1943

ಸ್ವದೇಶಾಭಿಮಾನಿ

SWADESHABHIMANI

ESTD. **1906**

[ಸಂಪುಟ 37] ತಾರೀಕು 1—1—1943 [ಸಂಚಿಕೆ 1]

'ಹಿಟ್ಲರ್ ಚರ್ಚಿಲರಿಗೆ ಶರಣು ಎನಬೇಕೊ?

ಭಾರತ ಮೊದಲು ಸ್ವತಂತ್ರವಾಗಬೇಕು'

—ಬ್ರಿಟಿಷರಿಗೆ ಚೀನೀ ವಿದ್ವಾಂಸರ ಬುದ್ಧಿವಾದ—

"ಭಾರತದ ಇಂದಿನ ರಾಜಕೀಯ ಅಶಾಂತಿ ಇನ್ನೂ ಹೆಚ್ಚುಕಾಲ ಮುಂದರಿಯಬಾರದು, ಮುಂದುವರಿದರೆ ಭಾರತಕ್ಕಾಗಲಿ ಬ್ರಿಟನಿಗಾಗಲಿ ಇದರಿಂದ ಲಾಭವಿಲ್ಲ ಇಬ್ಬರ ಶತ್ರುವಾದ ಮೂರನೆಯ ಜಪಾನಿಗೆ ಇದೊಂದು ಆಮಂತ್ರಣವಾದೀತು ಚೀನ ದೇಶದಲ್ಲಿ ಒಂದು ಕಥೆಯಿದೆ, ಮಿಂಚುಳ್ಳಿ ಮತ್ತು ಏಡಿಯದು ಏಡಿ ಬಿಸಿಲಿಗೆ ನೀರಿನಿಂದ ಮೇಲೆ ಬಂದಿದ್ದಾಗ ಮಿಂಚುಳ್ಳಿ ಅದನ್ನು ಹಿಡಿಯಹೋಯಿತು, ಏಡಿ ಮಿಂಚುಳ್ಳಿಯನ್ನು ಕಚ್ಚಿ ಹಿಡಕೊಂಡಿತು ಒಂದು ನೀರಿಗೆಳೆಯಿತು, ಒಂದು ನೆಲಕ್ಕೆಳೆಯಿತು ಅಷ್ಟರಲ್ಲಿ ಮೀನುಗಾರ ಬಂದ, ಏಡಿ ಮತ್ತು ಮಿಂಚುಳ್ಳಿ ಎರಡೂ ಮೀನುಗಾರನಿಗೆ ಆಹುತಿಯಾದವು ಈಗ ಜಪಾನೀ ಮೀನುಗಾರನು ಭಾರತದ ಬಾಗಿಲಲ್ಲಿ ಕಾದು ನಿಂತಿದ್ದಾನೆ ಏಡಿ ಮತ್ತು ಮಿಂಚುಳ್ಳಿ ಎರಡನ್ನೂ ಹಿಡಿಯಲು ಅವನಿಗೀಗ ಸಂದರ್ಭವೊದಗಿದಂತಾಗಿದೆ ಹೀಗಾದರೆ ಭಾರತಕ್ಕೆ ಮಾತ್ರವಲ್ಲ ಸಂಯುಕ್ತ ರಾಷ್ಟ್ರಗಳ ಯುದ್ಧ ಯತ್ನಕ್ಕೇ ಇದರಿಂದ ಆಘಾತವಾದೀತು ಭಾರತದ ಇಂದಿನ ಬಿಕ್ಕಟ್ಟು ಭಾರತದ ಮಿತ್ರರೆಲ್ಲರಿಗೂ ಬಹಳ ಆತುರ ಹುಟ್ಟಿಸಿದೆ ಆದರೆ ಇದರಿಂದ ಬರ್ಲಿನ್ ರೋಮ್, ಟೋಕಿಯೋಗಳ ಹಿಟ್ಲರ್, ಮುಸಲನಿ ಟೋಜೋಗಳು ಅಟ್ಟಹಾಸದಿಂದ ನಗುವಂತೆ ಆಗಿದೆ ಆದ್ದರಿಂದ ನಾನೀ ವಿನಂತಿ ಮಾಡಿಕೊಳ್ಳುತ್ತೇನೆ' ಹೀಗೆಂದು 'ವಿಶ್ವಭಾರತಿ'ಯ ಚೀನಾಭವನದ ಪ್ರೊಫೆಸರ್ ಟಾನ್‌ಯುನ್ ಶಾನ್ ಎಂಬ ಚೀನೀ ಬೌದ್ಧ ವಿದ್ವಾಂಸರು ಭಾರತ ಮತ್ತು ಬ್ರಿಟನಿಗೆ ಸಮಯೋಚಿತ ಒಂದು ಬಿನ್ನಹ ಮಾಡಿಕೊಂಡಿರುವರು ಭಾರತದ ಮೇಲೆ ಜಪಾನರ ಬಾಂಬು ಸುರಿಯುತ್ತಿರುವೀ ಕಾಲದಲ್ಲಿ ಅವರ ಅಭಿಪ್ರಾಯವು ಅತ್ಯಂತ ಮನನೀಯವಿದೆ ಅವರ ಲೇಖನದ ವಿವರ ಇಂತಿದೆ

ಭಾರತದ ನನ್ನ ಮಿತ್ರರಿಗೆ

"ನಾನು ಮೊದಲಾಗಿ ಭಾರತದ ನನ್ನ ಮಿತ್ರರಿಗೆ ಬಿನ್ನವಿಸುತ್ತೇನೆ ನನ್ನ ದೇಶದಂತೆ ನಿಮ್ಮ ದೇಶವನ್ನೂ ನಾನು ಪ್ರೀತಿಸುತ್ತೇನೆ ಭಾರತದ ಸ್ವಾತಂತ್ರ್ಯಕ್ಕಾಗಿ ನೀವು ಹೂಡಿದ ಹೋರಾಟದಲ್ಲಿ ನನ್ನ ಪೂರ್ಣ ಸಹಾನುಭೂತಿಯಿದೆ ನಿಮ್ಮ ಭಾವನೆಯೇ ನಮ್ಮ ಭಾವನೆಯಾಗಿದೆ ಆದರೆ ಅಂಗಡಿ ಲೂಟಿ ಮಾಡುವ, ಮಾರ್ಗ ಸಂಚಾರ ಪ್ರತಿಬಂಧಿಸುವ, ಸರಕಾರೀ ಕಚ್ಚೇರಿಗಳನ್ನು ಸುಡುವ ಇಂಥಾ ಕೃತ್ಯಗಳು ಯೋಗ್ಯವಾದುವಲ್ಲ ಎಂದು ನಾನೆಣಿಸುತ್ತೇನೆ ನಾನು ತಿಳಿದಂತೆ ಕಾಂಗ್ರೆಸು ನಿಜವಾಗಿಯೂ ಈ ತರದ ಚಳವಳವನ್ನು ಒಪ್ಪಲಿಕ್ಕಿಲ್ಲ ಮಹಾತ್ಮಾಜಿ ಇದನ್ನು ಖಂಡಿಸುವರು, ಹಲವಾರು ಸಲ ಬ್ರಿಟಿಷರಿಗೆ ಯುದ್ಧ ಯತ್ನದಲ್ಲಿ ತೊಂದರೆ ಕೊಡಬಾರದೆಂದು ಗಾಂಧಿಜಿ ಹೇಳಿದ್ದಾರೆ ಇಂದಿನೀ ಯುದ್ಧವು ಸಂಯುಕ್ತ ರಾಷ್ಟ್ರ ಮತ್ತು ಅಕ್ಷ ರಾಷ್ಟ್ರಗಳಿಗೆ ಮಾತ್ರ ನಡೆಯುವ ಯುದ್ಧವಲ್ಲ ಇದು ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರಗಳ ನಡುವಿನ ಯುದ್ಧ, ಮಾನವತೆ ಮತ್ತು ಪಶುತೆಗಳೊಳಗಿನ ಯುದ್ಧ, ನ್ಯಾಯ ಮತ್ತು ಅನ್ಯಾಯಗಳೊಳಗೆ ನಡೆಯುವ ಯುದ್ಧ, ನಾಗರಿಕತೆ ಅನಾಗರಿಕತೆಗಳಿಗೆ ಉಂಟಾದ ಹೋರಾಟ ಜಪಾನಿನಂಥಾ ಸಮಯ ಸಾಧಕ ಫ್ಯಾಸಿಸ್ಟ ಶಕ್ತಿ ಭಾರತದ ಬಾಗಿಲಿಗೆ ಬಂದಿರುವಾಗ ಭಾರತೀಯರು ಯುದ್ಧ ಯತ್ನಕ್ಕೆ ಹಾನಿ ತರದಿರುವುದು ಮಾತ್ರವಲ್ಲ, ಸಹಾಯವನ್ನೇ ಒದಗಿಸಬೇಕಾಗಿದೆ ಆದರೆ ಬ್ರಿಟಿಷರ ಕರ್ತವ್ಯಗಳಿಂದ ನಿಮ್ಮ ಮನಸ್ಸಿನಲ್ಲಿ ಉಂಟಾದ ರೋಷಾವೇಶವನ್ನು ನಾನು ಬಲ್ಲೆನು ಭಾರತಕ್ಕೆ ಸ್ವಾತಂತ್ರ್ಯ ಕೊಡಲೊಲ್ಲದ ಬ್ರಿಟನಿನೊಡನೆ ನೀವು ಸೇರಲಾರಿರೆಂದು ಹೇಳುತ್ತಿರಿ ಭಾರತವು ಸ್ವತಂತ್ರವಾಗುವ ವರೆಗೆ ಯುದ್ಧದಲ್ಲಿ ಸೇರಲಾರೆವೆನ್ನುವಿರಿ ಈ ಯುದ್ಧವು ವಸಾಹತ್ತುಗಳನ್ನಾಳಿಸಲು ಸಾಮ್ರಾಜ್ಯಶಾಹೀ ರಕ್ಷಣೆಗಾಗಿ ನಡೆಯುತ್ತಿರುವ ವಂಚಕ ರಾಷ್ಟ್ರಗಳ ಯುದ್ಧವೆನ್ನುತ್ತೀರಿ ಈ ಯುದ್ಧದಲ್ಲಿ ಶರತವಿಲ್ಲದೆ ಸೇರಿ ಬಿಟ್ಟರೆ ಇದರಿಂದ, ಭಾರತದ ಪಾಶ ಬಂಧವನ್ನು ಬಿಗಿಮಾಡಲು ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳಿಗೆ ಸಹಾಯ ಮಾಡಿದಂತಾಗುವುದೆನ್ನುವಿರಿ ನಿಜವಾಗಿಯೂ ಈ ಯುದ್ಧದ ತತ್ವ ಇದೇ ಆಗಿದ್ದರೆ ನೀವು ಹೇಳುವುದೆಲ್ಲಾ ಸರಿ ಆದರೆ ಈ ಯುದ್ಧದ ಸಮಸ್ಯೆ ಇಷ್ಟರಲ್ಲಿಯೇ ಉಳಿಯಲಿಕ್ಕಿಲ್ಲ ಭಾರತವು ಯುದ್ಧಾನಂತರವೂ ಬಂಧನದಲ್ಲಿಯೇ ಕೊಳೆಯಕ್ಕಿಲ್ಲ ಯುದ್ಧ ಮುಗಿದ ಮೇಲೆ, ಸಂಯುಕ್ತ ರಾಷ್ಟ್ರಗಳು ಈ ಯುದ್ಧದಲ್ಲಿ ಗೆದ್ದರೆ ಭಾರತವು ಸ್ವತಂತ್ರವಾಗಿಯೇ ತೀರುವುದು ಭಾರತಕ್ಕೆ ಸ್ವಾತಂತ್ರ್ಯ ಕೊಡಬಾರದೆಂದು ಹೇಳುವ ಧೈರ್ಯ ಆಗ ಯಾರಿಗೂ ಇರದು ಬ್ರಿಟನೂ ಅದಕ್ಕೆ ತಲೆತಗ್ಗಿಸಿಯೇ ತೀರುವುದು ಆದರೆ ಒಂದು ಪಕ್ಷ ಸಂಯುಕ್ತ ರಾಷ್ಟ್ರಗಳು ಸೋತು ಅಕ್ಷ ರಾಷ್ಟ್ರಗಳೇ ಗೆದ್ದರೆ ಭಾರತಕ್ಕೆ ಬಂಧನ ತಪ್ಪಿದಲ್ಲ ಇಂದಿಗಿಂತಲೂ ಮುಂದೆ ಭಯಂಕರವೇ ಒದಗೀತು ಟೋಜೋ ಪದಹತಿಯಲ್ಲಿ ಹಿಟ್ಲರ್ ಪದಹತಿಯಲ್ಲಿ ಭಾರತ ನರಳಬೇಕಾದೀತು ಆದ್ದರಿಂದ ಸೋದರರೇ ನೀವು ಈ ಯುದ್ಧದಲ್ಲಿ ಸೇರಿ ಹೋರಾಡಬೇಕು, ಬ್ರಿಟಿಷರಲ್ಲಿ ನಿಜವಾಗಿಯೂ ನಿಮಗೆ ವಿಶ್ವಾಸವಿಲ್ಲದಿದ್ದರೆ ಇಲ್ಲಿರುವ ಅಮೆರಿಕದ ಸೈನಿಕರೊಡಗೂಡಿ ಹೋರಾಡಿರಿ ನಿಮಗೆ ಸೈನಿಕ ಶಿಕ್ಷಣದಲ್ಲಿ ವಿಶ್ವಾಸವಿಲ್ಲವೆಂದರೆ—ಅಹಿಂಸಾ ಮಾರ್ಗದಲ್ಲಿ ಜಪಾನ್ ಶಕ್ತಿಯೆದುರು ಭಾರತವನ್ನು ಹುರಿದುಂಬಿಸಬೇಕು ನೀವು ಹಳೆ ಯಜಮಾನ ಹೋಗಿ ಹೊಸ ಯಜಮಾನಬರಲಿ ಎಂದು ತಿಳಿವ ತಪ್ಪು ಮಾಡಬೇಡಿರಿ.

ನಿಮಗಿದು ಸುವರ್ಣ ಸಂಧಿ!

"ಈಗ ನಾನು ಬ್ರಿಟಿಷ್ ಅಧಿಕಾರಿಗಳಿಗೆ ವಿನಂತಿಸಿಕೊಳ್ಳುತ್ತೇನೆ ಎಲ್ಲರ ಪರವಾಗಿ, ಹಲವು ಕಾರಣಗಳಿಗಾಗಿ, ನೀವು ಮೊದಲು ಭಾರತವನ್ನು ಸ್ವತಂತ್ರವೆಂದು ಸಾರಿರಿ, ಕೂಡಲೇ ಭಾರತದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿರಿ ಇದು ಕೇವಲ ಭಾರತೀಯರ ಆಶೆ ಮಾತ್ರವಲ್ಲ, ಸಂಯುಕ್ತ ರಾಷ್ಟ್ರದ ಹಲವರ ಆಶೆಯೂ ಇದಾಗಿದೆ ನಿಮ್ಮ ಬ್ರಿಟಿಷರಲ್ಲಿಯೇ ಹಲವರು ಈ ಆಶೆಯುಳ್ಳವರಾಗಿದ್ದಾರೆ ಭಾರತವನ್ನು ಸ್ವತಂತ್ರ ಮಾಡುವುದು ಒಳ್ಳೆ. ನಮ್ಮ ಸಮಾನ ಶತ್ರುಗಳಿಗೆ ಮಾತ್ರ ಹಿತವಿರಲಾರದು ಏಕೆಂದರೆ ಸ್ವತಂತ್ರ ಮಾಡಿದರೆ, ಭಾರತೀಯರನ್ನು ಅವರ ಕಡೆ ಸೆಳೆಯುವ ಅವರ ಪ್ರಚಾರವೇ ವ್ಯರ್ಥವಾಗುವುದು 'ಭಾರತವನ್ನು ಚರ್ಚಿಲ್ ಸ್ವತಂತ್ರ ಮಾಡಿದರೆ ನಾನವನ ಶರಣಾಗತನಾಗುವೆನು' ಎಂದು ಹಿಟ್ಲರ್ ಹೇಳಿದ್ದಾನೆ! ಜಪಾನರು ಹೇಳುತ್ತಾರೆ "ಬ್ರಿಟಿಷರು ನಿಮಗೆ ಸ್ವಾತಂತ್ರ್ಯ ಕೊಡಲಿಕ್ಕಿಲ್ಲ, ನಾವು ಬರುತ್ತೇವೆ ನಾವದನ್ನು ಕೊಡುತ್ತೇವೆ ಎಂದು ಆದ್ದರಿಂದ, ಬ್ರಿಟಿಷ್ ಮಿತ್ರರೇ ನಾನು ನಿಮಗೆ ವಿನಂತಿಸುವುದು ಭಾರತವನ್ನಿಂದು ಸ್ವತಂತ್ರ ಮಾಡಿರಿ ಹಿಟ್ಲರನು ಚರ್ಚಿಲ್ ಶರಣಾಗತನಾಗಲಿ! ಜಪಾನರು ಅವರ ಕೆಟ್ಟ ಬಾಯನ್ನು ಮುಚ್ಚಿಕೊಳ್ಳಲಿ! ಅವರ ಹಗಲುಗನಸುಗಳು ವ್ಯರ್ಥವಾಗಲಿ! ನೀವು ಭಾರತವನ್ನು ಸ್ವತಂತ್ರ ಮಾಡಿದ ಕೂಡಲೇ, ಇದರ ಹೆಸರೇ ಬೇರಾಗುತ್ತದೆ, ಯುದ್ಧದ ಹೆಸರೇ ಬೇರಾಗುತ್ತದೆ, ಭಾರತದ ಇಂದಿನ ಪರಿಸ್ಥಿತಿ ಮಾಯವಾಗಿ ಇಲ್ಲಿ ಹೊಸಹುರುಪು ಹುಟ್ಟುತ್ತದೆ ಭಾರತವನ್ನು ಸ್ವತಂತ್ರ ಮಾಡಲು ಹೆಚ್ಚೇನೂ ಸಮಯ ಬೇಡ, ಕೆಲವು ನಿಮಿಷ ಸಾಕು, ರಾಷ್ಟ್ರೀಯ ಸರಕಾರ ರಚಿಸಲೂ ಹೆಚ್ಚಿನ ತೊಡಕು ಆಗಲಿಕ್ಕಿಲ್ಲ ಭಾರತದ ರಾಷ್ಟ್ರೀಯ ಸರಕಾರವು ಈ ಯುದ್ಧದಲ್ಲಿ ಬೆಂಬಲ ಕೊಟ್ಟರೆ ನಿಮಗೆ ಪ್ರತಿಯೊಂದೂ ಲಭಿಸುವುದು ಒಬ್ಬ ಹೊರಗಿನವನಾಗಿ, ಇದೇ ದೇಶದಲ್ಲಿರುವವನಾಗಿ, ನಿಸ್ಪೃಹಿಯಾಗಿ ನಾನು ಸಾರುವುದೆಂದರೆ ಭಾರತವನ್ನು ಸ್ವತಂತ್ರ ಮಾಡಲು ಇದು ಸುವರ್ಣ ಸಂಧಿಯಿರುದು! ಈಗ ಸ್ವತಂತ್ರ ಮಾಡುವರೆ ಇರುವಷ್ಟು ಆತುರವು ಮತ್ತು ಅವಶ್ಯಕತೆ ಬೇರಾವಾಗಲೂ ಇರಲಿಲ್ಲ ನೀವೀಗ ಭಾರತವನ್ನು ಸ್ವತಂತ್ರ ಮಾಡಿಬಿಟ್ಟರೆ ೪೦೦ ಮಿಲಿಯ ಜನರ ಹೃದಯವನ್ನು ಗೆದ್ದಂತೆ ಮಾತ್ರವಲ್ಲ ಇಡೀ ಸಂಯುಕ್ತ ರಾಷ್ಟ್ರದ ಮೆಚ್ಚುಗೆ ಆದರ ಗೌರವವನ್ನೂ ಪಡೆಯುವಿರಿ ಇತಿಹಾಸದಲ್ಲಿ ಇದು ಸುವರ್ಣಾಕ್ಷರಗಳಿಂದ ಬರೆಯಲ್ಪಡುವುದು'

ಯುದ್ಧ ಕಾರಣದ ನಾಶ

"ಭಾರತದ ಬೇರೆ ಬೇರೆ ಪಂಗಡಗಳಲ್ಲಿ ಎಷ್ಟೇ ಭಿನ್ನಭಾವವಿದ್ದರೆ ಸ್ವಾತಂತ್ರ್ಯ ಬೇಕೆಂಬೀ ವಿಷಯ ಎಲ್ಲರದೂ ಏಕಾಭಿಪ್ರಾಯವಾಗಿದೆ ನೀವು ಸ್ವಾತಂತ್ರ್ಯ ಸಾರಿದ ಮೇಲೂ ಭಾರತೀಯರು ತಮ್ಮ ಅನೈಕ್ಯ ಬಗೆಹರಿಸದೆ, ರಾಷ್ಟ್ರೀಯ ಸರಕಾರ ಸ್ಥಾಪಿಸಲಾರರಾದರೆ ಆಗ ನೀವು ದೋಷಿಗಳಾಗುವುದಿಲ್ಲ, ಅವರನ್ನೇ ದೂರಬಹುದಾಗಿದೆ. ಹಾಗಾದರೂ ಆ ಮೇಲೆ ನಿಮಗೆ ಭಾರತದಲ್ಲಿ ಸ್ಥಾನ ತಪ್ಪಿ ಹೋಗುವುದಿಲ್ಲ. ಭಾರತವನ್ನು ಸ್ವತಂತ್ರ ಮಾಡಿದರೆ ಅದು ಜಪಾನರೊಡನೆ ರಾಜಿಮಾಡಿಕೊಂಡೀತೆಂದು ಅಂಜುವುದು ತಪ್ಪು ಭಾರತವು ಸ್ವತಂತ್ರವಾದ ಕೂಡಲೇ ಸಂಪೂರ್ಣ ಮನಸ್ಸಿನಿಂದ ನಿಮ್ಮ ಕಡೆಗೇ ಸೇರುವುದು ಏಕೆಂದರೆ ಕಾಂಗ್ರೆಸು ಮತ್ತು ಇತರ ಪಕ್ಷಗಳು ತಮ್ಮ ಫೇಸಿಸ್ಟ್ ವಿರೋಧವನ್ನು ಅನೇಕ ಸಲ ಸಾರಿವೆ, ಒಮ್ಮೆ ಅವರಿಗೆ ಸ್ವಾತಂತ್ರ್ಯ ಕೊಟ್ಟರೆ ಮತ್ತೆ ಅವರು ಸ್ವಾತಂತ್ರ್ಯ ಬಿಡಲು ಖಂಡಿತ ಒಪ್ಪಲಾರರು, ನೀವು ಯಾರನ್ನೇ ನಂಬದಿದ್ದರೆ ಮಹಾತ್ಮಾಜಿಯವರನ್ನು ನಂಬಬಹುದು ಅವರ ಸತ್ಯಪ್ರಿಯತೆ, ಸ್ವಾತಂತ್ರ್ಯ ಪ್ರೇಮಗಳನ್ನು ಸಂಶಯಪಡಲಾಗದು ನೆಹರುಗಳ ಫೇಸಿಸ್ಟ್ ವಿರೋಧವನ್ನು ನಂಬದಿರಕೂಡದು! ನಿಮ್ಮ ಕೈಯ್ಯಲ್ಲಿ ಅಧಿಕಾರವಿರುವುದರಿಂದ, ಅಮೆರಿಕದ ಸೈನ್ಯ ಅಲ್ಲಿರುವುದರಿಂದ ಅವರು ಜಪಾನಿನೊಡನೆ ರಾಜಿಮಾಡಿಕೊಳ್ಳಲೂ, ಯುದ್ಧವನ್ನು ವಿರೋಧಿಸಲೂ ಮತ್ತೂ ಸಾಧ್ಯವೇ ಇಲ್ಲ ಆದರೆ ಅವರಿಗೀಗ ಸ್ವಾತಂತ್ರ್ಯ ಕೊಡದಿದ್ದರೆ ತೀರ ನಿರಾಶೆ ಅವರನ್ನು ಕವಿದು ಬಿಡುವುದು ಆದರಿಂದ ಅವರು ಬ್ರಿಟಿಷ್ ಅಧಿಕಾರಕ್ಕೆ ಮಾತ್ರವಲ್ಲ ಇಡೀ ಯುದ್ಧ ಯತ್ನಕ್ಕೇ ಆತಂಕ ತಂದೊಡ್ಡಲೂ ಸಾಧ್ಯವಿದೆ ಆಗ ಭಾರತವನ್ನು ಸ್ವತಂತ್ರಮಾಡಿದರೆ ಮುಂದೆ ಅದರೊಡನೆ ವ್ಯವಹಾರ ಸಂಬಂಧ ಲಾಭಗಳೆಲ್ಲಾ ನಮಗೆ ದೊರಕದೆಂದು ನೀವು ಹೆದರುವುದೂ ಅವಶ್ಯವಿಲ್ಲ ಎಲ್ಲಾ ಅದರ ವಿರುದ್ಧವಾಗುವುದು ಒಬ್ಬನು ಬೇರೊಬ್ಬನಲ್ಲಿ ವಿಶ್ವಾಸವಿಟ್ಟರೆ ಅವನೂ ಇವನಲ್ಲಿ ವಿಶ್ವಾಸವಿಡುತ್ತಾನೆಂಬುದು ಲೋಕ ನಿಯಮ ನೀವು ಅವರನ್ನು ನಂಬಿದರೆ, ನಂಬಿ ಅವರನ್ನು ಸ್ವತಂತ್ರ ಮಾಡಿದರೆ ಆ ಭಾವನೆಯನ್ನು ಅವರಿಟ್ಟುಕೊಂಡು ಮುಂದಿನ ನಿಮ್ಮ ವ್ಯವಹಾರವನ್ನು ಖಂಡಿತವಾಗಿ ಮರೆಯಲಾರರು ಇಂಥಾ ಮಾನಸಿಕ ಸೌಹಾರ್ದವು ನಿಮ್ಮ ನಡತೆಯಿಂದ ತೋರಿ ಬಂದರೆ ಅದನ್ನು ಹಿಟ್ಲರ್ ಮುಸಲನಿ ಟೋಜೋ ಯಾರೂ ಮುರಿಯಲಾರರು ಆದರೆ ಸಾಮಂತ ಸ್ವರಾಜ್ಯ, ಪ್ರಾಂತಿಕ ಸ್ವಾಯತ್ತತೆ, ಸ್ಥಳೀಯ ಸರಕಾರ ಈ ರೀತಿ ನೀವು ಇನ್ನೂ ಮಾತನಾಡಕೂಡದು ಭಾರತವನ್ನು ಪೂರ್ಣ ಸ್ವಾತಂತ್ರ್ಯ ಮಾಡಲೇಬೇಕು ಯುದ್ಧ ಮುಗಿದ ಮೇಲಂತೂ ಹಾಗೆ ಮಾಡಲೇ ಬೇಕಾಗುವುದು ಆದ್ದರಿಂದ ಈಗಲೇ ನೀವು ಮುಂದಾಳುತನ ವಹಿಸಿದರೆ ನಿಮ್ಮ ಕೀರ್ತಿಯೇ ಅದರಿಂದ ಬೆಳಗೀತು ಇಡೀ ಜಗತ್ತು ನಿಮ್ಮ ಪಾದ ತಲದಲ್ಲಿ ಬಿದ್ದು ನಿಮ್ಮನ್ನು ಗೌರವಿಸೀತು. ನೀವು ಲೋಕದ ಸ್ವಾತಂತ್ರ್ಯ ನ್ಯಾಯ, ಪ್ರಜಾಪ್ರಭುತ್ವ ಮೊದಲಾದುವುಗಳಿಗಾಗಿ ಹೋರಾಡುವದೆಂದು ಯುದ್ಧೋದ್ದೇಶವನ್ನು ಸಾರಿದ್ದೀರಿ, ಭಾರತೀಯರಿಗೆ ಜಗತ್ತಿನ ಐದನೇ ಒಂದಂಶ ಜನರಿಗೆ ಅದನ್ನೇ ಕೊಡಲು ತಿರಸ್ಕರಿಸಿದರೆ ಹೇಗಾದೀತು ವಿಚಾರಿಸಿರಿ! ಇಂಥಾ ಜನರು ನಮ್ಮೊಡನೆ ಸೇರದೆ ಶತ್ರುಗಳೊಡನೆ ಸೇರಿ ಬಿಟ್ಟರೆ ನಮಗೆ ಜಯ ಖಂಡಿತವೆಂದಾದರೂ ಹೇಗೆ ಹೇಳಬಹುದು? ಈ ಯುದ್ಧವನ್ನು ನಾವು ಹೋರಾಡಿ ಗೆದ್ದರೆ ಸಾಲದು; ಯುದ್ಧದ ಕಾರಣವನ್ನೇ ನಾವು ನಾಶಪಡಿಸಬೇಕು. ಬ್ರಿಟನು ದ್ರೋಹದ ಹಲ

(೨ನೇ ಪುಟಕ್ಕೆ ಮುಂದುವರಿದಿದೆ)

ಹಿಟ್ಲರ್, ಚರ್ಚಿಲರಿಗೆ ಶರಣು ಎನಬೇಕೊ?

(೧ನೇ ಪುಟದಿಂದ ಮುಂದುವರಿದುದು)

ನಾರು ಖಂಡಗಳನಾಳಬಹುದಾದರೆ ಯೂರೋಪಿನ ಕೆಲವು ಭೂಭಾಗವನ್ನು ನಾನೇಕೆ ಆಳಬಾರದೆಂದು ಹಿಟ್ಲರನು ಆಲೋಚಿಸಿದರೆ ತಪ್ಪೇನು? ಬ್ರಿಟನು ದೂರ ಪೂರ್ವದ ಭಾರತ ಬರ್ಮಾ ಮೊದಲಾದ ಭೂಭಾಗಗಳನ್ನಾಳಬಹುದಾದರೆ ನಾನು ಚೀನಾ, ಬರ್ಮಾ ಆ ಮೇಲೆ ಇಡೀ ಏಶ್ಯವನ್ನೇ ಏಕೆ ಆಳಬಾರದು ಎಂದು ಜಪಾನು ಭಾವಿಸಿದರೆ ತಪ್ಪೇನು? ಹೀಗಾಗಿ ಭಾರತವನ್ನು ಸ್ವತಂತ್ರ ಮಾಡುವುದರಿಂದ ನೀವು ಯುದ್ಧದ ಮುಖ್ಯವಾದೊಂದು ಕಾರಣವನ್ನೇ ನಾಶಪಡಿಸಿದ ಹಾಗಾದೀತು! ಮುಂದೆ ಯುದ್ಧವಾಗದಂತೆ ಮಾಡಲು ಇದೇ ಸಾಧನವಾದೀತು. ಹೀಗಾಗದೆ ಇದ್ದರೆ ಈ ಯುದ್ಧವನ್ನು ಗೆಲ್ಲುವುದೂ ಸಾಧ್ಯವಿಲ್ಲ, ಗೆದ್ದೂ ಪ್ರಯೋಜನವಿಲ್ಲ ನನ್ನ ಭಾರತದ ಮತ್ತು ಬ್ರಿಟನಿನ ಮಿತ್ರರಲ್ಲಿ ನಾನು ನನ್ನೀ ವಿನಂತಿಯನ್ನು ಶುದ್ಧ ಹೃದಯದಿಂದ ಮಾಡಿಕೊಳ್ಳುತ್ತೇನೆ"

ಪಡ್ನೂರು
ಮನೆಜಪ್ತಿ

ಇಲ್ಲಿನ ಜಮೀನ್ದಾರರಾದ ಶ್ರೀ ಪಿ ಮರಿಭಟ್ಟರ ಮನೆಗೆ ತಾ ೧೭ರಂದು ಪೋಲೀಸರು ಅಕಸ್ಮಾತ್ ಆಕ್ರಮಣಮಾಡಿ ಕೆಲ ತಾಸುಗಳ ವರೆಗೆ ಶೋಧಿಸಿ ನೆಹರುಗಳ 'ಪಾರ್ಟಿಂಗ್ ಓಫ್ ದಿ ವೇಸ್' ಎಂಬ ಆಂಗ್ಲ ಪುಸ್ತಕವ, ಶ್ರೀ ದಾಮೋದರ ಬಾಳಿಗರ ಭಾಷಾಂತರ 'ಪಥವಿಯೋಗ' ಪುಸ್ತಕವನ್ನು ಜಪ್ತಿಮಾಡಿ ಕೊಂಡೊಯ್ದರೆಂದೂ, ಬೇರೇನೂ ಆಕ್ಷೇಪಾರ್ಹ ಸಿಗಲಿಲ್ಲವೆಂದೂ ತಿಳಿದಿದೆ ಶ್ರೀ ಭಟ್ಟರ ಹಿರಿಯಮಗನನ್ನು ಮದ್ರಾಸಿನಲ್ಲಿ ಬಂಧಿಸಿರುವರೆಂದು ಸುದ್ದಿ

ಕಾರ್ಕಳ
ಶಿಕ್ಷೆ – ದಂಡನೆ

ಸರಕಾರೀ ನೌಕರರು ತಮ್ಮ ಉದ್ಯೋಗಕ್ಕೆ ರಾಜಿನಾಮೆ ಕೊಡಬೇಕೆಂದು ಹೊಡೆದು ಗಿ ವಿನಂತಿಸಿ ಪತ್ರ ಬರೆದರೆಂದು ಆರೋಪದಲ್ಲಿ ತಾ ೨೨ರಂದು ಕೈದು ಮಾಡಲ್ಪಟ್ಟ ಶ್ರೀ ಆರ್ ದೇವರಾಯ ಶೆಣೈಯವರ ವಿಚಾರಣೆಯು ತಾ ೨೪ಕ್ಕೆ ಕುಂದಾಪುರ ಸಬ್ ಕಲೆಕ್ಟರರ ಆಫೀಸಿನಲ್ಲಿ ನಡೆದು ೯ ತಿಂಗಳ ಶಿಕ್ಷೆ ಮತ್ತು ರೂ ೧೦೦ ಜುಲ್ಮಾನೆ ವಿಧಿಸಲಾಗಿದೆ

ಟಿಂಬರ್ ಎಣ್ಣೆ ಮಾರಾಟದ ಸಂಬಂಧ ಸರಕಾರದ ನಿರ್ಬಂಧಾಜ್ಞೆಯನ್ನು ಮುರಿದರೆಂಬ ಕಾರಣ ಶ್ರೀ ಆನೆಕೆರೆ ಮುಂಡ್ಕೂರು ನರಸಿಂಹ ಕಾಮತ್ ಮತ್ತು ಶ್ರೀ ಬಜಗೋಳಿ ಮುಡಾರು ರಾಮಕೃಷ್ಣ ನಾಯ್ಕರ ಮೇಲೆ ಆದ ಆರೋಪದ ವಿಚಾರಣೆ ತಾ ೨೪ರಂದು ಕುಂದಾಪುರ ಸಬ್ ಕಲೆಕ್ಟರರಲ್ಲಿ ನಡೆದು ಅವರಲ್ಲಿ ಮೊದಲಿನವರಿಗೆ ರೂ ೨೦೦ ಮತ್ತು ಎರಡನೆಯವರಿಗೆ ರೂ ೬೦೦ ಜುಲ್ಮಾನೆ ವಿಧಿಸಲಾಗಿದೆ

ಬೆಂಗಳೂರು
ಕನ್ನಡ ಸಾಹಿತ್ಯ ಪರಿಷತ್ತು
ಶ್ರೀ ಮಾಸ್ತಿಯವರು ಉಪಾಧ್ಯಕ್ಷರು
ಹೊಸ ಕಾರ್ಯಕಾರಿ ಸಮಿತಿ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಚುನಾವಣೆ ನಡೆದು ಶ್ರೀ ಮಾಸ್ತಿಯವರು ಉಪಾಧ್ಯಕ್ಷರಾಗಿಯೂ ಬಿ ವೆಂಕೋಬರಾಯರು ಕಾರ್ಯದರ್ಶಿಗಳಾಗಿಯೂ ಡಿ ಸಿ. ಸುಬ್ಬರಾಯಪ್ಪನವರು ಕೋಶಾಧ್ಯಕ್ಷರಾಗಿಯೂ ಆರಿಸಿ ಬಂದರು ಶ್ರೀಗಳಾದ ಬಿ ಎಂ. ಶ್ರೀಕಂಠಯ್ಯ, ಗೋಕಾಕ, ವಿ ಸೀತಾರಾಮಯ್ಯ, ಮುಗಳಿ, ಬಸವನಾಳ, ವಿ ಬಿ ನಾಯಿಕ, ಚಂದ್ರಶೇಖರ ಶಾಸ್ತ್ರಿ, ವಾಲಿ, ಎಂ ಎಸ್. ಅನಂತ ಪದ್ಮನಾಭ ರಾವ್ ಹಾಗು ಶ್ರೀಮತಿ ಕಲ್ಯಾಣಮ್ಮ ಇವರು ಸದಸ್ಯರಿರುವರು.

ಮಂಗಳೂರು
ಹಿಂದು ಸೇವಾ ಸಂಘ

ಇದರ ವಾರ್ಷಿಕ ಸಭೆಯು ತಾ. 30ರಂದು ರೊಸಾರಿಯೋ ಇಗರ್ಜಿ ರಸ್ತೆಯಲ್ಲಿರುವ ಬಾಲಕಾಶ್ರಮದಲ್ಲಿ ಶ್ರೀ. ಎ. ಆರ್ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತು

ಇದರ ದ್ವಿತೀಯ ವಾರ್ಷಿಕಾಧಿವೇಶನವು ತಾ. ೧೮ರಲ್ಲು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾ ಭವನದಲ್ಲಿ ಶ್ರೀ. ಎ. ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ವೃಂದಾವನಸ್ಥ ಶ್ರೀ ಗೋಕರ್ಣ ಮಠಾಧೀಶ ಶ್ರೀ ಮದಿಂದಿರಾಕಾಂತ ಯತಿವರ್ಯರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು. ವಿಷಯ ನಿಯಾಮಕ ಸಮಿತಿ ಸಭೆ ಸೇರಿತು. ಬಹಿರಂಗ ಅಧಿವೇಶನದಲ್ಲಿ ಐದು ರಠಾವುಗಳು ಮಂಜೂರಾದವು. ರಾತ್ರಿ ವಿವಿಧ ವಿನೋದಾವಳಿಗಳಿದ್ದುವು. ಶ್ರೀ. ರಾಮಚಂದ್ರ ಪೈಗಳು ವಂದನಾರ್ಪಣೆ ಮಾಡಿದರು ತಾ. ೨೯ರಂದು ಪುನಃ ಬಹಿರಂಗ ಅಧಿವೇಶವು ಜರಗಿತು. ಸಮಾಜೋಪಯೋಗೀ ಠರಾವುಗಳು ಮಂಜೂರಾದುವು ಆ ದಿವಸವೂ ವಿವಿಧ ವಿನೋದಾವಳಿಗಳಿದ್ದುವು ಡಾ. ಎಂ ಕೇಶವ ಪೈಗಳು ವಂದನಾರ್ಪಣೆ ಗೈದರು

ಹಿಂದುಸ್ಥಾನ ಸ್ಕೌಟ್ ರೇಲಿ ಮತ್ತು ಜಿಲ್ಲಾ ಸ್ಕೌಟ್ ಪರಿಷತ್ತು

ಜನವರಿ ತಾ 16, 17ರಲ್ಲು ಉಡುಪಿ ಇನ್ನಂಜೆ ಎಸ್ ವಿ ಎಸ್। ಹಯ್ಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಜರಗುವುದು ತಮ್ಮ ದಳಗಳನ್ನು ರೇಲಿಗೆ ಮುನ್ನಡೆಸುವ ರೋವರ್ ಲೀಡರರೂ, ಸ್ಕೌಟು ಮಾಸ್ತರರೂ ಕಬ್ ಮಾಸ್ತರರೂ ಕನಿಷ್ಠಪಕ್ಷ ಒಂದು ವಾರಕ್ಕೆ ಮುಂಚಿತವಾಗಿ ತಾವೆಷ್ಟು ಮಂದಿ ಬರಲಿರುವೆವೆಂದೂ ತಾವು ತಲಪುವ ಸಮಯವನ್ನು ಇನ್ನಂಜೆ ಹಾ। ಎ। ಶಾಲೆಯ ಮೆನೇಜರರಿಗೆ ತಿಳಿಸಬೇಕು ಪ್ರತಿಯೊಂದು ದಳವೂ ಶಿಬಿರಾಗ್ನಿ ಕಾಲದಲ್ಲಿ ಒಂದಾದರೂ ಸಾಮೂಹಿಕ ಚಟುವಟಿಕೆ ತೋರಿಸಲು ಸಿದ್ಧವಿರಬೇಕು. ಜಿಲ್ಲಾ ಸ್ಕೌಟು ಸಂಸ್ಥೆಯ ಎಲ್ಲಾ ಮೆಂಬರರಿಗೂ ಆಮಂತ್ರಣವಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

14ನೇ ಮದ್ರಾಸು ಪ್ರಾಂತಿಕ ಮುನ್ಸಿಪಲ್ ಎಂಪ್ಲೋಯಿಸ್ ಫೇಡರೇಶನ್ 1942

ಇದು ಮಂಗಳೂರಲ್ಲಿ ತಾ ೩೦ ಮತ್ತು ೩೧ ಈ ಎರಡು ದಿನಗಳಲ್ಲಿ ಜರಗಿತು ೩೦ರಂದು ಸಂಜೆ ಪ್ರಾರ್ಥನೆಯಿಂದ ಸಭೆಯು ಪ್ರಾರಂಭವಾಗಿ, ಸ್ವಾಗತ ಭಾಷಣವಾದ ಮೇಲೆ ಶ್ರೀ ಬಿ ವೆಂಕಟ್ರಾಯ ಬಾಳಿಗರು ಪರಿಷತ್ತನ್ನು ಉದ್ಘಾಟನೆ ಮಾಡಿದರು ಡಾ ಪಿ. ಕೆ ಪಿ ಶರ್ಮರು ಅಧ್ಯಕ್ಷತೆ ವಹಿಸಿದ್ದರು ತಾ. ೩೧ರಂದು ಪ್ರಾತಃ ಸಬ್‌ಜೆಕ್ಟ್ ಕಮಿಟಿಯ ಸಭೆ ಸೇರಿತು ಸಂಜೆ ೫ ಗಂಟೆಗೆ ಪರಿಷತ್ತು ಜರಗಿತು.

ಇಂದಿರೆಗೆ ನೆಹರು ಪತ್ರ

ಬೊಂಬಯಿ ಸರಕಾರದ ಯಾವುದೊ ಸೆರೆಮನೆಯಿಂದ, ಜವಾಹರಲಾಲ ನೆಹರುಗಳ ತಮ್ಮ ಮಗಳು ಇಂದಿರಾ ಗಾಂಧಿಗೆ ಒಂದು ಪತ್ರ ಬರೆದಿದ್ದು ಅದನ್ನು ಬೊಂಬಯಿ ಸರಕಾರವು ಸಂಯುಕ್ತ ಪ್ರಾಂತ ಸರಕಾರಕ್ಕೆ ಕಳುಹಿಸಿ (ಅಲ್ಲಿ ಜೈಲಿನಲ್ಲಿರುವ ಇಂದಿರಾ ಗಾಂಧಿಗೆ ಕೊಡುವರೆ)ದ್ದು ಆ ಸರಕಾರವು ತಲಪಿಸಲಿಲ್ಲವೆಂದು ನ್ಯೂ ದಿಲ್ಲಿಯ ಹಿಂದೂ ಬಾತ್ಮಿದಾರನು ಬರೆಯುತ್ತಾನೆ ಸೆರೆಮನೆಯಲ್ಲಿರುವ ಕಾಂಗ್ರೆಸ್ ಮುಖಂಡರಿಗೆ ಪತ್ರವ್ಯವಹಾರಕ್ಕೆ ಆಸ್ಪದ ಕೊಡಲಾಗಿದೆಯೆಂದು ಜಗತ್ತಿನ ಮುಂದೆ ಸಾರಿದ ಸರಕಾರದ ನೀತಿ ಹೀಗೆ ಇದೆಯೆಂದು ಆ ಬಾತ್ಮಿದಾರನ ಹೇಳಿಕೆ

ನೆಹರು ಭಾಷಣಕ್ಕೆ ಅಪ್ಪಣೆಯಿಲ್ಲ

ಅಖಿಲಭಾರತ ವಿಜ್ಞಾನ ಪರಿಷತ್ತಿನ ನಿಯೋಜಿತ ಅಧ್ಯಕ್ಷರಾಗಿ ಪಂಡಿತ ಜವಾಹಿರಲಾಲ ನೆಹರುಗಳು ಚುನಾಯಿತರಾಗಿದ್ದು, ಬರುವ ಅದರ ಅಧಿವೇಶನದಲ್ಲಿ, ನೆಹರುಗಳ ಅಧ್ಯಕ್ಷ ಭಾಷಣವನ್ನೋದಲು ಸರಕಾರವು ಸಮ್ಮತಿ ಕೊಡಲಿಲ್ಲ.

ಇಂದಿರಾ ನೆಹರು ಪ್ರಕೃತಿ

ನೆಹರುಗಳ ಕುಮಾರಿ ಶ್ರೀಮತಿ ಇಂದಿರಾ ಗಾಂಧೀಯವರನ್ನು ಸಿವಿಲ್ ಸರ್ಜನರು ಪರೀಕ್ಷಿಸಿ ಅವರ ಆರೋಗ್ಯ ಇದ್ದಂತೆಯೇ ಇದೆಯೆಂದು ಪ್ರಕಟಿಸಿದ್ದಾರೆ.

ಪುಸ್ತಕಾವಲೋಕನ
ಕುಲದೀಪಕರು

ಧಾರವಾಡದ ಲಲಿತ ಸಾಹಿತ್ಯಮಾಲೆಯವರು ತಮ್ಮ ಮೂರನೆಯ ಕುಡಿಯಾಗಿ ಶ್ರೀ ಸಿದ್ದಪ್ಪನಹಳ್ಳಿ ಕೃಷ್ಣಶರ್ಮಾ ಇವರ ಕುಲದೀಪಕರು ಎಂಬ ವ್ಯಕ್ತಿಚಿತ್ರದ ಪುಸ್ತಕವನ್ನು ಪ್ರಕಟಿಸಿದ್ದಾರೆ 'ಕುಲದೀಪಕರು' ಪುಸ್ತಕದಲ್ಲಿ ಎಂಟು ಮಂದಿಯ ಜೀವನ ಚಿತ್ರವಿದೆ,

ಈ 'ಕುಲದೀಪಕರು' ಎಂಟು ಮಂದಿ, ಭಾರತದ ಅಷ್ಟೇ ಏಕೆ ಮಾನವ ಕೋಟಿಯ ಕುಲವನ್ನೇ ಇವರು ಬೆಳಗಿದವರು, ಚಾರ್ಲಿ ಅಂಡ್ರೂಸ್, ಗೋಪಬಂಧುದಾಸ, ಸಿ ವಿ ರಾಮನ್, ಭಿಕ್ಷು ಉತ್ತಮ, ವಿಶ್ವೇಶ್ವರಯ್ಯ, ಸಾಲಾರ್ ಜಂಗ್, ಮಾಡಪಾಟಿ ಹನುಮಂತರಾವ್, ಮಹದೇವ ದೇಸಾಯಿ ಇವರೇ ಆ ಎಂಟು ಮಂದಿ ಚಾರ್ಲಿ ಅಂಡ್ರೂಸ್ ಐರೋಪ್ಯರಾದರೂ, ಕ್ರಿಸ್ತ ಮಿಶನರಿಯಾದರೂ, 'ಭಾರತದ ಕರೆ ಕೇಳಿ ಭಾರತಕ್ಕೆ ಬಂದವರು, ಅಧ್ಯಾತ್ಮಿಕ ರಾಜಕೀಯ ತಪೋಜೀವಿಗಳು-ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿದವರು, ದೀನಬಂಧು ಎಂಬ ಅನ್ವರ್ಥನಾಮ ಪಡೆದವರು, ಯೇಸು ಸಮವಾದ ಜೀವನ ಆಪರದು ಗೋಪಬಂಧುದಾಸರು ಉತ್ಕಲದ ದೀನಬಂಧು, ಗುಜರಾಥಿಗೆ ಪಟೇಲರಂತೆ, ಪಂಜಾಬಿಗೆ ಲಜಪತರಾಯರಂತೆ, ಮರಾಠಕ್ಕೆ ತಿಲಕರಂತೆ, ಉತ್ಕಲಕ್ಕಾಗಿ ಗೋಪಬಂಧುದಾಸರು ದುಡಿದವರು,ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಉತ್ಕಲದ ದೀನರ ಸೇವೆಯಲ್ಲಿ ಆಯುಸ್ಸು ಸವೆದವರು. ಕೃಷಿಕರೊಡನೆ ಹೊಲದಲ್ಲಿ, ಅಧಿಕಾರಿಗಳೊಡನೆ ಶಾಸನ ಸಭೆಯಲ್ಲಿ ಬೆರೆತಿದ್ದು ದೇಶಸೇವೆಗಾಗಿ ಸವೆದವರು ವಿಶ್ವೇಶರಯ್ಯನವರೆಂದರೆ ತಿಳಿಯದವರಾರುಂಟು. ಮೈಸೂರಿಗೆ ಜೀವಕೊಟ್ಟ ಶಿಲ್ಪಿ ಅವರು ಅವರ ಶಿಲ್ಪ ವೈಭವ ದೇಶಪ್ರೇಮ, ದೂರದೃಷ್ಟಿ ಇವುಗಳು ಅಖಿಲಭಾರತದಲ್ಲಿ ಬೇರೊಬ್ಬನಲ್ಲಿರುವುದು ಅಪೂರ್ವ ಸಿ ವಿ ರಾಮನ್ ಬೆಳಕಿನ ಕಿರಣಗಳ ಆಟವನ್ನು ಹೊರಗೆಡಹಿದವರು, ಅದರಿಂದ ನೋಬೆಲ್ ಅಪೂರ್ವ ಬಹುಮಾನ ಹೊಂದಿದವರು ರಾಮನ್ ಸಿದ್ಧಾಂತ, ರಾಮನ್ ಪರಿಣಾಮ ವಿಜ್ಞಾನ ವಿದ್ಯಾರ್ಥಿಗಳಿಗೆಲ್ಲಾ ಗೊತ್ತು ಭಿಕ್ಷು ಉತ್ತಮರು ಬರ್ಮಾ ದೇಶದಲ್ಲಿ ಹುಟ್ಟಿ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಕೊನೆಗೆ ಬರ್ಮದಲ್ಲಿಯೂ ಸ್ವಾತಂತ್ರ್ಯ ಚೈತನ್ಯ ತುಂಬಿಸಿದ ಉತ್ತಮ ಭಿಕ್ಷು, ಸಂಸಾರವನ್ನು ತೊರೆದ ಸನ್ಯಾಸಿ, ರಾಜಕೀಯದಲ್ಲಿ ಉಗ್ರ ದೀರ, ಚೀನಕ್ಕೆ ಕಾಂಗ್ರೆಸ್ ಪ್ರತಿನಿಧಿಯಾಗಿ ಹೋಗಿ ಅಲ್ಲಿ ಬಹುಮಾನ ಪಡೆದರು. ಹೈದರಾಬಾದಿನ ಮಂತ್ರಿ ಸಾಲಾರ್ ಜಂಗ್, ಹೈದರಾಬಾದಿನ ದೇಶಭಕ್ತ ಹನುಮಂತರಾವ್ ಇವರದೂ ಅಪೂರ್ವವಾದ ಜೀವನ, ಸಾವಿರದಲ್ಲಿಯೋ ದಶ ಸಾವಿರಗಳಲ್ಲಿಯೋ ಇಂಥಾ ಜೀವಿಗಳನ್ನು ಕಾಣುವುದು ಅಪೂರ್ವ

ಈ ಎಂಟು ವ್ಯಕ್ತಿಗಳ ಚಿತ್ರವನ್ನು ಚಿಕ್ಕದಾಗಿಯೂ ಚೊಕ್ಕವಾಗಿಯೂ ಶ್ರೀ ಶರ್ಮರು ಮೋಹಕ ಶೈಲಿಯಲ್ಲಿ ಬರೆದಿದ್ದಾರೆ ಶ್ರೀ ಕೃಷ್ಣಶರ್ಮರ ವ್ಯಕ್ತಿ ಚಿತ್ರಗಳ ಶೈಲಿ ಅದು ಅವರದೇ ಆಗಿದ್ದು ಕನ್ನಡದಲ್ಲಿ ಹೊಸತೊಂದು ಹಾದಿಯನ್ನು ತೋರಿಸಿದೆ ಶ್ರೀಮತಿ ಲೀಲಾ ಶಿ ಕಾರಂತರು ಇದಕ್ಕೆ ... ಮುಮ್ಮುನ್ನುಡಿ ಬರೆದಿರುವರು ... ಆಕಾರದ ... ಪುಟಗಳ ಈ ಪುಸ್ತಕದ ಬೆಲೆ ... ಆಣೆ ಕಾಗದದ ಅಭಾವದೀಕಾಲದಲ್ಲಿಯೂ ಹೊಸ ಪುಸ್ತಕ ಮಾಲೆಯೊಂದನ್ನು ಹೊರಡಿಸಿ ಕನ್ನಡಿಗರಿಗೆ ಲಲಿತ ಸಾಹಿತ್ಯವನ್ನೀಯುತ್ತಿರುವುದು ಪ್ರಶಂಸನೀಯ ಶ್ರೀ ಶರ್ಮರ ಈ ಗ್ರಂಥವನ್ನು ಕನ್ನಡಿಗರು ಓದಲು ಮರೆಯಬಾರದು.

—ಕಯ್ಯಾರ

TENDER NOTICE

Sealed tenders from Registered contractors will be received up to 4 P M on 13-1 1943 for the maintenance of Road works for 1943-'44

Mangalore }
22 12 1942 }

District Board Engineer
South Kanara

ಚರ್ಮವ್ಯಾಧಿಗಳು ಮೋಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು
(Cuticura Ointment)
ಚರ್ಮವ್ಯಾಧಿಗಳನ್ನ ಊರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು

ಕುಟಿಕೂರಾ ಮುಲಾಮು
CUTICURA OINTMENT

Greetings
FOR
The New Year

The Directors, Officers and the Staff of the Canara Industrial and Banking Syndicate Ltd, join in sending to their numerous Share holders, constituents, well wishers and friends, their hearty greetings for a Prosperous and Happy New Year and express gratitude for their increasing Cooparation, good-will and support in the past and solicit the same in the future

The Canara Industrial & Banking Syndicate Ltd., Udipi. (South India)

ಸಮರಭೂಮಿಯ ಸಂಚಾರ

ದಶಂಬರ ತಿಂಗಳ ಇಪ್ಪತ್ತನೇ ತಾರೀಕಿನ ಅಪರಾತ್ರಿಯಿಂದ ತೊಡಗಿ ಈಗ ಬಿಡದೆ ಅಂತರಾಂತರಗಳಲ್ಲಿ ಕಲ್ಕತ್ತಾ ಪಟ್ಟಣದ ಮೇಲೆ ಜಪಾನರು ಬಾಂಬೆಸೆಯುತ್ತಲೇ ಇದ್ದಾರೆ. ಇದರಿಂದ ಆದ ಆಸ್ತಿ, ಜನ, ವಸ್ತು ನಷ್ಟಗಳೇನೋ ಅತ್ಯಂತ ಕಡಿಮೆಯೆಂದು ತಿಳಿದು ಬರುವುದಾದರೂ, ನಿರಂತರದೀ ಧಾಳಿಯ ವಿಚಾರವೇನೋ ಬಹಳ ಗಮನೀಯವಿದೆ. ಸಾಲದ್ದಕ್ಕೆ ಚಿತಗಾಂಗ್ ಫೇಣಿ ಪ್ರದೇಶಗಳ ಮೇಲೂ ಜಪಾನರು ಬಾಂಬೆಸೆಯುತ್ತಲೇ ಇರುವರು, ಇದರೊಂದಿಗೆ ಹಲವು ವೈರಿ ವಿಮಾನಗಳು ಪೂರ್ವ ಬಂಗಾಲದ ಕೆಲ ಕಡೆಗಳಿಗೂ ಧಾಳಿಯಿಟ್ಟಿವೆ. ಈ ಎಲ್ಲಾ ವಿಮಾನ ಧಾಳಿಯ ವಿವರಗಳನ್ನೇನೋ ತಿಳಿದುಕೊಳ್ಳಲು ನಮಗೆ ಕುತೂಹಲವಿರುವುದು ಸಹಜ ಆದರೆ ಅಂತಹ ವಿವರಗಳನ್ನು ಕೊಡುವುದರಿಂದ ವೈರಿಗೆ ಸುದ್ದಿ ಸಿಕ್ಕಿ ಆತನಿಗೆ ಹೆಚ್ಚಿನ ಪ್ರಯೋಜನವಾದೀತೆಂಬ ಶಂಕೆಯಿಂದ, ಆ ವಿವರಗಳನ್ನು ಸದ್ಯ ಪ್ರಕಟಿಸಲಾಗುವುದಿಲ್ಲವೆಂದು, ಕಲ್ಕತ್ತದ ಕಡೆಯ ಮಿಲಿಟರಿ ಖಾತೆಯ ಅಧಿಕಾರೀ ಪ್ರಕಟಣೆಯೊಂದು ತಿಳಿಸುತ್ತದೆ.

ರಶ್ಯ ಆಫ್ರಿಕಗಳಲ್ಲಿ

ರಶ್ಯನ್ ಸೇನೆ ರೋಸ್ಟೋವಿಗೆ ಕೇವಲ ೮೦ ಮೈಲು ದೂರದಲ್ಲಿ ಬಂದು ನೆಲೆಯೂರಿದೆ. ಡಾನ್ ನದಿಯ ಮಧ್ಯಭಾಗದಲ್ಲಿ ರಶ್ಯನ್ ಸೈನ್ಯವು ಇನ್ನೂ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿತು ಸ್ಟಾಲಿನ್ ಗ್ರಾಡಿನ ಆಗ್ನೇಯದಲ್ಲಿ ಜರ್ಮನರಿಗೆ ಅಪಜಯವಾಯಿತು ಆ ಕಡೆಗೆ ಕೊಟೆಲ್ನಿಕೋವೋದಿಂದಲೂ ರಶ್ಯನರು ಮುನ್ನುಗ್ಗುತ್ತಿರುವರು. ಕಾಕಸಸಿನಲ್ಲಿ ಜರ್ಮನರು ರೋಸ್ಟೋವ್ ಕಡೆ ಗಾಬರಿಯಿಂದ ನೋಡುತ್ತಿದ್ದಾರೆ ಈ ನಗರದ ಪತನವಾದರೆ ಕಾಕಸಸಿನಲ್ಲಿರುವ ಜರ್ಮನ್ ಸೇನೆ ಕತ್ತರಿಸಲ್ಪಟ್ಟಂತಾಗುವುದು ಮಿತ್ರ ಸೈನ್ಯವು ಟ್ಯುನಿಸಿಗೆ ಕೇವಲ ೧೨ ಮೈಲು ಅಂತರದಲ್ಲಿದೆಯೆಂದು ಸುದ್ದಿ ದಕ್ಷಿಣ ಟ್ಯುನಿಶಿಯಾದಲ್ಲಿ ಜನರಲ್ ಜಿರಾಡರ ಸೈನ್ಯವು ಪಾಂಟ್ ಡಿಫಾಹ್ಸಿನ ವರೆಗೆ ನುಗ್ಗಿ ಒಂದು ಮಹತ್ವದ ಸ್ಥಳವನ್ನಾಕ್ರಮಿಸಿಕೊಂಡಿತು ಇಲ್ಲಿ ಜರ್ಮನರ ಪ್ರತಿಘಟನೆ ಜೋರಾಗಿಯೇ ಇದೆ ಜನರಲ್ ಜಿರಾಡರು ಉತ್ತರ ಆಫ್ರಿಕದಲ್ಲಿ ಫ್ರೆಂಚ್ ಹೈ ಕಮಿಶನರಾಗಿ ನೇಮಕವಾಗಿದ್ದಾರೆ ಡಾರ್ಲಾನ್ ಕೊಲೆಯಾದ ಮೇಲೆ ಜಿರಾಡರಿಗೆ ಈಗ ಮನ್ನಣೆ ದೊರಕಿದೆ ಟ್ಯುನಿಸ್ ಬಿಜರ್ಟಾ ನಡುವಿನ ವೈರಿ ಠಾಣ್ಯಗಳಿಗೆ ಮಿತ್ರ ವೈಮಾನಿಕರು ಒಂದೇ ಸಮನೆ ಬಾಂಬಿಕ್ಕುತ್ತಿರುವರು ಲಿಬಿಯದಲ್ಲಿ ಬ್ರಿಟಿಷ್ ಸೇನೆ ರೊಮೆಲನನ್ನು ಓಡಿಸುತ್ತಾ ಸಿರ್ಟೆ ನಗರವನ್ನೂ ಆಕ್ರಮಿಸಿಕೊಂಡಿತು ಅತ್ತ ಲಿಬಿಯದ ದಕ್ಷಿಣದ ಝೂಡ್ ಎಂಬಲ್ಲಿನ ಫೆಝೂ ಪ್ರಾಂತದಲ್ಲಿ ಡಿಗೋಲೆ ಸೈನ್ಯಗಳೂ ವೈರಿಗಳನ್ನು ಮುತ್ತಿರುವವಂತೆ ಫೆಝೂ ಟ್ರಿಪೋಲಿಗೆ ೫೦೦ ಮೈಲು ದೂರದಲ್ಲಿದೆ ನ್ಯೂಗಿನಿಯ ಬೂನಾ ಪ್ರದೇಶದ ಬಳಿಯಲ್ಲಿಯೂ ಹೋರಾಟ ನಡೆಯುತ್ತಿದೆ

ಡಾರ್ಲಾನ್‌ರ ಕೊಲೆ

ಹಿಂದೆ ಹಿಟ್ಲರ್ ಪಕ್ಷಪಾತಿಯಾಗಿದ್ದು ಇತ್ತೀಚೆಗೆ, ಮಿತ್ರಪಕ್ಷಕ್ಕೆ ಬಂದಿದ್ದ ಫ್ರಾನ್ಸಿನ ಡಾರ್ಲಾನ್‌ರನ್ನು ಅಲ್ಜಿಯರ್ಸಿನ ಹೈ ಕಮಿಶನ್ ಕಚೇರಿಯಲ್ಲಿ ಓರ್ವನು ಗುಂಡು ಹಾರಿಸಿ ಕೊಲೆ ಮಾಡಿದನೆಂದೂ ಕೊಲೆಗಾರನನ್ನು ಬಂಧಿಸಿ ಮರಣದಂಡನೆ ವಿಧಿಸಲಾಗಿದೆಯೆಂದೂ ವಾರ್ತೆಯಿದೆ ಸಾಯುವಾಗ ಡಾರ್ಲಾನರಿಗೆ ೬೧ ವರ್ಷ ಪ್ರಾಯ ೧೮೯೯ರಲ್ಲಿ ಇವರು ಫ್ರಾನ್ಸಿನ ನೌಕಾ ಪಡೆಯನ್ನು ಸೇರಿದರು ಈ ಯುದ್ಧಾರಂಭದಲ್ಲಿ ಫ್ರೆಂಚ್ ನೌಕಾಪಡೆಯ ದಳಪತಿಯಾಗಿದ್ದರು. ಫ್ರಾನ್ಸ್ ಪತನವಾದ ಮೇಲೂ ಆ ಅಧಿಕಾರದಲ್ಲಿಯೇ ಇದ್ದರು ಒಂದು ವರ್ಷದ ಮೇಲೆ ವಿಚಿ ಮಂತ್ರಿಮಂಡಳದ ಉಪಮಂತ್ರಿಯಾಗಿದ್ದರು ಮಾರ್ಶಲ್ ಪಿಟೇನರ ಉತ್ತರಾಧಿಕಾರಿಯಾಗಿ ನೇಮಿಸಲ್ಪಟ್ಟರು ಇವರು ಅಧಿಕಾರದಲ್ಲಿದ್ದಾಗ ಮಿತ್ರ ರಾಷ್ಟ್ರಗಳು ಸಿರಿಯಾ ಲೆಬನಾನ್‌ಗಳನ್ನು ಆಕ್ರಮಿಸಲು ಪ್ರಯತ್ನಿಸಿದಾಗ ಮಿತ್ರ ಸೈನ್ಯವನ್ನೆದುರಿಸಿ ಕಾದಾಡಲು ಇವರು ಫ್ರೆಂಚ್ ಸೈನ್ಯಕ್ಕೆ ಆಜ್ಞೆಯಿತ್ತಿದ್ದರು ಈಚೆಗೆ ಫ್ರೆಂಚ್ ಉತ್ತರ ಆಫ್ರಿಕಕ್ಕೆ ಅಮೆರಿಕನ್ ಸೈನ್ಯ ಬಂದಿಳಿದಾಗ, ಲಾವಲರಲ್ಲಿ ಮತಭೇದವುಂಟಾಗಿ ಅವರು ಮಿತ್ರಪಕ್ಷವನ್ನು ಸೇರಿಕೊಂಡರು, ಫ್ರೆಂಚ್ ಸೈನ್ಯಗಳು ಫ್ರೆಂಚ್ ಉತ್ತರ ಆಫ್ರಿಕದ ಪ್ರಜೆಗಳೂ ಮಿತ್ರ ರಾಷ್ಟ್ರಗಳೊಡನೆ ಸಹಕರಿಸಿ ವರ್ತಿಸಬೇಕೆಂದು ಮನವಿಮಾಡಿಕೊಂಡರು. ಕಳೆದ ಮಹಾ ಯುದ್ಧದಲ್ಲಿಯೂ ಇವರು ತಮ್ಮ ಸೇವೆ ಸಲ್ಲಿಸಿದ್ದಾರೆ ಡಾರ್ಲಾನರು ಫ್ರಾನ್ಸ್ ಪತನವಾದ ಮೇಲೂ ಹಿಟ್ಲರ್ ಪಕ್ಷಪಾತಿಯಾಗಿಯೇ ಇದ್ದು, ಈಚೆಗೆ ಮಿತ್ರರ ಕಡೆಗೆ ಬಂದು ಸೇರಿದ ವಿಷಯ ಮಿತ್ರ ರಾಷ್ಟ್ರಗಳಲ್ಲಿಯೇ ಹಲವರಿಗೆ ಸಂಶಯ ಹುಟ್ಟಿತ್ತು ರಶ್ಯ, ಅಮೆರಿಕ, ಬ್ರಿಟನುಗಳ ಕೆಲವರು ಅವರನ್ನು ಹಿಟ್ಲರನ ಗುಪ್ತಚರರೆಂದೂ, ನಂಬಬೇಡಿರೆಂದೂ ಎಚ್ಚರಿಕೆಯಿತ್ತಿದ್ದರು ಅಂತೂ ಮಿತ್ರರಲ್ಲಿ ಸಂಶಯ ನೆಲೆಯೂರಿದ್ದಂತೆಯೇ ಫ್ರಾನ್ಸನ್ನು ಬಿಟ್ಟು ಮಿತ್ರ ಪಕ್ಷಕ್ಕೆ ಬಂದು ಸೇರಿದ್ದಂತೆಯೇ, ಯಾವ ಮಹತ್ವಾಕಾಂಕ್ಷೆ ಅವರಲ್ಲಿತ್ತೋ ನಮಗೆ ಹೇಳಬರುವುದಿಲ್ಲ - ಇಂದು ಡಾರ್ಲಾನರು ದುರ್ಮರಣಕ್ಕೆ ತುತ್ತಾದುದು ತುಂಬಾ ವಿಷಾದಕರವಿದೆ ಜಗತ್ತಿನ ಯುದ್ಧ ವಿಭೂತಿಗಳಲ್ಲಿ ಅಗ್ರಗಣ್ಯ ಸ್ಥಾನವನ್ನೇರಿದ ಒಂದು ವ್ಯಕ್ತಿ ಇಂದು ಹೀಗೆ ಕಣ್ಮರೆಯಾಗಿದೆ!

ಫ್ರಾನ್ಸಿನ ಭವಿಷತ್ತು

ಡಾರ್ಲಾನರ ಕೊಲೆಯಾದೀ ಮಹತ್ವದ ಪ್ರಸಂಗದಲ್ಲಿ ಫ್ರಾನ್ಸಿನ ಭವಿಷ್ಯತ್ತನ್ನು ಕುರಿತು ವಿಚಾರಿಸುವುದು ಸಮಯೋಚಿತವಿದೆ ಫ್ರಾನ್ಸು ಜರ್ಮನಿಯ ವಶವಾಗಿದ್ದು ಅದು ಜರ್ಮನಿ ಹೇಳಿದಂತೆಯೇ ಕೇಳಬೇಕಾಗಿದೆಯೆಂಬ ವಿಷಯವೆಲ್ಲರಿಗೂ ವಿದಿತವೇ ಹಿಟ್ಲರನ ವಿರುದ್ಧ ನಿಂತ ಡಿಗೋಲೆ ಊರು ಬಿಟ್ಟು ಹೋಗಿದ್ದಾನೆ, ಡಾರ್ಲಾನ್ ಕೊಲೆಯಾಗಿದೆ ವಿಚಿ ಸರಕಾರದ ಮುಖ್ಯಾಧಿಕಾರಿ ಲಾವಲ್ ಹಿಟ್ಲರನ ಭೇಟಿಯಾಗಿ ವಿಚಾರವಿನಿಮಯ ಮಾಡಿಕೊಂಡಿರುವನು ಫ್ರಾನ್ಸಿನ ಭವಿಷ್ಯ ಕಾರ್ಯಕ್ರಮ ಈ ಭೇಟಿಯ ಸಮಯ ನಿಶ್ಚಿತವಾಗಿದೆಯಂತೆ ಫ್ರಾನ್ಸು ಈಗಾಗಲೇ ಮಿತ್ರ ರಾಷ್ಟ್ರಗಳ ವಿರುದ್ಧ ಯುದ್ಧ ಸಾರಿ ಆಫ್ರಿಕದಲ್ಲಿರುವ ತನ್ನ ವಸಾಹತ್ತನ್ನು ಪುನಃ ಪಡೆಯಲು ಪ್ರಯತ್ನಿಸಬಹುದು ಈಗ ಟುಲಾನದಲ್ಲಿರುವ ಫ್ರೆಂಚ್ ನೌಕಾದಳದ ಸಹಾಯವನ್ನೂ ಪಡೆಯಬಹುದು ಫ್ರೆಂಚ್ ನೌಕಾಪಡೆ ಇದುವರೆಗೆ ಜರ್ಮನ್ ಪಕ್ಷ ಸೇರಲಿಕ್ಕೆ ನಿರಾಕರಿಸಲು ದಳಪತಿ ಡಾರ್ಲಾನರೇ ಮುಖ್ಯ ಕಾರಣರಾಗಿದ್ದು ಈಗ ಅವರ ಕೊಲೆಯಾಗಿ ಆ ಕಾರ್ಯವೂ ಸುಸೂತ್ರವಾಗಬಹುದು. ಮೊನ್ನೆ ಮೊನ್ನೆ ಟುಲಾನದಲ್ಲಿರುವ ಫ್ರೆಂಚ್ ಹಡಗಗಳು ಆತ್ಮಹತ್ಯ ಮಾಡಿಕೊಳ್ಳಲೂ ಡಾರ್ಲಾನರೇ ಕಾರಣವೆಂದು ಹೇಳಲಾಗುತ್ತದೆ ಅಂತೂ ಡಾರ್ಲಾನ್ ಮರಣದಿಂದ ವಿಚಿ ಫ್ರಾನ್ಸಿಗೆ ಹಾಗೂ ಹಿಟ್ಲರ್ ಕಾರ್ಯಕ್ಕೆ ಫ್ರೆಂಚ್ ಪ್ರಭುತ್ವದಲ್ಲಿ ಹೆಚ್ಚಿನ ಸ್ಥಾನಭದ್ರತೆಯೊದಗಿದಂತಾಯಿತು ಡಿಗೋಲೆ ಸ್ವತಂತ್ರ ಫ್ರೆಂಚರನ್ನು ಕಟ್ಟಿಕೊಂಡು ಹಿಟ್ಲರ ವಿರುದ್ಧವಾಗಿ ಎಷ್ಟು ಪ್ರಚಾರ ನಡೆಸಿದರೂ ಅದರಿಂದ ಅಷ್ಟರ ಮಟ್ಟಿಗೆ ಜರ್ಮನಿಗೆ ತೊಂದರೆಯಾದೀತೆಂದು ಊಹಿಸಬರುವುದಿಲ್ಲ ಹೇಗೂ ಸ್ವಾತಂತ್ರ್ಯವನ್ನು ಕಳಕೊಂಡು, ಹಿಟ್ಲರ್ ದಾಸರಾಗಿ ಕುಣಿದಾಡುವ ಫ್ರೆಂಚರು ಲಾವಲರ ದಾಸ್ಯದ ಮುಂದಾಳುತ್ವದಲ್ಲಿ ಇನ್ನೆಂಥಾ ಸಾಹಸಕ್ಕೆ ಕೈಹಾಕುವರೆಂಬುದೇ ನೋಡತಕ್ಕದ್ದಿದೆ

ಸ್ಪೈನಿಗೆ ಕಾಲು ಚಾಚಿದೆ?-

ಜರ್ಮನ್ ಸೇನೆಯು ಈಗಾಗಲೇ ತಟಸ್ಥ ಸ್ಪೈನಿಗೂ ಕಾಲು ಚಾಚುವ ಕಾರ್ಯ ಕೈಕೊಂಡಿದೆಯೆಂದು ಒಂದು ವಾರ್ತೆಯಿದೆ ಪಶ್ಚಿಮ ಭೂಮಧ್ಯ ಸಮುದ್ರದಲ್ಲಿ ಸ್ಪೈನಿಗೆ ಸೇರಿದ ಬೆಲೆರಿಕ ದ್ವೀಪಗಳನ್ನು ತಮಗೆ ಬಿಟ್ಟುಕೊಡಬೇಕೆಂದು ಜರ್ಮನಿ ಸ್ಪೈನನ್ನು ಒತ್ತಾಯಪಡಿಸುತ್ತಿದೆಯೆಂದು ಅಂಕಾರಾದ ಸುದ್ದಿ ಸಾರುವುದು ಈ ದ್ವೀಪಗಳು ಸ್ಪೈನಿಗೆ ಪೂರ್ವದಲ್ಲಿದ್ದು ಅಲ್ಜೀರಿಯದ ಉತ್ತರಕ್ಕೆ ಇವೆ ಸಂದರ್ಭವೊದಗಿದರೆ ಇದನ್ನು ಬಲಾತ್ಕಾರದಿಂದಾದರೂ ಜರ್ಮನರು ಕೈವಶಪಡಿಸಿಕೊಳ್ಳುವುದರಲ್ಲಿದ್ದಾರಂತೆ! ಉತ್ತರ ಆಫ್ರಿಕದಲ್ಲಿ ಮಿತ್ರರು ಮುಂದುವರೆಯುತ್ತಿರುವುದರಿಂದ ಜರ್ಮನರು ಸ್ಪೈನ್ ಪೋರ್ಚುಗಲನ್ನು ಅಥವಾ ಬಲೆರಿಕ್ ದ್ವೀಪಗಳನ್ನು ಹಿಡಿದುಕೊಳ್ಳಲು ಆಶೆಯುಳ್ಳವರಾಗಿದ್ದಾರೆಂದು ತಿಳಿಯುತ್ತದೆ. ಬಲೆರಿಕ್ ಸ್ಪೈನಿನ ವಶವಿರುವ ದ್ವೀಪ ಸಮುದಾಯ. ಈ ದ್ವೀಪಗಳನ್ನು ಜರ್ಮನರು ಕೈವಶಮಾಡಿಕೊಂಡರೆ ಪಶ್ಚಿಮ ಭೂಮಧ್ಯ ಸಮುದ್ರದಲ್ಲಿ ಮಿತ್ರರ ನೌಕಾ ದಳಗಳಿಗೆ ಪ್ರಬಲ ಆತಂಕವನ್ನುಂಟುಮಾಡಬಹುದು. ಓರಾನ್ ಆಲ್ಜೀರ್ಸಿನಂತಹ ಮಹತ್ವದ ಠಾಣ್ಯಗಳನ್ನು ಸ್ವಾಧೀನಪಡಿಸಲು ಜರ್ಮನಿಗೆ ಆಗ ಸುಲಭವಾಗುವುದು ಸ್ಪೈನಿನ ಸರ್ವಾಧಿಕಾರಿ ಫ್ರಾಂಕೋ ಇಂದಿನ ತನ್ನ ಸ್ಥಾನ ಗಳಿಸಿಕೊಳ್ಳಲು ಹಿಟ್ಲರ್ ಮುಸಲನಿಗಳ ಬೆಂಬಲ ಪಡಕೊಂಡು ಅವರಿಗೆ ಋಣಿಯಾಗಿದ್ದಾನೇನೋ ನಿಜ ಆ ವಿಷಯ ತಿಳಿದೇ ಮಿತ್ರರಾದರೂ ಆತನನ್ನು ಇದುವರೆಗೆ ಕೆಣಕಹೋಗಿಲ್ಲ. ಏಕೆಂದರೆ ಸ್ಪೈನಿನ ತಾಟಸ್ಥ್ಯ ಭಂಗವಾಗಿ ಆತನು ಶತ್ರುಪಕ್ಷ ಸೇರಿದರೆ ಮಿತ್ರರ ಯುದ್ಧ ಯತ್ನಕ್ಕೆ ಆತಂಕವುಂಟಾಗುವುದಾಗಿ ಸ್ಪೈನಿನ ತಾಟಸ್ಥ್ಯವನ್ನು ಎಲ್ಲರೂ ಒಪ್ಪಿಕೊಂಡರು. ಇತ್ತೀಚೆಗೆ ಹಿಟ್ಲರನೇ ಮಿತ್ರರು ಸ್ಪೈನನ್ನಾಕ್ರಮಿಸ ಬರುವರೆಂದು ಪ್ರಚಾರ ನಡೆಸುತ್ತಾನೆ, ಹಾಗೆ ಹೇಳುತ್ತಾ ಸ್ವತಃ ಆಕ್ರಮಿಸ ಹೋಗುವುದೂ ಒಂದು ಸಮರೋಪಾಯವಾಗಿದೆ ಅಂತೂ ಇದುವರೆಗೆ ತಟಸ್ಥ ನೀತಿ ಕಾಪಾಡಿಕೊಂಡಿದ್ದ ಸ್ಪೈನ್ ಪೋರ್ಚುಗಲ್‌ಗಳಿಗೂ ಈಗ ಬವಣೆ ಬರುವಂತಿದೆ ಈ ಸಂದರ್ಭ ಸ್ಪೈನ್ ಪೋರ್ಚುಗಲ್‌ಗಳೂ ಆತ್ಮರಕ್ಷಣೆಯ ಪ್ರಯತ್ನ ಮಾಡಬಹುದು ಸ್ಪೈನಿನ ವಿದೇಶ ಮಂತ್ರಿ ಪೋರ್ಚುಗಲಿಗೆ ಹೋಗಿ ವಿಚಾರವಿನಿಮಯ ಮಾಡಿ ಮರಳಿಬಂದ ವಿಷಯವೂ ಮಹತ್ವದ್ದೇ ಇದೆ ಅಂತೂ ಭೂಮಧ್ಯ ಸಮುದ್ರದಲ್ಲಿ ಮತ್ತೊಮ್ಮೆ ಭಾರೀ ಕೋಲಾಹಲವುಂಟಾಗುವುದರಲ್ಲುಂಟು

ಸೊಲಮನ್ ಯುದ್ಧದ ಮಹತ್ವ

ಜಪಾನರು ಸ್ವಾಧೀನಪಡಿಸಿದ್ದ ಸೊಲೊಮನ್ ದ್ವೀಪ ಪಂಕ್ತಿಯಲ್ಲಿ ಅಮೆರಿಕನರು ಆರು ದ್ವೀಪಗಳನ್ನು ಮರಳಿಪಡೆದರು ಈ ಜಯವು ಅತ್ಯಂತ ಮಹತ್ವದಿದೆ ಆಗಸ್ಟ್ ತಿಂಗಳಲ್ಲಿ ಮೂರು ವಾರಗಳ ಭೀಕರ ಹೋರಾಟದ ನಂತರ ಈ ದ್ವೀಪಗಳು ಮಿತ್ರರ ಕೈವಶ ಬಂದಿವೆ ಇದರಿಂದ ಆಸ್ಟ್ರೇಲಿಯದ ಮೇಲೆ ಜಪಾನಿನ ಧಾಳಿಯ ಭೀತಿ ದೂರವಾದಂತಾಗಿದೆ ಈ ದ್ವೀಪಗಳನ್ನು ಮರಳಿ ಪಡಕೊಳ್ಳಲು ಜಪಾನರು ನಾಲ್ಕು ಸಲ ದಾಳಿಯಿಟ್ಟು, ಅಸಂಖ್ಯ ಕಷ್ಟ ನಷ್ಟಗಳನ್ನು ಅನುಭವಿಸಿದ್ದು ಮಾತ್ರ ಒಂದಲ್ಲದೆ ಪ್ರಯೋಜನವೇನೂ ಪಡೆಯಲಿಲ್ಲ ಮಿತ್ರಪಕ್ಷದ ಮಹತ್ವದ ಯುದ್ಧದೃಷ್ಟಿಯಿಂದ ಪರೀಕ್ಷಿಸಿದರೆ ಆಫ್ರಿಕದ ಭೂವಿಜಯದಷ್ಟೇ ಈ ಸಮುದ್ರ ವಿಜಯವೂ ಪ್ರಾಮುಖ್ಯವಾಗಿದೆ ಪೆಸಿಫಿಕ್ಕಿನ ಈ ಕಠಿಣ ಹೋರಾಟದಲ್ಲಿ ಅಮೆರಿಕಾ ನೌಕಾದಳವು ತನ್ನ ಶಕ್ತಿ ಸಾಮರ್ಥ್ಯವನ್ನು ತೋರಿಸಿದ್ದು ಮಾತ್ರವಲ್ಲದೆ ಮಹತ್ವದ ಪ್ರದೇಶವನ್ನೂ ಪಡಕೊಂಡಿದೆ ಜಪಾನರ ಕೊನೆಯ ಧಾಳಿ ನವಂಬರ ಅಂತ್ಯ ದಶಂಬರ ಆದಿಯಲ್ಲಿ ಆಯಿತು ಒಟ್ಟು ನಾಲ್ಕುಸಲದ ನೌಕಾ ಧಾಳಿಯಲ್ಲಿ ಜಪಾನು ೧೪೩ ಹಡಗಗಳನ್ನು ಕಳಕೊಂಡಿತೆಂದು ತಿಳಿದುಬರುವುದು ಗಣನೀಯ ನಷ್ಟವಾಗಿದೆ! ಆಗಸ್ಟ್ ಅಂತ್ಯದೊಳಗೆ ಗುಡಾಲಕನಾರ, ತುಲಾಗಿ, ಗಾವುಟು, ಟಿಂಬೋಗೆ, ಮೆಕಂಬಾ, ಫ್ಲೊರಿಡಾಗಳಂಥಾ ಮಹತ್ವದ ದ್ವೀಪಗಳು ಮಿತ್ರರ ಕೈವಶ ಬಂದವು ನ್ಯೂಗಿನಿಯಲ್ಲಿ ಜಪಾನರ ಸ್ಥಾನಭದ್ರತೆಯೂ ಬಹುಮಟ್ಟಿಗೆ ಈಗ ಸಡಿಲಾಗಿದೆ. ಸೊಲಮನ್ ನೌಕಾ ಅಪಜಯದಿಂದಾಗಿ ನ್ಯೂಗಿನಿಯಿಂದಲೂ ಜಪಾನರು ಹೊರ ಬೀಳಬೇಕಾಗುತ್ತದೆ ಜಪಾನು ನ್ಯೂಗಿನಿಯನ್ನೂ ಕಳೆದುಕೊಂಡರೆ ಆಸ್ಟ್ರೇಲಿಯಕ್ಕೆ ಜಪಾನ್ ಧಾಳಿಯ ಭೀತಿ ಮತ್ತೂ ಕಡಿಮೆ ಆಗುವುದು ನ್ಯೂಗಿನಿ ಸೊಲಮನ್‌ಗಳೆರಡೂ ಅಮೆರಿಕನರಿಗೆ ದೊರೆತರೆ ಫಿಲಿಪೈನನ್ನೂ ಬೇಗನೇ ಸ್ವಾಧೀನಪಡಿಸಬಹುದು, ಹಾಗೂ ಈಗ ಜಪಾನಿನಿಂದ ಹಿಂದೀ ಸಾಗರಕ್ಕೆ ಬರುವ ಹಡಗಗಳಿಗೆ ದೊಡ್ಡ ಗಂಡಾಂತರ ಉಂಟಾಗಿರುವುದು. ಈ ವಿಜಯದಿಂದ ಆಸ್ಟ್ರೇಲಿಯ ಅಮೆರಿಕ ಸಂಬಂಧವೂ ಸಮೀಪವಾಯಿತು ಅಮೆರಿಕನರಿಗೆ ಡಚ್ ಇಂಡೀಸನ್ನಾಕ್ರಮಿಸಲೂ ಇದರಿಂದ ಯತ್ನಿಸಬಹುದು. ಈ ದ್ವೀಪಗಳನ್ನಾಕ್ರಮಿಸುವುದರಿಂದ ಟೋಕಿಯೋದ ಮೇಲೆ ಬಾಂಬೆಸೆಯಲು ಸುಲಭವಾಗುತ್ತದೆ.

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು, ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು, ಹಾಗಾಗ ಬೇಕಾದರೆ ಪ್ರತಿದಿನ ರಾತ್ರಿ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು ಕೊಬ್ಬು ಬೆಳೆಯುವುದಿಲ್ಲ ಹೀಗೆ ಇದು ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಬೈಲ್ ಬೀನ್ಸು ಬಾಟ್ಲಿ ಒಂದರ 1 ರೂಪಾಯಿ ಬೆಲೆಗೆ ಸಿಗುವುದು

BILE BEANS

ಬೈಲ್ ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು.

ಸ್ವದೇಶಾಭಿಮಾನಿ

ತಾರೀಕು 25—12—1942

ಹೊಸ ರಾಯಭಾರಿ

ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರು ಭಾರತಕ್ಕೆ ತಮ್ಮ ರಾಯಭಾರಿಯಾಗಿ ವಿಲಿಯಂ ಫಿಲಿಪ್ಸರನ್ನು ನೇಮಕ ಮಾಡಿದ್ದಾರೆ. ಫಿಲಿಪ್ಸರು ಹಲವು ದೇಶಗಳಲ್ಲಿ ರಾಯಭಾರ ಮಾಡಿದ ಅನುಭವಶಾಲಿಗಳಾಗಿದ್ದಾರಂತೆ! ಹಾಗಾಗಿ ಭಾರತ ಬ್ರಿಟನುಗಳಲ್ಲಿ ಬಾಂಧವ್ಯವನ್ನುಂಟುಮಾಡುವಲ್ಲಿ ಈ ಹೊಸ ರಾಯಭಾರಿ ಯಶಸ್ವಿಗಳಾದಾರೇ ಎಂದು ಹಲವರು ಆಶಾತುರರಾಗಿರುವರು

ಕಳೆದ ಎಪ್ರಿಲಿನಲ್ಲಿ ಸರ್ ಲೂವಿ ಜಾನ್ಸನರು ಭಾರತಕ್ಕೆ ಅಮೇರಿಕದ ರಾಯಭಾರಿಯಾಗಿ ಬಂದ ವಿಷಯ ನಮಗಿನ್ನೂ ಮರೆತು ಹೋಗಿಲ್ಲ. ಅವರು ಇಲ್ಲಿನ ಪರಿಸ್ಥಿತಿ ವಿಷಮಕ್ಕೇರುವ ಕಾಲದಲ್ಲಿಯೇ ಬಂದಿದ್ದರು. ಅದರ ಪರಿಹಾರದ ಬಗ್ಗೆ ಏನೇನು ಪ್ರಯತ್ನ ಮಾಡಿದರೋ ಅದೊಂದೂ ಇನ್ನೂ ಬಹಿರಂಗವಾಗಿಲ್ಲ. ಅಂತೂ ಏನು ಸಾಹಸ ಮಾಡಿದರೂ ಪ್ರಯೋಜನ ತೋರದೆ 'ಬಂದ ದಾರಿಗೆ ಸುಂಕ ಇಲ್ಲ'ದೆ ಅವರು ಹೊರಟು ಹೋಗಬೇಕಾಯಿತು!

'ಭಾರತದ ಸಮಸ್ಯೆ ಇಂದು ಬ್ರಿಟನಿನಂತೆ ಅಮೇರಿಕದ್ದೂ ಆಗಿದೆ' ಎಂದು ಲುಯಿ ಫಿಶರರು ಅಮೇರಿಕನರನ್ನು ಎಚ್ಚರಿಸಿದ್ದಾರೆ. ಇತ್ತೀಚೆಗೆ ಭಾರತದ ವಿಷಯ ಪ್ರಚಂಡ ಪ್ರಚಾರವನ್ನು ಅವರು ಅಮೇರಿಕದಲ್ಲಿ ಮಾಡುತ್ತಿದ್ದಾರೆ. ಫಿಶರರ ಲೇಖನವನ್ನೋದಿಕೊಂಡು ಫಿಲಿಪ್ಸರು ಬರಬೇಕು. ಜಾನ್ಸನರಿಗಿಂತ ಫಿಲಿಪ್ಸರಿಗೆ ಅಧಿಕ ಅಧಿಕಾರ ಕೊಡಲಾಗಿದೆಯೆಂದೂ ಹೇಳಲಾಗಿದೆ. ಈ ಅಧಿಕ ಅಧಿಕಾರದಲ್ಲಿ ಫಿಲಿಪ್ಸರು ಏನೆಲ್ಲಾ ಕಾರ್ಯ ಮಾಡಲು ಸಮರ್ಥರಾಗುವರೋ ನೋಡಬೇಕು.

ಸಿಲೋನಿನ ಸ್ವಾತಂತ್ರ್ಯ

ಸಿಲೋನ್ ರಾಷ್ಟ್ರೀಯ ಕಾಂಗ್ರೆಸಿನ ೨೩ನೆಯ ಬಹಿರಂಗ ಅಧಿವೇಶನದಲ್ಲಿ, ವೆಸ್ಟ್ ಮಿನಿಸ್ಟರ್ ಕಾಯಿದೆಯಲ್ಲಿ ಹೇಳಿದ ಮಾಸಾಹತ್ತು ಸ್ವರಾಜ್ಯವನ್ನಳಿದು, ಸಂಪೂರ್ಣ ಸ್ವರಾಜ್ಯ ಸಂಪಾದನೆಯನ್ನೇ ಧ್ಯೇಯವಾಗಿಟ್ಟುಕೊಳ್ಳುವ ಮಹತ್ವದೊಂದು ನಿರ್ಣಯವು ಅಂಗೀಕೃತವಾಯಿತು. ಈ ನಿರ್ಣಯದಂತೆ ಆ ಕಾಂಗ್ರೆಸಿನ ಘಟನೆಯಲ್ಲಿಯೂ ತಿದ್ದುಪಡಿ ಮಾಡಲಾಗಿರುವುದು. ಇದು ಮಾತ್ರವಲ್ಲದೆ ಯುದ್ಧ ಮುಗಿದ ಬಳಿಕ ಸಿಲೋನಿಗ ಸ್ವಾತಂತ್ರ್ಯ ಕೊಡುವುದಾಗಿ ಸಂಯುಕ್ತ ರಾಷ್ಟ್ರಗಳು ಸಾರಬೇಕೆಂದೂ ಒಂದು ನಿರ್ಣಯ ಆಗಿರುವುದು. ಈ ನಿರ್ಣಯಗಳು ಅತ್ಯಂತ ಮಹತ್ವದ್ದಿವೆ.

ಸಣ್ಣ ರಾಷ್ಟ್ರದವರಾದರೂ, ಸಿಂಹಳೀಯರು ಇಂದಿನೀ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳ ಯುಗದಲ್ಲಿ ತಮ್ಮ ದೇಶದ ಸ್ವಾತಂತ್ರ್ಯವನ್ನು ಬಯಸುತ್ತಿರುವುದು ನ್ಯಾಯವೇ ಆಗಿದೆ. ಭಾರತದಂಥಾ ದೊಡ್ಡ ರಾಷ್ಟ್ರವು ಅರ್ಧ ಶತಮಾನಕ್ಕಿಂತ ಮೇಲ್ಪಟ್ಟು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವುದಿದ್ದರೂ, ಭಾರತೀಯರ ಕೇಳಿಕೆಯನ್ನು ಕುಂಟುನೆವಹೂಡಿ ಮುಂದೆ ಮಾಡುವ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಸಿಲೋನಿನ ಸ್ವಾತಂತ್ರ್ಯದ ಕಡೆಗೆ ಬೇಗನೇ ಗಮನ ಕೊಡುವರೆ?

ಸ್ವದೇಶ ಸಮಾಚಾರ

ಅಖಿಲ ಭಾರತದಲ್ಲಿ ಒಂದು ದಿನ ಪತ್ರಿಕೆಗಳಿಲ್ಲ!

ಎಂಬುದಾಗಿ ಅಖಿಲಭಾರತ ಸಂಪಾದಕರ ಸಮ್ಮೇಳನದ ಸ್ಥಾಯಿ ಸಮಿತಿ ನಿರ್ಣಯಿಸಿದೆ. ಈ ಸಮಿತಿಗೂ ಸರಕಾರಕ್ಕೆ ಆದ ಒಪ್ಪಂದದ ಅನೇಕ ಅಂಶಗಳಿಗೆ ಕೆಲವು ಪ್ರಾಂತ ಸರಕಾರಗಳು ತಪ್ಪಿ ವರ್ತಿಸುವುದರ ನಿಷೇಧಾರ್ಥವಾಗಿ ಈ ನಿರ್ಣಯವಾಗಿದೆ. ಭಾರತದ ಎಲ್ಲಾ ಪತ್ರಿಕೆಗಳು ಅಧ್ಯಕ್ಷರು ನಿರ್ಣಯಿಸಿದ ಒಂದು ದಿನ ತಮ್ಮ ಪತ್ರಿಕೆಗಳನ್ನು ಪ್ರಕಟಿಸಕೂಡದಾಗಿ ವಿನಂತಿಯಿದೆ. ಅಧ್ಯಕ್ಷರು ಮನೆ ಅಪ್ಪಣೆ ಕೊಡುವ ವರೆಗೆ ಅಥವಾ ಸರಕಾರನಿರ್ಬಂಧವನ್ನು ಹಿಂತೆಗೆವ ವರೆಗೆ, (೧) ಸರಕಾರದಿಂದ ಅಥವಾ ಸರಕಾರೀ ಕಚೇರಿಯಿಂದ ಹೊರಡುವ ಯಾವ ಪ್ರಕಟಣೆಗಳನ್ನೂ ಪ್ರಕಟಿಸಕೂಡದು (೨) ಹೊಸ ವರ್ಷದ ಬಿರುದು ಪ್ರಶಸ್ತಿಗಳನ್ನೂ ಪ್ರಕಟಿಸಕೂಡದು (೩) ಬ್ರಿಟಿಷ್ ಸರಕಾರದ, ಇಂಡಿಯಾ ಸರಕಾರದ ಮತ್ತು ಮತ್ತು ಪ್ರಾಂತ ಸರಕಾರಗಳ ಸದಸ್ಯರೂ ಅಧಿಕಾರಿಗಳು ಮಾಡುವ ಭಾಷಣವಾಗಿ ಇವುಗಳನ್ನೂ ಪ್ರಕಟಿಸಕೂಡದು

ರಾಜಾಜಿಯೂ ಜಿನ್ನರಂತೆ

ಹಿಂದುಗಳು ಮತ್ತು ಮುಸಲ್ಮಾನರು ಒಂದೇ ರಾಷ್ಟ್ರದವರಲ್ಲವೆಂದೂ ಭಿನ್ನ ಭಿನ್ನ ರಾಷ್ಟ್ರೀಯರೆಂದು ಬಹಿರಂಗವಾಗಿ ಹೇಳಿದರೆಂಬುದಾಗಿ 'ಲೀಡರ್' ಪತ್ರಿಕೆ ಬರೆಯುತ್ತದೆ

ಹಿಂದುಸ್ಥಾನ ಸರಕಾರದ

ಗೃಹಮಂತ್ರಿ ಸರ್ ರಜಿನಾಲ್ಡ್ ಮ್ಯಾಕ್ಸ್‌ವೆಲ್ಲರು ಸೇವಾ ನಿವೃತ್ತರಾಗಿ ಅವರ ಸ್ಥಾನಕ್ಕೆ ಸರ್ ಮಹಮ್ಮದ್ ಜಾಫರುಲ್ಲಾ ಖಾನರು ಬರುವರೆಂದು ಸುದ್ದಿ. ಅವರ ಸ್ಥಳಕ್ಕೆ ಅಲ್ಲಾಬಾದ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ನೇಮಕವಾಗುವರಂತೆ. ವೈಸರಾಯರ ಕಾರ್ಯಕಾರೀ ಮಂಡಳವನ್ನು 'ಇನ್ನೂ ವಿಸ್ತರಿಸಿ ಗೃಹ ಮತ್ತು ಆರ್ಥಿಕ ಖಾತೆಗಳು ಭಾರತೀಯರಿಗೇ ಒಪ್ಪಿಸಲ್ಪಡುವುದೆಂದು ಬೇರೊಂದು ಸುದ್ದಿಯಿದೆ

ಭಾರತವೊಂದು ದೇಶ

ಅದಕ್ಕೆ ಒಂದೇ ಸರಕಾರವಿರಬೇಕೆಂದು ವೈಸರಾಯರು ಹೇಳಿದ್ದನ್ನು ಸರ್ ಜ ಜಿರುದ್ದೀನರು ಖಂಡಿಸಿ ಟೀಕಿಸಿದ್ದಾರೆ. ಸರ್, ಸಿ ಪಿ ಯವರು ವೈಸರಾಯರನ್ನು ಇದಕ್ಕಾಗಿ ಹೊಗಳುತ್ತಾ ರಾಜಾಜಿಯನ್ನು ಅವರ ಇಂದಿನ ಧೋರಣೆಗಾಗಿ ಟೀಕಿಸಿದ್ದಾರೆ

ಭಾರತ ರಕ್ಷಣೆಗೆ ೧೦ ಲಕ್ಷ ಸೈನಿಕರು

ಇದಲ್ಲದೆ ಬ್ರಿಟಿಷ್ ಚಕ್ರವರ್ತಿಗಳು ಕ್ರಿಸ್‌ಮಸ್ ಸಂದೇಶದ ಭಾಷಣದಲ್ಲಿ ಹೇಳಿದರು ಭವಿಷ್ಯದಲ್ಲಿ ಎಲ್ಲರೂ ಶಾಂತಿ ನ್ಯಾಯ ಭ್ರಾತೃಭಾವದಿಂದಿರುವ ವಿಶ್ವಾಸವಿರಿಸಬೇಕೆಂದೂ ಇಂದು ಒಟ್ಟಾಗಿರುವಂತೆ ಯುದ್ಧಾನಂತರವೂ ಐಕ್ಯಮತ್ಯದಿಂದ ವರ್ತಿಸಬೇಕೆಂದೂ ಹಾರೈಸಿದರು

ಸರ್ ಸಿಕಂದರರ ನಿಧನ

ಪಂಜಾಬಿನ ಮುಖ್ಯ ಮಂತ್ರಿ ಸರ್ ಸಿಕಂದರ್ ಹಯ್ಯಾತ್‌ಖಾನರು ತಾ. ೨೬ರಂದು ಮಧ್ಯರಾತ್ರಿ ಅಕಸ್ಮಾತ್ ಹೃದಯ ವಿಕಾರದಿಂದ ಮೃತಿಹೊಂದಿದ ಶೋಚನೀಯ ವಾರ್ತೆ ಬಂದಿದೆ. ಆ ದಿನ ರಾತ್ರಿ ೧೦ ಗಂಟೆವರೆಗೆ ಸಿಕಂದರರು ಪೂರ್ಣ ಆರೋಗ್ಯದಲ್ಲಿದ್ದರು. ಇವರು ೧೮೯೨ನೆಯ ಇಸವಿ ಜೂನ್ ೫ನೇ ತಾರೀಕಿನ ದಿನ ಹುಟ್ಟಿದರು. ಕಳೆದ ಮಹಾ ಯುದ್ಧದಲ್ಲಿಯೂ ಇವರು ಕೆಲಸ ಮಾಡಿರುವರು. ೧೯೧೯ರಲ್ಲಿ ಅಫಗಾಣ್ ಮೂರನೇ ಯುದ್ಧದಲ್ಲಿಯೂ ಕೆಲಸ ಮಾಡಿರುವರು. ೧೯೨೧ರಿಂದ ಪಂಜಾಬ್ ನ್ಯಾಯ ವಿಧಾಯಕ ಸಭೆಯಲ್ಲಿದ್ದರು. ೧೯೩೨ ಮತ್ತು ೧೯೩೪ರಲ್ಲಿ ಪಂಜಾಬಿನ ಹಂಗಾಮಿ ಗವರ್ನರರಾಗಿದ್ದರು. ೧೯೩೭ನೇ ಎಪ್ರಿಲ್‌ನಿಂದ ಪಂಜಾಬಿನ ಮುಖ್ಯ ಮಂತ್ರಿಗಳಾದರು. ಪಂಜಾಬಿನಲ್ಲಿ ಯೂನಿಯನಿಸ್ಟ್ ಪಕ್ಷವನ್ನು ಸ್ಥಾಪಿಸಿ ಆಡಳಿತೆ ಸ್ಥಾಪಿಸುತ್ತಿದ್ದರು. ಪಂಜಾಬಿನ ಹಿಂದು ಮುಸ್ಲಿಂ ಶೀಖರಲ್ಲಿ ಐಕ್ಯ ಪ್ರಯತ್ನ ಮಾಡುತ್ತಿದ್ದರು. ಮುಸ್ಲೀಂ ಲೀಗಿನೊಡನೆ ಒಮ್ಮೊಮ್ಮೆ ಸಹಕರಿಸುತ್ತಿದ್ದರೆ ಇನ್ನೊಮ್ಮೆ ಅದರ ಧೋರಣೆ ಖಂಡಿಸುತ್ತಿದ್ದರು. ಪಾಕಿಸ್ಥಾನದ ಬಗ್ಗೆಯೂ ಇವರ ಒಂದು ನಿಶ್ಚಿತ ಸಿದ್ಧಾಂತವಿರಲಿಲ್ಲ. ಇವರು ಈ ಯುದ್ಧಕಾಲದಲ್ಲಿ ಎರಡು ಸಲ ಮಧ್ಯಪೂರ್ವಕ್ಕೆ ಹೋದರು. ಲಿಬಿಯಾ ರಣಭೂಮಿಯನ್ನು ಸಂದರ್ಶಿಸಿದರು. ಚರ್ಚಿಲರೊಡನೆ ಮಾತುಕತೆ ಮಾಡಿದರು. ಇಂಥಾ ಪ್ರಭಾವಶಾಲಿಗಳ ನಿಧನದಿಂದ ಪಂಜಾಬಿಗೆ ಮಾತ್ರವಲ್ಲ ಅಖಿಲಭಾರತಕ್ಕೆ ಮಹಾ ನಷ್ಟವಾಗಿದೆ. ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ!

ಚಿಲ್ಲರೆ ವಿಷಯ ಹೊಸ ವ್ಯವಸ್ಥೆಯಾಗುತ್ತದೆ

ಎಂದು ಪ್ರಕಟವಾಗಿದೆ. ಭಾರತದಲ್ಲಿರುವ ಟಂಕಸಾಲೆಗಳಲ್ಲಿ ಹೊಸ ಚಿಲ್ಲರೆ ನಾಣ್ಯಗಳು ತಯಾರಾಗುತ್ತಿವೆಯಂತೆ. ಕೆಲವು ಟಂಕಸಾಲೆಗಳಲ್ಲೀಗ ಚಿಲ್ಲರೆ ನಾಣ್ಯ ಮಾತ್ರ ತಯಾರಾಗುತ್ತಿವೆಯಂತೆ. ಮಾತ್ರವಲ್ಲದೆ ಉತ್ತರ ಭಾರತದಲ್ಲಿ ಚಿಲ್ಲರೆ ನಾಣ್ಯ ತಯಾರಿಸಲು ಹೊಸ ಟಂಕಸಾಲೆಯೊಂದು ತಯಾರಾಗಿದೆಯಂತೆ. ಇನ್ನು ಕೆಲವೇ ದಿನಗಳಲ್ಲಿ ಚಿಲ್ಲರೆಯ ತೊಂದರೆ ನಿವಾರಣೆಯಾಗುವುದಂತೆ

ಲಂಡನಿನಲ್ಲಿ - ಭಾರತದ ಸ್ವಾತಂತ್ರ್ಯ ದಿನ

ವನ್ನು ಜನವರಿ ೨೬ರಂದು ಆಚರಿಸಬೇಕೆಂದು ಅಲ್ಲಿಲಿರುವ ಎಲ್ಲಾ ಭಾರತೀಯ ಸಂಸ್ಥೆಗಳೂ ನಿರ್ಧರಿಸಿ ಸಿದ್ಧತೆಮಾಡುತ್ತವೆ. ಎಸ್ಸೆಕ್ಸ್ ಥಿಯೇಟರಿನಲ್ಲಿ ಸಭೆ ನಡೆಯುವ ಏರ್ಪಾಡಾಗಿದೆ. ಈ ಸಂದರ್ಭದಲ್ಲಿ ಸ್ವರಾಜ್ಯಭವನವೊಂದನ್ನು ಬ್ರಿಟಿಷ್ ದ್ವೀಪಗಳ ಕೇಂದ್ರ ಸಂಸ್ಥೆಯಾಗಿ ಸ್ಥಾಪಿಸಲಾಗುವುದು. ಭಾರತದ ಸ್ವಾತಂತ್ರ್ಯದ ಬಗ್ಗೆ ಭಾಷಣಗಳೂ ವ ಜನವರಿ ೩೦ರಂದು ಒಂದು ದೊಡ್ಡ ಪ್ರದರ್ಶನವೂ ಆಗಲಿದೆ.

ಮಾಲವೀಯರಿಗೆ ಕಾಣಿಕೆ

ದಶಂಬರ ೩೦ಕ್ಕೆ ಪಂಡಿತಮಾಲವೀಯರಿಗೆ ೮೦ ವರ್ಷ ತುಂಬುವುದರಿಂದ ಆ ದಿನ ಅವರಿಗೆ ೧೦೦೦ ಪಶುಗಳನ್ನು ಕಾಣಿಕೆ ಕೊಡಬೇಕೆಂದು ಅಖಿಲ ಭಾರತ ಗೋರಕ್ಷಣೆ ಪ್ರಚಾರ ಸಂಸ್ಥೆಯವರು ನಿರ್ಧರಿಸಿದ್ದಾರೆ

ಅ. ಭಾ ಹಿಂದು ಮಹಾಸಭಾಧಿವೇಶನ

ಸಾವರ್ಕರರ ಭಾಷಣ

ಕಾನಪೂರದಲ್ಲಿ ಅ ಭಾ ಹಿಂದು ಮಹಾಸಭೆಯ ೨೪ನೇ ಅಧಿವೇಶನವು ಜರಗಿತು. ಅಧ್ಯಕ್ಷರಾದ ವೀರ ಸಾವರ್ಕರರು ಈ ರೀತಿ ಭಾಷಣ ಮಿತ್ತರು. 'ರಾಷ್ಟ್ರ ಸಂಘದವರು ಗೊತ್ತುಮಾಡಿದ ಇಲ್ಲವೇ ಬೇರೆ ಸಂಸ್ಕೃತರಿಗೆ ಸಮ್ಮತವಿರುವ ರಕ್ಷಣೆಯು ಮುಸಲ್ಮಾನರಿಗೂ ಒಪ್ಪಿತವಾಗತಕ್ಕದ್ದು. ಕೆಲವು ಸಣ್ಣ ವಿಷಯಗಳಲ್ಲಿ ಮುಸಲ್ಮಾನರಿಗೆ ರಿಯಾಯತಿ ಕೊಡಬಹುದು. ಆದರೆ ಅಖಂಡ ಹಿಂದುಸ್ಥಾನವನ್ನು ವಿಭಾಗಿಸಿದರೆ ಮಾತ್ರ ಕೇಂದ್ರ ಸರಕಾರದಲ್ಲಿ ಮತ್ತು ಪ್ರಾಂತ ಸರಕಾರದಲ್ಲಿ ಭಾಗವಹಿಸುವೆವೆಂದು ಮುಸಲ್ಮಾನರು ಹಟ ಹಿಡಿದರೆ ಅದನ್ನು ನಡೆಸಕೊಡೆವು. ಯಾವ ಪ್ರಾಂತವೇ ಆದರೂ ಅಖಂಡ ಹಿಂದುಸ್ಥಾನದಿಂದ ಬೇರೆಯಾಗಬೇಕೆಂದರೆ ಅದು ನಡಿಯಲಿಕ್ಕಿಲ್ಲ. ಅಖಂಡ ಹಿಂದುಸ್ಥಾನಕ್ಕೇ ಸ್ವಯಂ ನಿರ್ಣಯದ ಹಕ್ಕು ಇರುವುದಲ್ಲದೆ ಯಾವುದೇ ಪ್ರಾಂತ ಜಿಲ್ಲೆ ತಾಲೂಕುಗಳಿಲ್ಲ. ಮುಸಲ್ಮಾನರಾದರೂ ದೇಶದ ಸ್ವಾತಂತ್ರ್ಯ ಪಡೆಯಲು ಇತರ ಮತಸ್ಥರಂತೆ ಹಿಂದುಸ್ಥಾನದ ಅಖಂಡತೆಯನ್ನು ಮನ್ನಿಸಿ ನಡೆವುದೊಳ್ಳಿತು. ಹಿಂದುಸ್ಥಾನವನ್ನು ವಿಭಾಗಿಸಬೇಕೆಂದು ಪ್ರಯತ್ನವು ವಿಶ್ವಾಸಘಾತಕದ್ದಾಗಿರುವುದು. (1) ಹಿಂದುಗಳು ಅದಷ್ಟು ಸಂಖ್ಯೆಯಿಂದ ಸೈನ್ಯದಲ್ಲಿ ಸೇರಿಕೊಳ್ಳಬೇಕು, ಮದ್ದುಗುಂಡುಗಳ ಕಾರಖಾನೆಗಳಲ್ಲಿಯೂ ಕೆಲಸ ಮಾಡಬೇಕು. (2) ಕೇಂದ್ರ ಸರಕಾರದಿಂದ ತೊಡಗಿ ಅದಷ್ಟು ಅಧಿಕಾರ ಸ್ಥಾನಗಳನ್ನು ಸ್ವಾಧೀನ ಮಾಡಿಕೊಳ್ಳಬೇಕು. (3) ಮಹಾಸಭೆಯನ್ನು ಬಲಪಡಿಸಿ, ಪಾಕಿಸ್ಥಾನವನ್ನಳಿಸಬೇಕು (4) ಅಸ್ಪೃಶ್ಯತಾ ನಿವಾರಣೆ ಮಾಡಬೇಕು.

ಪೆಪ್ಸಿನ ವಿಷಯ ಒಬ್ಬ ಪ್ರಖ್ಯಾತ ಡಾಕ್ಟರರ ಅಭಿಪ್ರಾಯ

ಡಾಕ್ಟರ್ ಗೋರ್ಡನ್ ಸ್ಟೇಬಲ್ಸ್ ಎಂ ಡಿ ಸಿ ಡಿ ಆರ್ ಎನ್ ಇವರು ಶ್ವಾಸಯೋಗ್ಯ ವಿಷಹಾರಿ ಪೆಪ್ಸನ್ನು ಸ್ವತಃ ಉಪಯೋಗಿಸಿ ಹೀಗೆ ಬರೆದಿರುತ್ತಾರೆ

"ಕಫವನ್ನು ನಿವಾರಿಸಲು, ಕಂಠವನ್ನು ಸರಿಗೊಳಿಸಲು, ಶ್ವಾಸಕೋಶದ ನೋವನ್ನು ಹೋಗಲಾಡಿಸಲು ಪೆಪ್ಸು ಅತ್ಯಂತ ಹಿತವಾದ ಔಷಧಿಯಾಗಿದೆ"

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ, ಆ ಸತ್ವವು ಶ್ವಾಸದೊಡನೆ ಶ್ವಾಸಕೋಶಕ್ಕೆ ಹೋಗಿ ಅಲ್ಲಿರುವ ರೋಗಕಾರೀ ಅಣುಗಳನ್ನು ಕೊಂದು ಕಫ ಶೀತಾದಿಬಾಧೆಗಳನ್ನು ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುತ್ತದೆ

ಪೆಪ್ಸನ್ನು ಕೊಂಡುಕೊಳ್ಳಿರಿ,

PEPS

ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು.

ಜಿಲ್ಲಾ ಸಮಾಚಾರಗಳು

ಮಂಗಳೂರು

ನೃತ್ಯ ತರಗತಿ

ಆಲ್ಮೋರದಿಂದ ಹಿಂದಿರುಗಿದ ಬಳಿಕ ಶ್ರೀ ಕೆ. ಕೆ. ಸೆಟ್ಟರು ಟ್ರೈನಿಂಗ್ ಶಾಲೆಗಳ ವಿದ್ಯಾರ್ಥಿ ಅಧ್ಯಾಪಕರಿಗಾಗಿ ಆರಂಭಿಸಿದ್ದ ನೃತ್ಯ ತರಗತಿಯು ತಾ ೧೯ರಂದು ಬೆಳಗ್ಗೆ ಮುಕ್ತಾಯವಾಯಿತು.

ಶ್ರೀಗಳಾದ ಬಾಲಪ್ಪ ಮತ್ತು ಲೋಕಯ್ಯ ಶೆಟ್ಟಿ ಇವರಿಗೆ ಸ್ಥಾನ ಬದ್ಧತೆ

ಶ್ರೀಗಳಾದ ಲೋಕಯ್ಯ ಶೆಟ್ಟಿ ಮತ್ತು ಬಾಲಪ್ಪ ಇವರ ವಿಚಾರಣೆಯು ತಾ ೩೦ರಂದು ನಡೆದು, ಕಲೆಕ್ಟರರ ಆಜ್ಞೆಯಂತೆ ಅವರನ್ನು ಸ್ಥಾನಬದ್ಧ ಕೈದಿಗಳನ್ನಾಗಿ ಮಾಡಲಾಯಿತು.

ಕಮ್ಯೂನಿಸ್ಟರ ವಿಚಾರಣೆ

ಜಾಮೀನು ನಿರಾಕರಿಸಲ್ಪಟ್ಟಿತು

ಇಲ್ಲಿ ಬಂಧಿಸಲ್ಪಟ್ಟು ರಿಮಾಂಡಿನಲ್ಲಿರಿಸಲ್ಪಟ್ಟಿದ್ದ ಕಮ್ಯೂನಿಸ್ಟರಾದ ಶ್ರೀಯುತರು ಬಿ ವಿ ಕಕ್ಕಿಲ್ಲಾಯ ಮತ್ತು ವಿ ಕೆ ನಾಯರ್ ಇವರ ವಿಚಾರಣೆಯು ಸಬ್ ಡಿ ಆಫೀಸರ್ ಶ್ರೀ ಜೂಗಪ್ಪನವರ ಮುಂದೆ ತಾ ೩೦ರಂದು ಆರಂಭವಾಯಿತು ಮಂಗಳೂರು ಕಮ್ಯೂನಿಸ್ಟ್ ಕಚೇರಿಯಿಂದ ಹಿಡಿಯಲ್ಪಟ್ಟಿದ್ದ ಐಕ್ಯ ಪ್ರತಿಜ್ಞೆಗಳಲ್ಲಿ ಸರಕಾರಕ್ಕೆ ವಿರುದ್ಧವಾದ ಒಂದು ವಾಕ್ಯವಿದೆಯೆಂದೂ ಆ ಪ್ರತಿಜ್ಞೆಯನ್ನು ಬರೆದ ಕಮ್ಯೂನಿಸ್ಟ್ ಪಕ್ಷದವರೇ ಹೊರಡಿಸಿದರೆಂಬುದನ್ನು ನಂಬುವುದು ಕಷ್ಟವೆಂದೂ ಮುದ್ರಣಾಲಯದ ಹೆಸರು ಕೂಡಾ ಪ್ರತಿಜ್ಞೆಯಲ್ಲಿ ಇಲ್ಲವೆಂದೂ ಕೋರ್ಟಿನಲ್ಲಿ ವಿವರಣೆಯಾಯಿತು ನ್ಯಾಯಾಧೀಶರು ಕೈದಿಗಳನ್ನು ಜಾಮೀನಿನ ಮೇಲೆ ಬಿಡಲು ನಿರಾಕರಿಸಿದರು ಶ್ರೀಯುತರು ರಂಗನಾಥ್ ಕಲ್ಬೇರಿಕರ್ ಮತ್ತು ನಸೀಪ್ಪಯ್ಯ ಇವರು ಕೈದಿಗಳ ಪರವಾಗಿ ವಾದಿಸುತ್ತಿದ್ದರು, ವಿಚಾರಣೆಯು ಬರುವ ವರ್ಷ ಜನವರಿ ತಾ ೨ಕ್ಕೆ ಮುಂದುವರಿಸಲ್ಪಟ್ಟಿದೆ

ಎ ಆರ್ ಪಿ ಆಫೀಸರರು

ಮಂಗಳೂರಿನ ಪತ್ರಿಕಾ ಪ್ರತಿನಿಧಿಗಳನ್ನು ತಾ ೨೨ರಂದು ಸಂಜೆ ತಮ್ಮ ಆಫೀಸಿಗೆ ಆಹ್ವಾನಿಸಿ ಎ ಆರ್ ಪಿಯ ವಿವಿಧ ಚಟುವಟಿಕೆಗಳನ್ನು ವಿವರಿಸಿ ಹೇಳಿದರು ಶಿಕ್ಷಣ ತರಗತಿಗಳು ನಡೆಯುತ್ತಿದ್ದಲ್ಲಿಗೆ ಅವರು ಪ್ರತಿನಿಧಿಗಳನ್ನು ಕರೆದೊಯ್ದು ಸಂಸ್ಥೆಯು ಹೇಗೆ ನಡೆಯುತ್ತಿದೆ ಎಂಬುದರ ಮಾಹಿತಿಗಳನ್ನು ಮಾಡಿಕೊಟ್ಟು ಎ ಆರ್ ಪಿ ಸಂಸ್ಥೆಯ ಸಾರ್ವಜನಿಕರ ವಿಶ್ವಾಸವನ್ನು ಗಳಿಸುವಂತೆ ಮಾಡಲು ಪತ್ರಿಕೆಗಳು ನೆರವಾಗಬೇಕೆಂದು ಕೇಳಿಕೊಂಡರು

ಕಳೆದ ಸೋಮವಾರ ಎರಡನೆಯ ಸಲ ಮಂಗಳೂರಲ್ಲಿ ಎ ಆರ್ ಪಿ ಯವರ ಸೈರನುಗಳ ಕೂಗುವಿಕೆಯ ಪ್ರಯೋಗ ನಡೆಯಿತು

ಸಕ್ಕರೆಯ ಹಂಚೋಣ

ತಾ ೨೪ರಂದು ಸಂಜೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸಕ್ಕರೆಯ ಸರಬರಾಯಿ ಕುರಿತು ಆಲೋಚಿಸಲು ಅಧಿಕಾರಿಗಳ ಮತ್ತು ಸಾಹುಕಾರರ ಸಭೆ ಸೇರಿದ್ದು, 'ರೇಶನಿಂಗ್ ಕಾರ್ಡು'ಗಳ ಮೂಲಕ ಬಟ್ವಾಡೆ ಮಾಡುವ ವಿಚಾರದಲ್ಲಿ ಚರ್ಚಿಸಲಾಯಿತು ರಖಂ ವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು ಸದ್ಯ ಸಕ್ಕರೆಯನ್ನು ಯಾವ ದರದಲ್ಲಿ ಮಾರಬೇಕೆಂದು ಕ್ರಯದ ನಿರ್ಣಯವಾಯಿತು ಪ್ಯಾಕ್ ಮಾಡಿದ ಸಕ್ಕರೆ ಪೌಂಡಿಗೆ ಆಣೆ ೩, ಪ್ಯಾಕ್ ಮಾಡದ ಸಕ್ಕರೆ ಪೌಂಡಿಗೆ ಆಣೆ ೩

ವರ್ಧಂತ್ಯುತ್ಸವಗಳು

ಕೆನರಾ ಹೈಸ್ಕೂಲಿನ ವರ್ಷ ವರ್ಧಂತಿಯು ತಾ. ೨೫ರಂದು ಸಂಜೆ, ಶಾಲಾ ಮಠಾರದಲ್ಲಿ ಜರಗಿತು, ಸ್ವಾಮಿ ಸುವಿಚಾರಾನಂದರವರು ಅಧ್ಯಕ್ಷರಾಗಿದ್ದರು ಶಾಲಾ ಆಡಳಿತೆಯ ಸಮಿತಿಯ ಅಧ್ಯಕ್ಷರಾದ ಡಾ. ಎಂ. ಕೇಶವ ಪೈಗಳು ಅಧ್ಯಕ್ಷರನ್ನು ಸೂಚಿಸಿದ ಬಳಿಕ, ಅಧ್ಯಕ್ಷರ ಮೊದಲ ಮಾತುಗಳಾಗಿ ಡಾ. ಎಂ. ಎ. ಕಾಮತರಿಂದ ಶಾಲೆಯ ಶ್ರೇಯಃ ಪ್ರಾರ್ಥನೆ, ಶಾಲೆಯ ಮುಖ್ಯೋಪಾಧ್ಯಾಯರಿಂದ ಶಾಲಾ ವರದಿಯ ವಾಚನ ಇನಾಮು ಹಂಚೋಣ, ಅಧ್ಯಕ್ಷರ ಉಪಸಂಹಾರ ಭಾಷಣಗಳಾಗಿ ವಿವಿಧ ವಿನೋದಾವಳಿಗಳಿಂದ ವರ್ಧಂತಿಯು ಕೊನೆಗೊಂಡಿತು.

ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ದಿನಾಚರಣೆ, ತಾ. ೨೬ರಲ್ಲಿ ಆ ಶಾಲಾ ಮಠಾರದಲ್ಲಿ ಆ ಸಂಘದ ಉಪಾಧ್ಯಕ್ಷ ಶ್ರೀ. ಎಂ ಎಸ್ ಕಿಣಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು ವರದಿ, ಲೆಕ್ಕಪತ್ರಗಳು ಮಂಜೂರಾಗಿ, ಸಂಘದ ಸದಸ್ಯರುಗಳಲ್ಲಿ ಕೆಳಗಿನವರನ್ನು ಆಡಳಿತೆ ಕಮಿಟಿಯ ಸದಸ್ಯರನ್ನಾಗಿ ಆರಿಸಲಾಯಿತು,—ಶ್ರೀಗಳಾದ ಎಂ ಎನ್. ಕಿಣಿ, ಎಂ. ಅಣ್ಣಪ್ಪ ಕಾಮತ್, ಎಂ ವೆಂಕಟೇಶ ಪೈ, ಎಂ ಮಾಧವ ರಾವ್, ಎಂ. ಪುರುಷೋತ್ತಮ ಕಾಮತ್, ಎಸ್ ಕಮಲಾಕ್ಷ ಪೈ, ಶ್ರೀಮತಿಯರಾದ ಕೆ. ವಸಂತಿ, ಜಿ ಸುನಂದಾ, ಎಚ್ ಸುನಂದಾ. ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿ ವಂದನಾರ್ಪಣೆಯೊಡನೆ ಉತ್ಸವ ಕೊನೆಗೊಂಡಿತು

ಉದಕದಾನ

ಮಾರ್ಗಸ್ಥರ ಉಪಯೋಗಕ್ಕಾಗಿರುವ ನೀರಿನ 'ಫಿಲ್ಟರ್' ಪಾತ್ರವನ್ನು ತೆರೆಯುವ ಸಮಾರಂಭವೊಂದು 'ಧರ್ಮವಿಲಾಸ' (ಬೋಳಾರ)ದಲ್ಲಿ ಜರಗಿತು ಆರಂಭದಲ್ಲಿ ಶ್ರೀ ಟಿ ಥಿಯೋಫಿಲ್‌ರವರು ಭಾಷಣಮಾಡಿ ಡಾ ಭಂಡಾರ್ಕರ್ ಅವರನ್ನು ಸಮಾರಂಭಕ್ಕೆ ಅಧ್ಯಕ್ಷರಾಗಬೇಕೆಂದು ಪ್ರಾರ್ಥಿಸುತ್ತಾ, ಹಿಂದೆ ೧೯೪೨ರಲ್ಲಿ ತಮ್ಮ ಪ್ರಯತ್ನದಿಂದ ಮಾರ್ಗಸ್ಥರಾದ ದನಕರು ಕುದುರೆಗಳಿಗಾಗಿ ನೀರಿನ ಸರಬರಾಯಿಯಾಗುವಂತೆ ವಿರ್ಮಿಸಿದುದನ್ನು ಸ್ಮರಣೆಗೆ ತಂದುಕೊಟ್ಟು, ಹಿಂದಿನಿಂದೀಚೆಗೆ ಜನತೆಗೆ ಗಿಯೂ ಕುಡಿಯುವ ನೀರನ್ನು ಒದಗಿಸುವ ಉದ್ದೇಶವು ತಮ್ಮಲ್ಲಿದ್ದರೂ ಕಾರಣಾಂತರಗಳಿಂದ ಅದು ಸಾಧಿಸದೆ ಹೋಯಿತೆಂದೂ ಅನಂತರ ಶ್ರೀ ವೆಂಕಟೇಶ್ವರ ಸುಗುಣರಾಮ ನಾಯಕ್ ಅವರು ಫಿಲ್ಟರ್ ಪಾತ್ರವನ್ನೂ, ಶ್ರೀ ಎಂ ಅಣ್ಣಪ್ಪ ನಾಯಕ್ ಅವರು ಒಂದು ಪ್ಲಾಟ್‌ಫಾರ್ಮ್ ರಚಿಸಲು ಅಗತ್ಯವಿರುವ ಸಿಮೆಂಟನ್ನೂ ಒದಗಿಸಿಕೊಡುವ ಸತ್ಸಹಾಯ ಮಾಡಿದುದರಿಂದ ಈಗ ಈ ಧರ್ಮಕಾರ್ಯವನ್ನು ಪೂರೈಸಲು ಸಾಧ್ಯವಾಯಿತೆಂದೂ ತಿಳಿಸಿದರು ಶ್ರೀ ರತ್ನಾ ಬಾಯಿಯವರು ಶ್ರೀ ಥಿಯೋಫಿಲ್‌ರವರ ಘನೋದ್ದೇಶವನ್ನು ಪ್ರಶಂಸಿಸಿ ಭಾಷಣಮಾಡಿದರು ಅಧ್ಯಕ್ಷರ ಭಾಷಣವಾಗಿ ಸಮಾರಂಭವು ಕೊನೆಗೊಂಡಿತು.

'ಕೆನರಾ ಚೇಂಬರ್ ಅಫ್ ಕಾಮರ್ಸ್'

ನಮ್ಮ ದಕ್ಷಿಣ ಜಿಲ್ಲಾ ವಾಣಿಜ್ಯ ಸಂಘದವರ ವಾರ್ಷಿಕೋತ್ಸವವು ತಾ ೨೭ರಲ್ಲಿ ಕೆನರಾ ಹೈಸ್ಕೂಲಿನ ಮಠಾರದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಕರಮತುಲ್ಲಾ ಅವರ ಅಧ್ಯಕ್ಷತೆಯಲ್ಲಿ ಜರುಗಿತು ಪ್ರಾರ್ಥನೆ ನಡೆದು, ಸಂಘದ ಅಧ್ಯಕ್ಷರಾದ ಶ್ರೀ ಮಿಜಾರ್ ಗೋವಿಂದ ಪೈಗಳು ಸ್ವಾಗತ ಭಾಷಣ ಮಾಡುತ್ತ, ಗತವರ್ಷದಲ್ಲಿ ಅಧಿಕಾರಿಗಳಿಗೂ ವರ್ತಕರಿಗೂ ಇರುತ್ತಿದ್ದ ಸಂಬಂಧ, ಇರಬೇಕಾದ ಸಹಕಾರಗಳ ಕುರಿತು ಪ್ರಸ್ತಾವಿಸಿ, ಬಡವರ ಒಟ್ಟಿ ಹಾಗೂ ಆಹಾರಸಾಧನಗಳ ವಿಚಾರದಲ್ಲಿ ಮಾತಾಡಿ, ಅವನ್ನು ಉತ್ಪತ್ತಿ ಮಾಡುವವರು ಸಕಾರಣವಾದ ದರಗಳಲ್ಲಿ ಅವನ್ನು ಮಾರಬೇಕೆಂದೂ, ಈಗಿನ ಧಾರಣೆವಾಸಿಗೆ ಸಾಹುಕಾರರನ್ನೇ ಟೀಕಿಸುವುದು ಸರಿಯಲ್ಲವೆಂದೂ ಸರಕಾರವು ಡಿಪ್ಪೋಗಳನ್ನು ತೆರೆಯುವ ಅವಶ್ಯಕತೆಯುಂಟೆಂದೂ ಸೂಚಿಸಿದರು.

ಈ ಸಂಘದ ಗೌರವ ಕಾರ್ಯದರ್ಶಿ ಶ್ರೀ ಕೆ. ಕೇಶವ ಶೆಣೈಯವರು ಸಂಘದ ಗತವರ್ಷದ ವರದಿಯನ್ನೊಪ್ಪಿಸುತ್ತ, ಯುದ್ಧದ ಪರಿಸ್ಥಿತಿ, ಅದರಿಂದ ವ್ಯಾಪಾರದ ಮೇಲಾದ ಪರಿಣಾಮ, 'ಕಂಟ್ರೋಲ್' ಪ್ರಶ್ನೆಯನ್ನು ಹೊಸ ರೀತಿಯಿಂದ ಇತ್ಯರ್ಥಿಸುವ ಅವಶ್ಯಕತೆ, ಏರುತ್ತಿರುವ ಅಕ್ಕಿ ಬೆಲೆಯ ಸಮಸ್ಯೆ, ಆಹಾರ ಸಾಮಗ್ರಿಗಳನ್ನು ಪೇಟೆಗಾಗಿ ಬೆಳೆಸುವುದರಿಂದ ಆಗುವ ಪ್ರಯೋಜನ, ಬೆಲೆಯನ್ನು ಮಿತಿಗೊಳಿಸುವಲ್ಲಿ ಈಗಿರುವ ಕುಂದುಕೊರತೆ, ಸಾಮಗ್ರಿಗಳನ್ನು ಸಾಗಿಸುವ ವಹಿವಾಟ ಸಾಧನದ ಅಭಾವ, ಬೆಲೆ ನಿರ್ಣಯಿಸಿದುದಕ್ಕಿಂತಲೂ ವಿಪರೀತವಾದ ಧಾರಣೆಗೆ ಸಾಮಗ್ರಿಗಳನ್ನು ಗುಟ್ಟಿನಿಂದ ನಡೆಯುವ ವ್ಯವಹಾರ ಈ ಮೊದಲಾದ ವಿಚಾರಗಳಲ್ಲಿ ಪ್ರಸ್ತಾವಿಸಿ, ಅರ್ಧ ಮನಸ್ಸಿನ ಉಪಾಯಗಳಿಂದ ಫಲವಿಲ್ಲವೆಂದೂ, ಆಹಾರ ಸಾಮಗ್ರಿಗಳ ಉಪಯೋಗದಲ್ಲಿ 'ರೇಶನಿಂಗ್' ಪದ್ಧತಿ ಅಗತ್ಯವೆಂದೂ ಸೂಚಿಸಿ ಈಗ ನಡೆಯುತ್ತಿರುವ 'ಬಡವರ ಅಕ್ಕಿ ಭಂಡಾರ'ಕ್ಕೆ ಎಲ್ಲರೂ ಸಹಾಯ ಮಾಡಬೇಕೆಂದರು.

ಅನಂತರ ಡಾ। ಎಂ ಕೇಶವ ಪೈ ಶ್ರೀ ಬಿ. ವೈಕುಂಠ ಬಾಳಿಗ, ಶ್ರೀ. ಪಿ. ಸಿ ಲೋಬೋ ಶ್ರೀ. ಸಿ. ಆರ್. ಆರ್. ಪೂಂಜ ಇವರೂ ಭಾಷಣಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಹಾರ ಸಾಧನಗಳನ್ನು ಸಾಗಿಸುವ ಸಾಧನಗಳನ್ನು ಹೇಗೆ ಹಾಳು ಮಾಡುತ್ತಿದ್ದಾರೆ ಎಂಬುದನ್ನು ಎತ್ತಿ ಹಿಡಿದು, ಜನರ ತೆರಿಗೆಯಿಂದಲೇ ನಿರ್ಮಿಸಲ್ಪಟ್ಟ ಜನತೆಯದೇ ಆದ ಅವುಗಳನ್ನು ಜನರೇ ನಾಶ ಮಾಡುವುದು ಎಷ್ಟೊಂದು ಘಾತಕತನದ್ದೆಂದು ಹೇಳಿ, ವ್ಯಾಪಾರಿಯ ಲಾಭ, ರೈತನ ಲಾಭ ಈ ಕುರಿತಾಗಿ ವಿವರಿಸುತ್ತ, ಯುದ್ಧ ಕಾಲದಲ್ಲಿ ಅತ್ಯಧಿಕ ಲಾಭ ಸಂಪಾದಿಸಬೇಕೆಂಬ ಈ ಉತ್ಕಟೇಚ್ಛೆಯನ್ನು ತಡೆಗಟ್ಟಲು 'ಬೆಲೆಯ ಮಿತಿಯ ನಿರ್ಣಯದ ಪದ್ಧತಿ' ಜಾರಿಗೆ ಬಂತೆಂದೂ ರೈತ, ವ್ಯಾಪಾರಿ ಮೊದಲಾದವರು ಒಬ್ಬರೊಬ್ಬರನ್ನು ದೂರಿ ಫಲವಿಲ್ಲವೆನ್ನದೂ ನುಡಿದು ಅಕ್ಕಿಯ ಸಮಸ್ಯೆ, ಬೆಲೆ ಮಿತಿಯ ನಿರ್ಣಯ ಇವುಗಳಿಗೆ ಸಂಬಂಧಿಸಿದ ಅಂಶಗಳು ಹಲವು ಎಷ್ಟು ತೊಡಕಾದುವೆಂದು ವಿವರಿಸಿದರು ಜಿಲ್ಲೆಯಲ್ಲಿ ಧರ್ಮಬುದ್ಧಿಯ ಸತ್ಕಾರ್ಯಗಳು ವ್ಯವಸ್ಥೆಗೊಂಡು, ರೈತರೂ, ಜಮೀನ್ದಾರರೂ, ಸಾಹುಕಾರರೂ ಎಲ್ಲರೂ ಉದಾರ ಬುದ್ಧಿಯಿಂದ ಪರಸ್ಪರ ಸಹಕರಿಸಿ, ಬಡಜನರ ಗೋಳನ್ನು ನಿವಾರಿಸುವಲ್ಲಿ ಮುಂದಾಗಬೇಕೆಂದೂ ಸೂಚಿಸಿದರು

ಶಿಕ್ಷೆ

ಸಿದ್ಧಕಟ್ಟೆ (ಬಂಟ್ವಾಳ) ಮೊದಲಾದ ಕಡೆ ರಾಜದ್ರೋಹದ ಚಟುವಟಿಕೆಗಳನ್ನು ನಡೆಸಿದರೆಂದು ಆರೋಪ ಹೊರಿಸಿ ಹೂಡಲಾದ ಮೊಕದ್ದಮೆ ಮಂಗಳೂರು ಸ। ಡಿ। ಆಫೀಸರಲ್ಲಿ ವಿಚಾರಣೆಯಾಗಿ ವರದರಾಜ ಶೆಣೈ ಇವರಿಗೆ ೧ ವರ್ಷ ಶ್ರೀಗಳಾದ ಕೇಶವ ಬಳಿಗ, ಗೋಪಾಲ ಬಾಳಿಗ ನರಸಿಂಹ ಮಲ್ಯ, ರಮೇಶ ಪ್ರಭು ಮತ್ತು ಅಮ್ಮುಶೆಟ್ಟಿ ಇವರಿಗೆ ತಲಾ ೬-ತಿಂಗಳ ಕಠಿಣ ಶಿಕ್ಷೆ ತಾ ೨೪ರಂದು ವಿಧಿಸಲ್ಪಟ್ಟಿದೆ

ನಿಧನ

ಶ್ರೀ ಕಲ್ಬೇರಿ ರಾಮರಾಯರು (ಶ್ರೀ ರಂಗನಾಥ್ ಕಲ್ಬೇರಿಕರರ ತಂದೆ) ಮತ್ತು ಶ್ರೀ ಯು ಅನಂದರಾಯರು ದಿವಂಗತರಾದ ಶೋಚನೀಯ ವಾರ್ತೆಯನ್ನು ಪ್ರಕಟಿಸಲು ವಿಷಾದಿಸುತ್ತೇವೆ ದಿವಂಗತ ರಾಮರಾಯರು ಪೋಲೀಸ್ ಇನ್‌ಸ್ಪೆಕ್ಟರಾಗಿ ನಿವೃತ್ತಿ ಹೊಂದಿದ್ದು ಶ್ರೀ ಕುರ್ವಾನಂದ ಮಹಿಳಾ ಸೇವಾಶ್ರಮದ ಏಳಿಗೆ ಕಾರ್ಯ ಮೊದಲಾದ ಸಾರ್ವಜನಿಕ ಕೆಲಸಗಳಲ್ಲಿ ಆಸಕ್ತರಿದ್ದರು. ದಿವಂಗತ ಆನಂದರಾಯರು ಇಂಪೀರಿಯಲ್ ಬೇಂಕಿನ ದೊಡ್ಡ ಉದ್ಯೋಗದಲ್ಲಿದ್ದು ನಿವೃತ್ತಿ ಹೊಂದಿ ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ತಮ್ಮ ಸೇವೆ ಸಲ್ಲಿಸುತ್ತಿದ್ದರು ದಿವಂಗತರುಗಳ ಬಂಧುಗಳ ದುಃಖದಲ್ಲಿ ನಾವು ಸಹ ಸಂತಾಪ ಸೂಚಿಸುವುದು ಮಾತ್ರವಲ್ಲದೆ ಮೃತರ ಆತ್ಮಗಳಿಗೆ ಶಾಂತಿಯನ್ನೂ ಬಯಸುತ್ತೇವೆ

ಉಡುಪಿ

ಪತ್ರಿಕೋದ್ಯಮಿಗಳ ಸಂಘ ಸ್ಥಾಪನೆ

ಉಡುಪಿಯ ಪತ್ರಿಕೋದ್ಯಮಿಗಳ ಸಭೆಯೊಂದು ತಾ ೨೭ರಲ್ಲಿ ಸಂಜೆ ನವಯುಗ ಆಫೀಸಿನಲ್ಲಿ 'ಧುರೀಣ' ಸಂಪಾದಕ ಶ್ರೀ ಆರ್. ಎಸ್ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿ ಉಡುಪಿ ಪತ್ರಿಕೋದ್ಯಮಿಗಳ ಸಂಘ ಸ್ಥಾಪಿಸಲಾಯಿತು, ಶ್ರೀಗಳಾದ ಆರ್ ಎಸ್ ಶೆಣೈ, ಅಧ್ಯಕ್ಷ; ಯು. ಎಸ್ ಭಟ್ ಕಾರ್ಯದರ್ಶಿ ಟಿ. ಆರ್ ಎ. ಪೈ, ಕೆ. ಆರ್. ಶೆಣೈ ಮತ್ತು ಕೆ ಎಚ್. ಶೆಟ್ಟಿ ಇವರು ಕಾರ್ಯ ನಿರ್ವಾಹಕ ಮಂಡಳಿಯ ಸದಸ್ಯರಾಗಿ ಆರಿಸಲ್ಪಟ್ಟರು. ಜಿಲ್ಲಾ ಪತ್ರಿಕೋದ್ಯಮಿಗಳ ಸಹಕಾರದಿಂದ ಅಖಿಲ ಕರ್ನಾಟಕ ಪತ್ರಿಕೋದ್ಯಮಿಗಳ ಪರಿಷತ್ತನ್ನು ಉಡುಪಿಯಲ್ಲಿ ಮಕರ ಸಂಕ್ರಾಂತಿ ವೇಳೆ ಜರಗಿಸಬೇಕಾಗಿ ನಿರ್ಧರಿಸಲಾಯಿತು ಪಂಡಿತ ತಾರಾನಾಥಜಿ ಮತ್ತು ಶ್ರೀ. ಪಿ. ಎ. ಪೈಗಳವರ ಅಕಾಲ ನಿಧನದ ಸಲುವಾಗಿ ಸಂತಾಪಸೂಚಕ ಠರಾವಾಯಿತು, ಪತ್ರಿಕಾ ವ್ಯವಸಾಯಿಗಳಿಗಿರುವ ತೊಂದರೆ ತೊಡಕುಗಳು, ಪತ್ರಿಕೆಗಳಿಗಿರಬೇಕಾದ ಧ್ಯೇಯ ಇತ್ಯಾದಿ ವಿಷಯಗಳನ್ನೆತ್ತಿ ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸ್ ರಾವ್, ಕೆ. ವಿಠಲ ಶೆಣೈ, ಒನ್ನಂಜೆ ರಾಮಚಾರ್ ಮೊದಲಾದವರು ಭಾಷಣಗಳನ್ನಿತ್ತರು.

ಸೇವಾ ಶಿಬಿರ

೧೯೪೩ನೇ ಜನವರಿ ತಾ ೯ರಿಂದ ೧೬ರ ತನಕ ನಡೆಯಲಿರುವ ಮಕರ ಸಂಕ್ರಮಣ ಜಾತ್ರೆಯ ಸಮಯ ಬರತಕ್ಕ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಉಡುಪಿಯಲ್ಲಿ ಒಂದು ಸೇವಾ ಶಿಬಿರವನ್ನು ತಾ. ೪ ೧-೪೩ರಿಂದ ತೆರೆಯಲಾಗುವುದೆಂದು ತಿಳಿದಿದೆ.

ಕುಂದಾಪುರ

ಶಿಕ್ಷೆ ಮತ್ತು ದಂಡನೆ

ಆಗೋಸ್ತು ೨೦ ತಾರೀಖಿನಲ್ಲಿ ಕೋಟದಲ್ಲಿ ತಂತಿ ವ್ಯವಹಾರಕ್ಕೆ ತಡೆಮಾಡಿದರೆಂಬ ಆರೋಪಕ್ಕೊಳಗಾದ ಆರು ಮಂದಿಯ ವಿಚಾರಣೆಯು ಕುಂದಾಪುರ ಸಬ್ ಕಲೆಕ್ಟರರಲ್ಲಿ ಭಾರತ ರಕ್ಷಣಾ ಕಾನೂನಿನ ಮೇರೆಗೆ ತಾ. ೨೨ರಲ್ಲು ನಡೆಯಿತು ಶ್ರೀಗಳಾದ ನರಸಿಂಹ ಹೊಳ್ಳರಿಗೆ ೯ ತಿಂಗಳು ಕಠಿಣ ಸಜೆ ಮತ್ತು ರೂಪಾಯಿ ೫೦೦ ದಂಡನೆ, ತಪ್ಪಿದರೆ ೩ ತಿಂಗಳ ಅಧಿಕ ಶಿಕ್ಷೆ ಕೃಷ್ಣ ಸಂದೆಯವರಿಗೆ ೬ ತಿಂಗಳ ಕಠಿನ ಸಜೆ ಮತ್ತು ರೂಪಾಯಿ ೨೦೦ ದಂಡನೆ, ತಪ್ಪಿದರೆ ಮೂರು ತಿಂಗಳ ಅಧಿಕ ಶಿಕ್ಷೆ, ಗೋಪಾಲಕೃಷ್ಣ ಕಾಮತರಿಗೆ ೬ ತಿಂಗಳ ಕಠಿನ ಸಜೆ ಮತ್ತು ೨೫ ರೂ ಜುಲ್ಮಾನೆ ತಪ್ಪಿದರೆ ಒಂದು ತಿಂಗಳ ಜಾಸ್ತಿ ಸಜೆ, ಎಸ ವೆಂಕಟೇಶ ನಾಯಕ್ ಪದ್ಮನಾಭ ಕಿಣಿ ಮತ್ತು ತ್ರಿವಿಕ್ರಮ ಉಪಾಧ್ಯಾಯರಿಗೆ ಪ್ರತ್ಯೇಕವಾಗಿಯೂ ಆರಾರು ತಿಂಗಳು ಸಶ್ರಮ ಶಿಕ್ಷೆ ವಿಧಿಸಲಾಯಿತು ಇವರೆಲ್ಲರನ್ನು ಆಲಿಪುರ ಜೈಲಿಗೆ ಕೊಂಡುಹೋಗಲಾಗಿದೆ.

ಆಲೆಯ ಬಿಡುಗಡೆ

ಅಪ್ಪುನಾಯ್ಕ ಮತ್ತು ಚೋಮ ಮೂಲ್ಯರೆಂಬವರು ಮಿತ್ರರು ಚೋಮ ಮೂಲ್ಯನ ಸಂಬಂಧಿಕಳಾದ ಚೋಮು ಎಂಬವಳನ್ನು ಅಪ್ಪು ನಾಯ್ಕನು ಹೊಡೆದನು ಚೋಮು ಹೆಂಗಸಿನ ಸಂಬಂಧಿಕನಾದ ಚೋಮ ಮೂಲ್ಯನೂ ಅಪ್ಪುನಾಯ್ಕನನ್ನು ಪುತ್ತೂರು ತಾಲೂಕಿಗೆ ಸೇರಿದ ಚಿಪ್ಪಾರ್ ಗ್ರಾಮದ ಕುಂಡಿ ಬ್ಯಾರಿಗಳ ಅಂಗಡಿಯಲ್ಲಿ ಸಂಧಿಸಿದರು ಚೋಮ ಮೂಲ್ಯನು ಆಲೆಯ ತಲೆಗೆ ಸಾಗಬೆತ್ತದಿಂದ ಒಲವಾಗಿ ಹೊಡೆದನು ಅಪ್ಪುನಾಯ್ಕನು ಒಂದು ಕತ್ತಿಯಿಂದ ಚೋಮ ಮೂಲ್ಯನ ಎದೆಗೆ ಕಡಿಯಲು ಚೋಮ ಮೂಲ್ಯನು ಕೂಡಲೇ ಮಡಿದನು ಅನಂತರ ಅಪ್ಪುನಾಯ್ಕನನ್ನು ಬೇರೆಯವರು ಹಿಡಿದು ಚೆನ್ನಾಗಿ ಹೊಡೆದರು ಆಲೆಯ ಮೇಲೆ ೨೫ ಗಾಯಗಳಿದ್ದುವು. ಆತ್ಮರಕ್ಷಣೆಯ ಹಕ್ಕನು ಉಪಯೋಗಿಸುವ ಸಂದರ್ಭದಲ್ಲಿ ಆಲೆಯು ಚೋಮ ಮೂಲ್ಯನನ್ನು ಕೊಂದುದು ಎಂದು ಆಲೆಯ ಕಡೆಯಿಂದ ವಾದಿಸಲಾಗಿತ್ತು. ಅಸೆಸರರ ಅಭಿಪ್ರಾಯವನ್ನು ಮಂಜೂರು ಮಾಡಿ ಸೆಶ್ಯನ್ಸ್ ಜಡ್ಜರಾದ ಶ್ರೀ ಟಿ. ಡಿ ರಾಮಯ್ಯ ಪಂತಲು ಅವರು ಅಪರಾಧಿಯು ಆತ್ಮರಕ್ಷಣೆಯ ಹಕ್ಕನ್ನು ಉಪಯೋಗಿಸಿದುದು ನ್ಯಾಯಬದ್ಧವಾಗಿದೆ ಎಂದು ತೀರ್ಮಾನಿಸಿ ತಾ. ೨೨ ೧೨ ೪೨ರಂದು ಅಪರಾಧಿಯನ್ನು ಬಿಡುಗಡೆ ಮಾಡಿದರು ಶ್ರೀ. ಜಿ. ಕೆ ಗೋವಿಂದ ಭಟ್ಟರು ಪ್ರಾಸಿಕ್ಯೂಶನ್ ನಡೆಸಿದರು, ಶ್ರೀ ಬಿ. ಎಲ್. ಎನ್ ರೈಗಳು ಆಲೆಯ ಪರವಾಗಿ ವಾದಿಸಿದರು

ಕಾಸರಗೋಡು

ನೀಲೇಶ್ವರ—ಚಿಲ್ಲರೆ ದಾಸ್ತಾನು

ಇಲ್ಲಿಯ ರೆವಿನ್ಯೂ ಇನ್‌ಸ್ಪೆಕ್ಟರರು ಒಬ್ಬರ ವಸತಿಯನ್ನು ಶೋಧಿಸಿ ೩೦೦೦ ಕಾಲಾಣೆಗಳನ್ನೂ ೪೦೦೦ ಪೈಗಳನ್ನೂ ಹಲವು ನೂರು ಒಂದಾಣೆ ಎರಡಾಣೆ ನಾಣ್ಯಗಳನ್ನೂ ಹಿಡಿದೊಯ್ದರೆಂದು ತಿಳಿದಿದೆ

ಕೋಡ್ಲ ಮೊಗರು

ಇಲ್ಲಿನ ಹಾ ಎ ಶಾಲೆಯ ವರ್ಧಂತಿ ಉತ್ಸವವು ಶ್ರೀ ಟಿ. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಸಿನೆಮಾ ಸುದ್ದಿ

ವಿರಹದಿಂದ ಜ್ಯೋತಿ ಪ್ರಕಾಶನ ಆತ್ಮಹತ್ಯೆ?

ಬಂಗಾಳದ ಸಿನೆಮಾ ನಟ ಜ್ಯೋತಿ ಪ್ರಕಾಶನು ಕಳೆದ ತಾ. ೧೬-೧೨-೪೨ಕ್ಕೆ ವಿಷ ತಿಂದು ಆತ್ಮಹತ್ಯೆಮಾಡಿದ ವಿಷಯ ಈಗ ಕೆಲವು ಸುದ್ದಿಗಳು ಪ್ರಕಟವಾಗಿವೆ. ಆತನು, ಪ್ರಥಮ ವಿವಾಹವಾಗಿ ಹದಿನೇಳು ತಿಂಗಳು ಕಳೆವುದರೊಡನೆ, ಈಚೆಗೆ ಒಂದೆರಡು ತಿಂಗಳ ಹಿಂದೆ ಶೀಲಾಹೆಲ್ವಾರ್ ಎಂಬ ಮುಸ್ಲಿಂ ತರುಣಿಯನ್ನು ಪ್ರೇಮ ವಿವಾಹವಾಗಿದ್ದನು. ಶೀಲಾ ಹೆಲ್ವಾರಳು ತಾ. ೩೦-೧೧-೪೨ರಂದು ಅಕಾಲ ಮೃತ್ಯುವಿಗೆ ತುತ್ತಾದಳು. ಆಕೆ ಬಹಳ ಎಳೆಯ ವಯಸ್ಸಿನವಳಿದ್ದು ನೃತ್ಯ ಸಂಗೀತಾದಿಗಳಲ್ಲಿ ಕುಶಲಳಾಗಿದ್ದಳು ಹೀಗೆ ನೃತ್ಯ ಸಂಗೀತಾಭಿನಯಗಳಿಂದ ಪ್ರೇಮಪಾಶದಿಂದ ಉಜ್ವಲ ಜೀವನದ ಭವಿಷ್ಯವನ್ನು ಕಲ್ಪಿಸಿಕೊಂಡು ಜತೆಗೂಡಿದ ಪತ್ನಿಯ ಈ ಅಕಾಲ ನಿಧನದಿಂದ, ಅಸಹನೀಯ ವಿರಹ ಪರವಶನಾಗಿ, ಜ್ಯೋತಿ ಪ್ರಕಾಶನು ಆತ್ಮಹತ್ಯೆ ಮಾಡಿಕೊಂಡನೆಂದು ಹಲವರು ಊಹಿಸುತ್ತಾರೆ. ಜ್ಯೋತಿ ಪ್ರಕಾಶನು ಹಿಂದೆ 'ಜವಾನ್-ಕೀರೀತ್' 'ಡಾಕ್ಟರ್' ಚಿತ್ರಗಳಲ್ಲಿ ಅಭಿನಯಿಸಿದ್ದು ಮಾತ್ರವಲ್ಲದೆ ಎಂ. ಪಿ. ಪ್ರೊಡಕ್ಷನ್ಸಿನ 'ಹೊಸ್ಪಿಟಲ್' ಚಿತ್ರದಲ್ಲಿ ಕಾನನ್ ದೇವಿಯೊಡನೆಯೂ, ತಲ್ವಾರ್ ಪ್ರೊಡಕ್ಷನ್ಸಿನ 'ಮಾಂಟೋಲಿ' ಚಿತ್ರದಲ್ಲಿ ರಮೋಲಾಳೊಡನೆಯೂ ಮುಖ್ಯ ಪಾತ್ರ ವಹಿಸುವವನಿದ್ದು, ಅವನೀ ದುರ್ಮರಣದಿಂದ ಸಿನೆಮಾ ಪ್ರಪಂಚಕ್ಕೆ ಅಪಾರ ನಷ್ಟವುಂಟಾಗಿದೆ!

ನ್ಯೂರ್‌ಜಹಾನಳ ವ್ಯಾಜ್ಯ

ತನ್ನ ಸೋದರರು ತನ್ನ ಸಂಪಾದನೆಯ ಮೇಲೆ ಜೀವನ ಮಾಡುವ ಇರಾದೆಯಿಂದ ತನ್ನನ್ನು ಬೆದರಿಸಿ, ಭಂಗಿಸಿ, ಕೊಲ್ಲುವ ಯತ್ನವೂ ಮಾಡುತ್ತಿದ್ದು, ದುಷ್ಟ ಕೃತ್ಯಕ್ಕೆ ಜೀಳುವಂತೆಯೂ ಒತ್ತಾಯಿಸಿದರೆಂದೂ, ಆದ್ದರಿಂದ ಸರಕಾರವು ತನ್ನ ಜೀವ ರಕ್ಷಣೆಗೆ ನೆರವಾಗಬೇಕೆಂದೂ ಸಿನೆಮಾ ನಟಿ ನೂರ್‌ಜಹಾನಳು ಬೊಂಬಯಿ ಕೋರ್ಟಿನಲ್ಲಿ ಒಂದು ವ್ಯಾಜ್ಯ ತಂದಿದ್ದಾಳೆ. ತಾನು ಜಮೀನ್ದಾರ ಚಿತ್ರದಲ್ಲಿ ಅಭಿನಯಿಸುತ್ತಿದ್ದಾಗ, ತನ್ನ ಸಾವಿರಾರು ರೂಪಾಯಿಗಳ ಸಂಪಾದನೆಯನ್ನು ಸಂಪೂರ್ಣ ಅವರು ಸ್ವಾಧೀನಪಡಿಸಿಕೊಂಡರೆಂದೂ, ತನಗೆ ಆಗ ಕಣ್ಣು ಬೇನೆ ಆಗಲು ಅದಕ್ಕೆ ಒಬ್ಬ ನಿಷ್ಪ್ರಯೋಜಕ ಡಾಕ್ಟರರಲ್ಲಿಗೆ ಕರಕೊಂಡು ಹೋಗಿ ಕಣ್ಣು ಕೆಡಿಸಿದರೆಂದೂ, ಆ ಮೇಲೆ ತಾನು ಶೌಕತ್ ಹುಸೇನರನ್ನು ಮದುವೆಯಾಗಲು ಅದರಿಂದ ತನ್ನ ಸಂಪಾದನೆಯು ಅವರಿಗೆ ಸಿಗುವುದು ತಪ್ಪಿ ಹೋಗುತ್ತದೆಂದೂ, ತನ್ನ ಹಾಗೂ ಗಂಡನ ಕೊಲೆಯ ಕೃತ್ಯಕ್ಕೂ ಪ್ರಯತ್ನಿಸಿದರೆಂದೂ ಆವಳ ದೂರಾಗಿದೆ.

ಲೀಲಾ ಹರೀಶ್

ಲೀಲಾ ಚಿಟ್ನಿಸ್ ಮತ್ತು ಹರೀಶರು ಪ್ರಥಮ ಸಲವಾಗಿ, ರಮಣೀಕದ ಸಾಮಾಜಿಕಚಿತ್ರ 'ರೇಖಾ'ದಲ್ಲಿ ಪ್ರಣಯಿಗಳಾಗಿ ಅಭಿನಯಿಸುತ್ತಾರೆ. ಅವರ ಮುಂದಿನ ಕೃತಿಯೊಂದು ಲೀಲಾ ಚಿಟ್ನಿಸ್ ಮತ್ತು ಅಶೋಕ ಕುಮಾರರ ನಟನೆಯಿಂದ ಕೂಡಿದ್ದು ಅದರ ಹೆಸರೇನೆಂದು ಇನ್ನೂ ಪ್ರಸಿದ್ಧವಾಗಿಲ್ಲ.

ಯಶೋಧರಾ ಮೋಡಕ್

ಯಶೋಧರಾ ಕಟ್ಜು ಮತ್ತು ಶಾಹು ಮೋಡಕರು ರಮಣೀಕದ 'ದುಲ್ಹಾನ್' ಚಿತ್ರದಲ್ಲಿ ನಾಯಿಕಾ ನಾಯಕರಾಗಿದ್ದಾರೆ. ಯಶೋಧರಾ ಕಟ್ಜು ನೂತನ ತಾರೆ; ನೆಹರು ಕುಟುಂಬಕ್ಕೆ ಸೇರಿದವಳೆಂಬ ಪ್ರಚಾರವುಂಟು 'ಲಾಲಾಜಿ' ನಂತರ ಪ್ರಾಮುಖ್ಯ ಪಾತ್ರದಲ್ಲಿ ಈ ಚಿತ್ರದಲ್ಲಿ ಆಕೆಯ ನಟನೆಯನ್ನು ನೋಡಬೇಕು.

ಮೋಡಕ್-ಶೋಭನಾ

ಇವರು ವಾಡಿಯಾ ಪಿಕ್ಚರ್ಸ್ ಇವರ 'ಶೋಭಾ' ಎಂಬ ಚಿತ್ರದಲ್ಲಿ ನಾಯಕ ನಾಯಕಿಯರಾಗಿ ನಟಿಸುತ್ತಾರೆ.



ಪುಂಡರು ನಮ್ಮನ್ನು ಸುಲಿಯುವರು.

ಅಂಚೇಕಚೇರಿಗಳನ್ನೂ, ಟಪ್ಪಾಲು ಚೀಲಗಳನ್ನೂ, ಸ್ಟೇಷನುಗಳನ್ನೂ ಸುಡುವುದರಿಂದ ನಮ್ಮಲ್ಲಿಯ ತೀರ ಬಡಜನರಿಗೇ ಹೆಚ್ಚು ಹಾನಿಯಾಗುವುದು: ಸರ್ಕಾರಕ್ಕಾಗುವ ನಷ್ಟ ಇಲ್ಲವೆಂದರೂ ಸಲ್ಲುವುದು. ಸಾರ್ವಜನಿಕ ಮಾರ್ಗಸೌಕರ್ಯಗಳ ಈ ಸಾರ್ವತ್ರಿಕ ಧ್ವಂಸವನ್ನು ಯಾವ ದೇಶಪ್ರೇಮಿಯೂ ಸಹಿಸಲಾರನು. ಇದೆಲ್ಲದಕ್ಕೂ ಕಳಸವಿಡುವಂತೆ, ಪುಂಡರು ಜನರ ಕೊಲೆಯನ್ನೂ ಮಾಡುತ್ತಿರುವರು!

ಪುಂಡರು ಭಾರತಮಾತೆಯ ಪವಿತ್ರ ಹೆಸರಿಗೆ ಕಲಂಕವನ್ನು ಹಚ್ಚುತ್ತಿರುವರು. ಪುಂಡರ ಸ್ವೈರಾಚರಣೆ ನಡೆದಿರುವಷ್ಟು ದಿನ, ಸ್ವಾತಂತ್ರ್ಯ ಸಂಪಾದನೆಯ ಆಸೆಯನ್ನು ಬಿಟ್ಟುಕೊಡುವುದು ಒಳ್ಳೆಯದು. ಪೋಲೀಸರ ಮತ್ತು ದಂಡಿನ ಸಹಾಯದಿಂದಲೇ ಪುಂಡರ ಪಾರುಪತ್ಯ ಮಾಡುವ ಸಂದರ್ಭದಲ್ಲಿ, ಎಷ್ಟೋ ನಿರ್ದೋಷಜನರು ಕಷ್ಟಕ್ಕೀಡಾಗುವುದು ಸಹಜವಿದೆ. ಜನತೆಯ ನಿರ್ಧಾರವೇ ಪುಂಡ-ರಾಜ್ಯವನ್ನು ನಿಮಿಷದಲ್ಲಿ ಕೊನೆಗಾಣಿಸಬಲ್ಲುದು.

ಸ್ಥಳೀಯ ಕಾವಲು ಕೂಟಗಳನ್ನು ನಿರ್ಮಿಸಿರಿ; ಸ್ವಯಂ ಸೇವಕರ ಗಸ್ತಿದಲಗಳನ್ನು ಸಜ್ಜುಗೊಳಿಸಿರಿ.

ಪುಂಡರನ್ನು ಪ್ರತಿಭಟಿಸಿರಿ!

CPU.61 Kn.

ಸಾದರ - ಸ್ವಿಕಾರ

ಜಿಲ್ಲಾ ಹರಿಜನ ಸೇವಕ ಸಂಘ

ಮಂಗಳೂರು ದ. ಕ. ಇದರ ೩೦ನೇ ಸಪ್ಟೆಂಬರ ೧೯೪೨ಕ್ಕೆ ಅಂತ್ಯವಾಗುವ ವರ್ಷದ ವರದಿ ನಮ್ಮ ಹಸ್ತಗತವಾಗಿದೆ. ಜಿಲ್ಲೆಯ ಹರಿಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರಯತ್ನಿಸುವ ಈ ಸಂಘವು ೧೯೪೧ ನವಂಬರದಲ್ಲಿ ರಿಜಿಸ್ಟ್ರೇಶನ್ ಹೊಂದಿದ್ದು ಶ್ರೀಗಳಾದ ಎ. ಬಿ. ಶೆಟ್ಟಿ ಡಾ। ಅಡಪ್ಪ, ಎಸ್. ಎಸ್. ಕಿಲ್ಲೆ ಇವರಂಥಾ ಸಮರ್ಥ ಸಾರ್ವಜನಿಕ ಕೆಲಸಗಾರರ ಮುಂದಾಳುತನದಲ್ಲಿ ಹಲವು ಪ್ರಶಂಸನೀಯ ಕಾರ್ಯಗಳನ್ನು ಕೈಕೊಂಡಿದ್ದು ಸಾರ್ವಜನಿಕರ ಆದರ ಪ್ರೋತ್ಸಾಹಗಳಿಗೆ ಪಾತ್ರವಾಗಿದೆ. ಉಡುಪಿ, ಕುಂದಾಪುರ, ಕಾಸರಗೋಡು ಪುತ್ತೂರುಗಳಲ್ಲಿ ವಿದ್ಯಾರ್ಥಿ ಭವನಗಳನ್ನೂ, ಕುಂದಾಪುರ, ಬೈಂದೂರು, ಉಡುಪಿ ಕಾರ್ಕಳ, ಮೂಲ್ಕಿ, ಪುತ್ತೂರು ಮತ್ತು ಕಾಸರಗೋಡುಗಳಲ್ಲಿ ಬೋರ್ಡ್ ಸೆಕೆಂಡರಿ ಸ್ಕೂಲುಗಳಿಗೆ ಹೋಗುವ ವಿದ್ಯಾರ್ಥಿಗಳಿಗಾಗಿ ಮಧ್ಯಾಹ್ನದ ಊಟದ ಏರ್ಪಾಡನ್ನೂ, ಕೆಲವು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಔಷಧೋಪಚಾರ ದ್ರವ್ಯ ವಸ್ತ್ರಗಳ ಸಹಾಯವನ್ನೂ, ಈ ಸಂಸ್ಥೆ ಕೊಡುತ್ತಿದೆ ಮಾತ್ರವಲ್ಲದೆ ಕಾರ್ಕಳದಲ್ಲಿ ನಡೆವ 'ಶಬರೀ-ಆಶ್ರಮ'ಕ್ಕೂ ಸಹಾಯ ಮಾಡಿದೆ. ಕಾಸರಗೋಡು ತಾಲೂಕಿನ 'ಶೀತಂಗೋಳಿ'ಯಲ್ಲಿ ಒಂದು ಹರಿಜನ ಕೊಲೊನಿ ಮಾಡುವ ವ್ಯವಸ್ಥೆಯನ್ನೂ ಕೆಲವರಿಗೆ ಕೈಗಾರಿಕೆ ಶಿಕ್ಷಣಕ್ಕೂ ಸಹಾಯ ಮಾಡಿದೆ. ಕುಂದಾಪುರ, ಉಡುಪಿ, ಕಾಸರಗೋಡು, ಪುತ್ತೂರು ಕಾರ್ಕಳಗಳಲ್ಲಿ ಈ ಸಂಘದ ಶಾಖೆಗಳು ಸ್ಥಾಪಿತವಾಗಿ ಕೆಲಸಮಾಡುತ್ತಿದೆ. ಹರಿಜನ ಸೇವಕರಾದ ಶ್ರೀ ಎಸ್. ಎಸ್. ಕಿಲ್ಲೆಯವರು ಜಿಲ್ಲೆಯ ಹಳ್ಳಿಹಳ್ಳಿಗಳಿಗೂ ಹೋಗಿ ಪ್ರಚಾರಕಾರ್ಯ ನಡೆಸುತ್ತಿದ್ದಾರೆ. ಡಿಲ್ಲಿ ಹರಿಜನ ಸೇವಕ ಸಂಘ, ಬೊಂಬೇ ಫ್ಲಡ್ ರಿಲೀಫ್ ಕಮಿಟಿ, ದ. ಕ. ಜಿಲ್ಲಾ ಬೋರ್ಡು, ಮಂಗಳೂರು ಮುನ್ಸಿಪಾಲಿಟಿ, ಸರಕಾರದ ಗ್ರೇಂಟು, ಕೋಪರೇಟಿವ್ ಸೊಸೈಟಿ॥ ರಿಜಿಸ್ಟ್ರಾರ್ ಮೊದಲಾದವರು ಜಿಲ್ಲೆಯ ಹಲವು ಮಂದಿ ಉದಾರಿಗಳೂ ದ್ರವ್ಯ ಸಹಾಯ ಮಾಡಿದ್ದಾರೆ. ಇಂಥಾ ಮಾನವೀಯತೆಯ ಕಾರ್ಯದಲ್ಲಿ ಜಿಲ್ಲೆಯ ಸಾರ್ವಜನಿಕರು ಆಸಕ್ತಿ ವಹಿಸಿ ಸಂಘವನ್ನು ಸರ್ವ ವಿಧದಿಂದಲೂ ಪ್ರೋತ್ಸಾಹಿಸಿ ಮುಂದಿನ ವರ್ಷಗಳಲ್ಲಿ ಆತ್ಮಧಿಕ ಚಟುವಟಿಕೆಗಳನ್ನು ನೆರವೇರಿಸುವ ಸಹಾಯವಾಗಬೇಕೆಂದು ನಾವು ಆಶಿಸುತ್ತೇವೆ.

—ರಾಮಕೃಷ್ಣ ಲೀಲಾ ಪ್ರಸಂಗ—

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು.

ಶ್ರೀ ಪರಮಹಂಸರು ಭಾವ ಸಮಾಧಿಯಲ್ಲಿ ದರ್ಶನ ಮಾಡಿದ ವಿಷಯಗಳು ಬಾಹ್ಯ ಜಗತ್ತಿನಲ್ಲಿ ನಿಜವಾಗಿಯೂ ಸಂಭವಿಸುತ್ತಿದ್ದುವು ಶ್ರೀ ಪರಮಹಂಸರ ಜೀವನದಲ್ಲಿ ಸಂಭವಿಸಿದ ಅನೇಕ ಘಟನೆಗಳಿಂದ ಉಪನಿಷತ್ತಿನಲ್ಲಿ ಹೇಳಿದ ಆ ವಿಷಯವು ಸತ್ಯವೆಂದು ನಮಗೆ ವಿದಿತವಾಗುತ್ತಿತ್ತು. ಸಾಧಾರಣವಾಗಿ ಮಾನವನ ಮನಸ್ಸಿನಲ್ಲಿ ಉದ್ಭವಿಸುವ ಭಾವಗಳು 'ಸ್ವಸಂವೇದ್ಯ'ವಾದುವುಗಳು ಅಂದರೆ ಆ ಭಾವಗಳ ಪರಿಮಾಣ, ತೀವ್ರತೆ, ಇತ್ಯಾದಿ ಆತನೇ ಸ್ವತಃ ಯಥಾರ್ಥವಾಗಿ ತಿಳಿಯಬಲ್ಲನು ಇತರರು ಆ ಭಾವಗಳ ಬಾಹ್ಯ ವಿಕಾಸವನ್ನು ಮಾತ್ರ ಕಂಡು, ಅನುಮಾನ ಮಾತ್ರ ಮಾಡಬಹುದು ಭಾವ ಸಮಾಧಿಯ ಅಂತಹ ಸ್ವಸಂವೇದ್ಯ ಪ್ರಕೃತಿಯು ಸಕಲರ ಪ್ರತ್ಯಕ್ಷದ ವಿಷಯವಾಗಿದೆ ಭಾವಗಳು ಇತರ ಯೋಚನೆಗಳಂತೆ ಮಾನಸಿಕ ವಿಕಾರ ಅಥವಾ ಶಕ್ತಿಪ್ರಕಾಶ ಮಾತ್ರವೆಂದೂ, ಮನಸ್ಸಿನಲ್ಲೇ ಅವುಗಳ ಉದಯ, ಮನಸ್ಸಿನಲ್ಲೇ ಅವುಗಳ ಲಯವೆಂದೂ, ಬಾಹ್ಯ ಜಗತ್ತಿನಲ್ಲಿ ಅವುಗಳ ಚಿತ್ರಗಳನ್ನು ನೋಡುವುದು ಅಥವಾ ಕಾಣಿಸುವುದು ಅಸಾಧ್ಯವೆಂದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಶ್ರೀ ಪರಮಹಂಸರು ಭಾವಸಮಾಧಿಯಲ್ಲಿ ಪ್ರತ್ಯಕ್ಷಿಸಿದ ಅನೇಕ ವಿಷಯಗಳು ತದ್ವಿಪರೀತವಾಗಿದ್ದುವು ಉದಾಹರಣೆಗಾಗಿ—ಸಾಧನೆಯ ಕಾಲದಲ್ಲಿ ಶ್ರೀ ಪರಮಹಂಸರು ಸ್ವಹಸ್ತದಿಂದಲೇ ನೆಟ್ಟ ಗಿಡಗಳನ್ನು ದನಕರುಗಳು ತಿಂದುದನ್ನು ಕಂಡು ಅಲ್ಲೊಂದು ಸುತ್ತುಮುತ್ತಲೂ ಬೇಲಿಯನ್ನು ಕಟ್ಟಬೇಕೆಂದು ಅವರಿಗೆ ಇಚ್ಛೆಯಾಯಿತು ಹಾಗೆ ಇಚ್ಛೆಯಾದ ನಂತರವೇ ಗಂಗಾನದಿಯ ಉಬ್ಬರದಲ್ಲಿ ಆ ಬೇಲಿಯನ್ನು ಕಟ್ಟಲು ಬೇಕಾದ ವಸ್ತುಗಳು ಅಂದರೆ ಮರದ ಗೂಟಗಳು, ಹಗ್ಗ, ಒಂದು ಕತ್ತಿ ಆ ಸ್ಥಾನದಲ್ಲೇ ತೇಲಿ ಬಂದಿದ್ದುವು ಮತ್ತು ಕಾಳಿ ಮಂದಿರದ 'ಭರ್ತಾಭಾರಿ' ಎಂಬ ಹೆಸರಿನ ಮಾಲಿಯ ಸಹಾಯದಿಂದ ಆ ಬೇಲಿಯನ್ನು ಕಟ್ಟಿದರು' ರಾಸ್ಮಣಿಯ ಅಳಿಯ ಮಥುರಾಮೋಹನರೊಂದಿಗೆ ತರ್ಕಮಾಡುತ್ತಾ ಒಂದಾನೊಂದು ದಿನ 'ಈಶ್ವರನ ಇಚ್ಛೆಯಾದರೆ ಎಲ್ಲವೂ ಸಾಧ್ಯವಾಗುವುದು ಕೆಂಪು ಹೂವಿನ ಮರದಲ್ಲಿ ಬೆಳ್ಳಗೆ ಹೂವೂ ಕೂಡ ಬೆಳೆಯಬಹುದು' ಎಂದು ಹೇಳಿದ ಮಾತನ್ನು ಮಥುರಾಮೋಹನರು ನಂಬಲಿಲ್ಲ ಆದರೆ ಮರುದಿನವೇ ಶ್ರೀ ಪರಮಹಂಸರು ತೋಟದ ದಾಸವಾಳ ಹೂವಿನ ಗಿಡದ ಒಂದು ಗೆಲ್ಲಿನಲ್ಲಿ ಎರಡು ತರದ ಹೂವುಗಳನ್ನು ಕಂಡು, ಆ ಹೂವುಗಳೊಂದಿಗೆ ಆ ಗೆಲ್ಲನ್ನೂ ಮುರಿದು ತಂದು ಮಥುರಾಮೋಹನರಿಗೆ ತೋರಿಸಿದ್ದರು—ತಂತ್ರ ಸಾಧನೆ, ವೇದಾಂತ ಸಾಧನೆ, ವೈಷ್ಣವ ಸಾಧನೆ, ಇಸ್ಲಾಮ್—ಸಾಧನೆ,—ಮೊದಲಾದ ಸಾಧನೆಗಳನ್ನು ಮಾಡುವ ಅಭಿಲಾಷೆಯು ಶ್ರೀ ಪರಮಹಂಸರ ಅಂತರ್ಯದಲ್ಲಿ ಹುಟ್ಟಿದೊಡನೆಯೇ ಆಯಾ ಮತದ ಒಬ್ಬೊಬ್ಬ ಸಿದ್ಧ ಪುರುಷನು ದಕ್ಷಿಣೇಶ್ವರದ ಕಾಳೀ ದೇವಾಲಯದಲ್ಲಿ ಬಂದು ಆಯಾ ಮತದ ದೀಕ್ಷೆಯನ್ನು ಕೊಟ್ಟಿದ್ದರು! ಶ್ರೀ ಪರಮಹಂಸರು, ಭಕ್ತರನ್ನೂ ಕಾಣಬೇಕೆಂದು ಇಚ್ಛಿಸಿದ್ದರು ಮತ್ತು ಅವರು ಬಂದೊಡನೆ ಪ್ರತಿಯೊಬ್ಬರ ಗುರುತನ್ನೂ ಹಿಡಿದು ಅವರನ್ನು ಗ್ರಹಿಸಿದ್ದರು ಹೀಗೆ ಅನೇಕ ದೃಷ್ಟಾಂತಗಳನ್ನು ಉಲ್ಲೇಖಿಸಬಹುದು—ಇವುಗಳನ್ನು ಪರ್ಯಾಲೋಚಿಸಿದಲ್ಲಿ—ಶ್ರೀ ಪರಮಹಂಸರ ಮಾನಸಿಕ ಅನೇಕ ಭಾವಗಳು ಸಾಧಾರಣ ಮಾನವ ಮನಸ್ಸಿನ ಭಾವಗಳಂತೆ ಯೋಚನೆಯಲ್ಲೇ ಪರ್ಯಾವಸಾನವಾಗಲಿಲ್ಲವೆಂದು ತಿಳಿಯುತ್ತದೆ.— ಪರಂತು ಅವರ ಭಾವಗಳಂತೆ ಬಾಹ್ಯ ಜಗತ್ತಿನ ಘಟನೆಗಳು ಏನೋ ನಮಗೆ ಅಜ್ಞಾತವಾದ ನಿಯಮ ಬಂಧನಕ್ಕೆ ಒಳಪಟ್ಟು, ಪರಿವರ್ತಿಸುತ್ತಿದ್ದುವು. ನಾವು ಇಲ್ಲಿ ಈ ಮೇಲೆ ಹೇಳಿದ ಸತ್ಯದ ವಿಷಯವಾಗಿ ಉಲ್ಲೇಖನ ಮಾತ್ರ ಮಾಡಿ ಬಿಟ್ಟಿದ್ದೇವೆ. ಪಾಠಕರು ಅದರಿಂದ ತಂತಮ್ಮ ಅಭಿರುಚಿಯಂತೆ ಆಲೋಚನೆಯನ್ನು ಅಥವಾ ಅನುಮಾನವನ್ನು ಮಾಡಬಹುದು—ಪರಂತು ಘಟನೆಗಳು ನಿಜವಾಗಿಯೂ ಹಾಗೆಯೇ ಸಂಭವಿಸುತಿದ್ದುವು

ಕ್ರಮಶಃ

GREETINGS.

The Directors, Officers and staff of the CANARA BANK, LIMITED, join in sending you this message of appreciatiom for youı goodwill and patronage during the last year We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD 1906.

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members s limited)

Head Office: UDIPI

Estd 1906

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಹೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು.

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4 ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು.

5 28 ರಾತ್ತಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6 ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು

ವಿಶೇಷ ಸೂಚನೆ: ಬಸ್ಸು ವ್ಯವಹಾರದ, ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. ಬೊಂಬ್ಯಾ ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಹೊಸವರ್ಷದ ಅಭಿವಂದನೆ

ನಮ್ಮ ಎಲ್ಲಾ ಪೊಲಿಸಿದಾರರಿಗೂ, ಏಜಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ

ನವ ವರ್ಷವು

ಆನಂದದಾಯಕವಾಗಿಯೂ, ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು

★ ನಾವು ★

—ಹೃತ್ಪೂರ್ವಕವಾಗಿ ಹಾರೈಸುತ್ತೇವೆ—

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ಏಜಂಟರು:

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಉಡುಪಿ ಸೇಲಂ ಬೆಂಗಳೂರು ತ್ರಿವೇಂಡ್ರಂ
ಮಂಗಳೂರು ಕಲ್ಲಿಕೋಟೆ ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗ್ಗಳನ್ನು ಗುಣಪಡಿಸುವ ದಿವ್ಯೌಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜಂಟರು —
(1) ಡಾಕ್ಟರ್ ವಿ. ಸಿ. ಕಾಮತ್, ರಥಬೀದಿ (2) ರಾಘುವೇಂದ್ರ ಷೈ, ರಥಬೀದಿ (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್. ಪ್ರಭು, M L B S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ॰ ಕನ್ನಡ

ಡಿಪೋ—1 ವೆ.ರಾಠ ಗಲ್ಲಿ ಹುಬ್ಬಳ್ಳಿ.
2, 36 ಸ್ವಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ,

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 8—1—1943 [ಸಂಚಿಕೆ 2]

ಹಿಂದು ಮಹಾಸಭೆ ಚಳವಳ ಹೂಡುವುದು?

ಹಿಂದು ಮಹಾಸಭೆಯ ಅಧಿವೇಶನವು ವೀರ ಸಾವರ್ಕಾರರ ಅಧ್ಯಕ್ಷತೆಯಲ್ಲಿ ಕಾನ್‌ಪುರದಲ್ಲಿ ಜರಗಿತು. ಬ್ರಿಟಿಷ್ ಸರಕಾರದವರು ಭಾರತಕ್ಕೆ ಸ್ವಾತಂತ್ರ್ಯ ಕೊಡಲು ನಿರಾಕರಿಸುತ್ತಿರುವುದರಿಂದ ಸ್ವಾತಂತ್ರ್ಯ ಪಡೆಯಲು ಒತ್ತಾಯಪಡಿಸುವುದಕ್ಕಾಗಿ, ಹಿಂದೂ ಮಹಾಸಭೆಯು ಸಾಮೂಹಿಕ ಚಳವಳವನ್ನು ಹೂಡಬೇಕೆಂಬ ಠರಾವನ್ನು ಡಾ. ಬಿ. ಎಸ್. ಮೂಂಜೆಯವರು ತಂದರು, ಅದು ಸರ್ವಾನುಮತದಿಂದ ಮಂಜೂರಾಯಿತು. ಠರಾವಿನ ವಿವರ ಈ ಕೆಳಗಿನಂತಿದೆ: 'ಹಿಂದೂ ಮಹಾಸಭೆಯು ಸೂಚಿಸಿದ ರಾಷ್ಟ್ರೀಯ ಬೇಡಿಕೆಯನ್ನು ಬ್ರಿಟಿಷ್ ಸರಕಾರದವರು ನಿರಾಕರಿಸಿದ್ದಾರೆ. ಇದರಿಂದ, ಅವರಿಗೆ ಅಧಿಕಾರ ಬಿಟ್ಟುಕೊಡಲು ಮನಸ್ಸಿಲ್ಲವೆಂದು ಖಚಿತವಾಗುತ್ತದೆ. ಆ ಕಡೆ ಮುಸ್ಲಿಂ ಲೀಗಿನವರು ಪಾಕಿಸ್ತಾನ ಪಡೆಯುವುದಕ್ಕಾಗಿ ಏನನ್ನಾದರೂ ಮಾಡಲು ಸಿದ್ಧರಿರುವೆವೆಂದು ಬೆದರಿಸುತ್ತಾರೆ. ಬ್ರಿಟಿಷ್ ಸರಕಾರದವರಾದರೂ ಈ ಧೋರಣೆಗೆ ಬೆಂಬಲ ಕೊಡುವರೆಂದು ಕ್ರಿಪ್ಸ್ ಯೋಜನೆಯಿಂದ ವ್ಯಕ್ತವಾಯಿತು. ಆದರಿಂದ ಹಿಂದುಸ್ತಾನವು ಸ್ವತಂತ್ರ ರಾಷ್ಟ್ರವೆಂದು ಸಾರಿ ಪಾಕಿಸ್ತಾನವನ್ನು ವಿರೋಧಿಸುವಂತೆ ಬ್ರಿಟಿಷ್ ಸರಕಾರವನ್ನು ಒತ್ತಾಯಪಡಿಸುವುದಕ್ಕೋಸ್ಕರ, ಸಾಮೂಹಿಕ ಚಳವಳ ಹೂಡುವುದೊಂದೇ ದಾರಿಯಾಗಿದೆಯೆಂದು ಈ ಅಧಿವೇಶನವು ಅಭಿಪ್ರಾಯಪಡುತ್ತದೆ. ಹೊರಗಿನಿಂದ ಒದಗುವ ಧಾಳಿಯನ್ನು ಮತ್ತು ದೇಶದೊಳಗಿನ ಗಲಭೆಗಳನ್ನು ಎದುರಿಸಲು ಹಿಂದುಗಳು ಸಂಘಟಿತರಾಗುವುದು ಅವಶ್ಯ. ಆದಕಾರಣ ಈ ಅಧಿವೇಶನವು ೧೯೪೩ರೊಳಗೆ ಒಂದು ಯೋಜನೆಯನ್ನು ಸಿದ್ಧಪಡಿಸಬೇಕೆಂದು ವರ್ಕಿಂಗ್ ಕಮಿಟಿಗೆ ತಿಳಿಸುತ್ತದೆ.' ಈ ಠರಾವನ್ನು ಮಂಡಿಸುತ್ತಾ ಮೂಂಜೆಯವರು, ಹಿಂದುಗಳು ಪಾಕಿಸ್ತಾನವಾಗಿ ಭಾರತವನ್ನು ವಿಭಾಗಿಸಲು ಎಂದಿಗೂ ಅವಕಾಶ ಕೊಡಲಾರರೆಂದರು. ರಾಜಾ ಮಹೇಶ್ವರ ದಯಾಳ ಮತ್ತು ಶ್ರೀ ಬಿ. ಜಿ. ಖಾಪರ್ಡೆಯವರು ಠರಾವಿಗೆ ಬೆಂಬಲ ಕೊಡುತ್ತಾ ಬ್ರಿಟಿಷರು ನಮ್ಮ ಮೂಲ ಕೇಳಿಕೆಯನ್ನು ನಿರಾಕರಿಸಿದ್ದರಿಂದ ಈ ಚಳವಳ ಹೂಡಬೇಕಾಗಿದೆಯೆಂದರು. ಅಧ್ಯಕ್ಷ ಸಾವರ್ಕಾರರು ತಮ್ಮ ಭಾಷಣದಲ್ಲಿ ಠರಾವಿನ ಮಹತ್ವವನ್ನು ಎಲ್ಲರೂ ಅರಿತುಕೊಂಡು ಅದರಂತೆ ನಡೆದುಕೊಳ್ಳಬೇಕೆಂದರು. 'ಬರಿಯ ಠರಾವುಗಳನ್ನು ಮಾತ್ರ ಮಾಡಿದ್ದರಿಂದ ಏನೂ ಆಗುವುದಿಲ್ಲ, ಏನಾದರೂ ಕೆಲಸ ಮಾಡಲೇಬೇಕೆಂದು ನಮಗೀಗ ತಿಳಿದಿದೆ. ಎಂಥಾ ವಿಪತ್ತು ಬಂದರೂ ಅದನ್ನು ಧೈರ್ಯದಿಂದ ಎದುರಿಸಲು ಸಿದ್ಧರಾಗಿರಬೇಕು. ಚಳವಳವನ್ನು ಹೂಡಲೇಬೇಕಾದ ಸಂದರ್ಭ ಬಂದದ್ದು, ದುರ್ದೈವವಾದರೂ, ಹಿಂದುಗಳು ಸಂಘಟಿತರಾಗಿ ಧೈರ್ಯದಿಂದ ಮುನ್ನುಗ್ಗಬೇಕು' ಎಂದರು. ಹೀಗೆ ಈಗ ಹಿಂದೂ ಮಹಾಸಭೆಯೂ ಸರಕಾರಕ್ಕೆ ಚಳವಳದ ಬೆದರಿಕೆಯೊಂದನ್ನು ಕೊಟ್ಟಿದೆ. ಹಿಂದು ಮಹಾಸಭೆಯು, ಪಾಕಿಸ್ತಾನವನ್ನು ವಿರೋಧಿಸುವ ಈ ಠರಾವಿನ ವಿರುದ್ಧ ಮುಸ್ಲಿಂ ಲೀಗಿನ ಪಾಕಿಸ್ತಾನ ಕೊಡದಿದ್ದರೆ ಚಳವಳ ಹೂಡುವೆವೆಂಬ ಬೆದರಿಕೆಯು ಇನ್ನೊಂದು ಠರಾವೂ, ಬೇಗನೇ ಆಗಬಹುದೆಂದೂ ನಾವು ನಿರೀಕ್ಷಿಸಬಹುದು.' ಜಾತೀಯ ಪಂಗಡಗಳಿಗೆ ರಾಜಕೀಯದಲ್ಲಿ ಪ್ರಾಧಾನ್ಯತೆಯಿತ್ತ ಫಲವನ್ನು ಹೀಗೆ ಉಣ್ಣಬೇಕಾಗಿದೆ!

ಕಲ್ಕತ್ತದ ಧಾಳಿಯ ವಿವರ ಕೊಡಲಿಲ್ಲ!

ಆಹಾರ ಸಾಮಗ್ರಿಗಳ ಅಭಾವವಾಗಿದೆಯೆ?

ಕಲ್ಕತ್ತಾ ದಾಳಿಯ ಸುದ್ದಿಗಳು

ಶತ್ರುಗಳು ವಿಮಾನದಾಳಿ ಮಾಡುತ್ತಿದ್ದರೂ, ಜನರು ಧೈರ್ಯಗೆಟ್ಟಿಲ್ಲ, ನಗರ ಬಿಟ್ಟು ಹೋಗುವುದಿಲ್ಲ ಎಂದು ಸಾರಿದ ಸರಕಾರೀ ಪ್ರಕಟಣೆಯನ್ನು ಟೀಕಿಸುತ್ತಾ, 'ಸ್ಟೇಟ್ಸ್‌ಮನ್' ಪತ್ರಿಕೆ ಹೀಗನ್ನುತ್ತದೆ: 'ಧಾಳಿಯೆಂಬ ಶಬ್ದಕ್ಕೆ ಸರಕಾರದವರು ಯಾವ ಅರ್ಥವನ್ನಿಟ್ಟುಕೊಂಡಿದ್ದಾರೋ ಗೊತ್ತಾಗುವುದಿಲ್ಲ. ಆದರೆ ಅಸಂಖ್ಯಾತ ಜನರು ಪ್ರತಿದಿನ ನಗರ ಬಿಟ್ಟು ಹೋಗುವುದನ್ನು ನಾವು ನೋಡುತ್ತಿದ್ದೇವೆ. ಇದು ಸ್ವಾಭಾವಿಕ. ನಗರದಲ್ಲಿ ಸರಿಯಾದ ಆಹಾರ ವ್ಯವಸ್ಥೆ ಇಲ್ಲದಿರುವುದರಿಂದ ಜನರು ಹೊರಗೆ ಹೋಗುತ್ತಿರುವರಲ್ಲಿ ಏನೂ ಆಶ್ಚರ್ಯವಿಲ್ಲ. ಪ್ರತಿಯೊಂದು ವಿಮಾನಧಾಳಿಯ ಕಾಲಕ್ಕೆ ಸಾಕಷ್ಟು ಎಚ್ಚರಿಕೆ ಕೊಡಲಾಗಿತ್ತೆಂದು ಹೇಳಿದ್ದು ಸರಿಯಲ್ಲ. ಧಾಳಿಯ ಎಚ್ಚರಿಕೆ ಕೊಟ್ಟ ಸ್ವಲ್ಪ ಹೊತ್ತಿನೊಳಗಾಗಿಯೇ ಬಾಂಬುಗಳು ಬಿದ್ದು, ಗುಂಡು ಹಾರಿಸಿದ ಗರ್ಜನೆ ಅನೇಕರಿಗೆ ಕೇಳಿಸಿತು. ಆದ್ದರಿಂದ ಸರಕಾರದವರು ತಮ್ಮ ಪ್ರಕಟಣೆಯಲ್ಲಿ ಸರಿಯಾದ ವಿವರ ಕೊಡಬೇಕು.' 'ಮೋರ್ನಿಂಗ್ ನ್ಯೂಸ್' ಪತ್ರಿಕೆ ಹೀಗೆ ಬರೆಯುತ್ತದೆ: 'ಇತ್ತೀಚೆಗೆ ಹೌರಾ ಮತ್ತು ಸೀಲ್ದಾ ಸ್ಟೇಶನುಗಳನ್ನು ನೋಡಿದರೆ ಬಡಜನರೇ ಹೆಚ್ಚಾಗಿ ಪಟ್ಟಣ ಬಿಟ್ಟು ಹೋಗುವಂತೆ ತೋರುತ್ತದೆ. ಬರಗಾಲ ಬಂದ ಊರಿಂದ, ಊರು ಬಿಟ್ಟು ಹೋಗುವ ಜನರಂತೆ ಸಾವಿರಾರು ಮಂದಿ ಸ್ತ್ರೀ ಪುರುಷರು ಸಾಮಾನುಗಳನ್ನು ಬೆನ್ನಮೇಲೆ ಹೇರಿಕೊಂಡು ಹೋಗುತ್ತಿರುವುದನ್ನು ನಾವು ಕಲ್ಕತ್ತದ ಪ್ರತಿಯೊಂದು ರಸ್ತೆಯಲ್ಲಿಯೂ ನೋಡಬಹುದು. ರೈಲ್ವೆ ಮತ್ತು ರೈಲ್ವೆ ರಸ್ತೆಗಳ ಸೌಕರ್ಯವಿಲ್ಲದಿರುವುದರಿಂದ ಎಷ್ಟೋ ಜನರು ದೋಣಿಗಳಲ್ಲಿ ಹೊರಟು ಹೋಗುತ್ತಿರುವರು. ಜನರು ಈ ರೀತಿ ಹೊರಟುಹೋಗುತ್ತಿರುವುದಕ್ಕೆ ಧಾಳಿಯ ಭೀತಿ ಮತ್ತು ಆಹಾರದ ಅಭಾವಗಳೇ ಕಾರಣಗಳು.' ಶ್ರೀ ಗಝನವಿಯವರು ಈ ವಿಷಯ ಹೀಗೆಂದು ಒಂದು ಪ್ರಕಟಣೆಯಿತ್ತಿರುವರು: 'ಕಲ್ಕತ್ತದ ಅಧಿಕಾರಿಗಳು ಸಂದರ್ಭಕ್ಕೆ ಸರಿಯಾಗಿ ಉಪಾಯಗಳನ್ನು ಕೈಕೊಳ್ಳದಿದ್ದರೆ, ಪಟ್ಟಣ ಮಾತ್ರವಲ್ಲ ಇಡೀ ಪ್ರಾಂತದಲ್ಲಿಯೇ ಜನರಿಗೆ ಗೊಂದಲವುಂಟಾಗುವುದು. ನಗರದ ಧಾಳಿಯ ಪರಿಣಾಮ ಅಷ್ಟೇನೂ ದುಃಖದಾಯಕವಾಗಿಲ್ಲವಾದರೂ, ಕೆಲಜನರು ನಗರದಿಂದ ಹೊರಹೋಗಲು ಪ್ರಯತ್ನಿಸುವುದು ಸಹಜವಾದುದು. ಇಂಥಾ ಪರಿಸ್ಥಿತಿಯಲ್ಲಿ ಯಾವುದೇ ನಗರದ ಜನರಾದರೂ ಹೀಗೆಯೇ ಮಾಡುವರು.' 'ಸ್ಟೇಟ್ಸ್‌ಮನ್' ಪತ್ರಿಕೆಯು ಕಲ್ಕತ್ತಕ್ಕೆ ಧಾಳಿಯಾದ ಸುದ್ದಿಯನ್ನು ಪ್ರಕಟಿಸಲು ಮಾಡಿದ ಅವ್ಯವಸ್ಥೆಯ ಕುರಿತು ಹೀಗೆಂದು ಬರೆದಿದೆ: 'ಧಾಳಿಯಾದ ಕೂಡಲೇ ಸತ್ಯ ಸಂಗತಿಗಳನ್ನು ಜನರ ಮುಂದಿಡಲು ವ್ಯವಸ್ಥೆ ಮಾಡಿದೆಯೆಂದು ಒಂದು ತಿಂಗಳ ಹಿಂದೆ ಹೇಳಲಾಗಿತ್ತು, ಆದರೆ ಈಗ ಆ [illegible] ಕಂಡುಬರುವುದಿಲ್ಲ. ಕ್ರಿಸ್‌ಮಸ್ ಹಬ್ಬದ ದಿನ ನಾಲ್ಕನೆಯ ಧಾಳಿಯಾದ ಸುದ್ದಿ ಪತ್ರಿಕೆಗಳಿಗೆ ಅಧಿಕೃತವಾಗಿ ಮುಟ್ಟಬೇಕಾದರೆ ಹನ್ನೆರಡು ತಾಸು ಹಿಡಿಯಿತು. ಆ ಸುದ್ದಿಯೂ ಕೇವಲ ನಲವತ್ತು ಶಬ್ದಗಳಲ್ಲಿ ಮುಗಿದಿತ್ತು. ವಿಶೇಷ ಸಂಗತಿಗಳೇ ಇಲ್ಲ. ರಾತ್ರಿ ಕೆಲಸಮಾಡುವ ಪತ್ರಿಕೆಗಳಿಗೆ ನಿಜವಾದ ಸುದ್ದಿ ಗೊತ್ತಿದ್ದರೂ ಅಂದಿನ ಪತ್ರಿಕೆಯಲ್ಲಿ ಅದನ್ನು ಮುದ್ರಿಸಲು ಅಧಿಕಾರಿಗಳು ಒಪ್ಪಿಗೆ ಕೊಡಲಿಲ್ಲ. ರಾತ್ರಿ ಕಲ್ಕತ್ತೆಯ ಮೇಲೆ ಧಾಳಿಯಾಯಿತೆಂದಿಷ್ಟು ಸುದ್ದಿ ಸಹ ಬೆಳಗ್ಗಿನ ಪತ್ರಿಕೆಗಳಲ್ಲಿರಲಿಲ್ಲ. ಜನರಿಗೆ ಯಾವ ಸುದ್ದಿ ಬೇಕಿತ್ತೋ ಅದೇ ಸುದ್ದಿ ಕೊಡಲಾಗಲಿಲ್ಲ. ಪತ್ರಿಕೆಗಳನ್ನು, ಈ ವ್ಯವಸ್ಥೆಯು ಅಸಹನೀಯ ಸ್ಥಿತಿಗೆ ದೂಡುತ್ತದೆ. ಪತ್ರಿಕೆಗಳು ಸಾರ್ವಜನಿಕರ ಸೇವೆಯನ್ನು ಸಲ್ಲಿಸಬೇಕಾಗಿದೆಯೆಂಬುದನ್ನು ಮರೆಯತಕ್ಕದ್ದಲ್ಲ. ಒಬ್ಬ ಅಧಿಕಾರಿ ಪ್ರಕಟಿಸಬಹುದೆಂದ ಒಂದು ಸುದ್ದಿಯನ್ನೇ ಇನ್ನೊಬ್ಬ ಅಧಿಕಾರಿ ಪ್ರಕಟಿಸಕೂಡದೆಂದನು. ಮೂರನೆ ಧಾಳಿಯಾದ ನಂತರ ಹೊಸ ದಿಲ್ಲಿಯಿಂದ ಹೊರಟ ಸುದ್ದಿಯಲ್ಲಿ ಮುಖ್ಯ ತಪ್ಪುಗಳಿದ್ದುವು. ಈ ತಪ್ಪನ್ನು ೮೦೦ ಮೈಲು ದೂರದ ಅಧಿಕಾರಿಗಳ ತಲೆಮೇಲೆ ಹೊರಿಸುವುದು ಸರಿಯಲ್ಲ. ಆದರೆ ಈ ತರದ ಪರಿಸ್ಥಿತಿ ಹೀಗೆಯೇ ಉಳಿಯಬಾರದು. ಜನರು ಗಾಳಿ ಸುದ್ದಿಯನ್ನು ನಂಬಬೇಡಿರೆಂದು ಸರಕಾರ ಪ್ರಕಟಿಸುತ್ತದೆ. ಹಾಗೆಯೇ ಜನರು ಅಂಥಾ ಸುದ್ದಿಗಳನ್ನು ನಂಬುವುದೂ ಇಲ್ಲ. ಆದರೆ ಸರಕಾರವೇ ಸರಿಯಾದ ಸುದ್ದಿ ಪ್ರಕಟಿಸಲು ನಿರ್ಬಂಧಮಾಡಿದರೆ, ಇಂಥಾ ಸ್ಥಳೀಯ ಸುದ್ದಿಗಳನ್ನೇ ತಡೆದರೆ, ಜನರು ಮುಂದೆ ಗಾಳಿಯ ಸುದ್ದಿಗಳನ್ನೇ ನಂಬಲು ಸುರು ಮಾಡುವರು.'

ಆಹಾರ ಸಾಮಗ್ರಿಗಳ ಅಭಾವ

ಚಿಮಿಣಿಎಣ್ಣೆ ಸಿಗದಿದ್ದರೆ ಕತ್ತಲೆಯಲ್ಲಿ ಕುಳಿತು ದಿನ ದೂಡಬಹುದು. ಬಟ್ಟೆಗೆ ಕ್ರಯ ಏರಿದರೆ ಅರೆ ಉಟ್ಟು ಬದುಕಬಹುದು. ಆದರೆ ಆಹಾರವೇ ಇಲ್ಲವಾದರೆ? ಒಡಲ ಬೆಂಕಿ ಸುಡುವುದನ್ನು ತಡೆವರಾರು? ಅದರ ಪರಿಣಾಮ ಏನಾದೀತೆಂದು ಊಹಿಸುವುದು ಹೇಗೆ? ಅಕ್ಕಿ ಇಲ್ಲ, ಗೋದಿಯಿಲ್ಲ, ಜೋಳವಿಲ್ಲ ಹೀಗೆಂದು ದೇಶದ ಮೂಲೆಮೂಲೆಗಳಿಂದ ಈಗ ಹೊಟ್ಟೆಯ ಕೂಗೆದ್ದಿದೆ. ಬಂಗಾಳದಲ್ಲಿ ಅಕ್ಕಿಯ ಅಭಾವವುಂಟಾದ ವಿಷಯ ಸ್ವಲ್ಪಕಾಲದ ಹಿಂದೆಯೇ ಗೊಂದಲವಾಗಿತ್ತು. ಮುಂಬಯಿವರ್ತಕರು ಆಹಾರ ಸಾಮಗ್ರಿಗಳ ಅಭಾವವುಂಟಾಗಿದೆಯೆಂದು, ಕೂಡಲೇ ಸರಕಾರವು ಏನಾದರೂ ನಿವಾರಣೋಪಾಯ ಕೈಕೊಳ್ಳಬೇಕೆಂದೂ ವೈಸರಾಯರೊಡನೆ ವಿನಂತಿಮಾಡಿಕೊಂಡಿದ್ದಾರೆ. ಇತರ ಪ್ರಾಂತಗಳ ಪರಿಸ್ಥಿತಿಯೂ ಹೀಗೆಯೆ! ಬಡಜನರು ದಿನಕ್ಕೆ ಒಂದೂಟ ಉಣ್ಣುವುದೂ ಸಾಧ್ಯವಿಲ್ಲವಾಗಿದೆ. ಇಂಥಾ ಪರಿಸ್ಥಿತಿಗಾಗಿ ಯಾರನ್ನು ದೂರಿಯೂ ಪ್ರಯೋಜನವಿಲ್ಲ. ಆದರೆ ಯಾರೂ ಸುಮ್ಮಗಿರುವುದು [illegible] ತಮ್ಮಿಂದಾದಷ್ಟು ಈ ಸಮಸ್ಯೆ ಪರಿಹರಿಸಲು ಮುಂದೆ ಬರಬೇಕು. ಆದರಲ್ಲೂ ದೇಶ [illegible] ಸರಕಾರವು ಕಣ್ಮುಚ್ಚಿಕೊಂಡಿರಬಾರದು. ವ್ಯಾಪಾರಸ್ಥರು ಆಹಾರ ಸಾಮಗ್ರಿಗಳನ್ನು [illegible], ಅತಿ ಲಾಭದ ಆಶೆಯಿಂದ ಕಳ್ಳ ವ್ಯಾಪಾರ ಮಾಡುತ್ತಿದ್ದಾರೆ. [illegible] ಅಧಿಕಾರಿಗಳೇ [illegible] ನಿಜವಾಗಿಯೂ [illegible] ವ್ಯಾಪಾರಸ್ಥರು ಮಾಡುವ [illegible] ಜನರ [illegible] ಅವರಿಗೆ [illegible] ಸರಕಾರವೇ ಆಹಾರ ವಸ್ತುಗಳನ್ನು [illegible] ರವಾನೆ ಮಾಡಿ [illegible] ಪದಾರ್ಥಗಳಿಗೆ [illegible] ಸರಕಾರವನ್ನು ದೂರುತ್ತಾರೆ. [illegible] 'ಕ್ರಾನಿಕಲ್' ಪತ್ರಿಕೆ ಈ ಬಗ್ಗೆ ಒಂದು ಉದಾಹರಣೆ ಕೊಟ್ಟಿದೆ. [illegible] ಸರಕಾರವು [illegible] ಮಿತ್ರ ರಾಷ್ಟ್ರಗಳಿಗೆ ಹಂಚಿದೆ. [illegible] ವರ್ಷಗಳಲ್ಲಿ [illegible] ಸರಕಾರವು ಹಿಡಿದುಕೊಟ್ಟಿರುತ್ತದೆ. ಎಂದರೆ ಇಂಗ್ಲೆಂಡಿನಲ್ಲಿ ಚಹಾ ಹಿಂದಿನ ದರಕ್ಕೆ [illegible] ಕೊಟ್ಟರೆ ಧಾರಾಳ ಚಹಾ ಸಿಗುತ್ತದೆ. [illegible] ಸ್ಥಾನದಲ್ಲಿ ಮಾತ್ರ ನೂರು ಪಾಲು ನಾಲ್ಕು ಪಾಲು [illegible] ಕೊಟ್ಟರೂ ಚಹಾ ಸಿಗುತ್ತದೆಯಿಲ್ಲ! ಹಿಂದುಸ್ಥಾನದಲ್ಲಿ ಸುಮಾರು ೩ ಕೋಟಿ ಟನ್ ಅಕ್ಕಿ ಬೆಳೆಯುತ್ತದೆ. ಬರ್ಮದಿಂದ ೧೫ ಲಕ್ಷ ಟನ್ ಅಕ್ಕಿ ಪ್ರತಿವರ್ಷ ಹಿಂದುಸ್ಥಾನಕ್ಕೆ ಆಮದಾಗುತ್ತಿತ್ತು. ಈ ವರ್ಷ ಮಧ್ಯ ಪ್ರಾಂತದಲ್ಲಿ ಅಕ್ಕಿಬೆಳೆ ಚನ್ನಾಗಿದೆ. ಸಾಧಾರಣ [illegible] ಟನ್ ಅಕ್ಕಿ ಬೆಳೆದಿದೆ. ಕಳೆದವರ್ಷ [illegible] ಟನ್ ಮಾತ್ರ ಬೆಳೆದಿತ್ತು. ಈ ವರ್ಷ [illegible] ಬಂಗಾಳದ ಬರಿಸಾಲ ಜಿಲ್ಲೆಯಲ್ಲಿಯೂ ಹೇರಳ ಅಕ್ಕಿ ಬೆಳೆದಿದೆ. ಆದರೆ ಬಡಜನರಿಗೆ ಅಷ್ಟು ಊಟಕ್ಕೆ ಅಕ್ಕಿ ಸಿಗುವುದೇ ಇಲ್ಲ. ಅಕ್ಕಿಯ ದರವಂತೂ ವಿಪರೀತಕ್ಕೇರಿದೆ. ಆದರೂ ಅಕ್ಕಿ ಸಿಗದೆ ಜನರು ದಿನಗಟ್ಟಲೆ ಉಪವಾಸ ಮಾಡುತ್ತಿದ್ದಾರೆ. ಸರಕಾರದ ನಿಯಂತ್ರಣವಿದ್ದರೂ ಆ ಬೆಲೆಗೆ ಪೇಟೆಯಲ್ಲಿ ಆಹಾರ ಸಾಮಗ್ರಿ ದೊರಕುವುದಿಲ್ಲವೆಂಬ ದೂರು ಎಲ್ಲೆಡೆಯಲ್ಲಿಯೂ ಇದ್ದದ್ದೇ. ಸರಕಾರದ ಈಗಿನ ನಿಯಂತ್ರಣ ನೀತಿಯೇ ಲಾಭ ಬಡುಕರಾದ ಕಳ್ಳ ವ್ಯಾಪಾರಸ್ಥರಿಗೆ ಅನುಕೂಲವಾಗಿದೆಯೆಂದು ಬೊಂಬಯಿ ಮುನ್ಸಿಪಾಲಿಟಿಯಲ್ಲಿ ಈ ಕುರಿತು ಚರ್ಚೆಯಾದಾಗ ಸಭಾಸದರು ಸಾರಿದರು. ಕಲ್ಕತ್ತ ಸಿಂಧಗಳಿಂದ

(೩ನೇ ಪುಟಕ್ಕೆ ಮುಂದುವರಿದಿದೆ)

ಹಿಂದು ಮಹಾಸಭೆ ಚಳವಳಿ ಹೂಡುವುದು?

(೧ನೇ ಪುಟದಿಂದ ಮುಂದುವರಿದುದು)

ಅಕ್ಕಿ ರಫ್ತಾಗಬಾರದಾಗಿ ಆಜ್ಞೆ ಹೊರಟಿದ್ದರೂ ಅಲ್ಲಿನ ಧಾರಣೆ ವಿಪರೀತಕ್ಕೇರಿದೆ. ಹೀಗೆಯೇ ಧಾರಣೆ ಏರುತ್ತಾ ಹೋದರೆ ದೊಂಬಿಯಾದೀತೆಂದು ತರ್ಕಿಸುತ್ತಾರೆ. ಹಿಂದುಸ್ಥಾನದಲ್ಲಿ ಆಹಾರ ಸಾಮಗ್ರಿಗಳಿಗೆ ಕೊರತೆಯಿಲ್ಲವೆಂದೂ ಈಗ ವಾಹನ ಸೌಕರ್ಯ ಸರಿಯಾಗಿಲ್ಲದಿರುವುದರಿಂದ ಈ ತೊಂದರೆಯಾಗಿದೆಯೆಂದೂ ಕೆಲವರನ್ನುತ್ತಾರೆ. ಸೈನಿಕರನ್ನು ಸಾಕುವ ಸಲುವಾಗಿ ಸರಕಾರವು ಆಹಾರ ಸಾಮಗ್ರಿಗಳನ್ನು ಖರೀದು ಮಾಡುತ್ತಿರುವುದರಿಂದ ನಾಗರಿಕರಿಗೆ ಈ ಪರಿಸ್ಥಿತಿಯೊದಗಿದೆಯೆಂದು ಇನ್ನು ಹಲವರು ಹೇಳುತ್ತಾರೆ. ಈಗ ಇಲ್ಲಿಂದ ಸಿಲೋನ್, ಇರಾನ್ ಬ್ರಿಟನುಗಳಿಗೂ ಆಹಾರ ಹೋಗುತ್ತದೆಂದೂ ಹೇಳಲಾಗುತ್ತದೆ. ಹೇಗಿದ್ದರೂ ಈಗ ಏರುತಿರುವ ದರವನ್ನು ವಿಚಾರಿಸಿದರೆ ಆಹಾರ ಸಾಮಗ್ರಿಗಳ ಕೊರತೆಯುಂಟಾಗಿದೆಯೇ ಎಂದು ನಾವು ಶಂಕಿಸಬೇಕು. ನಿಜವಾಗಿ ಕೊರತೆಯುಂಟಾಗಿದ್ದರೆ ಅದನ್ನು ಹಿಡಿತಕ್ಕೆ ತರುವ ಕೆಲಸ ಸರಕಾರದ್ದು. ಕೊರತೆಯುಂಟಾಗದಿದ್ದರೆ ಜನರಿಗೆ ಸರಿಯಾಗಿ ಹಂಚಿ ಬೀಳುವಂತೆ ಮಾಡುವುದೂ ಅದರ ಹೊಣೆ. ಸರಕಾರವು ಆಹಾರದ ಕ್ರಯ ನಿರ್ಬಂಧಿಸುವುದರೊಡನೆ, ಆಹಾರ ವಸ್ತುಗಳನ್ನು ಒದಗಿಸಿಯೂ ಕೊಡುವುದು ಮುಖ್ಯ. ಆಹಾರ ಸಾಮಗ್ರಿಗಳನ್ನೊದಗಿಸದೆ ಬರೇ ನಿರ್ಬಂಧ ಮಾಡಿದರೇನು ಪ್ರಯೋಜನ? ಜನರಾದರೂ ಇಂತಹ ಮಾನವೋಪಯೋಗೀ ಕಾರ್ಯದಲ್ಲಿ ಸಂಪೂರ್ಣ ಸಹಕರಿಸಿ ದೇಶದ ಗೊಂದಲವನ್ನು ಮುಖ್ಯವಾಗಿ ಜೀವನಾಧಾರವಾದ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಯತ್ನಿಸಲೇಬೇಕು.

ತಾ ೧೭-೧೨-೪೨ರ ದಿನ ಉಡ್ಪಿ ಬೆನರೆಬೆಂಚ್ ಮೆಜಿಸ್ಟ್ರೇಟ್ ಶ್ರೀಮಣಿ ಕಣ್ಣನ್‌ರವರು ಕುಂದಾಪುರ ಶಾಂತಿನಿಕೇತನ ಹಾ ಎ ಶಾಲೆಯಲ್ಲಿ ಸೇರಿದ ಗ್ರಾಮಸ್ಥರ ಸಭೆಯಲ್ಲಿ ಈಗಿನ ಯುದ್ಧದಲ್ಲಿ ಸ್ತ್ರೀಯರು ಮಾಡಬಹುದಾದ ಕರ್ತವ್ಯಗಳೇನೆಂಬ ವಿಷಯ ಇಂಗ್ಲಿಷಿನಲ್ಲಿ ಮಾತಾಡಿದರು. ಶ್ರೀಮತಿ ತಾರಾಬಾಯಿಯವರು ಕನ್ನಡದಲ್ಲಿ ಸಭಿಕರಿಗೆ ವಿವರಿಸಿದರು. ಬಳಿಕ ಶಾಲಾ ಉಪಾಧ್ಯಾಯಿನಿಯರಾದ ಶ್ರೀಮತಿ ಸೀತಾರತ್ನ, ಸಾಚಂದ್ರಾವಳಿ, ಶ್ರೀ ಕೆ ಕೆ. ಕಲ್ಕೂರ ಮೊದಲಾದವರೂ ಅದೇ ವಿಷಯ ಎತ್ತಿ ಹೇಳಿದರು. ಉಡ್ಪಿ ತಾಲೂಕು ತಹಶಿಲ್‌ದಾರ ಶ್ರೀ ಕೆ ಕೇಶವಹೆಗ್ಡೆರು ಸಭಾಧ್ಯಕ್ಷರಾಗಿದ್ದರು. ಫೋಟೋಗಳು ತೆಗೆಯಲ್ಪಟ್ಟು ಶ್ರೀಮತಿ ವಿದ್ವಾನ್, ಸೀತಾರತ್ನ ಕೆ. ವಿ ಕಲ್ಕೂರರವರಿಂದ ಧನ್ಯವಾದಾರ್ಪಣೆಯಾಯಿತು.

ಜಗತ್ಪ್ರಸಿದ್ಧ ಚರ್ಮರೋಗ ಹಾರಿ

ಜಾಂಬಕ್ ವಿಷವನ್ನು ತಡೆದು ಇಂದ್ರಜಾಲದಂತೆ ಗುಣ ಪಡಿಸುವುದು

ಅನೇಕ ಕಾಲದಿಂದ ಜಾಂಬಕ್ ಜಗತ್ಪ್ರಸಿದ್ಧವಾಗಿದ್ದು ಚರ್ಮರೋಗಗಳಿಗೆ ಇದು ಅತ್ಯುತ್ತಮ ಔಷಧಿಯೆನಿಸಿದೆ. ನಿಮ್ಮ ಎಲ್ಲಾ ತರದ ಕಡಿತ, ಗಾಯ, ಬೊಕ್ಕೆ, ಕಾಲುನೋವು ತುರಿಕಜ್ಜಿ, ವಿಷಗಾಯ ಇತ್ಯಾದಿ ನೋವುಗಳಿಗೆ ಈ ವನೌಷಧಿಯಿಂದ ತಯಾರಿಸಿದ ಜಾಂಬಕ್ ಲೇಪವನ್ನು ಲೇಪಿಸಿದರೆ ಖಂಡಿತ ಗುಣವಾಗುತ್ತದೆ. ಜಾಂಬಕನ್ನು ಡಾಕ್ಟರರೂ ನರ್ಸುಗಳೂ ಎಲ್ಲಾ ಕಡೆಗಳಲ್ಲಿಯೂ ಉಪಯೋಗಿಸಿ ಪ್ರಶಂಸಿಸುತ್ತಾರೆ. ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಅಥವಾ ರೂ 2-4-0 ಜಾಂಬಕ್ ಸೋಪಿಗೆ ಒಂದು ರೂಪಾಯಿ, ಜಾಂಬಕ್ ಪೌಡರಿಗೆ ಒಂದು ರೂಪಾಯಿ



ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಸಸ್ಯಾಣಿಕೊಟ್ಟು ವಿರಹಿತವಾದುದು

ಪುಸ್ತಕಾವಲೋಕನ

ಮೇಡೇಮ್ ಕ್ಯೂರಿ*

ಈ ವಿಶಾಲವಿಶ್ವದಲ್ಲಿ ವಿಜ್ಞಾನದ ಅಲ್ಪ ಪರಿಚಯ ಮಾಡಿಕೊಂಡವರಾಗಲಿ, 'ರೇಡಿಯಂ' ಪ್ರಭಾವ ಬಲ್ಲವರಾಗಲಿ ಯಾರಿದ್ದರೂ ಅವರೆಲ್ಲಾ ವಿಜ್ಞಾನ ಸಂಶೋಧನೆಗಾಗಿ ನೋಬೆಲ್ ಪಾರಿತೋಷಕಗಳನ್ನು ಪಡೆದ ಮೇಡೇಮ್ ಕ್ಯೂರಿಯ ಪುಣ್ಯನಾಮವನ್ನು ಕೇಳದಿರಲು ಸಾಧ್ಯವಿಲ್ಲ — ಆದರೆ ಅಂಥಾ ಜಗದ್ವಿಖ್ಯಾತ ಪ್ರತಿಭಾಶಾಲಿನಿಯಾದ ವೈಜ್ಞಾನೀ ಮಹಾತ್ಮಳ ಜೀವನಚರಿತ್ರೆ ಬಹುಮಂದಿ ತಿಳಿದಿರಲಿಕ್ಕಿಲ್ಲ. ಮೇಡಂ ಕ್ಯೂರಿಯ ಮಗಳೇ, ಆಕೆಯೂ ವಿಜ್ಞಾನಕ್ಕಾಗಿ ನೋಬೆಲ್ ಪಾರಿತೋಷಿಕ ಪಡೆದವಳು, ತನ್ನ ತಾಯಿಯ ಸುಂದರ ಜೀವನ ಚರಿತ್ರವನ್ನು ಬರೆದಿದ್ದಾಳೆ. ಅದರ ಆಧಾರದಿಂದ ಶ್ರೀಮತಿ ಕೆ. ವಿ ರತ್ನಮ್ಮನವರು 'ಮೇಡಂ ಕ್ಯೂರಿ' ಎಂಬೀ ಚಲೋ ಪುಸ್ತಕವನ್ನು ಬರೆದು ಕನ್ನಡ ಸಾಹಿತ್ಯ ಭಂಡಾರಕ್ಕೆ ಇನ್ನೊಂದು ಅಮೂಲ್ಯ ಗ್ರಂಥವನ್ನು ಸೇರಿಸಿದ್ದಾರೆ. ಧಾರವಾಡದ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರು ಈ ಮನೋಹರ ಜೀವನಚರಿತ್ರೆಯನ್ನು ಪ್ರಕಟಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಪಾರತಂತ್ರ್ಯದಲ್ಲಿ ತೊತ್ತಳದುಳಿಯಲ್ಪಟ್ಟ ಪೋಲೆಂಡಿನಲ್ಲಿ ಮೇನ್ಯ (ಇವಳೇ ಮುಂದೆ ಮೇಡಂ ಕ್ಯೂರಿಯೆಂದು ಹೆಸರಾದವಳು) ಜನ್ಮವೆತ್ತಿದಳು. ಆ ರಾಷ್ಟ್ರದ ಹೃದಯದಲ್ಲಿ ದುಮುದುಮಿಸುತ್ತಿದ್ದ ಸ್ವಾತಂತ್ರ್ಯದ ಕಿಡಿ ಅವಳ ಹೃದಯದಲ್ಲಿಯೂ ಜ್ವಲಿಸುತ್ತಿತ್ತು. ವಿದ್ಯಾವಂತರೂ ವಿಜ್ಞಾನ ಶಾಸ್ತ್ರಜ್ಞರೂ ಆದ ತಂದೆ ತಾಯಿಗಳೇ ಇವಳಿಗೆ ಜನ್ಮ ಕೊಟ್ಟರು. ಮೇನ್ಯ ಚುರುಕು ಬುದ್ಧಿಯ ಹುಡುಗಿ. ತನ್ನ ಸೋದರ ಸೋದರಿಯರಂತೆ ಅವಳಿಗೂ ಶಿಕ್ಷಣ ದೊರಕಿತು. ಕಷ್ಟ ದುಃಖಗಳನ್ನು ಎಷ್ಟು ಪಡೆದರೂ ಓದಿನ ಕಡೆಗೆ ಒಲಿದ ಅವಳ ಮನಸ್ಸು ಅಲ್ಲಿಂದ ಹಿಂತೆಗೆಯಲಿಲ್ಲ. ಮುಂದೆ ಮೇನ್ಯ ಪೇರಿಸಿಗೆ ಉಚ್ಚ ಶಿಕ್ಷಣಕ್ಕಾಗಿ ಹೋದಳು. ಅಲ್ಲಿಯೂ ಪ್ರಯಾಸಪಟ್ಟು ಓದಿದಳು. ಅಲ್ಲಿ ಫ್ರೆಂಚ ವಿಜ್ಞಾನಿ ಪಿಯರಿಕ್ಯೂರಿ ಪರಿಚಯವಾಯಿತು. ವಿಜ್ಞಾನಿ ವಿಜ್ಞಾನಿಗಳ ಈ ಮಧುರ ಮಿಲನವೇ ಮುಂದೆ ಪ್ರೇಮದ ರೂಪವಾಗಿ ಅವರ ಜೀವಗಳನ್ನು ಜತೆಗೂಡಿಸಿತು. ಫ್ರೆಂಚ ವಿಜ್ಞಾನಿ ಮತ್ತು ಪೋಲಿಷ್ ಹುಡುಗಿ ವಿವಾಹವಾದರು. ಪ್ರತಿಭಾಶಾಲಿಗಳಾದ ಈ ವಿಜ್ಞಾನಿಗಳಿಬ್ಬರೂ ವಿಜ್ಞಾನ ಸಂಶೋಧನೆಯಲ್ಲಿಯೇ ನಿರತರಾದರು. ಮೊದಲು ಉಕ್ಕಿನ ಆಕರ್ಷಣ ಶಕ್ತಿ ವಿಷಯ ಸಂಶೋಧನೆ ನಡೆಸಿದರು, ಮುಂದೆ ನಾಲ್ಕು ವರ್ಷಗಳ ಸಂಶೋಧನೆಯ ಹೋರಾಟ ಹೂಡಿ ಎಚ್‌ಬ್ಲೆಂಡಿನಿಂದ ಅವರು 'ರೇಡಿಯಂ' ಎಂಬ ಹೊಸ ಧಾತುವೊಂದನ್ನು ಬೇರೆ ಮಾಡಿ ತೋರಿಸಿದ್ದು ಪ್ರಪಂಚವನ್ನೇ ಬೆರಗುಗೊಳಿಸಿತು. ಇದರಿಂದ ಪಿಯರಿ ದಂಪತಿಗಳ ಕೀರ್ತಿ ದುಂದುಭಿ ದೇಶವಿದೇಶಗಳಲ್ಲಿ ಮೊಳಗಿತು. ಯನ್ತ್ರವಚಿಕಿತ್ಸೆಗೂ ಜಗ್ಗದ ಕೇನ್ಸರ್ ರೋಗ ರೇಡಿಯಂನಿಂದ ಗುಣವಾತ್ತದೆಂದು ತಿಳಿದಕೂಡಲೇ ಅವರಕೀರ್ತಿ ಮತ್ತಷ್ಟು ಹೆಚ್ಚಿತು. ಪ್ರಾನ್ಸಿನಲ್ಲಿಯೂ ಅವರು ಸಣ್ಣ ದೊಡ್ಡ ಬಹುಮಾನಗಳನ್ನು ಪಡೆದರು. ಇಂಗ್ಲೆಂಡು ಇವರನ್ನು ಆಮಂತ್ರಿಸಿ ಅಭೂತಪೂರ್ವವಾಗಿ ಗೌರವಿಸಿತು. ಮುಂದೆ ಸ್ವೀಡನಿನಿಂದ ಇಬ್ಬರನ್ನೂ ಜಗದ್ವಿಖ್ಯಾತವಾಗಿ ಮಾಡಿದ ಗೌರವ 'ನೋಬೆಲ್' ಪಾರಿತೋಷಿಕವು ಇಬ್ಬರಿಗೂ ದೊರಕಿತು. ಕೀರ್ತಿ ಬಂದರೂ ಅದನ್ನು ಬಯಸದೆ, ದ್ರವ್ಯ ಬರದರೂ ಭೋಗಿಸದೆ ವಿಜ್ಞಾನಿಗಳು ವಿಜ್ಞಾನದಲ್ಲಿಯೇ ತಲ್ಲೀನರಾಗಿದ್ದರು. ಮುಂದೆ ಗಂಡ ಪಿಯರಿಯೂ ತೀರಿಹೋದ. ಅದು ಆಕೆಗೆ ಸಹಿಸಲಾರದ ಆಘಾತವಿತ್ತು. ಆದರೂ ವಿಜ್ಞಾನದ ಒಲವು ತಗ್ಗದೆ ಮುಂದೆಯೂ ಸಂಶೋಧನೆನಡೆಸಿ ಇನ್ನೊಮ್ಮೆ ಆಕೆ ನೋಬೆಲ್ ಬಹುಮಾನ ಪಡೆದಳು. ಮುಂದೆ ಮಹಾಯುದ್ಧ ಬಂದಾಗ ಮಾನವಸೇವೆ ಮಾಡಿದಳು. ಮುಂದೆ ಅಮೆರಿಕವೂ ಮೇಡಂ ಕ್ಯೂರಿಯನ್ನು ಆಮಂತ್ರಿಸಿ ಗೌರವಿಸಿತು. ಕೊನೆ ಉಸಿರೆಳೆಯುವ ವರೆಗೆ ಮುಪ್ಪಡಿಸಿದ್ದರೂ ವಿಜ್ಞಾನ ಸಂಶೋಧನೆಯಲ್ಲಿಯೇ ನಿರತಳಾಗಿ ಕ್ಯೂರಿ ಶಾಂತವಾದ ಆಡಂಬರವಿಲ್ಲದ ಮರಣ ಹೊಂದಿದಳು. ಅವಳ ಶಾಶ್ವತ ಸ್ಮಾರಕವಾಗಿ ರೇಡಿಯಂ ವಿಷಯ ಆಕೆ ಬರೆದ ಪುಸ್ತಕವೂ ಪ್ರಕಟವಾಯಿತು.

'ಮೇರಿಕ್ಯೂರಿಯ ಜೀವನ ಚರಿತ್ರೆಯನ್ನು ಓದಿದಾಗ ಒಂದು ಪ್ರಶ್ನೆ ಪುನಃ ಪುನಃ ಮನಸ್ಸಿನಲ್ಲಿ ಹುಟ್ಟುತ್ತದೆ 'ಇಂಥ ಹೆಂಗುಸು ತಿರುಗಿ ಹುಟ್ಟಿಯಾಳೆ?' ಎಂದು. ಹುಟ್ಟಬಹುದು ಎಂದು ಆ ಪ್ರಶ್ನೆಗೆ ಧೈರ್ಯವಾಗಿ ಉತ್ತರ ಹೇಳುವುದು ಕಷ್ಟ. ಆ ಅಪೂರ್ವ ಚೇತನದ ವಿಷಯದಲ್ಲಿ ಇದಕ್ಕಿಂತ ಹೆಚ್ಚು ಹೇಳುವುದು ಸಾಧ್ಯವಿಲ್ಲ. ಆ ಪ್ರಚಂಡ ಪ್ರತಿಭೆಯೇನು, ಬಳಿನ ಕಷ್ಟಗಳ ಮುಂದೆ ಹೆಣಗಿ ಹೋರಾಡಿದ ಆ ಹೃದಯದ ಶಕ್ತಿಯೇನು, ಬಡತನವನ್ನು ಒಲಿದು ಆರಾಧಿಸಿ, ಕೈಗೆಟಕಿದ ನಿಧಿಯನ್ನೂ, ಕೀರ್ತಿಗೌರವಗಳನ್ನೂ ಒಲ್ಲದೆ ಹೋದ ಆ ಮನಸ್ಸಿನ ಸಂಸ್ಕೃತಿಯೇನು, ಇವುಗಳನ್ನೆಲ್ಲ ಅವಳ ಜೀವನ ಚರಿತ್ರೆಯನ್ನು ಓದಿಯೇ ತಿಳಿಯಬೇಕು' ಎಂದು ಲೇಖಕಿಯವರು ಬರೆದ ಮಾತುಗಳು ಅಕ್ಷರಶಃ ಸತ್ಯವಿವೆ. ನಿಜವಾಗಿಯೂ ಈ ಜೀವನ ಚರಿತ್ರೆ 'ಕತೆಯಂತೆ, ಕಾವ್ಯದಂತೆ ಸುಂದರವಾಗಿದೆ!' ಭವ್ಯವಾದ ಈ ಜೀವನ ಚರಿತ್ರೆಯನ್ನು ಶ್ರೀಮತಿ ರತ್ನಮ್ಮನವರು ತಮ್ಮ ಸುಂದರ ಶೈಲಿಯಲ್ಲಿ ಬಲು ಸೊಗಸಾಗಿ ಕನ್ನಡಿಸಿ ಚಿತ್ರಿಸಿದ್ದಾರೆ. ಮೇಡಂಕ್ಯೂರಿಯ ಮತ್ತು ಆಕೆಯ ಸಂಸಾರದ ಕೆಲವು ಚಿತ್ರಗಳನ್ನೂ ಕೊಟ್ಟದ್ದು ಪುಸ್ತಕದ ಸೊಗಸನ್ನು ಹೆಚ್ಚಿಸಿದೆ.

—ಕಯ್ಯಾರ

*ಕನ್ನಡಿಸಿದವರು ಶ್ರೀಮತಿ ಕೆ ವಿ ರತ್ನಮ್ಮ, ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ೧/೮ ಆಕಾರದ ೧೭೭ ಪುಟಗಳು ಬೆಲೆ ೧ ೪ ೦

GREETINGS.

The Directors, Officers and staff of the CANARA BANK, LIMITED, join in sending you this message of appreciatiom for your goodwill and patronage during the last year. We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD: 1906.

ಕಾಕಸಸಿನಲ್ಲಿರುವ ರಶ್ಯನ್ ಸೇನೆಯು ತೆರೇಕ ನದಿಯ ಮಾರ್ಗವಾಗಿ ಮುನ್ನುಗ್ಗಿ ಮೊಝುದೇಕ್ ನಗರವನ್ನು ಆಕ್ರಮಿಸಿಕೊಂಡಿರುವುದಾಗಿ ಇದೀಗ ಪ್ರಕಟವಾಗಿದೆ. ರಶ್ಯನರು ವೆಲೂಕಿಲೂಕಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಕೆಂಪು ಸೈನ್ಯ ಎಲ್ಲಾ ರಣಭೂಮಿಗಳಲ್ಲಿಯೂ ಮುನ್ನುಗ್ಗುತ್ತಿದೆ. ಬರ್ಮಾದ ಮೇಲೆ ಧಾಳಿಯಾಗುತ್ತಲೇ ಇದೆ. ಆದರೆ ಕೆಲದಿನಗಳಿಂದ ಜಪಾನರು ಬಂಗಾಳದ ಕಡೆ ಬಾಂಬೆಸೆದ ಸುದ್ದಿ ಬಂದಿಲ್ಲ. ಲಿಬಿಯದಲ್ಲಿ ಹೆಚ್ಚಿನ ಚಟುವಟಿಕೆಗಳೇನೂ ಸದ್ಯ ತೋರುವುದಿಲ್ಲ. ಆದರೆ ಟುನಿಸ್ ಸುವೆಸ್‌ಗಳ ಮೇಲೆ ಪುನಃ ಧಾಳಿಯಾಯಿತು. ಬೂನಾ ಪ್ರದೇಶದಲ್ಲಿ ಸನಾಮಂದಾರ ಹತ್ತಿರ ಜಪಾನರ ಪರಿಸ್ಥಿತಿ ಕೆಟ್ಟಿದೆ. ಚೀನದಲ್ಲಿ ಹಾಂಕೋದ ಈಶಾನ್ಯ ೬೦ ಮೈಲು ಮೇಲೆ ಮೂಚಂದದ ಹತ್ತಿರ ಕಾಳಗ ನಡೆದಿದೆ. ಟುನಿಶಿಯದಲ್ಲಿ ಭೂದಳದ ಚಟುವಟಿಕೆಯಿದೆ. ಹೀಗೆ ರಶ್ಯ ರಣರಂಗವೊಂದನ್ನುಳಿದರೆ ಈಗ ಬೇರೆ ಕಡೆಗಳಲ್ಲಿ ಅಷ್ಟೊಂದು ಭೀಕರ ಸಂಗ್ರಾಮ ನಡೆಯುತ್ತಲಿಲ್ಲ.

೧೯೪೨ರ ಸಿಂಹಾವಲೋಕನ

೧೯೪೨ನೇ ಇಸವಿಯ ಯುದ್ಧವನ್ನು ಸಿಂಹಾವಲೋಕನ ಮಾಡಿದರೆ ಮಿತ್ರ ಶತ್ರು ಪಕ್ಷಗಳ ಸಮರಶಕ್ತಿ, ಪಾಂಡಿತ್ಯಗಳು ಸ್ಪಷ್ಟವಾಗುವುದರೊಡನೆ ಮುಂದಿನ ಅವರ ಗೆಲವು ಸೋಲುಗಳನ್ನೂ ತುಸು ಮಟ್ಟಿಗೆ ಊಹಿಸಿಕೊಳ್ಳಬಹುದು. ಕಳೆದ ವರ್ಷದಲ್ಲಿಯೂ ಜಯಾಪಜಯ, ಆಸೆ ನಿರಾಸೆ, ಏರಿಳಿತಗಳು ಉಭಯಪಕ್ಷದವರಿಗೂ ಒದಗಿವೆ. ೧೯೪೨ ಇಸವಿಯು ಮಿತ್ರ ರಾಷ್ಟ್ರಗಳ ನಿರಾಸೆಯೊಡನೆ ಪ್ರಾರಂಭವಾಯಿತು. ಜಪಾನು, ಪೂರ್ವ ರಾಷ್ಟ್ರದ ಪ್ರಬಲ ರಾಷ್ಟ್ರವೊಂದು, ಆಗ ತಾನೇ ಪ್ರಚಂಡ ಅಭಿಯೋಗಕ್ಕೆ ಆರಂಭ ಮಾಡಿತ್ತು; ಪೆಸಿಫಿಕ್ ಸಾಗರವನ್ನೆಲ್ಲ ನುಂಗಿ ಬಿಡುವ ಸಾಹಸಕ್ಕೆ ಹೊರಟಿತ್ತು. ಅಂಥಾ ಮಹತ್ವಾಕಾಂಕ್ಷೆಯ ಜಪಾನನ್ನು ಯಶಸ್ವಿಯಾಗಿ ಪ್ರತಿಭಟಿಸುವುದೂ ಏನೋ ಕಾರಣದಿಂದ ಮಿತ್ರ ರಾಷ್ಟ್ರಗಳಿಗೂ ಸಾಧ್ಯವಾಗಲಿಲ್ಲ. ಹಾಗಾಗಿ ಜಪಾನು ಒಂದರ ಮೇಲೆ ಒಂದು ಪ್ರದೇಶವನ್ನು ಮಿಂಚಿನ ವೇಗದಲ್ಲಿ ನುಂಗುತ್ತಾ ಬಂತು; ಮಿತ್ರರಾಷ್ಟ್ರಗಳ ಅಭೇದ್ಯ ದುರ್ಗಗಳು ಭೇದಿಸಲ್ಪಟ್ಟವು. ಪರ್ಲ್ ಬಂದರ್ ಸಿಂಗಾಪುರಗಳು ಹೋದ ವಿಚಾರವು ಈ ಯುದ್ಧದ ಇತಿಹಾಸದಲ್ಲಿಯೇ ಅಪೂರ್ವವಾದುದು. ಇಷ್ಟರಲ್ಲೇ ಮುಗಿಯದೆ ಫಿಲಿಪ್ಪೈನ್ಸ್, ನ್ಯೂಗಿನಿ, ಡಚ್ ಈಸ್ಟ್ ಇಂಡೀಸ್, ಇಂಡೋ ಚೀನಾ ಸಯ್ಯಾಂ, ಮಲಯ, ಬರ್ಮಾ ಇವುಗಳೂ ಒಂದರ ಮೇಲೊಂದರಂತೆ ಜಪಾನಿನ ಕೈ ತುತ್ತಾದುವು. ಹೀಗೆ ~~ಕೇವಲ~~ ಆರು ತಿಂಗಳೊಳಗೆ ಜಪಾನು ನೈಋತ್ಯ ಪೆಸಿಫಿಕ್ ಸಾಗರದಲ್ಲಿ ಮತ್ತು ಏಶ್ಯಾಖಂಡದ ಪೂರ್ವ ಸಾಗರದಲ್ಲಿ ಪ್ರಾಬಲ್ಯದಿಂದ ವರ್ಧಮಾನವಾಗುತ್ತಾ ಬಂತು. ಯೂರೋಪಿನಲ್ಲಿಯೂ ಜರ್ಮನ್ ಸೇನೆ ಮುಂದುವರಿಯುತ್ತಾ ಇತ್ತು; ಸಂಪದ್ಯುಕ್ತವಾದ ಅನೇಕ ಪ್ರದೇಶಗಳು ಹಿಟ್ಲರನ ಕೈಸೇರುತ್ತಿದ್ದವು. ರಶ್ಯನರು ಚಳಿಗಾಲದ ಯುದ್ಧವನ್ನು ಪ್ರಾರಂಭಿಸಿದ್ದರೂ ಅದರಿಂದ ಹೆಚ್ಚಿನದೇನೂ ಪ್ರಯೋಜನವಾಗಿರಲಿಲ್ಲ. ಮಧ್ಯ ಏಶ್ಯದಲ್ಲಿ ಜನರಲ್ ಅಚಿನ್‌ಲೆಕ್ಕರ ಸೈನ್ಯವೂ ಬೆಂಗಾಜಿಯಿಂದ ಮುಂದೆ ಹೋಗಲಿಕ್ಕಾಗದೆ ಉಳಿದಿತ್ತು. ಯು ಬೋಟುಗಳ ಹಾವಳಿಯಂತೂ ಹೆಚ್ಚಾಗಿಯೇ ಇತ್ತು. ಅಮೆರಿಕದಿಂದ ಸಾಮಾನುಗಳು ಬರುವುದೂ ಬಹಳ ಕಷ್ಟವಾಗಿತ್ತು. ಹೀಗೆ ೧೯೪೨ರ ಪ್ರಾರಂಭದಲ್ಲಿ ಮತ್ತೂ ಕೆಲಕಾಲ ಮಿತ್ರರಾಷ್ಟ್ರವನ್ನು ನಿರಾಶೆಯು ಮುಸುಕಿ ಮುಚ್ಚಿದ್ದರೂ ಅದರ ಅಂತ್ಯವು ಆಶೆಯ ಕಿರಣವನ್ನು ತಂದಿದೆ.

ಜರ್ಮನರು ಹಾಗೂ ಜಪಾನರು ಒಂದಾಗಿ ತಮ್ಮ ಪ್ರಭುತ್ವವನ್ನು ಹಿಂದು ಸಾಗರದ ಮೇಲೆ ಸ್ಥಾಪಿಸಿ ಬಿಡಬೇಕೆಂದು ಮಾಡಿದ ಪ್ರಯತ್ನವು ಇಂದು ವಿಫಲವಾಗುತ್ತಿದೆ. ಮಿತ್ರ ರಾಷ್ಟ್ರಗಳು ತಮ್ಮ ಸಿದ್ಧತೆಯನ್ನು ಹೆಚ್ಚುಗೊಳಿಸಿ ನವಚೇತನಗೊಂಡು ಮುಂದೊತ್ತುತ್ತಿವೆ. ಅಕ್ಷರಾಷ್ಟ್ರಗಳ ಶಕ್ತಿ ಈಗ ಕುಗ್ಗುತ್ತಾ ಬರುತ್ತಿದೆ. ಶತ್ರು ವಶವಾಗದೆ ಇರುವ, ಅಳಿದುಳಿದ ಆಯಕಟ್ಟಿನ ಸ್ಥಳಗಳನ್ನು ಭದ್ರಪಡಿಸಿಕೊಂಡು ಮಿತ್ರ ರಾಷ್ಟ್ರಗಳು ಹುರುಪುಗೊಂಡಿವೆ. ಜಪಾನಿನ ಬಲಿಗೆ ಆಹುತಿಯಾಗಲಿದ್ದ ಆಸ್ಟ್ರೇಲಿಯವನ್ನು ರಕ್ಷಿಸುವುದರೊಡನೆ ಬರ್ಮವನ್ನು ಪುನಃ ಸ್ವಾಧೀ-

ಸಮರಭೂಮಿಯ ಸಂಚಾರ

ನಪಡಿಸುವ ಸಾಹಸಕ್ಕೂ ತೊಡಗಿದ್ದಾರೆ. ಅಮೆರಿಕವು ನೌಕಾ ವಾಯು ಬಲಗಳನ್ನು ಹೆಚ್ಚಿಸಿ ಕಾರ್ಯರಂಗಕ್ಕಿಳಿದಿದೆ. ಕೋರಲ್ ಸಮುದ್ರ ಮಿಡ್ವೆ, ಸೊಲಮನ್ಸ್ ಮತ್ತು ನ್ಯೂಗಿನಿ ಕಾಳಗದಲ್ಲಿ ಶತ್ರುಬಲವನ್ನು ಕುಂದಿಸಿ ಮಿತ್ರ ರಾಷ್ಟ್ರದವರು ಪ್ಯಾಸಿಫಿಕ್ಕಿನಲ್ಲಿ ಪುನಃ ತಮ್ಮ ಪ್ರಭುತ್ವ ಸ್ಥಾಪಿಸಿಕೊಳ್ಳುತ್ತಿದ್ದಾರೆ. ರಶ್ಯದಲ್ಲಿಯೂ ವೈರಿ ಜರ್ಜರಿತನಾಗಿದ್ದಾನೆ. ಜರ್ಮನ್ ಸೇನೆಯ ಮೇಲೆ ರಶ್ಯನರು ಅಭಿಯೋಗ ಕೈಕೊಂಡು ಅವರನ್ನು ಹಣ್ಣುಗೊಳಿಸುತ್ತಿರುವರು. ಇಜಿಪ್ತಿನಲ್ಲಿಯಂತೂ ಮಿತ್ರರಿಗೆ ಮಹತ್ವದ ವಿಜಯ ದೊರಕಿದೆ; ರೊಮೆಲನು ಇದು ವರೆಗೆ ಪಲಾಯನ ಸೂತ್ರವೊಂದನ್ನೇ ಪಠಿಸುತ್ತಿದ್ದಾನೆ. ಅಮೆರಿಕದ ಸಹಾಯದಿಂದ ಬ್ರಿಟಿಷರು ಉತ್ತರ ಆಫ್ರಿಕವನ್ನೂ ಮುತ್ತಿದ್ದಾರೆ; ಕೆಲವು ಪ್ರದೇಶಗಳೂ ಅಲ್ಲಿ ಕೈವಶ ಬಂದಿವೆ. ಯೂರೋಪಿನ ಮೇಲೆ ಮಿತ್ರ ವಿಮಾನುಗಳ ಧಾಳಿ ಹೆಚ್ಚುತ್ತಲೇ ಇರುವುದು. ಹೀಗೆ ೧೯೪೨ರ ಕೊನೆಯು ಮಿತ್ರರಿಗೆ ಆಶೆಯ ಕಿರಣವನ್ನು ಮೂಡಿಸಿದೆ! ಆದರೆ ಈ ವಿಜಯದ ಅನುಕೂಲತೆಗಳಿಂದಲೇ ಸಂಪೂರ್ಣ ವಿಜಯ ಸಿಕ್ಕಿತೆಂದು ನೆಮ್ಮದಿಯಿರಲು ಸಾಧ್ಯವಿಲ್ಲ. ಸಂಪೂರ್ಣ ಜಯ ಸಿಗಬೇಕಾದರೆ ಇನ್ನಾದರೂ ಜೀವದ ಹಂಗು ತೊರೆದು ಹೋರಾಡಬೇಕು. ಹಿಟ್ಲರನಾದರೂ ಕಳೆದ ವರ್ಷ ಅಷ್ಟೊಂದು ವಿಜೃಂಭಿಸಿಲ್ಲವಾದರೆ ಅದು ತಾನು ಹಿಂದೆ ನುಂಗಿಕೊಂಡ ಪ್ರದೇಶಗಳನ್ನು ಜೀರ್ಣಿಸಿಕೊಳ್ಳುವ ಸಲುವಾಗಿದ್ದರೂ ಇರಬಹುದು. ಟೋಜೋರಾದರೂ ಬರ್ಮಾ, ಮಲಯ, ಫಿಲಿಪೈನ್ಸ್ ಇಂಥಾ ಪ್ರಾಮುಖ್ಯ ಪ್ರದೇಶಗಳು ದೊರಕಿರುವುದರಿಂದ ಅವುಗಳನ್ನು ಗಟ್ಟಿಮಾಡಿಕೊಳ್ಳಲು ಕೆಲಕಾಲ ಮೌನ ತಳೆದಿದ್ದರೂ ಇರಬಹುದು. ಹಾಗಾಗಿ ಇನ್ನು ಮುಂದೆ ಆಗುವ ಯುದ್ಧವೇ ನಿರ್ಣಾಯಕ ಯುದ್ಧವಾಗುವುದಲ್ಲದೆ ಇದುವರೆಗಿನದು ಕೇವಲ ಸಿದ್ಧತೆಯದೇ ಎನಬೇಕಾಗುತ್ತದೆ.

ರಶ್ಯ ಯುದ್ಧದ ಪರಿಸ್ಥಿತಿ

ಘೋರ ಯುದ್ಧವು—ಎಡೆಬಿಡದೆ ಆಗುತ್ತಲೇ ಇರುವುದು—ಇಂದು ರಶ್ಯವೊಂದರಲ್ಲೆ! ಚಳಿಗಾಲ ಬಂತೆಂದು ಯುದ್ಧದಬಿಸಿ ಏನೇನೂ ಈ ಸಲ ತಣಿಯಲಿಲ್ಲ. ಮೊದಲಿನಷ್ಟೇ ಭೀಷಣವಾಗಿದೆ. ರಶ್ಯನ್ ಯುದ್ಧದ ಸುದ್ದಿಗಳು ಒಂದು ಕ್ರಮ ಪ್ರಕಾರವಾಗಿ ಬರುತ್ತಲಿಲ್ಲವೆಂದು ತೋರುತ್ತದೆ. ಸ್ಟಾಲಿನ್‌ಗ್ರಾಡಿನ ಅವಸ್ಥೆಯೇನಾಯಿತು? ಕಾಕಸಸ್ ಪರಿಸ್ಥಿತಿ ಹೇಗಿದೆ? ವೋಲ್ಗಾ ದಾಟಿ ಹೋದರೆ? ಡಾನ್ ವಕ್ರದಲ್ಲಿ ಹೇಗುಂಟು? ಈ ವಿಷಯವನ್ನೆಲ್ಲಾ ನಾವು ತಿಳಿದು ಕೊಳ್ಳಬೇಕಾದರೆ, ಬಿಡಿ ಬಿಡಿಯಾಗಿ ಬರುತ್ತಿರುವ ಸುದ್ದಿಗಳನ್ನು ಸಂದುಗೂಡಿಸಿ ಅನ್ವಯ ಮಾಡಿಕೊಂಡು ಅರ್ಥಮಾಡಬೇಕಷ್ಟೆ. ಅಂತೂ ರಶ್ಯದಲ್ಲಿ ಯುದ್ಧವು ಯಾವುದಾದರೂ ಒಂದೇ ಕಡೆಯಲ್ಲಿ ನಡೆಯುತ್ತಿರದೆ, ಅಲ್ಲಲ್ಲಿ ಬಹುಮುಖವಾಗಿದೆ. ಇದು ಈವರೆಗೆ ಜರ್ಮನರು ಆಕ್ರಮಿಸಿ ಬಂದು, ರಶ್ಯದ ಹಲವು ಸ್ಥಳಗಳನ್ನು ಕೈವಶಪಡಿಸಿ ಕೊಂಡಂತೆ ಈಗ ರಶ್ಯನರೂ ಜರ್ಮನರ ಮೇಲೇರಿ ಹೋಗಿ ತಮ್ಮ ಪಿತೃ ಭೂಮಿಯನ್ನು ಪುನಃ ಪಡೆಯಲು ಹೋರಾಟ ಹೂಡಿದ್ದಾರೆ!

ಕಳೆದ ಬೇಸಗೆಯಲ್ಲಿ ಜರ್ಮನರು ಆಕ್ರಮಿಸುತ್ತಾ ಬಂದು ಸ್ಟಾಲಿನ್‌ಗ್ರಾಡಿನ ಒಳಹೊಕ್ಕು ಹೋರಾಟ ಗೈದರಷ್ಟೆ! ಆ ಯುದ್ಧ ಇನ್ನೂ ಅಂತೆಯೇ ಸಾಗುತ್ತದೆ. ನಗರದ ರಸ್ತೆ ರಸ್ತೆಗಳಲ್ಲಿ ತೋಪಿನ, ಗುಂಡಿನ, ಕತ್ತಿಯ ಈಟಿಯ ಕೈಕೈ ಹೋರಾಟಗಳೂ ನಡೆಯುತ್ತಿವೆ. ಒಂದು ರೀತಿಯಿಂದ ನೋಡಿದರೆ ವೈರಿಗಳನ್ನು ರಶ್ಯನರು ಸ್ಟಾಲಿನ್‌ಗ್ರಾಡ್ ವರೆಗೆ ಬರಲು ಬಿಟ್ಟುಕೊಟ್ಟು ಅಲ್ಲಿ ತಡೆದು ಹಾಕಿದಂತೆ ತೋರುತ್ತದೆ. ಸ್ಟಾಲಿನ್‌ಗ್ರಾಡಿನಲ್ಲಿ ತಡೆಯಲ್ಪಟ್ಟ ಜರ್ಮನ್ ಸೇನೆ ಅಲ್ಲಿಯೇ ಯುದ್ಧ ಹೂಡಿ ಹತವಾಗುತ್ತಿದೆ. ಇಷ್ಟರಲ್ಲಿ ರಶ್ಯನ್ ವೀರ ಸೇನಾನಿ ಟಿಮೊಶಂಕೋ ಆ ನಗರದ ಉಭಯ ಪಾರ್ಶ್ವಗಳಲ್ಲಿ ಎಂದರೆ ದಕ್ಷಿಣೋತ್ತರಗಳಲ್ಲಿ ಪ್ರಚಂಡವಾದ ಆಕ್ರಮಣ ಕೈಕೊಂಡಿದ್ದಾನೆ: ಇದರಿಂದಾಗಿ ಡಾನ್‌ವೋಲ್ಗಾ ತೀರದಲ್ಲಿರುವ ೨೨ ಲಕ್ಷ ಜರ್ಮನ್ ಸೇನೆ ಪರಿಭವಕ್ಕೊಳಗಾಯಿತು. ಆ ಸೈನ್ಯ ತಪ್ಪಿಸಿಕೊಂಡು ಹೋಗಲಾರದೆ ಅಲ್ಲಿ ನಿಂತು ಯುದ್ಧಮಾಡುತ್ತಿದೆ. ಇದೊಂದು ರಶ್ಯನರ ಯುದ್ಧರಂಗವಾಗಿದೆ. ಸ್ಟಾಲಿನ್‌ಗ್ರಾಡಿನಿಂದ ಸುಮಾರು ೨೦೦ ಮೈಲು ವಾಯುವ್ಯದಲ್ಲಿರುವ ರೋಸ್ಟೋವಿನಿಂದ, ಅಷ್ಟೇ ದೂರ ಉತ್ತರಕ್ಕಿರುವ ಡಾನ್ ನದಿತೀರದಲ್ಲಿರುವ ವೊರೊನೆಜದ ವರೆಗೆ ಕಳೆದ ಬೇಸಗೆಯಲ್ಲಿ ಜರ್ಮನರು ಮುಂದೊತ್ತಿ, ಅನಂತರ ದಕ್ಷಿಣಾಭಿಮುಖವಾಗಿ, ಡಾನ್ ನದೀ ತೀರದುದ್ದದಲ್ಲಿಯೂ ನುಗ್ಗಿ, ಸ್ಟಾಲಿನ್‌ಗ್ರಾಡನ್ನು ಕೆಳಗಡೆ ಕಾಕಸಸನ್ನೂ ಮುತ್ತಿಗೆ ಹಾಕಿದ್ದರು. ಜರ್ಮನರಿನ್ನೂ ಡಾನ್ ನದೀ ದಾಟಿ ಆಚೆಗೆ ಹೋಗಲಿಲ್ಲ. ಡಾನ್ ನದೀ ಒಳಗೆ ರಶ್ಯನರ ಧಾನ್ಯ ಸಮೃದ್ಧ ಪ್ರದೇಶವಿದೆ. ರಶ್ಯನರು ಸಮಯ ಸಾಧಿಸಿ, ೨॥ ಲಕ್ಷ ಸೈನ್ಯಸಮೇತ ಡಾನ್ ರೇಖೆಯನ್ನು ವೊರೊನೆಜ್ ದಕ್ಷಿಣದಲ್ಲಿಯೂ, ಕ್ಲೇಟ್ಸ್‌ಕಾಯ ಸಮೀಪದಲ್ಲಿಯೂ ದಾಟಿ ಒಳನುಗ್ಗಿದರು. ಡಾನ್ ನದೀ ಬಯಲಿನ ಕೇಂದ್ರವೂ, ಡೊನೆಟ್ಸ್ ನದೀ ತೀರದ ಮುಖ್ಯ ಪಟ್ಟಣವೂ ಆದ ಮಿಲ್ಲಿರೋವೋ ಕಡೆ ಎರಡು ಸೈನ್ಯಗಳು ಸೇರಿ ಆ ಪುರವನ್ನು ಮುತ್ತುತ್ತಿವೆ. ಮಿಲ್ಲಿರೋವೊ ಸ್ಟಾಲಿನ್‌ಗ್ರಾಡ್ ಪಶ್ಚಿಮಕ್ಕಿದೆ. ರಶ್ಯನರು ಉತ್ತರದಿಂದ ಹೀಗೆ ಮುನ್ನುಗ್ಗುತ್ತಿದ್ದಾರೆ. ಇದೊಂದು ಯುದ್ಧರಂಗವಾಗಿದೆ. ಡಾನ್‌ವೋಲ್ಗಾ ನದೀ ನಡುವೆ ಸಿಕ್ಕಿ ಬಿದ್ದಿರುವ ಜರ್ಮನ್ ಸೇನೆಗೆ ಬೆಂಬಲವಾಗಲು ರಶ್ಯನ್ ಸೇನೆಯನ್ನು ಸೋಲಿಸಲೂ, ಸ್ಟಾಲಿನ್‌ಗ್ರಾಡ್ ಪಶ್ಚಿಮದಿಂದ ಜರ್ಮನರ ಒಂದು ದೊಡ್ಡ ಪ್ರಯತ್ನ ನಡೆಯುತ್ತಿದೆ. ಇದು ಬಹಳ ಕಾಲದಿಂದ ನಡೆಯಿತು. ಜರ್ಮನರೀಗ ತಮ್ಮ ಹಿಡಿತವನ್ನು ಕಳಕೊಂಡಿರುವುದರಿಂದ ರಶ್ಯನರು ಅವರನ್ನು ಬಹುದೂರ ಹಿಂದಟ್ಟಿ, ರೊಸ್ಟೋವ್ ಸ್ಟಾಲಿನ್‌ಗ್ರಾಡ್ ರೈಲ್ವೆಯ ಮಧ್ಯಸ್ಥಳದಲ್ಲಿರುವ ಕೊಟೆಲ್ನಿಕೋವ್ ಹಿಡಿದಿರುವರು. ಇದೂ ಒಂದು ಯುದ್ಧರಂಗವಾಗಿದೆ; ಈ ಪರಿಸ್ಥಿತಿ ಜರ್ಮನರಿಗೆ ಬಹಳ ಗಂಡಾಂತರದ್ದಾಗಿದೆ; ರಶ್ಯನರಿಗೆ ಹೆಚ್ಚಿನ ಅನುಕೂಲವಾಗಿರುವುದು. ಆದರೆ ಯುದ್ಧದಗತಿ—ಕಾಲಚಕ್ರ—ಹೇಗೆ ತಿರುಗುತ್ತದೋ ಮುಂದೆ ನೋಡಬೇಕು.

ಬರ್ಮಾದ ಪೆಟ್ಟು ಕಲ್ಕತ್ತೆಗೆ!

೧೯೪೨ರ ಅಂತ್ಯದಲ್ಲಾದ ಮಹಾ ಘಟನೆಗಳಲ್ಲಿ ಜಪಾನರು ಭಾರತದ ಕೇಂದ್ರ ಸ್ಥಳಗಳಲ್ಲೊಂದಾಗಿರುವ ಕಲ್ಕತ್ತೆಗೆ ಎಡೆಬಿಡದೆ ಬಾಂಬು ಸುರಿಸಿದ್ದು, ಚಿತಗಾಂಗ್, ಫೇಣಿ, ಪೂರ್ವ ಬಂಗಾಲ, ಅಸ್ಸಾಮ್ ಕಡೆಗಳಲ್ಲಿಯೂ ಬಾಂಬೆಸೆಯುತ್ತಿದ್ದುದು ಗಣನೀಯ ವಿಚಾರವಾಗಿದೆ. ಬರ್ಮಾವನ್ನು ಸ್ವಾಧೀನಪಡಿಸ್ಸುವ ಹಠದಿಂದ ಆಂಗ್ಲ ಅಮೇರಿಕನ್ ಸೈನ್ಯಗಳು ಬರ್ಮಾದ ಮೇಲೆ ಬಿದ್ದಷ್ಟೇ ರಭಸದಲ್ಲಿ ಜಪಾನರಾದರೂ ಭಾರತದ ಕಡೆಗೆ ಗಮನ ಕೊಟ್ಟಿದ್ದಾರೆ. ಜಪಾನರು ಕಳೆದ ಮೇ ಅಂತ್ಯದಲ್ಲಿಯೇ ತಮ್ಮ ವಿಜಯ ಪತಾಕೆ ಏರಿಸಿದ್ದರೂ ನಮ್ಮೀ ಪುಣ್ಯಭೂಮಿಗೆ ಅವರು ಕಾಲಿಟ್ಟಿರಲಿಲ್ಲ. ಮಳೆ ಮುಗಿದ ಬಳಿಕ ವಾತಾವರಣವು ಶುಭ್ರವಾಗಲು ಬರಬಹುದೆಂಬ ನಿರೀಕ್ಷೆ ಕೆಲವರಿಗಿದ್ದರೂ ಆಗಲೂ ಅವರು ಬರಲಿಲ್ಲ. ಹೀಗೆ ಕಳೆದೆರಡು ತಿಂಗಳಿಂದಲೂ ಜಪಾನರು ತಟಸ್ಥರಾಗಿರುವುದನ್ನು ನೋಡಿ ಹಲವರು ಅಚ್ಚರಿಗೊಂಡಿದ್ದರು. ಆದರೆ ಇಷ್ಟರಲ್ಲೇ ದಳಪತಿ ವೇವಲರು ಮತ್ತು ಮಿತ್ರಪಕ್ಷದ ಕೆಲವು ಧುರೀಣರೂ ಬರ್ಮಾವನ್ನು ಮರಳಿ ಪಡೆದುಕೊಳ್ಳಬೇಕೆಂಬ ನಿರ್ಧಾರವನ್ನು ಸಾರತೊಡಗಿದರು. ಹಾಗೆ ಹೇಳಿದರೂ ಕೆಲಕಾಲ ಯಾವ ಚಟುವಟಿಕೆಯೂ ತೋರಲಿಲ್ಲ. ಆದರೆ ಒಂದು ಮಂಗಳ ಪ್ರಭಾತದಲ್ಲಿ, ಆಂಗ್ಲ-ಭಾರತ ಸೈನಿಕರು ಅರಕಾನಾದಲ್ಲಿ ಬರ್ಮಾದ ಗಡಿಯನ್ನು ದಾಟಿ, ಮಾಂಗ್ಡೊ ಬುತಿದಾಂಗ್ ಪ್ರದೇಶವನ್ನು ವಶಪಡಿಸಿಕೊಂಡರೆಂಬ ಸುದ್ದಿ ಬಂತು. ಶತ್ರುಗಳ ಪ್ರತಿಭಟನೆಯೂ ಇಲ್ಲದೆ ಹೀಗೆ ಬರ್ಮಾದಲ್ಲಿ ಮುಂದೊತ್ತಿದ ವಿಚಾರ ಹಲವರು ಉತ್ತೇಜಿತರಾದರು. ಆದರೆ ಕೆಲದಿನಗಳಲ್ಲಿಯೇ ಸುದ್ದಿ ಬಂತು, ಅರಕಾನಾದಲ್ಲಿ ಮುಂದುವರಿದದ್ದು ಅಷ್ಟೇನೂ ಹೇಳಿಕೊಳ್ಳತಕ್ಕದ್ದಾಗಿಲ್ಲವೆಂದು. ಉತ್ತೇಜಿತವಾದ ಆಶೆಗೆ ಇದರಿಂದ ತಣ್ಣೀರೆರಚಿದಂತಾಯಿತು. ಚೀನ, ಭಾರತ ಹಾಗೂ ಮಿತ್ರ ರಾಷ್ಟ್ರಗಳವರು ಇದನ್ನು ಕೇಳಿ ತುಸು ಕಳವಳಗೊಂಡರು. ಇಷ್ಟರಲ್ಲಿ ಜಪಾನರ ಬಾಂಬು ಚಿತಗಾಂಗ್, ಫೇಣಿ ಹಾಗೂ ಕಲ್ಕತ್ತದ ಮೇಲೆಯೇ ಸುರಿಯಿತು! ಹೀಗಾಗಿ ಹಲವರು ಹೇಳುತ್ತಾರೆ: ಬರ್ಮಾಕ್ಕೆ ಕೊಟ್ಟ ಪೆಟ್ಟು ಕಲ್ಕತ್ತೆಗೆ ತಾಗಿತೇ? ಎಂದು! ಬರ್ಮಾದಲ್ಲಿ ಈ ಗಣನೀಯವಲ್ಲದ ಮುಂದೊತ್ತುವಿಕೆಯೂ, ಜಪಾನರನ್ನು ಕಲ್ಕತ್ತದಂತಹ ಜನನಿಬಿಡ ಕೇಂದ್ರ ಸ್ಥಾನಕ್ಕೆ ಎಡೆಬಿಡದೆ ನಾಲ್ಕೈದು ಸಲ ಬಾಂಬು ಸುರಿಸುವಂತೆ ಕೆರಳಿಸಿ ಬಿಟ್ಟಿತೇ ಎಂಬುದೂ ವಿಚಾರಿಸತಕ್ಕುದಾಗಿದೆ.

ಬಂಗಾಳದ ಪ್ರಧಾನ ಪಟ್ಟಣವಾದ ಕಲ್ಕತ್ತೆಗೆ ಹೀಗೆ ಜಪಾನರು ಬಾಂಬು ಸುರಿಸಿದರೂ, ಇಂದು ಭಾರತ ರಕ್ಷಣೆ ಹಿಂದಿಗಿಂತ ಬಲವಾಗಿದೆಯೆಂಬುದನ್ನು ಅವರು ಇಷ್ಟರಲ್ಲೇ ತಿಳಕೊಂಡಿರಬಹುದು. ಭಾರತದ ರಕ್ಷಣೆಗೆ ಭಾರತದ ಸೈನ್ಯವು ಸಾಲದ್ದಕ್ಕೆ ಅಮೆರಿಕನ್ ಯೋಧರೂ ಇಲ್ಲಿದ್ದಾರೆಂದು ಜಪಾನರು ಈಗಾಗಲೇ ಅನುಭವಕ್ಕೆ ತಂದುಕೊಂಡಿರಬೇಕು. ಭಾರತದೊಳಗಿನ ಪರಿಸ್ಥಿತಿಯೇನಂತೂ, ಸರಕಾರದವರು ಕಳೆದ ಆಗಸ್ಟ್ ತಿಂಗಳಿಂದ ಸಂಪೂರ್ಣ ಅಡಗಿಸಿ ಹದಕ್ಕೆ ತಂದುಬಿಟ್ಟಿದ್ದಾರೆಂಬುದನ್ನೂ ಜಪಾನರು ಅರ್ಥಮಾಡಿಕೊಂಡಾರು. ಎಷ್ಟೇ ಆತಂಕಗಳಿದ್ದರೂ, ಬೇರೆ ಕಡೆಗಳಲ್ಲಿ ಎಷ್ಟೇ ಕಾರ್ಯಕಲಾಪಗಳಿದ್ದರೂ, ಸರಕಾರವು ಭಾರತದ ಗಡಿಯಲ್ಲಿ ಭದ್ರ ಸೈನ್ಯವೊಂದನ್ನು, ವಿಶೇಷತಃ ಅಮೆರಿಕದಿಂದ ಬಂದ ಸೈನ್ಯವನ್ನು ಇರಿಸಿಕೊಂಡಿದೆಯೆಂಬುದೂ ಗಣನೀಯವಿದೆ. ಹೀಗಾಗಿ ಜಪಾನರು ಕಲ್ಕತ್ತದ ಮೇಲೆ ಬಾಂಬು ಹಾಕಿದರೂ; ಇಲ್ಲಿನ ರಕ್ಷಣೆ ಭದ್ರವಾಗಿದೆಯೆಂದು ತಿಳಕೊಂಡ ದಳಪತಿ ವೇವಲರು ತಮ್ಮ ಸೇನೆಯನ್ನು ಬರ್ಮಾದಲ್ಲಿ ಅಕ್ಯಾಬ್ ವರೆಗೆ ಮುನ್ನುಗ್ಗಲು ಆಜ್ಞೆಯಿತ್ತಿರುವುದು ಪ್ರಶಂಸನೀಯವಿದೆ. ಪೂರ್ವ ಸೇನೆಯ ದಳಪತಿ ಲೆ|| ಜನರಲ್ ಇರ್ವಿನರು ತಮ್ಮ ಆಕಾಶ ಭಾಷಣದಲ್ಲಿ, ಬರ್ಮಾದ ಮುಂದೊತ್ತುವಿಕೆ ಸದ್ಯ ಸಮಾಧಾನದಿಂದಾಗುತ್ತಿದ್ದರೂ; ಅದು ಎಡೆಬಿಡದೆ ನಡೆಯುತ್ತಲೇ ಇರುವುದೆಂದೂ ಈಗಾಗಲೇ ಇನ್ನೊಂದು ಜಿಲ್ಲೆಯನ್ನೂ ಕೈವಶಪಡಿಸಿಕೊಂಡಿರುವೆವೆಂದೂ ಹೇಳಿದರು. ಜಪಾನರು ಎಷ್ಟರವರೆಗೆ ಈ ರೀತಿ ಬರ್ಮಾದ ಪ್ರದೇಶಗಳನ್ನು ತಮ್ಮ ಕೈಯಿಂದ ಕಿತ್ತುಕೊಳ್ಳಲು ಬಿಟ್ಟುಕೊಡುವರೋ ನೋಡಬೇಕು. ಅಕ್ಯಾಬ್ ವರೆಗೆ ಬರ್ಮಾದಲ್ಲಿ ಜಪಾನರನ್ನು ಮಿತ್ರ ರಾಷ್ಟ್ರದವರು ಬೆನ್ನಟ್ಟಿದ್ದರೆ, ಜಪಾನರಾದರೂ ಕಲ್ಕತ್ತದ ಮೇಲೆ ಹಾಗೂ ಬಂಗಾಳದ ಇತರ ಪ್ರಾಂತಗಳ ಮೇಲೆ ಬಾಂಬೆಸೆಯುವ ಸಾಹಸವನ್ನೇಕೆ ವ್ಯರ್ಥವಾಗಿ ಕೈಕೊಂಡರೋ ನಮಗೆ ಅರ್ಥವಾಗುವುದಿಲ್ಲ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. 462/42.

ಪಧನೋಪ್ಪರಿ...... ವಾದಿ

ಮತ್ತು

ಇಸ್ಮಾಲಿ ಬ್ಯಾರಿ ಕೂಡಾ...... ಪ್ರತಿವಾದಿರು

1ನೇ ಪ್ರತಿವಾದಿ ಮಂಗಳೂರು ತಾಲೂಕು ಮಂಜನಾಡಿ ಗ್ರಾಮದ ಕೊಡಂಗೆಯಲ್ಲಿರುವ, ಹಮದ ಬ್ಯಾರಿಗಳ ಮಗ, 1ನೇ ಪ್ರತಿವಾದಿ ಇಸ್ಮಾಲಿ ಬ್ಯಾರಿಗೆ—

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಕ್ರೈಪೇತಿನಲ್ಲಿ ಕೇಳಿದ ನಿವೃತ್ತಿಗಳ ಬಗ್ಗೆ ನಿಮ್ಮ ಮೇಲೆ ಒಂದು ವ್ಯಾಜ್ಯ ದಾಕ್ಲು ಮಾಡಿರುತ್ತಾರೆ. ಸದ್ರಿ ದಾವೆಯ ನೋಟೀಸನ್ನು ನಿಮಗೆ ಗಜೇಟು ಪಬ್ಲಿಕೇಶನಿಂದ ಮಾಡಿಸುವರೇ ಇದೇ ಬರುವ 19–1–43ಕ್ಕೆ ಇಟ್ಟಿರುತ್ತದೆ. ಆದ್ರಿಂದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ ನೀವು ನಿಮ್ಮ ಆಕ್ಷೇಪಣೆಗಳೇನಾದ್ರು ಇದ್ದ ಪಕ್ಷದಲ್ಲಿ ಅವುಗಳನ್ನು ಈ ಕೋರ್ಟಿನ ಮುಂದೆ ಸದ್ರಿ ತಾ. 19–1–43ನೇ ದಿವಸ ನೀವು ಖುದ್ದು ಯಾ ವಕೀಲ್ ಮುಖಾಂತ್ರ ಹಾಜ್ರುಮಾಡತಕ್ಕದ್ದು. ಇಲ್ಲವಾದ್ರೆ ಅದನ್ನು ನಿಮ್ಮ ಗೈರು ಹಾಜ್ರಿನಲ್ಲಿಯೇ ತೀರ್ಮಾನಿಸಲ್ಪಡುವುದು.

(By order of Court).

ಮಂಗಳೂರು, 5–1–43 } Sd) H. D. Alva Vakil for Pltf.

ಸ್ವದೇಶಾಭಿಮಾನಿ

ತಾರೀಕು 8—1—1943

ಅಮೇರಿಕದ ಶ್ವೇತ ಪತ್ರ

ಅಮೇರಿಕ ಸರಕಾರವು ಒಂದು ಶ್ವೇತ ಪತ್ರವನ್ನು ಹೊರಡಿಸಿ ಅದರಲ್ಲಿ ಜಪಾನಿನ, ಜರ್ಮನಿಯ, ಇಟಲಿಯ ಆಕ್ರಮಣ ನೀತಿಗಳನ್ನು ಖಂಡಿಸಿ ತನ್ನ ಪ್ರಜಾಪ್ರಭುತ್ವ ಸ್ವಾತಂತ್ರ್ಯ ಧೋರಣಗಳನ್ನು ಸ್ಪಷ್ಟಪಡಿಸಿದೆ. ೧೯೩೧ರಿಂದ ೧೯೪೧ರ ವರೆಗೆ ಜಪಾನು ಆಕ್ರಮಣ ಹಾಗೂ ಪಾಶವಿಕ ಶಕ್ತಿಯ ಕಾರ್ಯಗಳನ್ನೇ ಕೈಕೊಂಡಿದೆಯೆಂದೂ, ಈ ಅವಧಿಯಲ್ಲಿ ಜರ್ಮನಿ, ಇಟಲಿ ಜಪಾನುಗಳೂ ಜಗತ್ತಿನಲ್ಲಿ ದಬ್ಬಾಳಿಕೆಯ ಧೋರಣವನ್ನೇ ಅವಲಂಬಿಸಿದವೆಂದೂ ಅದರಲ್ಲಿ ವಿವರಿಸಲಾಗಿದೆ. ಕೊನೆಗೆ ೧೯೪೧ರ ಡಿಸೆಂಬರ್ ೭ನೇ ತಾರೀಕಿನಂದು ಜಪಾನಿನ ಪರವಾಗಿ ಇಟಲಿ ಜರ್ಮನಿ ಹಾಗೂ ಈ ರಾಷ್ಟ್ರಗಳ ಸ್ವಾಧೀನ ರಾಷ್ಟ್ರಗಳು ಮತ್ತು ಜಪಾನೂ ಅಮೇರಿಕದ ಮೇಲೆ ಹಾಗೂ ಉಳಿದ ಸಂಯುಕ್ತ ರಾಷ್ಟ್ರಗಳ ಮೇಲೆ ಯುದ್ಧ ಸಾರಿದ ಈ ಎಲ್ಲಾ ವಿವರಗಳೂ ಅದರಲ್ಲಿ ಅಡಕವಾಗಿವೆ.

ಅಮೇರಿಕವು ಮಿತ್ರ ಭಾವನೆಯ ಧೋರಣವನ್ನನುಸರಿಸಿದ್ದರೂ, ಅಕ್ಷ ರಾಷ್ಟ್ರಗಳ ಈ ಲೋಕಾಕ್ರಮಣ ನೀತಿ ತಿಳಿದು ಬಂದುದರಿಂದ, ತನ್ನ ಆತ್ಮರಕ್ಷಣೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ್ದು ಮಾತ್ರವಲ್ಲದೆ ಅಕ್ಷರಾಷ್ಟ್ರಗಳ ಈ ಕ್ರೂರ ದಬ್ಬಾಳಿಕೆಯನ್ನೆದುರಿಸಲು ಸಂಯುಕ್ತ ರಾಷ್ಟ್ರಗಳಲ್ಲಿ ಅಮೇರಿಕ ಮುಂದಾಳಾಗಿ ನಿಲ್ಲಬೇಕಾಯಿತೆಂದೂ ಸ್ಪಷ್ಟಪಡಿಸಲಾಗಿದೆ. ಅಮೇರಿಕ ಅಧ್ಯಕ್ಷ ರೂಸ್‌ವೆಲ್ಟರು ೧೯೩೩ರಲ್ಲಿ ನಿಶ್ಶಸ್ತ್ರೀಕರಣ ಯೋಜನೆಯನ್ನು ಜಿನೆವಾ ಪರಿಷತ್ತಿಗೆ ಒಪ್ಪಿಸಿದ್ದರೂ, ಫ್ರೆಂಚರ ಆತ್ಮರಕ್ಷಣೆಗೆ ಬಾಧೆ ಬರುವುದೆಂದು ಅದನ್ನು ಆಕ್ಷೇಪಿಸಿದ ವಿಷಯವೂ, ಇಟಲಿಯು ಫ್ರಾನ್ಸಿನ ಮೇಲೆ ಧಾಳಿ ಮಾಡುವ ಮೊದಲು ರೂಸ್‌ವೆಲ್ಟರು ಮುಸಲಿನಿಗೆ ವಿನಂತಿ ಮಾಡಿಕೊಂಡದ್ದು ವ್ಯರ್ಥವಾದ ವಿಷಯವೂ, ರಷ್ಯದ ಧಾಳಿ, ಪರ್ಲ್ ಬಂದರ್ ಧಾಳಿ ವಿಷಯಗಳೂ ಈ ಶ್ವೇತಪತ್ರಿಕೆಯಲ್ಲಿ ಇವೆ. ಎರಡನೆಯ ಮಹಾಯುದ್ಧವನ್ನು ನಿಲ್ಲಿಸಲು ಅಮೇರಿಕವು ಮಾಡಿದ ಪ್ರಯತ್ನಗಳು ಹೇಗೆ ವ್ಯರ್ಥವಾದುವೆಂದು ಇದರಲ್ಲಿ ತಿಳಿಸಿರುತ್ತದೆ.

ಕೊನೆಗೆ ಇದರಲ್ಲಿ ಫ್ರೆಂಚರ ಸ್ವಾತಂತ್ರ್ಯದ ಸಲುವಾಗಿ ಅಮೇರಿಕವು ಅಕ್ಷರಾಷ್ಟ್ರಗಳ ನೀತಿಗೆ ವಿರುದ್ಧವಿದ್ದು, ಅಕ್ಷರಾಷ್ಟ್ರಗಳ ಕೈಗೆ ಫ್ರೆಂಚ ಹಡಗಪಡೆಯೂ, ವಿಮಾನ ದಳವೂ ಸಿಗಬಾರದೆಂಬುದೂ, ವೈರಿಗಳನ್ನು ಫ್ರಾನ್ಸಿನಿಂದ ಓಡಿಸಿ ತಮ್ಮ ಸ್ವಾತಂತ್ರ್ಯವನ್ನು ಪುನಃ ಸಂಪಾದಿಸುವುದಕ್ಕೆ ಫ್ರೆಂಚರಿಗೆ ಸರ್ವವಿಧದ ಸಹಾಯ ಮಾಡಬೇಕೆಂಬುದೂ, ಹಿಟ್ಲರ್ ಹಾಗೂ ಅವನ ತತ್ವಗಳಿಂದ ಫ್ರೆಂಚ ಜನರನ್ನು ದೂರವಾಗಿಡುವ ಪ್ರಯತ್ನ ಮಾಡಬೇಕೆಂದೂ ತನ್ನ ಉದ್ದೇಶಗಳನ್ನು ಸಾರಲಾಗಿದೆ.

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೬-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ—ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಸ್ವದೇಶ ಸಮಾಚಾರ

ಅಹಮ್ಮದಾಬಾದಿನಲ್ಲಿ ಗುಂಡು ಹಾರಿಸಲಾಯಿತು!

ಪೋಲೀಸಿನವರ ಮೇಲೆ ಕಲ್ಲುಗಳನ್ನು ಬಿಸಾಡಿದ ಪೆವನದಿಂದ, ಪೋಲೀಸರು ಎರಡನೇ ಬಾರಿ ಪಟ್ಟಾನ್ ರಸ್ತೆಯಲ್ಲಿ ಗುಂಡು ಹಾರಿಸಿದರು. ಹಳೇ ಕಮರ್ಷಿಯಲ್ ಗಿರಣಿಯಲ್ಲಿ ಬಾಂಬೊಂದು ಆಸ್ಫೋಟನವಾಯಿತು. ಇಬ್ಬರನ್ನು ಕೈದು ಮಾಡಲಾಗಿದೆ. ಹದಿನೈದು ನಿಮಿಷಗಳೊಳಗೆ ಮಹೋಶ್ವರಿ ಗಿರಣಿಯಲ್ಲಿ ಬಾಂಬು ಆಸ್ಫೋಟನವಾಯಿತು.

ಜನವರಿ ೬ರಕ್ಕೆ ವಾರ್ತಾ ಪತ್ರಿಕೆಗಳಿಲ್ಲ

ಬೊಂಬಾಯಿಯಲ್ಲಿ ದಶಂಬರ ೧೮ರಿಂದ ೨೧ರ ವರೆಗೆ ಸೇರಿದ ಅಖಿಲ ಭಾರತ ಸಂಪಾದಕರ ಸ್ಥಾಯಿ ಸಮಿತಿಯಲ್ಲಿ ನಿರ್ಧರಿಸಿದಂತೆ ಭಾರತದಲ್ಲಿರುವ ಸಮಸ್ತ ವಾರ್ತಾ ಪತ್ರಿಕೆಗಳೂ ಜನವರಿ ೬ನೆಯ ತಾರೀಕಿನ ದಿನ ಹರತಾಳ ಆಚರಿಸಬೇಕಾಗಿ ವಿನಂತಿಸಲಾಗಿದೆ. ಬೊಂಬಾಯಿ ನಿರ್ಣಯದ ಪ್ರಕಾರ ಈ ಹರತಾಳವಲ್ಲದೆ, ಸರಕಾರಿ ಪ್ರಕಟಣೆಗಳನ್ನು ಪ್ರಕಟಿಸಕೂಡದು, ಹೊಸ ವರ್ಷದ ಬಿರುದುಗಳನ್ನು ಪ್ರಕಟಿಸಕೂಡದು, ಬ್ರಿಟಿಷ್ ಸರಕಾರದ ಮತ್ತು ಪ್ರಾಂತ ಸರಕಾರಗಳ ಸದಸ್ಯರ ಭಾಷಣಗಳನ್ನು ಪ್ರಕಟಿಸಕೂಡದು ಜನವರಿ ೬ರಿಂದ ಮುಂದೆ ತಿಳಿಸುವ ವರೆಗೆ ಭಾರತದ ಪತ್ರಿಕೆಗಳೆಲ್ಲಾ ಹೀಗೆ ನಡೆಯಬೇಕೆಂದೂ ವಿನಂತಿಸಲಾಗಿದೆ.

ನೆಹರು ಅಧ್ಯಕ್ಷರಾಗದಿರುವುದರ ಸಲುವಾಗಿ ವಿಷಾದ

ಪಂಡಿತ ಜವಾಹರಲಾಲ ನೆಹರುಗಳು ಈ ಸಲದ ಅ. ಭಾ. ವಿಜ್ಞಾನ ಪರಿಷತ್ತಿಗೆ ಅಧ್ಯಕ್ಷರಾಗಿ ನಿಯೋಜಿತರಾಗಿದ್ದು, ಅವರು ಅಧ್ಯಕ್ಷತೆ ವಹಿಸಲೂ, ಅವರ ಅವರ ಅಧ್ಯಕ್ಷಭಾಷಣ ಓದಲೂ, ಸರಕಾರದ ನಿರ್ಬಂಧವಿದ್ದುದರಿಂದ ಅದಕ್ಕಾಗಿ ವಿಷಾದ ಸೂಚಿಸುವ ಠರಾವಾಗಿ, ಮುಂದಿನ ಪರಿಷತ್ತಿಗೆ ಅವರನ್ನೇ ಅಧ್ಯಕ್ಷರಾಗಿ ಚುನಾಯಿಸಲಾಯಿತು. ಪಂಡಿತ ನೆಹರುಗಳು ಬರೆದ ಅಧ್ಯಕ್ಷ ಭಾಷಣದ ಪ್ರತಿಯೂ ತಮಗೆ ತಲಪಲಿಲ್ಲವೆಂದು ಪರಿಷತ್ತಿನ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಮಂಗಳೂರು ತಾಲೂಕು ಬೋ. ಎ. ಶಾಲಾ ಉಪಾಧ್ಯಾಯ ಪರಿಷತ್ತು

ತಾ. ೨೮ರಂದು ಸ್ಥಳೀಯ ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲಾ ಭವನದಲ್ಲಿ ಶ್ರೀ. ಕೆ. ಕೃಷ್ಣರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಿತ್ತು. ಅಧ್ಯಕ್ಷರ ಚುನಾವಣೆ, ಮೌನ ಪ್ರಾರ್ಥನೆಗಳಾದ ತರುವಾಯ ಉಪಾಧ್ಯಾಯ ಸಂಘದ ಗೌ. ಕಾರ್ಯದರ್ಶಿ ಶ್ರೀ ಬಿ ಭೋಜರಾಯರು ಸಂಘವು ಗತ ವರ್ಷದಲ್ಲಿ ನಡೆಸಿದ ಕಾರ್ಯಕಲಾಪಗಳ ಮತ್ತು ಸಂಘದ ಆಯವ್ಯಯದ ತಪಸೀಲುಗಳ ವರದಿಯನ್ನು ಸಭೆಯ ಮುಂದಿರಿಸಿದರು. ಜಿಲ್ಲಾ ಬೋ. ವಿದ್ಯಾಧಿಕಾರಿ ಎಚ್. ರಾಮರಾವ್ ಭಾಷಣ ಮಾಡುತ್ತಾ ಕೆಲವು ಸಲಹೆಗಳನ್ನಿತ್ತರು. ೧ ಮೊದಲನೆಯ ತರಗತಿಯಲ್ಲಿ ಓದುವ ಮಕ್ಕಳ ಸಂಖ್ಯೆಯು ನಾಲ್ಕನೆ ಒಂದಂಶವಾದರೂ ನಾಲ್ಕನೆ ತರಗತಿಯಲ್ಲಿರುವಂತೆ ಮಾಡಿಕೊಳ್ಳುವುದು; ೨. ಹುಡುಗರ ಶಾಲೆಗಳಲ್ಲಿ ೧೦ಕಡೆ ೨೫ರಷ್ಟು ಹುಡುಗಿಯರನ್ನು ಸೇರಿಸಿಕೊಳ್ಳುವುದು; ೩ ಹರಿಜನ ಮಕ್ಕಳನ್ನು ಸೇರಿಸಿಕೊಳ್ಳುವುದು ಇವೇ ಮುಂತಾದ ಕಾರ್ಯಗಳನ್ನು ಉಪಾಧ್ಯಾಯರು ಸುಲಭವಾಗಿ ಮಾಡಬಹುದೆಂದೂ ಹಾಗೆ ಮಾಡಿದರೆ ಹಲವು ಶಾಲೆಗಳನ್ನು ಮುಚ್ಚದಂತೆ ಮಾಡಬಹುದೆಂದೂ, ಉಪಾಧ್ಯಾಯರುಗಳು ಈ ಬಾಬಿನಲ್ಲಿ ಪ್ರಯತ್ನಿಸದೆ ಹೋದರೆ ಇಲಾಖೆಯವರು ಕೆಲ ಶಾಲೆಗಳನ್ನು ಮುಚ್ಚಬಹುದೆಂದೂ ಸೂಚಿಸಿದರು. ಅನಂತರ ೧. ಜೀವನಕ್ಕೆ ಬೇಕಾದ ಆಹಾರ ವಸ್ತುಗಳ ಬೆಲೆ ಏರಿದ್ದರಿಂದ ಬಡ ಜಿ. ಬೋ. ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಸರಕಾರದ ನೌಕರರಿಗೆ ಕೊಡುವ ಮಟ್ಟದಲ್ಲಿ ತುಟ್ಟಿಭತ್ತೆ ಕೊಡಬೇಕು; ೨. ಬರವಣಿಗೆಯ ಸಾಮಗ್ರಿಗಳಿಗೆ ಬೆಲೆಯು ಮಿತಿಮೀರಿ ಹೋಗಿರುವುದರಿಂದ ಈಗ ಬೋ. ಎ. ಶಾಲೆಗಳಿಗೆ ಕೊಡಲಾಗುತ್ತಿರುವ ಸಾದಿಲ್‌ವಾರು ಖರ್ಚಿನ ಮೌಲ್ಯವನ್ನು ಸೇ. ೫೦ರಷ್ಟು ಹೆಚ್ಚಿಸಿ ಕೊಡಬೇಕು; ೩. ಬೋ. ಎ. ಶಾಲಾ ಉಪಾಧ್ಯಾಯರು ಲೋಕಲ್ ಬೋರ್ಡಿನ ನೌಕರರಾಗಿ ಅಂಗೀಕರಿಸಲ್ಪಡಬೇಕು; ೪. ಪ್ರಾವಿಡೆಂಟ್ ಫಂಡಿನಿಂದ ಸಾಲಪಡೆದ ಮೊಬಲಗನ್ನು ಮರುಪಾವತಿ ಮಾಡುವ ಕಾಲಾವಧಿಯನ್ನು ೨೪ರಿಂದ ೪೮ ತಿಂಗಳುಗಳಿಗೇರಿಸಬೇಕು; ೫. ಬೋ. ಎ. ಶಾಲಾ ಉಪಾಧ್ಯಾಯರು ಕೆಲಸದಿಂದ ನಿವೃತ್ತರಾಗುವ ಪ್ರಾಯವನ್ನು ೬೦ಕ್ಕೇರಿಸಬೇಕು; ೬. ಮತ್ತು ಬೋ. ಪ್ರಾಥಮಿಕ ಶಾಲಾಧ್ಯಾಪಕರ ಮಕ್ಕಳಿಗೆ ಬೋ. ಹೈಸ್ಕೂಲುಗಳಲ್ಲಿ ಧರ್ಮಾರ್ಥ ವಿದ್ಯಾಭ್ಯಾಸ ದೊರೆಯುವಂತಾಗಬೇಕು, ಎಂಬ ಠರಾವುಗಳು ಸರಿಯಾಗಿ ಸಭೆಯಲ್ಲಿ ಚರ್ಚಿಸಲ್ಪಟ್ಟು ಸರ್ವಾನುಮತಿಯಿಂದ ಮಂಜೂರಾದುವು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 803/1942.

(O. S. 277/1941).

ಮಾರೂರು ವೆಂಕಟ್ರಮಣ ಪೈ—ಅರ್ಜಿದಾರ

ಮತ್ತು

ಕೋಡುಗುಳಿ ನಾರಾಯಣ ಭಟ್ಟ ಸಹಾ—

ರೆಸ್ಪಾಂಡೆಂಟರು.

2. ಚಿಕ್ಕಯ್ಯ ರೈ } ಸಂಕಪ್ಪ ರೈ
3. ಅಜ್ಜಕ್ಕು ಹೆಂಗ್ಸು } ಮಕ್ಕಳು.

ಮಂಗಳೂರು ತಾಲೂಕು ಪಜ್ಜಿನಮೊಗ್ರು ಗ್ರಾಮದ ಕರಂಬುಹಿತ್ಲು ಎಂಬಲ್ಲಿರುವವರು, ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ:—

ಮೇಲ್ಕಂಡ ಅಮ್ಲಜ್ಯಾರಿ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಏಲಂ ಇಸ್ತಿಹಾರಿನ ಪರತ್ತುಗಳನ್ನು ನಿರ್ಣಯಿಸಲಿಕ್ಕೆ ತಾರೀಕು 27-1-1943ಕ್ಕೆ ಸದ್ರಿ ಅಮ್ಲಜ್ಯಾರಿ ಅರ್ಜಿಯು ಇಟ್ಟಿರುತ್ತದೆ. ಆದುದರಿಂದ ಸದ್ರಿ ದಿವಸ ನೀವು ಖುದ್ದಿನಿಂದಾಗಲೀ ವಕೀಲರ ಮುಖಾಂತರವಾಗಲೀ ಹಗಲು ಘಂಟೆ 10-30ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸುವರೆ ತಪ್ಪಿದಲ್ಲಿ ಸದ್ರಿ ಏಲಂ ಇಸ್ತಿಹಾರಿನ ಪರತ್ತುಗಳು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ತಿಳಿದಿರಲಿ.

Mangalore 7-1-1943 | M. Janardan Mallya Pleader for the Petr.

NOTICE

Notice is hereby given of the Resolution passed in the Extraordinary General Meeting of the Gokuldas Farms Ltd., Mangalore, which was held on 31st December 1942:-"That it has been proved to the satisfaction of this meeting that the Company cannot by reason of its liabilities continue its business and that it is advisable to wind up the same, and accordingly that the Company be wound up voluntarily; and that Mr. Venkatraya Kamath Vakil of Mangalore be and he is hereby appointed liquidator for the purpose of such winding up".

K. Raghavendra Rao,
Managing Director

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀಗಳಾದ ಈಶ್ವರ ಮತ್ತು ರಾಮರಾಯ ಕಿಣಿಯವರ ಪುನಃ ಬಂಧನ

ಶ್ರೀಗಳಾದ ಕೆ. ಈಶ್ವರ, ಎಂ. ಎಲ್. ಎ. ಮತ್ತು ಶ್ರೀ. ಎಂ. ರಾಮರಾಯ ಕಿಣಿ ಇವರನ್ನು ತಾ: ೪ರಂದು ಆಲಿಪುರಂನಿಂದ ಬಿಡುಗಡೆ ಮಾಡಿ ಪುನಃ ಬಂಧಿಸಿ ಡಿಟೆನ್ಯನ್ ಮಾಡಿರುವರೆಂದು ತಿಳಿದುಬರುತ್ತದೆ.

ಆಲಿಪುರಂನಿಂದ ಬಿಡುಗಡೆ

ಶ್ರೀಗಳಾದ ಪ್ರಭಾಕರ ಶೇಟ್, ಎಂ. ಕೆ. ಬೊಮ್ಮಯ್ಯ, ಮತ್ತು ಕೃಷ್ಣ ಭಂಡಾರ್ಕರ್ ಈ ಮೂವರು ದಕ್ಷಿಣಕನ್ನಡದ ರಾಜಕೀಯ ಕೈದಿಗಳು ತಾ. ೪ರಂದು ಆಲಿಪುರಂ ಜೈಲಿನಿಂದ ಬಿಡುಗಡೆ ಹೊಂದಿರುವರು.

ಮಂಗಳೂರು ಹೊಸ ಮುನ್ಸಿಪಲ್ ಕೌನ್ಸಿಲಿನ ರಚನೆ

ಮಂಗಳೂರಿನ ಮುನ್ಸಿಪಲ್ ಕೌನ್ಸಿಲಿನ ಕಾಂಗ್ರೆಸ್ ಪಕ್ಷದ ಮತ್ತು ಇತರ, ಚುನಾಯುತ ಬಹು ಸಂಖ್ಯೆಯ ಕೌನ್ಸಿಲರರು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಟ್ಟು, ಅನಂತರ ಈ ಕೌನ್ಸಿಲಿನ ಕಾರ್ಯಭಾರಗಳನ್ನು ಸಾಗಿಸಲು ಕಮಿಶನರನ್ನು ಸ್ಪೆಶಲ್ ಆಫೀಸರರನ್ನಾಗಿ ನೇಮಕ ಮಾಡಿದ್ದು, ಈಗ ಈ ಮುನ್ಸಿಪಾಲಿಟಿಯ ಹೊಸ ಕೌನ್ಸಿಲಿನ ರಚನೆಯಾಗುವಂತೆ, ಮುಂದೆ ತೋರುವ ೨೮ ಮಂದಿಯನ್ನು ಆ ಕೌನ್ಸಿಲಿನ ಸದಸ್ಯರನ್ನಾಗಿ ಸರಕಾರದವರು ನಾಮಕರಣ ಮಾಡಿರುತ್ತಾರೆ. ಶ್ರೀಗಳಾದ ಜೆ. ಎಲ್. ಲೇಬೊ; ಫ್ರೆಡರಿಕ್‌ಪ್ಯಾಸ್; ಎಂ. ರಾಮಚಂದ್ರ ಪೈ ಬಿ. ತಿಮ್ಮಪ್ಪ ಶೆಟ್ಟಿ; ಅಮಿರುದ್ದೀನ್ ಸಾಹೇಬ್; ಪುತ್ತೂರು ಹುಸೇನ್ ಸಾಹೇಬ್; ಯು. ಹಮ್ಮಬ್ಬ; ಸಿ. ಮಹಮ್ಮದ್, ಡಿ. ನರಸಿಂಹಪ್ಪ; ಪಿ. ಶ್ಯಾಮರಾವ್; ಎನ್ ಮುಕುಂದ ನ್ಯಾಕ್; ಪಿ. ಆರ್. ಆರ್. ಫ್ರೂಂಜ; ಸಿ ಎಲ್. ಲೋಬೊ; ಜೋನ್ ಗೊನ್ಸಾಲ್ವೀಸ್; ಎಂ. ಎಸ್. ಶ್ರೀಪ್ಪ; ಎ. ಶಂಕರ ಆಳ್ವ; ಹುರುಳಿ ಭೀಮ ರಾವ್; ಯು. ಅಬ್ದುಲ್ ಹುಸೇನ್ ಸಾಹೇಬ್; ಸಿಲ್ವೆಸ್ಟರ್ ಎಫ್. ನರೊಂಹಾ ಜೆ. ಜೆ. ಪುರ್ಟಾಡೊ; ಬಿ. ಗಂಗಾಧರದಾಸ; ಜೆ. ಎಸ್. ಸುವರ್ಣ; ಎಸ್. ಬಸವ; ಜೆ. ದತ್ತಾತ್ರಯ ರಾವ್; ಎಂ. ರಾಮಪ್ಪ; ಶ್ರೀಮತಿಯರಾದ ಎಸ್. ಶಾಂತಾ ಬಾಯಿ, ಎಮಿ ಅರಾಂಜ, ಮತ್ತು ರೆ. ಫಾ. ಸಿ. ಬಿ. ಲೋಬೊ. ಈ ಸದಸ್ಯರ ಪ್ರಥಮ ಸಭೆ ಇದೇ ತಾ. ೧೧ಕ್ಕೆ ಬೆಳಗ್ಗೆ ಗಂಟೆ ೧೧ಕ್ಕೆ ಜರುಗಿ ಚೆಯರ್ ಮ್ಯಾನ್‌ರ ಚುನಾವಣೆ ನಡೆಯುವುದು ಚೆಯರ್‌ಮ್ಯಾನರ ಸ್ಥಾನಕ್ಕೆ ಶ್ರೀಗಳಾದ ಪುತ್ತೂರು ಹುಸೇನ್ ಸಾಹೇಬ್ ಎಂ. ಎಸ್. ಶ್ರೀಪ್ಪ, ಪಿ. ಆರ್. ಆರ್. ಫ್ರೂಂಜ, ಮತ್ತು ಜೆ. ದತ್ತಾತ್ರಯ ರಾವ್ ಇವರು ಉಮೇದುವಾರರಾಗಬಹುದೆಂದು ತಿಳಿದುಬಂದಿದೆ.

ತಿದ್ದುಪಡಿ

ಕಳೆದ ಸಲ ಪ್ರಕಟವಾದ ಪಮ್ಮರು ಮನೆ ಜಪ್ತಿ ವಿಷಯವು ನಿರಾಧಾರವಾದುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮಂಗಳೂರು ಸ್ಪೆಶಲ್ ಆಫೀಸರರ ಕಾರ್ಯಕಲಾಪ

ಮುನ್ಸಿಪಲ್ ಸ್ಪೆಶಲ್ ಆಫೀಸರರು ಕಳೆದ ಶನಿವಾರ ಸಂಜೆ, ಮುನ್ಸಿಪಲ್ ಕಾರ್ಯಾಲಯದಲ್ಲಿ ಕೆಲವು ವಿಷಯಗಳನ್ನು ಇತ್ಯರ್ಥಿಸಿದರು. ಮುನ್ಸಿಪಾಲಿಟಿಯ ಕಾರ್ಯಭಾಗಗಳ ಸಂಬಂಧ ಬರುವ ಇನಸ್ಪೆಕ್ಟಿಂಗ್ ಅಥವಾ ಆಡಿಟಿಂಗ್ ಆಫೀಸರುಗಳಿಗೆ ಬಾಡಿಗೆ ಇಲ್ಲದೆ ಮು॥ ಪ್ರಯಾಣಿಕರ ಬಂಗಲೆಯನ್ನು ಕೊಡುವ ನಿರ್ಧಾರವಾಯಿತು; ಇತರ ಪ್ರಯಾಣಿಕರು ತೆರಬೇಕಾದ ಬಾಡಿಗೆ ದರವನ್ನು ತಗ್ಗಿಸಲಾಯಿತು. ಸರಕಾರದಿಂದ ನಾಮಕರಣ ಹೊಂದಿದ ೨೮ ಮಂದಿ ಸದಸ್ಯರುಳ್ಳ ಮಂಗಳೂರಿನ ಮುನ್ಸಿಪಲ್ ಕೌನ್ಸಿಲು ಇದೇ ಜನವರಿ ತಾ. ೨ರಿಂದ ಪುನರ್‌ರಚಿಸಲ್ಪಟ್ಟಿದೆ ಎಂಬ ಅರ್ಥವುಳ್ಳ ಸರಕಾರದ ಅಪ್ಪಣೆಯನ್ನು ಓದಿ ರಿಕಾರ್ಡು ಮಾಡಲಾಯಿತು.

ದ. ಕ. ಚೇಂಬರ್ ಆಫ್ ಕಾಮರ್ಸಿನ ಠರಾವುಗಳು

ತಮ್ಮ ವಾರ್ಷಿಕಾಧಿವೇಶನ ಕಾಲದಲ್ಲಿ (ಕಳೆದ ತಾ: ೨೭ರಲ್ಲಿ ನಡೆದ) ದ. ಕ. ಜಿಲ್ಲಾ ವಾಣಿಜ್ಯ ಸಂಘದವರು, ಹಲವು ಉಪಯುಕ್ತ ಠರಾವುಗಳನ್ನು ಮಂಜೂರು ಮಾಡುವುದರೊಂದಿಗೆ ಭಾರತದ ರಾಜಕೀಯ ಸಮಸ್ಯೆಗಳ ತೀರ್ಮಾನಕ್ಕಾಗಿ ಒಂದು ಏಕಕಂಠದ ಒಪ್ಪಂದಕ್ಕೆ ಬರುವಂತೆ, ಭಾರತದ ಯಾವತ್ತು ದೊಡ್ಡ ರಾಜಕೀಯ ಪಂಗಡಗಳವರಿಗೂ, ಜನನಾಯಕರಿಗೂ ಅವರವರು ಸಂಧಿಸಿ ಮಾತಾಡಿಕೊಳ್ಳುವ ಹಾಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿ ಕೊಡಬೇಕೆಂದೂ, ಮುಖ್ಯ ಆಹಾರ ಸಾಧನಗಳ ಮೇಲಿನ ಈಗಿನ ಕಂಟ್ರೋಲ್ ಪದ್ಧತಿಯಲ್ಲಿ ತಕ್ಕ ಬದಲಾವಣೆಗಳಾಗಬೇಕೆಂದೂ, ಎಲ್ಲ ತಾಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿಯೂ ಅಕ್ಕಿ ಮೊದಲಾದ ಸಾಧನಗಳ ಡಿಪೋಗಳನ್ನು ಸರಕಾರದವರು ತೆರೆಯಬೇಕೆಂದೂ, ವಾಣಿಜ್ಯದ ಹಿತಾಸಕ್ತಿಯ ರಕ್ಷಣೆಗಾಗಿ ಈ ಸಂಘದ ಕಡೆಯಿಂದ ಒಂದು 'ಗ್ಯಾರ್ಯುಟಿ'ನ್ನು ಹೊರಡಿಸಬೇಕೆಂದೂ, ಸಣ್ಣ ನಾಣ್ಯಗಳ ಸರಬರಾಯಿ ಸರಿಯಾಗಿ ಆಗುವಂತೆ ವಿರ್ಪಡಿಸಬೇಕೆಂದೂ ಠರಾವುಗಳನ್ನೂ ಮಾಡಿರುವರು.

ಚಿಮಿಣಿ ಎಣ್ಣೆ ಮೊಕದ್ದಮೆ

ಕಳೆದ ತಾ' ೨೮ರಲ್ಲಿ ಮಂಗಳೂರು ಸಬ್ ಡಿ॥ ಮ್ಯಾಜಿಸ್ಟ್ರೇಟರಾದ ಶ್ರೀ. ಜೂಗಪ್ಪನವರು, ತಮ್ಮ ಮೂಲ್ಕಿ ಕೇಂಪಿನಲ್ಲಿ ಕಾರ್ಕಳ ತಾಲೂಕು ಪಾರೂರು ಗ್ರಾಮದಲ್ಲಿನ ಶ್ರೀ. ಕೊರಗಯಾನೆ ವಿಠಲ ಹೆಗ್ಗಡೆ ಅವರೂ, ಶ್ರೀ. ನಾರಾಯಣ ಹೆಗ್ಗಡೆ ಅವರೂ, ಚಿಮಿಣಿ ಎಣ್ಣೆಯ ವ್ಯವಹಾರದಲ್ಲಿ ಅತಿ ಲಾಭವನ್ನು ಪಡೆಯಲು ಯತ್ನಿಸಿದರೆಂಬ ಆರೋಪದ ಮೊಕದ್ದಮೆಯು ತನಿಖೆ ನಡೆಸಿ, ಇಂಡಿಯಾ ರಕ್ಷಣೆಯ ಕಾನೂನಿನ ೮೧ (೪)ರ ಅನ್ವಯ, ಅವರಿಬ್ಬರಲ್ಲಿ ಪ್ರತಿಯೊಬ್ಬರಿಗೂ ರೂ. ೫೦೦ರ ಜುಲ್ಮಾನೆ ತಪ್ಪಿದರೆ ೩ ತಿಂಗಳಿನ ಕಠಿನ ಸಜೆ ಎಂದು ವಿಧಿಸಿದರು.

ಅದೇ ತಾರೀಕಿನಂದು, ಅದೇ ನ್ಯಾಯಾಧೀಶರು, ಅದೇ ಕೇಂಪಿನಲ್ಲಿ ಅದೇ ಆರೋಪದ ಇನ್ನೊಂದು ಮೊಕದ್ದಮೆಯಲ್ಲಿ, ಅದೇ ಪಾರೂರು ಗ್ರಾಮದಲ್ಲಿನ ಶ್ರೀ. ನರಸಿಂಹ ಭಂಡಾರಿ ಮತ್ತು ಶ್ರೀ. ರಾಮಚಂದ್ರ ಭಂಡಾರಿ. ಇವರಿಬ್ಬರಿಗೆ ತಲಾ ೧೦೦ ರೂಪಾಯಿಗಳ ಜುಲ್ಮಾನೆ ತಪ್ಪಿದರೆ ಮೂರು ತಿಂಗಳ ಸಜೆ ಎಂದು ವಿಧಿಸಿರುವರು.

ಆಹಾರ ಪದಾರ್ಥ ಮತ್ತು ಚಿಲ್ಲರೆ ನಿಯಂತ್ರಣ ವಾರ

ಮಂಗಳೂರು ಕಮ್ಯುನಿಸ್ಟ ಪಾರ್ಟಿಯವರು ಜನವರಿ ೧೦ರಿಂದ ೧೮ರ ತನಕ ಮಂಗಳೂರಿನಲ್ಲಿ ಆಹಾರ ಪದಾರ್ಥ ಮತ್ತು ಚಿಲ್ಲರೆ ನಿಯಂತ್ರಣ ವಾರವನ್ನು ಆಚರಿಸಲು ನಿಶ್ಚೈಸಿರುವರು. ಈ ಕಾರ್ಯದಲ್ಲಿ ಸರ್ವ ಪಟ್ಟಣಿಗರೂ ಸಹಕರಿಸಬೇಕು. ಇದರ ಕುರಿತಾದ ಹೆಚ್ಚಿನ ಮಾಹಿತಿಯನ್ನು ವೆಂಕಟರಮಣದ ಬಳಿ ಇರುವ, ಮಂಗಳೂರು ಕಮ್ಯುನಿಸ್ಟ ಪಾರ್ಟಿ ಆಫೀಸಿನಿಂದ ಪಡೆಯಬಹುದೆಂದು ಮಂ. ಕ. ಪಾರ್ಟಿಯವರು ತಿಳಿಸುತ್ತಾರೆ.

ಪ್ರಾಶಿಕ್ಯೂಶನ್

ಅಸಿ॥ ಕಮರ್ಶಿಯಲ್ ಆಫೀಸರರಾದ ಶ್ರೀ ಎಚ್. ನಾಗಪ್ಪನವರು ಮಂಗಳೂರು ಆಪಲಕಿ ಕೇರಿಯಲ್ಲಿ ಲೈಸನ್ಸ್ ಪಡೆಯದೆ ಭತ್ತವನ್ನು ಮಾರಾಟಕ್ಕಾಗಿ ಸಂಗ್ರಹಿಸಿಟ್ಟಿದ್ದ ಕೊರಗಪ್ಪ ಮೂಲ್ಯರಲ್ಲಿದ್ದ ೧೨೦ ಮುಡಿ ಭತ್ತವನ್ನೂ, ಸುಬ್ಬ ಮೂಲ್ಯರಲ್ಲಿದ್ದ ೨೦೦ ಮುಡಿ ಭತ್ತವನ್ನೂ, ಕಂಡು ಹಿಡಿದು ವಶಮಾಡಿಕೊಂಡು, ಅವರಿಬ್ಬರ ಮೇಲೂ 'ಪ್ರಾಶಿಕ್ಯೂಶನ್' ಹೂಡಿದ್ದಾರೆ.

ಮಂಗಳೂರಲ್ಲಿ ಬ್ಲೇಕ್ ಔಟ್

ಇದೇ ತಾ. ೨ರಲ್ಲಿ ರಾತ್ರಿ ಸಂಪೂರ್ಣ 'ಬ್ಲಾಕ್ ಔಟ್'ನ ಪರೀಕ್ಷಾ ಪ್ರಯೋಗವು ನಡೆಯಿತು.

ಮದ್ರಾಸ್ ಪ್ರಾಂತಿಕ ಮುನ್ಸಿಪಲ್ ಉದ್ಯೋಗಿಗಳ ಫೆಡರೇಶನಿನ ಹದಿನಾಲ್ಕನೆಯ ಅಧಿವೇಶನ

ಕಳೆದ ೩೧ನೇ ತಾರೀಕು ಸಂಜೆ ಸ್ಥಳೀಯ ಮುನ್ಸಿಪಲ್ ಸೆಂಟ್ರಲ್ ವಾರ್ಡ್ ಬಾಲಕರ ಶಾಲಾ ಕಟ್ಟಡದ ವಠಾರದಲ್ಲಿ, ಆರಂಭವಾಯಿತು. ಪ್ರಾರ್ಥನೆಯಾಗಿ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಟಿ. ಹರಿಶ್ಚಂದ್ರರಾಯರು ಸ್ವಾಗತ ಭಾಷಣ ಮಾಡಿ, ಶ್ರೀ. ಬಿ. ವೆಂಕಟರಾವ್ ಬಾಳಿಗರನ್ನು ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುವಂತೆ ಅವರನ್ನು ಕೇಳಿಕೊಂಡರು.

ಅನಂತರ ಶ್ರೀ. ಬಿ. ವೆಂಕಟರಾಯ ಬಾಳಿಗರು ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ಭಾಷಣದಲ್ಲಿ ಪುರಜನರಿಗೆ ಸಂಬಂಧಿಸಿದ ನಾಗರಿಕರ ಆಡಳಿತವೆಂದರೆ "ಜನರಿಂದ ಜನರಿಗಾಗಿರುವ ಸರಕಾರ"ವೇ ಎಂದು ಹೇಳಿ, ಸ್ಥಳೀಯ ಸಂಸ್ಥೆಯ ಆಡಳಿತದಲ್ಲಿ ಪಕ್ಷ ಪದ್ಧತಿ ಅಗತ್ಯವಲ್ಲ, ಜನಪ್ರತಿನಿಧಿಗಳು ಜನತೆಯ ವಿಶ್ವಾಸವನ್ನು ಪಡೆಯುವಂಥವರಾಗಿರಬೇಕು, ಅವರು ಪ್ರಾಮಾಣಿಕರಾಗಿರಬೇಕು ಎಂದು ತಿಳಿಸಿ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿರುವ "ಅಧಿಕಾರವು ಮಿತವಾದವು" ಎಂಬ ವಿಚಾರ ಮಾತನಾಡಿದರು. ಮುನಿಸಿಪಲ್ ಉದ್ಯೋಗಿಗಳ ಕುರಿತು 'ನಿಮ್ಮ ಸೇವೆಗೆ ಪ್ರತಿಫಲವಾಗಿ ಪೆನ್‌ಶನ್ ದೊರೆಯುವಂತೆ ಮಾಡಿಕೊಳ್ಳಿ' ಎನ್ನುತ್ತ 'ಪ್ರಾವಿಡೆಂಟ್ ಫಂಡಿನ' ವಿಚಾರದ ಸಾಧಕ ಬಾಧಕಗಳನ್ನು ಚರ್ಚಿಸಿದರು. ಅಲ್ಲದೆ ಮುನ್ಸಿಪಲ್ ಉದ್ಯೋಗಿಗಳಿಗೆ, ಸುವ್ಯವಸ್ಥಿತವಾದ ಒಂದು ಮುನಿಸಿಪಾಲಿಟಿಯಲ್ಲಿ, ಸಾಧಾರಣವಾದ ಬಾಡಿಗೆಯ ದರದಲ್ಲಿ ನಿವಾಸಗೃಹಗಳನ್ನು ಒದಗಿಸಿ ಕೊಡಬೇಕಾದುದು ಅಗತ್ಯವೆಂದರು.

ಬಳಿಕ ಅಂದಿನ ಅಧ್ಯಕ್ಷರಾದ ಡಾ. ಪಿ. ಕೆ. ಪಿ. ಶರ್ಮರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಮುನಿಸಿಪಲ್ ಸರ್ವಿಸ್ಸನ್ನು ಪ್ರಾಂತಿಕವನ್ನಾಗಿ ಮಾಡುವ ಆವಶ್ಯಕತೆ, ಸರಕಾರೀ ನೌಕರರ ಸಂಬಳದ ಸ್ಕೇಲನ್ನೇ, ಮುನಿಸಿಪಲ್ ಉದ್ಯೋಗಿಗಳಿಗೂ ಅನ್ವಯಿಸುವ ಆವಶ್ಯಕತೆ, ಮುನಿಸಿಪಲ್ ಸರ್ವಿಸಿನಲ್ಲಿರುವ ಅಧಿಕಾರಿಗಳನ್ನೇ ಕಮಿಶನರರ ಸ್ಥಾನಕ್ಕೆ ಆರಿಸುವ ಆವಶ್ಯಕತೆ, ಮುನಿಸಿಪಲ್ ಮತ್ತು ಜಿಲ್ಲಾ ಬೋರ್ಡಿನ ಸರ್ವಿಸುಗಳಲ್ಲಿರುವ ಎಲ್. ಟಿ., ಎಮ್‌ಗಳಲ್ಲದವರ ಸೇವಾ-ಸಂಬಳಗಳ ವಿಚಾರ, ಮುನಿಸಿಪಲ್ ಕನಿಷ್ಠ ಉದ್ಯೋಗಿಗಳ ಹೀನ ಸ್ಥಿತಿ ಮುಂತಾದವನ್ನು ವಿವರಿಸಿ, ಮಾತನಾಡಿದರು.

ಈ ಸಮಾರಂಭಕ್ಕೆ ಯಶಸ್ಸನ್ನು ಕೋರಿ ಬಂದ ಹಲವು ಸಂದೇಶಗಳನ್ನು ಓದಿದ ಬಳಿಕ, ಸ್ಥಳೀಯ ಮುನ್ಸಿಪಲ್ ಸಂಘದ ಕಾರ್ಯದರ್ಶಿಗಳಾದ ಶ್ರೀ. ಎಂ. ರಂಗ ಇವರು ಧನ್ಯವಾದಗಳನ್ನು ಅರ್ಪಿಸಿದರು.

ಎರಡನೇ ದಿನ ಬೆಳಗ್ಗೆ ವಿಷಯ ನಿಯಾಮಕ ಸಮಿತಿ ಕಲ್ಲಿಕೋಟೆ ಮುನಿಸಿಪಾಲಿಟಿಯ ರೆವಿನ್ಯೂ ಆಫೀಸರರಾದ ಶ್ರೀ. ದಾಮೋದರನ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಚರ್ಚಿಸಿತಲ್ಲದೆ, ಸಂಜೆಯ ಮಹಾಸಭೆಯಲ್ಲಿ ಡಾ॥ ಪಿ. ಕೆ. ಪಿ. ಶರ್ಮರವರ ಅಧ್ಯಕ್ಷತೆಯಲ್ಲಿ ಮುನ್ಸಿಪಲ್ ಉದ್ಯೋಗಿಗಳಿಗೆಲ್ಲ ತುಟ್ಟಿಭತ್ತೆ ಕೊಡಬೇಕೆನ್ನುವ, ಮುನ್ಸಿಪಾಲಿಟಿಯ ಶಿಕ್ಷಣಾಂಗವೇ ಮೊದಲಾದ ನಾನಾ ಶಾಖೆಗಳ ಉದ್ಯೋಗಿಗಳ ಸ್ಥಾನಮಾನ, ಸಂಬಳ ಸಾರಿಗೆಗಳನ್ನು ತಕ್ಕಂತೆ ಹೆಚ್ಚಿಸಿ, ಅವರ ಅಭ್ಯುದಯವನ್ನು ಹಾರೈಸಬೇಕೆನ್ನುವ ಸುಮಾರು ೫೦ ಠರಾವುಗಳೂ ಮಂಜೂರಾದುವು. ಬರುವ ಸಲ ಇದರ ಅಧಿವೇಶನವು ತಾಡಪತ್ರಿಯಲ್ಲಾಗಬೇಕೆಂದು ಆಮಂತ್ರಿಸಿದ ಆ ಮುನ್ಸಿಪಾಲಿಟಿಯ ಮ್ಯಾನೇಜರರ ಆರಿಕೆಯು ಮನ್ನಿಸಲ್ಪಟ್ಟಿದೆ.

ಮಂಜೇಶ್ವರ

ಇದೇ ಬರುವ ತಾ. ೧೨-೧-೪೩ನೇ ದಿನ ಮಂಗಳವಾರ ಜರಗಲಿರುವ ಮಂಜೇಶ್ವರ ಕಿರು ಷಷ್ಠಿ ಮಹೋತ್ಸವದ ಸಮಾರಾಧನೆ, ಉತ್ಸವ ವಗೈರೆಗಳು, ಈಗಿನ ಯುದ್ಧದ ದೆಸೆಯ ನಿರ್ಬಂಧಗಳಿಂದ ಸಾಯಂಕಾಲ ೬ ಗಂಟೆಯ ಒಳಗೆ ಮುಗಿಸಬೇಕಾಗಿರುವುದರಿಂದ, ಸದ್ರಿ ದಿವಸ ನಡೆಯುವ ಮಹಾಪೂಜೆ ಸಮಾರಾಧನೆ ವಗೈರೆ ಮಧ್ಯಾಹ್ನ ಈಗಿನ ೩-೧೦ ಗಂಟೆ ಒಳಗೆ ಮತ್ತು ರಾತ್ರಿ ಉತ್ಸವ ವಗೈರೆ ಸಾಯಂಕಾಲ ೬ ಗಂಟೆಯ ಒಳಗೆ ಮುಕ್ತಾಯಗೊಳಿಸುವ ವ್ಯವಸ್ಥೆ ಮಾಡಿರುವುದಾಗಿ ಸದ್ರಿ ಮಹೋತ್ಸವಕ್ಕೆ ಬರಲಿರುವ ಗೌಡ ಸಾರಸ್ವತ ಭಕ್ತ ಜನ ವೃಂದಕ್ಕೆ ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಕಳ

ಶಿಕ್ಷೆ—ಜುಲ್ಮಾನೆ

ತಂತಿ ಸರಿಗೆ ಕಡಿದ ಅಪಾದನೆಯ ಮೇಲೆ ೨೬-೮-೪೨ರಂದು ಕುಂದಾಪುರದಲ್ಲಿ ಕೈದಾದ ಶ್ರೀಗಳಾದ ಎ. ರಾಮಕೃಷ್ಣ ನಾವಡ, ಕೆ. ರಾಘವೇಂದ್ರ ಶೆಣೈ, ಕೆ. ವಿಟ್ಠಲ ಪೈ, ಮತ್ತು ಕೆ. ಸಂಜೀವ ಕಾಮತರಿಗೆ ೯ ತಿಂಗಳ ಶಿಕ್ಷೆ ಮತ್ತು ಕೊನೆಯವರಿಗೆ ಹೆಚ್ಚಿಗೆಯಾಗಿ ೧೫ ಛಡಿ ಏಟು, ಶಿಕ್ಷೆ ವಿಧಿಸಿ ಇವರನ್ನು ಸರಕಾರದಧಿಕಾರಿಗಳು ರಾಜಿನಾಮೆ ಕೊಡಬೇಕೆಂದು ಅವರಿಗೆ ಕಾಗದ ಬರೆದ ಕಾರಣ ೨೩-೧೧-೪೨ರಂದು ಕೈದಾಗಿ ೯ ತಿಂಗಳ ಶಿಕ್ಷೆ ೧೦೦ ರೂ. ಜುಲ್ಮಾನೆ ವಿಧಿಸಲ್ಪಟ್ಟ ಶ್ರೀಗಳಾದ ದೇವರಾಯ ಶೆಣೈಯವರನ್ನೂ ಆಲಿಪುರ ಜೈಲಿಗೆ ಕೊಂಡುಹೋಗಿದ್ದಾರೆ. ತಂತಿ ಸರಿಗೆ ಕಡಿದ ಬಗ್ಗೆ ಮೇಲಿನವರೊಂದಿಗೆ ಕೈದಾದ ಕುಂದಾಪುರದ ಶ್ರೀ. ಕೆ. ನಾರಾಯಣ ಖಾರ್ವಿಯವರು ಬಿಡಲ್ಪಟ್ಟಿದ್ದಾರೆ.

ಪೆರಡಾಲ

ವಿವಾಹ

ಇಲ್ಲಿನ ಜನಪ್ರಿಯ ಸಾರ್ವಜನಿಕ ಕಾರ್ಯಕರ್ತರಾದ ಶ್ರೀ ಎಂ. ಜಿ. ಮಹಾಲಿಂಗ ಭಟ್ಟರ ವಿವಾಹವು, ಇಲ್ಲಿನ ಜಮೀನ್ದಾರರೂ, ಈ ಊರಿನ ಮುಂದಾಳುಗಳಲ್ಲೊಬ್ಬರೂ ಆದ ಶ್ರೀ ನವಕಾನ ಕೃಷ್ಣಭಟ್ಟರ ಮಗಳು ಸೌ। ಸುಬ್ಬಮ್ಮನೊಡನೆ ತಾ ೩ರಂದು ರಾತ್ರಿ ೮ ಗಂಟೆಗೆ ಶ್ರೀ. ನವಕಾನ ಕೃಷ್ಣಭಟ್ಟರ ಮನೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಉಡುಪಿ

ನಗರ ಸಭೆ

ಚೆಯರ್‌ಮ್ಯಾನ್ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಉಡುಪಿ ನಗರ ಸಭೆಯ ಮೀಟಿಂಗು ತಾ. ೨೮ರಲ್ಲಿ ಜರಗಿತು. ಸಂತೆ ಮಾರ್ಕೆಟುಗಳಲ್ಲಿ ವಸೂಲು ಮಾಡುವ ಫೀಸನ್ನು ತಲೆ ಹೊರೆ ಒಂದರ ನಾಲ್ಕು ಪೈ ಯಿದ್ದುದನ್ನು ಅರ್ಧಾಣೆಯಂತೆಯೂ ಗಾಡಿ ಹೊರೆ ಒಂದರ ಎರಡಾಣೆಯಿದ್ದುದನ್ನು ನಾಲ್ಕಾಣೆಯಂತೆಯೂ ಬರುವ ಎಪ್ರಿಲ್ ಆದಿಯಿಂದ ವಸೂಲು ಮಾಡಬೇಕಾಗಿ ನಿರ್ಣಯಿಸಲಾಯಿತು. ಮುನಿಸಿಪಲ್ ತೆಂಕಣ ಪುಮುಗಿಯರ ಹಾಗೂ ಬಡಗಣ ಹುಡುಗರ ಶಾಲೆಗೊಂದರಂತೆ ಸೆಕೆಂಡರಿ ಗ್ರೇಡ್ ಉಪಾಧ್ಯಾಯರ ಇಸಂ ಸೆಂಕ್ಷನ್ ಮಾಡಲಾಯಿತು. ಕೆಲವು ರಸ್ತೆ ಕಾಮಗಾರಿ ದುರಸ್ತಿ ಬಗ್ಗೆ ಹಣ ಮಂಜೂರಾಯಿತು.

ಪುತ್ತೂರು

ಕಮ್ಯೂನಿಸ್ಟರಿಗೆ ಶಿಕ್ಷೆ

ಅಕ್ಟೋಬರ ತಾ. ೧೬ರಂದು ಸಿಲ್ಲಿಕೋಡ್ ಎಂಬಲ್ಲಿ ಬಂಧಿಸಲ್ಪಟ್ಟಿದ್ದ ಕಮ್ಯೂನಿಸ್ಟ್ ಕೆಲಸಗಾರರಾದ ಶ್ರೀ. ಕುಂಞಕಣ್ಣನ್ ಅವರನ್ನು ಪುತ್ತೂರಿನ ಸ್ಪೆಶಲ್ ಮ್ಯಾಜಿಸ್ಟ್ರೇಟರು ತಾ. ೩ರಂದು ದೇಶ ರಕ್ಷಣಾ ಕಾನೂನಿನನ್ವಯ ಆರು ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು. ಇವರಿಗೆ ಸಿ ಕ್ಲಾಸು ಆಲಿಪುರಂ ಜೈಲು ವಾಸ.

ಕೊಲೆ

ಉಪ್ಪಿನಂಗಡಿಯಲ್ಲಿ ಕಳೆದ ತಾ. ೨೪ರಂದು ಬೆಳಗ್ಗಿನ ಸಮಯ ಕಾಂಚಿಲ ಪುತಪ್ಪ ಶೆಟ್ಟಿ ಎಂಬ ಓರ್ವರನ್ನು ವೈರತ್ವದ ನಿಮಿತ್ತ ತಲವಾರಿನಿಂದ ಹೊಟ್ಟೆಗೆ ಕಡಿದು, ಯಾರೋ ಓರ್ವನು ಕೊಲೆಗೈದಿರುತ್ತಾನಾಗಿ ತಿಳಿದುಬಂದಿರುತ್ತದೆ. ಮೃತರು ಆ ದಿನವೇ ಸ್ಥಳೀಯ ಆಸ್ಪತ್ರೆಗೆ ಸಾಗಿಸಲ್ಪಟ್ಟು ಪಂಚನಾಮೆಯು ಜರಗಿಸಲ್ಪಟ್ಟಿರುತ್ತದೆ.

ಪಂಜಾಬಿನ ಸಿಕಂದರ್

ಮೇಜರ್ ಮಾಲಿಕ್ ಸರ್ ಸಿಕಂದರ್ ಹಯಾತ್ ಖಾನರು ಡಿಸೆಂಬರ್ ೨೬ನೆಯ ನಡು ರಾತ್ರಿ ಲಾಹೋರಿನಲ್ಲಿ ಸ್ವಗೃಹದಲ್ಲಿ ಹೃದಯಸ್ತಂಭನದಿಂದ ಮೃತರಾದರು. ಸಾಯುವ ಮುನ್ನ ಅವರು ತಮ್ಮ ಗಂಡುಮಕ್ಕಳಿಬ್ಬರ ಮತ್ತು ಹೆಣ್ಣು ಮಗಳೊಬ್ಬಳ ಮದುವೆ ಸಮಾರಂಭದ ಲೆಕ್ಕಪತ್ರಗಳನ್ನು ಪರಿಶೀಲಿಸಿ ಮುಗಿದ್ದರು; ಆ ವಾರವೆಲ್ಲ ಸಿಕಂದರ್ ಮನೆಯಲ್ಲಿ ವೈಭವ. ಈ ಸಮಾರಂಭಾತ್ಮದಲ್ಲಿ ನಗೆನಗುತ್ತ ಸರ್ ಸಿಕಂದರರು ತೀರಿಕೊಂಡರು. ವಯಸ್ಸಿನ್ನೂ ೫೦; ತುಂಬಿದ ಮನೆ; ಐದು ಹೆಣ್ಣು ಐದು ಗಂಡು ಮಕ್ಕಳು. ಪಂಜಾಬಿನಂತಹ ಕಲಹ ಪೀಡಿತ ಪ್ರಾಂತ್ಯವು ಸಿಕಂದರರನ್ನು ಕಳೆದುಕೊಂಡು ಮತ್ತೆ ಕೋಲಾಹಲಕ್ಕೆ ಸಿಕ್ಕಿದೆ. ಪಂಜಾಬಲ್ಲ, ಸಮಸ್ತ ಭಾರತವೂ ಅವರ ನಿಧನಕ್ಕಾಗಿ ಮರುಕಗೊಂಡಿದೆ. ಸುಮಾರು ಎರಡು ಸಾವಿರ ಸಂತಾಪ ಸೂಚಕ ತಂತಿಗಳು ಹೋಗಿದ್ದವು.

ಕಾಂಗ್ರೆಸ್ ತರುಣ ನಾಯಕ ಶ್ರೀ ಯೂಸೆಫ್ ಮೆಹರಾಲಿಯವರು ತಮ್ಮ 'ಭಾರತದ ನಾಯಕರು' ಎಂಬ ಗ್ರಂಥದಲ್ಲಿ ಬರೆದಿರುವ ಸರ್ ಸಿಕಂದರರ ವ್ಯಕ್ತಿ ಚಿತ್ರವಿದನ್ನು 'ವಿಶ್ವಕರ್ಣಾಟಕ'ದಿಂದ ಎತ್ತಿ ಕೊಡಲಾಗಿದೆ.

ಪಂಜಾಬಿನ ಪ್ರಧಾನ ಪಟ್ಟ

ಈಗ್ಗೈದು ವರ್ಷದ ಕೆಳಗೆ ಪಂಜಾಬಿನಲ್ಲೊಂದು ವಿರುದ್ಧ ಪ್ರವಾಹಗಳ ಸೆಣಸಾಟ. ಸರ್ ಫಜ್ಲಿ ಹುಸೇನ್ ತಮ್ಮ ಯೂನಿಯನಿಸ್ಟ್ ಪಾರ್ಟಿಯನ್ನು ಶಾಸನ ಸಭಾ ಚುನಾವಣೆಗಳಿಗೆ ವಿರುದ್ಧವಾಗಿ ಉಪಯೋಗಿಸಲು ನಿರ್ಧಾರ ಮಾಡಿದ್ದರು. ಉಳಿದ ಚಿಲ್ಲರೆ ಪಾರ್ಟಿಗಳ ಎದೆ ನಡುಗಿಹೋಗಿತ್ತು. ಹಿಂದೂಮತ ಪಕ್ಷದವರಿಗೂ, ಫಜ್ಲಿ ಹುಸೇನರ ವಿರುದ್ಧ ಕೈ ಎತ್ತುವ ಧಂಡನ ಯಾರಿಗೂ ಇಲ್ಲ. ಪಂಜಾಬಿನ ರಾಜಕೀಯ ಪ್ರಪಂಚ ಅವರ ನಿರಂಕುಶ ರೀತಿ, ಶಕ್ತಿ ಸಾಮರ್ಥ್ಯ, ಕಟ್ಟುವ ಕಲೆಯ ಗಾರುಡಿಗ ತನಕ್ಕೆ ಮಣಿದಿತ್ತು ಪಂಜಾಬು. ಈ ಹೋರಾಟದ ಗೆಲುವಿನ ವಿಜಯಮುಕುಟ, ಪ್ರಧಾನಿಪಟ್ಟ. ಇದರಲ್ಲಿ ಕೈ ಹಾಕಲು ಪಂಜಾಬಿನ ಮಂಡಲಾಧಿಪತಿಗೂ ಹೆದರಿಕೆಯೆ.

ಎದುರು ನೋಡಿ ಯಾರು ಹಾಕಬೇಕು? ಸೌಮ್ಯ ಪಕ್ಷದವರು—ಮಾಡರೇಟ್ಸ್ ಅಧಿಕಾರಿಗಳು ಎಲ್ಲರ ಕಣ್ಣು ಸಿಕಂದರ್ ಹಯಾತ್ ಖಾನರ ಕಡೆ ತಿರುಗಿತು. ಆಗವರು ಇಂಡಿಯಾ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್. ಫಜ್ಲಿ ಹುಸೇನರಲ್ಲಿಲ್ಲದ ಗುಣವೆಲ್ಲ ಸಿಕಂದರ್ ಹಯಾತರಲ್ಲಿತ್ತು. ಮುಸ್ಲಿಂ ಕೋಮಿನವರ ಬೇಡಿಕೆ ಇವರ ಹೃದಯದಲ್ಲಷ್ಟು ಹೊಕ್ಕಿರಲಿಲ್ಲ. ಅಂತೇ ಫಜ್ಲಿ ಹುಸೇನರಿಗಿಂತ ಇವರು ಹಿಂದೂ ಸೀಖ್ ನಾಯಕರಿಗೆ ಹೆಚ್ಚು ಬೇಕಾದವರಾಗಿದ್ದರು. ಎಲ್ಲರನ್ನೂ ಮೀರಿ ಬೆಳೆಯುವ ಉಗ್ರ ಪ್ರತಿಭೆಯೂ ಇವರಿಗಿರಲಿಲ್ಲ. ಇದರಿಂದ ಪಂಜಾಬಿನ ರಾಜಕೀಯ ಇವರ ಪದಾಕ್ರಾಂತವಾಗುವ ಭೀತಿಯೂ ಇರಲಿಲ್ಲ. ಮೃದುವಾದ ರೀತಿ, ನೀತಿ, ಒಳ್ಳೆ ಮನಸ್ಸು; ಸಂಭಾಷಣೆಯಲ್ಲಿ ಸರಸ್ಸು. ಶ್ರೀಮಂತಿಕೆಯ ರೀತಿ, ಎಲ್ಲರನ್ನೂ ಮೆಚ್ಚಿಸಿತ್ತು. ಅಲ್ಲದೆ ಗೌರ್ನರು ಅಧಿಕಾರಿಗಳಿಗೂ ಬೇಕಾದವರು. ಸಿಕಂದರ್ ಹಯಾತ್ ಫಜ್ಲಿ ಹುಸೇನರ ಪಡಿಯಚ್ಚಲ್ಲ. ಇವರು ಪ್ರಧಾನಿಯಾದಲ್ಲಿ ಹಳೆಯ ಸಂಪ್ರದಾಯ ಬಿಚ್ಚಿ ಬೀಳಬೇಕಾದ್ದಿಲ್ಲ.

ಆ ಕಾಲಕ್ಕೆ ಸಿಕಂದರ್ ಹಯಾತರ ವ್ಯಕ್ತಿತ್ವ ಅಷ್ಟೇನೂ ದೊಡ್ಡದಾಗಿರಲಿಲ್ಲ. ಈ ಆಟದಲ್ಲಿ ನಿಪುಣರಾದ ಫಜ್ಲಿ ಹುಸೇನರನ್ನು ಎದುರಿಸುವುದು ಸುಲಭಸಾಧ್ಯವಲ್ಲವೆಂದೂ ಗೊತ್ತು. ಸುತ್ತೂ ನೋಡಿ ಸಿಕಂದರ್ ಹಯಾತ್ ಫಜ್ಲಿ ಹುಸೇನರ ಕೆಳಗೆ ಕೆಲಸ ಮಾಡಲು ಒಪ್ಪಿಕೊಂಡರು. ಈ ವೇಳೆಗಾಗಲೆ ಫಜ್ಲಿ ಹುಸೇನರ ಆರೋಗ್ಯ ಕೆಟ್ಟಿತ್ತು. ಕೆಲವೇ ದಿನಗಳಲ್ಲಿ ಮೃತರಾದರು. ಅವರ ಬಳಿಕ ಸಿಕಂದರ್ ಹಯಾತ್ ಯೂನಿಯನಿಸ್ಟ್ ಪಕ್ಷದ ಮುಂದಾಳುಗಳಾದರು; ಪಂಜಾಬಿನ ಪ್ರಧಾನಿಗಳೂ ಆದರು.

ಸರಕಾರದ ವಿಶ್ವಾಸ

ಸಿಕಂದರ್ ಹಯಾತ್ ಖಾನ್ ಸಂಕುಚಿತ ದೃಷ್ಟಿಯುಳ್ಳವರು. ಹೊಸ ಮಾತೆಂದರೆ ಹೆದರಿಕೆ. ಮಲಗಿರುವ ನಾಯಿ ಮಲಗಿಯೇ ಇರಬೇಕು ಎನ್ನುವ ಮನೋಭಾವ. ಹುಟ್ಟಿದ್ದು ದೊಡ್ಡ ಮನೆತನದಲ್ಲಿ; ವಿದ್ಯಾಭ್ಯಾಸವಾದದ್ದು ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ—ಮುಂದೆ ಲಂಡನಿನಲ್ಲಿ. ಸೈನ್ಯಕ್ಕೆ ಸೇರಿದುದೂ ಅಲ್ಲಿ. ಯುದ್ಧದಲ್ಲಿ ಬ್ರಿಟಿಷ್ ದಳಕ್ಕೆ ನಾಯಕನಾದ ಮೊದಲ ಭಾರತೀಯ ಸರ್ ಸಿಕಂದರ್ ಹಯಾತ್ ಖಾನ್. ಮೂರನೆ ಅಫ್ಘನ್ ಯುದ್ಧದಲ್ಲೂ ಕದನ ರಂಗದಲ್ಲಿದ್ದವರು. ಅಲ್ಲಿಂದ ಹಿಂದಿರುಗಿದ ಮೇಲೆ ಮತ್ತೆ ಸಾರ್ವಜನಿಕರ ಕ್ಷೇತ್ರಕ್ಕಿಳಿದ ಸ್ವಲ್ಪ ಕಾಲದಲ್ಲೇ ಶಾಸನ ಸಭೆಯ ಸದಸ್ಯರಾದರು, ಜಮೀನ್ದಾರರ ಪಕ್ಷದಿಂದ.

ಸಂಪತ್ತು, ಒಳ್ಳೆಯವನು ಎನ್ನುವ ಅಭಿಪ್ರಾಯ, ವಿದೇಶೀ ಸರಕಾರದ ಬೆಂಬಲ, ಇವು ಸಿಕಂದರ್ ಹಯಾತರ ಶಕ್ತಿ ಮೂಲ. ಇವರು ಯಾವಾಗಲೂ ಸರಕಾರದ ಪ್ರೀತಿಗೆ ಪಾತ್ರರಾದವರೇ. ಎಲ್ಲ ಪಕ್ಷಗಳವರೂ, ಸೈಮನ್ ಕಮೀಷನನ್ನು ಬಹಿಷ್ಕರಿಸಲು ತೀರ್ಮಾನಿಸಿದಾಗ, ಇವರು ಮಾತ್ರ, ಆ ಪ್ರಾಂತದ ಸೈಮನ್ ಸಮಿತಿಯ ಅಧ್ಯಕ್ಷರಾಗಲು ಒಪ್ಪಿದ್ದರು. ಇದಕ್ಕೂ ಮೊದಲು, ಎಲ್ಲ ಪ್ರಗತಿ ಪರಜನ ಪ್ರಿನ್ಸ್ ಆಫ್ ವೇಲ್ಸ್ (ಈಗಿನ ವಿಂಡ್ಸರಿನ ಡ್ಯೂಕ್) ಭಾರತಕ್ಕೆ ಬಂದಾಗ ಬಹಿಷ್ಕರಿಸಿದ್ದಾಗ, ಇವರು ಮಾತ್ರ ತಮ್ಮ ಮನೆಗೆ ತೋರಣ ಕಟ್ಟಿದ್ದರು. ಸರಕಾರದ ವಿಶ್ವಾಸವನ್ನು ಇವರು ಯಾವಾಗಲೂ ಕೆಡಿಸಿಕೊಂಡಿರಲಿಲ್ಲ. ಸರಕಾರವೂ ಇದಕ್ಕೆ ಪ್ರತ್ಯುಪಕಾರ ಮಾಡದೆ ಹೋಗಲಿಲ್ಲ. ಪಂಜಾಬಿನ ತಾತ್ಕಾಲಿಕ ಗೌರ್ನರೂ ಆಗಿದ್ದರು ಕೆಲದಿನ.

ಸಿಕಂದರ್ ಹಯಾತ್ ಖಾನ್ ನವೀನ ಪಾಳೇಗಾರಿಕೆಯ ಪ್ರತಿನಿಧಿ. ಸ್ವತಃ ಜಮೀನ್ದಾರ, ಬಂಡವಾಳಗಾರ. ಹೊಸತು ಬೇಡವೆನ್ನುವ ವತಾಥ್ಯ ಇಲ್ಲವಾದರೂ ಹಳೆಯುವದ ಕಡೆಯೇ ಜೋಲಿ ಹೆಚ್ಚು. ಜಾರು ಕಾಲದ ರಾಜಕಾರಣಿ ಇವರು. ಇವರ ಅಧಿಕಾರ ಕಾಲ ಪ್ರಜೆಗಳ ಹಕ್ಕು ಬಾಧ್ಯತೆಗಳ ದುರಂತ ಪ್ರಕರಣ.

ಲೀಗಿನೊಡನೆ ಸಂಬಂಧ

ಜಿನ್ನಾ ಸಾಹೇಬ್, ಮುಸ್ಲಿಂ ಲೀಗಿನ ಹೆಸರಿನಲ್ಲಿ ಚುನಾವಣೆಗೆ ನಿಲ್ಲಬೇಕು ಎಂದು ಬೇಡಿಕೊಂಡರು. ಸಿಕಂದರ್ ಹಯಾತ್ ಖಾನ್ ಬಲೆಗೆ ಬೀಳಲಿಲ್ಲ. ಇವರ ಪಕ್ಷ ಮುಸಲ್ಮಾನ ಪಕ್ಷವಲ್ಲ, ಹಿಂದೂ, ಸೀಖ್ ಮುಸಲ್ಮಾನ್ ಮೂರೂ ಕಲೆತ ಪಂಗಡ. ಅದರ ಅಧ್ಯಕ್ಷ ಇವರು. ಅಂತೇ ಜಿನ್ನಾ ಸಾಹೇಬರ ಬೇಡಿಕೆಗೆ ಮಾನ್ಯತೆ ದೊರೆಯಲಿಲ್ಲ. ಮುಸ್ಲಿಂ ಲೀಗ್‌ಗೆ ಒಂದೇ ಒಂದು ಸ್ಥಾನ. ನಗೆಚಾಟಿಕೆಯ ಮಾತಾಗಿ ಹೋಯಿತು ಪಂಜಾಬಿನಲ್ಲದು.

ಕಾಂಗ್ರೆಸ್ ಮಂತ್ರಿತ್ವ ಸ್ವೀಕಾರದ ನಿರ್ಧಾರ ಮಾಡಿದಾಗ, ಕಾಂಗ್ರೆಸ್ ಅಲ್ಲದ ಮಂತ್ರಿ ಪದಗಳ ಎದೆ ಅಲ್ಲಾಡಿತು. ಕಾಂಗ್ರೆಸ್ ಮಂತ್ರಿತ್ವಗಳಿದ್ದ ಕಡೆ ಜನ ಪ್ರಗತಿಶೀಲರಾಗಿರುವುದೂ, ಅಲ್ಲಿನ ಕೃತ ಜನರ ಸ್ಥಿತಿ ಉತ್ತಮಗೊಳ್ಳುತ್ತಿರುವುದೂ, ಇವರ ಎದೆಯನ್ನು ಒತ್ತ ತೊಡಗಿತು. ವ್ಯತ್ಯಾಸ ಅಗಾಧವಾಗಿತ್ತು. ಜನ, ರಾಜಕೀಯ ಬಂದಿಗಳ ಬಿಡುಗಡೆಗಾಗಿ, ಸರಕಾರಿ ಲಗಾಮು ಸಡಿಲವಾಗಲು, ಪಂಜಾಬಿನಲ್ಲೂ ಬಂಗಾಳದಂತೆ ಕೇಳತೊಡಗಿದರು. ಸಿಕಂದರು ಹಯಾತ್, ಹೆದರಿ ಓಡಿ ಹೋಗಿ ಜಿನ್ನಾ ಸಾಹೇಬರನ್ನಪ್ಪಿಕೊಂಡರು. ಹಿಂದಿನದನ್ನೆಲ್ಲಾ ಮರೆಯುವಂತೆ ಬೇಡಿಕೊಂಡರು. ಬಂಗಾಲಾ ಪ್ರಧಾನಿ ಫಜ್ಲುಲ್‌ಹಕ್ ಆ ಕಾಲಕ್ಕೆ ಹಾಕಿದಲಾಗ ಇನ್ನೂ ದೊಡ್ಡದು.

ಮುಸ್ಲಿಂ ಲೀಗಿನಲ್ಲಿ ಜಿನ್ನಾ ಸಾಹೇಬರನ್ನು ಬಿಟ್ಟರೆ ಪ್ರಧಾನ ಸ್ಥಾನ ಸಿಕಂದರ್ ಹಯಾತರಿಗೆ. ಆದರೆ, ಸಿಕಂದರು ಹಯಾತ್ ಖಾನ್ ಜಾತಿದ್ವೇಷದಲ್ಲಿ ಪ್ರಮಾಣ ಜ್ಞಾನವಿದೆ. ಅಂತೇ ಜಿನ್ನಾ ಸಾಹೇಬರಷ್ಟು ಕೂಗಾಡುವುದಿಲ್ಲ. ಮುಂದೆ ಇವರಿಬ್ಬರ ಸಂಬಂಧ ಹೇಗಾದ್ರಿ ಹೇಗೆ ತಿರುಗೀತೆಂದು ಬೇಕಾದಷ್ಟು ಊಹಾಪೋಹ ನಡೆಯುತ್ತಿದೆ. ಏನೆಂದರೂ ಜಿನ್ನಾ ಸಾಹೇಬ್ ತುಂಬಾ ಆಕರ್ಷಕ ವ್ಯಕ್ತಿ; ಇದರಲ್ಲಿ ಸಂಶಯವಿಲ್ಲ. ಆದರೂ ಅವರ ಈಗಾಗಿನ ನಡತೆ, ಅವರ ಸ್ನೇಹಿತರಿಗೂ ಅರ್ಥವಾಗಿಲ್ಲ; ಅವರ ಪ್ರೇಮಿಗಳೂ ಕಣ್ಣು ಕಣ್ಣು ಬಿಡುತ್ತಾರೆ. ಸ್ಪಷ್ಟವಾಗಿ ಜಿನ್ನಾ ಸಾಹೇಬ್ ಕಾಂಗ್ರೆಸ್ಸು, ಸರಕಾರ ಎರಡಕ್ಕೂ ವಿರೋಧಿ. ಸಿಕಂದರ್ ಹಯಾತ್ ಖಾನ್ ಹಾಗಲ್ಲ. ಸ್ಪಷ್ಟವಾಗಿಯೇ ಸರ್ಕಾರದ ಪಕ್ಷ ಸೇರಿದ್ದಾರೆ. ಸಾಧ್ಯವಾದರೆ ಕಾಂಗ್ರೆಸಿನೊಡನೆ ಒಪ್ಪಂದ ಮಾಡಿಕೊಳ್ಳಲೂ ಸಿದ್ಧ. ಈ ವಿರುದ್ಧ ಧ್ರುವಗಳ ಸ್ನೇಹ ಎಷ್ಟು ಕಾಲ ನಡೆದೀತು. ಈಗಿನ ಅಂತರರಾಷ್ಟ್ರ ಪರಿಸ್ಥಿತಿಯಿಂದ, ಸರಕಾರ ಕಾಂಗ್ರೆಸ್ಸಿನ ಬಹುಭಾಗದ ಬೇಡಿಕೆಗಳನ್ನು ಮನ್ನಿಸಲು ಸಿದ್ಧವಾಗಬಹುದು. ಈಗ ಕಾಣಿಸುವಂತೆ, ಜಿನ್ನಾ ಸಾಹೇಬರಿಗೆ ಇದರಿಂದ ಹೆಚ್ಚೇನೂ ಸಂತೋಷವಾಗದು; ಅಡ್ಡಗಾಲೂ ಹಾಕಿಯಾರು. ಆಗ ಸಿಕಂದರ್ ಹಯಾತ್ ಖಾನ್ ಬ್ರಿಟಿಷರ ಕಡೆಗೆ ಒಲಿಯುವುದೇ ಸಿದ್ಧಾಂತ. ಬೇಕೆಂದರೆ ಆಗಾಖಾನರ ಸಂಪತ್ತು ಸಾನುಭೂತಿಯೂ ದೊರೆತೀತು. ಬಂಗಾಳದ ಪ್ರಧಾನ ಫಜ್ಲುಲ್‌ಹಕ್ ಅವರೂ ಹಿಂದೆ ಬೀಳಲಿಕ್ಕಿಲ್ಲ. ಆಗ ಜಿನ್ನಾ ಸಾಹೇಬರಿಗೆ ದುರಂತದ ಅರಿವು ಆದೀತು. ಈಗಿನವ ರಂಗಕ್ಕೆ ತಾಳ ಹಾಕುತ್ತಿರುವ, ಬ್ರಿಟಿಷರ ಸೃಷ್ಟಿ, ಸರ್‌ಗಳೂ, ಖಾನ್ ಬಹದ್ದೂರ್‌ಗಳೆಲ್ಲಾ ಜಿನ್ನಾ ಸಾಹೇಬರನ್ನು ನಡುನೀರಿನಲ್ಲಿ ಕೈ ಬಿಡುವವರೇ. ಬ್ರಿಟನ್ ಕೈಸನ್ನೆ ಮಾಡಿದ ಕೂಡಲೇ, ಜಿನ್ನಾ ಸಾಹೇಬ ಆಗಲೂ ಪೂರ್ತಿಯಾಗಿ ರಾಜಕೀಯ ರಂಗದಿಂದ ಮಾಸಿಹೋಗಲಿಕ್ಕಿಲ್ಲ. ನಾಮಮಾತ್ರವಾಗಿರುತ್ತಾರೆ. ೧೯೧೬ರ ಲಕ್ನೋ ಒಪ್ಪಂದಕ್ಕಿಂತ ಹೆಚ್ಚು ಮಹತ್ವದ್ದಾಗುತ್ತದೆ ಈ 'ಗಾಂಧಿ—ಆಗಾ—ಸಿಕಂದರ್—ಹಕ್ ಒಪ್ಪಂದ! ಜಿನ್ನಾ ಸಾಹೇಬ್ ಈ ರಾಗವನ್ನೆ ಎಳೆಯಬೇಕು. ಇಲ್ಲವೆಂದರೆ ಪ್ರವಾಹಕ್ಕೆ ಮರಳ ಅಣೆಗಟ್ಟು ಕಟ್ಟಿ ಸೋತವನಂತೆ ದೂರ ನಿಲ್ಲಬೇಕು. ಮುಖ ಕೆಂಪಗೆ ಮಾಡಿಕೊಂಡು ಮುಸ್ಲಿಂ ಲೀಗಿನ ಒಡಕಿಗೆ ಕಾಂಗ್ರೆಸಿನಲ್ಲೂ ಪ್ರತಿಧ್ವನಿ ಬಂದೀತು; ಯಾರು ಯಾರು ಎಂತಹವರೆಂದು ಸ್ಪಷ್ಟವಾಗಿ ಗೊತ್ತಾದೀತು. ಭಾರತದ ರಾಜಕಾರಣದಲ್ಲಿ ಅದೊಂದು ಗರಡಿಯಾಟ. ಅಂತೂ ಹತ್ತಿರದ ಭವಿಷ್ಯದಲ್ಲಿ ಮಹತ್ವದ ಬದಲಾವಣೆಗಳಾಗುವ ಸೂಚನೆ ತುಂಬಾ ಇವೆ.

ಸಿನೆಮಾ ಸುದ್ದಿ

ನೆಹರು ಚಿತ್ರಕ್ಕೆ ನಿರ್ಬಂಧ

ಪಂಡಿತ ಜವಾಹರಲಾಲ ನೆಹರುಗಳು ಬರ್ಮ ಇಂಡೋ ಚೀಣಾ ಯಾತ್ರೆ ಮಾಡಿದ ಚಿತ್ರಗಳನ್ನೂ ಮೆಕ್ಕಾ ಹಾಜ್ ಯಾತ್ರೆ ಚಿತ್ರಗಳನ್ನೂ ಬಿಹಾರ್ ಸರಕಾರವು ಪ್ರದರ್ಶಿಸಕೂಡದೆಂದು ನಿರ್ಬಂಧಿಸಿದೆ.

ತೆರಿಗೆಯಿಲ್ಲ

'ಭಕ್ತ ಕಬೀರ್' ಚಿತ್ರವು ಹಿಂದೂ ಮುಸ್ಲಿಂ ಐಕ್ಯತೆಯನ್ನು ತೋರಿಸುವ ಚಿತ್ರವಾದ್ದರಿಂದ ಅದಕ್ಕೆ ತೆರಿಗೆ ಇಲ್ಲವೆಂದು ಬೊಂಬಯಿ ಸರಕಾರವು ತೆರಿಗೆ ಮಾಫಿಮಾಡಿದೆ.

ರಮಣೀಕ ಪ್ರೊಡಕ್ಷನಿನ

ರೇಖಾ ಚಿತ್ರ ತಯಾರಾಗುತ್ತಿದೆ. ಲೀಲಾ ಚಿಟ್ನಿಸ್ ಹರೀಶನೊಡನೆ ಇದೇ ಮೊದಲನೆ ಬಾರಿಯಾಗಿ ಈ ಚಿತ್ರದಲ್ಲಿ ನಟಿಸುವಳು. ಲೀಲಾ ಅಶೋಕರ ಚಿತ್ರವೊಂದೂ ಈ ಸಂಸ್ಥೆಯಲ್ಲಿ ತಯಾರಾಗಲಿದೆ.

"ಜೀವನ ನಾಟಕ"

ಕನ್ನಡ ಸಿನೆಮಾ 'ಜೀವನ ನಾಟಕ'ವು ಸದ್ಯ ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ. ಜಯಮ್ಮ ವೀರಣ್ಣ ಇವರು ಕನ್ನಡ ಸಿನೆಮಾ ಪ್ರೇಕ್ಷಕರಿಗೆ ಹಳೆ ಪರಿಚಿತರು. ಕೆಂಪರಾಜ್ ಅರಸು ಹೊಸ ನಟ. 'ಅಧ್ಯ' ಪ್ರಖ್ಯಾತಿಯ ಶಾಂತಾ ಹುಬ್ಳೀಕರ್ ಇದರಲ್ಲಿ ನಟಿಸುತ್ತಾಳೆಂಬುದು ಈ ಸಿನೆಮದ ವೈಶಿಷ್ಟ್ಯವಾಗಿದೆ.

ನ್ಯೂ ಥಿಯೇಟರ್ಸಿನ 'ಕಾಶಿನಾಥ'

ಎಂಬ ನವೀನ ಚಿತ್ರವು ತಯಾರಾಗುತ್ತಿದೆ. ಇದು ಬರುವ ಜನವರಿ ಅಂತ್ಯದೊಳಗೆ ಪ್ರದರ್ಶಿತವಾಗುವುದೆಂದು ಸುದ್ದಿ. ಇದರಲ್ಲಿ ಸುನಂದಾ ಎನ್ನುವ ಹೊಸ ತಾರೆ ಉದಯಿಸಿದ್ದಾಳೆ. ನಿತಿನ್ ಬೋಸರು ಇದರ ನಿರ್ದೇಶಕರು. ಅಸಿತಭರಣ, ಭಾರತಿ, ನವಾಬ್ ಮೊದಲಾದವರು ನಟ ನಟೀವರ್ಗ. ಪಂಕಜಮಲ್ಲಿಕರ ಸಂಗೀತ ನಿರ್ದೇಶನ. 'ಕಾಶಿನಾಥ್' ಚಿತ್ರವನ್ನು ಎರಡು ಭಾಷೆಗಳಲ್ಲಿ ತೆಗೆದಾದ ಮೇಲೆ ನಿತಿನ್ ಬೋಸರು ಲಕ್ಷ್ಮಿ ಪ್ರೊಡಕ್ಷನಿಗೆ ಸೇರುವರೆಂದು ತಿಳಿಯುತ್ತದೆ.

'ಮೇರಾ ಗಾಂವ್'

ಎಂಬುದು ಲಕ್ಷ್ಮಿ ಪ್ರೊಡಕ್ಷನಿನ ಕೃತಿ. ನಿತಿನ್ ಬೋಸರ ನಿರ್ದೇಶಕತ್ವದಿಂದ ತಯಾರಾಗಲಿದೆ. ಜಯರಾಜ್, ಛಾಯಾದೇವಿ, ಜಗದೀಶ ಶೇಟಿ, ಕೆ. ಸಿ. ಡೇ ಇವರೇ ಮೊದಲಾದ ಪ್ರಖ್ಯಾತ ನಟನಟೀವರ್ಗ ಅಭಿನಯಿಸುತ್ತಾರೆ.

'ಹಸೋ ಹಸೋ ಇ ದುನಿಯಾವಾಲೋ'

ಇದು ದ್ವಾರಕ ಪ್ರಸಾದರು ನಿರ್ದೇಶಿಸುವ ಸೌಭಾಗ್ಯ ಪಿಕ್ಚರ್ಸಿನ ಹಾಸ್ಯ ಶೃಂಗಾರಮಯ ಮನೋಹರ ಚಿತ್ರ. ಝೂಲಾ ಖ್ಯಾತಿಯ ಶಾಜಾದಿ ಮತ್ತು ಗೋಪೆ ಇದರಲ್ಲಿ ನಟಿಸುತ್ತಾರೆ.

ಬೊಂಬೇ ಟಾಕೀಸ್

ಸಮಾಚಾರ ಹೀಗಿದೆ: ಆ ಸಂಸ್ಥೆಯ ಅಧ್ಯಕ್ಷ ಸರ್ ಚಿಮನ್‌ಲಾಲ್ ಸೆಟಲ್‌ವಾಡರು, ಜನರಲ್ ಮೇಜರ್ ರಾಯ್‌ಬಹದ್ದೂರ್ ಚುನಿಲಾಲರೂ, ತಯಾರಕ ಶಶಿಧರ ಮುಖರ್ಜಿಯವರು, ನಿರ್ದೇಶಕ ಜ್ಞಾನ್ ಮುಖರ್ಜಿಯವರು, ನಟ ಅಶೋಕ ಕುಮಾರರು, ಕವಿ ಪ್ರದೀಪರು ಚಿತ್ರಕಾರ ಸಂತೋಷಿ ಮತ್ತು ಲೆಕ್ಕಪರೂ, ಶಬ್ದ ನಿಪುಣ ವಾಚಾ-ಪಿಲ್ಕೆ ಸಂಪಾದಕ ಪೈ ತಯಾರಿಕೆ ವ್ಯವಸ್ಥಾಪಕ ಪಿರೇರ್ ಇವರೆಲ್ಲಾ ಬೊಂಬೇ ಟಾಕೀಸನ್ನು ದೇವಿಕಾ ರಾಣಿಗೆ ಬಿಟ್ಟುಕೊಟ್ಟು ಹೊರಟಿರುವರಂತೆ! 'ಕಿಸ್ಮತ್' ಈ ಹಳೆ ಗುಂಪಿನ ಕೊನೆಯ ಚಿತ್ರವಾಗಲಿದೆ. ಇವರೆಲ್ಲರೂ ಇನ್ನೊಂದು ಸಂಸ್ಥೆ ಪ್ರಾರಂಭಿಸುವರೆಂದು ತಿಳಿದಿದೆ.

ಎರಡು ಶಾಕುಂತಳಗಳು

ಶಾಂತಾರಾಮರು ತಮ್ಮ ರಾಜಕಮಲ್ ಪ್ರೊಡಕ್ಷನಿನ ಪ್ರಥಮ ಕೃತಿಯಾಗಿ ಕಾಳಿದಾಸನ ಪ್ರಸಿದ್ಧ ಶಾಕುಂತಳವನ್ನು ತಯಾರಿಸುವ ಸುದ್ದಿ ನಾವು ಕೇಳಿದ್ದೇವೆ. ಇಷ್ಟರಲ್ಲಿಯೇ 'ಗುರುದೇವ ಪ್ರೊಡಕ್ಷನಿನವರು, ಬಲವಂತಸಿಂಗ್ (ಪನೋಲಿ ಶೀರ್ತಿಯ) ಶಕುಂತಳೆ (ಹೊಸ ತಾರೆ) ಅಲಕನಂದ್, ರಾಮಮೂರ್ತಿ ಇವರ ಅಭಿನಯದಿಂದ ಕೂಡಿದ ಶಾಕುಂತಳ ಚಿತ್ರವೊಂದನ್ನು ತಯಾರಿಸುತ್ತಾರೆಂದೂ ತಿಳಿದುಬರುತ್ತದೆ. ಈ ಎರಡು ಶಾಕುಂತಳಗಳಲ್ಲಿ ಯಾವುದು ಉತ್ತಮವೋ ನಿರೀಕ್ಷಿಸಬೇಕು.

ಮೂರು ಚಿತ್ರಗಳು

ಚಿತ್ರಾ ಪ್ರೊಡಕ್ಷನ್ ಎಂಬುದು ಲೀಲಾ ಚಿಟ್ನಿಸ್ ಸಂಸ್ಥೆ. ಪ್ರಥಮ ಚಿತ್ರ 'ಕಿಸೀಸೇ ನಾ ಕಹನಾ' ಎಂಬುದು. ಲೀಲಾ ಚಿಟ್ನಿಸ್ ಮತ್ತು ಪಹಾರೀ ಸನ್ಯಾಲ್ ಇದರಲ್ಲಿ ನಟಿಸುವರು. ಇವರ ಎರಡನೆಯ ಚಿತ್ರ 'ಪ್ರತಿಜ್ಞಾ' ಮೋತಿಲಾಲ್ ಸ್ವರ್ಣಲತಾ ಇದರಲ್ಲಿ ನಟಿಸುವರು. ಮೂರನೆಯ ಚಿತ್ರ 'ಅಮಾನತ್' ಹಸನ್‌ಬಾನು ಹರೀಶ್ ಇದರಲ್ಲಿ ಅಭಿನಯಿಸುವರು.

ಕೇಶ್ ಎಂಡ್ ಕೇರಿ

ಎಂಬುದು ನ್ಯೂಹನ್ಸ್‌ನವರ ಕಾಮೆಡಿ. ಇದು ಬರ್ಮೀಯ ಜೀವನವನ್ನು ಚಿತ್ರಿಸುವ ಸಿನೆಮಾ. ಬಾಬುರಾವ್ ಪೆಂಡಾರ್ಕರ್ ಇದರಲ್ಲಿ ಬರ್ಮೀ ನಾಯಕ ಪಾತ್ರ ವಹಿಸುತ್ತಾನೆ. ಬರ್ಮೀ ಜನರ ನಡೆ ನುಡಿ, ವೇಷ ಭೂಷಣಗಳನ್ನು ಅರಿತುಕೊಳ್ಳಲು ಅತನು ಬೊಂಬಯಿಗೆ ಹೋಗಿ ಅಲ್ಲಿ ಬರ್ಮೀಯರೊಂದಿಗೆ ವಾಸಿಸುತ್ತಿದ್ದನು. ಬರ್ಮೀ ಹುಡುಗಿಯೊಬ್ಬಳು ಪೆಂಡಾರ್ಕರನನ್ನು ಬರ್ಮೀ ವೇಷದಲ್ಲಿ ನೋಡಿ 'ಚಿಂತೆಯಿಲ್ಲ, ಈತ ಆಗಬಹುದು' ಎಂದಳಂತೆ!

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು.

ಪ್ರತಿಯೊಂದು ಭಕ್ತನೊಂದಿಗೆ ಶ್ರೀ ಪರಮಹಂಸರು ಬೇರೆ ಬೇರೆ ಭಾವದ ಸಂಬಂಧವನ್ನಿಡುತ್ತಿದ್ದರು

ಶ್ರೀ ಪರಮಹಂಸರು ನಿರ್ವಿಕಲ್ಪ ಸಮಾಧಿಯಲ್ಲಿರುವ ಸಮಯವನ್ನು ಬಿಟ್ಟು, ಇತರ ಸಮಯದಲ್ಲಿ 'ಭಾವಮುಖ'ದಲ್ಲಿ ಇರುತ್ತಿದ್ದರೆಂದು ಈ ಮೊದಲೇ ಹೇಳಿದ್ದೇವೆ. ಆದ್ದರಿಂದಲೇ ಅವರು ತಮ್ಮ ಬಳಿಯಲ್ಲಿ ಬಂದ ಪ್ರತಿಯೊಬ್ಬ ಭಕ್ತನೊಂದಿಗೆ ಒಂದೊಂದು ಭಾವದ ಸಂಬಂಧವನ್ನು ಸ್ಥಾಪಿಸಿ, ಆ ಸಂಬಂಧವನ್ನು ಕೊನೆಯ ತನಕ ಕದಡದೆ ಇಡುತ್ತಿದ್ದರು. ಶ್ರೀ ಜಗದಂಬೆಯ ಹ್ಲಾದಿನೀ ಮತ್ತು ಸಂಧಿನೀ ಶಕ್ತಿಯ ವಿಶೇಷ ವಿಕಾಸ ಸ್ವರೂಪರಾದ ಸ್ತ್ರೀ ಮೂರ್ತಿಗಳೊಡನೆ ಶ್ರೀ ರಾಮಕೃಷ್ಣ ದೇವರು ಆ ಜೀವನ ಮಾತೃ ಸಂಬಂಧವನ್ನಿಟ್ಟ ವಿಷಯವು ಈಗ ಸಾಧಾರಣವಾಗಿ ಪ್ರಸಿದ್ಧವಾಗಿಯೇ ಇದೆ. ಪರಂತು ಪುರುಷ ಭಕ್ತರಲ್ಲಿ ಪ್ರತಿಯೊಬ್ಬನೊಂದಿಗೆ ಅವರ ಬೇರೆ ಬೇರೆ ಸಂಬಂಧದ ವಿಷಯವಾಗಿ ಜನಸಾಮಾನ್ಯರು ಈಗಲೂ ತಿಳಿಯಲಿಲ್ಲ. ಆದ್ದರಿಂದ ಆ ವಿಷಯವಾಗಿ ಸ್ವಲ್ಪ ಇಲ್ಲಿ ಹೇಳಿದರೆ ಅಪ್ರಾಸಂಗಿಕವಾಗಲಿಕ್ಕಿಲ್ಲ. ಸಾಧಾರಣವಾಗಿ ಶ್ರೀ ಪರಮಹಂಸರು ತಮ್ಮ ಭಕ್ತರನ್ನು ಶಿವಾಂಶ ಸಂಭೂತರು ಮತ್ತು ವಿಷ್ಣು ಅಂಶೋದ್ಭೂತರೆಂದು ಎರಡು ವಿಭಾಗಗಳಾಗಿ ಮಾಡುತ್ತಿದ್ದರು. ಆ ಎರಡು ತರದ ಭಕ್ತರ ಪ್ರಕೃತಿ, ಆಚಾರ ವ್ಯವಹಾರ, ಭಜನಾನುರಾಗ ಇತ್ಯಾದಿ ಎಲ್ಲ ವಿಷಯಗಳಲ್ಲಿ ಪಾರ್ಥಕ್ಯ ಉಂಟೆಂದು ನಿರ್ದೇಶಿಸುತ್ತಿದ್ದರು, ಮತ್ತು ಅವುಗಳನ್ನೆಲ್ಲ ಸ್ವತಃ ತಿಳಿದುಕೊಳ್ಳುತ್ತಿದ್ದರು. ಪರಂತು ಆ ಪಾರ್ಥಕ್ಯವೇನೆಂಬುದನ್ನು ಸರಿಯಾಗಿ ಪಾಠಕರಿಗೆ ತಿಳಿಸಲು ನಮಗೆ ಅಸಾಧ್ಯವೆಂದೇ ಅರಿಯಬೇಕು.

ಎರಡು ತರದ ಭಕ್ತರು ಭಕ್ತರ ಪ್ರಕೃತಿಯನ್ನು ನೋಡಿಕೊಂಡು ಶ್ರೀ ಪರಮಹಂಸರು ಪ್ರತಿಯೊಬ್ಬ ಭಕ್ತನೊಂದಿಗೆ ಭಾವ ಸಂಬಂಧವನ್ನು ಬೆಳೆಸುತ್ತಿದ್ದರು:-

ಆದ್ದರಿಂದ ಶಿವಾನ ಮತ್ತು ವಿಷ್ಣುವಿನ ಪ್ರಕೃತಿಗಳು ಎರಡು ಆದರ್ಶ ಮುದ್ರೆಗಳೆಂದೂ, ಈ ಎರಡು ಬೇರೆ ಬೇರೆ ಮುದ್ರೆಗಳಲ್ಲಿ ಪ್ರತಿಯೊಬ್ಬ ಭಕ್ತನ ಮಾನಸಿಕ ಪ್ರಕೃತಿಯು ರಚನೆಯಾಗುತ್ತದೆಂದು ಪಾಠಕರು ಸಂಕ್ಷೇಪವಾಗಿ ಅಷ್ಟೇ ತಿಳಿದರೆ ಸಾಕು. ಈ ಭಕ್ತರೆಲ್ಲರೊಂದಿಗೆ ಶ್ರೀ ಪರಮಹಂಸರು ಶಾಂತ, ದಾಸ್ಯ, ಸಖ್ಯ ವಾತ್ಸಲ್ಯ ಮೊದಲಾದ ಬೇರೆ ಬೇರೆ ಭಾವಗಳ ಸಂಬಂಧವನ್ನು ಬೆಳೆಸಿದ್ದರು. ಅವರಿಗೆ ಬೇರೆ ಬೇರೆ ಭಕ್ತರೊಂದಿಗೆ ಬೇರೆ ಬೇರೆ ಭಾವದ ಸಂಬಂಧವಿತ್ತು. ಹೇಗೆಂದರೆ—ನರೇಂದ್ರನಾಥರ (ಸ್ವಾಮಿ ವಿವೇಕಾನಂದರ) ವಿಷಯವಾಗಿ ಹೀಗನ್ನುತ್ತಿದ್ದರು. 'ನರೇಂದ್ರನ ಮನೆಯು ನನ್ನ ಮಾವನ ಮನೆಯಂತೆ,' (ತಮ್ಮನ್ನು ತೋರಿಸಿ) 'ಇದರೊಳಗೆ ಇರುವುದು ಸ್ತ್ರೀ ಭಾವ, ಮತ್ತು (ನರೇಂದ್ರರಿಗೆ ತೋರಿಸಿ) ಅವನೊಳಗೆ ಇರುವುದು ಪುರುಷಭಾವ.' ಸ್ವಾಮಿ ಬ್ರಹ್ಮಾನಂದರನ್ನು ತಮ್ಮ ಪುತ್ರನೆಂದು ಭಾವಿಸುತ್ತಿದ್ದರು. ವಿಶಿಷ್ಟ ವಿಶಿಷ್ಟ ಸನ್ಯಾಸಿ ಮತ್ತು ಗ್ರಹಸ್ಥ ಪ್ರತಿಯೊಬ್ಬ ಭಕ್ತನೊಂದಿಗೆ ಶ್ರೀ ಪರಮಹಂಸರು ಒಂದೊಂದು ವಿಶಿಷ್ಟ ವಿಶಿಷ್ಟ ಭಾವಸಂಬಂಧವನ್ನಿಟ್ಟಿದ್ದರು ಮತ್ತು ಸಾಧಾರಣ, ಭಕ್ತರಲ್ಲಿ ಪ್ರತಿಯೊಬ್ಬರನ್ನು ನಾನಾ ಗುಣ ದೃಷ್ಟಿಯಿಂದ ನೋಡುತ್ತಿದ್ದರಿಂದ, ಅವರೊಂದಗೆ ಅವರು ಶಾಂತಭಾವದ ಸಂಬಂದವನ್ನವಲಂಬಿಸಿದರೆಂದು ಹೇಳಬೇಕೆಂತಿಲ್ಲ. ಪ್ರತಿಯೊಬ್ಬ ಭಕ್ತನ ಅಂತರ್ಯದ ಪ್ರಕೃತಿಯನ್ನು ನೋಡಿಯೇ ಶ್ರೀ ಪರಮಹಂಸರು ಅವರೊಂದಿಗೆ ಅಂತಹ ಭಾವ ಅಥವಾ ಸಂಬಂಧವನ್ನು ಸ್ಥಾಪಿಸುತ್ತಿದ್ದರು. ಶ್ರೀ ಪರಮಹಂಸರು ಹೀಗನ್ನುತ್ತಿದ್ದರು—'ಮನುಷ್ಯರ ಅಂತರ್ಯದಲ್ಲಿ ಏನಿದೆಯೆಂಬುದಾಗಿ ನನಗೆ ತಿಳಿಯುತ್ತಿತ್ತು, ಗಾಜಿನ 'ಆಲ್ಮಾರ'ದೊಳಗಿರುವ ವಸ್ತುಗಳನ್ನು ಹೇಗೆ ಹೊರಗಿನಿಂದ ನೋಡಬಹುದೋ ಅದರಂತೆಯೇ.' ಮನುಷ್ಯನು ತನ್ನ ಪ್ರಕೃತಿ ವಿರೋಧವಾಗಿ ಎಂದಿಗೂ ಆಚರಿಸಲಾರನು, ಆದ್ದರಿಂದ ಭಕ್ತರಲ್ಲಿ ಯಾರಿಗಾದರೂ ಶ್ರೀ ಪರಮಹಂಸರು ನಿರ್ಣಯಿಸಿದ ಭಾವದ ಅಥವಾ ಭಾವದ ವಿರೋಧವಾಗಿ ನಡೆಯುವುದಕ್ಕೂ ಆಚರಿಸುವುದಕ್ಕೂ ಎಂದಿಗೂ ಸಾಧ್ಯವಾಗುತ್ತಿದ್ದಿಲ್ಲ. ಯಾರಾದರೂ ಇತರರ ಆಚರಣೆಯನ್ನನುಸರಿಸಿ ತಂತಮ್ಮ ಭಾವಕ್ಕೆ ವಿರೋಧವಾಗಿ ಆಚರಿಸಿದರೆ, ಶ್ರೀ ಪರಮಹಂಸರು ಜಿಜ್ಞಾಸೆ ಪಡುತ್ತಿದ್ದರು, ಮತ್ತು ಅವರ ತಪ್ಪನ್ನು ಸುಧಾರಿಸುತ್ತಿದ್ದರು. ಉದಾಹರಣೆಗಾಗಿ—ಶ್ರೀ ಪರಮಹಂಸರು ಗಿರೀಶರನ್ನು (ಗಿರೀಶಚಂದ್ರ ಘೋಷ) ಭೈರವನೆಂದು ಭಾವಿಸುತ್ತಿದ್ದರು. ದಕ್ಷಿಣೇಶ್ವರ ಕಾಳೀ ದೇವಾಲಯದಲ್ಲಿ ಒಂದಾನೊಂದು ದಿನ ಭಾವ ಸಮಾಧಿಯಲ್ಲಿ ಶ್ರೀ ಪರಮಹಂಸರು ಅವರನ್ನು ಈ ರೂಪದಲ್ಲಿ ಕಂಡಿದ್ದರು. ಗಿರೀಶರ ಕಟುಮಾತನ್ನು ಅವರು ಹಾಸ್ಯಮುಖದಿಂದ ಸಹನಮಾಡುತ್ತಿದ್ದರು, ಏಕೆಂದರೆ ಅವರ ಅಂತಹ ಕಟೋಕ್ತಿಯ ಆವರಣದಲ್ಲಿ ಅಪೂರ್ವವಾದ ಮತ್ತು ಕೋಮಲವಾದ ಏಕಾಂತ ನಿರ್ಭರತೆಯ ಭಾವವು ಅವಿತುಕೊಂಡಿರುವುದನ್ನು ನೋಡುತ್ತಿದ್ದರು. ಗಿರೀಶರು ಹೀಗೆ ಮಾಡುವುದನ್ನು ನೋಡಿ ಇನ್ನೊಬ್ಬ ಭಕ್ತನು ಅಂತಹ ಕಟೋಕ್ತಿಯನ್ನು ಪ್ರಯೋಗಿಸಲು ಶ್ರೀ ಪರಮಹಂಸರು ಆತನ ಮೇಲೆ ವಿರಕ್ತರಾಗಿದ್ದರು ಮತ್ತು ಆತನ ತಪ್ಪನ್ನು ತೋರಿಸಿಕೊಟ್ಟಿದ್ದರು. ಈ ಮಾತೆಲ್ಲ ಈಗ ಸಾಕು—ನಮ್ಮ ವಕ್ತವ್ಯ ವಿಷಯವನ್ನೇ ಮುಂದುವರಿಸೋಣ.

ಕ್ರಮಶಃ

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members is limited)

Head Office: UDIPI

Estd 1906.

HALFTONE & LINE BLOCK MAKING UNDERTAKEN

Sharada Press, MANGALORE.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕ್ಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2. ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು.

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4. ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು.

5. 28 ರಾತ್ತಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD: 1931

HEAD OFFICE Mangalore. ***BRANCHES*** Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ
ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)
ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ನಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ : —

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

'Bhuvanendra Products Limtied

Katapadi, S. Kanara.

"BHUVANENDRA" Garbhapal

Tried and appreciated by eminent Doctors Proved to be the best remedy where even allopathic medicines failed A specific for threatened or habitual abortion andother uterine troubles Must be commense soon after conception andcontinued up to the time of delivery

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು —
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B B. S. ಸಿ ಪಿ. ಸಿ ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮಂರಾರ ಗಲ್ಲಿ ಹುಬ್ಬಳ್ಳಿ.
2. 86 ಫ್ಯಾಕ್ಟ್ರೀ ಸ್ಟ್ರೋಡ್, ಟ್ರಿಪ್ಲಿಕೇನ್, ಮದರಾಸು

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 15—1—1943 [ಸಂಚಿಕೆ 3]

ಪ್ರೊ। ಬನ್ಸಾಲಿಯವರು ಉಪವಾಸ ನಿಲ್ಲಿಸಿದರು?

ಮಧ್ಯಪ್ರಾಂತ ಸರಕಾರವು ಒಪ್ಪಂದಕ್ಕೆ ಬಂತು

ಗೋಯಂಕಾರಿಗೆ ಬನ್ಸಾಲಿಯವರ ಸಂದೇಶ

— ನೆಹರು ಮತ್ತು ವಿಜ್ಞಾನ ಸಮ್ಮೇಳನ —

ಬನ್ಸಾಲಿಯವರೊಡನೆ ಗೋಯಂಕಾರ ಭೇಟಿ

'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಸಂಪಾದಕರಾದ ಶ್ರೀ ರಮಾನಾಥ ಗೋಯಂಕಾರರು ಚೀಮೂರು ದುರಂತದ ಬಗ್ಗೆ ಉಪವಾಸ ಕೈಕೊಂಡಿರುವ ಪ್ರೊ। ಬನ್ಸಾಲಿಯವರನ್ನು ದಶಂಬರ ೨೯ರಂದು ಭೇಟಿಯಾದಾಗ, ಅವರಿತ್ತ ಸಂದೇಶವು ಜನವರಿ ೨ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ ಆ ವಿವರದ ಸಾರಾಂಶ ಹೀಗಿದೆ 'ಓರ್ವ ಮಾನಿನಿಯ ಮಾನವೆಂದರೆ ಒಂದು ದೇಶದ ಹಾಗೂ ಜನಾಂಗದ ಮಾನ ಎಂಥಾ ಕಷ್ಟಗಳು ಬಂದರೂ ಆ ಮಾನವನ್ನು ರಕ್ಷಿಸಲು ಮರೆಯಬಾರದು' ಇದು ಕೊನೆಗೆ ಬನ್ಸಾಲಿಯವರು ಕೊಟ್ಟ ಸಂದೇಶ ಗೋಯಂಕಾರವರು ಉಪವಾಸ ಬಿಟ್ಟುಬಿಡುವಂತೆ ಬನ್ಸಾಲಿಯವರೊಡನೆ ಬೇಡಿಕೊಂಡರು ಅದಕ್ಕೆ ಬನ್ಸಾಲಿಯವರು ಕೊಟ್ಟ ಉತ್ತರ ಹೀಗಿತ್ತು "ನನಗೇನೂ ತೊಂದರೆಯಿಲ್ಲ, ಅಥವಾ ಆಗಬಾರದ್ದು ಒಂದು ಪಕ್ಷ ಆದರೂ ಏನಾಗಬಹುದು? ಮರಣವಷ್ಟೆ? ಅದು ಆಗಬಾರದಲ್ಲ ನಾವು ಇಚ್ಛಿಸಬೇಕಾದದ್ದು ಮಾನಿನಿಯರ ಮಾನ ರಕ್ಷಣೆಯ ಮಹತ್ವದ ವಿಷಯದ ಮುಂದೆ ನನ್ನೀ ಜೀವವು ದೊಡ್ಡ ಸಮುದ್ರದ ಒಂದು ಹನಿಯಂತೆ, ಕೇವಲ ಒಂದು ಹನಿ ಮಾತ್ರ ದೇಶ ಸೇವೆಗಾಗಿ ಸಾಯುವುದಕ್ಕಿಂತ ಬದುಕುವುದು ಮೇಲಲ್ಲವೇ? ಗೋಯಂಕಾ ಕೇಳಿದರು ಬನ್ಸಾಲಿ ಅದಕ್ಕೆ ಹೀಗಂದರು 'ನನ್ನ ಬಾಳುವೆ ಈಗಾಗಲೇ ಅತೀ ದೀರ್ಘವಾಗಿದೆ ಮುಂದಿನ ಗಳಿಗೆಯಲ್ಲೇ ಮೃತ್ಯು ಬರಬಾರದೇತಕ್ಕೆ? ನಿನ್ನೆ ಕಾಂಗ್ರೆಸ್ ಭಕ್ತರಾಗಿದ್ದವರು ಇಂದು ಸರಕಾರದ ಗುಲಾಮರಾಗಿದ್ದಾರೆ ಆದ್ದರಿಂದ ನಾನು ನನ್ನ ಕರ್ತವ್ಯದಲ್ಲಿ ವಿಳಂಬ ತೋರುವುದು ಸರಿಯಲ್ಲ ಈ ದಿನದ ಕೆಲಸವನ್ನು ಈ ದಿನವೇ ಮಾಡಿ ತೀರಬೇಕು ನಾಳೆ ಉತ್ತಮ ಕೆಲಸ ಮಾಡಬಹುದೆಂಬ ವಿಶ್ವಾಸದಿಂದ ಈ ದಿನದ ಕೆಲಸವನ್ನು ಬದಿಗಿರಿಸುವುದು ಸರಿಯಲ್ಲ' ಶ್ರೀ ಆಣೆಯವರೊಡನೆ ನಡೆಸಿದ ಮಾತುಕತೆಗಳ ಕುರಿತು ಬನ್ಸಾಲಿಯವರು ಹೀಗಂದರು "ನಾನು ಮೊಣಕಾಲೂರಿ ಬೇಡಿದೆ ಆದರೆ ನನ್ನ ವಿನಂತಿಯನ್ನು ಅವರು ಕೇಳಲಿಲ್ಲ' ಬನ್ಸಾಲಿಯವರ ಉಪವಾಸ ನಿರ್ಧಾರವನ್ನು ಬದಲಾಯಿಸಲು ಸಾಧ್ಯವಾಗದೆ, ಶ್ರೀ ಗೋಯಂಕಾರವರು ಅವರೊಡನೆ ಒಂದು ಸಂದೇಶ ಕೇಳಿದರು "ಸಂದೇಶ ಕೊಡುವ ಯೋಗ್ಯತೆ ನನ್ನಂತಹ ಅಲ್ಪ ಜೀವಿಗೆ ಎಲ್ಲಿಂದ ಬರಬೇಕು?' ಬನ್ಸಾಲಿ ಹೇಳಿದರು ಕೊನೆಗೆ ಮೇಲಿನ ಸಂದೇಶ ದೊರಕಿತು

ನೆಹರು ಮತ್ತು ವಿಜ್ಞಾನ

ಭಾರತೀಯ ವಿಜ್ಞಾನ ಸಮ್ಮೇಳನಕ್ಕೆ ಏನೋ ಶನಿದೆಶೆ ಹಿಡಿದಂತೆ ತೋರುತ್ತದೆ ಐದು ವರ್ಷಗಳ ಹಿಂದೆ ಈ ಸಮ್ಮೇಳನವು ತನ್ನ ರಜತೋತ್ಸವವನ್ನು ಬ್ರಿಟಿಷ್ ವಿಜ್ಞಾನಿ ಲಾರ್ಡ್ ರುತರ್ ಫೋರ್ಡರ ಅಧ್ಯಕ್ಷತೆಯಲ್ಲಿ ಆಚರಿಸಬೇಕೆಂದು ನಿಶ್ಚಯಿಸಿತು. ಆದರೆ ಸಮ್ಮೇಳನ ಜರಗುವ ಮೊದಲು ಅಧ್ಯಕ್ಷರು ತೀರಿಹೋದರು. ಹಾಗಾಗಿ ಅಧ್ಯಕ್ಷ ಭಾಷಣವನ್ನು ಸಮ್ಮೇಳನದಲ್ಲಿ ಓದಬೇಕಾಯಿತು ಈ ಸಲ 30ನೇ ಅಧಿವೇಶನಕ್ಕೆ ಪಂಡಿತ ನೆಹರುಗಳನ್ನು ಅಧ್ಯಕ್ಷರಾಗಿ ಆರಿಸಿದರು ಅಲ್ಲಿಯೂ ವಿಘ್ನ ಬಂತು ಪಂಡಿತರು ಸೆರೆಮನೆಯಲ್ಲಿ, ಎಲ್ಲಿಯೋ ಯಾರಿಗೂ ಗೊತ್ತಿಲ್ಲ—ಇದ್ದರಾಗಿ, ಅವರ ಭಾಷಣವನ್ನಾದರೂ ಓದಲು ಸಮ್ಮತಿಯಿಲ್ಲ ನಿಜವಾಗಿಯೂ ಯಮ ಧರ್ಮರಾಯನಾದರೂ ಡಿಫೆನ್ಸ್ ಕಾನೂನಿಗಿಂತ ದಯಾಶಾಲಿಯಲ್ಲವೆ?

ವಿಜ್ಞಾನ ವಿಷಯದಲ್ಲಿ ನೆಹರುಗಳ ಭಾಷಣವನ್ನೋದಲು ಸರಕಾರವು ಬಿಡದಿರುವುದರಿಂದ ಲೋಕಕ್ಕೇ ದೊಡ್ಡ ನಷ್ಟವಾಗಿದೆ 'ಮಗಳಿಗೆ ತಂದೆಯ ಪತ್ರ'ಗಳಲ್ಲಿ ನೆಹರು ವಿಜ್ಞಾನ ವಿಚಾರಗಳನ್ನು ಎಷ್ಟು ಸಮಂಜಸವಾಗಿ, ವಿಮರ್ಶಾತ್ಮಕವಾಗಿ ವಿಚಾರಿಸಿದರೆಂಬುದನ್ನು ತಿಳಿದವರು ನೆಹರುಗಳ ವೈಜ್ಞಾನಿಕ ಬುದ್ಧಿಶಕ್ತಿಗೆ ಬೆರಗಾಗದಿರರು 1938ರಲ್ಲಿ ಅಲಹಾಬಾದಿನ ನೇಶನಲ್ ಎಕಡಮಿ ಒಫ್ ಸೈನ್ಸಿನಲ್ಲಿ ನೆಹರು ಹೀಗೆಂದಿದ್ದರು 'ನನ್ನ ಅದೃಷ್ಟವು ನನ್ನನ್ನು ಸಂತೆಯ, ಹೊಲದ, ಕಾರ್ಖಾನೆಯ ಕಡೆಗೆ ಅಲ್ಲಿ ವಾಸಿಸುವ ಜನರ ದೀನ ಜೀವನದ ಕಡೆಗೆ ಸೆಳೆಯುತ್ತಿದ್ದರೂ, ಇಂಥಾ ಘೋರ ಪ್ರವಾಹದಲ್ಲಿ ನಾನು ತೇಲುತ್ತಿದ್ದರೂ, ವಿಜ್ಞಾನವು ನನಗೆ ಹೊಸತಲ್ಲ, ವಿಜ್ಞಾನ ಮಂಟಪದಲ್ಲಿ ನಾನೂ ಕೆಲಕಾಲ ಆರಾಧಕನಾಗಿದ್ದೆನು ಇನ್ನೊಂದು ಪರಿಷತ್ತಿನಲ್ಲಿ ಭಾಷಣ ಮಾಡುತ್ತಾ ನೆಹರುಗಳು 'ರಾಜಕೀಯ ರಂಗದಲ್ಲಿ ನಾನು ಸೆಳೆಯಲ್ಪಟ್ಟವನಾಗಿದ್ದರೂ, ನಾನು ವಿಶ್ರಾಂತಿ ಕಾಲದಲ್ಲಿ ನನ್ನ ಕೇಂಬ್ರಿಜ್‌ನ—ವಿಜ್ಞಾನಗೃಹದ ಕಡೆಗೆ ನನ್ನ ಮನಸ್ಸನ್ನೂ ಹರಿಯಗೊಡುತ್ತಿದ್ದೆ ವಾತಾವರಣವು ನನ್ನನ್ನು ವಿಜ್ಞಾನದಿಂದ ದೂರವಾಗಿಡದರೂ ನನ್ನ ಹೃದಯವು ಆ ಕಡೆಗೇ ಸೆಳೆಯುತ್ತಿದೆ ದಿನ ಹೋದಂತೆ ವಿಜ್ಞಾನ ಕಡೆಗೇ ನನ್ನ ಮನಸ್ಸು ಹರಿಯುತ್ತದೆ ಆಧುನಿಕ ಜೀವನವು ವೈಜ್ಞಾನಿಕ ದೃಷ್ಟಿಯಿಲ್ಲದೆ ಸಾಗಲಾರದೆಂದು ನನಗೆ ತಿಳುವಳಿಕೆಯಾಗಿದೆ ರಾಜಕೀಯವು ನನ್ನನ್ನು ಆರ್ಥಿಕ ವಿಚಾರಕ್ಕೆಳೆಯಿತು ಆರ್ಥಿಕ ವಿಚಾರವು ವೈಜ್ಞಾನಿಕ ದೃಷ್ಟಿಯನ್ನು ತಂದಿತು ಕೊನೆಗೆ ವಿಜ್ಞಾನದೃಷ್ಟಿಯಿಲ್ಲದೆ ಜೀವನ ಸಾಗಲಾರದೆಂದು ತಿಳಿವಾಯಿತು ನಮ್ಮ ದೇಶದ ದಾರಿದ್ರ್ಯ, ಅಂಧಶ್ರದ್ಧೆ, ಅನಾರೋಗ್ಯ ಇವುಗಳೆಲ್ಲದರ ನಿವಾರಣೆಗೆ ವಿಜ್ಞಾನದೃಷ್ಟಿ ಅವಶ್ಯಬೇಕಾಗಿದೆ' ನೆಹರುಗಳು ವಿಜ್ಞಾನವನ್ನು ಪ್ರಾಮುಖ್ಯ ವಿಷಯವಾಗಿ ತೆಗೆದುಕೊಂಡು ತನ್ನ ಪ್ರೌಢ ವಿದ್ಯಾಭ್ಯಾಸವನ್ನು ಪಡೆದವರು ರಾಜಕೀಯದಲ್ಲಿ ಆಸಕ್ತಿ ಹುಟ್ಟುವ ಮೊದಲು ಅವರು ವಿಜ್ಞಾನ ವಿಷಯದಲ್ಲಿ ತಲ್ಲೀನರಾಗಿದ್ದರು ಇಂಥವರ ಭಾಷಣವನ್ನು ಕೇಳಲು ಅಥವಾ ಓದಲೂ ಕೂಡಾ ಭಾರತೀಯರಿಗೆ—ಏಕೆ ಜಗತ್ತಿಗೇ ಒದಗದಿರುವುದು ನಮ್ಮೆಲ್ಲರ ದೌರ್ಭಾಗ್ಯವೆನಬೇಕು

ಆಣೆ ಜಯತಿಲಕರ ಭೇಟಿ

ಸಾಗರೋತ್ತರ ಪ್ರದೇಶಗಳ ಭಾರತ ಸಚಿವ ರಾಯ ಶ್ರೀ ಎಂ ಎಸ್ ಆಣೆಯವರು, ಸಿಲೋನ್ ಸರಕಾರದ ಪ್ರತಿನಿಧಿ ಬ್ಯಾರೆನ್ ಜಯತಿಲಕರನ್ನು ಭೇಟಿಯಾಗಿ ವಿಚಾರವಿನಿಮಯ ಮಾಡಿದರು ಸಿಲೋನ್ ಸರಕಾರವು ತಮ್ಮಲ್ಲಿಯ ರಬ್ಬರ್ ತೋಟಗಳಿಗೆ ೩೦ ಸಾವಿರ ಕೂಲಿಗಾರರನ್ನು ಕೇಳಿದ್ದು ಆ ವಿಷಯವಾಗಿ ಉಭಯತರಲ್ಲಿ ಮಾತುಕತೆಗಳಾದುವು

> **ಪ್ರೊ। ಬನ್ಸಾಲಿಯವರು ಉಪವಾಸ ನಿಲ್ಲಿಸಿದರು**
>
> **ಸರಕಾರದ ಒಪ್ಪಂದ ಪತ್ರಿಕೆ**
>
> ನಾಗಪುರ ೧೩ ೧ ೪೩ ಪ್ರೊ। ಭನಸಾಲಿ ಹಾಗು ಮಧ್ಯಪ್ರಾಂತ ಸರಕಾರದವರಲ್ಲಿ ಒಪ್ಪಂದವಾಗಿ ಪ್ರೊ। ಭನಸಾಲಿಯವರು ತಮ್ಮ ಉಪವಾಸ ನಿಲ್ಲಿಸಲು ಒಪ್ಪಿಕೊಂಡಿರುವರೆಂದು ಮಧ್ಯಪ್ರಾಂತ ಸರಕಾರದ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಜಯರತ್ನಂ ಇವರು ಈ ಹೊತ್ತು ವಿಶೇಷ ಪತ್ರಿಕಾ ಪರಿಷತ್ತಿನಲ್ಲಿ ಜಾಹೀರು ಮಾಡಿದರು ಹಾಗೆಯೆ ಅವರು ಮುಂದೆ ಸಾಗಿ ಪ್ರೊ। ಭನಸಾಲಿಯವರ ಸಂಬಂಧದ ಸುದ್ದಿಗಳನ್ನು ಪ್ರಕಟಿಸಲು ಹಿಂದುಸ್ಥಾನ ಸಂರಕ್ಷಣ ಕಾಯಿದೆ ಅನ್ವಯ ಹಾಕಿದ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳಲಾಗಿದೆಯೆಂದೂ ತಿಳಿಸಿದರು ಈ ಒಪ್ಪಂದಕ್ಕನುಸಾರವಾಗಿ ಪ್ರೊ। ಭನಸಾಲಿಯವರು ಈ ಹೊತ್ತು ಮಧ್ಯಾಹ್ನದಲ್ಲಿ ಉಪವಾಸ ನಿಲ್ಲಿಸಿ ಪಾರಣೆ ಮಾಡಿದರು
>
> ಉಭಯತರಲ್ಲಿ ಆದ ಒಪ್ಪಂದಿಕೆಯು ಸರಕಾರಿ ಪ್ರಕಟನೆ ರೂಪದಲ್ಲಿ ಪ್ರಸಿದ್ಧಿಸಲ್ಪಟ್ಟಿದೆ — ಅ ಪ್ರೆ

ಅಫಗಾನರಿಗೂ ಪ್ರತ್ಯೇಕ ಆಡಳಿತ ಬೇಕು

ಎಂಬುದಾಗಿ ಅಫಗಾನ ಜಿರಗಾದ ಅಧ್ಯಕ್ಷ ಅರಬ್ ಅಬ್ದುಲ್ ಗಫರ್ ಎಂ ಎಲ್ ಎ ಇವರು ಪೇಶಾವರದಲ್ಲಿ ಒಂದು ಸಾರ್ವಜನಿಕ ಭಾಷಣ ಮಾಡುತ್ತಾ ಹೇಳಿದರು, ಪಠಾಣರು ಮಧ್ಯ ಏಶಿಯದ ಇತಿಹಾಸದಲ್ಲಿ ಪ್ರಸಿದ್ಧಿ ಪಡೆದವರೆಂದರು

ಭಾರತಕ್ಕೆ ಟರ್ಕಿ ಸಂಪಾದಕರ ಭೇಟಿ

ಭಾರತ ಸರಕಾರದ ಆಹ್ವಾನದಂತೆ ಕೆಲವುಂದಿ ಟರ್ಕಿಯ ಸಂಪಾದಕರು ಭಾರತಕ್ಕೆ ಹೊರಡುವರು ಇವರೊಂದಿಗೆ ಅನಟೋಲಿಯ ಏಜೆನ್ಸಿಯ ಪ್ರತಿನಿಧಿಯೊಬ್ಬರೂ ಬರಲಿರುವರು

ಫಿಲಿಪ್ಸರ ಆಗಮನ

ಅಮೆರಿಕದ ಅಧ್ಯಕ್ಷರ ಪ್ರತಿನಿಧಿ ಫಿಲಿಪ್ಸರು ಭಾರತಕ್ಕೆ ರಾಯಭಾರಿಯಾಗಿ ತಾ ೭ರಂದು ಕರಾಚಿಗೆ ಬಂದಿಳಿದರು ಇವರು ಭಾರತಕ್ಕೆ ಬರುವುದಿದೇ ಮೊದಲನೆಯ ಸಲ 'ಭಾರತದ ಸಮಸ್ಯಾ ಪರಿಹಾರದ ಬಗ್ಗೆ ಫಿಲಿಪ್ಸರು ಯಾವ ಯೋಜನೆಯನ್ನೂ ತಕ್ಕೊಂಡು ಹೋಗುವುದಿಲ್ಲ ಯಾವ ಪಕ್ಷವೂ ವಹಿಸದೆ ಪರಿಸ್ಥಿತಿ ತಿಳಿಕೊಳ್ಳುವರು' ಎಂದು ಇವತ್ತು ಬ್ರೌಸ್ ವೆಲ್ಲರು ಹೇಳಿದಾರೆ ಫಿಲಿಪ್ಸರ್ ಲಂಡನಿನಲ್ಲಿ ಹೇಳಿದಂತೆ ಇವರು ಭಾರತದ ಬಹು ಭಾಗ ಪ್ರವಾಸ ಮಾಡುವರು ಪ್ರಮುಖ ಭಾರತೀಯರನ್ನು ಕಾಣುವರೆಂದು ತಿಳಿದಿದೆ

ಭಾರತದ ಸ್ವಾತಂತ್ರ್ಯದ ಬಗ್ಗೆ ಲಂಡನಿನಲ್ಲಿ ಸಭೆ

ಯೊಂದು ಜರಗಿ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು, ಕಾಂಗ್ರೆಸಿನೊಡನೆ ಮಾತುಕತೆ ನಡೆಸಿ, ಭಾರತೀಯರಿಂದ ಕೂಡಿದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕು ಎಂಬ ನಿರ್ಣಯ ಆ ಸಭೆಯಲ್ಲಿ ಅಂಗೀಕೃತವಾಯಿತು ಭಾರತದ ನಿಜವಾದ ಪರಿಸ್ಥಿತಿ ತಿಳಿಕೊಳ್ಳಲು ತೊಂದರೆಯುಂಟಾಗಿರುವ ಕುರಿತು ಆ ದಿನದ ಭಾಷಣಕಾರರು ಖಂಡಿಸಿದರು. ಬ್ರಿಟಿಷ್ ಪತ್ರಿಕೆಗಳು ಭಾರತದ ಪರಿಸ್ಥಿತಿ ಬಗ್ಗೆ ಪ್ರಕಟಿಸುವ ಅಸತ್ಯಾಂಶಗಳನ್ನೂ ಖಂಡಿಸಲಾಯಿತು ಎಸಿ ತಿನ್ನಲ್ಲಿ ದೊಡ್ಡದೊಂದು ಪ್ರದರ್ಶನ ಜರಗಿ ಆರು ಭಾಷಣಗಳಾಗಲಿವೆ

ಸಿಂಧದ ಸತ್ಯಾಗ್ರಹಿಗಳ ಮೇಲೆ ಅತ್ಯಾಚಾರ

ಸಿಂಧ ಪ್ರಾಂತದಲ್ಲಿ ಈ ಭಯಾನಕ ಪರಿಸ್ಥಿತಿಯುಂಟಾಗಿದೆಯೆಂದು, ಹಾತೋರಿನ ಸಿಂಧ ಒಬ್ಸರ್ವರ್ ಪತ್ರಿಕೆಯು ಟೀಕೆಯಿಂದ ಗೊತ್ತಾಗಿದೆ ಆ ಪತ್ರಿಕೆ ಈ ರೀತಿ ಬರೆಯುತ್ತದೆ 'ಸಿಂಧದ ಕೆಲವು ಜಿಲ್ಲೆಗಳಲ್ಲಿ ಸತ್ಯಾಗ್ರಹದ ಆರೋಪದಲ್ಲಿ ೩೦೦ ಮಂದಿ ವಿದ್ಯಾರ್ಥಿಗಳಿಗೆ ಛಡೀ ಏಟುಗಳ ಶಿಕ್ಷೆ ವಿಧಿಸಲಾಗಿದೆ ಸತ್ಯಾಗ್ರಹಿ ಕೈದಿಗಳನ್ನು ಕೈಗೆ ಬೇಡಿ ಮತ್ತು ಸೊಂಟಕ್ಕೆ ಹಗ್ಗ ಹಾಕಿ ಮೆರೆಸುತ್ತಿದ್ದಾರೆ ಉಗಿ ಬಂಡಿಯ ಕಂಬಿಯ ಜೋಡ ತಗಡಗಳನ್ನು ಕೀಳಲು ಯತ್ನಿಸಿದ ಆರೋಪಕ್ಕಾಗಿ ಒಬ್ಬರಿಗೆ ಮರಣ ಶಾಸನ ವಿಧಿಸಲಾಗಿದೆ ಯುದ್ಧ ಕೈದಿಗಳಿಗೆ ಸಂಕೋಲೆ ಹಾಕಿದ್ದಕ್ಕಾಗಿ ಬ್ರಿಟಿಷರೂ ಜರ್ಮನರೂ ಕೋಲಾಹಲವೆಬ್ಬಿಸಿರುವರು ಅದೇ ಬ್ರಿಟಿಷ್ ರಾಜ್ಯದಲ್ಲಿ ಸತ್ಯಾಗ್ರಹಿಗಳನ್ನು ಕೈಗೆ ಕೋಳಹಾಕಿ, ಸೊಂಟಕ್ಕೆ ಹಗ್ಗ ಹಾಕಿ ದಣಿಸಿದ್ದು ಅನುಚಿತ'

ಹೆಬ್ಬೆಟ್ಟಿನ ಗುರುತು ಕೊಡದ್ದಕ್ಕೆ ಶಿಕ್ಷೆ

ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಂತೆ ಕಲ್ಕತ್ತದಲ್ಲಿ ಬಂಧಿಸಲ್ಪಟ್ಟ ಅರ್ಧೇಂದು ಭೂಷಣ ಗುಪ್ತ, ವಿಜಯಕಲಾ ಹಾಗೂ ಸುಭೀರ ಕುಮಾರ ಇವರು ಹೆಬ್ಬೆಟ್ಟಿನ ಗುರುತು ಕೊಡಲೊಪ್ಪದ್ದಕ್ಕೆ ಅವರ ಶಿಕ್ಷೆ ಹೆಚ್ಚಿಸಲಾಗಿದೆ

ಧೂಮಕೇತು ದರ್ಶನ

ಖಗೋಳ ಶಾಸ್ತ್ರಜ್ಞರ ಲೆಕ್ಕದಂತೆ ಈಗ ಹೊಸ ಧೂಮಕೇತುವೊಂದು ಕಂಡುಬಂದಿದೆ. ಅದಿನ್ನೂ ರಿಯ ಕಣ್ಣಿಗೆ ಕಾಣುವಷ್ಟು ದೊಡ್ಡದಾಗಿರದೆ ದೂರದರ್ಶಕ ಯಂತ್ರಕ್ಕೆ ಮಾತ್ರ ಗೋಚರವಾ ಗುವುದಾಗಿದೆ. ಸ್ವೀಡನಿನ ಇಂಟರ್‌ನೇಶನಲ್ ಸೆಂಟ್ರಲ್ ಎಂಬ್‌ನಲ್ಲಿ ೧೯೪೭ನೆಯ ದಶಂಬರ ೨೭ನೆಯ ತಾರೀಕಿನಂದು ಅದನ್ನು ಗುರುತು ಹಚ್ಚಿದರು. ಅದು ಮಿಥುನ ರಾಶಿಯು ಬಳಿ ಕಾ ಣುತ್ತದೆ. ಪ್ರಾಚೀನ ನಾಡೀ ಗ್ರಂಥಗಳಲ್ಲಿ, ಈ ಧೂಮಕೇತುವಿನ ವಿಷಯ ಬಹಳ ಹೇಳಿದೆ. ಧ್ರುವನಾಡಿ, ಕಾಕಭುಜಂದರ್‌ನಾಡಿ, ವಿನಾಯ ಕ ನಾಡಿಗಳು ಈ ಧೂಮಕೇತುವಿನ ದರ್ಶನ ಕಾಲದಲ್ಲಿ ಭಗವಂತನ ಅವತಾರವಾಗುವದೆಂದು ಹೇಳಿವೆ. ಧ್ರುವನಾಡಿಯು ಭಗವಾನನ ಅವತಾ ರಕ್ಕೆ ಮೊದಲು ಲೋಕದಲ್ಲಿ ಕ್ಷಾಮಡಾಮರಗಳಾ ಗುತ್ತವೆಯೆಂದು ಹೇಳುತ್ತದೆ. ಕಾಕಭುಜಂದರ್ ನಾಡಿಯಲ್ಲಿ, ವಿಕ್ರಮಶಕ ೨೦೦೫ರಲ್ಲಿ ಎಂದರೆ ೧೯೪೮-೪೯ ಕ್ರಿ. ಶ. ದಲ್ಲಿ ಕಲಿಯುಗ ಬದಲಾಗು ತ್ತದೆಂದೂ ಆಗ ಸೌರವ್ಯೂಹದಲ್ಲೂ ಭೂಮಿಯ ಲ್ಲೂ ಬ್ರಹ್ಮಾಂಡ ಬದಲಾವಣೆಯಾಗುತ್ತದೆಂದೂ ಹೇಳುತ್ತದೆ. ೧೯೪೭ನೆಯ ಆಗಸ್ಟ ೧ನೆಯ ತಾರೀಕಿನಂದು ಈ ಬದಲಾವಣೆಗಳಾಗುತ್ತವಂತೆ! ವಿನಾಯಕರ್ ನಾಡಿಯಲ್ಲಿ ಈ ಧೂಮಕೇತುವು ೧೯೪೮ನೆಯ ಜನವರಿ ೫ನೇ ತಾರೀಕಿಗೆ ಕಣ್ಣಿಗೆ ಕಾಣುವುದೆಂದೂ ೧೫ನೆಯ ತಾರೀಕಿನ ದಿನ ಅದರ ಬಾಲವು ಬೆಳೆವುದೆಂದೂ ಹೇಳಿದೆ. ಅನಂತರ ಅದು ಬೆಳೆಯುತ್ತಾ ಆಕಾಶತುಂಬಾ ಅದರ ಬಾಲ ಹರಡಿ, ಕನ್ಯಾರಾಶಿಯಲ್ಲಿ ತಲೆಯಾದರೆ ಮೀನ ರಾಶಿಯಲ್ಲಿ ಬಾಲವಿರುವುದೆಂದೂ ಹೇಳಲಾಗಿದೆ.

ದಿವಂಗತರಾದರು

ಸಂಸ್ಕೃತ ಮತ್ತು ಜ್ಯೋತಿಷಗಳಲ್ಲಿ ವಿದ್ವಾಂ ಸರೆನಿಸಿದ ಕಾರ್ಕಳ ಚಿತ್ಪಾವನ ಬ್ರಾಹ್ಮಣ ಸಮಾಜದ ಶ್ರೀ. ದುರ್ಗಾರಾಮ ಶಾಸ್ತ್ರಿಯವರು ತಮ್ಮ ೭೨ವರ್ಷದ ವೃದ್ಧಾಪ್ಯದಲ್ಲಿ ಅಮಾತಿಸಾರ ದ ಬೇನೆಯಿಂದ ತಮ್ಮ ದುರ್ಗದ ಮನೆಯಲ್ಲಿ ದಿ ವಂಗತರಾದರು. ಅವರ ಆತ್ಮಕ್ಕೆ ಚಿರಶಾಂತಿಯ ರಲಿ.

ಪೆರಡಾಲ ವಾರ್ಷಿಕಭಜನೆ

ತಾ. ೧೩-೧-೧೯೪೮ನೇ ಬುಧವಾರ ಸೂರ್ಯಾ ಸ್ತಮಾನದಿಂದ ಮರುದಿನ ಸೂರ್ಯೋದಯದ ವರೆಗೆ 'ಪ್ರೇಮಕೂಟ'ದವರ ವಾರ್ಷಿಕ ಭಜನಾ ಸಮಾರಂಭವು ಪೆಂಡಾಲ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು.

ಹಿಂದೀ ಕ್ಲಾಸುಗಳು

ಇದೇ ತಿಂಗಳ ತಾ. ೧೫ರಿಂದ ಸ್ಥಳೀಯ ಮಿ. ಲ್ ಗ್ರಿಸ್ ಸೆಕೆಂಡರಿ ಶಾಲೆಯಲ್ಲಿ ರಾತ್ರಿ ಗಂಟೆ ೭ರಿಂದ ೯ರ ವರೆಗೆ ಹಿಂದೀ ವರ್ಗಗಳು ನಡಿಸಲ್ಪ ಡುವವು. ಹಿಂದೀ ಕ್ಲಾಸಿಗೆ ಸೇರಲಿಚ್ಛಿಸುವವರು ಸದ್ರಿ ಶಾಲೆಯ ಮುಖ್ಯೋಪಾಧ್ಯಾಯರ ಹತ್ತಿರ ತಮ್ಮ ಹೆಸರುಗಳನ್ನು ಕೊಡಬಹುದು.

GREETINGS.

The Directors, Officers and staff of the CANARA BANK, LIMITED, join in sending you this message of appreciation for your goodwill and patronage during the last year. We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD: 1906.

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

ದಮ್ಮುಗುಣ ಪಡಲೇ ಬೇಕು ಎಂದು ಡಾಕ್ಟರರು ಅಸಾಧ್ಯ ಅನ್ನುವದಿಲ್ಲ

ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದು ಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದಕೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವ ಕಾಶವಾಗಿ ಶಕ್ತಿಯು ತುಂಬಿ ಬಂದು ಫುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ ಬೊಂಬಾಯಿ ಏಜಂಟ—ಮೆಸರ್ಸ ನನವಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಭಾರತಕ್ಕೆ ಪ್ರತ್ಯೇಕವಾಗಿ ತಯಾರಿಸಿದ್ದು

ವೆಸ್ಟ್ ಎಂಡ್ ವಾಚುಗಳು ಸರಿಯಾದ ಸಮಯ ಕೊಡುವ ವಿಷಯ ನಮಗೊಂದು ಹೆಮ್ಮೆಯಿದೆ. ಅರ್ಧ ಶತಮಾನಗಳಿಂದ ಪೋಲ್ಪಟ್ಟು ಅದರ ಅಪ್ರತಿಕೀರ್ತಿ ಇಂದಿಗೂ ಸ್ಥಿರವಾಗಿದೆ. ಹಣಕೊಟ್ಟು ಪಡಕೊಳ್ಳುವವರಿಗೆ ಒಳ್ಳೆಯದನ್ನೇ ವೆಸ್ಟ್ ಎಂಡ್ ವಾಚ್ ಕಂಪೆನಿ ಕೊಡುವುದೇಕೆಂದರೆ ಅಲ್ಲಿ ಉತ್ತಮ ಕೆಲಸಗಾರರಿಂದ ಶ್ರೇಷ್ಠ ಸಾಮಗ್ರಿಗಳಿಂದ ಇವು ತಯಾರಿಸಲ್ಪಡುತ್ತವೆ. ಎಂಥಾ ವಾತಾವರಣದಲ್ಲೂ ಈ ವಾಚುಗಳು ಸರಿಸಮಯ ಕೊಡುತ್ತವೆ. ಭಾರತದ ಪರಿಸ್ಥಿತಿಗೆ ವೆಸ್ಟ್ ಎಂಡ್ ವಾಚುಗಳು ಅತ್ಯುತ್ತಮವಾಗಿವೆಯೆಂದು ಅನುಭವದಿಂದಲೇ ತಿಳಕೊಳ್ಳಬಹುದು.



ನ್ಯೂ ಬಿಜೊ

18 ಕ್ಯಾ. ಗಟ್ಟಿ ಬಂಗಾರ ರೂ. 298.

ರೇಡಿಯಂ ಪಿಗರ್ಸ್ ಮತ್ತು ಹೇಂಡ್ಸ್ ಈ ಯಾವುದೇ ತರದ್ದು ರೂ. 3 ಹೆಚ್ಚು.



ಬಿಜೊ—ಟ್ವಿನ್ ಡಯಲ್

ಪೇಟೆಂಟ್ ಎವರ್‌ಬ್ರೈಟ್ ಸ್ಟೀಲ್ ರೂ. 124.
18 ಕ್ಯಾರಟ್ ಗಟ್ಟಿ ಬಂಗಾರ ರೂ. 270.

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಾಯಿ — ಕಲ್ಕತ್ತೆ.

WEST END WATCH Co

BOMBAY CALCUTTA

ಸಮರಭೂಮಿಯ ಸಂಚಾರ

ಕಳೆದ ಕೆಲವು ವಾರಗಳಿಂದ ಎಲ್ಲಾ ರಣಭೂಮಿಗಳಲ್ಲಿಯೂ ಮಿತ್ರಪಕ್ಷಕ್ಕೆ ಜಯವೇ ದೊರಕುತ್ತಿದೆ. ರಶ್ಯನರು ಜರ್ಮನರನ್ನು ಕಾಕಸಸ್ ರಣಭೂಮಿಯಲ್ಲಿಯೂ ಹಿಮ್ಮೆಟ್ಟಿಸಿದ್ದಾರೆ. ರೊಸ್ಟೋವ್ ಬಾಗಿಲಿನಲ್ಲಿ ರಶ್ಯನ್ ಸೈನ್ಯ ಬಂದು ನಿಂತಿದೆ. ಟುನಿಶಿಯಾದಲ್ಲಿಯೂ ಫ್ರೆಂಚ್ ಸೈನ್ಯಗಳಿಗೆ ಜಯ ಸಿಕ್ಕಿದೆ. ಆಂಗ್ಲೋ ಅಮೆರಿಕನ್ ಸೈನ್ಯಗಳು ಟುನಿಶಿಯಾದಲ್ಲಿ ಎರಡು ಕಡೆ ಧಾಳಿ ನಡೆಸುತ್ತಿವೆ. ನ್ಯೂಗಿನಿಯಲ್ಲಿಯೂ ಮಿತ್ರರು ಮುಂದುವರಿಯುತ್ತಿರುವರು. ಬರ್ಮದ ಮೇಲೆ ಬ್ರಿಟಿಷ್ ವಿಮಾನ ಪಡೆಯವರು ಬಾಂಬು ಸುರಿಸುತ್ತಿದ್ದಾರೆ. ಅಕ್ಯಾಬ್ ಬಂದರದಿಂದ ೨೫ ಮೈಲು ಮೇಲಿರುವ ಮಾಯೂ ನದೀ ತೀರದಲ್ಲಿರುವ ಜಪಾನರ ಭದ್ರ ಸ್ಥಳವಾದ ರಾಥೆಡಾಂಗದ ಸಲುವಾಗಿ ಭೀಕರ ಕಾಳಗ ನಡೆಯುತ್ತಿದೆ.

1943ರಲ್ಲಿ ಯಾರಿಗೆ ಜಯ?

ಈ ಪ್ರಶ್ನೆ, ಹೊಸವರ್ಷದ ಆರಂಭಕಾಲದಲ್ಲಿ ಸಹಜವಾಗಿ ಪ್ರತಿಯೊಬ್ಬನ ತಲೆ ಸುತ್ತುತ್ತಿದೆ! ೧೯೪೨ರ ಅಂತ್ಯದ ಮೂರು ತಿಂಗಳ ಪರಿಸ್ಥಿತಿಯನ್ನು ನಾವೀ ಸಂದರ್ಭದಲ್ಲಿ ತುಸು ಅವಲೋಕಿಸಬೇಕು. ಯೂರೋಪಿನಲ್ಲಿ ಮತ್ತು ಆಫ್ರಿಕದಲ್ಲಿ ಏಶ್ಯಾದಲ್ಲಿ ಮತ್ತು ಆಸ್ಟ್ರೇಲಿಯದ ಸುತ್ತಲೂ ಹೀಗೆ ಎಲ್ಲಾ ರಣರಂಗಗಳಲ್ಲಿಯೂ ಮಿತ್ರರಾಷ್ಟ್ರಗಳು ಮುಂದೊತ್ತಿಹೋಗುವ, ಅಕ್ಷರಾಷ್ಟ್ರಗಳನ್ನು ಪ್ರತಿಭಟಿಸಿ ನಿಂತಿರುವ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ಜರ್ಮನರು ಇತ್ತ ಆಫ್ರಿಕದ ನೆಲದಲ್ಲಿ ತಮ್ಮ ಕೊನೆಯ ಹೆಜ್ಜೆಯನ್ನಿಡುವ ಯೋಚನೆ ಮಾಡುತ್ತಿದ್ದಂತೆ, ಅತ್ತ ರಶ್ಯನ್ ರಣಭೂಮಿಯಲ್ಲಿಯೂ ಅತ್ಯಂತ ಪರಾಭವವನ್ನೇ ಎದುರಿಸುತ್ತಿದ್ದಾರೆ. ಆ ಎರಡು ಕಡೆಗಳಲ್ಲಿ ಹೋರಾಡುವ ಸೈನಿಕರ ಧೈರ್ಯಶಕ್ತಿಗಳು ದಿನದಿಂದ ದಿನಕ್ಕೆ ಕುಗ್ಗುತ್ತಿವೆ, ಇದು ಮುಂದಿನ ವರ್ಷದಲ್ಲಿ ಹಿಟ್ಲರನ ಕೊನೆಗಾಲವನ್ನೇ ಸಾರುವಂತಿದೆ. ಹೀಗೆ ಯುದ್ಧರಂಗದಲ್ಲಿ ಜರ್ಮನರಿಗೆ ಪರಾಜಯ ಪ್ರಾಪ್ತವಾಗುತ್ತಿರುವಾಗ, ಗೃಹರಂಗದಲ್ಲಾದರೂ ಸುಖವುಂಟೇ ಎಂದು ನಾವು ತುಸು ಆಲೋಚಿಸುವ. ಹಿಟ್ಲರನು ಜರ್ಮನ್ ಜನತೆಗೆ ಎರಡು ವರ್ಷಗಳ ಮೊದಲೇ ವಿಜಯ ದೊರಕಿಸಿ ಕೊಡುವೆನೆಂದು ಭರವಸೆಯಿತ್ತಿದ್ದನು. ಎರಡು ವರ್ಷಗಳ ಹಿಂದೆ ಬಿಟ್ಟು, ಈಗ ನಾಲ್ಕು ವರ್ಷಗಳಾದರೂ ಈ ಯುದ್ಧ ಕೊನೆಗಾಣದಿರುವುದೂ, ದಿನ ಹೋದಂತೆ ಜನ ಧನ, ಸುಖ ಸಂಪತ್ತುಗಳನ್ನು ಬಲಿದಾನ ಕೊಟ್ಟು ಬೇಸತ್ತಿರುವುದೂ ಇಂದು ಜರ್ಮನ್ ಜನತೆಗೆ ನಿರಾಶೆಯನ್ನುಂಟುಮಾಡಿರುವುದು. ಕಳೆದ ನವಂಬರದ ಮೊದಲು ರಶ್ಯವೊಂದರಲ್ಲೇ ಎಂಟು ಮಿಲಿಯ ಜರ್ಮನರು ಸತ್ತಿದ್ದರೆ, ಉಳಿದ ರಣಭೂಮಿಗಳಲ್ಲಿ ಏನಿಲ್ಲೆಂದರೂ ಎರಡು ಮಿಲಿಯದಷ್ಟಾದರೂ ಮರಣಹೊಂದಿರಲೇ ಬೇಕು; ಇದು ಎಂಥಾ ನಷ್ಟವೆಂಬುದನ್ನು ಊಹಿಸಬಹುದು! ಯುದ್ಧ ಪ್ರಾರಂಭಕಾಲದಿಂದ ಇದುವರೆಗೆ ಜರ್ಮನ್ ಪ್ರಚಾರದ ರೀತಿಯನ್ನು ಕೇಳುತ್ತಾ ಬಂದವರಿಗೆ, ಅವರ ಪ್ರಚಾರ ಕಾರ್ಯದಲ್ಲಿಯೂ ಎಷ್ಟರಮಟ್ಟಿಗೆ ವ್ಯತ್ಯಾಸವಾಗಿದೆಯೆಂದು ತಿಳಿಯದಿರದು; ಇಂದು ಹಿಂದಿನ ಆ ಆರ್ಭಟವಿಲ್ಲ ಗೊಬೆಲ್ಸನ ಕಂಠದಲ್ಲಿ! ಮೊದಲಾದರೆ ಸ್ವಾತಂತ್ರ್ಯ, ದೇಶಭಕ್ತಿ, ಗೌರವ, ವೀರಾರಾಧನೆ ಸಾಮ್ರಾಜ್ಯಲಾಲಸೆ ಇವುಗಳೇ ಅವನ ಪ್ರಚಾರ ಭೇರಿಯಾಗಿತ್ತು; ಇಂದು ಭವಿಷ್ಯದ ಬೆದರಿಕೆಯ ಧ್ವನಿ ಒಡೆದು ಕಾಣುತ್ತದೆ. ಯುದ್ಧ ಗೆದ್ದ ಮೇಲೆ ಏನೇನು ಸುಖಸಂಪತ್ತುಂಟು ಎಂಬ ವಿಷಯವನ್ನು ಅವನು ಹೇಳುವುದಿಲ್ಲ. ಯುದ್ಧದಲ್ಲಿ ಸೋತುಬಿಟ್ಟರೆ ಎಂಥಾ ಅನರ್ಥವಾದೀತೆಂದು ಜನರನ್ನು ಈಗ ಅಂಜಿಸುತ್ತಿದ್ದಾನೆ. ಹೀಗೆ ಎಷ್ಟು ಹಠದಿಂದ, ಎಷ್ಟು ಒತ್ತಾಯದಿಂದ, ಎಷ್ಟು ಅಂಜಿಕೆಯಿಂದ ಜನರನ್ನು ಹುರಿದುಂಬಿಸಿದರೂ ಜನತೆಗೆ ಯುದ್ಧದಲ್ಲಿ ನಿರಾಶೆ ಬಂದರೆ ಅದರ ಫಲವನ್ನು ಯಾರಾದರೂ ಅನುಭವಿಸಲೇ ಬೇಕು! ನಾಜಿಗಳ ಅಧೀನ ಯೂರೋಪಿನ ಬಹುಭಾಗ ಇಂದು ಬಂದಿದೆಯೆನ್ನೋ ನಿಜ; ಆದರೆ, ಅದರಿಂದ ಯುದ್ಧಮಾಡುವ ಜನತೆಗೆ ಹೆಚ್ಚಿನ ಸುಖಸಮಾಧಾನವಾಗಲು ಸಾಧ್ಯವಿಲ್ಲ. ಆದರೂ ಹಿಟ್ಲರನು ತನ್ನ ಅದ್ಭುತ ರಣಕೌಶಲ್ಯದಿಂದ ರಶ್ಯದಲ್ಲಿ ಕಾಳಗವನ್ನೊಮ್ಮೆ ಕೊನೆಗಾಣಿಸಲು ಈ ವರ್ಷ ಕೊನೆಯ ಹೋರಾಟವನ್ನು ಕೊಡಬಹುದು. ಹಿಟ್ಲರನ ಸೋಲುಗೆಲವು ರಶ್ಯದೀ ಸಂಗ್ರಾಮದಲ್ಲಿ ನಿರ್ಧಾರವಾಗುವುದು!

ಇಟಲಿಗೆ ಆಕ್ರಮಣವುಂಟು!

ಹೊಸ ವರ್ಷದಲ್ಲಿ ಹಿಟ್ಲರನಿಗೆ ಹೀಗೆ ಅಶುಭ ಸೂಚನೆ ತೋರುತ್ತಿದ್ದಂತೆ, ಮುಸಲನಿಯ ಅದೃಷ್ಟವೂ ಚೆನ್ನಾಗಿ ಕಾಣುವುದಿಲ್ಲ. ತನ್ನ ರಾಜ್ಯವನ್ನು, ತನ್ನ ಸೈನಿಕರನ್ನು ಹಿಟ್ಲರನ ಮಹತ್ವಾಕಾಂಕ್ಷೆಯ ಸಲುವಾಗಿ ಮಾರಿಕೊಂಡ ಮುಸಲನಿಯು ಈಗ, ಪದಾತಿ, ನೌಕಾ, ವಿಮಾನಬಲಗಳನ್ನು ಬಹಳವಾಗಿ ಕಳಕೊಂಡಿರುವನು. ಹೀಗಿರುವಾಗ, ಮುಂದೆ ಆತನ ಅಂಜಿಕೆಯೆಂದರೆ ಇಟಲಿಗೇ ಶತ್ರು ಮುತ್ತಿಗೆಯಾಗುವುದು! ಈ ವರ್ಷದಲ್ಲಿಯೇ ಇಟಲಿಯ ಪ್ರಧಾನನಗರಗಳಿಗೆ ಆಗಾಗ ಬಾಂಬು ಬೀಳತೊಡಗಿದೆ; ರೋಮ್ ನಗರವನ್ನು 'ಬಹಿರಂಗ ಪಟ್ಟಣ'ವಾಗಿ ಸಾರುವ ಒಂದು ಸುದ್ದಿಯೂ ಈಗ ಪ್ರಕಟವಾಗಿದೆ. ಪ್ಯಾರಿಸನ್ನು ಬಹಿರಂಗ ಪಟ್ಟಣವಾಗಿ ಸಾರಿದ ಬಳಿಕ ಫ್ರಾನ್ಸು ಶತ್ರುವಶವಾಗಲು ಎಷ್ಟು ದಿನಗಳು ಬೇಕಾಯಿತು? ಒಮ್ಮೆ ಟುನಿಶಿಯದಲ್ಲಿ ಅಕ್ಷಸೇನೆ ಭೇದಿಸಲ್ಪಟ್ಟರೆ, ಆ ಮೇಲೆ ಇಟಲಿ ನಿರಂತರ ಹೊಡೆತಕ್ಕೆ ಬಲಿಬೀಳಬೇಕಾಗುತ್ತದೆ. ಇದನ್ನು ತಿಳಕೊಂಡೇ ಇರಬೇಕು, ಹಿಟ್ಲರನಾದರೂ ಇಟಲಿಯ ರಕ್ಷಣೆಗೆ ಬೇಕಾದಷ್ಟು ಸಾಧನ ಸಹಾಯಗಳನ್ನು ಕಳುಹಿಸುತ್ತಿರುವುದು. ಆದರೆ ಜರ್ಮನಿ ಎಷ್ಟೊಂದು ಪ್ರಯತ್ನಪಟ್ಟರೂ ಇಟಲಿಯನ್ನು ಫ್ರಾನ್ಸಿನಂತೆ ರಕ್ಷಿಸಿಕೊಳ್ಳಲು ಸಮರ್ಥವಾದಾವೇ ಎಂಬುದು ವಿಚಾರಿಸತಕ್ಕ ವಿಚಾರವಾಗಿದೆ. ಆಸ್ಟ್ರೇಲಿಯಾ ಇಟಲಿಗಳ ಮಧ್ಯೆ ಇರುವ, ಮುಸಲನಿ—ಹಿಟ್ಲರ್ ಭೇಟಿ ಪ್ರಸಿದ್ಧವಾದ ಬ್ರೆನ್ನರ್ ಕಣಿವೆಯೂ, ಪ್ರಬಲ ರಕ್ಷಣೆಯಿಂದ ಕೂಡಿರುತ್ತದೆಯೆಂಬುದೂ ಪ್ರಧಾನ ವಿಷಯವು. ಹೀಗೆ ಜರ್ಮನಿ ಇಟಲಿಗಳಿಗೆ ವಿಪತ್ತು ಬರಲಿದೆಯೆಂಬ ಸೂಚನೆಗಳಷ್ಟು ಕಂಡು ಬರುತ್ತವೆ.

ಜಪಾನಿನ ಸಿದ್ಧತೆಯೇನು?

ಏಶ್ಯದಲ್ಲಿ ಜಪಾನಿನ ಶಕ್ತಿಯನ್ನು ಅವಗಣಿಸುವುದು ಸರಿಯಲ್ಲ. ಕಳೆದ ವರ್ಷದ ಮಿಡ್ವೇ ಯುದ್ಧದಲ್ಲಿ ದೊರೆತ ಜಯವಾದರೂ ಸಾಧಾರಣವಾದುದಲ್ಲ. ನ್ಯೂಗಿನಿ ಸೊಲೊಮನ್‌ಗಳನ್ನಾಕ್ರಮಿಸಿಕೊಳ್ಳಬೇಕೆಂದು ಜಪಾನರು ಮಾಡಿದ ಪ್ರಯತ್ನ ವಿಫಲವಾದರೂ, ಅವರು ಇನ್ನೂ ಆ ದ್ವೀಪಗಳಲ್ಲಿಯೇ ಇರುವರೆಂಬುದೂ ಅಮೆರಿಕನರನ್ನು ಮುನ್ನುಗ್ಗದಂತೆ ತಡೆಗಟ್ಟುತ್ತಿರುವರೆಂಬುದೂ ಗಣನೀಯವಿದೆ. ದಕ್ಷಿಣ ನ್ಯೂಗಿನಿಯನ್ನು ಮಿತ್ರರು ಪಡೆದುಕೊಂಡಿದ್ದರೂ ಉತ್ತರ ನ್ಯೂಗಿನಿ ಜಪಾನರ ಕೈವಶ ಹೋಗಿದೆ. ನ್ಯೂಗಿನಿಯನ್ನು ಮುತ್ತಿ ಆರು ತಿಂಗಳಾದರೂ ಇದುವರೆಗೆ ಇಲ್ಲಿಂದ ಜಪಾನರನ್ನು ಓಡಿಸಲಾಗಲಿಲ್ಲವೇಕೋ ತಿಳಿಯಲಾಗುವುದಿಲ್ಲ. ಅಮೆರಿಕನ್ ಸೈನ್ಯ, ಆಸ್ಟ್ರೇಲಿಯದ ಬಲ, ಬ್ರಿಟಿಷ್ ಸಹಾಯ ಇಷ್ಟಿದ್ದರೂ, ಅದಾಗದಿರುವುದನ್ನು ನೋಡಿದರೆ ಜಪಾನರ ಸಾಮರ್ಥ್ಯವನ್ನು ಹೊಗಳಬೇಕಾಗಿದೆ. ಇದೇ ಸಂದರ್ಭದಲ್ಲಿ ಜಪಾನರು ರಬಾಲದಲ್ಲಿ ಅಸಂಖ್ಯ ಹಡಗಗಳನ್ನು ಸಂಗ್ರಹಿಸುತ್ತಿರುವರೆಂದೂ ಸುದ್ದಿಯಿದೆ. ರಬಾಲವು ನ್ಯೂಗಿನಿಗೆ ಈಶಾನ್ಯದಲ್ಲಿರುವ ನ್ಯೂಬ್ರಿಟನ್ ದ್ವೀಪದಲ್ಲಿದೆ. ಇಲ್ಲಿಂದ ಸೊಲೊಮನ್ ನ್ಯೂಗಿನಿಗಳೆರಡಕ್ಕೆ ಹೋಗಲೂ ಅನುಕೂಲ ದಾರಿಯುಂಟು. ಇಲ್ಲಿ ಹಡಗಗಳನ್ನು ಸಂಗ್ರಹಿಸುತ್ತಿರುವಂತೆ ಅತ್ತ ನ್ಯೂಗಿನಿಯ ಪೂರ್ವ ಕರಾವಳಿಯ ಉತ್ತರಾರ್ಧವನ್ನೂ ಜಪಾನರು ಆಕ್ರಮಿಸಿರುವರು. ಅಲ್ಲಲ್ಲಿ ವ್ಯೂಹಗಳನ್ನೂ, ವಿಮಾನಗೃಹಗಳನ್ನೂ ಕಟ್ಟಿಕೊಂಡಿದ್ದು ಸೈನ್ಯ ಸಂಗ್ರಹ ಮಾಡಲಾಗುತ್ತಿದೆ. ಇದರಿಂದ ಜಪಾನರು ಈಗಾಗಲೇ ಪ್ರಚಂಡ ಧಾಳಿಯ ಸಿದ್ಧತೆಯೊಂದನ್ನು ಮಾಡುವರೆಂದು ಊಹಿಸಬಹುದು. ಆದರೆ ಅವರು ನ್ಯೂಗಿನಿ ಮುತ್ತುವರೋ, ಸೊಲೊಮನ್ ಆಕ್ರಮಿಸುವರೋ ತಿಳಿದಿಲ್ಲ! ಹೀಗೆ ಜಪಾನಿನ ಸಿದ್ಧತೆ ನಡೆಯುತ್ತಿರುವಾಗ, ರೂಸ್‌ವೆಲ್ಟರು ಈ ವರ್ಷ ಮಿತ್ರರು ಜಪಾನಿನ ಮೇಲೆ ಆಕ್ರಮಿಸಬೇಕೆಂದು ಹೇಳಿದ್ದು ಗಮನಾರ್ಹವಿದೆ. ಆದರೆ ಮಿತ್ರರ ಧಾಳಿಯ ಸಿದ್ಧತೆಗಳ ವಿವರವೇನೂ ಇದುವರೆಗೆ ಕಂಡುಬಂದಿಲ್ಲ. ಉತ್ತರ ಆಫ್ರಿಕದ ಯುದ್ಧ ಮುಗಿವ ವರೆಗೆ, ಮಿತ್ರರು ಪೆಸಿಫಿಕ್ಕಿಗೆ ಕಾಲಿಡುವಂತೆ ತೋರುವುದಿಲ್ಲ. ಅದುವರೆಗೆ ಜಪಾನರು ಸುಮ್ಮಗಿರುವರೆಂದು ಊಹಿಸುವುದೂ ತಪ್ಪು. ಶತ್ರುಗಳು ತಮ್ಮ ಮೇಲೆ ಬೀಳುವ ಮೊದಲು, ತಾವೇ ಅವರ ಮೇಲೆ ಬಿದ್ದು ಘಾತಗೊಳಿಸುವುದು ಬುದ್ಧಿವಂತಿಕೆಯ ಲಕ್ಷಣ. ಜಪಾನರು ಕಳೆದ ವರ್ಷವಾದರೂ ಹೀಗೆಯೇ ಮಾಡಿದ್ದಾರೆ. ಈ ವರ್ಷವಾದರೂ ಹಾಗೆ ಮಾಡುವ ಸಿದ್ಧತೆಗಳೇ ತೋರುತ್ತವೆ. ಭಾರತದ ಮೇಲೆ, ನ್ಯೂಗಿನಿ ಮೇಲೆ, ಸೊಲೊಮನ್ ಮೇಲೆ ಹೀಗೆ ಎಲ್ಲಾ ಕಡೆಗಳಲ್ಲಿಯೂ ಜಪಾನರ ಸಮರಸಮಾರಂಭ ಕಾಣುತ್ತದೆ. ಯೂರೋಪಿನಲ್ಲಿ ಹಿಟ್ಲರ್ ಮುಸಲನಿಗಳ ಶಕ್ತಿಯನ್ನು ಕಡೆಗಣಿಸಿದರೂ ಕಡೆಗಣಿಸಬಹುದು. ಏಕೆಂದರೆ ಅವರು ಕಳೆದ ಮೂರು ವರ್ಷದ ಹೋರಾಟದಲ್ಲಿ ಸೋತು ಸುಣ್ಣಾದವರು, ಆದರೆ ಏಶ್ಯದಲ್ಲಿ ಜಪಾನಿನ ಶಕ್ತಿಯನ್ನು ಕಡೆಗಣಿಸಲು ಖಂಡಿತ ಸಾಧ್ಯವಿಲ್ಲ. ಸಿಂಗಾಪುರ, ಫಿಲಿಪ್ಪೈನ್ಸ್, ಮಲಯ, ಬರ್ಮಗಳನ್ನು ಮಿಂಚಿನಗತಿಯಿಂದ ಜಪಾನು ಸ್ವಾಧೀನಪಡಿಸಿಕೊಂಡು, ಈಗ ಮುಂದಿನ ಆಕ್ರಮಣಕ್ಕೆ ಇನ್ನಷ್ಟು ಸಜ್ಜಿತವಾಗಿ ನಿಂತಿದೆಯೆನಬೇಕು.

ರಶ್ಯನ್ ಪ್ರತಿಭಟನೆ

ಕಳೆದ ಎರಡು ತಿಂಗಳಿಂದ ಜರ್ಮನರನ್ನು ಪರಿಣಾಮಕಾರಿಯಾಗಿ ಪ್ರತಿಭಟಿಸಿ ಹೋರಾಡುತ್ತಿರುವ ರಶ್ಯನ್ ವೀರರು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಕಳೆದ ಒಂದುವರೆ ವರ್ಷದಿಂದ ವಿಶ್ರಾಂತಿಯಿಲ್ಲದೆ ಕಾದಾಡುತ್ತಿದ್ದರೂ, ಚಳಿಗಾಲದ ಹೋರಾಟಕ್ಕೆಂದು ಹೊಸ ಸೈನ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದ ರಶ್ಯನ್ ದಳಪತಿಗಳ ಸಾಹಸವೂ ಪ್ರಶಂಸನೀಯವಿದೆ. 1942ರ ಒಳಗೆ ಸ್ಟಾಲಿನ್‌ಗ್ರಾಡ್ [illegible], ಕಾಕಸಸಿನೊಳಗೂ ನುಗ್ಗಿ ಯುರಲ್ ಪರ್ವತದಾಚೆ ರಶ್ಯನರನ್ನು ಅಟ್ಟಿಬಿಡಬೇಕೆಂದು ಬಯಸಿದ ಹಿಟ್ಲರನ ವಿಚಾರಗಳೆಲ್ಲ ಆಕಾಶ ಗೋಪುರಗಳಾದುವು. ವಾನ್ ಬಾಕನ ಸೈನ್ಯವು ಡಾನ್ ವಕ್ರದ ವರೆಗೆ ಬಂದು ಸ್ಟಾಲಿನ್‌ಗ್ರಾಡ್ ಮತ್ತು ಕಾಕಸಸ್ ಹೀಗೆ ಎರಡು ಕಡೆಗೆ ವಿಭಾಗವಾದ ಮೇಲೆ ಜರ್ಮನ್ ಸೇನೆ ವಿವಿಧ ಪರಿಭವಗಳಿಗೆ ಒಳಗಾಗುತ್ತಿದೆ. ಸ್ಟಾಲಿನ್‌ಗ್ರಾಡ್ ಕಾಕಸಸ್‌ಗಳೆರಡರಲ್ಲಿಯೂ ಜರ್ಮನರೇನೂ ವಿಶೇಷ ಮುಂದುವರಿಯುತ್ತಿಲ್ಲ. ಕಳೆದ ಎರಡು ತಿಂಗಳ ಹೋರಾಟದಲ್ಲಿ ಜರ್ಮನರ ಶಕ್ತಿ ಬಹಳ ಕುಂದಿದೆ. ಸ್ಟಾಲಿನ್‌ಗ್ರಾಡನ್ನು ಆಕ್ರಮಿಸಿಕೊಳ್ಳುವ, ಕಾಕಸಸ್ ಕಡೆಗೆ ಮುಂದುವರಿಯುವಂತೆಯೂ ತೋರುವುದಿಲ್ಲ. ಹೀಗಾಗಿ ಈ ಚಳಿಗಾಲ ಕಳೆಯುವವರೆಗೆ ಜರ್ಮನರು ವಿಶೇಷ ಮುಂದುವರಿಯುವಂತಿಲ್ಲ. ರಶ್ಯದ ಚಳಿಗಾಲವೆಂದರೆ ಜರ್ಮನರಿಗೆ ಮೃತ್ಯು ಸ್ವರೂಪವಿದೆ. ದೇವರ ದಯೆಯಿಂದ ನಾವು ಬದುಕಿಕೊಂಡೆವು ಎಂದು ಹಿಟ್ಲರನೇ ಕಳೆದ ಚಳಿಗಾಲದ ಸಂಕಷ್ಟದ ಕುರಿತು ಉದ್ಗರಿಸಿದ್ದನು. ಅಂತೂ ಈ ಸಲ ಚಳಿಗೆ ಬೇಕಾದ ಸಿದ್ಧತೆಗಳನ್ನು ಜರ್ಮನರು ಮಾಡಿಕೊಂಡಿದ್ದರೂ, ಅವರಿಂದ ಮುಂದುವರಿಯುವುದೇನೂ ಆಗಲಿಲ್ಲ. ಇದೇ ಸಂದರ್ಭವನ್ನು ನಿರೀಕ್ಷಿಸಿಕೊಂಡು ರಶ್ಯನರು ಪ್ರತಿಧಾಳಿಯನ್ನು ಪ್ರಾರಂಭಿಸಿದ್ದಾರೆ. ಪ್ರತಿಧಾಳಿ ಮಾಡಿ ಸ್ಟಾಲಿನ್‌ಗ್ರಾಡನ್ನು ಸಂಪೂರ್ಣ ಪುನಃ ಪಡಕೊಳ್ಳುವುದು ರಶ್ಯನರಿಗೆ ಆಗಲಿಲ್ಲವೇನೋ ನಿಜ. ಆದರೂ ಸುಮಾರು 2000 ಮೈಲು ವಿಸ್ತೀರ್ಣದ ಡಾನ್‌ವಕ್ರದಿಂದ ಜರ್ಮನರನ್ನೆಲ್ಲಾ ಓಡಿಸಿದ್ದಾರೆ. ಸ್ಟಾಲಿನ್‌ಗ್ರಾಡಿನ ಸೈನ್ಯ ಮುತ್ತಿರುವ ಕೊಟೆಲ್ನಿಕೋವೊನಿಂದ ಪ್ರತಿಧಾಳಿ ಮಾಡಿ ರಶ್ಯನರನ್ನು ಹಿಂದೆಟ್ಟಬೇಕೆಂದು ಜರ್ಮನರು ಸಾಹಸಪಟ್ಟರೂ ಅದು ಫಲಿಸಲಿಲ್ಲ. ಈಗ ಸಾಹಸಗಳೆಲ್ಲಾ ವ್ಯರ್ಥವಾಗಿ ಜರ್ಮನರು ರೋಸ್ಟೋವ್ ಕಡೆಗೆ ಹಿಂಜರಿಯುತ್ತಿದ್ದಾರೆ. ರಶ್ಯನರು ಅವರನ್ನು ಹಿಂಬಾಲಿಸುತ್ತಲೂ ಇರುವರು. ಅತ್ತ ಡಾನ್ ವಕ್ರದಲ್ಲಿರುವ ರಶ್ಯನ್ ಸೇನೆ, ಮಾಸ್ಕೋ ರೊಸ್ಟೋವ್ ರೈಲ್ವೆಮಾರ್ಗವನ್ನು ಕತ್ತರಿಸಿ ಯುಕ್ರೇನದಲ್ಲಿ ಕಾಲಿಟ್ಟಿರುವುದು; ಡೊನೆಟ್ಸ್ ಪ್ರದೇಶವನ್ನಾಕ್ರಮಿಸಿಕೊಳ್ಳಬೇಕೆಂದೂ ರಶ್ಯನರ ಆಲೋಚನೆಯಿದೆ. ಕಾಕಸಸಿನಲ್ಲಿಯೂ ರಶ್ಯನರು ಮುನ್ನುಗ್ಗಿ ನಾಲ್‌ಚಿಕ ಮೊಜದೋಕ ಮತ್ತು ಪ್ರೋಕ್ಲಾಡನಾಯಾ ಮೊದಲಾದ ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿಕೊಂಡಿರುವರು. ಇದೆಲ್ಲವನ್ನು ನೋಡಿದರೆ ರಶ್ಯದಿಂದ ಜರ್ಮನರು ಬೇಗನೇ ಕಾಲ್ತೆಗೆಯಬೇಕಾಗಿ ಬರಬಹುದೆಂಬ ಸೂಚನೆ ತೋರುತ್ತದೆ.

ಎದೆಗೆ ನೋವನ್ನುಂಟು ಮಾಡುವ ಬ್ರೊಂಕೈಟಿಸ್ಸನ್ನು ಗುಣಪಡಿಸಿರಿ.

ಬ್ರೊಂಕೈಟಿಸ್ಸ ನಿಮ್ಮ ಎದೆಯಲ್ಲಿ ನೋವನ್ನುಂಟುಮಾಡಿ ಕೊಂದರೆ ಕೊಡುತ್ತದೆಯೆ? ನೀವು ಆಗಾಗ ಶ್ವಾಸಕ್ಕಾಗಿ ತೊಂದರೆ ಪಡುತ್ತೀರೆ? ನಿಮ್ಮ ತಲೆ ಸಿಡಿವ ಹಾಗೆ ಆಗಾಗ ಕಫ ಬರುತ್ತದೆಯೆ? ಹಾಗಾದರೆ ವಿಷಹಾರಿ ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ಸೇವಿಸಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಔಷಧಿ ಸತ್ವವನ್ನು ಹೊರಗೆಡವಿ ಅದು ಶ್ವಾಸದೊಡನೆ ಸೇರಿ ಶ್ವಾಸಕೋಶಕ್ಕೆ ಮುಟ್ಟುತ್ತದೆ. ಹೀಗೆ ಪೆಪ್ಸು ಎದೆನೋವು, ಕಫ, ತಲೆನೋವು ಮೊದಲಾದವುಗಳನ್ನು ಗುಣಪಡಿಸಿ ನಿಮ್ಮ ಶ್ವಾಸ ಸರಿಯಾಗಿರುವಂತೆ ಸಹಾಯಮಾಡುವುದು. ಪೆಪ್ಸು ಕಂಠವನ್ನು ಸರಿಗೊಳಿಸಿ ಶ್ವಾಸಕೋಶವನ್ನು ಬಲಗೊಳಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳೂ ಪೆಪ್ಸನ್ನು ಒಂದು ರೂಪಾಯಿ ಬೆಲೆಗೆ ಮಾರುತ್ತಾರೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸ್ವದೇಶಾಭಿಮಾನಿ

ತಾರೀಕು 15—1—1943

ಸ್ವದೇಶ ಸಮಾಚಾರ

ತಪೋನಿಧಿ ಬನ್ಸಾಲಿ

ಚಿಮೂರಿನಲ್ಲಿ ಸೈನಿಕರು ಹಾಗೂ ಪೋಲೀಸರು ಮಾನಿನಿಯರ ಮಾನಾಪಹಾರ ಮಾಡಿದರೆಂಬ ಆರೋಪದ ವಿಚಾರಣೆಯಾಗಬೇಕೆಂದು ವೈಸರಾಯರ ಎಕ್ಸಿಕುಟಿವ್ ಕೌನ್ಸಿಲಿನಲ್ಲಿ ಮಂಡಿತರಾಗಿರುವ ಅಣೆಯವರ ಮೂಲಕ ಸರಕಾರದೊಡನೆ ವಿನಂತಿ ಮಾಡಿಕೊಂಡ ತನ್ನ ಅರಿಕೆ ವ್ಯರ್ಥವಾಗಲು, 'ಈ ಋಷಿ ಭೂಮಿಯಲ್ಲಿ ಇನ್ನಾವ ಮಾನಿನಿಯ ಮಾನವೂ ಅಪಹಾರವಾಗದಿರಲಿ' ಎಂಬ ದೃಢ ನಿರ್ಧಾರ ಮಾಡಿ, ನೀರನ್ನೂ ಸೇವಿಸದೆ ಘೋರ ಉಪವಾಸವನ್ನು ಕೈಕೊಂಡ ಸೇವಾಗ್ರಾಮದ ಸನ್ಯಾಸಿ ಪ್ರೊಫೆಸರ್ ಬನ್ಸಾಲಿಯರೊಡನೆ ಮಧ್ಯಪ್ರಾಂತದ ಸರಕಾರವು ಕೊನೆಗೆ — ಅರುವತ್ತ ಮೂರು ದಿನಗಳ—ಘೋರ ಉಪವಾಸ ತಪಸ್ಸು ಆದ ಬಳಿಕವಾದರೂ, ಒಪ್ಪಂದಕ್ಕೆ ಬಂದುದರ ಫಲವಾಗಿ ಬನ್ಸಾಲಿಯವರು ಉಪವಾಸವನ್ನೀಗ ಬಿಟ್ಟುಕೊಟ್ಟಿರುವರೆಂಬ ವರ್ತಮಾನವು ಅಖಿಲ ಭಾರತವನ್ನೇ ಸಂತೋಷದಲ್ಲಿ ತೇಲಿಸಿದೆ. ನಿರ್ಮಲ ಜೀವನದ, ಅಚಲ ಧೈರ್ಯದ ಈ ತಪೋನಿಧಿಯು ಭಾರತೀಯರಿಗೆ ಯಾವ ವಿಷಯವು ಜೀವಕ್ಕಿಂತಲೂ ಪ್ರಿಯವೋ ಆ ಮಹಿಳೆಯರ ಮಾನರಕ್ಷಣೆಗಾಗಿ ತನ್ನ ಜೀವನವನ್ನು ಬಲಿದಾನಮಾಡಲು ನಿರ್ಧರಿಸಿ ಕೈಕೊಂಡ ಘೋರ ಉಪವಾಸವು ಸರಕಾರವನ್ನು ಅಂತೆಯೇ ಇಡೀ ಭಾರತವನ್ನೇ ನಡುಗಿಸಿತ್ತು. ಆಹಾರ ಏನನ್ನೂ ಸೇವಿಸದೆ ಅರುವತ್ತಮೂರು ದಿನಗಳ ವರೆಗೆ ಈ ಘೋರ ಉಪವಾಸ ತಪಸ್ಸನ್ನು ಮುಂದುವರಿಸಬೇಕಾದರೆ, ಅದು ಆ ಋಷಿ ಸದೃಶ ಮಹಾತ್ಮನ ಆತ್ಮಶಕ್ತಿಯ ತೇಜಸ್ಸಿನ ಪ್ರಭಾವವನ್ನು ತೋರಿಸುತ್ತದೆ. ಇಂಥಾ ಸಂದರ್ಭದಲ್ಲಿ ಉತ್ತಮವಾದೊಂದು ಧ್ಯೇಯಕ್ಕಾಗಿ, ಉಜ್ವಲ ಉಪವಾಸ ಮಾಡಿ ಯಶಸ್ವಿಯಾದ ಬಗ್ಗೆ ಪ್ರೊ। ಬನ್ಸಾಲಿಯವರನ್ನೂ, ಅವರ ಜೀವನವನ್ನುಳಿಸಲು ಯತ್ನಿಸಿದ ಡಾ। ಖಾರೆ ಹಾಗೂ ಶ್ರೀ ಮುನ್ಶಿ ಮೊದಲಾದವರನ್ನೂ, ಕೊನೆಗಾದರೂ ವಿಷಯದ ಗಂಭೀರತೆಯನ್ನರಿತು ನ್ಯಾಯದ ಕಡೆಗೆ ಬಗ್ಗಿದ ಸರಕಾರವನ್ನೂ ನಾವು ಅಭಿನಂದಿಸದಿರಲಾರೆವು.

ಪ್ರೊ। ಬನ್ಸಾಲಿಯವರು ಆತ್ಮಯಜ್ಞಕ್ಕೆ ಮನಮಾಡಿದ ಈ ವಿಷಯವು ಅಖಿಲ ಭಾರತದ ವಿಷಯ; ಜನತೆಯ ಹಕ್ಕು ಬಾಧ್ಯತೆಯ ವಿಷಯ; ಅಧಿಕಾರ ದರ್ಪವಿದ್ದರೂ ನ್ಯಾಯವು ತಲೆಯೆತ್ತಬೇಕೆಂದು ಸಾಧಿಸಿದ ವಿಷಯ. ಇಂಥಾ ವಿಷಯದ ಸುದ್ದಿಗಳನ್ನು ಪ್ರಕಟಿಸಲೂ ಪತ್ರಿಕೆಗಳಿಗೆ ನಿರ್ಬಂಧಹಾಕಲಾಯಿತು! ಇದು ಪತ್ರಿಕೆಗಳ ಜೀವಂತಸ್ಥಿತಿಯನ್ನು ನಾಶಪಡಿಸುವಂಥಾದ್ದೆಂದು ವಿಚಾರಿಸಿ ಅ. ಭಾ. ಪತ್ರಿಕಾ ಸಂಪಾದಕರ ಸ್ಥಾಯೀ ಸಮಿತಿಯವರು ಜನವರಿ ಆರನೆಯ ತಾರೀಕಿಗೆ ಒಂದು ದಿನ ಯಶಸ್ವಿಯಾಗಿ ಹರತಾಳವನ್ನಾಚರಿಸಿದ್ದು ಮಾತ್ರವಲ್ಲದೆ ಹೊಸ ವರ್ಷದ ಬಿರುದಿನ ಪಟ್ಟಿಯನ್ನು ಹಾಗೂ ಸರಕಾರೀ ಪ್ರಕಟಣೆಗಳನ್ನು ಪ್ರಕಟಿಸದಿರುವುದಾಗಿಯೂ ನಿರ್ಧರಿಸಿದರು. ಸರಕಾರವು ಪ್ರೊ। ಬನ್ಸಾಲಿಯರೊಡನೆ ಒಪ್ಪಂದ ಮಾಡಿಕೊಂಡು, ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧವನ್ನು ಹಿಂತೆಗೆದಿರುವುದಾಗಿ ತಿಳಿಸಿದ್ದರಿಂದ ಪತ್ರಿಕೆಗಳಾದರೂ ಸರಕಾರದ ಪ್ರಕಟಣೆಗಳ ಮೇಲೆ ಹಾಕಿದ ನಿರ್ಬಂಧವನ್ನು ಹಿಂತೆಗೆದ ಸಂತೋಷದ ಸುದ್ದಿ ಪ್ರಕಟವಾಗಿದೆ. ಈ ಸಂದರ್ಭದಲ್ಲಿ ನ್ಯಾಯದ ಸಲುವಾಗಿ ಹೋರಾಡಿ ಸಂಕಷ್ಟಗಳನ್ನು ಎದೆಗೊಟ್ಟು ಎದುರಿಸಿದ ಸಕಲರನ್ನೂ ನಾವು ಅಭಿನಂದಿಸುವುದರೊಡನೆ ಮಧ್ಯಪ್ರಾಂತ ಸರಕಾರದ ಒಪ್ಪಂದ ನೀತಿಯನ್ನೂ ನಾವು ಕೊಂಡಾಡುವೆವು. ತಪೋನಿಧಿ ಬನ್ಸಾಲಿಯವರು ಆಧುನಿಕ ಭಾರತದ ಉಜ್ವಲ ತಪಸ್ವಿಯಾಗಿ ನಮಗೆ ಮಾರ್ಗದರ್ಶಕರಾಗಿ ಬಹುಕಾಲ ಬಾಳಲಿ ಎಂದು ಭಗವಂತನೊಡನೆ ಪ್ರಾರ್ಥಿಸಿಕೊಳ್ಳುತ್ತೇವೆ.

೧೫ ಪೋಲೀಸರು ಕಾಂಗ್ರೆಸ್ ಘೋಷ ಮಾಡಿದರು

ಜಿಸೂರು ಜಿಲ್ಲೆಯ ೧೫ ಜನ ಪೋಲೀಸರು ತಮ್ಮ ಸಾಮಾನು ಚೀಲ ಮೊದಲಾದುವುಗಳನ್ನು ಒಗೆದು, ಕೆಲಸ ಬಿಟ್ಟುಕೊಡಲೆಂದು ಇತರರನ್ನು ಹುರಿದುಂಬಿಸಲು, ಗಾಂಧಿ ಮಹಾರಾಜ ಕೀ ಜೈ ಎಂದು ಘೋಷ ಮಾಡಿದರೆಂದು ಸೆರೆ ಹಿಡಿಯಲ್ಪಟ್ಟಿರುವರು. ಅವರ ಬಗ್ಗೆ ವಿಚಾರಣೆಯಾಗಿ ಅವರಿಗೆ ೨ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಓರ್ವ ಸಬ್ ಇನ್‌ಸ್ಪೆಕ್ಟರ್ ಮತ್ತು ಕೆಲವು ಪೋಲೀಸರ ಮೇಲೆ ಏರಿ ಹೋದರೆಂಬ ಆರೋಪವೂ ಅವರ ಮೇಲಿತ್ತು.

ಕಲೆಕ್ಟರರ ಕಛೇರಿಗೆ ಜನರ ಮುತ್ತಿಗೆ

ಬೆಳಗಾವಿಯಲ್ಲಿ ನೂರಾರು ಜನರು ಕಲೆಕ್ಟರರ ಕಚೇರಿಗೆ ಮುತ್ತಿಗೆ ಹಾಕಿ ಕಡಿಮೆ ಕ್ರಯದಲ್ಲಿ ಅಕ್ಕಿ ಆಹಾರ ಪದಾರ್ಥ ಕೊಡಬೇಕೆಂದು ಬೊಬ್ಬೆಯೆಬ್ಬಿಸಲು, ಪೋಲೀಸರು ಬಂದು ಅವರನ್ನು ಚದರಿಸಿದರು.

ಭಾರತದಿಂದ ದವಸಧಾನ್ಯ ರಫ್ತು ಇಲ್ಲ

ಸರ್ಕಾರದ ಭರವಸೆ

ಭಾರತ ಸರಕಾರದ ವಾಣಿಜ್ಯ ಸಚಿವರಾದ ಶ್ರೀ. ನಳಿನಿರಂಜನ ಸರ್ಕಾರರಲ್ಲಿ ಬಂಗಾಳ ಚೇಂಬರ್ ಓಫ್ ಕಾಮರ್ಸಿನವರೂ, ಯೂರೋಪಿಯನ್ ಸಂಘದವರೂ ಭೇಟಿಯಾಗಿ ಆಹಾರ ಪದಾರ್ಥಗಳ ಕುರಿತು ಮಾತುಕತೆ ನಡೆಸಿದ ಫಲವಾಗಿ, ಸರಕಾರರು, ಆಹಾರಪದಾರ್ಥಗಳ ಪರಿಸ್ಥಿತಿ ಉತ್ತಮಗೊಳ್ಳದಿದ್ದರೆ ಬರುವ ಮಾರ್ಚ್ ತಿಂಗಳ ನಂತರ ಭಾರತದಿಂದ ಆಹಾರ ಪದಾರ್ಥಗಳ ಎಲ್ಲಾ ರಫ್ತನ್ನೂ ನಿಲ್ಲಿಸಲಾಗುವುದೆಂದು ಹೇಳಿದರು. ಭಾರತದಿಂದ ಈಗ ಆಹಾರ ಪದಾರ್ಥಗಳು ಸಿಲೋನ್ ಮತ್ತು ಮಧ್ಯಪ್ರಾಂತ್ಯಕ್ಕೆ ಹೋಗುತ್ತದೆ. ಆಹಾರಪದಾರ್ಥಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ರವಾನಿಸುವ ಸೌಕರ್ಯದ ವಿಚಾರವೂ ಹೆಚ್ಚಿನ ಗಮನಕೊಡಲಾಗುವುದೆಂದರು.

ಪ್ರೊ। ಬನ್ಸಾಲಿಯವರೊಡನೆ ಒಪ್ಪಂದ

ಮಧ್ಯಪ್ರಾಂತ ಸರಕಾರದ ಮಾಜಿ ಮುಖ್ಯಮಂತ್ರಿ ಡಾ। ಖಾರೆಯವರೂ, ಮುನ್ಶಿಯವರೂ ಪ್ರಯತ್ನಿಸಿ ಬನ್ಸಾಲಿ ಮತ್ತು ಸರಕಾರದೊಡನೆ ಒಪ್ಪಂದ ಮಾಡಿಸಿದರು. ಚಿಮೂರಿಗೆ ಭೇಟಿ ಕೊಡಲು ಅಣೆ ಒಪ್ಪಿದರು. ಆರೋಗ್ಯ ಬಂದ ಮೇಲೆ ಬನ್ಸಾಲಿಯವರೂ ಅವರೂ ಚಿಮೂರಿಗೆ ಹೋಗುವರು. ಸರಕಾರವೂ ಮಾನಿನಿಯರ ಮಾನವುಳಿಸುವ ಆಶ್ವಾಸನವಿತ್ತಿದೆ. ಚಿಮೂರು ಹಾಗೂ ಬನ್ಸಾಲಿಯವರಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಪ್ರಕಟಿಸಬಾರದೆಂದು ಹಾಕಿದ ನಿರ್ಬಂಧ ಸರಕಾರ ಹಿಂತೆಗೆಯಿತು. ಇನ್ನು ಮೇಲೆ ಚಿಮೂರಿಗೆ ಹೋಗಬಯಸುವವರ ಮೇಲೆ ನಿರ್ಬಂಧವಿಲ್ಲ. 'ತನ್ನ ಉಪವಾಸದ ಸಂಬಂಧದಲ್ಲಿ ತಾನು ಸಾಗಿಸಬಹುದಾದ ಚಟುವಟಿಕೆ ಇಲ್ಲವೆ ಭಾಷಣಗಳಿಗೆ ನಿರ್ಬಂಧ ಹಾಕುವುದಿಲ್ಲವೆಂದು ನಾನು ಭಾವಿಸುತ್ತೇನೆ' ಎಂದು ಬನ್ಸಾಲಿ ತಿಳಿಸಿದ್ದಾರೆ. ಹೀಗೆ 63 ದಿನಗಳ ಉಪವಾಸದ ಬಳಿಕ ತಾ. 12ರಿಂದ ಮೋಸುಂಬೀ ರಸದಲ್ಲಿ ಸ್ವಲ್ಪ ಗ್ಲುಕೋಸ್ ಸೇರಿಸಿ ಬನ್ಸಾಲಿ ಪಾರಣೆಮಾಡಿದರು. ಮೌಲ್ವಿಗಳು ಕುರಾಣ ಓದಿ ಪ್ರಾರ್ಥನೆ ಮಾಡಿದ ಬಳಿಕ ಜಾನಕೀದೇವಿ ಬಜಾಜ್, ಕೆ. ಎಂ. ಮುನ್ಶಿ, ಅನುಸೂಯಾ ಬಾಯಿ ಕಾಳೆ ಹಾಗೂ ಸೇವಾಗ್ರಾಮದ ಕೆಲವರು ಅವರಿಗೆ ಮಾಲೆ ಹಾಕಿದರು. ಬಜಾಜರ ಮನೆಯಲ್ಲಿ ಬನ್ಸಾಲಿ ಉಪವಾಸ ಮಾಡಿದ್ದರಿಂದ, ಆ ಸ್ಥಳಕ್ಕೆ 'ಬನ್ಸಾಲಿ ಕುಟೀರ' ಎಂದು ಹೆಸರಿಡುವುದಾಗಿ ಶ್ರೀ. ಬಜಾಜರು ಸಾರಿದರು.

ಪಂಜಾಬಿನ ಹೊಸ ಪ್ರಧಾನರು

ಮೇಜರ್ ಮಾಲಿಕ್ ಕಿಜಾರ್ ಹಯತ್ ಖಾನ್ ಟಿವಾನ

ಮೇಜರ್ ಖಿಜಾರ್ ಹಯ್ಯತ್ ಖಾನ್ ಟಿವಾನರು ಪಂಜಾಬಿನ ಹೊಸ ಪ್ರಧಾನರಾಗಿದ್ದಾರೆ. ಟಿವಾನ ಎಂಬುದು ಪಂಜಾಬಿನಲ್ಲಿ ಪ್ರಸಿದ್ಧವಾದೊಂದು ಮನೆತನ. ಜನರ್ ನವಾಬ್ ಮಾಲಿಕ್ ಸರ್ ಉಮರ್ ಹಯ್ಯತ್ ಖಾನ್ ಟಿವಾನ ಎ. ಡಿ. ಸಿ. ಟು ಹಿಸ್ ಮೆಜಿಸ್ಟಿ ದಿ ಕಿಂಗ್ ಎಂಪರರ್ ಇವರ ಏಕಮಾತ್ರ ಪುತ್ರರು. ಮೇಜರ್ ಟಿವಾನರು ಸೈನ್ಯಖಾತೆಯಲ್ಲಿ ಕೆಲಸ ಮಾಡಿದವರು. ಮತ್ತು ಶಾಸನ ಸಭಾ ಸದಸ್ಯರಾದರು; ಆ ಮೇಲೆ ಮಂತ್ರಿಯಾದರು. ಅನೇಕ ಸಂಸ್ಥೆಗಳಲ್ಲಿ ಸಾರ್ವಜನಿಕ ಕಾರ್ಯ ಮಾಡಿದ್ದಾರೆ. ಈಗ ಪ್ರಧಾನ ಮಂತ್ರಿಯಾಗಿದ್ದಾರೆ.

ಭಾರತದಲ್ಲಿ ಪತ್ರಿಕೆಗಳ ಹರತಾಳ

ಅಖಿಲಭಾರತ ಪತ್ರಿಕಾ ಸಂಪಾದಕರ ಸ್ಟಾಂಡಿಂಗ್ ಕಮಿಟಿ ನಿರ್ಣಯ ಪ್ರಕಾರ ಅಖಿಲಭಾರತದಲ್ಲಿ ತಾ. ೬ರಂದು ಅನೇಕ ಪತ್ರಿಕೆಗಳ ಪ್ರಕಟವಾಗಲಿಲ್ಲ. ಕಲ್ಕತ್ತದಲ್ಲಿ ಮುಸ್ಲಿಂ ಲೀಗ್ ಪತ್ರಿಕೆಗಳೂ ಪ್ರಕಟವಾಗಿಲ್ಲ.

ಮದ್ರಾಸು ಪತ್ರಿಕೆಗಳ ಮೇಲೆ ಸರಕಾರದ ಪ್ರತೀಕಾರ

ಹೊಸವರ್ಷದ ಬಿರುದು ಪಟ್ಟಿಯನ್ನು ಪ್ರಕಟಿಸಲಿಲ್ಲವೆಂಬುದಕ್ಕಾಗಿ, ಮದ್ರಾಸು ಸರಕಾರವು, ಆ ಪತ್ರಿಕೆಗಳ ಬಾತ್ಮಿದಾರರಿಗೆ ಸರಕಾರೀ ಕಚೇರಿಯಿಂದ ಸುದ್ದಿ ತಿಳಿಯುವ ಅನುಕೂಲತೆ ಹಾಗೂ ಸರಕಾರೀ ಜಾಹೀರಾತಿನ ಅನುಕೂಲತೆಗಳನ್ನು ರದ್ದುಪಡಿಸಿದೆ. ಮದ್ರಾಸು ಸರಕಾರದ ಈ ನೀತಿಯು ರಾಜಕೀಯ ವಿವೇಕತೆಯ ಅಭಾವವನ್ನು ಸೂಚಿಸುತ್ತದೆಂದು ಅನೇಕರು ಟೀಕಿಸಿದ್ದಾರೆ.

ಹೂರರ ಮೇಲೆ ಗೋಳಿಬಾರು

೨೫ ಹೂರರ ಬಂಧನ

ಕರಾಚಿಯ ಶಹಾದಪುರದಲ್ಲಿ ಪೋಲೀಸರು ಒಬ್ಬ ಹೂರನನ್ನು ಗುಂಡಿಟ್ಟು ಕೊಂದು ೨೫ ಹೂರರನ್ನು ಬಂಧಿಸಿರುವರು. ಸಂಶಯದ ಮೇಲೆ ಈ ಗುಂಡು ಹಾಕಲಾಗಿದೆ. ಸೆರೆಹಿಡಿದವರಲ್ಲಿ ಕೆಲವರು ಸ್ತ್ರೀಯರೂ ಇರುವರು.

ಭಾರತದಲ್ಲಿ ಗೋದಿ ಪೂರೈಕೆ

ಭಾರತದಲ್ಲಿ ಆಹಾರಕ್ಕೆ ಸಾಕಷ್ಟು ಗೋಧಿಯಿಲ್ಲದಿರುವುದರಿಂದ, ಅದಕ್ಕಾಗಿ ಆಸ್ಟ್ರೇಲಿಯದಿಂದ ತರಿಸುವುದೆಂದೂ, ಮಿಲಿಟರಿಗಾಗಿ ಸಂಗ್ರಹಿಸಿದ್ದರಿಂದ ಕೆಲವನ್ನು ನಾಗರಿಕರಿಗೆ ಕೊಡುವುದೆಂದೂ ಸರಕಾರ ನಿಶ್ಚಯಿಸಿರುವುದಾಗಿ ತಿಳಿಯುತ್ತದೆ.

ಅಸಾಮಿನಲ್ಲಿ ೬೦೦ ಜನರಿಗೆ ಶಿಕ್ಷೆ

೩ ಲಕ್ಷ ೩೫ ಸಾವಿರ ರೂ. ದಂಡ

ಅಸಾಮಿನಲ್ಲಿ ಇತ್ತೀಚೆಗೆ ನಡೆದ ಗಲಭೆಗಳ ನಿಮಿತ್ತ ೬೦೦ ಜನರಿಗೆ ಶಿಕ್ಷೆ ಮತ್ತು ೩ ಲಕ್ಷ ೩೬ ಸಾವಿರ ರೂಪಾಯಿ ದಂಡ ವಿಧಿಸಲಾಗಿದೆಯೆಂದು ಸರಕಾರೀ ಪ್ರಕಟಣೆ ಸಾರುತ್ತದೆ. ಮಾತ್ರವಲ್ಲದೆ ೨೫ ಜನರ ಚಟುವಟಿಕೆಗಳನ್ನು ನಿರ್ಬಂಧಿಸಿದಲ್ಲದೆ ೯೭ ಜನರನ್ನು ಬೇರೆ ಬೇರೆ ಸೆರೆಮನೆಗಳಲ್ಲಿ ಸ್ಥಾನಬದ್ಧರಾಗಿಡಲಾಗಿದೆಯಂತೆ!

ಈಸೂರು ದುರಂತದ ಪ್ರತಿಧ್ವನಿ

ಐದು ಜನರಿಗೆ ಫಾಶಿ ಶಿಕ್ಷೆ ಕಾಯಂ

ಈಸೂರು ಕೊಲೆ ಖಟ್ಲೆಯ ತೀರ್ಪನ್ನು ಪುನರ್ವಿಮರ್ಶಿಸಿ ಹ್ಯಾಕೋರ್ಟಿನ ಮುಖ್ಯ ನ್ಯಾಯಾಧೀಶ ಸರ್ ಡಾಸ್ಕರೋಲಿಯವರು ಶ್ರೀಗಳಾದ ಗುರಪ್ಪ, ಮಲ್ಲಪ್ಪ, ಸತ್ಯನಾರಾಯಣಾಚಾರ್ಯ, ಹಾಲಪ್ಪ ಮತ್ತು ಶರ್ಕರಪ್ಪ ಈ ಐವರಿಗೆ ಫಾಶಿ ಶಿಕ್ಷೆ ಕಾಯಂ ಮಾಡಿದರು. ಮತ್ತು ಶ್ರೀಮತಿಯರಾದ ಹಾಲಮ್ಮ, ಪಾರ್ವತಮ್ಮ ಮತ್ತು ಸಿದ್ಧಮ್ಮ ಹಾಗೂ ಶ್ರೀಗಳಾದ ನೀಲಕಂಠಪ್ಪ, ಸುಬ್ರಹ್ಮಣ್ಯ, ಗುರುಶಾಂತಪ್ಪ ಮತ್ತು ನಾಗೇಶಾಚಾರಿ ಇವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಬೇರೆ ೧೧ ಜನರಿಗೆ ೧೦ರಿಂದ ಹತ್ತು ವರ್ಷಗಳ ವರೆಗೆ ಬೇರೆ ಬೇರೆ ಅವಧಿಯ ಶಿಕ್ಷೆ ವಿಧಿಸಲಾಗಿದೆ. ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಶ್ರೀ. ಎನ್. ಹನುಮಂತಪ್ಪ ಎಂಬವರ ಬಿಡುಗಡೆಯಾಗಿದೆ.

ಬೊಂಬಯಿಯಲ್ಲಿ ಆಹಾರದ ಅಭಾವ

ಬೊಂಬಾಯಿಯಲ್ಲಿ ಆಹಾರ ಸಾಮಗ್ರಿಗಳ ಕೊರತೆಯುಂಟಾಗಿದೆಯೆಂದು ವರ್ತಕ ಸಂಘವು ವೈಸರಾಯರಲ್ಲಿ ವಿನಂತಿಸಿದೆ; ಮುಂಬಯಿ ಗವರ್ನರರಲ್ಲಿಗೆ ಈ ಬಗ್ಗೆ ಶಿಷ್ಟಮಂಡಳವೊಂದು ಹೋಗಿದೆ. ಗವರ್ನರರು ಶಿಷ್ಟಮಂಡಳದ ದೂರನ್ನು ಕೇಳಿ, ಆ ಕುರಿತು ಮಾತನಾಡಲು ತಾನೇ ಸ್ವತಃ ವೈಸರಾಯರಲ್ಲಿಗೆ ಹೋಗುವೆನೆಂದರು. ಬೊಂಬಯಿಯಲ್ಲಿ ಗೋಧಿ ಖಂಡಿಗೆ ರೂ ೬೨ರಂತೆ ಮಾರಬೇಕೆಂಬ ನಿರ್ಬಂಧವಿದ್ದರೂ, ರೂ. ೮೦ ಕೊಟ್ಟರೂ ಸಿಗುವುದಿಲ್ಲವಂತೆ! ಅಕ್ಕಿಯ ಬೆಲೆಯು ಅಲ್ಲಿ ವಿಪರೀತಕ್ಕೇರಿರುವುದೆಂದು ಸುದ್ದಿ.

ಮದ್ರಾಸಿನಲ್ಲಿ ಕೊಲೆರಾ

ತ್ರಿಚುನಾಪಳ್ಳಿ ಮೊದಲಾದ ಜಿಲ್ಲೆಗಳಲ್ಲಿ ಹರಡಿದ್ದ ಕೊಲೆರಾ ರೋಗವು ಈಗ ಮದ್ರಾಸ್ ನಗರಕ್ಕೂ ಹರಡಿದೆಯಾಗಿ ಸುದ್ದಿ ಬಂದಿದೆ. ಜನರು ದಾಸು ಹಾಕಿಸುವುದು, ಶುಚಿತ್ವವನ್ನಿಡುವುದೇ ಮೊದಲಾದ ಪ್ರತಿಬಂಧಕ ಉಪಾಯಗಳನ್ನು ಕೈಕೊಳ್ಳುವಂತೆ ಪ್ರಚಾರಗಳಾಗುತ್ತಿವೆ. ಇದರೊಂದಿಗೆ, ಆಹಾರ ಸಾಮಗ್ರಿಗಳಿಲ್ಲದೆ ಜನರು ಅರ್ಧೋಪವಾಸದಿಂದ ದಿನತೆಗೆಯುತ್ತಿರುವಾಗ ರೋಗಗಳು ಅಂಥವರಿಗೇ ಹೆಚ್ಚಾಗಿ ಬಾಧಿಸುತ್ತಿರುವುದು ಸಹಜವಾದ್ದರಿಂದ, ಸರಕಾರವು ಆಹಾರ ಸಾಮಗ್ರಿಗಳು ಸರಿಯಾಗಿ ಸಿಗುವಂತೆ ಮಾಡುವುದೂ ಅವಶ್ಯವಾಗಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರು ಮುನ್ಸಿಪಲ್ ಚೆಯರ್‌ಮ್ಯಾನರ ಚುನಾವಣೆ.

ಮುನಿಸಿಪಾಲಿಟಿಯ ಪ್ರಥಮ ಮುಸ್ಲಿಂ ಚೆಯರ್‌ಮ್ಯಾನರು

ಕಳೆದ ೧೧ನೇ ಸೋಮವಾರ ಬೆಳಗ್ಗೆ ಗಂಟೆ ೧೧ಕ್ಕೆ ಸರಿಯಾಗಿ ಸ್ಥಳೀಯ ಮುನ್ಸಿಪಲ್ ಚೆಯರ್‌ಮ್ಯಾನರ ಚುನಾವಣೆಯು ಡೆಪ್ಯುಟಿ ಕಲೆಕ್ಟರ್ ಶ್ರೀ ರಾಮುಲು ಅವರ ಅಧ್ಯಕ್ಷತೆಯಲ್ಲಿ ಜರುಗಿತು. ನಾಮಕರಣಹೊಂದಿದ ೨೪ ಮಂದಿ ಕೌನ್ಸಿಲರರಲ್ಲಿ ೨೬ ಮಂದಿ ಈ ಹೊಸ ಕೌನ್ಸಿಲಿನ ಪ್ರಥಮ ಸಭೆಗೆ ಬಂದಿದ್ದರು. ಕೌನ್ಸಿಲರರೆಲ್ಲ ರಾಜಪ್ರತಿಜ್ಞೆಯನ್ನು ಮಾಡಿದ ಒಳಿಕ, ಕಮಿಶನರರು ಈ ಚುನಾವಣೆಯ ಸಂಬಂಧವಾದ ಕ್ರಮ ನಿಬಂಧನೆಗಳನ್ನು ಓದಿ ಹೇಳಿದರು.

ಶ್ರೀ ಶ್ರೀಸ್ಟರ ಉಮೇದುವಾರಿಕೆಯನ್ನು ಶ್ರೀ ಜೋನ್ ಗೋನ್ಸಾಲ್ವಿಸ್‌ರು ಸೂಚಿಸಿ, ಶ್ರೀ ಸಿ. ಎಲ್. ಲೋಬೋರವರು ಅನುಮೋದಿಸಿದರು. ಶ್ರೀ ಪುತ್ತೂರು ಹುಸೇನ್ ಸಾಹೇಬರ ಉಮೇದುವಾರಿಕೆಯನ್ನು ಶ್ರೀ ಯು. ಪಮ್ಮಬ್ಬನವರು ಸೂಚಿಸಿ, ಶ್ರೀ ಅಹಮ್ಮದ್ ಹುಸೇನರು ಅನುಮೋದಿಸಿದರು; ಶ್ರೀ ಪಿ. ಆರ್. ಆರ್. ಪೂಂಜರ ಉಮೇದುವಾರಿಕೆಯನ್ನು ಶ್ರೀ ಎಂ. ರಾಮಚಂದ್ರ ಪೈಗಳು ಸೂಚಿಸಿ, ಶ್ರೀ. ಡಿ. ನರಸಿಂಹ ಪೈಗಳು ಅನುಮೋದಿಸಿದರು. ಶ್ರೀ ಜಿ. ದತ್ತಾತ್ರೆಯರಾಯರ ಉಮೇದುವಾರಿಕೆಯನ್ನು ಶ್ರೀ. ಜೆ. ಎಸ್. ಸುವರ್ಣರು ಸೂಚಿಸಲು, ಅನುಮೋದಕರಿಲ್ಲದೆ ಹೋಗಿ 'ಮತದಾನ'ವು ಉಳಿದ ಮಂದಿ ಉಮೇದುವಾರರ ಹೆಸರಲ್ಲಿ ನಡೆಯಿತು.

ಪ್ರಥಮ ಮತದಾನದ ಕಾಲದಲ್ಲಿ ಶ್ರೀ. ಪುತ್ತೂರು ಹುಸೇನ್ ಸಾಹೇಬರಿಗೆ ೯ ಮತಗಳೂ, ಶ್ರೀ. ಪೂಂಜರಿಗೆ ೯ ಮತಗಳೂ, ಶ್ರೀ. ಎಂ. ಎಸ್. ಶ್ರೀಷ್ಟರಿಗೆ ೬ ಮತಗಳೂ ದೊರಕಿ, ಮೂರನೆಯವರ ಉಮೇದುವಾರಿಕೆ ವ್ಯರ್ಥವಾಗಿ ತಿರುಗಿ ಮತದಾನವು ಶ್ರೀಗಳಾದ ಸಾಹೇಬರ ಮತ್ತು ಪೂಂಜರ ಹೆಸರಲ್ಲಿ ನಡೆದಾಗ, ಶ್ರೀ ಪುತ್ತೂರು ಹುಸೇನ್ ಸಾಹೇಬರಿಗೆ ೧೫ ಮತಗಳೂ ಎರಡನೆಯವರಿಗೆ ೧೦ ಮತಗಳೂ ದೊರಕಿ ಶ್ರೀ ಸಾಹೇಬರು ಈ ಮುನಿಸಿಪಾಲಿಟಿಯ ಪ್ರಥಮ ಮುಸ್ಲಿಂ ಚೆಯರ್‌ಮ್ಯಾನರಾಗಿ ಬಹುಮತದಿಂದ ಚುನಾಯಿಸಲ್ಪಟ್ಟರು.

ಈ ಮುನಿಸಿಪಾಲಿಟಿಯ ಪ್ರಥಮ ಚೆಯರ್‌ಮ್ಯಾನರಾಗಿ ಒಬ್ಬ ಮುಸ್ಲಿಮರು ಚುನಾಯಿಸಲ್ಪಟ್ಟ ಸಂದರ್ಭವನ್ನು ಎತ್ತಿಕೊಂಡು ಶ್ರೀ ಎಂ. ಎಸ್. ಶ್ರೀಷ್ಟ, ಶ್ರೀ. ರಂಗನಾಥ ಪೂಂಜ, ಶ್ರೀ. ಸಿ. ಎಲ್. ಲೋಬೋ, ಶ್ರೀ ಯು. ಹಮ್ಮಬ್ಬ ಶ್ರೀ. ಜಿ. ದತ್ತಾತ್ರೆಯರಾವ್ ಮೊದಲಾದವರು ಭಾಷಣ ಮಾಡಿ, ಸಂತೋಷ ಪ್ರದರ್ಶಿಸಿ, ಚೆಯರ್‌ಮ್ಯಾನರನ್ನು ಅಭಿನಂದಿಸಿದರು. ಶ್ರೀ ರಾಮುಲು (ಸಭಾಧ್ಯಕ್ಷರು) ಅವರೂ, ಕಮಿಶನರ್ ಶ್ರೀ. ರಾಮಸ್ವಾಮಿ ಮುದಲಿಯಾರರೂ ಚೆಯರ್‌ಮ್ಯಾನರ ಆಯ್ಕೆಯ ವಿಚಾರದಲ್ಲಿ ಅಭಿನಂದಿಸಿದರು. ಚೆಯರ್‌ಮ್ಯಾನರು ತಮ್ಮ ಸ್ಥಾನವನ್ನು ಅಲಂಕರಿಸಿ, ಎಲ್ಲರಿಗೂ, ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು.

ಈ ಮುನಿಸಿಪಾಲಿಟಿಯ ವೈಸ್ ಚೆಯರ್‌ಮ್ಯಾನರ ಸ್ಥಾನದ ಚುನಾವಣೆ ಇನ್ನು ಮುಂದೆ ನಡೆವುದಾಗಿದೆ.

ಮಂಗಳೂರಿನ ರೆ॥ ಡಿ॥ ಆಫೀಸರು

ಮಂಗಳೂರು ರೆ॥ ಡಿ॥ ಆಫೀಸರಾದ ಶ್ರೀ. ಟಿ. ಜೋಗಪ್ಪನವರು ಅವಿನಾನ್ ದೀವಿಗೆ ಇನಸ್ಪೆಕ್ಷನ್ ಸಂಬಂಧ ತೆರಳಲಿದ್ದು, ಅವರ ಚಾರ್ಜನ್ನು ಸದ್ಯಕ್ಕೆ ಪುತ್ತೂರು ವಿಭಾಗದ ಡೆ॥ ಕಲೆಕ್ಟರರಾದ ಶ್ರೀ. ಶ್ರೀರಾಮುಲು ಅವರು ಆಗಲೇ ವಹಿಸಿಕೊಂಡಿರುವರು. ಈ ಮಂಗಳೂರು ವಿಭಾಗಕ್ಕೆ ಬೇಗನೇ ಶ್ರೀ ಜೆ. ಜೆ. ಪೊನ್ನಯ್ಯ ಅವರು ಡೆ॥ ಕಲೆಕ್ಟರರಾಗಿ ಬರಲಿರುವರು ಎಂದು ಹೇಳಲಾಗಿದೆ.

ದ. ಕ. ಹಿಂದೂಸ್ಥಾನ ಸ್ಕೌಟ್ ಅಸೋಸಿಯೇಶನ್

ಈ ಸಂಘದ ಕಾರ್ಯಕಾರೀ ಸಮಿತಿಯು ಈಚೆಗೆ ಸ್ಥಳೀಯ ಥಿಯಸೋಫಿಕಲ್ ಲಾಜಿನಲ್ಲಿ ಶ್ರೀ. ಬಿ. ಅನಂತರಾಯರ ಅಧ್ಯಕ್ಷತೆಯಲ್ಲಿ ಸೇರಿ, ಇದೇ ತಾ ೧೬-೧೭ರಲ್ಲಿ, ಉಡುಪಿ ತಾಲೂಕು ಇನ್ನಂಜೆಯಲ್ಲಿ ಒಂದು ಸ್ಕೌಟ್ ರ್‍ಯಾಲಿಯನ್ನು ಜರುಗಿಸಬೇಕೆಂದು ನಿರ್ಧರಿಸಿತು. ಜಿಲ್ಲಾ ಸ್ಕೌಟ್ ಕಮಿಶನರರಾದ ಶ್ರೀ. ಎಂ. ಎಸ್. ಮಾಧವರಾಯರು, ಈ ಜಿಲ್ಲೆಯ ಸ್ಕೌಟ್ ಸಂಘಗಳ ೩ ತಿಂಗಳ ಸ್ಕೌಟ್ ಚಟುವಟಿಕೆಗಳ ವಿಚಾರವನ್ನು ಆರುಹಿಸಿದರು.

ಸಹಕಾರಿ ಶಿಕ್ಷಣ ತರಬೇತಿ ತರಗತಿ

ದ ಕ. ಜಿಲ್ಲಾ ಸಹಕಾರಿ ಎಡ್ವಾನ್ಸ್‌ಮೆಂಟ್ ಸಂಘದವರು ವ್ಯವಸ್ಥೆಗೊಳಿಸಿದ ಸಹಕಾರಿ ಸಂಸ್ಥೆಗಳಲ್ಲಿನ "ಸ್ಟೋರ್ ಮ್ಯಾನೇಜರು" ಮತ್ತು "ಡಿಪೊ ಕೀಪರು"ಗಳ ಟ್ರೈನಿಂಗ್ ತರಗತಿಯು ಈಚೆಗೆ, ಸೆಂಟ್ರಲ್ ಕೋ-ಓಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ, ದ ಕ ಜಿಲ್ಲಾ ಸರಕಾರೀ ಉದ್ಯೋಗಸ್ಥರ ಕೋ-ಓಪರೇಟಿವ್ ಸಂಘದಲ್ಲಿ ಆರಂಭಿಸಲ್ಪಟ್ಟ ಸಂದರ್ಭದಲ್ಲಿ ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರಾದ ಶ್ರೀ ಕಣ್ಣನ್ ನಾಯರರವರು, ಸಹಕಾರಿ ಸಂಘಗಳ ಏಳಿಗೆಗೆ ಈ ಶಿಕ್ಷಣವು ಎಷ್ಟು ಆವಶ್ಯವೆಂದು ವಿವರಿಸಿದರು. ಎಡ್ವಾನ್ಸ್‌ಮೆಂಟ್ ಸಂಘದ ಅಧ್ಯಕ್ಷರಾದ ಶ್ರೀ ಎಂ. ಎಸ್ ಮಾಧವರಾಯರೂ ಈ ವಿಚಾರದಲ್ಲಿ ಭಾಷಣಮಾಡಿದರು

ದ ಕ. ಜಿಲ್ಲಾ ಟೀಚರ್ಸ್ ಗಿಲ್ಡ್

ದ ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಟೀಚರ್ಸ್ ಕೌನ್ಸಿಲಿನವರು ಈಚೆಗೆ ಸ್ಥಳೀಯ ಕೆನರಾ ಹೈಸ್ಕೂಲಲ್ಲಿ ವೈಸ್ ಪ್ರಸಿಡೆಂಟರಾದ ಶ್ರೀ ಎಂ. ಎಸ್. ಏಕಂಬರರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ, ಕಾರ್ಯದರ್ಶಿಗಳು ಈ ಗಿಲ್ಡಿಗೆ ಸದ್ಯ ೩ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಯೂನಿಯನುಗಳು ಸೇರಿದ ಕಾರಣ ಒಟ್ಟಿಗೆ ೨೦ ಸಂಘಗಳು ಈಗ ಇರುವಂತಾಯಿತೆಂದು ತಿಳಿಸಿದರು

ಸಂತಾಪಸೂಚಕ ಸಭೆ

ಕಳೆದ ತಾ. ೪ರಲ್ಲಿ ಸಂಜೆ, ಸ್ಥಳೀಯ ಈಶ್ವರಾನಂದ ಮಹಿಳಾ ಸೇವಾಶ್ರಮದ ಸಂಘದ ಕಟ್ಟಡದಲ್ಲಿ, ಆ ಸಂಘದ ಗೌರವ ಕಾರ್ಯದರ್ಶಿಗಳೂ, ನಿವೃತ್ತ ಪೋಲೀಸ್ ಇನ್ಸ್‌ಪೆಕ್ಟರರೂ ಆದ ದಿವಂಗತ ಶ್ರೀ ಟಿ. ರಾಮರಾಯರ ನಿಧನದ ಕುರಿತು ಸಂತಾಪ ಸೂಚಿಸಲು ಶ್ರೀಮತಿ ಎಸ್. ಆರ್. ಪೂಂಜ ಅವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ, ಮೃತರ ಗುಣಾತಿಶಯಗಳ ವಿಚಾರದಲ್ಲಿ ಡಾ. ಎಂ. ಕೇಶವ ಪೈ, ಶ್ರೀಗಳಾದ ಯು. ಯು. ಮಂಜಪ್ಪ, ಜಿ. ದತ್ತಾತ್ರೆಯರಾವ್, ಎಸ್. ರಾಮರಾವ್, ಯು. ಗೋಪಾಲ ನಾಯ್ಕ ಎಂ. ವೆಂಕಟೇಶ ಪೈ, ಶ್ರೀಮತಿ ಎ. ಪಾರ್ವತಿಬಾಯಿ ಅವರು ಮಾತಾಡಿದರು. ಶ್ರೀ. ಬಿ. ವೈಕುಂಠ ಬಾಳಿಗರು ವಂದನಾರ್ಪಣೆ ನಡೆಸಿದರು. ಸೇವಾಶ್ರಮದವರ ಆಶ್ರಯದಲ್ಲಿ ಮೃತರ ಸ್ಮಾರಕವೊಂದು ಏರ್ಪಾಡಾಗಬೇಕೆಂದು ನಿರ್ಧಾರವಾಯಿತು.

ಸ್ವದೇಶೀ ಸ್ಟೋರ್ಸ್

ಮಂಗಳೂರು 'ಅಖಿಲಭಾರತ'ಚರಕಾ ಸಂಘದಿಂದ ಅಧಿಕೃತಪಟ್ಟು ಇಲ್ಲಿಯ ಮಂಗಳೂರು ಸ್ವದೇಶೀ ಸ್ಟೋರ್ಸಿನಿಂದ ನಡೆಸಲ್ಪಡುವ ಮಂಗಳೂರು ಖಾದಿ ಉತ್ಪತ್ತಿ ಕೇಂದ್ರದ ಕಳೆದ ೧೯೪೨ನೇ ಇಸ್ವಿ ಜನವರಿಯಿಂದ ದಶಂಬರ ಆಖೈರ ವರೆಗಿನ ಖಾದಿ ಉತ್ಪತ್ತಿಯು ಈ ಕೆಳಗೆ ಕೊಟ್ಟಂತೆ ಆಗಿರುತ್ತದೆ ಕೂಲಿಗೆ ನೇಯುವವರು ೬೩ ಜನರು ಇವರಿಂದ ಬಂದ ನೂಲಿನ ಲಟ್ಟಿಗಳು ೮೯೫. ಇದರ ಕ್ರಯ ರೂಪ್ಯಾ ೬೯೯-೧೪-೯ ಖಾಸಗಿ ಬಗ್ಗೆ ನೂಲು ಕೊಟ್ಟು ಬದ್ಲಿಗೆ ಖಾದಿ ಪಡಕೊಂಡವರ ನೂಲಿನ ಲಟ್ಟಿಗಳು ೫೯೭೩ ಇದರ ಕ್ರಯ ೪೫೮-೧೩-೦ ಕೂಡಾ ೧೪೮೩ ಲಟ್ಟಿಗಳಿಗೆ ಕ್ರಯ ರೂಪ್ಯಾ ೧೧೫೮-೧೦ ೯ ಆಗಿರುತ್ತದೆ. ಈ ಪೈಕಿ ದಶಂಬರ ತಿಂಗಳ ಆಖೈರ ವರೆಗೆ ಉತ್ಪತ್ತಿಯಾದ ಖಾದಿ ೪೯೦॥ ಗಜ ಇದರ ಕ್ರಯ ರುಪ್ಯಾ ೩೦೩-೭-೦ ಆಗಿರುತ್ತದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮುದ್ರಾಡಿ,

ಮಾಮೂಲಿನಂತೆ ಈ ವರ್ಷವೂ ಇಲ್ಲಿ ತಾ. ೧೭ರಂದು ಮಧ್ಯಾಹ್ನ ಘಂಟೆ ೧೨ರಿಂದ ೭ರ ತನಕ ಶ್ರೀ ಕೆ. ಸದಾಶಿವ ಭಟ್, ಕಾರ್ಕಳ ಇವರ ಅಧ್ಯಕ್ಷತೆಯಲ್ಲಿ ಕೋಣಗಳ ಸ್ಪರ್ಧೆಯಾನೆ ವಿನೋದ ಕಂಬಳಗಳವು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು.

ಕಾಪು

ಕಾಪಿನಲ್ಲಿ ೯ರಲ್ಲು 'ದಿ ಟ್ರೂಪ್ಸ್ ಎಮೇನಿಟಿಸ್ ಫಂಡಿ'ನ ಸಹಾಯಾರ್ಥವಾಗಿ ಜೋಡಾಟ ಒಂದನ್ನು ಜರಗಿಸಿ ಟಿಕೇಟು ಮಾರಾಟದಿಂದ ಖರ್ಚು ಕಳೆದು ಉಳಿದ ೨೦೦-೧-೩ಯನ್ನು ತಾಲೂಕು ಖಜಾನೆಗೆ ರವಾನಿಸಿದ್ದಾರೆಂಗಿ ತಿಳಿದು ಬರುತ್ತದೆ.

ಉಡುಪಿ

ಜುಲ್ಮಾನೆ

ಉಡುಪಿ ತಾಲೂಕು ಕೊಡವೂರು ಗ್ರಾಮದ ಫಕೀರರಿಗೆ ೧೯೪೧ನೇ ಇಸ್ವಿ ಆಗೋಸ್ತು ತಾ. ೨೭ರಲ್ಲಿ ಒಂದು ಮಾನಹಾನಿಕಾರಕವಾದ ಪತ್ರವನ್ನು ಕಳುಹಿಸಿದರೆಂದು, ಉಡುಪಿಯ ಸ್ಪೆಶಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಪಿ. ಗೋಪಾಲ ನಾಯ್ಕರು, ೨೨ ಮಂದಿ ದೇವಡಿಗರಿಗೆ, ತಲಾ ೩-೩ ರೂಪಾಯಿಗಳ ಜುಲ್ಮಾನೆ ತಪ್ಪಿದರೆ ೧೪ ದಿನಗಳ ಸಜೆ ಎಂದು ವಿಧಿಸಿದರು.

ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿ ಇವರ ಬಿಡುಗಡೆ

ಕಳೆದ ಸೆಪ್ಟಂಬರ ೯ಕ್ಕೆ ಮಡಿಕೇರಿ ಸೋಮವಾರ ಪೇಟೆಯಲ್ಲಿ ಗಾಂಧಿಜಿ ಬಂಧನದ ಸಂಬಂಧ ಕೂಡಿದ ಸಭೆಯಲ್ಲಿ ರಾಜದ್ರೋಹಾತ್ಮಕ ಆರೋಪದ ಭಾಷಣ ಮಾಡಿದರೆಂದು ೩ ತಿಂಗಳ ಶಿಕ್ಷೆ ವಿಧಿಸಿ ಮಡಿಕೇರಿ ಜೈಲಿನಲ್ಲಿರಿಸಲ್ಪಟ್ಟ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಗಳು ಈಚೆಗೆ ಬಿಡುಗಡೆಯಾಗಿಬಂದಿರುವರು.

ಕಾರ್ಕಳ

ಚುನಾವಣೆ

ಶೀಘ್ರದಲ್ಲಿಯೇ ನಡೆಯಲಿರುವ ಮದ್ರಾಸು ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆಗೆ ಇಲ್ಲಿಯ ಬೋರ್ಡ ಹೈಸ್ಕೂಲಿನ ಅಧ್ಯಾಪಕ ಶ್ರೀ ಯು. ದೇವರ ರಾವ್ ಎ. ಯಲ್. ಟಿ ಯವರು ಓರ್ವ ಉಮೇದ್ವಾರರಾಗಿರುವರೆಂದು ತಿಳಿದಿದೆ

ಸಭೆ ಸಮಾಚಾರಗಳು

ಶ್ರೀ ಕೆ ಸುಬ್ರಾಯ ಕಾಮತರ ಅಧ್ಯಕ್ಷತೆಯಲ್ಲಿ ಕೂಡಿದ ಒಂದು ಸಭೆಯಲ್ಲಿ ಡಾಕ್ಟರ ಯಂ. ಕೇಶವ ಪೈಯವರು ಶಿಕ್ಷಣದಲ್ಲಿ ಧರ್ಮಬೋಧೆಯ ಅವಶ್ಯಕತೆಯ ಕುರಿತು ಭಾಷಣ ಮಾಡಿದರು ಬೋಳ ಸಿರಿದಾರು ಕಾಡೆಟ್ ಶಾಲೆಯ ವರ್ಧಂತಿ ಉತ್ಸವವು ಶ್ರೀ ಕೆ ಪಿ ಶೇಷಗಿರಿ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಕಳ ಕೇಂದ್ರದ ಉಪಾಧ್ಯಾಯರ ಸಭೆ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕೂಡಿತು.

ಕೈದು-ಬಿಡುಗಡೆ

ಇದೇ ತಾ, ೯ರ ದಿನ ಅನಧಿಕೃತ ಕರಪತ್ರಗಳನ್ನು ಹಂಚಿದ ಶ್ರೀ ಕೆ ರಂಗನಾಥ ಪ್ರಭು ಮತ್ತು ಶ್ರೀ ಐ ವಿ ಗಣಪತಿಯವರನ್ನು ಪೋಲೀಸರು ಕೈದುಮಾಡಿದ್ದಾರೆ ಹಿಂದೆ ಕೋರ್ಟು ಪಿಕೆಟಿಂಗ ಮಾಡಿ ಜೈಲಿಗೆ ಹೋದ ಶ್ರೀ ಮಂಜುನಾಥ ಕುಡ್ವ ಮತ್ತು ರಾಘವೇಂದ್ರ ನಾಯಕರು ಶಿಕ್ಷೆಯ ಅವಧಿ ಮುಗಿಸಿ ಮರಳಿರುತ್ತಾರೆ

ಹಿಂದೀ ಪ್ರಚಾರ

ಕಳೆದ ನವಂಬರ ತಿಂಗಳ ಹಿಂದೀ ಪರೀಕ್ಷೆಗಳನ್ನು ಕೊಟ್ಟ ೨೪ ಮಂದಿಯಲ್ಲಿ ೨೧ ಮಂದಿ ಉತ್ತೀರ್ಣರಾಗಿದ್ದಾರೆ. ಆಗೋಸ್ತು ತಿಂಗಳಲ್ಲಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸರ್ಟಿಫಿಕೇಟುಗಳನ್ನು ಕೊಡುವ ಒಂದು ಸಮಾರಂಭವು ಇದೇ ತಾ. ೨೪ರ ದಿನ ಸ್ವಸ್ತಿ ಶ್ರೀ. ಲಲಿತ ಕೀರ್ತಿ ಭಟ್ಟಾರಕ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗುವದು.

ಸಿನೆಮಾ ಸುದ್ದಿ

ಊರ್ಮಿಳಾ ಪಂಜಾಬಿ

ಪ್ರಭಾತದ 'ದಸ್‌ಬಜೇ' ಚಿತ್ರದಲ್ಲಿ ಪಾತ್ರ ವಹಿಸಿರುವ ಊರ್ಮಿಳಾ ಪಂಜಾಬಿಯ ಪ್ರಿಯತಮನು ಬರೋಡದ ಕ್ಯಾಪ್ಟನ್ ಷರೀಫ್. ಆಕೆ ಆತನನ್ನು ಮದುವೆಯಾಗುತ್ತಾಳಂತೆ! ಆತನ ಕಾರ್ ಡ್ರೈವರನ ಮೇಲೆ ಕಳ್ಳತನದ ವ್ಯವಹಾರವನ್ನು ಹೂಡಿದ್ದಾಳೀಗ ಆಕೆ.

ಕಪಾಳ ಮೋಕ್ಷ!

ಸಿನೆಮಾ ನಟಿಯರೇನೋ ಚೆಲುವೆಯರು ಬೆಡಗುಗಾತಿಯರಹುದು. ಆದರೆ ಅವರೊಡನೆ ವ್ಯವಹಾರ ತೀರಾ ಸುಖದ್ದಲ್ಲ. ಶಾಂತ ಆಪ್ಟೆಯನ್ನು ಕೆಣಕಿ ಬಾಬುರಾವ್ ಪಟೇಲನು ಕಪಾಳ ಮೋಕ್ಷ ಮಾಡಿಕೊಂಡನೆಂಬುದು ಹಿಂದಿನ ಸುದ್ದಿಯಾಯಿತು. ಹೇನ್‌ಸೆನ್ ಸ್ವಾಪರ್ ಇಂಗ್ಲೆಂಡಿನ ಪ್ರಖ್ಯಾತ ಸಿನೆಮಾ ವಿಮರ್ಶಕ, ಬಹಳ ಜನಪ್ರಿಯ. ಒಮ್ಮೆ ಆತ ವಿಲಿಯಂ ಪಾಸ್ಟರ್ ನಟಿಯನ್ನು ವಿಮರ್ಶೆ ಮಾಡಿ ಕೆಣಕಿದ. ಆತನಿಗೂ ಕೆನ್ನೆಗೆ ಏಟು ತಪ್ಪಲಿಲ್ಲ. ಹಾಗೂ ಸಿನೆಮಾ ವಿಮರ್ಶೆ ಮಾಡುವ ಮೊದಲು ಕೆನ್ನೆಯನ್ನು ಇನ್ಶೂರ್ ಮಾಡಿಕೊಂಡರೆ ಒಳ್ಳೆಯದು!

ಸಿನೆಮಾದಲ್ಲಿ ಪೌರಾಣಿಕ ವ್ಯಕ್ತಿಗಳು

'ನನ್ನ ಬಾಲ್ಯದಲ್ಲಿ ಹಿರಿಯರು ಪೌರಾಣಿಕ ಕಥೆಗಳನ್ನು ಹೇಳುವುದನ್ನು ಕೇಳಿ ನಾನು ಬಹಳ ಮೆಚ್ಚಿದ್ದೇನೆ. ಆ ಪೌರಾಣಿಕ ವ್ಯಕ್ತಿಗಳ ಹೆಸರು ಕೇಳಿದಾಕ್ಷಣ ಆನಂದವುಕ್ಕೇರುತ್ತದೆ. ಸಿನೆಮಾಗಳಲ್ಲಿ ಈ ಮನೋಹರ ಕಥೆಗಳನ್ನು ಅಂದಗೆಡಿಸುತ್ತಾರೆ. ರಾಮ, ಕೃಷ್ಣ, ನಾರದ ಇತ್ಯಾದಿ ವೇಷದಲ್ಲಿ ನಮ್ಮ ನಟರು ಅಭಿನಯಿಸುವುದನ್ನು ಕಂಡು ನನಗೆ ಅಸಹ್ಯವೆನ್ನಿಸುತ್ತದೆ. ಸಿನೆಮಾದಲ್ಲಿ ಈ ಭವ್ಯ ಪುರುಷರ ವ್ಯಕ್ತಿತ್ವವೇ ಹಾಳಾಗುತ್ತದೆ. ಇಂಥ ಸಿನೆಮಾಗಳನ್ನು ನಾನು ಪ್ರೋತ್ಸಾಹಿಸಲಾರೆ' ಎಂದು ರಾಜಾಜಿ ಹೇಳುತ್ತಾರೆ.

'ಕಿಸಿ ಸೇ ನಾ ಕಹ್‌ನಾ'

ಇದು ಚಿತ್ರಾ ಪ್ರೊಡಕ್ಷನ್ನಿನ ಪ್ರಥಮ ಚಿತ್ರ. ಪಹಾಡಿ ಸನ್ಯಾಲ್ ಲೀಲಾ ಚಿಟ್ನಿಸ್ ಇದರಲ್ಲಿ ಅಪೂರ್ವವಾಗಿ ಜತೆಗೂಡಿದ್ದಾರೆ. ಕೇಶವರಾವ್ ದಾತೆ, ಘೋರಿ ಶಾಜಾದಿ ಇತ್ಯಾದಿ ನಟನಟೀವರ್ಗದಿಂದ ಕೂಡಿದೆ. ನಟನೆ, ಅಭಿನಯ, ಸಂಗೀತ ಕಥೆಗಳಲ್ಲಿ ಇದು ಅತ್ಯುತ್ತಮವಾದಿದೆ. ಬಾಲಾಜಿ ಟಾಕೀಸಿನಲ್ಲಿ ಈಗ ಪ್ರದರ್ಶಿತವಾಗುವುದು.

'ಭಕ್ತ ಕಬೀರ' ಚಿತ್ರಕ್ಕೆ ಪ್ರತಿಬಂಧ?

ಬೊಂಬಯಿ ಪಂಜಾಬ್ ಸರಕಾರಗಳು 'ಭಕ್ತ ಕಬೀರ' ಚಿತ್ರದ ಹಿಂದು ಮುಸ್ಲಿಂ ಐಕ್ಯತೆಯ ವಿಷಯವನ್ನು ಮನಗಂಡು ಅದಕ್ಕೆ ತೆರಿಗೆ ಮಾಫಿ ಮಾಡಿರುವುದಾಗಿ ಪ್ರಕಟವಾಗಿರುವುದಷ್ಟೆ? ಆದರೆ ಈಗ ಆ ಸಿನೆಮವನ್ನು ಯಾವ ಪ್ರಾಂತದಲ್ಲೂ ಪ್ರಕಟಿಸಬಾರದೆಂಬ ನಿರ್ಬಂಧಕಾಜ್ಞೆ ಹೊರಟಿದೆಯೆಂದು ಒಂದು ವದಂತಿ!

'ಮೈಸೂರ್' ಮೂವಿಟೋನ್

ಎಂಬ ಹೆಸರಿನ ಒಂದು ಪ್ರೈವೆಟ್ ಲಿಮಿಟೆಡ್ ಕಂಪೆನಿಯು, ಬೆಂಗಳೂರಲ್ಲಿ ಸ್ಥಾಪಿತವಾಗಿದೆ. ಮೈಸೂರು ಬೆಂಗಳೂರುಗಳ ಕೆಲ ಆಢ್ಯ ಶ್ರೀಮಂತರು ಈ ಮೂವಿಟೋನ್ ಸ್ಥಾಪಿಸಿದ್ದಾರೆ. ಶ್ರೀ. ಎಚ್. ಎಂ. ರೆಡ್ಡಿಯವರು ಮೇನೇಜಿಂಗ್ ಡೈರೆಕ್ಟರಾಗಿರುವರು. ಹಿಂದಿ, ತಮಿಳು, ತೆಲುಗು, ಕನ್ನಡಗಳಲ್ಲಿ ವಾಕ್ಚಿತ್ರಗಳನ್ನು ತಯಾರಿಸುವ ವ್ಯವಸ್ಥೆಯುಂಟು. ಕನ್ನಡ ಚಿತ್ರಗಳನ್ನು ತಯಾರಿಸಲು, ಕನ್ನಡೇತರ ಪ್ರಾಂತಗಳಿಗೆ ಹೋಗಬೇಕಾದ ಪ್ರಯಾಸವು ಇದರಿಂದ ನಿಂತಿತು. ಕನ್ನಡಿಗರಿಗೆ ಇದೊಂದು ಹೆಮ್ಮೆಯ ವಿಷಯ.

ಶಾಂತಾ ಆಪ್ಟೆ

ಸನ್‌ರೈಸ್ ಪ್ರೊಡಕ್ಷನ್ ಇವರ ಚಿತ್ರ 'ದುಹೈ' ಎಂಬುದರಲ್ಲಿ ಈಗ ಅಭಿನಯಿಸುತ್ತಾಳೆ. ಶಾಂತಾ ಆಪ್ಟೆ ನೂರ್ಜಹಾನ್, ಕುಮಾರ್, ಜಾರೀನ್, ಅನ್ಸಾರಿ, ಮಿರ್ಜಾ ಮುಶ್ರಫ ಇವರೇ ನಟವರ್ಗದವರು.

'ಶಾರದಾ'

ಕರ್ದಾರ್ ಪ್ರೊಡಕ್ಷನಿನ ಚಿತ್ರ ಕರಾಚಿಯಲ್ಲಿ ಇದು ಪ್ರದರ್ಶಿತವಾಗುತ್ತಿದೆ. ಮೆಹತಾಬ್ ಇದರಲ್ಲಿ ಪ್ರಾಮುಖ್ಯ ಪಾತ್ರ ವಹಿಸುತ್ತಾಳೆ. ಉಲ್ಹಾಸ್, ವಸ್ತಿ, ಶಾ, ಪಂಡಿತ ಬದ್ರಿ ಪ್ರಸಾದ್, ನಿರ್ಮಲ ಕುಮಾರಿ ಇವರೇ ಮೊದಲಾದ ನಟವರ್ಗ. ನಿರ್ಮಲಕುಮಾರಿ ಹೊಸ ತಾರೆ; ಕೋಕಿಲಕಂಠೆ.

ನಮಸ್ತೇ

ಕರ್ದಾರರ ಸಂಗೀತಮಯ ಚಿತ್ರ. ಪ್ರದರ್ಶನಕ್ಕೆ ತಯಾರಾಗುತ್ತಿದೆ. ಪ್ರತಿಮಾದಾಸ ಗುಪ್ತೆ, ವಸ್ತಿ, ಜಗದೀಶ್, ನಯಂಪಳ್ಳಿ, ಮಿತ್ರ ಮೊದಲಾದವರು ಇದರಲ್ಲಿ ನಟಿಸುವರು.

ಕಾನೂನು

ಎಂಬುದು ಕರ್ದಾರರ ಮೂರನೆಯ ಚಿತ್ರ. ಇದೂ ತಯಾರಿಯಲ್ಲಿದೆ. ಮೆಹತಾಬ್, ಶಾಹುಮೋದಕ್, ನಿರ್ಮಲ ಕುಮಾರಿ ಮೊದಲಾದವರು ಇದರಲ್ಲಿ ನಟವರ್ಗ.

'ನೌಕರ್'

ಎಂಬುದು ಸನ್‌ರೈಸ್ ಪಿಕ್ಚರ್ಸ್ ಕೃತಿ. ಚಂದ್ರಮೋಹನ್ ಮತ್ತು ಶೋಭನಾ ಸಮರ್ಥ ಇವರು ಮುಖ್ಯ ಪಾತ್ರ ವಹಿಸುತ್ತಾರೆ. ಶೌಕತ್ ಹುಸೇನ್ ಮತ್ತು ನೂರ್ಜಹಾನ್ (ಖಾನ್‌ದಾನ್ ಖ್ಯಾತಿಯ) ಇವರು ಈ ಚಿತ್ರ ತಯಾರಿ ಮಾಡುತ್ತಾರೆ.

'ರಾಧಾರಮಣ' ಕನ್ನಡ

ಎಂ. ವಿ. ರಾಜಮ್ಮ 'ರಾಧಾರಮಣ' ಎಂಬ ಕನ್ನಡ ಚಿತ್ರದಲ್ಲಿ ಅಭಿನಯಿಸುತ್ತಾಳೆಂದೂ, ಮದ್ರಾಸಿನ ನ್ಯೂಟೋನ್ ಸ್ಟುಡಿಯೋದಲ್ಲಿ ಅದು ಬೇಗನೇ ಚಿತ್ರಿತವಾಗುವುದೆಂದೂ ಸುದ್ದಿ. ಶ್ರೀ. ಸಿಂಹರು ಇದರ ನಿರ್ದೇಶಕರೆಂದು ತಿಳಿದಿದೆ.

ನ್ಯೂ ಚಿತ್ರಾದಲ್ಲಿ

'ಪ್ರಹ್ಲಾದ' ಪ್ರಾರಂಭೋತ್ಸವ

ಸ್ಥಳೀಯ ನ್ಯೂ ಚಿತ್ರ ಟೋಕೀಸಿನಲ್ಲಿ ಕನ್ನಡ ಪ್ರಹ್ಲಾದ ಚಿತ್ರದ ಪ್ರಾರಂಭೋತ್ಸವ ಮತ್ತು ಪ್ರಥಮ ಪ್ರದರ್ಶನವು ತಾ ೧೪ರಂದು ಸಂಜೆ ನೆರವೇರುವುದು. ನಗರದ ಪತ್ರಿಕಾ ಸಂಪಾದಕರು ಆಮಂತ್ರಿತರಾಗಿರುವರು. ಶ್ರೀ ವೈಕುಂಠ ಬಾಳಿಗರು ಸಂಜೆ ೬-೩೦ ಗಂಟೆಗೆ ಪ್ರಾರಂಭೋತ್ಸವವನ್ನು ನೆರವೇರಿಸುವರು ಆ ಮೇಲೆ ೭-೩೦ಕ್ಕೆ ಚಿತ್ರ ಪ್ರದರ್ಶನವಿದೆ. ಕುಮಾರಿ ಚಂದ್ರಮ್ಮ, ಗಣಪತಿ ಭಟ್ಟ (ದಕ್ಷಿಣ ಕನ್ನಡದವರು) ಶ್ರೀನಿವಾಸ ಮೂರ್ತಿ, ರಾಜಮ್ಮ, ನಾಗಲಕ್ಷ್ಮಿ ಮೊದಲಾದವರು ಇದರಲ್ಲಿ ನಟ ನಟೀ ವರ್ಗ.

ಇಕೊ—ಜಲಪರ್ಯಟನಕ್ಕೆ ಸಿದ್ಧವಾದ ಹೊಸ ನೌಕೆ! ಇದೊಂದು ಮಾನವನ ಕೌಶಲದ ಕುರುಹಾಗಿದೆ; ಈ ಮುದ್ದು ಮಗುವನ್ನು ತನ್ನ ಹರವಾದ ಎದೆಯಮೇಲೆ ಆಡಿಸಲು ಕಡಲು ತವಕಿಸುತ್ತಿರುವಂತಿದೆ.

ಭಾರತವು ತನ್ನ ಹೊಸಸ್ವದೇಶೀ ಉದ್ಯಮಗಳ ಬಗ್ಗೆ ಹೆಮ್ಮೆಪಡಬಹುದಾಗಿದೆ. ನಮ್ಮ ದೇಶದ ವಿಶಾಲ ಕರಾವಳಿಯಲ್ಲಿ ಹಾಗೂ ಒಳನಾಡಿನಲ್ಲಿ—ಹಲವೆಡೆಗಳಲ್ಲಿ—ಹೊಸಹೊಸ ಕಾರ್ಖಾನೆಗಳು ಮಾಯಾಜಾಲದಂತೆ ಹುಟ್ಟುತ್ತಿವೆ; ಹಿಂದೀ ಕೈಗಾರಿಕೆಗಳು ದಿನಗಳೆದಂತೆ ಹೆಚ್ಚುತ್ತಿವೆ. ಇದು ಕೊನೆಯಲ್ಲಿ ಔದ್ಯೋಗಿಕ ಸ್ವಯಂಪೂರ್ಣತೆಯಲ್ಲಿ ಪರಿಣಮಿಸುವುದು ನಿಜ: ಸದ್ಯಕ್ಕೆ ದೇಶದ ರಕ್ಷಣೆಯೇ ಈ ಪ್ರಯತ್ನಗಳ ಗುರಿಯಾಗಿದೆ.

ಈ ಬೆಲೆಯುಳ್ಳ ಸರಕುಗಳನ್ನು ದುಂದುಮಾಡುವುದು ಬೇಡ: ಹಿಂದುಸ್ಥಾನದಲ್ಲಿ ತಯಾರಾಗುವ ಪ್ರತಿವಸ್ತುವೂ ನಮ್ಮ ಯುದ್ಧದಲಗಳಿಗೆ ಬೇಕಾಗಿದೆ. ಯಾವುದನ್ನೂ ಆದಷ್ಟು ಕಡಿಮೆ ಕೊಳ್ಳಿರಿ. ರೇಶ್ಮೆಯ ಸೀರೆಕೊಳ್ಳುವುದನ್ನು ಬಿಟ್ಟುಕೊಟ್ಟರೆ, ಆ ರೇಶ್ಮೆ ಕೊಡೆ ವಿಮಾನಗಳಿಗೆ ಉಪಯೋಗಿಸ ಬಹುದಾಗಿದೆ; ಹಾಗೆಯೇ ಮೋಟಾರುಗಳಿಗೆ ಉಪಯೋಗಿಸುವ ಉಕ್ಕು ಟ್ಯಾಂಕುಗಳಿಗೂ, ಮನೆಗೆ ಹಚ್ಚುವ ಬಣ್ಣಗಳು ಸೈನಿಕರಿಗೆ—ಮುಚ್ಚು ಮರೆಯ ಸಾಧನವಾಗಿಯೂ ಉಪಯುಕ್ತವಾಗುವವು.

ನೀವು ಉಳಿಸುವ ಹಣವೂ ಯುದ್ಧದ ಒಂದು ಆಯುಧವಾಗಬಲ್ಲುದು! ಹೇಗೆ ಗೊತ್ತೇ?, ಹಿಂದುಸ್ಥಾನದ ರಕ್ಷಣಾಕಾರ್ಯದಲ್ಲಿ ಹಾಗೂ ಭಾವೀ ಔದ್ಯೋಗಿಕ ಅಭಿವೃದ್ಧಿಯ ಯೋಜನೆಯಲ್ಲಿ ಅದನ್ನು ತೊಡಗಿಸಿರಿ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್
...ಇಲ್ಲವೆ ಡಿಫೆನ್ಸ್ ಲೋನ್ಸ್
ಇವುಗಳಕ್ಕಿಂತ ಮತ್ತೇನನ್ನೂ ಕೊಳ್ಳುವ ಮೊದಲು ಕೊಂಚ ಯೋಚಿಸಿರಿ.

★ ಸರ್ಟಿಫಿಕೇಟುಗಳು ನಿಮ್ಮ ಅಂಚೆ ಕಚೇರಿಯಲ್ಲಿ ಸಿಗುವವು.
೧೦ ರೂ.ಗೆ ಹತ್ತು ವರ್ಷಗಳಲ್ಲಿ ರೂ. ೩.೯.೦ ಲಾಭ ಬರುವುದು.

C.P.U. 28. Kn.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು.

ಶ್ರೀ ಪರಮಹಂಸರು ಭಕ್ತರನ್ನು ಎಷ್ಟೋ ಪ್ರಕಾರವಾಗಿ ಧರ್ಮ ಪಥಕ್ಕೆ ಮುಂದುವರಿಸುತ್ತಿದ್ದರು

ಭಾವಮುಖಾವಸ್ಥಿತರಾದ ಶ್ರೀ ಪರಮಹಂಸರು ಈ ರೀತಿಯಾಗಿ ಸ್ತ್ರೀ ಅಥವಾ ಪುರುಷ ಪ್ರತಿಯೊಬ್ಬ ಭಕ್ತನ ಪ್ರಕೃತಿಗಾರ ಆಧ್ಯಾತ್ಮಿಕ ಭಾವವನ್ನು ಸಂಪೂರ್ಣವಾಗಿ ಅರಿತು ಅವರೊಂದಿಗೆ ಆಯಾ ಭಾವಕ್ಕನುಗುಣವಾದ ಒಂದೊಂದು ಪ್ರೇಮಸಂಬಂಧವನ್ನು ಚಿರಕಾಲಕ್ಕೂ ಬೆಳೆಸುತ್ತಿದ್ದರು. ಆಯಾ ಭಾವಸಂಬಂಧಾಶ್ರಯದಲ್ಲಿ ಅವರಲ್ಲಿ ಪ್ರತಿಯೊಬ್ಬರಿಗೆ ಭಾಗವದ್ದರ್ಶನ, ಲಾಭಾದ ಪಥಕ್ಕೆ ಯಾವ ಪ್ರಕಾರವಾಗಿ ಮುಂದುವರಿಸುತ್ತಿದ್ದರೆಂಬ ವಿಷಯವಾಗಿ ಸ್ವಲ್ಪ ಪರಿಚಯವನ್ನು ವಾಚಕರಿಗೆ ಕೊಟ್ಟು ನಾವು ಈ ಅಧ್ಯಾಯವನ್ನು ಮುಗಿಸಿಬಿಡುವೆವು. ಅದ್ವೈತ ಭಾವ ಭೂಮಿಯಿಂದಿಳಿದೇ ಶ್ರೀ ಪರಮಹಂಸರು ಶಾಂತ, ಸಖ್ಯ, ವಾತ್ಸಲ್ಯ, ಮಧುರ ಭಾವೋಪಲಬ್ಧಿಗೋಸುಗ ಸಾಧನೆ ಮಾಡಿ ಆಯಾ ಭಾವದ ಪರಾಕಾಷ್ಠೆ ಪ್ರಾಪ್ತರಾಗಿದ್ದರು. ನಂತರ ಅನೇಕ ದಿನಗಳ ಮೇಲೆ ಭಕ್ತರು ಅವರ ಬಳಿಗೆ ಹೋಗಲಾರಂಭಿಸಿದಾಗ, ಒಂದಾನೊಂದು ದಿನ ಭಾವಾವಸ್ಥೆಯಲ್ಲಿದ್ದಾಗ ಅವರ ಮನಸ್ಸಿನಲ್ಲಿ ತಮ್ಮ ಭಕ್ತರಿಗೂ ಭಾವಸಮಾಧಿ ಆಗಬೇಕೆಂದು ಇಚ್ಛೆ ಹುಟ್ಟಿತು ಮತ್ತು ಶ್ರೀ ಜಗದಂಬೆಗೆ ಆ ವಿಷಯವಾಗಿ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿದರು. ಅನಂತರವೇ ಭಕ್ತರಲ್ಲಿ ಕೆಲವರಿಗೆ ಹಾಗಾಯಿತು. ಆ ಅವಸ್ಥೆಯಲ್ಲಿ ಅವರ ಬಾಹ್ಯಜಗತ್ತಿನ ಮತ್ತು ದೇಹಾದಿಯ ಪ್ರಜ್ಞೆಯು ಕಡಿಮೆಯಾಗಿ, ಅಂತರ್ಯದ ಒಂದು ವಿಶಿಷ್ಟ ಭಾವ ಪ್ರವಾಹವು ಆದರೆ ಮೂರ್ತಿಚಿಂತನವು ಎಷ್ಟು ಅಭಿವರ್ಧಿಸುತ್ತಿತ್ತೆಂದರೆ, ಆ ಮೂರ್ತಿಯು ಉಜ್ವಲರೂಪದಲ್ಲಿ ಸಜೀವವಾಗಿ ಅವರ ಸಮ್ಮುಖಕ್ಕೆ ನಿಂತು, ನಗಾಡುತ್ತಿತ್ತು; ಮಾತನಾಡುತ್ತಿತ್ತೆಂಬದಾಗಿ ಅವರು ಕಾಣುತ್ತಿದ್ದರು. ಭಜನೆ ಸಂಗೀತಾದಿಯನ್ನು ಕೇಳಿದೊಡನೆಯೇ ಮುಖ್ಯವಾಗಿ ಅವರಿಗೆ ಹಾಗಾಗುತ್ತಿತ್ತು.

ಭಕ್ತರು ದೇವದೇವಿ ಮೂರ್ತಿಗಳನ್ನು ದರ್ಶನಮಾಡಿದ್ದು ಒಬ್ಬ ಭಕ್ತನಿಗೆ ವೈಕುಂಠ ದರ್ಶನವಾದುದು

ಶ್ರೀ ಪರಮಹಂಸರಿಗೆ ಇನ್ನೂ ಕೆಲವು ಭಕ್ತರಿದ್ದರು. ಅವರಿಗೆ ಸಂಗೀತಾದಿ ಕೇಳಿದರೆ ಹಾಗಾಗುತ್ತಿದ್ದಿಲ್ಲ, ಪರಂತು ಧ್ಯಾನಾದಿ ಮಾಡುವ ಹೊತ್ತಿನಲ್ಲಿ ಅವರಿಗೆ ದೇವಮೂರ್ತಿಗಳ ದರ್ಶನವಾಗುತ್ತಿತ್ತು. ಮೊದಮೊದಲು ಕೇವಲ ದರ್ಶನ ಮಾತ್ರವಾಗುತ್ತಿತ್ತು. ನಂತರ ಧ್ಯಾನವು ಗಾಢದಾಗುತ್ತ ಬಂದ ಹಾಗೆ ಆ ಮೂರ್ತಿಗಳು ಸಜೀವವಾಗಿ ಮಾತನಾಡುವುದು ಇತ್ಯಾದಿಯನ್ನು ಅನುಭವಿಸುತ್ತಿದ್ದರು. ಇನ್ನುಕೆಲವರು ಮೊದಮೊದಲು ನಾನಾ ಪ್ರಕಾರವಾದ ದರ್ಶನಾದಿಗಳನ್ನು ಮಾಡುತ್ತಿದ್ದರು, ಪರಂತು ಧ್ಯಾನವು ಮತ್ತಷ್ಟು ಗಂಭೀರವಾದರೆ ಇನ್ನು ಆ ದರ್ಶನಾದಿಗಳನ್ನು ಮಾಡುತ್ತಿದ್ದಿಲ್ಲ. ಪರಂತು ಒಂದು ಆಶ್ಚರ್ಯದ ವಿಷಯವೇನೆಂದರೆ ಶ್ರೀ ರಾಮಕೃಷ್ಣ ದೇವರು ಇವರ ಪ್ರತಿಯೊಬ್ಬರ ದರ್ಶನದ ಅಥವಾ ಅನುಭವಗಳ ಮಾತನ್ನು ಕೇಳಿಯೇ ಯಾರು ಯಾವ ಅಂತಸ್ಥಿನಲ್ಲಿದ್ದಾರೆಂದೂ, ಯಾರಿಗೆ ಯಾವದು ಪ್ರಯೋಜನವೆಂದೂ, ಇನ್ನು ಮೇಲೆ ಪ್ರತಿಯೊಬ್ಬರು ಯಾವ ದರ್ಶನವನ್ನು ಮಾಡುವರೆಂದೂ ತಿಳಿಯುತ್ತಿದ್ದರು. ದೃಷ್ಟಾಂತ ಸ್ವರೂಪವಾಗಿ ನಾವು ಇಲ್ಲಿ ಒಬ್ಬ ಭಕ್ತನ ವಿಷಯವನ್ನು ಹೇಳುತ್ತೇವೆ. ನಮ್ಮ ಸ್ನೇಹಿ ಒಬ್ಬ ಸ್ನೇಹಿತನು (ಸ್ವಾಮಿ ಅಭೇದಾನಂದ) ಶ್ರೀ ರಾಮಕೃಷ್ಣದೇವರಿಂದ ಉಪದೇಶವನ್ನು ಪಡೆದು ಧ್ಯಾನಾದಿಯನ್ನು ಮಾಡಲು ಪ್ರಾರಂಭಿಸಿದರು; ಮತ್ತು ಮೊದಮೊದಲು ಧ್ಯಾನಮಾಡುವ ಸಮಯದಲ್ಲಿ ಇಷ್ಟ ಮೂರ್ತಿಯನ್ನು ನಾನಾ ರೀತಿಯಲ್ಲಿ ದರ್ಶನಮಾಡಿದರು. ಆಗಾಗ ದಕ್ಷಿಣೇಶ್ವರಕ್ಕೆ ಬಂದು ತಾನು ಕಂಡ ದರ್ಶನಗಳನ್ನೆಲ್ಲಾ ಶ್ರೀ ಪರಮಹಂಸರಿಗೆ ಹೇಳುತ್ತಿದ್ದರು. ಶ್ರೀ ಪರಮಹಂಸರು ಅದನ್ನು ಕೇಳಿ 'ಒಳ್ಳೇದಾಯಿತು' ಅಥವಾ 'ಹೀಗೆ ಹೀಗೆ ಮಾಡುತ್ತಿ' ಎಂದು ಹೇಳುತ್ತಿದ್ದರು. ನಂತರ ಒಂದಾನೊಂದು ದಿನ ಆ ಸ್ನೇಹಿತನು ಧ್ಯಾನಿಸುವ ಸಮಯ ಎಲ್ಲ ದೇವ ದೇವಿಗಳ ಮೂರ್ತಿಗಳು ಒಂದು ಮೂರ್ತಿಯ ಶರೀರದಲ್ಲಿ ಪ್ರವೇಶಿಸಿ ವಿಲೀತವಾದಂತೆ ಕಂಡರು. ಆ ವಿಷಯವನ್ನು ಶ್ರೀ ಪರಮಹಂಸರಿಗೆ ಹೇಳಲು 'ನಿನಗೆ ವೈಕುಂಠ ದರ್ಶನವಾಯಿತು ಇನ್ನು ಮೇಲೆ ದರ್ಶನವಾಗಲಿಕ್ಕಿಲ್ಲ' ಅಂದರು. 'ನಿಜವಾಗಿಯೂ ಹಾಗೆಯೇ ಆಗಿತ್ತು. ಧ್ಯಾನ ಮಾಡುತ್ತ ಮಾಡುತ್ತ ಯಾವ ಮೂರ್ತಿಯನ್ನೂ ಕಾಣುತ್ತಿದ್ದಿಲ್ಲ. ಶ್ರೀ ಪರಮಾತ್ಮನ ಸರ್ವವ್ಯಾಪಕತ್ವದ ಬೇರೆ ತರದ, ಉಚ್ಚ ಭಾವಗಳು ನನ್ನ ಹೃದಯವನ್ನು ಅಧಿಕರಿಸುತ್ತಿತ್ತು. ಆಗ ಮೂರ್ತಿದರ್ಶನ ಮಾಡುವುದೆಂದರೆ ನನಗೆ ಬಹಳ ಪ್ರಿಯಕರವಾಗಿತ್ತು. ಅಂತಹ ದರ್ಶನಾದಿಗಳಾಗುವರತೆ ಬಹಳ ಪ್ರಯತ್ನವನ್ನು ಕೂಡ ಮಾಡುತ್ತಿದ್ದೆನು, ಆದರೆ ಮಾಡುವುದೇನು?, ಇನ್ನೆಂದಿಗೂ ಆ ಮೂರ್ತಿಗಳ ದರ್ಶನವಾಗಲಿಲ್ಲ!' ಎಂದು ನಮ್ಮ ಸ್ನೇಹಿತನು ಹೇಳುತ್ತಿದ್ದನು.

ಕ್ರಮಶಃ

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere. The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members is limited)

Head Office: UDIPI

Estd 1906.

ರೈಲು ಬಂಡಿಗಳ ಸಮಯ

ಗಾಡಿಗಳು ಹೊರಡುವ ಗಂಟೆ ತಪ್ಪುವ ಗಂಟೆ

ಮಂಗಳೂರು ಎಕ್ಸ್

ಪ್ರೆಸ್ (ಸ್ಪೈಲ್) 8 5 ಬೆಳಿಗ್ಗೆ 7 5 ಸಾಯಂ

ಶಟ್ಲ್ (ಪೆಸೆಂಜರ್) ಸಾಯಂ 5 25 15 ಬೆ

ಮಲಬಾರ್ ಎಕ್ಸ್‌ಪ್ರೆಸ್ (ಸ್ಪೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1 ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2. ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕಲಾಗಲಾರದು

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಲ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4. ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು.

5 28 ರಾತ್ತಲಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ
ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—
ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ
ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)
ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

'Bhuvanendra Products Limtied

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಪಂರಾರಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ಟ್ರೋರಿ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 22—1—1943 [ಸಂಚಿಕೆ 4]

ನಮ್ಮ ಜಿಲ್ಲೆಯಲ್ಲಿ

ಆಹಾರದ ಸಂಕಷ್ಟ ನಿವಾರಣೆಯಾಗಬೇಡವೆ?

ಹೊಸತೊಂದು ಯೋಜನೆಯೀಗ ಸಿದ್ಧವಾಗಿದೆ

—ಬಡತನದ ಬೆಂಕಿ ಊರನ್ನೆ ಸುಟ್ಟುಬಿಡಬಾರದು—

—ರೈತ ವ್ಯಾಪಾರಿ ಅಧಿಕಾರಿ ಅನಧಿಕಾರಿಗಳ ಬೆಂಬಲಬೇಕು—

"ಚಿಮಿಣಿ ಎಣ್ಣೆ ಇಲ್ಲವಾದರೆ ಕತ್ತಲೆಯಲ್ಲಿ ಕುಳಿತು ಕಾಲ ಕಳೆಯಬಹುದು, ಬಟ್ಟೆಯಿಲ್ಲದಿದ್ದರೆ ಅರೆವುಟ್ಟು ದಿನ ದೂಡಬಹುದು, ಹಸಿಯುತ್ತಿರುವ ಹೊಟ್ಟೆಗೆ ಉಣ್ಣಲು ಆಹಾರವಿಲ್ಲದಿದ್ದರೆ? ಸುಡುತ್ತಿರುವ ಒಡಲಿನ ಬೆಂಕಿಯನು ತಡೆಯುವವರುಂಟೆ?" ಹೀಗೊಂದು ನಮ್ಮ ಪತ್ರಿಕೆಯ ಇತ್ತೀಚೆಯ ಒಂದು ಸಂಚಿಕೆಯಲ್ಲಿ ನಾವು ಬರೆದಿರುವುದನ್ನು, ನಮ್ಮ ವಾಚಕರು ಇಷ್ಟು ಬೇಗ ಮರೆತಿರಲಿಕ್ಕಿಲ್ಲ. ನಾವು ಆ ಲೇಖನದಲ್ಲಿ, ಹಿಂದೂ ದೇಶದ ಉದ್ದಗಲದಲ್ಲಿ ಎಲ್ಲೆಡೆಯಲ್ಲೂ ಈಗ ಎದ್ದಿರುವ ಆಹಾರ ಸಂಕಷ್ಟದ ಕಾರಣವನ್ನು, ಸರಕಾರವು ವ್ಯಾಪಾರಸ್ಥರ ಮೇಲೂ, ವ್ಯಾಪಾರಸ್ಥರು ಸರಕಾರದ ಮೇಲೂ ಹೊರಿಸಿ ಪರಸ್ಪರ ದೂರಿಕೊಳ್ಳುವುದರಿಂದ ಸಮಸ್ಯೆ ಪರಿಹಾರವಾಗಲಾರದೆಂದೂ, ಆದರೆ ದಿನದಿಂದ ದಿನಕ್ಕೆ ವಿಷಮವಾಗುತ್ತಿರುವ ಈ ಪರಿಸ್ಥಿತಿಯನ್ನು ಕಣ್ಣಾರೆ ನೋಡುತ್ತ ಸುಮ್ಮಗಿರುವವರೆಲ್ಲರೂ ತಮಗೂ ದೇಶಕ್ಕೂ ಅನ್ಯಾಯಗಾರರಾಗುತ್ತಾರೆಂದೂ ಅದರಲ್ಲೂ ದೇಶದ ರಕ್ಷಣೆಯ ಹೊಣೆ ಹೊತ್ತ ಸರಕಾರದ ಮೇಲೆ ಈ ಜವಾಬ್ದಾರಿ ಹೆಚ್ಚಿರುವುದೆಂದೂ ವಿಶದಪಡಿಸಿದ್ದೆವು. ದೇಶಸರ್ವತ್ರ ಉಂಟಾದ ಈ ಆಹಾರದ ಸಂಕಷ್ಟದ ಭುಗಿಲನ್ನು ಕಂಡು ನಮ್ಮಂತೆ ಯೋಚಿಸಿದವರು ಹಲವರಿರಬಹುದು. ನಮ್ಮಂತೆ ಅಭಿಪ್ರಾಯ ಪ್ರಕಟಿಸಿದವರೂ ಕೆಲವರಿದ್ದಾರೆ. ತಮಗೆ ತಿಳಿದ ದಾರಿಯಲ್ಲಿ ತಮಗೆ ಸಾಧ್ಯವಾದ ರೀತಿಯಲ್ಲಿ ಕಾರ್ಯಕ್ಷೇತ್ರಗಳಲ್ಲಿ ಇಳಿದು ಈ ವಿಷಯ ಕೆಲಸ ಮಾಡಿದವರೂ ಇಲ್ಲದಿಲ್ಲ. ಆದರೆ ದೇಶಸರ್ವತ್ರ, ಪ್ರಾಂತ ಪ್ರಾಂತಗಳಲ್ಲಿ, ಜಿಲ್ಲೆ ಜಿಲ್ಲೆಗಳಲ್ಲಿ ನಗರ ಗ್ರಾಮಕೇಂದ್ರಗಳಲ್ಲಿ ಇಂಥಾ ವಿಷಯದ ಕುರಿತು ಒಂದು ಯೋಜನೆ ಆಳವಡಿಸಿ ಇದುವರೆಗೆ ಸರಕಾರವೇ ಕೆಲಸ ಮಾಡಿದ್ದು ಕಂಡುಬರುವುದಿಲ್ಲ. ಈ ರೀತಿ ದುಡಿಯಲು ಸಮರ್ಥರಾದ ಸಾರ್ವಜನಿಕ ಕೆಲಸಗಾರರನ್ನಂತೂ ನಮ್ಮ ಮಧ್ಯದಲ್ಲಿ ಈಗ ಕಾಣುವುದೇ ದುರ್ಲಭವಾಗುತ್ತಿದೆ'

ನಮ್ಮ ಜಿಲ್ಲೆಯ ಪರಿಸ್ಥಿತಿ

ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಪರಿಸ್ಥಿತಿಯೇನೆಂಬುದನ್ನು ನಾವು ಇಲ್ಲಿ ವಿಚಾರಿಸುವುದು ಪ್ರಕೃತವಾಗಿದೆ. ಯುದ್ಧದ ಧಳ್ಳುರಿ ಹಬ್ಬಿದಂತೆ, ಪ್ರತಿಯೊಂದಕ್ಕೂ ದಿನದಿಂದ ದಿನಕ್ಕೆ ಕ್ರಯ ಏರುತ್ತ ಏರುತ್ತಾ ಹೋಯಿತು. ಅದರೊಡನೆ ಆಹಾರ ಪದಾರ್ಥಗಳ ಕ್ರಯವೂ ಏರುತ್ತಾ ಇದೆ. ನಮ್ಮಲ್ಲಿ ಅಕ್ಕಿ ಮುಖ್ಯ ಆಹಾರ. ಅಕ್ಕಿ ಉತ್ಪತ್ತಿಯೂ ಸಾಕಷ್ಟಿದೆ. ಮೊದಲು ರಂಗೂನಿನಿಂದ ಅಕ್ಕಿ ನಮ್ಮಲ್ಲಿಗೆ ಬರುವುದು ನಿಂತುಹೋದದ್ದು, ಯುದ್ಧದ ದೆಸೆಯಿಂದ ಖರ್ಚು ಹೆಚ್ಚುತ್ತಾ ಹೋದದ್ದು, ಇದರೊಂದಿಗೆ ಸಹಜವಾಗಿ, ತಮ್ಮ ಉತ್ಪತ್ತಿಗೆ ಹೆಚ್ಚು ಕ್ರಯ ಸಿಗಬೇಕೆಂಬ ರೈತರ ಹಾರೈಕೆ, ವ್ಯಾಪಾರಿಗಳ ಲಾಭದೃಷ್ಟಿ, ಇವೆಲ್ಲದರಿಂದ ಅಕ್ಕಿಯ ಕ್ರಯ ಏರುತ್ತಾ ಹೋಗಲು ಕಾರಣವೆನ್ನಬಹುದು. ನಾವು ಮೊದಲೇ ಹೇಳಿದಂತೆ ಯಾವುದಕ್ಕೆ ಕ್ರಯ ಏರಿದರೂ ಜನರು ಕಂಗಾಲಾಗುವುದಿಲ್ಲ. ಆದರೆ ಆಹಾರದ ವಿಷಯ ಅಂತಲ್ಲ. ಅದಕ್ಕೆ ಮಿತಿಮೀರಿ ಕ್ರಯ ಏರುತ್ತಾ ಹೋದರೆ, ಮಿತಿಯ ಸಂಬಳದ ಜನರು, ಅಂಥವರೇ ನಮ್ಮಲ್ಲಿ ಬಹುಮಂದಿ, ಕೂಲಿಗಾರರೂ ಹೊಟ್ಟೆಗಿಲ್ಲದೆ ನರಳಿ ಸಾಯಬೇಕಾಗುವುದು. ಇತರ ಪದಾರ್ಥಗಳಿಗೆ ಕ್ರಯ ಏರಿದ ಲೆಕ್ಕದಲ್ಲಿ ಅಕ್ಕಿಗೆ ಮುಡಿ ಒಂದರ ರೂಪಾಯಿ ೧೯ರ ಮಟ್ಟಿಗೆ ಏರಿದ್ದರಲ್ಲಿ ರೈತರು ಅದು ತಮಗೆ ನ್ಯಾಯವಾದ ಬೆಲೆಯೆಂದು ಹೇಳುವುದನ್ನು ತೆಗೆದು ಹಾಕಲು ಬರುವುದಿಲ್ಲವಾದರೂ ರೈತವರ್ಗದವರ ಆ ಕಿಂಚಿತ್ ಲಾಭದ ಫಲವಾಗಿ ಜಿಲ್ಲೆಯ ಬಹುಪಾಲು ಜನತೆ ಹೊಟ್ಟೆಗಿಲ್ಲದೆ ನರಳುವುದು ಘೋರ ಪಾಪವೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಆಹಾರ ಪದಾರ್ಥವಾದ ಅಕ್ಕಿ ಬಡವರಿಗೂ ಸಿಗುವಂತೆ ಮಾಡುವ ವಿಚಾರದಲ್ಲಿ ರೈತರು, ವ್ಯಾಪಾರಸ್ಥರು, ಅಧಿಕಾರ ಇದ್ದವರು ಅಧಿಕಾರ ಇಲ್ಲದವರು ಸರ್ವರೂ ಸಹಾನುಭೂತಿಯ ದೃಷ್ಟಿಯಿಂದ ಸಹಕರಿಸಿ ಕೆಲಸ ಮಾಡಬೇಕಾದ ಸಂದರ್ಭವೀಗ ಒದಗಿದೆ. ಈ ಸಂದರ್ಭದಲ್ಲಿ ಜಿಲ್ಲೆಯ ಕೆಲವು ಕಡೆಗಳಲ್ಲಿ, ಪುತ್ತೂರು ಮೊದಲಾದ ಕಡೆಗಳಲ್ಲಿ ಬಡಜನರು ತುಸು ಉದ್ರೇಕಗೊಂಡ ಸುದ್ದಿಯೂ ನಮಗೆ ಕೇಳಿಬಂತು. ಇಂಥಾ ಉದ್ರೇಕದ ನಿರಂತರ ರೂಪವನ್ನು ನಾವು ಮೊನ್ನೆ ಮೊನ್ನೆಯ ನಾಸಿಕದ ಲೂಟಿಸುದ್ದಿಯಿಂದ ಅರಿತುಕೊಳ್ಳಬಹುದು. ಇಂಥಾ ಬೆಂಕಿಯು ಪ್ರಾಂತದಿಂದ ಪ್ರಾಂತಕ್ಕೆ ಹಬ್ಬಲು ಹೆಚ್ಚು ಸಮಯವೇನೂ ಬೇಕಾಗುವುದಿಲ್ಲ. 'ರೋಗ ತಗಲಿದನಂತರ ಮದ್ದು ಮಾಡುವುದಕ್ಕಿಂತ ರೋಗ ತಗಲದಂತೆ ನಿವಾರಣೋಪಾಯ ಕೈಕೊಳ್ಳುವುದು ಉತ್ತಮವಲ್ಲವೆ? ಈ ವಿಚಾರವನ್ನು ಮುಂದಿಟ್ಟುಕೊಂಡು ನಮ್ಮ ಜಿಲ್ಲೆಯ ಪ್ರಭಾವಶಾಲೀ ಸಾರ್ವಜನಿಕ ಕಾರ್ಯಕರ್ತರು ಈಗ ಕಾರ್ಯರಂಗಕ್ಕಿಳಿದಿರುವರು.

ಯೋಜನೆ ಒಂದು ಸಿದ್ಧವಾಗಿದೆ

'ಕೀರ್ತಿಬೇಡ ಕಾರ್ಯವಾಗಲಿ' ಎಂಬ ಎಚ್ಚರಿಕೆ ಕೊಡುತ್ತಾ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ದುಡಿಯುವ ನಮ್ಮ ಜಿಲ್ಲೆಯ ಪ್ರಭಾವಶಾಲೀ ಮುಂದಾಳುಗಳಲ್ಲಿ ಶ್ರೀ ನೊಳಹಳ್ಳಿ ಶಿವರಾಯರು ಒಬ್ಬರು. ಶ್ರೀ ಶಿವರಾಯರಿಗೆ, ಜಿಲ್ಲೆಯ ಈ ತೆರದ ಪರಿಸ್ಥಿತಿಯನ್ನು ಬಡಜನರ ಆಹಾರ ಸಂಕಷ್ಟವನ್ನು ಕಂಡು ಏನೂ ಕೆಲಸ ಮಾಡದೆ ಸುಮ್ಮಗಿರುವುದು ಅನ್ಯಾಯವೆಂದು ಮನಗಂಡಂತೆ ತೋರುತ್ತದೆ. ತನ್ನ ಸ್ವಾಭಾವಿಕವಾದ ಸಾರ್ವಜನಿಕ ಕಾರ್ಯ ವಿಚಕ್ಷಣತೆಯಿಂದ ಅವರು ಇಡೀ ಜಿಲ್ಲೆಗೆ ಅನ್ವಯಿಸಿ ಒಂದು ಯೋಜನೆಯನ್ನು ಆಳವಡಿಸಿ, ಜಿಲ್ಲೆಯ ಅದ್ಯಂತವನ್ನು ತಿರುಗಾಡಿ, ತಮ್ಮ ಸಹಕಾರ್ಯಕರ್ತರನ್ನು, ವ್ಯಾಪಾರಿಗಳನ್ನು ಸಾರ್ವಜನಿಕರನ್ನು ಕಂಡು ಮಾತನಾಡಿ ಒಂದು ಪರಿಣಾಮಕಾರಿಯಾದ ಕಾರ್ಯವನ್ನು ಮಾಡುವ ಪ್ರಯತ್ನಕ್ಕೆ ತೊಡಗಿದ್ದಾರೆ. ತಮ್ಮ ಯೋಜನೆ ತಮ್ಮ ಪ್ರಯತ್ನ, ತಮ್ಮ ಮುನ್ನೋಟಗಳ ವಿಚಾರಗಳನ್ನು ಅವರು ತಾ. ೨೦ರಂದು ಸಂಜೆ, ಮಂಗಳೂರು ಸೆಂಟ್ರಲ್ ಕೋಓಪರೇಟಿವ ಬೇಂಕಿನ ಕಟ್ಟಡದಲ್ಲಿ ಸೇರಿದ, ಪತ್ರಿಕಾ ಪ್ರತಿನಿಧಿಗಳ ಮುಂದೆ, ಸಾರ್ವಜನಿಕರ ಅವಗಾಹನೆ ಪ್ರೋತ್ಸಾಹ ಸಹಕಾರ, ಬೆಂಬಲಗಳ ಸಲುವಾಗಿ ಮುಂದಿಟ್ಟಿದ್ದಾರೆ. ಶ್ರೀ ಶಿವರಾಯರ ಹೇಳಿಕೆಯ ಸಾರಾಂಶ ಹೀಗಿದೆ. ನಮ್ಮ ಜಿಲ್ಲೆಗೆ ಹೊರಗಿಂದ ಅಕ್ಕಿ ಬರದಿದ್ದರೂ ಸಾಕಾಗಬಹುದು. ಅದರಲ್ಲೂ ಸುಗ್ಗಿ ಬೆಳೆ ಒಳ್ಳೆಯದೇ ಇರುವುದರಿಂದ ಬರಗಾಲ ಬರಲಿಕ್ಕಿಲ್ಲ. ಕಾಸರಗೋಡು ತಾಲೂಕು ಒಂದಕ್ಕೆ ಮಾತ್ರ ಮಿಕ್ಕ ತಾಲೂಕುಗಳಿಂದ ಅಕ್ಕಿ ಹೋಗಬೇಕು. ಹೀಗಿರುವಾಗ, ನಮ್ಮಲ್ಲಿರುವ ಅಕ್ಕಿಯನ್ನು ಸರಿಯಾಗಿ ಹಂಚಿಕೊಂಡರೆ, ಆಹಾರದ ಬರಗಾಲವಿಲ್ಲದೆ ಬದುಕಬಹುದು. ಕೃಷಿಯೇ ಕಸುಬಾಗಿರುವವರ ಮಟ್ಟಿಗೆ ಅಕ್ಕಿಯ ಬೆಲೆ ಏರಿದ್ದರಿಂದ ಹೆಚ್ಚಿನ ಜೀವನ ಸಮಸ್ಯೆ ಹುಟ್ಟಲಿಲ್ಲ. ಆದರೆ ಪೇಟೆ ಪಟ್ಟಣಗಳಲ್ಲಿರುವ ಜನರಿಗೆ ಸಂಬಳ, ಕೂಲಿ ಕೆಲಸ ಮಾಡುವ ಜನರಿಗೆ ಒಂದು ಮಿತಿಯಲ್ಲಿ ಅಕ್ಕಿಯನ್ನು ಒದಗಿಸುವ ಏರ್ಪಾಡು ಈಗ ಮಾಡಲೇಬೇಕಾಗಿದೆ. ಅದಕ್ಕಾಗಿ ಇಡೀ ಜಿಲ್ಲೆಯಲ್ಲಿ ನೂರಾರು ಕೇಂದ್ರ (ಅಪೇಕ್ಷಿತ ಬೇಕಾದರೂ ಆಗಬಹುದು) ಕೇಂದ್ರಗಳನ್ನು ತೆರೆಯುವುದು. ಪ್ರತಿಯೊಂದು ಕೇಂದ್ರದಲ್ಲಿ ಬಡಜನರ, ಕೂಲಿ ಕೆಲಸದ, ಹಾಗೂ ತಿಂಗಳ ರೂಪಾಯಿ ಐವತ್ತಕ್ಕಿಂತ ಕಡಿಮೆ ಸಂಬಳದ ಜನರ ಜನಗಣನೆ ತೆಗೆಯುವುದು. ಆ ಜನಗಣನೆಯ ಪ್ರಕಾರ ಒಟ್ಟು ಈ ಎಲ್ಲಾ ಕೇಂದ್ರಗಳಲ್ಲಿ ಪ್ರಾಯಸ್ಥರಿಗೆ ದಿವಸಕ್ಕೆ ½ ಸೇರು ಅಪ್ರಾಯಸ್ಥರಿಗೆ 1 ಪಾವು ಅಕ್ಕಿ ಕೊಡುವುದೇ ಆದರೆ ಎಷ್ಟು ಅಕ್ಕಿ ಬೇಕೆಂದು ಗೊತ್ತಾದ ಕೂಡಲೇ ಅಕ್ಕಿ ಸೇರು ಒಂದರ ಆಣೆ ಮೂರರಂತೆ ಆ ಜನರಿಗೆ ಮಾರಾಟ ಮಾಡುವ ಏರ್ಪಾಡಿನಿಂದ ಭತ್ತ ಅಕ್ಕಿಗಳನ್ನು ಜಮೀನ್ದಾರರಲ್ಲಿ ಹೋಗಿ, ಅವರ ಉತ್ಪತ್ತಿಯ ಒಂದಂಶವನ್ನು ಇಂಥಾ ಮನುಷ್ಯ ಜೀವನೋಪಕಾರೀ ಕಾರ್ಯಕ್ಕಾಗಿ ರೂ. ೭-೮-೦ ಕ್ರಯದಲ್ಲಿ ಕೊಡಬೇಕೆಂದು ಕೇಳಿ ಅವರಿಂದ ಅಕ್ಕಿ ಸಂಗ್ರಹಿಸುವುದು. ಇದಕ್ಕೆ ಆಯಾಯ ಸ್ಥಳದ ಪ್ರಭಾವಶಾಲೀ ಮುಂದಾಳುಗಳನ್ನು ಹಿಡಿದು ಕೆಲಸ ಮಾಡುವುದು. ಜನಗಣನೆ ತೆಗೆದ ಮಂದಿಗೆ ಕಾರ್ಡುಗಳನ್ನು ಕೊಟ್ಟು, ಆ ಕಾರ್ಡುಗಳ ಲೆಕ್ಕದಿಂದ, ಏನೂ ಪ್ರಯಾಸವಾಗದಂತೆ ತಡವಾಗದಂತೆ ಅಕ್ಕಿ ಹಂಚುವ ಏರ್ಪಾಡು ಮಾಡುವುದು. ಹೀಗೆ ಇಡೀ ಜಿಲ್ಲೆಯಲ್ಲಿ ಅಷ್ಟೊಂದು ಕೇಂದ್ರಗಳನ್ನು ತೆರೆದು ಅಲ್ಲಿ ಇದನ್ನು ಲೆಕ್ಕಪತ್ರ ಸರಿಯಾಗಿಟ್ಟು ಕೆಲಸ ಮಾಡುವ ಸಲುವಾಗಿ, ಈಗಾಗಲೇ ಇಡೀ ಜಿಲ್ಲೆಯ ಮುಖ್ಯ ಮುಖ್ಯ ನಗರ ಗ್ರಾಮ ಕೇಂದ್ರಗಳಲ್ಲಿ ಸ್ಥಾಪಿತವಾಗಿರುವ ಕೋಆಪರೇಟಿವ್ ಬೇಂಕುಗಳ ಕೆಲಸಗಾರರು, ಪ್ರತಿಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುವಂತೆ ಅವರನ್ನು ಕೇಳಿಕೊಳ್ಳುವುದು. ಶ್ರೀ ಶಿವರಾಯರು ಜಿಲ್ಲಾ ಕೋಆಪರೇಟಿವ್ ಸಂಘದ ಅಧ್ಯಕ್ಷರಾಗಿರುವುದರಿಂದ ಈ ಕೆಲಸವು ಸುಲಭವೇ ಆಗಿರುತ್ತದೆ. ಹೀಗೆ ಇಡೀ ಜಿಲ್ಲೆಯಲ್ಲಿ ಒಂದು ಮಹತ್ತಾದ ಸಂಘಟನೆಯಿಂದ, ಸಮರ್ಥರಾದ ಸಾರ್ವಜನಿಕ ಕಾರ್ಯಕರ್ತರ ಬೆಂಬಲದಿಂದ ಜಿಲ್ಲೆಯ ಬಡಜನರ ಸಂಕಷ್ಟ ನಿವಾರಣೆಗಾಗಿ ಈ ಮಹತ್ವದ ಯೋಜನೆಯೊಂದನ್ನು ಜಿಲ್ಲೆಯ ಜನರ ಮುಂದಿಟ್ಟು ಶ್ರೀ ಶಿವರಾಯರು ತಮ್ಮ ಸಹಕಾರ್ಯಕರ್ತರೊಂದಿಗೆ ಕಾರ್ಯಕ್ಷೇತ್ರಕ್ಕೆ ಇಳಿದಿದ್ದಾರೆ. ಇಂದಾ ಮಾನವ ಜೀವನ ಸಹಾಯಕ ಕಾರ್ಯದಲ್ಲಿ ಜಮೀನ್ದಾರರು ಮಾತ್ರವಲ್ಲ ವ್ಯಾಪಾರಸ್ಥರೂ ನೆರವಾಗಬೇಕೆಂದೂ, ನೆರವಾದರೆಂದೂ ಅವರು ಹಾರೈಸಿದ್ದಾರೆ.

ಇದೊಂದು ಸುವರ್ಣ ಸಂಧಿ

ನಮ್ಮ ಜಿಲ್ಲೆಯ ಜನರಿಗೆ, ಜಮೀನ್ದಾರರಿಗೆ, ವ್ಯಾಪಾರಿಗಳಿಗೆ ಅಧಿಕಾರವಿರುವವರಿಗೆ, ಅಧಿಕಾರವಿಲ್ಲದವರಿಗೆ ಧನಿಗಳಿಗೆ, ದರಿದ್ರರಿಗೆ ಎಲ್ಲರಿಗೂ ಇದೊಂದು ಸುವರ್ಣ ಸಂಧಿ. ಇಡೀ ಜಿಲ್ಲೆಯ ಜನತೆ ಒಂದು ಕುಟುಂಬ ಎಂಬ ದೃಷ್ಟಿಯಿಂದ ತಮ್ಮ ಹಾಗೂ ಜನತೆಯ ಉಪಕಾರಕ್ಕಾಗಿ ದುಡಿಯಲು ಸಿಕ್ಕಿದ ಒಂದು ಅಪೂರ್ವ ಸಂದರ್ಭ. ವ್ಯಾಪಾರದ ದೃಷ್ಟಿ, ಧನವಂತರ ದೃಷ್ಟಿ, ಬಡವರ ದೃಷ್ಟಿ ಬೇರೊಂದಿದೆಯೆಂಬುದನ್ನು ನಾವು ಒಳ್ಳೆವು. ಯಾರು ಸತ್ತರೂ ಚಿಂತೆಯಿಲ್ಲ ನಾವು ಮಾತ್ರ ಬದುಕಿದ್ದರೆ ಸಾಕು ಎನ್ನುವ ಭಾವನೆ ಆ ದೃಷ್ಟಿಯ ಮೂಲ ಎಂಬುದೂ ನಮಗೆ ಗೊತ್ತು. ಆದರೆ ಆ ದೃಷ್ಟಿಯವರಾದರೂ ಇಂದಿನ ಲೋಕದ ಪರಿಸ್ಥಿತಿಯನ್ನು ಆಲೋಚಿಸಬೇಕು. ತಾವು ಕೂಡಿಟ್ಟ ವಸ್ತುಸಾಧನಗಳು ತಾವು ಸಂಗ್ರಹಿಸಿಟ್ಟ ಸಂಪತ್ತೈಶ್ವರ್ಯಗಳು ತಮ್ಮ ಇಚ್ಛೆಯಂತೆಯೇ ಉಪಯೋಗಿಸಲ್ಪಡುವವು ಎಂಬ ಭರವಸೆಯಿಂದ ಭದ್ರವಾಗಿ ಕುಳಿತಿರುವ ಸಮಯ ಇದಲ್ಲ. ಈ ಯೋಜನೆಯಂತೆ ಯಾರೂ ಸಂಪೂರ್ಣ ಸ್ವಾರ್ಥತ್ಯಾಗ ಮಾಡಬೇಕಾಗಿಲ್ಲ. ತಮ್ಮ ಉತ್ಪತ್ತಿಯ ಲಾಭದ ಸ್ವಲ್ಪ ಅಂಶವನ್ನು ಬಿಟ್ಟು ಬಿಡುವುದು ಇಂಥಾ ವಿಷಮ ಸಂದರ್ಭದಲ್ಲಿ ದೊಡ್ಡದಲ್ಲ. ಆದರಿಂದ ಜನತೆ ಪರಸ್ಪರ ವಿಶ್ವಾಸವುಳ್ಳದ್ದಾಗುತ್ತದೆ. ಕಷ್ಟಕಾಲದಲ್ಲಿ ಸಹಾಯಕ್ಕೆ ಒದಗುವ ಜನರಿದ್ದಾರೆಂದು, ಜನತೆ ಶಾಂತತೆಯಿಂದಿರುತ್ತದೆ. ಶಾಂತತೆಯಿಂದ ಜೀವನ ಸುಖವಾಗುತ್ತದೆ. ಆದ್ದರಿಂದ, ನಮ್ಮ ಜಿಲ್ಲೆಯ ಜನರು ಇಂಥಾ ಸುವರ್ಣ ಸಂಧಿಯನ್ನು ಕಳಕೊಳ್ಳಬಾರದು. ಈ ಯೋಜನೆಯನ್ನು ಯಶಸ್ವಿಯಾಗಿ ಮಾಡಿ ಎಲ್ಲರೂ ಪ್ರಯೋಜನ ಪಡಕೊಳ್ಳುವುದು ಅವಶ್ಯ. ಈ ಯೋಜನೆ ಸಾಕಷ್ಟು ಪರಿಣಾಮಕಾರಿಯಾಗದಿದ್ದರೆ, ಇದಕ್ಕಿಂತ ಉತ್ತಮ ಯೋಜನೆಯನ್ನೊಂದನ್ನು ಸೂಚಿಸಿದರೂ ಆಗಬಹುದು. ಹೇಗಾದರೂ ಉರಿಯುತ್ತಿರುವ ಬೆಂಕಿಯನ್ನು ಕೂಡಲೇ ನಂದಿಸಬೇಕು. ಇಲ್ಲವಾದರೆ ಯಾರಿಗೂ ಉಳಿಗಾಲವಿಲ್ಲ!

“ನಾವು ಕಣ್ಣಾರೆ ಒಂದು ತಪಸ್ಸನ್ನು ಕಂಡೆವು”

ಪ್ರೊ। ಭನ್ಸಾಲಿಯವರ ಕುರಿತು ಮುನ್ಷಿ ಹೇಳಿಕೆ

ಖಾರೆ—ಭನ್ಸಾಲಿ ಪತ್ರವ್ಯವಹಾರ

‘ನಮ್ಮ ಹೆಂಗುಸೆಂದರೆ ಕಸದ ಹುಳುವೆ?’

ಸೇವಾಗ್ರಾಮದ ಪ್ರೊ। ಬನ್ಸಾಲಿಯವರು ಚಿಮೂರಿನಲ್ಲಿ ಮಿಲಿಟರಿ ಹಾಗೂ ಪೋಲೀಸರು ಹೆಂಗುಸರ ಮೇಲೆ ಅತ್ಯಾಚಾರ ನಡೆಸಿದ ಆರೋಪದ ವಿಚಾರಣೆಯಾಗಬೇಕೆಂದು ವೈಸರಾಯ್ ಕೌನ್ಸಿಲ್ ಮಂಡಿತ ಶ್ರೀ. ಎಂ. ಎಸ್. ಅಣೆಯವರೊಡನೆ ಕೇಳಿಕೊಂಡ ವಿನಂತಿ ತಿರಸ್ಕರಿಸಲ್ಪಡಲು ಮರಣಾಂತ ಉಪವಾಸ ಕೈಕೊಂಡು ೬೩ ದಿನಗಳ ಘೋರ ಉಪವಾಸ ತಪಸ್ಸು ಮಾಡಿ, ಕೊನೆಗೆ ಡಾ। ಖಾರೆ ಮತ್ತು ಮುನ್ಷಿ ಮೊದಲಾದವರ ಪ್ರಯತ್ನದಿಂದ ಮಧ್ಯಪ್ರಾಂತ ಸರಕಾರಕ್ಕೂ ಪ್ರೊ। ಬನ್ಸಾಲಿಯವರಿಗೂ ಒಪ್ಪಂದವಾಗಿ, ಬನ್ಸಾಲಿಯವರು ಉಪವಾಸ ಬಿಟ್ಟುಕೊಟ್ಟ ಸುದ್ದಿಯನ್ನು ನಾವು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಮಧ್ಯಸ್ಥಿಕೆ ನಡೆಸಿದ ಡಾ। ಖಾರೆ ಹಾಗೂ ಬನ್ಸಾಲಿಯವರಿಗೆ ಈ ರೀತಿ ಪತ್ರವ್ಯವಹಾರ ನಡೆಯಿತು:

ಬನ್ಸಾಲಿಯವರಿಗೆ ಡಾ। ಖಾರೆಯವರ ಪತ್ರ:

‘ಪ್ರಿಯ ಬನ್ಸಾಲಿಯವರೇ,

ಜನವರಿ ೮ರಂದು ನಾನು ನಿಮ್ಮೊಡನೆ ಮಾತನಾಡಿದ ಪರಿಣಾಮವಾಗಿ, ಚಿಮೂರಿನ ಕುರಿತು ನಾನು ಗವರ್ನರರನ್ನು ಕಂಡು ಮಾತುಕತೆ ನಡೆಸಿದೆ. ಚಿಮೂರಿನ ಹೆಂಗುಸರ ಮೇಲೆ ಅತ್ಯಾಚಾರ ನಡೆಸಿದ ದೂರುಗಳ ವಿಚಾರವು ಈಗ ದೀರ್ಘ ಸಮಯ ಕಳೆದು ಹೋದ ಕಾರಣ ರುಜುವಾತು ನಡೆಸುವುದು ಪ್ರಯಾಸಕರವಾಗಿರುವುದರಿಂದ, ಆ ಬಗ್ಗೆ ಸಾರ್ವಜನಿಕ ವಿಚಾರಣೆಯಾಗಬೇಕೆಂದು ಒತ್ತಾಯಮಾಡಕೂಡದು. ಆದರೆ ಆ ಕುರಿತು ನಾನು ಕೆಳಗಿನ ಭರವಸೆ ಕೊಡುತ್ತೇನೆ. (೧) ಚಿಮೂರಿನ ಹೆಂಗುಸರ ಮಾನಾಪಹಾರ ಮಾಡುವ ಉದ್ದೇಶ ಸರಕಾರಕ್ಕಿದ್ದಿಲ್ಲ. ದೇಶದಲ್ಲಿ ಅಕ್ರಮ ನಡೆಯುವಾಗ ಶಿಸ್ತು ಪಾಲಿಸುವುದು ಮಿಲಿಟರಿ ಹಾಗೂ ಪೋಲೀಸರ ಕರ್ತವ್ಯವೆಂದು ಸರಕಾರವು ಯಾವಾಗಲೂ ನಂಬಿದೆ. ಅಂಥಾ ಶಿಸ್ತು ಪಾಲನೆಯ ಕಾಲದಲ್ಲಿಯೂ ಹೆಂಗುಸರ ಮಾನ ರಕ್ಷಣೆ ಅವಶ್ಯ ಆಗಬೇಕೆಂದೇ ಸರಕಾರ ಭಾವಿಸುತ್ತದೆ. (೨) ಚಿಮೂರು ಹಾಗೂ ಬನ್ಸಾಲಿ ಪ್ರಕರಣದ ಕುರಿತು ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧವನ್ನು ತೆಗೆದು ಹಾಕಲಾಗುತ್ತದೆ. (೩) ಈ ಸಂಬಂಧದ ಪ್ರಕಟಣೆ ಅಥವಾ ಪತ್ರಿಕಾ ಪ್ರಕಟಣೆಗಳನ್ನು ಏಕ ಕಾಲದಲ್ಲಿ ಎಲ್ಲಾ ಪತ್ರಿಕೆಗಳಿಗೆ ಪ್ರಕಟಣೆಯ ಬಗ್ಗೆ ಕೊಡಲಾಗುವುದು. (೪) ಚಿಮೂರನ್ನು ಸಂದರ್ಶಿಸುವವರಿಗೆ ನಿರ್ಬಂಧ ಹಾಕಲಾಗುವುದಿಲ್ಲ. ನಿಮ್ಮ ಜತೆಯಲ್ಲಿ ಚಿಮೂರನ್ನು ಸಂದರ್ಶಿಸಲು ಹಾಗೂ ಅಲ್ಲಿನ ಜನರನ್ನು ಕಂಡು ಮಾತನಾಡಿಸಲು ಶ್ರೀ. ಎಂ. ಎಸ್. ಅಣೆಯವರು ಬರುವರು. ನಿಮಗೆ ಇಚ್ಛೆಯಿದ್ದರೆ ನಾನೂ ನಿಮ್ಮ ಸಂಗಡ ಬರುವೆನು. ನಿಮ್ಮ ತ್ಯಾಗ ಅಸದೃಶವಾದುದು! ಮೇಲೆ ಹೇಳಿದ ವಿಷಯಗಳಿಗನುಸಾರವಾಗಿ ನಿಮ್ಮ ಕಠಿಣ ಉಪವಾಸವನ್ನು ಕೊನೆಗಾಣಿಸಬೇಕೆಂಬುದು ನನ್ನ ವಿನಂತಿ.

ಇತಿ ನಿಮ್ಮ ವಿಶ್ವಾಸಪಾತ್ರ; ಖಾರೆ.’

ಡಾ। ಖಾರೆಯವರಿಗೆ ಬನ್ಸಾಲಿಯವರ ಪತ್ರ:

‘ಪ್ರಿಯ ಡಾ। ಖಾರೆಯವರೇ,

ನಿಮ್ಮ ಯತ್ನಗಳಿಗಾಗಿ ಹಾಗೂ ನೀವು ಬರೆದ ಪತ್ರಕ್ಕಾಗಿ ನಿಮ್ಮನ್ನು ನಾನು ಅಭಿನಂದಿಸುತ್ತೇನೆ. ನಿಮ್ಮ ಪತ್ರದಂತೆ ಸರಕಾರವು ಒಂದು ಪ್ರಕಟಣೆ ಕೊಡಲು ಒಪ್ಪಿದೆಯೆಂದೂ, ಚಿಮೂರನ್ನು ಸಂದರ್ಶಿಸಲು ಹಾಗೂ ಅಲ್ಲಿಯ ವಾರ್ತೆಗಳನ್ನು ಪ್ರಕಟಿಸಲು ಸರಕಾರವು ಪತ್ರಿಕೆಗಳಿಗೆ ಹಾಕಿದ ನಿರ್ಬಂಧ ತೆಗೆದುಹಾಕಿದೆಯೆಂದೂ ಕೇಳಿ ಸಂತುಷ್ಟನಾದೆನು. ನಾನೊಬ್ಬ ಧಾರ್ಮಿಕ ಜೀವಿಯಾಗಿದ್ದು, ದುರ್ಬಲರ ಮಾನವನ್ನು ಕೆಡಿಸುವುದೆಂದರೂ ನನಗೆ ತುಂಬಾ ವ್ಯಥೆಯಾಗುತ್ತದೆ. ಅದು ಸಮಾಜದ ಮೇಲೆ ಮಾಡಿದ ಒಂದು ಘೋರ ಅಪರಾಧ ಮಾತ್ರವೇ ಅಲ್ಲ, ದೇವರ ಮೇಲೆ ಮಾಡಿದ ಅಪರಾಧ. ಈ ಭಾವನೆಯನ್ನು ಕಿಂಚಿತ್ ಪ್ರಮಾಣದಲ್ಲಾದರೂ ಜನತೆಯ ಮುಂದಿಡುವುದು ಈಗ ನನ್ನ ಪಾಲಿಗೆ ಬಂದಿತು: ಹೆಂಗುಸರ ಮಾನ ಕಾಯುವಂಥಾ, ಇಷ್ಟು ಪರಿಣಾಮಕಾರೀ ಕಾರ್ಯದಲ್ಲಿ ಮನಸಾಕ್ಷಿಯನ್ನುಚ್ಚರಿಸಲು ನನ್ನನ್ನು ಕಾರಣಭೂತನಾಗುವಂತೆ ಮಾಡಿದ್ದಕ್ಕೆ ನಾನು ಭಗವಂತನನ್ನು ಕೊಂಡಾಡುತ್ತೇನೆ. ನೀವು ಕೊಟ್ಟ ಕಾರಣಗಳಿಂದಾಗಿ, ವಿಚಾರಣೆಯಾಗಬೇಕೆಂಬ ನನ್ನ ಕೇಳಿಕೆಯನ್ನು ಬಿಟ್ಟು ಉಪವಾಸವನ್ನು ಕೊನೆಗೊಳಿಸುತ್ತೇನೆ. ನಾನು ಉಪವಾಸ ಬಿಟ್ಟ ಮೇಲಾದರೂ, ನನ್ನ ಚಟುವಟಿಕೆಗಳ ವಿಷಯ ಅಥವಾ ನನ್ನ ಉಪವಾಸದ ಸಂಬಂಧ ಹಾಗೂ ಚಿಮೂರು ಜನರಿಗೆ ಮಾಡುವ ಸಹಾಯದ ವಿಷಯ ನನ್ನ ಮಾತುಕತೆಗಳನ್ನಾಗಲಿ ನಿರ್ಬಂಧಿಸಕೂಡದು.

ಇತಿ ನಿಮ್ಮ ಪ್ರೀತಿಯ, ಬನ್ಸಾಲಿ.’

ಇದೆಲ್ಲಾ ಆದ ಮೇಲೆ ಅಣೆಯವರು ಬನ್ಸಾಲಿಯವರಿಗೆ ಈ ರೀತಿ ತಂತಿ ಕಳುಹಿಸಿದರು:

ಸಂದೇಶಗಳು

“ಪ್ರಾಂತಿಕ ಸರಕಾರಕ್ಕೂ ನಿಮಗೂ ಆದ ಒಪ್ಪಂದದ ಸುದ್ದಿ ಕೇಳಿದೊಡನೆ ಕಳೆದ ರಾತ್ರಿ ನಾನು ಭಗವಂತನನ್ನು ಕೊಂಡಾಡಿದೆನು. ದೇವರು ನಿಮಗೆ ದೀರ್ಘಾಯುಸ್ಸನ್ನೂ ಸಂಪೂರ್ಣ ಶಕ್ತಿಸಾಮರ್ಥ್ಯಗಳನ್ನೂ ದಯಪಾಲಿಸಲಿ ಮತ್ತು ಇನ್ನೂ ನೀವು ಮಾತೃಭೂಮಿಗೆ ತುಂಬಾ ಸೇವೆ ಸಲ್ಲಿಸುವಂತೆ ಆತನು ಅನುಗ್ರಹಿಸಲಿ”.

ಹೀಗೆ ತನಗೆ ಅಣೆಯವರು ಕಳುಹಿಸಿದ ತಂತಿಯನ್ನು ಅಭಿನಂದಿಸಿ ಪ್ರೊ। ಬನ್ಸಾಲಿಯವರು ಅದಕ್ಕೆ ಪ್ರತ್ಯುತ್ತರ ಕಳುಹಿಸಿರುವರೆಂದೂ ಸುದ್ದಿ ಇದೆ.

ಪ್ರೊ। ಬನ್ಸಾಲಿಯವರು ಉಪವಾಸ ಮಾಡುತ್ತಿರುವಾಗ, ಅವರನ್ನು ಸಂದರ್ಶಿಸಿ, ಕೊನೆಯ ಸಂದೇಶ ಪಡೆದುಬಂದು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದ ‘ಇಂಡಿಯನ್ ಎಕ್ಸ್‌ಪ್ರೆಸ್’ ಪತ್ರಿಕೆಯ ಸಂಪಾದಕ ಶ್ರೀ. ರಮಾನಾಥಗೋಯಂಕರು ಪ್ರೊ। ಬನ್ಸಾಲಿಯವರ ಪಾರಣೆಯ ಸುದ್ದಿ ಕೇಳಿ ಅವರನ್ನು ಅಭಿನಂದಿಸಿ ಕಳುಹಿಸಿದ ತಂತಿಗೆ ಬನ್ಸಾಲಿಯವರು ಈ ರೀತಿ ಉತ್ತರ ಕೊಟ್ಟಿರುವರು:

‘ನಿಮ್ಮ ಅಭಿವಂದನೆಗಳಿಗಾಗಿ ಧನ್ಯವಾದಗಳು. ಇದರ ಕೀರ್ತಿ ಬಾಪೂಜಿ ಮತ್ತು ಅವರ ಪ್ರೀತಿಯ ಮಂತ್ರ ಅಹಿಂಸೆಗೆ ಸಲತಕ್ಕದ್ದು. ಆ ತತ್ವವನ್ನು ಅಭ್ಯಾಸಕ್ಕೆ ತರಲು ಪರಮಾತ್ಮನು ನಮಗೆ ಶಕ್ತಿ ನೀಡಲಿ’,

‘ಕಣ್ಣಾರೆ ಒಂದು ತಪಸ್ಸು ಕಂಡೆ’

ಬನ್ಸಾಲಿಯವರು ೬೩ ದಿನಗಳ ಉಗ್ರ ಉಪವಾಸ ತಪಸ್ಸನ್ನು ಮುಗಿಸಿ ಪಾರಣೆಮಾಡಿದ ಸಂದರ್ಭದಲ್ಲಿ ನೆರೆದ ಸಭೆಯ ಮುಂದೆ ಶ್ರೀ. ಕನ್ಹಯಾಲಾಲ ಮುನ್ಷಿಯವರು ಹೀಗೆಂದರು: ‘ಈ ಸ್ಥಳವು (ಸೇವಾಗ್ರಾಮವು) ಬಾಪೂಜಿಯವರ ಆಶೀರ್ವಾದದಿಂದ ತಪೋ ಭೂಮಿಯಾಗಿದೆ. ಬನ್ಸಾಲಿಯವರು ಈ ಪುಣ್ಯಸ್ಥಳದಲ್ಲಿ ಉಗ್ರ ತಪಸ್ಸು ಆಚರಿಸಿದರು. ಇಂಥಾ ಸಂದಿಗ್ಧ ಪರಿಸ್ಥಿತಿಯಲ್ಲಿ ಬಾಪೂಜಿಯವರ ನೆನಪಾಗಿ ನಮ್ಮ ಕಂಠಗಳು ಬಿಗಿದುಬಂದವು. ನಮಗೆ ತಿಳಿಯದೆಯೇ ನಮ್ಮ ಕಣ್ಣುಗಳು ನೀರು ಸುರಿಸಿದವು. ನಿರಾಶಾ ಸಾಗರದ ಭೀಕರ ತೆರೆಗಳು ನಮ್ಮನ್ನು ದೂರದೂರ ಒಯ್ಯುತ್ತಿರುವಾಗ ನಾವು ಕೂಗಿ ಕರೆದೆವು ‘ಬಾಪೂ’ ಎಂದು. ಮುಳುಗುತ್ತಿರುವ ನಮಗೆ ಒಂದು ನೌಕೆಯ ಅವಶ್ಯಕತೆಯಿತ್ತು. ಆದರೆ ಬಾಪೂ ನಮ್ಮಿಂದ ಬಹು ದೂರವಿದ್ದರು. ಭನ್ಸಾಲಿಯವರು ಉಪವಾಸ ದೀಕ್ಷೆ ಕೈಕೊಂಡಾಗ, ಬಾಪೂಜಿಯವರ ಮುಗುಳ್ನಗೆಯೇ ನಮ್ಮಲ್ಲಿ ಹೊಸ ಚೈತನ್ಯವನ್ನು ತುಂಬಿಸಿತ್ತು. ಅದು ಸದ್ಯ ಕನಸಿನ ಕೊಪ್ಪರಿಗೆಯಾದರೂ ನಾವು ಬನ್ಸಾಲಿಯರನ್ನುಳಿಸಲು ಶತಪ್ರಯತ್ನಮಾಡಿದೆವು. ಬನ್ಸಾಲಿಯವರು ನಮಗೆ ಹಿಂದುಸ್ತಾನದ ಸ್ವರ್ಣಯುಗದ ರಾಮರಾಜ್ಯದ ನೆನಪು ಮಾಡಿಕೊಟ್ಟರು. ಪ್ರಾಚೀನ ಋಷಿಗಳ ತಪಸ್ಸಿನ ಕಲ್ಪನೆಯ ಸಂತೋಷದ ದೃಶ್ಯಗಳನ್ನು ನೋಡುತ್ತಿದ್ದ ನಾವು ಇಂದು ನಿಜವಾದೊಂದು ತಪಸ್ಸನ್ನು ಕಣ್ಣಾರೆ ಕಂಡೆವು. ಬನ್ಸಾಲಿಯವರ ಜೀರ್ಣ ದೇಹದಲ್ಲಿ ಶಕ್ತಿ ಸ್ಫೂರಿದ ಕೂಡಲೇ ಅವರು ಅಣೆಯವರೊಂದಿಗೆ ಚಿಮೂರಿಗೆ ಹೋಗುವರು. ‘ಮಾನಿನಿಯರ ಮಾನವು ಜನಾಂಗದ ಮಾನ; ಅದರ ಬೆಲೆ ತನ್ನ ಜೀವಕ್ಕಿಂತ ಎಷ್ಟೋ ಮೇಲು’ ಎಂದು ಕಂಬನಿಗರೆದು, ಕಣ್ಣೀರು ಗಲ್ಲದ ಮೇಲೆ ಸುರಿಯುತ್ತಿರಲು ಬನ್ಸಾಲಿಯವರು ಹೇಳಿದ ಮಾತುಗಳು ಚಿಕ್ಕ ಮಗುವಿನ ಕಿವಿಯಲ್ಲಿಯೂ ಪ್ರತಿಧ್ವನಿತವಾಗುತ್ತದೆ. ಹಾಗಿರುವಾಗ ಸರಕಾರವು ಇದರ ಕಡೆಗೆ ಗಮನಕೊಡದಿರಲು ಹೇಗೆ ಸಾಧ್ಯ?’

ನಮ್ಮ ಹೆಂಗುಸು ಹುಳವೆ?

ಪ್ರೊ। ಬನ್ಸಾಲಿಯವರು ಹೀಗೆಂದಿದ್ದರು:

“ಗಡಿನಾಡು ಪ್ರಾಂತದಲ್ಲಿ ಒಬ್ಬ ಆಂಗ್ಲ ಮಹಿಳೆಯನ್ನು ದುಷ್ಟರು ಅಪಹರಿಸಿದಾಗ, ಮೂರು ವರ್ಷಗಳ ಕಾಲ, ಸರಕಾರವು, ಭೂಮ್ಯಂತರಿಕ್ಷಗಳನ್ನು ತಲೆ ಕೆಳಗುಮಾಡಿ, ‘ಆಕೆಯನ್ನು ದುಷ್ಟರಿಂದ ಮತ್ತೆ ಪಡೆಯುವವರೆಗೆ ಜಗಳಿರುಳು ತಪಸ್ಸು ಮಾಡಲಿಲ್ಲವೆ? ಅದಕ್ಕಾಗಿ ಇಡೀ ಇಂಗ್ಲೀಷ್ ಜಾತಿಯೇ ಎಷ್ಟು ತಲ್ಲಣಗೊಂಡಿತ್ತು. ಎಷ್ಟು ಹಣ ವೆಚ್ಚ ಮಾಡಿತು. ಆ ಧೈರ್ಯ, ಆ ಅಭಿಮಾನ ನಮ್ಮಲ್ಲಿ ಮೂಡಬೇಕು ಅದಕ್ಕಾಗಿ ನನ್ನ ಪ್ರಾಣ ಹೋದರೂ ಚಿಂತೆಯಿಲ್ಲ. ನಮ್ಮ ಹೆಂಗುಸಂದರೇನು ಕಸದ ಹುಳುಗಿಂತ ಕೀಳೆ?”

ಬನ್ಸಾಲಿ ಮತ್ತು ಪೋಲೀಸ್

ಒಮ್ಮೆ ಪ್ರೊ। ಬನ್ಸಾಲಿಯವರು ನಾಗಪುರದಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಕೊಡುತ್ತಿದ್ದರು. ಆಗ ಅಲ್ಲಿಗೆ ಒಂದು ಪೋಲೀಸ್ ದಳ ಬಂತು. “ಈ ಗತಿಗೇಡಿಯನ್ನು ಹಿಡಿದು ಕತ್ತಲೆ ಕೋಣೆಯಲ್ಲಿ ಹಾಕಿ, ಆತನಿಗೆ ಬುದ್ಧಿ ಬರುವವರೆಗೆ ಹೊಡೆಯಿರಿ” ಆದರಲ್ಲಿನ ಪೋಲೀಸ್ ಅಧಿಕಾರಿ ಹೀಗೆಂದು ಹೇಳಿದ. ಪ್ರೊ। ಬನ್ಸಾಲಿಯವರು ತಮ್ಮ ಭಾಷಣವನ್ನು ಅಲ್ಲೇ ಮುಗಿಸಿದರು. ಪೋಲೀಸ್ ಅಧಿಕಾರಿ ಕಡೆಗೆ ತಿರುಗಿ ಹೀಗೆಂದು ಹೇಳಿದರು: ‘ನಾನೀಗ ಸಿದ್ಧನಾಗಿದ್ದೇನೆ. ಕತ್ತಲೆ ಕೋಣೆ ಎಲ್ಲಿದೆ ತೋರಿಸಿ’—ಈ ಮಾತುಗಳಿಂದ ಪೋಲೀಸು ಅಧಿಕಾರಿಯ ಪಶು ಹೃದಯಕ್ಕೆ ಮಾನವ ಬುದ್ಧಿ ಬಂತು. ಕೂಡಲೇ ಆತನು ನಯವಿನಯದಿಂದ ಹೇಳಿದ: ‘ತಪ್ಪಾಯಿತು ಸ್ವಾಮಿ, ನನಗೆ ನಿಮ್ಮನ್ನು ಸೆರೆಹಿಡಿಯಲು ಮಾತ್ರ ಅಧಿಕಾರ’.

ಪ್ರೊ। ಬನ್ಸಾಲಿಯವರ ಪ್ರಕೃತಿ

ಸುಧಾರಿಸುತ್ತಿದೆಯೆಂದು ವರ್ಧಾದಿಂದ ತಾ. 20ರ ಪ್ರಕಟಣೆ ತಿಳಿಸುತ್ತದೆ. ಈ ವರೆಗೆ ಉಪವಾಸ ಬಿಟ್ಟಂದಿನಿಂದ 8 ಪೌಂಡು ಹೆಚ್ಚಿರುವರಂತೆ!

ಪತ್ರಿಕೆ ಮತ್ತು ಸರಕಾರ

ಬನ್ಸಾಲಿ ಹಾಗೂ ಚೀಮೂರು ಪ್ರಕರಣದ ವಿಚಾರವಾಗಿ ಪತ್ರಿಕೆ ಹಾಗೂ ಸರಕಾರದ ಮಧ್ಯೆ ಒಂದು ಘರ್ಷಣೆ ಉಂಟಾಯಿತು. ಚೀಮೂರು ದುರಂತಕ್ಕೆ ಸಂಬಂಧಿಸಿದ ಹಾಗೂ ಬನ್ಸಾಲಿ ಉಪವಾಸಕ್ಕೆ ಸಂಬಂಧಿಸಿದ ಯಾವ ಸುದ್ದಿಯೂ ಪ್ರಕಟಿಸಕೂಡದಾಗಿ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿದ್ದಕ್ಕೆ ಪತ್ರಿಕೆಗಳು ನಿಷೇಧಿಸಿ ಒಂದು ದಿನ ಹರತಾಳವಾಚರಿಸಿ ಸರಕಾರೀ ಪ್ರಕಟಣೆಯನ್ನು ಇನ್ನು ಮುಂದೆ ಪ್ರಕಟಿಸಬಾರದಾಗಿ ನಿರ್ಧರಿಸಿದವು. ಈಗ ಸರಕಾರವು ಆ ನಿಷೇಧವನ್ನು ಹಿಂತೆಗೆಯಲು ಪತ್ರಿಕೆಗಳು ತಮ್ಮ ನಿಷೇಧವನ್ನೂ ಹಿಂತೆಗೆದಿವೆ. ಮದ್ರಾಸು ಸರಕಾರವು ಸರಕಾರೀ ಆಫೀಸಿನಿಂದ ಪತ್ರಿಕೆಗಳಿಗೆ ಸುದ್ದಿ ಕೊಡುವುದಿಲ್ಲವೆಂದು ಸಾರಿದ್ದನ್ನೂ ಹಿಂತೆಗೆದಿದೆ.

ಸಬ್ ಡಿವಿಜನಲ್ ಆಫೀಸರರ ಬಂಧನ

ರೈಲ್ವೆ ಇನ್‌ಸ್ಪೆಕ್ಟರರೂ ಬಂಧಿತರಾದರು

ಬಂಗಾಲದ ಮಿಲಿಟರಿ ಇಂಜಿನಿಯರಿಂಗ್ ಸರ್ವಿಸಿನ ಸಬ್ ಡಿವಿಜನಲ್ ಆಫೀಸರ್ ಶ್ರೀ ವರ್ಮಾ ಮಿಲಿಟರಿ ಕಂಟ್ರಾಕ್ಟರ್. ಶ್ರೀ. ಗುರುದತ್ತ ಸಿಂಹ ಮತ್ತು ಧನಬಾದದ ರೈಲ್ವೆ ಇನ್‌ಸ್ಪೆಕ್ಟರ್ ಶ್ರೀ. ನಂದಗೋಪಾಲ ಮಿತ್ರ ಇವರನ್ನು ಬರದ್ವಾನದಲ್ಲಿ ಡಿಫೆನ್ಸ್ ಕಾನೂನಿನಂತೆ ಸೆರೆಹಿಡಿದಿರುವರು.

ಸರ್ ರಾಮಸ್ವಾಮಿ ಗೃಹಮಂತ್ರಿ ಆಗುವರು?

ಸರ್. ರಾಮಸ್ವಾಮಿ ಮುದಲಿಯಾರರು ಭಾರತಕ್ಕೆ ಬೇಗನೇ ಮರಳಿ ಬರುವವರಿದ್ದು ಅವರ ಪ್ರಕೃತಿ ಹಾಗೂ ಖಾಸಗಿ ಕಾರಣಗಳ ನಿಮಿತ್ತ ಯುದ್ಧ ಮಂತ್ರಿಮಂಡಳದ ಸಭಾಸದತ್ವವನ್ನು ಬಿಡುವವರಿರುವುದರಿಂದ ಮ್ಯಾಕ್ಸವೆಲ್ಲರ ಸ್ಥಳದಲ್ಲಿ ಅವರು ಗೃಹಮಂತ್ರಿಗಳಾಗುವರೆಂದು ಒಂದು ಸುದ್ದಿ.

ಬಿಜಾಪುರದಲ್ಲಿ ಭೀಕರ ಬರಗಾಲ

ಚಳವಳ ನಿಲ್ಲಿಸಿ ಸಹಕಾರ ಕೊಡಲಾಗಿದೆ

ಬಿಜಾಪುರ ಜಿಲ್ಲೆಯಲ್ಲಿ ಭೀಕರ ಕ್ಷಾಮವುಂಟಾಗಿರುವುದರಿಂದ ಕಾಂಗ್ರೆಸ್ಸಿನವರು ಚಳವಳವನ್ನು ನಿಲ್ಲಿಸಿ, ಕ್ಷಾಮ ಪರಿಹಾರಕ ಸಮಿತಿಯವರೊಡನೆ ಎಲ್ಲಾ ತರದಿಂದಲೂ ಸಹಕರಿಸಲು ನಿರ್ಣಯಿಸಿರುವರಾಗಿ ತಿಳಿದುಬರುತ್ತದೆ.

ಫಿಲಿಪ್ಸರ ಭೇಟಿ

ರೂಸ್‌ವೆಲ್ಟರ ಭಾರತ ಪ್ರತಿನಿಧಿ ಫಿಲಿಪ್ಸರು ಭಾರತಕ್ಕೆ ಬಂದಿದ್ದು ವೈಸರಾಯ್ ಎಕ್ಸಿಕುಟಿವ್ ಕೌನ್ಸಿಲಿನ ಸದಸ್ಯರನ್ನು ಕಂಡು ಮಾತನಾಡಿದರು.

GREETINGS.

The Directors, Officers and staff of the CANARA BANK, LIMITED, join in sending you this message of appreciatiom for your goodwill and patronage during the last year. We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD: 1906.

ಸಮರಭೂಮಿಯ ಸಂಚಾರ

ಸುಮಾರು ಹದಿನಾರು ತಿಂಗಳಿಂದ ಜರ್ಮನರಿಂದ ಮುತ್ತಲ್ಪಟ್ಟ ಲೆನಿನ್‌ಗ್ರಾಡ್ ನಗರವೀಗ ಬಂಧಮುಕ್ತವಾದ ಸುದ್ದಿ ಬಂದಿದೆ. ರಶ್ಯನ್ ಸೈನ್ಯಗಳು ಲೆನಿನ್‌ಗ್ರಾಡ್ ಸುತ್ತಲಿದ್ದ ಜರ್ಮನ್ ವ್ಯೂಹವನ್ನು ಭೇದಿಸಿ ಒಳನುಗ್ಗಿ ಮುಂದುವರಿದಿರುವವು. ದಕ್ಷಿಣದಲ್ಲಿ ಕೆಲವು ರಶ್ಯನ್ ಸೇನೆಗಳು ಡೊನೆಟ್ಸ್ ನದಿಯನ್ನು ದಾಟಿ ವೊರೊನೆಜ್ ರೊಸ್ಟೋವ್ ಮಾರ್ಗದಲ್ಲಿರುವ ಮರ್ಲೊನ್‌ಸ್ಕ್ ಎಂಬ ಊರನ್ನು ಆಕ್ರಮಿಸಿಕೊಂಡಿವೆ ವೊರೊನೆಜ್‌ನ ದಕ್ಷಿಣದಲ್ಲಿ ಹೊಸ ಧಾಳಿ ಆರಂಭವಾಗಿದೆ ಮಿಲ್ಲಿರೊವೋ ನಗರವನ್ನು ರಶ್ಯನರು ವಶಪಡಿಸಿಕೊಂಡು ಅಲ್ಲಿದ್ದ ಜರ್ಮನರನ್ನು ಪರಾಭವಗೊಳಿಸಿದರು. ಸ್ಟಾಲಿನ್‌ಗ್ರಾಡ್‌ನಲ್ಲಿಯೂ ಜರ್ಮನರು ದಿನದಿಂದ ದಿನಕ್ಕೆ ಕಂಗೆಡುತ್ತಲೇ ಇದ್ದಾರೆ ಉತ್ತರ ಆಫ್ರಿಕದಲ್ಲಿ ಬ್ರಿಟಿಷ್ ಸೈನ್ಯ ಟ್ರಿಪೋಲಿಕಡೆ ಮುಂದೆ ಸಾಗುತ್ತಿದೆ ರೊಮೆಲನು ಯುದ್ಧವನ್ನು ತಪ್ಪಿಸಿಕೊಂಡೇ ಹಿಂಜರಿಯುತ್ತಿರುವನು ರೊಮೆಲನು ನಿಂತು ಯುದ್ಧ ಮಾಡುವನೋ ಇಲ್ಲವೋ ಟುನಿಶಿಯಾಕಡೆ ಹೋಗಿ ಅಲ್ಲಿನ ಜರ್ಮನ್ ಸೇನೆಯನ್ನು ಸೇರಿಕೊಳ್ಳುವನೋ ಇನ್ನೂ ನಿಶ್ಚಿತವಾಗಿ ತಿಳಿದಿಲ್ಲ ಬ್ರಿಟಿಷ್ ಅಷ್ಟಮದಳವು ಟ್ರಿಪೋಲಿಯನ್ನು ಮುಟ್ಟುವವರೆಗೆ ವೇಗದಿಂದ ಸಾಗಬಹುದು ಟ್ರಿಪೋಲಿ ಮಾರ್ಗದಲ್ಲಿ ರೋಮೆಲನು ನಿಂತು ಶತ್ರುಗಳನ್ನೆದುರಿಸುವ ಲಕ್ಷಣವಿದೆಯೆಂದೂ ಲಂಡನ್ ಸುದ್ದಿ ಬಂದಿದೆ ಅಷ್ಟಮದಳವು ಮಿಸರುಟಾ ಹಾಗೂ ಗೇರಿಬಾಲ್ಡಿ ದಾಟಿ ಜ್ಲಿಟನ್ ಭಾಗವನ್ನು ಮುಟ್ಟಿರುವುದು. ದಕ್ಷಿಣಭಾಗದಲ್ಲಿ ಟಾರಹುನಾ ಬಳಿ ಯುದ್ಧ ನಡೆಯಿತು ಪ್ರಾನ್ಸ್‌ನಲ್ಲಿ ಟುಲ್ಲಾಜ್ ಹಾಗೂ ಮೊಸಲ್ಲೆ ನದೀ ತೀರ ಇರುವ ವ್ಯೂಹವನ್ನು ಜರ್ಮನರು ಭದ್ರಪಡಿಸುತ್ತಿರುವರೆಂದೂ, ಭೆನ್ನರಕಣಿವೆ ಉತ್ತರಕ್ಕೆ ದುರ್ಗಗಳನ್ನು ಕಟ್ಟುತ್ತಿರುವರೆಂದೂ ತಿಳಿದಿದೆ ನ್ಯೂಗಿನಿಯಲ್ಲಿ ಮಿತ್ರ ಸೈನಿಕರು ಸಾನಂದ ಭೂಶಿರಕ್ಕೆ ಧಾಳಿಮಾಡಿ ಅದನ್ನು ಹಿಡಿದರು ಬರ್ಮದ ಮೇಲೆ ಮಿತ್ರ ವಿಮಾನಗಳು ಧಾಳಿಯಿಡುತ್ತಿವೆ 'ಸ್ವಿಡನಿಗೆ ಮಿತ್ರರ ಆಕ್ರಮಣ ಭಯವಿದೆ' ಎಂದು ಅಲ್ಲಿನ ಪ್ರಧಾನಮಂತ್ರಿ ಎಚ್ಚರಿಕೆಯಿತ್ತಿರುವನು ಹಿಟ್ಲರ್ ಇಂಗ್ಲಾಂಡನ್ನು ಆಕ್ರಮಿಸಬಹುದೆಂದು ಲಾರ್ಡ್ ಹೆಲಿಫಾಕ್ಸರ ಎಚ್ಚರಿಕೆಯಾಗಿದೆ'

ರಶ್ಯದಲ್ಲಿ ಜರ್ಮನ್ ಪರಾಭವ

ರಶ್ಯದ ಎಲ್ಲಾ ರಣರಂಗಗಳಲ್ಲಿಯೂ ಜರ್ಮನರು ಹಿಂಜರಿಯುತ್ತಿದ್ದಾರೆ ಉತ್ತರ ಕಾಕಸಸ್‌ನಲ್ಲಿ ಮೊಜಡಕನ್ನು ವಶಮಾಡಿಕೊಂಡ ನಂತರ ರಶ್ಯನರು ವಾಯುವ್ಯಕ್ಕೆ 65 ಮೈಲು ದೂರದಲ್ಲಿರುವ ಜಾರ್ಜಿಎವಸ್ಕ ಮತ್ತು ದಕ್ಷಿಣ ರಶ್ಯದಲ್ಲಿ ಮಿನರಾಲ್ನೀ ಎವೊಡಿ ಈ ಎರಡು ಸ್ಥಳಗಳನ್ನು ವಶಪಡಿಸಿಕೊಂಡರು ಅಲ್ಲದೆ ಬೇರೆ ನಾಲ್ಕು ಮಹತ್ವದ ರೈಲ್ವೇ ಕೇಂದ್ರಗಳನ್ನೂ ಹಾಗೂ ಮೂರು ದೊಡ್ಡ ನಗರಗಳನ್ನು ಸ್ವಾಧೀನಮಾಡಿಕೊಂಡರು ಉತ್ತರ ಕಾಕಸಸ್‌ನಲ್ಲಿ ಬುಡೆನಕೋರಾಣ್ಯವನ್ನೂ ವಶಪಡಿಸಿಕೊಂಡರು ಮಧ್ಯ ರಣರಂಗದಲ್ಲಿ ವೆಲೀ ಕಲುಕಿಯ ಉತ್ತರಕ್ಕೆ ಜರ್ಮನ್ ಸೇನೆ ಧಾಳಿಯಿಟ್ಟಿತು ಇಲ್ಲಿ ರಶ್ಯನರು ತುಸು ಹಿಂಜರಿಯಬೇಕಾಯಿತು ದಕ್ಷಿಣ ರಶ್ಯದಲ್ಲಿ ಟರೆಕ್ ನದಿಯ ಬಳಿ ಮಾತ್ರ ಜರ್ಮನರ ಪ್ರಭಾವವಿದ್ದು ಉಳಿದ ಕಡೆ ಜರ್ಮನ್ ವರ್ಚಸ್ಸು ಕುಂಠಿತವಾಗುತ್ತಿದೆ ಆದರೆ ರಶ್ಯನರು ಅಲ್ಲಿಂದಲೂ ಮುನ್ನುಗ್ಗಿ ಟರೇಕ್ ನದಿಯ ಉತ್ತರಕ್ಕೆ 60 ಮೈಲು ಮಿಕ್ಕಿ ಮುಂದುವರಿದಿರುವರು

ರಶ್ಯನರು ರೊಸ್ಟೋವ್ ಕಡೆಗೆ ಸಾಗಿಬರುತ್ತಿರುವರು ಜರ್ಮನರು ನೊವೊರೊಸಿಸ್ಕ್ ಮತ್ತು ಕರ್ಚ್ ದ್ವೀಪ ಕಲ್ಪಗಳ ಸ್ವಲ್ಪ ಭಾಗವನ್ನು ವಶದಲ್ಲಿಟ್ಟುಕೊಂಡು ಕಾಕಸಸಿನ ತಮ್ಮ ಸೈನ್ಯವನ್ನೆಲ್ಲ ಹಿಂತೆಗೆದುಕೊಳ್ಳಲಿರುವರೆಂದು ಒಂದು ಸುದ್ದಿ ಬಂದಿದೆ ಹಾಗಲ್ಲದಿದ್ದರೆ ಎರವಿಪೆಟೊಗೊರಸ್ಕು ಮಿನರಲಾನೀವಾಡೀಯಂಥಾ ಮಹತ್ವದ ಸ್ಥಳಗಳನ್ನು ಅವರು ಬಿಟ್ಟುಕೊಡುತ್ತಿದ್ದಿಲ್ಲವೆಂದು ಅಭಿಪ್ರಾಯವಾಗಿದೆ ಸ್ಟಾಲಿನ್‌ಗ್ರಾಡ್ ಭಾಗದಲ್ಲಿ ರಶ್ಯನ್ ಸೇನೆ ವೊಲ್ಗಾ ನದಿಯಿಂದ ನಾಲ್ಕು ಮೈಲು ಮುಂದರಿದು, ಆ ನಗರದ ಪಶ್ಚಿಮಕ್ಕಿರುವ ಬಾಹ್ಯ ಸಂಘವನ್ನು ಹೊಕ್ಕು ಈಗ ಕಾರಖಾನೆ ಭಾಗದಲ್ಲಿ ಮುಂದೆ ಸಾಗಿದೆ. ಅಲ್ಲಿ ಶತ್ರುಗಳು ಆರು ಸಲ ಪ್ರಬಲ ಧಾಳಿಯಿಟ್ಟರು ಅವುಗಳನ್ನೆಲ್ಲಾ ಹಿಂದೂಡಲಾಗಿದೆ. ದಕ್ಷಿಣ ಡಾನ್ ವಿಭಾಗದಲ್ಲಿ ರಶ್ಯನ್ ಪ್ರಗತಿ ಮಂದವಾಗಿದೆ ಅಲ್ಲಿ ಜರ್ಮನರ ಪ್ರಚಂಡ ಸೇನೆಯಿದೆ. ಡಾನ್ ನದೀ ಕೆಳಪ್ರದೇಶದಲ್ಲಿ ಜರ್ಮನ್ ವ್ಯೂಹವನ್ನು ಭೇದಿಸಿ ರಶ್ಯನ್ ಟೇಂಕುಗಳು ಮುಂದುವರಿದು ರೊಸ್ಟೋವಿಗ ಗಂಡಾಂತರ ಹೆಚ್ಚಿಸಿ ರೊಸ್ಟೋವಿಗೆ ಗಂಡಾಂತರ ಹೆಚ್ಚಿಸಿವೆ . ರೊಸ್ಟೋವ್ ದಕ್ಷಿಣ ರಶ್ಯದಲ್ಲಿ ಜರ್ಮನರ ಮುಖ್ಯ ಸಂರಕ್ಷಣೆಯ ಕೇಂದ್ರವಾಗಿದೆ

ಮಾರ್ಶಲ್ ಟಿಮುಶಂಕೋ ಲೆನಿನ್‌ಗ್ರಾಡ್ ಇಲಮೆನ್ ರಣಭೂಮಿಯಲ್ಲಿ ಹೋರಾಡುವನು ಇತ್ತೀಚೆಯ ಸುದ್ದಿಯಂತೆ ಉತ್ತರ ಕಾಕಸಸಿನಲ್ಲಿ ರಶ್ಯನರು ಮತ್ತಷ್ಟು ಸ್ಥಳಗಳನ್ನು ಹಿಡಿದಿರುವರು ಮುಖ್ಯ ರಶ್ಯನ್ ಕಾಕಸಸ್ ಸೈನ್ಯವು ಕಾಲಮಾಕ ಇಳಜಾರಿನ ದಕ್ಷಿಣಕ್ಕೆ ಬರುವ ರಶ್ಯನ್ ದಳದೊಂದಿಗೆ ಕೂಡಿ ಎರಡೂ ಮುನ್ನುಗಿವೆ ಅರ್ಮವೀರ ರೈಲ್ವೆ ಜಂಕ್ಶನ್ ವಶಪಡಿಸಲು ಈ ಸಾಹಸವಾಗಿದೆ ಇನ್ನೊಂದು ಸೈನ್ಯ ವೊರೊಶಿಲೊ ಮೊಸ್ಕೊ ಕಡೆಗೂ ಸಾಗಿದೆ ಮಧ್ಯರಣರಂಗದಲ್ಲಿ ಮೋಸ್ಕೋ ವಾಯುವ್ಯಕ್ಕೆ ಜರ್ಮನರು ವೆಲೂಕಿಲೂಕಿ ಭಾಗದಲ್ಲಿ ರಶ್ಯನರ ಮುನ್ನಡೆ ತಡೆಯಲು ಯತ್ನಿಸುತ್ತಿದ್ದಾರೆ ಕಾಕಸಸ್ ಸೈನಿಕರು, ಕಿಸ್ಲೊ ವೊಡೊಸ್ಕ ಮತ್ತು ಪ್ಯಾಟಿಗರೊಸ್ಕ ಮಧ್ಯದ ಎಸರಟೂಕಿಯವನ್ನೂ ಪ್ಯಾಟಿಗರೋಸ್ಕ ಉತ್ತರದ ಬಿನ್ನಾಯನಿಚನ್ನು ಸ್ವಾಧೀನ ಮಾಡಿಕೊಂಡಿರುವರು

ಇರಾಕ್ ಯುದ್ಧ ಸಾರಿತು!

ಇಂದಿನ ಯುದ್ಧವು ಲೋಕಯುದ್ಧವೆಂದ ಮೇಲೆ ಇದರ ಬಾಧೆ ಯಾರಿಗೂ ತಪ್ಪದಿರಲು ಸಾಧ್ಯವಿಲ್ಲವಷ್ಟೆ? ಅಂತೆಯೇ, ದಿನದಿನಕ್ಕೆ ತಟಸ್ಥರಾಷ್ಟ್ರಗಳೂ ಒಂದರ ಮೇಲೆ ಒಂದಾಗಿ ಏನಾದರೊಂದು ನೆವದಿಂದ ಯುದ್ಧರಂಗಕ್ಕೆ ಇಳಿಯಲೇ ಬೇಕಾಗುತ್ತಿರುತ್ತದೆ ಇದುವರೆಗೆ ತಟಸ್ಥವಾಗಿದ್ದ ಇರಾಕ್ ಸರಕಾರವೂ ಈಗ ಯುದ್ಧರಂಗಕ್ಕಿಳಿದ್ದಿದೆ ಇರಾಕ್ ಸರಕಾರವು ಜರ್ಮನಿ, ಇಟಲಿ ಜಪಾನ್ ಈ ಅಕ್ಷರಾಷ್ಟ್ರಗಳ ವಿರುದ್ಧ ಯುದ್ಧ ಸಾರಿರುವುದು "ಅಕ್ಷರಾಷ್ಟ್ರಗಳು ಬಹಳ ಕಾಲದಿಂದ ಇರಾಕಿನ ವಿಷಯ ವಿರೋಧಧೋರಣೆ ವಹಿಸಿರುವುದು ಮಾತ್ರವಲ್ಲದೆ, ತಮ್ಮ ಗುಪ್ತ ಕೆಲಸಗಾರರ ಮುಖಾಂತರ ಇರಾಕ್ ಸರಕಾರವನ್ನು ತಲೆಕೆಳಗು ಮಾಡಲು ಪಯತ್ನಿಸುತ್ತ ಬಂದಿರುವುದರಿಂದ, ಹಾಗೂ ಅವರು ಆಕಾಶವಾಣಿಯ ಮೂಲಕ ಇರಾಕಿನ ಬಗ್ಗೆ ವಿರುದ್ಧ ಪ್ರಚಾರ ಮಾಡಿ, ಇರಾಕಿನ ಜನರಲ್ಲಿ ಅನೈಕ್ಯವನ್ನುಂಟು ಮಾಡಲು ಸಾಧಿಸುತ್ತಿರುವುದರಿಂದ, ಇದಕ್ಕಿಂತಲೂ ಹೆಚ್ಚಿನದೆಂದರೆ, ಅವರು ಆಕಾಶವಾಣಿಯಲ್ಲಿ ಇರಾಕಿನ ರಾಜಕುಟುಂಬದ ಬಗ್ಗೆ ಅಪಮಾನಕರವಾದ ಉದ್ಗಾರ ತೆಗೆದು ಶಸ್ತ್ರ ಬಲದಿಂದ ಇರಾಕಿನ ಆಡಳಿತವನ್ನು ಬದಲಾಯಿಸಲು ಪ್ರಯತ್ನ ಮಾಡುತ್ತಿರುವ ಕ್ರಾಂತಿಕಾರರಿಗೆ ಉತ್ತೇಜನ ಕೊಡುತ್ತಿರುವುದರಿಂದಲೂ, ಇದರ ಮೇಲೆ, ಅರಬರ ದೃಷ್ಟಿಯಿಂದಲೂ ವಿಶೇಷತಃ ಇರಾಕಿನ ಹಿತದೃಷ್ಟಿಯಿಂದಲೂ ಸಂಯುಕ್ತ ರಾಷ್ಟ್ರಗಳ ನೀತಿಗೆ ಅಂಟಿಕೊಳ್ಳುವುದು ಅವಶ್ಯವಿರುವುದರಿಂದಲೂ—ಇರಾಕ್ ಸರಕಾರವು ಇದು ಅಕ್ಷರಾಷ್ಟ್ರಗಳ ವಿರುದ್ಧ ಯುದ್ಧ ಸಾರಿದೆ ಎಂದು ಒಂದು ಪ್ರಕಟಣೆ ಹೊರಬಿದ್ದಿದೆ ಇರಾಕ್ ಯುದ್ಧ ಸಾರಿದ ಸುದ್ದಿ ಕೇಳಿ ಲಂಡನಿನಲ್ಲಿ ಬಹಳ ಸಮಾಧಾನವಾಯಿತಂತೆ! ಏಕೆಂದರೆ ಸ್ವತಂತ್ರ ಅರಬ ರಾಷ್ಟ್ರವು ಗ್ರೇಟ್ ಬ್ರಿಟನಿನ ಮಿತ್ರರಾಷ್ಟ್ರವಾಗಿ ಅದರ ವೈರಿಗಳ ವಿರುದ್ಧ ಯುದ್ಧ ಸಾರಿದ್ದು ಇದೇ ಮೊದಲನೆಯ ಸಲ

ಇರಾಕ್ ಜರ್ಮನಿಯೊಡನೆ ೧೯೩೯ನೇ ಸಪ್ಟಂಬರ ೧೧ನೇ ತಾರೀಕಿಗೆ, ಇಟಲಿಯೊಡನೆ ೧೯೪೦ನೇ ಜೂನಿನಲ್ಲಿ, ಜಪಾನ್ ಹಾಗೂ ವಿಶಿಯೊಡನೆ ೧೯೪೧ನೇ ನವಂಬರದಲ್ಲಿಯೂ ತನ್ನ ಸಂಬಂಧವನ್ನು ಕಡಿದುಕೊಂಡಿತ್ತು ಜರ್ಮನರು ೧೯೪೧ರಲ್ಲಿ ಆಂಗ್ಲೋ ಇರಾಕ್ ಸಂಬಂಧ ಭಂಗಪಡಿಸಲು ಶಕ್ಯವಿದ್ದ ಪ್ರಯತ್ನ ಮಾಡಿದರೆಂದು ಹೇಳಲಾಗಿದೆ ರಶೀದಾಲಿಯ ಬಂಡಾಯ ಜೊತೆಯಿದ್ದು ಜರ್ಮನರ ಸಹಾಯದಿಂದಾಗಿ ಎಂಬುದು ಇದರ ಊಹನೆಯಾಗಿದೆ ಇರಾಕಿನ ಸೈನ್ಯ ಬಲವು ಶಾಂತ ಕಾಲದಲ್ಲಿ ೨೮ ಸಾವಿರ ಜನವಿದ್ದಿತು ವಿಮಾನದಲವಲ್ಲದೆ, ೩ ಅಶ್ವಾರೋಹಿ ದಳಗಳೂ ೧೫ ಬೇಟೆಲಿಯನ್‌ಗಳೂ, ಪದಾತಿದಲವೂ, ಇದರಹೊರತಾಗಿ ೧೦ ಸಾವಿರ ಪೋಲೀಸ್ ಪಡೆಯೂ ಇದೆ ಇಲ್ಲಿನ ಜನಸಂಖ್ಯೆ ೩೫ ಲಕ್ಷ ೯ನೇ ದಲದ ದಳಪತಿ ಜನರಲ್ ಸರ್ ಹೆನ್ರಿ ಮೆಟಮೆಟಲೇಂಡರು ಕಳೆದ ಆಗಸ್ಟಿನಿಂದ ಇರಾಕಿನಲ್ಲಿ ಬ್ರಿಟಿಷ್ ಸೈನ್ಯ ಹಿತಸಂಬಂಧದ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ ಇರಾಕಿನ ಅರಸರಿಗೆ ೮ ವರ್ಷ ವಯಸ್ಸೂ ಆಗಿಲ್ಲ ಇರಾಕಿನಲ್ಲಿ ಯುದ್ಧ ಕ್ಕಿಂತ ಮೊದಲೇ ೪೦ ಲಕ್ಷ ಟನ್ ಎಣ್ಣೆ ಹೊರಡುತಿತ್ತು, ಇರಾಕಿನ ವ್ಯಾಪಾರದಲ್ಲಿ ಬ್ರಿಟನಿಗೆ ಮೊದಲನೆಯ ಸ್ಥಾನವೂ, ಅನಂತರ ಜಪಾನ್ ಹಾಗೂ ಅಮೆರಿಕಗಳಿಗೆ ಎರಡು ಮೂರನೆಯ ಸ್ಥಾನಗಳೂ ಇದೆ ಇರಾಕು ಹೀಗೆ ಈಗ ಯುದ್ಧ ಸಾರಿದ ವಿಷಯವನ್ನು ಅಲ್ಲಿನ ಮುಖ್ಯಮಂತ್ರಿ ರೂಸ್‌ವೆಲ್ಟರಿಗೂ ತಿಳಿಸಿರುವರಂತೆ! ಇರಾಕು ಯುದ್ಧ ಸಾರಿತು ಎಂಬುದೇನೋ ಮಹತ್ವದ ಮಾತು ಆದರೆ ಹೀಗೆ ಸಾರಿದ ಯುದ್ಧದಿಂದ ಪರಿಣಾಮಕಾರಿಯಾಗಿ ಮಿತ್ರಪಕ್ಷಕ್ಕೆ ಎಷ್ಟರ ಮಟ್ಟಿಗೆ ಸಹಾಯ ಅಕ್ಷ ಪಕ್ಷಕ್ಕೆ ಎಷ್ಟರ ಮಟ್ಟಿಗೆ ವಿರೋಧಗಳುಂಟಾಗಲಿವೆಯೆಂಬುದು ಅದರ ಚಟುವಟಿಕೆಗಳಿಂದ ನಮಗೆ ತಿಳಿದುಬರಬೇಕಷ್ಟೆ!

ಚೀನಕ್ಕೆ ಹಕ್ಕುಬಾಧ್ಯತೆಗಳು

ಚೀನದಲ್ಲಿನ ತಮ್ಮ ಎಾದೆ ೨೫ ಹಕ್ಕುಬಾಧ್ಯತೆಗಳನ್ನು ಒಟ್ಟುಕೊಡುವುದಾಗಿ ಬ್ರಿಟನು ಅಮೆರಿಕಗಳು ಬಹಳ ದಿನಗಳಿಂದ ಹೇಳುತಿದ್ದು ಈಗ ಅದನ್ನು ಬಿಟ್ಟುಕೊಟ್ಟ ಬಗ್ಗೆ ಈ ಸರಕಾರಗಳಲ್ಲಿ ಒಂದು ಒಪ್ಪಂದವಾಯಿತೆಂದೂ ಈ ಒಪ್ಪಂದಕ್ಕೆ ಚೀನ—ಬ್ರಿಟನ್, ಅಮೆರಿಕಾ ಮತ್ತು ಹಿಂದುಸ್ತಾನವೂ ಕೂಡಾ ಸಹಿ ಹಾಕಿವೆಯೆಂದೂ ತಿಳಿದುಬರುವುದು ಸಂತೋಷದ ಸಂಗತಿ ಇಷ್ಟು ತಡವಾಗಿಯಾದರೂ ನ್ಯಾಯವನ್ನು ಕೊಡಲು ಹೀಗೆ ಮನಮಾಡಿದ ಗ್ರೇಟ್ ಬ್ರಿಟನು ಅಮೆರಿಕಾ ರಾಷ್ಟ್ರಗಳನ್ನು ಅಭಿನಂದಿಸಲೇ ಬೇಕು ಇದುವರೆಗೆ ಪಾಶ್ಚಾತ್ಯರು ಚೀನ ಮೊದಲಾದ ಪೂರ್ವ ರಾಷ್ಟ್ರಗಳ ಮೇಲೆ ಸ್ವೇಚ್ಛಾ ವಿಹಾರಮಾಡಿ ಸೂರೆಸುಲಿಗೆ ಗೈದದಂಬುದು ಈಗ ವಿವರಿಸಬೇಕಾದ ಅವಶ್ಯವಿಲ್ಲ ಯುದ್ಧಾನಂತರದ ಸ್ನೇಹಸಂಬಂಧ, ವ್ಯಾಪಾರ ವಹಿವಾಟು, ಹಡಗುಪಡೆ ಮೊದಲಾದ ಕುರಿತು ಈ ಒಪ್ಪಂದ ಆಗಿದೆಯೆಂದು ತಿಳಿದುಬರುತ್ತದೆ ಇದನ್ನು ನಿರೀಕ್ಷಿಸಿದರೆ, ಪಾಶ್ಚಾತ್ಯರ ದೃಷ್ಟಿಯು ಪೂರ್ವರಾಷ್ಟ್ರಗಳ ವಿಷಯ, ಕೊನೆಗೆಂದರೆ ಚೀನದ ಕುರಿತಾದರೂ ಸ್ವಲ್ಪ ದಯಾಭಾವದ್ದಾಗಿ ಪರಿಣಮಿಸಿದೆಯೆಂದು ತೋರುವುದು ಆದರೆ ಬ್ರಿಟಿಷರು ಹಾಂಕಾಂಗ್ ವಿಷಯದಲ್ಲಿ ಮಾತ್ರ ಯಾವುದೇ ಹಕ್ಕು ಬಾಧ್ಯತೆಯನ್ನೂ ಬಿಟ್ಟುಕೊಡಲು ಇನ್ನೂ ಸಿದ್ಧವಿದ್ದಂತೆ ತೋರುವುದಿಲ್ಲ ಇದನ್ನು ನೋಡಿದರೆ ಸಾಮ್ರಾಜ್ಯಶಾಹಿತ್ವದ ಸಂಕುಚಿತ ಬುದ್ಧಿ ಇನ್ನೂ ಬಿಟ್ಟುಹೋಗಿಲ್ಲವೆಂದೇ ತಿಳಕೊಳ್ಳಬೇಕಾಗುವುದು ಇಂಥಾ ಅಂತಃಘೋರಣವೊಂದನ್ನು ಇಟ್ಟುಕೊಂಡು ಈ ಒಪ್ಪಂದವಾದರೂ ಅದು ಬೂದಿ ಮುಚ್ಚಿದ ಕೆಂಡದಂತಾಗಿ ನಿಜವಾದ ಸ್ನೇಹಕ್ಕೆ ತೊಂದರೆಯಾದೀತು ನ್ಯಾಯವಾದುದನ್ನು ಕೊಡುವ ವಿಷಯ ಇನ್ನೂ ಬ್ರಿಟನು ಅಮೆರಿಕಗಳು ಉದಾರವಾಗಿಲ್ಲವೆಂದು ಇದರಿಂದ ಜಗಜ್ಜಾಹಿರವಾಗುವುದು ಆದಕಾರಣ, ಬ್ರಿಟಿಷರೂ ಅಮೆರಿಕನರೊಡನೆ ತಮ್ಮ ಯುದ್ಧೋದ್ದೇಶವನ್ನು ಸ್ಪಷ್ಟವಾಣಿಯಿಂದ ಸಾರಿ ತಮ್ಮ ಸಾಮ್ರಾಜ್ಯಾಕಾಂಕ್ಷೆಯಿಂದ ಇಟ್ಟುಕೊಂಡಿರುವ ಹಕ್ಕುಬಾಧ್ಯತೆಗಳನ್ನೆಲ್ಲಾ ಬಿಟ್ಟುಕೊಡಲು ಸಿದ್ಧರಾದಲ್ಲಿ ಮಾತ್ರ ಲೋಕದ ಉಳಿದ ರಾಷ್ಟ್ರಗಳಿಗೂ ವಿಶ್ವಾಸ ಬಂದೀತು

ಈ ಒಪ್ಪಂದದಲ್ಲಿ ಹಿಂದುಸ್ತಾನವೂ ಸಹಿ ಹಾಕಿರುವುದೆಂಬುದು ಒಂದು ತಮಾಷೆಯ ಸಂಗತಿಯಾಗಿದೆ ಚೀನದ ಯಾವುದೇ ಪ್ರಾದೇಶಿಕ ಹಕ್ಕುಬಾಧ್ಯತೆಗಳನ್ನೂ ಕಸಿದುಕೊಳ್ಳದ ಹಿಂದುಸ್ತಾನವು ಯಾತಕ್ಕೆ ಈ ಒಪ್ಪಂದಕ್ಕೆ ಸಹಿಹಾಕಬೇಕಾಯಿತೋ ತಿಳಿಯಲು ಕಷ್ಟವಾಗಿರುವುದು ಅಥವಾ ದಾಸಹಿಂದುಸ್ತಾನವು ಸ್ವಾಮಿ ಬ್ರಿಟನು ಹೇಳಿದಂತೆ ಸಹಿಮಾಡಿದ್ದರೂ ಮಾಡಿರಬಹುದು! ನಿಜವಾದ ಹಿಂದುಸ್ತಾನದ ಅಭಿಪ್ರಾಯವನ್ನು ಯಾರು ಕೇಳಬೇಕು? ಬ್ರಿಟಿಷರಿಗೆ ಒಂದು 'ಓಟು' ಹೆಚ್ಚು ಸಿಗಲಿ ಎಂದು ಹಿಂದುಸ್ತಾನಕ್ಕೆ ಲೀಗ್ ಓಫ್ ನೇಶನ್ಸ್‌ನಲ್ಲಿ ಒಂದು ಸ್ಥಾನ ಕೊಡಲಾಗಿತ್ತು! ನಿಜವಾಗಿ ನೋಡಿದರೆ, ಹಿಂದುಸ್ತಾನದ ಪ್ರತಿನಿಧಿಗೆ ಬ್ರಿಟನಿನ ವಿರುದ್ಧ, ತನ್ನ ಅಭಿಪ್ರಾಯಕ್ಕೆ ಬಂದಂತೆ ನಡೆಯಲು ಆಸ್ಪದವುಂಟೆ? ಹೇಗಿದ್ದರೂ ಚೀನಕ್ಕೆ ಹಕ್ಕುಬಾಧ್ಯತೆಗಳು ಸಿಗುವಾಗ, ಹಿಂದುಸ್ತಾನವೂ ಸಂತೋಷಗೊಳ್ಳುವುದೆಂಬುದು ನಿಜವಾದ್ದರಿಂದ ಇಲ್ಲಿ ವಿಶೇಷ ಚರ್ಚಿಸಬೇಕಾದುದಿಲ್ಲ

ನಾಶಿಕದಲ್ಲಿ ಅಂಗಡಿಗಳ ಲೂಟಿ!

ನಾಶಿಕದಲ್ಲಿ ಅನೇಕ ಅರಿವೆ ಮತ್ತು ಕಾಳಿನ ಅಂಗಡಿಗಳ ಲೂಟಿಯಾಗಿದೆ ಇದರ ಪರಿಣಾಮ ಕರ್ಫ್ಯೂ ಆರ್ಡರಾಗಿರುವುದು ಬೆಳಗಿನಿಂದ ಗೊಂದಲವಿತ್ತು ಅನೇಕ ಮಂದಿ ಸ್ತ್ರೀಪುರುಷರು ಗುಂಪುಗುಂಪಾಗಿ ಅಂಗಡಿಗಳಿಗೆ ಹೊಕ್ಕು ಸಾಮಾನುಗಳನ್ನು ಒಯ್ಯುತ್ತಿದರು ಪೊಲೀಸರು ಎಷ್ಟು ಹೇಳಿದರೂ ಅವರು ಕೇಳುತ್ತಿರಲಿಲ್ಲ ಕಲ್ಲುಗಳಿಂದ ಹೊಡೆಯುತ್ತಿದರು ಈ ಗೊಂದಲ ಊರಿಡೀ ಹಬ್ಬಿತು ರಾತ್ರಿ ಒಂಬತ್ತು ಗಂಟೆಗೆ ಪರಿಸ್ಥಿತಿಯನ್ನು ಹಿಡಿತದಲ್ಲಿಡಲು ಕರ್ಫ್ಯೂ ಓರ್ಡರು ಜಾರಿ ಮಾಡಲಾಯಿತು ಶಾಂತತೆಯನ್ನುಂಟುಮಾಡಲು ಮಿಲಿಟರಿ ಪೋಲೀಸರು ಬಂದಿದರು. ಅವರು ಲೂಟಿಗಾರರನ್ನು ಕಂಡಕೂಡಲೇ ಎಚ್ಚರಿಕೆ ಕೊಡದೇ ಗುಂಡು ಹಾಕಿಸಿದರು ಈ ಸಂಬಂಧ ಸುಮಾರು 40 ಜನರನ್ನು ಬಂಧಿಸಿದೆ

ಪೀರ್ ಪಗಾರೋ ಬಂಧನ

ಸಬಗತ್ ಉಲ್ಲಾಷಾ ಪೀರ್ ಪಗಾರೋರನ್ನು ಹಿಡಿದು ಸೆರೆಪಾಲಿತದಿಂದ ಜನವರಿ ೧೪ರಲ್ಲಿ ಸಿಂಧ್‌ಗೆ ಕರೆತರಲಾಗಿದೆಯೆಂದು ಸಿಂಧ್ ಸರಕಾರದ ಪ್ರಕಟಣೆಯೊಂದು ತಿಳಿಸುತ್ತದೆ ಇವರು ಹೂರ್ ಗಲಾಟೆಗಳಲ್ಲಿ ಸೇರಿಕೊಂಡಿದ್ದರಂತೆ ಇವರನ್ನು ಈಗ ಮಿಲಿಟರಿ ಅಧಿಕಾರಿಗಳ ವಶಕ್ಕೆ ಕೊಡಲಾಗಿದೆ

ಹುಮಾಯೂನ್ ಕಬೀರ್‌ರ ಮನೆ ಶೋಧನೆ

ಕಲ್ಕತ್ತದ ಶಾಸನಸಭಾ ಸದಸ್ಯರಾದ ಶ್ರೀ ಹುಮಾಯೂನ್ ಕಬೀರ್‌ರವರ ಮನೆಗೆ ವಿಶೇಷ ಪೋಲೀಸರು ನುಗಿ ಡಿಫೆನ್ಸ್ ಕಾನೂನು ಮೇರೆ ಶೋಧನೆ ನಡಿಸಿದರು

ಕನ್ನಡ ಟೈಪ್‌ರೈಟರ್

ಮೈಸೂರಿನವರೊಬ್ಬರ ಸಾಹಸ

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಸ್ಟೆನೊಗ್ರಾಫರ್ ಮತ್ತು ಚಾಂಪಿಯನ್ ಮೆಟ್ರೋಪಾಲಿಟನ್ ಕಾಲೇಜಿನಲ್ಲಿ ಸಹಾಯೋಪಾಧ್ಯಾಯರಾದ ಶ್ರೀ ಎನ್ ಎ ಶ್ರೀನಿವಾಸರಾಯರು ಕನ್ನಡ ಭಾಷೆಯ ಟೈಪ್‌ರೈಟರನ್ನು ತಯಾರು ಮಾಡಿದ್ದಾರೆಂದು ತಿಳಿದಿದೆ ಈ ಯಂತ್ರದಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಟೈಪ್‌ರೈಟರಿನಲ್ಲಿ ಟೈಪ್ ಮಾಡುವಷ್ಟು ವೇಗದೊಡನೆ ಟೈಪ್ ಮಾಡಬಹುದೆಂದು ತಿಳಿಯುತ್ತದೆ ಈ ಯಂತ್ರವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮುಂದೆ ಸನ್ನದಲ್ಲಿಯೇ ಪ್ರದರ್ಶಿಸಲಾಗುವುದಂತೆ

ಎರಡು ರೂಪಾಯಿ ನೋಟುಗಳು

ಕೇಂದ್ರ ಸರಕಾರದ ಆಜ್ಞೆಯಂತೆ ಇಂಡಿಯಾ ರಿಜರ್ವ್ ಬ್ಯಾಂಕಿನವರು ಎರಡು ರೂಪಾಯಿ ನೋಟುಗಳನ್ನು ಸದ್ಯದಲ್ಲಿ ಹೊರಡಿಸಿ ಚಲಾವಣೆಗೆ ಕೊಡಲಿರುವರೆಂದು ಪ್ರಕಟವಾಗಿದೆ

ಸ್ವದೇಶಾಭಿಮಾನಿ

ತಾರೀಕು 15—1—1943

ಆಹಾರ ಸಂಕಷ್ಟ ನಿವಾರಣೆ

ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ಕ್ರಯ ಏರುತ್ತಾ ಬರುವುದರಿಂದ, ನಿಶ್ಚಿತ ಸಂಬಳ ಹಾಗೂ ಕೂಲಿಯ ಕೆಲಸ ಮಾಡುವ ಬಹು ಮಂದಿಯ ಜೀವನವು ಕಠಿಣವಾಗುತ್ತಾ ಬರುತ್ತದೆ. ಈಗಾಗಲೇ ಪೇಟೆಗಳಲ್ಲಿ ಕೆಲಸಗಾರರು ದಿನ ಒಂದಕ್ಕೆ ಒಂದು ಊಟವನ್ನೂ ಹೊಟ್ಟೆ ತುಂಬಾ ಮಾಡಲಾರದೆ ನರಳುತ್ತಿದ್ದಾರೆ. ಮಧ್ಯಮ ವರ್ಗದವರ ಜೀವನವೂ ಬಹಳ ವಿಷಮವೇ ಆಗುತ್ತಾ ಬಂದಿದೆ. ಇಂಥಾ ಪರಿಸ್ಥಿತಿ ಇನ್ನೂ ಹೆಚ್ಚು ಕಾಲ ಮುಂದುವರಿಯುವುದು ಯೋಗ್ಯವಲ್ಲ.

ಈ ತರದ ಆಹಾರ ಸಂಕಷ್ಟಕ್ಕೆ ಏನು ನಿವಾರಣೋಪಾಯವೆಂದು ಈಗಾಗಲೇ ಜಿಲ್ಲೆಯ ಸಾರ್ವಜನಿಕ ಕೆಲಸಗಾರರು ವಿಚಾರಿಸತೊಡಗಿದ್ದಾರೆಂಬುದು ಶುಭಲಕ್ಷಣ. ಪತ್ರಿಕೆಗಳವರೂ ಈ ಕುರಿತು ಕೆಲ ಕಾಲದಿಂದಲೇ ಎಚ್ಚರಿಕೆ ಕೊಡುತ್ತಾ ಬಂದಿವೆ. ಕೆಲವರು ಅಲ್ಲಲ್ಲಿ ವೈಯಕ್ತಿಕವಾಗಿ ಆಹಾರ ಸಂಕಷ್ಟ ಪರಿಹಾರ ಕಾರ್ಯ ಮಾಡಿದ್ದೂ ನಮಗೆ ತಿಳಿದಿದೆ. ಎಷ್ಟೋ ಜನರು ಕಡಿಮೆ ಕ್ರಯಕ್ಕೆ ಅಕ್ಕಿ ಮಾರಾಟ ಮಾಡಿದ ಪುಣ್ಯಾತ್ಮರಿದ್ದಾರೆ. ಇವರಿಗೆ ಜನರು ಚಿರಋಣಿಗಳು.

ನಮ್ಮ ಜಿಲ್ಲೆಯ ಆಹಾರ ಸಂಕಷ್ಟ ಪರಿಹಾರಕ್ಕಾಗಿ ಈಗ ಜಿಲ್ಲೆಯ ಅಭ್ಯಂತರದಲ್ಲಿಯೂ ಈ ಬಗ್ಗೆ ಸಾರ್ವಜನಿಕರ ಬೆಂಬಲದಿಂದ, ಸಂಘಟಿತ ರೂಪದಲ್ಲಿ ಅಲ್ಲಲ್ಲಿ ಹಳ್ಳಿ ನಗರ ಕೇಂದ್ರಗಳಲ್ಲಿ ಬಡ ಜನರಿಗೆ ಕಡಿಮೆ ಕ್ರಯದಲ್ಲಿ ಅಕ್ಕಿ ಸಿಗುವ ಏರ್ಪಾಡನ್ನು ಮಾಡುವರೆ ಶ್ರೀ ಮೊಳಹಳ್ಳಿ ಶಿವರಾಯರು ಒಂದು ಮಹತ್ವಾದ ಯೋಜನೆಯನ್ನು ಅಳವಡಿಸಿ ಕೆಲಸ ಮಾಡಲು ಕಾರ್ಯರಂಗಕ್ಕಿಳಿದ್ದಾರೆ. ಈ ಯೋಜನೆಯ ವಿಚಾರ ನಾವು ಮೊದಲನೆಯ ಪುಟದಲ್ಲಿ ಒಂದು ವಿವರವಾದ ಲೇಖನವನ್ನು ಪ್ರಕಟಿಸಿದ್ದೇವೆ. ನಮ್ಮ ಜಿಲ್ಲೆಯ ಜನರು ಜಮೀನ್ದಾರರು, ವ್ಯಾಪಾರಸ್ಥರು, ಅಧಿಕಾರಿ, ಅನಧಿಕಾರಿಗಳೆಲ್ಲರೂ ಈ ಕುರಿತು, ಇಂಥಾ ಮಾನವೋಪಯೋಗೀಕಾರ್ಯದ ಕುರಿತು ಸಹಾನುಭೂತಿಯಿಂದ ವಿಚಾರಿಸಿ, ಪರಿಣಾಮಕಾರೀ ಸಹಕಾರ ಕೊಡುವರಾಗಿ ನಾವು ಹಾರೈಸುತ್ತೇವೆ.

ಇದು ಶುಭಸೂಚನೆ

ನಮ್ಮ ಜಿಲ್ಲೆಯ ಆಹಾರ ಸಂಕಷ್ಟ ನಿವೃತ್ತಿಯಾಗಬೇಕೆಂದು, ಪತ್ರಿಕೆಗಳು, ಸಾರ್ವಜನಿಕರು, ಮುಂದಾಳುಗಳು ಯೋಚಿಸುತ್ತಿದ್ದಂತೆ ನಮ್ಮ ಜಿಲ್ಲಾ ಕಲೆಕ್ಟರರೂ ಈ ಕುರಿತು ವಿಚಾರಿಸಲು ಜಿಲ್ಲೆಯ ಮುಖ್ಯಸ್ಥರನ್ನು ಕರೆದು ಸಭೆ ಸೇರಿಸಿ ವಿಚಾರವಿನಿಮಯ ಮಾಡಿದರೆಂದು ತಿಳಿದು ನಾವು ಬಹಳ ಸಂತೋಷಪಡುತ್ತೇವೆ. ಇದೊಂದು ಶುಭಸೂಚನೆ.

ಕಲೆಕ್ಟರರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಬೇರೆಬೇರೆ ಜನರು ಹಲವು ಯೋಜನೆಗಳನ್ನು ಮುಂದೆ ತಂದು ವಿವರಿಸಿದರೆಂಬುದರಿಂದಲೇ ಈ ಸಮಸ್ಯಾಪರಿಹಾರದಲ್ಲಿ ನಮ್ಮ ಮುಂದಾಳುಗಳು ಕೆಲಸ ಮಾಡಲು ಮನಸ್ಸುಳ್ಳವರಾಗಿದ್ದಾರೆಂದು ಖಚಿತವಾಗುತ್ತದೆ. ಯೋಜನೆಗಳನ್ನು ಮುಂದೆ ತಂದವರು ಸುಮ್ಮಗಿರದೆ ಕಾರ್ಯಕ್ಷೇತ್ರಕ್ಕಿಳಿದು ಕೆಲಸಮಾಡಿ ಜನತೆಯ ಕೃತಜ್ಞತೆಗೆ ಪಾತ್ರರಾಗಬೇಕೆಂದು ನಮ್ಮ ವಿನಂತಿಯಾಗಿದೆ.

ಜಿಲ್ಲೆಯ ಆಹಾರ ಸಮಸ್ಯೆ ಪರಿಹಾರಕ್ಕಾಗಿ ಚೇಂಬರ್ ಓಫ್ ಕಾಮರ್ಸಿನವರು, ಮಂಗಳೂರು ಕಮ್ಯುನಿಸ್ಟ್ ಪಕ್ಷದವರು, ಶ್ರೀಗಳಾದ ಜಿನರಾಜಹೆಗ್ಡೆ, ಅಚ್ಯುತನ್ ನಾಯರ್, ವೆಂಕಟೇಶ ಪೈ, ವಿ. ಎಸ್ ಕುಡ್ವರೇ ಮೊದಲಾದವರೆಲ್ಲರೂ ಕೊಟ್ಟ ಸೂಚನೆಗಳು ವಿಚಾರಣೀಯ. ಎಲ್ಲದಕ್ಕಿಂತಲೂ ಹೆಚ್ಚಾಗಿ ಜಿಲ್ಲೆಯಿಂದ ಮುಂದೆ ಆರು ತಿಂಗಳ ವರೆಗೆ ಅಕ್ಕಿ ಹೊರ ಹೋಗಬಾರದೆಂದು ಮಾಡಿದ ನಿರ್ಣಯವು ಪ್ರಶಂಸನೀಯ. ಈ ನಿರ್ಣಯವು ಜಾರಿಗೆ ಬರುವಲ್ಲಿ ಅಧಿಕಾರೀ ವರ್ಗದವರು, ವ್ಯಾಪಾರಸ್ಥರ ಎಲ್ಲದಕ್ಕಿಂತಲೂ ವಿಶೇಷವಾಗಿ ಸಾರ್ವಜನಿಕರು ಸಂಪೂರ್ಣ ನೆರವಾಗಬೇಕೆಂದು ನಾವು ಪ್ರಾರ್ಥಿಸುತ್ತೇವೆ.

ಲೆನಿನ್‌ಗ್ರಾಡ್ ವಿಮೋಚನೆ

ರಶ್ಯನ್ ಕ್ರಾಂತಿಯ ತೊಟ್ಟಿಲಿನಂತಿರುವ ರಶ್ಯನರ ಪ್ರೀತಿಯ ನಗರ, ಕ್ರಾಂತಿವೀರ ಲೆನಿನ ಹೆಸರಿನ ಪಟ್ಟಣವಾದ ಲೆನಿನ್‌ಗ್ರಾಡು, ಜರ್ಮನ್ ಆಕ್ರಮಣದಿಂದ ವಿಮುಕ್ತವಾಗಿ ಸಂಪೂರ್ಣ ರಶ್ಯನರ ಸ್ವಾಧೀನ ಬಂತೆಂಬೀ ಸುದ್ದಿಯು ಸಂತೋಷಜನಕವಾಗಿದೆ. ಲೆನಿನ್‌ಗ್ರಾಡ್‌ನ ಯುದ್ಧದಲ್ಲಿ ರಶ್ಯನರು ಅಸಮ ಸಾಹಸ ತೋರಿಸಿದರು. ಲೆನಿನ್ ಗ್ರಾಡನ್ನು, ಯುದ್ಧ ಪ್ರಾರಂಭವಾದ ಕಾಲದಲ್ಲಿಯೇ ಕೈವಶಪಡಿಸಿಕೊಳ್ಳಲು ಜರ್ಮನರು ಭರದಿಂದ ಪ್ರಯತ್ನ ಮಾಡಿದರು. ಅಲ್ಲಿಗೆ ವಸ್ತುಸಾಮಗ್ರಿಗಳನ್ನು ಸಾಗಿಸುವ ಮಾರ್ಗಗಳು ತಡೆಗಟ್ಟಲ್ಪಟ್ಟವು. ಹೀಗೆ ಎಷ್ಟು ಸಂಕಷ್ಟವೊದಗಿದರೂ, ರಶ್ಯನರು ಕೊನೆವರೆಗೂ ಮಣಿಯಲಿಲ್ಲ. ಅಂತೂ ಕೊನೆಗೀಗ ಆಕ್ರಮಿಸಿ ಬಂದಿದ್ದ ಜರ್ಮನರ ಭದ್ರವ್ಯೂಹವನ್ನು ಭೇದಿಸಿ ರಶ್ಯನರು ಲೆನಿನ್‌ಗ್ರಾಡನ್ನು ವಿಮುಕ್ತಗೊಳಿಸಿದ್ದಾರೆ. ಹಿಟ್ಲರನ ಹುರುಪಿಗೆ ಇದೊಂದು ಬಲವಂತವಾದ ಪೆಟ್ಟೆಂಬುದರಲ್ಲಿ ಏನೂ ಸಂಶಯವಿಲ್ಲ. ರಶ್ಯನ್ ರಣರಂಗದಲ್ಲಿ ಜರ್ಮನರಿಗೆ ಹೀಗೆ ಒದಗುತ್ತಿರುವ ಸೋಲನ್ನು ನೋಡಿದರೆ, ಹಿಟ್ಲರನ ಶಕ್ತಿ ಕುಂದುತ್ತಾ ಬರುವಂತೆ ಕಂಡುಬರುವುದು.

ಸ್ವದೇಶ ಸಮಾಚಾರ

ಕಲ್ಕತ್ತದ ಮೇಲೆ ಆರನೇ ಧಾಳಿ
ಶತ್ರುಗಳ ವಿಮಾನಗಳುರುಳಿದವು
ನಮಗೇನೂ ಆಗಿಲ್ಲ!

ಕಲ್ಕತ್ತದ ಮೇಲೆ ಆರನೆಯ ಸಲ ಜಪಾನ್ ವಿಮಾನಗಳು ತಾ. 15ರಂದು ರಾತ್ರಿ ಬಾಂಬು ಹಾಕಿದ ವಿಚಾರವಾಗಿ, ನ್ಯೂ ಡಿಲ್ಲಿಯಿಂದ ಹೀಗೆಂದು ಸುದ್ದಿ ಪ್ರಕಟವಾಗಿದೆ ‘ಕೆಲ ಬಾಂಬು ಬಿದ್ದವೆ. ಬಹಳ ಸ್ವಲ್ಪ ಹಾನಿಯಾಯಿತು. ನಾಲ್ಕೇ ನಿಮಿಷಗಳಲ್ಲಿ ನಮ್ಮ ಯುದ್ಧ ವಿಮಾನಗಳು ಶತ್ರುಗಳ ಮೂರು ವಿಮಾನಗಳನ್ನುರುಳಿಸಿದವು. ಅವರ ಒಂದು ವಿಮಾನವು ನಮ್ಮ ವೈಮಾನಿಕನ ಮೇಲೆ ಗುಂಡು ಹಾಕಿದರೂ ತಾಗಲಿಲ್ಲ. ಅನಂತರ ನಮ್ಮ ವೈಮಾನಿಕನು ಶತ್ರುವಿಮಾನದಲ್ಲಿ ಬೆಂಕಿಯೇಳುವಂತೆ ಧಾಳಿ ಮಾಡಿದನು. ಅದರಿಂದ ಆ ಶತ್ರು ವಿಮಾನ ಸುಟ್ಟುಹೋಯಿತು’.

ಕಲ್ಕತ್ತದಿಂದ ಹೊರಟ ಸರಕಾರೀ ಪ್ರಕಟಣೆಯಲ್ಲಿ ಈ ವಿವರಗಳಿವೆ — ‘ಕೆಲಬಾಂಬುಗಳು ಜನವಸತಿಯಿರುವಲ್ಲಿ ಬಿದ್ದಿತ್ತು. ಆದರೆ ಪ್ರಾಣಾಪಾಯವಾಗಿರುವುದು ಬಹಳ ಸ್ವಲ್ಪ ಜನರಿಗೆ. ಶತ್ರುವಿಮಾನ ಒಂದದ್ದು, ಅವುಗಳಲ್ಲಿ ಮೂವರನ್ನು ನಮ್ಮ ವೈಮಾನಿಕರು ಉರುಳಿಸಿದ್ದು ಈ ವಿಷಯ ತಿಳಿದು ಬರುವಷ್ಟು ಅವಸರವಿಲ್ಲದೆ ಕೆಲಸ ಆಗಿತ್ತು. ಜನರ ನಿತ್ಯಜೀವನದಲ್ಲಿ ಇದರಿಂದ ಏನೊಂದೂ ಅಸ್ತವ್ಯಸ್ತ ಆಗಲಿಲ್ಲ. ವಿಮಾನಗಳನ್ನು ಹೊಡೆದೋಡಿಸುವಾಗ ಅವು ಬಾಂಬು ಚೆಲ್ಲಿದವು. ಅವುಗಳಲ್ಲಿ ಎರಡು ಕೂಲಿಗಾರರ ಮನೆಗಳ ಮೇಲೆ ಬಿದ್ದುವಲ್ಲದೆ ಮಿಕ್ಕವೆಲ್ಲಾ ಬಯಲಲ್ಲಿ ಬಿದ್ದವು’’

ಕಲ್ಕತ್ತದ ಮೇಲೆ ಏಳನೆ ಧಾಳಿ

ವೈರಿ ವಿಮಾನಗಳು ತಾ ೧೯ರ ರಾತ್ರಿ ೯, ೧೦ ಘಂಟೆಗೆ ಕಲ್ಕತ್ತದ ಮೇಲೆ ಅನೇಕ ಬಾಂಬುಗಳನ್ನು ಹಾಕಿದವು. ಧಾಳಿಯ ಪರಿಣಾಮವಾಗಿ ಎರಡು ಕಡೆ ಬೆಂಕಿಯೆದ್ದಿವೆ. ಆದರೆ ಕೂಡಲೇ ನಂದಿಸಲಾಯಿತು. ನಮ್ಮ ಫೈಟರುಗಳು ಅವುಗಳನ್ನೆದುರಿಸಿದವು. ಧಾಳಿಯಿಂದಾದ ಅಪಘಾತ ಕಡಿಮೆ. ಈ ಮೊದಲು ಒಮ್ಮೆ ಚಿತಗಾಂಗ್ ಫೆಣಿಪ್ರದೇಶಗಳ ಮೇಲೂ ಶತ್ರುಗಳು ಬಾಂಬು ಸುರಿಸಿದರು

ಚಿಲ್ಲರೆ ನಾಣ್ಯ ಕೂಡಿಸಿಡುವುದು ಮತ್ತು ಮಾರಾಟ
ಇದನ್ನು ನಡೆಸುವವರಿಗೆ ಶಿಕ್ಷೆ

ಚಿಲ್ಲರೆ ನಾಣ್ಯಗಳ ಅಭಾವ ಹೆಚ್ಚಾಗಿರುವುದಕ್ಕೆ ಅವುಗಳನ್ನು ಕೆಲವರು ಕೂಡಿಸಿ ಇಡುವುದೇ ಕಾರಣವಾಗಿದೆ. ತಾಮ್ರದ ನಾಣ್ಯಗಳನ್ನು ಸಂಗ್ರಹಿಸಿ ಕೆಲವರು ಮಾರಾಟಮಾಡುವುದೂ ಇದಕ್ಕೆ ಕಾರಣವಾಗಿದೆ. ಹೀಗೆ ಮಾಡುವುದು ಅಪರಾಧವಾಗಿದೆ. ಚಿಲ್ಲರೆ ನಾಣ್ಯ ಸಂಗ್ರಹಮಾಡುವವರ ಮೇಲೆ ಅನೇಕ ಕಡೆ ಮೊಕದ್ದಮೆ ನಡೆಸಲಾಗಿದೆ. ಶಿಕ್ಷೆಯನ್ನು ಕೊಡಲಾಗಿದೆ. ಡಿಫೆನ್ಸ್ ಕಾನೂನು ಮೇರೆಗೆ ಇದು ಅಪರಾಧವೆಂದು ಪರಿಗಣಿಸಲ್ಪಟ್ಟಿದೆ. ನಾಣ್ಯ ಸಂಗ್ರಹ ಮಾಡುವವರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎಂದು ಇಂಡಿಯಾ ಸರಕಾರದ ಗೆಜೆಟಿನಲ್ಲಿ ಪ್ರಕಟಿಸಲಾಗಿದೆ

ಎ. ಐ. ಸಿ. ಸಿ.ಯ ೨೦ ಸಾವಿರ ರೂಪಾಯಿ ಜಪ್ತಿ

ಮುಂಬಯಿ ‘ಸರಕಾರದವರು, ಬಚರಾಜ್ ಎಂಡ್ ಕಂಪನಿಯವರ ಮೇಲೆ, ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಕಾನೂನು ಪ್ರಕಾರ ನೋಟೀಸು ಹೊರಡಿಸಿ, ಹಿಂದುಸ್ತಾನ ಸುಗರ್ ಮಿಲ್ಸ್ ಲಿಮಿಟೆಡ್‌ನಲ್ಲಿ ಇಟ್ಟಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಸಂಬಂಧಿಸಿದವೆಂದು ನಂಬಲಾದ ೨೦ ಸಾವಿರ ರೂಪಾಯಿಗಳನ್ನು ಜಪ್ತಿ ಮಾಡುವರೆಂದು ತಿಳಿಸಿದ್ದಾರೆ. ಬಚರಾಜ ಮತ್ತು ಕಂಪನಿಯವರು ಹಿಂದುಸ್ತಾನ ಸುಗರ್ ಮಿಲ್ಸ್‌ನ ಮೆನೇಜಿಂಗ್ ಡೈರೆಕ್ಟರರು.

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಚೇರಿ ಜಪ್ತಿ

ಪೋಲೀಸರು, ವರ್ಧಾದಲ್ಲಿರುವ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಚೇರಿಯನ್ನು ಜಪ್ತಿಮಾಡಿ ಶ್ರೀ. ಜೆ ಸಿ ಕುಮಾರಪ್ಪನವರು ಬರೆದ ಕೆಲವು ಲೇಖನಗಳ ಪ್ರತಿಗಳನ್ನು ಕೊಂಡುಹೋಗಿರುವರು

ಆರ್ಡಿನೆನ್ಸು ರಾಜ್ಯಭಾರ ಎಷ್ಟು ಕಾಲದ ವರೆಗೆ?
ಎಸೆಂಬ್ಲಿಯಲ್ಲಿ ಪ್ರಶ್ನೆ

ಶಾಸನಸಭೆಗಳಲ್ಲಿ ಮಂಡಿಸದೆ, ಒಂದೇ [illegible] ಆರ್ಡಿನೆನ್ಸುಗಳನ್ನು ವೈಸರಾಯರು ಈಗ ಹೊರಡಿಸುತ್ತಾ ಇದ್ದಾರಷ್ಟೆ? ಶಾಸನ ಸಭೆಗಳಲ್ಲಿ ಪಾಸು ಮಾಡದೆ ಹೀಗೆ ಅನಿಶ್ಚಿತ ಕಾಲದ ವರೆಗೆ ಆರ್ಡಿನೆನ್ಸುಗಳನ್ನು ಮಾಡಿ ರಾಜ್ಯಭಾರ ಗೈಯ್ಯಲು ವೈಸರಾಯರಿಗೆ ಅಧಿಕಾರವಿದೆಯೋ ಎಂಬ ಕುರಿತು ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ ಕೆ ಸಿ ನಿಯೋಗಿಯವರು ಒಂದು ಪ್ರಶ್ನೆಹಾಕುವವರಿದ್ದಾರೆಂದು ತಿಳಿದಿದೆ. ಹಳೆ ಕಾಯಿದೆಯಂತೆ ವೈಸರಾಯರಿಗೆ ಆರೇ ತಿಂಗಳ ವರೆಗೆ ಆರ್ಡಿನೆನ್ಸ್ ರಾಜ್ಯಭಾರಮಾಡಲು ಅದರ ನಂತರ ಅದನ್ನು ಶಾಸನಸಭೆ ಮುಂದೆ ಮಂಡಿಸಲು ಇಲ್ಲವೇ ಪುನಃ ಅದನ್ನು ಜಾರಿಗೆ ತರಲು ಅಧಿಕಾರ ಕೊಡಲ್ಪಟ್ಟಿತ್ತು. ಆದರೆ ೧೯೪೦ರಲ್ಲಿ ಪಾರ್ಲಿಮೆಂಟಿನಲ್ಲಿ ಆರ್ಡಿನೆನ್ಸುಗಳಿಗೆ ಅನಿಶ್ಚಿತ ಅವಧಿಯ ಪಾಲಿಸುವ ತಿದ್ದುಪಡಿ ಸ್ವೀಕೃತವಾಯಿತು. ಆಗ ಭಾರತ ಮಂತ್ರಿ ಅಮೆರಿ ಭಾಷಣಮಾಡುತ್ತಾ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ೭೨ನೆಯ ಕಲಮಿನನ್ವಯ ವೈಸರಾಯರಿಗೆ ಆರೇ ತಿಂಗಳ ಮಟ್ಟಿಗೆ ಆರ್ಡಿನೆನ್ಸು ರಾಜ್ಯಭಾರ ಮಾಡಲು ಅಧಿಕಾರವಿದೆಯೆಂದರು. ಆದರೆ ಯುದ್ಧಕಾಲದ ಅಗತ್ಯಗಳಿಗಾಗಿ ವೈಸರಾಯರನ್ನು ಮೇಲಿನ ಕಲಮಿನಿಂದ ಹೊರಪಡಿಸಲಾಯಿತು. ಇದರ ಪ್ರಕಾರ ಅವರಿಗೆ ಕಠಿಣಕಾಲ ಮುಗಿವವರೆಗೆ ಆರ್ಡಿನೆನ್ಸು ಮುಂದುವರಿಸುವ ಅಧಿಕಾರ ಕೊಡಲ್ಪಟ್ಟಂತಾಗಿದೆ. ಹೀಗಿರುವುದರಿಂದ ಇನ್ನು ಮುಂದೆಯೂ ವೈಸರಾಯರು ಶಾಸನಸಭೆಗಳಲ್ಲಿ ಮಂಡಿಸದೆ ಆರ್ಡಿನೆನ್ಸು ಮುಂದುವರಿಸುವರೇ ಎಂದು ಪ್ರಶ್ನೆ

ಪತ್ರಿಕೆಗಳಿಗೆ ಕಾಗದದ ಕೊರತೆ

ಹಿಂದೂದೇಶದ ಪತ್ರಿಕೆಗಳಿಗೆ ಕೊಡುವ ಕಾಗದದ ಅಂಶವು ಬಹಳ ಕಡಿಮೆ ಮಾಡಲಾಗುವುದೆಂದು ಸರಕಾರವು ಪ್ರಕಟಿಸಿದೆ. ಇದರಿಂದ ಪತ್ರಿಕಾಸಂಚಾಲಕರಿಗೆ ಸಿಡಿಲುಬಡಿದಂತಾಗಿರುವುದು. ಇದರಿಂದ ಒಟ್ಟು ಭಾರತದ ಪತ್ರಿಕೆಗಳಲ್ಲಿ ಅದರಲ್ಲೂ ಸಣ್ಣ ಪತ್ರಿಕೆಗಳಿಗೆ ಬಲವಾದ ಪೆಟ್ಟು ಬಿದ್ದಂತಾಯಿತು. ಪತ್ರಿಕೋದ್ಯೋಗಿಗಳನ್ನು ಕಂಡು ಮಾತನಾಡಿ ವಿಚಾರವಿನಿಮಯ ಮಾಡದೆ ಸರಕಾರದವರು ತಮ್ಮಷ್ಟಕ್ಕೇ ಹೀಗೆ ನಿರ್ಣಯ ಮಾಡಬಾರದಾಗಿ ಒಂದು ವಿನಂತಿ ಹೋಗಿದೆ.

ಶ್ರೀ ಮಾಸ್ತಿಯವರು ದ್ವಿತೀಯ ಸಚಿವರಾಗುವರೆ?

ಮೈಸೂರಿನ ದ್ವಿತೀಯ ಸಚಿವ ಶ್ರೀ ಎ ವಿ ರಾಮನಾಥನರು ಭರತಪುರದ ದಿವಾನರಾಗಲಿರುವುದರಿಂದ, ಅವರ ಸ್ಥಾನದಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ನೇಮಕ ಹೊಂದುವರೇ ಎಂದು ಒಂದು ಸುದ್ದಿಯಿದೆ

ಬೊಂಬಯಿಯಲ್ಲಿ ರೇಶನಿಂಗ್

ಬೊಂಬಯಿಯಲ್ಲಿ ಆಹಾರ ಸಮಸ್ಯೆ ಸಂಕಷ್ಟವಾಗಿದೆಯೆಂಬೀ ವಿಚಾರದಲ್ಲಿ ಅಲ್ಲಿನ ಗವರ್ನರರು ವೈಸರಾಯರನ್ನು ಕಂಡು ಮಾತನಾಡಿ ಬಂದವರು ಬೇಗನೇ ಅಲ್ಲಿ ರೇಶನಿಂಗ್ (ಎಲ್ಲರಿಗೂ ಒಂದು ಮಿತಿಯಿಂದ ಹಂಚಿಕೊಡುವ ಪದ್ಧತಿ) ಯನ್ನು ಜಾರಿಗೆ ತರುವುದಾಗಿ ತಿಳಿಸಿದ್ದಾರೆ. ಆಹಾರ ಧಾನ್ಯಗಳನ್ನು ಒಂದು ತಿಂಗಳಿಗಿಂತ ಹೆಚ್ಚಿನ ವೆಚ್ಚಕ್ಕೆ ದಾಸ್ತಾನು ಮಾಡಬಾರದಾಗಿ ಮುಂಬಯಿ ನಗರ ಹಾಗೂ ಉಪನಗರಗಳಲ್ಲಿ ಆಜ್ಞೆ ಹೊರಡಿದೆ. ಸಂಗ್ರಹಿಸಿಟ್ಟವರಿಗೆ 3 ವರ್ಷ ಶಿಕ್ಷೆ.

ಜಿಲ್ಲಾ ಸಮಾಚಾರಗಳು

ಕಲೆಕ್ಟರರ ಕಚೇರಿಯಲ್ಲಿ ಆಹಾರ ಸಮಸ್ಯೆಯ ಕುರಿತು ಚರ್ಚೆ

ಕಲೆಕ್ಟರರ ಕಚೇರಿಯಲ್ಲಿ ಜಿಲ್ಲೆಯ ವರ್ಗದಾರರ, ವ್ಯಾಪಾರಸ್ಥರ, ಹಾಗೂ ಪ್ರಮುಖ ಗೃಹಸ್ಥರ ಸಭೆ

ಆಹಾರದ ಸಮಸ್ಯೆ ವಿಮರ್ಶೆಗಾಗಿ

ತಾ. ೩ರಂದು ಸಂಜೆ ಗಂಟೆ ೪ಕ್ಕೆ, ದ. ಕ. ಜಿಲ್ಲಾ ಕಲೆಕ್ಟರರ ಆಮಂತ್ರಣದಂತೆ, ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ ವರ್ಗದಾರರು, ವ್ಯಾಪಾರಸ್ಥರು ಹಾಗೂ ಇತರ ಪ್ರಮುಖ ಗೃಹಸ್ಥರು ಬಂದಿದ್ದು, ಕಲೆಕ್ಟರರ ಕಚೇರಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಅಕ್ಕಿ ಮೊದಲಾದ ಆಹಾರ ಧಾನ್ಯಗಳ ಬೆಲೆ ಮೊದಲಾದ ವಿಷಯ ವಿಚಾರ ಮಾಡುವರೆ ಒಂದು ಮಹಾಸಭೆಯು ಸೇರಿತು. ಪ್ರಾರಂಭದಲ್ಲಿ ಜಿಲ್ಲಾ ಕಲೆಕ್ಟರರು ಸಭೆ ಕರೆದ ಉದ್ದೇಶವನ್ನು ವಿವರಿಸಿ, ಶ್ರೀ ಮೊಳಹಳ್ಳಿ ಶಿವರಾವ್, ಡಾ. ವಸಂತಪ್ಪ, ಮಂಗಳೂರು ಕಮ್ಯುನಿಸ್ಟ್ ಪಾರ್ಟಿ, ಚೇಂಬರ್ ಓಫ್ ಕಾಮರ್ಸ್ ಮೊದಲಾದವರಿಂದ ಬಂದ ಯೋಜನೆ ಸೂಚನೆಗಳನ್ನು ವಿವರಿಸಿ, ಚರ್ಚೆಗಾಗಿ ಸಭಿಕರ ಮುಂದಿಡುತ್ತಾ, ಸಾರ್ವಜನಿಕರು ಕಡಿಮೆ ದರದಲ್ಲಿ ಅಕ್ಕಿ ಒದಗಿಸಿಕೊಡುವ ಡಿಪೋಗಳನ್ನು ತೆರೆಯುವ ಸೂಚನೆ ತಂದದ್ದು ತಾನು ಅದನ್ನು ಸ್ವಾಗತಿಸುವುದಾಗಿ ತಿಳಿಸಿದರು.

ಆನಂತರ ಚೇಂಬರ್ ಓಫ್ ಕಾಮರ್ಸಿನ ಪರವಾಗಿ ಶ್ರೀ ಕೊಂಚಾಡಿ ಕೇಶವ ಶೆಣೈಗಳು, ಚೇಂಬರ್ ಓಫ್ ಕಾಮರ್ಸಿನ ಸೂಚನೆಗಳನ್ನು ಸಭೆಯ ಮುಂದಿಟ್ಟು ವಿವರಿಸಿದರು. ಅವರ ಸೂಚನೆಗಳು ಈ ಕೆಳಗಿನಂತಿದ್ದವು. ಅಕ್ಕಿ ಭತ್ತಗಳು ಜಿಲ್ಲೆಯ ಹೊರಗೆ ಹೋಗದಂತೆ ನಿರ್ಬಂಧಿಸುವ ಆಜ್ಞೆಯನ್ನು ಕಲೆಕ್ಟರರು ಮುಂದುವರಿಸಬೇಕು. (೨) ಮೈಸೂರು ಸರಕಾರಕ್ಕೆ, ಮದ್ರಾಸು ಸರಕಾರವು 40 ಸಾವಿರ ಟನ್ ಅಕ್ಕಿ ಕೊಡುತ್ತಿದು ಅದರಲ್ಲಿ 10 ಸಾವಿರ ಟನ್ ಮೈಸೂರಿನಿಂದ ಪ್ರತಿ ವರ್ಷ ನಮ್ಮ ಜಿಲ್ಲೆಗೆ ಬರುತ್ತಿದ್ದುದನ್ನು ಈ ವರ್ಷವೂ ಬರುವಂತೆ ಏರ್ಪಾಡು ಮಾಡಬೇಕು. (೩) ಸಹಕಾರೀ ಸಂಘಗಳು ಜಿಲ್ಲೆಯ ಹಳ್ಳಿಹಳ್ಳಿಗಳ ಕೇಂದ್ರಗಳಲ್ಲಿ ಮಾರಾಟದ ಸ್ಟೋರ್‍ಗಳನ್ನು ತೆರೆದಿದ್ದು, ಅವುಗಳಲ್ಲಿ ಅಕ್ಕಿ ಭತ್ತಗಳ ಮೇಲೆ ಸಾಲ ಸಿಗುವುದರಿಂದ, ಅಕ್ಕಿ ಭತ್ತಗಳಿಗೆ ಕ್ರಯ ಚೆಚ್ಚು ಮಾಡಿ ಮಾರಾಟಮಾಡುವರೆ ವರ್ಗದಾರರಿಗೆ ಅಸ್ಪದ ವಾಗುತ್ತಿದ್ದು, ಹಾಗೆ ಸಹಕಾರೀ ಸಂಘಗಳ ಮೂಲಕ ಅಕ್ಕಿ ಭತ್ತಗಳಿಗೆ ಕ್ರಯ ಏರುವುದನ್ನು ಕಲೆಕ್ಟರರು ನಿರ್ಬಂಧಿಸಬೇಕು. (೪) ವಸ್ತು ಸಂಗ್ರಹಿಸಿಟ್ಟರೆ, ವ್ಯಾಪಾರಸ್ಥರಾಗಲಿ, ವರ್ಗದಾರರಾಗಲಿ, ಅವರ ಸಂಗ್ರಹದಲ್ಲಿ 1/6 ರಷ್ಟನ್ನು ಅವರಿಗೆ ಬಿಟ್ಟು 5/6ರಷ್ಟನ್ನು ಒತ್ತಾಯದಿಂದ ಸ್ವಾಧೀನಮಾಡಿ ವ್ಯಾಪಾರಕ್ಕೆ ಹಾಕಬೇಕು.- ಇವು ಚೇಂಬರ್ ಓಫ್ ಕಾಮರ್ಸಿನ ಸೂಚನೆಗಳಿದ್ದುವು.

ಆನಂತರ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ ಎಂ ಎಲ್. ಎ (ಕೇಂದ್ರ) ಇವರು ಮಾತನಾಡಿ ಈ ಕೆಳಗಿನ ಸೂಚನೆಗಳನ್ನಿತ್ತರು. ೧) ಸರಕಾರದವರು ಅಕ್ಕಿ ಭತ್ತಗಳಿಗೆ ಮಾತ್ರವಲ್ಲದೆ ಇತರ ಜೀವನಾವಶ್ಯ ವಸ್ತುಗಳಿಗೆಲ್ಲಾ ಬೆಲೆ ನಿರ್ಬಂಧಿಸಬೇಕು. ಏಕೆಂದರೆ ಅಕ್ಕಿ ಭತ್ತಗಳ ಬೆಲೆ ಮಾತ್ರ ನಿರ್ಬಂಧಿಸಿ ಇತರ ಜೀವನಾವಶ್ಯ ವಸ್ತುಗಳ ಬೆಲೆ ಏರುತ್ತಾ ಇದ್ದರೆ ವರ್ಗದಾರರಿಗೆ ಜೀವನವು ಸಂಕಷ್ಟವಾಗುವುದು. ೨) ಬೇರೆ ಬೇರೆ ಜಿನಸುಗಳಿಗೆ ಬೆಲೆ ಯಾವ ದಾಮಾಶಾಯಿಯಲ್ಲಿ ಏರಿದೆಯೋ ಆ ವಿಚಾರವನ್ನು ಮಾಡಿ ಎಲ್ಲಾ ವಸ್ತುಗಳಿಗೂ ಬೆಲೆ ನಿರ್ಬಂಧ ಮಾಡುವಂತೆ ಒಂದು ಅಧಿಕಾರವುಳ್ಳ ಕಮಿಟಿಯನ್ನು ಏರ್ಪಡಿಸಬೇಕು. ೩) ಕಳ್ಳವ್ಯಾಪಾರ(Black market) ಆಗದಂತೆ ಸರಕಾರವು ಡಿಪೋಗಳನ್ನು ತೆರೆದು ಸಾಮಗ್ರಿಗಳನ್ನು ಒದಗಿಸಿಕೊಡಬೇಕು. ೪) ಅಗತ್ಯಬಿದ್ದರೆ ಪ್ರತಿಯೊಬ್ಬನಿಗೂ ಇಷ್ಟಿಷ್ಟೇ ಕೊಡಬೇಕೆಂಬ ಮಿತಿ (rationing)ಯನ್ನು ನಿಶ್ಚಯಿಸಿ, ಅದನ್ನು ಜಾರಿಗೆ ತರಬೇಕು.

ಬೇರೆ ಬೇರೆ ಯೋಜನೆಗಳು ಚರ್ಚಿಸಲ್ಪಟ್ಟವು

—ಆರು ತಿಂಗಳ ವರೆಗೆ ನಿರ್ಬಂಧ ಮುಂದುವರಿಸುವ ಸೂಚನೆ—

ಮೇಲಿನ ಸೂಚನೆಗಳನ್ನು ಮಂಗಳೂರು ಕಮ್ಯುನಿಸ್ಟ್ ಪಕ್ಷದವರೂ ಒಪ್ಪಿದರು. ಮಂಗಳೂರು ಕಮ್ಯುನಿಸ್ಟ್-ಪಕ್ಷದ ಪರವಾಗಿ ಶ್ರೀ. ಎನ್. ಕೆ. ಉಪಾಧ್ಯಾಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಶ್ರೀ ಎಂ. ಶಿವರಾಯರ ಯೋಜನೆಯನ್ನು ಜಿಲ್ಲಾ ಕೋಪರೇಟಿವ್ ಸೊಸೈಟಿಗಳ ಡೆ. ರಿಜಿಸ್ತ್ರಾರರಾದ ಶ್ರೀ ಕಣ್ಣನ್ ನಾಯರರು ವಿವರಿಸಿ, ಸಭಿಕರ ಮುಂದಿಟ್ಟರು (ಅದನ್ನು ನಾವು ಬೇರೆ ಕಡೆ ವಿವರವಾಗಿ ಕೊಟ್ಟಿದ್ದೇವೆ) ಡಾ. ಮಾಧವ ಪೈಗಳ ಯೋಜನೆಯು 'ಸಹಕಾರ' ಸಂಘಗಳು ಆಹಾರ ಸಾಮಗ್ರಿ ದಾಸ್ತಾನು ಮಾಡಿ ಹಂಚುವ ಏರ್ಪಾಡು ಮಾಡಬೇಕೆಂಬುದಾಗಿ ಇತ್ತು.

ಹೀಗೆ ಮೇಲೆ ಹೇಳಿದ ಯೋಜನೆಗಳು ಸಭೆಯ ಮುಂದಿಡಲಾಗಿ ದೀರ್ಘ ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ ಶ್ರೀಗಳಾದ ಎಂ. ವೆಂಕಟೇಶಪ್ಪೆ, ರಾಘವೇಂದ್ರ ಪೈ, ವಿ ಎಸ್. ಕುಡ್ವ ಮೊದಲಾದವರೂ ಭಾಗವಹಿಸಿದರು.

ಕೊನೆಗೆ, ಮುಂದೆ ಆರು ತಿಂಗಳ ವರೆಗೆ, ಅಕ್ಕಿ ಭತ್ತಗಳು ನಮ್ಮ ಜಿಲ್ಲೆಯಿಂದ ಹೊರಹೋಗದಂತೆ ನಿರ್ಬಂಧವನ್ನು ಮುಂದುವರಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವಂತೆ ನಿರ್ಣಯವಾಯಿತು.

ಆಹಾರ ಸಂಕಷ್ಟ ನಿವಾರಣೆ ಸಭೆ

ಈ ದಿನ ಸಂಜೆ ಮಂಗಳೂರು ಸೆಂಟ್ರಲ್ ಕೋಅಪರೇಟಿವ್ ಸೊಸೈಟಿ ಬೇಂಕಿನ ಕಟ್ಟಡದಲ್ಲಿ ಜಿಲ್ಲೆಯ ಆಹಾರ ಸಂಕಷ್ಟ ನಿವಾರಣೆಯ ವಿಚಾರದ ಬಗ್ಗೆ ಸಾರ್ವಜನಿಕ ಮಹನೀಯರ ಒಂದು ಮಹಾ ಸಭೆ ಕೂಡಲಿದೆ.

ಅಕ್ಕಿ ಲೂಟಿಯ ಸುದ್ದಿ

ಮಂಗಳೂರಿನ ಕೂಳೂರಿನಲ್ಲಿ ಸಾಗುತ್ತಿದ್ದ ಒಂದು ದೋಣಿ ಅಕ್ಕಿಯನ್ನು ಯಾರೋ ಒಬ್ಬ ತ್ವಾರದಿಂದ ಸ್ವಾಧೀನಪಡಿಸಿಕೊಂಡಿರುವರೆಂದೂ, ಉಳ್ಳಾಲ ತೊಕ್ಕೊಟ್ಟಿನ ಬಳಿ ಒಂದು ಗಾಡಿ ಅಕ್ಕಿಯನ್ನು ಯಾರೋ ಲೂಟಿ ಮಾಡಿದರೆಂದೂ ಸುದ್ದಿ ಇದೆ.

ನಿರ್ಣಯದ ಬೆಲೆಗಿಂತ ಹೆಚ್ಚಿಗೆ ಮಾರಿದ ಆರೋಪ

ಮಂಗಳೂರು ಸರ್ಕಲ್ ಪೋಲೀಸ್ ಇನಸ್ಪೆಕ್ಟರ್ ಶ್ರೀ. ಕೆ ಸೇತು ಮಾಧವ ಮೆನೋನ್ ಅವರು, ಅತಿ ಲಾಭದ ಉದ್ದೇಶದಿಂದ ಸರಕಾರದವರು ನಿರ್ಧರಿಸಿದ ಬೆಲೆಗಿಂತ ಹೆಚ್ಚಿಗೆ ಬೆಲೆಗೆ ಬೆಂಕಿಪೆಟ್ಟಿಗೆಯನ್ನು ಮಾರಿದುದನ್ನು ಕಂಡುಹಿಡಿದು ಬಂದರದ ಅಂಗಡಿಗಾರರಾದ ಚಯಬ್ಬ ಬ್ಯಾರಿ, ಕುಂಞಾರಾಮನ್ ಅವರ ಮೇಲೂ, ರಥಬೀದಿ ವ್ಯಾಪಾರಿಗಳಾದ ಗೋಳಿಕಟ್ಟೆ ವೆಂಕಟರಾವ್, ವೆಬ್‍ಸ್ಟರ್ ಮಾರ್ಕೆಟಿನ ಪಾಂಡುರಂಗ ಶೆಣೈ ಅವರ ಮೇಲೂ ಕಾನೂನಿನ ಕ್ರಮಗಳನ್ನು ಜರುಗಿಸಿರುತ್ತಾರೆ.

ನಿರ್ಬಂಧಕಾಜ್ಞೆ ಮುಂದುವರಿಯಿತು

ದ. ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆ, ಕೂಟಗಳು ಜರಗಕೂಡದೆಂದು ಈ ಮೊದಲು ೬ ತಿಂಗಳ ಹಿಂದೆಯೇ ವಿಧಿಸಿದ ಕಲೆಕ್ಟರರ ನಿರ್ಬಂಧಕಾಜ್ಞೆಯು ಜನವರಿ ತಾ ೧೮ರಿಂದ ಪುನಃ ಎರಡು ತಿಂಗಳ ವರೆಗೆ ಮುಂದುವರಿಸಲಾಗಿದೆ.

ಚಿಲ್ಲರೆಯನ್ನು ಹಿಡಿಯಲಾಯಿತು

ಈ ತಿಂಗಳ ಪ್ರಥಮ ವಾರದದಲ್ಲಿ ಮಂಗಳೂರು ಸರ್ಕಲ್ ಪೋಲೀಸ್ ಇನಸ್ಪೆಕ್ಟರರಾದ ಶ್ರೀ ಕೆ. ಸೇತುಮಾಧವ ಮೆನೋನ್ ಅವರೂ, ಸಬ್ ಮ್ಯಾಜಿಸ್ಟ್ರೇಟ್ ಶ್ರೀ. ನರಸಿಂಹ ಅವರೂ ರಥಬೀದಿಯಲ್ಲಿ ನಾಲ್ಕು ಪ್ರಮುಖ ವ್ಯಾಪಾರಿಗಳ ಅಂಗಡಿಗಳಲ್ಲಿ 'ಚಿಲ್ಲರೆಗಾಗಿ ಪಂಚೋಧನೆ ನಡೆಸಿ, ಶ್ರೀ. ಅಡಿಗೆ ಕೃಷ್ಣ ಶೆಣೈಯವರಲ್ಲಿ ಚಿಲ್ಲರೆಯಿತ್ತೆಂಬ ಆರೋಪದಲ್ಲಿ ಅವರ ಮೇಲೆ 'ಪ್ರೊಸೆಕ್ಯೂಶನ್' ಕಾರ್ಯಕ್ರಮವನ್ನು ನಡೆಸಿರುವರು.

ಶ್ರೀ ಕೈಡೇಲು ತಿಮ್ಮಪ್ಪ ಶೆಟ್ಟರ ಬಂಧನ

ಮಂಗಳೂರಿನ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಲ್ಲೊಬ್ಬರಾದ ಶ್ರೀ ಕೈಡೇಲ್ ತಿಮ್ಮಪ್ಪ ಶೆಟ್ರನ್ನು ತಾ 13ರಂದು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಬಂಧಿಸಿರುವರು.

ಕಮಲಾದೇವಿಯರ ಬಿಡುಗಡೆ ಮತ್ತು ಬಂಧನ

ಶ್ರೀಮತಿ ಕಮಲಾದೇವಿಯರನ್ನು ಕೆಲಕಾಲ ಹಿಂದೆ ಬೆಂಗಳೂರು ಬಸವನಗುಡಿಯಲ್ಲಿ ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸ್ಥಾನಬದ್ಧರಾಗಿಟ್ಟಿದ್ದು ಅವರನ್ನು ತಾ 15ರಂದು ಬಿಡುಗಡೆ ಮಾಡಿ ಮೈಸೂರು ಸಂಸ್ಥಾನದಿಂದ ಹೊರಡಬೇಕೆಂಬ ಮೈಸೂರು ಸರಕಾರದ ಆಜ್ಞೆ ಅವರಿಗೆ ತಿಳಿಸಿ, ಅವರನ್ನು ಬೆಂಗಳೂರು ಕೆಂಟೋನ್ಮೆಂಟಿಗೆ ತಂದು ಬಿಡುತ್ತಲೇ ಬ್ರಿಟಿಷ್ ಭಾರತದ ಪೋಲೀಸರು ಶ್ರೀಮತಿಯವರನ್ನು ಕೈದುಮಾಡಿ ವೆಲ್ಲೂರು ಸೆರೆಮನೆಗೆ ಒಯ್ದರು.

ಆಗಮನ

ಇದೇ ತಿಂಗಳ ತಾ ೨೩ಕ್ಕೆ ಯುದ್ಧ ಪ್ರಕಟಣಾ ಖಾತೆಯ ಡೈರೆಕ್ಟರರೂ, ನ್ಯಾಶನಲ್ ವಾರ್ ಫ್ರಂಟಿನ ಪ್ರಾಂತಿಕ ಆರ್ಗನೈಜರರೂ ಆಗಿರುವ ಶ್ರೀ ಕೃಷ್ಣನ್ ಟಿ. ಟಿ. ಬಿ ಹ ರ್ವ ಅವರು ಮಂಗಳೂರಿಗೆ ಬಂದು, ತಾ ೨೩ರಲ್ಲಿ ಇಲ್ಲಿದ್ದು, ಇಲ್ಲಿಗೆ ಸಮೀಪದ ಕೆಲ ಸ್ಥಳಗಳನ್ನು ಸಂದರ್ಶಿಸಿ, ಮಂಗಳೂರಲ್ಲಿ ಜರಗುವ ಒಂದು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಹಿಂತೆರಳುವರೆಂದು ತಿಳಿದುಬಂದಿದೆ.

ಏ. ಆರ್. ಪಿ. ಯವರ ಆಟ. ಸ್ಪರ್ಧೆಗಳು

ತಾ ೧೨ರಂದು, ಸ್ಥಳೀಯ ಪೋಲೀಸ್ ಗ್ರೌಂಡ್ಸಿನಲ್ಲಿ ಏ ಆರ್ ಪಿ ಯವರ ಆಟಪಾಟಗಳ ಸ್ಪರ್ಧೆಯೂ, ಬಹುಮಾನ ವಿತರಣೆಯೂ ಜರಗಿತು. ಪ್ರಥಮತಃ ಏ ಆರ್. ಪಿ ವಳದವರ ನಾನಾ ಆಟಗಳೂ ಹಗಲು ವೇಷಗಳೂ ಜರಗಿತು. ಅಂದಿನ ಅಧ್ಯಕ್ಷರಾದ ಮಂಗಳೂರಿನ ಆ ರ್ಡ್ ಬಿಶಪ್‌ರಿಗೂ ಶ್ರೀಮತಿ ಡಿ. ಇ. ಜಿ. ಚೆಡ್ವಿಕ್ ಅವರಿಗೂ ಗೌ॥ ಚೀಫ್ ವಾರ್ಡನರಾದ ಶ್ರೀ. ಜಿ. ಸೋಮಶೇಖರರಾಯರು ಹೂಮಾಲೆ ಹಾಕಿದರು. ಏ ಆರ್. ಪಿ. ಕಂಟ್ರೋಲರಾದ ಜಿಲ್ಲಾ ಕಲೆಕ್ಟರರು, ಏ ಆರ್. ಪಿ ಯವರ ಸೇವೆಯನ್ನು ವಿವರಿಸಿ ಭಾಷಣ ಮಾಡಿದ ಬಳಿಕ, ಶ್ರೀಮತಿ ಡಿ. ಇ. ಜಿ. ಚೆಡ್ವಿಕರು ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಅಧ್ಯಕ್ಷರು ಭಾಷಣ ಮಾಡಿದ ಬಳಿಕ ಕೇಪ್ಟನ್ ಸಿ ಕೆ. ಮೆನೋನ್ (ಜಿಲ್ಲಾ ಸರ್ಜನರು) ವಂದನಾರ್ಪಣೆ ನಡೆಸಿದರು.

ಟೌನ್ ನ್ಯೂಸೆನ್ಸ್ ಆಕ್ಟಿನ ಮೇರೆಗೆ

ಹಿಂದಿನ ಸೋಮವಾರ ರಾತ್ರಿ ಹಂಪನ್‍ಕಟ್ಟೆಯಲ್ಲಿ ಗುರವು ಕೂಡಿದ್ದ ಸುಮಾರು ೩೦ ಮಂದಿಯನ್ನು ಪೋಲೀಸರು ಕೈದು ಮಾಡಿ ಅವರನ್ನು ಟೌನ್ ನ್ಯೂಸೆನ್ಸ್ ಆಕ್ಟಿನ ಕ್ರಮಗಳಿಗೆ ಗುರಿಪಡಿಸಿರುತ್ತಾರೆ.

ದ. ಕ. ಡಿಸ್ಟ್ರಿಕ್ಟ್ ಬೋರ್ಡಿನ ಸಭೆ

ತಾ. ೨೯ರಂದು ಬೆಳಿಗ್ಗೆ 11 ಗಂಟೆಗೆ ಮಂಗಳೂರು ಡಿ. ಬೋ. ಆಫೀಸಿನಲ್ಲಿ ಜರಗುವುದು.

ಶ್ರೀಗಳಾದ ಲೋಕಯ ಶೆಟ್ಟಿ ಮತ್ತು ಬಾಲಪ್ಪ ಇವರಿಗೆ 'ಡಿಟೆನ್ಶನ್'

'ಡಿಫೆನ್ಸ್ ಓಫ್ ಇಂಡಿಯಾ' ಕಾನೂನಿನಂತೆ ಮಂಗಳೂರಲ್ಲಿ ಬಂಧಿತರಾದ ಶ್ರೀಗಳಾದ ಲೋಕಯ್ಯ ಶೆಟ್ಟಿ ಮತ್ತು ಬಾಲಪ್ಪ ಇವರಿಗೆ 'ಡಿಟೆನ್ಶನ್' ವಿಧಿಸಿ ವೆಲ್ಲೂರು ಜೈಲಿಗೆ ಕೊಂಡೊಯ್ಯಲಾಗಿದೆ.

ಆಹಾರ ಮತ್ತು ಚಿಲ್ಲರೆ ವಾರ

ಮಂಗಳೂರು ಕಮ್ಯುನಿಸ್ಟ್ ಪಕ್ಷದವರು ಪ್ರಾರಂಭಿಸಿದ ಆಹಾರ ಮತ್ತು ಚಿಲ್ಲರೆ ವಾರದಲ್ಲಿ ಹಲವು ಮಂದಿ ಮಜೂರರು ವಿದ್ಯಾರ್ಥಿಗಳು ಪ್ರತಿ ದಿನ ಮನೆ ಅಂಗಡಿಗಳಿಗೆ ಹೋಗಿ ಜನರಿಗೆ ಆಹಾರದ ವಿಷಯ ವಿವರಿಸಿ ಸಹಿ ಪಡೆಯುತ್ತಿರುವರು. ಹೀಗೆ ಪಡೆದ ಸಹಿಗಳ ಮೆಮೋರಾಂಡವನ್ನು ಜಿಲ್ಲಾ ಕಲೆಕ್ಟರರಲ್ಲಿ ಕೊಂಡೊಯ್ಯಲು ಐದು ಜನರದೊಂದು ಕಮಿಟಿ ರಚಿತವಾಗಿದ್ದು, ಇದರಲ್ಲಿ ಶ್ರೀಗಳಾದ ಹರಿದಾಸಾಚಾರ್ಯ ಮತ್ತು ಎನ್ ಕೆ ಉಪಾಧ್ಯಾಯರು ಕಮ್ಯುನಿಸ್ಟ ಪಕ್ಷದ ಪರವಾಗಿಯೂ, ಶ್ರೀ. ಕೆ. ಕೇಶವ ಕಾಮತರು ಬೀಡಿ ಕೆಲಸಗಾರರ ಪರವಾಗಿಯೂ, ಶ್ರೀ. ಸೋನ್ಸರು ಹೆಂಚಿನ ಕೆಲಸಗಾರರ ಪರವಾಗಿಯೂ ಶ್ರೀ ಪದ್ಮನಾಭನರು ವಿದ್ಯಾರ್ಥಿಗಳ ಪರವಾಗಿಯೂ ನೇಮಿಸಲ್ಪಟ್ಟಿರುವರು. 'ಆಹಾರ ನಿಯಂತ್ರಣ ಸಮಿತಿ'ಯೊಂದನ್ನು ನಿರ್ಮಿಸಬೇಕೆಂಬ ಅಭಿಪ್ರಾಯದಿಂದ ಸ್ಥಳೀಯ ಸಾರ್ವಜನಿಕ ಸಂಸ್ಥೆಗಳಿಗೆ ಕಮ್ಯುನಿಸ್ಟ್ ಪಾರ್ಟಿಯವರು ಸಹಕರಿಸುವರೆಂದೂ ತಿಳಿದಿದೆ.

ಫರಂಗಿಪೇಟೆ ತಾರಾನಾಥ ಸ್ಮಾರಕ

ಇತ್ತೀಚೆ ದಿವಂಗತರಾದ ಪಂಡಿತ ತಾರಾನಾಥರ ಸ್ಮಾರಕವಾಗಿ 'ಶ್ರೀ ತಾರಾನಾಥ ವಾಚನಾಲಯ' ಮತ್ತು 'ಶ್ರೀ ತಾರಾನಾಥ ಯಕ್ಷಗಾನ ಮಂಡಳಿ' ಎಂಬ ಎರಡು ಸಂಸ್ಥೆಗಳು ಸ್ಥಾಪಿಸಲ್ಪಟ್ಟಿವೆ.

ನೀಲೇಶ್ವರ ಏಡೆಡ್ ಅಧ್ಯಾಪಕ ಸಭೆ

ಈ ಸರಗೋಡು ತಾಲೂಕು ಏಡೆಡ್ ಅಧ್ಯಾಪಕ ಸಭೆಯೊಂದು ನೀಲೇಶ್ವರದ ಹಾ. ಎ. ಶಾಲಾ ಮರಾವದಲ್ಲಿ ಶ್ರೀ ಸಿ ಕೆ ನಂಬಿಯಾರ್ ಅಧ್ಯಕ್ಷತೆಯಿಂದ ಜರಗಿ, 1) ಕಾ. ತಾ. ಏಡೆಡ್ ಸ್ಕೂಲ್ ಉಪಾಧ್ಯಾಯ ಯೂನಿಯನಿಗೆ ಮಂಜೂರಾತಿ ಕೇಳುವ 2) ವಿದ್ಯಾಧಿಕಾರಿಗಳನ್ನು ಕಂಡು ತುಟ್ಟಿಭತ್ತೆ ವಿಷಯ ಮಾತನಾಡುವ 3) ಅಧ್ಯಾಪಕ ಸಂಘದ ವಾರ್ಷಿಕ ವರ್ಗಣೆಯನ್ನು ರದ್ದುಗೊಳಿಸುವಂತೆ ಕೇಳಿಕೊಳ್ಳುವ 4) ಕಾ. ತಾ. ಏಡೆಡ್ ಉಪಾಧ್ಯಾಯರ ಒಂದು ಪರಿಷತ್ತನ್ನು ತಾ 30ರಂದು ಜರಗಿಸುವ ಠರಾವುಗಳಾದುವು.

ಎಮರ್ಾಳ ರೈತರ ಸಭೆ ಮತ್ತು ಸ್ಕೌಟ್ ಪರಿಷತ್ತು

ಎಮರ್ಾಳ ಬೋ. ಹ. ಎಲಿಮೆಂಟರಿ ಶಾಲಾ ವಠಾರದಲ್ಲಿ ಜರಗಿದ ಕಾಪು ಎಮರ್ಾಳ್ ರೋವರ್ಸ್ ದಳದವತಿಯಿಂದ ನೆರೆದ ರೈತರ ಸಭೆಗೆ ಉಪ್ಪಿನಂಗಡಿ ಎ ಡೆಪೋಸ್ಕ್ರೇಟಿರುದ ಶ್ರೀ. ಕೆ ಸಂಜೀವಶೆಟ್ಟರು ಅಧ್ಯಕ್ಷರಾಗಿದ್ದರು. ಜಿಲ್ಲಾ ಹಿಂದುಸ್ತಾನೀ ಸ್ಕೌಟ್ ಕಮಿಶನರಾದ ಶ್ರೀ ಎಂ. ಎಸ್. ಮಾದಪರಾಯರು ಮತ್ತು ಶಾಲಾ ದಿ ಇನ್ಸ್‌ಪೆಕ್ಟರರಾದ ಶ್ರೀ ಸಂಜೀವ ಭಟ್ಟರು ಗ್ರಾಮೋದ್ಧಾರದ ಕುರಿತು ಭಾಷಣವಿತ್ತರು. ಅನಂತರ ತುಳು ನಾಟಕವೊಂದು ಅಭಿನಯಿಸಲ್ಪಟ್ಟಿತು.

ಪುತ್ತೂರು

ಅಕ್ಕಿಯ ವ್ಯವಸ್ಥೆ ವಿಚಾರ

ಹಳ್ಳಿಗಳಲ್ಲಿ ಜಮೀನ್ದಾರರಲ್ಲಿರುವ ಅಕ್ಕಿ ಭತ್ತಗಳನ್ನು ಜನರಿಗೆ ದಾಮಾಶಾಯಿ ಪ್ರಕಾರ ಒದಗಿಸಿಕೊಡುವ ಕೆಲಸಕ್ಕಾಗಿ ಇಲ್ಲಿನ ಮುಂದಾಳು ಶ್ರೀ ಮೊಳಹಳ್ಳಿ ಶಿವರಾಯರು ಕಾರ್ಯಕ್ಷೇತ್ರಕ್ಕಿಳಿದಿರುವರೆಂಬುದು ಸುತ್ತ್ಯ. ಜಮೀನ್ದಾರರು ಇಂತಿಷ್ಟು ಅಕ್ಕಿ ಯಾ ಭತ್ತವನ್ನು, ಅಕ್ಕಿ ಮುಡಿ ಒಂದರ 7-8-0 ರೂಪಾಯಿಯಂತೆ ಕೊಡಬೇಕೆಂದೂ ಅದನ್ನು ಅಲ್ಲಲ್ಲಿ ಸಹಕಾರೀ ಸಂಘಗಳ ಮುಖಾಂತರ ಜನರಿಗೆ ಒದಗಿಸಬೇಕೆಂದೂ ಯೋಜನೆ ಇರುವುದಾಗಿ ಸುದ್ದಿ ಇದೆ.

ಸಿನೆಮಾ ಸುದ್ದಿ

'ಜೀವನ ನಾಟಕ'ವನ್ನು ನೋಡಿ—

(—ಕಯ್ಯಾರ)

'ಗುಬ್ಬಿ ಫಿಲ್ಮ್ಸ್'ನವರ ಕನ್ನಡ ಕೃತಿ 'ಜೀವನ ನಾಟಕ'ವನ್ನು ನೋಡಿ ಶಾಂತಾ ಹುಬ್ಳೀಕರ ನಟನೆಯ ವಿಷಯ ನಮಗಿದ್ದ ಅಭಿಮಾನ ಇನ್ನೂ ಹೆಚ್ಚಾಯಿತು. ಹಿಂದೀ ಚಿತ್ರಗಳಲ್ಲಿ ಅಭಿನಯಿಸಿ ಅಖಿಲ ಭಾರತ ಪ್ರಖ್ಯಾತಳಾದೀ ನಟಿ ಕನ್ನಡಿಗಳೆಂಬುದು ಕನ್ನಡಿಗರೆಲ್ಲರಿಗೂ ಒಂದು ಹೆಮ್ಮೆ. ಜೀವನ ನಾಟಕದ ಎರಡನೆಯ ಪದ್ಮಾ (ಶಾಂತಾಹುಬ್ಳೀಕರ್) ರಜತ ಪರದೆ ಮೇಲೆ ಬಂದಾಗಲೇ ಈ ಸಿನೆಮಾಕ್ಕೆ ಹೊಸತೊಂದು ಶೋಭೆ ಬಂದಂತೆ ತೋರುವುದು. 'ಆದ್ಮಿ'ಯಲ್ಲಿ ವೇಶ್ಯೆಯಾಗಿ ಅಷ್ಟೊಂದು ಅಸದೃಶವಾಗಿ ನಟಿಸಿದ ಹುಬ್ಳೀಕರ್, ವೇಶ್ಯೆ ಪಾತ್ರಕ್ಕೆ ಮಾತ್ರ ಯೋಗ್ಯಳೆಂದು ಹಿಂದೆ ಹಲವರು ಊಹಿಸಿದ್ದುದನ್ನು, ಇಲ್ಲಿನ ಅವಳ ಗರತಿಯ ಅಭಿನಯದಿಂದ, ತಿದ್ದಿಕೊಳ್ಳಬೇಕು! ಗರತಿ ಪದ್ಮಾ ಎಂತಹ ಆದರ್ಶ ಭಾರತೀಯ ಮಹಿಳೆ! ಅಭಿನಯ, ಸಂಗೀತ, ಮಾತು ಎಲ್ಲದರಲ್ಲಿಯೂ 'ಜೀವನ ನಾಟಕ'ದಲ್ಲಿ ನೋಡಿ ಆನಂದಿಸತಕ್ಕ ಒಂದೇ ಒಂದು ಪಾತ್ರವೆಂದರೆ ಶಾಂತಾ ಹುಬ್ಳೀಕರ್ ಅಭಿನಯಿಸಿದ ಪದ್ಮಾ.

—ಜಯಮ್ಮನ ಪ್ರಾರಂಭದ ಹಾಡು ಶಾಸ್ತ್ರೀಯವಿದ್ದು ಅತ್ಯಂತ ಉತ್ತಮವಿದೆ. ಮಾತು ಚನ್ನಾಗಿದೆ, ನಟನೆ ಸಾಮಾನ್ಯ. ನಾಟಕರಂಗದ ಪರಿಚಯ ಬಿಟ್ಟುಹೋಗಿಲ್ಲ; ಸಿನೆಮಾರಂಗದ ತಾದಾತ್ಮ್ಯ ಇನ್ನೂ ಬಂದಿಲ್ಲ. ಮೊದಲ ಪದ್ಮಾಳಲ್ಲಿ ಒಂದಿಷ್ಟೂ ಸಹಜತೆಯಿಲ್ಲ. ವೀರಣ್ಣನವರು, ಸಿನೆಮಾ ಅಭಿನಯದಿಂದ, ಅದರಲ್ಲೂ ಹಾಸ್ಯಾಭಿನಯದಿಂದ, ಎಷ್ಟು ತೀವ್ರ ನಿವೃತ್ತರಾಗುವರೋ ಅಷ್ಟು ತೀವ್ರ ಅವರ ಕೀರ್ತಿಯೂ ಪ್ರೇಕ್ಷಕರ ಆನಂದವೂ ಹೆಚ್ಚೀತು. ನಾಟಕಗಳಲ್ಲಿ ಅಭಿನಯಿಸಿ, ಕನ್ನಡ ನಾಡನ್ನು ಮೆಚ್ಚಿಸಿದ 'ವಿನೋದ ರತ್ನಾಕರ'ರು ಸಿನೆಮಾಕ್ಕೆ ಬಂದು ಇಂಥಾ 'ಅಪಹಾಸ್ಯ' ಪ್ರದರ್ಶಿಸಬಾರದು; ವೀರಣ್ಣನವರ ಉತ್ತರ ಭಾಗದ ನಟನೆ, ಸನ್ಯಾಸಿಯಾಗಿ ನಟಿಸಿದ ಗಂಭೀರ ನಟನೆ ಮಾತ್ರ ಮೆಚ್ಚುವಂತಿದೆ!

ಶ್ರೀ: ಅ.ನ. ಕೃಷ್ಣರಾಯರ ಕತೆಗಳನ್ನು ನಾಟಕಗಳನ್ನು ಓದಿ ನಾವು ಮೆಚ್ಚಿದ್ದೇವೆ; 'ಜೀವನ ನಾಟಕ'ದ ಕತೆಯನ್ನೂ ಅವರು ಬರೆದರೇ ಎಂದು ನಮಗೆ ಆಶ್ಚರ್ಯವಾಯಿತು! ವಸ್ತು ಶೈಲಿಗಳಲ್ಲಿ ಕೃತ್ರಿಮತೆಯೇ ಕಾಣುತ್ತದೆ. ಚತುರರಲ್ಲದ ಕೆಲ ನಟನಟಿಯರಿಂದ, ಕನ್ನಡ ಅರಿಯದ ನಿರ್ದೇಶಕರಿಂದ ಕತೆಯ ಮೂಲಸ್ವರೂಪವು ಹೀಗೆ ಕೆಟ್ಟಿದ್ದರೂ ಇರಬಹುದು.

ನ್ಯೂ ಥಿಯೇಟರ್ಸ್ ನಿರ್ದೇಶಕ 'ಮಹಾಬ'ರು ನಮಗೆ ನಿರಾಶೆಯನ್ನೇ ಉಂಟುಮಾಡಿದರು. ಕನ್ನಡ ತಿಳಿಯದ ನಿರ್ದೇಶಕರು, ಕನ್ನಡ ಚಿತ್ರವನ್ನು ನಿರ್ದೇಶಿಸಬೇಕಾಗಿ ಬಂದದುರವಸ್ಥೆಯ ಪರಿಣಾಮ ಇದಾಗಿದ್ದರೂ ಇರಬಹುದು. ಸರ್ವೋತ್ತಮ ಬಾದಾಮಿಯಂಥವರು ಕನ್ನಡ ಚಿತ್ರ ನಿರ್ದೇಶಿಸಲು ಸಿಗಲಾರರೇ?

'ಜೀವನ ನಾಟಕ'ದ ಕೊನೆಯ ನಾಟ್ಯ ಅತ್ಯುತ್ತಮವಿದೆ. ಈ ಸಿನೆಮಾದಲ್ಲಿ ಶಾಂತಾ ಹುಬ್ಳೀಕರ ಅಭಿನಯವನ್ನು ಬಿಟ್ಟರೆ, ನೋಡತಕ್ಕಂಥಾ ಇನ್ನೊಂದು ಭಾಗ ಈ ನೃತ್ಯವೊಂದು. ನೃತ್ಯವು ಭಾವಗರ್ಭಿತವಿದ್ದು ಕಲಾಪೂರ್ಣವಿದೆ. ಕೆಂಪರಾಜ ಅರಸುಗೆ ಸಿನೆಮಾ ನಟನಾಗತಕ್ಕ ಯೋಗ್ಯತೆಯುಂಟು. ಸುಂದರ ದೃಢ ಶರೀರವಿದೆ; ಅಭಿನಯದಲ್ಲಿಯೂ ಸಹಜತೆಯಿದೆ. ಉತ್ತಮ ನಿರ್ದೇಶಕರ ಕೈಯಲ್ಲಿ ಮುಂದಕ್ಕೆ ಉತ್ತಮ ನಟನಾಗಬಲ್ಲನೆಂದು ನಾವು ಹಾರೈಸಬಹುದು.

ಒಟ್ಟಿನಿಂದ ಜೀವನ ನಾಟಕವು ಹಲಕೆಲವು ವಿಶಿಷ್ಟ ವಿಷಯಗಳಿಗಾಗಿ ಅವಶ್ಯ ನೋಡಬೇಕಾದ ಚಿತ್ರ. ಕೆಲವು ಅಪೂರ್ಣತೆಯಿರಬಹುದು; ಮನುಷ್ಯ ಸ್ವಭಾವ ಜನ್ಯ ಪ್ರಮಾದವಿರಬಹುದು; ಟೀಕೆಗಳಿಗೆ ಎಡೆಯಿರಬಹುದು. ಆದರೆ ನೋಡಿ ಆನಂದಪಡತಕ್ಕ ಅಂಶಗಳೂ ಕೆಲವಿವೆ. ಎಲ್ಲದಕ್ಕಿಂತಲೂ ಹೆಚ್ಚು ಕನ್ನಡ ಸಿನೆಮಾ ಎಂಬುದರಿಂದ, ಕನ್ನಡಿಗರು ಅವಶ್ಯ ನೋಡಲೇ ಬೇಕು. ಕನ್ನಡ ಸಿನೆಮಾ ನಿರ್ಮಾತೃಗಳೂ 'ದರಿದ್ರ'ರಾಗಬಾರದೆಂಬುದಕ್ಕಾಗಿ ಒಂದಲ್ಲ ಹಲವು ಸಲ ನೋಡಬೇಕು; ನೋಡಿ ತಮ್ಮ ರಚನಾತ್ಮಕ ವಿಮರ್ಶೆ ಹೇಳಲು ಮರೆಯಬಾರದು. ಹಾಗಾದರೆ ಮಾತ್ರ ನಮ್ಮ ಸಿನೆಮಾ ಸೃಷ್ಟಿ ಮುಂದೆ ಉತ್ತಮವಾಗಿ ಫಲವತ್ತಾಗಿ, ರಸವತ್ತಾಗಿ ಬೆಳೆದೀತು!

215



ಚಳಿ ಮತ್ತು ಶೀತಗಳನ್ನು ಕೂಡಲೇ ಗುಣ ಪಡಿಸುವುದು

ಜಾಂಬಕನ್ನು ಪ್ರತಿ ರಾತ್ರೆ ಮಲಕೊಳ್ಳುವಾಗ ಹಚ್ಚಿರಿ.

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಕೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು, ಬೇಗನೇ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿ ಹೋಗುವುದು. ಹಾಗೆ ಅವು ಶ್ವಾಸಕಾಲದಲ್ಲಿ ಶ್ವಾಸದೊಡನೆಸೇರಿ ನಿಮ್ಮ ತಲೆಯ ಭಾರವನ್ನು ಕಡಿಮ್ಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶಮಾಡುತ್ತದೆ. ಕ್ರಯ ಒಂದು ರೂಪಾಯಿ ಇಲ್ಲವೆ ರೂ. 2–4–0 ಸೋಪ್ಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಹೋಲಿವುಡ್ಡಿಗೆ ಹೋಗುತ್ತಾಳಂತೆ—

'ಖಜಾಂಚಿ' 'ಖಾನ್‌ದಾನ್' ಖ್ಯಾತಿಯ ಮನಮೋಹಿನಿ ನಟಿ ಮನೋರಮಾ, ಅಲ್ಲಿ ಅಭಿನಯಿಸುವ ಸಂದರ್ಭ ಆಕೆಗೆ ಒದಗಿದರೂ ಒದಗಬಹುದೆಂದು ಡಿಲ್ಲಿಯ 'ದಿ ಮೂವೀಸ್' ಎಂಬ ಚಿತ್ರ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಹೋಲಿವುಡ್ಡಿನ ಆರ್. ಕೆ. ಒ. ರೇಡಿಯೋ ಚಿತ್ರ ಸಂಸ್ಥೆಯಿಂದ ಆಕೆಗೆ ಅಲ್ಲಿ ಬಂದು ನಟಿಸುವರೆ ಆಮಂತ್ರಣವಿದೆಯೆಂದೂ ತಿಳಿಯುತ್ತದೆ. 'ಭಾರತದಲ್ಲಿ ಉತ್ತಮ ಛಾಯಾಗ್ರಾಹಿ ಯಾರೂ ಇಲ್ಲ' ಎಂಬುದು ಮನೋರಮೆ ಬಹುಕಾಲದಿಂದ ಪಡುತ್ತಿದ್ದ ಅತೃಪ್ತಿ. ಈಗ ಉತ್ತಮ ಛಾಯಾಗ್ರಾಹಿತ್ವ ಹಾಗೂ ಅನುಪಮ ನಿರ್ದೇಶನಗಳಲ್ಲಿ ಪರಿಪೂರ್ಣಳಾಗಲು ಆಕೆ ಹೋಲಿವುಡ್ಡಿಗೆ ಹೋಗುವವಳಿದ್ದಾಳೆ.

ತಿರುಗಿ ನಾಸ್ತಿಮಳ್ಳು

ಚಲಚ್ಚಿತ್ರ ಲೋಕಕ್ಕೆ ಕಾಲಿಡುವಳೆಂಬ ಸಂತೋಷದ ವಾರ್ತೆ ಬಂದಿದೆ. ಸಿನೆಮಾ ನಟನೆಯಿಂದ ರೂಪರಾಣಿಯಾದ ಆಕೆ ನಿವೃತ್ತಳಾಗುವಳೆಂಬ ಸುದ್ದಿ ಹಲವರನ್ನು ನಿರಾಶರನ್ನಾಗಿ ಮಾಡಿತ್ತು. ತಾಜ್‌ಮಹಾಲ್ ಪಿಕ್ಚರ್ಸಿನ ದ್ವಿತೀಯ ಕೃತಿಯಲ್ಲಿ ಅಶೋಕ ಕುಮಾರನ ಜತೆಯಲ್ಲಿ ಅಭಿನಯಿಸುವವಳವಳು.

ಶಾಂತಾರಾಮರ 'ಶಾಕುಂತಳ'ದಲ್ಲಿ

ಚಂದ್ರಮೋಹನ್ ದುಷ್ಯಂತನಾಗಿ, ನೂರ್ಜಹಾನ್ ಪ್ರಿಯಂವದೆಯನಾಗಿ, ನಿಂಬಾಳ್ಕರ್ ಕಣ್ವರ್ಷಿಯಾಗಿ, ದೀಕ್ಷಿತ್ ವಿದೂಷಕನಾಗಿ, ಸಾಧನಾಬೋಸ್ ಮೇನಕೆಯಾಗಿ ಅಭಿನಯಿಸುವರೆಂದು ನಿಶ್ಚಿತವಾಗಿದೆ; ಶಕುಂತಳಾ ಪಾತ್ರ ಹೆಚ್ಚು ಪಾಲಿಗೆ 'ಜಯಶ್ರೀ'ಗೆಂದೇ ಸುದ್ದಿ.

'ಥೇಂಕ್ ಯು'

ಎಂಬುದು ಅಮರ ಪ್ರೊಡಕ್ಷನಿನ ಚಿತ್ರ. ಇದು ಅರ್ಧ ಚಿತ್ರದಲ್ಲಿಯೇ ಬಾಕಿಯಿದೆ. ನಿರ್ದೇಶಕ ವೀರೇಂದ್ರ ದೇಸಾಯಿಯವರ ಅಸ್ವಸ್ಥವೇ ಇದರ ಕಾರಣ.

ನಿಮಗಿದು ಗೊತ್ತಿದೆಯೆ?

ನಿರ್ದೇಶಕ ಶಾಂತಾರಾಮರು, ತಮ್ಮ ಸಿನೆಮಾ ಜೀವನದ ಆರಂಭ ಕಾಲದಲ್ಲಿ, ಮಧ್ಯಾಹ್ನದ ಮೇಲೆ ಒಂದು 'ಸಿಂಗಲ್' ಕುಡಿಯುವರೆ, ಅರ್ಧ ಕಾಸೂ ಇಲ್ಲದೆ ಎಷ್ಟೋ ವರ್ಷ ಕಳೆದಿದ್ದರು.

卐

ಸಂಪಾದಕ ಹಾರ್ನಿಮೇನರು 'ಮೂಕಚಿತ್ರ'ಗಳ ಕಾಲದಲ್ಲಿ ಸಿನೆಮಾ ವಿಮರ್ಶಕರೂ, ಒಂದು ಭಾರತೀಯ ಚಲಚ್ಚಿತ್ರ ನಿರ್ಮಾಣ ಕಂಪನಿಯ ನಿರ್ದೇಶಕರಾಗಿಯೂ ಇದ್ದರು!

卐

ರತನ್‌ಬಾಯಿಗೆ ಎಂಟು ವರ್ಷಗಳ ಹಿಂದೆ ಸುಟ್ಟು ತಿನ್ನಲೂ ಇಂಗ್ಲಿಷು ಬರುತ್ತಿರಲಿಲ್ಲ; ಈಗ ಉತ್ತಮ ಆಂಗ್ಲ ಭಾಷೆ ಮಾತನಾಡುತ್ತಾಳೆ. ಈಗ ನಟಿ ರತನ್‌ಬಾಯಿಯು, ಭಾರತದ ಏಕಮಾತ್ರ ಸ್ತ್ರೀ ಚಲಚ್ಚಿತ್ರ ನಿರ್ಮಾಪಕಳು. ಅವಳ ಮೊದಲನೆಯ ಚಿತ್ರ 'ಸಾಹೇಲಿ'ಯಿಂದ ೪೦ ಸಾವಿರ ರೂಪಾಯಿಗಿಂತ ಮಿಕ್ಕಿ ಲಾಭ ಪಡೆದಿದ್ದಾಳೆ.

卐

ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಆಂಗ್ಲ, ಬಂಗಾಳಿ, ಹಿಂದೀ ಭಾಷೆಗಳಲ್ಲಿ ಚಿತ್ರಿತವಾಗುತ್ತಿದೆ. ಆಚಾರ್ಯ ಆರ್ಟ್ ಪ್ರೊಡಕ್ಷನಿನ ಎನ್. ಆರ್. ಆಚಾರ್ಯರು ಇದರ ನಿರ್ದೇಶಕರು.



ಆರೋಗ್ಯ ನಿಯಮಗಳು ಕೆಲವಿವೆ ಹಾಗೂ ಸುಲಭವಾದವು ಅದರಲ್ಲಿ ಹೊರಗಿನ ಶುಭ್ರತೆಯು ಒಂದು. ಆದರೆ ಅಂತರ್ಯಶುದ್ಧಿಯೂ ಇನ್ನು ಮುಖ್ಯವಾದುದು. ಅಂತರ್ಯ ಶುದ್ಧಿಯೇ ಶರೀರಕ ಮತ್ತು ಮಾನಸಿಕ ಆರೋಗ್ಯ ಕೊಡಬಲ್ಲುದು. ಅಂತರ್ಯ ಶುದ್ಧಿ ಹೊಂದಲು ಸುಲಭ ಹಾಗೂ ಉಲ್ಲಾಸಕರವಾದ ಮಾರ್ಗ, ಒಂದು ಲೋಟ ನೊರೆ ಬರುವ ಆಂಡ್ರುಸ್ ಅನ್ನು ಕ್ರಮವಾಗಿ ತೆಗೆದುಕೊಳ್ಳುವುದು; ಇದು ಶುದ್ಧಿಪಡಿಸುವುದು ತಂಪು ಮಾಡುವುದು ಮತ್ತು ಚೈತನ್ಯ ಕೊಡುವುದು.

ಮೊದಲು ಆಂಡ್ರೂಸ್ ಬಾಯಿ, ನಾಲಿಗೆಯನ್ನು ಶುದ್ಧಿಮಾಡುವುದು.

ಅನಂತರ: ಆಂಡ್ರೂಸ್ ಜಠರವನ್ನು ಒಳ್ಳೆ ಸ್ಥಿತಿಯಲ್ಲಿಟ್ಟು ಹುಳಿಯನ್ನು ಸರಿಪಡಿಸುತ್ತೆ.

ಆ ಮೇಲೆ: ಆಂಡ್ರೂಸ್ ಲಿವರನ್ನು ಶಕ್ತಿಯುತವಾಗಿ ಮಾಡಿ ಪಿತ್ತವನ್ನು ತಡೆಯುವದು.

ಕೊನೆಯದಾಗಿ: ನಿಮ್ಮ ಅಂತರ್ಯಶುದ್ಧಿ ಸಂಪೂರ್ಣವಾಗಲು ಆಂಡ್ರೂಸ್ ಸೌಮ್ಯವಾಗಿ ಮಲವಿಸರ್ಜನೆ ಮಾಡಿಸುವುದು. ತೊಂದರೆ ಕೊಡುವ ವಿಷಗಳನು ಹೊರಸಾಗಿ, ಮಲಬದ್ಧತೆ ಸಂಪಡಿಸಿ, ರಕ್ತವನ್ನು ಶುದ್ಧಿಮಾಡಿ ಚರ್ಮವನ್ನು ಸ್ವಚ್ಛವಾಗಿಡುವುದು.

ಅಂತರ್ಯ ಶುದ್ಧಿಗೆ ಕ್ರಮವಾಗಿ ಉಪಯೋಗಿಸಿ

ANDREWS
LIVER SALT

Health Drink — Tonic Laxative

ದುರ್ಗಾದಾಸ್, ವೆಂಕಟರಾಜ, ಪಿಲಲಶೆಟ್ಟಿ ಹಾಗೂ ಶ್ರೀಮತಿಯರಾದ ಕಲ್ಯಾಣಮ್ಮ, ರಾಜವಾಡೆ, ಕಾಮತ್ ಮೊದಲಾದವರ ಕತೆ ಕವನ ಲೇಖನಗಳಿಂದ ಈ ಸಂಚಿಕೆ ವಾಚನೀಯವಿದೆ. ನೃತ್ಯದ ಕುರಿತು ಉದಯಶಂಕರರ ಹಾಗೂ ಅವರಶಿಷ್ಯ ಶ್ರೀ. ಕೆ. ಕೆ. ಶೆಟ್ಟರು ಬರೆದ ಲೇಖನಗಳು ಆಕರ್ಷಕ ಸಚಿತ್ರಗಳಿಂದ ಕೂಡಿ ಕೊಡಲ್ಪಟ್ಟಿವೆ. ಉದಯಶಂಕರರ ಶಿವ ತಾಂಡವ ನೃತ್ಯ ಭಂಗಿಯ ಒಂದು ಮುಖಚಿತ್ರವೂ ಇದೆ. ಜಯ ಕರ್ನಾಟಕ ಆಕಾರದ ಸುಮಾರು ನೂರು ಪುಟಗಳ ಈ ಸುಂದರ ವಿಶೇಷ ಸಂಚಿಕೆಯ ಬೆಲೆ ಎಂಟಾಣೆ. ಕಾಗದದ ಅಭಾವದೀ ಕಾಲದಲ್ಲಿಯೂ ಇಂಥಾ ಸಾಹಸಗಳನ್ನು ಮಾಡಿ ತನ್ನ ವಾಚಕರನ್ನು ತೃಪ್ತಿಪಡಿಸಿದ 'ನವಯುಗ'ದ ಸಂಚಾಲಕರನ್ನು ನಾವು ಅಭಿನಂದಿಸುತ್ತೇವೆ.

ಸಾದರ-ಸ್ವೀಕಾರ

ನವಯುಗ ಮಕರ ಸಂಕ್ರಾಂತಿ ಸಂಚಿಕೆ

'ಉಡುಪಿ'ಯಿಂದ ಹೊರಡುವ ಈ ಕನ್ನಡ ವಾರಪತ್ರಿಕೆ ಪ್ರತಿವರ್ಷದಂತೆ, ಈ 'ಕಷ್ಟಕಾಲ'ದಲ್ಲಿಯೂ ಮಕರ ಸಂಕ್ರಾಂತಿಯ ವಿಶೇಷ ಸಂಚಿಕೆಯನ್ನು ಪ್ರಕಟಿಸಿದುದು ತುಂಬಾ ಅಭಿನಂದನೀಯ ವಿಚಾರವಾಗಿದೆ. ಶ್ರೀಗಳಾದ ಎ. ಬಿ. ಶೆಟ್ಟಿ, ಶಿವರಾಮ ಕಾರಂತ, ಕೊರಡ್ಕಲ್ ಎನ್. ಎಸ್. ಜೈನಿ

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು.

ಸಾಕಾರವಾದಿಗಳಿಗೆ ಶ್ರೀ ಪರಮಹಂಸರ ಉಪದೇಶ: ರೇಶ್ಮೆದಾರ ಮತ್ತು 'ಜ್ಯೋತಿ' ಮತ್ತು ದೀಪ

ಸಾಕಾರವಾದಿಗಳಿಗೆ ಶ್ರೀ ಪರಮಹಂಸರು ಹೀಗನ್ನುತ್ತಿದ್ದರು:—'ಧ್ಯಾನಿಸುವ ಸಮಯ ಮನಸನ್ನು ಎಂದೂ ವಿಚಲಿತವಾಗದಂತೆ, ರೇಶ್ಮೆದಾರಿನಿಂದ ಇಷ್ಟದೇವತೆಯ ಪಾದಕಮಲಕ್ಕೆ ಕಟ್ಟಿ ಹಾಕಿದ್ದಿ ಎಂದು ಭಾವಿಸಬೇಕು. ರೇಶ್ಮೆದಾರಿನಿಂದ ಕಟ್ಟಬೇಕು, ಏಕೆಂದರೆ ಅದು ಬಹಳ ಮೃದುವಾಗಿದೆ, ಬೇರೆ ದಾರಿನಿಂದ ಕಟ್ಟಿದರೆ ಪಾದಕಮಲಕ್ಕೆ ನೋವಾಗಬಹುದು.' ಮತ್ತೂ ಹೀಗೆ ಹೇಳುತ್ತಿದ್ದರು:—'ಧ್ಯಾನಿಸುವ ಸಮಯ ಮಾತ್ರ ಇಷ್ಟ ಚಿಂತನಮಾಡಿ ಬೇರೆ ಸಮಯ ಅದನ್ನು ಮರೆಯಬಾರದು. ಮನಸ್ಸಿನ ಒಂದಾಂಶವನ್ನು ಆ ಚಿಂತನದಲ್ಲೇ ಇಡಬೇಕು. ದುರ್ಗಾ ಪೂಜೆ ಮಾಡುವಾಗ ಒಂದು ದೀಪ ಹಚ್ಚಿಡುತ್ತಾರೆ. ಶ್ರೀ ದೇವರ ಬಳಿಯಲ್ಲಿ ಒಂದು ಜ್ಯೋತಿ ಯಾವಾಗಲೂ ಇಡಬೇಕು. ಅದನ್ನು ಆರಿಸಬಾರದು. ಆರಿಸಿದರೆ ಗೃಹಸ್ಥರಿಗೆ ಕೆಡಕು ಬರುವುದುಂಟು. ಹಾಗೆಯೇ ಹೃದಯಾರವಿಂದದಲ್ಲಿ ಇಷ್ಟ ದೇವತೆಯನ್ನು ಪ್ರತಿಷ್ಠಾಪನೆ ಮಾಡಿ ಅದರ ಚಿಂತನರೂಪ ಒಂದು ದೀಪವನ್ನು ಹಚ್ಚಿಸಿ ಯಾವಾಗಲೂ ಇಡಬೇಕು. ಸಂಸಾರ ಕಾರ್ಯಕಲಾಪವನ್ನು ಮಾಡುತ್ತ ಮಾಡುತ್ತ ಮಧ್ಯೆ ಮಧ್ಯೆ ಅಂತರ್ಮುಖವಾಗಿ ಆ ದೀಪವು ಉರಿಯುತ್ತದೆಯೋ ಇಲ್ಲವೋ ನೋಡಬೇಕು.'

ಧ್ಯಾನಮಾಡುವ ಮೊದಲು ಮನಸ್ಸನ್ನು ತೊಳೆಯಬೇಕು

ಇನ್ನೂ ಹೀಗನ್ನುತ್ತಿದ್ದರು:— "ಆಗ ಇಷ್ಟ ದೇವತೆಯ ಚಿಂತನ ಮಾಡುವ ಮೊದಲು ಮನಸ್ಸನ್ನು ಚೆನ್ನಾಗಿ ತೊಳೆದಿದ್ದೇನೆಂದು ಭಾವಿಸಬೇಕು; ಮನಸ್ಸಿನಲ್ಲಿ ಕಸ, ಕೆಸರು ಮುಣ್ತೆಲ್ಲ (ವಾಸನಾವೃತ್ತಿಗಳು ಇತ್ಯಾದಿ) ಇವೆ ಅಲ್ಲವೆ? ಅವುಗಳನ್ನು ಚೆನ್ನಾಗಿ ತೊಳೆದು ಸ್ವಚ್ಛಮಾಡಿ ನಂತರ ಇಷ್ಟದೇವತೆಯನ್ನು ಪ್ರತಿಷ್ಠಾಪನೆ ಮಾಡುತ್ತೇನೆಂದು ಭಾವಿಸಬೇಕು."

ಕ್ರಮಶಃ

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India-Liability of members is limited)

Head Office: UDIPI

Estd. 1906.



ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ಪ್ರಚ್ಚಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:— ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ ಮುಂಬೈ ಏಜಂಟ — ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ: ಪ್ರಿನ್ಸೆಸ ಸ್ಟ್ರೀಟ ಮುಂಬೈ.

ಪುರೋಹಿತ ಶ್ವಾಸಹಾರಿ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯಾಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2. ಪ್ರತಿಯೊಬ್ಬ ಪ್ಯಾಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು.

3. ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಲಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು.

4. ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು.

5. 28 ರಾತ್ತಲಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD: 1931

HEAD OFFICE Mangalore. ***BRANCHES*** Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates

All kinds of inland banking business undertaken

ಮುಳುಕಡ್ಡಿ ಮದ್ದು



ಕಜ್ಜಿ, ತುರಿ, ತುರಿಕೆ, ಹುಳು ಕಡ್ಡಿ, ರಕ್ತ ಉಷ್ಣದ್ರವ, ತಲೆ ಹುಣ್ಣು, ಶೈತ್ಯ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮ್ಮೆಂಬಳ ... ಶೆಣೈ, ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ:

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ—ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limtied
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಾಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:—1. ವಂಟಾರ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ಟರೀಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಬೇದಿಗೆ ಉತ್ತಮಾಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಖು 29—1—1943 [ಸಂಚಿಕೆ 5]

ಬಾಯಿ ಹೊಲಿದುಕೊಂಡು ತಪಸ್ಸು ಮಾಡಿದರು!

ಬೇವಿನೆಲೆ ತಿಂದು ಜೀವನ ಮಾಡಿದರು!

ಹಿಮಗಿರಿ ಶಿಖರದಲ್ಲಿ ಅಲೆದಾಡಿದರು!

—ಪ್ರೊ। ಬನ್ಸಾಲಿಯವರ ಕೆಲವು ವಿವರಗಳು—

'ತೆಳ್ಳನೆ ಶರೀರ, ಸನ್ಯಾಸಿ ಯೋಗ್ಯವೂ ಅರವಿಂದ ಘೋಷ ಸದೃಶವೂ ಆದ ನೀಳ ಗಡ್ಡ, ಇಂಥಾ, ಅವರ ಭಾವಚಿತ್ರವನ್ನು ನಾನು ಇತ್ತೀಚೆಗೆ ಕಂಡಾಗ, ಅವರನ್ನು ಹಿಂದೆ, ನಿತ್ಯವೂ ಒಳ್ಳೆಯ ಉಡುಪಿನಲ್ಲೇ ಶೋಭಿಸುತ್ತಿದ್ದ, ಸಂತೋಷ ಸಂಭ್ರಮದಿಂದ ಪರಿಪೂರ್ಣರಾಗಿದ್ದ ಅಂದಿನ ಯುವಕನೆಂದು ನನಗೆ ತಿಳಕೊಳ್ಳುವುದು ಪ್ರಯಾಸವಾಯಿತು. ಅವರು ನಾನು ತಿಳಿದಂತೆ, ಸ್ಟೆಂಟ್ ಕ್ಸೇವಿಯರ್ ಕಾಲೇಜಿನಲ್ಲಿ 'ಗ್ರೇಜ್ಯುವೇಟ್' ಆದರು; ಆ ಮೇಲೆ ನನ್ನೊಡನೆ ಪ್ರೊ। ಪೇಟ್ರಿಕ್ ಗೆಡೆಸ್ ಇವರಲ್ಲಿ ಕಲಿಯಲು 'ಪೋಸ್ಟ್ ಗ್ರೇಜ್ಯುವೇಟ್' ತರಗತಿಗೆ ಸೇರಿದರು. ಆ ಸೂಕ್ಷ್ಮ ಮನೋಭಾವನೆ, ಹಾಗೂ ಉತ್ತಮ ಹೃದಯ ಶುದ್ಧಿ ಇವುಗಳನ್ನು ಬಿಟ್ಟರೆ, ಅವರನ್ನು ಇತರ ಉತ್ತಮ ವಿದ್ಯಾರ್ಥಿಗಳಿಂದ ಬೇರ್ಪಡಿಸುವ ಗುಣ ವಿಶೇಷವೇನೂ ಇರಲಿಲ್ಲ. ನಾವು ಪ್ರೊ। ಗೆಡೆಸರೊಂದಿಗೆ ಡಾ। ಹೆರಾಲ್ಡ್ ಮಾನರ ಆಮಂತ್ರಣದಂತೆ ಒಂದು ವಾರಾಂತ್ಯವನ್ನು ಪೂನದ ಎಗ್ರಿಕಲ್ಚರಲ್ ಕಾಲೇಜಿನಲ್ಲಿ ಕಳೆಯಲು ಹೋದ ಸಂದರ್ಭದಲ್ಲಿ ನಾನವರ ಸಮೀಪ ಪರಿಚಯ ಮಾಡಿಕೊಂಡೆನು!' ಹೀಗೆಂದು ಮೀರತ್ ಮೊಕದ್ದಮೆಯ ಆರೋಪಿತರಲ್ಲೊಬ್ಬರಾದ ಶ್ರೀ. ಎಂ. ಜಿ. ದೇಸಾಯಿಯವರು ಪ್ರೊ। ಬನ್ಸಾಲಿಯವರ ಕುರಿತು ಒಂದು ಲೇಖನ ಬರೆದು ತಿಳಿಸುತ್ತಾರೆ. ಅವರ ಲೇಖನದ ಇತರ ಅಂಶಗಳು ಇಂತಿವೆ.

ನಾನಾಗ ಕನವರಿಸಲೂ ಇಲ್ಲ!

'ಒಂದು ದಿನ ರಾತ್ರಿ, ಬನ್ಸಾಲಿಯವರು 'ಪನೋಟ್ಸ್ ಸಾಲ್ಟ್'ನ್ನು ತೆಗೆದುಕೊಳ್ಳುವ ಸಂದರ್ಭ, ಪ್ರತಿದಿನವೂ ನಾವು ಮಲಕೋಶವನ್ನು ನಿರ್ಮಲವಾಗಿಡುವ ವಿಚಾರವಾಗಿ ಹಾಗೂ ಆಗಾಗ ಉಪವಾಸ ಮಾಡುವ ವಿಚಾರವಾಗಿ ನನ್ನ ಮನಸ್ಸಿಗೆ ಹತ್ತುವಂತೆ ಉಪದೇಶಿಸಿದರು. ಮುಂದೆ ಇವರು ಒಂದಾನೊಂದು ದಿನ ಆ ಮರಣಾಂತ ಉಪವಾಸವನ್ನು ಕೈಕೊಂಡು, ಪಾಷಾಣ ಹೃದಯದ ಆಡಳಿತವೊಂದರ ಹೃದಯವನ್ನೂ ಕರಗಿಸುವ ಉಜ್ವಲ ಭವಿಷ್ಯವುಳ್ಳವರಾಗುವರೆಂದು ನಾನಾಗ ಕನವರಿಸಲೂ ಇಲ್ಲ. ಆ ಮೇಲಿನ ನನ್ನ ಅವರ ಸಂದರ್ಶನವೆಂದರೆ ಶ್ರೀ ಬನ್ಸಾಲಿಯವರು ರಾಷ್ಟ್ರದ ಕರೆಕೇಳಿ ತಮ್ಮ ಹೃದಯ ದೇಹ ಸರ್ವಸ್ವವನ್ನೂ ಅಸಹಕಾರ ಚಳವಳಕ್ಕರ್ಪಿಸಿ, ಕಾಲೇಜಿನಿಂದ ಹೊರಬಂದು, ವಿದೇಶೀ ವಸ್ತ್ರಗಳನ್ನು ಹೋಮ ಮಾಡಲು ಸಂಗ್ರಹಿಸುತ್ತಿದ್ದ ಹಾಗೂ ವಿದ್ಯಾರ್ಥಿಗಳನ್ನು ಶಾಲೆ ಬಿಟ್ಟು ಹೊರ ಬರುವಂತೆ ಉಪದೇಶಿಸುತ್ತಿದ್ದ ಕಾಲದ್ದಾಗಿದೆ.

"ಅವರು ಬೊಂಬಾಯಿಯ ಪ್ರಥಮ ರಾಷ್ಟ್ರೀಯ ಕಾಲೇಜಿನ ಪ್ರೊಫೆಸರರಾಗಿ ನೇಮಿಸಲ್ಪಟ್ಟರು. ಅಂದೀಗ ಗಾಂಧಿ ಆಶ್ರಮದಲ್ಲಿ ವಾಸ ಮಾಡುತ್ತಿದ್ದರು. ಒಮ್ಮೆ ಅವರು ನನ್ನನ್ನು ಆಶ್ರಮಕ್ಕೆ ಆಮಂತ್ರಿಸಿ ಅಲ್ಲಿನ ಸ್ವಂಕಷ್ಟ ಜೀವನದ ಮಾದರಿಯನ್ನು ಅನುಭವಿಸುವಂತೆ ಮಾಡಿ, ಆಶ್ರಮವನ್ನು ಸೇರಲು ಉಪದೇಶಿಸಿದರು. ನಾನು ಅವರೊಡನೆ ಹೇಳಿದೆ: "ಹೃದಯವೇನೋ ಒಪ್ಪುತ್ತಿದೆ; ಆದರೆ ಶರೀರ ಮಾತ್ರ ದುರ್ಬಲವಿದೆ" ಎಂದು. ಅವರ ಆ ತರದ ಕಠಿಣವ್ರತದಲ್ಲಿ ನನಗೆ ಸೇರಿಕೊಳ್ಳುವುದು ಅಸಾಧ್ಯವಾಯಿತು.

ಮತ್ತೆ ಲಂಡನಿನಲ್ಲಿ

'ಮತ್ತೆ ನಾನವರನ್ನು ಕಂಡದ್ದು 1925ರಲ್ಲಿ ಲಂಡನಿನಲ್ಲಿ. ನನ್ನನ್ನು ಭೇಟಿಯಾಗಲು ಅವರು ಭಾರತೀಯ ವಿದ್ಯಾರ್ಥಿ ಭವನದಲ್ಲಿ ಕಾದುಕೊಂಡಿದ್ದರು. ಅವರನ್ನು ಅಲ್ಲಿ ಭೇಟಿಯಾಗಿ ಪುನಃ ಅವರ ಒಡನಾಟ ಪಡೆಯಲು, ನನಗೂ ಸಂತೋಷವೇ ಆಯಿತು. ಅವರು ಅಷ್ಟರಲ್ಲೇ ಸೆರೆಮನೆವಾಸ ಅನುಭವಿಸಿದ್ದರು. ಲಂಡನಿನಲ್ಲಿ ರಾಜನೀತಿ ಮತ್ತು ಅರ್ಥನೀತಿಗಳನ್ನು ಕಲಿಯಲು ಬಂದಿದ್ದರು. ಅವರಿಗೆ ಸಮತಾವಾದವನ್ನು ಬೋಧಿಸಲು ನಾನು ಆತುರವುಳ್ಳವನಾಗಿದ್ದೆ. ಗೋವರ್ ಸ್ಟ್ರೀಟಿನಲ್ಲೇ ಅವರಿಗೆ ತಾತ್ಕಾಲಿಕ ಬಿಡಾರವೊಂದನ್ನೇರ್ಪಡಿಸಿದೆ. ಅಲ್ಲಿಯೂ ಅವರು ಹಣ್ಣು ಹಂಪಲ ಹಾಲುಗಳಿಂದಲೇ ಜೀವನ ಮಾಡುತ್ತಿದ್ದರು!

"ಇಂಗ್ಲೆಂಡಿಗೆ ಬರುವ ಮೊದಲು, ಶ್ರೀ ಬನ್ಸಾಲಿಯವರು ಸ್ವಿಜರ್ಲೆಂಡಿನಲ್ಲಿಳಿದು ಪಂಡಿತ ಶ್ಯಾಮಜಿ ಕೃಷ್ಣವರ್ಮ ಮತ್ತು ಅವರ ಪತ್ನಿಯವರೊಂದಿಗೆ ಕೆಲಕಾಲ ಉಳಕೊಂಡುದಾಗಿ ನನ್ನೊಡನೆ ಹೇಳಿದರು. ಶ್ರೀ. ಬನ್ಸಾಲಿಯವರಿಗೂ ಕೃಷ್ಣವರ್ಮರಿಗೂ ಸಮೀಪ ಸಂಬಂಧವಿತ್ತು. ಶ್ಯಾಮಜಿ ಕೃಷ್ಣವರ್ಮರು, ಆ ಕಾಲದಲ್ಲಿ ಯುರೋಪಿನಲ್ಲಿ ಕ್ರಾಂತಿಕಾರಕರಾಗಿ ಕೆಲಸ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿಗಳಿಗೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಹೆಚ್ಚಿನ ಕಾಲ ಎಲ್ಲಾ ತರದ ಸಹಾಯಗಳನ್ನು ಕೊಡುತ್ತಿದ್ದರು. ಅವರು 'ಇಂಡಿಯನ್ ಸೋಶಿಯಲಜಿಸ್ಟ್' ಎಂಬ ಪತ್ರಿಕೆ ನಡೆಸುತ್ತಿದ್ದರು. 'ಇಂಡಿಯಾ ಹೌಸ'ನ್ನು ಸ್ಥಾಪಿಸಿದರು. ಈ 'ಇಂಡಿಯಾ ಹೌಸೇ' ಬ್ಯಾರಿಸ್ಟರ್ ಸಾವರ್ಕರ್ ಮೊದಲಾದ ಅನೇಕ ಭಾರತೀಯ ಕ್ರಾಂತಿಕಾರರು ಬಳೆದ ಸ್ಥಳ. ಶ್ಯಾಮಜಿ ಕೃಷ್ಣ ಶರ್ಮರಿಗೆ, ಶ್ರೀ. ಭನ್ಸಾಲಿಯವರು ಮಹಾತ್ಮಾ ಗಾಂಧಿಯವರನ್ನು ಅನುಸರಿಸುವುದು ಸರಿತೋರಲಿಲ್ಲ. ತನ್ನ ವಂಶದ ದೇಶಾಭಿಮಾನೀ ಯುವಕನೊಬ್ಬನು, ಕ್ರಾಂತಿಕಾರನಾಗುವುದನ್ನುಳಿದು ಇಂಥಾ ಅಬದ್ಧ ಅಪ್ರಯೋಜಕ ಅಹಿಂಸೆ ಚರಕಗಳಲ್ಲಿ ಮಗ್ನನಾಗಿರುವುದು ಸರಿಯಲ್ಲವೆಂದು ಅವರು ಇವರಿಗೆ ತಿಳಿಸಿದರು. ಶ್ರೀ ಬನ್ಸಾಲಿಯವರು, ಗಾಂಧಿವಾದ ಬಿಡುವಂತೆ ಮಾಡುವುದರಲ್ಲಿ ಕೃಷ್ಣವರ್ಮರ ಸಾಹಸ ಏನೂ ಫಲಿಸಲಿಲ್ಲ.

ಗಾಂಧಿ ಸೈಕಲ್ ಹತ್ತಿದ್ದು

ಶ್ರೀ ಭನ್ಸಾಲಿಯವರು ಸಬರ್ಮತಿ ಆಶ್ರಮದ ಕೆಲವು ವಿನೋದ ಪ್ರಸಂಗಗಳನ್ನು ನನ್ನೊಡನೆ ಹೇಳಿದರು. ಮಹಾತ್ಮಾ ಗಾಂಧಿಯವರೂ ಸೈಕಲ್ ಸವಾರಿ ಮಾಡಬಲ್ಲರೆಂಬುದು ಅವರಿಗೆ ಗೊತ್ತಿರಲಿಲ್ಲ. ಒಂದು ದಿನ, ಶ್ರೀ ಬನ್ಸಾಲಿಯವರ ಕೈಯ್ಯಲ್ಲಿದ್ದ ಸೈಕಲನ್ನು ಹಿಡಿದೆಳೆದು ಮುದುಕ ಗಾಂಧಿ; ತನಗೆ ಒಂದು ಸಭೆಗೆ ಹೋಗಲು ತಡವಾಯಿತೆಂದು ಸೈಕಲ್ ಹತ್ತಿ ಹೋಗುವುದನ್ನು ನೋಡಿ ಅವರಿಗೆ ದಿಗ್ಭ್ರಮೆಯಾಯಿತು. ಗಾಂಧಿಜಿಗೆ ಏನಾದರೂ ಅವಗಢ ಸಂಭವಿಸುತ್ತದೆಯೆಂದೇ ಶ್ರೀ ಭನ್ಸಾಲಿಯವರ ಗ್ರಹಿಕೆ. ಸೈಕಲ್ ಅತ್ತಿತ್ತ ತಿರುಗುತ್ತಿತ್ತು. ಗಾಂಧಿಜಿ ಸವಾರಿ ಮಾಡುತ್ತಲೇ ಇದ್ದರು. ಅಂತೂ ಕಡೆಗೆ ನಿಶ್ಚಿತ ಹೊತ್ತಿಗೆ ಗಾಂಧಿ ಸೈಕಲ್ ಹತ್ತಿ, ಸಭೆ ಜರಗುವ ಸ್ಥಳವನ್ನು ಮುಟ್ಟಿದರು! ಸಿಂಧದ ನನ್ನ ಒಡನಾಡಿ ವಿದ್ಯಾರ್ಥಿಯೊಡನೆ ಅವರು ಹಿಮಾಲಯದಲ್ಲಿ ಅಲೆದಾಡಿದ, ಅಲ್ಲಿ ಪ್ರತಿನಿಮಿಷವೆಂಬಂತೆ ವ್ಯಾಘ್ರ ಭೀಕರ ಕಷ್ಟಗಳನ್ನು ಕೇಳುತ್ತಿದ್ದ ಈ ವಿಷಯವನ್ನೆಲ್ಲಾ ನನಗೆ ಅವರು ಹೇಳಿದರು.

"ಅಂದಿನಿಂದ ನನ್ನ ಅವರ ಸಂಬಂಧ ದೂರವಾಗಿದೆ. ಅವರೀಗ ನನ್ನಿಂದ ಬಹಳ ಉನ್ನತ ಮಹಿಮೆಯ ಸ್ಥಳದಲ್ಲಿ—ನಕ್ಷತ್ರ ಲೋಕದ ಸಮೀಪಕ್ಕೆ—ಏರಿದ್ದಾರೆ. ಮೀರತ್ ಕ್ರಾಂತಿ ಮೊಕದ್ದಮೆಯಲ್ಲಿ ಸೆರೆಮನೆ ಸೇರಿದ್ದ ನನ್ನನ್ನು ಶ್ರೀ ದೇವದಾಸ ಗಾಂಧಿ ಕಾಣಲು ಸೆರೆಮನೆಗೆ ಬಂದಾಗ, ನಾನು ಪ್ರೊ। ಬನ್ಸಾಲಿಯವರ ವಿಷಯ—ಸಬರ್ಮತಿಯಲ್ಲಿ ನನ್ನ ಗುರುತದವರು ಅವರೊಬ್ಬರೇ—ಕೇಳಿದೆ. ಆಗ ಅವರು ನನಗೆ ಹೇಳಿದರು; 'ಶ್ರೀ ಬನ್ಸಾಲಿಯವರು ಈಗ ಹಠಯೋಗವನ್ನು ಅಭ್ಯಾಸ ಮಾಡುತ್ತಿದ್ದಾರೆ; ಬಹಳ ಭೀಕರವಾದ ಉಪವಾಸ ಆಚರಿಸುತ್ತಿದ್ದಾರೆ. ಗಾಂಧಿಜಿ ಬೇಡವೆಂದರೂ ಅವರು ಅದನ್ನು ಬಿಡುವುದಿಲ್ಲ' ಎಂದು!

'ನಮ್ಮೆಲ್ಲರ ಹಾಗೂ ನಮ್ಮ ರಾಷ್ಟ್ರದ ಮಹಾ ಭಾಗ್ಯವೆನಬೇಕು, ಈ ಅರುವತ್ತ ಮೂರು ದಿನಗಳ ಘೋರ ಉಪವಾಸಮಾಡಿ, ಪ್ರೊ। ಬನ್ಸಾಲಿಯವರು ತಿರುಗಿ ಜೀವಲೋಕಕ್ಕೆ ಮರಳುತ್ತಿರುವುದು! ಅವರ ಸುದ್ದಿಗಳನ್ನು ಪ್ರಕಟಿಸಲೇ ಬಾರದೆಂದು ಸರಕಾರ ನಿರ್ಬಂಧ ಮಾಡಿದರೂ ಅವರಿಂದು ಪ್ರಾಚೀನ ಋಷಿಗಳ, ಯೋಗಿಗಳ ಜೀವನಾದರ್ಶವನ್ನು ಅನುಸರಿಸಿ, ಇಡೀ ರಾಷ್ಟ್ರವು ಎಂದೆಂದೂ ಮರೆಯಲಾರದ ಮಹಾ ವಿಭೂತಿಪುರುಷರಾಗಿದ್ದಾರೆ!'

ಋಷಿಕಾಲದ ಹಠಯೋಗಿ!

"ಅರುವತ್ತಮೂರು ದಿನಗಳ ಉಪವಾಸಗೈದು ಪ್ರೊ। ಬನ್ಸಾಲಿ, ಉಪವಾಸ ಕೊನೆಗಾಣಿಸದರೆಂಬೀ ವಾರ್ತೆಯು, ಆತ್ಮಶಕ್ತಿ ಪಶುಶಕ್ತಿಯನ್ನು ಗೆಲ್ಲುವುದೆಂಬ ಮಾತಿಗೆ ಇನ್ನೊಂದು ಉದಾಹರಣೆಯನ್ನಿತ್ತಿದೆ. ಒಂದು ಕಾಲದ, ಇಂಗ್ಲಿಷ್ ಪ್ರೊಫೆಸರರೊಬ್ಬರು, ದಿನದಿಂದ ದಿನಕ್ಕೆ, ಇಂಚು ಇಂಚು ಪ್ರಮಾಣದಲ್ಲಿ, ಉಪವಾಸಮಾಡಿ ಸಾಯುತ್ತಾ ಇದ್ದಾರೆಂಬೀ ಸುದ್ದಿ, ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ದ್ರುತಗತಿಯಿಂದ ಸಂಚರಿಸಿ ಎಲ್ಲರಲ್ಲಿಯೂ ಭಯಪ್ರಕೋಪಗಳನ್ನು ಹುಟ್ಟಿಸಿತು. ನಮ್ಮ ಇತರ ಮಹಾಪುರುಷರಂತೆ, ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಹೊಂದಿ, ಅಹಮ್ಮದಾಬಾದ್ ಕಾಲೇಜ್ ಒಂದರಲ್ಲಿ ಉದ್ಯೋಗ ಮಾಡುತ್ತಿದ್ದು, ಅವರು, ಗಾಂಧಿಜಿಯವರ ಮಾಂತ್ರಿಕ ಕರೆ ಕೇಳಿದೊಡನೆಯೇ ಸನ್ಯಾಸಿಯ ಜೀವನ ನಡೆಸಲು ನಿಶ್ಚಯಿಸಿದರು.

(೩ನೇ ಪುಟಕ್ಕೆ ಮುಂದುವರಿದಿದೆ)

The Bank of Mangalore Limited, Mangalore.

ESTD. [illegible]

HEAD OFFICE Mangalore. *BRANCHES* Moodabidri & Padubidri.

[illegible]

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಬಿಕ್ಕೆ, ಉಪಕಸ್ತ್ರ, ಕರಿ ಹುಣ್ಣು, ವೃಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ:

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕ್ಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limtied

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:–1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಸ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 29—1—1943 [ಸಂಚಿಕೆ 5]

ಬಾಯಿ ಹೊಲಿದುಕೊಂಡು ತಪಸ್ಸು ಮಾಡಿದರು!

ಬೇವಿನೆಲೆ ತಿಂದು ಜೀವನ ಮಾಡಿದರು!

ಹಿಮಗಿರಿ ಶಿಖರದಲ್ಲಿ ಅಲೆದಾಡಿದರು!

—ಪ್ರೊ|| ಬನ್ನಾಲಿಯವರ ಕೆಲವು ವಿವರಗಳು—

'ತೆಳ್ಳನೆ ಶರೀರ, ಸನ್ಯಾಸಿ ಯೋಗ್ಯವೂ ಅರವಿಂದ ಘೋಷ ಸದೃಶವೂ ಆದ ನೀಳ ಗಡ್ಡ, ಇಂಥಾ, ಅವರ ಭಾವಚಿತ್ರವನ್ನು ನಾನು ಇತ್ತೀಚೆಗೆ ಕಂಡಾಗ, ಅವರನ್ನು ಹಿಂದೆ, ನಿತ್ಯವೂ ಒಳ್ಳೆಯ ಉಡುಪಿನಲ್ಲೇ ಶೋಭಿಸುತ್ತಿದ್ದ, ಸಂತೋಷ ಸಂಭ್ರಮದಿಂದ ಪರಿಪೂರ್ಣರಾಗಿದ್ದ ಅಂದಿನ ಯುವಕನೆಂದು ನನಗೆ ತಿಳಕೊಳ್ಳುವುದು ಪ್ರಯಾಸವಾಯಿತು. ಅವರು ನಾನು ತಿಳಿವಂತೆ, ಸ್ಯೆಂಟ್ ಕ್ಸೇವಿಯರ್ ಕಾಲೇಜಿನಲ್ಲಿ 'ಗ್ರೇಜ್ಯುವೇಟ್' ಆದರು; ಆ ವೇಳೆ ನಮ್ಮೊಡನೆ ಪ್ರೊ|| ಪೇಟ್ರಿಕ್ ಗೆಡೆಸ್ ಇವರಲ್ಲಿ ಕಲಿಯಲು 'ಪೋಸ್ಟ್ ಗ್ರೇಜ್ಯುವೇಟ್' ತರಗತಿಗೆ ಸೇರಿದರು. ಆ ಸೂಕ್ಷ್ಮ ಮನೋಭಾವನೆ, ಹಾಗೂ ಉತ್ತಮ ಹೃದಯ ಶುದ್ಧಿ ಇವುಗಳನ್ನು ಬಿಟ್ಟರೆ, ಅವರನ್ನು ಇತರ ಉತ್ತಮ ವಿದ್ಯಾರ್ಥಿಗಳಿಂದ ಬೇರ್ಪಡಿಸುವ ಗುಣ-ವಿಶೇಷವೇನೂ ಇರಲಿಲ್ಲ. ನಾವು ಪ್ರೊ|| ಗೆಡೆಸರೊಂದಿಗೆ ಡಾ|| ಹೆರಾಲ್ಡ್ ಮಾನರ ಆಮಂತ್ರಣದಂತೆ ಒಂದು ವಾರಾಂತ್ಯವನ್ನು ಪೂನದ ಎಗ್ರಿಕಲ್ಚರಲ್ ಕಾಲೇಜಿನಲ್ಲಿ ಕಳೆಯಲು ಹೋದ ಸಂದರ್ಭದಲ್ಲಿ ನಾನವರ ಸಮೀಪ ಪರಿಚಯ ಮಾಡಿಕೊಂಡೆನು!' ಹೀಗೆಂದು ಮೀರತ್ ಮೊಕದ್ದಮೆಯ ಆರೋಪಿತರಲ್ಲೊಬ್ಬರಾದ ಶ್ರೀ. ಎಂ. ಜಿ. ದೇಸಾಯಿಯವರು ಪ್ರೊ|| ಬನ್ನಾಲಿಯವರ ಕುರಿತು ಒಂದು ಲೇಖನ ಬರೆದು ತಿಳಿಸುತ್ತಾರೆ. ಅವರ ಲೇಖನದ ಇತರ ಅಂಶಗಳು ಇಂತಿವೆ.

ನಾನಾಗ ಕನವರಿಸಲೂ ಇಲ್ಲ!

'ಒಂದು ದಿನ ರಾತ್ರಿ, ಬನ್ನಾಲಿಯವರು 'ವಿನೋಸ್ ಸಾಲ್ಟ'ನ್ನು ತೆಗೆದುಕೊಳ್ಳುವ ಸಂದರ್ಭ, ಪ್ರತಿದಿನವೂ ನಾವು ಮಲಕೋಶವನ್ನು ನಿರ್ಮಲವಾಗಿಡುವ ವಿಚಾರವಾಗಿ ಹಾಗೂ ಆಗಾಗ ಉಪವಾಸ ಮಾಡುವ ವಿಚಾರವಾಗಿ ನನ್ನ ಮನಸ್ಸಿಗೆ ಹತ್ತುವಂತೆ ಉಪದೇಶಿಸಿದರು. ಮುಂದೆ ಇವರು ಒಂದಾನೊಂದು ದಿನ ಆ ಮರಣಾಂತ ಉಪವಾಸವನ್ನು ಕೈಕೊಂಡು, ಪಾಷಾಣ ಹೃದಯದ ಆಡಳಿತವೊಂದರ ಹೃದಯವನ್ನು ಕರಗಿಸುವ ಉಜ್ವಲ ಭವಿಷ್ಯವುಳ್ಳವರಾಗುವರೆಂದು ನಾನಾಗ ಕನವರಿಸಲೂ ಇಲ್ಲ. ಆ ಮೇಲಿನ ನನ್ನ ಅವರ ಸಂದರ್ಶನವೆಂದರೆ, ಶ್ರೀ ಬನ್ನಾಲಿಯವರು ರಾಷ್ಟ್ರದ ಕರೆಕೇಳಿ ತಮ್ಮ ಹೃದಯ ದೇಹ ಸರ್ವಸ್ವವನ್ನೂ ಅಸಹಕಾರ ಚಳವಳಿಕ್ಕರ್ಪಿಸಿ ಕಾಲೇಜಿನಿಂದ ಹೊರಬಂದು, ವಿದೇಶೀ ವಸ್ತ್ರಗಳನ್ನು ಹೋಮ ಮಾಡಲು ಸಂಗ್ರಹಿಸುತ್ತಿದ್ದ ಹಾಗೂ ವಿದ್ಯಾರ್ಥಿಗಳನ್ನು ಶಾಲೆ ಬಿಟ್ಟು ಹೊರ ಬರುವಂತೆ ಉಪದೇಶಿಸುತ್ತಿದ್ದ ಕಾಲದಲ್ಲಾಗಿದೆ.

"ಅವರು ಬೊಂಬಾಯಿಯ ಪ್ರಥಮ ರಾಷ್ಟ್ರೀಯ ಕಾಲೇಜಿನ ಪ್ರೊಫೆಸರರಾಗಿ ನೇಮಿಸಲ್ಪಟ್ಟರು. ಅಂಧೇರಿಯ ಗಾಂಧಿ ಆಶ್ರಮದಲ್ಲಿ ವಾಸ ಮಾಡುತ್ತಿದ್ದರು. ಒಮ್ಮೆ ಅವರು ನನ್ನನ್ನು ಆಶ್ರಮಕ್ಕೆ ಆಮಂತ್ರಿಸಿ ಅಲ್ಲಿನ ಸಂಕಷ್ಟ ಜೀವನದ ಸ್ವಾದವನ್ನು ಅನುಭವಿಸುವಂತೆ ಮಾಡಿ, ಆಶ್ರಮವನ್ನು ಸೇರಲು ಉಪದೇಶಿಸಿದರು. ನಾನು ಅವರೊಡನೆ ಹೇಳಿದೆ: "ಹೃದಯವೇನೋ ಒಪ್ಪುತ್ತಿದೆ; ಆದರೆ ಶರೀರ ಮಾತ್ರ ದುರ್ಬಲವಿದೆ" ಎಂದು. ಅವರಾ ತರದ ಕಠಿಣವ್ರತದಲ್ಲಿ ನನಗೆ ಸೇರಿಕೊಳ್ಳುವುದು ಅಸಾಧ್ಯವಾಯಿತು.

ಮತ್ತೆ ಲಂಡನಿನಲ್ಲಿ

'ಮತ್ತೆ ನಾನವರನ್ನು ಕಂಡದ್ದು 1925ರಲ್ಲಿ ಲಂಡನಿನಲ್ಲಿ. ನನ್ನನ್ನು ಭೇಟಿಯಾಗಲು ಅವರು ಭಾರತೀಯ ವಿದ್ಯಾರ್ಥಿ ಭವನದಲ್ಲಿ ಕಾದುಕೊಂಡಿದ್ದರು. ಅವರನ್ನು ಅಲ್ಲಿ ಭೇಟಿಯಾಗಿ ಪುನಃ ಅವರ ಒಡನಾಟ ಪಡೆಯಲು ನನಗೂ ಸಂತೋಷವೇ ಆಯಿತು. ಅವರು ಅಷ್ಟರಲ್ಲೇ ಸೆರೆಮನೆವಾಸ ಅನುಭವಿಸಿದ್ದರು. ಲಂಡನಿನಲ್ಲಿ ರಾಜನೀತಿ ಮತ್ತು ಅರ್ಥನೀತಿಗಳನ್ನು ಕಲಿಯಲು ಬಂದಿದ್ದರು. ಅವರಿಗೆ ಸಮತಾವಾದವನ್ನು ಬೋಧಿಸಲು ನಾನು ಆತುರವುಳ್ಳವನಾಗಿದ್ದೆ. ಗೋವರ್ ಸ್ಟ್ರೀಟಿನಲ್ಲೇ ಅವರಿಗೆ ತಾತ್ಕಾಲಿಕ ಬಿಡಾರವೊಂದನ್ನೇರ್ಪಡಿಸಿದೆ. ಅಲ್ಲಿಯೂ ಅವರು ಹಣ್ಣುಹಂಪಲ ಹಾಲುಗಳಿಂದಲೇ ಜೀವನ ಮಾಡುತ್ತಿದ್ದರು!

"ಇಂಗ್ಲೆಂಡಿಗೆ ಬರುವ ಮೊದಲು, ಶ್ರೀ ಬನ್ನಾಲಿಯವರು ಸ್ವಿಜರ್ಲೆಂಡಿನಲ್ಲಿದ್ದು ಪಂಡಿತ ಶ್ಯಾಮಜಿ ಕೃಷ್ಣವರ್ಮ ಮತ್ತು ಅವರ ಪತ್ನಿಯವರೊಂದಿಗೆ ಕೆಲಕಾಲ ಉಳಕೊಂಡುದಾಗಿ ನನ್ನೊಡನೆ ಹೇಳಿದರು. ಶ್ರೀ ಬನ್ನಾಲಿಯವರಿಗೂ ಕೃಷ್ಣವರ್ಮರಿಗೂ ಸಮೀಪ ಸಂಬಂಧವಿತ್ತು. ಶ್ಯಾಮಜಿ ಕೃಷ್ಣಶರ್ಮರು, ಆ ಕಾಲದಲ್ಲಿ ಯುರೋಪಿನಲ್ಲಿ ಕ್ರಾಂತಿಕಾರಕರಾಗಿ ಕೆಲಸ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿಗಳಿಗೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಹೆಚ್ಚಿನ ಕಾಲ ಎಲ್ಲಾ ತರದ ಸಹಾಯಗಳನ್ನು ಕೊಡುತ್ತಿದ್ದರು. ಅವರು 'ಇಂಡಿಯನ್ ಸೋಶಿಯಲಜಿಸ್ಟ್' ಎಂಬ ಪತ್ರಿಕೆ ನಡೆಸುತ್ತಿದ್ದರು. 'ಇಂಡಿಯಾ ಹೌಸ'ನ್ನು ಸ್ಥಾಪಿಸಿದರು. ಈ 'ಇಂಡಿಯಾ ಹೌಸೇ' ಬ್ಯಾರಿಸ್ಟರ್ ಸಾವರ್ಕರ್ ಮೊದಲಾದ ಅನೇಕ ಭಾರತೀಯ ಕ್ರಾಂತಿಕಾರರು ಬೆಳೆದ ಸ್ಥಳ. ಶ್ಯಾಮಜಿ ಕೃಷ್ಣ ಶರ್ಮರಿಗೆ, ಶ್ರೀ. ಬನ್ನಾಲಿಯವರು ಮಹಾತ್ಮಾ ಗಾಂಧಿಯವರನ್ನು ಅನುಸರಿಸುವುದು ಸರಿತೋರಲಿಲ್ಲ. ತನ್ನ ವಂಶದ ದೇಶಾಭಿಮಾನೀ ಯುವಕನೊಬ್ಬನು, ಕ್ರಾಂತಿಕಾರನಾಗುವುದನ್ನು ಬಿಟ್ಟು ಇಂಥಾ ಅಬದ್ಧ ಅಪ್ರಯೋಜಕ ಅಹಿಂಸೆ ಚರಕಗಳಲ್ಲಿ ಮಗ್ನನಾಗಿರುವುದು ಸರಿಯಲ್ಲವೆಂದು ಅವರು ಇವರಿಗೆ ತಿಳಿಸಿದರು. ಶ್ರೀ ಬನ್ನಾಲಿಯವರು, ಗಾಂಧಿವಾದ ಬಿಡುವಂತೆ ಮಾಡುವುದರಲ್ಲಿ ಕೃಷ್ಣವರ್ಮರ ಸಾಹಸ ಏನೂ ಫಲಿಸಲಿಲ್ಲ.

ಗಾಂಧಿ ಸೈಕಲ್ ಹತ್ತಿದ್ದು

ಶ್ರೀ ಬನ್ನಾಲಿಯವರು ಸಬರ್ಮತಿ ಆಶ್ರಮದ ಕೆಲವು ವಿನೋದ ಪ್ರಸಂಗಗಳನ್ನು ನನ್ನೊಡನೆ ಹೇಳಿದರು. ಮಹಾತ್ಮಾ ಗಾಂಧಿಯವರೂ ಸೈಕಲ್ ಸವಾರಿ ಮಾಡಬಲ್ಲರೆಂಬುದು ಅವರಿಗೆ ಗೊತ್ತಿರಲಿಲ್ಲ. ಒಂದು ದಿನ, ಶ್ರೀ ಬನ್ನಾಲಿಯವರ ಕೈಯ್ಯಲ್ಲಿದ್ದ ಸೈಕಲನ್ನು ಹಿಡಿದೆಳೆದು ಮುದುಕ ಗಾಂಧಿ, ತನಗೆ ಒಂದು ಸಭೆಗೆ ಹೋಗಲು ತಡವಾಯಿತೆಂದು ಸೈಕಲ್ ಹತ್ತಿ ಹೋಗುವುದನ್ನು ನೋಡಿ ಅವರಿಗೆ ದಿಗ್ಭ್ರಮೆಯಾಯಿತು. ಗಾಂಧಿಜಿಗೆ ಏನಾದರೂ ಅವಗಢ ಸಂಭವಿಸುತ್ತದೆಯೆಂದೇ ಶ್ರೀ ಬನ್ನಾಲಿಯವರ ಗ್ರಹಿಕೆ. ಸೈಕಲ್ ಅತ್ತಿತ್ತ ತಿರುಗುತಿತ್ತು. ಗಾಂಧಿಜಿ ಸವಾರಿ ಮಾಡುತ್ತಲೇ ಇದ್ದರು. ಅಂತೂ ಕಡೆಗೆ ನಿಶ್ಚಿತ ಹೊತ್ತಿಗೆ ಗಾಂಧಿ ಸೈಕಲ್ ಹತ್ತಿ, ಸಭೆ ಜರಗುವ ಸ್ಥಳವನ್ನು ಮುಟ್ಟಿದರು! ಹಿಂದದ ನನ್ನ ಒಡನಾಡಿ ವಿದ್ಯಾರ್ಥಿಯೊಡನೆ ಅವರು ಹಿಮಾಲಯದಲ್ಲಿ ಅಲೆದಾಡಿದ, ಅಲ್ಲಿ ಪ್ರತಿನಿನಾದವೆಂಬಂತೆ ವ್ಯಾಘ್ರ ಭೀಕರ ಶಬ್ದಗಳನ್ನು ಕೇಳುತ್ತಿದ್ದ ಈ ವಿಷಯವನ್ನೆಲ್ಲಾ ನನಗೆ ಅವರು ಹೇಳಿದರು.

"ಅಂದಿನಿಂದ ನನ್ನ ಅವರ ಸಂಬಂಧ ದೂರವಾಗಿದೆ. ಅವರೀಗ ನನ್ನಿಂದ ಬಹಳ ಉನ್ನತ ಮಹಿಮೆಯ ಸ್ಥಳದಲ್ಲಿ—ನಕ್ಷತ್ರ ಲೋಕದ ಸಮೀಪಕ್ಕೆ—ಏರಿದ್ದಾರೆ. ಮೀರತ್ ಕ್ರಾಂತಿ ಮೊಕದ್ದಮೆಯಲ್ಲಿ ಸೆರೆಮನೆ ಸೇರಿದ್ದ ನಮ್ಮನ್ನು ಶ್ರೀ ದೇವದಾಸ ಗಾಂಧಿ ಕಾಣಲು ಸೆರೆಮನೆಗೆ ಬಂದಾಗ, ನಾನು ಪ್ರೊ|| ಬನ್ನಾಲಿಯವರ ವಿಷಯ—ಸಬರ್ಮತಿಯಲ್ಲಿ ನನ್ನ ಗುರುತದವರು ಅವರೊಬ್ಬರೇ—ಕೇಳಿದೆ. ಆಗ ಅವರು ನನಗೆ ಹೇಳಿದರು; 'ಶ್ರೀ ಬನ್ನಾಲಿಯವರು ಈಗ ಹಠಯೋಗವನ್ನು ಅಭ್ಯಾಸ ಮಾಡುತ್ತಿದ್ದಾರೆ; ಬಹಳ ಭೀಕರವಾದ ಉಪವಾಸ ಆಚರಿಸುತ್ತಿದ್ದಾರೆ. ಗಾಂಧಿಜಿ ಬೇಡವೆಂದರೂ ಅವರು ಅದನ್ನು ಬಿಡುವುದಿಲ್ಲ' ಎಂದು!

'ನಮ್ಮೆಲ್ಲರ ಹಾಗೂ ನಮ್ಮ ರಾಷ್ಟ್ರದ ಮಹಾ ಭಾಗ್ಯವೆನಬೇಕು, ಈ ಅರುವತ್ತ ಮೂರು ದಿನಗಳ ಘೋರ ಉಪವಾಸ ಮಾಡಿ, ಪ್ರೊ|| ಬನ್ನಾಲಿಯವರು ತಿರುಗಿ ಜೀವಲೋಕಕ್ಕೆ ಮರಳುತ್ತಿರುವುದು! ಅವರ ಸುದ್ದಿಗಳನ್ನು ಪ್ರಕಟಿಸಲೇ ಬಾರದೆಂದು ಸರಕಾರ ನಿರ್ಬಂಧ ಮಾಡಿದರೂ ಅವರಿಂದು ಪ್ರಾಚೀನ ಋಷಿಗಳ, ಯೋಗಿಗಳ ಜೀವನಾದರ್ಶವನ್ನು ಅನುಸರಿಸಿ, ಇಡೀ ರಾಷ್ಟ್ರವು ಎಂದೆಂದೂ ಮರೆಯಲಾರದ ಮಹಾ ವಿಭೂತಿ ಪುರುಷರಾಗಿದ್ದಾರೆ!'

ಋಷಿಕಾಲದ ಹಠಯೋಗಿ!

"ಅರುವತ್ತಮೂರು ದಿನಗಳ ಉಪವಾಸಗೈದು ಪ್ರೊ|| ಬನ್ನಾಲಿ, ಉಪವಾಸ ಕೊನೆಗಾಣಿಸಿದರೆಂಬ ವಾರ್ತೆಯು, ಆತ್ಮಶಕ್ತಿ ಪಶುಶಕ್ತಿಯನ್ನು ಗೆಲ್ಲುವುದೆಂಬ ಮಾತಿಗೆ ಇನ್ನೊಂದು ಉದಾಹರಣೆಯನ್ನಿತ್ತಿದೆ. ಒಂದು ಕಾಲದ, ಇಂಗ್ಲಿಷ್ ಪ್ರೊಫೆಸರರೊಬ್ಬರು, ದಿನದಿಂದ ದಿನಕ್ಕೆ, ಇಂಚು ಇಂಚು ಪ್ರಮಾಣದಲ್ಲಿ, ಉಪವಾಸ ಮಾಡಿ ಸಾಯುತ್ತಾ ಇದ್ದಾರೆಂಬ ಸುದ್ದಿ, ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ದ್ರುತಗತಿಯಿಂದ ಸಂಚರಿಸಿ ಎಲ್ಲರಲ್ಲಿಯೂ ಭಯಪ್ರಕೋಪಗಳನ್ನು ಹುಟ್ಟಿಸಿತು. ನಮ್ಮ ಇತರ ಮಹಾಪುರುಷರಂತೆ, ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಹೊಂದಿ, ಅಹಮ್ಮದಾಬಾದ್ ಕಾಲೇಜ್ ಒಂದರಲ್ಲಿ ಉದ್ಯೋಗ ಮಾಡುತ್ತಿದ್ದು, ಅವರು, ಗಾಂಧಿಜಿಯವರ ಮಾಂತ್ರಿಕ ಕರೆ ಕೇಳಿದೊಡನೆಯೇ ಸನ್ಯಾಸಿಯ ಜೀವನ ನಡೆಸಲು ನಿಶ್ಚಯಿಸಿದರು.

(3ನೇ ಪುಟಕ್ಕೆ ಮುಂದುವರಿದಿದೆ)

ಬಾಯಿ ಹೊಲಿದುಕೊಂಡು ತಪಸ್ಸು ಮಾಡಿದರು!

(ಹಿಂದಿನ ಪುಟದಿಂದ ಮುಂದುವರಿದುದು)

ಅಂದಿನಿಂದ ಅವರು ಗಾಂಧಿಜಿಯ ಗೌರವ ಪಾತ್ರರಾಗಿದ್ದಾರೆ. ಗಾಂಧಿಜಿ ಅವರನ್ನು ಪ್ರಾಚೀನ ಯುಗಗಳ ಸಾಲಿನ ಒರ್ವ 'ಹಠಯೋಗಿ'ಯಾಗಿ ತಿಳಿಕೊಂಡಿದ್ದಾರೆ. ಹೀಗೆಂದು ಶ್ರೀ ಜೆ. ಎನ್. ಆಚಾರ್ಯರು ಪ್ರೊ| ಬನ್ಸಾಲಿಯವರ ಕುರಿತು ಒಂದು ಲೇಖನದಲ್ಲಿ ಬರೆಯುತ್ತಾರೆ. ಅದರ ವಿವರ ಇಂತಿದೆ.

ಬಾಯಿ ಹೊಲಿದು ತಪಸ್ಸು

"ಅವರು ಘೋರ ತಪಸ್ಸನ್ನು ಗೈದರು; ಬೇವಿನೆಲೆ ತಿಂದು ಜೀವಿಸಿದರು. ಆಳವಾದ ಬಾವಿಯಲ್ಲಿ ಕುತ್ತಿಗೆ ವರೆಗೆ ನೀರಲ್ಲಿ ಮುಳುಗಿ ಎಷ್ಟೋ ರಾತ್ರಿ ಕಳೆದರು; ಬಾಯಿ ಹೊಲಿದುಕೊಂಡು ಮೌನ ತಪಸ್ಸು ಆಚರಿಸಿದರು. ಹಿಮಾಚ್ಛಾದಿತ ಹಿಮಾಲಯ ಗಿರಿ ಶಿಖರಗಳಲ್ಲಿ ಅಲೆದಾಡಿದರು. ಕೊನೆಗೆ ಗಾಂಧಿಜಿ ಆಶ್ರಮದಲ್ಲಿ ಬಂದು ನೆಲಸಿದರು; ಅಂದಿನಿಂದ ಸೇವೆ ಮತ್ತು ದೈವ ಭಕ್ತಿ ಇವುಗಳೇ ಅವರ ಜೀವನ ಮಂತ್ರವಾಗಿದೆ. ಜನರ ಗುಂಪಿಗೆ ಮುಂದಾಳಾಗುವ ಭ್ರಾಂತಿಯಾಗಲಿ, ಕೀರ್ತಿಕಾಮನೆಯ ಇಚ್ಛೆಯಾಗಲಿ ಅವರ ಬಳಿ ಸುಳಿದೇ ಇಲ್ಲ.

"ಒಮ್ಮೆಲೇ ಅವರಿಗೆ ಅಂತರಾತ್ಮನ ಆದನಿ ಕೇಳಿಸಿತು! ಅದಕ್ಕೆ ಅವರು ಮಾರ್ಮಾರ್ದನಿಯಿತ್ತರು. ಅದರ ಫಲಿತಾಂಶವೇನೆಂಬುದು ಈಗ ಜಗತ್ತಿಗೇ ತಿಳಿದಿದೆ. ಪತ್ರಿಕೆ ಮತ್ತು ಸರಕಾರಗಳಿಗೆ ಅನಿರೀಕ್ಷಿತ ಉಂಟಾದ ಒಂದು ಮಹಾ ಹೋರಾಟಕ್ಕೂ ಕಾರಣ, ಪ್ರೊ| ಬನ್ಸಾಲಿಯವರಿಂದೂ ಈಗ ಗೊತ್ತಾಗಿದೆ.

ಪ್ರೊ| ಬನ್ಸಾಲಿಯವರ ಹೆಸರು ಇನ್ನು ಮುಂದೆ ಅಮರ ವೀರರಾದ ಮೇಕ್‌ಸ್ವೆನೀ, ಮತ್ತು ಜತೀಂದ್ರನಾಥರ ಸಾಲಿಗೆ ಸೇರುವುದು; ಆದರೆ ಅವರಿಬ್ಬರಿಗೂ ಯಾವುದು ಅಸಾಧ್ಯವಾಯಿತೋ ಆ ಫಲವನ್ನು ಪ್ರೊ| ಬನ್ಸಾಲಿ ಪಡೆದುಬಿಟ್ಟರು! ಜ್ವಾಲೆಯು ಇನ್ನೊಂದು ಜ್ವಾಲೆಯನ್ನು ಕೂಡಿಕೊಳ್ಳುವ ಹಾಗೆ, ಅವರ ಹೃದಯದ ಕರೆ, ಇತರ ಹೃದಯಗಳನ್ನೂ ಕರಗಿಸಿ, ಅಸಂಭವವಾಗಿದ್ದುದನ್ನೂ ಸಂಭವವಾಗಿ ಮಾಡಿಬಿಟ್ಟಿತು!"

ಇಂದೊಂದು ಆಶ್ಚರ್ಯ!

"ಲೋಕದ ದೃಷ್ಟಿಯಲ್ಲಿ ಪ್ರೊ| ಬನ್ಸಾಲಿ ಓರ್ವ ಯೋಧನಲ್ಲ. ಅವರು ಬರೇ ಮಾನವ ಪ್ರೇಮಿ. 'ಪಾರಿವಾಳದಂತೆ ನಿರುಪದ್ರವಿ; ಜಗತ್ತು ತುಳಿಯುತ್ತಿರುವ ಹುಲ್ಲಿನಂತೆ ದೀನ' ಜನ ಅವರು! ಅಂಥವರು ಮರಣಾಂತ ಉಪವಾಸದ ಈ ಘೋರ ನಿರ್ಧಾರ ನಿಶ್ಚಯಿಸಿದಾಗ ವರ್ಧಾದವರೆಲ್ಲರೂ ಬೆರಗಾದರು" ಹೀಗೆಂದು ವರ್ಧಾ ವರದಿಗಾರರೊಬ್ಬರು ಬರೆಯುತ್ತಾರೆ. ಅವರು ಆ ವರದಿಯಲ್ಲಿ ಮತ್ತೂ ಹೇಳುವುದೇನಂದರೆ: "ಕೆಲವು ವರ್ಷಗಳ ಹಿಂದೆ ಅವರು ತಮ್ಮ ಉಚ್ಚ ಪದವಿಯನ್ನು ಬಿಟ್ಟರು. ಅಲೆದಾಡುವ ಸನ್ಯಾಸಿಯಾದರು. ಬೇವಿನೆಲೆ ತಿಂದು ಜೀವಿಸುತ್ತಾ, ದೇಹವನ್ನು ಕಠಿಣ ಸಂಕಷ್ಟಕ್ಕೆ ಒಳಗಿಸಿ ಆತ್ಮ ಪರಿಶುದ್ಧಿ ಮಾಡುತ್ತಿದ್ದರು. ಅವರ ತಪೋ ಜೀವನವನ್ನು ನೋಡಿ, ಅವರ ಮಿತ್ರರ ಮಾತು ಹೇಳಬೇಕೇ, ದಾರಿಹೋಕರೂ ಬೆರಗಾಗುತ್ತಿದ್ದರು. ಅಲೆದಾಡುವಾ ಸನ್ಯಾಸಿಯನ್ನು ಗಾಂಧಿಜಿ ಮೌನಸಾಧುವಾಗಿ ಪರಿವರ್ತನೆಗೊಳಿಸಿದರು. ಅವರು ದಿನದಿನೇ ಶರೀರದ ತಿರುಗಿಸುತ್ತಾ, ತನ್ನ ಕುಟೀಯನ್ನು ಸೇವಾಗ್ರಾಮದ ಹುಡುಗರಿಗೆ ಶಿಕ್ಷಣ ಶಾಲೆಯನ್ನಾಗಿ ಮಾಡಿ ಕಲಿಸುತ್ತಿದ್ದರು. ಆ ಮೌನಿಯ ಸಂಗತಿಗಳು ಅವರಿಗೆ ಕಿವಿಗೆ ಬಿದ್ದಾಗ ಅವರಿಗೆ ಜೀವಧಾರಣೆ ಮಾಡಿಕೊಂಡಿರುವುದೇ ಅಸಹ್ಯವಾಯಿತು!

"ಪ್ರೊಫೆಸರ್ ಬನ್ಸಾಲಿಯವರು ತನ್ನ ಉಪವಾಸವನ್ನು ನವಂಬರ 12ರಂದು ಚಿಮೂರು ಬಾಲಾಜಿ ದೇವಾಲಯದಲ್ಲಿ ಪ್ರಾರಂಭಿಸಿದರು. ಹದಿನೈದು ದಿನಗಳವರೆಗೆ ಅವರು ನೀರನ್ನೂ ತೆಗೆದುಕೊಳ್ಳಲಿಲ್ಲ. ಸರಕಾರವು ಆ ಮೇಲೆ ಅವರನ್ನು ವರ್ಧಾಕ್ಕೆ ತಂದು ಬಿಟ್ಟಿತು. ಶ್ರೀ ಕಮಲನಯನ ಬಜಾಜ್ ಮತ್ತು ಅವರ ತಾಯಿ ಜಾನಕಿ ಬೆನ್ ಬಜಾಜರು, ಬನ್ಸಾಲಿಯವರೊಡನೆ ತಮ್ಮ ಕಟ್ಟಡದಲ್ಲಿ ವಾಸವಾಗಿರಲು ಬೇಡಿಕೊಂಡದ್ದಕ್ಕೆ ಅವರು ಒಪ್ಪಿದರು. ದಿನಗಳು ಉರುಳಿದವು. ಆಣೆಯವರಿಗೂ ಕಳವಳವುಂಟಾದಂತೆ ತೋರಿತು. ಹಾಗಾಗಿ, ತಮಗೇನು ಸಾಧ್ಯ ಮತ್ತು ನ್ಯಾಯವೆಂದು ತೋರುವುದೋ ಅದನ್ನೆಲ್ಲಾ ಮಾಡುವುದಾಗಿ ತಿಳಿಸಿದರು. ಇದು ದಶಂಬರ 5ರಂದು. ಆ ಮೇಲೆ ದಶಂಬರ 10ರಲ್ಲಿ, ಕಾನೋರ್ವನಾಗಿ ಚಿಮೂರಿಗೆ ಹೋಗುವುದಾಗಿಯೂ ಅದರ ವಿಚಾರಣೆ ಮಾಡುವುದು ಸಾಧ್ಯವಿಲ್ಲವೆಂದೂ. ಅನಪೇಕ್ಷಿತವೆಂದೂ ಆಣೆಯವರು ತಂತಿ ಬಿಟ್ಟರು.

ಎಲ್ಲೆಡೆಯಲ್ಲಿ ಕಳವಳ

ಈ ಘೋರ ಉಪವಾಸದ ಸುದ್ದಿ ಕೇಳಿ ಪಂಡಿತ ಮಾಲವೀಯರೂ ನೊಂದುಕೊಂಡರು. 'ಮಾತೃಭೂಮಿ ಮತ್ತು ಮಹಿಳೆಯರ ಸೇವೆ ಮಾಡುವ ಸಲುವಾಗಿ ಮರಣಾಂತ ಉಪವಾಸವನ್ನು ಬಿಟ್ಟು ಬದುಕುವುದು ಅವಶ್ಯ'ವೆಂದು ಅವರೂ ಬೇಡಿಕೊಂಡರು ಅವರೊಡನೆ ಹಲವು ವಿನಂತಿ ಮಾಡಲ್ಪಟ್ಟವು. ಉಪವಾಸದ 45ನೇ ದಿನವೂ ಬನ್ಸಾಲಿಯವರು ಸಂತೋಷದಿಂದ ಆರೋಗ್ಯದಿಂದಲೂ ಇದ್ದರು. ಆದರೆ ಜನವರಿ ಮೊದಲನೆಯ ವಾರದಲ್ಲಿ ಅವರ ಪರಿಸ್ಥಿತಿ ಭೀಕರವಾಯಿತು! ಎಲ್ಲರಿಗೂ ಗಾಬರಿ ಹುಟ್ಟಿತು!

"ಈ ಸಮಯದಲ್ಲಿ ಮಧ್ಯಪ್ರಾಂತದ ಹಿಂದಿನ ಡಿಪ್ಯುಟಿ ಸ್ಪೀಕರರಾದ ಶ್ರೀಮತಿ ಅನುಸೂಯಾ ಬಾಯಿಯವರು, ಮಾಜಿ ಪ್ರಧಾನ ಮಂತ್ರಿ ಡಾ| ಖಾರೆಯವರನ್ನು ಒತ್ತಾಯಿಸಲು, ಅವರು, ಗವರ್ನರರನ್ನು ಕಂಡು ಮಾತನಾಡುವಂತಾಯಿತು. ಅದರಿಂದ ಪ್ರೊಫೆಸರ್ ಬನ್ಸಾಲಿಯವರೊಡನೆ ಸರಕಾರವು ಒಪ್ಪಂದಕ್ಕೆ ಬಂತು. ಕಳೆದ 12ನೆಯ ತಾರೀಕಿನ ದಿನ ಅಪರಾಹ್ನ 4 ಗಂಟೆಗೆ ಈ ಘೋರ ಉಪವಾಸದ ಪಾರಣೆ ಆಯಿತು! ವರ್ಧಾದ ಜನರಿಗೆ ಇದೊಂದು ಅಚ್ಚರಿಯೇ ಆಯಿತು! ಡಿಪ್ಯುಟಿ ಕಮಿಶನರ್ ಮತ್ತು ನಗರದ ಪ್ರಸಿದ್ಧ ಮಹನೀಯರ ಮುಂದೆ ಪ್ರೊ| ಬನ್ಸಾಲಿ ಅರ್ಧ ಔನ್ಸು ಮುಸುಂಬಿ ರಸವನ್ನು ಒಂದು ಡ್ರಾಮು ಗ್ಲುಕೋಸ್ ಸೇರಿಸಿ ಸೇವಿಸಿ ಪಾರಣೆಗೈದರು. ಆ ದಿನ ಸಂಜೆ, ಅಖಿಲಭಾರತ ಗ್ರಾಮೋದ್ಯೋಗ ಸಂಘದವರು ಒದಗಿಸಿದ ಹೊಸ ಜೇನಿನ ತುಪ್ಪವನ್ನೂ ಸೇವಿಸಿದರು.

"ಈ ಸುದ್ದಿ ಕೇಳಿದ್ದೇ ತಡ ಅವರಿಗೆ ದೀರ್ಘಾಯುಸ್ಸು ಹಾರೈಸಿ ಭಾರತದ ಎಲ್ಲಾ ಭಾಗದಿಂದಲೂ ಅಸಂಖ್ಯ ತಂತಿಗಳು ಬರುತ್ತಲೇ ಇವೆ. ಈ 'ಯೋಗಿರಾಜ'ನ ದರ್ಶನಕ್ಕಾಗಿ ಸಾವಿರಾರು ಮಂದಿ ಇಲ್ಲಿಗೆ ಈಗ ಧಾವಿಸುತ್ತಿದ್ದಾರೆ."

ಭಾರತಕ್ಕೆ ಪ್ರತ್ಯೇಕವಾಗಿ ತಯಾರಿಸಿದ್ದು

ವೆಸ್ಟ್ ಎಂಡ್ ವಾಚುಗಳು ಸರಿಯಾದ ಸಮಯ ಕೊಡುವ ವಿಷಯ ನಮಗೊಂದು ಹೆಮ್ಮೆಯಿದೆ. ಅರ್ಧ ಶತಮಾನಗಳಿಂದ ಪೋಲ್ಪಟ್ಟು ಅದರ ಆ ಕೀರ್ತಿ ಇಂದಿಗೂ ಉಳಿದಿದೆ. ಹಣಕೊಟ್ಟು ಪಡಕೊಳ್ಳುವವರಿಗೆ ಒಳ್ಳೆಯದನ್ನೇ ವೆಸ್ಟ್ ಎಂಡ್ ವಾಚ್ ಕಂಪೆನಿ ಕೊಡುವುದೇಕೆಂದರೆ ಅಲ್ಲಿ ಉತ್ತಮ ಕೆಲಸಗಾರರಿಂದ ಶ್ರೇಷ್ಠ ಸಾಮಗ್ರಿಗಳಿಂದ ಇವು ತಯಾರಿಸಲ್ಪಡುತ್ತವೆ. ಎಂಥಾ ವಾತಾವರಣದಲ್ಲೂ ಈ ವಾಚುಗಳು ಸರಿಸಮಯ ಕೊಡುತ್ತವೆ. ಭಾರತದ ಪರಿಸ್ಥಿತಿಗೆ ವೆಸ್ಟ್ ಎಂಡ್ ವಾಚುಗಳು ಅತ್ಯುತ್ತಮವಾಗಿವೆಯೆಂದು ಅನುಭವದಿಂದಲೇ ತಿಳಕೊಳ್ಳಬಹುದು.



ನ್ಯೂ ಬಿಜೊ
18 ಕ್ಯಾ. ಗಟ್ಟಿ ಬಂಗಾರ ರೂ. 298.
ರೇಡಿಯಂ ಫಿಗರ್ಸ್ ಮತ್ತು ಹೇಂಡ್ಸ್ ಈ ಯಾವುದೇ ತರದ್ದು ರೂ. 3 ಹೆಚ್ಚು.

ಬಿಜೊ-'ಟ್ವಿನ್ ಡಯಲ್'
ಪೇಟೆಂಟ್ ಎವರ್‌ಬ್ರೈಟ್ ಸ್ಟೀಲ್ ರೂ. 124.
18 ಕ್ಯಾರಟ್ ಗಟ್ಟಿ ಬಂಗಾರ ರೂ. 270.

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಾಯಿ — ಕಲ್ಕತ್ತ.

WEST END WATCH Co
BOMBAY CALCUTTA

ನಿಮ್ಮ ಕಂಠ ಮತ್ತು ಶ್ವಾಸ ಕೋಶಗಳನ್ನು ರಕ್ಷಿಸಿರಿ

ನೀವು ಕಫ, ಶೀತ, ಕಂಠನೋವು ಮತ್ತು ಶ್ವಾಸಕೋಶದ ದುರ್ಬಲತೆಗಳಿಂದ ನರಳುವಿರಾದರೆ, ವಿಷಹಾರೀ ಶ್ವಾಸಯೋಗ್ಯ ಪೆಪ್ಸು ಮಾತ್ರೆಗಳನ್ನು ತೆಗೆದುಕೊಂಡು ಶೀಘ್ರ ಗುಣಹೊಂದಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡವುತ್ತದೆ. ಅದು ನಿಮ್ಮ ಶ್ವಾಸದೊಡನೆ ಶ್ವಾಸಕೋಶಕ್ಕೆ ಸೇರಿ, ಅಲ್ಲಿನ ರೋಗಾಣುಗಳನ್ನು ನಾಶಮಾಡುವುದು. ಎದೆಯ ಅನೇಕ ತರದ ತೊಂದರೆಗಳನ್ನು ನಿವಾರಿಸುವುದು. ಪೆಪ್ಸು ಕಂಠವನ್ನು ಸರಿಗೊಳಿಸುವುದು, ನಿಮ್ಮ ಎದೆ ಮತ್ತು ಶ್ವಾಸಕೋಶಕ್ಕೆ ಒಳ್ಳೆಯ ರಕ್ಷಣೆಯನ್ನೀಯುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುವುದು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS
ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಸಮರಭೂಮಿಯ ಸಂಚಾರ

ಜನವರಿ ತಾ. ೨೫ರ ಮೋಸ್ಕೋ ಪ್ರಕಟಣೆಯೊಂದು, ವೊರೊನೆಜದಿಂದ ಶತ್ರುವನ್ನು ಹೊಡೆದೋಡಿಸಲಾಯಿತು ಎಂದೂ, ಡಾನ್ ನದಿಯ ಪೂರ್ವ ಭಾಗ ಮತ್ತು ವೊರೊನೆಜದ ಪಶ್ಚಿಮ ಭಾಗಗಳಿಂದ ಜರ್ಮನರನ್ನು ಹಿಂದಟ್ಟಲಾಯಿತೆಂದೂ ಸಾರುತ್ತದೆ. 'ಜರ್ಮನ್ ಕೊಳ್ಳೆಗಾರರನ್ನು ಹೊಡೆದೋಡಿಸಲು ಮುನ್ನುಗ್ಗಿ ಹೋರಾಡಿರಿ; ಶತ್ರುಗಳನ್ನು ನಮ್ಮ ರಾಷ್ಟ್ರದ ಗಡಿಯಿಂದ ಹೊರದೂಡಿರಿ' ಹೀಗೆ ಸ್ಟಾಲಿನನು ಒಂದು ಸಂದೇಶನೀಯುತ್ತಾ ತನ್ನ ಸೈನಿಕರನ್ನು, ಅವರು ಇದುವರೆಗೆ ಹೊಂದಿದ ವಿಜಯಗಳಿಗಾಗಿ ಪ್ರಶಂಸಿಸಿರುವನು. ಇತ್ತೀಚೆಯ ಸುದ್ದಿಗಳನ್ನು ಕೇಳಿದರೆ ರಶ್ಯ ರಣರಂಗದಲ್ಲಿ ಜರ್ಮನರಿಗೆ ಎಲ್ಲೆಲ್ಲೂ ಸೋಲೇ ಸಂಭವಿಸತೊಡಗಿದಂತೆ ತೋರುತ್ತದೆ.

ಅರ್ಮವೀರ ಪತನ

ರಶ್ಯನರಿಗೆ ಈಗ ಇನ್ನೊಂದು ವಿಜಯ ದೊರಕಿತು. ಜನವರಿ ೨೩ನೇ ದಿನ ಟ್ರಾನ್ಸ್ ಕಾಕೇಶಿಯನ್ ರಣರಂಗದಲ್ಲಿ ರಶ್ಯನರು ವೀರ ನಿರ್ಧಾರದಿಂದ ಹೋರಾಡಿ ಅರ್ಮವೀರ ನಗರವನ್ನು ಶತ್ರುವಿನ ಕೈಯಿಂದ ಬಿಡುಗಡೆ ಮಾಡಿ ವಶಪಡಿಸಿಕೊಂಡರು. ವೊರೊನೆಜ ರಣಭೂಮಿಯಲ್ಲಿದ್ದ ರಶ್ಯನ್ ಸೈನಿಕರು ತಮ್ಮ ಧಾಳಿಯನ್ನು ಮುಂದೊತ್ತಿ ವೊಲೊಕೊನೊವಕಾ ಎಂಬ ಜಿಲ್ಲಾ ಕೇಂದ್ರವನ್ನು ಆಕ್ರಮಿಸಿಕೊಂಡರು. ಅರ್ಮವೀರವು ರೊಸ್ತೋವಿನಿಂದ ಆಗ್ನೇಯಕ್ಕೆ ೧೪೦ ಮೈಲು ದೂರಕ್ಕಿದ್ದು ದೊಡ್ಡ ರೈಲ್ವೆ ಜಂಕ್ಷನಾಗಿರುವುದು. ಮೈಕೊಪ್ ಎಣ್ಣೆ ಕಣಿಯ ಮಾರ್ಗವು ರೊಸ್ತೋವ್-ಗ್ರೋಝ್ನಿ ಕಣಿಯ ಮಾರ್ಗವನ್ನು ಇಲ್ಲಿಯೇ ಕೂಡುತ್ತದೆ. ವೊಲೋಕೊನೊವಾಕ ವು ಖಾರ್ಕೊವಿನಿಂದ ಓಸ್ಕೊಲ ಮಾರ್ಗದಲ್ಲಿ ವಾಲುಕಿಯಿಂದ ವಾಯುವ್ಯಕ್ಕೆ ಇಪ್ಪತ್ತು ಮೈಲು ದೂರದಲ್ಲಿದೆ. ಸೋವಿಯೆಟ್ ಟೇಂಕ್‌ಗಳು ವೊರೆನೆಜದಿಂದ ಟ್ರಾನ್ಸ್ ಕಾಕೆಸಸಿಯಾದ ಕಡೆಗೆ ಮುನ್ನುಗ್ಗುತ್ತಿವೆ. ಹೀಗೆ ಮುನ್ನುಗ್ಗುತ್ತಿರುವ ಮಾರ್ಗದಲ್ಲಿ ನಾಲ್ಕು ಮುಖ್ಯ ನಗರಗಳಿವೆ. (೧) ಕೂಪಾನಸ್ಕ—ಇದು ಖಾರ್ಕೋವದಿಂದ ಆಗ್ನೇಯಕ್ಕೆ ೮೦ ಮೈಲು ದೂರದಲ್ಲಿದೆ. (೨) ವೊರೊಶಿಲೋವೊ ಗ್ರಾಡ್ ಇದು ರೋಸ್ತೋವದಿಂದ ವಾಯುವ್ಯಕ್ಕೆ ೯೦ ಮೈಲು ದೂರದಲ್ಲಿದೆ. ಇದರ ಪತನ ಸನ್ನಿಹಿತವಾಗಿದೆ. (೩) ಟಿಕೊರೆಟ್ಸ್ಕ—ಇದು ರೊಸ್ತೋವ್ ಕಾಕಸಸ್ ಮಾರ್ಗದಲ್ಲಿರುವ ಮಹತ್ವದ ಜಂಕ್ಷನಾಗಿದೆ. (೪) ಅರ್ಮವೀರ ಇದು ಈಗಾಗಲೇ ಪತನವಾಗಿದೆ—ಇದು ಕೂಬಾನಿನ ದಕ್ಷಿಣಭಾಗ ಮತ್ತು ಕಪ್ಪು ಸಮುದ್ರದ ಕೆಲವು ಭಾಗಗಳ ಕೇಂದ್ರವಾಗಿರುವುದು.

ಉತ್ತರ ಕಾಕಸಸಿನ ಕಾಳಗವೀಗ ಕೂಬಾನ್ ಪ್ರಾಂತಕ್ಕೆ ಸ್ಥಳಾಂತರಿಸಲ್ಪಟ್ಟಿದೆ. ಅತ್ತ ಸ್ಟಾಲಿನ್‌ಗ್ರಾಡಿನಲ್ಲಿ ರಶ್ಯನರು ಒಂದೆರಡು ಕಡೆ ಜರ್ಮನ್ ವ್ಯೂಹವನ್ನು ಭೇದಿಸಿರುವರು. ಆದರೆ ಜರ್ಮನ್ ಪಡೆ ಒಂದಿಷ್ಟು ಹಿಂದೆ ಸರಿಯಲಿಲ್ಲವಂತೆ! ವೊರೊನೆಜದಿಂದ ಮುನ್ನುಗ್ಗುತ್ತಿರುವ ರಶ್ಯನ್ ಸೈನ್ಯದ ಗತಿಯೂ ಬಹಳ ತೀವ್ರವಿದೆ. ಜರ್ಮನರ ಚಳಿಗಾಲದ ವ್ಯೂಹವಾದ ಖಾರ್ಕೊವ್ ಮತ್ತು ಕುರ್‍ಸ್ಕ ಗಳೆರಡನ್ನೂ ಈ ಸೈನ್ಯವು ಮುತ್ತಲು ಹೊರಡಿದೆ. ಈಗಾಗಲೇ ಅದು ಈ ಎರಡು ಪಟ್ಟಣಗಳ ನಡುವಿರುವ ವೊಲೊಕೊನೊವ್ಕವನ್ನು ವಶಪಡಿಸಿರುವುದು; ಬುಡೆನೋ ನಗರವೂ ರಶ್ಯನರ ಸ್ವಾಧೀನ ಬಂದಿರುವುದು. ಕಾಕಸಸಿನಲ್ಲಿ ಅತ್ಯಂತ ಮಹತ್ವದ ರೈಲ್ವೆ ಕೇಂದ್ರವಾದ ಟಿಖರೆಟಸ್ಕದ ಕಡೆಗೆ ರಶ್ಯನ್ ಸೇನೆ ನುಗ್ಗುತ್ತಿದೆ. ಇನ್ನೊಂದು ಸೇನೆ ಸೆಲೀನಾ ಹತ್ತಿರ ಬಂದಿದೆ. ಇದು ರೋಸ್ತೋವಿಗೆ ೯೦ ಮೈಲು ದೂರವಿದೆ. ಮತ್ತೊಂದು ಸೈನ್ಯ ತಖಾತಾ ರೈಲ್ವೆ ಕೇಂದ್ರದಿಂದ ರಾಝು ವೆಲನೋ ಊರಿನ ಕಡೆ ಹೊರಟಿದೆ. ಇಲ್ಲಿಂದ ಟಿಖರೆಟಸ್ಕವು ೭೫ ಮೈಲು ದೂರದಲ್ಲಿದೆ.

ಅತ್ತ ದಕ್ಷಿಣ ಕಾಕಸಸಿನಲ್ಲಿ ಅರ್ಮವೀರವನ್ನು ಆಕ್ರಮಿಸಿಕೊಂಡ ರಶ್ಯನ್ ಸೇನೆಯು ಟಿಖರೆಟಸ್ಕಕ್ಕೆ ೪೦ ಮೈಲು ದೂರವಿರುವ ಕ್ರೊಪೊಟಕಿನ ಊರಿಗೆ ಹೊರಟಿದೆ. ಕ್ರೊಪೊಟಕಿನದಿಂದ ಕ್ರಾಸ್ನಡಾರ್–ಟಿಖರೆಟಸ್ಕ ರೈಲ್ವೆ ಕೇವಲ ೫೦ ಮೈಲು ದೂರವಿದೆ. ಈ ರೈಲ್ವೆಯನ್ನು ಕತ್ತರಿಸಿ ಬಿಟ್ಟರೆ ಕಾಕಸಸಿನಿಂದ ಜರ್ಮನರು ಹೊರಗೆ ಹೋಗುವುದೇ ಕಷ್ಟವಾಗುವುದು. ಅರ್ಮವೀರದಲ್ಲಿ ತಳವೂರಿದ ಮೇಲೆ ಕೆಲವು ರಶ್ಯನ್ ಸೈನ್ಯಗಳು ಟುವಾಪ್ಸೆ ಮತ್ತು ಮೈಕೊಪ ಎಣ್ಣೆ ಕಣಿಗಳ ಕಡೆಗೆ ಸಾಗಿವೆ. ಹೀಗೆ ಸ್ಟಾಲಿನ್‌ಗ್ರಾಡ್ ಡಾನದ ಕೆಳಭಾಗ, ವೊರೊನೆಜದ ಉತ್ತರ ಭಾಗ ಮತ್ತು ಲಡೋಗಾಸರೋವರ ಈ ಪ್ರದೇಶಗಳಲ್ಲಿ ರಶ್ಯನ್ ಜರ್ಮನ್ ವೀರರು ಹೋರಾಡುತ್ತಿರುವರು.

ಟ್ರಿಪೋಲಿ ಪತನ

ಲಿಬಿಯದ ರಾಜಧಾನಿಯಾದ ಟ್ರಿಪೋಲಿಯು ಪತನವಾಗಿ, ಬ್ರಿಟಿಷ್ ಅಷ್ಟಮ ದಳದವರು ತಾ. ೨೩ರಂದು ಮುಂಜಾನೆ ಆ ಪಟ್ಟಣವನ್ನು ಹೊಕ್ಕರು! ಜರ್ಮನ್ ಸೈನಿಕರೆಲ್ಲಾ ಆಗಲೇ ಆ ನಗರವನ್ನು ಖಾಲಿ ಮಾಡಿ ಟ್ಯುನಿಸಿಯಾಕ್ಕೆ ಹೊರಟು ಹೋಗಿದ್ದರೆಂದೂ ಹೇಳಲಾಗಿದೆ. ಸೇನಾಪತಿ ಮಾಂಟ್‌ಗುಮೇರಿಯು ಕಳೆದ ಮೂರು ತಿಂಗಳ ಹಿಂದೆ ಸುವೇಜನ್ನಾಕ್ರಮಿಸಲು ಎಲಾಮೆನ್‌ನಲ್ಲಿ ನಿಂತಿದ್ದ ರೊಮೆಲ್ಲನ ಸೈನ್ಯದ ಮೇಲೆ ಧಾಳಿ ಸುರು ಮಾಡಿ, ೧೪೦೦ ಮೈಲುಗಳಷ್ಟು ಮುಂದೊತ್ತಿ ಈಗ ಪೂರ್ಣ ವಿಜಯ ಹೊಂದಿದನು. ಟ್ರಿಪೋಲಿಯನ್ನು ವಶಪಡಿಸಿಕೊಳ್ಳುವುದೇ ಅಷ್ಟಮದಳದವರ ಮುಖ್ಯ ಉದ್ದೇಶವಾಗಿತ್ತು. ರೊಮೆಲನು ತನ್ನ ಅಳಿದುಳಿದ ಸೈನಿಕರನ್ನು ಉಳಿಸಿಕೊಳ್ಳಬೇಕಾದರೆ ಮತ್ತು ವಾನ್ ಅರ್ನಿಮನೊಂದಿಗೆ ಕೂಡಿಕೊಳ್ಳಬೇಕಾದರೆ ಇನ್ನೂ ೫೦೦ ಮೈಲುಹೋಗಬೇಕಾಗಿದೆ. ಟ್ರಿಪೋಲಿಯೂ ಗವಶವಾಗಿರುವುದರಿಂದ ಎಲ್ಲರ ಲಕ್ಷವೂ ಈಗ ಪಶ್ಚಿಮಕ್ಕೆ ಟ್ಯುನಿಸಿಯಾ ಕಡೆಗೆ ಹರಿದಿದೆ. ಅಲ್ಲಿ ಕೊನೆಯ ಕಾಳಗವಾಗುವುದು!

ಟ್ರಿಪೋಲಿ ಮಹತ್ವದ ಸ್ಥಳವಾಗಿದೆ. ಇದು ಟ್ರಿಪೋಲಿಟಾನಿಯದ ಮುಖ್ಯ ಪಟ್ಟಣ. ಅದರ ಜನಸಂಖ್ಯೆ ಒಂದು ಲಕ್ಷಕ್ಕಿಂತ ಹೆಚ್ಚಿಗಿದೆ. ಅದರಲ್ಲಿ ಮೂರನೇ ಒಂದಂಶಕ್ಕಿಂತ ಹೆಚ್ಚಿನ ಜನರು ಯೂರೋಪಿಯನರು. ಯುದ್ಧ ದೃಷ್ಟಿಯಿಂದಲೂ ಟ್ರಿಪೋಲಿ ಮಹತ್ವದ್ದಿದೆ. ಅಲ್ಲಿ ಬಂದರವಿರುವುದರಿಂದ, ಮುಂದಿನ ಧಾಳಿಗೆ ಅಷ್ಟಮದಳವು ಸೈನ್ಯಸಾಮಗ್ರಿ ತರಿಸಿಕೊಳ್ಳಬಹುದು. ಟ್ರಿಪೋಲಿಯಿಂದ ಕೇವಲ ೨೦೦ ಮೈಲಿನಂತರದಲ್ಲಿ ಮಾಲ್ಟಾ ಎಂಬ ಮಹತ್ವದ ಠಾಣ್ಯವಿದೆ. ಇದರಿಂದ ಮಿತ್ರರು, ಅಲೆಗ್ಝಾಂಡ್ರಿಯಾದಿಂದ ಮಾಲ್ಟಾವರೆಗೆ ಹಡಗುಗಳಿಗೆ ಸಂರಕ್ಷಣೆ ಕೊಡಲು ಶಕ್ತರಾಗುವರು. ಅಲ್ಲದೆ ಟ್ರಿಪೋಲಿ ವಿಜಯದ ನೈತಿಕ ಪರಿಣಾಮವೂ ಮಹತ್ವದ್ದಿದೆ. ಇಟಲಿಯು ಆಫ್ರಿಕಾ ಸಾಮ್ರಾಜ್ಯದ ತನ್ನ ಕೊನೆಯ ಪಟ್ಟಣವನ್ನು ಇಂದು ಕಳಕೊಂಡಿತು. ಅದರ ಸೌಂದರ್ಯ ಹಾಗೂ ಸಂಪತ್ತುಗಳು ಇಟಲಿಯನರಿಗೆ ಹೆಮ್ಮೆಯ ವಿಷಯಗಳಾಗಿದ್ದುವು.

ಇನ್ನು ಅಷ್ಟಮದಳವು ಮೊದಲನೆಯ ದಳದೊಡನೆ ಸೇರಿಕೊಳ್ಳಲು ಟ್ಯುನಿಸಿಯಾದಲ್ಲಿ ಹೊಕ್ಕಿತೆಂದರೆ, ಟ್ರಿಪೋಲಿ ಪತನದಿಂದ ಅದರ ಪೂರ್ತಿ ಕಾರ್ಯ ಸಮಸ್ಯೆಯೂ ಹಗುರವಾಗುವುದು. ಅಷ್ಟಮ ದಳದ ಮುನ್ನಡೆಗೆ ಈಗ ಟ್ಯುನಿಸಿಯನ್ ಗಡಿಯಲ್ಲಿ ಟ್ರಿಪೋಲಿಯಿಂದಾಚೆಗೆ ೬೦ ಮೈಲಿನಂತರದಲ್ಲಿರುವ ಮೆರಂಥಲ್ಯಾನ್ ಮಾರ್ಗ ತಡೆಯಾಗಿದೆ. ಮೆರೆಂಥ ಲೈನಿನ ದುರ್ಗಗಳನ್ನು ೧೯೪೦ರಲ್ಲಿ ಇಟಲಿಯನರು ಫ್ರೆಂಚರಿಂದ ಅದನ್ನು ತೆಗೆದುಕೊಂಡ ನಂತರ ಸ್ವಲ್ಪ ಸಡಿಲಿಸಿದ್ದರು. ಆದರೆ ಆ ಮೇಲೆ ಜರ್ಮನರು ಅದನ್ನು ಬಲಪಡಿಸಿದ್ದಾರೆ. ಇಲ್ಲಿ ಜರ್ಮನರು ಅಷ್ಟಮದಳವನ್ನೆದುರಿಸಬಹುದು.

ಟ್ರಿಪೋಲಿಯಿಂದ ಪಶ್ಚಿಮಕ್ಕೆ ಮುನ್ನುಗ್ಗುತ್ತಿರುವ ಬ್ರಿಟಿಷ್ ಅಷ್ಟಮದಳವು ಉತ್ತರ ಕರಾವಳಿಯಲ್ಲಿ ಟ್ರಿಪೋಲಿಯಿಂದ ಇಪ್ಪತ್ತೈದು ಮೈಲು ದೂರದಲ್ಲಿರುವ ಝೂಷಿಯಾ ಎಂಬ ನಗರವನ್ನು ಆಕ್ರಮಿಸಿವೆಯೆಂದು ಮಧ್ಯ ಪೂರ್ವದ ಯುದ್ಧ ಪ್ರಕಟಣೆಯಾಗ ಸಾರುತ್ತದೆ. ಟ್ಯುನಿಸಿಯ ಹಾಗೂ ಸಿಸಿಲಿಗಳ ನಡುವಿನ ಶತ್ರು ಮಾರ್ಗಗಳ ಮೇಲೂ ಮಿತ್ರರು ಧಾಳಿಯಿಟ್ಟರು. ಆಗ್ನೇಯ ಟ್ಯುನಿಸಿಯದಲ್ಲಿ ಅಮೆರಿಕದ ಗಸ್ತು ದಳದವರು ಮೆಕ್‌ನಾಸಿಯಲ್ಲಿರುವ ಶತ್ರು ಠಾಣ್ಯಗಳ ಮೇಲೆ ಧಾಳಿಮಾಡಿದರು. ಒಟ್ಟಿನಿಂದ ಹೀಗೆ ಆಫ್ರಿಕದಲ್ಲಿ ಬ್ರಿಟಿಷರಿಗೆ ಒಂದೇ ತೆರದಲ್ಲಿ ಜಯವೂ, ಜರ್ಮನರಿಗೆ ಅಪಜಯವೂ ದೊರಕುತ್ತಿದೆ.

The Canara Banking Corporation Ltd.

(Incorporated in British India)

Head Office: UDIPI

Estd. 1906.

Applications are invited, for the posts of Agents and Accountants in the Corporation to serve in branches outside the District. Selected candidates will have to undergo a probationery course as per rules. Graduates or persons with previous banking experience or who have passed Banking Examinations will be preferred. Persons who have not passed atleast the S. S. L. C. or other equivalent exminations need not apply.

Applications stating age, qualifications, etc. together with 2 good references must reach the undersigned before the 15th February 1943.

Udipi, 21-1-1943. V. R. KAMATH, B. A., LL. B., Manager.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 4/1943

1. ಸುಂದರಿ ಯಾನೆ ಶಾಂತಾಬಾಯಿ
2. ದೇವಿದಾಸ (ಮೈನರ)
3. ವಿಟ್ಠಲ (ಮೈನರ)

} ಅರ್ಜಿದಾರರು

ಮೈನರ 2-3ನೇ ಅರ್ಜಿದಾರರ ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು.

ಸದರಿ 1ನೇ ಅರ್ಜಿದಾರಳ ಗಂಡ ವ ಮಿಕ್ಕ ಅರ್ಜಿದಾರರ ತಂದೆ ಮೃತ ಶೇಣ್ವೆ ಪುರುಷೋತ್ತಮ ಅನಂತ ಪೈಗಳ ಬಾಬ್ತು ಸದರಿ ಅರ್ಜಿಯ A ಶೆಡ್ಯೂಲಿನಲ್ಲಿ ನಮೂದಿಸಿದಂತೆ ಲೈಫ್ ಯಿನ್ಸೂರೆನ್ಸ ಪೊಲಿಸಿಗಳ ಬಾಬ್ತು ವಗೈರೆ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ವ ಸದರಿ ಶೆಡ್ಯೂಲಿನಲ್ಲಿ ಕಾಣಿಸಿದ ಶೇರ್ಸುಗಳನ್ನು 2-3ನೇ ಅರ್ಜಿದಾರರ ಹೆಸರಲ್ಲಿ ಟ್ರೆನ್ಸಫರ್ ಕೊಂಡುವರೆ ಸಹಾ ತಾವು ಹಕ್ಕುದಾರರೆಂತಲೂ ಆ ಕುರಿತು ತಮ್ಮ ಹೆಸರಲ್ಲಿ ಮೇಲೆ ಕಾಣಿಸಿದ ಪ್ರಕಾರ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿಯೂ ವಗೈರೆ ಅಪೇಕ್ಷಿಸಿ ಸದ್ರಿ ಅರ್ಜಿದಾರರು ಬರಕೊಂಡ ಮೇಲ್ಕಂಡ ಅರ್ಜಿಯು ತಾ. 20-2-1943ಕ್ಕೆ ತನಿಕೆಗೆ ಇಡೋಣಾಗಿಯದೆ. ಈ ಕುರಿತು ಯಾರಾದ್ರೂ ಆಕ್ಷೇಪ ಹೇಳುವವರು ಇದ್ರೆ ಸದರಿ ತಾರೀಕಿನ ದಿವ್ಸ ಸದರಿ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸೋಣಾಗುತ್ತದೆ.

ಉಡುಪಿ 27-1-43 } M. Damodar Kamath, Advocate for Petitioner

ಸ್ವದೇಶಾಭಿಮಾನಿ

ತಾರೀಖು 19-1-1943

ಸ್ವದೇಶ ಸಮಾಚಾರ

ಹಿಂದುಸ್ಥಾನದ ಆಹಾರ ಸಮಸ್ಯೆ

ವೈಸರಾಯ್ ಮಂತ್ರಿಮಂಡಳದ ಆಹಾರ ಮಂತ್ರಿ ಶ್ರೀ. ಎನ್. ಆರ್. ಸರ್ಕಾರರು ಈ ವಾರ, ನ್ಯೂಡಿಲ್ಲಿಯಲ್ಲಿ ಸೇರಿದ ಪತ್ರಿಕಾ ಪರಿಷತ್ತಿನಲ್ಲಿ ಇಂಡಿಯಾ ಗವರ್ನಮೆಂಟಿನ ಆಹಾರ ಸಮಸ್ಯೆಯ ಪರಿಹಾರ ಯೋಜನೆಯ ವಿಷಯವನ್ನು ವಿವರಿಸಿ ಹೇಳಿದರು. ಅದರಲ್ಲಿ ಈ ಕೆಳಗಿನ ನಾಲ್ಕು ವಿಷಯಗಳು ಪ್ರಾಮುಖ್ಯವಿವೆ. (೧) ಗೋಧಿಯ ಅಭಾವವನ್ನು ಪರಿಹರಿಸಲು, ಬರುವ ಮೂರು ತಿಂಗಳಲ್ಲಿ ಹೊರಗಿನಿಂದ ಗೋಧಿ ತರಿಸುವುದು; ಇದು ಕಳೆದ ವರ್ಷದಂತೆ ಸೈನಿಕರ ಉಪಯೋಗಕ್ಕೆ ಮಾತ್ರ ಇರದೆ ನಾಗರಿಕರಿಗೂ ಸಿಗುವಂತೆ ಮಾಡುವುದು. (೨) ಈಗ ಇದ್ದ ಗೋಧಿಯ ಬೆಲೆ ನಿರ್ಬಂಧವನ್ನು ತೆಗೆದು ಹಾಕುವುದರ ಮೂಲಕ, ಗೋಧಿ ಬೆಳೆಸುವ ಪ್ರದೇಶದ ಜನರಲ್ಲಿ ವಿಶ್ವಾಸ ಹುಟ್ಟುವಂತೆ ಮಾಡುವುದು. (೩) ಆಹಾರ ಇಲಾಖೆಯವರು ಜನರ ಮುಂದೆ ಯಥಾರ್ಥ ವಿಷಯಗಳನ್ನು ತಿಳಿಸುವಂಥಾ ವಿಶಾಲ ಪ್ರಚಾರ ಕಾರ್ಯವನ್ನು ಕೈಕೊಳ್ಳುವುದು. (೪) ಆಹಾರ ಪದಾರ್ಥಗಳನ್ನು

ಈ ಬಾರಿಯ ಉದ್ದೇಶದಿಂದ [illegible] ಸರಕಾರ ... ಪ್ರಯೋಗಕ್ಕೆ ತರುವದು

ರೇಶನಿಂಗಿನ ವಿಷಯ ಮಾತನಾಡುತ್ತಾ ಶ್ರೀ ಸರ್ಕಾರರು, ಭಾರತದ ಇಡೀ ಜನತೆಯಲ್ಲಿ ಇದನ್ನು ಜಾರಿಗೆ ತರುವುದು ಬಹಳ ದುಸ್ಸಾಧ್ಯವಿದೆಯೆಂದು ಹೇಳಿ, ದೊಡ್ಡ ಪಟ್ಟಣಗಳಲ್ಲಿ ಈ ಕುರಿತು ತಕ್ಕ ಕಾರ್ಯಕ್ರಮ ಜಾರಿಗೆ ತರುವಂತೆ, ಆಯಾಯ ಪ್ರಾಂತಿಕಸರಕಾರಗಳನ್ನು ಕೇಳಿಕೊಂಡಿದೆಯೆಂದೂ, ಅವುಗಳು ಅವಶ್ಯವಿದ್ದಲ್ಲಿ ತಡ ಮಾಡದೆ ಆ ಕಾರ್ಯಕ್ರಮ ಜಾರಿಗೆ ತರುವವೆಂದೂ ಹೇಳಿದರು. ಸರಕಾರದ ಮುಂದಿನ ಯೋಜನೆಯ ಕುರಿತು ಮಾತನಾಡುತ್ತಾ, ಇಂದು ಆಹಾರದ ವಿಷಯ ಉಂಟಾಗಿರುವ ವಿಷಮ ಸ್ಥಿತಿಯನ್ನು ಪರ್ಯಾಲೋಚಿಸಿ ಮುಂದೆ ಇಂಥಾ ತೊಂದರೆ ಉಂಟಾಗದಂತೆ, ಸರಕಾರವೇ ಹೆಚ್ಚಿಗಿರುವ ಆಹಾರ ಸಾಮಗ್ರಿಗಳನ್ನು ಕ್ರಯಕ್ಕೆ ಪಡಕೊಂಡು, ಹಾಗೆಹೆಚ್ಚಿಳಿದ ಆಹಾರವನ್ನು ಕಡಿಮೆಯಿರುವ ಪ್ರಾಂತಕ್ಕೆ ಕಳುಹಿಸುವಂತೆ ಸರಕಾರವೇ ಏರ್ಪಡಿಸುವುದೆಂದೂ, ಇಂಥಾ ಯೋಜನೆಯು ಪಂಜಾಬಿನಲ್ಲಿ ಈಗಾಗಲೇ ಪ್ರಯೋಗಿಸಲ್ಪಟ್ಟದ್ದು, ಈ ಯೋಜನೆಯ ವಿವರಗಳನ್ನು ಇತರ ಪ್ರಾಂತಗಳಿಗೂ ಸಂಸ್ಥಾನಗಳಿಗೂ ಕಳುಹಿಸಲಾಗಿದೆಯೆಂದೂ ಹೀಗೆ ಮಾಡುವುದರಿಂದ ಆಹಾರ ಸಾಮಗ್ರಿಗೆ ಒಂದು ನಿಶ್ಚಿತ ಬೆಲೆ ಗೊತ್ತುಮಾಡಲು ಸುಲಭವಾಗುವುದೆಂದೂ ತಿಳಿಸಿದರು.

ವಿದ್ಯಾರ್ಥಿಯನ್ನು ಗಲ್ಲಿಗೇರಿಸಿದರು!

ಸಕ್ಕರದ ಊರಿನ ೨೦ ವರ್ಷದ ವಿದ್ಯಾರ್ಥಿ ಹೇಮು ಕಲಾಣಿ ಎಂಬವರಿಗೆ ಮಾರ್ಶಲ್ ಲಾ ಕೋರ್ಟಿನವರು ಮರಣ ದಂಡನೆ ವಿಧಿಸಿದರು. ರೈಲ್ವೆ ಮಾರ್ಗದ ಫಿಶ್‌ಪ್ಲೇಟು ತೆಗೆದ ಆರೋಪ ಇವರ ಮೇಲೆ ಹೊರಿಸಲಾಗಿತ್ತು. ಇವರ ಜೀವದಾನ ಅರ್ಜಿ ತಿರಸ್ಕೃತವಾಗಿ ಇದೇ ತಾ. ೨೧ರಂದು ಬೆಳಗ್ಗೆ ಸಿಂಧ್ ಪ್ರಾಂತದ ಹೈದರಾಬಾದಿನಲ್ಲಿ ಗಲ್ಲಿಗೇರಿಸಿದರು. ವಿದ್ಯಾರ್ಥಿಯೊಬ್ಬರನ್ನು ಇಂಥಾ ಆರೋಪದಲ್ಲಿ ಗಲ್ಲಿಗೇರಿಸಿದ್ದು ಇದೇ ಮೊದಲನೆಯ ದಾಖಲೆ! ಇವರ ಶವಮೆರವಣಿಗೆ ಕಾಲದಲ್ಲಿ ೫೦ ಸಾವಿರಜನ ಸೇರಿದ್ದರು. ಬಹಳ ದೊಡ್ಡ ಪ್ರದರ್ಶನವಿತ್ತು!

ಟರ್ಕಿಯ ಪತ್ರಿಕೋದ್ಯಮಿಗಳು

ಕೆಲವರೀಗ ಭಾರತಕ್ಕೆ ಬಂದಿದ್ದಾರೆ. ಭಾರತ ಪರಿಸ್ಥಿತಿಯ ಕುರಿತು ಅವರು ಅಭ್ಯಾಸಮಾಡಲಿರುವರು. ಇದಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಅವರಿಗೆ ಸರಕಾರವು ಕೊಡಲು ಒಪ್ಪಿದೆಯಂತೆ. ಕಾಂಗ್ರೆಸ್ ಮುಖಂಡರನ್ನು ಕಾಣುವಿರಾ? ಎಂದು ಅವರಿಗೆ ಪ್ರಶ್ನೆ ಕೇಳಿದಾಗ 'ಅದೆಲ್ಲವೂ ನಮ್ಮನ್ನೇ ಹೊಂದಿಕೊಂಡಿಲ್ಲ' ಎಂದು ಉತ್ತರ ಬಂತು. ಭಾರತದ ಮೈತ್ರಿಗಾಗಿ ಅವರು ತಮ್ಮ ಅಭಿಲಾಷೆ ವ್ಯಕ್ತಮಾಡಿದರು. ಪ್ರಜಾಪ್ರಭುತ್ವಕ್ಕೆ ಜಯವಾಗಬೇಕೆಂಬ ತಮ್ಮಿಷ್ಟವನ್ನು ಪ್ರಕಟಿಸಿದ್ದಾರೆ. ಭಾರತದಲ್ಲಿ ಟರ್ಕಿಯ ಪತ್ರಿಕೋದ್ಯಮಿಗಳು ಕೆಲವರು ಖಾಯಂವಾಗಿ ನಿಲ್ಲಲು ಅವರು ವ್ಯವಸ್ಥೆ ಮಾಡುವರಂತೆ. ಅಂತೆಯೇ ಕೆಲವು ಭಾರತೀಯ ಪತ್ರಿಕೋದ್ಯಮಿಗಳಿಗೂ ಅಲ್ಲಿ ನೆಲೆ ಅವಕಾಶ ಮಾಡಿಕೊಡುವ ಭರವಸೆ ಕೊಟ್ಟಿದ್ದಾರೆ. ಮುಸ್ಲಿಂ ಲೀಗಿನ ಪತ್ರಿಕೆ, 'ಡಾನ್' ಈ ಮಂಡಳಿಗೆ ಒಂದು ಸತ್ಕಾರಕೂಟ ಏರ್ಪಡಿಸಿತು.

ಪುಂಡುಗಂದಾಯಕ್ಕೆ ಅಪೀಲಿಲ್ಲ?

ಪುಂಡುಗಂದಾಯ ವಿಧಿಸಿದ ಬಗ್ಗೆ ವಿರುದ್ಧವಾಗಿ ಯಾರೂ ಕೋರ್ಟಿನಲ್ಲಿ ವ್ಯಾಜ್ಯ ತರಕೂಡದೆಂದು ಇಂಡಿಯಾ ಸರಕಾರದವರು ಒಂದು ಹೊಸ ತಿದ್ದುಪಡಿ ಆರ್ಡಿನೆನ್ಸು ಜಾರಿಮಾಡಿದ್ದಾರೆ. ಈ ಪುಂಡುಗಂದಾಯವು, ಯಾರಾದರೂ ಮಾರ್ಗ ಸಂಚಾರ ಪ್ರತಿಬಂಧ ಮಾಡಿದರೆ, ಕಂಬಿತಂತಿ ಕಡಿದರೆ ಆ ಊರಿನ ಜನರಿಗೆ ವಿಧಿಸುವಂಥಾದ್ದು; ಇದು ಮುಸಲ್ಮಾನರಿಗೆ, ಕ್ರಿಶ್ಚಿಯನರಿಗೆ, ಸರಕಾರಿ ನೌಕರರಿಗೆ ಲಾಗುವಿಲ್ಲ. ಹಾಗೆಂದರೆ ಹಿಂದುಗಳಿಗೆ ಮಾತ್ರ. ಹಿಂದುವಾಗಿ ಹುಟ್ಟಿದ ಪಾಪಕ್ಕೆ ಇದು ಸರಕಾರದ ಒಂದು ಪ್ರತೀಕಾರವೇ ಎಂದು ಈಗಾಗಲೇ ಹಲವರು ಮರುಗತೊಡಗಿದ್ದಾರೆ. ಅವರಂಗಜೇಬನ ಕಾಲದ ಜಜಿಯಾ ತೆರಿಗೆಗೂ ಇದಕ್ಕೂ ಹೋಲಿಕೆಯೆಂದು ಹಲವರು ಟೀಕಿಸಿದ್ದಾರೆ. ರಾಜಕೀಯ ತಪ್ಪಿಗೆ ಧಾರ್ಮಿಕ ಶಿಕ್ಷೆ ಕೊಡುವುದು ಹೇಗಾದರೂ ನ್ಯಾಯವಲ್ಲ.

ಡಾ। ಮುಖರ್ಜೀ ಪುಸ್ತಕಕ್ಕೆ ಪ್ರತಿಬಂಧ

"ಭಾರತ ಸಂಗ್ರಾಮದ ಎರಡು ಅಂಕ" ಎಂಬ ಪುಸ್ತಕವನ್ನು ಬಂಗಾಳ ಮಂತ್ರಿ ಮಂಡಳದ ಮಾಜಿ ಮಂತ್ರಿ ಡಾ। ಶಾಮ ಪ್ರಸಾದ ಮುಖರ್ಜೀಯವರು ಬರೆದು ಪ್ರಕಟಿಸಿದ್ದಾರೆ. ಅದನ್ನು ಇನ್ನು ಮೇಲೆ ಯಾರೂ ಮುದ್ರಿಸಿ ಪ್ರಕಟಿಸಬಾರದಾಗಿ ಬಂಗಾಳ ಗವರ್ನರರು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳ ಮೇಲೆ ರಾಷ್ಟ್ರ ಧ್ವಜವಿಡಕೂಡದು.

ಎಂಬುದಾಗಿ ಮದ್ರಾಸು ಸರಕಾರವು ಒಂದು ಹುಕುಂ ಹೊರಡಿಸಿದೆ. ಯಾರಾದರೂ ಧ್ವಜ ಹಾರಿಸಿದ್ದಾದರೆ ಅವರು ಅಂಡಿನೆನ್ಸಿಗೆ ದಂಡಕ್ಕೊಳಗಾಗುವಂತೆ ಪರಿಗಣಿಸಲ್ಪಡುವರೆಂದೂ ಎಚ್ಚರಿಕೆ ಕೊಟ್ಟಿರುವರು.

ಸ್ವಾತಂತ್ರ್ಯ ದಿನಾಚರಣೆ

ಜನವರಿ ೨೬ ಭಾರತೀಯರ ಸ್ವಾತಂತ್ರ್ಯ ದಿನ. ಈ ದಿನವನ್ನು ಕಾಂಗ್ರೆಸು ೧೯೩೦ನೇ ಇಸವಿಯಿಂದ ಆಚರಿಸುತ್ತಿತ್ತು. ಆದರೆ ಕಾಂಗ್ರೆಸ್ಸೇ ಈಗ ಸರಕಾರದ ಬಂಧನದಲ್ಲಿರುವುದರಿಂದ ಈ ದಿನವನ್ನು ಸಾರ್ವಜನಿಕವಾಗಿ ಆಚರಿಸುವಂತಿಲ್ಲದಾಗಿದೆ.

ಆದರೂ ಈ ದಿನಾಚರಣೆಯ ಪ್ರದರ್ಶನಗಳು ಅಖಿಲ ಭಾರತದ ಬೇರೆ ಬೇರೆ ಕಡೆಗಳಲ್ಲಿ ನಡೆದು ಆ ಸಂಬಂಧ ಹಲವು ಬಂಧನ ಮೊದಲಾದುವುಗಳು ನಡೆದ ಸುದ್ದಿ ಬರುತ್ತಿದೆ. ಲಂಡನಿನಲ್ಲಿ 'ಸ್ವರಾಜ್ಯ ಭವನ'ದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ ಅಲ್ಲಿನ ಭಾರತೀಯರೂ ಭಾರತ ಮಿತ್ರರೂ ಸೇರಿ ಸ್ವಾತಂತ್ರ್ಯ ಪ್ರತಿಜ್ಞೆ ಓದಿ ಭಾಷಣಮಾಡಿ, ಸ್ವಾತಂತ್ರ್ಯ ದಿನವನ್ನು ವೈಭವದಿಂದಾಚರಿಸಿದರು. ಭಾರತದ ಕೆಲವು ಕಡೆ ಈ ದಿನದ ಸಂಬಂಧ ಪೆಟ್ಟು ಗುಂಡುಹಾರಿಸುವಿಕೆಯೂ ಆಯಿತು.

ಭಾರತದ ಕುರಿತು ೫೦ ಅಂಶಗಳು

ಎಂಬ ಚಿಕ್ಕ ಪುಸ್ತಕವನ್ನು ಲಂಡನಿನಲ್ಲಿ ಬ್ರಿಟಿಷ್ ಮಂತ್ರಿಮಂಡಳದವರು ಪ್ರಕಟಿಸಿ, ಹೊರದೇಶಗಳಿಗೆ ಕಳುಹಿಸುತ್ತಾರೆ. ಭಾರತೀಯ ಅಧಿಕಾರಗಳೇ ಇವತ್ತಾರೆ. ಯುರೋಪಿಯನರು ಕೆಲವೇ ಮಂದಿ; ಭಾರತೀಯರಿಗೆ ಅಧಿಕಾರಗಳನ್ನು ಹೆಚ್ಚು ಹೆಚ್ಚು ಕೊಡುತ್ತ ಬಂದಿದ್ದೇವೆ ಎಂಬ ತಮ್ಮ ಆತ್ಮಸಮರ್ಥನೆ ಇದರಲ್ಲಿದೆ. ಅಮೆರಿಕ ಮೊದಲಾದ ರಾಷ್ಟ್ರಗಳು ಬ್ರಿಟನನ್ನು ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಒತ್ತಾಯಿಸಬಾರದೆಂದು ಈ ಕುತಂತ್ರದ ಕುಪ್ರಚಾರವನ್ನು ಮಾಡಲಾಗಿದೆಯೆಂದು ಈಗಾಗಲೇ ಹಲವರು ಟೀಕಿಸತೊಡಗಿದ್ದಾರೆ.

ದೇವಕೋಟೆ ದುರಂತದಲ್ಲಿ ಕಠಿಣ ಶಿಕ್ಷೆಗಳು

ತಮಿಳುನಾಡಿನ ದೇವಕೋಟೆ ಎಂಬಲ್ಲಿ ನಡೆದ ಒಂದು ದುರಂತದ ಸಂಬಂಧದಲ್ಲಿ ೯೩ ಮಂದಿ ಅಪಾದಿತರಲ್ಲಿ ೬೬ ಮಂದಿಗೆ ಶಿಕ್ಷೆ ಆಯಿತು. ಶಿಕ್ಷೆಯಾದವರಲ್ಲಿ ೧೬ ಮಂದಿ ೧೫ ವರ್ಷದಿಂದ ೨೦ ವರ್ಷದೊಳಗಿನ ಯುವಕರು. ಇವರಿಗೆ ಮೂರು ವರ್ಷ ಬೊರ್ಸ್ಟಲ್ ಸ್ಕೂಲ್ ಶಿಕ್ಷೆಯಾಗಿದೆ. ನಾಲ್ಕು ಮಂದಿಗೆ ತಲಾ ೧೦ ವರ್ಷ ಕಠಿಣ ಶಿಕ್ಷೆ. ಮೂವರಿಗೆ ತಲಾ ಎರಡು ವರ್ಷ ಕಠಿಣ ಶಿಕ್ಷೆ. ೪೩ ಮಂದಿಗೆ ತಲಾ ೭ ವರ್ಷ ಕಠಿಣ ಶಿಕ್ಷೆ.

Canara High School Mangalore.

The following additions have been made to the electoral rules as an explanation after the note in Rule 1.

"Non-old boy donors will be allowed to nominate in the aggregate four old pupils of the Canara High School or Canara Girls School on the electoral roll for election to the Canara High School Council; provided the nominees are related to the donors as ascendents or descendents or collaterals up to the third degree or as husband or wife."

"Old Boy donors may make nominations of four members of the above description in the electoral roll in addition to themselves".

"The aforesaid right can be exercised only once".

M. Madhava Rao

Manager.

ನೀವು ನಿಮ್ಮ ಪ್ರಾಯಕ್ಕಿಂತ ತರುಣರಾಗಿ ಯಾಕೆ ಆಗಬಾರದು?

ಪ್ರತಿದಿನ ರಾತ್ರಿ ಎರಡು ಬೈಲ್ ಬೀನ್ಸುಗಳನ್ನು ಸೇವಿಸುವ "ಸುವರ್ಣ ನಿಯಮ"ವನ್ನನುಸರಿಸಿದರಾದರೆ, ನೀವು ನಿಮ್ಮ ನಿಜವಾದ ಪ್ರಾಯಕ್ಕಿಂತ ತರುಣರಾಗಿ ಕಾಣುವುದು ಮಾತ್ರವಲ್ಲ ಸ್ವತಃ ನೀವೇ ಹಾಗೆಂದು ಅನುಭವಿಸುವಿರಿ. ಬೈಲ್ ಬೀನ್ಸು ಶುದ್ಧ ಶಾಕಾಹಾರದಿಂದಲೇ ಮಾಡಿದ್ದು ಅವು ಅವಯವಗಳನ್ನು ಸರಿಗೊಳಿಸುವವು. ರಕ್ತವನ್ನು ಶುದ್ಧಿಗೊಳಿಸುವವು. ದಿನ ನಿತ್ಯದ ಶೌಚಿಯನ್ನು ನಿರ್ಮಲಗೊಳಿಸುವವು. ಹೀಗೆ ನಿಮ್ಮನ್ನು ಆರೋಗ್ಯವಂತರಾಗಿ ತರುಣರಾಗಿ ಮತ್ತು ಆಕರ್ಷಕರಾಗಿ ಮಾಡುವವು.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಬೈಲ್ ಬೀನ್ಸು ಬಾಟ್ಲಿ ಒಂದರ ಒಂದು ರೂಪಾಯಿ ಬೆಲೆಗೆ ಮಾರಲ್ಪಡುವುದು.

BILE BEANS

ಬೈಲ್ ಬೀನ್ಸು ನಿಮ್ಮನ್ನು ತರುಣರಾಗಿಯೂ ಆರೋಗ್ಯವಂತರಾಗಿಯೂ ಮಾಡುವುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ ಕೃಷ್ಣ ಶೆಣೈ ಬೆಟ್ಟಂಗಡಿ "ಡಿಟೆನ್ಯೂನ್"

ಫೆಬ್ರವರಿ ತಾ. ೩ರಂದು ವೆಲ್ಲೂರು ಜೈಲಿನಿಂದ ಬಿಡುಗಡೆಗೊಂಡು ಹೋಗಿರುವರೆಂದು ತಿಳಿದಿದೆ. ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಪ್ರಕಾರ ಇವರನ್ನು ಕಳೆದವಾರ ಬಂಧಿಸಲಾಗಿತ್ತು

ಡಾ| ಯು. ಪಿ. ಮಲ್ಯರ ಬಂಧನ

ಜಿಲ್ಲೆಯ ಕಾಂಗ್ರೆಸ್ ಮುಂದಾಳುಗಳಲ್ಲೊಬ್ಬರಾದ ಡಾ| ಯು. ಪಿ. ಮಲ್ಯರನ್ನು ತಾ. ೨೪ರಂದು ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಪ್ರಕಾರ ಬಂಧಿಸಿರುವರು.

ಶ್ರೀ ಎಸ್. ಎಸ್. ಕಾರಂತರ ಬಂಧನ

ಡಕ್ ಹರ್ಡೀಕರು ಸೆರೆಮನೆಗೊಯ್ಯಲ್ಪಟ್ಟ ನಂತರ ಹುಬ್ಬಿ ಗಜೆಟ್ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಎಸ್. ಎಸ್. ಕಾರಂತರನ್ನು (ಇವರು ನಮ್ಮ ಜಿಲ್ಲೆಯವರು) ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ೧೨೯ನೇ ಕಲಮಿನಂತೆ ಸೆರೆಹಿಡಿದು ಸ್ಥಾನಬದ್ಧರಾಗಿ ಮಾಡಿರುವರು.

ಬಂಧನ ಬಿಡುಗಡೆ

ಜನವರಿ ೨೬ನೇ ತಾರೀಕಿನಂದು, ಮಂಗಳೂರು ನಗರದ ಬೀದಿಬೀದಿಗಳಲ್ಲಿ ಪೋಲೀಸು ಬಂದೋಬಸ್ತು ವಿಶೇಷವಾಗಿತ್ತು ಕೆಲವು ಕಟ್ಟಡಗಳ ಮೇಲೆ ರಾಷ್ಟ್ರಧ್ವಜಗಳು ಹಾರಾಡುತ್ತಿದ್ದವು. ಕೆಲವು ಜನರು ರಾಷ್ಟ್ರಧ್ವಜವನ್ನು ಧರಿಸಿಕೊಂಡಿದ್ದರು ಆ ದಿನ ಕರಪತ್ರಗಳನ್ನು ಹಂಚುತ್ತಾ ಮಾರ್ಗದಲ್ಲಿ ಹೋಗುತ್ತಿದ್ದ ಸುಮಾರು ೧೧ ಜನರನ್ನು ಪೋಲೀಸರು ಬಂಧಿಸಿ ಆ ಮೇಲೆ ಬಿಡುಗಡೆ ಮಾಡಿದರೆಂದೂ ತಿಳಿದುಬರುತ್ತದೆ

ಕಮ್ಯೂನಿಸ್ಟ ಕೈದಿಗಳು

ಶ್ರೀಯುತರು ಬಿ ವಿ. ಕಕ್ಕಿಲ್ಲಾಯ ಮತ್ತು ವಿ. ಕೆ. ನಾಯರ್ ಇವರ ವಿಚಾರಣೆಯು ಶ್ರೀ ಶ್ರೀರಾಮುಲು ನಾಯ್ಡು, ರೆ/ಡಿ ಆಫೀಸರ್, ಅವರ ಎದುರು ತಾ ೨೦ರಂದು ನಡೆಯಬೇಕಾಗಿದ್ದರೂ ಫೆಬ್ರವರಿ ತಾ. ೨ಕ್ಕೆ ಪುನಃ ಮುಂದುವರಿಸಲ್ಪಟ್ಟಿದೆ

ಚಿಲ್ಲರೆ ಕೊಡಿಸಿಟ್ಟ ಆರೋಪ

ಚಿಲ್ಲರೆಯನ್ನು ಇರಿಸಿಕೊಂಡ ಅಪಾದನೆಯ ಮೇರೆಗೆ ಡಿ| ಕಾನೂನಿನನ್ವಯ ಮಂಜೇಶ್ವರದಿಂದ ಶ್ರೀ. ಸುಬ್ರಾಯಚಾರಿಯವರನ್ನೂ ಕುಂಬಳೆಯಿಂದ ಶ್ರೀ ಎಲ್ ಎಸ್ ಪ್ರಭುಗಳನ್ನೂ ಸೆರೆಹಿಡಿದು ತಂದಿದ್ದಾರೆ ವಿಚಾರಣೆಯು ನಡೆಯಲಿದೆ

ಮಿತ್ರ ಮಂಡಳಿ ಮಂಗಳೂರು

ಇದರ ವಾರ್ಷಿಕ ಮಹಾಸಭೆಯೊಂದು ಕಳೆದ ಆದಿತ್ಯವಾರ ಕೆನರಾ ಹೈಸ್ಕೂಲಲ್ಲಿ ಶ್ರೀ ಎಂ ವಿ ಪ್ರಭುಗಳ ಅಧ್ಯಕ್ಷತೆಯಿಂದ ಕೂಡಿ, ಕಳೆದ ವರ್ಷದ ವರದಿ ಲೆಕ್ಕಪತ್ರಗಳು ಮಂಜೂರಾಗಿ ಹೊಸ ವರ್ಷದ ಆಡಳಿತ ಮಂಡಳಿ ರಚಿಸಲ್ಪಟ್ಟಿತು. ಹೊಸ ವರ್ಷದ ವಿಶೇಷ ಕಾರ್ಯಕ್ರಮವಾಗಿ (೧) ಸದಸ್ಯಸಂಖ್ಯೆ ಹೆಚ್ಚಿಸುವುದು (೨) ಒಂದು ಸಂಚಾರ ಪುಸ್ತಕ ಭಂಡಾರವನ್ನೇರ್ಪಡಿಸಿ ಮಿತ್ರಮಂಡಳಿಯ ಸದಸ್ಯರಿಗೆ ಅದರ ಸೌಕರ್ಯ ಒದಗಿಸುವುದು (೩) ಮಿತ್ರಮಂಡಳಿಯ ಕನ್ನಡಸೇವಾ ಗ್ರಂಥಮಾಲೆಯಲ್ಲಿ ಶ್ರೀ ಟಿ ವಾಮನಭಟ್ಟರ ಕವನ ಪುಸ್ತಕವೊಂದನ್ನು ಪ್ರಕಟಿಸುವುದು—ಈ ನಿರ್ಣಯಗಳಾದುವು ಹೊಸ ವರ್ಷದ ಕಾರ್ಯಕಾರೀ ಮಂಡಲಿಗೆ ಶ್ರೀ ಮುಳಿಯ ತಿಮ್ಮಪ್ಪಯ್ಯ (ಅಧ್ಯಕ್ಷರು), ಶ್ರೀ ಎಂ. ವಿ ಪ್ರಭು ಮತ್ತು ಕೆ. ಎಸ್. ಅಡಿಗ (ಉಪಾಧ್ಯಕ್ಷರು), ಶ್ರೀ. ಎಸ್. ಪಿ ಭಟ್ಟ (ಕಾರ್ಯದರ್ಶಿ), ಶ್ರೀಗಳಾದ ತಲ್ಚೇರಿಕರ್, ವಾಮನಭಟ್ಟ, ಶಂಕರಭಟ್ಟ, ಕಿಂಞಣ್ಣ ರೈ ಎಸ್. ಆರ್. ಪ್ರಭು ಮೊದಲಾದವರಿಂದ ಕೂಡಿದ ಕಾರ್ಯಕಾರೀ ಸಮಿತಿ ರಚಿತವಾಗಿದೆ.

ಮಂಗಳೂರು ಮುನಿಸಿಪಲ್ ಕೌನ್ಸಿಲ್

ತಾ. ೨೧ರಂದು ಸ್ಥಳೀಯ ಮುನ್ಸಿಪಲ್ ಆಫೀಸಿನಲ್ಲಿ ಕೌನ್ಸಿಲಿನ ಸಭೆ ಚೇರ್ಮೇನ್ ಜ|| ಹಾಜಿ ಅಬ್ದುಲ್ಲಾ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ವೈಸ್ ಚೇರ್ಮೇನರ ಸ್ಥಾನಕ್ಕೆ ಶ್ರೀ ಸಿ. ಎಲ್. ಲೋಬೋ ಅವರೂ, ಶ್ರೀ ಎಂ. ಮುಕುಂದ ಪ್ರಭುಗಳೂ ಉಮೇದುವಾರರಾಗಿದ್ದರು. ಮತ ತೆಗೆಯಲಾಗಿ ಶ್ರೀ ಲೋಬರಿಗೆ ೧೬, ಶ್ರೀ. ಪ್ರಭುಗಳಿಗೆ ೮ ಓಟುಗಳು ದೊರೆತು ಮೊದಲಿನವರು ವೈಸ್ ಚೇರ್ಮೇನರಾದರು. ಆ ನಂತರ ಟೌನ್ ಪ್ಲಾನಿಂಗ್ ಕಮಿಟಿಗೆ, ಚೇರ್ಮೇನರು ಸಹಿತ ಶ್ರೀಗಳಾದ ಎಂ. ಎಸ್. ಶ್ರೀನಿವಾಸ ಪೈ ರಂಗನಾಥ ಪೂಂಜ, ಜಿ. ದತ್ತಾತ್ರೆಯರಾವ್, ಎ. ಶಂಕರ ಆಳ್ವ, ಯು ಅಹ್ಮದ್ ಹುಸೇನ್ ಸಾಹೇಬ್, ಅವರೂ ಕೆರಿಗೆ ಅಪೀಲ್ ಕಮಿಟಿಗೆ ವೈಸ್ ಚೇರ್ಮೇನರ ಸಹಿತ, ಶ್ರೀಗಳಾದ ಎಸ್ ಎಫ್. ನರೋನ, ಎಂ. ರಾಮಪ್ಪ, ಜಿ. ಗಂಗಾಧರದಾಸ್, ಎಚ್ ಭೀಮರಾವ್, ಪಿ ಶ್ಯಾಮರಾವ್, ಜೆ. ಎಸ್ ಸುವರ್ಣ, ಎಂ. ರಾಮಚಂದ್ರ ಪೈ, ಪಿ ಜೆ ಫುರ್ಟಾಡೋ ಮತ್ತು ಶ್ರೀಮತಿ ಎಮಿ ಅರಾಘಾ ಅವರೂ, ಕಂಟ್ರಾಕ್ಟ ಕಮಿಟಿಗೆ ಶ್ರೀ. ಜೋನ್ ಗೋನ್ಸಾಲ್ವಿಸ್ ಅವರೂ, ಎಕ್ಸೈಜ್ ಲ್ಯಾಸೆನ್ಸಿಂಗ್ ಬೋರ್ಡಿಗೆ ಈ ಸಂಸ್ಥೆಯ ಪ್ರತಿನಿಧಿಗಳಾಗಿ ಶ್ರೀಮತಿ ಎಮಿ ಅರಾಘಾ. ಯು ಹಮ್ಮಬ್ಬ ಅವರೂ ಚುನಾಯಿಸಲ್ಪಟ್ಟರು. ನೇಮಕದ ಕಮಿಟಿಯ ಒಬ್ಬ ಸದಸ್ಯರ ಸ್ಥಾನಕ್ಕೆ ಶ್ರೀಗಳಾದ ಜಿ ದತ್ತಾತ್ರೆಯರಾವ್, ಜೆ ಡಿ. ಲೋಬೋ ಅವರಿಬ್ಬರ ಹೆಸರು ಸೂಚಿಸಲ್ಪಟ್ಟು ಓಟು ತೆಗೆಯಲಾಗಿ ರಾಯರಿಗೆ ೧೬ ಓಟು ಲೋಬರಿಗೆ ೧೦ ಓಟು ದೊರಕಿ ರಾಯರೇ ಚುನಾಯಿಸಲ್ಪಟ್ಟರು

ಉಡುಪಿ

ದೇವಾಡಿಗರ ಮುಷ್ಕರ

ಶ್ರೀ ಕೃಷ್ಣ ದೇವಸ್ಥಾನದ ನೌಕರರಾದ ದೇವಾಡಿಗ ಬಂಧುಗಳು ತಮಗೆ ಕೊಡುವ ಪಡಿಯಕ್ಕಿ ದರವನ್ನು ಸೇರು ಒಂದರ ನಾಲ್ಕು ದುಡ್ಡು ಇದ್ದುದನ್ನು ಈಗಣ ಬಜಾರು ಧಾರಣೆಗನುಸಾರವಾಗಿ ಏರಿಸಬೇಕೆಂದು ಪರ್ಯಾಯ ಮಠದ ಸ್ವಾಮಿಗಳನ್ನು ಕೇಳಿಕೊಂಡಾಗ ಸ್ವಾಮಿಗಳವರು ಉದಾಸೀನ್ಯತೆಯನ್ನು ಪ್ರದರ್ಶಿಸಲಾಗಿ ದೇವಾಡಿಗ ಬಂಧುಗಳು ತಾ ೧೮ನೇ ಸೋಮವಾರ ಮುಷ್ಕರಕ್ಕಾರಂಭಿಸಿದರು ಪೂರ್ವಾಹ್ನದ ಪೂಜೆಗಳೆಲ್ಲಾ ವಾದ್ಯ ಘೋಷಗಳಿಲ್ಲದನೇ ನಡೆದುವು ದೇವಾಡಿಗರ ಕೇಳಿಕೆಯು ನ್ಯಾಯ ಸಮ್ಮತವಾದುದೆಂದು ಇತರ ಮಠಾಧಿಪತಿಗಳು ಸದಭಿಪ್ರಾಯ ವನ್ನಿತ್ತರು ಪರ್ಯಾಯ ಸ್ವಾಮಿಗಳು ಪಡಿಯಕ್ಕಿ ಸೇರು ೧ರ ಹತ್ತು ಕಾಸಿನಂತೆ ಕೊಡಲೊಪ್ಪಿದರು ಮುಷ್ಕರವು ನಿಂತಿತು.

ದ ಕ ಜಿಲ್ಲಾ ಸ್ಕೌಟ್ ಸಮ್ಮೇಳನ

ದ ಕ ಜಿಲ್ಲಾ ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನಿನ ನೇತೃತ್ವದಲ್ಲಿ ಜಿಲ್ಲೆಯ ಪ್ರಥಮ ಸ್ಕೌಟ್ ಸಮ್ಮೇಳನವು ಇನ್ನಂಜೆ ಶ್ರೀ ವಿಷ್ಣುಮೂರ್ತಿ ಸ್ವಾಮಿ ಹಾ ಎ ಶಾಲಾ ವಠಾರದಲ್ಲಿ ಜರಗಿತು ಜಿಲ್ಲಾ ಎಜ್ಯುಕೇಶನಲ್ ಆಫೀಸರ್ ಶ್ರೀ ಎ ವೆಂಕಟ ಸುಬ್ಬರಾಯರು ಇದರ ಅಧ್ಯಕ್ಷರಾಗಿದ್ದರು ಡಾ ಎಮ್ ಕೇಶವಪೈಗಳು ಸಮಾರಂಭದ ಉದ್ಘಾಟನೆ ನೆರವೇರಿಸಿದರು ಶ್ರೀ ಸೋದೆ ಮಠದ ಶ್ರೀ ವಿಶ್ವೇಂದ್ರ ತೀರ್ಥ ಸ್ವಾಮಿಗಳವರೂ ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಸ್ವಾಮಿಗಳವರೂ ಹಾಜರಿದ್ದರು

ಏಳುನೂರು ಮಂದಿ ಸ್ಕೌಟ್ಸರು (೧೦೦ ಮಂದಿ ಗರ್ಲ್ ಗೈಡ್ಸ್) ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಆಗಮಿಸಿದ್ದು ಸ್ಕೌಟ್ ಧ್ವಜವಂದನೆಯಗಳನ್ನು ಮಾಡಿ ವಿವಿಧ ಸ್ಕೌಟ್ ಚಟುವಟಿಕೆನ್ನು ಪ್ರದರ್ಶಿಸಿದರು

ಮರುದಿನ ಪೂರ್ವಾಹ್ನ ಜಿಲ್ಲಾ ಸ್ಕೌಟ್ ಕಮಿಶನರ್ ಶ್ರೀ ಎಂ. ಎಸ್ ಮಾಧವರಾಯರ ಅಧ್ಯಕ್ಷತೆಯಲ್ಲಿ, ಸ್ಕೌಟ್ಸರ ಪರಿಷತ್ತು ಜರಗಿ ಜಿಲ್ಲೆಗೆ ಸಂಬಂಧಿಸಿದ ಸ್ಕೌಟ್ ವಿಷಯಗಳು ಪರಿಶೀಲಿಸಲ್ಪಟ್ಟುವು

ದ. ಕ. ಜಿಲ್ಲಾ ಹಿಂದೂ ಸ್ಕೂಲ್ಸ್ ಫೆಡರೇಶನ್

ದ. ಕ. ಜಿಲ್ಲೆಯ ಹಿಂದೂ ಎಯಿಡೆಡ್ ಶಾಲಾ ಮೆನೇಜರರ ಪ್ರಥಮ ಪರಿಷತ್ತು ಇನ್ನಂಜೆ ಶಾಲೆಯಲ್ಲಿ ಡಾ| ಎಂ. ಕೇಶವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಎಸ್. ಮಾಧವರಾಯರು ಪರಿಷತ್ತನ್ನು ಕರೆದುದರ ಉದ್ದೇಶವನ್ನು ಹೇಳಿ ಖಾಸಗಿ ಹಿಂದೂ ಶಾಲೆಗಳ ಈಗಿನ ಕರುಣಾಜನಕ ವಿಷಮ ಪರಿಸ್ಥಿತಿಯನ್ನು ವಿವರಿಸಿ ಫೆಡರೇಶನ್ ಸ್ಥಾಪನೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ರೀತಿಯಾಗಿ ಹೇಳಿದರು. 'ಕ್ರೈಸ್ತ ಮಿಶನ್ ಸಂಸ್ಥೆಗಳಿಗೊಳಪಟ್ಟ ಖಾಸಗಿ ಶಾಗಲೆಳು ಚೆಲೋ ರೀತಿಯಲ್ಲಿ ಮುಂದರಿಯುತ್ತಿವೆ. ಧಾರ್ಮಿಕ ಶಿಕ್ಷಣವು ಚೆನ್ನಾಗಿ ಕೊಡಲ್ಪಡುವುದು. ಹಿಂದೂ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣ ವ್ಯವಸ್ಥೆಯಿಲ್ಲ, ಪರಸ್ಪರ ಒಕ್ಕಟ್ಟು ಇರುವುದಿಲ್ಲ. ಆದುದರಿಂದಲೇ ಕ್ರೈಸ್ತ ಮಿಶನ್ನಿಗೆ ಒಳಪಡದ ಖಾಸಗಿ ಹಿಂದೂ ಶಾಲೆಗಳಿಗೆ ಕ್ರೈಸ್ತ ಮಾದರಿಯು ಇಡೀ ಜಿಲ್ಲೆಗೆ ಅನ್ವಯಿಸುವ ಫೆಡರೇಶನ್ ಅತ್ಯಗತ್ಯ ಈ ಫೆಡರೇಶನ್ ಕ್ರೈಸ್ತ ಮಿಶನಿನ ಎದುರಂಗಡಿಯೆಂದು ಯಾರೂ ಭಾವಿಸಕೂಡದು ಈ ಯೋಜನೆಗೆ ಧರ್ಮಾಧಿಕಾರಿಗಳು ಮುಖ್ಯವಾಗಿ ಉಡುಪಿ ಸ್ವಾಮಿಗಳವರು ಸಂಪೂರ್ಣ ಬೆಂಬಲವಿತ್ತು ಮಠ ಸಂಸ್ಥಾನಕ್ಕೆ ಆಸ್ತಿಪಾಸ್ತಿಗಳಿರುವ ಗ್ರಾಮ ಕೇಂದ್ರಗಳಲ್ಲಿಯ ಶಾಲೆಗಳನ್ನು ಜೀರ್ಣೋದ್ಧಾರ ಮಾಡಿ ಧಾರ್ಮಿಕ ಶಿಕ್ಷಣ ಪ್ರಚಾರ ಮಾಡಬೇಕಾಗಿದೆ' ಎಂದರು. ದ. ಕ. ಜಿಲ್ಲಾ ಸ್ಕೂಲ್ಸ್ ಫೆಡರೇಶನ್ ಸ್ಥಾಪನೆಯಾಗಬೇಕೆಂದು ಒಮ್ಮತದ ನಿರ್ಧಾರವಾಯಿತು.

ನೀಲೇಶ್ವರ—ಮುಷ್ಕರ

ಸ್ಥಳೀಯ ಕೇರಳ ಬೈನಾಕ್ಷೀವರ್ಕ್ಸಿನ ಕಂಪೆನಿಗೆ ಸೇರಲ್ಪಟ್ಟ ಮಜೂರರು ತಾ. ೧೯ರಂದು ಮುಷ್ಕರ ಹೂಡಿದರು. (೧) ಕುಟ್ಟಭತ್ತ ಕೊಡಬೇಕು (೨) ವಾರಕೊಮ್ಮೆ ಕೂಲಿ ಕೊಡಬೇಕು (೩) ೫೦| ಕೂಲಿ ಹೆಚ್ಚಿಸಬೇಕು (೪) ಸೇರಿಗೆ ೦ ೪-೩ ಪೈಯಂತೆ ಕಂಪೆನಿಯವರೇ ಮಾರುತ್ತಿರುವ ಅಕ್ಕಿಯ ಬದಲು ಪೇಟೆಯಿಂದ ಅಕ್ಕಿ ಪಡೆಯಲು ಹಕ್ಕಿರಬೇಕು—ಎಂಬುದು ಕೇಳಿಕೆಗಳಾಗಿದ್ದುವು. ೧ನೆ ಮತ್ತು ೨ನೇ ಕೇಳಿಕೆಗಳಿಗೆ ಉತ್ತರವನ್ನು ಹೆಡ್ ಆಫೀಸಿನಿಂದ ಒಂದು ವಾರದೊಳಗೆ ತರಿಸುವುದಾಗಿಯೂ ೩ ಮತ್ತು ೪ನೆಯವುಗಳಿಗೆ ತಮ್ಮ ಸಮ್ಮತಿ ಇದೆಯೆಂದು ವರ್ಕ್ಸಿನ ಮೆನೇಜರು ಹೇಳಿದುದರಿಂದ ಮರುದಿನ ಸಂಜೆ ಮುಷ್ಕರ ಮುಕ್ತಾಯವಾಯಿತು

ಕಾರ್ಕಳ

ನಿಧನ

ಸ್ಥಳೀಯ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಪಿ. ನರಸಿಂಹ ವೆಂಕಟೇಶ ಶೆಣೈಯವರು ಇದೇ ತಾ 22ರ ದಿನ ಅಕಾಲ ನಿಧನವನ್ನು ಹೊಂದಿದರು. ಆ ಸಂಬಂಧ ಹಲವು ಸಂತಾಪಸೂಚಕ ಸಭೆಗಳಾಗಿ, ಅವರ ಸ್ಮಾರಕವನ್ನೇರ್ಪಡಿಸಲಿಕ್ಕೆ ಸಮಿತಿಯಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ

ಅಲೆಗೆ ಶಿಕ್ಷೆ

ಕಾಸರಗೋಡು ತಾಲುಕು ಮುಗು ಗ್ರಾಮದ ಮೊಯಿದಿನ್ ಕುಟ್ಟಿ ಎಂಬವನು ಕಳೆದ ತಾ ೧ ೪-೪೨ ರಾತ್ರಿ ಗದ್ದೆಗೆ ನೀರು ಕೊಂಡುಹೋಗುವ ವಿಷಯ ಜಗಳವಾಗಿ ಅದೇ ಗ್ರಾಮದ ಮಮ್ಮದೆ ಎಂಬವನನ್ನು ತಿವಿದು ಕೊಂದ ಆರೋಪಣೆಯ ಮೇಲೆ ಆತನಿಗೆ ಮಂಗಳೂರು ಸೆಶನ್ ಜಡ್ಜರಾದ ಸಿ. ಸಿ ಓ ಅಲಿಪಿ ಸಾಹೇಬ್ ಬಹದ್ದೂರರು ಇ. ಪಿ. ಕೋಡಿನ ೩೦೪ನೇ ಕಲಂ ಪ್ರಕಾರ ೫ ವರ್ಷದ ಕಠಿಣ ಶಿಕ್ಷೆಯನ್ನು ವಿಧಿಸಿದರು. ಅಲ್ಲದೆ ಪೋಕರೆ ಎಂಬವನಿಗೆ ಜಖಂಪಡಿಸಿದ ಆರೋಪದ ಮೇಲೆ ೩ ವರ್ಷ ಶಿಕ್ಷೆಯನ್ನೂ ವಿಧಿಸಿದರು ಉಳಿದ ೩ ಜನ ಆಲೆಯು ಬಿಡಲ್ಪಟ್ಟರು.

ಕುಂದಾಪುರ

ಸಂತೆಲೂಟಿ

ಕಳೆದ ವಾರದ ಕುಂದಾಪುರ ಸಂತೆಯಲ್ಲಿ ಲೂಟಿ ನಡೆಯಿತು ಎಂಬ ನಂಬಲರ್ಹವಾದ ಸುದ್ದಿ ಬಂದಿದೆ.

ಬಾರಕೂರು

ಇಲ್ಲಿ ನೀಳಾವರ ಶ್ರೀ ಶ್ರೀನಿವಾಸ ಕಲ್ಕೂರರಿಂದ ನಡೆಯಿಸಲ್ಪಡುತ್ತಿರುವ ಶ್ರೀ ಭಾರತೀ ಸಂಗೀತ ಶಾಲೆಯ ಚತುರ್ಥ ವಾರ್ಷಿಕೋತ್ಸವವು ತಾ. 19ರಂದು ಸಂಜೆ ಭಂಡಾರಕೇರಿ ಶ್ರೀ ಮಠದ ಶ್ರೀ ಮತ್ಪರಮಹಂಸೇತ್ಯಾದಿ ಬಿರುದಾಂಕಿತರಾದ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀ ಪಾದಂಗಳವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು.

ಮಣಿಪಾಲ

ಎಕಡಮಿ ಜನರಲ್ ಎಜ್ಯುಕೇಶನ ಇದರ ಸುಪ್ರೀಮ್ ಗವರ್ನಿಂಗ್ ಬೋಡಿಯ ಸಭೆ ಉಡುಪಿಯಲ್ಲಿ ಕೆನರಾ ಮ್ಯುಚ್ಯುವಲ್ ಕಟ್ಟಡದಲ್ಲಿ ಸೇರಿ ಆಡಳಿತ ಕಮಿಟಿಗೆ ಕೆಳಗಿನವರನ್ನು ಸದಸ್ಯರನ್ನಾಗಿ ಆರಿಸಿತು, ಶ್ರೀಗಳಾದ ಬಿ ಎಲ್. ಎನ್. ರೈ, (ಅಧ್ಯಕ್ಷ) ಎ. ಎಲ್. ನಾರಾಯಣರಾವ್, (ಉಪಾಧ್ಯಕ್ಷ) ಡಾ. ಟಿ. ಎಂ. ಎ. ಪೈ. (ರಿಜಿಸ್ಟ್ರಾರ್) ಕೆ. ಶ್ರೀನಿವಾಸ ಪೈ, (ಮೆನೇಜರ್) ಕೆ. ಗುರುರಾಜರಾವ್, ಆರ್. ಫೆರ್ನಾಂಡಿಸ್, ಯು. ವೆಂಕಟ್ರಾವ್, ಯು. ಪುಂಡಲೀಕ ಶೆಣೈ, ಮತ್ತು ಕೊರಡ್ಕಲ್ ಶ್ರೀನಿವಾಸರಾವ್.

ಡಿಯೋಸಿಸನ್ ಸೊಸೈಟಿಗಳ ಜನರಲ್ ರೇಲಿ—ಮಂಗಳೂರು

ಇದು ತಾ 25ರಂದು ಸಂಜೆ ಮಿಲಾಗ್ರಿಸ್ ಶಾಲಾ ವಠಾರದಲ್ಲಿ ಮಂಗಳೂರು ಬಿಷಪರ ಅಧ್ಯಕ್ಷತೆಯಲ್ಲಿ ಸೇರಿತು

ಸಾದರ-ಸ್ವೀಕಾರ

ಆಧುನಿಕ ರಶ್ಯಾ—ಗ್ರಂಥಕರ್ತ. ಪಿ. ಆರ್ ರಾಮಯ್ಯ, ಸಂಪಾದಕ ತಾಯಿನಾಡು ಮತ್ತು ಡೈಲಿ ನ್ಯೂಸ್ ಪುಟಗಳು ಕ್ರೌನ್ ೧/೮ ಆಕಾರದ ೨೫೬. ಭೂಪಟ ಮತ್ತು ಚಿತ್ರ ಸಹಿತ ವಿದೆ ಬೆಲೆ ೧—೮—೦ ಪ್ರಕಾಶಕರು ತಾಯಿನಾಡು ಪ್ರಕಟನಾಲಯ, ಬೆಂಗಳೂರು ನಗರ—ವಿಮರ್ಶೆಯಭಾವಕಾಶ

NOTICE

In the Court of the District Munsif of Mangalore

Original Suit No 476/1942.

Between -

M Ambu Bai, widow of M. Shiva Rao, residing at Kodialbail in Mangalore Town

Plaintiff

and

1 M Subhadra Devi, wife of Pachappa Shetty residing in Manjeshwar Town of Kasaragod Taluk, 2 Aithappa son of Pakira Naik, snuff merchant, who last resided at Chudvegalli in Mangalore Town ..

Defendants

To

The Defendants named above

Please take notice that the plaintiff named above has filed the above suit against you for recovery of Rs 2344-9-8 etc, being the whole of the principal and interest thereon at 10% p a from 27-9-1937 onwards due to her under the registered simple mortgage-deed dated 26-9-1932 for Rs. 1550 0-0, principal, executed by the 2nd amongst you in her favour

The said suit will come up for hearing in the above Court on 10-2-1943 at 11 A. M., when you may appear in person or by pleader and oppose the same otherwise, it will be heard and decided in your absence.

(By Order)

Mangalore, 26-1-1943 — **M. Vasudeva Rao**, Vakil for Plaintiff.

[illegible]

ಭಾರತಕ್ಕೆ ಅಮೆರಿಕ ಮಾಡುವ ಅನ್ಯಾಯ!

—[illegible]—

[illegible] ಚಿತ್ರಿಸುತ್ತಾರೆ.

ಆದರೆ ಈ ಅನ್ಯಾಯ ನಮ್ಮ ಭಾರತಕ್ಕೆ ಆಗಿರುವಷ್ಟು ಇತರರಿಗಾಗಿಲ್ಲ. ಇಂಡಿಯಾ ಸ್ಪೀಕ್ಸ್ 'ಲೈವ್ಸ್ ಒಫ್ ಬೆಂಗಾಲ್ ಲಾನ್ಸರ್', 'ಕ್ಲೈವ್ ಒಫ್ ಇಂಡಿಯಾ' 'ಮೇವಲ್ಲಿ ಮಿಂಕಲ್', 'ಗಂಗಾದೀನ್' ಅಥವಾ ಜಂಗಲ್ ಬುಕ್' ಇವೆಲ್ಲವನ್ನು ನೋಡಿದರೂ ಇಲ್ಲಿ ಬರುವ ಬಿಳಿಯರು ಸಾತ್ವಿಕರು, ಶುದ್ಧ ಹೃದಯರು ಹಸನ್ಮುಖಿಗಳು ದೇಶೀಯರೆಲ್ಲಾ ಗಂಟುಮೋರೆಯ ಕುತಂತ್ರ ಕೊಲೆಪಾತಕಿಗಳಾದಮೂಢರು, ಕುತ್ಸಿತರು. ಆದರಲ್ಲಿಯೂ ಕೆಲವರು ವಿಶ್ವಾಸಿಕರಿದ್ದರೆ ಅವರು ಬಿಳಿಯರ ಬಾಲಹಿಡಿದು ನೇತಾಡುವವರು, ನಾಯಿಯಂಥಾ ಸ್ವಾಮಿ ಭಕ್ತರು. ಇಂಥಾ ಪಾತ್ರಗಳನ್ನು ತೋರಿಸುವ ಉದ್ದೇಶ ಮಕ್ಕಳು ಇವನನ್ನು ಅನುಸರಿಸಲೆಂದು, ಸ್ವಾತಂತ್ರ್ಯಕ್ಕಾಗಿ ಹೋರಾಡುವ ಭಾರತೀಯರು ಇಂಥಾದ್ದನ್ನು ದ್ವೇಷಿಸುವರು, ಇಂಥಾದ್ದನ್ನು ನೋಡಿ ನಮ್ಮ ರಕ್ತ ಕುದಿಯುತ್ತದೆ. ಅಮೆರಿಕನರೇ ನೀವು ಸ್ವಾತಂತ್ರ್ಯದ ಯುದ್ಧ ಹೂಡಿದಾಗ, ಬ್ರಿಟಿಸರು ಅಮೆರಿಕನರನ್ನು ತಮ್ಮ ನಾಟಕಗಳಲ್ಲಿ ದ್ರೋಹಿಗಳಾಗಿ, ಕಾರ್ಕೋಟಕರಾಗಿ, ಕೊಲೆಪಾತಕಿಗಳಾಗಿ ಚಿತ್ರಿಸಿದ್ದರೆ ನಿಮಗೆ ಹೇಗೆನಿಸುತ್ತಿತ್ತು?.

ಸಾಬು ಅಮೆರಿಕದಲ್ಲಿ ಭಾರತದ ಜಾಹಿರಾತು. ಬ್ರಿಟಿಷ್ ಸ್ವಾಮಿಭಕ್ತ ಅರಸನಾಗಿ, ಇ. ಡಬ್ಲ್ಯು. ಮೇಸನ್ ಬರೆದ ಕಥೆಯಲ್ಲಿ ಅಭಿನಯಿಸಿದ, ಉಳಿದ ಭಾರತೀಯರೆಲ್ಲಾ ರಾಜದ್ರೋಹಿಗಳು. ಈ ಸ್ವಾಮಿನಿಷ್ಠನಾದರೂ ಸದ್ಗುಣ ಕಲಿತದ್ದು ಬ್ರಿಟಿಷರಿಂದ, ಹೀಗೆ ನಟಿಸಿ ಮೆಚ್ಚು ಬಾಲವನ್ನಾಡಿಸಿದ ನಾಯಿಯನ್ನು ಮೆಚ್ಚದವರಾರು?

ಹಾಲಿವುಡ್ಡಿನಲ್ಲಿ 'ಎಲ್ಲರಿಗೂ ಸಂಗೀತ ಬೇಕು' ಎನ್ನುವುದರಲ್ಲಿ ಗಾಂಧಿಜಿ ಕೀಲು ಸೆಲೂನು ಹುಡುಗಿಯೊಡನೆ ಕುಣಿಯುವಂತೆ ಚಿತ್ರಿಸಿದೆ. ಭಾರತದಲ್ಲಿ ಗಾಂಧಿಜಿ ಎಂದರೆ ಏಸುವಿನ ಅವತಾರ! ರೂಸ್‌ವೆಲ್ಟರನ್ನೂ ಮೀರಿಸಿದ ರಾಜಕಾರಣಿ! ಇದೆಂಥಾ ಅನ್ಯಾಯ ಭಾರತಕ್ಕೆ ಹಾಲಿವುಡ್ಡಿನಲ್ಲಿ!

ಮೋದಿಯವರ "ಪೃಥ್ವೀವಲ್ಲಭ"

ಮಿನರ್ವಾ ಮೂವಿಟೋನಿನ ಸೊಹ್ರಾಬ್ ಮೋದಿಯವರು ಮಹಾ ಮಹಾ ಚಲಚ್ಚಿತ್ರಗಳನ್ನು ನಿರ್ಮಾಣ ಮಾಡುವ ಸಾಹಸಿಗರು. ಲಕ್ಷಾಂತರ ರೂಪಾಯಿ ವ್ಯಯಿಸಿ 'ಸಿಕಂದರ್' ನಿರ್ಮಿಸಿದರು. ಈಗ 'ಪೃಥ್ವೀ ವಲ್ಲಭ'ವೆಂಬ ಪೌರಾಣಿಕ ಕಥಾನಕಚಿತ್ರವೊಂದನ್ನು ನಿರ್ಮಿಸುತ್ತಿದ್ದಾರೆ. ಇದು ಮುಂಜರಾಜನ ಕಾಲದ ಕಥೆಯನ್ನು ಅಧರಿಸಿಕೊಂಡಿದೆ. ಇದರ ಪಾತ್ರವರ್ಗದಲ್ಲಿ ಸೊಹ್ರಾಬ್ ಮೋದಿ, ಪೃಥ್ವಿರಾಜ್, ಸಜ್ಜನ್, [illegible], ಕಾದಿರ್ ಅಲಿ, ನವೀನಯಾಜ್ಞಿಕ್, ಕೌಸಲ್ಯಾ, ಸಂಕಥಾ ಪ್ರಸಾದ, ದುರ್ಗಾ ಖೋಟೆ, ಅಲ್‌ನಾಸೀರ್ ಹಾಗೂ ಕೆ. ಎನ್. ಸಿಂಘ್ ಮೊದಲಾದವರು ನಟಿಸುತ್ತಾರೆ. 'ಸಿಕಂದರ್' ಚಿತ್ರವನ್ನು ಮೀರಿಸುವ ಸಾಹಸ ಇದಾಗಿದೆಯೆಂದು [illegible]ಬರುತ್ತದೆ.

ಬಾಬುರಾವ್ ಪಟೇಲ್ ಕಂಪೆನಿ

ಒಂದು ಆರಂಭವಾಗಲಿದೆಯೆಂದು ಸುದ್ದಿ. [illegible] ಸಿನೆಮಾ [illegible] ಸಂಪಾದಕರು ಸ್ವತಃ ಚಲಚ್ಚಿತ್ರಗಳನ್ನು ತಯಾರಿಸ ತೊಡಗಿದರೆ ಹೇಗಾಗುತ್ತದೋ ನೋಡಬೇಕು. ಪ್ರಸಿದ್ಧ ಸಿನೆಮಾ ಕಥಾ ಲೇಖಕ ದಿವಾನ್ ಶೇರಾರ್ ಹೆಸರಲ್ಲಿ ಈ ಹೊಸ ಕಂಪನಿ ಪ್ರಾರಂಭವಾಗುತ್ತಿದ್ದರೂ ಅದರ ಸಂಪೂರ್ಣ ಅಧಿಕಾರ ಬಾಬುರಾವ್ ಪಟೇಲನದಂತೆ. 'ಮಹಾತ್ಮಾ ಕಬೀರ್' ಚಿತ್ರ ಅವರ ಮೊದಲನೆಯ ಸಾಹಸವೆಂದೂ ಹೇಳಲಾಗಿದೆ. ದಿವಾನ್ ಶೇರಾರ್ ಇದರ ಲೇಖಕನಾಗಿ ಸುಶೀಲಾರಾಣಿ ಮತ್ತು ಕುಮಾರ್ ಇವರು ಇದರಲ್ಲಿ ನಾಯಿಕಾ ನಾಯಕರಾಗಿ ಅಭಿನಯಿಸಲಿರುವರೆಂದೂ ಗೊತ್ತಾಗಿರುವುದು.

ಚುನಿಲಾಲ್ ಕಂಪನಿ

ಬೊಂಬಯಿ ಟಾಕೀಸು ಬಿಟ್ಟು ಕೈಬಿಟ್ಟ ರಾಯ್ ಬಹದ್ದೂರ್ ಚುನಿಲಾಲ್ ಮತ್ತು ಎಸ್. ಮುಖರ್ಜಿಯವರು ಬರುವ ತಿಂಗಳಲ್ಲಿಯೇ ತಮ್ಮ ಹೊಸ ಚಿತ್ರ ಸಂಸ್ಥೆಯನ್ನು ನಿರ್ಮಿಸುವರೆಂದು ಸುದ್ದಿಯಿದೆ. ಮುಂಬಯಿಯ ಧನವಂತರೊಬ್ಬರು ಇವರಿಗೆ ಧನಸಹಾಯ ಮಾಡಲು ಒಪ್ಪಿರುವರಂತೆ. ಚುನಿಲಾಲರು ಬೊಂಬಯಿ ಟಾಕೀಸನ್ನು ಬಿಡುವಾಗ ಅವರ ಪಾಲುಗಳ ಬಗ್ಗೆ ದೊರಕಿದ ಮೌಲ್ಯ ೭ ಲಕ್ಷ ೯೦ ಸಾವಿರ ರೂಪಾಯಿಗಳು. ಈ ಸಂಸ್ಥೆಯ ಮೊದಲ ಚಿತ್ರವು ಬೇಗನೇ ಅಶೋಕ ಕುಮಾರ್ ಮತ್ತು ಚಂದ್ರಪ್ರಭಾ, ಇವರ ನಟನೆಯಿಂದ ನಿರ್ಮಾಣವಾಗಲಿದೆಯೆಂದೂ ಹೇಳಲಾಗಿದೆ.

ನ್ಯೂಥೀಟರ್ಸ್ ಬಿಟ್ಟು

ನಿತಿನ್ ಬೋಸರು, ಲಕ್ಷ್ಮೀ ಪಿಕ್ಚರ್ಸನ್ನು ಸೇರುವರೆಂದು ಪ್ರಸಿದ್ಧವಾಗಿತ್ತಷ್ಟೆ? ಈಗ ಅವರು ಬೊಂಬಯಿಯ ಎನ್. ಬಿ. ಪ್ರೊಡಕ್ಷನ್ನು ಸೇರಿ ನಿರ್ದೇಶಕರಾಗುವರೆಂದು ತಿಳಿದುಬಂದಿದೆ. 'ಕಾಶಿನಾಥ' ಇವರ ನ್ಯೂಥಿಯೇಟರ್ಸಿನ ಕೊನೆಯ ಚಿತ್ರ.

ಉದಯಶಂಕರ್ ಪ್ರಭಾತದಲ್ಲಿ

ಒಂದು ನಾಟ್ಯಚಿತ್ರವನ್ನು ತಯಾರಿಸುವ ಒಪ್ಪಂದ ಮಾಡಿಕೊಂಡಿರುವನೆಂದು ತಿಳಿದು ಬರುತ್ತದೆ. ಅಖಿಲ ಜಗತ್ತಿನಲ್ಲಿ ಇದರ ಪ್ರದರ್ಶನವಾಗಲಿದೆ. ಇದಕ್ಕೆ ಆಂಗ್ಲ ನಾಮಕರಣವೂ ಮಾಡಲ್ಪಡುವುದು.

ದೇವಿಕಾರಾಣಿ ಜಾನ್ಸಿ ರಾಣಿಯಾಗಿ

ಅಭಿನಯಿಸುತ್ತಾಳೆಂದೂ, ಬೇಗನೇ ಬೊಂಬಯಿ ಟಾಕೀಸಿನವರು ಭಾರತದ ಈ ಮಹಾ ರಾಣಿಯ ಜೀವನವನ್ನು ಚಿತ್ರಿಸುವ ಚಲಚ್ಚಿತ್ರವೊಂದನ್ನು ನಿರ್ಮಿಸುವರೆಂದೂ ತಿಳಿಯುತ್ತದೆ.

"ತಮಿಳು ಸಾವಿತ್ರಿ"

ಈ ಚಿತ್ರವು ಮಂಗಳೂರು ಸೆಂಟ್ರಲ್ ಟಾಕೀಸಿನಲ್ಲೀಗ ಪ್ರದರ್ಶಿಸಲ್ಪಡುತ್ತದೆ. ಶಾಂತಾ ಆಪ್ಟೆ ಸುಬ್ಬುಲಕ್ಷ್ಮಿಯರ ದಿವ್ಯ ಗಾಯನಗಳನ್ನು ಇದರಲ್ಲಿ ಕೇಳಬಹುದು. ದಕ್ಷಿಣ ಭಾರತದಲ್ಲಿ ಇದು ಪ್ರಖ್ಯಾತವಾದ ಒಂದು ಚಿತ್ರ.

ಮಂಗಳೂರಿಗೆ ಬಂಗಾಳೀ ಚಿತ್ರಗಳು

ತರಲಿವೆಯೆಂದೂ, ಬಾಲಾಜಿ ಟಾಕೀಸಿನವರು ಈ ಸಾಹಸ ಕೈಕೊಂಡಿರುವರೆಂದೂ ನಾವು ಕೇಳುತ್ತೇವೆ. 'ಮರಾಠಿ' 'ತಮಿಳು' 'ತೆಲುಗು' ಭಾಷೆಯ ಎಂಥೆಂಥಾ ಚಿತ್ರಗಳನ್ನೋ ತರುವದಕ್ಕಿಂತ ಈ ಸಾಹಸ ಮಾಡುವುದು ಎಷ್ಟೋ ಪಾಲಿಗೆ ಮೇಲು. ಪಂಜಾಬಿ ಚಿತ್ರಗಳನ್ನೂ ಬಾಲಾಜಿಯವರು ತರಿಸುತ್ತಾರೆಂದೂ ಸುದ್ದಿಯುಂಟು.

ಜಿಲ್ಲಾ ಮಹಾಜನರೇ

ಆಹಾರ ಸಂಕಷ್ಟ ನಿವಾರಣಾ ಸಮಿತಿ, ಮಂಗಳೂರು.

ಮಹಾಜನರಲ್ಲಿ ವಿಜ್ಞಾಪನೆ.

ದಕ್ಷಿಣ ಕನ್ನಡದ ಜನರೆಲ್ಲರ ಮುಖ್ಯ ಆಹಾರವಾಗಿರುವ ಅಕ್ಕಿಯ ಕ್ರಯ ಏರುತ್ತಲೇ ಇದೆ. ಕನಿಷ್ಠ ತರದ ಅಕ್ಕಿಗೆ ಕೂಡಾ ರೂ. 10–8–0 ಸೇರಿಗೆ 0–4–0ಗಿಂತ ಕಡಿಮೆಯಲ್ಲಿ ಅಕ್ಕಿ ದೊರೆಯುವುದಿಲ್ಲ. ಇದು ಬಡ ಜನರಿಗೆ ಮಾತ್ರವಲ್ಲ ಮಧ್ಯಮ ವರ್ಗದವರಿಗೆ ಕೂಡಾ ಅಸಾಧ್ಯ ಕ್ರಯವಿದ್ದು ಜನರು ಅತೀವ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಬಡಜನರಲ್ಲಿ ನಿರಾಶೆ ಪ್ರಬಲವಾಗುತ್ತಿದ್ದು ಅಶಾಂತಿಯುಂಟಾಗಬಹುದಾದಂಥ ಪರಿಸ್ಥಿತಿ ಬಂದಿದೆ. ಹಸಿವಿಗೆ ತುತ್ತಾದ ಬಡಜನರಿಗೆ ಶಕ್ತಿಮೀರಿ ಸಹಾಯಮಾಡಿ ಇವರು ಅಶಾಂತಿಯ ದಾರಿಗೆ ಹೋಗದಂತೆ ತಡೆಗಟ್ಟುವುದು ಮಹಾಜನರ ಕರ್ತವ್ಯವಿರುತ್ತದೆ.

ಬಡಜನರಿಗೆ, ಅಂದರೆ ಮಜೂರರು, ಚಿಕ್ಕ ಚಿಕ್ಕ ಕಸಬುದಾರರು ಹಾಗೂ ತಿಂಗಳಿಗೆ ರೂ. 50ಕ್ಕೆ ಮಿಕ್ಕದ ಸಂಬಳದ ನೌಕರರು, ಇಂಥವರಿಗೆಲ್ಲ ಸೇರಿಗೆ ಹೆಚ್ಚೆಂದರೆ 0–3–0ಯಂತೆ ಅಕ್ಕಿ ಒದಗಿಸಲು ಯೋಜನೆ ಮಾಡಲಾಗಿದೆ. ಪ್ರಾಯಸ್ಥರಿಗೆ, ಅಂದರೆ 16 ವರ್ಷ ಅಥವಾ ಅದಕ್ಕೆ ಮೇಲಿನ ಪ್ರಾಯದವರಿಗೆ ದಿನ 1ರ ½ ಸೇರಿನಂತೆಯೂ, ಪ್ಪ್ರಾಯಸ್ಥರಿಗೆ ಅಂದರೆ 5 ವರ್ಷದಿಂದ 15 ವರ್ಷದ ವರೆಗಿನ ಪ್ರಾಯದವರಿಗೆ ದಿನಕ್ಕೆ ¼ ಸೇರಿನಂತೆಯೂ ಅಕ್ಕಿ ಒದಗಿಸುವುದು ಈ ಯೋಜನೆಯ ಏರ್ಪಾಡು.

ಯಾವ ಕೇಂದ್ರದಲ್ಲಿ ಎಷ್ಟು ಕುಟುಂಬಗಳಿಗೆ ಎಷ್ಟು ಅಕ್ಕಿ ಒದಗಿಸಬೇಕಾಗುತ್ತದೆಂದು ಎಣಿಸಬೇಕಾದುದು ಮೊದಲನೆಯ ಕೆಲಸ. ಈ ಬಗ್ಗೆ ಈಗಾಗಲೇ ಕಾರ್ಯಾರಂಭವಾಗಿ ಮಂಗಳೂರಲ್ಲಿ ಜಿಲ್ಲಾ ಕಮಿಟಿಯೂ, ಕುಂದಾಪುರ, ಉಡುಪಿ, ಕಾರ್ಕಳ, ಕಾಸರಗೋಡು ಮತ್ತು ಪುತ್ತೂರುಗಳಲ್ಲಿ ತಾಲೂಕು ಕಮಿಟಿಗಳೂ, ಬೈಂದೂರು, ಶಿರೂರು ಮೊದಲಾದ ಗ್ರಾಮ ಕೇಂದ್ರಗಳಲ್ಲಿ ಸ್ಥಳೀಕ ಕಮಿಟಿಗಳೂ ಏರ್ಪಟ್ಟಿವೆ. ಬೇಕಾದ ಮಾಹಿತಿ ಸಂಗ್ರಹದ ಕಾರ್ಯದಲ್ಲಿ ಅಲ್ಲಲ್ಲಿಯ ಶಾಲಾ ಉಪಾಧ್ಯಾಯರು ತುಂಬಾ ಸಹಾಯ ಮಾಡುವರೆಂದು ನಿರೀಕ್ಷಿಸಲಾಗಿದೆ. ಪ್ರತಿ ಕೇಂದ್ರದಲ್ಲಿ ಸಹಾಯ ಒದಗಿಸಬೇಕಾದ ಕುಟುಂಬಗಳ ಪಟ್ಟಿ, ಪ್ರತಿ ಮನೆಯಲ್ಲಿಯ ಪ್ರಾಯಸ್ಥ ಹಾಗೂ ಅಪ್ರಾಯಸ್ಥರ ಸಂಖ್ಯೆ ಗೊತ್ತಾದರೆ ಆಯಾ ಮನೆಯವರಿಗೆ ಇಂತಿಷ್ಟೆ ಅಕ್ಕಿ ಪಡೆಯಬಹುದೆಂಬುದನ್ನು ಕಾಣಿಸುವ ಕಾರ್ಡುಗಳನ್ನು ಒದಗಿಸಲಾಗುವುದು.

ಅಕ್ಕಿಗಾಗಿ ಬಂದವರು ಬಹಳ ಹೊತ್ತು ಕಾಯಬೇಕಾಗದಂತೆ ವಿಳಂಬವಿಲ್ಲದೆ ಇದನ್ನು ಕೊಡುವ ವ್ಯವಸ್ಥೆ ಮಾಡಬೇಕಾಗಿದೆ. ಜಿಲ್ಲೆಯಲ್ಲಿಯ ಸಹಕಾರಿ ಸ್ಟೋರುಗಳು, ಕೃಷಿಕ ಭಂಡಸಾಲೆ ಸಂಘದ ಸುಮಾರು 49 ಶಾಖೆಗಳು ಹಾಗೂ ಡಿಪೋಗಳು ಯಾವ ಪ್ರತಿಫಲದ ಅಪೇಕ್ಷೆ ಇಲ್ಲದೆ ಈ ಕೆಲಸ ಮಾಡುವವು. ಅಗತ್ಯವಿದ್ದಲ್ಲೆಲ್ಲ ಇತರ ಡಿಪೋಗಳನ್ನು ಅಲ್ಲಲ್ಲಿಯ ಸ್ಥಳೀಕ ಕಮಿಟಿಯವರ ಆಶ್ರಯದಲ್ಲಿ ತೆರೆದು ಇವುಗಳ ಮೂಲಕ ಈ ಕೆಲಸ ಸಾಧಿಸಬಹುದು.

ಯಾವ ಗ್ರಾಮಗಳ ಮಟ್ಟಿಗೆ ಕೇಂದ್ರಗಳ ವ್ಯವಸ್ಥೆ ಮಾಡಬಹುದೆಂದೂ ಅಲ್ಲಿ ಸಹಾಯ ಒದಗಿಸಬೇಕಾದವರ ಪಟ್ಟಿ ಹಾಗೂ ಬೇಕಾಗುವ ಅಕ್ಕಿಯ ಅಂದಾಜನ್ನೂ ಕುರಿತು ಸೆಂಟ್ರಲ್ ಸಹಕಾರೀ ಬೇಂಕ್, ಕೊಡಿಯಾಲ್‌ಬೈಲ್, ಮಂಗಳೂರು, ಇಲ್ಲಿರುವ ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿಯ ಕಾರ್ಯದರ್ಶಿಯವರಿಗೆ ಬರೆದುಕೊಂಡಲ್ಲಿ ಈ ಕುರಿತು ತಕ್ಕ ಗಮನ ಕೊಡಲಾಗುವುದು.

ಪ್ರಕೃತಕ್ಕೆ ಜಿಲ್ಲೆಯಲ್ಲಿ 71 ಕೇಂದ್ರಗಳ ಮಟ್ಟಿಗೆ ಈ ಬಗೆಯ ಏರ್ಪಾಡು ಮಾಡುವುದೆಂದು ಈಗ ನಿರ್ಣಯವಾಗಿದೆ. ಬೇಕಾದ ಮಾಹಿತಿ ಸಂಗ್ರಹ ಮಾಡಲು ಸ್ವಲ್ಪ ಸಮಯ ಬೇಕಾದುದರಿಂದ ಮಾರ್ಚ 1ನೇ ತಾರೀಕಿನಿಂದ ಅಕ್ಕಿ ಕೊಡುವ ಏರ್ಪಾಡು ಆರಂಭಿಸಬೇಕೆಂದೂ ಕನಿಷ್ಠಪಕ್ಷಕ್ಕೆ ಬರುವ ಸಪ್ಟಂಬರ ಆಖೈರು ತನಕ ಅಂದರೆ ಸುಮಾರು 200 ದಿವಸಗಳ ತನಕ ಈ ಏರ್ಪಾಡು ನಡೆಸಬೇಕೆಂದೂ ಎಣಿಸಲಾಗಿದೆ. ಈ ಅಕ್ಕಿಯನ್ನು ಮುಡಿ 1ರ 7–8–0ರಂತೆ ಸಂಗ್ರಹಿಸಲು ಸಾಧ್ಯವಾದರೆ ಮಾತ್ರ ಈ ಯೋಜನೆ ಯಶಸ್ವಿಯಾಗುವುದು. ರೂ. 7–8–0ಯಂತೆ ಬೇಕಾದಷ್ಟು ಅಕ್ಕಿಯನ್ನು ಕೊಂಡುಕೊಳ್ಳಲು ಬೇಕಾಗುವ ಭಂಡವಾಳವನ್ನು ಸಹಕಾರಿ ಸಂಸ್ಥೆಗಳು ವ ಇತರರು ಒದಗಿಸಬಹುದು.

ಬಡವರು ಅನ್ನಕ್ಕಾಗಿ ಎಲ್ಲೆಲ್ಲಿಯೂ ಹಾತೊರೆಯುತ್ತಿರುವ ಈ ಕಠಿಣ ದಿನಗಳಲ್ಲಿ ಜಿಲ್ಲೆಯ ಮಹಾಜನರೆಲ್ಲರೂ ಸಹಾಯಕ್ಕೆ ಮುಂದೊತ್ತಿ ಬರುವುದು ಪ್ರತಿಯೊಬ್ಬರ ಕರ್ತವ್ಯವಿರುತ್ತದೆ. ಮಾತ್ರವಲ್ಲ ಈ ಕಾರ್ಯಕ್ಕೆ ಎಲ್ಲರೂ ನೆರವಾಗುವರೆಂಬ ಭಗ್ಗೆ ಸಾಕಷ್ಟು ಭರವಸೆಯು ಈಗಾಗಲೇ ಕಂಡುಬರುತ್ತದೆ. ಶ್ರೀಮಂತ ಜನರು, ವರ್ಗದಾರರಿರಲಿ, ಸಾಹುಕಾರರಿರಲಿ ಅಥವಾ ಇನ್ನಾವ ಬಗೆಯಿಂದ ಶ್ರೀಮಂತರಿರಲಿ, ಎಲ್ಲರೂ ರೂ. 7–8–0ರ ಧರದಲ್ಲಿ ಈ ಯೋಜನೆಯ ಬಗ್ಗೆ ಬೇಕಾಗುವ ಅಕ್ಕಿಯನ್ನು ಒದಗಿಸಿ ಕೊಡಬೇಕಾಗಿದೆ. ಸಾಧ್ಯವಿದ್ದವರೆಲ್ಲ ಅವರವರ ಶಕ್ತಿಮೀರಿ ಈಗಿನ ಆವಶ್ಯಕತೆಯ ದೃಷ್ಟಿಯಿಂದ ಸಾಕಷ್ಟು ಪ್ರಮಾಣದಲ್ಲಿ ಅಕ್ಕಿ ಒದಗಿಸಬೇಕಾಗಿಯೂ ಎಲ್ಲರೂ ಈ ಕಾರ್ಯಕ್ರಮದ ಬಗ್ಗೆ ಬೇಕಾದ ಎಲ್ಲಾ ಕೆಲಸ ಕಾರ್ಯಗಳಲ್ಲಿ ನೆರವಾಗಿ ಸಹಕರಿಸಬೇಕೆಂದೂ ನಾವು ಅತ್ಯಾಗ್ರಹದಿಂದ ವಿಜ್ಞಾಪಿಸಿಕೊಳ್ಳುತ್ತೇವೆ.

ಧರ್ಮಸ್ಥಳ ಮಂಜಯ್ಯ ಹೆಗ್ಡೆ (ಅಧ್ಯಕ್ಷ).
ವಿಟ್ಲಲ್ಲಿ ಪುರುಷೋತ್ತಮ ಶೇಟ್, ಎಚ್. ಹುಸೇನ್ ಪುತ್ತೂರು ಸಾಹೇಬ್, ಪಿ. ಸಿ. ಲೋಬೊ, ಯಂ. ಕೇಶವ ಪೈ, ಯಂ. ವೆಂಕಟೇಶ ಪೈ (ಉಪಾಧ್ಯಕ್ಷರು).
ಜಿ. ದತ್ತಾತ್ರೇಯ ರಾವ್, ಯು. ವಿಶ್ವನಾಥ (ಜತೆಕಾರ್ಯದರ್ಶಿಯರು).
ಯಂ. ತಿರ್ಮಲರಾವ್ (ವ್ಯವಸ್ಥಾಪಕ ಕಾರ್ಯದರ್ಶಿ).

ಬಿ. ವೈಕುಂಠ ಬಾಳಿಗ, ಕೆ. ಬಿ. ಜಿನರಾಜ ಹೆಗ್ಡೆ, ಯಸ್. ನರ್ಸಪ್ಪಯ್ಯ, ಕೆ. ಕೇಶವ ಶೆಟ್ಟಿ, ಆರ್. ಬಿ. ಸಿ. ಡಿ. ಅಂದ್ರಾದೆ, ಯು. ಹಮ್ಮಬ್ಬ, ಸಿ. ಯಲ್. ಲೋಬೋ, ಕೆ. ರಘುಚಂದ್ರ ಬಲ್ಲಾಳ್, ಪಿ. ಆರ್. ಆರ್. ಪೂಂಜ, ಯಚ್. ವಿ. ಅಡಪ್ಪ, ಜಿ. ಸೋಮಶೇಖರ ರಾವ್, ವಿಜಾರ್ ಗೋವಿಂದಶೆಟ್ಟಿ
(ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರು).

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ. ಶ್ರೀ ಸ್ವಾಮಿ ಪ್ರಣವೇಶಾನಂದರು.

ಸಾಕಾರ ಅಥವಾ ನಿರಾಕಾರ—ಇವು ಗಳಲ್ಲಿ ಯಾವುದು ಶ್ರೇಷ್ಠವಾದುದು ಸಾಕಾರ ಮತ್ತು ನಿರಾಕಾರದ ಸಮನ್ವಯ

ಶ್ರೀ ರಾಮಕೃಷ್ಣ ದೇವರು ಶ್ರೀ ಪರಮಾತ್ಮನ ಸಾಕಾರ ಮತ್ತು ನಿರಾಕಾರ ಉಪಾಸನೆಯ ವಿಷಯವಾಗಿ ಹೀಗನ್ನುತ್ತಿದ್ದರು:— "ಕೆಲವರು ಸಾಕಾರವನ್ನು ಹಿಡಿದು ನಿರಾಕಾರಕ್ಕೆ ತಲ್ಪುತ್ತಾರೆ, ಇನ್ನು ಕೆಲವರು ನಿರಾಕಾರವನ್ನು ಹಿಡಿದು ಸಾಕಾರಕ್ಕೆ ಇಳಿಯುತ್ತಾರೆ" ಶ್ರೀ ಪರಮಹಂಸರ ಭಕ್ತ ಗಿರೀಶಚಂದ್ರನ ಮನೆಯಲ್ಲಿ ಒಂದು ದಿನ ನನ್ನ ಸ್ನೇಹಿತನೊಬ್ಬನು (ದೇವೇಂದ್ರನಾಥ ಬಸು) ಅವರನ್ನು ಕುರಿತು 'ಮಹಾಶಯರೇ, ಸಾಕಾರ ಶ್ರೇಷ್ಠವೊ ಅಥವಾ ನಿರಾಕಾರ ಶ್ರೇಷ್ಠವೊ?' ಎಂದು ಕೇಳಿದನು 'ನಿರಾಕಾರವು ಎರಡು ತರವಾಗಿದೆ ಪಕ್ವ ನಿರಾಕಾರ ಮತ್ತು ಅಪಕ್ವ ನಿರಾಕಾರ. ಪಕ್ವ ನಿರಾಕಾರವು ಉಚ್ಚ ಜ್ಞಾನವೆಂಬುದು ನಿಜ; ಆದರೆ ಸಾಕಾರವನ್ನು ಹಿಡಿದು ಅಂತಹ ನಿರಾಕಾರಕ್ಕೆ ತಲ್ಪಬೇಕು. ಅಪಕ್ವ ನಿರಾಕಾರೋಪಾಸನೆಯಲ್ಲಿ ಕಣ್ಣು ಮುಚ್ಚಿದರೆ ಅಂಧಕಾರವೇ ಕಾಣುವುದು— ಬ್ರಾಹ್ಮ ಸಮಾಜದ ನಿರಾಕಾರೋಪಾಸನೆಯಂತೆ ಈ ವಿಷಯವು ನಿಜವಾದುದರಿಂದ ನಾವು ಇಲ್ಲಿ ಉಲ್ಲೇಖಿಸಿದ್ದೇವೆ ಖರೆ, ಆದರೆ ಶ್ರೀ ಪರಮಹಂಸರು ಬ್ರಾಹ್ಮ ಸಮಾಜದವರಿಗೆ ನಿಂದೆ ಮಾಡುತ್ತಿದ್ದರೆಂದು ಇದರಿಂದ ಭಾವಿಸಲಾಗದು ಏಕೆಂದರೆ, ಶ್ರೀ ಪರಮಹಂಸರು ಕೀರ್ತನಾರಂಭದಲ್ಲಿ ಸಕಲ ಸಂಪ್ರದಾಯಗಳ ಭಕ್ತವೃಂದಕ್ಕೆ ಪ್ರಣಾಮ ಸಲ್ಲಿಸುತ್ತಿದ್ದಾಗ ಆಧುನಿಕ ಬ್ರಾಹ್ಮ ಸಮಾಜದವರಿಗೂ ಪ್ರಣಾಮವನ್ನು ಸಲ್ಲಿಸುತ್ತಿದ್ದರು. ಬಾರಿಬಾರಿ ಅವರು ಹೀಗೆ ಮಾಡಿದುದನ್ನು ನಾವು ನೋಡಿದ್ದೇವೆ. ಬ್ರಹ್ಮ ಸಮಾಜದ ಮುಖಂಡ ಕೇಶವ ಚಂದ್ರಸೇನರೇ ಶ್ರೀ ಪರಮಹಂಸರ ಉಪದೇಶಗಳನ್ನು ಮೊದಲೇ ಕಲ್ಕತ್ತೆಯ ಜನಸಾಧಾರಣರ ಮಧ್ಯ ಪ್ರಚಾರಪಡಿಸಿದ್ದರು ಇದು ಸಕಲರಿಗೂ ತಿಳಿದ ವಿಷಯ. ಅಲ್ಲದೆ ಶ್ರೀ ಪರಮಹಂಸರ ಸನ್ಯಾಸಿ ಶಿಷ್ಯಂದಿರಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಮೊದಲಾದವರು ಬ್ರಾಹ್ಮ ಸಮಾಜಕ್ಕೆ ಚಿರಋಣಿಯಾಗಿದ್ದ ವಿಷಯವನ್ನು ಮುಕ್ತಕಂಠದಿಂದ ತಾವೇ ಸ್ವತಃ ಸ್ವೀಕರಿಸುತ್ತಿದ್ದರು ಶ್ರೀ ಪರಮಹಂಸರ ಭಕ್ತರಲ್ಲಿ ಇನ್ನೂ ಕೆಲವರು ಪಾಶ್ಚಾತ್ಯ ವಿದ್ಯಾ ಪ್ರಭಾವದಿಂದ ಅಪಕ್ವ ನಿರಾಕಾರೋಪಾಸನೆ ಮಾಡುತ್ತಿದ್ದರು. ಕ್ರಿಸ್ತಮತದ ಪಾದ್ರಿಯರು ಸಾಕಾರೋಪಾಸನೆಗೆ ನಿಂದೆ ಮಾಡಿದಂತೆ ಅಥವಾ ಶ್ರೀ ಪರಮಾತ್ಮನ ಸಾಕಾರ ಮೂರ್ತಿಗಳನ್ನವಲಂಬಿಸಿ ಸಾಧನೆಯಲ್ಲಿ ಮುಂದುವರಿದ ಭಕ್ತರನ್ನು ಅವರು 'ಮೂರ್ತಿಪೂಜಕರು' ಎಂದೂ ಅಂಧ ವಿಶ್ವಾಸಿಯೆಂದೂ ಯಾರಾದರು ನಿಂದೆ ಮಾಡುತ್ತಿದ್ದರೆ, ಶ್ರೀ ಪರಮಹಂಸರು ಹಾಗೆ ನಿಂದೆ ಮಾಡದಂತೆ ಅವರನ್ನು ನಿಷೇಧಿಸುತ್ತಿದ್ದರು.

ಕ್ರಮಶಃ

GREETINGS.

The Directors, Officers and staff of the CANARA BANK, LIMITED, join in sending you this message of appreciatiom for your goodwill and patronage during the last year We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD 1906.

ದಮ್ಮು ಗುಣ ಪಡಲೇ ಬೇಕು ಎಂದು ಡಾಕ್ಟರರು ಅಸಾಧ್ಯ ಅನ್ನುವದಿಲ್ಲ

ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣವಾಡುತ್ತದೆ ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು ಶೌಚದತೊಂದರೆ ಉಳಿಯುವದಿಲ್ಲ ಪಚನ ಕ್ರಿಯೆ ನೆಟ್ಟಗಾಗುವದು ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು

ರೂ. ೨-೮-೦ ರೂ ೪-೨-೦ ರೂ ೭-೦-೦ ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ ಬೊಂಬೈ ಏಜಂಟ—ಮೆ ಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ



ಪುರೋಹಿತ ಶ್ವಾಸಹಾರಿ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1 ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನು ತಂದರೆ ಬಸ್ಸಿನಲ್ಲಿ ಹಾಕಲಿಕ್ಕಾಗಲಾರದು.

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5 28 ರಾತ್ತಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6 ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

[illegible] of Mangalore Limited, Mangalore.
ESTD. 1931.
[illegible] BRANCHES
[illegible] Moodabidri & Padubidri
[illegible] Collect Cheques, Demand and [illegible]
Bills at Most Competitive Rates
ISSUES DRAFTS ON ALL IMPORTANT TOWNS
IN THE DISTRICT
and also on
BOMBAY, MADRAS, CALICUT, BANGALORE,
MYSORE, TIRUPPUR, COIMBATORE, ERODE,
KUMBAKONUM, BELGAUM, DHARWAR
HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

[illegible]

ಅಮೃತಾಂಜನ ಡಿಪೋ, [illegible]
ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಕಾ. ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂಥಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limtied'

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು; ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ನಾರಾಂಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 5—2—1943 [ಸಂಚಿಕೆ 6]

ಅಮೆರಿಕದಲ್ಲಿ ಭಾರತೀಯರ ಸ್ವಾತಂತ್ರ್ಯ ಸಮರ

'ಹಿಂದುಗಳ ಮೇಲೆ ಮೆಶಿನ್ ಗನ್'!

ಕೆಲಸಮಯದ ಹಿಂದೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ವಿಷಯದಲ್ಲಿ ಚರ್ಚೆಯಾಗುತ್ತಿದ್ದಾಗ 'ಶಾಂತಿ ಪಾಲನೆ ಮಾಡುವ ಪ್ರಯತ್ನದಲ್ಲಿ ಹಿಂದೂಗಳ ಗುಂಪುಗಳ ಮೇಲೆ ವಿಮಾನಗಳಿಂದ ಮೆಶಿನ್ ಗುಂಡು ಪ್ರಯೋಗಿಸಲ್ಪಟ್ಟಿತು' ಎಂದು ಹೇಳಿಕೆ ಮಾಡಲ್ಪಟ್ಟಾಗ ಕೆಲ ಕನ್ಸರ್ವೇಟಿವ್ ಪಕ್ಷದ ಸದಸ್ಯರು ಜಯ ಜಯಕಾರ ಮಾಡಿದರು. ಸದಸ್ಯರನ್ನು ಹೀಗೆ ಮಾಡದಂತೆ ತಡೆಯಬೇಕೆಂದು ಸ್ಪೀಕರರನ್ನು ಕೇಳಿಕೊಂಡಾಗ ಅವರು ತಾವು ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲವೆಂದರು—

ಅಮೇರಿಕದಲ್ಲಿ ಭಾರತೀಯರ ಪಿಕೆಟಿಂಗ್

ಭಾರತದ ಸ್ವಾತಂತ್ರ್ಯ ದಿನಾಚರಣೆಯಂದು ವಾಶಿಂಗ್‌ಟನ್ನಿನ ಬ್ರಿಟಿಷ್ ರಾಯಭಾರಿ ಕಚೇರಿಯ ಮುಂದೆ ಕೆಲ ಯುವಕರೂ ಎಂಟು ಮಂದಿ ಹುಡುಗಿಯರೂ ದಸ್ತಗಿರಿ ಮಾಡಲ್ಪಟ್ಟರು. ೨೦ ವರ್ಷ ಪ್ರಾಯದ ಓರ್ವ ಯುವತಿ, ಮತ್ತು ೩೦ ವರ್ಷ ಪ್ರಾಯದ ಓರ್ವ ಧರ್ಮ ಬೋಧಕರೂ, ಸೇರಿ ಐದು ಮಂದಿ ಬ್ರಿಟಿಷ್ ರಾಯಭಾರಿ ಕಚೇರಿಯ ಮುಂದೆ ಪಿಕೆಟ್ ಮಾಡಿದರು. ಅವರು "ಹಿಂದೂಸ್ಥಾನದ ಸ್ವಾತಂತ್ರ್ಯ ಸ್ಥಾಪನೆಯ ಹದಿಮೂರನೆ ವಾರ್ಷಿಕೋತ್ಸವ" ಎಂದು ಬರೆದ ಬೋರ್ಡುಗಳನ್ನು ಹಿಡಿದುಕೊಂಡಿದ್ದರು.

ಸೈನಿಕರಿಗೆ ವೇಶ್ಯಾಗೃಹ ಅವಶ್ಯವೆ?

ಕಲ್ಕತ್ತದ ಸಭ್ಯಗೃಹಸ್ಥರು ವಾಸಿಸುತ್ತಿರುವ ಮನೆಗಳನ್ನು, ಸೈನಿಕರಿಗೆ ವ್ಯಭಿಚಾರ ಮಾಡಲು ವೇಶ್ಯಾಗೃಹವಾಗಿ ಉಪಯೋಗಿಸಲಿಕ್ಕೆ ಖಾಲಿಮಾಡಿ ಕೊಡಬೇಕೆಂದು ಪೋಲೀಸರು ಕೇಳುತಿದ್ದಾರೆಂಬ ವಿಷಯ ಅಲ್ಲಿನ 'ಡಿಯೋಸೆನ್ ಮೆಗಜಿನ್'ನಲ್ಲಿ ಒಂದು ಟೀಕಾತ್ಮಕ ಲೇಖನ ಬಂದಿದೆ. ಸಭ್ಯ ಗೃಹಸ್ಥರ ಮಾನಗೌರವಗಳನ್ನು ಕಾಪಾಡಲು ನೇಮಿಸಲ್ಪಟ್ಟ ಪೋಲೀಸಿನವರೇ ಹೀಗೆ ಹೋಗಿ ಗೃಹಸ್ಥರ ಮನೆಗಳಲ್ಲಿ ವೇಶ್ಯೆಯವರನ್ನು ವಾಸಮಾಡಲು ಏರ್ಪಡಿಸಿ ಸೈನಕರಿಗೆ ವ್ಯಭಿಚಾರ ಮಾಡಲು ಸೌಕರ್ಯ ಮಾಡಿಕೊಡುವುದು ಅನ್ಯಾಯವೆಂಯು ಆ ಪತ್ರಿಕೆ ಬರೆಯುತ್ತದೆ. ಎಷ್ಟೋ ಮನೆಗಳನ್ನು ಸಭ್ಯ ಗೃಹಸ್ಥರು ಬಿಟ್ಟುಕೊಟ್ಟು ಅಲ್ಲಿ ವೇಶ್ಯೆಯರು ಬಂದು ಉಳಕೊಂಡಿದ್ದಾರೆ. 'ನಮ್ಮ ದೇಶದ (ಭಾರತ) ಸೈನಿಕರು ಅವರ (ಬ್ರಿಟಿಷರ) ದೇಶದಲ್ಲಿರುವಾಗ. ಅಲ್ಲಿನ ಸಭ್ಯ ಗೃಹಸ್ಥರು ನಮ್ಮ ಸೈನಿಕರಿಗೆ ವ್ಯಭಿಚಾರಮಾಡಲು, ಸೌಕರ್ಯ ಮಾಡಿ ಕೊಟ್ಟಿದ್ದರೆ?' ಎಂದು ಆ ಪತ್ರಿಕೆ ಕೇಳಿದೆ. ಇಂಥಾ ಅನ್ಯಾಯಗಳನ್ನು ಸಾರ್ವಜನಿಕರು ಅವಶ್ಯ ಪ್ರತಿಭಟಿಸಬೇಕಾಗಿದೆ!

ಕಾಂಗ್ರೆಸ್ ಮುಖಂಡರನ್ನು ನೋಡಬಿಡುವುದಿಲ್ಲ

— ನೆಹರು ಹಸ್ತಾಕ್ಷರ ಪ್ರದರ್ಶನ —

ಸಿಲೋನಿಗೆ ಹಿಂದೀಯರು

ಕೆಲಸ ಮಾಡಲು ಕೂಲಿಗಳಾಗಿ ಬೇಕಾಗಿದೆಯೆಂದು ಸಿಲೋನ್ ಸರಕಾರವೀಗ ಭಾರತ ಸರಕಾರದೊಡನೆ ಕೇಳಿದೆ. ಹಿಂದೆ ಸಾವಿರಾರು ಕೂಲಿಗಾರರು ಸಿಲೋನಿಗೆ ಭಾರತದಿಂದ ಹೋಗಿ ಪರಂಪರೆಯಿಂದ ದುಡಿದರು, ಅಂಟುರೋಗಗಳ ನರಕವಾಗಿದ್ದ ಅದನ್ನು ಮನೋಹರ ಪ್ರದೇಶವಾಗಿ ಮಾರ್ಪಡಿಸಿದರು. ರಬ್ಬರ್ ಚಾ ಮೊದಲಾದವನ್ನು ಹೇರಳ ಬೆಳೆಸಿದರು. ಆದರೆ ಸಿಲೋನ್ ಸರಕಾರ ಭಾರತದ ಕೂಲಿಗಾರರನ್ನು ದ್ವೇಷಿಸಿತು. ಅವರಿಗೆ ಸ್ಥಾನಮಾನ ಕೊಡಲಿಲ್ಲ. ಅಲ್ಲಿಂದ ಹೊರಹಾಕಿದರು. ಭಾರತ ಸರಕಾರವಾದರೂ ನಮ್ಮ ಕೂಲಿಗಾರರು ಅಲ್ಲಿಗೆ ಹೋಗಕೂಡದೆಂದಿತು. ಈಗ ಬ್ರಮ್ಮಾ ಮಲಯಾ ಜಪಾನ್ ವಶವಾದ ಮೇಲೆ ಅಲ್ಲಿನ ಪರಿಸ್ಥಿತಿ ಕೆಟ್ಟಿದೆ. ಬರ್ಮದಿಂದ ಅಕ್ಕಿ ಬರುವುದಿಲ್ಲ. ತಮ್ಮ ಹೊಟ್ಟೆತುಂಬಿಸಲು ಸಿಲೋನು ಭಾರತಕ್ಕೆ ಮೊರೆಯಿಡುತ್ತದೆ. ರಬ್ಬರ್ ಉತ್ಪತ್ತಿಗೂ ಸೊನ್ನೆ ಬಿದ್ದಿದೆ. ಅಲ್ಲೀಗ ಕೂಲಿ ಜನವೇ ಸಿಗುವುದಿಲ್ಲ. ಇದಕ್ಕಾಗಿ ಸಿಲೋನ್ ಭಾರತದಿಂದ ಕೂಲಿಗಾರರನ್ನು ಕೇಳಿದೆ. ಸಿಲೋನಿನ ಬೇರನ್ ಜಯತಿಲಕರು ಭಾರತದಲ್ಲಿಯೇ ಬಂದು ತಂಗಿದ್ದಾರೆ. ಅನ್ನ ಭಿಕ್ಷೆ, ಕೂಲಿ ಭಿಕ್ಷೆ ಬೇಡುತ್ತಾರೆ. ಆದರೆ ಸಿಲೋನಿನ ಧೋರಣೆಯನ್ನು ಅರಿತ ಅಖಿಲ ಭಾರತವೇ ಇದನ್ನು ಪ್ರತಿಭಟಿಸುತ್ತಿದೆ. ಸಿಲೋನಿಗೆ ಕೂಲಿಗಾರರನ್ನು ಕಳುಹಿಸಿ ಪುನಃ ದುರವಸ್ಥೆಗೆ ದೂಡಕೂಡದೆಂದು. ಆಣೆಯವರು ಈ ಅಧಿಕಾರವುಳ್ಳವರು. ಆಣೆ ಮತ್ತು ಸರಕಾರ ಈಗ ಪುನಃ ಏನು ಯೋಚನೆ ಮಾಡುವರೋ ನೋಡಬೇಕು.

ಮದ್ರಾಸು ಪ್ರಾಂತದಲ್ಲಿ ಅಕ್ಕಿರಫ್ತು

ವಿಷಯ ಸರಕಾರವು, ಈಗಾಗಲೇ ಯೋಜನೆ ಮಾಡಿದ್ದು, ನೆಲ್ಲೂರು, ತ್ರಿಚುನಾಪಳ್ಳಿ ಮತ್ತು ತಾಡೆಪಳ್ಳಿ ಈ ಮೂರು ಸ್ಥಳಗಳಲ್ಲಿ ಬರುವ ತಿಂಗಳಿಂದ ಮೂವರು ಖರೀದಿ ಆಫೀಸರನ್ನು ನೇಮಿಸುವುದಾಗಿ ತಿಳಿಯುತ್ತದೆ. ಯಾವ ಸ್ಥಳದಲ್ಲಿ ಜನರ ಉಪಯೋಗಕ್ಕೆ ಮೀರಿ ಅಕ್ಕಿ ಉತ್ಪತ್ತಿ ಇದೆಯೋ ಅಲ್ಲಿಂದ ಅಕ್ಕಿ ರಫ್ತು ಸಲ್ಲಿಸಲಾಗುವುದು. ರಫ್ತು ಮಾಡಬೇಕಾದರೆ ಸರಕಾರದಿಂದ ನೇಮಿಸಲ್ಪಟ್ಟ ಖರೀದಿ ಆಫೀಸರ ಮೂಲಕ ಅಕ್ಕಿಯನ್ನು ಕೊಳ್ಳಬೇಕಾಗುವುದು. ಎಲ್ಲಿ ಅಕ್ಕಿಯ ಅಭಾವವಿದೆಯೋ ಆ ಜಿಲ್ಲೆಗೆ ಸಿವಿಲ್ ಸಪ್ಲೈಸ್ ಕಮಿಶನರು ಅಲ್ಲಿನ ಅಕ್ಕಿಯ ಅಂದಾಜನ್ನು ನಿರ್ಣಯಿಸುವರು. ಅಂಥಾ ಜಿಲ್ಲೆಗಳ ಕಲೆಕ್ಟರರು ಆ ಕುರಿತು ಸಾಧ್ಯವಾದಷ್ಟು ಉತ್ತಮ ರೀತಿಯ ವ್ಯವಸ್ಥೆ ಮಾಡುವರು. ನ್ಯಾಯವಾದ ದರದಲ್ಲಿ ಅಕ್ಕಿ ಹಂಚುವ ವ್ಯವಸ್ಥೆಯೂ ಮಾಡಲಾಗುವುದು. ಪ್ರಕೃತ ಸ್ವಂತ ಖರ್ಚಿಗೆ ಒಮ್ಮೆಗೆ ಎರಡು ಗೋಣಿ ಒಯ್ಯಲು ಆತಂಕವಿಲ್ಲ. ಹೀಗೆಂದು ಮೊದಲಾಗಿ ಸರಕಾರದ ಯೋಜನೆಯಿರುವುದಾಗಿ ಪ್ರಕಟವಾಗಿದೆ.

ಕಾಂಗ್ರೆಸ್ ಮುಖಂಡರನ್ನು ನೋಡಬಿಡುವುದಿಲ್ಲ

ಎಂಬ ವಿಷಯವು ಕಾಮನ್ಸ್ ಸಭೆಯಲ್ಲಿ ಸೊರೆನ್ಸನರು ಕೇಳಿದ ಪ್ರಶ್ನೆಗೆ ಅಮೆರಿಯವರಿತ್ತ ಉತ್ತರದಿಂದ ತಿಳಿದುಬಂತು. ಭಾರತ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಲು ಕಾಂಗ್ರೆಸು ಮತ್ತು ಕಾಂಗ್ರೆಸು ಇತರ ಪ್ರಮುಖರ ಭೇಟಿ ಮಾಡಿಸುವ ಆವಶ್ಯಕತೆ ವಿಷಯ ಸೊರೆನ್ಸನರು ಮಾತನಾಡಿದ್ದರು. ಕಾಂಗ್ರೆಸ್ ಮುಖಂಡರ ಭೇಟಿಗೆ ಅವಕಾಶ ಕೊಡಲಾಗುವುದಿಲ್ಲ ಎಂಬುದಾಗಿ ಇಂಡಿಯಾ ಸರಕಾರ ಮೊದಲೇ ನಿಶ್ಚಯ ಮಾಡಿದ್ದರಿಂದ ತಾನು ಅದರಲ್ಲಿ ಪ್ರವೇಶಿಸುವುದಿಲ್ಲವೆಂದು ಅಮೆರಿಯವರ ಸಮರ್ಥನೆ.

ಗಫರ್ ಖಾನರ ಮಗನ ಬಂಧನ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನರ ಮಗ ಖಾನ್ ಅಬ್ದುಲ್ ವಾಲಿಖಾನರನ್ನು ಹಾಗೂ ಗುಲಾಮ ರಸೂಲ್ ಖಾನರೆಂಬವರನ್ನೂ ಬಂಧಿಸಿ ಪೇಶಾವರ ಸೆರೆಮನೆಗೊಯ್ದಿರುವರು.

ಈಸೂರು ಅಪಾದಿತರಿಗೆ ಜೀವದಾನ

ಕೊಡಬೇಕೆಂದು ಮೈಸೂರು ಮಹಾರಾಜರೊಡನೆ ವಿನಂತಿಸಿಕೊಂಡು ಸಂಸ್ಥಾನದ ಹಲವರು, ಹಲವು ಮಂದಿ ವಿದ್ಯಾರ್ಥಿಗಳು ವರ್ತಕರು, ಉದ್ಯೋಗಸ್ಥರೇ ಮೊದಲಾದವರು ಮನವಿಮಾಡಿಕೊಂಡಿದ್ದಾರೆ.

ಪಂಜಾಬ ವಿಭಜನೆ?

ಪಂಜಾಬನ್ನು ವಿಭಾಗಿಸಬೇಕೆಂದು ಕೆಲವು ಸೀಖರು ಪ್ರಯತ್ನಿಸುತ್ತಿರುವ ಸಂಬಂಧದಲ್ಲಿ ಲ್ಯಾಲಪುರ ಹಿಂದು ಮಹಾಸಭಾಧ್ಯಕ್ಷರು ಡಾ. ಮುಂಜೆಯವರಿಗೊಂದು ತಂತಿಬಿಟ್ಟು ಪಂಜಾಬಿನ ಹಿಂದುಗಳು ಇದನ್ನು ಪೂರ್ಣ ಪ್ರತಿಭಟಿಸುವರೆಂದು ತಿಳಿಸುವರು.

ಮೂವರಿಗೆ ಜೀವಾವಧಿ ಶಿಕ್ಷೆ

ನಾಗಪುರದ ರಾಮಟೇಕ ಟ್ರೆಜರಿ ಲೂಟಿ ಸಂಬಂಧದಲ್ಲಿ ಮೂವರಿಗೆ ಜೀವಾವಧಿ ಶಿಕ್ಷೆಯು ತೀರ್ಪು ಕೊಡಲಾಗಿದೆ. ಉಳಿದವರಿಗೆ ಬೇರೆ ಬೇರೆ ಶಿಕ್ಷೆಗಳಿವೆ.

ಬರಗಾಲ ನಿವಾರಣೆ ಕಾರ್ಯಕ್ಕೆ ತೊಂದರೆ

ಬಿಜಾಪುರದಲ್ಲಿ ಬರಗಾಲ ನಿವಾರಣೆ ಕಾರ್ಯಕ್ಕಾಗಿ ಅಲ್ಲಿ ನೂಲುವ ನೆಯ್ಯುವ ವ್ಯವಸ್ಥೆ ಮಾಡಲು ಹೋಗಿದ್ದ ಮೂರು ಮಂದಿ ಅಖಿಲ ಭಾರತ ಚರಕಾ ಸಂಘದ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿರುವರೆಂದು ತಿಳಿದಿದೆ.

ನೆಹರು ಹಸ್ತಾಕ್ಷರ ಪ್ರದರ್ಶನ

ಪಂಡಿತ ಜವಾಹರಲಾಲ ನೆಹರುಗಳ 'ಯುದ್ಧ ಮತ್ತು ಎಲ್ಲಾ ಜನಾಂಗಗಳು' ಎಂಬ ಭಾಷಣದ ಹಸ್ತಾಕ್ಷರದ ಮೂಲ ಪ್ರತಿಯನ್ನು ನ್ಯೂಯಾರ್ಕಿನ ಸಾರ್ವಜನಿಕ ಪುಸ್ತಕ ಸಂಗ್ರಹಾಲಯದಲ್ಲಿಡಲಾಗಿದೆ. ಇದರೊಂದಿಗೆ ಜಗತ್ ಪ್ರಸಿದ್ಧರಾದ ರೂಸ್‌ವೆಲ್ಟ್, ಸ್ಟಾಲಿನ್, ಚರ್ಚಿಲ್, ವೆಂಡೆಲ್ ವಿಲ್ಕಿ ಚಿಯಾಂಗ್ ಕೈಶೇಕ ಮೊದಲಾದ ೧೯ ಮಂದಿಯ ಹಸ್ತಾಕ್ಷರಗಳೂ ಇವೆ.

ತರ ಬಿ, ಪೇರಬೈಲು, ಕೀಳೆ, ಕಣ್ಣೆರುಬಾವಿ, ಶವತ್ತ, ಕಂಕನಾಡಿ ಬಿ, ಕರುಮನ್ನೂರು, ಬಂಗ್ರ ಕೂಳೂರು, ಕೊಡಿಯಾಲಬೈಲು ಬಿ, ಮುನ್ನೂರು, ಕಾವೂರು, ಮರೋಳಿ.

ನೇಮಕ

ಮಂಗಳೂರಿನ ಮುಸ್ಲಿಂ ಭೂಮಾಲೀಕರಾದ ಶ್ರೀ. ಖಿಲಿ ಶರಫುದ್ದೀನ್ ಸಾಹೇಬರು, ದಕ್ಷಿಣ ಕನ್ನಡ ಜಿಲ್ಲೆಯ "ರಿಲೀಜಿಯಸ್" ಕಮಿಟಿಯ ಮೆಂಬರಾಗಿ ನೇಮಕಪಟ್ಟಿರುವರು.

ಶ್ರೀ. ಎಂ. ಅಬ್ದುರಹಿಮಾನ್ ಸಾಹೇಬರು, ಬಿ. ಇ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಮಧುರಾ ಜಿಲ್ಲೆಯಲ್ಲಿ ಎಸಿಸ್ಟಂಟ್ ಇಂಜಿನಿಯರ

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 67/1940.
R. E. P. No. 741/1942.
R. E. A No 1803/1942.

ಸುಬ್ರಾಯ ಭಟ್ಟ ..... ಅರ್ಜಿದಾರ

ಮತ್ತು

1. ಶ್ರೀನಿವಾಸ ಭಟ್ಟ—ಲಕ್ಷ್ಮೀನಾರಾಯಣ ಭಟ್ರ ಮಗ ತಿರುವಾಂಕೂರು ಸರಸ್ಥಾನದಲ್ಲಿ ಕನಿಯಾಂಪರಂಬು ಎಂಬಲ್ಲಿ ಶಾಂತಿಗಾರ
2. ಲಕ್ಷ್ಮಮ್ಮ

} ರೆಸ್ಪೊಂಡೆಂಟರು

1ನೇ ರೆಸ್ಪೊಂಡೆಂಟರಿಗೆ—

ಮೇಲೆ ಹೆಸ್ರು ಕಾಣ್ಸಿದ ಅರ್ಜಿದಾರ ಸಧ್ರಿ R. E. P. 741/1942ರಲ್ಲಿ ಡಿಕ್ರಿಯಲ್ಲಿ ಜವಾಬ್ದಾರಿಯಿರುವ ಸ್ಥಿರಾಸ್ತಿ ಏಲಂ ಕುರಿತು ಅರ್ಜಿ ಕೊಟ್ಟಿರುವದರಿಂದ ಏಲಂ ಇಸ್ತಿಹಾರಿನ ಷರತುಗಳನ್ನು ಮಂಜೂರು ಪಡಿಸುವರೆ ಮತ್ತು ಏಲಂ ಸಮಯ ವಾದಿಗೆ ಬಿಡ್ ಎಂಡ್ ಸೆಟ್ ಆಪ್ ಬಗ್ಗೆ ಪರ್ಮಿಶನ್ ಕೊಡಬೇಕೆಂತ ಕೂಡಾ ಅರ್ಜಿದಾರ ಅಪೇಕ್ಷಿಸುವದರಿಂದ ಆ ಕುರಿತು ನಿಮಗೇನಾದ್ರು ಆಕ್ಷೇಪವಿದ್ರೆ ತನಿಖೆ ತಾರೀಕಿನ ಬೆಳಿಗ್ಗೆ 10-30ಕ್ಕೆ ಮೇಲಿನ ಕೋರ್ಟ ಮುಂದೆ ಹಾಜರಾಗಿ ಜಾಹೀರು ಪಡಿಸಿಕೊಳ್ಳಬಹುದು ಎಂತ ಈ ಮೂಲಕ ತಿಳಿಸೋಣಾಗುತ್ತದೆ. ತನಿಖೆ ತಾ 17-2-1943

ಕೋರ್ಟು ಹುಕುಂ ಪ್ರಕಾರ

ಮಂಗಳೂರು ತಾ. 1-2-43. } B R Vyasaraya Achar, ಅರ್ಜಿದಾರನ ಕಡೆ ಎಡ್ವಕೇಟ್

ಸಾದರ-ಸ್ವೀಕಾರ

ಸುಬೋಧ—ಸಂಪಾದಕರು ಯಂ ರಾಮರಾವ್. ಪ್ರಕಾಶಕರು ಸುಬೋಧ ಪ್ರಕಟನಾಲಯ, ಬೆಂಗಳೂರು.

ಕಳೆದ ಹದಿನೆಂಟು ವರ್ಷಗಳಿಂದ ಒಂದು ಯೋಗ್ಯ ತರಗತಿಯಲ್ಲಿ ನಡೆಯುತ್ತಿರುವ ಈ ಪತ್ರಿಕೆಯ ಹದಿನೆಂಟನೆಯ ವಾರ್ಷಿಕ ಸಂಚಿಕೆ ನಮ್ಮ ಕೈಸೇರಿದೆ. ಇದರಲ್ಲಿ ಕರ್ನಾಟಕದ ಹಲವು ಲೇಖಕರ ವಿಚಾರ ಪರಿಪ್ಲುತ ಲೇಖನಗಳಿವೆ. ಹೆಚ್ಚಾಗಿ ಧಾರ್ಮಿಕ ವಿಷಯಗಳನ್ನೇ ಪ್ರಕಟಿಸುತ್ತಿರುವ ಈ ಪತ್ರಿಕೆಯ ವೈಶಿಷ್ಟ್ಯವೂ ಇದರಲ್ಲಿದೆ. ಹಲವು ಸಾಮಾಜಿಕ ವಿಚಾರಗಳೂ ಇವೆ. ಸುಬೋಧ ಪತ್ರಿಕೆಯು ಒಂದು ಮೇಲ್ಪಟ್ಟದ ಮಾಸಿಕ. ಕನ್ನಡದ ಜನತೆ ಅವಶ್ಯವಾಗಿ ಈ ಪತ್ರಿಕೆಯನ್ನು ಓದಬೇಕು. ಸಂಪಾದಕರ ಪ್ರಕಾಶಕರ ಈ ಸಾಹಿತ್ಯಸೇವೆಯನ್ನು ನಾವು ಹೃತ್ಪೂರ್ವಕ ಕೊಂಡಾಡುವೆವು.



ಒಂದು ಟ್ಯಾಂಕಿಗೆ? ಅಲ್ಲ—ಒಂದು ಟ್ಯಾಂಕಿನ ಕಾಳಗಕ್ಕೆ! ಈ ಮಹಾಯುದ್ಧದ ವಿಸ್ತಾರವನ್ನು ಸರಿಯಾಗಿ ತಿಳಿದುಕೊಳ್ಳೋಣ. ನಾವು ಉಪಯೋಗಿಸುವ ಪ್ರತಿವಸ್ತುವೂ ನಮ್ಮ ಯುದ್ಧದಳಗಳಿಗೆ ಬೇಕಾಗುತ್ತದೆಂಬುದನ್ನು ಅರಿತುಕೊಳ್ಳೋಣ. ನಮಗೆ ವಾರಕ್ಕೆ ೪ ಗ್ಯಾಲನು ಪೆಟ್ರೋಲು ಬೇಕೋ? ರಣಭೂಮಿಯಲ್ಲಿ ಜರ್ಮನ್ ಸೇನಾಪತಿ ರೋಮಲನೊಡನೆ ಹೋರಾಡಲು ನಮ್ಮ ಸೈನ್ಯಕ್ಕೆ ೧ ಲಕ್ಷ ಗ್ಯಾಲನು ಬೇಕಾಗುವುದು, ನಮಗೆ ಒಂದು ಜೋಡಿ ಪಾದತ್ರಾಣಗಳು ಬೇಕಾಗಿದ್ದರೆ, ನಮ್ಮ ಸೈನ್ಯಕ್ಕೆ ಲಕ್ಷಾವಧಿ ಜೋಡಿ ಬೂಟುಗಳು ಬೇಕು! ಇದರಂತೆಯೇ ಉಳಿದುದೆಲ್ಲವೂ ಪೇಟೆಯಲ್ಲಿ ನಾವು ಕೊಳ್ಳುವ ಪ್ರತಿವಸ್ತುವೂ ಆಧುನಿಕ ಯುದ್ಧಕ್ಕೆ ಬೇಕಾಗಿರುತ್ತದೆ. ಆದುದರಿಂದ ಅದನ್ನು ಕಡಿಮೆಕೊಳ್ಳೋಣ. ಮತ್ತೆ ನಾವು ಉಳಿಸುವ ಹಣ? ಅದನ್ನೂ ಯುದ್ಧದ ಒಂದು ಆಯುಧವಾಗಿ ಉಪಯೋಗಿಸೋಣ ಯುದ್ಧ ಗೆಲ್ಲಲು ಬೇರೆ ದಾರಿಯಿಲ್ಲ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್
...ಇಲ್ಲವೆ ಡಿಫೆನ್ಸ್ ಲೋನ್ಸ್
ಇವುಗಳಹೊರತು ಮತ್ತೇನನ್ನೂ ಕೊಳ್ಳುವ ಮೊದಲು ಕೊಂಚ ಯೋಚಿಸಿರಿ.

★ ಸರ್ಟಿಫಿಕೇಟುಗಳು ನಿಮ್ಮ ಅಂಚೇ ಕಚೇರಿಯಲ್ಲಿ ಸಿಗುವವು
೧೦ ರೂ ಗೆ—ಹತ್ತು ವರ್ಷಗಳಲ್ಲಿ ರೂ ೩ ೯ ೦ ಲಾಭ ಬರುವುದು.

CPU-29-KN

ರಾಗಿ ನೇಮಕ ಹೊಂದಿರುವರು ಇವರು ದಕ್ಷಿಣ ಕನ್ನಡದ ಮುಸಲ್ಮಾನರಲ್ಲಿ ಈ ಪರೀಕ್ಷೆ ಪಾಸಾಗಿ ಈ ಉದ್ಯೋಗವನ್ನು ಸಂಪಾದಿಸಿರುವವರಲ್ಲಿ ಮೊದಲಿಗರು

ಹಿಂದೂ ಮತ ತತ್ವಗಳ ಬೋಧನೆ

ಯ ಅವಶ್ಯಕತೆಯ ಕುರಿತು ಡಾ. ಎಂ. ಕೇಶವಪೈ ಅವರು ತಾ. ೨೮ರಂದು ಸಂಜೆ ಡಿ. ಸಿ ಎಂ. ಹಾಲ್‌ನಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆಯೂ ಕೆಲ ಮಹನೀಯರೊಡನೆಯೂ ಮಾತುಕತೆ ನಡೆಸಿದರು. ಹಿಂದೂ ಮತವು ಕ್ಷಯಿಸದಂತೆ ನೋಡಿಕೊಳ್ಳುವುದು ಅವಶ್ಯವೆಂದೂ ಶಾಲೆಗಳಲ್ಲಿ ಹಿಂದೂ ಮತದ ಕುರಿತಾದ ಶಿಕ್ಷಣ ಸಿಗುವಂತಾಗಬೇಕೆಂದೂ ಈ ಕಾರ್ಯಗಳಿಗಾಗಿ ಯತ್ನ ನಡೆಯಬೇಕೆಂದೂ ಹೇಳಿ, ಪತ್ರಿಕೆಯವರ ಬೆಂಬಲವನ್ನು ಕೋರಿದರು. ತಾ. ೩೧ರಂದು ಉಡುಪಿಯಲ್ಲಿ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಈ ಕುರಿತಾಗಿಯೇ ವಿಚಾರ ವಿನಿಮಯಮಾಡಲು ಒಂದು ಸಭೆ ಜರಗಿತೆಂದೂ ತಿಳಿದುಬರುತ್ತದೆ.

ಶ್ರೀ ತ್ಯಾಗರಾಜ ಮಹೋತ್ಸವವು

ಸ್ಥಳೀಯ ಬೆಸೆಂಟ್ ಶಾಲೆಯಲ್ಲಿ ಗಾನಕಲಾ ಮಂಡಳಿಯ ಆಶ್ರಯದಲ್ಲಿ ಡಾ. ಯಂ. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ತಾ. ೨೬ನೇ ಸಂಜೆ ಆಚರಿಸಲ್ಪಟ್ಟಿತು. ಶ್ರೀ. ಪಿ. ಕೆ. ನಾರಾಯಣನವರು ತ್ಯಾಗರಾಜರ ಜೀವನದ ಕುರಿತಾಗಿಯೂ, ಶ್ರೀ. ಎಸ್. ಕೃಷ್ಣಭಟ್ಟರು ಸಂಗೀತ, ಸಾಹಿತ್ಯದ ಮೇಲೂ ಭಾಷಣ ಮಾಡಿದರು. ಶ್ರೀ. ಸಿ. ಎನ್. ಶಾಸ್ತ್ರಿ ಮತ್ತು ಪಾರ್ಟಿಯವರ ಸಂಗೀತವೂ ನಡೆಯಿತು.

ಉಡುಪಿ

ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನಿನ ಮಹಾಸಭೆಯು ತಾ. ೩೧ರಲ್ಲಿ ಡಾ. ಎಸ್. ಆರ್ ಪೈಗಳವರ ಅಧ್ಯಕ್ಷತೆಯಲ್ಲಿ ಸೇರಿ ಚಾಲ್ತಿ ವರುಷದ ಕಾರ್ಯನಿರ್ವಾಹಕ ಮಂಡಳಿಯ ರಚನೆಯಾಯಿತು.

ಕಾರ್ಕಳ

ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ಪ್ರಮಾಣ ಪತ್ರ ವಿತರಣೋತ್ಸವವು ತಾ. ೨೪ರ ದಿನ ಶ್ರೀ ಲಲಿತ ಕೀರ್ತಿ ಭಟ್ಟಾರಕ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪುತ್ತೂರು

ರಜೆಯ ಮೇಲಿರುವ ಸ್ಥಳೀಯ ಬೋ. ಹೈಸ್ಕೂಲ್ ಹೆಡ್‌ಮಾಸ್ತರ್ ಶ್ರೀ. ರಾಮನ್ ನಂಬಿಯಾರರ ಸ್ಥಾನದಲ್ಲಿ ಉಡುಪಿ ಬೋ. ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಶ್ಯಾಮರಾಯ ಶೆಟ್ಟರು ಹೆಡ್ಮಾಸ್ತರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಸಮರಭೂಮಿಯ ಸಂಚಾರ

ರಷ್ಯ ರಣರಂಗದಲ್ಲಿ ಜರ್ಮನಿಗೆ ಪರಾಜಯವೇ ಪ್ರಾಪ್ತವಾಗುತ್ತಿದೆ. ಸ್ಟಾಲಿನ್‌ಗ್ರಾಡ್ ರಷ್ಯಯಲ್ಲಿ ಜನವರಿ ತಿಂಗಳಿಂದ ಎರಡೂವರೆ ಲಕ್ಷ ಜರ್ಮನರು ಸತ್ತಿರಬೇಕೆಂದು ಅಂದಾಜು ಮಾಡಿದ್ದಾರೆ. ಶತ್ರುಗಳ ಸೈನ್ಯವು ನಾಶವಾದ ಅಂಕೆಸಂಖ್ಯೆಗಳನ್ನು ಹೇಳುವುದರಲ್ಲಿ ಸ್ವಲ್ಪ ಅತಿಶಯೋಕ್ತಿ ಇರಬಹುದಾದರೂ ಅಪಾರ ನಷ್ಟವಾಗಿದೆಯೆಂದಿಷ್ಟು ನಾವು ಅರ್ಥಮಾಡಿಕೊಳ್ಳಬಹುದು. ಸ್ಟಾಲಿನ್‌ಗ್ರಾಡ್ ಭಾಗದಲ್ಲಿ ವೋರೊನೆಜ್ ಉತ್ತರದಲ್ಲಿ, ಡೊನೆಟ್ಸ್ ಕಾಕೆಸಸ್‌ಗಳಲ್ಲಿ ಹೀಗೆ ಎಲ್ಲಾ ಕಡೆಗಳಲ್ಲಿಯೂ ಜರ್ಮನರ ಪ್ರಗತಿಯೇ ಹೆಚ್ಚುತ್ತಿದೆ. ರಷ್ಯನರು ಜನವರಿ ತಿಂಗಳಲ್ಲಿ ಒಟ್ಟು ನಾಲಚಿಕ, ಜಾರ್ಜಿಯಸ್ಕ, ಮೊಝ್ದೋಕ್, ವೆಲಾಕಿಲೂಕಿ, ರೊಸೆಚ್, ಮಿಲ್ಲೆರೊವೊ, ಜಾಮಿನಿವೊಕೊ, ವೊರೊಶಿಲೊವೊಸ್ಕ, ಸಾಲ್ಸಕ, ಕಾಸ್ಟ್ರೊನಾ, ಮೈಕೂಪ ಮೊದಲಾದ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ಹೀಗೆ ಹಿಟ್ಲರನಿಗೆ ಸ್ಟಾಲಿನ್‌ಗ್ರಾಡಿನಲ್ಲಿ ದೊಡ್ಡ ಪರಾಜಯವಾಗಿದ್ದು ಅದರ ಜೊತೆಗೆ ಲೆನಿನ್‌ಗ್ರಾಡ್ ಮುತ್ತಿಗೆಯೂ ತೆಗೆಯಲ್ಪಟ್ಟಿದೆಯೆಂದು ಸುದ್ದಿ ಬಂದಿದೆ.

ಉತ್ತರ ಆಫ್ರಿಕದಲ್ಲಿ

ಉತ್ತರ ಆಫ್ರಿಕದ ರಣಭೂಮಿಯಲ್ಲಿ ಜರ್ಮನರು ಅತ್ಯಂತ ಆಯಕಟ್ಟಿನ ಸ್ಥಳವನ್ನು ಆಕ್ರಮಿಸಿಕೊಂಡಿದ್ದು, ಟ್ಯುನಿಸ್, ಬಿಜರ್ಟಾಗಳು ಅವರ ಕೈಯ್ಯಲ್ಲೇ ಇರುವುದರಿಂದ ಪರಿಸ್ಥಿತಿ ಅವರಿಗೇ ಅನುಕೂಲವಾಗಿದೆ. ಆದ್ದರಿಂದ ಇನ್ನು ಮುಂದೆ ಮಿತ್ರರು ಅತ್ಯಂತ ಕಷ್ಟ ಹಾಗೂ ಅಪಾಯಕರವಾದ ಯುದ್ಧ ಮಾಡಬೇಕಾಗಿದೆ. ಈಗ ಜರ್ಮನರು ಆಕ್ರಮಿಸಿಕೊಂಡಿರುವ ಗುಡ್ಡಗಳಿಂದ ಮುಕ್ತ ಆರ ಮತ್ತು ಬಿಜರ್ಟಾಗಳ ಎದುರಿಗಿರುವವುಗಳಿಂದ ಅವರನ್ನು ಓಡಿಸಲು ಬ್ರಿಟಿಷ್ ಅಮೆರಿಕನ್ ಸೈನ್ಯಗಳು ಪ್ರಯತ್ನವನ್ನೇನೋ ಮಾಡಿದವು. ಆದರೆ ಪ್ರಯತ್ನದಲ್ಲಿ ಈಗಾಗಲೇ ಅನೇಕ ಹಾನಿಯಾಗಿದೆ. ಜರ್ಮನರು ಈ ಗುಡ್ಡಗಳ ನಡುವೆ ದೊಡ್ಡ ದೊಡ್ಡ ಕಬ್ಬಿಣದ ತಗಡುಗಳ ಮರೆಯಲ್ಲಿ ಫಿರಂಗಿಗಳನ್ನಿಟ್ಟಿರುವರು. ಈ ಗುಡ್ಡಗಳಲ್ಲಿ 18 ಅಡಿ ಆಳವಾದ ಕಂದಕಗಳೂ ಇವೆ. ಇದನ್ನೂ ಜರ್ಮನ್ ದಳ ಕಾಯುತ್ತಿದೆ. ಇಲ್ಲಿ ಮೆಶಿನ್ ಗನ್ನುಗಳನ್ನು ಇಡಲಾಗಿದೆ. ಹೀಗೆ ಭದ್ರವಾಗಿರುವ ಗುಡ್ಡಗಳನ್ನು ದಾಟುವುದು ಬಹಳ ಪ್ರಾಣಾಪಾಯಕಾರಿಯಾಗಿದೆ. ಬಸ್ಸೆಲಷಿಯಾ ಕಣಿವೆಯಲ್ಲಿ ಜರ್ಮನರಿಗೆ ಅರ್ಧ ವಿಜಯ ದೊರೆತಿದೆ. ಮಳೆಗಾಲ ಮುಗಿದ ಕೂಡಲೇ ಕೊನೆಯ ಧಾಳಿ ಮಾಡಬೇಕೆಂದು ಮಿತ್ರರು ಸಿದ್ಧತೆ ಮಾಡುತ್ತಿರುವರು. ಮಧ್ಯ ಟುನೆಶಿಯಾದಲ್ಲಿ ಪಾಂಟೆಡೋಪಾಸಿನ ಹತ್ತಿರ ಜರ್ಮನರು ಮುನ್ನುಗ್ಗಿದ್ದಾರೆ. ಮಿತ್ರರ ಪ್ರತಿಧಾಳಿಯೂ ಇತ್ತು. ಟ್ಯುನಿಸ್ ಬಂದರದ ಮೇಲೆ ಧಾಳಿಯಾಗಿದೆ. ರೊಮೆಲನ ಸೈನ್ಯವು ಟುನಿಸಿಯಾದಲ್ಲಿ ವಾನ್ ಅರ್ನಿಮ್ಮರ ಸೈನ್ಯ (ಇದು ಜರ್ಮನರದು)ದೊಂದಿಗೆ ಕೂಡಿಕೊಳ್ಳುವುದನ್ನು ತಪ್ಪಿಸಲು ಜನರಲ್ ಐಸೆನ್‌ಹಾವರು ಪ್ರಯತ್ನಿಸುತ್ತಿರುವರೆಂದು ತಿಳಿದುಬಂದಿದೆ. ರೊಮೆಲನ ಹಾಗೂ ವಾನ್ ಅರ್ನಿಮರನ ಸೈನ್ಯಗಳು ಜತೆಸೇರಿಬಿಟ್ಟರೆ ಬಹಳ ಗಂಡಾಂತರವೇ ಆಯಿತು! ಒಟ್ಟಿನಿಂದ ಈಚೆಗೆ ಬಂದ ಸುದ್ದಿಯಂತೆ ಮಿತ್ರರಿಗೆ ಆಫ್ರಿಕದ ರಣಭೂಮಿಯಲ್ಲಿ ಅಷ್ಟೊಂದು ಗೆಲವು ಕಂಡುಬರುವುದಿಲ್ಲ.

ಕಸಬ್ಲಾಂಕಾ ಸಮ್ಮೇಳನ

ಉತ್ತರ ಆಫ್ರಿಕದಿಂದ ಮಹತ್ವದ ವಾರ್ತೆಯೊಂದು ಬಂದಿದೆ. ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರೂ, ಬ್ರಿಟಿಷ್ ಪ್ರಧಾನಿ ಚರ್ಚಿಲರೂ ಉತ್ತರಾಫ್ರಿಕದ ಕಸಬ್ಲಾಂಕಾದಲ್ಲಿ ಹತ್ತು ದಿನಗಳ ವರೆಗೆ ಉಭಯ ಪಕ್ಷದ ಸಮರ ವಿಶಾರದರನ್ನೂ ಸೇರಿಸಿಕೊಂಡು ವಿಚಾರವಿನಿಮಯ ಮಾಡಿದರು. ಅದರ ಫಲವಾಗಿ ಉಭಯತರೂ ಅಖಿಲ ಜಗತ್ತಿನ ಯುದ್ಧನೀತಿಗೆ ಅನ್ವಯಿಸುವ ಮಹತ್ವದ ಯೋಜನೆಗಳುಳ್ಳ ಒಂದು ಒಪ್ಪಂದ ಮಾಡಿಕೊಂಡಿದ್ದಾರೆ. ಆ ಒಪ್ಪಂದದ ಮುಖ್ಯ ಸಾರಾಂಶವಿಂತಿರುವುದು. 1943ನೆಯ ವರ್ಷದಲ್ಲಿ ಅತ್ಯಂತ ಮಹತ್ವವಾದ ಸ್ಥಳಗಳನ್ನು ನೋಡಿಕೊಂಡು ಅಲ್ಲಿ ಹಿಟ್ಲರನೊಡನೆ ಹೋರಾಟ ಹೂಡಿ, ಸಾಧ್ಯವಾದ ಮಟ್ಟಿಗೆ ಹಿಟ್ಲರನ ಸೈನ್ಯದ ಹೋರಾಟದ ಹೊರೆಯನ್ನು ರಶ್ಯದ ರಣರಂಗದಿಂದ ನಿವೃತ್ತಿಗೊಳಿಸುವ ಮೂಲಕ ಸೋವಿಯೆಟ್ ವೀರರಿಗೆ ಹೆಚ್ಚಿನ ಅನುಕೂಲ ಪರಿಸ್ಥಿತಿಯನ್ನು ತಂದುಕೊಡುವುದು, ಈ ನಿರ್ಧಾರಕ್ಕೆ ಬೇಕಾದ ಯೋಜನೆಗಳೂ ಸಿದ್ಧವಾಗಿವೆಯಂತೆ. ಮತ್ತೆ ಅಲ್ಲಿ ನಡೆದ ಇನ್ನೊಂದು ಮಹತ್ವದ ಸಂಗತಿಯೆಂದರೆ ಫ್ರೆಂಚ್ ನಾಯಕದ್ವಯರಾದ ಡಿಗಾಲೆ ಜಿರಾಡರಲ್ಲಿ ಒಪ್ಪಂದವಾದುದು. ಉತ್ತರ ಆಫ್ರಿಕದಲ್ಲಿ ಮಿತ್ರರ ಯುದ್ಧ ನಿರ್ವಹಣಕ್ಕೆ ಆತಂಕಕಾರಿಯಾಗಿದ್ದು, ಯಾವ ನಿಶ್ಚಿತ ಧೋರಣವೂ ಇಲ್ಲದೆ, ಯಾವಾಗಲೂ ಅಪಾಯಶಂಕೆಯನ್ನು ಹುಟ್ಟಿಸುತ್ತಿದ್ದ ಈ ಉಭಯ ಫ್ರೆಂಚ್ ನಾಯಕರು ಈಗ ಒಂದು ಏಕಮತದ ಒಪ್ಪಂದಕ್ಕೆ ಬರುವಂತೆ ಮಾಡುವುದರಲ್ಲಿ ಚರ್ಚಿಲ್ ರೂಸ್‌ವೆಲ್ಟರು ಕೃತಾರ್ಥರಾದುದು ಬಹಳ ಮಹತ್ವದ ವಿಷಯವೇನೋ ಸರಿ.

ಈ ಸಮ್ಮೇಳನಕ್ಕೆ ಸ್ಟೆಲಿನ್ ಚಿಯಾಂಗ್ ಕೈಶೇಕರನ್ನೇನೋ ಆಹ್ವಾನಿಸಲಾಗಿತ್ತಂತೆ! ಅಂತೂ ಅವರಿಗೆ ಬರಲಾಗದಿದ್ದರೂ ಇಲ್ಲಿ ಆಗುವ ನಿಷ್ಕರ್ಷೆಗಳೇನೂ ಬಾಕಿ ಉಳಿಯಲಿಲ್ಲ. ಸ್ಟಾಲಿನರೇನೋ ರಶ್ಯದ ಜೀವನ ಮರಣದ ಸಂಗ್ರಾಮದಲ್ಲಿಯೇ ಮಗ್ನರಾಗಿರುವಾಗ, ಅವರಿಗೆ ಇಂಥಾ ಸಮ್ಮೇಳನಕ್ಕೆ ಬರಲು ಸಮಯವೆಲ್ಲಿ ದೊರಕಬೇಕು? ಯುರೋಪಿನ ಯುದ್ಧ ನಿರ್ವಹಣ ಕಾರ್ಯವನ್ನು ಆಲೋಚಿಸುವ ಸಮ್ಮೇಳನಕ್ಕೆ ಚಿಯಾಂಗ್ ಕೈಶೇಕರು ಬರದಿದ್ದರೂ ಹೆಚ್ಚಿನ ನಷ್ಟವೇನೂ ಇಲ್ಲ. ಅಂತೂ 1942ನೆಯ ವರ್ಷದ ಅಂತ್ಯವು ಮಿತ್ರರಿಗೆ ಬಹಳ ಅನುಕೂಲವಾಗಿ ಪರಿಣಮಿಸಿರುವಾಗ ಮುಂದಿನ ಈ ಮಹತ್ವಯೋಜನೆ ಮಾಡಲು ಸಹಜವಾಗಿ ಹೀಗೆ ಹುಮ್ಮಸು ಹುಟ್ಟಿರಬೇಕು. ಇನ್ನು ರಶ್ಯದ ಹೊರೆಯನ್ನಿಳಿಸಲು, ಜರ್ಮನಿ ಮೇಲೆ ಯಾವ ಕಡೆಯಲ್ಲಿ ಆಕ್ರಮಣ ಕಾರ್ಯ ಪ್ರಾರಂಭಿಸುವರೋ ನೋಡಬೇಕಾಗಿದೆ. ಆದರೆ 1942ರಲ್ಲಿ ಎಡೆಬಿಡದೆ ಹೇಳಲಾಗುತ್ತಿದ್ದ 'ದ್ವಿತೀಯ ರಣರಂಗ'ದ ವಿಚಾರಕ್ಕೂ ಈ ರಶ್ಯದ ಭಾರವನ್ನಿಳಿಸುವ ಸಲುವಾಗಿ ಹಿಟ್ಲರನನ್ನಿಡಿಯುವ ಯೋಜನೆಗೂ ಏನಾದರೂ ಸಂಬಂಧವುಂಟೇ ಎಂಬ ಕುರಿತು ನಮಗಿನ್ನೂ ಸ್ಪಷ್ಟೀಕರಣ ಸಿಗಲಿಲ್ಲ!

ಹಿಟ್ಲರ್ ಭಾಷಣ

ಇತ್ತ ಮಿತ್ರಪಕ್ಷದ ಮುಖಂಡರು ಹೀಗೆ ಸಮ್ಮೇಳನ ಸೇರಿ ಮುಂದಿನ ಕಾರ್ಯಯೋಜನೆಯನ್ನಳವಡಿಸುತ್ತಿರಲು, ಅತ್ತ ಹಿಟ್ಲರನೂ ತನ್ನ ನಿರ್ಧಾರವನ್ನು ಹೊರಗೆಡಹಿದ್ದಾನೆ. ನಾಜಿಗಳು ಅಧಿಕಾರಕ್ಕೆ ಬಂದ ಹತ್ತನೆಯ ವರ್ಷದ ಸಮಾರಂಭದಂದು ಹಿಟ್ಲರ್ ಕೊಟ್ಟ ಸಂದೇಶ ಭಾಷಣದಲ್ಲಿ, ಜರ್ಮನ್ ಜನತೆ ಇಂದಿನ ಹೋರಾಟದಲ್ಲಿ ಮಾಡಿದ ಅತುಲ ಬಲಿದಾನ, ಮುಂದಿನ ಭೀಷಣ ಬಲಿದಾನದ ಅವಶ್ಯಕತೆ ಮೊದಲಾದವುಗಳ ಕುರಿತು ವಿವರಿಸಿದನು. ಹಿಟ್ಲರನು ಅದರಲ್ಲಿ 1919ರಿಂದ ಜರ್ಮನರಿಗಾದ ಅನ್ಯಾಯವನ್ನು ವಿವರಿಸಿ ಬಾಲ್ಶೆವಿಸಂನಿಂದ ಯುರೋಪಿಗಾದ ಅಪಾಯವನ್ನು ತಿಳಿಸಿ, ಅದನ್ನು ಮುರಿದಿಕ್ಕುವ ನಿರ್ಧಾರದ ಗಂಭೀರಭಾಷಣವ ಮಾಡಿದನು 'ಇಂದಿನ ಯುದ್ಧದಲ್ಲಿ ಒಂದೋ ನಾವು ಗೆಲ್ಲಬೇಕು, ಇಲ್ಲವೇ ಅಳಿಯಬೇಕು. ಬೇರೆ ದಾರಿಯಿಲ್ಲ. ನಮ್ಮ ವೈರಿ (ರಶ್ಯ)ವು ಮಾಡುತ್ತಿರುವ ಹಾವಳಿಯನ್ನು ತಡೆಗಟ್ಟುವಲ್ಲಿ ನಾವು ಜೀವನ ಮರಣದ ಸಂಗ್ರಾಮ ಹೂಡಬೇಕು. 1932ರಿಂದ ನಾವು ನಾಜಿ ಜರ್ಮನಿಗಾಗಿ ಅದ್ಭುತ ಕೆಲಸ ಮಾಡಿದ್ದೇವೆ. ನಮ್ಮ ಮುಂದಿನ್ನ ಹೊಣೆಗಾರಿಕೆ ಇದಕ್ಕಿಂತಲೂ ಹೆಚ್ಚಿನದಿರುತ್ತದೆ. ಈ ಸಂಗ್ರಾಮದಲ್ಲಿ ನಾವು ಗಂಡಾಂತರವನ್ನೆದುರಿಸಬೇಕಾಗಬಹುದು, ಆದರೆ ಇದರಲ್ಲಿ ಸೋತರೆ ಜರ್ಮನಿಗೇನಾಗುವುದೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಹೋರಾಡಬೇಕು. ನಮ್ಮ ಹೋರಾಟದಲ್ಲಿ ಜಯವು ನಮಗೇನೂ ಸುಲಭವಲ್ಲ. ಅದಕ್ಕೆ ಅತುಲ ಬಲಿದಾನ ಮಾಡಬೇಕು. ದೇವರು ಪ್ರತಿಯೊಬ್ಬನನ್ನೂ, ಪ್ರತಿಯೊಂದು ದೇಶವನ್ನೂ ಈಗ ತಕ್ಕಡಿಯಲ್ಲಿಟ್ಟು ಪರೀಕ್ಷಿಸುತ್ತಾನೆ. ಈ ಪರೀಕ್ಷೆಯಲ್ಲಿ ನಾವು ಗೆಲಬೇಕು. ಎಷ್ಟು ಕಾಲ ಯುದ್ಧ ಬೆಳೆಯುತ್ತೋ ಅಷ್ಟು ನಮ್ಮ ಶಕ್ತಿ ಬೆಳೆಯುತ್ತಾ ಹೋಗುವುದು. ಏನಾದರೊಂದು ಇತ್ಯರ್ಥವಾಗುವವರೆಗೆ ನಾವು ವಿಶ್ರಾಂತಿ ಹೊಂದಕೂಡದು. ಲೋಕದಲ್ಲಿ ನಡೆಯುವುದನ್ನೆಲ್ಲಾ ನೋಡಲು ದೇವರಿದ್ದಾನೆ. ಆತನು ನ್ಯಾಯಮೂರ್ತಿ. ನಾವು ನಮ್ಮ ಕರ್ತವ್ಯಗಳನ್ನು ಮಾಡಬೇಕು. ಕೊನೆಗೆ ಒಂದು ದಿನ ನಮಗೆ ಸುದಿನ ಒದಗುವುದು. ಆಗ ನಾವು ಹೊಸ ಜಗತ್ತನ್ನು ನಿರ್ಮಿಸುವೆವು. ನಮ್ಮ ಗುರಿ ಅದೇ ಆಗಿದೆ'. ಇವು ಹಿಟ್ಲರನು ಜರ್ಮನ್ ಜನತೆಗಿತ್ತ ಸಂದೇಶ ಭಾಷಣದ ಕೆಲವು ಅಂಶಗಳು. ಅಂತೂ ಹಿಟ್ಲರನು ದೃಢ ನಿರ್ಧಾರದಿಂದ ಯುದ್ಧವನ್ನು ಮುಂದೆ ಸಾಗಿಸುವನೆಂಬುದಂತೂ ನಿಶ್ಚಯ!

ಜಪಾನಿನ ಸುದ್ದಿಯೇನು?

ಚಿತ್ತಗಾಂಗ್, ಫೆಣಿ, ಅಸಾಮ್, ಕಲ್ಕತ್ತ, ಪೂರ್ವ ಬಂಗಾಳ ಮೊದಲಾದ ಕಡೆ ಕೆಲವು ಊರಗಳಲ್ಲಿ ನಿರಂತರ ಬಾಂಬು ಸುರಿಸುತ್ತಿದ್ದು ಅನೇಕ ಅನಾಹುತಗಳನ್ನುಂಟುಮಾಡಿದ ಜಪಾನರು ಈಗ ಪುನಃ ತಟಸ್ಥರಾಗಿದ್ದಾರೆ. ಯಾಕೆ ಹೀಗಾಗಿದ್ದಾರೆಂಬುದು ಪ್ರತಿಯೊಬ್ಬನ ಪ್ರಶ್ನೆ. 'ಜಪಾನಿನ ಸುದ್ದಿಯೇನು?' ಎಂಬುದಾಗಿ ಇತ್ತೀಚೆಗೆ ಹಲವರು ಕೇಳತೊಡಗಿದ್ದಾರೆ. ನಮಗಂತೂ ಈ ವಿಷಯ ಏನೇನೂ ಹೇಳಬರುವುದಿಲ್ಲ. ಆದರೆ ಇಂದಿನ ಮೌನವನ್ನು ಜಪಾನರ ಅಸಾಮರ್ಥ್ಯವನ್ನಾಗಿ ಭಾವಿಸಿಕೊಳ್ಳುವುದು ಪ್ರಮಾದವಾದೀತು. ಕೆಲಕಾಲ ಭಾರತದ ನಗರ ಗ್ರಾಮಗಳಿಗೆ ಬಾಂಬಿಟ್ಟು, ಅದರ ಪ್ರತಿಕ್ರಿಯೆಯನ್ನು ಅರಿತುಕೊಂಡ ಜಪಾನು, ಈಗ ಮುಂದಿನ ಘನಘೋರ ಧಾಳಿಗೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡಿರಬಹುದೆಂದು ಊಹಿಸುವುದೂ ಒಂದು ರೀತಿಯಿಂದ ಸ್ವಾಭಾವಿಕವಿದೆ. ಮದ್ರಾಸಿನ ಗವರ್ನರರೇನೋ ನಮಗಿನ್ನು ಜಪಾನ್ ಧಾಳಿಯ ಭೀತಿಯಿಲ್ಲವೆಂದು ಭರವಸೆ ಕೊಟ್ಟಿದ್ದಾರೆ. ಆದರೆ ಸಂಯುಕ್ತಪ್ರಾಂತದ ಗವರ್ನರರು, ಕಾಶಿಯ ಮೇಲೆ ಶತ್ರುಧಾಳಿಯಾಗುವ ಸಂಭವವಿದೆಯೆಂದು ಹೇಳಿರುವರು. ಭವಿಷ್ಯವನ್ನು ನುಡಿಯುವುದರಲ್ಲಿ ಸತ್ಯತೆಯೇ ಇರಬೇಕೆಂದೇನೂ ಇಲ್ಲವಾದರೂ, ಹಾಗೆ ಸಂಯುಕ್ತಪ್ರಾಂತದ ಗವರ್ನರರು ಹೇಳಬೇಕಾದರೆ ಏನೋ ಆಧಾರವಿರಲೇ ಬೇಕು. ಆಸ್ಟ್ರೇಲಿಯದ ಮೇಲೆ ಜಪಾನರು ಧಾಳಿ ಮಾಡುವ ನಿಶ್ಚಯ ಮಾಡಿದ್ದರೂ, ಅಲ್ಲಿ ಅಮೆರಿಕನರು ಅವರಿಗೆ ಬಲವಾದ ಪೆಟ್ಟು ಕೊಟ್ಟುದರಿಂದ, ಜಪಾನರ ದೃಷ್ಟಿಯೀಗ ಭಾರತದತ್ತ ತಿರುಗಿರುವುದೆಂದು ಸಂಯುಕ್ತ ಪ್ರಾಂತದ ಗವರ್ನರರ ಅಭಿಪ್ರಾಯವಾಗಿದೆ. ಹೇಗಿದ್ದರೂ ಧಾಳಿಯ ಭೀತಿ ಹೋಯಿತೆಂದು ಕೈಕಟ್ಟಿ ಕುಳಿತಿರುವ ಸಮಯ ಇದಲ್ಲ. ಭಾರತೀಯರಾದರೂ ಜಪಾನ್ ಆಕ್ರಮಣವನ್ನು ಏಕಕಂಠದಿಂದ ಪ್ರತಿಭಟಿಸುತ್ತಾರೆಂಬುದು ಜಗದ್ವಿದಿತವಿದೆ. ಆದರೆ ಜನರ ಪ್ರತಿನಿಧಿತ್ವದ ಸರಕಾರವಿಲ್ಲದಿರುವಾಗ, ಜನತೆಯ ನ್ಯಾಯಾರುಹ ಉರಿದುಂಬಿಸಬಲ್ಲರು? ಸೆರೆಮನೆಯಲ್ಲಿರುವ ಮುಖಂಡರು ಸೈನ್ಯಸಂಗ್ರಹ ಮಾಡಬಲ್ಲರೇನು?

ಇತರ ಸುದ್ದಿಗಳು

ಚರ್ಚಿಲರು ಟರ್ಕಿಗೆ ಹೋಗಿ ಕೈರೋಗೆ ಮರಳಿರುವರು. ಟರ್ಕಿ ಅಧ್ಯಕ್ಷ ಇನೆನ್ಯು ಮತ್ತು ಇತರ ಅಧಿಕಾರಿಗಳೊಡನೆ ಬ್ರಿಟನು ಅಮೇರಿಕಗಳು ಟರ್ಕಿ ಸಂರಕ್ಷಣೆಗೆ ಹೋಗಿ ಸಾಹಾಯ ಮಾಡಬಹುದೆಂಬ ವಿಷಯ ಪೂರ್ಣ ಒಮ್ಮತವಾಯಿತೆಂದು ಸರಕಾರಿ ಪ್ರಕಟಣೆ ಸಾರಿದೆ. ಕಳೆದ ಮಹಾ ಯುದ್ಧದಲ್ಲಿ ದುರ್ದೈವದಿಂದ ಹರಿದು ಹೋಗಿದ್ದ ಟರ್ಕಿ ಬ್ರಿಟನುಗಳ ಸ್ನೇಹಸಂಬಂಧ ಪುನಃ ಕೂಡಿಕೊಂಡಿತೆಂದು ಚರ್ಚಿಲರು ಹೇಳಿದರು. ಚೀನದಲ್ಲಿ ಭಯಂಕರ ಬರಗಾಲವುಂಟಾಗಿದೆ. ಚೀನಾ ಜಪಾನು ಸಂಧಾನವಾಗುವ ಸುದ್ದಿಯೊಂದೂ ಹರಡಿದೆ. ರಶ್ಯಾ ಜರ್ಮನುಗಳೊಳಗೆ ರಾಜಿಯಾಗುವಂತೆ ಫ್ರೆಂಕೋ ಪ್ರಯತ್ನಿಸುತ್ತಾನೆಂದೂ ವಾರ್ತೆಯುಂಟು. ಸೊಲೊಮನಿನಲ್ಲಿ ತಿರುಗಿ ನೌಕಾ ಯುದ್ಧ ಪ್ರಾರಂಭವಾಗಿದೆ.

ಸ್ವದೇಶಾಭಿಮಾನಿ

ತಾರೀಖು 5-2-1948

ಆಹಾರದ ಬೆಲೆ

ನಮ್ಮ ದೇಶದಲ್ಲಿ ಇತ್ತೀಚೆಗೆ ಆಹಾರ ಪದಾರ್ಥಗಳಿಗೆ ಬೆಲೆ ಏರಲು ಕಾರಣವೇನೆಂಬ ವಿಷಯ ಅರ್ಥ ಶಾಸ್ತ್ರಜ್ಞರು ಗಂಭೀರ ವಿಚಾರ ಮಾಡತೊಡಗಿದ್ದಾರೆ. ಅವರು ಹೇಳುವ ಕಾರಣಗಳೆಂದರೆ, ಆಹಾರ ಪೂರೈಕೆ ಕಡಿಮೆಯಿರುವುದು ಮತ್ತು ನೋಟುಗಳು ಹೆಚ್ಚಾಗಿ ಬಳಕೆಗೆ ಬಂದು ರೂಪಾಯಿಯ ಬೆಲೆ ತಗ್ಗಿರುವುದು. ಭಾರತದಲ್ಲಿ ಈಗ ಆಹಾರ ಪದಾರ್ಥಗಳಿಗೆ ಬೆಲೆ ಏರಲು ಎರಡನೆಯ ಕಾರಣವೇ ಮುಖ್ಯವಾದುದೆಂದು ಹಲವರು ಅರ್ಥ ಶಾಸ್ತ್ರಜ್ಞರು ಹೇಳತೊಡಗಿದ್ದಾರೆ.

ಯುದ್ಧ ಪ್ರಾರಂಭವಾದಂದಿನಿಂದ ಸರಕಾರವು ನೋಟುಗಳನ್ನು ಹೆಚ್ಚುಹೆಚ್ಚಾಗಿ ತಯಾರಿಸತೊಡಗಿದ್ದರಿಂದ ರೂಪಾಯಿ ಬೆಲೆ ತಗ್ಗಿ ವಸ್ತುಗಳ ಧಾರಣೆ ಹೆಚ್ಚಿತು. ೧೯೩೯ರಲ್ಲಿ ೧೭೮ ಕೋಟಿ ರೂಪಾಯಿ ನೋಟುಗಳು ಚಲಾವಣೆಯಲ್ಲಿದ್ದರೆ ಮುಂದೆ ಏರುತ್ತಾ ಏರುತ್ತಾ ಹೋಗಿ ಈ ಜನವರಿ ೧೫ಕ್ಕೆ ೫೮೪ ಕೋಟಿ ರೂಪಾಯಿ ನೋಟುಗಳು ಚಲಾವಣೆಯಲ್ಲಿವೆ. ಹೀಗೆ ಜನರ ಕೈಯ್ಯಲ್ಲಿ ಬರಿಯೇ ನೋಟುಗಳು ಹೆಚ್ಚುತ್ತಾ ಬಂದುದರಿಂದಲೂ ಹಲವು ಕಾರಣಗಳಿಂದ ಸರಕುಗಳು ದೊರಕುವುದು ಈಗ ಕಠಿಣವಾದದ್ದರಿಂದಲೂ ಹೆಚ್ಚು ಬೆಲೆ ಕೊಟ್ಟು ಸಾಮಗ್ರಿ ಪಡೆಕೊಳ್ಳತೊಡಗಿ ವಸ್ತುಗಳ

[illegible] ಇದು ಮಾತ್ರವಲ್ಲದೆ ನೋಟುಗಳನ್ನು ಹೊರಡಿಸಬೇಕಾದರೆ ಸಾಧಾರಣವಾಗಿ ಅಷ್ಟು ಬೆಲೆಯ ಬಂಗಾರವನ್ನು ಸ್ಟರ್ಲಿಂಗನ್ನು ಭಾರತದ ಸರಕಾರದ ಸಾಲ ಪತ್ರ ಅಥವಾ ರೂಪಾಯಿಗಳನ್ನು ಆಧಾರವಾಗಿ ಇಡಲಾಗುತ್ತದೆ. ಆದರೆ ಬಂಗಾರ ಮಾತ್ರ ಈಗ ಕಾಣಲಿಕ್ಕೇ ದುರ್ಲಭವಾಗಿದೆ. ಸ್ಟರ್ಲಿಂಗ್ ಮತ್ತು ಭಾರತ ಸರಕಾರದ ಸಾಲ ಪತ್ರಗಳನ್ನು ಮಾತ್ರ ಇಡಲಾಗುತ್ತದೆ. ಸಾಲದ್ದಕ್ಕೆ ಈಗ ನಮ್ಮ ದೇಶಕ್ಕೆ ಬರುವ ವಸ್ತುಗಳಿಗಿಂತ ಹೋಗುವ ವಸ್ತುಗಳೇ ಹೆಚ್ಚಾಗಿವೆ. ಇದರ ಮೇಲೆ ಇಲ್ಲಿ ಬಂದು ತಳವೂರಿರುವ ಅಮೆರಿಕವೇ ಮೊದಲಾದ ವಿದೇಶದ ಸೈನಿಕರ ವೆಚ್ಚದ ಭಾರವೂ ಈ ದೇಶದ ಮೇಲೆಯೇ ಬಿದ್ದಿದೆ. ಈ ವೆಚ್ಚವನ್ನು ಇಂಗ್ಲೆಂಡಿನಲ್ಲಿ ಸ್ಟರ್ಲಿಂಗ್ ರೂಪದಲ್ಲಿ ಹಾಗೂ ಭಾರತದ ಸಾಲಪತ್ರಗಳ ರೂಪದಲ್ಲಿ ಕೊಡುತ್ತಿರುವುದರಿಂದ ಈಗ ಸ್ಟರ್ಲಿಂಗ್ ಮತ್ತು ಸಾಲಪತ್ರಗಳೇ ಹೆಚ್ಚಿವೆ.

ಹೀಗೆ ಹೆಚ್ಚುತ್ತಿರುವ ಸ್ಟರ್ಲಿಂಗ್ ಸಾಲ ಪತ್ರಗಳಿಗನುಸಾರವಾಗಿ ಭಾರತ ಸರಕಾರದವರು ಹೊರಡಿಸುತ್ತಿರುವ ನೋಟುಗಳು ಮಿತಮೀರಿರುವುದೇ ಇಂದು ಆಹಾರ ಸಾಮಗ್ರಿಗಳಿಗೆ ಬೆಲೆಯೇರಲು ಒಂದು ಮುಖ್ಯ ಕಾರಣವಾಗಿದೆಯೆಂದು ಅರ್ಥ ಶಾಸ್ತ್ರಜ್ಞರ ಸಿದ್ಧಾಂತವಾಗಿದೆ. ಜನರ ಮುಂದೆ ವ್ಯಾಪಾರಿಗಳನ್ನೂ, ವರ್ಗದಾರರನ್ನೂ ದೂರುವ ಕೆಲಸ ಮಾತ್ರ ಮಾಡುವುದಕ್ಕಿಂತ ಸರಕಾರವು ನಿಜವಾದ ಕಾರಣವನ್ನು ಕಂಡುಹುಡುಕಿ ತಕ್ಕ ಪರಿಹಾರ ಕಾರ್ಯವನ್ನು ಕೂಡಲೇ ಕೈಕೊಳ್ಳುವುದು ಅವಶ್ಯವಾಗಿದೆ.

ಬಾವು ಮತ್ತು ರಕ್ತ ವಿಷವೇರುವುದನ್ನು ತಡೆಯಿರಿ.

ಜ್ಯಾಂಬಕ್ ಆದರ್ಶ ವಿಷಹಾರ ಔಷಧ

ಗಣ್ಯಮಾಡದ ಗಾಯವು, ವಿಷರೂಪಿಯಾಗಿ ನೋವು ಮತ್ತು ಸಂಕಷ್ಟಗಳನ್ನುಂಟುಮಾಡುತ್ತದೆ. ಇದನ್ನು ಯಾವಾಗಲೂ ಗಾಯವಾದ ಕೂಡಲೇ ಜಾಂಬಕ್ ಲೇಪ ಸವರುವುದರಿಂದ ಪರಿಹರಿಸಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ಶುದ್ಧ ವನಸ್ಪತಿ ತೈಲವು ಚರ್ಮಕ್ಕೆ ಬೇಗನೇ ಅಂಟಿಕೊಂಡು ನೋವನ್ನು ಕಡಿಮೆಮಾಡಿ, ಬಾವನ್ನು ಇಳಿಸಿ, ಹೀಗೆ ಎಲ್ಲಾ ತರದ ಗಾಯ ವ್ರಣಗಳ ಕೊಳೆ ವಸ್ತುಗಳನ್ನು ಹೊರಹಾಕುತ್ತದೆ. ಜಾಂಬಕ್ ಕಲೆಯಿಲ್ಲದೆ ಗುಣಮಾಡುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ರೂಪಾಯಿ ಬಿಲ್ಲೆದು ಅಥವಾ ರೂ. 2-4-0 ಜಾಂಬಕ್ ಸೋಪಿನ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಕೊಬ್ಬು ವಿರಹಿತವಾದುದು.

ಸ್ಥಳೀಯ ಸಮಾಚಾರ

ದೇಶವಿದೇಶಗಳಲ್ಲಿಯೂ ಸ್ವಾತಂತ್ರ್ಯ ದಿನಾಚರಣೆ

ಭಾರತದ ಸ್ವಾತಂತ್ರ್ಯ ದಿನಾಚರಣೆಯು ಜನವರಿ ೨೬ರಂದು ದೇಶವಿದೇಶಗಳಲ್ಲಿ ಜರಗಿತು. ಲಂಡನಿನಲ್ಲಿ ಭಾರೀ ಸಭೆ ಜರಗಿ ರಾಷ್ಟ್ರಗೀತೆ ಹಾಡಿ, ಭಾರತಕ್ಕೆ ಸ್ವಾತಂತ್ರ್ಯ ದಾನ ಮಾಡಬೇಕೆಂದೂ ಭಾರತೀಯರೂ, ಐರೋಪ್ಯ ಗೃಹಸ್ಥರು ಕೆಲವರೂ ಭಾಷಣಮಾಡಿದರು. ಅಮೆರಿಕದಲ್ಲಿ ಭಾರಿ ಪ್ರದರ್ಶನ ನಡೆದು ಬ್ರಿಟಿಷ್ ರಾಯಭಾರೀ ಕಚೇರಿ ಮುಂದೆ ಪಿಕೆಟಿಂಗ್ ಕೂಡಾ ಜರಗಿ, ಹಲವರು ಇವರಲ್ಲಿ ಮಹಿಳೆಯರೂ, ಧರ್ಮೋಪದೇಶಕರೂ, ಐರೋಪ್ಯರೂ ಇದ್ದಾರೆ, ಬಂಧಿಸಲ್ಪಟ್ಟಿದ್ದಾರೆ. ಭಾರತ ನಗರ ಗ್ರಾಮಗಳಲ್ಲಿ ಈ ಸಂಬಂಧ ಸಭೆ, ಮೆರವಣಿಗೆ, ಬಂಧನ, ಲಾಠಿಪೆಟ್ಟು, ಗುಂಡು ಹಾರಿಸುವಿಕೆಗಳೂ ನಡೆದಿವೆ. ಅಹಮ್ಮದಾಬಾದಿನಲ್ಲಿ ಈ ದಿನ ಪ್ರದರ್ಶನಕಾರರಾದ ಜನರ ಮೇಲೆ ಪೋಲೀಸರು ಗುಂಡುಹಾರಿಸಿದ್ದರು. ಮುಂಬಯಿಯಲ್ಲಿಯೂ ಬೇರೆ ಕಡೆಗಳಲ್ಲಿ ಪ್ರದರ್ಶನವಾಗಿ ಹಲವರ ಬಂಧನವಾಗಿದೆ; ಐದು ಗಿರಣಿಗಳು ಮುಚ್ಚಲ್ಪಟ್ಟಿವೆ, ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಕೆಲವು ಪೇಟೆಗಳೂ ಮುಚ್ಚಲ್ಪಟ್ಟಿವೆ. ಮಹಿಳೆಯರೂ ಮೆರವಣಿಗೆ ತೆಗೆದು ಸುಮಾರು ನೂರು ಮಂದಿ ಬಂಧಿಸಲ್ಪಟ್ಟಿದ್ದಾರೆ. ಸೂರತ್‌ನಲ್ಲಿ ಸಭೆ ಮೆರವಣಿಗೆಯನ್ನು ಪೋಲೀಸರು ಬಡಿದು ಚದರಿಸಿ ಐದು ಜನ ಮಹಿಳೆಯರನ್ನು ಬಂಧಿಸಿದರು. ಕರಾಚಿಯಲ್ಲಿ ಈ ದಿನಾಚರಣೆ ನಿಮಿತ್ತ ೫೦ ಜನರ ಬಂಧನವಾಗಿದೆ. ಕರಾಚಿಯಲ್ಲಿ ಐದು ಜನರು ಆ ದಿನ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ನುಗ್ಗಿ ಕಾಂಗ್ರೆಸ್ ಘೋಷಣೆ ಮಾಡಿ ಗೋಡೆಗೆ ರಾಷ್ಟ್ರಧ್ವಜ ಹಚ್ಚಿದರು. ಅವರನ್ನು ಬಂಧಿಸಿ ಶಿಕ್ಷಿಸಲಾಗಿದೆ. ಲಖನೌನಲ್ಲಿಯೂ ಹಲವರ ಬಂಧನವಾಗಿದೆ. ಪಾಟ್ನಾದಲ್ಲಿ ಈ ನಿಮಿತ್ತ ೧೦ ಮಂದಿ ಸ್ತ್ರೀಯರು ಸಮೇತ ೫೦ ಜನರನ್ನು ಸೆರೆಹಿಡಿದಿದ್ದರು. ಕಟಕಿನಲ್ಲಿ ಕಾಂಗ್ರೆಸ್ ಧ್ವಜವೇರಿಸಿ ಭಾಷಣಮಾಡಲು ಪ್ರಯತ್ನಿಸಿದ ಕೆಲವರನ್ನು ಸೆರೆಹಿಡಿಯಲಾಗಿದೆ. ರೆವೆನ್ಯೂ ಕಮಿಶನರ ಕಚೇರಿಗೆ ಧ್ವಜವೇರಿಸಲು ಪ್ರಯತ್ನಿಸಿದ ಕೆಲವರನ್ನೂ ಬಂಧಿಸಲಾಗಿದೆ. ಕರ್ನಾಟಕದ ಪೇಟೆ ಪಟ್ಟಣ ಗ್ರಾಮಗಳಲ್ಲಿಯೂ ಈ ದಿನ ಆಚರಿಸಲ್ಪಟ್ಟಿದೆ.

ಜಿನ್ನಾ ಹೇಳುತ್ತಾರೆ.

ಸದ್ಯದ ಬಿಕ್ಕಟ್ಟನ್ನು ಬಿಡಿಸುವ ಬೀಗದ ಕೈ ಗಾಂಧಿಜಿ ಹಾಗೂ ಕಾಂಗ್ರೆಸಿನ ಕೈಯ್ಯಲ್ಲಿದೆ ಎಂದು ಅದ್ದರಿಂದ ಗಾಂಧಿಜಿ ಮತ್ತು ಕಾಂಗ್ರೆಸು ಹೃತ್ಪೂರ್ವಕ ಇಚ್ಛೈಸಿದರೆ ಬಿಕ್ಕಟ್ಟು ಬಿಡಿಸಬಹುದೆಂದೂ ಅವರು ಹೇಳುತ್ತಾರೆ. ಆದರೆ ಕಾಂಗ್ರೆಸ್ ಮುಖಂಡರನ್ನು ಸೆರೆಮನೆಗೆ ಹೋಗಲು ತಾ ಹೇಳಿಲ್ಲವಾದ್ದರಿಂದ ಅವರ ಬಿಡುಗಡೆಗೂ ನಾನು ಶಕ್ತನಾಗಲಾರೆನೆಂದು ಅವರ ವಾದ. ಪಾಕಿಸ್ತಾನವನ್ನು ಮಾತ್ರ ಅವರಿಗೆ ಕೊಡಲೇಬೇಕಂತೆ!

ಕರ್ನಾಟಕದಲ್ಲಿ ಇಮ್ಮಡಿ ಖಾದಿ

ಉತ್ಪತ್ತಿ ೧೯೪೩ನೇ ಇಸವಿಯಲ್ಲಿ ಮಾಡಬೇಕೆಂಬ ಯೋಜನೆಯನ್ನು ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಚರಕಾ ಸಂಘದ ಕೆಲಸಗಾರರು ಮಾಡಿದ್ದಾರೆ. ಕರ್ನಾಟಕದ ಕೆಲವೂರುಗಳಲ್ಲಿ ಬರಗಾಲವಿರುವುದರಿಂದ ಅಲ್ಲಿ ನೂಲುವ ನೇಯುವ ಕಾರ್ಯವನ್ನು ಭರದಿಂದ ಕೈಕೊಳ್ಳಲಾಗುವುದು. ಹಲವು ಕಡೆಗಳಲ್ಲಿ ಈಗಾಗಲೇ ಹೊಸ ನೂಲು ನೇಯ್ಗೆ ಕೇಂದ್ರ ತೆರೆದು ಖಾದಿ ಕೆಲಸಗಾರರು ಶ್ರಮವಹಿಸಿ ದುಡಿಯುತ್ತಿದ್ದಾರೆ.

ಮೌಲ್ವಿ ಅಹಮ್ಮದ್ ಮುಬಾರಕ್

ಎಂಬ ಅಸಾಮ್ ಪ್ರಾಂತಸಿಲೆಟ್ಟಿನ ಪ್ರಮುಖ ವಕೀಲರೂ, ಹಾಗೂ ಮುನ್ಸಿಪಲ್ ಸದಸ್ಯರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ.

'ಜನ್ಮ ಭೂಮಿ' ಪತ್ರಿಕೆಗೆ ದಂಡ

ಮುಂಬಯಿಯ ಜನ್ಮ ಭೂಮಿ ಪತ್ರಿಕೆಗೆ ವಿಧಿಸಿದ್ದ ದಂಡದಲ್ಲಿಯ ರೂ. ೧೫೦೦ ದಂಡವನ್ನು ಜಪ್ತಿಮಾಡಿ ಮತ್ತೆ ರೂ. ೩೦೦೦ ಹೊಸದಾಗಿ ಕೇಳಿದ್ದರ ಬಗ್ಗೆ ಅವರು ಅಪೀಲುಮಾಡಿರುವರು

ಆಹಾರದ ಕೊರತೆಗೆ ಕಾರಣವೇನು?

ಎರಡು ದಿನವು ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಶ್ರೀ ರಾಧಾಕಮಲ ಮುಖರ್ಜಿಯವರೊಂದು ಲೇಖನ ಬರೆದಿರುವರು. ಅದರಲ್ಲಿ ಅವರು ಹೀಗೆಂದಿದ್ದಾರೆ: 'ಸಾಮಾನ್ಯ ಸ್ಥಿತಿಯಲ್ಲೇ ಭಾರತದಲ್ಲಿ ೪ ಕೋಟಿ ೮೦ ಲಕ್ಷ ಜನರಿಗೆ ಆಹಾರದ ಕೊರತೆಯಿದೆ. ಆಹಾರ ಉತ್ಪತ್ತಿಯ ಪ್ರಮಾಣಕ್ಕಿಂತ ಪ್ರಜಾಭಿವೃದ್ಧಿ ಹೆಚ್ಚಾಗಿ ಮತ್ತು ಆಹಾರದ ಕೊರತೆ ದಿನಂದಿನಕ್ಕೆ ಏರುತ್ತದೆ. ೧೯೦೦ರಿಂದ ೧೯೩೮ರ ವರೆಗೆ ಶೇಕಡಾ ೨೫ರಷ್ಟು ಪ್ರಜಾಭಿವೃದ್ಧಿಯಾಗುತ್ತಿರುವಾಗ, ಆಹಾರದಲ್ಲಿ ಶೇಕಡಾ ೭ರಷ್ಟು ನ್ಯೂನತೆಯೇ ಕಂಡುಬರುತ್ತದೆ. ಮಾತ್ರವಲ್ಲದೆ ಅಕ್ಕಿ ಗೋಧಿ ಮೊದಲಾದ ಆಹಾರವಸ್ತುಗಳು ಬೆಳೆಯುವ ಸ್ಥಳಗಳು ಕಡಿಮೆಯಾಗುತ್ತಿದ್ದು, ಜವೆ ಗೋಧಿ, ಜೋಳ, ಸಜ್ಜೆ ಮೊದಲಾದ ಅಪ್ರಾಮುಖ್ಯ ಧಾನ್ಯ ಬೆಳೆಯುತ್ತದೆ. ಇದರಿಂದ ಭಾರತದ ಜನರ ಆಹಾರದಲ್ಲಿ ಪೌಷ್ಟಿಕವಸ್ತು ಕಡಿಮೆಯಾಗುತ್ತಿದೆ. ಈಗಿನ ಯುದ್ಧದಿಂದಾಗಿ ಈ ಕೊರತೆ ಇನ್ನಷ್ಟು ಭಯಂಕರವಾಗಿದೆ. ಬರ್ಮಾ, ತಾಯಿಲೆಂಡು, ಇಂಡೋ ಚೀನಗಳಿಂದ ೧೯೩೯ರಿಂದ ೨೫ ಲಕ್ಷ ಟನ್ ಅಕ್ಕಿ ನಮ್ಮ ದೇಶಕ್ಕೆ ಬರುತ್ತಿತ್ತು. ಒಟ್ಟು ನಮ್ಮ ದೇಶದಲ್ಲಿ ಅಕ್ಕಿ ಉಣ್ಣುವ ೨೪ ಕೋಟಿ ಜನರಲ್ಲಿ ೧ ಕೋಟಿ ೨೦ ಲಕ್ಷ ಜನರಿಗೆ ಅಕ್ಕಿ ಹೊರಗಿಂದ ಬರುತಿತ್ತು. ಈಗ ಅದು ಪೂರ್ಣ ನಿಂತಿದೆ. ಸಾಲದ್ದಕ್ಕೆ ಈಗ ಅಕ್ಕಿ ಉತ್ಪಾದನೆ ೫೧ ಲಕ್ಷ ಟನ್ ಪ್ರಮಾಣ ಕಡಿಮೆ ಆಗಿದೆ. ಮೊದಲು ಬರ್ಮಾ ಮೊದಲಾದೆಯಿಂದ ಬರುತ್ತಿದ್ದ ೨೪ ಲಕ್ಷ ಟನ್ ಅಕ್ಕಿಯನ್ನೂ ಸೇರಿಸಿಕೊಂಡರೆ ಈ ವರ್ಷ ಅಕ್ಕಿಯಲ್ಲಿ ೭೫ ಲಕ್ಷ ಟನ್ ಕಡಿಮೆ ಆಯಿತು. ಗೋದಿಯಾದರೂ ಕಳೆದ ವರ್ಷಗಳಲ್ಲಿ ಸರಾಸರಿ ೧ ಕೋಟಿ ಟನ್ ಬೆಳೆದಿದೆ. ಈ ವರ್ಷ ಅದರ ಉತ್ಪತ್ತಿ ೬೦ ಸಾವಿರ ಟನ್ ಬೆಳೆದಿದೆ, ೧೯೪೧-೪೨ರಲ್ಲಿ ಗೋಧಿ ನಿರ್ಯಾತ ೧,೬೦೦೦೦ ಟನ್ ಗೋದಿ ಹಿಟ್ಟಿನದು ೬೨೦೦೦ ಟನ್; ಯುದ್ಧದ ದೆಸೆಯಿಂದ ಹಿಂದುಸ್ಥಾನದಲ್ಲಿ ಗೋದಿ ಬೇಡಿಕೆ ೫೦೦,೦೦೦ ಟನ್ ಹೆಚ್ಚಾಗಿದೆ, ಹೀಗೆ ಲೆಕ್ಕಹಾಕಿದರೆ ಸದ್ಯ ಭಾರತದಲ್ಲಿ ಗೋದಿ ಕೊರತೆ ೪,೬೦,೦೦೦ ಟನ್‌ದಷ್ಟಿದೆ. ಇಂದಿನ ಆಹಾರ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ ನಮ್ಮ ದೇಶದಲ್ಲಿ ೪೦ ಕೋಟಿ ಪ್ರಜೆಗಳಲ್ಲಿ ೬ ಕೋಟಿ ೬೦ ಲಕ್ಷ ಜನರಿಗೆ ಆಹಾರವಿಲ್ಲ.

ಭಾಗಲ್‌ಪುರ ಜೈಲ್ ದೊಂಬಿ ಖಟ್ಲೆ

ಯ ಅಪೀಲಿನಲ್ಲಿ ಹೈಕೋರ್ಟಿನವರು ಮೂವರ ಮರಣ ದಂಡನೆಯನ್ನು ಕಾಯಂ ಮಾಡಿ, ಇಬ್ಬರ ಮರಣ ಶಿಕ್ಷೆ ರದ್ದು ಮಾಡಿರುವರು.

ಜೋಶಿಯವರ ಠರಾವು

ಮಹಾತ್ಮಾಜಿಯವರನ್ನು ಕಂಡು ವಿಚಾರವಿನಿಮಯ ಮಾಡಲು ಅಸ್ಪದಕೊಡದಿರುವ ವಿಷಯ ಕೇಂದ್ರ ಎಸೆಂಬ್ಲಿಯಲ್ಲಿ ಚರ್ಚಿಸಲು ಶ್ರೀ ಎನ್. ಎಂ. ಜೋಶಿಯವರು ಒಂದು ಠರಾವು ಮಂಡಿಸಲು ಸೂಚನೆಯಿತ್ತಿರುವರು.

ಸಂಪಾದಕರಿಗೆ ಶಿಕ್ಷೆ

'ಸಿಂಧ್ ಒಬ್ಸರ್ವರ್' ಪತ್ರಿಕೆಯ ಸಂಪಾದಕರಾದ ಶ್ರೀ ಪುನ್ನಯ್ಯನವರು ಕೋರ್ಟಿನ ಅಪಮಾನಮಾಡಿ ಲೇಖನ ಬರೆದರೆಂದು ಅವರಿಗೆ ೫೦೦ ರೂ. ದಂಡ; ಇಲ್ಲವೇ ೬ ತಿಂಗಳ ಶಿಕ್ಷೆ ವಿಧಿಸಿರುವರು. 'ನೇಶನಲ್ ಹೆರಾಲ್ಡ್' ಪತ್ರಿಕೆಯ ಸಂಪಾದಕರಿಗೆ ವಿಧಿಸಿದ ಶಿಕ್ಷೆಯನ್ನು ಟೀಕಿಸಿ ಬರೆದದ್ದೇ ಇವರ ಅಪರಾಧ!

ಈಚೆಗೆ ಸರ್ ಕ್ರಿಪ್ಸರು

ಬುದ್ಧಿ ಕಲಿತಂತೆ ತೋರುತ್ತದೆ. ತನ್ನ ಯೋಜನೆಯನ್ನು ನಿರಾಕರಿಸಲು ಗಾಂಧಿಜಿ ವ್ಯಕ್ತಿಶಃ ಕಾರಣರಲ್ಲ, ಅವರ ಪ್ರಭಾವ ಕಾಂಗ್ರೆಸಿನಲ್ಲಿರುವುದರಿಂದ ಹಾಗಾಯಿತು. ಆದರೆ ಭಾರತ ಸಮಸ್ಯೆ ಬಿಡಿಸಬೇಕಾದರೆ ನಾವು ಕಾಂಗ್ರೆಸಿನ ಸಖ್ಯ ಪಡೆಯಲೇ ಬೇಕು. ಗಾಂಧಿಜಿ ಯುಗ-ಪುರುಷರು ಮುಂತಾಗಿ ಸರ್ ಕ್ರಿಪ್ಸರು ಈಚೆಗೆ ಹೇಳಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ. ಪ್ರಭಾಕರ ಶೇಟರ ಬಂಧನ

ಆಗಸ್ಟ್ ತಿಂಗಳಲ್ಲಿ ಬಂಧಿಸಲ್ಪಟ್ಟು ಸೆರೆಮನೆ ವಾಸ ತೀರಿಸಿ ಮಂಗಳೂರಿಗೆ ಮರಳಿ ಬಂದಿದ್ದ ಶ್ರೀ. ಪ್ರಭಾಕರ ಶೇಟರು ಪುನಃ ಬಂಧಿಸಲ್ಪಟ್ಟಿರುವರು.

ಡಾ। ಯು. ಪಿ ಮಲ್ಯರಿಗೆ ಡಿಟೆನ್ಯನ್

ವಿಧಿಸಿ ವೆಲ್ಲೂರು ಸೆರೆಮನೆಗೊಯ್ದಿರುವರೆಂ ತಿಳಿದುಬರುತ್ತದೆ.

ಶ್ರೀ. ಪಿ. ದಯಾನಂದ ನಾಯಕರ ಬಂಧನ

ಪಾಂಗಾಳ ನಾಯಕ್ ಬೇಂಕಿನ ಹೊಸದುರ್ಗ ಶಾಖೆಯ ಏಜೆಂಟರಾದ ಶ್ರೀ ಪಿ ದಯಾನಂದ ನಾಯಕ್ ಬಿ ಎ ಬಿ. ಎಲ್ ಇವರ ಮನೆಯನ್ನು ಶೋಧಿಸಿ, ಕೆಲವು ಪ್ರಕಟಣೆಗಳನ್ನು ಪೋಲೀಸರು ವಶಪಡಿಕೊಂಡು, ತಾ ೩೦ರಂದು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಇವರನ್ನು ಹೊಸದುರ್ಗದಲ್ಲಿ ಬಂಧಿಸಿ ಕಾಸರಗೋಡು ಸಬ್ ಜೈಲಿಗೆ ತಂದಿರಿಸಿದ್ದಾರೆ

ನೀಲೇಶ್ವರ-ಸ್ವಾತಂತ್ರ್ಯ ದಿನಾಚರಣೆ ವಿದ್ಯಾರ್ಥಿಗಳ ಬಂಧನ

ತಾ ೨೬ರಂದು ನೀಲೇಶ್ವರ ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು ಹೈಸ್ಕೂಲಿನ ಮುಂಭಾಗದಲ್ಲಿರುವ ಮೈದಾನಿನಲ್ಲಿ ಬೆಳಗ್ಗೆ ೧೦ ಗಂಟೆಗೆ ಧ್ವಜವಂದನೆಯನ್ನು ನಡೆಸುತ್ತಿದ್ದಾಗ ಸರ್ಕಲ್ ಮತ್ತು ಸಬ್ ಇನ್‌ಸ್ಪೆಕ್ಟರರು ಬಂದು ಧ್ವಜವನ್ನು ಮುರಿದು ಹಾಕಿದರು. ಶ್ರೀಧರನ್ ನಂಬ್ಯಾರ್ ಮತ್ತು ಕರುಣಾಕರನ್ ನಂಬ್ಯಾರ್ ಎಂಬಿಬ್ಬ ವಿದ್ಯಾರ್ಥಿಗಳನ್ನು ಹಿಡಿದು ರಿಸರ್ವ ಪೋಲೀಸರ ಕೇಂಪಿಗೊಯ್ದು ವಿಚಾರಣೆ ನಡೆಸಿ ಕರುಣಾಕರನ್ ನಂಬ್ಯಾರರನ್ನು ಬಿಟ್ಟು ಶ್ರೀಧರನ್ ನಂಬ್ಯಾರರನ್ನು ಬಂಧಿಸಿರುವರು ಬಳಿಕ ಶ್ರೀಯುತರು ಕೆ ಕುಂಞಕೃಷ್ಣನ್, ಟಿ ಕೆ ಗೋವಿಂದನ್ ಮತ್ತು ಕುಂಞಿರಾಮ ಪೊದುವಾಳ ಎಂಬ ಮೂವರನ್ನು ಬಂಧಿಸಿ ಶ್ರೀಧರನ್ ನಂಬ್ಯಾರರೊಡನೆ ಹೊಸದುರ್ಗಕ್ಕೆ ಕೊಂಡೊಯ್ದರು

ದ ಕ ಜಿಲ್ಲೆಯಿಂದ ಹೊರಹೋಗ ಕೂಡದು

ಮುಂದಿನ ಅಪ್ಪಣೆಯಾಗುವ ವರೆಗೆ ಈ ಜಿಲ್ಲೆಯಿಂದ ಅಕ್ಕಿ ಬತ್ತ ಹೊರ ಸಾಗದಂತೆ ಜಿಲ್ಲಾ ಅಧಿಕಾರಿಗಳ ಅಪ್ಪಣೆಯಾಗಿದೆ

ಜಿಲ್ಲಾ ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿ, ಮಂಗಳೂರು

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಯಂ. ಯಲ್ ಸಿ, ಶ್ರೀ ಕೆ ಬಿ ಜಿನರಾಜ ಹೆಗ್ಡೆ ಯಂ ಯಲ್. ಎ (ಸೆಂಟ್ರಲ್) ರಾವ್ ಸಾಹೇಬ್ ಪಿ ಆರ್ ರಂಗನಾಥ ಪುಂಜ, ಗಂಗೊಳ್ಳಿ ದತ್ತಾತ್ರಯ ರಾವ್ (ಮಾಜಿ) ಟ್ರೆಜರಿ ಡಿಪ್ಯೂಟಿ ಕಲೆಕ್ಟರ್ ಮತ್ತು ಮೊಳಹಳ್ಳಿ ಶಿವರಾವ್ ಇವರು ಈ ಸಮಿತಿಯ ಅಕ್ಕಿನಿಧಿಗೆ ಅಕ್ಕಿ ಸಂಗ್ರಹಿಸುವ ಬಗ್ಗೆ ಮಾಡಲಿರುವ ಪ್ರವಾಸದ ಕಾರ್ಯಕ್ರಮ —

ಫೆಬ್ರುವರಿ ತಾ ೨— ಪೂ ಗ ೯— ಗಂಗೊಳ್ಳಿ ಅ. ಗ ೨— ಗಂಗೊಳ್ಳಿಯಿಂದ ನಿರ್ಗಮನ, ದಾರಿಯಲ್ಲಿ ಕಿರಿಮಂಜೇಶ್ವರ— ಖಂಬದಕೋಣೆ— ಉಪ್ಪುಂದ. ಅ. ಗ ೫-೩೦— ಬೈಂದೂರು— ಆಗಮನ ಫೆಬ್ರುವರಿ ತಾ ೩— ಪೂ ಗ ೯— ಕುಂದಾಪುರ, ಅ. ಗ ೨— ಬಸ್ರೂರು— ಅ ಗ ೩—೩೦— ಕೋಟೇಶ್ವರ— ದಾರಿಯಲ್ಲಿ—ಕೋಟ— ಕಲ್ಯಾಣಪುರ, ಅ. ಗ. ೬-೩೦ ಉಡುಪಿ ಫೆಬ್ರುವರಿ ತಾ ೪— ಪೂ ಗ. ೮— ಮಲ್ಪೆ— ಪೂ ಗ ೧೦— ಹಿರ್ಗ—ದಾರಿಯಲ್ಲಿ ಉದ್ಯಾವರ—ಮಧ್ಯಾಹ್ನ—೧೨— ಕಟಪಾಡಿ— ಅ ಗ. ೨-೩೦— ಕಾಪು— ಅ. ಗ ೩-೩೦-ಶಿರ್ವ— ದಾರಿಯಲ್ಲಿ—ಬೆಳ್ಮಣ್ಣು— ಪಡುಬಿದ್ರಿ. ಅ. ಗ. ೬-೩೦— ಮೂಲ್ಕಿ—ಆಗಮನ. ತಾ. ೫— ಪೂ ಗ. ೮-೩೦ ಮೂಲ್ಕಿಯಿಂದ ನಿರ್ಗಮನ, ದಾರಿಯಲ್ಲಿ ಕಿನ್ನಿಗೋಳಿ ಮುಂಡ್ಕೂರು—ಕಟೀಲು—ಬಜ್ಪೆ ಅ. ಗ. ೧೨ ೪೦ ಹಳೆ ಅಂಗಡಿ ಆಗಮನ ಅ. ಗ. ೩-೩೦ ಸುರತ್ಕಲ್ ಆಗಮನ, ದಾರಿಯಲ್ಲಿ ಪಣಂಬೂರು ಅ. ಗ. ೬ ಮಂಗಳೂರು ಆಗಮನ. ಫೆಬ್ರುವರಿ ತಾ. ೭ ಪೂ. ಗ. ೮ ಮಂಗಳೂರಿನಿಂದ ನಿರ್ಗಮನ - ಪೂ. ಗ. ೧೧ ಹಿರಿಯಡ್ಕ ಆಗಮನ, ದಾರಿಯಲ್ಲಿ ಬೈಲೂರು ಅ ಗ. ೧೨-೩೦ ಕಾರ್ಕಳ ಆಗಮನ ಅ. ಗ. ೩-೩೦ ಮಿಯಾರು ಆಗಮನ, ಅ ಗ. ೭ ಮೂಡಬಿದ್ರಿ ಆಗಮನ. ಫೆಬ್ರುವರಿ ತಾ. ೯ ಪೂ. ಗ ೮ ೩೦ ಮೂಡಬಿದ್ರಿಯಿಂದ ನಿರ್ಗಮನ ಅ ಗ ೯ ವೇಣೂರು ಆಗಮನ, ಅ ಗ. ೨ ಸಿದ್ಧಕಟ್ಟೆ ಆಗಮನ, ಅ ಗ. ೩ ಅರ್ಲ ಆಗಮನ, ಅ ಗ ೪ ಮೂಡಬಿದ್ರಿ ಆಗಮನ, ಅ. ಗ ೪-೩೦ ನಿಡ್ಡೋಡಿ ಆಗಮನ ಅ. ಗ. ೫-೩೦ ಕಡಂದಲೆ ಆಗಮನ, ಅ ಗ ೬-೩೦ ಮಿಜಾರು ಆಗಮನ ದಾರಿಯಲ್ಲಿ ಗುರುಪುರ ಅ ಗ. ೮ ಮಂಗಳೂರು ಆಗಮನ, ಫೆಬ್ರುವರಿ ತಾ. ೧೦ ಪೂ. ಗ ೮ ೩೦ ಮಂಗಳೂರಿನಿಂದ ನಿರ್ಗಮನ ಪೂ. ಗ. ೯ ಫರಂಗಿಪೇಟೆ ಆಗಮನ ಪೂ. ಗ ೧೦ ಜೋಡುಮಾರ್ಗ ಆಗಮನ ಮಧ್ಯಾಹ್ನ ೧೨ ಪಾಣೆಮಂಗಳೂರು ಆಗಮನ ಅ. ಗ ೨ ೩೦ ಪೊಳಲಿ ಆಗಮನ, ಅ ಗ. ೫ ಬಂಟ್ವಾಳ ಆಗಮನ. ಫೆಬ್ರುವರಿ ತಾ ೧೧ ಪೂ ಗ ೯ ಕಾವಲ್‌ಮೂಡೂರು ಆಗಮನ ದಾರಿಯಲ್ಲಿ ವಗ್ಗ ಪೂ. ಗ ೧೧ ೩೦ ಪುಂಜಾಲ್ ಕಟ್ಟೆ ಆಗಮನ

ಆಹಾರ ಸಮಸ್ಯ ನಿವಾರಣಾ ಸಮಿತಿ

ಈ ಹೆಸರಿನಿಂದ ಸ್ಥಾಪಿತವಾದೊಂದು ಸಮಿತಿ ಸಭೆಯು ಕಲೆಕ್ಟರರ ಆಫೀಸಿನಲ್ಲಿ ತಾ. ೩೧ರಂದು ಸೇರಿ ಅಕ್ಕಿಗೆ ಒಂದು ನ್ಯಾಯವಾದ ಬೆಲೆಯನ್ನು ನಿಯಂತ್ರಿಸುವ ವಿಚಾರವಾಗಿ ವಿಮರ್ಶೆ ಮಾಡಿತು ಈ ದಿನದ ಸಭೆಗೆ ಹೆಚ್ಚು ಮಂದಿ ಜಮೀನ್ದಾರರು ಬರದಿರುವುದರಿಂದ ಈ ಸಭೆಯನ್ನು ತಾ ೮ಕ್ಕೆ ಮುಂದುವರಿಸಲಾಗಿದೆ ಮಹಾಜನರು ತಾವಾಗಿಯೇ ಮುಂದೆ ಬಂದು ಒಂದು ನ್ಯಾಯವಾದ ಬೆಲೆಯನ್ನು ನಿರ್ಧರಿಸಿಕೊಳ್ಳದಿದ್ದರೆ ಸರಕಾರವೇ ನಿರ್ಬಂಧಿಸುವುದಾಗಿ ಈ ಸಭೆಯಲ್ಲಿ ಎಚ್ಚರಿಕೆ ಕೊಡಲಾಗಿದೆ ನಮ್ಮ ಜಿಲ್ಲೆಯ ಕಮರ್ಶಿಯಲ್ ಟೇಕ್ಸ್ ಆಫೀಸರರು ಈಗ ಆಹಾರ ಸಾಮಗ್ರಿ ಬೆಲೆ ನಿಯಂತ್ರಣದ ಅಧಿಕಾರಿಗಳಾಗಿರುವರು ಬೆಜವಾಡದಿಂದ ಬಂದ ಅಕ್ಕಿ ಚೀಲವೊಂದಕ್ಕೆ ರೂ ೧೬—೭ ರಂತೆ ಮಲಬಾರಿನಲ್ಲಿ ಮಾರುತ್ತಾರೆಂದು ತಿಳಿಯುತ್ತದೆ ಅದ್ದರಿಂದ ತಾ ೮ರಂದು ಈ ಸಮಿತಿಯ ಸಭೆ ಕಲೆಕ್ಟರರ ಕಚೇರಿಯಲ್ಲಿ ಪುನಃ ಸೇರಲಿರುವುದರಿಂದ ಸರಕಾರವು ನಿರ್ಬಂಧ ಹೊರಿಸುವುದಕ್ಕಿಂತ ಮಂಚಿತ ಜನರೇ ಒಂದು ನಿರ್ಧಾರಕ್ಕೆ ಬಂದುಕೊಳ್ಳುವುದು ಉಚಿತವಾಗಿರುವುದು

ಮುನ್ಸಿಪಾಲಿಟಿ

ಸಭೆಯು ತಾ ೧೮ರಂದು ಸಂಜೆ ಮುನ್ಸಿಪಲ್ ಆಫೀಸಿನಲ್ಲಿ ಚೇರ್‌ಮೇನ್ ಶ್ರೀ ಪುತ್ತೂರು ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ, ಸ್ಥಳೀಯ ಸಂಸ್ಥೆಗಳ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವು ಹಾರಾಡಬಾರದೆಂದು ಮದ್ರಾಸು ಸರಕಾರವು ಹೊರಡಿಸಿದ ಆಜ್ಞೆಯನ್ನು ಪಾಲಿಸುವ ಸಲುವಾಗಿ ಈ ಕಟ್ಟಡದ ಮೇಲಿರುವ ರಾಷ್ಟ್ರಧ್ವಜವನ್ನು ತೆಗೆಯುವರೆ ಸಭೆಯು ಒಪ್ಪಿತು ಮುನ್ಸಿಪಲ್ ಲಾರಿಯ ರಿಫೇರಿ ವಿಷಯ ಸದಸ್ಯರು ವಿಚಾರ ಮಾಡಿದರು. ಮದ್ರಾಸು ಗವರ್ನರರು ಮಂಗಳೂರಿಗೆ ಬಂದಾಗ ಅವರಿಗೆ ಮಾನಪತ್ರ, ಯುದ್ಧ ನಿಧಿಗೆ ಥೈಲಿ ಸಮರ್ಪಿಸುವ ಸೂಚನೆ ಆಯಿತು

ಜಿಲ್ಲಾ ಬೋರ್ಡು

ಸಭೆಯು ತಾ ೨೯ರಂದು ಪೂರ್ವಾಹ್ನ ೧೧ ಘಂಟೆಗೆ (ಆರೋಗ್ಯ ಸಂಪಾದನೆಗಾಗಿ ಪರವೂರಿಗೆ ಹೋಗಿದ್ದು ಇತ್ತೀಚೆಗೆ ಹಿಂದಿರುಗಿದ) ಅಧ್ಯಕ್ಷ ಡಾ. ಕೆ. ವಿಠ್ಠಲ ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಸಾರ್ವಜನಿಕರಿಗೆ ಸಭೆಯೊಳಗೆ ಪ್ರವೇಶವಿರಲಿಲ್ಲ. ಸ್ಥಾಯಿ ಸಮಿತಿಯ ಮೂರು ಸ್ಥಾನಗಳು ಸದಸ್ಯರ ರಾಜಿನಾಮೆಯಿಂದಾಗಿ ಖಾಲಿ ಬಿದ್ದುದರಿಂದ ಆ ಸ್ಥಾನಗಳಿಗೆ ಶ್ರೀಗಳಾದ ನಾಗಪ್ಪಯ್ಯ, ಶಮ್ನಾಡ್ ಸಾಹೇಬ್ ಮತ್ತು ಜತ್ತನ್ನರು ಇವರು ಆರಿಸಲ್ಪಟ್ಟರು. ಉಡುಪಿ ಹೈಸ್ಕೂಲಿನ ಕುರಿತಾಗಿ ಇರುವ ವಿವಾದವನ್ನು ತೀರಿಸುವುದಕ್ಕೆ ನಿರ್ಮಿತವಾಗಿದ್ದ ಸಮಿತಿಗೂ ಹೊಸ ಮೂವರು ಸದಸ್ಯರು ಆರಿಸಲ್ಪಟ್ಟರು. ದಿಲ್ಲಿಯಲ್ಲಿ ಜರಗಲಿರುವ ಅ. ಭಾ. ಸ್ಥಳೀಯ ಸಂಸ್ಥೆಗಳ ಪರಿಷತ್ತಿಗೆ ಡಾ। ವಿಠಲಶೆಟ್ಟರು ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟರು. ಪುತ್ತೂರು, ತ್ರಿಕರಪುರ ಮತ್ತು ಬೆಳ್ಳಾರೆಗಳ ಉಪಾಧ್ಯಾಯರ ಸಂಘಗಳಿಂದ ತುಟ್ಟಿಭತ್ತೆ ಕೇಳಿಕೊಂಡು ಬಂದಿದ್ದ ಮನವಿಯು ಗಣಿಸಲ್ಪಟ್ಟು ಬೋರ್ಡಿನ ಆರ್ಥಿಕ ಸ್ಥಿತಿ ಶಿಥಿಲವಿರುವುದರಿಂದ ತುಟ್ಟಿಭತ್ತೆಯನ್ನು ಸದ್ಯಕ್ಕೆ ಕೊಡದಿರಲು ವಿಷಾದವಾಗುತ್ತದೆಂಬ ಅಧ್ಯಕ್ಷರ ಸೂಚನೆಯು ಮಾನ್ಯವಾಯಿತು. ಅನೈತಿಕ ವ್ಯಾಪಾರಕ್ಕೆ ಸಂಬಂಧಿಸಿದ ಕಾನೂನುಗಳನ್ನು ಜಿಲ್ಲೆಗಳ ಕೆಲ ಗ್ರಾಮಗಳಿಗೂ ಅನ್ವಯಿಸಬೇಕೆಂಬ ಕಲೆಕ್ಟರರ ಸೂಚನೆಗೆ ಬೋರ್ಡು ತನ್ನ ಆಕ್ಷೇಪ ಇಲ್ಲವೆಂದಿತು ಹಲ ಪಂಚಾಯತ ಬೋರ್ಡುಗಳ ಅಂದಾಜು ಬಜೆಟುಗಳಿಗೆ ಬೋರ್ಡು ಒಪ್ಪಿಗೆಯನ್ನಿತ್ತಿತು ಮಂಜೇಶ್ವರ ಹಾ ಎ ಶಾಲೆಯ ಮೇಲಣ ಕ್ಲಾಸುಗಳನ್ನು ತೆಗೆದುಕೊಡವೂರು ಶಾಲೆಯಲ್ಲಿ ಪುನಃ ಸ್ಥಾಪಿಸಬೇಕೆಂಬ ರಕ್ಷಕರ ಸಂಘದ ಅರಿಕೆ ಮಾನ್ಯವಾಗಲಿಲ್ಲ ೧೯೪೨ ಅಕ್ಟೋಬರದಲ್ಲಿ ದೊರೆತಂತೆಯೇ ತುಟ್ಟಿಭತ್ತೆಯನ್ನು ಬೋರ್ಡಿನ ನೌಕರರಿಗೆ ಕೊಡುವ ನಿರ್ಧಾರವಾಯಿತು ಕಾಸರಗೋಡಿನಲ್ಲಿ ಅಕ್ಕಿಯನ್ನು ಕೊಂಡು, ಬಡವರಿಗಾಗಿ ಮಾರಲು ಮಿಗಿಸಿದ್ದರೂ, ೨೦೦೦ವು ವೆಚ್ಚವಾದ ಬಗೆಯ ಪಟ್ಟಿಯು ಸ್ವೀಕೃತವಾಯಿತು

ಮುಟ್ಟಿ ಕೊಲೆ ಮೊಕದ್ದಮೆ
ಇಬ್ಬರಿಗೆ ಮರಣದಂಡನೆ
೭ ಜನರಿಗೆ ಟ್ರಾಪು

ಕಟ್ಪಾಡಿಯಲ್ಲಿ ಕಳೆದ ತಾ ೮ ೧೦ ೪೧ನೇ ರಾತ್ರಿ ತೆನ್ನಯ ಪೂಜಾರಿ ಎಂಬವನನ್ನು ಮೋಟಾರ್ ಕಾರಿನಲ್ಲಿ ಹಾಕಿ ಪಿಲಾರ್ ಕಾನ ಎಂಬ ಕಾಡಿನಲ್ಲಿ ಚೆನ್ನಾಗಿ ಹೊಡೆದು ಕೊಂದುಹಾಕಿದ ಕೇಸಿನಲ್ಲಿ ೨ನೇ ಆಲೆ ಶೀನಶೆಟ್ಟಿಗೆ ಮರಣದಂಡನೆಯನ್ನೂ, ಮೋಟರ್ ಕಾರಿನ ಡ್ರೈವರ ಗಿರಿಯಪ್ಪ ಮೋಟಾರ್ ಕಾರಿನ ಧನಿ ಮುದ್ದು ಸುವರ್ಣ, ಈ ತಕ್ಸೀರನ್ನು ನಡಿಸಲು ಕಾರಣಭೂತನೆಂತ ಹೇಳಲ್ಪಟ್ಟ ಮುಟ್ಟಿಗ್ರಾಮದ ಅಧಿಕಾರಿ ರಾಮಚಂದ್ರಯ್ಯ ಇವರ ಮಗ ವಾಸುದೇವಯ್ಯ ಇವರ ಕೆಲಸದ ಗೊಡ್ಡ ಎಂಬವ, ತನಿಯಪೂಜಾರಿ ಕಂಪು ಯಾನೆ ರಾಮ ಶೆಟ್ಟಿ ಈ ೭ ಜನರಿಗೆ ಟ್ರಾಪು ಶಿಕ್ಷೆಯನ್ನೂ ಮಂಗಳೂರಿನ ಸೆಶ್ಯನ್ಸ್ ಜಡ್ಜರಾದ ಶ್ರೀ ಸಿ ಸಿ ಬಿ ಅಲಿಪಿ ಸಾಹೇಬರು ವಿಧಿಸಿದರು ೫ನೇ ಆಲೆ ನಾಗಪ್ಪ ಶೆಟ್ಟಿ ಮತ್ತು ೧೦ನೇ ಆಲೆ ಬಾಬುಶೆಟ್ಟಿ ಇವರಿಬ್ಬರು ಬಿಡಲ್ಪಟ್ಟರು. ಆಲೆರ ಕಡೆಯಿಂದ ಶ್ರೀ ಬಿ ನರಸಿಂಗರಾಯರೂ ಶ್ರೀ ಕಲ್ಲೇರಿ ರಂಗರಾಯರೂ ವ್ಯವಹರಿಸಿದ್ದರೆ ಗವರ್ನಮೆಂಟ್ ವಕೀಲ್ ಶ್ರೀ ನಂಬ್ಯಾರರೂ ಅಸಿಸ್ಟೆಂಟ್ ಗ ವ ಶ್ರೀ ತಲ್ವಾರರೂ ಪ್ರೊಸಿಕ್ಯೂಶನ್ ಕಡೆಯಿಂದ ವ್ಯವಹರಿಸಿದ್ದರು ಶ್ರೀ ಫರ್ಟಾಡೋ ಎಸ್ ಐ ಯವರು ಕೇಸಿನ ತನಿಖೆ ನಡೆಸಿ ಚಾರ್ಜುಶೀಟು ಹಾಕಿದರು

ಉಡುಪಿ

ರಿಜರ್ವ ಪೋಲೀಸರು ಸ್ಥಳೀಯ ಸಬ್ ಇನ್ಸ್‌ಪೆಕ್ಟರರ ನಾಯಕತ್ವದಲ್ಲಿ ಇಲ್ಲಿಯ ಕೆಲ ಅಂಗಡಿಗಳಲ್ಲಿ ತಾ. ೨೭ರಲ್ಲಿ ಜಡ್ತಿ ನಡೆಸಿದರು. ವಿಶೇಷ ಚಿಲ್ಲರೆ ನಾಣ್ಯಗಳೇನೂ ದೊರೆಯಲಿಲ್ಲವಾಗಿ ತಿಳಿದುಬರುತ್ತದೆ.

ನಗರ ಸಭೆ-ಗಾಂಧಿಜಿ ಮತ್ತು ನೆಹರು ಭಾವಚಿತ್ರ ತೆಗೆದರು!

ತಾರೀಕು ೨೭ರಲ್ಲಿ ನಗರ ಸಭೆಯ ಮೀಟಿಂಗು ಚೆಯರ್‌ಮೆನ್ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗುವ ಪೂರ್ವ ಸಭಾಸದನದ ಗೋಡೆಯಲ್ಲಿರಿಸಲ್ಪಟ್ಟಿದ್ದ ರಾಷ್ಟ್ರಧ್ವಜಗಳಿಂದಲಂಕೃತವಾದ ಮಹಾತ್ಮಾಜಿ ಮತ್ತು ಪಂಡಿತ ನೆಹರುಗಳ ಭಾವಚಿತ್ರಗಳು ತೆಗೆಯಲ್ಪಟ್ಟು ನಗರಸಭೆಯ ರಾಜಭಕ್ತಿಯನ್ನು ಪ್ರದರ್ಶಿಸಿತು.

ಎರಡು ತಲೆಗಳುಳ್ಳ ಕರು!

ಮಂಗಳೂರಲ್ಲಿ, ರೈಲ್ವೆ ಸ್ಟೇಶನ್‌ನ ಹತ್ತಿರ ಒಂದು ದನವು ಎರಡು ತಲೆಗಳುಳ್ಳ ಒಂದು ಕರು ಹಾಕಿದೆ ಇದಕ್ಕೆ ಕೊರಳೊಂದು ತಲೆ ಎರಡೇ, ಕಣ್ಣು ನಾಲ್ಕು, ಕಿವಿ ಎರಡೇ ಡಾ। ಎ ಎಸ್ ಪೀಟರ್ಸ್ ಎಂಬವರು ಈ ದನವು ಈ ವಿಚಿತ್ರ ಕರುವನ್ನು ಹೆರುವ ಕಾಲದಲ್ಲಿ ಇದ್ದರು. ಕರು ಹೆರುವ ಕಾಲದಲ್ಲಿಯೇ ಸತ್ತು ಹೋಗಿತ್ತು ದನವು ಸ್ಥಳೀಯ ಶ್ರೀಪತಿ ರಾಯರೆಂಬವರ ಮನೆಯದ್ದಾಗಿದೆಯೆಂದು ತಿಳಿದುಬರುತ್ತದೆ.

ನೋಟೀಸು

ದ ಕ ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಕ್ರಮ ಅಮಲ್ದಾರಿ ನಂಬ್ರ 18?/42
ಕ್ರಮ ನಂಬ್ರ 123'31.

ಅಣ್ಣಪ್ಪ ಗೌಡ ಕೂಡಾ ಅರ್ಜಿದಾರರು
ಮತ್ತು
ಬಾಳಪ್ಪ ಗೌಡ ಕೂಡಾ ರೆಸ್ಪಾಂಡೆಂಟರು

2ನೇ ರೆಸ್ಪಾಂಡೆಂಟ ಕೃಷ್ಣ ಗೌಡಾ ಚೆನಿಯ ಗೌಡನ ಮಗ ಕಾಸರಗೋಡು ತಾಲೂಕು ಜಾಲಸೂರು ಗ್ರಾಮದ ಕದಿಕೆಯಡ್ಕ ಎಂಬಲ್ಲಿ ಇರುವವರಿಗೆ—

ಮೇಲಿನ ಅಮಲ್ದಾರಿ ವ್ಯವಹರಣೆಯಲ್ಲಿ 1 ಮತ್ತು 2ನೇ ಅರ್ಜಿದಾರರು ತಮ್ಮ ಡಿಕ್ರಿ ಹಕ್ಕನ್ನು 9ನೇ ಅರ್ಜಿದಾರಗೆ ರಿಜಿಸ್ಟ್ರಿ ನಿಶಿ ಪರಾಭಾರೆ ಕೊಟ್ಟಿದ್ದನ್ನು C P Code ನ order 21 Rule 16ರ ಮೇರೆಗೆ ಮಂಜೂರು ಮಾಡಲಕ್ಕೂ ನಂತ್ರ ಮೇಲಿನ ಅಮಲ್ದಾರಿಯನ್ನು ಮುಂದರಿಸಲಿಕ್ಕೂ ಅರ್ಜಿ ದಾಖಲು ಮಾಡಿರುತ್ತಾರೆ ಸದ್ರಿ ವ್ಯವಹರಣೆಯು ಮೇಲಿನ ಕೋರ್ಟಿನಲ್ಲಿ ತಾ. 22 2–1943ನೇ ಅಪರಾಹ್ನ ಘಂಟೆ 11ಕ್ಕೆ ತನ್ನಿಗೆ ಇಟ್ಟಿರುತ್ತದೆ ಅದ್ದರಿಂದ ಸದ್ರಿ ದಿವಸ ನಿಮಗೇನಾದರೂ ಆಕ್ಷೇಪ ಹೇಳಲು ಇದ್ದಲ್ಲಿ ನೀವಾಗಲಿ ವ ವಕೀಲರ ಮುಖಾಂತರವಾಗಲಿ ಹಾಜರು ಆಗತಕ್ಕದ್ದು. ತಪ್ಪಿದಲ್ಲಿ ತೀರ್ಮಾನವು ಏಕಪಕ್ಷಪಾರ್ಟಿಯಾಗಿ ಮಾಡಲ್ಪಡುವುದೆಂತ ತಿಳಿದಿರಲಿ

(By order of Court)

ಮಂಗಳೂರು 3–2–1943 } **K Vyasa Rao,** Advocate for Petr.



ಸ್ವದೇಶಾಭಿಮಾನಿ

ತಾರೀಖು [illegible]—1943

ಆಹಾರದ ಬೆಲೆ

ನಮ್ಮ ದೇಶದಲ್ಲಿ ಇತ್ತೀಚೆಗೆ ಆಹಾರ ಪದಾರ್ಥಗಳಿಗೆ ಬೆಲೆ ಏರಲು ಕಾರಣವೇನೆಂಬ ವಿಷಯ ಅರ್ಥ ಶಾಸ್ತ್ರಜ್ಞರು ಗಂಭೀರ ವಿಚಾರ ಮಾಡತೊಡಗಿದ್ದಾರೆ. ಅವರು ಹೇಳುವ ಕಾರಣಗಳೆಂದರೆ, ಆಹಾರ ಪೂರೈಕೆ ಕಡಿಮೆಯಿರುವುದು ಮತ್ತು ನೋಟುಗಳು ಹೆಚ್ಚಾಗಿ ಬಳಕೆಗೆ ಬಂದು ರೂಪಾಯಿಯ ಬೆಲೆ ತಗ್ಗಿರುವುದು. ಭಾರತದಲ್ಲಿ ಈಗ ಆಹಾರ ಪದಾರ್ಥಗಳಿಗೆ ಬೆಲೆ ಏರಲು ಎರಡನೆಯ ಕಾರಣವೇ ಮುಖ್ಯವಾದುದೆಂದು ಹಲವರು ಅರ್ಥ ಶಾಸ್ತ್ರಜ್ಞರು ಹೇಳತೊಡಗಿದ್ದಾರೆ.

'ಯುದ್ಧ ಪ್ರಾರಂಭವಾದಂದಿನಿಂದ ಸರಕಾರವು ನೋಟುಗಳನ್ನು ಹೆಚ್ಚುಹೆಚ್ಚಾಗಿ ತಯಾರಿಸತೊಡಗಿದ್ದರಿಂದ ರೂಪಾಯಿ ಬೆಲೆ ತಗ್ಗಿ ವಸ್ತುಗಳ ಧಾರಣೆ ಹೆಚ್ಚಿತು. ೧೯೩೯ರಲ್ಲಿ ೧೭೮ ಕೋಟಿ ರೂಪಾಯಿ ನೋಟುಗಳು ಚಲಾವಣೆಯಲ್ಲಿದ್ದರೆ ಮುಂದೆ ಏರುತ್ತಾ ಏರುತ್ತಾ ಹೋಗಿ ಈ ಜನವರಿ ೧ನೆಕ್ಕೆ ೫೮೯ ಕೋಟಿ ರೂಪಾಯಿ ನೋಟುಗಳು ಚಲಾವಣೆಯಲ್ಲಿವೆ. ಹೀಗೆ ಜನರ ಕೈಯ್ಯಲ್ಲಿ ಒಮ್ಮೆಯೇ ನೋಟುಗಳು ಹೆಚ್ಚುತ್ತಾ ಬಂದುದರಿಂದಲೂ ಹಲವು ಕಾರಣಗಳಿಂದ ಸರಕುಗಳು ದೊರಕುವುದು ಈಗ ಕಠಿಣವಾದದ್ದರಿಂದಲೂ ಹೆಚ್ಚು ಬೆಲೆ ಕೊಟ್ಟು ಸಾಮಗ್ರಿ ಪಡಕೊಳ್ಳತೊಡಗಿ ವಸ್ತುಗಳ

[illegible] ಈಗ ಬಿಡಲಾಗಿದ್ದಾರೆ.

ಇದು ಮಾತ್ರವಲ್ಲದೆ ನೋಟುಗಳನ್ನು ಹೊರಡಿಸಬೇಕಾದರೆ ಸಾಧಾರಣವಾಗಿ ಅಷ್ಟು ಬೆಲೆಯ ಬಂಗಾರವನ್ನು ಸ್ಟರ್ಲಿಂಗನ್ನೂ ಭಾರತದ ಸರಕಾರದ ಸಾಲ ಹಣ ಅಥವಾ ರೂಪಾಯಿಗಳನ್ನು ಆಧಾರವಾಗಿ ಇಡಲಾಗುತ್ತದೆ. ಆದರೆ ಬಂಗಾರವಂತು ಈಗ ಕಾಣಲಿಕ್ಕೇ ದುರ್ಲಭವಾಗಿದೆ. ಸ್ಟರ್ಲಿಂಗ್ ಮತ್ತು ಭಾರತ ಸರಕಾರದ ಸಾಲ ಪತ್ರಗಳನ್ನು ಮಾತ್ರ ಇಡಲಾಗುತ್ತದೆ. ಸಾಲದ್ದಕ್ಕೆ ಈಗ ನಮ್ಮ ದೇಶಕ್ಕೆ ಬರುವ ವಸ್ತುಗಳಿಗಿಂತ ಹೋಗುವ ವಸ್ತುಗಳೇ ಹೆಚ್ಚಾಗಿವೆ. ಇದರ ಮೇಲೆ ಇಲ್ಲಿ ಬಂದು ತಳವೂರಿರುವ ಅಮೆರಿಕನ್ನೇ ಮೊದಲಾದ ವಿದೇಶದ ಸೈನಿಕರ ವೆಚ್ಚದ ಭಾರವೂ ಈ ದೇಶದ ಮೇಲೆಯೇ ಬಿದ್ದಿದೆ. ಈ ವೆಚ್ಚವನ್ನು ಇಂಗ್ಲೆಂಡಿನಲ್ಲಿ ಸ್ಟರ್ಲಿಂಗ್ ರೂಪದಲ್ಲಿ ಹಾಗೂ ಭಾರತದ ಸಾಲಪತ್ರಗಳ ರೂಪದಲ್ಲಿ ಕೊಡುತ್ತಿರುವುದರಿಂದ ಈಗ ಸ್ಟರ್ಲಿಂಗ್ ಮತ್ತು ಸಾಲಪತ್ರಗಳೇ ಹೆಚ್ಚಿವೆ

ಹೀಗೆ ಹೆಚ್ಚುತ್ತಿರುವ ಸ್ಟರ್ಲಿಂಗ್ ಸಾಲ ಪತ್ರಗಳಿಗನುಸಾರವಾಗಿ ಭಾರತ ಸರಕಾರದವರು ಹೊರಡಿಸುತ್ತಿರುವ ನೋಟುಗಳು ಮಿತಿಮೀರಿರುವುದೇ ಇಂದು ಆಹಾರ ಸಾಮಗ್ರಿಗಳಿಗೆ ಬೆಲೆಯೇರಲು ಒಂದು ಮುಖ್ಯ ಕಾರಣವಾಗಿದೆಯೆಂದು ಅರ್ಥ ಶಾಸ್ತ್ರಜ್ಞರ ಸಿದ್ಧಾಂತವಾಗಿದೆ. ಜನರ ಮುಂದೆ ವ್ಯಾಪಾರಿಗಳನ್ನೂ, ವರ್ಗದಾರರನ್ನೂ ದೂರುವ ಕೆಲಸ ಮಾತ್ರ ಮಾಡುವುದಕ್ಕಿಂತ ಸರಕಾರವು ನಿಜವಾದ ಕಾರಣವನ್ನು ಕಂಡುಹುಡುಕಿ ತಕ್ಕ ಪರಿಹಾರ ಕಾರ್ಯವನ್ನು ಕೂಡಲೇ ಕೈಕೊಳ್ಳುವುದು ಅವಶ್ಯವಾಗಿದೆ.

ಬಾವು ಮತ್ತು ರಕ್ತ ವಿಷವೇರುವುದನ್ನು ತಡೆಯಿರಿ.

ಜಾಂಬಕ್ ಆದರ್ಶ ವಿಷಹಾರಿ ಔಷಧ

ಗಣ್ಯಮಾಡದ ಗಾಯವು ವಿಷರೂಪಿಯಾಗಿ ನೋವು ಮತ್ತು ಸಂಕಷ್ಟಗಳನ್ನುಂಟುಮಾಡುತ್ತದೆ. ಇದನ್ನು ಯಾವಾಗಲೂ ಗಾಯವಾದ ಕೂಡಲೇ ಜಾಂಬಕ್ ಲೇಪ ಸವರುವುದರಿಂದ ಪರಿಹರಿಸಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ಶುದ್ಧ ವನಸ್ಪತಿ ತೈಲವು ಚರ್ಮಕ್ಕೆ ಬೇಗನೇ ಹೀರಿಕೊಂಡು ನೋವನ್ನು ಕಡಿಮೆಮಾಡಿ, ಬಾವನ್ನು ಇಳಿಸಿ, ಹೀಗೆ ಎಲ್ಲಾ ತರದ ಗಾಯ ವ್ರಣಗಳ ಕೊಳೆ ವಸ್ತುಗಳನ್ನು ಹೊರಹಾಕುತ್ತದೆ. ಜಾಂಬಕ್ ಕಲೆಯಿಲ್ಲದೆ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ರೂಪಾಯಿ ಒಂದು ಅಥವಾ ರೂ. 2—4—0 ಜಾಂಬಕ್ ಸೋಪಿನ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಕೊಟ್ಟು ವಿರಚಿತವಾದುದು.

ಸ್ವದೇಶ ಸಮಾಚಾರ

ದೇಶವಿದೇಶಗಳಲ್ಲಿಯೂ ಸ್ವಾತಂತ್ರ್ಯ ದಿನಾಚರಣೆ

ಭಾರತದ ಸ್ವಾತಂತ್ರ್ಯ ದಿನಾಚರಣೆಯು ಜನವರಿ ೨೬ರಂದು ದೇಶವಿದೇಶಗಳಲ್ಲೆಲ್ಲಾ ಜರಗಿತು. ಲಂಡನಿನಲ್ಲಿ ಭಾರೀ ಸಭೆ ಜರಗಿ ಇದಕ್ಕೆ ಗೀತೆ ಹಾಡಿ, ಭಾರತಕ್ಕೆ ಸ್ವಾತಂತ್ರ್ಯ ದಾನ ಮಾಡಬೇಕೆಂದೂ ಭಾರತೀಯರೂ ಐರೋಪ್ಯ ಗೃಹಸ್ಥರು ಕೆಲವರೂ ಭಾಷಣಮಾಡಿದರು. ಅಮೆರಿಕದಲ್ಲಿ ಭಾರಿ ಪ್ರದರ್ಶನ ನಡೆದು ಬ್ರಿಟಿಷ್ ರಾಯಭಾರೀ ಕಚೇರಿ ಮುಂದೆ ಪಿಕೆಟಿಂಗ್ ಕೂಡಾ ಜರಗಿ ಹಲವರು ಇವರಲ್ಲಿ ಮಹಿಳೆಯರೂ, ಧರ್ಮೋಪದೇಶಕರೂ, ಐರೋಪ್ಯರೂ ಇದ್ದಾರೆ, ಬಂಧಿಸಲ್ಪಟ್ಟಿದ್ದಾರೆ. ಭಾರತ ನಗರ ಗ್ರಾಮಗಳಲ್ಲಿ ಈ ಸಂಬಂಧ ಸಭೆ, ಮೆರವಣಿಗೆ, ಬಂಧನ, ಲಾಠಿಪೆಟ್ಟು, ಗುಂಡು ಹಾರಿಸುವಿಕೆಗಳೂ ನಡೆದಿವೆ. ಅಹಮ್ಮದಾಬಾದಿನಲ್ಲಿ ಈ ದಿನ ಪ್ರದರ್ಶನಕಾರರಾದ ಜನತೆ ಮೇಲೆ ಪೋಲೀಸರು ಗುಂಡುಹಾರಿಸಿದ್ದರು. ಮುಂಬಯಿಯಲ್ಲಿಯೂ ಬೇರೆ ಕಡೆಗಳಲ್ಲಿ ಪ್ರದರ್ಶನವಾಗಿ ಹಲವರ ಬಂಧನವಾಗಿದೆ; ಐದು ಗಿರಣಿಗಳು ಮುಚ್ಚಲ್ಪಟ್ಟಿವೆ. ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಕೆಲವು ಪೇಟೆಗಳೂ ಮುಚ್ಚಲ್ಪಟ್ಟಿವೆ. ಮಹಿಳೆಯರೂ ಮೆರವಣಿಗೆ ತೆಗೆದು ಸುಮಾರು ನೂರು ಮಂದಿ ಬಂಧಿಸಲ್ಪಟ್ಟಿದ್ದಾರೆ. ಸೂರತ್‌ನಲ್ಲಿ ಸಭೆ ಮೆರವಣಿಗೆಯನ್ನು ಪೋಲೀಸರು ಬಡಿದು ಚದರಿಸಿ ಐದು ಜನ ಮಹಿಳೆಯರನ್ನು ಬಂಧಿಸಿದರು. ಕರಾಚಿಯಲ್ಲಿ ಈ ದಿನಾಚರಣೆ ನಿಮಿತ್ತ ೫೦ ಜನರ ಬಂಧನವಾಗಿದೆ. ಕರಾಚಿಯಲ್ಲಿ ಐದು ಜನರು ಆ ದಿನ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ನುಗ್ಗಿ ಕಾಂಗ್ರೆಸ್ ಘೋಷಣೆ ಮಾಡಿ ಗೋಡೆಗೆ ರಾಷ್ಟ್ರಧ್ವಜ ಹಚ್ಚಿದರು ಅವರನ್ನು ಬಂಧಿಸಿ ಶಿಕ್ಷಿಸಲಾಗಿದೆ. ಲಕ್ನೌನಲ್ಲಿಯೂ ಹಲವರ ಬಂಧನವಾಗಿದೆ. ಪಾಟ್ನಾದಲ್ಲಿ ಈ ನಿಮಿತ್ತ ೧೦ ಮಂದಿ ಸ್ತ್ರೀಯರು ಸಮೇತ ೫೦ ಜನರನ್ನು ಸೆರೆಹಿಡಿದಿದ್ದರು. ಕಟಕಿನಲ್ಲಿ ಕಾಂಗ್ರೆಸ್ ಧ್ವಜವೇರಿಸಿ ಭಾಷಣಮಾಡಲು ಪ್ರಯತ್ನಿಸಿದ ಕೆಲವರನ್ನು ಸೆರೆಹಿಡಿಯಲಾಗಿದೆ ರೆವೆನ್ಯೂ ಕಮಿಶನ ಕಚೇರಿಗೆ ಧ್ವಜವೇರಿಸಲು ಪ್ರಯತ್ನಿಸಿದ ಕೆಲವರನ್ನೂ ಬಂಧಿಸಲಾಗಿದೆ. ಕರ್ನಾಟಕದ ಪೇಟೆ ಪಟ್ಟಣ ಗ್ರಾಮಗಳಲ್ಲಿಯೂ ಈ ದಿನ ಆಚರಿಸಲ್ಪಟ್ಟಿದೆ.

ಜಿನ್ನಾ ಹೇಳುತ್ತಾರೆ

ಸದ್ಯದ ಬಿಕ್ಕಟ್ಟನ್ನು ಬಿಡಿಸುವ ಬೀಗದ ಕೈ ಗಾಂಧಿಜಿ ಹಾಗೂ ಕಾಂಗ್ರೆಸಿನ ಕೈಯ್ಯಲ್ಲಿದೆ ಎಂದು ಆದ್ದರಿಂದ ಗಾಂಧಿಜಿ ಮತ್ತು ಕಾಂಗ್ರೆಸು ಹೃತ್ಪೂರ್ವಕ ಇಚ್ಛಿಸಿದರೆ ಬಿಕ್ಕಟ್ಟು ಬಿಡಿಸಬಹುದೆಂದೂ ಅವರು ಹೇಳುತ್ತಾರೆ. ಆದರೆ ಕಾಂಗ್ರೆಸ್ ಮುಖಂಡರನ್ನು ಸೆರೆಮನೆಗೆ ಹೋಗಲು ತಾ ಹೇಳಿಲ್ಲವಾದ್ದರಿಂದ ಅವರ ಬಿಡುಗಡೆಗೂ ನಾನು ಶಕ್ತನಾಗಲಾರೆನೆಂದು ಅವರ ವಾದ. ಪಾಕಿಸ್ತಾನವನ್ನು ಮಾತ್ರ ಅವರಿಗೆ ಕೊಡಲೇಬೇಕಂತೆ!

ಕರ್ನಾಟಕದಲ್ಲಿ ಇಮ್ಮಡಿ ಖಾದಿ

ಉತ್ಪತ್ತಿ ೧೯೪೩ನೇ ಇಸವಿಯಲ್ಲಿ ಮಾಡಬೇಕೆಂಬಯೋಜನೆಯನ್ನು ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಚರಕಾ ಸಂಘದ ಕೆಲಸಗಾರರು ಮಾಡಿದ್ದಾರೆ. ಕರ್ನಾಟಕದ ಕೆಲವೂರುಗಳಲ್ಲಿ ಬರಗಾಲವಿರುವುದರಿಂದ ಅಲ್ಲಿ ನೂಲುವ ನೇಯುವ ಕಾರ್ಯವನ್ನು ಭರದಿಂದ ಕೈಕೊಳ್ಳಲಾಗುವುದು. ಹಲವು ಕಡೆಗಳಲ್ಲಿ ಈಗಾಗಲೇ ಹೊಸ ನೂಲು ನೇಯ್ಗೆ ಕೇಂದ್ರ ತೆರೆದು, ಖಾದಿ ಕೆಲಸಗಾರರು ಶ್ರಮವಹಿಸಿ ದುಡಿಯುತ್ತಿದ್ದಾರೆ.

ಮೌಲ್ವಿ ಅಹಮ್ಮದ್ ಮುಬಾರಕ್

ಎಂಬ ಅಸ್ಸಾಮ್ ಪ್ರಾಂತಸಿಲೆಟಿನ ಪ್ರಮುಖ ವಕೀಲರೂ, ಹಾಗೂ ಮುನ್ಸಿಪಲ್ ಸದಸ್ಯರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ.

'ಜನ್ಮ ಭೂಮಿ' ಪತ್ರಿಕೆಗೆ ದಂಡ

ಮುಂಬಯಿಯ ಜನ್ಮಭೂಮಿ ಪತ್ರಿಕೆಗೆ ವಿಧಿಸಿದ್ದ ದಂಡದಲ್ಲಿಯ ರೂ. ೦೫೦೦ ದಂಡವನ್ನು ಜಪ್ತಿಮಾಡಿ ಮತ್ತೆ ರೂ. ೩೦೦೦ ಹೊಸದಾಗಿ ಕೇಳಿದ್ದರ ಬಗ್ಗೆ ಅವರು ಅಪೀಲುಮಾಡಿರುವರು

ಆಹಾರದ ಕೊರತೆಗೆ ಕಾರಣವೇನು?

ಎಂಬ ವಿಷಯ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಶ್ರೀ ರಾಧಾಕಮಲ ಮುಖರ್ಜಿಯವರೊಂದು ಲೇಖನ ಬರೆದಿರುವರು. ಅದರಲ್ಲಿ ಅವರು ಹೀಗೆಂದಿದ್ದಾರೆ: 'ಸಾಮಾನ್ಯ ಸ್ಥಿತಿಯಲ್ಲೇ ಭಾರತದಲ್ಲಿ ೪ ಕೋಟಿ ೮೦ ಲಕ್ಷ ಜನರಿಗೆ ಆಹಾರದ ಕೊರತೆಯಿದೆ. ಆಹಾರ ಉತ್ಪತ್ತಿಯ ಪ್ರಮಾಣಕ್ಕಿಂತ ಪ್ರಜಾಭಿವೃದ್ಧಿ ಹೆಚ್ಚಾಗಿ ಮತ್ತು ಆಹಾರದ ಕೊರತೆ ದಿನಂದಿನಕ್ಕೆ ಏರುತ್ತದೆ. ೧೯೧೦ರಿಂದ ೧೯೩೦ರ ವರೆಗೆ ಶೇಕಡಾ ೨೫ರಷ್ಟು ಪ್ರಜಾಭಿವೃದ್ಧಿಯಾಗುತ್ತಿರುವಾಗ ಆಹಾರದಕ್ಕೆ ಶೇಕಡಾ ೭ರಷ್ಟು ನ್ಯೂನತೆಯೇ ಕಂಡುಬರುತ್ತದೆ. ಮಾತ್ರವಲ್ಲದೆ ಅಕ್ಕಿ ಗೋಧಿ ಮೊದಲಾದ ಆಹಾರವಸ್ತುಗಳು ಬೆಳೆಯುವ, ಸ್ಥಳಗಳು ಕಡಿಮೆಯಾಗುತ್ತಿದ್ದು, ಜವೆಗೋಧಿ, ಜೋಳ, ಸಜ್ಜೆ ಮೊದಲಾದ ಅಪ್ರಾಮುಖ್ಯ ಧಾನ್ಯ ಬೆಳೆಯುತ್ತಿದೆ. ಇದರಿಂದ ಭಾರತದ ಜನರ ಆಹಾರದಲ್ಲಿ ಪೌಷ್ಟಿಕವಸ್ತು ಕಡಿಮೆಯಾಗುತ್ತಿದೆ. ಈಗಿನ ಯುದ್ಧದಿಂದಾಗಿ ಈ ಕೊರತೆ ಇನ್ನಷ್ಟು ಭಯಂಕರವಾಗಿದೆ. ಬರ್ಮಾ, ತಾಯಿಲೆಂಡು, ಇಂಡೋ ಚೀನಗಳಿಂದ ೧೯೩೯ರಿಂದ ೨೬ ಲಕ್ಷ ಟನ್ ಅಕ್ಕಿ ನಮ್ಮ ದೇಶಕ್ಕೆ ಬರುತ್ತಿತ್ತು ಒಟ್ಟು ನಮ್ಮ ದೇಶದಲ್ಲಿ ಅಕ್ಕಿ ಉಣ್ಣುವ ೨೪ ಕೋಟಿ ಜನರಲ್ಲಿ ೧ ಕೋಟಿ ೩೦ ಲಕ್ಷ ಜನರಿಗೆ ಅಕ್ಕಿ ಹೊರಗಿಂದ ಬರುತ್ತಿತ್ತು. ಈಗ ಅದು ಪೂರ್ಣ ನಿಂತಿದೆ. ಸಾಲದ್ದಕ್ಕೆ ಈಗ ಅಕ್ಕಿ ಉತ್ಪಾದನೆ ೫೧ ಲಕ್ಷ ಟನ್ ಪ್ರಮಾಣ ಕಡಿಮೆ ಆಗಿದೆ. ಮೊದಲು ಬರ್ಮಾ ಮೊದಲಾದೆಯಿಂದ ಬರುತ್ತಿದ್ದ ೨೪ ಲಕ್ಷ ಟನ್ ಅಕ್ಕಿಯನ್ನೂ ಸೇರಿಸಿಕೊಂಡರೆ ಈ ವರ್ಷ ಅಕ್ಕಿಯಲ್ಲಿ ೭೫ ಲಕ್ಷ ಟನ್ ಕಡಿಮೆ ಆಯಿತು. ಗೋಧಿಯಾದರೂ ಕಳೆದ ವರ್ಷಗಳಲ್ಲಿ ಸರಾಸರಿ ೧ ಕೋಟಿ ಟನ್ ಬೆಳೆದಿದೆ. ಈ ವರ್ಷ ಅದರ ಉತ್ಪತ್ತಿ ೬೦ ಸಾವಿರ ಟನ್ ಬೆಳೆದಿದೆ. ೧೯೪೧-೪೨ರಲ್ಲಿ ಗೋಧಿ ನಿರ್ಯಾತ ೧,೬೦೦೦೦ ಟನ್ ಗೋಧಿ ಹಿಟ್ಟಿನದು ೬೨೦೦೦ ಟನ್, ಯುದ್ಧದ ದೆಸೆಯಿಂದ ಹಿಂದುಸ್ಥಾನದಲ್ಲಿ ಗೋಧಿ ಬೇಡಿಕೆ ೫೦೦,೦೦೦ ಟನ್ ಹೆಚ್ಚಾಗಿದೆ. ಹೀಗೆ ಲೆಕ್ಕಹಾಕಿದರೆ ಸದ್ಯ ಭಾರತದಲ್ಲಿ ಗೋಧಿ ಕೊರತೆ ೪,೩೦,೦೦೦ ಟನ್‌ದಷ್ಟಿದೆ. ಇಂದಿನ ಆಹಾರ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ ನಮ್ಮ ದೇಶದಲ್ಲಿ ೪೦ ಕೋಟಿ ಪ್ರಜೆಗಳಲ್ಲಿ ೬ ಕೋಟಿ ೩೦ ಲಕ್ಷ ಜನರಿಗೆ ಆಹಾರವಿಲ್ಲ.

ಭಾಗಲ್‌ಪುರ ಜೈಲ್ ದೊಂಬಿ ಖಟ್ಲೆ

ಯ ಅಪೀಲಿನಲ್ಲಿ ಹೈಕೋರ್ಟಿನವರು ಮೂವರ ಮರಣ ದಂಡನೆಯನ್ನು ಕಾಯಂ ಮಾಡಿ, ಇಬ್ಬರ ಮರಣ ಶಿಕ್ಷೆ ರದ್ದು ಮಾಡಿರುವರು.

ಜೋಶಿಯವರ ಠರಾವು

ಮಹಾತ್ಮಾಜಿಯವರನ್ನು ಕಂಡು ವಿಚಾರವಿನಿಮಯ ಮಾಡಲು ಅಸ್ಪದಕೊಡದಿರುವ ವಿಷಯ ಕೇಂದ್ರ ಎಸೆಂಬ್ಲಿಯಲ್ಲಿ ಚರ್ಚಿಸಲು ಶ್ರೀ ಎನ್. ಎಂ. ಜೋಶಿಯವರು ಒಂದು ಠರಾವು ಮಂಡಿಸಲು ಸೂಚನೆಯಿತ್ತಿರುವರು.

ಸಂಪಾದಕರಿಗೆ ಶಿಕ್ಷೆ

'ಸಿಂಧ್ ಒಬ್ಸರ್ವರ್' ಪತ್ರಿಕೆಯ ಸಂಪಾದಕರಾದ ಶ್ರೀ ಪುನ್ನಯ್ಯನವರು ಕೋರ್ಟು ಅಪಮಾನವಾಡಿ ಲೇಖನ ಬರೆದರೆಂದು ಅವರಿಗೆ ೫೦೦ ರೂ. ದಂಡ, ಇಲ್ಲವೇ ೬ ತಿಂಗಳ ಶಿಕ್ಷೆ ವಿಧಿಸಿರುವರು. 'ನೇಶನಲ್ ಹೆರಾಲ್ಡ್' ಪತ್ರಿಕೆಯ ಸಂಪಾದಕರಿಗೆ ವಿಧಿಸಿದ ಶಿಕ್ಷೆಯನ್ನು ಟೀಕಿಸಿ ಬರೆದದ್ದೇ ಇವರ ಅಪರಾಧ!

ಈಚೆಗೆ ಸರ್ ಕ್ರಿಪ್ಸರು

ಬುದ್ಧಿ ಕಲಿತಂತೆ ತೋರುತ್ತದೆ. ತನ್ನ ಯೋಜನೆಯನ್ನು ನಿರಾಕರಿಸಲು ಗಾಂಧಿಜಿ ವ್ಯಕ್ತಿಶಃ ಕಾರಣರಲ್ಲ. ಅವರ ಪ್ರಭಾವ ಕಾಂಗ್ರೆಸಿನಲ್ಲಿರುವುದರಿಂದ ಹಾಗಾಯಿತು. ಆದರೆ ಭಾರತಸಮಸ್ಯೆ ಬಿಡಿಸಬೇಕಾದರೆ ನಾವು ಕಾಂಗ್ರೆಸಿನ ಸಮ್ಮತಿ ಪಡೆಯಲೇಬೇಕು. ಗಾಂಧಿಜಿ ಯುಗ ಪುರುಷರು' ಮುಂತಾಗಿ ಸರ್ ಕ್ರಿಪ್ಸರು ಈಚೆಗೆ ಹೇಳಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ. ಪ್ರಭಾಕರ ಶೇಟರ ಬಂಧನ

ಆಗಸ್ಟ್ ತಿಂಗಳಲ್ಲಿ ಬಂಧಿಸಲ್ಪಟ್ಟು ಸೆರೆಮನೆವಾಸ ತೀರಿಸಿ ಮಂಗಳೂರಿಗೆ ಮರಳಿ ಬಂದಿದ್ದ ಶ್ರೀ. ಪ್ರಭಾಕರ ಶೇಟರು ಪುನಃ ಬಂಧಿಸಲ್ಪಟ್ಟಿರುವರು.

ಡಾ| ಯು ಪಿ ಮಲ್ಯರಿಗೆ ಡಿಟೆನ್ಶನ್

ವಿಧಿಸಿ ವೆಲ್ಲೂರು ಸೆರೆಮನೆಗೊಯ್ದಿರುವರೆಂ ತಿಳಿದುಬರುತ್ತದೆ.

ಶ್ರೀ. ಪಿ. ದಯಾನಂದ ನಾಯಕರ ಬಂಧನ

ಕಾಂಗಾಳ ನಾಯಕ್ ಬೇಂಕಿನ ಹೊಸದುರ್ಗ ಶಾಖೆಯ ಏಜೆಂಟರಾದ ಶ್ರೀ ಪಿ ದಯಾನಂದ ನಾಯಕ್ ಬಿ ಎ ಬಿ ಎಲ್ ಇವರ ಮನೆಯನ್ನು ಹುಡುಕಿ, ಕೆಲವು ಪ್ರಕಟಣೆಗಳನ್ನು ಪೋಲೀಸರು ವಶಪಡಿಸಿಕೊಂಡು, ತಾ ೩೧ರಂದು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಇವರನ್ನು ಹೊಸದುರ್ಗದಲ್ಲಿ ಬಂಧಿಸಿ ಕಾಸರಗೋಡು ಸಬ್ ಜೈಲಿಗೆ ತಂದಿರಿಸಿದ್ದಾರೆ

ನೀಲೇಶ್ವರ–ಸ್ವಾತಂತ್ರ್ಯ ದಿನಾಚರಣೆ ವಿದ್ಯಾರ್ಥಿಗಳ ಬಂಧನ

ತಾ. ೨೬ರಂದು ನೀಲೇಶ್ವರ ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು ಹೈಸ್ಕೂಲಿನ ಮುಂಭಾಗದಲ್ಲಿರುವ ಮೈದಾನಿನಲ್ಲಿ ಬೆಳಗ್ಗೆ ೧೦ ಗಂಟೆಗೆ ಧ್ವಜವಂದನೆಯನ್ನು ನಡೆಸುತ್ತಿದ್ದಾಗ ಸರ್ಕಲ್ ಮತ್ತು ಸಬ್ ಇನ್ಸ್‌ಪೆಕ್ಟರರು ಬಂದು ಧ್ವಜವನ್ನು ಮುರಿದು ಹಾಕಿದರು ಶ್ರೀಧರನ್ ನಂಬ್ಯಾರ್ ಮತ್ತು ಕರುಣಾಕರನ್ ನಂಬ್ಯಾರ್ ಎಂಬಿಬ್ಬ ವಿದ್ಯಾರ್ಥಿಗಳನ್ನು ಹಿಡಿದು ರಿಸರ್ವ ಪೋಲೀಸರ ಕೇಂಪಿಗೊಯ್ದು ವಿಚಾರಣೆ ನಡೆಸಿ ಕರುಣಾಕರನ್ ನಂಬ್ಯಾರರನ್ನು ಬಿಟ್ಟು ಶ್ರೀಧರನ್ ನಂಬ್ಯಾರರನ್ನು ಬಂಧಿಸಿರುವರು ಬಳಿಕ ಶ್ರೀಯುತರು ಕೆ ಕುಂಞಿಕೃಷ್ಣನ್, ಟಿ ಕೆ ಗೋವಿಂದನ್ ಮತ್ತು ಕುಂಞರಾಮ ಪೊತುವಾಳ ಎಂಬ ಮೂವರನ್ನು ಬಂಧಿಸಿ ಶ್ರೀಧರನ್ ನಂಬ್ಯಾರರೊಡನೆ ಹೊಸದುರ್ಗಕ್ಕೆ ಕೊಂಡೊಯ್ದರು

ದ ಕ ಜಿಲ್ಲೆಯಿಂದ ಹೊರಹೋಗ ಕೂಡದು

ಮುಂದಿನ ಅಪ್ಪಣೆಯಾಗುವ ವರೆಗೆ ಈ ಜಿಲ್ಲೆಯಿಂದ ಅಕ್ಕಿ ಬತ್ತ ಹೊರ ಸಾಗದಂತೆ ಜಿಲ್ಲಾ ಅಧಿಕಾರಿಗಳ ಅಪ್ಪಣೆಯಾಗಿದೆ

ಜಿಲ್ಲಾ ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿ, ಮಂಗಳೂರು

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಯಂ. ಯಲ್ ಸಿ, ಶ್ರೀ ಕೆ ಬಿ ಜಿನರಾಜ ಹೆಗ್ಡೆ, ಯಂ ಯಲ್ ಎ (ಸೆಂಟ್ರಲ್) ರಾವ್ ಸಾಹೇಬ್ ಪಿ ಆರ್ ರಂಗನಾಥ ಪೂಂಜ, ಗಂಗೊಳ್ಳಿ ದತ್ತತ್ರೆಯ ರಾವ್ (ಮಾಜಿ) ಟ್ರೆಜರಿ ಡಿಪ್ಯೂಟಿ ಕಲೆಕ್ಟರ್ ಮತ್ತು ಮೊಳಹಳ್ಳಿ ಶಿವರಾವ್ ಇವರು ಈ ಸಮಿತಿಯ ಅಕ್ಕಿನಿಧಿಗೆ ಅಕ್ಕಿ ಸಂಗ್ರಹಿಸುವ ಬಗ್ಗೆ ಮಾಡಲಿರುವ ಪ್ರವಾಸದ ಕಾರ್ಯಕ್ರಮ. –

ಫೆಬ್ರುವರಿ ತಾ ೨– ಪೂ. ಗ ೯– ಗಂಗೊಳ್ಳಿ– ಅ. ಗ ೨– ಗಂಗೊಳ್ಳಿಯಿಂದ ನಿರ್ಗಮನ, ದಾರಿಯಲ್ಲಿ ಕಿಂಮಂಜೇಶ್ವರ– ಖಂಬದಕೋಣೆ– ಉಪ್ಪುಂದ, ಅ ಗ ೫–೩೦– ಬೈಂದೂರು– ಆಗಮನ. ಫೆಬ್ರುವರಿ ತಾ ೩– ಪೂ ಗ. ೯– ಕುಂದಾಪುರ, ಅ. ಗ. ೨– ಬಸ್ರೂರು– ಅ ಗ. ೩–೩೦– ಕೋಟೇಶ್ವರ– ದಾರಿಯಲ್ಲಿ–ಕೋಟ– ಕಲ್ಯಾಣಪುರ, ಅ ಗ. ೭–೩೦– ಉಡುಪಿ ಫೆಬ್ರುವರಿ ತಾ ೪– ಪೂ ಗ. ೯– ಮಲ್ಪೆ– ಪೂ ಗ. ೧೦. ಹೆರ್ಗ–ದಾರಿಯಲ್ಲಿ– ಉದ್ಯಾವರ– ಮಧ್ಯಾಹ್ನ–೧೨– ಕಟ್ಪಾಡಿ– ಅ. ಗ. ೨–೩೦– ಕಾಪು– ಅ ಗ ೩–೩೦–ಶಿರ್ವ– ದಾರಿಯಲ್ಲಿ– ಬೆಳ್ಮಣ್ಣು– ಪಡುಬಿದ್ರಿ ಅ. ಗ. ೬–೩೦– ಮೂಲ್ಕಿ–ಆಗಮನ, ತಾ. ೫– ಪೂ ಗ. ೮–೩೦ ಮೂಲ್ಕಿಯಿಂದ ನಿರ್ಗಮನ, ದಾರಿಯಲ್ಲಿ ಕಿನ್ನಿಗೋಳಿ, ಮುಂಡ್ಕೂರು–ಕಟೀಲು–ಬಜ್ಪೆ ಅ. ಗ. ೧೨ ೩೦ ಪಕ್ಷಿ ಅಂಗಡಿ ಆಗಮನ ಅ. ಗ. ೩–೩೦ ಸುರತ್ಕಲ್ ಆಗಮನ, ದಾರಿಯಲ್ಲಿ ಪಣಂಬೂರು. ಅ ಗ ೬ ಮಂಗಳೂರು ಆಗಮನ ಫೆಬ್ರುವರಿ ತಾ. ೬ ಪೂ. ಗ. ೮ ಮಂಗಳೂರಿನಿಂದ ನಿರ್ಗಮನ, (ಪೂ. ಗ. ೧೧ ಹಿರಿಯಡ್ಕ ಆಗಮನ, ದಾರಿಯಲ್ಲಿ ಬೈಲೂರು ಅ. ಗ. ೧೨–೩೦ ಕಾರ್ಕಳ ಆಗಮನ, ಅ. ಗ. ೩–೩೦ ನಿಟ್ಟೆ(?) ಆಗಮನ, ಅ ಗ. ೬— ಮೂಡಬಿದ್ರಿ ಆಗಮನ ಫೆಬ್ರುವರಿ ತಾ. ೯ ಪೂ. ಗ ೮ ೩೦ ಮೂಡಬಿದ್ರಿಯಿಂದ ನಿರ್ಗಮನ ಅ. ಗ ೯ ವೇಣೂರು ಆಗಮನ, ಅ. ಗ ೨ ಸಿದ್ಧಕಟ್ಟೆ ಆಗಮನ ಅ ಗ ೩ ಅರ್ಲ ಆಗಮನ, ಅ ಗ ೪ ಮೂಡಬಿದ್ರಿ ಆಗಮನ ಅ. ಗ ೪–೩೦ ನಿಡ್ಡೋಡಿ ಆಗಮನ, ಅ ಗ. ೫–೩೦ ಕಡಂದಲೆ ಆಗಮನ, ಅ ಗ ೬–೩೦ ಮಿಜಾರು ಆಗಮನ ದಾರಿಯಲ್ಲಿ ಗುರುಪುರ. ಅ ಗ ೮ ಮಂಗಳೂರು ಆಗಮನ ಫೆಬ್ರುವರಿ ತಾ. ೧೦ ಪೂ. ಗ ೮ ೩೦ ಮಂಗಳೂರಿನಿಂದ ನಿರ್ಗಮನ ಪೂ ಗ ೯ ಫರಂಗಿಪೇಟೆ ಆಗಮನ ಪೂ. ಗ ೧೦ ಜೋಡುಮಾರ್ಗ ಆಗಮನ ಮಧ್ಯಾಹ್ನ ೧೨ ಪಾಣೆಮಂಗಳೂರು ಆಗಮನ ಅ ಗ ೨–೩೦ ಪೊಳಲಿ ಆಗಮನ ಅ ಗ ೫ ಬಂಟ್ವಾಳ ಆಗಮನ ಫೆಬ್ರುವರಿ ತಾ ೧೧ ಪೂ ಗ ೯ ಕಾವಲ್‌ಮೂಡುರು ಆಗಮನ ದಾರಿಯಲ್ಲಿ ವಗ್ಗ ಪೂ ಗ ೧೧ ೩೦ ಪುಂಜಾಲ್ ಕಟ್ಟೆ ಆಗಮನ

ಆಹಾರ ಸಮಸ್ಯ ನಿವಾರಣಾ ಸಮಿತಿ

ಈ ಹೆಸರಿನಿಂದ ಸ್ಥಾಪಿತವಾದೊಂದು ಸಮಿತಿ ಸಭೆಯು ಕಲೆಕ್ಟರರ ಆಫೀಸಿನಲ್ಲಿ ತಾ ೩೧ರಂದು ಸೇರಿ ಅಕ್ಕಿಗೆ ಒಂದು ನ್ಯಾಯವಾದ ಬೆಲೆಯನ್ನು ನಿಯಂತ್ರಿಸುವ ವಿಚಾರವಾಗಿ ವಿಮರ್ಶೆ ಮಾಡಿತು ಈ ದಿನದ ಸಭೆಗೆ ಹೆಚ್ಚು ಮಂದಿ ಜಮೀನ್ದಾರರು ಬಾರದಿರುವುದರಿಂದ ಈ ಸಭೆಯನ್ನು ತಾ ೫ಕ್ಕೆ ಮುಂದುವರಿಸಲಾಗಿದೆ ಮಹಾಜನರು ತಾವಾಗಿಯೇ ಮುಂದೆ ಬಂದು ಒಂದು ನ್ಯಾಯವಾದ ಬೆಲೆಯನ್ನು ನಿರ್ಧರಿಸಿಕೊಳ್ಳದಿದ್ದರೆ ಸರಕಾರವೇ ನಿರ್ಬಂಧಿಸುವುದಾಗಿ ಈ ಸಭೆಯಲ್ಲಿ ಎಚ್ಚರಿಕೆ ಕೊಡಲಾಗಿದೆ ನಮ್ಮ ಜಿಲ್ಲೆಯ ಕಮರ್ಶಿಯಲ್ ಟೇಕ್ಸ್ ಆಫೀಸರರು ಈಗ ಆಹಾರ ಸಾಮಗ್ರಿ ಬೆಲೆ ನಿಯಂತ್ರಣದ ಅಧಿಕಾರಿಗಳಾಗಿರುವರು ಬೆಜವಾಡದಿಂದ ಬಂದ ಅಕ್ಕಿ ಚೀಲವೊಂದಕ್ಕೆ ರೂ ೧೬–೭ ಧರಂತೆ ಮಲಬಾರಿನಲ್ಲಿ ಮಾರುತ್ತಾರೆಂದು ತಿಳಿಯುತ್ತದೆ ಆದ್ದರಿಂದ ತಾ ೮ರಂದು ಈ ಸಮಿತಿಯ ಸಭೆ ಕಲೆಕ್ಟರರ ಕಚೇರಿಯಲ್ಲಿ ಪುನಃ ಸೇರಲಿರುವುದರಿಂದ ಸರಕಾರವು ನಿರ್ಬಂಧ ಹೊರಿಸುವುದಕ್ಕಿಂತ ಮುಂಚಿತ ಜನರೇ ಒಂದು ನಿರ್ಧಾರಕ್ಕೆ ಬಂದುಕೊಳ್ಳುವುದು ಉಚಿತವಾಗಿರುವುದು

ಮುನ್ಸಿಪಾಲಿಟಿ

ಸಭೆಯು ತಾ. ೧ರಂದು ಸಂಜೆ ಮುನ್ಸಿಪಲ್ ಆಫೀಸಿನಲ್ಲಿ ಚೇರ್‌ಮೇನ್ ಶ್ರೀ ಪುತ್ತೂರು ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ, ಸ್ಥಳೀಯ ಸಂಸ್ಥೆಗಳ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವು ಹಾರಾಡಬಾರದೆಂದು ಮದ್ರಾಸು ಸರಕಾರವು ಹೊರಡಿಸಿದ ಆಜ್ಞೆಯನ್ನು ಪಾಲಿಸುವ ಸಲುವಾಗಿ ಈ ಕಟ್ಟಡದ ಮೇಲಿರುವ ರಾಷ್ಟ್ರಧ್ವಜವನ್ನು ತೆಗೆಯುವರೆ ಸಭೆಯು ಒಪ್ಪಿತು. ಮುನ್ಸಿಪಲ್ ಲಾರಿಯ ರಿಪೇರಿ ವಿಷಯ ಸದಸ್ಯರು ವಿಚಾರ ಮಾಡಿದರು ಮದ್ರಾಸು ಗವರ್ನರರು ಮಂಗಳೂರಿಗೆ ಬಂದಾಗ ಅವರಿಗೆ ಮಾನಪತ್ರ, ಯುದ್ಧ ನಿಧಿಗೆ ಥೈಲಿ ಸಮರ್ಪಿಸುವ ಸೂಚನೆ ಆಯಿತು

ಜಿಲ್ಲಾ ಬೋರ್ಡು

ಸಭೆಯು ತಾ ೨ರಂದು ಪೂರ್ವಾಹ್ನ ೧೧ ಘಂಟೆಗೆ (ಆರೋಗ್ಯ ಸಂಪಾದನೆಗಾಗಿ ಪರವೂರಿಗೆ ಹೋಗಿದ್ದು ಇತ್ತೀಚೆಗೆ ಹಿಂದಿರುಗಿದ) ಅಧ್ಯಕ್ಷ ಡಾ. ಕೆ. ನಿತ್ಯಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು, ಸಾರ್ವಜನಿಕರಿಗೆ ಸಭೆಯೊಳಗೆ ಪ್ರವೇಶವಿರಲಿಲ್ಲ. ಸ್ಥಾಯಿ ಸಮಿತಿಯ ಮೂರು ಸ್ಥಾನಗಳು ಸದಸ್ಯರ ರಾಜೀನಾಮೆಯಿಂದಾಗಿ ಖಾಲಿ ಬಿದ್ದುದರಿಂದ ಆ ಸ್ಥಾನಗಳಿಗೆ ಶ್ರೀಯುತರಾದ ನಾಗಪ್ಪಯ್ಯ, ಕಜ್ಸಾನ್ ಸಾಹೇಬ್ ಮತ್ತು ಅತ್ತಿಪ್ಪೆ ಇವರು ಆರಿಸಲ್ಪಟ್ಟರು. ಉಡುಪಿ ಹೈಸ್ಕೂಲಿನ ಕುರಿತಾಗಿ ಇರುವ ವಿವಾದವನ್ನು ತೀರಿಸುವುದಕ್ಕೆ ನಿರ್ಮಿತವಾಗಿದ್ದ ಸಮಿತಿಗೂ ಹೊಸ ಮೂವರು ಸದಸ್ಯರು ಆರಿಸಲ್ಪಟ್ಟರು. ಡಿಲ್ಲಿಯಲ್ಲಿ ಜರಗಲಿರುವ ಅ. ಭಾ. ಸ್ಥಳೀಯ ಸಂಸ್ಥೆಗಳ ಪರಿಷತ್ತಿಗೆ ಡಾ| ವಿಠಲಶೆಟ್ಟರು ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟರು. ಪುತ್ತೂರು, ತ್ರಿಕರಪುರ ಮತ್ತು ಬೆಳ್ಳಾರೆಗಳ ಉಪಾಧ್ಯಾಯರ ಸಂಘಗಳಿಂದ ತುಟ್ಟಿಭತ್ತೆ ಕೇಳಿಕೊಂಡು ಬಂದಿದ್ದ ಮನವಿಯು ಗಣಿಸಲ್ಪಟ್ಟು ಬೋರ್ಡಿನ ಆರ್ಥಿಕ ಸ್ಥಿತಿ ಶಿಥಿಲವಿರುವುದರಿಂದ ತುಟ್ಟಿಭತ್ತೆಯನ್ನು ಸದ್ಯಕ್ಕೆ ಕೊಡದಿರಲು ನಿಷಾದವಾಗುತ್ತದೆಂಬ ಅಧ್ಯಕ್ಷರ ಸೂಚನೆಯು ಮಾನ್ಯವಾಯಿತು. ಅನೈತಿಕ ವ್ಯಾಪಾರಕ್ಕೆ ಸಂಬಂಧಿಸಿದ ಕಾನೂನುಗಳನ್ನು ಜಿಲ್ಲೆಗಳ ಕೆಲ ಗ್ರಾಮಗಳಿಗೂ ಅನ್ವಯಿಸಬೇಕೆಂಬ ಕಲೆಕ್ಟರರ ಸೂಚನೆಗೆ ಬೋರ್ಡು ತನ್ನ ಆಕ್ಷೇಪ ಇಲ್ಲವೆಂದಿತು. ಹಲ ಪಂಚಾಯತ ಬೋರ್ಡುಗಳ ಅಂದಾಜು ಬಜೆಟುಗಳಿಗೆ ಬೋರ್ಡು ಒಪ್ಪಿಗೆಯನ್ನಿತ್ತಿತು ಮಂಜೇಶ್ವರ ಹಾ ಎ ಶಾಲೆಯ ಮೇಲಣ ಕ್ಲಾಸುಗಳನ್ನು ತೆಗೆದು ಕೊಡವೂದು ಶಾಲೆಯಲ್ಲಿ ಪುನಃಸ್ಥಾಪಿಸಬೇಕೆಂಬ ರಕ್ಷಕರ ಸಂಘದ ಅರಿಕೆ ಮನ್ನವಾಗಲಿಲ್ಲ ೧೯೪೨ ಅಕ್ಟೋಬರದಲ್ಲಿ ದೊರೆತಂತೆಯೇ ತುಟ್ಟಿಭತ್ತೆಯನ್ನು ಬೋರ್ಡಿನ ನೌಕರರಿಗೆ ಕೊಡುವ ನಿರ್ಧಾರವಾಯಿತು ಕಾಸರಗೋಡಿನಲ್ಲಿ ಅಕ್ಕಿಯನ್ನು ಕೊಂಡು, ಬಡವರಿಗಾಗಿ ಮಾರಲು ಬಗಿಸಿದ್ದರೂ, ೨೦೦೦ವು ವೆಚ್ಚವಾದ ಬಗೆಯ ಪಟ್ಟಿಯು ಸ್ವೀಕೃತವಾಯಿತು

ಮುಟ್ಟ ಕೊಲೆ ಮೊಕದ್ದಮೆ ಇಬ್ಬರಿಗೆ ಮರಣದಂಡನೆ ೭ ಜನರಿಗೆ ಬಿಡುಗಡೆ(?)

ಕಟ್ಪಾಡಿಯಲ್ಲಿ ಕಳೆದ ತಾ ೮–೧೦ ೪೧ನೇ ರಾತ್ರಿ ತೆನ್ನಯ ಪೂಜಾರಿ ಎಂಬವನನ್ನು ಮೋಟಾರ್ ಕಾರಿನಲ್ಲಿ ಹಾಕಿ ಪಿಲಾರ್ ಕಾನ ಎಂಬ ಕಾಡಿನಲ್ಲಿ ಚೆನ್ನಾಗಿ ಹೊಡೆದು ಕೊಂದುಹಾಕಿದ ಕೇಸಿನಲ್ಲಿ ೨ನೇ ಆಲೆ ಶೀನಶೆಟ್ಟಿಗೆ ಮರಣದಂಡನೆಯನ್ನೂ, ಮೋಟರ್ ಕಾರಿನ ಡ್ರೈವರನಾಗಿದ್ದ ಮೋಟಾರ್ ಕಾರಿನ ಧನಿ ಮುದ್ದು ಸುವರ್ಣ, ಈ ತಕ್ಸೀರನ್ನು ನಡಿಸಲು ಕಾರಣಭೂತನೆಂತ ಹೇಳಲ್ಪಟ್ಟ ಮುಟ್ಟಗ್ರಾಮದ ಅಧಿಕಾರಿ ರಾಮಚಂದ್ರಯ್ಯ ಇವರ ಮಗ ವಾಸುದೇವಯ್ಯ, ಇವರ ಕೆಲಸದ ಗೊಡ್ಡ ಎಂಬವ, ತನಿಯಪೂಜಾರಿ ಕಂಪು ಯಾನೆ ರಾಮ ಶೆಟ್ಟಿ ಈ ೭ ಜನರಿಗೆ ಟ್ರಾನ್ಸ್‌ಪೋರ್ಟ ಶಿಕ್ಷೆಯನ್ನೂ ಮಂಗಳೂರಿನ ಸೆಶ್ಶನ್ಸ್ ಜಡ್ಜರಾದ ಶ್ರೀ ಸಿ ಸಿ ಬಿ, ಅಲಿಪಿ ಸಾಹೇಬರು ವಿಧಿಸಿದರು ೫ನೇ ಆಲೆ ನಾಗಪ್ಪ ಶೆಟ್ಟಿ ಮತ್ತು ೧೦ನೇ ಆಲೆ ಬಾಬುಶೆಟ್ಟಿ ಇವರಿಬ್ಬರು ಬಿಡಲ್ಪಟ್ಟರು. ಆಲೆರ ಕಡೆಯಿಂದ ಶ್ರೀ ಬಿ ನರಸಿಂಗರಾಯರೂ ಶ್ರೀ ತಲ್ಚೇರಿ ರಂಗರಾಯರೂ ವ್ಯವಹರಿಸಿದ್ದರೆ ಗವರ್ನಮೆಂಟ್ ವಕೀಲ್ ಶ್ರೀ ನಂಬ್ಯಾರರೂ ಅಸಿಸ್ಟೆಂಟ್ ಗ ಪ ಶ್ರೀ ಕಲ್ಯಾರರೂ ಪ್ರೊಸಿಕ್ಯೂಶನ್ ಕಡೆಯಿಂದ ವ್ಯವಹರಿಸಿದ್ದರು ಶ್ರೀ ಫಟಾರ್ಡೋ ಎಸ್ ಐ ಯವರು ಕೇಸಿನ ತನಿಖಿ ನಡೆಸಿ ಚಾರ್ಜು ಶೀಟು ಹಾಕಿದರು

ಖುಲಾಸೆ(?)

ರಿಜರ್ವ್ ಪೋಲೀಸರು ಸ್ಥಳೀಯ ಸಬ್ ಇನ್ಸ್‌ಪೆಕ್ಟರ ನಾಯಕತ್ವದಲ್ಲಿ ಇಲ್ಲಿಯ ಕೆಲ ಅಂಗಡಿಗಳಲ್ಲಿ ತಾ. ೨೭ರಲ್ಲಿ ಜಪ್ತಿ ನಡೆಸಿದರು. ವಿಶೇಷ ಚಿಲ್ಲರೆ ನಾಣ್ಯಗಳೇನೂ ದೊರೆಯಲಿಲ್ಲವಾಗಿ ತಿಳಿದುಬರುತ್ತದೆ.

ನಗರ ಸಭೆ–ಗಾಂಧಿಜಿ ಮತ್ತು ನೆಹರು ಭಾವಚಿತ್ರ ತೆಗೆದರು!

ತಾರೀಕು ೨೬ರಲ್ಲಿ ನಗರ ಸಭೆಯ ಮೀಟಿಂಗು ಚೆಯರ್‌ಮೆನ್ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗುವ ಪೂರ್ವ ಸಭಾಸದನದ ಗೋಡೆಯಲ್ಲಿರಿಸಲ್ಪಟ್ಟಿದ್ದ ರಾಷ್ಟ್ರಧ್ವಜಗಳಿಂದಲಂಕೃತವಾದ ಮಹಾತ್ಮಜಿ ಮತ್ತು ಪಂಡಿತ ನೆಹರುಗಳ ಭಾವಚಿತ್ರಗಳು ತೆಗೆಯಲ್ಪಟ್ಟು ನಗರಸಭೆಯ ರಾಜಭಕ್ತಿಯನ್ನು ಪ್ರದರ್ಶಿಸಿತು.

ಎರಡು ತಲೆಗಳುಳ್ಳ ಕರು!

ಮಂಗಳೂರಲ್ಲಿ, ರೈಲ್ವೆ ಸ್ಟೇಶನ್‌ನ ಹತ್ತಿರ ಒಂದು ದನವು ಎರಡು ತಲೆಗಳುಳ್ಳ ಒಂದು ಕರು ಹಾಕಿದೆ, ಇದಕ್ಕೆ ಕೊರಳೊಂದು, ತಲೆ ಎರಡೇ, ಕಣ್ಣು ನಾಲ್ಕು, ಕಿವಿ ಎರಡೇ ಡಾ| ಎ. ಎಸ್. ಪೀಟರ್ಸ್ ಎಂಬವರು ಈ ದನವು ಈ ವಿಚಿತ್ರ ಕರುವನ್ನು ಹೆರುವ ಕಾಲದಲ್ಲಿ ಇದ್ದರು. ಕರು ಹೆರುವ ಕಾಲದಲ್ಲಿಯೇ ಸತ್ತು ಹೋಗಿತ್ತು ದನವು ಸ್ಥಳೀಯ ಶ್ರೀಪತಿ ರಾಯರೆಂಬವರ ಮನೆಯದ್ದಾಗಿದೆಯೆಂದು ತಿಳಿದುಬರುತ್ತದೆ

ನೋಟೀಸು

ದ ಕ ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಕ್ರಮ ಅಮಲ್ದಾರಿ ನಂಬ್ರ 16?/42.

ಕ್ರಮ ನಂಬ್ರ 123/31.

ಅಣ್ಣಪ್ಪ ಗೌಡ ಕೂಡಾ — ಅರ್ಜಿದಾರರು

ಮತ್ತು

ಬಾಳಪ್ಪ ಗೌಡ ಕೂಡಾ — ರೆಸ್ಪಾಂಡೆಂಟರು

2ನೇ ರೆಸ್ಪಾಂಡೆಂಟ ಕ ಕೃಷ್ಣ ಗೌಡಾ ಚೆನಿಯ ಗೌಡನ ಮಗ ಕ ಸರಗೋಡು ತಾಲೂಕು ಜಾಲಸೂರು ಗ್ರಾಮದ ಕದಿಕೆಯಡ್ಕ ಎಂಬಲ್ಲಿ ಇರುವವರಿಗೆ–

ಮೇಲಿನ ಅಮಲ್ದಾರಿ ವ್ಯವಹರಣೆಯಲ್ಲಿ 1 ಮತ್ತು 2ನೇ ಅರ್ಜಿದಾರರು ತಮ್ಮ ಡಿಕ್ರಿ ಹಕ್ಕನ್ನು 3ನೇ ಅರ್ಜಿದಾರಗೆ ರಜಿಸ್ಟ್ರಿ ನಿಶಿ ಪರಾಭಾರೆ ಕೊಟ್ಟದ್ದನ್ನು C P Code ನ order 21 Rule 16ರ ಮೇರೆಗೆ ಮಂಜೂರು ಮಾಡಲಕ್ಕೂ ನಂತ್ರ ಮೇಲಿನ ಅಮಲ್ದಾರಿಯನ್ನು ಮುಂದರಿಸಲಿಕ್ಕೂ ಅರ್ಜಿ ದಾಖಲ್ಲು ಮಾಡಿರುತ್ತಾರೆ ಸದ್ರಿ ವ್ಯವಹರಣೆಯು ಮೇಲಿನ ಕೋರ್ಟಿನಲ್ಲಿ ತಾ. 22 2 1943ನೇ ಅಪರಾಹ್ನ ಘಂಟೆ 11ಕ್ಕೆ ತನ್ನಿಗೆ ಇಟ್ಟಿರುತ್ತದೆ ಅದ್ದರಿಂದ ಸದ್ರಿ ದಿವಸ ನಿಮಗೇನಾದರೂ ಆಕ್ಷೇಪ ಹೇಳಲು ಇದ್ದಲ್ಲಿ ನೀವಾಗಲಿ ವ ವಕೀಲರ ಮುಖಾಂತರವಾಗಲಿ ಹಾಜರು ಆಗತಕ್ಕದ್ದು ತಪ್ಪಿದಲ್ಲಿ ತೀರ್ಮಾನವು ಏಕಪಕ್ಷಪಾರ್ಟಿಯಾಗಿ ಮಾಡಲ್ಪಡುವುದೆಂತ ತಿಳಿದಿರಲಿ

(By order of Court)

ಮಂಗಳೂರು 3–2–1943 — **K Vyasa Rao,** Advocate for Petr

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ ಅಷ್ಟು ಸುಖಕರ– ಅಷ್ಟು ಚರ್ಮ ಮೃದುಕರ–

ಕುಟಿಕೂರ ಟಾಲ್ಕಮ್ ಪೌಡರ್.

CUTICURA TALCUM POWDER

'ನನ್ನ ದೇಹವು ಪಶುಪಕ್ಷಿಗಳಿಗೆ ಆಹಾರವಾಗಲಿ!'

'ಭರತಮಾತೆಯ ಗರ್ಭದಲ್ಲಿ ಪುನಃ ನನಗೆ ಜನ್ಮವೊದಗಲಿ!'

'ಗಾಂಧಿಜಿ ನಾನು ತಪ್ಪು ಮಾಡಿದ್ದರೆ ಕ್ಷಮಿಸಿಬಿಡಲಿ'

ಪ್ರೊ। ಬನ್ಸಾಲಿಯವರ ಕೊನೆಯ ಆಸೆಗಳಿಂತಿದ್ದುವು

ಬನ್ಸಾಲಿಯವರ ದಿನದಿಂದ ದಿನಕ್ಕೆ ಆರೋಗ್ಯ ... ಅರುವತ್ತುಮೂರು ದಿನಗಳ ... ಉಪವಾಸದಿಂದ ... ಅವರ ದೇಹ ... ಯಾವ ಸಮಯದಲ್ಲಾದರೂ ಅನಾಹುತವೇ ಆಗಬಹುದೆಂದು ಡಾಕ್ಟರರೇ ಅಂಜಿಕೊಂಡಿದ್ದರು. ಆ ಅಂಜಿಕೆಯನ್ನು ಪರಿಹಾರ ಮಾಡಿ, ಅವರ ಶರೀರದಲ್ಲಿ ಚೈತನ್ಯ ಬರುತ್ತಿದ್ದಂತೆ ಅವರ ಅಖಿಲ ಭಾರತದ ಮಿತ್ರರ ಮುಖಗಳೂ ಅರಳುತ್ತಿವೆ. ಅವರು ಮೊದಲನೆಯ ದಿನ ಎರಡು ಬಾರಿ ಕಿತ್ತಳೆ ಹಣ್ಣಿನ ರಸ ಸೇವಿಸಿದರು. ಆ ರಾತ್ರಿ ಅವರಿಗೆ ಒಳ್ಳೆಯ ನಿದ್ರೆ ಬೀಳಲಿಲ್ಲ. ಮಧ್ಯರಾತ್ರಿ ೧॥ ಗಂಟೆ ಕಾಲಕ್ಕೆ ಎದ್ದು ಗೀತಾಂಜಲಿಯನ್ನು ಸ್ವಲ್ಪ ಹೊತ್ತು ಓದಿ ಆ ಮೇಲೆ ಒರಗಿದರು. ಮರುದಿನದಿಂದಲೇ ಏನಾದರೂ ಕೆಲಸ ಮಾಡಬೇಕೆಂದು ಬನ್ಸಾಲಿಯವರ ಆಗ್ರಹ. ಸುಮ್ಮ ಸುಮ್ಮನೇ ಕುಳಿತು ತಿನ್ನುವುದು ಅವರಿಗೆ ಸಾಧ್ಯವಿಲ್ಲ! ಅಂಥಾ ಕರ್ಮಯೋಗಿ ಅವರು. 'ಆಹಾರ ತೆಕ್ಕೊಂಡಿದ್ದೇನೆ, ಇನ್ನು ದುಡಿಯಬೇಕು' ಇದು ಅವರ ಹಠ. ಚರಕವನ್ನು ಕಾಲುತಾಸು ತಿರುಗಿಸಿದರು. ಆ ದಿನ ಕಿತ್ತಳೆ ಹಣ್ಣಿನ ರಸ ಮತ್ತು ಹಾಲು ಕುಡಿದರು. ಪ್ರಕೃತಿ ಬೇಗಬೇಗನೇ ಸುಧಾರಿಸುತ್ತಿತ್ತು. ನಾಲ್ಕನೆ ದಿನವೇ ಅವರು ಪೊಪ್ಪಳಿ ಹಣ್ಣು, ಬೋರುಬೋಗಳನ್ನು ಹಲ್ಲಿನಿಂದ ಜಗಿದು ತಿಂದರು. ಎದ್ದು ತಿರುಗಾಡತೊಡಗಿದರು. ಕಿತ್ತಳೆ ಹಣ್ಣಿನ ರಸದಿಂದ ಪಾರಣೆ ಮಾಡಿದ್ದು ಬನ್ಸಾಲಿಯವರಿಗೆ ಸರಿತೋರಲಿಲ್ಲ. 'ಬೇಯಿಸಿದ ಜೀನಸುಗಳನ್ನು ನಾನು ತಿನ್ನುತ್ತೇನೆ; ಗೋಧಿಹಿಟ್ಟು ತಿಂದು ಪಾರಣೆ ಮಾಡಬೇಕಾಗಿತ್ತು; ನನಗೆ ಆ ಅಭ್ಯಾಸವುಂಟು' ಹೀಗೆಂದರವರು. ಗುರುವಾರ ತಾ. ೧೪ರಂದು ಸಂಕ್ರಾಂತಿ. ಅಂದು ಉಪವಾಸ ಬಿಟ್ಟ ಮೂರನೆಯ ದಿನ, ೫-೬ ತೊಲೆ ಸಕ್ಕರೆ ಎಳ್ಳನ್ನು ಜಗಿದು ತಿಂದರು. ಡಾಕ್ಟರರು ಅದನ್ನು ನೋಡಿ ಅಂಜಿದರು. ಆದರೆ ಬನ್ಸಾಲಿಯವರಿಗೆ ಏನೂ ಅಪಾಯವಾಗಲಿಲ್ಲ. ಉಪವಾಸ ಬಿಟ್ಟ ಎಂಟನೇ ದಿನ ಎಂದರೆ ತಾ. ೨೦ಕ್ಕೆ ಅವರ ತೂಕ ಎಂಟು ಪೌಂಡು ಹೆಚ್ಚಿತು. ಹಾಗಾಗಿ ಈಗ ಬನ್ಸಾಲಿಯವರು ಸಂಕಷ್ಟವನ್ನು ದಾಟಿದರೆಂದು ಡಾಕ್ಟರರೆಲ್ಲಾ ಸಂತೋಷಪಡುತ್ತಾರೆ. ಬನ್ಸಾಲಿಯವರ ಆರೋಗ್ಯ ವಾರ್ತೆ ಕೇಳಿ ಅಖಿಲ ಭಾರತವೇ ಸಂತೋಷಗೊಳ್ಳುತ್ತದೆ!

ಆಣೆ ಕೋಣೆ ತೋರಿಸಿದರು!

ಚಿಮೂರು ಗ್ರಾಮದಲ್ಲಿ ಸೈನಿಕರೂ ಪೋಲೀಸರೂ ಸ್ತ್ರೀಯರ ಮಾನಾಪಹಾರ ಮಾಡಿದರೆಂಬ ಸುದ್ದಿ ಕೇಳಿ ಪ್ರೊ। ಬನ್ಸಾಲಿಯವರಿಗೆ ಬಹಳ ವೇದನೆ ಆಯಿತು. ತಮಗೆ ಹುಚ್ಚು ಹಿಡಿದಂತಾಯಿತೆಂದು ಬನ್ಸಾಲಿಯವರು ನವಂಬರ ತಾ. ೩೦ರಂದು ಪ್ರಕಟಿಸಿದ ಪ್ರಕಟಣೆಯಲ್ಲಿ ಹೇಳಿದ್ದಾರೆ. ಚಿಮೂರು ಗ್ರಾಮದ ನೆರೆಗ್ರಾಮ ವಾಣಿಗ್ರಾಮ. ವೈಸರಾಯ ಮಂತ್ರಿಮಂಡಳ ಮಂಡಿತರಾದ ಆಣೆಯವರು ವಾಣಿಗ್ರಾಮದವರು. ಚಿಮೂರಿಗೂ ಅವರಿಗೂ ಹೆಚ್ಚಿನ ಸಂಬಂಧವುಂಟು. ಅದ್ದರಿಂದಲೂ, ಭಾರತದ ಸ್ತ್ರೀಯರ ಮಾನರಕ್ಷಣೆಯ ವಿಚಾರವಾದ್ದರಿಂದಲೂ ಆಣೆಯವರು ಈ ವಿಷಯ ವಿಚಾರ ಮಾಡುವರೆಂದು ತಿಳಿದು ಪ್ರೊ। ಬನ್ಸಾಲಿಯವರು ದಿಲ್ಲಿ ವರೆಗೆ ಹೋಗಿ ಆಣೆಯವರಲ್ಲಿ ದೂರಿತ್ತರು. 'ಇದೇನು ವಿಶೇಷ ಸಂಗತಿ? ಸೈನಿಕರಿರುವಲ್ಲಿ ಇಂಥಾದ್ದು ಆಗುವಂಥಾದ್ದೇ' ಎಂದು ಆಣೆ ಹೇಳಿಬಿಟ್ಟರು! ಇಂಥಾ ಮಾತನ್ನು ಕೇಳಿ ಸರಳ ಶುದ್ಧ ಹೃದಯದ ಬನ್ಸಾಲಿಯವರಿಗೆ ಆಶ್ಚರ್ಯವೂ ಸಂಕಟವೂ ಆಯಿತು! "ಈ ವಿಚಾರದಲ್ಲಿ ನಿಮಗೇನೂ ಮಾಡಲು ಸಾಧ್ಯವಿಲ್ಲವೆಂದಾದರೆ ನಿಮ್ಮ ಕೆಲಸಕ್ಕೆ ರಾಜಿನಾಮೆ ಕೊಡಬಾರದೆ? ಈ ವಿಷಯ ಏನೂ ಆಗದಿದ್ದರೆ ನಾನು ಆಮರಣಾಂತ ಉಪವಾಸ ತೊಡಗುತ್ತೇನೆ" ಎಂದರು ನಿರ್ಧಾರಪೂರ್ವಕ ಬನ್ಸಾಲಿಯವರು! ಹೀಗೆ ಹೇಳಿದ ಬನ್ಸಾಲಿಯವರಿಗೆ, ಆಣೆಯವರು ಹತ್ತಿರದ ಒಂದು ಕೋಣೆ ತೋರಿಸಿ, ಅಲ್ಲಿ ಕುಳಿತು ಉಪವಾಸ ತೊಡಗುವಂತೆ ಹೇಳಿದರು. ಇನ್ನೇನು ತಡವುಂಟೆ? ಬನ್ಸಾಲಿಯವರು ಅದೇ ಕೋಣೆಯಲ್ಲಿ ಆಗಿನಿಂದಲೇ ಕುಳಿತು ಉಪವಾಸ ಮಾಡತೊಡಗಿದರು!

ಉಪವಾಸ ತಪಸ್ಸಿನಲ್ಲಿ

ಹೀಗೆ ನವಂಬರ ೧೧ಕ್ಕೆ ಬನ್ಸಾಲಿಯವರ ಉಪವಾಸ ವ್ರತ ಆರಂಭವಾಯಿತು. ಅದೇ ದಿನ ಮಧ್ಯಾಹ್ನ ಪೋಲೀಸರು ಬಂದು ಬನ್ಸಾಲಿಯವರು ದಿಲ್ಲಿ ಬಿಟ್ಟು ಹೊರಟು ಹೋಗಬೇಕೆಂದು ಅಪ್ಪಣೆ ಕೊಟ್ಟರು. ಬನ್ಸಾಲಿಯವರು ಆ ಕೋಣೆಯೊಳಗಿಂದ ಹೊರಗೆ ಬರಲೇ ಇಲ್ಲ. ರಾತ್ರಿ ೯॥ ಗಂಟೆಗೆ ಬನ್ಸಾಲಿಯವರನ್ನು ಪೋಲೀಸರು ಬಂಧಿಸಿ ಸೆರೆಮನೆಗೊಯ್ದರು. ಅಲ್ಲಿ ನವಂಬರ ನಾಲ್ಕನೇ ತಾರೀಕಿಗೆ ಅವರಿಗೆ ಮೂಗಿನ ಮೂಲಕ ಆಹಾರ ಸೇವಿಸಲು, ಪೋಲೀಸರು ಬಲಾತ್ಕಾರದಿಂದ ಪ್ರಯತ್ನ ಮಾಡಿದರು. ಆ ಪ್ರಯತ್ನವೇನೂ ಫಲಿಸಲಿಲ್ಲ. ಉಪವಾಸ ನಡೆದೇ ಇತ್ತು. ಬಳಿಕ ಆರನೇ ತಾರೀಕಿಗೆ ಸೆರೆಮನೆಯಿಂದ ಹೊರಹಾಕಿ ಅವರನ್ನು ಸೇವಾಗ್ರಾಮಕ್ಕೆ ತಂದುಬಿಟ್ಟರು. ಬನ್ಸಾಲಿಯವರು ಅಲ್ಲಿಂದ ಚಿಮೂರಿಗೆ ಹೊರಟರು. ಹೊಸ ಉಪವಾಸ ವ್ರತ ನವಂಬರ ೧೩ರಿಂದ ಚಿಮೂರು ಬಾಲಾಜಿ ದೇವಾಲಯದಲ್ಲಿ ಆರಂಭವಾಯಿತು. ಚಿಮೂರು ಅನ್ಯಾಯದ ಕುರಿತು ವಿಚಾರಣೆ ನಡೆಯದಿದ್ದರೆ ತಾನು ಉಪವಾಸ ಮುಂದುವರಿಸುವುದಾಗಿ ಬನ್ಸಾಲಿಯವರು ಡಿಪ್ಯುಟಿ ಕಮಿಶನರಿಗೆ ಬರೆದು ತಿಳಿಸಿದರು. ಚಿಮೂರನ್ನು ಮೂರು ತಾಸುಗಳೊಳಗೆ ಬಿಟ್ಟು ಹೋಗಬೇಕಾಗಿ ಆಜ್ಞೆ ಹೊರಟಿತು. ಬನ್ಸಾಲಿಯವರು ಆ ಆಜ್ಞೆ ಮನ್ನಿಸಲಿಲ್ಲ. ಅವರನ್ನು ಬಂಧಿಸಿ ಸೇವಾಗ್ರಾಮಕ್ಕೆ ತಂದುಬಿಟ್ಟರು. ಬನ್ಸಾಲಿ ತಿರುಗಿ ಚಿಮೂರಿಗೆ ಹೋದರು. ಹೀಗೆ ತಾ. ೨೯ರ ವರೆಗೆ ಸೇವಾಗ್ರಾಮಕ್ಕೆ ಪೋಲೀಸರು ತಂದುಬಿಡುವುದು, ಚಿಮೂರಿಗೆ ಬನ್ಸಾಲಿ ಹೋಗುವುದು ಇದೇ ಕ್ರಮ ನಡೆದಿತ್ತು. ಚಿಮೂರಿಗೆ ಹೋಗುವಾಗ ಗಾಂಧಿಜಿ ದಂಡಯಾತ್ರೆಗೆ ಹೊರಡುವಾಗ ಹಿಡಿದ ಕೋಲನ್ನು ಹಿಡಿದು ಹೊರಟಿದ್ದರು. ಕೊನೆಯ ಸಲ ಅವರನ್ನು ಸೇವಾಗ್ರಾಮದಲ್ಲಿ ಪೋಲೀಸರು ತಂದುಬಿಟ್ಟದ್ದು ಒಂದು ಮಂಚದ ಮೇಲೆ ಮಲಗಿಸಿಕೊಂಡು! ಮೊದಲನೆಯ ಹದಿನೈದು ದಿನ ಅವರು ನೀರನ್ನೂ ತೆಗೆದುಕೊಳ್ಳಲಿಲ್ಲ. ಪೋಲೀಸು ಸುಪರಿಂಟೆಂಡೆಂಟರು ನೀರನ್ನಾದರೂ ಕೊಳ್ಳಲೆಂದು ಬೇಡಿದರೂ ಅವರು ಒಡಂಬಡಲಿಲ್ಲ! ಅವರ ಗೆಳೆಯರು ಬಹಳ ಆಗ್ರಹಮಾಡಿದ ಮೇರೆಗೆ ನವಂಬರ ೨೭ರಂದು ನೀರು ತೆಗೆದುಕೊಂಡರು. ಈ ಉಪವಾಸ ಕಾಲದಲ್ಲಿ ಬನ್ಸಾಲಿಯವರು ಆನಂದದಿಂದಲೇ ಇದ್ದರು. ಯೋಗಿಯಂತೆ ಸಮಾಧಾನಚಿತ್ತದಿಂದಿದ್ದರು. ಆದರೂ ದಿನಹೋದಂತೆ ಬನ್ಸಾಲಿಯವರ ದೀರ್ಘವ ಶರೀರ ಕ್ಷೀಣವಾಗತೊಡಗಿತು. ಆದರೂ ಮುಖಮುದ್ರೆ ತಪೋಬಲದಿಂದ ಉಜ್ವಲವಾಗಿ ತೋರುತಿತ್ತು! ಒಂದುವರೆ ತಿಂಗಳ ಉಪವಾಸದ ನಂತರ ಅವರ ಪ್ರಕೃತಿ ಬಹಳ ಕ್ಷೀಣವಾಯಿತು. ಆದರೂ ಶುದ್ಧವಾಗಿ ಮಾತನಾಡುತ್ತಿದ್ದರು. ಧ್ವನಿ ಬಿದ್ದಿತ್ತು. ಮೂತ್ರದಲ್ಲಿ ರಕ್ತಾಂಶ ಹೋಗುತಿತ್ತು. ಡಾ. ವರದ ಪಾಂಡೇ ಮೊದಲಾದ ಡಾಕ್ಟರರ ಮೋರೆ ಸಪ್ಪಗಾಯಿತು! ಜೀವಕ್ಕೆ ಅಪಾಯವುಂಟೆಂದು ಎಲ್ಲರೂ ಅಂಜಿದರು!

ಅವರ ಕೊನೆಯ ಆಸೆಗಳು!

ಜನವರಿ ೩ನೆಯ ತಾರೀಕು ಉಪವಾಸದ ೫೩ನೆಯ ದಿನ! ಬನ್ಸಾಲಿಯವರಿಗೆ ಆಗಾಗ ಎಚ್ಚರ ತಪ್ಪುತಿತ್ತು. ಜಾನಕೀ ಬಜಾಜ್, ಕಮಲನಯನ್ ಬಜಾಜ ಮೊದಲಾದವರೆಲ್ಲ ಬಹಳ ಕಳವಳಗೊಂಡರು! ಬನ್ಸಾಲಿಯವರಿಗೂ ತಮ್ಮ ಅಂತ್ಯಕಾಲ ಸಮೀಪಿಸಿತೆಂದು ತೋರಿತು. ಅವರು ಆ ಸಮಯ ತಮ್ಮ 'ಕೊನೆಯ ಆಸೆಗಳ'ನ್ನು ಹೇಳಿದರು. ಗುರು ಮಹಾತ್ಮಾಜಿಯವರ ಚರಣ ತಲದಲ್ಲಿ ಅರ್ಪಿಸಲು ಒಂದು ಪತ್ರ ಬರೆದಿಟ್ಟರು. 'ದೇವರು ನನಗೆ ಅನೇಕ ರೀತಿಯಲ್ಲಿ ಅನುಗ್ರಹ ತೋರಿಸಿದ್ದಾನೆ. ಅನೇಕ ವಸ್ತುಗಳನ್ನು ಸಂತೋಷದಿಂದ ತ್ಯಾಗಮಾಡುವ ಶಕ್ತಿಯನ್ನು ದಯಪಾಲಿಸಿದ್ದಾನೆ. ಆತನ ಕಾರ್ಯಕ್ಕಾಗಿ ನನ್ನೀ ಶರೀರವನ್ನರ್ಪಿಸುವ ಭಾಗ್ಯವನ್ನೂ ನನಗೆ ಆತನು ಕೊಟ್ಟಿದ್ದಾನೆ. ಆದರೆ ಸರಕಾರದ ಅಥವಾ ಆಣೆಯವರ ಮನಸ್ಸನ್ನು ಪರಿವರ್ತನೆಗೊಳಿಸುವ ಶಕ್ತಿಯೊಂದನ್ನು ನನಗೆ ಆತನು ಅನುಗ್ರಹಿಸಲಿಲ್ಲ. ಇಂದು ನನ್ನ ಉಪವಾಸದ ೫೩ನೆಯ ದಿನ. ನನಗೆ ಎಚ್ಚರತಪ್ಪುವ ಕಾಲ ಬಂದಿದೆ. ಆದ್ದರಿಂದ ನಾನು ನನ್ನೀ ಕೊನೆಯ ಆಸೆಗಳನ್ನು ನಿವೇದಿಸಿಕೊಳ್ಳುತ್ತೇನೆ. ಬಾಪು (ಮಹಾತ್ಮಾ ಗಾಂಧಿಜಿಯವರು) ನನ್ನ ಗುರು. ೨೫ ವರ್ಷಗಳಿಂದಲೂ ನಾನು ಅವರ ಚರಣತಲದಲ್ಲಿ ಕುಳಿತು ಪಾಠ ಕಲಿಯುತ್ತಿದ್ದೇನೆ. ನನ್ನ ಸರ್ವಸ್ವವೂ ಅವರದ್ದೇ. ಅವರು ಕಲಿಸಿದ ಸತ್ಯ ಮತ್ತು ಅಹಿಂಸೆಗಳ ಪಾಠಗಳಿಗನುಸಾರವಾಗಿ ನಡೆಯುವುದೊಂದೇ ನನ್ನ ಜೀವನದ ಉದ್ದೇಶವಿತ್ತೆಂದು, ನಾನು ತೀರಿಹೋದ ಬಳಿಕ ಬಾಪುಗೆ ತಿಳಿಸಿರಿ. ಈ ಹಾದಿಯಲ್ಲಿ ನಾನು ನನ್ನ ಸಾಧ್ಯವಾದ ಎಲ್ಲಾ ಪ್ರಯತ್ನ ಮಾಡಿದ್ದೇನೆ. ನಾನು ಮಾಡಿದ ಕೆಲಸದಲ್ಲಿ ನ್ಯೂನತೆಯಿದ್ದರೆ ನನ್ನನ್ನವರು ಕ್ಷಮಿಸಬೇಕಾಗಿ ಬೇಡಿಕೊಂಡಿದ್ದೇನೆಂದೂ ತಿಳಿಸಿರಿ. ನನ್ನ ಮರಣಾನಂತರ, ನನ್ನೀ ದೇಹವು ಪಶುಪಕ್ಷಿಗಳಿಗೆ ಆಹಾರವಾಗಬೇಕೆಂದು ನನ್ನ ಆಸೆಯಾಗಿದೆ. ಜಾನಕೀದೇವಿಯವರು ತಮಗಿಷ್ಟಬಂದಂತೆ ನನ್ನ ಉತ್ತರಕ್ರಿಯೆ ಮಾಡಿಸಬೇಕು. ನಾನು ಇನ್ನು ಮುಂದೆ ಸ್ಮೃತಿತಪ್ಪಿ ಅಸಂಬದ್ಧ ಮಾತನಾಡಿ ಆಹಾರ ಬೇಕೆಂದು ಎಲ್ಲಿಯಾದರೂ ಕೇಳಿದರೆ ಯಾರೂ ನನಗೆ ಆಹಾರ ಕೊಡಬಾರದು. ಸರಕಾರವು ವಿಚಾರಣಾಮಂಡಳವನ್ನೇರ್ಪಡಿಸಲು ಒಪ್ಪಿದರೆ, ಅಥವಾ ಆಣೆಯವರು ನನ್ನೊಡನೆ ಚಿಮೂರಿಗೆ ಹೋಗಲು ಒಡಂಬಟ್ಟರೆ ಮಾತ್ರ ನನಗೆ ಆಹಾರ ಕೊಡುವುದು. ನನ್ನೀ ಭಾರತಭೂಮಿಯು ಸ್ವತಂತ್ರವಾಗಬೇಕು, ಐಹಿಕ ಪಾರಮಾರ್ಥಿಕ ಶಕ್ತಿಯಲ್ಲಿ ಉನ್ನತವಾಗಬೇಕು ಎಂದು ನನ್ನ ಅಪೇಕ್ಷೆಯಾಗಿದೆ. ಬಾಪುರಂಥಾ ವ್ಯಕ್ತಿಗಳು ಈ ಭೂಮಿಯಲ್ಲಿ ಹುಟ್ಟಿರುವಾಗ ನನ್ನೀ ಅಪೇಕ್ಷೆ ಸಫಲವಾಗುವುದೆಂದು ಶ್ರದ್ಧೆಯಿದೆ. ಆದರೆ ಈ ಫಲವನ್ನು ಕಣ್ಣಾರೆ ಕಾಣಲು ದೇವರು ನನಗೆ ಈ ಜನ್ಮದಲ್ಲಿ ಆಯುಷ್ಯ ಕೊಡಲಿಲ್ಲವೆಂದು ತೋರುತ್ತದೆ. ಆದ್ದರಿಂದ ದೇವರು ಪುನಃ ನನಗೆ ಇದೇ ಭೂಮಿಯಲ್ಲಿ ಜನ್ಮ ಕೊಡಬೇಕೆಂದು, ನಾನು ಆತನನ್ನು ಕೊನೆಗೆ ಹೀಗೆ ಪ್ರಾರ್ಥಿಸಿಕೊಳ್ಳುತ್ತೇನೆ. ದೇವಕಾರ್ಯಕ್ಕಾಗಿ ಬದುಕುವಂತೆ ಸಾಯುವ ಶಕ್ತಿಯನ್ನೂ ಸಹ ನನ್ನ ದೇಶಬಾಂಧವರು ಗಳಿಸುವುದನ್ನು ನಾನು ನನ್ನೀ ಚರ್ಮಚಕ್ಷುವಿನಿಂದ ನೋಡಬೇಕೆಂದು ಆಸೆಯಿದೆ'. ಇವು ಆ ತಪೋನಿಧಿಯ ಕೊನೆಯ ಆಸೆಗಳಿದ್ದುವು!

ಪಾಷಾಣವೂ ಕರಗುತಿತ್ತು!

ಇಷ್ಟರಲ್ಲಿ ಪರುಷ ಪಾಷಾಣವೂ ಕರಗುತಿತ್ತು. ಭಾರತ ಸರಕಾರ, ಮಧ್ಯಪ್ರಾಂತ ಸರಕಾರಗಳ ಅಧಿಕಾರಿಗಳೂ ತಲ್ಲಣಗೊಂಡರು! ಭಾರತದ ಅದ್ಯಂತದಲ್ಲಿ ಆಬಾಲವೃದ್ಧರಾದಿ-ಸಮಸ್ತ ಜನರೂ ಮರುಮರುಗುತ್ತಿದ್ದರು. ಉದ್ರೇಕಗೊಂಡಿದ್ದರು. ಶ್ರೀಮತಿ ಅನಸೂಯಾಬಾಯಿ ಶ್ರೀಮಾನ್ ಮುನ್ಷಿ, ಡಾ. ಖಾರೆ ಮೊದಲಾದವರು ಮಧ್ಯಸ್ಥಿಕೆಗಾಗಿ ಹಗಲಿರುಳು ವಿಶ್ರಾಂತಿಯಿಲ್ಲದೆ ವಿಶ್ರಾಂತಿ ಬಯಸದೆ ಓಡಾಡುತ್ತಿದ್ದರು. ಕೊನೆಗೆ ಸ್ತ್ರೀಯರ ಮಾನರಕ್ಷಣೆಯ ಹೊಣೆ ತಮ್ಮದೆಂದು ಸರಕಾರವು ಒಪ್ಪಿತು! ಬನ್ಸಾಲಿಯವರೊಡನೆ ಆಣೆಯವರು ಚಿಮೂರಿಗೆ ಬರುವುದಾಗಿ ಒಪ್ಪಿಕೊಂಡರು! ಬಹಿರಂಗವಾಗಿ ವಿಚಾರಣೆ ನಡೆಸಿದರೆ, ಮಾನಭಂಗ ಹೊಂದಿದ ಸ್ತ್ರೀಯರಿಗೆ ದೀರ್ಘಕಾಲವಾದ್ದರಿಂದ ಪುನಃ ಹೆಚ್ಚಿನ ವ್ಯಸನ ಕೊಟ್ಟಂತೆ ಆಗುವುದರಿಂದ, ಬಹಿರಂಗ ವಿಚಾರಣೆ ಬೇಡವೆಂದು ಅವರ ಮಿತ್ರರು ಹೇಳಿದ್ದಕ್ಕೆ ಬನ್ಸಾಲಿಯವರೇ ಒಪ್ಪಿಕೊಂಡರು. ಅರುವತ್ತುಮೂರು ದಿನಗಳ ಉಪವಾಸದಲ್ಲೂ ಬನ್ಸಾಲಿಯವರು ಎಚ್ಚರತಪ್ಪಿರಲಿಲ್ಲ. ಒಪ್ಪಂದ ಕರಾರಿನ ಪ್ರತಿಯೊಂದು ಶಬ್ದವನ್ನೂ ಓದಿ ಅರ್ಥಮಾಡಿಕೊಂಡು, ಮಹಾತ್ಮರ ಹಾಗೂ ರಾಷ್ಟ್ರದ ಗೌರವಕ್ಕೂ ಸ್ತ್ರೀಯರ ಮಾನರಕ್ಷಣೆಗೂ ಯಾವುದೇ ರೀತಿಯ ಭಂಗ ಬರುವುದಿಲ್ಲವೆಂದು ಮನಗಂಡು ಅವರು ಆ ಒಪ್ಪಂದ ಕರಾರಿಗೆ ಸಹಿಹಾಕಿ ಮತ್ತೆ ಉಪವಾಸವನ್ನು ಬಿಟ್ಟುಕೊಟ್ಟರು. ಈ ಚರಿತ್ರಾರ್ಹವಾದ ಮಧ್ಯಸ್ಥಿಕೆಯಲ್ಲಿ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರೂ ಸಹ ಸೇರಿದ್ದಾರೆಂದು ಆಣೆಯವರು ಲಾಹೋರಿನ 'ಟ್ರಿಬ್ಯೂನ್' ಪತ್ರಿಕೆಯ ಸಂಪಾದಕರೊಡನೆ ಹೇಳಿದರು! ಬನ್ಸಾಲಿಯವರು ಉಪವಾಸ ಬಿಟ್ಟುಕೊಟ್ಟರೆಂಬ ಸುದ್ದಿ ಕೇಳಿದೊಡನೆಯೇ ಆಣೆಯವರು ದೇವರನ್ನು ಪ್ರಾರ್ಥಿಸಿಕೊಂಡರಂತೆ! ಅವರ ತಲೆ ಸುತ್ತು ಸುತ್ತುತ್ತಿದ್ದ ಘೋರ ಅಪರಾಧ ರಾಶಿಯೊಂದು ಹೇಗಾದರೂ ಕೊನೆಗೆ ಅಪಾಯವಾಗದೆ ಕಳಚಿ ಬಿದ್ದುದಕ್ಕಾಗಿ ಇರಬೇಕು! ಬನ್ಸಾಲಿಯವರು ಉಪವಾಸ ಬಿಡುವತನಕ, ಅವರು ಉಪವಾಸ ಮಾಡುತ್ತಿದ್ದ ಬಜಾಜವಾಡಿಯ ಸುತ್ತು ರಾತ್ರಿಹಗಲು ಯಮದೂತರಂತೆ ಪೋಲೀಸರು ಪಹರೆ ಮಾಡುತ್ತಿದ್ದರು. ಒಳಗಿಂದ ಹೊರಗೆ, ಹೊರಗಿನಿಂದ ಒಳಗೆ ಯಾರಿಗೂ ಹೋಗಲು ಸಾಧ್ಯವಿರಲಿಲ್ಲ. ಪತ್ರಿಕೆಗಳು ಈ ಚಾರಿತ್ರಿಕ ವಿಷಯವನ್ನಾದರೂ ತಿಳಿಸಲು ಆಸ್ಪದವೂ ಇರಲಿಲ್ಲ! ಬನ್ಸಾಲಿಯವರು ಉಪವಾಸ ಮುರಿದೊಡನೆಯೇ ಪೋಲೀಸರೂ ಅಲ್ಲಿಂದ ಕಾಲ್ತೆಗೆದರು. ಪತ್ರಿಕೆಗಳ ನಿರ್ಬಂಧವೂ ಸಡಿಸಲಿಸಲ್ಪಟ್ಟಿತು.

ಪ್ರೊ। ಬನ್ಸಾಲಿಯವರು ಬ್ರಹ್ಮಚಾರಿಗಳು; ಇಂದ್ರಿಯ ನಿಗ್ರಹಿಗಳು; ನಿರ್ಭಯರು! ಅವರ ಆತ್ಮಶಕ್ತಿ ಅಪಾರವಾದುದು. ಅರುವತ್ತುಮೂರು ದಿನಗಳ ಉಪವಾಸ ಮಾಡಿದ್ದರೂ ಇನ್ನೂ ಮೂರು ನಾಲ್ಕು ವಾರ ನೀರು ಸೇವಿಸಿ ಬದುಕಿ ಉಳಿಯುತ್ತಿದ್ದರೆಂದು ಕಮಲನಯನ ಬಜಾಜರು ಹೇಳುತ್ತಾರೆ. ಅವರು ಪಸುಕೂಸಿನಂತೆ ನಿಷ್ಪಾಪರು. ಅವರಿಗೆ ಈಗ ೪೦, ೪೫ ವರ್ಷ ಆಗಬಹುದಾದರೂ ಅವರನ್ನು ಎತ್ತಿಕೊಂಡು ಮುದ್ದುಕೊಡಬೇಕೆಂದು ತಮಗೆನಿಸುತ್ತದಾಗಿ ಮುನ್ಷಿಯವರು ಬರೆಯುತ್ತಾರೆ. ಬನ್ಸಾಲಿಯವರನ್ನು ಸೇವಾಗ್ರಾಮದವರು ಮತ್ತು ಅವರ ಪರಿಚಿತರು 'ಬಾಬಾಜಿ' ಎಂದು ಕರೆಯುತ್ತಾರೆ. ಇಂಥಾ ಮಹಾತ್ಮರಿಂದಲೇ ಭಾರತಮಾತೆಯ ಪವಿತ್ರ ಕೀರ್ತಿಯು ಮುಗಿಲು ಮುಟ್ಟುತ್ತಿದೆ!

ಜನವರಿ ೧೧ರಂದು ವರ್ಧಾದಿಂದ ಹೊರಟ ಒಂದು ಪ್ರಕಟಣೆಯಲ್ಲಿ ಪ್ರೊ। ಬನ್ಸಾಲಿಯವರು ಸೇವಾಗ್ರಾಮದ ಆಶ್ರಮದಲ್ಲಿರುವರಾಗಿಯೂ ಅವರ ಆರೋಗ್ಯವು ಉತ್ತಮಗೊಳ್ಳುತ್ತಿರುವುದಾಗಿಯೂ ಹೇಳಲ್ಪಟ್ಟಿದೆ. ಪ್ರೊ। ಬನ್ಸಾಲಿಯವರು ಚಿಮೂರನ್ನು ಸಂದರ್ಶಿಸಲು ಉತ್ಸುಕರಾಗಿ ಆಣೆಯವರು ಚಿಮೂರಿಗೆ ತಮ್ಮೊಡನೆ ಬಂದು ತಮ್ಮ ಕರ್ತವ್ಯವನ್ನು ಆದಷ್ಟು ಬೇಗ ನೆರವೇರಿಸಬೇಕೆಂದೂ ತಂತಿ ಬಿಟ್ಟಿರುವರಾಗಿಯೂ ತಿಳಿಯುತ್ತದೆ.

ರಾಮಕೃಷ್ಣ ಲೀಲಾ ಪ್ರಸಂಗೆ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು.

'ಶ್ರೀ ಪರಮಾತ್ಮನು ಸಾಕಾರವಾಗಿಯೂ ಇದ್ದಾನೆ, ನಿರಾಕಾರವಾಗಿಯೂ ಇದ್ದಾನೆ, ಅಲ್ಲದೆ ಆತನು ಇನ್ನೂ ಏನೇನೋ ಆಗಿರಬಹುದು. ಆತನ ಮಹಿಮೆಯನ್ನು ಆತನೇ ಬಲ್ಲನು' 'ಸಾಕಾರವೇನೆಂದು ಬಲ್ಲಿಯೋ-ನೀರು ಮಂಜುಗಡ್ಡೆಯಾಗಿದ್ದಂತೆ-ನೀರು ಗಟ್ಟಿಯಾದರೆ ಮಂಜುಗಡ್ಡೆಯಾಗುತ್ತದೆ, ಮಂಜುಗಡ್ಡೆಯು ಹೊರಗೂ ಒಳಗೂ ನೀರೇ ಹೊರತು ಮತ್ತೇನಿಲ್ಲ. ನೀರಿಗೆ ಒಂದು ರೂಪವಿಲ್ಲ, ವಿಶಿಷ್ಟ ಆಕಾರವಿಲ್ಲ, ಆದರೆ ಮಂಜುಗಡ್ಡೆಗೆ ಒಂದು ಆಕಾರವಿದೆ. ಇದರಂತೆಯೇ ಭಕ್ತಿ-ರೂಪ ಚಳಿಯಿಂದ ಅಖಂಡ ಸಚ್ಚಿದಾನಂದವೆಂಬ ಸಾಗರದ ನೀರು ಗಟ್ಟಿಯಾಗಿ ಮಂಜುಗಡ್ಡೆಯಂತೆ ನಾನಾ ಆಕಾರಗಳನ್ನು ಧರಿಸುತ್ತದೆ' ಎಂದು ಶ್ರೀ ಪರಮಹಂಸರು ಹೇಳುತ್ತಿದ್ದರು ಶ್ರೀ ಪರಮಹಂಸರ ಈ ದೃಷ್ಟಾಂತವು ಸಾಕಾರ ನಿರಾಕಾರವೆಂಬ ಎರಡು ಭಾವಗಳು ಒಂದೇ ಶ್ರೀ ಪರಮಾತ್ಮನಲ್ಲಿ ಒಂದೇ ಸಮಯದಲ್ಲಿರಲು ಸಾಧ್ಯವೆಂದು ಎಷ್ಟೋ ಜನರ ಮನಸ್ಸಿನಲ್ಲಿ ಧಾರಣೆಮಾಡಿಸಿ ಅವರಿಗೆ ಶಾಂತಿ ಕೊಟ್ಟಿರುತ್ತದೆಂದು ಇನ್ನು ಬೇರೆ ಹೇಳಬೇಕೆಂತಿಲ್ಲ.

ಸ್ವಾಮಿ ವಿವೇಕಾನಂದರು ಮತ್ತು ಅಂಧ ವಿಶ್ವಾಸವು

ಇಲ್ಲಿ ಇನ್ನೊಂದು ವಿಷಯವನ್ನು ಹೇಳದೆ ನಮಗೆ ಉಪಾಯವಿಲ್ಲ. ಸ್ವಾಮಿ ವಿವೇಕಾನಂದರು ಶ್ರೀ ಪರಮಹಂಸರು ಹೇಳಿದ ಆಸಕ್ತ ನಿರಾಕಾರವಾದೀ ಭಕ್ತರಲ್ಲಿ ಸರ್ವ ಪ್ರಧಾನ ಭಕ್ತರಾಗಿದ್ದರು. ಅದು ಮಾತ್ರವಲ್ಲ ಶ್ರೀ ಪರಮಹಂಸರು ಅವರಿಗೆ ಸಕಲ ತರಗತಿಯ ಭಕ್ತರಲ್ಲಿ ಅಗ್ರಾಸನವನ್ನು ಕೊಡುತ್ತಿದ್ದರು. ಅವರು ಆಗ ಬ್ರಹ್ಮ ಸಮಾಜದ ಮತ್ತು ಪಾಶ್ಚಾತ್ಯ ಶಿಕ್ಷಾ ಪ್ರಭಾವದಿಂದ ಸಾಕಾರವಾದಿಯವರನ್ನು ಆಗಾಗ ಬಹಳ ನಿಂದೆಗೆ ಗುರಿಮಾಡುತ್ತಿದ್ದರು. ತರ್ಕ ಮಾಡುತ್ತಿರುವಾಗ ಅವರ ಆ ಭಾವವು ವಿಶೇಷವಾಗಿ ಲಕ್ಷ್ಯಕ್ಕೆ ಬರುತ್ತಿತ್ತು. ಶ್ರೀ ಪರಮಹಂಸರೂ ಕೂಡ ಆಗಾಗ ಸಾಕಾರವಾದಿಕೆಲವು ಭಕ್ತರನ್ನು ಅವರೊಂದಿಗೆ ತರ್ಕಮಾಡುವಂತೆ ಪ್ರೇರೇಪಿಸಿ ಆ ಚಲ್ಲಾಟವನ್ನು ನೋಡುತ್ತಿದ್ದರು. ಸ್ವಾಮಿಜೀಯವರ ಮುಂದೆ ಯಾರೂ ತರ್ಕಮಾಡಿ ಜಯಿಸುತ್ತಿದ್ದಿಲ್ಲ. ಅಲ್ಲದೆ ಸ್ವಾಮಿಜೀಯವರ ತೀಕ್ಷ್ಣ ತರ್ಕಯುಕ್ತಿಗಳ ಮುಂದೆ ಅವರು ನಿರುತ್ತರರಾಗಿ ಮನಸ್ಸಿನಲ್ಲಿ ಖಿನ್ನರಾಗುತ್ತಿದ್ದರು. 'ನರೇಂದ್ರನು ಇಂಥಿಂಥವನ ಮಾತುಗಳನ್ನು ಸಂಪೂರ್ಣವಾಗಿ ಕತ್ತರಿಸಿ ಬಿಟ್ಟಿದ್ದನು. ಆತನ ಬುದ್ಧಿ ತೀಕ್ಷ್ಣವಾಗಿದೆ' ಎಂದು ಶ್ರೀ ಪರಮಹಂಸರು ಆಗಾಗ ಅವರ ವಿಷಯವಾಗಿ ಬೇರೆಯವರಿಗೆ ಸಾನಂದದಿಂದ ಹೇಳುತ್ತಿದ್ದರು. ಪರಂತು ಒಂದಾನೊಂದು ದಿನ ಸಾಕಾರವಾದಿ ಗಿರೀಶರೊಂದಿಗೆ ತರ್ಕಮಾಡಿ ಸ್ವಾಮಿಜೀಯವರಿಗೂ ಕೂಡ ನಿರುತ್ತರರಾಗಬೇಕಾಗಿತ್ತು. ಆ ದಿನ ಗಿರೀಶರ ವಿಶ್ವಾಸವನ್ನು ಇನ್ನೂ ದೃಢೀಕರಿಸಬೇಕೆಂದು ಶ್ರೀ ಪರಮಹಂಸರು ಅವರನ್ನೇ ಸಹಾಯ ಮಾಡಿದ್ದರೆಂದು ನಮಗೆ ತೋರಿತ್ತು.

ಕ್ರಮಶಃ

GREETINGS.

The Directors, Officers and staff of the CANARA BANK, LIMITED, join in sending you this message of appreciatiom for your goodwill and patronage during the last year We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD 1906.

The Canara Banking Corporation Ltd.

(Incorporated in British India)

Head Office: UDIPI

Estd 1906.

Applications are invited for the posts of Agents and Accountants in the Corporation to serve in branches outside the District. Selected candidates will have to undergo a probationery course as per rules. Graduates or persons with previous banking experience or who have passed Banking Examinations will be preferred. Persons who have not passed atleast the S. S. L. C. or other equivalent exminations need not apply.

Applications stating age, qualifications, etc together with 2 good references must reach the undersigned before the 15th February 1943.

Udipi, 21-1-1943 } V. R KAMATH, B A., LL B., *Manager*

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಇಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಲ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

ಸ್ಟೇಶನು ಬಿಟ್ಟು ಹಾವಿಯ 3ʼ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5. 28 ರಾತ್ತಲಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯು ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯು ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined-Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD 1931
HEAD OFFICE Mangalore. *BRANCHES* Moodabidri & Padubidri.
The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ/ ಕಂಪೆನಿಯಲ್ಲಿ ದೊರಿಯುವುದು

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕ್ಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ: ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limtied

Katapadi, S. Kanara.

"BHUVANENDRA" Garbhapal

Tried and appreciated by eminent Doctors Proved to be the best remedy where even allopathic medicines failed A specific for threatened or habitualabortion andother uterine troubles Must be commense soon after conception andcontinued up to the time of delivery

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು –
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್. ಪ್ರಭು, M. B. B. S. ಸಿ. ಪಿ ಸಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮಾರಾರ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

1906

[ಸಂಪುಟ 37] ತಾರೀಕು 12—2—1943 [ಸಂಚಿಕೆ 7]

'ಗಾಂಧಿಜಿಯನ್ನೇ ನಾವು ಮೊದಲು ರಕ್ಷಿಸುವೆವು'

ಗಾಂಧಿ, ಕ್ರಿಪ್ಸ್, ಸ್ಟಾಲಿನ್, ಗಾರ್ಬೋ, ಶಾ, ಚಿಯಾಂಗರಲ್ಲಿ ನಿಮಗೆ ಯಾರು ಮೊದಲು ಬೇಕು?

ಜಬಲ್‌ಪುರದ ಸಿಟಿ ಕಾಲೇಜ್ ಯೂನಿಯನಿನಲ್ಲಿ ಒಂದು ಚರ್ಚೆ ನಡೆಯಿತು. ಗಾಂಧಿಜಿ, ಸ್ಟಾಫೋರ್ಡ್ ಕ್ರಿಪ್ಸ್, ಬರ್ನಾಡ್ ಶಾ, ಗ್ರೆಟಾ ಗಾರ್ಬೋ, ಚಿಯಾಂಗ್ ಕೈಶೇಕ್ ಇವರು ಒಂದು ಹಡಗದಲ್ಲಿ ದಾರಿ ತಪ್ಪಿ ಒಂದು ಅರಕ್ಷಿತ ಪ್ರದೇಶದಲ್ಲಿರುವರೆಂದಾದರೆ, ನಿಮಗೆ ಅವರಲ್ಲಿ ಒಬ್ಬೊಬ್ಬನನ್ನೇ ಸಂರಕ್ಷಿಸಲು ಸಾಧ್ಯವಿದ್ದರೆ ನೀವು ಯಾರನ್ನು ರಕ್ಷಿಸುವಿರಿ? ಎಂಬುದು ಚರ್ಚೆಯ ವಿಷಯ. ಶ್ರೀ. ಕೆ. ಎಸ್. ದಾಥೋರ್ ಇವರು ಅಗ್ರಾಸನ ವಹಿಸಿದ್ದರು. ಶ್ರೀ. ಸಿರಿಲ್ ಮೊಡಕ್, ಎಂ. ಎ. ಡಿ. ಲಿಟ್ ಇವರು ಸ್ಟಾಲಿನ್ ಪರವಾಗಿಯೂ, ಶ್ರೀ. ಮೋತಿ ಸರ್ಕಾರ್ ಜಾ, ಎಂ. ಎ; ಎಲ್. ಎಲ್. ಬಿ. ಇವರು ಕ್ರಿಪ್ಸರ ಪರವಾಗಿಯೂ, ರೆವೆರೆಂಡ್ ಡಿ. ಪಿ. ಕೂಲೀ (ಚೀನದಿಂದ ಬಂದವರು) ಚಿಯಾಂಗ್ ಪರವಾಗಿಯೂ ಪ್ರೊ. ಆರ್. ವರ್ಮರು ಗಾಂಧಿಜಿ ಪರವಾಗಿಯೂ ವಾದಿಸಿದರು. ಕಡೆಗೆ ಮತ ತೆಗೆಯಲು ಗಾಂಧಿಜಿಯನ್ನೇ ಮೊದಲು ಬದುಕಿಸುವುದೆಂದು ಸಭಿಕರು ಬಹುಮತಪಟ್ಟರು. ಎರಡನೆಯದಾಗಿ ಗ್ರೆಟಾ ಗಾರ್ಬೋಗೆ ಮತ ದೊರಕಿತು!

"ದಾಸ್ಯಕ್ಕಿಂತ ಸಾವೇ ಮೇಲು"

ಆತ್ಮಹತ್ಯೆ ಮಾಡಿಕೊಳ್ಳುವ ಜನಾಂಗ

ಅಮೆರಿಕದ ಮೆಕ್ಸಿಕೋದಲ್ಲಿರುವ ಸೇರಿಸ್ ಎಂಬ ಒಂದು ಜನಾಂಗವು ಈಗ ಆತ್ಮಹತ್ಯೆ ಮಾಡಿಕೊಳ್ಳುತ್ತಿದೆ! ಬಿಳಿ ಜನರು ಅವರ ಸ್ವಾತಂತ್ರ್ಯವನ್ನಪಹರಿಸಿ ಅವರಿಗೆ ಪೀಡೆ ಕೊಟ್ಟು ಸುಲಿಗೆ ಮಾಡುತ್ತಿರಲು; ಆ ಜನರು ಇಂಥಾ ದಾಸ್ಯ ಜೀವನದಲ್ಲಿ ನಮ್ಮ ವಂಶವು ಕೊಳೆಯುವುದಕ್ಕಿಂತ, ಆತ್ಮಹತ್ಯೆ ಮಾಡಿಕೊಂಡು ನಮ್ಮ ವಂಶವನ್ನೇ ಸಾಯಬಿಡುವುದೊಳ್ಳೆಯದೆಂದು ನಿರ್ಧಾರ ಮಾಡಿದರು. ಜುವಾನ್ ಥೋಮಸ್ ಎಂಬವನು ಇವರ ಮುಖಂಡನು. ಇವನೂ ಕೆಲವು ಪ್ರಮುಖರೂ ಕೂಡಿ ಈ ನಿರ್ಧಾರ ಮಾಡಿ ಅಲ್ಲಿಂದೀಚೆಗೆ ಅವರ ವಂಶ ದಿನೇ ದಿನೇ ಸಹಿಸುತ್ತಾ ಬರುತ್ತದೆ. ಈಗೀಗ ಅವರೂ ಒಟ್ಟು ೮೦೦ ಮಂದಿಗಿಂತ ಹೆಚ್ಚಿಲ್ಲ! ನಿಜವಾಗಿಯೂ ದಾಸ್ಯ ಸಂಕಟಕ್ಕಿಂತ ಸಾವೇ ಮೇಲು!

ಇಂದೋರ್ ಮಹಾರಾಜರ ಸಿಂಹಾಸನ ತ್ಯಾಗ?

'ಭಾರತದೊಳಗೆ ಒಂದು ದಂಗೆ ತಲೆಯೆತ್ತುವ ಸಂದರ್ಭ ಇದ್ದಾಗ, ಜಪಾನರ ಧಾಳಿಯ ಭೀತಿ ಹುಟ್ಟಿದ್ದಾಗ, ಭಾರತದ ಪ್ರಸಿದ್ಧ ಅರಸುಮನೆತನದ ಇಂದೋರಿನ ಮಹಾರಾಜಾಧಿ ರಾಜ ರಾಜರಾಜೇಶ್ವರ ಸವಾಯಿ ಶ್ರೀ. ಯಶವಂತ್ ರಾವ್ ಹೋಳ್ಕರ್ ಸಿಂಹಾಸನ ತ್ಯಾಗಮಾಡಿ ಅಮೇರಿಕಕ್ಕೆ ಹಾರಿಹೋದ ವಿಚಾರವಾಗಿ, ಬ್ರಿಟಿಷರು ಅವರ ಹೆಂಡತಿಯ ಅಸ್ವಸ್ಥದಹಾಗೂ ಅವರ ಸ್ವಂತ ಆರೋಗ್ಯದ ವಿಚಾರವಾದ ಕಾರಣ ಕೊಡುತ್ತಿರುವರಾದರೂ ಭಾರತೀಯರು ಬೇರೆ ರೀತಿಯಿಂದ ಊಹಿಸುತ್ತಿದ್ದಾರೆ' ಎಂದು ಮೊದಲಾಗಿ ಅಮೇರಿಕನ್ ಪತ್ರಿಕೆಯೊಂದು ಬರೆಯುತ್ತದೆ. ಹೋಳ್ಕರರು ಕೆಲಕಾಲಕ್ಕಿಂತ ಮೊದಲು, 'ಆಶ್ರಿತ ರಾಜ್ಯಗಳನ್ನು ಅಖಂಡ ಭಾರತದಿಂದ ಬೇರೆ ಮಾಡಿ ಆಳುವ ವಿಷಯವು ಚೆನ್ನಾಗಿಲ್ಲ; ಅವು ಸಮಗ್ರ ಭಾರತದಲ್ಲಿ ಆಡಳಿತದಲ್ಲಿ ಸೇರಬೇಕು' ಎಂದು ಹೇಳಿದ ಮೇಲೆಯೇ ಅವರ ಕುರಿತು ಆಡಳಿತದವರಿಗೆ ದೃಷ್ಟಿಬಿತ್ತು. ಸಂಪ್ರದಾಯ ಮೀರಿ ನೆರೆಯ ರಾಜನೊಬ್ಬನನ್ನು ನೇಮಿಸಿದ ವಿಷಯವನ್ನು ನೋಡಿ ಹೋಳ್ಕರರ ಕಣ್ಣಲ್ಲಿ ಕಂಬನಿ ಸುರಿಯಿತು! ಕಳೆದ ಆಗಸ್ಟಿನಲ್ಲಿ ಮಹಾರಾಜರು ತಮ್ಮ ಸಂಸ್ಥಾನಕ್ಕೆ ಒಂದು ಪ್ರತ್ಯೇಕ ಘಟನಾವಳಿಯನ್ನು ಜಾಹೀರುಮಾಡಿದರು. ಆ ಸಂದರ್ಭದಲ್ಲಿ ಅವರು ತಮ್ಮ ಪ್ರಜೆಗಳು ಕೃಷಿಕರು ಕೊಡಬೇಕಾಗಿದ್ದ ಎಷ್ಟೋ ಸಾಲವನ್ನು ಬಿಟ್ಟುಬಿಟ್ಟರು. ಅನೇಕ ಅತಿಥಿಗಳನ್ನು, ಸಾವಿರಾರು ಮಂದಿ ಗ್ರಾಮದ ಜನರನ್ನು, ಅವರು ಒಂದು ದಿನ ಆಮಂತ್ರಿಸಿದರು. ಅಲ್ಲಿ ಅವರು ತಮ್ಮ ಹೊಸ ಘಟನಾವಳಿಯನ್ನು ಓದಿದರು. ಅವರ ತಂದೆಯೂ ಒತ್ತಾಯದಿಂದ ಸಿಂಹಾಸನ ತ್ಯಾಗ ಮಾಡಬೇಕಾಯಿತು. ಇವರಾದರೂ ಹೊಸ ಹೊಸ ಸುಧಾರಣೆಗಳನ್ನು ರಾಜ್ಯದಲ್ಲಿ ತಂದಿದ್ದರು. ಗ್ರಾಮೋದ್ಧಾರ, ಅಸ್ಪೃಶ್ಯತಾ ನಿವಾರಣೆ, ವಿದ್ಯಾ ಸುಧಾರಣೆ, ಬಾಲ್ಯ ವಿವಾಹ ನಿಷೇಧ ಮೊದಲಾದವು ಅವರ ಮುಖ್ಯ ಮುಖ್ಯ ಸುಧಾರಣೆಗಳಾಗಿದ್ದವು. ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವು ಆರಂಭವಾದ ಮೊದಲ್ಗೊಂಡು, ಆಶ್ರಿತ ರಾಜರು ಯಾವಾಗಲೂ ಪ್ರದರ್ಶನದ ಗೊಂಬೆಗಳಾಗಿಯೇ ಇರಬೇಕಲ್ಲದೆ, ಮಾತನಾಡುವ, ಕೆಲಸ ಮಾಡುವವರಾಗಿರಕೂಡದೆಂಬುದು ಬ್ರಿಟಿಷರ ಅಲಿಖಿತ ಶಾಸನವಾಗಿದೆ! ಎಂದು ಆ ಪತ್ರಿಕೆ ಕೆಲವು ರಹಸ್ಯಗಳನ್ನು ಹೊರಗೆಡಹಿದೆ!

'ಸ್ಟಾಲಿನ್', ಚಿಯಾಂಗ್, ಕ್ರಿಪ್ಸ್, ಶಾ ಇವರನ್ನು ಆ ಮೇಲೆ'

ಸರ್ ವಿಜಯರಿಗೆ ಚರ್ಚಿಲರ ತಂತಿ

ಇಂದೋರ್ ಮಹಾರಾಜರ ಸಿಂಹಾಸನ ತ್ಯಾಗ?

ಸರ್ ವಿಜಯರಿಗೆ ಚರ್ಚಿಲರ ತಂತಿ!

ಭಾರತದ ಸಮಸ್ಯೆಯಲ್ಲಿ ಕೈಹಾಕಲು ಅಸಾಧ್ಯ!

ವಿಜಯ ನಗರದ ಮಹಾರಾಜ ಕುಮಾರ ಸರ್ ವಿಜಯ ಎಂ. ಎಲ್. ಎ. ಇವರು ಕ್ರಿಸ್‌ಮಸ್ ಸಮಯದಲ್ಲಿ, ಭಾರತದ ಸಮಸ್ಯೆ ಬಗೆಹರಿಸುವಂತೆ ಕೇಳಿಕೊಂಡು, ಮುಂದಾಗಿ ಫೀಸು ಕಟ್ಟಿ ಚರ್ಚಿಲರಿಗೊಂದು ತಂತಿ ಬಿಟ್ಟಿದ್ದರು. ಅದಕ್ಕೀಗ ಉತ್ತರ ಬಂದಿದೆ. "ನೀವು ಹೇಳಿದ ವಿಚಾರವು ಮೂಲತಃ ವೈಸರಾಯರಿಗೆ ಹಾಗೂ ಇಂಡಿಯಾ ಸರಕಾರಕ್ಕೆ ಸಂಬಂಧಿಸಿದ್ದು, ಅದರಲ್ಲಿ ನಾನು ಕೈಹಾಕಲು ಸಿದ್ಧನಿಲ್ಲ' ಎಂಬುದು ಆ ತಂತಿಯ ವಿವರ. ಹಿಂದೆ ಸರ್ ವಿಜಯರು ಮುಂಚಿತವಾಗಿ ಫೀಸುಕಟ್ಟಿ ಎರಡು ಸಲ ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ತಂತಿಯಿತ್ತಿದ್ದರು. ಅವುಗಳ ಗತಿಯೇ ಇದಕ್ಕೂ ಆಗಿಲ್ಲವೆಂಬುದೊಂದು ಸಂತೋಷದ ಸಂಗತಿಯಾದರೂ, ಈ ಉತ್ತರದಿಂದ ಏನೂ ಚರಿತಾರ್ಥ ಇಲ್ಲವೆಂಬುದು ವಿಷಾದಕರವೇ ಆಗಿದೆ. "ಈ ಜನಗಳಿಗೆ (ಬ್ರಿಟಿಷರಿಗೆ) ಪ್ರಜಾಧಿಕಾರ ಪ್ರಜಾಪ್ರಭುತ್ವವೆಂದರೆ ಒಂದು ಬರಿಯ ಪ್ರಹಸನವೇ ಆಗಿದೆ' ಎಂದು ಸರ್ ವಿಜಯರ ಹೇಳಿಕೆ.

ಮಾಜಿ ಗವರ್ನರರು ಸಾಕ್ಷಿಗಳಾಗಿ!

ಪೀರ್ ಪಗಾರೋ ಮೊಕದ್ದಮೆ

ಪೀರ್ ಪಗಾರೋ ವಿಚಾರಣೆಯು ಮಾರ್ಶಲ್ ಲಾಕೋರ್ಟಿನಲ್ಲಿ ಫೆಬ್ರುವರಿ ೧ಂಕ್ಕೆ ಪ್ರಾರಂಭವಾಗುವುದೆಂದು 'ಟ್ರಿಬ್ಯೂನ್' ಪತ್ರಿಕೆ ಬರೆಯುತ್ತಾ, ಅವರಲ್ಲಿ ಡಿಫೆನ್ಸ್ ಸಾಕ್ಷಿಗಳಾಗಿ, ಸರ್ ಲಾನ್‌ಲಟ್ ಗ್ರಹಾಮ್ (ಮಾಜಿ ಗವರ್ನರ್). ಸರ್ ಗುಲಾಮ್ ಹುಸೇನ್ ಹಿದಯತುಲ್ಲಾ (ಪ್ರಧಾನಮಂತ್ರಿ) ಖಾನ್ ಬಹದ್ದೂರ್ ಎಂ. ಎ. ಕುಹ್ರು (ರೆವೆನ್ಯೂ ಮಂತ್ರಿ) ಶ್ರೀ. ಎಂ. ಎಚ್. ಗಜದರ್ (ಗೃಹ ಮಂತ್ರಿ) ಇತ್ಯಾದಿ ಹೈದರಾಬಾದಿನ ಪ್ರಮುಖರೂ ಡಿಫೆನ್ಸ್ ಸಾಕ್ಷಿಗಳಾಗಿ ವಿಚಾರಿಸಲ್ಪಡುವರೆಂದೂ, ಅವರಿಗೆ ಇಷ್ಟರಲ್ಲೇ ಕೋರ್ಟಿನ ನೋಟೀಸು ಹೋಗಿದೆಯೆಂದೂ ತಿಳಿದು ಬರುತ್ತದೆ.

ಶ್ರೀ. ಸತ್ಯಮೂರ್ತಿ ಮತ್ತು ಕೊಂಡ ವೆಂಕಟಪ್ಪಯ್ಯ

ಇವರಿಬ್ಬರನ್ನೂ ಸರಕಾರವು ಅವರ ಆರೋಗ್ಯ ಸರಿಯಾಗಿಲ್ಲದಿರುವುದರಿಂದ ಬಿಡುಗಡೆಮಾಡಿರುವುದು. ಸತ್ಯಮೂರ್ತಿಯವರು ಬಹಳ ಕ್ಷೀಣರಾಗಿರುವರು. ಕೊಂಡ ವೆಂಕಟಪ್ಪಯ್ಯನವರು ರಕ್ತದ ಒತ್ತದದಿಂದ ಬಹಳ ಅಸ್ವಸ್ಥರಾಗಿದ್ದಾರೆ.

ಕಾಂಗ್ರೆಸ್ ಹಣದ ಬಗ್ಗೆ ವ್ಯಾಜ್ಯ

ಬಜಾಜರ ಕಂಪನಿಯಾದ ಬಚರಾಜ್ ಎಂಡ್ ಕೊ. ಲಿಮಿಟೆಡಿನಲ್ಲಿರುವ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಹಣ ರೂ. ೭೩,೦೦೦ವನ್ನು ಇತ್ತೀಚೆಗೆ ಬೊಂಬಯಿ ಸರಕಾರವು ವಶಮಾಡಿಕೊಂಡ ವಿಷಯ, ಆ ಕಂಪನಿಯವರು ವ್ಯಾಜ್ಯ ಹೂಡಿದ್ದಾರೆ. ಅಖಿಲಭಾರತ ಕಾಂಗ್ರೆಸ್ ಕಮಿಟಿಯು ನಿಯಮಬಾಹಿರವೆಂದು ಸಾರಲಾಗುವ ಮುಂಚೆಯೇ ಆ ಹಣವು ತಮ್ಮಲ್ಲಿ ಇಡಲ್ಪಟ್ಟಿರುವುದರಿಂದ, ಅದನ್ನು ಸರಕಾರವು ಸ್ವಾಧೀನಪಡಿಸುವುದು ನ್ಯಾಯವಲ್ಲವೆಂದು ಕಂಪನಿಯವರ ವಾದವಾಗಿದೆ.

ಚಿಮೂರಿಗೆ ಆಚೆ ಪ್ರಯಾಣ

ಆಗಬೇಕೆಂದು, ಒಪ್ಪಿದಿಯವರು ಅದಷ್ಟು ಬೇಗನೇ ಒಪ್ಪಂದದಂತೆ ತಾವಿಬ್ಬರೂ ಹೋಗಬೇಕೆಂದೂ ವಿವರಿಸಿ, ತಂತಿ ಬಿಟ್ಟಿದ್ದಕ್ಕೆ ಜನೆಯವರು, ಕೆಲಸಗಳ ಬಾಹುಳ್ಯದಿಂದ ಮಾರ್ಚಿ ತಿಂಗಳ ಕೊನೆಯ ವರೆಗೆ ತನಗೆ ಚಿಮೂರಿಗೆ ಬರಲಾಗುವುದಿಲ್ಲವೆಂದು ತಿಳಿಸಿದ್ದಾರೆ!

ಮೊಗಲ್ ಚಕ್ರವರ್ತಿಗಳ ಸಂಸ್ಕೃತ ಪ್ರೇಮ

ಮೊಗಲ್ ಚಕ್ರವರ್ತಿಗಳಲ್ಲಿ ಅಕ್ಬರನಷ್ಟು ಜನಪ್ರಿಯರು ಬೇರಿಲ್ಲ. ಅವನ ನಂತರದ ಕೆಲ ರಾಜರೂ ಇಲ್ಲಿನ ಸಂಸ್ಕೃತಿ ಪ್ರಿಯರಾಗಿದ್ದರು. ಅವರಲ್ಲಿ ಕೆಲವರಿಗೆ ಸಂಸ್ಕೃತ ಭಾಷಾಪ್ರೇಮವು ಅಪಾರವಾಗಿತ್ತು. ಅನೇಕ ಸಂಸ್ಕೃತ ಪಂಡಿತರನ್ನು ಒಟ್ಟುಗೂಡಿಸಿ, ಅನೇಕ ಉಪನಿಷತ್‌ಗಳನು 'ಸಿರ್‌ಉಲ್ ಅಕ್ಬರ್' ಎಂದರೆ ಮಹಾ ರಹಸ್ಯ ಎಂಬ ಹೆಸರಲ್ಲಿ ಪಾರ್ಸಿ ಭಾಷೆಗೆ ಮಾಡಿಸಿದ್ದ ಮೊಗಲ್ ರಾಜ ದಾರಾಷಿಕೋ ಔರಂಗಜೇಬನ ಸೋದರನು. ಈತನು ನಾನಾ ಧರ್ಮಗಳನ್ನು ಆಶ್ರಯಿಸಿ, ಕಡೆಗೆ ವೇದೋಪನಿಷತ್ತುಗಳಲ್ಲಿ ಮನಸ್ಸಿನ ನೆಮ್ಮದಿ ಪಡೆದನಂತೆ! ತನ್ನ ಉಂಗುರಗಳಲ್ಲೂ ಆಭರಣ-ವಸ್ತುಗಳಲ್ಲೂ 'ಪ್ರಭು' ಎಂಬ ಅಂಕಿತವನ್ನು ಅವನು ಕೆತ್ತಿಸಿದ್ದನು. ಆತನಿಗೆ ಸಂಸ್ಕೃತ ಭಾಷಾಭ್ಯಾಸದಲ್ಲಿ ಸಹಾಯವಿತ್ತವನು ಅವನ ಸೋದರನಾದ ಷಷಯಸ್ತಾಖಾನನು. ಯೋಗ ವಾಸಿಷ್ಠ ಮೊದಲಾದ ಗ್ರಂಥಗಳನ್ನು ಪಾರ್ಸಿ ಭಾಷೆಗೆ ಭಾಷಾಂತರ ಮಾಡಿಸಿದ್ದನು. ರಾಮಾಯಣ, ಮಹಾಭಾರತ, ಅಥರ್ವವೇದ, ಲೀಲಾವತಿ, ರಾಜತರಂಗಿಣಿ, ಹರಿವಂಶ, ಪಂಚತಂತ್ರ, ನಳ-ದಮಯಂತಿ, ದ್ವಾತ್ರಿಂಶತ್ ಪುತ್ತಲಿಕಾಸಿಂಹಾಸನ, ಗಂಗಾಧರ, ಮಹೇಶಮಹಾನಂದ ಇತ್ಯಾದಿ ಉದ್ಗ್ರಂಥಗಳನ್ನು ಮಹಮ್ಮದೀಯ ಪಂಡಿತರು ಪಾರ್ಸಿಗೆ ಭಾಷಾಂತರಿಸಿದ್ದಾರೆ. ಭರಪ್‌ಖಾನ್ ಎಂಬವನು ಗಂಗಾಸ್ತೋತ್ರದಂತ ಉತ್ತಮ ಭಕ್ತಿ ಕವಿತೆಗಳನ್ನು ರಚಿಸಿದ್ದಾನೆ.

ರುತರ್ ಫೋರ್ಡರು ಹೋಮ್ ಮೆಂಬರರೇ!

ಮದ್ರಾಸು ಗವರ್ನರರ ಎಡ್ವೈಜರರಾಗಿದ್ದವರೂ ಈಗ ಬಿಹಾರಿನಲ್ಲಿ ಬದಲಿ ಗವರ್ನರರೂ ಆಗಿರುವ ಶ್ರೀ. ಟಿ. ಜಿ. ರುತರ್‌ಫೋರ್ಡರು ಇಂಡಿಯಾ ಸರಕಾರದ ಹೋಮ್ ಮೆಂಬರರ ಸ್ಥಾನಕ್ಕೆ ನಿಯಮಿತರಾಗಬಹುದೆಂದು ಊಹೆಯಾಗಿದೆ. ಹೋಮ್ ಮೆಂಬರರಾದ ಸರ್ ರೆಜಿನಾಲ್ಡ್ ಮೆಕ್ಸ್‌ವೆಲ್‌ರವರು ಇದೇ ಬರುವ ಎಪ್ರಿಲ್ ತಿಂಗಳಲ್ಲಿ ನಿವೃತ್ತರಾಗಲಿದ್ದಾರೆ.

ಚೀನದ ಸ್ವಾತಂತ್ರ್ಯಕ್ಕಾಗಿ ಭಾರತೀಯನ ಬಲಿದಾನ!

— ಡಾ॥ ದ್ವಾರಕಾನಾಥ ಕೊಟ್ನಿಸರ ಮರಣದ ಜಯಗಾನ —

ಯಾರು ಸ್ವಾತಂತ್ರ್ಯಕ್ಕೆ ಹೋರಾಡುವರು? ಯಾರು ಫೇಸಿಸ್ಟ್ ವಿರೋಧಿಗಳು?

[illegible] ದೂರದ ಹಳ್ಳಿಯೊಂದರಲ್ಲಿ—ಓರ್ವ ಭಾರತೀಯ ಯುವಕ ಚೀನದ ಬಂಧುಗಳಿಗೆ ಸಹಾಯ ನೀಡಲು ಹೋದ ಡಾಕ್ಟರ್ ದ್ವಾರಕಾನಾಥ ಎಸ್. ಕೊಟ್ನಿಸ್ ಮರಣಶಯ್ಯೆಯಲ್ಲಿ ಮಲಗಿದ್ದನು! ಈ ಹುತಾತ್ಮನಾದ ಭಾರತೀಯ ಯುವಕ ಡಾಕ್ಟರರ ಬಳಿ—ಆತನ ಧೀರ ಧರ್ಮಪತ್ನಿ—ಚೀನದ ಯುವತಿಯೋರ್ವಳು, ತನ್ನ ತೊಡೆಯ ಮೇಲೆ ಚೀನ-ಭಾರತಗಳ ಮಧುರ ಬಾಂಧವ್ಯದ ಕುರುಹಾದ—ಆ ಗಂಡು ಮಗುವೊಂದನ್ನು ಹಿಡಿದುಕೊಂಡು ಉಕ್ಕಿಬರುವ ದುಃಖದಿಂದ ಹೃದಯವು ಬಿರಿಯದಂತೆ ತಡೆದುಕೊಂಡು ಮೂಕಶೋಕ ಪ್ರದರ್ಶಿಸುತ್ತಿದ್ದಾಳೆ! ಆ ಯುವಕನು ಕೊನೆಯ ಕಾಲಕ್ಕೆ ಮೃತ್ಯುವಿನ ಬಳಿ ಹೋಗುವ ಮೊದಲಿನ ನಿಮಿಷ—ತನ್ನ ಪತ್ನಿಯನ್ನು ಮತ್ತು ಪುತ್ರನನ್ನು ತುಂಬು ಕಣ್ಣುಗಳಿಂದೊಮ್ಮೆ ನೋಡಿ ಪ್ರಾಣ ಬಿಟ್ಟನು! ಕೊನೆಯ ಕಾಲದಲ್ಲಿ ಆತನು ತನ್ನ ಪತ್ನೀ ಪುತ್ರರ ಕುರಿತು ಏನೆಂದು ಭಾವಿಸಿರಬೇಕು? ಅಯ್ಯೋ! ಅವರು ಮುಂದೆ ಅನಾಥರಾಗುವರಲ್ಲಾ ಎಂದೆ? ಖಂಡಿತವಾಗಿ ಹಾಗಿರಲಿಕ್ಕಿಲ್ಲ; ಏಕೆಂದರೆ ಆತನಿಗೆ ಗೊತ್ತು. ತಾನು ಯಾವ ದೂರದ ಭಾರತದಿಂದ ತನ್ನ ಬಂಧು ಬಳಗ, ತಂದೆ ತಾಯಿ ಎಲ್ಲರನ್ನೂ ಬಿಟ್ಟು ಬಂದು ಈ ದುಃಖಿತ ಚೀನೀಯರ ಸಂಕಷ್ಟ ಪರಿಹಾರ ಕಾರ್ಯವನ್ನು ಕೈಕೊಂಡು ಮಡಿದನೋ, ಆ ಪುಣ್ಯ ಸ್ಮರಣೆಗಾಗಿ ತನ್ನೀ ಪತ್ನಿ ಪುತ್ರರನ್ನು ಕೃತಜ್ಞ ಚೀನವು ಮರೆಯಲಾರದೆಂದು! ತಾನು ಚೀನೀಯನಲ್ಲ; ಆದರೆ ಚೀನಕ್ಕಾಗಿ ಮಡಿದೆನು! ಏತಕ್ಕಾಗಿ! ಚೀನದ ಜನರ ಬೇನೆಯನ್ನು ಗುಣಪಡಿಸುವದಕ್ಕಾಗಿ!' ಜಪಾನರ ಬಾಂಬಿನ ಪೆಟ್ಟಿನಿಂದ ನರಳುತ್ತಿರುವ ಸಾವಿರಾರು ಚೀನೀಯೋಧರನ್ನು ಬದುಕಿಸುವುದಕ್ಕಾಗಿ! ಹಗಲು ರಾತ್ರಿ ವಿಶ್ರಾಂತಿಯಿಲ್ಲದೆ ವಿಶ್ರಾಂತಿ ಬಯಸದೆ, ಚೀನದ ಯೋಧರನ್ನು ಪುನರ್ನವಗೊಳಿಸುವುದಕ್ಕಾಗಿ! ಚೀನದ ಸ್ವಾತಂತ್ರ್ಯ ಸಮರವನ್ನು ಜಯಗೊಳಿಸುವುದಕ್ಕಾಗಿ! ಸ್ವತಂತ್ರ ಚೀನದಲ್ಲಿ ತನ್ನ ಪತ್ನೀ ಪುತ್ರರಿಗೆ ತನ್ನಿಂದ, ತನ್ನೀ ಕಾರ್ಯದಿಂದ ಎಂಥಾ ಗೌರವವಿದೆ; ತನ್ನ ತಾಯ್ನಾಡು ಭಾರತಕ್ಕೆ ಎಂಥಾ ಕೀರ್ತಿಯಿದೆ! ಇದು ಆ ಮರಣೋನ್ಮುಖೀ ಭಾರತೀಯ ಯುವಕ ಡಾಕ್ಟರನಿಗೆ ಗೊತ್ತು! ಆದ್ದರಿಂದಲೇ ಅಷ್ಟು ಹಸನ್ಮುಖಿಯಾಗಿ ಅಷ್ಟು ತೇಜೋಪೂರ್ಣನಾಗಿ ಅಷ್ಟು ತೃಪ್ತಿಯುತನಾಗಿ ಆತನು ಈ ಎಳೇ ಪ್ರಾಯದಲ್ಲಿಯೂ ಮೃತ್ಯುವನ್ನು ಆಲಿಂಗಿಸಿಕೊಂಡನು!

ಓ ಎನ್ನ ತಾಯ್ನಾಡೇ!

ಆ ದೂರದ ಚೀನದ ಹಳ್ಳಿಯ ಗುಡಿಸಲಂತಿದ್ದ ಆಸ್ಪತ್ರೆಯಲ್ಲಿ, ಹಿಮಾಚ್ಛಾದಿತ ಭೂಮಿಭಾಗದಲ್ಲಿ ಡಾಕ್ಟರ್ ದ್ವಾರಕಾನಾಥ ಕೊಟ್ನೀಸ್ ಹೀಗೆ ಕೊನೆಯುಸಿರೆಳೆದಾಗ ಆತನ ಹೃದಯದಲ್ಲಿ ಎಂಥಾ ಭವ್ಯ ಭಾಸುರ ಕಲ್ಪನೆಗಳು ಬಂದವೆ! ಚೀನದ ತನ್ನ ಒಡನಾಡಿಗಳು, ಚೀನೀ ಪತ್ನಿಯ, ಪುತ್ರನ ಇವರ ಪ್ರೇಮಾವರಣವನ್ನು ಮೀರಿ ಆತನ ಹೃದಯವು ತನ್ನ ತಾಯ್ನಾಡು ಭಾರತದತ್ತ ಹಾರಿ ಬಂದಿತು! ಚೊಂಬಯಿಗೆ—ಎಲ್ಲಿ ತಾನು ವಿದ್ಯೆ ಕಲಿತೆನೋ, ಎಲ್ಲಿ ತನ್ನ ನೂರಾರು ಜೀವದ ಗೆಳೆಯರಿದ್ದಾರೋ ಅಲ್ಲಿಗೆ, ಶೋಲಾಪುರಕ್ಕೆ—ಎಲ್ಲಿ ತಾನು ಜನ್ಮವೆತ್ತಿದನೋ, ಎಲ್ಲಿ ತನ್ನ ಅಣ್ಣ ತಮ್ಮಂದಿರು, ಅಕ್ಕ ತಂಗಿಯರು, ಸೊಸೆಯಂದಿರು, ಅಳಿಯಂದಿರು, ಬಾಲ್ಯಕಾಲದ ಒಡನಾಡಿ ಗೆಳೆಯರು, ಎಲ್ಲದಕ್ಕಿಂತಲೂ ಹೆಚ್ಚಾಗಿ, ಪತಿಯನ್ನು ಕಳಕೊಂಡು, ಈಗ ತನ್ನೊಬ್ಬ ಪುತ್ರನನ್ನೂ ದೂರ ಅಗೋಚರ ಪ್ರದೇಶವೊಂದರಲ್ಲಿ ಚೀನದಲ್ಲಿ ಕಳಕೊಂಡು, ದುಃಖಾಕ್ರಾಂತೆಯಾಗಿ ಕಂಗಾಲಾದ ತನ್ನ ವೃದ್ಧ ಮಾತೆಯನ್ನು ಆತನು ನೆನೆದನು! ಆದರೆ ಎಲ್ಲದಕ್ಕಿಂತಲೂ ಹೆಚ್ಚು ತನ್ನ ತಾಯ್ನಾಡನ್ನು—ಮಾತೆ ಭಾರತಿಯನ್ನು ಆತನು ಕೊನೆಗಾಲದಲ್ಲಿ ನೆನೆಯದೆ ಉಳಿಯಲಿಲ್ಲ!

ವೈದ್ಯ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ದೇಶದ ರಾಜಕೀಯದ ಕುರಿತು ಹೆಚ್ಚಿನ ಗಮನ ಕೊಡುವುದು ಆತನಿಗೆ ಸಾಧ್ಯವಾಗಲಿಲ್ಲ. ತನ್ನ ಕಾಲದ ಇತರ ವಿದ್ಯಾರ್ಥಿಗಳಂತೆ, ಏನೋ ಒಂದು ಆದರ್ಶ, ದೇಶಾಭಿಮಾನದ ಕುರಿತು ಎಂಥದೋ ಒಂದು ಅನಿವಾರ್ಯ ಹುಮ್ಮಸು ಇವುಗಳನ್ನು ಬಿಟ್ಟರೆ ರಾಜಕೀಯದ ಕುರಿತು ಹೆಚ್ಚಿನ ಅಭ್ಯಾಸ ಆತನದು ಇರಲಿಲ್ಲ. ಚೀನಕ್ಕೆ ವೈದ್ಯ ಸಹಾಯ ನೀಡಲು ಭಾರತದ ಪ್ರತಿನಿಧಿಯಾಗಿ ಹೋದಾಗಲೂ ಇದೊಂದು ಜೀವನದ ಸಾಹಸವೆಂಬ ಹುಮ್ಮಸೇ ಆತನಲ್ಲಿ ಹೆಚ್ಚಿತ್ತು. ಆದರೆ ಅಲ್ಲಿ ಹೋದ ಮೇಲೆ, ಒಂದು ರಕ್ತ ಪಿಪಾಸು ರಾಷ್ಟ್ರವು ಜಪಾನು, ದೀನ ದುರ್ಬಲ ಸ್ವಾತಂತ್ರ್ಯಾಕಾಂಕ್ಷಿ ರಾಷ್ಟ್ರವಿನ್ನೊಂದನ್ನು ಚೀನವನ್ನು, ತನ್ನ ಕಾಲ ಕೆಳಗೆ ಹಾಕಿ ತುಳಿಯುತ್ತಿರುವುದನ್ನು, ಅಂಥಾ ಘೋರ ಸಂಕಟಕ್ಕಾದರೂ ಎದೆಗೊಟ್ಟು ನಾಡಿನ ಸ್ವಾತಂತ್ರ್ಯಕ್ಕಾಗಿ ಚೀನದ ಪುತ್ರ ಪುತ್ರಿಯರು ಹೋರಾಡುವುದನ್ನು ಕಂಡು ಆತನ ಹೃದಯದಲ್ಲಿ ಅಡಗಿದ್ದ ದೇಶಾಭಿಮಾನದ ಬೆಂಕಿ ಉರಿಯಿತು. 'ಓ ಎನ್ನ ತಾಯ್ನಾಡೆ' ಭಾರತವೇ ನಿನಗೂ ಇಂದು ಇದೇ ಪಾರತಂತ್ರ್ಯ ಪಾಶ ಬಿಗಿದಿದೆಯಲ್ಲವೆ? ತಾಯೇ, ನೀನೆಂದು ಸ್ವಾತಂತ್ರ್ಯ ಸೂರ್ಯೋದಯವನ್ನು ಕಾಣುವೆ?' ಇವು ದೂರದ ಚೀನದಲ್ಲಿ ಅಹರ್ನಿಶಿ ಆತನ ಪ್ರಾರ್ಥನೆಗಳಾದವು. ಚೀನದ ಕೂಲಿಗಾರ ಕೃಷಿಕರಿಂದ ಕೂಡಿದ ಅಷ್ಟಮ ಪಥ ದಳ (Eight Route Army) ದೊಡನೆ ಸೇರಿಕೊಂಡು ಆ ಯೋಧರು ಯಾವ ನಿರ್ಧಾರದಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೋ ಅದೇ ನಿರ್ಧಾರದಿಂದ ತಾನೂ ಅವರ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದನು. ತನ್ನ ಪಾರ್ಥಿವ ಶರೀರದಿಂದ ಪ್ರಾಣಪಕ್ಷಿಯು ಹಾರಿಹೋಗುವ ಸಂದರ್ಭದಲ್ಲಿ ಆ ತರುಣ ಡಾಕ್ಟರ್ ದ್ವಾರಕಾನಾಥ ಕೊಟ್ನಿಸ್, ದೂರದ ಚೀನದಿಂದ, ಭಾರತದ ಭವ್ಯ ಭವಿಷ್ಯತ್ತಿನ ಕನಸು ಕಂಡನು! ಭವಿಷ್ಯತ್ತಿನಲ್ಲಿ ಭಾರತ ಮತ್ತು ಚೀನಗಳೊಳಗೆ ಆಗಲಿರುವ ಮಧುರ ಬಾಂಧವ್ಯದ ಸುವರ್ಣ ಸ್ವಪ್ನವನ್ನು ಕಂಡನು.

ನೆಹರು ಕರೆಗೆ ಭಾರತವೇ ಎಚ್ಚತ್ತಿತು!

ಡಾಕ್ಟರ್ ದ್ವಾರಕಾನಾಥ ಕೊಟ್ನಿಸನು ಯಾಕಾಗಿ ಚೀನಕ್ಕೆ ಹೋದ? ಏಕೆ ಚೀನದ ಆ ದೂರದ ಹಳ್ಳಿಯೊಂದರಲ್ಲಿ—ತನ್ನ ಮಾತೃಭೂಮಿಯಿಂದ ಸಾವಿರಾರು ಮೈಲುಗಳ ದೂರದಲ್ಲಿ ಮಡಿದ? ಇದು ಒಂದು ಮನೋಹರವಾದ ಕಥೆ! ರೋಮಾಂಚಕ ಕಥೆ! ಈ ಕಥೆ 1938 ರದ್ದು! ಅಲ್ಲ ಅದಕ್ಕಿಂತಲೂ ಬಹಳ ಹಿಂದಿನದು! ಇದು ಓರ್ವನ ಜೀವನದ ಕಥೆಯಲ್ಲ; ಭಾರತೀಯ ರಾಷ್ಟ್ರೀಯ ಚಳವಳಿವು ಅಂತರ್ರಾಷ್ಟ್ರೀಯ ಸಹಾನುಭೂತಿ ತೋರಿಸಿದ ಪುಣ್ಯ ಕಥೆಯಿದು! ದಲಿತರಿಗಾಗಿ, ದೀನರಿಗಾಗಿ, ಸ್ವಾತಂತ್ರ್ಯಪ್ರಿಯ ಮಾನವವರ್ಗಕ್ಕಾಗಿ ಭಾರತವು, ಕಾಂಗ್ರೆಸು ನೀಡಿದ ಸಹಾಯ ಹಸ್ತದ ರೋಮಾಂಚಕ ಕಥೆಯಿದು!

1912ರಲ್ಲು ಬಾಲ್ಕನ್ ಯುದ್ಧ ಸಾಗಿತು; ಟರ್ಕಿ ಎಲ್ಲಾ ತರದಲ್ಲೂ ಜೀರ್ಣವಿದೀರ್ಣವಾಗಿತ್ತು! ಟರ್ಕಿಯ ರಾಷ್ಟ್ರದೇಹದಲ್ಲಿ ರಕ್ತಸುರಿಯುತಿತ್ತು! ಅಲ್ಲಿ ಗಾಯಗೊಂಡವರು ಸಾವಿರಾರು ಮಂದಿ; ಅವರ ಗಾಯ ಗುಣಪಡಿಸುವ ಡಾಕ್ಟರರು ಮಾತ್ರ ಕೆಲವೇ ಮಂದಿ ಇದ್ದರು! ಅಷ್ಟರಲ್ಲಿ ಓರ್ವ ತರುಣ ಭಾರತೀಯ ಡಾಕ್ಟರ್, ಆಗ ತಾನೇ ಇಂಗ್ಲೆಂಡಿನಿಂದ ವಿದ್ಯಾಭ್ಯಾಸ ಮುಗಿಸಿ ಮರಳಿಬಂದವರು—ಡಾಕ್ಟರ್ ಮುಖ್ತಾರ್ ಅಹಮ್ಮದ್ ಅನ್ಸಾರಿಯವರು (ಅವರೇ ಮುಂದೆ ಅಖಿಲ ಭಾರತ ಕಾಂಗ್ರೆಸಿಗೆ ಅಧ್ಯಕ್ಷರೂ ಆದರು) ಆದರ್ಶದ ಘನತೆಯಿಂದ ಹುರಿದುಂಬಿದವರಾಗಿ, ಸೋದರ ಮಾನವರ ಮೇಲಿನ ಪ್ರೇಮದಿಂದಾಗಿ ಅಲ್ಲಿಗೆ ವೈದ್ಯಕೀಯ ದಳದೊಡನೆ ಪ್ರಯಾಣ ಮಾಡಿದರು. ಅಲ್ಲಿ ಆ ನಿಃಸ್ವಾರ್ಥೀ ಭಾರತೀಯ ವೈದ್ಯದಳವು ಮಾಡಿದ ಸೇವೆಗೆ ಟರ್ಕಿ ಬಹಳ ಕೃತಜ್ಞತೆ ತೋರಿಸಿತು; ಬಹಳ ಗೌರವಕೊಟ್ಟಿತು. ಅದೇ ಮುಂದೆ ಭಾರತ ಮತ್ತು ಟರ್ಕಿಗಳ ಮಧುರ ಬಾಂಧವ್ಯವನ್ನು ಬೆಳೆಸಲು ಸಹಕಾರಿಯೂ ಆಯಿತು.

೧೯೧೪ನೆಯ ಇಸವಿ, ದಕ್ಷಿಣ ಆಫ್ರಿಕದಿಂದ, ಭಾರತೀಯ ಬೇರಿಸ್ಟರರೊಬ್ಬರು, —ಮೋಹನದಾಸ ಕರಮಚಂದ ಗಾಂಧಿ— ಲಂಡನಿಗೆ ಹೋಗಿ ಅಲ್ಲಿ 'ಇಂಡಿಯನ್ ಎಂಬ್ಯುಲೆನ್ಸ್‌ಕೋರ್' ಒಂದನ್ನು ಸಂಘಟಿಸಿ ಯುದ್ಧದಲ್ಲಿ ಗಾಯಗೊಂಡವರಿಗೆ ಸೇವೆಗೈದರು. ೧೯೧೯-೧೯೨೦ರಲ್ಲು, ಅಖಿಲಭಾರತವೇ, ಹಿಂದುಗಳು, ಮುಸ್ಲಿಮರೆಲ್ಲರೂ ಒಟ್ಟಾಗಿ ಖಿಲಾಪತ್ ಚಳವಳದಲ್ಲಿ ಸೇರಿ, ಟರ್ಕಿಯ ಮೇಲೆ ಯೂರೋಪಿಯನ್ ಬಲಾತ್ಕಾರವನ್ನು ಪ್ರತಿಭಟಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ವಹಿಸಿದ ಭಾಗವು ಮತ್ತು ಇಂಗ್ಲೆಂಡಿಗೆ ಒಂದು ಶಿಷ್ಟಮಂಡಳ ಕಳುಹಿಸಿ, ಟರ್ಕಿಗೆ ಆದ ಅನ್ಯಾಯವನ್ನು ಕಡಿಮೆ ಮಾಡಲು ಮಾಡಿದ ಪ್ರಯತ್ನ ಪ್ರಶಂಸನೀಯವಿದೆ.

ಹೀಗೆ ೧೯೩೬ರನೆ ಇಸವಿ ಬಂತು! ನೆಹರು ಭಾರತಕ್ಕೆ ಕರೆಯಿತ್ತರು. 'ಸ್ಪೈನಿನ ಇಂದಿನ ಸ್ವಾತಂತ್ರ್ಯ ಚಳವಳವು, ಜಗತ್ತಿನಲ್ಲಿ ಯಾರೆಲ್ಲಾ ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾರೋ ಅವರೆಲ್ಲರ ಹೃದಯವನ್ನು ಸಹಾನುಭೂತಿಯಿಂದ ತುಂಬಿಸಿದೆ. ಚೀನ ಮತ್ತು ಸ್ಪೈನುಗಳ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರೂ ಭಾಗವಹಿಸಲಿದ್ದಾರೆ. ಮಿಲಿಯಾಂತರ ಮಂದಿ ರಿಪಬ್ಲಿಕನ್ ಸ್ಪೈನಿನಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದಾರೆ; ಚೀನದಲ್ಲಿ ನಿರ್ದಯ ಜಪಾನು ಬಾಂಬಿಗೆ ಬಲಿಯಾಗುತ್ತಿದ್ದಾರೆ; ಉಪವಾಸ ಬಿದ್ದಿದ್ದಾರೆ. ಇಂಥಾ ಹೊರಗಿನ ಸ್ವಾತಂತ್ರ್ಯವೀರರ ಸಂಕಟಗಳನ್ನು ನೋಡಿ ನಾವು ಭಾರತ ಮಾತೆಯ ಮಕ್ಕಳು ಸುಮ್ಮಗಿರುವುದು ನ್ಯಾಯವಲ್ಲ'' ಎಂದರು! ಈ ನೆಹರುವಾಣಿಯಲ್ಲಿ ಕಾಂಗ್ರೆಸಿನ ವಿದೇಶನೀತಿ ಅಡಕವಾಗಿತ್ತು! ನೆಹರು ಕರೆಗೆ ಭಾರತವೆಚ್ಚತ್ತಿತ್ತು! ಟರ್ಕಿಯಿರಲಿ, ಅಬಿಸೀನಿಯವಿರಲಿ, ಸ್ಪೈನಿರಲಿ, ಚೀನವಿರಲಿ ಎಲ್ಲೆಲ್ಲಿ ದಳಿತ ಜನರು ಸಂಕಟಪಡುತ್ತಾರೋ ಅಲ್ಲಲ್ಲಿ ನಮ್ಮ ಸಹಾನುಭೂತಿ ಇದೆಯೆಂಬುದು ಸಾರಲ್ಪಟ್ಟಿತು! ಅರೆಹೊಟ್ಟೆಯ ಭಾರತೀಯರೂ, ನಿಧಿ ಸಂಗ್ರಹಿಸಿ ಸ್ಪೈನಿಗೆ ಕಳುಹಿಸಿದರು! ಅಷ್ಟರಲ್ಲೇ, ಡಾಕ್ಟರ್ ಅತಲ ಮುಂದಾಳುತ್ವದಿಂದ, ಚೀನಕ್ಕೆ, ಸಹಾಯ ಮಾಡಲು, ಗಾಯಗೊಂಡವರನ್ನು ಗುಣಪಡಿಸಲು ಒಂದು ವೈದ್ಯಮಂಡಳವು ಚೀನಕ್ಕೂ ಹೊರಟಿತು! ಡಾಕ್ಟರ್ ದ್ವಾರಕನಾಥರೂ ಆ ಮಂಡಳದಲ್ಲಿ ಒಬ್ಬರಾಗಿದ್ದರು!

ಈ ವಿಪರೀತ ನೋಡಿ!

ಅಂದು ಜವಾಹರ್‌ಲಾಲರು ಭಾರತ ರಾಷ್ಟ್ರದ ಪ್ರತಿನಿಧಿಯಾಗಿ ಸ್ಪೈನಿಗೆ ಹಾರಿ ಹೋದರು. ಅಲ್ಲಿನ ಮುಖಂಡರನ್ನು ಭೇಟಿಯಾದರು. ತನ್ನ ಸ್ವಾತಂತ್ರ ಚಳವಳದಲ್ಲಿ ಸಹಾನುಭೂತಿ ತೋರಿಸಲು ಬಂದ ಭಾರತದ ರಾಷ್ಟ್ರವೀರನನ್ನು ಸ್ಪೈನು ಸಂಭ್ರಮದಿಂದ ಸ್ವಾಗತಿಸಿತು. ಫೇಸಿಸ್ಟ್ ರಾಕ್ಷಸರ ಬಾಂಬಿನ ಮಳೆಯಡಿಯಲ್ಲಿ ನಿಂತು ಮೇಡ್ರಿಡ್ ರಕ್ಷಕ ಯೋಧರಿಗೆ ನೆಹರು ಶುಭಾಶಂಸೆಗೈದರು. ಈ ಸಮಯದಲ್ಲಿ ಎಷ್ಟೋ ಮಂದಿ ಇಂದಿನ ಬ್ರಿಟನ್ ಅಮೇರಿಕಗಳ ಸ್ವಾತಂತ್ರ್ಯ ವೀರರೆನ್ನುವವರು, ಈ ದಳಿತ ರಾಷ್ಟ್ರಗಳ ರಕ್ಷಣೆಗಾಗಿ ತಮ್ಮ ಕಿರುಬೆರಳ ಸಹಾಯವೀಯಲೂ ಸಿದ್ಧರಿರಲಿಲ್ಲ. ನೆಹರು ಸ್ಪೈನಿಗೆ ಹಾರಿಹೋದಾಗ, ಬ್ರಿಟಿಷ ಪ್ರಧಾನ ಮಂತ್ರಿಗಳು ಮ್ಯುನಿಕಿಗೆ ಹಾರಿ ಸ್ಪೈನ್ ಜೆಕೊಸ್ಲವೇಕಿಯಗಳ ಸ್ವಾತಂತ್ರ್ಯವನ್ನು, ಮಾರಲು ಹಿಟ್ಲರನೊಡನೆ ಸಂಧಾನ ನಡೆಸುತ್ತಿದ್ದರು! ೧೯೩೬ರನೇ ಆಗಸ್ಟನಲ್ಲಿ ನ್ಯೂಯಾರ್ಕಿನ ಸ್ಟೇಡಿಯಂನಲ್ಲಿರುವ ರ್‍ಯಾಂಡಾಲ್ಸ್ ದ್ವೀಪದಲ್ಲಿ ನಾಲ್ಕು ಮಂದಿ ಗಾಂಧಿ ಟೊಪ್ಪಿ ಧಾರಿಗಳು ಓರ್ವ ಕಿತ್ತಳೆ ಬಣ್ಣ ಹಸೀರೆಯುಟ್ಟ ಮಹಿಳೆಯೂ ಭಾರತದ ತ್ರಿವರ್ಣ ರಾಷ್ಟ್ರಧ್ವಜವನ್ನು ಹಿಡಿದೆತ್ತಿ, ಅಂತ

(೬ನೇ ಪುಟಕ್ಕೆ ಮುಂದುವರಿದಿದೆ)

ಸಮರಭೂಮಿಯ ಸಂಚಾರ

ವಿಜಯ ಶ್ರೀಯು ರಶ್ಯನ್ ವೀರರ ಕೊರಳಿಗೆ ಈಗ ದಿನನಿತ್ಯವೂ ಜಯಮಾಲಿಕೆಗಳನ್ನೇ ಸುರಿಸುತ್ತಿದ್ದಾಳೆ. ರಶ್ಯನರು ಪ್ರತಿಭಟನೆ ಪ್ರಾರಂಭಿಸಿ ಕಳೆದ ಆದಿತ್ಯವಾರಕ್ಕೆ ಎಂಭತ್ತೊಂದು ದಿನಗಳಾದವು. ಇಷ್ಟರಲ್ಲಿಯೇ ಅವರು ಒಂದು ಲಕ್ಷ ಚದುರ ಮೈಲು ಪ್ರದೇಶವನ್ನು ಜರ್ಮನರಿಂದ ಪುನಃ ತಮ್ಮ ವಶಕ್ಕೆ ತೆಗೆದುಕೊಂಡರು. ದಕ್ಷಿಣ ಟುನಿಸಿಯದಲ್ಲಿ ನಡೆಯುತ್ತಿದ್ದ ಕಾಳಗವು ಸದ್ಯಕ್ಕೆ ನಿಂತಿದೆಯೆಂದು ಸುದ್ದಿ ಬಂದಿದೆ.

ಅಡಾನಾ ಸಮ್ಮೇಳನ

ಕಳೆದ ಸಲ ಕಸಬ್ಲಾಂಕಾ ಸಮ್ಮೇಳನದ ವಿಷಯ ನಾವು ಬರೆದಿದ್ದೆವು. ಹಿಟ್ಲರನಿಗೆ ಇತ್ತೀಚೆಗೆ ರಶ್ಯ ಮೊದಲಾದ ರಣರಂಗಗಳಲ್ಲಿ ಮಹತ್ವದ ಅಪಮಾನ ಅಪಜಯಗಳೇ ಆಗುತ್ತಿರುವಾಗ, ಮಿತ್ರರು ತಮ್ಮ ಮುಂದಿನ ಯೋಜನೆಗಳನ್ನು ಇನ್ನಷ್ಟು ಬಲಪಡಿಸುವುದರಲ್ಲಿ ತೊಡಗಿದ್ದಾರೆ. ಕಸಬ್ಲಾಂಕದಲ್ಲಿ ಚರ್ಚಿಲರೂ ರೂಸ್‌ವೆಲ್ಟರೂ ಸಂಬಂಧಿಸಿ 1943ರ ತಮ್ಮ ಕಾರ್ಯಕ್ರಮಗಳನ್ನು ಚರ್ಚಿಸಿದರು. ಅದರ ಒಟ್ಟು ವಿವರಗಳು ಇನ್ನೂ ಹೊರಬೀಳಲಿಲ್ಲವಾದರೂ, ಸಾರಾಂಶವಾಗಿ ಹೇಳುವುದಾದರೆ, ಹಿಟ್ಲರನ ಮೇಲೆ ಬಲವಾದ ಆಕ್ರಮಣವೊಂದನ್ನು ಈ ವರ್ಷದಲ್ಲಿ ಕೈಕೊಂಡು ಯುದ್ಧವನ್ನು ಗೆಲ್ಲುವ ಯೋಜನೆಯನ್ನು ಈ ಉರ್ವರು ಮಹಾವ್ಯಕ್ತಿಗಳು ಕೈಕೊಂಡರೆಂಬುದಕ್ಕೆ ಏನೇನೂ ಸಂಶಯವಿಲ್ಲ. ಅದಕ್ಕೆ ಸ್ಟಾಲಿನ್ ಕೈಜೋಡಿಸಲಿಲ್ಲ? ಬರೇ ಚರ್ಚಿಲ್ ರೂಸ್‌ವೆಲ್ಟರಿಂದಲೇ ಹಿಟ್ಲರನ ಪತನ ಕಾರ್ಯವು ಪೂರೈಸೀತೆ? ಎಂಬೀ ವಿಚಾರಗಳಂತೂ ಮುಂದೆ ನೋಡಬೇಕಷ್ಟೆ!

ಅಂತೂ ಚರ್ಚಿಲರು ಈ ಸಮ್ಮೇಳನದಿಂದ ಮಾತ್ರ ತೃಪ್ತರಾಗದೆ, ಕೂಡಲೇ ಟರ್ಕಿಗೂ ಹಾರಿ, ಅದರ ಅಧ್ಯಕ್ಷ ಇನೋನ್ಯುರನ್ನೂ ಅಡಾನಾ ಎಂಬಲ್ಲಿ ಭೇಟಿಯಾಗಿ ಅವರೊಡನೆ ಕೆಲ ಸಂಗತಿಗಳನ್ನು ಚರ್ಚಿಸಿದರು. ಒಟ್ಟಿನಲ್ಲಿ ಈ ವರ್ಷ ಏನಾದರೊಂದು ಮಹತ್ವದ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಮಿತ್ರರು ಉತ್ಸುಕರಾಗಿದ್ದಂತೆ ತೋರುತ್ತದೆ. ಈ ಭೇಟಿಯು ಕೇವಲ ಸ್ನೇಹದ್ಯೋತಕವೆಂದೇನೋ ಹೇಳಲಾಗಿದೆ. ಆದರೆ ಜೀವನ ಮರಣದ ಸಂಗ್ರಾಮದೀಕಾಲದಲ್ಲಿ, ಅಹರ್ನಿಶಿ ರಣರಭಸದಲ್ಲಿರುವ ಬ್ರಿಟಿಷ್ ಪ್ರಧಾನರು ಏನೂ ರಾಜಕೀಯವಿಲ್ಲದೆ ಬರೇ ಸ್ನೇಹದ್ಯೋತಕಕ್ಕಾಗಿ ಟರ್ಕಿಯವರೆಗೆ ಹಾರಿ, ಇನೋನ್ಯುರನ್ನು ಭೇಟಿಯಾಗಿ ಮಾತುಕತೆ ನಡೆಸುವಷ್ಟು ಪ್ರಯಾಸಪಟ್ಟಾರು ಎಂದು ನಂಬುವುದು ಕಷ್ಟ! ಚರ್ಚಿಲರೀ ಪ್ರಯಾಣಕ್ಕೆ ಏನೋ ಮಹತ್ವ ರಾಜಕೀಯದ, ಸಮರನೀತಿಯ ಕಾರಣವಿರಲೇಬೇಕು. ಹಿಟ್ಲರನಿಗೀಗ ರಶ್ಯದಲ್ಲಿ ದಿನೇ ದಿನೇ ಅಪಜಯವೊದಗುತ್ತಿರಲು ಒಂದು ಪಕ್ಷ ಆತನು ಟರ್ಕಿಯ ಮುಖಾಂತರ ಕಾಕಸಸಿಗೆ ನುಗ್ಗಬಹುದು! ಇದನ್ನು ತಡೆಯುವಂತೆ ಚರ್ಚಿಲರು ಇನೋನ್ಯುರೊಡನೆ ಮಂತ್ರಾಲೋಚನೆ ಮಾಡಿದರೇ ಎಂಬುದೂ ಒಂದು ವಿಚಾರವುಂಟು. ಆ ವಿಷಯ ಹೇಗಿದ್ದರೂ ತಟಸ್ಥವಾಗಿರುವ ಟರ್ಕಿಯನ್ನು, ಅದು ಎದುರುಪಕ್ಷಕ್ಕೆ ಮಾಲಿಬಿಡದಂತೆ, ತಮ್ಮ ಕಡೆಗೆ ಎಳೆಯುವಂತೆ ತಂತ್ರನೀತಿಯನ್ನು ಚರ್ಚಿಲರು ಈ ಅಡಾನಾ ಸಮ್ಮೇಳನದಲ್ಲಿ ನಡೆಸಿರಬಹುದೆಂದೂಹಿಸುವುದು ಅನುಚಿತವಾಗಲಾರದು. ಹೀಗೆ ಚರ್ಚಿಲರು ತಟಸ್ಥ ಟರ್ಕಿಗೆ ಹೋಗಿ ಇನೋನ್ಯುರೊಡನೆ ಗುಪ್ತ ಮಾತುಕತೆ ಮಾಡಿದ್ದರ ಪರಿಣಾಮವೇನಾಗಬಹುದೋ ನೋಡಬೇಕು. ಅಂತೂ ಇದರಿಂದ ಹಿಟ್ಲರನ ಹೊಟ್ಟೆ ಉರಿಯದೆ ಇರಲಾರದು. ಟರ್ಕಿಯ ತಾಟಸ್ಥ್ಯವನ್ನು ಇನ್ನು ಮುಂದೆ ಆತನು ಪಾಲಿಸಲಿ. ಇಷ್ಟಪಡದಿರಲೂ ಸಾಕು. ಹೀಗೆಯೇ ಎಲ್ಲಾ ರಣಕ್ಷೇತ್ರಗಳಲ್ಲಿಯೂ ಸೋಲನ್ನಪ್ಪುತ್ತಾ ಬರುತ್ತಿರುವ ಹಿಟ್ಲರನು ಉರಿದೆದ್ದರೂ ಆತನ್ನಿದಿರಿಸಲು ಟರ್ಕಿ ಸಿದ್ಧವಿರಲೂ ಇರಬಹುದು. ಆದರೆ ಹಿಟ್ಲರನಿಗೆ ಸದ್ಯ ರಶ್ಯ, ಟುನಿಸಿಯಗಳ ಹೋರಾಟವು ಪ್ರಾಣಾಂತಿಕವಾಗಿರುವುದರಿಂದ, ಆತನು ಟರ್ಕಿಯ ಕಡೆಗೆ ಬೇಗನೇ ಗಮನಕೊಡುವುದು ಸಾಧ್ಯವಿಲ್ಲ.

'ಶರತ ಹಾಕದೆ ಶರಣು'

'ಈಜಿಪ್ತನ್ನು ರಕ್ಷಿಸಿಯಾಯ್ತು, ಲಿಬಿಯ ತುಚಿಗೊಳಿಸಲಾಯ್ತು; ಟ್ರಿಪೋಲಿಯೇ ನಮ್ಮ ಕೈಗೆ ಬಂತು, ಒಟ್ಟಿನಲ್ಲಿ ಟುನಿಸಿಯಾ ಒಂದಿಷ್ಟು ಸ್ಥಳವನ್ನು ಬಿಟ್ಟರೆ ಸಮಗ್ರ ಆಫ್ರಿಕವೇ ನಮ್ಮ ಕೈವಶವಾಗಿದೆ' ಅತ್ತ ನಮ್ಮ ಮಿತ್ರರಾದ ರಶ್ಯನ್‌ವೀರ ಸಿಂಹರು ಜರ್ಮನ್ ನಾಯಿಗಳ ಮೇಲೆ ಬಿದ್ದು ಅವರನ್ನು ನಾಗಲೋಟದಿಂದ ಓಡಿಸುತ್ತಿದ್ದಾರೆ, ಜಾಡಿಸುತ್ತಿದ್ದಾರೆ' ಇನ್ನೇನಂತೆ? ಹಿಟ್ಲರನಿಗೆ ಇನ್ನೂ ಹೋರಾಡಲು ಹುಮ್ಮಸಿದೆಯೆ? ಆಗಲಿ ನೋಡೋಣ, ಎಷ್ಟರ ತನಕ ತಾನೇ ಹೀಗೆ ಯುದ್ಧ ಮುಂದುವರಿಸಿಯಾನು!' ಆದರೆ ಇದೊಂದು ಎಚ್ಚರಿಕೆ ಪಮ್ಮದು, ಈ ಯುದ್ಧವನ್ನು ನಾವಾದರೂ ಇನ್ನು ಮುಂದೆ ಆತನು ಶರತ ಹಾಕದೆ ಶರಣಾಗುವ ವರೆಗೆ ನಿಲ್ಲಿಸಲಾರೆವು' ಹೀಗಿದೆ ಸಮ್ಮೇಳನ ಸೇರಿಸಿ ಯೋಜನೆಗಳನ್ನು ಅಳವಡಿಸುತ್ತಿರುವ ಮಿತ್ರಪಕ್ಷದ ಮಹಾಮುಖಂಡರ 'ಒಳಗಿನ ಒಳಗಿನ ಒಳದನಿ'ಯೊಂದು! ರಶ್ಯದ ಮಹಾವಿಜಯವನ್ನು ನೋಡಿ ಇಷ್ಟರಲ್ಲಿಯೇ ಅನೇಕರು, ಹಿಟ್ಲರನು ಶರಣುಬಂದಂತೆಯೇ ಎಂದು ನಿರ್ಧರಿಸಿಬಿಟ್ಟಿದ್ದಾರೆ. ಆದ್ದರಿಂದಲೇ ಆತನು ಶರಣು ಬಂದರೆ ತಾವು ಏನೇನು ಶರತಗಳನ್ನು ಹಾಕಬೇಕೆಂದೂ ಈಗಾಗಲೇ ಹಲವರು ಸೂಚನೆಗಳನ್ನು ಕೊಡುತ್ತಿದ್ದಾರೆ. ಆದರೆ ಹೀಗೆ ಒಂದೇ ಸಲ ಹಿಗ್ಗಿಬಿಡುವುದರಲ್ಲೇನೇನೂ ಬುದ್ಧಿವಂತಿಕೆಯಿಲ್ಲ. ಇಂದಿನೀ ಮಹಾಯುದ್ಧವಾರಂಭವಾದ ಮೇಲೆ ಹಿಟ್ಲರನು ಒಂದರ ಮೇಲೊಂದಾಗಿ ಎಷ್ಟೊಂದು ರಾಷ್ಟ್ರಗಳನ್ನು ನುಂಗಿ ನೀರ್ಕುಡಿಯಲಿಲ್ಲ? ರಶ್ಯ ಒಂದು ಕಡೆಯ ಇಂದಿನೀ ಪರಾಭವದಿಂದ, ಆತನ ಹಿಂದಿನ ಆ ಸಾಹಸಗಳೆಲ್ಲವೂ ಅಡಿಮೇಲಾದೀತೆ? ಅಥವಾ ರಶ್ಯದಿಂದ ಆದರೂ, ಮಿತ್ರರು ಹಾರೈಸುವಷ್ಟು ಬೇಗ ಆತನು ಓಡಿಹೋದಾನೆ? ಯುಕರಿನ್ ಮೊದಲಾದ ಫಲವತ್ತಾದ ಪ್ರದೇಶಗಳು ಇನ್ನೂ ಜರ್ಮನರ ಸ್ವಾಧೀನವಿಲ್ಲವೆ?

ಒಂದು ಪಕ್ಷ ರಶ್ಯನರ ಮುಂದೊತ್ತುವಿಕೆಯು ಇದೇ ತರದಲ್ಲಿ ಮುಂದುವರಿದರೆ ಹಿಟ್ಲರನು ನೀಪರ್ ನದಿವರೆಗೆ ತನ್ನ ಸೈನ್ಯವನ್ನು ಹಿಂದೆಗೆದು ಅಲ್ಲಿ ಹಿಂದೆಯೇ ಕಟ್ಟಿಕೊಂಡಿರುವ ಭದ್ರ ವ್ಯೂಹದಲ್ಲಿ ತಳವೂರಿ ಕೆಲಕಾಲ ಕಳೆಯಲೂ ಬಹುದು. ಮುಂದೆ ಸೈನ್ಯ ಸಾಧನ ಸಜ್ಜಿತನಾಗಿ ಸಂಗ್ರಾಮ ಕೊಡಬಹುದು. ಅಥವಾ ಒಂದು ಪಕ್ಷ, ಈಗಾಗಲೇ ಗುಜುಗುಜು ಸುದ್ದಿ ಬಂದಿರುವಂತೆ ಫ್ರೇಂಕೋನ ಮಧ್ಯಸ್ಥಿಕೆಯಿಂದ ರಶ್ಯದೊಡನೆ ಸಂಧಾನ ಮಾಡಿ ಮಿತ್ರರಿಗೆ ಮತ್ತೂ ಎದುರು ನಿಲ್ಲಬಹುದು. ಏಕೆಂದರೆ ಈಗ ಬ್ರಿಟನು ಅಮೆರಿಕಗಳು ಎಷ್ಟೊಂದು ರಶ್ಯಕ್ಕೆ ಸಹಾನುಭೂತಿ ತೋರಿಸುವುದಿದ್ದರೂ ಅದು ಹಿಟ್ಲರನು ತಮ್ಮ ಸಮಾನ ಶತ್ರುವೆಂಬ ಒಂದೇ ಉದ್ದೇಶದಿಂದ ಇಲ್ಲವೆಂದರೆ, ರಶ್ಯದ 'ಸರ್ವರಿಗೂ ಸಮಪಾಲಿನ ನಸುವ ಸಮತಾವಾದಕ್ಕೂ, ಬ್ರಿಟನು ಅಮೆರಿಕಗಳ 'ದುಡ್ಡಿದ್ದವನೇ ದೊಡ್ಡಪ್ಪ'ನೆನ್ನುವ ಭಂಡವಾಳಶಾಹೀ ನೀತಿಗೂ ಎಲ್ಲಿನ ನಂಟತನ? ಈ ರೀತಿ ತತ್ವತಃ ರಶ್ಯ ಮತ್ತು ಬ್ರಿಟನು ಅಮೆರಿಕಗಳು ಇನ್ನೂ ಜತೆಗೂಡಿಲ್ಲವೆಂದು ಹಿಟ್ಲರನಿಗೂ ಗೊತ್ತು! 'ನಾವು ನಾವು ಬಡಿದಾಡಿ ಸೋತಾಗ, ನಮ್ಮಿಬ್ಬರನ್ನೂ ಮೆಟ್ಟಿ ನಿಂತು ಬ್ರಿಟನು ಅಮೆರಿಕಗಳು ಲಾಭ ಪಡೆಯುವವೆ'ಂದು ಎಚ್ಚರಿಸಿ, ಪ್ರಚಾರಿಸಿ, ರಶ್ಯದ ಕಡೆಗೆ ಹಿಟ್ಲರ್ ಕೂಡಲೇ ಒಪ್ಪಂದಕ್ಕೆ ಹೋಗಲಾರನೆಂದಾದರೂ ಹೇಗೆ ಹೇಳುವುದು? ಈ ಒಪ್ಪಂದಕ್ಕೆ ರಶ್ಯ ಒಪ್ಪಿಬಿಟ್ಟೀತೇ ಎಂಬೀ ವಿಚಾರವು ನಮಗೀಗ ಪ್ರಕೃತವಲ್ಲ.

ಸ್ಟಾಲಿನ್‌ಗ್ರಾಡಿನ ಸೋಲು

ಸ್ಟಾಲಿನ್‌ಗ್ರಾಡ್ ನಗರ ಪೆಬ್ರವರಿ ಒಂದನೆಯ ತಾರೀಕಿನಂದು ಜರ್ಮನರ ಹಸ್ತದಿಂದ ಪುನಃ ರಶ್ಯನರ ವಶ ಬಂತು. ಆಹಾರ ಸಾಮಾಗ್ರಿ ಮೊದಲಾದವು ಸಮಯಕ್ಕೆ ಒದಗದಿದ್ದುದರಿಂದ ಅಲ್ಲಿದ್ದ ಜರ್ಮನ್ ಸೈನ್ಯವು ಘರಿಭವಕ್ಕೊಳಗಾಗಿ ಕೊನೆಯ ಗಂಡು ಹಾರಿಸಿ ಶರಣುಹೊಕ್ಕಿತು. ಈ ಯುದ್ಧದಿಂದ ಜರ್ಮನಿಯ ಆರನೆಯ ದಳವು ಪರಿಸಮಾಪ್ತಿ ಹೊಂದಿತು. ಒಟ್ಟು ಜರ್ಮನರು ಇದರಲ್ಲಿ ಎರಡುವರೆ ಲಕ್ಷ ಸೈನಿಕರನ್ನು ಕಳಕೊಂಡರೆಂದು ಹೇಳಲಾಗುತ್ತದೆ. ಅನೇಕ ಸೈನಿಕರೊಡನೆ, ಜರ್ಮನರ ಮುಖ್ಯ ಸೇನಾಪತಿ ಫೀಲ್ಡ್ ಮಾರ್ಶಲ್ ಪೌಲಿಸ್ ಸೆರೆಸಿಕ್ಕಿದ್ದಾನೆ. ಇದರಿಂದ ಜರ್ಮನಿಯಲ್ಲಿ ತುಂಬಾ ಕಳವಳವುಂಟಾಗಿದ್ದು, ಈ ಸೋಲಿನ ಸೂಚನೆಯೆಂದು ಜರ್ಮನಿಯ ಕಾರ್ಖಾನೆಗಳೆಲ್ಲವೂ ಒಂದು ನಿಮಿಷ ಮೌನವ್ರತವನ್ನಾಚರಿಸಿದುವಂತೆ! ರಶ್ಯನರೀಗ ಸ್ಟಾಲಿನ್‌ಗ್ರಾಡಿನ ಪುನರ್ರಚನೆಯನ್ನು ಕೈಕೊಳ್ಳುತ್ತಿದ್ದಾರೆ! ಧನ್ಯ ರಶ್ಯನ್ ವೀರರೇ ಧನ್ಯ! ನಿಮ್ಮ ಮುಖಂಡನ ಹೆಸರಿನ ಈ ಪ್ರಿಯ ಪಟ್ಟಣವನ್ನು ಪ್ರಾಣದ ಪಣ ತೆತ್ತು ಪುನಃ ಸ್ವಾಧೀನಪಡಿಸಿದ ನಿಮ್ಮ ಸಾಹಸವು ಅಖಿಲ ಪ್ರಪಂಚದ ಮೆಚ್ಚುಗೆಯನ್ನೇ ಪಡೆದಿದೆ! ಹೀಗೆ ರಶ್ಯನರಿಗೆ ಉತ್ತರ ಕಾಕಸಸಿನಲ್ಲಿ, ಮೈಕೋಪ ಎಣ್ಣೆ ಕಣಿಗಳೂ, ಟಿಕೋರೆಟಸ್ಕ ಕಣಿಗಳೂ ವಶ ಬಂದಿವೆ. ಕ್ಯೂಬಾನದಲ್ಲಿ ರಶ್ಯನರು ಕಪ್ಪು ಸಮುದ್ರದ ಕಡೆ ಸಾಗುತ್ತಿದ್ದಾರೆ. ಕಾಕಸಸಿನಿಂದ ಹೊರಟ ಸೈನ್ಯ ರೊಸ್ಟೊವಿಗೆ ಮುತ್ತಿಗೆ ಹಾಕಿದೆ. ವೊರೊನೋಜ ಪಟ್ಟಣದಿಂದಲೂ ರಶ್ಯನರು ಮುನ್ನುಗ್ಗಿದ್ದಾರೆ. ಡಾನ್ ಮಧ್ಯದಲ್ಲಿ ರಶ್ಯನರ ಧಾಳಿ ಬಲವಾಗಿದೆ. ಸ್ವಾಟೋ ಹತ್ತಿರ ಕುಪಾನಸ್ಕ ಲಿಸಿಚನಸ್ಕ ರೈಲ್ವೆ ಕತ್ತರಿಸಿ ಖಾರಕೋವ್ ವೊರೋಶಿಲೋವ್ ಗ್ರಾಡ್ ಕಡೆಗೆ ಧಾವಿಸುತ್ತಿರುವರು. ಕಾಕಸಸಿನಲ್ಲಿ ಎರಡು ಕೇಂದ್ರಗಳನ್ನುಳಿದು ಮಿಕ್ಕವೆಲ್ಲಾ ರಶ್ಯನರಿಗೆ ವಶಬಂದಿವೆ. ಲೆನಿನ್‌ಗ್ರಾಡ್ ಮುತ್ತಿಗೆಯನ್ನು ಸಡಿಲುಮಾಡಿದ ಮೇಲೆ ಅದರ ಸುತ್ತು ಜರ್ಮನರ ಒತ್ತಾಟ ಬಲವಾಗಿದೆ. ರೊಮೆಲ್‌ನ ಸೈನ್ಯವು ಮಾರೆಥ್ ವ್ಯೂಹದಲ್ಲಿ ಭದ್ರವಾಗಿ ತಳವೂರಿದ ಮೇಲೆ ಟುನಿಸಿಯ ಪರಿಸ್ಥಿತಿಯಲ್ಲಿ ಅಷ್ಟೊಂದು ಬದಲಾವಣೆಯಾಗಿಲ್ಲ. ಎರಡೂ ಕಡೆಗಳಲ್ಲಿಯೂ ಅಲ್ಪ ಸ್ವಲ್ಪ ಪ್ರಗತಿಯಾಗಿದೆ.

ಚೀನ-ಜಪಾನ್ ರಾಜಿ?

'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಚೀನಾ ಜಪಾನಗಳೊಳಗಣ ರಾಜಿಯಾಗುವ ವಿಷಯ ಒಂದು ಲೇಖನ ಬಂದಿದೆ. "ಜಪಾನ್ ಮುಖ್ಯ ಮಂತ್ರಿ ಟೋಜೋ ಈ ವರ್ಷ ಚೀನದವರೊಡನೆ ಒಪ್ಪಂದ ಮಾಡಲು ಯೋಚಿಸುತ್ತಿರುವನೆಂದು ವಾಶಿಂಗ್‌ಟನ್ನಿನ ಕೊರಿಯನ್ ಜನರಿಗೆ ತಿಳಿದುಬಂದಿದೆ" ಎಂಬುದೇ ಆ ಲೇಖನದ ಸಾರಾಂಶವಾಗಿದೆ. ಈ ಬಗ್ಗೆ ರಾಜಿಯ ಮಾತುಕತೆಗಳನ್ನು ಮುಂದುವರಿಸ ಪರೆ, ಚೀನದಲ್ಲಿರುವ ಜಪಾನಿನ ಕೈಗೊಂಬೆ ಸರಕಾರಕ್ಕೆ—ನಾನ್‌ಕಿಂಗ್ ಚೀನೀ ಸರಕಾರಕ್ಕೆ—ಅಧಿಕಾರ ಕೊಡಲಾಗಿದೆಯಂತೆ! 1937ರಲ್ಲಿ ಚೀನ ಯಾವ ಪರಿಸ್ಥಿತಿಯಲ್ಲಿತ್ತೋ, ಅದೇ ಸ್ಥಿತಿಯಲ್ಲಿ ಅದನ್ನಿರಬಿಡುವುದು, ಮಂಚೂರಿಯಾದಲ್ಲಿ ಸಂಯುಕ್ತಾಧಿಕಾರ ಸ್ಥಾಪಿಸುವುದು, ಚೀನಕ್ಕೆ ಜಪಾನು ಆರ್ಥಿಕ ಸಹಾಯವನ್ನು ನೀಡುವುದು ಇವು ರಾಜಿಯ ಶರತಗಳಾಗಿ ತಿಳಿದುಬಂದಿದೆ. ಚೀನದಲ್ಲಿ ಇತ್ತೀಚೆಗೆ ಭಯಂಕರ ಕ್ಷಾಮವುಂಟಾಗಿ ಜನರು ಆಹಾರವಿಲ್ಲದೆ ಸಾಯುತ್ತಿದ್ದಾರೆಂಬ ವಾರ್ತೆ ಬರುತ್ತಿದೆ. ಅಂತೂ ಈ ರಾಜಿ ಮಾತುಕತೆಯ ಕುರಿತು ಚೀನದಿಂದಾಗಲಿ ಜಪಾನಿನಿಂದಾಗಲಿ ಇದುವರೆಗೆ ಅಧಿಕೃತ ವಾರ್ತೆ ಏನೂ ಬಂದಿಲ್ಲ.

ಸ್ವದೇಶಾಭಿಮಾನಿ

ತಾರೀಖು 12—3—1948

ಜಿನ್ನಾ ಕೇಳಿದಿರಿ?

"ಇಷ್ಟು ಕಾಲದ ವರೆಗೆ, ಭಾರತದ ಬಿಕ್ಕಟ್ಟನ್ನು ಬಿಡಿಸುವ ಬೀಗದ ಕೈ ಮುಸ್ಲಿಂ ಲೀಗಿನ ಕೈಯ್ಯಲ್ಲಿತ್ತೆಂದು ಹಲವರು ಬಗೆದಿದ್ದರು. ಆದರೆ ಈಗ ಜಿನ್ನರೇ ಹೇಳುತ್ತಾರೆ, ಆ ಬೀಗದ ಕೈ ಗಾಂಧಿ ಮತ್ತು ಕಾಂಗ್ರೆಸಿನ ಕೈಗೆ ಹೋಗಿದೆಯೆಂದು! ಇದಕ್ಕೆ ಯಾರು ಹೊಣೆಗಾರರು? ಕಳೆದ ಆಗಸ್ಟಿನಲ್ಲಿ ಕಾಂಗ್ರೆಸು, ಮುಸ್ಲಿಂ ಲೀಗಿನ ಕೇಳಿಕೆಗೆ ಮನ್ನಣೆಯಿತ್ತು, ಪಾಕಿಸ್ತಾನದ ಸಂಬಂಧದ ತನ್ನ ಧೋರಣೆ ಸ್ಪಷ್ಟಪಡಿಸಿದಾಗ, ಲೀಗಿಗೆ ಭಾರತದ ಬಿಕ್ಕಟ್ಟು ಬಿಡಿಸಲು ಮುಂಬರುವರೆ ಒಳ್ಳೆಯ ಸಂದರ್ಭ ಒದಗಿತ್ತು. ಮಾತ್ರವಲ್ಲದೆ ಕಾಂಗ್ರೆಸು, ಆಗ ಲೀಗಿನೊಡನೆ ಸಂಧಾನಮಾಡಲೂ ತನ್ನ ಆತುರವನ್ನು ವ್ಯಕ್ತ ಮಾಡಿತು. ಆದರೆ ಜಿನ್ನರು ಕೇವಲ ಪಾಕಿಸ್ತಾನವೊಂದರ ಹಠ ಹಿಡಿದರು; ಸುವರ್ಣ ಸಂದರ್ಭವನ್ನು ಕಳಕೊಂಡರು. ಇಷ್ಟರಲ್ಲಿ ಕಾಂಗ್ರೆಸು ಸೆರೆಮನೆ ಸೇರಿದ್ದರಿಂದ, ಅವರು ಮಾತುಕತೆ ಮಾಡುವಂತಿರಲಿಲ್ಲ. ಹಿಂದು ಮಹಾಸಭೆಯವರು, ಮೊದಲು ತುಸು ಮೆತ್ತಗಿದ್ದರೂ, ಮತ್ತೆ ಪ್ರತಿಭಟಿಸುವುದೇ ಯೋಗ್ಯವೆಂದು ಭಾವಿಸಿ ಜಿನ್ನರಿಗೆ ಯೋಗ್ಯ ಉತ್ತರವಿತ್ತರು. ಅಸ್ಪೃಶ್ಯವರ್ಗದ ಮುಖಂಡ ಅಂಬ್ಡೇಕರರೂ, ಜಿನ್ನಾ ಗಾಂಧಿ ಜಗಳದಲ್ಲಿ ತಾನೇಕೆ ಕೈಹಾಕಬೇಕೆಂದು ದೂರನಿಂತರು. ಇಷ್ಟು ಮಾತ್ರವಲ್ಲ, ರಾಜಾಜಿಯೂ ನಿರಾಶೆಗೊಂಡು, ಜಿನ್ನರ ಕೈಬಿಟ್ಟುಬಿಟ್ಟರು.

"ಬ್ರಿಟಿಷರ ಕಡೆಯಿಂದಲೂ ಜಿನ್ನರಿಗೆ ಪ್ರೋತ್ಸಾಹ ದೊರಕಲಿಲ್ಲ. ವೈಸರಾಯರು ಪಾಕಿಸ್ಥಾನಕ್ಕೆ ತಣ್ಣೀರೆರಚಿದರು. ಭಾರತ ಮಂತ್ರಿ ಅಮೆರಿ, ಹಿಂದಿನ ಭರವಸೆಗಳನ್ನೆಲ್ಲಾ ಮರೆತು, ಮುಂದಿನ ಭಾರತಕ್ಕೆ ಅಕ್ಬರನ ಆಡಳಿತವೇ ಸರಿಯೆಂದರು. ಇದಕ್ಕೂ ಹೆಚ್ಚಿನದೆಂದರೆ, ಟರ್ಕಿಯ ಪತ್ರಿಕಾಕರ್ತರು, ಲೀಗಿನ ಮಾನಪತ್ರಕ್ಕೆ ಉತ್ತರವೀಯುತ್ತಾ, ತಾವು ಭಾರತದಲ್ಲಿ 'ಪಾಕಿಸ್ಥಾನ' ಮೊದಲಾದ ಒಳ ಜಗಳಗಳ ವಿಷಯ ಆಸಕ್ತರಾಗಿಲ್ಲವೆಂದು ಸ್ಪಷ್ಟ ಹೇಳಿ ಬಿಟ್ಟರು! ಲೀಗಿನ ದುರವಸ್ಥೆ ಮತ್ತೂ ಮುಗಿಯಲಿಲ್ಲ. ರಾಜಾಜಿಯವರೀಗ, ಜಿನ್ನರೊಡನೆ, ಪಾಕಿಸ್ತಾನವೆಂದರೆ, ಲಾಹೋರಿನಿಂದ ಪಶ್ಚಿಮಕ್ಕೆ ಒಂದು ಚೂರು, ಡಾಕಾ ಮತ್ತು ಮೈಮನಸಿಂಗ ಸುತ್ತು ಒಂದು ಚೂರು ಸ್ಥಳ, ಬೇಕಾದರೆ ಅದನ್ನು ತೆಗೆದುಕೊಳ್ಳಿ ಎಂದು ಹಂಗಿಸಿ ಹೇಳಿದ್ದಾರೆ! ಜಿನ್ನರು ಇದಕ್ಕೆಲ್ಲಾ ಏನನ್ನುವರು? ಇನ್ನೂ ತಮ್ಮ ಹಠ ಹಿಡಿದೇ ಇರುವರೆ? ಅಥವಾ ಭಾರತದ ಬಿಕ್ಕಟ್ಟು ಬಿಡಿಸಲು ಮುಂಬರುವರೆ? ಲೀಗಿನ ವಾರ್ಷಿಕಾಧಿವೇಶನ ಬೇಗನೇ ದಿಲ್ಲಿಯಲ್ಲಿ ಸೇರಲಿದೆ. ಲೀಗಿನ ವಿಚಾರವಂತ ಪ್ರತಿನಿಧಿಗಳು, ಇನ್ನಾದರೂ ಜಿನ್ನರಿಗೆ ಬುದ್ಧಿ ಹೇಳಿ, ಕಾಂಗ್ರೆಸು ಮತ್ತು ಬ್ರಿಟಿಷ್ ಸರಕಾರದೊಡನೆ ಮಾತುಕತೆ ಮಾಡುವಂತೆ ಪ್ರಯತ್ನಿಸುವರೆಂದು ನಾನು ಹಾರೈಸುತ್ತೇನೆ."

ಮೇಲಿನ ಮಾತುಗಳು ಮುಸ್ಲಿಂ ಮುಖಂಡರಾದ ಡಾ। ಸಯ್ಯದ್ ಅಬ್ದುಲ್ ಲತೀಫರದು! ಜಿನ್ನಾ ಇವನ್ನು ಕೇಳಿದಿರಿ?

ಪುನರವತಾರ

'ಈಸ್ಟ್ ಇಂಡಿಯಾ ಕಂಪನಿ'ಯೇ 'ಯುನಯಿಟೆಡ್ ಕಿಂಗ್‌ಡಂ ಕಮರ್ಶಿಯಲ್ ಕೋರ್ಪರೇಶನ್' ಎಂಬ ಹೆಸರಿನಿಂದೀಗ ಪುನರವತಾರ ಹೊಂದಿದೆಯೆಂದು ಭಾರತದ ಎಸೆಂಬ್ಲಿಯಲ್ಲೊಮ್ಮೆ ಹೇಳಲಾಗಿತ್ತು. ಭಾರತೀಯರ ಲಾಭನಷ್ಟಗಳನ್ನು ಗಣಿಸದೆ, ಅಧಿಕಾರದ ಬಲದಿಂದ, ವ್ಯಾಪಾರದ ಪೇಟೆಯನ್ನು ಪಡೆದುಕೊಂಡು ಹಿಂದೆ 'ಈಸ್ಟ್ ಇಂಡಿಯಾ ಕಂಪನಿ'ಯು ಅಪರಿಮಿತ ಲಾಭ ಪಡೆದಿದ್ದೆ. ಆ ಕಂಪನಿಯ ಪಾಲುಗಾರರು ಡೈರೆಕ್ಟರರೂ ಮಿಲಿಯಾಧಿಪರಾದರು. ಅಂತೆಯೇ ಈಗ ಸರಕಾರದ ಬೆಂಬಲವಿರುವ, ಮಾತ್ರವಲ್ಲದೆ, ಸಾಧನ ಸಾಮಗ್ರಿವೊಯ್ಯಲು ಹಡಗುಗಳ ವ್ಯವಸ್ಥೆಯೂ ಇರುವ ಈ ವಿದೇಶೀಯ ವ್ಯಾಪಾರ ಸಂಸ್ಥೆಯೊಂದು ಭಾರತದಲ್ಲಿ ತಲೆಯೆತ್ತಿ ನಿಂತ ಬಗ್ಗೆ ಭಾರತದ ಹಲವು ಮಂದಿ, ಆರ್ಥಿಕ ವಿಚಾರಜ್ಞರು, ವ್ಯಾಪಾರಸ್ಥರು ತಮ್ಮ ದುಃಖೋದ್ಗಾರ ತೆಗೆದಿದ್ದಾರೆ.

ಬ್ರಿಟಿಷ್ ಭಂಡವಾಳಗಾರರ ಹಣದ ಬೆಂಬಲ, ಸರಕಾರದ ಬೆಂಬಲಗಳನ್ನು ಪಡೆದು ನಿಂತ ಈ ವ್ಯಾಪಾರ ಸಂಸ್ಥೆಯೊಡನೆ ದೇಶೀಯ ವ್ಯಾಪಾರಸ್ಥರು ಎದುರಾಡುವುದಾದರೂ ಹೇಗೆ? ಸಕ್ಕರೆ, ಗೋಧಿ ಮತ್ತು ಕೆಲ ರಬ್ಬರ್ ಸಾಮಾನುಗಳನ್ನು ಈ ಕಂಪನಿಯು ಪಡೆದುಕೊಂಡು ನಾಲ್ಕು ಪಾಲು ಬೆಲೆಗೆ ಬೇರೆ ದೇಶಗಳಿಗೆ ಮಾರುತ್ತಿರುವದೆಂದು ಕೆಲವು ತಿಂಗಳ ಹಿಂದೆ ಭಾರತದ ವ್ಯಾಪಾರಿಗಳು ಪ್ರತಿಭಟಿಸಿದ್ದರು. ಭಾರತ ಸರಕಾರವಾದರೂ ಈಗೊಂದು ಪ್ರಕಟಣೆ ಹೊರಡಿಸಿ ಯುದ್ಧ ಕಾಲದಲ್ಲಿ ಇಂಥಾ ಕಂಪನಿ ಅವಶ್ಯವೆಂದು ಸಮರ್ಥಿಸಿದೆ. ಯುದ್ಧಾನಂತರವಾದರೂ ಇದು ಉಳಿಯುವುದೆಂದು ಬ್ರಿಟನಿನ ಬೋರ್ಡ್ ಓಫ್ ಟ್ರೇಡಿನ ಅಧ್ಯಕ್ಷ ಡಾ। ಡಾಲ್ಟನರು ಕಾಮನ್ಸಿನಲ್ಲಿ ಹೇಳಿದ ಮಾತಿನಿಂದ ಧ್ವನಿತವಾಗುತ್ತದೆ. ಸ್ಪೈನ್, ಪೋರ್ಚುಗಲ್, ಅರ್ಜೆಂಟಾಯಿನಗಳಲ್ಲಿ ಈ ಕಂಪನಿಯ ಶಾಖೆಗಳೂ ಈಗಾಗಲೇ ಸ್ಥಾಪಿತವಾಗಿದ್ದು ಬೇರೆ ಒಂಬತ್ತು ಉಪಶಾಖೆಗಳು ಮಧ್ಯಪೂರ್ವ ಮತ್ತು ಆಫ್ರಿಕದಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಯುತ್ತದೆ. ಭಾರತದ ನಷ್ಟ, ಬ್ರಿಟಿಷ್ ಭಂಡವಾಳಗಾರರ ಲಾಭ, ಇವೆರಡರಲ್ಲಿ ಸರಕಾರಕ್ಕೀಗ ಯಾವುದು ಬೇಕಾಗಿದೆ?

ಸ್ವದೇಶ ಸಮಾಚಾರ

ಸಿಕಂದರ್ ಪುತ್ರ ಮಂತ್ರಿ

ಪಂಜಾಬಿನ ಸರ್ ಸಿಕಂದರರ ಪುತ್ರ ಮೇಜರ್ ಶೌಕತ್ ಹಯಾತ್ ಖಾನರು ಪಂಜಾಬಿನ ಮಂತ್ರಿಮಂಡಳದಲ್ಲಿ ಸೇರಿಸಲ್ಪಟ್ಟಿದ್ದಾರೆ.

ಅಮೆರಿಕದಿಂದ ಮರಳಿದ್ದಾರೆ

ಫೆಸಿಫಿಕ್ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದ ಬೇಗಂ ಷಾನವಾಜರು. ಇವರು ಡಿಲ್ಲಿಗೆ ಬಂದಾಗ ಪತ್ರಿಕೋದ್ಯಮಿಗಳ ರಹಸ್ಯ ಸಮ್ಮೇಳನ ಸೇರಿಸಿದರು, ಇದಕ್ಕೆ ಭಾರತ, ಬ್ರಿಟಿಷ್, ಅಮೆರಿಕಗಳ ಪತ್ರಿಕಾ ಪ್ರತಿನಿಧಿಗಳನ್ನಾರನ್ನೂ ಕರೆದಿರಲಿಲ್ಲ. ಈಗ ತಾನು ಸರಕಾರೀ ಕೆಲಸದಲ್ಲಿ ನಿಯುಕ್ತಳಾಗಿರುವುದರಿಂದ ಯಾವುದೇ ರಾಜಕೀಯ ವಿಚಾರ ಹೇಳಲಾರೆನೆಂದರು!

ಜಾಫರುಲ್ಲಾರ ಸ್ಥಾನದಲ್ಲಿ

ಭರತಪುರದ ಮುಖ್ಯ ಮಂತ್ರಿ ಶ್ರೀ. ಕೆ. ಪಿ. ಎಸ್. ಮೇನನರು ಚೀನದಲ್ಲಿ ಭಾರತದ ಪ್ರತಿನಿಧಿಯಾದ ಭಾರತದ ಏಜಂಟ ಜನರಲರಾಗಿ ನೇಮಕ ಹೊಂದುವರೆಂದು ವಾರ್ತೆಯಿದೆ.

ಭಾರತದ ಆಹಾರ ಪರಿಸ್ಥಿತಿ

ವಿಚಾರವು ಗಾಬರಿಗೊಳ್ಳುವ ರೀತಿಯಲಿಲ್ಲವೆಂದು ಭಾರತ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ಸರ್ಕಾರರು ಹೇಳುತ್ತಾರೆ. ಆಹಾರ ವ್ಯವಸ್ಥೆಯನ್ನು ಸರಿಗೊಳಿಸುವ ಸಂಬಂಧ ಸರಕಾರದವರು ಕಾರ್ಯಕ್ರಮ ಕೈಕೊಳ್ಳಲಿದ್ದಾರಂತೆ!

ಕೇಂದ್ರ ಎಸೆಂಬ್ಲಿ

ಮುಂದಿನ ವಾರ ಕೂಡಲಿದೆ. ಇದರಲ್ಲಿ ೧೧ ನಿಲುವಳಿ ಸೂಚನೆಯಿಡಲಾಗಿದೆ. ಸಂತಸಿಂಗ, ದೇಶಮುಖ, ರೋಸ್‌ಗಿ, ಬಜೋರಿಯಾ ಮೊದಲಾದವರು ಇದನ್ನು ತಂದಿರುವರು. ಆಹಾರ ಸಮಸ್ಯೆ, ಬೆಳ್ಳಿ ಮಾರಾಟ, ಔಷಧ ಸಾಮಾನು ತಯಾರಿಕೆ, ಕಾಗದ ಮೊದಲಾದ ವಿಚಾರಗಳೂ ಗಾಂಧಿಜಿ ಭೇಟಿ ನಿರಾಕರಣೆಯ ವಿಚಾರವೂ ಈ ಸೂಚನೆಗಳಲ್ಲಿವೆ.

ಬೋಸರ ಮೇಲಿನ ಖಟ್ಲೆ

ಯ ವಿಚಾರಣೆಯು ಮೇ ೧೮ ವರೆಗೆ ಪುನಃ ಮುಂದುವರಿಸಲಾಗಿದೆ. ಸುಬಾಸರು ಅದೃಶ್ಯರಾಗುವ ಮೊದಲು ಅವರ ಮೇಲೆ ಡಿಫೆನ್ಸ್ ಕಾನೂನಿನ ಪ್ರಕಾರ ಈ ಖಟ್ಲೆ ಹೂಡಲಾಗಿತ್ತು.

ಅಪೀಲಿಲ್ಲ?

ಡಿಫೆನ್ಸ್ ಕಾನೂನಿನ ಪ್ರಕಾರ ನಡೆಯುವ ಖಟ್ಲೆಗಳ ವಿಚಾರಣೆ ನಡೆಸಲು ನಿಯಮಿಸಲ್ಪಟ್ಟ ಸ್ಪೆಶಲ್ ಜಡ್ಜರ ತೀರ್ಪಿನ ವಿರುದ್ಧ ಅಪೀಲು ಮಾಡಲು ಆಸ್ಪದವಿಲ್ಲವೆಂದು ಮದ್ರಾಸು ಹೈಕೋರ್ಟಿನವರು ಅಭಿಪ್ರಾಯವಿತ್ತಿದ್ದಾರೆ!

ಅ. ಭಾ. ಚರಕಾ ಸಂಘದ

ಕರ್ನಾಟಕ ಶಾಖೆಯವರು ತಮ್ಮ ಅಧೀನದಲ್ಲಿರುವ ನೂಲುವವರಿಗೂ ನೇಕಾರರಿಗೂ ಇದೇ ಫೆಬ್ರವರಿಯಿಂದ ತುಟ್ಟಿ ಭತ್ತೆ ಮಂಜೂರು ಮಾಡಿದ್ದಾರೆ.

ವಿಜಾಪುರದಲ್ಲಿ ಬರಗಾಲ

ನಿವಾರಣೆಯ ಕಾರ್ಯವು ಅಧಿಕಾರೀ ಅನಧಿಕಾರೀ ಕಾರ್ಯಕರ್ತರಿಂದ ಬಹಳ ಭರದಿಂದ ನಡೆಯುತ್ತಿದೆ.

ಬೆಲ್ಲ ತಯಾರಿಸಲು ನಿರ್ಬಂಧ

ಹೊಸಪೇಟೆಯ ಸುತ್ತಲಿನ ೨೨ ಹಳ್ಳಿಗಳಲ್ಲಿ ಬೆಲ್ಲ ತಯಾರಿಸುವುದನ್ನು ಸರಕಾರವು ನಿರ್ಬಂಧಿಸಿ ಅನೇಕ ಸಂಸಾರಗಳು ಉಪವಾಸ ಬೀಳಬೇಕಾಗಿ ಬಂದಿದೆ. ರೈತರು ತಮ್ಮ ಕಷ್ಟ ಪರಿಸ್ಥಿತಿಯ ಕುರಿತು ಸರಕಾರದ ಅಧಿಕಾರಿಗಳಿಗೆ ದೂರಿಟ್ಟರು. ಪರಿಹಾರವಿನ್ನೂ ದೊರೆತಿಲ್ಲ.

ಗಡಿನಾಡಿನಲ್ಲಿ

ಕೆಂಪಂಗಿಗಳ ಪಿಕೆಟಿಂಗ್ ಸತ್ಯಾಗ್ರಹಾದಿಗಳು ಭರದಿಂದ ನಡೆಯುತ್ತಿವೆ. ಇತ್ತೀಚೆಗೆ ಗಫರ್ ಖಾನರ ಮಗನಿಗೆ ಈ ಸಂಬಂಧ ಮೂರು ವರ್ಷಗಳ ಶಿಕ್ಷೆವಿಧಿಸಿದ್ದಾರೆ. ಇಲ್ಲಿ ಪುನಃ ಮಂತ್ರಿಮಂಡಳ ಸ್ಥಾಪಿಸುವ ಸುದ್ದಿಯೊಂದಿದೆ.

ಗ್ರೀಕ್ ರಾಯಭಾರಿ ಕಚೇರಿ

ನುಗ್ಗಿ ಅವರನ್ನು ಹೊಡೆದ ಆರೋಪದಲ್ಲಿ ಕಲ್ಕತ್ತೆಯಲ್ಲಿ ಶ್ರೀ. ಎಸ್. ಕರಂಬಯಾಸ ಎಂಬವರು ಬಂಧಿಸಲ್ಪಟ್ಟರು.

'ವಂದೇ ಮಾತರಂ'ಕ್ಕೆ ಆಕ್ಷೇಪ!

ಡಾಕಾ ವಿಶ್ವ ವಿದ್ಯಾಲಯದ ವಿದ್ಯಾರ್ಥಿನೀ ಸಂಘದ ಸಮಾರಂಭ ಕಾಲದಲ್ಲಿ 'ವಂದೇ ಮಾತರಂ' ಹಾಡಿದ್ದಕ್ಕೆ ಮುಸಲ್ಮಾನ ವಿದ್ಯಾರ್ಥಿಗಳು ಆಕ್ಷೇಪಿಸಿ ಗೊಂದಲವೆಬ್ಬಿಸಿ ಮಾರಾಮಾರಿಯಾಗಿ ೫೦ ಜನರಿಗೆ ಗಾಯವಾಗಿದ್ದು ಓರ್ವನು ಮೃತಹೊಂದಿದನು.

ಬಿಕಾನೇರ ಮಹಾರಾಜರು

ತಾ. ೨ ರಂದು ಬೊಂಬಯಿಯಲ್ಲಿ ನಿಧನ ಹೊಂದಿದರು. ಇವರ ಶವವನ್ನು ವಿಮಾನದಲ್ಲಿ ಬಿಕಾನೇರಿಗೆ ತರಲಾಯಿತು. ಇವರು ಉತ್ತಮ ರಾಜಕಾರಣಿಯರಾಗಿದ್ದಂತೆ, ಪ್ರಸಿದ್ಧ ಬೇಟೆಗಾರರೂ ಆಗಿದ್ದರು.

ಹೈಕೋರ್ಟಿಗೆ ಅಧಿಕಾರವಿಲ್ಲ?

ಸರಕಾರದ ಆಜ್ಞೆಯ ಪ್ರಕಾರ ಡಿಟೆನ್ಶನ್ ವಿಧಿಸಲ್ಪಟ್ಟವರನ್ನು ಕೋರ್ಟಿಗೆ ತಂದು ವಿಚಾರಣೆಗೆ ಗುರಿಮಾಡುವ ಅಧಿಕಾರ ಹೈಕೋರ್ಟಿಗಿಲ್ಲವೆಂದು ಮುಂಬಾಯಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ತೀರ್ಮಾನ ಕೊಟ್ಟರು.

ಸ್ಟೇಂಡಾರ್ಡ್ ಬಟ್ಟೆ

ಎಂಬ ಹೆಸರಲ್ಲಿ ಬಡ ಜನರಿಗೆ ಉಪಯೋಗಿಸಲು ಯೋಗ್ಯವಾಗಿ ಕಡಿಮೆ ದರದಲ್ಲಿ ಸರಕಾರವು ಬಟ್ಟೆ ಒದಗಿಸುವ ಯೋಜನೆ ಮಾಡಿದೆ. ೧೯೪೪ ನೇ ಎಪ್ರಿಲ್ ಕೊನೆಗೆ ೩ ತಿಂಗಳ ಮಟ್ಟಿಗೆ ೫೦೦ ಯಾರ್ಡ್ ಸ್ಟೇಂಡರ್ಡ್ ಬಟ್ಟೆ ತಯಾರಾಗುವ ಸಿದ್ಧತೆಯಾಗಿರುವುದು.

ಏಡೆಡ್ ಶಾಲೆಗಳ ಉಪಾಧ್ಯಾಯರಿಗೆ ತುಟ್ಟಿಭತ್ತೆ

ಮದ್ರಾಸು ಪ್ರಾಂತದಲ್ಲಿಯ ಏಡೆಡ್ ಎಲಿಮೆಂಟರಿ ಶಾಲೆಗಳಲ್ಲಿಯ ಉಪಾಧ್ಯಾಯರ ಸ್ಥಿತಿಯನ್ನು ಸುಧಾರಿಸುವ ಸಂಬಂಧವಾಗಿ ಈ ಸರಕಾರವು ಈ ತನಕ ಆಗಾಗ ಶಿಕ್ಷಣ ಸಂಬಂಧವಾಗಿ ಕೊಡಲಾಗುತ್ತಿದ್ದ ಗ್ರೇಂಟು ದರಗಳನ್ನು ಹೆಚ್ಚಿಸಿರುತ್ತಾ, ಅವನ್ನು ವಿಶೇಷ ತಗ್ಗಿಸದೆ ಅರ್ಹತೆಯುಳ್ಳ ಉಪಾಧ್ಯಾಯರಿಗೆ ಪೂರ್ಣವಾಗಿ ದೊರಕಿಸಿಕೊಡುವ ಬಗ್ಗೆ ಬಜೆಟುಗಳಲ್ಲಿ ಹೆಚ್ಚಿಗಾಗಿ ಹಣವನ್ನು ಪಿಂಗಡಿಸಿಟ್ಟ ಸಂಗತಿಯನ್ನು ಸರಕಾರವು ಪ್ರಕಟಿಸಿದೆಯಲ್ಲದೆ, ಪ್ರಕೃತ ಜೀವನದ ಖರ್ಚು ಏರಿರುವ ಕಾರಣ, ಅದು ಕೆಲವು ತಿಂಗಳಿಂದ ಬಹು ವಿಪರೀತವಾಗಿದ್ದುದರಿಂದಲೂ ಕಳೆದ ಆಕ್ಟೋಬರ ತಾ. ೧ರಿಂದ ಈ ಉಪಾಧ್ಯಾಯರಿಗೆ ತಿಂಗಳಿಗೆ ರೂಪಾಯಿ ೨ರಂತೆ ತುಟ್ಟಿಭತ್ತೆ ಕೊಡಲು ಸರಕಾರವು ಹುಕುಂ ಕೊಟ್ಟಿದೆಂದು ತಿಳಿಯುತ್ತದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಭತ್ತಗಳ ಕುರಿತು ಕಲೆಕ್ಟರರ ಪ್ರಕಟಣೆ

ಇಂಡಿಯಾ ರಕ್ಷಣೆಯ ಶಾಸನದ ಅನ್ವಯ ನಮ್ಮ ಜಿಲ್ಲಾ ಕಲೆಕ್ಟರರು ಒಂದು ಪ್ರಾಮುಖ್ಯವಾದ ಆಜ್ಞೆಯನ್ನು ಅಕ್ಕಿ ಭತ್ತಗಳ ಕುರಿತಾಗಿ ಹೊರಡಿಸಿರುವರು. ಆ ಮೇರೆಗೆ, ರೂ. ೨೫೦ ಯಾ ಅದಕ್ಕಿಂತ ಹೆಚ್ಚಿಗೆ ತೀರ್ವೆ ತೆರುವ ಪ್ರತಿಯೊಬ್ಬ ವರ್ಗದಾರನೂ ಕಳೆದ ೧೯೪೨ನೇ ಫಸಲಿಯಲ್ಲಿ ತಾನು ಮಾರಿದ ಅಕ್ಕಿ ಭತ್ತದ ಮೊತ್ತದ ವಿವರವನ್ನು ಇದೇ ತಾ. ೨೮ರೊಳಗೆ ಕಲೆಕ್ಟರರಿಗೆ ತಿಳಿಸಬೇಕಲ್ಲದೆ ಇದೇ ತಾ. ೧೫ರಲ್ಲಿ ತನ್ನ ವಶವಿರುವ, ತಾನು ಈಡಿಟ್ಟಿರುವ ಹಾಗೂ ತನ್ನ ಬಗ್ಗೆ ಒಕ್ಕಲುಗಳಲ್ಲಿ ಇರಬಹುದಾದ ಅಕ್ಕಿ ಭತ್ತವೆಷ್ಟೆಂಬ ವಿವರವನ್ನೂ ಕೊಡಬೇಕಾಗಿದೆ. (೨) ಅಕ್ಕಿ ಭತ್ತದ ವ್ಯಾಪಾರಕ್ಕಾಗಿ ಲೈಸನ್ಸ್ ಪಡೆದಿರುವ ಯಾವತ್ತು ರಖಂ ವ್ಯಾಪಾರಿಗಳೂ ಇದೇ ತಾ. ೧೫ರಲ್ಲಿ, ತಮ್ಮಲ್ಲಿರುವ ಅಕ್ಕಿ ಭತ್ತಗಳ ಮೊತ್ತದ ಲೆಕ್ಕವನ್ನೂ ಹಾಗೂ ೧೯೪೨ರಲ್ಲಿ ತಾವು ಪ್ರತಿ ತಿಂಗಳಲ್ಲಿ ಅವನ್ನು ಮಾರಿದ ವಿವರವನ್ನೂ ಇದೇ ತಾ. ೨೮ರೊಳಗೆ ಒಪ್ಪಿಸಬೇಕಾಗಿದೆ. (೩) ಅಕ್ಕಿ ಭತ್ತಗಳ ಮೇಲೆ ಕಡ ಕೊಡುವ ಯಾವತ್ತು ಬೇಂಕುಗಳು ಸಹಕಾರಿ ಸಂಘಗಳು, ಇತರ ಸಂಸ್ಥೆಗಳು, ತಾವು ಕಡ ಕೊಟ್ಟಿರುವ ಅಕ್ಕಿ ಭತ್ತಗಳ ಮೊತ್ತದ ಲೆಕ್ಕಾಚಾರವನ್ನು—ತಾ. ೧೫ನೇ ಫೆಬ್ರವರಿಯಲ್ಲಿರುವಂತೆ—ಹಾಗೆ ಈಡಿಟ್ಟಿರುವವರ ಹೆಸರು ಮತ್ತು ಮೊತ್ತಗಳ ವಿವರಗಳೊಡನೆ ಇದೇ ತಾ. ೨೮ರೊಳಗೆ ತಿಳಿಸಬೇಕಾಗಿದೆ.

"ಕೆನರಾ ಚೇಂಬರ್ ಆಫ್ ಕಾಮರ್ಸ್" ಕಮಿಟಿ

ಕೆನರಾ ಚೇಂಬರ್ ಕಾಮರ್ಸ್‌ನ ಕಮಿಟಿಯವರು ಇದೇ ಕಳೆದ ಫೆಬ್ರುವರಿ ತಾ. ೨ರಲ್ಲಿ ಸಭೆ ಸೇರಿ, "ಚಿಲ್ಲರೆ" ನಾಣ್ಯಗಳ ತಲಾಷಿಗಾಗಿ ನಡೆಯುತ್ತಿರುವ ಕಾರ್ಯಕ್ರಮಗಳನ್ನು ವಿಮರ್ಶಿಸಿ, ಆ ಕುರಿತು ಸರಕಾರದವರು ನಿರ್ದಿಷ್ಟವಾದ ನಿಯಮ ನಿಬಂಧನೆಗಳನ್ನು ರಚಿಸಬೇಕೆಂದೂ ಒಬ್ಬ ವ್ಯಾಪಾರಿಯು ನಿತ್ಯದ ವಹಿವಾಟದ ಮೊತ್ತದಲ್ಲಿ ಸೇಕಡಾ ೨೦ರಷ್ಟು ಚಿಲ್ಲರೆ ನಾಣ್ಯಗಳು ಅವನಲ್ಲಿ ಇರುವಂತೆ ಬಿಡುವುದು ವಿಹಿತವೆಂದೂ ಸ್ಥಳೀಯ ವ್ಯಾಪಾರಿಗಳು—ಈಗಿನ ರೀತಿಯಲ್ಲಿಯೇ ಕೈದು, ಪ್ರಾಸಿಕ್ಯೂಶನ್ ಮೊದಲಾದವು ನಡೆದರೆ,—ತಮ್ಮ ನಿತ್ಯದ ವ್ಯವಹಾರವನ್ನು ಶಾಂತ ರೀತಿಯಲ್ಲಿ ಸಾಗಿಸುವುದು ಅಸಾಧ್ಯವೆಂದು ತಿಳಿದಿರುವುದಾಗಿ ಆ ವ್ಯಾಪಾರಿಗಳ ಕಡೆಯಿಂದ ಈ ಕೋರಿಕೆಗಳು ಬಂದಿರುವುದರಿಂದ, ಈ ಚಿಲ್ಲರೆಯ ಕುರಿತಾದ ನಿರ್ದಿಷ್ಟವಾದ ನಿಯಮ ನಿಬಂಧನೆಗಳನ್ನು ರಚಿಸಿ, ಈ ಚೇಂಬರಿಗೆ ತಿಳಿಸಬೇಕೆಂದೂ ನಿರ್ಧಾರವಾಯಿತಲ್ಲದೆ ಈ ಠರಾವನ್ನು ಮದ್ರಾಸ್ ಸರಕಾರದ ಚೀಫ್ ಸೆಕ್ರೆಟರಿ ಮೊದಲಾದ ಸಂಬಂಧಪಟ್ಟ ಮುಖ್ಯಾಧಿಕಾರಿಗಳಿಗೂ, ಜಿಲ್ಲಾ ಅಧಿಕಾರಿಗಳಿಗೂ ಕಳುಹಿಸಲಾಗಿದೆ.

ಜಿಲ್ಲಾ ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿ, ಮಂಗಳೂರು.

ಪ್ರವಾಸ ಕಾರ್ಯಕ್ರಮ

ಈ ಮೊದಲು ಪ್ರಕಟಿಸಿದ ಕಾರ್ಯಕ್ರಮದಂತೆ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಮೊದಲಾದವರಿಗೆ ಪ್ರವಾಸಮಾಡಲು ಪೆಟ್ರೋಲು ದೊರೆಯದೆ ಅಸಾಧ್ಯವಾಯಿತು. ಸಮಿತಿಯ ವ್ಯವಸ್ಥಾಪಕ ಕಾರ್ಯದರ್ಶಿಯರೊಬ್ಬರೇ ಕೆಲವೆಡೆ ಹೋಗಬೇಕಾಯಿತು. ಸಂಬಂಧಪಟ್ಟವರಿಗೆ ಈ ಕುರಿತು ಪ್ರತ್ಯೇಕ ಬರೆಯಲಾಗಿದೆ. ಹೀಗೆ ಪ್ರಕಟಿಸಿದಂತೆ ಕಾರ್ಯಕ್ರಮ ನಡೆಸಲು ಅಸಾಧ್ಯವಾದುದಕ್ಕೆ ಸಮಿತಿಯ, ಪರವಾಗಿ ಕ್ಷಮಿಸಬೇಕಾಗಿ ಕೇಳಿಕೊಳ್ಳಲಾಗುತ್ತದೆ.

ಈಗ ಪೆಟ್ರೋಲಿನ ವ್ಯವಸ್ಥೆ ಮಾಡಿಕೊಂಡು ಈ ಕೆಳಗಿನ ಕಾರ್ಯಕ್ರಮದಂತೆ ಪ್ರವಾಸವನ್ನು ಜರಗಿಸಲಾಗುತ್ತದೆ:—

ಫೆಬ್ರವರಿ ತಾ. ೯—ಪೂರ್ವಾಹ್ನ ಗ. ೮—ಮಂಗಳೂರಿಂದ ನಿರ್ಗಮನ; ೮—೩೦ರಿಂದ ೯—ಗುರುಪುರ. ೯—೩೦ರಿಂದ ೧೦—ಮುಡಾರು ೧೦—೩೦ರಿಂದ ೧೧ ಕಲ್ಲ ಮುಂಡ್ಕೂರು. ೧—೩೦ರಿಂದ ೨—೩೦ ನಿಡ್ಡೋಡಿ. ೩ರಿಂದ ೪—ಮುಂಡ್ಕೂರು ೪—೩ರಿಂದ ೫—ಕಿನ್ನಿಗೋಳಿ, ೬ರಿಂದ ೮— ಮೂಲ್ಕಿ.

ಫೆಬ್ರವರಿ ತಾ. ೧೦—ಪೂ. ಗ. ೧೦—ಮೂಲ್ಕಿಯಿಂದ ನಿರ್ಗಮನ. ೧೧ರಿಂದ ೧೧—೩೦—ಪಡುಬಿದ್ರೆ, ೧೨ರಿಂದ ೧೨—೩೦—ಬೆಳ್ಮಣ್ಣು. ೧ರಿಂದ ೨—ಶಿರ್ವ ೨—೩೦ರಿಂದ ೩—೩೦—ಕಟ್ಪಾಡಿ, ೫—ಉಡುಪಿ.

ಫೆಬ್ರವರಿ ತಾ. ೧೧—ಪೂ. ಗ. ೮—ಉಡುಪಿಯಿಂದ ನಿರ್ಗಮನ, ೮—೩೦ರಿಂದ ೯—ಹೆರ್ಗ, ೯—೩೦ರಿಂದ ೧೦. ಹಿರಿಯಡ್ಕ, ೧೦—೩೦ರಿಂದ ೧೧—ಬೈಲೂರು, ೨ರಿಂದ ೩—ಕಾರ್ಕಳ, ೩—೩೦ರಿಂದ ೪—ಮಿಯಾರು, ೫ರಿಂದ ೬—ಮೂಡಬಿದ್ರೆ.

ಜಿಲ್ಲಾ ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿ, ಮಂಗಳೂರು

ಶಾಂತಿರಕ್ಷಣೆಯ ಅವಶ್ಯಕತೆ

ಆಹಾರ ವಸ್ತುಗಳ ಬೆಲೆ ಏರಿರುವ ಕಾಲದಲ್ಲಿ ಬಡಜನರು ನಿರಾಶೆಯಿಂದ. ಉದ್ರೇಕಗೊಂಡು, ನಿರರ್ಥಕವಾಗಿ ಪ್ರಮಾದ ಉಂಟಾಗುವ ರೀತಿಯಲ್ಲಿ ಶಾಂತಿಭಂಗಮಾಡುವ ಸಂಭವವಿದೆ. ಕೆಲವು ಭಾಗಗಳಲ್ಲಿ ಹಾಗೆ ನಡೆದುದೂ ಉಂಟು.

ಕ್ರಯವೇರುವುದಕ್ಕೆ ಕೆಲಮಂದಿ ವರ್ತಕರು ಕಾರಣರೆಂಬಿತ್ಯಾದಿ ತಪ್ಪು ಭಾವನೆಗಳೇ ಇಂಥ ಉದ್ರೇಕಕ್ಕೆ ಕಾರಣವಿರುತ್ತವೆ. ಆದರೆ ಅದಕ್ಕೆ ಹಲವು ಕಾರಣಗಳಿದ್ದು ಈಗಿನ ಯುದ್ಧ ಪರಿಸ್ಥಿತಿಯೇ ಮುಖ್ಯ ಕಾರಣವೆನ್ನಬಹುದು. ಎಲ್ಲರೂ ಅತೀವ ತಾಳ್ಮೆ ವಹಿಸಬೇಕು.

ಲೂಟಿ ನಡೆದರೆ ವ್ಯಾಪಾರ ವ್ಯವಹಾರ ಕಷ್ಟವಾಗಿ ಪರಿಸ್ಥಿತಿಯು ಇನ್ನಷ್ಟು ಕೆಟ್ಟು ಯಾರಿಗೂ ಲಾಭವಿಲ್ಲದಾಗುವುದು. ಶಾಂತಿ ಭಂಗವಾದಲ್ಲಿ ಪೋಲೀಸ್ ಬಂದೋಬಸ್ತು ಮೊದಲಾದ ತೊಂದರೆಗಳೇ ಪರಿಣಾಮವಾಗುವವು.

ಆಹಾರ ಸಂಕಷ್ಟ ನಿವಾರಣೆಯ ಕೆಲಸವು ಭರದಿಂದ ಮುಂದರಿಯುತ್ತದೆ. ಪ್ರಕೃತ ೫೧ ಕೇಂದ್ರಗಳನ್ನು ಈ ಜಿಲ್ಲೆಯಲ್ಲಿ ಸ್ಥಾಪಿಸಿ ೩ ಆಣೆಯಂತೆ ಅಕ್ಕಿ ಮಾರಲು ಮೇಲಿನ ಸಮಿತಿಯು ತ್ವರ್ಯತೊಡಗುವುದು.

ಶ್ರೀ. ವಿಠಲ ಶೆಟ್ಟರಿಗೆ ಪುನಃ ಶಿಕ್ಷೆ

ಕುಂದಾಪುರ ತಾಲೂಕಿನ ವಕ್ವಾಡಿ ಹೊಸಮನೆಯ ಶ್ರೀ. ವಿಠಲ ಶೆಟ್ಟಿ ಎಂಬವರು ಕಳೆದ ಅಕ್ಟೋಬರ ತಿಂಗಳಲ್ಲಿ ಕರಪತ್ರ ಹಂಚಿದ ಆರೋಪದ ನಿಮಿತ್ತ ಶಿಕ್ಷೆಯಲ್ಲಿ ೩ ತಿಂಗಳ ಶಿಕ್ಷೆಗೆ ಗುರಿಯಾಗಿ, ಇದೇ ಕಳೆದ ಜನವರಿ ತಾ. ೯ರಲ್ಲಿ ಕಾರವಾರ ಸೆರೆಮನೆಯಿಂದ ಬಿಡುಗಡೆ ಹೊಂದಿದ್ದು, ಜನವರಿ ತಾ. ೨೬ರಂದು ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಶಿಕ್ಷೆಯಲ್ಲಿ ಪುನಃ ಬಂಧಿತರಾಗಿ ೯ ತಿಂಗಳ ಶಿಕ್ಷೆಗೆ ಗುರಿಯಾಗಿದ್ದಾರೆ.

ದಿ ಶಿವಾಜಿ ಫಿಸಿಕಲ್ ಕಲ್ಚರ್ ಇನ್ಸಿಟ್ಯೂಟ್, ಮಂಗಳೂರು

ಕಳೆದ ತಾ. ೩೧ನೇ ಆದಿತ್ಯವಾರ ಸಂಜೆ ಗಂಟೆ ೫ಕ್ಕೆ ಮೇಲಿನ ಸಂಸ್ಥೆಯ ೬ನೇ ವಾರ್ಷಿಕೋತ್ಸವವು ಜಪ್ಪಿನಲ್ಲಿರುವ ಸೀರಿಯನ್ ಮಿಶನ್ ಇಗರ್ಜಿಯ ವಠಾರದಲ್ಲಿ ಜರಗಿತು. ಅನೇಕ ಮಹಿಳೆಯರೂ ಮಹನೀಯರೂ ನೆರೆದಿದ್ದರು. ಮಾನ್ಯ ಜಿಲ್ಲಾ ಕಲೆಕ್ಟರ್ ಯಂ. ಕರಿಮತುಲ್ಲಾ ಐ. ಸಿ. ಎಸ್. ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಇನ್ಸಿಟ್ಯೂಟಿನ ವಿದ್ಯಾರ್ಥಿ ಶ್ರೀ. ಎ. ಸಾರಂಗಪಾಣಿ ಇವರು ಸಭಿಕರನ್ನು ಸ್ವಾಗತೀಕರಿಸಿ ಸಂಸ್ಥೆಯ ಈ ವರೆಗಿನ ಕಾರ್ಯದ ವರದಿಯನ್ನೋದಿದರು. ಅಧ್ಯಕ್ಷರ ಬಹುಮಾನಪಟ್ಟ ಭಾಷಣವಾದ ಮೇಲೆ ಪ್ರೇಕ್ಷಣೀಯವಾದ ಹಲವು ಆಟಗಳನ್ನು ಇನ್ಸಿಟ್ಯೂಟಿನ ವಿದ್ಯಾರ್ಥಿಗಳು ಆಡಿತೋರಿಸಿದರು. ಇವರೊಂದಿಗೆ ಶ್ರೀ. ಕೆ. ಜಯರಾಮ ಶೆಟ್ರು ಅದ್ಭುತವಾದ ಹಿಪ್ನೋಟಿಸಮಂ ಮತ್ತು ಮೆಸ್ಮೆರಿಸಂ ಆಟಗಳೂ ನಡೆದಿದ್ದುವು. ಆಟಗಳ ಮಧ್ಯದಲ್ಲಿ ಶ್ರೀಯುತರುಗಳಾದ ಯನ್. ಎಸ್. ಕಿಲ್ಲೆಯವರ ಮತ್ತು ಎ. ರಮಾನಾಥರಾಯರ ಭಾಷಣಗಳಿದ್ದುವು. ಕೆಲವು ಅಭ್ಯಾಸಿಗಳಿಗೆ ಊರ ಮಹನೀಯರ ಕಡೆಯಿಂದ ಬಹುಮಾನಗಳು ದೊರಕಿದ್ದುವು. ಅಲ್ಲದೆ, ಶ್ರೀ. ಕೆ. ಜಯರಾಮ ಶೆಟ್ಟರಿಗೆ ಜನಾಬ್ ಅಬ್ದುಲ್ ರಹಿಮಾನ್ ಬಿ. ಎ. ಬಿ. ಎಲ್. ಇವರಿಂದ ಒಂದು ಪದಕವೂ, ಇನ್ಸಿಟ್ಯೂಟಿನ ಕಡೆಯಿಂದ ಒಂದು ಬೆಳ್ಳಿಯ ಕಪ್ ಕೂಡಾ ದೊರಕಿರುತ್ತದೆ. ಸಮಾರಂಭವು ಸರ್ವ ಜನಾದರಣೀಯವಾಗಿ ರಾತ್ರಿ ಗಂಟೆ ೯ಕ್ಕೆ ಮುಕ್ತಾಯವಾಯಿತು. ಇನ್ಸಿಟ್ಯೂಟಿನ ಸ್ಥಾಪಕರಾದ ಪ್ರೊಫೆಸರ್ ಎ. ಕೆ. ಸಾಲಿಯಾನ್ ಇವರ ಪ್ರಯತ್ನವು ಸ್ತುತ್ಯವಿದೆ.

ಹರಿಜನ ಸೇವೆ

ತಾ. ೩ರಂದು ಕಾಸರಗೋಡು ಮಿಶನ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಮೈಂದಪ್ಪರೈಗಳ ಓದುವಿಕೆಯಿಂದ ಕೃಷ್ಣಕರ್ಣರ ಸಂವಾದ ವಾಚನ ನಡೆಯಿತು. ಶ್ರೀಮಾನ್. ಕಿಲ್ಲೆಯವರ ಅರ್ಥ ವಿವರಣೆಯಿತ್ತು. ಸುಮಾರು ೬೦ ರೂಪಾಯಿ 'ಕಾಸರಗೋಡು ಹರಿಜನ ವಿದ್ಯಾರ್ಥಿ ಭವನಕ್ಕೆ ನಿಧಿ ಸಂಗ್ರಹವಾಯಿತು. ಕಾ. ಹ. ಸೇ. ಸಂಘದ ಅಧ್ಯಕ್ಷ ಶ್ರೀ. ಎ. ಶ್ರೀನಿವಾಸ ಪೈಗಳು ಕೃತಜ್ಞತೆ ಹೇಳಿದರು.

ಭಾಷಣ

ಸ್ಥಳೀಯ ಗಣಪತಿ ಹೈಸ್ಕೂಲಿನ ವಿದ್ಯಾರ್ಥಿ ಸಭೆಯಲ್ಲಿ ತಾ. ೮ರಂದು ಸಂಜೆ ಶ್ರೀ. ಎನ್. ಎಸ್. ಕಿಲ್ಲೆಯವರು 'ಭಾರತದ ಕಥಾ ನಾಯಕನು ಯಾರು?' ಎಂಬ ವಿಷಯ ಭಾಷಣವಿತ್ತರು. ಶ್ರೀ. ರಾಮಪ್ಪನವರು ಅಧ್ಯಕ್ಷರಾಗಿದ್ದರು.

ಶ್ರೀ. ರಾಮಕೃಷ್ಣ ವಿದ್ಯಾರ್ಥಿ ಭವನ

ಬಂಟರ ಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ ವಿದ್ಯಾರ್ಥಿನೀ ಭವನಗಳ ವಾರ್ಷಿಕೋತ್ಸವವು ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ನೆರವೇರಿತು. ವಿದ್ಯಾರ್ಥಿಭವನ ಮತ್ತು ವಿದ್ಯಾರ್ಥಿನಿಭವನಗಳ ವರದಿ ವಾಚನ, ಆ ಮೇಲೆ ವಿದ್ಯಾರ್ಥಿ ವಿದ್ಯಾರ್ಥಿನಿಗಳಿಗೆ ಬಹುಮಾನ ಹಂಚೋಣ, ಆ ಮೇಲೆ ವಕೀಲ್ ಶ್ರೀ. ಕೆ. ಕೆ. ರೈ ಇವರ ಸ್ವಸ್ತಿವಾಚನ, ಕಾರ್ಯದರ್ಶಿ ಶ್ರೀ ಜಗನ್ನಾಥ ಶೆಟ್ಟರಿಂದ ಉತ್ತರ ಆ ಮೇಲೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಬೇರೆ ಬೇರೆ ಇಂಗ್ಲಿಷ್ ಮತ್ತು ಕನ್ನಡ ನಾಟಕಗಳು ವಿವಿಧ ವಿನೋದಾವಳಿ, ನೃತ್ಯಾದಿಗಳು ನಡೆದವು. ಅನಂತರ ಅಧ್ಯಕ್ಷ ಭಾಷಣ, ಧನ್ಯವಾದ ಅರ್ಪಣೆಗಳಿಂದ ಸಮಾರಂಭ ಮುಕ್ತಾಯವಾಯಿತು.

ಶ್ರೀ ದಯಾನಂದ ನಾಯ್ಕರ ವಿಚಾರಣೆ

ಪಾಂಗಾಳ ನಾಯಕ್ ಬೇಂಕಿನ ಕಾಞಂಗಾಡು ಶಾಖೆಯ ಏಜಂಟರಾದ ಶ್ರೀ ಪಿ. ದಯಾನಂದ ನಾಯಕರನ್ನು ಇಂಡಿಯಾ ಡಿಫೆನ್ಸ್. ಕಾನೂನು ಮೇರೆಗೆ ದಸ್ತಗಿರಿಮಾಡಿದ್ದು ಆ ಮೇಲೆ ಅವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆ. ಅವರ ವಿಚಾರಣೆಯು ಇದೇ ತಾ. ೧೭ರಲ್ಲಿ ಮಂಜೇಶ್ವರ ಮೊಕ್ಕಾಮಿನಲ್ಲಿ ನಡೆಯುವುದೆಂದು ತಿಳಿಯುತ್ತದೆ.

ಬಹುಮಾನ

ತಾ. ೨೭ರಲ್ಲಿ ಮಂಗಳೂರಿನವರೊಬ್ಬರು ಲೈಸನ್ಸಿಲ್ಲದೆ ಚಿಮ್ನಿ ಎಣ್ಣೆ ಡಬ್ಬಿಯನ್ನು ಬಸ್ಸಿನಲ್ಲಿ ಒಯ್ಯುತ್ತಿರಲು, ಇಲ್ಲಿ ಪಟೇಲರು ಅದನ್ನು ತಡೆದರೆಂದೂ, ಅಷ್ಟರಲ್ಲಿ ಅದನ್ನು ತಂದವರು ಪರಾರಿಯಾದರೆಂದೂ, ಡಬ್ಬಿ ಒಯ್ಯುತ್ತಿದ್ದ ಕೂಲಿಯವನ ಹೇಳಿಕೆ ಪಡೆಕೊಂಡಿರುವರೆಂದೂ ತಿಳಿದಿದೆ.

ಸಾದರ-ಸ್ವೀಕಾರ

ಅಮೃತಾಂಜನ ಕೆಲೆಂಡರ್

೧೯೪೩ ಇದು ನಮ್ಮ ಹಸ್ತಗತವಾಗಿದೆ. ಉಪಯುಕ್ತವಾದ ಈ ಕೆಲಂಡರನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಕಳೆದ ಐವತ್ತು ವರ್ಷಗಳಿಂದ ಅಮೃತಾಂಜನದವರು ಸಮಾಜ ಸೇವೆ ಮಾಡುತ್ತಿದ್ದಾರೆ ಇದರ ಸುವರ್ಣೋತ್ಸವದ ನೆನಪಿನ ಈ ಕೆಲೆಂಡರು ಚಂದವಾಗಿವೆ. ಈ ಸಂಸ್ಥೆ ಇನ್ನೂ ಜನಸೇವೆ ಮಾಡಿ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ.

ಶ್ರೀನಿವಾಸ ಪ್ರೊಕೆಟ್ ಕೆಲೆಂಡರ್

೧೯೪೩. ಮುದ್ರಕರು ಮತ್ತು ಪ್ರಕಾಶಕರು: ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್, ಕಾಸರಗೋಡು ದರ ೬ ಪೈ. ಇಡೀ ವರ್ಷದ ತಾರೀಕು, ತಿಥಿ ಸಂಕ್ರಾಂತಿ ಸಹಿತವಾಗಿರುವ ಈ ಕೆಲೆಂಡರಿನಲ್ಲಿ ಹಿಂದು, ಮಹಮ್ಮದೀಯ ಹಬ್ಬಗಳು ಹಾಗೂ ಸರಕಾರೀ ರಜೆಗಳೂ, ಬೇಂಕ್ ಮತ್ತು ಕೋರ್ಟು ರಜಾ ದಿನಗಳೂ ಸೇರಿದ್ದು, ಕೊನೆಯಲ್ಲಿ ಜ್ಞಾಪಕ ವಿಷಯಗಳನ್ನು ಬರೆದುಕೊಳ್ಳುವರೆ ಕೆಲವು ಖಾಲೀ ಪುಟಗಳೂ ಇರುವುದರಿಂದ, ಇಷ್ಟು ಕಡಿಮೆ ಕ್ರಯದಲ್ಲಿ, ಇಂಥಾ ಉಪಯುಕ್ತ, ಬಹಳ ಸಣ್ಣ ಆಕಾರದ ಕೇಲೆಂಡರನ್ನು ಈಗಿನ ಕಾಲಕ್ಕೆ ಅನುಕೂಲವಾಗುವಂತೆ ಒದಗಿಸಿದ ಕಾಸರಗೋಡು ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್‌ನ ಮಾಲಿಕರನ್ನು ನಾವು ಅಭಿನಂದಿಸುತ್ತೇವೆ.



ಕನ್ನಡ ಪ್ರಹ್ಲಾದ ಹೇಗಿದೆ?

(—ಕಯ್ಯಾರ)

'ಕನ್ನಡ ಪ್ರಹ್ಲಾದ ಹೇಗಿದೆ?' ಎಂದು ನನ್ನ ಸಿನಿಮಾಪ್ರಿಯ ಗೆಳೆಯರನೇಕರು ಕೇಳುತ್ತಾರೆ. ಅವರಲ್ಲಿ ಅದನ್ನು ನೋಡದವರಿದ್ದರೂ ನೋಡಿದವರೂ ಕೆಲವರಿದ್ದಾರೆ. ಅವರ ಅನುಭವಕ್ಕಾಗಿಯೋ, ನನ್ನ ಪರೀಕ್ಷೆಗಾಗಿಯೋ ಹಾಗೆ ಕೇಳುವ ಅವರ 'ವಾಕ್ ಸ್ವಾತಂತ್ರ್ಯ'ಕ್ಕೆ ನಿರ್ಬಂಧ ಹಾಕುವ 'ಅಧಿಕಾರ' ನನ್ನಲಿಲ್ಲವೆಂಬುದೂ ಅವರಿಗೆ ಚೆನ್ನಾಗಿ ಗೊತ್ತು!

ಹೇಗಿದ್ದರೂ ಅವರ ಕುತೂಹಲವನ್ನು ಸಿನೆಮಾ ನಡೆಯುವ ಮೂರು ವಾರಗಳ ತನಕವೂ ನನ್ನಿಂದ ತಣಿಸುವುದಾಗಲಿಲ್ಲ. ಅದುವರೆಗೂ ನನಗೆ ಈ ಸಿನೆಮಾ ನೋಡುವುದೇ ಆಗಲಿಲ್ಲ; ಸಮಯವಿರಲಿಲ್ಲವೆಂದು ಹೇಳಿದರೆ ದೊಡ್ಡ ವಾತಾದೀತು; ಮೊದಲೇ ಸಿನೆಮಾ ನೋಡಿದರೆ ಅದರ ಕುರಿತು ಸತ್ಯವನ್ನೇ ಹೇಳಬೇಕಾಗುತ್ತದೆ. ಒಳ್ಳೆಯದಿದ್ದರಂತೂ ಒಳ್ಳೆಯದೇ ಆದೀತು. ಸಿನೆಮಾ ಮಟ್ಟದಿದ್ದರೆ ಅದರಿಂದ ಅಂಥಾ ಅಭಿಪ್ರಾಯದಿಂದ ಪ್ರದರ್ಶಕರಿಗೂ ಉತ್ಪಾದಕರಿಗೂ ಹಿತವಾಗದಿರಲೂ ಸಾಕು! ಹಾಗಾಗಿ ಕೆಲವು ಚಿತ್ರಗಳನ್ನು ಕೊನೆಗೆ ನೋಡುವುದೇ ಒಳ್ಳೆಯದೆಂದು ತಿಳಿಕೊಂಡಿದ್ದೇನೆ. ಇದು ಮಾತ್ರವಲ್ಲದೆ ಇನ್ನೊಂದು ಕಾರಣವೂ ಇಲ್ಲದಿಲ್ಲ. ಮೊದಲ ದಿನಗಳೆಂದರೆ, ನಮ್ಮೂರಿಗೆ ಯಾವುದೇ ಪ್ರಸಿದ್ಧ ಚಿತ್ರಬಂದರೂ, ಅದರಲ್ಲೂ ಕನ್ನಡ ಚಿತ್ರ ಒಳ್ಳೆಯದಿರಲಿ, ಕೆಟ್ಟದಿರಲಿ ಬಂದರೆ, ಜನರ ತಿಕ್ಕಾಟ ಇದ್ದೇ ಇರುತ್ತದೆ. ಈ ತಿಕ್ಕಾಟದಲ್ಲಿ ಸುಸುಳಿ ಹೊರಬರಬೇಕಾದರೆ ಆಯುಸ್ಸು ಬಹಳ ಗಟ್ಟಿ ಇರಬೇಕು. ಕೆಲವು ಕಡೆ ಇದೂ ಸಾಲದ್ದಕ್ಕೆ ಈಗ ಸಿನೆಮಾ ಟಿಕೇಟು ಪಡೆಯಲು ಹೋಗುವವವರಿಗೆ ಕೆಲಪೋಲೀ ಜನರ ತಿಕ್ಕಾಟದೊಡನೆ ಪೋಲೀಸು ಜನರ ಗುದ್ದಾಟವೂ ಬೀಳತೊಡಗಿದೆ! ಯಾವುದೇ ಘನ ತತ್ವದ ಸಲುವಾಗಿಯೂ ಇರದೆ ಕೇವಲ ಸಿನೆಮಾ ನೋಡುವ ನಿವಾರ್ಯ ಚಟಕ್ಕಾಗಿ ಪೋಲೀಸರ ಕೈಯಿಂದ ಪೆಟ್ಟು ತಿನ್ನುವುದೂ ನನಗೆ ಹಿತವೆನಿಸುವುದಿಲ್ಲ!

ಹೀಗಾಗಿ 'ಕನ್ನಡ ಪ್ರಹ್ಲಾದ' ಚಿತ್ರ ಕೊನೆಯ ವಾರ ನಡೆಯುತ್ತಿರುವಾಗ, ಮೇಲಿನ ತೊಂದರೆಗಳಿಲ್ಲಾ ಇನ್ನು ಬರಲಾರವೆಂದು ದೃಢ ನಂಬಿಗೆಯಾದ ಮೇಲೆ ಅದನ್ನು ನೋಡಲುಹೋದೆ. ಈಗ 'ಕನ್ನಡ ಪ್ರಹ್ಲಾದ' ಹೇಗಿದೆ? ಎಂದರೆ ನಾನು ಅಭಿಪ್ರಾಯ ಕೊಡಲು ಸಿದ್ಧನಿದ್ದೇನೆ.

'ಪ್ರಹ್ಲಾದ'ದ ಕತೆ ಪ್ರಸಿದ್ಧ ಪೌರಾಣಿಕ ಕಥೆಯಾದ್ದರಿಂದ ಅದರಲ್ಲಿ ವಿಶೇಷ ಕುತೂಹಲಜನಕವೇನಿಲ್ಲದಿದ್ದರೂ, ಕುತೂಹಲದಿಂದಲೇ ಆದಿಯಿಂದ ಅಂತ್ಯದ ವರೆಗೂ ಸಿನೆಮಾ ನೋಡಿದೆ. ಕತೆಗಾರಿಕೆ ಹಾಗೂ ನಿರ್ದೇಶಕತ್ವದಲ್ಲಿ ಶ್ರೀ ಸುಬ್ರಹ್ಮಣ್ಯಂ ನುರಿತವರೆಂಬುದು ಸಂತೋಷದ ವಿಷಯ. ಪ್ರಹ್ಲಾದನ ಪ್ರೇರಣೆಯಂತೆ, ಜನರು ಅವರ ಆತ್ಮಸಾಕ್ಷಿಯನ್ನು ಅಡಗಿಸದೆ, ನಾರಾಯಣ ನಾಮ ಭಜಿಸಲು ತೊಡಗಿದಾಗ ಅದೂ ನಾರಾಯಣ ದ್ವೇಷಿ ಅಹಂಕಾರಿ, ಉದ್ಧತ ಹಿರಣ್ಯಕಶಿಪುವಿನ ಎದುರಲ್ಲೇ—ದುಷ್ಟ ರಾಕ್ಷಸರು ಆ ಹರಿ ಭಕ್ತರನ್ನು ನಿರ್ದಯ ಹೊಡೆದು ಚದರಿಸಿದ ದೃಶ್ಯವು ನನ್ನ ಕಣ್ಣಮುಂದೆ ಸದಾ ಕಟ್ಟುತ್ತಿದೆ! ಶ್ರೀ. ಬೆಳ್ಳಾವೆ ಶಾಸ್ತ್ರಿಗಳ ಸಂವಾದ ಲೇಖನವು ಉತ್ತಮವಿದೆ. ಭಾಷೆ ಅತೀವ ಮಧುರವಿದೆ. ಚಿತ್ರೀಕರಣವೂ ಚನ್ನಾಗಿ ಬಂದಿದೆ.

ಅಭಿನಯ, ಸಂಗೀತ ಎರಡೂ ತೀರಾ ಸಾಮಾನ್ಯ. ಕುಮಾರಿ ಚಂದ್ರಮ್ಮ, ಓರ್ವ ಹೆಣ್ಣು ಹುಡುಗಿ ಎಷ್ಟೊಂದು ಚನ್ನಾಗಿ ಪ್ರಹ್ಲಾದನ ಪಾತ್ರ ಅಭಿನಯಿಸಿದ್ದಾಳೆ, ಎಂದು ಕೆಲವರು ನನ್ನೊಡನೆ ಹೇಳಿದ್ದರು. ಆದನೆ ಕುಮಾರಿ ಚಂದ್ರಮ್ಮನ ಅಭಿನಯ ಬಹಳ ಉತ್ತಮವಾಗಿತ್ತೆಂದು ಹೇಳುವುದನ್ನು ನಾನು ಒಪ್ಪಲಾರೆ; 'ಪ್ರಹ್ಲಾದ' ಪಾತ್ರವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿದೆ, ಎಂಬುದಕ್ಕೆ ನನ್ನ ಸಮ್ಮತಿಯಿದೆ. ರಾಜಮ್ಮನಿಗೆ ಸಿನೆಮಾ ತಾರೆಯಾಗುವ ರೂಪ, ಆಕೃತಿ, ಮಾತುಗಾರಿಕೆಗಳ ಲಕ್ಷಣಗಳಿದ್ದರೂ, ಇಲ್ಲಿ ಅಭಿನಯ ಭಾವನಾ ಪ್ರಕಾಶನೆಗಳು ಸಾಕಷ್ಟು ತುಂಬಿಲ್ಲ. 'ಪ್ರಹ್ಲಾದನನ್ನು ಬೆಟ್ಟದಿಂದ ಕೆಳಗೆ ದೂಡಿ, ಕೊಂದು ಬಿಡುವಂತೆ ಹಿರಣ್ಯಕಶಿಪುವು ಆಜ್ಞಾಪಿಸಿ, ಕಯಾದುವಿನ ಬಳಿಯಿಂದ ಪ್ರಹ್ಲಾದನನ್ನು ಸೆಳೆಯುವಾಗ, ತಾಯಿಯ ದುಃಖ ಹೇಗಿರಬೇಕಿತ್ತು? ಬೊಂಬೆಯಂತೆ ಇದ್ದುಬಿಡುವುದೆ? ಹಿರಣ್ಯಕಶಿಪು ಪಾತ್ರವಹಿಸಲು ಶ್ರೀನಿವಾಸಮೂರ್ತಿಗೆ ಇರುವ 'ಭೀಮಕಾಯ'ದ ಯೋಗ್ಯತೆಯೊಂದನ್ನುಳಿದರೆ ಮತ್ತೇನೂ ಕಾಣುವುದಿಲ್ಲ. ಗಣಪತಿ ಭಟ್ಟ ದಕ್ಷಿಣಕನ್ನಡದವರೆಂಬುದು ನಮಗೆ ತುಂಬಾ ಅಭಿಮಾನ. ಆದರೆ ಅಭಿನಯ ತೀರಾ ಸಾಮಾನ್ಯ ತರದ್ದು ಎನ್ನದಿದ್ದರೆ ನಮ್ಮದು 'ಜಿಲ್ಲಾಭಿಮಾನ' ವಾದೀತು!

ಹೆಚ್ಚಿನದು ಈ ಚಿತ್ರದಲ್ಲಿ ಮಕ್ಕಳ ಆಟ; ಬಹುಶಃ ಎಳೆಯ ಹುಡುಗರಿಗೆ ಈ ಚಿತ್ರವು ಬಹಳ ಮೆಚ್ಚಿಗೆ ಆದರೂ ಆಗಬಹುದು! ಓರ್ವ ತುಂಟ ಹುಡುಗನ ಪಾತ್ರವಹಿಸಿದ ಹುಡುಗ ಬಹಳ ಚಲೋದಾಗಿ ಅಭಿನಯಿಸಿದ್ದಾನೆ! ಕೊನೆಯ ನರಸಿಂಹೋದ್ಭವವೇನೋ ಚೆನ್ನಾಗಿ ಪ್ರದರ್ಶಿಸಲಾಗಿದೆ. ಆದರೆ ಹಿರಣ್ಯ ಕಶಿಪುವಿನ ವಧೆ, ಪೌರಾಣಿಕ ಕಥಾನುಗುಣವಿರಲಿಲ್ಲವೋ, ಸ್ವೈಜವಿರಲಿಲ್ಲವೋ ಅಂತೂ ಹೃದಯಸ್ಪರ್ಶಿಯಾಗಿಲ್ಲ.

ಹೇಗಿದ್ದರೂ ಶ್ರೀ ಸುಬ್ರಹ್ಮಣ್ಯಂರ ಈ ಸಾಹಸವನ್ನು ನಾವು ಕೊಂಡಾಡುತ್ತೇವೆ. ಕನ್ನಡಕ್ಕಾಗಿ ಅವರು ಮಾಡಿದ ಸೇವೆಯನ್ನು ಕನ್ನಡಿಗರು ಮರೆಯಲಾರರು. 'ಪ್ರಹ್ಲಾದ'ವನ್ನು ಪ್ರತಿಯೊಬ್ಬರೂ ನೋಡಬೇಕೆಂದು ನಮ್ಮ ಆಗ್ರಹವಾಗಿದೆ. ಏಕೆಂದರೆ, ಆ ಮೂಲಕ ಶ್ರೀ ಸುಬ್ರಹ್ಮಣ್ಯಂರವರು ನಮಗೆ ಇನ್ನಷ್ಟು ಉತ್ತಮ ಚಿತ್ರಗಳನ್ನು ಒದಗಿಸಿ ಧನ ಮತ್ತು ಕೀರ್ತಿಗಳನ್ನು ಗಳಿಸುವಂತಾಗಬೇಕು.

'ಸಾವಿತ್ರಿ'

ಕಳೆದ ಎರಡು ವಾರಗಳಿಂದ ಸೆಂಟ್ರಲ್ ಟೊಕೀಸಿನಲ್ಲಿ ಪ್ರದರ್ಶಿಸಲ್ಪಡುವ 'ಸಾವಿತ್ರಿ' ಮಂಗಳೂರಿನ ಸಿನೆಮಾ ಪ್ರಿಯರಿಗೆ ಮರುಳು ಹಿಡಿಸಿ ಬಿಟ್ಟಿದೆ! ಸುಬ್ಬುಲಕ್ಷ್ಮಿ, ಶಾಂತಾ ಆಪ್ಟೆ, ಇವರ ಸಂಗೀತಾಭಿನಯಗಳು ಜಿಲ್ಲೆಯ ಮೂಲೆ ಮೂಲೆಗಳಿಂದಲೂ ಜನರನ್ನು ಆಕರ್ಷಿಸುತ್ತಿದೆ

ಶುಜಾಚ್

ನವಯುಗ ಚಿತ್ರಪಟದ, ಸಂಗೀತ, ಹಾಸ್ಯ, ಅಭಿನಯಗಳಲ್ಲಿ ಪ್ರಸಿದ್ಧವಾದ ಚಿತ್ರ ಶುಜಾಚ್ (ಸಿನ್ನವಳು) ಎಂಬ ಚಿತ್ರವು ಬಾಲಾಜಿ ಟೊಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ. ಸ್ನೇಹಪ್ರಭಾ, ಸಾಹು, ದತ್ತಮುಅಣ್ಣಾ, ವತ್ಸಲಾ, ಜೋಗ್, ಮೊದಲಾದ ಪ್ರಸಿದ್ಧ ನಟವರ್ಗದ ಅಭಿನಯವಿದೆ. ಸ್ನೇಹಪ್ರಭಾಳ ಮನೋಹರ ಸಂಗೀತ ಅಭಿನಯಗಳನ್ನು ಇನ್ನೊಮ್ಮೆ ಈ ಚಿತ್ರದಲ್ಲಿ ನೋಡಬಹುದು.

'ಫಿಲ್ಮಸ್ತಾನ್'

ಹಿಂದುಸ್ಥಾನದಲ್ಲಿ, ಪಾಕಿಸ್ತಾನ್, ದ್ರಾವಿಡಸ್ತಾನ—ಇವುಗಳೆಲ್ಲಾ ಆಗಬೇಕಾಗಿದ್ದರೆ, 'ಫಿಲ್ಮಸ್ತಾನ್' ಒಂದು ಏಕೆ ಆಗಕೂಡದು? ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಪಕ್ಷಕ್ಕೂ ಅಸ್ತಿತ್ವ ಸ್ಥಾಪನೆಯಿದೆಯಷ್ಟೆ? 'ಫಿಲ್ಮಸ್ತಾನ್' ಎಂದರೆ ಅದೇನೋ ರಾಜಕೀಯ ವಿಚಾರವೆಂದು ತಿಳಕೊಳ್ಳಬೇಡಿ. ಇದೊಂದು ಹೊಸ ಚಿತ್ರ ಸಂಸ್ಥೆಯ ಹೆಸರು. ಬೊಂಬೇಟಾಕೀಸಿನ—ಎರಡನೆ ಇತ್ತೀಚೆಗೆ ಅದರಿಂದ ಪಾಲು ಪಡೆದು ಹೊರಬಂದ—ರಾಯ್ ಬಹದ್ದೂರ್ ಚುನ್ನೀಲಾಲರಿದ್ದಾರಷ್ಟೆ? ಅವರು, ಈಗ ಹೊಸದಾಗಿ ಸ್ಥಾಪಿಸಿದ ಚಿತ್ರ ಸಂಸ್ಥೆಗೆ ಹೀಗೆ ಹೆಸರಿಟ್ಟಿದ್ದಾರೆ. ಸಿರಿವಂತ ಕಪೂರಚಂದರು ಇದಕ್ಕೆ ಧನಸಹಾಯ ಮಾಡುತ್ತಾರಂತೆ! ಅಶೋಕ ಕುಮಾರ್ ಮತ್ತು ಚಂದ್ರಪ್ರಭಾ ಇವರು ಮುಖ್ಯಪಾತ್ರ ವಹಿಸುವ ಪ್ರಥಮ ಚಿತ್ರವು ಬೇಗನೇ ಇದರಲ್ಲಿ ತಯಾರಾಗುವುದಿದೆ.

[೨ನೇ ಪುಟದಿಂದ]

ಭಾರತೀಯನ ಬಲಿದಾನ!

ರಾಷ್ಟ್ರೀಯ ಯುವಕ ಸಂಘದ ಸಭೆಯಲ್ಲಿ ೫೬ ಜನಾಂಗಗಳ ಪ್ರತಿನಿಧಿಗಳೊಡನೆ ಸೇರಿ ಪ್ರದರ್ಶನ ಮಾಡುತ್ತಿದ್ದರು. 'ಗಾಂಧಿಗೆ ಜಯ' 'ಭಾರತಕ್ಕೆ ಸ್ವಾತಂತ್ರ್ಯ'ವೆಂಬುದು ಅವರ ಜಯಘೋಷವಾಗಿತ್ತು! ಎರಡು ದಿನಗಳ ನಂತರ ನ್ಯೂಯಾರ್ಕಿನ ಪೊಗುಕಿಪಿಸಿಯಲ್ಲಿ ಸೇರಿದ ಜಗತ್ತಿನ ಯುವಕರ ೬೦೦ ಪ್ರತಿನಿಧಿಗಳ ಮುಂದೆ ತುಂಬಿದ ಆ ಗಂಭೀರ ಸಭೆಯಲ್ಲಿ, ಯುಸಫ್ ಮಹರಾಲಿ ನಿಂತು, ಪ್ರಚಂಡಕರ ತಾಡನದ ಮಧ್ಯೆ ಫ್ಯಾಸಿಸಂ ಮತ್ತು ಇಂಪೀರಿಯಲಿಸಂಗಳನ್ನು ಕಟ್ಟುಗ್ರವಾಗಿ ಖಂಡಿಸಿ ಸ್ವಾತಂತ್ರ್ಯದ ವೀರಘೋಷಗೈದರು!

ಅಂದು 1938 ಸಪ್ಟಂಬರದಲ್ಲಿ ಚೀನಕ್ಕೆ ಹೊರಟ ಭಾರತೀಯ ವೈದ್ಯ ಮಂಡಳದ ಐದು ಮಂದಿ ಡಾಕ್ಟರರನ್ನು ಬೊಂಬಾಯಿ ಬೀಳ್ಕೊಟ್ಟಿತು. ಕಾಂಗ್ರೆಸ್ ಭವನದಲ್ಲಿ ದೇವಿ ಸರೋಜಿನಿಯವರ ಅಧ್ಯಕ್ಷತೆಯಲ್ಲಿ ಈ ಅಪೂರ್ವ ಸಮಾರಂಭ ನೆರವೇರಿತು. 'ನೀವು ಭಾರತದ ಸ್ವಾತಂತ್ರ್ಯವೀರರ ಪ್ರತಿನಿಧಿಗಳು.' ಇದೇನೋ ಭೀಷಣ ಕರ್ತವ್ಯ, ನಿಮ್ಮ ಬಂಧು ಚೀನಿಯರೊಡನೆ ನಿಮ್ಮ ಕರ್ತವ್ಯದಲ್ಲಿ ನೀವು ಮರಣಹೊಂದಿದರೂ ಹೊಂದಬಹುದು. ನೀವು ಸತ್ತರೆ ನಿಮ್ಮ ಗೋರಿಯ ಬಳಿ ನಿಂತು ನಾನು ವಿಜಯಗೀತೆಯನ್ನು ಹಾಡುವೆನು.' ಎಂದು ಅಂದು ದೇವಿ ಸರೋಜಿನಿ ಹೇಳಿದ್ದರು. ಹಂತ! ಇಂದು ಡಾ. ದ್ವಾರಕನಾಥರ ಗೋರಿಯ ಬಳಿ ನಿಂತು ಮರಣದ ಜಯಗೀತೆ ಹಾಡಲು ದೇವಿ ಸರೋಜಿನಿಯು ಸೆರೆಯಲ್ಲಿ ಬಂಧಿತರಾಗಿ ಬಿಟ್ಟಿದ್ದಾರೆ! ಡಾ. ದ್ವಾರಕನಾಥರ ಮರಣ ಎಷ್ಟು ಭವ್ಯವಾದ ಮರಣ! ಪ್ರಜಾಸತ್ತೆಗಾಗಿ ಹೋರಾಡುವೆವೆಂದು ಬಾಯಲ್ಲಿ ಸಾರುವ ಬ್ರಿಟನು ಅಮೆರಿಕಗಳಿಗಿಂತ, ಭಾರತವು ಎಷ್ಟೊಂದು ಮುಂದುವರಿದು ಕೆಲಸಮಾಡಿತು! ಎಂದು ಬ್ರಿಟನು ಟರ್ಕಿಯನ್ನು ಸೋಲಿಸಲು ಸಿದ್ಧವಿತ್ತೋ, ಅಂದು ಭಾರತವು ಅಲ್ಲಿ ವೈದ್ಯಮಂಡಳ ಕಳುಹಿಸಿತ್ತು! ಎಂದು ಬ್ರಿಟಿಷ್ ಅಮೆರಿಕನ್ ಭಂಡವಾಳಶಾಹಿಗಳು, ರಶ್ಯದಲ್ಲಿ ಬಿಳಿ ಜನರ ಪ್ರತಿ ಕ್ರಾಂತಿಗೆ ಸಹಾಯ ಮಾಡುತ್ತಿದ್ದರೋ ಅಂದು ಭಾರತವು ಕೂಲಿಗಾರರ ವಿಷಯ ತನ್ನ ಸಹಾನುಭೂತಿ ತೋರಿಸಿತ್ತು. ಎಂದು ಬ್ರಿಟನು ಮತ್ತು ಸಾಮುವೆಲ್ ಹೋರರು ಫ್ರಾನ್ಸಿನ ಲಾವಲರೊಡನೆ ಸೇರಿ ಅಬಿಸೀನಿಯನ್ನು ಇರಿಯಲು ತಂತ್ರ ನಡೆಸುತ್ತಿದ್ದರೋ, ಅಂದು ಜವಾಹರಲಾಲರು ಮುಸಲನಿಯೊಡನೆ 'ಶೇಕ್ ಹೇಂಡ್' ಮಾಡಲು ತಿರಸ್ಕರಿಸಿದ್ದರು. ಎಂದು ಚೆಂಬರ್ಲಿನರು ಮುನಿಕಿಗೆ ಹೋಗಿ ಹಿಟ್ಲರರೊಡನೆ ರಾಜಿಮಾಡಿದ್ದಾರೋ, ಅಂದು ನೆಹರು ಮೇಡ್ರಿಡಿಗೆ ಹಾರಿ, ಫ್ಯಾಸಿಸ್ಟ್ ವಿರೋಧಕರಿಗೆ ಸಹಾಯ ಮಾಡಿದ್ದರು. ಎಂದು ಬ್ರಿಟನು ಜಪಾನನ್ನು ಸಮಾಧಾನಪಡಿಸಲು ಬ್ರಮ್ಹಾ ಮಾರ್ಗವನ್ನು ಮುಚ್ಚಿಬಿಟ್ಟಿತ್ತೋ, ಅಂದು ಭಾರತವು ಚೀನಕ್ಕೆ ವೈದ್ಯಮಂಡಳ ಕಳುಹಿಸ್ಕಿತು, ಇಂಥಾ ಭಾರತದ ಮುಖಂಡರಿಂದು ಸೆರೆಮನೆ ಸೇರಿದ್ದಾರೆ! ಡಾ. ದ್ವಾರಕನಾಥರು ಮಡಿದುಹೋಗಿದ್ದಾರೆ! ಆದರೂ ಈ ಎಲ್ಲಾ ನೆನಪು ಇತಿಹಾಸದ ಸ್ಮೃತಿಪಥದಲ್ಲಿ ಅಚ್ಚಳಿಯದ ಸುವರ್ಣ ಲಿಪಿಯಲ್ಲಿ ಉಲ್ಲಿಖಿತವಾಗಿ ಉಳಿದೀತು.

ಚೀನದ, ಅಷ್ಟಮ ಪಥ ದಳವಿಂದು, ಡಾ। ದ್ವಾರಕನಾಥರ ಪುಣ್ಯ ಸ್ಮಾರಕವೊಂದನ್ನು ನಿರ್ಮಿಸಲು ಮನಮಾಡಿದೆಯೆಂಬ ಸುದ್ದಿ ಬಂದಿದೆ! ಸ್ವತಂತ್ರ ಚೀನದ ಮಕ್ಕಳು ಅವರ ಮುದಿ ತಾತಂದಿರ ಮುಖದಿಂದ, ದೂರಭಾರತದಿಂದ ಬಂದು, ಚೀನದ ಸ್ವಾತಂತ್ರ್ಯಕ್ಕಾಗಿ ಮಡಿದ ಈ ವೀರ ಯೋಧನ ಪುಣ್ಯೇತಿಹಾಸವನ್ನು–ಭವ್ಯ ರೋಮಾಂಚಕ ಕಥೆಯನ್ನು ಆಸಕ್ತಿಯಿಂದ ಆಲಿಸಿ ಬಾಷ್ಪಾಂಜಲಿ ಸುರಿಸುವರು!

ಹೊಸದುರ್ಗ

ಬಂಧನ

ಜಮೀನ್ದಾರರ ಇಚ್ಛೆಗೆ ವಿರುದ್ಧವಾಗಿ ಪೈರು ಕೊಯ್ಯಲು ಒಕ್ಕಲಿಗ ಶ್ರೀ। ಕಣ್ಣನ್ ಅವರಿಗೆ ಸಹಾಯ ಮಾಡಿದರೆಂಬ ಆರೋಪಣೆಯಿಂದ ಕಾಞಂಗಾಡಿನ ಶ್ರೀ ಕುಂಞಂಬು ಅವರು ಬಂಧಿಸಲ್ಪಟ್ಟಿರುವರು. ಇದಕ್ಕೆ ಸಂಬಂಧಿಸಿ ಕಣ್ಣನ್ ಅವರ ತಮ್ಮನಾದ ಶ್ರೀ ಅಂಬು ಎಂಬವರೂ ಬಂಧಿಸಲ್ಪಟ್ಟಿರುವರು

ಉಡುಪಿ

ಚುನಾವಣೆ

ಉಡುಪಿ ನಗರ ಸಭೆಗೆ ಅಜ್ಜರ ಕಾಡು ವಾರ್ಡಿನಿಂದ ಶ್ರೀ। ರಾಘವೇಂದ್ರ ಭಟ್ಟರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟರು

ಸಭೆ ಜರಗಲಿಲ್ಲ

ಶಾಲೆಗಳಲ್ಲಿ ಹಿಂದೂ ಮಕ್ಕಳಿಗೆ ಹಿಂದೂ ಮತ ತತ್ವಗಳ ಬೋಧನೆಯ ಆವಶ್ಯತೆಯ ಕುರಿತು ವಿಚಾರ ವಿನಿಮಯದ ಒಗ್ಗೆ ಶ್ರೀ ಫಲಿಮಾರು ಮಠದಲ್ಲಿ ಸೇರಬೇಕಾಗಿದ್ದ (ತಾ. ೩೧ ರಲ್ಲಿ) ಸಭೆಯು ಜರಗಲಿಲ್ಲ. ಮೊದಲಾಗಿ ಸಭೆ ಜರಗಿಸಲು ಪರವಾನಗಿ ಪಡೆಯದುದೇ ಇದಕ್ಕೆ ಕಾರಣ.

ಕಾಸರಗೋಡು

ಜಿಲ್ಲೆಯ ಹಿಂದುಸ್ಥಾನ್ ಸ್ಕೌಟು

ಕಮಿಶನರಾದ ಶ್ರೀ। ಎಂ ಎಸ್ ಮಾಧವರಾಯರು ಯುವಜನ ಸಂಘದ ಆಶ್ರಯದಲ್ಲಿ ಸ್ಕೌಟ್ ದಳವರ ಚಟುವಟಿಕೆಗಳ ಕುರಿತು ಭಾಷಣ ಮಾಡಿದರು. ಶ್ರೀ. ಮಹಮ್ಮದ್ ಶಿಮ್ನಾಡ್ ಸಾಹೇಬರು ಅಧ್ಯಕ್ಷರಾಗಿದ್ದರು.

ಕಮ್ಯುನಿಸ್ಟರ ವಿಚಾರಣೆ

ಶ್ರೀ। ಬಿ. ವಿ. ಕಕ್ಕಿಲ್ಲಾಯ ಮತ್ತು ಶ್ರೀ। ಕುಂಞಿಕಣ್ಣನ್ ಇವರ ವಿಚಾರಣೆಯು ಫೆಬ್ರವರಿ ೨೧ಕ್ಕೆ ಮುಂದುವರಿಸಲ್ಪಟ್ಟಿದೆ.

WANTED

Applications are invited from Secondary Grade Trained teachers, at a salary of Rs. 18 per month. Guarantee of Services can be given for three years.

Apply to— **H. Santha Alva,**
Manager
Kannur Aided Ele School,
Kumbla Post.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ:- ಶ್ರೀ ಸ್ವಾಮಿ ಪ್ರಣವೇಶಾನಂದರು,

ಸ್ವಾಮೀ ವಿವೇಕಾನಂದರು ಒಂದಾನೊಂದು ದಿನ ಶ್ರೀ ಪರಮಾತ್ಮನ ವಿಶ್ವಾಸದ ವಿಷಯವನ್ನೆತ್ತಿ, ಸಾಕಾರವಾದಿಯ ವಿಶ್ವಾಸಕ್ಕೆ 'ಅಂಧ ವಿಶ್ವಾಸ'ವೆಂದು ಶ್ರೀ ಪರಮಹಂಸರೊಂದಿಗೆ ನಿರ್ದೇಶಮಾಡಿದ್ದರು. ಇದಕ್ಕುತ್ತರವಾಗಿ ಶ್ರೀ ಪರಮಹಂಸರು ಅವರನ್ನು ಕುರಿತು ಹೀಗೆಂದು ಹೇಳಿದ್ದರು. 'ಒಳ್ಳೇದು ಅಂಧ ವಿಶ್ವಾಸವೇನೆಂದು ನನಗೆ ಹೇಳಬಲ್ಲೆಯಾ? ವಿಶ್ವಾಸವೆಂಬುದೆಲ್ಲ ಅಂಧವಾಗಿಯೇ ಇದೆ; ವಿಶ್ವಾಸಕ್ಕೆ ಒಂದು ಕಣ್ಣು ಇದೆಯೇ? 'ವಿಶ್ವಾಸ'ವೆಂದೇ ಹೇಳು, ಇಲ್ಲವಾದರೆ 'ಜ್ಞಾನ'ವೆಂದೇ ಹೇಳು ಸುಮ್ಮನೆ, ವಿಶ್ವಾಸದಲ್ಲಿ ಕಣ್ಣಿದ್ದ ವಿಶ್ವಾಸ ಒಂದು, ಕಣ್ಣಿಲ್ಲದ ವಿಶ್ವಾಸ ಇನ್ನೊಂದು ಉಂಟೇ? ಇದು ಯಾವ ನ್ಯಾಯ? 'ನಿಜವಾಗಿಯೂ ಅಂಧ ವಿಶ್ವಾಸದ ಅರ್ಥವನ್ನು ಶ್ರೀ ಪರಮಹಂಸರಿಗೆ ತಿಳಿಸಲು ಹೋಗಿ ನಾನು ಸೋತುಹೋಗಿದ್ದೆನು. ಆ ಮಾತಿನ ಅರ್ಥವು ನನಗೂ ಆಗಲಿಲ್ಲ, ಶ್ರೀ ಪರಮಹಂಸರು ಹೇಳಿದ ಮಾತೇ ನಿಜವೆಂದು ತಿಳಿದು ಆ ಅವಧಿಯಿಂದ ಅದರ ವಿಷಯವಾಗಿ ಇನ್ನು ಮಾತೇ ಎತ್ತಲಿಲ್ಲ.' ಎಂದು ಸ್ವಾಮೀ ವಿವೇಕಾನಂದರು ಹೇಳಿದ್ದರು

ನಿರಾಕಾರವಾದಿಗಳಿಗೆ ಉಪದೇಶ

ಅವಕ್ಕ ನಿರಾಕಾರವಾದಿಯುವರನ್ನೂ ಸಾಕಾರವಾದಿಯುವರನ್ನೂ ಶ್ರೀ ಪರಮಹಂಸರು ಒಂದೇ ದೃಷ್ಟಿಯಿಂದ ನೋಡುತ್ತಿದ್ದರು. ಅವಕ್ಕ ನಿರಾಕಾರವಾದಿಯವರು ಹೇಗೆ ಧ್ಯಾನ ಮಾಡಬೇಕೆಂದು ಕೂಡ ಹೇಳುತ್ತಿದ್ದರು. ಅವರನ್ನು ಕುರಿತು ಹೀಗನ್ನುತ್ತಿದ್ದರು—'ನೋಡು, ಪರಮಾತ್ಮನು ಸಮುದ್ರದ ನೀರಿನಂತೆ ಎಲ್ಲ ಕಡೆಯುಲ್ಲಿ ಇದ್ದಾನೆಂದೂ, ನಾನೊಂದು ಅದರಲ್ಲಿರುವ ಮೀನೆಂದೂ, ಆ ಸಚ್ಚಿದಾನಂದ ಸಾಗರದಲ್ಲಿ ಮುಳುಗುತ್ತೇನೆಂದೂ, ಕೇಬಾಡುತ್ತೇನೆಂದೂ, ಈಜಾಡುತ್ತೇನೆಂದೂ ಭಾವಿಸಿದ್ದೆನು. ಒಮ್ಮೊಮ್ಮೆ ನಾನೊಂದು ಮಡಕೆಯೆಂದೂ, ಅದು ನೀರಿನಲ್ಲಿ ಮುಳುಗಿದೆ ಎಂದೂ, ಮತ್ತೆ ನನ್ನೊಳಗೂ ಹೊರಗೂ ಆ ಅಖಂಡ ಸಚ್ಚಿದಾನಂದವು ತುಂಬಿದೆ ಎಂದೂ ಭಾವಿಸುತ್ತಿದ್ದೆನು ''

ಕ್ರಮಶಃ

GREETINGS.

The Directors, Officers and staff of the CANARA BANK, LIMITED, join in sending you this message of appreciatiom for your goodwill and patronage during the last year We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD 1906.

The Canara Banking Corporation Ltd.

(Incorporated in British India)

Head Office: UDIPI

Estd. 1906

Applications are invited for the posts of Agents and Accountants in the Corporation to serve in branches outside the District Selected candidates will have to undergo a probationery course as per rules Graduates or persons with previous banking experience or who have passed Banking Examinations will be preferred. Persons who have not passed atleast the S. S. L. C. or other equivalent exminations need not apply.

Applications stating age, qualifications, etc together with 2 good references must reach the undersigned before the 15th February 1943.

Udipi, 21-1-1943 } V R KAMATH, B A, LL B *Manager*

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1 ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಲ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4 ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5 28 ರಾತ್ತಲಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು

6 ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ ಪೆಸೆಂಜರರು ಈ ನಿಯಮಗಳನ್ನು ಅನುಸರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ

JOINT MANAGERS,

The Combined Booking Agency, MANGALORE.

The Joint Booking Office, KODIALBAIL

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಶ್ವಾಸ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯ: ಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರಿಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು;

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.

2. 86 ಫ್ಲಾಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ, ಬಲವನ್ನೂ ಕೊಡುತ್ತದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 19—2—1943 [ಸಂಚಿಕೆ 7]

ಭಾರತದ ಕುರಿತು

ಇವು ಸತ್ಯ ಸಂಗತಿಗಳೊ? ಸುಳ್ಳಿನ ಸಂತೆಗಳೊ?

ಅಮೆರಿಕದ ಕಣ್ಣಿಗೆ ಬ್ರಿಟಿನು ಮಸಿ ಹಚ್ಚಿದೆ!

ಅಮೆರಿಕವನ್ನು ವಂಚಿಸುವಸಲುವಾಗಿ ಬ್ರಿಟಿಷ್ ಪ್ರಚಾರ ಖಾತೆಯವರು 'ಭಾರತದ ಬಗ್ಗೆ ಐವತ್ತು ಸತ್ಯಸಂಗತಿ'ಗಳನ್ನು ಪ್ರಕಟಪಡಿಸಿದ್ದಾರೆ! ಅದರ ವಿವರವನ್ನು ಸಾರಾಂಶವಾಗಿ ನಾವು ಕೆಳಗೆ ಕೊಟ್ಟಿರುವೆವು. ವಾಚಕರೇ ಈ ವಿಷಯದಲ್ಲಿ ನಿರ್ಧಾರ ಹೇಳಬೇಕು, ಇವು ಸತ್ಯಸಂಗತಿಗಳೋ, ಸುಳ್ಳಿನ ಸಂತೆಗಳೋ ಎಂದು!

ಭಾರತದ ಸರಕಾರ

(೧) ಯುದ್ಧಾನಂತರ ಭಾರತಕ್ಕೆ ಪೂರ್ಣ ಸ್ವರಾಜ್ಯ ಕೊಡಲಾಗುವುದು (೨) ಯುದ್ಧ ಮುಗಿದ ಕೂಡಲೇ ಭಾರತೀಯರಿಂದ ಚುನಾಯಿತವಾದ ಸಮಿತಿಯು ತಯಾರಿಸಿದ ರಾಜ್ಯಘಟನೆಗನುಸಾರವಾಗಿ ಹೊಸ ರಾಜ್ಯವ್ಯವಸ್ಥೆ ಮಾಡಲಾಗುವುದು (೩) ಆಡಳಿತದ ಎಲ್ಲಾ ಶಾಖೆಗಳಲ್ಲಿಯೂ ಹೆಚ್ಚಾಗಿ ಭಾರತೀಯರೇ ಇದ್ದಾರೆ, ಸ್ಥಳೀಯ ಸರಕಾರದ ಆಡಳಿತ ಅವರ ಸ್ವಾಧೀನವೇ ಇದೆ. (೪) ಪ್ರತಿ ಹನ್ನೊಂದು ಮಂದಿ ನ್ಯಾಯಾಧೀಶರಲ್ಲಿ ಹತ್ತು ಮಂದಿ ಭಾರತೀಯರೇ, ಒಬ್ಬ ಬ್ರಿಟಿಷ್ ಅಧಿಕಾರಿ ಇದ್ದರೆ ಎಂಟು ಮಂದಿ ಭಾರತೀಯ ಅಧಿಕಾರಿಗಳಿದ್ದಾರೆ ಸಿವಿಲ್ ಹಾಗೂ ವೈದ್ಯಕೀಯ ಖಾತೆಯಲ್ಲಿ ಪ್ರತಿಯೊಬ್ಬ ಬ್ರಿಟಿಷನಿಗೆ ೩೦ ಮಂದಿ ಭಾರತೀಯರಿದ್ದಾರೆ. ಎಂಜನಿಯರಿಂಗ್ ಇಲಾಖೆಯಲ್ಲಿ ಪ್ರತಿ ಬ್ರಿಟಿಷನಿಗೆ ೧೪ ಮಂದಿ ಭಾರತೀಯರು (೫) ರಕ್ಷಣೆ, ವಿದೇಶಾಂಗ ನೀತಿ, ಸುಂಕ, ತೆರಿಗೆ, ಭಾರತ ಸಂಸ್ಥಾನಗಳೊಡನೆ ಸಂಬಂಧ, ಅಂಚೆ ಮತ್ತು ತಂತಿ, ಆದಾಯ ತೆರಿಗೆ, ಹಣ ಮತ್ತು ನಾಣ್ಯ ನಿರ್ಮಾಣ, ಸಿವಿಲ್ ಕಾನೂನು, ಈ ವಿಷಯಗಳಲ್ಲಿ ಭಾರತದ ಕೇಂದ್ರ ಸರಕಾರವೇ ವ್ಯವಹರಿಸುತ್ತದೆ (೬) ಕೇಂದ್ರ ಶಾಸನ ಸಭೆಯಲ್ಲಿ ಎರಡು ಅಂಗಗಳಿದ್ದು, ಕೌನ್ಸಿಲ್ ಓಫ್ ಸ್ಟೇಟ್‌ನ ೫೪ ಮಂದಿಯಲ್ಲಿ ೩೨ ಮಂದಿ ಭಾರತೀಯರಿಂದಲೇ ಚುನಾಯಿತರಾದವರೂ, ಲೆಜಿಸ್ಲೇಟಿವ್ ಎಸೆಂಬ್ಲಿಯ ೧೪೧ ಮಂದಿಯಲ್ಲಿ ೧೦೨ ಭಾರತೀಯರಿಂದಲೇ ಚುನಾಯಿತರಾದವರಿರುವರು. (೭) ವೈಸರಾಯ್ ಎಕ್ಸಿಕ್ಯುಟಿವ್ ಕೌನ್ಸಿಲಿನ ೧೫ ಮಂದಿಯಲ್ಲಿ ೧೧ ಮಂದಿ ಭಾರತೀಯರು, ರಕ್ಷಣೆ, ಕೂಲಿಗಾರ ವಿಚಾರ, ವಾಣಿಜ್ಯ, ಸಿವಿಲ್ ರಕ್ಷಣೆ, ಆರೋಗ್ಯ ಮತ್ತು ಭೂಕಂದಾಯ, ಅಂಚೆ ಮತ್ತು ರೇಡಿಯೋ, ಸಮುದ್ರದಾಚೆಯ ಭಾರತೀಯರ ಯೋಗಕ್ಷೇಮ, ಕಾನೂನು ಈ ಆಡಳಿತಗಳೆಲ್ಲಾ ಭಾರತೀಯರ ಕೈಯಲ್ಲಿಯೇ ಇದೆ. (೮) ಎಲ್ಲಾ ಬಗೆಯ ಆಡಳಿತ ವಿಷಯದಲ್ಲಿಯೂ ಮಂತ್ರಿಮಂಡಳದ ಬಹುಮತದ ನಿರ್ಣಯಕ್ಕೆ ವೈಸರಾಯರು ಒಪ್ಪಲೇಬೇಕು ಅವರಿಗೆ ವಿಶೇಷಾಧಿಕಾರವಿದ್ದರೂ ಅದನ್ನು ೧೯೩೭ರಿಂದ ಉಪಯೋಗಿಸಿಲ್ಲ. ಉದಾಹರಣೆ ಗಾಂಧಿಜಿ ಬಂಧನ, ಚಳವಳ ಮರ್ದನೆಗಳ ವಿಚಾರವು ಮಂತ್ರಿಮಂಡಳದ ಸಭೆಯಲ್ಲಿಯೇ ನಿರ್ಣಯವಾಯಿತು (೯) ಬ್ರಿಟಿಷ ಭಾರತದ ೧೧ ಪ್ರಾಂತಗಳೂ ೧೯೩೭ರಿಂದ ಸ್ವತಂತ್ರಾಡಳಿತವನ್ನು ಅನುಭವಿಸುತ್ತವೆ. (೧೦) ಭಾರತದಲ್ಲಿ ಒಟ್ಟು ೫೬೨ ಸಂಸ್ಥಾನಗಳಿವೆ (೧೧) ಪ್ರತಿ ಸಂಸ್ಥಾನದಲ್ಲೂ ಭಾರತೀಯ ರಾಜರೇ ಇದ್ದಾರೆ. (೧೨) ಬ್ರಿಟಿಷ್ ಭಾರತದಲ್ಲಿ ಸ್ತ್ರೀಯರಿಗೆ ಮತಸ್ಥಾನ ಹಕ್ಕಿದೆ. ಶಾಸನ ಸಭೆಗಳಲ್ಲಿ ಸ್ತ್ರೀ ಸದಸ್ಯರಿದ್ದಾರೆ ನೆಹರು ಸೋದರಿ ಮಂತ್ರಿಗಳಾಗಿದ್ದರು, ಬೇಗಂ ಶಾನವಾಜ್ ಎಂಬ ಮಹಿಳೆ ರಾಷ್ಟ್ರೀಯ ರಕ್ಷಣಾ ಮಂಡಳದ ಸದಸ್ಯೆ (೧೩) ಭಾರತದಲ್ಲಿ ಸಂಪೂರ್ಣ ಮತಧರ್ಮ ಸ್ವಾತಂತ್ರ್ಯವಿದೆ. (೧೪) ಕಾಂಗ್ರೆಸ್ ಎಂಬುದು ಒಂದು ರಾಜಕೀಯ ಪಕ್ಷ ಮಾತ್ರ ಅಮೆರಿಕದ ಕಾಂಗ್ರೆಸಿನಂತಲ್ಲ, ಅದು ವೈಸರಾಯ್ ಲಾರ್ಡ ಡಫರಿನ್ನರ ಸೂಚನೆಯಂತೆ ೧೮೮೫ರಲ್ಲಿ 'ಇಂಡಿಯನ್ ನೇಶನಲ್ ಕಾಂಗ್ರೆಸ್' ಎಂದು ಪ್ರಸಿದ್ಧವಾಯಿತು.

ಭಾರತದ ಜನರು

(೧೫) ಜಗತ್ತಿನ ಜನ ಸಂಖ್ಯೆಯಲ್ಲಿ ಐದನೆ ಒಂದಂಶ ಭಾರತದ ಜನತೆ ಒಟ್ಟು ೩೮೮,೦೦೦,೦೦೦. (೧೬) ಇವರಲ್ಲಿ ಕಾಲು ಭಾಗದಷ್ಟು ಮಂದಿ ಬ್ರಿಟಿಷ್ ಪ್ರಜೆಗಳೆಲ್ಲ. ತಮ್ಮದೇ ಸಂಸ್ಥಾನಗಳ ರಾಜರ ಅಧೀನ (೧೭) ಬ್ರಿಟಿಷ್ ಭಾರತದ ಹನ್ನೊಂದು ಪ್ರಾಂತಗಳಲ್ಲಿ ೧೯೫,೮೨೬,೦೦೦ ಮಂದಿ ಭಾರತೀಯರು ಬ್ರಿಟಿಷ್ ಪ್ರಜೆಗಳು. (೧೮) ಭಾರತದಲ್ಲಿ ಒಟ್ಟು ೧೦೦,೦೦೦ಕ್ಕೆ ಮೀರಿದ ಜನ ಸಂಖ್ಯೆಯುಳ್ಳ ನಗರಗಳು ೫೬. (೧೯) ಜನತೆಯಲ್ಲಿ ಶೇಕಡಾ ೮೯ ಭಾಗ ಹಳ್ಳಿಯವರು (೨೦) ಜನತೆಯಲ್ಲಿ ಶೇಕಡಾ ೬೬ ಹಿಂದುಗಳು ಶೇ. ೨೨ ಮುಸಲ್ಮಾನರು. (೨೧) ಭಾರತದಲ್ಲಿ ೨೪ ವಿವಿಧ ಭಾಷೆಗಳಿವೆ ವಿದ್ಯಾವಂತ ಭಾರತೀಯರಿಗೆ ತಿಳಿವ ಭಾಷೆ ಇಂಗ್ಲಿಷ್.

ಭಾರತದ ಆರ್ಥಿಕ ಸ್ಥಿತಿ

(೨೨) ಯಾವುದೇ ರೀತಿಯಿಂದ ಭಾರತ ಬ್ರಿಟನಿಗೆ ತೆರಿಗೆ ಕೊಡುವುದಿಲ್ಲ (೨೩) ಭಾರತದ ರಕ್ಷಣೆಗಾಗಿ ಬ್ರಿಟನು ಬೆಲೆ ಪಡೆಯದೆ ೧೨೦,೦೦೦,೦೦೦ ಡಾಲರು ಬೆಲೆಯ ಉಪಕರಣ ಕೊಡುತ್ತಿದೆ (೨೪) ೧೯೨೧ರಿಂದ ಭಾರತಕ್ಕೆ ಆರ್ಥಿಕ ವ್ಯವಸ್ಥೆಯ ಸ್ವಾತಂತ್ರ್ಯವಿದೆ ಬ್ರಿಟನು ಅಥವಾ ಇತರ ದೇಶಗಳಿಂದ ಬರುವ ಮಾಲುಗಳ ಮೇಲೆ ಸುಂಕ ಹೇರುವ ಅಧಿಕಾರವಿದೆ (೨೫) ಈ ಮೊದಲು ಬ್ರಿಟಿಷ್ 'ಇನ್‌ವೆಸ್ಟರ್'ಗಳ ಕೈಯ್ಯಲ್ಲಿದ್ದ ರಕ್ಷಣಾ ಪತ್ರಗಳಲ್ಲಿ ಈಗ ಶೇಕಡಾ ೭೫ರಷ್ಟು ಭಾರತೀಯರ ಕೈಯ್ಯಲ್ಲಿದೆ ಯುದ್ಧ ಮುಗಿವುದರೊಳಗಾಗಿ ಎಲ್ಲಾ ರಕ್ಷಣಾಪತ್ರಗಳೂ ಭಾರತೀಯರ ಕೈ ಸೇರುವವು. (೨೬) ಕಳೆದ ಇಪ್ಪತ್ತು ವರ್ಷಗಳಿಂದ ಭಾರತದ ಬಂಡವಾಳ ಮತ್ತು ಕೈಗಾರಿಕೆ ಬೆಳೆದಿದೆ. (೨೭) ಇಡೀ ಬ್ರಿಟಿಷ್ ಸಾಮ್ರಾಜ್ಯ ಮತ್ತು ಸಂಯುಕ್ತಸಂಸ್ಥಾನದಲ್ಲೇ ದೊಡ್ಡ ಉಕ್ಕಿನ ಕಾರ್ಖಾನೆ (ತಾತಾ) ಭಾರತದಲ್ಲಿದೆ. ಇದು ಪೂರ್ಣ ಭಾರತೀಯ ಭಂಡವಾಳ.

ಯಂತ್ರ ಸಮೂಹಾಂಗ

(೨೮) ಹಿಂದೆ ಕ್ಷಾಮ ಬರುತಿತ್ತು, ಈಗ ರೈಲ್ವೆ ಮೊದಲಾದ ವ್ಯವಸ್ಥೆಯಾಗಿ ಅದಿಲ್ಲ. (೨೯) ಭಾರತದ ನೀರಾವರಿ ವ್ಯವಸ್ಥೆ ಚೆನ್ನಾಗಿದೆ. (೩೦) ಸರಕಾರದ ಸ್ವಾಮಿತ್ವದಲ್ಲಿರುವ ಭಾರತೀಯ ರೈಲ್ವೆಗಳ ವ್ಯವಹಾರ ದೊಡ್ಡದು. ಇವುಗಳಲ್ಲಿ ೭೦೦,೦೦೦ ಮಂದಿ ಕೆಲಸಗಾರರಿದ್ದಾರೆ ಇದರ ಆದಾಯಾಂಶವನ್ನು ಸರಕಾರವು ತೆಕೊಳ್ಳುವುದರಿಂದ ತೆರಿಗೆಗಾರನ ಹೊರೆ ಇಳಿದಿದೆ. (೩೧) ಕೈಗಾರಿಕೆಯಲ್ಲಿ ಭಾರತ ಜಗತ್ತಿನಲ್ಲಿ ಎಂಟನೆ ಸ್ಥಾನ ಪಡೆದಿದೆ. (೩೨) ರಿಜಿಸ್ಟರಾದ ಟ್ರೇಡ್ ಯೂನಿಯನ್‌ಗಳ ಸಂಖ್ಯೆ ಹೆಚ್ಚಿದೆ. (೩೩) ತರುಣ ಭಾರತೀಯರು ಲಾರ್ಡ ಬೆವಿನರ ಯೋಜನೆಗನುಸಾರ ಇಂಗ್ಲೆಂಡಿಗೆ ಹೋಗಿ ಕೈಗಾರಿಕೆ ಶಿಕ್ಷಣ ಪಡೆಯುತ್ತಾರೆ. (೩೪) ಭಾರತದಲ್ಲಿ ಸಹಕಾರ ಸಂಘಗಳಿವೆ

ಭಾರತದ ಯುದ್ಧೋದ್ಯಮ

(೩೫) ಭಾರತವು ಪೂರ್ವದ ರಕ್ಷಣಾ ಕೇಂದ್ರ, ರಶ್ಯಚೀನಗಳ ಸರಬರಾಜ ಮಾರ್ಗ (೩೬) ಭಾರತೀಯ ಸೈನಿಕರು ೩೦ದು ಹೆಚ್ಚಿದ್ದಾರೆ; ತಾವಾಗಿಯೇ ಸೈನ್ಯಕ್ಕೆ ಸೇರುತ್ತಾರೆ. (೩೭) ಎಲ್ಲಾ ಯುದ್ಧರಂಗಗಳಲ್ಲೂ ಬ್ರಿಟಿಷ್ ಭಾರತೀಯ ಸೈನಿಕರು ಸರಿ ಸಮಾನತೆಯಿಂದಿದ್ದಾರೆ (೩೮) ಭಾರತದ ನೌಕಾ ಪಡೆ ರಣರಂಗದಲ್ಲಿ ಅತುಳ ಸಾಹಸ ಪ್ರದರ್ಶಿಸಿದೆ. (೪೦) ಮಿತ್ರ ಪಕ್ಷದ ವರ್ತಕ ಹಡಗಗಳಲ್ಲಿ ೪೦,೦೦೦ ಭಾರತೀಯರಿದ್ದಾರೆ. (೪೧) ರಾಯಲ್ ಏರ್ ಫೋರ್ಸ ಪಡೆಯಲ್ಲದೆ ಭಾರತದಲ್ಲಿ ೧೦ ಭಾರತೀಯ ವಿಮಾನ ತಂಡಗಳಿವೆ ಇವುಗಳಲ್ಲಿ ಬಹುಮಂದಿ ಭಾರತೀಯರೇ (೪೨) ತನಗೆ ಬೇಕಾದ ಯುದ್ಧ ಸಾಮುಗ್ರಿಗಳಲ್ಲಿ ಶೇಕಡಾ ೯೦ರಷ್ಟು ಭಾರತವೇ ನಿರ್ಮಿಸುತ್ತದೆ. (೪೩) ಸೈನಿಕರಿಗೆ ಕಂಬಳಿ, ಬಟ್ಟೆ, ಸಮವಸ್ತ್ರಗಳನ್ನು ಒದಗಿಸುತ್ತದೆ (೪೪) ಯುದ್ಧಕಾಲಕ್ಕೆ ಬೇಕಾಗುವ ಕುಶಲ ಕೆಲಸಗಾರರ ಸಲುವಾಗಿ ೧೯೪೦ರಿಂದು ಕಡ್ಡಾಯ ರಾಷ್ಟ್ರಸೇವೆಯ ನಿಬಂಧನೆ ಜಾರಿಮಾಡಿದ್ದು, ಈಗ ೪೮,೦೦೦ ಮಂದಿ ಶಿಕ್ಷಣ ಹೊಂದಿದ್ದಾರೆ. (೪೫) ಭಾರತದಲ್ಲಿ ಮೆಶಿನ್ ಸಾಮುಗ್ರಿ, ಔಷಧ ಮೊದಲಾದ ಹೊಸ ಹೊಸ ಕೈಗಾರಿಕೆ ಬೆಳೆದಿವೆ (೪೬) ನೌಕಾ ನಿರ್ಮಾಣವಾಗುತ್ತಿದೆ. (೪೭) ನ್ಯೂಡಿಲ್ಲಿಯಲ್ಲಿ ಸ್ಥಾಪಿತವಾದ ಈಸ್ಟರ್ನ್‌ಗ್ರೂಪ್ ಸಪ್ಲೈ ಕೌನ್ಸಿಲಿನವರಿಗೆ, ಪೂರ್ವಾರ್ಧಗೋಳಕ್ಕೆ ಒದಗಿಸಬೇಕಾದ ಸಾಮಗ್ರಿಗಳಿಗೆ ಬಹುಭಾಗ ಭಾರತದಿಂದಲೇ ದೊರಕಿದೆ.

ಭಾರತ ಅಮೆರಿಕ

(೪೮) ಅಮೆರಿಕದ ಯುದ್ಧ ಕೈಗಾರಿಕೆಗೆ ಬೇಕಾದ ಅನೇಕ ಸಾಮುಗ್ರಿ ಭಾರತ ದೊರಕಿಸಿದೆ. (೪೯) ಭಾರತ ಮತ್ತು ಅಮೆರಿಕಗಳ ನಡುವೆ ಈಗ ಅಧಿಕಾರೀ ಸಂಬಂಧ ಬಲವಾಗಿದೆ. ಪರಸ್ಪರ ರಾಯಭಾರಿಗಳನ್ನು ಕಳುಹಿಸಿ ಕೊಡಲೊಪ್ಪಿದೆ. (೫೦) ಭಾರತದ ರಕ್ಷಣೆಯಲ್ಲಿ ನೆರವಾಗುವುದಕ್ಕೂ, ದೂರ ಪೂರ್ವದಲ್ಲಿ ಸಂಯುಕ್ತರಾಷ್ಟ್ರಗಳಿಗೆ ಯುದ್ಧ ಸಾಮುಗ್ರಿ ಒದಗಿಸುವುದಕ್ಕೂ ಅಮೆರಿಕವು ಟೆಕ್ನಿಕಲ್ ಮಂಡಳಿಯೊಂದನ್ನು ೧೯೪೨ರಲ್ಲಿ ಭಾರತಕ್ಕೆ ಕಳುಹಿಸಿತು. ಅದರ ನಾಯಕ ಗ್ರೇಡಿ; ಅವರ ಸಲಹೆಗಳನ್ನು ಜಾರಿಗೆ ತರಲಾಗಿದೆ.

ಮಹಾತ್ಮರ ಉಪವಾಸ

— ಸರಕಾರೀ ಪ್ರಕಟಣೆ ಮತ್ತು ಅಧಿಕೃತ ಸುದ್ದಿಗಳು —

— ಬಿಡುಗಡೆಗಾಗಿ ಬಿನ್ನಹಗಳು —

ಮಹಾತ್ಮಾ ಗಾಂಧಿಯವರು ಫೆಬ್ರುವರಿ 10ರಿಂದ ಮೊದಲುಗೊಂಡು ಇಪ್ಪತ್ತೊಂದು ದಿನಗಳ ಉಪವಾಸ ಕೈಕೊಳ್ಳುವ ನಿರ್ಧಾರ ಮಾಡಿದರು. ಈ ಸಲದ ಉಪವಾಸವು ಆಮರಣವಿರದೆ, ಉಪವಾಸದ ಅಗ್ನಿಪರೀಕ್ಷೆಯಿಂದ ಪಾರಾಗುವದಾಗಿರುವುದರಿಂದ ಅವರು ಈ ಉಪವಾಸ ಕಾಲದಲ್ಲಿ ಸಂಬಿ ಹಣ್ಣುಗಳ ರಸವನ್ನು ಸ್ವೀಕರಿಸುವರು.

ಈ ಸಂಬಂಧದಲ್ಲಿ ಗಾಂಧಿಜಿ ಮತ್ತು ವೈಸರಾಯರೊಳಗೆ ದೀರ್ಘ ಪತ್ರ ವ್ಯವಹಾರ ನಡೆಯಿತು. ಈಗ ದೇಶ ಸರ್ವತ್ರ ನಡೆಯುತ್ತಿರುವ ಅತ್ಯಾಚಾರಗಳಿಗೆ ಗಾಂಧಿಜಿ ಹಾಗೂ ಕಾಂಗ್ರೆಸೇ ಕಾರಣವೆಂದು ವೈಸರಾಯರು ಅಭಿಪ್ರಾಯ ಪ್ರಕಟಿಸಿದರು. ಸತ್ಯ ಅಹಿಂಸೆಗಳೇ ತನ್ನ ಧರ್ಮವೆಂದೂ, ಕಾಂಗ್ರೆಸಿಗರಿಗಾದರೂ ಅದೇ ತತ್ವವಿರುವುದೆಂದೂ, ಈಗ ಆಗುತ್ತಿರುವ ಅತ್ಯಾಚಾರಗಳು ತಾನು ಹೇಳಿದ್ದಲ್ಲವೆಂದೂ, ಸರಕಾರವು ಸಂಧಾನಕ್ಕೆ ದಾರಿಯಿಡದೆ, ಒಂದೇ ಸಲ ಎಲ್ಲಾ ಮುಖಂಡರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟು ಜನತೆಯನ್ನು ಉದ್ರೇಕಗೊಳಿಸಿದ ಕಾರಣ ಸರಕಾರವೇ ಇದಕ್ಕೆಲ್ಲಾ ಕಾರಣವೆಂದೂ ಗಾಂಧಿಜಿ ಹೇಳಿದರು ಗಾಂಧಿಜಿಯವರ ವಾದವನ್ನು ವೈಸರಾಯರು ಪುನಃ ಅಲ್ಲಗಳೆದು ಗಾಂಧಿಜಿ ಹಾಗೂ ಕಾಂಗ್ರೆಸಿನ ಮೇಲೆಯೇ ತಪ್ಪು ಸ್ಥಾಪನೆಮಾಡಿದರು. ಇಂಥಾ ಸಂದರ್ಭದಲ್ಲಿ, ತಮಗೆ ಸಂಧಾನಕ್ಕೆ ಆಸ್ಪದವೂ ಕೊಡದೆ, ತಮಗೆ ಜನರಿಗೆ ಯಾವುದೇ ಮಾತನ್ನು ಹೇಳಲೂ ಎಡೆಗೊಡದೆ, ತಮ್ಮನ್ನು ಗೊತ್ತುಗುರಿಯಿಲ್ಲದೆ ಸೆರೆಮನೆಯಲ್ಲಿ ಹಾಕಿರುತ್ತಾ, ದೇಶದಲ್ಲಿ ಆಗುವ ಅತ್ಯಾಚಾರಗಳಿಗೆಲ್ಲಾ ತಾವು ಹಾಗೂ ಕಾಂಗ್ರೆಸು ಹೊಣೆಗಾರರೆಂದೇ ಸರಕಾರವು ಅಭಿಪ್ರಾಯ ಮಾಡಿಕೊಂಡಿರುವಾಗ, ಸತ್ಯಾಗ್ರಹಿಯಾಗಿ ತನಗೆ ಉಪವಾಸ ಮಾಡುವುದನ್ನುಳಿದು ಬೇರೆ ಮಾರ್ಗವಿಲ್ಲವೆಂದು ಗಾಂಧಿಜಿ ಈ ಘೋರ ನಿರ್ಧಾರ ಮಾಡಿದರು

ಗಾಂಧಿಜಿ ಹೀಗೆ ಉಪವಾಸ ತೊಡಗಿದ್ದರ ಮೂಲಕ, ಒತ್ತಾಯಪಡಿಸಿ ಸರಕಾರವನ್ನು ಸಂಧಿಗೆ ಬರುವಂತೆ ಮಾಡುವ ಇಂಥಾ ನೀತಿ ಸರಿಯಲ್ಲವೆಂದೂ, ಈ ಸಲದ ಉಪವಾಸದಲ್ಲಿ ಏನಾದರೂ ಅನಾಹುತವಾದರೆ ಅದಕ್ಕೆ ಗಾಂಧಿಜಿಯೇ ಹೊಣೆಗಾರರೆಂದೂ, ಮಾತ್ರವಲ್ಲದೆ ಉಪವಾಸ ಮುಗಿವ ತನಕ ಅವರನ್ನು ಬಿಡುಗಡೆ ಮಾಡಬಹುದೆಂದೂ ಸರಕಾರ ಸಾರಿತು. ಅದಕ್ಕೆ ಮಹಾತ್ಮರು ತನ್ನದಿದು ಯಾರನ್ನೂ ಒತ್ತಾಯಪಡಿಸುವ ನೀತಿಯಲ್ಲವೆಂದೂ, ಸತ್ಯಾಗ್ರಹಿಯಾಗಿ ತಾನು ತನಗಾದ ಅನ್ಯಾಯಕ್ಕೆ ತನ್ನ ಮನಸಾಕ್ಷಿಯಿಂದಲೇ ನಿರ್ಧಾರ ಮಾಡಿರುವೆನೆಂದೂ, ಶರ್ತಹಾಕಿ ನನ್ನನ್ನು ಬಿಡುಗಡೆ ಮಾಡುವರೆ ತನ್ನಿಷ್ಟವಿಲ್ಲವೆಂದೂ, ಒಂದು ಪಕ್ಷ ಉಪವಾಸ ಮಾಡಿದಾಗ ತನ್ನನ್ನು ಬಿಟ್ಟರೆ ಕೂಡಲೇ ಉಪವಾಸ ನಿಲ್ಲಿಸಿ ತಿರುಗಿ ಬಂಧನದಲ್ಲಿಟ್ಟ ಮೇಲೆ ಅದನ್ನು ಪ್ರಾರಂಭಿಸುವುದಾಗಿಯೂ ತಿಳಿಸಿದರು. ಹೀಗಾಗಿ ಅವರನ್ನು ಶರತ್ತು ಹಾಕದೆ ಬಿಡುಗಡೆ ಮಾಡಿದರೆ ಮಾತ್ರ ಅವರು ಉಪವಾಸ ನಿಲ್ಲಿಸಬಹುದೆಂದು ತಿಳಿದುಬಂದ ಮೇಲೆ ಈಗ ಅವರ ಉಪವಾಸವು ಪೂನದ ಆಗಾಖಾನ ಬಂಗ್ಲೆಯಲ್ಲಿ (ಅವರನ್ನು ಬಂಧಿಸಿಟ್ಟ ಸೆರೆಮನೆಯಲ್ಲಿಯೇ) ಆಗುತ್ತಿದೆ. ಗಾಂಧಿಜಿಯವರು ಕಳೆದ ಆಗಸ್ಟ್ ತಿಂಗಳಲ್ಲಿಯೇ ಸರಕಾರಕ್ಕೊಂದು ಪತ್ರ ಬರೆದು ಹಿಂಸಾ ಕೃತ್ಯಗಳಿಗೆ ತನ್ನ ಒಪ್ಪಿಗೆಯಿಲ್ಲವೆಂದೂ, ಸಂಧಾನಕ್ಕೆ ನಾನು ಸದಾ ಸಿದ್ಧನಿದ್ದೇನೆಂದೂ ತಿಳಿಸಿದ ಪತ್ರವೀಗ ಸರಕಾರದಿಂದ ಪ್ರಕಟಿಸಲ್ಪಟ್ಟಿದೆ. ಉಪವಾಸ ಕಾಲದಲ್ಲಿ ಗಾಂಧಿಜಿಯನ್ನು ಅವರ ಸ್ವಂತ ಡಾಕ್ಟರರು ನೋಡುವಂತೆ ಹಾಗೂ ಅವರ ಸಮೀಪದ ಬಂಧುಗಳು ಸಂದರ್ಶಿಸುವಂತೆ ಸರಕಾರವು ರಿಯಾಯಿತಿ ಮಾಡಿದೆ!

ಉಪವಾಸದ ಅವಧಿಯಲ್ಲಿ ಸರಕಾರವು ಅವರ ಆರೋಗ್ಯದ ಕುರಿತು ಪ್ರಕಟಣೆಗಳನ್ನು ಪ್ರಕಟಿಸುವುದಾಗಿ ತಿಳಿಸಿದೆ. ಇದುವರೆಗೆ ಪ್ರಕಟವಾಡಿದ ಪ್ರಕಟಣೆಗಳಿಂದ ನಾವು ಈ ವಿವರವನ್ನು ಇಲ್ಲಿ ಕೊಟ್ಟಿರುತ್ತೇವೆ. ಗಾಂಧಿಜಿ ಉಪವಾಸದ ಕುರಿತು ವಿವರ ಕೊಡುವರೆ ಪತ್ರಿಕೆಗಳಿಗೆ ನಿರ್ಬಂಧ ಹಾಕಿದ ಕುರಿತು ಡಿಲ್ಲಿಯಲ್ಲಿ ಸೇರಿರುವ ಅಖಿಲಭಾರತ ಪತ್ರಿಕಾ-ಸಂಪಾದಕರ ಸ್ಥಾಯೀ ಸಮಿತಿಯವರು ಗಂಭೀರ ವಿಚಾರ ಮಗ್ನರಾಗಿರುವರೆಂದು ತಿಳಿದುಬರುತ್ತದೆ

ಫೆಬ್ರವರಿ 10ರಂದು, ಅವರನ್ನು ಬಂಧಿಸಿಟ್ಟ ಆಗಾಖಾನ ಬಂಗ್ಲೆಯ ಎಲ್ಲಾ ನಿವಾಸಿಗಳಿಂದೊಡಗೂಡಿದ ಒಂದು ವಿಶೇಷ ಪ್ರಾರ್ಥನೆಯಾದಮೇಲೆ, ಗಾಂಧಿಜಿ ಉಪವಾಸ ತೊಡಗಿದರು. ಪ್ರಾರ್ಥನೆಯ ಮೊದಲು ಗಾಂಧಿಜಿ ತನ್ನ ನಿತ್ಯಾಹಾರವಾದ ಆಡಿನ ಹಾಲು, ಬೇಯಿಸಿದ ತರಕಾರಿ ಮತ್ತು ಹಣ್ಣಿನ ರಸಗಳನ್ನು ಸೇವಿಸಿದರು. ಸಂಜೆಯ ಪ್ರಾರ್ಥನೆಯ ಕಾಲದಲ್ಲಿ

(೩ನೇ ಪುಟಕ್ಕೆ ನಡೆಯುವರಿದೆ)

ತ್ರಿಪೋಲಿಯ ಪತನದಿಂದ
ಇಟಲಿಯ ಸಾಮ್ರಾಜ್ಯ
ಮಣ್ಣು ಮುಕ್ಕಿದಂತಾಯಿತು

ವಿಜಯವು ಸ್ವಾತಂತ್ರ್ಯದ ಹೆಬ್ಬಾಗಿಲು

ಮಿತ್ರರಿಗೆ ವಿಜಯ
ವಾಗುವುದು ಖಂಡಿತ;
ಅದು ಒಡನೆ ಆಗುವಂತೆ
ನಿಮ್ಮ ಪಾಲಿನ ಕೆಲಸ ಮಾಡಿರಿ

P. U.-150 KN.

ಸಮರಭೂಮಿಯ ಸಂಚಾರ

ರಶ್ಯನರು ಖಾರ್‌ಕೋವ್ ಮೇಲೆ ಧಾಳಿಯಿಟ್ಟು ಅದನ್ನು ಸ್ವಾಧೀನಪಡಿಸಿದರ ಅಝೋವ್ ಸಮುದ್ರ ಕರಾವಳಿಯಲ್ಲಿರುವ ಟಗನರಾಗಕ್ಕೂ ಗಂಡಾಂತರವುಂಟಾಗಿದೆ. ಮೋಸ್ಕೋ–ರೋಸ್ಟೋವ್ ರೈಲ್ವೆ ಮಾರ್ಗವನ್ನು ರಶ್ಯನರು ಎರಡು ದಿನ ಹಿಂದೆಯೇ ಕತ್ತರಿಸಿ, ಈಗ ಅವರು ಟಗರಾನ ಸಮೀಪಿಸುತ್ತಿದ್ದಾರೆ. ಪೂರ್ವ ಡೊನೆಟ್ಜ ಭಾಗದಲ್ಲಿ ರಶ್ಯನರು ಅನೇಕ ಹಳ್ಳಿಗಳನ್ನು ಸ್ವಾಧೀನಮಾಡಿಕೊಂಡರು. ಉತ್ತರ ಡಾನೆಟ್ಜನ ಸಮೀಪವಿದ್ದ ಶತ್ರುವಿನ ಭದ್ರಕೋಟೆಯಾದ ನೊವೊಚರಕಸ್ಕವು ಪತನವಾಗಿದೆ. ಯುಕ್ರೇನಿನ ಅನೇಕ ನಗರದ್ವಾರಗಳಲ್ಲಿ ಯುದ್ಧ ಸಾಗುತ್ತಿದೆ. ಓರೆಲಿನಿಂದ ರೊಸ್ಟೋವ್ ವರೆಗೆ ಸುಮಾರು ೪೦೦ ಮೈಲು ದೂರದ ಪ್ರದೇಶದಲ್ಲಿ ಜರ್ಮನರ ಮುರಿದುಬಿದ್ದ ವ್ಯೂಹವನ್ನು ರಶ್ಯನರು ನಿರ್ನಾಮ ಮಾಡುತ್ತಿರುವರು. ಹೀಗೆ ರಶ್ಯನ್ ರಣರಂಗದಲ್ಲಿ ಜರ್ಮನರಿಗೆ ಬಹಳವಾಗಿ ಸೋಲೇ ಪ್ರಾಪ್ತವಾಗುತ್ತಿದೆ.

ರೊಮೆಲ್ ಮುನ್ನುಗ್ಗಿದನು!

ಟುನಿಸಿಯದಲ್ಲಿ ರೊಮೆಲನು ಪ್ರಚಂಡ ಧಾಳಿಯೊಂದನ್ನು ಪ್ರಾರಂಭಿಸಿ ಮುನ್ನುಗ್ಗಿದ ಸುದ್ದಿ ಬಂದಿದೆ. ಅಮೆರಿಕನ್ ವ್ಯೂಹವನ್ನು ಭೇದಿಸಿ ರೋಮೆಲ್ ಮುಂದುವರಿದಿದ್ದಾನೆ. ಇದರಿಂದ ಅಮೆರಿಕನ್ ವಶವಿರುವ ಗೆಫೆಸಾದ ಮೇಲೆ ಗಂಡಾಂತರ ಮೊದಗಿ ಅದು ಪತನವಾಯಿತೆಂದು ತಿಳಿದುಬಂದಿದೆ. ದಕ್ಷಿಣ ಟುನಿಸಿಯವನ್ನು ಸಂಪೂರ್ಣ ತಮ್ಮ ಕೈಯ್ಯಲ್ಲಿಟ್ಟುಕೊಳ್ಳುವುದಕ್ಕಾಗಿ ರೊಮೆಲನದೇ ಸಾಹಸವಾಗಿದೆ. ಅವರನ್ನು ತಡೆಯಲು ಅಮೆರಿಕನರಾದರೂ ಬಹಳ ಪ್ರಯತ್ನಪಡುತ್ತಿರುವರು. ಎರಡೂ ಜರ್ಮನ್ ಬಲಗಳು ಇಲ್ಲಿ ಒಗ್ಗಟ್ಟಾಗಿ ಮುಂದುವರಿಯುತ್ತವೆ. ಅಮೆರಿಕನರಿಗೆ ಬಹಳ ಹಾನಿಯಾಗಿದೆ. ರೊಮೆಲನ ಟೇಂಕ್ ಕಾಳಗ ಭಯಾನಕವಾಗಿದೆ. ಮಧ್ಯ ಟುನಿಶಿಯದಲ್ಲಿ ಜರ್ಮನರ ಪ್ರಾಬಲ್ಯ ಅಷ್ಟೊಂದು ಕಂಡುಬರುವುದಿಲ್ಲ. ರೊಮೆಲನ ಸೈನ್ಯ ಫೈದ ಪ್ರದೇಶದಲ್ಲಿ ಧಾಳಿಯಿಟ್ಟ ಸುದ್ದಿ ಬಂದಿದೆ. ರೊಮೆಲನ ಈ ಪರಾಕ್ರಮವು ಸಾಹಸಮಯವಾದುದು. ಹಿಂದೆ ಲಿಬಿಯದಲ್ಲಿಯೂ ರೊಮೆಲನು ಹೀಗೆಯೇ ಮಾಡಿದನು. ಒಮ್ಮೆ ಮುನ್ನುಗ್ಗಿದನೆಂದರೆ ಮತ್ತೆ ಆತನು ಒಂದರೆಕ್ಷಣವೂ ನಿಲಲೇ ಇಲ್ಲ. ಎಲಾಮೆನ್ ವರೆಗೆ ಆತನಿಗೆ ಒಂದಿಷ್ಟು ತೊಂದರೆ ಸಂಭವಿಸಲಿಲ್ಲ. ಈಗ ಟುನಿಸಿಯದಲ್ಲಿಯೂ ಆತನು ಅದೇ ಧೋರಣವನ್ನು ಕೈಕೊಂಡಿದ್ದಾನೆ. ಜರ್ಮನರ ಬಳಿ ಇಷ್ಟೊಂದು ಶಕ್ತಿಯಿದೆಯೆಂದು ಅಮೆರಿಕನರು ತಿಳಿದಿರಲಿಲ್ಲ. ಆದ್ದರಿಂದಲೇ ರೊಮೆಲನ ಪ್ರಚಂಡ ಧಾಳಿಗೆ ಅಮೆರಿಕನರು ಹಿಂಜರಿಯತೊಡಗಿದ್ದಾರೆ. ಜರ್ಮನರ ಎರಡು ಸೈನ್ಯಗಳು ಎರಡು ದಿಕ್ಕುಗಳಿಂದಲೂ ಧಾಳಿಯಿಡುತ್ತಿವೆ. ಇಷ್ಟರಲ್ಲಿ ಲಂಡನಿನಿಂದ ಒಂದು ಸುದ್ದಿ ಬಂದಿದೆ. ರೊಮಲನಿಗೆ ಶರೀರ ಅಸ್ವಸ್ಥವಿದ್ದು, ಆತನು ಜರ್ಮನಿಗೆ ತೆರಳಿರುವನೆಂದು ರಾಯ್ಟರ್ ವಿಶೇಷ ಸುದ್ದಿಗಾರನು ಬರೆಯುತ್ತಾನೆ! ರೊಮೆಲನ ಮುಂದೊತ್ತುವಿಕೆಯೂ, ಆತನ ಅಸ್ವಸ್ಥದ ವಾರ್ತೆಯೂ ಒಮ್ಮೆಲೇ ಬಂದದ್ದು ವಿಚಿತ್ರವಾಗಿದೆ!

ಚರ್ಚಿಲ್ ಹೇಳಿಕೆ

ಬ್ರಿಟಿಷ್ ಪ್ರಧಾನಿ ಚರ್ಚಿಲರು ಕಾಮನ್ಸ್ ಸಭೆಯಲ್ಲಿ ಕಳೆದವಾರ ಯುದ್ಧ ಪರಿಸ್ಥಿತಿ ಕುರಿತು ಒಂದು ಹೇಳಿಕೆಯಿತ್ತರು. ವೈರಿಯನ್ನು, ಆದಷ್ಟು ತೀವ್ರದಲ್ಲಿ, ನೆಲ, ಜಲ, ಆಕಾಶಗಳಲ್ಲಿ ಎದುರಿಸುವ ವಿಚಾರ ಮಾಡುವುದೂ ವೈರಿಯು ಶರತವಿಲ್ಲದೆ ಶರಣು ಆಗುವಂತೆ ಯುದ್ಧಮಾಡವುದೂ ಕಸಬ್ಲಾಂಕಾ ಪರಿಷತ್ತಿನ ಉದ್ದೇಶವಿತ್ತೆಂದು ಸಾರಿದರು. 'ರಶ್ಯದವರಿಂದ ಈಗ ವೈರಿಯ ರಕ್ತ ಸ್ರಾವವಾಗುತ್ತಿರುವಾಗಲೇ ನಾವೂ ಬಲವಾದ ಪೆಟ್ಟು ಹೊಡೆಯಬೇಕಾಗಿದೆ. ಬ್ರಿಟನು ಹಾಗೂ ಅಮೆರಿಕಗಳು ಸಂರಕ್ಷಿತ ಕರಾವಳಿಗಳಲ್ಲಿ ಧೈರ್ಯದಿಂದಿಳಿದು ಶತ್ರುವನ್ನೆದುರಿಸತಕ್ಕದ್ದಿದೆ. ಅದಕ್ಕೆ ಬೇಕಾದ ಸಕಲ ಸಿದ್ಧತೆ ಮಾಡಬೇಕಾಗಿದೆ' ಎಂದರು. ಆ ಮೇಲೆ ಯುಬೋಟುಗಳ ಹಾವಳಿಯ ವಿಷಯವನ್ನೆತ್ತಿ, ಬ್ರಿಟಿಷ್ ಹಾಗು ಅಮೆರಿಕನ್ ಸರಕಾರಗಳು ಅವುಗಳನ್ನು ನಿರ್ಮೂಲಗೊಳಿಸುವಲ್ಲಿ ಕೈಕೊಂಡ ಸಾಧನೆಯನ್ನು ವಿವರಿಸಿ, ಜರ್ಮನಿಯನ್ನು ಇದಿರಿಸಿದಂತೆ ಜಪಾನನ್ನೂ ಸದೆ ಬಡೆಯುವ ವಿಷಯವಾಗಿ ಮಾತನಾಡಿದರು, 'ಜಪಾನರ ಮೇಲೆ ನಿರ್ಣಾಯಕ ಯುದ್ಧ ಹೂಡುವ ಮೊದಲು ಜರ್ಮನರನ್ನು ಸೋಲಿಸಬೇಕು; ಆ ಮೇಲೆ ನಮ್ಮ ಸೈನ್ಯವು ಪೂರ್ವಕ್ಕೆ ಸಾಗಿ ಜಪಾನನನ್ನು ಶರತಹಾಕದೆ ಶರಣು ಮಾಡುವವರೆಗೆ ಸದೆಬಡೆಯಬೇಕು' ಎಂದರು. ಗುಡಾಲಕನಾಲ ಹಾಗೂ ನ್ಯೂಗಿನಿಯಲ್ಲಿ ಸಿಕ್ಕಿದ ವಿಜಯದ ಕುರಿತು ಅಭಿನಂದಿಸಿದರು 'ಸದ್ಯದಲ್ಲಿ ಜಪಾನರ ನಮ್ಮ ಯುದ್ಧವು ಭಾರತದ ಚಟುವಟಿಕೆಗಳಿಗೆ ಸಂಬಂಧಿಸಿದೆ; ಏಶ್ಯದ ನಮ್ಮ ಚಟುವಟಿಕೆ ಬರ್ಮಕ್ಕೆ ಸಂಬಂಧಿಸಿದೆ. ಬರ್ಮ ರಸ್ತೆಯನ್ನು ತೆರೆದು ಚೀನಕ್ಕೆ ಸಹಾಯ ಮಾಡುವುದು ನಮ್ಮ ಕರ್ತವ್ಯವಾಗಿದೆ!' ಎಂದರು.

ಟರ್ಕಿಯ ವಿಷಯ ಮಾತನಾಡುತ್ತಾ ಅದನ್ನು ತೊಂದರೆಯಲ್ಲಿ ಹಾಕುವುದು ನಮ್ಮ ಉದ್ದೇಶವಿಲ್ಲವೆಂದೂ, ಆದರೆ ಟರ್ಕಿ ವಿಪತ್ತಿನಲ್ಲಿ ಸಿಕ್ಕಿದರೆ ಬ್ರಿಟನು ಅಮೆರಿಕಗಳೂ ವಿಪತ್ತಿಗೀಡಾಂತೆಯೇ ಎಂದೂ, ಟರ್ಕಿ ನಮ್ಮ ಮಿತ್ರರಾಷ್ಟ್ರವಿರುವುದರಿಂದ, ಅದರ ಪ್ರದೇಶ ಹಕ್ಕುಹಿತ್ತ ಬಾಧ್ಯತೆಗಳನ್ನು ಕಾಪಾಡುವುದು ನಮ್ಮ ಕರ್ತವ್ಯವೆಂದೂ ನುಡಿದರು. ಆ ಮೇಲೆ ಆಫ್ರಿಕದ ಜಯದ ಕುರಿತೂ ಹೆಗ್ಗಳಿಕೆಯನ್ನು ಹೇಳಿದರು. ಹೀಗೆ ಸಮರ ಸಂಗತಿಯ ಕುರಿತು ಚರ್ಚಿಲರು ಹೇಳಿಕೆಯಿತ್ತು, ಇನ್ನು ಮುಂದಿನ ಮಿತ್ರರಾಷ್ಟ್ರಗಳ ಧೋರಣೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಒಂದು ಎದ್ದು ತೋರುವ ವಿಷಯವೆಂದರೆ, ಯೂರೋಪಿನ ಯುದ್ಧ ಮೊದಲು, ಏಶ್ಯದ ಯುದ್ಧ ಮತ್ತೆ ಎಂಬದು. ಚರ್ಚಿಲರು ಹಿಂದಿನಿಂದಲೇ ಈ ಕುರಿತು ಒತ್ತಿ ಹೇಳುತ್ತಿದ್ದಾರೆ. ಯೂರೋಪಿನ ಶಾಂತಿ ಸಮ್ಮೇಳನವಾದ ನಂತರ ಏಶ್ಯದ ಶಾಂತಿ ಸಮ್ಮೇಳನವೆಂದೂ ಹಿಂದೆ ನುಡಿದಿದ್ದರು. ಯೂರೋಪು ಏಶ್ಯಗಳ ಯುದ್ಧನೀತಿಯಲ್ಲಿ ಹೀಗೆ ಬ್ರಿಟಿಷ್ ಪ್ರಧಾನರು ದ್ವಿವಿಧ ಧೋರಣೆಯಿಟ್ಟುಕೊಳ್ಳುವದು ಯುಕ್ತವೇ ಎಂಬ ಬಗ್ಗೆ ಕೆಲವರು ಸಂದೇಹ ಪಡದೆ ಇಲ್ಲ!

ಬಿಸಿಬಿಸಿ ಸುದ್ದಿಗಳು

ರಶ್ಯನರು ಖಾರ್ಕೋವನ್ನು ಆಕ್ರಮಿಸಿಕೊಂಡರು; ಜರ್ಮನರನ್ನು ಅಲ್ಲಿಂದ ಹೊಡೆದೋಡಿಸಲಾಯಿತು. ಇದು ರಶ್ಯದಲ್ಲಿ ಜರ್ಮನರಿಗಾದ ಮಹತ್ವದೊಂದು ಪರಾಜಯವಾಗಿದೆ. ಕುರ್ಸ್ಕದಿಂದ ರೊಸ್ಟೋವ್ ವರೆಗೆ ಜರ್ಮನರು ಹಿಂದೆ ಸರಿಯುತ್ತಿದ್ದಾರೆ. ಓರೆಲದಿಂದ ಆಗ್ನೇಯಕ್ಕಿರುವ ಜರ್ಮನರ ಕೆಲವು ಭದ್ರ ಸ್ಥಾನಗಳನ್ನು ಭೇಧಿಸಲಾಗಿದೆ. ಟುನಿಶಿಯದಲ್ಲಿ ರೊಮ್ಮೆಲನು ಸುಮಾರು [illegible] ಟ್ಯಾಂಕುಗಳೊಡನೆ ಒಂದು ದಿನ ಹೋರಾಡಿ, ಬೆಯುಟ್ಲಾ, ಜೆಲ್ಮಾ, ಲೆಸೌಡಾ ಮಾರ್ಗವಾಗಿ ಮುನ್ನುಗ್ಗಿದನು. ಉತ್ತರ ದಕ್ಷಿಣ ಕರಾವಳಿಯನ್ನು ಳಿಸಿಕೊಳ್ಳಲು ಮತ್ತು ಉತ್ತರ ಟುನಿಸಿಯಾದಲ್ಲಿರುವ ಬ್ರಿಟಿಷ್ ಸಶಸ್ತ್ರ ದಳಗಳಲ್ಲಿ ಕೆಲವನ್ನು ದಕ್ಷಿಣಕ್ಕೆ ಎಳೆಯಬೇಕೆಂತಲೂ ಹೀಗೆ ಎರಡು ಉದ್ದೇಶದಿಂದ ಜರ್ಮನರು ಈ ಧಾಳಿ ಕೈಕೊಂಡಿರುವರೆಂದು ತಿಳಿದು ಬರುತ್ತದೆ. ಅಮೆರಿಕನರೀಗ ಪ್ರತಿ ಧಾಳಿ ಸುರುಮಾಡಿದ್ದಾರೆ. ಡಚ್ ಈಸ್ಟ್ ಇಂಡೀಸಿನಲ್ಲಿರುವ ಬೋರ್ನಿಯೋ ಎಣ್ಣೆ ಕಣಿಯನ್ನು ಜಪಾನರು ಉಪಯೋಗಿಸುತ್ತಿದ್ದಾರೆ. ಮಹಾತ್ಮ ಗಾಂಧಿಯವರ ಉಪವಾಸದ ಬಗೆ ಅಮೇರಿಕವು ಇತ್ತೀಚೆಗೆ ವಿಶೇಷ ಗಮನ ಕೊಡುತ್ತಿದೆಯೆಂದು ತಿಳಿದುಬರುತ್ತದೆ. ಭಾರತದಲ್ಲಿ ಬಹುಮಂದಿ ಅಮೆರಿಕನ್ ಸೈನಿಕರಿದ್ದು ಸದ್ಯ ಭಾರತದ ಗಂಡಾಂತರವನ್ನು ತಪ್ಪಿಸಲು ಅಮೆರಿಕ ಹಾರೈಸುವುದು ಸಹಜವಾಗಿದೆ.

ಉತ್ತಮ ನಂಬಿಗೆಯ ಗಡಿಯಾರಗಳು

ಬೇರೆ ವಾಚುಗಳಿಗಿಂತ ವೆಸ್ಟ್ ಎಂಡ್ ವಾಚುಗಳು ಉತ್ತಮವೆಂಬುದಕ್ಕೆ ಅನುಭವವೇ ಸಾಕ್ಷಿ. ಯಾವುದೇ ದೃಷ್ಟಿಯಿಂದ ನೋಡಿದರೂ ಅವು ಯಾವ ಇತರ ವಾಚುಗಳಿಗೂ ಕಡಿಮೆಯವಲ್ಲ. ಏಕೆಂದರೆ ಅವುಗಳು ಜಗತ್ತಿನಲ್ಲಿ ಎಲ್ಲಾ ಪ್ರಸಿದ್ಧವಾದ ಉತ್ತಮ ಸಾಮುಗ್ರಿಗಳಿಂದ ತಯಾರಿಸಿದವುಗಳು.

ನಿಮ್ಮ ರುಚಿ ಮತ್ತು ಕಿಸೆಗೆ ಸರಿಯಾಗುವ ವೆಸ್ಟ್‌ಎಂಡ್ ವಾಚಿನ ಧರ್ಮಾರ್ಥ ಕೆಟಲಾಗಿಗೆ ಬರೆಯಿರಿ.

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಯಿ— — —ಕಲ್ಕತ್ತ

WEST END WATCH CO.
BOMBAY " CALCUTTA

ಸ್ವದೇಶಾಭಿಮಾನಿ

ತಾರೀಕು 19—2—1943

'ಇನ್‌ಫ್ಲೇಶನ್'

ಇಂದಿನ ಯುದ್ಧದೊಂದು ಅನಾಹುತ ಇದು; ಸಾಮಗ್ರಿಗಳಿಗೆ ಈಗೀಗ ಬೆಲೆ ಹೆಚ್ಚಾಗುತ್ತಾ ಹೋಗುವುದರ ಗುಟ್ಟೇನು? ಸರಕಾರವೇನೋ ವ್ಯಾಪಾರಿಗಳ ಮೇಲೆ, ವ್ಯಾಪಾರಿಗಳೇನೋ ಉತ್ಪಾದಕರ ಮೇಲೆ, ಬಡಜನರು ಅದೃಷ್ಟದ ಮೇಲೆ ಭಾರ ಹಾಕಿ ಕುಳಿತಿದ್ದಾರೆ. ಆದರೆ ಸರಕಾರದ ಆರ್ಥಿಕ ಧೋರಣೆಯಲ್ಲಿರುವ ದೋಷವೇ ಇದಕ್ಕೆ ಕಾರಣವಾಗಿದೆಯೆಂದು ಇತ್ತೀಚೆಗೆ ಅರ್ಥ ಶಾಸ್ತ್ರಜ್ಞರು ಸಿದ್ಧಪಡಿಸಿರುವರು. ಉತ್ಪತ್ತಿಗೆ ಸರಿಯಾಗಿ, ಬೆಳವಣಿಗೆಯಾಗದೆ ನೋಟುಗಳು ಹೆಚ್ಚುತ್ತಾ ಹೋಗುವುದಕ್ಕೆ 'ಇನ್‌ಫ್ಲೇಶನ್' ಎನ್ನುವರು. ಈ ರೀತಿ ಚಲನ ನಾಣ್ಯಗಳು ಹೆಚ್ಚುತ್ತಾ ಹೋಗುವುದರಿಂದ ಬಹಳ ಕಡಿಮೆ ಸರಕುಗಳಿಗೆ ಆ ಹಣಗಳನ್ನೆಲ್ಲಾ ಕೊಡಬೇಕಾಗುತ್ತದೆ. ಹಾಗಾಗಿಯೇ ಸಾಮಗ್ರಿಗಳ ಧಾರಣೆ ದಿನದಿಂದ ದಿನಕ್ಕೆ ಏರುತ್ತಿದೆ. ಎಂದರೆ, ಇದರಿಂದ ಹಣದ ಬೆಲೆ ಕಡಿಮೆಯಾದಂತಾಯಿತು. ಕೆಲಕಾಲದ ವರೆಗೆ ಇದೇ ಪರಿಸ್ಥಿತಿ ಉಳಿದರೆ ಈ 'ಇನ್‌ಫ್ಲೇಶನ್' ದೇಶಕ್ಕೆ ಘಾತುಕ ಪರಿಣಾಮವನ್ನುಂಟುಮಾಡೀತು! ಭಾರತದಲ್ಲಿ ಕೆಲತಿಂಗಳ ಹಿಂದೆಯೇ ಈ ಪರಿಸ್ಥಿತಿಯುಂಟಾಗಿದೆ. ಅದೀಗ ತೀರಾ ಭಯಾನಕ ಸ್ಥಿತಿಗೆ ಬಂದಿದೆ. ೧೯೩೯ನೇ ಆಗಸ್ಟಿನಲ್ಲಿ ೧೭೭ ಕೋಟಿ ನೋಟು ಚಲಾವಣೆಯಲ್ಲಿದ್ದರೆ ಈಗ ಸುಮಾರು ೬೦೦ ಕೋಟಿಗೆ ಆ ಸಂಖ್ಯೆ ಏರಿದೆ. ಆದರೆ ಅದಕ್ಕನುಸಾರವಾಗಿ ಈಗ ಉತ್ಪತ್ತಿ ಹೆಚ್ಚಿದೆಯೆಂದು ಹೇಳಲು ಸಾಧ್ಯವುಂಟೆ? ಹಾಗಾಗಿ ಸರಕುಗಳಿಗೆ ಧಾರಣೆ ಏರುತ್ತಿದೆ. ಎಂದರೆ ರೂಪಾಯಿ ಬೆಲೆ ತಗ್ಗಿದೆ!

ಇದೇ ಬಗೆಯ ಆರ್ಥಿಕ ಧೋರಣೆಯನ್ನು ಭಾರತ ಸರಕಾರವು ಇನ್ನೂ ಮುಂದುವರಿಸಿದರೆ ತೀರಾ ಗಂಡಾಂತರವಾಗುವುದು. ಹೀಗೆ 'ಇನ್‌ಫ್ಲೇಶನ್' ಉಂಟಾದಾಗಲೇ ಜನರು ಹೆಚ್ಚಿನ ಬೆಲೆ ಕೊಟ್ಟು ಆಹಾರದ ಸಾಮಗ್ರಿಗಳನ್ನು ಸಂಗ್ರಹಿಸುವರು, ಲಾಭದ ದೃಷ್ಟಿಯೂ, ಮುಂದೆ ಹೆಚ್ಚು ಹಣ ಕೊಡಬೇಕಾಗುವುದೆಂಬ ಅಂಜಿಕೆಯೂ ಇದಕ್ಕೆ ಕಾರಣವಾಗುತ್ತದೆ. ಈ ತರದ ಆರ್ಥಿಕ ಧೋರಣೆಯ ಅನರ್ಥವು ಬಡವರಿಗೇ ಹೆಚ್ಚಿನ ಹಾನಿಯನ್ನುಂಟುಮಾಡುತ್ತದೆ. ಸರಕಾರದವರು ಇಲ್ಲಿ ಸರಕುಗಳನ್ನು ಕೊಂಡು, ಸ್ಟರ್ಲಿಂಗ್ ರೂಪದಲ್ಲಿ ಬೆಲೆ ಕೊಡುವರು; ಇದಕ್ಕೆ ಪ್ರತಿಯಾಗಿ ನೋಟುಗಳನ್ನು ಹೊರಡಿಸುವರು. ಸರಕಾರದ ಆರ್ಥಿಕ ನೀತಿಯ ಈ ದೋಷವೇ 'ಇನ್‌ಫ್ಲೇಶನ್'ಗೆ ಮೂಲವಾಗಿದೆ. ಬ್ರಿಟಿಷ್ ಮತ್ತು ಅಮೇರಿಕನ್ ಸರಕಾರದವರು ತಾವು ಕೊಳ್ಳುವ ಸಾಧನಗಳಿಗೆ ಪ್ರತಿಯಾಗಿ ಸರಕುಗಳ ಬೆಲೆಯನ್ನು ರೂಪಾಯಿಗಳಲ್ಲಿ ಕೊಡುವುದೇ ನ್ಯಾಯವಾದುದು. ಆ ಹೊಣೆ ಅವರು ಹೊರಬೇಕು. ಇಲ್ಲವೇ ಬದಲಾಗಿ ಬಂಗಾರ ಕಳುಹಿಸಬಹುದು. ಹೇಗೂ ಈಗ ದೇಶದಲ್ಲಿ ನಿರುಪಯೋಗಿಯಾಗಿರುವ, ಹಣದ ಉಪಯೋಗ ಮಾಡಿಕೊಳ್ಳುವುದಕ್ಕಾಗಿ ರೂಪಾಯಿ ಸಾಲವನ್ನು ತೆಗೆದು ಹೊಸ ಹೊಸ ನೋಟುಗಳನ್ನು ಹೊರಡಿಸುವುದನ್ನು ನಿಲ್ಲಿಸುವುದೇ 'ಇನ್‌ಫ್ಲೇಶನ್' ರೋಗಕ್ಕೆ ಮುಖ್ಯವಾದ ನಿವಾರಣೋಪಾಯವಾಗಿದೆ.

ಗಾಂಧಿಜಿ ಬದುಕಲಿ!

ಮಹಾತ್ಮಾ ಗಾಂಧಿಜಿಯವರು ಇಪ್ಪತ್ತೊಂದು ದಿನಗಳ ಉಪವಾಸ ನಿರ್ಧಾರ ಮಾಡಿರುವ ವಿಷಾದಕರ ವಾರ್ತೆ ಅಖಿಲ ಭಾರತವನ್ನೇ ಚಿಂತಾಮಗ್ನವಾಗಿ ಮಾಡಿದೆ. ದೇಶವಿದೇಶಗಳಿಂದ ಹಲವು ಮಂದಿ ಜನತಾ ಮುಖಂಡರು ಗಾಂಧಿಜಿಯನ್ನು ಶರತವಿಲ್ಲದೆ ಬಿಡುಗಡೆ ಮಾಡಬೇಕೆಂದು ವೈಸರಾಯರಿಗೂ ಚರ್ಚಿಲರಿಗೂ ತಂತಿಗಳನ್ನು ಕಳುಹಿಸುತಿದ್ದಾರೆ. ಗಾಂಧಿಜಿ ಬದುಕಲಿ ಎಂಬುದು ಇಂದು ಎಲ್ಲರ ಹಾರ್ದಿಕ ಹಾರೈಕೆಯಾಗಿದೆ.

ಸರಕಾರವನ್ನು ಒತ್ತಾಯಪಡಿಸುವ ಸಲುವಾಗಿ ತಾನೀ ಉಪವಾಸ ನಿರ್ಧಾರ ಮಾಡಿಲ್ಲವೆಂದು ಗಾಂಧಿಜಿ ಸ್ಪಷ್ಟ ಹೇಳಿದ್ದಾರೆ. ಅದಕ್ಕಾಗಿಯೇ ಸಂಧಾನ ಅಪೇಕ್ಷೆಗಳಾಗಿ ಅವರು ಆ ಮರಣ ಉಪವಾಸ ಕೈಕೊಳ್ಳದೆ ಕೇವಲ ಇಪ್ಪತ್ತೊಂದು ದಿನಗಳ ಅವಧಿಯಿಟ್ಟಿದ್ದಾರೆ. ಆದರೆ ಗಾಂಧಿಜಿಯ ಪ್ರಾಯ, ಶರೀರ ಶಕ್ತಿಗಳನ್ನು ಗಮನಿಸಿದರೆ ಇದೂ ಕೂಡಾ ಸ್ವಲ್ಪ ಕಠಿಣವಾದ ವಿಷಯವಾಗುವುದು. ಗಾಂಧಿಜಿ ಮತ್ತು ವೈಸರಾಯರ ಮಧ್ಯೆ ಒಂದು ಯೋಗ್ಯ ಒಪ್ಪಂದವಾಗಿ ಭಾರತದ ಬಿಕ್ಕಟ್ಟು ಬಗೆಹರಿಯಲಿ ಎಂದು ನಾವು ಹಾರೈಸುವೆವು.

ಸ್ವದೇಶ ಸಮಾಚಾರ

ತಾ. ೧೩ರಂದು ಸರಕಾರವು ಹೊರಡಿಸಿದ ಒಂದು ಪ್ರಕಟಣೆಯಲ್ಲಿ 'ಗಾಂಧಿಜಿಯವರಿಗೆ ನೀರು ಕುಡಿಯುವುದು ಕಷ್ಟವಾಗುತ್ತಿದೆ. ಆದಿತ್ಯವಾರ ಅವರಿಗೆ ಸಮಾಧಾನವಿದ್ದಿಲ್ಲ. ಅವರ ಆರೋಗ್ಯವು ತುಸು ಕೆಟ್ಟಿರುವುದು' ಎಂದು ತಿಳಿಸಲಾಗಿದೆ. ಹೊಸ ದಿಲ್ಲಿಯಲ್ಲಿ ಸೇರಿದ ಕೇಂದ್ರ ಎಸೆಂಬ್ಲಿಯ ಸಭೆಯಲ್ಲಿ ಶ್ರೀ ಮೈತ್ರರು ಗಾಂಧಿಜಿಯನ್ನು ಅನಿರ್ಬಂಧವಾಗಿ ಬಿಡಬೇಕೆಂದು ಒಂದು ಸೂಚನೆ ಮಂಡಿಸಿದರು. ಶ್ರೀಗಳಾದ ಎಂ. ಎಸ್. ಜೋಶಿ, ಸರದಾರ ಸಂತ ಸಿಂಗ, ಡಾ| ಬೆನರ್ಜಿ, ಕೃಷ್ಣ ಮಾಚಾರಿ ಇವರು ಇದಕ್ಕೆ ಬೆಂಬಲ ಕೊಟ್ಟು ವಾದಿಸಿದರು. ಮುಸ್ಲಿಂ ಲೀಗ್ ಸದಸ್ಯರೂ ಇದಕ್ಕೆ ನಿಷೇಧ ತೋರಿಸಲಿಲ್ಲ. ಸರ್ ಸುಲ್ತಾನ್ ಅಹ್ಮದರು ಇದಕ್ಕೆ ಒಣ ಆತ್ಮಸಮರ್ಥನೆ ಮಾಡಿಕೊಂಡರು. ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ಶ್ರೀ ಕಾಲೀಕರರು ಇದೇ ಸೂಚನೆ ತಂದಿದ್ದಾರೆ. ರಾಷ್ಟ್ರೀಯ ಪಕ್ಷದ ಸದಸ್ಯರು ತಂದ ಈ ಸೂಚನೆಗೆ ಲೀಗಿನವರೂ ಬೆಂಬಲ ಕೊಡುವರೆಂದೂ ಜಿನ್ನರ ಸೂಚನೆ ಕಾಯುತ್ತಿದ್ದಾರೆಂದೂ ಸುದ್ದಿಯಿದೆ. ಮುಖಂಡ ಪರಿಷತ್ತಿಗೆ ರಾಜಾಜಿ ಜಿನ್ನರಿಗೆ ಆಮಂತ್ರಣ ಕೊಟ್ಟದ್ದು, 'ಅದೆಲ್ಲಾ ಹಿಂದುಗಳಿಗೆ ಸಂಬಂಧಪಟ್ಟ ವಿಷಯವಾದ್ದರಿಂದ ತಾನು ಬರಲಾಗುವುದಿಲ್ಲವೆಂದು ಅವರು ರಾಜಾಜಿಗೆ ತಿಳಿಸಿದ್ದಾರೆ! ಅಲ್ಲಾ ಭಕ್ಷರೂ ಬರಬಹುದೆಂದು ಗೊತ್ತಾಗಿದೆ.

ಶ್ರೀಮತಿ ದುರ್ಗಾ ಬೆನ್ ಮಹಾದೇವ ದೇಸಾಯಿ, ಅವರ ಮಗ ನಾರಾಯಣ ದೇಸಾಯಿ, ಮತ್ತು ಗಾಂಧಿಜಿ ಮೊಮ್ಮಗ ಕಾನು ಗಾಂಧಿ ಇಷ್ಟು ಮಂದಿಗೆ ಮಹಾತ್ಮರ ಭೇಟಿಯಾಗಲು ಸಮ್ಮತಿ ದೊರತಿದೆ. ಇನ್ನು ಹಲವು ಮಂದಿ ಸಮ್ಮತಿಗೆ ಕಾಯುತ್ತಿದ್ದಾರೆ. ಶ್ರೀ. ಠಕ್ಕರರೂ ಪೂನಕ್ಕೆ ಬಂದಿದ್ದಾರೆ! ಭಾರತದ ಕಮ್ಯೂನಿಸ್ಟ್ ಪಕ್ಷದವರು ಒಂದು ಪ್ರಕಟಣೆ ಹೊರಡಿಸಿ ಗಾಂಧಿಜಿಯ ಬಿಡುಗಡೆ ಮಾಡಬೇಕೆಂದೂ, ಲೀಗು ಇದರ ಸಂಬಂಧವಾಗಿ ಒಮ್ಮತವಾಗಬೇಕೆಂದೂ ಕೇಳಿಕೊಂಡಿದ್ದಾರೆ. ಹಿಂದು ಮಹಾ ಸಭೆಯವರು ಗಾಂಧಿಜಿ ಬಿಡುಗಡೆಯಾಗಬೇಕೆಂದು ಠರಾವು ಮಾಡಿದ್ದಾರೆ. ಲಂಡನಿನಲ್ಲಿರುವ ಭಾರತೀಯ ಮುಖಂಡರು, ರೂಸ್‌ವೆಲ್ಟ್, ಸ್ಟಾಲಿನ್, ಚಿಯಾಂಗ್ ಕೈಶೇಕರಿಗೆ ತಂತಿ ಕಳುಹಿಸಿ ಗಾಂಧಿಜಿ ಉಪವಾಸದ ಸಂದರ್ಭದಲ್ಲಿ ಮಿತ್ರಪಕ್ಷ ಮುಂದಾಳುಗಳು ಮಧ್ಯಸ್ಥಿಕೆಗೆ ಬರಬೇಕೆಂದು ಹಾರೈಸಿರುವರು. ಗಾಂಧಿಜಿ ಉಪವಾಸದ ಸಂಬಂಧ ಲಂಡನಿನಲ್ಲಿರುವ ಬೇರೆಬೇರೆ ಮತ ಜಾತಿಗಳ ಭಾರತೀಯರು ಇಪ್ಪತ್ತನಾಲ್ಕು ತಾಸುಗಳ ಪ್ರಾರ್ಥನೆಯ ಸಭೆಗಳನ್ನು ಜರಗಿಸಿದರು. ಗಾಂಧಿಜಿ ಹಿಂಸಾಕೃತ್ಯವನ್ನು ಒಪ್ಪದೆ ಆಗಸ್ಟ್ ತಿಂಗಳಲ್ಲಿಯೇ ವೈಸರಾಯರಿಗೆ ಪತ್ರ ಬರೆದಿದ್ದು, ಅದನ್ನು ಸರಕಾರವು ಆಗಲೇ ಪ್ರಕಟಿಸಿದ್ದರೆ ಇಷ್ಟೊಂದು ಅನಾಹುತ ಆಗಲಿಕ್ಕಿಲ್ಲವಾಗಿತ್ತೆಂದೂ, ಪ್ರಕಟಿಸಲು ತಡ ಮಾಡಿದುದರ ಕಾರಣವೇನಿತ್ತೆಂದೂ ರಾಜಾಜಿ ಪ್ರಶ್ನಿಸುತ್ತಾರೆ.

ಗಾಂಧಿಜಿ ಉಪವಾಸದ ಸಂಬಂಧ ಲಂಡನಿನ 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆ ಅಗ್ರಲೇಖ ಬರೆಯುತ್ತಾ, ಉಪವಾಸದ ಹೊಣೆ ತನಗಿಲ್ಲವೆಂದು ಸರಕಾರ ಎಷ್ಟು ಹೇಳಿದರೂ, ಕಾಂಗ್ರೆಸು ಮುಖಂಡರ ಬಂಧನದ ನಂತರ ಅನುಸರಿಸಿದ ಕಠಿಣ ಧೋರಣದ ನಿಮಿತ್ತವಾಗಿ ಅವರು ಈಗ ಉಪವಾಸ ಕೈಕೊಳ್ಳುತ್ತಿರುವುದರಿಂದ, ಗಾಂಧಿಜಿಯ ಈ ಉಪವಾಸವು ಭಾರತದ ಆಳವನ್ನು ಕೆದಕಿ ಬಿಡಲು ಸಮರ್ಥವಾಗುವುದು ಎಂದು ಅಭಿಪ್ರಾಯಪಟ್ಟಿದೆ. ಮಹಾತ್ಮರ ಉಪವಾಸದ ಸಂಬಂಧ ಕಾಮನ್ಸ್ ಸಭೆಯಲ್ಲಿ ಪ್ರಶ್ನಿಸಿದಾಗ, ಅಮೆರಿಯವರು ಉಪವಾಸದ ಮೊದಲು ಅವರ ಆರೋಗ್ಯ ಚನ್ನಾಗಿದ್ದಿತೆಂದರು. ಹಾಗೆಯೇ ನೆಹರು ಮತ್ತು ಅವರ ಪುತ್ರಿ ಇಂದಿರಾ ಗಾಂಧಿಯವರ ಆರೋಗ್ಯ ಚನ್ನಾಗಿಲ್ಲದಿದ್ದರೆ ತನಗೆ ವರದಿ ಬರುತ್ತಿತ್ತೆಂದು ತಿಳಿಸಿದರು. ರೂಸ್‌ವೆಲ್ಟರ ರಾಯಭಾರಿ ಫಿಲಿಪ್ಸರು ಮಹಾತ್ಮರನ್ನು ಭೇಟಿ ಮಾಡಲು ಪೂನಕ್ಕೆ ತೆರಳುವರೆಂಬೊಂದು ಸುದ್ದಿಯುಂಟು.

ಸರಕಾರವು ತಾ ೧೬ರಂದು ಪ್ರಕಟಿಸಿದ ಪ್ರಕಟಣೆಯಲ್ಲಿ ಮಹಾತ್ಮಗಾಂಧಿಯವರ ಪ್ರಕೃತಿ ಕಳೆದ ಇಪ್ಪತ್ತನಾಲ್ಕು ತಾಸುಗಳಲ್ಲಿ ಕೆಟ್ಟಿರುವುದೆಂದು ತಿಳಿಸಿದೆ. ಗಾಂಧಿಜಿಯವರಿಗೆ ಓಕರಿಕೆಯಾಗಿದ್ದು ನೀರು ಕುಡಿಯುವುದೂ ಕಷ್ಟವಾಗುತ್ತದೆಯಾಗಿ ಹೇಳಲಾಗಿದೆ. ಡಾ| ಬಿ. ಸಿ. ರೈಯವರು ಬಂದು ಪರೀಕ್ಷಿಸಿ, ಈ ಸಲದ ಉಪವಾಸ ಹಿಂದಿನದಕ್ಕಿಂತ ಕಠಿಣವೆಂದು ಮಾತ್ರ ಹೇಳಿದರಲ್ಲದೆ ಇನ್ನೇನೂ ತಿಳಿಸಲಿಲ್ಲ. ಮಹಾತ್ಮರು ಹಸನ್ಮುಖಿಗಳಾಗಿದ್ದು ಡಾಕ್ಟರೊಡನೆ ಕೆಲ ಹೊತ್ತು ಮಾತನಾಡಿದರು. ಈ ಸಲ ಅವರ ತೂಕ ೭೩ ಪೌಂಡು ಇದ್ದು, ಅದು ಸ್ವಲ್ಪ ಈಗ ಕಡಿಮೆಯಾಗಿದೆ. ಕೇಂದ್ರ ಎಸೆಂಬ್ಲಿಯಲ್ಲಿ ಎರಡು ಸಭೆಗಳಲ್ಲೂ ಮಹಾತ್ಮರು ಬಿಡುಗಡೆ ಮಾಡಬೇಕೆಂಬುದಾಗಿ ಸದಸ್ಯರು ಬಹುವಾಗಿ ವಾದಿಸಿದರೂ, ಸರಕಾರವು ನಿರಾಶಾಜನಕ ಉತ್ತರವಿತ್ತಿದೆ. ತಾ. ೧೯ರಂದು ದಿಲ್ಲಿಯಲ್ಲಿ ಮುಖಂಡರ ಪರಿಷತ್ತು ಸೇರುತ್ತದೆ. ಈ ಸಂದರ್ಭ ಅಖಿಲಭಾರತ ಪತ್ರಿಕಾಕರ್ತರೂ ಸಭೆ ಸೇರಿಸಿದ್ದಾರೆ. ಅವರ ವಿನಂತಿಗೆ ಸರಕಾರವು ಗಮನಕೊಡುವುದೋ ನೋಡಬೇಕು. ಅಷ್ಟೆ, ಸರಕಾರ, ಮೋದಿ ಈ ಮೂವರು ವೈಸರಾಯ್ ಮಂತ್ರಿಮಂಡಳಕ್ಕೆ ರಾಜಿನಾಮೆ ಕೊಟ್ಟ ಸುದ್ದಿ ಬಂದಿದೆ.

ಆಹಾರ ಸಾಮಾಗ್ರಿ ಸಂಗ್ರಹಿಸುವವರಿಗೆ ಎಚ್ಚರಿಕೆ

ಆಹಾರಧಾನ್ಯಗಳ ನಿಯಂತ್ರಣ ಸಂಬಂಧವಾದ ಡಿಫೆನ್ಸ್ ಕಾನೂನಿನ ಇದೇ ತಾ. ೬ರಲ್ಲಿ ಕೆಲವು ತಿದ್ದುಪಡಿಗಳನ್ನು ಇಂಡಿಯಾ ಗಜೇಟಿನಲ್ಲಿ ಪ್ರಕಟಿಸಿದೆ. ಅಕ್ರಮವಾಗಿ ಸಂಗ್ರಹಿಸಿಟ್ಟ ಧಾನ್ಯದವಸಗಳ ಸಂಬಂಧವಾಗಿ ಶಿಕ್ಷೆ ಹಾಗೂ ದಂಡಗಳು ಈ ಮುಂಚೆ ವಿಧಿಸಿರುತ್ತ, ಅದರ ಜತೆಗೆ, ಹಾಗೆ ದಾಸ್ತಾನು ಇಟ್ಟುಕೊಂಡ ದವಸಧಾನ್ಯಗಳನ್ನೇ ಸರಕಾರವು ಸ್ವಾಧೀನಮಾಡುವುದೆಂಬುದು ಈ ಬದಲಾವಣೆಗಳಲ್ಲಿಯ ಒಂದು ಮುಖ್ಯ ವಿಷಯ. ಈ ಹೊಸತರದ ಶಿಕ್ಷೆಯು ರಖಂ ವ್ಯಾಪಾರಿಗಳಿಗೆ ಹಾಗೂ ಚಿಲ್ಲರೆ ವ್ಯಾಪಾರಿಗಳಿಗೂ ಅನ್ವಯವಾಗುತ್ತದೆ.

GREETINGS.

The Directors, Officers and staff of the CANARA BANK, LIMITED, join in sending you this message of appreciation for your goodwill and patronage during the last year. We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD: 1906.

ಬಾವುಗಳನ್ನು ಕೂಡಲೇ ಗುಣಪಡಿಸಿರಿ.

ನೋವನ್ನು ಉಂಟುಮಾಡುವ ವಿಷಕಾರಿ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಬಿಸಿಯಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು

CUTICURA OINTMENT

ಜಿಲ್ಲಾ ಸಮಾಚಾರಗಳು

ಮಂಗಳೂರು

ಗಾಂಧಿಜಿಯನ್ನು ಬಿಡುಗಡೆ ಮಾಡಿರಿ

ಕೆನರಾ ಚೇಂಬರ್ ಓಫ್ ಕಾಮರ್ಸಿನ ಕೇಳಿಕೆ

ಸ್ಥಳೀಯ ಕೆನರಾ ಚೇಂಬರ್ ಓಫ್ ಕಾಮರ್ಸಿನ ಸಭೆಯಲ್ಲಿ, ಮಹಾತ್ಮಾ ಗಾಂಧಿಯವರ ಉಪವಾಸ ವಿಚಾರ ದುಃಖ ಪ್ರದರ್ಶಿಸಲ್ಪಟ್ಟು ಗಾಂಧಿಜಿಯವರನ್ನು ಶರತ್ತ ಹಾಕದೆ ಬಿಡುಗಡೆ ಮಾಡಿ ಇಂದಿನ ರಾಜಕೀಯ ಬಿಕ್ಕಟ್ಟು ಬಗೆಹರಿಸಬೇಕೆಂದು ವೈಸರಾಯರಲ್ಲಿ ಕೇಳಿಕೊಳ್ಳುವ ನಿರ್ಣಯವೊಂದು ಮಂಜೂರಾಗಿ ವೈಸರಾಯರಿಗೆ ತಂತಿ ಮೂಲಕ ಬಿನ್ನಯಿಸಿಕೊಳ್ಳಲಾಗಿದೆ

ಕಮ್ಯುನಿಸ್ಟರ ತಂತಿ

ಗಾಂಧಿಜಿಯನ್ನು ಶರತ ಹಾಕದೆ ಬಿಡುಗಡೆ ಮಾಡಬೇಕೆಂಬುದಾಗಿ ಮಂಗಳೂರು ಕಮ್ಯುನಿಸ್ಟ ಪಕ್ಷದವರು ವೈಸರಾಯರಲ್ಲಿ ವಿನಂತಿಸುವ ತಂತಿ ಕಳುಹಿಸಿರುವರಾಗಿ ತಿಳಿದುಬಂದಿದೆ.

ಗಾಂಧಿಜಿಗೆ ಆಯುಃಪ್ರಾರ್ಥನೆ

ಬದಿಯಡ್ಕ ಪ್ರೇಮಕೂಟದ ವಾರ್ಷಿಕ ಮಹಾಸಭೆ ಕಳೆದ ಶುಕ್ರವಾರ ಸೇರಿ ಅದರಲ್ಲಿ ಗಾಂಧಿಜಿಯ ಉಪವಾಸದ ವಿಷಯು ಪ್ರಸ್ತಾಪಿಸಿ ಅವರಿಗೆ, ಭಗವಂತನು ಆಯುರಾರೋಗ್ಯಗಳನ್ನು ದಯ ಪಾಲಿಸಲೆಂದು ಹಾರೈಸಿ ಸದಸ್ಯ ಸಭಿಕರೆಲ್ಲರೂ ಎದ್ದು ನಿಂತು ಐದು ನಿಮಿಷ ಮೌನ ಪ್ರಾರ್ಥನೆ ಮಾಡಿದರು.

ಸತ್ಯಾಗ್ರಹಿಗಳ ಬಿಡುಗಡೆ

ಪೆರಡಾಲಿನ ಸತ್ಯಾಗ್ರಹಿಗಳಾದ ಶ್ರೀ ದಿ ಬೀರು ಶೆಟ್ಟಿ ಮತ್ತು ಶ್ರೀ ಕೆ ಟಿ, ಶಂಕರ ಇವರು ಅನುಕ್ರಮವಾಗಿ ಕಳೆದ ೫ ಮತ್ತು ೬ರಂದು ಆಲಿಪುರಂ ಜೈಲಿನಿಂದ ಐದು ತಿಂಗಳ ಶಿಕ್ಷೆಯ ಅವಧಿ ಮುಗಿಸಿ ಬಿಡುಗಡೆ ಹೊಂದಿ ಮರಳಿ ಬಂದಿರುವರು ಇವರಿಬ್ಬರೂ ಕಾಸರಗೋಡಿನ ಕೋರ್ಟು ಪಿಕೆಟಿಂಗ್ ಸಂಬಂಧದಲ್ಲಿ ಶಿಕ್ಷಿತರಾಗಿದ್ದರು. ಇಬ್ಬರೂ ಶರೀರದಲ್ಲಿ ಕೃಶಗೊಂಡಿದ್ದರೂ ಆರೋಗ್ಯವನ್ನು ಕಾಪಾಡಿಕೊಂಡಿದ್ದಾರೆ ನಮ್ಮ ಜಿಲ್ಲೆಯ ಎಲ್ಲಾ ರಾಜಕೀಯ ಕೈದಿಗಳೂ ಉಲ್ಲಾಸದಿಂದಿರುವರಾಗಿ ಇವರು ತಿಳಿಸುತ್ತಾರೆ

ಜಿಲ್ಲೆಯ ರೈತರ ಸಂಘ

ದ ಪರವಾಗಿ ಅವರ ದೂರುಗಳನ್ನು ಮದ್ರಾಸು ಸರಕಾರಕ್ಕೆ ಒಪ್ಪಿಸಲಿಕ್ಕೆ ಒಂದು ಸಮಿತಿಯೇರ್ಪಟ್ಟದ್ದು ಅಕ್ಕಿಯ ಬೆಲೆಯನ್ನು ನಿಯಂತ್ರಿಸುವುದೂ, ಹಾಗೂ ಭತ್ತವನ್ನು ಜಿಲ್ಲೆಯ ಹೊರಭಾಗಗಳಿಗೆ ರಫ್ತು ಮಾಡಕೂಡದಾಗಿ ನಿವೇದಿಸುವುದೂ ಅನಪೇಕ್ಷಣೀಯವೆಂದೂ ಜಿಲ್ಲಾ ಕಲೆಕ್ಟರರೊಡನೆ ನಿವೇದಿಸಲು ಸದರಿ ಸಮಿತಿಗೆ ಅಧಿಕಾರ ಕೊಟ್ಟಿದೆ ಯುದ್ಧದ ದೆಸೆಯಿಂದ ನೋಟ್ ಚಲಾವಣೆಯು ಅತ್ಯಧಿಕವಾಗಿರುವುದೂ, ಸರಕುಗಳ ಒಯ್ಯೋಣಕ್ಕೂ ತೊಂದರೆಯುಂಟಾಗಿರುವುದೂ, ಗೇಯುವ ಜನರು ಕಡಿಮೆಯಾಗಿ ಹಾಗೂ ಧಾನ್ಯದವಸಗಳ ಉತ್ಪತ್ತಿಯ ವೆಚ್ಚವು ಹೆಚ್ಚಾಗಿರುವುದೂ, ಅಲ್ಲದೆ ಅಧಿಕ ಲಾಭದ ವ್ಯಾಪಾರಕ್ಕೆ ಎಡೆತಡೆಯಿಲ್ಲದೆ ಇರುವುದೂ ಇಂದಿನತೊಂದರೆಗೆ ಕಾರಣವಿರುತ್ತಾ, ನಿತ್ಯ ಜೀವನಕ್ಕೆ ಬೇಕಾದ ಇತರ ವಸ್ತುಗಳ ಧಾರಣೆಯನ್ನು ಸಹ ನಿಯಂತ್ರಿಸದೆ ಅಕ್ಕಿ ಮತ್ತು ಭತ್ತದ ಧಾರಣೆಯನ್ನು ಮಾತ್ರ ನಿಯಂತ್ರಿಸಲು ಸರಕಾರವು ಯತ್ನಿಸುವ ನೀತಿಯನ್ನು ಈ ಸಂಘದವರು ಒಪ್ಪುವುದಿಲ್ಲವೆಂದು ಕಳೆದ ತಾ. ೮ರಲ್ಲು ಜರಗಿದ ಸಭೆಯಲ್ಲಿ ನಿರ್ಣಯಿಸಿದ್ದಾರೆ.

ಕೋರ್ಟು ಇನ್ಸ್‌ಪೆಕ್ಷನ್

ಮದ್ರಾಸು ಹೈಕೋರ್ಟಿನ ಜಸ್ಟಿಸ್ ವಾಡ್ಸ್‌ವರ್ತರವರು ಇಲ್ಲಿಯ ಜಿಲ್ಲಾ ಕೋರ್ಟಿನ ಇನ್ಸ್‌ಪೆಕ್ಷನ್ ಸಂಬಂಧವಾಗಿ ಕಳೆದ ಬುಧವಾರ ಬಂದಿದ್ದು ಎರಡು ದಿನ ಉಳಿದು ಮರಳಿದರು.

ಸತ್ಕಾರ

ಇಲ್ಲಿಯ ಜಿಲ್ಲಾ ಕೋರ್ಟಿನ ಇನಸ್ಪೆಕ್ಷನಿನ ಸಂಬಂಧ ದಯೆ ಮಾಡಿಸಿದ್ದ ಮದ್ರಾಸ್ ಹೈಕೋರ್ಟ್ ಜಸ್ಟೀಸ್ ವಾಡ್ಸ್‌ವರ್ತರ ಸನ್ಮಾನಾರ್ಥವಾಗಿ, ಇಲ್ಲಿಯ ವಕೀಲ ಸಂಘದವರು ಕಳೆದ ಶುಕ್ರವಾರ ಸಂಜೆ ಒಂದು 'ಟೀಪಾರ್ಟಿ' ಕೊಟ್ಟರು. ಸಂಘದ ಸೆಕ್ರಟರಿ ಶ್ರೀ. ಜಿ. ಸೋಮಶೇಖರರಾಯರು ಅತಿಥಿಗಳನ್ನು ಸ್ವಾಗತಿಸಿ ಭಾಷಣ ಮಾಡಿದ ಮೇಲೆ, ಜಸ್ಟೀಸರು 'ಈ ಅಧಿಪತ್ಯದಲ್ಲಿ ಈ ಜಿಲ್ಲೆ ಅತ್ಯಂತ ಸುಸಂಸ್ಕೃತವಾದದ್ದು' ಎಂಬಿತ್ಯಾದಿ ಪ್ರಶಂಸಾತ್ಮಕ ಉತ್ತರವನ್ನು ಕೊಟ್ಟರು.

ಎ. ಆರ್ ಪಿ. ಪ್ರಯೋಗ

ತಾ. ೨೧ನೇ ಆದಿತ್ಯವಾರ ಸೈರನುಗಳ ಧ್ವನಿ ಮೂಲಕ ನಡೆಯುವುದು. ಇದನ್ನು ಕೇಳಿದ ಕೂಡಲೇ ಸಕಲರೂ ಆಶ್ರಯ ಸ್ಥಾನಗಳನ್ನು ಸೇರಬೇಕೆಂದೂ ವಾಹನ ಸಂಚಾರ ನಿರ್ಬಂಧಿಸಲಾಗುವುದೆಂದೂ ತಿಳಿಸಲಾಗಿದೆ

ವರ್ಧಂತಿಗಳು

ಸ್ಥಳೀಯ ಗಣಪತಿ ಹೈಸ್ಕೂಲಿನ ವರ್ಷವರ್ಧಂತಿಯು ಕಳೆದ ಶನಿವಾರ ಸಂಜೆ ಡಾ ಎಂ ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು, ಇತರ ಕಾರ್ಯಗಳೊಂದಿಗೆ, ಆ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಪರವಾಗಿ, ಅದರ ಅಧ್ಯಕ್ಷ ಶ್ರೀ. ಜಿ ಸೋಮಶೇಖರರಾಯರು ಒಪ್ಪಿಸಿದ ಆ ಶಾಲೆಯ ನಿವೃತ್ತ ಉಪಾಧ್ಯಾಯರಾದ ಶ್ರೀ. ಉಭಯ ಗೋಪಾಲಕೃಷ್ಣರಾಯರ ಭಾವ ಚಿತ್ರದ ಅನಾವರಣ ಕಾರ್ಯವೂ ನಡೆಯಿತು

ಸ್ಥಳೀಯ ಬಿ. ಇ. ಎಂ ಹೈಸ್ಕೂಲಿನ ವರ್ಷವರ್ಧಂತಿಯು ಕಳೆದ ಶನಿವಾರ ಸಂಜೆ ಜಿಲ್ಲೆಯ ವಿದ್ಯಾಧಿಕಾರಿಗಳಾದ ಶ್ರೀ ವೆಂಕಟ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ವರದಿ ವಾಚನ ಸ್ಪರ್ಧಿಗಳ ಬಹುಮಾನ ವಿತರಣ ವಿವಿಧ ವಿನೋದಾವಳಿ ಮೊದಲಾದ ಕಾರ್ಯಕಲಾಪಗಳೊಂದಿಗೆ ಯಶಸ್ವಿಯಾಗಿ ಜರಗಿತು

ಡಿ ಸಿ. ಎಂ ಸಂಸ್ಥೆ

ಈ ಸಂಸ್ಥೆಯ ಸ್ಥಾಪಕರ ದಿನಾಚರಣೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ. ಆರ್ ಪಿಳ್ಳೈ ಅವರ ಅಧ್ಯಕ್ಷತೆಯಲ್ಲಿ ನಡೆಯಿತು ಸ್ಥಾಪಕರಾದ ದಿವಂಗತ ಶ್ರೀ ಕುದ್ಮುಲ್ ರಂಗರಾಯರ ಗುಣಾತಿಶಯಗಳ, ಸಮಾಜ ಸೇವಾ ಧರ್ಮಗಳ ಕುರಿತಾಗಿ, ಡಾ. ಎಂ. ಕೇಶವ ಪೈ, ಶ್ರೀ ಎಂ ಮಾಧವರಾವ್ ಮೊದಲಾದವರು ಭಾಷಣ ಮಾಡಿದರು

ಪ್ರಕಾಶ ಎಸೋಸಿಯೇಶನ್

ಇದರ ವಾರ್ಷಿಕೋತ್ಸವವು ಕಳೆದ ಆದಿತ್ಯವಾರ ಶ್ರೀ ಕೆನರಾ ಹೈಸ್ಕೂಲ್ ಸಭಾ ಭವನದಲ್ಲಿ ಜರಗಿತು ಕನ್ನಡ ಹಿಂದೀ ಚರ್ಚಾ ಸ್ಪರ್ಧೆಗಳ ಬಹುಮಾನ ವಿತರಣೆ, ಉತ್ತಮ ಕಾರ್ಯಕರ್ತ ಹಾಗೂ ಕಲಾವಿದ ಮತ್ತು ಲೇಖಕರಿಗೆ ಬಹುಮಾನ ವಿತರಣೆಗಳಾದವು ಪ್ರಕಾಶ ಎಸೋಸಿಯೇಶನಿನವರು ಸಾಹಿತ್ಯ ಸಂಸ್ಕೃತಿ ಕಲಾ ವಿಷಯಕ ಚಟುವಟಿಕೆಗಳನ್ನು ಕೈಕೊಳ್ಳುತ್ತಾರೆ ಒಂದು ಕೈಬರಹದ ಪತ್ರಿಕೆ, ವಿನೋದ ಕೂಟಗಳು, ಪುಸ್ತಕ ಪ್ರಕಾಶನಗಳನ್ನೂ ಜರಗಿಸುವವರು

ಸೈಂಟ್ ಎಲಾಸಿಯಸ್ ಕಾಲೇಜ್

ಯೂನಿಯನ್ನಿನ ವಾರ್ಷಿಕ ದಿನಾಚರಣೆ ತಾ ೧೪ರಂದು ಶ್ರೀ ಬಿ ವೈಕುಂಠ ಬಾಳಿಗರ ಅಧ್ಯಕ್ಷತೆಯಿಂದ ಜರಗಿತು. ಫಲಾಹಾರ, ವಿದ್ಯಾರ್ಥಿಗಳ ಭಾಷಣ, ವಿವಿಧ ವಿನೋದಾವಳಿಗಳಿದ್ದವು ಯೂನಿಯನ್ನಿನ ಪರವಾಗಿ ಅದರ ಗವರ್ನರರಾದ ಪ್ರೊ। ವಿ ಜೆ ಜೊಸೆಫರು, ಆ ಕಾಲೇಜಿನ ಸಂಸ್ಕೃತ ಪಂಡಿತರಾದ ಬ್ರಹ್ಮಶ್ರೀ ವಿ ಅನಂತ ಉಪಾಧ್ಯಾಯರು ಉದ್ಯೋಗದಿಂದ ನಿವೃತ್ತರಾಗುವ ಸಂದರ್ಭದಲ್ಲಿ, ಅವರ ಶ್ರೇಯಸ್ಸನ್ನು ಬಯಸುವ ಒಂದು ಮಾನಪತ್ರವನ್ನು ಸಮರ್ಪಿಸಿದರು

ಶ್ರೀಮದ್ರಾಮಾಯಣ ಹರಿಕಥೆಯ ಮಂಗಲೋತ್ಸವ

ಶ್ರೀ ಕದ್ರಿ ಹನುಮಂತ ದೇವಸ್ಥಾನದಲ್ಲಿ ಇದೇ ತಾ. ೨೧-೨-'೪೩ಕ್ಕೆ ನಡೆಯಲಿರುವುದು. ಸರ್ವರಿಗೂ ಸ್ವಾಗತವಿದೆ.

ಗ್ರೇಜು ಏಟ್ಸರಲ್ಲಿ ವಿನಂತಿ

ಬರುವವಾರ ನಡೆಯಲಿರುವ ಸೆನೇಟ್ ಜನರಲ್ ಚುನಾವಣೆಗೆ ಸ್ಥಳೀಯ ಸೆಂಟ್. ಎಲೋಸಿಯಸ್ ಕಾಲೇಜಿನ ಮೆಥ್‌ಮೆಟಿಕ್ಸ್ ಪ್ರೊಫೆಸರ್ ಶ್ರೀ ರಾಮಚಂದ್ರ ಅಯ್ಯರವರು ಉಮ್ಮೇದ್ವಾರಿಗಳಾಗಿರುವರು. ಶ್ರೀ ಯರು ಕಳೆದ ೩೦ ವರ್ಷಗಳಿಂದಲೂ ನಮ್ಮ ಜಿಲ್ಲೆಯಲ್ಲಿ ಕೆಲಸಮಾಡುತ್ತಿದ್ದಾರೆ. ಸೆನೇಟ್ ಸಭೆಯ ಸದಸ್ಯರಾಗಿಯೂ ವಿಶಿಷ್ಟ ವಿದ್ಯಾಭ್ಯಾಸದ ವಿಷಯದಲ್ಲಿ ಬಹಳ ಮೆಹನತ್ತಿನಿಂದ ಸೇವೆಸಲಿಸಿರುವರು. ಅಲ್ಲದೆ, ನಮ್ಮ ಜಿಲ್ಲೆಯ ಸಾರ್ವಜನಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸಿರುವರು, ನಮ್ಮ ಜಿಲ್ಲೆಯ ರಿಜಿಸ್ಟರ್ಡ್ ಗ್ರೇಜುಏಟ್ಸರಿಂದ ಸಾದರದ ಪ್ರೋತ್ಸಾಹವನ್ನು ಶ್ರೀ ಯರು ಹಾರೈಸುತ್ತಾರೆ.

ಬದಿಯಡ್ಕ

ವಾರ್ಷಿಕೋತ್ಸವ

ಡಾ। ಪಿ. ಎಸ್ ಶಾಸ್ತ್ರಿಗಳ ಚಿಕಿತ್ಸಾಲಯದ ಹೊಸಕಟ್ಟಡದ ಒಂದನೇ ವಾರ್ಷಿಕೋತ್ಸವ ಸಂಬಂಧವಾಗಿ ಕಳೆದ ಶುಕ್ರವಾರ ಸಂಜೆಗೆ, ಆ ಕಟ್ಟಡದಲ್ಲಿ, ಊರ ಮಹನೀಯರನ್ನು ಆಮಂತ್ರಿಸಿ ಭಜನಾ ಸಮಾರಂಭವೊಂದು ನೆರವೇರಿಸಲ್ಪಟ್ಟಿತು ಡಾ। ಶಾಸ್ತ್ರಿಗಳಿಗೆ ಶ್ರೇಯಸ್ಸನ್ನು ಹಾರೈಸಿ ಶ್ರೀಗಳಾದ ಎಸ್. ವೆಂಕಪ್ಪ ಶರ್ಮ ಮತ್ತು ಡಾ। ಕೆ. ಕೇಶವ ಭಟ್ಟರು ಮಾತನಾಡಿದರು. ಡಾ। ಶಾಸ್ತ್ರಿಗಳು ಅದಕ್ಕೆ ಉತ್ತರವಿತ್ತರು ಆ ಮೇಲೆ ಪ್ರಸಾದ ಫಲಾಹಾರ ದೊಂದಿಗೆ ಉತ್ಸವವು ಕೊನೆಗೊಂಡಿತು

ಪ್ರೇಮಕೂಟ

ಕಳೆದ ಶುಕ್ರವಾರ ರಾತ್ರಿ ಬದಿಯಡ್ಕ ಪ್ರೇಮಕೂಟದ ವಾರ್ಷಿಕ ಮಹಾ ಸಭೆಯು, ಅದರ ಅಧ್ಯಕ್ಷ ಶ್ರೀ ಎಂ. ರಾಮಕೃಷ್ಣರಾಯರ ಅಧ್ಯಕ್ಷತೆಯಿಂದ ಡಾ। ಶಾಸ್ತ್ರಿಗಳ ಕಟ್ಟಡದಲ್ಲಿ ಜರಗಿತು. ಕಾರ್ಯದರ್ಶಿಗಳಿಂದ ವರದಿವಾಚನ ಹಾಗೂ ಅಧ್ಯಕ್ಷರ ಆರಂಭ ಭಾಷಣಗಳಾಗಿ ಹೊಸ ಕಾರ್ಯಕಾರೀ ಮಂಡಳದ ಚುನಾವಣೆಯಾಯಿತು ಕಳೆದ ವರ್ಷದ ದಸರಾ ಮಹೋತ್ಸವ ಮೊದಲಾದ ಹಲವು ಕಾರ್ಯಕ್ರಮಗಳ ದೇಶದ ಪ್ರಕೃತದ ರಾಜಕೀಯದಿಂದ ನೆರವೇರಿಸುವುದಾಗಲಿಲ್ಲವಾಗಿ ವರದಿಯಿಂದ ತಿಳಿದುಬರುತ್ತದೆ ಹೊಸ ವರ್ಷಕ್ಕೂ ಶ್ರೀ. ಎಂ ರಾಮಕೃಷ್ಣರಾಯರೇ ಅಧ್ಯಕ್ಷರಾಗಿ ಚುನಾಯಿತರಾದರು

ಉಡುಪಿ

ಜುಲ್ಮಾನೆ

ಉಡುಪಿಯ ಸಾಹುಕಾರರಾದ ಶ್ರೀ। ದೇವೇಂದ್ರ ಕಾಮತ್ ಮತ್ತು ಕಾರ್ಕಳದ ಶ್ರೀ। ಗೋಪಾಲ ಕೃಷ್ಣ ಶೆಣೈ ಮತ್ತು ಅವರ ನೌಕರರೊಬ್ಬರಿಗೆ ನಿಯಮಿತ ದರಕ್ಕಿಂತ ಜಾಸ್ತಿ ಕ್ರಯದಲ್ಲಿ ಬೆಂಕಿಪೆಟ್ಟಿಗೆ ಮಾರಾಟ ಮಾಡಿದ್ದಕ್ಕಾಗಿ ಕುಂದಾಪುರ ಸಬ್ ಕಲೆಕ್ಟರರು ಕ್ರಮವಾಗಿ ರೂ ೧೦೦, ೫೦೦ ಮತ್ತು ೨೫೦ರಂತೆ ಜುಲ್ಮಾನೆ ವಿಧಿಸಿದರು

ತೆಗೆದುಹಾಕಿದರು

ಶ್ರೀ ಕೃಷ್ಣ ಮಠದ ೪೦ ಮಂದಿ ದೇವಾಡಿಗರು ಜಾಸ್ತಿ ಸಂಬಳದ ಬಗ್ಗೆ ಮುಷ್ಕರ ಹಿಡಿದು ಜಯಶೀಲರಾದಾಗ್ಲೂ ಪರ್ಯಾಯ ಶ್ರೀ ಕೃಷ್ಣಾಪುರ ಸ್ವಾಮಿಗಳು ಅವರನ್ನು ಕೆಲಸದಿಂದ ತೆಗೆದು ಹೊಸಬರನ್ನು ನೇಮಿಸಿದ್ದಾರೆಂದು ತಿಳಿದು ಬರುತ್ತದೆ

ಸಭೆ

ತಾ ೧೧ ರಲ್ಲಿ ಉಡುಪಿ ತಾಲೂಕಿನ ವರ್ತಕರ ಮತ್ತು ವರ್ತಕರ ಸಭೆಯು ಕಾರ್ಪರೇಶನ್ ಮಾಳಿಗೆಯಲ್ಲಿ ಕುಂದಾಪುರ ಸಬ್ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ। ಮೊಳಹಳ್ಳಿ ಶಿವರಾಯರ ಯೋಜನೆಗೆ ಈ ಸಭೆಯ ಬೆಂಬಲ ದೊರೆಯಿತು ೨೫ ವರುಷದೊಳಗಿನ ಮಕ್ಕಳಿಗೆ ಸಹ ಈ ಯೋಜನೆಯಿಂದ ಉಪಕಾರ ದೊರೆಯಬೇಕಾಗಿದೆ ಎಂಬ ಸೂಚನೆಯನ್ನು ಉಪಸಮಿತಿಯಲ್ಲಿ ತೀರ್ಮಾನಿಸಲಾಗುವುದೆಂದು ಶ್ರೀ। ಶಿವರಾಯರು ಆಶ್ವಾಸನೆಯಿತ್ತರು

ಸುಬ್ರಹ್ಮಣ್ಯಕ್ಕೆ ಮೈಸೂರು ಮಹಾರಾಜರ ಆಗಮನ

ಮೈಸೂರಿನ ಮಹಾರಾಜರಾದ ಶ್ರೀಮನ್ಮಹಾರಾಜ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರು ದಿವಾನರಾದ ರಾಜಮಂತ್ರಿ ಪ್ರವೀಣ ಸರ್ ಮಾಧವರಾವ್ ಮತ್ತು ಇತರ ಹಲ ಅಧಿಕಾರಿಗಳೊಡನೆ ತಾ. ೮ ರಂದು ಮಧ್ಯಾಹ್ನ ೧.೨ ಘಂಟೆಗೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಸಂದರ್ಶನವಿತ್ತರು, ವಾದ್ಯಘೋಷ ಸಹಿತ ಮಹಾರಾಜರನ್ನು ಇದಿರ್ಗೊಳ್ಳಲಾಯಿತು, ವೇದ ಮಂತ್ರ ಪಠನದ ಬಳಿಕ ಮಹಾರಾಜರಿಗೆ ಮಂತ್ರಾಕ್ಷತೆಯಾಗಿ ಪ್ರಸಾದವು ಕೊಡಲ್ಪಟ್ಟಿತು. ಟ್ರಸ್ಟಿಗಳ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ। ಕೆ. ಅರ್. ಅಚಾರ್ ಅವರು ಮಹಾರಾಜರಿಗೆ ಮಾನಪತ್ರವನ್ನರ್ಪಿಸಿದರು ಸುಬ್ರಹ್ಮಣ್ಯ ಮಠದ ಸ್ವಾಮಿಗಳ ಪರವಾಗಿ ಇನ್ನೊಂದು ಮಾನಪತ್ರವು ಶ್ರೀ। ಯು. ಬಿ. ಆಚಾರ್ಯರಿಂದ ಅರ್ಪಿಸಲ್ಪಟ್ಟಿತು ಅನಂತರ ಮಹಾರಾಜರು ಮೆರವಣಿಗೆಯಲ್ಲಿ ವಸತಿಗೆ ಕರೆದೊಯ್ಯಲ್ಪಟ್ಟರು. ಮಹಾರಾಜರೂ ಪರಿವಾರದವರೂ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಚಿತ್ತೈಸಿ ಪ್ರಧಾನ ದೇಗುಳಕ್ಕೆ ಸಂಬಂಧಿಸಿದ ಇತರ ಗುಡಿಗಳನ್ನು ಸಂದರ್ಶಿಸಿದುದಲ್ಲದೆ, ಶ್ರೀ ಸುಬ್ರಹ್ಮಣ್ಯ ನರಸಿಂಹ ಮತ್ತು ಭಾಲ ಸುಬ್ರಹ್ಮಣ್ಯ ದೇವರುಗಳನ್ನು ಪೂಜಿಸಿದರು.

ಆಲೆರ ಬಿಡುಗಡೆ

ಪುತ್ತೂರು ತಾಲುಕು ಬಾಳ್ಗೋಡು ಗ್ರಾಮದ ಸಾಂತಪ್ಪ ಗೌಡ, ಅವನ ಹೆಂಡತಿ ಗಂಗು, ಮಗ ಪದ್ಮಯ್ಯ ಈ ಮೂವರು ಸಾಂತಪ್ಪನ ಅಣ್ಣ ಕೊರಗಪ್ಪ ಎಂಬವನನ್ನು ಕಡಿದು ಕೊಂದರೆಂಬ ಆಪಾದನೆಯ ಮೇಲೆ ಅವರನ್ನು ಸೆಶ್ಯನ್ ಕೋರ್ಟಿಗೆ ಕಮಿಟುಮಾಡೋಣಾಗಿತ್ತು ಮೃತನಿಗೂ ಆಲೆರಿಗೂ ಒಂದು ಸ್ಥಳದ ವಿಷಯ ವಿವಾದವಿದ್ದು ತಕ್ಷೀಧಿನ ದಿನ (೫ ೬ ೪೨) ೨ ಬಾಳೆ ಗೊನೆಗಳ ವಿಷಯ ಜಗಳವಾಗಿ ಮೃತನು ಜಖಂ ಪಟ್ಟು ಅಲ್ಲೇ ಸತ್ತು ಹೋದನು ಮೃತನು ತನ್ನ ಸ್ಥಳಕ್ಕೆ ಅಕ್ರಮ ಪ್ರವೇಶವಾಡಿ ತನ್ನನ್ನು ಹೊಡೆಯಲು ತನ್ನ ಜೀವದ ರಕ್ಷಣೆಗಾಗಿ ತಾನು ಮೃತನನ್ನು ಕಡಿದದು ಎಂಬುದಾಗಿ ಆಲೆಯ ಹೇಳಿಕೆಯಾಗಿತ್ತು ಮಂಗಳೂರಿನ ಸೆಶ್ಯನ್ಸ್ ಜಡ್ಜರಾದ ಶ್ರೀ ಸಿ ಸಿ ಓ ಅಲಿಪಿ ಸಾಹೇಬರು ಆಲೆರನ್ನು ನಿರಪರಾಧಿಗಳೆಂತ ವಿಧಿಸಿ ಬಂಧಮುಕ್ತ ಮಾಡಿದರು ಆಲೆರ ಕಡೆಯಿಂದ ಶ್ರೀ ಎ ಮೂಸಬ್ಬ ಇವರು ಕೋರ್ಟಿನಿಂದ ನೇಮಕ ಪಟ್ಟು ವ್ಯವಹರಿಸಿದ್ದರು

'ಮಾಂಗಲ್ಯ ಕಾಪಾಡಿರಿ'

ಎಂಬುದಾಗಿ ಈಸಾದು ಮೊಕದ್ದಮೆಯಲ್ಲಿ ಮರಣದಂಡನೆಗೆ ಗುರಿಯಾದವರ ಪತ್ನಿಯವರು ಶಿವಮೊಗ್ಗ ನಗರ ಸ್ಟೇಶನ್ ಬಳಿ ಪ್ರಯಾಣ ಮಾಡುತ್ತಿದ್ದ ಮೈಸೂರು ಮಹಾರಾಜರಿಗೆ ಮಾನಪತ್ರವನ್ನರ್ಪಿಸಿ ಬಿನ್ನವಿಸಿಕೊಂಡರು

NOTICE

In the Court of the Subordinate Judge of South Kanara

O. S 70/32
R I A 1062/37

Between
Subramania Patter—*Petitioner*
and

Kooleni Neduvale Porail Abdulkader Karnavan and Manager of the Therunad and others . *Respondents*

Please take notice that the receiver of the above plaint properties K Gopal Rau B A B L Advocate Mangalore will sell by public auction near Rajas High School Nileshwar (1) the standing pepper crops (2) the standing areca and coconut crops in the immoveable properties in the west Eleri and belonging to the estate on 21-2-1943 The purchaser will have to deposit the bid amount before confirmation of sale and taking delivery of the crops

Mangalore, 16-2-1943. } Sd) K. Gopal Rau, Receiver

ಸಿನೆಮಾ ಸುದ್ದಿ

'ಮಿಸ್ ಹಿಟ್ಲರ್'

'ಏನು ಬ್ರಹ್ಮಚಾರಿ ಹಿಟ್ಲರನಿಗೆ ಸಂತಾನವೆ?' ಎಂದು ಯಾರಾದರೂ ಪ್ರಶ್ನಿಸಬಹುದು! ಹಿಟ್ಲರನಿಗೆ ಸಂತಾನವುಂಟೋ ಇಲ್ಲವೋ ಎಂಬುದನ್ನಿಲ್ಲಿ ಚರ್ಚಿಸಲು ನಾವೂ ಸಿದ್ಧರಿಲ್ಲ. ಅದರ ಮೇಲಿನದು ಒಂದು ಫಿಲ್ಮಿನ ಹೆಸರು ಮಾತ್ರ. ಅಮರ್ ಪಿಕ್ಚರ್ಸಿನವರ ಕೃತಿ. ಈ ಚಿತ್ರದ ತಯಾರಿಕೆಯ ಕೆಲಸವು ಭರದಿಂದ ನಡೆಯುತ್ತಿದೆ. 'ಮಿಸ್ ಹಿಟ್ಲರ್' ಎಂಬ ಹೆಸರೇ ಹೊರತು, ಹಿಟ್ಲರನಿಗೂ ಈ ಚಿತ್ರದ ಕಥೆಗೂ ಏನೇನೂ ಸಂಬಂಧವಿಲ್ಲ!

ಉದಯಶಂಕರ ಚಿತ್ರ

ಪ್ರಸಿದ್ಧ ನರ್ತಕರಾದ ಉದಯಶಂಕರರು ತಮ್ಮ ಮೇಳದೊಡನೆ ಒಂದು ಚಿತ್ರ ತಯಾರಿ ಮಾಡುವ ವಿಷಯದಲ್ಲಿ ಬಹಳ ಕಾಲದಿಂದ ಆಲೋಚನೆ ಮಾಡುತ್ತಿದ್ದರು. ಈಗ ಅವರು ಪ್ರಭಾತ ಫಿಲ್ಮ್ ಕಂಪೆನಿಯ ಸಹಾಯದಿಂದ ಆ ಚಿತ್ರವನ್ನು ತಯಾರಿಸುವ ಒಪ್ಪಂದ ಮಾಡಿಕೊಂಡರೆಂದು ತಿಳಿಯುತ್ತದೆ. ಮೊದಲಿನ ಅವರ ಅಭಿಪ್ರಾಯವು ಪ್ರಭಾತ ಮತ್ತು ಪಂಚೋಲಿ ಈ ಎರಡು ಸಂಸ್ಥೆಗಳ ಸಹಕಾರ ಪಡೆಯುವದಾಗಿದ್ದು, ಅದಕ್ಕೆ ಪಂಚೋಲಿಯವರು 'ಪ್ರಭಾತ'ವನ್ನು ಬಿಟ್ಟು ತಮ್ಮೊಂದು ಸಂಸ್ಥೆಯ ಸಹಕಾರದಿಂದಲೇ ತಯಾರಿಸಬೇಕೆಂದು ಹೇಳಿದ್ದರಿಂದ, ಈಗ ಪಂಚೋಲಿಯನ್ನೇ ಬಿಟ್ಟು 'ಪ್ರಭಾತ' ಒಂದರ ಸಹಕಾರದಿಂದಲೇ ಅವರು ಚಿತ್ರ ತಯಾರಿಸಲು ನಿಶ್ಚೈಸಿದರೆಂದು ಅವರ ಕಲಾಕೇಂದ್ರದ ವಿದ್ಯಾರ್ಥಿಯೊಬ್ಬರು ಹೇಳಿದರು. ಉದಯ ಶಂಕರರ ಚಿತ್ರವು ವಿಶ್ವ ವಿಖ್ಯಾತವಾಗುವುದೆಂದು ಹಾರೈಸಲಾಗಿದೆ.

ಎಲ್ಲರಿಗೂ ಪಾಲುಂಟು!

ಸಿನೆಮಾ ಸೃಷ್ಟಿಸಿ ಲಾಭವನ್ನು ಒಬ್ಬನೇ ಪಡೆಯಬೇಕೇಕೆ? ಅದರಲ್ಲಿ ಕೆಲಸ ಮಾಡಿದ ಪ್ರತಿಯೊಬ್ಬರಿಗೂ ಅದರಲ್ಲಿ ಪಾಲು ಕೊಡುವುದು ನ್ಯಾಯವಲ್ಲವೇನು? ಈ ದೃಷ್ಟಿಯನ್ನಿಟ್ಟುಕೊಂಡು ಬೊಂಬಾಯಿಯಲ್ಲಿ ಒಂದು ಹೊಸ ಸಿನೆಮಾ ಸಂಸ್ಥೆಯೀಗ ರಚಿತವಾದ ಸುದ್ದಿ ಕೇಳುತ್ತೇವೆ. ಇದರಲ್ಲಿ ನಿರ್ದೇಶಕ ನಟವರ್ಗಗಳಿಂದ ತೊಡಗಿ, ಕೂಲಿಯ ವರೆಗೂ ಲಾಭದಲ್ಲಿ ಸರಿ ಪಾಲು ಹಂಚುವ ಸಹಕಾರ ತತ್ವವು ಅನ್ವಯಿಸುವಂತೆ ಏರ್ಪಾಡಾಗಿದೆ. ಈಗಾಗಲೇ ಶಾಂತಾರಾಮ್, ಪೃಥ್ವೀರಾಜ್, ದುರ್ಗಾಖೋಟೆ ಮೊದಲಾದವರು ಇದರಲ್ಲಿ ಭಾಗವಹಿಸಲು ಒಪ್ಪಿಕೊಂಡಿರುವರು. ಪೀಪಲ್ಸ್ ಪಿಕ್ಚರ್ಸ್ ಎಂಬುದು ಇದರ ನಾಮಕರಣ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 780/42.

ಕೆ. ಸೀತಾರಾಮರಾವ್. . . . ಅರ್ಜಿದಾರ

ಮತ್ತು

1. ಸುಬ್ರಾಯ ಭಟ್ಟ, ನಾರಾಯಣ ಭಟ್ಟ ಮಗ. 2. ರಾಜಮ್ಮ 1ನೇಯವರ ಪತ್ನಿ. 3 ಕೆ. ಎಸ್. ನಾರಾಯಣರಾವ್, ಸಾಗರ ಸಿನೆಮಾ ಕಂಪೆನಿ ಬೊಂಬಾಯಿ. 4. ರಾಜಗೋಪಾಲರಾವ್, ಮೋಡರ್ನ್ ಕೆಫೆ ರೆಸ್ಟೋರೆಂಟ್ ಪವರ್‌ಪೇಟೆ, ಎಲ್ಲೂರು, ಗೋದಾವರಿ ವೆಸ್ಟ್ ಕೂಡಾ. . . } ಪ್ರತಿವಾದಿಗಳು

ಮೇಲೆ ಹೆಸರು ಕಾಣಿಸಿದ ಅರ್ಜಿದಾರನು ಢಿಕ್ರಿಯಲ್ಲಿ ವಿವರಿಸಿದ ಸ್ಥಿರಾಸ್ತಿ ಮಾರಾಟದ ಬಗ್ಗೆ ಅರ್ಜಿಮಾಡಿರುವುದರಿಂದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ಬಗ್ಗೆ ಮತ್ತು ಯೇಲಂ ವಾದಿಗೆ ಏಲಂಗೆ ನಿಂತು ಢಿಕ್ರಿ ಹಣದಿಂದ ಏಲಂ ಹಣವನ್ನು ವಜಾ ಮಾಡುವರೆ ಪರ್ಮಿಶನ್ ಕೊಡಬೇಕೆಂತ ಕೂಡಾ ಅಪೇಕ್ಷಿಸುವುದರಿಂದ, ಆಕುರಿತು ನಿಮಗೇನಾದ್ರು ಆಕ್ಷೇಪವಿದ್ದರೆ ತಾರೀಕು 27-2-43ನೇ ದಿನ ಬೆಳಿಗ್ಗೆ 10½ ಗಂಟೆಗೆ ಹಾಜರಾಗಿ ದಾಖಲು ಮಾಡಿಕೊಳ್ಳಬಹುದು ಎಂತ ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು, 2-2-'43. } K. Balakrishna Rao, ವಾದಿ ಕಡೆ ವಕೀಲ್.

ಬೆಟ್ಟದಮೇಲಿರುವ ಬಾಲಕ

ಸಂವತ್ಸರದ ಚಕ್ರವನ್ನು ತಿರುಗಿಸುತ್ತಾ, ಮಳೆ ಬೆಳಗಳನ್ನು ತರುವ ಸೂರ್ಯದೇವನ ಕೃಪಾದೃಷ್ಟಿಗೊಳಗಾಗಿ, ನಮ್ಮ ನಾಡಿನಲ್ಲಿ ದಿನವೊಂದು ಸಾಗುತ್ತಿದೆ. ಹುಡುಗನೊಬ್ಬನು ತನ್ನ ಧೋತ್ರವನ್ನು ಗಾಳಿಗೆ ಹಿಡಿದು ಆರಿಸುತ್ತಿದ್ದಾನೆ. ಪವಿತ್ರ ಕ್ಷೇತ್ರಗಳ ಮೇಲೆ ಪುರಾತನ ಕಟ್ಟಡ, ವೃಕ್ಷಗಳ ನೆರಳು ಬಿದ್ದಿದೆ. ರೈತನು ತನ್ನ ಹೊಲದಲ್ಲಿ ಕೆಲಸಮಾಡುತ್ತಿದ್ದಾನೆ; ದನಗಳು ನದೀ ತೀರದಲ್ಲಿ ಮೇಯುತ್ತಿವೆ. ಹತ್ತಿರದಲ್ಲಿ ಇರುವ ನಗರಗಳ ಅವ್ಯಕ್ತ ನಿನಾದ ಬಹುದೂರದವರಿಗೆ ಕೇಳಿಬರುತ್ತಿದೆ. ಇಂಡಿಯಾದ ಮೇಲೆ ಅಭಿಮಾನ ಉಳ್ಳವರಿಗೆ ಎಂತಹ ಸುಂದರ ದೃಶ್ಯ ಇದು.

ಈ ರಾಷ್ಟ್ರದ ವಿಶಾಲ ಗ್ರಾಮ ಪ್ರದೇಶದ ಶಾಂತತೆ ಶತಶತಮಾನಗಳಿಂದ ಶಾಂತಿಮಯ ಜೀವನವನ್ನು ಪ್ರೇರೇಪಿಸಿದೆ. ಕಾರ್ಯಾರ್ಥವಾಗಿ ನಗರಗಳಲ್ಲಿ ಬಾಳಬೇಕಾದ ನಾವು ಕೂಡ ಆ ಮಹಾಶಾಂತಿಯ ಸರೋವರದಿಂದ ಶಾಂತಿಯನ್ನು ಪಡೆಯುತ್ತೇವೆ.

ಸಂಸಾರ ಮತ್ತು ಸ್ನೇಹದ ಆಸ್ತಿವಾರದ ಮೇಲೆ ಸುಸ್ಥಿತವಾಗಿದ್ದ ನಾಲ್ಕು ಕೋಟಿ ಚೀಣೀಯರ ಜೀವನವನ್ನು ಜಪಾನೀ ಸೇನೆಗಳು ತಲೆಕೆಳಗು ಮಾಡಿದುವು.

ಇಂಡಿಯಕ್ಕೆ ಈ ಆಪತ್ತು ಉಂಟಾಗದಂತೆ ತಡೆಯಲು ನಾವೆಲ್ಲರೂ ಒಂದುಗೂಡಿ, ನಮ್ಮ ಯೋಧರಿಗೆ ಬೆಂಬಲ ಕೊಡಬೇಕು. ಮತ್ತು ನಮ್ಮ ಶಕ್ತಿಯನ್ನೆಲ್ಲಾ ವಿನಿಯೋಗಿಸಿ ವೈರಿಯನ್ನು ತಡೆಗಟ್ಟಿ ನಿಲ್ಲಿಸಬೇಕು.

ನೀವೇ ಯೋಚನೆಮಾಡಿ ನೋಡಿರಿ ಒಂದುಗೂಡಿ ವರ್ತಿಸಿರಿ

ಇದೇ ರಾಷ್ಟ್ರೀಯ ಯುದ್ಧಮುಖ

CPU.8-A.KN.

ಪೃಥ್ವೀರಾಜನ ಬಂಧನ!

ಏನು ಸಿನೆಮಾನಟ ಪೃಥ್ವೀರಾಜನೂ ರಾಜಕೀಯ ರಂಗಕ್ಕಿಳಿದನೇ? ಎಂದು ನೀವು ಪ್ರಶ್ನಿಸಬಹುದು. ಪೃಥ್ವೀರಾಜನಿಗೆ ಭಾರತದ ರಾಜಕೀಯದಲ್ಲಿ ಆಸಕ್ತಿಯುಂಟೋ ಇಲ್ಲವೋ ಎಂಬ ವಿಷಯ ಬೇರೆ. ಆದರೆ ಆತನನ್ನು ಸೆರೆಹಿಡಿಯಲು ಒಂದು ವಾರಾಂಟು ಹೊರಟಿದ್ದು ಆ ವಿಷಯ ಆತನಿಗೆ ತಿಳಿದು ಪೋಲೀಸರ ಮುಂದೆ ಆತನು ಸ್ವತಃ ಹಾಜರಾಗಿ, ಬಂಧಿಸಲ್ಪಟ್ಟು ಈಗ ಜಾಮೀನಿನಲ್ಲಿ ಬಿಡುಗಡೆ ಹೊಂದಿದ್ದಾನೆಂದು ಸುದ್ದಿಯಿದೆ.

"ಯುದ್ಧ ಮತ್ತು ಶಾಂತಿ"

ಇದು ಟೋಲ್ ಸ್ಟಾಯಿಯವರ ಪ್ರಸಿದ್ಧ ಗ್ರಂಥ. (War and Peace) ಇದನ್ನು ಅಲೆಕ್ಸಾಂಡರ್ ಕೋರ್ಡಾ ಚಿತ್ರ ತೆಗೆಯುವರೆಂದು ತಿಳಿಯುತ್ತದೆ. ಒಂದು ಇಂಗ್ಲಿಷ್ ಪತ್ರಿಕೆ ಬರೆಯಿತು. 'ಅಯ್ಯೋ ಈ ಗ್ರಂಥ ಚಲಚ್ಚಿತ್ರವಾಗುವುದೋ? ಯಾವನೋ ಮಹಾನುಭಾವ ಇದರ ಮೇಲ್ವಿಚಾರಣೆ ಕೈಕೊಳ್ಳುವನು?' ಎಂದು. 'ನಾನೇ ಇದನ್ನು ಚಿತ್ರ ತೆಗೆಯುವಾತ' ಎಂದು ಕೋರ್ಡಾ ಅದಕ್ಕೆ ಉತ್ತರವಿತ್ತಿದ್ದಾನೆ! ನೋಡಬೇಕು, ಅವನ ಉತ್ತರದ ಸತ್ಯತೆಯನ್ನು. ರಷ್ಯದ ಪ್ರಸಿದ್ಧ ನಿರ್ದೇಶಕ ಲುಸೆನ್ ಸ್ಟಿನ್ ಮತ್ತು ಪುಡೋವ್ ಕಿನ್ ಇವರು ಈ ಚಿತ್ರವನ್ನು ನಿರ್ದೇಶಿಸಲು ಒಪ್ಪಿರುವರಂತೆ!

ಮಹಾತ್ಮರ ಉಪವಾಸ

(೨ನೇ ಪುಟದಿಂದ)

ಶ್ರೀಮತಿ ಕಸ್ತೂರ್ ಬಾ, ಡಾ| ಸುಶೀಲ ನಾಯರ್ ಮತ್ತು ಶ್ರೀ. ಪ್ಯಾರೇಲಾಲರು ಗೀತೆಯ ಹದಿನೆಂಟು ಅಧ್ಯಾಯಗಳನ್ನೂ ತುಲಸಿದಾಸ ರಾಮಾಯಣದಿಂದ ಕೆಲವು ಭಾಗಗಳನ್ನೂ ಪಠನಮಾಡಿದರು ಡಾಕ್ಟರರು ಆಗಾಗ ಬಂದು ನೋಡುತ್ತಿದ್ದಾರೆ. ದಿನನಿತ್ಯ ಅವರ ವೈದ್ಯಕೀಯ ವ್ಯವಸ್ಥೆ ಮಾಡಲಾಗಿದೆ

ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್ ಮತ್ತು ಶ್ರೀ ಶೇಠ್ ಘನಶ್ಯಾಮದಾಸ ಬಿರ್ಲಾರು ಡಿಲ್ಲಿಯಲ್ಲಿದ್ದು ವೈಸರಾಯ್ ಮಂತ್ರಿಮಂಡಳ ಮಂಡಿತರಾಗಿರುವ ಕೆಲವು ಭಾರತೀಯರನ್ನು ಕಂಡು, ಗಾಂಧಿಜಿ ಉಪವಾಸಕ್ಕೈಕೊಂಡ ಸಂದರ್ಭದ ವಿಚಾರವಾಗಿ ಮಾತನಾಡಿದರು. ರೂಸ್‌ವೆಲ್ಟರ ರಾಯಭಾರಿಯಾಗಿರುವ ಫಿಲಿಪ್ಸರು ಕಲ್ಕತ್ತಕ್ಕೆ ಹೊರಡುವ ಕಾರ್ಯಕ್ರಮವನ್ನು ನಿಲ್ಲಿಸಿ ಈ ಸಂಬಂಧವಾಗಿ ಡಿಲ್ಲಿಯಲ್ಲಿಯೇ ತಂಗಿದ್ದಾರೆ ರಾಜಾಜಿಯವರು ಒಂದು ದೀರ್ಘ ಪ್ರಕಟಣೆ ಕೊಟ್ಟು, ಗಾಂಧಿಜಿಯ ಉಪವಾಸದ ಭೀಕರತೆಯನ್ನು ತಿಳಿಸುತ್ತಾ ಅವರನ್ನು ಬಿಡುಗಡೆ ಮಾಡಬೇಕೆಂದೂ, ವೈಸರಾಯರಂತೆ ಗಾಂಧಿಜಿಯಾದರೂ ಭಾರತದ ಬಿಕ್ಕಟ್ಟು ಬಗೆಹರಿಸುವಲ್ಲಿ ಆತುರರಿರುವರೆಂದೂ ತಿಳಿಸಿದ್ದಾರೆ. ಹೀಗೆ ದೇಶದ ಮೂಲೆ ಮೂಲೆಗಳಿಂದ ಗಾಂಧಿಜಿಯ ಬಿಡುಗಡೆ ಮಾಡಬೇಕೆಂಬ ಬಗ್ಗೆ ವೈಸರಾಯರಿಗೆ ತಂತಿಗಳು ಹೋಗುತ್ತಿವೆ, ಮುಂಬಾ ಕಡೆಗಳಲ್ಲಿ ಅವರಿಗೆ ಆಯುಃ ಪ್ರಾರ್ಥನೆಗಳಾಗಿವೆ, ಹಲವು ಕಡೆ ಹರತಾಳಗಳಾಚರಿಸಲ್ಪಟ್ಟಿವೆ

ಉಪವಾಸದ ಎರಡನೇ ದಿನವೂ ಗಾಂಧಿಜಿಯನ್ನು ಡಾಕ್ಟರರು ಪರೀಕ್ಷಿಸಿ ಅವರ ದೇಹಸ್ಥಿತಿ ಕೆಟ್ಟಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಬಂಧನದಲ್ಲಿರುವ ಡಾ| ಗಿಲ್ಡರನ್ನು ಡಾ| ಸುಶೀಲಾ ನಾಯರರ ಕೇಳಿಕೆಯಂತೆ ಗಾಂಧಿಜಿಯು ಬಳಿಯಿರಲು ಸರಕಾರವು ಆಗಾಖಾನ ಬಂಗ್ಲೆಗೆ ವರ್ಗಾಯಿಸಿದೆ ಡಾ| ಗಿಲ್ಡರ್, ಡಾ| ನಾಯರ್ ಸರೋಜಿನಿ ದೇವಿ ಮತ್ತು ಮೀರಾಬೆನ್ ಇವರು ಗಾಂಧಿಜಿಯ ಶುಶ್ರೂಷೆ ಮಾಡುತ್ತಿದ್ದಾರೆ ೧೯೩೩ರ ಮಹಾತ್ಮರ ಉಪವಾಸ ಕಾಲದಲ್ಲಿ ಅವರ ಸೇವೆ ಮಾಡಿದ ಕಲ್ಕತ್ತದ ಡಾ| ಬಿ ಸಿ ರೊಯ್ಯವರನ್ನು ಮಹಾತ್ಮರ ಕೇಳಿಕೆಯ ಮೇರೆಗೆ ಆಗಾಖಾನ ಬಂಗಲೆಗೆ ಬರಲು ಸರಕಾರವು ಅನುಮತಿಯಿತ್ತಿದೆ. ಗಾಂಧಿಜಿಯ ಶರೀರ ಪ್ರಕೃತಿಯನ್ನು ಗಮನಿಸಿದರೆ ಈ ಸಲದ ಉಪವಾಸವು ಬಹಳ ಕಳವಳವನ್ನು ಹುಟ್ಟಿಸುವಂಥಾದ್ದಾಗಿದೆಯೆಂದು ಡಾ| ರೊಯ್ಯವರು ಕಲ್ಕತ್ತದಿಂದ ಪೂನಕ್ಕೆ ಹೊರಡುವಾಗ ಹೇಳಿದರು. ಉಪವಾಸದ ಎರಡನೆಯ ದಿನ ಮೊದಲ್ಗೊಂಡೇ, ಗಾಂಧಿಜಿಯವರು ಸ್ವರ್ಗವಾಸಿ ಮಹಾದೇವ ದೇಸಾಯಿಯವರ ಸಮಾಧಿಗೆ ಪ್ರತಿದಿನ ಹೋಗುತ್ತಿರುವ ಕಾರ್ಯಕ್ರಮವನ್ನು ನಿಲ್ಲಿಸಿದರು. ತಾ. ೧೩ರಂದು ಪೂನದ ಹವೆ ಪಕ್ಕನೆ ಬಿಸಿಯೇರಿದ್ದರಿಂದ ಗಾಂಧಿಜಿಯನ್ನು ತುಸು ಹೊತ್ತು ಹೊರಜಗಲಿಯಲ್ಲಿ ಮಲಗಿಸಿದರು. ಶ್ರೀಮತಿ ಮಹಾದೇವ ದೇಸಾಯಿಯವರು ತನ್ನ ಪುತ್ರನೊಂದಿಗೆ ಗಾಂಧಿಜಿ ದರ್ಶನಾಕಾಂಕ್ಷಿಗಳಾಗಿ ಪೂನಕ್ಕೆ ಬಂದಿದ್ದಾರೆ.

ಮುಖಂಡರ ಪರಿಷತ್ತು

ಶ್ರೀಗಳಾದ ರಾಜಗೋಪಾಲಾಚಾರಿ, ಕೆ. ಎಂ. ಮುನ್ಷಿ, ಕೆ. ಶ್ರೀನಿವಾಸನ್, ಎನ್. ಎಂ. ಜೋಶಿ, ಜಿ ಎಲ್ ಮೆಥಾ, ಡಾ| ಬೆನರ್ಜಿ, ಭಾರತದ ಮೆಟ್ರೋಪೊಲಿಟನ್, ಪಂಡಿತ ಕುಂಜ್ರು, ಕಾಜಿ ಅಬ್ದುಲ್ ರಶೀದ್ ಚೌಧರಿ, ಸರ್ ಎ ಎಚ್. ಗಜ್ನವಿ ಮೊದಲಾದವರು ಸಹಿ ಹಾಕಿ, ಗಾಂಧಿಜಿ ಉಪವಾಸದ ಸಂಬಂಧ ವಿಚಾರ ಮಾಡುವರೆ ಒಂದು ಸರ್ವಪಕ್ಷೀಯ ಸಮ್ಮೇಳನವನ್ನು ಸೇರಿಸಲು ಭಾರತದ ೧೫೦ ಮಂದಿ ಮುಖಂಡರಿಗೆ ಆಮಂತ್ರಣ ಕೊಟ್ಟಿದ್ದಾರೆ ಆಮಂತ್ರಿತರಲ್ಲಿ ಶ್ರೀಗಳಾದ ಜಿನ್ನ, ಸಾವರ್ಕರ್, ಸಪ್ರು, ಜಯಕರ್, ಮಾಳವೀಯ, ಭಾರತದ ಧರ್ಮಗುರು, ಹಕ್, ಬಿರ್ಲಾ, ಮೂಂಜೆ ತಾತಾ, ತಾರಾಸಿಂಗ್ ಮೊದಲಾದವರೂ ಇದ್ದಾರೆ ಸಪ್ರುಗಳು ಬರಲು ಒಪ್ಪಿದ್ದಾರಾಗಿ ತಿಳಿದಿದೆ

ಗಾಂಧಿಜಿ ಉಪವಾಸ ತೊಡಗಿದ ಸುದ್ದಿ ಕೇಳಿ ಸೇವಾಗ್ರಾಮದಲ್ಲಿ ತುಂಬಾ ಕಳವಳವುಂಟಾಯಿತು ಅವರಿಗೆ ಆಯುಃ ಪ್ರಾರ್ಥನೆ ಮಾಡಲಾಯಿತು. ಮೊನ್ನೆ ತಾನೇ ೬೩ ದಿನಗಳ ಉಪವಾಸ ತೀರಿಸಿ, ಸುಧಾರಿಸುತ್ತಿರುವ ಪ್ರೊ| ಭನ್ಸಾಲಿಯವರು ಈ ಸುದ್ದಿ ಕೇಳಿದ ಕೂಡಲೇ ಪುನಃ ಸಹಾನುಭೂತಿಪರ ಉಪವಾಸ ತೊಡಗಿದರು ಆದರೆ ಅವರ ಮಿತ್ರರೆಲ್ಲಾ ಸೇರಿ ನೀವು ಉಪವಾಸ ಮಾಡುವ ಸುದ್ದಿ ಕೇಳಿದರೆ ಗಾಂಧಿಜಿಗೆ ಮತ್ತಷ್ಟು ಕಳವಳವುಂಟಾದೀತೆಂದು ಹೇಳಿದ್ದರಿಂದ ಅವರು ತಾ ೧೪ರಂದು ಉಪವಾಸ ನಿಲ್ಲಿಸಿದರು. ನಾಸಿಕದ ಶ್ರೀ ರಾಮನಾಚಾರ್ಯ ದಾಮೋದರ ಪದ್ಮನಾಭಿಯೆಂಬವರು ಗಾಂಧಿಜಿ ಸಹಾನುಭೂತಿಪರ ಉಪವಾಸ ತೊಡಗಿದ್ದಾರೆ

The Canara Banking Corporation Ltd.

(Incorporated in British India)

Head Office: UDIPI

Estd 1906.

Applications are invited for the posts of Agents and Accountants in the Corporation to serve in branches outside the District. Selected candidates will have to undergo a probationery course as per rules. Graduates or persons with previous banking experience or who have passed Banking Examinations will be preferred. Persons who have not passed atleast the S. S. L. C. or other equivalent exminations need not apply.

Applications stating age, qualifications, etc together with 2 good references must reach the undersigned before the 15th February, 1943.

Udipi, 21-1-1943. V. R KAMATH, B A, LL B, *Manager*

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಲಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4 ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5. 28 ರಾತ್ತಲಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6 ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯು ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD: 1931

HEAD OFFICE Mangalore. ***BRANCHES*** Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಳಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳು ಕಡ್ಡಿ, ಪಿಕ್ಕ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀನರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:–1. ವಂಟಾರ ಗಲ್ಲಿ ಹುಬ್ಬಳ್ಳಿ.
2. 36 ಫಸ್ಟಕ್ರೋಸ್ಟ್‌ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 26—2—1943 [ಸಂಚಿಕೆ 8]

ವೈಸರಾಯರ ಮಂತ್ರಿಮಂಡಳದಿಂದ

ಆಣೆ ಸರ್ಕಾರ್ ಮೋಡಿಯವರು ಹೊರಬಂದರು!

ಮಿಡ್ನಾಪುರ ಅತ್ಯಾಚಾರ ವಿಚಾರಣೆಯ ಆಶ್ವಾಸನ!

ಸಂಪಾದಕ ಪರಿಷತ್ತು ಪುನಃ ಸೇರಿತು।

ಮಿಡ್ನಾಪುರ ಜಿಲ್ಲೆಯ ತಾಮಲೂಕ ಮತ್ತು ಕಂಟಾಯಿಗಳಲ್ಲಿ ನಡೆಸಿದ ದಬ್ಬಾಳಿಕೆಯ ವಿಚಾರಣೆಯಾಗಬೇಕೆಂಬ ಸೂಚನೆಯು ಬಂಗಾಳ ಅಸೆಂಬ್ಲಿಯಲ್ಲಿ ಸುಮಾರು ಎರಡು ಗಂಟೆಗಳ ತನಕ ಚರ್ಚಿಸಲ್ಪಟ್ಟಿತು. ನಿರಪರಾಧೀ ಜನರನ್ನು ಬಂಧಿಸಿದ್ದು, ಆಸ್ತಿ ಪಾಸ್ತಿಗಳನ್ನು ಹಾನಿಗೊಳಿಸಿದ್ದು, ಮನೆ ಮಠಗಳನ್ನು ಸುಟ್ಟುಹಾಕಿದ್ದು, ಹೆಂಗಸರ ಮೇಲೆ ಬಲಾತ್ಕಾರ ಮಾಡಿದ್ದು ಮೊದಲಾದ ಸಂಗತಿಗಳು ಆ ಚರ್ಚೆಯ ಕಾಲದಲ್ಲಿ ಪ್ರಜಾ ಪ್ರತಿನಿಧಿಗಳಿಂದ ವಿವರಿಸಲ್ಪಟ್ಟು ಇಂಥಾ ಅನ್ಯಾಯದ ಕುರಿತು ನಿಷ್ಪಕ್ಷಪಾತ ವಿಚಾರಣೆ ಆಗಬೇಕೆಂದು ಸದಸ್ಯರು ಸಾರಿದರು. ಕಾಂಗ್ರೆಸ್ ಪಕ್ಷದ ಡಾ। ನಲಿನಾಕ್ಷಿಸನ್ಯಾಳರು ಈ ಸೂಚನೆಯನ್ನು ಮಂಡಿಸಿದರು. ಸರಕಾರದ ಬೆಂಬಲಿಗರಾದ ಶ್ರೀ ಎನ್ ಎನ್ ಚಕ್ರವರ್ತಿಗಳು ಇದನ್ನು ಅನುಮೋದಿಸಿದರು. ಡಾ। ಶ್ಯಾಮ ಪ್ರಸಾದ ಮುಖರ್ಜಿ ಮತ್ತು ಸರ್ ನಾಜಿಮುದ್ದೀನರು ಈ ಚರ್ಚೆಯಲ್ಲಿ ಪ್ರಮುಖ ಭಾಗ ವಹಿಸಿದ್ದರು (ಡಾ। ಶ್ಯಾಮ ಪ್ರಸಾದ ಮುಖರ್ಜಿಯವರು, ಮಿಡ್ನಾಪುರದಲ್ಲಿ ಆದ ಅತ್ಯಾಚಾರದ ಕುರಿತು ಸರಕಾರವು ಕಣ್ಮುಚ್ಚಿರುವುದನ್ನು ಖಂಡಿಸಿ, ವೈಸರಾಯರಿಗೂ, ಬಂಗಾಳದ ಪ್ರಧಾನಮಂತ್ರಿಗಳಿಗೂ ಒಂದು ದೀರ್ಘ ಪತ್ರ ಬರೆದು ತಮ್ಮ ಬಂಗಾಳದ ಮಂತ್ರಿ ಪದವಿಗೆ ರಾಜಿನಾಮೆಯಿತ್ತ ವಿಚಾರವನ್ನು ವಾಚಕರು ಇಲ್ಲಿ ನೆನಪಿಗೆ ತಂದುಕೊಳ್ಳುವುದು ಅವಶ್ಯವಾಗಿದೆ)— ಹೀಗೆ ಎಸೆಂಬ್ಲಿಯಲ್ಲಿ ಚರ್ಚಿಸಿದವರೆಲ್ಲರೂ, ಅತ್ಯಾಚಾರ ಮಾಡಿದ ಅಧಿಕಾರಿಗಳ ತಪ್ಪುಗಳನ್ನು ಬಹಿರಂಗ ಪಡಿಸಬೇಕೆಂದು ಹೇಳಿದರು. ಮುಖ್ಯಮಂತ್ರಿಗಳು ಈ ವಾದಕ್ಕೆ ಉತ್ತರ ಕೊಡುತ್ತಾ, ಮಿಡ್ನಾಪುರದಲ್ಲಿ ಕಳೆದ ಆಗಸ್ಟ್ ತಿಂಗಳಲ್ಲಿ ಒಂದು ಪ್ರತಿ ಸರಕಾರವೇ ಸ್ಥಾಪಿಸಲ್ಪಟ್ಟು, ಅನೇಕ ಸರಕಾರೀ ಅಧಿಕಾರಿಗಳನ್ನು ಅಲ್ಲಿನ ಜನರು 'ಗಾಂಧಿ ಜೈಲಿ'ನಲ್ಲಿ ಹಾಕಿದ ವಿಷಯಗಳನ್ನು ವಿವರಿಸಿ, ಈ ಪರಿಸ್ಥಿತಿ ಬಂದಾಗ ಸರಕಾರವು ಉಗ್ರೋಪಾಯ ಕೈಕೊಳ್ಳಬೇಕಾದರೂ, ಅಲ್ಲಿ ಸರಕಾರೀ ಕಡೆಯಿಂದ ಬಹಳ ಅತ್ಯಾಚಾರಗಳಾಗಿವೆಂದು ತನಗೂ ಸುದ್ದಿಬಂದಿರುವುದರಿಂದ ಅದರ ವಿಚಾರಣೆಯಾಗಬೇಕೆಂಬುದಕ್ಕೆ ಒಪ್ಪಿದರು. ಮಿಡ್ನಾಪುರದಲ್ಲಿ ಬಿರುಗಾಳಿ ಅನಾಹುತವೂ, ಹೆಂಗುಸರ ಮೇಲೆ ಆದ ಅತ್ಯಾಚಾರ ವಿಚಾರವೂ ಬಹಳ ಅಸಹನೀಯವೆಂದರು. ಆದ್ದರಿಂದ ಇದರ ಬಗ್ಗೆ ನ್ಯಾಯ ದೃಷ್ಟಿಯಿಂದ ವಿಚಾರಣೆ ನಡೆಸಲು ಓರ್ವ ನಿಷ್ಪಕ್ಷಪಾತೀ ನ್ಯಾಯಾಧೀಶರನ್ನು ನಿಯಮಿಸುವುದಾಗಿ ಆಶ್ವಾಸನೆಯಿತ್ತರು. ಅತ್ಯಾಚಾರ ಮಾಡಿದ ಅಧಿಕಾರಿಗಳಿಗಾದರೂ ಶಿಕ್ಷೆಯಾಗಿ ನ್ಯಾಯ ಸ್ಥಾಪನೆಯಾಗುವುದು ಸಹಜವಾಗಿದೆ. ಉಳಿದ ಪ್ರಾಂತಗಳ ಅಧಿಕಾರಿಗಳೂ ಬಂಗಾಳದ ಮಾದರಿಯನ್ನು ಅನುಸರಿಸಬಾರದೇಕೆ?

೧೦೨೮ ಜನ ಸತ್ತರು!

ಭಾರತಮಂತ್ರಿ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ಆಗಸ್ಟ ತಿಂಗಳಿಂದ ನವಂಬರ ವರೆಗೆ ಹಿಂದುಸ್ಥಾನದಲ್ಲಿ ಚಳವಳದಿಂದ ೧೦೨೮ ಜನರು ಸತ್ತರೆಂದೂ, ೩,೨೧೫ ಜನರು ಗಾಯಗೊಂಡರೆಂದೂ ಹೇಳಿದರು. ಒಟ್ಟು ೯೫೮ ಜನರಿಗೆ ಛಡೀ ಏಟಿನ ಶಿಕ್ಷೆ ಕೊಡಲಾಯಿತಂತೆ, ಸಂಯುಕ್ತ ಪ್ರಾಂತದಲ್ಲಿ ಎಷ್ಟು ಜನರಿಗೆ ಶಿಕ್ಷೆ ಕೊಡಲಾಯಿತೆಂಬದರ ವರದಿಯೇ ಬಂದಿಲ್ಲವೆಂದರು.

ಸರದಾರ್ ಸಂತಸಿಂಗರು ಕೇಂದ್ರ ಶಾಸನ ಸಭೆಯಲ್ಲಿ ಹಾಕಿದ ಪ್ರಶ್ನೆಗೆ ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್‌ರು ಉತ್ತರ ಕೊಡುತ್ತ, 'ಕಾಂಗ್ರೆಸ್ ನಾಯಕರ ಬಂಧನವಾದ ಕೂಡಲೆ ಆದ ಗಲಾಟೆಗಳ ಸಂಬಂಧವಾಗಿ ಸರಕಾರದವರ ೧೯೪೨ನೆ ವರ್ಷಾಂತ್ಯಕ್ಕೆ ೫೩೮ ಸಾರೆ ಗುಂಡು ಹಾರಿಸಿದರು. ಪೋಲೀಸಿನವರು ಮಾತ್ರ ೪೭೦ ಸಲ ಗುಂಡು ಹಾರಿಸಿದರು. ಸೈನಿಕರೂ, ಪೋಲೀಸಿನವರೂ ಗುಂಡು ಹಾರಿಸಿ ೯೪೦ ಮಂದಿ ಸತ್ತರು, ೧೬೩೦ ಮಂದಿಗೆ ಗಾಯಗಳಾದವು. ಜತೆಗೆ ೬೦,೨೨೯ ಮಂದಿಯನ್ನು ಹಿಡಿದು ಬಂಧಿಸಿದರು. ೨೬೦೦೦ ಮಂದಿಯನ್ನು ನ್ಯಾಯಸ್ಥಾನಗಳಲ್ಲಿ ವಿಚಾರಣೆಗೆ ಗುರಿಪಡಿಸಿ ಅಪರಾಧಿಗಳೆಂದು ತೀರ್ಮಾನಿಸಿದರು. ೧೮,೦೦೦ ಮಂದಿಯನ್ನು ಭಾರತ್ನ ಸಂರಕ್ಷಣಾ ಶಾಸನದ ೨೬ ಮತ್ತು ೧೨೯ನೆ ವಿಧಿಯ ಪ್ರಕಾರ ಶಿಕ್ಷಿಸಲಾಯಿತು' ಎಂಬುದಾಗಿ ಹೇಳಿದರು. ಈ ಅಂಕೆಗಳು ಬ್ರಿಟಿಷ್ ಸರಕಾರದ ಘನತೆ ಗೌರವಗಳನ್ನು ಹೆಚ್ಚಿಸುತ್ತವೆಯೋ?

ಸದ್ಯದ ರಾಜಕೀಯ ಗಲಭೆಯಿಂದ ಬಿ ಬಿ ಡಬ್ಲ್ಯು ಮತ್ತು ಇ ಆಯ್ ರೇಲ್ವೆಗಳಿಗೆ ೯೬ ಮತ್ತು ೧೪ ಲಕ್ಷ ರೂ. ನಷ್ಟವಾಗಿದೆಯೆಂದು ಸರ್ ಎಡ್ವರ್ಡ್ ಬೆಂಥಾಲರು ಅಸೆಂಬ್ಲಿಯಲ್ಲಿ ಹೇಳಿದರು. ಮಾಲಗಾಡಿಯಲ್ಲಿ ಆದ ನಷ್ಟವನ್ನು ಇದರಲ್ಲಿ ಕೂಡಿಸಿಲ್ಲವಂತೆ. ಬಿ ಬಿ ಎನ್ ಡಬ್ಲ್ಯು ರೇಲ್ವೆಯ ಸ್ಟೇಶನ್‌ಗಳಲ್ಲಿ ಲೂಟಿಯಾದ ಸಾಮಾನುಗಳ ಬೆಲೆಯು ೬ ಲಕ್ಷ ರೂಪಾಯಿಗಳಿಗೆ ಮೀರಬಹುದೆಂದೂ, ಇ ಆಯ್ ರೇಲ್ವೆಯಲ್ಲಿ ಇನ್ನೂ ಅಂದಾಜ ಮಾಡಿಲ್ಲವೆಂದೂ ಹೇಳಿದರು.

ಪುನಃ ಸಂಪಾದಕ ಪರಿಷತ್ತು

ದಿಲ್ಲಿಯಲ್ಲಿ ಕಳೆದವಾರ ಅಖಿಲಭಾರತ ಸಂಪಾದಕ ಪರಿಷತ್ತಿನ ಸ್ಥಾಯೀ ಸಮಿತಿಯ ಸಭೆ ಸೇರಿತು. ಆ ಸಭೆಯಲ್ಲಿ ಗಾಂಧಿಜಿಯವರ ಉಪವಾಸದ ಕುರಿತು ವಿಚಾರಿಸಲ್ಪಟ್ಟು ಅವರನ್ನು ಶರತವಿಲ್ಲದೆ ಬಿಡುಗಡೆ ಮಾಡಬೇಕೆಂದು ನಿರ್ಣಯವಾಯಿತು. ಇದು ಮಾತ್ರವಲ್ಲದೆ ಇನ್ನೂ ಕೆಲವು ವಿಚಾರಗಳು ಚರ್ಚಿಸಲ್ಪಟ್ಟು ನಿರ್ಣಯವಾದವು. ಮಹಾತ್ಮಾಜಿಯವರ ಉಪವಾಸದ ಸುದ್ದಿಯ ಪ್ರಕಟಣೆಯ ಸಂಬಂಧ ಈ ದೇಶದಲ್ಲಿ ಮತ್ತು ಪರದೇಶದಲ್ಲಿ ಕಠಿಣ ನಿರ್ಬಂಧ ಹಾಕಿ, ಜನರಿಗೆ ಸತ್ಯಾಂಶ ತಿಳಿಯದಂತೆ ಸರಕಾರವು ಮಾಡಿರುವುದನ್ನು ನಿಷೇಧಿಸಲಾಯಿತು. ಮಹಾತ್ಮರ ಆರೋಗ್ಯದ ಬಗ್ಗೆ ಡಾಕ್ಟರರ ಸಹಿಯಿಂದ ಸರಕಾರವು ಹೊರಡಿಸುವ ಪ್ರಕಟಣೆಗಳಲ್ಲಿ ಉಪವಾಸದ ಇತರ ಉಪಯುಕ್ತ ಸುದ್ದಿಗಳನ್ನೂ ಸೇರಿಸಿಕೊಳ್ಳಬೇಕೆಂದು ವಿನಂತಿಸಲಾಯಿತು, ಮಾತ್ರವಲ್ಲದೆ ಪತ್ರಿಕೆಗಳ ಅಧಿಕೃತ ಬಾತ್ಮೀದಾರರಿಗೆ ಗಾಂಧಿಜಿಯ ಉಪವಾಸದ ವಿವರಗಳನ್ನು ತಿಳಿಸುವರೆ ಆಸ್ಪದ ಕೊಡಬೇಕೆಂದೂ ಕೇಳಿಕೊಳ್ಳಲಾಯಿತು. ಸುದ್ದಿ ಮತ್ತು ಸಂಪಾದಕೀಯ ಲೇಖನಗಳ ಮೇಲೆ ಪ್ರಾಂತಿಕ ಸರಕಾರಗಳು ನಿರ್ಬಂಧಾಜ್ಞೆಗಳನ್ನು ಹಾಕುವುದನ್ನೂ ನಿಷೇಧಿಸಲಾಯಿತು. ಬೀಹಾರಿನಲ್ಲೀಗ ಶಾಂತತೆ ನೆಲಸಿರುವುದರಿಂದ, ಸರ್ಚ್‌ಲೈಟ್ ಪತ್ರಿಕೆಯ ಮೇಲೆ ಹಾಕಿದ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳಬೇಕೆಂದು ನಿರ್ಣಯಿಸಲಾಯಿತು. ಹೀಗೆ ಅಖಿಲಭಾರತ ಸಂಪಾದಕರ ಸ್ಥಾಯಿ ಸಮಿತಿಯವರೇನೋ ಕೆಲವು ನಿರ್ಣಯಗಳನ್ನು ಮಾಡಿದರು, ತಮ್ಮ ನ್ಯಾಯವಾದ ಹಕ್ಕಿಗಾಗಿ ಕೇಳಿಕೊಂಡರು, ಸರಕಾರದ ನಿರ್ಬಂಧದ ಕುರಿತು ತಮ್ಮ ಅತೃಪ್ತಿಯನ್ನು ಸೂಚಿಸಿದರು. ಆದರೆ ಅದಕ್ಕೆಲ್ಲಾ ಸರಕಾರ ಗಮನ ಕೊಡುವುದೇ ನೋಡಬೇಕು. ಆದರೆ ಕಳೆದ ಸಲ ಪ್ರೊ। ಭನ್ಸಾಲಿಯವರು ಉಪವಾಸ ತೊಡಗಿದಾಗ, ಸರಕಾರವು ಅವರ ಉಪವಾಸಕ್ಕೆ ಸಂಬಧಿಸಿದ ಸುದ್ದಿ ಪ್ರಕಟಿಸಬಾರದೆಂದು ಹೇಳಿದ್ದರಿಂದ, ಅದರ ನಿಷೇಧಾರ್ಥವೆಂದು ಅಖಿಲ ಭಾರತದ ಹಲವು ಪತ್ರಿಕೆಗಳು, ಸಂಪಾದಕರ ಪರಿಷತ್ತಿನ ಅಧ್ಯಕ್ಷರ ಕೇಳಿಕೆಯಿಂದ ಒಂದೆರಡು ದಿನದ ಹರತಾಳವನ್ನಾಚರಿಸಿದವೆಂಬ ವಿಷಯವನ್ನು ಪುನಃ ಇಲ್ಲಿ ನೆನಪು ಮಾಡುವುದು ಅವಶ್ಯವಾಗಿದೆ. ಹೀಗೆ ಭಾರತದ ಪತ್ರಿಕೆಗಳು, ಇತರ ಮುಖಂಡರಂತೆ ನಿರ್ಣಯ ಮಾಡುವುದು ಮಾತ್ರವಲ್ಲದೆ, ಪ್ರತ್ಯಕ್ಷ ಕಾರ್ಯವನ್ನು ಕೈಕೊಳ್ಳುವರೆಯೂ ಕಲಿತಿವೆ. ಅವರ ಹಿಂದಿನಾ ಪಾಠವು ಈ ಸಲದಲ್ಲಿಯೂ ಪುನರಾವೃತ್ತಿಯಾದೀತೇ ಎಂದು ಹಲವರು ಶಂಕಿಸುತ್ತಾರೆ. ಆದರೆ ಅಂತಹದ ಘಟನೆ ಬರದೆ ಎಲ್ಲವೂ ಸುಗಮವಾಗಿ ಸಾಗುವಂತೆ ಮಾಡುವ ಜವಾಬ್ದಾರಿಯು ಸರಕಾರದ ಅಧೀನವಿದೆ. ಸರಕಾರವು ಈ ಸಲವಾದರೂ ಹಿಂದಿನಂತೆ ಸಂದರ್ಭದ ಸದುಪಯೋಗ ಮಾಡಿಕೊಂಡು ಗಂಡಾಂತರವನ್ನು ಪರಿಹರಿಸುವ ಮುತ್ಸದ್ದಿತನ ತೋರಿಸುವುದೇ ಎಂದು ನೋಡಬೇಕಾಗಿದೆ.

ಆಣೆ ಸರ್ಕಾರ್ ಮೋಡಿ ರಾಜಿನಾಮೆ

ವೈಸರಾಯರ ಮಂತ್ರಿಮಂಡಳ ಮಂಡಿತರಾಗಿದ್ದ ಶ್ರೀಗಳಾದ ಆಣೆ, ಸರ್ಕಾರ್ ಮತ್ತು ಮೋಡಿ ತ್ರಯರು, ಗಾಂಧಿಜಿಯವರ ಉಪವಾಸದ ವಿಷಯದಲ್ಲಿ ವೈಸರಾಯರ ಅಭಿಪ್ರಾಯಕ್ಕೆ ಮತಭೇದ ತೋರಿಸಿ ತಮ್ಮ ಸ್ಥಳಗಳಿಗೆ ರಾಜಿನಾಮ ಕೊಟ್ಟಿದ್ದಾರೆ. ಕಳೆದ ಸಲ, ಆಗಸ್ಟ್ ತಿಂಗಳಲ್ಲಿ ಗಾಂಧಿಜಿ ಮೊದಲಾದ ಅಖಿಲಭಾರತದ ಸಮಸ್ತ ಕಾಂಗ್ರೆಸ್ ಮುಖಂಡರನ್ನು 'ಏಕ್‌ದಮ್' ಬಂಧಿಸಿ ಗೊತ್ತುಗುರಿಯಿಲ್ಲದೆ ಸೆರೆಮನೆ ಸೇರಿಸಿ, ಜನರು ಸಹಜವಾಗಿ ಉದ್ರೇಕಗೊಂಡಾಗ, ಅವರ ಮೇಲೆ ದಂಡಪ್ರಯೋಗ ಕಾರ್ಯಕ್ರಮವನ್ನು ಕೈಕೊಂಡ ವಿಷಯದಲ್ಲಿ ವೈಸರಾಯರು, ತಾವು ತಮ್ಮ ಮಂತ್ರಿಮಂಡಳದಲ್ಲಿರುವ ಹನ್ನೊಂದು ಮಂದಿ ಭಾರತೀಯ ಅನಧಿಕಾರೀ ಸದಸ್ಯರ ಏಕಮತದ ಒಪ್ಪಿಗೆಯಿಂದ ಈ ಕಾರ್ಯಕ್ರಮ ಕೈಕೊಂಡಿರುವುದಾಗಿ ಸಾರಿದರು. (ಆಗಲೂ ಆಣೆಯವರೇನೋ ರಾಮೇಶ್ವರ ಯಾತ್ರೆಗೆ ತೆರಳಿದರು. ಸರ್ಕಾರರೂ ದಿಲ್ಲಿಯಲ್ಲಿರಲಿಲ್ಲ, ಸರ್ ಸಿ ಪಿ ಯವರು ತಿರುವಾಂಕೂರಿಂದ ಬಿಟ್ಟುಹೋಗಿರಲಿಲ್ಲವೆಂದು ಪತ್ರಿಕೆಗಳಲ್ಲಿ ಸುದ್ದಿ ಬಂದಿತ್ತು) ಆದರೆ ಈ ಸಲ ಗಾಂಧಿಜಿಯ ಉಪವಾಸದ ವಿಷಯದಲ್ಲಿ ಸರಕಾರವು ಅಂಥಾ ಪ್ರಕಟಣೆಯನ್ನು ಮಾಡಲಿಲ್ಲವೆಂಬುದನ್ನು ನಾವು ಮರೆಯಬಾರದು. ಮೊದಲಿನ ಸಲವಾದರೂ, ಸರ್ ಸಿ ಪಿ ಯವರು ರಾಜಿನಾಮೆ ಕೊಟ್ಟದ್ದು, ಅವರಿಗೆ ವೈಸರಾಯರ ಅಭಿಪ್ರಾಯದ ವಿಷಯ ಮತಭೇದದಿಂದಾಗಿದೆಯೆಂದು ಅಲ್ಲಲ್ಲಿ ಸುದ್ದಿ ಹರಡಿತ್ತು. ಅಂತೂ ಆಣೆ ಮೊದಲಾದವರು ಇದುವರೆಗೂ ಸಹಿಸಿಕೊಂಡಿದ್ದರು. ಆದರೆ ಇಡೀ ರಾಷ್ಟ್ರದ ಜೀವಾಳದಂತಿದ್ದ ಗಾಂಧಿಜಿ, ತನಗೆ ಆದ ಅನ್ಯಾಯಕ್ಕಾಗಿ ಉಪವಾಸ ಮಾಡುತ್ತೇನೆಂದು ಸಾರಿದಾಗ, ಆ ವಿಷಯದಲ್ಲಿ ತಮಗೇನು ಮಾಡಲೂ ಸಾಧ್ಯವಿಲ್ಲದಿರಲು, ಆಣೆ ಮೊದಲಾದವರು ರಾಜಿನಾಮೆ ಕೊಟ್ಟ ಬಗ್ಗೆ ಅವರನ್ನು ಈಗ ದೇಶದ ಮುಂದಾಳುಗಳನೇಕರು ಅಭಿನಂದಿಸಿದ್ದಾರೆ. ಇಷ್ಟಾದರೂ ಆತ್ಮಗೌರವ ಅವರು ಕಡೆಗಾದರೂ ತೋರಿಸಿದರಲ್ಲಾ ಎಂದು! ವೈಸರಾಯರು ಈ ಮೂವರ ರಾಜಿನಾಮೆ ಸ್ವೀಕರಿಸಿದ್ದು ಮಾತ್ರವಲ್ಲದೆ ಸರಕಾರದ ಧೋರಣೆ ಏನೇನೂ ಬದಲಾಗುವುದಿಲ್ಲವೆಂದೂ ಸ್ಪಷ್ಟ ಹೇಳಿದ್ದಾರೆ. ಇದರಿಂದ ಗಾಂಧಿಜಿ ಇಪ್ಪತ್ತೊಂದು ದಿನಗಳ ಉಪವಾಸ ಮಾಡಿ ಆ ಮಧ್ಯೆ ಸತ್ತುಹೋದರೂ ಸರಕಾರದ, ವೈಸರಾಯರ ಅಸುರಿ ಕಂಪನಿಯ ಹೃದಯ ಕರಗಲಾರದೆಂದು 'ಸ್ಪಷ್ಟವಾದಂತಾಯಿತು'. ರಾಜಿನಾಮೆ ಕೊಟ್ಟ ಮೂವರು ಮಹನೀಯರಿಗೂ, ದಿಲ್ಲಿಯಲ್ಲಿ ಸೇರುವ ಅಖಿಲಭಾರತ ಮುಖಂಡರ ಪರಿಷತ್ತಿಗೆ ಆಮಂತ್ರಣ ಹೋಗಿದೆ, ಸರ್ ಮೋಡಿಯವರು ತಮ್ಮ ಅಗತ್ಯದ ಕಾರ್ಯದಿಂದ ಬರಲಾಗದಿದ್ದರೂ, ಗಾಂಧಿಜಿಯವರ ಬಿಡುಗಡೆಯನ್ನು ಹಾರೈಸಿದ್ದು, ಇತರರಿಬ್ಬರು, ಆಣೆ ಸರ್ಕಾರರು ಪರಿಷತ್ತಿಗೆ ಹೋಗಿ ತಮ್ಮ ಸಹಾಯ ಸಹಕಾರಗಳನ್ನು ನೀಡಿದ್ದಾರೆ, ಗಾಂಧಿಜಿ ಜೀವ ಉಳಿಸಬೇಕೆಂದು ಪ್ರಯತ್ನ ಮಾಡಿದ್ದಾರೆ.

ಮಹಾತ್ಮರ ಉಪವಾಸ

ಸರಕಾರೀ ಪ್ರಕಟಣೆ ಮತ್ತು ಅಧಿಕೃತ ಸುದ್ದಿಗಳು

ಗಾಂಧಿಜಿ ಆರೋಗ್ಯದ ಕುರಿತು ಪ್ರತಿದಿನ ಸರಕಾರದವರೇ ಡಾಕ್ಟರರ ಸಹ ಸೂಚಿಸಿದ ಪ್ರಕಟಣೆ ಕೊಡುತ್ತಿದ್ದಾರೆ. ಆ ಅಧಿಕೃತ ಸುದ್ದಿಗಳ ಕೆಲವು ಸಾರಾಂಶಗಳನ್ನು ನಾವಿಲ್ಲಿ ಕೊಡುತ್ತೇವೆ. ಕಳೆದ ಸಂಚಿಕೆಯಲ್ಲಿ ತಾ. ೧೬ರ ವರೆಗಿನ ಸಾರಾಂಶ ಕೊಟ್ಟಿದ್ದೆವು.

ಆ ಮೇಲೆ ತಾ. ೧೭ರ ಸುದ್ದಿ ಹೀಗಿದೆ: ಗಾಂಧಿಜಿಯವರ ದೇಹಸ್ಥಿತಿ ಮಂಗಳವಾರಕ್ಕಿಂತ ಉತ್ತಮ ಅಂತರೂ ಗಾಬರಿಗೊಳ್ಳುವ ಪರಿಸ್ಥಿತಿಯೇ ಇದೆ. ಗಾಂಧಿಜಿ ಏಟೇ ಜಲಪಾನ ಮಾಡಿದರು. ಅದರಿಂದ ಓಕರಿಕೆ ನಿಂತಿತು. ಗಾಂಧಿಜಿಯು ವ್ಯಾಕುಲರಾಗಿದರು; ಅವರ ಬಳಿ ಒಂಬತ್ತು ಮಂದಿ ಡಾಕ್ಟರರಿದ್ದಾರೆ. ಡಾ. ಬಿ. ಸಿ. ರಾಯರವರು ಗಾಂಧಿಜಿಯನ್ನು ಪರೀಕ್ಷಿಸಿ 'ಮಹಾತ್ಮರು ಉಪವಾಸ ತೊಡಗಿ ಒಂದು ವಾರವಾದ್ದರಿಂದ ಮೊದಲನೆಯ ಘಟ್ಟ ತೀರಿತು; ಎರಡನೆಯ ವಾರ ಸ್ವಲ್ಪ ಗಂಡಾಂತರದ್ದು' ಎಂದು ಹೇಳಿದರು. ಗಾಂಧಿಜಿಯನ್ನು ಆಸ್ಪತ್ರೆಯ ಮಂಚದ ಮೇಲೆ ಮಲಗಿಸಿದ್ದಾರೆ. ಅವರಿಗೆ ತೊಂದರೆಯಿಲ್ಲದೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸಲು ಈ ವ್ಯವಸ್ಥೆಯಾಗಿದೆ. ಪತ್ರಿಕೆಗಳನ್ನೋದುವುದನ್ನು ಗಾಂಧಿಜಿ ಬಿಟ್ಟುಬಿಟ್ಟಿದ್ದಾರೆ. ಅವರನ್ನು ಭೇಟಿ ಮಾಡುವವರಿಗೆ ಹೆಚ್ಚು ಹೊತ್ತು ಮಾತನಾಡಲು ಬಿಡುವುದಿಲ್ಲ. ಡಾ. ಗಿಲ್ಡರ್ ಗಾಂಧಿಜಿ ಹಾಸಿಗೆ ಬಳಿ ಇದ್ದಾರೆ. ಗಾಂಧಿಜಿ ಬೆಳಗ್ಗೆ ಮತ್ತು ಸಂಜೆಯ ಪ್ರಾರ್ಥನೆಗಳಲ್ಲಿ ಭಾಗವಹಿಸುತ್ತಾರೆ. ಈ ಪ್ರಾರ್ಥನೆಗೆ ಅಲ್ಲಿ ಬಂಧಿತರಾದವರೆಲ್ಲಾ ಸೇರಿರುವರು.

ತಾ. ೧೮ರ ಪ್ರಕಟಣೆಯಲ್ಲಿ ಹೀಗಿದೆ: ಗಾಂಧಿಜಿ ಒಂಬತ್ತು ತಾಸು ನಿದ್ರೆಮಾಡಿದರು; ಆದರೂ ಅವರು ಉಲ್ಲಸಿತರಾಗಿಲ್ಲ. ಅವರ ಮೂತ್ರಪಿಂಡಗಳೂ ಸರಿಯಾಗಿ ಕೆಲಸಮಾಡುವುದಿಲ್ಲ. ಅಷ್ಟು ಎಚ್ಚರಿಕೆಯಿಂದಿಲ್ಲ. ಅವರಿಗೆ 'ಯುರೇಮಿಯ' ಎಂಬ ಮೂತ್ರ ಸಂಬಂಧ ವ್ಯಾಧಿ ಕಂಡುಬಂದಿದೆ. ಹೃದಯ ಶಕ್ತಿ ಸ್ವಲ್ಪ ಕುಗ್ಗಿದೆ. ಒಟ್ಟಿನಲ್ಲಿ ದೇಹಸ್ಥಿತಿ ಮತ್ತೂ ಕಳವಳದ್ದಿದೆ. ಗಾಂಧಿಜಿಯವರನ್ನು ಈ ದಿನ ಪರೀಕ್ಷಿಸಿ ಹೊರಬಂದ ಡಾಕ್ಟರರ ಮುಖ ಸಪ್ಪಗಿತ್ತು. ಈ ಬೆಳಗ್ಗಿನಿಂದ ಗಾಂಧಿಜಿ ಮಾತನಾಡಲು ಮನಸ್ಸೇ ತೋರಿಸುತ್ತಿಲ್ಲ. ತಮ್ಮನ್ನು ಭೇಟಿಮಾಡಲು ಬರುತಿದ್ದವರಲ್ಲಿ ಗಾಂಧಿಜಿ ಮೊದಲು ತೋರಿಸುತ್ತಿದ್ದ ಉತ್ಸಾಹ ಈಗ ತೋರಿಸುವುದಿಲ್ಲ. ಶ್ರೀಮತಿಗಳಾದ ಕೃಷ್ಣಾ ಹಾತೀಸಿಂಗ್, ಲೀಲಾವತಿ ಮುನ್ಷಿ ಮತ್ತು ಗೋಷಿಬೆನ್ ಕ್ಯಾಪ್ಟನ್‌ರವರು ಗಾಂಧಿಜಿಯವರನ್ನು ಈ ದಿನ ಸಂಜೆ ಕೇವಲ ಮೂರು ನಿಮಿಷ ಕಾಲ ಮಾತ್ರ ಭೇಟಿಯಾದರು. ಅವರು ಹೊರಬಂದಾಗ ಅವರ ಮುಖದಲ್ಲಿ ವ್ಯಸನ ತೋರುತ್ತಿತ್ತು. ಅವರು ಏನೊಂದೂ ಮಾತನಾಡಲಿಲ್ಲ.

ತಾ. ೧೯ರ ಪ್ರಕಟಣೆ ಹೀಗಿದೆ: ದೌರ್ಬಲ್ಯವಿರುವುದರಿಂದ ಗಾಂಧಿಜಿ ಹೆಚ್ಚು ಮಾತನಾಡಲು ಶಕ್ತರಾಗಿಲ್ಲ. ಬಾಯಲ್ಲಿ ಜೊಲ್ಲು ಸುರಿಯುತ್ತಿದ್ದುದರಿಂದ ಅವರಿಗೆ ಈ ದಿನ ಸರಿ ನಿದ್ರೆಬರಲಿಲ್ಲ. ನೀರು ಕುಡಿಯಲು ಅವರು ಇತರ ಸಹಾಯವಪೇಕ್ಷಿಸದೆ ತಾವೇ ಲೋಟವನ್ನೆತ್ತಿ ಕುಡಿದರು. ವೈಸರಾಯ್ ಕೌನ್ಸಿಲಿಗೆ ಆಣೆ ನೊಡಲಾದ ಮೂವರು ರಾಜಿನಾಮೆ ಕೊಟ್ಟ ಸಂಗತಿಯನ್ನು ಅಲ್ಲದೆ ಮುಖಂಡ ಪರಿಷತ್ತಿನ ವಿಚಾರವನ್ನೂ ಅವರಿಗೆ ತಿಳಿಸಲಾಯಿತು. ಗಾಂಧಿಜಿ ಕೇಳಿ ಸ್ವಲ್ಪ ಮುಗುಳ್ನಗೆ ನಕ್ಕರು ಮಾತ್ರ. ಆಗಾಖಾನ ಬಂಗ್ಲೆಯಲ್ಲಿರುವ ಅವರ ಬಂಧುಗಳಿಗೆ ಗಾಂಧಿಜಿಯರ ಜೀವನದ ವಿಷಯ ಕಳವಳ ಹೆಚ್ಚಾಗುತ್ತಿದೆ. ಗಾಂಧಿಜಿ ಜೊತೆಯಲ್ಲಿರುವವರಲ್ಲಿ ಇಬ್ಬರಿಗೆ ಅಸ್ವಾಸ್ಥ್ಯವಾಗಿದೆ. ಗಾಂಧಿಜಿ ಒಟ್ಟಿಗೆ ಬೇರೆ ಯಾರಿಗೂ ಇರಲು ಅವಕಾಶ ಕೊಟ್ಟಿಲ್ಲ. ದೇವಿ ಸರೋಜಿನಿಯವರೇ ಅಡಿಗೆ ಮಾಡುತ್ತಾರೆ. ಅಲ್ಲದೆ ಅವರು ಗಾಂಧಿಜಿಯ ಶುಶ್ರೂಷೆಯನ್ನೂ ಮಾಡುತ್ತಿದ್ದಾರೆ. ಪ್ರಾರ್ಥನೆ ಕಾಲದಲ್ಲಿ ಹಲವರು ಸಂಗೀತ ವಾದ್ಯಗಳ ಸಹಾಯದಿಂದ ಭಕ್ತಿಗೀತೆಯನ್ನು ಹಾಡಿ ಅವರ ಬೇಸರವನ್ನು ಪರಿಹರಿಸಲು ಯತ್ನಿಸುವರು. ಸಂದರ್ಶಕರು ಮತ್ತು ಮಿತ್ರರು ಬಂದು ಮಾತನಾಡುತ್ತಿದ್ದರೆ ಮಹಾತ್ಮರಿಗೆ ಹೆಚ್ಚು ಆಯಾಸವಾಗುವುದೆಂದು ಇಂದಿನಿಂದ ಸಂದರ್ಶನಕ್ಕೆ ಯಾರನ್ನೂ ಬಿಡುವುದಿಲ್ಲ. ಗಾಂಧಿಜಿ ಶ್ರೀ ದೇವದಾಸ ಗಾಂಧಿ ಮತ್ತು ಅವರ ಕುಟುಂಬದ ಈ ದಿನ ಮಹಾತ್ಮರಬಳಿ ಬಂದರು.

ತಾ. ೨೦ರ ಪ್ರಕಟಣೆ ಹೀಗೆ ಸಾರುತ್ತದೆ: ಮಹಾತ್ಮರ ಪ್ರಕೃತಿ ಬಹಳ ಕೆಟ್ಟಿದೆ. ಅವರ ಸ್ಥಿತಿ ಚಿಂತಾಜನಕವಿದೆ. ದೇವದಾಸ ಗಾಂಧಿ ಮತ್ತು ಅವರ ಬಳಗ ಈಗ ಮಹಾತ್ಮರ ಬಳಿ ಸೇರಿರುವರು. ಶ್ರೀಮತಿ ಜಾನಕಿಬಾಯಿ ಬಜಾಜ್ ಮತ್ತು ಶ್ರೀ. ಕಮಲನಯನ ಬಜಾಜರು ಗಾಂಧಿಜಿಯನ್ನು ಕೆಲ ನಿಮಿಷ ಕಂಡರು. ಶ್ರೀ. ಬ್ರೆಲ್ವಿ ಸಹ ಬಂದಿದ್ದರು. ಮಹಾತ್ಮರ ಕೇಳಿಗೆ ಬರಕೂಡದೆಂದು ಎಷ್ಟು ಹೇಳಿದರೂ ಸಂದರ್ಶಕರು ಬರುತ್ತಲೇ ಇರುವರು.

ತಾ. ೨೧ರ ಪ್ರಕಟಣೆ ಹೀಗಿದೆ: ನಿನ್ನೆಯ ದಿನವನ್ನು ಗಾಂಧಿಜಿ ಬಹಳ ಕಷ್ಟದಿಂದ ಕಳೆದರು. ೮ ವರೆಗೆ ಕೇವಲ ೪॥ ಗಂಟೆ ಮಾತ್ರ ನಿದ್ರೆ ಬಂದಿತ್ತು. ಹಗಲಲ್ಲಿ ಅವರು ಉದಾಸೀನರಾಗಿದ್ದು ಒಮ್ಮೊಮ್ಮೆ ದಾಹ ಬರುತ್ತಿದೆ. ಹೃದಯಕ್ರಿಯೆ ದುರ್ಬಲವಾಗಿದ್ದು ನಾಡಿಗಳು ಮಂದವಾಗಿವೆ. ಅವರು ಬಹಳ ಅಶಕ್ತರಾಗಿರುವುದರಿಂದ ನೀರು ಕುಡಿಯಲೂ ಕಷ್ಟವಾಗುತ್ತಿದೆ. ಎಂದಿನಂತೆ ಅವರು ೪೦ ಔನ್ಸು ನೀರನ್ನು ಎರಡು ಔನ್ಸ್ ನಿಂಬೆ ರಸದೊಂದಿಗೆ ಕುಡಿದರು. ಉಪವಾಸ ತೆಗೆದುಕೊಂಡದಷ್ಟು ಅವರು ಅಶಕ್ತರಾಗಿರುವರು. ೨೦ನೇ ತಾರೀಕಿನ ವರೆಗೆ ಅವರು ತೂಕ ೧೪ ಪೌಂಡು ಕಡಿಮೆಯಾಗಿತ್ತು. ಮೂತ್ರದೋಷದಿಂದ ದೇಹದಲ್ಲಿ ಹೆಚ್ಚಾಗಿ ವಿಷವು ಪ್ರಸಂಗಕೊಡಗಿದ್ದು

(೭ನೇ ಪುಟಕ್ಕೆ ಮುಂದುವರಿದಿದೆ)



ವಿಶ್ವಾಖಂಡದ ಇತರ ಭಾಗಗಳಿಗಿಂತ ಇಂಡಿಯಾಕ್ಕೆ ಹೆಚ್ಚು ಪ್ರಶಸ್ತಿಯನ್ನು ದೊರಕಿಸಿದ್ದಂಥ, ವಿಶಾಲ ಭಾವಪ್ರಧಾನವಾದ ಪದ್ಧತಿಗಳನ್ನುಳ್ಳ ನಮ್ಮ ಸಜೀವ ಸಂಸ್ಕೃತಿಯನ್ನು ನಾಶಮಾಡಿಕೊಳ್ಳಲು ನಾವು ಬಯಸುತ್ತೇವೇನು? ನಾಸ್ತಿಕವಾದ, ತರ್ಕವಾದಗಳಿಗೆ ಅದರ ತೋರಿರುವ ನಮ್ಮ ರಾಷ್ಟ್ರದ ನಡೆನೆ ವಿಶಿಷ್ಟವಾದುದು. ಪುರಿ—ಜಗನ್ನಾಥ ಶೃಂಗೇರಿಯ ಪವಿತ್ರ ಬಂದೂ ಮಠಗಳನ್ನು, ಶ್ರೀ ಅರವಿಂದಘೋಷ್ ಮಹರ್ಷಿ, ಆಡಯಾರ್ ಆಶ್ರಮಗಳನ್ನೂ,...ಶಾಂತಿನಿಕೇತನವನ್ನೂ ನೆನಪಿಗೆ ತಂದುಕೊಳ್ಳಿ. ಜಪಾನೀಯರು ನಮ್ಮ ದೇಶವನ್ನಾಕ್ರಮಿಸಿಕೊಂಡರೆ ಇವೆಲ್ಲಾ ನಾಶವಾಗುವುವು. ಗುರುದೇವ ಏನು ಹೇಳುವರೋ ಕೇಳಿ.

"ತಲೆ ಬುರುಡೆಗಳ ತಳಹದಿಯಮೇಲೆ ರಚಿಸಲ್ಪಡುವ ಭಾವೀ ವಿಶ್ವಾದ ಭಾವನೆಯನ್ನು ಆಧಾರವಾಗಿಟ್ಟುಕೊಂಡು ನೀವು (ಜಪಾನೀಯರು) ಮುಂದುವರಿಯುತ್ತಿದ್ದೀರಿ...ಜನರನ್ನು ಕೊಲ್ಲುವ ಬಗ್ಗೆ ತಾನು ತೋರಿದ ಪ್ರಚಂಡ ದಕ್ಷತೆಗಾಗಿ ಹೃದಯಾನಂದವನ್ನು ಅನುಭವಿಸಿದ ಕುಂಟ ಕೈಮುರಿದ ಶತ್ರುಗಳೂ, ಜಪಾನಿನ ಸಂದೇಶವೂ ಒಂದೇ ಆಗುವುದೆಂದು ನಾನು ಕನಸಿನಲ್ಲಿಯೂ ಭಾವಿಸಿರಲಿಲ್ಲ...ಈಗ ನಿಮ್ಮ ಪತ್ರದಲ್ಲಿ ಹೇಳುವ ತತ್ವ (ವಿಶ್ವಾಖಂಡ ವಿಶ್ವಾದ ಜನರಿಗೆ ಎಂಬುದು) ರಾಜಕೀಯ ಮೋಸ ತಂತ್ರದ ಒಂದು ವಿಧಾನ; ನಾನು ಯಾವಾಗಲೂ ವಿರೋಧಿಸುವಂತಹ ಹೀನ ಭಿನ್ನೋಪ್ಪ ಗುಣಗಳುಳ್ಳದು. ರಾಜಕೀಯ ವಿಧಾನ, ವಿಭಾಗಗಳನ್ನು ಮೀರಿ, ಅಖಿಲ ಮಾನವವರ್ಗವನ್ನು ಒಂದುಗೂಡಿಸುವ ಗುಣ ಅದರಲ್ಲಿ ಇಲ್ಲ."

ರವೀಂದ್ರನಾಥ ಟಾಗೂರರವರು ಜಪಾನೀಕವಿ ನೊಗೋಚಿಯವರಿಗೆ ಬರೆದ "ಕವಿಯಿಂದ ಕವಿಗೆ" ಎಂಬ ಪತ್ರದಲ್ಲಿ ಜಪಾನೀ ರಾಷ್ಟ್ರ ಮತ್ತು ಜನರನ್ನು "ದೈವಸ್ವರೂಪ" ವೆಂದು ಭಾವಿಸಿ ಪೂಜಿಸಬೇಕೆಂಬ ತತ್ವಕ್ಕೆ ಒಳಪಟ್ಟಿರದ ಯಾವ ಬೋಧನೆಗೂ ಅವಕಾಶವಿಲ್ಲ ಜಪಾನೀಯರ ವಿನಾಶಕ ಸೇನೆಗಳು ಇಲ್ಲಿಗೆ ಬಂದಮೇಲೆ.

ನೀವು 'ಗುರುದೇವರ' 'ಅಖಿಲ ಮಾನವವರ್ಗಸ್ನೇಹ'—ತತ್ವವನ್ನೂ ಅನುಸರಿಸಿರಿ. ಆಗಲೀ; ನಿಮ್ಮ ವಂಯ್ಯಕ್ತಿಕ ಧ್ಯೇಯಗಳನ್ನು ತ್ಯಾಗಮಾಡಿರಿ. ಜಪಾನೀಯರನ್ನು ನಿಮ್ಮ ದೇಶದಿಂದ ದೂರ ಇಟ್ಟಿರುವುದಕ್ಕಾಗಿ ನಿಮ್ಮ ಕೈಲಾದ ಎಲ್ಲಾ ಸಹಾಯವನ್ನು—ಬ್ರಿಟಿಷರಾಷ್ಟ್ರದವರೊಡನೆ—ನೀಡಿರಿ.

ನೀವೇ ಯೋಚನೆ ಮಾಡಿ ನೋಡಿರಿ
ಒಂದುಗೂಡಿ ವರ್ತಿಸಿರಿ
ಇದೇ ರಾಷ್ಟ್ರೀಯ ಯುದ್ಧಮುಖ

CPU. 8 F. KN.

ಕಳೆದ ಮೂರು ತಿಂಗಳಲ್ಲಿ ರಶ್ಯನರು ಓರೆಲ್‌ನಿಂದ ಉತ್ತರ ಕಾಕಸಸ್ ವರೆಗೆ ಮುನ್ನೂರು 'ಮೈಲು' ಮುನ್ನುಗ್ಗಿದರು. ಜರ್ಮನರ ಅಸಂಖ್ಯ ಜನಧನ ಸಾಮಗ್ರಿಗಳನ್ನು ನಾಶಗೊಳಿಸಿದರು. ಯುಕ್ರೇನ್ ಮೇಲೆ ಧಾಳಿಯಿಟ್ಟು ಕ್ರಾಸ್ನೊಗ್ರಾಡ್ ನಗರ ಹಾಗೂ ರೈಲ್ವೆ ಜಂಕ್ಷನನ್ನೂ, ಪಾಲವ್ಲೋಗ್ರಾಡ್ ಮತ್ತು ರೈಲ್ವೆ ಜಂಕ್ಷನನ್ನೂ ಸ್ವಾಧೀನಮಾಡಿಕೊಂಡರು. ಓರೆಲ್ ಮೇಲೆ ಕೆಂಪು ಸೈನ್ಯವು ಮೂರು ಕಡೆಯಿಂದ ಧಾಳಿಯಿಟ್ಟಿದೆ. ಉತ್ತರ ಆಫ್ರಿಕದಲ್ಲಿ ಜರ್ಮನರ ಧಾಳಿ ಪ್ರಬಲವಾಗಿದ್ದು ಬ್ರಿಟಿಷ್ ಸೈನ್ಯಗಳು ಹಿಂಜರಿಯುತ್ತಿವೆ. ದಕ್ಷಿಣ ಟ್ಯುನಿಶಿಯದಲ್ಲಿರುವ ಕೆಸರಿನ್ ಕಣಿವೆಯನ್ನು ಜರ್ಮನರು ಆಕ್ರಮಿಸಿಕೊಂಡಿರುವರೆಂದು ಸುದ್ದಿ. ಅಷ್ಟಮ ದಳವು ಮೇರೆಥ್ ವ್ಯೂಹದ ಬಾಹ್ಯ ವಲಯದಲ್ಲಿರುವ ಮೆಡಿನಿಯನ್ನು ಹಿಡಿದುಕೊಂಡಿತು. ಅಷ್ಟಮ ದಳವು ರೊಮೆಲನ ದಳದ ಮೇಲೆ ಧಾಳಿ ಪ್ರಾರಂಭಿಸಿದೆ. ಯೂನಾನ್ ಪ್ರಾಂತದಲ್ಲಿ ಜಪಾನರು ಒಂದು ಪ್ರಚಂಡ ಧಾಳಿ ಪ್ರಾರಂಭಿಸಿದ್ದಾರೆ. ಹೈನಾನ ದ್ವೀಪದ ಉತ್ತರದಲ್ಲಿರುವ ಕ್ವಾಂಗಟಾಂಗ ಪ್ರಾಂತದ ಲೈಚೌ ದ್ವೀಪ ಕಲ್ಪಕ್ಕೆ ಜಪಾನರು ನುಗ್ಗಿ ಕ್ವಾಂಗಚೌ ಎಂಬ ನಗರವನ್ನು ಸ್ವಾಧೀನಪಡಿಸಿಕೊಂಡರು. ಕೆಲವು ಜಪಾನೀ ಸೈನ್ಯಗಳು ಸಾಲವೀನ್ ನದಿಯ ಪೂರ್ವಕ್ಕಿರುವ ಪೂಶಾನಿನ ಕಡೆಗೆ ನುಗ್ಗುತ್ತಿರುವವು. ಬೇರೆ ಕೆಲವು ಸೈನ್ಯಗಳು ಮಾಮೀನ ಕಣಿವೆಯ ಕಡೆಗೂ ಹೋಗುತ್ತಿವೆ. ನದಿಯ ಪಶ್ಚಿಮ ದಡದ ಮೇಲೆ ಭೀಕರ ಕಾಳಗವಾಗುತ್ತಿದೆ. ಕಿಯಾಂಗಸು ಪ್ರಾಂತದಲ್ಲಿ ಗ್ರೇಂಡ್ ಕೆನಾಲ್ ಮಾರ್ಗವಾಗಿ ಮುನ್ನುಗ್ಗುತ್ತಿರುವ ಜಪಾನೀ ಸೈನ್ಯಗಳು ಒಂದು ದೊಡ್ಡ ಚೈನೀ ಸೈನ್ಯವನ್ನು ಸುತ್ತುಗಟ್ಟಲು ಸಾಹಸಪಟ್ಟವು

ಚೀನದ ಮೊರೆ!

ಮೆಡಮ್ ಚಿಯಿಂಗ್ ಕೈಶೇಕರು, ಆರೋಗ್ಯದ ಸಲುವಾಗಿ ಅಮೆರಿಕಕ್ಕೆ ತೆರಳಿದರೆಂದು ಕೆಲ ದಿನಗಳ ಹಿಂದೆ ವಾರ್ತೆ ಬಂತು. ಆದರೆ ಆ ಪ್ರಯಾಣದಲ್ಲಿ ರಾಜಕೀಯ ಮಹತ್ವವಿರಲೇಬೇಕೆಂದು ಹಲವರು ಶಂಕಿಸಿದ್ದರು. ಈಗ ಆ ಊಹನೆ ನಿಜವಾಗಿ ತೋರುತ್ತದೆ ಅಮೆರಿಕದ ಪ್ರತಿನಿಧಿಗಳನ್ನುದ್ದೇಶಿಸಿ ಮೇಡಮ್, ಮೊನ್ನೆ ಮೊನ್ನೆ ಚೀನದ ಪರವಾಗಿ ಒಂದು ವಿನಂತಿಮಾಡಿಕೊಂಡಿದ್ದಾರೆ. 'ಆಕ್ರಮಿತ ಪ್ರದೇಶಗಳ ಮಹತ್ವದಿಂದ ಜಪಾನು ಈಗ ಜರ್ಮನಿಗಿಂತ ಬಲಿಷ್ಠವಾಗಿದೆಯೆಂಬುದನ್ನು ಮಿತ್ರರು ಮರೆಯಬಾರದು. ಅದರ ಸಾಧನ ಸಂಪತ್ತು ಹೆಚ್ಚುತ್ತಲಿದೆ ಇದೇ ಪರಿಸ್ಥಿತಿ ಮುಂದುವರಿದರೆ ಜಪಾನನ್ನು ಬಗ್ಗಿಸುವುದು ಸುಲಭವಾಗಲಾರದು. ನಾಗರಿಕತೆಗೆ ಹಾನಿ ತಟ್ಟುವ ಮೊದಲು ಜಪಾನಿನ ಈ ಶಕ್ತಿಯನ್ನು ಕುಗ್ಗಿಸಲೇ ಬೇಕು. ನಮಗೆ ಚೀನೀಯರಿಗೆ ಈಗಿನದಕ್ಕಿಂತ ಉತ್ತಮವಾದ ಜಗತ್ ಸೃಷ್ಟಿಯಾಗಬೇಕಾಗಿದೆ. ಇದು ನಮ್ಮ ಸಲುವಾಗಿ ಮಾತ್ರವಲ್ಲ; ಇಡೀ ಜಗತ್ತಿನ ಸಲುವಾಗಿ. ಇಡೀ ಲೋಕಕ್ಕೆ ಸ್ವತಂತ್ರಮಯ ಸುಖ ಜಗತ್ತು ಬೇಕಾಗಿದೆ. ಹೀಗಿರುವಾಗ ಕೇವಲ

ಸಮರ ಭೂಮಿಯ ಸಂಚಾರ

ಧ್ಯೇಯಗಳನ್ನು ಸಾರಿಬಿಟ್ಟದ್ದರಿಂದ ಕೆಲಸ ಕೈಗೂಡುವುದಿಲ್ಲ. ಆ ಧ್ಯೇಯಗಳ ಸಲುವಾಗಿ ಕಾರ್ಯರಂಗಕ್ಕಿಳಿಯಬೇಕು.' ಈ ಮಾತುಗಳನ್ನು ಮೇಡಮ್‌ರು ಅಮೆರಿಕನರಿಗೆ ಹೇಳಿದರು; ಇದರಿಂದ ಅವರ ಕರ್ತವ್ಯವೇನೆಂದು ಎಚ್ಚರಿಸಿದ್ದಾರೆ. ಮಿತ್ರರ ಯುದ್ಧೋದ್ದೇಶವು ಸಫಲವಾಗಬೇಕಾದರೆ ಚೀನಕ್ಕೆ ಬೇಕಾದ ಸಹಾಯ ಸಾಮಗ್ರಿ ಕಳುಹಿಸುವುದು ಅವಶ್ಯವಾಗಿದೆ. ಚೀನವು ಜಪಾನಿನ ಗಂಡಾಂತರದಿಂದ ನರಳುತ್ತಿದೆ. ಅಮೆರಿಕವು ಇದನ್ನು ಮನಸ್ಸಿಗ ಹಚ್ಚಿಕೊಳ್ಳದಿದ್ದರೆ ಸಾರಿದ ಯುದ್ಧೋದ್ದೇಶಕ್ಕೆ ಏನು ಬೆಲೆಯುಂಟು?

ಚೀನದಲ್ಲಿ, ಹೂಪೇಕಿಯಾಂಗ್ಸಿ, ಕ್ವಾಂಗಟಂಗ ಮತ್ತು ಕಿಯಾಂಗಸೂ ಪ್ರಾಂತಗಳಲ್ಲಿ ಜಪಾನರು ವಿಸ್ತಾರವಾದ ಧಾಳಿಯನ್ನು ಪ್ರಾರಂಭ ಮಾಡಿರುವರು. ಶಾಂಸೀ ಪ್ರಾಂತದಲ್ಲಿ ಮತ್ತು ಯಾಂಗಿಸ್ಸೀ ಪ್ರದೇಶದಲ್ಲಿ ಅವರು ಒಟ್ಟು ಸೇರಿರುವರು ಇಲ್ಲಿ ಅವರಿಗೆ ವೈಮಾನಿಕ ಬಲವೂ ಬಂದಿದೆ. ಇದನ್ನೆಲ್ಲಾ ನೋಡಿದರೆ ಚೀನದ ಮೇಲೆ ಬಹಳ ಗಂಡಾಂತರ ಬರಲಿದೆಯೆಂದು ಸೂಚಿತವಾಗುತ್ತದೆ. ಚಿಯಾಂಗ್ ಕೈಶೇಕರೇನೋ ಎಲ್ಲಾ ಕಡೆಗಳಲ್ಲಿಯೂ ಜಪಾನರನ್ನು ಇದಿರಿಸಲು ಶತಪ್ರಯತ್ನ ಮಾಡುತ್ತಿದ್ದಾರೆ. ಬೇಗನೇ ತಮಗೆ ಗಂಡಾಂತರವಿದೆಯೆಂದು ಚೀನರೂ ತಿಳಿದಿದ್ದಾರೆ ಜಪಾನರೊಡನೆ ಹೋರಾಡಿ ಹೋರಾಡಿ ಸಂಕಟಪಡುತ್ತಿದ್ದಾರೆ. ಈಗ ಅಮೆರಿಕ ವಿಪುಲ ಸಾಧನ ಸಾಮಗ್ರಿ ಸಹಾಯದಿಂದ ಚೀನಕ್ಕೆ ಬೆಂಬಲ ಕೊಡಬೇಕು; ಚೀನದ ಮೊರೆಯನ್ನು ಕೇಳಬೇಕು. ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಮನಃಪೂರ್ವಕ ಹೋರಾಡಬೇಕು!

ರಶ್ಯನ್ ವಿಜಯ ಸಂಭ್ರಮ

ಕಳೆದ ನವಂಬರ 19ರಿಂದ ಭೀಕರ ಪ್ರತಿ ಯುದ್ಧವನ್ನು ಕೈಕೊಂಡ ರಶ್ಯನರು ವಿದ್ಯುದ್ವೇಗದಿಂದ ವಿಜಯಿಗಳಾಗುತ್ತಾ ಮುಂದುವರಿದಿದ್ದಾರೆ. ದಿನದಿನವೆಂಬಂತೆ, ಅವರು ಸೋತು ಕೈಬಿಟ್ಟ ನಗರಗಳೆಲ್ಲಾ ಅವರ ಸ್ವಾಧೀನವಾಗುತ್ತಿವೆ. ಅದರಲ್ಲೂ ರೊಸ್ಟೊವ್, ವೊರೊಶಿಲೋವ್‌ಗ್ರಾಡ್, ಖಾರ್ಕೋವುಗಳು ರಶ್ಯನರ ಕೈವಶವಾದ ಮೇಲಂತೂ ಮಿತ್ರಪಕ್ಷದಲ್ಲಿ ವಿಜಯ ಸಂಭ್ರಮವೇ ಸಂಭ್ರಮ! ಸ್ಟಾಲಿನ್‌ಗ್ರಾಡನ್ನು, ರಶ್ಯನರ ಪ್ರಿಯ ಸೇನಾನಿಯ ಹೆಸರಿನ ಪುಣ್ಯರಾಜಧಾನಿಯನ್ನು, ಜರ್ಮನರು ಹೊಕ್ಕರೆಂದು ಕೇಳಿದಂದು ಎಲ್ಲೆಲ್ಲೂ ಕಳವಳವೇ ಉಂಟಾಗಿತ್ತು; ಹಲವು ದಿನಗಳ ವರೆಗೆ, ತಿಂಗಳು ತಿಂಗಳುಗಳ ವರೆಗೆ ಆ ನಗರದ ಬೀದಿಬೀದಿಗಳಲ್ಲಿ, ಮನೆಮನೆಗಳಲ್ಲಿ ಇಕ್ಕಡೆಯ ಯೋಧರಿಗೆ ಕೈಕಾಳಗವೇ ಹತ್ತಿತು. ಇನ್ನೇನು, ಸ್ಟಾಲಿನ್‌ಗ್ರಾಡೂ ಜರ್ಮನರ ಸ್ವಾಧೀನ ಬಂದೇ ಬಿಡುವುದೆಂದು ಎಲ್ಲೆಲ್ಲೂ ತಳಮಳವುಂಟಾಗಿತ್ತು! ಆದರೆ ರಶ್ಯನ್ ವೀರರ ಸಾಹಸವೇನು! ಅವರ ದೃಢ ನಿರ್ಧಾರವೇನು! ಸ್ವಾತಂತ್ರ್ಯಕ್ಕಾಗಿ ಅವರು ಮಾಡಿದ ಬಲಿದಾನವೇನು! ಸ್ಟಾಲಿನ್‌ಗ್ರಾಡಿನಲ್ಲಿ ಶತ್ರುಸೈನ್ಯವನ್ನು ಕೊಚ್ಚಿ ಕೊಚ್ಚಿ ಕೆಡಹಿಬಿಟ್ಟರು; ಜರ್ಮನರನ್ನು ಒಬ್ಬನೇ ಒಬ್ಬನೂ ವೈರಿ ಉಳಿಯದಂತೆ, ತಮ್ಮ ಪ್ರೀತಿಯ ನಗರದಿಂದ ಹೊರಹಾಕಿ ಬಿಟ್ಟರು. ರಶ್ಯನರು ಈಗ ಇದೇ ವಿಜಯ ಸಂಭ್ರಮದಲ್ಲಿದ್ದಾರೆ; ಇದೇ ವೀರಾವೇಶದಲ್ಲಿ, ವೈರಿಗಳನ್ನು ತಮ್ಮ ಪಿತೃಭೂಮಿಯಿಂದ ಹಿಮ್ಮೆಟ್ಟಿಸಿ ಹಿಂದಟ್ಟುತ್ತಿದ್ದಾರೆ. ಜರ್ಮನರಾದರೂ 'ಬಂದ ದಾರಿಗೆ ಸುಂಕವಿಲ್ಲದ' ಹಿಂದೋಡುತ್ತಿರುವರು!

ಖಾರ್ಕೊವನ್ನು ವಶಪಡಿಸಿಕೊಂಡ ರಶ್ಯನ್ ಸೈನ್ಯಗಳು ಸೈಋತ್ಯದಲ್ಲಿ 75 ಮೈಲು ದೂರವಿರುವ ಪೊಲ್ಟಾವಾ ರೈಲ್ವೇದಾರಿಯಾಗಿ ಹಿಟ್ಲರನ ಸೈನ್ಯವನ್ನು ಬೆನ್ನಟ್ಟಿ ಹೋಗುತ್ತಿವೆ ನೀಪರ್ ಕಡೆಗೆ ಮತ್ತು ಪಶ್ಚಿಮ ಹಾಗೂ ಯುಕ್ರೇನ್ ಕಡೆಗೆ ಸಾಗಲು ರಶ್ಯನರಿಗೀಗ ಮಾರ್ಗವು ನಿಷ್ಕಂಟಕವಾಗಿದೆ. ಇದರಿಂದ ಓರಲ್‌ನಲ್ಲಿರುವ ಜರ್ಮನರ ಪಾರ್ಶ್ವ ಮತ್ತು ಹಿಂದಲಗಳಿಗೆ ಅಪಾಯವೊದಗಿರುವುದು. ರಶ್ಯನರನ್ನು ತಡೆಯಬೇಕೆಂದು ಮಾಡಿದ ಜರ್ಮನರ ಪ್ರಯತ್ನವು ನಿಷ್ಫಲವಾಯಿತು. ದಾಯುಮ್ನದಲ್ಲಿ ವೊರೋಶಿಲೋವೊಗ್ರಾಡಿನಿಂದ ಸ್ಟಾಲಿನೋ ವರೆಗೆ ರಶ್ಯನರ ಮತ್ತೊಂದು ಸೈನ್ಯ ಸಾಗುತ್ತಿದೆ ಈ ಭಾಗದಲ್ಲಿ ಜರ್ಮನರು ಆತ್ಮರಕ್ಷಣೆ ಮಾಡಿಕೊಳ್ಳುತ್ತಿದ್ದರೂ ಒಂದೊಂದೇ ಪ್ರದೇಶ ಅವರ ಕೈ ಬಿಡುತ್ತಿದೆ ಕುರ್ಸ್ಕ ಮತ್ತು ಓರೆಲ್ ಮಧ್ಯ ರಣಾಂಗಣದಲ್ಲಿ ರಶ್ಯನರು ಜರ್ಮನರನ್ನು ಬಹಳ ಹಿಂದಟ್ಟಿದರು. ರಶ್ಯನರೀಗ ಟಾಗನರಾಗವನ್ನು ದಾಟಿ ಮುಂದೊತ್ತುತ್ತಿರುವರು ಸೀವರ್ ವರೆಗೆ ಜರ್ಮನರು ರಶ್ಯನರನ್ನು ತಡೆವ ಹಾಗೆ ತೋರುವುದಿಲ್ಲ. ಕ್ರಾಸ್ನಡಾರಿನಿಂದಲೂ ರಶ್ಯನರು ಮುನ್ನುಗ್ಗುತ್ತಿದ್ದು ಈಗ ನವರಸಸ್ಕದಿಂದ ಹಾಗೂ ತಮನ ಪೆನಿನ್‌ಶುಲಾದಿಂದಲೂ ಮುಂದೊತ್ತಿದ್ದಾರೆ. ಹೀಗೆ ರಶ್ಯನ್ ರಣರಂಗದಲ್ಲಿ ಅನಿರೀಕ್ಷಿತವಾದ ವಿಜಯವೊದಗಿದೆ. ಕೆಂಪು ಸೈನ್ಯವು ಬಿರುಗಾಳಿಯಂತೆ ಭರದಿಂದ ಎತ್ತಲೂ ಶತ್ರುಗಳನ್ನು ಭೇದಿಸಿ ಸಾಗುತ್ತಿದೆ ಹಿಟ್ಲರನು ರಿಂಗಾ—ಓಡೆಸ್ಸಾ ಮಾರ್ಗವಾಗಿ ಒಂದು ಹೊಸ ವ್ಯೂಹ ಕಟ್ಟಲಿರುವನೆಂದು ತಿಳಿದುಬರುತ್ತದೆ. ಹಿಟ್ಲರನು ಒಮ್ಮೆಲೇ ರಶ್ಯನ್ ರಣಭೂಮಿಯಿಂದ ಹಿಂಜರಿಯದೆ ಚಳಿಗಾಲ ಮುಗಿವ ವರೆಗೂ ಹೋರಾಟ ಮುಂದುವರಿಸುವನೆಂದು ಕೆಲವರು ಹೇಳುತ್ತಾರೆ.

ಟ್ಯುನಿಶಿಯದಲ್ಲಿ

ಸುಮಾರು ಎರಡು ತಿಂಗಳ ವರೆಗೆ ಸ್ತಬ್ಧವಾಗಿದ್ದ ಟ್ಯುನಿಶಿಯದಿಂದ ಈಗ ಬಲವಾದ ರಣಭೇರಿ ಕೇಳಬರುತ್ತಿದೆ. ಎಲ್ ಎಲಾಮೆನಿನಿಂದ ಒಂದೇ ಸವನೆ ಹಿಂದೆ ಹಿಂದೆ ಸರಿದ ರೊಮೆಲನು ಟ್ಯುನಿಶಿಯದಲ್ಲಿ ಬಂದು ತಳವೂರಿ ಅಲ್ಲಿಂದ ಮಿತ್ರರ ಮೇಲೆ ಧಾಳಿಯಿಡುತ್ತಿದ್ದಾನೆ. ಟ್ಯುನಿಶಿಯದಲ್ಲಿ ಜರ್ಮನರ ಎರಡೂ ಸೈನ್ಯಗಳು (ಆರ್ನಿಮ್ ಮತ್ತು ರೊಮೆಲನ) ಒಟ್ಟು ಸೇರಕೂಡದೆಂದು ಮಿತ್ರರೇನೋ ಶಕ್ತಿ ಪ್ರಯತ್ನ ಮಾಡಿದರೂ, ಅದು ಸಾಧ್ಯವಾಗಲಿಲ್ಲ. ಸುಮಾರು 3 ಲಕ್ಷ ಜರ್ಮನ್ ಸೈನಿಕರು ಅಲ್ಲಿ ಒಟ್ಟು ಸೇರಿ ಹೋರಾಡುತ್ತಿದ್ದಾರೆ, ಅಲ್ಲಿನ ಯುದ್ಧದಲ್ಲಿ ಅಮೆರಿಕದವರಿಗೆ ಬಹಳ ನಷ್ಟವೊದಗಿತು ಅಮೆರಿಕೆ ಸೈನ್ಯದಲ್ಲಿ ಸಾಧನ ಸಾಮಗ್ರಿ, ಮೊದಲಾದವು ಸಾಕಷ್ಟಿದ್ದರೂ, ಅವರಲ್ಲಿ ಸಮರ ವಿಚಕ್ಷಣತೆಯಿಲ್ಲದ್ದರಿಂದ ಹಿಂಜರಿಯಬೇಕಾಗಿ ಒಂತೆಂದು ಹೇಳಲಾಗುತ್ತದೆ. ರೊಮೆಲನ ಟೇಂಕ್ ಯುದ್ಧ ಅಲ್ಲೀಗ ಸುರುವಾಗಿದೆ. ಜರ್ಮನರ ಮ್ಯಾರೆಥ್ ವ್ಯೂಹದ ಎದುರಿಗಿರುವ ಬ್ರಿಟಿಷ್ ಅಷ್ಟಮ ದಳವು ಬೇಗನೇ ಜರ್ಮನರನ್ನೆದುರಿಸುವುದು, ಆಗ ನೋಡಬೇಕು, ಸಮರ ಸಂರಂಭವನ್ನು! ಟ್ಯುನಿಶಿಯದಲ್ಲಿ ಜರ್ಮನರು ಪ್ರಬಲವಾಗುತ್ತಿರುವುದರಿಂದ, ಸೇನಾಪತಿ ಮಾಂಟೆಗ್ ಮೋರಿಯು ಅಷ್ಟಮ ದಳ ಸಹಿತ ಮ್ಯಾರೆಥ್ ವ್ಯೂಹವನ್ನು ನುಗ್ಗಿ ಹೋರಾಡುವನೆಂದು ತೋರುತ್ತದೆ ಆದರೆ ಮ್ಯಾರೆಥ್ ವ್ಯೂಹವು ಬಲವಾಗಿದೆ ಇದನ್ನು ಮೆಜಿನೋ ವ್ಯೂಹದಂತೆ ಕಟ್ಟಿದ್ದಾರೆ ಅಲ್ಲಲ್ಲಿ ಪ್ರಬಲ ಕೋಟೆ ಕೊತ್ತಳಗಳಿವೆ, ಶಸ್ತ್ರಾಸ್ತ್ರ ಸಿದ್ಧತೆಗಳಿವೆ. ಅಂತೂ ಟ್ಯುನಿಶಿಯದಲ್ಲಿ ಘೋರ ಕಾಳಗ ಕಾದಿದೆ ಜರ್ಮನರನ್ನು ಆಫ್ರಿಕದಿಂದ ಹೊರಗಟ್ಟಿ ಮತ್ತೆ ಯೂರೋಪಿನ ಯುದ್ಧವನ್ನು ಪ್ರಾರಂಭಿಸಬೇಕೆಂದು ರೂಸ್‌ವೆಲ್ಟರು ಮೊನ್ನೆ ತಾನೇ ಹೇಳಿದರು. ಆದ್ದರಿಂದ ಈ ಯುದ್ಧವು ಒಂದು ನಿರ್ಣಾಯಕ ಯುದ್ಧವಾಗುವುದು. ವೈರಿಯೂ ಸಜ್ಜಿತನಾಗಿ, ಪ್ರಬಲನಾಗಿರುವಾಗ, ಅವನನ್ನು ಅಲ್ಲಿಂದ ಹೊಡೆದೋಡಿಸುವುದೆಂದರೆ ಇದಕ್ಕೆ ಸಾಮಾನ್ಯ ಸಾಹಸ ಸಾಕಾಗಲಾರದು. ಇದರಲ್ಲಿ ಯಾರು ಗೆಲ್ಲುವರೋ, ಯಾರು ಸೋಲುವರೋ ಎಂದು ಜಗತ್ತೇ ಈಗ ನಿರೀಕ್ಷಿಸುತ್ತಿದೆ!

ಮಂಗಳೂರು
ಜಿಲ್ಲಾ ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿ

ಇದರ ಪ್ರವಾಸ ಸಮಿತಿಯ ಸದಸ್ಯರಾದ ಶ್ರೀ ಗಳಾದ ಧರ್ಮಸ್ಥಳ ಮಂಜಯ್ಯ ಹೆಗ್ಗೆ, ಕೆ. ಜಿ. ಜಿನರಾಜ ಹೆಗ್ಗೆ, ಜಿ. ದತ್ತಾತ್ರೇಯರಾವ್, ಎಂ. ಶಿವರಾಮ್ ಇವರು ಮೊದಲೇ ಪ್ರಕಟಿಸಿದಂತೆ ಜಿಲ್ಲಾ ಸಂಚಾರ ಮಾಡಿ ವಿಸ್ತಾರವಾದ ವರದಿಯನ್ನು ಕೊಟ್ಟಿದ್ದಾರೆ. ಅಲ್ಲಲ್ಲಿ ಸಭೆಮಾಡಿ ಕಮಿಟಿ ರಚಿಸಿದ್ದಾರೆ. ಕೆಲವು ಕಡೆ ಮೊದಲೇ ಕಮಿಟಿ ಆಗಿರುತ್ತದೆ ಹೋದಲ್ಲೆಲ್ಲಾ ಇವರ ಯೋಜನೆಗೆ ಬೆಂಬಲ ದೊರಕಿದೆ. ಜನರ ಸೂಚನೆಯಂತೆ ಮೇ ತಿಂಗಳಲ್ಲಿ ಡಿಪೋಗಳನ್ನು ತೆರೆಯಬೇಕಾಗುವುದು ಅಕ್ಕಿ ಸಂಗ್ರಹ ಮೊದಲಾದ ಕೆಲಸಗಳನ್ನು ಭರದಿಂದ ಮಾಡಬೇಕಾಗಿದೆ. ಜಮೀನುದಾರರು ಉತ್ಪತ್ತಿಯ 1/10 ಅಂಶವನ್ನು ಕಡಿಮೆ ಬೆಲೆಗೆ ಕೊಡಲು ಒಪ್ಪಿದ್ದಾರೆ. ಎಲ್ಲರೂ ಈ ಕಾರ್ಯದಲ್ಲಿ ನೆರವಾಗಬೇಕಾಗಿ ಅಪೇಕ್ಷಿಸಲಾಗಿದೆ.

ಸಾದರ—ಸ್ವೀಕಾರ

ಮೊರದೆದುರಲ್ಲಿ ಮತ್ತು ಇತರ ಕವನಗಳು, ಬರೆದವರು 'ವಾಮನ', ಮಿತ್ರಮಂಡಳಿ ಅಖಿಲ ಸೇವಾ ಗ್ರಂಥಮಾಲೆಯ ಎರಡನೆಯ ಕುಸುಮ. ಪ್ರಕಾಶಕರು, ಮಿತ್ರಮಂಡಳಿ, ಮಂಗಳೂರು. ಕ್ರೌನ್ 1/16 ಆಕಾರದ 36+4 ಪುಟಗಳು. ಬೆಲೆ ಎಂಟಾಣೆ. ವಿಮರ್ಶೆ ಯಥಾವಕಾಶ.

ಸ್ವದೇಶಾಭಿಮಾನಿ

ತಾರೀಕು 26—2—1943

ರಶ್ಯದ ಕರೆ!

ಲಂಡನಿನಲ್ಲಿರುವ ರಶ್ಯದ ರಾಯಭಾರಿಗಳಾದ ಮೇಸ್ಕಿಯವರು, ಲಂಡನಿನಲ್ಲಿ ಒಂದು ಭಾಷಣ ಮಾಡುತ್ತಾ, ಇತ್ತೀಚೆಗೆ ರಶ್ಯನರು ಪಡೆದ ವಿಜಯದಿಂದ, ವಿಜೃಂಭಿಸಿ ಮೈಮರೆತು ಬಿಡದೆ, ಈ ವರ್ಷದಲ್ಲಿ ಜರ್ಮನಿ ಮತ್ತು ಅದರ ಸಹಕಾರೀ ರಾಷ್ಟ್ರಗಳನ್ನು ಸಂಪೂರ್ಣ ಸೋಲಿಸುವಂತೆ ಮಿತ್ರರು ಸಮರ್ಥರಾಗಬೇಕೆಂದು ಒಂದು ಎಚ್ಚರಿಕೆಯಿತ್ತಿರುವರು.

'ನಮ್ಮ ವಿಜಯವೆಷ್ಟೇ ಮಹತ್ವದಿದ್ದರೂ, ಅಷ್ಟನು ಪಳಿದ ಸಾಹಸ ಎಷ್ಟೇ ಅಭಿನಂದನೀಯವಿದ್ದರೂ ನಾಜೀ ಜರ್ಮನಿಯ ಅವಸಾನ ಕಾಲ ಬಂದಿದೆಯೆಂದು ತಿಳಿಯುವುದು ಮಾತ್ರ ತಪ್ಪು. ಆದ್ದರಿಂದ, ಯೂರೋಪಿನಲ್ಲಿ ನಾಜೀ ಜರ್ಮನಿಯ ಸೈನಿಕರ ಮೇಲೆ, ಆಂಗ್ಲ ಅಮೆರಿಕನ್ ಸೈನಿಕರು ಭೀಕರವಾದ ಧಾಳಿಯನ್ನು ಶುರು ಮಾಡಬೇಕು; ಆಗ ಪೂರ್ವ ಪಶ್ಚಿಮ ಎರಡು ಕಡೆಗಳಿಂದಲೂ ಅವರಿಗೆ ಹೊಡೆತ ಬೀಳುವುದು. ಈ ರೀತಿ ಎರಡು ಕಡೆಗಳಿಂದಲೂ ಜರ್ಮನಿಯ ಮೇಲೆ ಧಾಳಿಯಾದರೆ ಮಾತ್ರ ನಮಗೆ ವಿಜಯವು ಸಿಗುವುದು; ಇದಕ್ಕೆ ಬಹಳ ಸ್ವಾರ್ಥತ್ಯಾಗ ಮಾಡಬೇಕು; ಶತ್ರುವಿಗೆ ಈಗ ವಿಶ್ರಾಂತಿಯನ್ನು ಕೊಡಬೇಡಿರಿ' ಇದು ಮೇಸ್ಕಿಯವರು ರಶ್ಯದ ಪರವಾಗಿ ಮಿತ್ರರಿಗೆ ಇತ್ತ ಕರೆ!

ಜರ್ಮನಿಯಿಂದು ರಶ್ಯದ ರಣಭೂಮಿಯಲ್ಲಿ ಜರ್ಜರಿತವಾಗಿದೆಯೇನೋ ಸರಿ; ಆದರೆ ಮಿತ್ರರು ರಶ್ಯದ ಭಾರವಿಳಿಸಲು ಏನು ಮಾಡುತ್ತಿದ್ದಾರೆ? ರಶ್ಯವೊಂದನ್ನೇ ಜರ್ಮನಿಯೆದುರು ಹೋರಾಡಲು ಬಿಟ್ಟುಬಿಟ್ಟರೆ ವಿಜಯ ಸಿದ್ಧಿಯಾದೀತೆ? ಈಗ ರಶ್ಯಕ್ಕೆ ಬೆಂಬಲ ಕೊಡದಿದ್ದರೆ–ದ್ವಿತೀಯ ರಣರಂಗ ತೆರೆಯದಿದ್ದರೆ, ಇನ್ನು ಯಾವಾಗ? ರಶ್ಯದ ಕರೆಗೆ ಮಿತ್ರರು ಕೂಡಲೇ ಉತ್ತರ ಕೊಡಬೇಕು!

'ಸ್ಟರ್ಲಿಂಗ್' ಸಾಲ

ಭಾರತವು ಬ್ರಿಟನಿನಿಂದ ಸಾಲ ಪಡೆಕೊಳ್ಳುವುದನ್ನಳಿದು, ಅದಕ್ಕೆ ಸಾಲ ಕೊಡುತ್ತಿದೆಯೆಂಬುದು ಸಂತೋಷದ ವಿಷಯವಾದರೂ, ಭಾರತದ ಲೆಕ್ಕದಲ್ಲಿರುವ ಆ ಎಲ್ಲಾ ಸಾಲಗಳೂ 'ಸ್ಟರ್ಲಿಂಗ್' ಸಾಲ ಪತ್ರಗಳ ರೂಪದಲ್ಲಿವೆಯೆಂಬುದನ್ನು ನಾವು ಅವಶ್ಯ ಗಮನಿಸಬೇಕಾಗಿದೆ. ಈ ವಿಷಯವೀಗ ಅರ್ಥ ಶಾಸ್ತ್ರಜ್ಞರ ಗಮನವನ್ನೂ ಆ ಕಡೆ ಸೆಳೆದಿದೆ.

'ಸ್ಟರ್ಲಿಂಗ್' ಎಂದರೆ ಬರೀ ಕಾಗದ ಪತ್ರದ ಹಣ. ಅದನ್ನು ಮಾರಾಟಕ್ಕಿಟ್ಟಾಗ, ಅದರ ಬೆಲೆ ಕಡಿಮೆಯಾಗುವ ಸಂಭವವಿದೆ; ಅದಕ್ಕೆ ಸಿಗುವ ಪ್ರತಿಫಲ ಕಡಿಮೆಯಾಗಲು ಸಾಧ್ಯವಿದೆ. ಹೀಗಾಯಿತೆಂದರೆ ಭಾರತಕ್ಕೆ ನಷ್ಟವೇ ಉಂಟಾಗುವುದೆಂಬುದನ್ನು ನಾವು ಪ್ರತ್ಯೇಕ ಹೇಳಬೇಕಾಗಿಲ್ಲ.

ಭಾರತದ ಆರ್ಥಿಕ ಧೋರಣೆಯ ಕುರಿತು ಬ್ರಿಟನು ಹಿಂದೆ ಮಾಡಿದ ವ್ಯವಹಾರವೇ ಇಂದಿನೀ ಸಂಶಯಕ್ಕೆ ಎಡೆಗೊಟ್ಟಿರುವುದು. ಹಾಗಾಗಿ ಸ್ಟರ್ಲಿಂಗ್ ಸಾಲ ಪತ್ರವನ್ನು ಬಂಗಾರ, ಡೊಲರ್ ರೂಪವಾಗಿ ಯಾಕೆ ಬದಲಿಸಬಾರದು? ಅಥವಾ ಸ್ಟರ್ಲಿಂಗ್ ಸಾಲಪತ್ರವನ್ನು ಬ್ರಿಟನಿನಲ್ಲಿಯೂ ಯಾಕೆ ಕೊಡಬಾರದು?

ಪ್ರಮುಖ ಭಾರತೀಯರು, ಭಾರತದ ಅರ್ಥ ಶಾಸ್ತ್ರಜ್ಞರು ಹಾಗೂ ವ್ಯಾಪಾರಿಗಳು ಈಗ ಈ ಕಡೆಗೆ ವಿಶೇಷ ಗಮನ ಕೊಡುತ್ತಿದ್ದಾರೆ. ಸರಕಾರವು ಮೇಲೆ ಹೇಳಿದಂತೆ ಮಾಡಬೇಕಾಗಿ ಒತ್ತಾಯಪಡಿಸಿದ್ದಾರೆ. ಆದರೆ ಈ ಕುರಿತು ಇದುವರೆಗೆ 'ಇಂಡಿಯಾ ಗವರ್ನ್‌ಮೆಂಟ್' ಏನೊಂದೂ ಗಮನ ಕೊಟ್ಟಂತೆ ತೋರುವುದಿಲ್ಲ.

ಈ ಮೌನವ್ರತವೇಕೆ?

ಫಿಲಿಪ್ಸರೇನು?

ಅಮೆರಿಕದ ಅಧ್ಯಕ್ಷರ ರಾಯಭಾರಿ ಫಿಲಿಪ್ಸರು ಭಾರತಕ್ಕೆ ಬಂದು ತಿಂಗಳೆರಡಾದುವು! ಅವರಿಲ್ಲಿ ಏನು ಮಾಡುತ್ತಿದ್ದಾರೆ? ಅವರಿಂದ ಭಾರತೀಯರು ಏನನ್ನು ಹಾರೈಸುತ್ತಾರೆ? ಭಾರತ ಬಿಕ್ಕಟ್ಟು ಬಿಡಿಸಲು, ಭಾರತವನ್ನು ಯುದ್ಧಸಕ್ತವಾಗಿ ಮಾಡಲು ಫಿಲಿಪ್ಸರು ಏನು ಮಾಡುತ್ತಿದ್ದಾರೆ?

ಕಳೆದ ಎರಡು ತಿಂಗಳಲ್ಲಿ ಅವರು ಭಾರತದ ಕುರಿತು ಸಾಕಷ್ಟು ಅನುಭವ ಮಾಡಿಕೊಂಡಿರಬಹುದು; ಭಾರತದ ಹಲವು ಮುಂದಿ ಮುಖಂಡರನ್ನು ಅಧಿಕಾರಿಗಳನ್ನು ಕಂಡು ಮಾತನಾಡಿದ್ದಾರೆ. ತನ್ಮಧ್ಯೇ ಗಾಂಧಿಜಿ ಉಪವಾಸ ನಿಂತ ಮಹಾ ಪ್ರಸಂಗವೊಂದು ಬಂದೊದಗಿದೆ. ಅದಕಾಗಿ ಅಖಿಲಭಾರತದಲ್ಲಿ ಎಂತಹ ಪ್ರತಿಕ್ರಿಯೆಯುಂಟಾಗಿದೆಯೆಂಬುದನ್ನು ಅವರು ಕಣ್ಣಾರೆ ನೋಡಬಹುದು. ಈ ಸಂದರ್ಭದಲ್ಲಿ ಭಾರತದ ಬಿಕ್ಕಟ್ಟು ಬಿಡಿಸಲು, ಭಾರತವನ್ನು ಯುದ್ಧ ಸಕ್ತವಾಗಿ ಮಾಡಲು ಫಿಲಿಪ್ಸರು ಏನು ಮಾಡುತ್ತಿದ್ದಾರೆ?

ಕೇಂದ್ರ ಸಭೆಗಳಲ್ಲಿ

ಕೇಂದ್ರ ಶಾಸನ ಸಭೆ ಮತ್ತು ಕೌನ್ಸಿಲ್ ಒಫ್ ಸ್ಟೇಟ್ ಸಭೆಗಳು ಈಗ ಜರಗುತ್ತಿವೆ. ಹಲವಾರು ವಿಚಾರಗಳು ಚರ್ಚಿಸಲ್ಪಡುತ್ತಿವೆ.

ಪ್ರಜಾಪ್ರತಿನಿಧಿಗಳು, ಗಾಂಧಿಜಿಯ ಉಪವಾಸದ ಸಂಬಂಧ ದೇಶದಲ್ಲುಂಟಾದ ಪರಿಸ್ಥಿತಿಯನ್ನು ಚರ್ಚಿಸುವ ಸೂಚನೆ ತಂದರು; ಅಧ್ಯಕ್ಷರು ಅದನ್ನು ಚರ್ಚಿಸಲು ಸಮ್ಮತಿ ಕೊಡಲಿಲ್ಲ!

'ಕೌನ್ಸಿಲ್ ಒಫ್ ಸ್ಟೇಟ್'ನಲ್ಲಿಯೂ ಮಹಾತ್ಮರ ಉಪವಾಸದ ಕುರಿತು ಸರಕಾರವು ವಹಿಸಿದ ಧೋರಣದ ನಿಷೇಧಾರ್ಥವಾಗಿ ಪಂಡಿತ ಕುಂಜ್ರು ಮೊದಲಾದ ಪ್ರಗತಿಪಕ್ಷದ ಸದಸ್ಯರು ಸಭಾರಂಗವನ್ನು ಬಿಟ್ಟು ಹೊರಬಂದರು!

ಸ್ವದೇಶ ಸಮಾಚಾರ

ಮಹಾತ್ಮರ ಉಪವಾಸ

ಗಾಂಧಿಜಿಯವರ ಆರೋಗ್ಯದ ಕುರಿತು ತಾ. ೨೩ರ ಪ್ರಕಟಣೆ ಹೀಗೆ ತಿಳಿಸುತ್ತದೆ: 'ಗಾಂಧಿಜಿಯವರಿಗೆ ನಿನ್ನೆ ರಾತ್ರಿ ಸ್ವಲ್ಪ ನಿದ್ದೆ ಬಿದ್ದಿತು. ಹಗಲಲ್ಲಿ ಆಗಾಗ ತೂಕಡಿಸುತ್ತಿದ್ದರು. ಅವರು ಈಗ ಆರಾಮದಿಂದಿದ್ದಾರೆ.' ಗಾಂಧಿಜಿ ಹಸನ್ಮುಖಿಗಳಾಗಿರುವರೆಂದು ಅವರನ್ನು ಈ ದಿನ ಕಂಡು ಬಂದವರೆಲ್ಲ ಹೇಳಿದರು. ಬಹಳ ದಿನದಿಂದ ಭೇಟಿಯಾಗದ ಬಳಗದವರನ್ನು ಅವರು ಗುರುತಿಸಿದರು. ಧ್ವನಿ ನಿಶ್ಶಕ್ತವಿದ್ದರೂ ಸ್ಪಷ್ಟವಿತ್ತು. ಮುಗುಳ್ನಗೆಯಿಂದ ಸಂದರ್ಶಕರೆಲ್ಲರನ್ನೂ ಸ್ವಾಗತಿಸಿದರು. ಫ್ರೆಂಡ್ಸ್ ಎಂಬುಲೆನ್ಸ್ ಯುನಿಟಿನ ಹೊರೆಸ್ ಅಲೆಕ್ಸಾಂಡರೊಡನೆ ನಾಲ್ಕು ನಿಮಿಷ ಮಾತನಾಡಿದರು. ಅವರು ಮಹಾತ್ಮರಿಗೆ ಅನೇಕ ಇಂಗ್ಲಿಷ್ ಗೆಳೆಯರಿಂದ ಪ್ರೀತಿಯ ಸಂದೇಶ ತಂದಿದ್ದರು. ಸ್ವಾಮಿ ಆನಂದ, ದೇವದಾಸಗಾಂಧಿ, ಬಜಾಜರ ಮನೆಯವರು ಈ ದಿನ ಪುನಃ ಗಾಂಧಿಜಿಯನ್ನು ಕಂಡರು. ಶ್ರೀ ಮಥುರಾದಾಸ ತ್ರಿಕಮಜಿ ಮತ್ತು ಅವರ ಮನೆಯವರೂ ಎರಡನೆಯ ಸಲ ಕಂಡರು. ಈಗ ದರ್ಬಾನಿನಲ್ಲಿರುವ ಗಾಂಧಿಜಿ ಪುತ್ರ ಮಣಿಲಾಲ ಗಾಂಧಿಯವರು ಮಹಾತ್ಮರ ಆರೋಗ್ಯವನ್ನು ತಿಳಿಕೊಳ್ಳಲು ದಿನಂಪ್ರತಿ ಎರಡು ಸಲ ಟೆಲಿಫೋನ್ ಕರೆಕೊಡುತ್ತಿರುವರು.

ತಾ. ೨೪ರ ಪ್ರಕಟಣೆಯಲ್ಲಿ ಹೀಗಿದೆ: 'ಗಾಂಧಿಜಿಯವರ ಪ್ರಕೃತಿ ಸ್ವಲ್ಪ ಸುಧಾರಿಸಿದೆ. ಮೂತ್ರದೋಷವೂ ತುಸು ಕಡಿಮೆಯಾಗಿದೆ. ಆದರೆ ಅಶಕ್ತಿ ವಿಶೇಷ ಹೆಚ್ಚುಕಡಿಮೆಯಾಗಿಲ್ಲ. ಅವರು ಉಲ್ಲಾಸದಿಂದಿದ್ದಾರೆ.' ಗಾಂಧಿಜಿಯವರ ಉಪವಾಸದ ಗಂಡಾಂತರದ ಎರಡನೆ ವಾರವು ಕಳೆದೀಗ ಮೂರನೇ ವಾರ ಪ್ರಾರಂಭವಾದಂತೆ, ಉಪವಾಸ ಯಶಸ್ವಿಯಾಗುವ ಲಕ್ಷಣಗಳು ತೋರಿಬರುತ್ತವೆ. ಗಾಂಧಿಜಿಯವರ ವೃದ್ಧ ಭಗಿನಿ ಶ್ರೀಮತಿ ಗೋಕಿಬೇನರು ಈ ದಿನ ಮಹಾತ್ಮರನ್ನು ಕಂಡರು. ದಿವಂಗತ ಸಿ. ಆರ್. ದಾಸರ ಭಗಿನಿ ಶ್ರೀಮತಿ ಊರ್ಮಿಳಾದೇವಿಯರೂ ಕವಿ ರವೀಂದ್ರರ ಪುತ್ರ ಶ್ರೀ. ರಥೀಂದ್ರ ಠಾಗೂರರೂ ಭೇಟಿಯಾದರು.

ಅಮೆರಿಕ ಕೈಹಾಕುವುದಿಲ್ಲ

ಗಾಂಧಿಜಿ ಉಪವಾಸದ ವಿಷಯದಲ್ಲಿ ಅಮೆರಿಕದ ಅಧಿಕಾರೀ ಮಂಡಳ ಕೈಹಾಕುವುದಿಲ್ಲವೆಂಬುದಾಗಿ ಅಲ್ಲಿನ ಅಧಿಕಾರೀಮಂಡಳದ ಹೇಳಿಕೆಯಿದೆ. ಗಾಂಧಿಜಿಯನ್ನು ಬಿಡುಗಡೆಗೆ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷವೂ ಆತುರವಿದೆ. ಪರ್ಲ್ ಬಕ್ಸ್ ಮೊದಲಾದ ಅಮೆರಿಕದ ಪ್ರಸಿದ್ಧ ಮಹನೀಯರೂ ಮಹಿಳೆಯರೂ ರೂಸ್‌ವೆಲ್ಟರನ್ನು ಗಾಂಧಿಜಿಯ ಬಿಡುಗಡೆಮಾಡಿಸಲು ಕೇಳಿಕೊಂಡಿದ್ದಾರೆ.

ಅಪಪ್ರಚಾರ

ಸದ್ಯದ ಗಲಭೆಗೆ ಗಾಂಧಿಜಿ ಹಾಗೂ ಕಾಂಗ್ರೆಸು ಕಾರಣವೆಂದು ಸರಕಾರವು ಈಗಾಗಲೇ ಏಕಪಕ್ಷೀಯ ಸಮರ್ಥನೆಯುಳ್ಳ ಒಂದು ಪುಸ್ತಕ ಪ್ರಕಟಿಸಿದೆಯಷ್ಟೆ! ಇದು ಕೇವಲ ಅಪಪ್ರಚಾರವೆಂದು ದೇಶ ಸರ್ವತ್ರ ಕೂಗು ಎದ್ದಿದೆ. ಆದರೆ ಈ ವಿವರಗಳನ್ನಾದರೂ ಪುಣೆಗೆ ಕಳುಹಿಸಿ, ಗಾಂಧಿಜಿಯನ್ನೂ ವರ್ಕಿಂಗ್ ಕಮಿಟಿ ಸದಸ್ಯರನ್ನೂ ಒಟ್ಟು ಸೇರಿಸಿದರೆ ಮಹಾತ್ಮರು ಉಪವಾಸ ಬಿಡಬಹುದೆಂದೂ ಅವರಿಗೆ ತಮ್ಮ ಸಮರ್ಥನೆ ಮಾಡಿಕೊಳ್ಳಲು ಅವಕಾಶವಾಗುವುದೆಂದೂ ಮುಖಂಡರು ವೈಸರಾಯರಿಗೆ ತಿಳಿಸಿದ್ದು, ಅದೂ ತಿರಸ್ಕೃತವಾಗಿದೆಯೆಂದು ತಿಳಿಯುತ್ತದೆ.

ಗಾಂಧಿಜಿಯನ್ನು ಬಿಡಲಾರೆವು

ಚರ್ಚಿಲರ ನಕಾರ

ಮಹಾತ್ಮರನ್ನು ಶರತ ಹಾಕದೆ ಬಿಡುಗಡೆ ಮಾಡಬೇಕೆಂದು ಡಿಲ್ಲಿಯಲ್ಲಿ ಸೇರಿದ ಅಖಿಲ ಭಾರತದ ಮುಖಂಡ ಪರಿಷತ್ತಿನವರು ಚರ್ಚಿಲರೊಡನೆ ಮಾಡಿದ ವಿನಂತಿಗೆ ಹಿಂದುಸ್ತಾನದ ಸರಕಾರದ ಧೋರಣೆಗೆ ತಾನು ಬೆಂಬಲವಿರುವುದಾಗಿಯೂ ಗಾಂಧಿಜಿಯನ್ನು ಬಿಡುಗಡೆಮಾಡಲಾಗುವುದಿಲ್ಲವೆಂದೂ ಚರ್ಚಿಲರು ಉತ್ತರವಿತ್ತಿದ್ದಾರೆ!

'ಹಿಂದುಸ್ತಾನ್ ಟೈಮ್ಸ್' ಮೇಲೆ ಗದೆ!

ಗಾಂಧಿಜಿ ಉಪವಾಸ ಪ್ರಾರಂಭಿಸಿದ್ದೇ ತಡ, ಅದರ ಕುರಿತು ಸುದ್ದಿ ಕೊಡುವರೆ ನಿರ್ಬಂಧ ಹೊರಟು, ನಮ್ಮ ದೇಶದ ಅನೇಕ ಪತ್ರಿಕೆಗಳು ಸರಕಾರದ ಗದಾ ಪ್ರಹಾರಕ್ಕೆ ಈಗಾಗಲೇ ತುತ್ತಾಗುತ್ತಿವೆ. ಇಂಥ ಪತ್ರಿಕೆಗಳಲ್ಲಿ ನ್ಯೂ ಡಿಲ್ಲಿಯಿಂದ ಹೊರಡುವ 'ಹಿಂದುಸ್ತಾನ್ ಟೈಮ್ಸ್' ಪ್ರಖ್ಯಾತವಾದುದು. ಇದಕ್ಕೆ ಕಾರಣವಿಲ್ಲದೆಯೂ ಇಲ್ಲ. ಇದರ ಸಂಪಾದಕರು ಶ್ರೀ ದೇವದಾಸ ಗಾಂಧಿಯವರು; ಮಹಾತ್ಮರ ಔರಸಪುತ್ರ. ಹೀಗಾಗಿ ಸರಕಾರಕ್ಕೆ ಈ ಪತ್ರಿಕೆಯ ಮೇಲೆ ವಕ್ರದೃಷ್ಟಿಯಿರುವುದೂ ಸಹಜ. ಸಂಪಾದಕರಿಗಾದರೂ, ತಮ್ಮ ತಂದೆ ಮೃತ್ಯುಶಯ್ಯೆಯಲ್ಲಿದ್ದಾಗ, ಏನಾದರೂ ಉದ್ರೇಕ ಹುಟ್ಟುವುದೂ ಸಹಜ. ಕಳೆದ ಅಗೆಸ್ಟ್ ತಿಂಗಳಲ್ಲಿಯೇ ಈ ಪತ್ರಿಕೆಯ ಮೇಲೆ ಸರಕಾರ ನಿರ್ಬಂಧ ಹಾಕಿದ್ದು, ಆ ಪತ್ರಿಕೆ ಕೆಲಕಾಲ ಪ್ರಕಟವಾಗಲೇ ಇಲ್ಲ. ಈಗ ಪುನಃ ಪ್ರಕಟವಾಗಿದೆ. ಈಗ ಪುನಃ ನಿರ್ಬಂಧವೂ ಬಿದ್ದಿದೆ. ಈ ಪತ್ರಿಕೆಯಲ್ಲಿ ಉಪವಾಸದ ಸುದ್ದಿಯನ್ನು ಇಷ್ಟೇ ಉದ್ದ ಕೊಡಬೇಕು, ಇಂತಹ ಅಚ್ಚುಮೊಳೆಗಳನ್ನೇ ಉಪಯೋಗಿಸಬೇಕು; ಇಷ್ಟೇ ತಲೆತರಹ ಹಾಕಬೇಕು ಇತ್ಯಾದಿಗಳ ನಿರ್ಬಂಧಗಳನ್ನು ಹಾಕಿದ ಕುರಿತು ಕೇಂದ್ರ ಶಾಸನ ಸಭೆಯ ಪ್ರತಿನಿಧಿಗಳು ಸರಕಾರದ ಈ ಅರ್ಥವಿಲ್ಲದ ನೀತಿಯನ್ನು ಕಟುವಾಗಿ ಟೀಕಿಸಿದರು. ಆದರೆ ಅದರಿಂದ ಸರಕಾರದ ಮನಸ್ಸು ಮೃದುವಾದಂತೇನೂ ತೋರುವುದಿಲ್ಲ.

ಮುಖಂಡರ ಪರಿಷತ್ತು

ಗಾಂಧಿಜಿಯ ಉಪವಾಸದಿಂದಾಗಿ ಉಂಟಾದ ದೇಶದ ಕಳವಳವನ್ನು ಪ್ರಕಟಿಸುವರೆ, ಹಾಗೂ ಅವರನ್ನು ಶರತವಿಲ್ಲದೆ ಬಿಡುಗಡೆ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವರೆ, ಅಖಿಲಭಾರತ ಸಕಲ ಜಾತಿ, ಮತ, ಪಂಗಡಗಳ ಮುಖಂಡರೆಲ್ಲರೂ ಡಿಲ್ಲಿಯಲ್ಲಿ ಸರ್ ಸಪ್ರುಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ವೈಸರಾಯರ ಕಡೆಗೆ ಗಾಂಧಿಜಿಯನ್ನು ಶರತವಿಲ್ಲದೆ ಬಿಡುಗಡೆ ಮಾಡಬೇಕೆಂಬ ಸರ್ವಾನುಮತದ ಒಂದು ನಿರ್ಣಯ ಕಳುಹಿಸಿದ್ದು, ಅದಕ್ಕೆ ವೈಸರಾಯರ ಸೆಕ್ರೆಟರಿಯಿಂದ, ಸರಕಾರವು ತನ್ನ ಹಿಂದಿನ ಧೋರಣವನ್ನು ಗಾಂಧಿಜಿಯನ್ನು ಬಿಡಲಿಕ್ಕಾಗುವುದಿಲ್ಲವೆಂದು ಬದಲಾಯಿಸುವುದಿಲ್ಲವೆಂದು ಉತ್ತರ ಬಂದಿದೆ. ಮುಖಂಡರ ಪರಿಷತ್ತಿನ ನಿರ್ಣಯದ ಪ್ರತಿಗಳನ್ನು ಚರ್ಚಿಲರಿಗೂ, ಫಿಲಿಪ್ಸರಿಗೂ ಈಗ ಕಳುಹಿಸಲಾಗಿದೆ.

ಫಿಲಿಪ್ಸರ ಭೇಟಿ

ರೂಸ್‌ವೆಲ್ಟರ ರಾಯಭಾರಿ ಫಿಲಿಪ್ಸರನ್ನು ಡಿಲ್ಲಿಯಲ್ಲಿ ಸಪ್ರುಗಳು, ಭೂಲೂಬಾಯಿ ದೇಸಾಯಿ ಮತ್ತು ರಾಜಾಜಿ ಕಂಡುಮಾತನಾಡಿದರು. ಗಾಂಧಿಜಿ ಉಪವಾಸದ ವಿಷಯ ಅವರೊಡನೆ ಚರ್ಚಿಸಿರಬೇಕೆಂದು ಊಹಿಸಲಾಗಿದೆ.

ಆಗಾಖಾನ್ ಬಂಗ್ಲೆ ಕಡೆಗೆ

೪೩ ಮಂದಿ ಸಹಿತ ಮೆರವಣಿಗೆ ಹೊರಟಿದ್ದ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ನಾಯಕ ಶ್ರೀ. ಎಂ. ಆರ್. ಮಸಾನಿಯವರನ್ನು ಅವರ ಆ ಹಿಂಬಾಲಕರೆಲ್ಲರನ್ನೂ ಬಂಧಿಸಲಾಗಿದೆ. ಇವರೆಲ್ಲರೊ ಬೊಂಬಯಿಯಿಂದ ಬಂದಿದ್ದರು. ಇವರಲ್ಲಿ ಬಹುಮಂದಿ ವಿದ್ಯಾರ್ಥಿಗಳು. ಗಾಂಧಿಜಿ ರಾಷ್ಟ್ರದ ಏಕಮಾತ್ರ ಕೇವಾಳ, ಉಪವಾಸದಿಂದ ನರಳುತ್ತಿದ್ದಲ್ಲಿಗೆ ಅವರ ದರ್ಶನ ಮಾಡಲು ಅವರು ಹೊರಟಿದ್ದರು!

ರೈಲ್ವೆ ಉತ್ಪನ್ನ

೩೭,೩೪೦೦೦೦೦ ರೂಪಾಯಿ ೧೯೪೩-೪೪ರಲ್ಲಿ ಆಗುವುದೆಂದು ಕೇಂದ್ರ ಶಾಸನಸಭೆಯಲ್ಲಿ ಸರ್ ಎಡ್ವರ್ಡ್ ಬೆಂಥಾಲರು ರೈಲ್ವೆ ಅಂದಾಜು ಪತ್ರವನ್ನು ಮಂಡಿಸುತ್ತಾ ಹೇಳಿದರು. ಇದು ಕಳೆದ ವರ್ಷದ ಉಳಿತಾಯಕ್ಕಿಂತ ೮,೩೦೦೦೦೦೦ ರೂಪಾಯಿಯಷ್ಟು, ಮೊತ್ತ ಮೊದಲು ನಿರೀಕ್ಷೆಗಿಂತ ೩,೩೦೦೦೦೦ದಷ್ಟು ಹೆಚ್ಚಾಗುವುದು. ಈ ಸಲ ರೈಲ್ವೆ ಪ್ರಯಾಣ ಮತ್ತು ಬಾಡಿಗೆ ದರಗಳನ್ನು ಎಲ್ಲಿಯೂ ಹೆಚ್ಚಿಸುವುದಿಲ್ಲವೆಂದೂ ಹೇಳಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಗಾಂಧಿಜಿಯನ್ನು ಬಿಡಿರಿ

ಎಂಬುದಾಗಿ ಮಂಗಳೂರು ವಿದ್ಯಾರ್ಥಿ ಸಂಘದವರು ವೈಸರಾಯರಿಗೆ ತಂತಿ ಕಳುಹಿಸಿರುವರಾಗಿ ತಿಳಿದು ಬಂದಿದೆ.

ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಗಾಂಧಿಜಿ ಆಯುಃ ಪ್ರಾರ್ಥನೆಯ ಸಹಾನುಭೂತಿಪರ ಉಪವಾಸಗಳ ಸುದ್ದಿಗಳು ಬಂದಿವೆ.

ಗಾಂಧಿಜಿ ಉಪವಾಸ ಸಹಾನುಭೂತಿಯಾಗಿ ಸ್ಥಳೀಯ ಬಂಟರ ಯಾನೆ ನಾಡವರ ಸಂಘದ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ವಿದ್ಯಾರ್ಥಿಗಳು ಕಳೆದ ಗುರುವಾರ ಇಡೀ ದಿನ ಉಪವಾಸ ಕೈಕೊಂಡರು.

ಪತ್ರಿಕೋದ್ಯಮಿಗಳ ತಂತಿ

ಮಹಾತ್ಮರನ್ನು ಬಂಧನಯೋ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡು ಜಿಲ್ಲಾ ಪತ್ರಿಕೋದ್ಯೋಗಿ ಸಂಘದವರು ವೈಸರಾಯರಿಗೆ ತಾ. ೨೦ ರಂದು ತಂತಿ ಬಿಟ್ಟಿರುವರು.

ಆಲಿಪುರದಿಂದ ಬಿಡುಗಡೆ

ಕಳೆದ ಸಪ್ಟಂಬರ ತಿಂಗಳಲ್ಲಿ ಕೋರ್ಟು ಪಿಕೆಟಿಂಗ್ ಮಾಡಿ, ಬಂಧಿತರಾಗಿ ಆಲಿಪುರಂ ಸೆರೆಮನೆಯಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಶ್ರೀಗಳಾದ ಶೀನಶೆಟ್ಟಿ, ಭೋಜ, ಸದಾಶಿವಕಾರಂತ, ನರಸಿಂಹ ಪೊಳ್ಳ, ರಾಮಚಂದ್ರ ಭಟ್ಟ, ಸತ್ಯೇಂದ್ರ ನಾಯಕ್, ಹರೀಂದ್ರನಾಥ ಶೆಟ್ಟಿ ಮೊದಲಾದ ಕಾಂಗ್ರೆಸ್ ಕೆಲಸಗಾರರು ಹಾಗೂ ವಿದ್ಯಾರ್ಥಿ ಮುಖಂಡರು ಆಲಿಪುರಂನಿಂದ ಶಿಕ್ಷೆಯ ಅವಧಿ ತೀರಿಸಿ ಬಿಡುಗಡೆಹೊಂದಿ ಬಂದಿದ್ದಾರೆ. ಶ್ರೀ ಪೊಳ್ಳ ಮೊದಲಾದ ಕೆಲವರು ಅನಾರೋಗ್ಯದ ನಿಮಿತ್ತ ಬೆಂಗಳೂರು ಮೊದಲಾದ ಕಡೆಗಳಲ್ಲಿ ಕೆಲ ದಿನಗಳ ವರೆಗೆ ಔಷದೋಪಚಾರ ಮಾಡಿಸಿಕೊಂಡು ಮರಳುವವರಿದ್ದಾರೆಂದು ತಿಳಿಯುತ್ತದೆ.

ಮುನಿಸಿಪಲ್ ಮೀಟಿಂಗ್

ಕಳೆದ ೧೯ರಲ್ಲಿ ಜರುಗಿದ ಮುನಿಸಿಪಲ್ ಕಂಡಕ್ಟೆನ್ಸಿಯಿಂದ ೬ ಮಂದಿಯ ಇಂಕ್ರಿಮೆಂಟ್ ಬಾಕಿಯ ಕುರಿತು ವಿಚಾರಣೆ ನಡೆಸಬೇಕೆಂದೂ, ಗವರ್ನರರ ಆಗಮನ ಕಾಲದಲ್ಲಿ ಅವರಿಗೆ ಈ ಕೌನ್ಸಿಲಿನ ಪರವಾಗಿ ಒಂದು ಸಾವಿರ ರೂಪಾಯಿಗಳ ಕಾಣಿಕೆಯ ಥೈಲಿಯನ್ನು ಒಪ್ಪಿಸಬೇಕೆಂದೂ, ಮುನಿಸಿಪಲ್ ಸಿಬಂದಿಗೆ ಕಳೆದ ತಾರೀಕು ೧-೮-'೪೨ರಿಂದ, ರೂ. ೪ ಹಾಗೂ ೭ ರೂಪಾಯಿಗಳಂತೆ ತುಟ್ಟಿಭತ್ತೆ ಸಲ್ಲಬೇಕೆಂದೂ ನಿಶ್ಚಯವಾಯಿತು. ಮಂಗಳೂರು ನಗರದಲ್ಲಿ ಬಡಜನರಿಗೆ ಅಕ್ಕಿ ಹಂಚುವ ಯೋಜನೆಯಲ್ಲಿ, ಕೌನ್ಸಿಲ್ ಸಹಕರಿಸಬೇಕೆಂಬ ಕೇಳಿಕೆ ಮಾನ್ಯವಾಯಿತು. ನಗರದಲ್ಲಿ ಶ್ವಾಸಕೋಶ ಸಂಬಂಧವಾದ ರೋಗಗಳು ಹೆಚ್ಚುವುದನ್ನು ತಡೆಯುವಂತೆ ಆ ಕುರಿತು ತಕ್ಕ ಉಪಾಯಗಳನ್ನು ಕೈಕೊಳ್ಳುವಾಗ, ಧೂಳಿಲ್ಲದ ರಸ್ತೆಗಳನ್ನು ಒದಗಿಸಬೇಕಾದುದು ಆಗತ್ಯವಾದುದರಿಂದ, ಅಂಥ ರಸ್ತೆಗಳಿಗಾಗಿ ಸರಕಾರ ಗ್ರಾಂಟ್ ಕೊಡುವಂತೆ ಕೇಳಿಕೊಳ್ಳಬೇಕಾಗಿಯೂ, ಎ. ಆರ್. ಪಿ. ಯವರ ವಶವಿರುವ ಮುನ್ಸಿಪಲ್ ಲಾರಿಗಳು—ಎ. ಆರ್. ಪಿ. ಯವರಿಗೆ ಅನುಕೂಲವಾದ ಸಮಯಗಳಲ್ಲಿ—ರಸ್ತೆಗಳಿಗೆ ನೀರು ಸುರಿಸಲು ಒದಗುವಂತೆ ಆ ಶಾಖೆಯವರನ್ನು ಕೇಳಿಕೊಳ್ಳಬೇಕಾಗಿಯೂ ನಿರ್ಣಯವಾಯಿತು. ಮಂಗಳೂರಿನ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನವರಿಗೆ, ೧೯೪೩—೪೪ಕ್ಕೆ ರೂ. ೧೦೦೦ರ ಸಹಾಯಧನ ಮಂಜೂರಾಯಿತು. ವೆಟ್‌ಸ್ಟರ್ ಮಾರ್ಕೆಟಿನ ಏಲಮಿನ ವಿಚಾರವು ತಿರುಗಿ ಮುಂದುವರಿಯಬೇಕೇ, ಬೇಡವೇ ಎಂಬ ವಿಚಾರದಲ್ಲಿ ಚರ್ಚೆ ನಡೆದು ಮತ ತೆಗೆಯಲಾಗಿ ಮುಂದುವರಿಯಬೇಕೆಂಬ ಪರವಾಗಿ ೧೭ ಓಟುಗಳೂ, ಬೇಡವೆಂಬ ಕುರಿತಾಗಿ ಕುರಿತಾಗಿ ೬ ಮತಗಳೂ ದೊರಕಿ ಏಲಂ ಮುಂದುವರಿಯಬೇಕೆಂದೇ ನಿರ್ಧಾರವಾಯಿತು.

ಕಳೆದ ತಾ. ೨೧ನೇ ಸಂಜೆ ಸ್ಥಳೀಯ ಮುನಿಸಿಪಲ್ ಕೌನ್ಸಿಲ್ ಸಭೆ ಜರುಗಿ ಖಾಲಿ ಸ್ಥಳಗಳಿಗೆ ತೆರಿಗೆ ಹೊರಿಸುವ ವಿಚಾರ ನಡೆಸಿ ತೀರ್ಮಾನ ಮಾಡಿತಲ್ಲದೆ, ಭಗಿನೀ ಸಮಾಜ (ಮಂಗಳೂರು) ಉರ್ವ ಮೈದಾನಿನಲ್ಲಿ ಕೊಡಬೇಕೆಂದು ಕೇಳಿಕೊಂಡ ಹೆಂಗೆ ಮನೆ, ಕ್ಲಿನಿಕ್ ಹಾಗೂ ಡಿಸ್ಪೆನ್ಸರಿ ಕಟ್ಟಡಗಳ ಸಂಬಂಧವಾದ ನೆಲದ ಪ್ಲಾನುಗಳ ಪ್ರಶ್ನೆಯ ಇತ್ಯರ್ಥವನ್ನು ಸದ್ಯ ಮುಂದಕ್ಕೆ ಹಾಕಿತು. ಸ್ಥಳೀಯ ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘದ ಅರಿಕೆಯಂತೆ ಆ ಸಂಘಕ್ಕೆ ೧೯೪೩—೪೪ಕ್ಕೆ ಸಹಾಯಧನವಾಗಿ ರೂ. ೫೦ನ್ನು ಮಂಜೂರು ಮಾಡಲಾಯಿತು.

ದ. ಕ. ಜಿಲ್ಲಾ ಎತ್ಲೆಟಿಕ್ ಸಂಘದ ಕಾರ್ಯಕ್ರಮಗಳು

ಕಳೆದ ಶುಕ್ರವಾರ ಶನಿವಾರ ಸಂಜೆ ಲ್ಯಾನ್ ಮೈದಾನಿನಲ್ಲಿ ಜರುಗಿದುವು. ಶನಿವಾರ ಸಂಜೆ, ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಲೆಕ್ಟರರು, ಬಹುಮಾನ ವಿತರಣೆಯ ಸಂದರ್ಭದಲ್ಲಿನ ಭಾಷಣ ಮಾಡಿದ ಮೇಲೆ, ಮುನಿಸಿಪಲ್ ಚೆಯರ್‌ಮ್ಯಾನರು ಸಮಯೋಚಿತವಾದ ಮಾತುಗಳನ್ನಾಡಿದರು. ಜಿಲ್ಲಾ ಕಲೆಕ್ಟರರ ಪತ್ನಿಯವರು ಗೆದ್ದವರಿಗೆ ಬಹುಮಾನ ಹಂಚಿದರು. ಆಟಪಾಟಗಳ ಸ್ಪರ್ಧೆಯಲ್ಲಿ, ಜೂನಿಯರ್ ಮತ್ತು ಸೀನಿಯರ್ ಕಪ್ಪುಗಳು ಸ್ಥಳೀಯ ಸೈ। ಎಲೋಶಿಯುಸ್ ಕಾಲೇಜಿಗೂ, 'ಓಪನ್ ಕ್ಲಾಸ್' ಕಪ್, ಸ್ಥಳೀಯ ವೈ. ಎಂ. ಸಿ. ಎ. ಅವರಿಗೆ ದೊರಕಿತು. ಕ್ರಿಕೆಟ್ ಪಂದ್ಯಾಟಗಳಲ್ಲಿ ಸಟ್ ಜೂನಿಯರ್ ಇಂಟರ್ ಸ್ಕೂಲ್ ಕಪ್ ಸೈ। ಎಲೋಶಿಯುಸ್ ಕಾಲೇಜಿಗೆ, ಜೂನಿಯರ್ ಮತ್ತು ಸೀನಿಯರ್ ಇಂಟರ್ ಸ್ಕೂಲ್ ಕಪ್‌ಗಳು, ಕೆನರಾ ಹೈಸ್ಕೂಲಿಗೆ, ಫೋರ್ಡ್ ಕಪ್ ಮಂಗಳೂರು ಕ್ರಿಕೆಟ್ ಕ್ಲಬ್ಬಿನವರಿಗೆ, ಅಬ್ಬುಕರ್ಕ್ ಕಪ್, ಸೈ। ಎಲೋಶಿಯುಸ್ ಕಾಲೇಜಿಗೆ ದೊರಕಿವೆ. ಹಾಕಿಯ ಜೂನಿಯರ್ ಇಂಟರ್ ಸ್ಕೂಲ್ ಕಪ್ ಮತ್ತು ಕಿಂಗ್ ಜಾರ್ಜ್ ಮೆಮೋರಿಯಲ್ ಕಪ್ ಇವು ಸೈ। ಎಲೋಶಿಯುಸ್ ಕಾಲೇಜಿಗೆ, ಫುಟ್ ಬಾಲಿನ ಲೀಗ್ ಕಪ್ ಎಸ್ ಆರ್ ಎಸ್ ಮೋಹನ್ನಿಗ. ಬಾಸ್ಕೆಟ್ ಬಾಲಿನ ಸೀನಿಯರ್ ಇಂಟರ್ ಸ್ಕೂಲ್ ಕಪ್ ಕೆನರಾ ಹೈಸ್ಕೂಲಿಗೆ, ಜಿ. ಕೆ. ಚಿಟ್ಟೂರ್ ಓಪನ್ ಕಪ್ ಕಾಸರಗೋಡು ಕ್ಲಬ್ಬಿಗೆ, ಬ್ಯಾಡ್‌ಮಿಂಟನಿನ ಜೆ. ಬಿ. ಮಚ್ಚಾಡೋ ಓಪನ್ ಕಪ್, ಪೆಂಟ್ಲಾಂಡ್ ಪೇಟ್ ಗೇಮ್ಸ್ ಕ್ಲಬ್ಬಿಗೆ, ಟೆನ್ನಿಸಿನ ಇಂಟರ್ ಸ್ಕೂಲ್ ಕಪ್ (ಮಿಪನು ಡಬಲ್) ಸೈ। ಎಲೋಶಿಯುಸ್ ಕಾಲೇಜಿಗೆ ದೊರಕಿವೆ. ಅಲ್ಬುಕರ್ಕ್ ಕ್ರಿಕೆಟ್ ಬೇಟಿಂಗ್ ಮೆಡಲ್ ಶ್ರೀ ನಾರಾಯಣ ಪೈ ಅವರಿಗೆ ದೊರಕಿದೆ.

ಆಹಾರ ವಿಚಾರ

ಮಿಲಾಗ್ರಿಸ್ ಇಗರ್ಜಿಯ ವಠಾರದಲ್ಲಿ ತಾ. ೧೪ರಂದು ಜರಗಿದ ಸಭೆಯಲ್ಲಿ ಅಕ್ಕಿಯ ಬೆಲೆಯನ್ನು ಹತೋಟಿಯಲ್ಲಿಡುವುದರ ಕುರಿತು ಗವರ್ನರರು ಇತ್ತ ಬರುವಾಗ ಅವರನ್ನು ಕಂಡು ಮಾತನಾಡುವುದಕ್ಕೂ ಅದಕ್ಕೆ ಮುಂಚಿತವಾಗಿ ಅಕ್ಕಿ ರಫ್ತಿನ ನಿರ್ಬಂಧ ಮುಂದುವರಿಯಬೇಕಾಗಿ ಹಾಗೂ ರೂ. ೬—೮ರ ಬೆಲೆ ನಿಶ್ಚಿತವಾಗಬೇಕಾಗಿಯೂ ಸರಕಾರವು ಅಕ್ಕಿಯನ್ನೆಲ್ಲ ವಶಪಡಿಸಿ ಡಿಪೋ ತೆರೆಯಬೇಕು ಎಂದು ಕೇಳಿಕೊಂಡು ಮನವಿಯನ್ನು ಕಳಿಸುವುದಕ್ಕೂ ನಿರ್ಧಾರವಾಯಿತು.

ಗೋಖಲೆಯವರ ಪುಣ್ಯ ತಿಥಿ

ತಾ. ೧೯ರಂದು ಸಂಜೆ ಸ್ಥಳೀಯ ಡಿ. ಸಿ. ಎಂ. ಹಾಲಿನಲ್ಲಿ ಡಾ. ಎಂ. ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎಂ. ಎಸ್. ವಿಠಾಂಬರರಾವ್, ಎಸ್. ಮುಕುಂದರಾವ್, ಎಂ. ಎನ್. ಚೌಟ, ಶ್ರೀಮತಿ ಎಸ್. ಆನಂದೀ ಬಾಯಿ, ಪ್ರೊ. ಬಿ. ಡಿಸೋಲ್ ಮೊದಲಾದವರು ಭಾಷಣವಿತ್ತರು.

ಶರಾಬು ಗುತ್ತಿಗೆಗಳ ಏಲಂ

ಮಂಗಳೂರು ಟೌನ್ ಮತ್ತು ಆಸುಪಾಸಿನ ಕೆಲವು ಶರಾಬು ಗುತ್ತಿಗೆಗಳ—೧೯೪೩-೪೪ನೇ ವರುಷದ—ಹರಾಜು, ಇದೇ ತಾ. ೧೮ರಲ್ಲಿ ತಾಲೂಕು ಕಚೇರಿಯಲ್ಲಿ ರೆವೆನ್ಯೂ ಡಿವಿಜನಲ್ ಆಫೀಸರರ ಸಮಕ್ಷಮ ನಡೆಯಿತು. ಸಾಮಾನ್ಯ ಎಲ್ಲ ಗುತ್ತಿಗೆಗಳು, ಈ ಮೊದಲೊಂದೂ ಆಗಿರದಷ್ಟು ಹೆಚ್ಚು ಮೌಲ್ಯಕ್ಕೆ ಹರಾಜಾದುವು.

'ಬೀರ್' ಅಂಗಡಿ ರದ್ದು ಹೊಂದಿತು

ಹಂಪನಕಟ್ಟೆ ಶರಾಬು ಗುತ್ತಿಗೆಯ ಒಳಗಿದ್ದ 'ಬೀರ್' ಅಂಗಡಿಯನ್ನು ಈ ವರುಷದಿಂದ ತೆಗೆದುಹಾಕಲಾಗಿದೆ.

ಉಡುಪಿ

ಪಿ. ಎ. ಪೈ. ಸ್ಮಾರಕ ನಿಧಿ

ದಿವಂಗತ ಪಿ. ಎ. ಪೈಯವರ ಸ್ಮಾರಕ ನಿಧಿಯನ್ನು ಸಂಗ್ರಹಿಸಿ ಅದನ್ನು ಹೇಗೆ ವಿನಿಯೋಗಿಸಬೇಕೆಂಬುದನ್ನು ಯೋಚಿಸಲು ಕೆನರಾ ಮ್ಯೂಚುವೆಲ್ ಬಿಲ್ಡಿಂಗಿನಲ್ಲಿ ಸಭೆಯೊಂದು ತಾ. ೧೭ರಲ್ಲಿ ಶ್ರೀ ಪಿ. ನಾರಾಯಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ನಿಧಿ ಸಂಗ್ರಹದ ಬಗ್ಗೆ ೩೦ ಜನರ ಒಂದು ಕಮಿಟಿಯನ್ನು ರಚಿಸಿದೆ. ಇದೇ ಬರುವ ಮಾರ್ಚ ಅಂತ್ಯದೊಳಗೆ ನಿಧಿಯನ್ನು ಸಂಗ್ರಹಿಸಬೇಕೆಂದೂ, ಅದರ ಬಡ್ಡಿಯ ಅರ್ಧಾಂಶವನ್ನು ಮಣಿಪಾಲ ಹಿಂದೂ ಅನಾಥಾಲಯಕ್ಕೂ, ಅರ್ಧಾಂಶವನ್ನು ಉತ್ಪತ್ತಿಗನುಗುಣವಾಗಿ ಉಡುಪಿ ಬೋರ್ಡು ಹೈಸ್ಕೂಲಿನ, ಕ್ರಿಶ್ಚಿಯನ್ ಹೈಸ್ಕೂಲಿನ, ಸಂಸ್ಕೃತ ಕಾಲೇಜಿನ, ಕಾನ್ವೆಂಟಿನ, ಎಳೆದೆನೆಯ ಅರ್ಹತೆಯುಳ್ಳ ಒಬ್ಬೊಬ್ಬ ವಿದ್ಯಾರ್ಥಿಗೂ, ಮತ್ತೆರಡನ್ನು ಮಹಮ್ಮದೀಯ, ಹರಿಜನ ನೇಕಾರ ವೃತ್ತಿಯ ವಿದ್ಯಾರ್ಥಿಗಳಿಗೂ ಕ್ರಮವಾಗಿ ವೇತನ ಕೊಡುವುದಕ್ಕಾಗಿ ಉಪಯೋಗಿಸಬೇಕೆಂದಾಯಿತು.

ಸಮ್ಮೇಳನ

ಕಾಸರಗೋಡು ತಾಲೂಕು ಎ. ಉಪಾಧ್ಯಾಯರ ಸಮ್ಮೇಳನವು ಕಾಸರಗೋಡಿನಲ್ಲಿ ಶ್ರೀ ಮಹಮ್ಮದ್ ಜಮ್ಮಾಡರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಕೆ. ನಂಬಿಯಾರರ ಸ್ವಾಗತ ಭಾಷಣದ ಅನಂತರ, ಈ ರೇಂಜಿನ ಇನ್‌ಸ್ಪೆಕ್ಟರ್ ಶ್ರೀ ರಾಮುಣ್ಣಿಯವರು ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಮಾಡಿದರು. ಕಾಸರಗೋಡು ಹೈಸ್ಕೂಲಿನ ಉಪಾಧ್ಯಾಯರಾಗಿರುವ ಶ್ರೀ ಭವಾನಿಶಂಕರರಾಯರು ಎ. ಶಾ. ಉಪಾಧ್ಯಾಯರ ಯೂನಿಯನಿನ ಆವಶ್ಯಕತೆಯ ಕುರಿತು ಭಾಷಣವನ್ನು ಮಾಡಿದ ಬಳಿಕ ಕಡಿಮೆ ಪಕ್ಷ ರೂ. ಐದನ್ನಾದರೂ ತುಟ್ಟಿಭತ್ತೆ ಕೊಡಬೇಕಾಗಿಯೂ, ಸಂಬಳವನ್ನು ಮಾಸಾಂತ್ಯದಲ್ಲಿಯೇ ಸಿಗುವ ಹಾಗೆಯೂ ಕೇಳಿಕೊಂಡು ಠರಾವುಗಳಾದುವು.

ಪುತ್ತೂರು

ಆಳಿಗೆ ಮರಣ ದಂಡನೆ

ಪುತ್ತೂರಿನ ಸಮೀಪವಿರುವ ದರ್ಬೆ ಎಂಬಲ್ಲಿಯ ೬ ವರ್ಷ ಪ್ರಾಯದ ರಾಮಕೃಷ್ಣ ಎಂಬ ಶಾಲಾ ಹುಡುಗನನ್ನು ಕೆರೆಯಲ್ಲಿ ಮುಳುಗಿಸಿ ಕೊಂದು ಅವನ ಕಿವಿಯಲ್ಲಿದ್ದ ಚಿನ್ನದ ಟಿಕ್ಕಿಗಳನ್ನು ಕದ್ದು ತೆಗೆದನೆಂಬ ಆರೋಪಣೆಯ ಮೇಲೆ ಅದೇ ಗ್ರಾಮದ ೧೬ ವರ್ಷ ಪ್ರಾಯದ ಕೃಷ್ಣ ನಾಯಕನೆಂಬವನಿಗೆ ಮಂಗಳೂರಿನ ಸೆಶ್ಯನ್ ಜಡ್ಜರು ತಾ. ೧೫ರಲ್ಲಿ ಮರಣದಂಡನೆ ವಿಧಿಸಿದರು.



ಸಿನೆಮಾ ಸುದ್ದಿ

ಯಾಕೆ ನಿರ್ಬಂಧ ಹಾಕಿದರಿ?

ಎಂದು ಕೇಳುವ ಅಧಿಕಾರ ನಮಗೆ ಈಗ ಇಲ್ಲ. ಆದರೆ ನಿರ್ಬಂಧ ಹಾಕಿದ ಚಿತ್ರಗಳು ಮಾತ್ರ ಜನಪ್ರಿಯವಾಗುವವೆಂಬುದರಲ್ಲಿ ಸಂಶಯವಿಲ್ಲ. 'ರೋಟಿ' 'ಭಕ್ತ ಕಬೀರ್' ಮತ್ತು 'ಉಲ್ಟಿ ಗಂಗಾ' ಚಿತ್ರಗಳನ್ನು ಸರಕಾರವು ಈಗ ನಿರ್ಬಂಧಿಸಿದೆ. ಜನರು ರೋಟಿ (ಅನ್ನ)ಗಾಗಿ ಕೂಗಾಡುತ್ತಿರುವೀ ಕಾಲದಲ್ಲಿ 'ರೋಟಿ'ಯಿಲ್ಲದಂತೆ ಮಾಡಬಾರದಿತ್ತೆಂದು ಕೆಲವರು ಹೇಳುವುದೇನೋ ಸರಿ. ಆದರೆ 'ರೋಟಿ' ಚಿತ್ರ ನಿರ್ಬಂಧ ಹಾಕಿಸಿಕೊಳ್ಳುವ ಯಾವ ಅಪರಾಧ ಮಾಡಿತೆ? ಅದೇನೂ ನಮಗೆ ತಿಳಿಯದು! ಎಷ್ಟೋ ಮಂದಿ 'ಸ್ಥಾನಬದ್ಧ'ರಾಗಿ ಅನಿಯಮಿತ ಕಾಲದ ವರೆಗೆ ನಿರ್ಬಂಧಿತರಾದ ದೇಶದ ಮುಂದಾಳುಗಳು ಯಾವ ಅಪರಾಧ ಮಾಡಿದ್ದಾರೆಂದು ಯಾರಾದರೂ ಹೇಳಬಲ್ಲರೆ? ಯುದ್ಧ ಕಾಲವಿದು; ಡಿಫೆನ್ಸ್ ಓಫ್ ಇಂಡಿಯಾ ಕಾಲವಿದು. 'ರೋಟಿ'ಗಾದರೂ ಈ ಯುದ್ಧಕಾಲದಲ್ಲಿ ಡಿಫೆನ್ಸ್ ಓಫ್ ಇಂಡಿಯಾ ಯಾಕೆ ಲಗಾವಾಗಬಾರದು? ಆದರೆ 'ರೋಟಿ' ಚಿತ್ರವನ್ನು ಇಷ್ಟರಲ್ಲೇ ನೋಡಿದ ವಿಮರ್ಶಕರು ಅದನ್ನು ಸಮತಾವಾದೀ ಚಿತ್ರವೆಂದು ಉಲ್ಲೇಖಿಸಿದ್ದಾರೆ. ಸಮತವಾದೀ ರಾಷ್ಟ್ರ, ರಶ್ಯಾದೊಡನೆ ಮೈತ್ರಿಗೊಂಡ (ಯುದ್ಧ ಮುಗಿವ ವರೆಗಾದರೂ) ನಮ್ಮ ಸರಕಾರವು 'ರೋಟಿ'ಯನ್ನು ಯುದ್ಧ ಮುಗಿವ ವರೆಗಾದರೂ ಪ್ರದರ್ಶಿಸಲು ಬಿಡಬಾರದಿತ್ತೇ? ಎಂದು ಕಮ್ಯುನಿಸ್ಟರು, ಸೋಶಿಯಲಿಸ್ಟರು ಕಿರಿಕಿರಿ ಮಾಡುತ್ತಾರೆ.

'ಭಕ್ತ ಕಬೀರ'ದ ಅಪರಾಧವೇನಂತೆ? 'ಹಿಂದೂ ಮುಸ್ಲಿಂ ಐಕ್ಯ' ಸಾರುವುದೆ? 'ನಿಮ್ಮಲ್ಲಿ, ಹಿಂದು ಮುಸ್ಲಿಮರಲ್ಲಿ ಐಕ್ಯವಿಲ್ಲದೆ ನಿಮ್ಮ ಸ್ವಾತಂತ್ರ್ಯವನ್ನು ತಿರುಗಿ ನಿಮಗೆ ಯಾರಿಗೆಂದು ಕೊಡಲಿ'? ಎಂದು ಸರಕಾರ ಮೊರೆಯುತ್ತಿದೆ! ಹಾಗೆಂದು ಒಂದು ಬಾಯಿಯಲ್ಲಿ ಹೇಳುತ್ತಾ, ಕೈಯ್ಯಲ್ಲಿ ಹಿಂದೂ ಮುಸ್ಲಿಂ ಐಕ್ಯ ಸಾಧಕ ಕೆಲಸಗಳಿಗೆ ತಡೆ ಹಾಕಿದರೆ ಹೇಗೆ? ಸರಕಾರವನ್ನು ಟೀಕಿಸುವವರೇನೋ ಇದು 'ವಿಭಜಿಸಿ ಆಳುವ ನೀತಿ' ಎಂದು ಸಾಮ್ರಾಜ್ಯಶಾಹೀ ಸರಕಾರವನ್ನು ಖಂಡಿಸಬಹುದು. ಆದರೆ ನಮಗೆ 'ಭಕ್ತ ಕಬೀರ' ಚಿತ್ರ ನಿರ್ಬಂಧಿಸಲ್ಪಟ್ಟ ಕಾರಣವೇನೇನೂ ಗೊತ್ತಿಲ್ಲ. ಅಂತೂ ಇಷ್ಟೊಂದು ಹೇಳಬಹುದು. ಮೊನ್ನೆ ಮೊನ್ನೆ ಮಂಗಳೂರಲ್ಲಿ ಪ್ರದರ್ಶಿಸಲ್ಪಟ್ಟು ಅಷ್ಟೊಂದು ಜನಾದರಣೀಯವಾಗದ ಈ ಚಿತ್ರವನ್ನು, ನಿರ್ಬಂಧ ತೆಗೆದ ಮೇಲೆ ಸ್ವಲ್ಪ ಹೆಚ್ಚು ಬಾಡಿಗೆ ಕೊಟ್ಟಾದರೂ, ತಿರುಗಿ ಮಂಗಳೂರಿಗೆ ತರಿಸುವ ಸಾಹಸವನ್ನು ನಮ್ಮ ಸ್ಥಳೀಯ ಸಿನೆಮಾ ಪ್ರದರ್ಶಕರು ಮಾಡದಿರಲಾರರು! ಹಾಗೂ 'ರೋಟಿ' 'ಭಕ್ತ ಕಬೀರ' 'ಉಲ್ಟಿ ಗಂಗಾ'ಗಳಿಗಾಗಿ ಮಾಡಿದ ವೆಚ್ಚಕ್ಕೆ ಉತ್ಪಾದಕರು ಚಕ್ರಬಡ್ಡಿಯ ಲಾಭ ಪಡೆಯುವರೆಂಬುದು ಖಂಡಿತ.

'ಭಕ್ತರಾಜ' ಪಗ್ನೀಸ್!

ಭಕ್ತ ಚಿತ್ರಗಳಲ್ಲಿ ವಿಷ್ಣುಪಂತ ಪಗನೀಸನ ಅಭಿನಯವನ್ನು ಮೆಚ್ಚದವರಾರು? ಈಗ ಅತನು 'ಭಕ್ತರಾಜ' ಎಂಬ ಚಿತ್ರದಲ್ಲಿಯೇ ಅಭಿನಯಿಸುತ್ತಾನೆ. ಇದು ಜಯಂತ ದೇಸಾಯಿಯವರ ಮೊದಲನೆಯ ಚಿತ್ರ.

'ಆಗೇ ಕದಮ್!'

'ಆಗೇಕದಮ್' ಎಂದರೆ 'ಮುನ್ನುಗ್ಗು' ಎಂದರ್ಥ. ಈ ಹೆಸರಿನ ಚಿತ್ರವೊಂದು ಆಚಾರ್ಯ ಆರ್ಟ್‌ಕಿವರ ಚಿತ್ರಾನೀಗ ಸೆಟ್ಟುಗಳ ಮೇಲೆ ನಿಜವಾಗಿ ಮುನ್ನುಗ್ಗುತ್ತಿದೆ. ಮೋತೀಲಾಲ್ ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತಾನೆ.

'ಕೋಶಿಷ್'

ಎಂಬ ಫೈಸಾಲ್‌ರವರ ಚಿತ್ರದಲ್ಲಿ ಅನೇಕ ಮಂದಿ ಪ್ರಸಿದ್ಧ ಕಲಾವಿದರು ನಟಿಸುವರು. ಪನ್ನಾಬಾನು ಮತ್ತು ತ್ರಿಲೋಕ್ ಕಪೂರ್ ಇವರು ಮುಖ್ಯ ಪಾತ್ರಗಳನ್ನು ವಹಿಸುವರು.

'ಚಂದ್ರಮೋಹನ್' ದುಷ್ಯಂತನಾದರೆ?

ಹೇಗೆ ಒಪ್ಪೀತೇ? ಎಂದು ಹಲವರು ಶಂಕಿಸುತ್ತಿದ್ದಾರೆ. ಚಂದ್ರಮೋಹನ್ ಗಂಭೀರ ರುದ್ರ ನಟನೆಗಳಲ್ಲಿ ಪ್ರಸಿದ್ಧನು; ಶೃಂಗಾರ ಪ್ರಿಯ ದುಷ್ಯಂತ ಪಾತ್ರವನ್ನು ಹೇಗೆ ನಿರ್ವಹಿಸುತ್ತಾನೋ ನೋಡಬೇಕು. ಶಾಂತಾರಾಮರ 'ಶಕುಂತಲ' ಚಿತ್ರದಲ್ಲಿ ಚಂದ್ರಮೋಹನ್ ದುಷ್ಯಂತನಾಗಿಯೂ, ಜಯಶ್ರೀ ಶಕುಂತಳೆಯಾಗಿಯೂ ನಟಿಸುವರು. ಇದರ ಶೂಟಿಂಗ್ ಜನವರಿ ಆರನೆಯ ತಾರೀಕಿನಂದು ಆರಂಭವಾಯಿತು.

ನಟಿತಾ ಮೋತಿಲಾಲರು

ಜತೆಯಾಗಿರುವುದನ್ನು ನಾವು ನೋಡದೆ, ಅಥವಾ ಅವರು ಜತೆಗೂಡಿ ಅಭಿನಯಿಸಿದ ಸಿನೆಮಾವನ್ನು ನೋಡದೆ ಬಹಳ ಸಮಯ ಆಯಿತು! ಆದರೆ ಈಗ ಪುನಃ ಅವರು ಮಿನರ್ವಾದವರ 'ಪ್ರಾರ್ಥನಾ'ದಲ್ಲಿ ಒಟ್ಟಾಗಿದ್ದಾರೆ. ನಿರ್ದೇಶಕರ್‍ಯಾರೆಂದು ಪುನಃ ಹೇಳಬೇಕೆ? ಅವರೇ ಸರ್ವೋತ್ತಮ ಬಾದಾಮಿಯವರು; ನಮ್ಮ ನಾಡಿನವರು! ಬಾದಾಮಿಯವರ ಕೈ ಚಮತ್ಕಾರಕ್ಕೆ ಬಹಳ ಮೆಚ್ಚಿಕೆ ಬೇಕು ನಟಿತಾ! 'ಪ್ರಾರ್ಥನಾ'ವನ್ನು ಆದಷ್ಟು ತೀವ್ರ ಮಂಗಳೂರಲ್ಲಿ ಪ್ರದರ್ಶಿಸುವಂತೆ ಸ್ಥಳೀಯ ಸಿನೆಮಾ ಮಾಲಕರಲ್ಲಿ ನಮ್ಮ ಪ್ರಾರ್ಥನಾ ಇದೆ.

ಸಾವಿತ್ರಿ 'ರಜತೋತ್ಸವ'

ರಜತೋತ್ಸವ ಎಂದರೆ ಇಪ್ಪತ್ತೈದು ವರ್ಷಗಳ ಹಬ್ಬ. ಆದರೆ ನಮ್ಮ ಮಂಗಳೂರಿನವರು, ಶ್ರೀ. ವೆಂಕಟ್ರಾಯ ಬಾಳಿಗರು ಹೇಳಿದಂತೆ 'ಸಮಯಕ್ಕಿಂತ ಮುಂದುವರಿದೇ ಇದ್ದಾರೆ; ಈಗಿನ ಕಾಲವೂ ಒಂದು ಗಂಟೆಗೆ ಮುಂದೆ ತಾನೆ?' ಸ್ಥಳೀಯ ಸೆಂಟ್ರಲ್ ಟಾಕೀಸಿನವರು ತಮಿಳು ಚಿತ್ರ ಸಾವಿತ್ರಿಯನ್ನು ತಮ್ಮ ಥಿಯೇಟರಿನಲ್ಲಿ ಇಪ್ಪತ್ತೈದು ದಿನಗಳ ಪ್ರದರ್ಶನ ಮಾಡಿದ ಉತ್ಸವವನ್ನು ರಜತೋತ್ಸವವಾಗಿ ಆಚರಿಸಿದರು. ಕಳೆದ ಸೋಮವಾರ ಶ್ರೀ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ, ಸಾವಿತ್ರಿ ಚಿತ್ರ ನಿರ್ಮಾಪಕರಾದ ಮಧುರಾ ರಾಯಲ್ ಟಾಕೀಸಿನವರಿಗೆ ಆದರ ಪ್ರದರ್ಶಕರಾದ ಸೆಂಟ್ರಲ್ ಟಾಕೀಸಿನವರೂ, ಸೆಂಟ್ರಲ್ ಟಾಕೀಸಿನವರಿಗೆ ರಾಯಲ್ ಟಾಕೀಸಿನವರೂ ಅನ್ಯೋನ್ಯ ಬಹುಮಾನ ಕೊಟ್ಟರು. ನಗರದ ಹಲವು ಮಹನೀಯರನ್ನು ಆಮಂತ್ರಿಸಿ 'ಟೀಪಾರ್ಟಿ'ಯಿತ್ತು ಸತ್ಕರಿಸಿದರು. ತುಂಬಾ ಜನರು ನೆರೆದಿದ್ದರು. ಟಿಕೇಟು ಪಡಕೊಂಡವರಿಗೆ ಸಿಹಿ ನೀಡಿ ಮೆಚ್ಚಿಸಿದರು. ರಜತೋತ್ಸವದ ಪ್ರಶಂಸೆಯಾಗಿ ಶ್ರೀಗಳಾದ ಪ. ಕಯ್ಯಾರ ಕಿಞ್ಞಣ್ಣ ರೈ, ಕುಕ್ಕುಕುಂದ ಶಿವರಾವ್, ವೆಂಕಟೇಶ ಪ್ರಭು, ಬಿ. ವೆಂಕಟ್ರಾಯ ಬಾಳಿಗ ಮತ್ತು ಡಾ| ಉಪೇಂದ್ರ ಪೈಗಳು ಭಾಷಣವಿತ್ತರು. ಒಳ್ಳೆಯ ಚಿತ್ರವನ್ನು ನೋಡಿ ಪುರಜನರಿಗೂ ಸಂತೋಷ. ಕೈತುಂಬಾ ದುಡ್ಡು ಗಳಿಸಿದ್ದರಿಂದ ಸಿನೆಮಾ ಪ್ರದರ್ಶಕರಿಗೆ ಹಾಗೂ ಉತ್ಪಾದಕರಿಗೂ ಆನಂದವಾಗಲೇ ಬೇಕಷ್ಟೆ?



ವಿಜಯದ ಆಯುಧವಿದು!

'ಇಂಡಿಯನ್ ಏರ್ ಫೋರ್ಸ್' ದಲ್ಲಿಯ ನಮ್ಮ ತರುಣ, ಕೌಶಲ ಸಂಪನ್ನ ವೈಮಾನಿಕರು ಈ ಸಾಧನದಿಂದ ಶತ್ರುಗಳನ್ನು ಖಂಡಿತವಾಗಿ ಸೋಲಿಸಬಲ್ಲರು. ಇದರ ಸಹಾಯದಿಂದಲೆ ಅವರ ವಿಮಾನಗಳು ಶತ್ರುಗಳ ಮೇಲೆ ಧಾಳಿ ಮಾಡಲು ಮುಗಿಲಲ್ಲಿ ಹಾರುವವು.

ಅತಿಶ್ರೇಷ್ಠ ಯೋಧರು - ಅತ್ಯುತ್ಕೃಷ್ಟ ತರಬೇತಿ ಅತ್ಯುತ್ತಮ ಯಂತ್ರಗಳು, ಈ ಮೂರೂ ಸೇರಿ ಜಪಾನಿಗಳನ್ನು ಭಾರತದ ಅಂತರಿಕ್ಷದಿಂದ ಹಾರಹೊಡೆಯಬಲ್ಲವು. ಆದರೆ ಇಷ್ಟೇ ಸಾಲದು. ವಿಮಾನಗಳೇ ಮೊದಲಾದ ಯುದ್ಧ ಸಾಹಿತ್ಯದ ನಿರ್ಮಾಣಕ್ಕೆ ಲೆಕ್ಕವಿಲ್ಲದಷ್ಟು ಸಾಮಗ್ರಿಗಳು ಬೇಕು. ಅದಕ್ಕಾಗಿ ಯಾವ ಒಡವೆಗಳನ್ನು ಕೊಳ್ಳದಿದ್ದರೆ ಸಾಗುವುದೋ ಅಂಥವುಗಳನ್ನು ಕೊಳ್ಳದಿರುವುದು ನಮ್ಮ ಕರ್ತವ್ಯವಾಗಿದೆ. ಯುದ್ಧದ ಪ್ರಚಂಡವೆಚ್ಚದ ಮೂಲಕ, ನಾವು ಉಳಿಸಬಹುದಾದ ಹಣವನ್ನೆಲ್ಲ ಸರ್ಕಾರಕ್ಕೆ ಸಾಲದರೂಪದಲ್ಲಿ ಕೊಡುವುದು ಅಗತ್ಯವಿದೆ. ನಮ್ಮ ಮಿತವ್ಯಯದಿಂದಲೆ ಜಪಾನಿಗಳನ್ನು ತಡೆಗಟ್ಟುವ ನಮ್ಮ ದೃಢ ನಿರ್ಧಾರವನ್ನು ಕೃತಿಯಲ್ಲಿ ತರಬಲ್ಲೆವು.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್
...ಇಲ್ಲವೆ ಡಿಫೆನ್ಸ್ ಲೋನ್ಸ್

ಸರ್ಟಿಫಿಕೇಟುಗಳು ನಿಮ್ಮ ಅಂಚೇ ಕಚೇರಿಯಲ್ಲಿ ಸಿಗುವವು.
೧೦ ರೂ.ಗೆ ಹತ್ತು ವರ್ಷಗಳಲ್ಲಿ ರೂ. ೩-೯-೦ ಲಾಭ ಬರುವುದು.

ಇವುಗಳ ಹೊರತು ಮತ್ತೇನನ್ನೂ ಕೊಳ್ಳುವ ಮೊದಲು ಹೊಂಚಿ ಯೋಚಿಸಿರಿ.

CPU.30Kn.

(೩ನೇ ಪುಟದಿಂದ ಮುಂದುವರಿದುದು)

ಮಹಾತ್ಮರ ಉಪವಾಸ

ಉಪವಾಸವನ್ನು ಬೇಗನೇ ಮುಕ್ತಾಯಗೊಳಿಸದಿದ್ದರೆ, ಅವರ ಜೀವವನ್ನು ಉಳಿಸುವುದು ಸಾಧ್ಯವಾಗದೆ ಹೋಗುವುದು ಕಸ್ತೂರಿಬಾಯಿಯವರು ಪತಿಯ ಉಪವಾಸದ ಆದಿಯಿಂದಲೇ ಅವರ ಬಳಿಯಿದ್ದು ಶೋಕವನ್ನೆಲ್ಲಾ ಸಹಿಸಿಕೊಂಡು ಶುಶ್ರೂಷಿಸುತ್ತಿದ್ದಾರೆ. ರಾಮದಾಸ ಗಾಂಧಿಯವರು ಅವರ ಕುಟುಂಬದ ಇತರ ಸದಸ್ಯರು ಮತ್ತು ಗಾಂಧಿಜಿಯ ಮೊಮ್ಮಕ್ಕಳೊಂದಿಗೆ ಮನೆಗೆ ಬಂದಿದ್ದಾರೆ ಮೇಡಂ ಸೋಫಿಯಾ ವಾಡಿಯಾ, ಜಿ ಎಫ್. ಭರೂಚಾ, ಶಂಕರಲಾಲ ಬೇಂಕರ್ ಮತ್ತು ಆರ್. ಡಿ. ಬಿರ್ಲಾರು, ಪ್ರತಿಯೊಬ್ಬರೂ ಮೂರು ನಿಮಿಷ ಮಹಾತ್ಮರ ಭೇಟಿಯಾದರು. ಸಂದರ್ಶಕರು ಯಾರೂ ಮಹಾತ್ಮರಿಂದ ಉತ್ತರ ಅಪೇಕ್ಷಿಸಕೂಡದೆಂದು ಡಾಕ್ಟರರು ತಿಳಿಸಿದ್ದಾರೆ. ಗಾಂಧಿಜಿಯೂ ಮಾತನಾಡಕೂಡದೆಂದು ಡಾಕ್ಟರರು ಅವರಿಗೆ ವಿನಂತಿಸಿದ್ದಾರೆ. ಗಾಂಧಿಜಿ ನೀರನ್ನು ಗಾಜಿನ ಕೊಳವೆಯಿಂದ ಕುಡಿಯುತ್ತಾರೆ. ಅಲ್ಲದೆ ತಮ್ಮ ತುಟಿವರೆಗೆ ನೀರಿನ ಪಾತ್ರ ತೆಗೆದುಕೊಂಡು ಬರಲು ಅಸ್ಪದಕೊಡುತ್ತಿರುವರು ದೀರ್ಘಕಾಲದ ವರೆಗೆ ಅವರು ಧ್ಯಾನಮಗ್ನರಾಗಿಯೇ ಇರುತ್ತಾರೆ. ಆಗಾಗ್ಗೆ ಅವರು ದಿವಂಗತ ಮಹಾದೇವ ದೇಸಾಯಿಯವರ ಸ್ಮರಣೆಮಾಡುತ್ತಿದ್ದಾರೆ. ಮಹಾದೇವ ದೇಸಾಯಿಯವರ ಪತ್ನಿ ಮತ್ತು ಚಿರಂಜೀವಿಯವರು ಯಾವಾಗಲೂ ಮಹಾತ್ಮರ ಹತ್ತಿರವೇ ಇದ್ದು ಸಮಾಧಾನಪಡಿಸುತ್ತಿರುವರು. ಉಪವಾಸ ಪ್ರಾರಂಭಿಸಿದಂದಿನಿಂದ ಅವರು ಇದುವರೆಗೆ ಪ್ರತಿದಿನ ಮುಂಜಾನೆಯೂ ಮಹಾದೇವ ದೇಸಾಯಿಯರ ಸಮಾಧಿಯ ಮೇಲೆ ಪುಷ್ಪಗಳನ್ನು ಅರ್ಪಿಸಲಾಗಿದೆಯೋ ಇಲ್ಲವೊ ಎಂಬುದನ್ನು ವಿಚಾರಿಸುತ್ತಿದ್ದಾರೆ. ಉಪವಾಸಕ್ಕಿಂತ ಮೊದಲು ಅವರೇ ಪ್ರತಿದಿನ ತಪ್ಪದೆ ಪುಷ್ಪಗಳನ್ನರ್ಪಿಸಿ ಬರುತ್ತಿದ್ದರು. ಗಾಂಧಿಜಿ ಪುತ್ರರಾದ ದೇವದಾಸ ಗಾಂಧಿ ಮತ್ತು ರಾಮದಾಸ ಗಾಂಧಿಯವರು ಅವರ ಮನೆಯವರೊಂದಿಗ ಬಹು ಹೊತ್ತು ಮಹಾತ್ಮರ ಬಳಿಯಲ್ಲಿಯೇ ಇದ್ದರು.

ತಾ ೨೨ರ ಪ್ರಕಟಣೆ ಹೀಗೆ ಸಾರುತ್ತದೆ 'ನಿನ್ನೆಯ ದಿನವಿಡೀ ಗಾಂಧಿಜಿಗೆ ವಿಶ್ರಾಂತಿಯಿರಲಿಲ್ಲ. ಮಧ್ಯಾಹ್ನ ೪ ಗಂಟೆಗೆ ಮಹಾತ್ಮರ ಪ್ರಕೃತಿಯಲ್ಲಿ ಗಂಡಾಂತರವೇ ತೋರಿತು ಓಕರಿಕೆಯ ಬಾಧೆ ಬಹಳವಾದ್ದರಿಂದ ಅವರಿಗೆ ಮೂರ್ಛೆ ಬಂತು, ನಾಡಿಗಳು ಕೈಗೆ ಸಿಗದಷ್ಟು ಮಂದವಾದವು ಆದರೂ ನಿಂಬೆಹಣ್ಣಿನ ರಸದೊಂದಿಗೆ ನೀರನ್ನು ಕುಡಿಸಿದರು. ಆ ಮೇಲೆ ಅಪಾಯ ದೂರವಾದಂತಾಗಿ, ರಾತ್ರಿಯಲ್ಲಿ ೬॥ ಗಂಟೆ ಕಾಲ ನಿದ್ರೆಮಾಡಿದರು ಈ ದಿನ ಮೌನದಿಂದಿದ್ದಾರೆ. ಇಂದು ಸ್ವಲ್ಪ ಉಲ್ಲಸಿತರಾದಂತೆ ತೋರುತ್ತದೆ. ಹೃದಯ ಮತ್ತಷ್ಟು ಅಶಕ್ತವಾಗಿರುವುದು. ಗಾಂಧಿಜಿಯನ್ನು ಕಾಣಲು ಬಿಡುವಿಲ್ಲದೆ ಸಂದರ್ಶಕರು ಬರುತ್ತಾರೆ. ಗಾಂಧಿಜಿಯವರ ಇಬ್ಬರು ಮಕ್ಕಳು ಮತ್ತು ಬಜಾಜರ ಮನೆಯವರು ಈ ದಿನ ಗಾಂಧಿಜಿ ದರ್ಶನ ತೆಗೆದುಕೊಂಡರು. ಮಹಾತ್ಮರ ಮಿದುಳಿಗೆ ಆಯಾಸ ಬೀಳದಂತೆಯೂ ಸಂದರ್ಶಕರೂ ಮಾತನಾಡದಂತೆ ಡಾ। ಗಿಲ್ಡರ್ ಜಾಗ್ರತೆ ವಹಿಸುತ್ತಿದ್ದಾರೆ. ಬಂದವರು ಗಾಂಧಿಜಿಯನ್ನು ಕಂಡು, ಅಲ್ಲಿಯೇ ವಂದಿಸಿ ಮೂರು ಮಿನಿಟಿನ ನಂತರ ಹೋಗುವರು.

ಮಹಾತ್ಮಾಜಿಯವರ ಸಂಬಂಧಿಕರೂ, ಮುಂಬಯಿಯ ಮಾಜಿ ಮೇಯರರೂ ಆದ ಶ್ರೀ. ಮಥುರಾದಾಸ ತ್ರಿಕಮಜಿಯವರು ಈಗ ಮಿರ್ಜ ಆಸ್ಪತ್ರೆಯಲ್ಲಿ ಶುಶ್ರೂಷೆ ಹೊಂದುತ್ತಿದ್ದರೂ ಅವರನ್ನು ಕಾಣಬೇಕೆಂದು ಗಾಂಧಿಜಿ ಅಪೇಕ್ಷಿಸಿದ್ದರಿಂದ ಅವರು ಗಾಂಧಿಜಿಯನ್ನು ನೋಡಲು ಬರುವರು. ಮುಂಬಯಿ ಪ್ರಾಂತ ಪರಿಷತ್ತಿನ ಕೆಲಸ ಮುಗಿಸಿದ ಕೂಡಲೇ ಬುಧವಾರ ಅಥವಾ ಗುರುವಾರ ರಾಜಾಜಿ ಮತ್ತು ಜಿ ಡಿ ಬಿರ್ಲಾ ಮುಂಬಯಿಗೆ ಬರುವರು

The Canara Banking Corporation Ltd.

(Incorporated in British India)

Head Office: UDIPI

Estd 1906.

Applications are invited. for the posts of Agents and Accountants in the Corporation to serve in branches outside the District. Selected candidates will have to undergo a probationery course as perrules. Graduates or persons with previous banking experience or who have passed Banking Examinations will be preferred. Persons who have not passed atleast the S. S. L. C. or other equivalent exminations need not apply.

Applications stating age, qualifications, etc. together with 2 good references must reach the undersigned before the 15th February 1943.

Udipi, 21-1-1943 — **V. R. KAMATH**, B. A., LL. B., *Manager*.

GREETINGS.

The Directors, Officers and staff of the CANARA BANK, LIMITED, join in sending you this message of appreciatiom for your goodwill and patronage during the last year We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD 1906.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ

2. ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು.

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲ್ಪಾಗುವುವು.

4 ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು.

5. 28 ರಾತ್ತಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯು ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಸರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR, HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ನಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ: ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಪಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮಂಗಾರ ಗಲ್ಲಿ ಹುಬ್ಬಳ್ಳಿ.
2. 36 ಫ್ರಾಕ್ರೋಪ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ, ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. **1906**

[ಸಂಪುಟ 37] ತಾರೀಕು 5—3—1943 [ಸಂಚಿಕೆ 8]

ಮಹಾತ್ಮರ ಉಪವಾಸ

ಸರಕಾರೀ ಪ್ರಕಟಣೆ ಮತ್ತು —ಅಧಿಕೃತ ಸುದ್ದಿಗಳು—

ಮಹಾತ್ಮಾ ಗಾಂಧಿಜಿಯವರು, ಮಹೋಪವಾಸ ಕೈಕೊಂಡ ಮೊದಲ್ಗೊಂಡು ಸರಕಾರೀ ಪ್ರಕಟಣೆ ಹಾಗೂ ಅಧಿಕೃತ ಸುದ್ದಿಗಳ ಆಧಾರದಿಂದ ನಾವು ಮಹಾತ್ಮರ ಉಪವಾಸದ ದಿನವಹಿಕ್ರಮವನ್ನು ಪ್ರಕಟಿಸುತ್ತಾ ಬಂದಿದ್ದೇವೆ. ತಾ ೨೮ನೆಯ ತಾರೀಕಿನ ವರೆಗಿನ ಸುದ್ದಿಗಳನ್ನು ಹಿಂದಿನ ಸಂಚಿಕೆಗಳಲ್ಲಿ ಕೊಟ್ಟಿರುವೆವು ಈಗ ಆ ಮೇಲಿನ, ಮಹಾತ್ಮರ ಮಹೋಪವಾಸದ ಕೊನೆಯ ವಾರದ ಸುದ್ದಿಗಳನ್ನು ನಾವಿಲ್ಲಿ ಸಂಗ್ರಹವಾಗಿ ಕೊಡುತ್ತೇವೆ

ತಾ. ೨೫ರ ಪ್ರಕಟಣೆಯಲ್ಲಿ ಹೀಗಿದೆ ಗಾಂಧಿಜಿ ಪ್ರಕೃತಿ ಸುಧಾರಿಸುತ್ತಿದೆ. ಆದರೆ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯಿಲ್ಲ ತಾ. ೨೧ರಂದು ಆದ ಓಕರಿಕೆಯಿಂದಾಗಿ ಅವರು ಸೀನಿಂಬೆ ರಸ ಮತ್ತು ನೀರನ್ನು ಕುಡಿದರು. ಸೋಮವಾರ ಮತ್ತು ಮಂಗಳವಾರವೂ ಹೀಗೆ ಮಾಡಲಾಯಿತು. ಮಂಗಳವಾರ ಫಲಿತಾಂಶ ಒಳ್ಳೆದಿತ್ತು. ನಿನ್ನೆ ಬಹಳ ಕಡಿಮೆ ಸೇವಿಸಿದರು ಗಾಂಧಿಜಿ ಉಲ್ಲಸಿತರಾಗಿರುವರು ಪ್ರತಿಯೊಬ್ಬರೂ ಅವರ ಉಪವಾಸಾಂತ್ಯ ದಿನವಾದ ಮಾರ್ಚಿ ಮೂರನ್ನು ಕಾಯುತ್ತಿದ್ದಾರೆ. ಹಿಂದೆ ತೆಕ್ಕೊಳ್ಳುವುದಕ್ಕಿಂತ ಕಡಿಮೆ ನಿಂಬೆರಸವನ್ನವರೀಗ ಸೇವಿಸುವರು ಒಂದು ಔನ್ಸ್ ನಿಂಬೆರಸವನ್ನು ಹತ್ತು ಔನ್ಸ್ ನೀರಿನಲ್ಲಿ ಬೆರಸಿ ಸೇವಿಸುತ್ತಾರೆ ಶ್ರೀ. ಮುನ್ಷಿಯವರು ಗಾಂಧಿಜಿಯನ್ನು ಕಂಡರು. ಗಾಂಧಿಜಿಯವರು ಮಿದುಳಿನ ಶಕ್ತಿ ಗಳಿಸಿಕೊಂಡಂತೆ ತೋರುತ್ತದೆ 'ಹಿಂದು' ಪತ್ರಿಕೆಯ ಸಂಪಾದಕ ಶ್ರೀ. ಶ್ರೀನಿವಾಸರು ಈ ದಿನ ಗಾಂಧಿಜಿ ಭೇಟಿಯಾದರು ಸಂಪಾದಕರ ಪರಿಷತ್ತು ಹಾಗೂ ಮುಖಂಡರ ಪರಿಷತ್ತಿನ ವಿಚಾರವನ್ನು ತಾನು ತಿಳಕೊಂಡಿದ್ದೇನಾಗಿ ಗಾಂಧಿಜಿ ಅವರೊಡನೆ ಹೇಳಿದರು ಶ್ರೀಗಳಾದ ಜೆ. ಎಲ್. ಮೆಥಾ ಮತ್ತು ಡಾ. ಸುಬ್ರಾಯನರೂ ಭೇಟಿಯಾದರು. ಗಾಂಧಿಜಿ ಸುಬ್ರಾಯನರೊಡನೆ ಅವರ ಪತ್ನೀ ಪುತ್ರರ ವಿಚಾರ ಕೇಳಿದರು ಗಾಂಧಿಜಿಯು ಚರ್ಚಿಲರ ಉತ್ತರ, ಸರಕಾರವು ನೂತನವಾಗಿ ಹೊರಡಿಸಿದ ಪ್ರಕಟಣೆ (ಕಾಂಗ್ರೆಸಿನ ಮೇಲೆ ದೂರು ಆರೋಪಿಸುತ್ತ) ಇವುಗಳ ವಿಷಯವೆಲ್ಲಾ ತಿಳಿಕೊಂಡಿದ್ದಾರೆ. ಸರಕಾರದ ಘೋಷಣೆಯಿಂದ ಅವರು ಕೊಂಚ ತಳಮಳಗೊಂಡಂತೆ ತೋರಿತು. ಸೇವಾಗ್ರಾಮದ ಅನೇಕ ಆಶ್ರಮವಾಸಿಗಳು ಬಂದು ಗಾಂಧಿಜಿಯನ್ನು ಕಂಡರು. ಆಗಾಖಾನರ ಅರಮನೆಗೆ ಮೆರವಣಿಗೆ ಹೊರಟ ಕೆಲ ನಾಸಿಕದ ಸ್ವಯಂಸೇವಕರು ಬಂಧಿತರಾಗಿದ್ದಾರೆ. ಠಾಗೂರರ ಕುಟುಂಬವು ಪೂನಕ್ಕೆ ಬಂದಿದೆ, ೧೯೩೨ರ ಗಾಂಧಿಜಿ ಉಪವಾಸದ ಸಂದರ್ಭದಲ್ಲಿಯೂ ರವೀಂದ್ರರೂ ಅವರ ಬಳಿಗೆ ಬಂದಿದ್ದರು.

೨೬ರ ಪ್ರಕಟಣೆ ಹೀಗಿದೆ 'ಗಾಂಧಿಜಿ ಉಪವಾಸದ ಹದಿನೇಳನೆಯ ದಿನವು ಬಂದದ್ದರಿಂದ ಇನ್ನು ಅವರು ಈ ಅಗ್ನಿಪರೀಕ್ಷೆಯಲ್ಲಿ ಪಾರಾಗಿ ಬರುವೆಂಬ ಆಶೆ ಹಲವರಿಗುಂಟಾಗಿದೆ. ಡಾಕ್ಟರರು ನೋಡಿದಾಗ ಅವರು ಉಲ್ಲಸಿತರಿದ್ದರು. ಸೀ ನಿಂಬೆರಸ ಮತ್ತು ನೀರನ್ನು ಸೇವಿಸುತ್ತಾರೆ ಆದರೆ ಪರಿಮಾಣ ಕಡಿಮೆಮಾಡಲಾಗಿದೆ ಕಳೆದ ಶನಿ ಆದಿತ್ಯವಾರಗಳಲ್ಲಿ ತನ್ನ ಪರಿಸ್ಥಿತಿ ಕಠಿಣವಿತ್ತೆಂಬುದು ಅವರಿಗೆ ಸ್ಪಷ್ಟ ನೆನವರಿಕೆಯಿದೆ. ಹೃದಯ ಮತ್ತು ನಾಡಿ ನಿನ್ನೆಯಂತೆಯೇ ಇದೆ ವಾರಾಂತ್ಯದ ಘಟನೆಯ ಕುರಿತು ಗಾಂಧಿಜಿ ಹೇಳಿದರು 'ನಾನು ಮರಣ ಮತ್ತು ನಿಂಬೆರಸ್ಸಿನ ರಸಗಳ ಮಧ್ಯೇ ಹೋರಾಡಬೇಕಾಯಿತು. ನಾನು ಭ್ರಮಕವೃದಾಗಿ ಭರವಸೆ ಕೊಟ್ಟಿದ್ದೇನೆ, ಹಾಗಾಗಿ ಸೀ ನಿಂಬೆರಸ ಸೇವಿಸಿದೆ. ಅದರಿಂದ ಹೆಚ್ಚು ನೀರು ಕುಡಿಯುವುದಾಯಿತು. ಓಕರಿಕೆ ಕಡಿಮೆ ಆಯಿತು ಗಾಂಧಿಜಿ ಹೆಚ್ಚಿನ ಸಮಯ ಆಗಾಖಾನ ಬಂಗ್ಲೆಯ ಪೂರ್ವ ಜಗಲಿಯ ಜಮಖಾನೆ ಮೇಲೆ ಮಲಗುತ್ತ ತುಸು ಹೊತ್ತು ನೂಲುತ್ತಾ ಇರುತ್ತಾರೆ ಅವರ ಬಳಿ ಶ್ರೀಮತಿ ಗಾಂಧಿ, ಕಾನೂ ಗಾಂಧಿ, ಮತ್ತು ಪ್ಯಾರೇಲಾಲರು ಕುಳಿತು ಗೀತೆ ಹೇಳುತ್ತಿರುವರು. ಸಂದರ್ಶಕರಿಗೆ ಅವರ ಬಳಿ ಎರಡು ಕುರ್ಚಿಗಳಿವೆ. ಪೂಜೆಯಲ್ಲಿ ನೀರು ಮೊದಲಾದವು ಬಳಿಯಲ್ಲಿವೆ ಪ್ರತಿದಿನ ಬೆಳಿಗ್ಗೆ ಡಾ. ಮೊಹತರು ಎರಡು ತಾಸು ಗಾಂಧಿಜಿಯ ಮೈ ತಿಕ್ಕುತ್ತಾರೆ. ಆಗಾಗ ಅವರಿಗೆ ಜಾಡ್ಯ ಬರುತ್ತದೆ. ದೌರ್ಬಲ್ಯವೊಂದನ್ನುಳಿದರೆ ಅವರ ಪ್ರಕೃತಿ ಸುಧಾರಿಸುತ್ತದೆನ್ನಬಹುದು. ಅವರಿಗೆ ಆಗಾಗ್ಗ ನಿದ್ರೆಯಲ್ಲಿ ಎಚ್ಚರವಾಯಿತು. ಆದರೆ ಎರಡನೇ ವಾರದ ವಿಷಮಗಳು ಈಗ ಒಂದೂ ಇಲ್ಲ ಈ ಹದಿನೇಳು ದಿನಗಳಲ್ಲಿ ಗಾಂಧಿಜಿ ಇಪ್ಪತ್ತು ಪೌಂಡು ಕಡಿಮೆ ಆಗಿದ್ದಾರೆ. ಈ ದಿನ ಶ್ರೀಗಳಾದ ಮುನ್ಷಿ, ಭೂಲಾ ಬಾಯಿ ದೇಸಾಯಿ, ವಾಲ್ಚಂದ್ ಹೀರಾಚಂದ್, ಶ್ರೀಮತಿ ಶಾಮ್ ನಾರಾಯಣ ರುಜ್ ಮತ್ತು ಗಾಂಧಿಜಿ ಕುಟುಂಬದವರೂ ಗಾಂಧಿಜಿ ಭೇಟಿಯಾದರು. ಶ್ರೀಮತಿ ಜಾನಕೀ ದೇವಿ ಬಜಾಜ್, ಸಿ. ಆರ್. ದಾಸರ ಸೋದರಿ, ಶ್ರೀಮತಿ ಊರ್ಮಿಳಾ ದೇವಿ ಮತ್ತು ಸ್ವಾಮಿ ಆನಂದರು ಮಹಾತ್ಮರನ್ನು ಕಂಡರು ಆಗಾಖಾನ ಬಂಗ್ಲೆಯಲ್ಲಿ ಗಾಂಧಿಜಿಯೊಡನಿರುವ ಅವರ ಮೊಮ್ಮಗ ಕಾನೂ ಗಾಂಧಿಯು ಸಂದರ್ಶಕರೊಡನೆ ಗಾಂಧಿಜಿ ಆಡುವ ಮಾತುಕತೆಗಳ ಟಿಪ್ಪಣಿ ಬರಕೊಳ್ಳುತ್ತಾನೆ ಗಾಂಧಿಜಿಯು ಉಪವಾಸದ ಕೊನೆಯ ದಿನಗಳನ್ನು ಅವರು ಸುಖದಿಂದ ಕಳೆಯಲೆಂದೂ, ಸಂದರ್ಶಕರಾರೂ ಅವರನ್ನು ನೋಡಲು ಹೋಗಬೇಡಿರೆಂದು ಸೇವಾಗ್ರಾಮದ ಆಶ್ರಮವಾಸಿಗಳು ಸಾರ್ವಜನಿಕ ವಿನಂತಿ ಮಾಡಿಕೊಂಡಿದ್ದಾರೆ. ಗಾಂಧಿಜಿ ದರ್ಶನಕ್ಕೆ ಶಾಂತಿ ನಿಕೇತನದ ಚೀನಾ ವಿದ್ವಾಂಸರಾದ ಪ್ರೊ। ಟಾನ್ ಯುನ್ ಶಾನರೂ ಅಣೆಯರೂ ಬಂದಿದ್ದಾರೆ. ಪ್ರೊ। ಶಾನರು ಕಳೆದ ಬುಧವಾರ ಒಂದು ದಿನ ಸಹಾನುಭೂತಿಪರ ಉಪವಾಸ ಮಾಡಿದ್ದರು.

ತಾ. ೨೭ರ ಪ್ರಕಟಣೆ ಹೀಗಿರುವುದು: ಗಾಂಧಿಜಿಯವರ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಿಲ್ಲ ಅವರು ಹಿಂದಿನ ದಿನದಷ್ಟು ಉಲ್ಲಸಿತರಾಗಿರುವುದಿಲ್ಲ. ಗಾಂಧಿಜಿಗೆ ಈ ದಿನ ಆಯಾಸವಾದಂತೆ ಕಂಡು ಬಂತೆಂದು ಸಂದರ್ಶನಕ್ಕೆ ಹೋದವರು ಹೇಳಿದರು ಸೀ ನಿಂಬೆ ರಸದೊಡನೆ ನೀರು ಸೇವಿಸುವುದನ್ನು ಗಾಂಧಿಜಿ ಬಿಟ್ಟುಬಿಟ್ಟಿರುವರು ನಿಂಬೆ ರಸದ ಪ್ರಮಾಣವನ್ನು ಕಡಿಮೆ ಮಾಡಿರುವರು ದಿನವೂ ೩, ೪। ಔನ್ಸ್ ನಿಂಬೆರಸ ಸೇವಿಸುವರು ಈ ದಿನ ಹೆಚ್ಚು ನೀರು ಸೇವಿಸಲು ಅವರಿಗೆ ಶಕ್ಯವಾಯಿತು. ತಾ ೨೭ರ ಮಧ್ಯಾಹ್ನ ಅಣೆಯವರು ಗಾಂಧಿಜಿಯನ್ನು ಭೇಟಿ ಮಾಡಿದರು. ಅಣೆಯವರು ಇಲ್ಲಿಯೇ ಇದ್ದು ಗಾಂಧಿಜಿಯನ್ನು ಪುನಃ ಕಾಣಲಿರುವರೆಂದು ತಿಳಿಯುತ್ತದೆ, ಮಹಾತ್ಮರ ೧೯೩೨ ಉಪವಾಸ ಕಾಲದಲ್ಲಿ ಅಣೆಯವರು ಅವರ ಬಳಿಯೇ ಇದ್ದರು. ಆಗ ಅಣೆ ಕಾಂಗ್ರೆಸಿನ ಹಂಗಾಮಿ ಅಧ್ಯಕ್ಷರಾಗಿದ್ದರು ಆಗಾಖಾನ್ ಬಂಗ್ಲೆ ಕಡೆಗೆ ಮೆರವಣಿಗೆ ಹೊರಡಲು ಸಿದ್ಧ ಮಾಡುತ್ತಿದ್ದ ಕೆಲವರನ್ನು ಬಂಧಿಸಲಾಗಿದೆ ಅವರೆಲ್ಲಾ ಪುನೆಗೆ ಅಹಮ್ಮದಾಬಾದ್, ನದಿಯಾದ್, ಇಂದೂರು, ಬಾಶಿ ಮೊದಲಾದ ಕಡೆಯಿಂದ ಬಂದವರಿದ್ದರು. ಹೀಗೆ ಗಾಂಧಿಜಿ ದರ್ಶನಕ್ಕಾಗಿ ಆಗಾಖಾನ್ ಬಂಗ್ಲೆಗೆ ಮೆರವಣಿಗೆ ಹೊರಟ ಹಲವು ದಲಗಳು ತಡೆದು ಬಂಧಿಸಲ್ಪಟ್ಟಿವೆ! ಉಪವಾಸದಲ್ಲಿ ಕಷ್ಟ ಪಡುತ್ತಿದ್ದ ಗಾಂಧಿಜಿಯನ್ನೊಮ್ಮೆ ಕಣ್ಣಾರೆ ನೋಡಿಬಿಡಬೇಕೆಂದು ಹಲವರ ಆಶೆ! ದಕ್ಷಿಣ ಆಫ್ರಿಕದ ಮುಖ್ಯ ಮುಖ್ಯ ನಗರಗಳಲ್ಲಿ ಗಾಂಧಿಜಿ ಉಪವಾಸದ ಬಗ್ಗೆ ಪ್ರಾರ್ಥನೆ, ಉಪವಾಸ ಮೊದಲಾದವು ಜರಗಿದವು ಹರತಾಳವೂ ಇತ್ತು. ರಾಜಾಜಿ ತಾ. ೨೮ರಂದು, ಮಹಾತ್ಮರ ದರ್ಶನ ಮಾಡಿದರು. ಯಾವುದೇ ರಾಜಕೀಯ ಘಟನೆಗಳ ಕುರಿತು ರಾಜಾಜಿ ಮಹಾತ್ಮರೊಡನೆ ಮಾತನಾಡಲಿಲ್ಲ, ಅವರಿಗೆ ಆಯಾಸವಾಗಕೂಡದೆಂದು 'ಬ್ರಿಟನು ಮಹಾತ್ಮರೊಡನೆ ಮಾತುಕತೆಗೆ ತೊಡಗದೆ ಸುವರ್ಣ ಸಂಧಿಯೊಂದನ್ನು ಕಳೆಕೊಂಡಿತು' ಎಂದು ರಾಜಾಜಿ ಹೇಳಿದರು.

ತಾ. ೨೮ರ ಪ್ರಕಟಣೆ ಹೀಗೆ ತಿಳಿಸುತ್ತದೆ. 'ಇನ್ನು ಎರಡು ದಿನಗಳ ಉಪವಾಸವಿದ್ದರೂ ಮಹಾತ್ಮಾಗಾಂಧಿಯವರು ಈ ಹೊತ್ತು ಸುಧಾರಿಸಿರುವರು ಅವರು ಬಹಳ ಅಶಕ್ತರಿದ್ದರೂ ಉಪವಾಸವನ್ನು ಸಹಿಸಿಕೊಳ್ಳುತ್ತಿರುವರು. ನಿನ್ನೆಯಷ್ಟು ಉದಾಸೀನರಾಗಿಲ್ಲ. ಈ ದಿನ ಹೆಚ್ಚು ಉಲ್ಲಸಿತರಾಗಿದ್ದಾರೆ. ಓಕರಿಕೆಯೂ ಕಂಡುಬರುವುದಿಲ್ಲ ನೀರನ್ನು ಅನಾಯಾಸ ಕುಡಿದರು'. ಠಾಗೂರರ ಸೊಸೆ ಶ್ರೀಮತಿ ಸರಳಾದೇವಿ ಗಾಂಧಿಜಿಯನ್ನು ಭೇಟಿಯಾದರು. ಶ್ರೀಮತಿ ರಾಧಾಬಾಯಿ ಸುಬ್ಬರಾಯನ್ ಮತ್ತು ಶ್ರೀಮತಿ ಅಂಬುಜಮ್ಮಾಳ್ (ಎಸ್. ಶ್ರೀನಿವಾಸ ಅಯ್ಯಂಗಾರ್ ಪುತ್ರಿ) ಇಲ್ಲಿಗೆ ಬಂದಿದ್ದಾರೆ. ಈ ದಿನ ಸಂಜೆ ಬಹಳ ಸಂದರ್ಶಕರು ಬಂದಿದ್ದರು. ಅವರಲ್ಲಿ ಬಳಗದವರೂ ಮಿತ್ರರೂ ಹೆಚ್ಚಾಗಿದ್ದರು ಕೆಲವು ಶಿಶುಗಳೂ ಇದ್ದುವು. ರಾಜಾಜಿ ಈ ದಿನ ಪುನಃ ಮಹಾತ್ಮರನ್ನು ಕಂಡರು. ಇಂದು ಅವರ ಪ್ರಕೃತಿ ಸುಧಾರಿಸಿದಂತೆ ಕಂಡುಬಂದಿದೆ. ಈದಿನ ಸ್ವಚ್ಛ ಕ್ಷೌರಮಾಡಿಸಿಕೊಂಡರು, ಮುಖದಲ್ಲಿ ಕಳೆ ತೋರುತಿತ್ತು ಬಂದವರೊಡನೆ ಒಂದೆರಡು ನಿಮಿಷ ಮಾತನಾಡಿದರು ಒಬ್ಬ ಸಂದರ್ಶಕರು ಗಾಂಧಿಜಿಗೊಂದು ಜಪಮಾಲೆ ಕೊಟ್ಟಿದ್ದರು ಅದನ್ನವರು ಬಿಡದೆ ಉಪಯೋಗಿಸುತ್ತಿದ್ದರು. ಅದು ಈ ದಿನ ಮಂಚದ ಕಾಲಿಗೆ ಜೋತು ಬಿದ್ದಿತ್ತು ಅವರ ಬಳಿ ಒಂದು ಇಂಗ್ಲಿಷ್ ಪುಸ್ತಕವೂ ಇತ್ತು. ಸಂದರ್ಶನಕ್ಕೆ ಮಾರ್ಚಿ ಮೂರರ ಮೇಲೂ ಸರಕಾರ ಆಸ್ಪದ ಕೊಡುವುದೋ ತಿಳಿಯದಾಗಿದೆ. ಅಂಥಾ ಸೌಕರ್ಯವಿತ್ತರೆ ಅಣೆ ಮತ್ತು ರಾಜಾಜಿ ಇಲ್ಲಿಯೇ ಉಳಿಯುವರೆಂದು ತಿಳಿಯುತ್ತದೆ. ಗಾಂಧಿಜಿ ಪುತ್ರ ದೇವದಾಸ ಗಾಂಧಿಯವರು ಒಂದು ಪ್ರಕಟಣೆ ಹೊರಡಿಸಿ, 'ಮಹಾತ್ಮಾ ಗಾಂಧಿಯವರ ಆರೋಗ್ಯದ ಕುರಿತು ಸ್ವದೇಶ ವಿದೇಶಗಳಿಂದ ಅನೇಕ ತಂತಿ, ಟೆಲಿಫೋನ್ ಮತ್ತು ಪತ್ರಗಳು ಬಂದಿವೆ, ಉಪವಾಸ ಮುಗಿಯುತ್ತಾ ಬಂದಂತೆ ಇವು ಹೆಚ್ಚು ಹೆಚ್ಚು ಬರುತ್ತಿವೆ ಕೆಲವರು ಡಾಕ್ಟರರಿಗೆ ಸಲಹೆಗಳನ್ನು ಕಳುಹಿಸುತ್ತಿದ್ದಾರೆ ಇವರೆಲ್ಲರಿಗೂ ನನ್ನ ಅಭಿವಂದನೆಗಳು' ಎಂದು ತಿಳಿಸಿದ್ದಾರೆ. ಶ್ರೀ ಎಂ. ಎಸ್. ಅಣೆಯವರು ತಾ. ೨೭ರಂದು ಮಧ್ಯಾಹ್ನ ಮಹಾತ್ಮರ ಭೇಟಿಗೆ ಬಂದವರು ಒಟ್ಟು ೩೦ ನಿಮಿಷದ ತನಕ ಅಲ್ಲಿದ್ದು ಶ್ರೀಮತಿ ಸರೋಜಿನಿ ದೇವಿ, ಶ್ರೀಮತಿ ಗಾಂಧಿ ಇವರನ್ನು ಭೇಟಿಯಾದರು, ದಿವಂಗತ ಮಹಾದೇವ ದೇಸಾಯಿಯವರ ಪತ್ನಿ ಶ್ರೀಮತಿ ದುರ್ಗಾ ಬೆನರನ್ನೂ ಭೇಟಿಯಾಗಿ, ಅವರ ಪತಿಯ ನಿಧನದ ಬಗ್ಗೆ ಸಹಸಂತಾಪ ಸೂಚಿಸಿದರು ಅಣೆ ಗಾಂಧಿಜಿ ಉಪವಾಸ ಮುಗಿವ ವರೆಗೆ ಇಲ್ಲಿದ್ದು ಆಗಾಗ ಭೇಟಿಯಾಗುವರೆಂದು ತಿಳಿದಿದೆ ಗಾಂಧಿಜಿಯವರಿಗೆ ಉಪವಾಸದ ಕೊನೆಯ ಈ ದಿನಗಳಲ್ಲಿ ಹೆಚ್ಚು ಆಯಾಸವಾಗುವುದರಿಂದ ಜನರು ಭೇಟಿಗೆ ಬರುವುದನ್ನು ಕಡಿಮೆ ಮಾಡಬೇಕೆಂದು ಡಾಕ್ಟರರು ವಿನಂತಿ ಮಾಡಿಕೊಂಡಿರುವರು ರಾಜಾಜಿಗೆ ಬೇಕಾಗಿದ್ದಾಗಲೆಲ್ಲಾ ಗಾಂಧಿಜಿಯನ್ನು ಭೇಟಿಯಾಗಲು ಸರಕಾರದಿಂದ ಸಮ್ಮತಿ ದೊರಕಿದೆಯೆಂದು ತಿಳಿದಿದೆ.

ತಾ ೧ರ ಪ್ರಕಟಣೆಯಲ್ಲಿ ಹೀಗಿದೆ 'ಮಹಾತ್ಮರ ಪ್ರಕೃತಿಯಲ್ಲಿ ವಿಶೇಷ ಬದಲಾವಣೆಯಾಗಿಲ್ಲ. ಈ ದಿನ ಅವರು ಮೌನವಿದ್ದುದರಿಂದ ಯಾರೊಡನೆಯೂ ಮಾತನಾಡಲಿಲ್ಲ ಒಟ್ಟಿನಿಂದ ಅವರು ಉಲ್ಲಸಿತರಿದ್ದರು.' ಉಪವಾಸದ ೧೯ನೇ ದಿನ ಸಾಮಾನ್ಯವಾಗಿ ಗಾಂಧಿಜಿಯವರಿಗೆ ವಿಶೇಷ ಸಂಕಟವಾಗುತ್ತಿತ್ತು, ಆದರೆ ಈ ಸಲ ಹಾಗೇನೂ ಆಗಲಿಲ್ಲ ಆದ್ದರಿಂದ ಅವರು ಯಶಸ್ವಿಯಾಗಿ ಉಪವಾಸ ತೀರಿಸುವರೆಂಬ ಆಶೆ ಎಲ್ಲರಿಗಿದೆ ಅಣೆಯವರು ಉಪವಾಸ ಮುಗಿವ ವರೆಗೆ ಪೂನದಲ್ಲಿಯೇ ಇರುವರು. ಇಂಗ್ಲಂಡಿನಿಂದ ಪಾರ್ಲಿಮೆಂಟಿನ ಶಿಷ್ಟಮಂಡಲವೊಂದು ಭಾರತಕ್ಕೆ ಬರಬಹುದೆಂಬುದನ್ನು ಅಣೆಯವರು ಸಮ್ಮತಿಸಿದರು. ಈ ಶಿಷ್ಟಮಂಡಲ ಬಂದರೆ ಭಾರತದ ನಿಜ ಸ್ಥಿತಿ ಬ್ರಿಟಿಷರಿಗೆ ಗೊತ್ತಾಗಬಹುದೆಂದು ಅವರ ಹಾರೈಕೆ. ತಾ. ೩ರಂದು ಒಂದು ದಿನ ಎಂದರೆ ಮಂಗಳವಾರದ ವರೆಗೆ ಮಾತ್ರ ಗಾಂಧಿಜಿಯವರ ಭೇಟಿಗೆ ಸರಕಾರ ಅವಕಾಶವೀಯುವುದು. [illegible] ಮೇಲೆ ಯಾರನ್ನೂ ನೋಡ ಬಿಡಲಿಕ್ಕಿಲ್ಲ, ಆದರೆ ಮರುದಿನ, ಗಾಂಧಿಜಿ ಪಾರಣೆಮಾಡುವ ದಿನ, ಬೇಕಾದರೆ

([illegible])

ಅಭಾವ

ಪ್ರಕೃತದ ಪರಿಸ್ಥಿತಿಯು ಹೇಗಿದೆ?

೧. ಕಳೆದ ಹದಿನಾಲ್ಕು ವರುಷಗಳಲ್ಲಿ, ನಮ್ಮ ಹಿಂದುಸ್ಥಾನದಲ್ಲಿ ಬೆಳೆಸಲ ಧವಸ ಧಾನ್ಯಗಳ ಸಂಗ್ರಹವು ಇಂದಿಗಿಂತಲೂ ಕಮ್ಮಿಯಾಗಿತ್ತು.

೨. ಈಗಿರುವ ಧವಸ ಧಾನ್ಯದ ಅಭಾವವು ಕೇವಲ ಶೇಕಡಾ ೫ ಕ್ಕಿಂತಲೂ ಕಮ್ಮಿಯಾಗಿರುತ್ತದೆ. ಅಂದರೆ ನಿಮ್ಮ ಊಟಕ್ಕೆ ಬೇಕಾಗುವ ಅಕ್ಕಿ, ಬೇಳೆ ಮತ್ತು ಹಿಟ್ಟಿನ ಇಪ್ಪತ್ತರಲ್ಲಿ ಒಂದಂಶ.

ಹಾಗಾದರೆ ಈರೀತಿಯ ತೊಂದರೆಗಳು ಬಂದೊದಗಲು ಏನು ಕಾರಣ?

೧. ನಮ್ಮ ವ್ಯವಸಾಯಗಾರನ ಇಂದಿನ ಪರಿಸ್ಥಿತಿಯು, ಹಿಂದಿನ ಎಷ್ಟೋ ವರುಷಗಳಿಂತ, ಒಳ್ಳೇಯದಾಗಿರುವುದರಿಂದ ಅವನು ತನ್ನಲ್ಲಿರುವ ಪೈದಾಸ್ತುಗಳನ್ನು ಮಾರಾಟ ಮಾಡುವುದರ ಬದಲಾಗಿ ದಾಸ್ತಾನು ಮಾಡುತ್ತಾನೆ.

೨. ಪಟ್ಟಣವಾಸಿಗರು, ಬೆಲೆಯು ಇನ್ನೂ ಏರಬಹುದು ಎಂಬ ಭಯದಿಂದ ತಮಗೆ ತತ್ಕಾಲಕ್ಕೆ ಬೇಕಾಗುವುದಕ್ಕಿಂತಲೂ ಅಧಿಕವಾಗಿ ಮುಂದಿನ ಉಪಯೋಗಕ್ಕೆಂದು ಶೇಖರಿಸಿ ಇಡುತ್ತಾರೆ.

೩. ಕಪಟಿ ವ್ಯಾಪಾರಿಗಳು ಅನಾವಶ್ಯಕ ಬೆಲೆಯನ್ನು ಏರಿಸಿ ಅಧಿಕಲಾಭವನ್ನು ಪಡೆಯುತ್ತಾರೆ. ಅದೂ ಅಲ್ಲದೆ ಈವರೆಗೂ ಧವಸ ಧಾನ್ಯದ ವ್ಯವಹಾರವನ್ನು ಮಾಡದವರೂ ಕೂಡಾ, ಲಾಭದ ಆಶೆಯಿಂದ ಈಗ ಆ ವ್ಯಾಪಾರದಲ್ಲಿ ಕೈಹಾಕಿದ್ದಾರೆ.

ನಮ್ಮ ಸರಕಾರ ಏನು ಮಾಡುತ್ತಿದೆ?

೧. ಮಿತ್ರರಾಷ್ಟ್ರಗಳಲ್ಲಿ ಆಹಾರ ಸಾಮಗ್ರಿಗಳ ಅಭಾವವಿರುವುದಾದರೂ ಅಲ್ಲಿಂದ ಯುದ್ಧಸಾಮಗ್ರಿಗಳನ್ನು ಸಾಗಿಸುವ ಬದಲಾಗಿ ಧವಸ ಧಾನ್ಯಗಳನ್ನು ನೌಕೆಯಲ್ಲಿ ರಭಸದಿಂದ ನಮ್ಮ ದೇಶಕ್ಕೆ ತಂದೊಯ್ಯುತ್ತದೆ.

೨. ಧರ್ಮಕ್ಕೆ ವಿರೋಧವಾಗಿ ವರ್ತಿಸುವ ವ್ಯಾಪಾರಿಗಳನ್ನು ನಿರ್ಮೂಲ ಗೊಳಿಸುವುದಕ್ಕೋಸ್ಕರ, ಅವರಿಗೆ ಕಠಿಣ ಶಿಕ್ಷೆಯನ್ನು ವಿಧಿಸುತ್ತದೆ.

೩. ಸಮೃದ್ಧಿ ಸ್ಥಳಗಳಿಂದ ಧವಸ ಧಾನ್ಯಗಳನ್ನು ಶೇಖರಿಸಿ ಅಭಾವವಿರುವ ಸ್ಥಳಗಳಲ್ಲಿ ಹಂಚುತ್ತದೆ.

ನೀವು ಕೂಡಾ ಸಹಕರಿಸಬಲ್ಲಿರಿ

ಕೂಡಿಡುವವರನ್ನು ಬಹಿಷ್ಕರಿಸಿರಿ

CPU 172 Kn.

ರಾಷ್ಟ್ರೀಯ ಯುದ್ಧ ಮುಖದ ಜಾಹೀರಾತು

ಸಮರಭೂಮಿಯ ಸಂಚಾರ

ಮಾರೆಥ್‌ವ್ಯೂಹದ ಮುಂಭಾಗದಲ್ಲಿದ್ದ ಬ್ರಿಟಿಷರ ಎಂಟನೇ ಸೈನ್ಯವು ಧಾಳಿ ಪ್ರಾರಂಭಿಸಿರುವುದೆಂದು ಅಂಕಾರಾ ರೇಡಿಯೋದಲ್ಲಿ ಹೇಳಲಾಗಿದೆ. ಇತ್ತೀಚೆಗೆ ಮಾರೆಥ್ ವ್ಯೂಹದಲ್ಲಿ ಯುದ್ಧದ ಕಾವು ಕ್ಷಣಕ್ಷಣಕ್ಕೆ ಹೆಚ್ಚಾಗುತ್ತಿದೆ ಜರ್ಮನರೂ ಪ್ರಬಲ ಸಿದ್ಧತೆ ಮಾಡುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ರೊಮೆಲನು ಕೊನೆ ತನಕ ಇಲ್ಲಿ ಕಾದಾಡುವ ನಿರ್ಣಯ ಮಾಡಿದಂತೆ ತೋರುವುದು ಉತ್ತರ ಟುನೀಸಿಯದಲ್ಲಿ ವಾನ್ ಅರ್ನಿಮ್ ಸೈನ್ಯವು ಐದು ಕಡೆಗಳಲ್ಲಿ ಧಾಳಿಯಿಟ್ಟಿದೆ. ಕೆಸರಿನ್ ಪಟ್ಟಣವು ಮಿತ್ರರ ವಶವಾಗಿರುವುದು ಮಾರೆಥ್ ವ್ಯೂಹದ ಬಳಿ ಉಭಯ ಪಕ್ಷಗಳ ಸಮರ ಸನ್ನಾಹವು ಭರದಿಂದ ನಡೆಯುತ್ತಿದೆ.

ದಕ್ಷಿಣ ರಶ್ಯದಲ್ಲಿ ಭಯಂಕರ ಕಾಳಗವಾಗುತ್ತಿದೆ ಒಂದು ಕುರ್ಸ್ಕ ಖಾರ್ಕೊವ್ ರೈಲ್ವೆ ಪಶ್ಚಿಮಕ್ಕೂ ಮತ್ತೊಂದು ಡೊನೆಟ್ಸ್ ಪ್ರದೇಶದಲ್ಲಿಯೂ ನಡೆಯುತ್ತಿರುವುದು ಜರ್ಮನರು ಮುಖ್ಯವಾಗಿ ಕ್ರಾಮಟೊರ್ಸ್ಕಾಯಾ ಮತ್ತು ವೊರೊಶಿಲೋವ್‌ಗ್ರಾಡಿನ ನೈಋತ್ಯದಲ್ಲಿ ಪ್ರತಿಧಾಳಿಯಿಡುತ್ತಿರುವರು ಆಯಕಟ್ಟಿನ ರೈಲ್ವೆಗಳು ಮತ್ತು ಡೊನೆಟ್ಸ್ ಪ್ರದೇಶವಿರುವುದು ಇಲ್ಲಿ ಖಾರ್ಕೊವ್ ಪಶ್ಚಿಮದ ಪೊಲ್ಟಾವ ರಸ್ತೆಯಲ್ಲಿಯೂ ಒಂದು ಭೀಷಣ ಯುದ್ಧವಾಗುತ್ತಿರುವುದು ಒರೆಲನ್ನು ಉಳಿಸಿಕೊಳ್ಳುವುದಕ್ಕಾಗಿ ಜರ್ಮನರು ಬಹಳ ಸಾಹಸಪಡುತ್ತಿರುವರು.

ಜಪಾನು ಆಸ್ಟ್ರೇಲಿಯದ ಉತ್ತರದಲ್ಲಿ ಸೈನ್ಯ ಸಂಗ್ರಹ ಮಾಡುತ್ತಿದೆ ಮುಖ್ಯವಾಗಿ ವಿಮಾನ ಮತ್ತು ಸೈನಿಕರು ಹೆಚ್ಚಾಗಿ ಬರುತ್ತಿದ್ದಾರೆ ಜಪಾನರಿಗೆ ನ್ಯೂಗಿನಿ ಮತ್ತು ಸೊಲೊಮನ್‌ಗಳಲ್ಲಿ ಅಪಜಯವುಂಟಾಗಿದ್ದರೂ ಅವರು ಈಗಾಗಲೇ ಭಯಂಕರ ಪ್ರತಿ ಧಾಳಿ ಮಾಡುವುದು ಖಂಡಿತವೆಂದು ತಿಳಿಯುತ್ತದೆ ದಕ್ಷಿಣ ಫೆಸಿಫಿಕ್ಕಿನ ದೇಶಗಳಲ್ಲಿ ಎಂದರೆ ಬರ್ಮಾ ಮಲಯ, ಸುಮಾತ್ರ, ಜಾವಾ ಮತ್ತು ಬೋರ್ನಿಯೋಗಳಲ್ಲಿಯೂ ಜಪಾನರು ಸೈನ್ಯ ಸಂಗ್ರಹಿಸುತ್ತಿದ್ದಾರೆ ಈಗಾಗಲೇ ಹಲವು ಸೈನಿಕ ಶಾಲೆಗಳನ್ನೂ ತೆರೆಯಲಾಗಿದೆಯೆಂದು ತಿಳಿಯುತ್ತದೆ

ಜಪಾನಿನ ಧಾಳಿ

ಯೂನಾನ್ ಪ್ರಾಂತದಲ್ಲಿ ಜಪಾನರೀಗ ಪ್ರಚಂಡ ಧಾಳಿಯನ್ನು ಸುರು ಮಾಡಿದ್ದಾರೆ ಕೆಲವು ಜಪಾನೀ ಸೈನ್ಯಗಳು ಸ್ಯಾಲಿನ್ ನದಿಯ ಪೂರ್ವಕ್ಕಿರುವ ಪೂಶನದ ಕಡೆ ಮುನ್ನುಗ್ಗುತ್ತಿದೆ ನದಿಯ ಪಶ್ಚಿಮ ದಡದ ಮೇಲೂ ತೀವ್ರ ಯುದ್ಧ ನಡೆಯುತ್ತಿದೆ ಕಿಯಾಂಗ್ಸು ಪ್ರಾಂತದಲ್ಲಿ ಜಪಾನೀ ಸೈನ್ಯಗಳು ಒಂದು ದೊಡ್ಡ ಚೀನೀ ದಳವನ್ನು ಸುತ್ತುಗಟ್ಟಲು ಸಾಹಸಪಟ್ಟವು ಹೈನಾನ್ ದ್ವೀಪದ ಕ್ವಾಂಗಟುಂಗ ಪ್ರಾಂತದ ನೈಚಾ ದ್ವೀಪ ಕಲ್ಪದಲ್ಲಿ ಜಪಾನರು ಮುನ್ನುಗ್ಗಿ ಕ್ವಾಂಗಚೌ ಎಂಬ ಫ್ರೆಂಚ್ ಸವಲತ್ತಿನ ನಗರವನ್ನೂ ಹೈಕಾಂಗ್ ಮತ್ತು ಸಾಯಿಶಿಗಳನ್ನೂ ವಶಪಡಿಸಿಕೊಂಡರು ಅವರು ಈಗ ವಾಯುವ್ಯದ ಅನಫೂ ಕಡೆ ಹೋಗಿರುವರು ಕ್ವೊಚ್ಯಾನ ಪ್ರಾಂತದಲ್ಲಿ ಕೆಲವು ಪಟ್ಟಣಗಳ ಮೇಲೆ ಜಪಾನೀ ವಿಮಾನಗಳು ಧಾಳಿಯಿಟ್ಟವು ಚುಂಕಿಂಗಿನ ಉತ್ತರಕ್ಕಿರುವ ಭೈಂಗಶಾನ್ ಮತ್ತು ಯೊಂಗತ್ಸಿ ನದಿಗಳ ಮೇಲೆ ಚಂಕಿಂಗಿನ ಕೆಳಗಿರುವ ವಾಸಶೆನ್ ಇವು ವೈರಿಗಳ ಮುಖ್ಯ ಗುರಿಗಳಾಗಿದ್ದವು ಕಳೆದ ೨೩ನೇ ತಾರೀಕಿನಂದು ಜಪಾನು ವಿಮಾನಗಳು ಅಸಾಮಿನ ಮೇಲೆ, ಅಲ್ಲಿರುವ ಅಮೆರಿಕನ್ ಕೇಂದ್ರದ ಮೇಲೆ ಧಾಳಿಯಿಟ್ಟವು ಭಾರತದಲ್ಲಿರುವ ಅಮೆರಿಕನ್ ಕೇಂದ್ರಗಳ ಮೇಲೆ ಜಪಾನ್ ವಿಮಾನಗಳು ಧಾಳಿಯಿಟ್ಟುದು. ಇದೇ ಮೊದಲನೆಯ ಸಲ ಆ ಮೇಲೆ ಗುರುವಾರ ಮುಂಜಾನೆ ಜಪಾನ್ ಬಾಂಬರುಗಳ ಒಂದು ಪ್ರಬಲವಾದ ತಂಡವು ಯುದ್ಧ ವಿಮಾನಗಳ ಬೆಂಗಾವಲಿನೊಡನೆ ಬಂದು ಅಸಾಮಿನಲ್ಲಿರುವ ಅಮೆರಿಕನ್ ವಿಮಾನ ಗೃಹದ ಮೇಲೆ ಧಾಳಿಯಿಟ್ಟಿತು ಅಮೆರಿಕದ ವೈಮಾನಿಕರದನ್ನೆ ದುರಿಸಿದರು, ಇದರಿಂದ ನಮಗೆ ವಿಶೇಷ ಹಾನಿಯಾಗಲಿಲ್ಲವೆಂದು ಪ್ರಕಟವಾಗಿದೆ

ಟುನಿಸಿಯದಲ್ಲಿ ಸೋಲೆ?

ಟುನಿಸಿಯದಿಂದ ಬರುವ ಸುದ್ದಿಗಳನ್ನೋದಿದರೆ ಅಲ್ಲಿ ಮಿತ್ರರಿಗೆ ಸೋಲು ಉಂಟಾಗುತ್ತಿರುವುದು ಕಂಡುಬರುತ್ತದೆ, ಅದರಲ್ಲಿಯೂ ಮುಖ್ಯವಾಗಿ ಅಮೆರಿಕನರಿಗೆ ಅಪಾರ ಹಾನಿಯಾಗಿದೆ ಬಿರ್ಮುರ್ಟಾದಿಂದ ಮ್ಯಾರೆಥ್ ವ್ಯೂಹದ ವರೆಗೆ ಕರಾವಳಿಯು ಅಕ್ಷರಾಷ್ಟ್ರಗಳ ಕೈಗೆ ಬಂದಿದೆ ಇಲ್ಲಿ ವಾನ್ ಅರ್ನಿಮ್ ಮತ್ತು ರೊಮೆಲನ ಸೈನ್ಯಗಳು ಸಂಧಿಸಿದವು ಮೆಕ್ನಾಸಿಯ ವರೆಗೆ ಬಂದಿದ್ದ ಅಮೆರಿಕನರು ಹಿಂದಕ್ಕೆ ಓಡಿಸಲ್ಪಟ್ಟರು ಇಷ್ಟೇ ಅಲ್ಲ ರೊಮೆಲನು ಮಾರೆಥ್‌ವ್ಯೂಹದ ದಕ್ಷಿಣ ತುದಿಯಿಂದ ಗೆಫಸಾದ ವರೆಗೆ ನುಗ್ಗಿ ಬ್ರಿಟಿಷ್ ಮತ್ತು ಅಮೆರಿಕನ್ ಸೈನ್ಯಗಳು ಸಂಧಿಸದಂತೆ ಮಾಡಿದನು ಇದೇ ಸಮಯದಲ್ಲಿ ರೊಮೆಲನ ಕೆಲವು ಸೈನ್ಯಗಳು ಸಿಬಟೀಲಾದಿಂದ ಕೆಸರಿನಾ ಕಣಿವೆಯಲ್ಲಿ ಪ್ರವೇಶಿಸಿ ಫೆರಿಯನಾ ಪಟ್ಟಣವನ್ನು ಆಕ್ರಮಿಸಿಕೊಂಡು ಅಲ್ಜೀರಿಯಾ ಗಡಿನಾಡಿನಲ್ಲಿರುವ ಟಿಬೆಸ್ಸಾದ ಕಡೆಗೆ ಹೊರಡಿರುವವು ಮತ್ತೆ ಕೆಲವು ಸೈನ್ಯಗಳು ಸಿಬಟೀಲಾದ ವಾಯುವ್ಯಕ್ಕಿರುವ ಥಾಲಾದ ಕಡೆ ಹೊರಟವು ಇದರಿಂದೆಲ್ಲಾ ಮಧ್ಯ ಟುನಿಸಿಯದಲ್ಲಿ ಅಮೆರಿಕನರ ಸ್ಥಾನವು ಅಷ್ಟು ಭದ್ರವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ ಜರ್ಮನರ ಎರಡೂ ಸೈನ್ಯಗಳು ಒಂದುಗೂಡಿ ದೊಡ್ಡ ಧಾಳಿಯಿಡಲು ಸಹಾಯವಾಯಿತು ಬ್ರಿಟಿಷ್ ಮತ್ತು ಅಮೆರಿಕನ್ ಸೈನ್ಯಗಳು ಒಂದು ಗೂಡಿ ಮುಂದುವರಿಯಲು ಸಾಧ್ಯವಿಲ್ಲದಾಯಿತು, ಇದರಿಂದ ಮಿತ್ರರಿಗೆ ಟುನಿಸಿಯದಲ್ಲಿ ಸೋಲು ಸಂಭವಿಸತೊಡಗಿತು! ಆದರೆ ಇದುವರೆಗಿನ ಸೋಲಿನಿಂದ ರಣಗತಿಯನ್ನು ನಿರ್ಧರಿಸುವುದು ಸರಿಯಲ್ಲ, ಮಿತ್ರಪಕ್ಷದವರಾದರೂ ಹುಮ್ಮಸಿನಿಂದ ಹೋರಾಡುತ್ತಿದ್ದಾರೆ ಜಯಮಾಲೆಯು ರೊಮೆಲನ ಕೊರಳಿಂದ ಮಿತ್ರರ ಕೊರಳಿಗೆ ಅಕಸ್ಮಿಕವಾಗಿ ಬಂದರೂ ಬರಬಹುದು, ಅಂಥಾ ಪ್ರಯತ್ನಗಳು ನಡೆಯುತ್ತಲಿರುವುದು ಶುಭಲಕ್ಷಣವಾಗಿದೆ

ಇನ್ನೆಂದಿಗೊ ದ್ವಿತೀಯ ರಂಗ?

"ಈಗ ಅಲ್ಲವಾದರೆ ಇನ್ನೆಂದಿಗೊ ದ್ವಿತೀಯ ರಂಗ?" ಹೀಗೆಂದು ರಶ್ಯನರೊಡನೆ ಅಖಿಲ ಪ್ರಪಂಚದ ಜನತೆಯೇ, ಮಿತ್ರರನ್ನು ಪ್ರಶ್ನಿಸುತ್ತಾರೆ ಕಳೆದ ನವಂಬರ ಹತ್ತೊಂಬತ್ತರಿಂದ ಭೀಷಣ ಪ್ರತಿ ಯುದ್ಧವನ್ನು ಪ್ರಾರಂಭಿಸಿದ ರಶ್ಯನ್ ವೀರರು, ಸ್ಟಾಲಿನ್‌ಗ್ರಾಡ್, ರೋಸ್ಟೊವ್, ಖಾರ್ಕೋವ್ ಮೊದಲಾದ ಪ್ರಸಿದ್ಧ ಪಟ್ಟಣಗಳೆಲ್ಲವನ್ನೂ ಅಸಮ ಸಾಹಸದಿಂದ ಹೋರಾಡಿ ಹಿಂದೆ ಪಡಕೊಂಡದ್ದು ಮಾತ್ರವಲ್ಲದೆ, ಈಗಾಗಲೇ ನೂರು ಸಾವಿರ ಚದುರಳತೆಯ ರಶ್ಯನ್ ನೆಲವನ್ನು ಜರ್ಮನರ ಪದಹತಿಯಿಂದ ಸ್ವತಂತ್ರಗೊಳಿಸಿದರು! ರಶ್ಯನರು ಇಂತಹ ಪವಾಡವನ್ನು ಇಷ್ಟು ಬೇಗ ಮಾಡಿ ಬಿಟ್ಟಾರೆಂದು ಕೇವಲ ಕೆಲವೇ ಮಂದಿ ರಶ್ಯನ್ ಅರಾಧಕರಾದರೂ ನಂಬಿರಲಿಲ್ಲ ಯೂರೋಪಿನ ಸಮರ ಪಂಡಿತರಾದರೂ, ರಶ್ಯದವರು ಪಿತೃಭೂಮಿಗಾಗಿ ಜೀವವನ್ನು ತೃಣ ಸಮಾನವೆಂದು ಭಾವಿಸಿ ಹೋರಾಡಬಲ್ಲರಲ್ಲದೆ ಇನ್ನೇನೂ ಅವರಿಂದ ಬಗೆಹರಿಯದೆಂದೇ ಭಾವಿಸಿದ್ದರು, ಆದರೆ ಸಮರನೀತಿಯಲ್ಲಿ ಇಂದು ರಶ್ಯನರೇ ಅಖಿಲ ಯೂರೋಪಿನಲ್ಲಿ ಅತ್ಯಂತ ನಿಪುಣರೆನಬೇಕು; ಈ ಯುದ್ಧದಲ್ಲಿ ಹಿಟ್ಲರನ ಕೈವಶ ಬಂದ ಹತ್ತು ಹದಿನಾರು ರಾಷ್ಟ್ರಗಳ ಪೈಕಿ, ಆತನಿಂದ ಹೋರಾಡಿ, ಪುನಃ ತಮ್ಮ ರಾಷ್ಟ್ರವನ್ನು ಸ್ವತಂತ್ರಗೊಳಿಸಿದ ಕೀರ್ತಿ ರಶ್ಯನರದು ಮಾತ್ರ ಗೊಬೆಲ್ಸನೇ ಒಪ್ಪುತ್ತಾನೆ 'ರಶ್ಯನ್ ರಣರಂಗದಲ್ಲಿ ನಮಗೆಂದಾದ ಅಪಜಯವು ಇದು ವಿಧಿಯ ಎಚ್ಚರಿಕೆಯ ಕರೆ ಎಂದು

ಇಂಥ ನರ ಮುಂದಿನ ಯೋಜನೆಯಾದರೂ ದಿಗಿಲುಗೊಳಿಸುವಂತಿದೆಯೆಂಬುದು ಸ್ಪಷ್ಟವೆ ಸ್ಟಾಲಿನ್, ಈಗಾಗಲೇ ತನ್ನ ಸೇನಾಪತಿಗಳಿಗೆ ಸಂದೇಶ ಕಳುಹಿಸಿದ್ದಾನೆ 'ಒಬ್ಬನೇ ಒಬ್ಬ ಜರ್ಮನ್ ಸಿಪಾಯಿಯೂ ರಶ್ಯನ್ ನೆಲದಲ್ಲಿ ಉಳಿದಿರಬಾರದು, ಈ ಋತು ದಾಟಿದ ಕೂಡಲೇ ಯುದ್ಧ ವಿದ್ಯಾ ವಿಶಾರದರಾದ ನೂರು ಮಿಲಿಯ ನಮ್ಮ ಸಿಪಾಯಿಗಳು ತಯಾರಾಗುವರು, ಅವರು ನಿಮ್ಮ ಬೆಂಬಲಿಗರಾಗಿರಲು ಸಿದ್ಧರಿರುವರು, ಬ್ರಿಟಿಷ್ ಅಮೆರಿಕದವರ ಸಹಾಯ ಸಾಮಗ್ರಿಗಳನ್ನು ನಮ್ಮ ಭೂಮಿಗೆ ಬೇಕಾದಷ್ಟು ತಲುಪಿಸುವ ಸಾಹಸ ಮಾಡಲಾಗಿದೆ' ಎಂದು ಮಾರ್ಶಲ್ ಟಿಮೊಶಂಕೋ ಈಗಾಗಲೇ ಅಮೆರಿಕಕ್ಕೆ ಹೋಗಿರುತ್ತಾನೆಂಬ ಸುದ್ದಿ ಬಂದಿದೆ ಬಹುಶಃ ಈ ಪ್ರಯಾಣವು ಮಿತ್ರರನ್ನು ದ್ವಿತೀಯ ರಂಗ ತೆರೆಯುವಂತೆ ಒತ್ತಾಯಪಡಿಸುವ ಸಲುವಾಗಿಯೇ ಇರಬೇಕು— ಈಗ ರಶ್ಯನರಿಗೆ ಸಹಾಯ ಕೊಡದಿದ್ದರೆ ಮಿತ್ರರಿನ್ನಾವಾಗ ಕೊಡಬಲ್ಲರು? ಈಗ ಶತ್ರುವನ್ನು ಬಲಗುಂದಿಸಲು ಮುಂದೆ ಬರದಿದ್ದರೆ ಮಿತ್ರರು ಇನ್ನಾವಾಗ ಮುಂದೆ ಬಂದಾರು? ಆಕ್ರಮಣಕಾರೀ ಹಿಟ್ಲರನನ್ನು ತಮ್ಮ ರಾಷ್ಟ್ರದಿಂದ ಹೊರ ಅಟ್ಟುವಲ್ಲಿ 'ಮಾಡುವೆವು ಇಲ್ಲವೇ ಮಡಿವೆವು' ಎಂದು ರಶ್ಯನ್ ವೀರರು ಹೋರಾಡುತ್ತಿರುವಾಗ ಮಿತ್ರರು ಮೌನವಾಗಿದ್ದರೆ ಹೇಗಾದೀತು? ದ್ವಿತೀಯ ರಣರಂಗವನ್ನು ಈಗ ತೆರೆಯದಿದ್ದರೆ ಹೇಗೆ?

ನೋಟೀಸು

ದಕ್ಷಿಣ ಕನ್ನಡಾ ಸಬ್ ಕೋರ್ಟಿನಲಿ

R E P 190/42 O S. 59/40

ಗಣಪತಿ ಭಟ್ಟ ವಾದಿ ಅರ್ಜಿದಾರ

ಮತ್ತು

ಸಾವಿತ್ರಿ ಕೂಡಾ ಪ್ರತಿವಾದಿರು ರೆಸ್ಪೊಂಡೆಂಟ್ರು

೫ನೇ ರೆಸ್ಪೊಂಡೆಂಟ ಮಹಾಬಲ ಭಟ್ರಿಗೆ ಸದ್ರಿ ನೋಲಿನ ಅಮ್ಲುಜ್ಯಾರಿಯಲ್ಲಿ ಅರ್ಜಿದಾರನು ಡಿಕ್ರಿಯಲ್ಲಿ ಜವಾಬ್ದಾರಿಯಿರುವ ಸ್ಥಿರಾಸ್ತಿಯನ್ನು ಏಲಂಮಿಗೆ ಅಪೇಕ್ಷಿಸಿ ಯೇಲಂ ಇಸ್ತಿಹಾರನ್ನು ಹಾಜ್ರುಪಡ್ಸಿರುತ್ತಾನೆ ಸದ್ರಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ಅಮ್ಲುಜ್ಯಾರಿಯು ಈ ಕೋರ್ಟಿನಲ್ಲಿ ತಾರೀಕು 24 3-1943ಕ್ಕೆ ಇಟ್ಟಿರುತ್ತದೆ ಆ ದಿವ್ಸ ನೀವು ಕೋರ್ಟ ಮುಂದೆ 11 ಘಂಟೆಗೆ ಹಾಜ್ರಾಗುವರೇ ತಪ್ಪಿದರೆ ನಿಮ್ಮ ಗೈರ ಹಾಜರಿಯಿಂದ ಸದ್ರಿ ಶರ್ತಗಳನ್ನು ನಿರ್ಣಯಿಸಲಾದೀತು

ಮಂಗಳೂರು ತಾ 4 3-43 } **N Krishna Bhat** Advocate for Petitioner

NOTICE

In the Court of the District Munsif of Mangalore

O S No 819/1942

Between –

B F Lobo . . . *Plaintiff*

and

Veeramma and others *Defendants*

To

The 15th defendant Kalyani, daughter of Veeramma, residing at Annu Shetty's Compound, Kodialbail Mangalore Town

Please take notice that the above suit filed by the plaintiff for recovery of Rs 1123 1-1 being the arrears of rent due up to 31-5-1942 under a registered mulgeni chit dated 15-3-1807 executed by Sanna Tyampanna Shetty the predecessor in-title of the defendants together with possession of the property on the ground of forfeiture by non payment of rental as also future mesne profits and costs of suit will come on for hearing on 18-3-1943 at 10 A. M You may either appear in person or by a pleader on the said date failing which it will be decided in your absence

(By order of the court)

Mangalore, 26-2-1943, } **M A Kamath,** Vakil for plaintiff

ಬಿಸಿಬಿಸಿ ಸುದ್ದಿಗಳು

ಹಿಟ್ಲರನ ಆಜ್ಞೆ ಪ್ರಕಾರ ಹೆರ್‌ವಾನ್ ರಿಬನ್‌ಟ್ರಾಪನು ರೋಮಿಗೆ ಹೋಗಿ ಫೆಬ್ರವರಿ ೨೪ರಿಂದ ೨೮ರ ವರೆಗೆ ಅಲ್ಲಿದ್ದನೆಂದು ಜರ್ಮನ್ ರೇಡಿಯೋ ಸಾರುತ್ತದೆ. ಹಿಟ್ಲರನಿಂದ ತಂದ ಪತ್ರವನ್ನು ಫೆಬ್ರವರಿ ೨೫ರಂದು ರಿಬನ್‌ಟ್ರಾಪನು ಮುಸಲನಿಗೆ ಮುಟ್ಟಿಸಿದನಂತೆ. ಈ ಸುದ್ದಿಯನ್ನು ನಿರೀಕ್ಷಿಸುವಾಗ, ಹಿಟ್ಲರ್ ಮುಸಲನಿಗಳಾದರೂ ಚರ್ಚಿಲ್ ರೂಸ್‌ವೆಲ್ಟರಂತೆ ಮುಂದಿನ ಯೋಜನೆಯಲ್ಲಿ ಗಂಭೀರ ವಿಚಾರ ಮಗ್ನರಾಗಿರುವರೆಂದು ತಿಳಿದುಕೊಳ್ಳಬಹುದು ಮಾರ್ಶಲ್ ಟಿಮೊಶಂಕೋ ಸೈನಿಕರು ರಶ್ಯದ ವಾಯುವ್ಯ ರಣರಂಗದ ಜರ್ಮನ್ ಹದಿನಾರನೆ ದಲದ ಮೇಲೆ ಧಾಳಿಯಿಟ್ಟು ಧನಾನಸ್ಕ ಮೊದಲಾದ ೩೨ ಜನ ವಸತಿಗಳನ್ನು ಸ್ವಾಧೀನಮಾಡಿಕೊಂಡರು ಜರ್ಮನ್ ದಳವು ೧೯೪೧ ಸಪ್ಟಂಬರದಲ್ಲಿ ಇಲ್‌ಮೆನ್ ಸರೋವರ ವ್ಯೂಹವನ್ನು ಭೇಧಿಸಿ ಈ ಭಾಗವನ್ನಾಕ್ರಮಿಸಿಕೊಂಡಿತ್ತು



ಒಂದು ಟೀ ಚಮಚ ನೊರೆಬರುವ ಆಂಡ್ರ್ಯೂಸ್ ಬಹು ಆಹ್ಲಾದಕರವಾದ ಹಾಗೂ ಆರೋಗ್ಯಕರವಾದ ಪಾನೀಯವಾಗಿರುವುದಲ್ಲದೆ ದೇಹವು ಮೆದುಳು ಉತ್ತಮ ಸ್ಥಿತಿಯಲ್ಲಿರುವುದಕ್ಕೂ ಕಾರಣವಾಗುವುದು, ಅಂತರ್ಯ ಶುದ್ಧಿಯು ಹೊರಗಿನ ಶುಚಿಗಿಂತ ಹೆಚ್ಚು ಮುಖ್ಯವಾದದ್ದು ಎಲ್ಲಾ ಕಡೆಗಳಲ್ಲು ಕೋಟ್ಯಾಂತರ ಜನರು ತಮಗೆ ಬೇಕಾದಷ್ಟು ಸಲ ಆಂಡ್ರ್ಯೂಸ್ ತೆಗೆದುಕೊಂಡು ಆರೋಗ್ಯವನ್ನು ಕಾಪಾಡಿಕೊಂಡಿರುವರು.

ಮೊದಲು ಆಂಡ್ರ್ಯೂಸ್ ಬಾಯಿ, ನಾಲಗೆಯನ್ನು ಶುದ್ಧಿ ಮಾಡುವುದು

ಅನಂತರ ಆಂಡ್ರ್ಯೂಸ್ ಜಠರವನ್ನು ಒಳ್ಳೆ ಸ್ಥಿತಿಯಲ್ಲಿಟ್ಟು ಹುಳಿಯನ್ನು ಸರಿಪಡಿಸುತ್ತೆ

ಆ ಮೇಲೆ ಆಂಡ್ರ್ಯೂಸ್ ಲಿವರನ್ನು ಶಕ್ತಿಯುತವಾಗಿ ಮಾಡಿ ಪಿತ್ತವನ್ನು ತಡೆಯುವುದು

ಕೊನೆಯದಾಗಿ ಎಮ್ಮ ಅಂತರ್ಯಶುದ್ಧಿ ಸಂಪೂರ್ಣವಾಗಲು ಆಂಡ್ರ್ಯೂಸ್ ಸೌಮ್ಯವಾಗಿ ಮಲವಿಸರ್ಜನೆ ಮಾಡಿಸುವುದು ತೊಂದರೆಕೊಡುವ ವಿಷಗಳನ್ನು ಹೊರದಾಗಿಸಿ, ಮಲಬದ್ಧತೆ ಸರಿಪಡಿಸಿ ರಕ್ತವನ್ನು ಶುದ್ಧಿಮಾಡಿ ಚರ್ಮವನ್ನು ಸ್ವಚ್ಛವಾಗಿಡುವುದು ಅಂತರ್ಯ ಶುದ್ಧಿಗೆ ಕ್ರಮವಾಗಿ ಉಪಯೋಗಿಸಿ

ಆಂಡ್ರ್ಯೂಸ್ ಲಿವರ್ ಸಾಲ್ಟ್
ಆರೋಗ್ಯ ಪಾನೀಯ—ವಿರೇಚಕ

ANDREWS LIVER SALT

Health Drink – Tonic Laxative

ಸ್ವದೇಶಾಭಿಮಾನಿ

ತಾರೀಕು 5—3—1943

ಹೊಸ ವರ್ಷದ 'ಬಜೆಟ್'

ಇಂಡಿಯಾ ಸರಕಾರದ ಅರ್ಥಸಚಿವರಾದ ಸರ್ ಜೆರಿಮಿ ರೇಜಮೇನರು ಕೇಂದ್ರ ಎಸೆಂಬ್ಲಿಯಲ್ಲಿ ೧೯೪೩-೪೪ನೆಯ ವರ್ಷದ ಅಂದಾಜು ಪತ್ರವನ್ನು ಮಂಡಿಸಿದರು. ಹೊಸ ವರ್ಷದಲ್ಲಿ ೬೦ ಕೋಟಿ ರೂಪಾಯಿಗಳ ಕೊರತೆಯಾಗುವುದೆಂದು ಅಂದಾಜು ಮಾಡಲಾಗಿದೆ. ಇದನ್ನು ತುಂಬಿಸಿಕೊಳ್ಳಲು ೨೦ ಕೋಟಿ ರೂಪಾಯಿಗಳ ಉತ್ಪತ್ತಿ ಬರುವಷ್ಟು ಹೊಸ ತೆರಿಗೆಗಳನ್ನು ಹೇರಲು ನಿಶ್ಚಯಮಾಡಿರುವರು.

ಇನ್‌ಕಮ್ ಟ್ಯಾಕ್ಸ್, ಸುಪರ್ ಟ್ಯಾಕ್ಸ್ ಕೋರ್ಪೊರೇಶನ್ ಟ್ಯಾಕ್ಸ್ ಮತ್ತು ವಿಶೇಷ ಲಾಭದ ಟ್ಯಾಕ್ಸ್ ಇವುಗಳ ಮೂಲಕ ಹೊಸ ತೆರಿಗೆಗಳು ವಸೂಲು ಮಾಡಲ್ಪಡುವವು. ಅಪ್ರತ್ಯಕ್ಷ ರೀತಿಯ ತೆರಿಗೆಗಳಲ್ಲಿ ಹೊಗೆಸೊಪ್ಪು ಮತ್ತು ವನಸ್ಪತಿ ಜನ್ಯ ಪದಾರ್ಥಗಳ ಮೇಲಿನ ತೆರಿಗೆಗಳನ್ನು ಹೆಚ್ಚಿಸಲಾಗಿದೆ. ಈ ತರದ ಎಲ್ಲಾ ಹೊಸ ತೆರಿಗೆಗಳಿಂದ ೨೦.೧ ಕೋಟಿ ರೂಪಾಯಿಯಷ್ಟು ಹೆಚ್ಚಿನ ಉತ್ಪತ್ತಿ ಬರುವುದು; ಹೀಗಾದರೂ ೪೦.೧೯ ಕೋಟಿ ರೂಪಾಯಿಯಷ್ಟು ಮತ್ತೂ ಕೊರತೆಯುಳಿಯುತ್ತದೆ.

ಸರ್ ರೆಜಿಮೆನರು ಅಂದಾಜು ಪತ್ರವನ್ನು ಮಂಡಿಸುತ್ತಾ ಹೀಗಂದರು: '೧೯೪೨-೪೩ರಲ್ಲಿ ೨೩೮.೪೯ ಕೋಟಿ ರೂಪಾಯಿಗಳು ಸಂರಕ್ಷಣೆಗೆ ವೆಚ್ಚವಾದವು, ೪೩-೪೪ರಲ್ಲಿ ೨೦೦ ಕೋಟಿ ರೂಪಾಯಿ ಖರ್ಚಾಗಬಹುದು. ಈ ವರ್ಷದಲ್ಲಿ ೯೪.೬೬ ಕೋಟಿ ರೂಪಾಯಿ ಕೊರತೆಬೀಳುತ್ತದಾದರೆ ಬರುವ ವರ್ಷದಲ್ಲಿ ೬೦.೨೮ ಕೋಟಿ ರೂಪಾಯಿ ಕೊರತೆ ಬೀಳುವುದು. ಸಂರಕ್ಷಣ ವೆಚ್ಚದಲ್ಲಿ ೪೯.೧೪ ಕೋಟಿ ಮತ್ತು ೧೯.೮೫ ಕೋಟಿ ರೂಪಾಯಿಗಳು ವಿಮಾನ ನಿಲ್ದಾಣಗಳ ವಿಸ್ತರಣೆ ಹಾಗೂ ಭಾರತೀಯ ನೌಕಾಸೇನೆ ಮತ್ತು ಟೆಲಿಫೋನ್ ತಂತಿಗಳ ಯೋಜನೆಗಳಿಗಾಗಿ ಕಾಯಂ ವೆಚ್ಚಮಾಡಲಾಗುವುದು.'

ಬ್ರಿಟನು ಮತ್ತು ಭಾರತಗಳಲ್ಲಿ ಸಂರಕ್ಷಣೆಯ ವೆಚ್ಚದ ಹಂಚುವಿಕೆ ಇಂದಿನಂತೆ ಉಳಿಯುವುದೆಂದು ತಿಳಿಸಿದರು. ವಿಮಾನಬಲದ ವಿಸ್ತರಣೆಯಲ್ಲಿ ಭಾರತವು ತನ್ನ ಸಲುವಾಗಿ ಆಗುವ ವೆಚ್ಚವನ್ನು ಕೊಡಬೇಕಾಗುವುದೆಂದರು. ಅಮೆರಿಕದಿಂದ ದೊರಕುವ ಕಡ ಮತ್ತು ಆಡವು ಸಹಾಯ ಪ್ರತಿಯಾಗಿ ನಾವು ಏನನ್ನು ಪ್ರತಿಯಾಗಿ ಕೊಡಬೇಕೆಂಬ ಸಂಬಂಧದಲ್ಲಿ ಒಪ್ಪಂದವೊಂದನ್ನು ಮಾಡಿಕೊಳ್ಳುವ ವಿ[illegible] ಚರ್ಚಿಸಲಾಗುತ್ತಿದೆ. [illegible] ಸೈನಿಕರಿಗಾಗಿ ಈ ವರ್ಷ ೧೬೭ ಕೋಟಿ ರೂಪಾಯಿ ಖರ್ಚಾಗಿದ್ದು ಮುಂದಿನ ವರ್ಷ ೬೮.೨೪ ಕೋಟಿ ರೂಪಾಯಿ ವೆಚ್ಚವಾಗಬಹುದೆಂದರು. ಸರ್ ರೆಜಿಮೆನರು, 'ಸ್ಟರ್ಲಿಂಗ್' ಸಾಲದ ವಿಷಯ ಪ್ರಸ್ತಾಪಿಸಿ, ಭಾರತವಿಂದು ಸಾಲ ಕೊಡುವ ರಾಷ್ಟ್ರವಾಗಿದೆಯೆನ್ನುತ್ತಾ ಹಲವು ವರ್ಷಗಳಲ್ಲಿ ಮಾಡಿದ ಸಾಲವನ್ನು ಮೂರು ವರ್ಷಗಳಲ್ಲಿ ತೀರಿಸಲಾಯಿತೆಂದರು!

ಹೊಸದಾಗಿ ಹೇರಿರುವ ತೆರಿಗೆಗಳ ವಿವರ ಹೀಗಿದೆ: ೫೦೦೦ದ ವರೆಗಿನ ಉತ್ಪನ್ನಗಳ ತೆರಿಗೆ ಹೆಚ್ಚಿಸಲಾಗುವುದಿಲ್ಲ. ಮುಂದೆ ೫೦೦೦ದಿಂದ ೧೦ ಸಾವಿರದ ವರೆಗಿನ ಉತ್ಪನ್ನಗಳ ಮೇಲೆ ಸೆಂಟ್ರಲ್ ಸರ್ ಚಾರ್ಜನ್ನು ೯ರಿಂದ ೧೦ ಪೈಗೆ ಏರಿಸಲಾಗಿದೆ; ೧೦ರಿಂದ ೧೫ ಸಾವಿರದ ಉತ್ಪನ್ನಗಳ ಮೇಲೆ ೧೪ರಿಂದ ೧೬ ಪೈಗೆ ಮತ್ತು ಅದರ ಮೇಲಿನವುಗಳ ತೆರಿಗೆಯನ್ನು ೧೫ರಿಂದ ೨೦ ಪೈಗೆ ಹೆಚ್ಚಿಸಲಾಗಿದೆ; ೨೫೦೦೦ದಿಂದ ೩ ಲಕ್ಷ ಉತ್ಪನ್ನಗಳ ಮೇಲಿನ ಸುಪರ್ ಟ್ಯಾಕ್ಸನ್ನು ರೂಪಾಯಿಗೆ ೬ ಪೈಯಂತೆ ಏರಿಸಲಾಗಿದೆ; ಈ ಸುಪರ್ ಟ್ಯಾಕ್ಸ್ ಮತ್ತು ಸರ್ ಚಾರ್ಜ ಟ್ಯಾಕ್ಸಗಳನ್ನು ಯೋಚಿಸಿದರೆ, ಕಡಿಮೆ ಉತ್ಪನ್ನಗಳಿಗೆ ರೂಪಾಯಿಗೆ ೧೦ ಪಾವಾಣೆಯಿಂದ ಪರಮಾವಧಿ ಉತ್ಪನ್ನಗಳಿಗೆ ೧೨॥ ಆಣೆಯ ವರೆಗೆ ತೆರಿಗೆ ಬೀಳುವುದು. ಕಾರ್ಪೊರೇಶನ್ ತೆರಿಗೆಯನ್ನು ರೂಪಾಯಿಗೆ ೬ ಪೈಯಂತೆ ಏರಿಸಲಾಗಿದೆ; ವಿಶೇಷ ಲಾಭದ ತೆರಿಗೆಯನ್ನು ಮುಂದಿನ ವರ್ಷವೂ ಅನ್ವಯಿಸಲಾಗುವುದು. ಇವುಗಳಿಂದ ವರ್ಷಕ್ಕೆ ೭ ಕೋಟಿ ರೂಪಾಯಿ ಉತ್ಪತ್ತಿಯಾಗುವುದು.

ಸ್ವಂತ ಉಪಯೋಗಕ್ಕೆ ಬೆಳೆಯುವ ಹೊಗೆಸೊಪ್ಪಿಗೆ ತೆರಿಗೆಯಿಲ್ಲ; ಈ ಹೆಚ್ಚಿನ ಹೊಗೆಸೊಪ್ಪು ತೆರಿಗೆಯು ನೂರಕ್ಕೆ ೨೦ರಷ್ಟಾಗಬಹುದು; ವನಸ್ಪತಿ ಜನ್ಯ ಪದಾರ್ಥಗಳಿಗೆ ಒಂದು ಹ್ಯಾಂಡ್ರೆಡ್ವೇಟಿಗೆ ೭ ರೂಪಾಯಿ ತೆರಿಗೆ ಹೇರಲಾಗುವುದು. ಇವುಗಳಿಂದ ವರ್ಷಕ್ಕೆ ೧೪೦ ಲಕ್ಷ ರೂಪಾಯಿ ಉತ್ಪತ್ತಿಯಾಗುವುದು.

ಪೋಸ್ಟಲ್ ಮತ್ತು ಅಂಚೆ ದರಗಳಲ್ಲಿ ಒಳದೇಶದ ಕವರುಗಳಿಗೆ ಮೊದಲನೆಯ ತೊಲೆಯ ನಂತರ ಪ್ರತಿ ತೊಲೆಗೆ ತೆಗೆದುಕೊಳ್ಳುತ್ತಿದ್ದ ಅರ್ಧಾಣೆಯನ್ನು ಒಂದು ಆಣೆಗೆ ಏರಿಸಲಾಗಿದೆ: ಒಳದೇಶ ಪಾರ್ಸೆಲುಗಳಲ್ಲಿ ಮೊದಲನೇ ನಲ್ವತ್ತು ತೊಲೆಗಳ ದರವನ್ನು ೪ ಆಣೆಯಿಂದ ೬ ಆಣೆಗೆ ಏರಿಸಲಾಗಿದೆ. ಟೆಲಿಫೋನ್ ದರದ ಆರನೇ ಓಂದಂಶ ಸರ್ ಚಾರ್ಜನ್ನು ಮೂರನೇ ಒಂದಂಶಕ್ಕೆ ಏರಿಸಲಾಗಿದೆ. ಇವುಗಳಿಂದ ವರ್ಷಕ್ಕೆ ೧೨೦ ಲಕ್ಷ ರೂಪಾಯಿ ಉತ್ಪನ್ನವಾಗುವುದು.

ಸ್ವದೇಶ ಸಮಾಚಾರ

ಗಾಂಧಿಜಿ ಬಿಡುಗಡೆಗಾಗಿ ವ್ಯರ್ಥ ಪ್ರಯತ್ನ!

ಅಖಿಲ ಭಾರತದಿಂದ ಬೇರೆ ಬೇರೆ ಸಂಘ, ಜಾತಿ, ಮತ, ಪಂಥದವರು ಸ್ತ್ರೀಪುರುಷರಾದಿಯಾಗಿ ಸಮಸ್ತರೂ ಗಾಂಧಿಜಿಯನ್ನು ಬಿಡುಗಡೆಮಾಡಬೇಕೆಂದು ಸರಕಾರದೊಡನೆ ಬಿನ್ನವಿಸಿಕೊಂಡರು. ಅಖಿಲ ಭಾರತದ ಸಕಲ ಜಾತಿ ಮತ ಪಂಥಗಳ ಮುಖಂಡರು ದಿಲ್ಲಿಯಲ್ಲಿ ಸಭೆ ಸೇರಿ ವಿನಂತಿಸಿಕೊಂಡರು. ವಿದೇಶಗಳಿಂದ ಚೀನ, ಲಂಡನ್, ಅಮೆರಿಕ, ದಕ್ಷಿಣ ಆಫ್ರಿಕಾ ಮೊದಲಾದ ಕಡೆಗಳಿಂದಲೂ ಅನೇಕ ಬಿನ್ನಹಗಳು ಬಂದಿದ್ದವು. ಆದರೆ ಅದಕ್ಕೆ ಸರಕಾರವು ಗಮನಕೊಡಲಿಲ್ಲ. ಗಾಂಧಿಜಿಯನ್ನು ಬಿಡುಗಡೆ ಮಾಡಲಾಗುವುದಿಲ್ಲವೆಂದು ವೈಸರಾಯರು ಖಂಡಿತ ಹೇಳಿಬಿಟ್ಟರು; ಚರ್ಚಿಲರೂ ವೈಸರಾಯರ ಧೋರಣೆಯನ್ನೇ ಸಮರ್ಥಿಸಿದರು. ಅಮೆರಿಯವರೂ ಅದನ್ನೇ ಸಮರ್ಥಿಸಿದರು ಮಾತ್ರವಲ್ಲದೆ ಗಾಂಧಿಜಿ ಉಪವಾಸದ ಬಗ್ಗೆ ಬ್ರಿಟನಿನಲ್ಲಿ ಹಲವರಿಗೆ ತಪ್ಪು ಕಲ್ಪನೆಯಿರುವುದರಿಂದ ಅದನ್ನು ಪರಿಹರಿಸುವ ಬಗ್ಗೆ ಕಾಮನ್ಸಿನಲ್ಲಿ ಒಂದು ಚರ್ಚೆಯೇರ್ಪಡಿಸಬೇಕೆಂದು ಕ್ಯೂಲಿಗಾರ ಸದಸ್ಯ ಸೊರೆನ್ಸನರು ಕೇಳಿದ್ದಕ್ಕೆ, ಅಮೆರಿ ಆಗುವುದಿಲ್ಲವೆಂದು ಹೇಳಿಬಿಟ್ಟರು. ಲಂಡನಿನ ಮೆಂಚಸ್ಟರ್ ಗಾರ್ಡಿಯನ್ ಪತ್ರಿಕೆಯೂ ಕಳಕಳಿಯಿಂದ ಕೇಳಿಕೊಂಡಿತು. ಆದರೆ ಆ ಪ್ರಯತ್ನಗಳೆಲ್ಲವೂ ನೀರಮೇಲಿನ ಹೋಮಗಳಾದವು.

ಅಪವಾದ ಕಾಂಗ್ರೆಸಿನ ಮೇಲೆ!

ಆಗಸ್ಟ ೮ರಿಂದ ಮೊದಲ್ಗೊಂಡು ಭಾರತದ ಕೆಲವು ಕಡೆಗಳಲ್ಲಾದ ಗಲಭೆ ದಂಗೆ, ಹಿಂಸೆಗಳೆಲ್ಲಾ ಕಾಂಗ್ರೆಸು ಹಾಗೂ ಗಾಂಧಿಜಿಯೇ ಕಾರಣವೆಂದು ಹೇಳಿ, ಈ ವಿಷಯ ಗಾಂಧಿಜಿಗೆ ಗೊತ್ತಿರುತ್ತಾ ಅವರು ಬೇಕೆಂತಲೇ ಮಾಡಿದರೆಂದು ಸಮರ್ಥಿಸಿ ಸರಕಾರವೀಗ ಏಕಪಕ್ಷೀಯ ಪ್ರಕಟಣೆಯೊಂದನ್ನು ಹೊರಡಿಸಿದೆ. ಗಾಂಧಿಜಿ, ವೈಸರಾಯರಿಗೆ ಬರೆದ ಪತ್ರದಲ್ಲಿ ತಾನು ಹಾಗೂ ಕಾಂಗ್ರೆಸು ಹಿಂಸೆಯನ್ನು ಸಾರಿಲ್ಲವೆಂದೂ, ಜನರನ್ನು ಉದ್ರೇಕಿಸಿ ಸರಕಾರವೇ ಇಂದಿನ ಅನರ್ಥಕ್ಕೆ ಕಾರಣವಾಯಿತೆಂದೂ, ತನ್ನನ್ನು ಬಿಡುಗಡೆ ಮಾಡಿದರೆ ತಾನೀ ವಿಷಯವನ್ನು ಜಗತ್ತಿನ ಮುಂದೆ ರುಜುಪಡಿಸಲು ಸಿದ್ಧನಿದ್ದೇನೆಂದು ಹೇಳಿದ್ದರೂ ಅವರನ್ನು ಸರಕಾರವು ಬಿಡುಗಡೆ ಮಾಡದೆ, ಅವರಿಗೆ ನ್ಯಾಯವನ್ನು ಹೇಳಲು ಆಸ್ಪದ ಕೊಡದೆ, ಹೀಗೆ ಮತ್ತೂ ಮತ್ತೂ ಏಕಪಕ್ಷವಾಗಿಯೇ ಸರಕಾರವು ವಾದಿಸುವ ನೀತಿಯನ್ನು, ರಾಜಾಜಿ, ಸಪ್ರು ಮೊದಲಾದ ಅಖಿಲಭಾರತದ ಮುಖಂಡರೆಲ್ಲರೂ ಖಂಡಿಸಿದ್ದು ಮಾತ್ರವಲ್ಲದೆ ದೇಶದ ಪ್ರಮುಖ ಪತ್ರಿಕೆಗಳೂ ಕಟುವಾಗಿ ಟೀಕಿಸಿವೆ. ಸರಕಾರವು ಬೇಕಾದರೆ ಒಂದು ನಿಷ್ಪಕ್ಷಪಾತೀ ನ್ಯಾಯಮಂಡಳವನ್ನೇರ್ಪಡಿಸಿ, ಸತ್ಯಾಸತ್ಯಗಳನ್ನು ಬಯಲಿಗೆಳೆಯಲಿ ಎಂದು ರಾಜಾಜಿ ಸರಕಾರಕ್ಕೆ ಆಹ್ವಾನವಿತ್ತಿದ್ದಾರೆ.

ವಿಧುರರು ವಿಧವೆಯರನ್ನೇ ಮದುವೆಯಾಗಬೇಕು

ಎಂಬುದಾಗಿ ಬಂಗಾಳ ಅಸೆಂಬ್ಲಿಯಲ್ಲಿ ಸ್ಥಿರ ಸದಸ್ಯರು ಒಂದು ಮಸೂದೆ ತಂದಿದ್ದಾರೆ: ಅದನ್ನು ಸರಕಾರದ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ಈ ಶಾಸನಕ್ಕೆ ವಿರುದ್ಧ ವರ್ತಿಸಿದವರಿಗೆ ಶಿಕ್ಷೆ ಜುಲ್ಮಾನೆಗಳನ್ನು ವಿಧಿಸಲು ಅದರಲ್ಲಿ ಸೂಚನೆಯಿದೆ. ಬಂಗಾಳದಲ್ಲಿ ೫ ಲಕ್ಷಕ್ಕಿಂತ ಹೆಚ್ಚು ವಿಧುರರಿದ್ದು ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಪುನಃ ಮದುವೆಯಾಗಲಿರುವವರು. ವಿಧುರರು ವಿಧವೆಯರನ್ನೇ ಮದುವೆಯಾಗಬೇಕೆಂದು ಶಾಸನ ಮಾಡಿದ್ದಾದರೆ ೫ ವರ್ಷ ಮೊದಲ್ಗೊಂಡು ೨೫ ವರ್ಷಗಳ ವರೆಗಿನ ಎಲ್ಲಾ ವಿಧವೆಯರಿಗೂ ವಿವಾಹವಾಗುವುದು. ಇದರಿಂದ ವಿಧವಾ ವಿವಾಹದ ಪ್ರಶ್ನೆ ಕೆಲ ಮಟ್ಟಿಗೆ ಪರಿಹಾರವಾಗುವುದು.

ಸರ್ ವಾಜಪೇಯರ ಸ್ಥಾನದಲ್ಲಿ

ವಾಶಿಂಗ್ಟನ್‌ನಲ್ಲಿ ಭಾರತ ಸರಕಾರದ ಏಜೆಂಟ್ ಜನರಲರಾಗಿ, ಈಗ ಗುಂಟೂರಿನ ಕಲೆಕ್ಟರರಾಗಿರುವ ಶ್ರೀ ಅಟ್ಯುತ ಮೆನನರು ನೇಮಕ ಹೊಂದುವರೆಂದು ತಿಳಿದಿದೆ.

ಚರ್ಚಿಲ್ ರೂಸ್‌ವೆಲ್ಟರ ಅನಾರೋಗ್ಯ

ಚರ್ಚಿಲರಿಗೆ ನಿಮೋನಿಯಾ, ಅಗಿ, ಒಂದು ಶ್ವಾಸಕೋಶವು ಸ್ವಲ್ಪ ಬಾಧೆಯಾದ ವಾರ್ತೆ ಹಿಂದೆ ಪ್ರಕಟವಾಗಿದ್ದು ಅಂತೆಯೇ ರೂಸ್‌ವೆಲ್ಟರೂ ಅಸೌಖ್ಯದಿಂದಿದ್ದು ಅವರಿಬ್ಬರೂ ಈಗ ಸುಧಾರಿಸುತ್ತಿರುವರೆಂದು ವಾರ್ತೆ ಬಂದಿದೆ.

ಸೈನಿಕರ ಉದ್ಧಟತನ

ಆಣೆಯವರಿಗೆ ಅವಮಾನ

ಮೊನ್ನೆ ವರೆಗೆ ವೈಸರಾಯರ ಮಂತ್ರಿಮಂಡಳ ಮಂಡಿತರಾಗಿದ್ದ ಶ್ರೀ ಆಣೆಯವರು ನಾಗಪುರದಿಂದ ಪುನೆಗೆ ಹೊರಡುವಾಗ, ಎರಡನೇ ತರಗತಿ ಗಾಡಿಯನ್ನು ರಿಸರ್ವ್ ಮಾಡಿದ್ದರು; ಆದರೆ ಕೆಲ ಸೈನಿಕರು ಬಂದು, ರೈಲ್ವೆ ಅಧಿಕಾರಿಗಳು ಎಷ್ಟು ಹೇಳಿದರೂ ಕೇಳದೆ, ಆಣೆಯವರ ಸಾಮಾನನ್ನು ಕಿತ್ತು ಕೆಳಗೆಸೆದು ಕುಳಿತರು. ಆಣೆ ಬೇರೊಂದು ಗಾಡಿಯಲ್ಲಿ ಹೊರಟು ಹೋದರು.

ಈಸೂರು ಅಪರಾಧಿಗಳಿಗೆ ಜೀವದಾನವಿಲ್ಲ!

ಎಂಬುದಾಗಿ, ಮೈಸೂರು ಪ್ರಭುಗಳು ದಯೆಯ ಅರ್ಜಿಯನ್ನು ನಿರಾಕರಿಸಿದರೆಂದು ತಿಳಿದಿದೆ. ಈಸೂರು ಅಪಾದನೆಯಲ್ಲಿ ಐವರು ಮರಣದಂಡನೆಗೆ ಗುರಿಯಾಗಿದ್ದು, ಅವರಿಗೆ ಜೀವದಾನ ಮಾಡಬೇಕೆಂದು ಎಲ್ಲಾ ಕಡೆಗಳಿಂದಲೂ ಮೈಸೂರರಸರಿಗೆ ವಿನಂತಿ ಹೋಗಿದ್ದವು.

ಪತಿಪತ್ನಿಯರಲ್ಲಿ ಭಿನ್ನಾಭಿಪ್ರಾಯ!

ಇಂಡಿಯಾ ಸರಕಾರದ ನಾಗರಿಕ ರಕ್ಷಣೆಯ ಮಂತ್ರಿಯಾದ ಸರ್ ಜೆ. ಪಿ. ಶ್ರೀವಾಸ್ತವರು ದಿಲ್ಲಿಗೆ ಬಂದಿದ್ದ ಸಂ. ಪ್ರಾಂತಗಳ ಗವರ್ನರರಿಗೆ ಕೂಟವನ್ನೇರ್ಪಡಿಸಿದರು. ಆದರೆ ಲೇಡಿ ಶ್ರೀವಾಸ್ತವರು ಕೂಟದಲ್ಲಿ ಭಾಗವಹಿಸಲಿಲ್ಲ. ಇತ್ತೀಚೆಗೆ ಜರಗಿದ ಧುರೀಣರ ಪರಿಷತ್ತಿಗೆ ಲೇಡಿ ಶ್ರೀವಾಸ್ತವರು ತಮ್ಮ ಮಗಳೊಡನೆ ಸನ್ನಿಹಿತರಾಗಿದ್ದು ಮಹಾತ್ಮರ ಬಂಧ ವಿಮೋಚನೆಯನ್ನು ಸಮರ್ಥಿಸಿದರು. ಗಾಂಧಿಜಿ ಬಿಡುಗಡೆ ವಿಷಯ ಪತಿಪತ್ನಿಯರಲ್ಲಿ ಮತಭೇದವಿರುವದಾಗಿ ಊಹನೆಯಿದೆ.

ಸಿಂಹಳಕ್ಕೆ ಭಾರತದ ಕೆಲಸಗಾರರು

ಸಿಂಹಳದ ರಬ್ಬರ್ ತೋಟಗಳಿಗೆ ೨೦,೦೦೦ ಹಿಂದೀ ಕೆಲಸಗಾರರನ್ನು ಕಳುಹಿಸಬೇಕೆಂದು ಸಿಂಹಳದ ಸರಕಾರವು ಹಿಂದೀ ಸರಕಾರಕ್ಕೆ ಮನವಿ ಮಾಡಿತ್ತು. ಹಿಂದೀಯರ ಸ್ಥಾನಮಾನಗಳ ವಿಚಾರ ಸಮರ್ಪಕವಾದ ಆಶ್ವಾಸನೆ ಬಾರದೆ ಕೆಲಸಗಾರರನ್ನು ಕಳುಹಿಸಲು ಅನುಕೂಲವಿಲ್ಲವೆಂದು ಹಿಂದೀ ಸರಕಾರದವರು ಸೂಚಿಸಿದರು. ಈಗ ಸಿಂಹಳದ ಸರಕಾರವು ಹಿಂದೀ ಸರಕಾರದ ಸೂಚನೆಯನ್ನು ತಿರಸ್ಕರಿಸಿದೆಯೆಂದು ತಿಳಿದುಬರುತ್ತದೆ. ಎಂದರೆ ಹಿಂದೀ ಕೆಲಸಗಾರರನ್ನು ಸಿಂಹಳಕ್ಕೆ ಕಳುಹಿಸುವ ಸಂಭವವಿಲ್ಲ.

ಆಸಾಮಿನ ಮೇಲೆ ಜಪಾನರ ಧಾಳಿ

ತಾ. ೨೩ರಂದು ಮಧ್ಯಾಹ್ನ ಕೆಲ ಜಪಾನಿ ಬಾಂಬರುಗಳು ಆಸಾಮಿನಲ್ಲಿರುವ ಅಮೆರಿಕನರ ವಿಮಾನ ನಿಲ್ದಾಣವೊಂದರ ಮೇಲೆ ಬಾಂಬುಗಳನ್ನು ಸುರಿಸಿದುವು. ವಿಶೇಷ ಹಾನಿಯಾಗಿಲ್ಲ.

ಸಾದರ-ಸ್ವೀಕಾರ

ಗೀತಾ ಪ್ರವಚನಗಳು (ಅಧ್ಯಾಯ ೧೨)
ಮೂಲ ಲೇಖಕರು: ಆಚಾರ್ಯ ವಿನೋಬಾ,
ಪ್ರಕಾಶಕರು: ಅವಧೂತ ಗ್ರಂಥಾಲಯ ಹುಬ್ಬಳ್ಳಿ
ಮಾರಾಟಗಾರರು: ಸಾಹಿತ್ಯಭಂಡಾರ, ಹುಬ್ಬಳ್ಳಿ
ಬೆಲೆ ನಾಲ್ಕಾಣೆ.
ವಿಮರ್ಶೆ ಯಥಾವಕಾಶ

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರಲ್ಲಿ ಹರತಾಳ

ತಾ. ೨ರಂದು, ಮಹಾತ್ಮರ ಉಪವಾಸದ ಕೊನೆಯ ದಿನ, ಮಂಗಳೂರಲ್ಲಿ ಹರತಾಳ ಆಚರಿಸಲ್ಪಟ್ಟಿತು.

ಶ್ರೀ ನಾರಾಯಣಶೆಣೈಗಳ ಬಂಧನ

ತಾ. ೨ರಂದು ರಥಬೀದಿಯ ಪೇಪರ್ಸ್ ಸ್ಟಾಲಿನ ಶ್ರೀ ಕೊಂಚಾಡಿ ನಾರಾಯಣ ಶೆಣೈಗಳನ್ನು ಡಿಫೆನ್ಸ್ ಓಫ್ ಇಂಡಿಯಾ ಏಕ್ಟಿನ ಪ್ರಕಾರ ಬಂಧಿಸಿದರು.

ಸಹಾನುಭೂತಿ ಉಪವಾಸ

ತಾ. ೨ರಂದು ಮಂಗಳೂರಲ್ಲಿ ಹಲವು ಮಂದಿ ಸ್ತ್ರೀಪುರುಷರು ಗಾಂಧಿಜಿ ಉಪವಾಸದ ಸಂಬಂಧ ಸಹಾನುಭೂತಿ ತೋರಿಸಿ ಉಪವಾಸ ಆಚರಿಸಿದರು.

ಮದ್ರಾಸಿನಲ್ಲಿ ದ. ಕ. ವಿದ್ಯಾರ್ಥಿಗಳ ಬಂಧನ

ಮದ್ರಾಸಿನಲ್ಲಿ ಇತ್ತೀಚೆಗೆ ದಕ್ಷಿಣ ಕನ್ನಡದ ವಿದ್ಯಾರ್ಥಿಗಳು ಕೆಲವರು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಬಂಧಿತರಾಗಿದ್ದಾರೆ, ಅವರಲ್ಲಿ ಶ್ರೀಗಳಾದ ವಿಟ್ಠಲದಾಸ ಶೆಟ್ಟಿ, ಆಚಾರ್ಯ, ಕಾಮತ್, ಮಿಸ್ ಲಲಿತಾ ಮೊದಲಾದವರು ಇರುವರು.

ಗಾಂಧಿಜಿ ಆಯುಃ ಪ್ರಾರ್ಥನೆ

ಮಂಗಳೂರು ಕೆನರಾ, ಗಣಪತಿ ಹೈಸ್ಕೂಲುಗಳ ಮತ್ತು ರಾಮಕೃಷ್ಣ ವಿದ್ಯಾರ್ಥಿ ಭವನ ಮತ್ತು ಅಲೋಶಿಯಸ್ ಕಾಲೇಜ್ ಹಾಸ್ಟೆಲ್‌ಗಳ ವಿದ್ಯಾರ್ಥಿಗಳು ಮಹಾತ್ಮರ ಆಯುಃ ಪ್ರಾರ್ಥನೆ ಸಲ್ಲಿಸಿರುವರು. ಹಲವರು ಒಂದು ದಿನದ ಉಪವಾಸವನ್ನಾಚರಿಸಿರುವರು.

ಪುತ್ತೂರು ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ತಾ. ೨ರಂದು ಕಾರ್ತಿಕ ಪೂಜೆಯು ಜರಗಿಸಲ್ಪಟ್ಟು, ಮಹಾತ್ಮರ ಶ್ರೇಯಸ್ಸು ಮತ್ತು ಆರೋಗ್ಯದ ವಿಷಯ ಪ್ರಾರ್ಥನೆಯು ನಡೆಸಲ್ಪಟ್ಟಿರುತ್ತದೆ.

ಮುಲ್ಕಿ ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ತಾ. ೨ರಂದು ಮಹಾತ್ಮರ ಆಯುಃ ಪ್ರಾರ್ಥನೆ ಆಚರಿಸಲ್ಪಟ್ಟು ಆ ಬಗ್ಗೆ ಶ್ರೀದೇವರಿಗೆ ಪೂಜೆ, ದೀಪಾರಾಧನೆಗಳು ಅರ್ಪಿತವಾದವು. ಇಲ್ಲಿನ ಶ್ರೀ ಸುಕೃತೀಂದ್ರ ತೀರ್ಥ ಭಜನಾ ಮಂಡಲದಲ್ಲಿಯೇ ಅದೇ ಬಗ್ಗೆ ತಾ. ೨ರಂದು ಭಜನೆ ನಡೆಯಿತು.

ಕಾರ್ಕಳದಲ್ಲಿ ಮಹಾತ್ಮರ ಉಪವಾಸದ ಬಗ್ಗೆ ವೆಂಕಟ್ರಮಣರ ದೇವಾಲಯದಲ್ಲಿ ಪ್ರಾರ್ಥನೆ, ಹಲವರ ಸಹಾನುಭೂತಿಪರ ಉಪವಾಸಾದಿಗಳು ಜರಗಿದವು.

ಹೀಗೆ ನಗರದ ಹಾಗೂ ಜಿಲ್ಲೆಯ ಬೇರೆಬೇರೆ ಕಡೆಗಳಲ್ಲಿ ಜನರು, ಸಂಘಗಳು ಸೇರಿ ದೇವಾಲಯಗಳಲ್ಲಿ ಗಾಂಧಿಜಿ ಆಯುಃ ಪ್ರಾರ್ಥನೆ ಮಾಡಿದ ಅನೇಕ ಸುದ್ದಿಗಳು ಬಂದಿರುತ್ತವೆ.

ಪೂನದಲ್ಲಿ ದ. ಕ. ವಿದ್ಯಾರ್ಥಿ ಸಂಘ

ವೊಂದು ಸ್ಥಾಪಿತವಾಗಿದೆ. ಅದರ ಮಹಾಸಭೆಯೊಂದು ಸೇರಿ ಗಾಂಧಿಜಿಯನ್ನು ಶರತ್ತಿಲ್ಲದೆ ಬಿಡುಗಡೆ ಮಾಡಬೇಕೆಂದು ನಿರ್ಣಯಮಾಡಿ ವೈಸರಾಯರಿಗೆ ತರತಿ ಕಳುಹಿಸಲಾಗಿದೆ. ಆ ವಿದ್ಯಾರ್ಥಿ ಸಂಘಕ್ಕೆ ಕೆಳಗಿನವರು ಅಧಿಕಾರೀ ಮಂಡಲಿಯಾಗಿ ಆರಿಸಲ್ಪಟ್ಟಿದ್ದಾರೆ ಶ್ರೀಗಳಾದ ಬಿ ಎಸ್. ಭಾಸ್ಕರ ರೈ (ಅಧ್ಯಕ್ಷ) ವೆಂಕಟ್ರಾಯ ಶೆಟ್ಟಿ (ಉಪಾಧ್ಯಕ್ಷ) ಎ. ಬಿ. ಭಟ್ಟ (ಕಾರ್ಯದರ್ಶಿ) ಕೆ. ಬಿ. ಹೆಗ್ಡೆ, ಶಶಿಧರರಾವ್, ವಿ ವಿ ಕಾಮತ್ ಮುರಲೀಧರರಾವ್, ಬಾಲಕೃಷ್ಣರಾವ್, ಪ್ರೊ। ಎಸ್. ಆರ್. ಶರ್ಮರು ಇದರ ಪ್ರಾರಂಭ ಭಾಷಣ ಕೊಡಲು ಒಪ್ಪಿರುವರು.

ದ. ಕ. ವಿದ್ಯಾರ್ಥಿ ಸಂಘ

ದ ಆಶ್ರಯದಲ್ಲಿ ಕಳೆದ ಆದಿತ್ಯವಾರ ಸಂಜೆ ಶ್ರೀ. ವೈಕುಂಠ ಬಾಳಿಗರ ಅಧ್ಯಕ್ಷತೆಯಿರದ ಸಾಂಸ್ಕೃತಿಕ ಪರಿಷತ್ತೊಂದು ಜರಗಿತು. ಶ್ರೀಗಳಾದ ಎಂ. ಎಸ್. ಮಾಧವ ರಾವ್, ಸೀತಾರಾಮರಾವ್ ಇವರು ಭಾಷಣವಿತ್ತರು. ಕಾರ್ಯದರ್ಶಿ ಶ್ರೀ ಪದ್ಮನಾಭನ್ ಕೃತಜ್ಞತೆ ಹೇಳಿದರು.

ಕಮ್ಯೂನಿಸ್ಟರ ವಿಚಾರಣೆ

ಶ್ರೀಯುತರು ಬಿ. ವಿ. ಕಕ್ಕಿಲ್ಲಾಯ ಮತ್ತು ಸಿ. ಕುಂಞಕಣ್ಣನ್ (ಕಮ್ಯೂನಿಸ್ಟರು) ಇವರ ವಿಚಾರಣೆಯು ತಾ. ೨ರಂದು ನಡೆದು ಪುನಃ ಮಾರ್ಚ ೩ಕ್ಕೆ ಇಡಲ್ಪಟ್ಟಿದೆ.

ಮಜೂರ ಮುಖಂಡರಾದ ಶ್ರೀ ಕೇಶವ ಕಾಮತರನ್ನು ಒಮ್ಮೆ ವಿಚಾರಿಸಿ ಬಿಡಲಾಗಿತ್ತಷ್ಟೆ. ಈಗ ಪೋಲೀಸರು ಒಟ್ಟೆಯನ್ನು ಪುತ್ತೂರು ನ್ಯಾಯಾಧೀಶರಲ್ಲಿಗೆ ವರ್ಗಾಯಿಸಿರುವರು, ತಾ. ೨ರಂದು ಪುನಃ ವಿಚಾರಣೆಯಾಗಲಿದೆ.

ಕಮ್ಯೂನಿಸ್ಟ್ ಪಾರ್ಟಿ

ತಾ ೨೧ನೇ ದಿನವನ್ನು ಐಕ್ಯ ದಿನವಾಗಿ ಆಚರಿಸಿತು. ಪಾರ್ಟಿಯ ಸ್ವಯಂಸೇವಕರು ಆ ದಿನ ನಗರದಲ್ಲೆಲ್ಲ ಸುತ್ತಾಡಿ ಗಾಂಧಿಜಿಯ ಬಿಡುಗಡೆಯ ಅವಶ್ಯತೆಯನ್ನೂ ಅದಕ್ಕಾಗಿ ಕಾಂಗ್ರೆಸ್-ಲೀಗ್ ಐಕ್ಯ ಅಗತ್ಯವೆಂಬುದನ್ನೂ ವಿವರಿಸಿ ಹೇಳಿದರು ಕಾಂಗ್ರೆಸ್-ಲೀಗ್ ಮತ್ತು ಕೆಂಪು ಧ್ವಜಗಳಿದ್ದ ಬ್ಯಾಜುಗಳು ಮಾರಲ್ಪಟ್ಟವು ತಾ ೨೩ರಂದು ಕೆಂಪು ಪಡೆಯ ದಿನಾಚರಣೆಯು ಮಂಗಳೂರು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಜರಗಿತು.

ಶಿಕ್ಷೆ–ಜುಲ್ಮಾನೆ

ಶ್ರೀಗಳಾದ ಅನಂತ ಶೆಣೈ, ವೆಂಕಟೇಶ ಪೈ ಮತ್ತು ಅಚ್ಯುತ ಪ್ರಭು ಎಂಬೀ ಮೂವರು ಕಳೆದ ಸಪ್ಟಂಬರಿನಲ್ಲಿ ಒಬ್ಬ ಸರಕಾರೀ ನೌಕರನ ಮೇಲೆ ಕೈಮಾಡಿ, ಸರಕಾರದ ಕೆಲವು ಸೊತ್ತುಗಳಿಗೆ ನಷ್ಟವುಂಟುಮಾಡಿದರೆಂಬ ಆರೋಪದ ಮೊಕದ್ದಮೆಯು ಮಂಗಳೂರು ಸ॥ ಡಿ॥ ಆಫೀಸರರಾದ ಶ್ರೀ. ಜಿ ಜಿ ಪೊನ್ನಯ್ಯ ಇವರ ಮುಂದೆ ನಡೆದು, ಮೊದಲನೆಯ ಆರೋಪಿಗೆ ೧ ವರ್ಷ ಕಠಿನ ಶಿಕ್ಷೆ (ಇಂಡಿಯಾ ರಕ್ಷಣೆಯ ಶಾಸನದ ಅನ್ವಯ) ವಿಧಿಸಲಾಯಿತು. ಮಿಕ್ಕ ಇಬ್ಬರನ್ನು ಬಿಡುಗಡೆ ಮಾಡಲಾಯಿತು.

ಚಿಮಿಣಿ ಎಣ್ಣೆ ಮಾರಾಟದ ಸಂಬಂಧವಾದ ಬೋರ್ಡನ್ನು ತೂಗ ಹಾಕದ ಆರೋಪದ ಮೊಕದ್ದಮೆಗಳೆರಡು ಮಂಗಳೂರು ಸ॥ ಡಿ। ಆಫೀಸರರಾದ ಶ್ರೀ ಜೆ. ಜೆ. ಪೊನ್ನಯ್ಯ ಇವರ ಮುಂದೆ ನಡೆದು, ಪುತ್ತೂರಿನ ಶ್ರೀ. ಎಲ್ತಿಮಾರ್ ರಾಮಚಂದ್ರ ಶಾನುಭಾಗರಿಗೂ ಪುತ್ತೂರಿನ ಶ್ರೀ ದೇವಣ್ಣ ಕಿಣಿ ಅವರಿಗೂ ಇಂಡಿಯಾ ಡಿಫೆನ್ಸ್ ಕಾನೂನಿನಂತೆ ತಲಾ ೧೦೦-೧೦೦ರೂಪಾಯಿಗಳ ಜುಲ್ಮಾನೆ ವಿಧಿಸಲಾಗಿದೆ.

ಪೆನ್ನಿ ಮಾರಾಟ

ಮಾರ್ಚ್ ತಾ. ೫ ಮತ್ತು ೬ರಂದು ಬೆಳಿಗ್ಗೆ ಘಂಟೆ ೬ಕ್ಕೆ ಬಿ ಇ. ಎಂ. ಹೈಸ್ಕೂಲಿನ ಸಹಾಯಾರ್ಥ ಒಂದು ಪೆನ್ನಿ ಮಾರಾಟ ಏರ್ಪಟ್ಟಿದೆ. ತರತರದ ಕಸೂತಿ, ಕೃತಕ ಪುಷ್ಪ, ಉಪಹಾರ ಮೊದಲಾದವುಗಳು ಇವೆ ಮಹಾಜನರ ಪ್ರೋತ್ಸಾಹ ಅಪೇಕ್ಷಿಸಲಾಗಿದೆ.

ಜನ್ಮಟಾಪು

ಪುತ್ತೂರು ತಾಲೂಕು ಹಳೇ ನೆರಂಕಿ ಗ್ರಾಮದ ಮುದರ ಗೌಡನೆಂಬವನು ಕಳೆದ ೨೧ ೯-೪೨ರಲ್ಲು ಅದೇ ಗ್ರಾಮದ ಮುದರ ಗೌಡನೆಂಬವನನ್ನು ಕೊಂದನೆಂಬ ತಕ್ಸೀರಿನ ಮೇಲೆ ಮಂಗಳೂರು ಸೆಶ್ಶನ್ಸ್ ಜಡ್ಜರು ಜನ್ಮಟಾಪಿನ ಶಿಕ್ಷೆಯನ್ನು ವಿಧಿಸಿದರು. ಆಪೀಯ ಕಡೆಯಿಂದ ಕೋರ್ಟಿನಿಂದ ನೇಮಕ ಹೊಂದಿದ ಶ್ರೀ. ನಾಗರಾಜಯ್ಯನವರು ವ್ಯವಹರಿಸಿದರು.

ವಿಚಿತ್ರಗಳು

ಏಳು ತಲೆಗಳ, ತಾಳೆ ಮರವೊಂದು ತೆಕ್ಕಟ್ಟೆಯಿಂದ ಕೋಮಗೆ ಹೋಗುವ ದಾರಿಯಲ್ಲಿ ಕಂಡು ಬಂದಿದೆಯೆಂದು ತಿಳಿಯುತ್ತದೆ. ಇದೇ ರೀತಿ ಕುಂದಾಪುರದಿಂದ ಮುಂದೆ ಗುಜ್ಜಾಡಿ ಎಂಬಲ್ಲಿ ಲಕ್ಷ್ಮೀನಾರಾಯಣ ದೇವಾಲಯದ ಬಳಿ ಒಂದು ಮಾವಿನ ಮರದಲ್ಲಿ ಸರ್ಪದ ಹೆಡೆಯಾಕಾರ, ಖಡ್ಗಾಕಾರ, ತ್ರಿಶೂಲಾಕಾರ, ಕೋಳಿ, ನವಿಲು, ಚಕ್ರ, ಹನುಮಂತ ಮೊದಲಾದ ಆಕಾರದ ರೂಪಗಳು ಮರದ ಹತ್ತಿರ ನಿಂತು ನೋಡಿ ಅಮರದಲ್ಲಿ ತೋರುತ್ತವೆಯಾಗಿಯೂ ಹೇಳುತ್ತಾರೆ.

ವರ್ಧಂತಿಗಳು

ಕೆನರಾ ಹುಡುಗಿಯರ ಶಾಲೆಯ ವರ್ಧಂತ್ಯುತ್ಸವವು ಶ್ರೀಮತಿ ಎಂ. ಸರಸ್ವತಿ ಬಾಯಿ ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ರುಜಾರಿಯೋ ಸೆಕೆಂಡರಿ ಶಾಲೆಯ ವಾರ್ಷಿಕೋತ್ಸವವು ಉಡುಪಿ ಡಿ-ಮುನ್ಸೀಫರಾದ ಶ್ರೀ। ಡಿ. ನೊರೋಞ್ಞಾ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಜಿಲ್ಲೆಯ ಅತಿ ಪುರಾತನ ವಿದ್ಯಾಲಯಗಳಲ್ಲಿ ಒಂದಾದ ಆ ಶಾಲೆಯ ಪ್ರಗತಿಯ ಕುರಿತು ಮಾತಾಡಿದರು

ಬಿ. ಇ ಎಮ್. ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ದಿನಾಚರಣೆಯು ಡಾ। ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಜೆಪ್ಪು ಸೈಂಟ್ ಜೋಸ್ಸ್ ಹಾ. ಎ ಶಾಲೆಗಳ ವರ್ಧಂತಿ ಉತ್ಸವವು ಶ್ರೀ। ಜೆ. ಪಿ. ಡೇಗೋ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ದ್ರಾವಿಡ ಬ್ರಾಹ್ಮಣರ ವಿದ್ಯಾರ್ಥಿ ಭವನದ ದಿನಾಚರಣೆಯು ಡಾ ಪಿ ವೆಂಕಟಗಿರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಮುನ್ಸಿಪಾಲಿಟಿ

ಇದರ ಸಭೆಯೊಂದು ತಾ. ೧ರಂದು ಜರಗಿ, ಹೊಸ್ಗೆ ಬಜಾರಿನಲ್ಲಿ ಕೋಟೆಗಳಿಗೆ ಮನೆಕಟ್ಟಿಸಿ ಕೊಡಬಾರದೆಂದೂ, ಅದು ಅಸಾಧ್ಯವಾಗುವುದೆಂದೂ ಶ್ರೀ ಪಿ. ಡಿ. ಸೋಜರು ಆಕ್ಷೇಪ ತರಲು ಅದನ್ನು ಪರಿಶೀಲಿಸಲು ಒಂದು ಕಮಿಟಿ ನೇಮಕವಾಯಿತು ಕೊರೊನೇಶನ್ ಗ ರ್ಡನಿಗೆ ರೂ. ೭೦ ಸೆಂಕ್ಷನ್ ಆಯಿತು. ಗವರ್ನರರಿಗೆ ಮಾನಪತ್ರವು ಹೇಗಿರಬೇಕೆಂದು ಚರ್ಚಿಸಲಾಯಿತು.

ಸತ್ಕಾರ ಕೂಟ

'ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್'ನ ಮೇನೇಜಿಂಗ್ ಡೈರೆಕ್ಟರರ ಡಾ। ಟಿ. ಎಂ ಪೈಗಳವರಿಗೆ ಕಳೆದ ಶನಿವಾರ, ಆ ಬೇಂಕಿನ ಸ್ಥಳೀಯ ಪೆಲಿಕ್ಸ್‌ಪೈ ಬಜಾರಿನ ಶಾಖಾ ಕಟ್ಟಡದಲ್ಲಿ ಒಂದು ಸತ್ಕಾರ ಕೂಟವು ಜರಗಿತು. ಶ್ರೀ ಬಿ. ವೈಕುಂಠ ಬಾಳಿಗರು ಡಾ। ಎಂ. ಆರ್. ಭಟ್, ಮತ್ತು ಶ್ರೀ. ಎಸ್. ನರ್ಸಪ್ಪಯ್ಯ ಇವರು ಡಾ। ಪೈಗಳ ಗುಣಾತಿಶಯಗಳನ್ನು ಕೊಂಡಾಡಿದರು. ಹಲವು ಮಂದಿ ನಗರದ ಪ್ರಮುಖ ಗೃಹಸ್ಥರು ಬಂದಿದ್ದರು

ಹರಿಕಥೆ

ಇದೇ ತಿಂಗಳ ತಾ 5, 6 ಮತ್ತು 7ನೇ ದಿವಸಗಳಲ್ಲಿ ಸ್ಥಳೀಯ ಜೈಲ್‌ರೋಡ್ ಗೋವು ಆಸ್ಪತ್ರೆಯ ಬಳಿ, ಕೊಡಿಯಾಲಬೈಲು ಶ್ರೀಧರ ನಾಯ್ಕರವರು ತಾ. 5, 6ನೇ ಶುಕ್ರವಾರ, ಶನಿವಾರ ದಿವಸದಲ್ಲಿ 'ರಾಮ ಪರಂಧಾಮ' ಎಂಬ ಕಥೆಯನ್ನೂ, ತಾ. 7ನೇ ಆದಿತ್ಯವಾರ ದಿವಸ 'ಸತೀ ಅನುಸೂಯ' ಎಂಬ ಕಥೆಯನ್ನೂ ಮಲ್ಪೆ ಶಂಕರ ನಾರಾಯಣ ಸಾಮುಗರವರಿಂದ ತಾ 5ನೇ ಶುಕ್ರವಾರ ಸಂಜೆ ಗಂಟೆ 5ರಿಂದ 8ರ ತನಕವೂ ಬಾಕಿ ಎರಡು ದಿವಸಗಳಲ್ಲಿ ರಾತ್ರಿ 8ರಿಂದ (ಈಗಿನ) 11ರ ತನಕವೂ ನಡಿಸುವರು. ಹರಿಕಥಾಪ್ರೇಮಿಗಳು ದಯಮಾಡಿಸಿ, ಶ್ರೀ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಆರ್ಯ ಸಮಾಜ

ಮಂಗಳೂರು ಆರ್ಯ ಸಮಾಜದ ೩೩ನೇ ವಾರ್ಷಿಕೋತ್ಸವವು ತಾ. ೮ರಂದು ಶ್ರೀಯುತ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ವೈದಿಕ ಧ್ವಜಾರೋಹಣ, ಹವನ, ಭಜನ, ಈಶ್ವರೋಪಾಸನವೇದೋಪದೇಶ, ಅನಾಥ ಮಕ್ಕಳಿಗೆ ಮೃಷ್ಟಾನ್ನ ಭೋಜನಾದಿಗಳು ಜರೆಗಿ, ಅಪರಾಹ್ನ ಭಜನ ವರದಿ ವಾಚನ, ಋಷಿ ಬೋಧೋತ್ಸವದ ಕುರಿತು ಶ್ರೀಗಳಾದ ಆರ್. ಆರ್. ತಲ್ಪೇರಿಕರ್, ಕೆ. ಕೆ. ರೈ, ಬಿ. ಎಂ. ತಿಂಗಳಾಯ ಮತ್ತು ಶ್ರೀಮತಿ ಸೀತಾದೇವಿ ಇವರ ಭಾಷಣಗಳಾದುವು.

ಉಡುಪಿ

ಅಕ್ಕಿ ಡಿಪೋಗಳು

ಸಾಲಿಗ್ರಾಮ, ಹಂಗಾರಕಟ್ಟೆ, ಬ್ರಹ್ಮಾವರ ಕೇಂದ್ರಗಳಲ್ಲಿ ಬಡಬಗ್ಗರಿಗೆ ಸೇರಿಗೆ ೩ ಆಣೆ ದರದಲ್ಲಿ ಅಕ್ಕಿ ಒದಗಿಸಿಕೊಡುವ ಡಿಪೋಗಳು ತಾ. ೨೩ರಲ್ಲು ತೆರೆಯಲ್ಪಟ್ಟುವು.

ಪೆರ್ಡೂರು

ಶ್ರೀ ಅನಂತಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಯ ಕಟ್ಟೋಣದ ಸಹಾಯಾರ್ಥವಾಗಿ ಪೆರ್ಡೂರಿನಲ್ಲಿ ಇದೇ ತಿಂಗಳ ತಾ. 20 ನೇ ಶನಿವಾರ ರಾತ್ರಿ ಶ್ರೀ ಸಪುಕೂದು ಮತ್ತು ಪೆರ್ಡೂರು ದಶಾವತಾರ ಮೇಳಗಳ ಯಕ್ಷಗಾನ ಜೋಡಾಟ ನಡೆಯಲಿರುವುದರಿಂದ ಮಹಾಜನರ ಸಹಕಾರ ಅಪೇಕ್ಷಿಸಲಾಗಿದೆ.

ನೋಟೀಸು

ಉಡುಪಿ ಡಿ। ಮು। ಕೋರ್ಟಿನಲ್ಲಿ

O. P No 10/1943

1) ಎಸ್ ರಾಮರಾವ್ (ಅರ್ಜಿದಾರರ ಕುಟುಂಬದ ಯಜಮಾನನಾಗಿ), 2) ಎಸ್. ಶಿವರಾವ್, 3) ಎಸ್. ಮುರಾರಿರಾವ್—ಮ್ಯಾನರ್ಸರು, ರಕ್ಷಕಳು ತಾಯಿ 4ನೇ ಅರ್ಜಿದಾರಳು—ಎಸ್. ಶಂಕರನಾರಾಯಣ ರಾಯರ ಮಕ್ಕಳು. 4) ಗಿರಿಜಮ್ಮ—ಎಸ್. ಶಂಕರನಾರಾಯಣ ರಾಯರ ವಿಧವೆ—ಅರ್ಜಿದಾರರು

ಉಡ್ಪಿ ತಾಲೂಕು ಶಿರ್ವ ಗ್ರಾಮದಲ್ಲಿರುವವರು.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದರೆ

ಮೇಲ್ಕಂಡ ಅರ್ಜಿ ವ್ಯವಹರಣೆಯಲ್ಲಿ 1ರಿಂದ 3ರ ವರೆಗಿನ ಅರ್ಜಿದಾರರ ತಂದೆ ವ 4ನೇ ಅರ್ಜಿದಾರಳ ಗಂಡ ತಾ 16–12–42ರಲ್ಲು ಮೃತಪಟ್ಟ ಶಿರ್ವ ಶಂಕರನಾರಾಯಣ ರಾಯರಿಗೆ ಅರ್ಜಿಯಲ್ಲಿ ಕಾಣಿಸಿದಂತೆ ಮದ್ರಾಸ್ ಎಡ್ಯುಕೇಶನಲ್ ಡಿಪಾರ್ಟಮೆಂಟಿನಿಂದ ಶಿರ್ವ ಶ್ರೀ ಶಾರದಾ ಎಲಿಮೆಂಟರಿ ಶಾಲೆಯ ಬಾಬ್ತು ಒರತಕ್ಕ ಗ್ರೇಂಟ್ ಬಾಬಿನ ಐವಜನ್ನು ಮತ್ತು ಸದರ್ನ ಡೇಂಡ್ ಟ್ರಸ್ಟ್ ಲಿಮಿಟೆಡ್ ಮಂಗಳೂರು ಇದರಿಂದ ನಂಬ್ರ 840–6–12–42ನೇ ಡಿವಿಡೆಂಡ್ ವಾರಂಟು ಪ್ರಕಾರ ಶೇರ್ ಮತ್ತು ಡಿವಿಡೆಂಡ್ ಐವಜನ್ನು ಸಹಾ ವಸೂಲುಪಡಿಯುವರೆ ಅರ್ಜಿದಾರರೇ ಹಕ್ಕುದಾರರೆಂತಲೂ ಆ ಕುರಿತು ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಸಂಗ್ತಿಗಳನ್ನು ಕಾಣಿಸಿ ಅರ್ಜಿದಾರರು ದಾಖಲ್ಮಾಡಿರುವ ಮೇಲ್ಕಂಡ ಅರ್ಜಿಯು ತಾ. 15–3–1943ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಹೇಳಲುಳ್ಳವರು ಸದ್ರಿ ದಿವಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಹ್ಯಾಹೀರು ಮಾಡಿಕೊಳ್ಳತಕ್ಕದ್ದು

ಉಡುಪಿ 28–2–43 } P. V. Acharya. Vakil for Petitioner

ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ

O. S. 55/42 R I A. 75/43.

ದೇವಕಿ ಅಮ್ಮ . . ವಾದಿ.

ಲಕ್ಷ್ಮೀನಾರ್ಣಪ್ಪಯ್ಯ ಕೂಡಾ ಪ್ರತಿವಾದಿರು

ಸದ್ರಿ ವ್ಯಾಜ್ಯದ ೩ನೇ ಪ್ರತಿವಾದಿ ರಾಮಕೃಷ್ಣಯ್ಯಗೆ ಈ ಮೂಲಕ ತಿಳಿಸುವದೇನೆಂದ್ರೆ –

ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಳು ಫ್ಯಾನಲ್ ಡಿಕ್ರಿ ಬಗ್ಗೆ ದಾಖಲ್ಮಾಡಿದ ಮೇಲೆ ಕಾಣ್ಸಿದ ಅರ್ಜಿಯು ತನಿಕಿ ಬಗ್ಗೆ ತಾರೀಕು 9–3–43ಕ್ಕೆ ಇಟ್ಟಿದೆ. ಅದ್ರಿಂದ ಆದ್ರಲ್ಲಿ ನಿಮ್ಮ ಉದಾಹರಣೆಗಳು ಇದ್ರೆ ಆ ದಿನ 10 ಗಂಟೆಗೆ ಸರಿಯಾಗಿ ಸ್ವತಹ ಅಗ್ಲಿ ವ ವಕೀಲರ ಮುಖಾಂತ್ರವಾಗ್ಲಿ ಉದಹರಿಸತಕ್ಕದ್ದು, ತಪ್ಪಿದ್ರೆ ಏಕಪಾರ್ಟಿ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು ತಿಳಿದಿರಲಿ.

ಪುತ್ತೂರು 13-3-43 } C. S. Shastry Vakil for Petitioner

‘ತಮಿಳು ಸಾವಿತ್ರಿ’ಗೆ ಹೋಗಿದ್ದೀರಾ?

(—ಕಯ್ಯಾರ)

“ತಮಿಳು ಸಾವಿತ್ರಿಗೆ ಹೋಗಿದ್ದೀರಾ?” “ಹೌ ಹೌ, ತಮಿಳು ಭಾಷೆಯ ‘ಸಾವಿತ್ರಿ’ ಸಿನೆಮಕ್ಕೆ ಹೋಗಿದ್ದೇನೆ!” “ತಮಿಳು ಸಾವಿತ್ರಿ ಶಾಂತಾ ಆಪ್ಟೆಯ ವಿಷಯ ನಿಮ್ಮ ಅಭಿಪ್ರಾಯವೇನು?” “ಶಾಂತಾ ಆಪ್ಟೆಯ ವಿಷಯ ಅಭಿಪ್ರಾಯ ಕೊಡುವುದು ಅಷ್ಟೇನೂ ಸುಲಭ ಕೆಲಸವಲ್ಲ. ಆಕೆ ಅಖಿಲ ಭಾರತ ಪ್ರಸಿದ್ಧಳಾದ ನಟಿ. ಅಭಿನಯ, ಸಂಗೀತ, ಸೌಂದರ್ಯ ಎಲ್ಲದರಲ್ಲಿಯೂ ಪ್ರಥಮ ಪಂಕ್ತಿಗೆ ಸೇರಿದವಳು; ಹಾಗಿರುವಾಗ, ಆಕೆ ಚೆನ್ನಾಗಿ ಅಭಿನಯಿಸಲಿಲ್ಲ, ಚಸ್ನಾಗಿ ಹಾಡಲಿಲ್ಲ ಎಂದೆಲ್ಲಾ ನಾನು ಹೇಳಿದರೆ ಹೇಗಾದೀತು? ಆದರೂ ನನಗೇನೋ ಹೀಗೆ ತೋರುತ್ತದೆ. ಅನುಕೂಲನಲ್ಲದ ಗಂಡನು ದೊರಕಿದ ಹುಡುಗಿಯ ಜೀವನವನ್ನು ನಾವು ನೋಡುತ್ತೇವೆ. ‘ತಮಿಳು ಸತ್ಯವಾನ’ ವೈ. ವಿ. ರಾವ್, ‘ತಮಿಳು ಸಾವಿತ್ರಿ’ ಶಾಂತಾ ಆಪ್ಟೆಗೆ ಅನುಕೂಲ ನಾಯಕನಾಗಲಿಲ್ಲವಲ್ಲಾ ಎಂದು ಮರುಕವಾಗುತ್ತದೆ. ಶಾಂತಾ ಆಪ್ಟೆಯ ಅಪೂರ್ಣ ಅಭಿನಯ ಸಂಕುಚಿತ ಸಂಗೀತಗಳನ್ನು ನಾವು ತಮಿಳು ಸಾವಿತ್ರಿಯಲ್ಲಿ ಕಾಣಬಹುದು. ದಕ್ಷಿಣಾದಿಯಲ್ಲಿ ತೊಡಗಿ ಉತ್ತರಾದಿಯಲ್ಲಿ ಅಂತ್ಯಗೊಳಿಸುವಂತಿದ್ದರೂ ಸಂಗೀತ ಮಾಧುರ್ಯವೇನೋ ಮನವೋಹಿಸುತ್ತದೆ. ತಮಿಳು ವಾಕ್ಯಗಳನ್ನು ಆಕೆ ಬಾಯಿಪಾಠ ಮಾಡಿಕೊಂಡೇ ಹೇಳುತ್ತಾಳೆಂಬುದು ಸ್ಪಷ್ಟವಾಗುತ್ತದೆ. ಹೇಗಿದ್ದರೂ ಶಾಂತಾ ಆಪ್ಟೆಯು ‘ತಮಿಳು ಸಾವಿತ್ರಿ’ಯಾಗಿ ಅವತಾರವೆತ್ತಿ ಬಂದದ್ದೇ ಚಿತ್ರವು ಇಷ್ಟೊಂದು ಯಶಸ್ವಿಯಾಗಲು ಒಂದು ಕಾರಣವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.”

“ಚಿತ್ರದ ಯಶಸ್ವಿತೆಯ ವಿಷಯ ಹೇಳುತ್ತೀರಾ? ಆ ಸಂಗತಿಯೇ ಬೇರೆ. ‘ತಮಿಳು ಸಾವಿತ್ರಿ’ಯನ್ನು ರಥೋತ್ಸವದ ಸಮಯದಲ್ಲಿ ಪ್ರದರ್ಶಿಸಿದ್ದೆಂಬುದು ನೆನಪುಂಟೋ? ಆಗ ಎಷ್ಟು ಜನರು ಸಂಸಾರ ಸಮೇತ ಜಿಲ್ಲೆಯ ಮೂಲೆಗಳಿಂದ ಬರುವುದಿಲ್ಲ? ಅವರಿಗೆಲ್ಲಾ ನೋಡಲು ಒಳ್ಳೆಯ ಸಿನೆಮಗಳೇ ಆಗಬೇಕೇನು? ಎರಡನೆಯ ಮೂರನೆಯ ವಾರ ಪ್ರದರ್ಶಿಸಲ್ಪಡುವಾಗ, ತುಂಬ ಬೆಳದಿಂಗಳಿದ್ದು ಜನರಿಗೆ ರಾತ್ರಿ ಕಾಲದಲ್ಲಿಯೂ ಸಿನೆಮಕ್ಕೆ ತೊಂದರೆಯಿಲ್ಲದೆ ಹೋಗಲು ಅನುಕೂಲವಿತ್ತೆಂಬುದರಿಂದಲೂ ಹೆಚ್ಚು ಜನರು ಬರಲಾಯಿತೆಂಬುದನ್ನು ಗಮನಿಸಬೇಕು. ಪುರಾಣ ಪ್ರಸಿದ್ಧ ಪತಿವ್ರತೆಯಾದ ಸಾವಿತ್ರಿಯ ಕಥೆಯನ್ನು ಸಹಜವಾಗಿ ಹೆಂಗುಸರೇ ನೋಡಲು ಹೆಚ್ಚಾಗಿ ಬರತೊಡಗಿದ್ದದರಿಂದ ಅವರೊಡನೆ ಮಕ್ಕಳೂ ಅವರನ್ನು ಸಾಗಿಸಲು ಗಂಡಸರೂ ಬರಬೇಕಾಗುತ್ತದೆಂಬುದೂ ನಿನಗೆ ಗೊತ್ತೋ? ಇಪ್ಪತ್ತೈದು ದಿನ ಪ್ರದರ್ಶಿಸಲ್ಪಟ್ಟಿತೆಂದು ‘ರಜತೋತ್ಸವ’ ಮೊದಲಾದ ಉತ್ಸವಗಳನ್ನಾಚರಿಸಿ ಟಿಕೇಟು ಪಡಕೊಂಡವರಿಗೆಲ್ಲಾ ಮಿಠಾಯಿ ಕೊಟ್ಟರೆ, ಜನ ಮತ್ತೂ ಮತ್ತೂ ಬರದೇ ಇರುತ್ತಾರೇನು?”

“ಒಟ್ಟಿನಿಂದ ನೀವು ಹೇಳುವುದಾದರೂ ಏನು? ತಮಿಳು ಸಾವಿತ್ರಿ ನಿಮಗೆ ಮೆಚ್ಚಿಗೆ ಆಗಲಿಲ್ಲವೆಂದಲ್ಲವೆ? ನಾನಾದರೂ ಅದನ್ನು ಯಾವಾಗ ಕೊಂಡಾಡಿದೆ? ಆದರೆ ನೋಡಿ, ನಾನು ನೀವು ಮೆಚ್ಚದಿದ್ದರೂ ಸಾಮಾನ್ಯ ಜನರು ಮೆಚ್ಚಿದರಲ್ಲಾ; ಸಿನೆಮಾ ಪ್ರದರ್ಶಕರಿಗೆ ಹಾಗೂ ಉತ್ಪಾದಕರಿಗೆ ಬೇಕಾದದ್ದು ನನ್ನ ನಿಮ್ಮ ಮೆಚ್ಚಿಗೆಯೆ? ಸಾಮಾನ್ಯ ಜನರ ಪ್ರೋತ್ಸಾಹವೆ?” “ಹಾಗೆಂದರೆ ಸಾಮಾನ್ಯ ಜನರನ್ನು ಮರುಳುಗೊಳಿಸಿ ದುಡ್ಡು ಮಾಡುವುದೊಂದೇ ಸಿನೆಮಾದ ಉದ್ದೇಶವೇನು? ಚನ್ನಾಗಿ ಹಾಡಬಲ್ಲಳೆಂದು ಮಾತ್ರ ಸುಬ್ಬುಲಕ್ಷ್ಮಿಗೆ ನಾರದನ ಪಾತ್ರ ಕೊಡುವುದೇ! ನಾರದನ ಪಾತ್ರದಲ್ಲಿ ಏನಾದರೂ ಅಭಿನಯ ಚಾತುರ್ಯವಿತ್ತೆ? ಒಂದಿಷ್ಟಾದರೂ ಸಹಜತೆಯಿತ್ತೆ? ನೀರಿನಿಂದ ಮೇಲೆತ್ತಿ ಹಾಕಿದ ಮೀನಾಗಿದ್ದನು ಸುಬ್ಬುಲಕ್ಷ್ಮಿ ನಾರದ! ನಾರದನ ಪಾತ್ರ ವಹಿಸಿ ಸುಬ್ಬುಲಕ್ಷ್ಮಿ ಸಂಗೀತದ ಪ್ರವಾಹ ಹರಿಸಿದಂತೆ, ಯಾವುದೇ ನಾಯಕಿಯ ಪಾತ್ರವನ್ನು ಯಾರಾದರೂ ಗಂಡುಸು ವಹಿಸಿದರೆ, ಸಂಕೋಚವಿಲ್ಲದ ಶೃಂಗಾರ ಪ್ರದರ್ಶಿಸಿ ಸಾಮಾನ್ಯ ಜನರನ್ನು ಮರುಳುಗೊಳಿಸಲಾಗುವುದಿಲ್ಲವೇನು? ಹಾಗೆ ಮಾಡಿದರೂ ಸಿನೆಮಾ ಉತ್ಪಾದಕರೂ ಪ್ರದರ್ಶಕರೂ ಹೆಚ್ಚು ದುಡ್ಡು ಗಳಿಸಬಹುದಲ್ಲಾ?” ಇದೇನೋ ನಿಮ್ಮದು ಭಯಂಕರ ಸೂಚನೆ; ಅಂತೂ ನಾರದನ ಪಾತ್ರವನ್ನು ಸುಬ್ಬುಲಕ್ಷ್ಮಿ ವಹಿಸಿದ್ದು ಚನ್ನಾಗಿರಲಿಲ್ಲವೆಂಬುದನ್ನು ನಾನೂ ಒಪ್ಪುತ್ತೇನೆ. ‘ದಕ್ಷಿಣೋತ್ತರ ಸಂಗೀತ ತಾರೆಗಳ ಸಂಗಮ ಚನ್ನಾಗಿತ್ತಲ್ಲಾ?’ ‘ನಿಜವಾಗಿ ನೋಡಿದರೆ ಇಲ್ಲಿನ ಸಂಗೀತಕ್ಕೆ ಯಾರಾದರೂ ತಲೆದೂಗಲೇಬೇಕು.’ ‘ವನಮಾಲಿ, ಪಾತ್ರವಹಿಸಿದ ಸಾರಂಗಪಾಣಿಯ ಹಾಸ್ಯ ಹೇಗಿತ್ತು?’ ‘ನಾನವನಿಗೆ ತಮಿಳು ದೇಸಾಯಿ ಎಂದೇ ಹೆಸರಿಟ್ಟಿದ್ದೇನೆ.’

‘ಯಮನ ಕಂದ ಪದ್ಯ ಎಷ್ಟು ಚನ್ನಾಗಿತ್ತು, ಕೇಳಿದ್ದಿರಾ?’ ‘ಕಮ್ಯುನಿಸಂ ಪ್ರಭಾವ ಇದು; ಕಾರ್ಖಾನೆಗಳಲ್ಲಿಯೂ ರೇಡಿಯೋ ಸಂಗೀತ ಇಡಿಸಿದ್ದಾರೆ; ಕಷ್ಟಪಡುತ್ತಿದ್ದರೂ ಕೆಲಸಗಾರರಿಗೆ ಅದರ ಅರಿವಾಗದೆ ಆನಂದವಾಗಲೆಂದು! ಹಾಗಿರುವಾಗ ಯಮರಾಯನು ಸಂಗೀತ ಪ್ರದರ್ಶಿಸದಿದ್ದರೆ ಹೇಗೆ?’ ‘ದಕ್ಷಿಣ ಕನ್ನಡದ ಗಣಪತಿ ಭಟ್ಟರು ಯಮದೂತರಾಗಿದ್ದಾರಯ್ಯ.’ ‘ನಮ್ಮ ಜಿಲ್ಲೆಯವರ ಭಾಗ್ಯ, ಯಮಲೋಕದಲ್ಲಿ ‘ನಮ್ಮ ಜಿಲ್ಲೆಯವರಿಗೆ ಸ್ವಲ್ಪ ರಿಯಾಯತಿ ಸಿಕ್ಕಿಯೇ ಸಿಕ್ಕಿತು’

ಒಂದು ಸಂಜೆ ಬಾವುಟೆಗುಡ್ಡೆಯಲ್ಲಿ ಕುಳಿತು ಇಬ್ಬರು ತರುಣರು ಹೀಗೆ ತುದಿಮೊದಲಿಲ್ಲದ ಸಂವಾದದಲ್ಲಿ ತೊಡಗಿದ್ದರು.

ಚಂದ್ರಮೋಹನ್

ಸರ್ದಾರ್ ಅಖ್ತಾರ್

ಜತೆಯಾಟದ ಹೇಗೆ? ನಿಜವಾಗಿಯೂ ಅದು ಅನಿಮಿಷರು ಆಕಾಶದಲ್ಲಿ ಸೇರಿ ನೋಡತಕ್ಕಂಥಾ ದೃಶ್ಯ! ಪಜ್ಲಿ ಬ್ರದರ್ಸನವರ ‘ಫೇಶನ್’ ಚಿತ್ರದಲ್ಲಿ ಈ ಜತೆಯನ್ನು ಕಾಣಬಹುದು. ಈ ಚಿತ್ರ ತಯಾರಿಯಲ್ಲಿದೆ. ಈ ಕಂಪನಿಗೆ ಸೇರಿದ ಸಬಿತಾದೇವಿಯೂ ಇದರಲ್ಲಿ ನಟಿಸುವಳೆಂದು ಸುದ್ದಿಯಿದೆ. ಚಂದ್ರಮೋಹನನಿಗೊಪ್ಪುವ ನಾಯಕಿ ಸಬಿತಾ ಇರಲಿಕ್ಕಿಲ್ಲ, ಸರ್ದಾರ್ ಅಖ್ತಾರೇ ಆಗಿರಬೇಕು!

‘ವಿಜಯ ಲಕ್ಷ್ಮಿ’

ಎಂಬುದು ಬೊಂಬೇ ಟಾಕೀಸ್ ಪ್ರಸಿದ್ಧ ಶ್ರೀ ಕಶ್ಯಪರು ಇಂಡಿಯಾ ಆರ್ಟ್ ಪಿಕ್ಚರ್ಸ್ ಕಂಪನಿಗೆ ಸೇರಿ ತಯಾರಿಸುವ ಚಿತ್ರ. ಶೋಭನಾ ಸಮರ್ಥ ಮೊದಲಾದವರು ಇದರಲ್ಲಿ ನಟವರ್ಗದವರು.

ಕುಮ್ಮಿ ರಮೋಲಾ

‘ಖಜಾಂಚಿ’ ನೋಡಿದವರೆಲ್ಲರನ್ನು ಮರುಳುಗೊಳಿಸಿದ ಹುಚ್ಚು ಹುಡುಗಿ ರಮೋಲಾ! ಆಕೆಯ ಇತ್ತೀಚಿಯ ಅಭಿಯ ‘ಮಂಚಾಲಿ’ ಎಂಬ ಚಿತ್ರದಲ್ಲಿ. ಶಬ್ದಸಾ ದೃಶ್ಯದಿಂದ ಮಂಚಾಲಿ ಇದೂ ‘ಪಂಚೋಲಿ’ಯವರದೆಂದು ಭಾವಿಸಬೇಡಿ; ತಲ್ವಾರ್ ಪ್ರೊಡಕ್ಷನಿನವರ ಕೃತಿಯಿದು. ಮನೋರಮಾಳೂ ಇದರಲ್ಲಿ ಅಭಿನಯಿಸುತ್ತಾಳೆ. ಜ್ಯೋತಿ ಪ್ರಕಾಶ್, ರಾಮದುಲಾರಿ ಇವರೇ ಮೊದಲಾದವರು ಇತರ ನಟವರ್ಗ.

ಸ್ಥಳೀಯ ಸಿನೆಮಗಳು

ಸೆಂಟ್ರಲ್ ಟಾಕೀಸಿನಲ್ಲಿ ರಾಯಲ್ ಟಾಕೀಸಿನವರ ಸಾವಿತ್ರಿ ಮತ್ತು ಬಾಲಾಜಿ ಟಾಕೀಸಿನಲ್ಲಿ ಪ್ರಕಾಶ್ ಪಿಕ್ಚರ್ಸಿನವರ ಸ್ಟೇಶನ್ ಮಾಸ್ಟರ್ ಎಂಬೀ ಎರಡು ಉತ್ತಮ ಚಿತ್ರಗಳೀಗ ಪ್ರದರ್ಶಿತವಾಗುತ್ತಿವೆ. ‘ಸಾವಿತ್ರಿ’ಯಲ್ಲಿ ಶಾಂತಾ ಆಪ್ಟೆ, ವೈ. ವಿ. ರಾವ್, ಸುಬ್ಬುಲಕ್ಷ್ಮಿ ಮೊದಲಾದ ಪ್ರಸಿದ್ಧ ನಟನಟಿಯರೂ, ‘ಸ್ಟೇಶನ್ ಮಾಸ್ಟರ್’ನಲಿ ಪ್ರೇಮ ಅದೀಬ್, ರತ್ನಮಾಲಾ ಮೊದಲಾದ ವಿಖ್ಯಾತ ನಟನಟಿಯರೂ ಅಭಿನಯಿಸುತ್ತಾರೆ.

WANTED

Secondary Grade Trained Teacher for:

1. Belman St Joseph's H. E. School.
2. Chelur St. Thomas H. E. School.
3. Kallamundkur L. F. Ele. School, Niddodi.
4. Paduveri Holy Cross Ele. School, Byndoor.
5. Tenkabellore St. Michael's H. E. School.
6. Modankap H. E. School, Bantval.
7. Shirva Don. Bosco H. E. School.
8. Kolalgiri St. Xavier's H. E. School, Giri.
9. Brahmavar R. C. Girls' H. E. School.
10. Madantar Guardian Angels' H. E. School.

Higher Grade Trained Teachers for:

1. Iddya Sacred Heart Ele. School, Suratkal
2. Shirtadi Holy Angels' Ele. School.
3. Belman H. E. School.
4. Belman L. F. Ele. School.
5. Paduvery Holy Cross Ele. School, Byndoor.
6. Siddakatte St. Patrick's Ele. School.
7. Kukkepady St. Barthol Ele. School.
8. Chelur St. Thomas H. E. School.

Please apply to:–

Bishop's House, Mangalore, 25–2–'43. | **Rev. Fr. M. Pinto,** Secretary, Catholic Board of Education.

NOTICE

In the Court of the District Judge of South Kanara

O. P. No. 20/1943.

1. Keshavji Tulsidas Seth, 2. Dharamsee Vittaldas Seth, 3. Mathuradas Vittaldas Seth, 4. Haridas Vittaldas Seth......... *Petitioners.*

Notice is hereby given that the above Petitioners have applied to the above Court for the grant of a succession certificate to the 1st Petitioner to collect the debts due to Kalyanji Tulsidas Seth of Mangalore who died on 30-8-1942. Any person concerned desiring to oppose the application may appear in the above Court on 31-3-1943 at 10-30 A. M. and oppose the petition failing which the petition will be decided in their absence.

Mangalore, 1–3–1943. | **M. Keshava Pai,** Counsel for Petitioners.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 440/42.

ಗಂಗಾಧರ ಉಡ್ಪ— ವಾದಿ.

ಸೀತಾರಾಮ ಉಡ್ಪ ಸಹಾ— ಪ್ರತಿವಾದಿರು

2ನೇ ಪ್ರತಿವಾದಿ ನಾರಾಯಣ ಉಡ್ಪಯಾನೆ ಶಾಸ್ತ್ರಿ ಕೂಡ್ಲಿ ಸುಬ್ರಾಯ ಉಡ್ಪರ ಮಗ ನೇಪಾಳದಲ್ಲಿರುವವ.

2ನೇ ಪ್ರತಿವಾದಿಗೆ ಈ ಮೂಲ್ಕ ತಿಳಿಸುವದೇನಂದ್ರೆ:— ಮೇಲ್ಕಂಡ ದಾವೆಯಲ್ಲಿ ವಾದಿ ಪ್ರತಿವಾದಿರ ಕುಟುಂಬದ ಆಸ್ತಿಗಳಲ್ಲಿ ತನಗೆ ¼ ಅಂಶದ ಪಾಲು ಕೊಡಿಸಬೇಕೆಂತ ವಾದಿಯು ಮಾಡಿದ ದಾವೆಯು ತಾ. 25-3-43ಕ್ಕೆ ತನ್ನಿಗೆ ಇಡೋಣಾಗಿದೆಯದ್ದೆ, ಇದ್ರಲ್ಲಿ ನಿಮ್ಮ ಉದಾರ ಣೆಯಿದ್ರೆ ಸದ್ರಿ ತಾರೀಕಿನ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜ್ರಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದ್ರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ಮುಂದಿನ ತೀರ್ಮಾನವಾಗುವದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ.

24–2–43, Kundapur | Pleader for Plaintiff.

ನಂಬಿ ನಂಬಿ ತೆಗೆದು ಕೊಳ್ಳಲು



ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಲಾಪುರ.

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP.

(೧ನೇ ಪುಟದಿಂದ)

ಗಾಂಧಿಜಿಯ ಮಕ್ಕಳಿಬ್ಬರು, ದೇವದಾಸ ಮತ್ತು ರಾಮದಾಸ ಗಾಂಧಿಯವರು ಇರಬಹುದಂತೆ. ಗಾಂಧಿಜಿಯವರನ್ನು ಉಪಚರಿಸುತ್ತಿದ್ದ ಡಾ। ಬಿ. ಸಿ. ರಾಯ್‌ಯವರು ಬುಧವಾರ ಕಲ್ಕತ್ತೆಗೆ ಹೊರಡುವರು. ಈ ದಿನ ಶ್ರೀಗಳಾದ ಜಿ. ಡಿ. ಬಿರ್ಲಾ ರಾಜಾಜಿ, ದೇವದಾಸ ಮತ್ತು ಬಜಾಜರ ಮನೆಯವರು ಭೇಟಿಯಾದರು. ಆಹೆ ನಾಳೆ ಮಹಾತ್ಮರನ್ನು ಕಾಣುವರು. ಪ್ರೊ। ಬನ್ಸಾಲಿ ಮಹಾತ್ಮರನ್ನು ಕಾಣಲು ಹೊರಟಿದ್ದು, ಗಾಂಧಿಜಿಗೆ ಅಶಕ್ತಿಯಿರುವುದರಿಂದ ಅವರನ್ನು ಕಾಣಲು ಬರಬೇಡಿರೆಂದು ಹೇಳಿಕಳುಹಿಸಿದ್ದರಿಂದ ಅವರು ಬರುವುದಿಲ್ಲ.

ತಾ. ೩ರ ಪ್ರಕಟಣೆಯಂತಿದೆ: 'ಇಂದು ಮಹಾತ್ಮರ ಉಪವಾಸದ ಕೊನೆಯ ದಿನ. ನಾಳೆ ಮುಂಜಾನೆ ೯ ಗಂಟೆಗೆ ಅವರು ಪಾರಣೆ ಮಾಡುವರು. ಈ ದಿನ ಮಹಾತ್ಮರ ಪ್ರಕೃತಿಯಲ್ಲಿ ಏನೂ ಬದಲಾವಣೆಯಾಗಿಲ್ಲ. ಅವರು ಹಸನ್ಮುಖಿಗಳಾಗಿದ್ದಾರೆ. ಈ ದಿನ ಅವರ ಸಂದರ್ಶನಕ್ಕೆ ಉಪವಾಸ ಪ್ರಾರಂಭದಂದಿನಿಂದ ಬಂದದಕ್ಕಿಂತ ಹೆಚ್ಚು ಜನರು ಬಂದದ್ದರಿಂದ ಅವರಿಗೆಲ್ಲಾ ದರ್ಶನ ಮಾಡಿಸುವರೆ ಮಹಾತ್ಮರನ್ನು ಅವರ ಕೋಣೆಯಿಂದ ಅಂಗಳಕ್ಕೆ ಶುಶ್ರೂಷಾ ವಾಹನದ ಮೇಲಿರಿಸಿ ತರಲಾಯಿತು. ಸಂದರ್ಶಕರಲ್ಲಿ ಆಹೆ, ರಾಜಾಜಿ, ರಥೀಂದ್ರನಾಥ ಠಾಗೂರ್ ಹಾಗೂ ಅವರ ಮನೆಯವರು, ಮಿಸ್ ಗ್ಲಾಡಿಸ್ ಓವೆನ್, ಫಾದರಲ್ಯಾಕ್, ಠಕ್ಕರ್, ಪ್ರೊ। ತಾನ್ ಯೆನ್ ಶಾನ್ ಶ್ರೀಮತಿ ಮುನ್ಷಿ, ಲೇಡಿ ವಿಠ್ಠಲದಾಸ ಠಾಕರಸಿ ಮತ್ತು ಬಜಾಜ ಕುಟುಂಬದವರು ಮುಖ್ಯರು. ಹೆಚ್ಚಿನವರು ಇವರ ಸಂದರ್ಶನ ಸಮೂಹಕ್ಕೆ ಹೋದರು. ಆದರೆ ಆಹೆ ರಾಜಾಜಿಯವರು ೫ ನಿಮಿಷ ಮಾತನಾಡಿದರು. ನಾಳೆಯಿಂದ ಡಾಕ್ಟರರನ್ನುಳಿದು ಇನ್ನಾರನ್ನೂ ಬರಗೊಡುವುದಿಲ್ಲ. ಗಾಂಧಿಜಿ ಈ ದಿನ ತಮ್ಮ ಹೆಚ್ಚಿನ ಸಮಯವನ್ನು ಧ್ಯಾನದಲ್ಲಿಯೇ ಕಳೆಯುವರು. ಸಂದರ್ಶಕರನ್ನು ಉಲ್ಲಾಸದಿಂದ ಸ್ವಾಗತಿಸಿದರು. ನಿಂಬೆರಸವನ್ನು ಈ ದಿನ ಕಡಿಮೆ ತೆಗೆದುಕೊಂಡರು. ಗಾಂಧಿಜಿ ಉಪವಾಸದಲ್ಲಿ ಪ್ರತಿದಿನ ಸರಾಸರಿ ೩೦ ಔನ್ಸಿನಷ್ಟು ನಿಂಬೆರಸವನ್ನು ನೀರಿನಲ್ಲಿ ಸೇವಿಸುತ್ತಾರೆ. ಒಂದು ಔನ್ಸ್ ರಸದಲ್ಲಿ ಪೌಷ್ಟಿಕತ್ವ ೩೦ ಕ್ಯಾಲರಿಯಿರುವುದು. ಆದರೆ ದೇಹಕ್ಕೆ ಕನಿಷ್ಟ ೧೮೦೦ರಿಂದ ೨೦೦೦ ಕ್ಯಾಲರಿ ಬೇಕಾಗುವುದೆಂದು ಡಾಕ್ಟರರು ಅಭಿಪ್ರಾಯಪಡುತ್ತಾರೆ. ಬಿರ್ಲ ರಾಜಾಜಿಯವರು ಮುಂಬಯಿಗೆ ಹೋದರು. ಡಾ। ರಾಯರು ನಾಳೆ ಹೊರಡುತ್ತಾರೆ. ಆಗಾಖಾನ ಅರಮನೆಗೆ ಮೆರವಣಿಗೆ ತೆಗೆದ ಧಾರವಾಡ ಹೊದಲಾದ ಕಡೆಯ ಕೆಲವು ಕನ್ನಡಿಗರು ಬಂಧಿಸಲ್ಪಟ್ಟಿರುವರು.

ನಾಳೆ ೯ ಗಂಟೆಗೆ ಅವರು ಒಂದು ಗ್ಲಾಸಿನಷ್ಟು ಕಿತ್ತಳೆ ರಸ ಹಾಗೂ ಬಾಲಂಚಿಯಷ್ಟು ಗ್ಲುಕೋಸ್ ತೆಗೆದುಕೊಂಡು ಪಾರಣೆಮಾಡುವರು. ಹಿಂದಿನ ಪಾರಣೆಯಂತೆ ಈಗ ಅವರ ಹತ್ತಿರ ಹೊರಗಿನವರಿಗಾರಿಗೂ ಇರಲು ಅಪ್ಪಣೆಯಿಲ್ಲ. ಅವರ ಬಳಿ ಕಸ್ತೂರಿಬಾಯಿ, ಸರೋಜಿನಿ ದೇವಿ, ಸುಶೀಲಾ ನಾಯರ್, ಮೀರಾಬೆನ್, ಪ್ಯಾರೇಲಾಲ್ ಮತ್ತು ಡಾ। ಗಿಲ್ಡರ್ (ಇವರೊಬ್ಬರು ಯರವಾಡ ಸೆರೆಮನೆಯಿಂದ ವರ್ಗಾಯಿಸಲ್ಪಟ್ಟವರು) ಮಾತ್ರ ಇರುವರು. ಇವರಲ್ಲದೆ ಇವರ ಬಳಿ ಒಂದು ತಿಂಗಳ ತನಕ ಇರಲು ಅಪ್ಪಣೆ ದೊರೆತ ಕಾನೂ ಗಾಂಧಿ (ಮಹಾತ್ಮರ ಮೊಮ್ಮಗ) ಮಹಾದೇವ ದೇಸಾಯರ ಪತ್ನಿ ದುರ್ಗಾಬೆನ್, ಅವರ ಮಗ ನಾರಾಯಣ ದೇಸಾಯಿ ಇವರೂ ಹಾಜರಿರುವರು. ಮಹಾತ್ಮರ ಪುತ್ರರಿಬ್ಬರು (ರಾಮದಾಸ ಮತ್ತು ದೇವದಾಸ ಗಾಂಧಿ) ಪಾರಣೆ ಸಮಯ ಹಾಜರಿರುವುದಿಲ್ಲ. ಆದರೆ ಮತ್ತು ನಾಲ್ಕು ದಿವಸ ಅವರಿಗೆ ಪ್ರತಿದಿವಸ ಗಾಂಧಿಜಿಯವರ ಭೇಟಿಯಾಗಲು ಅಪ್ಪಣೆಯಿದೆ.

ತಾ. ೪ರಂದು ಮುಂಜಾನೆ ೯ ಗಂಟೆಗೆ ಗಾಂಧಿಜಿ ಪಾರಣೆ ಮಾಡಿ ಸುಖವಾಗಿ ಉಪವಾಸ ಕೊನೆಗಾಣಿಸಿದರೆಂಬ ಸಂತೋಷಜನಕ ವಾರ್ತೆ ಬಂದಿದೆ. ಇನ್ನು ಮುಂದೆ ಮಹಾತ್ಮರ ವಿಷಯ ಸರಕಾರವೇನೂ ಪ್ರಕಟಣೆ ಹೊರಡಿಸುವ ಹಾಗಿಲ್ಲ; ಸದ್ಯಕ್ಕೆ ಅವರ ಸುದ್ದಿ ನಮಗೆ ದೊರಕುವ ದಾರಿಯೂ ಇಲ್ಲ; ಆದರೆ ಮಹಾತ್ಮರು ಚಿರಾಯುಗಳಾಗಿ ಭಾರತದ ಬಂಧ ವಿಮೋಚನೆಗೋಸ್ಕರವೆಂದು ನಾವು ಭಗವಂತನೊಡನೆ ಪ್ರಾರ್ಥಿಸುವ.

The Canara Banking Corporation Ltd.

(Incorporated in British India)

Head Office: UDIPI

Estd. 1906.

Applications are invited for the posts of Agents and Accountants in the Corporation to serve in branches outside the District. Selected candidates will have to undergo a probationery course as per rules. Graduates or persons with previous banking experience or who have passed Banking Examinations will be preferred. Persons who have not passed atleast the S. S. L. C. or other equivalent exminations need not apply.

Applications stating age, qualifications, etc. together with 2 good references must reach the undersigned before the 15th February 1943.

Udipi, 21-1-1943. **V. R. KAMATH**, B. A., LL. B., *Manager*.

GREETINGS.

The Directors, Officers and staff of the CANARA BANK, LIMITED, join in sending you this message of appreciatiom for your goodwill and patronage during the last year. We sincerely wish you a HAPPY AND PROSPEROUS NEW YEAR.

CANARA BANK, LIMITED.

ESTD: 1906.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.
2. ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು.
3. ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು.
4. ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು.
5. 28 ರಾತ್ತಲಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.
6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: | ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಸರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD. 1931

HEAD OFFICE: Mangalore. ***BRANCHES:*** Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಬಚ್ಚನ ವೃದ್ಧಾಪ್ಯದ ಮತ್ತು ಸವಿೂಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತನೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು   ಕಲ್ಲಿಕೋಟೆ   ಸೇಲಂ   ತಿರುವಾಂಕೂರು   ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited'

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷ್ಟೋ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮಂಗಾರ ಗಲ್ಲಿ ಹುಬ್ಬಳ್ಳಿ.
2. 86 ಫ್ಯಾಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 12—3—1943 [ಸಂಚಿಕೆ 8]

ಮಹಾತ್ಮರ ಪಾರಣೆ ಮತ್ತು ಅನಂತರ

ಸರಕಾರೀ ಪ್ರಕಟಣೆ ಹಾಗೂ ಅಧಿಕೃತ ಸುದ್ದಿಗಳು

ಮಾರ್ಚ್ ಮೂರನೆಯ ತಾರೀಕಿನಂದು ಸ್ಟೇಂಡಾರ್ಡ್ ಗಂಟೆ ೯-೩೪ಕ್ಕೆ ಮಹಾತ್ಮಾ ಗಾಂಧಿಜಿಯವರು ತಮ್ಮ ಇಪ್ಪತ್ತೊಂದು ದಿನಗಳ ಮಹೋಪವಾಸವನ್ನು ನೀರು ಮಿಶ್ರಿತ ಕಿತ್ತಳೆ ಹಣ್ಣಿನ ರಸ ಸೇವಿಸಿ ಕೊನೆಗಾಣಿಸಿದರು. ಕಳೆದ ಇಪ್ಪತ್ತೊಂದು ದಿನಗಳಲ್ಲಿಯೂ ಅವರ ಜತೆಯಲ್ಲಿದ್ದ ಎಲ್ಲಾ ಡಾಕ್ಟರರು ಮತ್ತು ಆಗಾಖಾನ ಬಂಗ್ಲೆಯಲ್ಲಿ ಸ್ಥಾನಬದ್ಧರಾಗಿರುವವರು ಮಾತ್ರ ಆ ಸಮಯದಲ್ಲಿ ಹಾಜರಿದ್ದರು.

ಪಾರಣೆಯ ವಿಧಿಯು ಸಣ್ಣದಾಗಿದ್ದರೂ ಬಹಳ ಚಿತ್ತಾಕರ್ಷಕವಿತ್ತು. ಅದರಲ್ಲಿ ಒಂದು ವಿಧದ ಶ್ರದ್ಧೆ ಮತ್ತು ಗಾಂಭೀರ್ಯಗಳಿದ್ದುವು. ಪಾರಣೆಯ ಮೊದಲು ಗಾಂಧಿಜಿ, ಮಂಚದ ಮೇಲೊರಗಿದ್ದಂತೆಯೇ ಧ್ಯಾನಮಗ್ನರಾಗಿದ್ದರು. ಆ ದಿನ ಮೊದಲು ಆಗಾಖಾನ ಬಂಗ್ಲೆಗೆ ಬಂದವರು ಡಾ| ಬಿ. ಸಿ. ರೈಗಳು. ಆ ಮೇಲೆ ಎಲ್ಲಾ ಡಾಕ್ಟರರೂ ಬಂದರು. ಅಲ್ಲಿನವರು ಮಹಾತ್ಮರ ಪ್ರೀತಿಯ ಹಾಡಾದ 'ವೈಷ್ಣವ ಜನತೊ' ವನ್ನೂ ರವೀಂದ್ರರ 'ಗೀತಾಂಜಲಿ'ಯಿಂದ ಕೆಲವು ಗೀತೆಗಳನ್ನೂ ಹಾಡಿದರು. ಕೀರ್ತನಾ ಪುಸ್ತಕದಿಂದ ಕೆಲವು ಭಕ್ತಿ ಪದಗಳನ್ನೂ, ಕೂರಾನ್‌ನ ಕೆಲವು ಭಾಗಗಳನ್ನೂ ಪಠಿಸಿದರು. ಆ ಮೇಲೆ ಪ್ರಾರ್ಥನೆ ಮುಗಿಯಲು ಅಲ್ಲಿದ್ದವರೆಲ್ಲರೂ ಐದು ನಿಮಿಷ ಮೌನ ಆಚರಿಸಿದರು. ಮಹಾತ್ಮರು ಕೈಜೋಡಿಸಿಕೊಂಡು ಧ್ಯಾನಮಗ್ನರಾಗಿದ್ದರು. ಅನಂತರ ಶ್ರೀಮತಿ ಕಸ್ತೂರಿ ಬಾರವರು ಆರು ಔನ್ಸ್ ಕಿತ್ತಳೆ ರಸವಿರುವ ಪಾತ್ರವನ್ನು ಗಾಂಧಿಜಿಯ ಕೈಗಿತ್ತರು. ಇಷ್ಟನ್ನು ಕುಡಿಯಬೇಕಾದರೆ, ಗಾಂಧಿಜಿ ಇಪ್ಪತ್ತು ನಿಮಿಷ ತೆಗೆದರು. ಈ ಪಾರಣೆಯ ಪಾನೀಯವನ್ನು ತುಟಿಗಿಡುವ ಮೊದಲು ಗಾಂಧಿಜಿ ಕ್ಷೀಣ ಸ್ವರದಿಂದ ಎಲ್ಲಾ ಡಾಕ್ಟರರಿಗೂ ತನ್ನನ್ನು ಅಷ್ಟು ಲಕ್ಷ್ಯವಿಟ್ಟು, ಜಾಗ್ರತೆಯಿಂದ ಶುಶ್ರೂಷಿಸಿದ್ದಕ್ಕಾಗಿ ತಮ್ಮ ಕೃತಜ್ಞತೆ ಸಮರ್ಪಿಸಿದರು. ಎಲ್ಲದಕ್ಕಿಂತಲೂ ಮೇಲಾಗಿ, ಅವರಿಗೆ ತನ್ನ ಮೇಲಿದ್ದ ಪ್ರೀತಿಯಿಂದಾಗಿ ತಾನು ಬದುಕಿದೆನೆಂದರು.

ಹೀಗೆ ಗಾಂಧಿಜಿ ಪಾರಣೆ ಮಾಡುವ ಸಮಯ, ಅಲ್ಲಿಗೆ ಶ್ರೀಮತಿ ಸರೋಜಿನಿ ದೇವಿಯರು ಓಡಿಬಂದು ಡಾಕ್ಟರರಿಗೆಲ್ಲಾ ಕಿತ್ತಳೆ ರಸವನ್ನು ಕುಡಿಯಲು ಕೊಟ್ಟರು. 'ಇನ್ನೊಂದು ಲೋಟಾ ಕುಡಿಯಿರಿ' ಎಂಬ ಅವರ ಮಾತಿನ ಸದ್ದೊಂದಲ್ಲದೆ, ಆ ಕೋಣೆ ಪೂರ್ಣ ಮೌನಮುದ್ರೆಯಿಂದಿತ್ತು! ಕೆಲವು ಡಾಕ್ಟರರು ಮತ್ತು ಆ ಸೆರೆಮನೆಯ ಸುಪರಿಂಟೆಂಡೆಂಟರು ವಿದೇಶೀ ಉಡುಪಿನಲ್ಲಿದ್ದುದರಿಂದ ಕುರ್ಚಿಗಳ ಮೇಲೆ ಕುಳಿತಿದ್ದರಲ್ಲದೆ, ಮಿಕ್ಕವರೆಲ್ಲರೂ ಕೆಳಗೆ ಜಮಖಾನದಲ್ಲಿ ಕುಳಿತುಕೊಂಡಿದ್ದರು. ಡಾ| ಗಿಲ್ಡರರನ್ನು ಗಾಂಧಿಜಿಯವರ ಬಳಿ ಉಳಕೊಳ್ಳಲು ಸರಕಾರವು ಅನುಮತಿಯಿತ್ತಿದೆ, ಗಾಂಧಿಜಿಯ ಮೈಯಲ್ಲಿ ಆಯಾಸ ಮತ್ತು ನಿತ್ರಾಣದ ಸೂಚನೆಯಿದ್ದರೂ ಉಲ್ಲಸಿತರಿದ್ದಾರೆ.

ಇಷ್ಟರ ತನಕವೂ ಹೊರಗೆ ಕಾಯುತ್ತಿದ್ದ ಪತ್ರಿಕಾ ಪ್ರತಿನಿಧಿಗಳು, ಉಪವಾಸ ಮುಗಿಸಿದ ಮೇಲೆ ಅಲ್ಲಿಂದ ಹೊರಬಂದ ಡಾ| ಬಿ. ಸಿ. ರೈಯವರನ್ನು ಮುತ್ತಿಗೆ ಹಾಕಿದರು. 'ಶಿಶುವಿನಂತೆ ಮಹಾತ್ಮರನ್ನು ಈಗ ಉಪಚರಿಸಬೇಕು' ಎಂದು ಡಾ| ರೈಗಳು ಹೇಳಿದರು.

ಮಹಾತ್ಮರು ಉಪವಾಸ ತೊಡಗುವ ಮುನ್ನ ಏನೇನು ನಿರ್ಬಂಧಗಳೆಲ್ಲಾ ಇದ್ದವೂ, ಉಪವಾಸ ತೀರಿಸಿದ ಬಳಿಕವೂ ಅವೆಲ್ಲಾ ನಿರ್ಬಂಧಗಳನ್ನು ಸರಕಾರವು ಹೇರಿದೆ. ಆದರೆ ವೈದ್ಯಕೀಯ ಶುಶ್ರೂಷೆಯ ಮಟ್ಟಿಗೆ ಸ್ವಲ್ಪ ರಿಯಾಯತಿ ಇಡಲಾಗಿದೆ. ಭೇಟಿ ಮೊದಲಾದುವುಗಳೆಲ್ಲಾ ಇನ್ನು ಮುಂದೆ ಸಿಗುವುದಿಲ್ಲ. ಹೀಗಾದ್ದರಿಂದ ಕೊನೆಯ ದಿನವಾದ ತಾ. ೨ರಂದು ವಿಶೇಷ ಸಂದರ್ಶಕರು ಬಂದಿದ್ದರು. ಎಲ್ಲರಿಗೂ ಮಹಾತ್ಮರ ದರ್ಶನ ಮಾಡಿಸಲಾಗಿತ್ತು. ರಾಜಾಜಿ ಮತ್ತು ಆಣೆಯವರು ಮಹಾತ್ಮರ ಹಾಸಿಗೆ ಬಳಿ ಕುಳಿತು ಕೆಲಕಾಲ ಮಾತನಾಡಿದ್ದರು. ಕೊನೆಯ ದಿನವಾದರೂ ಮಹಾತ್ಮರನ್ನು ನೋಡಲು ನಮಗೆ ಅನುಮತಿ ಕೊಡಬೇಕು, ಅಥವಾ ಅವರು ಉಪವಾಸ ವ್ರತವನ್ನು ಕೊನೆಗೊಳಿಸುವಾಗಲಾದರೂ ನಮ್ಮನ್ನು ಒಳಬಿಡಬೇಕೆಂದು ದೇಶವಿದೇಶಗಳ ಪತ್ರಿಕಾ ಪ್ರತಿನಿಧಿಗಳು ವಿನಂತಿಸಿಕೊಂಡರೂ ಸರಕಾರವು ಅವರ ವಿನಂತಿಯನ್ನು ಮನ್ನಿಸಲೇ ಇಲ್ಲ. ಪೂನಾದಲ್ಲಿದ್ದ ಅಮೆರಿಕನ್ ಬಾತ್ಮಿದಾರರು ಕೂಡಾ ಗವರ್ನರರಿಗೆ ತಂತಿ ಕಳುಹಿ ಕೇಳಿಕೊಂಡರೂ, ಅವರಿಗೂ ಸಮ್ಮತಿ ಸಿಗಲಿಲ್ಲ.

ಮಹಾತ್ಮರು ಕೈಕೊಂಡ ಉಪವಾಸಗಳಲ್ಲಿ ಇದು ೧೭ನೆಯದು. ಮಹೋಪವಾಸಗಳಲ್ಲಿ ಇದು ಐದನೆಯದು. ಪೂನಾದಲ್ಲಿಯೇ ಅವರು ಹಿಂದೆ ಎರಡು ಸಲ ಉಪವಾಸ ಹಿಡಿದಿದ್ದರು. ಆದರೆ ಕಳೆದ ಉಪವಾಸ ಕಾಲದಲ್ಲಿ ಜನತೆಯಾಗಲಿ, ಡಾಕ್ಟರರಾಗಲಿ ಇಷ್ಟೊಂದು ವ್ಯಗ್ರರಾಗಿರಲಿಲ್ಲ. 'ಗಾಂಧಿಜಿ ಮೃತ್ಯುವಿನ ಬಾಯಿ ವರೆಗೆ ಹೋಗಿದ್ದರು' ಎಂದು ಡಾ| ಬಿ. ಸಿ. ರೈಯವರು ಹೇಳಿದರು. ಈ ಸಲ ಅವರಿಗೆ ಪುನಃ ಶಕ್ತಿ ಕೂಡಲು ಹತ್ತು ವಾರ ಬೇಕಾದೀತು! ೧೯೩೨ರ ಉಪವಾಸದಲ್ಲಿ ಚೇತನಗೊಳ್ಳಲು ಆರು ವಾರ ಹಿಡಿದಿತ್ತು!

ಮಹಾತ್ಮರ ಉಪವಾಸ ಕಾಲದಲ್ಲಿ ಪೂನಕ್ಕೆ ಬಂದಷ್ಟು ತಂತಿ ಟಪ್ಪಾಲುಗಳು ಅದರ ಇತಿಹಾಸದಲ್ಲೇ ಬಂದಿರಲಿಲ್ಲ. ಉಪವಾಸವು ಸುಖದಿಂದ ಕೊನೆಗಾಣಲೆಂದು ಪ್ರಾರ್ಥಿಸಿ, ಅದನ್ನು ಬಿಡಬೇಕೆಂದು ವಿನಂತಿಸಿ ಅನೇಕ ತಂತಿ ಪತ್ರಗಳು ಬಂದಿದ್ದವು. ಗಾಂಧಿಜಿ ಅವನ್ನೆಲ್ಲಾ ನೋಡಿದ್ದಾರೋ ಇಲ್ಲವೋ ಸಂದೇಹವಿದೆ. ಮಹಾತ್ಮರ ಶುಶ್ರೂಷೆ ವಿಷಯ ಡಾಕ್ಟರರಿಗೆ ಅನೇಕರಿಂದ ಸಲಹೆಗಳು ಬಂದಿದ್ದವು. ದಕ್ಷಿಣ ಪ್ರಾಂತದಿಂದ ಒಬ್ಬರು ಒಂದು ಕಟ್ಟು ವಿಭೂತಿಯನ್ನು ಕಳುಹಿಸಿ, ಅದನ್ನು ದಯಮಾಡಿ ಗಾಂಧಿಜಿಗೆ ಹಚ್ಚಬೇಕೆಂದು ಬೇಡಿಕೊಂಡಿದ್ದರು.

ಗಾಂಧಿಜಿ ಉಪವಾಸ ಮುಗಿಸಿದರೆಂದ ಸುದ್ದಿ ಕೇಳಿದ ಕೂಡಲೆ ಪೂನ ರೈಲ್ವೆ ಸ್ಟೇಶನಿನ ಎದುರಿಗಿರುವ ಮೊರಾರ್ಜಿ ಗೋಕುಲದಾಸ್ ಧರ್ಮಶಾಲೆಯ ಬಳಿ, ಗಾಂಧಿಜಿಯವರ ಬಂಧುಬಳಗದವರು, ಮಿತ್ರ ವರ್ಗದವರು, ಅವರ ಆರಾಧಕರು ಸೇರಿ ಬೃಹತ್ ಸಭೆಯೊಂದನ್ನು ಸೇರಿಸಿ, ದೇವರನ್ನು ಕೊಂಡಾಡಿದರು. ಈ ಸಭೆಗೆ ಬಂದವರಲ್ಲಿ ಮುಖ್ಯರು ಶಾಂತಿನಿಕೇತನದ ಪ್ರೊಫೆಸರ್ ತಾನ್‌ಯಾನ್‌ಶಾನ್, ಮತ್ತು ಅವರ ಪತ್ನಿ, ಆಣೆ, ಥಕ್ಕರ್, ಮೆಸೆಕಿಸ್, ಅಲೆಕ್ಸಾಂಡರ್, ರಾಮದಾಸ ಗಾಂಧಿ, ದೇವದಾಸ ಗಾಂಧಿ, ಬಿ. ಎಫ್. ಬರೂಛಾ, ಕಮಲನಯನ ಬಜಾಜ್, ಶ್ರೀಮತಿ ಶಾಂತಾ ಕುಮಾರಿ ಮೊರಾರ್ಜಿ, ಲೇಡಿ ವಿಠ್ಠಲ್‌ದಾಸ್ ಥಾಕರ್‌ಸೇ, ಶ್ರೀಮತಿ ಸರಲಾ ದೇವಿ ಚೌಧರಾಣಿ (ಮಹಾತ್ಮರ ಎಂಭತ್ತು ವರ್ಷ ಪ್ರಾಯದ ಸೋದರಿ) ಶ್ರೀಮತಿ ಜಾನಕಿ ಬಜಾಜ್ ಮತ್ತು ಕುಮಾರಿ ಅಬ್ಬಾಸ್ ಸಲಾಮ್ ಮೊದಲಾದವರು.

ಈ ಸಭೆಯು ಒಂದು ಹಳೆ ಅಶ್ವತ್ಥಮರದ ಅಡಿಯ ಕಟ್ಟೆಯಲ್ಲಿ ಕೂಡಿತು. ಗಾಂಧಿಜಿಯವರ ಒಂದು ಭಾವಚಿತ್ರವನ್ನು ಆ ಕಟ್ಟೆಯಲ್ಲಿಟ್ಟಿದ್ದರು; ಅದರ ಮೇಲೆ ಸಣ್ಣ ತ್ರಿವರ್ಣ ರಂಜಿತ ಧ್ವಜ ಹಾರುತ್ತಿತ್ತು. ಎರಡು ನಿಮಿಷಗಳ ಮೌನ ಮುದ್ರೆಯೊಡನೆ ಪ್ರಾರ್ಥನೆ ಪ್ರಾರಂಭವಾಯಿತು. ಸೇವಾ ಗ್ರಾಮ ಆಶ್ರಮದ ಪಂಡಿತ ಶಾನವಡಿಯವರು ಗೀತೆಯಿಂದ ಶ್ಲೋಕವನ್ನು ಪಠಿಸಿ ಪ್ರಾರ್ಥನೆ ಪ್ರಾರಂಭಿಸಿದರು. ಸೇವಾಗ್ರಾಮದ ಮುಸ್ಲಿಮ್ ಆಶ್ರಮವಾಸಿನಿ ಕುಮಾರಿ ಅಬ್ಬಾಸ್ ಸಲಾಮ್ ಕೊರಾನಿನಿಂದ ಕೆಲ ಪದ್ಯ ಹಾಡಿದರು. ಶ್ರೀ. ಹೊರೆಸ್ ಅಲೆಕ್ಸಾಂಡರ್ ಬೈಬಲಿನಿಂದ ಕೆಲವು ಪಂಕ್ತಿ ಓದಿದರು. ಶ್ರೀ. ಆಣೆಯವರು, ತಾವೇ ಸ್ವತಃ ರಚಿಸಿ ನಿನ್ನೆ ಗಾಂಧಿಜಿಯವರ ಹಸ್ತ ಕೊಟ್ಟಿದ್ದ ಸಂಸ್ಕೃತ ಶ್ಲೋಕಗಳನ್ನು ಓದಿದರು. ಶ್ರೀ. ಥಕ್ಕರ್ ಗುಜರಾಥಿಯಲ್ಲಿ ಪ್ರಾರ್ಥನೆ ನಡೆಸಿದರು. ಶ್ರೀ. ಬಿ. ಎಫ್. ಬರೂಛಾರವರು ಜೆಂಡ್ ಅವೆಸ್ತಾದಿಂದ ಪಂಕ್ತಿ ಓದಿದರು. ಶ್ರೀಮತಿ ಸರಳಾದೇವಿ ಚೌಧರಾಣಿಯವರು 'ಗೀತಾಂಜಲಿ'ಯಿಂದ ಕೆಲವು ಪಂಕ್ತಿ ಓದಿದರು. ಚೀನದ ವಿದ್ವಾಂಸರು, ಕೈಮುಗಿಯುತ್ತಾ ಚೀನ ಭಾಷೆಯಲ್ಲಿ ಪ್ರಾರ್ಥನೆ ಮಾಡಿದರು. ಆ ಪ್ರಾರ್ಥನೆಯು ಗಾಂಧಿಜಿಯವರ ಪ್ರಿಯ ಗೀತೆಗಳಾದ "ವೈಷ್ಣವ ಜನತೋ" ಮತ್ತು "ರಘುಪತಿ ರಾಘವ ರಾಜಾರಾಮ್" ಹಾಡುಗಳಿಂದ ಕೊನೆಗೊಂಡಿತು.

ಇದೇ ರೀತಿ ದಿಲ್ಲಿ, ಕಾಶಿ, ಕರಾಚಿ, ಮುಂಬಯಿ, ಮದ್ರಾಸು ಮೊದಲಾದ ಭಾರತದ ಎಲ್ಲಾ ಕಡೆಗಳಲ್ಲಿಯೂ ಪ್ರಾರ್ಥನೆಗಳಾದುವಲ್ಲದೆ, ಲಂಡನಿನಲ್ಲಿಯೂ ಪ್ರಾರ್ಥನೆ ಸಭೆಗಳು ಜರಗಿದವು. ಲಂಡನಿನ ಇಂಡಿಯಾ ಲೀಗಿನ ಆಶ್ರಯದಲ್ಲಿ ಈ ಸಂಬಂಧ ಸಭೆ ಜರಗಿ, ಗಾಂಧಿಜಿಯ ಉಪವಾಸದ ಯಶಸ್ವೀ ಅಂತ್ಯಕ್ಕಾಗಿ ದೇವರನ್ನು ಪ್ರಾರ್ಥಿಸಿದ್ದಲ್ಲದೆ, ಸರಕಾರದ ನೀತಿಯನ್ನು ಖಂಡಿಸಲಾಯಿತು. ಪಾರ್ಲಿಮೆಂಟ್ ಸದಸ್ಯರಾದ ಶ್ರೀ. ಎಲೆಕ್ಸ್ ಸ್ಲೋನ್, ಶ್ರೀ. ಎಚ್. ಎಚ್. ಎಲ್ವಿನ್, ಲಾರ್ಡ್ ಸ್ಟ್ರಬಗೋಲಿ, ರೆವೆರೆಂಡ್ ಗೂಡಾಲ್ ಮೊದಲಾದವರು ಮಹಾತ್ಮರ ಬಿಡುಗಡೆ ವಿಷಯ ಸಮರ್ಥಿಸಿ ಸರಕಾರದ ಧೋರಣವನ್ನು ಖಂಡಿಸಿದರು. ಚೀನ ಅಮೆರಿಕೆಗಳಿಂದಲೂ ಗಾಂಧಿಜಿ ಉಪವಾಸದ ಯಶಸ್ವಿತೆಗಾಗಿ ಆನಂದೋದ್ಗಾರಗಳು ಕೇಳಿಬರುತ್ತಿವೆ.

ಸರಕಾರವು, ಗಾಂಧಿಜಿ ಆರೋಗ್ಯದ ವಿಚಾರದಲ್ಲಿ ತಾ. ೪ರಂದು ಒಂದು ಪ್ರಕಟಣೆ ಹೊರಡಿಸಿ, ಗಾಂಧಿಜಿ ಉಪವಾಸ ಮುಗಿಸಿದ ಬಳಿಕ, ಕಿತ್ತಳೆರಸ, ಜೇನು, ನೀರುಗಳನ್ನು ಸೇವಿಸಿದರು. ನಿದ್ರೆ ಬಂದಿದೆ; ಉಲ್ಲಾಸದಿಂದಿದ್ದಾರೆ ಎಂದು ತಿಳಿಸಿದೆ. ತಾ. ೫ರಂದೂ ಒಂದು ಪ್ರಕಟಣೆಯಿತ್ತು. ಅದರಲ್ಲಿ 'ಗಾಂಧಿಜಿ ಪರಿಸ್ಥಿತಿ ತೃಪ್ತಿಕರವಿದೆ, ಅವರು ಉಲ್ಲಸಿತರಾಗಿದ್ದಾರೆ' ಎಂದು ಹೇಳಿದೆ. ತಾ. ೫ಕ್ಕೆ ಉಪವಾಸ ಮುಗಿಸಿ ಮೂರು ದಿನಗಳಾದುವು. ಕಳೆದ ಎರಡು ದಿನಗಳಲ್ಲಿ ಕೊಟ್ಟ ಪೋಷಕ ಆಹಾರಗಳಿಂದ ಅವರಿಗೆ ಶಕ್ತಿ ಬಂದಿರುವುದೆಂದು ತಿಳಿದಿದೆ. ಇಂದು ಅವರು ನಿತ್ಯದಂತೆ ಕಿತ್ತಳೆಹಣ್ಣಿನ ರಸ ತೆಗೆದುಕೊಂಡದ್ದು ಮಾತ್ರವಲ್ಲದೆ ಒಂದು ಕಿತ್ತಳೆ ಹಣ್ಣನ್ನೂ ತಿಂದರು. ಅಲ್ಲದೆ ಪಾರಣೆ ಮಾಡಿದಂದಿನಿಂದ, ಇಂದೇ ಮೊದಲಾಗಿ ಆಡಿನ ಹಾಲು ಕುಡಿದರು. ದೇವದಾಸ ಗಾಂಧಿ ಈ ದಿನ ಪುನಃ ಮಹಾತ್ಮರ ಭೇಟಿಯಾಗಿ ಕೆಲ ನಿಮಿಷ ಅವರ ಹತ್ತಿರ ಇದ್ದರು. ತಾ. ೬ರ ಸರಕಾರೀ ಪ್ರಕಟಣೆ ಹೀಗೆ ಸಾರುತ್ತದೆ: 'ನಿನ್ನೆ ದಿನ ಗಾಂಧಿಜಿ ಆಡಿನ ಹಾಲು ಹಾಗೂ ಹಣ್ಣಿನ ರಸ ಮಾತ್ರ ತೆಗೆದುಕೊಂಡರು. ಕಿತ್ತಳೆ ಹಣ್ಣಿನ ತೊಳೆಗಳನ್ನೂ ತಿಂದರು. ಅವರ ಪ್ರಕೃತಿ ಸಮಾಧಾನವಿದೆ. ಈ ವರದಿಯನ್ನು ಅನುಲಕ್ಷಿಸಿ, ಮಹಾತ್ಮರ ಪ್ರಕೃತಿಯ ವಿಷಯ ಪ್ರಕಟಣೆ ಹೊರಡಿಸುವುದು ಅವಶ್ಯ ಕಂಡುಬಂದರೆ ಮಾತ್ರ ಇನ್ನು ಮುಂದೆ ಪ್ರಕಟಣೆ ಹೊರಡಿಸಲಾಗುವುದು' ಎಂದು ತಿಳಿಸಲಾಗಿದೆ. ಎಂದರೆ ಇದೇ ಸದ್ಯಕ್ಕೆ ಮಹಾತ್ಮರ ಕುರಿತು ಸರಕಾರದ ಕೊನೆಯ ಪ್ರಕಟಣೆಯೆಂದು ನಾವು ಅರ್ಥಮಾಡಿಕೊಳ್ಳಬೇಕು.

ಧನ್ಯವಾದಾರ್ಪಣೆ

ಶ್ರೀಗಳಾದ ಆಣೆ, ರಾಜಾಜಿ, ಕೇಳ್ಕರ್, ಹೊರೇಸ್, ಅಲೆಕ್ಸಾಂಡರ್, ಪ್ರೊ. ತಾನ್ ಯಾನ್ ಶಾನ್; ಶ್ರೀಯುತ ಥಕ್ಕರ್ ಮತ್ತು ಶ್ರೀಮತಿಗಳಾದ ಜಾನಕೀ ಬಜಾಜ್, ಲೇಡಿ ವಿಠ್ಠಲ್‌ದಾಸ್, ಥಾಕರ್‌ಸೇ ಇವರು ಸಹಿ ಹಾಕಿ, ಗಾಂಧಿಜಿಯವರು ಬದುಕಿ ಉಳಿದ ವಿಷಯ ದೇವರಿಗೆ ಧನ್ಯವಾದಾರ್ಪಣೆ ಮಾಡುವ ಬಗ್ಗೆ ತಾ. ೭ರಂದು ಅಖಿಲ ಭಾರತದಲ್ಲಿ ಧನ್ಯವಾದಾರ್ಪಣೆಯ ದಿನವಾಗಿ ಆಚರಿಸಬೇಕೆಂದು ವಿನಂತಿ ಹೊರಡಿಸಿದರು. ವೈಸರಾಯ್ ಮಂತ್ರಿಮಂಡಳ ಮಂದಿತರಾದ ಶ್ರೀ. ಜ್ವಾಲಾ ಪ್ರಸಾದ ಶ್ರೀವಾಸ್ತವರೂ ಒಂದು ಪ್ರಕಟಣೆ ಹೊರಡಿಸಿ, ಮಹಾತ್ಮಾಜಿಯವರ ಪ್ರಾಣವುಳಿಸಿದ ದೇವರನ್ನು 'ನಾವೆಲ್ಲರೂ ಕೊಂಡಾಡಬೇಕೆಂದು' ಬಿನ್ನವಿಸಿಕೊಂಡಿದ್ದಾರೆ. ಈ ಪ್ರಕಾರ ಅಖಿಲ ಭಾರತದಲ್ಲಿ; ಈ ದಿನವು ಆಚರಿಸಲ್ಪಟ್ಟಿತು.

"ಮಹಾತ್ಮರ ಬದಲು ನಾನು ಸಾಯುತ್ತೇನೆ"

ನಾಗಪುರದ ಚಾಂದಾ ಜಿಲ್ಲೆಯ ಓರ್ವ ವೃದ್ಧ ಸಾಧುವು, ಮಹಾತ್ಮರು ಉಪವಾಸದಿಂದ ಮರಣೋನ್ಮುಖರಾಗಿದ್ದಾರೆಂದು ಸುದ್ದಿ ಬಂದಾಗ, ಗಾಂಧಿಜಿಯವರ ಸಲುವಾಗಿ ನಿಧನ ಹೊಂದಿದರೆಂದು ವಾರ್ತೆ ಬಂದಿದೆ. "ನನ್ನ ಪ್ರಾಣವನ್ನು ಗಾಂಧಿಜಿಗೆ ಕೊಟ್ಟಿದ್ದೇನೆ. ಮಹಾತ್ಮಾಜಿ ಇನ್ನು ಸಾಯುವುದಿಲ್ಲ" ಎಂದು ಆ ಸಾಧುವು ನಿಧನ ಹೊಂದುವಾಗ ಪತ್ರ ಬರೆದಿದ್ದು, ಆ ಪತ್ರವು ಅಲ್ಲಿನ ಮುಂದಾಳುಗಳೊಬ್ಬರ ವಶವಿರುವುದೆಂದು ತಿಳಿದುಬರುವುದು.

ಮಹಾತ್ಮರು

ಮನೋಬಲದಿಂದಲೇ ಬದುಕಿದರು!

ನಿತ್ಯ ಧ್ಯಾನವಾಗ್ನರಾಗಿದ್ದರು

'ದೇವರ ಕೆಲಸ ಇನ್ನೂ ಉಳಿದಿದೆ'

ಗಾಂಧೀಜಿ ಮೂರು ವಾರಗಳ ಉಪವಾಸ ದೀಕ್ಷೆಯಿಂದ ಹೇಗೆ ಪಾರಾದರೆಂಬ ವಿಷಯವಾಗಿ ಈ ಅವಧಿಯಲ್ಲಿ ಅವರ ಬಳಿಯಲ್ಲೇ ಇದ್ದ ಡಾ. ಬಿ. ಸಿ. ರ್‍ಯಾಯವರು ಒಂದು ಪ್ರಕಟಣೆಯಿತ್ತು ವಿವರಿಸಿ ಹೇಳಿದ್ದಾರೆ. ಅದರ ಸಾರಾಂಶವಿಂತಿದೆ:—

"ದಿನ ಒಂದಕ್ಕೆ ೪೦ರಿಂದ ೬೦ ಔನ್ಸುಗಳಷ್ಟು ನೀರಿಗೆ ನಿಂಬೆಯ ಸರಾಸರಿ ನಾಲ್ಕು ಯಾ ಐದು ಔನ್ಸ್ ರಸ ಸೇರಿಸಿ ಗಾಂಧಿಯವರು ಕುಡಿಯುತ್ತಿದ್ದರು. ಇಷ್ಟು ರಸ ಕುಡಿದರೂ ಉಪವಾಸವು ಕಠಿಣವಾಗುತ್ತಲೇ ಇತ್ತು. ಏಕೆಂದರೆ—ಯಾವ ಕೆಲಸವನ್ನೂ ಮಾಡದೆ ಸಂಪೂರ್ಣ ವಿರಾಮದಲ್ಲಿರುವ ಮನುಷ್ಯನಿಗಾದರೂ, ಅವನು ಬದುಕಿರಬೇಕಾದರೆ ಅವನ ಶರೀರಕ್ಕೆ ಸಾಮಾನ್ಯವಾಗಿ ೨೦೦೦ ಕೆಲೊರೀಸ್ ಬೇಕು. ಒಂದು ಔನ್ಸ್ ನಿಂಬೆ ರಸವೆಂದರೆ ೨೦ ಕೆಲೊರೀಸ್ ಮಾತ್ರ. ಕೆಲವು ದಿನಗಳಲ್ಲಿ ಗಾಂಧಿಯವರು ನಾಲ್ಕು ಔನ್ಸ್ ಪ್ರಕಾರ ಈ ರಸವನ್ನು ಕುಡಿದುದುಂಟು, ಇನ್ನು ಕೆಲವು ದಿನಗಳಲ್ಲಿ—ಅಂದರೆ ಬೇಕಾದಷ್ಟು ನೀರು ಕುಡಿಯಲು ಅವರು ಶಕ್ತರಿದ್ದ ದಿನಗಳಲ್ಲಿ—ಒಂದು ತಟಕು ರಸವನ್ನಾದರೂ ಕುಡಿಯದಿದ್ದುದುಂಟು. ಕಳೆದ ಸೋಮವಾರ ದಿನ ಅವರು ೨೦ ಔನ್ಸ್ ರಸ ಸ್ವೀಕರಿಸಿದ್ದರು. ಆ ದಿನವೆಂದರೆ ಅವರ ಸ್ಥಿತಿ ವಿಷಮತೆಗೆ ಬಂದ ಮರುದಿನವಾಗಿದೆ. ತಾನು ಸಾಯಲು ಇಚ್ಛೆ ಪಡುವುದಿಲ್ಲ—ಎಂದು ಅವರು ಮುಂಚಿತವಾಗಿಯೇ ಸ್ಪಷ್ಟಪಡಿಸಿದ್ದರಷ್ಟೆ? ಹೀಗಾಗಿ ಅವರು ೨೦ ಔನ್ಸಿನಷ್ಟು ರಸವನ್ನು ಡಾಕ್ಟರರ ಒತ್ತಾಯದಿಂದಾಗಿ ಸೇವಿಸಿದ್ದಾಗಿದೆ. ಈ ೨೦ ಔನ್ಸ್ ರಸವು ೪೦೦ ಕೆಲೊರೀಸ್ ಮಾತ್ರ, ಅಂದರೆ ಸುಮ್ಮನೆ ಬಿದ್ದುಕೊಂಡಿದ್ದ ಮನುಷ್ಯನಿಗೆ ಅತ್ಯಗತ್ಯ ಬೇಕಾಗುವ ಕೆಲೊರೀಸ್‌ಗಳ ಐದರಲ್ಲಿ ಒಂದು ಪಾಲು! ಮನುಷ್ಯನು ನಿರಾಹಾರನಿರುವಾಗ ಅವನ ಅಂಗಭಾಗಗಳ ಅಣುಗಳ ರಚನೆ (tissues)ಯು ನಾಶವಾಗುತ್ತಿದೆ ಮತ್ತು ಅವನ್ನು ಪುನಃ ಹುಟ್ಟಿಸಲಿಕ್ಕೆ ೪೦೦ ಕೆಲೊರೀಸ್ ಸಾಲದು. ಆದ ಕಾರಣ, ಫೆಬ್ರವರಿ ತಾ. ೨೨ರಲ್ಲಿ ಗಾಂಧಿಯವರು ೨೦ ಔನ್ಸ್ ರಸ ಕುಡಿದರೂ ಅವರು ಉಪವಾಸವೇ ಇದ್ದರೆನ್ನಬೇಕು.

"ಮಾನವ ದೇಹಕ್ಕೆ ದಿನಕ್ಕೆ ೫೦ ಯಾ ೬೦ ಔನ್ಸುಗಳಷ್ಟು ನೀರು ಬೇಕು. ಇಷ್ಟು ನೀರು ಕುಡಿಯಲು ಶಕ್ತರಾಗುವಂತೆಯೂ, ಓಕರಿಕೆಯನ್ನು ತಡೆಯಲಿಕ್ಕಾಗಿಯೂ ಗಾಂಧಿಯವರು ನಿಂಬೆ ರಸವನ್ನು ಅದಕ್ಕೆ ಸೇರಿಸುತ್ತಿದ್ದರು. ಈ ಹುಳಿ ಹಣ್ಣಿನಲ್ಲಿ ಓಕರಿಕೆಯನ್ನು ನಿರ್ಬಂಧಿಸತಕ್ಕ ಕೆಲವು ಉಪ್ಪು ಪದಾರ್ಥಗಳಿವೆ. ಆಯಾಯ ದಿನದ ಪರಿಸ್ಥಿತಿಯನ್ನು ಅನುಸರಿಸಿ ಗಾಂಧಿಯವರು ಈ ರಸವನ್ನು ಹೆಚ್ಚುಕಡಿಮೆ ಮಾಡಿಕೊಳ್ಳುತ್ತಿದ್ದರು.

"ಇಂತಹ ಉಪವಾಸ ದೀಕ್ಷೆಯಿಂದಾಗಿ ಗಾಂಧಿಯವರ ಆರೋಗ್ಯಕ್ಕೆ ಶಾಶ್ವತವಾದ ಅಪಾಯ ಉಂಟಾದೀತೇ—ಎಂಬ ಪ್ರಶ್ನೆ ಕುರಿತು ಈಗಿಂದಾಗಿ ಉತ್ತರ ಹೇಳಲು ನಾನು ಶಕ್ತನಲ್ಲ. ಅದು ನಿಶ್ಚಯವಾಗಿ ತಿಳಿಯಬೇಕಾದ್ದರೆ ಉಪವಾಸ ಕೊನೆಗೊಂಡ ನಂತರ ಅವರ ರಕ್ತವನ್ನು ಪರೀಕ್ಷಿಸಬೇಕು. ಪರಂತು ಅವರ ಮೂತ್ರಪಿಂಡ(Kidneys)ಗಳೂ ಕಲಿಜ (liver)ವೂ ಹಾನಿಗೊಂಡಿವೆಯೆಂಬುದನ್ನು ನಾನು ಒಪ್ಪುತ್ತೇನೆ.

"ಗಾಂಧಿಯವರಿಗೆ ಗುಪ್ತವಾಗಿ 'ಗ್ಲುಕೋಸ್' ಕೊಟ್ಟಿತ್ತೆಂದು ಬೊಂಬಾಯಿ ಡಾಕ್ಟರರೊಬ್ಬರು ಆರೋಪ ಹೊರಿಸಿದ್ದಾರೆ; ಅದು ತೀರ ಅಬದ್ಧವಾಗಿದೆ. ಗಾಂಧಿಜಿಯವರಲ್ಲಿ ಈ ಮೋಸ ನಡೆಯದು, ಅವರ ತಿಳುವಳಿಕೆಗೆ ಬಾರದೆ ಅದನ್ನು ಕೊಡಲು ಸಾಧ್ಯವೇ ಇಲ್ಲ. ನಮ್ಮ ವೈದ್ಯಕೀಯ ಪಾಂಡಿತ್ಯ ಕೂಡ ಗಾಂಧಿಜಿಯವರಲ್ಲಿ ಸಾಗದು. ಗಾಂಧಿಜಿಯವರು ಉಪವಾಸವನ್ನು ಮತ್ತೂ ಮುಂದರಿಸುವ ಪಕ್ಷದಲ್ಲಿ ಅವರ ಜೀವಕ್ಕೆ ಅಪಾಯ ಸಂಭವಿಸದೆ ಇರಲಾರದೆಂದು ಆಗಾಖಾನ ಅರಮನೆಯ ಡಾಕ್ಟರರೆಲ್ಲರೂ ಇದೇ ಉಪವಾಸ ಸಮಯ ಅಭಿಪ್ರಾಯ ಪಟ್ಟಿದ್ದರು; ಆದರೆ ಕೇವಲ ಅವರ ಮನೋಬಲದಿಂದಲೇ ಅವರು ಈ ಗಂಡಾಂತರವನ್ನು ದಾಟಿ ನಮ್ಮ ಮಾತನ್ನು ಸುಳ್ಳಾಗಿಸಿ ಬಿಟ್ಟರು!

"ಅವರು ಈಗ ತುಂಬಾ ನಿಶ್ಶಕ್ತರಿದ್ದು ಅವರ ಮೈಭಾರ ನೋಡಲು ಸಾಧ್ಯವಿಲ್ಲದಾಗಿದೆ. ಕಳೆದ ಶುಕ್ರವಾರದಿಂದ ಅವರ ಮೈತೂಕ ನೋಡಿಲ್ಲ.

'ಪರಮಾತ್ಮನು ಈ ಸಲ ನನ್ನನ್ನೇಕೆ ಪಾರು ಮಾಡಿದನೋ ನನಗೆ ತಿಳಿಯದಾಗಿದೆ; ಬಹುಶಃ ನಾನು ಇನ್ನೂ ಆತನ ಅಪ್ಪಣೆಯನ್ನು ಪೂರೈಸಬೇಕಾಗಿದೆಯೆಂದು ತೋರುತ್ತದೆ' ಹೀಗೆ ಗಾಂಧಿಜಿ ಉಪವಾಸ ಕೊನೆಗೊಳಿಸಿದ ಕೂಡಲೇ ಈ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರೆಂದು, ಕಲ್ಕತ್ತದಲ್ಲಿ ಗಾಂಧಿಜಿ ಉಪವಾಸ ಮುಕ್ತಾಯದ ಬಗ್ಗೆ ಅಭಿನಂದನೆ ಸಲ್ಲಿಸಲು ಸೇರಿದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಭೆಯಲ್ಲಿ ಡಾ| ಬಿಧನ್ ಚಂದ್ರರಾಯ್‌ಯವರು ಹೇಳಿದರು. ಡಾ| ರ್‍ಯಾಯವರು ಗಾಂಧಿಜಿಯವರ ಉಪವಾಸದ ಕುರಿತು ಮಾತನಾಡುತ್ತಾ, ಆದಿಯಿಂದ ಅಂತ್ಯದವರೆಗೆ ಈ ಉಪವಾಸವನ್ನು ಪರೀಕ್ಷಿಸಿದರೆ, ಇದೊಂದು ಧಾರ್ಮಿಕ ತಪಸ್ಸೆಂದು ಹೇಳಿದರು. ಅವರ ತಪಸ್ಸಿನ ಅವಧಿ ಕೇವಲ ಇಪ್ಪತ್ತೊಂದು ದಿನ ಮಾತ್ರ ಇದ್ದುದರಿಂದ, ೧೯೩೨ರಲ್ಲಿ ಸಾರಿದಂತೆ ಮರಣಾಂತ ಉಪವಾಸ ಮಾಡದೆ ಶಕ್ತ್ಯಾನುಸಾರದ ತಪಸ್ಸು ಮಾಡಿದರೆಂದರು. ಗಾಂಧಿಜಿಯವರು ಪ್ರಾರ್ಥನೆಯಿಂದ ಉಪವಾಸವನ್ನು ಪ್ರಾರಂಭಿಸಿ, ಪ್ರಾರ್ಥನೆಯಿಂದ ಅದನ್ನು ಕೊನೆಗೊಳಿಸಿದರೆಂದು ತಿಳಿಸುತ್ತಾ, ಅವರು ಈ ಅವಧಿಯಲ್ಲಿ ಪರಮಾತ್ಮನಲ್ಲಿ ತಲ್ಲೀನರಾಗಿದ್ದರೆಂದರು. 'ಗಾಂಧಿಜಿಯವರ ಉಪವಾಸವನ್ನು ನೋಡಿದ್ದು ಪ್ರತ್ಯಕ್ಷ ಯಜ್ಞವನ್ನು ಕಂಡಂತಾಗಿದೆ. ಅವರು ಮೃತ್ಯುವಿನೊಡನೆ ಹೋರಾಡುತ್ತಿದ್ದರು. ಪರಮಾತ್ಮನಲ್ಲಿ ಸದಾ ಲೀನರಾದ ಅವರ ಮುಂದೆ ಪ್ರತ್ಯಕ್ಷ ಭಗವಂತನೇ ಬಂದು ನಿಂತಿರುವನೋ ಎಂಬ ಭಾವನೆ ತೋರುತಿತ್ತು. ಪರಮಾತ್ಮನು ನಮ್ಮೆಲ್ಲರ ಸಲುವಾಗಿ ಮಹಾತ್ಮರನ್ನು ಉಳಿಸಿದನು' ಎಂದರು. ಉಪವಾಸದ ಮೂಲಕ ಮೈಯಲ್ಲಿ ಹೆಚ್ಚುತ್ತಿದ್ದ ಹೊಲಸನ್ನು ಹೊರಹಾಕಲು ಅವರು ಹುಳಿರಸವನ್ನು ಸೇವಿಸುತ್ತಿದ್ದರೆಂದು ಡಾ| ರ್‍ಯಾ ಹೇಳಿದರು. ತಾವು ಮೂರ್ಛೆಹೊಂದಿದರೆ ತಮಗೇನಾದರೂ ಮದ್ದು ಕೊಡಬಾರದೆಂದು ಗಾಂಧಿಜಿ ಮೊದಲೇ ಡಾಕ್ಟರರಿಗೆ ವಿಧಿಸಿದ್ದರೆಂದೂ ಅದನ್ನು ತಾವು ಅಕ್ಷರಶಃ ಪಾಲಿಸಿರುವುದಾಗಿಯೂ ಅವರು ತಿಳಿಸಿದರು.

ಮಹಾತ್ಮರ ಪುತ್ರ ದೇವದಾಸ ಗಾಂಧಿಯವರು ಒಂದು ಪ್ರಕಟಣೆಯಲ್ಲಿ ಹೀಗೆನ್ನುತ್ತಾರೆ: 'ನಾನು ಮತ್ತು ನನ್ನ ಸಹೋದರನು ತಾ. ೬ರಂದು ಮಹಾತ್ಮರ ಸಂದರ್ಶನವನ್ನು ಮಾಡಿ ಅವರ ಅಪ್ಪಣೆ ತೆಗೆದುಕೊಂಡೆವು. ಅವರ ಉಪವಾಸ ಮುಗಿದಂದಿನಿಂದ ಪ್ರತಿ ದಿನ ೧½ ತಾಸು ನಾವವರ ಬಳಿ ಇದ್ದೆವು. ಶುಕ್ರವಾರ ದಿನ ನಾನು ಗಾಂಧಿಜಿಯವರೊಡನೆ ಕೆಲ ತಾಸು ಇದ್ದೆನೆಂದು ಪ್ರಕಟವಾದದ್ದು ಸರಿಯಲ್ಲ. ಇನ್ನು ಕೆಲ ದಿನ ನನಗೆ ಅವರನ್ನು ನೋಡುವ ಭಾಗ್ಯ ದೊರೆಯಲಿಕ್ಕಿಲ್ಲ... ... ಹೋಗುವುದರಿಂದ ತಾಯಿಗೆ ಸಮಾಧಾನವಾಗುತ್ತದೆ. ಏಕೆಂದರೆ ನಮ್ಮ ತಾಯಿ ಈಗ ದಿನ ದಿನಕ್ಕೆ ದೇಹ ಹಾಗೂ ಮನಸ್ಸಿನಿಂದ ಕ್ಷೀಣರಾಗುತ್ತಿದ್ದಾರೆ. ಮಹಾತ್ಮರ ಪ್ರಕೃತಿ ಸುಧಾರಿಸುತ್ತಿದೆ; ಅವರು ಹಾಸಿಗೆಯಿಂದ ಏಳಬೇಕಾದರೆ ಇನ್ನೂ ೧೫ ದಿನಗಳು ಬೇಕಾಗಬಹುದು. ಉಪವಾಸದ ಪರಿಣಾಮವೇನೆಂದು ನಾನೀಗ ಹೇಳಬಯಸುವುದಿಲ್ಲ; ಕಾಲಕ್ರಮದಲ್ಲಿ ಅದು ತಾನಾಗಿಯೇ ಗೊತ್ತಾದೀತು. ಆದರೆ ಆ ಕುರಿತು ಕೆಲವು ದಂತಕಥೆಗಳಿವೆ. ನಾನಿಲ್ಲಿ ಎರಡರ ಕುರಿತು ಹೇಳುತ್ತೇನೆ. ಪತ್ರಿಕೆಗಳಲ್ಲಿ ಸುದ್ದಿ ಬಂದಿತ್ತು, ಗಾಂಧಿಜಿಗೆ ಉಪವಾಸ ಕಾಲದಲ್ಲಿ ಬಹಳ ಪತ್ರಗಳೂ ತಂತಿಗಳೂ ಬಂದಿದ್ದವೆಂದು. ಆದರೆ ಆಗಾಖಾನ ಬಂಗ್ಲೆಗೆ ಒಂದೂ ಬಂದಿರಲ್ಲ. ಇನ್ನೊಂದು, ಗಾಂಧಿಜಿ ನಿಂಬೆ ತೆಗೆದುಕೊಂಡ ವಿಷಯ. ಒಬ್ಬ ವಿದೇಶೀಯ ವಾರ್ತಾದಾರ ಕೇಳಿದ, ಏನು ಗ್ಲುಕೋಸ್ ಸೇರಿಸಿ ಕೊಡಲಾಗಿದೆಯೆ! ಎಂದು. 'ನಿಂಬೆ' ಎಂಬ ಶಬ್ದದಿಂದ ಈ ಗಲಾಟೆ ಹುಟ್ಟಿದ್ದು. ಗಾಂಧಿಜಿ ಸೇವಿಸಿದ್ದು ಮೂಸಂಬಿ ರಸವನ್ನು. ಓಕರಿಕೆ ಬಂದು ಯಾವುದೂ ಗಂಟಲಲ್ಲಿ ಇಳಿಯದಾದಾಗ ಅವರ ಇಚ್ಛೆಯಂತೆ ಅಲ್ಪಪರಿಮಾಣ ಇದನ್ನು ನೀರಲ್ಲಿ ಬೆರಸಿ ಕೊಡಲಾಗಿದೆ, ಉಪವಾಸ ಕಾಲದಲ್ಲಿ ಅವರು ಪ್ರತಿದಿನ ೬ ಔನ್ಸಿಗಿಂತ ಕಡಿಮೆ ರಸವನ್ನು ೬೦ ಔನ್ಸು ನೀರಿನಲ್ಲಿ ಬೆರಸಿ ಸೇವಿಸುತ್ತಿದ್ದರು.

ನಂಬಿ ನಂಬಿ ತೆಗೆದು ಕೊಳ್ಳಲು



ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಲಾಪುರ.

ಎರಡು ದಿನಗಳ ಘೋರ ಕಾಳಗದ ನಂತರ ರಶ್ಯನ್ ಸೇನೆಗಳು, ವೈರಿವ್ಯೂಹವನ್ನು ಭೇದಿಸಿ ಮಧ್ಯ ರಣಭೂಮಿಯಲ್ಲಿ ಅವರ ಮಹತ್ವದ ಕೇಂದ್ರ ಸ್ಥಳವಾದ ಸಿಶೇವ್ಕಾ ನಗರವನ್ನು ವಶಪಡಿಸಿಕೊಂಡವು. ಇದು ವ್ಯಾಝ್ಮಾ ನಗರದ ಉತ್ತರಕ್ಕಿದೆ. ಇಲ್ಲಿ ವೈರಿಗಳ ಅನೇಕ ಜನ, ಧನ, ವಸ್ತು ಸಂಗ್ರಹಗಳನ್ನೂ ಕೈಸೆರೆ ಹಿಡಿಯಲಾಗಿದೆ. ವ್ಯಾಝ್ಮಾ ಮತ್ತು ಬ್ರಿಯಾನಸ್ಕ ನಗರಗಳನ್ನು ರಶ್ಯನರು ಎರಡು ಕಡೆಗಳಿಂದಲೂ ಸುತ್ತುಗಟ್ಟಿದ್ದಾರೆ. ಫಾಟಸ್ಕ ನಗರದ ಪಶ್ಚಿಮದಲ್ಲಿ ರಶ್ಯನರು ೩೦ ಮೈಲುಗಳ ವಿಸ್ತಾರವಾದ ಧಾಳಿಯಿಟ್ಟು ೨೪ ತಾಸುಗಳಲ್ಲಿ ಮತ್ತೆ ೧೦೦ ಸ್ಥಳಗಳನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ವ್ಯಾಝ್ಮಾ ನಗರಕ್ಕೆ ಹೊರಗಿನ ಸಂಬಂಧ ಈಗ ಕಡಿದು ಹೋಗಿರುವುದರಿಂದ, ಜರ್ಮನರು ಈಗಾಗಲೇ ಆ ನಗರವನ್ನು ಖಾಲಿಮಾಡಿರುವರೆಂದು ಹೇಳಲಾಗುತ್ತದೆ. ಒರೆಲಿನ ವಾಯುವ್ಯಕ್ಕೂ ರಶ್ಯನರ ಒತ್ತಾಟವು ಜೋರಾಗಿದೆ. ಡೊನೆಟ್ಜ್ ಯುದ್ಧವು ಸದ್ಯಕ್ಕೆ ತಣ್ಣಗಾದಂತೆ ಕಂಡುಬರುವುದು. ಉತ್ತರದಲ್ಲಿ ಟಿಮುಶಂಕೋ ಸೈನ್ಯವು ಕಷ್ಟದಿಂದ ಸ್ಟಾರಯಾರೂಸಾದ ಕಡೆ ಮುನ್ನುಗ್ಗುತ್ತಿದೆ. ಇಲ್ಲಿ ಜರ್ಮನರ ವ್ಯೂಹ ಭದ್ರವಾಗಿದೆ. ಘೊಟಸ್ಕಾ ನಗರವನ್ನು ರಶ್ಯನ್ ಸೇನೆಯು ಸಾಹಸದಿಂದ ಭೇದಿಸಿ ಒಳನುಗ್ಗಿ ಸ್ವಾಧೀನಪಡಿಸಿಕೊಂಡಿತು. ಇದರಿಂದ ಜರ್ಮನರಿಗೆ ಬಹಳ ನಷ್ಟವಾಗಿದೆ. ರಿಝೆವಾವನ್ನು ವಶಪಡಿಸಿಕೊಂಡ ರಶ್ಯನರನ್ನು ಅದಕ್ಕಿಂತ ಮುಂದೆ ಹೋಗಬಿಡಬಾರದೆಂದು ಜರ್ಮನರು ಈ ನಗರವನ್ನು ರಕ್ಷಿಸಲು ಸಾಹಸದಿಂದ ಹೋರಾಡಿದರು. ರಶ್ಯನರ ರಕ್ತಸೈನ್ಯವು ವ್ಯಾಝ್ಮಾ ಸ್ಮೋಲೆನ್‌ಸ್ಕ ಕಡೆಗಳಲ್ಲಿ ಭರದಿಂದ ಮುನ್ನುಗ್ಗುತ್ತಿದೆ.

ಟುನಿಸಿಯದ ಉತ್ತರ ಮಧ್ಯ ಮತ್ತು ದಕ್ಷಿಣ ರಣಭೂಮಿಗಳಲ್ಲಿ ಜರ್ಮನರು ಪುನಃ ಮುನ್ನುಗ್ಗುತ್ತಿರುವರು. ಟಾಜಿಯನ್ ಕಣಿವೆಯ ಹತ್ತಿರ ಭಯಾನಕ ಸಂಗ್ರಾಮ ಸಾಗುತ್ತಿದೆ. ಅಲ್ಲಿಂದ ವೈರಿ ಟ್ಯಾಂಕುಗಳು ಮೆಡನೀನಗೆ ದಕ್ಷಿಣದಲ್ಲಿರುವ ಬ್ರಿಟಿಷ್ ವ್ಯೂಹದಲ್ಲಿ ನುಗ್ಗಿ ಆ ವ್ಯೂಹವನ್ನು ಇಬ್ಭಾಗಿಸಿದವು. ಇದರಿಂದ ರೊಮೆಲನ ಪದಾತಿ ಸೇನೆಯು ಮುನ್ನುಗ್ಗುವುದಕ್ಕೆ ಬಹಳ ಅನುಕೂಲವಾಯಿತು. ಆದರೆ ಬ್ರಿಟಿಷರ ಎಂಟನೇ ಸೈನ್ಯವು ಈ ಧಾಳಿಯನ್ನು ಎದುರಿಸಲು ಸಿದ್ಧವಾಗಿತ್ತು. ಉಭಯ ಪಕ್ಷದವರೂ ವೀರಾವೇಶದಿಂದ ಕಾದಾಡುತ್ತಿದ್ದಾರೆ. ಹಾನಿಯ ಕಡೆಗೆ ಯಾರೂ ಲಕ್ಷ್ಯವೇ ಕೊಡುವಂತೆ ಕಂಡುಬರುವುದಿಲ್ಲ. ಇಡೀ ಆಕಾಶವೇ ಉರಿಯುತ್ತಿದೆ. ಆಫ್ರಿಕ ರಣಭೂಮಿಯಲ್ಲಿ ಇಷ್ಟರಲ್ಲಿಯೇ ದೊಡ್ಡದೊಂದು ವಿಮಾನ ಕಾಳಗವಾಗುವ ಸಂಭವವಿದೆ. ಮ್ಯಾರೆಥ್ ವ್ಯೂಹದ ಬಳಿ ಈಗಾಗಲೇ ವಿಮಾನಯುದ್ಧ ಸುರುವಾಗಿದೆ. ಫ್ರೆಂಚ್ ಸೈನ್ಯಗಳು ಟೋಝುರ್ ನಗರವನ್ನು ಸುತ್ತುಗಟ್ಟಿವೆಯೆಂದೂ ಅವು ರೆಡೆಯಟ ಪಟ್ಟಣವನ್ನು ಸಾಧೀನಪಡಿಸಿದೆಯೆಂದೂ ಹೇಳಲಾಗಿದೆ. ರೊಮೆಲನು ಅಷ್ಟನು ದಲದ ಮೇಲೆ ಎರಡು ಬಾರಿ ಪ್ರಬಲ ಧಾಳಿಯಿಟ್ಟನು. ಆದರೆ ಎರಡು ಸಲವೂ ಅಷ್ಟನುದಲವನ್ನು ಭೇದಿಸಲಾಗಲಿಲ್ಲ. ದಕ್ಷಿಣ ಟುನಿಸಿಯದಲ್ಲಿ ಜರ್ಮನರು ಗಾಫಸಾ ಸಮೀಪ ಇರುವರೆಂದು ತಿಳಿದಿದೆ. ಗಾಫಸಾ ನಗರವು ಕೆಲದಿನಗಳ ಹಿಂದೆ ಸಫಾಕ್ಸ ಸಹಿತ ಜರ್ಮನರ ವಶವಾಯಿತು. ರೊಮೆಲನು ದಕ್ಷಿಣ ಟುನಿಸಿಯದಲ್ಲಿ ಪ್ರಚಂಡ ಧಾಳಿಯಿಡುವ ಸಿದ್ಧತೆ ತೋರುತ್ತದೆ.

ಸಮರಭೂಮಿಯ ಸಂಚಾರ

ಹಿಮ ಕರಗುತ್ತಿದೆ!

ಕಳೆದ ಕೆಲವು ಕಾಲದಿಂದ, ರಶ್ಯದಲ್ಲಿ ಹಿಮಗಾಲ ಪ್ರಾರಂಭವಾದಂದಿನಿಂದ ಇದುವರೆಗೆ, ರಶ್ಯನರು ತೋರಿಸಿದ ಸಾಹಸವೇನೋ ಅಸದೃಶವಾದುದು. ಜರ್ಮನ್ ವೈರಿಗಳನ್ನು ಅವರು ಬಹುದೂರ ಹಿಂದೆ ಸರಿಸಿದರು. ತಮ್ಮ ಅನೇಕಾನೇಕ ನಗರಗಳನ್ನು ಪುನಃ ಕೈವಶಪಡಿಸಿಕೊಂಡರು. ಮಿತ್ರರೇನೋ ರಶ್ಯನರ ವಿಜಯವನ್ನು ನೋಡಿ ಸಹಜವಾಗಿ ಹಿಗ್ಗಿದ್ದಾರೆ! ಆದರೆ ಇಷ್ಟರಿಂದಲೇ ಉಬ್ಬಿಬಿಡಬಹುದೆ? ರಶ್ಯದಲ್ಲಿ ಇನ್ನೂ ಜರ್ಮನರು ಸಂಪೂರ್ಣ ಪರಾಭವ ಹೊಂದಿಲ್ಲವೆಂಬುದನ್ನು ಗಮನಿಸುವುದವಶ್ಯ. ರಶ್ಯನರಿಗಾದರೂ ಈ ಭೀತಿಯಿಲ್ಲದಿಲ್ಲ. ಬೇಗನೇ ದ್ವಿತೀಯ ರಂಗ ತೆರೆಯಿರಿ ಎನ್ನದು ಅವರು ಈಗಲೂ ಕೂಗುತ್ತಿದ್ದಾರೆ. ದ್ವಿತೀಯ ರಂಗ ತೆರೆಯುವ ವಿಚಾರವೇನೂ ಈ ಕಡೆಯಿಂದ ಕೇಳಿಬರುವುದಿಲ್ಲವೆಂಬುದು ವಿಷಾದಕರ. ಸಾಲದ್ದಕ್ಕೆ ಸದ್ಯ ರಶ್ಯದಲ್ಲಿ ಹೆಪ್ಪುಗಟ್ಟಿದ ಹಿಮರಾಶಿಯು ಈಗಾಗಲೇ ಕರಗುತ್ತಿದೆ. ಇದು ವೈರಿಗಳಿಗೆ ಅನುಕೂಲ. ಏಕೆಂದರೆ ಇನ್ನು ಎರಡುಮೂರು ತಿಂಗಳ ವರೆಗೆ ಆತನಿಗೆ ಹೊಸ ಧಾಳಿಯು — ವಸಂತಧಾಳಿಯ ಸಿದ್ಧತೆ ಮಾಡಲು ಸಮಯ ದೊರಕುವುದು. ಹಿಮ ಕರಗಿದ ನೆಲದಲ್ಲಿ ಯುದ್ಧ ಯಂತ್ರವು ಚಲಿಸುವುದು ಅಸಂಭವವಿರುವುದರಿಂದ ಎರಡು ಪಕ್ಷಗಳೂ ಕೆಲವು ವಾರಗಳ ವರೆಗೆ ಸುಮ್ಮಗಿರಲೇ ಬೇಕಾಗುವುದು. ಈ ಅವಧಿಯಲ್ಲಿ ಹಿಟ್ಲರನು ಚೇತರಿಸಿಕೊಳ್ಳುವನೆಂದು ನಂಬಲು ಆಧಾರವಿದೆ. ಆತನು ಸೈನ್ಯವನ್ನು ಆಗ ಪುನರ್ಘಟಿಸಿಬಿಡುವನು; ಆಯುಧ, ಆಹಾರ ಸಾಮುಗ್ರಿಗಳನ್ನು ತರಿಸಿಕೊಳ್ಳಬಹುದು. ಹಿಟ್ಲರನ ವಸಂತಕಾಲದ ಧಾಳಿಯಂತೂ ಇತಿಹಾಸ ಪ್ರಸಿದ್ಧವಾದುದೇ? ಹೀಗೆ ಸಕಲ ಸನ್ನಾಹಸಜ್ಜಿತನಾಗಿ ವಸಂತಕಾಲದಲ್ಲಿ ಹಿಟ್ಲರನು ರಶ್ಯವನ್ನು ತಿರುಗಿ ಜರ್ಜರಿತ ಮಾಡಿದರೆ? ಈಗಾಗಲೇ ರಶ್ಯನರಿಗೆ ಈ ಭೀತಿ ಹುಟ್ಟಿದೆ ಯೆಂಬುದು ಸ್ಪಷ್ಟ. ಈ ವಾರದ ಯುದ್ಧವಾರ್ತೆಗಳನ್ನು ನೋಡಿದರೆ, ರಶ್ಯನರು ಅಷ್ಟೊಂದು ಹುಮ್ಮಸಿನಿಂದಿರುವುದೂ ಕಂಡು ಬರುವುದಿಲ್ಲ. ಹಾಗಾಗಿ ಹಿಟ್ಲರನು ವಸಂತಕಾಲದ ಧಾಳಿಗೆ ಪ್ರಾರಂಭಿಸುವ ವರೆಗೆ ಆತನಿಗೆ ಸಿದ್ಧತೆಮಾಡಕೊಡುವುದು ಮೂರ್ಖತನ. ಈಗಲೇ ಜರ್ಮನರನ್ನು ಎಲ್ಲಾ ಕಡೆಯಿಂದಲೂ ಎದುರಿಸಬೇಕು. ರಶ್ಯಕ್ಕೆ ಬೀಳುವ ಪೆಟ್ಟನ್ನು ತಪ್ಪಿಸಬೇಕು; ಮಿತ್ರರು ಬೇಗನೇ ದ್ವಿತೀಯ ರಂಗ ತೆರೆಯಲೇ ಬೇಕು.

ಬಿಸ್ಮಾರ್ಕಿನ ಭಾರೀ ಕಾಳಗ

ಬಿಸ್ಮಾರ್ಕ್ ಸಮುದ್ರದಲ್ಲಿ ಮಿತ್ರರಿಗೂ ಶತ್ರುಗಳಿಗೂ ನಡೆದ ಭೀಕರಯುದ್ಧವು ತಾ. ೬ರಂದು ಕೊನೆಗೊಂಡಿತು. ಇದರಲ್ಲಿ ಮಿತ್ರರಿಗೇ ಜಯವಾಗಿರುವುದಾಗಿ ಹೇಳಲಾಗುತ್ತದೆ. ಈ ಯುದ್ಧದಲ್ಲಿ ಮಿತ್ರರ ೧೩೬ ವಿಮಾನಗಳು ಭಾಗವಹಿಸಿದ್ದವು. ವೈರಿಗಳು ಸುಮಾರು ೧೫೦ ವಿಮಾನಗಳನ್ನು ತಂದಿದ್ದರು. ಇಂಥ ಸಿದ್ಧತೆಯಿಂದ ಪ್ರಬಲ ಯುದ್ಧವು ಅಗ್ನಿವರ್ಷವನ್ನು ಸುರಿಸುತ್ತಾ ನಡೆಯಿತು. ವೈರಿಗಳ ೧೦ ಯುದ್ಧ ಹಡಗುಗಳೂ, ೧೨ ಸಾರಿಗೆ ಹಡಗುಗಳೂ ಹೊರಟಿದ್ದು ಅವೆಲ್ಲವನ್ನೂ ಮುಳುಗಿಸಲಾಗಿದೆಯೆಂದು ಹೇಳಲಾಗಿದೆ. ದಡವನ್ನು ಮುಟ್ಟಲು ಯತ್ನಿಸಿದ ೧೫೦೦೦ ಶತ್ರುಸೈನಿಕರನ್ನೂ ನಾಶಮಾಡಲಾಯಿತಂತೆ! ಕೇಪ್ ಗ್ಲೂಸ್ಟರಿನ ವಿಮಾನ ಗೃಹಕ್ಕೆ ಧಾಳಿಯಾಗಿದೆ. ಹೀಗೆ ಬಿಸ್ಮಾರ್ಕ್ ಸಮುದ್ರದಲ್ಲಿ ಮಿತ್ರರಿಗೆ ದೊರೆತ ವಿಜಯವು ಬಹಳ ಮಹತ್ವದ್ದಿದೆ. ಅದರಿಂದ ನ್ಯೂಗಿನಿಯ ಮೇಲೆ ಆಗಬಹುದಾಗಿದ್ದ ಜಪಾನಿನ ನೆಲಧಾಳಿಯು ತಪ್ಪಿತು ಎಂದು ಕರ್ಟಿನರು ಹೇಳಿದ್ದರು. ನ್ಯೂ ಜಾರ್ಜಿಯಾ ದ್ವೀಪದ ದಕ್ಷಿಣತೀರದಲ್ಲಿರುವ ಬಂದರದಲ್ಲಿ ವೈರಿಪ್ರದೇಶಗಳ ಮೇಲೆ ಅಮೇರಿಕನ್ ವೈಮಾನಿಕರು ಬಾಂಬೆಸೆದರು. ಟುಲಾ ದ್ವೀಪದಲ್ಲಿನ ಅಮೇರಿಕನ್ ದಲಗಳ ಮೇಲೆ ಜಪಾನೀ ವೈಮಾನಿಕರೂ ಬಾಂಬಿಟ್ಟರು. ಶಾಟ್ಲಂಡ್ ದ್ವೀಪದ ಕ್ರಾಹಿಲ್ಲಿ, ಬುಯಿನ್ ಮತ್ತು ಬಲ್ಲಾಲೆಗಳ ಮೇಲೂ ಅಮೇರಿಕನ್ ವಿಮಾನಗಳು ಧಾಳಿಯಿಟ್ಟವು.

ಸದ್ಯ ಬರ್ಮಾ ಧಾಳಿಯಿಲ್ಲ?

ಬರ್ಮವನ್ನು ಪುನಃ ಸ್ವಾಧೀನಪಡಿಸಿಕೊಳ್ಳಬೇಕೆಂದು ಆಗಾಗ ಮಿತ್ರಪಕ್ಷದ ಸೇನಾನಿಗಳು ಕೂಗುತ್ತಿದ್ದರು. ಆ ವಿಷಯದಲ್ಲಿ ಅಲ್ಪಸ್ವಲ್ಪ ಸಾಹಸಗಳೂ ನಡೆದವು. ಆದರೆ ಇದುವರೆಗೂ ಏನೂ ಯಶಸ್ಸು ಸಿಗಲಿಲ್ಲ. ಸದ್ಯ ಮಳೆಗಾಲವು ಸನ್ನಿಹಿತವಾದುದರಿಂದ ಬರ್ಮಾದ ಮೇಲೆ ದೊಡ್ಡ ಪ್ರಮಾಣದಲ್ಲಿ ಧಾಳಿಯಿಡುವುದಿಲ್ಲವೆಂದೂ, ಆದ್ದರಿಂದ ಜಪಾನಿನೊಡನೆ ಯುದ್ಧ ಮಾಡುವುದಕ್ಕೆ ಅವಶ್ಯವಿರುವ ಯುದ್ಧ ಸಾಮುಗ್ರಿಗಳನ್ನು ಮಿತ್ರರಾಷ್ಟ್ರಗಳಿಂದ ಪಡೆಯಲು ಚೀನವು ಮುಂದಿನ ವರ್ಷದ ವರೆಗೆ ಕಾಯಬೇಕಾಗುವುದೆಂದೂ ಚುಂಗ್‌ಕಿಂಗದಲ್ಲಿರುವ ಎಸೊಸಿಯೇಟೆಡ್ ಸುದ್ದಿಗಾರನು ಬರೆಯುತ್ತಾನೆ! ಇದನ್ನು ಪರಿಶೀಲಿಸಿದರೆ ಸದ್ಯ ಜಪಾನನ್ನು ಮುರಿಯಲು ಮಿತ್ರರು ಏನೇನೂ ಕಾರ್ಯಾಚರಣೆ ಕೈಕೊಳ್ಳದೆ, ಯೂರೋಪಿನ ಯುದ್ಧವನ್ನು ಮಾತ್ರ ಮೊದಲು ಮುಗಿಸುವ ನಿರ್ಧಾರ ಮಾಡಿಕೊಂಡಂತೆ ಕಂಡು ಬರುವುದು. ಜಪಾನನ್ನು ಏಶ್ಯಾದಲ್ಲಿ ನಿರಂಕುಶ ವಿಜೃಂಭಿಸಬಿಡುವುದು ಎಷ್ಟರ ಮಟ್ಟಿಗೆ ಸಮಂಜಸವೋ ನಮಗೆ ತಿಳಿಯದು. ಆದರೆ ಸದ್ಯ ಜಪಾನನ್ನು ಮುರಿಯುವ ಯತ್ನ ಮಾಡಲು ಮಿತ್ರರಿಗೆ ಪರಿಸ್ಥಿತಿ ಅನುಕೂಲವಿಲ್ಲವೆಂಬುದೂ ಗಮನೀಯ ವಿಚಾರವಾಗಿದೆ.

ಚಿತಗಾಂಗ್ ಅಕ್ಯಾಬ್‌ಗಳ ನಡುವಿನ ಪ್ರದೇಶದಲ್ಲಿ ಸರಾಸರಿ ೨೦೦ ಇಂಚುಗಳ ಮಳೆ ಬೀಳುತ್ತದೆ. ಇಷ್ಟು ಮಳೆಯು ಕೇವಲ ಮೂರು ತಿಂಗಳಲ್ಲಿಯೇ ಬೀಳುವುದರಿಂದ ಅಲ್ಲಿಗೆ ಹೊಸ ಸೈನ್ಯ ಸಾಗಿಸಿ ಧಾಳಿಯಿಡುವುದು ಅಸಾಧ್ಯವಾಗುತ್ತದೆ. ಮಾತ್ರವಲ್ಲದೆ ಈಗ ಅಲ್ಲಿ ಮಲೇರಿಯ ಬಾಧೆಯೂ ಬಹಳವಿದೆ. ಹಾಗಾಗಿ ಅಲ್ಲಿ ಹೋಗಿ ಸೈನಿಕರು ಹುರುಪಿನಿಂದ ಹೋರಾಡಲೂ ಸಾಧ್ಯವಿಲ್ಲ. ಇದು ಮಾತ್ರವಲ್ಲದೆ ವಾತಾವರಣವು ಅನುಕೂಲವಿಲ್ಲದಿರುವಾಗ ವಿಮಾನ ಮೂಲಕ ಪೆಟ್ರೋಲ್ ಸಾಗಿಸುವುದೂ ಕಷ್ಟವಾಗುವುದು. ಹೀಗೆಲ್ಲಾ ಇರಲು, ಬರ್ಮಾದ ಧಾಳಿಯ ಬಗ್ಗೆ ಕುತೂಹಲಗೊಂಡ ಅನೇಕರು— ವಿಶೇಷತಃ ಚೀನಿಯರು — ಈಗ ನಿರಾಶೆಗೊಳ್ಳಬೇಕಾಗಿದೆ. ಜನರಲ್ ವೇವಲರು ಹೇಗಾದರೂ ಬರ್ಮವನ್ನು ಪುನಃಪಡೆದುಕೊಳ್ಳಬೇಕೆಂದು ಕೆಲಕಾಲ ಹಿಂದೆ ಪಣತೊಟ್ಟು ಹೇಳಿದ್ದವರೂ, ಈಗ, ಎಸೊಸಿಯೇಟೆಡ್ ಸುದ್ದಿಗಾರನು ಹೇಳುವಂತೆ ಊಹಿಸಿದ್ದರೆ, ಇದರಿಂದ ಮಿತ್ರರ ಮೇಲೆ ಚೀನೀಯರ ವಿಶ್ವಾಸ ಉಳಿಯುವುದು ಕಷ್ಟವಾದೀತು. ಏಕೆಂದರೆ, ಚೀನವು ಜಪಾನನ್ನು ಎದುರಿಸಬೇಕಾದರೆ ಅದಕ್ಕೆ ಶಸ್ತ್ರಾಸ್ತ್ರಗಳು ಬೇಕು; ಅದನ್ನು ಮಿತ್ರದೇಶಗಳಿಂದ ಸಾಗಿಸಬೇಕು; ಅದಕ್ಕೆ ಬರ್ಮಾ ರಸ್ತೆ ತೆರೆಯಬೇಕು; ಇದು ಆಗಬೇಕಾದರೆ ಮಿತ್ರರು ಬರ್ಮವನ್ನು ಸ್ವಾಧೀನಪಡಿಸಿಕೊಳ್ಳಲೇ ಬೇಕು. ಈ ವಿಷಯವನ್ನು ಬರ್ಮಾ ಕೈಬಿಟ್ಟಂದಿನಿಂದಲೂ ಮಿತ್ರರೇ ಒಪ್ಪುತ್ತಾ ಬಂದಿದ್ದು, ಈಗ ಈ ರೀತಿ ನಿರ್ಧರಿಸಿದರೆ ಚೀನವು ಮಿತ್ರರನ್ನು ಮುಂದೆ ಹೇಗೆ ನಂಬಬೇಕು?

THE CANARA BANKING CORPORATION Ltd.

(Incorporated in British India with limited liability).

STATEMENT OF AFFAIRS AS ON 31ST DECEMBER 1943.

Capital & Liabilities	Rs.	As.	Ps.
Paid up Capital	6,36,890	0	0
Reserve & other funds	3,71,882	13	11
Deposits	41,83,873	4	1
Due to Bankers	5,08,545	12	1
Bills per contra	3,59,357	12	1
Sundries including branch adjustments & undisbursed profits	2,83,736	5	9
Profit for the year 1942	49,461	3	5
Total Rs.	63,93,747	3	4

Property & Assets	Rs.	As.	Ps.
Landed property, premises, etc.	91,659	0	0
Advances	31,28,612	4	9
Investment on Govt. Securities etc. at cost	15,34,536	14	3
Sundries	74,183	5	7
Bills for Collection	3,59,357	12	1
Cash on Hand & with bankers	12,05,397	14	8
Total Rs.	63,93,747	3	4

ಸ್ವದೇಶಾಭಿಮಾನಿ

ತಾರೀಕು 12—3—1943

ಪುನಃ ಪ್ರಯತ್ನ

ಮಹಾತ್ಮರ ಉಪವಾಸದ ಪರಿಣಾಮವಾಗಿ ಉಂಟಾದ ಭಾರತ ರಾಜಕೀಯದ ಹೊಸ ಪರಿಸ್ಥಿತಿಯನ್ನು ಪರಿಭಾವಿಸಿ, ಅಖಿಲಭಾರತದ ಮುಖಂಡರು ಪುನಃ ಒಂದು ಪ್ರಯತ್ನ ಮಾಡಲು ನಿರ್ಧರಿಸಿದುದು ಸಂತೋಷದ ಸಂಗತಿ. ಮುಂಬಯಿಯಲ್ಲಿ ಈ ಸಲ ಮುಖಂಡರು ಸಭೆ ಸೇರಿದ್ದಾರೆ. ಅಖಿಲಭಾರತದ ಸರ್ವ ಮತ ಪಂಥಗಳ ಪ್ರತಿನಿಧಿ ಮುಖಂಡರೆಲ್ಲರೂ ಈ ಪರಿಷತ್ತಿಗೆ ಬಂದಿದ್ದಾರೆ. ಒಪ್ಪಂದವಾಗುವ ಆಶೆಯುಂಟು, ಮಹಾತ್ಮರನ್ನು ಬಿಡುಗಡೆ ಮಾಡಿ ಎಂದು ಅವರು ಸರಕಾರಕ್ಕೆ ವಿನಂತಿಸಿಕೊಂಡಿದ್ದಾರೆ.

ರಾಜಾಜಿ, ಮಹಾತ್ಮರನ್ನು ಭೇಟಿಯಾಗಿದ್ದವರೇ ಒಂದು ಆಶಾದಾಯಕವಾದ ಹೇಳಿಕೆಯಿತ್ತಿರುವರು. "ಮಹಾತ್ಮರ ಹಾಸಿಗೆ ಬಳಿಯಿಂದ ನನಗೆ ಹೊಸ ಸ್ಫೂರ್ತಿ ಬಂತು; ಮನಸ್ಸಿನ ಚಿಂತೆ ಕಳವಳ ಬಗೆಹರಿಯಿತು" ಎಂದಿದ್ದಾರೆ. ರಾಜಾಜಿಯವರು ಎರಡು ಸಲ ಗಾಂಧಿಜಿಯವರ ಭೇಟಿಯಾಗಿದ್ದು ಪ್ರತಿಸಲವೂ ನಾಲ್ವತ್ತು ಮಿನಿಟುಗಳಿಗೆ ಮಿಕ್ಕಿ ಮಹಾತ್ಮರ ಬಳಿಯಿದ್ದರು. ಗಾಂಧಿಜಿಯಿಂದ ರಾಜಕೀಯ ಬಿಕ್ಕಟ್ಟು ಬಗೆಹರಿಸುವಲ್ಲಿ ರಾಜಾಜಿ ಸೂಚನೆ ತಂದಿರಬಹುದೆ?

ಗಾಂಧಿಜಿಯನ್ನು ಕೂಡಲೇ ಬಿಡುಗಡೆ ಮಾಡುವುದು ಹಾಗೂ ಸೆರೆಮನೆಯಲ್ಲಿರುವ ಕಾಂಗ್ರೆಸ್ ಮುಖಂಡರೊಡನೆ ಸಂಧಾನದ ಮಾತುಕತೆಗಳನ್ನು ಬೆಳೆಸಲು ಅಸ್ಪದವನ್ನುಂಟುಮಾಡುವುದು ಮತ್ತು ದೇಶದ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಪ್ರತಿ [illegible] ಮಹತ್ವದ ವಿಚಾರಗಳು ಮುಖಂಡರ ಪರಿಷತ್ತಿನಲ್ಲಿ ಚರ್ಚಿಸಲ್ಪಡುವವೆಂದು ಈಗಾಗಲೇ ಪ್ರಸಿದ್ಧವಾಗಿದೆ.

ಅಖಿಲಭಾರತದ ಮುಖಂಡರೇನೋ ಈ ವಿಷಯವಾಗಿಯೇ ಮೊನ್ನೆ ಮೊನ್ನೆ ಒಂದು ಸಭೆಸೇರಿ ನಿರ್ಣಯ ಮಾಡಿ ಸಂಧಾನಕ್ಕೆ ಸರಕಾರವನ್ನು ಆಹ್ವಾನಿಸಿದ್ದರು; ಅದಕ್ಕೆ ದೊರೆತ ಉತ್ತರದ ವಿವರವಂತೂ ಈಗಾಗಲೇ ಪ್ರಸಿದ್ಧವಾಗಿದೆ. ಆದರೂ ಈಗ ಪುನಃ ಪ್ರಯತ್ನ ಮಾಡುವುದಲ್ಲಿ ದೋಷವಿಲ್ಲ, ಮಾತ್ರವಲ್ಲದೆ ಯುಕ್ತಿಯೂ ಇದೆ. ಮಹಾತ್ಮರ ಉಪವಾಸದ ಪರಿಸ್ಥಿತಿಯಿಂದ ಈಗ ದೇಶದ ರಾಜಕೀಯದಲ್ಲಿ ಹೊಸ ಪರಿಸ್ಥಿತಿಯುಂಟಾಗಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಮುಖಂಡರ ಪ್ರಯತ್ನವು ಈ ಸಲವಾದರೂ ಯಶಸ್ವಿಯಾಗಲಿ ಎಂದು ನಾವು ಹಾರೈಸುವೆವು.

'ಸತ್ತವರನ್ನು ಕೆರಳಿಸಬೇಡಿ!'

ಎಂಬುದಾಗಿ ಬೊಂಬೆ ಕ್ರಾನಿಕಲ್‌ನಲ್ಲಿ ಇತ್ತೀಚೆಗೆ ನೆಶಲ್‌ನವಾತ್ ಫ್ರಂಟಿನವರು ಟಾಗೂರರ ಮಾತನ್ನು ಯುದ್ಧ ಪ್ರಚಾರಕ್ಕೆ ಬಳಸಿಕೊಂಡು ಅವರ ಚಿತ್ರ ಸಹಿತವಾದ ಪ್ರಚಾರ ಮಾಡುವುದನ್ನು ಖಂಡಿಸಿ ಬರೆದಿದ್ದಾರೆ. ಟಾಗೂರರು ಜಪಾನಿನ ಸಾಮ್ರಾಜ್ಯ ಲಾಲಸೆಯನ್ನು ಖಂಡಿಸಿದಂತೆ, ಬ್ರಿಟಿನಿನ ಸಾಮ್ರಾಜ್ಯ ಪಾಲನೆಯನ್ನೂ ಖಂಡಿಸಲಿಲ್ಲವೇನು? ಮರಣಕ್ಕಿಂತ ಕೆಲದಿನಗಳ ಮುನ್ನ ಮಿಸ್ ರತ್‌ಬೋನ್ ಎಂಬಾಕೆಗೆ ಬರೆದ ಪತ್ರ ಪ್ರಕಟಿಸಬಾರದೇನು? ಎಂದು ಆ ಪತ್ರಿಕೆ ಪ್ರಶ್ನಿಸುತ್ತದೆ. ಹಿಂದೊಮ್ಮೆ, ನೆಹರುಗಳ ಚಿತ್ರಸಹಿತವಾಗಿ ಅವರ ಮಾತನ್ನೂ ಯುದ್ಧ ಪ್ರಚಾರಕ್ಕೆ ಬಳಸಿಕೊಂಡಿದ್ದಾರೆ! ಸೆರೆಮನೆಯಲ್ಲಿರುವವರನ್ನು, ಸತ್ತು ಹೋದವರನ್ನು ಹೀಗೆ ಅನ್ಯಾಯವಾಗಿ ಬಳಸಿಕೊಂಡು ಯುದ್ಧ ಪ್ರಚಾರ ಸಾಗಿಸುವುದಕ್ಕಿಂತ, ಅಂಬೇಡ್ಕರ್, ಶ್ರೀವತ್ಸ, ಎಂ. ಎನ್. ರಾಯ್ (ಕ್ರಾಂತಿ ವೀರ ತಾನೆ?) ಮೊದಲಾದವರ ಚಿತ್ರಗಳನ್ನೂ ಮಾತುಗಳನ್ನೂ ಉಪಯೋಗಿಸಬಾರದೇಕೆ? ಎಂದು ಆ ಪತ್ರಿಕೆಯ ಸೂಚನೆಯಿದೆ!

Estd. 1906.							
Canara Bank, Limited							
(Incorporated in British India with limited liability).							
BALANCE SHEET AS ON 31st DECEMBER 1942							
LIABILITIES				ASSETS			
	Rs.	As.	Ps.		Rs.	As.	Ps.
SUBSCRIBED CAPITAL: Rs. 20 lacs.				Fixed Capital			
Paid up Capital	14,96,072	8	0	Expenditure	1,00,182	13	2
Reserves	4,50,000	0	0	ADVANCE TO CUSTOMERS:			
Deposits	1,45,50,502	7	1	Secured by valu-			
Due to Bankers	13,50,000	0	0	able securities	51,16,338	6	2
Bills for collection				Secured by bills			
as per contra	8,76,169	10	2	of Exchange etc.	24,36,563	11	11
Liability for Foreign				Investments	65,65,374	15	7
Bills negotiated	8,05,026	10	5	Bills for collection	8,76,160	10	2
Sundries	10,51,464	10	11	Liabilities of custo-			
Appropriation A/c.	2,062	3	8	mers for foreign			
Net Profits	1,53,310	2	10	bills negotiated	8,05,026	10	5
				Sundries	4,71,599	3	0
				Cash on hand and at			
				Call with Bankers	43,63,352	14	8
Total Rs.	2,07,34,608	5	1	Total Rs.	2,07,34,608	5	1

ಸ್ವದೇಶ ಸಮಾಚಾರ

ಮಹಾತ್ಮ ದೇಶ ದೇಸಾಯಿಯವರ ಬೂದಿ

ಯನ್ನು ಪೂನಾದಿಂದ ೧೮ ಮೈಲು ದೂರದ ಆಲಂದಿಯಲ್ಲಿರುವ ಇಂದ್ರಾಯಾಣಿ ನದಿಗೆ ತಾ. ೩ ರಂದು ಪ್ರಾತಃಕಾಲ ಹಾಕಲಾಯಿತು. ಮಹಾತ್ಮರು ಈ ಬೂದಿಯನ್ನು ತನ್ನ ಕೊಟಡಿಯಲ್ಲಿ ಒಂದು ಖಾದೀ ಚೀಲದಲ್ಲಿ ಭದ್ರವಾಗಿಟ್ಟುಕೊಂಡಿದ್ದರು. ಮಹಾತ್ಮರು ಉಪವಾಸ ಮುಕ್ತಾಯಗೊಳಿಸಿದ ಶುಭಕಾಲದಲ್ಲಿ ಈ ಕಾರ್ಯವೂ ನೆರವೇರಿಸಲಾಯಿತು. ದಿವಂಗತ ದೇಸಾಯಿಯವರ ಪ್ರಿಯ ಸ್ನೇಹಿತ ಸ್ವಾಮಿ ಆನಂದರು ಈ ಬೂದಿಯನ್ನು ಆಗಾಖಾನ ಬಂಗ್ಲೆಯಿಂದ ಕೊಂಡೊಯ್ದರು. ಶ್ರೀ ಪ್ಯಾರೆಲಾಲರು ಸ್ವಾಮಿ ಆನಂದರ ಕೈಗೆ ಈ ಚೀಲವನ್ನಿತ್ತರು. ಮೂವರು ಹಿಂದು ಪೋಲೀಸರು ಸ್ವಾಮಿ ಆನಂದರೊಡನೆ ಆಲಂದಿಗೆ ಬಂದಿದ್ದರು. ಸ್ವಾಮಿಗಳು ಸಂಕಲ್ಪ, ತರ್ಪಣ ದಕ್ಷಿಣಾದಿಗಳನ್ನು ನೆರವೇರಿಸಿದರು. ಈ ಕಾರ್ಯಕ್ಕೆ ಇಬ್ಬರು ಹರಿಜನರನ್ನೂ ಆಹ್ವಾನಿಸಲಾಗಿತ್ತು.

ಬೆಳ್ಳಿ ರೂಪಾಯಿಗಳು

ವಿಕ್ಟೋರಿಯಾ ರಾಣಿ ತಲೆಯುಳ್ಳ ಏಳನೇ ಎಡ್ವರ್ಡ್ ಚಕ್ರವರ್ತಿಗಳ ತಲೆಯುಳ್ಳ ಬೆಳ್ಳಿ ರೂಪಾಯಿಗಳನ್ನೂ, ಅರ್ಧ ರೂಪಾಯಿಗಳನ್ನೂ ಬರುವ ಎಪ್ರಿಲ್ ೩೦ನೇ ತಾರೀಕಿನ ವರೆಗೆ ಇಂಡಿಯಾ ರಿಸರ್ವ್ ಬೇಂಕಿನಲ್ಲಿ ವಾಪಾಸ್ ತೆಗೆದುಕೊಳ್ಳಲಾಗುವದು. ಇದೇ ಆಖೇರಿ ತಾರೀಕು. ಈ ತಾರೀಕಿನ ನಂತರ, ತಡವಾದುದಕ್ಕೆ ಸರಿಯಾದ ಕಾರಣ ಕೊಟ್ಟು, ರಿಜರ್ವ್ ಬೇಂಕಿನ ವಿಶೇಷ ಅನುಮತಿ ಪಡೆದು ಈ ನಾಣ್ಯಗಳನ್ನು ರಿಸರ್ವ್ ಬೇಂಕಿಗೆ ಕೊಡಬಹುದು.

ಲಕ್ಷ್ಮಣ ಸ್ವಾಮಿ ಮೊದಲಿಯೂರರಿಗೆ ರಿಸರ್ವ್ ಸೀಟು ಇಲ್ಲ

ಮದ್ರಾಸಿನಿಂದ ಮಂಗಳೂರಿಗೆ ತನ್ನ ಕಮಿಶನ್ ಸಹಿತ ಹೊರಟಿದ್ದ ಯುನಿವರ್ಸಿಟಿ ವೈಸ್ ಛಾನ್ಸಲರ್ ಲಕ್ಷ್ಮಣ ಸ್ವಾಮಿ ಮುದಲಿಯೂರರು ಎರಡನೇ ತರಗತಿಯ ಗಾಡಿಯನ್ನು ತನ್ನ ಪರವಾಗಿ ಮೊದಲೇ ರಿಸರ್ವ್ ಮಾಡಿದ್ದರೂ, ಓರ್ವ ಯೂರೋಪಿಯನ್ ಆಫೀಸರನು ಬಂದು ಆಕ್ರಮಿಸಿ, ಮುದಲಿಯೂರರಿಗೆ ರೈಲ್ವೆ ಅಧಿಕಾರಿಗಳು ಎಷ್ಟು ಹೇಳಿದರೂ ಸ್ಥಳ ಬಿಟ್ಟುಕೊಡಲಿಲ್ಲ. ಈ ಕುರಿತು ಯೋಗ್ಯ ವಿಚಾರಣೆ ಆಗಬೇಕೆಂದು ಕೇಂದ್ರ ಎಸೆಂಬ್ಲಿಯಲ್ಲಿ ಡಾ। ದೇಶಮುಖರು ಒಂದು ಸೂಚನೆ ತಂದರು. ಅಧ್ಯಕ್ಷರು ಅದನ್ನು ನಿಯಮಬಾಹ್ಯ ಮಾಡಿದರು.

ದಿವಾಕರ ಮೊದಲಾದವರನ್ನು ಹಿಡಿದುಕೊಟ್ಟರೆ ೫೦೦೦ ರೂ. ಇನಾಮು

ಧಾರವಾಡ ಫೆ ೨೪ಕಳೆದ ಆಗಸ್ಟ ೯ನೇ ತಾರೀಖಿನಿಂದ ಪತ್ತೆ ಹತ್ತದಿದ್ದ ಧಾರವಾಡ ಜಿಲ್ಲೆಯ ಈ ಕೆಳಗಿನ ಕಾಂಗ್ರೆಸ್ ಕಾರ್ಯಕರ್ತರನ್ನು ಹಿಡಿದುಕೊಟ್ಟವರಿಗೆ ಕೆಳಗಿನಂತೆ ಇನಾಮುಗಳನ್ನು ಕೊಡಲಾಗುವದೆಂದು ಸಾರಲಾಗಿದೆ:

(೧) ಶ್ರೀ ಧಿ ಪಿ ಕರಮರಕರ ೧೦೦೦ ರೂ (೨) ಶ್ರೀ ಆರ್ ಎಸ್ ಹುಕ್ಕೇರಿಕರ ೫೦೦ ರೂ (೩) ಶ್ರೀ ಆರ್ ಆರ್ ದಿವಾಕರ ೫೦೦ ರೂ (೪) ಶ್ರೀ ತಿಮ್ಮನಗೌಡ ಹಣಮಂತಗೌಡ ಪಾಟೀಲ ಮಣಸಿನಹಾಳ ೧೦೦೦ (೫) ಶ್ರೀ ಶಂಕರ ಕುರ್ತಕೋಟಿ ೫೦೦ ರೂ (೬) ಶ್ರೀ ನರಸಿಂಹ ದಾಬಡೆ ೨೫೦ ರೂ (೭) ಶ್ರೀ ಛನಬಸಪ್ಪ ಅಂಬಲಿ ೨೫೦ ರೂ (೮) ಶ್ರೀ ಮಹಾದೇವ ಮೈಲಾರ ೫೦೦ ರೂ (೯) ಶ್ರೀ ಶಿವಪ್ಪ ಆರ್ ನೇಸ್ವಿ ಹಿರೇಕೆರೂರ ೫೦೦ ರೂ (೧೦) ಶ್ರೀ ಸಿದಪ್ಪ ಫಕೀರಪ್ಪ ಬೆಟಸೂರ ೨೫೦ ರೂ. ಇವರಲ್ಲಿ ಶ್ರೀ ತಿಮ್ಮನಗೌಡ ಪಾಟೀಲ ಮಣಸಿನಹಾಳ ಇವರು ಬಾಂಬು ಸ್ಫೋಟದಿಂದ ರಾಣಿಬೆನ್ನೂರ ತಾಲೂಕಿನಲ್ಲಿ ಎಲ್ಲಿಯೋ ಗಾಯಹೊಂದಿ ಮೃತಪಟ್ಟಿರುವರೆಂದು ಸುದ್ದಿಯಿದೆ. (ಸಂ. ಕ.)

ಗಲ್ಲಿಗೇರಿಸಿದರು!

ಈಸೂರು ಅಪಾದಿತರಲ್ಲಿ ಇಬ್ಬರನ್ನು ಈಗಲೆ ಗಲ್ಲಿಗೇರಿಸಿದರೆಂದು ಬೆಂಗಳೂರ ಸುದ್ದಿ.

ಕನಸಿನಲ್ಲೂ ಕಾಂಗ್ರೆಸಿನವರ ಹೆದರಿಕೆಯೇ?

ಸರಕಾರದ ದಬ್ಬಾಳಿಕೆಯ ನೀತಿಯನ್ನು ಕುರಿತು ಸರ್ದಾರ್ ಸಂತ ಸಿಂಗರು ಕೇಂದ್ರ ಎಸೆಂಬ್ಲಿಯಲ್ಲಿ ಒಂದು ಸೂಚನೆ ತಂದರು. 'ಜನರ ಸ್ವಾತಂತ್ರ್ಯವನ್ನು ನಿರಂಕುಶವಾಗಿ ನಿರ್ಬಂಧಿಸಲಾಗಿದೆ. ಸರಕಾರವು ಈಗ ಮಾಡುತ್ತಿರುವ ಅತ್ಯಾಚಾರಗಳನ್ನು ಬೇರೆ ನಾಗರಿಕ ಸರಕಾರ ಮಾಡಬಾರದು' ಎಂದು ಸಂತ ಸಿಂಗರು ಹೇಳುವಾಗ 'ಅಲ್ಲಿ ಕಾಂಗ್ರೆಸಿನವರಿಲ್ಲ' ಎಂದರು ನ್ಯಾಕ್ಸವೆಲರು. ಹಾಗಾದರೆ ಮಾಕ್ಸ್‌ವೆಲ್ಲರಿಗೆ ಕನಸಿನಲ್ಲಿಯೂ ಕಾಂಗ್ರೆಸಿನವರ ಹೆದರಿಕೆಯೆ? ಬಹುಶಃ ಮಾಕ್ಸ್‌ವೆಲ್ಲರು ಸತ್ತ ಮೇಲೂ ಕಾಂಗ್ರೆಸಿನವರು ಬೆದರಿಸಬಹುದು. ದಬ್ಬಾಳಿಕೆ ಪ್ರಾರಂಭಿಸಿ ಏಳು ತಿಂಗಳಾಯಿತು. ಇದರಿಂದ ರಾಜಕೀಯ ಬಿಕ್ಕಟ್ಟು ಬಗೆಹರಿದಿದೆಯೆ? ಮೂವರು ಮಂತ್ರಿಗಳು ರಾಜಿ ಕೊಟ್ಟರಲ್ಲಾ! ನೀವು ನಾಗರಿಕರಾಗಲಿ, ಸಮ್ಮೊಡನೆ ನಾವು ಸಹಕರಿಸುತ್ತೇವೆ ಎಂದು ಸಂತಸಿಂಗರು ಹೇಳಿದರು.

ಆಹ, ನೋಡಿ ಸರ್ಕಾರದ ಫೋಟೋ ನಿರ್ಬಂಧ

ಹಿಂದುಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ ಮೋಲಿನವರ ಫೋಟೋ ಹಾಕಕೂಡದೆಂದು, ಸರಕಾರವು ನಿರ್ಬಂಧ ಹಾಕಿದ ಬಗ್ಗೆ ಶ್ರೀ ಕೃಷ್ಣ ಮಾಚಾರಿಯವರು ಕೇಂದ್ರ ಎಸೆಂಬ್ಲಿಯಲ್ಲಿ ಪ್ರಶ್ನಿಸಿದರು. ಮಾಕ್ಸವೆಲ್ಲರು ಅದಕ್ಕೆ ಉತ್ತರವಿತ್ತು ಅದು ನಮಗೆ ಗೊತ್ತಿಲ್ಲವೆಂದರು. ಪತ್ರಿಕೆಗಳ ಮೇಲೆ ಸರಕಾರವು ಹೊರಿಸುವ ಅನೇಕ ನಿರ್ಬಂಧತೆ ಕುರಿತು ಬಂದ ಪ್ರಶ್ನೆಗೆ ಉತ್ತರ ಕೊಡುತ್ತಾ ಸಂಪಾದಕೀಯ ಲೇಖನಕ್ಕೆ ನಿರ್ಬಂಧ ಹಾಕುವುದು ತಮ್ಮ ಉದ್ದೇಶವಲ್ಲವೆಂದೂ, ಕೆಲ ಸುದ್ದಿಗಳ ಬಗ್ಗೆ ನಿರ್ಬಂಧ ಹಾಕಲಾಗಿದೆಯೆಂದೂ ಮಾಕ್ಸ್‌ವೆಲ್ ಸಾಹೇಬರು ಉದ್ಗರಿಸಿದರು!

ಮಹಾತ್ಮರ ಹಾಸಿಗೆಬಳಿಯಿಂದ!

ನನಗೆ ಹೊಸ ಆಸೆ, ಹೊಸ ಹುರುಪು ಬಂದಿದೆ, ಮಾನಕ್ಕೆ ಹೋದಾಗ ಎಲ್ಲವೂ ಅಂಧಕಾರವಾಗಿತು, ಮನಸಿನ ಚಿಂತೆ ಕಳವಳಹೋಗಿದೆ. ಆಶಾ ಭಾವನೆಯುಂಟಾಗಿದೆ. ಭಾರತ ಮುಖಂಡರು ಪುನ್ಹ ಸಭೆಸೇರಿ ಐಕ್ಯಮತ್ಯಪ್ರಯತ್ನ ಮಾಡಬೇಕು. ಗಾಂಧಿಜಿ ಉಪವಾಸ ಪ್ರಕರಣವು ಹೊಸ ಸಂದರ್ಭವನ್ನುಂಟುಮಾಡಿದೆ ಯೆಂದು ಗಾಂಧಿಜಿ ಹೇಳುತ್ತಾರೆ.

ವೆಂಕಟೇಶ ಶಿವಭಕ್ತಿಯೋಗ ಸಂಘ

ಧ. ಆಶ್ರಯದಲ್ಲಿ ತಾ. ೧೧ರಂದು ಗೋಕರ್ಣನಾಥ ದೇವಾಲಯದಲ್ಲಿ ಸ್ವಾಮಿಶ್ರೀ ಗುರುಪ್ರಸಾದರಿಗೆ ಶ್ರೀ ಆರ್. ಕೆ. ಪ್ರಭುಗಳ ಅಧ್ಯಕ್ಷತೆಯಿಂದ ಒಂದು ಬೀಳ್ಕೊಡುವ ಸಮಾರಂಭವು ಜರಗಿತು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. 21/38. R. E. P. 94/43.

ವಾದಿ—ಎದ್ರಿರು ರಾಮ ರಾವ್.
ಪ್ರತಿವಾದಿರು—ಚೆರ್ಡಪ್ಪ ಯಾನೆ ಮಂಜುನಾಥ ಪ್ರಭು ಕೂಡಾ.

ಕಾರ್ಕಳ ತಾಲೂಕು ಯರುವುರು ಗ್ರಾಮದಲ್ಲಿರುವ ಶೇಶಗಿರಿ—ಹೆಗ್ಗಡೆ ವಿಧವೆ 4ನೇ ಎದ್ರಿನೇತ್ರಾವತಿ ಅಮ್ಮಗೆ ತಿಳಿಸಿದ್ದು—

ಮೇಲ್ಕಂಡ ಅಮ್ಮಲ್ಜಾರಿಯಲ್ಲಿ ನಿಮ್ಮ ಆಕ್ಷೇಪ ಇದ್ದರೆ ನೀವು ಸ್ವತಃ ಯಾ ವಕೀಲರ ಮುಖಾಂತರ ತಾ. 29—3—1943ಕ್ಕೆ ಹಗಲು ಘಂಟೆ 10ರ ವಳಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಪ್ಪಿದರೆ ನಿಮ್ಮನ್ನು ಶಿಕ್ಷಾ ನೂಡಲಾದೀತು—ತಿಳಿದಿರಲಿ.

(By order of the Court).

ಪುತ್ತೂರು. } (Sd.) B. Chidananda Rao
ತಾ. 5-3-43 } Vakil for Plaintiff.

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಲೆಕ್ಟರರ ಪ್ರಕಟಣೆ

ಮೈಸೂರು ಪ್ರಾಂತ್ಯದಲ್ಲಿ ಮಣಿರೋಳಿ, ತೀರ್ಥಳ್ಳಿ ವ ಶಿವಮೊಗ್ಗ ಎಂಬ ಗ್ರಾಮುಗಳಲ್ಲಿ ಪ್ಲೇಗು ರೋಗವು ಹಬ್ಬಿಕೊಂಡಿರುವದಾಗಿಯೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ತಾಗಿ ಇರುವ ಆಗುಂಬೆ ಗ್ರಾಮದಲ್ಲಿ ಇಲಿ ಬೀಳುವ ಕಾಟ ಇರುವದಾಗಿಯೂ ನಮ್ಮ ತಿಳುವಳಿಕೆಗೆ ಬಂದಿರುತ್ತದೆ. ಮೈಸೂರು ಪ್ರಾಂತ್ಯದಿಂದ ನಮ್ಮ ಜಿಲ್ಲೆಗೆ ಹಾದು ಬರುವ ಸೋಮೇಶ್ವರ, ಚಿಕ್ಕಮಗಳೂರು ವಸ್ತೆಯು ಹೆಚ್ಚಿನ ಜನ ಜಾನುವಾರು ರಪ್ತಾಗುವ ಮಾರ್ಗವಾಗಿರುವದಲ್ಲದೆ ಮೇಲೆ ಹೇಳಿದ ಗ್ರಾಮುಗಳಲ್ಲಿ ಪ್ಲೇಗು ರೋಗವು ಹಬ್ಬಿಕೊಂಡಿರುವ ಕಾರಣದಿಂದ ಆಗುಂಬೆಯಲ್ಲಿಯ ನಿವಾಸಿಕರಲ್ಲಿ ಅನೇಕರು ಈಗಾಗಲೇ ಪರದೇಶಕ್ಕೆ ಹೊರಟು ಹೋಗುವರೆ ಉದ್ಯುಕ್ತರಾಗಿರುವರಾಗಿ ತಿಳಿದು ಬರುತ್ತದೆ. ಈ ದೆಸೆಯಿಂದ ಮೈಸೂರು ಪ್ರಾಂತ್ಯದಲ್ಲಿ ಹಬ್ಬಿಕೊಂಡಿರುವ ಪ್ಲೇಗು ರೋಗವು ಪ್ರಯಾಣಿಕರಿಂದಾಗಿ, ಜಾನುವಾರುಗಳಿಂದಾಗಲೀ ದವಸಧಾನ್ಯಗಳ ಆಮದುಗಳಿಂದಾಗಲೀ ನಮ್ಮ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ ಪಸರಿಸುವ ಭಯವಿರುವ ಕಾರಣ ಸದ್ರಿ ರೋಗವು ಹಬ್ಬದಂತೆ ಏರ್ಪಾಡು ಮಾಡುವ ಸಂಬಂಧವಾಗಿ ನಮ್ಮ ಜಿಲ್ಲೆಯ ಗಡಿಯಲ್ಲಿ ಅಂದರೆ ಕಾರ್ಕಳ ತಾಲೂಕಿನ ನಾಡ್ಪಾಲು ಗ್ರಾಮದ ಸೋಮೇಶ್ವರ ಎಂಬಲ್ಲಿ ತಾ. ೧೦—೪—೧೯೪೩ರಿಂದ ಒಂದು ತಿಂಗಳ ವರೆಗೆ ಒಂದು ತನಿಖಿ ಡಿಪೋವನ್ನು ತೆರೆಯುವ ಏರ್ಪಾಡು ಮಾಡಿರುತ್ತದೆ. ಸದ್ರಿ ಡಿಪೋದಲ್ಲಿ ನೇಮಿಸಿರುವ ಪ್ಲೇಗು ಉದ್ಯೋಗಸ್ಥರು ಮೈಸೂರು ಸಂಸ್ಥಾನ ಅತ್ತಕಡೆಯಿಂದ ಸೋಮೇಶ್ವರ ಮಾರ್ಗವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಬರುವ ಎಲ್ಲಾ ಪ್ರಯಾಣಸ್ಥರನ್ನೂ ಅವರ ಸಾಮಾನುಗಳನ್ನೂ ಸಂಪೂರ್ಣ ತನಿಖಿ ಮಾಡುವಂತೆಯೂ ಪ್ರಯಾಣಸ್ಥರ ವಸ್ತ್ರಗಳನ್ನೂ ಸಾಮಾನುಗಳನ್ನೂ ಬಿಸಿಲಿಗೆ ಹಾಕಿ ಒಣಗಿಸುವಂತೆಯೂ ನೋಡಿಕೊಳ್ಳಲಿಕ್ಕೆ ಅವರಿಗೆ ಅಧಿಕಾರ ಕೊಟ್ಟಿದೆ. ಈ ಕಾರ್ಯದಲ್ಲಿ ಸರ್ವರೂ ಸಂಬಂದಪಟ್ಟ ಸರಕಾರಿ ಶಿಬಂದಿಯವರಿಗೆ ಅಗತ್ಯವುಳ್ಳ ಎಲ್ಲಾ ಸಹಾಯಗಳನ್ನು ಮಾಡಬೇಕು.

ಯುನಿವರ್ಸಿಟಿ ಕಮಿಶನ್

ಮಂಗಳೂರಿಗೆ ಮದ್ರಾಸ್ ಯುನಿವರ್ಸಿಟಿ ಕಮಿಶನಿನವರು—ವೈಸ್ ಚಾನ್ಸಲರಾದ ಎ. ಲಕ್ಷ್ಮಣ ಸ್ವಾಮಿ ಮುದಲಿಯಾರ್ ಅವರ ನಾಯಕತ್ವದಲ್ಲಿ ಬಂದಿದ್ದು, ಕಳೆದ ಶುಕ್ರವಾರ ಸ್ಯೆಂಟ್ ಏನ್ಸ್ ಹ್ಯಾಸ್ಕೂಲ್, ಸ್ಥಳೀಯ ಹಂಚುಕಾರ್ಖಾನೆಗಳನ್ನು ಸಂದರ್ಶಿಸಿ, ಗವರ್ನಮೆಂಟ್ ಕಾಲೇಜಿನ ಉತ್ಸವದಲ್ಲಿ ಭಾಗಿಗಳಾಗಿ, ಮರುದಿನ ಹಲವರಿಗೆ ಭೇಟಿಕೊಟ್ಟು, ಹಲವು ಡೆಪ್ಯುಟೇಶನುಗಳನ್ನು ಕೇಳಿ, ಸ್ಯೆಂಟ್ ಏನ್ಸ್ ಹ್ಯಾಸ್ಕೂಲ್, ಆಸ್ಪತ್ರೆ, ಗವರ್ನ್‌ಮೆಂಟ್ ಕಾಲೇಜುಗಳನ್ನು ಸಂದರ್ಶಿಸಿ, ಜಿಲ್ಲಾ ಮೆಡಿಕಲ್ ಸಂಘಕ್ಕೆ ಭೇಟಿ ಕೊಟ್ಟು, ಸ್ಯೆಂಟ್ ಎಲೋಶಿಯಸ್ ಕಾಲೇಜನ್ನು ಸಂದರ್ಶಿಸಿ, ಅಲ್ಲಿಂದ ಲೇಡೀಸ್ ಕ್ಲಬಿಗೂ ಬಂದು, ಸ್ಯೆಂಟ್ ಆಗ್ನೇಸ್ ಕಾಲೇಜಿನ ಉತ್ಸವದಲ್ಲಿ ಭಾಗಿಗಳಾಗಿ, ಕಳೆದ ಆದಿತ್ಯವಾರ ಮೈಲಿನಲ್ಲಿ ಹಿಂದಿರುಗಿದರು.

ಗವರ್ನ್ಮೆಂಟ್ ಕಾಲೇಜಿನ

ಹಳೇ ವಿದ್ಯಾರ್ಥಿಗಳ ಸಂಘದ ದಿನಾಚರಣೆ ತಾ. ೪ರಂದು ಬೆಳಗ್ಗೆ ನಿವೃತ್ತ ಜಿಲ್ಲಾ ಮೆಡಿಕಲ್ ಆಫೀಸರರಾದ ಡಾ॥ ಬಿ. ರಾಮ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಅಂದು ಆಟ, ಸತ್ಕಾರ ಕೂಟ, ಆ ವಿದ್ಯಾರ್ಥಿ ಸಂಘದ ಸಭೆಗಳು ಜರಗಿದವು.

"ಗವರ್ನ್ಮೆಂಟ್ ಕಾಲೇಜ್ ವರ್ಧಂತಿಯು ತಾ. ೫ರಂದು ಸಂಜೆ ಮದ್ರಾಸ್ ಯುನಿವರ್ಸಿಟಿ ವೈಸ್ ಛಾನ್ಸಲರಾದ ಡಾ॥ ಎ. ಲಕ್ಷ್ಮಣ ಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸಿನ ಕ್ವೀನ್ ಮೇರೀಸ್ ಕಾಲೇಜಿನ ಪ್ರೊಫೆಸರ್ ಶ್ರೀಮತಿ ಟಿ. ಎನ್. ರಾಮ ಮೂರ್ತಿ ಅವರು ಬಹುಮಾನ ವಿತರಣೆ ನಡೆಸಿದರು.

ಗವರ್ನ್‌ಮೆಂಟ್ ಕಾಲೇಜಿನ ಹಳೇ ವಿದ್ಯಾರ್ಥಿಗಳ ಶಿಷ್ಟಮಂಡಲ ಒಂದು ಕಳೆದ ಶನಿವಾರ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರರ ಬಳಿ ಸಾರಿ ಈ ಕಾಲೇಜನ್ನು ಫಸ್ಟ್ ಗ್ರೇಡ್ ಕಾಲೇಜಾಗಿ ಪರಿವರ್ತಿಸಬೇಕೆಂದು ಪ್ರಾರ್ಥಿಸಿದಾಗ, ಅವರ ಈ ಕಾರ್ಯದಲ್ಲಿ ತಮ್ಮಿಂದಾದ ಯಾವತ್ತು ಸಹಾಯವನ್ನೂ ಮಾಡುವೆವೆಂದು ಭರವಸೆ ಹೇಳಿ, ಈ ಯುದ್ಧ ಕಾಲದಲ್ಲಿ ಅದಕ್ಕೆ ಬೇಕಾಗುವ ಹಣದ ವಿನಿಯೋಗದ ಸಂಬಂಧವಾದ ಅಡಚಣೆಯನ್ನು ಸೂಚಿಸಿ, ಸಾರ್ವಜನಿಕರಿಂದ ದ್ರವ್ಯಸಹಾಯವಾದರೆ ಆ ಕೆಲಸ ಸುಲಭವಾಗುವುದೆಂದು ತಿಳಿಸಿದರು.

ಜಿಲ್ಲಾ ಪೀರಿಯಾಡಿಕಲ್ ಕಾನ್ಫರೆನ್ಸ್

ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗಿ ಹಳೇ ಮದಗಗಳ ಜೀರ್ಣೋದ್ಧಾರದ ಕಾರ್ಯದ ಪ್ರಶ್ನೆಯನ್ನು ರೆವಿನ್ಯೂ ಡಿವಿಜನಲ್ ಆಫೀಸರುಗಳ ವಿಮರ್ಶೆಗೆ ಒಳಪಡಿಸಬೇಕೆಂದಾಯಿತು. ಆಹಾರ ಸಾಧನಗಳನ್ನು ಹೆಚ್ಚಾಗಿ ಬೆಳಸಿರೆಂಬ ಚಳವಳಕ್ಕೆ ಬೆಂಬಲ ಕೊಡುವಂತೆ ಮದಗ (ನೀರನ್ನು ಕೂಡಿಸಿಡುವ ಜಲಾಶ್ರಯ) ಗಳನ್ನು ಜೀರ್ಣೋದ್ಧಾರ ಮಾಡಬೇಕೆಂಬ ಸೂಚನೆ ಬಂದಿವೆ.

ನಿಧನ

ಕೇಂದ್ರ ಎಸೆಂಬ್ಲಿಯ (ಹಿಂದೀ ಕ್ರೈಸ್ತರ ಪ್ರತಿನಿಧಿ) ಸದಸ್ಯರಾದ ಡಾ॥ ಎಫ್. ಎಕ್ಸ್. ಡಿ'ಸೋಜರು, ಹೊಸದಿಲ್ಲಿಯಲ್ಲಿ ಅಲ್ಪ ಕಾಲದ ಅನಾರೋಗ್ಯದಿಂದ ವಿಧಿವಶರಾದರು. ಇವರು ಇಂಡಿಯನ್ ಸಿವಿಲ್ ಸರ್ವಿಸಿನ ಒಬ್ಬ ನಿವೃತ್ತ ಅಧಿಕಾರಿಗಳು; ಅವರು ಸ್ವಲ್ಪ ಕಾಲ ಸಿಂಧಿನಲ್ಲಿ ಜುಡೀಶಿಯಲ್ ಕಮಿಶನರಾಗಿದ್ದರು. ಈ ಮಹನೀಯರು ದಕ್ಷಿಣ ಕನ್ನಡ ಜಿಲ್ಲೆಯವರು.

ಕೈಲಾಸವಾಸಿ ಬಸ್ತಿ ದೇವಪ್ಪ ಶೆಣ್ಯೆಗಳು

ಮಂಗಳೂರಿನ ಪ್ರಸಿದ್ಧ ವ್ಯಾಪಾರಿಗಳೂ, ಸುಪ್ರಸಿದ್ಧ ಕ್ರಿಕೆಟ್ ಆಟಗಾರರೂ ಆದ ಶ್ರೀ ಬಸ್ತಿ ದೇವಪ್ಪ ಶೆಣ್ಯೆಯವರು ಹೃದ್ರೋಗದಿಂದ ದಿವಂಗತರಾದರು. ದಿವಂಗತರ ನಿಧನದ ಬಗ್ಗೆ ಬಂದರದಲ್ಲಿ ಹರತಾಳವಿತ್ತು. ಮೃತರ ಆತ್ಮಗಳಿಗೆ ಶಾಂತಿ ಇರಲಿ!

ಕೆನರಾ ಚೇಂಬರ್ ಆಫ್ ಕಾಮರ್ಸ್

ಅದರ ವಾರ್ಷಿಕಸಭೆಯು ಪ್ರೈ, ತಾ. ೩ರಂದು ಶ್ರೀ ಮಿಜಾರ್ ಗೋವಿಂದಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರ್ಷದ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಶ್ರೀ॥ ಕಸ್ತೂರಿ ನಾಗೇಶ ಪೈ ಅವರು ಮುಂದಿನ ಅಧ್ಯಕ್ಷರು.

೪,೫೦೦ ಮಂದಿ

ಸಹಿ ಮಾಡಿರುವ ಮನವಿಯೊಂದನ್ನು ಮದ್ರಾಸಿನ ಗವರ್ನರರಿಗೆ ಶ್ರೀ॥ ಸಿ. ಎಲ್. ಲೋಬೊ ಅವರು ಕಳುಹಿಸಿರುವರು. ಜಿಲ್ಲೆಯಲ್ಲಿ ಸಾಕಷ್ಟು ಅಕ್ಕಿ ಇಲ್ಲವೆಂದೂ ಬೇಕಾದ ಅಕ್ಕಿಯು ಇತರ ಸ್ಥಳಗಳಿಂದ ಇಲ್ಲಿಗೆ ಕಳಿಸಲ್ಪಡುವ ವ್ಯವಸ್ಥೆಯಾಗಬೇಕೆಂದೂ ಆ ಮನವಿಯಲ್ಲಿ ಕೇಳಿಕೊಳ್ಳಲಾಗಿದೆ.

ಸತ್ಕಾರ

'ಬಾಂಬೆ ಕ್ರಾನಿಕಲ್' ಪತ್ರಿಕೆಯ ಉಪ ಸಂಪಾದಕರಾದ ಶ್ರೀ॥ ಆರ್. ಕೆ. ಪ್ರಭುಗಳು ಮಂಗಳೂರಿಗೆ ಆಗಮಿಸಿದ್ದು ತಾ. ೫ರಂದು ಸಂಜೆ 'ಪ್ರಭಾತ' ಆಫೀಸಿನಲ್ಲಿ ಪ್ರಕಾಶ ಸಂಸ್ಥೆಯ ಕಾರ್ಯಕಾರಿ ಮಂಡಳಿಯು ಆತಿಥ್ಯವನ್ನು ಸ್ವೀಕರಿಸಿದರು. ಸಂಸ್ಥೆಯ ಸದಸ್ಯರಲ್ಲನೇಕರು ಭಾಷಣವಿತ್ತರು.

ತಾ. ೬ರಂದು ಸಂಜೆ ವಿ. ಸಿ. ಎಂ. ಕಟ್ಟಡದಲ್ಲಿ ಶ್ರೀ ಆರ್. ಕೆ. ಪ್ರಭುಗಳಿಗೆ ನಗರದ ಪತ್ರಿಕೋದ್ಯೋಗಿಗಳು ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಪತ್ರಿಕೋದ್ಯಮಿಗಳಿಗೆ ಶ್ರೀ ಪ್ರಭುಗಳು ಹಲವು ಹಿತಸೂಚನೆಗಳನ್ನಿತ್ತರು. ಬೊಂಬಯಿಯಿಂದ ಬಂದಿದ್ದ ಅಲ್ಲಿನ ಕರ್ನಾಟಕ ಎಸೋಸಿಯೇಶನಿನ ಕಾರ್ಯದರ್ಶಿ ಶ್ರೀ ಮಾರ್ಟಿಸರು ಆ ಸಂಘದ ಚಟುವಟಿಕೆಗಳ ಕುರಿತು ವಿವರಿಸಿ ಜಿಲ್ಲೆಯ ಪತ್ರಿಕೋದ್ಯಮಿಗಳು ಸಂಘದ ಕಾರ್ಯಕಲಾಪದ ವಿಷಯ ಹೆಚ್ಚಿನ ಪ್ರಚಾರ ಕೊಡಬೇಕೆಂದು ಕೇಳಿಕೊಂಡರು.

'ರಾಷ್ಟ್ರಬಂಧು' ವಿನ ಉಪ ಸಂಪಾದಕರಾದ ಮದ್ರಾಸಿಗೆ ವರ್ಗಾಯಿಸಲ್ಪಟ್ಟ ಶ್ರೀ ಕೆ. ಕೃಷ್ಣರಾಯರಿಗೆ ಕಳೆದ ಶನಿವಾರ ಸಂಜೆ ಡಿ. ಸಿ. ಎಂ. ಶಾಲಾ ಭವನದಲ್ಲಿ ದ. ಕ. ಜಿಲ್ಲಾ ಪತ್ರಿಕೋದ್ಯಮಿ ಸಂಘದವರು ಒಂದು ಸತ್ಕಾರ ಕೂಟವನ್ನೇರ್ಪಡಿಸಿ ಬೀಳ್ಕೊಟ್ಟರು. ಸಂಘದ ಅಧ್ಯಕ್ಷರಾದ ಶ್ರೀ ಎಚ್. ಭೀಮರಾಯರು ಶ್ರೀ ಕೃಷ್ಣರಾಯರ, ಸಮಾಜಸೇವೆ, ಪತ್ರಿಕಾಸೇವೆ ಮೊದಲಾದ ಹಲವು ಕಾರ್ಯಕಲಾಪದ ಕುರಿತು ಪ್ರಶಂಸಿಸಿ ಮಾತನಾಡಿದರು. ಶ್ರೀ ಕೃಷ್ಣರಾಯರು ಸಂದರ್ಭೋಚಿತ ಉತ್ತರವಿತ್ತರು.

ಸ್ಯೆಂಟ್ ಅಗ್ನೇಸ್ ಕಾಲೇಜಿನ

ವರ್ಧಂತಿಯು ಕಳೆದ ಶನಿವಾರ ಮದ್ರಾಸ್ ಯುನಿವರ್ಸಿಟಿ ವೈಸ್ ಛಾನ್ಸಲರು ಶ್ರೀ ಲಕ್ಷ್ಮಣ ಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಲೇಜಿನ ವರದಿಯನ್ನು ಮಿಸೆಸ್ ಎಚ್. ರೊಡ್ರಿಗ್ಸ್‌ರು ಓದಿದರು. ಅಧ್ಯಕ್ಷರಿಂದ ಬಹುಮಾನ ವಿತರಣದ ಬಳಿಕ 'ವಿವಿಧ ವಿನೋದಾವಳಿಗಳಾದವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಈ ಕಾಲೇಜಿನವರು ನಿಯೋಗಿಸಿದ 'ಗೃಹಕೃತ್ಯ ಶಾಸ್ತ್ರ'ವನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದಿರುವ ಕುರಿತೂ ಇತರ ಚಟುವಟಿಕೆಗಳ ಕುರಿತು ಪ್ರಶಂಸಿಸಿ ಮುಂದಿನ ವರ್ಷ ಯಾವಾಗಲಾದರೂ ಈ ಆಧಿಪತ್ಯದ ಮಹಿಳಾ ಕಾಲೇಜುಗಳ ಮುಖ್ಯಾಧಿಕಾರಿಗಳದೊಂದು ಪರಿಷತ್ತು ನಡೆಸುವಂತೆ ಏರ್ಪಡಿಸಿ, ಆ ಸಭೆಯು ಮಹಿಳಾ ಶಿಕ್ಷಣದ ವಿಚಾರಗಳನ್ನು ಸಮಾಲೋಚಿಸಲಾಗುವುದೆಂದರು.

ಮಹಿಳೆಯರಿಗಾಗಿ ಎಲ್. ಟಿ. ಶಿಕ್ಷಣ

ಯುನಿವರ್ಸಿಟಿ ಕಮಿಶನಿನವರು ಇಲ್ಲಿನ ಸ್ಯೆಂಟ್ ಏನ್ಸ್ ಹ್ಯಾಸ್ಕೂಲ್ ಮತ್ತು ಮಹಿಳೆಯರ ಸೆಕೆಂಡರಿ ಟ್ರೈನಿಂಗ್ ಶಾಲೆಗಳಲ್ಲಿ ಮಹಿಳೆಯರಿಗಾಗಿ ಎಲ್. ಟಿ. ಶಿಕ್ಷಣ ಕೊಡುವ ಕುರಿತು ಪರ್ಯಾಲೋಚಿಸಿದರು. ಅವರು ಬಹುಶಃ ಇಲ್ಲಿ ಆ ಕ್ಲಾಸುಗಳ ಏರ್ಪಾಡಿಗಾಗಿ ಶಿಫಾರಸು ಮಾಡುವರೆಂದು ತಿಳಿದುಬಂದಿದೆ.

ಸಿನೆಟಿಗೆ ಚುನಾವಣೆ

ಉಡುಪಿ–ಮಂಗಳೂರು ಮುನಿಸಿಪಾಲಿಟಿಗಳ ಪಕ್ಷವಾಗಿ, ಮದ್ರಾಸ್ ವಿದ್ಯಾನಿಲಯದ ಸೆನೆಟಿನ ಸದಸ್ಯತ್ವಕ್ಕೆ ನಿಂತಿದ್ದ ಶ್ರೀಗಳಾದ ಅದೂರು ಲಕ್ಷ್ಮೀನಾರಾಯಣ ರಾವ್ (ಉಡುಪಿ ಮು. ಚೆಯರ್‌ಮ್ಯಾನ್ ಹಾಗೂ ಡಿ॥ ಬೋ॥ ವೈಸ್ ಪ್ರೆಸಿಡೆಂಟ್) ಅವರಿಗೆ ೨೫ ಓಟುಗಳೂ, ಮಂಗಳೂರು ಮು॥ ಕೌನ್ಸಿಲರ್ ಜನಾಬ್ ಯು. ಹಮ್ಮಬ್ಬ ಸಾಹೇಬ್ ಅವರಿಗೆ ೧೪ ಓಟುಗಳೂ, ಶ್ರೀ. ಎಂ. ರಾಮಚಂದ್ರ ಪೈ (ಮಂಗಳೂರು ಮು॥ ಕೌನ್ಸಿಲರ್) ಅವರಿಗೆ ೩ ಓಟುಗಳೂ ದೊರಕಿ ಮೊದಲನೆಯವರು ಜಯಶೀಲರಾದರು.

ಕಾರ್ಕಳ

ಶ್ರೀ ಮೊಳಹಳ್ಳಿ ಶಿವರಾಯರು ಅಕ್ಕಿ ಸಹಾಯದ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೋಸ್ಕರ ಕಳೆದ ತಾ. ೩ರ ದಿನ ರೆ. ಫಾ. ಸೋಜರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟವರ ಒಂದು ಸಭೆಯನ್ನು ಕೂಡಿಸಿದರು.

ಕುಮಾರ ಪರ್ವತ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಪ್ರೇಕ್ಷಣೀಯ ಸ್ಥಳಗಳಲ್ಲೊಂದಾದ ಕುಮಾರ ಪರ್ವತಕ್ಕೆ ಹೋಗುವ ನಿಮಿತ್ತವಾಗಿ ೨೫ನೇ/ಆದಿತ್ಯವಾರ ದಿನ ಬೆಳಗ್ಗೆ ೧೦ ಘಂಟೆ ಸಮಯಕ್ಕೆ ಪರ್ವತಾರೋಹಣ ಮಾಡುವ ಉದ್ದೇಶ ಒಂದು ಪಾರ್ಟಿಯು ಸುಬ್ರಹ್ಮಣ್ಯದಿಂದ ಹೊರಡುವ ಏರ್ಪಾಡು ಮಾಡೋಣಾಗಿದೆಯೆಂದು ತಿಳಿಯುತ್ತದೆ.

ಉಡುಪಿ

ಮುನ್ಸಿಪಲ್ ಸಭೆ

ಹೊಸತಾಗಿ ಆರಿಸಲ್ಪಟ್ಟ ಶ್ರೀ ಎಮ್. ರಾಘವೇಂದ್ರ ಭಟ್ಟರು ರಾಜಭಕ್ತಿ ಪ್ರಮಾಣ ಮಾಡಿದರು. ಮಹಾತ್ಮಾಜಿಯವರನ್ನು ಯಾವ ಶರ್ತಗಳೂ ಇಲ್ಲದೆ ಕೂಡಲೇ ಬಿಡುಗಡೆ ಮಾಡುವಂತೆ ವೈಸ್ ರಾಯರಿಗೆ ತಂತಿ ಮೂಲಕ ಕೌನ್ಸಿಲಿನ ಅಭಿಪ್ರಾಯ ತಿಳಿಸಲಾಯಿತು.

ಮಹಾತ್ಮಾಜಿಯವರ ಆಯುರಾರೋಗ್ಯದ ನಿಮಿತ್ತ ಉಡುಪಿ ಮತ್ತು ಕಟ್ಪಾಡಿ ಶ್ರೀ ವೆಂಕಟ್ರಮಣ ದೇವಸ್ಥಾನಗಳಲ್ಲೂ ಉದ್ಯಾವರ ಶ್ರೀ ವಿಠೋಬ ದೇವಸ್ಥಾನದಲ್ಲೂ ಪ್ರಾರ್ಥನೆಗಳಾದುವು.

ತಾ. ೬ರಂದು ಉಡುಪಿಯಲ್ಲಿ ಸಾರ್ವತ್ರಿಕ ಹರತಾಳವಿತ್ತು.

ಮುಂಬಯಿ

ಕಾರ್ನಾಡ ಸದಾಶಿವರಾವ್ ವಾಚನಾಲಯ

ದೇಶಭಕ್ತ ಕಾರ್ನಾಡ್ ಸದಾಶಿವರಾಯರ ಹೆಸರಿನಿಂದ ಮುಂಬಯಿಯಲ್ಲಿ ಸ್ಥಾಪಿತವಾದ ಉಚಿತ ವಾಚನಾಲಯ ಮತ್ತು ಗ್ರಂಥ ಭಂಡಾರದ ಪ್ರಥಮ ವಾರ್ಷಿಕೋತ್ಸವವು ಕಳೆದ ವಾರ ಶ್ರೀ ಎಸ್. ಎ. ಬ್ರೆಲ್ವಿಯವರ ಅಧ್ಯಕ್ಷತೆಯಿಂದ ಜರಗಿತು. ಆ ದಿನ ದೆ. ಭ. ಸದಾಶಿವರಾಯರ ಭಾವಚಿತ್ರ ಅನಾವರಣೋತ್ಸವವೂ ನಡೆಯಿತು. ಸದಾಶಿವರಾವ್ ಇನ್‌ಸ್ಟಿಟ್ಯೂಟ್ ಎಂಬ ಒಂದು ಸಂಸ್ಥೆಯೂ ಇಲ್ಲಿ ಸ್ಥಾಪಿತವಾಗಿದೆ.

ಪ್ರಿವಿ ಕೌನ್ಸಿಲಿನಲ್ಲಿ ಕಯ್ಯೂರ ಮೊಕದ್ದಮೆ

ಅಪೀಲಿಗೆ ಅಪ್ಪಣೆ ಸಿಗಲಿಲ್ಲ!

ಲಂಡನ್ ತಾ. ೪—ಈ ಹೊತ್ತು ಪ್ರಿವಿ ಕೌನ್ಸಿಲಿನಲ್ಲಿ ಕಯ್ಯೂರ ಮೊಕದ್ದಮೆ ವಿಚಾರಣೆಗೆ ಬಂದಿತ್ತು. ಆದರೆ ಬೋರ್ಡಿನವರು ಅಪೀಲಿಗೆ ಅಪ್ಪಣೆ ಕೊಡಲಿಲ್ಲ. ಬೋರ್ಡಿನಲ್ಲಿ ಲಾರ್ಡ ಆಟಕಿನ್, ಲಾರ್ಡ ಪ್ಯಾಂಕರಟನ್, ಸರ್ ಜಾರ್ಜ ರ್‍ಯಾಂಕಿನ ಮತ್ತು ಸರ್ ಮಾಧವನ್ ನಾಯರ್ ಇವರಿದ್ದರು. ಶ್ರೀ ಡಿ. ಎನ್. ಪ್ರಿಟ್ ಹಾಗು ಶ್ರೀ ವಿ. ಕೆ. ಕೃಷ್ಣ ಮೆನನರು ಆರೋಪಿಗಳ ಪರವಾಗಿ ಹಾಜರಿದ್ದರು. ಮತ್ತು ಜಿ. ಡಿ. ರಾಬರ್ಟ್ಸ ಹಾಗು ಆರ್. ಪ್ಯಾಂಡೂ ಇವರು ಸರಕಾರದ ಪರವಾಗಿ ವಾದಿಸಿದರು.

ಮಾಫಿ ಸಾಕ್ಷಿದಾರರ ಸಾಕ್ಷಿಗಳನ್ನು ನಂಬಿ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿರುವದೆಂದೂ, ಅವರು ಹೇಳಿದ್ದು ಮ ನಿಜವೇ ಹೇಗೆಂಬುದನ್ನು ಪರೀಕ್ಷಿಸಿ ನೋಡಲಾಗಿಲ್ಲವೆಂದೂ ಆರೋಪಿಗಳ ಪರವಾಗಿ ವಕೀಲರು ಹೇಳಿದರು.

ಹಿಂದುಸ್ಥಾನದಿಂದ ಬಂದ ಅಪೀಲುಗಳ ಸಂಬಂಧದಲ್ಲಿ ಮಾಡಲಾದ ನಿಯಮಗಳಲ್ಲಿ ಈ ಮೊಕದ್ದಮೆ ಬರುವದಿಲ್ಲೆಂದು ಬೋರ್ಡಿನವರು ಹೇಳಿ ಅಪೀಲಿಗೆ ಅಪ್ಪಣೆ ನಿರಾಕರಿಸಿದರು.

ಕಾಸರಗೋಡು ತಾಲೂಕು ಕಯ್ಯೂರಲ್ಲಿ ೧೯೪೧ರ ಮಾರ್ಚ ೨೮ನೇ ತಾರೀಕಿನ ದಿವಸ ಸುಬ್ರಾಯನೆಂಬ ಓರ್ವ ಪೋಲೀಸ್ ಕನಸ್ಟೇಬಲನ ಕೊಲೆಮಾಡಿದ್ದೆಂದು ಆರೋಪಿಸಿ ೬೦ ಜನರ ಮೇಲೆ ಖಟ್ಲೆ ಹಾಕಲಾಗಿತ್ತು. ಆರೋಪಿಗಳಲ್ಲಿ ಯಾರೂ ಕೊಲೆ ಮಾಡಿದ್ದು ಕಂಡು ಬರುವದಿಲ್ಲೆಂದು ಅಸೆಸರರು ಅಭಿಪ್ರಾಯ ಪಟ್ಟರೂ, ಮಂಗಳೂರ ಸೆಶನ್ಸ್ ಜಡ್ಜರು ೫ ಜನರ ಮೇಲೆ ಕೊಲೆಯ ಆರೋಪ ಹೊರಿಸಿ ನಾಲ್ವರಿಗೆ ಗಲ್ಲಿನ ಶಿಕ್ಷೆ ವಿಧಿಸಿ ಐದನೆಯವನು ೧೮ ವರ್ಷದೊಳಗಿನವನಿದ್ದುದರಿಂದ ಅವನ ವಿಷಯವನ್ನು ಪ್ರಾಂತಿಕ ಸರಕಾರದ ಕಡೆಗೆ ಕಳಿಸಿದರು ಮತ್ತು ಇಲ ಜನರನ್ನು ಬಿಡುಗಡೆ ಮಾಡಿ ಉಳಿದವರಿಗೆ ಬೇರೆ ಬೇರೆ ಅವಧಿಯ ಶಿಕ್ಷೆ ವಿಧಿಸಿದರು. ಆರೋಪಿಗಳು ಈ ಶಿಕ್ಷೆಯ ವಿರುದ್ಧ ಹ್ಯಾಕೋರ್ಟಿಗೆ ಅಪೀಲು ಮಾಡಿದ್ದರು. ಅಲ್ಲಿಯೂ ಶಿಕ್ಷೆ ಕಾಯಂ ಮಾಡಲ್ಪಟ್ಟಿತು.

ಸಿನೆಮಾ ಸುದ್ದಿ

ಮಮ್ತಾಜ್ ಶಾಂತಿ

…ಯ ಅಶಿಕ್ಷಿತ ಚಾಪಲ್ಯವನ್ನು ನಮ್ಮ … ಸಾಗರದವರು 'ಬಸಂತ್'ದಲ್ಲಿ ನೋಡಿದ್ದಾರೆ; ಮತ್ತೂ ಮತ್ತೂ ನೋಡಿದ್ದಾರೆ — ನೋಡಿ ನೋಡಿ ಮರುಳಾಗಿದ್ದಾರೆ. ಆಕೆ ಈಗ ಅದಕ್ಕಿಂತಲೂ ಶ್ರೇಷ್ಠತರವಾಗಿ ತನ್ನ ಅಭಿನಯ ನಾಟ್ಯ ನೈಪುಣ್ಯಗಳನ್ನು ತೋರಿಸಿದ್ದಾಳೆ 'ಬಾದಲಿ ದುನಿಯಾ' ಚಿತ್ರದಲ್ಲಿ! ಇದು ಮುರಾರಿ ಪಿಕ್ಚರ್ಸಿನವರ ಕೃತಿ. ತ್ರಿಲೋಕ ಕಪೂರ, ಕೆ. ಸಿ. ಡೇ, ಶ್ರಾಜಾದಿ ಮೊದಲಾದ ಪ್ರಖ್ಯಾತ ನಟವರ್ಗ ಇವರಲ್ಲಿ ಅಭಿನಯಿಸುತ್ತಾರೆ. ಮಮ್ತಾಜ್‌ಶಾಂತಿಯೇನೋ ಇತ್ತೀಚೆಗೆ ಸಿನೆಮಾ ಕ್ಷೇತ್ರಕ್ಕೆ ಪದಾರ್ಪಣ ಮಾಡಿದಳು. 'ಬಸಂತ'ದ ನಂತರ 'ಕಿಸ್ಮತ್'ನಲ್ಲಿ ನಟಿಸಿದ್ದಾಳೆ. ಈಗ 'ಬಾದಲಿ ದುನಿಯಾ'ದಲ್ಲಿ ನಟಿಸುವಳು. 'ಮಾಂಗ್ತಿ' ಪಂಜಾಬಿ ಚಿತ್ರದಲ್ಲಿ ಅವಳ ಅಪೂರ್ವ ನಟನೆ ಇದೆಯೆಂದು ಪ್ರಸಿದ್ಧವಾಗಿದೆ. ಈ ಎಲ್ಲಾ ಚಿತ್ರಗಳನ್ನು ನಾವು ಬೇಗನೇ ನೋಡಲುಂಟೆ?

ನಟನಟಿಯರ ಗಾಂಧೀ ಭಕ್ತಿ!

ಗಾಂಧಿಜಿಯೇನೋ ಸಿನೆಮಾವನ್ನು ಬಹಿಷ್ಕರಿಸಿದರು, ಆದರೆ ಸಿನೆಮಾ ನಟನಟಿಯರು ಗಾಂಧಿಜಿಯಲ್ಲಿ ಭಕ್ತಿಯನ್ನು ಬಿಟ್ಟಿಲ್ಲ. ಗಾಂಧಿಜಿ ಈ ಸಲ ಮಹೋಪವಾಸ ಕೈಕೊಂಡರೆಂಬ ಸುದ್ದಿ ಕೇಳಿ ಓರ್ವ ಪ್ರಸಿದ್ಧ ನಟಿ, ತನ್ನ ಸಾವಿರಾರು ರೂಪಾಯಿ ಸಂಪಾದನೆಯ ಒಂದು ಕಾರ್ಯಕ್ರಮವನ್ನು ಬಿಟ್ಟು ಬಿಟ್ಟು, ಮನೆಯಲ್ಲೇ ಉಳಿದು, ಒಂದು ದಿನ ಸಹಾನುಭೂತಿಪರ ಉಪವಾಸಮಾಡಿದಳು! ಆಂಧ್ರತಾರೆಯೊಬ್ಬಳು, ಎಂಟು ದಿನಗಳ ಸಹಾನುಭೂತಿಪರ ಉಪವಾಸಮಾಡಿದ್ದು ಮಾತ್ರವಲ್ಲ ಸಾವಿರಮಂದಿ ಬಡಬಗ್ಗರಿಗೆ ಗಾಂಧಿಜಿ ಹೆಸರಲ್ಲಿ ಅನ್ನವಿತ್ತಳು. ಇಬ್ಬರು ಪ್ರಹಸನ ನಟರು ಹಲವು ದೇವಾಲಯಗಳಲ್ಲಿ ಗಾಂಧಿಜಿ ಆಯುರಾರೋಗ್ಯಗಳಿಗೆ ಅರ್ಚನೆ ಆರಾಧನೆ ನಡೆಸಿದರು. ಕಲಾಜೀವಿಗಳಲ್ಲಿ ರಾಷ್ಟ್ರೀಯತೆ ಕಡಿಮೆಯೆನ್ನುವವರಾರು?

ಖಾದೀಧಾರಿ ಪ್ರಿಥ್ವಿರಾಜ್

ಸಿನೆಮಾ ನಟರಲ್ಲಿ ಪ್ರಿಥ್ವಿರಾಜನು ಖಾದಿಧಾರಿ! ಪೂರ್ಣ ಖಾದಿವೇಷ ಅವನದು, ಅವನ ಉನ್ನತ ಸೌಧದ ಮೇಲೆ ತ್ರಿವರ್ಣರಂಜಿತ ರಾಷ್ಟ್ರಧ್ವಜವು ನಿತ್ಯ ಹಾರಾಡುತ್ತಿದೆ! ರಾಷ್ಟ್ರದ ಸ್ವಾತಂತ್ರ್ಯದ ಬಗ್ಗೆ ಆತನಿಗೆ ಅತುಲ ಹಂಬಲವಿದೆಯಂತೆ! ಮುಂದೆ ಸಿನೆಮಾ ಜೀವನಬಿಟ್ಟು ಎಲ್ಲಿಯಾದರೂ ರಾಜಕೀಯ ಲೋಕಕ್ಕೆ ಕಾಲಿಡಲೂ ಬಹುದೆ?

ಜಗಳ ಮಾಡದಿದ್ದರೆ

ನಟಿಯಾಗುವುದಿಲ್ಲವೇನೊ? ನಟಿಯಾದವಳಿಗೆ ಜಗಳ ಮಾಡದಿರುವುದೂ ಸಾಧ್ಯವಿಲ್ಲವೇನೊ? ಶಾಂತಾ ಆಪ್ಟೆಯ ತಂಗಿಯಾಗಿದ್ದಾಳಂತೆ ಮುಮ್‌ತಾಜ್ ಶಾಂತಿಯೊಗ, ಎಂದರೆ ಮೊಹಬತ್ ಚಿತ್ರಾ ನಿರ್ಮಾಪಕರೊಡನೆ— ಮುಮ್‌ತಾಜ್ ಜಗಳ ಮಾಡಿದಳು. ಇದರಿಂದ ಆ ಚಿತ್ರದ ನಿರ್ಮಾಣ ಅರ್ಧದಲ್ಲಿಯೇ ನಿಂತಿತು. ಆದರೆ ಸದ್ಯವೇ ಈ ಕಲಹವು ಕೊನೆಗೊಂಡು ಚಿತ್ರನಿರ್ಮಾಣ ಮುಂದುವರಿಯಲಿದೆಯೆಂಬ ಸಂತೋಷದ ಸುದ್ದಿಯೂ ಬಂದಿದೆ.

ಸಂಗೀತದಲ್ಲಿ ಸೈಗಲನನ್ನು

ಮೀರಿದವರಿಲ್ಲ ಸಿನೆಮಾಲೋಕದ ನಟರಲ್ಲಿ. ಆದರೆ ಆತನ ದುರದೃಷ್ಟವನ್ನ ಬೇಕು, ಗಾಯನ ಕಚ್ಚೇರಿಯಲ್ಲಿ ಆತನ ಸಂಗೀತ ಕೇಳಿ ಬೇಸರಗೊಂಡವರೇ ಬಹಳ ಮಂದಿ. ಸೈಗಲನ ಸಿನೆಮಾ ಸಂಗೀತವನ್ನು ಕೇಳಿ ಮರುಳುಗೊಂಡವರು, ಆತನನ್ನು ಗಾಯನ ಕಚೇರಿಗೆ ಆಗಾಗ ಕರೆಯುತ್ತಾರೆ. ದಿಲ್ಲಿ, ಮುಂಬಯಿ, ಕಲ್ಕತ್ತಾ ಮೊದಲಾದ ಲಾದ ಕಡೆಗಳಲ್ಲಿ ಸೈಗಲ್ ಗಾಯನ ಕಚೇರಿ ಏರ್ಪಡಿಸಿ, ಎಲ್ಲೆಲ್ಲೂ ನಿರಾಶೆ, ಅಸಂತೋಷ, ಅತೃಪ್ತಿಗಳೆ; ಮೊನ್ನೆ ಮೊನ್ನೆಯ ಘಟನೆಯಿದು— ಬರೋಡದಲ್ಲಿ ಸೈಗಲ ಗಾಯನ ಕಚೇರಿ ಏರ್ಪಡಿಸಲ್ಪಟ್ಟಿತು. ಪ್ರೇಕ್ಷಕವೃಂದ ಬೇಸರಗೊಂಡಿತು. ಕೆಲವರು ಸೈಗಲನ ಬಾಯಿ ಮುಚ್ಚಿಸಲು ಬೆಂಚು ಕುರ್ಚಿಗಳನ್ನು ಚೂರುಮಾಡಿದರಂತೆ! ಗಾಯನ ಕಚೇರಿ ವ್ಯವಸ್ಥಾಪಕರು ಹಿಂಬದಿಯಿಂದಲೇ ಪರಾರಿಯಾದರಂತೆ; ಇದೊಂದು ಆತನ ದುರದೃಷ್ಟ; ನಾಟಕದ ನಟ ನಟಿಯರು ಸಿನೆಮಾದಲ್ಲಿ ಸೋಲುವಂತೆ!



ಹಳ್ಳಿಯ ಭವಿಷ್ಯ

ಪ್ರತಿ ೧೦ ಮಂದಿ ಭಾರತೀಯರಲ್ಲಿ ೯ ಮಂದಿ ಹಳ್ಳಿಗರು. ಇಂಡಿಯದಲ್ಲಿ ಒಟ್ಟು ೭೫೦,೦೦೦ ಹಳ್ಳಿಗಳಿವೆ ಅವುಗಳಲ್ಲಿ ೩೪೦ ಲಕ್ಷ ಸಂಸಾರಗಳು ವಾಸಿಸುತ್ತವೆ ಸ್ವರಾಜ್ಯವನ್ನು ಸಾಧಿಸಿದ ಇಂಡಿಯ ತತ್‌ಕ್ಷಣವೇ ತನ್ನ ಪ್ರೇಮಮಯ ಆಸಕ್ತಿಯನ್ನು ಪ್ರಸರಿಸುವುದು ಈ ಹಳ್ಳಿಗಳ ಕಡೆಗೇ. ಏಕೆಂದರೆ, ಹಳ್ಳಿಗಳೇ ಇಂಡಿಯ; ಅವೇ ಇಂಡಿಯದ ಭೂತ, ವರ್ತಮಾನ, ಭವಿಷ್ಯತ್ತುಗಳು, ನಮ್ಮ ರಾಷ್ಟ್ರ ಜೀವನದ ಬೇರು, ಅಸೀಮಾಂತವಾದ ನಮ್ಮ ನಾಡಿನ ಬಯಲುಗಳಲ್ಲೂ, ನಿರ್ಜನವಾದ ಗುಡ್ಡಗಳಲ್ಲೂ ಅಡಗಿರುವ ಈ ಗುಡಿಸಿಲ ಗುಂಪುಗಳಲ್ಲಿ ಹಬ್ಬಿದೆ ಹಳ್ಳಿಗರ ಜೀವನದ ಮಟ್ಟವನ್ನು ಮೇಲ್ಪಡಿಸುವುದರಿಂದ ಮಾತ್ರ ಇಂಡಿಯಾದ ನೈಜ ಐಶ್ವರ್ಯವನ್ನು ಬೆಳೆಸಬಹುದು ನೈಸರ್ಗಿಕ ಅನುಕೂಲ್ಯಗಳನ್ನು ಪೂರ್ತಿಯಾಗಿ ವೃದ್ಧಿಗೊಳಿಸ ಬಹುದು

ಹಳ್ಳಿಗಳ ಅವಶ್ಯಕತೆಗಳಿಗೆ ಲಕ್ಷ್ಯಕೊಡುವುದರಿಂದ ಮಾತ್ರ ಇಂಡಿಯ- ರಷ್ಯಾ, ಚೀಣಾಗಳಂತೆ—ಹೊಸ ಹುಟ್ಟನ್ನು ಹೊಂದಬಹುದು

ಸಹಸ್ರಾರುಮಂದಿ ಸುಶಿಕ್ಷಿತ ಸ್ತ್ರೀ ಪುರುಷರು ನಗರಗಳನ್ನು ಬಿಟ್ಟು ಹಳ್ಳಿಗಳಿಗೆ ಹೋಗಿ ಹಳ್ಳಿಗರೊಡನೆ ಬೆರೆತು ಕೆಲಸಮಾಡಿದರೆ ಮಾತ್ರ ಅಪಾರವಾದ ಈ ಪುನರ್ರಚನೆಯ ಕಾರ್ಯ ಸಾಧ್ಯ. ಬೇರೆ ಇನ್ನಾರೂ ಈ ಕಾರ್ಯವನ್ನು ಸಾಧಿಸಲಾರರು

ಜಪಾನೀಯರ ಆಧಿಪತ್ಯದಲ್ಲಿ ನಮ್ಮ ನಾಡಿನ ಸುಶಿಕ್ಷಿತರು ಅಂತಹ ಕಾರ್ಯಕ್ರಮವನ್ನು ಕೈಗೊಳ್ಳಲು ಅವಕಾಶವೇ ಇಲ್ಲ—ಆ ಕಾರ್ಯಕ್ರಮ ಯಶಸ್ವಿಯಾಗ ಬೇಕಾದರೆ, ಅವಶ್ಯಕವಾಗಿ ಬೇಕಾದ ಕ್ರಾಂತಿಕಾರಕ ಆರ್ಥಿಕ ಬದಲಾವಣೆಗಳನ್ನು ಸೂಚಿಸಲಂತೂ ಸಾಧ್ಯವೇ ಇಲ್ಲ.

ಮುಂದಿನಂತೆ, ಇಂದುಕೂಡ ಸುಶಿಕ್ಷಿತ ಭಾರತೀಯರು, ಹಳ್ಳಿಗರಿಗೆ ಮಾರ್ಗ ತೋರಬೇಕು ನಮ್ಮ ರೈತರಿಗೆ ಮಾರ್ಗ ತೋರಿರಿ-ಅವರು ಜಪಾನೀ ಆಕ್ರಮಣವನ್ನು ನಿರೋಧಿಸುವರು.

ನೀವೇ ಯೋಚನೆ ಮಾಡಿ ನೋಡಿರಿ ಒಂದುಗೂಡಿ ವರ್ತಿಸಿರಿ

ಇದೇ ರಾಷ್ಟ್ರೀಯ ಯುದ್ಧ ಮುಖ

CPU-G.B. KN

ಕಿಶೋರ್ ಶಾಂತಿ 'ಸವಾಲ್'

ಕಿಶೋರ್ ಶಾಹು ಮತ್ತು ಮುಮ್‌ತಾಜ್ ಶಾಂತಿಯರು ನಾಯಕನಾಯಕಿಯರಾಗುತ್ತಾರೆ ಗೀತಾಂಜಲಿ ಪಿಕ್ಚರ್ಸಿನವರು 'ಸವಾಲ್' ಚಿತ್ರದಲ್ಲಿ. ಈ ಚಿತ್ರಸಂಸ್ಥೆ ಹೊಸತಾಗಿ ಈಗ ಸ್ಥಾಪಿತವಾದುದು.

ಸಿನೆಮಾದಲ್ಲಿ ಚಾಣಕ್ಯ!

ಚಾಣಕ್ಯತಂತ್ರದ ವಿಷಯ ಕೇಳದ ಭಾರತೀಯರಿಲ್ಲ. ನಂದವಂಶವನ್ನು ನಿರ್ಮೂಲ ಮಾಡಿ, ಅಮಾತ್ಯ ರಾಕ್ಷಸನ ಮಂತ್ರ ಶಕ್ತಿಯನ್ನು ಭಂಗಿಸಿ ಚಂದ್ರಗುಪ್ತನಿಗೆ ಪಟ್ಟ ಕಟ್ಟಿದ ಸಾಹಸಿಯಿತ, ಅರ್ಥ ಶಾಸ್ತ್ರಜ್ಞ, ರಾಜ ನೀತಿಜ್ಞನಾತ, ಈತನ ಕಥೆಯನ್ನು ಚಂದ್ರಗುಪ್ತ ಚಾಣಕ್ಯರ ರಮ್ಯ ಇತಿಹಾಸವನ್ನು ಪ್ರಕಾಶ ಕಂಪೆನಿಯವರು ತಯಾರಿಸಲಿದ್ದಾರೆ. ಅವರ 'ರಾಮ ರಾಜ್ಯ' ಪೂರ್ತಿಯಾದ ಕೂಡಲೇ ಇದರ ಕೆಲಸ ಆರಂಭವಾಗಲಿದೆ. ಇವರ 'ರಾಮ ರಾಜ್ಯ'ವು 'ಭರತ ವಿಲಾಪ'ಕ್ಕಿಂತಲೂ ಪ್ರಸಿದ್ಧವಾಗಬಹುದೆಂದು ನಂಬಲಾಗಿದೆ. ಶ್ರೀ ವಿಜಯ ಭಟ್ಟರೇ ನಿರ್ದೇಶಕರು.

"ಅವಳೆಲ್ಲಿ"?

ಸಿನೆಮಾ ನಟ ಹಸನ್‌ಬಾನ್, ಈಗ ಆವಳ ಅಭಿನಯದಿಂದ ಚಿತ್ರ ತಯಾರಿಸಲಿರುವ ಒಂದು ಸಂಸ್ಥೆಯವರು ಪೇಚಾಟಕ್ಕೆ ಬಿದ್ದಿದ್ದಾರೆ! 'ಅವಳೆಲ್ಲಿ?' ಎಂದು ಅವರು ಪ್ರಶ್ನಿಸುತ್ತಾರೆ!

ಪುಸ್ತಕಾವಲೋಕನ

ಮರದೆದುರಲ್ಲಿ*

'ಮಿತ್ರಮಂಡಳಿ'ಯ ಕಾರ್ಯಕಲಾಪಗಳನ್ನ ಕನ್ನಡಿಗರು ಶ್ರೀ ಜೆ. ವಾಮನಭಟ್ಟರ ಪರಿಚಯ ಮಾಡದಿರಲು ಸಾಧ್ಯವಿಲ್ಲ. 'ಮಿತ್ರಮಂಡಳಿ' ಸ್ಥಾಪಿತವಾದಂದಿನಿಂದಲೂ ಅದರ ವಿವಿಧ ಚಟುವಟಿಕೆಗಳಲ್ಲಿ ತಲ್ಲೀನರಾಗಿ ದುಡಿಯುವ ಅಚಲ ಸಾಹಿತ್ಯಭಕ್ತರಲ್ಲಿ ಅವರು ಮೊದಲಿಗರು. ಈಗಾಗಲೇ ತಮ್ಮ ಗದ್ಯ ಪದ್ಯ ಕೃತಿಗಳಿಂದ ಹಾಗೂ ಇತರ ಸಂಗ್ರಹ ಪ್ರಕಟಣೆಗಳಿಂದ ಕನ್ನಡ ವಾಙ್ಮಯ ಲೋಕಕ್ಕೆ ಅವರು ಪರಿಚಿತರು. ಈಗ ಶ್ರೀಮಾನ್ ಭಟ್ಟರು 'ಮರದೆದುರಲ್ಲಿ ಮತ್ತು ಇತರ ಕವಿತೆಗಳು' ಎಂಬ ತಮ್ಮ ಸ್ವಕೀಯ ಕವಿತೆಗಳನ್ನು ಸಂಗ್ರಹಿಸಿದ್ದಾರೆ. 'ಮಿತ್ರ ಮಂಡಳಿ'ಯವರು ಇದನ್ನು ತಮ್ಮ ಅಖಿಲಸೇವಾ ಗ್ರಂಥಮಾಲೆಯಲ್ಲಿ ೧೬ನೆಯ ಕುಸುಮವಾಗಿ ಪೋಣಿಸಿ ಕನ್ನಡಿಗರ ಕೈಗಿತ್ತಿದ್ದಾರೆ.

ಈ ಕವನ ಸಂಗ್ರಹಕ್ಕೆ ಡಾ॥ ಎಸ್. ಪಿ. ಭಟ್ಟರು 'ಮಾಲೆಯ ಪರವಾಗಿ ಮಾತ'ನ್ನು ಬರೆದಿರುವರು. ಇದರಲ್ಲಿ ಕವಿ ಪರಿಚಯ ಮತ್ತು ಕವಿತಾ ವಿಮರ್ಶೆಗಳನ್ನು ಕಿಂಚಿತ್ತಾಗಿಯಾದರೂ ಚಂದವಾಗಿ ಮಾಡಿದ್ದಾರೆ. ಶ್ರೀ ವಾಮನ ಭಟ್ಟರ 'ಬಿನ್ನಹ'ವೂ ಹೃದಯ ಸ್ಪರ್ಶಿ ಇದೆ. ತಮ್ಮ ಹಳೆಯ ನೆನಪುಗಳನ್ನು ಹಳೆ ಸಂಗಾತಿಗಳನ್ನು ಮಧುರವಾಗಿ ಇಲ್ಲಿ ಅವರು ಸ್ಮರಿಸಿದ್ದಾರೆ.

ಒಟ್ಟು ಇದರಲ್ಲಿ ಇಪ್ಪತ್ತೆಂಟು ಕವನಗಳಿವೆ. ಹೆಚ್ಚಿನವು ಪ್ರಕೃತಿಗೆ ಸಂಬಂಧಪಟ್ಟವು; ಪ್ರಕೃತಿಯಿಂದ ಸ್ಫೂರ್ತಿಗೊಂಡವು. ಆದರೂ ಕೇವಲ ವರ್ಣನಾತ್ಮಕಗಳಿರದೆ ಭಾವನಾ ಪ್ರಧಾನವಾಗಿರುವವೇ ಹೆಚ್ಚು. 'ಮರದೆದುರಲ್ಲಿ' ಎಂಬುದು ಮೊದಲ ಕವಿತೆ; ಈ ಸಂಗ್ರಹದಲ್ಲಿ ಇದೇ ಹಿರಿಯ ಕವಿತೆ. 'ನೇಸರನ ಬಿಸಿಲಲ್ಲಿ ಬಳಲಿ, ತಿಂಗಳಿನ ಜೊನ್ನದಾ ಸೊಂಪಿನಲಿ ತಣಿಯುತ್ತಿರುವ ಮರವೊಂದು, ತಂಬೆಲರ ಸೊಗಸಿಂಗೆ ತೂಗಿ ತುಂಬಿಗಳು ಹಾಡುಗಳನಾಲಿಸಂದು ನೆನೆಯುತ್ತ ಕೊರಲನ್ನು ಒಲೆದಾಡಿ ತಿರೆಯಲ್ಲಿ ತಿರವಾಗಿ ನಿಂತಿದೆ. ತರಗೆಲೆಗಳುದುರಿ ಚಿಗುರು ಮೂಡುವವು; ಕುಸುಮಗಳ ಪರಿಮಳಕ್ಕೆ ಬಂಡುಣಿಗಳೆರಗುವವು; ಬಿರಿಹೂವು ತೊಟ್ಟುದುರಿ ಬೀಳುವುವು; ಮರದ ಬಳಿ ಹಕ್ಕಿಗಳು ಹಾಡುವವು; ಹಸು ಮೇಳೆ ಮೆಲುಕಾಡುವವು, ಅಣುಗ ಅಣುಗಿಯರು ಬೈಗಿನಲ್ಲಿ ಅದರ ಬಳಿ ಹಾಡುತ್ತ ನಲಿಯುತ್ತ ಬರುವರು; ಕೊನೆಗೊಮ್ಮೆ ಗಿಡಬಳ್ಳಿ ಮರಪೊದರ ಹಸುರನ್ನು ಬಿಳ್ದಿಂಗಳಿಯ ಕಪ್ಪು ಆವರಿಸುವುದು. ಹೀಗೆ 'ಹಗಲನ್ನು ಕಟ್ಟಿರುಳು ಬೆಂಬತ್ತಿ ಬರಲು' ಮರವು ತಿರೆಯಲ್ಲಿ ತಿರವಾಗಿ ನಿಂತಿರುವುದು!' ಕವಿಯು ಇಂಥಾ 'ಮರದೆದುರಲ್ಲಿ' ನಿಂತು ಸಂಭಾಷಿಸುತ್ತಾನೆ; ಪ್ರಕೃತಿಯೊಡನೆ ತನ್ಮಯನಾಗಿ ತಾತ್ವಿಕ ಜೀವಿಯಾಗಿ ಸಂಭಾಷಿಸುತ್ತಾನೆ. ಉಪನಿಷತ್ ಕಾಲದ ರಸ ಋಷಿಗಳೂ ಇಂತು 'ಸನಾತನವಾದ ಅಶ್ವತ್ಥ' ವೃಕ್ಷದ ಎದುರಲ್ಲಿ ನಿಂತು ಮಾತನಾಡಿದ್ದಾರೆ. ರಸಿಕರು ಇದನ್ನು—ಇಲ್ಲಿನ ಹಲವು ಕವಿತೆಗಳನ್ನು—ಈ ದೃಷ್ಟಿಯಿಂದ ವಿಮರ್ಶಿಸಿದರೆ ಕವಿತೆಯ ಆಳವನ್ನು ಹೊಗಬಹುದು.

'ನಿವೇದನ' ಎರಡನೇ ಕವಿತೆ. ಕವಿಯು ತನ್ನ ಕಿರಿಯ ಸೇವೆಗಾಗಿ, ಪ್ರಕೃತಿ ಮಾತೆಯೊಡನೆಯೋ ಭರತಮಾತೆಯೊಡನೆಯೋ, ವಿಶ್ವಮಾತೆಯೊಡನೆಯೋ ಎಡೆಬಿಟ್ಟು ನಿವೇದಿಸಿಕೊಳ್ಳುತ್ತಾನೆ. ಈ ನಿವೇದನ ಹೃದಯಂಗಮವಾಗಿದೆ. ಮೂರನೆಯ ಕವಿತೆ 'ಕವಿತೆ'ಯ ಕುರಿತು. ನಾಲ್ಕನೆಯದು ಶ್ರೀ ಗೋವಿಂದ ಪೈಗಳ 'ಗಿಳಿವಿಂಡಿ'ಗೆ. 'ಸಾಗರದ ಮೇರೆಯಲ್ಲಿ' ಇದೂ ಒಂದು ತತ್ವಮಯ ಗೀತೆ. ಆ ಮೇಲಿನದು 'ಬಯಲಿನ ಸೊಬಗು'. 'ಈ ದಾರಿ ಹೊಸ ದಾರಿ.' 'ಭಿಕ್ಷಾಪಾತ್ರೆ' ಗೌತಮನದು. 'ನಡೆವ ನೆರಳು' ಒಂದು ಭಾವಗೀತೆ. 'ಈ ನನ್ನ ಲತೆ' ಪ್ರಕೃತಿ ಗೀತೆ. 'ಕುಡುಕು' (ಕುಡಿಕತನ?) ಒಂದು ಕಥಾ ಕವನ. 'ಕಳೆದ ವಿಜಯ ದಶಮಿ' ಕವಿಯ ಸಾಹಿತ್ಯ ಭಕ್ತಿಯ ನಿದರ್ಶನ. 'ಬಯಕೆ' ಪ್ರಕೃತಿಯ ಮಾಟದಿಂದ ಹುಟ್ಟಿದ್ದು. 'ಸಿರಿಪನ್ನೆ' ಐತಿಹಾಸಿಕ ಘಟನೆ. 'ಅಳಿವುಳಿವು' ಭಾವಗೀತೆ. 'ನಮ್ಮ ನಾಡು' ರಾಷ್ಟ್ರಗೀತೆ. 'ಪುಳಿನದಲಿ' ಕವಿ ಸಂತೋಷಗೊಂಡಿದ್ದಾನೆ. 'ದಿನ ಬರದಿತು' 'ಮನಸ್ಸಾಕ್ಷಿ' 'ಕರೆ' ಇವು ಭಾವಗೀತೆಗಳು. 'ವನಿತಾಂಗಿ' 'ಬಯಸಿದ ಬಸಿರು' 'ಅಯೋರೇ' 'ದುರ್ವಾಂಕುರದ ಚೆಲುವೆ' ಇವು ಪ್ರಕೃತಿ ಗೀತಗಳು. 'ಕವಿಯು ಯೂಥನಕ?' ಎಂಬುದು ಕವಿಯೊಡನೆ ಪ್ರಶ್ನೆ. 'ಮೈಸೂರು ಮಲ್ಲಿಗೆಗೆ' ಶ್ರೀ ನರಸಿಂಹಸ್ವಾಮಿಯವರ ಗ್ರಂಥಕ್ಕೆ. 'ಕನ್ನಡದ ಹಿರಿಯರಿರ' ಎಂಬುದು ನಮ್ಮ ನಾಡಿನ ಜನರನ್ನು ಕುರಿತು. 'ಹೂಕನಸು' ಕೊನೆಯದು ತತ್ವಮಯ ಪ್ರಗತಿ ಗೀತ; ಒಂದು ಸೊನೆಟ್.

ಶ್ರೀಮಾನ್ ಜೆ. ವಾಮನ ಭಟ್ಟರ ಕವಿತೆಗಳಲ್ಲಿ, ಕವಿತಾ ರಚನೆಯಲ್ಲಿ ಒಂದು ನೂತನತೆ, ಒಂದು ವೈಶಿಷ್ಟ್ಯವಿದೆ. ಪ್ರಕೃತಿ ಗೀತಗಳನ್ನೇ ಹೆಚ್ಚಾಗಿ ಇಲ್ಲಿ ನಾವು ಕಾಣಬಹುದಾದರೂ ಅದರಲ್ಲಿ ತತ್ವಗಳನ್ನು ಬೆರಸಿ, ಕವಿಗಳು ರಸಿಕರನ್ನು ತಾತ್ವಿಕ ಸೃಷ್ಟಿಗೆ ಎಳೆಯುತ್ತಾರೆ. ಇದು ಕುಸು ಕ್ಲಿಷ್ಟ ಶೈಲಿಯೆಂದರೂ ಸಾಹಿತ್ಯದಲ್ಲಿ ಇದೂ ಒಂದು ಸರಣಿಯೆಂಬುದನ್ನು ನಾವು ಅಲ್ಲಗಳೆಯುವುದಿಲ್ಲ. ವಾಕ್ಯ ರಚನೆಯೂ ಒಂದು ವಿಶಿಷ್ಟವಾದುದು. ಕನ್ನಡ, ಕೊಂಕಣಿ, ಇಂಗ್ಲಿಷು, ಸಂಸ್ಕೃತಗಳ ಮಿಶ್ರಣ ಸಂಸ್ಕಾರದಿಂದ ಈ ವಿಶಿಷ್ಟತೆ ಬಂದಿದ್ದರೂ ಇರಬಹುದು. ಹೆಚ್ಚಾಗಿ ಕನ್ನಡ ಪದಗಳನ್ನೇ ಬಳಸಿದ್ದಾರೆ. ಇವುಗಳೆಲ್ಲಾ ಬೇರೆ ಬೇರೆ ಕಾಲದಲ್ಲಿ ಬರೆದ ಕವಿತೆಗಳಾಗಿದ್ದು ಕೆಲವು ಕೇವಲ ಪ್ರಾರಂಭ ಕವನಗಳೂ ಇವೆ.

ಒಟ್ಟಿನಿಂದ ಹಲ ಕೆಲವು ವೈಶಿಷ್ಟ್ಯಗಳಾಗಿ ಶ್ರೀ ಭಟ್ಟರ ಕವಿತೆಗಳನ್ನು ಕನ್ನಡ ಸಾಹಿತ್ಯ ಸೇವಕರು ಅವಶ್ಯ ಓದಬೇಕು; ಓದಿ ರಸಾಸ್ವಾದಿಸಬೇಕು. ಕನ್ನಡ ವಾಙ್ಮಯ ಲೋಕದಲ್ಲಿ ಇಲ್ಲಿನ ಕೆಲವು ಕವನಗಳಾದರೂ ಒಂದು ಸ್ಥಾನಪಡೆಯಬಹುದು. ಕಾಗದದ ಅಭಾವದೀ ಕಾಲದಲ್ಲಿ ಇಂಥಾ ಒಂದು ಗ್ರಂಥವನ್ನು, ಅದರಲ್ಲಿಯೂ ಕವನ ಸಂಗ್ರಹವನ್ನು—ಪ್ರಕಟಿಪಡಿಸಿದ ಮಿತ್ರಮಂಡಳಿಯ ಹಾಗೂ ಶ್ರೀ ವಾಮನ ಭಟ್ಟರ ಸಾಹಸವನ್ನು ನಾವು ಕೊಂಡಾಡುತ್ತೇವೆ. ಕನ್ನಡಿಗರು ಈ ಸಾಹಸವನ್ನು ಪ್ರೋತ್ಸಾಹಿಸುವರೆಂದು ನಮ್ಮ ಭರವಸೆಯಾಗಿದೆ.

— ಕಯ್ಯಾರ

*ಮರದೆದುರಲ್ಲಿ ಮತ್ತು ಇತರ ಕವಿತೆಗಳು; ಕವಿ: 'ವಾಮನ' ಪ್ರಕಾಶಕರು: ಮಿತ್ರಮಂಡಳಿ, ಮಂಗಳೂರು, ಕ್ರೌನ್ ೧/೮ ಆಕಾರದ ೫೪+೮ ಪುಟಗಳು. ಬೆಲೆ ಎಂಟಾಣೆ.

THE

Canara Industrial & Banking Syndicate, Ltd.

(Incorporated in British India. Liability of Shareholders limit).

Estd.) Head Office: **UDIPI, S. India.** (1925.

ANNOUNCEMENT.

The remaining issue of the 5% Cumulative Preference Shares of the Bank will be sold at an increased rate of premium of Re. 1/- per share after 1st May 1943 as the Bank is compelled to make a larger provision for payment of In-come-tax according to increased rates of taxation. Subscription for the shares at the present rates will however be received at all our Branches till 15th April 1943.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು — ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ.

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2. ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು.

3. ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಲಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು.

4. ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು.

5. 28 ರಾತ್ತಲಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಸರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD. 1931

HEAD OFFICE — Mangalore. *BRANCHES* — Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆಬೇನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಕಟ್ಟು ವೇದನೆಗಳಿಗೂ ಎದೆನೋವು, [illegible] ಕಾಲು, ಚಾಚಿಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. — ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಅಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕ್ಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ರಾನ್ಸಿಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 19—3—1943 [ಸಂಚಿಕೆ 8]

ಭಾರತದ ಸಮಸ್ಯೆಯಲ್ಲಿ

ರೂಸ್‌ವೆಲ್ಟ್--ಕೈಶೇಕರು ಕೈಹಾಕಬೇಕು!'

ಅಮೆರಿಕದ ಮುಖಂಡರ ಒಂದು ವಿನಂತಿ

ಭಾರತದ ಮುಖಂಡರ ಪುನಃ ಪ್ರಯತ್ನ.

'ಗಾಂಧಿಜಿಯವರನ್ನು ಬಿಟ್ಟುಬಿಡಿರಿ'

ಮಹಾತ್ಮರನ್ನು ಅನಿರ್ಬಂಧವಾಗಿ ಬಿಡುಗಡೆ ಮಾಡಿರೆಂದು ಗಾಂಧಿಜಿಯ ಉಪವಾಸ ಕಾಲದಲ್ಲಿ ಉದ್ವಿಗ್ನರಾದ ಅಖಿಲ ಭಾರತದ ಮುಖಂಡರೆಲ್ಲರೂ ಸೇರಿ, ವೈಸರಾಯರನ್ನು, ಬ್ರಿಟಿಷ್ ಸರಕಾರವನ್ನೂ ಕೇಳಿಕೊಂಡಿದ್ದರಷ್ಟೆ? ಅಂದು ಆ ವಿನಂತಿಯೇನೋ ಸರಕಾರದಿಂದ ತಿರಸ್ಕೃತವಾಯಿತು. ಆದರೆ ಈಗ ಮಹಾತ್ಮರು ಗಂಡಾಂತರವೇನೂ ಒದಗದೆ ಉಪವಾಸವನ್ನು ಯಶಸ್ವಿಯಾಗಿ ಕೊನೆಗಾಣಿಸಿದರು ಮಹಾತ್ಮರ ಉಪವಾಸದ ಪರಿಣಾಮವಾಗಿ ಭಾರತದ ರಾಜಕೀಯದಲ್ಲುಂಟಾದ ಹೊಸ ಪರಿಸ್ಥಿತಿಯನ್ನು ಗಮನಿಸಿ ಪುನಃ ಅಖಿಲ ಭಾರತದ ಮುಖಂಡರೆಲ್ಲರೂ ಬೊಂಬಯಿಯಲ್ಲಿ ಜಯಕರರ ಮನೆಯಲ್ಲಿ ಸಭೆ ಸೇರಿದರು, ಈ ಸಲವೂ ಸರ್ ಸಪ್ರುಗಳೇ ಅಧ್ಯಕ್ಷತೆ ವಹಿಸಿದರು ಗಾಂಧಿಜಿಯ ಪಾರಣೆಯ ಅನಂತರದ ಭಾರತದ ಪರಿಸ್ಥಿತಿಯನ್ನು ಅಲ್ಲಿ ಅವರು ಚರ್ಚಿಸಿದರು ಕೊನೆಗೆ ಎಲ್ಲರೂ ಸೇರಿ ಒಂದು ವಿನಂತಿ ಹೊರಡಿಸಿದ್ದಾರೆ ಅದಕ್ಕೆ ಸಪ್ರು, ಜಯಕರ್, ರಾಜಾಜಿ, ಮುನ್ಶಿ ಭೂಲಾಬಾಯಿ ವಿರ್ಲಾ, ಸರ್ ಪುರುಷೋತ್ತಮದಾಸ, ಸರ್ ದಲಾಲ್ ಶ್ರೀ ಬ್ರೆಲ್ವಿ, ದೇವದಾಸ ಗಾಂಧಿ, ವಾಲಚಂದ ಹೀರಾಚಂದ, ಡಾ। ಮುಖರ್ಜಿ, ಸರ್ ಹೋಮಿ ಮೋಡಿ, ಅಲ್ಲಾ ಭಕ್ಷ, ತಾರಾ ಸಿಂಗ, ಜಗದೀಶ ಪ್ರಸಾದ, ಮೆಹತಾ ಮೊದಲಾದ ಮೂವತ್ತೈದು ಮಂದಿ ಅಖಿಲಭಾರತದ ಸರ್ವ ಮತ ಪಂಥಗಳ ಪ್ರತಿನಿಧಿಗಳೂ ಸಹಿಹಾಕಿದ್ದಾರೆ ಅದರ ವಿವರ ಕೆಳಗಿನಂತಿದೆ

"ಮಹಾತ್ಮರನ್ನು ಬಿಟ್ಟುಬಿಡಿರಿ"

ಕಳೆದ ಕೆಲ ತಿಂಗಳಿಂದ ದೇಶದಲ್ಲಿ ನಡೆಯುತ್ತಿರುವ ಭಯಂಕರ ಕೃತ್ಯಗಳಿಗಾಗಿ ನಾವು ವಿಷಾದಿಸುತ್ತೇವೆ. ಈಗ ಕಾಂಗ್ರೆಸಿನವರೂ, ಸರಕಾರದವರೂ ತಮ್ಮ ರೀತಿ ನೀತಿಗಳನ್ನು ಬದಲಾಯಿಸಿಕೊಳ್ಳಬೇಕಾಗಿದೆ ನಮ್ಮಲ್ಲಿ ಕೆಲವರು ಮಹಾತ್ಮರೊಡನೆ ಮಾತುಕತೆ ನಡೆಸಿದೆವು ಆದ್ದರಿಂದ ಈಗ ಪ್ರಯತ್ನಮಾಡಿ ಸಂಧಾನ ನಡೆಸಿದರೆ ಸಫಲವಾದೀತೆಂದು ನಮಗನಿಸುತ್ತದೆ ಮಹಾತ್ಮರನ್ನು ಬಿಡುಗಡೆ ಮಾಡುವುದರಿಂದ, ಅವರು ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು, ಮುಂದಿನ ಮಾರ್ಗ ತೋರಿಸಲು ನೆರವಾಗುವರೆಂದೂ, ಸಂಗ್ರಾಮ ಕಾರ್ಯವನ್ನು ಸಾಗಿಸಲು ಅವರು ಆತಂಕವನ್ನುಂಟುಮಾಡಲಾರರೆಂದೂ ನಮಗೆ ಭರವಸೆಯಿದೆ ಸದ್ಯದ ಘಟನೆಗಳ ಬಗ್ಗೆ ಮಹಾತ್ಮರ ಅಧಿಕೃತ ಅಭಿಪ್ರಾಯ ತಿಳಿದುಕೊಳ್ಳಲೂ, ಈ ಮೂಲಕ ಸಂಧಾನದ ಪ್ರಯತ್ನ ಮಾಡಲಿಕ್ಕೂ ನಮ್ಮಲ್ಲಿ ಕೆಲವರಿಗೆ ಮಹಾತ್ಮರ ಬಳಿ ಹೋಗಲು ಸಮ್ಮತಿ ಕೊಡಬೇಕು ಕೆಲವರೊಂದಿಗೆ ಅವರು ನಡೆಸಿದ ಮಾತುಕತೆಗಳಿಂದ ಅವರು ಸಂಧಾನಕ್ಕೆ ಸಿದ್ಧರಿರುವರೆಂದು ನಮಗೆ ಸ್ಪಷ್ಟವಾಗಿದೆ ಇದಕ್ಕಾಗಿ ವೈಸರಾಯರು ನಮಗೆ ಮಾರ್ಗ ಮಾಡಿಕೊಡಬೇಕು" ಎಂದು ಆ ಭಾ ಮುಖಂಡರು ಕೇಳಿಕೊಂಡಿರುವರು ಇದೇನೋ ಗಂಭೀರವಾದ, ವಿಚಾರಪೂರ್ಣವಾದ, ಸ್ನೇಹಮಯ ವಾತಾವರಣವನ್ನು ಕಲ್ಪಿಸಬೇಕೆಂಬ ಉದಾತ್ತ ಉದ್ದೇಶಪೂರಿತವಾದ ಕೇಳಿಕೆಯೆಂಬ ವಿಷಯ ಯಾರೂ ಸಂಶಯಪಡಲು ಕಾರಣವಿಲ್ಲ ಇಂಥಾ ಸುವರ್ಣ ಸಂಧಿಯನ್ನು ವೈಸರಾಯರಾಗಲಿ ಬ್ರಿಟಿಷ್ ಸರಕಾರವಾಗಲಿ ಕಳೆದುಕೊಳ್ಳಬಾರದು ಭಾರತದಲ್ಲಿ ಆಂತರಿಕ ಶಾಂತಿ ನೆಲಸಿ, ಆ ಮೂಲಕ ಬ್ರಿಟಿಷ್ ಭಾರತ ಬಾಂಧವ್ಯ ಬೆಳಗಿ, ಯುದ್ಧ ಕಾರ್ಯಕ್ಕೆ ಭಾರತವು ಒಮ್ಮತದಿಂದ ಬೆಂಬಲ ಕೊಡುವಂಥಾ ಸಂದರ್ಭವನ್ನು ನಾವು ಬೇಗನೇ ನೋಡಬಹುದೆ?

ಧೋರಣೆ ಬದಲಿಸಲಾಗದೆ?

ಹಿಂದೆ ದಿಲ್ಲಿಯಲ್ಲಿ, ಈಗ ಬೊಂಬಯಿಯಲ್ಲಿ, ಅ ಭಾ ಮುಖಂಡರು ಸಭೆಸೇರಿ ಮಾಡಿದ ವಿನಂತಿಯ ವಿಚಾರ ಕಾಮನ್ಸ್ ಸಭೆಯಲ್ಲಿ ಕಳೆದವಾರ ಪ್ರಶ್ನೆ ಕೇಳಲಾಯಿತು ಅದಕ್ಕೆ ಭಾರತ ಮಂತ್ರಿ ಅಮೆರಿಯವರು ಕೆಳಗಿನ ಉತ್ತರವಿತ್ತಿದ್ದಾರೆ "ಬೊಂಬಯಿಯಲ್ಲಿ ಮುಖಂಡರು ಸೇರಿ ಮಾಡಿದ ನಿರ್ಣಯವನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ, ಅದರ ವಿಚಾರವನ್ನು ನಾನು ಅರಿತಿದ್ದೇನೆ ಈ ವಿಚಾರ ನಾನೀಗ ಏನೂ ಹೇಳಲಾರೆ, ನನಗೆ ತಿಳಿದಮಟ್ಟಿಗೆ ಇಂಡಿಯಾ ಸರಕಾರಕ್ಕೆ ಇದುವರೆಗೆ (ತಾ ೧೧) ಈ ನಿರ್ಣಯವು ಕಳುಹಿಸಲ್ಪಟ್ಟಿಲ್ಲ ಆದರೆ ಹಿಂದೆ ದಿಲ್ಲಿಯಲ್ಲಿ ಮುಖಂಡರು ಮಾಡಿದ ಮನವಿಯ ವಿಚಾರ ಪ್ರಧಾನ ಮಂತ್ರಿ ಚರ್ಚಿಲರು ಕೊಟ್ಟ ಉತ್ತರವು ಈಗಾಗಲೇ ಎಲ್ಲರಿಗೂ ತಿಳಿದಿರಬೇಕು" ಅಮೆರಿಯವರ ಈ ಮಾತಿನಲ್ಲಿ ನಮಗೆ ಏನೇನೂ ಸ್ಪಷ್ಟೀಕರಣ ತೋರುವುದಿಲ್ಲ

ಗೃಹ ಮಂತ್ರಿಯಾಗಿದ್ದ ಸರ್ ಮೇಕ್ಸ್‌ವೆಲ್ಲರು ಅಧಿಕಾರದಿಂದ ನಿವೃತ್ತರಾಗುವವರಿದ್ದು, ಅವರ ಅಧಿಕಾರಾವಧಿಗೆ ಈಗ ಜೀವದಾನ ಕೊಡಲಾಗಿದೆ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರ ಅಧಿಕಾರಾವಧಿಯೂ ಕೆಲಸಮಯ ಹಿಂದೆ, ಅವರು ತಾನು ಬೇಗನೇ ನಿವೃತ್ತನಾಗಲಿರುವೆನು ಎಂದು ಹೇಳಿದ್ದರೂ, ಬೆಳೆಸಲ್ಪಟ್ಟಿತು ಲಾರ್ಡ್ ಲಿನ್‌ಲಿತ್‌ಗೋ ಮತ್ತು ಸರ್ ಮೇಕ್ಸ್‌ವೆಲರು ಭಾರತದ ಇಂದಿನ ಬ್ರಿಟಿಷ್ ರಾಜನೀತಿಗೆ ಹೊಣೆಗಾರರಿದ್ದಾರೆ. ಹೀಗಿರುವಾಗ ಅವರಿಬ್ಬರನ್ನೂ ಅಧಿಕಾರಸ್ಥಾನದಿಂದ, ನಿವೃತ್ತಿಹೊಂದಬಿಡದಿರುವ, ಬ್ರಿಟಿಷ್ ಪ್ರಭುತ್ವದ ಧೋರಣೆಯನ್ನನುಲಕ್ಷಿಸಿದರೆ ಭಾರತದಲ್ಲಿ, ಇದುವರೆಗೆ ಯಾವ ಧೋರಣೆಯನ್ನು ಬ್ರಿಟಿಷ್ ಪ್ರಭುತ್ವವು ವಹಿಸಿತ್ತೊ ಅದೇ ಧೋರಣವೇ ಇನ್ನೂ ಮುಂದುವರಿಸಲ್ಪಡುವದೆಂದು ಊಹಿಸಲು ಆಸ್ಪದವುಂಟೆಂದು ದಿಲ್ಲಿಯ ಪತ್ರಿಕಾವರದಿಗಾರರು ಹೇಳಿಕೆ ಹೊರಡಿಸುತ್ತಿದ್ದಾರೆ ಸಾಮಾನ್ಯ ಜನತೆಗಾದರೂ, ಮೇಲಿನ ತರ್ಕವು ಅಸಮಂಜಸವೆಂದು ತೋರುವುದಿಲ್ಲ ಹೇಗಿದ್ದರೂ, ಸಂದರ್ಭವನ್ನು ಅನುಲಕ್ಷಿಸಿ ಬ್ರಿಟಿಷ್ ಪ್ರಭುತ್ವವಾಗಲಿ, ವೈಸರಾಯ್, ಗೃಹಮಂತ್ರಿಗಳಾಗಲಿ ಬ್ರಿಟಿಷ್ ಪ್ರಭುತ್ವಕ್ಕೂ, ಭಾರತಕ್ಕೂ ಹಿತವಾಗುವುದಾದರೆ ತಮ್ಮ ಇಂದಿನ ಧೋರಣೆಯನ್ನು ಯಾಕೆ ಬದಲಾಯಿಸಕೂಡದು?

'ಬ್ರಿಟಿಷರ ಭಾಗ್ಯವಿದು!'

ಪ್ರೊ। ಲಾಸ್ಕಿಯವರು, 'ರೆಜಿನಾಲ್ಡ್ ನ್ಯೂಸ್' ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾ, ಮಹಾತ್ಮರು ಉಪವಾಸದಿಂದ ಮರಣ ಹೊಂದದಿರುವುದು ಬ್ರಿಟಿಷರ ಭಾಗ್ಯವೆಂದು ಸಾರಿದ್ದಾರೆ' ಗಾಂಧಿಜಿ ಮೃತರಾಗಿದ್ದರೆ ಮೊದಲೇ ಕೆಟ್ಟುಹೋಗಿದ್ದ ಬ್ರಿಟಿಷ್ ಭಾರತ ಬಾಂಧವ್ಯವು ಸಂಪೂರ್ಣ ಹಾಳಾಗಿಹೋಗುತ್ತಿತ್ತೆಂದು ಅವರು ಸ್ಪಷ್ಟ ನುಡಿದಿರುವರು "ಬ್ರಿಟಿಷ್ ಮಂತ್ರಿಮಂಡಳವು ಭಾರತದ ಸಮಸ್ಯೆಯನ್ನು ಸಂಪೂರ್ಣವಾಗಿ ಹಾಳುಮಾಡಿತೆಂದು ನಾನು ಖಂಡಿತ ಹೇಳಬಲ್ಲೆ ಕೆಲಸ ಕೆಟ್ಟಮೇಲೆ, ಮತ್ತೂ ಸ್ವಲ್ಪ ಮಾತ್ರ ಪ್ರಯತ್ನ ಮಾಡುವುದು, ಇದುವೇ ಸರಕಾರವು ಅನುಸರಿಸುತ್ತಾ ಬಂದ ಧೋರಣೆಯಾಗಿದೆ ಕ್ರಿಪ್ಸ ಸಂಧಾನವು ನಿಷ್ಪ್ರಯೋಜನವಾದ ಮೇಲೆ ನಮ್ಮ ಸಮತಾವಾದೀ ಪಕ್ಷವು ಕೈಕಟ್ಟಿ ಕುಳಿತಿರುವುದು ವಿಷಾದದ ಸಂಗತಿಯಾಗಿದೆ ಇನ್ನು ಮುಂದೇನೂ ಮಾಡಬೇಕಾದುದಿಲ್ಲವೆಂದು ಹೀಗೆ ಕುಳಿತಿರುವುದೆ? ಭಾರತದ ಸಮಸ್ಯೆಯನ್ನು ಬುದ್ಧಿವಂತಿಕೆಯಿಂದ ಬಿಡಿಸಲು ಅಸಾಧ್ಯವೆಂದು ಹೀಗೆ ಮೌನವ್ರತವೆ? ಈ ಅಭಿಪ್ರಾಯವನ್ನಿಟ್ಟುಕೊಂಡರೆ, ನಾವು ಪ್ರಜಾಪ್ರಭುತ್ವ ಪದ್ಧತಿಯಲ್ಲಿಯೇ ವಿಶ್ವಾಸವನ್ನು ಬಿಟ್ಟುಬಿಟ್ಟಂತೆ!" ಹೀಗೆಂದು ಪ್ರೊ। ಲಾಸ್ಕಿಯವರು ಬ್ರಿಟಿಷ್ ಪ್ರಭುತ್ವವನ್ನು ಬ್ರಿಟಿಷ್ ರಾಜನೀತಿಜ್ಞರನ್ನು ಎಚ್ಚರಿಸಿದ್ದಾರೆ! ಪ್ರೊ। ಲಾಸ್ಕಿಯವರು ಬ್ರಿಟನಿನ ಮಹಾಧೀಮಂತರಲ್ಲಿ ಒಬ್ಬರು, ಆಳವಾಗಿ ರಾಜನೀತಿಯನ್ನು ಅಭ್ಯಾಸಿಸಿದವರು, ಅಂತರಾಷ್ಟ್ರೀಯ ಕೀರ್ತಿಶಾಲಿಗಳು ಇವರ ಮಾತಿಗೂ ಏನೂ ಬೆಲೆ ಬಾರದೇನು?

ಅತ್ತ ಅಮೆರಿಕದಿಂದಲೂ

ಒಂದು ಸಂಯುಕ್ತ ಪ್ರಕಟಣೆ ಬಂದಿದೆ ಅಮೆರಿಕದ ಪ್ರಸಿದ್ಧ ವಿದ್ವಾಂಸರು, ಗ್ರಂಥಕರ್ತರು, ರಾಜನೀತಿಜ್ಞರು, ಹಲವು ಸಂಘಸಂಸ್ಥೆಗಳ ಪ್ರತಿನಿಧಿಗಳು, ಅಧ್ಯಾಪಕರು ಪತ್ರಿಕೋದ್ಯೋಗಿಗಳು ಹೀಗೆ ಒಟ್ಟು ೯೫ ಮಂದಿ ಪ್ರಭಾವಶಾಲೀ ಅಮೆರಿಕನರು ಸೇರಿ ಆ ಹೇಳಿಕೆ ಹೊರಡಿಸಿದ್ದಾರೆ ಭಾರತದ ಸಮಸ್ಯೆ ಇಂದು ಅಮೆರಿಕದ ಸಮಸ್ಯೆ ಆದ್ದರಿಂದ ಬ್ರಿಟನು ಭಾರತವನ್ನು ಸ್ವತಂತ್ರಮಾಡುವಂತೆ ಒತ್ತಾಯಿಸುವುದು ನಮ್ಮ ಕರ್ತವ್ಯ' ಎಂದು ಅವರು ತಿಳಿದು ಈ ಹೇಳಿಕೆಯಿತ್ತಿರುವರು ಭಾರತದ ಜನತೆ ಜಪಾನಿನೆದುರು ಹೋರಾಡಬೇಕಾಗಿದೆ ಭಾರತೀಯರಿಗೆ ಜಪಾನದ ಸ್ನೇಹ ಬೇಡ, ಅವರ ಸ್ವಾತಂತ್ರ್ಯ ಬೇಕಾಗಿದೆ ಅದು ದೊರೆತರೆ ಭಾರತೀಯರಾದರೂ ಚೀನೀಯರಂತೆ ಜಪಾನಿನೆದುರು ಹೋರಾಡುವುದು ಖಂಡಿತ" ಎಂದು ಅವರು ವಾದಿಸಿದ್ದಾರೆ ಆದರಿಂದ, 'ಬ್ರಿಟನು ಈಗ ಟೊಳ್ಳು ಮಾತುಗಳಿಂದ ನಂಬಿಕೆ ಹುಟ್ಟಿಸಲು ಸಾಧ್ಯವಿಲ್ಲ ಗೆದ್ದ ಮೇಲೆ ಸ್ವಾತಂತ್ರ್ಯ ಕೊಡುತ್ತೇವೆಂದು ಕಳೆದ ಯುದ್ಧ ಕಾಲದಲ್ಲಿಯೂ ಹೇಳಿದ ಬ್ರಿಟನು ಭಾರತೀಯರು ಅಂದು ಯುದ್ಧದಲ್ಲಿ ಶೂರತ್ವದಿಂದ ಹೋರಾಡಿದರೂ ಅವರಿಗೆ ಹೇಳಿದ ಮಾತು ಸಲಿಸದೆ ವಂಚಿಸಿತು ಆದ್ದರಿಂದ ಅವರು ಈಗ ಬರೇ ವಾಗ್ದಾನವನ್ನು ನಂಬುವುದಿಲ್ಲ ಅವರಿಗೆ ಕೃತಿ ಬೇಕು, ಮಾತು ಬೇಡ ಭಾರತದಲ್ಲಿ ಬಿಕ್ಕಟ್ಟು ಅನಗತ್ಯ ಮಿತ್ರ ದೇಶಗಳ ಹಿತಕ್ಕಾಗಿ ಅಲ್ಲಿನ ಬಿಕ್ಕಟ್ಟು ಪರಿಹರಿಸಲೇ ಬೇಕು. ಎಲ್ಲಾ ಪಕ್ಷ ಪಂಗಡಗಳನ್ನೊಳಗೊಂಡ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಬೇಕು ಭಾರತೀಯರು ಇಂದು ಸಂಧಾನಕ್ಕೆ ಸಿದ್ಧರು ಸಂಧಾನಕ್ಕೀಗ ಕಾಲಪಕ್ವವಾಗಿದೆ ಜನನಾಯಕರನ್ನು ಸೆರೆಯಿಂದ ಬಿಡುಗಡೆ ಮಾಡಿ, ಜನತೆಯನ್ನು ಸುರಿದುಂಬಿಸಬೇಕು ಗಾಂಧಿಜಿ ಮತ್ತು ಉಳಿದ ಭಾರತದ ನಾಯಕರು ನೀಡಿದ ಸ್ನೇಹಹಸ್ತವನ್ನು ಹಿಂದೂಡ ಕೂಡದು ಈ ವಿಷಯ ರೂಸ್‌ವೆಲ್ಟ್ ಮತ್ತು ಚಿಯಾಂಗ್ ಕೈಶೇಕರು ಕೈಹಾಕಬೇಕು' ಎಂದು ಅವರು ಒತ್ತಾಯಪಡಿಸಿದ್ದಾರೆ ಅಮೆರಿಕದ ಜನತೆ ಹೀಗೆಂದರೂ, ಅಮೆರಿಕದ ಅಧಿಕಾರೀ ಮಂಡಳ ಮೌನವಾಗಿರುವುದೇಕೆ?

ರಾಜಕೀಯ ಕೈದಿಗಳ ಕಷ್ಟ

ವನ್ನು ತಪ್ಪಿಸಬೇಕೆಂದೂ, ಅವರೊಡನೆ ಭೇಟಿಯಾಗಲು ಶಾಸನ ಸಭಾ ಸದಸ್ಯರಿಗೆ ಸಮ್ಮತಿ ಕೊಡಬೇಕೆಂದೂ, ಕೇಂದ್ರ ಎಸೆಂಬ್ಲಿಯಲ್ಲಿ ಹಾಗೂ ಕೌನ್ಸಿಲ್ ಓಫ್ ಸ್ಟೇಟಿದಲ್ಲಿ ಪ್ರಜಾಪ್ರತಿನಿಧಿಗಳು ನಿರ್ಣಯಗಳನ್ನು ತಂದರು.

ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಮಲಬಾರು ಎಕ್ಸ್ಪ್ರೆಸ್ (ಮೈಲ್)	8.5 ಬೆಳಗ್ಗೆ	6.5 ಸಾಯಂ.
ಲೋಕಲ್ (ಪೆಸೆಂಜರ್)	ಸಾಯಂ. 5.25	9.55 ಬೆ.

ಮಲಬಾರ್ ಎಕ್ಸ್ಪ್ರೆಸ್ (ಮೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲಾ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ.

ಪಗಡೆಯಾಟದ ಮೋಸದಿಂದ ದಾರಿದ್ರ್ಯ ವನವಾಸಗಳಿಗೆ ಗುರಿಯಾದ ಪಾಂಡವರನ್ನು ನೋಡಿ ಹಂಗಿಸಬೇಕೆಂದು ಕೌರವರು ಮಹಾ ವೈಭವದಿಂದೊಡಗೂಡಿ ಧೃತರಾಷ್ಟ್ರನ ಆಸ್ಥಾನದಿಂದ ದ್ವೈತವನಕ್ಕೆ ಪ್ರಯಾಣ ಮಾಡಿದರು.

ದುರ್ಯೋಧನನನ್ನು ದ್ವೇಷಿಸಲು ಪಾಂಡವರಿಗೆ ಅನೇಕ ಕಾರಣಗಳಿದ್ದುವು! ಗಂಧರ್ವರು ಕೌರವರನ್ನು ಸೋಲಿಸಿ ಸೆರೆಹಿಡಿದುಕೊಂಡು ಹೋದುದನ್ನು ಕಂಡು ಪಾಂಡವರು ಎಷ್ಟೊಂದು ಸಂತೋಷಪಡಬಹುದಾಗಿತ್ತು..

ಆದರೆ ಗಂಧರ್ವರು ದುರ್ಯೋಧನನ ಸೇನೆಯನ್ನು ಸೋಲಿಸಿ, ಕೌರವ ರಾಜಕುಮಾರರನ್ನು ಸರಪಳಿಗಳಿಂದ ಬಂಧಿಸಿ ಎಳೆದುಕೊಂಡುಹೋದಾಗ, ಭಯಗ್ರಸ್ತರಾದ ದುರ್ಯೋಧನನ ಪರಿವಾರದವರು, ಪಾಂಡವರ ಸಹಾಯವನ್ನು ಬೇಡಿದಾಗ ಯುಧಿಷ್ಠಿರನು ತನ್ನ ತಮ್ಮಂದಿರ ಕುಹಕ ನುಡಿಗಳನ್ನು ಖಂಡಿಸಿ "ನಿಷ್ಠುರ ವಾಕ್ಯಗಳನ್ನಾಡಲು ಕಾಲವಲ್ಲ ಇದು. ನಮ್ಮ ಮತ್ತು ಕೌರವರ ನಡುವಿನ ಕಲಹದಲ್ಲಿ ಅವರು ನೂರು ಮಂದಿ, ನಾವು ಐವರು. ಆದರೆ ಮೂರನೆಯವರು ಯಾರಾದರೂ ನಮ್ಮಲ್ಲಿ ಯಾರನ್ನು ಹಿಂಸಿಸಬಂದರೂ, ಆಗ ನಾವು ನೂರೈದು ಮಂದಿ:" ಎಂದು ಹೇಳಿ ಅವರನ್ನು ಸಮಾಧಾನಪಡಿಸಿದ್ದರು.

ಮಹಾಭಾರತದ ಈ ಪಾಠವನ್ನು ಚೀನಾ ಇಂಡಿಯಾಕ್ಕಿಂತ ಮೊದಲೇ ಆಚರಣೆಗೆ ತಂದಿದೆ! ಅಲ್ಲಿ, ಅಲ್ಪ ಸಂಖ್ಯಾತರಾದರೂ ಪ್ರಬಲರಾದ ಕಮ್ಯೂನಿಸ್ಟ್ ಪಂಗಡದವರು, ಒಮ್ಮೆ ತಮ್ಮ ಅಪ್ರತಿಮ ವೈರಿಯಾಗಿದ್ದ – ಜನರಲ್ ಸಿಮೋ ಚಂಗ್-ಕೈ-ಷೇಕ್ ರವರ ಅಸಂಖ್ಯಾತ ಅನುಯಾಯಿಗಳೊಡನೆ ಸಹಕರಿಸಿ ತಮ್ಮೆಲ್ಲರ ವೈರಿಗಳಾದ ಜಪಾನೀಯರನ್ನು ನಿರೋಧಿಸಲು ಸಹಾಯ ಮಾಡಿದರು.

ಪಾಂಡವರಂತೆ ಇರಿ: ಬ್ರಿಟಿಷ್ ನೌಕರರಿಗೆ ಕೂಡ ನಿಷ್ಠುರವಾಕ್ಯಗಳನ್ನಾಡಬೇಡಿ. ನಮ್ಮೆಲ್ಲರ ವೈರಿಗಳಾದ ಜಪಾನೀಯರನ್ನು ಹೊಡೆದೋಡಿಸಲು ಅವರಿಗೆ ಸಹಾಯಮಾಡಿರಿ.

ನೀವೇ ಯೋಚನೆಮಾಡಿ ನೋಡಿರಿ
ಒಂದುಗೂಡಿ ವರ್ತಿಸಿರಿ

ಇದೇ ರಾಷ್ಟ್ರೀಯ ಯುದ್ಧಮುಖ

ಮೈಕಳಿಕ್ಕೆ ಹಾಕುವ ಪೌಡರ್ ಮತ್ತು ಕ್ರೀಮುಗಳು ನೀವು ಸುಂದರವಾಗಿ ಕಾಣಲು ಸಹಾಯ ಮಾಡುವುವು. ಆದರೆ ನಿಜವಾದ ಸುಂದರ ಚರ್ಮ ಹೊಂದುವ ಗುಟ್ಟು ದೇಹದೊಳಗಾಗ ಚೊಕ್ಕಟವಾಗಿಡುವುದೇ ಆಗಿದೆ. ಇದನ್ನು ನೀವು ಮನೆಗಾಣುವವರೆಗೂ ಸೌಂದರ್ಯಸಾಧನೆಗಳ ಮೇಲೆ ಖರ್ಚು ಮಾಡುವುದರಲ್ಲಿ ಅರ್ಧ ವ್ಯರ್ಥವಾಗುವುದು. ಆದ್ದರಿಂದ ಆಂಡ್ರ್ಯೂಸ್‌ನಿಂದ ಆಂತರ್ಯ ಶುದ್ಧಿ ಪಡೆಯಿರಿ. ಸುಂದರ ಚರ್ಮ ಪಡೆಯಲು ಇದೇ ಮೊದಲಿನ ಮೆಟ್ಟಲು. ನಿಮಗ ಬೇಕಾದಾಗಲೆಲ್ಲಾ ಒಂದು ಲೋಟಾ ಆಂಡ್ರ್ಯೂಸ್ ತೆಗೆದುಕೊಂಡಲ್ಲಿ ದೇಹಪುಷ್ಟಿ, ಶಕ್ತಿ, ಉತ್ಸಾಹ ಚೈತನ್ಯವುಂಟಾಗುವುದು ಆಂಡ್ರ್ಯೂಸ್ ಈ ರೀತಿ ಆರೋಗ್ಯದಾಯಿನಿಯಾಗಿರುವುದು

ಮೊದಲು: ಆಂಡ್ರ್ಯೂಸ್ ಬಾಯಿ, ನಾಲಗೆಯನ್ನು ಶುದ್ಧಿ ಮಾಡುವುದು.

ಅನಂತರ: ಆಂಡ್ರ್ಯೂಸ್ ಜಠರವನ್ನು ಒಳ್ಳೆ ಸ್ಥಿತಿಯಲ್ಲಿಟ್ಟು ಹುಳಿಯನ್ನು ಸರಿಪಡಿಸುತ್ತೆ.

ಆ ಮೇಲೆ: ಆಂಡ್ರ್ಯೂಸ್ ಲಿವರನ್ನು ಶಕ್ತಿಯುತವಾಗಿ ಮಾಡಿ ಪಿತ್ತವನ್ನು ತಡೆಯುವುದು.

ಕೊನೆಯದಾಗಿ: ನಿಮ್ಮ ಆಂತರ್ಯಶುದ್ಧಿ ಸಂಪೂರ್ಣವಾಗಲು ಆಂಡ್ರ್ಯೂಸ್ ಸೌಮ್ಯವಾಗಿ ಮಲವಿಸರ್ಜನೆ ಮಾಡಿಸುವುದು. ತೊಂದರೆ ಕೊಡುವ ವಿಷಗಳನ್ನು ಹೊರಸಾಗಿಸಿ, ಮಲಬದ್ಧತೆ ಸರಿಪಡಿಸಿ, ರಕ್ತವನ್ನು ಶುದ್ಧಿಮಾಡಿ ಚರ್ಮವನ್ನು ಸ್ವಚ್ಛವಾಗಿಡುವುದು.

ಆಂತರ್ಯ ಶುದ್ಧಿಗೆ ಕ್ರಮವಾಗಿ ಉಪಯೋಗಿಸಿ

ಆಂಡ್ರ್ಯೂಸ್ ಲಿವರ್ ಸಾಲ್ಟ್

ಆರೋಗ್ಯ ಪಾನೀಯ— ವಿರೇಚಕ

ANDREWS
LIVER SALT

Health Drink — Tonic Laxative

ಸಮರಭೂಮಿಯ ಸಂಚಾರ

ರಶ್ಯದಲ್ಲಿರುವ ಅಮೇರಿಕದ ರಾಯಭಾರಿ ಎಡ್ಮಿರಲ್ ಸ್ಟಾನ್ಲೆಯವರು, ಅಲ್ಲಿಂದ ಹಿಂತಿರುಗಿ ಬಂದ ಮೇಲೆ, ರಶ್ಯದ ಕುರಿತು ಮತಭೇದದ ಕೆಲವು ಮಾತುಗಳನ್ನು ಹೇಳಿದರು: 'ಅಮೇರಿಕವು ಸಾಲ ಅಡವು ಕಾನೂನಿನಿಂದ, ರೆಡ್ ಕ್ರಾಸ್ ಮೊದಲಾದ ಮೂಲಕ ರಶ್ಯಕ್ಕೆ ವಿಶೇಷ ಸಹಾಯ ಮಾಡುತ್ತಿದ್ದರೂ, ಈ ಸಹಾಯದ ಸುದ್ದಿಯನ್ನೇ ರಶ್ಯವು ಎತ್ತುವುದಿಲ್ಲವೆಂಬುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ; ನಾವು ಗೈದ ಉಪಕಾರಕ್ಕೆ ರಶ್ಯವು ಕೃತಜ್ಞತೆಯನ್ನಾದರೂ ಸಲ್ಲಿಸಬೇಡವೇ? ರಶ್ಯನ್ ಸರಕಾರವು ನಮ್ಮ ಸಹಾಯದ ಸುದ್ದಿಯನ್ನೂ ತನ್ನ ಪ್ರಜೆಗಳಿಗೆ ತಿಳಿಸುವುದಿಲ್ಲ. ಬಹುಶಃ 'ಜರ್ಮನಿಯನ್ನು ತಾವು ಏಕಾಂಗಿಗಳಾಗಿಯೇ ಸೋಲಿಸಿದೆವು; ಮಿತ್ರರು ನಮಗೇನೂ ಸಹಾಯ ಒದಗಿಸಲಿಲ್ಲ' ಎಂಬ ಅಭಿಪ್ರಾಯವನ್ನು ಜನರಲ್ಲಿ ಹುಟ್ಟಿಸಬೇಕೆಂಬೀ ಆಲೋಚನೆ ರಶ್ಯನ್ ಸರಕಾರಕ್ಕಿದ್ದರೂ ಇರಬಹುದು?' ಎಂದು ಮೊದಲಾಗಿ ಅವರು ನುಡಿದರು! ಈ ಮಾತುಗಳು ಇಂದು ಅಮೇರಿಕನರನ್ನು ಮಾತ್ರವಲ್ಲ, ಅಖಿಲ ಜಗತ್ತನ್ನೇ ಬೆರಗುಗೊಳಿಸುವಂಥಾ ವಿಚಾರ. ಆದರೆ ಸಮ್ನರ್ ವೆಲಿಸ್, ವೆಂಡಲ್ ವಿಲ್ಕಿ ಪ್ರಭೃತಿಗಳು ಸ್ಟಾನ್ಲೆಯವರು ಹೇಳಿದ್ದು ಅವರ ವೈಯುಕ್ತಿಕ ಅಭಿಪ್ರಾಯವಲ್ಲದೆ, ಸರಕಾರದ ಅಭಿಮತವಲ್ಲವೆಂದೇನೋ ಅಂದಿರುವರು. ಹೇಗಿದ್ದರೂ ಇದು ಒಂದು ರಹಸ್ಯವನ್ನು ಹೊರಗೆಡಹುತ್ತದೆ. ರಶ್ಯ ಮತ್ತು ಮಿತ್ರ ರಾಷ್ಟ್ರಗಳ ಸಂಬಂಧದ ವಿಚಾರದಲ್ಲಿ ವಿಚಾರವಂತರ ದೃಷ್ಟಿ ಈಗ ಈ ಕಡೆ ಹರಿದಿದೆ.

ದ್ವಿತೀಯ ಮಹಾಯುದ್ಧದಲ್ಲಿ ರಶ್ಯದ ಸ್ಥಾನಮಾನಗಳೇನು? ಯುದ್ಧಾನಂತರದ ಜಗತ್ತಿನ ನವನಿರ್ಮಾಣದ ಯೋಜನೆಯೆಂತು? ರಶ್ಯ ಮತ್ತು ಮಿತ್ರ ರಾಷ್ಟ್ರಗಳಿಗೆ ಮುಂದೆ ಮಧುರ ಸಂಬಂಧವುಳಿದೀತೇ? ಎಂಬೀ ವಿಚಾರಗಳು ಈಗ ಎದ್ದು ತೋರುವ ಪ್ರಶ್ನೆಗಳು! ರಶ್ಯವು ಮಿತ್ರರೊಡಗೂಡಿ ಇಂದಿಗೆ ಇಪ್ಪತ್ತು ತಿಂಗಳು ದಾಟಿದವು; ಆದರೂ ಇದುವರೆಗೆ ರಶ್ಯದ ಕುರಿತು ತಮ್ಮ ಧೋರಣವೇನೆಂಬುದನ್ನು ಮಿತ್ರರು ಸ್ಪಷ್ಟೀಕರಿಸಲಿಲ್ಲ. ಜರ್ಮನಿಯು ಸಮಾನ ವೈರಿ ಎಂಬುದರಿಂದ ಮಾತ್ರ ಅವರು ಒಟ್ಟುಗೂಡಿದಂತೆ ತೋರುತ್ತದಲ್ಲದೆ, ರಶ್ಯ ಮತ್ತು ಉಳಿದ ಮಿತ್ರ ರಾಷ್ಟ್ರಗಳ ತತ್ವಗಳಲ್ಲಿ ಏನೇನೂ ಒಮ್ಮತವುಂಟಾದ ಸೂಚನೆ, ಹೇಳಿಕೆಗಳು ಇದುವರೆಗೆ ಯಾವುದೇ ರೂಪದಲ್ಲಿಯೂ, ಯಾರ ಬಾಯಿಯಿಂದಲೂ ಹೊರಬೀಳಲಿಲ್ಲ. ರಶ್ಯಕ್ಕೆ ಮಿತ್ರರು ಸಹಾಯ ಸಾಮಗ್ರಿ ಕಿಂಚಿತ್ತಾಗಿಯಾದರೂ ಕಳುಹಿಸಿರುವುದೂ, ದ್ವಿತೀಯ ರಣರಂಗವನ್ನು ತೆರೆಯುತ್ತಿದ್ದೂ ಬೇಗನೇ ತೆರೆಯುತ್ತೇವೆಂಬ ಭರವಸೆಯಿತ್ತಿರುವುದೂ ಒಂದು ತರದಿಂದ ಮಿತ್ರತ್ವಕ್ಕೇನೋ ಸಾಕ್ಷಿಗಳಾಗಿವೆ! ಆದರೆ ಇದುವರೆಗೆ ಜರ್ಮನಿಯೆದುರು ನಿಂತು ನಿರಂತರ ಸಾಹಸಮಯ ಹೋರಾಟ ಹೂಡಿ, ತಾನೂ ಜರ್ಜರಿತವಾಗಿ, ಶತ್ರುವನ್ನೂ ಪುಡಿಮಾಡಿದ ರಾಷ್ಟ್ರವೆಂದರೆ ರಶ್ಯವೊಂದೇ! ಹಿಟ್ಲರನು ರಶ್ಯದ ಮೇಲೆ ಧಾಳಿಯಿಟ್ಟಾಗ, ಬ್ರಿಟನು ಅಮೇರಿಕಗಳು ಜರ್ಮನಿಯನ್ನು ಎದುರಿಸಲು ಯೂರೋಪಿನಲ್ಲಿ ಮುನ್ನುಗ್ಗುವವೆಂದು ರಶ್ಯನರು ಮೊದಲು ಭಾವಿಸಿದ್ದರು. ಅದೇ ದ್ವಿತೀಯ ರಂಗದ ಕೂಗೆಬ್ಬಿಸಿದ್ದರು. ಹೀಗೆ ಮಾಡಿದ್ದರೆ—ಅದಕ್ಕೆ ಅನುಕೂಲವಾಗಲಿಲ್ಲವೆಂಬ ವಿಷಯ ಬೇರೆ—ಜರ್ಮನಿ ಇಕ್ಕಳದಲ್ಲಿ ಸಿಲುಕಿ ಇಷ್ಟರಲ್ಲಿಯೇ ಧ್ವಂಸವಾಗಿಯೂ ಬಿಡುತ್ತಿತ್ತು. ಆದರೆ ಆ ಸೂಚನೆಯೊಂದೂ ಕಾಣಲೇ ಇಲ್ಲ. ಇಷ್ಟರಲ್ಲಿ ರಶ್ಯನರೂ ಕಂಗಾಲಾಗುತ್ತಾ ಬಂದರು; ರಶ್ಯದ ಬಹುಭಾಗ ಜರ್ಮನರ ಕೈವಶವೂ ಆಯಿತು. ಆದರೆ ರಶ್ಯನರೇನೋ ತಮ್ಮ ಅಜೇಯ ಶಕ್ತಿಯಿಂದ ಸದ್ಯ ಹಿಟ್ಲರನನ್ನು ಹಿಂದಟ್ಟುತ್ತಿದ್ದಾರೆ. ಹೀಗಿದ್ದರೂ ದ್ವಿತೀಯ ರಂಗವನ್ನು ಸ್ಥಾಪಿಸಬೇಕೋ ಬೇಡವೋ ಎಂಬ ವಿಚಾರ ಇನ್ನೂ ಮಿತ್ರರು ನಿರ್ಧಾರ ಮಾಡಿಯೇ ಇಲ್ಲ! ಹೀಗಿರುವಾಗ ರಶ್ಯನರು, ಜರ್ಮನರೊಡನೆ ತಾವು ಏಕಾಂಗಿಗಳಾಗಿಯೇ ಹೋರಾಡುತ್ತೇವೆಂದು ತಿಳಕೊಂಡರೆ ಅದರಲ್ಲಿ ಏನು ಅನ್ಯಾಯವಿದೆ?

ಇಲ್ಲಿ ಇನ್ನೊಂದು ವಿಚಾರವೂ ಇದೆ. "ರಶ್ಯದ ಸಮತಾವಾದವು ಜಗತ್ತಿಗೆ ಹಾನಿ; ಪಾಶ್ಚಾತ್ಯ ನಾಗರಿಕತೆಯ ವೈರಿ ಅದು; ಇದನ್ನು ನಾಶ ಮಾಡಲು ನಾವಿಂದು ರಶ್ಯವನ್ನು ನೆಲಸಮ ಮಾಡಬೇಕು" ಎಂದು ಹಿಟ್ಲರ್ ಪದೇ ಪದೇ ಹೇಳುತ್ತಾ ಬಂದಿದ್ದಾನೆ. ಸಮತಾವಾದವನ್ನು ನಾಶಮಾಡುವುದೂ ಆತನ ಉದ್ದೇಶವಂತೆ! ಈ ಮಾತಿನ, ಈ ಪ್ರಚಾರದ ಪರಿಣಾಮ ಮಿತ್ರಪಕ್ಷದಲ್ಲಿ ಫಲಿಸಿದೆಯೆಂಬುದಕ್ಕೆ ಈಗ ಕೇಳಿ ಬರುವ ಅಂತಃಕಲಹದ ಸುದ್ದಿಯೇ ಸಾಕ್ಷಿ; ಭಂಡವಾಳ ಶಾಹೀ ರಾಷ್ಟ್ರಗಳಾದ ಬ್ರಿಟನು ಅಮೇರಿಕಗಳಾದರೂ ರಶ್ಯದ ಸಮತಾವಾದೀ ತತ್ವಕ್ಕೆ ಬದ್ಧ ವಿರೋಧಿಗಳೆಂಬುದು ಪ್ರಪಂಚಕ್ಕೇ ಗೊತ್ತು. ಹಾಗಾಗಿ ಸಮಾನ ವೈರಿಯನ್ನು ನಾಶಮಾಡಲೆಂದು ಒಟ್ಟಾದರೂ, ಒಳಗೆ ಹೊಗೆಯಾಡುತ್ತಿರುವುದೂ ಸಹಜವೇ. ನಾವು ಯುದ್ಧ ಮುಗಿವವರೆಗೆ ಮಾತ್ರ ರಶ್ಯದೊಡನೆ ಸ್ನೇಹದಿಂದಿರಬೇಕಲ್ಲದೆ, ಸಮತಾವಾದೀ ರಶ್ಯದೊಡನೆ ಮುಂದೆ ಸಹಕರಿಸುವುದು ಸಾಧ್ಯವಿಲ್ಲವೆನ್ನುವ ಬ್ರಿಟನ್ ಅಮೇರಿಕಗಳ ಮುತ್ಸದ್ದಿಗಳೂ ಹಲವರಿದ್ದಾರೆ. ಏಕೆಂದರೆ ಇದರಲ್ಲೊಂದು ಒಳಗುಟ್ಟೂ ಇದೆ. ರಶ್ಯದ ಮುಂದಾಳುತನದಲ್ಲಿ ಯುದ್ಧವನ್ನು ಗೆದ್ದರೆ, ರಶ್ಯವು ಮೇಲುಗೈಯಾಗಿ ನಿಂತರೆ, ಭವಿಷ್ಯತ್ ಜಗತ್ತಿನ ನವ ನಿರ್ಮಾಣವು ಸಮತಾವಾದೀ ರಶ್ಯದ ಹೇಳಿಕೆಯಂತೆಯೇ ಆಗಬೇಕು ತಾನೆ! ಇದಕ್ಕೆ ಬ್ರಿಟಿಷ, ಅಮೇರಿಕನ್ ಭಂಡವಾಳದ ಶಾಹಿಗಳು ಸರ್ವಥಾ ಒಪ್ಪಲಿಕ್ಕಿಲ್ಲ. ರಶ್ಯವಾದರೂ ಈ ಸಂದರ್ಭವನ್ನು ಸದುಪಯೋಗಿಸಿಕೊಂಡು, ಅತ್ಯಂತ ಬಲಿದಾನ ಮಾಡಿಯಾದರೂ, ತಮ್ಮದೇ ಮೇಲುಗೈ ತೋರಿಸಿ ಜಗತ್ತಿನ ನವನಿರ್ಮಾಣದಲ್ಲಿ ತಮ್ಮ ಧ್ವನಿ ಎತ್ತಿ ಕೇಳುವಂತೆ ಮಾಡಬೇಕೆಂದು ಸಾಹಸಪಡುವುದರಲ್ಲಿಯೂ ಅರ್ಥವಿದೆ. ಹೀಗಿರುವಾಗ ರಶ್ಯ ಮತ್ತು ಮಿತ್ರ ರಾಷ್ಟ್ರಗಳ ಸಂಬಂಧವು ಮುಂದೆ ಮಧುರವಾಗಿಯೇ ಮುಂದುವರಿದೀತೋ ಎಂಬುದು ಸಂದೇಹ. ಈ ಒಳಗಿನ ಹೊಗೆ, ಈ ಅಂತಃಕಲಹದ ಬೀಜ ಮಾಯವಾಗಬೇಕಾದರೆ ಇರುವುದು ಒಂದೇ ದಾರಿ. ಸಮತಾವಾದೀ ರಶ್ಯದ ವಿಷಯ ಬ್ರಿಟನು ಅಮೇರಿಕಗಳು ತಮ್ಮ ಧೋರಣವನ್ನು, ಕೇವಲ ಯುದ್ಧ ಮುಗಿವವರೆಗೆ ಮಾತ್ರವಲ್ಲ, ಯುದ್ಧ ಮುಗಿದ ಮೇಲೂ, ಸ್ಪಷ್ಟವಾಗಿ ಸಾರಬೇಕು; ಇಂದಿನೀ ಯುದ್ಧದಲ್ಲಿ ಜರ್ಮನಿ ಸೋತರೆ ತಾವು ರಶ್ಯದೊಡನೆ ಮುಂದೆ ಯಾವ ಸಂಬಂಧವನ್ನಿಟ್ಟುಕೊಳ್ಳುವೆವೆಂದು ಸ್ಪಷ್ಟ ತಿಳಿಸಬೇಕು. ಮುಚ್ಚುಮರೆ ಮಾಡುವುದು, ಮುಂದಿನ ಒಂದು ಯುದ್ಧಕ್ಕೆ—ಮೂರನೇ ಮಹಾಯುದ್ಧಕ್ಕೆ—ಸಿದ್ಧತೆ ಮಾಡಿದಂತೆ ಮಾತ್ರ ಆದೀತು!



ಸ್ವದೇಶಾಭಿಮಾನಿ

ತಾರೀಕು 19—3—1943

ಜಿಲ್ಲೆಯಲ್ಲಿ ಪುನಃ ಆಹಾರ ಸಂಕಷ್ಟ!

ಆಹಾರ ಸಾಮಗ್ರಿಗಳಿಗೆ, ಅದರಲ್ಲೂ ಪ್ರಾಮುಖ್ಯವಾಗಿ ಅಕ್ಕಿಗೆ, ಈಗ ಮಲೀ ರಹಾ ಜ್ವರದಂತೆ ಕ್ರಯ ಒಂದೇ ರೀತಿ ಏರುತ್ತಾ ಹೋಗುತ್ತಿದೆ! ಬಡ ಜನರ, ಕೂಲಿಗಾರರ, ನಿಶ್ಚಿತ ಸಂಬಳದವರ, ಮಧ್ಯಮ ವರ್ಗದವರ, ಇವರೆಲ್ಲರ ಹೊಟ್ಟೆಯ ಕೂಗು—ಅನ್ನದ ಗೋಳು—ಇಂದು ಮಿತಿಮೀರಿದೆ! ಇಂಥಾ ಸಂಕಷ್ಟದ ಪರಿಸ್ಥಿತಿಯನ್ನು ಸರಕಾರವೋ, ಸಾಹುಕಾರರೋ, ಧನವಂತರೋ, ಘನವಂತರೋ ಎಲ್ಲರೂ ಕಣ್ಣಾರೆ ನೋಡುತ್ತಾ ಇದ್ದು, ಇನ್ನೂ ಸುಮ್ಮಗಿರುವುದರಲ್ಲಿ ಏನೇನೂ ಬುದ್ಧಿವಂತಿಕೆಯಿಲ್ಲ!

ತಿಂಗಳ ಹಿಂದೆ ಇಂಥದೇ ಒಂದು ಸಂದರ್ಭ ಬಂದೊದಗಿತ್ತು; ಎಲ್ಲಿ ಏನಾದೀತೋ ಎಂದು ಹಲವರು ಹೆದರಿಹೋದರು! ಈ ಸಂದರ್ಭದಲ್ಲಿ ಅಧಿಕಾರಿಗಳೂ ಅನಧಿಕಾರಿಗಳೂ ತುಸು ಕಣ್ಣು ತೆರೆದರು. ಕಲೆಕ್ಟರರು ಜಿಲ್ಲೆಯ ಹಲವು ಮಂದಿ ಮುಖಂಡರನ್ನು ಆಮಂತ್ರಿಸಿದರು. ಆಹಾರ ಸಮಸ್ಯೆ ವಿಚಾರ ಚರ್ಚೆ ನಡೆಯಿತು. ಜಿಲ್ಲೆಯ ಆಹಾರ ಸಂಕಷ್ಟ ನಿವಾರಣೆಗಾಗಿ ಅಲ್ಲಿ ಒಂದು ಸಮಿತಿ—ಜಿಲ್ಲೆಯ ಹಲವು ಮಂದಿ ಮಹನೀಯರಿಂದ ಕೂಡಿದ ಸಮಿತಿ ಏರ್ಪಟ್ಟಿತು!

ಅದೇ ಸಂದರ್ಭದಲ್ಲಿ, ಇತ್ತ ಶ್ರೀ ಮೊಳಹಳ್ಳಿ ಶಿವರಾಯರೂ ಒಂದು ಯೋಜನೆ ತಂದರು. ಜಿಲ್ಲೆಯ ಆದ್ಯಂತ ತಿರುಗಾಡಿದರು. 'ಪರಿಸ್ಥಿತಿ ಬಹಳ ವಿಷಮವಿದೆ, ಈಗಲೇ ಪರಿಹಾರ ಮಾಡಬೇಕು' ಎಂದು ಎಚ್ಚರಿಸಿದರು. ಅವರೂ ಪಳವ್ರಾ ಮಂದಿ ಮಹನೀಯರನ್ನು ಕರೆದು ಸಭೆ ಸೇರಿಸಿದರು. ಬಂದ ಮಹನೀಯರೆಲ್ಲರೂ ಶ್ರೀ ಶಿವರಾಯರ ಯೋಜನೆಗೆ ತಲೆದೂಗಿದರು; ಕೂಡಲೇ ಕಾರ್ಯ ಕೈಕೊಳ್ಳಬೇಕಾಗಿಯೂ ಹೇಳಿದರು!

ಆದರೆ ಶ್ರೀ. ಶಿವರಾಯರು ಸೂಚಿಸಿದಂತೆ, ಈ ಯೋಜನೆಯು ಮಾರ್ಚಿ ತಿಂಗಳಿನಿಂದ ಪ್ರಾರಂಭಿಸುವುದೆಂದು ಮುಂದುವರಿಸಲ್ಪಟ್ಟಿತು. ಶ್ರೀಮಾನ್ ಶಿವರಾಯರೇ ಮೊದಲಾದವರು ಅಕ್ಕಿ ಸಂಗ್ರಹಕ್ಕಾಗಿ ಜಿಲ್ಲೆಯ ಕೆಲವು ಕಡೆಗಳನ್ನು ಸುತ್ತಾಡಿದ ಬಳಿಕ, ಆ ಅವಧಿಯನ್ನು ಮತ್ತೆ ಮೇ ತಿಂಗಳಿಗೆ ಮುಂದುವರಿಸುವುದಾಗಿ ಒಂದು ಹೇಳಿಕೆಯಿತ್ತರು!

ಇಂದು ಉಂಟಾದ ಪರಿಸ್ಥಿತಿಯೇನು? ಅಕ್ಕಿಗೆ ಕ್ರಯ ಏರುತ್ತಾ ಹೋಗಿ ಬಡಜನರು ಪುನಃ ಈಗ ಕಂಗೆಟ್ಟಿಲ್ಲವೆ? ಕಲೆಕ್ಟರರ ಕಚೇರಿಯಲ್ಲಿ ಸಭೆ ಕೂಡಿ ಏರ್ಪಟ್ಟ ಆಹಾರ ಸಂಕಷ್ಟ-ನಿವಾರಣಾ ಸಮಿತಿಯವರು ಈಗಲಾದರೂ ಮುಂಬಂದು ಕಾರ್ಯಮಾಡಬಾರದೆ? ಶ್ರೀ. ಶಿವರಾಯರ ಯೋಜನೆಯನ್ನೊಪ್ಪಿದ ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿಯವರು ಮೇ ತಿಂಗಳ ವರೆಗೂ ತಮ್ಮ ಅವಧಿ ಮುಂದುವರಿಸಿ ಜನರ ತಾಳ್ಮೆ ಪರೀಕ್ಷಿಸಬೇಕೆ? ಅಧಿಕಾರೀ ವರ್ಗದವರು, ಮಾನ್ಯ ಕಲೆಕ್ಟರರು ಜಿಲ್ಲೆ ಹೊರಗೆ ಅಕ್ಕಿ ಭತ್ತ ಹೋಗಕೂಡದೆಂದು ನಿರ್ಬಂಧಿಸಿದಂತೆ, ಹೀಗೆ ವಿಷಮವಾಗಿ ಏರುತ್ತಿರುವ ಅಕ್ಕಿ ಕ್ರಯಕ್ಕೂ ಬೇಗನೇ ಒಂದು ಮಿತಿಹಾಕಬಾರದೆ?

ಅಕ್ಕಿ ಮುಡಿ ಒಂದಕ್ಕೆ ನಾಲ್ಕೈದು ರೂ. ಕ್ರಯ ಇದ್ದದ್ದು ಆರೇಳು ರೂ.ಗೆ ಏರಿದಾಗಲೇ ಜಿಲ್ಲೆಯಲ್ಲಿ ಕೂಲಿಗಾರರೂ ನಿಶ್ಚಿತ ಸಂಬಳದ ಜನರೂ ಚಡಪಡಿಸಿದ್ದರು. ಆದರೂ ಕೊನೆಗೇನೋ ಸಮಾಧಾನವಾಯಿತು. ಆದರೆ, ಪುನಃ ಕ್ರಯ ಆರೇಳರಿಂದ ಹತ್ತು ಹನ್ನೊಂದರ ವರೆಗೆ ಏರಿದಾಗ ತಿರುಗಿ ಜನರು ಗೊಂದಲಗೊಂಡರು. ಆ ಸಂದರ್ಭವಲ್ಲಿಯೇ ಅಧಿಕಾರೀ ಅನಧಿಕಾರೀ ಮುಖಂಡರು ಸಭೆ ಸೇರಿಸಿ, ಸಮಿತಿ ಏರ್ಪಡಿಸಿ, ಸಮಾಧಾನಗೊಳಿಸಿದರು.

ಈಗ ಪುನಃ ಪರಿಸ್ಥಿತಿ ವಿಷಮವಾಗಿದೆ. ಅಕ್ಕಿ ಮುಡಿ ಒಂದರ ಕ್ರಯ ಹನ್ನೆರಡು ಹದಿಮೂರು ರೂಪಾಯಿಗಳ ವರೆಗೆ ಏರಿದೆ. ಇನ್ನೂ ಏರುವ ಸೂಚನೆಯೇ ತೋರುತ್ತಿದೆ. ಬಡವರ ಹೊಟ್ಟೆಯ ಕೂಗು ಇಂದು ಭೀಕರವಾಗಿದೆ! ಬರಿಯ ಭರವಸೆ ಈಗ ಪ್ರಯೋಜನವಿಲ್ಲ; ಜಿಲ್ಲೆಯ ಮಹನೀಯರು ಈ ಸಲ ಕಾರ್ಯಕ್ಷೇತ್ರಕ್ಕೆ ಇಳಿದು ಕೆಲಸಮಾಡಲೇಬೇಕು.

ಸ್ವದೇಶ ಸಮಾಚಾರ

ನೆಹರು ಪಂಥಕ್ಕೇರಿದಿದ್ದಾರೆ

ಎಂಬೀ ಪುಸ್ತಕವನ್ನು ಬೊಂಬಯಿ ಸರಕಾರವು ನಿರ್ಬಂಧಿಸಿದೆ. ಈ ಪುಸ್ತಕವನ್ನು ಮುದ್ರಿಸಿದ ಮುದ್ರಣಾಲಯದಿಂದ ೧೫೦೦ ರೂಪಾಯಿಗಳ ಠೇವಣಾತಿಯನ್ನೂ ಕೇಳಿರುವರು.

ರೈಲುಗಾಡಿಯಲ್ಲಿ ಕೊಲೆ

ಮದ್ರಾಸಿನ ಎಗ್ಮೋರ್ ಸ್ಟೇಷನಿನಲ್ಲಿ ಟ್ರಾವೆಂಕೂರ್ ಎಕ್ಸ್‌ಪ್ರೆಸ್ ಗಾಡಿಯ I ತರಗತಿಯಲ್ಲಿ ದೇವಕೋಟೆಯ ಪ್ರಮುಖ ಬೇಂಕರರೂ, ಇಂಡಿಯನ್ ಬೇಂಕಿನ ಡೈರೆಕ್ಟರರೂ ಆದ ಶ್ರೀ ಲಕ್ಷ್ಮಣನ್ ಚೆಟ್ಟಿಯಾರರ ಮೃತ ದೇಹವು ಕಂಡಿತು! ಚೆಟ್ಟಿಯಾರರು ಮಧುರಾ ಜಂಕ್ಷನ್‌ನಲ್ಲಿ ಈ ಗಾಡಿ ಹತ್ತಿದ್ದರು. ತ್ರಿಚಿನಾಪಳ್ಳಿ ಜಂಕ್ಷನಿನಲ್ಲಿ ಅವರು ತಮ್ಮ ಪೇದೆಯೊಡನೆ ಮಾತನಾಡಿದ್ದರು. ಪೇದೆ III ತರಗತಿ ಗಾಡಿಯಲ್ಲಿದ್ದನು.

ಶ್ರವಣಬೆಳಗುಳ ದೊಂಬಿ ತೀರ್ಪು

ವೀರಭದ್ರಯ್ಯ ಮತ್ತು ನಾಗರಿ ಗೌಡ ಎಂಬವರಿಗೆ ಫಾಶಿ ಶಿಕ್ಷೆಯನ್ನು ಚೀಫ್ ಜಸ್ಟಿಸರು ಖಾಯಂ ಮಾಡಿದರು. ಉಳಿದ ೧೬ ಮಂದಿಗೆ ಎರಡೆರಡು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ತಾ. ೬-೧೦-೪೨ರಲ್ಲು ಶ್ರವಣ ಬೆಳಗುಳದ ಬಳಿ ಸಂತೆ ನಡೆಸಲು ಅಧಿಕಾರಿಗಳು ಜನರಿಂದ ಒತ್ತಾಯದಿಂದ ತೆರಿಗೆ ವಸೂಲುಮಾಡಲು, ಜನರು ಕೆರಳಿ, ಪೋಲೀಸರ ಮೇಲೆ ಆಕ್ರಮಿಸಿದರೆಂದೂ, ಆಗ ಘರ್ಷಣೆಯಾಗಿ ಪೋಲೀಸರು ಗುಂಡು ಹಾರಿಸಲು ಸಾರ್ವಜನಿಕರಲ್ಲಿ ಹಲವರು ಮತ್ತು ಕಾಶಿ ವಿಶ್ವನಾಥನ್ ಎಂಬ ಪೋಲೀಸನೂ ಮೃತಹೊಂದಿದರೆಂಬುದು ಪ್ರೊಸಿಕ್ಯೂಶನ್ ಕಥೆಯಾಗಿದೆ.

ಇಸೂರು ಆರೋಪಿಗಳೆಲ್ಲ

ರನ್ನೂ ಫಾಶಿಗೆ ಕೊಡಲಾಯಿತು. ಒಟ್ಟು ಇಸೂರು ಅಪಾದಿತರು ೫ ಮಂದಿ. ಇವರು ಶ್ರೀಗಳಾದ ಗುರಪ್ಪ, ಮಲ್ಲಪ್ಪ, ಶಂಕರಪ್ಪ ಮೊದಲಾದವರು.

ಪುನಃ ಗಂಟೆ

ಹಿಂದಿನ ರೀತಿಯಲ್ಲಿಯೇ ತಿರುಗುತ್ತದೆಂದೂ, ಬೇಸಿಗೆಯಲ್ಲಿ ಹೀಗೆ ಬದಲುಮಾಡುವ ಯೋಜನೆ ಸರಕಾರಕ್ಕಿದೆಯೆಂದೂ ಕೇಂದ್ರ ಎಸೆಂಬ್ಲಿಯಲ್ಲಿ ಗೃಹಮಂತ್ರಿಗಳು ಹೇಳಿದರು.

ಸಿಂಧದಲ್ಲಿ 'ಮಾರ್ಶಲ್ ಲಾ'

ಎಂದರೆ ಮಿಲಿಟರಿ ರಾಜ್ಯಭಾರವು ಜಾರಿಯಲ್ಲಿ, ಕೆಲವು ಪ್ರದೇಶಗಳಲ್ಲಿದ್ದು ಆ ರೀತಿಯಿಂದ ಆಡಳಿತ ನಡೆಸುವುದನ್ನು ಕೇಂದ್ರ ಎಸೆಂಬ್ಲಿಯಲ್ಲಿ ಜನತೆಯ ಪ್ರತಿನಿಧಿ ಸದಸ್ಯರು, ಮುಸ್ಲಿಂ ಲೀಗ್, ನೇಶನಲಿಸ್ಟ್ ಮತ್ತು ಸ್ವತಂತ್ರ ಪಕ್ಷದ ಎಲ್ಲಾ ಸದಸ್ಯರೂ ಐಕ್ಯಮತ್ಯದಿಂದ, ಖಂಡಿಸಿ ಅದನ್ನು ತೆಗೆದುಹಾಕಬೇಕೆಂದರು. (ಚುನಾಯಿತ ಸದಸ್ಯರಲ್ಲಿ ಇಬ್ಬರು ಮಾತ್ರ ಸರಕಾರದ ಪರವಾಗಿದ್ದರು.

ಸತ್ತರು; ಗಾಯಗೊಂಡರು!

ಸೂರತಿನ ಪಶ್ಚಿಮ ಖಾನಪ್ರದೇಶದಲ್ಲಿ ಜನರಿಗೂ ಅಧಿಕಾರಿಗಳೂ ಕಿಕ್ಕಾಟವಾಗಿ, ಪೋಲೀಸರು ಗುಂಡು ಹಾರಿಸಿ ೧೫ ಮಂದಿ ಸತ್ತರು; ೩೫ ಮಂದಿ ಗಾಯಗೊಂಡರು. ಪೋಲೀಸರ ಮೇಲೆ ಗುಂಪಿನ ಜನರು ಬಿಲ್ಲು ಬಾಣಗಳಿಂದ ಹೊಡೆದರು. ಇದರಿಂದ ಮೂವರು ಪೋಲೀಸರಿಗೆ ಗಾಯವಾಗಿದೆ. ೩೦೦ ಮಂದಿ ಕೈದಿಗಳಾಗಿದ್ದಾರೆ. ಅಹಮ್ಮದಾಬಾದಿನಲ್ಲಿಯೂ ಜನರು ಕಲ್ಲೆಸೆದರೆಂದು ಪೋಲೀಸರು ಗುಂಡು ಹಾರಿಸಿ, ಒಬ್ಬನು ಸತ್ತು ಇಬ್ಬರಿಗೆ ಗಾಯವಾಗಿದೆ.

ಗಾಂಧಿಜಿಯನ್ನು ಪರದೇಶಕ್ಕೆ

ಒಯ್ಯಲಾಗುವುದೆಂದು ಡಿಲ್ಲಿಯ ಒಂದು ಪತ್ರಿಕೆ ಬರೆಯುತ್ತದೆ. 'ಇದೇನೂ ಅಸಂಭವವಲ್ಲ; ಸರಕಾರವು ಮಾಡುವ ತಪ್ಪುಗಳಿಗೆ ಮಿತಿಯಿಲ್ಲ; ಜವಾಬ್ದಾರ ಮನುಷ್ಯರೊಡನೆ ಯೋಗ್ಯ ರೀತಿಯಿಂದ ಸರಕಾರವು ವರ್ತಿಸಿದ ಉದಾಹರಣೆಯಿಲ್ಲ' ಎಂದು ರಾಜಾಜಿ ಹೇಳುತ್ತಾರೆ. ನೆಹರು, ಅಜಾದ್ ಮೊದಲಾದವರನ್ನು ಆಫ್ರಿಕೆಗೊಯ್ಯಲಾಗಿತ್ತೆಂಬ ಸುದ್ದಿ ಸತ್ಯವೇ ಎಂಬುದಾಗಿ ಪಾರ್ಲಿಮೆಂಟಿನಲ್ಲಿ ಸದಸ್ಯರು ಹಿಂದೊಮ್ಮೆ ಪ್ರಶ್ನಿಸಿದ್ದರು.

Estd. 1906.

Canara Bank, Limited

(Incorporated in British India with limited liability).

BALANCE SHEET AS ON 31st DECEMBER 1942

LIABILITIES

	Rs.	As.	Ps.
SUBSCRIBED CAPITAL: Rs. 20 lacs.			
Paid up Capital	14,96,072	8	0
Reserves	4,50,000	0	0
Deposits	1,45,50,502	7	1
Due to Bankers	13,50,000	0	0
Bills for collection as per contra	8,76,169	10	2
Liability for Foreign Bills negotiated	8,05,026	10	5
Sundries	10,51,464	10	11
Appropriation A/c.	2,062	3	8
Net Profits	1,53,310	2	10
Total Rs.	2,07,34,608	5	1

ASSETS

	Rs.	As.	Ps.
Fixed Capital Expenditure	1,00,182	13	2
ADVANCE TO CUSTOMERS:			
Secured by valuable securities	51,16,338	6	2
Secured by bills of Exchange etc.	24,36,563	11	11
Investments	65,65,374	15	7
Bills for collection	8,76,160	10	2
Liabilities of customers for foreign bills negotiated	8,05,026	10	5
Sundries	4,71,599	3	0
Cash on hand and at Call with Bankers	43,63,352	14	8
Total Rs.	2,07,34,608	5	1

NOTICE

In the Court of the District Judge of S. K.

O. P. 33 of 42

Between:—

Chimnalal Chakravarthi *Petitioner.*

and

Satishchandra Patack *Respondent.*

To

Satishchandra Patack,
Old Patak House, Madaripur,
P.O. Madaripur, Faridpur Dt.
Bengal.

The above named petitioner has made an application to this Court that his wife minor SuvarnalathaDevi alias Shona, who is in the custody of the respondent may be ordered to be handed over to the custody of the petitioner and that in case he fails to comply with the Court's order, the ward may be ordered to be arested and delivered over to the custody of the petitioner who is her legal guardian and that the above petition stands posted to 23-3-43 in the above Court you may appear on the said date, otherwise the same will be heard exparte.

By order of the Court

Mangalore, 13-3-43. } **K. Balakrishna Rao** *Advocate for Pltnr.*

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ

O. S. 428/1942

ಸುಜೀರ ಅನಂತನಾಯ್ಕ ....ವಾದಿ.

ಮತ್ತು

ಕಡಂಬಾರು ಶಂಕರನಾರಾಯಣರಾವ್ ಸಹಾ ಪ್ರತಿವಾದಿರು.

ಇವರೊಳಗೆ

2. ನಾರಣಪ್ಪಯ್ಯಾ 3. ವೆಂಕಟರಮಣಯ್ಯಾನರರು ಗಾರ್ಡಿಯನ್ ತಾಯಿ ಸುನಂದಾಬ್ಬಾ. ಕಡಂಬಾರು ಶಂಕರನಾರಾಯಣರಾಯರ ಹೆಂಡ್ತಿ-ಕಾಸರಗೋಡು ತಾಲೂಕು ಕಡಂಬಾರು ಗ್ರಾಮದಲ್ಲಿರುವವರು.

ಇವರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದರೆ:—

1 ನೇ ಪ್ರತಿವಾದಿಯು ತಾ. 5—11—32ರಲ್ಲಿ ವಾದಿಗೆ ರೂಪ್ಯಾ 1700/-ಕ್ಕೆ ಬರಕೊಟ್ಟ ಸ್ಥಿರಾಸ್ತಿ ಜವಾಬ್ದಾರಿ ತೋರದವು ದಸ್ತಾವೇಜು ಪ್ರಕಾರ ಬರತಕ್ಕ ಐವಜುಗಳನ್ನು ಭರಮಾಡಿಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಮೇಲಿನ ವ್ಯಾಜ್ಯವು ತಾರೀಕು 2—4—1943 ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಹಗಲು ಗಂಟೆ 10—30ಕ್ಕೆ ಖುದ್ದು ನಿಂದಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ಉದಹರಿಸುವರೆ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸೋಣಾಗುವುದು.

Mangalore, 13-3-1943 } **M. Janardan Mallya,** Pleader for Plaintiff.

ಜಿಲ್ಲಾ ಸಮಾಚಾರಗಳು

ಜಿಲ್ಲೆಯಲ್ಲಿ ಗವರ್ನರರ ಸಂಚಾರ

ರೂ. ನಾಲ್ಕುವರೆ ಲಕ್ಷಕ್ಕೆ ಮೀರಿದ ನಿಧಿ

ದ. ಕ. ಜಿಲ್ಲಾ ಕಲೆಕ್ಟರ್, ಮಿ| ಕರಮತುಲ್ಲಾ, ಐ. ಸಿ. ಎಸ್. ಇವರು ಮತ್ತು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಮಿ| ಎಫ್ ಜೆ. ಹಡ್ವಿಕ್ ಇವರೂ ಪತ್ನೀ ಸಮೇತರಾದ ಮದ್ರಾಸಿನ ಗವರ್ನರರನ್ನು ಸಂಪಾಜೆ ಗಡಿಯಲ್ಲಿ ಎದಿರುಕೊಳ್ಳಲು, ಗವರ್ನರರು ಅವರೊಡಗೂಡಿ ತಾ ೧೬ಕ್ಕೆ ಪುತ್ತೂರಿಗೆ ಬಂದರು. ಅಲ್ಲಿ ಬೋರ್ಡ ಸೆಕೆಂಡರಿ ಶಾಲೆಯಲ್ಲಿ ಸಾರ್ವಜನಿಕ ಸಭೆ ಸೇರಿತು ಅಲ್ಲಿಗೆ ಬಂದ ಪತ್ನೀ ಸಮೇತರಾದ ಗವರ್ನರರಿಗೆ ಹೂವಮಾಲೆ ಹಾಕಿ ಸತ್ಕರಿಸಿದ್ದಲ್ಲದೆ, ರೂ. ೧೦೦೦ ಕ್ಕಿಂತ ಹೆಚ್ಚು ಕೊಟ್ಟ ಮಹನೀಯರ ಪರಿಚಯ ಗವರ್ನರರಿಗೆ ಹೇಳಲಾಯಿತು ಪುತ್ತೂರು ಡಿ| ವಾರ್ ಕಮಿಟಿಯ ಅಧ್ಯಕ್ಷರೂ ಆದ ಶ್ರೀ ರಾಮುಲು ನಾಯಿಡುರವರು ಯುದ್ಧ ಕಮಿಟಿ ವರದಿಯನ್ನೋದಿ, ರೂ ೯೮,೦೮೦ರ ನಿಧಿಯನ್ನೊಪ್ಪಿಸಿದರು. ಗವರ್ನರರು ಭಾಷಣ ಕೊಡುತ್ತಾ 'ಕಷ್ಟ ಕಾಲದಲ್ಲಿಯೂ, ನಿಮ್ಮದು ಬಡ ಜಿಲ್ಲೆಯಾದರೂ ನೀವೀ ತಾಲೂಕಿನಿಂದ ಇಷ್ಟು ಮಹತ್ತಾದ ನಿಧಿ ಕೊಟ್ಟದ್ದಕ್ಕೆ ಕೃತಜ್ಞನಾಗಿರುವೆನು' ಎಂದರು. ಯುದ್ಧ ವಿಚಾರವಾಗಿ ಮಾತನಾಡುತ್ತಾ 'ಇಂದು ಅಪಾಯ ಕಾಲ ದಾಟಿದೆ, ಕೊನೆಯ ಜಯ ನಮ್ಮದು' ಎನ್ನುತ್ತಾ, ಆಹಾರ ಸಂಕಷ್ಟದ ಕುರಿತು, 'ಈ ಸಮಸ್ಯೆ ವಿಷಮವಾದುದಾದರೂ, ಸಂಗ್ರಹಿಸಿಡುವುದನ್ನು ತಡೆಯುವುದು, ಅಧಿಕ ಆಹಾರ ಬೆಳೆಸುವ ಪ್ರಚಾರ ಮೊದಲಾದವುಗಳಿಂದ ಕಷ್ಟವನ್ನು ಪರಿಹರಿಸಬೇಕಾಗಿದೆ' ಎಂದರು ಅಲ್ಲಿನ ತಹಸೀಲ್ದಾರ್ ಶ್ರೀ. ಗಣೇಶ ಇವರು ಗವರ್ನರರ ಭಾಷಣದ ಸಾರಾಂಶವನ್ನು ಕನ್ನಡದಲ್ಲಿ ಹೇಳಿದರು ನೇಶನಲ್ ವಾರ್ ಫ್ರಂಟಿನ ಆ| ಡಿ| ಆ| ರಾದ ಶ್ರೀ ಬಿ. ಶಿವರಾಮ ಹೊಳ್ಳರು ಕೃತಜ್ಞತೆ ಹೇಳಿದರು ಆ ಮೇಲೆ ಗವರ್ನರರು ನಗರ ಸಂದರ್ಶಿಸಿದರು.

ಮಂಗಳೂರಲ್ಲಿ ಗವರ್ನರರು

ತಾ ೧೬ರಂದು ಸಂಜೆಗೆ ಪತ್ನೀ ಸಮೇತರಾದ ಗವರ್ನರರು ಜಿಲ್ಲಾ ಕಲೆಕ್ಟರ್ ಮತ್ತು ಪೋಲೀಸ್ ಸುಪರಿಂಟೆಂಡೆಂಟರೊಡನೆ ಮಂಗಳೂರಿಗೆ ಬಂದರು ರಾತ್ರಿ ವಿಶ್ರಾಂತಿ ತೆಗೆದುಕೊಂಡು, ತಾ ೧೭ರಂದು ಪೂರ್ವಾಹ್ನ ೯-೩೦ ಗಂಟೆಗೆ ಸೆಂಟ್ರಲ್ ಮೈದಾನಿನಲ್ಲಿ ಮುನ್ಸಿಪಲ್ ಟೌನ್ ಹಾಲಿನ ಶಂಕುಸ್ಥಾಪನೆಗೈದರು. ಮೈದಾನಿನಲ್ಲಿ ರಚಿಸಿದ ಚಪ್ಪರದಲ್ಲಿ ಸಭೆಸೇರಿತು. ಗವರ್ನರರು ಮತ್ತು ಅವರ ಪತ್ನಿ ಈ ಚಪ್ಪರಕ್ಕೆ ಆಗಮಿಸುವ ಮೊದಲು, ಮಂಗಳೂರಿನ ಎ ಆರ್ ಪಿ ದಳವನ್ನು ಪರೀಕ್ಷಿಸಿದರು ಗವರ್ನರರು ಮತ್ತು ಅವರ ಪತ್ನಿಯವರಿಗೆ ಹೂಮಾಲೆ ಹಾಕಿ ಸತ್ಕರಿಸಿದ ಮೇಲೆ, ಮುನ್ಸಿಪಲ್ ಚೇರ್‌ಮೇನರು ಮುನ್ಸಿಪಲ್ ಕೌನ್ಸಿಲರ ಪರಿಚಯವನ್ನು ಗವರ್ನರರಿಗೆ ಹೇಳಿದರು ಆ ಮೇಲೆ ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಚೇರ್‌ಮೇನ್ ಪುತ್ತೂರು ಹುಸೇನ್ ಸಾಹೇಬರು ಮಾನಪತ್ರವನ್ನು ಓದಿದರು ಮಾನಪತ್ರದಲ್ಲಿ, ಈ ನಗರಕ್ಕೆ ಯುದ್ಧ ಪರಿಸ್ಥಿತಿಯಿಂದ ಉಂಟಾದ ಸಂಕಷ್ಟದ ವಿಷಯ, ವೆಟ್‌ಸ್ಟರ್ ಮಾರ್ಕೆಟನ್ನು ಸುಧಾರಿಸುವ ಹಾಗೂ ಮಾರ್ಗ ಸೌಕರ್ಯ ಯೋಜನೆಗಳನ್ನು ಕೌನ್ಸಿಲು ಬಿಟ್ಟುಬಿಡಬೇಕಾಗಿ ಬಂದ ವಿಚಾರ, ಮುನ್ಸಿಪಲ್ ಸಿಬಂದಿಗೆ ಸಂಬಳ ಹೆಚ್ಚಿಸುವ ವಿಚಾರ, ಮಂಗಳೂರಿಗೆ ನೀರಿನ ಸೌಕರ್ಯ ಮತ್ತು ಮಾರ್ಗ ಶುದ್ಧತೆ ವಿಷಯ ಆಹಾರ ಸಾಮಗ್ರಿಗೆ ಕ್ರಯ ಹೆಚ್ಚಾದ ವಿಚಾರ ಮೊದಲಾದವು ಸೂಚಿತವಾಗಿದ್ದವು. ಆ ಮೇಲೆ ಮುನ್ಸಿಪಾಲಿಟಿ ಪರವಾಗಿ ರೂ. ೧೦೦೦ದ ನಿಧಿ ಒಪ್ಪಿಸಲಾಯಿತು. ಟೌನ್ ಹಾಲ್ ಫಂಡಿನ ಅಧ್ಯಕ್ಷರಾದ ರಾವ್ ಸಾಹೇಬ್ ಪಿ. ಆರ್. ಆರ್. ಪೂಂಜರು ಅದರ ವರದಿ ಓದಿದರು. ಗವರ್ನರರು ತಮ್ಮ ಭಾಷಣದಲ್ಲಿ ತಾನಿಲ್ಲಿಗೆ ಮೂರನೆ ಸಲ ಬರುವುದೆಂದೂ, ತನ್ನ ಪತ್ನಿ ಇದೇ ಪ್ರಥಮ ಸಲ ಬರುವುದೆಂದೂ ಹೇಳುತ್ತಾ, ಸುಂದರ ನಗರವಿದನ್ನು ಸಂದರ್ಶಿಸಲು ತಾನು ಸದಾ ಸಂತುಷ್ಟನಿರುವೆನೆಂದು ತಿಳಿಸಿ, ಅನುಕೂಲವಾದರೆ, ಈ ದಿನ ಶಂಕು ಸ್ಥಾಪನೆ ಮಾಡಿದ ಕಟ್ಟಡದ ಉದ್ಘಾಟನಾ ಸಮಾರಂಭಕ್ಕೂ ತಾನು ಬರುವುದಾಗಿ ಹೇಳಿ ಮಾನಪತ್ರದಲ್ಲಿ ಸೂಚಿಸಲಾದ ಸಂಕಷ್ಟಗಳ ವಿಚಾರವನ್ನೆತ್ತಿ, ಯುದ್ಧ ಕಾಲವಲ್ಲದಿದ್ದರೆ ತಾನು ಪ್ರತಿಯೊಂದಕ್ಕೂ ಒಪ್ಪಿಗೆ ಕೊಡುತ್ತಿದ್ದೇನೆಂದೂ, ಆದರೂ ಮಾನ ಪತ್ರದಲ್ಲಿ ಕೇಳಲ್ಪಟ್ಟ ವಿಷಯಗಳ ಕುರಿತು ತಾನು ಅವಶ್ಯ ಆಲೋಚಿಸುವೆನೆಂದೂ ತಿಳಿಸಿದರು ಭಾಷಣ ಆದಮೇಲೆ ಗವರ್ನರರು ಶಂಖುಸ್ಥಾಪನೆ ಮಾಡಿದರು. ಕೌನ್ಸಿಲಿನ ವೈಸ್ ಚೇರ್‌ಮೇನರಾದ ಮಿ| ಸಿ ಎಲ್ ಲೋಬೋ ಕೃತಜ್ಞತೆ ಹೇಳಿದರು

ಸಂಘ ಸಂಸ್ಥೆಗಳ ಸಂದರ್ಶನ

ಇದಾದ ಮೇಲೆ ಗವರ್ನರರು ಗು| ಟ್ರೇಡ್ ಸ್ಕೂಲ್, ಸೈ| ಜೋಸೆಫ್ಸ್ ಎಸ್ಟೆಲಂವರ್ಕ್ಸ್ ಶೋಪ್, ಕಾಮನ್‌ವೆಲ್ತ್ ಟ್ರಸ್ಟ್ ಇಂಜಿನಿಯರಿಂಗ್ ವರ್ಕ್ಸ್, ಮತ್ತು ವಾರ್ ಟೆಕ್ನಿಶಿಯನ್ಸ್‌ಗಳಿಗೆ ತರಬೇತಿ ಕೊಡುವ ಸಿ ಪಿ ಸಿ ವರ್ಕ್ಸ್ ಶೋಪ್‌ಗಳನ್ನೂ ಸಂದರ್ಶಿಸಿದರು ಟ್ರೇಡ್ ಸ್ಕೂಲಿನ ಸುಪರಿಂಟೆಂಡೆಂಟ ಶ್ರೀ ಕೆ. ಜೆ. ಮೇನನರು ಗವರ್ನರರಿಗೆ ಮಾಲೆ ಹಾಕಿ, ಸ್ಕೂಲಿನೊಳಗೆ ಕರೆದುಕೊಂಡುಹೋಗಿ, ಅಲ್ಲಿ ತರಬೇತಿ ಹೊಂದುವ ವಾರ್ ಟೆಕ್ನಿಶಿಯನ್ಸ್ ಮತ್ತು ವಾರ್ ಸಪ್ಲೈ ಸೆಕ್ಷನನ್ನು ತೋರಿಸಿದರು ಸುಮಾರು ೨೩೦ ಟೆಕ್ನಿಶಿಯನ್ಸ್ ಅಲ್ಲಿ ಬೇರೆಬೇರೆ ಉದ್ಯೋಗಗಳಲ್ಲಿ ತರಬೇತಿ ಪಡೆಯುತ್ತಾರೆ ಶ್ರೀ ಮೇನನರು ರೂ ೨೦೦ರ ಒಂದು ನಿಧಿಯನ್ನು ಒಪ್ಪಿಸಿದರು ಅಲ್ಲಿ ಗವರ್ನರರು ತರಬೇತಿಗಾರರಿಗೆ ಭಾಷಣ ವಿತ್ತು, ಭಾರತವು ಮುಂದೆ ಔದ್ಯೋಗಿಕ ರಾಷ್ಟ್ರವಾಗುವುದೆನ್ನುತ್ತಾ, ಇಂದು ಪಡೆದ ಜ್ಞಾನವು ಮುಂದಕ್ಕೆ ಉಪಯೋಗವಾಗುವುದೆಂದರು. ಸೈ| ಜೋಸೆಫ್ಸ್ ವ. ಶಾಪಿನಲ್ಲಿ ಅದರ ಮೆನೇಜರ್ ರೆ| ಫಾ| ಜೆ| ಲೋಬೋರವರು ಸ್ವಾಗತಿಸಿ ಬೇರೆ ಬೇರೆ ವಿಭಾಗಗಳನ್ನು ತೋರಿಸಿದರು ಅಲ್ಲಿನ ಸುಪರಿಂಟೆಂಡೆಂಟ್ ಶ್ರೀ ಎಸ್. ವಿ. ಅಯ್ಯರು ಹೂಮಾಲೆ ಹಾಕಿ ಒಂದು ನಿಧಿಯನ್ನೊಪ್ಪಿಸಿದರು ಕಾ| ಟ್ರ| ಎ| ವರ್ಕ್ಸಿನಲ್ಲಿ ಡಿ ಪಿ ಆಡಮ್ಸ್ ಮತ್ತು ಎ ಎಚ್ ಗಸ್ ಇವರು ಸ್ವಾಗತಿಸಿ ಅಲ್ಲಿನ ಬೇರೆ ಬೇರೆ ವಿಭಾಗಗಳನ್ನು ತೋರಿಸಿದರು ಸಿ ಪಿ ಸಿ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಪಿ ಎಸ್. ಕುಡ್ವರು ತಮ್ಮ ವರ್ಕ್ ಶೋಪಿನಲ್ಲಿ ಗವರ್ನರರನ್ನು ಸ್ವಾಗತಿಸಿ, ಅಲ್ಲಿನ ಬೇರೆಬೇರೆ ವಿಭಾಗಗಳನ್ನು ತೋರಿಸಿ, ರೂ ೩೦೦೦ದ ಒಂದು ನಿಧಿಯನ್ನೂ ಒಪ್ಪಿಸಿದರು.

ಆ ಮೇಲೆ ಕಲೆಕ್ಟರರ ಬಂಗ್ಲೆಯಲ್ಲಿ ಗವರ್ನರರು ಶ್ರೀಗಳಾದ ಜೆ ಎನ್ ಟೈಟ್, ಎಂ ಅಣ್ಣಪ್ಪ ನಾಯಕ್, ಖಾನ್ ಸಾಹೆಬ್ ಎಚ್. ಎಸ್ ಹುಸೆನ್ ಸಾಹೆಬ್ ಎಂ ಎಲ್ ಎ ಡಿ ಮಂಜಯ್ಯ ಹೆಗ್ಗಡೆ ಎಂ ಎಲ್ ಸಿ ಜೇಸಿಸ್ ಪಿಂಟೋ ಮತ್ತು ರಾಯ್ ಬಹದೂರ್ ಶಾಂತಿಕುಮಾರ ಸಾದರಿಗೆ ಭೇಟಿಯಿತ್ತರು

ಸಾರ್ವಜನಿಕ ಸಭೆ

ಸಂಜೆ ಪತ್ನಿಸಮೇತರಾದ ಗವರ್ನರರು ನಗರ ಸಂದರ್ಶಿಸಿ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಸೇರಿದ ಸಾರ್ವಜನಿಕ ಸಭೆಗೆ ಬಂದರು ಅವರನ್ನು ಜಿಲ್ಲಾ ಜಡ್ಜರಾದ ಮಿ| ಅಲ್ಲಪ್ಪಿ ಸಾಹೇಬ್, ಶ್ರೀ ಬಿ. ಜೋಗಪ್ಪ ಮತ್ತು ಅಬ್ದುಲ್ ಗಫೂರ್ ಸಾಹೇಬ್,(ಮಂಗಳೂರು ಮತ್ತು ಕುಂದಾಪುರದ ಡಿ. ಆಫೀಸರರು) ಸ್ವಾಗತಿಸಿದರು, ಶ್ರೀ ಜೋಗಪ್ಪನವರು ರೂ. ೧೦೦೦ಕ್ಕಿಂತ ಹೆಚ್ಚು ಗವರ್ನರರ ವಾರ್ ಫಂಡಿಗೆ ಹಣ ಕೊಟ್ಟವರ ಪರಿಚಯವನ್ನು ಗವರ್ನರರಿಗೆ ಹೇಳಿದರು. ಜಿಲ್ಲಾ ನೇ. ವಾ| ಫ್ರಂಟಿನ ಆರ್ಗನೈಸರ್ ಖಾನ್ ಸಾಹೇಬ್ ಹುಸೇನ್ ಸಾಹೇಬ್ ಎಂ ಎಲ್. ಎ ಇವರಿಗೆ ಗವರ್ನರರು ಬಿರುದು ಕೊಟ್ಟರು. ದ. ಕ. ಜಿಲ್ಲಾ ವಾರ್ ಕಮಿಟಿಯ ಕಾರ್ಯದರ್ಶಿ ಶ್ರೀ ಎಂ. ಕೆ. ನಂಬಿಯಾರರು ವರದಿಯನ್ನೋದಿದರು. ಜಿಲ್ಲೆಯಿಂದ ಸೈನ್ಯಕ್ಕೆ ೧,೬೬೧ ಜನರನ್ನು ರಿಕ್ರೂಟ್ ಮಾಡಿದ್ದು, ಟೆಕ್ನಿಕಲ್ ಟ್ರೈನಿಂಗ್ ಸ್ಕೀಮಿಗೆ ೮೬೭ ಜನರನ್ನು ಆರಿಸಿದ್ದು, ಎಮರ್ಜೆನ್ಸಿ ಕಮಿಶನಿಗೆ ೧೬ ಅರ್ಜಿ, ಪ್ರಿಕೇಡೆಟ್ ಟ್ರೈನಿಂಗ್ ಸ್ಕೂಲಿನ ೪ ಅರ್ಜಿ ಈ ವರ್ಷ ಹೋದದ್ದು ಈ ವಿಷಯಗಳನ್ನೆಲ್ಲಾ ಹೇಳುತ್ತಾ, ಈ ಜಿಲ್ಲೆಯು, ೧೯೪೧ ಡಿಸೆಂಬರ ೧೫ರ ವರೆಗೆ ಪ್ರಾಂತದಲ್ಲಿ ಕೊನೆಯದಾಗಿ ಕೇವಲ ರೂ. ೧,೧೩,೧೫೮ ಮಾತ್ರ ಗವರ್ನರರ ಯುದ್ಧ ಫಂಡಿಗೆ ಕೊಟ್ಟದ್ದು, ಆದರೆ ಈಗ ಕೇವಲ ೧೪ ತಿಂಗಳಲ್ಲಿ ಆ ಸಂಖ್ಯೆಯು ರೂ ೬, ೮೪,೦೬೬ಕ್ಕೆ ಏರಿದ ವಿಷಯವನ್ನು ಎತ್ತಿ ಹೇಳಿದರು. ನೇ| ವಾ| ಫ್ರಂಟಿನ ಪರವಾಗಿ ಖಾ| ಸಾ| ಹು| ಸಾಹೇಬರು ವರದಿಯನ್ನೋದಿದರು ಆ ಮೇಲೆ ರೂ ೮೬,೦೦೦, ರೂ. ೬೮,೮೦೦, ರೂ. ೬೩,೩೦೦, ರೂ. ೪೯,೦೦೦ಗಳ ಬೇರೆ ಬೇರೆ ನಿಧಿಗಳನ್ನು ಮಂಗಳೂರು, ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ಪರವಾಗಿ ಅಲ್ಲಿನ ತಹಸೀಲ್ದಾರರು ಶ್ರೀ ಗಳಾದ ಯು. ಜನಾರ್ದನ ಜೆ ಎಲ್ ಡಿಸೋಜ ಕೆ. ಕೇಶವ ಕುಡ್ವ ಮತ್ತು ಎಸ್ ಜೋಶ್ವ ಇವರು ಒಪ್ಪಿಸಿದರು ಮಂಗಳೂರು ಸಾಹುಕಾರರ ಪರವಾಗಿ ಶ್ರೀ ಎಂ ಅಣ್ಣಪ್ಪ ನಾಯಕರು ರೂ. ೨೧,೮೦೦ದ ನಿಧಿಯನ್ನು ಒಪ್ಪಿಸಿದರು

ಗವರ್ನರರ ಭಾಷಣ

ಆ ಮೇಲೆ ಭಾಷಣಮಾಡುತ್ತಾ ಈ ಜಿಲ್ಲೆಯ ಜನರು ಯುದ್ಧ ಪುರಸ್ಕಾರಗಳ ವಿಷಯ ಸಂತೋಷ ಸೂಚಿಸಿ, ನಿಧಿಯೊಪ್ಪಿಸಿದ ವಿಷಯ ಸಂತೋಷ ತೋರ್ಪಡಿಸಿದ ನಂತರ, ಯುದ್ಧದ ವಿಷಯ ಮಾತನಾಡಿ, ಕಳೆದ ಸಲ ಮಂಗಳೂರಿಗೆ ಬಂದಾಗ ಜಪಾನು ಆಕ್ರಮಣದ ಭೀತಿಯಿತ್ತೆಂದೂ ಆದರೆ ಈ ಸಲ ಅವರ ಧಾಳಿಯಾಗುವ ಭಯ ಕಡಿಮೆಯಾಗಿದೆಯೆಂದು ತಿಳಿಸಿ, ರಷ್ಯ ಮತ್ತು ಇತರ ರಣಾಂಗಣಗಳ ವಿಚಾರವೆತ್ತಿ ಎಲ್ಲಾ ಕಡೆಗಳಲ್ಲಿಯೂ ವೈರಿಯು ಸೋಲುತ್ತಿರುವನೆಂದೂ ಅಂತ್ಯ ಜಯವು ತಮಗೆಂದೂ ಸಾರಿದರು. ಶ್ರೀ ಎಂ ಕೆ ನಂಬಿಯಾರರು ಕೃತಜ್ಞತೆ ಹೇಳಿದರು. ಆ ಮೇಲೆ ಪತ್ನೀ ಸಹಿತರಾದ ಗವರ್ನರರು ಕೆನರಾ ಕ್ಲಬ್ಬಿಗೆ ಹೋಗಿ, ಕಲೆಕ್ಟರರ ಆತಿಥ್ಯ ಸ್ವೀಕರಿಸಿದರು ಗವರ್ನರರ ಪತ್ನಿಯವರು ಕಾಮನ್ ವೆಲ್ತ್ ಟೈಲ್ ವೇರ್ಹೌಸ್, ಸಿಸ್ಟರ್ ಆಫ್ ಚೇರಿಟಿ, ಫಾದರ್ ಮುಲ್ಲರ್ ಆಸ್ಪತ್ರೆ, ಸೈಂಟ್ ಎಗ್ನೆಸ್ ಕಾನ್ವೆಂಟ್, ಲೇಡೀಸ್ ಕ್ಲಬ್ ಮತ್ತು ಆನಂದ ಮಹಿಳಾ ಸೇವಾಶ್ರಮಗಳನ್ನು ಸಂದರ್ಶಿಸಿದರು. ಸೈಂಟ್ ಎಗ್ನೆಸ್ ಕಾನ್ವೆಂಟ್‌ನಲ್ಲಿ ಲೇಡಿ ಹೋಪರು ಭಾಷಣಮಾಡುತ್ತಾ ಅಲ್ಲಿನ ಗೃಹಕೃತ್ಯ ಶಿಕ್ಷಣದ ವಿಷಯ ಕೊಂಡಾಡಿದರು. ಆ ಮೇಲೆ ಲೇಡಿ ಹೋಪರು ಕಲೆಕ್ಟರರ ಬಂಗ್ಲೆಯಲ್ಲಿ ಶ್ರೀಮತಿಯರಾದ ಎಂ ಎಸ್ ಶ್ರೇಷ್ಠ ಮತ್ತು ಶಾಂಭವಿ ಆರ್. ಪೂಂಜರಿಗೆ ಭೇಟಿಯಿತ್ತರು ತಾ೧೮ರಂದು ಗವರ್ನರರು ಮಂಗಳೂರಿಂದ ಕಾಸರಗೋಡಿಗೆ ತೆರಳಿದರು. ತಾ ೧೮ರಂದು ಮಿ| ಸಿ ಎಲ್ ಲೋಬೋರವರು, ಜಿಲ್ಲೆಯ ಬಡಜನರ ಪರವಾಗಿ ಆಹಾರ ಸಮಸ್ಯೆಯ ವಿಷಯ ಗವರ್ನರರಿಗೆ ಒಂದು ವಿನಂತಿ ಒಪ್ಪಿಸಿದರು

(ಅಪೂರ್ಣ)

ಕಯ್ಯೂರು ಮೊಕದ್ದಮೆ

ಯ ಅಪೀಲಿಗೆ ಪ್ರಿವಿ ಕೌನ್ಸಿಲಿನಲ್ಲಿ ಅಪ್ಪಣೆ ಸಿಗಲಿಲ್ಲವಷ್ಟೆ, ಮುಂದಿನ ಪ್ರಯತ್ನವನ್ನು ಮಾಡಿಬಿಡೋಣವೆಂದು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಸೋರೆನ್ಸರರು, ಈ ಬಸ್ಸು, ಕಯ್ಯೂರು ಅಪಾದಿತರಿಗೆ ಶ್ರೀಗಳಾದ ಮಡತ್ತಿಲ್ ಅಪ್ಪು, ಪಡುವರತ್, ಕುಂಞಂಬು ನಾಯರ್, ಕೋಯಿತಟ್ಟ ಚಿರುಕಂಡನ್ ಮತ್ತು ಪಳ್ಳಿಕಾಲ್ ಅಬೂಬಕರ್ ಇವರಿಗೆ, ಜೀವದಾನ ಕೊಡಿಸಬೇಕೆಂದು ಪ್ರಾರ್ಥಿಸಿ ಭಾರತಮಂತ್ರಿ ಅಮೆರಿಯವರಲ್ಲಿ ಒಂದು ಶಿಷ್ಟ ಮಂಡಳ ಒಯ್ಯುವರೆ ಅಪೇಕ್ಷಿಸಿ ಅದಕ್ಕೆ ಅಮೆರಿಯವರಿಂದ ಅನುಮತಿ ಕೇಳಿದ್ದರು. ಈ ವಿಷಯದಲ್ಲಿ ಶಿಷ್ಟಮಂಡಳ ತರುವುದು ಅವಶ್ಯವಿಲ್ಲವೆಂದು ಅಮೆರಿಯವರು ಸೋರೆನ್ಸನರಿಗೆ ಬರೆದಿದ್ದಾರಾಗಿ ತಿಳಿದಿದೆ, ಅಮೆರಿಯವರಿಂದ ಹೀಗೆ ತಿರಸ್ಕೃತವಾದರೂ, ಈಗ ಸಾರ್ವಭೌಮರಲ್ಲಿಯೆ ಇವರ ಜೀವದಾನಕ್ಕೆ ಬಿನ್ನಹ ಮಾಡುವ ಕೊನೆಯ ಸಾಹಸಮಯ ಪ್ರಯತ್ನ ಮಾಡಲಾಗುತ್ತದೆಂದು ಕಯ್ಯೂರು ಡಿಫೆನ್ಸ್ ಕಮಿಟಿ ಅಧ್ಯಕ್ಷರು ಪ್ರಕಟಿಸಿದ್ದಾರೆ.

ಹರಿಕಥಾ ಪ್ರಸಂಗ

ತಾ ೧೩-೩-೪೩ನೇ ಶನಿವಾರ ರಾತ್ರಿ ಗಂಟೆ ೮-೩೦ಕ್ಕೆ ಬೆಂಗರೆಯ ಭಜನೆ ಮಂದಿರದಲ್ಲಿ, "ಸತಿ ಅನಸೂಯಾ" ಎಂಬ ಹರಿಕಥಾ ಪ್ರಸಂಗವು ಹರಿದಾಸ್ ಶ್ರೀ ಬಿ ನಾರಾಯಣ ಕೋಟ್ಯನ್ ಎಂಬವರಿಂದ ನೆರವೇರಿತು

NOTICE

In the Court of the District Munsif of Mangalore.

R. E. P NO. 450/1942

Between

Sunder Rao Ullal — *Petitioner*

and

Ullal Ananthaya & others — *Respondents.*

To

Ratnakar Rao, son of Mangesh Rao.

4 Ramesha Rao, son of Mangesh Rao

Sumitra Rao son of Mangesh Rao

Residing in Codialbail, Mangalore Town

7 Sankamma daughter of Lakkanna Bhandary.

8 Drake niece of Subbayya Bhandary

Respondents 7 and 8 reside in Verkadi village, Kasaragod Taluk, S. K. District

9 Madhava Kini, son of Nagappa Kini residing in Bhatkal in North Kanara Dt

10 Ramakrishna Kini alias Krishna Kini son of Nagappa Kini residing in Ullal Kasba village Mangalore Taluk

12 Ananth a Padmanabha Kini is manager of his undivided family son of Nagappa Kini, Ullal Kasba village, Mangalore Taluk

14 Ramanatha } Minor sons
15 Dayananda } of 9th Res.
16 Srinivasa } Madhava Kini, represented by guardian and literally 9th Res., resides in Bhatkal in N Kanara Dt

17 Ramadasa
18 Umanatha
19 Ramesha
20 Purushothama

Minors sons of Raghunatha Kini by guardian ad-litem mother Siidevi alias Sundaramma residing in Ullal Kasba village, Mangalore Taluk.

28 Annappa Bhandary, son of Djapu Forest Ranger at Nagpur, Central Province

Whereas in the abovenamed suit the petitioner decree-holder has applied for the sale of the immoveable properties more fully detailed in the draft sale proclamation filed into Court.

You are hereby informed that the *30th day of March 1943* has been fixed for settling the terms of the sale proclamation.

Mangalore, 15-3-1943. — G. Somashekar Rao, *Vakil for Petitioner.*

ಸಿನೆಮಾ ಸುದ್ದಿ

'ಹಸ್ನಾಬಾನು' ಇದ್ದಾಳೆ!

'ಅವಳೆಲ್ಲಿ?' ಎಂದು ಕಳೆದ ಸಲ ನಾವು ಪ್ರಶ್ನಿಸಿದ್ದೆವು. ಆದರೆ ಈಗಾಕೆ ಮನೆಗೆ ಬಂದಿದ್ದಾಳೆಂದು ಸುದ್ದಿ ಬಂದಿದೆ. ಮನೆಯುವರೊಡನೆ ಯೇನೋ ಸ್ವಲ್ಪ ಜಗಳಾಡಿ ಎರಡು ವಾರ ಪರವೂರಿಗೆ ಹೋಗಿದ್ದಳಂತೆ! ಅವಳ ಅಭಿನಯದಿಂದ 'ಕೋಶಿಶ್' ಎಂಬ ಚಿತ್ರ (ದೀನ್ ಪಿಕ್ಚರ್ಸಿನವರ) ತಯಾರಾಗುವುದಿದ್ದು, ಅವಳಿಲ್ಲದ್ದರಿಂದ, ಆ ಕಂಪನಿಯವರು ತುಂಬಾ ಗಲಾಟೆ ಮಾಡಿದರು. ಹಸ್ನಾಬಾನು ಇದಕ್ಕಿಂತ ಮೊದಲೂ ಹೀಗೆ ಹೇಳದೆ ಕೇಳದೆ ಮನೆಯಿಂದ ಪರಾರಿಯಾಗಿರುವಳೆಂದು ಈಗ ತಿಳಿದುಬರುತ್ತದೆ. ಒಮ್ಮೊಮ್ಮೆ ಇಂಥಾ ವಿನೋದ ಮಾಡುವುದು ಅವಳ ಚಟವೇನೋ?

ವಿವಾಹ ವಿಚ್ಛೇದ

ಪುನರ್ಮಿಲನದ ನಾಯಿಕಾ ನಾಯಕರಾದ ಸ್ನೇಹಪ್ರಭಾ ಪ್ರಧಾನಳೂ, ಕಿಶೋರ ಸಾಹುವೂ ವಿವಾಹಿತ ದಂಪತಿಗಳಾಗಿ ಕೆಲವೇ ಕಾಲ ಸಂಸಾರ ಹೂಡಿದರು! ಆದರೇಕೋ ಅವರಿಗೆ ಪುನರ್ವಿಚ್ಛೇದವೂ ಆಗಬೇಕಾಯಿತು! ಒಬ್ಬರೊಬ್ಬರಿಗೆ ಸರಿಬರಲಿಲ್ಲ; ಹೀಗಾಗಿ ಕೆಲಕಾಲಗಳಾದುವು; ಈಗ ಈ 'ವಿವಾಹವಿಚ್ಛೇದ' ಕಾರ್ಯವು ಸಾಂಗವಾಗಿ ನೆರವೇರಿದೆ! ಇನ್ನೆಲ್ಲಿಯಾದರೂ ಇವರ 'ಪುನರ್ಮಿಳನ'ವಾದೀತೇ ಯಾರು ಹೇಳಬಲ್ಲರು? 'ಜನನಂ ಮರಣಂ, ಪುನರಪಿ ಜನನಂ ಪುನರಪಿ ಜನನೀ ಜಠರೇ ಶಯನಂ'!

ದಕ್ಷಿಣ ಭಾರತದಲ್ಲಿ

೧೯೪೨ನೇ ಇಸವಿಯಲ್ಲಿ ತಯಾರಾದ ಚಿತ್ರಗಳು ಒಟ್ಟು ೩೩. ಇದರಲ್ಲಿ ತಮಿಳು ೨೩, ತೆಲುಗು ೧೧, ಕನ್ನಡ ೨, ಮಳೆಯಾಳ ೧. ಮೇಲಿನ ೩೫ ಚಿತ್ರಗಳಲ್ಲಿ ದಕ್ಷಿಣಭಾರತದ ಹೊರಗಿನ ಸ್ಟುಡಿಯೋದಲ್ಲಿ ತೆಗೆದ ಚಿತ್ರ ೨ ಮಾತ್ರ. ಮದ್ರಾಸು ಪ್ರಾಂತದಲ್ಲಿ ಒಟ್ಟು ಸಿನೆಮಾ ಥಿಯೇಟರುಗಳು ೨೩೭. ಟೂರಿಂಗ್ ಟಾಕಿಗಳ ಸಂಖ್ಯೆ ಈಗ ಕಡಿಮೆಯಾಗಿದೆ. ಕುರುಡಾಯಿಲ್ ಮತ್ತು ವಿದ್ಯುಚ್ಛಕ್ತಿ ಅಭಾವವೇ ಇದರ ಕಾರಣ. ಯುದ್ಧ ಪರಿಸ್ಥಿತಿಯಿಂದ ಪ್ರತಿಯೊಂದರ ದರ ಹೆಚ್ಚಿದ್ದರೂ ಸಿನೆಮಾದವರು ಎಲ್ಲಿಯೂ ಟಿಕೇಟು ದರ ಹೆಚ್ಚಿಸಿಲ್ಲವೆಂಬುದು ಗಮನಾರ್ಹವಾದ ವಿಷಯವಾಗಿದೆ.

ಕಮಲಾ ಮಂಗ್ಳೂರ್ಕರ್

ಈಕೆ ಸಿನೆಮಾ ನಟಿ; ಮಂಗಳೂರಿನವರಿಗೆ ಅಭಿಮಾನದ ವಿಷಯ; ಹುಬ್ಳೀಕರ್‌ರಿಂದ ಹುಬ್ಳಿಗೆ, ಆ ಮೂಲಕ ಅಖಿಲ ಕರ್ನಾಟಕಕ್ಕೆ ಕೀರ್ತಿ ಬಂದಂತೆ, ಮಂಗ್ಳೂರ್ಕರ್‌ರಿಂದ ಮಂಗಳೂರಿಗೂ ಆ ಮೂಲಕ ಕರ್ನಾಟಕಕ್ಕೂ ಕೀರ್ತಿ ಬರಲಿ! 'ವಕೀಲ್ ಸಾಹೇಬ್' ಚಿತ್ರ ಇವಳದು. ಅದರಲ್ಲಿ ತ್ರಿಲೋಕ್ ಕಾಪೂರ್, ಮಾಧುರಿ ಮೊದಲಾದವರು ಪಾತ್ರವಹಿಸುವರು.

ರಾಜ ಕಮಲಕಲಾ

ಮಂದಿರವೆಂದರೆ ಶಾಂತಾರಾಮರ ಹೊಸ ಸಂಸ್ಥೆ; ಇದರ ಪ್ರಥಮ ಚಿತ್ರವೇ 'ಶಕುಂತಲೆ'; ಇದರೊಡನೆ 'ಮಾಲಿ' ಎಂಬ ಸಂತ ಚಿತ್ರವೂ, ಅದಾದ ಮೇಲೆ 'ಸ್ವರ್ಗ' ಎಂಬ ಹಾಸ್ಯ ಚಿತ್ರವೂ ತಯಾರಾಗಲಿದೆ. ಭಕ್ತ ಮಾಲಿಯ ಪಾತ್ರವನ್ನು ಸಂಗೀತಾಚಾರ್ಯ ಕೃಷ್ಣರಾವ್ ವಹಿಸುತ್ತಾರಂತೆ! ಕೇಶವರಾವ್ ದಾತೆಯವರ ನಿರ್ದೇಶಕತ್ವ. 'ಸ್ವರ್ಗವನ್ನು' ಶಾಂತಾರಾಮರೇ ನಿರ್ದೇಶಿಸುವರು!

ಸ್ಥಳೀಯ ಸಿನೆಮಗಳು

ಸೆಂಟ್ರಲ್ ಟಾಕೀಸಿನಲ್ಲಿ ನ್ಯೂಥಿಯೇಟರ್ಸಿನವರ 'ನರ್ತಕಿ' ಎಂಬ ಸಾಮಾಜಿಕ ಚಿತ್ರವೂ, ಬಾಲಾಜಿ ಟಾಕೀಸಿನಲ್ಲಿ ಛಾಯಾ ಫಿಲ್ಮ್ಸಿನವರ 'ಗೋರಾ ಕುಂಬಾರ' ಎಂಬ ಸಂತ ಚಿತ್ರವೂ ಈಗ ಪ್ರದರ್ಶಿತವಾಗುತ್ತಿವೆ. 'ನರ್ತಕಿ'ಯಲ್ಲಿ ಲೀಲಾದೇಸಾಯಿ, ನಝುಮುಲ್ 'ಗೋರಾಕುಂಬಾರ'ದಲ್ಲಿ ಬಾಬುರಾವ್ ಪೆಂಡಾರ್ಕರ್, ಲಲಿತಾ ಪವಾರ್ ಮೊದಲಾದ ಪ್ರಸಿದ್ಧ ನಟನಟಿಯರ ಅಭಿನಯವಿದೆ. ಎರಡೂ ಪ್ರೇಕ್ಷಣೀಯ ಚಿತ್ರಗಳು.

ಕಾವಲುಗಾರ

ಹಡಗುಗಳ ತಂಡ ಸಡಗರದಿಂದ ಸಾಗಿದೆ; ಶತ್ರುಗಳ ದಾಳಿ ವಿಮಾನ - ಯುದ್ಧ ವಿಮಾನ - ಜಲಾಂತರ್ಗಾಮಿ ನೌಕೆಗಳ ಹಾವಳಿ ತಪ್ಪಿಸಲೆಂದು ಮಿತ್ರರ ಯುದ್ಧ ನೌಕೆಗಳು ಎಡೆಬಿಡದೆ ಕಾಯುತ್ತಿವೆ. ನಮ್ಮ ಸಮುದ್ರ ಮಾರ್ಗಗಳ ಕಾವಲಿನ ಕೆಲಸವನ್ನು ಇವು ಮಾಡುತ್ತಿವೆ; ವಿಪುಲ ಯುದ್ಧ ಸಾಹಿತ್ಯವನ್ನು ನಮ್ಮ ದೇಶಕ್ಕೆ ಸುರಕ್ಷಿತವಾಗಿ ತಲುಪಿಸುತ್ತಿವೆ.

ನಾವೂ ಕಾವಲಿನ ಕೆಲಸವನ್ನು ಮಾಡಬೇಕಾಗಿದೆ. ಅಪವ್ಯಯವು ನಮ್ಮ ಅಂತಃಶತ್ರು; ಅದರಿಂದ ಕೆಡಕುಂಟಾಗದಂತೆ ನಾವು ಕಾಯಬೇಕಾಗಿದೆ. ಸಮುದ್ರದೊಳಗಿನ ನಮ್ಮ ಸಾರಿಗೆಹಡಗುಗಳಿಗೆ ಶತ್ರುದಾಳಿಯ ಭಯವಿರುವಂತೆ, ಅಪವ್ಯಯವು ನಮ್ಮ ಯುದ್ಧ ಪ್ರಯತ್ನವನ್ನು ಹಿಡಿಮಧ್ದಿನಂತೆ ಹಾರಿಸಿಬಿಡಬಲ್ಲುದು. ನಾವು ಪೇಟೆಯಲ್ಲಿ ಕೊಳ್ಳುವ ಪ್ರತಿ ಒಡವೆಯೂ ಯುದ್ಧದ ಸಾಹಿತ್ಯವಾಗಿದೆ. ಬಟ್ಟೆ, ಬಣ್ಣ, ಮೊಳೆ, ಕಟ್ಟಿಗೆ (ಮರ), ತೊಗಲು—ಎಲ್ಲವೂ ಬಹುದೊಡ್ಡ ಪ್ರಮಾಣದಲ್ಲಿ ನಮ್ಮ ಯುದ್ಧದಲಗಳಿಗೆ ಬೇಕಾಗಿವೆ.

ನಾವು ಯಾವುದನ್ನೂ ಅಪವ್ಯಯ ಮಾಡಕೂಡದು. ಜೀವನಕ್ಕೆ ಅತ್ಯಾವಶ್ಯಕವಾದ ವಸ್ತುಗಳನ್ನು ಮಾತ್ರ ಕೊಳ್ಳತಕ್ಕದ್ದು. ಮತ್ತು ನಾವು ಉಳಿಸುವ ಹಣವನ್ನು ಅತಿ ಸುರಕ್ಷಿತ ರೂಪದಲ್ಲಿ ತೊಡಗಿಸಿ, ಅದನ್ನೂ ಯುದ್ಧದ ಆಯುಧವನ್ನಾಗಿ ಮಾಡುವುದು ನಮ್ಮ ಕರ್ತವ್ಯವಾಗಿದೆ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್

...ಇಲ್ಲವೆ ಡಿಫೆನ್ಸ್ ಲೋನ್ಸ್

ಸರ್ಟಿಫಿಕೇಟುಗಳು ನಿಮ್ಮ ಅಂಚೆ ಕಚೇರಿಯಲ್ಲಿ ಸಿಗುವವು. ೧೦ ರೂ.ಗೆ ಹತ್ತು ವರ್ಷಗಳಲ್ಲಿ ರೂ. ೭.೬.೦ ಲಾಭ ಬರುವುದು.

ಇವುಗಳ ಹೊರತು ಮತ್ತೇನನ್ನೂ ಕೊಳ್ಳುವ ಮೊದಲು ಕೊಂಚ ಯೋಚಿಸಿರಿ.



CPU·31·KN

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲಾಪುರ.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ. ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—

ಕುಟಿಕೂರ ಟಾಲ್ಕಮ್ ಪೌಡರ್.

CUTICURA TALCUM POWDER

ಪುಸ್ತಕಾವಲೋಕನ

ಮೋಡಗಳು

'ಪುಷ್ಪಮಾಲೆ' ಎಂಬ ಕಥಾ ಸಂಗ್ರಹದಿಂದ ಕನ್ನಡ ವಾಚಕರಿಗೆ ಪರಿಚಿತರಾದ 'ಶ್ರೀ ಸ್ವಾಮಿ' ಯವರು, 'ಮೋಡಗಳು' ಎಂಬ ತಮ್ಮ ಇನ್ನೊಂದು ಕಥಾ ಸಂಗ್ರಹವನ್ನೀಗ ಕನ್ನಡಿಗರ ಕೈಗಿತ್ತಿದ್ದಾರೆ. ಧಾರವಾಡ, ಮನೋಹರ ಗ್ರಂಥ ಪ್ರಕಾಶನ ಸಮಿತಿಯವರು, ತಮ್ಮ ಮಾಲೆಯಲ್ಲಿ ೫೭ನೆಯ ಕುಸುಮವಾಗಿ ಇದನ್ನು ಪೋಣಿಸಿರುವರು. ಕಲಾಗಾರ ಶ್ರೀ ರಾಘವೇಂದ್ರರು ಅಂದವಾದೊಂದು ಹೊದಿಕೆ ಚಿತ್ರ ಚಿತ್ರಿಸಿರುವರು ಪ್ರಿನ್ಸಿಪಾಲ್ ಗೋಕಾಕರು ಇದಕ್ಕೆ ಒಪ್ಪುವ ಮುನ್ನುಡಿ ಬರೆದಿದ್ದಾರೆ 'ಶ್ರೀ ಸ್ವಾಮಿ'ಯವರು ಈ ಪುಸ್ತಕವನ್ನು ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಶ್ರೀಮತಿ ಪಂಕಜಮ್ಮ ವೆಂಕಟೇಶ ಅಯ್ಯಂಗಾರರಿಗೆ ಅವರ ಉಪಕಾರವನ್ನು ಸ್ಮರಿಸಿ ಅರ್ಪಿಸಿದ್ದಾರೆ ಕ್ರೌನ್ ೧/೮ ಆಕಾರದ ೧೫೭+೭ ಪುಟಗಳುಳ್ಳ ಈ ಪುಸ್ತಕದ ಬೆಲೆ ಒಂದು ರೂಪಾಯಿ

ಒಟ್ಟಿನಿಂದ ಇದರಲ್ಲಿ ಏಳು ಕಥೆಗಳಿವೆ ಎರಡು ಐತಿಹಾಸಿಕ ಮೂಲ, ಮಿಕ್ಕವೆಲ್ಲವೂ ಸಾಮಾಜಿಕ ಚಿತ್ರಗಳು 'ಮಾಯಾ' ಮೊದಲನೆಯ ಕತೆ, 'ಧರ್ಮಪದ'ದ ಆಧಾರದಿಂದ ಈ ಕತೆ ಎತ್ತಿದ್ದಾರೆ, ಗೌತಮ ಬುದ್ಧನ ಜೀವಿತ ಘಟನೆಗಳಲ್ಲೊಂದು. 'ಮಾಯಾ' ಶುದ್ಧ ನಿರ್ಮಲ ಹೃದಯದ ಕನ್ಯೆ, ಗೌತಮನ ಉಪದೇಶವನ್ನು ಎದೆಯಾರೆ ಹೀರಿಕೊಂಡಳು, ಗುರುವನ್ನು ಮೆಚ್ಚಿಸಿದಳು, ಜೀವನ ಸಾರ್ಥಕ ಮಾಡಿಕೊಂಡಳು! "ನಂಜಮ್ಮ" ಕೀಳಿಯಿಂದೆಲೆ ಮಾರುವ ಹೆಂಗಸು! ಬಾಲ್ಯದಲ್ಲಿಯೇ ಗಂಡ ಸತ್ತುಹೋಗಿ ಜೀವನದ ಸುಖವನ್ನು ಅನುಭವಿಸಲಾರದೆ ಇದ್ದರೂ, ಇತರ ಗಂಡು ಹೆಣ್ಣುಗಳು ಸುಖಿಗಳಾಗಿರಬೇಕೆಂದು ಅವಳ ಹಂಬಲ, ಅದೇ ಅವಳಿಗೆ ತೃಪ್ತಿ! "ಬೇಟೆ" ಎಂಬುದು ಮೂರನೆಯ ಕತೆ ಜಮೀನ್ದಾರರ, ಪಾಳೆಯಗಾರರ ಜೀವನಧಾಟಿಯನ್ನು ಕತೆಗಾರರು ಚಿತ್ರಿಸಿದ್ದಾರೆ ಇಂಥಾ ಜೀವನಗಳ ಪರಿಚಯ ನಮಗಿಲ್ಲದಿರುವುದರಿಂದಲೋ ಏನೋ, ಇದರಲ್ಲಿ ಆದಿಯಿಂದ ಅಂತ್ಯದ ವರೆಗೆ ಕೃತ್ರಿಮತೆಯೇ ತೋರಿಬರುತ್ತದೆ "ಸತಿ" ರಜಪುತಾನಾ ಚರಿತೆಯಲ್ಲಿನ ಬೂಂದಿ ಮಹಾರಾಣಿಯ ವಿಷಾದಾಂತ ಜೀವನ ಕಥೆ, ಬಹಳ ಮಾರ್ಮಿಕವಾಗಿ ಚಿತ್ರಿಸಲ್ಪಟ್ಟಿದೆ. 'ಗೋಧೂಳೀ ಲಗ್ನ'ದಲ್ಲಿ ಕತೆಗಾರರು ಹಲವು ಭಾವನಾಪರ ವ್ಯಕ್ತಿಗಳನ್ನು ಚಿತ್ರಿಸಿ, ಓದುಗರನ್ನು ತಲ್ಲೀನರನ್ನಾಗಿ ಮಾಡುತ್ತಾರೆ. 'ಪತಿಪರಾಯಣೆ' ಮಧ್ಯಮ ವರ್ಗದ ಒಂದು ದುರಂತ ಜೀವನ ಚಿತ್ರ! 'ವಿಷಮ ಶೀತಜ್ವರ' ಆಸ್ಪತ್ರೆಯ ಕಥೆ, ರೋಗಿಗಳನ್ನು ಮತಾಂತರಗೊಳಿಸುವ ಮಿಶನರಿಗಳ ಸಂಕೋಚಿತ ಧರ್ಮ ಬುದ್ಧಿ, ರೋಗಿಯನ್ನು ಗುಣಪಡಿಸಿದ ನರ್ಸ್, ಆತನೊಡನೆ ಪ್ರೇಮ ವಿವಾಹವಾಗುವುದು, ಇದು ಇಲ್ಲಿನ ಕಥೆ, ಉಪದೇಶಾತ್ಮಕವೆನಿಸಿದರೂ ಬಹಳ ಹೃದಯಂಗಮವಿದೆ.

ಈ ಕಥಾ ಪುಸ್ತಕವನ್ನು ಓದಲಿಕ್ಕೆ ಹಿಡಿದರೆ ಕೆಳಗಿಡಲು ಮನಸ್ಸೇ ಆಗುವುದಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಂದು ಕಥೆಯೂ ಮನಸ್ಸನ್ನು ನಾಟುತ್ತದೆ 'ಬೇಟೆ' ಒಂದನ್ನುಳಿದರೆ ಮಿಕ್ಕಾರು ಕತೆಗಳನ್ನೂ ನಾವು ಬಹಳ ಮೆಚ್ಚಿದ್ದೇವೆ 'ಶ್ರೀನಿವಾಸ' 'ಆನಂದ' ಗೋರೂರು ಮೊದಲಾದ ಪ್ರಸಿದ್ಧ ಕತೆಗಾರರ ಬರವಣಿಗೆಗಳಲ್ಲಿ ಕಂಡು ಬರುವಂತಹ ಕೆಲವು ವೈಶಿಷ್ಟ್ಯಗಳನ್ನು ನಾವಿದರಲ್ಲಿಯೂ ಕಾಣಬಹುದು ಶ್ರೀ. ಸ್ವಾಮಿಯವರಿಂದ ಕನ್ನಡಿಗರು ಇನ್ನಷ್ಟು ಉತ್ತಮ ಸಾಹಿತ್ಯವನ್ನು ಹಾರೈಸಬಹುದು, ಅವರ ಕತೆಗಳಿಗೆ ಸದಾ ಸ್ವಾಗತವು ಕಾದಿದೆ

ಕಯ್ಯಾರ

ಸಾದರ-ಸ್ವೀಕಾರ

ತೆನ್ನಾಲಿ ರಾಮಕೃಷ್ಣ (ನಾಟಕ) ಶ್ರೀ ಪಿ ಕೆ ವೆಂಕಟರಾಮಯ್ಯನವರು ಬರೆದುದು. ಪ್ರಕಾಶಕರು ಧಾರವಾಡ ಮನೋಹರ ಗ್ರಂಥ ಪ್ರಕಾಶನ ಸಮಿತಿ ವಿಮರ್ಶೆ ಯಥಾವಕಾಶ

THE

Canara Industrial & Banking Syndicate, Ltd.

(Incorporated in British India Liability of Shareholders limit)

Estd.) Head Office: UDIPI, S India (1925

ANNOUNCEMENT.

The remaining issue of the 5% Cumulative Preference Shares of the Bank will be sold at an increased rate of premium of Re. 1/- per share after 1st May 1943 as the Bank is compelled to make a larger provision for payment of In-come-tax according to increased rates of taxation Subscription for the shares at the present rates will however be received at all our Branches till 15th April 1943.

THE CANARA BANKING CORPORATION Ltd.

(Incorporated in British India with limited liability)

STATEMENT OF AFFAIRS AS ON 31ST DECEMBER 1943

Capital & Liabilities	Rs	As	Ps	Property & Assets	Rs	As	Ps.
Paid up Capital	6 36 890	0	0	Office premises			
Reserve & other funds	3 71 882	13	11	furniture etc	91 659	0	0
Deposits	41 83 873	4	1	Advances	31 28 612	4	9
Due to Bankers	5 08 545	12	1	investment on			
Bills per contra	3 59 357	12	1	Govt Securities			
Sundries including				etc at cost	15 34 536	14	3
branch adjustments &				Sundries	74 183	5	7
undisbursed profits	2 83 736	5	9	Bills for Collection	3 59 357	12	1
Profit for the year 1942	49 461	3	5	Cash on Hand &			
				with bankers	12 05 397	14	8
Total Rs	63 93 747	3	4	Total Rs	63 93 747	3	4

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ನಿರ್ವಹಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD: 1931

HEAD OFFICE Mangalore. ***BRANCHES*** Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಮುಕ್ಕಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ, ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸಧಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ:

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited'
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ಪಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ರಾಕ್ರೋಪ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

lited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 26—8—1943 [ಸಂಚಿಕೆ 13]

ವೈಸರಾಯರಲ್ಲಿ ಮುಖಂಡರ ಶಿಷ್ಟಮಂಡಳವೆ?

ಮಹಾತ್ಮರ ಆರೋಗ್ಯ

"ಉಪವಾಸ ತೀರಿಸಿದ ಬಳಿಕ ಮಹಾತ್ಮಾ ಗಾಂಧಿಯವರ ಆರೋಗ್ಯ ಉತ್ತಮಗೊಳ್ಳುತ್ತಿದೆ ಅವರ ಭಾರವೂ ಸ್ವಲ್ಪ ಹೆಚ್ಚಿರುವುದು ಪ್ರತಿದಿನ ಅವರು ಪ್ರಾತಃ ಮತ್ತು ಸಾಯಂ ಸಂಚಾರಕ್ಕೆ ಹೋಗುತ್ತಿದ್ದ ಕ್ರಮವನ್ನು, ಗಾಂಧಿಜಿ ಇನ್ನೂ ಪ್ರಾರಂಭಿಸಿಲ್ಲ ಅವರು ಎದ್ದು ನಿಂತು ನಡೆಯಲು ಸಮರ್ಥರಾಗಿದ್ದಾರೆ, ಆದರೆ ನಡೆಯುತ್ತಿಲ್ಲ ಉಪವಾಸ ಕಾಲದಲ್ಲಿ ಉಂಟಾದ ಅಶಕ್ತಿ ಕಡಿಮೆಯಾಗಿದೆ" ಎಂದು ತಾ 16ರ ಸರಕಾರೀ ಪ್ರಕಟಣೆ ತಿಳಿಸುತ್ತದೆ

ಡಾ| ಬಿಧನಚಂದ್ರ ರಾಯ್‌ಯವರು ಗಾಂಧಿಜಿಯವರನ್ನು ನೋಡಲು ತಾ 21, 22ರಲ್ಲು ಬರಬಹುದೆಂದೂ, ಅದಕ್ಕೆ ಸರಕಾರವು ಅವಕಾಶ ಕೊಟ್ಟಿದೆಯೆಂದೂ ತಿಳಿದುಬರುತ್ತದೆ ಮಹಾತ್ಮರು ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿದಾಗ ಡಾ| ರಾಯ್‌ಯವರು ತಮ್ಮನ್ನು ಪುನಃ ಬಂದು ನೋಡಬೇಕೆಂದು ಹೇಳಿದ್ದರಂದು ಗೊತ್ತಾಗಿದೆ.

ಕಸ್ತೂರಿ ಬಾಯಿ ಅಸೌಖ್ಯ

"ಶ್ರೀಮತಿ ಕಸೂರಿಬಾಯಿ ಗಾಂಧಿಯವರ ಈ ವಾರದಲ್ಲಿ ಎರಡು ಬಾರಿ ಹೃದಯ ವ್ಯಥೆಯಿಂದ ಸಂಕಟ ಪಟ್ಟರು ಆ ಮೇಲೆ ಅವರಿಗೆ ಗುಣವಾಯಿತು. ಇನ್ನೆರಡ ದಿನಗಳಲ್ಲಿ ಅವರ ಎಂದಿನಂತೆ ಆರೋಗ್ಯ ಹೊಂದುವ ಲಕ್ಷಣವಿದೆ ಶ್ರೀಮತಿ ಗಾಂಧಿಯವರಿಗೆ ಹೆಚ್ಚು ಪ್ರಾಯವಾದುದರಿಂದ ಮುಂದೆ ಈ ರೀತಿ ಹೃದಯ ವೇದನೆಯಾಗದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕಾಗಿದೆ ಡಾ| ಗಿಲ್ಡರ್ ಲೆ| ಕ| ಬಿ ಜಡ್ ಶಾ ಇವರು ಶ್ರೀಮತಿಯವರಿಗೆ ಚಿಕಿತ್ಸೆ ಮಾಡುತ್ತಿರುವರು ಶ್ರೀಮತಿಯವರ ಹೇಳಿಕೆಯಂತೆ, ಮಧ್ಯಪ್ರಾಂತದಿಂದ, ಅವರ ಅಪೇಕ್ಷೆಯ ಒಬ್ಬಳು ದಾದಿಯನ್ನು ಅವರ ಚಿಕಿತ್ಸೆಗಾಗಿ ಕರೆಸುವ ಏರ್ಪಾಡು ಮಾಡಲಾಗಿದೆ" ಎಂದು ತಾ 19ರ ಸರಕಾರೀ ಪ್ರಕಟಣೆ ಸಾರುತ್ತದೆ

ಸರೋಜಿನಿ ದೇವಿಯರ ಬಿಡುಗಡೆ

ಅಸೌಖ್ಯದ ನಿಮಿತ್ತ

ಶ್ರೀಮತಿ ದೇವಿ ಸರೋಜಿನಿಯವರು ಅಸ್ವಸ್ಥದಿಂದಿರುವ ನಿಮಿತ್ತ ಅವರನ್ನು ಅನಿರ್ಬಂಧ ಬಿಡುಗಡೆ ಮಾಡಲು ಸರಕಾರವು ಆಜ್ಞೆ ಹೊರಡಿಸಿತು. ಇದರಂತೆ ತಾ 21ರ ಮಧ್ಯಾಹ್ನ ನಂತರ ಅವರು ಬಿಡುಗಡೆ ಮಾಡಲ್ಪಟ್ಟರು ಅವರು ಲೇಡಿ ಥ್ಯಾಕರ್ಸಿಯವರ ಪರ್ಣಕುಟಿಗೆ ಬಂದು ಇಳಿದರು ಕಳೆದ ಮೂರು ದಿನಗಳಿಂದ ಅವರಿಗೆ ಜ್ವರ ಬಂದಿತ್ತು ಬಂಧ ಮುಕ್ತ ಮಾಡಿದ ಕೂಡಲೇ ಶುಶ್ರೂಷಾ ವಾಹನದಲ್ಲಿ ಅವರನ್ನು ಪರ್ಣಕುಟಿಗೆ ತರಲಾಯಿತು ಡಾ| ಡಿ ಕೆ ಮೆಹತಾ ಮತ್ತು ಶ್ರೀಮತಿ ಡಿ. ಕೆ ಮೆಹತಾ ಇವರು ಉಪಚರಿಸುತ್ತಿರುವರು ಪರ್ಣಕುಟಿ ವರೆಗೆ ಲೆ ಕ. ಬಿ ಝುಡ್. ಶಹಾರವರೂ ಬಂದಿದ್ದರು.

ಆಸ್ಪತ್ರೆಯ ಮೆಟ್ಟಲನ್ನು ಕೂಡಾ ಹತ್ತಲಾರದಷ್ಟು ಸರೋಜಿನಿ ದೇವಿಯರು ನಿಶ್ಶಕ್ತರಿರುವುದರಿಂದ ಅವರನ್ನು ಸ್ಟ್ರೆಚರಿನ ಮೇಲೆ ಮಲಗಿಸಿ

ಕಸ್ತೂರ್ ಬಾ, ಸರೋಜಿನಿ ದೇವಿಯರ ಅನಾರೋಗ್ಯ

'ಮಹಾತ್ಮರು ಆರೋಗ್ಯ ಹೊಂದುತ್ತಿದ್ದಾರೆ'

ಒಳಗೆ ಒಯ್ಯಲಾಯಿತು ಕೆಲದಿನಗಳಿಂದ ಅವರು ಅಮಾಂಶದಿಂದ ಬಳಲುತ್ತಿದ್ದು ಮೂರು ದಿನಗಳಿಂದ ಜ್ವರವೂ ಬರುತಿತ್ತು ಕಲ ಸಲ 101 ಡಿಗ್ರಿ ವರೆಗೆ ಜ್ವರ ಬರುತ್ತದೆ, ಮೊದಲು ಮಲೇರಿಯಾವೆಂದೂಹಿಸಿ ರಕ್ತ ಪರೀಕ್ಷೆ ಮಾಡಲು ಮಲೇರಿಯವಲ್ಲವೆಂದು ತಿಳಿದುಬಂದಿದೆ ತಾ 21ರ ಮಧ್ಯಾಹ್ನ ಅವರಿಗೆ ಜ್ವರ ಬಹಳವಿತ್ತು ಸಂಜೆ ಕಡಿಮೆ ಆಯಿತು ಹಲವು ಸಲ ಜಾಡ್ಯ ಬಿದ್ದಿತು ಹೃದಯ ಕ್ರಿಯೆ ಬಹಳ ಮಂದವಾಗಿದೆ ತಾ 22ರ ಪ್ರಕಟಣೆಯಲ್ಲಿ ಅವರಿಗೆ ಜ್ವರ ಬಿಟ್ಟಿದೆಯೆಂದೂ ಆದರೆ ಹೃದಯಕ್ರಿಯೆ ಇನ್ನೂ ನಿಶಕ್ತವಾಗಿದೆಯೆಂದೂ ಹೇಳಲಾಗಿದೆ

ಮಹಾತ್ಮರು ಭಾರತದ ಸಾಮ್ರಾಟ್

ಭಾರತದ ಸಾಮ್ರಾಟ್ ಒಬ್ಬರಿದ್ದಾರೆ, ಅವರೇ 'ಮಹಾತ್ಮಾ ಗಾಂಧಿ' ಅವರ ಪ್ರಭಾವ ಸಾಮ್ರಾಜ್ಯ ಶಕ್ತಿಗಿಂತಲೂ ಮಿಗಿಲಾದುದು ನ್ಯೂಡಿಲ್ಲಿಯ ಆಧುನಿಕ ಅರಮನೆಗಳಲ್ಲಿರುವ ನವೀನ ರಾಜಕರ್ತರ ಹೆಸರುಗಳು ಅಳಿದುಹೋದ ಅನೇಕ ಸಮಯದ ನಂತರವೂ ಅವರ ಹೆಸರು ಸ್ಮರಿಸಲ್ಪಡುವುದು, ಹಾಡಲ್ಪಡುವುದು ಭಾರತದ ಸಮಸ್ತ ಶಿಲ್ಪ ರಚನೆಗಳೂ, ಕುತುಬ್ ಮಿನಾರಿನಂಥಾ ಭವ್ಯ ಶಿಲಾಸ್ತಂಭಗಳೂ ನಾಶವಾಗಿ ಮರೆತ ಹೋದ ಮೇಲೂ ಮಹಾತ್ಮಾ ಗಾಂಧಿಯವರ ಹೆಸರು ಭಾರತದ ತೇಜೋಮೂರ್ತಿಗಳಾದ ಋಷಿ ಮತ್ತು ಭಾಗ್ಯವಿಧಾತರ ಸಾಲಿನಲ್ಲಿ ಅಗ್ರಗಣ್ಯವಾದುದೆಂದು ಭರತ ಖಂಡದ ತಾಯಂದಿರು ತಮ್ಮ ಹಸುಕೂಸುಗಳಿಗೆ ಕಲಿಸುವರು ಏಕೆಂದರೆ ಮಹಾತ್ಮರು ಅವಿನಾಶಿಯಾದ ಸಾಹಿತ್ಯ ಸಾಧನಗಳಿಂದ ಆಧ್ಯಾತ್ಮಿಕ ಅರಮನೆಯೊಂದನು ಕಟ್ಟಿ ಅಲ್ಲಿ ವಿರಾಜಮಾನರಾಗಿದ್ದಾರೆ ಅವರ ಆ ಅರಮನೆಯ ತಳಹದಿಯು ದೇವರ ರಾಜ್ಯದಲ್ಲಿ ಭದ್ರವಾಗಿ ಹಾಗೂ ಆಳವಾಗಿ ಹಾಕಲ್ಪಟ್ಟಿದೆ ಆ ಅರಮನೆಯನ್ನು ಕಟ್ಟುವಲ್ಲಿ ದೀನ ದರಿದ್ರರಿಗೆ ಒಂದಿಷ್ಟೂ ತೊಂದರೆ ಕೊಡಲಿಲ್ಲ ಪ್ರೀತಿ, ಭಕ್ತಿ ಹಾಗೂ ಜನತಾ ಸೇವೆಯೇ ಆ ಅರಮನೆಯ ಅಲಂಕಾರಗಳು ಆ ಅರಮನೆಯ ಸುತ್ತು ಯಾವ ಸೈನಿಕ ಬಲವೂ ಇಲ್ಲ, ಬದಲಾಗಿ ಹೃದಯಗಳ ಶಾಂತ ಸಮ್ಮೇಳಡವು ಅಲ್ಲಿ ಇದೆ ಅಲ್ಲಿ ಜಾತಿ, ಮತ, ಧರ್ಮ ವರ್ಣ ಭೇದಗಳಿಗೆ ಒಂದಿಷ್ಟೂ ಸ್ಥಾನವಿಲ್ಲ ಧಾರ್ಮಿಕ ವಿಚಾರದ ಶಾಂತಿಯನ್ನು ಭಂಗಗೊಳಿಸುವ ಯಾವ ಕ್ರಾಂತಿಯೂ ಅಲ್ಲಿಲ್ಲ ಅವರ ಸಾಮ್ರಾಜ್ಯವೆಂದರೆ ಹೃದಯ" ಹೀಗೆಂದು 21ನೇ ಫೆಬ್ರವರಿ 1943ರಂದು ದೀನಬಂಧು ಸಿ. ಎಫ್. ಅಂಡ್ರ್ಯೂಸರು ಹೇಳಿದ್ದರು!

ವೈಸರಾಯರಲ್ಲಿಗೆ ಶಿಷ್ಟಮಂಡಳ

ಮುಂಬಯಿಯಲ್ಲಿ ಮುಖಂಡರು ಸೇರಿ ಮಾಡಿದ ನಿರ್ಣಯಕ್ಕೆ ಈಗ ಶ್ರೀ ವಿ ಎಸ್. ಶ್ರೀನಿವಾಸ ಶಾಸ್ತ್ರಿ, ಸರ್ ಶಿವಸ್ವಾಮಿ ಅಯ್ಯರ್, ಶ್ರೀ. ವೆಂಕಟರಾಮ ಶಾಸ್ತ್ರಿ ಮೊದಲಾದ ಮಧ್ಯವರ್ತಿ ಪಂಗಡದವರೂ, ಸರ್ ಶ್ರೀರಾಮ್, ಸರ್ ಪದಮ್ ಪತ್ ಸಿಂಗಾನಿ ಮೊದಲಾದ ವ್ಯಾಪಾರೀ ಮುಖಂಡರೂ, ಡಾ| ಮುಖರ್ಜಿ, ದಯಾಳ್ ಮೊದಲಾದ ಹಿಂದೂ ಮಹಾಸಭಾ ಮುಖಂಡರೂ ಸೇರಿ ಲಕ್ಷ ಮಂದಿಗಿಂತ ಮಿಕ್ಕಿದ ಅಖಿಲ ಭಾರತದ ಸರ್ವ ಪಕ್ಷಗಳ ಮುಖಂಡರೀಗ ಸಹಿ ಮಾಡಿರುವರೆಂದು ಗೊತ್ತಾಗಿದೆ ರಾಜಕೀಯ ವಿಚಾರ ಚರ್ಚಿಸುವರೆ ತಮ್ಮನ್ನು ಭೇಟಿಯಾಗಲು ಹಲವು ಮಂದಿ ಮುಖಂಡರು ಇಷ್ಟಪಡುವುದಾದರೆ ಅಂಥಾ ಬೇಟಿಯನ್ನೇರ್ಪಡಿಸಲು ವೈಸರಾಯರು ಸಿದ್ಧರಿರುವಾಗ ಒಂದು ವದಂತಿಯಿದೆ ಬಂಧನದಲ್ಲಿರುವ ಮಹಾತ್ಮರನ್ನು ನೋಡಲೂ ಅವಕಾಶ ಕೊಡಬೇಕೆಂದು ಮುಖಂಡರು ಕೇಳುವದಾದರೆ ಆ ವಿಷಯವನ್ನೂ ವೈಸರಾಯರು ವಿಶಾಲ ಹೃದಯದಿಂದ ಆಲೋಚಿಸುವರೆಂದೂ ಸುದ್ದಿ ಸರ್ ಸಪ್ರು, ರಾಜಾಜಿ, ಜಯಕರ್ ಮತ್ತು ವ್ಯಾಪಾರಸ್ಥರ ಪರವಾಗಿ ಒಬ್ಬರೂ ವೈಸರಾಯರಲ್ಲಿಗೆ ಹೋಗಬಹುದೆಂದು ತಿಳಿದಿದೆ ಸರ್ ಸಪ್ರುಗಳಿಗೆ ವೈಸರಾಯರು ಬರೆಯಲಿರುವ ಪತ್ರವನ್ನು ಕುತೂಹಲದಿಂದ ಎಲ್ಲರೂ ನಿರೀಕ್ಷಿಸುತ್ತಿದ್ದಾರೆ

ಮೆಜಿಸ್ಟ್ರೇಟರ ಅಸಭ್ಯವರ್ತನೆ

ಕಲ್ಕತ್ತಾ ಹೈಕೋರ್ಟಿನ ಜಸ್ಟಿಸ್ ಸೇನರು ಮಿಡನಾಪುರ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಭಾರತದ ರಕ್ಷಣೆಯ ಕಾನೂನು ಪ್ರಕಾರ ಶ್ರೀ ಎಸ್ ಎನ್ ರೇಯವರ ಮೇಲೆ ನಡೆಸಿದ ಖಟ್ಲೆಯನ್ನು ಕಿತ್ತುಹಾಕಲು ಜಸ್ಟಿಸ್ ಎಡಗ್ಲೆಯವರು ಕೊಟ್ಟ ತೀರ್ಪನ್ನು ಸಮರ್ಥಿಸುತ್ತಾ, ಮಿಡ್ನಾಪುರ ಮೆಜಿಸ್ಟ್ರೇಟರು ಭಾರತ ರಕ್ಷಣಾ ಕಾನೂನನ್ನು ದುರುಪಯೋಗಪಡಿಸಿಕೊಂಡಿರುವರೆಂದೂ, ತಮಗೆ ಹೀಗ ವ್ಯಾಪಕವಾದ ಅಧಿಕಾರ ಕೊಡಲ್ಪಟ್ಟಾಗ ಅದನ್ನು ಉಪಯೋಗಿಸುವಲ್ಲಿ ಅಧಿಕಾರಿಗಳು ಬಹಳ ಎಚ್ಚರಿಕೆ ವಹಿಸಬೇಕೆಂದೂ, ತಮ್ಮ ಸ್ವೇಚ್ಛೆಯಂತೆ ನಡೆಯಕೂಡದೆಂದೂ ಬರೆದಿರುವರು ಜಸ್ಟಿಸ್ ಎಡಗ್ಲೆಯವರೂ ಮಿಡ್ನಾಪುರ ಮೆಜಿಸ್ಟ್ರೇಟರ ಅಸಭ್ಯ ವರ್ತನೆಯನ್ನು ಖಂಡಿಸಿದ್ದಾರೆ ಮಿಡ್ನಾಪುರ ಮೆಜಿಸ್ಟ್ರೇಟರು ರೇಯವರಿಗೆ ಒಂದು ಅಸಭ್ಯ ಪತ್ರ ಬರೆದಿದ್ದು ಸ್ವಚ್ಛಂದ ನೀತಿಯನ್ನುಪಯೋಗಿಸಿದ್ದ ಉಲ್ಲೇಖ ಅದರಲ್ಲಿದೆ

ಪೀರ್ ಪಗಾರೋರನ್ನು ಗಲ್ಲಿಗೇರಿಸಲಾಯಿತು

ಹೂರರ ಮುಖಂಡರಾದ ಸೈಯ್ಯದ್ ಸಭಾಕತುಲ್ಲಾ ಶಹಾ ಪೀರ್ ಪಗಾರೋರವರಿಗೆ, ಅರಸರ ವಿರುದ್ಧ ಕ್ರಾಂತಿ ಮಾಡಲು ಪ್ರಯತ್ನಿಸಿದ ರೆಂಬ ಆರೋಪದಲ್ಲಿ ಸಿಂಧ ಸರಕಾರ ನೇಮಿಸಿದ ಹೈದರಾಬಾದಿನ ಮಾರ್ಶಲ್ ಲಾ ಕೋರ್ಟಿನವರು ಫಾಶಿ ಶಿಕ್ಷೆ ವಿಧಿಸಿ ತಾ 20ರಂದು ಮುಂಜಾನೆ 4 ಗಂಟೆಗೆ ಗಲ್ಲಿಗೇರಿಸಲಾಯಿತು ಈ ವಿಚಾರಣೆಯು 1943–1–ರಿಂದ 1943–3–... ವರೆಗೆ ನಡೆಯಿತು ಅವರ ಚರಾಚರ ಆಸ್ತಿ ಜಪ್ತಿ ಮಾಡಲಾಗಿದೆ

ಪೀರ್ ಪಗಾರೋ ಅವರ ಪೂರ್ವಜರೊಬ್ಬರು 1600ರಲ್ಲಿ ಸ್ಥಾಪಿಸಿದ ಗಾದಿಯ 6ನೆಯ ವಂಶಸ್ಥರು ಅವರಿಗೆ 34 ವರ್ಷ ಪ್ರಾಯ ಎಂದಿಲ್ಲ ಒಂದು ದಿನ ತಾವು ಸಿಂಧದ ಅರಸರಾಗುವ ವಿಶ್ವಾಸ ಅವರದಿತ್ತೆಂದೂ ಖಾಸಗಿ ರೀತಿಯಿಂದ ಅವರು ಹಾಗೆ ಕರೆಸಿಕೊಳ್ಳುತ್ತಿದ್ದರೆಂದೂ ಹೇಳಲಾಗುತ್ತದೆ ಅವರ ಅನುಯಾಯಿಗಳಿಗೂ ಇವರ ಮೇಲೆ ಅಚಲ ವಿಶ್ವಾಸವಿತ್ತು ಅವರು ತಮ್ಮನ್ನು ಹೂರ್ ಸೈನ್ಯದ ಸೇನಾಪತಿಯೆಂದು ಕರೆಯುತ್ತಿದ್ದರು

ಪೀರ್ ಪಗಾರೋ ರವರಿಗೆ 10 ವರ್ಷದ ಹಿಂದೆ ಓರ್ವ ಹುಡುಗನನ್ನು ಅಪಹರಿಸಿದ ಬಗ್ಗೆ ಶಿಕ್ಷೆಯಾಗಿತ್ತು 1941ರಲ್ಲಿ ಪುನಃ ಹೂರರಿಗೆ ಶಸ್ತ್ರಾಸ್ತ್ರ ಶಿಕ್ಷಣ ಕೊಡುತ್ತಿದ್ದ ಆರೋಪದ ಮೇಲೆ ಬಂಧನವಾಯಿತು ಆ ಸಲ ಅವರು ಸೆರೆಮನೆಯಿಂದ ತಪ್ಪಿಸಿಹೋದರು ಪುನಃ ಅವರನ್ನು ಜನವರಿ 1ನೇ ತಾರೀಕಿಗೆ ಬಂಧಿಸಿ ಮಿಲಿಟರಿ ಅಧಿಕಾರಿಗಳ ವಶ ಒಪ್ಪಿಸಲಾಯಿತು ಮಿಲಿಟರಿ ಅಧಿಕಾರಿಗಳು ತಮ್ಮ ಕೋರ್ಟಿನಲ್ಲಿ ವಿಚಾರಣೆ ನಡೆಸಿ ಫಾಶಿ ಶಿಕ್ಷೆ ವಿಧಿಸಿದರು ಪೀರ್ ಪಗಾರೋರವರು ನಲಮನೆಗಳಲ್ಲಿಟ್ಟ ಅನೇಕ ಶಸ್ತ್ರಾಸ್ತ್ರಗಳು ಸಿಕ್ಕಿವೆ 1942ರಲ್ಲು ಸೈನ್ಯಾಧಿಕಾರಿಗಳು ಅವರ ಒಂದು ಕೋಟೆಯನ್ನು ಒಡೆದರು ಪೀರರಿಗೆ ನಾಲ್ವರು ಹೆಂಡಿರೂ ಇಬ್ಬರು ಮಕ್ಕಳೂ ಇರುವರು

ಬಲಾತ್ಕಾರದಿಂದ ಆಹಾರ!

ಕೇಂದ್ರ ಎಸೆಂಬ್ಲಿಯಲ್ಲಿ ತಾ 12ರಂದು ಪ್ರಜಾ ಪ್ರತಿನಿಧಿ ಸದಸ್ಯರು ಕೇಳದ ಪ್ರಶ್ನೆಗೆ ಗೃಹಮಂತ್ರಿ ಮೇಕ್ಸ್‌ವೆಲ್ಲರು ಈ ರೀತಿಯಿಂದ ಉತ್ತರವಿತ್ತರು 'ಗಾಂಧಿಜಿಯವರ ಬಂಧನದ ವಿಷಯ ತನ್ನ ವಿರೋಧ ಪ್ರದರ್ಶಿಸುವ ಬಗ್ಗೆ ಡಿಲ್ಲಿ ಸೆರೆಮನೆಯಲ್ಲಿದ್ದ ಶ್ರೀ ಸಿ ಜಿ ನಾಯುಡ್ ಎಂಬವರು ಕಳೆದ ನವೆಂಬರ 1ನೆಯ ತಾರೀಕಿನಿಂದ ಮಾರ್ಚ 3ನೆಯ ತಾರೀಕಿನ ವರೆಗೆ ಉಪವಾಸ ಸತ್ಯಾಗ್ರಹ ಕೈಕೊಂಡರು. "ಇವರಿಗೆ ಸರಕಾರವು ಬಲಾತ್ಕಾರದಿಂದ ಆಹಾರ ಕೊಡಬೇಕಾಯಿತು ಮಾರ್ಚ 3ರಂದು ಅವರು ಉಪವಾಸ ನಿಲ್ಲಿಸಿದರು.

ಜೈಲಿನಲ್ಲಿ ಲಾಠೀ ಪ್ರಹಾರ

ವನ್ನು ರಾಜಕೀಯ ಕೈದಿಗಳ ಮೇಲೆ ಮಾಡಿದ ವಿಷಯವಾಗಿ, ಒರಿಸಾ ಅಸೆಂಬ್ಲಿಯಲ್ಲಿ ಶ್ರೀಮತಿ ಸರಳಾ ದೇವಿಯವರು ಪ್ರಶ್ನೆಮಾಡಿದರು ಅದಕ್ಕೆ ಉತ್ತರ ಕೊಡುತ್ತಾ, ಮೌಲ್ವಿ ಸೋಭಾಸಖಾನರು ನವೆಂಬರ 1೯ರಂದು ಬರಹಾಮಪುರ ಜೈಲಿಗೆ ಸಶಸ್ತ್ರ ರಿಸರ್ವ್ ಪೋಲೀಸ್ ದಳವನ್ನು ಕರೆದುಕೊಂಡುಹೋಗಿ, ಅಲ್ಲಿಯ ರಾಜಕೀಯ ಕೈದಿಗಳ ಮೇಲೆ ಸ್ವಲ್ಪ ಸಮಯದ ವರೆಗೆ ಲಾಠೀ ಪ್ರಹಾರ ಮಾಡಲಾಯಿತೆಂದೂ, ಲಾಠೀ ಪ್ರಯೋಗದ ಪರಿಣಾಮವಾಗಿ ಕೆಲವು ಕೈದಿಗಳಿಗೆ ಗಾಯ ಸಂಭವಿಸಿದೆಯೆಂದೂ ಒಪ್ಪಿದರು ರಾಜಕೀಯ ಕೈದಿಗಳು ಜೈಲಿನಲ್ಲಿ ಪುಂಡಾಟಿಕೆ ನಡೆಸುತ್ತಿದ್ದುದರಿಂದ ಹಾಗೆ ಮಾಡಲಾಯಿತೆಂದೂ ಅವರು ಸಮರ್ಥಿಸಿಕೊಂಡರು.

— —

The Bank of Mangalore Limited, Mangalore.
ESTD. 1931

HEAD OFFICE Mangalore — *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ—ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ॥ ಯಂ. ಎಸ್. ಪ್ರಭು, M. B, B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.
ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರೋಫ್ಟ್‌ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಮಲಬೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 26—3—1943 [ಸಂಚಿಕೆ 13]

ವೈಸರಾಯರಲ್ಲಿ ಮುಖಂಡರ ಶಿಷ್ಟಮಂಡಳವೆ?

ಮಹಾತ್ಮರ ಆರೋಗ್ಯ

"ಉಪವಾಸ ತೀರಿಸಿದ ಬಳಿಕ ಮಹಾತ್ಮಾ ಗಾಂಧಿಯವರ ಆರೋಗ್ಯ ಉತ್ತಮಗೊಳ್ಳುತ್ತಿದೆ ಅವರ ಭಾರವೂ ಸ್ವಲ್ಪ ಹೆಚ್ಚಿರುವುದು. ಪ್ರತಿದಿನ ಅವರು ಪ್ರಾತಃ ಮತ್ತು ಸಾಯಂ ಸಂಚಾರಕ್ಕೆ ಹೋಗುತ್ತಿದ್ದ ಕ್ರಮವನ್ನು, ಗಾಂಧಿಜಿ ಇನ್ನೂ ಪ್ರಾರಂಭಿಸಿಲ್ಲ ಅವರು ಎದ್ದು ನಿಂತು ನಡೆಯಲು ಸಮರ್ಥರಾಗಿದ್ದಾರೆ, ಆದರೆ ನಡೆಯುತ್ತಿಲ್ಲ ಉಪವಾಸ ಕಾಲದಲ್ಲಿ ಉಂಟಾದ ಅಶಕ್ತಿ ಕಡಿಮೆಯಾಗಿದೆ" ಎಂದು ತಾ ೧೭ರ ಸರಕಾರೀ ಪ್ರಕಟಣೆ ತಿಳಿಸುತ್ತದೆ

ಡಾ। ಬಿಧನಚಂದ್ರ ರಾಯ್‌ಯವರು ಗಾಂಧಿಜಿಯವರನ್ನು ನೋಡಲು ತಾ ೨೮, ೨೯ರಲ್ಲು ಬರಬಹುದೆಂದೂ, ಅದಕ್ಕೆ ಸರಕಾರವು ಅವಕಾಶ ಕೊಟ್ಟಿದೆಯೆಂದೂ ತಿಳಿದುಬರುತ್ತದೆ ಮಹಾತ್ಮರು ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿದಾಗ ಡಾ। ರಾಯ್‌ಯವರು ತಮ್ಮನ್ನು ಪುನಃ ಬಂದು ನೋಡಬೇಕೆಂದು ಹೇಳಿದ್ದರೆಂದು ಗೊತ್ತಾಗಿದೆ

ಕಸ್ತೂರಿ ಬಾಯಿ ಅಸೌಖ್ಯ

"ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಈ ವಾರದಲ್ಲಿ ಎರಡು ಬಾರಿ ಹೃದಯ ವೇದನೆಯಿಂದ ಸಂಕಟ ಪಟ್ಟರು ಆ ಮೇಲೆ ಅವರಿಗೆ ಗುಣವಾಯಿತು. ಇನ್ನೆರಡ ದಿನಗಳಲ್ಲಿ ಅವರು ಎಂದಿನಂತೆ ಆರೋಗ್ಯ ಹೊಂದುವ ಲಕ್ಷಣವಿದೆ ಶ್ರೀಮತಿ ಗಾಂಧಿಯವರಿಗೆ ಹೆಚ್ಚು ಪ್ರಾಯವಾದುದರಿಂದ ಮುಂದೆ ಈ ರೀತಿ ಹೃದಯ ವೇದನೆಯಾಗದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕಾಗಿದೆ ಡಾ। ಗಿಲ್ಡರ್ ಲೆ। ಕ। ಬಿ ಜಡ್ ಷಾ ಇವರು ಶ್ರೀಮತಿಯವರಿಗೆ ಚಿಕಿತ್ಸೆ ಮಾಡುತ್ತಿರುವರು ಶ್ರೀಮತಿಯವರ ಹೇಳಿಕೆಯಂತೆ, ಮಧ ಪ್ರಾಂತದಿಂದ, ಅವರ ಅಪೇಕ್ಷೆಯ ಒಬ್ಬಳು ದಾದಿಯನ್ನು ಅವರ ಚಿಕಿತ್ಸೆಗಾಗಿ ಕರೆಸುವ ಏರ್ಪಾಡು ಮಾಡಲಾಗಿದೆ' ಎಂದು ತಾ ೧೯ರ ಸರಕಾರೀ ಪ್ರಕಟಣೆ ಸಾರುತ್ತದೆ

ಸರೋಜಿನಿ ದೇವಿಯರ ಬಿಡುಗಡೆ

ಅಸೌಖ್ಯದ ನಿಮಿತ್ತ

ಶ್ರೀಮತಿ ದೇವಿ ಸರೋಜಿನಿಯವರು ಅಸ್ವಸ್ಥದಿಂದಿರುವ ನಿಮಿತ್ತ ಅವರನ್ನು ಅನಿರ್ಬಂಧ ಬಿಡುಗಡೆ ಮಾಡಲು ಸರಕಾರವು ಆಜ್ಞೆ ಹೊರಡಿಸಿತು ಇದರಂತೆ ತಾ ೨೧ರ ಮಧ್ಯಾಹ್ನ ನಂತರ ಅವರು ಬಿಡುಗಡೆ ಮಾಡಲ್ಪಟ್ಟರು ಅವರು ಲೇಡಿ ಥ್ಯಾಕರ್ ಸಿಯವರ ಪರ್ಣಕುಟಿಗೆ ಬಂದು ಇಳಿದರು. ಕಳೆದ ಮೂರು ದಿನಗಳಿಂದ ಅವರಿಗೆ ಜ್ವರ ಬಂದಿತ್ತು ಬಂಧ ಮುಕ್ತ ಮಾಡಿದ ಕೂಡಲೇ ಶುಶ್ರೂಷಾ ವಾಹನದಲ್ಲಿ ಅವರನ್ನು ಪರ್ಣಕುಟಿಗೆ ತರಲಾಯಿತು. ಡಾ। ಡಿ. ಕೆ. ಮೆಹತಾ ಮತ್ತು ಶ್ರೀಮತಿ ಡಿ. ಕೆ. ಮೆಹತಾ ಇವರು ಉಪಚರಿಸುತ್ತಿರುವರು ಪರ್ಣಕುಟಿ ವರೆಗೆ ಲೆ. ಕ. ಬ್ಲೆಸ್ವುಡ್. ಕಹಾರವರೂ ಬಂದಿದ್ದರು.

ಆಸ್ಪತ್ರೆಯ ಮೆಟ್ಟಿಲನ್ನು ಕೂಡಾ ಹತ್ತಲಾರದಷ್ಟು ಸರೋಜಿನಿ ದೇವಿಯರು ನಿಶ್ಶಕ್ತರಿರುವುದರಿಂದ ಅವರನ್ನು ಸ್ಟ್ರೆಚರಿನ ಮೇಲೆ ಮಲಗಿಸಿ ಒಳಗೆ ಒಯ್ಯಲಾಯಿತು ಕೆಲದಿನಗಳಿಂದ ಅವರು ಆಮಾಂಶದಿಂದ ಬಳಲುತ್ತಿದ್ದು ಮೂರು ದಿನಗಳಿಂದ ಜ್ವರವೂ ಬರುತಿತ್ತು, ಕೆಲ ಸಲ ೧೦೪ ಡಿಗ್ರಿ ವರೆಗೆ ಜ್ವರ ಬರುತ್ತದೆ ಮೊದಲು ಮಲೇರಿಯಾವೆಂದೂಹಿಸಿ ರಕ್ತ ಪರೀಕ್ಷೆ ಮಾಡಲು ಮಲೇರಿಯವಲ್ಲವೆಂದು ತಿಳಿದುಬಂದಿದೆ ತಾ ೨೧ರ ಮಧ್ಯಾಹ್ನ ಅವರಿಗೆ ಜ್ವರ ಬಹಳವಿತ್ತು ಸಂಜೆ ಕಡಿಮೆ ಆಯಿತು ಹಲವು ಸಲ ಜಾಡ್ಯ ಬಿದ್ದಿತು ಹೃದಯ ಕ್ರಿಯೆ ಬಹಳ ಮಂದವಾಗಿದೆ ತಾ ೨೨ರ ಪ್ರಕಟಣೆಯಲ್ಲ ಅವರಿಗೆ ಜ್ವರ ಬಿಟ್ಟಿದೆಯೆಂದೂ ಆದರೆ ಹೃದಯಶಕ್ತಿಯು ಇನ್ನೂ ನಿಶ್ಶಕ್ತವಾಗಿದೆಯೆಂದೂ ಹೇಳಲಾಗಿದೆ

ಕಸ್ತೂರ್ ಬಾ, ಸರೋಜಿನಿ ದೇವಿಯರ ಅನಾರೋಗ್ಯ

'ಮಹಾತ್ಮರು ಆರೋಗ್ಯ ಹೊಂದುತ್ತಿದ್ದಾರೆ'

ಮಹಾತ್ಮರು ಭಾರತದ ಸಾಮ್ರಾಟ

ಭಾರತದ ಸಾಮ್ರಾಟ್ ಒಬ್ಬರಿದ್ದಾರೆ, ಅವರೇ 'ಮಹಾತ್ಮಾ ಗಾಂಧಿ, ಅವರ ಪ್ರಭಾವ ಸಾಮ್ರಾಜ್ಯ ಶಕ್ತಿಗಿಂತಲೂ ಮಿಗಿಲಾದುದು ನ್ಯೂಡಿಲ್ಲಿಯ ಆಧುನಿಕ ಅರಮನೆಗಳಲ್ಲಿರುವ ನವೀನ ರಾಜಕರ್ತರ ಹೆಸರುಗಳು ಅಳಿದುಹೋದ ಅನೇಕ ಸಮಯದ ನಂತರವೂ, ಅವರ ಹೆಸರು ಸ್ಮರಿಸಲ್ಪಡುವುದು, ಹಾಡಲ್ಪಡುವುದು ಭಾರತದ ಸಮಸ್ತ ಶಿಲ್ಪ ರಚನೆಗಳೂ, ಕುತುಬ್ ಮಿನಾರಿನಂಥಾ ಭವ್ಯ ಶಿಲಾಸ್ತಂಭಗಳೂ ನಾಶವಾಗಿ ಮರೆತುಹೋದ ಮೇಲೂ ಮಹಾತ್ಮಾ ಗಾಂಧಿಯವರ ಹೆಸರು ಭಗವಂತನ ತೇಜೋಮೂರ್ತಿಗಳಾದ ಋಷಿ ಮತ್ತು ಭಾಗ್ಯವಿಧಾತರ ಸಾಲಿನಲ್ಲಿ ಅಗ್ರಗಣ್ಯವಾದುದೆಂದು ಭರತ ಖಂಡದ ತಾಯಂದಿರು ತಮ್ಮ ಹಸುಕೂಸುಗಳಿಗೆ ಕಲಿಸುವರು ಏಕೆಂದರೆ ಮಹಾತ್ಮರು ಅವಿನಾಶಿಯಾದ ಸಾಹಿತ್ಯ ಸಾಧನಗಳಿಂದ, ಅಧ್ಯಾತ್ಮಿಕ ಅರಮನೆಯೊಂದನ್ನು ಕಟ್ಟಿ ಅಲ್ಲಿ ವಿರಾಜಮಾನರಾಗಿದ್ದಾರೆ ಅವರ ಆ ಅರಮನೆಯ ತಳಹದಿಯು ದೇವರ ರಾಜ್ಯದಲ್ಲಿ ಭದ್ರವಾಗಿ ಹಾಗೂ ಆಳವಾಗಿ ಹಾಕಲ್ಪಟ್ಟಿದೆ ಆ ಅರಮನೆಯನ್ನು ಕಟ್ಟುವಲ್ಲಿ ದೀನ ದರಿದ್ರರಿಗೆ ಒಂದಿಷ್ಟೂ ತೊಂದರೆ ಕೊಡಲಿಲ್ಲ ಪ್ರೀತಿ, ಭಕ್ತಿ ಹಾಗೂ ಜನತಾ ಸೇವೆಯೇ ಆ ಅರಮನೆಯ ಅಲಂಕಾರಗಳು ಆ ಅರಮನೆಯ ಸುತ್ತು ಯಾವ ಸೈನಿಕ ಬಲವೂ ಇಲ್ಲ; ಬದಲಾಗಿ ಹೃದಯಗಳ ಶಾಂತ ಸಮ್ಮೇಳಡವು ಅಲ್ಲಿ ಇದೆ ಅಲ್ಲಿ ಜಾತಿ, ಮತ, ಧರ್ಮ ವರ್ಣ ಭೇದಗಳಿಗೆ ಒಂದಿಷ್ಟೂ ಸ್ಥಾನವಿಲ್ಲ ಧಾರ್ಮಿಕ ವಿಚಾರದ ಶಾಂತಿಯನ್ನು ಭಂಗಗೊಳಿಸುವ ಯಾವ ಕ್ರಾಂತಿಯೂ ಅಲ್ಲಿಲ್ಲ ಅವರ ಸಾಮ್ರಾಜ್ಯವೆಂದರೆ ಹೃದಯ" ಹೀಗೆಂದು ೨೧ನೇ ಫೆಬ್ರವರಿ ೧೯೩೪ರಂದು ದೀನಬಂಧು ಸಿ ಎಫ್. ಆಂಡ್ರೂಸರು ಹೇಳಿದ್ದರು'

ವೈಸರಾಯರಲ್ಲಿಗೆ ಶಿಷ್ಟಮಂಡಳ

ಮುಂಬಯಿಯಲ್ಲಿ ಮುಖಂಡರು ಸೇರಿ ಮಾಡಿದ ನಿರ್ಣಯಕ್ಕೆ ಈಗ ಶ್ರೀ. ವಿ ಎಸ್. ಶ್ರೀನಿವಾಸ ಶಾಸ್ತ್ರಿ, ಸರ್ ಶಿವಸ್ವಾಮಿ ಅಯ್ಯರ್, ಶ್ರೀ. ವೆಂಕಟರಾಮ ಶಾಸ್ತ್ರಿ ಮೊದಲಾದ ಮಧ್ಯವರ್ತಿ ಪಂಗಡದವರೂ, ಸರ್ ದ್ರೀಲಾವತ್, ಸರ್ ಪದಮ್ ಪಡ್ ಸಿಂಗಾನಿ ಮೊದಲಾದ ವ್ಯಾಪಾರೀ ಮುಖಂಡರೂ, ಡಾ। ಮುಖರ್ಜಿ, ದಯಾಳ್ ಮೊದಲಾದ ಹಿಂದೂ ಮಹಾಸಭಾ ಮುಖಂಡರೂ ಸೇರಿ ೬೬ ಮಂದಿಗಿಂತ ಮಿಕ್ಕಿದ ಎಲ್ಲ ಭಾರತದ ಸರ್ವ ಪಕ್ಷಗಳ ಮುಖಂಡರೀಗ ಸಹಿ ಮಾಡಿರುವರೆಂದು ಗೊತ್ತಾಗಿದೆ ರಾಜಕೀಯ ವಿಚಾರ ಚರ್ಚಿಸುವರೆ ತಮ್ಮನ್ನು ಬೇಟಿಯಾಗಲು ಹಲವು ಮಂದಿ ಮುಖಂಡರು ಇಷ್ಟಪಡುವುದಾದರೆ ಅಂಥಾ ಬೇಟಿಯನ್ನೇರ್ಪಡಿಸಲು ವೈಸರಾಯರು ಸಿದ್ಧರಿರುವಾಗ ಒಂದು ವದಂತಿಯಿದೆ ಬಂಧನದಲ್ಲಿರುವ ಮಹಾತ್ಮರನ್ನು ನೋಡಲೂ ಅವಕಾಶ ಕೊಡಬೇಕೆಂದು ಮುಖಂಡರು ಕೇಳುವದಾದರೆ ಆ ವಿಷಯವನ್ನೂ ವೈಸರಾಯರು ವಿಶಾಲ ಹೃದಯದಿಂದ ಆಲೋಚಿಸುವರೆಂದೂ ಸುದ್ದಿ ಸರ್ ಸಪ್ರು, ರಾಜಾಜಿ, ಜಯಕರ್ ಮತ್ತು ವ್ಯಾಪಾರಸ್ಥರ ಪರವಾಗಿ ಒಬ್ಬರು ವೈಸರಾಯರಲ್ಲಿಗೆ ಹೋಗಬಹುದೆಂದು ತಿಳಿದಿದೆ ಸರ್ ಸಪ್ರುಗಳಿಗೆ ವೈಸರಾಯರು ಒರೆಯಲಿರುವ ಪತ್ರವನ್ನು ಕುತೂಹಲದಿಂದ ಎಲ್ಲರೂ ನಿರೀಕ್ಷಿಸುತ್ತಿದ್ದಾರೆ

ಮೆಜಿಸ್ಟ್ರೇಟರ ಅಸಭ್ಯವರ್ತನೆ

ಕಲ್ಕತ್ತಾ ಹೈಕೋರ್ಟಿನ ಜಸ್ಟಿಸ್ ಸೇನರು ಮಿಡನಾಪುರ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಭಾರತದ ರಕ್ಷಣೆಯ ಕಾನೂನು ಪ್ರಕಾರ ಶ್ರೀ ಎಸ್ ಎನ್ ರೇಯವರ ಮೇಲೆ ನಡೆಸಿದ ಖಟ್ಲೆಯನ್ನು ಕಿತ್ತುಹಾಕಲು ಜಸ್ಟಿಸ್ ಎಡಗ್ಲೆಯವರು ಕೊಟ್ಟ ತೀರ್ಪನ್ನು ಸಮರ್ಥಿಸುತ್ತಾ, ಮಿಡ್ನಾಪುರ ಮೆಜಿಸ್ಟ್ರೇಟರು ಭಾರತ ರಕ್ಷಣಾ ಕಾನೂನನ್ನು ದುರುಪಯೋಗಪಡಿಸಿಕೊಂಡಿರುವರೆಂದೂ, ತಮಗೆ ಹೀಗೆ ವ್ಯಾಪಕವಾದ ಅಧಿಕಾರ ಕೊಡಲ್ಪಟ್ಟಾಗ ಅದನ್ನು ಉಪಯೋಗಿಸುವಲ್ಲಿ ಅಧಿಕಾರಿಗಳು ಬಹಳ ಎಚ್ಚರಿಕೆ ವಹಿಸಬೇಕೆಂದೂ, ತಮ್ಮ ಸ್ವೇಚ್ಛೆಯಂತೆ ನಡೆಯಕೂಡದೆಂದೂ ಬರೆದಿರುವರು ಜಸ್ಟಿಸ್ ಎಡಗ್ಲೆಯವರೂ ಮಿಡ್ನಾಪುರ ಮೆಜಿಸ್ಟ್ರೇಟರ ಅಸಭ್ಯ ವರ್ತನೆಯನ್ನು ಖಂಡಿಸಿದ್ದಾರೆ ಮಿಡ್ನಾಪುರ ಮೆಜಿಸ್ಟ್ರೇಟರು ರೇಯವರಿಗೆ ಒಂದು ಅಸಭ್ಯ ಪತ್ರ ಬರೆದಿದ್ದು ಸ್ವಚ್ಛಂದ ನೀತಿಯನ್ನುಪಯೋಗಿಸಿದ್ದ ಉಲ್ಲೇಖ ಅದರಲ್ಲಿದೆ

ಪೀರ್‌ಪಗಾರೋರನ್ನು ಗಲ್ಲಿಗೇರಿಸಲಾಯಿತು

ಹೂರರ ಮುಖಂಡರಾದ ಸೈಯ್ಯದ್ ಸಭಾಶತುಲ್ಲಾ ಶಹಾ ಪೀರ್‌ಪಗಾರೋರವರಿಗೆ, ಅರಸರ ವಿರುದ್ಧ ಕ್ರಾಂತಿ ಮಾಡಲು ಪ್ರಯತ್ನಿಸಿದರೆಂಬ ಆರೋಪದಲ್ಲಿ ಸಿಂಧ ಸರಕಾರ ನೇಮಿಸಿದ ಹೈದರಾಬಾದಿನ ಮಾರ್ಶಲ್ ಲಾ ಕೋರ್ಟಿನವರು ಫಾಶಿ ಶಿಕ್ಷೆ ವಿಧಿಸಿ ತಾ ೨೦ರಂದು ಮುಂಜಾನೆ ೮ ಗಂಟೆಗೆ ಗಲ್ಲಿಗೇರಿಸಲಾಯಿತು ಈ ವಿಚಾರಣೆಯು ೨೩—೧—೪೩ರಿಂದ ೨೩—೨—೪೩ರ ವರೆಗೆ ನಡೆಯಿತು ಅವರ ಜಹಗೀರ ಆಸ್ತಿ ಜಪ್ತಿ ಮಾಡಲಾಗಿದೆ

ಪೀರ್‌ಪಗಾರೋ ಅವರ ಪೂರ್ವಜರೊಬ್ಬರು ೧೮೧೩ರಲ್ಲಿ ಸ್ಥಾಪಿಸಿದ ಗಾದಿಯ ೭ನೆಯ ವಂಶಸ್ಥರು ಅವರಿಗೆ ೩೬ ವರ್ಷ ಪ್ರಾಯ ಒಂದಿಲ್ಲ ಒಂದು ದಿನ ತಾವು ಸಿಂಧದ ಅರಸರಾಗುವ ವಿಶ್ವಾಸ ಅವರದಿತ್ತೆಂದೂ ಖಾಸಗಿ ರೀತಿಯಿಂದ ಅವರು ಹಾಗೆ ಕರೆಸಿಕೊಳ್ಳುತ್ತಿದ್ದರೆಂದೂ ಹೇಳಲಾಗುತ್ತದೆ ಅವರ ಅನುಯಾಯಿಗಳಿಗೂ ಇವರ ಮೇಲೆ ಅತಲ ವಿಶ್ವಾಸವಿತ್ತು ಅವರು ತಮ್ಮನ್ನು ಹೂರ್ ಸೈನ್ಯದ ಸೇನಾಪತಿಯೆಂದು ಕರೆಯುತ್ತಿದ್ದರು

ಪೀರ್‌ಪಗಾರೋ ರವರಿಗೆ ೨೦ ವರ್ಷದ ಹಿಂದೆ ಓರ್ವ ಹುಡುಗನನ್ನು ಅಪಹರಿಸಿದ ಬಗ್ಗೆ ಶಿಕ್ಷೆಯಾಗಿತ್ತು ೧೯೪೧ರಲ್ಲಿ ಪುನಃ ಹೂರರಿಗೆ ಶಸ್ತ್ರಾಸ್ತ್ರ ಶಿಕ್ಷಣ ಕೊಡುತ್ತಿದ್ದ ಆರೋಪದ ಮೇಲೆ ಬಂಧನವಾಯಿತು ಆ ಸಲ ಅವರು ಸೆರೆಮನೆಯಿಂದ ತಪ್ಪಿಸಿಹೋದರು ಪುನಃ ಅವರನ್ನು ಜನವರಿ ೧೯ನೇ ತಾರೀಕಿಗೆ ಬಂಧಿಸಿ ಮಿಲಿಟರಿ ಅಧಿಕಾರಿಗಳ ವಶ ಒಪ್ಪಿಸಲಾಯಿತು ಮಿಲಿಟರಿ ಅಧಿಕಾರಿಗಳು ತಮ್ಮ ಕೋರ್ಟಿನಲ್ಲಿ ವಿಚಾರಣೆ ನಡಸಿ ಫಾಶಿ ಶಿಕ್ಷೆ ವಿಧಿಸಿದರು ಪೀರ್‌ಪಗಾರೋರವರು ನೆಲಮನೆಗಳಲ್ಲಿಟ್ಟ ಅನೇಕ ಶಸ್ತ್ರಾಸ್ತ್ರಗಳು ಸಿಕ್ಕಿವೆ ೧೯೪೨ರಲ್ಲು ಸೈನ್ಯಾಧಿಕಾರಿಗಳು ಆವಕ್ಕೆ ಒಂದು ಕೋಟೆಯನ್ನು ಒಡೆದರು ಪೀರರಿಗೆ ನಾಲ್ವರು ಹೆಂಡಿರೂ ಇಬ್ಬರು ಮಕ್ಕಳೂ ಇರುವರು

ಬಲಾತ್ಕಾರದಿಂದ ಆಹಾರ!

ಕೇಂದ್ರ ಎಸೆಂಬ್ಲಿಯಲ್ಲಿ ತಾ ೧೭ರಂದು ಪ್ರಜಾ ಪ್ರತಿನಿಧಿ ಸದಸ್ಯರು ಕೇಳಿದ ಪ್ರಶ್ನೆಗೆ ಗೃಹಮಂತ್ರಿ ಮೇಕ್ಸ್‌ವೆಲ್ಲರು ಈ ರೀತಿಯಿಂದ ಉತ್ತರವಿತ್ತರು 'ಗಾಂಧಿಜಿಯವರ ಬಂಧನದ ವಿಷಯ ತನ್ನ ವಿರೋಧ ಪ್ರದರ್ಶಿಸುವ ಬಗ್ಗೆ ಡಿಲ್ಲಿ ಸೆರೆಮನೆಯಲ್ಲಿದ್ದ ಶ್ರೀ. ಸಿ ಕೆ ನಾಯರ್ ಎಂಬವರು ಕಳೆದ ನವಂಬರ ೧೮ನೆಯ ತಾರೀಕಿನಿಂದ ಮಾರ್ಚಿ ೩ನೆಯ ತಾರೀಕಿನ ವರೆಗೆ ಉಪವಾಸ ಸತ್ಯಾಗ್ರಹ ಕೈಕೊಂಡರು. ಇವರಿಗೆ ಸರಕಾರವು ಬಲಾತ್ಕಾರದಿಂದ ಆಹಾರ ಕೊಡಬೇಕಾಯಿತು ಮಾರ್ಚಿ ೩ರಂದು ಅವರು ಉಪವಾಸ ನಿಲ್ಲಿಸಿದರು.

ಜೈಲಿನಲ್ಲಿ ಲಾಠೀ ಪ್ರಹಾರ

ವನ್ನು ರಾಜಕೀಯ ಕೈದಿಗಳ ಮೇಲೆ ಮಾಡಿದ ವಿಷಯವಾಗಿ, ಒರಿಸಾ ಅಸೆಂಬ್ಲಿಯಲ್ಲಿ ಶ್ರೀಮತಿ ಸರಳಾ ದೇವಿಯವರು ಪ್ರಶ್ನೆಮಾಡಿದರು ಅದಕ್ಕೆ ಉತ್ತರ ಕೊಡುತ್ತಾ, ಮೌಲ್ವಿ ಸೋಭಾನಖಾನರು ನವಂಬರ ೧೫ರಂದು ಬರಹಾಮಪುರ ಜೈಲಿಗೆ ಸಶಸ್ತ್ರ ರಿಸರ್ವ್ ಪೋಲೀಸ್ ದಳವನ್ನು ಕರೆದುಕೊಂಡುಹೋಗಿ, ಅಲ್ಲಿಯ ರಾಜಕೀಯ ಕೈದಿಗಳ ಮೇಲೆ ಸ್ವಲ್ಪ ಸಮಯದ ವರೆಗೆ ಲಾಠೀ ಪ್ರಹಾರ ಮಾಡಲಾಯಿತೆಂದೂ, ಲಾಠೀ ಪ್ರಯೋಗದ ಪರಿಣಾಮವಾಗಿ ಕೆಲವು ಕೈದಿಗಳಿಗೆ ಗಾಯ ಸಂಭವಿಸಿದೆಯೆಂದೂ ಒಪ್ಪಿದರು ರಾಜಕೀಯ ಕೈದಿಗಳು ಜೈಲಿನಲ್ಲಿ ಪುಂಡಾಟಿಕೆ ನಡೆಸುತ್ತಿದ್ದುದರಿಂದ ಹಾಗೆ ಮಾಡಲಾಯಿತೆಂದೂ ಅವರು ಸಮರ್ಥಿಸಿಕೊಂಡರು.

WANTED

Clerks to serve as apprentices in a well-established Office. Minimum qualification should be at least S. S. L. C. (Completed). Young men of experience, possessing special qualifications in Commercial subjects such as Book-keeping, Shorthand, Typewriting etc. are preferred. Application in the handwriting of the applicants stating age etc. with copies of testimonials should reach by the 7th April 1943.

"X" C/o The Swadeshabhimani, Mangalore.



ರಕ್ಷಣೆಗಾಗಿ ಓಡಾಟ

ಅನೇಕ ವರ್ಷಗಳಿಂದಾಗಿ ನಮ್ಮ ಹಿಂದೂದೇಶದಲ್ಲಿ ಆಹಾರ ಸಮಸ್ಯೆಯು ಬಹು ಕಠಿಣವಾದದ್ದು. ಇದರಲ್ಲಿ ಒಂದಂಶದ ಭಾರವು ನಮ್ಮ ದೇಶದೊಳಗೇನೇ ಬಗೆಹರಿಸ ಬೇಕಾಗಿದೆ. ಮತ್ತೊಂದು ಅಂಶವು ನಮ್ಮ ಮಿತ್ರರಾಷ್ಟ್ರಗಳಿಂದ ನಮಗಾಗಿ ಬಗೆಹರಿಸಲ್ಪಡುತ್ತಿದೆ.

ದಿನಂಪ್ರತಿ ನಮ್ಮ ಪ್ರಾಮುಖ್ಯ ಬಂದರುಗಳಲ್ಲಿ ಧಾನ್ಯಗಳಿಂದ ತುಂಬಿ ತುಳುಕಾಡುತ್ತಿರುವ ಹಡಗುಗಳು ಬಂದು ತಲ್ಪುತ್ತಿವೆ. ಅಮೆರಿಕಾ ಸಂಯುಕ್ತ ರಾಷ್ಟ್ರಗಳ ಧಾನ್ಯದ ಖಣಜದಿಂದ ಈ ಆಹಾರವು ನಮ್ಮ ನಾಡಿನ ತುಟ್ಟಿ ಇರುವಂತಹ ಸ್ಥಳಗಳಲ್ಲಿ ಹಂಚಿಸಲಾಗುತ್ತಿದೆ.

ನಿಜ, ಪ್ರತೀದಿನ ಈ ಮಹಾ ನೌಕಾಪಡೆಗಳು ಭೀಕರವಾದ ಸಮುದ್ರವನ್ನ ಹೂಡವಾಡಿಸಿಕೊಂಡು ಬಿಕ್ಕಟ್ಟಿನ ಸಮಯದಲ್ಲಿ ನಮ್ಮ ನಾಡಿಗೆ ಸಹಾಯವನ್ನೀಯಲು ಧೈರ್ಯದಿಂದ ಬರುತ್ತಿವೆ.

ಆದರೆ ಅಷ್ಟೇ ಸಾಲದು.

ಪ್ರಜೆಗಳಾದ ನಾವು ಪ್ರಯತ್ನವೇನೂ ಮಾಡದಿದ್ದರೆ ನಮ್ಮ...ಅಡಚಣೆಗೊಳಗಾದ ಮಿತ್ರರ ನಿಸ್ವಾರ್ಥ ಭಾವನೆಯು ನಿಷ್ಫಲವಾಗಿತು. ನಮಗೆ ಅಗತ್ಯವಾಗಿರೇವುದಕ್ಕಿಂತಲೂ ಹೆಚ್ಚಾಗಿ ನಾವು ಕೂಡಿಟ್ಟರೆ, ಈ ಸಮಸ್ಯೆಯು ಇನ್ನೂ ಬಗೆಹರಿಸದೆ ಬಿದ್ದೀತು. ಅದು ಹಾಗಾಗಬಾರದು.

ಕೂಡಿಡಲು ಶಕ್ತರಾದ ಬಡವರನ್ನು ಪ್ರತ್ಯೇಕವಾಗಿ ಗಮನಿಸಿರಿ. ಪ್ರತಿದಿನವೂ ಗುಂಪುಗಟ್ಟಿ ದಿನಸುಗಳ ಅಂಗಡಿಗಳಮುಂದೆ, ತಮ್ಮ ನಿತ್ಯ ಭೋಜನದ ಸಲುವಾಗಿ ಕಾದು ನಿಂತಿರುವುದನ್ನು ನೋಡುತ್ತಲೇಯಿರುವಿರಲ್ಲವೆ! ಅವರ ಅಲ್ಪ ಆಹಾರವನ್ನು ಕಳವು ಮಾಡಬೇಡಿರಿ ಬದಲಾಗಿ ಅವರನ್ನು....ಸಹಾಯಿಸಿರಿ. ಹಾಗೆ ಮಾಡುವುದರಿಂದ ನಿಮ್ಮ ದೇಶದ ಹಾಗೂ ನಿಮ್ಮ ಸೇವೆಯನ್ನು ಮಾಡಿದಂತಾಗುವುದು. ಮತ್ತು ಮಿತ್ರರಾಷ್ಟ್ರಗಳ ತ್ಯಾಗವನ್ನು ಸಾರ್ಥಕಗೊಳಿಸಿದಂತಾಗುವದು.

ಕೂಡಿಡುವವರನ್ನು ಬಹಿಷ್ಕರಿಸಿರಿ

ರಾಷ್ಟ್ರೀಯ ಯುದ್ಧ ಮುಖದ ಜಾಹೀರಾತು

C.P.B. U.—177 KN

ರುಚಿಕರವಾದ ಒಂದುಲೋಟ ಅಂಡ್ರ್ಯೂಸ್‌ಗಿಂತಹೆಚ್ಚು ಉಲ್ಲಾಸಕರವಾದುದು ಯಾವುದೂ ಇಲ್ಲ, ಹಾಗೆಯೇ ಸಂಪೂರ್ಣ ಅಂತರ್ಯ ಶುದ್ಧಿಯುಂಟಾಗುವುದರಿಂದ ಅಂಡ್ರ್ಯೂಸ್ ಮನಸ್ಸು, ದೇಹವನ್ನು ಹೆಚ್ಚು ಆರೋಗ್ಯದಲ್ಲಿಡುವುದು. ಅಂಡ್ರ್ಯೂಸ್ ಆರೋಗ್ಯದಿಂದಿರುವವರಿಗೂ ಕೂಡ ಬೇಕಾದಂತಹ ಶ್ರೇಷ್ಠ ಟಾನಿಕ್ ವಿರೇಚಕ, ಎಲ್ಲಾ ವಯಸ್ಸಿನವರಿಗೂ ಸರಿಹೋಗುವದು, ವಾಡಿಕೆ ಬೇಕಾಗದಿಲ್ಲ. ಸ್ವಲ್ಪವೇ ಪ್ರಮಾಣವೇ ಸಾಕು.

ಮೊದಲು— ಅಂಡ್ರ್ಯೂಸ್ ಬಾಯಿ ನಾಲಿಗೆಯನ್ನು ಶುದ್ಧಿಮಾಡುತ್ತದೆ.

ಆನಂತರ—ಅಂಡ್ರ್ಯೂಸ್ ಜಠರವನ್ನು ಒಳ್ಳೆ ಸ್ಥಿತಿಯಲ್ಲಿಟ್ಟು ಹುಳಿಯನ್ನು ಸರಿಪಡಿಸುತ್ತೆ.

ಆ ಮೇಲೆ—ಅಂಡ್ರ್ಯೂಸ್ ಲಿವರನ್ನು ಶಕ್ತಿಯುತವಾಗಿ ಮಾಡಿ ಪಿತ್ತವನ್ನು ತಡೆಯುವದು.

ಕೊನೆಯದಾಗಿ-ನಿಮ್ಮ ಅಂತರ್ಯ ಶುದ್ಧಿ ಸಂಪೂರ್ಣವಾಗಲು ಅಂಡ್ರ್ಯೂಸ್ ಸೌಮ್ಯವಾಗಿ ಮಲವಿಸರ್ಜನೆ ಮಾಡಿಸುವುದು, ತೊಂದರೆ ಕೊಡುವ ವಿಷಗಳನ್ನು ಹೊರಸಾಗಿಸಿ, ಮಲಬದ್ಧತೆ ಸರಿಪಡಿಸಿ, ರಕ್ತವನ್ನು ಶುದ್ಧಿಮಾಡಿ ಚರ್ಮವನ್ನು ಸ್ವಚ್ಛವಾಗಿಡುವುದು.

ಅಂತರ್ಯ ಶುದ್ಧಿಗೆ ಕ್ರಮವಾಗಿ ಉಪಯೋಗಿಸಿ

ಅಂಡ್ರ್ಯೂಸ್ ಲಿವರ್ ಸಾಲ್ಟ್

ANDREWS LIVER SALT

Health Drink — Tonic Laxative

ಸಮರಭೂಮಿಯ ಸಂಚಾರ

ಯುಕ್ರೈನು ರಶ್ಯದಲ್ಲಿ ಸಂಪತ್ ಸಮೃದ್ಧಿಯ ಸ್ಥಳ, ಗೋಧಿ ಆಹಾರ ಅಪಾರ ಅಲ್ಲಿ ಹುಟ್ಟುತ್ತದೆ ಇದು ಜರ್ಮನರ ವಶವಾದದ್ದೇ ರಶ್ಯವು ಕಂಗೆಟ್ಟಿತ್ತು. ಆದರೆ ರಶ್ಯನರು ಅದನ್ನು ಪುನಃ ಸ್ವಾಧೀನಮಾಡಿಕೊಂಡಿದ್ದರು. ತಿರುಗಿ ಈಗ ಉಕ್ರೇನಿನ ಸಂಪತ್ತಿನ ಖನಿಯೆನಿಸಿದ ಖಾರ್ಕೋವಿಂದು ಜರ್ಮನರ ಕೈ ಸೇರಿಬಿಟ್ಟಿದೆ! ಯುದ್ಧ ದೃಷ್ಟಿಯಿಂದ ಈ ನಗರವು, ಒಬ್ಬರ ಕೈ ಬಿಟ್ಟು ಇನ್ನೊಬ್ಬರ ಕೈಗೆ ಹೋಗುವುದು ಬಹಳ ಮಹತ್ವದ ವಿಷಯವಾಗಿದೆ ಕೈಗಾರಿಕೆ ಮತ್ತು ಸಂಚಾರ ಸೌಕರ್ಯಗಳ ಕೇಂದ್ರವಾದ ಈ ನಗರವನ್ನು ಮಾರ್ಚಿ ೧೯ರಂದು ಜರ್ಮನರು ಆಕ್ರಮಿಸಿಕೊಂಡರು! ಖಾರ್ಕೋವ್ ಪತನದಿಂದ ರೋಸ್ತೋವಿಗೂ ಅಂಜಿಕೆಯುಂಟಾಗಿದೆ ಈ ಸೋಲಿನಿಂದ ಮಿತ್ರ ಪಕ್ಷದವರು ಮಹತ್ವದ ಪಾಠವನ್ನು ಕಲಿಯತಕ್ಕದ್ದಿದೆ ರಶ್ಯ ರಣಭೂಮಿಯಲ್ಲಾದರೂ ಜರ್ಮನರ ಶಕ್ತಿ ಇನ್ನೂ ಕುಂದಿಲ್ಲವೆಂದು ತಿಳಿಯಲು ಅವಕಾಶವಾಗಿದೆ ರಶ್ಯ ರಣರಂಗದಲ್ಲಿ ಕಳೆದ ಕೆಲಕಾಲದಿಂದ ಜರ್ಮನರಿಗೆ ರಶ್ಯನ್ ವೀರರಿಂದುಂಟಾದ ಅಪಜಯವನ್ನು ನೋಡಿ ಮಿತ್ರ ಪಕ್ಷದವರೇನೋ ಹಿಗ್ಗಿ ಹೋಗಿದ್ದರು, ಹಾಗೆ ಮೈಮರೆತಿರುವುದು ಜಾಣತನವಲ್ಲವೆಂದು ಈ ಅಪಜಯವು ಮಿತ್ರರ ಕಣ್ಣು ತೆರೆಯಿಸಿತು! ಇಷ್ಟರಲ್ಲೇ, ಹಿಮ ಕರಗಲು ತೊಡಗಿದ್ದ ರಶ್ಯನರ ದುರ್ದೈವ ವಸಂತಕಾಲ ಬಂತೆಂದರೆ ಹಿಟ್ಲರ್ ಹುರಿಗೊಳ್ಳುತ್ತಾನೆ ಹಿಮಗಾಲದಲ್ಲೇನೋ ಆತನಿಗೆ ಪ್ರಯಾಸವುಂಟಾದರೂ ವಸಂತಕಾಲವು ಬಂತೆಂಬುದು ಶತ್ರುವಿಗೆ ಅನುಕೂಲ ಹಿಟ್ಲರನ 'ವಸಂತ ಧಾಳಿ'ಯಂತೂ ಇತಿಹಾಸ ಪ್ರಸಿದ್ಧವೇ ಆದುದು ಇಂಥಾ ಸಂದರ್ಭದಲ್ಲಿ ವಿಜಯಿಗಳಾಗಿರುವ ರಶ್ಯನರಿಗೆ ಬೆಂಬಲ ಕೊಟ್ಟು, ಶತ್ರುವನ್ನು ರಶ್ಯನ್ ರಣಭೂಮಿಯಲ್ಲಿ ಸಂಪೂರ್ಣ ಸೋಲಿಸುವ ಸಾಹಸವನ್ನು ಮಿತ್ರರು ಮಾಡತಕ್ಕದ್ದು ಅವಶ್ಯವಾಗಿವೆ ಇದಕ್ಕಾಗಿ ತಡಮಾಡದೆ ದ್ವಿತೀಯ ರಣರಂಗವನ್ನು ಈಗಲೇ ಮಿತ್ರರು ತೆರೆಯಬೇಕು!

ವಾಶಿಂಗ್‌ಟನ್ ಸಮ್ಮೇಳನ

ಬ್ರಿಟನಿನ ಪರದೇಶ ಸಚಿವರಾದ ಈಡನರು ಅಮೆರಿಕಕ್ಕೆ ಹೋಗಿದ್ದು ಅಲ್ಲಿ ವಾಶಿಂಗ್‌ಟನಿನಲ್ಲಿ ರೂಸ್‌ವೆಲ್ಟರೇ ಮೊದಲಾದ ಅಮೇರಿಕದ ಮುಖಂಡರೊಡನೆ ಹಾಗೂ, ಅಲ್ಲಿರುವ ಚೀನ, ರಶ್ಯ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕ ಆಸ್ಟ್ರೇಲಿಯಾ ಮೊದಲಾದ ಮಿತ್ರ ರಾಷ್ಟ್ರಗಳ ರಾಯಭಾರಿಗಳೊಡನೆಯೂ ಮಾತುಕತೆ ಮಾಡುತ್ತಿರುವ ವಿಚಾರವು ಇಂದು ಮಹತ್ವವಾದೊಂದು ಪ್ರಸಂಗವಾಗಿದೆ ಅವರು ಹೀಗೆ ಆಕಸ್ಮಿಕವಾಗಿ ಅಮೇರಿಕಕ್ಕೆ ಪ್ರಯಾಣ ಮಾಡಲು ಹಾಗೂ ಅಲ್ಲಿ ಹೀಗೆ ಸಮ್ಮೇಳನವೇರ್ಪಡಿಸಲು ಉದ್ದೇಶವೇನಿರಬಹುದೆಂಬ ವಿಚಾರ ಈಗ ಊಹಾಪೋಹಗಳುಂಟಾಗಿವೆ ಹೇಗಿದ್ದರೂ ಮಹತ್ವದ ರಾಜಕೀಯ ವಿಚಾರ ವಿಮರ್ಶೆಗೆ ಇಂದು ಈಡನರು ಅಮೆರಿಕಕ್ಕೆ ಹೋಗಿರುವರೆಂಬ ವಿಷಯದಲ್ಲಿ ಯಾರದೂ ಭಿನ್ನಮತವಿರುವುದಿಲ್ಲ

ಈ ಸಮ್ಮೇಳನದಲ್ಲಿ ಮೂರು ವಿಚಾರಗಳು ಮುಖ್ಯವಾಗಿ ಚರ್ಚಿಸಲ್ಪಡಬಹುದೆಂದು ನಾವು ನಂಬುತ್ತೇವೆ (೧) ಮಿತ್ರರಾಷ್ಟ್ರಗಳನ್ನೆಲ್ಲಾ ಒಂದುಗೂಡಿಸಿ, ಯುದ್ಧಾನಂತರದ ಶಾಂತಿಲೋಕದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂಬ ವಿಚಾರವಾಗಿ ಒಂದು ಒಮ್ಮತದ ತೀರ್ಮಾನಕ್ಕೆ ಬರುವುದು (೨) ಅಮೆರಿಕ, ಚೀನ, ರಶ್ಯ, ಬ್ರಿಟನು ಈ ಮಿತ್ರ ರಾಷ್ಟ್ರಗಳ ಗೆಳೆತನವು ಶಾಶ್ವತವಾಗಿ ನಿಲ್ಲುವಂತೆಯೂ, ಯುದ್ಧದಲ್ಲಿ ಪರಸ್ಪರ ಇಂದು ಸಹಕರಿಸಿ ನಡೆಯುವಂತೆಯೂ ಒಂದು ಏರ್ಪಾಡು ಮಾಡುವುದು (೩) ಫೆಸಿಫಿಕ್ ಸಮುದ್ರದಲ್ಲಿ ಅಮೆರಿಕ ಮತ್ತು ಆಸ್ಟ್ರೇಲಿಯದ ಸೈನಿಕರು ಪ್ರದರ್ಶಿಸುತ್ತಿರುವ ಸಾಮರ್ಥ್ಯವನ್ನು ಮೆಚ್ಚಿ, ಅಲ್ಲಿ ಮುಂದೆ ನಡೆಯಲಿರುವ ಸಂಗ್ರಾಮದಲ್ಲಿ ಮಿತ್ರ ರಾಷ್ಟ್ರಗಳು ಹೇಗೆ ಸಹಕರಿಸಬೇಕೆಂಬುದನ್ನು ಇತ್ಯರ್ಥಿಸುವುದು ಈ ಮೂರು ಪ್ರಾಮುಖ್ಯ ವಿಚಾರಗಳನ್ನು ಈಡನರು ಬೇರೆ ಬೇರೆ ಪ್ರತಿನಿಧಿಗಳೊಡನೆ ವಾಶಿಂಗ್‌ಟನ್‌ನಲ್ಲಿ ಇಂದು ಮಾತನಾಡುತ್ತಿರುವರೆಂದು ನಾವು ಊಹಿಸಲು ಸಾಕಷ್ಟು ಆಧಾರಗಳಿವೆ.

ಮಿತ್ರರಾಷ್ಟ್ರಗಳಲ್ಲಿ, ಕೆಲವು ರಾಷ್ಟ್ರಗಳೊಳಗೆ ಈಗಾಗಲೇ ಸ್ವಲ್ಪ ಸ್ವಲ್ಪ ಅಂತಃಕಲಹವುಂಟಾಗಿರುವ ಸುದ್ದಿ ಹರಡುತ್ತಿದೆ. ಅದರಲ್ಲೂ ರಶ್ಯದಲ್ಲಿದ್ದ ಅಮೇರಿಕದ ರಾಯಭಾರಿ ಎಡ್ಮಿರಲ್ ಸ್ಟ್ಯಾನ್ಲೆಯವರು, ರಶ್ಯದ ಕುರಿತು ಹೇಳಿದ ಮಾತುಗಳನ್ನು ವಿಚಾರಿಸಿದರೆ ಮಿತ್ರ ಶಿಬಿರದಲ್ಲಿಯೇ ಹೋರಾಟಹುಟ್ಟುವ ಸೂಚನೆಕಂಡುಬರುವುದು ಹೇಗಿದ್ದರೂ ರಶ್ಯ ಅಮೆರಿಕಗಳ ಮನಸ್ಸು ಕಲಕಿರುವುದು ಯೋಗ್ಯವಲ್ಲ, ಅವುಗಳನ್ನು ಪುನಃ ಏನಾದರೂ ಒಡಕುಹುಟ್ಟಿದ್ದರೆ—ಸಂಘಟಿಸಲೇಬೇಕಾಗಿದೆ ಅದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನೂ ಸರ್ವಥಾ ಕೈಕೊಳ್ಳಲೇಬೇಕು ಅದು ಮಾತವಲ್ಲದೆ, ಚೀಣದ ದಳಪತಿಯ ಪತ್ನಿ ಮೇಡಂ ಚೈಶೇಕ್‌ರಾದರೂ ಮೊನ್ನೆ ಮೊನ್ನೆ 'ಚೀನಿಯರು ಸ್ವಸಾಮರ್ಥ್ಯದಿಂದಲೇ ಹೋರಾಡಿ ಜಪಾನಿಯರನ್ನು ಹಿಮ್ಮೆಟ್ಟಿಸುತ್ತಿರುವರು' ಎಂಬರ್ಥವಿಟ್ಟು ಮಾತನಾಡಿದ್ದಾರೆ ಚೀನಿಯರಿಗಾದರೂ ಮಿತ್ರರು ಸಾಕಷ್ಟು ಬೆಂಬಲ ಕೊಡುವುದಿಲ್ಲವೆಂದರೆ ಅವರಾದರೂ ಮಿತ್ರರಲ್ಲಿ ಅಷ್ಟೊಂದು ಪ್ರೀತಿಯಿಡಲು ಸಾಧ್ಯವಿಲ್ಲ, ಹೀಗಾದರೆ ಚೀನ ಮತ್ತು ಮಿತ್ರರಾಷ್ಟ್ರಗಳ ಸೌಹಾರ್ದವನ್ನೂ ಸಂಘಟಿಸಬೇಕು ಹೀಗೆಲ್ಲಾ ಮಾಡಬೇಕಾದರೆ, ಬ್ರಿಟನು ಅಮೆರಿಕಗಳು ಚೀನ ರಶ್ಯಗಳೊಡನೆ ಬಿಚ್ಚು ಹೃದಯದಿಂದ ಶಾಶ್ವತ ಸಹಕರಿಸಬೇಕಾದರೆ, ಪ್ರಬಲ ತತ್ವಗಳಲ್ಲಿ ಬದಲಾವಣೆ ಮಾಡಬೇಕಾಗಿ ಬಂದರೂ ಬರಬಹುದು ಇದಕ್ಕೆಲ್ಲಾ ಹೆಚ್ಚಿನ ವಿಚಾರ ವಿಮರ್ಶೆ ಬೇಕಾಗಿದೆ. ಆಳವಾದ ಆಲೋಚನೆ ಅವಶ್ಯವಿದೆ ಇದಕ್ಕೆ ಈಡನರು ಅಮೆರಿಕದತ್ತ ಸರಿದಿದ್ದರೂ ಇರಬಹುದು

ಕೊನೆಗೊಮ್ಮೆ ಚರ್ಚಿಲರು

ಮುಂದಿನ ಜಗತ್ತಿನ ನವನಿರ್ಮಾಣದ ಕುರಿತು ನಾಲ್ಕು ಮಾತುಗಳನ್ನು ಹೇಳಿಬಿಟ್ಟರು ಇಂದು ಹಿಟ್ಲರನನ್ನು ಮೊದಲು ನಾಶಮಾಡಿ, ಆ ಮೇಲೆ ಜಪಾನನ್ನು ಧ್ವಂಸಮಾಡುವುದು, ಹೀಗೆ ಯುದ್ಧಕಾರ್ಯವನ್ನು ಸಾಧಿಸುವುದು ಮಾತ್ರ ನಮ್ಮ ಉದ್ದೇಶವಾಗಬೇಕಲ್ಲದೆ, ಇನ್ನೂ ಕೊನೆಗಾಣದ ಯುದ್ಧದೀ ಕಾಲದಲ್ಲಿ, ಮುಂದಿನ ಶಾಂತಿಕಾಲದ ವ್ಯವಸ್ಥೆಯ ಕುರಿತು ಚರ್ಚೆ ಏಕೆ ಯೆಂಬುದೇ ಚರ್ಚಿಲರ ಮೊದಲನೆಯ ಮಾತು. ಆದರೇಕೋ ಕೊನಗೆ ಒತ್ತಾಯಕ್ಕೆಂಬಂತೆ ನಾಲ್ಕು ಮಾತುಗಳನ್ನು ಹೇಳಿಬಿಟ್ಟರು "ಯುದ್ಧ ಮುಗಿದ ಮೇಲೆ ಹೇಗೆ ಮಾಡಲಾಗುವುದೆಂದು ನಾನು ಈಗ ಭರವಸೆ ಕೊಡಲಾರೆ" ಹೀಗೆಂದು ಭಾಷಣದ ಪಲ್ಲವಿಯನ್ನು ಹೇಳುತ್ತಾ, "ಕೊನೆಯ ವರೆಗೂ ನಾನು ಬ್ರಿಟಿಷ ಪ್ರಧಾನಾಧಿಕಾರಿಯಾಗಿ ಉಳಿದರೆ, ಮುಂದಿನ ಕೆಲಸವನ್ನು ಬ್ರಿಟಿಷ್ ಜನತೆಗೆ ಒಪ್ಪಿಸುವೆನು ಎಂದು ಮಾತ್ರ ಹೇಳಿದರು! ಅಂತೂ ಕೊನೆಗಾದರೂ ಬ್ರಿಟಿಷ್ ಜನತೆ ತಮ್ಮ ಭಂಡವಾಳ ಶಾಹಿ, ಸಾಮ್ರಾಜ್ಯ ಶಾಹಿ ನೀತಿಗಳನ್ನು ಬಿಟ್ಟುಬಿಡಲು ಒಪ್ಪದಿದ್ದರೆ ಚರ್ಚಿಲರಾದರೂ ಏನು ಮಾಡಬಲ್ಲರು? ಆದ್ದರಿಂದಲೇ ಚರ್ಚಿಲರು ಪ್ರಥಮವಾಗಿ, ಹೇಳಿದ್ದು "ಯುದ್ಧ ಮುಗಿದ ಮೇಲೆ ಏನು ಮಾಡಲಾಗುವುದೆಂದು ನಾನು ಭರವಸೆ ಹೇಳಲಾರೆ" ಎಂದು!

ಹಿಟ್ಲರನನ್ನು ಮೊದಲು ಸೋಲಿಸಿ, ಜಪಾನನ್ನು ಆ ಮೇಲೆ ಸೋಲಿಸುವುದೆಂದೂ, ಯುದ್ಧ ಮುಗಿದ ಮೇಲೆ 'ಯೂರೋಪಿಗೊಂದು ಕೌನ್ಸಿಲು 'ಏಶ್ಯಾಕ್ಕೊಂದು ಕೌನ್ಸಿಲು' ರಚಿತವಾಗಬೇಕೆಂದೂ ಚರ್ಚಿಲರು ಹೇಳಿದರು ಯುದ್ಧ ಕಾಲದಲ್ಲಿ, ಸಂಯುಕ್ತ ಯುದ್ಧ ಕಾರ್ಯದಲ್ಲಿ, ಹಾಗೂ ಮುಂದಿನ ಸಂಯುಕ್ತ ರಾಷ್ಟ್ರಘಟನೆಗಳಲ್ಲಿ ಈ ಯೂರೋಪು ಏಶ್ಯಾ ಭೇದಕಲ್ಪನೆಯು ಈ ಬಿಳಿ ಕರಿ ಬಣ್ಣ ಭೇದದಂತಹ ವಿಚಾರವು ಏಕೆ ಅಗತ್ಯವೋ ನಮಗೆ ಅರ್ಥವಾಗುವುದಿಲ್ಲ ಹಿಟ್ಲರನನ್ನು ಸೋಲಿಸುವ ವರೆಗೆ ಜಪಾನನ್ನು ಎದುರಿಸಲು ಹೆಚ್ಚಿನ ಸಾಹಸಮಾಡಲಾಗುವುದಿಲ್ಲವೆಂಬುದು ಚರ್ಚಿಲರ ಮಾತಿನಿಂದ ಸ್ಪಷ್ಟವಾಗುತ್ತದೆ ಹಾಗಾದರೆ, ಈಗಲೂ ಜಪಾನು ಏಶ್ಯಾದಲ್ಲಿ ತನ್ನ ಪೂರ್ಣ ಶಕ್ತಿಯನ್ನು ಉಪಯೋಗಿಸಿಕೊಂಡು ಚೀನವನ್ನು ನುಂಗಿ, ಭಾರತದತ್ತ ದಂಡಯಾತ್ರೆಗೆ ಬೇಗನೇ ಮನಮಾಡಬಹುದೆಂದು ಊಹಿಸುವುದರಲ್ಲಿ ತಪ್ಪೇನಿದೆ? ಏಕೆಂದರೆ, ಹೇಗಿದ್ದರೂ, ಯೂರೋಪಿನ ಯುದ್ಧ ಮುಗಿವವರೆಗೆ, ಹಿಟ್ಲರನನ್ನು ಸೋಲಿಸುವ ವರೆಗೆ, ಚರ್ಚಿಲರು ಜಪಾನಿನತ್ತ ಗಮನಕೊಡುವುದಿಲ್ಲವೆಂಬುದು ಸಿದ್ಧಾಂತವಷ್ಟೆ? ಯುದ್ಧಾನಂತರವಾದರೂ ಯೂರೋಪು ಏಶ್ಯಾಗಳಿಗೆ ಎರಡು ಕೌನ್ಸಿಲುಗಳನ್ನು ರಚಿಸುವ ವಿಚಾರ ಬಹಳ ಸಂದೇಹಕ್ಕೆಡೆಕೊಡುತ್ತದೆ ಅಂತರಾಷ್ಟ್ರೀಯವಾಗಿ ಒಂದೇ ಕೌನ್ಸಿಲು ಸ್ಥಾಪಿತವಾದರೆ, ಅಲ್ಲಿ ರಶ್ಯ, ಚೀನ, ಭಾರತದಂಥಾ ರಾಷ್ಟ್ರಗಳೆಲ್ಲವೂ ಏಕಪಕ್ಷವಾಗಿ ವಾದಿಸಬಹುದೆಂಬ ಅಂಜಿಕೆ ಚರ್ಚಿಲರಿಗಿರುವುದರಿಂದಲೇ, ಹೀಗೆ ವಿಭಜಿಸಿ ಆಳುವ ಸಲುವಾಗಿ, ಯೂರೋಪಿಗೆ ಬೇರೆ, ಏಶ್ಯಕ್ಕೆ ಬೇರೆ ಕೌನ್ಸಿಲು ಮಾಡಿದಲ್ಲಿ, ಎರಡೂ ಕೌನ್ಸಿಲುಗಳಲ್ಲಿಯೂ ತನ್ನ ಪಕ್ಷವನ್ನೇ ಸಮರ್ಥಿಸಿ, ತನ್ನ ಮಾತನ್ನೇ ನಡೆಸಬಹುದೆಂದು ಚರ್ಚಿಲರು ಆಶೆಪಟ್ಟಿರುವರೆಂದೂ ಹಲವರು ಶಂಕಿಸುತ್ತಿರುವರು

ಚರ್ಚಿಲರು ಇನ್ನೊಂದು ವಿಷಯವನ್ನೂ ಹೇಳಿದರು ಆಕ್ರಮಣಕಾರೀ ರಾಷ್ಟ್ರಗಳ ವಿಷಯ ಪ್ರತೀಕಾರ ತೆಗೆದುಕೊಳ್ಳಬೇಕೆಂದು, ಮುಂದೆಯೂ ಒಂದು ರಾಷ್ಟ್ರಸಂಘವನ್ನು ಸ್ಥಾಪಿಸಿ, ಅದರಲ್ಲಿ ಸೋತಂತಹ ರಾಷ್ಟ್ರಗಳ ಮೇಲೆ ನಿಶ್ಶಸ್ತ್ರೀಕರಣವನ್ನು ಹೇರಬೇಕೆಂದು ಚರ್ಚಿಲರು ಅಭಿಪ್ರಾಯಪಟ್ಟಂತೆ ತೋರುತ್ತದೆ ಇದು ವರ್ಸೇಲಿ ಒಪ್ಪಂದದ ಪುನರಾವೃತ್ತಿಯೇ ಆಗದೇನು? ಸೋತ ರಾಷ್ಟ್ರಗಳ ಮೇಲೆ ಪ್ರತೀಕಾರ ತೆಗೆದುಕೊಳ್ಳುವಷ್ಟು—ಅವುಗಳು ಸೋತು ಶರಣಾದ ಮೇಲೂ—ದ್ವೇಷ ಭಾವನೆಯನ್ನಿಟ್ಟುಕೊಂಡರೆ, ಮುಂದೆ ಆ ದ್ವೇಷದ ಪ್ರತಿಕ್ರಿಯೆಯಾಗಿ ಇನ್ನೊಂದು ಮಹಾಯುದ್ಧದ ಸಿದ್ಧತೆಯಾಗದೇನು? ಇಂಥಾ ನೀತಿಯಿಂದ ಲೋಕದಲ್ಲಿ ಶಾಶ್ವತ ಶಾಂತಿಯು ನೆಲೆಗೊಳ್ಳುವುದೇನು? ಇದನ್ನೆಲ್ಲಾ ನೋಡಿದರೆ, ಈ ಯುದ್ಧವೇ ಕೊನೆಯ ಯುದ್ಧವಾಗುವುದೆಂದು ಹೇಗೆ ಧೈರ್ಯಪೂರ್ವಕ ಹೇಳಬಹುದು ಮುಂದಿನ ಯುದ್ಧ ಬೀಜಗಳನ್ನು ಹೀಗೆ ಈಗಾಗಲೇ ಹಲವರು ರಾಜಕಾರಣಿಗಳು ಬಿತ್ತುತ್ತಿದ್ದಾರೆ!

ಜಪಾನಿನ ಬಕಧ್ಯಾನ?

ಜಪಾನು ಇಂದು ಬಕಧ್ಯಾನಮಾಡುವಂತಿದೆ, ಯಾವ ಕಡೆ ಯಾವಾಗ ಬೀಳುವುದೋ ಯಾರಿಗೂ ತಿಳಿಯದು ಆದರೆ ಎಲ್ಲಾ ಕಡೆಗಳಲ್ಲಿಯೂ ಸಾಕಷ್ಟು ಸಿದ್ಧತೆ ಮಾಡಿಕೊಂಡು ಈಗ ಸುಮ್ಮಗೇ ಕುಳಿತುಬಿಟ್ಟಿದೆ. ಜಪಾನಿನ ಆಸೆ ಎಲ್ಲಿವರೆಗೆ ಚಾಚಿದೆಯೆಂದು ಯಾರಿಗೂ ಹೇಳಬರುವುದಿಲ್ಲ ರಶ್ಯದ ಮೇಲೆ ಯುದ್ಧ ಹೂಡಬೇಕೆಂದು, ಸೈಬೇರಿಯದಲ್ಲಿ ಜಪಾನಿನ ಸೈನ್ಯ-ಸಿದ್ಧತೆಯಾಗಿದೆ, ಭಾರತವನ್ನು ನುಗ್ಗಬೇಕೆಂದು ಬರ್ಮಗಡಿಯಲ್ಲಿ ಸೈನಿಕರು ತಯಾರಾಗಿದ್ದಾರೆ, ಆಸ್ಟ್ರೇಲಿಯಕ್ಕೆ ಧಾಳಿಯಿಡಬೇಕೆಂದು, ಫೆಸಿಫಿಕ್ ದ್ವೀಪಗಳಾದ ಸೊಲೊಮನ್, ನ್ಯೂಗಿನಿ ಮೊದಲಾದೆಡೆಗಳಲ್ಲಿ ಸೈನ್ಯಸಾಮಗ್ರಿ ತಯಾರಾಗಿದೆ ಚೀನದ ಮೇಲೆ ಯುದ್ಧತೊಡಗಿ ಈಗಲೇ ನಾಲ್ಕೈದು ವರ್ಷಗಳು ದಾಟಿ, ಅನೇಕ ಪ್ರಾಮುಖ್ಯ ನಗರ ಕೇಂದ್ರಗಳನ್ನು ವಶಪಡಿಸಿಕೊಂಡು ಯುದ್ಧ ಸಾಗಿಸುತ್ತಲೇ ಇದ್ದಾರೆ ಈಗಾಗಲೇ ಜಪಾನು ವಿಮಾನಗಳು ಸಿಡ್ನಿ ನಗರದ ಮೇಲೂ, ಪೋರ್ಟ್ ಡಾರ್ವಿನ್ ಮೇಲೂ ಹಾರಿಸಿದ್ದೆಯೆಂದು ಸುದ್ದಿಯಿರುವುದರಿಂದ ಆಸ್ಟ್ರೇಲಿಯಕ್ಕೆ ರಣಭೀತಿಯುಂಟಾಗಿರುವುದು ಭಾರತದ ಕಲ್ಕತ್ತಾ, ಚಿತಗಾಂಗ್, ಆಸಾಮ್, ಫೇಣಿ ಪ್ರಾಂತಗಳಲ್ಲಿ ಈಚೆಗೆ ಕೆಲ ತಿಂಗಳಿಂದಿತ್ತ ಬಾಂಬಿನ ಹೊಡೆತಬಿದ್ದಿದೆ ಕೆಲವು ಕಡೆಗಳಲ್ಲಿ ಆಗಾಗ ಈಗಲೂ ಬೀಳುತ್ತಲೇ ಇದೆ ಅತ್ತ ಸೈಬೇರಿಯದ ಗಡಿಯಲ್ಲಿ ಮಾತ್ರ ಇದುವರೆಗೆ ಏನೂ ಚಟುವಟಿಕೆ ತೋರಿಬರುತ್ತಲಿಲ್ಲ ಹೇಗಿದ್ದರೂ, ಜಪಾನು ಈ ರೀತಿ ಎಲ್ಲಾ ರಣರಂಗಗಳಲ್ಲಿಯೂ ಸೈನ್ಯ ಸಾಮಗ್ರಿ ಸಜ್ಜಿತವಾಗಿ ಸಿದ್ಧವಾಗಿರುವುದರ ಗುಟ್ಟೇನು? ಎಂಬುದು ಗಮನಾರ್ಹವಿದೆ

ಜಪಾನಿನ ಮುಖ್ಯ ಮಂತ್ರಿ ಜನರಲ್ ಟೋಜೊ ಕಳೆದ ವಾರ ನಾಂಕಿಂಗ್‌ಗೆ ಬಂದು, ತಮ್ಮ ಕೈಗೊಂಬೆ ಸರಕಾರದ ಅಧಿಪತಿ ವಾಂಗ್‌ಚಿಂಗ್ ವೇಯ ಸಂಗಡ ಮಾತುಕತೆಯಾಡಿ ಹೋದರು ಈ ಸಂಬಂಧದಲ್ಲಿ ಟೋಕಿಯೋ ಆಕಾಶವಾಣಿಯಲ್ಲಿ ಒಂದು ಘೋಷಣೆ ಹೊರಟಿದ್ದು ಜಪಾನು ಚೀನದಲ್ಲಿ ತನಗಿದ್ದ ವಿಶೇಷಾಧಿಕಾರವನ್ನು ಬಿಟ್ಟುಕೊಡುವ, ನಾಂಕಿಂಗ್‌ನಲ್ಲಿರುವ ವಾಂಗ್‌ಚಿಂಗ್ ವೇ ಸರಕಾರವನ್ನು ಬಲಪಡಿಸುವ ಹಾಗೂ ಚೀನ ಜಪಾನುಗಳಲ್ಲಿ ಸಹಕಾರ ಹೆಚ್ಚುವಂತೆ ಮಾಡುವ ಹಾಗೂ ಚೀನೀ ಜನರ ಆಸ್ತಿಪಾಸ್ತಿಗಳನ್ನು ನಾಂಕಿಂಗ್ ಸರಕಾರಕ್ಕೆ ಒಪ್ಪಿಸುವ ವಿಚಾರ ಇಲ್ಲಿ ಮಾತನಾಡಲಾಯಿತೆಂದು ಅದರಲ್ಲಿ ಹೇಳಲಾಗಿದೆ ಅಂತೂ ಇತ್ತೀಚೆಯ ಚೀನದ ಯುದ್ಧ ಪರಿಸ್ಥಿತಿಯನ್ನು ಗಮನಿಸಿದರೆ, ಚೀನವು ಈಗ ದುರ್ಬಲವಾಗಿದೆಯೆಂದೂ, ಸಾಕಷ್ಟು ಸೌಕರ್ಯ ಸಾಧನಗಳಿಲ್ಲದೆ ಚೀನಿಯರು ಯುದ್ಧ ಹೂಡಲು ಸಮರ್ಥರಾಗಿಲ್ಲವೆಂದೂ, ಲಕ್ಷಾಂತರ ಮಂದಿ ಅಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿರುವರೆಂದೂ ತಿಳಿದು ಬರುವುದು ಹೀಗೆಂದರೆ ಮಿತ್ರರಾಷ್ಟ್ರಗಳು ಚೀನಕ್ಕೆ ಕೊಡುವ ಸಹಾಯವು ಸಾಕಷ್ಟಿಲ್ಲವೆಂದೇ ಹೇಳಬೇಕು ಆದರೆ ಈಗ ಫೆಸಿಫಿಕ್ಕಿನಲ್ಲಿ ಮಿತ್ರರು ಸೈನ್ಯ ಸಂಗ್ರಹಿಸಿ ಜಪಾನಿನ ಮೇಲೆ ಎರಗುವ ಹಂಚಿಕೆಹೂಡುತ್ತಿದ್ದಾರೆ, ಅಮೆರಿಕದ ೧೪ನೇ ವಿಮಾನ ದಳವು ಚೀನದಲ್ಲಿ ಪುನರ್ಘಟಿತವಾಗುತ್ತಿದೆ, ಹೀಗಾಗಿ ಜಪಾನು ಕೊನೆಗೊಮ್ಮೆ ಚೀನದ ಯುದ್ಧವನ್ನು ಕೊನೆಗಾಣಿಸಲೇಬೇಕೆಂದು ಈಗ ನಿರ್ಧರಿಸಲೂ ಬಹುದು ಈ ಸಂದರ್ಭದಲ್ಲಿ ಕಂಗಾಲಾದ ಚೀನವನ್ನು, ನಾಲ್ಕು ದಿಕ್ಕುಗಳಿಂದಲೂ ಮುತ್ತಬಹುದು ಆಗ ಭಾರತದ ಮೇಲೆಯೂ ಧಾಳಿಯಿಟ್ಟು ಚೀನಕ್ಕೆ ಯಾವ ಕಡೆಯಿಂದಲೂ ಸಹಾಯ ಸಿಗದಂತೆ ಮಾಡಬಹುದು ಭಾರತದಲ್ಲಿ, ಅನೇಕ ಜಿ ಟಿ ಘ್ ಅನೇಕ್ ಸೈನಿಕರದ್ದು ಬರ್ಮಾಕ್ಕೆ ಆಗಾಗ ಧಾಳಿಯಿಡುತ್ತಿದ್ದಾರೆ, ಭಾರತದ ಹಲವು ಕಾರ್ಖಾನೆಗಳು ಜಪಾನರೆದುರು ಹೋರಾಡಲು ಭಾರೀ ಯುದ್ಧ ಸಾಮಗ್ರಿ ತಯಾರಿಸುತ್ತಿವೆ ಹೀಗಿರುವಾಗ ಜಪಾನು ಕೊನೆಗೊಮ್ಮೆ ಚೀನವನ್ನು ಸಂಪೂರ್ಣ ಸದೆಬಡಿಯಬೇಕಾದರೆ ಭಾರತದತ್ತ ಹಾರಿ ಬೀಳಲೇ ಬೇಕು, ಒಂದು ಕಲ್ಲಿನಿಂದ ಎರಡು ಹಣ್ಣು ಉದುರಿಸುವ ಸಾಹಸಕ್ಕೆ ಜಪಾನು ಕೈ ಹಾಕಲಿಕ್ಕಿಲ್ಲೆಂದೂ ಹೇಗೆ ಹೇಳುವುದು?

ಹೊಸ ಸುದ್ದಿಗಳು

ಡೊನೆಟ್ಸ್ ನದಿ ತೀರದಲ್ಲಿ ಜರ್ಮನರು ಭಾರೀ ಕಾಳಗ ಪ್ರಾರಂಭಿಸಿರುವರು ಬೆಲೆಗರೋಡವನ್ನು ಜರ್ಮನರು ಈಗಾಗಲೇ ಸ್ವಾಧೀನಪಡಿಸಿಕೊಂಡಿದ್ದು ಹಿಮ ಬೀಳುವ ಮುನ್ನ ಸೇತುವೆ ಕಟ್ಟುವುದು ಅವರ ಉದ್ದೇಶವೆಂದೊಂದು ಸುದ್ದಿ ಒಂದಿದೆ ಮಧ್ಯ ರಣಭೂಮಿಯಲ್ಲಿ ರಶ್ಯನರು ಸ್ಮೊಲೆನ್‌ಸ್ಕ ಕಡೆಗೆ ಎರಡು ದಿಕ್ಕಿನಿಂದ ಮುಂದೆ ಸಾಗಿರುವರು ವಿಯಾಸ್ಮಾ ಪ್ರದೇಶದಲ್ಲಿಯೂ ಜರ್ಮನರ ಧಾಳಿಯಿದೆ ವ್ಯಾಜ್ಮಾ ಸ್ಮೊಲೆನಸ್ಕ ರಸ್ತೆಯ ಅರ್ಧ ಭಾಗ ರಶ್ಯದ ವಶವಾಗಿದೆ ಕೂಬಾನವಲ್ಲಿಯೂ ಕಾಳಗ ಪ್ರಾರಂಭವಾಗಿದೆ ಜರ್ಮನರ ಧಾಳಿ ದಿನದಿನಕ್ಕೆ ಉಗ್ರವಾಗುತ್ತಿದೆ

ಟುನಿಶಿಯದ ದಕ್ಷಿಣ ಈಗ ಹೊಡೆಗಿರುವಂತೆ ತೋರುತ್ತದೆ ಮಾರೆತ ವ್ಯೂಹವನ್ನು ಬೇಧಿಸಲು ಮಿತ್ರ ಸೈನಿಕರು ಪ್ರಬಲ ಸಾಹಸ ಮಾಡುತ್ತಿರುವರು ಅಮೆರಿಕನ್ ಸೈನಿಕರು ಮೆಕ್ನಾಸಿಯನ್ನು ವಶಮಾಡಿಕೊಂಡು ಮುಂದೆ ಕೆಲವು ಮೈಲು ನುಗ್ಗಿರುವರು ಅಷ್ಟೆಮ ದಳವು ಕೂಡಾ ಗ್ರಿಲೋ ಮ್ಯಾರೆತ್ ಪಕ್ಕಿ ದಾಟಿ ಗೆಬ್ಸ್ ಸಮುದ್ರದ ಕಡೆಗೆ ರೋಮೆಲನ ಸೈನ್ಯದ ಹಿಂಬದಿಯಿಂದ ಧಾಳಿಯಿಡಲು ಹೊರಟಿದೆ



ನಂಬಿ ನಂಬಿ
ತೆಗೆದು
ಕೊಳ್ಳಲು
ದಮ್ಮಿನ ಮೇಲೆ
ಒಂದೇ ಉಪಾಯ
ಪುರೋಹಿತ ಶ್ವಾಸಹಾರಿ
ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್ 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ 2-12-0, ರೂ 4-8-0, ರೂ ೬ ಕ್ರಯಕ್ಕೆ ದೊರಕುವುದು
ತಯಾರಿಸುವವರು. ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ಸ್ವದೇಶಾಭಿಮಾನಿ

ತಾರೀಖು 26—8—1943

ಕ್ರಯ ನಿರ್ಬಂಧ

ನಮ್ಮ ಜಿಲ್ಲೆಯ ಜನರ ಮುಖ್ಯ ಆಹಾರವಾದ ಅಕ್ಕಿಯ ಕ್ರಯವು ದಿನದಿಂದ ದಿನಕ್ಕೆ ಏರುತ್ತಾ ಹೋಗಿ, ಬಡ ಜನರಿಗೆ, ಕೂಲಿ ಕೆಲಸಗಾರರಿಗೆ, ನಿಶ್ಚಿತ ಸಂಬಳದವರಿಗೆ—ಹೀಗೆ ಜನತೆಯಲ್ಲಿ ಬಹು ಮಂದಿಗೆ—ಉಂಟಾದ ಸಂಕಷ್ಟವನ್ನು ಪ್ರಸ್ತಾಪಿಸುತ್ತಾ, ಇಂದಿನ ಪರಿಸ್ಥಿತಿಯ ಗಂಭೀರತೆಯನ್ನು ತಿಳಿಸಿ, 'ಅಧಿಕಾರೀ ವರ್ಗದವರು, ಮಾನ್ಯ ಕಲೆಕ್ಟರರು ಜಿಲ್ಲೆಯ ಹೊರಗೆ ಅಕ್ಕಿ ಭತ್ತ ಹೋಗಕೂಡದೆಂದು ನಿರ್ಬಂಧಿಸಿದಂತೆ, ಹೀಗೆ ವಿಷಮವಾಗುತ್ತಿರುವ ಅಕ್ಕಿ ಭತ್ತಗಳ ಕ್ರಯಕ್ಕೂ ಬೇಗನೇ ಒಂದು ಮಿತಿ ಹಾಕಬಾರದೇ?' ಎಂದು ನಾವು ಕಳೆದ ಸಲದ ಸಂಚಿಕೆಯಲ್ಲಿ ವಿನಂತಿಸಿದ್ದೆವು; ನಮ್ಮ ವಿನಂತಿ ಮಾನ್ಯವಾಯಿತೆಂಬುದು ತುಂಬಾ ಸಂತೋಷ; ಜಿಲ್ಲೆಯ ಅಧಿಕಾರಿಗಳು ಅಕ್ಕಿ ಭತ್ತಗಳ ಕ್ರಯವನ್ನು ನಿರ್ಬಂಧಿಸಿದ್ದರಿಂದ ನಮ್ಮ ಜಿಲ್ಲೆಯ ಬಹು ಜನರು, ಹೆಚ್ಚಾಗಿ ಬಡ ಜನರು, ನಮ್ಮ ಈ ಸಂತೋಷದಲ್ಲಿ ಸಹಭಾಗಿಗಳಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ನಾವೀ ಸಂದರ್ಭದಲ್ಲಿ ನಮ್ಮ ಧನ್ಯವಾದಗಳನ್ನರ್ಪಿಸುತ್ತೇವೆ.

ಆಹಾರವೊಂದನ್ನುಬಿಟ್ಟು, ಮಿಕ್ಕ ಯಾವುದೇ ವಸ್ತುವಿಗೆ ಕ್ರಯ ಹೆಚ್ಚಿದರೂ ಅದರಿಂದ ಜನರು ಚಡಪಡಿಸಿದಂತಾಗುವುದಿಲ್ಲ. ಅಲ್ಪ ಸ್ವಲ್ಪ ತೊಂದರೆಯುಂಟಾಗುತ್ತದೆಂಬುದೇನೋ ಸಹಜ; ಯುದ್ಧಕಾಲದಲ್ಲಿ ಅಂಥಾ ಸಂಕಷ್ಟಗಳನ್ನು ನಾವು ಸಹಿಸಿಕೊಳ್ಳಲೇಬೇಕಾಗುವುದು. ಆದರೆ ಯುದ್ಧ ಕಾಲವೆಂದು ಯಾರಿಗೂ ಉಪವಾಸ ಬೀಳಲು ಸಾಧ್ಯವಿಲ್ಲ. ಪ್ರಜೆಗಳು ಹೊಟ್ಟೆಗಿಲ್ಲದೆ ನರಳುವ ಪರಿಸ್ಥಿತಿಗೆ ಬಂದಾಗ ಯುದ್ಧವನ್ನು ಜಯಿಸುವುದೂ ಸಾಧ್ಯವಿಲ್ಲ. ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಜನರಿಗೆ ಸಾಕಷ್ಟು ಆಹಾರ, ಮುಖ್ಯವಾಗಿ ಅಕ್ಕಿ, ಭತ್ತಗಳು, ಇದೆಯೆಂದು ಲೆಕ್ಕಪತ್ರಗಳ ಆಧಾರದಿಂದ ತಿಳಿದುಬಂದರೂ, ಜನರ ಈ ಆಹಾರ ಸಾಮಗ್ರಿಗೆ ಮಿತಿಮೀರಿ ಕ್ರಯ ಏರಿಸಿ ಬಡಜನರನ್ನು ಗೋಳಿಡಿಸುವುದರಲ್ಲಿ ಅರ್ಥವಿಲ್ಲ. ಈಗ ನಿರ್ಬಂಧಿತವಾದ ಕ್ರಯವಾದರೂ, ಯುದ್ಧಕ್ಕಿಂತ ಮೊದಲಿನ ಕ್ರಯದ ಇಮ್ಮಡಿಯೇ ಇರುವುದರಿಂದ,—ಭೂಮಾಲಿಕರಾಗಲಿ ತೀರಾ ನಷ್ಟ ಸಂಕಷ್ಟಗಳಿಗೆ ಬಲಿಯಾದಂತೆ ಆಗುವುದಿಲ್ಲ. ಆಹಾರವಿಲ್ಲದೆ ನರಳುತ್ತಿದ್ದ ಸೋದರ ಮಾನವ ವರ್ಗದ ಕಡೆಗೆ ನೋಡಿ—ಇತರ ಉತ್ಪತ್ತಿಗಾರರಂತೆ ತಮಗಾದರೂ ಈ ಸಂದರ್ಭದಲ್ಲಿ ಅಧಿಕಾಧಿಕ ಲಾಭ ಮಾಡಲಾಗಲಿಲ್ಲವಲ್ಲಾ—ಎಂಬೀ ಸ್ವಲ್ಪ ಮಟ್ಟಿನ ಅಸಂತೋಷವನ್ನು ನಮ್ಮ ಜಿಲ್ಲೆಯ ಭೂಮಾಲಿಕರು ಸಹಿಸಿಕೊಳ್ಳುವಷ್ಟು ವಿಶಾಲ ಹೃದಯವುಳ್ಳವರಾಗುವರೆಂದು ನಮ್ಮ ಭರವಸೆಯಾಗಿದೆ; ಇದು ನಮ್ಮ ವಿನಂತಿಯೂ ಆಗಿದೆ.

ಅಕ್ಕಿ ಭತ್ತಗಳಿಗೆ ಕ್ರಯ ನಿರ್ಬಂಧವಾಗಿ ಬಹು ಜನರಿಗೆ, ಅವರಲ್ಲಿಯೂ ಹೆಚ್ಚಾಗಿ ಬಡವರಿಗೆ ತುಂಬಾ ಸಂಕಷ್ಟ ಪರಿಹಾರವಾಯಿತೇನೋ ನಿಜ; ಆದರೆ ಮಿಕ್ಕ ಆಹಾರ ಸಾಮಗ್ರಿಗಳ ಕ್ರಯ ಮೆಣಸು, ಹುಳಿ ಮೊದಲಾದುವುಗಳ ಕ್ರಯವು ಈಗಾಗಲೇ ನಾಲ್ಕೈದು ಪಾಲಿಗಿಂತ ಹೆಚ್ಚಾಗಿ ಏರಿದ್ದು, ಇನ್ನೂ ಏರುತ್ತಲೇ ಇದೆ. ಆಹಾರವೆನ್ನುವಾಗ ಇವುಗಳೂ ಪ್ರಾಮುಖ್ಯವಾದವುಗಳೇ. ಇವುಗಳಿಲ್ಲದೆ ಊಟ ಪೂರೈಸಲಾರದು. ಹೀಗಾಗಿ ಇನ್ನು ಮುಂದೆ—ಬೇಗನೇ ಅವುಗಳ ಕ್ರಯಕ್ಕೂ ಒಂದು ಮಿತಿಯನ್ನು ಅಧಿಕಾರಿಗಳು ಮಾಡುವುದು ಯೋಗ್ಯವಿದೆ; ಇದೇ ಸಂದರ್ಭದಲ್ಲಿ ಭೂಮಾಲಿಕರ ಸಲುವಾಗಿ ಅಕ್ಕಿ ಭತ್ತ ಕ್ರಯ ತಗ್ಗಿದ್ದರಿಂದ, ಅವರ ನಿತ್ಯೋಪಯೋಗೀ ಸಾಧನಗಳು, ಹಾರೆ, ಗುದ್ದಲಿ, ಪಿಕ್ಕಾಸು ಮೊದಲಾದ ಕಬ್ಬಿಣ ಸಾಮಾನುಗಳೂ ಒಂದು ನಿಶ್ಚಿತ ಕ್ರಯದಲ್ಲಿ ದೊರಕುವಂತೆ ಅಧಿಕಾರಿಗಳು ಮಾಡುವುದೂ ಅತ್ಯಂತ ಅವಶ್ಯ. ಈ ಸಂದರ್ಭದಲ್ಲಿ ಆಹಾರದ ನಂತರದ ಅವಶ್ಯವೆನಿಸಿದ ಬಟ್ಟೆಯ ಕ್ರಯಕ್ಕೂ ಒಂದು ಮಿತಿ ಹಾಕುವುದು ನ್ಯಾಯವಾಗಿದೆ ಮತ್ತು ಅಗತ್ಯವಾಗಿದೆ.

ಸ್ವದೇಶ ಸಮಾಚಾರ

ಮುಖಂಡರಿಗೆ ವೈಸರಾಯರ ಉತ್ತರ

ಮುಂಬಯಿಯಲ್ಲಿ ಸೇರಿದ ಮುಖಂಡರ ಪರಿಷತ್ತಿನ ಪರವಾಗಿ ವೈಸರಾಯರ ಕಡೆಗೆ ಮುಂದಿನ ತಿಂಗಳ ಮೊದಲನೇ ವಾರದಲ್ಲಿ ಒಂದು ಶಿಷ್ಟಮಂಡಳ ಹೋಗುವುದಾಗಿ ತಿಳಿಯುತ್ತದೆ. ಈ ಮುಖಂಡ ಪರಿಷತ್ತಿನ ನಿರ್ಣಯದ ಕುರಿತು ವೈಸರಾಯರು ಡಾ. ಜಯಕರರಿಗೆ ಬರೆದ ಉತ್ತರದ ಕುರಿತು ಜಯಕರರ ಮನೆಯಲ್ಲಿ ಮುಖಂಡರು ತಾ. ೨೩ರಂದು ಕೂಡಿ ಚರ್ಚಿಸಿದರು. ವೈಸರಾಯರಲ್ಲಿ ಹೋಗುವ ಶಿಷ್ಟಮಂಡಳದಲ್ಲಿ ಯಾರು ಯಾರಿರಬೇಕೆಂದು ಚರ್ಚಿಸಲಾಯಿತು.

ಶರತ್ ಚಂದ್ರ ಬೋಸ್

ಇವರನ್ನು ಮಡಿಕೇರಿಯಲ್ಲಿಟ್ಟಿದ್ದು, ಅವರನ್ನು ಹಾಗೂ ಅವರೊಡನಿದ್ದ ಶಂಕರಲಾಲ ಬೇಂಕರರನ್ನು, ಮಡಿಕೇರಿಯಿಂದ ಮೈಸೂರು ಮೂಲಕ ಬೆಂಗಳೂರಿಗೆ ತಂದು ಉಟಕಮಂಡಕ್ಕೆ ಒಯ್ಯಲಾಗಿದೆ. ಅಲ್ಲಿಂದ ಅವರನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗಿ ಸ್ಥಾನಬದ್ಧತೆಯಲ್ಲಿಡಲಾಗುವುದೆಂದು ತಿಳಿಯುತ್ತದೆ.

'ಸರಕಾರವು ಕ್ರಾಂತಿಯನ್ನು ಹುರಿದುಂಬಿಸುತ್ತದೆ'

ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ ಪಕ್ಷದ ಶಂಭು ದಯಾಳಮಿಶ್ರರು, ಸರಕಾರವು ಪೀರ್ ಪಗಾರೋರನ್ನು ಫಾಶಿಗೆ ಕೊಟ್ಟು ಭಾರತದ ಜನರನ್ನು ಕ್ರಾಂತಿಗೆ ಹುರಿದುಂಬಿಸುತ್ತದೆ ಎಂಬ ವಿಷಯವನ್ನು ಚರ್ಚಿಸಲು ಸೂಚನೆ ತಂದರು. ಸರಕಾರದ ಪರವಾಗಿ ತ್ರಿವೇದಿಯವರು ಆಕ್ಷೇಪಿಸಿದರು. ಅಧ್ಯಕ್ಷರು ಸೂಚನೆ ಮಂಡಿಸಲು ಅಪ್ಪಣೆಯಿಲ್ಲವೆಂದು ಹೇಳಿದರು.

'SWADESHABHIMANI'

Revised Rates of Advertisement

In accordance with the amendments to the Newspaper Control Order an increase of 50% on the present rates of advertisement of 'Swadeshabhimani' will take effect from 1st. April 1943 on which date the new order will come into force.

Advt. Manager.

ಮಿಯಾನವಾಲಿ ಜೈಲಿನಲ್ಲಿ ೨೧ ದಿನಗಳ ಉಪವಾಸ

ಮಹಾತ್ಮರ ಉಪವಾಸದ ಕಾಲದಲ್ಲಿ ಸಹಾನುಭೂತಿಪರ ಉಪವಾಸವನ್ನು ಲಾಹೋರಿನ ಮಿಯಾನವಾಲಿ ಜೈಲಿನಲ್ಲಿ ಶ್ರೀಗಳಾದ ಮುನ್ಷಿ ಹರಿಲಾಲ ಎಂ. ಎಲ್. ಎ. (ಕಾಂಗ್ರೆಸ್) ಮತ್ತು ಸ್ವಾಮಿ ಕಿಶನದಾಸ ಇವರು ಕೈಕೊಂಡಿದ್ದು, ಅದರಿಂದ ಅವರ ಆರೋಗ್ಯಕ್ಕೇನೂ ತೊಂದರೆಯಾಗದ್ದರಿಂದ ಆ ಕಾಲದಲ್ಲಿ ಅದನ್ನು ಪ್ರಕಟಿಸಲಿಲ್ಲವೆಂದು ಸರಕಾರ ತಿಳಿಸಿದೆ.

ಪಠ್ಯ ಪುಸ್ತಕಗಳನ್ನು ಬದಲಿಸಬಾರದು

ಅರ್ಧ ವಾರ್ಷಿಕ, ತ್ರೈಮಾಸಿಕ ಮೊದಲಾದ ಹಾಗು ಲಿಖಿತ ಪರೀಕ್ಷೆಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡಬೇಕೆಂದು ಕೇಂದ್ರ ಶಿಕ್ಷಣಖಾತೆಯವರು ಪ್ರಾಂತಿಕ ಸರಕಾರಗಳಿಗೆ ಹಾಗು ವಿಶ್ವವಿದ್ಯಾಲಯಗಳಿಗೆ ಸೂಚನೆ ಕಳಿಸಿದ್ದಾರೆ. ಮತ್ತು ಯಾವುದೇ ಅವಧಿಯಲ್ಲಿ ಪಠ್ಯಪುಸ್ತಕಗಳನ್ನು ಬದಲಿಸಬಾರದೆಂದೂ, ಪಾಸಾದ ವಿದ್ಯಾರ್ಥಿಗಳ ಪುಸ್ತಕಗಳನ್ನು ಯೋಗ್ಯ ಬೆಲೆಗೆ ತಗೆದುಕೊಳ್ಳಬೇಕೆಂದೂ ಇತರ ಪುಸ್ತಕಗಳ ಸಂಖ್ಯೆಯನ್ನೂ ಕಡಿಮೆಮಾಡಬೇಕೆಂದೂ ಸೂಚಿಸಲಾಗಿದೆ.

ಗಾಂಧೀ ಕತೆ

ಸಾಯುವಾಗಲೂ ಸವಾಲ್

ಗಾಂಧೀಜೀ ಹಲವರು ಬಾರಿ ಉಪವಾಸಕ್ಕೆ ಶರಣಾಗಿದ್ದಾರೆ. ಕಡೆಯ ಹಾದಿ ಎಂದು. ಹಾಗೇ ಒಂದು ಸಲ ಉಪವಾಸದಲ್ಲಿ ಸಾಯುತ್ತಿದ್ದೆ. ಡಾ। ಬಿಧನಚಂದ್ರರಾಯರೇ ಅವರ ಉಪಚಾರ ಮಾಡುತ್ತಿದ್ದರು. ಹಾಗೇ ಮಾತನಾಡುತ್ತ ಆಡುತ್ತ ಡಾ। ರಾಯ್ ಗಾಂಧಿಜಿಗೆ ಸವಾಲ್ ಹಾಕಿದರು. 'ಬಂಗಾಲಿಯಲ್ಲಿ ನಿಮ್ಮ ರುಜು ಮಾಡಿ ನೋಡೋಣ'. ಗಾಂಧಿಜಿಗೆ ಬಂಗಾಲಿ ಬಾರದೆಂದೇ ಬಿಧನಚಂದ್ರರಾಯರ ನಂಬುಗೆ. 'ಮಾಡಿದರೆ ಏನು ಕೊಡುತ್ತಿ' ಎಂದು ಕೇಳಿದರು ಗಾಂಧಿಜಿ.

ಬಂಗಾಲಿಯಲ್ಲಿ ಹೆಸರು ಬರೆದರೆ ಇಪ್ಪತ್ತೈದು ರೂಪಾಯಿ ಕೊಡುತ್ತೇನೆಂದು ರಾಯ್. ಪಂದ್ಯ ಪಕ್ಕಾಯಿತು. ೪ ಗಳಿಗೆ ಡಾ। ರಾಯ್ ದಿಗ್ಭ್ರಾಂತರಾದರು. ಗಾಂಧಿಜಿ ಗುಂಡಾಗಿ ತಮ್ಮ ಹೆಸರನ್ನು ಶುದ್ಧ ಬಂಗಾಲಿಯಲ್ಲಿ ಬರೆದುಕೊಟ್ಟರು. ಇಪ್ಪತ್ತೈದು ರೂಪಾಯಿ ಕೊಟ್ಟು ಸುಮ್ಮನಾದರು ರಾಯ್.

"ಧುರೀಣರ ಬೇಡಿಕೆಗೆ ಒಪ್ಪಿರಿ"

ಮೆಂಚೆಸ್ಟರ ಗಾರ್ಡಿಯನ್ ಹಿತೋಕ್ತಿ

ಗಾಂಧಿಜಿಯವರು ತಮ್ಮ ಉಪವಾಸದಲ್ಲಿ ಮರಣಹೊಂದಲಿಲ್ಲೆಂಬುದು ಬ್ರಿಟನ್ ಭಾರತಗಳ ಸ್ನೇಹಸಂಬಂಧದ ದೃಷ್ಟಿಯಿಂದ ಸುದೈವದ ಸಂಗತಿಯೆಂದೇ ಹೇಳಬೇಕು ಎಂದು ಮೆಂಚೆಸ್ಟರ ಗಾರ್ಡಿಯನ್ ಪತ್ರಿಕೆಯು ಅಗ್ರಲೇಖನದಲ್ಲಿ ಬರೆಯುತ್ತದೆ—'ಆದರೆ ಪರಿಸ್ಥಿತಿ ಮಾತ್ರ ಹಾಗೆಯೆ ಇದೆಯೆಂದು ಹೇಳುವುದು ತಪ್ಪು. ಸಾವಿರಗಟ್ಟಲೆ ರಾಜಕೀಯ ಕ್ರಾಂತಿಕಾರರನ್ನು ಸೆರೆಮನೆಯಲ್ಲಿ ನೂಕಿದಲು ಪರಿಸ್ಥಿತಿಯು ಹಾಗೆಯೆ ಉಳಿಯಬಹುದೆ? ಗಂಡಾಂತರದ ಭಯದಿಂದ ಕಾಣ್ಕಲೆ ವೇಪ್ರೋಪಾಯಗಳನ್ನು ಕೈಕೊಳ್ಳಬೇಕಾಯಿತೆಂದು ಸರಕಾರದವರು ಹೇಳುತ್ತಾರೆ. ಆದರೆ ಹೀಗೆ ಅನಿಶ್ಚಿತ ಕಾಲದ ವರೆಗೆ ದಬ್ಬಾಳಿಕೆಯನ್ನು ನಡೆಸುವುದು ನ್ಯಾಯವಲ್ಲ. ಕೊನೆಗಾದರೂ ಈ ಬಿಕ್ಕಟ್ಟನ್ನು ಸಾಮೋಪಾಯದಿಂದ ಬಿಡಿಸಲೇಬೇಕಾಗುವುದು. 'ವಿವಿಧ ಪಕ್ಷಗಳಲ್ಲಿ ಒಡಂಬಡಿಕೆಯನ್ನು ಮಾಡಿಸಿ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಿರುವ ಭಾರತದ ಧುರೀಣರಿಗಾದರೂ ಸರಕಾರದವರು ಅವಕಾಶಕೊಡುತ್ತಿಲ್ಲ. ಗಾಂಧಿಜಿಯವರನ್ನು ಕಾಂಗ್ರೆಸ್ ವರ್ಕಿಂಗ ಕಮಿಟಿಯವರೊಂದಿಗೆ ಇರಿಸಿರೆಂದು ಅವರು ಕೇಳಿಕೊಂಡಿದ್ದಾರೆ. ಇಷ್ಟಕ್ಕೂ ಒಪ್ಪಲಿಕ್ಕೆ ರಾಜನೀತಿಯಾಗಲಿ ಪ್ರತಿಷ್ಠೆಯಾಗಲಿ ಅಡ್ಡಬರುವುದೆ?' ಎಂದೂ ಅದು ಹೇಳಿರುವುದು.

ಮಂಗಳೂರು

ಶೋಚನೀಯ ನಿಧನ

ರಂಗೂನಿನಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದು ಇತ್ತೀಚೆಗೆ ಸ್ವದೇಶಕ್ಕೆ ಬಂದಿರುವ ಡಾ. ಕೆ. ಯು. ಜಿ. ರಾವ್ ಅವರ ಪತ್ನಿ ಶ್ರೀಮತಿ ಅಂಬಾ ಭವಾನೀ ಅಮ್ಮನವರು ಇದೇ ತಾ. ೧೮ರಲ್ಲಿ ಪರಂಧಾಮವನ್ನೈದಿದರೆಂದು ತಿಳಿಸಲು ವ್ಯಸನವಾಗುತ್ತದೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ.

ಕಯ್ಯೂರು ಮೊಕದ್ದಮೆ

ಯ ಮರಣದಂಡನೆಯ ಕುರಿತು, ಅಮೆರಿಯವರು ಪಾರ್ಲಿಮೆಂಟಿನಲ್ಲಿ ಉತ್ತರ ಕೊಡುತ್ತಾ—ಮೃತಪಟ್ಟ ಪೋಲೀಸನನ್ನು ಜನರು ನದಿಗೆ ನೂಕಿ, ಅವನು ಸಾಯುವ ವರೆಗೆ ಕಲ್ಲು ಬಿಸಾಡಿದರು,—ಎಂಬೀ ಆರೋಪವು ವಿಚಾರಿಸಲ್ಪಟ್ಟು ನಾಲ್ವರಿಗೆ ಮಾತ್ರ ದಂಡನೆ ವಿಧಿಸಲ್ಪಟ್ಟ ಕುರಿತು, 'ಪ್ರಾಣ ಹೋಗುವಂತೆ ಕಲ್ಲು ಬಿಸಾಡಿದವನು ಇಂಥವನೇ ಎಂದು ಕಂಡುಹಿಡಿವುದು ಕಠಿಣ; ಅವನು ವಿಚಾರಣೆಗೆ ನಿಲ್ಲಿಸಲ್ಪಟ್ಟವರಲ್ಲಿ ಇಲ್ಲದಿರಲೂ ಬಹುದು" ಎಂದು ತೀರ್ಪುಕೊಟ್ಟ ನ್ಯಾಯಾಧೀಶರು ಪಟ್ಟ ಅಭಿಪ್ರಾಯದ ಕುರಿತು ತಪ್ಪು ತಿಳುವಳಿಕೆಯಾಗಿದೆಯೆಂದು ಸಮರ್ಥಿಸುತ್ತಾ, 'ಇಂಥಾ ಸಂದರ್ಭಗಳಲ್ಲಿ ಎಲ್ಲರ ಉದ್ದೇಶವೂ ಇರುವುದರಿಂದ ಎಲ್ಲರೂ ತಪ್ಪುಗಾರರು ಆಗುತ್ತಾರೆ' ಎಂದರು!

ESTD. 1906.

Canara Bank, Limited

(Incorporated in British India with limited liability).

BALANCE SHEET AS ON 31st DECEMBER 1942

LIABILITIES

	Rs.	As.	Ps.
SUBSCRIBED CAPITAL: Rs. 20 lacs.			
Paid up Capital	14,96,072	8	0
Reserves	4,50,000	0	0
Deposits	1,45,50,502	7	1
Due to Bankers	13,50,000	0	0
Bills for collection as per contra	8,76,169	10	2
Liability for Foreign Bills negotiated	8,05,026	10	5
Sundries	10,51,464	10	11
Appropriation A/c.	2,062	3	8
Net Profits	1,53,310	2	10
Total Rs.	2,07,34,608	5	1

ASSETS

	Rs.	As.	Ps.
Fixed Capital Expenditure	1,00,182	13	2
ADVANCE TO CUSTOMERS:			
Secured by valuable securities	51,16,338	6	2
Secured by bills of Exchange etc.	24,36,563	11	11
Investments	65,65,374	15	7
Bills for collection	8,76,160	10	2
Liabilities of customers for foreign bills negotiated	8,05,026	10	5
Sundries	4,71,599	3	0
Cash on hand and at Call with Bankers	43,63,352	14	8
Total Rs.	2,07,34,608	5	1

ಜಿಲ್ಲಾ ಸಮಾಚಾರ

ಅಕ್ಕಿಭತ್ತಗಳ ಕ್ರಯ ನಿರ್ಬಂಧ

ಭತ್ತ ಅಕ್ಕಿಗಳ ಬೆಲೆ ನಿರ್ಬಂಧ

ದ. ಕ. ಜಿಲ್ಲಾ ಕಲೆಕ್ಟರರು ಡಿಫೆನ್ಸ್ ರೂಲಿನ ೭೫ ಎ. ನಿಬಂಧನೆಗನುಗುಣವಾಗಿ, ಜನರ ಜೀವನಾವಶ್ಯಕವಾದ ಅಕ್ಕಿಭತ್ತಗಳ ಬೆಲೆಯನ್ನು ನಿರ್ಬಂಧಿಸುವ ಸಲುವಾಗಿ, ನಮ್ಮ ಜಿಲ್ಲೆಯಲ್ಲಿ ವ್ಯಾಪಾರಕ್ಕೆಂದು ಯಾವ ಯಾವ ಕಡೆ ಭತ್ತ ಅಕ್ಕಿಗಳ ಸಂಗ್ರಹವಿದೆಯೋ, ಆ ಸಂಗ್ರಹವನ್ನೆಲ್ಲಾ ಪ್ರಥಮತಃ ಸ್ವಾಧೀನ ಪಡಿಸಿಕೊಂಡು ಆ ಅಕ್ಕಿಭತ್ತಗಳು ಕಲೆಕ್ಟರರಿಂದ, ರಖಂ ವ್ಯಾಪಾರಿಗಳಿಗೆ ಹಾಗೂ ಚಿಲ್ಲರೆ ವ್ಯಾಪಾರಿಗಳಿಗೆ ಸರಿಯಾದ ಲೆಕ್ಕ ಪತ್ರಗಳ ಮೂಲಕ ವ್ಯಾಪಾರಕ್ಕಾಗಿ ಕೊಡಲ್ಪಡುವುದು. ಚಿಲ್ಲರೆ ವ್ಯಾಪಾರಿಗಳು ಒಂದು ಸಲದ ವ್ಯಾಪಾರದಲ್ಲಿ ಓರ್ವ ವ್ಯಕ್ತಿಗೆ ಒಂದು ಮುಡಿ ಅಕ್ಕಿಗಿಂತ ಹೆಚ್ಚು ಕೊಡಕೂಡದು. ಅವರು ಅದಕ್ಕೆ ಸರಿಯಾದ ಲೆಕ್ಕಪತ್ರ ರಶೀದಿಗಳನ್ನು ಇಡಬೇಕು. ಚಿಲ್ಲರೆ ವ್ಯಾಪಾರಿಗಳು ಅವರ ಅಂಗಡಿಯ ಎದುರುಗಡೆ ಎಲ್ಲರಿಗೂ ಕಾಣುವ ಸ್ಥಳದಲ್ಲಿ ಅವರಲ್ಲಿರುವ ಭತ್ತ ಅಕ್ಕಿಗಳ ಸಂಗ್ರಹ ಮತ್ತು ಅವುಗಳನ್ನು ಮಾರುವ ಕ್ರಯದ ಪಟ್ಟಿಯನ್ನು ಹಚ್ಚಬೇಕು.

ಚಿಲ್ಲರೆ ವ್ಯಾಪಾರಿಗಳಿಗೆ ನಿಶ್ಚಯಿಸಿದ ಕ್ರಯದ ಪಟ್ಟಿ ಹೀಗಿದೆ:—ಸುಗ್ಗಿ ಮತ್ತು ರಾಶಿ ಭತ್ತ ಮುಡಿ ೧ರ ರೂ. ೪-೩-೦; ಗುಡ್ಡು ಮತ್ತು ಏಣೆಲು ಭತ್ತ ಮುಡಿ ೧ರ ರೂ. ೪-೪-೦; ಮಸ್ಕತಿ ಭತ್ತ ಮುಡಿ ೧ರ ರೂ. ೪-೬-೦. ಸುಗ್ಗಿ ಮತ್ತು ರಾಶಿ ಅಕ್ಕಿ ಮುಡಿ ೧ರ ರೂ. ೮-೧೩-೬; ಸುಗ್ಗಿ ಮತ್ತು ರಾಶಿ ಸೇರು ೧ರ ರೂ. ೦-೩-೫; ಗುಡ್ಡು ಅಕ್ಕಿ ಮುಡಿ ೧ರ ರೂ. ೯-೫-೬; ಗುಡ್ಡು ಅಕ್ಕಿ ಸೇರು ಒಂದರ ರೂ. ೦-೩-೭; ಮಸ್ಕತ್ತಿ ಅಕ್ಕಿ ಮುಡಿ ೧ರ ರೂ. ೯-೧೩-೬; ಮಸ್ಕತಿ ಅಕ್ಕಿ ಸೇರು ೧ರ ರೂ. ೦-೩-೯. ರಖಂ ವ್ಯಾಪಾರಿಗಳು ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟ ಮಾಡಲು ನಿಶ್ಚಯಿಸಿದ ಕ್ರಯ ಪಟ್ಟಿ ಇಂತಿದೆ: ಸುಗ್ಗಿ ಮತ್ತು ರಾಶಿ ಭತ್ತ ಮುಡಿ ೧ರ ರೂ. ೪-೦-೦; ಗುಡ್ಡು ಮತ್ತು ಏಣೆಲ ಭತ್ತ ಮುಡಿ ೧ರ ರೂ. ೪-೨-೦; ಮಸ್ಕತ್ತಿ ಭತ್ತ ಮುಡಿ ೧ರ ರೂ. ೪-೪-೦. ಸುಗ್ಗಿ ಮತ್ತು ರಾಶಿ ಅಕ್ಕಿ ಮುಡಿ ೧ರ ರೂ. ೮-೯-೬; ಗುಡ್ಡು ಅಕ್ಕಿ ಮುಡಿ ೧ರ ರೂ. ೯-೧-೬; ಮಸ್ಕತ್ತಿ ಅಕ್ಕಿ ಮುಡಿ ೧ರ ರೂ. ೯-೯-೬.

ಮೇಲಿನ ನಿರ್ಬಂಧಕ್ಕೆ ಯಾರಾದರೂ ತಪ್ಪಿ ನಡೆದರೆ, ಅವರಲ್ಲಿರುವ ಅಕ್ಕಿ ಭತ್ತ ಸಂಗ್ರಹಗಳನ್ನೆಲ್ಲಾ ಮುಟ್ಟುಗೋಲು ಹಾಕಲಾಗುವುದು ಮಾತ್ರವಲ್ಲದೆ ಅವರ ಮೇಲೆ ಕಾನೂನು ಜಾರಿ ಮಾಡಲಾಗುವುದು ಎಂದು, ಪ್ರೈಸ್ ಎಡ್ವೈಸರಿ ಕಮಿಟಿ ಚೇರ್‌ಮೇನರೂ ಮಂಗಳೂರು ರೆವೆನ್ಯೂ ಡಿವಿಜನಲ್ ಆಫೀಸರರೂ ಆದ ಶ್ರೀ ಬಿ. ಜೂಗಪ್ಪ ಇವರು ಪ್ರಕಟಿಸಿರುತ್ತಾರೆ.

ಪ್ರತಿಬಂಧಕಾಜ್ಞೆ

ಜಿಲ್ಲಾ ಕಲೆಕ್ಟರರವರು, ಈ ಜಿಲ್ಲೆಯಲ್ಲಿ ಯಾರೂ ಸಾರ್ವಜನಿಕ ಸಭೆ, ಕೂಟ, ಮೆರವಣಿಗೆಗಳನ್ನು ಸೇರಿಸಬಾರದಾಗಿ ಕಳೆದ ಸಪ್ಟಂಬರ ೧ರಿಂದ ಮೊದಲ್ಗೊಂಡು ವಿಧಿಸಿದ ನಿರ್ಬಂಧಕಾಜ್ಞೆಗೆ ಇದೇ ಮಾರ್ಚಿ ತಾ. ೧೬ರಿಂದ ಪುನಃ ಎರಡು ತಿಂಗಳ ವರೆಗೆ ಮುಂದುವರಿಸಿರುವರು.

ದ. ಕ. ಬೋರ್ಡ್ ಸಭೆ

ತಾ. ೨೨ರಂದು ಪ್ರೆಸಿಡೆಂಟ್ ಡಾ। ವಿಠ್ಠಲ ಶೆಟ್ರು ಪುನಃ ಆರೋಗ್ಯ ಲಾಭಕ್ಕಾಗಿ ಕೊಯಂಬುತ್ತೂರಿಗೆ ಹೋಗಿರುವುದರಿಂದ ವೈಸ್ ಪ್ರೆಸಿಡೆಂಟ್ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ಥಳೀಯ ಸಂಸ್ಥೆಗಳ ಕಟ್ಟಡಗಳಲ್ಲಿ ಏರಿಸಲ್ಪಟ್ಟಿರುವ ರಾಷ್ಟ್ರಧ್ವಜವನ್ನು ಕಿತ್ತೊಗೆಯಬೇಕೆಂದು ಬಂದ ಪ್ರಾಂತಿಕ ಸರಕಾರದ ಅಪ್ಪಣೆಯನ್ನು ಈ ಬೋರ್ಡು ಮಾನ್ಯ ಮಾಡಿತು. ಶ್ರೀ ಜತ್ತಪ್ಪ ರೈಗಳು ಈ ನಿರ್ಣಯಕ್ಕೆ ತನ್ನ ವಿರೋಧ ಸೂಚಿಸಿದರು. ೧೯೪೩-೪೪ನೇ ಇಸ್ವಿಯ ಬೋರ್ಡಿನ ಬಜೆಟಿನಲ್ಲಿ ಸುಮಾರು ರೂ. ೧೫೧೪೫ರಷ್ಟು ಖರ್ಚು ಕಡಿಮೆ ಮಾಡಬೇಕೆಂದು ಬಂದ ಸರಕಾರದ ಸೂಚನೆಯಂತೆ ಈ ಕೆಳಗಿನ ಬಾಬುಗಳಲ್ಲಿ ಖರ್ಚು ಕಡಿಮೆ ಮಾಡಬೇಕೆಂದು ಬೋರ್ಡ್ ನಿರ್ಣಯಿಸಿದೆ:— ಜನರಲ್ ಸಿಬಂದಿಯ ಖರ್ಚಿನಲ್ಲಿ ರೂ. ೬೦೦; ಪಂಚಾಯಿತು ಆಫೀಸಿನ ವೆಚ್ಚದಲ್ಲಿ ರೂ. ೧೪೦೦ ಉಡುಪಿ-ಕಾಸರಗೋಡು ಸೆಕೆಂಡರಿ ಶಾಲೆಗಳ ಹೊರತಾಗಿ, ಇತರ ಬೋರ್ಡ್ ಸೆಕೆಂಡರಿ ಶಾಲೆಗಳ ನಾಲ್ಕನೇ ದರ್ಜೆಗಳನ್ನು ತೆಗೆದು ಹಾಕಿ ರೂ. ೨೦೦೦; ಆರೋಗ್ಯ ಪ್ರಚಾರ 'ವ್ಯಾನ್'ನು ನಿಲ್ಲಿಸಿ, ಆ ಸಂಬಂಧದ ಸಿಬಂದಿ ತೆಗೆದು ರೂ. ೧೦೦೦; ಅಲ್ವಾಡಿ ರೂರಲ್ ಡಿಸ್ಪೆನ್ಸರಿಗೆ ೨೬೦ ರೂ. ಮಾತ್ರ ಕೊಟ್ಟು ರೂ. ೫೦೦; ಅಧೂರು, ಕುಂಬಳೆ, ಶಂಕರನಾರಾಯಣ, ಗಂಗೊಳ್ಳಿ ಮತ್ತು ಫಳ್ನೀರಿನ ರೂರಲ್ ಡಿಸ್ಪೆನ್ಸರಿಗಳ ೫ ಮಂದಿ ಸೂಲಗಿತ್ತಿಯರ ಸ್ಥಾನ ವಜಾ ಮಾಡಿ ೧೫೦೦ ರೂ. ರಿಜರ್ವ್ ಕಂಪೌಂಡರನ್ನು ವಜಾ ಮಾಡಿ ರೂ. ೩೬೦; ಬಂಟ್ವಾಳದ ಆಸ್ಪತ್ರೆ ಎರಡನೇ ಕಂಪೌಂಡರನನ್ನು ವಜಾಮಾಡಿ ರೂ. ೩೬೦; ಮಂಜೇಶ್ವರ-ಕಡಬಗಳ ಡಿಸ್ಪೆನ್ಸರಿಗಳನ್ನು ರೂರಲ್ ಡಿಸ್ಪೆನ್ಸರಿಗಳನ್ನಾಗಿ ಮಾರ್ಪಡಿಸಿ ರೂ. ೪೬೦೩; ಧರ್ಮಸ್ಥಳದ ಮೆಡಿಕಲ್ ಪ್ರಾಕ್ಟೀಶನರರಿಗೆಂದು ಆ ಪಂಚಾಯತ್ ಬೋರ್ಡಿಗೆ ಸಲ್ಲುತ್ತಿರುವ ಸಹಾಯ ದ್ರವ್ಯವನ್ನು ನಿಲ್ಲಿಸಿ, ರೂ. ೩೬೦; ಪೆವಳಿಕೆಯ ಆಯುರ್ವೇದ ಡಿಸ್‌ಪೆನ್ಸರಿಯ ಸಹಾಯ ದ್ರವ್ಯ ನಿಲ್ಲಿಸಿ ರೂ. ೬೬೦; ಹೆರಿಗೆ ಮತ್ತು ಶಿಶು ಸಂಗೋಪನಗಳ ಯೋಜನೆಯಂತೆ ಕಂಪ್ಲಾರ್, ಕೋಟೆಕಾರುಗಳಲ್ಲಿ ಕೆಲಸಮಾಡುತ್ತಿರುವ ಸೂಲಗಿತ್ತಿಯರ ಸ್ಥಾನ ರದ್ದು ಮಾಡಿ ರೂ. ೬೧೬; ಸಿಬಂದಿಯ ಪ್ರಯಾಣ ಭತ್ತೆಯಲ್ಲಿ ಕತ್ತರಿಸಿ ರೂ. ೫೦೦ಗಳನ್ನು ಉಳಿಸುವುದಲ್ಲದೆ ಇನ್ನೂ ಸಾಲದೆ ಬಂದ ಮೊತ್ತಕ್ಕೆ ಮಿಕ್ಕ ಕೆಲವು ಅಂಶಗಳಿಂದ ಉಳಿತಾಯ ಮಾಡುವ ವಿಚಾರ ನಿರ್ಣಯವನ್ನು ವೈಸ್ ಪ್ರೆಸಿಡೆಂಟರಿಗೆ ಬಿಡಲಾಗಿದೆ.

ಮಂಗಳೂರು ಟೌನ್ ಹಾಲ್ ಟ್ರಸ್ಟಿಗೆ ಜಿಲ್ಲಾ ಬೋರ್ಡಿನಿಂದ ಪ್ರತಿನಿಧಿಗಳಾಗಿ ಮಿ। ಜೆಫ್ರಿಸ್‌ರವರು ಆರಿಸಲ್ಪಟ್ಟರು; ಉಡುಪಿ ತಾಲೂಕಿನ ಉದಿಯಾವರ ಕಾಪು ದೀರ್ಘ ಚರ್ಚೆಯ ನಂತರ ೫ ವರ್ಷಗಳ ವರೆಗೆ ವರ್ಷಕ್ಕೆ ೫ ಸಾವಿರದಂತೆ ಶ್ರೀ ವೈ ಮುಹಮ್ಮದ್ ಬ್ಯಾರಿಗಳಿಗೆ ಗುತ್ತಿಗೆಗೆ ಕೊಡಲು ನಿರ್ಧಾರವಾಯಿತು. ಶ್ರೀ ಎ. ಕೃಷ್ಣರಾಯ ಕೊಡ್ಗಿಯವರ ಸದಸ್ಯತ್ವ ಅವರ ಅಪೇಕ್ಷೆಯಂತೆ ಊರ್ಜಿತಗೊಳಿಸಲಾಯಿತು. ಸಾರ್ವಜನಿಕ ಆರೋಗ್ಯ ಖಾತೆ-ಸ್ಟ್ಯಾಂಡಿಂಗ್ ಕಮಿಟಿಗೆ ಡಾ। ಸುಂದರರಾಮ ಪೈಗಳ ಸದಸ್ಯತ್ವವನ್ನು ಊರ್ಜಿತಗೊಳಿಸಲಾಯಿತು. ೧೯೪೩-೪೪ನೇ ವರ್ಷದ ಪರವಾಗಿ ದ. ಕ. ಬೋರ್ಡು ಸೆಕೆಂಡರಿ ಶಾಲೆಗಳಲ್ಲಿ ಕಲಿಯುವ ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಕೊಡುವರೆ, ದ. ಕ. ಹರಿಜನ ಸೇವಕ ಸಂಘಕ್ಕೆ ರೂ. ೮೦೦ ಕೊಡಲು ಒಪ್ಪಿಗೆಯಾಯಿತು.

ಪ್ರೆಸ್ ಕೆಲಸಗಾರರ ಯೂನಿಯನ್

ನ ವಾರ್ಷಿಕ ಸಭೆಯು ತಾ. ೧೩ನೆ ಶನಿವಾರ ಸಂಜೆ ಯೂನಿಯನಿನ ಆಫೀಸಿನಲ್ಲಿ ಉಪಾಧ್ಯಕ್ಷ ಶ್ರೀ ಬಿ. ರಾಮಕೃಷ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಗತವರ್ಷದ ವರದಿ ವಾಚನ, ಲೆಕ್ಕಪತ್ರಗಳ ಪರಿಶೀಲನೆಗಳಾದ ಬಳಿಕ ಹೊಸವರ್ಷದ ಆಡಳಿತೆ ಸಮಿತಿಯು ಚುನಾಯಿಸಲ್ಪಟ್ಟಿತು. ಶ್ರೀಯುತರು ಕೆ. ಶಿವರಾವ್ ಅಧ್ಯಕ್ಷ, ಜತಪ್ಪ ಶೆಟ್ಟಿ ಉಪಾಧ್ಯಕ್ಷ, ಎ. ಚಂದ್ರಶೇಖರ ಕಾರ್ಯದರ್ಶಿ, ಎಂ. ಗುರುವಪ್ಪ ಕೋಶಾಧಿಕಾರಿ, ಸಿಲ್ವೆಸ್ಟರ್ ಪಿರೇರಾ, ಎಂ. ಬೈರೋಜಿ. ರಾವ್, ಆರ್. ಕೆ. ಮೈಯ್ಯ, ಬಿ. ಹೊನ್ನಪ್ಪ, ಎ. ವಾಸು ಇವರು ಹೊಸ ಕಾರ್ಯಸಮಿತಿಯ ಸದಸ್ಯರು.

ಕಮ್ಯೂನಿಸ್ಟ

ಕೈದಿಗಳಾದ ಶ್ರೀಯುತರು ಬಿ. ವಿ. ಕಕ್ಕಿಲ್ಲಾಯ ಮತ್ತು ಕರ್ಜಿಕಲ್ಲ್ ಇವರನ್ನು ರೆ. ಡಿ. ಆಫೀಸರ್ ಶ್ರೀ ಜೂಗಪ್ಪ ಅವರ ಮುಂದೆ ತಾ. ೨೨ರಂದು ಹಾಜರುಮಾಡಿ ಅವರನ್ನು ಜಮೀನಿನಲ್ಲಿ ಬಿಡುಗಡೆಮಾಡಿದೆ. ಪುನಃ ತಾ. ೨೦ಕ್ಕೆ ಮುಂದುವರಿಸಲ್ಪಟ್ಟಿತು. ಮಜೂರ ಮುಖಂಡರಾದ ಶ್ರೀ ಕೇಶವ ಕಾಮತರ ವಿಚಾರಣೆಯೂ ಎಪ್ರಿಲ್ ೨ರಂದು ಇಡಲ್ಪಟ್ಟಿದೆ.

ಕಾಸರಗೋಡು

ಕಮ್ಯೂನಿಸ್ಟರ ಬಂಧನ

ನೀಲೇಶ್ವರಕ್ಕೆ ಸಮೀಪವಿರುವ ಪೆರಿಯ ಎಂಬಲ್ಲಿ 'ಬೈಠಕ್' (ಸಾರ್ವಜನಿಕವಲ್ಲದ) ಸಭೆಗಳನ್ನು ಜರಗಿಸಿ ಗಾಂಧಿಜಿಯ ಬಿಡುಗಡೆಗಾಗಿ ಪ್ರಚಾರ ಮಾಡಿದರೆಂಬ ಆರೋಪದ ಮೇಲೆ ಮೂವರು ಕಮ್ಯೂನಿಸ್ಟರು ಬಂಧಿಸಲ್ಪಟ್ಟಿರೆಂಬ ವಾರ್ತೆ ಇದೆ.

ಕಾರ್ಕಳ

ಸಹಾಯ ಪ್ರಯತ್ನಗಳು

ಬಿರುಗಾಳಿಯಿಂದ ಪೀಡಿತರಾದ ಮಿಡ್ನಾಪುರದ ಅನಾಥರಿಗೆ ಸಹಾಯ ಮಾಡುವುದಕ್ಕೋಸ್ಕರ ಸ್ಥಳೀಯ ಆರ್ಯ ಸಮಾಜವು ೧೦೦ ರೂಪಾಯಿಗಳನ್ನು ವಂತಿಗೆಯಿಂದ ಸಾರ್ವದೇಶಿಕ ಆರ್ಯ ಪ್ರತಿನಿಧಿ ಸಭೆಗೆ ಸಂಗ್ರಹಿಸಿ ಕೊಟ್ಟಿದೆ. ಸ್ಥಳೀಯ ಹರಿಜನ ಸೇವಾ ಸಂಘದ ಸಹಾಯಾರ್ಥ ಒಂದು ಯಕ್ಷಗಾನ ಸಮಾರಂಭವು ತಾ. ೨೭ರ ದಿನ ರಾತ್ರಿ ನಡೆಯಲಿದೆ. ಬಡ ಜನರಿಗೆ ಅಕ್ಕಿ ಸಹಾಯ ಮಾಡಲಿಕ್ಕಾಗಿ ರೆ. ಸೋಜರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಸಮಿತಿ ಉಪಸಮಿತಿಗಳ ರಚನೆಯಾಗಿರುವುದು.



ಸಿನೆಮಾ ಸುದ್ದಿ

'ಅಪ್ನಾ ಘರ್' ನೋಡಿಲ್ಲವೆ?

ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶಿತವಾಯಿತಲ್ಲ. ಶಾಂತಾ ಆಪ್ಟೆ, ಚಂದ್ರಮೋಹನ್ ಅಭಿನಯಿಸಿದ 'ಅಪ್ನಾ ಘರ್' ಈ ಚಿತ್ರ ಅದನ್ನು ನೀವು ನೋಡಿಲ್ಲವೆ? ನೋಡಬೇಕಿತ್ತು ನೀವು ಅವರ ಕಥೆಯ್ಲೇನು? ಕಥೆಯ ಗೂಢವೇನು? ಆ ಹಾಡುಗಳೇನು? ಆ ಅಸದೃಶ ಅಭಿನಯವೇನು? ಆ ನಿರ್ದೇಶಕತ್ವವೇನು? ಒಂದೊಂದನ್ನೇ ಗ್ರಹಿಸಿ ರಸಿಕರು ತಲೆದೂಗಿದ್ದರು. ಆದರೇನೋ ನಮ್ಮ ಜನ "ಸತಿ ಸಾವಿತ್ರಿ" ನೋಡುವ ಜನಕ್ಕೆ 'ಅಪ್ನಾ ಘರ್' ಅಷ್ಟೊಂದು ಮೆಚ್ಚುಗೆಯಾಗಲಿಲ್ಲ. ಆದರೆ ಸರಕಾರಕ್ಕೆ ಈಗ ಗೊತ್ತಾಗಿದೆ ಈ ಚಿತ್ರ ನಿಜವಾಗಿ ಮಹತ್ವದ್ದೆಂದು. ಅದನ್ನು ದಾಬಾದಿನಲ್ಲಿಯೂ, ಬಿಹಾರ್ ಪ್ರಾಂತದಲ್ಲಿಯೂ ಈಗ ಈ ಚಿತ್ರ ಪ್ರದರ್ಶಿಸಬಾರದ್ದಾಗಿ ಸರಕಾರ ನಿರ್ಬಂಧಿಸಿದೆ! ಎಷ್ಟೋ ಸಲ ನಮ್ಮ ಜನರಿಗೆ ಸ್ಪಷ್ಟವಾಗುವುದು, ಯಾವನಾದರೂ ಸೆರೆಮನೆ ಸೇರಿದ ಮೇಲೆ ಆತನು ದೇಶಭಕ್ತನೆಂದು' ಬಹುಶಃ 'ಅಪ್ನಾ ಘರ್' ಇನ್ನೊಮ್ಮೆ ನಮ್ಮಂಗಳೂರಿಗೆ ಬಂದರೆ ಯಾರೂ ನೋಡಲು ಮರೆಯಲಾರರು!

'ಪಂಜಾಬಿ' ಚಿತ್ರಗಳನ್ನು

ನೋಡುವುದೊಂದು ನಮಗೆ ಬಾಕಿಯಿದೆ ಮೊನ್ನೆ ಮೊನ್ನೆ ಬಾಲಾಜಿಯವರು ಬಂಗಾಳಿ ಚಿತ್ರವನ್ನು ತರಿಸುವ ಸಾಹಸಮಾಡಿ ಮಂಗಳೂರಿಗೆ ಹೊಸತೊಂದು ರುಚಿ ನೀಡಿದ್ದರು ಸಾಮಾನ್ಯ ಜನರು ಸಾಕಷ್ಟು ಪ್ರೋತ್ಸಾಹಿಸಲಿಲ್ಲವೆಂಬುದರಿಂದ ಪ್ರದರ್ಶಕರಿಗೆ ಲಾಭವಾಗದಿದ್ದರೂ, ಕೆಲವು ಕಲಾಪ್ರೇಮಿಗಳು ಬಾಲಾಜಿಯವರ ಆ ಸಾಹಸವನ್ನು ಕೊಂಡಾಡದೆ ಇರಲಿಲ್ಲ. ಈಗ ಅವರು 'ಪಂಜಾಬಿ' ಚಿತ್ರಗಳನ್ನೂ ತರಿಸುವ ಸಾಹಸ ಮಾಡುತ್ತಾರೆಂಬ ಸುದ್ದಿಯಿದೆ, ಮುಮ್ತಾಜ್ ಶಾಂತಿ 'ಮಂಗ್ತಿ' ಎಂಬ ಪಂಜಾಬಿ ಚಿತ್ರದಲ್ಲಿ ತನ್ನ ಅತ್ಯುತ್ತಮ ಅಭಿನಯ ಪ್ರದರ್ಶಿಸಿದ್ದಾಳೆಂದು ನಾವು ಕೇಳಿದ್ದೇವೆ ಇದೇ ಚಿತ್ರವನ್ನು ನಾವು ಬೇಗನೇ ನೋಡಬಹುದೇ? ಬರೇ ಭಾಷೆಯನ್ನು ಮಾತ್ರ ನೋಡಿಕೊಂಡು ಮಂಗಳೂರಿನವರ ರುಚಿ ಹೇಳಲಾಗುವುದಿಲ್ಲವೆಂಬುದಕ್ಕೆ ತಮಿಳು ಚಿತ್ರ ಏಳು ವಾರಗಳ ವರೆಗೆ ಪ್ರದರ್ಶಿತವಾಗುವುದೂ, ಕನ್ನಡ ಚಿತ್ರವಾದರೂ ನಾಲ್ಕೇ ವಾರದಲ್ಲಿ ಅಂತ್ಯವಾಗುವುದೂ ನಿದರ್ಶನವಲ್ಲವೆ? ಬಾಲಾಜಿಯವರ ಈ ಸಾಹಸವು ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ

'ಶಾರದಾ' 'ನಮಸ್ತೆ'

ಎಂಬೀ ಆ ವಾರದ ಎರಡು ಚಿತ್ರಗಳೂ ಈಗ ತಯಾರಾಗಿವೆ ಶಾರದಾ ಬೊಂಬಾಯಿ ಮೊದಲಾದೆಡೆಗಳಲ್ಲೀಗ ಪ್ರದರ್ಶಿಸಲ್ಪಡುತ್ತಿದೆ ನರ್ಮಲಾ ಎನ್ನುವವರ ಇದರಲ್ಲಿ ಮೆಹತಾಬ್, ನ ಸ್ತ್ರಿ, ಉಲ್ಲಾಸ, ಮೊದಲಾದವರು ಇತರ ನಟರು, 'ನಮಸ್ತೆ' ಯು ಒಂದು ಸಾಮಾಜಿಕ ಚಿತ್ರ, ಪ್ರತಿಮಾದಾಸ ಗುಪ್ತೆ, ಮಾಸ್ಟರ್ ಮೊದಲಾದವರು ಅಭಿನಯಿಸುವರು ಈಗ ತಯಾರಾಗುವ ಇವರ ಚಿತ್ರ 'ಕಾನೂನ್'

'ಸವಾಲ್' ನಲ್ಲಿ

'ಬಸಂತ್' ಖ್ಯಾತಿಯ ಮಮ್ತಾಜ ಶಾಂತಿ ಮತ್ತು ಉಲ್ಲಾಸರೇ ಅಭಿನಯಿಸುತ್ತಾರಂತೆ, ಇತ್ತೀಚೆಗೆ ಕಿಶೋರ್ ಸಾಹು ನಟಿಸುವನೆಂದು ಸುದ್ದಿಯಾಗಿತ್ತು ಆದರೆ ಅದು ಸತ್ಯವಲ್ಲವೆಂದೀಗ ತಿಳಿದುಬಂದಿದೆ, 'ಸವಾಲ್' ಗೀತಾಂಜಲಿ ಪಿಕ್ಚರ್ಸಿನ ಕೃತಿ.

'ನಯಿ ಕಹಾನಿ'

ಪ್ರಭಾತದವರ ಇತ್ತೀಚಿಯ ಸಿನೆಮಾ, ಜ್ಯೋತಿ ರೋಸ್, ನಂದ್ರೇಕರ್, ಮೊದಲಾದವರು ಇದರಲ್ಲಿ ನಟಿಸುತ್ತಾರೆ, ಶಿಕ್ಷಕರು ಇದನ್ನು ನಿರ್ದೇಶಿಸಿದರು ಪತ್ತೇಲಾಲ್ ಮತ್ತು ದಾತೆಯವರು, ಈಗ 'ರಾಮ ಶಾಸ್ತ್ರಿ' ಚಿತ್ರದ ತಯಾರಿಕೆಗೆ ತೊಡಗಿದ್ದಾರೆ.

'ನ್ಯೆ ಜಿಂದಗಿ'

ಇದು ಯುನೈಟೆಡ್ ಫಿಲ್ಮ್ಸಿನವರ ಕೃತಿ, ಇದರ ಪೂರ್ವ ನಾಮಧೇಯ 'ಗಿರೋಂದ' ಈಗ ಹೀಗೆ ಬದಲಾಗಿದೆ, ಶೇಖ್ ಮುಖ್ತಾರ್, ಯಾಕೂಬ್, ಆಸೀಸ್ ಮೊದಲಾದವರಿದರಲ್ಲಿ ನಟಿಸುವರು, ಶ್ರೀ ಕಾಲೀಲರು ನಿರ್ದೇಶಿಸುವರು.

ಮಿನರ್ವಾದವರು

'ಭಕ್ತ ರಾಯದಾಸ' ಮತ್ತು 'ಪೃಥ್ವೀ ವಲ್ಲಭ' ತಯಾರಿಸುತ್ತಿದ್ದಾರೆ 'ಭಕ್ತ ರಾಯದಾಸ' ದಲ್ಲಿ ಲಲಿತಾಪವರ್, ಪರೇಶಬೆನರ್ಜಿ ಇವರಿಗೆ ಮುಖ್ಯ ಪಾತ್ರಗಳು 'ಪೃಥ್ವೀ ವಲ್ಲಭ' 'ಸಿಕಂದರ' ವನ್ನೂ ಮೀರುವ ಆಗಣಿತ ವೆಚ್ಚದ ಸೋಹ್ರಾಬ್ ಮೋದಿಯವರ ಅದ್ಭುತ ಕೃತಿಯೆಂದು ಹೇಳಲಾಗುತ್ತದೆ.

ತಯಾರಾಗಿದೆ!

ರಣಜಿತ್‌ನವರು ಅಧಿಕ ಚಿತ್ರಗಳನ್ನು ತಯಾರಿಸುವವರಲ್ಲಿ ಅಗ್ರಗಣ್ಯರು! ಈಗಾಗಲೇ ಐದು ಚಿತ್ರಗಳು ಪ್ರದರ್ಶನಕ್ಕೆ ತಯಾರಾಗಿವೆ (೧) 'ಫರಿಯಾದ್' (ಈಶ್ವರಲಾಲ್ ಖಾಧಿಮ್ ನಟಿಸಿರುವ) (೨) 'ಧೀರಜ್' (ಸಿತಾರಾ, ಮೋತಿಲಾಲ್ ಜತೆ) (೪) 'ಘೋಟಿವಾ' (ಖುರ್ಷಿದ್, ಪ್ರಭಾ ಅಭಿನಯಿಸುವ) (೪) 'ಗೌರಿ' (ಪೃಥ್ವೀರಾಜ್, ಮೋನಿಕಾ ದ್ವಂದ್ವದ) (೫) 'ಅಂಧೇರಾ' (ಕೆ ಸಿ. ಡೆ, ಸಿತಾರಾ ನಟಿಸುವ)

ಇಂಡಿಯದ ಸ್ತ್ರೀಯರೇ!

ತಂಗಿಯರೇ! ಇಂಡಿಯದ ಅದೃಷ್ಟ ನಿಮ್ಮ ಸುಕೋಮಲ ಕರಗಳಲ್ಲಿದೆ ಜೀವನದ ಗಹನ ಸಮಸ್ಯೆಗಳನ್ನು ನಿರ್ಣಯಿಸುವಾಗ ಗಂಡಸರು ನಿಮ್ಮ ಮಾರ್ಗದರ್ಶಿತ್ವವನ್ನು ಅಂಗೀಕರಿಸುತ್ತಾರೆ. ನಮ್ಮ ಜನಾಂಗದ ಅಳಿವು ಉಳಿವುಗಳ ಹೋರಾಟ ಇನ್ನೇನು ಆರಂಭವಾಗುವುದರಲ್ಲಿದೆ ಜಪಾನೀ ಧಾಳಿಕಾರರು ಇಂಡಿಯದ ಪೂರ್ವ ದಿಕ್ಕಿನ ಗಡಿಯಲ್ಲಿ ರಾಣ್ಯಮಾಡಿದ್ದಾರೆ ದೇಶದೊಳಕ್ಕೆ ಬರಲು ಅವರಿಗೆ ಅವಕಾಶಕೊಟ್ಟಲ್ಲಿ ಅವರು ಚೀನಾದಲ್ಲಿ ನಡೆಸುತ್ತಿರುವಂತೆ, ನಮ್ಮ ದೇಶದಲ್ಲೂ ಲೂಟನಡೆಸಿ ತಮ್ಮನ್ನು ನಿರೋಧಿಸಿದ ಪ್ರತಿಯೊಬ್ಬರನ್ನೂ (ತಮಗೆ ಬೇಕಾದುದನ್ನು ಕೊಳ್ಳುವರನ್ನು ಅಲ್ಲದಲ್ಲೂ ಅರಕ್ಷಿತ ನಿರ್ಬಲರನ್ನು) ಸಾವು, ನೋವುಗಳಿಗೆ ಒಳಗುಮಾಡುವರು

ಕಾದಾಟಗಳನ್ನು ಕೊನೆಗಾಣಿಸಿ, ಒರಟರನ್ನು ನಯಗೊಳಿಸಿ ಸಂಸಾರವು ಒಮ್ಮುಖವಾಗಿ ಜಗತ್ತನ್ನು ಶಕ್ತಿಯುಕ್ತ ಶಾಂತಿಯಿಂದ ಇದಿರಿಸುವಂತೆ ಮಾಡಬಲ್ಲವಳು ಯಾವಾಗಲೂ ತಾಯಿಯಲ್ಲವೆ? ಆಂತರಿಕ ಹೋರಾಟದಿಂದುಂಟಾದ ದುರ್ಬಲತೆಯ ಪರಿಣಾಮವಾಗಿ, ಭಾರತವರ್ಷವೆಂಬ ಬೃಹತ್ ಸಂಸಾರವು ಆಕ್ರಮಣಶೀಲನಾದ ವೈರಿಗೆ ಬಲಿಯಾಗದಂತೆ ಮಾಡಲು, ಇಂದು ಇಂಡಿಯಕ್ಕೆ ನಿಮ್ಮ ಸ್ತ್ರೀ ಸಹಜವಾದ ಚಾಕಚಕ್ಯತೆಯ ಅವಶ್ಯಕತೆಯಿದೆ ಇಂದು ನಮಗೆ ಪ್ರಧಾನವಾಗಿ ಬೇಕಾಗಿರುವ ಐಕ್ಯತೆಯನ್ನು ಸಾಧಿಸಲು ನಿಮ್ಮಿಂದಮಾತ್ರ ಸಾಧ್ಯ.

ಚೀನಾದ ಪ್ರಥಮ ಗೃಹಿಣಿಯಾದ ಮೇಡಾಂ ಚೆಂಗ್-ಕೈ-ಶೇಕ್‌ರವರು, ತಮ್ಮ ರಾಷ್ಟ್ರದ ಸ್ಥಿತಿಯನ್ನು ಅರ್ಥಮಾಡಿಕೊಂಡು ಅದಕ್ಕೆ ಬೇಕಾದ ಸಹಾಯವನ್ನೊದಗಿಸುವಂತೆ ಪರರಾಷ್ಟ್ರೀಯರನ್ನು ಪ್ರೇರೇಪಿಸಿರುವುದಲ್ಲದೆ, ಜಪಾನೀಯರಿಗೆ ವಿರುದ್ಧವಾಗಿ, ಅತಿಮಾನುಷ ಶೌರ್ಯವನ್ನು ತೋರಿ ಹೋರಾಡುವಂತೆ, ಚೀಣೀಯರನ್ನು ಹುರುಪುಗೊಳಿಸಿದ್ದಾರೆಂಬುದು ನಿಮಗೆ ಗೊತ್ತು.

ಭಾರತ ಸ್ತ್ರೀಯರಾದ ನಿಮ್ಮ ವರ್ಗದಲ್ಲೂ ಅಂತಹ ವೀರರಮಣಿಯೊಬ್ಬಳು ಹುಟ್ಟಲಿ! ನಮ್ಮ ಇಂಡಿಯ ದೇಶವನ್ನು ನಿರ್ಬಲಗೊಳಿಸುತ್ತಿರುವ ಘೋರ ಅಂತಃಕಲಹಗಳನ್ನು ಆಕೆ ಸಮಾಧಾನಗೊಳಿಸಲಿ! ಈ ಧ್ಯೇಯ ಸಾಧನೆಗಾಗಿ ನೀವೆಲ್ಲರೂ ಶ್ರಮಿಸಲು ಮುಂದೆ ಬರಬೇಕು

ನೀವೇ ಯೋಚನೆಮಾಡಿ ನೋಡಿರಿ
ಒಂದುಗೂಡಿ ವರ್ತಿಸಿರಿ

ಇದೇ ರಾಷ್ಟ್ರೀಯ ಯುದ್ಧ ಮುಖ

CPU 8 C Kn

ಕಾಸರಗೋಡಿನಲ್ಲಿ ಗವರ್ನರರು

ತಾ. ೧೮ರಂದು ಬೆಳಗ್ಗೆ ತಮ್ಮ ಸ್ವಂತ ರೈಲು ಗಾಡಿಯಲ್ಲಿ ಕಾಸರಗೋಡಿಗೆ ತಲಪಿದ ಗವರ್ನರರು ೧೦ ಘಂಟೆಗೆ ತಮ್ಮ ಪತ್ನಿಯೊಡನೆ ಬೀದಿಗಳಲ್ಲಿ ಸವಾರಿ ಹೊರಟರು. ಬಳಿಕ ಜರಗಿದ ಸಭೆಯಲ್ಲಿ ಶ್ರೀ ಪಿ. ಜಿ. ಸುಬ್ರಮಣ್ಯಂ ಅವರು ಯುದ್ಧ ಚಟುವಟಿಕೆಗಳ ವರದಿಯನ್ನೋದಿದರು. ೬೬,೦೦೦ ರೂ. ಗಳ ನಿಧಿಯು ಗವರ್ನರರಿಗೆ ಇಲ್ಲಿ ಅರ್ಪಿಸಲ್ಪಟ್ಟಿತು.

ತಮ್ಮ ಭಾಷಣದಲ್ಲಿ ಗವರ್ನರರು, ಕಾಸರಗೋಡಿನ ಜನರು ಯುದ್ಧಾಸಕ್ತರಾಗಿರುವುದಕ್ಕಾಗಿ ತೃಪ್ತಿಯನ್ನು ತೋರ್ಪಡಿಸಿ, ಅಲ್ಲಿಂದ ಅಷ್ಟು ಹಣ ತಮಗೆ ಕೊಟ್ಟುದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು. ಯುದ್ಧದ ಪರಿಸ್ಥಿತಿಯ ಕುರಿತು ಅವರು ಮಾತನಾಡುತ್ತಾ ವೈರಿಗಳ ಶಕ್ತಿಯು ಕುಂದಿದೆಯೆಂದು ಹೇಳಿ, ಅಂತ್ಯ ಜಯವು ತಮಗೇ ದೊರಕುವುದೆಂದರು. ಶ್ರೀ ಎಂ. ಪಿ. ನಾರಾಯಣ ಮೆನನರು ಧನ್ಯವಾದಗಳನ್ನರ್ಪಿಸಿದರು. ಗವರ್ನರರು ಇಲ್ಲಿಂದ ತಲಚೇರಿಗೆ ಪ್ರಯಾಣ ಬೆಳೆಸಿದರು.

ಈ ಜಿಲ್ಲೆಯಿಂದ ಈ ಬಾರಿ ಗವರ್ನರರ ಯುದ್ಧ ನಿಧಿಗೆ ಒಟ್ಟು ಹಣ, ನಮ್ಮ ಜಿಲ್ಲೆ ಸಂದದ್ದು ೫ ಲಕ್ಷದ ೩೦ ಸಾವಿರ ರೂಪಾಯಿಗಳೆಂದು ತಿಳಿದು ಬರುತ್ತದೆ.

ಕಯ್ಯೂರು ಆರೋಪಿಗಳಿಗಾಗಿ ಸಾರ್ವಭೌಮರಲ್ಲಿ ಜೀವದಾನ ಬೇಡಿಕೆ

ಕಯ್ಯೂರು ಆರೋಪಿಗಳ ಕುರಿತು, ಮಂಗಳೂರು ಜಡ್ಜರು, ಈ ಕೋರ್ಟಿನ ಇತಿಹಾಸದಲ್ಲೇ ದೀರ್ಘಕಾಲದ ವಿಚಾರಣೆ ನಡೆಸಿ, ಶ್ರೀಗಳಾದ ಮಡತ್ತಿಲ್ ಅಪ್ಪು, ಕುರುವರತ್ ಕುಂಞಂಬು ನಾಯರ್, ಕೋಯಿತಟ್ಟ ಚಿರುಕಂಡನ್ ಮತ್ತು ಪಳ್ಳಿಕಾಲ್ ಅಬೂಬಕರ್ ಎಂಬವರಿಗೆ ಪಾಶಿ ಶಿಕ್ಷೆ ವಿಧಿಸಿದಷ್ಟೆ! ಆ ಪಾಶಿ ಶಿಕ್ಷೆ ಮದ್ರಾಸು ಹೈಕೋರ್ಟು ಅಪೀಲಿನಲ್ಲೂ ಖಾಯಂ ಆಗಲು, ಗವರ್ನರರಲ್ಲಿ, ಆ ಮೇಲೆ ವೈಸರಾಯರಲ್ಲಿಯೂ ಮಾಡಿಕೊಂಡ ಜೀವದಾನ ಬೇಡಿಕೆಗಳೂ ನಿಷ್ಫಲವಾಗಲು, ಲಂಡನಿನ ಪ್ರಿವಿಕೌನ್ಸಿಲಿಗೆ ಇವರ ಅಪೀಲನ್ನು ಒಯ್ಯಲಾಯಿತು. ಆದರೆ ಪ್ರಿವಿಕೌನ್ಸಿಲು ಈ ಅಪೀಲನ್ನು ಸ್ವೀಕರಿಸಿಕೊಳ್ಳಲೇ ಇಲ್ಲ. ಹೀಗಾದಲ್ಲೂ, ಮುಂದಿನ ಪ್ರಯತ್ನವನ್ನು ಬಿಡಲೆಂದು ಸೋರೆನ್ಸನ್ ಮೊದಲಾದ ಪಾರ್ಲಿಮೆಂಟ್ ಸದಸ್ಯರು, ಭಾರತಮಂತ್ರಿ ಅಮೇರಿಯವರಲ್ಲಿ ಜೀವದಾನ ಬೇಡಿಕೆಯ ಬಗ್ಗೆ ಒಂದು ಶಿಷ್ಟಮಂಡಳ ಒಯ್ಯಲು ಪ್ರಯತ್ನಿಸಿ ಸಂಘಟಿಸಿ, ಆ ಬಗ್ಗೆ ಅಮೇರಿಯವರ ಅನುಮತಿಗೆ ಬರೆದರು. ಅಮೇರಿಯವರು, ಆ ಬಗ್ಗೆ ತನ್ನಲ್ಲಿ ಶಿಷ್ಟಮಂಡಳ ತರುವುದೇ ಅವಶ್ಯವಿಲ್ಲವೆಂದು ಹೇಳಿಬಿಟ್ಟರು! ಆದರೂ ನಿರಾಶರಾಗದೆ, ಈಗ ಸ್ವತಃ ಸಾರ್ವಭೌಮರಲ್ಲಿಯೇ ಜೀವದಾನ ಬೇಡಿಕೆಯ ಕೊನೆಯ ಸಾಹಸ ಮಾಡುವ ಪ್ರಯತ್ನವಿದೆ. ರೆವರೆಂಡ್ ಗೋರ್ಡನ್ ಲಿವಿಂಗ್‌ಸ್ಟೋನ್ ಎಂಬ ಎಡಿನ್‌ಬರೋದ ಪ್ರಸಿದ್ಧ ಮಂತ್ರಿಗಳು ಕಯ್ಯೂರು ಕೇಸಿನಲ್ಲಿ ಸಾರ್ವಭೌಮರು ಪ್ರವೇಶಿಸಿ ಜೀವದಾನ ಕೊಡಿಸಬೇಕೆಂದು ವಿನಂತಿಸಿಕೊಂಡಿದ್ದಾರೆ. ಲಂಡನಿನ ಸಿವಿಲ್ ಲಿಬರ್ಟೀಸ್ ಕೌನ್ಸಿಲಿನವರು ವೈಸರಾಯರಿಗೂ ಗವರ್ನರರಿಗೂ ಕಯ್ಯೂರು ಆರೋಪಿಗಳಿಗೆ ಜೀವದಾನ ಕೊಡಿಸಬೇಕೆಂದು ವಿನಂತಿಸಿ ತಂತಿ ಕೊಟ್ಟಿರುವರು. ಸಾರ್ವಭೌಮರೊಡನೆ ಬೇಡಿಕೊಳ್ಳುವ ಈ ಪ್ರಯತ್ನ ಮುಗಿವವರೆಗೆ, ಕಯ್ಯೂರು ಆರೋಪಿಗಳ ಪಾಶಿಶಿಕ್ಷೆ ಮುಂದುವರಿಸುವಂತೆ ಪ್ರಾಂತೀಯ ಸರಕಾರವನ್ನು ವಿನಂತಿಸಿಕೊಳ್ಳಲಾಗಿದೆ. ಈ ಬಗ್ಗೆ ಸಾರ್ವಭೌಮರಲ್ಲಿ ಇವರ ಜೀವದಾನ ಬೇಡಿಕೆ ವಿನಂತಿ ಮಾಡಲು, ಅಖಿಲ ಭಾರತದಲ್ಲಿ, ವಿಶೇಷವಾಗಿ ಕೇರಳದಲ್ಲಿ ನಗರ ನಗರ, ಗ್ರಾಮ ಗ್ರಾಮಗಳಿಂದಲೂ ವಿನಂತಿಗಳು ಹೋಗುತ್ತಿವೆ.

ಕಮ್ಯೂನಿಸ್ಟ್ ಮುಖಂಡರು ಕಯ್ಯೂರಲ್ಲಿ

ಅಖಿಲಭಾರತ ಕಮ್ಯೂನಿಸ್ಟ್ ಪಕ್ಷದ ಜನರಲ್ ಸಕ್ರೆಟರಿಗಳಾದ ಶ್ರೀ ಪಿ. ಸಿ. ಜೋಶಿಯವರು ಆಂಧ್ರ, ಕೇರಳ ಕಮ್ಯೂನಿಸ್ಟ್ ನಾಯಕರಾದ ಶ್ರೀಯುತರು ಸುಂದರಯ್ಯ ಮತ್ತು ಕೃಷ್ಣಪಿಳ್ಳೆಯವರೊಡಗೂಡಿ, ದಕ್ಷಿಣ ಕನ್ನಡದ ಕಾಂಗ್ರೆಸ್ ಮುಂದಾಳುಗಳೂ, ಮಂಗಳೂರು ಸೆಶ್ಶನ್ ಕೋರ್ಟಿನಲ್ಲಿ ಕಯ್ಯೂರು ಆರೋಪಿತರ ಪರವಾಗಿ ವಾದಿಸಿದ ವಕೀಲರೂ ಆದ ಶ್ರೀ ರಂಗರಾವ್ ತಲಚೇರಿಕರರೊಂದಿಗೆ ಕಳೆದವಾರ ಕಯ್ಯೂರನ್ನು ಸಂದರ್ಶಿಸಿ ಪಾಶಿ ಶಿಕ್ಷೆಗೆ ಗುರಿಯಾದವರ ಆಪ್ತ ಸಂಬಂಧಿಕರನ್ನು ಕಂಡು ಮಾತನಾಡಿ ಮರಳಿದರು.

THE
Canara Industrial & Banking Syndicate, Ltd.
(Incorporated in British India Liability of Shareholders limit)
Estd.) Head Office UDIPI, S India (1925.

ANNOUNCEMENT.

The remaining issue of the 5% Cumulative Preference Shares of the Bank will be sold at an increased rate of premium of Re. 1/- per share after 1st May 1943 as the Bank is compelled to make a larger provision for payment of In-come-tax according to increased rates of taxation Subscription for the shares at the present rates will however be received at all our Branches till 15th April 1943.

THE CANARA BANKING CORPORATION Ltd.
(Incorporated in British India with limited liability)

STATEMENT OF AFFAIRS AS ON 31ST DECEMBER 1943

Capital & Liabilities	Rs	As	Ps	Property & Assets	Rs.	As	Ps
Paid up Capital	6 36 890	0	0	Office premises furniture etc	91 659	0	0
Reserve & other funds	3 71 882	13	11	Advances	31 28 612	4	9
Deposits	41 83 873	4	1	Investment on Govt Securities etc at cost	15 34 536	14	3
Due to Bankers	5 08 545	12	1	Sundries	74 183	5	7
Bills per contra	3 59 357	12	1	Bills for Collection	3 59 357	12	1
Sundries including branch adjustments & undisbursed profits	2 83 736	5	9	Cash on Hand & with bankers	12 05 397	14	8
Profit for the year 1942	49 461	3	5				
Total Rs	63 93 747	3	4	Total Rs	63 93 747	3	4

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಸಿನಿಮಾ ಸುದ್ದಿ

ಅಪ್ಪಾ ಖಾನ್ ನೋಡಿಲ್ಲವೆ?

ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶಿಸಲಾಯಿತು. ಶಾಂತಾ ಆಪ್ಟೆ, ಚಂದ್ರಮೋಹನ್ ಅಭಿನಯಿಸಿದ 'ಅಪ್ನಾ ಘರ್' ಈ ಚಿತ್ರ ಅದನ್ನು ನೀವು ನೋಡಿಲ್ಲವೆ? ನೋಡಬೇಕಿತ್ತು ನೀವು. ಅದರ ಕಥೆಯೇನು? ಕಥೆಯ ಗೂಢವೇನು? ಆ ಹಾಡುಗಳೇನು? ಆ ಅಸದೃಶ ಅಭಿನಯವೇನು? ಆ ನಿರ್ದೇಶಕತ್ವವೇನು? ಒಂದೊಂದನ್ನೇ ಗ್ರಹಿಸಿ ರಸಿಕರು ತಲೆದೂಗಿದರು. ಅದರೇನೋ ನಮ್ಮ ಜನ "ತಮಿಳು ಸಾವಿತ್ರಿ" ನೋಡುವ ಜನಕ್ಕೆ 'ಅಪ್ನಾ ಘರ್' ಅಷ್ಟೊಂದು ಮೆಚ್ಚುಗೆಯಾಗಲಿಲ್ಲ. ಆದರೆ ಸರಕಾರಕ್ಕೆ ಈಗ ಗೊತ್ತಾಗಿದೆ ಈ ಚಿತ್ರ ನಿಜವಾಗಿ ಮಹತ್ವದ್ದೆಂದು. ಅಹಮ್ಮದಾಬಾದಿನಲ್ಲಿಯೂ, ಬಿಹಾರ್ ಪ್ರಾಂತದಲ್ಲಿಯೂ ಈಗ ಈ ಚಿತ್ರ ಪ್ರದರ್ಶಿಸಬಾರದಾಗಿ ಸರಕಾರ ನಿರ್ಬಂಧಿಸಿದೆ! ಎಷ್ಟೋ ಸಲ ನಮ್ಮ ಜನರಿಗೆ ಸ್ಪಷ್ಟವಾಗುವುದು, ಯಾವನಾದರೂ ಸೆರೆಮನೆ ಸೇರಿದ ಮೇಲೆ ಆತನು ದೇಶಭಕ್ತನೆಂದು! ಬಹುಶಃ 'ಅಪ್ನಾ ಘರ್' ಇನ್ನೊಮ್ಮೆ ಮಂಗಳೂರಿಗೆ ಬಂದರೆ ಯಾರೂ ನೋಡಲು ಮರೆಯಲಾರರು!

'ಪಂಜಾಬಿ' ಚಿತ್ರಗಳನ್ನು

ನೋಡುವುದೊಂದು ನಮಗೆ ಬಾಕಿಯಿದ್ದ. ಮೊನ್ನೆ ಮೊನ್ನೆ ಬಾಲಾಜಿಯವರು ಬಂಗಾಳಿ ಚಿತ್ರವನ್ನು ತರಿಸುವ ಸಾಹಸಮಾಡಿ ಮಂಗಳೂರವರಿಗೆ ಹೊಸತೊಂದು ರುಚಿ ನೀಡಿದರು. ಸಾಮಾನ್ಯ ಜನರು ಸಾಕಷ್ಟು ಪ್ರೋತ್ಸಾಹವೀಯಲಿಲ್ಲವೆಂಬುದರಿಂದ ಪ್ರದರ್ಶಕರಿಗೆ ಲಾಭವಾಗದಿದ್ದರೂ, ಕೆಲವು ಕಲಾಪ್ರೇಮಿಗಳು ಬಾಲಾಜಿಯವರ ಆ ಸಾಹಸವನ್ನು ಕೊಂಡಾಡದೆ ಇರಲಿಲ್ಲ. ಈಗ ಅವರು 'ಪಂಜಾಬಿ' ಚಿತ್ರಗಳನ್ನೂ ತರಿಸುವ ಸಾಹಸ ಮಾಡುತ್ತಾರೆಂಬ ಸುದ್ದಿಯಿದೆ. ಮನೋಜ್ ಶಾಂತಿ 'ಮಾಂಗ್ತಿ' ಎಂಬ ಪಂಜಾಬಿ ಚಿತ್ರದಲ್ಲಿ ತನ್ನ ಅತ್ಯುತ್ತಮ ಅಭಿನಯ ಪ್ರದರ್ಶಿಸಿದ್ದಾಳೆಂದು ನಾವು ಕೇಳಿದ್ದೇವೆ. ಇದೇ ಚಿತ್ರವನ್ನು ನಾವು ಬೇಗನೇ ನೋಡಬಹುದೇ? ಬರೇ ಭಾಷೆಯನ್ನು ಮಾತ್ರ ನೋಡಿಕೊಂಡು ಮಂಗಳೂರಿನವರ ರುಚಿ ಹೇಳಲಾಗುವುದಿಲ್ಲವೆಂಬುದಕ್ಕೆ ತಮಿಳು ಚಿತ್ರ ಏಳು ವಾರಗಳ ವರೆಗೆ ಪ್ರದರ್ಶಿತವಾಗುವುದೂ, ಕನ್ನಡ ಚಿತ್ರವಾದರೂ ನಾಲ್ಕೇ ವಾರದಲ್ಲಿ ಅಂತ್ಯವಾಗುವುದೂ ನಿದರ್ಶನವಲ್ಲವೆ? ಬಾಲಾಜಿಯವರ ಈ ಸಾಹಸವು ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ.

'ಶಾರದಾ' 'ನಮಸ್ತೆ'

ಶಾರದಾ ಕಂಪೆನಿಯ ಎರಡು ಚಿತ್ರಗಳೂ ಈಗ ತಯಾರಾಗಿವೆ. 'ಶಾರದಾ' ಬೊಂಬಯಿ ಮೊದಲಾದೆಡೆಗಳಲ್ಲೀಗ ಪ್ರದರ್ಶಿಸಲ್ಪಡುತ್ತಿದೆ. 'ಸಿಮ್ರ್ಲಾ' ಎನ್ನುವವಳೊಬ್ಬರೆ ಇದರಲ್ಲಿ ಮಾಡಿದ್ದಾಳು. ಮೆಹತಾಬ್, ಶಾಸ್ತ್ರಿ, ಉಲ್ಲಾಸ, ಮೊದಲಾದವರು ಇತರ ನಟರು. 'ನಮಸ್ತೆ' ಯು ಒಂದು ಸಾಮಾಜಿಕ ಚಿತ್ರ. ಪ್ರತಿಮಾದಾಸ ಗುಪ್ತೆ, ಶಾಸ್ತ್ರಿ ಮೊದಲಾದವರು ಅಭಿನಯಿಸುವರು. ಈಗ ತಯಾರಾಗುವ ಇವರ ಚಿತ್ರ 'ಕಾನೂನ್'

'ಸವಾಲ್' ನಲ್ಲಿ

'ಬಸಂತ್' ಖ್ಯಾತಿಯ ಮುಮ್ತಾಜ್ ಶಾಂತಿ ಮತ್ತು ಉಲ್ಲಾಸರೇ ಅಭಿನಯಿಸುತ್ತಾರಂತೆ. ಇತ್ತೀಚೆಗೆ ಕಿಶೋರ್ ಸಾಹು ನಟಿಸುವನೆಂದು ಸುದ್ದಿಯಾಗಿತ್ತು. ಆದರೆ ಅದು ಸತ್ಯವಲ್ಲವೆಂದೀಗ ತಿಳಿದುಬಂದಿದೆ. 'ಸವಾಲ್' ಗೀತಾಂಜಲಿ ಪಿಕ್ಚರ್ಸಿನ ಕೃತಿ.

'ನಯಿ ಕಹಾನಿ'

ಪ್ರಭಾತದವರ ಇತ್ತೀಚೆಯ ಸಿನೆಮಾ; ಜೈರಾಜ್, ರೋಸ್, ನಂದ್ರೇಕರ್, ಮೊದಲಾದವರು ಇದರಲ್ಲಿ ನಟಿಸುತ್ತಾರೆ. ಕಶ್ಯಪರು ಇದನ್ನು ನಿರ್ದೇಶಿಸಿದರು. ಪತ್ರೀಲಾಲ್ ಮತ್ತು ದಾತೆಯವರು, ಈಗ 'ರಾಮ ಶಾಸ್ತ್ರಿ' ಚಿತ್ರದ ತಯಾರಿಕೆಗೆ ತೊಡಗಿದ್ದಾರೆ.

'ನೈಜಿಂದಗಿ'

ಇದು ಯುನೈಟೆಡ್ ಫಿಲ್ಮ್ಸನವರ ಕೃತಿ. ಇದರ ಪೂರ್ವ ನಾಮಧೇಯ 'ಗಿರೋಂದ್' ಈಗ ಹೀಗೆ ಬದಲಾಗಿದೆ. ಶೇಖ್ ಮುಖ್ತಾರ್, ಯಾಕೂಬ್, ಆಸೀಸ್ ಮೊದಲಾದವರಿಂದರಲ್ಲಿ ನಟಿಸುವರು. ಶ್ರೀ ಕಾಲೀಲರು ನಿರ್ದೇಶಿಸುವರು.

ಮಿನರ್ವಾದವರು

'ಭಕ್ತ ರಾಯಿದಾಸ' ಮತ್ತು 'ಪೃಥ್ವೀ ವಲ್ಲಭ' ತಯಾರಿಸುತ್ತಿದ್ದಾರೆ. 'ಭಕ್ತ ರಾಯದಾಸ' ದಲ್ಲಿ ಲಲಿತಾ ಪವಾರ್, ಪರೇಶ ಬೆನರ್ಜಿ ಇವರಿಗೆ ಮುಖ್ಯ ಪಾತ್ರಗಳು. 'ಪೃಥ್ವೀ ವಲ್ಲಭ' 'ಸಿಕಂದರ' ವನ್ನೂ ಮೀರುವ ಅಗಣಿತ ವೆಚ್ಚದ, ಸೋಹ್ರಾಬ್ ಮೋಡಿಯವರ ಅದ್ಭುತ ಕೃತಿಯೆಂದು ಹೇಳಲಾಗುತ್ತದೆ.

ತಯಾರಾಗಿದೆ!

ರಣಜಿತ್‌ನವರು ಅಧಿಕ ಚಿತ್ರಗಳನ್ನು ತಯಾರಿಸುವದರಲ್ಲಿ ಅಗ್ರಗಣ್ಯರು! ಈವಾಗಲೇ ಇಷ್ಟು ಚಿತ್ರಗಳು ಪ್ರದರ್ಶನಕ್ಕೆ ತಯಾರಾಗಿವೆ! (೧) 'ಫರಿಯಾದ್' (ಈಶ್ವರಲಾಲ್, ಖಾಮಿಮ್ ನಟಿಸಿಯುವು) (೨) 'ಧೀರಜ್' (ಸಿ... ಈಶ್ವರಲಾಲ್ ಜತೆ) (೩) 'ಭೋಟಿವಾ' (ಮಹಿಪದ ಪ್ರಭಾ ಅಭಿನಯಿಸುವ) (೪) 'ಗಾರಿ' (ಪೃಥ್ವೀರಾಜ್, ಮೋತಿಲಾಲ್ ವೃಂದದ) (೫) 'ಅಂಧೇರಾ' (ಕೆ. ಸಿ. ಡೆ, ಸಿತಾರಾ ನಟಿಸುವ.)

ಇಂಡಿಯದ ಸ್ತ್ರೀಯರೇ!

ತಂಗಿಯರೇ! ಇಂಡಿಯದ ಅದೃಷ್ಟ ನಿಮ್ಮ ಸುಕೋಮಲ ಕರಗಳಲ್ಲಿದೆ. ಜೀವನದ ಗಹನ ಸಮಸ್ಯೆಗಳನ್ನು ನಿರ್ಣಯಿಸುವಾಗ ಗಂಡಸರು ನಿಮ್ಮ ಮಾರ್ಗದರ್ಶಿತ್ವವನ್ನು ಅಂಗೀಕರಿಸುತ್ತಾರೆ. ನಮ್ಮ ಜನಾಂಗದ ಅಳಿವು ಉಳಿವುಗಳ ಹೋರಾಟ ಇನ್ನೇನು ಆರಂಭವಾಗುವುದರಲ್ಲಿದೆ. ಜಪಾನೀ ಧಾಳಿಕಾರರು ಇಂಡಿಯದ ಪೂರ್ವ ದಿಕ್ಕಿನ ಗಡಿಯಲ್ಲಿ ಠಾಣ್ಯಮಾಡಿದ್ದಾರೆ. ದೇಶದೊಳಕ್ಕೆ ಬರಲು ಅವರಿಗೆ ಅವಕಾಶಕೊಟ್ಟಲ್ಲಿ ಅವರು ಚೀಣಾದಲ್ಲಿ ನಡೆಸುತ್ತಿರುವಂತೆ, ನಮ್ಮ ದೇಶದಲ್ಲೂ ಲೂಟಿನಡೆಸಿ ತಮ್ಮನ್ನು ನಿರೋಧಿಸುವ ಪ್ರತಿಯೊಬ್ಬರನ್ನೂ (ತಮಗೆ ಬೇಕಾದುದನ್ನುಳ್ಳವರನ್ನು, ಅದರಲ್ಲೂ ಅರಕ್ಷಿತ ನಿರ್ಬಲರನ್ನು) ಸಾವು ನೋವುಗಳಿಗೆ ಒಳಗುಮಾಡುವರು.

ಕಾದಾಟಗಳನ್ನು ಕೊನೆಗಾಣಿಸಿ, ಒರಟರನ್ನು ನಯಗೊಳಿಸಿ, ಸಂಸಾರವು ಒಮ್ಮುಖವಾಗಿ ಜಗತ್ತನ್ನು ಶಕ್ತಿಯುಕ್ತ ಶಾಂತಿಯಿಂದ ಇದಿರಿಸುವಂತೆ ಮಾಡಬಲ್ಲವಳು ಯಾವಾಗಲೂ ತಾಯಿಯಲ್ಲವೆ? ಆಂತರಿಕ ಹೋರಾಟದಿಂದುಂಟಾದ ದುರ್ಬಲತೆಯ ಪರಿಣಾಮವಾಗಿ, ಭಾರತವರ್ಷವೆಂಬ ಬೃಹತ್ ಸಂಸಾರವು ಆಕ್ರಮಣಶೀಲನಾದ ವೈರಿಗೆ ಬಲಿಯಾಗದಂತೆ ಮಾಡಲು, ಇಂದು ಇಂಡಿಯಕ್ಕೆ ನಿಮ್ಮ ಸ್ತ್ರೀ ಸಹಜವಾದ ಚಾಕಚಕ್ಯತೆಯ ಅವಶ್ಯಕತೆಯಿದೆ. ಇಂದು ನಮಗೆ ಪ್ರಧಾನವಾಗಿ ಬೇಕಾಗಿರುವ ಐಕ್ಯತೆಯನ್ನು ಸಾಧಿಸಲು ನಿಮ್ಮಿಂದಮಾತ್ರ ಸಾಧ್ಯ.

ಚೀನಾದ ಪ್ರಥಮ ಗೃಹಿಣಿಯಾದ ಮೇಡಾಂ ಚಂಗ್-ಕೈ-ಶೇಕ್‌ರವರು, ತಮ್ಮ ರಾಷ್ಟ್ರದ ಸ್ಥಿತಿಯನ್ನು ಅರ್ಥಮಾಡಿಕೊಂಡು ಅದಕ್ಕೆ ಬೇಕಾದ ಸಹಾಯವನ್ನೊದಗಿಸುವಂತೆ ಪರರಾಷ್ಟ್ರೀಯರನ್ನು ಪ್ರೇರಿಪಿಸಿರುವುದಲ್ಲದೆ, ಜಪಾನೀಯರಿಗೆ ವಿರುದ್ಧವಾಗಿ, ಅತಿಮಾನುಷ ಶೌರ್ಯವನ್ನು ತೋರಿ ಹೋರಾಡುವಂತೆ, ಚೀಣೀಯರನ್ನು ಹುರುಪುಗೊಳಿಸಿದ್ದಾರೆಂಬುದು ನಿಮಗೆ ಗೊತ್ತು.

> ಭಾರತ ಸ್ತ್ರೀಯರಾದ ನಿಮ್ಮ ವರ್ಗದಲ್ಲೂ ಅಂತಹ ವೀರರಮಣಿಯೊಬ್ಬಳು ಹುಟ್ಟಲಿ! ನಮ್ಮ ಇಂಡಿಯದೇಶವನ್ನು ನಿರ್ಬಲಗೊಳಿಸುತ್ತಿರುವ ಘೋರ ಅಂತಃಕಲಹಗಳನ್ನು ಆಕೆ ಸಮಾಧಾನಗೊಳಿಸಲಿ! ಈ ಧ್ಯೇಯ ಸಾಧನೆಗಾಗಿ ನೀವೆಲ್ಲರೂ ಶ್ರಮಿಸಲು ಮುಂದೆ ಬರಬೇಕು.

ನೀವೇ ಯೋಚನೆಮಾಡಿ ನೋಡಿರಿ
ಒಂದುಗೂಡಿ ವರ್ತಿಸಿರಿ

ಇದೇ ರಾಷ್ಟ್ರೀಯ ಯುದ್ಧ ಮುಖ

CPU. 8. C. KN.

ಕಾಸರಗೋಡಿನಲ್ಲಿ ಗವರ್ನರರು

ತಾ. ೧೮ರಂದು ಬೆಳಗ್ಗೆ ತಮ್ಮ ಸ್ವಂತ ರೈಲು ಗಾಡಿಯಲ್ಲಿ ಕಾಸರಗೋಡಿಗೆ ತೆರಳಿದ ಗವರ್ನರರು, ೧೦ ಘಂಟೆಗೆ ತಮ್ಮ ಪತ್ನಿಯೊಡನೆ ಬೀದಿಗಳಲ್ಲಿ ಸವಾರಿ ಹೊರಟರು. ಬಳಿಕ ಜರಗಿದ ಸಭೆಯಲ್ಲಿ ಶ್ರೀ ಪಿ. ಜಿ. ಸುಬ್ರಹ್ಮಣ್ಯಂ ಅವರು ಯುದ್ಧ ಚಟುವಟಿಕೆಗಳ ವರದಿಯನ್ನೋದಿದರು. ೬೬,೦೦೦ ರೂ. ಗಳ ನಿಧಿಯು ಗವರ್ನರರಿಗೆ ಇಲ್ಲಿ ಅರ್ಪಿಸಲ್ಪಟ್ಟಿತು.

ತಮ್ಮ ಭಾಷಣದಲ್ಲಿ ಗವರ್ನರರು, ಕಾಸರಗೋಡಿನ ಜನರು ಯುದ್ಧಾಸಕ್ತರಾಗಿರುವುದಕ್ಕಾಗಿ ತೃಪ್ತಿಯನ್ನು ತೋರ್ಪಡಿಸಿ, ಅಲ್ಲಿಂದ ಅಷ್ಟು ಹಣ ತಮಗೆ ಕೊಟ್ಟುದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು. ಯುದ್ಧದ ಪರಿಸ್ಥಿತಿಯ ಕುರಿತು ಅವರು ಮಾತನಾಡುತ್ತಾ ವೈರಿಗಳ ಶಕ್ತಿಯು ಕುಂದಿದೆಯೆಂದು ಹೇಳಿ, ಅಂತ್ಯ ಜಯವು ತಮಗೇ ದೊರಕುವುದೆಂದರು. ಶ್ರೀ ಎಂ. ಪಿ. ನಾರಾಯಣ ಮೆನನರು ಧನ್ಯವಾದಗಳನ್ನರ್ಪಿಸಿದರು. ಗವರ್ನರರು ಇಲ್ಲಿಂದ ತಲಚೇರಿಗೆ ಪ್ರಯಾಣ ಬೆಳೆಸಿದರು.

ಈ ಜಿಲ್ಲೆಯಿಂದ ಈವರೆಗೆ ಗವರ್ನರರ ಯುದ್ಧ ನಿಧಿಗೆ ಒಟ್ಟು ಹಣ, ನಮ್ಮ ಜಿಲ್ಲೆ ಸಂದದ್ದು ೫ ಲಕ್ಷದ ೬೦ ಸಾವಿರ ರೂಪಾಯಿಗಳೆಂದು ತಿಳಿದು ಬರುತ್ತದೆ.

ಕಯ್ಯೂರು ಆರೋಪಿಗಳಿಗಾಗಿ ಸಾರ್ವಭೌಮರಲ್ಲಿ ಜೀವದಾನ ಬೇಡಿಕೆ

ಕಯ್ಯೂರು ಆರೋಪಿಗಳ ಕುರಿತು, ಮಂಗಳೂರು ಜಡ್ಜರು, ಈ ಕೋರ್ಟಿನ ಇತಿಹಾಸದಲ್ಲೇ ದೀರ್ಘಕಾಲದ ವಿಚಾರಣೆ ನಡೆಸಿ, ಶ್ರೀಗಳಾದ ಮಡತ್ತಿಲ್ ಅಪ್ಪು, ಪದುವರತ್ ಕುಂಞಂಬು ನಾಯರ್, ಕೋಯಿತಟ್ಟ ಚಿರುಕಂಡನ್ ಮತ್ತು ಪಳ್ಳಿಕಾಲ್ ಅಬೂಬಕರ್ ಎಂಬವರಿಗೆ ಫಾಶಿ ಶಿಕ್ಷೆ ವಿಧಿಸಿದರಷ್ಟೆ? ಆ ಫಾಶಿ ಶಿಕ್ಷೆ ಮದ್ರಾಸು ಹೈಕೋರ್ಟಿನ ಅಪೀಲಿನಲ್ಲೂ ಖಾಯಂ ಆಗಲು, ಗವರ್ನರರಲ್ಲಿ, ಆ ಮೇಲೆ ವೈಸರಾಯರಲ್ಲಿ ಮಾಡಿಕೊಂಡ ಜೀವದಾನ ಬೇಡಿಕೆಗಳೂ ನಿಷ್ಫಲವಾಗಲು, ಲಂಡನಿನ ಪ್ರಿವಿಕೌನ್ಸಿಲಿಗೆ ಇದರ ಅಪೀಲನ್ನು ಒಯ್ಯಲಾಯಿತು. ಆದರೆ ಪ್ರಿವಿಕೌನ್ಸಿಲು ಈ ಅಪೀಲನ್ನು ಸ್ವೀಕರಿಸಿಕೊಳ್ಳಲೇ ಇಲ್ಲ. ಹೀಗಾದದ್ದೂ, ಮುಂತಿನ ಪ್ರಯತ್ನವನ್ನು ಮಾಡಲೆಂದು ಸೋರೆನ್ಸನ್ ಮೊದಲಾದ ಪಾರ್ಲಿಮೆಂಟ್ ಸದಸ್ಯರು, ಭಾರತಮಂತ್ರಿ ಅಮೆರಿಯವರಲ್ಲಿ ಜೀವದಾನ ಬೇಡಿಕೆಯ ಬಗ್ಗೆ ಒಂದು ಶಿಷ್ಟ ಮಂಡಳಿ ಒಯ್ಯಲು ಪ್ರಯತ್ನಿಸಿ ಸಂಘಟಿಸಿ, ಆ ಬಗ್ಗೆ ಅಮೆರಿಯವರ ಅನುಮತಿಗೆ ಬರೆದರು. ಅಮೆರಿಯವರು, ಆ ಬಗ್ಗೆ ತನ್ನಲ್ಲಿ ಶಿಷ್ಟ ಮಂಡಳಿ ತರುವುದೇ ಅವಶ್ಯವಿಲ್ಲವೆಂದು ಹೇಳಿಬಿಟ್ಟರು! ಆದರೂ ನಿರಾಶಗದೆ, ಈಗ ಸ್ವತಃ ಸಾರ್ವಭೌಮರಲ್ಲಿಯೇ ಜೀವದಾನ ಬೇಡಿಕೆಯ ಕೊನೆಯ ಸಾಹಸ ಮಾಡುವ ಪ್ರಯತ್ನವಿದೆ. ರೆವೆರೆಂಡ್ ಗೋರ್ಡಾನ್ ಲಿವಿಂಗ್‌ಸ್ಟೋನ್ ಎಂಬ ಎಡಿನ್‌ಬರೋದ ಪ್ರಸಿದ್ಧ ಮಂತ್ರಿಗಳು ಕಯ್ಯೂರು ಕೇಸಿನಲ್ಲಿ ಸಾರ್ವಭೌಮರು ಪ್ರವೇಶಿಸಿ ಜೀವದಾನ ಕೊಡಿಸಬೇಕೆಂದು ವಿನಂತಿಸಿಕೊಂಡಿದ್ದಾರೆ. ಲಂಡನಿನ ಸಿವಿಲ್ ಲಿಬರ್ಟಿಸ್ ಕೌನ್ಸಿಲಿನವರು, ವೈಸರಾಯರಿಗೂ ಗವರ್ನರರಿಗೂ ಕೈಯ್ಯೂರು ಆರೋಪಿಗಳಿಗೆ ಜೀವದಾನ ಕೊಡಿಸಬೇಕೆಂದು ವಿನಂತಿಸಿ ತಂತಿ ಕೊಟ್ಟಿರುವರು. ಸಾರ್ವಭೌಮರೊಡನೆ ಬೇಡಿಕೊಳ್ಳುವ ಈ ಪ್ರಯತ್ನ ಮುಗಿವವರೆಗೆ, ಕೈಯ್ಯೂರು ಆರೋಪಿಗಳ ಫಾಶಿಶಿಕ್ಷೆ ಮುಂದುವರಿಸುವಂತೆ ಪ್ರಾಂತೀಯ ಸರಕಾರವನ್ನು ವಿನಂತಿಸಿಕೊಳ್ಳಲಾಗಿದೆ. ಈ ಬಗ್ಗೆ ಸಾರ್ವಭೌಮರಲ್ಲಿ ಇವರ ಜೀವದಾನ ಬೇಡಿಕೆ ವಿನಂತಿಮಾಡಲು, ಅಖಿಲ ಭಾರತದಲ್ಲಿ, ವಿಶೇಷವಾಗಿ ಕೇರಳದಲ್ಲಿ ನಗರ ನಗರ, ಗ್ರಾಮ ಗ್ರಾಮಗಳಿಂದಲೂ ವಿನಂತಿಗಳು ಹೋಗುತ್ತಿವೆ.

ಕಮ್ಯೂನಿಸ್ಟ್ ಮುಖಂಡರು ಕಯ್ಯೂರಲ್ಲಿ

ಅಖಿಲಭಾರತ ಕಮ್ಯೂನಿಸ್ಟ್ ಪಕ್ಷದ ಜನೆರಲ್ ಸೆಕ್ರೆಟರಿಗಳಾದ ಶ್ರೀ. ಪಿ. ಸಿ. ಜೋಶಿಯವರು ಆಂಧ್ರ ಕೇರಳ ಕಮ್ಯುನಿಸ್ಟ್ ನಾಯಕರಾದ ಶ್ರೀಯುತರು ಸುಂದರಯ್ಯ ಮತ್ತು ಕೃಷ್ಣಪಿಳ್ಳೆಯವರೊಡಗೂಡಿ, ದಕ್ಷಿಣ ಕನ್ನಡದ ಕಾಂಗ್ರೆಸ್ ಮುಂದಾಳುಗಳೂ, ಮಂಗಳೂರು ಸೆಶ್ಶನ್ ಕೋರ್ಟಿನಲ್ಲಿ ಕಯ್ಯೂರು ಆರೋಪಿತರ ಪರವಾಗಿ ವಾದಿಸಿದ ವಕೀಲರೂ ಆದ ಶ್ರೀ. ರಂಗರಾವ್ ತಲಚೇರಿಕರರೊಂದಿಗೆ ಕಳೆದವಾರ ಕಯ್ಯೂರನ್ನು ಸಂದರ್ಶಿಸಿ ಫಾಶಿ ಶಿಕ್ಷೆಗೆ ಗುರಿಯದವರ ಆಪ್ತ ಸಂಬಂಧಿಕರನ್ನು ಕಂಡು ಮಾತನಾಡಿ ಮರಳಿದರು.

THE

Canara Industrial & Banking Syndicate, Ltd.

(Incorporated in British India. Liability of Shareholders limit).

Estd.) Head Office: UDIPI, S. India (1925.

ANNOUNCEMENT.

The remaining issue of the 5% Cumulative Preference Shares of the Bank will be sold at an increased rate of premium of Re. 1/- per share after 1st May 1943 as the Bank is compelled to make a larger provision for payment of In-come-tax according to increased rates of taxation. Subscription for the shares at the present rates will however be received at all our Branches till 15th April 1943.

THE CANARA BANKING CORPORATION Ltd.

(Incorporated in British India with limited liability).

STATEMENT OF AFFAIRS AS ON 31ST DECEMBER 1943.

Capital & Liabilities	Rs. As. Ps.	Property & Assets	Rs. As. Ps.
Paid up Capital	6,36,890 0 0	Office premises, furniture, etc.	91,659 0 0
Reserve & other funds	3,71,882 13 11	Advances	31,28,612 4 9
Deposits	41,83,873 4 1	Investment on Govt. Securities etc. at cost	15,34,536 14 3
Due to Bankers	5,08,545 12 1	Sundries	74,183 5 7
Bills per contra	3,59,357 12 1	Bills for Collection	3,59,357 12 1
Sundries including branch adjustments & undisbursed profits	2,83,736 5 9	Cash on Hand & with bankers	12,05,397 14 8
Profit for the year 1942	49,461 3 5		
Total Rs.	63,93,747 3 4	Total Rs.	63,93,747 3 4

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ನಿರ್ವಹಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜೆಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯ, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ರಕ್ತವಾತ, ನೆಗಡಿಯೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು   ಕಲ್ಲಿಕೋಟೆ   ಸೇಲಂ   ತಿರುವಾಂಕೂರು   ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic 'medicines failed. A specific for threatened or habitualabortion andother uterine troubles Must be commense soen after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು; ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:–
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಬಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:–1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ರಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. 1906
[ಸಂಪುಟ 37] ತಾರೀಕು 2—4—1943 [ಸಂಚಿಕೆ 13]

ನಮ್ಮನ್ನಗಲಿದ ಸತ್ಯಮೂರ್ತಿ

ಅಖಿಲಭಾರತದ ಅದ್ವಿತೀಯ ವಾಗ್ಮಿಶ್ರೇಷ್ಠರೂ, ಕಾಂಗ್ರೆಸ್ ಮುಂದಾಳುಗಳೂ ಕೇಂದ್ರ ಶಾಸನ ಸಭಾ ಸದಸ್ಯರೂ ಆದ ಶ್ರೀಮಾನ್ ಎಸ್. ಸತ್ಯಮೂರ್ತಿಯವರು ಇದೇ ಮಾರ್ಚಿ ತಿಂಗಳ ೨೮ನೆಯ ತಾರೀಕಿನಂದು ರಾತ್ರಿ ಒಂದು ಗಂಟೆಯ ಹೊತ್ತಿಗೆ ವಿಧಿವಶರಾದರೆಂಬ ವಿಷಾದಕರ ವಾರ್ತೆಯನ್ನು ಕೇಳಿ ಇಂದು ಅಖಿಲ ಭಾರತವೇ ಕಂಬನಿಯ ಕಡಲಲ್ಲಿ ಅದ್ದಿದೆ; ಭಾರತ ಮಾತೆ ತನ್ನ ಸುಪುತ್ರನೊಬ್ಬನನ್ನು ಕಳೆದುಕೊಂಡು ದುಃಖಿತಳಾಗಿದ್ದಾಳೆ. ಕಳೆದ ೧೯೪೨ರ ಆಗಸ್ಟ್ ತಿಂಗಳಲ್ಲಿ ಬೊಂಬಯಿಯಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಗೆ ಹೋಗಿದ್ದ ಅವರು ಅಲ್ಲಿಂದ ಮದ್ರಾಸಿಗೆ ಮರಳುವಂದು, ಅರ್ಕೋಣಂ ರೈಲ್ವೆ ನಿಲ್ದಾಣದಲ್ಲಿ ಆಗಸ್ಟ್ ತಾ. ೧೧ರಂದು ಬಂಧಿಸಲ್ಪಟ್ಟು, ಸ್ಥಾನಬದ್ಧರಾಗಿಡಲ್ಪಟ್ಟವರು ಹೀಗೆ ಭಾರತ ಸ್ವಾತಂತ್ರ್ಯ ಸಂಗ್ರಾಮ ರಂಗದಲ್ಲಿಯೇ ಭಾರತ ಪುತ್ರರಿಗೆ ಆದರ್ಶಕರವೂ ಸ್ಫೂರ್ತಿದಾಯಕವೂ ಆಗುವಂಥಾ ವೀರ ಮರಣವನ್ನು ಹೊಂದಿದರು. ಭಾರತದ ಪುತ್ರ ಪುತ್ರಿಯರೆಲ್ಲರೂ ಇಂದು ಶ್ರೀಮಾನ್ ಸತ್ಯಮೂರ್ತಿಯವರ ವಿಧವಾ ಪತ್ನಿ ಮತ್ತು ದುಃಖಿತ ಪುತ್ರಿಯ ಸಂತಾಪದಲ್ಲಿ ಅತ್ಯಂತವಾದ ಸಹಾನುಭೂತಿಯುಳ್ಳವರಾಗಿ, ಗತಿಸಿದ ಮಹಾತ್ಮ ಜೀವಕ್ಕೆ, ಮಾತೃಭೂಮಿಯ ಸೇವೆಯಲ್ಲಿ ವಿಶ್ರಾಂತಿಯಿಲ್ಲದೆ ಹೋರಾಡಿದ ಪುಣ್ಯ ಜೀವಕ್ಕೆ ಪರಮಾತ್ಮನು ಚಿರಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥನೆ ಸಲ್ಲಿಸುತ್ತಾರೆ!

ಕಳೆದ ೧೯೪೨ನೇ ಇಸವಿಯ ಆಗಸ್ಟ್ ತಿಂಗಳು ಭಾರತದ ಇತಿಹಾಸದಲ್ಲಿ ಪ್ರಸಿದ್ಧವಾದುದು; ಆ ತಿಂಗಳ ನಂತರದ ಘಟನೆಗಳನ್ನೂ ನಾವು ಎಂದೆಂದೂ ಮರೆಯಲಾರೆವು. ಮಹಾತ್ಮಾ ಗಾಂಧಿ, ನೆಹರು, ಅಜಾದ್ ಮೊದಲಾದ ಅಖಿಲಭಾರತ ಮುಖಂಡರಿಂದ ತೊಡಗಿ ಪ್ರಾಂತ ಜಿಲ್ಲೆಗಳ ಮುಖಂಡರೂ ಒಮ್ಮೆಲೇ ನಮ್ಮ ಮಧ್ಯದಿಂದ ಸೆಳೆಯಲ್ಪಟ್ಟು ಬಂಧನಕ್ಕೆ ಸೇರಿಸಲ್ಪಟ್ಟರು. ಎಷ್ಟೋ ಮಂದಿ ಮುಖಂಡರು ಅಖಿಲಭಾರತ ಕಾಂಗ್ರೆಸ್ ಕಮಿಟಿ ಸಭೆಗೆ ಹೋಗಿದ್ದವರು, ಮುಂಬಯಿಯಲ್ಲಿಯೇ ಸೆರೆಮನೆಗೆ ಸಾಗಿಸಲ್ಪಟ್ಟರು; ಎಷ್ಟೋ ಮಂದಿ ತಮ್ಮ ತಮ್ಮ ಊರಿಗೆ ಮರಳಿದವರು ಮಧ್ಯಮಾರ್ಗದಲ್ಲಿ ಜೈಲು ಸೇರಿದರು; ಎಷ್ಟೋ ಮುಂದಾಳುಗಳು ಮುಂಬಯಿ ಸಭೆಗೆ ಹೋಗದಿದ್ದವರೂ ತಮ್ಮ ತಮ್ಮ ಊರಲ್ಲಿಯೇ ಅಕಸ್ಮಾತ್ ಸೆರೆಮನೆ ಕಂಡರು. ಇದೇ ಸಂದರ್ಭದಲ್ಲಿ ಶ್ರೀಮಾನ್ ಸತ್ಯಮೂರ್ತಿಯವರೂ, ಮುಂಬಯಿ ಸಭೆಯಿಂದ ಮರಳುವರೇ ಮಧ್ಯಮಾರ್ಗದಲ್ಲಿ ಬಂಧಿಸಲ್ಪಟ್ಟು ವೆಲ್ಲೂರು ಸೆರೆಮನೆಗೆ ಸಾಗಿಸಲ್ಪಟ್ಟರು. ಅಲ್ಲಿಂದ ಕೆಲದಿನಗಳ ನಂತರ ದಕ್ಷಿಣ ಭಾರತದ ಪ್ರಮುಖ ಮುಖಂಡರೊಡನೆ ಶ್ರೀ ಸತ್ಯಮೂರ್ತಿಯವರನ್ನೂ ಅಮರಾವತಿಗೆ ಸಾಗಿಸಲಾಯಿತು. ಅಲ್ಲಿಯೇ ಅವರು ಬೇನೆ ಬಿದ್ದರು; ಅಲ್ಲಿನ ಆರ್ಪಿನ್ ಹಾಸ್ಪಿಟಲ್‌ನಲ್ಲಿ ಕೆಲಕಾಲ ಚಿಕಿತ್ಸೆ ನಡೆಯಿತು. ಅಲ್ಲಿಂದ ಅವರನ್ನು ಜನವರಿ ೧೦ಕ್ಕೆ ಮದ್ರಾಸು ಜನರಲ್ ಹಾಸ್ಪಿಟಲಿಗೆ ಒಯ್ಯಲಾಯಿತು. ಸರಕಾರವು ಫೆಬ್ರವರಿ ೨ರಂದು ಅವರನ್ನು ಅನಾರೋಗ್ಯದ ನಿಮಿತ್ತ ಬಂಧನದಿಂದ ಬಿಡುಗಡೆ ಮಾಡಿರುವುದಾಗಿ ಸಾರಿತು. ಶ್ರೀಮಾನ್ ಸತ್ಯಮೂರ್ತಿಯವರು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿಯೇ ಉಳಕೊಂಡಿದ್ದರು. ಕೆಲದಿನಗಳ ಹಿಂದೆ ಅವರ ದೇಹ ಪರಿಸ್ಥಿತಿಯಲ್ಲಿ ತುಸು ಸುಧಾರಣೆ ಕಂಡರೂ ಒಂದು ವಾರದ ಹಿಂದೆ ದೇಹ ಪರಿಸ್ಥಿತಿ ಪುನಃ ಕೆಡುತ್ತಾ ಬಂದಿತ್ತು. ಕೊನೆಗೆ ಕಳೆದ ಮಾರ್ಚಿ ೨೮ರಂದು ರಾತ್ರಿ ೧ ಗಂಟೆ ಹೊತ್ತಿಗೆ ಅವರ ಪ್ರಾಣ ವಾಯುವು ಪಾರ್ಥಿವ ಶರೀರವನ್ನಗಲಿ ಹೋಯಿತು; ಅದರಿಂದ ಅಖಿಲಭಾರತವೇ ಕಂಗೆಟ್ಟಿತು.

ಕೊನೆಯ ದರ್ಶನ

ತಾ. ೨೮ರಂದು ಬೆಳಗ್ಗೆ ಆಸ್ಪತ್ರೆಯಿಂದ ಶ್ರೀ ಸತ್ಯಮೂರ್ತಿಯವರ ಮೃತಕಳೇಬರವನ್ನು ತ್ಯಾಗರಾಜ ನಗರದಲ್ಲಿರುವ ಅವರ ಮನೆಗೆ ತರಲಾಗಿತ್ತು. ಅದೇ ಮಧ್ಯಾಹ್ನ ಅವರ ಪಾರ್ಥಿವ ಶರೀರದ ಮಹಾಸಮಾಧಿಯು ಮಾಂಬಳಂದಲ್ಲಿರುವ ಸಮಾಧಿ ಸ್ಥಳದಲ್ಲಿ ನೆರವೇರಿಸಲ್ಪಟ್ಟಿತು. ತಮ್ಮ ಪ್ರೀತಿಯ ಮುಂದಾಳುವಿನ,—ಭಾರತ ಮಾತೆಯ ಉದಾತ್ತ ಪುತ್ರನ—ಈ ಕೊನೆಯ ದರ್ಶನಕ್ಕೆಂದು ಅಗಣಿತ ಜನ ಸಂದೋಹ, ಬೇರೆ ಬೇರೆ ಸಂಸ್ಥೆಗಳ ಅನೇಕ ಪ್ರತಿನಿಧಿಗಳು ಆ ಬಾಲ ವೃದ್ಧರಾದಿ ಕಂಬನಿ ಸುರಿಸುತ್ತಾ ಅಲ್ಲಿ ಕೂಡಿತ್ತು. ಆ ಗಂಭೀರ ರುದ್ರ ಮೌನ ವಾತಾವರಣದಲ್ಲಿ ಅಗ್ನಿ ನಾರಾಯಣನು ತನ್ನ ಉಜ್ವಲ ಜ್ವಾಲೆಯಿಂದ ಆ ಮಹಾ ಮುಖಂಡನ ಪಾರ್ಥಿವ ಶರೀರವನ್ನು ಪಾವನ ದಹನ ಮಾಡುತ್ತಿದ್ದನು! ಬೆಳಗುವ ಶುಭ್ರ ಕೀರ್ತಿಯಂತೆ, ಪವಿತ್ರಾತ್ಮದ ಉಜ್ವಲ ಪ್ರಭೆಯಂತೆ ಚಿತಾ ಜ್ವಾಲೆ ಊರ್ಧ್ವಮುಖವಾಗಿ ಬೆಳಗುತಿತ್ತು.

ಶ್ರೀ ಸತ್ಯಮೂರ್ತಿಯವರ ನಿಧನ ವಾರ್ತೆಯು ಮದ್ರಾಸು ನಗರದಲ್ಲಿ ವಿದ್ಯುದ್ವಿಲಾಸದಿಂದ ಹಬ್ಬಿತು. ಅವರ ಅನೇಕ ಮಂದಿ ಒಡನಾಡಿಗಳು, ಸಂಬಂಧಿಕರು, ಗೆಳೆಯರು, ಆರಾಧಕರು ಗತಿಸಿದ ಜೀವಕ್ಕೆ ತಮ್ಮ ಭಕ್ತಿಯನ್ನು, ಪ್ರೇಮವನ್ನು ಸಲ್ಲಿಸಲು ಕೊನೆಯ ದರ್ಶನವೊಂದನ್ನು ಪಡೆಯಲು ಬಂದರು; ಇವರಲ್ಲಿ ರೈ। ಆ। ಶ್ರೀನಿವಾಸ ಶಾಸ್ತ್ರಿ, ಜಸ್ಟಿಸ್‌ರು ಪತಂಜಲಿ ಶಾಸ್ತ್ರಿ ಮತ್ತು ಚಂದ್ರಶೇಖರ ಅಯ್ಯರ್, ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಶ್ರೀಗಳಾದ ಸಿ. ಟಿ. ಮುದಲಿಯಾರ್, ಒ. ಪಲ್ಲ ರೆಡ್ಡಿ, ಆರ್. ಡಬ್ಲ್ಯು. ತ್ರೋ ಬಾಲ್ಡ್, ಜಿ. ಜಿ. ಆರ್. ಸ್ಟ್ಯಾಂಗ್, ಪಿ. ವರದರಾಜಲು ನಾಯುಡು, (ಕೆಪ್ಟನ್.) ಪಿ. ಕೃಷ್ಣ ಸ್ವಾಮಿ, ಜಿ. ನಾರಾಯಣ ಸ್ವಾಮಿ ಚೆಟ್ಟಿ, ಎಸ್. ವೆಂಕಟೇಶ ಅಯ್ಯಂಗಾರ್, ಸಾಮಿ ವೆಂಕಟಾಚಲಂ ಚೆಟ್ಟಿ, ಕೆ. ಶ್ರೀನಿವಾಸನ್, ಸಿ. ಆರ್. ಶ್ರೀನಿವಾಸನ್, ಡಾ। ಯು. ರಾಮರಾವ್, ಮೊದಲಾದವರು ಹಾಗೂ ಮದ್ರಾಸ್ ಕಾರ್ಪರೇಶನಿನ ಅನೇಕ ಮಂದಿ ಸದಸ್ಯರು ಪ್ರಮುಖರಾಗಿದ್ದರು. ಪ್ರಾತಃ ೧೧-೩೦ ಗಂಟೆಗೆ ಮನೆಯಿಂದ ಶವದ ಮೆರವಣಿಗೆ ಹೊರಟಿತು. ಮೃತಕಳೇಬರವನ್ನು ಹೊತ್ತವರಲ್ಲಿ ಅವರ ಕೆಲ ಮಂದಿ ಸಂಗಾತಿಗಳು, ಗೆಳೆಯರೂ ಇದ್ದರು.

ಸಮಾಧಿ ಸ್ಥಳದಲ್ಲಿ ಶ್ರೀಮಾನ್ ಸತ್ಯಮೂರ್ತಿಯವರ ಬಹುಮುಖದ ರಾಷ್ಟ್ರಸೇವೆಯನ್ನು ಪ್ರಶಂಸಿಸಿ ಹಲವು ಮಂದಿ ಪ್ರಮುಖರಿಂದ ಬೇರೆ ಬೇರೆ ಸಂಸ್ಥೆಗಳ ಪ್ರತಿನಿಧಿಗಳಿಂದ ಭಾಷಣಗಳಾದವು. ಶ್ರೀ. ಎಸ್. ಕೆ. ಯಜ್ಞನಾರಾಯಣ ಅಯ್ಯರ್ ವೇದ ಮಂತ್ರಗಳನ್ನು ಹೇಳಿದರು. ಡಾ। ಸುಬ್ಬರಾಯನರು ಮಾತನಾಡುತ್ತಾ, ಮಾತೃಭೂಮಿಗೆ ಶ್ರೀ ಸತ್ಯಮೂರ್ತಿಯವರು ಮಾಡಿದ ಸೇವೆ, ಕಾಂಗ್ರೆಸಿಗೆ ಅವರು ತೋರಿಸಿದ ನಿಷ್ಠೆಯುತೆಗಳನ್ನು ವಿವರಿಸಿ, ಶ್ರೀ ಸತ್ಯಮೂರ್ತಿಯವರ ಆದರ್ಶವು ರಾಷ್ಟ್ರದ ಯುವಕರಿಗೆ ಸ್ಫೂರ್ತಿದಾಯಕವಾದುದೆಂದು ಹೇಳಿದರು. ಶ್ರೀ ಕೆ. ವೆಂಕಟ ಸ್ವಾಮಿ ನಾಯ್ಡುಗಳು, ಶ್ರೀ ಸತ್ಯಮೂರ್ತಿಯವರಿಗಿದ್ದ ನಾಗರಿಕ ಕರ್ತವ್ಯದಕ್ಷತೆಗಳನ್ನು ಕೊಂಡಾಡಿ, ಮದ್ರಾಸು ಕೋರ್ಪರೇಶನಿನ ಮೇಯರರಾಗಿ ಅವರು ಸಲ್ಲಿಸಿದ ಸೇವೆಯನ್ನು ಪ್ರಸಂಶಿಸಿ, 'ಪೂಂಡಿ ರಿಸರ್ವೋಯರ್' ಯೋಜನೆಯು ಅವರ ಈ ಮುಖದ ಕರ್ತವ್ಯದಕ್ಷತೆಯ ಕುರುಹಾಗಿದೆಯೆಂದು ತಿಳಿಸಿದರು. ಅನಂತರ ಶ್ರೀ. ವಿ. ಚಕ್ಕರೈಯ ಚೆಟ್ಟಿಯರರು ಮಾತನಾಡಿ, ಶ್ರೀ ಸತ್ಯಮೂರ್ತಿಯವರ ಮರಣದಿಂದ ಭಾರತದ ರಾಷ್ಟ್ರೀಯತೆಗಾದ ಹಾನಿಯನ್ನು ತಿಳಿಸಿ, ಅವರ ಬಹುಮುಖದ ಪಾಂಡಿತ್ಯವನ್ನು ಪ್ರಶಂಸಿಸಿದರು. ಹಿಂದೀ ಪ್ರಚಾರ ಸಭೆಯ ಶ್ರೀ ಅವಧನಂದನರು ಮಾತನಾಡುತ್ತಾ, ಇಂಥಾ ಓರ್ವ ಸಾರ್ವಜನಿಕ ಕಾರ್ಯ ಪಟುವನ್ನು ಕಳೆದುಕೊಂಡದ್ದರಿಂದ ರಾಷ್ಟ್ರಕ್ಕೊದಗಿದ ಹಾನಿಯೆಷ್ಟೆಂದು ಹೇಳಿದರು. ಆ ಮೇಲೆ ಕಮ್ಯುನಿಸ್ಟ್ ಪಕ್ಷದ ಪರವಾಗಿ ಶ್ರೀಗಳಾದ ಜಿ. ಸೆಲ್ವಾಪತಿ ಚೆಟ್ಟಿ ಮತ್ತು ಪಿ. ರಾಮಮೂರ್ತಿಯವರೂ, ದಳಿತವರ್ಗದ ಪರವಾಗಿ ಶ್ರೀ ಶಿವಷಣ್ಮುಗಂ ಪಿಳ್ಳೆಯವರೂ ಯುವಕರ ಪರವಾಗಿ ಶ್ರೀ. ಎಲ್. ಎಸ್. ಮಾಣಿಯವರೂ ಇನ್ನು ಕೆಲವರೂ ಮೃತರನ್ನು ಕೊಂಡಾಡಿ ಮಾತನಾಡಿದರು.

ಜೀವನ ಪರಿಚಯ

ಶ್ರೀ ಸತ್ಯಮೂರ್ತಿಯವರು ೧೮೮೭ನೇ ಇಸವಿ ಆಗಸ್ಟ್ ೧೯ರಂದು ಪುದುಕೋಟ ಸ್ಟೇಟಿನ ತಿರುಮಾಯಣಂನಲ್ಲಿ ಒಂದು ಮಧ್ಯ ತರಗತಿಯ ವಿದ್ಯಾವಂತ ಕುಟುಂಬದಲ್ಲಿ ಜನ್ಮವೆತ್ತಿದರು. ಅವರ ತಂದೆಯವರೂ ವಕೀಲರು. ಶ್ರೀ ಸತ್ಯಮೂರ್ತಿಯವರು ಪುದುಕೋಟ ರಾಜಾಸ್ ಕೋಲೇಜ್ ಮತ್ತು ಮದ್ರಾಸ್ ಕ್ರಿಶ್ಚನ್ ಕೋಲೇಜುಗಳಲ್ಲಿ ತೇರ್ಗಡೆ ಹೊಂದಿ, ಮದ್ರಾಸ್ ಲಾ ಕಾಲೇಜಿನಲ್ಲಿ ವಕಾಲತ್ತು ಪಾಸಾದರು. ಎಡ್ವೋಕೇಟಾಗಿ ತನ್ನ ಜೀವನವನ್ನು ಪ್ರಾರಂಭಿಸಿದವರೇ ಸಹಜವಾಗಿ ರಾಜಕೀಯರಂಗಕ್ಕೆ ಆಕರ್ಷಿಸಲ್ಪಟ್ಟರು. ಕಳೆದ ಕಾಲು ಶತಮಾನದ ಅವರ ಸಾರ್ವಜನಿಕ ಸೇವೆಯೆಂದರೆ ಅವಿಶ್ರಾಂತ. ಸೇವಾ ಸೋಪಾನವನ್ನಡರಿ ರಾಷ್ಟ್ರದ ಉನ್ನತ ಪೀಠದಲ್ಲಿ ವಿರಾಜಮಾನರಾದರು. ಪ್ರಾರಂಭದಿಂದಲೇ ಅವರಿಗಿದ್ದ ಅಸದೃಶವಾದ ವಾಗ್ಮಿತೆಯು ಅವರನ್ನು ಈ ಮೇಲ್ಪಟ್ಟಕ್ಕೇರಿಸಲು ಹೆಚ್ಚಿನ ಸಹಕಾರಿಯಾಯಿತು. ೧೯೧೯ರಲ್ಲಿಯೇ ಅವರು ಬ್ರಿಟನಿಗೆ ಮತ್ತು ಐಯರ್ಲೆಂಡಿಗೆ ಹೋದ ಕಾಂಗ್ರೆಸಿನ ಶಿಷ್ಟಮಂಡಳದಲ್ಲಿ ಒಬ್ಬರಾಗಿದ್ದರು; ೧೯೨೫ರಲ್ಲೂ ಅವರು ಅಂಥದೇ ಕಾರ್ಯಕ್ಕಾಗಿ ವಿದೇಶ ಯಾತ್ರೆ ಮಾಡಿದರು. ಕಾಂಗ್ರೆಸ್ ರಾಜಕೀಯಕ್ಕೆ ಅವರು ನಿಜವಾಗಿ ಕಾಲಿಟ್ಟದ್ದು ದೇವಿ ಸರೋಜಿನಿಯವರ ಅಧ್ಯಕ್ಷತೆಯಿಂದ ಕೂಡಿದ ಕಾಂಜೀವರಂ ಕಾಂಗ್ರೆಸ್ ಸಮ್ಮೇಳನದ ಬಳಿಕ. ಆಗ ಪ್ರಭಾವಶಾಲಿ ಮುಂದಾಳೆನಿಸಿದ್ದ ಡಾ। ಅ ಅನಿಬೆಸೆಂಟನ್ನುನ ವಿರುದ್ಧ ಪಂಥ ಹೂಡಿ ಹೋರಾಡಿ, ಶ್ರೀ ಸತ್ಯಮೂರ್ತಿಯವರು ಅಪ್ರತಿಮ ವಾಗ್ಮಿಯೆನಿಸಿ ಗೆದ್ದರು. ಅದು ಅವರ ಮೊದಲನೆಯ ಜಯ. ಆ ಸಮ್ಮೇಳನದಿಂದ ಹೊರಬಂದವರೇ ತಮ್ಮ ಯಶೋ ದುಂದುಭಿಯನ್ನು ಬೇರೆ ಬೇರೆ ಸಭಾರಂಗಗಳಲ್ಲಿ ಮೊಳಗಿಸಿದರು. ಆ ಮೇಲೆ ದಾಸರು ನೋತೀಲಾಲರು ಮತ್ತು ಶ್ರೀನಿವಾಸಯ್ಯಂಗಾರರು 'ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದಾಗ ದ್ವಿದಳ ರಾಜ್ಯಭಾರವನ್ನು ಮುರಿಯಲು ಸೊಂಟಕಟ್ಟಿ ಆ ಪಕ್ಷಕ್ಕೆ ಸೇರಿದರು. ಶ್ರೀ. ಸತ್ಯಮೂರ್ತಿ ಆ ಪಕ್ಷಕ್ಕೆ ಸೇರಿದ್ದು ಬಲಗೈ ಬಂದಂತಾಯಿತು. ಮದ್ರಾಸು ಶಾಸನ ಸಭೆಯಲ್ಲಿ ಸ್ವರಾಜ್ಯಪಕ್ಷದಿಂದ ಚುನಾಯಿತ ಪ್ರತಿನಿಧಿಯಾಗಿದ್ದು ಅಲ್ಲಿ ವಿರೋಧ ಪಕ್ಷದ ಅಪ್ರತಿಮ ಮುಖಂಡರೆನಿಸಿದರು. ೧೯೨೭ರಂದು ಸಿ. ಆರ್. ರೆಡ್ಡಿಯವರು ಜಸ್ಟಿಸ್ ಪಕ್ಷದ ವಿರುದ್ಧ ಅವಿಶ್ವಾಸ ಠರಾವು ತಂದಾಗ ಶ್ರೀ ಸತ್ಯಮೂರ್ತಿಯವರು ಮಾಡಿದ ಭಾಷಣವು ಇತಿಹಾಸ ಪ್ರಸಿದ್ಧವಾದೊಂದು ಭಾಷಣವಾಗಿದೆ.

ಇತರ ಹಲವು ಕಾಂಗ್ರೆಸ್ ಮುಂದಾಳುಗಳಂತೆ ಅವರೂ ಸೆರೆಮನೆಯ ಅಗ್ನಿ ಪರೀಕ್ಷೆಗೆ ಅನೇಕ ಸಲ ಗುರಿಯಾದರು. ೧೯೩೦ರ ಸತ್ಯಾಗ್ರಹ ಆಂದೋಲನದಲ್ಲಿ ಪ್ರಮುಖ ಭಾಗವಹಿಸಿ, ಅವರಿಗೆ ಮೊದಲನೆಯ ಸಲ ಸೆರೆಮನೆ ವಾಸವ ಅನುಭವವಾಯಿತು. ಒಂದು ವರ್ಷದ ನಂತರ ಹೊರ ಬಂದರೂ ಕೂಡಲೇ ಬಂಧಿಸಲ್ಪಟ್ಟು ಪುನಃ ೧೮ ತಿಂಗಳ ಕಾರಾಗೃಹವಾಸ ಕಂಡರು. ಆ ಮೇಲೆ ೧೯೪೦ರಲ್ಲಿ ಪುನಃ ಅವರು ಜೈಲು ಸೇರಿದರು. ಅವರ ಕೊನೆಯ ಸೆರೆಮನೆ ಪ್ರವೇಶ ೧೯೪೨ರ ಆಗಸ್ಟ್ ತಿಂಗಳಲ್ಲಿ; ಮುಂಬಯಿ ಕಾಂಗ್ರೆಸ್ ಕಮಿಟಿ ಸಭೆಯಿಂದ ಮರಳುವಂದು. ಈ ಸಂದರ್ಭದಲ್ಲಿ ಅಸ್ವಸ್ಥರಾದವರು ಪುನಃ ಆರೋಗ್ಯ ಹೊಂದಲೇ ಇಲ್ಲ. ಹೀಗೆ ರಾಷ್ಟ್ರಕ್ಕಾಗಿ ಅವಿಶ್ರಾಂತ ದುಡಿದು ಶ್ರೀ ಸತ್ಯಮೂರ್ತಿಯವರಿಂದು ಚಿರ ವಿಶ್ರಾಂತಿ ಹೊಂದಿದರು!

ಅಧಿಕಾರ ಸ್ವೀಕಾರದಲ್ಲಿ

ಮದ್ರಾಸು ಪ್ರಾಂತದಲ್ಲಿ ಜನಜಾಗೃತಿ ರಾಜಕೀಯ ಜಾಗೃತಿ ಹುಟ್ಟಿಸುವಲ್ಲಿಗೆ ಶ್ರೀ ಸತ್ಯಮೂರ್ತಿಯವರು ಅವಿಶ್ರಾಂತ ಸೇವೆ ಸಲ್ಲಿಸಿ ಕೃತಾರ್ಥರಾಗಿದ್ದಾರೆ. ಈ ಪ್ರಾಂತದ ನಗರ

(೨ನೇ ಪುಟಕ್ಕೆ ಮುಂದುವರಿದಿದೆ)

'ಚರ್ಚಿಲರು ನಮಗೆ ಸ್ವಾತಂತ್ರ್ಯ ಕೊಡುವುದಿಲ್ಲ'

ಸರಕಾರವು ಶ್ವೇತಪತ್ರ ಹೊರಡಿಸಿದೆ!

ಬಂಗಾಳದ ಮೇಲೆ ಬಾಂಬು!

ಸರಕಾರದ ಶ್ವೇತಪತ್ರ

ಭಾರತದಲ್ಲೀಗ ನಡೆಯುತ್ತಿರುವ ಗಲಭೆಗಳಿಗೆ ಮಹಾತ್ಮಾ ಗಾಂಧಿಯವರು ಮತ್ತು ಕಾಂಗ್ರೆಸಿಗರು ಕಾರಣರೆಂದು ತಾವು ಹೇಳುತ್ತಿರುವುದನ್ನು ಸಮರ್ಥಿಸುವುದಕ್ಕಾಗಿ ಸರಕಾರದವರು ೫೦೦ರ ಪುಟಗಳ ಒಂದು ಶ್ವೇತಪತ್ರವನ್ನು ಪ್ರಸಿದ್ಧಿಸಿರುವರು. ಆ ಶ್ವೇತಪತ್ರದಲ್ಲಿ ಮಹಾತ್ಮರು ಆಗಸ್ಟ ೯ನೇ ತಾರೀಕಿನಿಂದ ಬ್ರಿಟಿಷರನ್ನು ಭಾರತ ಬಿಟ್ಟು ಹೋಗಿರೆಂದು ಹೇಳದಂದಿನಿಂದ ನಡೆದ ಘಟನೆಗಳಿವೆ. ಅದರಲ್ಲಿ ಕಾಂಗ್ರೆಸಿನವರು ಮತ್ತು ಗಾಂಧಿಜಿ ಅಹಿಂಸೆಯನ್ನು ಪಾಲಿಸುವುದರಲ್ಲಿ ಸಂಪೂರ್ಣ ವಿಶ್ವಾಸವುಳ್ಳವರಾಗಿಲ್ಲವೆಂದೂ ಬ್ರಿಟಿಷರು ಭಾರತ ಬಿಟ್ಟು ಹೊರಟುಹೋಗಿ, ಅವರ ಒಡೆತನ ಸ್ವಲ್ಪವೂ ಇರದಂತೆ ಮಾಡಬೇಕೆಂದು ಮಹಾತ್ಮರ ಉದ್ದೇಶವಿರುವುದೆಂದೂ, ಹೀಗೆ ಕಾಂಗ್ರೆಸು ಪ್ರಚಾರಮಾಡಿದ್ದರಿಂದ ದೇಶದಲ್ಲಿ ನಿರಾಶಾಮಯ ಭಾವನೆಯ ವಾತಾವರಣ ಹುಟ್ಟಿತೆಂದೂ, ಗಾಂಧಿಜಿ ಆಗಲೇ ಜಪಾನಿನೊಡನೆ ಸಂಧಾನಮಾಡಲು ಸಿದ್ಧರಿದ್ದರೆಂದೂ, ಇದನ್ನೆಲ್ಲಾ ನೋಡಿದರೆ ಕಾಂಗ್ರೆಸಿನವರು ಸಮಯ ಸಾಧಿಸಿ ಬ್ರಿಟಿಷರಿಗೆ ಕಷ್ಟ ಬಂದಾಗ ತಮ್ಮ ಪ್ರಯತ್ನ ಸಾಧಿಸಲು ಹೆಣಗಾಡಿದರೆಂದು ತೋರುತ್ತದೆಂದೂ, ಕಾಂಗ್ರೆಸ್ ಮುಖಂಡರನ್ನು ಕೆಲವರನ್ನು ಬಂಧಿಸಿದ ಕೂಡಲೇ ದೇಶದ ಬೇರೆಬೇರೆ ಕಡೆಗಳಲ್ಲಿ ಆದ ಗಲಭೆಯೆಲ್ಲವೂ ಪೂರ್ವ ತಯಾರಿಯದಾಗಿತ್ತೆಂದೂ, ಅದರಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಒಟ್ಟಿನಿಂದ ಚಳವಳವುಂಟಾದುದಕ್ಕೆ ಸರಕಾರವು ಕಾರಣವಲ್ಲವೆಂದೂ ಜನತೆಯೇ ಕಾರಣವೆಂದೂ, ಕೆಲವು ಮುಖಂಡರು ಇದರ ಪ್ರೇರಕರೆಂದೂ ಅವರ ಸಿದ್ಧತೆ ಮೊದಲೇ ಆಗಿತ್ತೆಂದೂ ಮುಸಲ್ಮಾನರು ಇದರಲ್ಲಿ ಸೇರಿಲ್ಲವೆಂದೂ ಕಾಂಗ್ರೆಸು ಸಮತಾವಾದಿಗಳು ಈ ಗುಪ್ತ ಚಟುವಟಿಕೆಗಳಲ್ಲಿ ಬಹಳ ಸೇರಿದ್ದರೆಂದೂ ಮೊದಲಾಗಿ ಹೇಳಲಾಗಿದೆ. ಸರಕಾರವು ಹೀಗೆ ಆಗಾಗ ತನ್ನ ಕಡೆಯ ಆತ್ಮಸಮರ್ಥನೆಯನ್ನು ಕೊಡುತ್ತಾ ಬಂದಿತ್ತಿದ್ದರೂ, ಕಾಂಗ್ರೆಸ್ ಕಡೆಯವರಿಗೆ ಮಹಾತ್ಮಾ ಗಾಂಧಿಯವರಿಗೆ, ತಮ್ಮ ಆತ್ಮಸಮರ್ಥನೆ ಮಾಡಲು ಅವಕಾಶ ಕಲ್ಪಿಸಿಕೊಡದಿರುವುದು ವಿಷಾದಕರವಾಗಿದೆ.

'ದಬ್ಬಾಳಿಕೆ ಇನ್ನು ಸಾಕು'

ಎಂಬುದಾಗಿ ಲಂಡನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯೇ, ಬ್ರಿಟಿಷ್ ಸರಕಾರವು ಭಾರತದಲ್ಲಿ ನಡೆಸುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿ ಬರೆಯುತ್ತದೆ. ಇಂಗ್ಲೆಂಡಿನ ಪತ್ರಿಕೆಗಳು ಹೆಚ್ಚಾಗಿ ಕಾಂಗ್ರೆಸನ್ನು ದೂಷಿಸಿ, ಬ್ರಿಟಿಷ್ ಸರಕಾರವನ್ನು ಹೊಗಳಿಯೇ ಬರೆಯುವವುಗಳು; ಮೆಂಚೆಸ್ಟರ್ ಗಾರ್ಡಿಯನ್ ಸರಕಾರವನ್ನು ಸಮರ್ಥಿಸದೆ ಟೀಕಿಸುವ ಧೈರ್ಯಮಾಡಿದೆ. "ಪ್ರತಿವಾದಿ ಹೇಳುವುದನ್ನು ನಾವು ಕೇಳಬೇಕು. ಶ್ವೇತಪತ್ರದಲ್ಲಿ ಭಾರತದ ಸಮಸ್ಯಾ ಪರಿಹಾರದ ಸೂಚನೆ ಏನೂ ಇಲ್ಲ. ದಬ್ಬಾಳಿಕೆಯಿನ್ನು ಸಾಕು. ಇದರಿಂದ ಭಾರತದ ಸಮಸ್ಯೆ ಬಗೆಹರಿವುದಿಲ್ಲ. ನಾವು ಆ ಸಮಸ್ಯೆ ಬಿಡಿಸಲೇಬೇಕು" ಎಂದು ಅದು ಬರೆದಿದೆ. ಡೈಲಿ ಹೆರಾಲ್ಡ್ ಪತ್ರಿಕೆಯೂ ಇಂತು ಬರೆದಿರುವುದು.

'ಚರ್ಚಿಲರು ನಮಗೆ ಸ್ವಾತಂತ್ರ್ಯ ಕೊಡುವುದಿಲ್ಲ'

ಎಂಬುದಾಗಿ ಪಂಡಿತ ಕುಂಜ್ರುಗಳು ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ಭಾಷಣ ಮಾಡುತ್ತಾ ಸ್ಪಷ್ಟಪಡಿಸಿದರು. ಅದ್ದರಿಂದ ಅಧಿಕಾರವನ್ನು ಬ್ರಿಟಿಷರು ನಮಗೆ ಬಿಟ್ಟುಕೊಡುವಂತೆ ಜನಮತವನ್ನು ನಾವು ಸಂಘಟಿಸಬೇಕೆಂದೂ, ಚರ್ಚಿಲರ ಭಾಷಣವನ್ನೋದಿದರೆ ನಮಗೆ ಅವರು ಎಂದಿಗೂ ಸ್ವಾತಂತ್ರ್ಯ ಕೊಡುವುದಿಲ್ಲವೆಂದೂ, ಮಿಲಿಟರಿ ಗಂಡಾಂತರ ಕಳೆದುಹೋದ ಹಾಗೆ ಅಧಿಕಾರವನ್ನು ಮುಂಗಮು [illegible] ಹಿಡಿಯುತ್ತಿರುವರೆಂದೂ ಪಂ। ಕುಂಜ್ರು ವಿವರಿಸಿದರು. ಕಾಂಗ್ರೆಸು ಅನ್ಯಾಯ ಮಾಡಿದೆಯೆಂಬುದನ್ನು ಅಮೇರಿಕದಲ್ಲಿ ಸಮರ್ಥಿಸಲು

ಸರಕಾರವು ಈಗ ಪುಸ್ತಕ ಹೊರಡಿಸಿದ್ದೆರೆ ಆ ಪ್ರಯತ್ನ ನಿಷ್ಫಲವಾಗಿದೆಯೆಂದು ಸರ್ ಜಫ್ರುಲ್ಲರ ಮಾತಿನಿಂದ ತಿಳಿದುಬರುತ್ತದೆಯೆಂದರು.

ಉಸ್ಮಾನರ ಉದ್ಗಾರ!

ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ವೈಸರಾಯರ ಕಾರ್ಯಕಾರೀ ಮಂಡಳಿ ಮಂದಿಗರಾದ ಸರ್ ಮಹಮ್ಮದ್ ಉಸ್ಮಾನರು ಭಾಷಣ ಮಾಡುತ್ತಾ ಭಾರತವು ಪ್ರಜಾಪ್ರಭುತ್ವಕ್ಕೆ ಆಯೋಗ್ಯವಿದೆಯೆಂದು ಹೇಳುತ್ತಾ ಕಾಂಗ್ರೆಸಿನ ಮೇಲೆ ನಂಜುಕಾರಿದರು! ಪಂಡಿತ ಕುಂಜ್ರು ಮತ್ತು ಸಪ್ರುಗಳು ಇದನ್ನು ಖಂಡಿಸಿ ವೈಸರಾಯ್ ಕಾರ್ಯಕಾರೀ ಮಂಡಳಿಯಿಂದ ದೇಶಕ್ಕೆ ಹಿತವಾಗುವುದಕ್ಕಿಂತ ಹೆಚ್ಚು ಅಹಿತವಾಗಿದೆಯೆಂದರು. ಅಂತೂ ಈ ಕುರಿತು ಪ್ರಬಲ ಚರ್ಚೆ ನಡೆದು, ಚುನಾಯಿತ ಸದಸ್ಯರು ಹಾಗೂ ವೈಸರಾಯ್ ಕಾರ್ಯಕಾರೀ ಮಂಡಳಿದಲ್ಲಿ ಸೇರಿದ ಸದಸ್ಯರಲ್ಲಿ ಹೆಚ್ಚಿನ ಮತಭೇದವಿರುವುದು ಸ್ಪಷ್ಟವಾಯಿತು.

ಬಂಗಾಳದ ಮೇಲೆ ಬಾಂಬು

ಧಾಳಿಯಾಯಿತು ತಾ ೨೬ರಂದು! ಆಗ್ನೇಯ ಬಂಗಾಳದ ವಿಮಾನಗೃಹದ ಮೇಲೆ ಧಾಳಿ ನಡೆಯಿತು. ಕುಸು ಪ್ರಾಣಹಾನಿ ಆಸ್ತಿಹಾನಿಗಳೂ ಆಗಿವೆ.

ಬೆಳಗಾವಿಯಲ್ಲಿ ಕರ್ಫ್ಯೂ

ಅಜ್ಞೆ ಆಗಿದೆ. ಈ ತಿಂಗಳು ಕಳದ ತಾ ೨೫ರಿಂದ ೩೦ ದಿನಗಳ ವರೆಗೆ ಜಾರಿಯಲ್ಲಿರುವುದು. ಮಾರ್ಚ ೨೩ರಂದು ನಾಲ್ಕು ಗಲ್ಲಿಗಳ ಜನರು ಮೂರು ಬ್ರಿಟಿಷ್ ಸಿಪಾಯಿಗಳ ಮೇಲೆ ಆಕ್ರಮಣ ಮಾಡಿ ಅವರ ವಶವಿದ್ದ ರಿವಾಲ್ವರ್‌ಗಳನ್ನೂ ಮದ್ದುಗುಂಡುಗಳನ್ನೂ ತೆಗೆದುಕೊಂಡು, ಆ ಸಿಪಾಯಿಗಳಿಗೆ ಗಾಯಮಾಡಿದರೆಂದು ಈ ಆರ್ಡರು ಮಾಡಲಾಗಿದೆ. ಈ ಕುರಿತು ಅನೇಕ ಜನರಿಗೆ ಎಚ್ಚರಿಕೆ ಕೊಡಲಾಗಿದೆ. ಹಾಗಾಗಿ ರಾತ್ರಿ ಒಂಭತ್ತು ಗಂಟೆಯಿಂದ ಬೆಳಗ್ಗೆ ಏಳುಗಂಟೆ ವರೆಗೆ ಯಾರೂ ಮಾರ್ಗಗಳಲ್ಲಿ ಸಂಚರಿಸಕೂಡದು. ಸಂಚರಿಸಿದರೆ ಪ್ರಾಣಾಪಾಯ!

ಬಾಲೆ ವೃದ್ಧೆಯರಿಗೆ ಗುಂಡು!

"೧೩ ವರ್ಷದ ಹುಡಿಗಿ ಹಾಗೂ ಒಬ್ಬ ಮುದುಕಿ ಮತ್ತು ಕೆಲವರ ಮೇಲೆ ಸರಕಾರೀ ಅಧಿಕಾರಿಗಳು ಗುಂಡು ಹಾರಿಸಿದ ಬಗ್ಗೆ ಹಾಗೂ ಒಬ್ಬ ರೈತನನ್ನು ಅತನ ಆಸ್ತಿ ಜಪ್ತಿ ಮಾಡಿ ಮಧ್ಯರಾತ್ರಿ ಕೋವಿಯ ತುದಿಯಿಂದ ಇರಿದು ಕೊಂದ ಬಗ್ಗೆ ಸರಕಾರದವರು ಏನಾದರೂ ಕ್ರಮ ತೆಗೆದುಕೊಂಡಿರುವರೋ" ಎಂದು ಆಸಾಮ್ ಎಸೆಂಬ್ಲಿಯಲ್ಲಿ ಶ್ರೀ ರೋಹಿಣಿ ಕುಮಾರ ಚೌಧುರಿಯವರು ಕೇಳಿದ ಪ್ರಶ್ನೆಗೆ ಆ ಕೃತ್ಯಗಳೆಲ್ಲವೂ ಆತ್ಮರಕ್ಷಣೆಗೋಸ್ಕರವಾಗಿ ಮಾಡಲ್ಪಟ್ಟಿತೆಂದು ಉತ್ತರ ಬಂತು!

ಮೈಸೂರು ರಾಜಸೋದರಿ

ಸುಜಯ ಕಾಂತಮ್ಮಣ್ಣಿಯವರ ವಿವಾಹವು ಸಾನಂದ್ ಮತ್ತು ಕೋಟಾದ ಯುವರಾಜ ಸಾಹೇಬ ಶ್ರೀ ರುದ್ರದತ್ತ ಸಿಂಗಜಿಯವರೊಡನೆ ತಾ ೨೫ರಂದು ಮೈಸೂರಲ್ಲಿ ಜರಗಿತು.

ಗಾಂಧಿಜಿಯನ್ನು ನೋಡಲು

ಡಾ। ಬಿ. ಸಿ. ರಾಯ್‌ಯವರು ಅಪ್ಪಣೆ ಕೇಳಿದ್ದರೂ ಅವರಿಗೆ ಅಪ್ಪಣೆ ದೊರೆತಿಲ್ಲ. ಡಾ। ರಾಯರು ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಭಾಷಣದ ವಿಷಯ ಸರಕಾರಕ್ಕೆ ಅಸಮಾಧಾನವಾಗಿದೆಯಂತೆ! ಹೀಗಿದ್ದರೆ ಡಾ। ರಾಯರಿಗೆ ಪುನಃ ಮಹಾತ್ಮರಭೇಟಿಗೆ ಸಮ್ಮತಿ ಸಿಗುವುದು ಸಾಧ್ಯವಿಲ್ಲ.

'ಕಾಂಗ್ರೆಸು ವಿರೋಧಿಸುವುದಿಲ್ಲ'

'ಮೃತಪತ್ರನಾಡದೆ ಸತ್ತರೆ ವಾರಸು ನಿರ್ಣಯ ಮಸೂದೆ' ಗೆ ಕಾಂಗ್ರೆಸು ವಿರೋಧಿಸುತ್ತದೆಂದು ಕೆಲಜನರು ಹೇಳುತ್ತಾರೆ. ಆದರೆ ಹಿಂದು ಸ್ತ್ರೀಯರಿಗೆ ಸರಿಸಮಾನತೆ ಕೊಡಲು ಕಾಂಗ್ರೆಸು ವಿರೋಧಿಸಿಲ್ಲ. ಜಾತಿ, ಕುಲ, ಧರ್ಮ, ವರ್ಣ ಲಿಂಗ ಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕೆಂದು ಕರಾಚಿ ಕಾಂಗ್ರೆಸಿನ ನಿರ್ಣಯವಿದೆ. ಹಾಗಾಗಿ ಕಾಂಗ್ರೆಸಿನವರು ಸೆರೆಯಲ್ಲಿರುವಾಗ ಹೀಗೆ ಯಾರೂ ಕಾಂಗ್ರೆಸಿನ ಬೆನ್ನಿಗೆ ಇರಿಯಬಾರದು ಎಂದು ಡಾ। ಜಿ. ದೇಶಮುಖರು ಹಿಂದು ಸ್ತ್ರೀಯರ ವಾರಸುಹಕ್ಕು ನಿರ್ಣಯದ ಮಸೂದೆಯ ವಿಷಯ ಕಾಂಗ್ರೆಸ್ ನೀತಿ ಸ್ಪಷ್ಟಪಡಿಸಿದ್ದಾರೆ.

ಸ್ತ್ರೀಯರನ್ನು ಕೊಂದರು!

ಸೋನಾರಪುರದ ಠಾಣೆಯಲ್ಲಿ ಗುರಿಡು ಹಾರಿಸುವ ಸಂದರ್ಭ ಇಬ್ಬರು ಸ್ತ್ರೀಯರು ಸತ್ತಿರುವರೆಂದು ಹಕ್ಕರು ಬಂಗಾಲ ಅಸೆಂಬ್ಲಿ ಪ್ರಶ್ನೆಗೆ ಉತ್ತರ ಕೊಡುತ್ತಾ ಒಪ್ಪಿದರು. ಬುದ್ಧೇರದ ಮಹೇಂದ್ರ ಚಂದ್ರದಾಸ ಎಂಬವನನ್ನು ಪೋಲೀಸರು ಮನೆಯಲ್ಲಿ ಗುಂಡಿಟ್ಟು ಕೊಂದ ಬಳಿಕ ಆಗಿದ್ದು ಸಾಕ್ಷಿದಾರನು ಯುದ್ಧಕ್ಕೆ ಹೋಗಿ ಬಳಿಕ ಮುಂದುವರಿಸಲಾಗಿದೆಯೆಂದೂ ಹಕ್ಕರು ಹೇಳಿದರು.

ಜಫ್ರುಲ್ಲರ ಆಕ್ರೋಶ!

'ಭಾರತ ಸಮಸ್ಯೆಯಲ್ಲಿ ಅಮೇರಿಕನರಿಗೆ ಬಹು ಆಸಕ್ತಿಯಿದೆ. ಆದರೆ ಅವರಿಗೆ ಇಲ್ಲಿನ ನಿಜ ಪರಿಸ್ಥಿತಿಯ ಕಲ್ಪನೆಯಿಲ್ಲ. ಅಟ್ಲಾಂಟಿಕ್ ಘೋಷಣೆಯನ್ನು ಭಾರತಕ್ಕೆ ಅನ್ವಯಿಸಬೇಕೆಂಬುದಕ್ಕೂ ರೂಸವೆಲ್ಟರ ಸಮ್ಮತಿಯಿದೆ' ಹೀಗೆಂದು ಅಮೇರಿಕದಿಂದೀಗ ಮರಳಿದ ಸರ್ ಜಫ್ರುಲ್ಲಾಖಾನರು ಮಾತನಾಡುತ್ತಾ, 'ಭಾರತದಲ್ಲಿರುವ ಅಮೇರಿಕನ್ ಸುದ್ದಿಗಾರರು ಕಳುಹಿಸುವ ಸುದ್ದಿಗಳು ಹೆಚ್ಚಾಗಿ ಬ್ರಿಟಿಷ ವಿರೋಧವಿವೆ ಹಾಗೂ ಕಾಂಗ್ರೆಸ್ ಸಹಾನುಭೂತಿಯುಳ್ಳವಿವೆ, ಆದರೆ ಮುಸಲ್ಮಾನರ ಅಭಿಪ್ರಾಯಕ್ಕೆ ಅಸ್ಪದೇ ಇಲ್ಲ' ಎಂದರು.

೧ನೆಯ ಪುಟದಿಂದ

ನಮ್ಮನ್ನಗಲಿದ ಸತ್ಯಮೂರ್ತಿ

ನಗರ ಗ್ರಾಮ ಗ್ರಾಮಗಳಲ್ಲಿ ಅವರು ಕಾಂಗ್ರೆಸ್ ಸಂದೇಶವನ್ನು, ರಾಷ್ಟ್ರದ ಕರೆಯನ್ನು, ತಮ್ಮ ಸಿಂಹನಾದದಿಂದ ಸಾರಿ ಜನತೆಯನ್ನು ಕರ್ತವ್ಯದ ಕಡೆಗೆ ಕಣ್ಣೆತ್ತಿ ನೋಡುವಂತೆ ಎಚ್ಚರಿಸಿದ್ದಾರೆ. ಶ್ರೀ ಸತ್ಯಮೂರ್ತಿಯವರ ಪ್ರಯತ್ನದ ಫಲವಾಗಿ ೧೯೩೪ರಲ್ಲಿ ಕಾಂಗ್ರೆಸು ಶಾಸನ ಸಭಾ ಬಹಿಷ್ಕಾರ ಧೋರಣೆಯನ್ನು ಬದಲಾಯಿಸಿ ಕೇಂದ್ರ ಶಾಸನ ಸಭೆಯ ಚುನಾವಣೆಗೆ ನಿಂತಿತು. ಕಾಂಗ್ರೆಸ್ ಪಕ್ಷದಿಂದ ಅವರು ಕೇಂದ್ರ ಶಾಸನ ಸಭೆಗೆ ಮದ್ರಾಸು ನಗರದಲ್ಲಿ ಶ್ರೀ ರಾಮಸ್ವಾಮಿ ಮುದಲಿಯಾರರನ್ನು ಸೋಲಿಸಿ ಚುನಾಯಿತರಾದರು! ಕೇಂದ್ರ ಶಾಸನ ಸಭೆಯಲ್ಲಿ ಕಾಂಗ್ರೆಸಿನ ಉಪ ನಾಯಕರಾಗಿದ್ದು ತಮ್ಮ ಪಕ್ಷಕ್ಕೆ ಶಾಸನ ಸಭೆಯ ಒಳಗಡೆ ಮತ್ತು ಹೊರಗಡೆಗಳಲ್ಲಿ ಬಲವನ್ನು ತಂದರು. ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಬೇಕೆನ್ನುವವರಲ್ಲಿ ಅಗ್ರಗಣ್ಯರಾದ ಶ್ರೀ. ಸತ್ಯಮೂರ್ತಿಯವರು ೧೯೩೭ರಂದು ಕಾಂಗ್ರೆಸು ಪ್ರಾಂತಿಕ ಶಾಸನ ಸಭೆಗಳ ಚುನಾವಣೆಗೆ ನಿಲ್ಲಲು ನಿರ್ಧರಿಸಿದಾಗ, ಮದ್ರಾಸು ಪ್ರಾಂತದಲ್ಲಿ ಚುನಾವಣೆಯ ಪ್ರಬಲ ಪ್ರಚಾರ ಕೈಕೊಂಡರು. ಆ ಚುನಾವಣೆಯ ಅಭೂತಪೂರ್ವ ಯಶಸ್ವಿತೆಗೆ ಶ್ರೀ ಸತ್ಯಮೂರ್ತಿಯವರ ಪ್ರಯತ್ನವೂ ಹೆಚ್ಚಿನ ಮಟ್ಟಿಗೆ ಕಾರಣವೆನಿಸಿದೆ. ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಬೇಕೆಂಬ ಹೋರಾಟದಲ್ಲಿ ಗೆದ್ದವರೇ, ಚುನಾವಣೆಗೆ ಉಮೇದ್ವಾರರಾಗಿ ನಿಲ್ಲುವಂದು ರಾಜಾಜಿಯವರ ಸಲುವಾಗಿ ತನ್ನ ಸ್ಥಳವನ್ನು ಅವರಿಗೆ ಬಿಟ್ಟುಕೊಟ್ಟರು!

ರಾಷ್ಟ್ರದ ಉನ್ನತ ರಾಜಕೀಯದಲ್ಲಿ ಮಾತ್ರವಲ್ಲ ಸ್ಥಳೀಯ ನಾಗರಿಕ ಜೀವನದಲ್ಲಿಯೂ ಅವರದು ಆಸಕ್ತಿ ಬಹಳವಿತ್ತು. ೧೯೨೨ರಲ್ಲಿಯೇ ಅವರು ಮದ್ರಾಸು ಸಿಟಿ ಕೌನ್ಸಿಲು ಪ್ರವೇಶಿಸಿದರು. ಆ ಮೇಲೆ ಅವರು ಅದರ ಆಲ್ಡರ್‌ಮೇನರೂ ಮತ್ತು ಮೇಯರರಾಗಿಯೂ ಚುನಾಯಿತರಾದರು. ಮದ್ರಾಸನ್ನು 'ಸುಂದರ ನಗರ'ವಾಗಿ ಮಾಡಬೇಕೆಂದು ಅವರು ಬಹುಮುಖ ಪ್ರಯತ್ನ ಮಾಡಿದರು. ಪೂಂಡಿ ಯೋಜನೆ, ನಗರಕ್ಕೆ ನೀರಿನ ಸೌಕರ್ಯ ಯೋಜನೆಗಳನ್ನು ಯಶಸ್ವಿಗೊಳಿಸಿದರು. ಮದ್ರಾಸು ವಿಶ್ವವಿದ್ಯಾಲಯದ ಸಿಂಡಿಕೇಟಿನಲ್ಲಿ ಅವರು ಬಹುಕಾಲ ಸದಸ್ಯರಾಗಿದ್ದು ಪ್ರಾಂತದ ವಿದ್ಯಾ ಯೋಜನೆಯನ್ನು ಸರಿಗೊಳಿಸುವುದರಲ್ಲಿ ಹೆಚ್ಚಿನ ಸಹಾಯ ಮಾಡಿರುವರು. ಅಣ್ಣಾಮಲೆ ವಿಶ್ವವಿದ್ಯಾಲಯ ರಚನೆಗಾಗಿ ಬಹು ಸಾಧಿಸಿದ್ದರು. ಶ್ರೀಮಾನ್ ಸತ್ಯಮೂರ್ತಿಯವರಿಗೆ ರಾಜಕೀಯ, ಶೈಕ್ಷಣಿಕ ವಿಚಾರಗಳಲ್ಲಿ ಮಾತ್ರವಲ್ಲದೆ ಸಂಗೀತ, ನಾಟಕ ರಂಗಭೂಮಿ, ಚಲಚ್ಚಿತ್ರ ಮೊದಲಾದ ಲಲಿತ ಕಲೆಗಳಲ್ಲಿಯೂ ತುಂಬಾ ಆಸಕ್ತಿಯಿತ್ತು. ಮದ್ರಾಸು ವಿಶ್ವ ವಿದ್ಯಾಲಯದ ಭಾರತೀಯ ಸಂಗೀತ ಶಾಖೆಗೆ ಅನೇಕ ವರ್ಷ ಸದಸ್ಯರಾಗಿದ್ದರು. ಮದ್ರಾಸು ಸಂಗೀತ ಸಭೆಯ ಉಪಾಧ್ಯಕ್ಷರಾಗಿ ಅದರಲ್ಲಿ ಆಸಕ್ತಿ ವಹಿಸಿದ್ದರು. ಸ್ವತಃ ಅವರು ಉತ್ತಮ ನಟರಾಗಿದ್ದರು; ಸುಗುಣ ವಿಲಾಸ ಸಭೆಯ ಉಪಾಧ್ಯಕ್ಷರಾಗಿಯೂ, ರಂಗಸ್ಥಳವನ್ನು ರಜತಪರದೆ ಆಕ್ರಮಿಸಲು ಚಲಚ್ಚಿತ್ರದಲ್ಲಿಯೂ ಆಸಕ್ತಿ ತೋರಿಸಿದ್ದಲ್ಲದೆ ೧೯೩೯ರಲ್ಲಿ ಮುಂಬಯಿಯಲ್ಲಿ ಸೇರಿದ ಅಖಿಲಭಾರತ ಚಲಚ್ಚಿತ್ರ ಸಮ್ಮೇಳನದ ಅಧ್ಯಕ್ಷರಾಗಿಯೂ, ದಕ್ಷಿಣಭಾರತ ಫಿಲ್ಮ್ ಚೇಂಬರ್ ಓಫ್ ಕೊಮರ್ಸಿನ ಅಧ್ಯಕ್ಷರಾಗಿಯೂ ಆ ಕೈಗಾರಿಕೆಯ ಅಭಿವೃದ್ಧಿಗೆ ಅನೇಕ ವಿಧದ ಸಹಾಯ ಮಾಡಿರುವರು. ಹೀಗೆ ಬೇರೆ ಬೇರೆ ವಿಭಾಗಗಳಲ್ಲಿ ಅವರು ಅಧಿಕಾರ ವಹಿಸಿ ಕೆಲಸ ಮಾಡಿದ್ದನ್ನು ನೋಡಿದರೆಯೇ ಅವರ ಬಹುಮುಖ ಕಾರ್ಯಕಲಾಪಗಳು ವ್ಯಕ್ತವಾಗದಿರವು. ೧೯೩೮ರಲ್ಲಿ ಕಲ್ಕತ್ತೆಯಲ್ಲಿ ಸೇರಿದ ಅಖಿಲಭಾರತ ಸ್ಥಳೀಕ ಸಂಸ್ಥೆಗಳ ಪರಿಷತ್ತಿಗೆ ಅಧ್ಯಕ್ಷರಾಗಿದ್ದರು. ಮದ್ರಾಸು ಯುನಿವರ್ಸಿಟಿಯ ಕಾನೂನು ವಿಭಾಗದ ಸದಸ್ಯರಿದ್ದರು. ಮದ್ರಾಸು ಸಂಸ್ಕೃತ ಸಂಘ, ಮದ್ರಾಸು ಪ್ರಾಂತ ಪ್ರೋಸ್ಟ್ ಮೆನ್ಸ್ ಯೂನಿಯನ್ ಇವುಗಳ ಉಪಾಧ್ಯಕ್ಷರಾಗಿದ್ದರು. ಮದ್ರಾಸಿನಲ್ಲಿ ೧೯೩೧, ೩೪, ೩೬ರಲ್ಲಿ ಸೇರಿದ ಸ್ವದೇಶೀ ಪ್ರದರ್ಶನದ ಸಂಘಟಕರು ಶ್ರೀಮಾನ್ ಸತ್ಯಮೂರ್ತಿಯರು. ಹೀಗೆ ನಮ್ಮ ರಾಷ್ಟ್ರದ ಏಳಿಗೆಯ ವಿವಿಧ ಕಾರ್ಯಕಲಾಪಗಳಲ್ಲಿ ಅವಿಶ್ರಾಂತ ಶ್ರಮ ವಹಿಸಿ ದುಡಿದ ಅಚಲ ರಾಷ್ಟ್ರಭಕ್ತನೊಬ್ಬನನ್ನು—ಶ್ರೀ ಸತ್ಯಮೂರ್ತಿಯವರನ್ನು ಕಳೆದುಕೊಂಡು ಭಾರತಮಾತೆಯು ಇಂದು ಅತ್ಯಂತ ದರಿದ್ರಳಾಗಿರುವಳು!

WANTED

Clerks to serve as apprentices in a well-established Office. Minimum qualification should be at least S. S. L. C. (Completed). Young men of experience, possessing special qualifications in Commercial subjects such as Book-keeping Shorthand, Typewriting etc. are preferred. Application in the handwriting of the applicants stating age etc. with copies of testimonials should reach by the 7th April 1943.

"X" C/o **The Swadeshabhimani, Mangalore.**

ಸಮರಭೂಮಿಯ ಸಂಚಾರ

ರಶ್ಯದ ಸ್ಟಾಲಿನ್‌ಸ್ಕ್ ರಣರಂಗದಲ್ಲಿ ಸೋವಿಯೇಟರು ಮುನ್ನುಗ್ಗಿ ಮತ್ತೆ ಕೆಲವು ಸ್ಥಳಗಳನ್ನು ಆಕ್ರಮಿಸಿಕೊಂಡಿರುವರು. ಹಿಮವು ಭರದಿಂದ ಕರಗತೊಡಗಿ ಮುನ್ನಡೆಯೂ ದುಸ್ತರವಾಗಿದೆ. ಡೊನೆಟ್ಸ್ ನದಿಯ ಮೇಲ್ಭಾಗದಲ್ಲಿ ನದಿಯನ್ನು ದಾಟಲು ಪ್ರಯತ್ನಿಸುತ್ತಿದ್ದ ವೈರಿಗಳಲ್ಲಿ ಹಲವರನ್ನು ನಾಶ ಮಾಡಿ ಉಳಿದವರನ್ನು ಹಿಂದಕ್ಕಟ್ಟಲಾಯಿತು. ರಶ್ಯದಲ್ಲಿ ಕಳೆದ ಐದು ತಿಂಗಳಿಂದ ಘೋರ ಸಂಗ್ರಾಮವು ನಡೆದು ಈಗ ೧೨೦೦ ಮೈಲುಗಳ ವಿಸ್ತಾರವಾದ ರಣಭೂಮಿಯಲ್ಲಿ ತುಸು ಶಾಂತತೆಯೇ ತೋರುತ್ತದೆ. ಸ್ಟಾರಯಾರೂಸಾದಿಂದ ಕುರ್ಸ್ಕ ಒರೆಲಗಳ ವರೆಗೆ ಕೆಂಪು ಸೈನ್ಯವು ಮುನ್ನುಗ್ಗುವಿಕೆಯಲ್ಲಿ ಕಡಿಮೆಮಾಡಿರದಿದ್ದರೂ ಅಲ್ಲಿನ ಕಾದಾಟವು ಕೇವಲ ಅನುಕೂಲ ಸ್ಥಳಗಳ ಸಲುವಾಗಿದೆ. ಬಯೆಲಿ ಮತ್ತು ನೀಪರ್ ನದಿಯ ಮೇಲ್ಭಾಗದ ಪಶ್ಚಿಮದಿಂದ ಸಾಗಿಬರುತ್ತಿದ್ದ ಸೈನ್ಯಗಳ ನಡುವೆ ಸಂಪೂರ್ಣ ಸಂಬಂಧವನ್ನು ಸಾಧಿಸಲಾಗಿದೆ. ಸ್ಮೊಲೆನ್‌ಸ್ಕ ಈಶಾನ್ಯದಲ್ಲಿ ೪೦ ಮೈಲಿಗೆ ಮೇಲಿಂದ ವ್ಯಾಝ್ಮಾ ರೈಲ್ವೆಯನ್ನೊಳಗೊಂಡು ಸ್ಲೆಖಿನಿಚಿ ಸ್ಮೊಲೆನ್‌ಸ್ಕ ರೈಲ್ವೆಯ ಮಧ್ಯದ ವರೆಗೆ ರಶ್ಯನರು ಮುನ್ನುಗ್ಗುತ್ತಿದ್ದಾರೆ. ಸ್ಮೊಲೆನ್‌ಸ್ಕ ಪ್ರಾಂತದಲ್ಲಿ ಜರ್ಮನರು ಹಿಂಜರಿಯುವಾಗ ಹಾಳುಗೆಡವಿದ್ದ ಮಾರ್ಗಗಳನ್ನು ಸರಿಪಡಿಸಲಾಗುತ್ತಿದೆ. ಅತ್ತ ಕುಬಾನ ಪ್ರದೇಶದಲ್ಲಿಯೂ ಎರಡು ಕಡೆಗಳಲ್ಲಿ ಘೋರ ಕದನ ನಡೆದಿದೆ.

ಮಾರೆಥ್ ಪತನ

ಟ್ಯುನಿಸಿಯದಲ್ಲಿ ಒಂದು ವಾರದಿಂದ ರೊಮೆಲನನ್ನು ಎದುರಿಸುತ್ತಿದ್ದ ಬ್ರಿಟಿಷ್ ಅಷ್ಟಮದಳವು ಮಾರೆಥ್ ವ್ಯೂಹವನ್ನು ಭೇದಿಸಿ ನುಗ್ಗಿ ಅದನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದೆ. ರೊಮೆಲನ ಸೈನ್ಯವು ಎಲ್ ಹಮಾ ಮತ್ತು ಗಬೆಜಗಳಲ್ಲಿ ಸೋತು ಉತ್ತರಕ್ಕೆ ಸ್ಫಾಕ್ಸ್ ಎಂಬ ಬಂದರದ ಕಡೆಗೆ ಹೊರಡಿರುವುದು. ಎಲ್ ಹಮಾವು ಬ್ರಿಟಿಷರ ವಶವಾಗಿದೆ; ಹಲವು ಬ್ರಿಟಿಷ್ ಮುಂದಲಗಳು ಗ್ಯಾಬೆಜವನ್ನೂ ಬಿಟ್ಟು ಮುಂದೆ ಹೋಗಿರುವವು. ಎಲ್ ಹಮಾದ ಹೊರಗೆ ಬ್ರಿಟಿಷ್ ಟೇಂಕ್ ಮತ್ತು ಜರ್ಮನರ ಟೇಂಕ್ ನಿರೋಧ ಫಿರಂಗಿಗಳೊಳಗೆ ಭಾರೀ ಯುದ್ಧ ನಡೆಯಿತು. ಎಲ್ ಹಮಾದಲ್ಲಿ ತಮ್ಮ ಬಲ ಕುಗ್ಗುತ್ತಿರುವುದನ್ನು ಕಂಡು ಜರ್ಮನರು ಮಾರೆಥ್‌ನಿಂದ ತಮ್ಮ ಸೈನ್ಯವನ್ನು ತಂದರು. ಇದರಿಂದ ಮಾರೆಥ್ ವ್ಯೂಹದ ಬಲವೂ ಕುಗ್ಗಿದಂತಾಯಿತು. ಇದೇ ಸಮಯವನ್ನು ಕಾದುಕೊಂಡು ಬ್ರಿಟಿಷರು ಮತ್ಮಾತಾ ಗುಡ್ಡದ ಬಳಿ ಭಾರೀ ಧಾಳಿಯನ್ನು ಪ್ರಾರಂಭಿಸಿದರು. ಬ್ರಿಟಿಷ್ ಕಾಲ್ಪಡೆಗಳು ಫಿರಂಗಿ ಸೈನ್ಯದ ಸಹಾಯದಿಂದ ಮುನ್ನುಗ್ಗಿ ಮಾರೆಥ್ ಮೊದಲಾದ ಹಳ್ಳಿಗಳನ್ನೂ ಆಕ್ರಮಿಸಿಕೊಂಡವು. ಹೀಗೆ ಜರ್ಮನರು ಮಾರೆಥ್ ವ್ಯೂಹದ ಆಶೆ ಬಿಟ್ಟು ಹಿಂದೆ ಸರಿದರು.

ಎಲ್ ಹಮಾನಿಂದ ಮುಂದೆ ಸಾಗಿದ ಬ್ರಿಟಿಷ್ ಅಷ್ಟಮ ದಳವು ಈಗ ಮೂರನೆಯ ಸಲ ಅತ್ಯಂತ ಪ್ರಬಲವಾದ ಪ್ರತಿಧಾಳಿಯನ್ನು ಪ್ರತಿಭಟಿಸಿ ಜನರಲ್ ಮಾಂಟೆಗ್‌ಮೋರಿಯು ಎಲ್ ಅಗೇಲಾ, ವಾದಿ, ಜಮು ಜಮುಗಳಲ್ಲಿ ಯಶಸ್ವಿಯಾದ ಯುದ್ಧನೀತಿಯನ್ನು ಇಲ್ಲಿಯೂ ಪ್ರಯೋಗಿಸಿದನು. ಎಲ್ ಹಮಾ ಭಾಗದಲ್ಲಿ ಮಾರೆಥ್ ವ್ಯೂಹದ ಹಿಂದಲಗಳಿಗೆ ಘೋರ ಗಂಡಾಂತರ ಒದಗಿದ್ದರಿಂದ, ಕೆಲವು ಸೈನ್ಯಗಳು ಗೇಬ್ಸದಕಡೆ ಹಿಂಜರಿಯಬೇಕಾಯಿತು. 'ಕೂಡಲೇ ಜನರಲ್ ಮಾಂಟೆಗ್‌ಮೋರಿಯು ಎರಡು ಸೈನ್ಯಗಳು ಗೇಬ್ಸದಕಡೆ ನುಗ್ಗಿದವು. ಶತ್ರುಗಳು ಹಿಂಜರಿಯುತ್ತಿದ್ದರೂ ಬಹಳ ಶಿಸ್ತಿನಿಂದ ಸರಿಯುತ್ತಿದ್ದಾರೆ. ಎಲ್ ಹಮಾಕ್ಕೆ ಜರ್ಮನರು ತಮ್ಮ ಶಿಸ್ತಿನ ಸೈನ್ಯ ತಂದಿದ್ದರು. ವೈರಿಗಳು ಉದ್ದೇಶಪೂರ್ವಕವಾಗಿ ಹಿಂಜರಿಯುವಂತೆ ತೋರುತ್ತದೆ. ಉತ್ತರ ಟ್ಯುನಿಶಿಯದಲ್ಲಿ ಪ್ರಥಮ ದಲದ ಪ್ರಗತಿಯು ಹವೆಯು ಪ್ರತಿಕೂಲವಾದ್ದರಿಂದ ಮಂದವಾಗಿದೆ.

ಹಿಟ್ಲರ್ ಮಾತಾಡಿದನು!

ಐದು ತಿಂಗಳ ದೀರ್ಘ ಮೌನವನ್ನು ಭೇದಿಸಿ, ಹಿಟ್ಲರ್, ಕಳೆದ ವಾರ ಬರ್ಲಿನಿನಲ್ಲಿ ಭಾಷಣ ಮಾಡಿದನು. ಚರ್ಚಿಲರು ಈ ಕಡೆ ಇಂಗ್ಲೆಂಡಿನಲ್ಲಿ ನಿಂತು ಬೊಬ್ಬಿಡುತ್ತಿರುವಾಗಲೇ ಹಿಟ್ಲರನೂ ಆ ಕಡೆಯಿಂದ ಅರ್ಭಟಿಸಿದ್ದಾನೆ! ರಶ್ಯದಲ್ಲಿ ಖಾರ್ಕೊವಿನ ಪುನರಾಕ್ರಮಣ, ಹಾಗೂ ಬೇರೆ ಬೇರೆ ಕಡೆಗಳಲ್ಲಿ ಪ್ರಾರಂಭಿಸಿದ ಧಾಳಿಗಳ ಪರಿಣಾಮವಾಗಿ ಜರ್ಮನ್ ಸೇನೆಯು ದೊಡ್ಡ ಗಂಡಾಂತರದಿಂದ ಪಾರಾದ ಪರಿಸ್ಥಿತಿಗಳನ್ನು ಹಿಟ್ಲರ್ ಹೊಗಳಿಕೊಂಡನು. ಹಿಟ್ಲರನ ಭಾಷಣದಲ್ಲಿ ಆತನ ಹಿಂದಿನ ಸರಣಿಯೇ ಇದೆ; ಅದೇ ಆರ್ಭಟೆ, ಅದೇ ಹಂಕಾರ, ಅದೇ ದೃಢ ನಿರ್ಧಾರಗಳಲ್ಲಿ ಈ ಸಲವೂ ನಾವಾತನ ಮಾತುಗಳನ್ನು ಕೇಳಬಹುದು. ಬೋಲ್ಶೇವಿಕ ಸಂಬಾಧೆಯಿಂದ ಪಶ್ಚಿಮ ಯೂರೋಪನ್ನು ಉಳಿಸಿದ ಕೀರ್ತಿ ಪರಾಕ್ರಮಗಳು ತಮ್ಮದೆಂದು ಹಿಟ್ಲರ್ ಹೆಮ್ಮೆ ಕೊಚ್ಚಿದನು. ಮುಂದಿನ ಆಕ್ರಮಣದ ಕುರಿತು ಸರ್ವ ಸಿದ್ಧತೆಗಳೂ ಆಗಿವೆಯೆಂದು ಆತನು ಭರವಸೆಯುಳ್ಳವನಾಗಿದ್ದಾನೆ. ಈ ಯುದ್ಧದಲ್ಲಿ ಅರ್ಧ ಕೋಟಿಗೂ ಮಿಕ್ಕಿದ ಜರ್ಮನ್ ವೀರರು ಮಡಿದರೆಂದು ಅವನು ಒಪ್ಪಿಕೊಂಡನು. ಅಟ್ಲಾಂಟಿಕ್ ಶಾಸನವನ್ನು ತೆಗಳಿ, ವಿಲ್ಸನರ ಹದಿಮೂರು ಸೂತ್ರಗಳ ಗತಿಯೇ ಅದಕ್ಕೂ ಆಗುವುದೆಂದು ಹಾಸ್ಯ ಮಾಡಿದನು. ಕೊನೆಗೆ, ಸಂಪ್ರದಾಯದಂತೆ, ದೇವರ ದಯೆಯಿಂದ—ಹಿಟ್ಲರ್ ದೇವರ ಅಸ್ತಿತ್ವವನ್ನು ನಿಜವಾಗಿ ನಂಬುತ್ತಾನೆಯೇ ಎಂದು ಹಲವರಿಗೆ ಶಂಕೆಯಿದ್ದರೂ—ಈ ಯುದ್ಧದಲ್ಲಿ ಜರ್ಮನಿಯೇ ಗೆಲ್ಲುವುದು (ಬ್ರಿಟಿಷರಾದರೂ ಅಂತ್ಯ ಜಯವು ತಮ್ಮದೆಂದೇ ಹೇಳುತ್ತಾರಷ್ಟೆ?) ಎಂದು ಸಾರಿ ಹೇಳಿದನು. ಹಿಟ್ಲರನ ಭಾಷಣವು ಸಂಪ್ರದಾಯಕ್ಕಿಂತ ಒಂದಿಷ್ಟಾದರೂ ಪರಿಳಿತ ಹೊಂದಿಲ್ಲವೆಂಬುದು ಇಲ್ಲಿ ಗಮನಾರ್ಹವಾಗಿದೆ.

ಶಾಂತಿಯೋ ಸಂಗ್ರಾಮವೋ?

ಸೈನಿಕ ವಿಜಯದ ನಂತರ ಮಿತ್ರರು ತಮ್ಮಲ್ಲಿ ಬಡಿದಾಡಿಕೊಂಡು ಶಾಂತಿಯನ್ನು ಕಳೆದುಕೊಳ್ಳುವರೋ ಎಂದು ಸತಿ ಚಿಯಾಂಗರು ಕಳೆದ ಶನಿವಾರ ರಾತ್ರಿ ಸಾನ್‌ಫ್ರಾನ್‌ಸಿಸ್ಕೋದಲ್ಲಿ ಭಾಷಣ ಮಾಡುತ್ತಾ ಹೇಳಿದರು. ಯುದ್ಧಾನಂತರದ ಜಗತ್ತಿನ ಬಗ್ಗೆ ನಿಶ್ಚಿತ ಯೋಜನೆ ಬರಹಮೂಲಕ ಸ್ಪಷ್ಟವಿಲ್ಲದಿದ್ದರೆ, ಇಂದಿನ ಗಂಡಾಂತರವು ಸೋಲಿನಲ್ಲಿಲ್ಲ, ವಿಜಯಾನಂತರದ ಶಾಂತಿಯನ್ನು ಕಳೆದುಕೊಳ್ಳುವುದರಲ್ಲಿದೆ ಎಂದೂ ಅವರು ನುಡಿದರು. ಸತಿ ಚಿಯಾಂಗರ ಮಾತು ಅರ್ಥಗರ್ಭಿತವಿದೆ. ಸತಿ ಚಿಯಾಂಗರು ಈ ಮಾತನ್ನು ಹೇಳಿದ್ದು ಅಮೆರಿಕಕ್ಕೆ ರಾಜಕೀಯ ಕಾರಣಕ್ಕಾಗಿ ಹೋಗಿದ್ದ ಅಂತನಿ ಈಡನರು ಅಮೆರಿಕದ ಮೇರಿಲೆಂಡ್ ಶಾಸನ ಸಭೆಯಲ್ಲಿ ಯುದ್ಧಾನಂತರ ಜಗತ್ತಿನ ಕುರಿತು ಭಾಷಣ ಮಾಡಿದ ಮೇಲೆ; ಈಡನರಾದರೂ ತಮ್ಮ ಭಾಷಣದಲ್ಲಿ ಮೊನ್ನೆ ಮೊನ್ನೆ ಚರ್ಚಿಲರು ಯುದ್ಧಾನಂತರದ ಯೋಜನೆಯ ಕುರಿತು ಹೇಳಿದ ಮಾತುಗಳನ್ನೇ ಪುನಃರುಚ್ಚರಿಸಿದರು. 'ಬ್ರಿಟನು ರಶ್ಯ ಅಮೆರಿಕ, ಚೀನಗಳು ವಿಜಯಾನಂತರ ಶಾಂತಿರಕ್ಷಣೆಗಾಗಿ ಸ್ವತಂತ್ರ ರಾಷ್ಟ್ರಗಳ ಸಂಯೋಜನೆಯನ್ನು ಸ್ಥಾಪಿಸಬೇಕು' ಎಂದು ಈಡನರು ಹೇಳಿದರು. ಈಡನರ ಮಾತು ಕೇಳಲಿಕ್ಕೆ ಚಂದವಾಗಿದ್ದರೂ ಕೃತಿಯಲ್ಲಿ ಇದರ ಬೆಲೆಯೇನಿದೆಯೆಂಬುದು ಸಂಶಯವಾಗಿದೆ. ಭಾರತದಂಥಾ ಬೃಹತ್ ರಾಷ್ಟ್ರವನ್ನು ಮತ್ತೂ ದಾಸ್ಯದಲ್ಲಿಯೇ ಇಟ್ಟು, ಯುದ್ಧಾನಂತರದ ಜಗತ್ತಿನಲ್ಲಿ ಶಾಂತಿ ಸಾಧಿಸುವುದು ಈಡನರ ಅಭಿಪ್ರಾಯವಿದ್ದಂತೆ ತೋರುತ್ತದೆ. ಚರ್ಚಿಲರಾದರೂ ಮೊನ್ನೆಯ ತಮ್ಮ ಭಾಷಣದಲ್ಲಿ ಭಾರತದ ಭವಿಷ್ಯತ್ತಿನ ವಿಷಯ ಚಕಾರ ಶಬ್ದ ಎತ್ತಲೇ ಇಲ್ಲ. ಸಾಮ್ರಾಜ್ಯವಾದೀ ಜನಗಳಿಗೆ ಭಾರತೀಯರ ಮೊರೆ ಕೇಳುವುದು ಅಸಂಭವವಲ್ಲದಿದ್ದರೂ ಅಪರೂಪವೆಂಬುದು ನಮಗೂ ಗೊತ್ತಾಗುತ್ತದೆ. ಆದರೆ ಭಾವೀ ಜಗತ್ತಿನ ಯೋಜನೆಯಲ್ಲಿಯೂ ಭಾರತದಂಥಾ ರಾಷ್ಟ್ರಗಳು ಇದೇ ತರದಲ್ಲಿ ನಿರಂತರ ದಾಸ್ಯದಲ್ಲಿಯೇ ಕೊಳೆತಿರಬೇಕೆಂದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಬಗೆದುಕೊಂಡಿದ್ದರೆ ಮುಂದಿನದು ಶಾಂತಿಯೋ ಸಂಗ್ರಾಮ ಸಿದ್ಧತೆಯೋ ಎಂದು ನಾವು ಪ್ರಶ್ನಿಸಬೇಕಾಗಿದೆ. ಬ್ರಿಟನು ಅಮೆರಿಕದಂಥಾ ಬಂಡವಾಳಶಾಹೀ ರಾಷ್ಟ್ರಗಳ ಈ ಧೋರಣೆಯನ್ನು ಚೀನಾ ರಶ್ಯಗಳು ಒಪ್ಪುವವೇ ಎಂಬುದನ್ನೂ ಚನ್ನಾಗಿ ವಿಚಾರಿಸಿಕೊಳ್ಳಬೇಕಾಗಿದೆ. ಬ್ರಿಟನು ಅಮೆರಿಕಗಳ ಸಾಮ್ರಾಜ್ಯದಾಹವನ್ನು ತೃಪ್ತಿಪಡಿಸಲು ಚೀನ ರಶ್ಯಗಳು ಇಂದಿನ ಸಂಗ್ರಾಮರಂಗದಲ್ಲಿ ಇಂಥಾ ಬಲಿದಾನ ಮಾಡಬೇಕೆ?

ಅಮೆರಿಕದಲ್ಲಿ ಭಾರತ

ದ ವಿಷಯ ಇತ್ತೀಚೆಗೆ ಆಸಕ್ತಿ ಹೆಚ್ಚುತ್ತಿದೆಯೆಂಬುದು ಅಲ್ಲಿಂದ ಮರಳಿ ಬಂದ ಸರ್ ಫಿಲಿಪ್ಸ್ ಹೇಳಿದ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ. ಬ್ರಿಟಿಷರೇನೋ ಅಮೆರಿಕನರನ್ನು ಭಾರತದ ವಿಚಾರ ಮಾತೆತ್ತಬೇಡಿರೆಂದು ಅಂದಿನಿಂದ ಇಂದಿನ ವರೆಗೂ ಬಾಯಿ ಕಟ್ಟುತ್ತಲೇ ಇದ್ದಾರೆ. ಆದರೆ ಇಂದಿನ ಯುದ್ಧದ ವಿಜಯ ಕಾರ್ಯವು ಬ್ರಿಟಿಷರಂತೆ ಅಮೆರಿಕನರಿಗೂ ಅಗತ್ಯವೇ ಆಗಿರುವುದರಿಂದ ಯುದ್ಧ ಕಾರ್ಯದಲ್ಲಿ ಭಾರತವು ಆಸಕ್ತಿ ವಹಿಸುವಂತೆ ಸಾಧಿಸುವುದು ಅತ್ಯಂತ ಅವಶ್ಯವಿದೆಯೆಂದು ಅಮೆರಿಕದ ರಾಜಕಾರಣಿಗಳಲ್ಲಿ ಅಗ್ರಗಣ್ಯರಾದವರೇ ಕೆಲವರು ವಾದಿಸತೊಡಗಿದ್ದಾರೆ. ಅಮೆರಿಕದಲ್ಲಿ ಒಂದು ಪ್ರಮುಖ ರಾಜಕೀಯ ಪಂಗಡದ ಮುಂದಾಳುವೆನಿಸಿದ, ಕಳೆದ ಚುನಾವಣೆಯಲ್ಲಿ ರೂಸ್‌ವೆಲ್ಟರೆದುರು ಪ್ರೆಸಿಡೆಂಟ್ ಸ್ಥಾನಕ್ಕೆ ಉಮೇದ್ವಾರರಾಗಿ ನಿಂತ, ಮುಂದೆಯೂ ಆ ಸ್ಥಾನಕ್ಕೆ ಉಮೇದ್ವಾರರಾಗಲಿರುವ ವೆಂಡಲ್ ವಿಲ್ಕಿಯವರೂ ಹೀಗೆ ಹೇಳುವವರಲ್ಲಿ ಒಬ್ಬರಾಗಿರುವರು. ವಿಲ್ಕಿಯವರು, ಮೊನ್ನೆಮೊನ್ನೆ ಲೋಕಯಾತ್ರೆ ಹೊರಟದ್ದರಲ್ಲಿ, ಭಾರತಕ್ಕೂ ಬರುವುದಿತ್ತೆಂದು ಹಲವರು ನಿರೀಕ್ಷಿಸಿದ್ದರು. ಅವರಿಗಾದರೂ ಆ ಅಭಿಪ್ರಾಯ ಇತ್ತಂತೆ! ಆದರೆ ಅಮೆರಿಕದ ಸರಕಾರವೇ ಅದಕ್ಕೆ ಅಡ್ಡಿ ಮಾಡಿತಂತೆ!

ಹೀಗೆ ಅಮೆರಿಕದಲ್ಲಿ ಜನಾಭಿಪ್ರಾಯವು ಭಾರತದ ಸಹಾನುಭೂತಿಪರವಿದ್ದರೂ ಅಲ್ಲಿನ ಅಧಿಕಾರೀವರ್ಗ ಕಠಿಣವಾಗಿದೆ. ಅಮೆರಿಕದ ಜನಾಭಿಪ್ರಾಯವನ್ನು ಭಾರತದ ಸಹಾನುಭೂತಿಪರ ಮಾಡುವುದರಲ್ಲಿ ಅಗ್ರಗಣ್ಯರು ಲೂಯಿ ಫಿಶರರು! ಅವರು ಅಲ್ಲಿ, ಕಾಂಗ್ರೆಸು ಹಾಗೂ ಗಾಂಧಿಜಿಯವರ ನ್ಯಾಯವನ್ನು ಸಮರ್ಥಿಸುವವರಾಗಿದ್ದಾರೆ "ಭಾರತೀಯರ ಸ್ವಾತಂತ್ರ್ಯದಬಗ್ಗೆ ಅಮೆರಿಕದಲ್ಲಿ ಸಹಾನುಭೂತಿಯಿದೆಯೆಂಬುದನ್ನು ಮರೆಯಬೇಡಿರಿ. ಈ ಭಾವನೆ ಅಮೆರಿಕದ ಅನೇಕ ಅಧಿಕಾರೀ ವರ್ಗದಲ್ಲಿ ಹಾಗೂ ವೆಂಡಲ್ ವಿಲ್ಕಿಯವರಲ್ಲಿ ಸ್ಪಷ್ಟವಾಗಿ ತೋರುತ್ತದೆ. ಇಂಗ್ಲೆಂಡು ಅಮೆರಿಕೆಗಳ ಸಂಬಂಧದಲ್ಲಿ ಭಾರತವೊಂದು ಮಹತ್ವದ ವಿಷಯ' ಎಂದು ಅವರು ಇತ್ತೀಚೆಗೆ ಉಲ್ಲೇಖಿಸಿದ್ದಾರೆ. ಅಮೆರಿಕವು ನಿಜವಾಗಿಯೂ ಪ್ರಜಾಸತ್ತೆಗೆ ಸಹಾಯಮಾಡುವುದೆಂಬುದಕ್ಕೆ ಭಾರತವು ಒಂದು ಒರೆಗಲ್ಲಾಗಿದೆ. ಆದರೇನೋ ಅಮೆರಿಕನರು ಅಮೆರಿಯವರ ಬಾಯಿ ಮುಚ್ಚಿಸಲು ಇನ್ನೂ ಸಮರ್ಥರಾಗಲಿಲ್ಲ. ಅಮೆರಿಯವರು ಭಾರತದ ಪ್ರಾಂತಗಳಲ್ಲಿ ಗವರ್ನರರ ಏಕತಂತ್ರಾಧಿಕಾರಕ್ಕೆ ಇನ್ನೂ ಜೀವದಾನ ಕೊಡಬೇಕೆನ್ನುವ ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುತ್ತಾ ಕಾಂಗ್ರೆಸು ಮತ್ತು ಗಾಂಧಿಜಿಯವರನ್ನು ಬಾಯಿಗೆ ಬಂದಂತೆ ತೆಗಳಿ ಬಯ್ದುಬಿಟ್ಟರು!

ಸ್ವದೇಶಾಭಿಮಾನಿ

ತಾರೀಖು 2—4—1943

ದಿವಂಗತ ಸತ್ಯಮೂರ್ತಿ

ಶ್ರೀಮಾನ್ ಎಸ್. ಸತ್ಯಮೂರ್ತಿಗಳ ನಿಧನಕ್ಕಾಗಿ ಅಖಿಲಭಾರತವೇ ಇಂದು ಶೋಕಿಸುತ್ತಿದೆ. ಭಾರತದ ಮಹಾ ಮುಖಂಡನೊಬ್ಬನು ಕಣ್ಮರೆಯಾದನು; ಕಾಂಗ್ರೆಸು ಪ್ರಭಾವಶಾಲೀ ಮುಂದಾಳುವೊಬ್ಬನನ್ನು ಕಳಕೊಂಡಿತು, ಭಾರತದ ಸ್ವಾತಂತ್ರ್ಯ ಸಂದೇಶವನ್ನು ತನ್ನ ಅಸದೃಶ ಸಿಂಹನಾದದಿಂದ ಸಾರುವ ಮಹಾ ಪ್ರತಿಭಾಶಾಲಿಯಾದ ಅದ್ಭುತ ವಾಗ್ಮಿಯೋರ್ವನು ಇಲ್ಲದಾಯಿತು! ಇಂದು ಭರತಮಾತೆ ತನ್ನ ಸುಪುತ್ರನೋರ್ವನನ್ನು ಕಳೆದುಕೊಂಡು ದರಿದ್ರಳಾದಳು!

ಸತ್ಯಮೂರ್ತಿಯವರ ದೇಶಪ್ರೇಮ, ಸಾರ್ವಜನಿಕ ಸೇವಾಕಾಂಕ್ಷೆಗಳು ಬಹುಮುಖದಿಂದ ವ್ಯಕ್ತವಾಗಿವೆ. ಕಾಂಗ್ರೆಸಿನ ಸಂದೇಶವನ್ನು, ಸ್ವಾತಂತ್ರ್ಯ ಸಂದೇಶವನ್ನು ಅವರು ಭಾರತದ ಮೂಲೆ ಮೂಲೆಗಳಿಗೂ ಹರಡಿದ್ದು ಮಾತ್ರವಲ್ಲದೆ ವಿದೇಶಗಳಿಗೂ ಹೋಗಿ ತನ್ನ ರಾಷ್ಟ್ರ ಸಂದೇಶವನ್ನು ಅವರು ಸಾರಿದ್ದಾರೆ; ತನ್ನ ಅನುಪಮ ದೇಶಭಕ್ತಿಯ ಕುರುಹೆಂದು ಕಠಿಣ ಕಾರಾಗೃಹವಾಸವನ್ನು, ಒಂದಲ್ಲ ಹಲವು ಸಲ ಅನುಭವಿಸಿದ್ದಾರೆ. ತನ್ನ ಉದ್ಯೋಗವನ್ನು—ಲಕ್ಷಾಂತರ ರೂಪಾಯಿ ಗಳಿಸಬಹುದಾದ ವಕಾಲತ್ತನ್ನು ಬಿಟ್ಟುಕೊಟ್ಟು ದೇಶಸೇವೆಯನ್ನೇ ಕೊನೆತನಕ ಮಾಡಿದ್ದಾರೆ. ಮದ್ರಾಸು ಕೋರ್ಪರೇಶನಿನ ಮೇಯರರಾಗಿ, ಅವರು ಮಾಡಿದ ಸೇವೆ ಅದರ ಇತಿಹಾಸದಲ್ಲಿಯೇ ವಿಶೇಷದ್ದಾಗಿದೆ. ಉನ್ನತ ರಾಜಕೀಯದಲ್ಲಿ ಮಾತ್ರ ವಿರದೆ ಅವರು ಸಾರ್ವಜನಿಕರ ದಿನದಿನದ ವ್ಯವಹಾರ ಸಂಕಷ್ಟಗಳನ್ನೂ ತಿಳಿದುಕೊಂಡು ದುಡಿಯುವವರಾಗಿದ್ದರು. ಹಾಗೆಯೇ ವಿದ್ಯಾಭ್ಯಾಸ, ಕಲೆ ಮೊದಲಾದುವುಗಳಲ್ಲಿಯೂ ಬಹಳ ಆಸಕ್ತಿ ವಹಿಸಿದ್ದರು.

ವಿಧಾಯಕ ಕಾರ್ಯಕ್ರಮದಲ್ಲಿ ಸತ್ಯಮೂರ್ತಿಯವರಿಗೆ ಆಸಕ್ತಿ ಹೆಚ್ಚು. ಕಾಂಗ್ರೆಸು ಹೊರಗೆ ನಿಂತು ಹೋರಾಡುವಂತೆ ಶಾಸನ ಸಭೆಗಳ ಒಳಹೊಕ್ಕೂ ಹೋರಾಡಬೇಕೆಂದು ವಾದಿಸಿದರು; ಹಾಗಿದ್ದರೂ ಕಾಂಗ್ರೆಸಿಗೆ ಕೊನೆತನಕ ವಿಧೇಯರಾಗಿಯೇ ನಡೆದರು. ಕಾಂಗ್ರೆಸು ಅಧಿಕಾರಸ್ವೀಕಾರ ಮಾಡಲು ನಿರ್ಧರಿಸಿದಾಗ ತಮಗೆ ಕಾದಿದ್ದ ಮದ್ರಾಸಿನ ಪ್ರಧಾನ ಮಂತ್ರಿ ಪದವಿಯನ್ನು ರಾಜಾಜಿಯವರಿಗಿತ್ತ ನಿಸ್ವಾರ್ಥಿ ಅವರು!

ಮದ್ರಾಸು ಪ್ರಾಂತದ ಜಸ್ಟಿಸ್ ಪಾರ್ಟಿಯನ್ನು ಜರ್ಜರಿತಗೊಳಿಸಿದ ಮಹಾವೀರರವರು. ಕೇಂದ್ರ ಶಾಸನ ಸಭೆಯ ಸದಸ್ಯರಾಗಿ ಸರಕಾರದ ಹುಳುಕನ್ನು ಹೊರಗೆಡವಿ ಹೋರಾಡಿದ ಮಹಾಯೋಧರವರು! ಹೀಗೆ ಹೋರಾಟದ ಮಧ್ಯದಲ್ಲಿಯೇ ಮಡಿದ ಸತ್ಯಮೂರ್ತಿಯವರು ವೀರಸ್ವರ್ಗ ಪಡೆದರು! ಈ ತ್ಯಾಗ ಯುವಕರಿಗೆ ಆದರ್ಶರಾದರು! ಭಾರತದ ಇತಿಹಾಸದಲ್ಲಿ ಸತ್ಯಮೂರ್ತಿಯವರ ಪುಣ್ಯ ನಾಮವು ಚಿರಸ್ಥಾಯಿಯಾಗಿ ಸುವರ್ಣಾಕ್ಷರಗಳಲ್ಲಿ ಉಲ್ಲಿಖಿತವಾಗಿ ಉಳಿಯುವುದು.

ಶಿಷ್ಟಮಂಡಳ

ಅಖಿಲಭಾರತ ಮುಖಂಡರು ಬೇಗನೇ ವೈಸರಾಯರಲ್ಲಿಗೆ ಶಿಷ್ಟಮಂಡಳ ಒಯ್ಯುವರಾಗಿ ತಿಳಿಯುತ್ತದೆ. ಮುಂಬಯಿಯಲ್ಲಿ ಮುಖಂಡರು ಸೇರಿ ಮಾಡಿದ ವಿನಂತಿಯ ವಿಷಯ ವೈಸರಾಯರಿಂದ ಉತ್ತರ ಬಂದಿದೆ. ವೈಸರಾಯರು, ಮುಖಂಡರು ತಮ್ಮನ್ನು ಭೇಟಿಯಾಗಲು ಒಪ್ಪಿಕೊಂಡಿರುವರು; ತಮ್ಮೊಡನೆ ಚರ್ಚಿಸಲಿರುವ ವಿಷಯಗಳನ್ನು ಮುಂಚಿತವಾಗಿ ತಿಳಿಸಬೇಕೆಂದು ವೈಸರಾಯರು ಹೇಳಿದ್ದಾರೆ.

ವೈಸರಾಯರು ತಿಳಿಸಿದಂತೆ, ಮುಖಂಡರು ತಮ್ಮ ಹೇಳಿಕೆಯನ್ನು ಬರೆದು ಈಗಾಗಲೇ ವೈಸರಾಯರಲ್ಲಿಗೆ ಕಳುಹಿಸಿರುವರೆಂದೂ ಗೊತ್ತಾಗಿದೆ. ಅದರಲ್ಲಿ ಗಾಂಧಿಜಿಯವರು ಭಾರತದ ರಾಜಕೀಯ ಬಿಕ್ಕಟ್ಟು ಬಗೆಹರಿಸಲು ಒಪ್ಪಿಗೆಯುಳ್ಳವರಾಗಿದ್ದಾರೆಂಬ ಭರವಸೆ ಕೊಡಲಾಗಿದೆಯೆಂದೂ ಕೇಳುತ್ತೇವೆ. ಎಪ್ರಿಲ್ ಪ್ರಥಮ ವಾರದಲ್ಲಿ ಮುಖಂಡರು ವೈಸರಾಯರನ್ನು ಕಾಣಲಿರುವರು.

ಮುಖಂಡರು ವೈಸರಾಯರನ್ನು ಕಾಣುವ ಮೊದಲು ಮಹಾತ್ಮರನ್ನು ಕಂಡು ಅವರ ಅಭಿಪ್ರಾಯ ತಿಳಕೊಳ್ಳುವುದು ಉಚಿತವಿದೆ. ಈ ಬಗ್ಗೆ ಪ್ರಯತ್ನಗಳಾಗುತ್ತಿವೆಯೆಂಬುದೂ ಸಂತೋಷಕರ. ಈ ಸಂದರ್ಭದಲ್ಲಿಯೇ, ವೈಸರಾಯರು, ಗಾಂಧಿಜಿ ಹೇಳಿದಂತೆ, ಅವರನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೊಡನೆ ಕೂಡಿಸಿ ಚರ್ಚಿಸಲು ಅವಕಾಶ ಕಲ್ಪಿಸಿಕೊಡುವುದೂ ಸಮಂಜಸವಾದುದು. ಹೀಗಾದರೆ ಮಹಾತ್ಮರು ಮತ್ತು ಕಾಂಗ್ರೆಸ್ ನಾಯಕರ ಅಭಿಪ್ರಾಯವನ್ನು ಅರಿತುಕೊಂಡ ಅಖಿಲ ಪಕ್ಷದ ಮುಖಂಡರಿಗೆ ಸಂಧಾನಮಾರ್ಗವು ಸುಗಮವಾಗಬಹುದು.

ಶ್ರೀಗಳಾದ ಮುನ್ಶಿ, ರಾಜಾಜಿ, ಭೂಲಾಬಾಯಿ ದೇಸಾಯಿ, ಸರ್ ಪುರುಷೋತ್ತಮದಾಸ ಠಾಕೂರ್‌ದಾಸ್ ಇವರು ವೈಸರಾಯರಲ್ಲಿಗೆ ಹೋಗುವ ಶಿಷ್ಟಮಂಡಳದವರೆಂದು ಈಗಾಗಲೇ ವದಂತಿ ಹಬ್ಬಿರುವುದು. ಈ ಮುಖಂಡರು ಸಂಧಾನ ಸಾಧಿಸಲು ಯಶಸ್ವಿಯಾಗಲಾರರೆಂದೇನೂ ನಮಗೆ ತೋರುವುದಿಲ್ಲ. ವೈಸರಾಯರು ಹಾಗೂ ಬ್ರಿಟಿಷ ಸರಕಾರದವರಾದರೂ ಈ ಸಲದ ಸಂಧಾನ ಸಂದರ್ಭವನ್ನು ನಿಷ್ಫಲ ಮಾಡಕೂಡದೆಂದು ನಮ್ಮ ವಿನಂತಿಯಿದೆ. ಅಖಿಲ ಭಾರತವೇ ಇಂದು ಶಿಷ್ಟಮಂಡಳದ ಕಾರ್ಯಕಲಾಪಗಳ ಕಡೆಗೆ ದೃಷ್ಟಿ ಹರಿಸಿದೆ. ಶಿಷ್ಟಮಂಡಳದವ ಪ್ರಯತ್ನ ಯಶಸ್ವಿಯಾಗಲೆಂದು ನಮ್ಮ ಹಾರೈಕೆ.

ಸ್ವದೇಶ ಸಮಾಚಾರ

ಪುಸ್ತಕ ನಿರ್ಬಂಧ

'ಮಿಡ್ನಾಪುರ ಅನಾಹುತದ ಬಗ್ಗೆ ಕೆಲಸಂಗತಿ' ಎಂಬ ಪುಸ್ತಕವನ್ನು ನಿರ್ಬಂಧಿಸಲಾಗಿದೆ. 'ಇಂಡಿಯಾ ರಿವೀವ್' ಪುಸ್ತಕದ ಪ್ರತಿಯದ್ದ ಬಗ್ಗೆ ಶ್ರೀ ಗಿರಾಜರನ್ನು ಅಹಮದಾಬಾದಿನಲ್ಲಿ ಬಂಧಿಸಲಾಗಿದೆ.

ಶಾಸನ ಸಭೆ ಮುಚ್ಚಬಾರದೆ?

ಲೆಜಿಸ್ಲೆಟಿವ್ ಎಸೆಂಬ್ಲಿ ಮತ್ತು ಕೌನ್ಸಿಲ್ ಓಫ್ ಸ್ಟೇಟ್‌ಗಳಲ್ಲಿ ನಡೆಯುವ ಭಾಷಣಗಳು ಸಾರ್ವಜನಿಕರಿಗೆ ಮುಟ್ಟಕೂಡದೆಂದು ಸರಕಾರವು ಪ್ರತಿಬಂಧಿಸುವ ವಿಷಯವಾಗಿ ಖಂಡಿಸುತ್ತಾ, 'ಹೀಗೆ ಮಾಡುವುದಕ್ಕಿಂತ ಶಾಸನ ಸಭೆಗಳನ್ನೇ ಮುಚ್ಚಬಾರದೇಕೆ?' ಎಂದು ಕೌನ್ಸಿಲ್ ಓಫ್ ಸ್ಟೇಟಿನ ಓರ್ವ ಸದಸ್ಯರು ಹೇಳಿದರು.

ರಾಜಕೀಯ ಕೈದಿಗಳ ಸ್ಥಿತಿ

ಯ ಕುರಿತು ಸರಕಾರದ ನೀತಿ ಬದಲಾವಣೆಯಾಗಬೇಕೆಂದು ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ ಕೃಷ್ಣಮಾಚಾರಿಯವರು ತಂದ ಠರಾವಿಗೆ ಮ್ಯಾಕ್ಸ್‌ವೆಲರು ಉತ್ತರ ಕೊಡುತ್ತಾ, ಯುದ್ಧ ಮುಗಿವವರೆಗೆ ಸರಕಾರವು ತನ್ನ ಧೋರಣೆ ಬದಲು ಮಾಡುವುದಿಲ್ಲವೆಂದರು. 'ರಾಜಕೀಯ ಕೈದಿ ಕಾಯಿಲೆ ಬಿದ್ದು ಆತನಿಗೆ ಚಳವಳ ಹೂಡಲು ಸಾಧ್ಯವಿಲ್ಲವೆಂದಾದ ಮೇಲೆ ಬಿಡುಗಡೆ ಮಾಡಬಹುದೆಂದರು!

ಚಡೀ ಶಿಕ್ಷೆ ನಿಲ್ಲಿಸುವಿರಾ?

ಎಂದು ಕಾಮನ್ಸ್ ಸಭೆಯಲ್ಲಿ ಅಮೇರಿಯವರೊಡನೆ ಪ್ರಶ್ನಿಸಲಾಗಿದೆ. ಭಾರತದಲ್ಲಿ ರಾಜಕೀಯ ಆರೋಪಕ್ಕಾಗಿ ಚಡೀ ಏಟಿನ ಚಿತ್ರಹಿಂಸೆ ಕೊಡುತ್ತಿರುವುದು ಅಯೋಗ್ಯವೆಂದು ಪಾರ್ಲಿಮೆಂಟು ಸದಸ್ಯರು ಅಭಿಪ್ರಾಯಪಡುತ್ತಾರೆ. ಆದರೆ ಅಮೇರಿಯವರು, ಬ್ರಿಟಿಷ್ ಭಾರತದಲ್ಲಿ ಚಡೀ ಏಟಿನ ಶಿಕ್ಷೆ ಕಾನೂನು ಬಾಹಿರವಲ್ಲವೆಂದು ಸಮರ್ಥಿಸಿದರು!

'SWADESHABHIMANI'
Revised Rates of Advertisement
In accordance with the latest amendment to the Newspaper Control Order an increase of ⅓ of the present rates of advertisement charges of 'Swadeshabhimani' will take effect from 1st. April 1943 on which date the new order will come into force.
Advt. Manager

'ಚರ್ಚಿಸುವ ವಿಷಯ ಮುಂಚಿತ ತಿಳಿಸಿ'

ಎಂಬುದಾಗಿ ಮುಖಂಡರ ಪರಿಷತ್ತಿನವರು ವೈಸರಾಯರಲ್ಲಿ ಶಿಷ್ಟಮಂಡಳ ಒಯ್ಯುವ ಕುರಿತು ಅವರೊಡನೆ ಅಪ್ಪಣೆ ಕೇಳಿದ್ದಕ್ಕೆ ವೈಸರಾಯರಿಂದೀಗ ಉತ್ತರಬಂದಿದೆ. ಮುಖಂಡರು ಅ ಸಿದ್ಧತೆ ಮಾಡುತ್ತಿದ್ದಾರೆ. ವೈಸರಾಯರಲ್ಲಿಗೆ ಹೋಗುವ ಮೊದಲು ಮಹಾತ್ಮರ ಅಭಿಪ್ರಾಯ ತಿಳಿಯುವ ಪ್ರಯತ್ನ ಮಾಡಲಾಗುತ್ತದೆ.

ಈಸೂರು ಮೊಕದ್ದಮೆ

ಯಲ್ಲಿ ಮೊದಲು ಹಿಡಿದವರ ಪೈಕಿ ಐವರನ್ನು ಈಗಾಗಲೇ ಫಾಶಿಗೆ ಕೊಟ್ಟದ್ದಲ್ಲದೆ, ಈಗ ಏಳು ಜನರ ಮೇಲೆ ಹೊಸದಾಗಿ ಮೈಸೂರು ಸರಕಾರವು ಖಟ್ಲೆ ಹಾಕಿದೆ!

'ಮಹಾತ್ಮರನ್ನು ವಿಚಾರಣೆಗೆ ಗುರಿಪಡಿಸಿ'

ಎಂಬುದಾಗಿ ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ರಾಜಾ ಯುವರಾಜ ದತ್ತಸಿಂಗಜಿಯವರು ಹೇಳಿದರು. ಸುಮ್ಮ ಸುಮ್ಮಗೆ ಕಾಂಗ್ರೆಸು ಮತ್ತು ಗಾಂಧಿಜಿ ಮೇಲೆ ಅಪವಾದ ಹೊರಿಸುವ ಪುಸ್ತಕ ಪ್ರಕಟಿಸುವುದಕ್ಕಿಂತ ಗಾಂಧಿಜಿಯವರನ್ನು ನ್ಯಾಯವಾದ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸುವುದು ಯೋಗ್ಯವಲ್ಲವೆ?

ದೇವಿ ಸರೋಜಿನಿಯವರು

ಈಗ ಅಪಾಯದಿಂದ ಪಾರಾಗಿದ್ದಾರೆಂದು ಡಾಕ್ಟರರು ಅಭಿಪ್ರಾಯಪಡುತ್ತಾರೆ. ಅವರಿಗೆ ಬಹಳ ಕೆಟ್ಟ ರೀತಿಯ ಮಲೇರಿಯ ಜ್ವರ ಬಂದಿತ್ತೆಂದು ಡಾಕ್ಟರರು ಹೇಳುತ್ತಾರೆ.

ಹಕ್ಕರ ರಾಜಿನಾಮೆ

ಬಂಗಾಳದ ಮುಖ್ಯ ಮಂತ್ರಿ ಫಜುಲುಲ್ ಹಕ್ಕರು ಮುಖ್ಯ ಮಂತ್ರಿಪದವಿಗೆ ರಾಜಿನಾಮೆ ಕೊಟ್ಟಿರುವರು. ಗವರ್ನರರು ಅದನ್ನು ಸ್ವೀಕರಿಸಿದ್ದಾರೆ. ಅದರ ವಿವರವಿನ್ನೂ ತಿಳಿದಿಲ್ಲ. ಗವರ್ನರರಿಗೂ ಹಕ್ಕರಿಗೂ ರಾಷ್ಟ್ರೀಯ ಮಂತ್ರಿಮಂಡಳ ರಚಿಸುವ ವಿಷಯ ಚರ್ಚೆಯಾಗಿ ಗವರ್ನರರ ಮಾತಿಗೆ ಹಕ್ಕರು ಒಪ್ಪದೆ ಇದ್ದುದರಿಂದ ಗವರ್ನರರು ರಾಜಿನಾಮೆ ಕೊಡಲು ಒತ್ತಾಯ ಮಾಡಿದಂತೆ ಹಕ್ಕರು ರಾಜಿನಾಮೆ ಕೊಟ್ಟಿರುವುದಾಗಿ ಒಂದು ಹೇಳಿಕೆಯಿದೆ. ಹಕ್ಕರ ರಾಜಿನಾಮ ಪತ್ರವು ಮೊದಲೇ ಗವರ್ನರರಿಂದ ಟೈಪು ಮಾಡಲ್ಪಟ್ಟದ್ದು ಅದಕ್ಕೆ ಹಕ್ಕರು ದಸ್ಕತು ಹಾಕಬೇಕಾಯಿತೆಂದೂ ತಿಳಿಯುತ್ತದೆ. ಇದರಿಂದ ಬಂಗಾಳದ ಗವರ್ನರರು ಸರ್ ಜಾನ್ ಹರ್ಬರ್ಟರರು ಬಹಳ ಉದ್ಧಟತನದ ಕೆಲಸ ಮಾಡಿದರೆಂದು ಕೆಲವರು ಟೀಕಿಸುತ್ತಾರೆ.

ಬಟ್ಟೆಯ ಬೆಲೆ

ಆಹಾರದಂತೆ ಬಟ್ಟೆಯೂ ಮಾನವ ಜೀವನಕ್ಕೆ ಅವಶ್ಯ; ಹಸಿವಡಗಿಸಲು ಉಂಡರೆ ಮಾತ್ರ ಸಾಲದು, ಮಾನವುಳಿಸಲು ಬಟ್ಟೆಯೂ ಬೇಕು. ಬಟ್ಟೆಯ ಬೆಲೆಯಿಂದು ಯುದ್ಧ ಪ್ರಾರಂಭವಾದ ಮೇಲೆ ನಾಲ್ಕುಪರೆ ಪಾಲು ಏರಿದೆ! ಬಟ್ಟೆ ವಿದೇಶಗಳಿಂದ ಬರುತ್ತಿರುವುದು ನಿಂತುಹೋಗಿದುದು. ಇಲ್ಲಿನ ವಸ್ತ್ರ ವ್ಯಾಪಾರಿಗಳ ಲಾಭದಾತೆಯೂ ಇಲ್ಲಿಂದ ಮಧ್ಯಪೂರ್ವಕ್ಕೆ ಬಟ್ಟೆ ಹೋಗುತ್ತಿರುವುದೂ ಈ ಮಿತಿಮೀರಿದ ಬೆಲೆಗೆ ಕಾರಣಗಳಾಗಿವೆ.

ಸರಕಾರದವರು ಈ ಸಮಸ್ಯೆಯನ್ನು ಪರಿಹರಿಸಲು ಏನುಮಾಡುತ್ತಿದ್ದಾರೆ! ಬಟ್ಟೆಯ ಬೆಲೆಗೆ ನಿರ್ಬಂಧ ಮಾಡಲೇ ಇಲ್ಲ. ಅದರ ಬದಲು 'ಸ್ಟಂಡಾರ್ಡ್ ಬಟ್ಟೆ' ಕೊಡುವುದಾಗಿ ಹೇಳಿದರು. 1941ನೇ ಅಕ್ಟೋಬರ್ ತಿಂಗಳಿಂದ ತೊಡಗಿ ಈ ಸ್ಟೇಂಡಾರ್ಡ್ ಬಟ್ಟೆಯ ಭರವಸೆ ಬರುತ್ತಿದ್ದರೂ ಇದುವರೆಗೆ ಏನೂ ಹೊರಬಂದಿಲ್ಲ; ಬಟ್ಟೆಯ ಸಮಸ್ಯೆ ಹೆಚ್ಚುತ್ತಲೇ ಇದೆ.

ಭಾರತದಲ್ಲಿರುವ ಬಟ್ಟೆಯ ಕಾರ್ಖಾನೆಗಳು ಇಂದು ಶೇಕಡಾ 300 ಹಾಗೂ 400ಕ್ಕೆ ಮಿಕ್ಕಿದ ಲಾಭ ಪಡೆಯುತ್ತಿವೆ; ಸಹಜವಾಗಿ ಇಂಥಾ ಲಾಭದಿಂದ ಸರಕಾರಕ್ಕೆ ತೆರಿಗೆ ರೂಪದಲ್ಲಿ ಬಹಳ ಹಣ ದೊರಕುತ್ತದೆ. ಬಟ್ಟೆಯ ಕಾರ್ಖಾನೆಯವರೂ, ಬಟ್ಟೆಯ ವ್ಯಾಪಾರಿಗಳೂ ಸರಕಾರವನ್ನು ಈ ರೂಪದಲ್ಲಿ ಬಾಯಿಮುಚ್ಚಿಸಬಲ್ಲರು. ಆದರೆ ಸರಕಾರವು ಬೇಗನೇ ಬಡವರ ಕಡೆಗೆ ಕಣ್ಣುತೆರೆದು ನೋಡುವುದು ಅಗತ್ಯವಾಗಿದೆ.

ಬಂಗಾಳ ಪ್ರಾಂತ 'ಧಾಳಿಯ ಪ್ರದೇಶ'

ವೆಂದು ಇಂಡಿಯಾ ಸರಕಾರದವರು ಸಾರಿದ್ದಾರೆ. ಎಂದರೆ ಇಲ್ಲಿ ಭಾರೀ ವಿಮಾನ ಧಾಳಿಯಾಗುವ ಹೆದರಿಕೆಯಿದೆಯೆಂದು ಅರ್ಥ! ಜಪಾನು ವಿಮಾನಗಳು ಬಂಗಾಳದಲ್ಲಿ ಪುನಃ ಈ ವಾರ ಎರಡನೆಯ ಸಲ ಧಾಳಿಯಿಟ್ಟವು. ಕಾಕ್ಸ್ ಬಜಾರಿನ ಮೇಲೆ ಬಾಂಬು ಹಾಕಲು ಶತ್ರು ವಿಮಾನಗಳು ಯತ್ನಿಸಿದವು.

ಕರ್ನಾಟಕ

ಸಿದ್ಧನಾಥ ಪಂತರ ಬಂಧನ

ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿ ಪಂಡಿತ ಸಿದ್ಧನಾಥ ಪಂತರನ್ನು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಹುಬ್ಬಳ್ಳಿಯಲ್ಲಿ ದಸ್ತಗಿರಿ ಮಾಡಲಾಗಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರ ಸಭೆ

...ಯ ಸಾಮಾನ್ಯ ಸಭೆಯೊಂದು ತಾ. ೨೫ರಂದು ಸಂಜೆ ಜರಗಿತು. ನಗರ ಸಭೆಯನ್ನು ವಿಸ್ತರಿಸುವ ನಿರ್ಧಾರವು ಗೊತ್ತಾಗಿ ತಾತ್ಕಾಲಿಕ ಸಿಬ್ಬಂದಿಯ ನೇಮಕವಾಯಿತು. ಮಿಸ್ ಎಂ. ಎ. ಆಂಡ್ರೂಸ್ ಅವರನ್ನೂ ನಗರದ ಹೆಲ್ತ್ ವಿಸಿಟರರಾಗಿ ನೇಮಿಸಲಾಯಿತು. ಹರಿಜನ ಸೇವಕ ಸಂಘಕ್ಕೆ ರೂ. ೩೦೦ರ ಸಹಾಯ ಧನವು ಮಂಜೂರಾಯಿತು. ಬಜೆಟಿನಲ್ಲಿ ಅದಕ್ಕಾಗಿ ಪ್ರತ್ಯೇಕಿಸಿ ಇಡಲ್ಪಟ್ಟಿದ್ದ ಹಣ ರೂ. ೨೫೦ ಮಾತ್ರ. ಎ. ಆರ್. ಪಿ. ಯವರಿಗೆ ಕೊಟ್ಟಿರುವ ಎರಡು ಲಾರಿಗಳನ್ನು ನಗರದಲ್ಲಿ ನೀರು ಹನಿಸುವುದಕ್ಕಾಗಿ ಬೆಳಗ್ಗಿನ ಮಟ್ಟಿಗಾದರೂ ಕೊಡಬೇಕೆಂದು ಕೇಳಿಕೊಂಡು ನಗರ ಸಭೆಯು ಬರೆದ ಪತ್ರಕ್ಕೆ ಬಂದ ಉತ್ತರವು ಓದಲ್ಪಟ್ಟಿತು. ಹಗಲು ರಾತ್ರಿಯೂ ಅಗ್ನಿಯನ್ನು ಆರಿಸುವುದಕ್ಕಾಗಿ ಯಂತ್ರಗಳು ಅವಶ್ಯವಿರುವುದರಿಂದ ಹಾಗೆಲ್ಲ ಕೊಡುವುದಕ್ಕಾಗುವುದಿಲ್ಲವೆಂದು ಎ. ಆರ್. ಪಿ. ಯವರು ಬರೆದಿದ್ದರು. ಈ ವಿಚಾರದಲ್ಲಿ ಮಾತನಾಡಲು ನಗರ ಸಭೆಯಿಂದ ಒಂದು ಶಿಷ್ಟಮಂಡಳವನ್ನು ಎ. ಆರ್. ಪಿ. ಆಫೀಸಿಗೆ ಕಳುಹುವುದೆಂದು ಗೊತ್ತಾಯಿತು. ಆನೆಕಾಲು ರೋಗದ ನಿವಾರಣೆಗಾಗಿ ಸೂಚನೆಕೊಡಲು ಒಂದು ಸಮಿತಿಯು ಏರ್ಪಟ್ಟಿತು.

ಇಂಡಿಯನ್ ಬೇಂಕ್ ಲಿಮಿಟೆಡ್

ಮದ್ರಾಸ್, ಇದರ ಶಾಖೆಯೊಂದು ಮಂಗಳೂರಲ್ಲಿ ಮೈದಾನಿನ ಉತ್ತರ ಮಾರ್ಗದಲ್ಲಿ ತಾ. ೩೧ನೇ ಮಾರ್ಚ್ ೧೯೪೩ರಂದು ತೆರೆಯಲ್ಪಟ್ಟಿದೆ.

ದ. ಕ. ಸೆಂಟ್ರಲ್ ಕೋಓಪರೇಟಿವ್ ರಖಂ ಮಾರಾಟದ ಸ್ಟೋರ್ಸ್

ಇದರ ಆರಂಭ ಸೂಚನೆಯ ಸಭೆ ಕಳೆದ ಆದಿತ್ಯವಾರ ಸೆಂಟ್ರಲ್ ಕೋ. ಬೇಂಕಿನ ಮಹಡಿಯಲ್ಲಿ ಶ್ರೀ ಯು. ಕಣ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಲೆಕ್ಟರ್ ಎಂ. ಕರಮತುಲ್ಲಾ ಅವರು ಈ ಸ್ಟೋರ್ಸಿನ ಆರಂಭೋತ್ಸವದ ಭಾಷಣ ಮಾಡುತ್ತ "ಈ ಸ್ಟೋರ್ಸ್ ಈ ದಿನಗಳಲ್ಲಿ ಬಹಳ ಪ್ರಯೋಜನಕಾರಿಯಾದ ಸೇವೆ ಸಲ್ಲಿಸಬಲ್ಲುದು; ಅದಕ್ಕಾಗಿ ಅನಾವಶ್ಯಕವಾದ ಲಾಭ ಸಿಕ್ಕಿಯನ್ನಿಲ್ಲದ ಸಟ್ಟಾ ವ್ಯಾಪಾರ ಮಾಡಬಾರದು; ಈಗಿನ ಪರಿಸ್ಥಿತಿಯ ಪ್ರಯೋಜನ ಪಡೆಯಲು ಮೇಲಕ್ಕೆದ್ದ ಅದೊಂದು ಹೊಸ ತರಗತಿಯ ಮಧ್ಯಸ್ಥ ವ್ಯಾಪಾರಗಾರರ ಪಂಗಡವನ್ನು ತೊರೆದೊಡಬೇಕು" ಎಂದಾಡಿದರು. ಶ್ರೀ ಎಸ್. ನರಸಪ್ಪಯ್ಯನವರು ಈ ಸೆಂಟ್ರಲ್ ಸ್ಟೋರ್ಸಿನ ಸ್ಥಾಪನೆಯ ಉದ್ದೇಶಗಳನ್ನು ವಿವರಿಸಿದರು. ಖಾನ್ ಬಹದ್ದೂರ್ ಎಂ. ಶವನ್ನಾಡ್ ಎಂ. ಎಲ್. ಎ. ಅವರು ಈಗ ಅಧಿಕಾರಿಗಳ ವಶವಿರುವ ಅಕ್ಕಿ ಸಹಕಾರಿ ಸ್ಟೋರ್ಸುಗಳ ಮೂಲಕವೇ ಜನತೆಗೆ ದೊರೆಯಬೇಕೆಂದರು. "ಸರ್ವೆಂಟ್ಸ್ ಓಫ್ ಇಂಡಿಯ ಸೊಸೈಟಿ"ಯ ಶ್ರೀ ಎಸ್. ಆರ್. ವೆಂಕಟರಾಮನ್ ಅವರೂ ಭಾಷಣಮಾಡಿದರು. ಸಹಕಾರ ಸಂಘಗಳ ಡೆ. ರಿಜಿಸ್ಟ್ರಾರ್ ಶ್ರೀ ಕಣ್ಣನ್ ನಾಯರು ಧನ್ಯವಾದಗಳನ್ನು ಅರ್ಪಿಸಿದರು. ಈ ಸ್ಟೋರ್ಸಿನ ಕಾರ್ಯನಿರ್ವಹಣಕ್ಕಾಗಿ ೧೫ ಮಂದಿ ಡೈರೆಕ್ಟರುಗಳನ್ನು ಆರಿಸಲಾಯಿತು.

ಜಿಲ್ಲಾ ಸಹಕಾರ ಅಭಿವೃದ್ಧಿ ಸಂಘ

ಈ ಸಂಘದ ಒಂದು ಮೀಟಿಂಗ್ ಕಳೆದ ಆದಿತ್ಯವಾರ ಸೆಂಟ್ರಲ್ ಕೋ. ಬ್ಯಾಂಕಿನ ಮಹಡಿಯಲ್ಲಿ ಅವರ ಅಧ್ಯಕ್ಷ ಶ್ರೀ ಎಮ್. ಎಸ್. ಮಾಧವ ರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿ, ಜಿಲ್ಲಾ ಸಹಕಾರ ಸಂಘಗಳ ಮೂರನೆಯ ಸಮ್ಮೇಳನಾಧಿವೇಶನವನ್ನು ಬರುವ ಮೇ ತಿಂಗಳ ಮಧ್ಯಭಾಗದಲ್ಲಿ ಪುತ್ತೂರಲ್ಲಿ ಜರುಗಿಸಬೇಕೆಂದು ನಿರ್ಧಾರವಾಯಿತು.

ಅಕ್ಕಿ ಹುಡುಕಾಟವಾಗುವುದೆ?

ಮಂಗಳೂರು ನಗರದಲ್ಲಿ ಅಕ್ಕಿ ಕ್ರಯ ನಿರ್ಬಂಧ ಕ್ರಮವೇನೋ ಬಹಳ ಬಿರುಸಾಗಿ ನಡೆದಿದೆ. ಆದರೆ ಇಷ್ಟರಲ್ಲೇ ಅಕ್ಕಿ ವ್ಯಾಪಾರಿಗಳು ತಮ್ಮಲ್ಲಿ ಅಕ್ಕಿ ಇಲ್ಲವೆಂದು ಹೇಳತೊಡಗಿದ್ದರಿಂದ, ಹಲವು ವ್ಯಾಪಾರಿಗಳ ಮನೆಗಳನ್ನು ಜಪ್ತಿ ಮಾಡಿದ್ದು ಕೆಲವು ಕಡೆ ಸಂಗ್ರಹಿಸಿಟ್ಟ ಅಕ್ಕಿಮುಡಿ ಸಿಕ್ಕಿವೆ. ಹೇಗೂ ಅಕ್ಕಿಮುಡಿಗಳು ಈಗ ನಗರದಿಂದ ಹತ್ತಿರದ ಹಳ್ಳಿಗಳಿಗೆ ಹೋಗುತ್ತಿರುವ ಸುದ್ದಿ ಹಬ್ಬಿದೆ. ಇನ್ನು ಕೆಲವರು, ಸರಕಾರದವರೇ ಅಕ್ಕಿ ಬೆಲೆ ನಿಯಂತ್ರಿಸಿ ಮಿಲಿಟರಿಗೆ ಕಳುಹಿಸುತ್ತಾರೆಂದೂ ಸುದ್ದಿ ಹರಡುತ್ತಾರೆ. ಹೇಗೂ ಬಹಳ ಕಾಲದ ನಂತರ ಅಕ್ಕಿಯ ಬೆಲೆಗೆ ಇಂದು ನಿಯಂತ್ರಣವೇನೋ ಆಯಿತು. ಯಾವುದೇ ರೂಪದಿಂದಾಗಲಿ, ನಮ್ಮ ಊರಿಂದ ಅಕ್ಕಿ ಮಾಯವಾಗುವುದನ್ನು ಸರಕಾರೀ ಅಧಿಕಾರಿಗಳು ಅದಕ್ಕಿಂತ ಹೆಚ್ಚಾಗಿ ಜನರೇ ಕಣ್ಣು ತೆರೆದು ನೋಡಿಕೊಂಡಿರಬೇಕಾಗಿದೆ. ಅಕ್ಕಿ ಮಾಯಮಾಡುವ ಮಂತ್ರಗಾರರನ್ನು ನಿರ್ಬಂಧಿಸಲೇ ಬೇಕು. (ಬಾತ್ಮಿ)

ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿ

ಇದರ ಕಾರ್ಯಕಾರೀ ಮಂಡಳಿಯ ಸಭೆಯೊಂದು ತಾ. ೨೯ರಂದು ದ. ಕ. ಸೆಂಟ್ರಲ್ ಕೋಓಪರೇಟಿವ್ ಬೇಂಕ್ ಕಟ್ಟಡದಲ್ಲಿ ಸೇರಿ, ಜಿಲ್ಲಾ ಅಧಿಕಾರಿಗಳು ಅಕ್ಕಿಭತ್ತಗಳ ಕ್ರಯ ನಿರ್ಬಂಧಿಸಿದ ನಿಮಿತ್ತ, ಈ ಕಮಿಟಿಯ ರಚನೆಯಾದ ಉದ್ದೇಶವು ಫಲಿಸುವಂತಾದುದರಿಂದ, ಈ ಕಮಿಟಿಯವರು ಅಧಿಕಾರಿಗಳೊಡನೆ ಅಕ್ಕಿ ಡಿಪ್ಪೋ ತೆರೆಯುವರೆ ಸಹಕರಿಸುವರು ಎಂದು ನಿರ್ಣಯಿಸಲಾಗಿದೆ.

ಅಕ್ಕಿಕ್ರಯ ನಿಯಂತ್ರಣ

ದ ವಿಚಾರವಾಗಿ ಮದ್ರಾಸು ಸರಕಾರ ಮತ್ತು ಜಿಲ್ಲಾ ಕಲೆಕ್ಟರರನ್ನು ಅಭಿನಂದಿಸುವ, ಹಾಗೂ ಅಕ್ಕಿ ಮುಡಿ ಒಂದರ ರೂ. 7-14-0 ಹಾಗೂ ಸೇರಿಗೆ 3 ಆಣೆ ಕ್ರಯ ನಿರ್ಬಂಧವು ಬಡವರಿಗೆ ಸಹಕಾರಿಯಿತ್ತೆನ್ನುವ, ಚಿಲ್ಲರೆ ಸಂಕಷ್ಟವನ್ನು ದೂರಿಕೊಳ್ಳುವ, ಸರಕಾರವು ಸ್ವಾಧೀನಪಡಿಸಿದ ಅಕ್ಕಿಯು ಸಾವುಕಾರರ ಮುಖಾಂತರ ಮಾರಾಟವಾಗದೆ ಕಲೆಕ್ಟರರ ಸ್ವಾಧೀನದ ಡಿಪೋಗಳಲ್ಲಿಯೇ ಮಾರಾಟವಾಗಬೇಕೆನ್ನುವ, ಈ ಜಿಲ್ಲೆಗೆ ಅಕ್ಕಿಭತ್ತ ಸಾಲದೆಂದು ಸಾರಿ ಹೊರಜಿಲ್ಲೆಯಿಂದ ತರಿಸಬೇಕೆನ್ನುವ, ಮೈಸೂರು ಮೊದಲಾದೆಡೆಗಳಿಗೆ ಹೋಗುವ ಕಪ್ಪಿನ ಬೆಲ್ಲ, ತಾಳೆ ಬೆಲ್ಲ, ಕಾಫಿ, ಟೀ ಮೊದಲಾದ ಬಡವರ ಆಹಾರಕ್ಕೆ ನಮ್ಮ ಜಿಲ್ಲೆಯಿಂದ ಹೊರಹೋಗದಂತೆ ನಿರ್ಬಂಧ ಹಾಕಬೇಕೆನ್ನುವ ಒಂದು ವಿನಂತಿಯು ಮದ್ರಾಸು ಗವರ್ನರಿಗೆ ಮಂಗಳೂರಿನ ಭಕ್ತಜನರು ತಾ. ೨೮ರಂದು ರೆ. ಫಾ. ಡಿ. ಜೆ. ಡಿ'ಸೋಜರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ನಿರ್ಣಯಿಸಿ ಕಳುಹಿಸಿರುವರು.

ಓರಿಯಂಟಲ್ ಬೇಡ್‌ಮಿಂಟನ್

ಕ್ಲಬ್ಬಿನ ದಶ ವಾರ್ಷಿಕ ಕೂಟವು ಶ್ರೀ ಎಚ್. ನರಸಿಂಹ ಇವರ ಅಧ್ಯಕ್ಷತೆಯಲ್ಲಿ ಜರಗಿತ್ತು. ಕಾರ್ಯದರ್ಶಿ ಶ್ರೀ. ಬಿ. ಕೆ. ಬಾಳಿಗರು ವರದಿಯೋದಿದರು. ಆ ಮೇಲೆ ಪಂದ್ಯಾಟದಲಿ ಗೆದ್ದವರಿಗೆ ಬಹುಮಾನ ವಿತರಣೆ ಭಾಷಣಗಳಾದವು.

ಜಿಲ್ಲಾ ಪತ್ರಿಕೋದ್ಯಮಿಗಳು

ರಾಷ್ಟ್ರ ಧುರೀಣರಾದ ಶ್ರೀ ಸತ್ಯಮೂರ್ತಿಯವರ ನಿಧನದ ಬಗ್ಗೆ ತಮ್ಮ ದುಃಖ ಪ್ರದರ್ಶನ ಮಾಡಿ ಅವರ ನಿಧನದಿಂದುಂಟಾದ ಅವರ ಬಂಧುಗಳ ದುಃಖದಲ್ಲಿ ಸಹ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಿ, ಅವರ ಆಪ್ತ ಸಂಬಂಧಿಕರಿಗೆ ಕಳುಹಿಸಿರುವರು.

ಕೃಷ್ಣಪ್ಪ ಸ್ಮಾರಕ ಕಪ್ಸ್

ನಾಗಿ ತೃತೀಯ ವಾರ್ಷಿಕ ಬೇಡ್‌ಮಿಂಟನ್ ಪಂದ್ಯಾಟಗಳು ಓರಿಯಂಟಲ್ ಬೇಡ್‌ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ಜರಗಿದವು. ಡಾ। ರಾಮಬಾಳಿಗರ ಅಧ್ಯಕ್ಷತೆ ವಹಿಸಿದ್ದರು. ಕೀ. ಶೇ. ಕೃಷ್ಣಪ್ಪನವರ ಚಿತ್ರಕ್ಕೆ ಶ್ರೀ ಎಂ. ಎ. ಕಾಮತರು ಹೂಮಾಲೆ ಹಾಕಿದರು. ವಿಜಯಿಗಳಾದ ಕಾಸರಗೋಡು ಟೌನ್ ಟೀಮಿನವರು ಕೃಷ್ಣಪ್ಪ ಮೆಮೋರಿಯಲ್ ರೋಲಿಂಗ್ ಕಪ್ಪನ್ನೂ ಬೇರೆ ರಜತ ಪದಕಗಳನ್ನೂ ಪಡೆದರು. ಅತ್ಯುತ್ತಮ ಆಟಕ್ಕಾಗಿ ಕಾಸರಗೋಡಿನ ಕಡೆಯಿಂದ ಆಡಿದ ಕಣ್ಣನೂರಿನ ಶ್ರೀ ರಾಮಕೃಷ್ಣನಿಗೆ ಟ್ರೊಪಿಕಲ್ ಇನ್ಶೂರೆನ್ಸ್ ಕಂಪೆನಿಯ ಶ್ರೀ ಆರ್. ಶೆಟ್ಟರ ವಿಶೇಷ ಬಹುಮಾನವಿತ್ತರು.

ಪ್ರಾಣಿಬಲಿ ನಿಷೇಧಕ್ಕೆ ಒಪ್ಪಿಗೆ

ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರಲ್ಲಿ ೬೫೦ ವರ್ಷಗಳಿಂದಲೂ ಭಜಿಸಿಕೊಂಡು ಬರುವ ಶ್ರೀ ಗುತ್ತಮ್ಮ ದೇವಸ್ಥಾನದಲ್ಲಿ ಸೇರಿದ ಹತ್ತು ಮಂದಿ ಸಮಸ್ತರ ಸಭೆಯಲ್ಲಿ ಇನ್ನು ಮುಂದೆ ದೇವಿ ಉತ್ಸವವು ಜರಗುವ ಸಮಯದಲ್ಲಿ ಪ್ರಾಣಿಬಲಿ ಕೊಡಬಾರದೆಂದೂ, ಇನ್ನು ಮುಂದಕ್ಕೆ ಆ ಕಾರ್ಯವನ್ನು ಸರ್ವಥಾ ನಿಲ್ಲಿಸಬೇಕೆಂದೂ ಒಂದು ವೇಳೆ ಬಲಿಗಾಗಿ ಇನ್ನು ಮುಂದೆ ಆಡು ಕುರಿ ಕೋಳಿಗಳನ್ನು ತಂದ ಪಕ್ಷದಲ್ಲಿ ಅದನ್ನು ಅವರಿಗೆ ವಾಪಾಸು ಕೊಡದೆ ಏಲಂ ಹಾಕಿ ಆ ಹಣವನ್ನು ಭಂಡಾರಕ್ಕೆ ವಿನಿಯೋಗಿಸಲಾಗುವುದೆಂದೂ ನಿರ್ಣಯಿಸಿರುವುದು ಸ್ತುತ್ಯ.

ಸ್ಕೌಟ್ ಮಾಸ್ಟರರ ಶಿಕ್ಷಣ ಶಿಬಿರ

ವೊಂದು ದ. ಕ. ಜಿಲ್ಲಾ ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನಿನ ಆಶ್ರಯದಲ್ಲಿ ಮೇ ೩ರಿಂದ ೧೧ರ ವರೆಗೆ ಕಾಸರಗೋಡಿನ ಬಳಿ ಬೇವಿಂಜೆಯಲ್ಲಿ ಏರ್ಪಡಿಸಲಾಗಿದೆ. ಈ ಶಿಕ್ಷಣ ಶಿಬಿರವು ಪ್ರಾಂತಿಕ ಆರ್ಗನೈಸಿಂಗ್ ಕಮಿಶನರ್ ಶ್ರೀ ರಾಜಗೋಪಾಲನ್ ಮತ್ತು ಜಿಲ್ಲಾ ಕಮಿಶನರ್ ಶ್ರೀ. ಎಂ. ಎಸ್. ಮಾಧವರಾವ್, ಮತ್ತು ನುರಿತ ಶಿಕ್ಷಕರ ನೇತೃತ್ವದಲ್ಲಿ ನಡೆಯುವುದು. ಊಟ ವಸತಿಗಳ ಖರ್ಚು ರೂ. 3/- ಸರ್ಟಿಫಿಕೇಟಿಗೆ ಎಂಟಾಣೆ, ಎರಡನ್ನೂ ಮುಂಚಿತವಾಗಿ ಕೊಡಬೇಕು. ಸೇರಬಿಚ್ಛಿಸುವವರು ಆಯಾಯ ತಾಲೂಕಿನ ಸ್ಕೌಟ್ ಎಸೋಸಿಯೇಶನ್ ಸೆಕ್ರೆಟರಿಗಳಿಗಾಗಲಿ, ಇಲ್ಲವೇ ಶ್ರೀ. ಬಿ. ಎಸ್ ಕಕ್ಕಿಲ್ಲಾಯ, ಎಡ್ವೋಕೇಟ್, ಕಾಸರಗೋಡು ಇವರಿಗಾಗಲಿ, ಅಥವಾ ಮಂಗಳೂರಿನಲ್ಲಿರುವ ಜಿಲ್ಲಾ ಆರ್ಗನೈಸರಿಗಾಗಲಿ ಎಪ್ರಿಲ್ ೨೫ರೊಳಗೆ ಬರೆಯುವುದು.

ಮಿಲಿಟರಿ ಲಾರಿಗಳು

ನೂರಾರು ಮಿಲಿಟರಿ ಲಾರಿಗಳು ಹರಿಹರದಿಂದ ಮಂಗಳೂರಿಗೆ ಬಂದು ಬೀಡುಬಿಟ್ಟಿವೆ. ಮಂಗಳೂರ ಹಂಚು ತೆಗೆದುಕೊಂಡು ಹೋಗಲು ಬಂದ ಸಪ್ಲೈಲಾರಿಗಳೆಂದು ತಿಳಿದುಬರುತ್ತದೆ.

ಪೈಗಂಬರರ ಜನ್ಮ ದಿನದ

ಆಚರಣೆಯು ಬೆಸೆಂಟ್ ಬಾಲಿಕಾ ಶಾಲೆಯಲ್ಲಿ ಆಚರಿಸಲ್ಪಟ್ಟಿತು.

ಕಾಸರಗೋಡು

ಕಮ್ಯುನಿಸ್ಟ

ರಾದ ಶ್ರೀಯುತರು ಪ್ರಕ್ಲೋಸ್ ಕುಂಞರಾಮನ್ ನಾಯರ್ ಮತ್ತು ನೇಲೋತ್ ಚಂದನ್ ನಾಯರ್, ಇವರನ್ನು ಪೆರಿಯದಲ್ಲಿ ಬಂಧಿಸಿದ್ದು ಪುತ್ತೂರಿಗೆ ಒಯ್ಯಲಾಗಿದೆ. ವಿಚಾರಣೆ ಎಪ್ರಿಲ್ ತಾ. ೯ಕ್ಕೆ.

ಹೊಸದುರ್ಗದ ಸಮೀಪ ಚೆಮ್ಮನಿ ಎಂಬಲ್ಲಿ ಭೂಮಾಲಕನ ಇಚ್ಛೆಗೆ ವಿರೋಧ ಪೈರು ಕೊಯ್ಯಲು ಒಕ್ಕಲಿನವರಿಗೆ ಸಹಾಯಮಾಡಿದರೆಂಬ ಆರೋಪವನ್ನು ಅಲ್ಲಿನ ಪಶೀಲರು ೧೧ ಜನರ ಮೇಲೆ ಹೊರಿಸಿದ್ದು ಅವರ ವಿಚಾರಣೆ ಎಪ್ರಿಲ್ ತಾ. ೫ಕ್ಕೆ ಇಟ್ಟಿದೆ.

ಮಡಿಕೈಯ್ಯಲ್ಲೂ ಪೋಲೀಸರಿಂದ ಅಂಥದೇ ಆರೋಪಕ್ಕೆ ಗುರಿಯಾದ ೬೦ ಮಂದಿ ಕಿಸಾನರ ವಿಚಾರಣೆಯನ್ನು ಹೊಸದುರ್ಗ ನ್ಯಾಯಾಧೀಶರು ಮಾಡುತ್ತಿದ್ದಾರೆ.

ಶ್ರೀ ರಾಮೋತ್ಸವ

ವನ್ನು ತಾ. ೫-೪-೪೩ರಿಂದ ೧೪-೪-೪೩ರ ವರೆಗೆ ಶ್ರೀ ಪಲಿಮಾರು ಮಠದ ಶ್ರೀ ಪಾದಂಗಳವರು ಸೀತಾಲಕ್ಷ್ಮಣ ಶ್ರೀ ರಾಮಚಂದ್ರ ದೇವರ ಸಮೇತ ಮಂಗಳೂರಿಗೆ ಬಂದು ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ಜರಗಿಸಲಿರುವರು. ಆ ಹತ್ತು ದಿನಗಳೂ ವೇದಪಾರಾಯಣ, ಮಹಾಪೂಜೆ, ವಿದ್ವಾಂಸರ ಭಾಷಣಗಳೇ ಮೊದಲಾದವುಗಳು ನಡೆಯಲಿವೆ.

ಪೆರ್ಡೂರು

ಶ್ರೀ ಅನಂತ ಪದ್ಮನಾಭ ಸ್ವಾಮಿಯ ವರ್ಷಾವಧಿ ರಥೋತ್ಸವದ ವೇಳೆ ಒಂದು ಕೃಷಿ ಪ್ರದರ್ಶನವು ನಿರ್ಮಾಣವಾಗಿತ್ತು.

ಕಯ್ಯೂರ ಕೈದಿಗಳನ್ನು ಗಲ್ಲಿಗೇರಿಸಲಾಯಿತು?

ಕಯ್ಯೂರ ಮೊಕದ್ದಮೆಯಲ್ಲಿ ಮರಣದಂಡನೆಗೊಳಗಾದ ಶ್ರೀಯುತರು ಮಡತ್ತಿಲ್ ಅಪ್ಪು, ಪೊದವರೆತ್ತ್ ಕುಂಞಂಬು ನಾಯರ್, ಕೋಯಿತಟ್ಟ ಚಿರುಕಂಡನ್ ಮತ್ತು ಪಳ್ಳಿಕಾಲ್ ಅಬ್ದುಬಕರ್, ಈ ನಾಲ್ವರನ್ನು ಮಾರ್ಚಿ ೨೯ರಂದು ಬೆಳಗ್ಗೆ ೫-೧೫ ಗಂಟೆಗೆ ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತೆಂದು ಕೇಳಿ ಬರುತ್ತದೆ. ಜೈಲು ಅಧಿಕಾರಿಗಳು ಅವರ ದೇಹವನ್ನು ಅಂತ್ಯ ಸಂಸ್ಕಾರಕ್ಕಾಗಿ ಅವರ ಸಂಬಂಧಿಕರಿಗೆ ಕೊಡಲೊಪ್ಪದೆ, ಜೈಲು ವಠಾರದಲ್ಲಿಯೆ ದಹನ ಅಂತ್ಯ ಕ್ರಿಯೆ ತೀರಿಸಿದರೆಂದೂ ಹೇಳಲಾಗುತ್ತದೆ. ಮದ್ರಾಸಿನಿಂದ ತಿಳಿದುಬಂದಂತೆ, ಸಾರ್ವಭೌಮರಿಗರ್ಪಿಸಿದ್ದ ಅವರ ಜೀವದಾನ ಬೇಡಿಕೆಯ ವಿನಂತಿಯು ನಾಲ್ಕು ದಿನಗಳ ಹಿಂದೆಯೇ ನಿರಾಕರಿಸಲ್ಪಟ್ಟಿತೆಂದು ಗೊತ್ತಾಗಿದೆ.

ಕಳೆದ ಆಗಸ್ಟ್ ತಿಂಗಳಲ್ಲಿ ಅಖಿಲ ಭಾರತ ಕಮ್ಯುನಿಸ್ಟ್ ನಾಯಕರಾದ ಶ್ರೀ. ಪಿ. ಸಿ. ಜೋಶಿಯವರಿಗೆ ಬರೆದ ಪತ್ರದಲ್ಲಿ ಮರಣದಂಡನೆಗೆ ಗುರಿಯಾದ ನಾಲ್ವರು ಈ ರೀತಿ ಹೇಳಿದ್ದರು.

'ನಮ್ಮ ಕೊನೆ ಉಸಿರಿನ ತನಕ ನೀವು ಮತ್ತು ನಮ್ಮ ಪಕ್ಷ (ಕಮ್ಯುನಿಸ್ಟ್) ದವರು ನಮ್ಮಲ್ಲಿಟ್ಟ ವಿಶ್ವಾಸವನ್ನು ನಾವು ಉಳಿಸುವೆವಾಗಿ ಭರವಸೆ ಕೊಡುವೆವು. ಜೀವಿಸುವ ಸಲುವಾಗಿ ನಾವು ಒದ್ದಾಡಬೇಕೆಂದು ಬಯಸುವುದಿಲ್ಲ. ನಮ್ಮ ಒಂದೇ ಒಂದು ಮಹತ್ವಾಕಾಂಕ್ಷೆಯೆಂದರೆ, ಆಕ್ರಮಿಸಿ ಬರುವ ಫೇಸಿಸ್ಟ್ ಶತ್ರುವಿನಿಂದ ನಮ್ಮ ಮಾತೃಭೂಮಿಯನ್ನು ಕಾಪಾಡುವಲ್ಲಿ ನಮ್ಮ ಜೀವಗಳ ಬಲಿದಾನ ಮಾಡಬೇಕಿತ್ತು ಎಂಬುದು. ನಮ್ಮಿಂದ ಸಾಧ್ಯವಿದ್ದಷ್ಟು ಫಾಸಿಸ್ಟ್ ಶತ್ರುಗಳನ್ನು ನಿರ್ನಾಮ ಮಾಡುವಂಥಾ ಸುವರ್ಣ ಸಂಧಿ ನಮಗೆ ಒದಗಲಿಲ್ಲವಲ್ಲಾ ಎಂಬುದು ನಮ್ಮ ಒಂದೇ ಒಂದು ನಿರಾಶೆಯಾಗಿದೆ. ಸೈನ್ಯದ ಅಧಿಕಾರಿಗಳು ಫೇಸಿಸ್ಟರೆದುರು ಹೋರಾಡುವ ಸಂಗ್ರಾಮದಲ್ಲಿ ನಮ್ಮನ್ನು ಬಲಿದಾನಕ್ಕೆ ಕಳುಹಿಸುವುದಿದ್ದರೆ ಅಂಥಾ ಮಹತ್ತಾದ ಉದ್ಯೋಗವನ್ನು ನಾವು ಕಮ್ಯುನಿಸ್ಟ್ ಧ್ಯೇಯ ಭಾವನೆಯಿಂದ ಸ್ವೀಕರಿಸಲು ಸಿದ್ಧರು' ಅವರ ಕೊನೆಯ ಆಶೆಯು ಹೀಗಿತ್ತು 'ನಾವು ನಮ್ಮ ಕೊನೆಯ ದಿನಗಳ ಪ್ರತಿಯೊಂದು ನಿಮಿಷವನ್ನೂ, ಸೆರೆಯಮರೆಯಲ್ಲಿ ಮಾತೃಭೂಮಿಯ ಪ್ರಾರ್ಥನಾ ಪದ್ಯಗಳನ್ನು ಹಾಡುತ್ತಾ ಸಂತೋಷದಿಂದ ಕಳೆಯುತ್ತಿರುವೆವು. ಹೊರಗಿರುವ ನಮ್ಮ ಬಂಧುಗಳು ಸಂಯುಕ್ತ ರಾಷ್ಟ್ರಗಳೊಡನೆ ಭಾರತೀಯ ಬಾಂಧವರೂ ಐಕ್ಯಮತ್ಯದಿಂದ ಸೇರಿ, ಜಗತ್ತಿನ ಆಕ್ರಮಣಕ್ಕೆ ಮುಂದೊತ್ತಿ ಬರುವ ಫೇಸಿಸ್ಟ್ ಕ್ಷಸನ ಸೊಂಟ ಮುರಿಯಲು ಸಾಧ್ಯವಾದ ಪ್ರಯತ್ನಗಳನ್ನೆಲ್ಲ ಮಾಡುತ್ತಿರುವರೆಂದು ಕೇಳಿ ನಾವು ಸಂತೋಷಗೊಂಡಿದ್ದೇವೆ. ಯುದ್ಧಾಂತ್ಯದಲ್ಲಿ ಜಗತ್ತಿನ ಜನತೆಯು 'ವಿಜಯಿಯಾಗಿ ತಲೆಯೆತ್ತುವುದೆಂದೂ ಅವರ ಭವಿಷ್ಯವು ಶುಭ್ರವೂ ಭವ್ಯವೂ ಆಗುವುದೆಂದೂ ನಾವು ಸಂಪೂರ್ಣ ನಂಬಿದ್ದೇವೆ. ಎಲ್ಲಾ ವಿಧದಿಂದ ರಾಷ್ಟ್ರೀಯ ಐಕ್ಯ ಸಾಧಿಸಿ, ರಾಷ್ಟ್ರದ ವಿಮೋಚನೆಗೆ ಇದೊಂದೇ ಉದಾತ್ತ ಮಾರ್ಗವಾಗಿದೆ'

ಅಖಿಲಭಾರತ ಕಮ್ಯೂನಿಸ್ಟ ನಾಯಕರಾದ ಶ್ರೀ ಪೂರ್ಣಚಂದ್ರ ಜೋಶಿಯವರು ಕಳೆದ ತಾ. ೩೧ರಂದು ಆಂಧ್ರ ಕೇರಳ ಕರ್ನಾಟಕದ ಕಮ್ಯೂನಿಸ್ಟ ಮುಂದಾಳುಗಳೊಡನೆ ಕಯ್ಯೂರಿಗೆ ಬಂದಿದ್ದರಷ್ಟೆ? ಶ್ರೀ ಜೋಶಿಯವರು ಕಯ್ಯೂರ ಆಪಾದನೆಯಲ್ಲಿ ಮರಣದಂಡನೆಗೆ ಗುರಿಯಾದ ಶ್ರೀಯುತರು ಮಡತ್ತಿಲ್ ಅಪ್ಪು, ಕುಞಂಬು ನಾಯರ್, ಚಿರುಕಂಡನ್, ಅಬ್ದುಬಕರ್ ಇವರ ಕುಟುಂಬಗಳನ್ನು ಸಂದರ್ಶಿಸಿ, ಆ ಕುಟುಂಬದವರ ಭಾವಚಿತ್ರಗಳನ್ನು ತೆಗೆದದ್ದಲ್ಲದೆ, ಶ್ರೀ ಮಡತ್ತಿಲ್ ಅಪ್ಪು ಇವರ ಮನೆಯಲ್ಲಿ ಅಖಿಲ ಭಾರತ ಕಮ್ಯುನಿಸ್ಟ ಪಕ್ಷದ ಪರವಾಗಿ, ಮರಣದಂಡನೆಗೆ ಗುರಿಯಾದ ಆ ನಾಲ್ಕು ಬಡ ಕುಟುಂಬಗಳಿಗೆ ಧನಸಹಾಯವನ್ನೂ ಮಾಡಿದರು. ಕಯ್ಯೂರಿಗೆ ಬರುವ ಮೊದಲು ಶ್ರೀ ಜೋಶಿಯವರು ಕಣ್ಣನೂರು ಸೆಂಟ್ರಲ್ ಜೈಲಿನಲ್ಲಿರುವ ಆ ನಾಲ್ವರು ಕೈದಿಗಳನ್ನು ಕಂಡು ಮಾತನಾಡಿದ್ದರು. ಆ ನಾಲ್ವರೂ ಹರ್ಷಚಿತ್ತರಾಗಿದ್ದು ತಮ್ಮ ಕೊನೆಯ ದಿವಸವನ್ನು ಇದಿರು ನೋಡುತ್ತಿರುವುದಾಗಿ ಶ್ರೀ ಜೋಶಿಯವರೊಡನೆ ಹೇಳಿರುವರು.

ಪುಸ್ತಕಾವಲೋಕನ

'ತೊಡಲ್ಪುಡಿ' ನಾಟಕಗಳು

ಉಡುಪಿಯ 'ಕಿರಿಯರ ಪ್ರಪಂಚ'ದವರು ಕಳೆದ ಒಂದು ವರ್ಷಗಳಿಂದ 'ತೊಡಲ್ಪುಡಿ' ಗ್ರಂಥಮಾಲೆಯ ಮೂಲಕ ಕತೆ, ಕಾದಂಬರಿ, ನಾಟಕ, ಕವನ, ಪ್ರಬಂಧ ಗ್ರಂಥಗಳನ್ನು ಪ್ರಕಟಿಸಿ, ಈ ಜಿಲ್ಲೆಯಲ್ಲಿ ಗಣನೀಯವಾದ ಸಾಹಿತ್ಯಸೇವೆ ಸಲ್ಲಿಸುತ್ತಿದ್ದಾರೆ. ಅವರ ಇತ್ತೀಚೆಯ ಪ್ರಕಟಣೆಗಳು ಶ್ರೀ ಎಸ್. ವೆಂಕಟರಾಜರು ಬರೆದ 'ರಂಗಭೂಮಿ' ಮತ್ತು ಶ್ರೀ. ಸೇಠ್ ಗೋವಿಂದದಾಸ ಎಂ. ಎಲ್. ಎ (ಸೆಂಟ್ರಲ್) ಇವರು ಹಿಂದಿಯಲ್ಲಿ ಬರೆದು, ಶ್ರೀ ಎಸ್. ಎಲ್. ಸುಬ್ರಹ್ಮಣ್ಯರಿಂದ ಕನ್ನಡಕ್ಕೆ ಅನುವಾದಿಸಲ್ಪಟ್ಟ 'ಸೇವಾ ಪಥ' ಎಂದ ಎರಡು ಸಾಮಾಜಿಕ ನಾಟಕಗಳು. ಇವು ತೊಡಲ್ಪುಡಿ ಗ್ರಂಥಮಾಲೆಯ ೧೫ ಮತ್ತು ೧೬ನೆಯ ಸುಡಿಗಳು. 'ರಂಗಭೂಮಿ' ರಾಯಲ್ ೧/೧೬ ಆಕಾರದ ೬೭ ಪುಟಗಳುಳ್ಳದ್ದಾಗಿ ಎಂಟಾಣೆ ಬೆಲೆಯದು. 'ಸೇವಾಪಥ' ಫುಲ್‌ಸ್ಕೇಪ್ ಆಕಾರದ ೮೩ ಪುಟಗಳಿಂದ ಕೂಡಿದ್ದು ಆರಾಣೆ ಬೆಲೆಯದು. ಶ್ರೀ ಎಸ್. ವೆಂಕಟರಾಜರು ಹೆಸರಾದ ಆಧುನಿಕ ಕನ್ನಡ ಬರೆಹಗಾರರಲ್ಲಿ ಒಬ್ಬರು; ಶ್ರೀ ಸೇಠ್ ಗೋವಿಂದದಾಸರು ಉಜ್ವಲ ರಾಷ್ಟ್ರಭಕ್ತರು ಮಾತ್ರವಲ್ಲದೆ ಉತ್ತರ ಭಾರತದ ಪ್ರಸಿದ್ಧ ಹಿಂದೀ ಲೇಖಕರು. ಹೀಗೆ ಈ ಇಬ್ಬರು ನಾಟಕಕಾರರ ನಾಟಕಗಳೂ ಕನ್ನಡಿಗರು ಕುತೂಹಲದಿಂದ ನಿರೀಕ್ಷಿಸುವವುಗಳು.

'ರಂಗಭೂಮಿ'ಯೆಂಬ ಹೆಸರೇ ನಾಟಕದ ನಾಟಕತ್ವವನ್ನು ಸಾರುತ್ತದೆ. ಲೇಖಕರು ನಾಟಕಗಳವಸ್ತು, ಪಾತ್ರ, ಸ್ವರೂಪ, ಸನ್ನಿವೇಶ, ಸಂಭಾಷಣೆ ನಟನೆಗಳ ವಿಷಯ ಸೂಕ್ಷ್ಮವಾದರೂ ವಿಚಾರಗರ್ಭಿತವಾದ ಮುನ್ನುಡಿ ಬರೆದಿದ್ದಾರೆ. 'ಸೇವಾಪಥ'ದ ಅನುವಾದಕರೂ, ಪ್ರಕಾಶಕರೂ ತಮ್ಮ ಪೀಠಿಕೆಗಳಲ್ಲಿ ಮೂಲ ಲೇಖಕರ ಪರಿಚಯವನ್ನು ಮಾಡುವುದರ ಮೂಲಕ ಕನ್ನಡ ವಾಚಕರ ಕುತೂಹಲ ಹೆಚ್ಚಿಸಿದ್ದಾರೆ. 'ರಂಗಭೂಮಿ'ಯನ್ನು ಶ್ರೀ ವೆಂಕಟರಾಜರು 'ಅತ್ತಿಗೆಗೆ ಅರ್ಪಿಸಿರುವವರು. 'ಸೇವಾಪಥ'ವನ್ನು ಮೂಲ ಲೇಖಕರ ಭಾವಚಿತ್ರ ಅಲಂಕರಿಸಿದೆ.

ಬ್ರಾಹ್ಮಣ ರಂಗಾಚಾರಿ ಸಂಪಾದನೆಗೇನೂ ದಾರಿಯಿಲ್ಲದೆ, ಹೆಂಡತಿಯ ಚಿನ್ನಾಭರಣ ಮಾರಿ ನಾಟಕ ಕಂಪನಿ ಸುರುಮಾಡುತ್ತಾನೆ; ತನ್ನ ನಾಟಕ ಕಂಪನಿಯ ನಟಿ ಮಿಸ್ ಮಾಧುರಿಯ ಬಲೆಗೆ ಬಿದ್ದು ಸರ್ವಸ್ವವನ್ನೂ ಕಳಕೊಂಡು ಕೊನೆಗೆ ದಿವಾಳಿಯಾಗುತ್ತಾನೆ. ಇವಿಷ್ಟು ಸೂಕ್ಷ್ಮವಾಗಿ 'ರಂಗಭೂಮಿ'ಯ ಸಾರಾಂಶ. ಪ್ರೊಪ್ರೈಟರ್ ರಂಗಾಚಾರಿ, ನಟ ಭೈರವ ಕೃಷ್ಣಸ್ವಾಮಿ, ಮಿಸ್ ಮಾಧುರಿ, ಮುದ್ದಯಾನೆ ಮುದ್ದಣ, ರಂಗಾಚಾರಿಯ ಹೆಂಡತಿ ಗೋದು, ಚಾತ್ರೀದಾರ ಇವಿಷ್ಟು ಇಲ್ಲಿನ ಜೀವಂತ ಪಾತ್ರಗಳು. ನಾಟಕ ಕಂಪನಿಗಳ, ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳ, ಅವರ ಅಂತರಂಗ ಜೀವನಗಳ ಕುರಿತು ಇದು ಒಂದು ವಿಡಂಬನೆಯಾಗಿದೆ. ಕಥಾಪಾತ್ರಗಳ ಮೂಲಕ, ಹಲವು ಸನ್ನಿವೇಶಗಳ ಮೂಲಕ, ಸಂಭಾಷಣೆಯ ಮೂಲಕ ನಾಟಕಕಾರರು ಈ ವಿಡಂಬನೆಯನ್ನು ಯಶಸ್ವಿಗೊಳಿಸಲು ಪ್ರಯತ್ನಿಸಿದ್ದಾರೆ. ಪ್ರೊಪ್ರೈಟರ್ ರಂಗಾಚಾರಿಯ ಪಾತ್ರವು ವಿನೋದವನ್ನುಂಟುಮಾಡುವುದರೊಡನೆ ಮರುಕವನ್ನೂ ಹುಟ್ಟಿಸುವುದು. ಆತನ ಹೆಂಡತಿ ಗೋದುವಿನ ಗತಿ ಅಂಥಾ ಗಂಡನನ್ನು ಪಡೆದ ಸ್ತ್ರೀಯರ ಹಣೆಬರೆಹ! ಕೃಷ್ಣಸ್ವಾಮಿ ಮತ್ತು ಮಿಸ್, ಮಾಧುರಿ ಇವರದು ಶತಜಾತಿಯ ಪಾತ್ರ ಸೃಷ್ಟಿ. ಮೊದಲನೆಯ ಅಂಕದ ಮೊದಲನೆಯ ದೃಶ್ಯದ ರಂಗಾಚಾರಿಯ ಆರಂಭ ಭಾಷಣ ತುಸು ಅಧಿಕ ಪ್ರಸಂಗವೆನಿಸಿದರೂ ಬೇರೆಲ್ಲಿಯೂ ಅಂಥಾ ಪ್ರಸಂಗಗಳು ಬಂದಿಲ್ಲ. ನಾಟಕ ರಚನೆಯಲ್ಲಿ ಶ್ರೀ. ವೆಂಕಟರಾಜರದು ಇದು ಪ್ರಾರಂಭ ಪ್ರಯತ್ನವಾಗಿ ತೋರುತ್ತದೆ. ಇವರಿಂದ ಇನ್ನೂ ಉತ್ತಮ ವಿಚಾರ ಪ್ರಚೋದಕ ನಾಟಕಗಳನ್ನು ಕನ್ನಡಿಗರು ಹಾರೈಸಬಹುದು.

'ಸೇವಾಪಥ'ದ ಕಥೆ ಭಾರತದ ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದುದು. ಮೂವರು ವಿದ್ಯಾವಂತ ಯುವಕರು ಬೇರೆ ಬೇರೆ ಆದರ್ಶಗಳನ್ನು ಹಿಡಿದು ಸಾಗುತ್ತಾರೆ. ಕೊನೆಗೆ ಮೂವರೂ ತಮ್ಮ ಆದರ್ಶಗಳ ಉಚ್ಚ ನೀಚತೆಗಳನ್ನು ಅರಿತುಕೊಳ್ಳುತ್ತಾರೆ. ಶ್ರೀ ಗೋವಿಂದದಾಸರು ಗಾಂಧಿವಾದದ ರಾಷ್ಟ್ರಭಕ್ತರಿರುವುದರಿಂದಲೇ ಇರಬೇಕು, ದೀನಾನಾಥನನ್ನು ಆದರ್ಶ ಗಾಂಧಿವಾದಿಯಾಗಿ ಚಿತ್ರಿಸಿ, ಶಕ್ತಿ ಪಾಲನಂಥಃ ಬಾಯಿ ಮಾತಿನ ಸೋಶಿಯಲಿಸ್ಟನನ್ನೂ, ಶ್ರೀನಿವಾಸನಂಥಾ ಸುಖಲೋಲುಪನಾದ ಶ್ರೀಮಂತ ವಿದ್ಯಾವಂತನನ್ನೂ ಕೊನೆಗೆ ಗಾಂಧಿವಾದಿ ದೀನಾನಾಥನ ಸೇವಾ ಪಥಕ್ಕೆ ಶರಣಾಗುವಂತೆ ಮಾಡಿದ್ದಾರೆ. ಈ ಮೂರು ಭಿನ್ನ ಮಾರ್ಗಗಳ ಪುರುಷ ವ್ಯಕ್ತಿಗಳಿಗೆ ದೀನಾನಾಥನ ಪತ್ನಿ ಸರಳೆ, ಶ್ರೀನಿವಾಸನ ಪತ್ನಿ ಕಮಲೆ, ಶಕ್ತಿಪಾಲನ ಆಂಗ್ಲ ಪತ್ನಿ ಮಾರ್ಗರೇಟ್ ಈ ಮೂರು ಭಿನ್ನ ರುಚಿಯ ಸ್ತ್ರೀ ವ್ಯಕ್ತಿಗಗಳೂ ಜೋಡಿಸಿ ಲೇಖಕರು ನಾಟಕರೂಪದಲ್ಲಿ ಸ್ಥಾಪಿಸಹೋದ ಸಿದ್ಧಾಂತಕ್ಕೆ ಪೋಷಣೆಯಿತ್ತಿರುವರು. ಈ ನಾಟಕದ ವಸ್ತುವಿನಲ್ಲಿ, ಸನ್ನಿವೇಶಗಳಲ್ಲಿ, ಸಂಭಾಷಣೆಗಳಲ್ಲಿ ಒಂದು ತತ್ವ ಸಿದ್ಧಾಂತ ಸ್ಥಾಪನೆಗೇ ಹೆಚ್ಚು ಪ್ರಾಧಾನ್ಯತೆ ತೋರುತ್ತದೆ. ಹೀಗಿದ್ದರೂ ನಾಟಕವು ಕೃತ್ರಿಮತೆಯ ಹಾದಿ ಹಿಡಿಯಲಿಲ್ಲವೆಂಬುದು ಲೇಖಕರ ರಚನಾ ಸಾಮರ್ಥ್ಯವನ್ನು ತೋರಿಸುತ್ತದೆ. ಇಂದಿನ ಭಾರತದ ಉಚ್ಚವರ್ಗದ ರಾಜಕೀಯ ವ್ಯಕ್ತಿ ಚಿತ್ರಗಳನ್ನು ನಾವಿಲ್ಲಿ ನೋಡುವುದರೊಂದಿಗೆ ಶ್ರೀ ಗೋವಿಂದದಾಸರಂಥಾ ರಾಷ್ಟ್ರಭಕ್ತರ ರಾಜಕೀಯ ಸಿದ್ಧಾಂತವನ್ನೂ ಮನನ ಮಾಡಬಹುದು. ಹಾಗಾಗಿ ಸೇವಾ ಪಥವನ್ನು ಸಾಹಿತ್ಯ ಮತ್ತು ರಾಜಕೀಯ ಎರಡು ದೃಷ್ಟಿಗಳಿಂದಲೂ ಕನ್ನಡಿಗರು ಅವಶ್ಯ ಓದಬೇಕಾಗಿದೆ.

ಈ ಎರಡು ಪುಸ್ತಕಗಳ ಅಚ್ಚುಕಟ್ಟು 'ಕಿರಿಯರ ಪ್ರಪಂಚ'ದ ಇತರ ಪ್ರಕಟಣೆಗಳಂತೆ ಆಕರ್ಷಣೀಯವೇ ಇದೆ. 'ರಂಗಭೂಮಿ'ಗೆ ತುಸು ಉತ್ತಮ ಕಾಗದ ಉಪಯೋಗಿಸಿದ್ದರೆ ಒಳ್ಳೆಯದಿತ್ತು. 'ಕಿರಿಯರ ಪ್ರಪಂಚ'ದವರ ಸಾಹಿತ್ಯ ಸೇವೆಯನ್ನು ಕನ್ನಡಿಗರು ಅವಶ್ಯ ಪ್ರೋತ್ಸಾಹಿಸಬೇಕು.

—ಕಯ್ಯಾರ.

ಸಿನೆಮಾ ಸುದ್ದಿ

ಅವರ 'ಶ್ರೇಣಿ'

ಹೇಗಿದೆಯೋ ನೋಡಬೇಕು. ಶಹ ಪ್ರದ, ಶ್ ಕೃತಿಯದು. ಸವಿತಾ, ಚಂದ್ರಮೋಹನ್, ಸರ್ದಾರ್ ಅಖ್ತರ್ ಈ ಪ್ರಸಿದ್ಧ ತಾರಾತ್ರಯಗಳು ಇದರಲ್ಲಿ ಬೆಳಗುತ್ತವೆ.

ಮುಸ್ಲಿಂ ಸೋದರಗೆ

ಹಿಂದೂ ತರುಣಿ ಸ್ನೇಹ ಹಸ್ತವನ್ನು ನೀಡಿದಳು! ಭಾರತದ ಭವ್ಯ ಭವಿಷ್ಯತ್ತು ಈ ದೃಶ್ಯದಲ್ಲಿದೆ; ಸಿಲ್ವರ್ ಫಿಲ್ಮ್ಸ್‌ನವರು 'ಬಾಲೇ' ಎಂಬ ಚಿತ್ರದಲ್ಲಿ ಇಂಥಾ ಮನಮೋಹಕ ದೃಶ್ಯವನ್ನು ಚಿತ್ರಿಸಿರುವರು. ತಾರಾಗಣವಾದರೂ ಪೃಥ್ವಿರಾಜ್, ಸಿತಾರಾ, ಕುಮಾರ್ ಮೊದಲಾದವರು. ಇದಕ್ಕೆ ನಮ್ಮ ಸ್ವಾಗತ.

'ಎಫ್. ಎ. ಬಿ.'

ಎಂದರೆ ಸರಕಾರವು ಯುದ್ಧ ಯತ್ನವನ್ನು ಸಿನೆಮಾ ಮೂಲಕ ಸಾಗಿಸಲು ಸ್ಥಾಪಿಸಿ ಫಿಲ್ಮ್ ಎಡ್ವೈಸರಿ ಬೋರ್ಡ್. ಸರಕಾರವೇ ಈಗ ಅದನ್ನು ಕದಗಿಸಿದೆ; ಅದು ಮಾಡಿದ ಪ್ರಯತ್ನ ಸಾಕಾಯಿತೆಂದಿರಬೇಕು! ಶಾಂತಾರಾಮರಂಥಾ ಸದ್ದೇಶಕರನ್ನು ನೇಮಿಸಿಯೂ ಎಫ್. ಎ. ಬಿ. ಭವಿಷ್ಯ ಬೆಳಗಲಿಲ್ಲ. ಸಿನೆಮಾಲೋಕವು ಇದರ ಕುರಿತು ಇಂದು ಸಮಾಧಿಗಾನ ಹಾಡುತ್ತಿದೆ.

ಕಾನನ್ ಸಾಧನಾ

ಇವರು ಬಂಗಾಳೀ ನಟಿಯರು; ಇರ್ವರೂ ಅಖಿಲಭಾರತ ಪ್ರಸಿದ್ಧಿಯವರು. ಕಾನನ್ ಇತ್ತೀಚೆಗೆ 'ಹೋಸ್ಪಿಟಲ್' ಚಿತ್ರದಲ್ಲಿ ನಟಿಸಿದ್ದಾಳೆ. ಮೊದಲಿನಂತೆಯೇ ಅಮರಗಾನದ ಝುರಿ ಸುರಿಸುತ್ತಾಳೆ. ಸಾಧನಾ 'ಪೈಗಮ್' ಎಂಬಾಕೆಯ ನವೀನ ಚಿತ್ರದಲ್ಲಿ ಮೊದಲಿಗಿಂತಲೂ ನವತರುಣಿಯಾಗಿ ತೋರುತ್ತಾಳೆ.

'ಫಿಲ್ಮ್ ಇಂಡಿಯಾ'

ಎಂದರೆ ಸಿನೆಮಾ ಪ್ರಿಯರಿಗೆಲ್ಲಾ ಗೊತ್ತು, ಬಾಬುರಾವ್ ಪಟೇಲ್ ಪತ್ರಿಕೆ, ಸಿನೆಮಾ ಪ್ರೇಮಿಗಳ ಪ್ರೀತಿಯ ಪತ್ರಿಕೆಯ ಹೆಸರೆಂದು. ಆದರೆ ದೂರ ಆಫ್ರಿಕದ ಕೆನ್ಯಾದಲ್ಲಿರುವ ಭಾರತೀಯರು ಅಲ್ಲಿ ಭಾರತದ ಚಿತ್ರ ತೋರಿಸಲು ಹೊಸ ಥಿಯೇಟರೊಂದನ್ನು ಕಟ್ಟಿಸಿ ಅದಕ್ಕೆ ಈ ಹೆಸರು ಕೊಟ್ಟಿದ್ದಾರೆ. ಸೋಹ್ರಾಬ್ ಮೋದಿ ಕೃತಿ ಪುಕಾರ್ ಅಲ್ಲಿ ಪ್ರದರ್ಶಿತವಾದ ಪ್ರಥಮ ಸಿನೆಮಾ 'ಫಿಲ್ಮ್ ಇಂಡಿಯಾ' ಪತ್ರಿಕೆಯ ಪ್ರಶಸ್ತಿಗಾಗಿ

ಈ ಪಡೆಯಿಂದ ಕೆನ್ಯಾದಲ್ಲಿ 40,000 ಮಂದಿ ಭಾರತೀಯರಿದ್ದಾರೆ.

ಕಿಶೋರ ಸಾಹು ಪ್ರಮೀಳಾದಾಸಗುಪ್ತ

ಇವರು ಈಗ ಜತೆ ಜತೆಯಾಗಿ ಅಭಿನಯಿಸತೊಡಗಿದ್ದಾರೆ. 'ಬ್ರಹ್ಮಚಾರಿ ಬಿತಾ' ಚಿತ್ರದಲ್ಲಿ ಇವರ ಜೋಡಿಯನ್ನು ನಾವು ನೋಡಿದ್ದೇವೆ. ಈಗ ಪುನಃ 'ರಾಜಾ'ದಲ್ಲಿ ಇವರು ರಾಜಾರಾಣಿಯಾಗಿರುವರು! 'ರಾಜಾ'ದ ಕಥೆ, ನಿದರ್ಶನ ನಟನೆ ಇವುಗಳೆಲ್ಲಾ ಕಿಶೋರಸಾಹು ಕೌಶಲ್ಯಗಳೇ.

'ಸುವರ್ಣಲತಾ'

ಈಕೆ ಸಿನೆಮಾ ಲೋಕಕ್ಕೆ ಹೊಸದಾಗಿ ಕಾಲಿಟ್ಟಾಕೆ. 'ತಸ್ವೀರ್' ಎಂಬ ಅತ್ರೀ ಚಿತ್ರದಲ್ಲಿ ಇವಳು ಅಭಿನಯಿಸುತ್ತಾಳೆ. ರೂಪ ಶೃಂಗಾರ ಚಿಂತೆಯಿಲ್ಲ. ನಟನೆ ಸಂಗೀತಗಳು ಹೇಗಿವೆಯೋ ನೋಡಬೇಕು!

'ಪಾಗ್ಲಿ' ಯಾರು?

ಅರುಣಾದೇವಿಯೇ? ಲಾಹೋರಿನ ಮಹೇಶ್ವರೀ ಪಿಕ್ಚರ್ಸ್‌ನವರು 'ಪಾಗ್ಲೀ' ಎಂಬ ಚಿತ್ರ ತಯಾರಿಸುತ್ತಾರೆ. ಅರುಣಾದೇವಿ ಅದರಲ್ಲಿ ನಟಿಸುತ್ತಾಳೆ. ನಿಜವಾಗಿಯೂ 'ಪಾಗ್ಲಿ' ಯಾರೆಂಬುದು ಆ ಚಿತ್ರ ನೋಡಿದ ಮೇಲೆ ನಾವು ಹೇಳಬಹುದು.

ಪುನಃ ಅನುರಾಧಾ

ಬಹಳ ಕಾಲಗಳ ಬಳಿಕ ಸಿನೆಮಾರಂಗಕ್ಕೆ ಕಾಲಿಟ್ಟಿದ್ದಾಳೆ 'ಕಲಿಯುಗ' ಎಂಬ ಹಿಂದ್ ಪಿಕ್ಚರ್ಸ್‌ನವರ ಕೃತಿಯಲ್ಲಿ. ನಿಜವಾಗಿ ಇದು ಕಲಿಯುಗದ ಪ್ರಭಾವವೇ ಇರಬೇಕು.

THE

Canara Industrial & Banking Syndicate, Ltd.

(Incorporated in British India. Liability of Shareholders limited).

Estd.) Head Office: UDIPI, S. India. (1925.

STATEMENT OF POSITION AS ON 31-12-1942.

LIABILITIES	Rs.	As.	Ps.	ASSETS	Rs.	As.	Ps.
Subscribed Capital Rs. 15,38,881				Office premises, Safes, furniture etc.	55,235	13	3
Capital (Paid-up) & Reserves	9,27,622	9	0	ADVANCES:			
Deposits	58,92,447	5	8	Secured by valuable Securities	17,52,523	4	11
Due to Bankers	2,04,545	13	8	On pronotes, guarantees etc.	7,19,379	8	7
Bills for collection	10,67,526	2	10	Bills Purchased	11,90,510	12	11
Sundries	9,30,486	5	1	INVESTMENTS:			
Profit & Loss A/c	60,672	9	10	Govt. Securities	15,24,410	7	6
				Deposits with other Banks	4,03,000	0	0
				Other Authorised Investments	5,60,190	9	10
				Bills for collection	10,67,526	2	10
				Sundries	1,00,025	12	0
				Cash in hand & balances with Bankers	17,10,497	6	3
Total Rs.	90,83,299	14	1	Total Rs.	90,83,299	14	1

"MUKUND NIVAS" UDIPI — T. M. A. Pai, *Managing Director.*

In the Court of the Official Receiver of South Kanara.

I. P. NO. 11/1923 on the file of the Sub-Court South Kanara.

Laxmana Rao . . Insolvent *(Deceased)*

NOTICE

is hereby given that the undersigned has received from the Bombay Life Insurance Company a sum of rupees 181-14-0 to the credit of the above I. P. As the records of the said case have now been destroyed, all creditors in the case and other persons interested in the said amount are hereby called upon to send particulars of their claims to this Office within a month from this date failing which the amount will be distributed without reference to or consideration of their claims.

Office of the Official Receiver Mangalore, Dated 24-3-1943. — (Sd.) A. M. D'sa B. A. LL. B. *Official Receiver of S. Kanara.*

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

Estd. 1906.
Canara Bank, Limited
(Incorporated in British India with limited liability).

BALANCE SHEET AS ON 31st DECEMBER 1942

LIABILITIES	Rs.	As.	Ps.	ASSETS	Rs.	As.	Ps.
SUBSCRIBED CAPITAL: Rs. 20 lacs.				Fixed Capital			
Paid up Capital	14,96,072	8	0	Expenditure	1,00,182	13	2
Reserves	4,50,000	0	0	ADVANCE TO CUSTOMERS:			
Deposits	1,45,50,502	7	1	Secured by valuable securities	51,16,338	6	2
Due to Bankers	13,50,000	0	0	Secured by bills			
Bills for collection as per contra	8,76,169	10	2	of Exchange etc.	24,36,563	11	11
Liability for Foreign				Investments	65,65,374	15	7
Bills negotiated	8,05,026	10	5	Bills for collection	8,76,160	10	2
Sundries	10,51,464	10	11	Liabilities of customers for foreign			
Appropriation A/c.	2,062	3	8	bills negotiated	8,05,026	10	5
Net Profits	1,53,310	2	10	Sundries	4,71,599	3	0
				Cash on hand and at Call with Bankers	43,63,352	14	8
Total Rs.	2,07,34,608	5	1	Total Rs.	2,07,34,608	5	1

THE CANARA BANKING CORPORATION Ltd.
(Incorporated in British India with limited liability).

STATEMENT OF AFFAIRS AS ON 31ST DECEMBER 1943

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ನೋಟೀಸು
ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

O. S. 29/1943.

1. ನಂದಾವರ ವೆಂಕಟೇಶ ಪ್ರಭು,
2. ನಂಧಾವರ ಗಣಪತಿ ಪ್ರಭು ಮಂಗಳೂರು ಶಹರಗದ್ದೆ ಕೇರಿಯಲ್ಲಿರುವವರು. .... ಅರ್ಜಿದಾರರು

ಹಾಲಿ ಮೃತಪಟ್ಟ 1ನೇ ಅರ್ಜಿದಾರರ ಮಗ ವ 2ನೆ ಅರ್ಜಿದಾರರ ತಮ್ಮ ನಂದಾವರ ವಾಸುದೇವ ಪ್ರಭುಗಳಿಗೆ The New India Assurance Co., Ltd., Bombay ಜೀವವಿಮೆ ಬಾಬ್ತು ರೂಪಾಯಿ 1000 ವಸೂಲಿ ಮಾಡುವರೆ ಅರ್ಜಿದಾರರ ಬಗ್ಗೆ 1ನೆ ಅರ್ಜಿದಾರರ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ದಾಖ್ಲೆ ಮಾಡಿದ ಮೇಲಿನ ಅರ್ಜಿಯು ತಾರೀಕು 24-6-1943ಕ್ಕೆ ಇಟ್ಟಿರುತ್ತದೆ. ಈ ವಿಚಾರದಲ್ಲಿ ಏನಾದರೂ ಹೇಳಿಕೊಳ್ಳಲಿಕ್ಕೆ ಇದ್ದವರು ಮೇಲಿನ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ತಾ. 24-6-1943ನೆ ಪೂರ್ವಾಹ್ನ ಘಂಟೆ 10-30ಕ್ಕೆ ಹಾಜರಾಗಿ ಹೇಳಿಕೊಳ್ಳಬಹುದಾಗಿ ಈ ಮೂಲಕ ಸರ್ವರಿಗೂ ತಿಳಿಸೋಣಾಗಿದೆ.

Mangalore, 27-3-1943. M. Janardhana Mallya, ಅರ್ಜಿದಾರರ ವಕೀಲ.

ಪ್ರಕಟಣೆ
ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 74/1943.

ಹಮ್ಮಬ್ಬ ಬ್ಯಾರಿ .... ವಾದಿ

ಮತ್ತು

ಹಮ್ಮದ್ ಬಾ ಬ್ಯಾರಿ, ಬಾಂಬಿಲ ಬೆಯ್ಯಬ್ಯಾರಿ ಮಗ. ಮಂಗಳೂರು ತಾಲೂಕು ಕಾವಲ ಪಡೂರು ಗ್ರಾಮದಲ್ಲಿ ವ್ಯಾಪಾರಸ್ಥ .. ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—ನಿಮ್ಮ ಮೇಲೆ ಮೇಲ್ಕಂಡ ವಾದಿಯು ಮಾಡಿದ ಮೇಲಿನ ವ್ಯಾಜ್ಯವು ಮೇಲ್ಕಂಡ ಕೋರ್ಟಿನಲ್ಲಿ ತಾ. 12-4-1943ಕ್ಕೆ ನಿಮ್ಮ ಹಾಜರಾತಿನ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ದಿನ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಗಲು 11 ಗಂಟೆಗೆ ಖುದ್ದಾಗಲೀ ವ ವಕೀಲ ದ್ವಾರವಾಗಲೀ ಹಾಜರು ಆಗಿ ನಿಮ್ಮ ಉದಾಹರಣೆಯನ್ನು ದಾಖಲು ಮಾಡಲಿಕ್ಕೆ ತಪ್ಪಿದ್ರೆ ನಿಮ್ಮನ್ನು ಶಿಪ್ಪಾ ಮಾಡಿ ನಿಮ್ಮ ಗೈರ ಹಾಜ್ರಿಯಲ್ಲಿ ಸದ್ರಿ ವ್ಯಾಜ್ಯವನ್ನು ತನ್ನಿಮಾಡಲಾಗುವುದು. ತಿಳಿದ್ದಿರಲಿ.

(By order)

Mangalore, 25-3-1943. A. Moosabba, B.A.B.L. Vakil for Plaintiff.

ಚರ್ಮವ್ಯಾಧಿಗಳು ಮೋಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು (Cuticura Ointment)

ಚರ್ಮವ್ಯಾಧಿಗಳನ್ನು ಊರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.

ಕುಟಿಕೂರಾ ಮುಲಾಮು
CUTICURA OINTMENT

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆ ಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ನಿರ್ವಹಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ; ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ; —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.

—2. 36 ಫ್ಯಾಕ್ಟ್ರೀ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. 1906

[ಸಂಪುಟ 37] ತಾರೀಖು 9-4-1943 [ಸಂಚಿಕೆ 15]

ಮುಖಂಡರ ಮನವಿಗೆ ವೈಸರಾಯರ ನಕಾರ!

ಪಾರ್ಲಿಮೆಂಟಿನಲ್ಲಿ ಅಮೆರಿ ಅಬ್ಬರಿಸಿದರು!

'ಅಧಿಕಾರ ಬಿಟ್ಟುಕೊಡಲು ಬ್ರಿಟಿಷರಿಗೆ ಮನಸ್ಸಿಲ್ಲ'

ಕಳೆದ ಆಗಸ್ಟ್ ತಿಂಗಳಲ್ಲಿ ಸರಕಾರವು ಒಮ್ಮೆಲೇ ಗಾಂಧಿಜಿ ಮೊದಲ್ಗೊಂಡು, ನಮ್ಮ ರಾಷ್ಟ್ರದ ಸಾವಿರಾರು ಪ್ರಜಾಪ್ರಿಯ ಮುಖಂಡರನ್ನೆಲ್ಲಾ ಸೆರೆಮನೆಗೆ ಹಾಕಿದ ಮೇಲೆ, ಜನರು ಅಲ್ಲಲ್ಲಿ ಉದ್ರೇಕಗೊಂಡದ್ದು, ಸರಕಾರ ಅದಕ್ಕೆ ಉಗ್ರೋಪಾಯ ಕೈಕೊಂಡದ್ದು. ಇವೆಲ್ಲಾ ವಿಷಯಗಳನ್ನು ಪರಿಶೀಲಿಸಿದರೆ ಯಾವುದೇ ಭಾರತೀಯನ ಹಾಗೂ ಭಾರತೀಯಳ ಹೃದಯವಾದರೂ ಅತ್ಯಂತ ಬೇನೆಗೊಳ್ಳುವುದು: ಮೊನ್ನೆ ಮೊನ್ನೆ ಗಾಂಧಿಜಿ ೨೧ ದಿನಗಳ ಮಹೋಪವಾಸ ಕೈಕೊಂಡರು; ತಾನು ಆಂದೋಲನ ಆರಂಭಿಸಿಲ್ಲೆಂದೂ, ತಾನು ಹಿಂಸೆಯನ್ನು ಕನಸಿನಲ್ಲಾದರೂ ನೆನಸುವವನಲ್ಲವೆಂದೂ, ತಾನು ಫ್ಯಾಸಿಸ್ಟ್ ವಿರೋಧಿಯೆಂದೂ, ಸರಕಾರವು ಬೇಕು ಬೇಕೆಂದೇ ಜನತೆಯನ್ನು ಕೆರಳಿಸಿ ಅವರ ಮೇಲೆ ಉಗ್ರೋಪಾಯ ಕೈಕೊಳ್ಳುತ್ತದೆಂದೂ, ತನ್ನ ನಿರಪರಾಧಿತ್ವವನ್ನು ಸ್ಥಾಪಿಸಲು ತಾನು ಬಂಧವಿಮುಕ್ತನಾದರೆ ಸಿದ್ಧನಿದ್ದೇನೆಂದೂ ಹೇಳಲು, ಸರಕಾರವು ಮಹಾತ್ಮರ ಈ ಕೇಳಿಕೆಗೆ ಕಿವಿಗೊಡದಿರುವುದರಿಂದ ೨೧ ದಿನಗಳ ಮಹೋಪವಾಸ ಕೈಕೊಂಡು, ದೇಶಕ್ಕೆ ದೇಶವೇ ಚಿಂತಾಕುಲವಾಗಿರಲು, ತನ್ನ ಅನುಪಮ ಆತ್ಮಶಕ್ತಿಯ ಪ್ರಭಾವದಿಂದ ಬದುಕಿ ಅಗ್ನಿ ಪರೀಕ್ಷೆಯಲ್ಲಿ ಪಾವನರಾದರು! ಇಂಥಾ ಸಂದರ್ಭವು ಅಖಿಲಭಾರತೀಯರ ಕಣ್ತೆರೆಯಿಸಿತು! ಸಕಲ ಜಾತಿ, ಧರ್ಮ, ಪಂಥಗಳ ಮುಖಂಡರೆಲ್ಲರೂ ಈಗ ಒಕ್ಕೊರಲಿನಿಂದ ಗಾಂಧಿಜಿಯನ್ನು ಬಿಡುಗಡೆ ಮಾಡಿದರೆ ಭಾರತದ ರಾಜಕೀಯ ಬಿಕ್ಕಟ್ಟು ಬಗೆಹರಿಯುತ್ತದೆಂದು ತಿಳಿದರು; ಈ ಬಗ್ಗೆ ವಿನಂತಿ ಮಾಡಿಕೊಂಡರು. ಅವರ ವಿನಂತಿ ನಿಷ್ಪ್ರಯೋಜನವಾಯಿತು! ಆದರೂ ಅವರು ಸುಮ್ಮಗಿರಲಿಲ್ಲ; ಮತ್ತೂ ಪ್ರಯತ್ನ ಮಾಡಿದರು. ತಿರಿಗಿ ಸಭೆ ಸೇರಿದರು. ಗಾಂಧಿಜಿ ಸಂಧಾನಕ್ಕೆ ಸಿದ್ಧರಿದ್ದಾರೆಂದೂ ಸರಕಾರವಾದರೂ ಈ ಸಂದರ್ಭದಲ್ಲಿ ಸುಮ್ಮಗಿರಬಾರದೆಂದೂ ಸಾರಿದರು. ಈ ಬಗ್ಗೆ ಪುನಃ ಪ್ರಯತ್ನಮಾಡಲು ಒಂದು ಶಿಷ್ಟಮಂಡಳವು ವೈಸರಾಯರನ್ನು ಕಂಡು ಮಾತನಾಡಬೇಕೆಂದು ಗೊತ್ತಾಯಿತು. ಆದರೆ ಗಾಂಧಿಜಿ ಮತ್ತು ಸರಕಾರದ ಮಧ್ಯೆ ಸಂಧಾನಮಾಡತಕ್ಕದ್ದಿರುವುದರಿಂದ ವೈಸರಾಯರಲ್ಲಿಗೆ ಹೋಗಿ ಯಾವದೇ ಸಂಧಾನದ ಶರತವನ್ನು ಒಪ್ಪಿಸಬೇಕಾದರೂ ಗಾಂಧಿಜಿಯ ಅಭಿಪ್ರಾಯವನ್ನು ತಿಳಕೊಳ್ಳುವುದು ಅವಶ್ಯವಷ್ಟೆ? ಅದಕ್ಕಾಗಿ ಶಿಷ್ಟಮಂಡಳದವರು ಮಹಾತ್ಮರನ್ನು ಸಂಧಾನದ ಸಲುವಾಗಿ, ಬೇಟಿಯಾಗಲು ತಮಗೆ ಒಪ್ಪಿಗೆ ಕೊಡಬೇಕೆಂದು ವೈಸರಾಯರೊಡನೆ ಕೇಳಿಕೊಂಡರು. ಆದರೆ ವೈಸರಾಯರು ಮಹಾತ್ಮರನ್ನು ಭೇಟಿಯಾಗಲು ಮುಖಂಡರಿಗೆ ಒಪ್ಪಿಗೆ ಕೊಡಲಿಲ್ಲ. ಹಾಗಾಗಿ ಶಿಷ್ಟಮಂಡಳ ಹೋಗುವುದು ನಿಂತುಹೋಗಿದೆ. ಸರಕಾರ ಹೀಗೆ ಎರಡುಸಲವೂ ಅಖಿಲಭಾರತದ ಮುಖಂಡರ ಕೇಳಿಕೆಯನ್ನು ತಿರಸ್ಕರಿಸಿಬಿಟ್ಟಿದೆ!

ವೈಸರಾಯರ ನಕಾರ

ಮುಖಂಡರ ಶಿಷ್ಟಮಂಡಳವು ತನ್ನೆಡೆಗೆ ಬರುವುದಾದರೆ ಅವರು ಮಾತನಾಡಲಿರುವ ವಿಷಯಗಳೇನೆಂದು ತನಗೆ ಮುಂಚಿತ ತಿಳಿಸಬೇಕೆಂಬುದಾಗಿ ವೈಸರಾಯರು ಹೇಳಿದರು. ಅಂತೆ ಮುಖಂಡರು ತಮ್ಮ ವಿಷಯಗಳನ್ನು ತಿಳಿಸಿ ವೈಸರಾಯರಿಗೆ ಪತ್ರ ಬರೆದರು. ಅದರಲ್ಲಿ ಗಾಂಧಿಜಿ ಸಂಧಾನಕ್ಕೆ ಸಿದ್ಧರಿದ್ದಾರೆಂದೂ, ಅವರು ಆಂದೋಲನ ಹೂಡಿಲ್ಲವೆಂದು ಅವರು ಬರೆದ ಪತ್ರಗಳಿಂದ ತಿಳಿದುಬರುವುದೆಂದೂ ಅದ್ದರಿಂದ ಸಂಧಾನ ಸಾಧಿಸುವ ಸಲುವಾಗಿ ವೈಸರಾಯರು ತಮಗೆ ಗಾಂಧಿಜಿ ಭೇಟಿಗೆ ಸಮ್ಮತಿ ಕೊಡಬೇಕೆಂದೂ ಕೇಳಿಕೊಳ್ಳಲಾಗಿತ್ತು. ಅದಕ್ಕೆ ವೈಸರಾಯರಿಂದ ಬಂದ ಉತ್ತರದ ಸಾರಾಂಶ ಇಂತಿದೆ:- ಶಿಷ್ಟಮಂಡಳದ ವಿನಂತಿಗೆ ಮುಸ್ಲಿಂ ಪ್ರತಿನಿಧಿಗಳಾಗಲಿ, ದಲಿತ ವರ್ಗದವರಾಗಲಿ ಹಿಂದು ಮಹಾಸಭೆಯವರಾಗಲಿ ಸಹಿ ಹಾಕಿಲ್ಲವಾಗಿ ನಿಮ್ಮ ವಿನಂತಿಗೆ ಪ್ರಾತಿನಿಧ್ಯವಿಲ್ಲ. ಹಿಂಸಾಕೃತ್ಯಗಳನ್ನು ಗಾಂಧಿಜಿ ಹಾಗೂ ಕಾಂಗ್ರೆಸಿಗರು ಸಿದ್ಧತೆಗೈದು ಪ್ರೋತ್ಸಾಹ ಕೊಟ್ಟರು. ಕಳೆದ ಆಗಸ್ಟ್ ತಿಂಗಳಿಂದ ನಡೆಯುತ್ತಿರುವ ದಂಗೆ ಹಿಂಸಾ ಕೃತ್ಯಗಳನ್ನು ಕಾಂಗ್ರೆಸು ವರ್ಕಿಂಗ್ ಕಮಿಟಿ ಸದಸ್ಯರು ಪತ್ರಿಕೆಗಳಿಂದ ತಿಳಕೊಂಡಿದ್ದಾರೆ. ಅವರದನ್ನು ಖಂಡಿಸಿ ಹೇಳಿಕೆ ಕೊಟ್ಟಿಲ್ಲ. ಅವರು ಆಗಸ್ಟ್ ನಿರ್ಣಯವನ್ನು ಇನ್ನೂ ವಾಪಾಸು ತೆಗೆದುಕೊಳ್ಳಲಿಲ್ಲ. ಕಾಂಗ್ರೆಸು ಕಾರ್ಯನೀತಿಯು ಈಗಲೂ ಮುಂಚಿನಂತೆಯೇ ನಡೆದಿದೆ. ಆದ್ದರಿಂದ ಪರಿಸ್ಥಿತಿ ಏನೂ ಬದಲಾವಣೆ ಆಗಿಲ್ಲ. ಗಾಂಧಿಜಿ ಉಪವಾಸದ ಮೊದಲಿನ ಪರಿಸ್ಥಿತಿಯೇ ಈಗಲೂ ಇದೆ. ಅದ್ದರಿಂದ ಮುಖಂಡರು ಗಾಂಧಿಜಿ ಭೇಟಿ ಮಾಡುವುದರಿಂದ ಪ್ರಯೋಜನವಿಲ್ಲ' ಹೀಗೆ ಹೇಳಿದ ವೈಸರಾಯರು ಒಟ್ಟಿನಿಂದ ಈ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. 'ಕಾಂಗ್ರೆಸು ಆಗಸ್ಟ್ ನಿರ್ಣಯವನ್ನು ಸಂಪೂರ್ಣ ಹಿಂತೆಗೆದುಕೊಳ್ಳಬೇಕು. ಹೊರಗೆ ನಡೆಯುತ್ತಿರುವ ಹಿಂಸಾಕೃತ್ಯಗಳನ್ನು ಗಾಂಧಿಜಿ ಸೆರೆಮನೆಯೊಳಗಿಂದ ಖಂಡಿಸಬೇಕು. ಗಾಂಧಿಜಿ ಮತ್ತು ಕಾಂಗ್ರೆಸಿನವರು ಸರಕಾರಕ್ಕೆ ಸರಿಯಾದ ಭರವಸೆ ಕೊಟ್ಟು, ಇನ್ನು ಮುಂದೆ ಇಂಥಾ ಕೆಲಸ ಮಾಡುವುದಿಲ್ಲವೆಂದು ಹೇಳಬೇಕು. ಹಾಗಾದರೆ ಸಂಧಾನದ ವಿಚಾರ ಆಲೋಚಿಸಬಹುದು; ಗಾಂಧಿಜಿ ಭೇಟಿಯ ವಿಷಯವೂ ಪರಿಶೀಲಿಸಬಹುದು.'

ಮುಂದೇನು ಮಾಡುತ್ತೀರಿ?

ಎಂದು ಪತ್ರಿಕಾ ಪ್ರತಿನಿಧಿಗಳು ರಾಜಾಜಿಯವರೊಡನೆ ಈ ವಿಷಯ ಮಾತನಾಡುತ್ತಾ ಪ್ರಶ್ನೆ ಹಾಕಿದರು. ಆ ಪ್ರಶ್ನೆಗೆ ರಾಜಾಜಿ ಕೊಟ್ಟ ಉತ್ತರ ಇಂತಿದೆ: "ನಾನೀಗ ಕೋಪದ ಮನೋಭಾವದಲ್ಲಿದ್ದೇನೆ. ನಿಮ್ಮ ಪ್ರಶ್ನೆಗೆ ಉತ್ತರ ಕೊಡುವಷ್ಟು ಸಮಾಧಾನವೂ ಇಲ್ಲ, ಸಂದರ್ಭವೂ ಇಲ್ಲ. ಮುಂದೇನು ಮಾಡಬೇಕೆಂದು ಸಾರ್ವಜನಿಕ ಮುಖಂಡರು ನಿರ್ಧರಿಸಬೇಕು. ಮುಖಂಡರು ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳ ಬೆಂಬಲವುಳ್ಳ ಹೊಸ ರಾಜಕೀಯ ಸಂಸ್ಥೆಯನ್ನು ನಿರ್ಮಿಸಿ ಆ ಮೂಲಕ ಪ್ರಯತ್ನ ಮಾಡಲೂಬಹುದು" ಎಂದರು. 'ವೈಸರಾಯರ ನಕಾರದಿಂದ ಅವರು ಸಂಧಾನಕ್ಕೆ ವಿರೋಧವಾಗಿದ್ದಾರೆಂದು ಅರ್ಥವಾಗುತ್ತದೆ. ರಾಷ್ಟ್ರೀಯ ಭಾರತಕ್ಕೂ ಬ್ರಿಟನಿಗೂ ಸ್ನೇಹ ಸಂಬಂಧವೇರ್ಪಡುವುದು ವೈಸರಾಯರಿಗೆ ಬೇಡವಾಗಿಲ್ಲವೆಂದು ವ್ಯಕ್ತವಾಗುತ್ತದೆ" ಎಂದೂ ರಾಜಾಜಿ ಹೇಳಿದರು. ಮುಖಂಡರ ಶಿಷ್ಟಮಂಡಳದ ಉದ್ದೇಶವು, ಭಾರತದ ಪ್ರಕೃತ ರಾಜಕೀಯ ಬಿಕ್ಕಟನ್ನು ಬಗೆಹರಿಸಿ ಸಂಧಾನವೇರ್ಪಡಿಸುವುದಾಗಿದ್ದು, ಮಹಾತ್ಮರ ಭೇಟಿಗೂ ಸರಿಯಾದ ಮಾತುಕತೆಗಳಿಗೂ ವೈಸರಾಯರು ಸಂದರ್ಭವೇರ್ಪಡಿಸಿದ್ದರೆ, ವೈಸರಾಯರು ತಮ್ಮ ಪತ್ರದಲ್ಲಿ ಏನನ್ನು ಬರೆದಿದ್ದರೋ ಅದು ಫಲಕಾರಿಯಾಗುತ್ತಿತ್ತೆಂದೂ ರಾಜಾಜಿ ವಿಶದಪಡಿಸಿದರು. ಭಾರತೀಯರಲ್ಲಿ ಇನ್ನೂ ಮತಭೇದವಿದೆಯೆಂಬುದನ್ನು ಎತ್ತಿ ಹೇಳಿ, ಬ್ರಿಟಿಷರು ತಮ್ಮ ಬೇಳೆ ಬೇಯಿಸುತ್ತಿರುವುದೂ, ಗಾಂಧಿಜಿ ಮತ್ತು ಕಾಂಗ್ರೆಸಿನವರ ಮೇಲೆ ಆರೋಪಿಸಿದ ತಪ್ಪನ್ನು, ವಿಚಾರಣೆಗೆ ಅವಕಾಶ ಕೊಡದೆಯೇ, ಒಪ್ಪಿಕೊಂಡು ಶರಣಾಗದೆ ರಾಜಿಯಿಲ್ಲವೆಂದು ವೈಸರಾಯರು ಹೇಳಿದುದೂ, ಭಾರತೀಯರಿಗೆ ಬ್ರಿಟಿಷರ ವಿಷಯ ದ್ವೇಷಭಾವನೆ ಹುಟ್ಟಿಸುವಂಥಾದ್ದಾಗಿದೆಯೆಂದು ರಾಜಾಜಿ ಎಚ್ಚರಿಕೆಯಿತ್ತಿದ್ದಾರೆ! ಒಟ್ಟಿನಿಂದ ಮುಖಂಡರ ಪ್ರಯತ್ನವೂ ಹೀಗೆ ಎರಡು ಸಲವೂ ವಿಫಲವಾಗಲು ಅವರಿಗೀಗ ಸರಕಾರದ ಈ ಧೋರಣೆಯಿಂದ ಬಹಳ ಅಸಮಾಧಾನವುಂಟಾಗಿದೆ. ಕಾಂಗ್ರೆಸನ್ನು ವೈಸರಾಯರು ಅವಹೇಳನ ಮಾಡುವುದನ್ನು ಅವರು ಸಹಿಸುವುದಿಲ್ಲ. ಸಂಧಾನದ ಮೆಟ್ಟಿಲನ್ನು ಕಟ್ಟಿ ಹೋಗುವ ಅವರಿಗೆ ಹೀಗೆ ಅಡಚಣೆಗಳುಂಟಾಗಿರುವುದರಿಂದ, 'ಮುಂದೆ ತಾನೇನು ಮಾಡಬೇಕೆಂದು ಜನರೇ ಹೇಳಲಿ' ಎಂದು ರಾಜಾಜಿ ಕೇಳುತ್ತಾರೆ!

ಅಮೆರಿ ಅಬ್ಬರಿಸಿದರು!

ಕಾಮನ್ಸ್ ಸಭೆಯಲ್ಲಿ ಭಾರತದ ವಿಚಾರ ಪ್ರಶ್ನೆ ಬಂದಾಗ, ಲಂಡನಿನಲ್ಲಿದ್ದು ಭಾರತದ ಪರವಾಗಿ ಮಂತ್ರಿತ್ವ ಮಾಡುವ ಅಮೆರಿ ಸಾಹೇಬರು ಸದಾಕಾಲ ಅಬ್ಬರಿಸುವವರೇ! ಲಂಡನಲ್ಲಿ ಕುಳಿತು ಭಾರತೀಯರ ಮಂತ್ರಿತ್ವ ಮಾಡುತ್ತಿರುವ ಅಮೆರಿಯವರ ನಿರಂಕುಶಾಧಿಕಾರವನ್ನು ಕಿತ್ತೊಗೆಯಲು ಭಾರತೀಯರಿಗೆ ಅಧಿಕಾರವೀಗ ಬರಲಿಲ್ಲವೆಂಬುದು, ಅವರಿಗೆ ಮಾತ್ರವೇನು ಅಖಿಲ ಜಗತ್ತಿಗೇ ಗೊತ್ತು! ಅಮೆರಿ ಸಾಹೇಬರು ಈ ಸಲವಾದರೂ ಹಿಂದಿನದೇ ಹಾಡು ಹಾಡಿದರು! ಕಾಂಗ್ರೆಸು ಮತ್ತು ಗಾಂಧಿಜಿಯವರನ್ನು ಬಾಯಿಗೆ ಬಂದಂತೆ ಬಯ್ದುಬಿಟ್ಟರು! ಕಾಂಗ್ರೆಸು ಸರ್ವಾಧಿಕಾರೀ ಸಂಸ್ಥೆಯಂತೆ ಮೆರೆಯಿತೆಂದು ದೂರಿದರು. 1937ರಲ್ಲಿ ಕಾಂಗ್ರೆಸಿಗೆ ದೊರೆತ ಅಲ್ಪ ಜಯದಿಂದ ಕಾಂಗ್ರೆಸು ಉಬ್ಬಿ ಹೋಯಿತೆಂದು ಹೇಳಿದರು. ಭಾರತದಿಂದ ಬ್ರಿಟಿಷ್ ಪ್ರಭುತ್ವವನ್ನು ಕಿತ್ತೊಗೆಯಲು ಕಾಂಗ್ರೆಸು ಯೋಚಿಸಿತೆಂದೂ ಸಾರಿದರು. ಆಗಸ್ಟ್ ಘೋಷಣೆ, ಕ್ರಿಪ್ಸ್ ಸಂಧಾನಗಳ ವಿಷಯ ಹೊಗಳಿದರು. ಬ್ರಿಟಿಷರಿಗೆ ಬರ್ಮದಲ್ಲಿ ಸೋಲಾಗುತ್ತಿರುವಾಗ, ಗಾಂಧಿಜಿ ಕ್ರಿಪ್ಸ್ ಯೋಜನೆಗೆ ದಿವಾಳಿ ಚೆಕ್ಕೆಂದು ಹೇಳಿ ಬ್ರಿಟಿಷರನ್ನು ಹೊರಗಟ್ಟಲು ಹವಣಿಸಿದರೆಂದೂ, ಹಾಗಾಗಿ ಅವರು 'ಬಹಿರಂಗ ದಂಗೆ' ಹೂಡಿ 'ಅರಾಜಕತೆ'ಯನ್ನು ಆಹ್ವಾನಿಸಿದರೆಂದೂ ಸ್ವತಂತ್ರಭಾರತವು ಜಪಾನಿನೊಡನೆ ಒಪ್ಪಂದ ಮಾಡಿಕೊಳ್ಳುವಂತೆ ಕಾಂಗ್ರೆಸಿನವರು ಮನಸ್ಸು ಮಾಡಿದ್ದಾರೆಂದೂ, ಕಾಂಗ್ರೆಸು ಹಿಂಸಾತ್ಮಕ ಚಳವಳವನ್ನು ಪ್ರೇರೇಪಿಸಿತೆಂದೂ, ಆದ್ದರಿಂದ ಸರಕಾರವು ಈ ದಂಗೆಯನ್ನಡಗಿಸಬೇಕಾಯಿತೆಂದೂ ತಮ್ಮನ್ನು ಸಮರ್ಥಿಸಿಕೊಂಡರು. ಮುಖಂಡರ ವಿನಂತಿ ವಿಷಯ ಅಮೆರಿಯವರೂ ಪ್ರಸ್ತಾಪಿಸಿ, ಗಾಂಧಿಜಿಯವರು ಶರಣಾಗದೆ ಮುಖಂಡರ ವಿನಂತಿ ಮಾನ್ಯಮಾಡಲಾಗುವುದಿಲ್ಲವೆಂದರು; ಜಾತಿ ಜಾತಿಗಳಲ್ಲಿ ಹಿಂದು ಮುಸ್ಲಿಮರಲ್ಲಿ ಒಪ್ಪಂದವಿಲ್ಲದೆ ರಾಷ್ಟ್ರೀಯ ಸರಕಾರ ಸ್ಥಾಪಿಸಲು ಆಗುವುದಿಲ್ಲವೆಂದು ಹೇಳಿದರು. ಆದ್ದರಿಂದ ಭಾರತ ಬಿಕ್ಕಟ್ಟು ಬಿಡಿಸುವುದು ಭಾರತೀಯರ ಹೊಣೆಯಿರುವುದೆಂದು ಹೇಳಿ ಮಾತು ಮುಕ್ತಾಯಗೈದರು!

ಭಾರತದ ವಿಚಾರ ಕಾಮನ್ಸ್ ಸಭೆಯಲ್ಲಿ ಕೆಲಕಾಲ ಚರ್ಚೆನಡೆಯಿತು. ಹೆಚ್ಚಾಗಿ ಲೇಬರ್, ಹಾಗೂ ಲಿಬರಲ್ ಪಕ್ಷದವರೂ ಕೆಲವರು, ಪಾರ್ಲಿಮೆಂಟ್ ನಲ್ಲಿ ಭಾರತದ ವಿಚಾರ ಸಹಾನುಭೂತಿ ತೋರಿಸಿ, ಬ್ರಿಟಿಷ್ ಸರಕಾರವೇ ಬಿಕ್ಕಟ್ಟು ಬಿಡಿಸಲು ಮುಂಬರಬೇಕೆಂದು ವಾದಿಸಿದರು. ಆ ಮೇಲೆ ಉಪ ಪ್ರಧಾನ ಅಟ್ಲಿಯವರು ಉತ್ತರ ಕೊಡುತ್ತಾ ಅಮೆರಿಯವರ ಮಾತನ್ನೇ ಸಮರ್ಥಿಸಿ, ಗಾಂಧಿಜಿ ಮತ್ತು ಕಾಂಗ್ರೆಸನ್ನು ತುಂಬಾ ದೂರಿ, ಭಾರತವನ್ನು 'ಉದ್ಧರಿಸಿ'ದ ವಿಷಯ ತಮ್ಮನ್ನು ತಾವೇ ಹೊಗಳಿಕೊಂಡರು! ಕೊನೆಗೆ ಅಮೆರಿಯವರು ತಂದ, ಭಾರತದ ಪ್ರಾಂತಗಳಲ್ಲಿ ಗವರ್ನರರ ನಿರಂಕುಶಾಧಿಕಾರಕ್ಕೆ ಬೇಕಾದಷ್ಟು ಸಮಯ ಜೀವದಾನ ಕೊಡುವ ನಿರ್ಣಯದ ಅಂಗೀಕಾರದೊಡನೆ ಚರ್ಚೆ ಕೊನೆಗೊಂಡಿತು. ಹೀಗೆ ಭಾರತದ ವಿಷಯ ಬ್ರಿಟನಿನಲ್ಲಿ ಬಹಳ ಸ್ವಾರಸ್ಯದ ಚರ್ಚೆಗಳಾಗಿ ಸ್ವಾರಸ್ಯದ ತೀರ್ಮಾನಗಳೂ ಆದವು! 'ಭಾರತದ ಅನೇಕ ಸ್ತ್ರೀಪುರುಷರನ್ನು ಸೆರೆಮನೆ ಸೇರಿಸಿ, ಕಾಂಗ್ರೆಸು ಪಕ್ಷದ ದಂಗೆಯನ್ನು ತಾವು ಅಡಗಿಸಿರುವುದಾಗಿ ಅಮೆರಿ ಅಬ್ಬರಿಸುತ್ತಾರೆ. ಕಾಂಗ್ರೆಸು ಮತ್ತು ಭಾರತ ಇವೆರಡು ಭಿನ್ನವೆಂದು ಜಗತ್ತಿಗೆ ಪ್ರದರ್ಶಿಸಲು ಅಮೆರಿ ಸಾಹಸಪಡುತ್ತಾರೆ. ಭಾರತೀಯರ ಮನೋಕಾಂಕ್ಷೆಯನ್ನು ಹೇಳಲು ತಾವೇ ಸಮರ್ಥರೆಂದು ಅವರು ತೋರಿಸುತ್ತಾರೆ. ಕಾಂಗ್ರೆಸು ಮುಖಂಡರು ಕ್ಷಮಾಪಣೆ ಕೇಳಿ ಶರಣು ಬರಬೇಕೆಂದು ಅಮೆರಿ ಅಭಿಪ್ರಾಯಪಡುವದಾಗಿದೆ. ಆದರೆ ಅವರು ಹೇಳಿದಂತೆ ನಡೆವ ಮನುಷ್ಯನೊಬ್ಬನೂ ಕಾಂಗ್ರೆಸಿನಲ್ಲಾಗಲಿ ಅದರ ಹೊರಗಾಗಲಿ ಯಾರೂ ಇಲ್ಲ. ಆಗಸ್ಟ್ ಘೋಷಣೆ, ಕ್ರಿಪ್ಸ್ ಯೋಜನೆಗಳು ಭಾರತೀಯರ ರುಮಾಲಿಗೆ ಮಣ್ಣುಗೂಡಿವೆ. ಭಾರತೀಯರಲ್ಲಿ ಕಾಲ್ಪನಿಕ ಮತಭೇದ ಹುಟ್ಟಿಸಲು ಬ್ರಿಟಿಷ್ ಸಾಮ್ರಾಜ್ಯವಾದಿಗಳೇ ಹೊಣೆಗಾರರು. ಮುಖ್ಯ ಅಧಿಕಾರ ಬಿಟ್ಟುಕೊಡಲು ಬ್ರಿಟಿಷರಿಗೆ ಮನಸ್ಸಿಲ್ಲ. ಆದ್ದರಿಂದ ಕಾಂಗ್ರೆಸು ಸ್ವೀಕರಿಸಿದ ಧೋರಣೆ ನ್ಯಾಯವಾದುದು" ಎಂದು ಎಂ. ಎಲ್. ಎ ಗಳಾದ ಅಬ್ದುಲ್ ಕಯ್ಯೂಮರು ಒಂದು ಹೇಳಿಕೆಯಿತ್ತು ಅಮೆರಿಯವರ ಅಬ್ಬರಕ್ಕೆ ಯೋಗ್ಯ ಉತ್ತರ ಕೊಟ್ಟಿದ್ದಾರೆ!

ಬಂಗಾಳದಲ್ಲಿಯೂ ಗವರ್ನರರದೇ ರಾಜ್ಯಭಾರ!

ಬಂಗಾಳದಲ್ಲಿ ೯೩ನೇ ಸೆಕ್ಷನ್!

ಈಗ ಜಾರಿಯಲ್ಲಿ ಬಂದಿದೆ. ಮಿಕ್ಕ ಆರು ಪ್ರಾಂತಗಳಲ್ಲಿ ಈಗಾಗಲೇ ೯೩ನೇ ಸೆಕ್ಷನ್, ಗವರ್ನರರ ನಿರಂಕುಶಾಧಿಕಾರ ನಡೆಯುತ್ತಿದ್ದು, ಪಾರ್ಲಿಮೆಂಟಿನಲ್ಲಿ ಅಮೆರಿಯವರು ಅದಕ್ಕೆ ಪುನಃ ಜೀವದಾನ ಮಾಡಿದ ಕಾಲದಲ್ಲಿಯೇ ಇನ್ನೊಂದು ಪ್ರಾಂತದಲ್ಲಿ, ಬಂಗಾಳದಲ್ಲಿಯೂ ಈ ಸೆಕ್ಷನಿನ ಆದೇಶವೇ ಬಂದದ್ದು ಸ್ವಾರಸ್ಯದ್ದಾಗಿದೆ; ೯೩ನೇ ಸೆಕ್ಷನ್ ಎಂದರೆ ಜನತಾ ಪ್ರತಿನಿಧಿಗಳ ಮಂತ್ರಿ ಮಂಡಳವಿಲ್ಲದೆ, ಬ್ರಿಟಿಷ್ ಸರಕಾರವು ತಮಗಿಷ್ಟಬಂದಂತೆ, ತಾವು ನೇಮಿಸಿದ ಗವರ್ನರರೊಬ್ಬರ ಮೂಲಕ ತಮಗೆ ಉಚಿತಬಂದ ರೀತಿಯು ಅಧಿಕಾರವನ್ನು ಪ್ರಾಂತಗಳಲ್ಲಿ ನಡೆಸುವುದಾಗಿದೆ. ಬಂಗಾಳದಲ್ಲಿ ಸಮ್ಮಿಶ್ರ ಮಂಡಳವಿದ್ದು ಹಕ್ಕರು ಅಲ್ಲಿನ ಪ್ರಧಾನ ಮಂತ್ರಿಗಳಾಗಿದ್ದರು. ಆದರೆ ಅಲ್ಲಿನ ಗವರ್ನರರು ಸರ್ ಜಾನ್ ಹರ್ಬರ್ಟರಿಗೆ ಈ ಮಂತ್ರಿ ಮಂಡಳದ ವಿಷಯ ಹೊಟ್ಟೆ ನೋವಿತ್ತು. ಹಾಗಾಗಿ ಗವರ್ನರರು ಸಮಯ ಸಿಕ್ಕಿದಾಗಲೆಲ್ಲಾ ಈ ಮಂತ್ರಿಮಂಡಳಕ್ಕೆ ಅಡ್ಡಗಾಲು ಹಾಕುತ್ತಾ ಬಂದರು. ೧೯೩೭ರಿಂದ ಮೊದಲ್ಗೊಂಡು ಇದುವರೆಗೂ ಹಕ್ಕರ ಮಂತ್ರಿಮಂಡಳವೇ ಬಂಗಾಳದಲ್ಲಿದ್ದು ಅದಕ್ಕೆ ಜನತೆಯ ಬೆಂಬಲವು ಬಲವಾಗಿತ್ತು. ಹಾಗಾಗಿ ಹಕ್ಕರು ಅಧಿಕಾರ ನಡೆಸುತ್ತಾ ಬಂದರು. ಆದರೆ ಕಳೆದ ತಾ. ೨೮ಕ್ಕೆ ಗವರ್ನರರು ಹಕ್ಕರನ್ನು ಕರೆದು ರಾಜಿನಾಮೆ ಕೊಡುವಂತೆ ಹೇಳಿದರು. ರಾಜಿನಾಮೆ ಪತ್ರವನ್ನು ಗವರ್ನರರು ಮೊದಲೇ ಟೈಪು ಮಾಡಿಸಿಟ್ಟಿದ್ದರು! ಅವರೊಡನೆ ಉಳಿದ ಮಂತ್ರಿಗಳೂ ರಾಜಿನಾಮೆ ಕೊಟ್ಟಿದ್ದಾರೆ. ಸಿಂಧದಲ್ಲಿಯೂ ಹೀಗೆಯೇ ನಡೆಯಿತು. ಅಲ್ಲಾಭಕ್ಷರಾದರೂ ತಮ್ಮ ಮುಖ್ಯ ಮಂತ್ರಿಪದವಿಗೆ ರಾಜಿನಾಮೆ ಕೊಡಬೇಕಾಯಿತು. ಜನರ ವಿಶ್ವಾಸಪಾತ್ರರಾಗಿದ್ದರೂ ವಿದೇಶೀಯರಾದರೊಬ್ಬರ ವಿಶ್ವಾಸ ಪಾತ್ರರಲ್ಲವಾದರೆ ಹಿಂದೂ ದೇಶದಲ್ಲಿ ಅಧಿಕಾರವಿಲ್ಲ! ಅಲ್ಲಾಭಕ್ಷರಿಗೆ ಸ್ವಲ್ಪ ಹಿಂದೆಯೇ ಈ ಸಂಗತಿ ತಿಳಿಯಿತು; ಹಕ್ಕರಿಗೆ ಈಗ ತಿಳಿಯಿತು. ಇದನ್ನು ತಿಳಿದೇ ಕಾಂಗ್ರೆಸು ಮಂತ್ರಿಗಳು, 'ರಾಜಿನಾಮೆ ಕೊಡಿ' ಎಂದು ಗವರ್ನರರು ಒತ್ತಾಯ ಮಾಡುವುದಕ್ಕಿಂತ ಮೊದಲೇ, ಗೌರವದಿಂದ ಸ್ವತಃ ರಾಜಿನಾಮೆ ಕೊಟ್ಟು ಹೊರಬಂದರು! ರಾಜಿನಾಮೆ ಕೊಡಲೊಪ್ಪದಿದ್ದರೆ ಮಂತ್ರಿಮಂಡಳವನ್ನು 'ಡಿಸ್‌ಮಿಸ್' ಮಾಡುವ ಅಧಿಕಾರ ಗವರ್ನರರಿಗಿದೆ!

ಮದ್ರಾಸ್ ಪ್ರಾಂತದಲ್ಲಿ ಆಹಾರ ಸರಬರಾಯಿ ವ್ಯವಸ್ಥೆ

—ಪುಣೆಯಲ್ಲಿ ಮೂವರು ಕನ್ನಡಿಗರ ಶಿಕ್ಷೆ—

ಮದ್ರಾಸ್ ಆಧಿಪತ್ಯದಲ್ಲಿ ಆಹಾರ ಸಾಮುಗ್ರಿಗಳ ಸರಬರಾಯಿ

ವ್ಯವಸ್ಥೆಯಾಗುವ ಹಾಗೆ ಅಧಿಕಾರಿಗಳ ಅಪ್ಪಣೆ ಹೊರಟಿದೆ. ಈ ಯೋಜನೆ ಸಹಕಾರ ತತ್ವಗಳ ಮೇರೆಗೆ. ಇದೇ ಎಪ್ರಿಲಿನಿಂದ ಒಂದು ವರ್ಷದ ವರೆಗೆ ಜಾರಿಯಲ್ಲಿ ಇರುವುದು. ಈ ಯೋಜನೆಯ ಬಗೆಗೆ ಅಗುವ ವೆಚ್ಚ ಸುಮಾರು ೭೨॥ ಲಕ್ಷ ರೂಪಾಯಿಗಳು. ಹಂಚೋಣದ ಕೆಲಸವು ಮುಖ್ಯವಾಗಿ ಪ್ರಾಯ್ಮರಿ ಸ್ಟೋರುಗಳ ಮೂಲಕ ನಡೆಯುವುದು; ಈ ಸ್ಟೋರುಗಳಿಗೆ ಅನ್ನ ಸಾಧನಗಳು ರಖಂ ವ್ಯಾಪಾರದ ಸ್ಟೋರುಗಳಿಂದ ದೊರಕುವುದು; ಈ ಸ್ಟೋರುಗಳು ಎರಡು ತಿಂಗಳಿಗೆ ಅಗತ್ಯವಿರುವ ಮುಖ್ಯ ಅನ್ನ ಸಾಮುಗ್ರಿಗಳನ್ನು ಕೊಂಡು ಸಂಗ್ರಹಿಸಿಡುವವು. ಈ ಯೋಜನೆಗೆ ಅಗತ್ಯವಿರುವ ಹಣವನ್ನು ಕೋ-ಓಪರೇಟಿವ್ ಸೆಂಟ್ರಲ್ ಬೇಂಕುಗಳಿಂದ ಸಾಲ ಪಡೆದ ಮೇಲೆ ಸರಕಾರವು ಆ ಹಣದ ಮರು ಪಾವತಿಯ ಕುರಿತಾಗಿ ಆ ಬೇಂಕುಗಳಿಗೆ 'ಗೇರಂಟಿ' ಕೊಡುವುದು. ಈ ಸ್ಟೋರುಗಳ ಮೇಲ್ವಿಚಾರ ಹಾಗೂ ಅವುಗಳಲ್ಲಿನ ಕಾರ್ಯ ನಿರ್ವಾಹಕ್ಕಾಗಿ ಸರಕಾರದ ಸಿಬಂದಿ ಏರ್ಪಡುವುದು. ಅನ್ನ ಸಾಮುಗ್ರಿಗಳಲ್ಲಿ ಅಕ್ಕಿ, ನವಣೆ ಇತ್ಯಾದಿ, ಬೇಳೆ ಕಾಳು, ಹುಣಿಸೆ ಹಣ್ಣು ಉಪ್ಪು, ಮೆಣಸಿನ ಕಾಯಿ, ಎಣ್ಣೆಗಳು, ಬೆಲ್ಲ, ಸಕ್ಕರೆ ಇವು ಈ ಯೋಜನೆಯಲ್ಲಿ ಸೇರುವವು. ಇವನ್ನು ಒದಗಿಸುವ ಕಾಲದಲ್ಲಿನ ಧಾರಣೆಯಂತೆ ಇವುಗಳ ಮಾರಾಟದ ಬೆಲೆ ನಿಷ್ಕರ್ಷಿಸಲ್ಪಡುವವು.

ಸಮಯ ಬದಲಾವಣೆಯಿಲ್ಲ

ವೆಂದೂ ಯುದ್ಧ ಮುಗಿವ ವರೆಗೆ ಹೀಗೆಯೇ ಇರುವುದೆಂದೂ ತಾ. ೪ರ ಸರಕಾರೀ ಪ್ರಕಟಣೆಯಿದೆ. ಸಪ್ಟಂಬರ ೧ರಿಂದ ಗ್ರೀನ್‌ವಿಚ್ ವೇಳೆಗಿಂತ ಹಿಂದುಸ್ತಾನದ ವೇಳೆ ೫॥ ಗಂಟೆ ಇದ್ದುದನ್ನು ೬॥ ಗಂಟೆ ಮಾಡಲಾಯಿತು. ಸಾರ್ವಜನಿಕರ ಉಪಯೋಗಕ್ಕೆ ವಿದ್ಯುಚ್ಛಕ್ತಿ ಕಡಿಮೆಯಾಗಿ ಯುದ್ಧೋಪಕರಣ ಕಾರಖಾನೆಗಳಿಗೆ ಹೆಚ್ಚಾಗಿ ದೊರಕಿಸುವ ಉದ್ದೇಶದಿಂದ ಹೀಗೆ ಮಾಡಲಾದದ್ದು, ಆ ಉದ್ದೇಶ ಸಾಧಿಸಿರುವುದಾಗಿಯೂ, ೮೨॥ ಡಿಗ್ರಿ ಮಿರಿಡಿಯನ್ ಪಶ್ಚಿಮಕ್ಕೆ ಇರುವ ಭಾಗದಲ್ಲಿ ಇದರಿಂದ ಸ್ವಲ್ಪ ತೊಂದರೆಯಾದರೂ ಅಲ್ಲಿನ ಪರಿಸ್ಥಿತಿಯನ್ನನುಸರಿಸಿ ಕೋರ್ಟು ಕಚೇರಿ ಶಾಲೆಗಳ ಸಮಯದಲ್ಲಿ ಸ್ವಲ್ಪ ಬದಲಾವಣೆ ಮಾಡಿದರೆ ಎಲ್ಲವೂ ಸರಿಯಾಗುವುದೆಂದೂ ಆ ಪ್ರಕಟಣೆಯಲ್ಲಿದೆ.

ಮದ್ರಾಸು ಪ್ರಾಂತದ ಮುನ್ಸಿಪಾಲಿಟಿ

ಗಳ ೧೯೪೧-೪೨ ವರ್ಷದ ಆಡಳಿತ ವಿಷಯದಲ್ಲಿ ಸರಕಾರವೀಗ ಒಂದು ಪ್ರಕಟಣೆ ಹೊರಡಿಸಿದೆ. ಅದರಲ್ಲಿ ಪ್ರಾಂತದಲ್ಲಿರುವ ಒಟ್ಟು ೮೨ ಮುನ್ಸಿಪಾಲಿಟಿಗಳಲ್ಲಿ ೬ ಮುನ್ಸಿಪಾಲಿಟಿಗಳ ಆಡಳಿತ ಚೆನ್ನಾಗಿತ್ತೆಂದೂ, ೬೭ರ ಆಡಳಿತ ಸಮಾಧಾನಕರವಿತ್ತೆಂದೂ, ಉಳಿದ ೯ರ ಆಡಳಿತ ಅತೃಪ್ತಿಕರ ಹಾಗೂ ಕೆಟ್ಟದಾಗಿತ್ತೆಂದೂ ಹೇಳಲಾಗಿದೆ. ವೈದ್ಯಕೀಯ ಉಪಚಾರ, ರೋಗ ಪ್ರತಿಬಂಧ ಮೊದಲಾದವುಗಳಿಗೆ ಒಟ್ಟು ಮುನ್ಸಿಪಾಲಿಟಿಗಳು ೭೦ ಲಕ್ಷ ರೂ. ವ್ಯಯಿಸಿವೆ.

'ಆಹಾರ ಪದಾರ್ಥ ಬೆಳೆಸಿರಿ'

ಎಂಬ ಪ್ರಚಾರದಿಂದ ಕಳೆದ ವರ್ಷ ೮೦ ಲಕ್ಷ ಎಕ್ರೆ ಭೂಮಿಯಲ್ಲಿ ಆಹಾರ ಪದಾರ್ಥ ಹೆಚ್ಚು ಬೆಳೆಸಲಾಗಿದೆಯೆಂದೂ, ಈ ವರ್ಷ ಇನ್ನು ೨೦ ಲಕ್ಷ ಎಕ್ರೆ ಭೂಮಿಯಲ್ಲಿ ಆಹಾರ ಪದಾರ್ಥ ಹೆಚ್ಚು ಬೆಳೆಸಿದರೆ, ಕೃಷಿಕರ ಉತ್ಪತ್ತಿಗೆ ಮುಂದೆ ಬೆಲೆ ಬೀಳುವುದೆಂಬ, ಕೃಷಿಕರ ಸಂಶಯಕ್ಕೆ ಸರಕಾರದವರು, ಮಿತಿಗೆ ಕಡಿಮೆಯಾಗಿ ಬೆಲೆಯಿಳಿಯದಂತೆ ಭರವಸೆ ಕೊಡುತ್ತಾರೆ.

ಪುಣೆಯಲ್ಲಿ ೩ ಕನ್ನಡಿಗರ ಶಿಕ್ಷೆ

ಮಹಾತ್ಮರು ಆಗಾಖಾನ ಬಂಗ್ಲೆಯಲ್ಲಿ ಉಪವಾಸ ಕೈಕೊಂಡಾಗ ಅಲ್ಲಿಗೆ ಮೆರವಣಿಗೆ ಹೊರಟ ಕನ್ನಡಿಗರ ದಳದಲ್ಲಿ ಬಂಧಿಸಲ್ಪಟ್ಟವರ ವಿಚಾರಣೆ ನಡೆದು, ಪದ್ಮನಾಭ ಮಳಗಿ, ವೀರಭದ್ರಯ್ಯ ಗುಡದೂರ ಮಠ ಹಾಗನಾರಾಯಣ ಹುಲಗಿ ಇವರಿಗೆ ೩ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ಉಳಿದ ಇಬ್ಬರು ವೆಂಕಟೇಶ ತೋರಗಲ್ಲು ಮತ್ತು ರಾಘವೇಂದ್ರ ಹೊಂಬಾಳಿ ಇವರನ್ನು ಅಪ್ರಾಯಸ್ಥರೆಂದು ಬಿಡುಗಡೆ ಮಾಡಲಾಗಿದೆ.

ಶಸ್ತ್ರ ಹಿಡಿದು ಸಂಚರಿಸಕೂಡದು

ಎಂದು ಅಹಮ್ಮದಾಬಾದಿನಲ್ಲಿ ಜಾರಿಯಲ್ಲಿರುವ ಸರಕಾರ ನಿರ್ಬಂಧಕಾಜ್ಞೆ ಪುನಃ ಮುಂದುವರಿಸಲ್ಪಟ್ಟಿದೆ.

ಅನಿಯಮಿತ ಅವಧಿ

ವರೆಗೆ ಕೇಂದ್ರ ಎಸೆಂಬ್ಲಿ ಅಧಿವೇಶನ ಮುಂದುವರಿಯಿತು.. ಕೇಂದ್ರ ಎಸೆಂಬ್ಲಿ ಹಾಗೂ ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ನಡೆದ ಚರ್ಚೆ ಭಾಷಣಗಳಿಂದ ಸಾರ್ವಜನಿಕರು ಅನೇಕ ಹುಳುಕುಗಳನ್ನು ತಿಳಕೊಂಡರು. ಅಸೆಂಬ್ಲಿ ಸದಸ್ಯರ ಎಲ್ಲಾ ಭಾಷಣಗಳನ್ನೂ ಸರಿಯಾಗಿ ಸಾರ್ವಜನಿಕರ ಅವಗಾಹನೆಗೆ ಸರಕಾರವು ಪ್ರಕಟಿಸಲಿಲ್ಲವೆಂದು ಓರ್ವ ಸದಸ್ಯರು ವಿಷಾದ ಸೂಚಿಸಿದ್ದರು.

Yet another year of all round progress--
--Figures that speak for themselves:

	1941	1942
New Completed Business	Rs. 7,51,850	Rs. 8,24,450
Premiums and Interest	Rs. 1,04,626	Rs. 1,19,255
Life Assurance Fund	Rs. 2,30,955	Rs. 3,00,230
Govt. & Approved Securities	Rs. 2,01,000	Rs. 2,69,400
Over-all Expense Ratio	48·9%	38·2%
Renewal Eepense Ratio	33·5%	19·8%
Interest Earned (net)	4%	4·1%

You as a Kanarite must be proud of this progress. For, the progress of an institution of your own district brings forward the success of Kanara enterprise throughout the country.

Represent the "POPULAR" as an Agent, Special Agent or District Agent. It will mean for you a permanent and remunerative connection.

The Popular Insurance Company Limited,

MANGALORE.

(Organisation throughout India)

ಸಮರಭೂಮಿಯ ಸಂಚಾರ

ಜನರಲ್ ಆಂಡರ್‌ಸನರ ಮೊದಲನೆಯ ಸೈನ್ಯವು ಬಿಜರ್ಟಾಕ್ಕೆ ಕೇವಲ ನಲ್ವತ್ತು ಮೈಲು ದೂರದಲ್ಲಿರುವ ಕೇಪಿಸಿರಾತ ಎಂಬ ಊರನ್ನಾಕ್ರಮಿಸಿಕೊಂಡು ಮೆಟವೂರ ಎಂಬಲ್ಲಿಗೆ ಹೊರಟಿರುವುದು. ಇಲ್ಲಿಂದ ಬಿಜರ್ಟಾ ಕೇವಲ ೨೦ ಮೈಲು ಅಂತರದಲ್ಲಿದೆ. ಮಧ್ಯ ಟುನಿಸಿಯದಲ್ಲಿ ಅಮೆರಿಕನರು ಎಲ್‌ಗೆಟಾರಿಂದ ಮುಂದೆ ನುಗ್ಗುತ್ತಿರುವರು. ಆದರೆ ವೈರಿಗಳು ಬಹಳ ದೃಢಮನಸ್ಸಿನಿಂದ ಅಲ್ಲಿ ನಿಂತಂತೆ ತೋರುತ್ತದೆ. ಗೆಫಸಾ-ಗ್ಯಾಬೆಝಾ ರಸ್ತೆಯು ಕಟಲಿ ರಸ್ತೆಯನ್ನು ಕೂಡುವಲ್ಲಿ ಜರ್ಮನರು ಅಮೆರಿಕನ್ ಸೈನ್ಯಗಳ ಮೇಲೆ ತೋಫುಗಳ ಬಲದಿಂದ ಪ್ರತಿಧಾಳಿಯನ್ನು ಪ್ರಾರಂಭಿಸಿದರು. ಮತ್ತೆ ಈ ರಸ್ತೆಯಲ್ಲಿ ಅಷ್ಟಮದಳ ಹಾಗೂ ಅಮೆರಿಕನ್ ದಳಗಳು ಸಂಧಿಸಿದವು. ಉತ್ತರ ಭಾಗದಲ್ಲಿ ವೈರಿಗಳ ಪ್ರತಿಭಟನೆ ಜೋರಿದ್ದರೂ ಫ್ರೆಂಚ್ ಸೈನ್ಯಗಳು ಸೆದಜೆನೇನದ ಬಳಿ ಮುಂದುವರಿಯುತ್ತಿವೆ. ಸೆದಜೆನೇನದ ಪೂರ್ವದಲ್ಲಿ ಹಲವು ಮೈಲುಗಳ ಮೇಲೆ ಜರ್ಮನರ ಹಿಂದೋಟವು ಅತ್ಯಂತ ಭರದಿಂದ ಸಾಗಿದ್ದರಿಂದ ಮಿತ್ರರಿಗೆ ಅವರನ್ನು ಬೆನ್ನಟ್ಟುವುದಾಗಲಿಲ್ಲ. ಹಾಗಾಗಿ ರೊಮೆಲನು ಉಪಾಯದಿಂದ ಪಾರಾಗಿ ಹೋದನು. ಜರ್ಮನರು ಟುನಿಸಿಯವನ್ನು ಖಾಲಿ ಮಾಡುತ್ತಿವ ಸಿದ್ಧತೆ ಗೈಯುತ್ತಿವರೆಂದು ಹೇಳಲಾಗುತ್ತದೆ. ಟುನಿಸಿಯದಲ್ಲಿ ಬ್ರಿಟಿಷರ ಅಷ್ಟಮ ಮತ್ತು ಅಮೆರಿಕನ್ ದಲಗಳು ಸಂಧಿಸಿದಂತೆ ಮಾಡಲು ರೊಮೆಲನು ಬಹಳ ಪ್ರಯತ್ನಮಾಡುತ್ತಿರುವನು.

ಕಳೆದ ಕೆಲದಿನಗಳಿಂದ ಶಾಂತವಾಗಿದ್ದ ರಶ್ಯ ರಣರಂಗವು ಈಗ ಸ್ವಲ್ಪ ಬಿರುಸಾಗಿದೆ. ಈಗ ಹಲವು ಕಡೆಗಳಲ್ಲಿ ಕಾಳಗ ಪ್ರಾರಂಭವಾಗಿದೆ. ಉತ್ತರ ಕಾಕೇಸಸಿನ ಕುಬಾನ ಪ್ರದೇಶದಲ್ಲಿ ರಶ್ಯನರು ಧಾಳಿಯನ್ನು ಮುಂದುವರಿಸಿ ಜರ್ಮನರನ್ನು ಸುತ್ತುಗಟ್ಟುತ್ತಿದ್ದಾರೆ. ಈಗ ಕೂಬಾನಿನಲ್ಲಿ ೬೦ ಮೈಲು ಉದ್ದ ಹಾಗೂ ೧೫ ಮೈಲು ವಿಸ್ತಾರದ ಭಾಗವು ಮಾತ್ರ ಜರ್ಮನರಿಗೆ ಉಳಿದಿದೆ. ಇಲ್ಲಿ ಕೆಂಪು ಸೈನ್ಯವು ಧಾಳಿಯ ಸಿದ್ಧತೆ ನಡೆಸಿದೆ. ಅದಕ್ಕೆ ಪರಿಸ್ಥಿತಿಯೂ ಅನುಕೂಲವಿದೆ. ಸದ್ಯ ಕುಬಾನ ರಂಗದಲ್ಲಿ ಮಾತ್ರ ರಶ್ಯನರು ಧಾಳಿಯಿಡುತ್ತಿರುವರು. ಉಳಿದ ರಂಗಗಳಲ್ಲಿ ಯುದ್ಧದ ರಭಸ ಕಡಿಮೆಯಾಗಿದೆ. ಡೊನೆಜ್ ಪ್ರದೇಶದಲ್ಲಿ ರಶ್ಯನ್ ವ್ಯೂಹವನ್ನು ಮುರಿವ ಪ್ರಯತ್ನವನ್ನು ಜರ್ಮನರಿನ್ನೂ ಬಿಟ್ಟಿಲ್ಲ. ಅವರು ಬಯಲಗೊರಡ ಖಾರ್ಕೊವ್‌ಗಳ ನಡುವಿನ ವ್ಯೂಹದಲ್ಲಿ ಎಲ್ಲಿಯಾದರೂ ಕಡಿಮೆ ಭದ್ರವಾಗಿರುವ ಭಾಗವನ್ನು ಭೇದಿಸಬೇಕೆಂದು ಒಂದೇ ರೀತಿ ಸಾಹಸಮಾಡುತ್ತಿರುವರು. ಮಧ್ಯ ರಣಭೂಮಿಯಲ್ಲಿ ಟೇಂಕ್ ಪ್ರತಿಬಂಧಕ ಕಂದಕ ತೋಡುವುದು, ಸುರಂಗ ಬಿತ್ತುವುದು; ಕೊತ್ತಳ ಕಟ್ಟುವುದು ಇವೇ ರಶ್ಯನರ ಚಟುವಟಿಕೆಗಳಾಗಿವೆ.

ಮೇರಿಥ್ ಮುರಿಯಿತು!

ಜರ್ಮನರು ಭದ್ರವೆಂದು ಭಾವಿಸಿದ್ದ, ರೊಮೆಲನು ತನ್ನ ಸೈನ್ಯವನ್ನು ಭದ್ರವಾಗಿ ತಳವೂರಿಸಿದ್ದ ಮೇರಿಥ್ ವ್ಯೂಹವಿಂದು ಮುರಿದುಹೋಯಿತು! ಬ್ರಿಟಿಷ್ ಅಷ್ಟಮದಳದವರು ಈ ವ್ಯೂಹವನ್ನು ಭೇದಿಸಿ ಮುನ್ನುಗ್ಗಿದರು. ರೊಮೆಲನು ಎಲ್ ಎಲಾಮೆನಿನಿಂದ ಓಡಿಬಂದು ಇಲ್ಲಿ ನೆಲಸಿದ್ದನು. ಇಲ್ಲಿ ರೊಮೆಲನು ಮಹಾಸಂಗ್ರಾಮ ಹೂಡುವನೆಂದೇ ಹಲವರು ಭಾವಿಸಿದ್ದರು. ಆದರೆ ಈಗ ಆ ಭಾವನೆಗಳೆಲ್ಲಾ ಬಯಲಾಯಿತು. ರೊಮೆಲನು ಕೇವಲ ಹನ್ನೆರಡು ದಿನಗಳ ವರೆಗೆ ಮಾತ್ರ ಇಲ್ಲಿ ಬ್ರಿಟಿಷ್ ಸೇನೆಯನ್ನೆದುರಿಸಲು ಸಮರ್ಥನಾದನು. ಆದರೆ ಮುಂದೆ ಆತನಿಂದ ಬಗೆಹರಿಯಲಿಲ್ಲ. ಜರ್ಮನರ ಬಲವಾದ, ಅಪಾಯಕರವಾದ ದುರ್ಗ ಎಂದು ಭಾವಿಸಲಾದ ಮೇರಿಥ್ ಇಂದು ಮುರಿದುಬಿತ್ತು. ಮೇರಿಥ್ ಈಗ ಬ್ರಿಟಿಷರ ವಶವಾಗಿದೆ. ಟುನಿಶಿಯಾ ಯುದ್ಧದಲ್ಲಿ, ಈ ಯುದ್ಧವು ಅತ್ಯಂತ ಮಹತ್ವದ್ದಾಗಿದೆ. ಉತ್ತರ ಆಫ್ರಿಕದಿಂದ ಅಕ್ಷರಾಷ್ಟ್ರಗಳ ಸೈನ್ಯವನ್ನು ಸಂಪೂರ್ಣ ಓಡಿಸಬೇಕಾದರೆ ಹಾಗೂ ಟುನಿಶಿಯಾ ಹೋರಾಟ ಮುಗಿಸಿಕೊಂಡು ಯೂರೋಪಿನಲ್ಲಿ ದ್ವಿತೀಯ ರಂಗ ತೆರೆಯಬೇಕಾದರೆ ರೊಮೆಲನ ಸೈನ್ಯವನ್ನು ಭಂಗಗೊಳಿಸುವುದು ಅತ್ಯಂತ ಅವಶ್ಯಕವಿತ್ತು. ರೊಮೆಲನಿಗೆ ಎಲ್ ಎಲಾಮಿನಲ್ಲಿಯೇ ಅಪಜಯ ಪ್ರಾಪ್ತವಾಯಿತು. ಆದರೆ ಚತುರನಾದ ಅವನು ಕುಶಲತೆಯಿಂದ ಅಲ್ಲಿಂದ ಓಡಿ ಓಡಿಬಂದು ಮೇರಿಥ್‌ನಲ್ಲಿ ತಲೆಮರೆಸಿಕೊಂಡನು. ಬ್ರಿಟಿಷ್ ಎಂಟನೆ ಸೈನ್ಯವು ಟುನಿಶಿಯದಲ್ಲಿ ಪದಾರ್ಪಣಮಾಡಿದರೂ ಮೇರಿಥ್ ದುರ್ಗವು ಅಡ್ಡಬಂದದ್ದರಿಂದ ಮುನ್ನುಗ್ಗಲಾಗಲಿಲ್ಲ. ಈಗ ಮತ್ತೆ ಮುಂದುವರಿಯಲು ಅವಕಾಶವಾಗಿದೆ. ಮಧ್ಯ ಟುನಿಶಿಯದಲ್ಲಿ ಅಮೆರಿಕನರು ಗೆಫೆಸಾ ಮೆಕ್ನಾಸಿಗಳನ್ನಾಕ್ರಮಿಸಿಕೊಂಡು ಕರಾವಳಿಯ ಕಡೆ ರೊಮೆಲನ ಸೈನ್ಯವನ್ನು ಹಿಂದಿನಿಂದ 'ಸುತ್ತುಗಟ್ಟಲು ಸಾಹಸ ಮಾಡುತ್ತಿರುವರು. ಉತ್ತರ ಟುನಿಶಿಯದಲ್ಲಿಯೂ ಬ್ರಿಟಿಷರ ಒಂದನೇ ಸೈನ್ಯವು ಜನರಲ್ ಆರ್ನಿಮನ ಸೈನ್ಯವನ್ನು ಎದುರಿಸುತ್ತಿದೆ. ಹೀಗೆ ಮೂರು ಕಡೆಗಳಲ್ಲಿಯೂ ಮಿತ್ರಸೈನ್ಯಗಳೀಗ ಮುನ್ನುಗ್ಗುತ್ತಿವೆ. ಆದರೆ ರೊಮೆಲನು ಮೇರಿಥ್ ವ್ಯೂಹವನ್ನು ಬಿಟ್ಟುಹೋಗಿದ್ದರೂ ಆತನ ಸೈನ್ಯವು ಇನ್ನೂ ಬಲವಂತವಾಗಿದೆ. ತೀರ ಉತ್ತರವಲ್ಲಿರುವ ಜನರಲ್ ಆರ್ನಿಮನ ಸೈನ್ಯವನ್ನು ಸೇರಿಕೊಳ್ಳುವುದು ರೊಮೆಲನ ಪ್ರಯತ್ನವಾಗಿದೆ.

ಬಂಗಾಳದಲ್ಲಿ ಜಪಾನರು

ಇತ್ತೀಚೆಗೆ ಕೆಲದಿನಗಳಿಂದ ಪುನಃ ಎಡೆಬಿಡದೆ ಬಾಂಬು ಸುರಿಸಲು ತೊಡಗಿದ್ದಾರೆ. ಜಪಾನರು ಈ ಸಲ ನಿಜವಾದ 'ಭಾರತ ಆಕ್ರಮಣ ಕಾರ್ಯವನ್ನು ತೊಡಗಿದರೇ ಎಂದು ಹಲವರು ಸಂಶಯಗೊಂಡಿರುವರು. ತಾ. ೬ರಂದು ಸುಮಾರು ೫೦ ಜಪಾನೀ ವಿಮಾನಗಳು ಬಂಗಾಳದ ಮೇಲೆ ಧಾಳಿಯಿಡಲು ಬಂದವು. ಕೆಲವು ವಿಮಾನಗಳು ಮುನ್ನುಗ್ಗಿ ಮಾಂಗಾಡಾದ ಮೇಲೆ ಬಾಂಬುಗಳನ್ನೊಗೆದವು. ಆಸ್ತಿ ಮತ್ತು ಜೀವಹಾನಿಯೂ ಆಗಿದೆ. ಆರ್. ಎ. ಎಫ್. ಮತ್ತು ಜಪಾನ್ ವಿಮಾನಗಳೊಳಗೆ ಆಕಾಶದಲ್ಲಿ ದ್ವಂದ್ವ ಯುದ್ಧವೂ ನಡೆಯಿತು. ತಾ. ೬ರಂದು ಚಿತಗಾಂಗ ಹಾಗೂ ಬುಧಿಡಾಂಗ್ ವಿಮಾನ ಗೃಹಗಳ ಮೇಲೆಯೂ ಜಪಾನರು ಧಾಳಿಯಿಟ್ಟರು. ಆಕಾಶದಲ್ಲಿ ವಿಮಾನಗಳ ದ್ವಂದ್ವ ಯುದ್ಧವೂ ನಡೆಯಿತು. ಹೀಗೆಯೇ ಕಳೆದ ಮಾರ್ಚ್ ತಿಂಗಳ ೩೦ರಂದು ಜಪಾನರು ೨೧ ವಿಮಾನಗಳ ತಂಡವೊಂದು ಆಗ್ನೇಯ ಬಂಗಾಳದಲ್ಲಿಯೂ ಒಂದು ವಿಮಾನ ಗೃಹ ಮೇಲೆ ಬಾಂಬು ಸುರಿಸಿದೆ. ೨೯ನೇ ತಾರೀಕಿನ ದಿನ ೬೨ ಜಪಾನೀ ವಿಮಾನಗಳು ಕಾಕ್ಸ ಬಜಾರಿನ ಮೇಲೆ ಧಾಳಿಯಿಟ್ಟವು. ೩೧ ಜಪಾನೀ ಬಾಂಬರು ಮತ್ತು ಯುದ್ಧ ವಿಮಾನಗಳು ಇದೇ ೧ನೇ ತಾರೀಕಿಗೆ ಆಗ್ನೇಯ ಬಂಗಾಳದ ಫೆಣಿಯ ಮೇಲೆ ಧಾಳಿ ಮಾಡಿದವು. ಇದರಿಂದ ಫೆಣಿಯಲ್ಲಿ ನಾಗರಿಕರ ಆಸ್ತಿಪಾಸ್ತಿಗಳಿಗೆ ಸ್ವಲ್ಪ ಹಾನಿಯಾಗಿದೆಯೆಂದೂ ತಿಳಿಯುತ್ತದೆ. ಪ್ರತಿಸಲದಲ್ಲಿಯೂ ನಮ್ಮ ವಿಮಾನಗಳು ಜಪಾನ್ ವಿಮಾನಗಳೆದುರು ಹಾರಾಡಿ ಹೋರಾಡಿದವೆಂದೇನೋ ನಮಗೆ ಹೇಳಲಾಗಿದೆ. ಹೇಗಿದ್ದರೂ ಈಗ ಬಂಗಾಳದಲ್ಲಿ ಜಪಾನರ ವಿಮಾನಧಾಳಿ ಎಡೆಬಿಡದೆ ಸಾಗುತ್ತಿರುವುದು ಖಂಡಿತ. ಇದರಿಂದಲೇ ಬಂಗಾಳವನ್ನೀಗ ಧಾಳಿಯ ಪ್ರದೇಶವೆಂದು ಸರಕಾರವೇ ಸಾರಿಬಿಟ್ಟಿದೆ! ಇದು ಭಾರತದ ಮೇಲೆ ಜಪಾನರ ನಿಜವಾದ ಆಕ್ರಮಣ ಕಾರ್ಯಕ್ರಮವೇ ಅಥವಾ ಕೇವಲ ಬೆದರಿಸುವ ಕೆಲಸವೇ ಎಂಬುದನ್ನು ನಾವು ತುಸು ಗಮನಿಸಬೇಕು. ಜಪಾನರು ಬರ್ಮದಲ್ಲಿ ಒಂದು ಪ್ರಬಲವಾದ ಧಾಳಿಯ ಸಿದ್ಧತೆ ಮಾಡುತ್ತಿರುವರೆಂಬುದಕ್ಕೆ ಸಂದೇಹವಿಲ್ಲವೆಂದು ಕರ್ನಲ್ ಹೋವರ್ಡ್ ಸ್ಲ್ಯಾಂಡರ್ನರು ಹೇಳಿದರು. 'ನಮಗಿಂತಲೂ ಮೊದಲು ತಾವೇ ಧಾಳಿಮಾಡಬೇಕೆಂದು ಜಪಾನರ ಹಂಚಿಕೆಯಿದೆ. ಆದರೆ ಮಳೆಯಾಗಲಿ, ಚಳಿಯಾಗಲಿ ನಾವು ಅವರ ಪ್ರಯತ್ನಗಳನ್ನು ವಿಫಲಗೊಳಿಸಲೇ ಬೇಕು. ಮಳೆಯ ಕಾರಣ ನಮಗೆ ತಿಂಗಳಲ್ಲಿ ಪ್ರತಿದಿನವೂ ಧಾಳಿಯಿಡುವುದು ಆಗಲಿಕ್ಕಿಲ್ಲ. ಆದರೆ ಜಪಾನರನ್ನು ಮುಂದೆ ಬರಬಿಡಬಾರದು' ಎಂದು ಅವರು ಎಚ್ಚರಿಸಿದ್ದಾರೆ!

ಅಟಲಾಂಟಿಕದಲ್ಲಿ

'ಜರ್ಮನ್ ಸಬ್‌ಮೆರಿನುಗಳ ಹಾವಳಿ ಹೆಚ್ಚಾಗಿರುವುದರಿಂದ, ಫೆಬ್ರವರಿಗಿಂತ ಮಾರ್ಚ ತಿಂಗಳಲ್ಲಿ ಮಿತ್ರರ ಹಡಗುಗಳು ಬಹಳವಾಗಿ ಮುಳುಗಿದವು. ಜರ್ಮನ್ ಸಬ್‌ಮೆರಿನುಗಳು ಬೇರೆ ಬೇರೆ ಗತ್ತುಗಳನ್ನುಪಯೋಗಿಸುತ್ತವೆ. ದಿನದಿನಕ್ಕೆ ಹೆಚ್ಚು ಹೆಚ್ಚು ಸಬ್‌ಮೆರಿನುಗಳು ಹೊರಡುತ್ತವೆ. ಅಲ್ಲಿನ ಪರಿಸ್ಥಿತಿ ಈಗ ಗಂಭೀರವಾಗಿದೆ' ಹೀಗೆಂದು ಅಮೆರಿಕದ ನೌಕಾಮಂತ್ರಿ ಕರ್ನಲ್ ನಾಕ್ಸರು ಒಂದು ಹೇಳಿಕೆಯಿತ್ತಿರುವರು. ಕರ್ನಲ್ ನಾಕ್ಸರ ಹೇಳಿಕೆಯಿಂದ ನೌಕಾವರ್ಗದವರು ಆಶ್ಚರ್ಯಪಡತಕ್ಕದ್ದೇನೂ ಇಲ್ಲ. ವಸಂತಕಾಲದಲ್ಲಿ ದೊಡ್ಡ ಧಾಳಿ ಪ್ರಾರಂಭವಾಗುವುದೆಂದು ಹಿಟ್ಲರನೇ ಹೇಳಿದ್ದನು. ಅಟಲಾಂಟಿಕದಲ್ಲಿ ಈಗ ಅಂಥಾ ಚಟುವಟಿಕೆಗಳಿಗೆ ಅನುಕೂಲ ವಾತಾವರಣವೇ ಇದೆ. ನಾಕ್ಸರು ಹೀಗೆ ಹೇಳಿಕೆ ಕೊಟ್ಟದ್ದರಿಂದ ಮಿತ್ರಬಲದಲ್ಲಿ ಇಂದು ಎಚ್ಚರಿಕೆ ಹುಟ್ಟಿದೆ. ಚರ್ಚಿಲರಾದರೂ ಬೇಗನೇ ನಾಕ್ಸರ ಹೇಳಿಕೆಯ ಸ್ಪಷ್ಟೀಕರಣ ಮಾಡುವರೆಂದು ಹಾರೈಸಲಾಗಿದೆ.

ಸದ್ಯದ ಸುದ್ದಿಗಳು

ದಕ್ಷಿಣ ಟುನಿಸಿಯದಲ್ಲಿ ಬ್ರಿಟಿಷ್ ಎಂಟನೇ ಸೈನ್ಯವು ಧಾಳಿಯನ್ನು ಪುನಃ ತೊಡಗಿದೆ. ವಾಡಿ ಅಕಾರತ್ ಎಂಬಲ್ಲಿದ್ದ ವೈರಿ ವ್ಯೂಹದ ಮೇಲೆ ಅನೇಕ ಸೈನ್ಯಗಳು ಒಮ್ಮೆಲೇ ಮುತ್ತಿಗೆ ಹಾಕಿದವು. ಇಲ್ಲಿ ಭಯಂಕರ ತೋಫಿನ ಕಾಳಗ ನಡೆಯಿತು. ವಾಡಿ ಅಕಾರತ್‌ನಲ್ಲಿ ವೈರಿ ವ್ಯೂಹವು ಮೇರಿಥ್‌ನಂತೆಯೇ ಇರುವುದು. ಈ ವ್ಯೂಹವು ಇತ್ತೀಚೆಗೆ ಕಟ್ಟಿದ್ದು. ಕರಾವಳಿಯಿಂದ ಇದು ಪ್ರಾರಂಭವಾಗಿ ಪಶ್ಚಿಮದಲ್ಲಿ ಒಂದು ಗುಡ್ಡದ ವರೆಗೆ ಹಬ್ಬಿರುವುದು; ಆದ್ದರಿಂದ ಇದನ್ನು ಭೇದಿಸುವುದು ಅಷ್ಟು ಸುಲಭವಲ್ಲ. ಅತ್ತ ಮಧ್ಯ ಟುನಿಸಿಯದಲ್ಲಿ ಅಮೆರಿಕನರೂ ಎಲ್‌ಗೆಟಾರದಿಂದ ವಾಡಿ ಅಕಾರತಿನ ಕಡೆಗೇ ಧಾಳಿ ನಡೆಸಿರುವರು.

ಬರ್ಮದಲ್ಲಿ ಜಪಾನರು ಮಾಯೂ ನದಿಯನ್ನು ದಾಟಿ ಮುಂದೆ ಬಂದಿರುವರು. ಕಳೆದ ವಾರದಲ್ಲಿ ಅವರು ಮಾಡಿದ ಚಟುವಟಿಕೆಗಳಿಂದ ಡೊಂಬಾಯಿಕದ ಉತ್ತರಕ್ಕೆ ಕಿರಿದಾದ ಗುಡ್ಡಗಾಡು ಪ್ರದೇಶದಲ್ಲಿರುವ ಮಿತ್ರ ಸೈನ್ಯಗಳಿಗೆ ದುಷ್ಟಾಂತರ ಬಂದಿತ್ತು. ಆದ್ದರಿಂದ ಜಪಾನರ ಈ ಮುನ್ನುಗ್ಗುವಿಕೆಯಿಂದ ಪಾರಾಗುವುದಕ್ಕಾಗಿ ಬ್ರಿಟಿಷ್ ಸೈನ್ಯಗಳು ಮಾಯೂ ನದಿಯಿಂದ ಹಿಂದೆ ಸರಿಯಬೇಕಾಯಿತು. ಬ್ರಿಟಿಷ್ ಸೈನ್ಯವು ರಾಥೆಡಾಂಗದ ಉತ್ತರಕ್ಕೆ ೧೫ ಮೈಲು ಹಿಂದೆ ಸರಿದದ್ದರಿಂದ ಗಂಡಾಂತರ ಹೆಚ್ಚಾಗಿತ್ತು. ಆದರೆ ಮಾಯೂ ದ್ವೀಪವನ್ನು ಯಶಸ್ವಿಯಾಗಿ ರಕ್ಷಿಸಬೇಕಾದರೆ ಇನ್ನೂ ಹಿಂದೆ ಸರಿಯಬೇಕಂತೆ! ಅಲ್ಲಿನ ಪರಿಸ್ಥಿತಿ ಇನ್ನೂ ಅನಿಶ್ಚಿತವಿದೆ. ವೈರಿಗಳು ದೋಣಿಗಳ ಮೂಲಕ ನದಿಯನ್ನು ದಾಟಲು ಯತ್ನಿಸುತ್ತಿರುವರು. ಅಪಾರ ಹಾನಿಯಾದರೂ ಅದನ್ನು ಲೆಕ್ಕಿಸದೆ ಮುಂದುವರಿಯುತ್ತಿರುವರು. ಕಳೆದ ಡಿಶಂಬರದಲ್ಲಿ ಕಳೆದುಕೊಂಡ ಪ್ರದೇಶವನ್ನು ತಿರುಗಿ ಪಡೆಕೊಳ್ಳಲು ಜಪಾನರು ಅಪಾರ ಸೈನ್ಯ ಸಿದ್ಧತೆ ಮಾಡಿರುವರು. ಜಪಾನರು ಇನ್ನೂ ಮುಂದೆ ನುಗ್ಗುವ ಸಂಭವವೇ ಇದೆ.

ರಶ್ಯದಲ್ಲಿ ಡೊನೆಟ್ಸ್ ನದೀ ತೀರದಂಚೆಯ ಮೇಲೆ ಇಜಿಯಾಮದ ಹತ್ತಿರ ಭಯಂಕರ ಕಾಳಗ ನಡೆಯುತ್ತಿದೆ. ಅಲ್ಲಿ ಜರ್ಮನರ ಒತ್ತಡ ಹೆಚ್ಚಾಗಿದ್ದು ಒಂದು ರಶ್ಯನ್ ಠಾಣೆಯನ್ನು ಅವರು ಮುತ್ತುತ್ತಿರುವರು. ಚುಗುವೆವ ಎಂಬಲ್ಲಿ ಜರ್ಮನರು ರಶ್ಯನರನ್ನು ಹಿಂದೆ ಸರಿಸಿರುವರು. ಬ್ರಿಟನಿನಿಂದ ಮಿಲಿಟರಿ ಶಿಷ್ಟಮಂಡಳವೊಂದು ರಶ್ಯಕ್ಕೆ ತೆರಳಿದೆ. ದ್ವಿತೀಯ ರಂಗದ ವಿಚಾರ ತನಗೆ ಗೊತ್ತಿದ್ದರೂ ಹೇಳುವುದಿಲ್ಲವೆಂದು ಪ್ರೆಸಿಡೆಂಟ್ ರೂಸ್‌ವೆಲ್ಟರು ಹೇಳಿದರು. ಬೊಲಿವಿಯಾ ಸರಕಾರವು ಅಕ್ಷರಾಷ್ಟ್ರಗಳ ವಿರುದ್ಧ ಯುದ್ಧ ಸಾರಿತು; ಇದು ದಕ್ಷಿಣ ಅಮೆರಿಕದ ಒಂದು ರಾಷ್ಟ್ರ. ಸ್ಪೈನ್ ಮಂತ್ರಿಮಂಡಳದ ಅವಸರದ ಸಭೆಯೊಂದು ಕೂಡಿದೆ.

ಸ್ವದೇಶಾಭಿಮಾನಿ

ತಾರೀಕು 9—4—1943

ಮುಖಂಡರ ಮುಖ ಭಂಗ!

ಅಖಿಲಭಾರತದ ಮುಖಂಡರ ಎರಡನೆಯ ಸಲದ ಪ್ರಯತ್ನವೂ ವ್ಯರ್ಥವಾಯಿತು! ಮುಖಂಡರು ಸಂಧಾನದ ಸಲುವಾಗಿ ಮಹಾತ್ಮರ ಸಂದರ್ಶನವಾಗಬೇಕೆಂದರು; ವೈಸರಾಯರು ಅದಾಗುವುದಿಲ್ಲವೆಂದುಬಿಟ್ಟರು! ಇದರಿಂದ ಸಂಧಾನ ಮಾರ್ಗವೇ ಮುಚ್ಚಿದಂತಾಗಿ, ವೈಸರಾಯರಲ್ಲಿಗೆ ಹೋಗಲು ಸಿದ್ಧವಾದ ಶಿಷ್ಟ ಮಂಡಳವು ತಟಸ್ಥವಾಯಿತು. ಎಲ್ಲಾ ಜಾತಿ, ಮತ, ರಾಜಕೀಯ ಪಂಥಗಳ ಅಖಿಲ ಭಾರತ ಮುಖಂಡರು ಸೇರಿ ಈ ಸಂಧಾನ ಪ್ರಯತ್ನ ಮಾಡುತ್ತಿರುವಾಗ ವೈಸರಾಯರು ಅದಕ್ಕೆ ಈ ರೀತಿ ಉತ್ತರ ಕೊಟ್ಟದ್ದು, ಹಲವರನ್ನು ನಿರಾಶೆಗೊಳಿಸಿದೆ. ಮುಖಂಡರಿಗೆ ಇದರಿಂದ ಮುಖಭಂಗವಾಗಿದೆ. ರಾಜಾಜಿ ಮುನ್ಷಿ ಪ್ರಭೃತಿಗಳು ಇದರಿಂದ ತಮಗುಂಟಾದ ಅತೃಪ್ತಿಯನ್ನು ಈಗಾಗಲೇ ಪ್ರಕಟಿಸಿದ್ದಾರೆ. ಸಾರ್ವಜನಿಕಾಭಿಪ್ರಾಯವನ್ನು ಸಾರುವ ಅನೇಕ ಪತ್ರಿಕೆಗಳು ವೈಸರಾಯರ ಧೋರಣವನ್ನು ಟೀಕಿಸಿವೆ. ಮೆಂಚೆಸ್ಟರ್ ಗಾರ್ಡಿಯನ್ ಮೊದಲಾದ ಲಂಡನಿನ ಪತ್ರಿಕೆಗಳೂ ಭಾರತದಲ್ಲಿನ ಬ್ರಿಟಿಷ್ ನೀತಿಯನ್ನು ಖಂಡಿಸುತ್ತವೆ. ಸಂಧಾನಕ್ಕೆ ವೈಸರಾಯರು ಸಿದ್ಧರಾಗಿಲ್ಲವೆಂದೂ, ಬ್ರಿಟಿಷರಿಗೆ ಅಧಿಕಾರ ಬಿಟ್ಟುಕೊಡಲು ಮನಸ್ಸಿಲ್ಲವೆಂದೂ ಇದರಿಂದ ಜನರು ತಿಳಿಕೊಳ್ಳುವಂತಾಗಿದೆ.

ಫಿಲಿಪ್ಸರೇನಂತೆ?

ರೂಸ್‌ವೆಲ್ಟರ ಪ್ರತಿನಿಧಿ ವಿಲಿಯಂ ಫಿಲಿಪ್ಸರು ಜಿನ್ನಾರೊಡನೆ ಬೇಗನೇ ಮಾತುಕತೆ ಮಾಡಲಿರುವರು. ಈ ಸಂದರ್ಶನವಾದರೆ ಭಾರತದಲ್ಲಿ ಫಿಲಿಪ್ಸರ ರಾಜಕೀಯ ಪರಿಶೋಧನೆ ಕೊನೆಗೊಂಡಂತೆ ಆಯಿತು. ರಾಜಾಜಿ ಡಿಲ್ಲಿಗೆ ಹೋಗುವ ಮೊದಲು ಫಿಲಿಪ್ಸರು ಅವರೊಡನೆಯೂ ಸಂಭಾಷಣೆ ಗೈದರು. ಗಾಂಧಿಜಿಯವರನ್ನು ಕಾಣಲು ಫಿಲಿಪ್ಸರು ವೈಸರಾಯರ ಅಪ್ಪಣೆ ಪಡೆಯುವರೆಂಬುದಕ್ಕೆ ಇದುವರೆಗೆ ಏನೂ ಆಧಾರವಿಲ್ಲ. ರಾಜಾಜಿಯವರೀಗ ಕಾಂಗ್ರೆಸು ವಿನಾ ಇತರ ಪಕ್ಷಗಳೊಳಗೆ ಒಂದು ಒಕ್ಕಟ್ಟು ಸಾಧಿಸಲು ಯತ್ನಿಸುವುದರಿಂದ, ಅವರಾ ಪ್ರಯತ್ನಕ್ಕೆ ಎಷ್ಟರ ಮಟ್ಟಿನ ಯಶಸ್ಸಿತೆ ಸಿಗಬಹುದೆಂದು ಫಿಲಿಪ್ಸರು ನಿರೀಕ್ಷಿಸುತ್ತಿದ್ದಂತೆ ತೋರುತ್ತದೆ. ಫಿಲಿಪ್ಸರು ಬೇಗನೇ ಅಮೆರಿಕಕ್ಕೆ ತೆರಳಿ, ಅಧ್ಯಕ್ಷ ರೂಸ್‌ವೆಲ್ಟರಿಗೆ ಭಾರತದ ವಿಷಯ ಒಂದು ವರದಿಯೊಪ್ಪಿಸುವರೆಂದೂ ತಿಳಿದುಬರುತ್ತದೆ. ಈ

ವಶಪಡಿಸಿಕೊಳ್ಳುವುದೇ ಅವರ ಭಾರತ ಪ್ರವಾಸದ ಮುಖ್ಯ ಉದ್ದೇಶವೆಂದು ಈಗ ಹೇಳಲಾಗುತ್ತದೆ.

ದ್ವಿವಿಧ ಗಂಡಾಂತರ!

ಬಂಗಾಳಕ್ಕೆ ಈಗ ಎರಡು ವಿಧದ ಗಂಡಾಂತರಗಳು ಬಂದೊದಗಿದೆ! ಒಂದು ಬಂಗಾಳವು 'ಧಾಳಿಯ ಪ್ರದೇಶ'ವೆಂದು ಸರಕಾರದಿಂದಲೇ ಸಾರಲ್ಪಟ್ಟಿದೆ ಮಾತ್ರವಲ್ಲದೆ, ಈಗಾಗಲೇ ಆ ಪ್ರಾಂತದ ಹಲವು ಕಡೆಗಳಲ್ಲಿ ಜಪಾನರು ಬಾಂಬು ಸುರಿಸುತ್ತಿದ್ದಾರೆ. ಎರಡನೆಯದಾಗಿ, ಕಳೆದ ಆರು ವರ್ಷಗಳಿಂದ ಜನತಾ ವಿಶ್ವಾಸಪಾತ್ರರಾಗಿ ಅಧಿಕಾರದಲ್ಲಿದ್ದ ಹಕ್ ಮಂತ್ರಿಮಂಡಳವು, ಗವರ್ನರರ ಒತ್ತಾಯದಿಂದ ರಾಜಿನಾಮೆ ಕೊಡಬೇಕಾಗಿ ಬಂದು, ಅಲ್ಲಿ ೯೩ನೇ ಸೆಕ್ಷನಿನ ಆಡಳಿತ ಎಂದರೆ ಗವರ್ನರರ ಏಕತಂತ್ರಾಧಿಕಾರವು ನಡೆಯುತ್ತಿದೆ! ಒಂದು ಕಡೆಯಿಂದ ಶತ್ರುಗಳು ಬಂಗಾಳವನ್ನು ಆಕ್ರಮಿಸುವ ಸಾಹಸ ಮಾಡುತ್ತಿರುವಾಗಲೇ, ಇನ್ನೊಂದು ಕಡೆಯಿಂದ, ಜನತೆಯ ವಿಶ್ವಾಸಪಾತ್ರರಾದ ಮುಖಂಡರು ಅಧಿಕಾರದಿಂದ ತಳ್ಳಲ್ಪಟ್ಟ ದೃಶ್ಯವು ಬಹಳ ಕರುಣಾಜನಕವಿರುವುದು! ಶತ್ರುವು ಬಾಗಿಲ ಬಳಿ ಕಾದು ನಿಂತಿರುವಾಗ ಜನತಾ ಪ್ರತಿನಿಧಿಗಳನ್ನು ಅಧಿಕಾರದಿಂದ ತಳ್ಳಿದ ಬಂಗಾಳದ ಗವರ್ನರರ ಅದೂರದೃಷ್ಟಿಯನ್ನು ಯಾರಾದರೂ ಖಂಡಿಸಲೇ ಬೇಕು. ಈಗಾಗಲೇ ಬಂಗಾಳದ ಹಲವರು ಮುಖಂಡರು, ಈ ಗವರ್ನರರನ್ನು ಹಿಂದಕ್ಕೆ ಕರೆಯಿರಿ ಎಂದು ಬ್ರಿಟಿಷ್ ಸರಕಾರಕ್ಕೆ ವಿನಂತಿಸಿಕೊಂಡಿದ್ದಾರೆ. ಹೇಗಿದ್ದರೂ ಬಂಗಾಳಕ್ಕೊದಗಿದ ಈ ಗಂಡಾಂತರವನ್ನು ಕೂಡಲೇ ಪರಿಹರಿಸುವುದು ಅತ್ಯಗತ್ಯವಾಗಿದೆ.

ಚೀನ—ಭಾರತ

ಚೀನ ಮತ್ತು ಭಾರತಗಳ ಮಧ್ಯೆ ಶತಮಾನಗಳಿಂದೀಚೆಗೆ ಅನೇಕ ತರದ ಮಧುರ ಸಂಬಂಧವು ನಡೆದು ಬಂದಿದೆ. ಈ ಉಭಯ ರಾಷ್ಟ್ರಗಳ ಸಂಸ್ಕೃತಿಗಳಲ್ಲಿಯೂ ಹೆಚ್ಚಿನ ಮಟ್ಟಿಗೆ ಸಂಬಂಧವಿದೆ. ಭವಿಷ್ಯ ಏಶ್ಯಾದಲ್ಲಿ ಈ ಎರಡು ರಾಷ್ಟ್ರಗಳ ಅನ್ಯೋನ್ಯತೆಯು ಅತ್ಯಂತ ಗಣನೀಯವಿರುವುದು. ಅದರಲ್ಲೂ ಈಗ ಚೀನದ ಜೀವನ ರೇಖೆ ಭಾರತವನ್ನೇ ಹಾದುಹೋಗಿರುವುದರಿಂದ ಈ ಎರಡು ರಾಷ್ಟ್ರಗಳ ಬಾಂಧವ್ಯ ಅವಿಭಾಜ್ಯವಿದೆ. ಹೀಗಾಗಿ ಆಗಾಗ ಚೀನದಿಂದ ಭಾರತಕ್ಕೂ, ಭಾರತದಿಂದ ಚೀನಕ್ಕೂ ಶಿಷ್ಟಮಂಡಳಿಗಳು ಹೋಗುವ ಸಂಪ್ರದಾಯ ಕೆಲಕಾಲದಿಂದಲೂ ನಡೆದುಬಂದಿದೆ. ಸದ್ಯ ಚೀನದಿಂದ ವಿದ್ಯಾ ಮತ್ತು ಸಂಸ್ಕೃತಿ ಶಿಷ್ಟಮಂಡಳವೊಂದು ಡಾ| ವೈ ಎಚ್. ಕುಎಂಬವರ ಮುಂದಾಳುತನದಲ್ಲಿ ಭಾರತಕ್ಕೆ ಬಂದು ಅನೇಕ ಸ್ಥಳಗಳನ್ನು ಹಲವು ಮಹನೀಯರನ್ನು ಸಂದರ್ಶಿಸಿದೆ. ಈ ಶಿಷ್ಟಮಂಡಳದಿಂದ ಚೀನ ಭಾರತಗಳ ಬಾಂಧವ್ಯ ಇನ್ನಷ್ಟು ಸಮೀಪ ಸಮೀಪವಾಗಲಿ ಎಂದು ನಾವು ಹಾರೈಸುತ್ತೇವೆ.

ಸ್ವದೇಶ ಸಮಾಚಾರ

ಬಂಗಾಲದಲ್ಲಿ ಅನ್ನದ ಕೂಗು!

ಬಂಗಾಳದಲ್ಲಿ ಆಹಾರದ ಕೂಗು ಭೀಕರವಾಗಿದೆ. ತಾ. ೧೭ರಂದು ೫೦೦೦ ಮಂದಿ ಮಹಿಳೆಯುವರು ಎಸೆಂಬ್ಲಿ ಸಭಾಭವನಕ್ಕೆ ಹೋಗಿ 'ಹಸಿವೆಯಿಂದ ಕಂಗೆಟ್ಟಿದ್ದೇವೆ. ಆಹಾರ ಕೊಡಿ' ಎಂದು ಕೂಗಿಟ್ಟರು. ನಾಲ್ಕೈದು ದಿನಗಳಿಂದ ಆಹಾರವಿಲ್ಲದೆ ನರಳುತ್ತಿದ್ದ ಕೆಲವು ಸ್ತ್ರೀಯರು ಈ ಮೆರವಣಿಗೆ ಹೋಗುತ್ತಿದ್ದ ಸಮಯದಲ್ಲಿ ಮಾರ್ಗದಲ್ಲಿಯೇ ಬಿದ್ದು ಮೂರ್ಛೆಹೋಗಿದ್ದರು. ಈ ಆರ್ತ ಮಹಿಳೆಯವರ ತಂಡವನ್ನು ನೋಡಿ, ಎದೆ ಕರಗಿದ ಹಕ್ಕರು ಹೇಳಿದರು: 'ಇಂದಿನಿಂದ, ನಾನು ಒಂದೇ ಊಟಮಾಡುವೆನು' ಎಂದು. ಆದರೆ ಇದರಿಂದ ಆ ಬಡಜನರ ಹಸಿವು ಆರೀತೆ? ಕೂಡಲೇ ಅಲ್ಲಿ ಎಲ್ಲರೂ ಕೂಡಿ ೧೦೦೦ ಮಣ ಅಕ್ಕಿ ಸಂಗ್ರಹಿಸಿ ಹಂಚಿದರು. ಒಬ್ಬೊಬ್ಬರಿಗೆ ಒಂದೊಂದು ಹಿಡಿಯೂ ಸಿಕ್ಕಲಿಕ್ಕಿಲ್ಲ! ಮಹಿಳೆಯರು ಮತ್ತೆ ಚೆದರಿದರು. ಹೊರಗೆ ಪೋಲೀಸು ದಳ ನಿಂತಿತ್ತು! ಗಲಭೆಯಾದರೆ ಅವರನ್ನು ಸೆರೆಮನೆಗೆ ಸೇರಿಸಲೆಂದು! ಹೀಗೆಂದು 'ಪೀಪಲ್ಸ್ ವಾರ್' ಪತ್ರಿಕೆ ಬರೆದಿದೆ.

ಅಮೆರಿ ಭಾಷಣ ಕೇಳಿದ್ದು ೧೪ ಮಂದಿ!

ಭಾರತದ ವಿಚಾರ ಕಳೆದವಾರ ಅಮೆರಿ ಪಾರ್ಲಿಮೆಂಟಿನಲ್ಲಿ ಬಹಳ ಉದ್ದಾಮ ಭಾಷಣವಿತ್ತರಷ್ಟೆ? ಅದರೆ ಅವರ ಉದ್ದಾಮ ಭಾಷವನ್ನು ಕೇಳಿದ್ದು ಕೇವಲ ೧೪ ಮಂದಿ! ಅಮೆರಿ ಭಾಷಣ ಪ್ರಾರಂಭವಾಗುವ ಮೊದಲು ೨೫೦ ಮಂದಿ ಸದಸ್ಯರಿದ್ದರು. ಅಮೆರಿ ಭಾಷಣಮಾಡಲು ಎದ್ದಾಗ ಕೇವಲ ೫೦ ಮಂದಿ ಮಾತ್ರ ಉಳಿದರು. ಅಮೆರಿ ಭಾಷಣ ನಡೆಯುತ್ತಿದ್ದಾಗ ಹಾಜರಿದ್ದವರು ಕೇವಲ ೧೪ ಮಂದಿ ಮಾತ್ರ! ಬ್ರಿಟನಿನಲ್ಲಿಯೇ ಅಮೆರಿಯವರ ಮಾತಿಗೆ ಇಷ್ಟು ಬೆಲೆಯಾದರೆ ಭಾರತದಲ್ಲಿ 'ಇನ್ನೆಷ್ಟು ಬೆಲೆ ಬಂದೀತು?

ಸಿಲೋನಿಗೆ ಹಿಂದೀ ಕೂಲಿಗಾರರನ್ನು

ಕಳುಹಿಸಲಾಗುವುದಿಲ್ಲವೆಂದು ಹಿಂದುಸ್ತಾನ ಸರಕಾರದವರೀಗ ಹೇಳಿದ್ದಾರೆ. ಸಿಲೋನ್ ಸರಕಾರವು ೨೦೦೦೦ ಹಿಂದೀ ಕೂಲಿಗಾರರನ್ನು ಕೇಳಿತ್ತು.

ಸರೋಜಿನಿ ದೇವಿ

ಹೈದರಾಬಾದಿಗೆ ತಾ. ೨ರಂದು ತಮ್ಮ ಮಗಳೊಂದಿಗೆ ಪ್ರಯಾಣ ಬೆಳೆಸಿರುವರು. ಸ್ಟೇಶನಿಗೆ ಅವರನ್ನು ಶುಶ್ರೂಷಾವಾಹನದಲ್ಲಿ ತರಲಾಗಿತ್ತು. ಅವರು ಬಹಳ ನಿಶ್ಶಕ್ತರಿದ್ದಾರೆ.

ಬಡವರ ಬಟ್ಟೆ,

ಇಂಡಿಯದಲ್ಲಿರುವ ಬಟ್ಟೆ ಮಿಲ್ಲುಗಳಲ್ಲಿ ಇದುವರೆಗೆ ೧೦ ಲಕ್ಷ ಗಜ ಬಟ್ಟೆ ಬಡವರಿಗಾಗಿ ತಯಾರಾಗಿದೆ ಎಂದು ಕೇಂದ್ರ ಎಸೆಂಬ್ಲಿಯಲ್ಲಿ ತಿಳಿಸಲಾಗಿದೆ.

ಶ್ರೀಮತಿ ಕಸ್ತೂರಿಬಾ ಗಾಂಧಿ

ಯವರು ಬಹಳ ಅನಾರೋಗ್ಯದಿಂದಿರುವುದರಿಂದ ಅವರನ್ನು ಕಾಣಲು ತಮಗೆ ಸಮ್ಮತಿ ಕೊಡಬೇಕೆಂದು, ಅವರ ಮಗ ರಾಮದಾಸ ಗಾಂಧಿಯವರು ಸರಕಾರದೊಡನೆ ಕೇಳಿಕೊಂಡಿದ್ದಾರೆ.

ರಾಷ್ಟ್ರಪತಿ ಅಜಾದರ ಪತ್ನಿ

ಬೇಗಂ ಅಜಾದರು ಶ್ವಾಸಕೋಶದ ರೋಗದಿಂದ ತೀವ್ರ ಅಸೌಖ್ಯಗೊಂಡಿರುವರು; ಅವರ ಪ್ರಕೃತಿ ಚಿಂತಾಜನಕವಿದೆ.

ಜೈಲು ತುಂಬಿದವು!

ಬೆಳಗಾವಿಯ ಹಿಂಡಲಗಿ ಸೆಂಟ್ರಲ್ ಜೈಲು ಮತ್ತು ಕಿಲ್ಲೆಯಲ್ಲಿರುವ ತಾತ್ಕಾಲಿಕ ಜೈಲುಗಳೆರಡೂ ರಾಜಕೀಯ ಕೈದಿಗಳಿಂದ ತುಂಬಿ ಹೋಗಿ, ಸ್ಥಳ ಸಾಕಾಗದೆ ಇರುವುದರಿಂದ ಹಳೆಯ ಜೈಲನ್ನು ಪುನಃ ತೆರೆಯುವ ಯೋಚನೆಯಿದೆಯಾಗಿ ತಿಳಿದಿದೆ.

ಪಂಡಿತ ತಾರಾನಾಥರ

ಸ್ಮಾರಕವಾಗಿ ತಾ. ೭ರಂದು ಅವರ ಸಮಾಧಿಯ ಮೇಲೆ ಸ್ಮಾರಕ ಶಿಲೆಯನ್ನು ಇಡಿಸುವ ಸಮಾರಂಭ ತುಂಗಭದ್ರದ ಪ್ರೇಮಾಯತನ ಆಶ್ರಮದಲ್ಲಿ ಹೈದರಾಬಾದಿನ ಶ್ರೀ ಮಹಾಯೋಗಿರಾಜ ಜೆ. ಮಂಗಯ್ಯ ಇವರಿಂದ ನೆರವೇರಿಸಲ್ಪಡುವುದು.

'ಸ್ವಾತಂತ್ರ್ಯ ಪ್ರತಿಜ್ಞೆ ನಿಯಮ ವಿರುದ್ಧವಲ್ಲ'

ಹೀಗೆ ಸಾರಿ ವರ್ಧಾದ ಸೆಶನ್ ಜಜ್ಜರಾದ ಶ್ರೀ ಜೆ. ಆರ್. ಮುದೋಳ್ಕಾರರು, ಕರಾಚಿಯ ಕೋತಾರಾಮ್ ವಾಲೇಚಾ ಮತ್ತು ಮಂಗಳೂರಿನ ರಾಮಚಂದ್ರ ಭಟ್ಟ, (ಇವರಿಬ್ಬರೂ ವಾರ್ಧಾ ಗ್ರಾಮ ಸೇವಕ ವಿದ್ಯಾಲಯದ ವಿದ್ಯಾರ್ಥಿಗಳು) ಇವರನ್ನು ನಿರಪರಾಧಿಗಳೆಂದು ಬಿಟ್ಟುಬಿಟ್ಟರು. ಆ ಜಜ್ಜರು ಹೇಳುವುದೇನೆಂದರೆ: 'ನಾನಿಡೀ ಸ್ವಾತಂತ್ರ್ಯ ಪ್ರತಿಜ್ಞೆಯನ್ನೋದಿದೆನು, ಅದು ಕಾನೂನು ವಿರುದ್ಧವೆಂದು ನನಗೆ ತೋಚಿಯಲಿಲ್ಲ. ಇದುವರೆಗೆ ಪ್ರತಿವರ್ಷ ಜನವರಿ ಎರಡಕ್ಕೆ ಅಖಿಲ ಭಾರತದಲ್ಲಿ ಈ ಪ್ರತಿಜ್ಞೆ ಓದಲ್ಪಡುತ್ತಿತ್ತು. ಈ ವರೆಗೆ ಸರಕಾರವು ಆಕ್ಷೇಪವೆತ್ತಲಿಲ್ಲವೆಂದು, ಆ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಸರಕಾರದ ಧೋರಣವನ್ನು ಟೀಕಿಸಿದ ಭಾಗದ ವಿಷಯವಾಗಿ ಪ್ರಜೆಗಳಿಗೆ ಅಂಥಾ ಟೀಕೆ ಮಾಡಲು ಅಧಿಕಾರವಿರಬೇಕೆಂದು ಜಜ್ಜರು ತೀರ್ಮಾನಿಸಿದರು. ಭಾರತವು ಬ್ರಿಟನಿನಿಂದ ಬೇರಾಗಬೇಕೆನ್ನುವುದು ತಪ್ಪಲ್ಲವೆಂದೂ, ಆದರೆ ಅದರಿಂದ ಸಾರ್ವಜನಿಕ ಶಾಂತಿಗೆ ತೊಂದರೆ ಮಾತ್ರ ಆಗಕೂಡದೆಂದೂ ಅವರ ಅಭಿಪ್ರಾಯವಿದೆ.

ಉಪವಾಸ ಮುಗಿದ ಮಹಾತ್ಮರ ಪ್ರಕೃತಿ

ಸುಧಾರಿಸುತ್ತಿದೆ. ಏಳು ದಿನಗಳಲ್ಲಿ ಮಹಾತ್ಮರ ತೂಕ ೧೦೨ ರಾತಲು ವಿಸಾರಿತು. ಉಪವಾಸದ ಪ್ರಾರಂಭಕ್ಕೆ ಮಹಾತ್ಮರ ತೂಕ ೧೦೯ ರಾತಲು ಇತ್ತು. ಸಂಜೆ ಮುಂಜಾನೆ ಮಹಾತ್ಮರು ದೀರ್ಘ ಕಾಲದ ತನಕ ಭಗವತ್ ಧ್ಯಾನ ಮಾಡುತ್ತಾರೆ; ಈಗ ಜಗಲಿಯ ಮೇಲೆ ಅಡ್ಡಾಡುತ್ತಾರೆ. ಹೊರಪಾರ್ಶ್ವದಲ್ಲಿ ಇನ್ನೂ ಅಡ್ಡಾಡಲು ಪ್ರಾರಂಭವಾಗಲಿಲ್ಲ. ಸರಕಾರದ ಅಪ್ಪಣೆಯ ಮೇರೆಗೆ ಮುಂಬಯಿಯ ಡಾ। ಗಜ್ಜರರು ಮೊನ್ನೆ ಮಹಾತ್ಮರ ಪ್ರಕೃತಿಯ ಪರೀಕ್ಷೆ ಮಾಡಿದರು. ಮಹಾತ್ಮರನ್ನು ಕಾಣಲು ಡಾ. ರಾಯ್‌ಯವರಿಗೆ ಅಪ್ಪಣೆ ಕೊಡಲಿಲ್ಲ! ಡಾ। ಗಜ್ಜರರು ಮಹಾತ್ಮರ ಪ್ರಕೃತಿವಿಷಯ ಪುಣೆಗೆ ಬಂದು ಪರ್ಣಕುಟಿಯಲ್ಲಿ ವಾಸವಾಗಿರುವ ಡಾ। ರೊಯರಿಗೆ ತಿಳಿಸಿದ್ದಾರೆ. ಮಹಾತ್ಮರು ಪ್ರತಿನಿತ್ಯ ಅಭ್ಯಂಗಸ್ನಾನ ಮಾಡುತ್ತಾರೆ. ಮಧ್ಯಾಹ್ನ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ.

ಪ್ರಜಾ ಸ್ವಾತಂತ್ರ್ಯ ಗಂಡಾಂತರದಲ್ಲಿದೆ!

ಎಂಬುದಾಗಿ ಜಿಲ್ಲಾ ಮೆಜಿಸ್ಟ್ರೇಟರು ಪಕು ರಾಜಾಪದ ಹರೀಶಚಂದ್ರ ಎಂಬ ವಿದ್ಯಾರ್ಥಿಯ ವಿಷಯ ತೆಗೆದುಕೊಂಡು ಕಾರ್ಯಕ್ರಮದ ಕುರಿತು ಅಲ್ಲಾಬಾದ್ ಹೈಕೋರ್ಟಿನಲ್ಲಿ ತಂದ ನ್ಯಾಜ್ಯದ ತೀರ್ಪು ಕೊಡುತ್ತಾ ಮುಖ್ಯ ನ್ಯಾಯಾಧೀಶ ಹೇಬಿಯಸ್ ಕಾರ್ಪಸ್ ತೀರ್ಮಾನ ಬರೆದಿರುವರು. ಯಾವ ಕಾಗದ ಪತ್ರ ರುಜುವಾತಿಗಳೂ ಇಲ್ಲದೆ ಹೀಗೆ ಜಿಲ್ಲಾ ಮೆಜಿಸ್ಟ್ರೇಟರು ಪ್ರಜೆಗಳ ಮೇಲೆ ಸವಾರಿ ಮಾಡಿದರೆ, ಸಾರ್ವಭೌಮರ ಪ್ರಜೆಗಳ ಸ್ವಾತಂತ್ರ್ಯವು ಗಂಡಾಂತರಕ್ಕೀಡಾಗುವುದೆಂದು ಅವರು ಅಭಿಪ್ರಾಯಪಡುತ್ತಾರೆ.

ನೋಟು ಸುಡಿಸಿದರು!

ಕಳೆದ ಆಗಸ್ಟ್ ತಿಂಗಳಲ್ಲಿ ಮೆಜಿಸ್ಟ್ರೇಟನೊಬ್ಬನು ೪,೪೪,೦೦೦ ರೂಪಾಯಿ ಬೆಲೆ ಬರುವ ಸರಕಾರೀ ಖಜಾನೆಯಲ್ಲಿದ್ದ ನೋಟುಗಳನ್ನು ಸುಡಿಸಿದರೆಂಬ ಲಕ್ನೋದ ಹಿಂದುಸ್ತಾನ್ ಸ್ಟೇಂಡಾರ್ಡ್ ಪತ್ರಿಕೆಯ ಬಾತ್ಮೀದಾರನು ಬರೆಯುತ್ತಾನೆ! ಮೆಜಿಸ್ಟ್ರೇಟನು ಹೀಗೆ ನೋಟುಗಳನ್ನು ಸುಡಿಸಿದ್ದು ಸರಕಾರೀ ಅಪ್ಪಣೆಯಂತೆಯೇ ಇರಬೇಕಲ್ಲವೆ? ಹೇಗಿದ್ದರೂ ಈಗ ರಿಜರ್ವ್ ಬೇಂಕ್ ಸರಕಾರದೊಡನೆ ಆ ನೋಟುಗಳನ್ನು ತಮಗೆ ಭರ್ತಿಮಾಡಿ ಕೊಡಬೇಕೆಂದು ಕೇಳಿದೆ!

ಜಿಲ್ಲಾ ಸಮಾಚಾರಗಳು

ಮಂಗಳೂರು

ಕೆನರಾ ಚೇಂಬರ್ ಆಫ್ ಕಾಮರ್ಸ್

ನವರ ಶಿಷ್ಟಮಂಡಳವೊಂದು ದ. ಕ. ಜಿಲ್ಲೆಯಲ್ಲಿ ಕಲೆಕ್ಟರರು ಅಕ್ಕಿ ಕ್ರಯ ನಿರ್ಬಂಧ ಮಾಡಿದ ವಿಷಯ ವ್ಯಾಪಾರಸ್ಥರಿಗಾದ ನಷ್ಟದ ಕುರಿತು ದೂರಿಡಲು ಮದ್ರಾಸಿಗೆ ತೆರಳಿದೆ. ಗವರ್ನರರ ಎಡ್ವೈಸರ್ ಎಚ್. ಯಂ. ವುಡ್ಡರನ್ನು ತಾ. ೧೧ರಂದು ಇವರು ಸಂದರ್ಶಿಸುವರು. ಈ ಶಿಷ್ಟಮಂಡಳದಲ್ಲಿ ಶ್ರೀಗಳಾದ ಕೊಂಚಾಡಿ ಕೇಶವ ಶೆಣೈ, ಎಚ್. ದಾಮೋದರ ಕಾಮತ್, ಎಸ್. ವೆಂಕಟ್ರಾಯ ಪೈ ಮತ್ತು ಎನ್. ಎಂ. ಪಾಂಡುರಂಗಪ್ಪೈ ಇವರೂ ಮದ್ರಾಸಿನಿಂದ ಇಬ್ಬರೂ ಇರುವರು. ಈ ಶಿಷ್ಟಮಂಡಳದ ವಿಷಯವನ್ನು ತಾ. ೫ರಂದು ಸಂಜೆ ಜಿಲ್ಲಾ ಪತ್ರಿಕೋದ್ಯಮಿಗಳನ್ನು ಚೇಂಬರ್ ಆಫ್ ಕಾಮರ್ಸಿನಲ್ಲಿ ಸಂಬಂಧಪಟ್ಟವರು ಕರೆಸಿ ವಿವರಿಸಿದರು. ಜಿಲ್ಲೆಯಲ್ಲಿ ಅಕ್ಕಿಯ ಕ್ರಯವನ್ನು ವ್ಯಾಪಾರಸ್ಥರಿಗೆ ಸರಕಾರದವರು ಮುಂಚಿತವಾಗಿ ಗೊತ್ತುಪಡಿಸದೆ ಒಮ್ಮೆಯೇ ನಿರ್ಬಂಧಿಸಿದ್ದರಿಂದ ವ್ಯಾಪಾರಸ್ಥರನ್ನು ಹೆಚ್ಚಿನ ನಷ್ಟಕಷ್ಟಗಳಿಗೆ ಗುರಿಪಡಿಸಿದಂತಾಗಿದೆಯೆಂದೂ ಈ ವಿಷಯ ಕೇಂದ್ರ ಸರಕಾರವಾಗಲಿ ಪ್ರಾಂತಿಕ ಸರಕಾರವಾಗಲಿ ಈ ಮೊದಲು ಎಚ್ಚರಿಸಿಲ್ಲವೆಂದೂ, ಅಕ್ಕಿ ಕ್ರಯವು ಕಡಿಮೆ ನಿಂತಲ್ಲಿ, ಉತ್ಪತ್ತಿಗಾರರಾದರೂ ಹೆಚ್ಚಿನ ಅಕ್ಕಿಯನ್ನು ಮಾರಾಟಕ್ಕೆ ತರಲು ಉತ್ಸಾಹಿತರಾಗುವುದಿಲ್ಲವೆಂದೂ, ಸರಕಾರದವರೇ ಕಳೆದ ಮಾರ್ಚಿ ೧೪ರಂದು ಅಕ್ಕಿ ಮುಡಿ ಒಂದರ ರೂ. ೧೦-೧೪-೩ ಕ್ರಯದಲ್ಲಿ ೭೩೬ ಮುಡಿಗಳನ್ನೂ ರೂ ೧೧-೬-೦ ಕ್ರಯದಲ್ಲಿ ೪೭೩ ಮುಡಿಗಳನ್ನೂ ಪಡೆಕೊಂಡಿದ್ದು ಹೀಗೆ ವ್ಯಾಪಾರ ಸಾಗುತ್ತಿರುವಾಗ ಎಚ್ಚರಿಕೆ ಕೊಡದೆ ನಿರ್ಬಂಧ ಹಾಕಿದ್ದರಿಂದ ವ್ಯಾಪಾರಸ್ಥರಿಗಾದ ನೂರಾರು ಸಾವಿರ ರೂಪಾಯಿಗಳ ನಷ್ಟ ಭರ್ತಿಯಾಗುವಂತೆ ಸರಕಾರವು ಏರ್ಪಡಿಸಬೇಕೆಂದೂ, ಅಕ್ಕಿ ಕ್ರಯ ಹೆಚ್ಚಲು ಅಕ್ಕಿ ವ್ಯಾಪಾರಿಗಳು ಕಾರಣರಲ್ಲವೆಂದೂ, ಕಳೆದ ಯುದ್ಧದಲ್ಲಿ ಜಪಾನು ಮಿತ್ರಪಕ್ಷವಿದ್ದಾಗ, ಬರ್ಮ ಮೊದಲಾದ ಕಡೆಗಳಿಂದ ಅಕ್ಕಿ ಬರುತ್ತಿದ್ದಾಗಲೂ ಅಕ್ಕಿ ಮುಡಿ ಒಂದರ ರೂ. ೧೬-೮-೦ ಆಗಿದ್ದು ಈ ಪರಿಸ್ಥಿತಿಯಲ್ಲಿ ರೂ. ೧೨-೦-೦ರ ವರೆಗೆ ಅಕ್ಕಿ ಕ್ರಯ ಏರಿದ್ದು, ಈಗಿನ ಸರಕಾರದ ಅಧಿಕ ನೋಟು ಚಲಾವಣೆ ವಿಷಯವನ್ನೆಲ್ಲಾ ಆಲೋಚಿಸಿದರೆ ವಿಶೇಷವಾಗಿಲ್ಲವೆಂದೂ, ನಿಶ್ಚಿತ ಸಂಬಳದವರಿಗೆ ಹಾಗೂ ಕೂಲಿಗಾರರಿಗೆ ಅಕ್ಕಿಗೆ ಕ್ರಯ ಹೆಚ್ಚಾಗಿ ತೊಂದರೆಯುಂಟಾಗುವುದೆಂದಾದರೆ ಸರಕಾರದವರು ಅವರಿಗೆ ಹೆಚ್ಚು ಸಂಬಳ ಸಿಗುವಂತೆ ಮಾಡುವುದಾಗಲಿ, ಅಥವಾ ಅವರಿಗೆ ಕಡಿಮೆ ಕ್ರಯದಲ್ಲಿ ಅಕ್ಕಿ ದೊರಕುವಂತೆ ಮಾಡುವುದಾಗಲಿ ಏರ್ಪಡಿಸದೆ ವ್ಯಾಪಾರಸ್ಥರನ್ನು ನಷ್ಟಗೊಳಿಸುವುದು ಸರಿಯಲ್ಲವೆಂದೂ ಮೊದಲಾಗಿ ಆ ಶಿಷ್ಟಮಂಡಳದ ಮನವಿಯಲ್ಲಿ ವಿವರಿಸಲಾಗಿದೆ.

ಜಿಲ್ಲೆಯ ಜಮೀನ್ದಾರರ ಕಡೆಯಿಂದಲೂ ಸರಕಾರಕ್ಕೆ ಈ ಕುರಿತು ಒಂದು ಶಿಷ್ಟಮಂಡಳ ಹೋಗಿರುವುದಾಗಿ ತಿಳಿದುಬರುತ್ತದೆ.

ಜನರ ಆಹಾರ ಕಮಿಟಿ

ಯೊಂದು ಮಂಗಳೂರು ಕಮ್ಯುನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ರಚಿತವಾಗಿ, ಸರಕಾರ ಮತ್ತು ಜನರ ಮಧ್ಯೆ ಯೋಗ್ಯ ಸಂಬಂಧ ಕಲ್ಪಿಸುವ ಬಗ್ಗೆ, ಆಹಾರ ಸರಿಯಾಗಿ ಹಂಚಿ ಸಿಗುವ ಬಗ್ಗೆ ರಚಿತವಾಗಿದೆ. ಶ್ರೀ ಮೂಸಬ್ಬ ಇವರು ಅಧ್ಯಕ್ಷರಾಗಿ, ಶ್ರೀ ಶಾಂತಾರಾಮ ಪೈಗಳು ಕಾರ್ಯದರ್ಶಿಗಳಾಗಿ, ಶ್ರೀಗಳಾದ ರಂ. ರಾ. ತಲ್ಚೇರಿಕರ್, ಮೊನಪ್ಪ ಸುವರ್ಣ, ಶ್ರೀಮತಿ ಲೀಲಾಬಾಯಿ ಏಕಂಬರರಾವ್ ಮೊದಲಾದವರು ಸದಸ್ಯರಾಗಿದ್ದಾರೆ. ಇದರ ಶಿಷ್ಟಮಂಡಳವೊಂದು ತಾ. ೭ರಂದು ಕಲೆಕ್ಟರರಲ್ಲಿ ಹೋಗಿದೆ.

ಮೂರನೇ ದ. ಕ. ಜಿಲ್ಲಾ ಸಹಕಾರಿ ಪರಿಷತ್ತು

ಬರುವ ಮೇ ತಿಂಗಳಲ್ಲಿ ಪುತ್ತೂರಲ್ಲಿ ಜರಗಲಿದೆ. ಇದರ ಸಂಬಂಧ ಕಳೆದ ಶುಕ್ರವಾರ ಶ್ರೀ ಮಂಗೇಶರಾಯರ ಅಧ್ಯಕ್ಷತೆಯಿಂದ ಒಂದು ಸಭೆಯು ಸೇರಿ ಸ್ವಾಗತ ಸಮಿತಿಯೊಂದು ರಚಿತವಾಗಿದೆ. ಶ್ರೀ ಎಂ. ಶಿವರಾವ್ (ಅಧ್ಯಕ್ಷ) ಶ್ರೀ ಬಿ. ರಾಮಚಂದ್ರರಾವ್ (ಉಪಾಧ್ಯಕ್ಷ) ಶ್ರೀಗಳಾದ ಬಿ. ಪ್ರಭಾಕರ ರಾವ್ ಮತ್ತು ಸಿ. ಎಸ್. ಶಾಸ್ತ್ರಿ (ಕಾರ್ಯದರ್ಶಿಗಳು) ಮೇ ೧೩ ಮತ್ತು ೧೪ರಲ್ಲು ಪರಿಷತ್ತು ಜರಗುವುದಾಗಿ ನಿರ್ಣಯಿಸಿದೆ.

ವಿಕ್ಟೋರಿಯಾ ಜುಬಿಲಿ ಸ್ಕಾಲರ್‌ಶಿಪ್

ಸಂಬಂಧ ಸ್ಪರ್ಧಾ ಪರೀಕ್ಷೆಯು ಜರಗಲಿರುವುದರಿಂದ ಉಮೇದ್ವಾರರು ೧೯೪೩ ಜೂನ್ ೧೫ರೊಳಗೆ ಸರಿಯಾದ ಫೋರ್ಮಿನಲ್ಲಿ ಅರ್ಜಿ ಬರೆದು ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟಿಗೆ ಕಳುಹಿಸತಕ್ಕದ್ದು. ಇದಕ್ಕೆ ಸಂಬಂಧಪಟ್ಟ ವಿವರಗಳು ಜಿಲ್ಲಾ ಕೋರ್ಟಿನಲ್ಲಿ ಸಿಗುವುದು. ಹಿಂದುಸ್ಥಾನದಲ್ಲಿರುವ ಸರಕಾರೀ ಸಂಸ್ಥೆಯಲ್ಲಿ ಎಂಜಿನಿಯರಿಂಗ್, ಫಾರೆಸ್ಟ್ರಿ, ಎಗ್ರಿಕಲ್ಚರ್, ಮೈನಿಂಗ್ ಮತ್ತು ಮೆಟಲರ್ಜಿ ಕಲಿಯುವ ವಿದ್ಯಾರ್ಥಿಯಾಗಿರಬೇಕು. ಈ ವಿದ್ಯಾರ್ಥಿವೇತನವು ಮಹಮ್ಮಡನ್ ಜಾತಿಯ, ಕ್ರಿಶ್ಚಿಯನ್ ಜಾತಿಯ, ಶೆಡ್ಯೂಲ್ಡ್ ಜಾತಿಯ ಅದಿಲ್ಲದಿದ್ದರೆ ಇತರ ಹಿಂದೂ ವರ್ಗದ ಯಾವುದೇ ವಿದ್ಯಾರ್ಥಿಗಳಿಗೆ ಕೊಡಲ್ಪಡುವುದು. ಸ್ಪರ್ಧಾ ಪರೀಕ್ಷೆಯು ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ '೪೩ನೇ ಜೂನ್ ೩೦ರಂದು ಜರಗುವುದು. ಈ ವಿದ್ಯಾರ್ಥಿವೇತನವು ೫ ವರ್ಷಕ್ಕಿಂತ ಮಿಕ್ಕಿ ಸಿಗಲಾರದು; ವೇತನದ ಏನೇಜು ತಿಂಗಳ ೧೫ರೂ.ಗಿಂತ ಕಡಿಮೆಯಿರುವುದಿಲ್ಲ. ಎಸ್. ಎಸ್. ಎಲ್. ಸಿ. ಪಾಸಾದ ೧೬ರಿಂದ ೨೧ ವರ್ಷದ ಒಳಗಿನ ವಿದ್ಯಾರ್ಥಿಗಳು ಉಮೇದ್ವಾರರಾಗಬಹುದು. ಗ್ರೇಜುವೇಟ್ ಆದವರು ೨೪ ವರ್ಷಕ್ಕಿಂತ ಮಿಕ್ಕದವರಲ್ಲವಾದರೆ ಉಮೇದ್ವಾರರಾಗಬಹುದು. ಉಮೇದ್ವಾರರು ನಡತೆ, ಆರೋಗ್ಯ, ಪ್ರಾಯದ ವಿಷಯ ಸರ್ಟಿಫಿಕೇಟು ಹಾಜರುಪಡಿಸಬೇಕು.

ತೋಟಗಾರಿಕೆ ಮತ್ತು ಫಲವಸ್ತು ಪ್ರದರ್ಶನ

ಮಂಗಳೂರಿನ ಎರಡನೇ ತೋಟಗಾರಿಕೆ ಸ್ಪರ್ಧೆಯಲ್ಲಿ ಮುಂದೆ ತೋರುವವರಿಗೆ ಬಹುಮಾನ ಕೊಡುವುದೆಂದು, ಕಳೆದ ಫೆಬ್ರವರಿಯಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯು ನಿರ್ಧರಿಸಲಾಗಿದೆ. ಖಾಸಗಿ ತೋಟಗಳ ಸ್ಪರ್ಧೆಯಲ್ಲಿ ಕ್ಲಾಸ್ ಎ. ಪ್ರಥಮ ಬಹುಮಾನ ಶ್ರೀಮತಿ ಶಾಂಭವಿ ಆರ್. ಪ್ರೊಂಜ್; ಕ್ಲಾಸ್ ಬಿ. ಪ್ರಥಮ ಬಹುಮಾನ ಶ್ರೀಮತಿ ಸಿತಮ್ಸ್; ಎರಡನೇ ಬಹುಮಾನ ಶ್ರೀ. ಡಿ. ನರಸಿಂಹ ಪೈ; ಕ್ಲಾಸ್ ಸಿ. ಮೊದಲನೇ ಬಹುಮಾನ ಮಿಸೆಸ್ ಚಿಡ್ಡಿಕ್; ಸಂಸ್ಥೆಗಳಲ್ಲಿ ಪ್ರಥಮ ಬಹುಮಾನ ಗವರ್ನ್‌ಮೆಂಟ್ ಕಾಲೇಜು.

ಇದೇ ಏಪ್ರಿಲ್ ತಾ. ೨೬ ಮತ್ತು ೨೭ರಲ್ಲಿ ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸಂಘದ ಆಶ್ರಯದಲ್ಲಿ ಪಶ್ಚಿಮ ಕರಾವಳಿಯ ಫಲ ಮತ್ತು ತರಕಾರಿಗಳ ಪ್ರಥಮ ಪ್ರದರ್ಶನವು ನಡೆಯಲಿದೆ. ಬಹುಮಾನವಾಗಿ ಸುಮಾರು ೪೦೦ ರೂಪಾಯಿಗಳನ್ನು ಹಂಚಲಾಗುವುದು.

ಹೊಸ ಜಿಲ್ಲಾ ಜಡ್ಜರು

ನಮ್ಮ ಜಿಲ್ಲಾ ಜಡ್ಜರಾದ ಮಿ। ಸಿ. ಸಿ. ಅಲ್ಲಿಸ್ಟ್ರಿ ಸಾಹೇಬರವರಿಗೆ ಪೂರ್ವ ಗೋದಾವರಿಗೆ ವರ್ಗವಾಗಿ, ಅವರ ಸ್ಥಾನಕ್ಕೆ ಇಲ್ಲಿಗೆ ರಾವ್ ಸಾಹೇಬ್ ಸಿ. ಸತ್ಯನಾರಾಯಣ ಚೌಧುರಿ ಅವರು ಬರುವರೆಂದು ತಿಳಿದುಬಂದಿದೆ.

ಪೋಲೀಸ್ ಇಲಾಖೆ

ಯವರ ಉಪಯೋಗಕ್ಕಾಗಿ ಮಂಗಳೂರು ಹೆಡ್ ಆಫೀಸಿನ ಬಳಿ ಒಂದು ಆಹಾರ ಸಾಮಗ್ರಿಗಳ ಸಹಕಾರಿ ಸ್ಟೋರ್ಸ್ ತೆರೆಯಲ್ಪಟ್ಟಿದೆ.

ಇಡ್ಯ ವಿದ್ಯಾದಾಯಿನಿ ಶಾಲಾ

ಇದರ ಉಪಯೋಗಾರ್ಥ ತಾ. ೨೫ರಂದು ಒಂದು ಸಂಗೀತ ನಾಟಕ ಜರಗಲಿದೆ.

ಮುನಿಸಿಪಲ್ ಸಭೆ

ತಾ. ೫ರಂದು ಸಂಜೆ ಸ್ಥಳೀಯ ಮುನಿಸಿಪಲ್ ಕಾರ್ಯಾಲಯದಲ್ಲಿ ಜರುಗಿದ ಅದರ ಸಭೆಯಲ್ಲಿ ಸ್ಥಳೀಯ ಸ್ವರಾಜ್ಯ, ಭಾರತ ಸೇವೆಗೆ ತನ್ನನ್ನು ಸಲ್ಲಿಸಿದ ಶ್ರೀ. ಸತ್ಯಮೂರ್ತಿಗಳ ನಿಧನಕ್ಕಾಗಿ ಸಂತಾಪಸೂಚಿಸುವ ಒಂದು ಠರಾವು ಚೇರ್‌ಮೇನರಿಂದ ಸೂಚಿಸಲ್ಪಟ್ಟು ಸರ್ವಾನುಮತದೊಂದಿಗೆ ಮಂಜೂರಾಗಿ ೨ ನಿಮಿಷಗಳ ಕಾಲ ಸಭಾಕಾರ್ಯಗಳು ನಿಲ್ಲಿಸಲ್ಪಟ್ಟಿದ್ದುವು.

ಜಿಲ್ಲಾ ಎಯಿಡೆಡ್ ಎಲಿಮೆಂಟರಿ ಶಾಲೆಗಳ ಫೆಡರೇಶನ್

ತಾ. ೪ರಲ್ಲಿ ಕೆನರಾ ಹೈಸ್ಕೂಲಲ್ಲಿ ಶ್ರೀ. ಎ. ಬಿ. ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಗೋಪಾಲ ರಾಯರು ಈ ಫೆಡರೇಶನಿನ ಉದ್ದೇಶಗಳೇನೆಂದು ವಿವರಿಸಿದರು. ಡಾ. ಎಂ. ಕೇಶವ ಪೈ, ಡಾ. ಪಿ. ಎನ್. ಭಟ್, ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ (ಕೇಂದ್ರ) ಶ್ರೀ. ಎಸ್. ನಾಗರಾಜಯ್ಯ, ಶ್ರೀ. ಎಚ್. ದಾಮೋದರ ರಾವ್, ಶ್ರೀ. ಎಂ. ಎಸ್. ಏಕಾಂಬರರಾವ್ ಇವರುಗಳೂ ಮಾತಾಡಿದರು. ಫೆಡರೇಶನಿನ ನಿಯಮಾವಳಿಗಳು ಸ್ವೀಕೃತವಾಗಿ ಒಂದು ಕಾರ್ಯಕಾರಿ ಸಮಿತಿಯ ರಚನೆಯೂ ಆಯಿತು.

ಉಡುಪಿ

ಅಕ್ಕಿ ಬೆಲೆ ನಿಯಂತ್ರಣ ಸಭೆ —

ತಾ. ೬ರಂದು ಕೋರ್ಪರೇಶನ್ ಕಟ್ಟಡದಲ್ಲಿ ಕೂಡಿದ ಸಾಹುಕಾರರ ಮತ್ತು ರೈತರ ಸಭೆಯ ಅಧ್ಯಕ್ಷಸ್ಥಾನ ವಹಿಸಿದ ಜಿಲ್ಲಾ ಕಲೆಕ್ಟರ್ ಮಿ। ಎಮ್. ಕರಮತುಲ್ಲಾ, ಐ. ಸಿ. ಎಸ್. ಅವರು ಜಿಲ್ಲೆಯಲ್ಲಿಯ ಭತ್ತ ಮತ್ತು ಅಕ್ಕಿಯ ಪರಿಸ್ಥಿತಿ ಕುರಿತು ಭಾಷಣ ಮಾಡಿದರು. ಬೆಳ್ತಿಗೆ ಅಕ್ಕಿಯ ದರವನ್ನು ಪ್ರಕೃತ ನಿಶ್ಚಯಿಸಿಲ್ಲವಾದರೂ ಸದ್ಯನೇ ಅದನ್ನೂ ಸಹ ಹತೋಟಿಗೆ ತರುವೆನೆಂದು ಜಿಲ್ಲಾ ಕಲೆಕ್ಟರರು ಆಶ್ವಾಸನೆಯಿತ್ತರು.

ಮುನಿಸಿಪಲ್ ಕೌನ್ಸಿಲ್ ಸಭೆ

ತಾ. ೩ರಲ್ಲಿ ಸಂಜೆ ನಗರ ಸಭಾಧ್ಯಕ್ಷ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜನವರಿ ತಿಂಗಳಿಂದಿಯಿಂದ ಯುದ್ಧಾಂತ್ಯದ ವರೆಗೆ ಸ್ಕೇಲ್ ಎಲೋವೆನ್ಸಿಗೆ ಅರ್ಹತೆಯುಳ್ಳವರಿಗೆ ತಿಂಗಳೊಂದರ ನಾಲ್ಕು ರೂಪಾಯಿಯಂತೆ ಎಲೊವೆನ್ಸ್ ಕೊಡಬೇಕಾಗಿ ಕಮಿಶನರು ಕೊಟ್ಟ ಸೂಚನೆಯು ತಿರಸ್ಕರಿಸಲ್ಪಟ್ಟಿತು. ಶಿಕ್ಷಣ ಸಮಿತಿಯ ಸದಸ್ಯತ್ವಕ್ಕೆ ಶ್ರೀ। ಎಮ್. ರಾಘವೇಂದ್ರ ಭಟ್ಟರನ್ನು ಆರಿಸಲಾಯಿತು. ಬಿಲ್ಡಿಂಗ್ ರೂಲ್ಸುಗಳಿಗೆ ವಿರುದ್ಧವಾಗಿ ತಿಳಿದೂ ತಿಳಿಯದೆಯೂ ಕಟ್ಟಡಗಳನ್ನು ಕಟ್ಟಿ ತದನಂತರ ಸ್ಥಳಾಕ್ರಮಣದ ತಪ್ಪಿಗೆ ಬಲಿಕೊಡಕೂಡದಾಗಿ ಬಂದ ಅರ್ಜಿಗಳು ಸ್ವೀಕರಿಸಲ್ಪಟ್ಟುವು.

ಪುತ್ತೂರು

'ಕ್ವಿಟ್ ಇಂಡಿಯಾ'

ಪುಸ್ತಕವನ್ನು ವಶದಲ್ಲಿಟ್ಟುಕೊಂಡುದಕ್ಕಾಗಿ ಹೊಸದುರ್ಗದಲ್ಲಿ ಬಂಧಿಸಲ್ಪಟ್ಟು, ಬಳಿಕ ಜಾಮೀನಿನ ಮೇಲೆ ಬಿಡಲ್ಪಟ್ಟ ಶ್ರೀ ಪಿ. ದಯಾನಂದ ನಾಯಕರ ವಿಚಾರಣೆಯು ಪುತ್ತೂರಿನಲ್ಲಿ ಜರಗಿ ಅವರಿಗೆ ೩೦೦ ರೂ. ಗಳ ದಂಡ ವಿಧಿಸಲಾಯಿತು.

ಕಾಸರಗೋಡು

ಹಿಂದೆಗೆದರು!

ಹೊಸದುರ್ಗಕ್ಕೆ ಸಮೀಪದಲ್ಲಿ ಬಳ್ಳ ಗ್ರಾಮವನ್ನು ಬಿಟ್ಟು ಹೊರಹೋಗಬಾರದೆಂದು ಹಿಂದಿನ ಸತ್ಯಾಗ್ರಹಿ ಶ್ರೀ। ಎ. ಸಿ. ಕಣ್ಣನ್ ನಾಯರ ಮೇಲೆ ಹೊರಿಸಲಾಗಿದ್ದ ನಿರ್ಬಂಧವು ಹಿಂದೆಗೆಯಲ್ಪಟ್ಟಿದೆ.

ಸಂತಾಪ ಪ್ರದರ್ಶನ

ಕಯ್ಯೂರು ಮೊಕದ್ದಮೆಯಲ್ಲಿ ಮರಣ ಶಿಕ್ಷೆಗೆ ಗುರಿಯಾಗಿದ್ದ ಶ್ರೀಯುತರು ಮಡತಿಲ್ ಅಪ್ಪು, ಚಿರುಕಂಡನ್, ಕುಂಞಾಂಬು ನಾಯರ್ ಮತ್ತು ಅಬೂಬಕರ್ ಇವರು ತಾ. ೩೦ರಂದು ಪ್ರಾತಃಕಾಲ ೬-೧೫ ಘಂಟೆಗೆ ಕಣ್ಣನ್ನೂರಿನ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲ್ಪಟ್ಟರೆಂಬೀ ವಾರ್ತೆ ತಲುಪಿದಾಗ ಕಪ್ಪು ಸಂಕೇತ ಧರಿಸಿ ಮಂಗಳೂರಲ್ಲಿ ಹಲವರು ಸಂತಾಪ ಪ್ರದರ್ಶನ ಮಾಡಿದರು. ಅರಸೀ ಚಾರ್ಜರಲ್ಲಿ ಪ್ರಾಣ ಭಿಕ್ಷೆಯನ್ನು ಬೇಡಲು ಸಿದ್ಧತೆಯಾಗುತ್ತಿರುವಾಗಲೇ ಈ ಮರಣ ಶಿಕ್ಷೆ ವಿಧಿಸಲ್ಪಟ್ಟಿತು.

ಅಕ್ಕಿ ಸ್ಟೋರು

ನಿಯಂತ್ರಿತ ಬೆಲೆಯಲ್ಲಿ ಅಕ್ಕಿಯನ್ನು ಮಾರುವುದಕ್ಕಾಗಿ ಜಿಲ್ಲಾ ಸಹಕಾರ ಸಂಘದವರು ಕಂಕನಾಡಿ, ಹೊಗೆ ಬಜಾರ್‌ಗಳಲ್ಲಿ ಎರಡು ಅಕ್ಕಿಯ ಸ್ಟೋರುಗಳನ್ನು ತೆರೆದಿರುವರು.

ದ. ಕ. ಜಿಲ್ಲಾ ಗಾಣಿಗರ ಯಾನೆ ಸಫಲ್ಯರ ಸಮಾಜ ಸುಧಾರಕ ಸಂಘ ಮಂಜೇಶ್ವರ

ದ. ಕ. ಜಿಲ್ಲೆಯ ಮತ್ತು ಉದ್ಯೋಗ ನಿಮಿತ್ತ ಪರದೇಶಗಳಲ್ಲಿರುವ ಸ್ವಜಾತಿ ಬಾಂಧವರಲ್ಲಿ ವಿನಂತಿ:

ಪ್ರಿಯ ಬಂಧುಗಳೇ ಮತ್ತು ಭಗಿನಿಯರೇ,

ನಮ್ಮ ಸಮಾಜವು ಬಹು ಪುರಾತನ ಕಾಲದಿಂದಲೇ ಇದ್ದರೂ ಸಮಾಜದ ಪ್ರಗತಿ ಪಥಕ್ಕೆ ಕಂಟಕ ಪ್ರಾಯವಾದ ಅವ್ಯವಸ್ಥೆಯನ್ನು ಮನಗಂಡು ಅದನ್ನು ಬೇರು ಸಹಿತ ಕಿತ್ತು ಸಮಾಜದಲ್ಲಿ ಯೋಗ್ಯವಾದ ವ್ಯವಸ್ಥೆಯನ್ನುಂಟುಮಾಡಿ ಬಂಧುಬಾಂಧವರಲ್ಲಿ ವಿದ್ಯಾಭಿವೃದ್ಧಿಗೊಳಿಸಿ ಐಕ್ಯತೆ, ಸಂಘಶಕ್ತಿ, ಸ್ವಾತಂತ್ರ್ಯ ಬುದ್ಧಿ, ಜನತಾ ಸೇವೆ, ಸಮಾಜಪ್ರೇಮ ಇವೇ ಮೊದಲಾದ ಸುಶೀಲತೆಗಳನ್ನು ಬೋಧಿಸಿ ಜನತೆಯನ್ನು ಧಾರ್ಮಿಕ ಆರ್ಥಿಕ, ಸಾಮಾಜಿಕ ವ್ಯವಹಾರಗಳಲ್ಲಿ ನಿಷ್ಪಕ್ಷಪಾತ ಬುದ್ಧಿಯಿಂದ ವರ್ತಿಸುವಂತೆ ಮಾಡಲು ಸಮಾಜಾಭಿವೃದ್ಧಿಯೇ ಪ್ರಾಮುಖ್ಯವೆಂದು ದ. ಕ. ಜಿಲ್ಲಾ ಗಾಣಿಗರ ಯಾನೆ ಸಫಲ್ಯರ ಸಮಾಜ ಸುಧಾರಕ ಸಂಘ, ಮಂಜೇಶ್ವರ ಎಂಬ ಸಂಸ್ಥೆಯು ಕೆಲವು ವರ್ಷಗಳಿಂದೀಚೆಗೆ ಕಾರ್ಯಸಾಧಿಸುತ್ತಾ ಸನ್ಮಾರ್ಗದರ್ಶಿಯಾಗಿ ಜನರ ಆದರಾತಿಶಯಕ್ಕೆ ಪಾತ್ರವಾಗುವಂತೆ ಮುನ್ನಡೆಯುತ್ತಾ ಬರುತ್ತಲಿದೆಯೆಂದು ತಿಳಿಸುವರೆ ಸಂತೋಷವಾಗುತ್ತದೆ.

ಮುಂದಕ್ಕೂ ಸಂಘದ ಮತ್ತು ಸಮಾಜದ ಪುರೋಭಿವೃದ್ಧಿಯನ್ನು ಬಯಸುವ ಪ್ರೋತ್ಸಾಹಕರ, ಆಶ್ರಯದಾತರ, ಚಂದಾದಾರರ ಸಂಖ್ಯೆಯು ಪ್ರವರ್ಧಮಾನವಾಗುತ್ತಾ ಬಂದು ಸಂಘಶಕ್ತಿಯು ಹೆಚ್ಚಿ ತನ್ಮೂಲಕ ಸಮಾಜದ ಮಹತ್ತರವಾದ ಸುಧಾರಣಾ ಕಾರ್ಯಕಲಾಪಗಳನ್ನು ಮಾಡುವುದು ಸುಲಭ ಸಾಧ್ಯವೆಂದು ನಿರ್ವಿವಾದವಾಗಿ ಹೇಳಬಹುದು.

ಸಮಾಜದ ಹಿತವೃತ್ತಿಯೆಂಬಲೇ ಜನ್ಮವೆತ್ತಿದ ಈ ಸಂಘವು ಇನ್ನು ಕೆಲವು ದಿನಗಳಲ್ಲಿ ರಿಜಿಸ್ಟ್ರಿಯಾಗಬೇಕೆಂಬ ಕಾಂಕ್ಷೆಯಿಂದಿರುವುದರಿಂದ ಜಿಲ್ಲೆಯ ಸ್ವಜಾತಿ ಬಾಂಧವರಾದ ತಾವೆಲ್ಲರೂ ಮುಂದಿನ ಸಮಾಜೋನ್ನತಿಯನ್ನು ಬಯಸಿ ಯೋಗ್ಯ ಸಲಹೆಗಳನ್ನು ಕೊಡುವಿರೆಂಬ ನಂಬಿಕೆಯಿಂದ ನಿಮ್ಮೆಲ್ಲರ ಬರೋಣಕ್ಕಾಗಿ ಇದೇ ಬರುವ ತಾ. 25-4-43ನೇ ಆದಿತ್ಯವಾರ ಬೆಳಿಗ್ಗೆ ಘಂಟೆ 11ಕ್ಕೆ ಸರಿಯಾಗಿ ಸಂಘದ ಮಹಾಸಭೆಯು ಮಂಜೇಶ್ವರ ಉದ್ಯಾವರ ಬೋರ್ಡು ಶಾಲೆಯಲ್ಲಿ ಜರಗಿಸಲ್ಪಡುತ್ತದೆ. ಸದ್ರಿ ದಿವಸಕ್ಕೆ ತಾವುಗಳು ಯಾ ತಮ್ಮ ಪ್ರತಿನಿಧಿಯವರನ್ನು ಕಳುಹಿಸಿಯಾಗಲಿ ಯಾ ಪತ್ರ ಮುಖಾಂತರವಾಗಲಿ ನಿಮ್ಮ ಹಿತಸೂಚನೆಗಳನ್ನು ಕಳುಹಿಸಿಕೊಡತಕ್ಕದ್ದು. ನಿಮ್ಮ ಪ್ರತಿನಿಧಿಯವರಾಗಲಿ ಯಾ ಪತ್ರವಾಗಲಿ ಅಂದಿನ ಸಭೆಗೆ ತಲುಪದಿದ್ದರೆ ತಾವುಗಳು ಯಾವುದೊ ಬಲವಾದ ಕೆಲಸದ ನಿಮಿತ್ತ ಬರುವರೆ ಅನಾನುಕೂಲವಾಯಿತೆಂದು ಸಂಘ ಕಾರ್ಯದಲ್ಲಿ ತಮ್ಮೆಲ್ಲರ ಒಪ್ಪಿಗೆಯೆಂದು ದೃಢಮಾಡಲಾದೀತು.

ಸಮಾಜಾಭಿಮಾನಿಗಳಾದ ಉತ್ಸಾಹಿಗಳು ತಮ್ಮ ಕರ್ತವ್ಯಗಳಲ್ಲಿ ಹಿಂದುಳಿಯದೆ ಸಂಪೂರ್ಣ ಸಾಹಸವನ್ನು ತೋರಿಸಿ ಸಮಾಜ ಸೇವೆಗೆ ಸಿದ್ಧರಾಗಿರಬೇಕಾಗಿ ಸಮಸ್ತ ಬಾಂಧವರನ್ನು ದೀನ ಭಾವದಿಂದ ಪ್ರಾರ್ಥಿಸುತ್ತೇನೆ.

ಯಂ. ಬಸಪ್ಪ, ಅಧ್ಯಕ್ಷ

ಉದ್ಯಾವರ ಮಂಜೇಶ್ವರ ಮತ್ತು ಬಂಗ್ರಮಂಜೇಶ್ವರಗಳೆಂಬ ಎರಡೂರ ಗುರಿಕಾರರ ಪತ್ತು ಸಮಸ್ತರ ಸವಿನಯ ಆಮಂತ್ರಣ.

ಸಿನೆಮಾ ಸುದ್ದಿ

ಇಪ್ಪತ್ತ್ಯೆದನೆಯ ಸಲ

ವಾಗಿ, ಇದೀಗ ದುರ್ಗಾ ಖೋಟೆ ..... ಅನ ಸೂಯ ಚಿತ್ರದಲ್ಲಿ ಅಭಿನಯಿಸುತ್ತಾಳೆ. ಇದು ಸನರ್ಕ್ಸ್ ಪಿಕ್ಚರ್ಸಿನವರ ಕೃತಿ.

ಬೊಂಬೇ ಟಾಕೀಸಿಗೆ

ಮೋತೀಲಾಲನು ಸೇರುವನಾತಿಯೂ, ಅದರ ಚಿತ್ರವೊಂದರಲ್ಲಿ ಮುಖ್ಯ ಪಾತ್ರ ವಹಿಸುವನೆಂದೂ ತಿಳಿದಿದೆ, ಮೋತೀಲಾಲನಿಗೆ ಕುದುರೆ ಜೂಜಿನಲ್ಲಿ ಹುಚ್ಚು ಬಹಳ. ಆತನು 'ಪೆಲ್ಯನ್' ಎಂಬ ಹುಂಪ್ಯಾಟದ ಕುದುರೆ ಪಾಲಕನಾಗಿದ್ದಾನೆ. ಮೋತೀಲಾಲನೊಡನೆ, ಎಂ. ಪಿ. ಪ್ರೊಡಕ್ಷಿನ ದಿಗ್ದರ್ಶಕ ಸುಶೀಲ ಮುಜುಮ್‌ದಾರರೂ ಬೊಂಬಯಿ ಟಾಕೀಸಿಗೆ ಸೇರುವರಂತೆ. ಈಶ್ವರಲಾಲನಿಗೂ ದೇವಿಕಾರಾಣಿಯ ಆಹ್ವಾನ ಹೋಗಿದೆ. ಬೊಂಬಯಿ ಟಾಕೀಸಿನ ಮೊದಲಿನ ನಟನಟೀ ವರ್ಗವು ಅಗಲಿದ ಮೇಲೆ ದೇವಿಕಾರಾಣಿ ಹೊಸ ನಟ ನಟೀ ವರ್ಗವನ್ನು ಅನ್ವೇಷಿಸುತ್ತಿದ್ದಾಳೆ.

ಶಾಂತಾ ಆಪ್ಟೆ, ಬಂಗಾಳಿಯಲ್ಲಿ

ಅಭಿನಯಿಸುವಳೆಂಬುದು ಇತ್ತೀಚೆಯ ಸುದ್ದಿ. ಲಕ್ಷ್ಮಿ ಪ್ರೊಡಕ್ಷನಿನವರು ಆ ಬಂಗಾಳಿ ಚಿತ್ರ ತಯಾರಿಸುವಂತೆ. ತಮಿಳು ಚಿತ್ರದಲ್ಲಿ ಈಗಾಗಲೇ ಆಕೆ ನಟಿಸಿ ಮಂಗಳೂರಿನವರನ್ನು ಮರಳುಗೊಳಿಸಿದ್ದಾಳೆ. ಮರಾಠಿ ಆಕೆಯ ಮಾತೃಭಾಷೆ. ಹಿಂದಿ ಚಿತ್ರಗಳಲ್ಲಿನ ಅವಳ ಅನುಪಮ ಅಭಿನಯ ಅಖಿಲಭಾರತ ಪ್ರಸಿದ್ಧ. ಇನ್ನು ಪಂಜಾಬೀ, ತೆ

ಲುಗು, ಕನ್ನಡ, ... ಭಾಷಾ ಚಿತ್ರಗಳಲ್ಲಿ ಶಾಂತಾ ಆಪ್ಟೆ ಅಭಿನಯಿಸುವುದು ಬಾಕಿಯಿದೆ.

'ಪ್ರೇಮ ಸಂಗೀತ'

ಕೇಳಲು ಯಾರಿಗೆ ಮನಸ್ಸು ಇಲ್ಲ? ಹಾಗಾದರೆ ಮೊದಲು ಕೇಳಬೇಕು, ನೀನಾ ..... ರಾಜರ 'ಪ್ರೇಮ ಸಂಗೀತ'ವನ್ನು. ಇದು ಶಾಲಿಮಾರ್ ಕೃತಿ. 'ಮನಕೀ ಜೀತ್' ಎಂಬ ಶಾಲಿಮಾರ್‌ನವರ ಇನ್ನೊಂದು ಕೃತಿಯಲ್ಲಿ ನೀನಾ ಶ್ಯಾಮರು ಜತೆಗೂಡಿದ್ದಾರೆ.

"ಚೋಟಿಮಾ"

ಖುರ್ಶಿದ್! ಎಂದರೆ ಸಿನೆಮಾ ಪ್ರಿಯರ ಕಿವಿ ಕಣ್ಣು ನೆಟ್ಟಗಾಗುವುದು. ಆಕೆ ಈಗ ಅಭಿನಯಿಸುವ ಚಿತ್ರ 'ಚೋಟಿಮಾ', ರಣಜಿತ್ ಕೃತಿ. ಈ 'ಚೋಟಿಮಾ'ಳನ್ನು ನಾವು ಬೇಗನೇ ನೋಡಬಯಸುತ್ತೇವೆ.

ರೇಣುಕಾದೇವಿ

ಯನ್ನು 'ನಯಾ ಸಂಸಾರ' ನೋಡಿದವರು ಮರೆತಿರಲಾರರು. ಆಕೆ ಈಗ ತಿರುಗಿ ಬಂದಿದ್ದಾಳೆ. 'ಸಹಾರಾ'ದಲ್ಲಿ; ರಾಸ್ಮಾನಿ ಆರ್ಟ್ ಪ್ರೊಡಕ್ಷನ್ ಕೃತಿಯಲ್ಲಿ. ನಾರ್ಥಂಗ್, ಪ್ರಾಣ್, ಮೀನಾ, ರಜಿಯಾ ಬೇಗಂ ಮೊದಲಾದವರು ಇತರ ನಟವರ್ಗ.

'ನಗದ್ ನಾರಾಯಣ್'

ಒಂದು ವಿಚಿತ್ರ ಹೆಸರು! ಸಿಲ್ವರ್ ಸ್ಕ್ರೀನ್ ಎಕ್ಸ್‌ಚೇಂಜಿನವರ ಸಿನೆಮಾದ ಹೆಸರಿದು. ಲೀಲಾ ದೇಸಾಯಿ ಮತ್ತು ಪಂಢಾರ್ಕರ್ ನಟಿಸುತ್ತಾರೆ. ಹಾಸ್ಯಮಯ ರೋಮಾಂಚಕ ಚಿತ್ರ.

ಕಾರ್ಕಳ ಸಹಾಯ ವಿವರ

ಸ್ಥಳೀಯ ಹರಿಜನ ಸೇವಾ ಸಂಘದ ಸಹಾಯಾರ್ಥ ಕಳೆದ ವಾರ ಆದ ಯಕ್ಷಗಾನ ಸಮಾರಂಭದ ಟಿಕೇಟು ಮಾರಾಟದಿಂದ ಜಮಾ ರೂ ೬೨೦-೮-೦, ಖರ್ಚು ೧೧೬-೬-೬, ಸಹಾಯವಾಗಿ ಸಂಘಕ್ಕೆ ದೊರೆತದ್ದು ೫೦೪-೪-೫ ಎಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ. ಸಂಘವು ಎಲ್ಲರಿಗೂ ಕೃತಜ್ಞವಾಗಿದೆ

ಸಭೆ ಸಮಾರಂಭಗಳು

ಕಾರ್ಕಳ ತಾಲೂಕಿನ ಬೋರ್ಡ ಎಲಿಮೆಂಟರಿ ಶಾಲಾ ಉಪಾಧ್ಯಾಯ ಸಂಘದ ವರ್ಷಾವಧಿ

ಸಭೆ ಮತ್ತು ಕಾರ್ಕಳ ಪಂಚಾಯತ ಬೋರ್ಡಿನ ಸಾರ್ವಜನಿಕ ಲೈಬ್ರರಿಯ ಪ್ರವಾಸನ ಸಭೆ

ಡಿಸ್ಟ್ರಿಕ್ಟ್ ಇನ್ಸಪೆಕ್ಟರ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲೂ, ಈ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಭೆ ಶ್ರೀ. ಯಂ ಸಿ ಪುರುಷೋತ್ತಮ ಕಾಮತರ ಅಧ್ಯಕ್ಷತೆಯಲ್ಲೂ ಜರಗಿ, ಶ್ರೀಗಳಾದ ಯಚ್. ರಾಘುರಾವ್, ಬಿ. ಯಂ. ಬಾಳಿಗಾ, ಡಿ. ವೆಂಕಟೇಶ ಭಟ್ಟ, ಕಟಪಾಡಿ ಶ್ರೀನಿವಾಸ ಶೆಟ್ಟಿ, ಎ. ಸೀತಾರಾಮರಾವ್ ಮೊದಲಾದವರ ಭಾಷಣಗಳು ಆದುವು.

ದಿ ಪೋಪ್ಯುಲರ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮಂಗಳೂರಲ್ಲಿ ಸ್ಥಾಪಿತವಾಗಿ ಕರ್ನಾಟಕದಲ್ಲಿ ಪ್ರಥಮವೂ ಸುಪ್ರಸಿದ್ಧವೂ, ಆದ ಈ ವಿಮಾ ಸಂಸ್ಥೆಯ ೧೯೪೨ನೇ ಇಸವಿಗೆ ಅಂತ್ಯವಾಗುವ ವರ್ಷದ ಅಂಕೆ ಸಂಖ್ಯೆಗಳ ವಿವರವು ನಮ್ಮ ಹಸ್ತಗತವಾಗಿದೆ. ಈ ಸಂಸ್ಥೆಯು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತ ೧೯೪೨ರಲ್ಲಿ ವಿಶೇಷದ ಅಭಿವೃದ್ಧಿ ಹೊಂದಿದ ವಿಷಯ ಕೆಳಗಿನ ಅಂಕೆ ಸಂಖ್ಯೆಗಳಿಂದ ತಿಳಿದುಬರುವುದು.

		೧೯೪೧	೧೯೪೨
ಹೊಸ ವ್ಯವಹಾರ	ರೂ	೭,೫೧,೮೫೦	ರೂ. ೮,೨೪,೪೫೦.
ಪ್ರಿಮಿಯಮಿನ ಆದಾಯ	,,	೯೬,೨೮೦.	,, ೧,೦೮,೬೦೦.
ಜೀವವಿಮಾ ನಿಧಿ	,,	೨,೩೦,೯೫೫	,, ೩,೦೦,೨೦೦.
ಸರಕಾರಿ ಮತ್ತು ಸರಕಾರದಿಂದ ಒಪ್ಪಲಾದ ಭದ್ರತೆಗಳಲ್ಲಿ—	,,	೨,೦೧,೦೦೦.	,, ೨,೬೫,೪೦೦.
ಎಲ್ಲ ಬಗೆಯ ಖರ್ಚಿನ ಪ್ರಮಾಣ		೪೮.೯%	೩೮.೨%
ರಿನ್ಯೂವಲ್ ಖರ್ಚಿನ	,,	೩೩ ೫%	೧೯.೮%
ಸಂಪಾದಿಸಿದ ಬಡ್ಡಿ (ಇನ್)		೪%	೪೦%

ರಿಜರ್ವ್ ಬೇಂಕಿನಲ್ಲಿ ಇರಿಸಬೇಕಾದ ಶಾಸನಬದ್ಧ ನಿಧಿ ೨,೦೦೦೦೦ ರೂಪಾಯಿಗಳು, ೧೯೪೨ರಲ್ಲಿ ಪೂರ್ಣವಾಗಿದೆ ವಿಮಾ ಶಾಸನದಂತೆ ಅಗತ್ಯವಿರುವ ವಿನಿಯೋಗದ ಮೊತ್ತವು, ಸರಕಾರಿ ಮತ್ತು ಅದರಿಂದ ಒಪ್ಪಲಾದ ಭದ್ರತೆಗಳಲ್ಲಿ ಇರಬೇಕಾದುದರಿಂದಲೂ ಸುಮಾರು ಒಂದೂವರೆ ಪಾಲಷ್ಟು ಇದೆ. ಮೇಲ್ಕಂಡ ಅಂಕೆ ಸಂಖ್ಯೆಗಳಿಂದ ಈ ಸಂಸ್ಥೆಯ ಅಭಿವೃದ್ಧಿ ಮತ್ತು ಭದ್ರತೆಗಳು ಖಚಿತವಾಗುವವು

ಸಂಸ್ಥೆಯ ಕಾರ್ಯಭಾರಗಳ ರೀತಿ ನೀತಿ, ಅದರ ಆಡಳಿತೆಯ ವಿಚಕ್ಷಣತೆ, ಅದರ ಪ್ರತ್ಯೋಭಿವೃದ್ಧಿ ಇತ್ಯಾದಿಗಳು ಸಮಸ್ತರ ಪ್ರಶಂಸೆಗೂ ಪಾತ್ರವೆನಿಸಿವೆ. ಮುಖ್ಯ ಇದಕ್ಕಿಂತಲೂ ದೊಡ್ಡ ವ್ಯವಹಾರವನ್ನು ಈ ಸಂಸ್ಥೆ ನಡೆಸುವರೆ, ನಮ್ಮ ಜಿಲ್ಲೆಯವರ ಕನ್ನಡಿಗರ ಇತರ ದೇಶೀಯರ ಸಹಕಾರವು ಅವಶ್ಯವಾಗಿದೆ ಈ ಯೋಗ್ಯ ವಿಮಾ ಸಂಸ್ಥೆಯು ಅತಿಶಯ ಪ್ರರೋಭಿವೃದ್ಧಿ ಹೊಂದಲೆಂದು ನಮ್ಮ ಹಾರೈಕೆ.

THE CANARA BANKING CORPORATION Ltd.

(Incorporated in British India with limited liability)

STATEMENT OF AFFAIRS AS ON 31ST DECEMBER 1942

Capital & Liabilities	Rs	As	Ps.	Property & Assets	Rs	As	Ps
Paid up Capital	6 36,890	0	0	Office premises furniture, etc	91 6590	0	
Reserve & other funds	3 71 882	13	11	Advances	31 28 612	4	9
Deposits	41 83 873	4	1	Investment on Govt. Securities etc at cost	15 34,536	14	3
Due to Bankers	5 08 545	12	1	Sundries	74 183	5	7
Bills per contra	3 59,357	12	1	Bills for Collection	3,59,357	12	1
Sundries including branch adjustments & undisbursed profits	2 83,736	5	9	Cash on Hand & with bankers	12,05 397	14	8
Profit for the year 1942	49 461	3	5				
Total Rs	63,93 747	3	4	Total Rs	63,93 747	3	4

NOTICE

In the Court of the District Munsif of Mangalore.

O. S. 557/42.
I. A. S. 1646, 1647/42.

Between:
Pandit Thimmappa— *Plaintiff*
and
Chandu Shetty & others— *Defendants.*

To

2nd Pakira Shetty, nephew of Chandu Shetty, residing in Sooruje village Mangalore Taluk.

The abovenamed plaintiff has filed the above suit for setting aside the claim order, by an application R. I A 1646/42 for a temporary injunction and by an application R. I. A 1647/42 for attachment before judgment of the plaint property pending the disposal of the above suit. Notice is hereby given that the said suit and the petitions are posted to 13-4-1943 for your appearance, failing which the same will be decided in your absence

By order

Mangalore, 6-4-43 } **K. Balakrishna Rao,** Advocate for Plff

NOTICE

In the Court of the Dt Judge of South Kanara.

O. P. No. 34/1943.

Between,
1 M Kalyani Bai
2 K Jani Bai } *Petitioners*
3. K Ratna Bai
and
M Venkatraya Nayak & others *Respondents*

Notice is hereby given that the above Petitioners have applied for the grant of succession certificate in respect of the debts due to the late M Ramachandra Nayak who died in Mangalore on 27-7-33. The above petition is posted to 30 6-1943 at 10 30 a. m in the above Court Persons concerned may appear in person or by Vakil and show cause if any against the application.

(By order of Court)

Mangalore, 8-4-1943 | **M. Keshava Pai,** *Counsel for Petrs.*

ಆಂಡ್ರೂಸಿನ ಅಂತರ್ಯ ಶುದ್ಧಿಯ ಸುಲಭ, ಆರೋಗ್ಯ ನಿಯಮವು ಪ್ರತಿ ಸ್ತ್ರೀಯೂ ಚೈತನ್ಯ ಯೌವನ ಸಂತೋಷದಿಂದಿರಲು ಸಹಾಯ ಮಾಡುವುದು ಆಂಡ್ರೂಸ್ ವರೇಚಕಕ್ಕಿಂತಲೂ ಉತ್ತಮವಾದದ್ದು ನಿಮಗೆ ಬೇಕಾದಾಗಲೆಲ್ಲಾ ಒಂದು ಲೋಟ ದಷ್ಟು ತೆಗೆದುಕೊಂಡರೆ ಕಳಂಕವಾದ ಚರ್ಮಕ್ಕೆ ಕಾರಣವಾದ ವಿಷವನ್ನು ಹೊರಸಾಗಿಸಿ, ತಲೆನೋವು ಸಣ್ಣ ಕಾಯಿಲೆಗಳನ್ನು ನಿಲ್ಲಿಸುವುದು. ಆಂಡ್ರೂಸ್ ಸಂಪೂರ್ಣ ದೇಹವನ್ನೇ ಹೇಗೆ ಶುದ್ಧಿ ಮಾಡುವುದೆಂಬುದನ್ನು ನೋಡಿ

ಮೊದಲು: ಆಂಡ್ರೂಸ್ ಬಾಯಿ, ನಾಲಗೆಯನ್ನು ಶುದ್ಧಿಮಾಡುವುದು
ಅನಂತರ: ಆಂಡ್ರೂಸ್ ಜಠರವನ್ನು ಒಳ್ಳೆ ಸ್ಥಿತಿಯಲ್ಲಿಟ್ಟು ಹುಳಿಯನ್ನು ಸರಿಪಡಿಸುತ್ತೆ.
ಆ ಮೇಲೆ: ಆಂಡ್ರೂಸ್ ಲಿವರನ್ನು ಶಕ್ತಿಯುತವಾಗಿ ಮಾಡಿ ಪಿತ್ತವನ್ನು ತಡೆಯುವುದು
ಕೊನೆಯದಾಗಿ: ನಿಮ್ಮ ಅಂತರ್ಯ ಶುದ್ಧಿ ಸಂಪೂರ್ಣವಾಗಲು ಆಂಡ್ರೂಸ್ ಸೌಮ್ಯವಾಗಿ ಮಲವಿಸರ್ಜನೆ ಮಾಡಿಸುವುದು. ತೊಂದರೆ ಕೊಡುವ ವಿಷಗಳನ್ನು ಹೊರಸಾಗಿಸಿ, ಮಲಬದ್ಧತೆ ಸರಿಪಡಿಸಿ, ರಕ್ತವನ್ನು ಶುದ್ಧಿಮಾಡಿ ಚರ್ಮವನ್ನು ಸ್ವಚ್ಛವಾಗಿಡುವುದು
ಅಂತರ್ಯ ಶುದ್ಧಿಗೆ ಕ್ರಮವಾಗಿ ಉಪಯೋಗಿಸಿ

ಆಂಡ್ರೂಸ್ ಲಿವರ್ ಸಾಲ್ಟ್
ಆರೋಗ್ಯ ಪಾನೀಯ—ವಿರೇಚಕ

ANDREWS
LIVER SALT
Health Drink — Tonic Laxative

ಪುಸ್ತಕಾವಲೋಕನ

ವಿನೋಬಾಜಿ 'ಗೀತಾಪ್ರವಚನಗಳು'

'ನನ್ನ ಮತ್ತು ಗೀತೆಯ ಸಂಬಂಧ ತರ್ಕವನ್ನು ಮೀರಿದ್ದಾಗಿದೆ. ತಾಯಿ ಹಾಲಿನಿಂದ ನನ್ನ ಮೈಬಲಿತುದಕ್ಕಿಂತಲೂ ಹೆಚ್ಚಾಗಿ ನನ್ನ ಹೃದಯ ಬುದ್ಧಿಗಳ ಬೆಳವಣಿಗೆಯು ಗೀತೆಯ ಹಾಲಿನಿಂದಾಗಿದೆ. * ಅನುಮಾನಕ್ಕೆ ಕತ್ತರಿಯಿಕ್ಕಿ ಶ್ರದ್ಧೆ ಹಾಗೂ ಪ್ರಯೋಗಗಳ ಬಲದಿಂದಲೇ ಗೀತೆಯ ಗಗನವನ್ನು ನಾನು ಕೈಲಾದಷ್ಟು ಸುತ್ತುತ್ತಿರುವೆನು. * ಗೀತೆಯೆಂದರೆ ನನಗೆ ಪ್ರಾಣತತ್ವ. ಗೀತೆಯ ವಿಚಾರವಾಗಿ ನಾನು ಇನ್ನೊಬ್ಬರೊಡನೆ ಮಾತನಾಡುತ್ತಿದ್ದೆಂದರೆ ಗೀತಾ ಸಮುದ್ರದಲ್ಲಿ ತೇಲಾಡಿದಂತೆ; ಹಾಗೂ ಒಬ್ಬನೇ ಇದ್ದಾಗ ಆ ಸುಧಾ ಸಾಗರದಲ್ಲಿ ಮುಳುಗಿಕೊಂಡಂತೆ ಇರುತ್ತೇನೆ'.

ಆಚಾರ್ಯ ವಿನೋಬರ ಮೇಲಿನ ಮಾತುಗಳು ಗೀತೆಯ ವಿಷಯ ಅವರಿಗಿರುವ ಅನನ್ಯ ಭಕ್ತಿಯನ್ನು ಪ್ರದರ್ಶಿಸುತ್ತವೆ. ಇಂಥಾ ಗೀತಾ ಭಕ್ತರು ಗೀತೆಯ ವಿಷಯದಲ್ಲಿ ೧೯೩೨ರಲ್ಲು ಧುಳೀದ ಸೆರೆಮನೆಯಲ್ಲಿದ್ದಾಗ ಅಧ್ಯಾಯಕ್ಕೊಂದರಂತೆ ಹದಿನೆಂಟು ವಿದ್ವತ್ಪೂರ್ಣ ಪ್ರವಚನಗಳನ್ನು ಕೊಟ್ಟಿದ್ದರು. ಶ್ರೀ ಸಾನೆಗುರೂಜಿಯವರು ಅದನ್ನು ಸುಸೂತ್ರವಾಗಿ ಬರೆಕೊಂಡಿದ್ದರು. ಆ ಮೇಲೆ ಅದನ್ನು ಮುದ್ರಿಸಿ ಪ್ರಕಟಿಸಬೇಕೆಂದು ಬಲು ಜನರ ಅಪೇಕ್ಷೆಯಿದ್ದಲು ವಿನೋಬಾಜಿ ಭಾಷಣ ಸ್ವಾತಂತ್ರ್ಯದ ಮೊದಲನೆಯ ಸತ್ಯಾಗ್ರಹಿಯಾಗುವ ಅಪೂರ್ವ ಸಂಧಿಯು ಕೆಲ ದಿನಗಳ ಒಂದೇ ಈ ಕಾರ್ಯಕ್ಕೆ ಕೈಹಾಕಿದ್ದರು. ಎರಡು ಮೂರು ಅಧ್ಯಾಯಗಳನ್ನು ತಿದ್ದಿ ಮುದ್ರಣಕ್ಕೆ ಕೊಡುವಷ್ಟರಲ್ಲಿಯೇ ಅವರು ಸೆರೆಮನೆ ಸೇರಬೇಕಾಯಿತು! ಹಾಗಾಗಿ ಎರಡು ಅಧ್ಯಾಯಗಳ ಪ್ರವಚನೆಗಳನ್ನು ಮಾತ್ರ ಪ್ರಕಟಿಸಲಾಯಿತು.

ಗಾಂಧಿ ಯುಗದ ಆಚಾರ್ಯರಾದ ವಿನೋಬಾಜಿಯವರು ಮರಾಠಿಯಲ್ಲಿ ಬರೆದ ಗ್ರಂಥವನ್ನು ಹುಬ್ಬಳ್ಳಿಯ ಅವಧೂತ ಗ್ರಂಥಮಾಲೆಯ ಶ್ರೀ. ದತ್ತಾತ್ರೇಯ ಶಿವಾನಂದ ಬಂಕಾಪುರ ಇವರು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಾಶಪಡಿಸಿದ್ದಾರೆ. 'ಇದು ಅವರ ಸಾಧನ ಗ್ರಂಥಾವಲಿಯ ಎರಡನೆಯ ಗ್ರಂಥ. ಕ್ರೌನ್ ೧/೮ ಆಕಾರದ ೯೬ ಪುಟಗಳುಳ್ಳ ಈ ಪುಸ್ತಕದ ಬೆಲೆ ನಾಲ್ಕಾಣೆ. ಹುಬ್ಬಳ್ಳಿ 'ಸಾಹಿತ್ಯ ಭಂಡಾರ'ದವರು ಇದರ ಮಾರಾಟಗಾರರು. ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಅಚ್ಚುಕಟ್ಟಾಗಿ ಇದು ಮುದ್ರಿಸಲ್ಪಟ್ಟಿದೆ.

ಗೀತೆಯ ತಿರುಳೇನೆಂಬ ವಿಷಯದಲ್ಲಿ ಆಚಾರ್ಯ ವಿನೋಬರ ಒಂದು ದೀರ್ಘ ವಿದ್ವತ್ಪೂರ್ಣ ವ್ಯಾಖ್ಯಾನ ಇದ್ದು; ಅರ್ಜುನನು ಹೇಡಿಯಾಗಿ, ಅಹಿಂಸಾವಾದಿಯಾಗಿ ಸಂಶಯಗ್ರಸ್ತನಾದುದಲ್ಲ; ಸ್ವಜನಾಸಕ್ತಿಯಿಂದ, ಮೋಹವಶನಾಗಿ, ಕರ್ತವ್ಯವನ್ನು ಮರೆತುಬಿಡುವುದರಲ್ಲಿದ್ದವನನ್ನು ಕೃಷ್ಣನು ಕರ್ತವ್ಯ ಮಾಡೆಂದು ಎಚ್ಚರಿಸಿದನು; ಸ್ವಧರ್ಮಕ್ಕೆ ಅಡ್ಡ ಬರುತ್ತಿರುವ ಮೋಹವನ್ನು ಹೊಡೆದು ಹಾಕಲಿಕ್ಕೆಂದೇ ಗೀತೋಪದೇಶವಾಯಿತು; ಎಂದು ವಿನೋಬಾಜಿ ಮೊದಲನೆಯ ಅಧ್ಯಾಯದ ತಿರುಳನ್ನು ತಿಳಿಸಿದ್ದಾರೆ. ಗೀತೆಯು ಎರಡನೆಯ ಅಧ್ಯಾಯದಿಂದ ಆರಂಭವಾಗುವುದೆಂದು ಕೆಲವರು ವಾದಿಸುವುದನ್ನು ಅವರು ಒಪ್ಪುವುದಿಲ್ಲ. ಮೊದಲಿನ ಮುನ್ನುಡಿ ಭಾಗವೂ ಬಹಳ ಮಹತ್ವದ್ದೆಂದೂ ಅರ್ಜುನನ ಭೂಮಿಕೆ ಯಾವುದು, ಗೀತೆ ಯಾವುದನ್ನು ಹೇಳಲು ಹೊರಟಿದೆಯೆಂಬ ವಿವೇಚನೆಗಳು ಈ ಪ್ರಸ್ತಾವನೆಯ ಕಥಾಭಾಗವಿಲ್ಲದೆ ಚನ್ನಾಗಿ ವಿದಿತವಾಗಲಾರವೆಂದು ವಿನೋಬಾಜಿ ವಿವರಿಸಿರುವರು.

ಎರಡನೆಯ ಅಧ್ಯಾಯದಲ್ಲಿ ಭಗವಂತನು ಜೀವನದ ಮಹಾಸಿದ್ಧಾಂತವನ್ನು ಹೇಳುತ್ತಾನೆಂದೂ ಎರಡನೆಯ ಅಧ್ಯಾಯದಲ್ಲಿರುವ 'ಸಾಂಖ್ಯ ಬುದ್ಧಿ' ಶಬ್ದಕ್ಕೆ 'ಜೀವನದ ಮೂಲ ಸಿದ್ಧಾಂತ' ವೆಂದು ತಾನು ಅರ್ಥ ಮಾಡಿಕೊಂಡಿರುವುದಾಗಿಯೂ ಆಚಾರ್ಯರು ತಿಳಿಸುತ್ತಾರೆ. ಎರಡನೆಯ ಅಧ್ಯಾಯದ ಜೀವನ ಸಿದ್ಧಾಂತವನ್ನು ೧) ಆತ್ಮನ ಅವಿನಾಶಿತ್ವ ಮತ್ತು ಏಕತ್ವ ೨) ಶರೀರದ ಕ್ಷುದ್ರತ್ವ ೩) ಸ್ವಧರ್ಮದ ನಿತ್ಯತ್ವವೆಂದು ಮೂರು ವಿಧವಾಗಿ ವಿನೋಬಾಜಿ ವಿಂಗಡಿಸುವರು. ಸ್ವಧರ್ಮದ ವಿಷಯ ಆಚಾರ್ಯರು ಬಹಳ ವಿಶಾಲ ಅರ್ಥ ವಿವರಿಸಿದ್ದಾರೆ. ಸ್ವಧರ್ಮ ಸಂಕೋಚ ಮನೋಭಾವನೆಯದಲ್ಲವೆಂದು ವಿಶದಪಡಿಸುತ್ತಾರೆ. ಜಾತಿ ಗಲಿಬಿಲಿಯನ್ನು ಖಂಡಿಸುತ್ತಾರೆ; ಮನುಷ್ಯನು ಶರೀರ ಲಂಪಟನಿರವೆ, ದೇಹವಿದು ಸೇವೆಯ ಸಾಧನವೆಂದು ತಿಳಿಯತಕ್ಕದ್ದೆಂದು ಸಾಧಿಸುತ್ತಾರೆ; ತ್ಯಾಗದ ಮಹಿಮೆಯನ್ನು ತಿಳಿಸುತ್ತಾರೆ. ಮುಂದೆ ಗೀತೆಯು ಕರ್ಮವಾದುವ ವಿಷಯವಾಗಿ ಸಾರಿದ ಉದಾತ್ತ ತತ್ವಗಳನ್ನು ವಿಶದಪಡಿಸುವರು. 'ಕರ್ಮಮಾಡಿ ಫಲವನ್ನು ಬಿಡಿ ಹಾಗೂ ಫಲವನ್ನು ಬಯಸದೆ ಕರ್ಮಮಾಡಿ' ಎಂಬೀ ತತ್ವದ ಮಹತ್ವವನ್ನು ತಿಳಿಸಿದ್ದಾರೆ. ಈ ವಿಷಯಗಳನ್ನು ಪ್ರತಿಪಾದಿಸುವಲ್ಲಿ ಅನೇಕ ಉದಾಹರಣೆಗಳನ್ನಿತ್ತು ವಿನೋಬಾಜಿ ಸ್ಪಷ್ಟಪಡಿಸುತ್ತಾರೆ.

ಗೀತೆಯ ಎರಡನೆಯ ಅಧ್ಯಾಯದಲ್ಲಿ ಸ್ಥಿತಪ್ರಜ್ಞನ ಕುರಿತು ಹೇಳಿದ ಹದಿನೆಂಟು ಶ್ಲೋಕಗಳು ಗೀತೆಯ ಹದಿನೆಂಟು ಅಧ್ಯಾಯಗಳ ಸಾರವನ್ನೊಳಗೊಂಡಿವೆಯೆಂಬುದು ಆಚಾರ್ಯರ ಅಭಿಪ್ರಾಯವಾಗಿದೆ. ಹೀಗೆ ಸಾಂಖ್ಯಬುದ್ಧಿ, ಯೋಗಬುದ್ಧಿ, ಸ್ಥಿತಪ್ರಜ್ಞಗಳಿಂದ ಸೇರಿದ ಸಂಪೂರ್ಣ ಜೀವನ ಶಾಸ್ತ್ರವು ಗೀತೆಯ ಎರಡನೆಯ ಅಧ್ಯಾಯದ ಅರ್ಥವೆಂದು ವ್ಯಾಖ್ಯಾನಿಸಿರುವರು.

ಭಾಷಣ ಸ್ವಾತಂತ್ರ್ಯದ ಮೊದಲನೆಯ ಸತ್ಯಾಗ್ರಹಿಯಾಗಿ ಸೆರೆಮನೆ ಸೇರಿದ ವಿನೋಬಾಜಿ ಇನ್ನೂ ಬಂಧನದಿಂದ ಬಿಡುಗಡೆ ಹೊಂದಿಲ್ಲ. ಹಾಗಾಗಿ ಇನ್ನೂ ಅವರ 'ಗೀತಾ ಪ್ರವಚನಗಳು' ಸಂಪೂರ್ಣವಾಗಿ ಪ್ರಕಟವಾಗುವ ಸುವರ್ಣ ಸಂಧಿ ಬಂದಿಲ್ಲ; ಇನ್ನೂ ಗೀತಾಭ್ಯಾಸಿಗಳ ದಾಹ ಅಡಗುವ ಕಾಲವೊದಗಿಲ್ಲ. ಇನ್ನೆಂದು ನಾವು ಮಿಕ್ಕ ಅಧ್ಯಾಯಗಳ ಕುರಿತು ಬರೆದ ಅಮೂಲ್ಯ ವ್ಯಾಖ್ಯಾನವನ್ನೋದುವೆವೋ—ಬಹುಶಃ ಸ್ವತಂತ್ರವಾದ ಭಾರತದಲ್ಲಿ ಓದಲಿರುವೆವೋ—ನಮಗೆ ಒಂದೂ ಹೇಳಬರುವುದಿಲ್ಲ. ಇಷ್ಟನ್ನಾದರೂ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿ ಕನ್ನಡಿಗರ ಜ್ಞಾನದಾಹವನ್ನಡಗಿಸಲು ಪ್ರಯತ್ನಿಸಿದ ಹುಬ್ಬಳ್ಳಿ ಅವಧೂತ ಗ್ರಂಥಾಲಯದವರಿಗೆ ಕನ್ನಡಿಗರು ಚಿರಋಣಿಗಳು.

—ಕೆಯ್ಯಾರ

ESTD.] **Canara Bank, Limited** [1906.

(Incorporated in British India with limited liability).

BALANCE SHEET AS ON 31st DECEMBER 1942

LIABILITIES	Rs.	As.	Ps.	ASSETS	Rs.	As.	Ps.
SUBSCRIBED CAPITAL; Rs.20 lacs.				Fixed Capital			
Paid up Capital	14,96,072	8	0	Expenditure	1,00,182	13	2
Reserves	4,50,000	0	0	ADVANCE TO CUSTOMERS:			
Deposits	1,45,50,502	7	1	Secured by valu-			
Due to Bankers	13,50,000	0	0	able securities	51,16,338	6	2
Bills for collection				Secured by bills			
as per contra	8,76,169	10	2	of Exchange etc.	24,36,563	11	11
Liability for Foreign				Investments	65,65,374	15	7
Bills negotiated	8,05,026	10	5	Bills for collection	8,76,160	10	2
Sundries	10,51,464	10	11	Liabilities of custo-			
Appropriation A/c.	2,062	3	8	mers for foreign			
Net Profits	1,53,310	2	10	bills negotiated	8,05,026	10	5
				Sundries	4,71,599	3	0
				Cash on hand and at			
				Call with Bankers	43,63,352	14	8
Total Rs.	2,07,34,608	5	1	Total Rs.	2,07,34,608	5	1

ನಂಬಿ ನಂಬಿ ತೆಗೆದು ಕೊಳ್ಳಲು



ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ಕ ಯುಕ್ತ ದೊರಕುವುವು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧಕ್ಕೆ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

ಸಿನೆಮಾ ಸುದ್ದಿ

ಆಶ್ವತ್ಥದಸೆಯ ಕಲ

ಹಾಗಿ, ಇದೀಗ ಧುರ್ಗಾ ಖೋಟೆ 'ಸತಿ ಅನಸೂಯ' ಚಿತ್ರದಲ್ಲಿ ಅಭಿನಯಿಸುತ್ತಾಳೆ. ಇದು ಸನ್‌ರೈಸ್ ಪಿಕ್ಚರ್ಸಿನವರ ಕೃತಿ.

ಬೊಂಬಾಯಿ ಟಾಕೀಸಿಗೆ

ಮೋತೀಲಾಲನು ಸೇರುವನಾಗಿಯೂ, ಆದರೆ ಚಿತ್ರವೊಂದರಲ್ಲಿ ಮುಖ್ಯ ಪಾತ್ರ ವಹಿಸುವನೆಂದೂ ತಿಳಿದಿದೆ. ಮೋತೀಲಾಲನಿಗೆ ಕುದುರೆ ಬಾಜಿನಲ್ಲಿ ಹುಚ್ಚು ಬಹಳ. ಆತನು 'ಶೆಲ್ಮನ್' ಎಂಬ ಪಂದ್ಯಾಟದ ಕುದುರೆ ಮಾಲಕನಾಗಿದ್ದಾನೆ. ಮೋತೀಲಾಲನೊಡನೆ, ಎಂ. ಪಿ. ಪ್ರೊಡಕ್ಷನ್ ದಿಗ್ದರ್ಶಕ ಸುಶೀಲ ಮುಜುಮ್‌ದಾರರೂ ಬೊಂಬಾಯಿ ಟಾಕೀಸಿಗೆ ಸೇರುವರಂತೆ. ಈಶ್ವರಲಾಲನಿಗೂ ದೇವಿಕಾರಾಣಿಯ ಆಹ್ವಾನ ಹೋಗಿದೆ. ಬೊಂಬಾಯಿ ಟಾಕೀಸಿನ ಮೊದಲಿನ ನಟನಟೀವರ್ಗವು ಅಗಲಿದ ಮೇಲೆ ದೇವಿಕಾರಾಣಿ ಹೊಸ ನಟ ನಟೀ ವರ್ಗವನ್ನು ಅನ್ವೇಷಿಸುತ್ತಿದ್ದಾಳೆ.

ಕಾಂತಾ ಆಪ್ಟೆ, ಬಂಗಾಳಿಯಲ್ಲಿ

ಅಭಿನಯಿಸುವಳೆಂಬುದು ಇತ್ತೀಚೆಯ ಸುದ್ದಿ. ಲಕ್ಷ್ಮಿ ಪ್ರೊಡಕ್ಷನಿನವರು ಆ ಬಂಗಾಳಿ ಚಿತ್ರ ತಯಾರಿಸುವರಂತೆ. ತಮಿಳು ಚಿತ್ರದಲ್ಲಿ ಈಗಾಗಲೇ ಆಕೆ ನಟಿಸಿ ಮಂಗಳೂರಿನವರನ್ನು ಮರಳುಗೊಳಿಸಿದ್ದಾಳೆ. ಮರಾಠಿ ಆಕೆಯ ಮಾತೃಭಾಷೆ. ಹಿಂದಿ ಚಿತ್ರಗಳಲ್ಲಿನ ಆವಳ ಅನುಪಮ ಅಭಿನಯ ಅಖಿಲಭಾರತ ಪ್ರಸಿದ್ಧ. ಇನ್ನು ಪಂಜಾಬೀ, ತೆಲುಗು, ಕನ್ನಡ, ಮಳೆಯಾಳೀ ಭಾಷಾ ಚಿತ್ರಗಳಲ್ಲಿ ಕಾಂತಾಳನ್ನು ಅಭಿನಯಿಸುವುದು ಬಾಕಿಯುದೆ.

'ಪ್ರೇಮ ಸಂಗೀತ'

ಕೇಳಲು ಯಾರಿಗೆ ಮನಸ್ಸು ಇಲ್ಲ? ಹಾಗಾದರೆ ಮೊದಲು ಕೇಳಬೇಕು, ಲೀನಾ ಜಯರಾಜರ 'ಪ್ರೇಮ ಸಂಗೀತ'ವನ್ನು. ಇದು ಶಾಲಿಮಾರ್ ಕೃತಿ. 'ಮನಕೀ ಜೀತ್' ಎಂಬ ಶಾಲಿಮಾರ್‌ನವರ ಇನ್ನೊಂದು ಕೃತಿಯಲ್ಲಿ ನೀನಾ ಶ್ಯಾಮರು ಜತೆಗೂಡಿದ್ದಾರೆ!

"ಚೋಟಿಮಾ"

—ಕರ್ಶಿದ್! ಎಂದರೆ ಸಿನೆಮಾ ಪ್ರಿಯರ ಕಿವಿ ಕಣ್ಣು ನೆಟ್ಟಗಾಗುವುದು. ಆಕೆ ಈಗ ಅಭಿನಯಿಸುವ ಚಿತ್ರ 'ಚೋಟಿಮಾ', ರಣಜಿತ್ ಕೃತಿ. ಈ 'ಛೋಟಿಮಾ'ಳನ್ನು ನಾವು ಬೇಗನೇ ನೋಡ ಬಯಸುತ್ತೇವೆ.

ರೇಣುಕಾದೇವಿ

ಯನ್ನು 'ನಯಾ ಸಂಸಾರ' ನೋಡಿದವರು ಮರೆತಿರಲಾರರು. ಆಕೆ ಈಗ ತೆರೆಗೆ ಬಂದಿದ್ದಾಳೆ, 'ಸಹಾರಾ'ದಲ್ಲಿ; ರಾಸ್ಟಾನಿ ಆರ್ಟ್ ಪ್ರೊಡಕ್ಷನ್ ಕೃತಿಯಲ್ಲಿ. ನಾರಂಗ್, ಪ್ರಾಣ್, ಮೀನಾ, ರಜಿಯಾ ಬೇಗಂ ಮೊದಲಾದವರು ಇತರ ನಟವರ್ಗ.

'ನಗದ್ ನಾರಾಯಣ್'

ಒಂದು ವಿಚಿತ್ರ ಹೆಸರು! ಸಿಲ್ವರ್ ಸ್ಕ್ರೀನ್ ಎಕ್ಸ್‌ಚೇಂಜಿನವರ ಸಿನೆಮಾದ ಹೆಸರಿದು. ಲೀಲಾ ದೇಸಾಯಿ ಮತ್ತು ಪೆಂಡಾರ್ಕಾರ್ ನಟಿಸುತ್ತಾರೆ. ಹಾಸ್ಯಮಯ ರೋಮಾಂಚಕ ಚಿತ್ರ.

ಕಾರ್ಕಳ

ಸಹಾಯ ವಿವರ

ಸ್ಥಳೀಯ ಹರಿಜನ ಸೇವಾ ಸಂಘದ ಸಹಾಯಾರ್ಥ ಕಳೆದ ವಾರ ಆದ ಯಕ್ಷಗಾನ ಸಮಾರಂಭದ ಟಿಕೇಟು ಮಾರಾಟದಿಂದ ಜಮಾ ರೂ. ೬೨೦-೮-೦. ಖರ್ಚು ೧೧೭-೬-೭. ಸಹಾಯವಾಗಿ ಸಂಘಕ್ಕೆ ದೊರೆತದ್ದು ೫೦೨-೩-೫. ಎಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ. ಸಂಘವು ಎಲ್ಲರಿಗೂ ಕೃತಜ್ಞವಾಗಿದೆ.

ಸಭೆ ಸಮಾರಂಭಗಳು

ಕಾರ್ಕಳ ತಾಲೂಕಿನ ಬೋರ್ಡ ಎಲಿಮೆಂಟರಿ ಶಾಲಾ ಉಪಾಧ್ಯಾಯ ಸಂಘದ ವರ್ಷಾವಧಿ ಸಭೆ ಮತ್ತು ಕಾರ್ಕಳ ಪಂಚಾಯತಿ ಬೋರ್ಡಿನ ಸಾರ್ವಜನಿಕ ಶಾಲೆಯೊಳಗೆ ಶನಿವಾರ ಜಿಲ್ಲಾ ಇನ್ಸ್‌ಪೆಕ್ಟರ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲೂ, ಈ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಭೆ ಶ್ರೀ. ಯಂ. ಕೆ. ಪೂರ್ಣೇತ್ತಮ ಕಾಮತರ ಅಧ್ಯಕ್ಷತೆಯಲ್ಲೂ ಜರಗಿ, ಶ್ರೀಗಳಾದ ಯಚ್. ರಾಮರಾವ್, ಟಿ. ಯಂ. ಬಾಳಿಗಾ, ಡಿ. ವೆಂಕಟೇಶ ಭಟ್ಟ, ಕಟಪಾಡಿ ಶ್ರೀನಿವಾಸ ಶೆಣೈ, ಎ. ಸೀತಾರಾಮರಾವ್ ಮೊದಲಾದವರ ಭಾಷಣಗಳು ಆದುವು.

NOTICE

In the Court of the District Munsif of Mangalore.

O. S. 557/42.

I. A. S. 1646, 1647/42.

Between:

Pandit Thimmappa— *Plaintiff*

and

Chandu Shetty & others— *Defendants.*

To

2nd Pakira Shetty, nephew of Chandu Shetty, residing in Sooriuje village, Mangalore Taluk.

The abovenamed plaintiff has filed the above suit for setting aside the claim order, by an application R. I. A. 1646/42 for a temporary injunction and by an application R. I. A. 1647/42 for attachment before judgment of the plaint property pending the disposal of the above suit. Notice is hereby given that the said suit and the petitions are posted to 13-4-1943 for your appearance, failing which the same will be decided in your absence.

By order

Mangalore, 6-4-43. } **K. Balakrishna Rao,** Advocate for Pltf.

NOTICE

In the Court of the Dt. Judge of South Kanara.

O. P. No. 34/1943.

Between:

1. M. Kalyani Bai
2. K. Jani Bai
3. K. Ratna Bai } *Petitioners.*

and

M. Venkatraya Nayak & others *Respondents.*

Notice is hereby given that the above Petitioners have applied for the grant of succession certificate in respect of the debts due to the late M. Ramachandra Nayak who died in Mangalore on 27-7-'33. The above petition is posted to 30-6-1943 at 10-30 a. m. in the above Court. Persons concerned may appear in person or by Vakil and show cause if any against the application.

(By order of Court)

Mangalore, 8-4-1943. | **M. Keshava Pai,** *Counsel for Petrs.*

ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮಂಗಳೂರಲ್ಲಿ ಸ್ಥಾಪಿತವಾಗಿ ಕರ್ನಾಟಕದಲ್ಲಿ ಪ್ರಥಮವೂ ಸುಪ್ರಸಿದ್ಧವೂ, ಆದ ಈ ವಿಮಾ ಸಂಸ್ಥೆಯ ೧೯೪೨ನೇ ಇಸವಿಗೆ ಅಂತ್ಯವಾಗುವ ವರ್ಷದ ಅಂಕೆ ಸಂಖ್ಯೆಗಳ ವಿವರವು ನಮ್ಮ ಹಸ್ತಗತವಾಗಿದೆ. ಈ ಸಂಸ್ಥೆಯು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತ ೧೯೪೨ರಲ್ಲಿ ವಿಶೇಷದ ಅಭಿವೃದ್ಧಿ ಹೊಂದಿದ ವಿಷಯ ಕೆಳಗಿನ ಅಂಕೆ ಸಂಖ್ಯೆಗಳಿಂದ ತಿಳಿದುಬರುವುದು.

	೧೯೪೨	೧೯೪೧
ಹೊಸ ವ್ಯವಹಾರ:	ರೂ. ೭,೫೧,೮೫೦.	ರೂ. ೮,೩೪,೪೫೦.
ಪ್ರೀಮಿಯಮಿನ ಆದಾಯ	,, ೯೬,೩೪೦.	,, ೧,೦೪,೬೦೦.
ಜೀವವಿಮಾ ನಿಧಿ	,, ೩,೩೦,೯೫೫.	,, ೭,೦೪,೩೦೦.
ಸ್ಟರಕಾರಿ ಮತ್ತು ಸರಕಾರದಿಂದ ಒಪ್ಪಲಾದ ಭದ್ರತೆಗಳಲ್ಲಿ—	,, ೩,೦೧,೦೦೦.	,, ೩,೬೯,೪೦೦.
ಎಲ್ಲ ಬಗೆಯ ಖರ್ಚಿನ ಪ್ರಮಾಣ—	೪೮.೯%	೩೮.೩%
ರಿನ್ಯೂವಲ್ ಖರ್ಚಿನ	,, ೩೩.೫%	೧೯.೮%
ಸಂಪಾದಿಸಿದ ಬಡ್ಡಿ (ಎಸ್)	೪%	೪.೧%

ರಿಜರ್ವ್ ಬೇಂಕಿನಲ್ಲಿ, ಇರಿಸಬೇಕಾದ ಶಾಸನಬದ್ಧ ನಿಧಿ ೨,೦೦೦೦೦ ರೂಪಾಯಿಗಳು, ೧೯೪೩ರಲ್ಲಿ ಪೂರ್ಣವಾಗಿದೆ. ವಿಮಾ ಶಾಸನದಂತೆ ಅಗತ್ಯವಿರುವ ವಿನಿಯೋಗದ ಮೊತ್ತವು, ಸರಕಾರಿ ಮತ್ತು ಅದರಿಂದ ಒಪ್ಪಲಾದ ಭದ್ರತೆಗಳಲ್ಲಿ ಇರಬೇಕಾದುದರಿಂದಲೂ ಸುಮಾರು ಒಂದೂವರೆ ಪಾಲಷ್ಟು ಇದೆ. ಮೇಲ್ಕಂಡ ಅಂಕೆ ಸಂಖ್ಯೆಗಳಿಂದ ಈ ಸಂಸ್ಥೆಯ ಅಭಿವೃದ್ಧಿ ಮತ್ತು ಭದ್ರತೆಗಳು ಖಚಿತವಾಗುವವು.

ಸಂಸ್ಥೆಯ ಕಾರ್ಯಭಾರಗಳ ರೀತಿ ನೀತಿ, ಅದರ ಆಡಳಿತೆಯ ವಿಚಕ್ಷಣತೆ, ಅದರ ಪುರೋಭಿವೃದ್ಧಿ ಇತ್ಯಾದಿಗಳು ಸಮಸ್ತರ ಪ್ರಶಂಸೆಗೂ ಪಾತ್ರವೆನಿಸಿವೆ. ಮುಖ್ಯ ಇದಕ್ಕಿಂತಲೂ ದೊಡ್ಡ ವ್ಯವಹಾರವನ್ನು ಈ ಸಂಸ್ಥೆ ನಡೆಸುವರೆ, ನಮ್ಮ ಜಿಲ್ಲೆಯವರ, ಕನ್ನಡಿಗರ ಇತರ ದೇಶೀಯರ ಸಹಕಾರವು ಅವಶ್ಯವಾಗಿದೆ. ಈ ಯೋಗ್ಯ ವಿಮಾ ಸಂಸ್ಥೆಯು ಅತಿಶಯ ಪುರೋಭಿವೃದ್ಧಿ ಹೊಂದಲೆಂದು ನಮ್ಮ ಹಾರ್ದಿಕೆ.

THE CANARA BANKING CORPORATION Ltd.

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises,			
Reserve & other funds	3,71,882	13	11	furniture, etc.	91,659	0	0
Deposits	41,83,873	4	1	Advances	31,28,612	4	9
Due to Bankers	5,08,545	12	1	Investment on			
Bills per contra	3,59,357	12	1	Govt. Securities			
Sundries including				etc. at cost	15,34,536	14	3
branch adjustments &				Sundries	74,183	5	7
undisbursed profits	2,83,736	5	9	Bills for Collection	3,59,357	12	1
Profit for the year 1942	49,461	3	5	Cash on Hand &			
				with bankers	12,05,397	14	8
Total Rs.	63,93,747	3	4	Total Rs.	63,93,747	3	4

ಆಂಡ್ರೂಸಿನ ಅಂತರ್ಯ ಶುದ್ಧಿಯು ಸುಲಭ ಆರೋಗ್ಯ ನಿಯಮವು. ಪ್ರತಿ ಸ್ತ್ರೀಯೂ ಚೆಲುವು ಯೌವನ ಸಂತೋಷದಿಂದಿರಲು ಸಹಾಯ ಮಾಡುವುದು. ಆಂಡ್ರೂಸ್ ವಿರೇಚಕಕ್ಕಿಂತಲೂ ಉತ್ತಮವಾದದ್ದು. ನಿಮಗೆ ಬೇಕಾದಾಗಲೆಲ್ಲಾ ಒಂದು ಲೋಟದಷ್ಟು ತೆಗೆದುಕೊಂಡಲ್ಲಿ ಕಳಂಕವಾದ ಚರ್ಮಕ್ಕೆ ಕಾರಣವಾದ ವಿಷವನ್ನು ಹೊರಹಾಗಿಸಿ, ತಲೆನೋವು ಸಣ್ಣ ಕಾಯಿಲೆಗಳನ್ನು ನಿಲ್ಲಿಸುವುದು. ಆಂಡ್ರೂಸ್ ಸಂಪೂರ್ಣ ದೇಹವನ್ನೇ ಹೇಗೆ ಶುದ್ಧ ಮಾಡುವುದೆಂಬುದನ್ನು ನೋಡಿ:

ಮೊದಲು: ಆಂಡ್ರೂಸ್ ಬಾಯಿ, ನಾಲಗೆಯನ್ನು ಶುದ್ಧಿ ಮಾಡುವುದು.

ಅನಂತರ: ಆಂಡ್ರೂಸ್ ಜಠರವನ್ನು ಒಳ್ಳೆ ಸ್ಥಿತಿಯಲ್ಲಿಟ್ಟು ಹುಳಿಯನ್ನು ಸರಿಪಡಿಸುತ್ತೆ.

ಆ ಮೇಲೆ: ಆಂಡ್ರೂಸ್ ಲಿವರನ್ನು ಶಕ್ತಿಯುತವಾಗಿ ಮಾಡಿ ಪಿತ್ತವನ್ನು ತಡೆಯುವುದು.

ಕೊನೆಯದಾಗಿ: ನಿಮ್ಮ ಅಂತರ್ಯ ಶುದ್ಧಿ ಸಂಪೂರ್ಣವಾಗಲು ಆಂಡ್ರೂಸ್ ಸೌಮ್ಯವಾಗಿ ಮಲವಿಸರ್ಜನೆ ಮಾಡಿಸುವುದು. ತೊಂದರೆ ಕೊಡುವ ವಿಷಗಳನ್ನು ಹೊರಹಾಗಿಸಿ, ಮಲಬದ್ಧತೆ ಸರಿಪಡಿಸಿ, ರಕ್ತವನ್ನು ಶುದ್ಧಿಮಾಡಿ ಚರ್ಮವನ್ನು ಸ್ವಚ್ಛವಾಗಿಡುವುದು.

ಅಂತರ್ಯ ಶುದ್ಧಿಗೆ ಕ್ರಮವಾಗಿ ಉಪಯೋಗಿಸಿ

ಆಂಡ್ರೂಸ್ ಲಿವರ್ ಸಾಲ್ಟ್

ಆರೋಗ್ಯ ಪಾನೀಯ—ವಿರೇಚಕ

ANDREWS LIVER SALT

Health Drink — Tonic Laxative

113

ಪುಸ್ತಕಾವಲೋಕನ

ವಿನೋಬಾಜಿ 'ಗೀತಾಪ್ರವಚನಗಳು'

'ನನ್ನ ಮತ್ತು ಗೀತೆಯ ಸಂಬಂಧ ತರ್ಕವನ್ನು ಮೀರಿದ್ದಾಗಿದೆ. ತಾಯಿ ಹಾಲಿನಿಂದ ನನ್ನ ಪುಷ್ಟಿಗೊಂಡುದಕ್ಕಿಂತಲೂ ಹೆಚ್ಚಾಗಿ ನನ್ನ ಹೃದಯ ಬುದ್ಧಿಗಳ ಬೆಳವಣಿಗೆಯು ಗೀತೆಯ ಹಾಲಿನಿಂದಾಗಿದೆ. * ಅನುವಾನಕ್ಕೆ ಕತ್ತರಿಯುಕ್ತಿ ಪ್ರಜ್ಞೆ ಹಾಗೂ ಪ್ರಯೋಗಗಳ ಶಕ್ತಿಯಿಂದಲೇ ಗೀತೆಯ ಗಗನವನ್ನು ನಾನು ಕೈಲಾದಷ್ಟು ಸುತ್ತುತ್ತಲಿದ್ದೇನೆ.* ಗೀತೆಯೆಂದರೆ ನನಗೆ ಪ್ರಾಣತತ್ತ್ವ. ಗೀತೆಯ ವಿಚಾರವಾಗಿ ನಾನು ಇನ್ನೊಬ್ಬರೊಡನೆ ಮಾತನಾಡುವುದೆಂದರೆ ಗೀತಾ ಸಮುದ್ರದಲ್ಲಿ ತೇಲಾಡಿದಂತೆ; ಹಾಗೂ ಒಬ್ಬನೇ ಇದ್ದಾಗ ಆ ಸುಧಾ ಸಾಗರದಲ್ಲಿ ಮುಳುಗಿಕೊಂಡಂತೆ ಇರುತ್ತೇನೆ'.

ಆಚಾರ್ಯ ವಿನೋಬರ ಮೇಲಿನ ಮಾತುಗಳು ಗೀತೆಯ ವಿಷಯ ಅವರಿಗಿರುವ ಅನನ್ಯ ಭಕ್ತಿಯನ್ನು ಪ್ರದರ್ಶಿಸುತ್ತವೆ. ಇಂಥಾ ಗೀತಾ ಭಕ್ತರು ಗೀತೆಯ ವಿಷಯದಲ್ಲಿ ೧೯೩೨ರಲ್ಲಿ ಧುಳೇದ ಸೆರೆಮನೆಯಲ್ಲಿದ್ದಾಗ ಅಧ್ಯಾಯಕ್ಕೊಂದರಂತೆ ಹದಿನೆಂಟು ವಿದ್ವತ್ಪೂರ್ಣ ಪ್ರವಚನಗಳನ್ನು ಕೊಟ್ಟಿದ್ದರು. ಶ್ರೀ ಸಾನೆಗುರೂಜಿಯವರು ಅದನ್ನು ಸವಿಸ್ತಾರವಾಗಿ ಬರೆಕೊಂಡಿದ್ದರು. ಆ ಮೇಲೆ ಅದನ್ನು ಮುದ್ರಿಸಿ ಪ್ರಕಟಿಸಬೇಕೆಂದು ಬಲು ಜನರ ಅಪೇಕ್ಷೆಯಿರಲು ವಿನೋಬಾಜಿ ಭಾಷಣ ಸ್ವಾತಂತ್ರ್ಯದ ಮೊದಲನೆಯ ಸತ್ಯಾಗ್ರಹಿಯಾಗುವ ಅಪೂರ್ವ ಸಂಧಿಯ ಕೆಲ ದಿನಗಳ ಒಂದೆ ಈ ಕಾರ್ಯಕ್ಕೆ ಕೈಹಾಕಿದ್ದರು. ಎರಡು ಮೂರು ಅಧ್ಯಾಯಗಳನ್ನು ತಿದ್ದಿ ಮುದ್ರಣಕ್ಕೆ ಕೊಡುವಷ್ಟರಲ್ಲಿಯೇ ಅವರು ಸೆರೆಮನೆ ಸೇರಬೇಕಾಯಿತು! ಹಾಗಾಗಿ ಎರಡು ಅಧ್ಯಾಯಗಳ ಪ್ರವಚನಗಳನ್ನು ಮಾತ್ರ ಪ್ರಕಟಿಸಲಾಯಿತು.

ಗಾಂಧಿ ಯುಗದ ಆಚಾರ್ಯರಾದ ವಿನೋಬಾಜಿಯವರು ಮರಾಠಿಯಲ್ಲಿ ಬರೆದೀ ಗ್ರಂಥವನ್ನು ಹುಬ್ಬಳ್ಳಿಯ ಅವಧೂತ ಗ್ರಂಥಮಾಲೆಯ ಶ್ರೀ. ದತ್ತಾತ್ರೇಯ ಶಿವಾನಂದ ಬಂಕಾಪುರ ಇವರು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಾಶಪಡಿಸಿದ್ದಾರೆ. ಇದು ಅವರ ಸಾಧನ ಗ್ರಂಥಾವಳಿಯ ಎರಡನೆಯ ಗ್ರಂಥ. ಕ್ರೌನ್ ೧/೮ ಆಕಾರದ ೩೬ ಪುಟಗಳುಳ್ಳ ಈ ಪುಸ್ತಕದ ಬೆಲೆ ನಾಲ್ಕಾಣೆ. ಹುಬ್ಬಳ್ಳಿ 'ಸಾಹಿತ್ಯಭಂಡಾರ'ದವರು ಇದರ ಮಾರಾಟಗಾರರು. ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಅಚ್ಚುಕಟ್ಟಾಗಿ ಇದು ಮುದ್ರಿಸಲ್ಪಟ್ಟಿದೆ.

ಗೀತೆಯ ತಿರುಳೇನೆಂಬ ವಿಷಯದಲ್ಲಿ ಆಚಾರ್ಯ ವಿನೋಬರ ಒಂದು ದೀರ್ಘ ವಿದ್ವತ್ಪೂರ್ಣ ವ್ಯಾಖ್ಯಾನ ಇದು. ಅರ್ಜುನನು ಹೇಡಿಯಾಗಿ, ಅಹಿಂಸಾವಾದಿಯಾಗಿ ಸಂಶಯಗ್ರಸ್ತನಾದುದಲ್ಲ; ಸ್ವಜನಾಸಕ್ತಿಯಿಂದ, ಮೋಹವಶನಾಗಿ, ಕರ್ತವ್ಯವನ್ನು ಮರೆತುಬಿಡುವುದರಲ್ಲಿದ್ದವನನ್ನು ಕೃಷ್ಣನು ಕರ್ತವ್ಯ ಮಾಡೆಂದು ಎಚ್ಚರಿಸಿದನು, ಸ್ವಧರ್ಮಕ್ಕೆ ಅಡ್ಡಿ ಬರುತ್ತಿರುವ ಮೋಹವನ್ನು ಹೊಡೆದು ಹಾಕಲಿಕ್ಕೆಂದೇ ಗೀತೋಪದೇಶವಾಯಿತು; ಎಂದು ವಿನೋಬಾಜಿ ಮೊದಲನೆಯ ಅಧ್ಯಾಯದ ತಿರುಳನ್ನು ತಿಳಿಸಿದ್ದಾರೆ. ಗೀತೆಯು ಎರಡನೆಯ ಅಧ್ಯಾಯದಿಂದ ಆರಂಭವಾಗುವುದೆಂದು ಕೆಲವರು ವಾದಿಸುವುದನ್ನು ಅವರು ಒಪ್ಪುವುದಿಲ್ಲ. ಮೊದಲಿನ ಮುನ್ನುಡಿ ಭಾಗವೂ ಬಹಳ ಮಹತ್ವದ್ದೆಂದೂ ಅರ್ಜುನನ ಭೂಮಿಕೆ ಯಾವುದು, ಗೀತೆ ಯಾವುವನ್ನು ಹೇಳಲು ಹೊರಟಿದೆಯೆಂಬ ವಿವೇಚನೆಗಳು ಈ ಪ್ರಸ್ತಾವನೆಯ ಕಥಾಭಾಗವಿಲ್ಲದೆ ಚನ್ನಾಗಿ ವಿದಿತವಾಗಲಾರವೆಂದು ವಿನೋಬಾಜಿ ವಿವರಿಸಿರುವರು.

ಎರಡನೆಯ ಅಧ್ಯಾಯದಲ್ಲಿ ಭಗವಂತನು ಜೀವನದ ಮಹಾಸಿದ್ಧಾಂತವನ್ನು ಹೇಳುತ್ತಾನೆಂದೂ ಎರಡನೆಯ ಅಧ್ಯಾಯದಲ್ಲಿರುವ 'ಸಾಂಖ್ಯ ಬುದ್ಧಿ' ಶಬ್ದಕ್ಕೆ 'ಜೀವನದ ಮೂಲ ಸಿದ್ಧಾಂತ'ವೆಂದು ತಾನು ಅರ್ಥ ಮಾಡಿಕೊಂಡಿರುವುದಾಗಿಯೂ ಆಚಾರ್ಯರು ತಿಳಿಸುತ್ತಾರೆ. ಎರಡನೆಯ ಅಧ್ಯಾಯದ ಜೀವನ ಸಿದ್ಧಾಂತವನ್ನು ೧) ಆತ್ಮನ ಅವಿನಾಶಿತ್ವ ಮತ್ತು ಏಕತ್ವ ೨) ಶರೀರದ ಕ್ಷುದ್ರತ್ವ ೩) ಸ್ವಧರ್ಮದ ನಿತ್ಯತ್ವವೆಂದು ಮೂರು ವಿಧವಾಗಿ ವಿನೋಬಾಜಿ ವಿಂಗಡಿಸಿರುವರು. ಸ್ವಧರ್ಮದ ವಿಷಯ ಆಚಾರ್ಯರು ಬಹಳ ವಿಶಾಲ ಅರ್ಥ ವಿವರಿಸಿದ್ದಾರೆ. ಸ್ವಧರ್ಮ ಸಂಕೋಚ ಮನೋಭಾವನೆಯದಲ್ಲವೆಂದು ವಿಶದಪಡಿಸುತ್ತಾರೆ. ಜಾತಿ ಗಲಿಬಿಲಿಯನ್ನು ಖಂಡಿಸುತ್ತಾರೆ, ಮನುಷ್ಯನು ಶರೀರ ಲಂಪಟನಿರದೆ, ದೇಹವದು ಸೇವೆಯ ಸಾಧನವೆಂದು ತಿಳಿಯತಕ್ಕದೆಂದು ಸಾಧಿಸುತ್ತಾರೆ, ತ್ಯಾಗದ ಮಹಿಮೆಯನ್ನು ತಿಳಿಸುತ್ತಾರೆ. ಮುಂದೆ ಗೀತೆಯು ಕರ್ಮಮಾರ್ಗದ ವಿಷಯವಾಗಿ ಸಾರಿದ ಉದಾತ್ತ ತತ್ವಗಳನ್ನು ವಿಶದಪಡಿಸಿರುವರು. 'ಕರ್ಮಮಾಡಿ ಫಲವನ್ನು ಬಿಡಿ ಹಾಗೂ ಫಲವನ್ನು ಬಯಸದೆ ಕರ್ಮಮಾಡಿ' ಎಂಬೀ ತತ್ವದ ಮಹತ್ವವನ್ನು ತಿಳಿಸಿದ್ದಾರೆ. ಈ ವಿಷಯಗಳನ್ನು ಪ್ರತಿಪಾದಿಸುವಲ್ಲಿ ಅನೇಕ ಉದಾಹರಣೆಗಳನ್ನಿತ್ತು ವಿನೋಬಾಜಿ ಸ್ಪಷ್ಟಪಡಿಸುತ್ತಾರೆ. ಗೀತೆಯ ಎರಡನೆಯ ಅಧ್ಯಾಯದಲ್ಲಿ ಸ್ಥಿತಪ್ರಜ್ಞನ ಕುರಿತು ಹೇಳಿದ ಹದಿನೆಂಟು ಶ್ಲೋಕಗಳು ಗೀತೆಯ ಹದಿನೆಂಟು ಅಧ್ಯಾಯಗಳ ಸಾರವನ್ನೊಳಗೊಂಡಿವೆಯೆಂಬುದು ಆಚಾರ್ಯರ ಅಭಿಪ್ರಾಯವಾಗಿದೆ. ಹೀಗೆ ಸಾಂಖ್ಯಬುದ್ಧಿ, ಯೋಗಬುದ್ಧಿ, ಸ್ಥಿತಪ್ರಜ್ಞಗಳಿಂದ ಸೇರಿದ ಸಂಪೂರ್ಣ ಜೀವನ ಶಾಸ್ತ್ರವು ಗೀತೆಯ ಎರಡನೆಯ ಅಧ್ಯಾಯದ ಅರ್ಥವೆಂದು ವ್ಯಾಖ್ಯಾನಿಸಿರುವರು.

ಭಾಷಣ ಸ್ವಾತಂತ್ರ್ಯದ ಮೊದಲನೆಯ ಸತ್ಯಾಗ್ರಹಿಯಾಗಿ ಸೆರೆಮನೆ ಸೇರಿದ ವಿನೋಬಾಜಿ ಇನ್ನೂ ಬಂಧನದಿಂದ ಬಿಡುಗಡೆ ಹೊಂದಿಲ್ಲ. ಹಾಗಾಗಿ ಇನ್ನೂ ಅವರ 'ಗೀತಾ ಪ್ರವಚನಗಳು' ಸಂಪೂರ್ಣವಾಗಿ ಪ್ರಕಟವಾಗುವ ಸುವರ್ಣ ಸಂಧಿ ಬಂದಿಲ್ಲ, ಇನ್ನೂ ಗೀತಾಭ್ಯಾಸಿಗಳ ದಾಹ ಅಡಗುವ ಕಾಲವೊದಗಿಲ್ಲ. ಇನ್ನೆಂದು ನಾವು ಮಿಕ್ಕ ಅಧ್ಯಾಯಗಳ ಕುರಿತು ಬರೆದ ಅಮೂಲ್ಯ ವ್ಯಾಖ್ಯಾನವನ್ನೋದುವೆವೋ, ಬಹುಶಃ ಸ್ವತಂತ್ರವಾದ ಭಾರತದಲ್ಲಿ ಓದಲಿರುವೆವೋ ನಮಗೆ ಒಂದೂ ಹೇಳಬರುವುದಿಲ್ಲ. ಇಷ್ಟನ್ನಾದರೂ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿ ಕನ್ನಡಿಗರ ಜ್ಞಾನದಾಹವನ್ನಡಗಿಸಲು ಪ್ರಯತ್ನಿಸಿದ ಹುಬ್ಬಳ್ಳಿ, ಅವಧೂತ ಗ್ರಂಥಾಲಯದವರಿಗೆ ಕನ್ನಡಿಗರು ಚಿರಋಣಿಗಳು.

—ಕಯ್ಯಾರ

ESTD.] **Canara Bank, Limited** [1906.

(Incorporated in British India with limited liability)

BALANCE SHEET AS ON 31st DECEMBER 1942

LIABILITIES	Rs	As	Ps	ASSETS	Rs	As	Ps
SUBSCRIBED CAPITAL, Rs 20 lacs				Fixed Capital			
Paid up Capital	14 96 072	8	0	Expenditure	1 00 182	13	2
Reserves	4 50 000	0	0	ADVANCE TO CUSTOMERS			
Deposits	1 45 50 502	7	1	Secured by valuable securities	51 16 338	6	2
Due to Bankers	13 50 000	0	0	Secured by bills of Exchange etc	24 36 563	10	11
Bills for collection as per contra	8 76 160	10	2	Investments	65 65 374	15	7
Liability for Foreign Bills negotiated	8 05 026	10	5	Bills for collection	8 76 160	10	2
Sundries	10 51 464	10	11	Liabilities of customers for foreign bills negotiated	8 05 026	10	5
Appropriation A/c	2 062	3	9	Sundries	4 71 599	3	0
Net Profits	1 53 310	2	10	Cash on hand and at Call with Bankers	43 63 352	14	8
Total Rs	2 07 34 608	5	1	Total Rs	2 07 34,608	5	1

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ 2-12-0 ರೂ 4-8-0, ರೂ 8 ಕ್ರಯಕ್ಕೆ ದೊರಕುವುವು

ತಯಾರಿಸುವವರು ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency,	**The Joint Booking Office,**
MANGALORE.	KODIALBAIL.

The Bank of Mangalore Limited, Mangalore.

ESTD. 1921

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ತಲೆಶೂಲೆ, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು, ... ಚೇಳು ವಿಷ ಮುಂತಾದ ಚೇನ, ವಾತ, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನು ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚಿಕ್ಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:— 1. ವಂಟಾರ ಗಲ್ಲಿ ಹುಬ್ಬಳ್ಳಿ.
2. 36 ಫ್ರಾಕ್ರೋಪ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 16—4—1943 [ಸಂಚಿಕೆ 16]

ಪೆಸಿಫಿಕ್ ಪರಿಷತ್ತಿನಲ್ಲಿ ಭಾರತದ ವಿಚಾರ—

ಮಹಾತ್ಮರು ಮರಣಾಂತ ಉಪವಾಸ ಕೈಕೊಳ್ಳುವರೆ?

ಗಾಂಧಿಜಿ ಮರಣಾಂತ ಉಪವಾಸ ಕೈಕೊಳ್ಳುವರೆಂಬುದಾಗಿ, ಲಂಡನಿನ ಟೆಲಿಗ್ರಾಫ್ ಪತ್ರಿಕೆಯು ಹೊಸದಿಲ್ಲಿ ಬಾತ್ಮಿದಾರನು ಬರೆಯುತ್ತಾನೆ. ಆದರೆ ಈ ವಾರ್ತೆಯನ್ನು ಸಮರ್ಥಿಸುವ ಸುದ್ದಿಯೊಂದೂ ಬಂದಿಲ್ಲ. ಗಾಂಧಿಜಿ ಈಗ ವೈಸರಾಯರೊಡನೆ ಪತ್ರವ್ಯವಹಾರ ಮಾಡುತ್ತಿರುವರೆಂದೂ, ದೇಶದಲ್ಲಿ ಆಗುವ ಅತ್ಯಾಚಾರಗಳಿಗೆ ಸರಕಾರವು ಕಾಂಗ್ರೆಸು ಮತ್ತು ಗಾಂಧಿಜಿಯರನ್ನು ಹೊಣೆಗಾರರೆಂದು ಹೇಳುವ ವಿಷಯ ಅವರು ಬಹಳ ಸಂತಾಪಗೊಂಡಿರುವರೆಂದೂ ಹೇಳಲಾಗುತ್ತದೆ.

ಪೇಸಿಫಿಕ್ ಪರಿಷತ್ತಿನಲ್ಲಿ ಭಾರತ ವಿಚಾರ

ವಾಶಿಂಗ್‌ಟನಿನಲ್ಲಿ ಸೇರಿದ ಪೆಸಿಫಿಕ್ ಪರಿಷತ್ತಿನಲ್ಲಿ ಭಾರತದ ವಿಚಾರ ಚರ್ಚೆಗಳಾದವೆಂದು ಈಗ ಆ ವರದಿಯಿಂದ ತಿಳಿದುಬರುತ್ತದೆ. ಸದ್ಯದ ಭಾರತದ ಬಿಕ್ಕಟ್ಟನ್ನು ಬಗೆಹರಿಸಲು, ಅಲ್ಲಿಗೆ ಹೋಗಿದ್ದ ಭಾರತದ ಪ್ರತಿನಿಧಿಯೊಬ್ಬನು ಸೂಚಿಸಿದ ಯೋಜನೆ ಇಂತಿದೆ: (೧) ವೈಸರಾಯಮಂಡಳದ ಮಹತ್ವದ ಖಾತೆಗಳಾದ ಗೃಹ ವ್ಯವಸ್ಥೆ ಹಣ ಕಾಸು ಹಾಗು ಯುದ್ಧ ಸಾರಿಗೆ ಈ ಮೂರನ್ನು ಭಾರತೀಯ ಸದಸ್ಯರ ಕೈಗೆ ಕೊಡಬೇಕು. ಹೀಗೆ ಮಾಡಿದರೆ ಒಟ್ಟು ಸದಸ್ಯರ ಸಂಖ್ಯೆ ೧೧ ಆಗಿ ಅವರೆಲ್ಲರೂ ಭಾರತೀಯರೇ ಆಗುವರು. ಆದರೆ ವೈಸರಾಯರಿಗೆ, ಈ ಮಂಡಲದ ನಿರ್ಣಯವನ್ನು ಮೀರಿ ನಡೆಯುವ ಅಧಿಕಾರ (ವೆಟೋ) ಇರಬೇಕು. (೨) ಶಾಸನ ಘಟನೆಗಳನ್ನು ತಯಾರಿಸಲು ಅವಶ್ಯವಿದ್ದ ಘಟನಾ ಸಮಿತಿಯ ಸ್ವರೂಪವನ್ನು ನಿರ್ಧರಿಸಲು ಇನ್ನೊಂದು ಸಮಿತಿಯನ್ನು ನೇಮಿಸಬೇಕು. ಮೊದಮೊದಲು ಈ ಸೂಚನೆಗೆ ಪರಿಷತ್ತಿನಲ್ಲಿ ಅಷ್ಟು ಮಹತ್ವ ದೊರೆಯದಿದ್ದರೂ ಕೊನೆಗೆ ಸದಸ್ಯರೆಲ್ಲರೂ ಇದು ಮಹತ್ವದ ಸೂಚನೆಯೆಂದು ಅಭಿಪ್ರಾಯಪಟ್ಟರು. ಮತ್ತು ಭಾರತದ ಸಮಸ್ಯೆಯಲ್ಲಿ ಅಮೆರಿಕವಾಗಲಿ ಮೂರನೆಯ ಯಾವ ರಾಷ್ಟ್ರವಾಗಲಿ ಕೈಹಾಕುವುದು ಅನುಚಿತವೆಂದೂ ಅಭಿಪ್ರಾಯಪಟ್ಟರು. ಬಳಿಕ ಅಟ್ಲಾಂಟಿಕ್ ಘೋಷಣೆ ವಿಷಯ ಚರ್ಚೆಯಾಗಿ ಇದು ಬಹಳ ಅಸ್ಪಷ್ಟವಿದ್ದು, ಇಡೀ ಜಗತ್ತಿಗೆ ಅನ್ವಯಿಸುತ್ತದೆಂಬ ಬಗ್ಗೆ ಸ್ಪಷ್ಟ ಸಾರಬೇಕೆಂದು ಸದಸ್ಯರು ಹೇಳಿದರು. ಪ್ಯಾಸಿಫಿಕ್ ಸಮಿತಿಯ ಉದ್ದೇಶಗಳ ಕುರಿತು ಹೀಗೆ ಹೇಳಲಾಗಿದೆ: (೧) ಏಶ್ಯ ಮತ್ತು ಜಗತ್ತಿನ ಇತರ ಭಾಗಗಳಲ್ಲಿ ಶಾಂತಿಯನ್ನು ನೆಲೆಗೊಳಿಸಲು ಅಂತರ್‌ರಾಷ್ಟ್ರೀಯ ಸಲಹೆಗಳನ್ನು ಜಾರಿಗೆ ತರುವುದು; ಜಗತ್ತಿನ ಶಾಂತಿ ಸ್ಥಾಪಿಸಬೇಕಾದರೆ ಭೂ, ಜಲ, ಹಾಗೂ ವಾಯು ಬಲಗಳ ಸಂಗ್ರಹ ಮಾತ್ರವಲ್ಲ ಕೆಲವು ನಾಗರಿಕ ಹಿತಾಧಿಕಾರಗಳೂ ಅಂತರ್‌ರಾಷ್ಟ್ರೀಯ ಸಮಿತಿಯ ಕೈಯಲ್ಲಿರಬೇಕು: (೨) ಎಲ್ಲಾ ರಾಷ್ಟ್ರಗಳ ಸ್ನೇಹ ಸರಕಾರಗಳ ಬೆಂಬಲದಿಂದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ವ್ಯಾಪಾರ ಮೊದಲಾದವು ಏರ್ಪಡುವುದು.

ಮಹಾತ್ಮರು ಮರಣಾಂತ ಉಪವಾಸ ಕೈಕೊಳ್ಳುವರೆ?

ಪಾರ್ಸಿಗಳಿಗೆ ಸರಕಾರದ ಸಂರಕ್ಷಣೆ ಬೇಡ

೧೦ ಸಾವಿರ ರೂಪಾಯಿ ಇನಾಮು!

ಶ್ರೀ ಜಯಪ್ರಕಾಶರನ್ನು ಹಿಡಿದು ಕೊಟ್ಟವರಿಗೆ!

ಕಳೆದ ನವಂಬರ ೯ನೇ ತಾರೀಕಿನ ಸುಮಾರಿಗೆ ಹಜಾರಿಭಾಗ ಸೆರೆಮನೆಯಿಂದ ತಪ್ಪಿಸಿಹೋದ ಅಖಿಲಭಾರತ ಕಾಂಗ್ರೆಸ್-ಸೋಶಿಯಲಿಸ್ಟ್ ಪಕ್ಷದ ನಾಯಕರಾದ ಶ್ರೀ-ಜಯಪ್ರಕಾಶ ನಾರಾಯಣರನ್ನು ಹಿಡಿದುಕೊಟ್ಟವರಿಗೆ ಐದು ಸಾವಿರ ರೂಪಾಯಿ ಇನಾಮು ಕೊಡುವುದಾಗಿ ಹಿಂದೊಮ್ಮೆ ಸರಕಾರದವರು ಪ್ರಕಟಿಸಿದ್ದರಷ್ಟೆ? ಈಗ ಆ ಇನಾಮಿನ ಹಣವನ್ನು ಐದು ಸಾವಿರದಿಂದ ಹತ್ತು ಸಾವಿರಕ್ಕೆ ಏರಿಸಲಾಗಿದೆ! ಹಿಂದೆ ಶ್ರೀ ಜಯಪ್ರಕಾಶರು ಸೆರೆಮನೆಯಲ್ಲಿದ್ದಾಗ, ಅವರು ಹಿಂಸಾತ್ಮಕ ಕ್ರಾಂತಿಕೃತ್ಯಕ್ಕೆ ಉದ್ಯೋಗಿಸುತ್ತಿರುವರೆಂದು ಅವರ ಮೇಲೆ ಆರೋಪ ಹೊರಿಸಿ, ಅವರಿಗೆ ಆತ್ಮಸಮರ್ಥನೆ ಮಾಡಲು ಆಸ್ಪದ ಕೊಡದೆ, ಸರಕಾರವು ಒಂದು ಪ್ರಕಟಣೆ ಹೊರಡಿಸಿತ್ತು! ಅದಕ್ಕೆ ಗಾಂಧಿಜಿ ಹೀಗೆ ಬರೆದಿದ್ದರು: 'ಶ್ರೀ ಜಯಪ್ರಕಾಶರು ಹಿಂಸಾತ್ಮಕ ಕ್ರಾಂತಿಯ ಹಂಚಿಕೆ ಮಾಡಿದ್ದಾರೆಂದು ಸರಕಾರ ಹೇಳುವುದನ್ನು ನಾನು ನಂಬಲೂ ನಂಬದಿರಲೂ ಆಧಾರಗಳೇನೂ ಇಲ್ಲ. ಆದರೆ ಶ್ರೀ-ಜಯಪ್ರಕಾಶರು ಪಾಶ್ಚಾತ್ಯ ದೇಶದಲ್ಲಿ ಹಲಕಾಲ ಇದ್ದು ಪಾಶ್ಚಿಮಾತ್ಯ ರಾಜಕೀಯವನ್ನು ಅಭ್ಯಾಸ ಮಾಡಿದವರು; ಪಾಶ್ಚಾತ್ಯ ರಾಜಕೀಯದಲ್ಲಿ ಹಿಂಸಾತ್ಮಕ ಕೃತ್ಯಗಳಿಗೆ ಆಸ್ಪದವಿದೆ. ಆದ್ದರಿಂದ ಶ್ರೀ ಜಯಪ್ರಕಾಶರು ಹಿಂಸೆಯ ವಿಷಯ ಆಲೋಚನೆ ಮಾಡಿದ್ದಾರೆಂದರೂ ಪಾಶ್ಚಾತ್ಯ ರಾಜಕೀಯ ವಿಚಾರ ಧೋರಣೆಯನ್ನು ಅರಿತವರಿಗೆ ಆಶ್ಚರ್ಯವಾಗಲಾರದು.'

'ಪಾರ್ಸಿಗಳಿಗೆ ಸರಕಾರದ ಸಂರಕ್ಷಣೆ ಬೇಡ'

ಅಟ್ಲೆಯವರಿಗೆ ವಾಡಿಯರ ಉತ್ತರ!

-ಕಾಮನ್ಸ್ ಸಭೆಯಲ್ಲಿ ಇತ್ತೀಚೆಗೆ ಅಟ್ಲಿಯವರು ಪಾರ್ಸಿ ಪಂಗಡವನ್ನು ಅಲ್ಪ ಸಂಖ್ಯಾಕ ಪಂಕ್ತಿಗೆ ಸೇರಿಸಿ, ಅವರಿಗೆ ಬ್ರಿಟಿಷರಿಂದ ಸಂರಕ್ಷಣೆ ಬೇಕಾಗಿದೆಯೆಂದು ವಾದಿಸಿದರು. ಹೀಗೆಯೇ ಹಿಂದೊಮ್ಮೆ ಹೇಳಿದ್ದಕ್ಕೆ ಉತ್ತರವಾಗಿ, ಪಾರ್ಸಿಯವರು ಸಹಿ ಹಾಕಿ, ತಮಗೆ ಬ್ರಿಟಿಷರಿಂದ ಸಂರಕ್ಷಣೆ ಬೇಕಾಗಿಲ್ಲ ಎಂದು ಉತ್ತರ ಕಳುಹಿಸಿದ್ದರು. 'ಹೀಗಿರುತ್ತಾ ಅಟ್ಲೆಯವರು ಪುನಃ ಅದೇ ರೀತಿ ಹೇಳುವುದು ಆಶ್ಚರ್ಯಕರವಿದೆ. ನಮಗೆ ಬ್ರಿಟಿಷರಿಂದ ಸಂರಕ್ಷಣೆ ಬೇಕಾಗಿಲ್ಲ. ಅಲ್ಪ ಸಂಖ್ಯಾಕರ ಸಂರಕ್ಷಣೆಯ ವಿಷಯ ಬ್ರಿಟಿಷರು ಮಾತನಾಡುವುದು ಭಾರತದಲ್ಲಿ ಬ್ರಿಟಿಷರಾಡಳಿತವನ್ನು ದೃಢಪಡಿಸಲಿಕ್ಕಲ್ಲದೆ ನಮ್ಮ ಪ್ರಯೋಜನಕ್ಕಾಗಿಯಲ್ಲ. ನಮ್ಮ ಹಿತವೆಂದರೆ ಇಡೀ ದೇಶದ ಹಿತ. ನಮಗೆ ಪ್ರತ್ಯೇಕ ಹಿತ ಸಂಬಂಧವಿಲ್ಲ. ನಮಗೆ ಅದಕ್ಕಾಗಿ ಬ್ರಿಟಿಷರ ರಕ್ಷಣೆಯೂ ಬೇಡ' ಎಂಬುದಾಗಿ ಪಾರ್ಸಿ ಸ್ವಾತಂತ್ರ್ಯಪಕ್ಷದ ಪ್ರೊ| ಪಿ. ಟಿ. ವಾಡಿಯರು ಒಂದು ಪ್ರಕಟಣೆ ಹೊರಡಿಸಿದ್ದಾರೆ.

ಅಜಾದರ ಪತ್ನಿ ದಿವಂಗತರಾದರು!

ರಾಷ್ಟ್ರಪತಿ ಮೌಲಾನಾ ಅಬುಲ್‌ಕಲಂ ಅಜಾದರ ಪತ್ನಿ ಬೇಗಂ ಅಜಾದರು ತಾ. ೯ರಂದು ಮುಂಜಾನೆ ೯ ಗಂಟೆಗೆ ದಿವಂಗತರಾದರು. ಪ್ರಾತಃ ಮೂರು ಗಂಟೆ ಹೊತ್ತಿಗೇ ಅವರ ಪರಿಸ್ಥಿತಿ ಬಹಳ ಚಿಂತಾಜನಕವಿತ್ತು. ಸಾಯುವಾಗ ಅವರಿಗೆ ೪೫ ವರ್ಷ ಪ್ರಾಯ. ಕಳೆದ ಎರಡು ವರ್ಷಗಳಿಂದ ಬೇಗಂ ಅಜಾದರು ಕ್ಷಯರೋಗದಿಂದ ಬೇನೆ ಬಿದ್ದಿದ್ದು, ಇತ್ತೀಚೆಗೆ ಅವರಿಗೆ ಅತಿಸಾರವೂ ಉಂಟಾಗಿ ಕೆಲದಿನಗಳ ಹಿಂದೆ ಅವರ ಪರಿಸ್ಥಿತಿ ಬಹಳ ಶೋಚನೀಯವೆನಿಸಿತ್ತು. ಈ ಸಂದರ್ಭದಲ್ಲಿ ಬೇಗಂ ಅಜಾದರನ್ನು ಕೊನೆಗೊಮ್ಮೆಯಾದರೂ ನೋಡಲು, ಸರಕಾರವು ಅವರ ಪತಿಗೆ ಸೆರೆಮನೆಯಲ್ಲಿರುವ ರಾಷ್ಟ್ರಪತಿ ಮೌಲಾನಾ ಅಬುಲ್‌ಕಲಂ ಅಜಾದರಿಗೆ ಅನುಮತಿ ಕೊಡಬೇಕೆಂದು ಪ್ರಾರ್ಥಿಸಿ ಸರಕಾರಕ್ಕೆ ಬಿನ್ನಹ ಕಳುಹಿಸಿದ್ದರು. ಆದರೆ ಸರಕಾರವು ಅಜಾದರಿಗೆ ಆ ಸಂದರ್ಭವನ್ನು ಒದಗಿಸಲಿಲ್ಲ! ಅವರು ಸೆರೆ ಮನೆಯಲ್ಲಿಯೇ ಉಳಿದು ಅವರ ಪತ್ನಿ ಕಣ್ಣಿಕಾಯಿಲೆಯಿಂದನರಳುವಾಗಲೂ ಅಂತ್ಯ ದರ್ಶನವೂ ಸಿಗದೆ ಪ್ರಾಣ ಬಿಡುವಂತಾಯಿತು! "ಮೌಲಾನಾ ಅಜಾದರು ಅಂತ್ಯಕಾಲದಲ್ಲಿ ಬೇಗಮರ ಬಳಿಯಿರದುದು ಬಹಳ ಶೋಚನೀಯ" ಎಂದು ಭೂಲಾಭಾಯಿ ದೇಸಾಯಿಯವರೇ ಪತ್ರಿಕಾ ಬಾತ್ಮಿದಾರರೊಡನೆ ಹೇಳಿದರು. ಬೇಗಂ ಅಜಾದರು ಹಳೆಯ ಕಾಲದ ವಿಚಾರದವರಿದ್ದರೂ, ಸ್ವಾಭಾವಿಕವಾದ ಸೌಜನ್ಯ ಸಂಸ್ಕೃತಿಗಳು ಅವರಲ್ಲಿ ತುಂಬಿದ್ದವು. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಬೇಗಂ ಅಜಾದರ ನಿಧನದ ಸಂತಾಪ ಸೂಚನೆಗಾಗಿ ಕಲ್ಕತ್ತಾ ಕೋರ್ಪರೇಶನಿನ ಅಧಿವೇಶನವು ಮುಂದುವರಿಸಲ್ಪಟ್ಟಿತು.

ಸರ್ ಟಾಟನ್ ಹೇಮರ ಮೇಲೆ ಕೋರ್ಟಿನ ಅಪಮಾನದ ಖಟ್ಲೆ!

ಶ್ರೀ ಜಗತ್‌ನಾರಾಯಣಲಾಲರು, ಮೊದಲು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿದ್ದರು: ಈಗ ಅವರನ್ನು ಜೈಲಿನಲ್ಲಿರಿಸಲಾಗಿದೆ. ಇವರಿಗೆ ಚಳವಳ ಹೂಡಿದರೆಂದು ಮೂರು ವರ್ಷ ಕಠಿಣ ಶಿಕ್ಷೆ ವಿಧಿಸಿರುವರು. ಈ ಶಿಕ್ಷೆಯ ವಿರುದ್ಧ ಅಪೀಲಿದ್ದು ಆ ವಿಚಾರಣೆ ಇನ್ನೂ ಮುಗಿದಿಲ್ಲ. ಈ ಮಧ್ಯೆ ಸರ್ ರಿಚರ್ಡ್ ಟಾಟನ್ ಹೇಮರು '೧೯೪೨—೪೩ರಲ್ಲಿ ನಡೆದ ಚಟುವಟಿಕೆಗಳ ಬಗ್ಗೆ ಕಾಂಗ್ರೆಸ್ ಹೊಣೆ' ಎಂಬ ಪುಸ್ತಕವನ್ನು ಪ್ರಕಟಿಸಿದ್ದು, ಅದರಲ್ಲಿ, 'ಆಗಸ್ಟ ೧೨ನೇ ತಾರೀಕಿನಂದು ಪಾಟ್ನಾದಲ್ಲಿ ಕೊಳ್ಳೆ ಲೂಟಿ ಮಾಡಲು ಶ್ರೀ ಜಗತ್ ನಾರಾಯಣಲಾಲರು ಜನರನ್ನು ಪ್ರೇರೇಪಿಸಿದರು' ಎಂದು ಉಲ್ಲೇಖಿತವಾಗಿದೆ. ಶ್ರೀಯುತರ ಖಟ್ಲೆಯನ್ನು ವಿಚಾರಿಸಿದ ನ್ಯಾಯಾಧೀಶರು, ಶ್ರೀ ಜಗತ್ ನಾರಾಯಣರು ಹಿಂಸೆಗೆ ಪ್ರೇರೇಪಣೆ ಮಾಡಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗಿರುತ್ತಾ ಶ್ರೀ ಜಗತ್ ನಾರಾಯಣರ ಅಪೀಲಿನ ವಿಚಾರಣೆ ಇನ್ನೂ ನಡೆಯಬೇಕಾಗಿರುವಾಗಲೇ, ಅವರ ಮೇಲೆ ಹಿಂಸೆಗೆ ಜವಾಬ್ದಾರರೆಂಬ ಆರೋಪ ಹೊರಿಸಿ ಪುಸ್ತಕ ಪ್ರಕಟಿಸಿ ನ್ಯಾಯದಾನಕ್ಕೆ ಅಡ್ಡಿಮಾಡಿದರೆಂದು, ಕೋರ್ಟಿನ ಅಪಮಾನದ ಖಟ್ಲೆಯನ್ನು ಸರ್ ಟಾಟನ್ ಹೇಮರ ಮೇಲೆ ನಡೆಸಲು ಶ್ರೀ ಜಗತ್ ನಾರಾಯಣಲಾಲರ ಪರವಾಗಿ ಪಾಟ್ನಾ ಸೆಶ್ಶನ್ ಜಡ್ಜರ ಕೋರ್ಟಿನಲ್ಲಿ ಅರ್ಜಿ ಮಾಡಲಾಗಿದೆ.

'ಅಧಿಕಾರ ಕಿತ್ತುಕೊಳ್ಳಲು ಇದೇ ತಕ್ಕ ಸಮಯ'

ದಯಾಳರ ಸ್ಪಷ್ಟ ಮಾತು

ಜ್ವಾಲಾಪುರ (ಹರದ್ವಾರ) ಹಿಂದು ಮಹಾಸಭಾ ಪರಿಷತ್ತಿನ ಅಧ್ಯಕ್ಷಪೀಠದಿಂದ ರಾಜಾ ಮಹೇಶ್ವರ ದಯಾಳ ಸೇಠರು ಭಾಷಣ ಮಾಡುತ್ತಾ, ಭಾರತೀಯರಿಗೆ ಅಧಿಕಾರ ಒಪ್ಪಿಸುವುದು ಬ್ರಿಟಿಷರಿಗೆ ಮನಸ್ಸಿಲ್ಲವೆಂದು ವೈಸರಾಯರು ಮಹಾತ್ಮರ ಭೇಟಿಗೆ ಸಮ್ಮತಿ ಕೊಡದ್ದರಿಂದಲೂ, ಇಡೀ ರಾಷ್ಟ್ರವೇ ಮಹಾತ್ಮರನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರೂ ಅದನ್ನು ತಿರಸ್ಕರಿಸಿದ್ದರಿಂದಲೂ ವ್ಯಕ್ತವಾಗುತ್ತದೆಂದು ಹೇಳಿ, ಈ ಯುದ್ಧವು ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳ ಸಲುವಾಗಿ ಹೋರಾಡಲ್ಪಡುತ್ತದೆಂದು ಹೇಳುವುದು ಭಾರತ ಮಟ್ಟಿಗೆ ಅಪಹಾಸ್ಯವಾಗಿರುವುದು, ಇದ್ದಿರುವ ಅಲ್ಪಸ್ವಲ್ಪ ಪ್ರಜಾ ಪ್ರಭುತ್ವವನ್ನೂ ಕಸಿದು, ಪ್ರಾಂತಗಳಲ್ಲಿ ಗವರ್ನರರ ನಿರಂಕುಶಾಧಿಕಾರವನ್ನು ಸ್ಥಾಪಿಸುವುದರಿಂದ ವ್ಯಕ್ತವಾಗುತ್ತದೆಂದೂ ಸಾರಿ, ನಾವೀಗ ದೇಶದಲ್ಲಿ ಕಂಡುಬರುವ ನಿರಾಶೆಯನ್ನು ಪ್ರಚಂಡ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಿ, ಕೂಡಲೇ ಪ್ರಾಂತ ಮತ್ತು ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸುವಂತೆ ಒಮ್ಮತದಿಂದ ಕೇಳಿಕೊಳ್ಳಬೇಕೆಂದೂ, ಬ್ರಿಟಿಷರಿಂದ ಅಧಿಕಾರ ಕಿತ್ತುಕೊಳ್ಳಲು ಇದೇ ತಕ್ಕ ಸಮಯವೆಂದೂ ಖಚಿತಪಡಿಸಿದರು. ಒಪ್ಪಂದಕ್ಕೆ ಸಾಧ್ಯವಿಲ್ಲದ ವಿಷಯಗಳನ್ನು ನಿಷ್ಪಕ್ಷಪಾತೀ ನ್ಯಾಯಮಂಡಳಕ್ಕೆ ಒಪ್ಪಿಸಿ ಇತ್ಯರ್ಥ ಮಾಡಬಹುದೆಂದರು. ಕೊನೆಗೆ, ಹಿಂದು ಮಹಾಸಭೆಯ ಈಗಿನ ಮುಖಂಡರ ಧೋರಣೆಯನ್ನು ಖಂಡಿಸಿ, ಈಗ ಹಿಂದು ಮಹಾಸಭೆ ಕೇವಲ ಸರಕಾರದ ರಿಕ್ರೂಟಿಂಗ್ ಏಜನ್ಸಿಯಾಗಿದೆಯೆಂದೂ, ಸಾಮೂಹಿಕ ದಂಡದ ರೂಪದಲ್ಲಿ ಹಿಂದುಗಳ ಮೇಲೆ ಹೊರಿಸಿದ 'ಜೆಜಿಯಾ' ತೆರಿಗೆ ವಿಷಯ ಹಿಂದು ಮಹಾಸಭೆ ಏನೊಂದೂ ಚಳವಳ ಹೂಡದೆ ಇರುವುದು ನ್ಯಾಯವಲ್ಲವೆಂದೂ ತಿಳಿಸಿದರು.

ಹೊಸರಿತ್ತಿಯಲ್ಲಿ ಪೋಲೀಸರು ಗುಂಡು ಹಾರಿಸಿದರು!

ಶ್ರೀ ಮಹಾದೇವಪ್ಪ ಮೈಲಾರರ ಮರಣ!

ಹೊಸರಿತ್ತಿಯಂಬಲ್ಲಿ ಇದೇ ತಿಂಗಳು ಒಂದನೇ ತಾರೀಕಿಗೆ ಪೋಲೀಸರು ಜನರ ಮೇಲೆ ಗುಂಡು ಹಾರಿಸಿ ಮೃತಪಟ್ಟವರಲ್ಲಿ, ಮಹಾತ್ಮರ ಇತಿಹಾಸದ ಪ್ರಸಿದ್ಧ ದಂಡೀ ಯಾತ್ರೆಯ ೮೦ ಸ್ವಯಂಸೇವಕರಲ್ಲಿ ಒಬ್ಬರಾಗಿದ್ದ ಶ್ರೀ ಮಹಾದೇವಪ್ಪ ಮೈಲಾರರು ಓರ್ವರಾಗಿರುವರು! ಈ ಗುಂಡು ಹಾರಿಸಿದ್ದರಲ್ಲಿ ಶ್ರೀ ಮೈಲಾರರಲ್ಲದೆ ಇನ್ನಿಬ್ಬರು ಮೃತಪಟ್ಟಿರುವರು. ಈಗ ಅಲ್ಲಿ ಪೋಲೀಸ ಮತ್ತು ಮಿಲಿಟರಿ ಕಾವಲಿಡಲಾಗಿದೆ. ತಾ. ೧೦ರಿಂದ ಒಂದು ತಿಂಗಳ ವರೆಗೆ ಹಾವೇರಿ ತಾಲೂಕಿನ ಬೆಳವಿಗೆ, ನೀಲಗಿರಿ, ಗುಯಲಗುಂಡಿ, ಹಾಲಗ, ಮರೋಳ, ನೆಗಳೂರು, ಕೊಡಬಾಳ, ಹೊಸರಿತ್ತಿ ಮತ್ತು ಕೊರಡೂರ ಈ ೯ ಹಳ್ಳಿಗಳಲ್ಲಿ ಕರ್ಫ್ಯೂ ಆಜ್ಞೆ ವಿಧಿಸಲಾಗಿದೆ. ಕಳೆದ ತಿಂಗಳು ಧಾರವಾಡ ತಾಲೂಕಿನ ೨೩ ಹಳ್ಳಿಗಳಲ್ಲಿ ಜಾರಿ ಮಾಡಿದ ಕರ್ಫ್ಯೂ ಆಜ್ಞೆಯ ಅವಧಿ ತಾ। ೧೦ರಿಂದ ಇನ್ನೂ ಒಂದು ತಿಂಗಳು ಬೆಳೆಸಲಾಗಿದೆ. ಇದೇ ರೀತಿ ಧಾರವಾಡ ನಗರದ ಗಡಿಯನ್ನು ಬಿಟ್ಟುಳಿದ ಹಳ್ಳಿಗಳಲ್ಲಿ ಜಾರಿ ಮಾಡಲಾಗಿದ್ದ ಕರ್ಫ್ಯೂ ಆಜ್ಞೆಯ ಅವಧಿಯೂ ಬೆಳೆಸಲಾಗಿದೆ. ಇದೇ ಥರ ಉತ್ತರ ಬೆಳಗಾವಿ, ಗರಗ, ಕಲ್ಲೂರ, ತಡಕೋಡ, ಮನ್ನಾಪುರ, ಕೋಟೂರ, ತೇಗೂರ, ಕೋಟಬಾಗಿ, ಯಾದವಾಡ, ಮಡಲಕಟ್ಟಿ, ಅಮ್ಮಿನಬಾವಿ ಮತ್ತು ಹೊಸಕಟ್ಟಿ ಈ ೧೨ ಹಳ್ಳಿಗಳಲ್ಲಿ ಜಾರಿ ಮಾಡಿದ ಮುಂಬಯಿ ಡಿಸ್ಟ್ರಿಕ್ಟ ಪೋಲೀಸ ಕಾಯಿದೆಯ ೪೬ನೇ ಕಲಮಿನ ಆಜ್ಞೆಯ ಅವಧಿಯೂ ಮುಂದುವರಿಸಲ್ಪಟ್ಟಿರುವುದು!

'ಬಿ. ಬಿ. ಸಿ ಸರಕಾರದ ಸೊತ್ತು'

ಕಾಮನ್ಸ್‌ನಲ್ಲಿ ಉಗ್ರ ಟೀಕೆ

ಬಿ ಬಿ ಸಿ ರೇಡಿಯೋ ಮಾಡುತ್ತಿರುವ ಪ್ರಚಾರವು ಕೇವಲ ಸರಕಾರವನ್ನು ಸಮರ್ಥಿಸುವುದಾಗಿದ್ದು, ಅದು ಮಂತ್ರಿಗಳಿಗೆ ತಮ್ಮ ಪ್ರಚಾರಕರಥಲು ಮಾತ್ರ ಸಾಧನವಾಗಿದೆಯೆಂದೂ, ಸುದ್ದಿ ಖಾತೆಯವರು ಹೀಗೆ ಮಾಡಲು ಅವರಿಗೆ ಯಾವ ಅಧಿಕಾರವಿಲ್ಲವೆಂದೂ, ಪ್ರತಿಯೊಬ್ಬ ನಾಗರಿಕನಿಗೂ ತನ್ನ ವಿಚಾರವನ್ನು ಬಿ ಬಿ ಸಿ ಮೂಲಕ ತಿಳಿಸಲು ಅವಕಾಶವಿರಬೇಕೆಂದೂ, ಬ್ರಿಟನು ಬುದ್ಧಿವಂತ ಜನಾಂಗದ ತವರೆಂದು ಬ್ರಿಟಿಷರು ಹೆಮ್ಮೆ ಪಡುತ್ತಿರುವಾಗ, ಬಿ. ಬಿ. ಸಿ ಯವರು ಅವರನ್ನು ಬುದ್ಧಿಶೂನ್ಯ ಪಶುಗಳಂತೆ ನಡೆಸಲು ಯತ್ನಿಸುತ್ತಿರುವರೆಂದೂ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಸದಸ್ಯರು ಮತ್ತು ಮಾಜಿ ಮಂತ್ರಿಗಳಾದವರು ಟೀಕಿಸಿದರು.

ನೋಟೀಸು

ದ. ಕ. ಮಂಗಳೂರು ಡಿ। ಮುನ್ಸಿಫ್ ಕೋರ್ಟಿನಲ್ಲಿ

R. E. P. 883/42.
S. C. 496/42.

K. ಹುಸೇನಬ್ಬ ಬ್ಯಾರಿ. ಅರ್ಜಿದಾರ

ಅಹಮ್ಮದ್ ಬ್ಯಾರಿ, ಉಜ್ಜಬ್ಬಬ್ಯಾರಿಗಳ ಮಗ, ಕುದ್ರೋಳಿ, ಮಂಗಳೂರು ರೆಸ್ಪೋಂಡೆಂಟ್

ಮೇಲಿನ ಅಮಲ್ದಾರಿಯಲ್ಲಿ ಅರ್ಜಿದಾರನು ರೆಸ್ಪೋಂಡೆಂಟನ ಬಾಬ್ತು ಸ್ಥಿರಾಸ್ತಿಯ ಏಲಂಗೆ ಅಪೇಕ್ಷಿಸಿ ಅರ್ಜಿಮಾಡಿದ್ದಾನೆ ಸದ್ರಿ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ತಾ. 1-6-43 ಕ್ಕೆ ಇಟ್ಟಿದೆ.

ಮಂಗಳೂರು. } **S. Venkat Rao,**
5-4-43 } ಅರ್ಜಿದಾರನ ಕಡೆ ವಕೀಲ್

ಪ್ರಕಟಣೆ

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 89/1943.

ಹಾಸಾಂಹಾಡೆಗಾನಿ ಮೂಸಬೆಳಗಾಂವಾಲ . . . ವಾದಿ

ಮತ್ತು

ಸಿ. ಬಾಪಕುಂಞ, ಕಾಸರಗೋಡು ತಾಲೂಕು ಕುಂಬ್ಳೆಯಲ್ಲಿ ವ್ಯಾಪಾರಸ್ಥ . . . ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದ್ರೆ—ನಿಮ್ಮ ಮೇಲೆ ಮೇಲ್ಕಂಡ ವಾದಿಯು ಮಾಡಿದ ಮೇಲಿನ ವ್ಯಾಜ್ಯವು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 5-6-1943ಕ್ಕೆ ನಿಮ್ಮ ಹಾಜರಾತಿನ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ದಿನ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಗಲು 11 ಗಂಟೆಗೆ, ಖುದ್ದಾಗಲೀ ವ ವಕೀಲ ದ್ವಾರವಾಗಲೀ ಹಾಜರು ಆಗಿ ನಿಮ್ಮ ಉದಾಹರಣೆಯನ್ನು ದಾಖಲು ಮಾಡಲಿಕ್ಕೆ ತಪ್ಪಿದ್ರೆ ನಿಮ್ಮನ್ನು ಶಿವ್ವಾ ಮಾಡಿ ನಿಮ್ಮ ಗೈರಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ತಸ್ಕಿ ಮಾಡಲಾಗುವುದು, ತಿಳಿದಿರಲಿ.

(B. O)

Mangalore, | **A. Moosabba** B.A.B.L.,
7-4-1943. | Vakil for Plaintiff

ಸಮರಭೂಮಿಯ ಸಂಚಾರ

ಟ್ಯುನಿಶಿಯದಲ್ಲಿ ಮಿತ್ರರು ಬಹಳವಾಗಿ ಮುಂದುವರಿಯುತ್ತಿದ್ದಾರೆ. ಫಂಡೋರ ಕಣಿವೆಯಲ್ಲಿ ಘೋರ ಕಾಳಗವಾಯಿತು. ಮಿತ್ರ ಸೈನಿಕರು ಫೊಸ ಹಾಗೂ ಕೈರವಾನಗಳನ್ನು ಸ್ವಾಧೀನಪಡಿಸಿಕೊಂಡರು. ಕೈರವಾನ ಹಾಗೂ ಸತಾಕ್ಸಗಳು ಖಾಲಿಯಾದ ವಿಚಾರ ಇಟಲಿ ಪ್ರಕಟಣೆಯಲ್ಲಿಯೂ ಇದೆ. ಇಷ್ಟರಲ್ಲಿ ಮಿತ್ರರ ಕೆಲ ವಿಮಾನಗಳು ನೇಪಲ್ಸ್, ತ್ರಪಾಣಿ, ಹಾಗೂ ಮಾರ್ಸಲೀಗಳ ಮೇಲೂ ಧಾಳಿಯಿಟ್ಟಿವೆಯೆಂದು ತಿಳಿದು ಬಂದಿದೆ. ಅಷ್ಟಮ ದಳದ ಗಸ್ತಿ ದಳದವರು ಕಥಾವಳಿ ಪ್ರದೇಶದಲ್ಲಿ ಮುನ್ನುಗ್ಗುತ್ತಾ ಹೋಗುತ್ತಿರುವರು. ಉತ್ತರದಲ್ಲಿ ಮಾತ್ರ ಮುನ್ನಡೆ ಸ್ವಲ್ಪ ಸಾವಕಾಶವಾಗಿದೆ. ಜಿಬೆಲ್ ದುಸೆಲಾಟ ಭಾಗದಲ್ಲಿ ಫ್ರೆಂಚ್ ಸೈನಿಕರು ಎತ್ತರವಾದ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಅನೇಕ ವೈರಿಗಳನ್ನು ಸೆರೆಹಿಡಿದಿರುವರು. ಮೆದಝೆಜ್ ಎಲ್ ಬಾಬ ಮೊದಲಾದ ಕಡೆಗಳಲ್ಲಿಯೂ ಕೂಡಾ ಮಿತ್ರ ಸೈನಿಕರು ಮುಂದೊತ್ತುತ್ತಿರುವರು. ಇಲ್ಲಿ ಮಿತ್ರ ವಿಮಾನ ಬಲದವರೂ ವಿಶೇಷ ಚಟುವಟಿಕೆ ತೋರಿಸುತ್ತಾರೆ. ಸಾರ್ಡಿನಿಯದಲ್ಲಿರುವ ವೈರಿ ವಿಮಾನ ಕೇಂದ್ರದ ಮೇಲೆ ಬಾಂಬು ಸುರಿಸಿದ್ದಾರೆ. ಟ್ಯುನಿಸ್ ಹಾಗೂ ಸಿಸಿಲಿಯ ಹಡಗುಗಳ ಮೇಲೆಯೂ ಧಾಳಿಯಿಡಲಾಗಿದೆ. ಸಧ್ಯ ಟ್ಯುನಿಸಿಯದಲ್ಲಿ ಜರ್ಮನ್ ಸೈನಿಕರು ದಕ್ಷಿಣದಿಂದ ಮುಂದೊತ್ತುವ ಅಷ್ಟಮ ದಲ ಹಾಗೂ ಪಶ್ಚಿಮದಿಂದ ಮುಂದೆ ಬರುತ್ತಿರುವ ಮಿತ್ರ ಬಲಗಳ ಹಿಡಿತದಲ್ಲಿ ಸಿಕ್ಕಿದಂತಾಗಿ ಅಲ್ಲಿಂದ ಪಾರಾಗಲು ಸೆಲಾಸೆ ಅಡಿಗೆ ಬಹಳ ಭರದಿಂದ ಹಿಂದೆಗೆಯುತ್ತಿದ್ದಾರೆ. ಅಷ್ಟಮ ದಲವು ಇಬ್ಭಾಗವಾಗಿ ಒಂದು ಎಲ್ ಜೇಮದ ಮೇಲೆ ಹಾಯ್ದು ಹೋಗುವ ಒಳದಾರಿಯಿಂದ ಸೌಸ್ಸಿ ನಗರದ ಕಡೆಗೆ ಮುನ್ನುಗ್ಗಿತು, ಇನ್ನೊಂದು ಫೇಡ ಕಣಿವೆಯ ಕಡೆಗೆ ಸಾಗಿತು. ಶತ್ರು ಪ್ರತಿರೋಧ ಪ್ರಬಲವಿದ್ದರೂ ಎಂಟನೇ ಸೈನ್ಯ ಮುಂದುವರಿಯುತ್ತಲೇ ಇದೆ. ಒಸೆಲ್ಟಿಯದ ಪೂರ್ವ ಪ್ರದೇಶದಲ್ಲಿ ಫ್ರೆಂಚರು ಧಾಳಿಯನ್ನು ಎಡೆಬಿಡದೆ ಸಾಗಿಸಿದರು. ಫೇಡ ಕಣಿವೆಯನ್ನು ವಶಪಡಿಸಿಕೊಂಡ ನಂತರ ಮಧ್ಯ ಟ್ಯುನಿಸಿಯದ ಕಾಳಗ ಕೊನೆಗೊಂಡಂತೆಯೇ ಆಯಿತು.

ವಿಜಯಿ ಮಾಂಟಗಮರಿ

ಐದು ತಿಂಗಳ ಹಿಂದೆ ಎಲ್ ಎಲಾಮೆನಿನಲ್ಲಿ ರೊಮೆಲನನ್ನು ಹಿಂದಕ್ಕಟ್ಟಿ ಮುನ್ನುಗ್ಗಿದ ವಿಜಯಿ ಮಾಂಟಗಮರಿಯು ಎಲ್ ಎಲಾಮೆನ್, ಎಲ್ ಅಗೇಲಾ, ಮೆಡನೀನ್, ಎಲ್ ಹಮ್ಮಾ ಕೊನೆಗೆ ಮಾರೆಥ್ ಈ ಎಲ್ಲಾ ೧೬೦೦ ಮೈಲುಗಳ ವಿಸ್ತಾರವಾದ ರಣಭೂಮಿಯಲ್ಲಿ ಕಾಳಗ ಕೊಟ್ಟು, ಒಂದು ಕಡೆಯೂ ನಿಲ್ಲದೆ, ಒಂದು ಸ್ಥಳದಲ್ಲಿಯೂ ಸೋಲದೆ ಲಿಬಿಯವನ್ನು ದಾಟಿ ಟ್ಯುನಿಸಿಯವನ್ನು ನುಗ್ಗಿ ಕರಾವಳಿಯ ಸಮೀಪ ಬಂದಿರುವ ಸಾಹಸದ ಸಂಗ್ರಾಮವನ್ನು ನೋಡಿ ಯಾರಾದರೂ ತಲೆದೂಗಲೇ ಬೇಕು. ಇನ್ನು ಟ್ಯುನಿಸ್ ಬಿಜರ್ಟಾಗಳನ್ನು ಆಕ್ರಮಿಸಿಕೊಂಡನೆಂದರೆ ಇಡೀ ದಕ್ಷಿಣಾಫ್ರಿಕವೇ ಮಾಂಟಾಗಮರಿಯ ಕೈವಶವಾಯಿತು. ಮ್ಯಾರೆಥ್ ವ್ಯೂಹದಲ್ಲಿ ರೊಮೆಲನು ಮಹಾ ಸಂಗ್ರಾಮವನ್ನು ಕೊಡುವನೆಂದೇನೋ ಹಲವರು ನಿರೀಕ್ಷಿಸಿದ್ದರು. ಆದರೆ ಅಷ್ಟಮದಳ ಅದನ್ನು ಭೇದಿಸಿ ಒಳಹೋಗುವುದೇ ತಡ, ರೊಮೆಲನು ಅಲ್ಲಿಂದಲೂ ಪಲಾಯನ ಮಾಡಿದನು. ಇದರಿಂದ ರೊಮೆಲನು ಇನ್ನೂ ಸೈನ್ಯ ಸಂಘಟನೆ ಮಾಡಿಕೊಂಡಿಲ್ಲವೆಂದು ಸಿದ್ಧವಾಗುತ್ತದೆ. ಮ್ಯಾರೆಥ್ ವ್ಯೂಹದ ಸಂಗ್ರಾಮದ ಇನ್ನೊಂದು ಫಲವೆಂದರೆ, ಮಧ್ಯ ಟ್ಯುನಿಸಿಯದಲ್ಲಿ ಪಿರಿಯಾನಾ, ಮೆಕ್ನಾಸಿ, ಗೆಫೆಸಾ ಮೊದಲಾದ ಊರುಗಳನ್ನು ಗೆದ್ದುಕೊಂಡು ಬಂದ ಅಮೆರಿಕನ್ ಸೈನ್ಯವು ಎಲ್ ಗೆಟಾರದಲ್ಲಿ ಅಷ್ಟಮ ದಳವನ್ನು ಕೂಡಿಕೊಂಡಿತು. ಈ ಉಭಯ ಸೈನ್ಯಗಳ ಜತೆಗೂಡಗೊಡಿಸಬಾರದೆಂದು ರೊಮೆಲ್ ಮಾಡಿದ ಸಾಹಸವೂ ವ್ಯರ್ಥವೇ ಆಯಿತು. ಮ್ಯಾರೆಥ್‌ನಿಂದ ಪಲಾಯನ ಮಾಡಿದ ಮೇಲೆ ರೊಮೆಲನು ವಾಡಿಅಕಾರಿತನಲ್ಲಿ ಹೋಗಿ ನೆಲಸಿಕೊಂಡನು. ಅದೂ ಸಂರಕ್ಷಣಾ ಕೇಂದ್ರವಾಗಿತ್ತು. ಈಗ ಅಲ್ಲಿಂದಲೂ ಪಲಾಯನ ಮಾಡಬೇಕಾಗಿ ಬಂದಿದೆ. ಎಲ್ಲಿಯ ವರೆಗೆ ರೊಮೆಲನು ಈ ಪಲಾಯನಸೂತ್ರವನ್ನು ಹಿಡಿಯುತ್ತಾ ಹೋಗುವನೆಂದು ಈಗ ಹೇಳಬರುವುದಿಲ್ಲ. ಈಗಾಗಲೇ ಸೊಸ್ಸೆಸ್ಫಾಕ್ಸ್ ಮೊದಲಾದವನ್ನೂ ಖಾಲಿಮಾಡಿಕೊಂಡಿರುವುದರಿಂದ, ತೀರ ಉತ್ತರಕ್ಕೆ ಹೋಗಿ ಜನರಲ್ ಆರ್ನಿಮನ ಸೈನ್ಯವನ್ನು ಕೂಡಿಕೊಳ್ಳಬಹುದು. ಹಾಗಾದರೆ ಮುಂದಿನ ಟ್ಯುನಿಸಿಯ ಕಾಳಗವು ಬಿಝರ್ಟಾ ಟ್ಯುನಿಸ್‌ಗಳ ನಡುವೆ ಇರುವ ಕಿರಿದಾದ ಪ್ರದೇಶದಲ್ಲಿ ನಡೆಯುವುದೆಂದು ತೋರುತ್ತದೆ. ಆರ್ನಿಮ ಮತ್ತು ರೊಮೆಲ್ ಇವರ ಉಭಯ ಸೈನ್ಯದಲ್ಲಿ ಒಟ್ಟು ೨೫೦,೦೦೦ ಸೈನಿಕರಿದ್ದಾರೆ. ಇಷ್ಟು ಸೈನ್ಯಸಂಗ್ರಹವಿರುತ್ತಾ ಜರ್ಮನರು ಟ್ಯುನಿಸಿಯವನ್ನು ಸುಮ್ಮನೇ ಬಿಟ್ಟುಗೊಡಲಾರರೆಂದು ತೋರುತ್ತದೆ. ಹಿಟ್ಲರನು ಟ್ಯುನಿಸಿಯವನ್ನು ಯುದ್ಧಕೊಡದೆ ಖಾಲಿಮಾಡಿ ಇದ್ದ ಸೈನ್ಯವನ್ನೆಲ್ಲಾ ಯುರೋಪಿಗೆ ಸಾಗಿಸುವನೆಂದೂ ಒಂದು ಸುದ್ದಿಯಿದೆ. ಹಿಂದೆ ೧೯೪೦ರಲ್ಲಿ ಜರ್ಮನರು ಫ್ರಾನ್ಸನ್ನು ನುಗ್ಗಿದಾ ಭಯಂಕರ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸೈನ್ಯಗಳು ಡಂಕರ್ಕ್ ಮೂಲಕ ಇಂಗ್ಲೆಂಡಿಗೆ ಹೋಗಬೇಕಾಯಿತು! ಹಿಂದಿನ ಕಾಲದ ಯುದ್ಧದಲ್ಲಿ ಪಲಾಯನವು ಅಪರಾಧವಾದರೂ ಈಗಿನ ಸಮರ ನೀತಿಯಲ್ಲಿ ಇದೂ ಒಂದು ಯುದ್ಧಕೌಶಲ್ಯವೆಂದೇ ಹೇಳಲಾಗುತ್ತದೆ! ಆದರೆ ರೊಮೆಲನ ವಿಚಾರ ಹೀಗೆಯೋ ಎಂದು ಯಾರಿಗೂ ಹೇಳಬರುವುದಿಲ್ಲ. ಆತನು ಮುನ್ನುಗ್ಗುವುದಕ್ಕಿಂತ ಹಿಂದೆ ಹೋಗುವುದೇ ಹಲವು ಸಲ ಅಪಾಯವಾಗಿದೆ. ಅನುಕೂಲ ಪರಿಸ್ಥಿತಿ ಬಂದಾಗ ಎಷ್ಟು ಬಲಿದಾನ ಮಾಡಿಯಾದರೂ ಆತನು ಭೀಷಣ ಕಾಳಗ ಕೊಡುವನು! ಏಕೆಂದರೆ ಆಫ್ರಿಕದ ಯುದ್ಧವು ಹಿಟ್ಲರನ ಮಾನಾಪಮಾನದ ಪ್ರಶ್ನೆಯಾಗಿದೆ. ಮಾತ್ರವಲ್ಲದೆ ಟ್ಯುನಿಸಿಯದಲ್ಲಿ ಹಿಟ್ಲರನಿಗೆ ಸೋಲಾದರೆ ಮಿತ್ರರು ಯುರೋಪಿನಲ್ಲಿ ಬೇರೆಲ್ಲಿಯೂ ಒಂದು ಕಡೆ ಹಿಟ್ಲರನಿಗೆ ಪೆಟ್ಟು ಹಾಕಲು ಸಿದ್ಧತೆ ಮಾಡುತ್ತಿರುವ ಸುದ್ದಿಯೂ ಇದೆ. ಹೀಗಿರುವಾಗ ಟ್ಯುನಿಸಿಯದಲ್ಲಿ ಭೀಷಣ ಕಾಳಗವೊಂದು ಮುಂದೆ ಆಗಲಿದೆಯೆಂದೇ ಊಹಿಸಬೇಕಾಗುತ್ತದೆ.

ರಶ್ಯದಲ್ಲಿ ಸ್ತಬ್ಧತೆ

ರಶ್ಯ ರಣರಂಗದಲ್ಲಿ ಸದ್ಯಃ ಸ್ತಬ್ಧತೆ ತೋರುತ್ತದೆ. ಈ ಸ್ತಬ್ಧತೆಯೆಂದರೆ ಮುಂದಿನ ಮಹಾಯುದ್ಧದ ಸಿದ್ಧತೆಯೆಂಬುದು ಖಂಡಿತ. ಈಗಂತೂ ಹಿಮ ಕರಗಲು ಪ್ರಾರಂಭವಾದದ್ದರಿಂದ ರಶ್ಯನರು ಜೋರಾಗಿ ಜರ್ಮನರನ್ನು ಬೆನ್ನಟ್ಟುವುದು ಸಾಧ್ಯವಿಲ್ಲ. ವಸಂತ ಕಾಲ ಬಂತೆಂದರೆ ಹಿಟ್ಲರನಿಗೆ ಇನ್ನೊಂದು ಭುಜ ಬಂದಂತೆಯೇ ಆಯಿತು. ಹಾಗಾಗಿ ಮುಂದಿನ ವಸಂತ ದಾಳಿಯ ಪ್ರಯತ್ನದ ಸಲುವಾಗಿ ಜರ್ಮನರು, ಅದನ್ನು ಯಶಸ್ವಿಯಾಗಿ ಪ್ರತಿಭಟಿಸಲು ರಶ್ಯನರು ಸಿದ್ಧತೆ ಮಾಡುತ್ತಿರಬಹುದು. ಡೊನೆಟ್ಸ್ ನದಿಯ ದಂಡೆಯ ಮೇಲೆ ಈಗಲೂ ಯುದ್ಧ ಸಾಗುತ್ತಲೇ ಇದೆ. ನದಿಯಲ್ಲಿ ಪ್ರವಾಹ ತುಂಬುವುದರೊಳಗೆ ಅದನ್ನು ದಾಟಿಬಿಡಬೇಕೆಂದು ಜರ್ಮನರು ಸಾಹಸಪಡುತ್ತಿರುವರು. ರಶ್ಯನರ ಪ್ರತಿಭಟನೆಯ ಫಲವಾಗಿ ಅವರ ಸಾಹಸ ಇನ್ನೂ ಫಲಿಸಿಲ್ಲ. ಉತ್ತರದಲ್ಲಿ ಸ್ಮೊಲೆನ್‌ಸ್ಕ ಕಡೆಗೆ ಹೊರಟಿದ್ದ ರಶ್ಯನರ ಚಟುವಟಿಕೆಯೂ ನಿಂತುಹೋಗಿದೆ. ರೊಸ್ತೊವಿಗೆ ಮಾಡಿದ ಜರ್ಮನರ ಧಾಳಿಯನ್ನು ರಶ್ಯನರು ನಿರರ್ಥಕಗೊಳಿಸಿದ್ದರು. ಕುಬಾನ್ ರಣಭೂಮಿಯಲ್ಲಿ ರಶ್ಯನರ ಮೇಲ್ಗೈಯಿದೆ. ಕಾಕಸಸಿನಲ್ಲಿ ಕುಬಾನ ಕೈಲ್ತಿಯ ಮೇಲ್ದಡೆಯಿರುವ ಬಕಾಸ್ಸ ನಗರವು ರಶ್ಯನರ ವಶವಾಗಿದೆ. ಎರಡೂ ಸೈನಿಕರು ಸದ್ಯ ಬಾಯಿ ಲೊಗರಾಡ್ ಮತ್ತು ಖಾರ್ಕೊವ್ ಪೂರ್ವಕ್ಕೆ ಪ್ರಬಲ ಸೈನ್ಯ ಸಂಗ್ರಹ ಮಾಡುತ್ತಿರುವರು. ಜರ್ಮನಿಯಿಂದ ಈಗ ರಶ್ಯಕ್ಕೆ ಮಹತ್ತಾದ ಸಂಗ್ರಾಮ ಸಾಮಗ್ರಿ ಬರುತ್ತದೆಯೆಂದೂ ಸುದ್ದಿ.

ಹಿಟ್ಲರ್-ಮುಸಲನಿ ಭೇಟಿ

ಇದೇ ಎಪ್ರಿಲ್ ತಿಂಗಳ ಏಳನೆಯ ತಾರೀಕಿನಿಂದ ಹತ್ತರ ವರೆಗೆ ಹಿಟ್ಲರ್ ಮುಸಲನಿಗಳು ಹಿಟ್ಲರನ ಮುಖ್ಯ ಕಚೇರಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು. ಮಾತುಕತೆ ಯಾವ ಕುರಿತು ಎಂದು ಪ್ರತ್ಯೇಕ ಹೇಳಬೇಕಾದ ಅವಶ್ಯವೇ ಇಲ್ಲ. ಎಲ್ಲಾ ಯುದ್ಧದ ವಿಚಾರವಾಗಿಯೇ, ಮುಂದಿನ ಸಂಯುಕ್ತ ಕಾರ್ಯ ಕ್ರಮದ ಕುರಿತೇ ಎಂದು ಯಾರೂ ಅರ್ಥ ಮಾಡಿಕೊಳ್ಳಬಹುದು. ಯುದ್ಧವು ಆರಂಭವಾದಂದಿನಿಂದ ಇದುವರೆಗೆ ಇದು ಕೂಡಿ ಏಳು ಸಲ ಈ ಪ್ರಭೃತಿಗಳು ಭೇಟಿಯಾದರು. ಒಟ್ಟಿನಲ್ಲಿ ಇವರೊಡನೆ ಸಖ್ಯವಾದ ಬಳಿಕ ಇವರದು ಇದು ಹನ್ನೆರಡನೆಯ ಭೇಟಿ. ಕಳೆದ ಸಲ ೧೯೪೨ರಲ್ಲಿ ಎಪ್ರಿಲ್ ೨೯, ೩೦ಕ್ಕೆ ಇವರು ಭೇಟಿಯಾಗಿದ್ದರು. ಈ ಮಾತುಕತೆಯ ಕಾಲದಲ್ಲಿ ಜರ್ಮನ್ ಕಡೆಯ ಹಿಮ್ಲರ್ ರಿಬನ್‌ಟ್ರಾಪ್, ಸೈನ್ಯಾಧಿಕಾರಿ ಕೀಟೆಲ್, ನೌಕಾಧಿಕಾರಿ ಡೊಯನಿಜ್, ಪತ್ರಿಕಾ ಮುಖಂಡ ಡಾ। ಸ್ಮಿಟ್ ಮೊದಲಾದ ಅಧಿಕಾರಿಗಳು, ಇಟಲಿ ಕಡೆಯ ಜನರಲ್ ಮರಾಸ್, ಆ. ಜಿ. ಗ್ಯಾಡಿನ್, ಆಡ್ಮಿರಲ್ ಜಿರೋಸಿ, ಕೌಂಟ್ ವಿಶೇ, ಕೌಂಟ್ ಪ್ರಿಟೋ ಮಾರ್ತ್ಯಿ ಮೊದಲಾದವರು ಹಾಜರಿದ್ದರು. ಇಲ್ಲಿ ಯುದ್ಧ ಪರಿಸ್ಥಿತಿ ಆಮೂಲಾಗ್ರವಾಗಿ ಚರ್ಚಿಸಲಾಯಿತೆಂದು ಜರ್ಮನ್ ಸುದ್ದಿ ಖಾತೆ ಸಾರುತ್ತದೆ. ಎಲ್ಲಾ ರಣರಂಗಗಳಲ್ಲಿಯೂ ಕೈಕೊಳ್ಳಬೇಕಾದ ಯುದ್ಧ ನೀತಿ, ಯೋಜನೆಗಳ ಬಗ್ಗೆ ಸಂಪೂರ್ಣ ಏಕಮತವಾಯಿತೆಂದೂ ಸಮಗ್ರ ಸೈನ್ಯ ಸಿದ್ಧತೆಗೈಯ್ಯಬೇಕೆಂಬ ನಿರ್ಣಯವು ದೃಢವಾಯಿತೆಂದೂ, ಅಕ್ಷರಾಷ್ಟ್ರಗಳ ಸಾಮಾನ್ಯ ಧೋರಣೆ ಉದ್ದೇಶಗಳನ್ನು ಇನ್ನೊಮ್ಮೆ ಇಲ್ಲಿ ಖಚಿತಗೊಳಿಸಲಾಯಿತೆಂದೂ ಈ ಮಾತುಕತೆಯು ಒಟ್ಟಿನಿಂದ ಬಹಳ ಸ್ನೇಹಮಯವಾಗಿತ್ತೆಂದೂ ಹೇಳಲಾಗುತ್ತದೆ. ಹಿಟ್ಲರ್ ಮುಸಲನಿಗಳು ಆಗಾಗ ಕೂಡಿ ಮಾತನಾಡಿಕೊಂಡು ಯುದ್ಧ ಸಾಗಿಸುತ್ತಿರುವುದೇನೋ ಬಹಳ ಸ್ವಾರಸ್ಯದ್ದಾಗಿದೆ. ಮುಂದೆ ವಸಂತಕಾಲದಲ್ಲಂತೂ ಹಿಟ್ಲರನು ರಶ್ಯದಲ್ಲಿ ಯಥಾಕ್ರಮ 'ವಸಂತ ಧಾಳಿ' ಪ್ರಾರಂಭಿಸತಕ್ಕವನೇ ಇದ್ದಾನೆ. ಅದರ ವಿಚಾರ ಇದರಲ್ಲಿ ಆಲೋಚನೆ ಆಗಿರಲೇ ಬೇಕು. ಸದ್ಯ ಟ್ಯುನಿಸಿಯದಲ್ಲಿ ಒದಗಿದ ಸೋಲಿನ ವಿಚಾರವೂ ಆಲೋಚನೆಯಾಗಿರಬಹುದು.

ಬರ್ನಾರ್ಡ್ ಶಾರ ಭವಿಷ್ಯ!

ಜಾರ್ಜ್ ಬರ್ನಾರ್ಡ್ ಶಾರವರು ಪ್ರಸಿದ್ಧರಾದ ಆಂಗ್ಲ ಗ್ರಂಥಕರ್ತರು; ಪ್ರತಿಭಾಶಾಲಿಗಳು; ಲೋಕದ ಚರಿತ್ರೆ, ವಿಜ್ಞಾನ, ರಾಜಕಾರಣಗಳನ್ನು ದಿವ್ಯದೃಷ್ಟಿಯಿಂದ ನೋಡುವ ಮಹಾಮೇಧಾವಿಗಳು. 'ನ್ಯೂ ಲೀಡರ್' ಪತ್ರಿಕೆಯಲ್ಲಿ ಅವರು ಒಂದು ಮಹಾ ಭವಿಷ್ಯ ಸಾರಿದ್ದಾರೆ. ಜಿರಾಡ್, ವಾಲೇಸ್, ಚರ್ಚಿಲ್, ಹಿಟ್ಲರ್ ಇವರ ವಿಷಯ ಬರೆಯುತ್ತಾ ಅವರು, ಈ ದ್ವಿತೀಯ ಮಹಾ ಯುದ್ಧದಲ್ಲಿ ಜರ್ಮನಿ, ಇಟಲಿ, ಜಪಾನುಗಳು ಮಣ್ಣುಮುಕ್ಕಿದರೂ, ಮೂರನೆಯ ಮಹಾ ಯುದ್ಧವೊಂದು, ಪ್ರಜಾಪ್ರಭುತ್ವ ಹಾಗೂ ಸಮತಾವಾದೀ ರಾಷ್ಟ್ರಗಳಾದ ಚೀನ ರಶ್ಯಗಳು ಒಂದು ಪಕ್ಷವಾಗಿಯೂ, ಧಂಡವಾಳಶಾಹೀ ಬ್ರಿಟನು ಅಮೆರಿಕಗಳು ಇನ್ನೊಂದು ಪಕ್ಷವಾಗಿಯೂ ನಿಂತು ಹೋರಾಡುವುದು ಆಗಲೇ ಬೇಕು ಎಂದು ಸ್ಪಷ್ಟ ಹೇಳಿದ್ದಾರೆ. ಅವರ ಅಭಿಪ್ರಾಯ ಇಂತಿದೆ: "ಈ ಯುದ್ಧದಲ್ಲಿ ಶತ್ರುಗಳಾದ ಜರ್ಮನಿ, ಇಟಲಿ, ಜಪಾನುಗಳು ನಾಶವಾದ ಮೇಲೆ ರಶ್ಯ ಚೀನ ಮತ್ತು ಬ್ರಿಟನು ಅಮೆರಿಕಗಳು ಎರಡು ವಿರುದ್ಧ ಪಕ್ಷಗಳಾಗುತ್ತವೆ. ತಮ್ಮತಮ್ಮ ಹಾದಿ ಹಿಡಿಯಲು ಅವುಗಳು ತಮ್ಮತಮ್ಮೊಳಗೆ ಒಂದು ಒಪ್ಪಂದ ಮಾಡಿಕೊಳ್ಳುತ್ತವೆ. ಇದಕ್ಕೂ ಹೆಚ್ಚಿನದೇನೂ ಈ ಯುದ್ಧದಲ್ಲಿ ಸಾಧಿಸುವುದಿಲ್ಲ. ಆದರೆ ಎಲ್ಲದಕ್ಕಿಂತಲೂ ಅನಿಷ್ಟಕರವಾದ ಒಂದು ಸಂಭವವೆಂದರೆ, ಮೂರನೆಯ ಮಹಾ ಯುದ್ಧವೊಂದು ಈ ಎರಡು ವಿರುದ್ಧ ಪಕ್ಷಗಳೊಳಗೆ ನಡೆಯುವುದು! ಚಿಯಾಂಗ್ ಕೈಶೇಕ್ ಮತ್ತು ಸ್ಟಾಲಿನರಿಗೆ ಬ್ರಿಟಿಷ್ ಸಾಮ್ರಾಜ್ಯವೇ ಕೊನೆಯ ವೈರಿಯಾಗುವುದು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮತ್ತೆ ಏಕ ಪಕ್ಷೀಯ ಸರಕಾರವಾಗಿ ಆ ಮೂರನೆಯ ಮಹಾ ಯುದ್ಧವು ಪ್ರಾರಂಭವಾಗುವುದು. ಅದರಲ್ಲಿ ಪ್ರಜಾಪ್ರಭುತ್ವವಾದಿ ಸಮತಾವಾದೀ ರಾಷ್ಟ್ರಗಳಾದ ಚೀನ ರಶ್ಯಗಳು; ಸಾಮ್ರಾಜ್ಯಶಾಹೀ ರಾಷ್ಟ್ರಗಳಾದ ಬ್ರಿಟನು ಅಮೆರಿಕಗಳ ವಿರುದ್ಧ ಕತ್ತಿ ಕಟ್ಟಿ ನಿಲ್ಲುವವು!" ಈ ಮಾತುಗಳು, ಮುಂದಿನ ಗಂಡಾಂತರವನ್ನು ಭವಿಷ್ಯಕಾರರ ದಿವ್ಯ ದೃಷ್ಟಿಯಿಂದ ನೋಡಿದ ಎಚ್ಚರಿಕೆಯ ನುಡಿಗಳಂತಿವೆ! ಬರ್ನಾರ್ಡ್ ಶಾರವರು ಈ ಮಾತನ್ನು ಹೇಳುವ ಮೊದಲೇ ಜಗತ್ತು ಇಂಥಾ ಒಂದು ಗಂಡಾಂತರದ ಕುರಿತು ಕನಸು ಕಂಡಿತ್ತು. ಮೊನ್ನೆ ಮೊನ್ನೆ ಅಮೆರಿಕದ ರಾಯಭಾರಿ ಸ್ಟ್ಯಾನ್ಲೆಯವರು ರಶ್ಯದಿಂದ ಮರಳಿ ಅಮೆರಿಕಕ್ಕೆ ಹೋದ ಬಳಿಕ, ಹೇಳಿದ ಮಾತುಗಳಿಂದ ಅನೇಕರು ಮೂರನೆಯ ಮಹಾಯುದ್ಧವೊಂದರ ಸಿದ್ಧತೆಯನ್ನು ಸ್ಪಷ್ಟವಾಗಿ ಕಾಣತೊಡಗಿದ್ದಾರೆ. ಎಲ್ಲಿ ವರೆಗೆ ಬ್ರಿಟನು ಅಮೆರಿಕಗಳು ತಮ್ಮ ಸಾಮ್ರಾಜ್ಯ ನೀತಿಯನ್ನು ಕೊನೆಗಾಣಿಸುವುದಿಲ್ಲವೋ, ಎಲ್ಲಿವರೆಗೆ ಭಾರತದಂಥಾ ರಾಷ್ಟ್ರಗಳು ದಾಸ್ಯ ವಿಮೋಚನೆ ಹೊಂದುವುದಿಲ್ಲವೋ, ಎಲ್ಲಿವರೆಗೆ ಮಿತ್ರರ ಯುದ್ಧೋದ್ದೇಶವು ಸ್ಪಷ್ಟ ಸ್ಪಷ್ಟವಾಗಿ ಪ್ರಪಂಚದ ಜನರಿಂದ ನಿಸ್ಸಂದೇಹವಾಗಿ ಅರ್ಥ ಮಾಡಲ್ಪಡುವುದಿಲ್ಲವೋ ಅಲ್ಲಿವರೆಗೆ ಇಂಥಾ ಗಂಡಾಂತರದ ಹಾಲಾಹಲವು ವಿಶ್ವಗರ್ಭದಲ್ಲಿ ಇದ್ದೇ ಇರುವುದು!

ಜಪಾನಿನ ಸಿದ್ಧತೆ ಏಕೆ?

ಭಾರತದ ಮೇಲೆ ಜಪಾನರ ಧಾಳಿಯಾದೀತು ಎಂಬ ಹೆದರಿಕೆ ನಮಗೆ ಇಲ್ಲವೇ ಇಲ್ಲ. ಏಕೆಂದರೆ 'ಜಪಾನರಿಗೆ ಹಾಗು ಮಾಡುವ ಶಕ್ತಿಯೇ ಇಲ್ಲ'ವೆಂದು ನಮ್ಮ ರಕ್ಷಕರು ನಮಗೆ ತಿಳಿಸಿದ್ದಾರೆ! ಆದರೂ ಪಶ್ಚಿಮ ಬರ್ಮದ ರಣಭೂಮಿಯಲ್ಲಿ ಬ್ರಿಟಿಷ್ ಸೈನಿಕರು ಹಿಂಜರಿದುದನ್ನು ನೋಡಿ ನಮಗೆ ವ್ಯಸನವಾಗುತ್ತದೆ. ಮಳೆಗಾಲದಲ್ಲಿ ಭೂಯುದ್ಧ ಅಸಾಧ್ಯವಾಗುವುದರಿಂದ, ಅದು ಪ್ರಾರಂಭವಾಗುವ ಮೊದಲೇ ಆದಷ್ಟು ಮುಂದೊತ್ತಿ ಬಂದು ಭಾರತದತ್ತ ಬೀಡು ಬಿಡಬೇಕೆಂದು ಜಪಾನರ ಹಠವಿದ್ದಂತೆ ತೋರುತ್ತದೆ. ಈಗಾಗಲೇ ಅವರು 'ಭೂಸಿದಾಂಗ್', ಮಾಂಗಡಾ ಪ್ರದೇಶಗಳ ಕೆಲವು ಮೈಲು ವಿಸ್ತೀರ್ಣದ ರಣಭೂಮಿಯಲ್ಲಿ ಮುನ್ನುಗ್ಗಿ ಬಂದಿದ್ದಾರೆ. ಮಾಯೂ ದ್ವೀಪಕಲ್ಪದ ಮೇಲೆ ಜಪಾನರು ಪುನಃ ಪುನಃ ಧಾಳಿಯಿಟ್ಟರು. ಸಣ್ಣ ಸಣ್ಣ ದೋಣಿಗಳಿಂದ ಸೈನಿಕರನ್ನು ತಂದಿಳಿಸಿದರು. ಆದರೇನು ಜಪಾನರಿಗೆ ಸುಖವಿಲ್ಲ. ಮಿತ್ರ ವೈಮಾನಿಕರು ಹೋಗಿ ಅವರಿಗೆ ಉಪದ್ರವ ಕೊಟ್ಟರು. ಇಷ್ಟಾದರೂ ಜಪಾನರಿದನ್ನು ತಪ್ಪಿಸಿಕೊಂಡು ಮಾಯೂ ಪ್ರದೇಶದ ಅಡವಿಗಳನ್ನು ಸೇರಿದ್ದಾರೆ. ಹೀಗೆ ಕಾಲು ಚಾಚಿದ ಅವರು ಬರ್ಮದ ಗಡಿಯಿಂದ ಸುಮಾರು ೨೫ ಮೈಲು ಬಂದಂತಿದೆ. ಆದರೆ ಈ ವಿಜಯದಿಂದ ಜಪಾನರಿಗೇನೂ ಪ್ರಯೋಜನವಿಲ್ಲವೆಂದು ಬ್ರಿಟಿಷ್ ಯುದ್ಧ ವಾರ್ತೆ ಸಾರುವುದನ್ನು ನೋಡಿದರೆ ವಿಚಿತ್ರವಾಗಿ ತೋರುತ್ತದೆ. ಜಪಾನರಿಗೆ ಈ ಪ್ರದೇಶ ಪ್ರಯೋಜನವಿಲ್ಲದಿದ್ದರೂ, ಮಿತ್ರರ ಕೈಯಿಂದ ಇದು ತಪ್ಪಿಹೋದುದರಿಂದ ಮಿತ್ರರಿಗೆ ನಷ್ಟವೇ ಅಲ್ಲವೇ? ಇನ್ನು ಈ ರಣರಂಗ ಹೇಗೆ ಮುಂದುವರಿಯುವುದೆಂದು ಹೇಳುವುದು ಈಗ ಕಠಿಣ. ಮಿತ್ರರು ಆಕ್ಯಾಬ್ ಬಂದರದ ಮೇಲೆ ಸಮುದ್ರ ಮಾರ್ಗವಾಗಿ ದಂಡೆತ್ತಿ ಹೋಗುವ ಸಾಹಸದಲ್ಲಿದ್ದಾರೆ. ಹಡಗುಗಳ ಕೊರತೆಯಾದ್ದರಿಂದ ಈ ಯೋಜನೆ ಫಲಕಾರಿಯಾಗಲಿಲ್ಲವೆಂದು ಹೇಳಲಾಗಿದೆ. ಅಂತೂ ಈಗ ಅಸಾಮ್, ಬರ್ಮಗಳ ಗಡಿ ಪ್ರದೇಶವಾದ ಅರಕಾನಿನಲ್ಲಿ ಯುದ್ಧ ನಡೆಯುತ್ತದೆ. ಜಪಾನಿಯರು ಬರ್ಮದಲ್ಲಿ ವಿಪುಲ ಯುದ್ಧ ಸಿದ್ಧತೆ ಮಾಡಿದ್ದಾರೆಂದೂ ಪೂರ್ವದಲ್ಲಿ ಚೀನದ ಮೇಲೂ, ಪಶ್ಚಿಮದಲ್ಲಿ ಭಾರತದ ಮೇಲೂ ಒಂದೇ ಕಾಲಕ್ಕೆ ಆಕ್ರಮಿಸುವ ಯೋಚನೆಯಲ್ಲಿರುವರೆಂದೂ ಚುಂಕಿಂಗ್ ಸುದ್ದಿ. ಬಂಗಾಳದ ಮೇಲೆ ಕಳೆದ ವಾರ ೫೦ ವಿಮಾನ ಹಾರಿ ಬಾಂಬು ಸುರಿಸಿದ್ದು ಎಲ್ಲರಿಗೂ ವಿದಿತವೇ ಇದೆ. ಈಗಲೂ ಚಿತಗಾಂಗ್ ಮೊದಲಾದ ಕಡೆ ಆಗಾಗ ತೊಂದರೆಗಳುಂಟೇ ಉಂಟು. ಜಪಾನರು ತಯಾರಾಗಿದ್ದಾರೆಂಬ ಚುಂಕಿಂಗ್ ಸುದ್ದಿಗೆ ಇದೂ ಆಧಾರವಾಗುತ್ತದೆ. ಅಮೆರಿಕದ ವಿಮಾನ ಖಾತೆಯ ಮುಖ್ಯಾಧಿಕಾರಿ ಕರ್ನಲ್ ಸೆಂಡರ್ಸ್ರವರೂ ಇತ್ತೀಚೆಗೆ ಬರ್ಮದಿಂದ ಮರಳಿ ಬಂದವರು, ಅಲ್ಲಿ ಜಪಾನರು ಪ್ರಬಲ ಸಿದ್ಧತೆ ಮಾಡಿದ್ದಾರೆಂದು ಹೇಳುತ್ತಾ, ಜಪಾನರು ಮಿತ್ರರ ಮೇಲೆ ಮುತ್ತಿಗೆ ಹಾಕಲು ಬರುವ ಮೊದಲು ನಾವೇ ಅವರ ಮೇಲೇರಿ ಹೋಗಬೇಕೆಂದು ಎಚ್ಚರಿಸಿರುವರು.

ಸ್ವದೇಶಾಭಿಮಾನಿ

ತಾರೀಕು 16—4—1943

ವಿಲ್ಕಿ ಹೇಳುತ್ತಾರೆ:

ಅಮೆರಿಕದ ಪ್ರಸಿದ್ಧ ರಾಜಕಾರಣಿಗಳಾದ ವೆಂಡಲ್ ವಿಲ್ಕಿಯವರು ಇತ್ತೀಚೆಗೆ ಭಾರತದ ಸ್ವಾತಂತ್ರ್ಯದ ವಿಷಯ ಖಂಡತುಂಡವಾಗಿ ಮಾತನಾಡುತ್ತಾರೆ. “ಸಾಮ್ರಾಜ್ಯದ ದಿನಗಳು ಮುಗಿದವು; ಭಾರತಕ್ಕೆ ಕೂಡಲೇ ಸ್ವಾತಂತ್ರ್ಯ ಕೊಡಬೇಕು” ಎಂಬುದು ಅವರ ಸ್ಪಷ್ಟ ಆಶಯವಿದೆ. ವಿಲ್ಕಿಯವರು ಇತ್ತೀಚೆಗೆ ‘ಒಂದೇ ಜಗತ್ತು’ ಎಂಬ ಪುಸ್ತಕವನ್ನು ಪ್ರಕಟಿಸಿದ್ದು, ಅದರಲ್ಲಿ ಈ ವಿಷಯವನ್ನು ಸಮರ್ಥಿಸುತ್ತಾರೆ. ಮುಂದಿನ ಜಗತ್ತಿನ ನವನಿರ್ಮಾಣಕ್ಕೆ ಭಾರತದ ಸ್ವಾತಂತ್ರ್ಯ ಅವಶ್ಯವೆಂದು ಅವರ ಅಭಿಪ್ರಾಯವಿದೆ. “ನಾವು ಹೆಮ್ಮೆ ಕೊಚ್ಚಿಕೊಳ್ಳುವ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯವೆಂಬೀ ಉದ್ದೇಶಗಳಲ್ಲಿ ನಮಗೆ ಹಾರ್ದಿಕ ವಿಶ್ವಾಸವಿದ್ದರೆ, ಹಾಗೂ ಅದನ್ನು ಸಾಧಿಸಲು ಮಧ್ಯಪೂರ್ವದ ಜನರು ಸಹಾಯ ಮಾಡಬೇಕೆಂದು ನಾವು ಮನಸಾ ಇಚ್ಛಿಸುವುದಾದರೆ ನಾವು ಅವರ ವಿಷಯದಲ್ಲಿ ಭೇದವನ್ನು ಕಲ್ಪಿಸಬಾರದು’ ಎಂದು ವಿಲ್ಕಿಯವರು ಆ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

“ಇದು ದಾಸ್ಯ ವಿಮೋಚನೆಯ ಯುದ್ಧವೆಂದು ಸ್ಟಾಲಿನರು ಸಾರಿದರು. ಆದರೆ ಈ ಯುದ್ಧದಲ್ಲಿ ಸೇರಿದ ಮೂವತ್ತೊಂದು ರಾಷ್ಟ್ರಗಳಿಗೂ ಈ ವಿಮೋಚನೆ ದೊರೆಯುವುದೆಂದು ಅವು ನಂಬಿರುವವೋ ಎಂಬುದು ಸಂಶಯದ ವಿಷಯವಾಗಿದೆ. ‘ಭಾರತದ ಕುರಿತು ಏನು ಮಾಡುವಿರಿ?’ ಎಂದು ನನ್ನ ಪ್ರವಾಸ ಕಾಲದಲ್ಲಿ ಆಫ್ರಿಕಾದಿಂದ ಅಲಾಸ್ಕದವರೆಗಿನ ಜನರೂ ನನ್ನೊಡನೆ ಪ್ರಶ್ನಿಸಿದರು. ‘ಭಾರತದ ಸ್ವಾತಂತ್ರ್ಯದ ವಿಷಯವನ್ನು ಮುಂದೆ ಹಾಕಿದರೆ, ಬ್ರಿಟನಿನದಲ್ಲ ಅಮೆರಿಕದ ಗೌರವವು ಕಡಿಮೆಯಾಗುವುದು’ ಎಂದು ಚೀನದ ಮಹಾಪುರುಷನೂ ಹೇಳಿದನು. ನಾವು ಒಪ್ಪಲಿ, ಒಪ್ಪದಿರಲಿ, ಪೌರ್ವಾತ್ಯ ಜನರು ಸ್ವಾತಂತ್ರ್ಯಕ್ಕೆ ಸಿದ್ಧರಾಗಿದ್ದು ಅದನ್ನು ರಕ್ಷಿಸಲೂ ಸಮರ್ಥರಾಗಿರುವರು: ಇಂತಿಷ್ಟು ಅವಧಿಯಲ್ಲಿ ಸ್ವಾತಂತ್ರ್ಯ ಕೊಡಬೇಕು. ಮತ್ತು ಅದನ್ನು ಕೊಡುವರೆಂಬುದಕ್ಕೆ ಯೋಗ್ಯ ಭರವಸೆ ಬೇಕು ಎಂದು ಅವರು ಕೇಳುತ್ತಾರೆ. ನಾವೀಗ ವರ್ಣಭೇದವನ್ನು ಮರೆತು ಸ್ವಾತಂತ್ರ್ಯ ಪ್ರೇಮಿಗಳೊಡನೆ ಬೆರೆಯಬೇಕು. ಆಗಿಂದಾಗ ಯುದ್ಧಕ್ಕೆ ಅಣಿ ಮಾಡುತ್ತಿರುವ ಸಾಮ್ರಾಜ್ಯ ತತ್ವವನ್ನು ಧೂಳೀಪಟ ಮಾಡಿಬಿಡಬೇಕು. ನಮಗೆ ಶಾಶ್ವತ ಶಾಂತಿ ದೊರೆಯಬೇಕಾದರೆ ಮೂರು ವಿಷಯಗಳನ್ನು ಗಮನಿಸಬೇಕು. (೧) ಯುದ್ಧೋದ್ದೇಶದ ಬಗ್ಗೆ ಬ್ರಿಟನು ಅಮೆರಿಕ, ಚೀನ ರಷ್ಯಗಳೊಳಗೆ ಒಮ್ಮತವಿರದಿದ್ದರೆ ಅಟ್ಲಾಂಟಿಕ್ ಶಾಸನವು ವಿಲ್ಸನರ ಹದಿನಾಲ್ಕು ನಿಯಮಗಳಂತೆ ಅಪಹಾಸ್ಯಕ್ಕೀಡಾಗುವುದು. (೨) ಜಗತ್ತು ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಿಂದ ಸ್ವತಂತ್ರವಿರಬೇಕು; ಪಾಶ್ಚಿಮಾತ್ಯರ ಉಚ್ಚತೆ ಮತ್ತು ಸಾಮ್ರಾಜ್ಯಗಳು ಆಗ ಅಗ್ನಿಪರೀಕ್ಷೆಗೆ ಗುರಿಯಾಗುವವು. (೩) ಇಡೀ ಜಗತ್ತನ್ನು ಸ್ವತಂತ್ರ ಮಾಡಿ ಶಾಂತಿ ಸ್ಥಾಪಿಸುವ ಕೆಲಸವನ್ನು ಅಮೆರಿಕವು ಉತ್ಸಾಹದಿಂದ ಕೈಕೊಳ್ಳಬೇಕು.”

ಮೇಲಿನ ಮಾತುಗಳಲ್ಲಿ ಅತ್ಯಂತ ಸ್ಪಷ್ಟ ವಿಚಾರವಿದೆ. ಅಮೆರಿಕದ ಈ ಮುಂದಾಳುವಿನ ಮಾತನ್ನು ಅಮೆರಿಕನರು ಬ್ರಿಟಿಷರೂ ಗಮನಿಸುವುದಿಲ್ಲವಾದರೆ ಇದು ರಾಜಕೀಯ ಆತ್ಮಹತ್ಯವೇ ಆದೀತು; ಜಗತ್ತಿನ ನವನಿರ್ಮಾಣವು ಶಾಂತಿ ಸುವ್ಯವಸ್ಥೆಗಳಲ್ಲಿ ಸ್ಥಾಪಿತವಾಗುವುದೆಂಬುದು ಕೇವಲ ಕನಸಾದೀತು!

ಆಫ್ರಿಕದ ಭಾರತೀಯರು

ಆಫ್ರಿಕದ ಟ್ರಾನ್ಸ್‌ವಾಲ, ನಾತಾಳ, ದರ್ಬಾನ ಮೊದಲಾದ ಕಡೆಗಳಲ್ಲಿ ಹೋಗಿ ನೆಲಸಿ, ಆ ದೇಶವನ್ನೇ ತಮ್ಮ ನಿವಾಸ ಭೂಮಿಯಾಗಿಯೇ ಮಾಡಿಕೊಂಡ ಭಾರತೀಯರ ಹಕ್ಕು ಬಾಧ್ಯತೆಗಳನ್ನು ಅಲ್ಲಿನ ಬಿಳಿಮುಖದವರು ಈಗ ಕಿತ್ತುಕೊಳ್ಳುವ ನಿರ್ಧಾರದಲ್ಲಿದ್ದಾರೆ! ಸಾಹಸಿಗಳೂ, ಉದ್ಯೋಗ ನಿರತರೂ ಆದ ಅಲ್ಲಿನ ಭಾರತೀಯರ ಕೈಯಲ್ಲಿ ಈಗ ಹಣವಾದದ್ದರಿಂದ ಅವರು ಅಲ್ಲಿ ಆಸ್ತಿಪಡಕೊಳ್ಳುತ್ತಿದ್ದಾರೆ. ಆ ವಿಷಯ ಅಲ್ಲಿನ ಸರಕಾರ ಅವರ ಮೇಲೆ ನಿರ್ಬಂಧ ಹಾಕುವ ಆಲೋಚನೆ ಮಾಡಿದ್ದರಿಂದ ಈಗ ದೊಡ್ಡ ಕಳವಳವೆದ್ದಿದೆ. ಯೂರೋಪಿಯನರ ಪ್ರದೇಶಗಳಲ್ಲಿ ಭಾರತೀಯರಿಗೆ ಆಸ್ತಿ ಕೊಳ್ಳಲು ಅಧಿಕಾರವಿಲ್ಲವೆಂದು ಬಿಳಿಯರ ಅಭಿಪ್ರಾಯವಾಗಿದೆ.

ಈ ರೀತಿಯಲ್ಲಿ ಭಾರತೀಯರ ಹಕ್ಕು ಬಾಧ್ಯತೆಗಳನ್ನು ಕಿತ್ತೊಗೆಯುವ ನಿರ್ಣಯ ಮಾಡಬೇಡಿರೆಂದು ಭಾರತ ಸರಕಾರವು ಆಫ್ರಿಕ ಸರಕಾರಕ್ಕೆ ಪತ್ರ ಬರೆದಿದ್ದರೂ ಅಲ್ಲಿನ ಸರಕಾರವು ತನ್ನ ಹಠ ಸಾಧಿಸುವುದರಲ್ಲಿಯೇ ಇದೆಯೆಂದು ತಿಳಿಯುತ್ತದೆ. ಈ ಸಂಬಂಧ ನಾತಾಳ ಮಂತ್ರಿಮಂಡಳದಲ್ಲಿಯೂ ಈಗ ಭಿನ್ನಾಭಿಪ್ರಾಯವಾಗಿದೆಯಂತೆ! ಹಿಂದೆ ಭಾರತೀಯರೊಡನೆ ಮಾಡಿಕೊಂಡ ಒಪ್ಪಂದವನ್ನು ಮುರಿದು ಆಫ್ರಿಕ ಸರಕಾರವು ಈ ರೀತಿ ವಕ್ರಮಾರ್ಗ ಹಿಡಿದಿರುವುದು ಆಶ್ಚರ್ಯವೂ, ವಿಷಾದಕರವೂ, ಸಂತಾಪಜನಕವೂ ಆಗಿದೆ. ಭಾರತ ಸರಕಾರವು ಈ ವಿಷಯದಲ್ಲಿ ಕೇವಲ ಪತ್ರವ್ಯವಹಾರವನ್ನು ಮಾಡುವುದರಲ್ಲಿ ಮಾತ್ರ ತೃಪ್ತವಾಗಿರದೆ ಒಳ್ಳೇ ಧೀರ ಮತ್ತು ವಿವೇಕಪರ ಹೆಜ್ಜೆ ತೆಗೆದುಕೊಳ್ಳಲೇಬೇಕು. ಬಣ್ಣಭೇದವು ಇಂದಿನ ಈ “ಸ್ವಾತಂತ್ರ್ಯದ ಸಲುವಾಗಿ ಮಾಡುವ ಯುದ್ಧ”ದ ಕಾಲದಲ್ಲಿಯೂ ಇಷ್ಟೊಂದು ವಿಶೇಷವಾಗಿದ್ದರೆ ಭಾರತೀಯರು ಮಿತ್ರರೊಡನೆ ಯಾವ ಶುಭಭವಿಷ್ಯದ ಸಲುವಾಗಿ ಈ ಯುದ್ಧದಲ್ಲಿ ಸಹಕರಿಸಿ ಹೋರಾಡಬೇಕು?

ಸ್ವದೇಶ ಸಮಾಚಾರ

ಹುಬ್ಬಳ್ಳಿಯಲ್ಲಿ ರೇಶನಿಂಗ್

ಇದೇ ತಾ. ೮ರಿಂದ ಆರಂಭವಾಗಿದೆ. ೪೧ ಅಂಗಡಿಗಾರರಿಗೆ ಲೈಸನ್ಸು ಕೊಟ್ಟಿದ್ದು ಅವರು ರೇಶನ್ ಕಾರ್ಡು ತೋರಿಸುವವರಿಗೆ ಆಹಾರ ಸಾಮಗ್ರಿ ಕೊಡುವರು. ಇನ್ನೂ ಕೆಲವು ಕಡೆ ಅಂಗಡಿ ತೆರೆಯಲ್ಪಡಲಿವೆ.

ವಿಜಾಪುರದಲ್ಲಿ ಬರಗಾಲ

ಸಾರಲ್ಪಟ್ಟು ಅನೇಕ ದಿನಗಳಾದರೂ, ಸರಕಾರವು ಸರಿಯಾಗಿ ಪರಿಹಾರ ಕಾರ್ಯ ಕೈಕೊಂಡಿಲ್ಲವೆಂದೂ, ಜನತೆಯ ಹಾಗೂ ಪತ್ರಿಕೆಗಳ ಅಭಿಪ್ರಾಯವಾಗಿದೆ. ಇಡೀ ಜಿಲ್ಲೆಯಲ್ಲಿ ಸಂಚಾರ ಮಾಡಿದ ಥಕ್ಕರ್ ಬಾಪಾರವರೂ ಹೀಗೆಯೇ ಹೇಳಿದ್ದಾರೆ.

ಲಾರ್ಡ್ ಸಭೆಯಲ್ಲಿಯೂ

ಭಾರತದ ವಿಚಾರವಾಗಿ, ಕಾಮನ್ಸ್‌ನಲ್ಲಿ ಹಾಡಿದ್ದಂತೆಯೇ ಹಾಡಿದರು. ಯುದ್ಧ ಮುಗಿವ ವರೆಗೆ ಭಾರತದ ಬಿಕ್ಕಟ್ಟು ಬಿಡಿಸಲು ಬ್ರಿಟಿಷರು ಸಿದ್ಧರಿಲ್ಲವೆಂದೇ ಈ ಹಾಡಿನ ಅರ್ಥವಾಗಿದೆ. ‘ಭಾರತೀಯರಲ್ಲಿ ಒಕ್ಕಟ್ಟಾಗಲಿ, ಒಪ್ಪಂದವಾಗಲಿ’ ಎಂಬುದೇ ಅವರ ಹಾಡಿನ ಪಲ್ಲವಿ. ಕಾಂಗ್ರೆಸನ್ನು ಸರ್ವಾಧಿಕಾರೀ ಸಂಸ್ಥೆಯೆಂದರು. ಗಾಂಧಿಜಿಯನ್ನು ದೂರಿದರು! ಬ್ರಿಟಿಷ್ ಮಾದರಿಯ ರಾಜ್ಯಘಟನೆ ಭಾರತಕ್ಕೆ ಒಪ್ಪುವುದಿಲ್ಲೆಂದರು! ಬ್ರಿಟಿಷರಿಂದ ಭಾರತೀಯರು ಇದಕ್ಕಿಂತ ಒಳ್ಳೆಯದೇನನ್ನೂ ಹಾರೈಸುವುದೇ ಇಲ್ಲವಲ್ಲಾ!

‘ಅನ್ಯಾಯ ಅನುಚಿತ’

‘ಸದ್ಯದ ಭಾರತದ ಬಿಕ್ಕಟ್ಟಿನ ಸಂಪೂರ್ಣ ಹೊಣೆಯನ್ನು ಗಾಂಧಿಜಿಯವರ ಮೇಲೆಯೇ ಹೊರಿಸುವುದು ಅನ್ಯಾಯ ಮತ್ತು ಅನುಚಿತ’ ವೆಂದು ಪ್ರೊ। ಹೆರಾಲ್ಡ್ ಲಾಸ್ಕಿಯವರು ‘ಭಾರತದ ಗಂಡಾಂತರ’ ಎಂಬ ಲೇಖನದಲ್ಲಿ ಬರೆದಿದ್ದಾರೆ. ‘ಯುದ್ಧಾರಂಭವಾದಂದಿನಿಂದಲೂ, ಭಾರತದ ವಿಷಯ ನಾವು ವಹಿಸದ ಧೋರಣವು ತಪ್ಪಾಗಿದ್ದು ಹೊಲಸು ಮಿಶ್ರಣದಿಂದ ಕೂಡಿದ್ದಾಗಿದೆ. ಒಮ್ಮತವಾಗುವ ವರೆಗೆ ಕಾಯುವ ನಮ್ಮ ಧೋರಣವು ನಿರಾಶಾಜನಕದ್ದಾಗಿದೆ’ ಎಂದೂ ಅವರು ಉಲ್ಲೇಖಿಸಿರುವರು.

‘ಬ್ರಿಟಿಷ್ ಸಾಮ್ರಾಜ್ಯದ ಕೊನೆ ದಿನ ಸಮೀಪಿಸಿದೆ’

ಎಂದು ಶ್ರೀಮತಿ ಪಾಟ್ರಿಸಿಯಾರಸೆಲರು, ಚರ್ಚಿಲರ ಭಾಷಣದ ಬಗ್ಗೆ ‘ಮೆಂಚೆಸ್ಟರ್ ಗಾರ್ಡಿಯನ್’ನಲ್ಲಿ ಒಂದು ಲೇಖನ ಬರೆದು ವಿವರಿಸಿದ್ದಾರೆ. ಅವರು ಆ ಲೇಖನದಲ್ಲಿ ಭಾರತಕ್ಕೆ ಈಗಲೇ ಸ್ವಾತಂತ್ರ್ಯ ಕೊಡಬೇಕೆಂದು ವಾದಿಸಿದ್ದಾರೆ.

ಸತ್ಯಮೂರ್ತಿಯವರ ಸ್ಥಾನಕ್ಕೆ,

ಕೇಂದ್ರ ಎಸೆಂಬ್ಲಿ ಚುನಾವಣೆಗೆ ನಿಲ್ಲಬೇಕೆಂದು ರಾಜಾಜಿಯವರನ್ನು ಒತ್ತಾಯ ಮಾಡಿದರೂ ಅವರು ಒಪ್ಪಲಿಲ್ಲವೆಂದೂ, ಹಿಂದು ಮಹಾ ಸಭೆಯವರು ಡಾ। ವರದರಾಜಲು ನಾಯುಡುರವರನ್ನು ನಿಲ್ಲಿಸುವರೆಂದೂ ತಿಳಿದಿದೆ.

ಚೀಮೂರ ದುರಂತದಲ್ಲಿ ಗಲ್ಲಿಗೆ

೨೦ ಜನರನ್ನು ಸರಕಾರವು ಕೊಟ್ಟಿತು! ಚಿಮೂರಲ್ಲಿ ಜನರಿಗೂ ಅಧಿಕಾರಿಗಳಿಗೂ ತಿಕ್ಕಾಟವಾಗಿ, ಆ ಮೇಲೆ ಆ ಊರಲ್ಲಿ ಮಿಲಿಟರಿ ರಾಜ್ಯಭಾರವೇರ್ಪಟ್ಟು, ಅನೇಕ ಅನರ್ಥವಾಗಿ ಆ ಊರ ಮಹಿಳೆಯರ ಮಾನಾಪಹಾರವಾಯಿತೆಂದೂ, ಆ ಬಗ್ಗೆ ವಿಚಾರಣೆಯಾಗಬೇಕೆಂದೂ ಪ್ರೊ। ಬನ್ಸಾಲಿಯವರು ಘೋರ ಉಪವಾಸ ಕೈಕೊಂಡ, ವಿಷಯವೀಗ ಅಖಿಲಭಾರತ ಪ್ರಸಿದ್ಧವೇ!

ಭಾರತದ ವಿಚಾರ ಸಮ್ನರ್ ವೆಲಿಸರು

ಅಮೆರಿಕ ಸರಕಾರದ ಕಾರ್ಯದರ್ಶಿ ಸಮ್ನರ್ ವೆಲಿಸರು ಅಮೆರಿಕದ ಯುದ್ಧ ಕಾಲದ ಧೋರಣದ ವಿಷಯ ವಿವರಿಸುತ್ತಾ, ಭಾರತದ ವಿಚಾರ ಹೀಗನ್ನುತ್ತಾರೆ: ‘ಭಾರತದ ರಾಜ್ಯಘಟನೆಯು ಬಹಳ ತೊಡಕಿನ ಹಾಗೂ ಸೂಕ್ಷ್ಮದ್ದಾಗಿದೆ. ಯುದ್ಧದ ರಭಸದಿಂದ, ಗಮನ ಹೊರೆಸುವುದು ಸಾಧ್ಯವಾದ ಕೂಡಲೆ, ಶರತವಿಲ್ಲದೆ ತಮಗಿಷ್ಟವಾದ ಸರಕಾರವನ್ನು ಭಾರತೀಯರು ಆರಿಸಿಕೊಳ್ಳಬಹುದೆಂದು ಅವರಿಗೀಗ ಭರವಸೆ ಕೊಡಲಾಗಿದೆ. ಭಾರತದ ಜನತೆಯ ಕಲ್ಯಾಣ ಹಾಗೂ ವೈರಿಯ ಪರಾಜಯ ಇವೆರಡರಲ್ಲಿಯೇ ಆಸಕ್ತರಾದ ಜನರು ಭಾರತದ ಆಂತರಿಕ ವ್ಯವಸ್ಥೆಯ ಕುರಿತು ಈಗ ಭಿನ್ನಾಭಿಪ್ರಾಯ ತೋರಿಸಬಹುದು. ಭಾರತದ ಪರಿಸ್ಥಿತಿಯಲ್ಲಿ ಪ್ರತ್ಯಕ್ಷ ಕೈಹಾಕುವುದು ಉದಾರತನದ ಪರೀಕ್ಷೆಯ ಪ್ರಶ್ನೆಯಾಗಿದ್ದು ಆ ವಿಷಯ ನಾವೀಗ ಏನೂ ಹೇಳುವುದೂ ಸಾಧ್ಯವಿಲ್ಲ! ಎಂದರು. ಎಂದರೆ ಅಮೆರಿಕ ಈಗ ಭಾರತದ ವಿಚಾರ ಕೈಹಾಕುವುದು ಸಾಧ್ಯವಿಲ್ಲವೆಂದ ಹಾಗಾಯಿತು!

ಜೀವದಾನವಿಲ್ಲ!

ಚಿಮೂರು, ಆಷ್ಟಿ, ಬುದಾನದ ಮಸ್ತು ಮುಂಡ ಸ್ಥಳಗಳ ದುರಂತದಲ್ಲಿ ಮರಣ ದಂಡನೆಗೆ ಗುರಿಯಾದ ೩೦ ಜನರ ಪರವಾಗಿ ಜೀವದಾನ ಕೊಡಬೇಕೆಂದು ಕೇಳಿದ ವಿನಂತಿಯನ್ನು ನಾಗಪುರ ಹೈಕೋರ್ಟಿನವರು ನಿರಾಕರಿಸಿದ್ದರು!

ಪೀರ್ ಫಗಾರೋ ಸೊತ್ತು ಸರಕಾರದ ವಶ

ಆಗಿದೆ. ಟಿಂಡೂಮಿಥಕಮಿನ ಪ್ರದೇಶದಲ್ಲಿ ಒಂದು ಮರುಭೂಮಿಯಲ್ಲಿ ಇವರು ತಯಾರಿಸಿಟ್ಟ ಅನೇಕ ಕೋವಿ, ಮದ್ದು ಗುಂಡು ಮೊದಲಾದವು ಇದ್ದವು. ಇವರಿಬ್ಬರು ಹೊರ ಮುಖಂಡರಾದ ಉಳುಮಾನ್ ರಾಜರ್ ಮತ್ತು ಪೀನು ರಾಜರ್ ಇವರನ್ನೂ ಸರಕಾರ ಸೆರೆಹಿಡಿದಿದೆ.

ವೈಸರಾಯ್ ಆದರೆ!

ಏನೆಲ್ಲಾ ಮಾಡಬೇಕು! ಜಪಾನರ ಮರ್ದನಕ್ಕಾಗಿ ವಿಮಾನಗಳನ್ನು ಕಳುಹಿಸುವುದಲ್ಲ, ಭಾರತೀಯರ ಮೇಲೆ ಮೆಶಿನ್‌ಗನ್ ಮಾಡಲು ಕಳುಹಿಸಬೇಕಾಗುತ್ತದೆ! ರಾಷ್ಟ್ರಗೀತೆಯನ್ನೂ ಹಾಡುವ ಸುಕುಮಾರ ಕೋಮಲೆಯರ ಮೇಲೆ ನಿರ್ದಯವಾಗಿ ಛಡಿ ಏಟು ಕೊಡಿಸಬೇಕಾಗುತ್ತದೆ! ಜೈಲಲ್ಲಿ ಹಾಕಿ ವಿದ್ಯಾರ್ಥಿಗಳ ಮೇಲೆ ಮನಸೆಯ ಜೊಡಿಸಬೇಕಾಗುತ್ತದೆ! ಮಹಾತ್ಮರ ಅನುಯಾಯಿಗಳನ್ನು ಗಲ್ಲಿಗೇರಿಸುವ ಪತ್ರಕ್ಕೆ ಸಹಿ ಹಾಕಬೇಕಾಗುತ್ತದೆ! ಮಹಾತ್ಮರಂಥಾ ಮಹಾಪುರುಷರನ್ನು, ನೆಹರು ಆಜಾದರೇ ಮೊದಲಾದ ರಾಷ್ಟ್ರವೀರರನ್ನು ಸೆರೆಮನೆಯ ಕತ್ತಲೆ ಕೋಣೆಗೆ ತಳ್ಳಬೇಕಾಗುತ್ತದೆ! ಸಾಮ್ರಾಜ್ಯವಾದೀ ಬ್ರಿಟನಿನ ಪರವಾಗಿ ನಿರ್ದಯ ದಂಡನೀತಿಯ ಅಧಿಕಾರ ಭಾರತದಲ್ಲಿ ನಡೆಸಬೇಕಾಗುತ್ತದೆ! ಇದನ್ನು ಮಾಡುತ್ತಿರುವಾಗ ಆತ್ಮಸಾಕ್ಷಿ ಕೆರಳುವುದಿಲ್ಲವೆ? ಹಾಗಾಗಿ, ಸರ್ ಸಿಂಕ್ಲೇರರು ತಮಗೊಪ್ಪಿಸಿದ್ದ ಭಾರತದ ವೈಸರಾಯ್ ಪದವಿಯನ್ನು ನಿರಾಕರಿಸಲು ಬಯಸಿದರು? ಎಂದು ‘ನ್ಯೂ ಸ್ಟೇಟ್ಸಮನ್’ ಉಲ್ಲೇಖಿಸುತ್ತದೆ.

‘ಶ್ವೇತಪತ್ರಕ್ಕೆ ನೆಹರು ಉತ್ತರ ಕೊಡಲಿ’

ಬ್ರಿಟಿಷ್ ರೇಡಿಯೋದಲ್ಲಿ ಭಾರತೀಯರ ಹೃದ್ಗತ ಸೂಚಿಸಲು ಆಸ್ಪದ ಕೊಡುವುದಿಲ್ಲವೆಂದು ಟೀಕಿಸುತ್ತಾ ಪಾರ್ಲಿಮೆಂಟ್ ಸದಸ್ಯರಾದ ಸೊರೆನ್ಸನರು, ನೆಹರು ರೇಡಿಯೋ ಮೂಲಕ ಶ್ವೇತಪತ್ರಕ್ಕೆ ಉತ್ತರ ಕೊಡುವಂತೆ ಏಕೆ ಏರ್ಪಡಿಸಬಾರದು ಎಂದು ಪ್ರಶ್ನಿಸಿ, ನಮ್ಮ ಶ್ವೇತಪತ್ರವು ನಮ್ಮ ಕಡೆಯ ವಕೀಲರ, ಜ್ಯೂರಿಯರ, ಜಡ್ಜರ, ಕೊನೆಯದಾಗಿ ಜೈಲರರ ಕೆಲಸವನ್ನೂ ಮಾಡುತ್ತದೆಂದೂ, ಹಾಗಾದರೆ ಎದುರು ಪಕ್ಷಕ್ಕೆ ಕಾಂಗ್ರೆಸಿಗೆ ಆತ್ಮಸಮರ್ಥನೆಗಾದರೂ ಆಸ್ಪದವೆಲ್ಲಿದೆಯೆಂದೂ ಹೇಳಿ, ನೆಹರುರವರಿಗೆ ಶ್ವೇತಪತ್ರಕ್ಕೆ ಉತ್ತರ ಕೊಡುವರೆ ಸಂದರ್ಭ ಕಲ್ಪಿಸಿಕೊಡಿರೆಂದು ವಾದಿಸಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮದ್ರಾಸಿನಲ್ಲಿ ಕೆನರಾ ಚೇಂಬರ್ ಓಫ್ ಕಾಮರ್ಸ್

ಇದರ ಕಡೆಯಿಂದ ಹೋದ ಶಿಷ್ಟಮಂಡಳದವರು ಕಳೆದ ಶನಿವಾರ ಗವರ್ನರರ ಎಡ್ವೈಸರ್ ಎಚ್. ಯುಡ್ಡರನ್ನು ಫೋರ್ಟ್ ಸೈಂಟ್ ಜೋರ್ಜನಲ್ಲಿ ಸಂದರ್ಶಿದ್ದರು. ಶ್ರೀಗಳಾದ ಎಚ್. ಡಿ. ಕಾಮತ್, ಪಿ. ಕಾಮತ್, ಕೆ. ಕೆ. ಶೆಣೈ, ಎಸ್. ವಿ. ಪೈ ಮತ್ತು ವಿ. ಎನ್. ಪೈ ಇವರು ಕೆನರಾ ಚೇಂಬರ್ ಓಫ್ ಕಾಮರ್ಸ್ ಕಡೆಯಿಂದಲೂ ಶ್ರೀ. ರಾಘವನ್ ನಾಯರರು ಸದರ್ನ್ ಇಂಡಿಯಾ ಚೇಂಬರ್ ಓಫ್ ಕಾಮರ್ಸ್ ಕಡೆಯಿಂದಲೂ ಹೋಗಿದ್ದರು. ಅಕ್ಕಿ ಮುಡಿ ಒಂದರ ರೂ ೧೨-೮-೦ ಕ್ರಯವಿರುವಾಗ, ಮೊದಲಾಗಿ ಎಚ್ಚರಿಕೆ ಕೊಡದೆ ದಕ್ಷಿಣಕನ್ನಡ ಜಿಲ್ಲೆಯ ಕಲೆಕ್ಟರರು ವ್ಯಾಪಾರಿಗಳ ೩೦,೦೦೦ ಮುಡಿ ಅಕ್ಕಿಯನ್ನು ಸ್ವಾಧೀನಪಡಿಸಿಕೊಂಡು ಅಕ್ಕಿ ಮುಡಿ ಒಂದರ ರೂ. ೮-೧೦-೦ರಿಂದ ೯-೧೦ರ ವರೆಗಿನ ಕ್ರಯಕ್ಕೆ ಮಾರಾಟ ಮಾಡಬೇಕೆಂದು ಕ್ರಯ ನಿರ್ಬಂಧಿಸಿದ ನಿಮಿತ್ತ ಈ ಸಂಬಂಧ ತಮಗುಂಟಾದ ನಷ್ಟ ಭರ್ತಿಯನ್ನು ಸರಕಾರವು ಕೊಡಬೇಕೆಂದು ಅವರ ಹೇಳಿಕೆಯಾಗಿತ್ತು. ನಿರ್ಬಂಧ ಹಾಕುವ ದಿನಗಳಲ್ಲಿ ಸರಕಾರದವರೇ ನೂರಾರು ಮುಡಿ ಅಕ್ಕಿಯನ್ನು ಹೆಚ್ಚಿಗೆ ಕ್ರಯದಲ್ಲಿ ಪಡಕೊಂಡಿದ್ದಾರೆಂದೂ, ಹೀಗೆ ಒಮ್ಮೆಲೇ ನಿರ್ಬಂಧ ಮಾಡಿದ್ದರಿಂದ ವ್ಯಾಪಾರವೇ ತಡೆಗಟ್ಟಲ್ಪಟ್ಟು ರೈತರಿಗೂ ಹೆಚ್ಚಿನ ನಷ್ಟವುಂಟಾಗಿದೆಯೆಂದೂ ಅವರ ದೂರುಗಳಿದ್ದವು.

ಚಿಲ್ಲರೆಯಿಲ್ಲ

ಕಂಬೀ ಕೂಗು ತಿರುಗಿ ಮಂಗಳೂರಲ್ಲಿ ಎದ್ದಿದೆ! ಜಿಲ್ಲೆಯ ಬೇರೆ ಬೇರೆ ಕಡೆಗಳಿಂದಲೂ ಇದೇ ರೀತಿಯ ದೂರುಗಳು ಕೇಳಿಬರುತ್ತವೆ. ತೂತಿದ್ದ ಒಂದು ಪಾವಾಣೆ ನಾಣ್ಯಗಳು ಕೆಲವು ಮಾತ್ರ ಕೆಲ ಸಮಯ ಕಾಣ ಬಂದಿದ್ದು ಈಗ ಅವುಗಳೂ ಬರುವುದಿಲ್ಲ. ಈ ಚಿಲ್ಲರೆ ಅಭಾವದ ಬಗ್ಗೆ ಅಧಿಕಾರಿಗಳು ಏನಾದರೂ ಕಾರ್ಯಕ್ರಮ ಕೈಕೊಳ್ಳಲಾರರೆ? ರೂಪಾಯಿ ನೋಟು ತೆಗೆದುಕೊಂಡು ಹೋದರೆ ಮುಕ್ಕಾಲಿನ ವಿಕ್ರಯವೂ ಮಾಡಲಾಗುವುದಿಲ್ಲವೆಂಬುದು ಬಹಳ ದೊಡ್ಡ ಸಂಕಷ್ಟವಾಗಿ ಬಿಟ್ಟಿದೆ! (ಬಾತ್ಮಿ)

ಎ. ಆರ್. ಪಿ. ನಿಬಂಧನೆ

ಗಳ ಕುರಿತು ಕಲೆಕ್ಟರರು ಹೊರಡಿಸಿರುವ ಒಂದು ಆಜ್ಞೆಯು ಹೀಗಿದೆ: ಎ. ಆರ್. ಪಿ. ನೋಟೀಸು ಇಲ್ಲವೆ ಬಿಗಿಲುಗಳನ್ನು ನ್ಯಾಯವಾದ ಕಾರಣವಿಲ್ಲದೆ ಯಾರೂ ಮಾರಬಾರದು; ಆ ಆಜ್ಞೆಗಳನ್ನು ಅನುಸರಿಸುವ ಸಮಯದಲ್ಲಿ ಯಾರ ಸ್ಥಳ, ಪ್ರದೇಶವಾಗಿದ್ದರೂ ಅಲ್ಲಿಗೆ ಹೋಗಿ ಅನಿವಾರ್ಯವಾದಷ್ಟು ಕಾಲ ನಿಲ್ಲಬಹುದು; ಹಾಗೆ ರಕ್ಷಣೆ ತೆಗೆದುಕೊಳ್ಳುವವರನ್ನು ಯಾರೂ ತಡೆಯಬಾರದು. ಈ ಆಜ್ಞೆಗಳನ್ನು ಪಾಲಿಸದಿದ್ದರೆ ಇಲ್ಲವೆ ಪಾಲಿಸುವವರಿಗೆ ಅಡ್ಡಿಮಾಡಿದರೆ ಆರು ತಿಂಗಳ ಸಜೆ ಇಲ್ಲವೆ ದಂಡನೆ, ಅಥವಾ ಎರಡೂ ಒಟ್ಟಿಗೆ ಸೇರಿ ಶಿಕ್ಷೆ ಸಿಗಬಹುದು.

ನೇಮಕ

ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ. ಎನ್. ಸುಬ್ಬರಾಯರು ಕೊಯಮುತ್ತೂರು ಮತ್ತು ನೀಲಗಿರಿಗಳ ಜಿಲ್ಲಾ ವಿದ್ಯಾಧಿಕಾರಿಗಳಾಗಿ ನೇಮಕ ಹೊಂದಿದ್ದಾರೆ.

ಜಿಲ್ಲಾ ಬೋರ್ಡಿ

ನವರು ಹಿಂಯಡ್ಕದಲ್ಲಿ ಕಟ್ಟಿಸಿದ್ದ ಬಂಗಲೆಗೆ ಬೆಂಕಿ ಬಿದ್ದುದರಿಂದ ಅದು ಉಪಯೋಗಕ್ಕೆ ಬೀಳುವ ಸ್ಥಿತಿಯಲ್ಲಿಲ್ಲವೆಂದು ಪ್ರಯಾಣಿಕರಿಗೆ ಬೋರ್ಡಿನ ಉಪಾಧ್ಯಕ್ಷರು ತಿಳಿಸುತ್ತಾರೆ.

ಪ್ರಥಮ ಚಿಕಿತ್ಸೆ

ಯ ಕುರಿತು ತಾ. ೧೬ರಿಂದ ಗವರ್ನಮೆಂಟ್ ಕಾಲೇಜಿನಲ್ಲಿ ಸೈಂಟ್ ಜೊ. ಎಂಬುಲೆನ್ಸ್ ಆಶ್ರಯದಲ್ಲಿ ಪ್ರತಿದಿನ ಸಂಜೆ ೫-೩೦ರಿಂದ ೬॥ ವರೆಗೆ ಭಾಷಣ ನಡೆಯುವವು. ಆ ಭಾಷಣಗಳಾದ ಮೇಲೆ ಪರೀಕ್ಷೆಯಿದೆ. ಅದರಲ್ಲಿ ಉತ್ತೀರ್ಣರಾದವರಿಗೆ ಶಿಫಾರಸು ಪತ್ರವಲ್ಲದೆ ಎ. ಆರ್. ಪಿ. ಯಲ್ಲಿ ಕೆಲಸವೂ ದೊರೆಯಬಹುದು.

ವಸಂತೋತ್ಸವ

ವೃ. ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ತಾ. ೧೪ ಮತ್ತು ೧೫ರಂದು ಜರಗಿತು. ಫಲಿಮಾರು ಮಠದ ಶ್ರೀ ಪಾದಂಗಳವರು ಇದರ ಉದ್ಘಾಟನಾ ಸಮಾರಂಭ ನೆರವೇರಿಸಿದರು. ಶಾಲೆಯ ಸಹಾಯಾರ್ಥ ವಿವಿಧ ವಿನೋದಾವಳಿ, ಲಕ್ಕಿ ಡಿಪ್ ಮೊದಲಾದವುಗಳಿದ್ದುವು.

ಶ್ರೀರಾಮೋತ್ಸವ

ವೃ. ತಾ. ೫ರಿಂದ ಆರಂಭವಾಗಿ ಕಾರ್ಯಕ್ರಮಗಳು ವಿಜೃಂಭಣೆಯಿಂದ ಫಲಿಮಾರು ಮಠದ ಶ್ರೀಮದ್ರಘುಮಾನ್ಯತೀರ್ಥ ಶ್ರೀ ಪಾದಂಗಳವರ, ಸನ್ನಿಧಿಯಲ್ಲಿ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ಜರಗಿದವು. ಪ್ರತಿ ರಾತ್ರೆ ೯॥ ಘಂಟೆಯಿಂದ ೧೨॥ ತನಕ ಮೈಸೂರಿನ ಶ್ರೀ. ಹರಿಸರ್ವೋತ್ತಮದಾಸರ ಹರಿಕಥೆಯಿದ್ದು ಇದು ವಿಶೇಷ ಜನಾದರಕ್ಕೆ ಪಾತ್ರವಾಗಿವೆ. ಸಂಜೆ ಹೊತ್ತು ಶ್ರೀಯುತರು ನಿಡ್ಲೋಡಿ ಅನಂತ ಉಪಾಧ್ಯಾಯ, ಉಳಿಯಾರ್ ಶ್ರೀನಿವಾಸಾಚಾರ್ಯ, ನಂಜುಂಡ ಶಾಸ್ತ್ರಿ, ಕಾಪು ಕೃಷ್ಣಾಚಾರ್ಯ ಶ್ರೀ. ಜೂಗಪ್ಪ ಕೆ. ಆರ್. ಆಚಾರ್ ಮೊದಲಾದವರಿಂದ ಉಪನ್ಯಾಸಗಳೂ ನಡೆಯಿತು. ದಿನನಿತ್ಯದ ಪೂಜಾ ವಿನಿಯೋಗದ ವೆಚ್ಚವಾದ ರೂ. ೧೦೦ಗಳನ್ನು ರಾ. ಬ. ಬಿ. ಶ್ರೀ. ಪತಿರಾವ್; ನಿವೃತ್ತ ಸಬ್ ಜಜ್ ಬೈಲು ಗೋಪಾಲ ಕೃಷ್ಣಯ್ಯ ಮೊದಲಾದವರು ವಹಿಸಿರುವರು. ರಾಮೋತ್ಸವದ ಕೊನೆಯ ದಿನ ನಗರಮೆರವಣಿಗೆ ಮೊದಲಾದ ವಿಶೇಷ ವಿಜೃಂಭಣೆಗಳಿದ್ದು ವಿಶೇಷ ಜನಸಮೂಹ ಸೇರಿತ್ತು. ಹರಿದಾಸರಿಗೆ ಮಂಗಳೂರ ಮಹಾಜನರ ಪರವಾಗಿ ಬಂಗಾರದ ಮೆಡಲು ಕೊಡಲ್ಪಟ್ಟಿತು.

ಕಳೆದ ನಗರಸಭೆಯ

ಅಧಿವೇಶನದಲ್ಲಿ ವಾರ್ಷಿಕ ಮಾರ್ಗ ದುರಸ್ತಿ ಮತ್ತಿತರ ವೆಚ್ಚಗಳಿಗಾಗಿ ಪುನಃ ಅಂದಾಜು ಹಾಕಿದಂತೆ ರೂ. ೩೫,೦೦೦ ಮಂಜೂರಾಯಿತು. ರೂ. ೧೦೦೦ ವಷ್ಟು ವೆಚ್ಚ ಮಾಡಿ ನಗರ ಸಭಾ ಪೇದೆಗಳಿಗೆ ಉಡುಗೆ ಒದಗಿಸಬೇಕೆಂಬ ಸೂಚನೆಯನ್ನು ಶ್ರೀ. ಗೊನ್ಸಾಲ್ವಿಸರು ವಿರೋಧಿಸಿದರು. ಮಾರ್ಗಕ್ಕೆ ನೀರು ಹಾಕಿ, ಚರಂಡಿಗಳನ್ನು ಶುಚಿಗೊಳಿಸಿ, ನೈರ್ಮಲ್ಯವನ್ನು ಕಾಪಾಡುವುದೂ ಕಷ್ಟವಾಗಿರುವಾಗ ಸ್ವಂತದ ವೆಚ್ಚವನ್ನು ಹೆಚ್ಚಿಸಿ ತೆರಿಗೆ ಕೊಡುವವರಿಗೆ ಅನ್ಯಾಯ ಮಾಡಬಾರದೆಂದೂ ಉಡುಗೆಯ ವೆಚ್ಚವನ್ನು ಅರ್ಧಕ್ಕಾದರೂ ಇಳಿಸಬೇಕೆಂದೂ ಅವರು ಸೂಚಿಸಿದರು. ಆದರೆ ಆ ಸೂಚನೆಗೆ ಬೆಂಬಲ ಸಿಗಲಿಲ್ಲ. ಹೊಗೆ ಬಜಾರಿನಲ್ಲಿ ತೋಟಗಳಿಗಾಗಿ ವಸತಿಗಳನ್ನು ನಿರ್ಮಿಸಬೇಕೆಂಬ ಯೋಜನೆಯನ್ನು ಸದ್ಯಕ್ಕೆ ಹಿಂದಿಡಲಾಯಿತು. ಎ. ಆರ್. ಪಿ ಯವರಿಗೆ ಕೊಟ್ಟ ಲಾರಿಗಳನ್ನು ಮಾರ್ಗಕ್ಕೆ ನೀರು ಚಿಮುಕಿಸುವ ಮಟ್ಟಿಗಾದರೂ ಹಿಂದೆ ತರಲು ಬಿಡಬೇಕೆಂದು ನಗರ ಸಭೆಯು ಕೇಳಿಕೊಂಡಿತಷ್ಟೆ? ಅದಕ್ಕೆ ಕಲೆಕ್ಟರರು ಕೊಟ್ಟ ಉತ್ತರದಂತೆ, ಮದ್ರಾಸಿನ ಅಧಿಕಾರಿಗಳಿಗೆ ಬರೆಯುವುದೆಂದಾಯಿತು. ಅವರ ಉತ್ತರವು ಬರುವಷ್ಟರಲ್ಲಿ ಮಳೆಗಾಲವು ಆರಂಭವಾಗುವುದೆಂದು ಒಬ್ಬ ಸದಸ್ಯರು ಹೇಳಿದರು! ಫೆಬ್ರವರಿ, ಮಾರ್ಚಿಗಳಲ್ಲಿ ಜರಗಿದ ಟೌನ್ ಪ್ಲಾನಿಂಗ್ ಸಮಿತಿಯ ವರದಿಯನ್ನು ನಗರ ಸಭೆಯು ಸ್ವೀಕರಿಸಿತು.

ಮಂಗಳೂರಿನ ಮಜೂರರ

ಮುಖಂಡರಾದ ಶ್ರೀ. ಕೇಶವ ಕಾಮತರ ಮೇಲೆ ಕಳೆದ ವರ್ಷದ ಅಕ್ಟೋಬರ ಮೊದಲ್ಗೊಂಡು ನಡೆಯುತ್ತಿದ್ದ ವಿಚಾರಣೆಯು ಕೊನೆಗಂಡಿರುವುದು. ಪುತ್ತೂರಿನ ನ್ಯಾಯಾಧೀಶರಾದ ಶ್ರೀ. ಶ್ರೀರಾಮುಲು ನಾಯ್ಡುರವರು ಒಳ್ಳೆ ನಡತೆಯ ಬಗ್ಗೆ ಎಚ್ಚರಿಕೆಯಿತ್ತು ಶ್ರೀ. ಕಾಮತರ ಬಿಡುಗಡೆ ಮಾಡಿರುವರು.

ಪಡುಬಿದ್ರಿಯಲ್ಲಿ ಖಾದಿ

ನಿರ್ಮಾಣ ಕಾರ್ಯವು ಶ್ರೀ ಕರಿಯಣ್ಣ ಶೆಟ್ರ ಉತ್ಸಾಹ ಸಂಘಟನೆಗಳಿಂದ, ಈಗ ಭರದಿಂದ ಸಾಗುತ್ತಿದೆ. ಪಯ್ಯನ್ನೂರಿನಿಂದ ನುರಿತ ಕೆಲಸ ಮಾಡಿಸುತ್ತಿದ್ದಾರೆ. ಜಿಲ್ಲೆಯ ಖಾದೀ ಪ್ರಿಯ ಮಹಾಜನರು ಈ ಸಂಘಟನೆಯ ಪ್ರಯೋಜನವನ್ನು ಪಡಕೊಳ್ಳುವುದು ಅವಶ್ಯ. ಜಿಲ್ಲೆಯ ಯಾವುದೇ ಕಡೆಯವರಾದರೂ ತಾವು ನೂತ ನೂಲನ್ನು ಇಲ್ಲಿಗೆ ಕಳುಹಿಸಿ ವಸ್ತ್ರಮಾಡಿಸಿಕೊಳ್ಳಬಹುದು. ಮಹಾಜನರ ಸಹಕಾರ ದೊರೆತರೆ ಇನ್ನಷ್ಟು ವಿಶಾಲ ಕ್ಷೇತ್ರದಲ್ಲಿ ಖಾದೀ ಕಾರ್ಯವನ್ನು ಕೈಕೊಂಡು ಇಡೀ ಜಿಲ್ಲೆಗೆ ಬೇಕಾದಷ್ಟು ಖಾದಿ ಒದಗಿಸಲು ಇವರು ಸಮರ್ಥರಾಗಬಹುದು.

ಕಾರ್ಕಳ

ಬಿಡುಗಡೆ

ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನನ್ವಯ ಕೈದು ಮಾಡಲ್ಪಟ್ಟು ಅಲಿಪುರಂ ಜೈಲಿನಲ್ಲಿ ರಾಜಕೀಯ ಕೈದಿಯಾಗಿ ಶಿಕ್ಷೆ ಅನುಭವಿಸುತ್ತಿದ್ದ ಶ್ರೀ ಕೆ. ಪಿ. ಕೇಶವ ಪ್ರಭುಗಳು ತಮ್ಮ ಶಿಕ್ಷೆಯ ಅವಧಿ ತೀರಿಸಿ ತಾ. ೧೦ಕ್ಕೆ ಇಲ್ಲಿಗೆ ಮರಳಿ ಬಂದಿರುವರು. ಕೆಲ ದಿನಗಳ ಹಿಂದೆ ಇಲ್ಲಿನ ಬೇರೆ ೭ ಮಂದಿ ಸತ್ಯಾಗ್ರಹಿಗಳೂ ಅಲಿಪುರಂ ಶಿಕ್ಷೆ ತೀರಿಸಿ ಮರಳಿ ಬಂದಿದ್ದಾರೆ.

ಇಲ್ಲಿನ ಬೋರ್ಡ ಹೈಸ್ಕೂಲಿನ ವರ್ಧಂತಿಯು ತಾ. ೧೨ರಂದು ಡಾ। ಎಂ. ಕೇಶವ ಪೈಗಳ ಅಧ್ಯಕ್ಷತೆಯಿಂದ ನೆರವೇರಿತು. ಶ್ರೀ. ನಾರಾಯಣ ಕಲ್ಯರು ಶಾಲೆಯ ಸ್ವಸ್ತಿ ವಾಚನ ಮಾಡಿದರು. ಶ್ರೀಮತಿ ಪದ್ಮಾವತಿ ಬಾಯಿ ಕೇಶವ ಪೈಯವರು ಬಹುಮಾನ ವಿತರಣೆ ಮಾಡಿದರು. ಹಿಂದಿನ ದಿನ ವಕೀಲ ಶ್ರೀ ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಹಳೆ ವಿದ್ಯಾರ್ಥಿ ಸಂಘದ ಸಭೆ ಕೂಡಿತು.

ಉಡುಪಿ

ಕನ್ಯಾ ಗುರುಕುಲ

ದಲ್ಲಿ (ಉತ್ತರ ಹಿಂದುಸ್ಥಾನ) ಶಿಕ್ಷಣ ಹೊಂದಿ ಬಂದಿರುವ ಕುಮಾರಿ ಸೀತಾ ದೇವಿ (ಶ್ರೀ ಬೆಳ್ಳಿಪ್ಪಾಡಿ ವೆಂಕಪ್ಪ ರೈಗಳ ಪುತ್ರಿ) ಯವರು ತಾ. ೯ರಂದು ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಶ್ರೀ ಎಸ್. ಎಸ್. ಕುರಟಿರ ಅಧ್ಯಕ್ಷತೆಯಿಂದ ತನ್ನ ಗುರುಕುಲದ ಅನುಭವಗಳ ಕುರಿತು ಹಿಂದಿಯಲ್ಲಿ ಭಾಷಣವಿತ್ತರು.

ಬನ್ನಿರಿ! ನೋಡಿರಿ!! ಆನಂದ ಪಡಿರಿ!!!

ಕುರಾಡಿ ಶಾಂತಿನಿಕೇತನದಲ್ಲಿ ತಾ. 24--4--1943ನೇ ರಾತ್ರಿ ಪೂರ್ ಪಂಡಿನ ಪರವಾಗಿ ಮಂದರ್ತಿ, ಸಾಕೂರು, ಪೆರ್ಡೂರು ಮತ್ತು ಅಮೃತೇಶ್ವರಿ ಈ ನಾಲ್ಕು ಮೇಳಗಳ ದಶಾವತಾರ ಆಟವಿದೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

K. Sitaratna Kalkur.

Member: Udipi Taluk War Fund Committee.

ಕಯ್ಯೂರ ಕಿಡಿಗಳ ಕೊನೆಯ ಸಂದೇಶ

ಕಾಮ್ರೇಡ್ ಪಿ. ಸಿ. ಜೋಶಿಯವರು ಕಯ್ಯೂರ ಕೈದಿಗಳನ್ನು ಗಲ್ಲಿಗೇರಿಸುವ ಕೆಲ ದಿನಗಳ ಮುನ್ನ, ಅವರನ್ನು ಇಟ್ಟಿದ್ದ ಕನ್ನನ್ನೂರು ಸೆರೆಮನೆಗೆ ಅವರ ಭೇಟಿಗಾಗಿ ಹೋಗಿದ್ದರು. ಅಲ್ಲಿನ ಸ್ಫೂರ್ತಿಮಯ ಘಟನೆಗಳನ್ನು ಅವರು ಹೃದಯದ್ರಾವಕ ವಿಸ್ತಾರ ಲೇಖನವೊಂದರಲ್ಲಿ ಬರೆದು ವಿವರಿಸಿದ್ದಾರೆ. ಅದರ ಸಾರಾಂಶ ಇಂತಿದೆ:

"ಅವರ ದೇಹ ಕೃಶವಾಗಿತ್ತು. ಆದರೆ ಅವರ ಹೃದಯ ದುರ್ಬಲಗೊಂಡಿರಲಿಲ್ಲ. ಮುಖಗಳು ತೇಜಸ್ಸಿನಿಂದ ಬೆಳಗುತ್ತಿದ್ದವು. ಪಾಶಿ ಕಂಬದ ಬಳಿ ತಮ್ಮ ಕೊರಳೊಡ್ಡಿ ನಿಂತ ಅವರ ದೃಶ್ಯ ನನ್ನ ಕಣ್ಣ ಮುಂದೆ ಒಂದು ಕ್ಷಣ ಹಾದುಹೋಯಿತು! ಮೃತ್ಯುವನ್ನು ಗಣಿಸದೆ, ಮುಗುಳ್ನಗೆಯಿಂದ ಮಾತೃಭೂಮಿಯ ಸಲುವಾಗಿ ಕೊನೆಯುಸಿರೆಳೆಯಲು ಸಿದ್ಧರಾಗಿ ನಿಂತಿದ್ದರು. ನಾನವರೊಡನೆ ಮಾತನಾಡುತ್ತಿದ್ದೆ. ನನ್ನ ಕಂಠ ಬಿಗಿದಿತ್ತು. ಕಣ್ಣು ಕೂಡಿ ಹರಿಯುತ್ತಿತ್ತು. ನಾನವರಿಗೆ ಹೇಳಿದೆ. 'ಇಂದು ೧೫,೦೦೦ ಕಮ್ಯೂನಿಸ್ಟರು ನಿಮ್ಮ ಕೀರ್ತಿಧ್ವಜವನ್ನು ನಿರಾತಂಕ ಹಾರಾಡಿಸುತ್ತಿರುವರು; ನೀವಿಂದು ಮಾತೃಭೂಮಿಯ ಸ್ವಾತಂತ್ರ್ಯದ ಸಲುವಾಗಿ, ಲೋಕದ ಪೀಳಿಗೆಯ ಸಲುವಾಗಿ ಪ್ರಾಣಾರ್ಪಣ ಮಾಡುತ್ತಿದ್ದೀರಿ: ನಿಮ್ಮದು ಮರಣವಲ್ಲ. ಸುಖ ಸ್ವಪ್ನ! ನಮ್ಮ ಪಕ್ಷವು ನಿಮ್ಮನ್ನು ಕಳಕೊಳ್ಳುತ್ತದು. ಆದರೆ ರಾಷ್ಟ್ರವು ನಾಲ್ವರು ರಾಷ್ಟ್ರಭಕ್ತರ ಹೆಸರನ್ನು ಮರೆಯಲಾರದು. ನೀವು ನಿಶ್ಚಿಂತರಾಗಿರಿ. ನಿಮ್ಮ ಮನೆಯವರ ಯೋಗಕ್ಷೇಮದ ವಿಚಾರ ರಾಷ್ಟ್ರದ ಕಮ್ಯೂನಿಸ್ಟರು ತಮ್ಮ ಕರ್ತವ್ಯ ಮಾಡಲು ಮರೆಯಲಾರರು. ಏನಾದರೂ ಸಂದೇಶ ಕೊಡುವಿರಾ?' ಕಯ್ಯೂರ ಬಂಧುಗಳಲ್ಲಿ ಕುಂಞಂಬು ನಾಯರ್ ಮೊದಲು ಮಾತನಾಡಿದ 'ಕಮ್ಯೂನಿಸ್ಟ್ ಪಾರ್ಟಿಯು ನಮಗೆ ಜನತಾ ಸೇವೆ ಮಾಡಲು ಕಲಿಸಿತು. ನನ್ನ ಪಾರ್ಟಿಯು, ಇಂದು ನಾನು ನನ್ನ ಕರ್ತವ್ಯ ಮಾಡಿದ್ದೇನೆ ಎಂದು ಹೇಳಿದರೆ ನನಗಷ್ಟೇ ಸಾಕು.' ಅನಂತರ ಮಡತ್ತಿಲ್ ಅಪ್ಪು ಹೇಳಿದ: 'ನೀವು ಎಂಥಾ ಶುಭ ವಾರ್ತೆ ತಂದಿದ್ದೀರಿ, ನಮ್ಮ ಪಾರ್ಟಿಯು ದಿನೇ ದಿನೆ ಬೆಳೆಯುತ್ತದೆಯೆ? ಇಷ್ಟೇ ಸಾಕು; ನಾನು ವಧಾಸ್ಥಾನದಲ್ಲಿ ಇನ್ನಷ್ಟು ಹುರುಪಿನಿಂದ ನಿಲ್ಲುವೆನು. ಅಗಲೂ ದೀನಳಾದ ನನ್ನ ದೇಶಮಾತೆಯನ್ನು ಮರೆಯಲಾರೆನು.' ಅನಂತರ ಚಿರುಕಂಡನ್ ಹೇಳಿದ: 'ನಾವು ಕಿಸಾನರ ಮಕ್ಕಳು. ಇಂದಲ್ಲ ನಾಳೆ ವಧಾಸ್ಥಾನಕ್ಕೆ ಹೋಗುವವರೇ. ಭಾರತೀಯರೆಲ್ಲರೂ ಕಿಸಾನರು. ಅವರೆಲ್ಲರನ್ನೂ ಪಾಶಿಗೆ ಕೊಡುವರೇನು? ಇಂದು ನಾನು ಜೀವಿಸಿ ಉಳಿದಿದ್ದರೂ ದೇಶದ ಸೇವೆಯಲ್ಲಿ ದುಮುಕಿ ಮಡಿಯುತ್ತಿದ್ದೆ.' ಕೊನೆಗೆ ಅಬ್ಬುಬಕರ್ ಮಾತನಾಡಿದ 'ನಾನು ಮೊದಲಿಂದಲೂ ದೇಶಕ್ಕಾಗಿ ಪ್ರಾಣವನ್ನರ್ಪಿಸುವ ಸುಖಸ್ವಪ್ನ ಕಾಣುತ್ತಿದ್ದೆನು. ಮಿತ್ರರೇ, ನಾವು ಧೀರರಾಗಿ ಪಾಶಿ ಹಗ್ಗಕ್ಕೆ ಕೊರಳು ಕೊಡುವೆವೆಂದು ತಿಳಿಸಿರಿ. ಮನೆಯಲ್ಲಿ ಮುದಿತಾಯಿ ಇದ್ದಾಳೆ. ಪುತ್ರನ ಮರಣವಾರ್ತೆ ಕೇಳಿ ಆ ಮುದಿ ತಾಯಿಗೆ......ನನ್ನ ಚಿಕ್ಕ ತಮ್ಮಂದಿರಿದ್ದಾರೆ. ಅವರೆಲ್ಲರಿಗೂ ಧೈರ್ಯ ಹೇಳಿ. ನನ್ನ ತಾಯಿಗೆ ನಾನೇ ಹಿರಿಯ ಮಗನಾಗಿದ್ದೆ. ನನ್ನ ನಂತರ ನನ್ನ ಮುದಿತಾಯಿಯ ಸೇವೆ ಸಲ್ಲಿಸುವವರು ಯಾರಿಲ್ಲ. ಆದರೆ ನನಗದರ ವಿಚಾರವಿಲ್ಲ......'.

"'ಜೈಲರ್ ಸಮಯ ಆಯಿತೆಂದನು. ಕಬ್ಬಿಣದ ಸಲಾಕೆಗಳು ನನ್ನನ್ನು ನನ್ನ ಬಂಧುಗಳಿಂದ ಬೇರ್ಪಡಿಸಿದವು! ನಾಲ್ವರ ಕೈ ಕುಲುಕಿದೆ. ಅಪ್ಪು ನನ್ನ ಕೈ ಕೆಲ ನಿಮಿಷ ವರೆಗೆ ಬಿಗಿಯಾಗಿ ಹಿಡಿದು ನಿಂತಿದ್ದ. ಆತನ ಕಣ್ಣುಗಳು ಒದ್ದೆಯಾಗಿದ್ದವು! ನನ್ನ ಹೃದಯ ಕೂಗುತಿತ್ತು! ಅಷ್ಟು ನನ್ನ ಕಿವಿಯಲ್ಲಿ ಉಸಿರಿದ 'ಕಾಮ್ರೇಡ್'; ಎಂತಹ ಮಧುರ ಶಬ್ದ!.' ದೂರದಲ್ಲಿ ಹೂಪಾತ್ರೆಯೊಂದಿತ್ತು. ಎಷ್ಟೋ ಹೂಗಳಿದ್ದವು. ನಾನು ಹೇಳಿದೆ: 'ಬಂಧುಗಳೇ, ಈ ಹೂಗಳು ಬಾಡಿಹೋಗುವವು. ಆದರೆ ನೀವು ಮಾನವ ವಿಕಸಿತಸುಮಗಳು. ನೀವೆಂದೂ ಬಾಡಲಾರಿರಿ!' ಅಬುಬಕರನ ನೆನಪಾಯಿತು. ಮುಸಲ್ಮಾನರು ತಾಯ್ನಾಡಿಗಾಗಿ ತ್ಯಾಗಮಾಡಲಾರರೆಂಬ ಕಳಂಕ ತೊಳೆದಿದ್ದನಾತ! ಪಾಶಿ! ಅಯ್ಯೋ ಎನಿಸಿತು. ಆದರೆ ಅವರು ವೀರರು!"

ಸಿನೆಮಾ ಸುದ್ದಿ

ಬಾಲಾಜಿಯಲ್ಲಿ 'ಸತ್ಯಹರಿಶ್ಚಂದ್ರ'

ಎಂ.ಬೀ. ಎಸ್. ಎಸ್. ನಾಟಕ ಮಂಡಳಿಯವರ ನೂತನ ಕನ್ನಡ ಪೌರಾಣಿಕ ಸಿನೆಮವು ಇದೇ ತಾ. ೧೭ರಿಂದ ಪ್ರದರ್ಶಿತವಾಗುವುದು. ಇದು ಫೇಮಸ್ ಟಾಕೀಯವರ ಕೃತಿ. 'ವಸಂತಸೇನಾ'ದಂಥ ಪ್ರಶಂಸಾರ್ಹ ಕನ್ನಡ ಚಿತ್ರವನ್ನು ಸ್ಥಳೀಯ ಕನ್ನಡ ಸಿನೆಮಾಭಿಮಾನಿಗಳಿಗೆ ಒದಗಿಸಿಕೊಟ್ಟ ಬಾಲಾಜಿ ಟಾಕೀಸಿನವರೇ ಈ ಕನ್ನಡ ಚಿತ್ರವನ್ನೂ ಪ್ರದರ್ಶಿಸುವರೆಂಬುದು ಸಂತೋಷ. 'ವಸಂತಸೇನಾ'ದ ಪ್ರಖ್ಯಾತ ನಟವರ್ಗ ಸುಬ್ಬಯ್ಯ ನಾಯ್ಡು, ನಾಗೇಂದ್ರರಾವ್, ಲಕ್ಷ್ಮೀಬಾಯಿ ಮೊದಲಾದವರು ಇದರಲ್ಲಿಯೂ ಅಭಿನಯಿಸುವರು. 'ಹರಿಶ್ಚಂದ್ರ' ಕಥೆಯಂಥಾ ಪ್ರಸಿದ್ಧ ಪೌರಾಣಿಕ ಕಥೆ, ಸತ್ಯಕ್ಕಾಗಿ ಅಷ್ಟೊಂದು ತ್ಯಾಗ ಮಾಡಿದ ಪೌರಾಣಿಕ ಮಹಾ ಪುರುಷನ ಪವಿತ್ರ ಕಥೆ ಮಂಗಳೂರಿನ ಮಹಾಜನರನ್ನು ಮೆಚ್ಚಿಸದಿರಲಾರದೆಂದು ನಾವು ಭಾವಿಸುತ್ತೇವೆ. ಇದು ವರೆಗಿನ ಕನ್ನಡ ಚಿತ್ರಗಳಲ್ಲಿ ಇದು ಉತ್ಕೃಷ್ಟವಾಗುವೆಂದು ಹಾರೈಸಲಾಗಿದೆ. ತಾ. ೧೭ರಂದು ಅ. ಗಂ. ೩-೪೫ಕ್ಕೆ ಇದರ ಸರ್ವ ಪ್ರಥಮ ಪ್ರದರ್ಶನವು ಬಾಲಾಜಿಟಾಕೀಸಿನಲ್ಲಿ ಜರಗುವುದು. ಮದ್ರಾಸು ಸರಕಾರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಎ. ಬಿ. ಶೆಟ್ಟರು ಇದರ ಉದ್ಘಾಟನಾಸಮಾರಂಭವನ್ನು ನೆರವೇರಿಸುವರು.

ಸಮಯ ಬದಲಾವಣೆ

ಸೆಂಟ್ರಲ್ ಮತ್ತು ಬಾಲಾಜಿ ಟೋಕಿಸಿನವರು ಪ್ರದರ್ಶನ ಸಮಯವನ್ನು ಸಂಜೆ ಗಂಟೆ ೬ಕ್ಕೆ ಮತ್ತು ೯-೩೦ಕ್ಕೂ, ಮೆಟನಿ ಗಂಟೆ ೩ಕ್ಕೂ ಬದಲಾಯಿಸಿದ್ದಾರೆ.

ತಾ. ೧೭-೪-೪೩ನೇ ಶನಿವಾರ ಮಾತ್ರ ಬಾಲಾಜಿ ಟಾಕೀಸಿನಲ್ಲಿ ಮೂರು ದೇಖಾವೆಗಳು. ಅವುಗಳ ಸಮಯವನ್ನು ಈ ರೀತಿ ನಿಶ್ಚಯಿಸಲಾಗಿದೆ, ಮೆಟನಿ/ಅಪರಾಹ್ನ ೩-೪೫ಕ್ಕೆ; ಸಾಯಂಕಾಲದ ದೇಖಾವೆ ೬-೩೦ಕ್ಕೆ; ಮತ್ತು ರಾತ್ರಿ ೯-೩೦ಕ್ಕೆ.

'ಸೆಂಟ್ರಲ್'ನಲ್ಲಿ 'ಸಂಗಮ್'

ಪ್ರದರ್ಶಿತವಾಗುತ್ತಿದೆ, ಇದು ನವಯುಗ ಚಿತ್ರಪಟದ ಕೃತಿ. ಹಾಸ್ಯ, ಶೃಂಗಾರ, ಆನಂದಗಳ ಸಂಗೋಹವಿಟ್ಟಿದೆ. ವಿನಾಯಕ, ಮೀನಾಕ್ಷಿಯರು ಪುನಃ ಜತೆಗೂಡಿ ಬಂದಿದ್ದಾರೆ. ದಾಮುಅಣ್ಣಾ, ವತ್ಸಲಾ ಕುಮಟೇಕರ್, ಜೋಗ್ ಮೊದಲಾದವರು ಇತರ ನಟರು.

ಪಂಚೋಲಿ ಆರ್ಟ್ ಪಿಕ್ಚರ್ಸ್

ಇದರ 'ಖಜಾನ್ಚಿ' 'ಖಾನ್‌ದಾನ್' ಖ್ಯಾತಿಯ ಚಿತ್ರಗಳ ನಿರ್ಮಾಪಕ ದಿಲ್‌ಶುಕ್ ಪಂಚೋಲಿಯವರ ಅಣ್ಣ ಶೇಟ್ ರವಿಶಂಕರ ಪಂಚೋಲಿಯವರು ನಿಧನ ಹೊಂದಿದ್ದು ಚಲಚ್ಚಿತ್ರ ಲೋಕಕ್ಕೆ ಮಹಾ ನಷ್ಟವಾಗಿದೆ. ಬೇಂಕ್ ಕ್ಲಾರ್ಕ್ ಆಗಿ ಜೀವನವನ್ನು ಪ್ರಾರಂಭಿಸಿದ ಇವರು, ಮತ್ತೆ ಸಿನೆಮಾ ಡಿಸ್ಟ್ರಿಬ್ಯೂಟರರಾಗಿ, ನಿರ್ಮಾಪಕರಾಗಿ ಕೀರ್ತಿ ಪಡೆದರು. ದಿಲ್‌ಶುಕ್ ಪಂಚೋಲಿಯವರು ಕೀರ್ತಿ ಶಿಖರಕ್ಕೇರಲು ಅವರ ಅಣ್ಣನೇ ಹೆಚ್ಚಿನ ಮಟ್ಟಿಗೆ ಹೊಣೆಗಾರರಿರುತ್ತಾರೆ.

ಸತ್ಯಮೂರ್ತಿ ನಿಧನಕ್ಕಾಗಿ

ಭಾರತದ ಫಿಲ್ಮ್ ಉದ್ಯೋಗಿಗಳ ಸಂಘದ ಮಹಾಸಭೆಯೊಂದು ಕಳೆದ ತಾ. ೨೪ರಂದು ಸೊಹ್ರಾಬ್ ಮೋದಿಯವರ ಮನೆಯಲ್ಲಿ ಸೇರಿ ಅಂಥಾ ವಾಗ್ಮಿ, ದೇಶಭಕ್ತ, ಲಲಿತ ಕಲಾ ಪ್ರೇಮಿಯ ನಿಧನದಿಂದ ತಮಗುಂಟಾದ ದುಃಖವನ್ನು ವ್ಯಕ್ತಪಡಿಸಿ ಮೃತರ ಕುಟುಂಬಕ್ಕೆ ಸಹಾನುಭೂತಿಯ ಸಂದೇಶ ಕಳುಹಿಸಿದರು. ಸತ್ಯಮೂರ್ತಿಗಳು ಇಂಡಿಯನ್ ಮೋಶನ್ ಪಿಕ್ಚರ್ಸ್ ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು.

ಉತ್ಪಾದಕರ ಸಂಕಷ್ಟ

ಕೋಡಕ್ ಫಿಲ್ಮ್ ಕಂಪೆನಿಯವರು ಇನ್ನು ಮುಂದೆ ತಿಂಗಳೊಂದರ ೧೦,೦೦೦ ಫೀಟಿನ ಪೊಸಿಟಿವ್ ಮತ್ತು ಸೌಂಡ್‌ರಾಪಿಲ್ಮ್‌ಗಳನ್ನು ಸ್ಟುಡಿಯೋ ಮತ್ತು ಲೆಬರೇಟರಿಗಳುಳ್ಳ ಸಿನೆಮಾ ಕಂಪೆನಿಗಳಿಗೆ ಮಾತ್ರ ಕಳುಹಿಸುವರೆ ನಿಶ್ಚಯಿಸಿದ್ದಾರೆ. ಹಾಗಾಗಿ ಇತರ ಕಂಪೆನಿಗಳು ಬೇಗನೇ ಹೊಸ ಚಿತ್ರ ನಿರ್ಮಿಸುವುದನ್ನು ನಿಲ್ಲಿಸಬೇಕಾಗುವುದು!

ಈಶ್ವರಲಾಲ್ ಮತ್ತು ಚಾರ್ಲಿ

ಇವರಿಬ್ಬರೂ ಮಾರ್ಚ್ ಅಂತ್ಯದೊಳಗೊಂಡು ರಣಜಿತ್ ಕಂಪೆನಿ ಬಿಟ್ಟಿದ್ದಾರೆ. ಹಲವು ಸಿನೆಮಾ ನಿರ್ಮಾಪಕರು ತಮ್ಮ ನಟನಟೀ ವರ್ಗಕ್ಕೆ ಮಾರ್ಚ್ ತಿಂಗಳ ಅಂತ್ಯದೊಳಗೆ ಕೆಲಸದಿಂದ ಹೋಗಬೇಕೆಂದು ನೋಟೀಸು ಕೊಟ್ಟ ಸುದ್ದಿಯಿದೆ. ಏಕೆಂದರೆ ಈಗ ಹೊಸ ಚಿತ್ರ ನಿರ್ಮಿಸುವುದು ಅಸಾಧ್ಯವಾಗಿದೆ.

ಮದುವೆಯಾದರು!

'ಖಾನ್‌ದಾನ್' ನಿರ್ದೇಶಕ ಶೌಕತ್ ಹುಸೇನರು 'ಖಾನ್‌ದಾನ್' ನಾಯಕಿ ನೂರ್‌ಜಹಾನಳನ್ನು ಮದುವೆಯಾದರು! ಈ ಸಂತೋಷ ಸಮಾರಂಭದ ಸಲುವಾಗಿ ನವೀನ್ ಪಿಕ್ಚರ್ಸಿನವರು ಈ ದಂಪತಿಗಳಿಗೆ ಒಂದು ಭಾರೀ ಔತಣ ಏರ್ಪಡಿಸಿದರು.

ಪ್ರಮಿಳಾ ಯಾರು?

ಸಿನೆಮಾ ನಟಿ ಪ್ರಮೀಳಾ ಜ್ಯೂಜಾತಿಯಲ್ಲಿ ಹುಟ್ಟಿದವಳು. ರೋಸ್ ಇವಳ ಸಂಬಂಧಿಕಳು. ಪ್ರಮೀಳಾ ಎಂಬುದು ಅವಳ ಸಿನೆಮಾ ಹೆಸರು. ೧೯೧೬ರಲ್ಲಿ ಆಕೆ ಹುಟ್ಟಿದಳು. ಇಂಟರ್ ಮೀಡಿಯಟ್ ಆರ್ಟ್ಸ್ ವರೆಗೆ ಕಲಿತು ಜ್ಯೂನಿಯರ್ ಮತ್ತು ಸೀನಿಯರ್ ಕೇಂಬ್ರಿಜ್ ತೇರ್ಗಡೆ ಹೊಂದಿ ಪ್ರಮೀಳಾ ಕೆಲಕಾಲ ಅಧ್ಯಾಪಕಿಯಾಗಿದ್ದಳು. 'ಪಂಜಾಬ್ ಮೈಲ್' 'ಸೋಂಗ್ ಆಫ್ ಲೈಫ್' 'ಮಹಾಮಾಯಾ' 'ಅವರ್ ಡಾರ್ಲಿಂಗ್ ಡಾಟರ್ಸ್' 'ಮೋತೀಲಾಲ್' 'ಸರಳಾ' 'ಮದರ್ ಇಂಡಿಯಾ' 'ಜಂಗಲ್ ಕಿಂಗ್' 'ಬಿಜ್ಲೀ' 'ಸರ್ದಾರ್' 'ಉಲ್ಟಾ ಗಂಗಾ' 'ಶಾದಾದಿ' 'ಕಾಂಚನ್' 'ಬಸಂತ್' 'ಝಾಂಕರ್' 'ಸಹೇಲಿ' ಮೊದಲಾದ ಚಿತ್ರಗಳಲ್ಲಿ ಆಕೆ ನಟಿಸಿದ್ದಾಳೆ. ಪುಸ್ತಕ ಓದುವುದರಲ್ಲಿ ಅವಳಿಗೆ ಆಸಕ್ತಿ ಬಹಳ. ಇನ್ನೂ ವಿವಾಹಿತೆಯಾಗಿಲ್ಲ. ವಿದೇಶೀಯ ಸ್ಟುಡಿಯೋ ಒಂದರಿಂದ ಆಕೆಗೆ ಅಭಿನಯಿಸಲು ಆಮಂತ್ರಣ ಬಂದಿತ್ತು. ಆದರೆ ಯೂರೋಪಿನಲ್ಲಿ ಯುದ್ಧದ ಬಿಸಿಯೇರಿದ್ದರಿಂದ ಆ ಚಿತ್ರ ನಿರ್ಮಾಣ ಮಾಡುವುದಾಗಲಿಲ್ಲ. ಸಿನೆಮಾ ನಟಿಯರ ಪೈಕಿ ಈಕೆಯಿಂದ ಇನ್ನೂ ಉತ್ತಮ ಅಭಿನಯ ಹಾರೈಸಬಹುದು.

ಲೀಲಾ—ಕುಮಾರರ

ಇನ್ನೊಂದು ಚಿತ್ರ 'ಕಿರಣ್' ಎಂಬುದು. ರಾಮಶುಕ್ಲಾ, ಕುಸುಮ ದೇಶಪಾಂಡೆ ಮೊದಲಾದವರು ಇತರ ನಟವರ್ಗ. ಇದು ರಮಣೀಯ ಕೃತಿ. ಇವರದೇ ಚಿತ್ರ 'ದುಲ್ಹಾನ್'ನಲ್ಲಿ ಶಾಹು ಮೋಡಕ್ ಮತ್ತು ಯಶೋಧರ ಕಟ್ಜು ನಟಿಸುತ್ತಾರೆ.

'ತಸ್ವೀರ್'

ಇದು ಅತ್ರೆ ಕೃತಿ. ದುರ್ಗಾಖೋಟೆ, ಮೋತಿಲಾಲ್, ಸ್ವರ್ಣಲತಾ, ಡೇವಿಡ್, ಅಜೂರಿ; ನವೀನ್ ಯಾಗ್ನಿಕ್ ಮೊದಲಾದವರು ಇಲ್ಲಿನ ನಟನಟೀವರ್ಗ. ದುರ್ಗಾಖೋಟೆ ಇದೇ ಮೊದಲನೆಯ ಸಲ ಹಾಸ್ಯ ಚಿತ್ರದಲ್ಲಿ ಅಭಿನಯಿಸುವುದು.

'ನಯೀ ಕಹಾನಿ'

ಪ್ರಭಾತದವರ ಇತ್ತೀಚೆಯ ಚಿತ್ರ. ರೋಸ್, ಶಾಲಿನಿ, ಜಯರಾಜ್, ನಂದ್ರೇಕರ್, ಬೆನರ್ಜಿ ಮೊದಲಾದವರು ಇದರಲ್ಲಿ ನಟಿಸುತ್ತಾರೆ. ಕಾಶ್ಯಪರು ನಿರ್ದೇಶಕರು.

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ತಾ. 17-4-43ರಲ್ಲಿ

ಹರಿಶ್ಚಂದ್ರ [ಕನ್ನಡ] ಚಿ

ಚಲಚ್ಚಿತ್ರದ ವೈಭವದ ಪ್ರದರ್ಶನ

ಬಾಲಾಜಿ ಟಾಕೀಸ್, ಮಂಗಳೂರು.

ಚಾಮುಂಡೇಶ್ವರಿ ಟಾಕೀಸ್, ಮೈಸೂರು

ರೂಪರಾಣಿ ಟಾಕೀಸ್, ಚಿತ್ರದುರ್ಗ

ಮಲ್ಲಿಕಾರ್ಜುನ ಟಾಕೀಸ್, ಹುಬ್ಬಳ್ಳಿ

ಹರಿಶ್ಚಂದ್ರ (ಕನ್ನಡದಲ್ಲಿ)

ಸುಬ್ಬಯ್ಯನಾಯ್ಡು
ನಾಗೇಂದ್ರ ರಾವ್
ಲಕ್ಷ್ಮಿಬಾಯಿ
B.S.ರಾಜೈಂಗಾರ್
ಕೃಷ್ಣಮೂರ್ತಿ ರಾವ್
M.G.ಮರಿ ರಾವ್



STUDIO PRAGATI

Distributors:- FAMOUS TALKIE DISTRIBUTORS.
BANGALORE · BEZWADA · MADRAS · MADURA · ERNAKULAM

ಪುಸ್ತಕಾವಲೋಕನ

ಕಾಳಿದಾಸನ ಕುರಿತು....

'ವಸಂತದ ಪ್ರಾರಂಭಕಾಲದ ಪುಷ್ಪ ಸಂಚಯವೂ, ಅದರ ಕೊನೆಯ ಕಾಲದ ಫಲ ಸಮುದಾಯವೂ ಏಕತ್ರ ಒಂದೇ ಹೆಸರಲ್ಲಿ ಕಾಣಬೇಕೋ, ಹೃದಯಕ್ಕೆ ಅಮಿತಾನಂದಕರವಾದ ಭೋಗಸಾಧನವಾಗಿ ಸ್ವರ್ಗಮರ್ತ್ಯಗಳ ಮಧುರ ಸಮ್ಮೇಳನವು ಏಕತ್ರ ಒಂದೇ ಹೆಸರಲ್ಲಿ ದೊರಕಬೇಕೋ, ಹಾಗಾದರೆ ಅವೆಲ್ಲವುಗಳ ಸಾಧಕವಾಗಿ ನಾನು 'ಶಾಕುಂತಲ' ಎಂಬೀ ಪದವನ್ನು ಉಚ್ಚರಿಸುತ್ತೇನೆ' ಹೀಗೆಂದು ಕಾಳಿದಾಸನ ಕುರಿತು, ಆತನ ಅದ್ವಿತೀಯ ಕೃತಿ 'ಶಾಕುಂತಳ'ದ ಕುರಿತು ಪಾಶ್ಚಾತ್ಯ ಕವಿಯಾದ ಗೀತೆ (Goethe) ಯು ಆನಂದೋದ್ಗಾರವೆತ್ತಿದನು! ಇದರಿಂದ ಕಾಳಿದಾಸನ ಕೀರ್ತಿ ಭರತಖಂಡದ ಪರಿಮಿತ ಸೀಮೆಯನ್ನು ಮೀರಿ ಅಖಿಲವಿಶ್ವವ್ಯಾಪಕವಾಗಿದೆಯೆಂಬುದು ಯಾರಿಗಾದರೂ ವಿದಿತವಾಗಲೇಬೇಕು. ಇಂಗ್ಲಿಷ್, ಪ್ರೆಂಚ್ ಜರ್ಮನ್, ಲೆಟಿನ್ ಮೊದಲಾದ ಹಲವು ಪಾಶ್ಚಾತ್ಯ ಭಾಷೆಗಳಲ್ಲಿ ಕಾಳಿದಾಸನ ಕೃತಿಗಳ ಭಾಷಾಂತರವೂ, ಆತನ ಕುರಿತು ಬರೆದ ಅನೇಕ ವಿಮರ್ಶಾತ್ಮಕ ಪ್ರಶಂಸಾತ್ಮಕ ಗ್ರಂಥಗಳಿರುವುದೂ ಇದಕ್ಕೆ ಸಾಕ್ಷಿಗಳಾಗಿವೆ. ಜಗತ್ತಿನ ಸಾಹಿತ್ಯ ರಸಿಕರಿಗೆ ಕಾಳಿದಾಸನ ಕುರಿತು, ಆತನ ಕಾವ್ಯಗಳ ಕುರಿತು ಓದಿದಷ್ಟೂ ಆಲಿಸಿದಷ್ಟೂ, ಕೇಳಿದಷ್ಟೂ ಕುತೂಹಲ ಹೆಚ್ಚಾಗುತ್ತಲೇ ಇದೆ.

ಇಂಥಾ ಕವಿ ಸಾರ್ವಭೌಮನ ಕುರಿತು, ಆತನ ಕೃತಿಗಳ ಕುರಿತು ಶ್ರೀಮತಿ ಕಮಲಾಬಾಯಿ ವಿ. ಉದ್ಯಾವರ, ಶಿರೋಮಣಿ, ಇವರು ಕಾರ್ಕಳದ ಶ್ರೀಮದ್ಭುವನೇಂದ್ರ ಸಂಸ್ಕೃತ ಕಾಲೇಜಿನ ಆಶ್ರಯದಲ್ಲಿ, ಒಂದು ವಿಮರ್ಶಾತ್ಮಕ ಲೇಖನವನ್ನು ಸಂಸ್ಕೃತದಲ್ಲಿ ಬರೆದು ಮದ್ರಾಸು ಸರಕಾರಕ್ಕೆ ಒಪ್ಪಿಸಿದ್ದಾರೆ. ಈ ವಿಸ್ತಾರವಾದ ವಿಮರ್ಶಾತ್ಮಕ ಲೇಖನವನ್ನು ಆಕಾರದ ೨೩೧/೮ ೧೧೧ ಪುಟಗಳುಳ್ಳ ಒಂದು ಪುಸ್ತಕರೂಪವಾಗಿ ಮುದ್ರಿಸಿ ಇತರರಿಗೂ ಈ ಸಂಶೋಧನೆ ಫಲವನ್ನು ಉಣಿಸುವ ಉಪಕಾರ ಮಾಡಿದ್ದಾರೆ. ಉಡುಪಿ 'ತುಳುನಾಡ್ ಪ್ರೆಸ್'ನವರು, ಈ ವಿಸ್ತಾರ ಸಂಸ್ಕೃತ ಲೇಖನ ಪುಸ್ತಕವನ್ನು ಹೆಚ್ಚಿನ ಲೋಪದೋಷಗಳಿಲ್ಲದೆ ಚಂದವಾಗಿ ಮುದ್ರಿಸಿರುವರು.

ಈ ಪ್ರಬಂಧವು ಕಾಳಿದಾಸನ 'ಕವಿ ಮತ್ತು ಕಾವ್ಯ' ವಿಮರ್ಶೆಯನ್ನು ಒಳಗೊಂಡಿದೆ. ಕವಿ ವಿಚಾರ ಮೊದಲನೆಯ ಭಾಗ; ಕಾವ್ಯ ವಿಚಾರ ಎರಡನೆಯ ಭಾಗ. ಮೊದಲನೆಯ ಭಾಗದಲ್ಲಿ ಕವಿಯ ವಿಶ್ವ ವಿಖ್ಯಾತ ಕೀರ್ತಿ, ಜೀವನಚರಿತ್ರ, ಆಧ್ಯಾತ್ಮಿಕ ಮತ, ಕಾಲವಿಚಾರ, ಕಾಳಿದಾಸನ ವಿದ್ವತ್ತು, ಕವಿಕಾಲದ ಲೋಕ ಸ್ಥಿತಿ, ಕಾಳಿದಾಸನ ನೀತಿಬೋಧೆ ಇವುಗಳನ್ನು ವಿಸ್ತಾರವಾಗಿ ಕೊಟ್ಟಿರುವರು. ಪಾಶ್ಚಾತ್ಯ ಪೌರಸ್ತ್ಯ ವಿದ್ವಾಂಸರಲ್ಲಿ ಕಾಳಿದಾಸನು ಬೀರಿದ ಪ್ರಭಾವಗಳನ್ನು ಅನೇಕ ನಿದರ್ಶನಗಳನ್ನಿತ್ತು ಸಮರ್ಥಿಸಿದ್ದಾರೆ. ಕಾಲ ನಿರ್ಣಯ ವಿಚಾರದಲ್ಲಿ ಅನೇಕ ಪಾಶ್ಚಾತ್ಯ ವಿಮರ್ಶಕರ ಅಭಿಪ್ರಾಯಗಳನ್ನು ತುಲನೆ ಮಾಡಿ ನೋಡಿದ್ದಾರೆ. ಕವಿಯ ದೇಶದ ವಿಚಾರವಾಗಿ, ಆತನು ಕಾಶ್ಮೀರ ದೇಶಸ್ಥನೆಂಬುದಕ್ಕಿಂತಲೂ ದಾಕ್ಷಿಣಾತ್ಯನಾಗಿದ್ದನೆಂಬುದಕ್ಕೆ ಹೆಚ್ಚಿನ ಆಧಾರಗಳಿವೆಯೆಂದು ಹೇಳುತ್ತಾ, ಕವಿಯು ಬ್ರಾಹ್ಮಣನಾಗಿದ್ದು, ಮಧ್ಯ ದೇಶದ ಯಾವುದೋ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಿದವನಾಗಿರಬೇಕೆಂದೂ, ಆ ಮೇಲೆ ಉಜ್ಜಯಿನಿಯೋ ಎಲ್ಲಿಯೋ ಆ ಕಡೆ ಅಧ್ಯಾಪಕ ವೃತ್ತಿಯನ್ನು ಕೈಕೊಂಡಿರಬೇಕೆಂದೂ ಊಹಿಸುತ್ತಾರೆ. ಮತದ ವಿಚಾರವಾಗಿ ಆತನು ಅದ್ವೈತ ತತ್ತ್ವ ಪ್ರತಿಪಾದಕನೆಂದೂ, ಶಿವೋಪಾಸಕನಿದ್ದನೆಂದೂ ಗ್ರಂಥಸ್ಥ ಆಧಾರಗಳಿಂದ ಸಮರ್ಥಿಸುತ್ತಾರೆ. ಕಾಳಿದಾಸನ ಕಾಲದ ವಿಚಾರ ಅನೇಕ ವಿದ್ವಾಂಸರ ಭಿನ್ನ ಭಿನ್ನ ಮತಗಳನ್ನೆತ್ತಿ ವಾದಿಸಿ, ಆತನು ಕ್ರಿಸ್ತಪೂರ್ವ ಆದರಲ್ಲೂ ಬಹುಶಃ ಪ್ರಥಮ ಶತಾಬ್ದಿಯಲ್ಲಿದ್ದವನಾಗಿರಬೇಕೆಂದು ಊಹಿಸಿರುವರು.

ಎರಡನೆಯ ಭಾಗದ ಕಾವ್ಯ ವಿಚಾರದಲ್ಲಿ, ಋತು ಸಂಹಾರ, ಮೇಘ ದೂತ, ಕುಮಾರ ಸಂಭವ, ರಘುವಂಶ ಈ ಶ್ರವ್ಯ ಕಾವ್ಯಗಳ ಹಾಗೂ ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ ಶಾಕುಂತಳ ಈ ದೃಶ್ಯಗಳ ಕಾವ್ಯಗಳ ವಿಚಾರ ವಿಮರ್ಶಿಸಿರುವರು. ಈ ಭಾಗವು ಬಹಳ ಸಂಕೋಚವಾಗಿಬಿಟ್ಟಿದೆ. ಅವರಲ್ಲೂ ಕಾಳಿದಾಸನ ಶಾಕುಂತಳದ ವಿಷಯವನ್ನೂ ಕೇವಲ ಮೂರು ಪುಟಗಳೊಳಗೇ ಮುಗಿಸಿಬಿಟ್ಟದ್ದು ತೀರಾ ನಿರಾಶಾಜನಕವಿರುತ್ತದೆ. ಕವಿಯ ದೇಶ, ಕಾಲವೊದಲಾದ ಊಹನಾ ಚರ್ಚೆಗಳ ಭಾಗವನ್ನಾದರೂ ಸ್ವಲ್ಪ ಸಂಕೋಚ ಮಾಡಿ, ಆತನ ಅಸದೃಶ ಕಾವ್ಯಗಳ ಸ್ವಾರಸ್ಯಗಳನ್ನು ತಿಳಿಸುವರೆ ದ್ವಿತೀಯ ಭಾಗವನ್ನು ಸ್ವಲ್ಪ ಲಂಬಿಸಿಬರೆದಿದ್ದರೆ; ಪ್ರತಿಯೊಂದು ಕಾವ್ಯದ ಕುರಿತು ಇನ್ನಷ್ಟು ಸ್ವಾರಸ್ಯ ವಿವರಿಸುತ್ತಿದ್ದರೆ ರಸಿಕರನ್ನು ತಲೆದೂಗಿಸಬಹುದಿತ್ತು.

ಅಂತೂ ನಮ್ಮ ನಾಡಿನ ವಿದುಷಿಯರೊಬ್ಬರು ಇಂತು ಸಾಹಿತ್ಯ ಸಂಶೋಧನೆಯ ಕಾರ್ಯ ಮಾಡಿದ್ದು ಅತ್ಯಂತ ಪ್ರಶಂಸಾರ್ಹವಾಗಿದೆ. ಕನ್ನಡದಲ್ಲಿ ಕಾಳಿದಾಸನ ಕುರಿತು ಬರೆದ ವಿಸ್ತಾರವಾದ ಗ್ರಂಥಗಳೇ ಇಲ್ಲ. ಆದ್ದರಿಂದ ಈ ವಿದುಷಿಯರು ತವಿಸ್ಯಾ ವಿಪುಲ ಅನುಭವ ಸಂಗ್ರಹಗಳ ಫಲವಾದ ಈ ಸಂಸ್ಕೃತ ಲೇಖನವನ್ನು ತುಸು ತಿದ್ದಿ, ಕಾವ್ಯಭಾಗವನ್ನಿನ್ನಷ್ಟು ವಿಸ್ತಾರವಾಗಿ ಕನ್ನಡದಲ್ಲಿ ಬರೆದು ಪ್ರಕಟಿಸುವ ಪ್ರಯತ್ನ ಮಾಡಿದರೆ ಸಾಕಷ್ಟು ಪ್ರೋತ್ಸಾಹ ಸಿಗಬಹುದೆಂದು ನಾವು ಭಾವಿಸುತ್ತೇವೆ.

—ಕೆಯ್ಯೂರ

ESTD.] **Canara Bank, Limited** [1906.

(Incorporated in British India with limited liability).

BALANCE SHEET AS ON 31st DECEMBER 1942

LIABILITIES	Rs.	As.	Ps.	ASSETS	Rs.	As.	Ps.
SUBSCRIBED CAPITAL: Rs.20 lacs.				Fixed Capital			
Paid up Capital	14,96,072	8	0	Expenditure	1,00,182	13	2
Reserves	4,50,000	0	0	ADVANCE TO CUSTOMERS:			
Deposits	1,45,50,502	7	1	Secured by valu-			
Due to Bankers	13,50,000	0	0	able securities	51,16,338	6	2
Bills for collection —				Secured by bills			
as per contra	8,76,169	10	2	of Exchange etc.	24,36,663	11	11
Liability for Foreign				Investments	65,65,374	15	7
Bills negotiated	8,05,026	10	5	Bills for collection	8,76,160	10	2
Sundries	10,51,464	10	11	Liabilities of custo-			
Appropriation A/c.	2,062	3	8	mers for foreign			
Net Profits	1,53,310	2	10	bills negotiated	8,05,026	10	5
				Sundries	4,71,599	3	0
				Cash on hand and at			
				Call with Bankers	43,63,352	14	8
Total Rs.	2,07,34,608	5	1	Total Rs.	2,07,34,608	5	1

THE CANARA BANKING CORPORATION Ltd.

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises,			
Reserve & other funds	3,71,882	13	11	furniture, etc.	91,65	0	0
Deposits	41,83,873	4	1	Advances	31,28,612	4	9
Due to Bankers	5,08,545	12	1	Investment on			
Bills per contra	3,59,357	12	1	Govt. Securities			
Sundries including				etc. at cost	15,34,536	14	3
branch adjustments &				Sundries	74,183	5	7
undisbursed profits	2,83,736	5	9	Bills for Collection	3,59,357	12	1
Profit for the year 1942	49,461	3	5	Cash on Hand &			
				with bankers	12,05,397	14	8
Total Rs.	63,93,747	3	4	Total Rs.	63,93,747	3	4

ಆಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ.

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ, ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

[illegible]

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಒಂದಿಸ [illegible] ಸದಸ್ಯರಾದ [illegible] ರನ್ನು ಸೆರೆಹಿಡಿದ ಕೂಡಲೇ ಅವರ ಪುತ್ರಿ [illegible] ಯು ಎಂಬವಳು ತಂದೆಯ ಅಗಲುವಿಕೆಯ ವ್ಯಥೆಯಿಂದ ಮಾತನಾಡುವ ಶಕ್ತಿಯನ್ನು ಕಳೆಕೊಂಡಳು! ಅವಳ ಇತ್ತೀಚೆಗೆ ಸಕ್ಕರೆ ಸೆರೆಮನೆಯಲ್ಲಿರುವ ಅವಳ ತಂದೆಯನ್ನು ಸಂದರ್ಶಿಸಲು ಸರಕಾರವು ಅಪ್ಪಣೆ ಕೊಟ್ಟಿತು. ಆಶ್ಚರ್ಯವೇನೆಂದರೆ, ತಂದೆಯ ದರ್ಶನವಾದಕೂಡಲೇ ಮಗಳು ಪುನಃ ಮೊದಲಿನಂತೆ ಮಾತನಾಡತೊಡಗಿದಳು!

ಕರ್ನೂಲಿನಲ್ಲಿ ಲೂಟಿ

ನಡೆದು, ಅಕ್ಕಿ, ವಸ್ತ್ರ ಮತ್ತಿತರ ಸಾಮಾನು [illegible] ದೋಚಿಕೊಂಡು [illegible] ರೂ. [illegible] ಹಾಗಿಯಿಂದ ವ್ಯಾಪಾರಿಗಳ ಅಂದಾಜು. ಅಂಗಡಿಗಳು ಮುಚ್ಚಲ್ಪಟ್ಟು ಧಾನ್ಯ [illegible] ರದೆ [illegible] ಜನರು ಕಷ್ಟಕ್ಕೊಳಗಾಗಿರುವರು.

ಈ ಲೂಟಿ ಸಂಬಂಧ [illegible] ಮಂದಿ ಬಂಧಿಸಲ್ಪಟ್ಟಿರುವರು. ಅವರಲ್ಲಿ ಐವರು ಸ್ತ್ರೀಯರು. ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ| ಪುಲ್ಲರೆಡ್ಡಿಯವರೂ ಬಂಧನಕ್ಕೊಳಗಾಗಿದ್ದಾರೆ. ಸೆರೆ ಹಿಡಿಯಲ್ಪಟ್ಟವರಲ್ಲಿ ಒಬ್ಬರಾದ ರಿಜಿಸ್ಟ್ರರ ಆಫೀಸಿನ ಗುಮಾಸ್ತರೊಬ್ಬರು ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ಕರ್ನೂಲಿನ ಹತ್ತಿರ ಇನ್ನೊಂದೆಡೆ ಲೂಟಿ ನಡೆದು ೨೪ ಮಂದಿ ಬಂಧಿಸಲ್ಪಟ್ಟಿದ್ದಾರೆ. ಗಾಡಿಗಳಿಂದ ಅಕ್ಕಿಯನ್ನು ದೋಚಿದರೆಂಬ ಅಪಾದನೆಯ ಮೇಲೆ ಬೇರೆ ೧೮ ಮಂದಿ ಕೈದಿಗೊಳಗಾಗಿರುವರು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿೂಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟೈಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.

2. 36 ಫ್ಯಾಕ್ಟೋರೀವ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಬೇದಿಗೆ ಉತ್ತಮೌಷಧಿ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 23—4—1943 [ಸಂಚಿಕೆ 16]

ಅಜಾದರನ್ನು ನೆನೆನೆನೆದೇ ಪ್ರಾಣಬಿಟ್ಟರು!

'ಪತಿಯನ್ನೊಮ್ಮೆ ತಂದು ತೋರಿಸಲಾರಿರಾ?'

ಬೇಗಂ ಅಜಾದರ ಕರುಣಾಮಯ ಕೊನೆಯ ಚಿತ್ರ!

ಬೇಗಂ ಜುಲೇಖಾ ಖಾತೂನ್—ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರ ಪತ್ನಿ, ಕಳೆದ ಐದನೇ ತಾರೀಕಿನಂದು ಇವರು ಪರಲೋಕದ ಪ್ರಯಾಣ ಮಾಡಿದರು; ಇವರ ನಿಧನದ ಸಂತಾಪವು ಅಖಿಲಭಾರತವನ್ನೇ ಹಬ್ಬಿತು; ಎಲ್ಲರೂ—ಸಕಲ ಜಾತಿ ಮತದವರು—ಆ ವೀರ ಪತ್ನಿಯ, ಭಾರತದ ರಾಷ್ಟ್ರಪತಿಯ ಆ ಪುಣ್ಯ ಸಹಧರ್ಮಿಣಿಯ ಮರಣಕ್ಕಾಗಿ ಕಂಬನಿಯ ಕಾಣಿಕೆ ಅರ್ಪಿಸಿದರು. ಪರಲೋಕದಲ್ಲಿ ಪರಮಾತ್ಮನು ಆ ಪುಣ್ಯ ಜೀವಕ್ಕೆ ಪರಮ ಶಾಂತಿಯನ್ನು ದಯ ಪಾಲಿಸಲಿ ಎಂದು ಸರ್ವರೂ ಭಗವಂತನೊಡನೆ ಮೊರೆಯಿಟ್ಟರು. ದಯಾಮಯನಾದ ಭಗವಂತನು ಜನರ ಈ ಪ್ರಾರ್ಥನೆಯನ್ನು ಕೇಳಿಯೇ ಕೇಳುತ್ತಾನೆ.

ಯಮ ಧರ್ಮನಿಗೆ ದಯೆಯೇನು?

ಬೇಗಂ ಅಜಾದರು ಕಳೆದ ಎರಡು ವರ್ಷಗಳಿಂದ ಹಾಸಿಗೆ ಹಿಡಿದಿದ್ದರು; ಕೆಟ್ಟ ಬೇನೆ ಕ್ಷಯ ರೋಗದಿಂದ ಪೀಡಿತರಾಗಿದ್ದರು. ಆರೋಗ್ಯ ಬಹಳ ಕೆಟ್ಟುಹೋಗಿತ್ತು. ಒಮ್ಮೆಲೇ ಅಜಾದರನ್ನು ಮಹಾತ್ಮರೇ ಮೊದಲಾದ ರಾಷ್ಟ್ರ ಧುರೀಣರೊಂದಿಗೆ ಕಳೆದ ಅಗಸ್ಟ್ ತಿಂಗಳಲ್ಲಿ ಸರಕಾರವು ಗೊತ್ತುಗುರಿಯಿಲ್ಲದೆ ಎಲ್ಲಿಯೋ ಸೆರೆಮನೆ ಸೇರಿಸಿಬಿಟ್ಟಿತು. ಬೇನೆಯಿಂದ ನರಳುತ್ತಿದ್ದ ಪತ್ನಿಯ ಬಳಿಯಿಂದ ಅವರ ಪ್ರಿಯ ಪತಿಯನ್ನಗಲಿಸಿತು! ಸಾಧ್ವಿ ಬೇಗಂ ಅಜಾದರಿಗೆ ಪತಿಯ ಈ ವಿಯೋಗ ಅಸಹನೀಯವಿತ್ತು. ಒಮ್ಮೆಲೇ ಅವರ ವ್ಯಾಧಿ ವಿಷಮತೆಗೇರಿಬಿಟ್ಟಿತು. ಕ್ಷಯ ರೋಗದೊಂದಿಗೆ ಅತಿಸಾರವೂ ಸೇರಿಕೊಂಡಿತು. ಎಲ್ಲದಕ್ಕಿಂತಲೂ ಹೆಚ್ಚಾಗಿ ಪತಿಯ ಯೋಚನೆ. ಇಷ್ಟೆಲ್ಲಾ ಸೇರಿ ಅವರನ್ನು ಮೃತ್ಯುಮುಖಕ್ಕೆ ದೂಡುತ್ತಿತ್ತು! ಮರಣಕ್ಕಿಂತ ಒಂದು ವಾರದ ಮುನ್ನ ವೈದ್ಯರು ಬೇಗಂ ಅಜಾದರ ವಿಷಯ ಪತ್ರ ಹೊರಡಿಸಿದರು. ಇದನ್ನು ಓದಿದ ಮೇಲೆ ಅವರು ಇನ್ನು ಬಹುಕಾಲ ಬದುಕುವುದಿಲ್ಲವೆಂದು ಎಲ್ಲರೂ ಖಂಡಿತ ಮಾಡಿದ್ದರು. ರಾಷ್ಟ್ರಪತಿ ಅಜಾದರನ್ನೊಮ್ಮೆ—ಕೊನೆ ಗಳಿಗೆಯಲ್ಲಾದರೂ ಅವರ ಪತ್ನಿಯನ್ನು ಸಂದರ್ಶಿಸಲು ಬಿಡುಗಡೆ ಮಾಡಿರಿ ಎಂದು ಸರಕಾರಕ್ಕೆ ಪ್ರಾರ್ಥನೆ ಹೋಯಿತು. ಪ್ರಾರ್ಥನೆಗಳ ಮೇಲೆ ಪ್ರಾರ್ಥನೆಗಳಾದವು. ಒಮ್ಮೆ ಆಶಾದಾಯಕ ವಾರ್ತೆಯೂ ಹಬ್ಬಿತ್ತು. ಸಾಯುವ ಮುನ್ನ ಅಜಾದರಿಗೆ ಅವರನ್ನೇ ಹಂಬಲಿಸಿ ಮೃತ್ಯುಶಯ್ಯೆಯಲ್ಲಿ ಮಲಗಿದ್ದ ಅವರ ಪ್ರಿಯ ಪತ್ನಿಯನ್ನು ನೋಡಲು ಸರಕಾರ ಸಂದರ್ಭವೊದಗಿಸಿ ಕೊಡುತ್ತದೆಂದು! ಆದರೆ ಅದೆಲ್ಲಾ ನಿರಾಧಾರ ಕಲ್ಪನಾ ರಾಜ್ಯಗಳಾದುವು. ಕೊನೆವರೆಗೂ ಅಜಾದರಿಗೆ ಆ ಸಂದರ್ಭವನ್ನು ಸರಕಾರ ಒದಗಿಸಲಿಲ್ಲ. ಪತಿಯ ಪಾದವನ್ನು ನೆನೆಯುತ್ತಾ ಆ ಸಾಧ್ವಿಯು ಪ್ರಾಣವನ್ನು ತೊರೆದರು. ಸರಕಾರದ ಹೃದಯವೇ ಮೆತ್ತಗಾಗಲಿಲ್ಲವೆಂದ ಮೇಲೆ ಯಮ ಧರ್ಮರಾಯನು ಮತ್ತೆ ಕರುಣೆ ತೋರಿಸುತ್ತಾನೆಯೆ?

ಎಪ್ರಿಲ್ ನಾಲ್ಕರ ಮಧ್ಯರಾತ್ರಿ! ಬೇಗಂ ಅಜಾದರ ಪ್ರಾಣಪಕ್ಷಿ ಸಾವು ಬದುಕುಗಳ ಉಯ್ಯಾಲೆಯಲ್ಲಿ ತೂಗಾಡುತಿತ್ತು. ಬದುಕುವ ಆಸೆ ಎಲ್ಲರಿಗೂ ತೀರಾ ಇಲ್ಲದಾಯಿತು. ಆದರೂ ಡಾಕ್ಟರರು ಆಮ್ಲಜನಕ ಚಿಕಿತ್ಸೆ ನಡೆಸಿದರು; ಪ್ರಾಣವಾಯು ತುಂಬಿಸಿದರು. ಮನುಷ್ಯ ಏನು ಸಾಹಸ ಮಾಡಿದರೆ ತಾನೇ ಏನು? ವಿಧಿಬಯಸಿದ್ದು ಬೇರೆ ಆದರೆ! ಆಮ್ಲಜನಕವಾಯು ತುಂಬಿಸಿದ ಮೂರು ತಾಸುಗಳ ಬಳಿಕ ಅವರ ದೇಹ ಪಂಜರದಿಂದ ಪ್ರಾಣಪಕ್ಷಿ ಹಾರಿಯೇ ಹೋಯಿತು! ಜೀವ ತೇಜಸ್ಸು ಆರಿ ಹೋಯಿತು! ಪವಿತ್ರಾತ್ಮವು ಪರಮಾತ್ಮನಲ್ಲಿ ಲೀನವಾಯಿತು. ಬೇಗಂ ಅಜಾದರು ತನ್ನ [illegible] ಮಧ್ಯವಯಸ್ಸಿನಲ್ಲಿಯೇ—ಮಕ್ಕಳಿಲ್ಲದೆ ಪತಿಯನ್ನಗಲಿ ವೃದ್ಧರಾದ ಅತ್ತೆ ಮಾವಂದಿರನ್ನು ಅವರೊಂದಿಗೆ ಅಖಿಲಭಾರತವನ್ನೇ ಕಂಬನಿಯ ಕಡಲಲ್ಲಿ ಅದ್ದಿ, ಅಜಾದರನ್ನು ಅನಾಥರನ್ನಾಗಿ ಮಾಡಿ ಇಹಲೋಕ ತ್ಯಜಿಸಿದರು!

ಪತಿದರ್ಶನಕ್ಕಾಗಿ ಹಂಬಲಿಸಿದರು!

ಬೇಗಂ ಅಜಾದರ ಕೊನೆಯ ಕೆಲ ದಿನಗಳು ಅತ್ಯಂತ ಕರುಣಾಮಯ ಘಟನೆಗಳಿಂದ ಕೂಡಿದ್ದವು; ಕಲ್ಲೆದೆಯವನನ್ನಾದರೂ ಕರಗಿಸುವಂಥದಾಗಿತ್ತು. ತಾನು ಸಾಯುತ್ತೇನೆಂಬುದು ಅವರಿಗೆ ಚನ್ನಾಗಿ ಗೊತ್ತು; ಅದಕ್ಕಾಗಿ ಅವರಿಗೆ ನೋವಾಗಲಿಲ್ಲ; ಕೊನೆಗೊಮ್ಮೆ ತನ್ನ ಪತಿದೇವನನ್ನು ಕಣ್ಣಾರೆ ನೋಡಿ ಪಾದವನ್ನು ಸ್ಪರ್ಶಿಸಿ ಪ್ರಾಣ ಬಿಡುವುದಾಗಲಿಲ್ಲವಲ್ಲಾ ಎಂಬುದು ಅವರ ದುಃಖ. ಹಾಸಿಗೆ ಹಿಡಿದ ಮೇಲೆ ಅವರು ದಿನೇ ದಿನೇ ಬಹಳ ದುರ್ಬಲರಾದರು; ಕೊನೆ ಕೊನೆಗೆ ಮಾತನಾಡುವುದೂ ಕಷ್ಟವಾಗುತ್ತಿತ್ತು; ಮಾತನಾಡುವುದೆಂದರೆ ಒಂದೇ ಮಾತು—ತನ್ನ ಪತಿದೇವನ ಕುರಿತೇ ಗಳಿಗೆ ಗಳಿಗೆ ಅದೇ ಚಿಂತೆ. ನೂರಾರು ಮೈಲಿಯಾಚೆಯಲ್ಲಿರುವ ತಮ್ಮ ಕಣ್ಮಣಿಯ ಕುರಿತು! ತಮ್ಮನ್ನು ನೋಡಲು ಬಂದವರೆಲ್ಲರೊಡನೆಯೂ ಅವರು ತಮ್ಮ ಪತಿಯ ಸುದ್ದಿ ಕೇಳುತ್ತಿದ್ದರು. ಬಂಧುಗಳಿರಲಿ, ಮಿತ್ರರಿರಲಿ, ದಾಸಿಯರಿರಲಿ ಎಲ್ಲರೊಡನೆಯೂ ಅದೇ ಪ್ರಶ್ನೆ, ಗಂಡನನ್ನೊಮ್ಮೆ ತೋರಿಸಿ ಎಂದು; ತಮ್ಮ ಹಾಸಿಗೆ ಬಳಿಯಿದ್ದ ದಾಸಿಯೊಡನೆ ಅದೇ ಮಾತುಕತೆ. ಒಮ್ಮೆ ಬೇಗಂ ಅಜಾದರನ್ನು ನೋಡಿ ಹೋಗಲು ಒಬ್ಬ ಮುಸಲ್ಮಾನ್ ಪೋಲೀಸನು ಬಂದಿದ್ದ. 'ಮರಣವೊದಗುವ ಮುನ್ನ ಒಮ್ಮೆ ಗಂಡನನ್ನು ತಂದು ತೋರಿಸಲಾರಿರಾ'' ಎಂದು ಅವರು ಆ ಪೋಲೀಸನ ಕಾಲು ಹಿಡಿದು ಕೇಳಿದರು. ಆತನ ಕಣ್ಣುಗಳೂ ಕಂಬನಿ ಸುರಿಸಿದವು; ಕಂಠವು ಬಿಗಿದಿತು; ಪಾಪ! ಆತ ಮರುಗಬಲ್ಲನಲ್ಲದೆ ಏನು ತಾನೇ ಮಾಡಬಲ್ಲ? ಅಥವಾ ಇತರರಾದರೂ ಏನು ಮಾಡಲಾಪರು? ಆಳುವ ಅರಸರೇ ಹೀಗೆ ನಿರ್ದಯರಾದರೆ, ಆಳಿಸಿಕೊಳ್ಳುವವರು, ರಾಜಸೇವಕರು ಮತ್ತೇನು ಮಾಡಬೇಕು? ಬಂದ ನಂಟರಿಷ್ಟರೊಡನೆಲ್ಲಾ, ಪತಿಯನ್ನು ತನಗೆ ದರ್ಶನ ಮಾಡಿಸುವಂತೆ, ನೀವೆಲ್ಲರೂ ಸರಕಾರಕ್ಕೆ ಕಾಗದ ಬರೆದರೆ ನಾನು ಸಂತೋಷದಿಂದ ಸತ್ತೇನು ಎಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದರು. ರಾತ್ರಿಯಲ್ಲಿಯೂ ಇದೇ ಧ್ಯಾನ. ಒಂದು ನಿಮಿಷವೂ ಕಣ್ಣು ಮುಚ್ಚುತ್ತಿರಲಿಲ್ಲ.

ಆ ದಿನದ ಮಂಗಳ ಉಷಃಕಾಲ

ಶುಕ್ರವಾರದ ಮಂಗಳ ಉಷಾಕಾಲ! ಇನ್ನೂ ಬೆಳಕು ಹರಿದಿರಲಿಲ್ಲ. ಆಗ ಅವರ ಪರಿಸ್ಥಿತಿ ತೀರಾ ಚಿಂತಾಜನಕವಾಗಿತ್ತು. ಕಣ್ಣು ಮುಚ್ಚಿ ಒರಗಿದ್ದರು. ಒಂದೇ ಗಳಿಗೆ! ಥಟ್ಟನೆ ಅವರಿಗೆ ಎಚ್ಚರವಾಯಿತು. ನಂದುವ ಜ್ಯೋತಿ ಕೊನೆಗೊಮ್ಮೆ ಉರಿಯುವಂತೆ! 'ಮೌಲಾನಾ ಸಾಹೇಬ್ ಆಯೆ ನಹೀ? (ಮೌಲಾನಾ ಸಾಹೇಬರು ಬಂದಿಲ್ಲವೇನು?) ಎಂದು ಪಕ್ಕದಲ್ಲಿದ್ದ ದಾಸಿಯೊಡನೆ ಪ್ರಶ್ನಿಸಿದರು. ಯಾರೂ ಮಾತನಾಡಲೇ ಇಲ್ಲ. ಅಥವಾ ಏನೆಂದು ತಾನೇ ಮಾತನಾಡಬಲ್ಲರು? ಯಾವುದನ್ನು ಹೇಳಿದರೆ ಅವರಿಗೆ ಅತ್ಯಂತ ಅಸಮಾಧಾನವಾದೀತು ಅದನ್ನು ಹೇಳದಿರುವುದೇ ವಾಸಿಯೆಂದು ಎಲ್ಲರೂ ತಲೆ ಬಗ್ಗಿಸಿದರು. ಬೇಗಮರ ಮುಖ ನಿಸ್ತೇಜವಾಯಿತು. ಮತ್ತೆ ದಾಸಿಯೊಡನೆ ಹೇಳಿದರು ''ನಾನು ತೆಗೆದಿಟ್ಟ ಆ ಅತ್ತರಿನ ಪಾತ್ರೆಯನ್ನು ಮೌಲಾನಾ ಸಾಹೇಬರು ಬಂದಾಗ ಅವರಿಗೆ ತೆಗೆದು ಕೊಡು, ಮರೆಯಬೇಡ. ಪ್ರಾರ್ಥನೆಯ ಕಾಲಕ್ಕೆ ಅವರದನ್ನು ಹಚ್ಚಿಕೊಂಡರೆ ನನಗದೇ ಸಾಕು. ಬೇಗಮರ ಹೃದಯದ ಉದ್ವೇಗ ಶಾಂತವಾಯಿತು! ಅವರ ಹಾಸಿಗೆ ಬಳಿ ಅತ್ತರಿನ ಆ ಪಾತ್ರೆಯಿತ್ತು. ತನ್ನ ಪತಿ ಬಂದಾಗ, ಅವರ ಕೈಯ್ಯಲ್ಲಿ ತಾನೇ ಅದನ್ನು ಕೊಡಬೇಕೆಂದು ಅವರು ಸಂಕಲ್ಪಿಸಿದ್ದರು. ಆ ಸಂಕಲ್ಪ ನಿರಾಶೆಯಾಗಲು ತನ್ನ ಕೊನೆಯ ಬಯಕೆಯನ್ನರುಹಿ ಅವರ ಹೃದಯ ಹಾಗೆ ಶಾಂತಿಗೊಂಡಿತು! ಎಷ್ಟೆಂದರೂ ಧೀರ ಪತ್ನಿ! ತನ್ನ ಪತಿ ಬರಲೇ ಇಲ್ಲವಲ್ಲಾ ಎಂದು ಸಾಯುವಾಗಲೂ ಅಶಾಂತಿಗೊಂಡೇ ಸಾಯಲಿಲ್ಲ. ಗಂಡ ಬರಲಿಲ್ಲವೆಂಬುವ ದುಃಖ ಹೃದಯದ ಕೊನೆಯ ಶಾಂತಿಯನ್ನು ಕದಡಲಿಲ್ಲ. ಪತಿಯ ಭಾಗ್ಯ ಬಂಧನವನ್ನು, ಪತಿಯ ಧರ್ಮಕೀರ್ತಿಯನ್ನು ಸ್ಮರಿಸಿ ಧೈರ್ಯಗೊಂಡರು. ಹೃದಯದ ಸಂತಾಪವನ್ನು ಹೃದಯದಲ್ಲಿಯೇ ಬಚ್ಚಿಟ್ಟುಕೊಂಡು, ಸುತ್ತಲಿದ್ದವರಿಗೆಲ್ಲಾ 'ನಾ ಹೋಗಿ ಬರುತ್ತೇನೆ, ನಗುನಗುತ್ತಾ ಕಳುಹಿಸಿಕೊಡಿ, ನಾನೇನಾದರೂ ನಿಮಗೆ ಸಿಟ್ಟು ಬರುವಂತೆ ಮಾಡಿದ್ದರೆ, ನಿಮ್ಮ ಮನಸ್ಸು ನೋಯಿಸಿದ್ದರೆ ಅದನ್ನೆಲ್ಲಾ ಕ್ಷಮಿಸಿ ಬಿಡಿ' ಎಂದು ಹೇಳಿ ಅಪ್ಪಣೆ ಬೇಡಿಕೊಂಡರು.

ಗಳಿಗೆ ತುಂಬುತಿತ್ತು! ಸಾವಿನ ಸೆಳೆತ ಹೆಚ್ಚುತ್ತಿತ್ತು. ಜೀವನದ ಕೊನೆಯ ನಿಮಿಷ ಬಂತೆಂದು ಬೇಗಮರಿಗೂ ಅರಿವಾಯ್ತು. ಕೊನೆಯ ಪ್ರಾರ್ಥನೆ ಹೇಳಲು ಪ್ರಯತ್ನಿಸಿದರು. ಆದರೆ ಮೃತ್ಯುವಿನ ತುತ್ತು ಬಿಗಿದಿತ್ತು; ನಾಲಿಗೆ ಶಕ್ತಿಹೀನವಾಗಿತ್ತು; ಮೂಕ ಮೌನರಾಗಿ ದೇವರನ್ನು ಸ್ಮರಿಸಿಕೊಂಡರು. ಸಮೀಪದಲ್ಲಿ ಕುಳಿತು ಕೊರಾನ್ ಹೇಳುತ್ತಿದ್ದರು. ಅದರ ಜೊತೆಗೆ ಬೇಗಮರೂ ತನ್ನ ಕ್ಷೀಣದನಿಗೂಡಿಸಿದರು. ಎಲ್ಲಾ ಆದ ಮೇಲೆ ಕೈ ಮುಗಿದರು; ಮತ್ತೆ ಅದೇ ಕ್ಷಣ ಕಣ್ಮುಚ್ಚಿದರು. ಮುಚ್ಚಿದ ಕಣ್ಣುಗಳು ಮತ್ತೆ ತೆರೆಯಲೇ ಇಲ್ಲ. ಜೀವನದಲ್ಲಿ ತೋರಿದ ಶಾಂತಿಯನ್ನು ಮರಣದಲ್ಲಿಯೂ ಅವರು ತೊರೆಯಲಿಲ್ಲ. ಬೇಗಂ ಅಜಾದರ ಪ್ರಾಣಪಕ್ಷಿ ದೇವ ಸಾನ್ನಿಧ್ಯ ಸೇರಿತು. ಜೀವನದ ಕೊನೆಯಾಸೆ—ತೀರದಾಸೆಯಾಗಿ ಎದೆಯನ್ನು ಶೂಲದಂತೆ ಇರಿಯುತ್ತಿದ್ದರೂ ಅವರು ಶಾಂತಚಿತ್ತದಿಂದಲೇ ಸಾವನ್ನಪ್ಪಿಕೊಂಡರು.

ಕೊನೆಯ ದರ್ಶನ

ಬೇಗಂ ಅಜಾದರ ಮರಣವಾರ್ತೆ ಇಡೀ ಕಲ್ಕತ್ತದಲ್ಲಿ ಬೆಂಕಿಯಂತೆ ಹಬ್ಬಿತು. ನಗರದ ನಾಗರಿಕರಿಗೆಲ್ಲಾ ಸಿಡಿಲೆರಗಿದಂತಾಯಿತು. ಅವರ ಮನೆ ಮುಂದೆ ಜನರ ಜಾತ್ರೆಯೇ ನೆರೆಯಿತು ರಾಷ್ಟ್ರಪತಿಯ ಧೀರಪತ್ನಿಯ ಪುಣ್ಯ ದರ್ಶನಕ್ಕೆಂದು. ಜನರು ನೋಡಿ ನೋಡಿ ಕಣ್ಣೀರು ಹೊಳೆಯಾಗಿ ಹರಿಸಿದರು. ಹಲವು ಮಂದಿ ಹಿಂದು ಮುಸಲ್ಮಾನ ಗೃಹಸ್ಥರು ಬಂದರು. ಶ್ರೀಯುತರು ಕಿರಣಶಂಕರ ರಾಯ್, ಅಬಿಯನ್ ದತ್ತ, ಸಯ್ಯದ್ ಜಲಾಲುದ್ದೀನ್ ಹಾಷ್ಮಿ, ಜೆ. ಸಿ. ಗುಪ್ತ, ತೈಬಲ್ ಜರೀಫ್, ಅಮರ ಕೃಷ್ಣಘೋಷ, ಖಾನ್ ಬಹದ್ದೂರ್ ಮುಹಮ್ಮದ್ ಜಾನ್, ಮನಮೋಹನ ಭಟ್ಟಾಚಾರ್ಯಜಿ, ಮೌಲಾನಾ ಮಹಮ್ಮದ್ ಉಸ್ಮಾನ್, ಜ್ಞಾನಾಂಜನ ನಿಯೋಗಿ, ಮೌಲಾನಾ ಮಾಯಾಬಾದಿ, ಬಿ. ಸೇನ ಗುಪ್ತ, ಮೊದಲಾದವರೂ ಬೇಗಮರಿಗೆ ತಮ್ಮ ಕೊನೆಯ ವಂದನೆ ಸಲ್ಲಿಸಿದರು. ಶುಕ್ರವಾರ ಪ್ರಾತಃಕಾಲ ಮೌಲಾನಾ ಅಜಾದರಿಗೂ ಒಂದು ತಂತಿ ಕಳುಹಿಸಲ್ಪಟ್ಟಿತು. ಅವರ ಹೃದಯ ತಂತಿ ದುಃಖದ ನಾದ ಹೊರಡಿಸಲೆಂದು!

ಮಧ್ಯಾಹ್ನ ಹನ್ನೆರಡು ತಾಸಿನ ಹೊತ್ತಿಗೆ ಶವದ ಮೆರವಣಿಗೆ ಹೊರಟಿತು. ಸಕಲ ಜಾತಿ ಮತ ಧರ್ಮದವರೂ ಈ ಮೆರವಣಿಗೆಯಲ್ಲಿ ಸೇರಿದ್ದರು. ಶವವನ್ನು ಚಿತ್ಪುರದಲ್ಲಿರುವ ನಖೋದಾ ಮಸೀದಿಗೆ ತರಲಾಯಿತು; ಊರಿಗೆ ಊರೇ ಶವದ ಬೆನ್ನ ಹಿಂದೆ ಬಂದಿತ್ತು. ಅಲ್ಲಿ ಜನಾಜಾ ಪ್ರಾರ್ಥನೆಯಾದ ಮೇಲೆ ಅಂತ್ಯಯಾತ್ರೆ ಮಾಣಿಕ್ ತೊಲಾದ ಮಸಣ ಭೂಮಿಗೆ ನಡೆಯಿತು. ಶವವನ್ನು ಗೋರಿಯಲ್ಲಿಟ್ಟರು. ಶ್ರೀಮತಿ ಲಾವಣ್ಯ ಪ್ರಭಾದತ್ತರು ಹೂಮಾಲೆ ಹಾಕಿ ಶವಕ್ಕೆ ಅಂತ್ಯ ನಮಸ್ಕಾರ ಮಾಡಿದರು. ಧಾರ್ಮಿಕ ಗೀತೆಗಳು ಜನಜಂಗುಳಿಯನ್ನು ಕಂಬನಿಯ ಕಡಲಲ್ಲಿ ಅದ್ದುತ್ತಿದ್ದವು. ಮೌಲಾನಾ ಅಜಾದರ ವೃದ್ಧ ಮಾತಾ ಪಿತೃಗಳ ಸನ್ನಿಧಿಯಲ್ಲಿಯೇ ಅವರ ಸೊಸೆಯಾದ ಬೇಗಂ ಅಜಾದರು ಗೋರಿಯಾದರು! ಭೂಮಾತೆಯು ತನ್ನ ಪ್ರೀತಿಯ ಪುತ್ರಿಯನ್ನು ಕೊನೆಗೆ ತನ್ನ ಬಳಿ ಮಲಗಿಸಿಕೊಂಡಳು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಸುಖಸರ್ವಸ್ವವನ್ನೂ ಬಲಿದಾನ ಮಾಡಿದ ವೀರ ಸೇನಾನಿಯ ಧೀರಪತ್ನಿಯೋರ್ವಳು ಇಂಥ ಭವ್ಯಮರಣಹೊಂದಿದಳು! ಅಜಾದರ ಕೀರ್ತಿ ಸೌರಭದ ಮರೆಯಲ್ಲಿ ಈ ಜೀವಪುಷ್ಪವೊಂದೂ ಅರಳಿ ಪರಿಮಳ ಬೀರಿ ಉರುಳಿ ಹೋಯಿತು! ಬೇಗಂ ಅಜಾದರು ರಾಷ್ಟ್ರಪತಿ ಅಜಾದರ ಆದರ್ಶ ಪತ್ನಿಯಾಗಿ ಮಡಿದರು! ರಾಷ್ಟ್ರಸೇವಕನೋರ್ವನ ವೀರಪತ್ನಿಯು ಎಂಥಾ ಮರಣ-ಭವ್ಯವಾದ ಮರಣ ಹೊಂದುವಳೆಂದು ಲೋಕಕ್ಕೆ ತಿಳಿಸಿದರು; ಅಂಥಾ ಕೀರ್ತಿ ಗೌರವವನ್ನು ಪಡೆದಳು. ನಮ್ಮ ರಾಷ್ಟ್ರದ ಭವ್ಯೇತಿಹಾಸದಲ್ಲಿ ಬೇಗಂ ಅಜಾದರ ಹೆಸರೂ ಶಾಶ್ವತವಾಗುವುದು. ಅವರ ಕೀರ್ತಿಗಾನವನ್ನು—ಎಷ್ಟೋ ಶತಮಾನಗಳ ಬಳಿಕವೂ—ಭವಿಷ್ಯ ಭಾರತದಲ್ಲಿ ವೃದ್ಧೆಯರು ಕಂಬನಿ ಸುರಿಸುತ್ತಾ ತಮ್ಮ ಚಿಕ್ಕ ಮೊಮ್ಮಕ್ಕಳಿಗೆ ಹಾಡಿ ಹೇಳುವರು!

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

[illegible]

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಹಿಂದಿನ ಸದಸ್ಯರಾದ ಜಯರಾಮದಾಸ್ ದೌಲತರಾಮ ರನ್ನು ಕರೆಹಿಡಿದ ಕೂಡಲೇ ಅವರ ಪುತ್ರಿ ಪ್ರೇಮು ಎಂಬವಳು ತಂದೆಯ ಅಗಲುವಿಕೆಯ ವ್ಯಥೆಯಿಂದ ಮಾತನಾಡುವ ಶಕ್ತಿಯನ್ನು ಕಳೆಕೊಂಡಳು! ಅವಳಿಗೆ ಇತ್ತೀಚೆಗೆ ಸಕ್ಕರ ಸೆರೆಮನೆಯಲ್ಲಿರುವ ಅವಳ ತಂದೆಯನ್ನು ಸಂದರ್ಶಿಸಲು ಸರಕಾರವು ಅಪ್ಪಣೆ ಕೊಟ್ಟಿತು. ಆಶ್ಚರ್ಯವೇನೆಂದರೆ, ತಂದೆಯ ದರ್ಶನವಾದಕೂಡಲೇ ಮಗಳು ಪುನಃ ಮೊದಲಿನಂತೆ ಮಾತನಾಡತೊಡಗಿದಳು!

ಕರ್ನೂಲಿನಲ್ಲಿ ಲೂಟಿ

ನಡೆದು, ಅಕ್ಕಿ, ವಸ್ತ್ರ ಮತ್ತಿತರ ಸಾಮಾನುಗಳನ್ನು ಜನರು ದೋಚಿಕೊಂಡು ಹೋದುದಲ್ಲದೆ [illegible] ೧೦,೦೦೦ ರೂ. ಗಳಷ್ಟು [illegible] ವ್ಯಾಪಾರಿಗಳ ಅಂದಾಜು [illegible] ದಾಜು, ಅಂಗಡಿಗಳು ಮುಚ್ಚಲ್ಪಟ್ಟು, ಧಾನ್ಯ [illegible] ಗದೆ ಬಡ ಜನರು ಕಷ್ಟಕ್ಕೊಳಗಾಗಿರುವರು.

ಈ ಲೂಟಿ ಸಂಬಂಧ [illegible] ಮಂದಿ ಬಂಧಿಸಲ್ಪಟ್ಟಿರುವರು. ಅವರಲ್ಲಿ ಐವರು ಸ್ತ್ರೀಯರು. ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ. ಪುಲ್ಲರೆಡ್ಡಿಯವರೂ ಬಂಧನಕ್ಕೊಳಗಾದ್ದಾರೆ. ಸೆರೆ ಹಿಡಿಯಲ್ಪಟ್ಟವರಲ್ಲಿ ಒಬ್ಬರಾದ ಬಿಸ್ವರರ ಆಫೀಸಿನ ಗುಮಾಸ್ತರೊಬ್ಬರು ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ಕರ್ನೂಲಿ[illegible] ಹತ್ತಿರ ಇನ್ನೊಂದೆಡೆ ಲೂಟಿ ನಡೆದು ೨೪ ಮಂದಿ ಬಂಧಿಸಲ್ಪಟ್ಟಿದ್ದಾರೆ. ಗಾಡಿಗಳಿಂದ ಅಕ್ಕಿಯನ್ನು ದೋಚಿದರೆಂಬ ಅಪಾದನೆಯ ಮೇಲೆ [illegible]ರೆಗಲ ಮಂದಿ ಕೈದಿಗೊಳಗಾಗಿರುವರು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:–

(1) ಡಾಕ್ಟರ್ ವಿ. ಟಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ನಃರಾಠ ಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 23—4—1943 [ಸಂಚಿಕೆ 16]

ಅಜಾದರನ್ನು ನೆನೆನೆನೆದೇ ಪ್ರಾಣಬಿಟ್ಟರು!

'ಪತಿಯನ್ನೊಮ್ಮೆ ತಂದು ತೋರಿಸಲಾರಿರಾ?'
ಬೇಗಂ ಅಜಾದರ ಕರುಣಾಮಯ ಕೊನೆಯ ಚಿತ್ರ!

ಬೇಗಂ ಜುಲೇಖಾ ಖಾತೂನ್—ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಜಾದರ ಪತ್ನಿ. ಕಳೆದ ಐದನೇ ತಾರೀಕಿನಂದು ಇವರು ಪರಲೋಕದ ಪ್ರಯಾಣ ಮಾಡಿದರು; ಇವರ ನಿಧನದ ಸಂತಾಪವು ಅಖಿಲಭಾರತವನ್ನೇ ಹಬ್ಬಿತು. ಎಲ್ಲರೂ—ಸಕಲ ಜಾತಿ ಮತದವರು—ಆ ವೀರ ಪತ್ನಿಯ, ಭಾರತದ ರಾಷ್ಟ್ರಪತಿಯ ಆ ಪುಣ್ಯಸಹಧರ್ಮಿಣಿಯ ಮರಣಕ್ಕಾಗಿ ಕಂಬನಿಯ ಕಾಣಿಕೆ ಅರ್ಪಿಸಿದರು. ಪರಲೋಕದಲ್ಲಿ ಪರಮಾತ್ಮನು ಆ ಪುಣ್ಯ ಜೀವಕ್ಕೆ ಪರಮ ಶಾಂತಿಯನ್ನು ದಯಪಾಲಿಸಲಿ ಎಂದು ಸರ್ವರೂ ಭಗವಂತನೊಡನೆ ಮೊರೆಯಿಟ್ಟರು. ದಯಾಮಯನಾದ ಭಗವಂತನು ಜನರ ಈ ಪ್ರಾರ್ಥನೆಯನ್ನು ಕೇಳಿಯೇ ಕೇಳುತ್ತಾನೆ.

ಯಮ ಧರ್ಮನಿಗೆ ದಯೆಯೇನು?

ಬೇಗಂ ಅಜಾದರು ಕಳೆದ ಎರಡು ವರ್ಷಗಳಿಂದ ಹಾಸಿಗೆ ಹಿಡಿದಿದ್ದರು; ಕೆಟ್ಟ ಬೇನೆ ಕ್ಷಯ ರೋಗದಿಂದ ಪೀಡಿತರಾಗಿದ್ದರು. ಆರೋಗ್ಯ ಬಹಳ ಕೆಟ್ಟುಹೋಗಿತ್ತು. ಒಮ್ಮೆಲೇ ಅಜಾದರನ್ನು ಮಹಾತ್ಮರೇ ಮೊದಲಾದ ರಾಷ್ಟ್ರ ಧುರೀಣರೊಂದಿಗೆ ಕಳೆದ ಅಗಸ್ಟ್ ತಿಂಗಳಲ್ಲಿ ಸರಕಾರವು ಗೊತ್ತುಗುರಿಯಿಲ್ಲದೆ ಎಲ್ಲಿಯೋ ಸೆರೆಮನೆ ಸೇರಿಸಿಬಿಟ್ಟಿತು. ಬೇನೆಯಿಂದ ನರಳುತ್ತಿದ್ದ ಪತ್ನಿಯ ಬಳಿಯಿಂದ ಅವರ ಪ್ರಿಯ ಪತಿಯನ್ನ ಅಗಲಿಸಿತು! ಸಾಧ್ವಿ ಬೇಗಂ ಅಜಾದರಿಗೆ ಪತಿಯ ಈ ವಿಯೋಗ ಅಸಹನೀಯವಾಗಿತ್ತು. ಒಮ್ಮೆಲೇ ಅವರ ವ್ಯಾಧಿ ವಿಷಮತೆಗೇರಿಬಿಟ್ಟಿತು. ಕ್ಷಯ ರೋಗದೊಂದಿಗೆ ಅತಿಸಾರವೂ ಸೇರಿಕೊಂಡಿತು. ಎಲ್ಲದಕ್ಕಿಂತಲೂ ಹೆಚ್ಚಾಗಿ ಪತಿಯ ಯೋಚನೆ. ಇಷ್ಟೆಲ್ಲಾ ಸೇರಿ ಅವರನ್ನು ಮೃತ್ಯುಮುಖಕ್ಕೆ ದೂಡುತ್ತಿತ್ತು! ಮರಣಕ್ಕಿಂತ ಒಂದು ವಾರದ ಮುನ್ನ ವೈದ್ಯರು ಬೇಗಂ ಅಜಾದರ ವಿಷಯ ಪತ್ರ ಹೊರಡಿಸಿದರು. ಇದನ್ನು ಓದಿದ ಮೇಲೆ ಅವರು ಇನ್ನು ಬಹುಕಾಲ ಬದುಕುವುದಿಲ್ಲವೆಂದು ಎಲ್ಲರೂ ಖಂಡಿತ ಮಾಡಿದ್ದರು. ರಾಷ್ಟ್ರಪತಿ ಅಜಾದರನ್ನೊಮ್ಮೆ—ಕೊನೆ ಗಳಿಗೆಯಲ್ಲಾದರೂ ಅವರ ಪತ್ನಿಯನ್ನು ಸಂದರ್ಶಿಸಲು ಬಿಡುಗಡೆ ಮಾಡಿರಿ ಎಂದು ಸರಕಾರಕ್ಕೆ ಪ್ರಾರ್ಥನೆ ಹೋಯಿತು. ಪ್ರಾರ್ಥನೆಗಳ ಮೇಲೆ ಪ್ರಾರ್ಥನೆಗಳಾದವು. ಒಮ್ಮೆ ಆಶಾದಾಯಕ ವಾರ್ತೆಯೂ ಹಬ್ಬಿತ್ತು. ಸಾಯುವ ಮುನ್ನ ಅಜಾದರಿಗೆ ಅವರನ್ನೇ ಹಂಬಲಿಸಿ ಮೃತ್ಯುಶಯ್ಯೆಯಲ್ಲಿ ಮಲಗಿದ್ದ ಅವರ ಪ್ರಿಯ ಪತ್ನಿಯನ್ನು ನೋಡಲು ಸರಕಾರ ಸಂದರ್ಭವೊದಗಿಸಿ ಕೊಡುತ್ತದೆಂದು! ಆದರೆ ಅದೆಲ್ಲಾ ನಿರಾಧಾರ ಕಲ್ಪನಾ ರಾಜ್ಯಗಳಾದುವು. ಕೊನೆವರೆಗೂ ಅಜಾದರಿಗೆ ಆ ಸಂದರ್ಭವನ್ನು ಸರಕಾರ ಒದಗಿಸಲಿಲ್ಲ. ಪತಿಯ ಪಾದವನ್ನು ನೆನೆಯುತ್ತಾ ಆ ಸಾಧ್ವಿಯು ಪ್ರಾಣವನ್ನು ತೊರೆದರು. ಸರಕಾರದ ಹೃದಯವೇ ಮೆತ್ತಗಾಗಲಿಲ್ಲವೆಂದ ಮೇಲೆ ಯಮ ಧರ್ಮರಾಯನು ಮತ್ತೆ ಕರುಣೆ ತೋರಿಸುತ್ತಾನೆಯೆ?

ಎಪ್ರಿಲ್ ನಾಲ್ಕರ ಮಧ್ಯರಾತ್ರಿ! ಬೇಗಂ ಅಜಾದರ ಪ್ರಾಣಪಕ್ಷಿ ಸಾವು ಬದುಕುಗಳ ಉಯ್ಯಾಲೆಯಲ್ಲಿ ತೂಗಾಡುತಿತ್ತು. ಬದುಕುವ ಆಸೆ ಎಲ್ಲರಿಗೂ ತೀರಾ ಇಲ್ಲದಾಯಿತು. ಆದರೂ ಡಾಕ್ಟರರು ಆಮ್ಲಜನಕ ಚಿಕಿತ್ಸೆ ನಡೆಸಿದರು; ಪ್ರಾಣವಾಯು ತುಂಬಿಸಿದರು. ಮನುಷ್ಯ ಏನು ಸಾಹಸ ಮಾಡಿದರೆ ತಾನೇ ಏನು? ವಿಧಿ ಬಯಸಿದ್ದು ಬೇರೆ ಆದರೆ! ಆಮ್ಲಜನಕವಾಯು ತುಂಬಿಸಿದ ಮೂರು ತಾಸುಗಳ ಬಳಿಕ ಅವರ ದೇಹ ಪಂಜರದಿಂದ ಪ್ರಾಣಪಕ್ಷಿ ಹಾರಿಯೇ ಹೋಯಿತು! ಜೀವ ತೇಜಸ್ಸು ಆರಿ ಹೋಯಿತು! ಪವಿತ್ರಾತ್ಮವು ಪರಮಾತ್ಮನಲ್ಲಿ ಲೀನವಾಯಿತು. ಬೇಗಂ ಅಜಾದರು ತನ್ನ ೪೫ನೆಯ ಮಧ್ಯವಯಸ್ಸಿನಲ್ಲಿಯೇ—ಮಕ್ಕಳಿಲ್ಲದೆ ಪತಿಯನ್ನಗಲಿ, ವೃದ್ಧರಾದ ಅತ್ತೆ ಮಾವಂದಿರನ್ನು ಅವರೊಂದಿಗೆ ಅಖಿಲಭಾರತವನ್ನೇ ಕಂಬನಿಯ ಕಡಲಲ್ಲಿ ಅದ್ದಿ, ಅಜಾದರನ್ನು ಅನಾಥರನ್ನಾಗಿ ಮಾಡಿ ಇಹಲೋಕ ತ್ಯಜಿಸಿದರು!

ಪತಿದರ್ಶನಕ್ಕಾಗಿ ಹಂಬಲಿಸಿದರು!

ಬೇಗಂ ಅಜಾದರ ಕೊನೆಯ ಕೆಲ ದಿನಗಳು ಅತ್ಯಂತ ಕರುಣಾಮಯ ಘಟನೆಗಳಿಂದ ಕೂಡಿದ್ದವು; ಕಲ್ಲೆದೆಯವನನ್ನಾದರೂ ಕರಗಿಸುವಂಥದಾಗಿತ್ತು. ತಾನು ಸಾಯುತ್ತೇನೆಂಬುದು ಅವರಿಗೆ ಚೆನ್ನಾಗಿ ಗೊತ್ತು; ಅದಕ್ಕಾಗಿ ಅವರಿಗೆ ನೋವಾಗಲಿಲ್ಲ; ಕೊನೆಗೊಮ್ಮೆ ತನ್ನ ಪತಿದೇವನನ್ನು ಕಣ್ಣಾರೆ ನೋಡಿ ಪಾದವನ್ನು ಸ್ಪರ್ಶಿಸಿ ಪ್ರಾಣ ಬಿಡುವುದಾಗಲಿಲ್ಲವಲ್ಲಾ ಎಂಬುದು ಅವರ ದುಃಖ. ಹಾಸಿಗೆ ಹಿಡಿದ ಮೇಲೆ ಅವರು ದಿನೇ ದಿನೇ ಬಹಳ ದುರ್ಬಲರಾದರು; ಕೊನೆಕೊನೆಗೆ ಮಾತನಾಡುವುದೂ ಕಷ್ಟವಾಗುತ್ತಿತ್ತು; ಮಾತನಾಡುವುದೆಂದರೆ ಒಂದೇ ಮಾತು—ತನ್ನ ಪತಿದೇವನ ಕುರಿತೇ. ಗಳಿಗೆ ಗಳಿಗೆ ಅದೇ ಚಿಂತೆ. ನೂರಾರು ಮೈಲಿಯಾಚೆಯಲ್ಲಿರುವ ತನ್ನ ಕಣ್ಮಣಿಯ ಕುರಿತು! ತನ್ನನ್ನು ನೋಡಲು ಬಂದವರೆಲ್ಲರೊಡನೆಯೂ ಅವರು ತಮ್ಮ ಪತಿಯ ಸುದ್ದಿ ಕೇಳುತ್ತಿದ್ದರು. ಬಂಧುಗಳಿರಲಿ, ಮಿತ್ರರಿರಲಿ, ದಾಸಿಯರಿರಲಿ ಎಲ್ಲರೊಡನೆಯೂ ಅದೇ ಪ್ರಶ್ನೆ. ಗಂಡನನ್ನೊಮ್ಮೆ ತೋರಿಸಿ ಎಂದು; ತಮ್ಮ ಹಾಸಿಗೆ ಬಳಿಯಿದ್ದ ದಾಸಿಯೊಡನೆ ಅದೇ ಮಾತುಕತೆ. ಒಮ್ಮೆ ಬೇಗಂ ಅಜಾದರನ್ನು ನೋಡಿ ಹೋಗಲು ಒಬ್ಬ ಮುಸಲ್ಮಾನ್ ಪೋಲೀಸನು ಬಂದಿದ್ದ. 'ಮರಣವೊದಗುವ ಮುನ್ನ ಒಮ್ಮೆ ಗಂಡನನ್ನು ತಂದು ತೋರಿಸಲಾರಿರಾ'' ಎಂದು ಅವರು ಆ ಪೋಲೀಸನ ಕಾಲು ಹಿಡಿದು ಕೇಳಿದರು. ಆತನ ಕಣ್ಣುಗಳೂ ಕಂಬನಿ ಸುರಿಸಿದವು; ಕಂಠವು ಬಿಗಿದಿತು; ಪಾಪ! ಅತ್ತ ಮರುಗಬಲ್ಲನಲ್ಲದೆ ಏನು ತಾನೇ ಮಾಡಬಲ್ಲ? ಅಥವಾ ಇತರರಾದರೂ ಏನು ಮಾಡಲಾಪರು? ಆಳುವ ಅರಸರೇ ಹೀಗೆ ನಿರ್ದಯರಾದರೆ, ಆಳಿಸಿಕೊಳ್ಳುವವರು, ರಾಜಸೇವಕರು ಮತ್ತೇನು ಮಾಡಬೇಕು? ಬಂದ ನಂಟರಿಷ್ಟರೊಡನೆಲ್ಲಾ, ಪತಿಯನ್ನು ತನಗೆ ದರ್ಶನ ಮಾಡಿಸುವಂತೆ, ನೀವೆಲ್ಲರೂ ಸರಕಾರಕ್ಕೆ ಕಾಗದ ಬರೆದರೆ ನಾನು ಸಂತೋಷದಿಂದ ಸತ್ತೇನು ಎಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದರು. ರಾತ್ರಿಯೆಲ್ಲಿಯೂ ಇದೇ ಧ್ಯಾನ. ಒಂದು ನಿಮಿಷವೂ ಕಣ್ಣು ಮುಚ್ಚುತ್ತಿರಲಿಲ್ಲ.

ಆ ದಿನದ ಮಂಗಳ ಉಷಃಕಾಲ

ಶುಕ್ರವಾರದ ಮಂಗಳ ಉಷಾಕಾಲ! ಇನ್ನೂ ಬೆಳಕು ಹರಿದಿರಲಿಲ್ಲ. ಆಗ ಅವರ ಪರಿಸ್ಥಿತಿ ತೀರಾ ಚಿಂತಾಜನಕವಾಗಿತ್ತು. ಕಣ್ಣು ಮುಚ್ಚಿ ಒರಗಿದ್ದರು. ಒಂದೇ ಗಳಿಗೆ! ಥಕ್ಕನೆ ಅವರಿಗೆ ಎಚ್ಚರವಾಯಿತು. ನಂದುವ ಜ್ಯೋತಿ ಕೊನೆಗೊಮ್ಮೆ ಉರಿಯುವಂತೆ! 'ಮೌಲಾನಾ ಸಾಹೇಬ್ ಆಯೆ ನಹೀ? (ಮೌಲಾನಾ ಸಾಹೇಬರು ಬಂದಿಲ್ಲವೇನು?) ಎಂದು ಪಕ್ಕದಲ್ಲಿದ್ದ ದಾಸಿಯೊಡನೆ ಪ್ರಶ್ನಿಸಿದರು. ಯಾರೂ ಮಾತನಾಡಲೇ ಇಲ್ಲ. ಅಥವಾ ಏನೆಂದು ತಾನೇ ಮಾತನಾಡಬಲ್ಲರು? ಯಾವುದನ್ನು ಹೇಳಿದರೆ ಅವರಿಗೆ ಅತ್ಯಂತ ಅಸಮಾಧಾನವಾದೀತು ಅದನ್ನು ಹೇಳದಿರುವುದೇ ವಾಸಿಯೆಂದು. ಎಲ್ಲರೂ ತಲೆ ಬಗ್ಗಿಸಿದರು. ಬೇಗಮರ ಮುಖ ನಿಸ್ತೇಜವಾಯಿತು. ಮತ್ತೆ ದಾಸಿಯೊಡನೆ ಹೇಳಿದರು "ನಾನು ತೆಗೆದಿಟ್ಟ ಈ ಅತ್ತರಿನ ಪಾತ್ರೆಯನ್ನು ಮೌಲಾನಾ ಸಾಹೇಬರು ಬಂದಾಗ ಅವರಿಗೆ ತೆಗೆದು ಕೊಡು, ಮರೆಯಬೇಡ. ಪ್ರಾರ್ಥನೆಯ ಕಾಲಕ್ಕೆ ಅವರದನ್ನು ಹಚ್ಚಿಕೊಂಡರೆ ನನಗದೇ ಸಾಕು. ಬೇಗಮರ ಹೃದಯದ ಉದ್ವೇಗ ಶಾಂತವಾಯಿತು! ಅವರ ಹಾಸಿಗೆ ಬಳಿ ಅತ್ತರಿನ ಆ ಪಾತ್ರೆಯಿತ್ತು. ತನ್ನ ಪತಿ ಬಂದಾಗ, ಅವರ ಕೈಯಲ್ಲಿ ತಾನೇ ಅದನ್ನು ಕೊಡಬೇಕೆಂದು ಅವರು ಸಂಕಲ್ಪಿಸಿದ್ದರು. ಆ ಸಂಕಲ್ಪ ನಿರಾಶೆಯಾಗಲು ತನ್ನ ಕೊನೆಯ ಬಯಕೆಯನ್ನರುಹಿ ಅವರ ಹೃದಯ ಹಾಗೆ ಶಾಂತಿಗೊಂಡಿತು! ಎಷ್ಟೆಂದರೂ ಧೀರ ಪತ್ನಿ! ತನ್ನ ಪತಿ ಬರಲೇ ಇಲ್ಲವಲ್ಲಾ ಎಂದು ಸಾಯುವಾಗಲೂ ಅಶಾಂತಿಗೊಂಡೇ ಸಾಯಲಿಲ್ಲ. ಗಂಡ ಬರಲಿಲ್ಲವೆನ್ನುವ ದುಃಖ ಹೃದಯದ ಕೊನೆಯ ಶಾಂತಿಯನ್ನು ಕದಡಲಿಲ್ಲ. ಪತಿಯ ಭಾಗ್ಯ ಬಂಧನವನ್ನು ಪತ್ನಿಯ ಧರ್ಮಕೀರ್ತಿಯನ್ನು ಸ್ಮರಿಸಿ ಧೈರ್ಯಗೊಂಡರು! ಹೃದಯದ ಸಂತಾಪವನ್ನು ಹೃದಯದಲ್ಲಿಯೇ ಬಚ್ಚಿಟ್ಟುಕೊಂಡು, ಸುತ್ತಲಿದ್ದವರಿಗೆಲ್ಲಾ 'ನಾ ಹೋಗಿ ಬರುತ್ತೇನೆ, ನಗುನಗುತ್ತಾ ಕಳುಹಿಸಿಕೊಡಿ, ನಾನೇನಾದರೂ ನಿಮಗೆ ಸಿಟ್ಟು ಬರುವಂತೆ ಮಾಡಿದ್ದರೆ, ನಿಮ್ಮ ಮನಸ್ಸು ನೋಯಿಸಿದ್ದರೆ ಅದನ್ನೆಲ್ಲಾ ಕ್ಷಮಿಸಿ ಬಿಡಿ' ಎಂದು ಹೇಳಿ ಅಪ್ಪಣೆ ಬೇಡಿಕೊಂಡರು.

ಗಳಿಗೆ ತುಂಬುತಿತ್ತು! ಸಾವಿನ ಸೆಳೆತ ಹೆಚ್ಚುತ್ತಿತ್ತು. ಜೀವನದ ಕೊನೆಯ ನಿಮಿಷ ಬಂತೆಂದು ಬೇಗಮರಿಗೂ ಅರಿವಾಯಿತು. ಕೊನೆಯ ಪ್ರಾರ್ಥನೆ ಹೇಳಲು ಪ್ರಯತ್ನಿಸಿದರು. ಆದರೆ ಮೃತ್ಯುವಿನ ತುತ್ತು ಬಿಗಿದಿತ್ತು; ನಾಲಿಗೆ ಶಕ್ತಿಹೀನವಾಗಿತ್ತು; ಮೂಕ ಮೌನರಾಗಿ ದೇವರನ್ನು ಸ್ಮರಿಸಿಕೊಂಡರು. ಸಮೀಪದಲ್ಲಿ ಕುಳಿತು ಕೊರಾನ್ ಹೇಳುತ್ತಿದ್ದರು. ಅದರ ಜೊತೆಗೆ ಬೇಗಮರೂ ತನ್ನ ಕ್ಷೀಣದನಿಗೂಡಿಸಿದರು. ಎಲ್ಲಾ ಆದ ಮೇಲೆ ಕೈ ಮುಗಿದರು; ಮತ್ತೆ ಅದೇ ಕ್ಷಣ ಕಣ್ಮುಚ್ಚಿದರು. ಮುಚ್ಚಿದ ಕಣ್ಣುಗಳು ಮತ್ತೆ ತೆರೆಯಲೇ ಇಲ್ಲ. ಜೀವನದಲ್ಲಿ ತೋರಿದ ಶಾಂತಿಯನ್ನು ಮರಣದಲ್ಲಿಯೂ ಅವರು ತೊರೆಯಲಿಲ್ಲ. ಬೇಗಂ ಅಜಾದರ ಪ್ರಾಣಪಕ್ಷಿ ದೇವ ಸಾನ್ನಿಧ್ಯ ಸೇರಿತು. ಜೀವನದ ಕೊನೆಯಾಸೆ—ತೀರದಾಸೆಯಾಗಿ ಎದೆಯನ್ನು ಶೂಲದಂತೆ ಇರಿಯುತ್ತಿದ್ದರೂ ಅವರು ಶಾಂತಚಿತ್ತದಿಂದಲೇ ಸಾವನ್ನಪ್ಪಿಕೊಂಡರು.

ಕೊನೆಯ ದರ್ಶನ

ಬೇಗಂ ಅಜಾದರ ಮರಣವಾರ್ತೆ ಇಡೀ ಕಲ್ಕತ್ತದಲ್ಲಿ ಬೆಂಕಿಯಂತೆ ಹಬ್ಬಿತು. ನಗರದ ನಾಗರಿಕರಿಗೆಲ್ಲಾ ಸಿಡಿಲೆರಗಿದಂತಾಯಿತು. ಅವರ ಮನೆ ಮುಂದೆ ಜನರ ಜಾತ್ರೆಯೇ ನೆರೆಯಿತು—ರಾಷ್ಟ್ರಪತಿಯ ಧೀರ ಪತ್ನಿಯ ಪುಣ್ಯ ದರ್ಶನಕ್ಕೆಂದು. ಜನರು ನೋಡಿ ನೋಡಿ ಕಣ್ಣೀರು ಹೊಳೆಯಾಗಿ ಹರಿಸಿದರು. ಹಲವು ಮಂದಿ ಹಿಂದು ಮುಸಲ್ಮಾನ ಗೃಹಸ್ಥರು ಬಂದರು. ಶ್ರೀಯುತರು ಕಿರಣಶಂಕರ ರಾಯ್, ಅಬಿಯನ್ ದತ್ತ, ಸಯ್ಯದ್ ಜಲಾಲುದ್ದೀನ್ ಹಾಷ್ಮಿ, ಜೆ. ಸಿ. ಗುಪ್ತ, ತೈಬಲ್ ಜರೀಫ್, ಅಮರ ಕೃಷ್ಣಘೋಷ, ಖಾನ್ ಬಹದ್ದೂರ್ ಮಹಮ್ಮದ್ ಜಾನ್; ಮನಮೋಹನ ಭಟ್ಟಾಚಾರ್ಯಜಿ, ಮೌಲಾನಾ ಮಹಮ್ಮದ್ ಉಸ್ಮಾನ್, ಜ್ಞಾನಾಂಜನ ನಿಯೋಗಿ, ಮೌಲಾನಾ ಮಾಯಾ ಬಾಧಿ, ಬಿ. ಸೇನ ಗುಪ್ತ, ಮೊದಲಾದವರೂ ಬೇಗಮರಿಗೆ ತಮ್ಮ ಕೊನೆಯ ವಂದನೆ ಸಲ್ಲಿಸಿದರು. ಶುಕ್ರವಾರ ಪ್ರಾತಃಕಾಲ ಮೌಲಾನಾ ಅಜಾದರಿಗೂ ಒಂದು ತಂತಿ ಕಳುಹಿಸಲ್ಪಟ್ಟಿತು. ಅವರ ಹೃದಯ ತಂತಿ ದುಃಖದ ನಾದ ಹೊರಡಿಸಿತೋ!

ಮಧ್ಯಾಹ್ನ ಹನ್ನೆರಡು ತಾಸಿನ ಹೊತ್ತಿಗೆ ಶವದ ಮೆರವಣಿಗೆ ಹೊರಟಿತು. ಸಕಲ ಜಾತಿ ಮತ ಧರ್ಮದವರೂ ಈ ಮೆರವಣಿಗೆಯಲ್ಲಿ ಸೇರಿದ್ದರು. ಶವವನ್ನು ಚಿತ್ಪುರದಲ್ಲಿರುವ ನಖೋದಾ ಮಜೀದಿಗೆ ತರಲಾಯಿತು; ಊರಿಗೆ ಊರೇ ಶವದ ಬೆನ್ನ ಹಿಂದೆ ಬಂದಿತ್ತು. ಅಲ್ಲಿ ಜನಾಜಾ ಪ್ರಾರ್ಥನೆಯಾದ ಮೇಲೆ ಅಂತ್ಯಯಾತ್ರೆ ಪರಾಣಿಕ್ ತೊಲಾದ ವಕ್ಫ ಭೂಮಿಗೆ ನಡೆಯಿತು. ಶವವನ್ನು ಗೋರಿಯಲ್ಲಿಟ್ಟರು. ಶ್ರೀಮತಿ ಲಾವಣ್ಯ ಪ್ರಭಾದತ್ತರು ಹೂಮಾಲೆ ಹಾಕಿ ಶವಕ್ಕೆ ಅಂತ್ಯ ನಮಸ್ಕಾರ ಮಾಡಿದರು. ಧಾರ್ಮಿಕ ಗೀತೆಗಳು ಜನಸಂಗುಳಿಯನ್ನು ಕಂಬನಿಯ ಕಡಲಲ್ಲಿ ಅದ್ದುತ್ತಿದ್ದವು. ಮೌಲಾನಾ ಅಜಾದರ ವೃದ್ಧ ಮಾತಾ ಪಿತೃಗಳ ಸನ್ನಿಧಿಯಲ್ಲಿಯೇ ಅವರ ಸೊಸೆಯಾದ ಬೇಗಂ ಅಜಾದರು ಗೋರಿಯಾದರು! ಭೂಮಾತೆಯು ತನ್ನ ಪ್ರೀತಿಯ ಪುತ್ರಿಯನ್ನು ಕೊನೆಗೆ ತನ್ನ ಬಳಿ ಮಲಗಿಸಿಕೊಂಡಳು. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಸುಖಸರ್ವಸ್ವವನ್ನೂ ಬಲಿದಾನ ಮಾಡಿದ ವೀರ ಸೇನಾನಿಯ ಧೀರಪತ್ನಿಯೋರ್ವಳು ಇಂಥ ಧನ್ಯಮರಣಹೊಂದಿದಳು! ಅಜಾದರ ಕೀರ್ತಿ ಸೌರಭದ ಮರೆಯಲ್ಲಿ ಈ ಜೀವಪುಷ್ಪವೊಂದೂ ಅರಳಿ ಪರಿಮಳ ಬೀರಿ ಉದುರಿ ಹೋಯಿತು! 'ಬೇಗಂ ಅಜಾದರು ರಾಷ್ಟ್ರಪತಿ ಅಜಾದರ ಆದರ್ಶ ಪತ್ನಿಯಾಗಿ ಮಡಿದರು! ರಾಷ್ಟ್ರ ಸೇವಕನೋರ್ವನ ವೀರಪತ್ನಿಯು ಎಂಥಾ ಮರಣ-ಧನ್ಯವಾದ ಮರಣ ಹೊಂದುವಳೆಂದು ಲೋಕಕ್ಕೆ ತಿಳಿಸಿದರು; ಅಂಥಾ ಕೀರ್ತಿ ಗೌರವವನ್ನು ಪಡೆದರು. ನಮ್ಮ ರಾಷ್ಟ್ರದ ಭವ್ಯೇತಿಹಾಸದಲ್ಲಿ ಬೇಗಂ ಅಜಾದರ ಹೆಸರೂ ಶಾಶ್ವತವಾಗುವುದು. ಅವರ ಕೀರ್ತಿಗಾನವನ್ನು—ಎಷ್ಟೋ ಶತಮಾನಗಳ ಬಳಿಕವೂ—ಭವಿಷ್ಯ ಭಾರತದಲ್ಲಿ ವೃದ್ಧೆಯರು ಕಂಬನಿ ಸುರಿಸುತ್ತಾ ತಮ್ಮ ಚಿಕ್ಕ ಮೊಮ್ಮಕ್ಕಳಿಗೆ ಹಾಡಿ ಹೇಳುವರು!

ಜವಾಹರರನ್ನು ಬಿಡುಗಡೆ ಮಾಡಿರಿ

ಮೇಡಂ ಕೈಶೇಕರು ಸಾರುತ್ತಾರೆ!

'ನಿಮ್ಮ ಮಾತಿಗೆ ಬೆಲೆಯಿದ್ದರೆ ಮುಂದೆ ಬನ್ನಿ'

ರಾಷ್ಟ್ರೀಯ ವಾರಪತ್ರಿಕೆ

ಸ್ವದೇಶಾಭಿಮಾನಿಗೆ — ಇಂದೇ — ಚಂದಾದಾರರಾಗಿರಿ.

'ಜವಾಹರರನ್ನು ಬಿಡುಗಡೆ ಮಾಡಿರಿ' ಮೇಡಂ ಚಿಯಾಂಗರ ವಿನಂತಿ

ಮೇಡಂ ಚಿಯಾಂಗ್ ಕೈಶೇಕರು ನ್ಯೂಯಾರ್ಕಿನಲ್ಲಿ ಭಾಷಣಮಾಡುತ್ತಾ, ಜಗತ್ತಿನ ಸಮಸ್ಯೆ ಪರಿಹರಿಸಲು ಭಾರತದ ಬಿಕ್ಕಟ್ಟು ಬಿಡಿಸವುದರ ಆವಶ್ಯಕತೆ ಕುರಿತು ಹೇಳುತ್ತಾ ಭಾರತಕ್ಕೆ ಸ್ವಾತಂತ್ರ್ಯವನ್ನು ಎಂದು ಮತ್ತು ಎಷ್ಟು ಕೊಡಲ್ಪಡುತ್ತದೆಂದು ಸ್ಪಷ್ಟ ಸಾರಬೇಕೆಂದೂ, ಭಾರತದ ರಾಜಕೀಯ ಪ್ರಭಾವವು ಸಂಯುಕ್ತ ರಾಷ್ಟ್ರಗಳ ಕಾರ್ಯಕ್ಕೆ ಸಹಕಾರಿಯಾಗಬೇಕಾದರೆ ಪಂಡಿತ ಜವಾಹರಲಾಲ ನೆಹರುಗಳನ್ನು ಬಿಡುಗಡೆ ಮಾಡಬೇಕೆಂದೂ ಹೇಳಿದರು. ನೆಹರುಗಳಿಗೆ ವಿಶಾಲವಾದ ವಿಶ್ವದೃಷ್ಟಿಯಿರುವುದರಿಂದ ಅವರನ್ನು ಬಿಡುಗಡೆ ಮಾಡಿದರೆ ಜಗತ್ ಸಮಸ್ಯೆ ಪರಿಹರಿಸಲು ಸಹಕಾರಿಯಾಗುವುದೆಂದು ಅವರು ಸ್ಪಷ್ಟಪಡಿಸಿದ್ದಾರೆ. ಮಿತ್ರಪಕ್ಷದವರು ಚೀನದ ಮುಂದಾಳುಗಳ ಮಾತಿಗೆ ಎಷ್ಟು ಬೆಲೆ ಕೊಡುತ್ತಾರೆಂಬುದು ಇದರಿಂದ ಗೊತ್ತಾಗುವುದು.

'ನಿಮ್ಮ ಮಾತಿಗೆ ಬೆಲೆಯಿದ್ದರೆ ಮುಂದೆ ಬನ್ನಿ'

ಬ್ರಿಟನು ಅಮೆರಿಕಗಳ ಸಾವರ್ಕಾರರ ಸವಾಲು!

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ವಿರುದ್ಧ ತರಲಾದ ನಿರ್ಣಯವನ್ನು ಖಂಡಿಸುತ್ತಾ ವೀರ ಸಾವರ್ಕಾರರು, ಈ ಯುದ್ಧವು ಸ್ವಾತಂತ್ರ್ಯ ಯುದ್ಧವೆಂದೂ ಜಗತ್ತಿನ ಏಳಿಗಾಗಿರುವ ಹೋರಾಟವೆಂದೂ ಬ್ರಿಟಿಷರು ಹಾಗೂ ಅವರ ಮಿತ್ರರು ಲೋಕ ತುಂಬಾ ಡಂಗುರ ಸಾರುತ್ತಿರುವಾಗ ಆಫ್ರಿಕಾ ಸರಕಾರವು ಇಂಥಾ ದಬ್ಬಾಳಿಕೆಯ ಮಸೂದೆ ಮಾಡಿದ್ದು ನೋಡಿ ತನಗೆ ಆಶ್ಚರ್ಯವಾಗುತ್ತದೆಯೆಂದೂ, ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ಭಾರತವನ್ನು ಬ್ರಿಟನಿನ ಸರಿ ಸಮಾನತೆಗೇರಿಸುವೆವೆಂಬ ಬ್ರಿಟಿಷರ ಬಾಯಿ ಮಾತಿಗೆ ಇದೆಂಥಾ ವ್ಯಂಗ ಟೀಕೆಯೆಂದೂ, ಕಾರ್ಯದಲ್ಲಿ ಭಾರತೀಯರು ಅಸಮಾನರೆಂದು ಒಂದು ಕಡೆ ಹೇಳುತ್ತಿರುವಾಗಲೆ ಇನ್ನೊಂದು ಕಡೆ ನಾಗರಿಕರೊಡನೆ ಇರಲು ಅಸ್ಪದವಿಲ್ಲದೆ ಮಾಡುವುದು ಅಪಹಾಸ್ಯವೆಂದೂ, ಮಿತ್ರರ ಅಟ್ಲಾಂಟಿಕ ಘೋಷಣೆ ಮತ್ತು ಪಾರ್ಲಿಮೆಂಟಿನ ಹಲವು ಭರವಸೆಗಳು ಕೇವಲ ಕಪಟ ನಾಟಕವೆಂದು ಈ ಮಸೂದೆ ತಿಳಿಸಿತೆಂದೂ, ಆದ್ದರಿಂದ ತನ್ನ ಯುದ್ಧೋದ್ದೇಶದ ಬಗ್ಗೆ ದೊಡ್ಡ ಮಾತನ್ನಾಡುತ್ತಿರುವ ಬ್ರಿಟನು ಅಮೆರಿಕಗಳು ಅನ್ಯಾಯದ ಪರಮಾವಧಿಯಾದ ಈ ಮಸೂದೆಯನ್ನು ತಡೆಯಲು ಪ್ರಯತ್ನಿಸಿದರೆ ಅವರ ಮಾತಿಗೆ ಬೆಲೆ ಬಂದೀತೆಂದು ಸ್ಪಷ್ಟಪಡಿಸಿ, ಭಾರತೀಯರೆಲ್ಲರೂ ದಕ್ಷಿಣ ಆಫ್ರಿಕ ಸರಕಾರದ ಈ ಧೋರಣೆಯನ್ನು ಖಂಡಿಸಬೇಕೆಂದು ಸಾರಿರುವರು.

'ಇಡೀ ದೇಶವನ್ನೇ ಬಿಟ್ಟು ಹೋಗುತ್ತೇವೆ.'

ದ. ಆಫ್ರಿಕದ ಭಾರತೀಯರ ಹೇಳಿಕೆ.

ಭಾರತೀಯರನ್ನು ಪ್ರತಿಬಂಧಿಸುವ ನಿರ್ಣಯವು ಪಾಸಾದ ನಂತರ ನಾತಾಳ ಹಿಂದೀ ಕಾಂಗ್ರೆಸಿನವರು ಜ. ಸ್ಮಟ್ಸರಿಗೆ ಒಂದು ಪತ್ರಬರೆದು 'ಬೇಕಾದರೆ ಭಾರತೀಯರೆಲ್ಲರೂ ದಕ್ಷಿಣ ಆಫ್ರಿಕವನ್ನು ಬಿಟ್ಟು ಹೋಗಲು ಸಿದ್ಧರಿದ್ದೇವೆ. ಆ ಪ್ರಕಾರ ಭಾರತದಲ್ಲಿರುವ ದಕ್ಷಿಣ ಆಫ್ರಿಕದ ಜನರೂ ಅಲ್ಲಿಂದ ಹೊರಡಬೇಕು' ಎಂದು ತಿಳಿಸಿರುವರು!

ಜಫ್ರುಲ್ಲಾ ಹೇಳುತ್ತಾರೆ

ಪೆಸಿಫಿಕ್ ಪರಿಷತ್ತಿಗೆ ಹೋದ ಸರ್ ಜಫ್ರುಲ್ಲಾ ಖಾನರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಒಂದು ಸ್ಪಷ್ಟೀಕರಣ ಮಾಡಿದ್ದಾರೆ. ಭಾರತದ ಸಮಸ್ಯೆ ವಿಚಾರ ಅಲ್ಲಿ ಒಂದು ಪ್ರತ್ಯೇಕ ಚರ್ಚಾಗೋಷ್ಠಿ ಕೂಡಿತ್ತು. ಭಾರತದ ಪರವಾಗಿ ಅಲ್ಲಿ ರಾಮಸ್ವಾಮಿ ಮುದಾಲಿಯಾರರಿದ್ದರು. ಅಲ್ಲಿ ಭಾರತದ ಪರಿಸ್ಥಿತಿ ಸಂಪೂರ್ಣ ಚರ್ಚಿಸಲ್ಪಟ್ಟಿತು. ಭಾರತದ ಸಮಸ್ಯೆ ಆದಷ್ಟು ಬೇಗ ಬಿಡಿಸಬೇಕು, ಈ ಯುದ್ಧಕಾಲದಲ್ಲಿ ಇದು ಅತ್ಯಾವಶ್ಯವೆಂದು ಆಸ್ಟ್ರೇಲಿಯ, ಕೆನಡಾ, ನ್ಯೂಜಿಲೆಂಡ್ ಪ್ರತಿನಿಧಿಗಳು ಹೇಳಿದರು. ಆದರೆ ಅಮೆರಿಕದವರು ಪ್ರತ್ಯಕ್ಷ ಕೈಹಾಕುವ ಇಚ್ಛೆಯುಳ್ಳವರೆಂದು ತೋರಲಿಲ್ಲ. ಅಮೆರಿಕ ಮಧ್ಯಸ್ಥಿಕೆ ಮಾಡಿದರೆ ಬಿಕ್ಕಟ್ಟು ಪರಿಹಾರವಾಗುವುದೇ ಎಂಬ ಪ್ರಶ್ನೆಗೆ, ಅಮೆರಿಕದ ಮಧ್ಯಸ್ಥಿಕೆಗೆ ಬ್ರಿಟನು ಒಪ್ಪದಿದ್ದರೆ ಅಮೆರಿಕ ಬ್ರಿಟನಿನ ವಿರುದ್ಧ ಯುದ್ಧ ಸಾರಲು ತಯಾರಿದೆಯೇ ಎಂದು ಜಫ್ರುಲ್ಲರು ಕೇಳಿದರು. ಅದಕ್ಕೆ ಉತ್ತರ ಸಿಗಲಿಲ್ಲ. ಆದರೆ ಅಟ್ಲಾಂಟಿಕ್ ಘೋಷಣೆಯು ತಪ್ಪು ತಿಳುವಳಿಕೆ ಸ್ಪಷ್ಟೀಕರಣವಾಗಬೇಕೆಂದು ಸಾರಲಾಯಿತು. ಭಾರತವು ಸ್ವಾವಲಂಬಿಯಾಗಬೇಕೆಂದು ಅಮೆರಿಕದವರು ಆಸಕ್ತರಿದ್ದಾರೆಂದೂ ಜಫ್ರುಲ್ಲರು ಹೇಳಿದರು.

ಪೋಲೀಸರ ಅತ್ಯಾಚಾರ

ಲಂಚ ಕೊಡದಕ್ಕೆ ಕೊಲೆ!

ತಮಗೆ ಲಂಚ ಕೊಡಲಿಲ್ಲವೆಂದು ಅಲ್ಲಾಬಾದಿನ ಉತ್ತಾರ ಎಂಬ ಹಳ್ಳಿಯ ರಾಮದುಲಾರಿ ಬನಿಯಾರನ್ನೂ ಅವರ ಹೆಂಡತಿಯನ್ನೂ ಪೋಲೀಸರು ಗುಂಡಿಟ್ಟು ಕೊಂದರು. ಅದರ ಲಂಚ ಕೊಡಲಿಲ್ಲವೆಂದು ಈ ಕೊಲೆಮಾಡಿದ್ದಲ್ಲದೆ, ಆತನು ಕಾಂಗ್ರೆಸ್ ಕೆಲಸ ಮಾಡುತ್ತಿದ್ದನೆಂದೂ ಎಂದರೆ ಅವರ ಅಭಿಪ್ರಾಯ ಪ್ರಕಾರ ಟೆಲಿಗ್ರಾಫ್ ಕಂಬ ಕೀಳುತ್ತಿದ್ದನೆಂದು ಮಾಡುವರೆ ಆತನನ್ನು ಕೊಂದು ಎತ್ತಿಕೊಂಡು ಹೋಗಿ ಒಂದು ಟೆಲಿಗ್ರಾಫ್ ಕಂಬಕ್ಕೆ ಕಟ್ಟಿಹಾಕಿ ಸರಕಾರದಿಂದ ಬಹುಮಾನ ಪಡೆಯಲೂ ಪ್ರಯತ್ನಿಸಿದ್ದರು! ಆ ಖಟ್ಲೆ ವಿಚಾರಣೆಯು ಡಿ. ಕಲೆಕ್ಟರ್ ಶ್ರೀ. ಎನ್. ಎ. ಅಬ್ಬಾಸಿ ಇವರ ಮುಂದೆ ನಡೆದು, ಆ ಮೆಜಿಸ್ಟ್ರೇಟರೂ ಪೋಲೀಸರು ಮಾಡಿದ ಅತ್ಯಾಚಾರವನ್ನು ತನ್ನ ತೀರ್ಪಿನಲ್ಲಿ ಖಂಡಿಸಿದ್ದಾರೆ. ಇಂಥಾ ಮೂರ್ಖ ಪೋಲೀಸರು!

ಈಸೂರು ದುರಂತದ ವಿಷಯದಲ್ಲಿ

ಈ ಮೊದಲೇ ಐದು ಮಂದಿಯನ್ನು ಮೈಸೂರು ಸರಕಾರವು ಗಲ್ಲಿಗೇರಿಸಿದ್ದು, ಈಗ ಪುನಃ ವಿಚಾರಣೆ ನಡೆಸಿ ಅವರಲ್ಲಿ ಶಾಂತವೀರಯ್ಯ ಎಂಬವರಿಗೆ ೧೪ ವರ್ಷ ಶಿಕ್ಷೆಯೂ, ಹೊಳಿಬಸ್ಯ ಮತ್ತು ಕುಮಾರಘಟ್ಟ ರಂಗ ಇವರಿಬ್ಬರಿಗೆ ಮರಣಾಂತ ಶಿಕ್ಷೆಯೂ ರುದ್ರಪ್ಪ ಎಂಬವರಿಗೆ ೧೦ ವರ್ಷ ಶಿಕ್ಷೆಯೂ ವಿಧಿಸಲ್ಪಟ್ಟಿದೆ. ಚನ್ನಬಸಮ್ಮ, ಶಿವಯ್ಯ ಮತ್ತು ವೀರಭದ್ರಪ್ಪ ಈ ಮೂರು ಜನರನ್ನು ಬಿಡುಗಡೆ ಮಾಡಲಾಗಿದೆ. ಜಡ್ಜರು ತಮ್ಮ ತೀರ್ಪಿನಲ್ಲಿ ಈಸೂರಿನಲ್ಲಿ ಕೂಡಿದ ಜನಸಂದಣಿ ಆಕ್ರಮಕೂಟವಾಗಿದ್ದರೂ ಅಮಲದಾರನನ್ನೂ ಫೌಜುದಾರನನ್ನೂ ಕೊಲ್ಲಬೇಕೆಂದು ಉದ್ದೇಶಿಸಿ ಸೇರಿದ್ದಲ್ಲವೆಂದು ತೀರ್ಮಾನಿಸಿರುವರು.

'ಬರ್ಮಾ ಯುದ್ಧಕ್ಕೆ ಸಿದ್ಧರಾಗಿಲ್ಲ'

ಕ್ರಿಪ್ಸ್ ಹೇಳುತ್ತಾರೆ.

'ಬರ್ಮದಿಂದ ಜಪಾನರನ್ನು ಹೊಡೆದೋಡಿಸಿ ಬರ್ಮಾ ರಸ್ತೆಯನ್ನು ತೆರೆಯುವರೆ ಬೇಕಾದಷ್ಟು ಶಕ್ತಿಯನ್ನು ನಾವಿನ್ನೂ ಸಂಘಟಿಸಿಕೊಂಡಿಲ್ಲ. ಆದರೆ ಇದು ಅತ್ಯವಶ್ಯವೆಂದು ನಮಗೆ ಬೆಂಬಲವಿಂತ ಚೀನಕ್ಕೆ ಬೇಗನೇ ಸಹಾಯ ಕಳಿಸಬೇಕೆಂದೂ ನಾವು ಬಲ್ಲೆವು' ಹೀಗೆಂದು ಕ್ರಿಪ್ಸರು ಹೇಳುತ್ತಾರೆ.

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

ಬಂಗ್ಲೆ ಕಟ್ಟೋಣದ ಮೇಲ್ಪುರಿ ಏಲಂ

ಕೆನರಾ ಬ್ಯಾಂಕ್ ಲಿಮಿಟೆಡ್ ಮಂಗಳೂರು ಈ ಸಂಸ್ಥೆಯ ಹಕ್ಕಿ ಮಂಗಳೂರು ಟೌನ್ ಸರ್ವೆ ನಂಬ್ರ 16–345/2–1ನೇ ದೊಡ್ಡ ಬಂಗ್ಲೆ ಕಟ್ಟೋಣದ ಮೇಲ್ಪುರಿಯನ್ನು ತಾ. 26–4–1943ರಲ್ಲು ಸದ್ರಿ ಬ್ಯಾಂಕಿನ ಲೈಟ್ ಹೌಸ್ ಹಿಲ್‌ನಲ್ಲಿರುವ ಆಫೀಸಿನಲ್ಲಿ ಸಾಯಂಕಾಲ 5 ಘಂಟೆಗೆ ಬಹಿರಂಗವಾಗಿ ಏಲಂ ಮಾಡೋಣಾಗುವದು.

ಸದ್ರಿ ಕಟ್ಟೋಣವು ಜಿಲ್ಲಾ ಕಲೆಕ್ಟರರ ಬಂಗ್ಲೆಗೆ ಅಮುದು ರಫ್ತಾಗುವ ಮಾರ್ಗದ ಪಕ್ಕದಲ್ಲಿಯೇ ಇದ್ದು ಸದ್ರಿ ಮೆಲ್ಪುರಿ ಕ್ರಯಕ್ಕೆ ಪಡಕೊಂಡವರು ಸಾಮಾನನ್ನು ಸಾಗಿಸಲಿಕ್ಕೆ ಬಹಳ ಅನುಕೂಲ.

ಸದ್ರಿ ಕಟ್ಟೋಣಕ್ಕೆ ಸಂಬಂಧಪಟ್ಟ ಬಾಗಿಲುಗಳೂ, ಕಿಟಿಕಿಗಳೂ, ಕಪಾಟುಗಳೂ, ಇಟ್ಟಿಗೆಗಳೂ, ಕಬ್ಬಿಣದ ಸರಳುಗಳೂ ಸಣ್ಣ ದೊಡ್ಡ ತೊಲೆಗಳೂ ಮೊರಾ ಕಲ್ಲುಗಳೂ ಇತ್ಯಾದಿ ಇವೆ.

ಮೇಲ್ಪುರಿಯನ್ನು ಕ್ರಯಕ್ಕೆ ಪಡಿಯುವರೇ ತಾತ್ಪರ್ಯವುಳ್ಳವರು ಸ್ವತಃ ಪರಾಂಬರಿಸಬಹುದು.

ಈಗಿನ ಕಾಲಸ್ಥಿತಿಯಲ್ಲಿ ಕಟ್ಟೋಣದ ವಸ್ತುಗಳಿಗೆ ಕ್ರಯ ಬಹಳ ಜಾಸ್ತಿ ಇರುವ ಕಾರಣ ಈಗ ಕಟ್ಟೋಣ ಕಟ್ಟಿಸುವವರಿಗೆ ಇದು ಒಂದು ಸುಸಂದರ್ಭ.

ಹೆಚ್ಚಿನ ಮಾಹೀತು ಕುರಿತು ಸದ್ರಿ ಬ್ಯಾಂಕಿನವರಿಂದ ತಿಳಕೊಳ್ಳಬಹುದು.

ಷರಾ: ಸದ್ರಿ ಬಂಗ್ಲೆ ಕಟ್ಟೋಣದಲ್ಲಿ ಮೊದಲು ಶ್ರೀ ಮಾನೆಕ್ಷಿನ ಪ್ರೋಜಿಯವರು ವಾಸವಾಗಿದ್ದರು.

CANARA BANK LTD., Light House Hill Mangalore.

ANNOUNCEMENT

A new Bank by name

THE MAHARASHTRA APEX BANK LTD.

Will be incorporated shortly to carry on banking business in the Maharashtra Area.

Authorised Capital: Rs. 50 Lakhs, divided into
2,50,000 Ordinary Shares of Rs. 10 each: Rs. 25 Lakhs
1,50,000 Five % Cum: Preference Shares of Rs. 10 each: Rs. 15 Lakhs
10,00,000 Defered Shares of Re. 1 each: Rs. 10 Lakhs

Managing Agents: THE CANARA INDUSTRIAL & BANKING SYNDICATE, LTD. UDIPI

Out of the Capital to be issued, the whole of the issue of Ordinary Shares of Rs. 25,00,000 will be underwritten by The Canara Industrial & Banking Syndicate Ltd., for the benefit of its constituents and well-wishers. Accordingly, the Syndicate has communicated this fact to such of its constituents, patrons and friends as may be interested in the Issue and received large number of advance applications.

While this issue will be an assured success, it is very much desired that the same is subscribed evenly by larger number of people instead of big holdings by individuals, and those that wish to take advantage of the Issue may communicate to us early.

The Share list will open early in May, 1943 and close in not later than a week.

Those that have not received any letter so far may—write to us direct or enquire with any of our Branches.

This is not a Prospectus. Watch the Issue of the Prospectus early in May

T. M. A. Pai,
Managing Director.
The Canara Industrial & Banking Syndicate, Ltd.

ಸಮರಭೂಮಿಯ ಸಂಚಾರ

೧೯೪೦ರಲ್ಲಿ ಸಾವಿರಾರು ಪೋಲೀಶ್ ಅಧಿಕಾರಿಗಳನ್ನು ಕತ್ತರಿಸು ವಧಿಸಿಹಾಕಿಬಿಟ್ಟಿದನ್ನು ಮೋಸ್ಕೋ ರೇಡಿಯೋ ಅಲ್ಲಗಳೆಯುತ್ತದೆ. ನಿಜವಾಗಿ ನೋಡಿದರೆ ಜರ್ಮನರೇ ಈ ಹತ್ಯಾಕಾಂಡವನ್ನು ಕೈಕೊಂಡರೆಂದೂ ಜರ್ಮನರು ತಮ್ಮ ಪಾಪಕೃತ್ಯವನ್ನು ಮರೆಮಾಡಿ ಈ ರೀತಿಯ ಅಪ ಪ್ರಚಾರ ಗೈಯುತ್ತಿರುವುದೆಂದೂ ಅದರ ಹೇಳಿಕೆಯಿರುವುದು.

'ಹಿಟ್ಲರನಿಗೆ ಈ ಹಾಳು ಯುದ್ಧ ಬೇಕಾಗಿಲ್ಲ; ಅದನ್ನು ತಪ್ಪಿಸಲು ಆತನು ಶಕ್ತಿಮೀರಿ ಯತ್ನಿಸಿದನು. ಆದರೆ ವೈರಿಗಳು ನಮ್ಮ ಮೇಲೆ ಬಲವಂತದಿಂದ ಯುದ್ಧ ಸಾರಿದರು. ಹಿಟ್ಲರನು ಜರ್ಮನರ ಅಧಿದೇವತೆಯಾಗಿ ಬಂದದ್ದನ್ನೆಲ್ಲಾ ಧೈರ್ಯಪೂರ್ವಕ ಎದುರಿಸುತ್ತಿದ್ದಾನೆ' ಹೀಗೆಂದು ಜರ್ಮನ್ ಪ್ರಚಾರ ಮಂತ್ರಿ ಗೋಬೆಲ್ಸ್ ಹಿಟ್ಲರನ ಜನ್ಮದಿನದ ನಿಮಿತ್ತ ಮಾಡಿದ ಭಾಷಣದಲ್ಲಿ ಹೇಳುತ್ತಾನೆ.

ಕೂಬಾನ ಪ್ರದೇಶದಲ್ಲಿ ಜರ್ಮನರ ಪ್ರತಿಭಟನೆಯನ್ನು ಮುರಿದು ರಶ್ಯನ್ ಸೇನೆ ಮುಂದುವರಿದಿದೆ. ಏನಾದರೂ ಕಾಕೇಸಸನ್ನು ಬಿಡಬಾರದೆಂದು ಜರ್ಮನರ ದೃಢ ಹೋರಾಟವಿದೆ.

ಟುನಿಸಿಯದಲ್ಲಿ ಕೇಪ್ ಸೆರಾತದಿಂದ ಎನ್ಫಿಡವಿಲೆ ವರೆಗೆ ಸುಮಾರು ೧೫೦ ಮೈಲು ದೂರದ ಗುಡ್ಡಗಾಡಿನಲ್ಲಿ ಉಭಯಪಕ್ಷದವರೂ ಭಾರೀ ಯುದ್ಧಸಿದ್ಧತೆ ಮಾಡಿದ್ದಾರೆ. ಎರಡು ಕಡೆಯವರೂ ಟುನಿಸಿಯದಲ್ಲಿ ದೊಡ್ಡ ವಿಮಾನ ಕಾಳಗ ನಡೆಸಿದರು.

ಟುನಿಸಿಯದಿಂದ ಪಲಾಯನ?

ಅಕ್ಷ ಸೈನ್ಯಗಳು, ರೊಮೆಲನ ಮುಂದಾಳುತನದಲ್ಲಿ ಒಂದೇಸವನೆ ಟುನಿಸಿಯದಿಂದ ಪಲಾಯನ ಮಾಡುತ್ತಲೇ ಇವೆ. ಮಿತ್ರ ಸೈನ್ಯಗಳು, ಮಾಂಟ್‌ಗ್‌ಮರಿಯ ಧುರೀಣತ್ವದಲ್ಲಿ ಅವುಗಳನ್ನು ಒಂದೇ ಸವನೆ ಈಶಾನ್ಯ ಮೂಲೆಗೆ ತಳ್ಳುತ್ತಲೂ ಇವೆ. ಬ್ರಿಟಿಷ, ಅಮೆರಿಕನ್, ಫ್ರೆಂಚ ಸೈನ್ಯಗಳು ವೈರಿ ಬಲವನ್ನು ಮೂರು ಮೂಲೆಗಳಲ್ಲಿಯೂ ಮುತ್ತುತ್ತಿವೆ. ಹೀಗೆ ಓಡುವುದು ರೊಮೆಲನ, ಓಡಿಸುವುದು ಮಾಂಟ್‌ಗ್‌ಮರಿಯ ಒಂದೇ ಒಂದು ಕಾರ್ಯವಾಗಿದೆ. ಆದರೆ ಈ ಓಡುವ ಮತ್ತು ಓಡಿಸುವ ಕೆಲಸಗಳು ಎಲ್ಲಿ ತನಕ ಸಾಗುವವೆಂಬುದನ್ನು ಕುತೂಹಲದಿಂದ ಎಲ್ಲರೂ ನಿರೀಕ್ಷಿಸುತ್ತಿದ್ದಾರೆ. ರೊಮೆಲನು ಟುನಿಸಿಯ ಖಾಲಿಮಾಡಿ ಸಿಸಿಲಿಯದಲ್ಲಿ ಅಡಗಿಕೊಳ್ಳುವನೆ? ಇಟಲಿ ಸೈನಿಕರು ಸಿಸಿಲಿಯಲ್ಲಿ ಸಿದ್ಧತೆ ಮಾಡುತ್ತಿದ್ದಾರೆಂದೂ ವದಂತಿಯಿದೆ. ಅಲ್ಲಿವಾನ್ ಆರ್ನಿಮನೊಡನೆ ಸೇರಿಕೊಳ್ಳಬೇಕೆಂಬ ಆತನ ಆಶೆ ಸಾಧಿಸಿರುವುದರಿಂದ ಬಲಗಳನ್ನೆಲ್ಲಾ ಉಪಯೋಗಿಸಿಕೊಂಡು, ದುರ್ಭೇದ್ಯವಾದ್ದು ಅದು ಸಾಧ್ಯವಾಗದಿದ್ದರೆ ಪ್ರಯಾಸಭೇದ್ಯವಾದ ಚಕ್ರವ್ಯೂಹವನ್ನಾದರೂ ರಚಿಸುವನೆ? ಇವೆರಡು ಪ್ರಶ್ನೆಗಳು ಈಗ ಹಲವರ ಕುತೂಹಲವನ್ನು ಹೆಚ್ಚಿಸಿವೆ. ರೋಮೆಲನು ಎಲ್ಲಿಯೂ ನಿಲ್ಲದೆ ಯಾರೊಡನೆಯೂ ಕಾದಾಡದೆ, ತನ್ನ ಸೈನ್ಯಕ್ಕೆ ಓಡಿ ಹೋದರೂ—ಏನೇನೂ ನಷ್ಟವೊದಗಿಸದೆ ಒಂದೇ ಹೆಜ್ಜೆಗೆ ನೂರಾರು ಮೈಲು ಪಲಾಯನ ಮಾಡಿದ್ದಾನೆ. ಯುದ್ಧ ಹೂಡುವುದರ ವಿಚಾರ ಈ ಸಲ ಅವನು ಆಲೋಚಿಸಲೇ ಇಲ್ಲ. ಆದರೂ ಆತನನ್ನು ಅರಿಬಲಗಳು ಮುತ್ತಿಗೆ ಹಾಕಿವೆ. ಮೂರು ದಿಕ್ಕಿನಿಂದಲೂ ಈಗ ಮುತ್ತಿಗೆ ಹಾಕಿ ಸಂಕಟಗೊಳಿಸಿವೆ; ಈ ಸಂದರ್ಭದಲ್ಲಿ ಮಾಂಟ್‌ಗಮರಿ ತನ್ನನ್ನು ಸುಮ್ಮಗೆ ಬಿಡಲಾರನೆಂದು ರೊಮೆಲನಿಗೂ ಗೊತ್ತು. ಸಿಸಿಲಿಯಲ್ಲಂತೂ ರೊಮೆಲನಿಗೆ ಸ್ವಾಗತ ಕಾದಿದೆ. ಕೆಲ ದಿನಗಳ ಹಿಂದೆಯೇ ಹಿಟ್ಲರ್ ಮುಸಲನಿಗಳ ಜರ್ಮನ್ ಇಟಲಿ ಸರ್ವಾಧಿಕಾರಿಗಳ ಭೇಟಿಯೂ ಆಗಿದೆ. ರೊಮೆಲನು ಇಷ್ಟು ಉದ್ದ ಪಲಾಯನ ಮಾಡಿದ್ದರೂ ಆತನ ಶಕ್ತಿ ಇನ್ನೂ ಕುಂದಿಲ್ಲ. ಬಹುಭಾಗ ಸೇನೆಯನ್ನು ಸಾಮಗ್ರಿಗಳನ್ನೂ ಉಳಿಸಿಕೊಂಡೇ ಅವನು ಓಡಿಹೋಗಿದ್ದಾನೆ. ಇದನ್ನು ನೋಡಿದರೆ ಇದೆಲ್ಲಾ ಆತನ ಪೂರ್ವ ಯೋಜನೆಯೆಂದೇ ಅರ್ಥವಾಗುತ್ತದೆ. ಇನ್ನಾದರೂ ಬಿಜರ್ಟಾ ಟ್ಯುನಿಸ್‌ಗಳು ಉಳಿದಿವೆ. ಅವು ಆತನ ಸುರಕ್ಷಿತ ಕ್ಷೇತ್ರಗಳು, ಪ್ರಕೃತದ ರಕ್ಷಣೆಯೊಡನೆ ತನ್ನ ಸಿದ್ಧತೆಯನ್ನೂ ಅಲ್ಲಿ ಆತನು ಮಾಡಿಕೊಂಡಿರುವನು; ಬಿಜರ್ಟಾ ಎಂಬುದು ಇನ್ನೊಂದು ಸುರಕ್ಷಿತ ಕೋಟೆ. ಅಲ್ಲಿ ನಿಂತು ಏನು ಮಾಡುತ್ತಾನೋ ಹೇಳಲಿಕ್ಕಿಲ್ಲ. ರೊಮೆಲನಂತೂ ಸಾಮಾನ್ಯ ಯೋಧನಲ್ಲ; ಬಹಳ ಚುರುಕು ಬುದ್ಧಿಯ ಸೇನಾನಿ. ತನಗೆ ಸ್ವಲ್ಪ ಸಂದರ್ಭ ದೊರೆತರೆ ಸಾಕು, ಒಮ್ಮೆಲೇ ಓಡಿದಕ್ಕಿಂತ ಹತ್ತು ಪಾಲು ತೀವ್ರ ಭರದಿಂದ ಮುಂದೆ ನುಗ್ಗಿ ಬರುವಂಥಾ ಅಸಮ ಸಾಹಸಿ!

ರಶ್ಯ ರಣಮುಖದಲ್ಲಿ

ರಶ್ಯ ರಣಮುಖದ ಉದ್ದ ೧೫೦೦ ಮೈಲು. ಪೋಲ್ಯಾಂಡ ೧೨ ಮೈಲು ವಿಸ್ತಾರದ ಕ್ಷೇತ್ರದಲ್ಲಿ ಉತ್ತರದ ತುಟ್ಟತುದಿ ಲೆನಿನ್‌ಗ್ರಾಡ್ ಇದೆ. ಈ ಕ್ಷೇತ್ರದಲ್ಲಿ ರಶ್ಯನರ ಸೇನೆಯಿದೆ. ಈಗ ಅಲ್ಲಿ ಯುದ್ಧದ ಭರ ತುಸು ಕಡಿಮೆಯಾಗಿದೆ. ಹಿಮ ಕರಗಲು ಶುರುವಾದ್ದರಿಂದ ರಶ್ಯನರ ಪ್ರತಾಪ ತಗ್ಗುವ, ಜರ್ಮನರ ಪ್ರತಾಪ ಏರುವ ಕಾಲ ಬಂದಿದೆ. ರಶ್ಯನರು ಸದ್ಯ ಟುನಿಸಿಯಾ ಕ್ಷೇತ್ರದ ಕಡೆಗೇ ತಮ್ಮ ಮುಖ ತಿರುಗಿಸಿ ನೋಡುತ್ತಿದ್ದಾರೆ. ಟುನಿಸಿಯದಲ್ಲಿ ಜರ್ಮನ್ ಸೇನೆ ಸೋತರೆ ಮಿತ್ರರು ರಶ್ಯಕ್ಕೆ ಬಂದಾರೇ, ತಮ್ಮ ಹೊರೆ ಇಳಿಸಿಯಾರೇ ಎಂಬುದು ಅವರ ಕುತೂಹಲ. ಇಷ್ಟಾದರೂ ರಶ್ಯನರು ತಮ್ಮ ಭುಜಬಲದಲ್ಲಿ ವಿಶ್ವಾಸ ಬಿಟ್ಟಿಲ್ಲ. ತಮ್ಮ ಧೈರ್ಯ ಸ್ಥೈರ್ಯ ಕಡಿಮೆ ಮಾಡಿಲ್ಲ. ತಮ್ಮ ಸಾಹಸ ಶಕ್ತಿ ಕುಂದಿಸಿಲ್ಲ. ಜರ್ಮನಿಯೇನೋ ಬಿರುಗಾಳಿಯಂತೆ ರಶ್ಯದ ಮೇಲೇರಿ ಬಂದರೂ, ವೈರಿಗಳನ್ನು ಹಲವು ಸಲ ಸಾಹಸಮಯ ಸಮರ ಹೂಡಿ ಹಿಮ್ಮೆಟ್ಟಿಸಿದರು. ಈಗಲಾದರೂ ಹಿಟ್ಲರ್ ಅಪೂರ್ವ ಸಿದ್ಧತೆ ಮಾಡುತ್ತಿದ್ದಾನೆ ಮುಂದಿನ 'ವಸಂತ ಧಾಳಿ'ಗೆ! ಹಿಟ್ಲರ್ ಮುಸಲನಿ ಭೇಟಿಯ ಕಾಲದಲ್ಲಂತೂ ರಶ್ಯದ ಯುದ್ಧ ಕೊನೆಗಾಣಿಸುವ ಮಹತ್ವದ ಹಂಚಿಕೆ ನಿರ್ಧಾರವಾಗಿರಲೇ ಬೇಕು. ಹಾಗಾಗಿ ರಶ್ಯನರು ಬೇಗನೇ ತಮ್ಮ ಮೇಲೆ ಪ್ರಬಲ ಆಕ್ರಮಣವಾಗಲಿದೆಯೆಂದು ತಿಳಿದೇ ಇದ್ದಾರೆ. ಹಾಗೆ ಮುಂಚಿತ ತಿಳಕೊಂಡಿರುವುದೂ ಒಳಿತೇ. ಏಕೆಂದರೆ ವೈರಿ ಸಿದ್ಧನಾಗಿ ಬಂದಾಗ, ತಾವೂ ಸಿದ್ಧರಾಗಿ ಅವರನ್ನು ಎದುರಿಸಬಹುದಾಗಿದೆ. ಹಿಟ್ಲರನ ವಸಂತ ಧಾಳಿ ಬಹುಶಃ ಮುಂದಿನ ತಿಂಗಳಲ್ಲಿ ಆರಂಭವಾದೀತು. ಮತ್ತೆ ಕೆಲಕಾಲ ಪ್ರಚಂಡ ಯುದ್ಧ—ಘನಘೋರ ಸಂಗ್ರಾಮ ನಡೆದೀತು. ಇಂದಿನ ಯುದ್ಧಮುಖವನ್ನು ಪರೀಕ್ಷಿಸಲು, ಹಿಟ್ಲರನ ಮುಂದಿನ ಮೊದಲನೆಯ ಪೆಟ್ಟು ಲೆನಿನ್‌ಗ್ರಾಡ್ ಮೇಲೆ ಬಿದ್ದೀತೆಂದು ತೋರುತ್ತದೆ. ಈ ಸಂದರ್ಭದಲ್ಲಾದರೂ ಟುನಿಸಿಯಾ ಯುದ್ಧ ಮುಗಿಸಿ ಮಿತ್ರರು ರಶ್ಯದ ಸಹಾಯಕ್ಕೆ ಬಂದಾರೇ ಅಥವಾ ರಶ್ಯವನ್ನು ರಕ್ಷಿಸಲು, ಪ್ರಪಂಚವೇ ಬೊಬ್ಬಿಡುವಂತೆ, ದ್ವಿತೀಯ ರಣರಂಗವನ್ನಾದರೂ ತೆರೆದಾರೆ?

ಬರ್ಮದಿಂದ ಜಪಾನ್ ಧಾಳಿ?

ಜಪಾನರು ಇಷ್ಟರಲ್ಲಿಯೇ ಮಾಂಗಡಾ ಮತ್ತು ಬಾಥೆಡಾಂಗಗಳನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸುತ್ತಿರುವರೆಂದು ಊಹಿಸಲಾಗಿದೆ. ಅಂತೂ ಇನ್ನು ನಾಲ್ಕು ವಾರಗಳಲ್ಲಿ, ಈ ಪ್ರದೇಶಗಳಲ್ಲಿ ಅತ್ಯಂತ ಭೀಕರ ಯುದ್ಧ ನಡೆಯುವುದೆಂದು ಅಸೋಸಿಯೇಟೆಡ್ ಪ್ರೆಸ್ಸಿನ ವಿಶೇಷ ಸುದ್ದಿಗಾರನು ತಿಳಿಸುತ್ತಾನೆ. 'ಮಳೆಗಾಲದಲ್ಲಿ ಇರಲಿಕ್ಕೆ ಈ ಪ್ರದೇಶವು ಅತ್ಯಂತ ಯೋಗ್ಯವಾಗಿದೆ. ಅದ್ದರಿಂದಲೇ ಅದನ್ನು ಪಡೆಯಲು ಉಭಯ ಪಕ್ಷದವರೂ ಸಾಹಸ ಮಾಡುತ್ತಿರುವರು. ಈ ಎರಡೂ ಹಳ್ಳಿಗಳನ್ನು ರಕ್ಷಿಸುವುದಕ್ಕಾಗಿ ಬ್ರಿಟಿಷ್ ಸೇನೆಗಳು ಇಂಡೀನದಿಂದ ಉತ್ತರಕ್ಕೆ ಮತ್ತು ಟಾಂಗಮಾದಿಂದ ಈಶಾನ್ಯಕ್ಕೆ ಹಿಂದೆ ಸರಿದಿರುವವು. ಈ ಎರಡು ಹಳ್ಳಿಗಳ ನಡುವೆ ೧೨ ಮೈಲು ಉದ್ದದ ರಸ್ತೆಯಿರುವುದು. ಈ ಭಾಗದಲ್ಲಿ ಜಪಾನರು ತಮ್ಮ ಸೈನ್ಯಗಳಿಗೆ ಸಾಮಗ್ರಿ ಪೂರೈಸುವ ವಿಚಾರದಲ್ಲಿ ಬಹಳ ತೊಂದರೆ ಪಡುತ್ತಿರುವರು. ಜಪಾನೀ ನೌಕೆಗಳು ಮಾಯೂನದಿಯಲ್ಲಿ ಬರುವುದನ್ನು ತಡೆಯಲಾಗುತ್ತದೆ. ಬ್ರಿಟಿಷ್ ಸೈನ್ಯಗಳು ಮೊದಲು ಹಿಟಪ್ಪಿ ಎಂಬ ಹಳ್ಳಿಯಿಂದ ಕೊನೆಗೆ ಟಾಂಗಮಾದಿಂದ ಹಿಂದೆ ಸರಿದಿರುವವು. ಈಗ ಬ್ರಿಟಿಷ್ ನೌಕೆಗಳು ಹೆಚ್ಚು ಕಷ್ಟವಿಲ್ಲದೆ ಸಂಚರಿಸಬಹುದು. ನುಸುಳಿಕೊಂಡು ಹೋಗುವ ವಿದ್ಯೆಯಲ್ಲಿ ಜಪಾನರು ಕುಶಲರು. ಗುಡ್ಡಗಾಡುಗಳಲ್ಲಿ ನುಗ್ಗಿ ಬರುವ ಅನುಭವ ಅವರಿಗಿದೆ. ಕೆಲ ದಿನಗಳ ಹಿಂದೆ ಬ್ರಿಟಿಷ್ ಸೈನ್ಯಗಳು ಡೋಂಬಾಯಿಕ ಪ್ರದೇಶದಿಂದ ಹಿಂದೆ ಸರಿಯಬೇಕಾಗಿ ಬಂದಾಗ ಇಂಡೀಲದ ಹತ್ತಿರ ಭೀಷಣ ಯುದ್ಧವಾಯಿತು. ಎಷ್ಟೋ ಸಲ ಜಪಾನರು ಮಾಯೂ ಗುಡ್ಡವನ್ನು ದಾಟಿ ಮತ್ತು ಕರಾವ ಮೈದಾನಿನಿಂದ ಬ್ರಿಟಿಷ್ ಸೈನ್ಯಗಳನ್ನು ಮುತ್ತುತ್ತಿದ್ದರು. ಹೀಗೆ ಅವರು ಒಮ್ಮೆ ಧಾಳಿಯಿಟ್ಟಾಗಲೇ ಬ್ರಿಟಿಷ್ ದಳಪತಿ ಕೇವಿಂಡಿಶರು ಸೆರೆ ಸಿಕ್ಕಿದರು; ಅವರ ಸಂಗಾತಿಗಳೂ ಸೆರೆ ಹಿಡಿಯಲ್ಪಟ್ಟರು. ಅನೇಕ ದಿನಗಳಿಂದ ಜಪಾನ್ ಠಾಣ್ಯದ ಮೇಲೆ ಗುಂಡು ಸುರಿಸುತ್ತಿದ್ದ ಫಿರಂಗಿ ಯುದ್ಧಗಾರರೂ ಹಿಂದೆ ಸರಿದರು. ಈ ಕಾಳಗದಲ್ಲಿ ಘೂರ್ಕಾ ಸೈನಿಕರೂ ಭಾಗವಹಿಸುತ್ತಿದ್ದಾರೆ' ಹೀಗೆಂದು ವರದಿ ಬಂದಿದೆ. ಒಟ್ಟಿನಿಂದ ಬರ್ಮದಲ್ಲಿ ಜಪಾನರು ಬಹಳ ಸಿದ್ಧತೆ ಮಾಡುತ್ತಿದ್ದಾರೆಂಬುದು ಖಂಡಿತ. ಪುನಃ ಯಾವಾಗ ಜಪಾನರು ಈ ಕಡೆ ಧಾಳಿಯಿಡುವರೋ ಎಂದು ಎಲ್ಲರೂ ವ್ಯಗ್ರರಾಗಿ ನಿರೀಕ್ಷಿಸುತ್ತಿದ್ದಾರೆ!

ಇದು ಸ್ವಾತಂತ್ರ್ಯ ಯುದ್ಧವೆ?

ಎಂದು ಅಮೆರಿಕದ ಪ್ರಸಿದ್ಧ ಲೇಖಕ, ನೋಬೆಲ್ ಬಹುಮಾನ ಪಡೆದದಾಕೆ ಪರ್ಲ್‌ಬಕ್ ಪ್ರಶ್ನಿಸುತ್ತಾರೆ. "ಹೋದ ಒಂದು ವರ್ಷದಲ್ಲಿ ಯುದ್ಧದ ಕಳೆಯೇ ಕೆಟ್ಟುಹೋಗಿದೆ. ಸ್ವಾತಂತ್ರ್ಯದ ಉದ್ದೇಶವು ಮಾಯವಾಗುತ್ತಿದೆ. ಈ ಯುದ್ಧವು ಮೂರನೆಯ ಮಹಾಯುದ್ಧಕ್ಕೆ ಮಾರ್ಗವನ್ನು ಮಾಡಿ ಕೊಡಬಹುದು, ಆ ಯುದ್ಧದಲ್ಲಿ ಫೇಸಿಸಂ ಮತ್ತು ಪ್ರಜಾಪ್ರಭುತ್ವಗಳ ಹೋರಾಟವು ಕೊನೆಗೊಳ್ಳುವುದು. ಆರು ತಿಂಗಳ ಹಿಂದೆ ಏಶಿಯ ಹಾಗೂ ಯುರೋಪಿನ ಮಿತ್ರರಾಷ್ಟ್ರಗಳು ಅಕ್ಷರಾಷ್ಟ್ರಗಳ ವಿರುದ್ಧ ಒಮ್ಮತಕ್ಕೆ ಬಂದಂತಾಗಿತ್ತು. ಈ ಯುದ್ಧವು ಎಲ್ಲಾ ರಾಷ್ಟ್ರಗಳ ಸ್ವಾತಂತ್ರ್ಯ ಯುದ್ಧವೆಂದು ಆ ಸುವರ್ಣ ಸಂಧಿಯಲ್ಲಿ ಧೈರ್ಯದಿಂದ ಮುಂದೆ ಬಂದು ಸಾರುವಂಥಾ ಮಹಾ ನಾಯಕರಾರೂ ನಮ್ಮಲ್ಲಿರಲಿಲ್ಲ. ನಮ್ಮ ನಾಯಕರೆಲ್ಲ ಕೇವಲ ದೇಶೀಯ ನಾಯಕರಾಗಿರುವರಲ್ಲದೆ ವಿಶ್ವ ವಿಶಾಲ ದೃಷ್ಟಿಯು ಅವರಿಗಿಲ್ಲವೆಂಬುದನ್ನು ನಾವು ಒಪ್ಪಲೇ ಬೇಕು. ಈ ಯುದ್ಧವು ಕೇವಲ ಸೈನ್ಯ ಬಲದ ಯುದ್ಧವಾಯಿತು. ಸ್ವಾತಂತ್ರ್ಯದ ಯುದ್ಧವಾಗಲಿಲ್ಲ' ಎಂದು ಪರ್ಲ್ ಬಕ್ಕರು ನ್ಯೂಯಾರ್ಕಿನಲ್ಲಿ ಒಂದು ಭಾಷಣ ಮಾಡುತ್ತಾ ಹೇಳಿದರು. "ಮುಂದೆ ಬರುವ ಯುದ್ಧದ ಸ್ವಭಾವವನ್ನು ನಾವೀಗ ಸ್ಪಷ್ಟವಾಗಿ ತಿಳಿದುಕೊಳ್ಳಲೇ ಬೇಕು. ಅಕ್ಷರಾಷ್ಟ್ರಗಳ ವಿರುದ್ಧದ ವಿಜಯದಿಂದ ಫೇಸಿಸಂ ವಿರುದ್ಧ ವಿಜಯ ದೊರಕಿದಂತಾಗಲಿಲ್ಲ. ಈ ಸತ್ಯವನ್ನು ತಿಳಕೊಂಡು ವಿಶ್ವವಿಶಾಲ ಅಭಿವೃದ್ಧಿಗೆ ಪ್ರಯತ್ನಿಸಬೇಕು. ಸ್ವಾತಂತ್ರ್ಯಪ್ರೇಮಿಗಳಾದ ನಾವು ಯಾವ ಅಂಜಿಕೆಯೂ ಇಲ್ಲದೆ ಸ್ಪಷ್ಟವಾತನಾಡಬೇಕು. ಭಾರತದ ಸಮಸ್ಯೆಯನ್ನು ಬಿಡಿಸಲು ಮತ್ತು ವರ್ಣಭೇದ ಭಾವನೆಯನ್ನಳಿಸಲು ಮಿತ್ರರಾಷ್ಟ್ರಗಳು ಇದುವರೆಗೂ ಯತ್ನಿಸಲೇ ಇಲ್ಲ" ಎಂದೂ ಅವರು ತಮ್ಮ ಭಾಷಣದಲ್ಲಿ ಹೇಳಿದರು. ಪರ್ಲ್ ಬಕ್ಕರ ಈ ಸ್ಪಷ್ಟೋಕ್ತಿಯಿಂದ ಅಮೆರಿಕದ ಜನತೆಯಲ್ಲಿ ತುಸು ಆಂದೋಲನವುಂಟಾಗಿದೆಯೆಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಉಲ್ಲೇಖಿಸುತ್ತದೆ. ಹಾಗಾದರೇನೋ ಒಳ್ಳೆಯದಿತ್ತು. ಆದರೆ ಸಾಮ್ರಾಜ್ಯಶಾಹೀ ಜನಕ್ಕೆ ಅಷ್ಟು ವಿವೇಕ ಎಲ್ಲಿಂದ ಬರಬೇಕು?

ಆಫ್ರಿಕದಿಂದ ಆರ್ತನಾದ!

ದಕ್ಷಿಣಾಫ್ರಿಕಾ ಸರಕಾರವು ಏಶಿಯಾಟಿಕ್ ಶಾಸನವೊಂದನ್ನು ಮಂಜೂರು ಮಾಡುವುದರಲ್ಲಿದೆ. ಈಗಾಗಲೇ ಇದರ ದ್ವಿತೀಯ ವಾಚನವೂ ಮುಗಿದಿದೆ. ಈ ಶಾಸನವು ಮಂಜೂರಾದರೆ, ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಆಸ್ತಿ ತೆಗೆದುಕೊಳ್ಳುವಂತಿಲ್ಲ ಮಾತ್ರವಲ್ಲದೆ ಅಲ್ಲಿ ಅವರಿಗೆ ವ್ಯಾಪಾರ ಮಾಡಲು ಇರುವ ಹಕ್ಕೂ ಹೋಗುತ್ತದೆ. ಸಾಲದ್ದಕ್ಕೆ ಇದು ಹಿಂದೆ, ದಕ್ಷಿಣ ಆಫ್ರಿಕದ ಭಾರತೀಯರಿಗೂ, ಅಲ್ಲಿನ ಸರಕಾರಕ್ಕೂ ಆದ ಗೌರವಯುತ ಒಪ್ಪಂದಕ್ಕೆ ವಿರುದ್ಧವಾಗಿದೆ. ಒಟ್ಟಿನಿಂದ ಅಲ್ಲಿರುವ ಭಾರತೀಯರನ್ನು ಮೂಲೆಗೆ ಸರಿಸಬೇಕೆಂಬುದೇ ಈ ಕಾಯಿದೆಯ ಉದ್ದೇಶ. ಈ ಮಸೂದೆ ಮಂಜೂರಾಗಕೂಡದೆಂದು ದಕ್ಷಿಣಾಫ್ರಿಕದಲ್ಲಿರುವ ಭಾರತೀಯರು ಎಷ್ಟು ಪ್ರತಿಭಟಿಸಿದರೂ ಇದುವರೆಗೆ ಏನೂ ಫಲಕಾರಿಯಾಗಲಿಲ್ಲ. ಭಾರತದಲ್ಲಾದರೂ ಈಗ ದೇಶಕ್ಕೆ ದೇಶವೇ ದಕ್ಷಿಣಾಫ್ರಿಕಾ ಸರಕಾರದ ಈ ಭೇದ ನೀತಿಯನ್ನು ಖಂಡಿಸುತ್ತದೆ. ಭಾರತೀಯರಿಗಾದ ಅನ್ಯಾಯಕ್ಕಾಗಿ ಸಂತಾಪಗೊಂಡಿದೆ. ಈ ಯುದ್ಧದಲ್ಲಿ ಭಾರತವು ಎಷ್ಟು ಸಹಾಯ ಮಾಡುತ್ತಿದೆಯೆಂಬುದನ್ನು ಗಣಿಸದೆ, ಆಫ್ರಿಕಾ ಸರಕಾರವು ಈ ಕಾಲದಲ್ಲೂ ಈ ವರ್ಣಭೇದವನ್ನುಂಟುಮಾಡುವಂಥಾ ಕಾಯಿದೆ ಮಾಡುವುದು ತೀರಾ ಶೋಚನೀಯವಾಗಿದೆ. ಭಾರತೀಯಸೈನಿಕರು ಪ್ರತಿಯೊಂದು ರಣಭೂಮಿಯಲ್ಲಿಯೂ, ರಕ್ತ ಸುರಿಸುತ್ತಿರುವಾಗ, ದಕ್ಷಿಣ ಆಫ್ರಿಕದ ಸಂರಕ್ಷಣೆಗಾಗಿ ಅವರು ಹೋರಾಡುತ್ತಿರುವಾಗಲೇ ಭಾರತೀಯರಿಗೆ ಹೀಗೆ ಅಪಮಾನವನ್ನುಂಟುಮಾಡುವುದನ್ನು ನೋಡಿ ಯಾವ ಭಾರತೀಯನ ರಕ್ತ ಕುದಿಯಲಾರದು? ದಕ್ಷಿಣ ಆಫ್ರಿಕಾ ಮೊದಲಾದ ಬ್ರಿಟಿಷ್ ಸಾಮ್ರಾಜ್ಯ ಪ್ರದೇಶಗಳಲ್ಲಿರುವ ಭಾರತೀಯರಿಗೆ ಉಳಿದವರಿಗಿರುವಷ್ಟೇ ಹಕ್ಕು ಇರುವುದು ನ್ಯಾಯವಾಗಿದೆ. ಇತ್ತೀಚೆಗೆ ಚರ್ಚಿಲರು ಮತ್ತು ಬ್ರಿಟಿಷ್ ಸೇನಾಪತಿಗಳು ಭಾರತದ ಯೋಧರ ಪರಾಕ್ರಮವನ್ನು ಹೊಗಳಿದರು. ಹಾಗೆ ಮಾಡುತ್ತಿರುವಾಗಲೇ ಇನ್ನೊಂದು ಕಡೆ ಅವರಿಗೆ ಅಪಮಾನ ಗೈಯುತ್ತಿರುವುದು, ಚಿತ್ರಹಿಂಸೆ ಕೊಡುತ್ತಿರುವುದು ಅಸಹನೀಯವಿದೆ. ಇದನ್ನು ನೋಡಿದರೆ ಈ ಯುದ್ಧವು ಸ್ವಾತಂತ್ರ್ಯದ ಯುದ್ಧವೆಂದು ಹೇಗೆ ನಂಬಬೇಕು? ಭಾರತ ಸರಕಾರದವರೂ ಈ ಕೃತಿಯನ್ನು ಪ್ರತಿಭಟಿಸಿದ್ದಾರೆನ್ನೋ ನಿಜ, ಆದರೆ ಬರಿಯ ಬಾಯಿಮಾತಿನ ಪ್ರತಿಭಟನೆ ಸಾಲದು; ಕೃತಿಯಿಂದ ಪ್ರತಿಭಟಿಸಿ ತೋರಿಸಬೇಕು. ನ್ಯಾಯಕ್ಕಾಗಿ ಹೋರಾಡಬೇಕು. ದಕ್ಷಿಣ ಆಫ್ರಿಕದ ಭಾರತೀಯರ ವಿರುದ್ಧ ಮಾಡಿದ ಈ ಶಾಸನವು ಭಾರತವನ್ನೇ ಅಪಮಾನ ಮಾಡಿದಂತೆ. ಇದೇ ಪರಿಸ್ಥಿತಿ ಉಳಿದರೆ, ಬಿಳಿಮೊಗದವರಲ್ಲದವರು ಬ್ರಿಟಿಷ್ ಸಾಮ್ರಾಜ್ಯದಲ್ಲಿರಲೂ ಅಯೋಗ್ಯರಾದಾರು. ಇದರಿಂದ ಮಿತ್ರರಾಷ್ಟ್ರಗಳ ಯುದ್ಧೋದ್ದೇಶದಲ್ಲಿ ಸಂಶಯವೇ ಹುಟ್ಟುತ್ತದೆ. ಜನರಲ್ ಸ್ಮಟ್ಸರಂಥಾ ಧುರೀಣರು ಈ ರೀತಿ ವರ್ತಿಸುವುದು ಬಹಳ ಖೇದಾಸ್ಪದವಾಗಿದೆ. ಬ್ರಿಟಿಷ್ ಸರಕಾರವು ಕೂಡಲೇ ಈ ವಿಚಾರ ಕೈಹಾಕದಿದ್ದರೆ ಭಾರತೀಯರಿಗಾಗುವ ಅನ್ಯಾಯಕ್ಕೆ ಅವರೂ ಒಪ್ಪಿದ ಹಾಗಾಗುವುದು.

ಅಲ್ಲಲ್ಲಿಯ ಸುದ್ದಿಗಳು

ಚೀನದ ಕ್ಯಾಂಟನ್ ಪ್ರದೇಶದಲ್ಲಿ ೧೦೦೦ ಜಪಾನೀ ಸೈನಿಕರು ಪ್ರಬಲ ಧಾಳಿಯೊಂದನ್ನು ಮಾಡಿದರು. ಎರಡು ದಿನ ಘೋರ ಯುದ್ಧ ನಡೆಯಿತು. ಆ ಮೇಲೆ ಜಪಾನರು ಹಿಂಜರಿದರು. ಅಷ್ಟರಲ್ಲಿ ಅವರ ಸಹಾಯಕ್ಕಾಗಿ ಇನ್ನೊಂದು ಜಪಾನೀ ಸೈನ್ಯ ಬಂದಿತು. ಈಗ ಯುದ್ಧ ಭೀಕರವಾಗಿ ನಡೆದಿದೆ. ಚೀನೀಯರು ಯಾಂಗ್‌ತ್ಸೇ ನದಿಯ ಮೇಲಿನ ಹ್ಯಾಂಕೋ ನಂತರದ ಅತಿ ಮಹತ್ವದೊಂದು ಬಂದರವನ್ನು ಸ್ವಾಧೀನ ಮಾಡಿಕೊಂಡರು. ಪಶ್ಚಿಮ ಯುನ್ನಾನಿನಲ್ಲಿ ಮಾಂಗ್‌ಶೀಯಿಂದ ಚೀನದ ಠಾಣ್ಯಗಳ ಕಡೆ ನುಗ್ಗಿದ ಜಪಾನೀ ಸೈನ್ಯಗಳನ್ನು ತಡೆಯಲಾಯಿತು.

ದಕ್ಷಿಣ ಶಾಂತಿ ಸಾಗರದಲ್ಲಿ ಮಿತ್ರ ವಿಮಾನಗಳು ಕೇಪ್ ಗ್ಲೂಸ್ಟರ್ ಮತ್ತು ಫಿನ್‌ಶಾವೆನಗಳ ಮೇಲೆ ಧಾಳಿಯಿಟ್ಟವು. 'ಮಧ್ಯ ಸೊಲೊಮನ್ ದ್ವೀಪದ ಮುಂಡಾಕೇಂದ್ರದ ಮೇಲೆ ಅಮೆರಿಕನ್ ವಿಮಾನಗಳು ಧಾಳಿಯಿಟ್ಟವು. ಕ್ವಾಟೀಂಡ್ ಪ್ರದೇಶದಲ್ಲಿ ಜಪಾನೀ ಹಡಗಗಳ ಮೇಲೆ ಬಾಂಬು ಹಾಕಲಾಗಿದೆ. ಅದೇ ರಾತ್ರಿ ಕಾಹಿಲಿ ನೆಲೆಯ ಮೇಲೂ ಧಾಳಿ ಮಾಡಲಾಯಿತು. ಉತ್ತರ ಶಾಂತಿ ಸಾಗರದಲ್ಲಿ ಆಟು ದ್ವೀಪದ ಮೇಲೆ ಕೆಲ ವಿಮಾನಗಳು ಧಾಳಿಯಿಟ್ಟವು. ಕಿಸ್ಕಾ ಬಂದರವು ಒಂಬತ್ತು ಸಲ ಧಾಳಿಗೆ ಗುರಿಯಾಯಿತು. ಬ್ರಿಟಿಷ್ ವಿಮಾನಗಳು ಫ್ರಾನ್ಸಿನಲ್ಲಿ ಹಾಗೂ ಬೆಲ್ಜಿಯಮಿನ ಗುರಿಗಳ ಮೇಲೆ ಧಾಳಿ ಮಾಡಿದವು.

ಇದೇ ಯುದ್ಧದಲ್ಲಿಯೇ ಅತ್ಯಂತ ಭೀಕರವೆನಿಸಿದ ಕಾಳಗವೊಂದು ಅಟ್ಲಾಂಟಿಕ್‌ನಲ್ಲಿ ವಿಮಾನ ಹಾಗೂ ಯುಬೋಟುಗಳ ನಡುವೆ ನಡೆಯಿತು. ಈ ಕಾಳಗದಲ್ಲಿ ಬ್ರಿಟನ್, ದಕ್ಷಿಣಾಫ್ರಿಕ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಹಾಗೂ ಜೆಕ್ಸ್ಲೊವಾಕ್ ವಿಮಾನಗಳು ಭಾಗವಹಿಸಿದ್ದವು. ಅಟ್ಲಾಂಟಿಕ್‌ನಲ್ಲಿ ತಮ್ಮ ಹಡಗಗಳನ್ನು ರಕ್ಷಿಸುತ್ತಾ ಸಾಗಿದ್ದವು ಈ ಜರ್ಮನ್ ಯುಬೋಟುಗಳು.

ಸ್ವದೇಶಾಭಿಮಾನಿ

ತಾರೀಖು 28—4—1943

ನೋಟುಗಳ ಅತಿಪ್ರಸರಣ

ಯುದ್ಧಕಾಲದಲ್ಲಿ ಹಲವು ವಸ್ತುಗಳಿಗೆ ಇತಿಮಿತಿಯಿಲ್ಲದೆ ಬೆಲೆ ಏರುತ್ತಾ ಹೋಗುವುದನ್ನು ನಿರ್ಬಂಧಿಸಲು, ಸರಕಾರವು ಆ ಗ್ಗಾರ್ಗ್ಯ ಕ್ರಯ ನಿಯಂತ್ರಣದ ಆಜ್ಞೆ ಹೊರಡಿಸುತ್ತದೆ. ಇದರಿಂದ ಎಷ್ಟೋ ಪಾಲಿಗೆ ಸಂಕಷ್ಟ ಪರಿಹಾರವೂ ಆಗುತ್ತದೆ. ಆದರೆ ವಸ್ತುಗಳ ಧಾರಣೆ ಏರುತ್ತಾ ಹೋಗಲು ಯಾವುದು ಮೂಲ ಕಾರಣವೋ, ಅಂಥಾ ನೋಟುಗಳ ಅತಿ ಪ್ರಸರಣವನ್ನು ಸರಕಾರವು ಸಲ್ಲಿಸದೆ ಇದ್ದರೆ, ನೋಟುಗಳ ಅತಿ ಪ್ರಸರಣವು ಇಂದಿನಂತೆಯೇ ಉಳಿಯಬಿಟ್ಟರೆ ದೇಶದ ಆರ್ಥಿಕ ಪರಿಸ್ಥಿತಿ ತೀರಾ ಕೆಟ್ಟು ಕೊಳೆತು ಹೋಗುವುದೆಂಬದನ್ನು ಇದುವರೆಗೂ ಭಾರತ ಸರಕಾರವು ಗಮನಕ್ಕೆ ತರದಿರುವುದು, ಎಂದರೆ, ಅತಿ ಪ್ರಸರಣವನ್ನು ನಿಯಂತ್ರಿಸುವ ತೀವ್ರೋಪಾಯ ಕೈಕೊಳ್ಳದಿರುವುದು ಶೋಚನೀಯವಿದೆ.

ಭಾರತದ ಇಪ್ಪತ್ತು ಮಂದಿ ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು ಒಂದು ಹೇಳಿಕೆ ಹೊರಡಿಸಿ, ಅದರಲ್ಲಿ ಭಾರತದ ಅರ್ಥ ಸಚಿವರಾದ ಸರ್ ಜೆರಿಮಿರೆಜಮನ್ನರ ಪೊಳ್ಳು ಸಮರ್ಥನೆಯನ್ನು ಪ್ರಕಟಪಡಿಸಿದ್ದಲ್ಲದೆ, ನೋಟುಗಳ ಅತಿಪ್ರಸರಣವು ಕಡಿಮೆಯಾಗದ ವಿನಾ ಇಂದಿನ ಧಾರಣೆ ಇಳಿಯುವುದಿಲ್ಲವೆಂದೂ ಸ್ಪಷ್ಟ ಸಾರಿದ್ದಾರೆ ಮಾತ್ರವಲ್ಲದೆ ಈ ಅತಿ ಪ್ರಸರಣವನ್ನು ನಿಯಂತ್ರಿಸುವ ಹಲವು ಉಪಯುಕ್ತ ಸೂಚನೆಗಳನ್ನೂ ಕೊಟ್ಟಿರುವರು.

ನೋಟುಗಳ ಅತಿ ಪ್ರಸರಣದಿಂದ ಇಂಗ್ಲೆಂಡು, ಅಮೆರಿಕ, ಜರ್ಮನಿ ಮೊದಲಾದ ಪ್ರತ್ಯಕ್ಷ ಯುದ್ಧಕ್ಕಿಳಿದ ರಾಷ್ಟ್ರಗಳ ಪರಿಸ್ಥಿತಿಗಿಂತಲೂ ಭಾರತದ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಇಲ್ಲಿ ಎಲ್ಲಾ ಅವಶ್ಯ ಪದಾರ್ಥಗಳ ಕ್ರಯವು ಎರಡು ಪಾಲು ಹೆಚ್ಚಿರುವುದು, ಮೂರು ನಾಲ್ಕು ಪಾಲು ಹೆಚ್ಚಿದವೂ ಹಲವಿವೆ. ಪರದೇಶದಲ್ಲಿ ಈ ಪರಿಸ್ಥಿತಿ ಬಂದಿಲ್ಲ. ೧೯೩೯ರ ಅಗಸ್ಟ್ ತಿಂಗಳಲ್ಲಿ ಮುಂಬಯಿಯ ಜೀವನ ವೆಚ್ಚವು ೧೦೦ ಇದ್ದರೆ, ಈಗ ಅದು ೨೦೫ಕ್ಕೆ ಏರಿದೆ! ಆದರೆ ಇದೇ ಅವಧಿಯಲ್ಲಿ ಅಮೆರಿಕದ ಜೀವನ ವೆಚ್ಚ ೧೦೭ಕ್ಕೆ, ಕೆನಡಾದ್ದು ೧೧೮ಕ್ಕೆ, ಇಂಗ್ಲೆಂಡಿನದ್ದು ೨೦೧ಕ್ಕೆ ಮತ್ತೆ ಜರ್ಮನಿಯದು ೧೩೮ಕ್ಕೆ ಮಾತ್ರ ಏರಿರುವುದು.

ಜೀವನ ವೆಚ್ಚದಂತೆ ನೋಟುಗಳ ಅತಿ ಪ್ರಸರಣದಲ್ಲಿಯೂ ಭಾರತವೇ ಇತರ ಎಲ್ಲಾ ರಾಷ್ಟ್ರಗಳನ್ನೂ ಮೀರಿರುವುದು. ೧೯೩೯ರಲ್ಲಿ ಅಮೆರಿಕದಲ್ಲಿ ೯೯೩೮ ದಶ ಲಕ್ಷ ಡಾಲರ್ ನೋಟುಗಳಿದ್ದವು. ೧೯೪೦ರಲ್ಲಿ ಅದು ೧೧೧೦೦ಕ್ಕೆ ಏರಿದೆ. ಇಂಗ್ಲೆಂಡಿನ ಪೌಂಡ್ ನೋಟುಗಳು ೫೦೪ ದಶ ಲಕ್ಷದಿಂದ ೬೫೬ಕ್ಕೆ ಏರಿದೆ. ಕೆನಡಾದಲ್ಲಿ ೧೯೩೯ರಿಂದ ೧೯೪೩ಕ್ಕೆ ಮುಟ್ಟಿದೆ. ಮತ್ತೆ ಜರ್ಮನಿಯಲ್ಲಿ ಇದು ೮೦೩೬ ದಶ ಲಕ್ಷ ಮಾರ್ಕ್ ನೋಟುಗಳಿಂದ ೨೦೫೫೮ರ ಮಟ್ಟಕ್ಕೆ ತಲಪಿದೆ." ಆದರೆ ಭಾರತದ ವಿಚಾರವೇ ಬೇರೆ. ೧೯೩೯ ನವೆಂಬರದಲ್ಲಿ ಇದ್ದ ೧೭೯ ಕೋಟಿ ರೂಪಾಯಿ ನೋಟುಗಳು ಈಗ ೬೦೦ ಕೋಟಿಗೆ ಮೀರಿರುವುದು. ಇಂಥಾ ಪರಿಸ್ಥಿತಿಯನ್ನು ಸರಕಾರವು ಹೀಗೆಯೇ ಬೆಳೆಯಬಿಟ್ಟರೆ ಜನತೆ ಕಳವಳಕ್ಕೆ ಗುರಿಯಾಗುವುದು! ನೋಟುಗಳ ಅತಿ ಪ್ರಸರಣವನ್ನು ನಿಯಂತ್ರಿಸುವುದು ಸರಕಾರದ ಸದ್ಯದ ಅವಶ್ಯ ಕರ್ತವ್ಯವಿರುವುದು

ಅನ್ಯಾಯ!

ದಕ್ಷಿಣ ಆಫ್ರಿಕದಲ್ಲಿ ಹಲವಾರು ತಲೆಮಾರುಗಳಿಂದ ಹೋಗಿ ನೆಲಸಿ, ಅದನ್ನೇ ತಮ್ಮ ಮಾತೃಭೂಮಿಯಾಗಿ ಮಾಡಿಕೊಂಡ ಸಾಹಸಿಗರೂ ಉದ್ಯೋಗ ಶೀಲರೂ ಆಗಿರುವ ಭಾರತೀಯರ ಮೂಲ ಭೂತ ಹಕ್ಕುಗಳ ಮೇಲೆ, ಅಲ್ಲಿನ ಸರಕಾರವು ಗದಾ ಪ್ರಹಾರ ಮಾಡುವ ಒಂದು ಶಾಸನವನ್ನು ಮಾಡುತ್ತಿರುವುದನ್ನು 'ಇದು ಅನ್ಯಾಯ! ಅನ್ಯಾಯ!' ಎಂಬುದಾಗಿ ಅಖಿಲ ಭಾರತವೇ ಏಕಕಂಠದಿಂದ ಖಂಡಿಸುತ್ತದೆ. ಅಖಿಲಭಾರತದ ಜನಮನದಲ್ಲಿ ಈ ವಿಚಾರವಿಂದು ಮಹಾ ಆಂದೋಲನವನ್ನುಂಟುಮಾಡಿರುವುದು.

ನಾತಾಳ ಪ್ರಾಂತದ ಮುಖ್ಯ ಪಟ್ಟಣವಾದ ದರ್ಬಾನ್‌ನಲ್ಲಿರುವ ಭಾರತೀಯರು ಅನೇಕ ಮನೆ ವಸತಿಗಳನ್ನು ಕ್ರಯಕ್ಕೆ ಕೊಂಡುಕೊಂಡಿರುವರು. ಇನ್ನೂ ಕೆಲ ಕಾಲ ಹೀಗೆ ಸಾಗಿದರೆ ಯೂರೋಪಿಯನರು ತುಂಬಿರುವ ದರ್ಬಾನನ್ನು ಭಾರತೀಯರೇ ಕ್ರಯಕ್ಕೆ ಪಡಕೊಳ್ಳಬಹುದು. ಆದ್ದರಿಂದ ಇನ್ನು ಮುಂದೆ ಭಾರತೀಯರ್ ಅಲ್ಲಿ ಆಸ್ತಿಯನ್ನು ಕೊಂಡುಕೊಳ್ಳದಂತೆ ಪ್ರತಿಬಂಧ ಮಾಡುವುದೇ ಈ ಶಾಸನದ ಉದ್ದೇಶವಾಗಿದೆ. ಟ್ರಾನ್ಸ್‌ವಾಲಿನಲ್ಲಿ ಮೂರುವರೆ ವರ್ಷಗಳ ಹಿಂದೆ ಇಂಥಾ ಶಾಸನವೊಂದನ್ನು ಮಾಡಿದ್ದು ಇದು ಎರಡನೆಯದಾಗಿದೆ. ಈಗ ತಂದಿರುವ ಶಾಸನದಲ್ಲಿ ಟ್ರಾನ್ಸ್‌ವಾಲ್ ಶಾಸನದ ಅವಧಿ ಮುಗಿದದ್ದರಿಂದ ಅದಕ್ಕೆ ಜೀವದಾನ ಕೊಡುವ ಸೂಚನೆಯೂ ಅಡಕವಾಗಿದೆ.

ಆಫ್ರಿಕವು ಭಾರತೀಯರಿಗೆ ಹೇಗೆ ಮಾತೃಭೂಮಿಯಲ್ಲವೋ, ಯೂರೋಪಿಯನರಿಗೂ ಅಂತೆಯೇ. ಆಸ್ತಿ ಮಾಡುವುದು ಮಾನವನ ಹಕ್ಕು. ಅದು ಮಿಕ್ಕವರಂತೆ ಭಾರತೀಯರಿಗೂ ಬೇಕಾಗಿದೆ. ಎಲ್ಲಿಯಾದರೂ ಯೂರೋಪಿಯನರು ಆಸ್ತಿ ಮಾಡುವುದಿದ್ದರೆ, ವ್ಯಾಪಾರ ವಹಿವಾಟು ನಡೆಸುವುದಿದ್ದರೆ, ಅವರ ಹಕ್ಕನ್ನು ಮುರಿಯಲು ಭಾರತೀಯರು ಶಾಸನ ತಂದದ್ದುಂಟೆ?, ಎಂದರೆ ಅವರಲ್ಲಿ ಅಧಿಕಾರವಿಲ್ಲವೆನ್ನುವುದೇನೋ ಸರಿ. ಆದರೆ ಅಧಿಕಾರ ತಮ್ಮ ಕೈಯ್ಯಲ್ಲಿ ಉಂಟೆಂದು ಬಿಳಿಯರು ಕರಿಯರ ಮೇಲೆ ಹೀಗೆ 'ಕುದುರೆ ಸವಾರಿ' ಮಾಡುವುದು ಇದು ಕೇವಲ ಅನ್ಯಾಯವಲ್ಲದೆ ಮತ್ತೇನು?

ಸ್ವದೇಶ ಸಮಾಚಾರ

ಬಂಗಾಳದಲ್ಲಿ ಸರಕಾರ

ಬಂಗಾಳ ಶಾಸನ ಸಭಾಸದಸ್ಯರಿಗೆ ಸಂಬಳ ಕೊಡಬಾರದೆಂದು ಸರಕಾರದಿಂದ ಆಜ್ಞೆ ಹೊರಟಿದೆ! ಬಂಗಾಳದಲ್ಲಿ ಸರಕಾರದವರು ಇನ್ನೊಂದು ಮಂತ್ರಿಮಂಡಳ ಮಾಡುವ ಸುದ್ದಿಯಿದೆ. ಬಂಗಾಳದ ಗವರ್ನರರು ತಾವೇ ಒಂದು ಆರ್ಥಿಕ ಮಸೂದೆಯನ್ನು ತಯಾರಿಸಿ ತಾವೇ ಅದಕ್ಕೆ ಒಪ್ಪಿಗೆಯಿತ್ತರು

ಸಾವರ್ಕಾರರ ೬೧ನೇ ಜಯಂತಿ

ನಿಮಿತ್ತ ಅಯೋಧ್ಯಾ ಪ್ರಾಂತದಿಂದ ೬೫ ಸಾವಿರ ರೂಪಾಯಿ ಅವರಿಗೆ ಕಾಣಿಕೆ ಕೊಡಲ್ಪಡುವುದು.

ಕಮ್ಯುನಿಸ್ಟರ ಬಂಧನ

ಅಖಿಲಭಾರತ ಕಮ್ಯುನಿಸ್ಟ್ ಪಕ್ಷದ ಜತೆ ಕಾರ್ಯದರ್ಶಿ ಎಸ್ ಜಿ. ಸರದೇಸಾಯಿ, ಕಾನಪುರ ಮಜದೂರ ಸಂಘದ ಅಧ್ಯಕ್ಷ ಎಸ್. ಎಸ್. ಯೊಸೂಫ್ ಮತ್ತು ಕಾರ್ಯದರ್ಶಿ ಎಸ್ ಸಿ ಕಾನಪುರ ಇವರನ್ನು ಸಂರಕ್ಷಕ ಕಾಯಿದೆಯಂತೆ ಸೆರೆ ಹಿಡಿಯಲಾಗಿದೆ.

ಬೊಂಬಯಿ ಹೈಕೋರ್ಟ್

ಇದರ ಮುಖ್ಯ ನ್ಯಾಯಾಧೀಶರ ಸ್ಥಳಕ್ಕೆ ಭಾರತೀಯರನ್ನು ನೇಮಿಸದೆ ಇಂಗ್ಲಿಷ್ ಬ್ಯಾರಿಸ್ಟರರನ್ನು ನೇಮಿಸಿದ್ದಕ್ಕೆ ಅಲ್ಲಿನ ಬಾರ್ ಎಸೋಸಿಯೇಶನಿನವರು ತಮ್ಮ ನಿಷೇಧ ತೋರಿಸಿದ್ದಾರೆ

ಶ್ರೀಮತಿ ವಾಯಲೆಟ್ ಆಳ್ವ

ಇವರು ನಮ್ಮ ದಕ್ಷಿಣ ಕನ್ನಡದವರಾದ ಶ್ರೀ ಮಾನ್ ಜೋಕಿಂ ಆಳ್ವರ ಪತ್ನಿ. ಕ್ರಿಶ್ಚಿಯನರಲ್ಲಿ ಉಜ್ವಲ ರಾಷ್ಟ್ರೀಯ ಭಾವನೆಯುಳ್ಳ ಧುರೀಣರಲ್ಲಿ ಶ್ರೀ ಜೋಕಿಂ ಆಳ್ವರೂ ಅಂತೆ ಅವರ ಪತ್ನಿಯೂ ಅಗ್ರಗಣ್ಯರು. ಶ್ರೀ ಜೋಕಿಂ ಆಳ್ವರು ಕಾಂಗ್ರೆಸು ಮುಂದಾಳು. ಸೆರೆಮನೆಯ ಸೌಖ್ಯ ಅನುಭವಿಸಿದವರು, ಅನುಭವಿಸುತ್ತಿರುವವರು. ಅವರ ಪತ್ನಿ ಶ್ರೀಮತಿ ವಾಯಲೆಟ್ ಆಳ್ವರೂ ಮೊನ್ನೆ ಮುಂಬಯಿಯಲ್ಲಿ ರಾಷ್ಟ್ರೀಯ ವಾರದ ದಿನ ಒಂದು ಸಭೆಯಲ್ಲಿ ರಾಷ್ಟ್ರೀಯ ಧ್ವಜ ಹಾರಿಸಿ ಭಾಷಣಮಾಡಲು ಬಂದಿದ್ದರು. ಆಗ ಅವರನ್ನು ಪೋಲೀಸರು ಬಂಧಿಸಿದರು. ಆ ಮೇಲೆ ಅವರ ವಿಚಾರಣೆಯಾಗಿ ರಾಷ್ಟ್ರೀಯ ಧ್ವಜ ಹಾರಿಸುವುದು ಅಪರಾಧವಲ್ಲವೆಂದು ನ್ಯಾಯಾಧೀಶರು ತೀರ್ಮಾನಿಸಲು ಶ್ರೀಮತಿ ಆಳ್ವರನ್ನು ಬಿಡುಗಡೆ ಮಾಡಿದರು!

ಸತ್ಯಮೂರ್ತಿಗಳ ಹೆಸರು

ಪುಂಡಿರಿಸರ್ವಾಯರ್ ಯೋಜನೆಗೆ ಇಡಬೇಕೆಂದು ಮದ್ರಾಸು ಕೋರ್ಪರೇಶನಿನಲ್ಲಿ ಆಲೋಚನೆ ಆಗುತ್ತಿದೆ. ಕೆಲವರೇನೋ ಇದಕ್ಕೆ ಹೋಪರ್ರವುದ್ದರ ಹೆಸರುಗಳನ್ನೂ ಸೂಚಿಸಿದ್ದಾರೆ!

ಎಸ್. ವಿ ರಾಮ ಮೂರ್ತಿ

ಇವರು ಮದ್ರಾಸು ಸರಕಾರದ ಮುಖ್ಯ ಕಾರ್ಯದರ್ಶಿ. ಗವರ್ನರರ ಸಲಹೆಗಾರರಲ್ಲೊಬ್ಬರು ಸ್ಥೈರ್ಯವಿಲ್ಲದ ಆರು ವಾರ ರಜೆಮೇಲೆ ತೆರಳುವುದರಿಂದ, ಈಗ ಶ್ರೀ ರಾಮ ಮೂರ್ತಿಯವರಿಗೆ ಎಡ್ವೈಸರ ಕೆಲಸ ನೇಮಕವಾಗಿದೆ.

ಬೆಳಗಾವಿಯಲ್ಲಿ ೨೦೮ ಬಾಂಬು!

ಬೆಳಗಾವಿ ಸಮೀಪದ ಸಂತಿ ಬಸ್ತವಾಡ ಎಂಬ ಹಳ್ಳಿಯಲ್ಲಿ ಒಂದು ಹೊಲದಲ್ಲಿ ಹುಗಿದಿದ್ದ ೨೦೦ ಬಾಂಬುಗಳನ್ನು ಪೋಲೀಸರು ಶೋಧಿಸಿರುವರು. ಈ ಸಂಬಂಧ ೨೦ ಜನರ ಬಂಧನವಾಗಿದೆ. ಇಲ್ಲಿನ ಪ್ರಸಿದ್ಧ ನಾಗರಿಕರೂ ಮುನ್ಸಿಪಲ್ ಸದಸ್ಯರೂ ಆದ ಶ್ರೀಗಳಾದ ಗಣಪತರಾವ ಖಾನಾಪುರ ಮತ್ತು ಲಕ್ಷ್ಮಣರಾವ ಜಾದವ ಇವರು ಬಂಧಿಸಲ್ಪಟ್ಟವರಲ್ಲಿ ಪ್ರಮುಖರಿರುವರು. ಈ ಬಾಂಬು ಪ್ರಕರಣದಿಂದ ಊರಲ್ಲಿ ಗಡಿಬಿಡಿಯುಂಟಾಗಿದೆ. ಖಾನಾಪುರದಲ್ಲಿ ಚಳವಳಿಕ್ಕೆ ಸಂಬಂಧಪಟ್ಟ ಕೆಲವರು ಸಿಗದ್ದರಿಂದ ಅವರ ಅಕ್ಕ, ಅಮ್ಮ, ಅಪ್ಪ, ಅತ್ತೆ ಮೊದಲಾದ ಸಂಬಂಧಿಕರನ್ನೂ ಸೆರೆ ಹಿಡಿದಿರುವರು. ಗಂಡಿಗವಾಡಕ್ಕೆ ಪೋಲೀಸರು ಮುತ್ತಿಗೆ ಹಾಕಿದ್ದಾರೆ. ವಾರಂಟಿದ್ದವರನ್ನು ಹಿಡಿಯಲು ಇಟಗಿಯಲ್ಲಿ ಪೋಲೀಸ್ ಲಾರಿಗಳು ಸುತ್ತುತ್ತಿವೆ. ಇಲ್ಲಿ ಸಮೀಪ ಒಂದು ಪೋಲೀಸ ಶಿಬಿರವನ್ನೇ ಸ್ಥಾಪಿಸಲಾಗಿದೆ. ಸಂಶಯದ ಮೇಲೆ ಅನೇಕರನ್ನು ಸೆರೆ ಹಿಡಿಯಲಾಗಿದೆ.

ಹಿಂದುಸ್ತಾನ ಸರಕಾರದ ಹೊಸ ಖಾತೆ

ಯಸಾದ ಇಂಡಸ್ಟ್ರಿಸ್ ಮತ್ತು ಸಿವಿಲ್ ಸಪ್ಲೈಸ್ ಖಾತೆ ಕಾರ್ಯದರ್ಶಿಗಳಾಗಿ ಎಂ. ಎಸ್. ಎ. ಹೈದರಿ ಮತ್ತು ಟಿ. ಎಸ್. ಪಿಳ್ಳೆಯವರು ಅಧಿಕಾರ ವಹಿಸುವರು.

ವೈಸರಾಯರಿಗೆ ಹಕ್ಕರು ಶಾಂತಿ

ಯೊಂದನ್ನು ಕಳುಹಿಸಿ, ಬಂಗಾಳದ ಕೆಲವು ಪ್ರಮುಖ ರಾಜಕೀಯ ಸಂಗತಗಳನ್ನು ಬಿಟ್ಟು ಮಂತ್ರಿಮಂಡಳ ರಚಿಸಿದರೆ ದೇಶದಲ್ಲಿ ಅಸಂತೋಷ ಹೆಚ್ಚಿ ಯುದ್ಧ ಯತ್ನಗಳಿಗೆ ಆತಂಕವುಂಟಾಗುವುದೆಂದು ಎಚ್ಚರಿಸಿದ್ದಾರೆ ಮತ್ತು ಒಂದೇ ಪಕ್ಷವು ಅಧಿಕಾರಕ್ಕೆ ಬರುವುದನ್ನು ಖಂಡಿಸಿದ್ದಾರೆ.

ಸತ್ಯಮೂರ್ತಿಯವರ ಸ್ಥಳದ

ಕೇಂದ್ರ ಎಸೆಂಬ್ಲಿ ಚುನಾವಣೆಗೆ ಶ್ರೀಯುತ ರಾ. ದ ಪಟ್ಟಾಭಿರಾಮನ್ (ಸಿ. ಪಿ. ಯವರ ಪುತ್ರ) ಎಸ್. ಪಾರ್ಥಸಾರಥಿ (ಶ್ರೀನಿವಾಸಯ್ಯಂಗಾರರ ಪುತ್ರ) ಮತ್ತು ಡಾ। ವರದರಾಜಲು ನಾಯಿಡು (ಹಿಂದು ಮಹಾಸಭೆ) ಈ ಮೂವರು ಉಮೇದ್ವಾರರಿದ್ದಾರೆ. ಜೂನ್ ೫ಕ್ಕೆ ಚುನಾವಣೆಯಾಗಲಿದೆ.

ವಿಜಯ ಲಕ್ಷ್ಮಿ ಪಂಡಿತ್

ಇವರು ಪೆರೋಲಿನ ಅವಧಿ ಮುಗಿದು ಅವರೀಗ ನೈನಿ ಜೈಲಿಗೆ ತೆರಳಿದ್ದಾರೆ. ಅವರ ಇಬ್ಬರು ಹೆಣ್ಣು ಮಕ್ಕಳು ಕುಮಾರಿ ಚಂದ್ರಲೇಖಾ ಮತ್ತು ಕುಮಾರಿ ತಾರಾ ಪಂಡಿತ್ ಇವರು ಅಮೆರಿಕಕ್ಕೆ ಉಚ್ಚ ಶಿಕ್ಷಣಕ್ಕಾಗಿ ತೆರಳುವವರಿದ್ದಾರೆ. ಮೇಡಂ ಕೈಶೇಕರು ವಿದ್ಯಾಭ್ಯಾಸ ಮಾಡಿದ್ದ ಮಾಸ್ಸಾಚುಸೆಟ್ಸ ವೆಲ್ಲೆಸ್ಲಿ ಕಾಲೇಜಿನಲ್ಲಿ ಇವರಿಗೆ ಪ್ರವೇಶ ದೊರೆತಿದೆ. ಇನ್ನೊಬ್ಬ ಹೆಣ್ಣು ಮಗಳು ಮುಂಬಯಿಯಲ್ಲಿ ಕಲಿಯುವಳು.

ಮುಂಬಯಿಯಲ್ಲಿ ಸೋಶಿಯಲಿಸ್ಟರ ಬಂಧನ

ಮಹಾರಾಷ್ಟ್ರ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದವರೂ, ಕಣ್ಮರೆಯಾಗಿದ್ದವರೂ ಆದ ಶ್ರೀಧರ ಪುರುಷೋತ್ತಮ ಲಿಮಯೆ, ಮಾಧವ ಪುರುಷೋತ್ತಮ ಲಿಮಯೆ, ಎನ್. ಜಿ. ಗೋರೆ ಮೊದಲಾದ ೧೫-೧೬ ಮಂದಿಯನ್ನು ಸೆರೆ ಹಿಡಿದಿರುವರು

ಬಾಲ್ಕನ್ಸಿನಲ್ಲಿ ಗಾಂಧಿಜಿ ಪ್ರಭಾವ

ಎಪ್ಪತ್ತರ ಮಟ್ಟಿಗೆ ಇದೆಯೆಂದು, ಈಗ ಲಂಡನಿನಲ್ಲಿರುವ ಯೂಗಸ್ಲವಿಯ ಮುಖಂಡರೊಬ್ಬರು ಮಾತನಾಡುತ್ತಾ, ಅಲ್ಲಿನ ಪ್ರಜಾಪಕ್ಷದ ಮುಖಂಡರಾಗಿದ್ದ ಎಂ. ರಾಡಿಚರು ಗಾಂಧಿಜಿಯ ಬಹಳ ದೊಡ್ಡ ಆರಾಧಕರಿದ್ದಾರೆಂದೂ, ಬಾಲ್ಕನಿನಲ್ಲಿ ಹಲವು ಮಂದಿ ಭಾರತದ ವಿಷಯ ಒಳ್ಳೆಯ ಅಭಿಪ್ರಾಯವುಳ್ಳವರಾಗಿದ್ದಾರೆಂದೂ ಹೇಳಿದರು

ಫಿಲಿಪ್ಸರು ಗಾಂಧಿಜಿಯನ್ನು

ನೋಡಲು ವೈಸರಾಯರ ಅನುಮತಿಯನ್ನು ಕೇಳಿಲ್ಲವೆಂದೂ ಹಾಗೆ ಕೇಳಿದರೆ ವೈಸರಾಯರು ಪೇಚಾಟದಲ್ಲಿ ಬೀಳುವರೆಂದು ಹಾಗೆ ಮಾಡಲಿಲ್ಲವೆಂದೂ ಅಭಿಪ್ರಾಯವಾಗಿದೆ.

ಪ್ರೊ॥ ಕೆ. ವಿ. ಅಯ್ಯರರ ವ್ಯಾಯಾಮ ಶಾಲೆ ಶೋಧನೆ

ಬೆಂಗಳೂರು ಪೋಲೀಸಿನವರು ಪ್ರೊ॥ ಕೆ. ವಿ. ಅಯ್ಯರ ವ್ಯಾಯಾಮ ಶಾಲೆಯನ್ನು ಮೂರು ಗಂಟೆಗಳ ಕಾಲ ಶೋಧಿಸಿ ಶ್ರೀ ಸಿದ್ಧಪ್ಪನ ಹಳ್ಳಿ ಕೃಷ್ಣ ಶರ್ಮರವರು ಮಹಾತ್ಮಾ ಗಾಂಧಿಯವರ ಮೇಲೆ ಬರೆದ ಹಲವು ಪುಸ್ತಕಗಳನ್ನೂ, ಪ್ರೊ॥ ಅಯ್ಯರರು ಹಿಂದೂ ಮುಸ್ಲಿಂ ಐಕ್ಯತೆ ಎಂಬ ವಿಚಾರವಾಗಿ ಬರೆದಿದ್ದ ಪುಸ್ತಕದ ಒಂದು ಪ್ರತಿಯನ್ನೂ ವಶಪಡಿಸಿಕೊಂಡರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲೆಯ ಭೂಮಾಲಿಕರ ಅವಗಾಹನೆಗೆ ದ. ಕ. ಕಲೆಕ್ಟರರ ಪ್ರಕಟಣೆ

"೨೫೦ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ಕಿರ್ವೆ ಕೊಡುವ ಭೂಮಾಲಿಕರೆಲ್ಲರೂ, ತಾ. ೨೮—೪—೧೯೪೩ರ ಒಳಗೆ ಅವರು ಫಸಲಿ ೧೩೫೧ರಲ್ಲಿ ಮಾರಾಟ ಮಾಡಿದ ಭತ್ತ ಮತ್ತು ಅವರ ವಶ ಈಗ ದಾಸ್ತಾನಾಗಿರುವ ಭತ್ತ ಅಥವಾ ಅವರು ಅಡವಿಟ್ಟ ಭತ್ತ, ಅಥವಾ ತಾ. ೧೫—೪—೧೯೪೩ರ ಒಳಗೆ ಅವರ ಹೆಸರಲ್ಲಿ ಒಕ್ಕಲುಗಳಲ್ಲಿರುವ ಭತ್ತ ಇವುಗಳ ವಿವರಗಳನ್ನೆಲ್ಲಾ ಅವರವರ ಗ್ರಾಮದ ಪಟೇಲರ ಮೂಲಕ ಅವರ ರೆವಿನ್ಯೂ ಡಿವಿಜನಲ್ ಆಫೀಸರರಿಗೆ ತಿಳಿಸತಕ್ಕದ್ದು. ಅವರ ಒಕ್ಕಲುಗಳಿಂದ ಬರತಕ್ಕ ಒಟ್ಟು ಗೇಣಿಗಳ ವಿವರವನ್ನೂ ಅವರು ತಿಳಿಸತಕ್ಕದ್ದು" ಹೀಗೆಂದು ಡಿಫೆನ್ಸ್ ಓಫ್ ಇಂಡಿಯಾ ರೂಲ್ಸಿನ 75 (A) ಪ್ರಕಾರ ದ. ಕ. ಜಿಲ್ಲಾ ಕಲೆಕ್ಟರರಾದ ಮಿ. ಕರಮತುಲ್ಲಾ ಐ. ಸಿ. ಎಸ್. ಇವರು ಪ್ರಕಟಿಸುತ್ತಾರೆ.

ಮುನ್ಸಿಪಾಲಿಟಿ ಕಣ್ತೆರೆಯಬೇಕು!

ಮೊನ್ನೆ ಕಂಬಳ ಮಾರ್ಗದಲ್ಲಿ ಒಂದು ಜಟ್ಕಾ ಗಾಡಿ ಕುದುರೆ, ಸವಾರರು, ಗಾಡಿ ಹೊಡೆಯುವವನ ಸಮೇತ, ಮಾರ್ಗದಿಂದ ಕೆಳಗೆ ಗದ್ದೆಗೆ ಬಿದ್ದು ಬಹಳ ಜಖಂ ಆಗಿದೆ. ಗಾಡಿ ಪುಡಿಪುಡಿಯಾಗಿರುವುದು. ಕುದುರೆಗೂ ಗಾಡಿ ಹೊಡೆಯುವವನಿಗೂ ಪೆಟ್ಟು ಆಗಿದೆ. ಗಾಡಿಯಲ್ಲಿ ಸವಾರಿ ಮಾಡುತ್ತಿದ್ದ 'ಬಡವರ ಬಂಧು' ಉಪಸಂಪಾದಕ ಶ್ರೀ ನರ್ಸಪ್ಪರಿಗೆ ತಲೆಗೆ ಚನ್ನಾಗಿ ಪೆಟ್ಟುಬಿದ್ದಿದೆ. ಇದರಿಂದ ಪ್ರಾಣಾಪಾಯವೇನೂ ಆಗಲಿಲ್ಲವೆಂಬುದು ಸಂತೋಷ. ಆದರೆ ಮುನ್ಸಿಪಾಲಿಟಿಯವರು ಬೇಗನೇ ಕಣ್ತೆರೆಯಬೇಕು. ಈ ಮಾರ್ಗವು ಬಹಳ ಸಪೂರವಾಗಿದ್ದು, ಒಂದು ಬಸ್ಸು ಮತ್ತು ಒಂದು ಜಟ್ಕಾಗಾಡಿ ಎದುರೆದುರು ಬಂದರೆ ಸರಾಗವಾಗಿ ದಾಟಿಹೋಗುವುದು ತೊಂದರೆಯ ಕೆಲಸವೇ ಆಗಿದೆ. ಅದರಲ್ಲೂ ಕುದುರೆಗಳು ಒಮ್ಮೊಮ್ಮೆ ಅತ್ತಿತ್ತ ಹಾರುವುದೂ ಸ್ವಭಾವ. ಹೀಗೆ ಮಾಡಿದರಂತೂ ಗಾಡಿ ಇಲ್ಲಿ ಕೆಳಗೆ ಬೀಳುವುದು ಖಂಡಿತ. ಈ ಘಟನೆಯೂ ಅದೇ ಪ್ರಕಾರ ಉಂಟಾಯಿತೆಂದು ತಿಳಿಯುತ್ತದೆ. ಈ ಮಾರ್ಗದಲ್ಲಿ ಸೈಕಲ್ ಸವಾರಿ ಮಾಡುವುದೂ ಅಪಾಯವಾಗಿದೆ. ಸಿಟಿ ಬಸ್ಸು ಬರುತ್ತಿದ್ದರೆ ತೊಲಗಿ ನಿಲ್ಲುವರೆ ಸಾಕಷ್ಟು ಸ್ಥಳವೇ ಇಲ್ಲದಂತಾಗಿದೆ. ನಮ್ಮ ಮುನ್ಸಿಪಾಲಿಟಿಯವರು ಈ ಕಡೆಗೆ ಕಣ್ತೆರೆದು ನೋಡಬೇಕು. ಈ ಮಾರ್ಗವನ್ನು ಸ್ವಲ್ಪ ವಿಶಾಲಮಾಡುವುದು ಅವಶ್ಯ ಮಾತ್ರವಲ್ಲದೆ ಎರಡು ಬದಿಗಳಲ್ಲಿಯೂ ಗೋಡೆ ಅತ್ಯಗತ್ಯ ಮಾಡಿಸಬೇಕು.

(ತರಿಗೆದಾರ)

ಮುನ್ಸಿಪಲ್ ಸಭೆ

ತಾ. ೧೯ರಲ್ಲಿ ಚೇರ್‌ಮೇನ್ ಪುತ್ತೂರ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ಭಗಿನಿ ಸಮಾಜದವರು ತಮಗೆ ನಗರಸಭೆಯವರು ಕೊಟ್ಟ ರೂ. ೬೦೦ ಸಹಾಯ ಧನ ಸಾಕಾಗುವುದಿಲ್ಲವೆಂದೂ, ಈ ವರ್ಷ ಅದು ೯೦೦ ರೂ. ಯಾಗಿ ವರ್ಧಿಸಬೇಕೆಂದೂ ಕೇಳಿಕೊಂಡ ಅರಿಕೆ ಮುಂದಿನ ಸಭೆಯಲ್ಲಿ ವಿಚಾರಿಸುವುದೆಂದಾಯಿತು. ನೀರೇಶ್ವಾಲ್ಯ ಹುಡುಗರ ಶಾಲೆ ಕಟ್ಟತಕ್ಕ ರೂ. ೨,೫೦೦, ಮಹಮ್ಮದನ್ ಹಾಯರ್ ಎಲಿಮೆಂಟರಿ ಶಾಲೆ ದುರಸ್ತಿಗೆ ರೂ. ೮೦. ಮಂಜೂರಾಯಿತು.

ಕನ್ನಡ ಸಹಕಾರಿ ಸಂಘ

ಜಿಲ್ಲಾ ಸಹಕಾರಿ ಎಡ್ವಾನ್ಸ್‌ಮೆಂಟ್ ಸೊಸೈಟಿಯ ಡೈರೆಕ್ಟರರ ಸಭೆಯೊಂದು ತಾ. ೧೮ರಲ್ಲಿ ಶ್ರೀ ಎಂ. ಎಸ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಸೇರಿ, ಈ ಸೊಸೈಟಿಯನ್ನು ಇನ್ನು ಮುಂದೆ ಕನ್ನಡ ಸಹಕಾರಿ ಸಂಘವೆಂದು ಕರೆಯಬೇಕಾಗಿ ನಿರ್ಣಯವಾಯಿತು. ಸಭೆಯ ಕಾರ್ಯಕಲಾಪಗಳ ವರದಿ ಸ್ವೀಕೃತವಾಯಿತು.

ಸೆಂಟ್ರಲ್ ಕೋ. ಸ್ಟೋರ್ಸ್

ಇದರ ಸಭೆಯೊಂದು ತಾ. ೧೮ರಲ್ಲಿ ಜರಗಿ ಮೂವರು ಡೈರೆಕ್ಟರರನ್ನಾರಿಸಿತು. ಆ ಮೇಲೆ ಚುನಾವಣೆಯಾಯಿತು. ಶ್ರೀ. ದತ್ತಾತ್ರೇಯ ರಾವ್ (ಅಧ್ಯಕ್ಷ) ಶ್ರೀ ಕೆ. ಟಿ. ಆಳ್ವ (ಉಪಾಧ್ಯಕ್ಷ) ಶ್ರೀಗಳಾದ ಎಂ. ವೆಂಕಟೇಶ ಪೈ, ಎಂ. ಆರ್ ಪೂಂಜ, ಯು. ಕಣ್ಣಪ್ಪ ಇವರು ಕಾರ್ಯಕಾರಿ ಮಂಡಳಿಯ ಸದಸ್ಯರು.

ಉಪಾಧ್ಯಾಯರಿಗೆ ತುಟ್ಟಿ ಭತ್ತೆ

ದ. ಕನ್ನಡ ಟೀಚರ್ಸ್ ಗಿಲ್ಡಿನ ಅರಿಕೆ

ಗಿಲ್ಡಿನ ವಾರ್ಷಿಕ ಸಭೆಯು ತಾ. ೧೧ರಂದು ಬಿ. ಇ. ಎಂ. ಹೈಸ್ಕೂಲಿನಲ್ಲಿ ಶ್ರೀ. ಎಂ. ಎಸ್. ಪಕಾಂಬರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಕಳ ಬೋ. ಹೈಸ್ಕೂಲಿನ ಮುಖ್ಯೋಪಾಧ್ಯಾಯರೂ ಗಿಲ್ಡಿನ ಮಾಜಿ ಅಧ್ಯಕ್ಷರೂ ಆಗಿದ್ದ ಶ್ರೀ ನರಸಿಂಹ ಶೆಣೈ ಅವರ ನಿಧನದಲ್ಲಿ ಸಂತಾಪವನ್ನು ಸೂಚಿಸಿದ ಮೇಲೆ ಸಭೆಯು ವರದಿ-ಲೆಕ್ಕಪತ್ರಗಳನ್ನು ಮಂಜೂರು ಮಾಡಿತು. ಸಹಾಯಿತ ಶಾಲೆಗಳ ಅಧ್ಯಾಪಕರಿಗೆ ತುಟ್ಟಿಭತ್ತೆ ಕೊಟ್ಟುದಕ್ಕೆ ಗಿಲ್ಡು ಸರಕಾರವನ್ನು ಅಭಿನಂದಿಸಿ, ತುಟ್ಟಿ ಭತ್ತೆಯು ಅತ್ಯಲ್ಪವಿದ್ದು ಅದೇ ಮಟ್ಟದ ಸರಕಾರಿ ನೌಕರರ ಭತ್ತೆಯ ಮೂರರಲ್ಲೊಂದಂಶ ಮಾತ್ರವಿದ್ದುದಕ್ಕೂ, ಲೋಕಲ್ ಬೋರ್ಡುಗಳೂ ಇತರ ಕೆಲ ಮ್ಯಾನೇಜ್‌ಮೆಂಟುಗಳೂ ತುಟ್ಟಿಭತ್ತೆ ಕೊಡದುದಕ್ಕೂ ತನ್ನ ವಿಷಾದವನ್ನು ವ್ಯಕ್ತಪಡಿಸಿತು. ಸರಕಾರಿ ನೌಕರರಿಗೆ ಸಿಗುವಂತೆಯೇ ಎಲ್ಲಾ ಅಧ್ಯಾಪಕರಿಗೂ ತುಟ್ಟಿಭತ್ತೆ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಇನ್ನೊಂದು ನಿರ್ಣಯವು ಸ್ವೀಕರಿಸಲ್ಪಟ್ಟಿತು. ಹೊಸ ವರ್ಷದ ಸಮಿತಿಗೆ ಶ್ರೀಯುತರು ಎ. ಎಸ್. ಕಾಂಟರು ಅಧ್ಯಕ್ಷರಾಗಿಯೂ, ಪಕಾಂಬರರಾವ್ ಮತ್ತು ಉಡುಪಿ ಗೋವಿಂದರಾವ್ ಉಪಾಧ್ಯಕ್ಷರಾಗಿಯೂ, ಎಂ. ವಾಸುದೇವರಾಯರು ಜನರಲ್ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿಯೂ, ಕೆ. ಸಂಜೀವ ಶೆಟ್ಟಿ ಮತ್ತು ಎಸ್. ಆರ್. ಫರ್ಟಾಡೋ ಇವರು ಸೆಕ್ಷನಲ್ ಕಾರ್ಯದರ್ಶಿಗಳಾಗಿಯೂ, ಎಸ್. ಮುಕುಂದರಾಯರು ದ. ಭಾ. ಟೀಚರ್ಸ್ ಗಿಲ್ಡಿಗೆ ಜಿಲ್ಲಾ ಗಿಲ್ಡಿನ ಪ್ರತಿನಿಧಿಯಾಗಿಯೂ ಆರಿಸಲ್ಪಟ್ಟರು.

ಉಪಾಧ್ಯಾಯರ ಸಭೆ

ಮಂಗಳೂರು ತಾಲೂಕು ಎಯಿಡೆಡ್ ಶಾಲಾ ಉಪಾಧ್ಯಾಯರ ಸಂಘದ ವಾರ್ಷಿಕ ಸಭೆ ತಾ. ೧೮ರಲ್ಲಿ ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಡಿ. ಇ. ಓ. ರಾದ ಶ್ರೀ ಎ. ವಿ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಆರ್. ಶಾಸ್ತ್ರಿಗಳು ವರದಿಯನ್ನೋದಿದರು. ಶ್ರೀಗಳಾದ ಶ್ರೀನಿವಾಸ ಶೆಣೈ ಮತ್ತು ಎಂ. ವಾಸುದೇವರಾಯರು ಭಾಷಣವಿತ್ತರು. ಸಂಘದ ಅಧ್ಯಕ್ಷ ಶ್ರೀ ದಾಮೋದರ ರಾಯರು ಕೃತಜ್ಞತೆ ಅರ್ಪಿಸಿದರು. ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಕೊಡುತ್ತಿರುವ ಗ್ರಾಂಟು ಒಂದೇ ರೀತಿ ಅವನತಿ ಹೊಂದುತ್ತಿರುವ ಕಾರಣ, ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚು ಗ್ರಾಂಟು ಕೊಡಿಸಬೇಕೆಂದೂ, ಇಂಗ್ಲಿಷನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು, ಇ. ಎಸ್. ಎ. ಎಲ್. ಸಿ. ಪರೀಕ್ಷೆ ಕೊಟ್ಟವರನ್ನು IV ಫಾರ್ಮಿನಲ್ಲಿ ಸೇರಿಸಬೇಕೆಂದೂ, ಐಡೆಡ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ ಅವರವರ ಗ್ರೇಡಿನ ಪ್ರಕಾರ ಸಂಬಳ ನಿಶ್ಚಯಿಸಬೇಕೆಂದೂ ನಿರ್ಣಯಗಳಾದವು.

ವೃಂದಾವನಸ್ಥರಾದರು

ಪರ್ತಗಾಳಿ ಶ್ರೀ ಗೋಕರ್ಣ ಮಠಾಧೀಶ ಶ್ರೀ ಕಮಲಕಾಂತ ತೀರ್ಥಯತಿವರ್ಯರು ತಾ. ೧೬-೪-೪೩ನೇ ಶುಕ್ರವಾರ ರಾತ್ರಿ ಪರ್ತಗಾಳಿಯಲ್ಲಿರುವ ತಮ್ಮ ಮಠದಲ್ಲಿ ವೃಂದಾವನಸ್ಥರಾದರೆಂಬುದನ್ನು ತಿಳಿಸಲು ನಾವು ತುಂಬಾ ವಿಷಾದಿಸುತ್ತೇವೆ. ಕಳೆದ ಒಂದೆರಡು ತಿಂಗಳಿಂದ ಅವರ ಆರೋಗ್ಯ ಚನ್ನಾಗಿರಲಿಲ್ಲ. ಗುರುವರ್ಯರು ಶಿಷ್ಯತ್ವಾಂಗ್ರಹ ಮಾಡಿ ಇನ್ನೂ ಒಂದು ವರ್ಷ ಪೂರ್ತಿಯಾಗಿಲ್ಲ. ಪರ್ತಗಾಳಿಯಲ್ಲಿ ಪ್ರಕೃತ ಸನ್ಯಾಸಾಶ್ರಮ ವಹಿಸಿರುವ ಶ್ರೀಮತ್ ಕಮಲಾ ಕಾಂತಯತಿವರ್ಯರ ಶಿಷ್ಯ ಶ್ರೀ ದ್ವಾರಕನಾಥ ತೀರ್ಥ ಗುರುಗಳಿಗುಂಟಾದ ಶೋಕದಲ್ಲಿ ಸಮಸ್ತ ಶಿಷ್ಯವೃಂದವೂ ಸಹಭಾಗಿಯಾಗಿದೆ. ಪರಮಾತ್ಮನು ವೃಂದಾವನಸ್ಥ ಯತಿವರ್ಯರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

ಎವಾರ್ಡ್ ದಿಕ್ರಿಗೆ ೧೨ ಆಣೆ ಸ್ಟ್ಯಾಂಪು ಸಾಕು!

ರಾಜಿ ಶರತ ಪ್ರಕಾರ—ಮಧ್ಯಸ್ಥಿಕೆಯವರ ಸಹಾಯದಿಂದ ಮಾಡಿದ ತೀರ್ಮಾನವನ್ನು ನ್ಯಾಯಾಧೀಶರ ಮುಂದೆ ಇಡುವಾಗ ೧೦೦ ರೂಪಾಯಿಗಳ ಕೋರ್ಟು ಫೀಸು ಕೊಡುವ ಅವಶ್ಯಕತೆ ಇದೆಯಷ್ಟೆ! ಆದರೆ ಈ ಸಂಬಂಧವಾಗಿದ್ದ ಕಾನೂನುಗಳ ಪೂರ್ವಾಪರವನ್ನು ವಿವೇಚಿಸಿ ನೋಡುವಾಗ ಬರೇ ೧೨ ಆಣೆಯ ಅರ್ಜಿ ಸ್ಟ್ಯಾಂಪಿನಿಂದ ಈ ಕಾರ್ಯವು ಆಗುವುದೆಂದು ಮಂಗಳೂರಿನ ಸಬ್ ಜಡ್ಜರಾದ ಶ್ರೀ. ಟಿ. ಟಿ. ರಾಮಯ್ಯ ಪಂತುಲು ಅವರು ತೀರ್ಮಾನಿಸಿತ್ತಿರುವರು. ಈ ಕುರಿತು ಬೇಕಾದ ಹೊಸ ನಿಬಂಧನೆಗಳನ್ನು ಮಾಡುವುದು ಉಚಿತವೆಂದು ನ್ಯಾಯಾಧೀಶರು ಹೈಕೋರ್ಟಿಗೆ ಸೂಚಿಸಿರುವರು.

ಪ್ರೆಸ್ ಕೆಲಸಗಾರರ ಯೂನಿಯನ್

ಇದರ ಕಾರ್ಯಕಾರಿ ಸಮಿತಿಯ ಸಭೆಯೊಂದು ತಾ. ೧೫ರಂದು ಸಂಜೆ ಅಧ್ಯಕ್ಷರಾದ ಶ್ರೀ. ಕು. ಶಿವರಾಯರ ಅಧ್ಯಕ್ಷತೆಯಲ್ಲಿ, ಯೂನಿಯನಿನ ಆಫೀಸಿನಲ್ಲಿ ಜರಗಿತು. ಕೆಲಸಗಾರರಿಗೆ ತುಟ್ಟಿಭತ್ತೆಯನ್ನು ದೊರಕಿಸಿಕೊಳ್ಳುವ ವಿಚಾರದಲ್ಲಿ ಪ್ರೆಸ್ಸುಗಳ ಮಾಲಕರಿಗೆ ಮನವಿಗಳನ್ನು ಕಳುಹಲು ನಾಲ್ಕು ಮಂದಿಯ ಒಂದು ಸಮಿತಿಯು ರಚಿಸಲ್ಪಟ್ಟಿತು.

ಮೂಲ್ಯರ ಅಥವಾ ಕುಲಾಲರ

ಸಂಸ್ಥೆ ಮತ್ತು ರಾಮ ಸೇವಾ ಸಮಿತಿಗಳ ವಾರ್ಷಿಕೋತ್ಸವವು ತಾ. ೧೫ರಂದು ಶ್ರೀ. ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕಳ್ಳತನ

ದಿಂದ ಕಳ್ಳು ತಯಾರಿಸಿದ ಮತ್ತು ಅಬ್ಕಾರಿ ಅಧಿಕಾರಿಗಳನ್ನು ಗಾಯಗೊಳಿಸಿದ ಆರೋಪದ ಮೇಲೆ ಕೇಶಪ್ಪ ಪೂಜಾರಿ ಎಂಬವನನ್ನು ಒಟ್ಟು ೩ ವರ್ಷಗಳ ಕಠಿಣ ಸಜೆಗೂ ಗಂಗಯ್ಯ ಪೂಜಾರಿ ಎಂಬವರನ್ನು ಒಟ್ಟು ೧ ವರ್ಷದ ಕಠಿಣ ಸಜೆಗೂ ಸಬ್ ಜಡ್ಜರಾದ ಶ್ರೀ ಟಿ. ಟಿ. ರಾಮಯ ಪಂತುಲು ಅವರು ಗುರಿಪಡಿಸಿರುವರು.

ಸ್ತ್ರೀಯರ ರಾಷ್ಟ್ರೀಯ ವಿದ್ಯಾಭ್ಯಾಸ ಸೊಸೈಟಿ

ಯೊಂದು ನಿರ್ಮಿಸಲ್ಪಟ್ಟಿದ್ದು ಅದರ ಪ್ರಥಮ ಸಭೆಯು ತಾ. ೧೧ರಂದು ಬೆಸೆಂಟ್ ರಾಷ್ಟ್ರೀಯ ಹುಡುಗಿಯರ ಶಾಲೆಯಲ್ಲಿ ಶ್ರೀ. ಎಂ. ವೆಂಕಟೇಶ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಸೆಂಟ್ ರಾಷ್ಟ್ರೀಯ ಶಾಲೆಯ ಎಲ್ಲಾ ನೋಟ್ವಿಚಾರಣೆಯನ್ನು ವಹಿಸಿಕೊಳ್ಳಲು ಈ ಸೊಸೈಟಿಯು ನಿರ್ಧರಿಸಿತು. ಡಾ. ಕೇಶವ ಪೈ, ಶ್ರೀಯುತರು ವೆಂಕಟೇಶ ಪೈ, ಅಮ್ಮೆಂಬಳ ಶ್ರೀನಿವಾಸ ಪೈ, ಅನಂತ ಪೈ, ಶೇಷಗಿರಿ ಪ್ರಭು, ಸುಜೀರ್ ಪೂಂಡಲೀಕ್ ನಾಯಕ್ ಮತ್ತು ಶ್ರೀಮತಿ ಮಿಜಾರ್ ತುಳಸಮ್ಮ—ಈ ಏಳು ಮಂದಿ ರೂ. ೫,೦೦೦ ದಂತೆ ಹಣ ಕೊಟ್ಟು ಸೊಸೈಟಿಯ ಅಜೀವ ಸದಸ್ಯರು; ಇವರಿಷ್ಟು ಮಂದಿಯೂ ಸ್ಥಳೀಯ ಥಿಯಸಾಫಿಕಲ್ ಸೊಸೈಟಿಯ ಐದು ಮಂದಿಯೂ ಸೇರಿ ಒಂದು ಆಡಳಿತೆ ಸಮಿತಿಯು ಏರ್ಪಟ್ಟಿತು. ಈ ಸಮಿತಿಯಲ್ಲಿ ಡಾ. ಕೇಶವ ಪೈ ಅವರು ಅಧ್ಯಕ್ಷರು; ಎ. ಬಿ. ಶೆಟ್ಟಿ—ಉಪಾಧ್ಯಕ್ಷರು; ಎಂ. ಎಸ್. ಪಿತಾಂಬರ ರಾವ್—ಕಾರ್ಯದರ್ಶಿ; ಎಂ. ವೆಂಕಟೇಶ ಪೈ ಕೋಶಾಧಿಕಾರಿ; ಶ್ರೀಮತಿ ಸುಶೀಲಾ ಚೌಟ, ಎಕ್ಸ್ ಒಫೀಸಿಯೋ ಸಹಾಯಕ ಕಾರ್ಯದರ್ಶಿ.

ಶಾಲಾ ವರ್ಧಂತಿ

ಅತ್ತಾವರ ಮುನ್ಸಿಪಲ್ ಶಾಲೆಯ ವರ್ಧಂತಿಯು ಶ್ರೀ ಬಿ. ಗಂಗಾಧರದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರು ವರದಿಯೋದಿದರು. ಶ್ರೀ ವಸಂತ ಸುವರ್ಣರು ಶಾಲೆಯ ಶುಭಾಶಂಸನೆ ಮಾಡಿದರು. ಶ್ರೀಗಳಾದ ಕುರುಳಿ ಭೀಮರಾವ್ ಮತ್ತು ಎ. ವೆಂಕಪ್ಪಯ್ಯನವರು ಭಾಷಣವಿತ್ತರು. ಶ್ರೀ ಬಿ. ಅಪ್ಪಯ್ಯನವರಿಂದ ರಚಿತವಾದ ಒಂದು ಪ್ರಹಸನವೂ ಅಭಿನಯಿಸಲ್ಪಟ್ಟಿತು.

ಹನುಮಾನ್ ಹೈಕಿಂಗ್ ಪಾರ್ಟಿ

ಶ್ರೀ. ಯು. ವಿ. ಕಿಣಿಯವರ ನೇತೃತ್ವದಲ್ಲಿ ಈ ಹೆಸರಿನಗರ ಜನರಿಂದ ಕೂಡಿದ ಪಾರ್ಟಿಯೊಂದು ತಾ. ೧೭ರಿಂದ ಜಿಲ್ಲೆಯೊಳಗೆ ೩೦೦ ಮೈಲು ನಡೆದು ಹೋಗುವರೆ ನಿಶ್ಚಯಿಸಿದೆ. ಶಾರೀರಿಕ ಚಟುವಟಿಕೆ ಗ್ರಾಮಜೀವನಾಭ್ಯಾಸ ಮೊದಲಾದವು ಇವರ ಉದ್ದೇಶ. ಮಹಾಜನರ ಸಹಕಾರ ಅಪೇಕ್ಷಿಸಲಾಗಿದೆ.

ಉಡುಪಿ

ಶಂಕು ಸ್ಥಾಪನೆ

ಹಣಿಯಾಡಿ ವಾರ್ಡಿನ ಪ್ರಾ. ಶಾಲೆಯ ನೂತನ ಕಟ್ಟಡದ ಶಂಕು ಸ್ಥಾಪನೆಯನ್ನು ತಾ. ೯ರಂದು ಸ್ಥಳೀಯ ಸರಾಫ್ ಶ್ರೀ. ವಾಮನ ಸುಬ್ರಾಯ ಕಾಮತರು ನೆರವೇರಿಸಿದರು.

ಜಿಲ್ಲಾ ವಿದ್ಯಾಧಿಕಾರಿ

ಯಾದ ಶ್ರೀ. ಎ. ವೆಂಕಟ ಸುಬ್ಬರಾಯರು ತಾ. ೧೩ರಂದು ಬೋ. ಹೈಸ್ಕೂಲಲ್ಲಿ ಹೈಸ್ಕೂಲ್ ಅಧ್ಯಾಪಕರನ್ನುದ್ದೇಶಿಸಿ ಮಾತನಾಡುತ್ತಾ ವಿದ್ಯಾವಂತ ತರುಣರಿಗೆ ಮಿಲಿಟರಿ ಖಾತೆಯಲ್ಲಿ ಉದ್ಯೋಗ ಮಾಡಲು ಸಾಕಷ್ಟು ಸಂದರ್ಭಗಳಿವೆ ಎಂದರು. ಅಂದು ಸಂಜೆ ಮುನಿಸಿಪಲ್ ಮೈನ್ ಶಾಲೆಯಲ್ಲಿ ಪ್ರಾ. ಶಾಲಾ ಶಿಕ್ಷಕ ಶಿಕ್ಷಕಿಯರ ಸಭೆಯಲ್ಲಿಯೂ ಅವರು ಭಾಷಣವಿತ್ತರು.

ಪುತ್ತೂರು

ವರ್ಗಾವರ್ಗಿ

ಇಲ್ಲಿಯ ರೆವೆನ್ಯೂ ಡಿವಿಜನಲ್ ಆಫೀಸರ್ ಶ್ರೀ. ಶ್ರೀರಾಮುಲು ನಾಯುಡು ಇವರಿಗೆ ಕರ್ನೂಲಿಗೂ, ತೂತುಕುಡಿಯ ಶ್ರೀ. ಎಂ. ಪಿ. ಸ್ವಾಮಿಕಣ್ಣು ಪಿಳ್ಳೆಯವರಿಗೆ ಇಲ್ಲಿಗೂ ವರ್ಗವಾಗಿದೆ.

ವಿಟ್ಲ

ದ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾದ ಶ್ರೀ. ಸಿ. ಯಸ್. ರಾಜಗೋಪಾಲ ಇವರಿಗೆ ಸುಳ್ಯಕ್ಕೂ ಪುತ್ತೂರಿನಲ್ಲಿ ಪ್ರೊಬೆಶನರಿ ಸಬ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ. ಗೋವಿಂದ ನಂಬಿಯಾರರಿಗೆ ವಿಟ್ಲಕ್ಕೂ ವರ್ಗವಾಗಿದೆ.

ದಕ್ಷಿಣ ಕನ್ನಡ ಮೂರನೆ ಸಹಕಾರಿ ಪರಿಷತ್ತು

ಇದನ್ನು ಜಿಲ್ಲಾ ಸಹಕಾರೀ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಇದೇ ಬರುವ ಮೇ ತಾರೀಕು ೧೬ ಮತ್ತು ೧೭ರಲ್ಲು ಪುತ್ತೂರಲ್ಲಿ ಜರಗಿಸಲು ನಿರ್ಣಯವಾಗಿ ಈ ಬಗ್ಗೆ ಪುತ್ತೂರಲ್ಲಿ ಸ್ವಾಗತ ಮಂಡಳಿಯು ಸ್ಥಾಪಿತವಾಗಿರುತ್ತದೆ. ಮೈಸೂರು ಸಂಸ್ಥಾನದ ಸಹಕಾರೀ ಸಂಘಗಳ ರಿಜಿಸ್ಟ್ರಾರಾದ ಶ್ರೀ. ಕೆ. ಸುಬ್ಬರಾಯರು ಪರಿಷತ್ತಿನ ಅಧ್ಯಕ್ಷರಾಗಲು ಒಪ್ಪಿರುತ್ತಾರೆ. ಜಿಲ್ಲೆಯಲ್ಲಿಯ ಎಲ್ಲಾ ಸಹಕಾರಿ ಸಂಘಗಳು ಪರಿಷತ್ತಿಗೆ ತಮ್ಮ ಪ್ರತಿನಿಧಿಗಳನ್ನು ನೇಮಿಸಿ ಇವರ ಹೆಸರು ಹಾಗೂ ಪ್ರತಿನಿಧಿ ಹಾಸಲು ರೂ. ೩ ಕೂಡಾ ಸಹಕಾರಿ ಪರಿಷತ್ತಿನ ಸ್ವಾಗತ ಮಂಡಳಿಯ ಕಾರ್ಯದರ್ಶಿ ಪುತ್ತೂರು, ಇವರಿಗೆ ಕಳುಹಿಸತಕ್ಕದ್ದು. ಪರಿಷತ್ತಿನ ಮುಂದೆ ಇರಿಸಲು ಬರಬಹುದಾದ ವಿಷಯಗಳಿದ್ದರೆ ಅಂಥ ನಿರ್ಣಯಗಳ ಪ್ರತಿಗಳನ್ನು ಸ್ವಾಗತಮಂಡಳಿಗೇನೆ ಕಳುಹಿಸತಕ್ಕದ್ದು ಎಂದು ಶ್ರೀ. ಉಡುಪಿ ಗೋವಿಂದರಾವ್ ಕಾರ್ಯದರ್ಶಿ ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘ ಮಂಗಳೂರು ಇವರು ತಿಳಿಸುತ್ತಾರೆ.

ಕಾಸರಗೋಡು

ಸಾರ್ವಜನಿಕ ವಂತಿಗೆಯಿಂದ, ತಾಳಿ ಪಡ್ಪಿನಲ್ಲಿ ನೂತನವಾಗಿ ಕಟ್ಟಿಸಿದ 'ಕೆ. ಪಿ. ವಿಟ್ಠಲ್‌ರಾವ್ ಪೆವಿಲಿಯೋನ್' ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಜಿಲ್ಲಾ ಕಲೆಕ್ಟರ್ ಮಿ। ಯಂ. ಕರಮತುಲ್ಲಾ ಐ. ಸಿ. ಯಸ್.ರವರ ಅಧ್ಯಕ್ಷತೆಯಲ್ಲಿ ಕಲೆಕ್ಟರವರ ಪತ್ನಿ ಬೇಗಮ್ ಕರಮತುಲ್ಲಾರವರು ಯಶಸ್ವಿಯಾಗಿ ಜರಗಿಸಿದರು. ಈ ಸಂದರ್ಭದಲ್ಲಿ ದಿವಂಗತ ಕೆ. ಪಿ. ವಿಟ್ಠಲ್‌ರಾವ್, ಅಮ್ಮೆಂಬಳ ಶ್ರೀನಿವಾಸ ಪೈ ಮತ್ತು ಇಲ್ಲಿಯ ಮುನ್ಸಿಫರಾದ ಶ್ರೀ. ಜಿ. ಯಸ್. ರೆಡ್ಡಿ ಇವರ ಭಾವ ಚಿತ್ರಗಳ ಅನಾವರಣ ಕಾರ್ಯವು ಶ್ರೀ. ಎ. ಶ್ರೀನಿವಾಸ ಪೈ, ಬಿ. ವೆಂಕಟ್ರಾಯ ಬಾಳಿಗ ಮತ್ತು ನಯಂಪಳ್ಳಿ ರಾಮರಾವ್ ಇವರಿಂದ ಕ್ರಮ ಪ್ರಕಾರ ಜರಗಿಸಲ್ಪಟ್ಟಿತು. ಸಭಿಕರಲ್ಲಿ ಡಾ. ಪಿ. ಯಸ್ ಭಟ್ಟರು ಮತ್ತು ಶ್ರೀ. ಪುಂಡೂರು ಲಕ್ಷ್ಮಿನಾರಾಯಣ ಪುಣಿಂಚತ್ತಾಯರು ಭಾಷಣವಿತ್ತರು. ಶ್ರೀ. ಎ. ವಿ. ಯನ್. ಮೆನೋನ್ ಇವರ ಧನ್ಯವಾದ ಸಮರ್ಪಣೆಯಾಯಿತು.

ಸಿನೆಮಾ ಸುದ್ದಿ

ಟೀಕೆ ಕಾಗಿಸಿದರು!

ಎರಡು ತಿಂಗಳ ಹಿಂದೆ 'ಫಿಲ್ಮ್ ಇಂಡಿಯಾ' ಪತ್ರಿಕಾ ಸಂಪಾದಕರ ಕಾರ್ಯದರ್ಶಿ ಸುಶೀಲಾ ರಾಣಿ—ಈಕೆ ಮುಂಗೋಪಿಯೆಂದವಳೆಂದು ಒಂದು ಪತ್ರಿಕೆ—ಭಾರತೀಯ ಚಲಚ್ಚಿತ್ರಗಳಲ್ಲಿ ನಟನಟಿಯರು ಟೀಕೆ ಕಾಗಿಸುವುದಲ್ಲದೆ, ಚುಂಬನವೇ ಇಲ್ಲವೆಂದು ಬಹಳ ಕಳವಳಗೊಂಡು ಒಂದು ಲೇಖನ ಬರೆದಿದ್ದಳು. ಈ ಬಗ್ಗೆ ಬಹಳವಾದ ವಿವಾದಗಳೂ ನಡೆದವು. ಚುಂಬಿಸುವುದು (ಬಹಿರಂಗವಾಗಿ) ಯೂರೋಪಿನಲ್ಲಿ ಅಶ್ಲೀಲವಲ್ಲವೆಂದೂ, ಭಾರತದಲ್ಲಿ ಬಹಿರಂಗ ಚುಂಬನವು ಶ್ರೀಮಂತವಲ್ಲ, ಬರೀ ಅಶ್ಲೀಲ, ಅಭ್ಯಸವೆಂದೂ ಹಲವರು ಟೀಕಿಸಿದರು. ಹೀಗಿದ್ದರೂ ಈಗ ನಮ್ಮ ಚಲಚ್ಚಿತ್ರ ನಿರ್ಮಾಪಕರು ಅಲ್ಲ ನಮ್ಮ ನಟನಟಿಯರು ಆ ಸಾಹಸಮಾಡಿಯೇ ಬಿಟ್ಟರು. 'ಪಹಿಲೀ ಮಂಗಲ್ ಗೌರಿ' ಎಂಬೀ ಮರಾಠಿ ಚಿತ್ರದಲ್ಲಿ ಸ್ನೇಹಪ್ರಭಾ ಪ್ರಧಾನ್ ಮತ್ತು ಶಾಹು ಮೋಡಕ್ ಚುಂಬನಕ್ಕೆ ಒಪ್ಪಿಬಿಟ್ಟರು. ಇದು ಭಾರತೀಯ ಪ್ರಥಮ ಬಹಿರಂಗ ಚುಂಬನ ಚಿತ್ರ. ನೋಡಬೇಕು, ಯಾವುದನ್ನು, ಈ ಚುಂಬನವನ್ನು ಮಾತ್ರವಲ್ಲ, ಇನ್ನು ಯಾವ ನಟನಟಿಯರು ಈ ಸಾಹಸದಲ್ಲಿ ಹಿಂದೆ ಬೀಳುತ್ತಾರೆಂಬುದನ್ನೂ!

"ನನ್ನ ಮಗು"

ಮೀನಾಕ್ಷಿಯದು! ವಿನಾಯಕರು ಇದರ ನಿರ್ದೇಶಕರು! ಸಾಲ್ವಿ, ದಾಮು ಅಣ್ಣಾ ಮೊದಲಾದವರೂ ಇದರಲ್ಲಿದ್ದಾರೆ. ಪ್ರಫುಲ್ಲ ಪಿಕ್ಚರ್ಸಿನಲ್ಲಿ ಇದು ತಯಾರಿಸಲ್ಪಟ್ಟಿದೆ.

"ಪೂಂಜಿ"

ಇದು ಪಂಚೋಲಿಯವರು ತಯಾರಿಸುತ್ತಿರುವ ಸಂಗೀತ ಸಂಭ್ರಮದ ಹೊಸ ಚಿತ್ರ. ಮನೋರಮಾ ಇದರಲ್ಲಿ ಹಾಡುತ್ತಾಳೆ! ರಾಗಿಣಿ, ಬೇಬಿ ಅಖ್ತರ್ ಮೊದಲಾದವರು ಇತರ ನಟಿಯರು.

ಅಂಜಲೀ ದೇವಿ

ಮೋತೀಲಾಲನೊಡನೆ ಆಚಾರ್ಯ ಪ್ರೊಡಕ್ಷನ 'ಆಗೇಕದಮ್' ಎಂಬ ಚಿತ್ರದಲ್ಲಿ ನಟಿಸುತ್ತಾಳೆ. ಇದು ಅವರ ಮೂರನೆಯ ಚಿತ್ರ. 'ಇಬ್ಬರು ಗ್ರಾಜ್ಯುವೇಟರು; ಒಬ್ಬಳು ಲೇಡೀ ಟೀಚರ್ ಮತ್ತೊಬ್ಬ ಗಂಡು ಟೀಚರ್, ಮದುವೆಯಾಗಬೇಕು—ಅರ್ಜಿ ಹಾಕಿರಿ' ಇದು ಕಥೆಯ ಗುಟ್ಟು!

'ನಮಸ್ತೇ'

ಮೆಸರ್ಸ್ ಸನ್ನಿಎಂಡ್ ಸಾದಿಕ್‌ರವರು 'ನಮಸ್ತೆ' ಎಂಬ ಹೆಸರಿನ ಚಿತ್ರ ತಯಾರಿಸುವರು. ಪ್ರತಿಮಾದಾಸಗುಪ್ತೆ ಇದರಲ್ಲಿ ನಾಯಕಿ. ಜಗದೀಶ್, ನಯಂಪಳ್ಳಿ ಮೊದಲಾದವರು ಇತರ ನಟವರ್ಗ.

ಲೀಲಾ ಚಿಟ್ನಿಸ್

ಚಿತ್ರಾ ಪ್ರೊಡಕ್ಷನಿನ ಮುಂದಿನ ಚಿತ್ರದಲ್ಲಿ ನಾಯಕಿಯಾಗುವಳೆಂಬುದು ಖಂಡಿತವಾಗಿದೆ. ನಾಯಕನಾರೋ ಇನ್ನೂ ಗೊತ್ತಾಗಿಲ್ಲ. ಕಥೆಯ ಹೆಸರೂ ಪ್ರಸಿದ್ಧವಾಗಿಲ್ಲ. ಅವರ ಈಗ ತಯಾರಾದ ಚಿತ್ರ 'ಪ್ರತಿಗ್ಯ' ಎಂಬುದು. ಮೋತೀಲಾಲ್ ಸ್ವರ್ಣಲತಾಳೊಡನೆ ನಟಿಸಿದ್ದು.

'ರಾಮಾನುಜ'

ಧಾರ್ಮಿಕ ಮಹಾಗುರು ರಾಮಾನುಜರು! ಅವರ ಮಹಾಕಥೆ ಚಿತ್ರರೂಪಕ್ಕಿಳಿದಿದೆ. ದೇವಕೀ ಬೋಸರಂಥಾ ಕುಶಲ ದಿಗ್ದರ್ಶಕರ ಕೈಯ್ಯಲ್ಲಿ ನೋಡಬೇಕು ಈ ಚಿತ್ರದ ಮಹಾತ್ಮ್ಯವನ್ನು.

'ಕಲ್ಪಮೋತಿ'

ರಮೋಲಾ ಅಭಿನಯಿಸುವ ಚಿತ್ರ. ರಮೋಲಾ, ಖಜಾಂಚಿ ನೋಡಿದವರನ್ನು ಹುಚ್ಚು ಹಿಡಿಸಿದ ಹುಡುಗಿ! ಪುನಃ ಇದರಲ್ಲಿ ಬಂದಿದ್ದಾಳೆ. ಅದೇ ನಗೆ, ಅದೇ ವಿಲಾಸ, ಅದೇ ಹಾವಭಾವಗಳು. ಶ್ಯಾಮ್, ರಾಮದುಲ್ಹಾರಿ ಮತ್ತು ಗ್ಯಾನಿ ಮೊದಲಾದವರು ಇತರ ನಟವರ್ಗ.

ಸಾಧನಾ-ಸುರೇಂದ್ರರು

ಅಮರ ಪಿಕ್ಚರ್ಸಿನ 'ಪೈಗಮ್'ದಲ್ಲಿ ಜತೆಗೂಡಿದ್ದಾರೆ. ಸುರೇಂದ್ರ ದೇಸಾಯಿ ಈ ಚಿತ್ರ ನಿರ್ದೇಶಕರು.

ಶಕಾರಿ-ಲಾಲದೇಸಾಯಿ

ಇವರು ಪ್ರಭಾತ್ ಕಂಪನಿಯ ಮುಂದಿನ ಚಿತ್ರ 'ಇಂಕಾರ್' ನಲ್ಲಿ ಪ್ರಣಯಿ ಪ್ರಣಯಿನಿಯರಾಗಿ ಅಭಿನಯಿಸುತ್ತಾರೆ.

'ಕಾನವಾಜ್'

ಶಹ ಸಾರ್ವಭೌಮ ಆಗಿ! ನಿಜವಾದ ಜೀವನದಲ್ಲಿ ಹೇಗೋ! ಅಂತೂ ನಟನೆಯಲ್ಲಿ ಹಾಗೆಯೆ! ಈಗ ಆತ 'ಮಾಸ್ಟರ್‌ಜಿ' ಎಂಬ ಜಾನಕ್ ಪಿಕ್ಚರ್ಸಿನಲ್ಲಿ ಅಭಿನಯಿಸುತ್ತಾನೆ.

ಶಾಂತರಾಮರಿಗೆ ಸಂತಾನ

ಆಗುತ್ತದೆ ಬೇಗ. ಅವರ ಮೋಹದ ಎರಡನೇ ಮಡದಿ ಜಯಶ್ರೀಯಲ್ಲಿ. ಶಕುಂತಲಾ ಚಿತ್ರದಲ್ಲಿ ಈಗ ಆಕೆ ನಟಿಸುತ್ತಾಳೆ ಶಕುಂತಳೆಯಾಗಿ. 'ಶಕುಂತಳಾ' ಹೊರಬೀಳುವಾಗ, ಶಾಂತರಾಮರ ಸಂತಾನವೂ ಹೊರಬೀಳುವುದು. ಗರ್ಭಿಣಿಯಾಗಿ ನಟಿಸುವ ಭಾಗ್ಯ. ಜೀವನ ನಾಟಕದ ಶಾಂತಿ ಸುಪ್ರೀತರಿಗೊಪ್ಪಿಳಿಗೇ ಅಲ್ಲ, ಜಯಶ್ರೀಗೂ ಬಂದಿದೆ.

ಮೊಹಬತ್ ದುರದೃಷ್ಟ

ಮೊಹಬತ್ ಚಿತ್ರಕ್ಕೆ ಏನೋ ದುರದೃಷ್ಟ. ಮುಮತಾಜ್ ಶಾಂತೀ ಮೋತೀಲಾಲರು ಇದರಲ್ಲಿ ನಟಿಸುವುದಾಗಿ ಮೊದಲು ಗೊತ್ತಾಗಿತ್ತು. ಆದರೆ ಅದು ತಪ್ಪಿಹೋಯಿತು. ಮುಮತಾಜ್ ಶಾಂತಿ ಸ್ಥಾನಕ್ಕೆ ಹುಸ್ನಬಾನು ಎಂದಾಯಿತು. ಈಗ ಅನೆರಡೂ ತಪ್ಪಿದೆ. ಶಾಂತಾ ಆಪ್ಟೆ ಪಹಾರಿ ಸನ್ಯಾಲರು ನಟಿಸುವುದೆಂದೀಗ ಗೊತ್ತಾಗಿದೆ. ಶಾಂತಾ ಆಪ್ಟೆ ಮೊದಲೇ ಕಲಹಪ್ರಿಯಳು. ಈ ಚಿತ್ರವು ಮುಗಿಯುವುದರೊಳಗೆ ಇನ್ನು ಏನೇನೆಲ್ಲಾ ಆಗಲಿದೆಯೋ?

'ದೇಟ್ ನೈಟ್ ಇನ್ ರಿಯೋ' ಸೆಂಟ್ರಲ್‌ನಲ್ಲಿ

ಟ್ವೆಂಟಿಯತ್ ಸೆಂಚುರಿ ಫೋಕ್ಸ್‌ನವರ ಸಂಗೀತ ನೃತ್ಯ ಸಮ್ಮೇಳನದ ಸುಂದರ ನೈಸರ್ಗಿಕ ವರ್ಣದ ರಮ್ಯ ಚಿತ್ರ 'ದೇಟ್ ನೈಟ್ ಇನ್ ರಿಯೊ' ಸೆಂಟ್ರಲ್‌ನಲ್ಲಿ ಪ್ರದರ್ಶಿತವಾಗುತ್ತದೆ. ಆಂಗ್ಲ ಚಿತ್ರಗಳಲ್ಲಿ ಇದು ರಮಣೀಯವಾದುದು. ಎಲಿಸ್ ಫಾಯ್, ಕಾರ್ಮೆನ್ ಮಿರಾಂಡಾ, ಡಾನ್ ಅಮೆಚಿ ಮೊದಲಾದ ಪ್ರಸಿದ್ಧ ನಟನಟಿಯರು ಇದರಲ್ಲಿ ಅಭಿನಯಿಸುವರು.

ಬಾಲಾಜಿ ಟೊಕೀಸಿನಲ್ಲಿ 'ಸತ್ಯ ಹರಿಶ್ಚಂದ್ರ'

ಈ ಸಿನೆಮದ ಪ್ರಥಮ ಪ್ರದರ್ಶನವು ತಾ. ೧೭ರಂದು ಅಪರಾಹ್ನ ಗಂ. ೩-೪೫ಕ್ಕೆ ನೆರವೇರಿತು. ಈ ಚಿತ್ರದ ಉದ್ಘಾಟನಾ ಸಮಾರಂಭವನ್ನು ಮದ್ರಾಸ್ ಸರಕಾರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ. ಎ. ಬಿ. ಶೆಟ್ಟರು ನೆರವೇರಿಸಿದರು. ಶ್ರೀ. ಶೆಟ್ಟರು ತಮ್ಮ ಚಿಕ್ಕ ಭಾಷಣದಲ್ಲಿ ಚಲಚ್ಚಿತ್ರೋದ್ಯಮದ ಪ್ರಗತಿ ಹಾಗೂ ಕನ್ನಡ ಚಿತ್ರಗಳ ಪ್ರಯತ್ನಗಳನ್ನು ಪ್ರಶಂಸಿಸುತ್ತಾ, 'ಹರಿಶ್ಚಂದ್ರ' ಚಿತ್ರವನ್ನು ಅಭಿನಂದಿಸಿದರು. ಆ ವೇಳೆ ಶ್ರೀ. ಬಿ. ವೈಕುಂಠ ಬಾಳಿಗರು ವಂದನಾರ್ಪಣೆ ಮಾಡಿ, ಬಾಲಾಜಿ ಟಾಕೀಸಿನವರಿಗೆ ಶುಭೇಚ್ಛೆ ಕೋರಿದರು. ಅನಂತರ 'ಸತ್ಯ ಹರಿಶ್ಚಂದ್ರ'ದ ಸರ್ವಪ್ರಥಮ ಪ್ರದರ್ಶನವಾಯಿತು. ಈ ಸಮಾರಂಭಕ್ಕೆ ನಗರದ ಪತ್ರಿಕೋದ್ಯಮಿಗಳೂ, ಕೆಲವು ಮಂದಿ ಸಭ್ಯ ಗೃಹಸ್ಥರೂ ಆಮಂತ್ರಿತರಾಗಿದ್ದರು. ವಿರಾಮ ಕಾಲದಲ್ಲಿ ಆಮಂತ್ರಿತರಿಗೆಲ್ಲಾ ಉಪಹಾರ ಸತ್ಕಾರವಿತ್ತು.

ಹರಿಶ್ಚಂದ್ರ ಕಥೆಯು ಸಮಸ್ತ ಭಾರತೀಯರಿಗೂ ಪರಿಚಿತವಾದುದು. ಈ ಚಿತ್ರದ ಅಭಿನಯಕಾರರೂ, ಕನ್ನಡ ಪ್ರೇಕ್ಷಕರಿಗೆ, ನಾಟಕ, ಸಿನೆಮಾಗಳೆರಡರಲ್ಲಿಯೂ ಚಿರಪರಿಚಿತರು. ಎಸ್. ಎಸ್. ನಾಟಕ ಮಂಡಳಿಯ ಪ್ರಸಿದ್ಧ ನಟರು, ಹಾಗೂ ಕನ್ನಡ 'ವಸಂತಸೇನಾ' ಖ್ಯಾತಿಯ ನಟವರ್ಗದವರು ಇದರಲ್ಲಿಯೂ ನಟಿಸುತ್ತಾರೆ. ಶ್ರೀ. ಸುಬ್ಬಯ್ಯ ನಾಯ್ಡು ಹರಿಶ್ಚಂದ್ರನಾಗಿ, ಲಕ್ಷ್ಮೀಬಾಯಿ ಚಂದ್ರಮತಿಯಾಗಿ, ನಾಗೇಂದ್ರರಾವ್ ವಿಶ್ವಾಮಿತ್ರನಾಗಿ ಕೃಷ್ಣಮೂರ್ತಿರಾವ್ ನಕ್ಷತ್ರಕನಾಗಿ, ಮರಿರಾವ್ ಬ್ರಾಹ್ಮಣನಾಗಿ ಉತ್ತಮ ನಟನೆ ತೋರಿಸಿದ್ದಾರೆ. ಚಲಚ್ಚಿತ್ರ ಪ್ರೇಮಿಗಳು, ಅದರಲ್ಲೂ ಕನ್ನಡ ಸಿನೆಮಾ ನೋಡಬೇಕೆನ್ನುವವರೆಲ್ಲರೂ ಅವಶ್ಯ ನೋಡಿ ಆನಂದಿಸಬೇಕಾದ ಚಿತ್ರವಿದು.

ಕಾಮನ್ಸಿನಲ್ಲಿ ಕಯ್ಯೂರ ಶಿಕ್ಷೆಯ ಪ್ರತಿಧ್ವನಿ!

ಅಕ್ರಮ ಕೃತ್ಯಕ್ಕೆ ಸರಕಾರದ ಒಪ್ಪಿಗೆಯೆ?

'ಅಮೆರಿ-ಲಿನ್‌ಲಿತ್‌ಗೋ ಮನೆಗೆ ಹೋಗಲಿ'

ಕಯ್ಯೂರ ಕೈದಿಗಳನ್ನು ಗಲ್ಲಿಗೇರಿಸಿದ ಪ್ರತಿಧ್ವನಿ

ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು!

ಮಾರ್ಚ ೩೦ನೇ ತಾರೀಖಿನ ದಿವಸ ಕಯ್ಯೂರಿನ ನಾಲ್ಕು ರೈತರನ್ನು ಗಲ್ಲಿಗೇರಿಸಿದುದರ ಸಂಬಂಧದಲ್ಲಿ ಕಾಮನ್ಸ್ ಸಭೆಯಲ್ಲಿ ತಾ. ೧೫ರಂದು ಅನೇಕ ಪ್ರಶ್ನೋತ್ತರಗಳು ನಡೆದವು. ಅವುಗಳಲ್ಲಿ ಕೂಲಿಗಾರ ಪಕ್ಷದ ಸೊರೆನಸನರ ಪ್ರಶ್ನೆಗೆ ಉತ್ತರ ಕೊಡುತ್ತ ಭಾರತ ಮಂತ್ರಿಗಳಾದ ಅಮೆರಿಯವರು ಈ ರೀತಿ ತಿಳಿಸಿದರು. "ಗವರ್ನರ ಜನರಲರಿಗೆ ಈ ವಿಷಯದಲ್ಲಿ ಇಲ್ಲಿಂದ ಯಾವ ಸಲಹೆ ಕೊಡಲ್ಪಟ್ಟಿಲ್ಲ. ದಯೆ ತೋರಿಸುವ ಅಧಿಕಾರವು ಅವರಿಗೆ ಇದ್ದೇ ಇರುವದು. ಭಾರತದ ಸಾರ್ವಜನಿಕರಿಂದಾಗಲಿ ಸಂಸ್ಥೆಗಳಿಂದಾಗಲಿ ಮಾಡಿಕೊಳ್ಳಲ್ಪಟ್ಟ ಮನವಿಯ ವರದಿಗಳು ನನಗೆ ಬಂದಿಲ್ಲ. ಆದರೆ ಹಾಗೆ ಮನವಿಗಳು ಬಂದಿದ್ದರೆ ಹಿಂದುಸ್ತಾನದಲ್ಲಿಯ ಜವಾಬದಾರಿ ಅಧಿಕಾರಿಗಳು ಅವುಗಳನ್ನು ಸಂಪೂರ್ಣ ವಿಚಾರ ಮಾಡಿರುವರೆಂದು ನನಗೆ ಭರವಸೆಯಿದೆ."

ಕಲ್ಲಿಕೋಟೆಯ ಕಮ್ಯುನಿಸ್ಟ ಪತ್ರಿಕೆಯಾದ 'ದೇಶಾಭಿಮಾನಿ'ಯ ಸಂಪಾದಕರು ಹಾಗು ಪ್ರಕಾಶಕರಾದ ಶ್ರೀ ಎಂ. ಎಸ್. ದೇವದಾಸ ಇವರ ಮೇಲೆ ಮದ್ರಾಸ ಸರಕಾರದವರು ಮುದ್ರಣ ಕಾಯಿದೆಯನ್ವಯ ನೋಟೀಸು ಪ್ರಯೋಗಿಸಿ ೧೦೦೦ ರೂ. ಜಾಮೀನು ಕೇಳಿದ್ದಾರೆ. ಕಯ್ಯೂರ ಖಟ್ಲೆಯ ಸಂಬಂಧದಲ್ಲಿ ಆಕ್ಷೇಪಾರ್ಹವಾದ ಅಗ್ರಲೇಖ ಬರೆದದ್ದೇ ಜಾಮೀನು ಕೇಳಲು ಕಾರಣವಾಗಿದೆಂದು ತಿಳಿದುಬರುತ್ತದೆ.

ಕಯ್ಯೂರ ಕೈದಿಗಳನ್ನು ಫಾಶಿಗೆ ಕೊಟ್ಟ ವರ್ತಮಾನವನ್ನು ಸರಕಾರವು ಅಧಿಕೃತವಾಗಿ ಏಕೆ ಪ್ರಕಟಿಸಲಿಲ್ಲವೆಂಬ ಬಗ್ಗೆ, ಲಂಡನ 'ಇಂಡಿಯಾ ಆಫೀಸಿ'ನ ಅಧಿಕಾರಿಗಳನ್ನು 'ಡೈಲಿ ವರ್ಕರ' ಪತ್ರಿಕೆಯ ಬಾತ್ಮೀದಾರನು ಹೋಗಿ ಕೇಳಲು, ಈ ವಿಚಾರವು ಇಂಡಿಯಾ ಗವರ್ನಮೆಂಟಿಗೆ ಸಂಬಂಧಪಟ್ಟಿದ್ದಲ್ಲದೆ, ಇಂಡಿಯಾ ಆಫೀಸಿಗೆ ಸಂಬಂಧಪಟ್ಟಿದ್ದಲ್ಲವೆಂದೂ ಹೇಳಿ ಇಂಡಿಯಾ ಗವರ್ನಮೆಂಟು ನಿಜವಾಗಿ ಆ ಸುದ್ದಿಯನ್ನು ಪ್ರಕಟಿಸದಿದ್ದರೆ ಅದು ವಿಷಾದಕರವೆಂದೂ ಅಭಿಪ್ರಾಯವಿತ್ತರು.

ಅಕ್ರಮಕೃತ್ಯಕ್ಕೆ ಸರಕಾರದ ಒಪ್ಪಿಗೆ?

"ಇಂಡೆಮ್ನಿಟಿ ಕಾಯಿದೆ."

ಮೊನ್ನೆ ಮೊನ್ನೆ ಸಂಯುಕ್ತ ಪ್ರಾಂತದ ಗವರ್ನರರು ಇಂಡೆಮ್ನಿಟಿ ಕಾಯಿದೆಯನ್ನು ಜಾರಿ ಮಾಡಿ ತಮ್ಮ ನೌಕರರ ತಲೆ ಮೇಲೆ ಅಭಯ ಹಸ್ತವಿಟ್ಟರು! ಕಾಂಗ್ರೆಸ್ ಆಂದೋಲನವನ್ನು ನಿರ್ನಾಮ ಮಾಡುವಲ್ಲಿ, ಸರಕಾರೀ ಕೆಲಸಗಾರರು ಏನಾದರೂ ಅಕ್ರಮ ಕೃತ್ಯಗಳನ್ನು ನಡೆಸಿದರೆ ಅವರನ್ನು ಈ ಕಾಯಿದೆ ಪ್ರಕಾರ ಕ್ಷಮಿಸಲಾಗುವುದು! ಬೀಹಾರ ಗವರ್ನರರೂ ಈಗ ಸಂಯುಕ್ತ ಪ್ರಾಂತದ ಗವರ್ನರರ ಹಾದಿ ಹಿಡಿದಿದ್ದಾರೆ. ಈ ರೋಗವು ಇಂತಹ ಪ್ರಾಂತದ ಗವರ್ನರರಿಗೂ ಬೇಗ ಹಬ್ಬಲು ಅವಕಾಶವಿದೆ. ಮಿಲಿಟರಿ ರಾಜ್ಯಭಾರ ನಡೆಸುವ ಕಾಲದಲ್ಲಿ ಇಂಥಾ ಶಾಸನ ಅವಶ್ಯ! ಆದರೆ ನಿಜವಾಗಿ ಈಗ ಭಾರತದಲ್ಲಿ ಮಿಲಿಟರಿ ರಾಜ್ಯಭಾರವುಂಟೆ? ಅದಿಲ್ಲವಾದರೆ ಇಂಥಾ ಕಾಯಿದೆಯ ಅವಶ್ಯಕತೆಯಾದರೂ ಏನು? ಡಿಫೆನ್ಸ್ ಕಾನೂನಂತೂ ಈಗ ಎಲ್ಲರ ತಲೆ ಸುತ್ತಿ ಸುಳಿಯುತ್ತಲೇ ಇರುವಾಗ ಇದೊಂದು ಪ್ರತ್ಯೇಕ ಕತ್ತಿಯಾಕೆ ಎತ್ತಬೇಕು! ಸರಕಾರೀ ಕೆಲಸಗಾರರು ಅಕ್ರಮ ಮಾಡುವುದನ್ನು ಪ್ರತ್ಯಕ್ಷ ಒಪ್ಪಿಕೊಳ್ಳುವ ಈ ಕಾಯಿದೆಯಿಂದ ಸರಕಾರೀ ನೌಕರರು ಅಕ್ರಮ ಕೃತ್ಯಮಾಡಿದರೂ ತಪ್ಪಿಸಿಕೊಳ್ಳಬಹುದೆಂದು ದೃಢ ನಿರ್ಧಾರವುಳ್ಳವರಾಗುವರೆಂದರೆ, ಈ ಕಾಯಿದೆಯಿಂದ ಲೋಕಕ್ಕೆ ಹಿತವಾದೀತೆ?

'ಅಮೆರಿ ಲಿನ್‌ಲಿತ್‌ಗೋರನ್ನು ಮನೆಗೆ ಹೋಗಲಿ'

ಲಂಡನ್ ಸಾರ್ವಜನಿಕ ಸಭೆ ವಿನಂತಿ

'ಅಮೃತಸರ' ದಿನದ ನಿಮಿತ್ತ ಲಂಡನಿನ ಸೆಂಟ್ರಲ್ ಹಾಲಿನಲ್ಲಿ ನೆರೆದ ಸಭೆಯಲ್ಲಿ, ಮಹಾತ್ಮರನ್ನು ಬಿಡಬೇಕೆಂದೂ, ಅಮೆರಿ ಲಿನ್‌ಲಿತ್‌ಗೋರನ್ನು ಮನೆಗೆ ಕಳುಹಿಸಬೇಕೆಂದೂ ಎಲ್ಲಾ ಭಾಷಣಕಾರರೂ ಒತ್ತಿ ಹೇಳಿದರು. ಸೋರೆನ್ಸನರು ಶ್ವೇತಪತ್ರವನ್ನು ಕಡುತರ ಟೀಕಿಸಿದರು. ಸಭೆಯಲ್ಲಿ ನೆರೆದಿದ್ದ ಸಾವಿರಾರು ಮಂದಿಯಲ್ಲಿ ಆಂಗ್ಲೇಯರೇ ಬಹಳ ಇದ್ದರು.

ಜಲಿಯಾನ್ ವಾಲಾಬಾಗಿನ ರಾಕ್ಷಸೀ ಕೃತ್ಯ!

"ಜಲಿಯನ್‌ವಾಲಾಬಾಗಿನ ದುರಂತಕ್ಕೆ ಸಮಾನವಾದ ಕ್ರೂರಕೃತ್ಯ ಬ್ರಿಟಿಷ್ ಸಾಮ್ರಾಜ್ಯಶಾಹಿ ಇತಿಹಾಸದಲ್ಲಿಯೇ ಬೇರೆ ಇಲ್ಲ. ಅದೊಂದು ಅಸಾಧಾರಣವಾದ ರಾಕ್ಷಸೀ ಕೃತ್ಯ! ಇದು ಇತಿಹಾಸದಲ್ಲಿ ವಿಕೃತ ರೂಪವೆತ್ತಿ ನಿಲ್ಲುವುದು! ಅಲ್ಲಿ ಕೂಡಿದ ಜನಸಮೂಹದಲ್ಲಿ ಲಾಠಿಯ ಹೊರತು ಬೇರೇನೂ ಇರಲಿಲ್ಲ. ಆ ಜನತೆ ಯಾರ ಮೇಲೂ ಆಕ್ರಮಿಸಲು ಹೊರಟಿರಲಿಲ್ಲ. ಅಲ್ಲಿ ಬರಿಯ ಸಭೆ ಸೇರಿತ್ತು. ಅದನ್ನು ಚದರಿಸಲು ಗುಂಡು ಹಾರಿಸಿದಾಗ ಜನತೆ ಓಡಿಹೋಯಿತು. ಹೊರ ಹೋಗಲು ಸ್ಥಳವಿಲ್ಲದೆ ಇಕ್ಕಟ್ಟಿನಲ್ಲಿ ಜನರು ಸಿಕ್ಕಿಕೊಳ್ಳಲು ಒಂದೇ ಗುಂಡು ಮೂರು ನಾಲ್ಕು ಜನರನ್ನು ಕೊಂದಿತು. ಜನತೆ ದಿಗ್ಭ್ರಾಂತವಾಗಿ ಅತ್ತಿತ್ತ ಓಡುತಿತ್ತು. ಗುಂಡುಗಳನ್ನು ಮಧ್ಯೆ ಗುರಿಯಿಟ್ಟರೆ ಜನತೆ ಬದಿಬದಿಗಳಲ್ಲಿ ಓಡುತಿತ್ತು. ಆ ಮೇಲೆ ಗುಂಡುಗಳ ಗುರಿ ಬದಿಗೂ ತಿರುಗಿತು. ಆಗ ಅನೇಕರು ನೆಲದ ಮೇಲೆ ಬಿದ್ದುಕೊಂಡರು. ಆದರೆ ಗುಂಡುಗಳ ಗುರಿ ನೆಲಕ್ಕೂ ಹರಿಯಿತು. ಆ ಮೇಲೆ ಸಿಡಿಗುಂಡುಗಳು ಮುಗಿಯಲು, ಬಂದ ಸೈನಿಕರು ಅನಿವಾರ್ಯರಾಗಿ ಹಿಂದೆ ಸಾಗಲು ಎಷ್ಟು ಬೇಕೋ ಅಷ್ಟೇ ಉಳಿದಿದ್ದಾಗ, ೩೭೯ ಮಂದಿ ಸತ್ತು ೧೨೦೦ಕ್ಕೂ ಮಿಕ್ಕಿದವರು ಗಾಯಗೊಂಡು ಬಿದ್ದಿದ್ದರು. ಹಾಗೆ ಮಾಡಿ ಸೈನಿಕರು ಬೆನ್ನು ತಿರುಗಿಸಿದರು. ಅವರ ಮೇಲೆ ಒಂದು ಕಲ್ಲು ಕೂಡಾ ಬಿದ್ದಿರಲಿಲ್ಲ" ಚರ್ಚಿಲರೇ ಹಿಂದೆ ಈ ಮಾತು ಹೇಳಿದ್ದರು!

ಸಾದರ-ಸ್ವೀಕಾರ

ದಿ ಪೊಪ್ಯುಲರ್ ಇನ್ಶ್ಯುರೆನ್ಸ್ ಕಂಪೆನಿ ಲಿಮಿಟೆಡ್

ಇದರ ೧೯ನೇ ವರ್ಷ - ದಿಸೆಂಬರ ೩೧ನೇ ತಾರೀಕಿಗೆ ಅಂತ್ಯವಾಗುವ ಇದರ ವರದಿ ಮತ್ತು ಲೆಕ್ಕ ಪತ್ರಗಳ ಪತ್ರವು ನಮ್ಮ ಹಸ್ತಗತವಾಗಿದೆ. ಈ ವರ್ಷದಲ್ಲಿ ರೂ. ೯,೩೮,೭೦೦ರ ಪ್ರೊಪೋಸಲ್‌ಗಳು ಬಂದಿದ್ದು ಇವುಗಳಲ್ಲಿ ರೂ. ೮,೨೮,೪೫೦ರಷ್ಟರ ಪೋಲೀಸಿಗಳಾಗಿವೆ. ಈ ಹೊಸ ವ್ಯವಹಾರವು ೧೯೪೧ರ ವ್ಯವಹಾರಕ್ಕಿಂತ ಶೇಕಡಾ ೧೦ರ ಅಭಿವೃದ್ಧಿ ಸೂಚಿಸುತ್ತದೆ. ಪ್ರೀಮಿಯಮ್ ಮತ್ತು ಬಡ್ಡಿ ಜಮಾ, ರೂ. ೧,೯೯,೩೪೫-೧-೭. ಮೇನೇಜ್‌ಮೆಂಟಿನ ಖರ್ಚು ಈ ವರ್ಷವೂ ಕಡಿಮೆ ಮಾಡಿದೆ. ರಿನ್ಯೂವಲ್ ಖರ್ಚಿನ ಸರಾಸರಿಯು ಈಗ ಶೇಕಡಾ ೩೮-೩ ಮತ್ತು ೧೯-೮ ಆಗಿದ್ದು ಕಳೆದ ವರ್ಷಕ್ಕಿಂತ ಬಹಳ ಕಡಿಮೆ ನಿಂತಿದೆ. ಲೈಫ್ ಎಶ್ಯೂರೆನ್ಸ್ ಫಂಡಿಗೆ ಈ ವರ್ಷ ರೂ. ೬೯,೩೭೪-೯-೮ ಸೇರಿಸಲಾಗಿದೆ. ಮತ್ತು ಲೈಫ್ ಫಂಡಿನಿಂದ ಪಡೆದ ಬಡ್ಡಿ ಶೇಕಡಾ ೪-೧ರಷ್ಟಾಗಿದೆ. ಕಂಪನಿಯು ಸರಕಾರೀ ಮತ್ತು ಅಧಿಕೃತ ಸೆಕ್ಯುರಿಟಿಗಳನ್ನು ರೂ. ೩,೬೪,೦೦೦ರಷ್ಟು ಪಡೆದಿದೆ. ಈ ವರ್ಷ ಇನ್ಶ್ಯೂರೆನ್ಸ್ ಕಾನೂನಿನ ಪ್ರಕಾರ ರಿಸರ್ವ್ ಬೇಂಕ್ ಒಫ್ ಇಂಡಿಯಾದಲ್ಲಿ ಅಧಿಕ ಮೊತ್ತ ರೂ. ೨,೦೦,೦೦೦ ಡಿಪೋಸಿಟ್ ಇದೆ. ಹೀಗೆ ಕಂಪನಿ ಎಲ್ಲಾ ತರದಲ್ಲೂ ಅಭಿವೃದ್ಧಿ ಹೊಂದಿದೆ. ಈ ಕಂಪನಿ ಮಹಾ ಜನರ ಸಹಕಾರದಿಂದ ಉತ್ತರೋತ್ತರ ಅಭಿವೃದ್ಧಿ ಹೊಂದಲಿ!

ತುಳುನಾಡಿನ ತೆಂಕಣ ನೆಲದಲ್ಲಿ

ಒಂದು ಜಿನ (ತೀರ್ಥಂಕರ?) ಶಿಲಾವಿಗ್ರಹ

— ಕಯ್ಯಾರ ಕಿಞ್ಞಣ್ಣ ರೈ.

ತುಳುನಾಡಿನ ತೆಂಕಣ ನೆಲದಲ್ಲಿ, ಕಾಸರಗೋಡು ತಾಲೂಕು ಕುಬಣೂರು ಗ್ರಾಮದ ಪರೀಲ್ ಶ್ರೀಶಂಕರನಾರಾಯಣ ಕುಬಣೂರರಾಯರ ಮನೆಯ ಸಮೀಪದ ನಾಗಬನ ಒಂದರಲ್ಲಿ ಒಂದು ಪ್ರಾಚೀನ ಜಿನ ಶಿಲಾ ವಿಗ್ರಹವು ಈಗ ಕಾಣಸಿಕ್ಕಿದೆ. ಕುಬಣೂರು ಎಂಬುದು ಮಂಗಲಪಾಡಿ ರೈಲ್ವೆ ಸ್ಟೇಶನಿನಿಂದ, ಸುಮಾರು ಎರಡು ಮೈಲುದೂರ ಮೂಡು ಮತ್ತು ತೆಂಕು ನೆಲೆಯಾಗಿದ್ದು ಆಗ್ನೇಯ ದಿಕ್ಕಿನಲ್ಲಿದೆ. ಮಂಗಲಪಾಡಿ ಸ್ಟೇಷನಿನಿಂದ ಮೂಡು ದಿಕ್ಕಿನಲ್ಲಿ ವಿಟ್ಲಕ್ಕೆ ಹೋಗುವ ಸರಕಾರೀ ರಸ್ತೆಯಲ್ಲಿ ಸುಮಾರು ಎರಡು ಮೈಲು ಹೋದರೆ ಬೇಕೂರ ಕಟ್ಟೆ ಎಂಬ ಸ್ಥಳವೊಂದು ಇದೆ. ಇಲ್ಲಿ ಬ್ರಾಹ್ಮಣರ ಒಂದು ಉಪಹಾರ ಭವನವಿದೆ. ಇಲ್ಲಿಂದ ತೆಂಕು ದಿಕ್ಕಿಗೆ ಸುಮಾರು ಎರಡು ಫರ್ಲಾಂಗು ಕೆಳಗೆ ಬಯಲಿಗೆ ಇಳಿದರೆ ಕುಬಣೂರಿಗೆ ಹೋಗಬಹುದು. ಕುಬಣೂರು ರಾಯರ ಮನೆತನದ ಮನೆಯ ಬಳಿ ದೊಡ್ಡದೊಂದು ನಾಗ ಬನವಿದ್ದು, ಆ ನಾಗಬನದಲ್ಲಿ ಈ ಜಿನಶಿಲಾ ವಿಗ್ರಹವನ್ನು ಕಾಣಬಹುದು

ಇಲ್ಲಿನ ಕುಬಣೂರು ರಾಯರ ಮನೆತನವು ಬಹಳ ಹಿಂದಿನಿಂದಲೇ ಪ್ರಸಿದ್ಧವಾದುದು ಈ ಆಸ್ತಿಯನ್ನು ಕುಂಬಳೆ ಸೀಮೆ ಅರಸರು, ಮಾಯಿಪ್ಪಾಡಿ ಅರಮನೆತನದ ಹಿಂದಿನ ಅರಸರೊಬ್ಬರು, ಕುಬಣೂರಾಯರ ಹಿರಿಯರಿಗೆ ಸಾವಿರಾರು ವರ್ಷಗಳ ಹಿಂದೆ ಉಂಬಳಿಯಾಗಿ ಬಿಟ್ಟು ಕೊಟ್ಟಿದ್ದರೆಂದು ಹೇಳುತ್ತಾರೆ ಅಂತೂ ಒಂದು ಒಂದೂವರೆ ಸಾವಿರ ವರ್ಷದಿಂದೀಚೆ ಇಲ್ಲಿ ಕುಬಣೂರಾಯರ ಮನೆತನದವರೇ ಇದ್ದು ಅದಕ್ಕಿಂತ ಹಿಂದೆ ಎಂದೋ ಇಲ್ಲಿ ಜೈನರ ವಸತಿಯಿದ್ದರೂ ಇರಬಹುದೇನೊ? ಅಂತೂ ಈ ಜಿನ ಪ್ರತಿಮೆಯಿರುವ ನಾಗ ಬನದಲ್ಲಿರುವ ಮರವೊಂದು ಬಹಳ ಪ್ರಾಚೀನವಾಗಿ ಏನಿಲ್ಲೆಂದರೆ ಒಂದು ಸಾವಿರ ವರ್ಷಕ್ಕೆ ಮೀರಿದ್ದೆಂದು ತಿಳಿಯಬಹುದಾದಷ್ಟು ಹಳೆಯದಾಗಿದೆ ಆದ ಕಾರಣ ಈ ಜಿನ ವಿಗ್ರಹವು ಯಾವ ಕಾಲದ್ದು, ಯಾರು ಇದನ್ನು ಇಲ್ಲಿ ಸ್ಥಾಪಿಸಿದರು, ಎಂಬೀ ವಿಚಾರಗಳನ್ನು ಇತಿಹಾಸ ಸಂಶೋಧಕರು ವಿಮರ್ಶಿಸಿ ತಿಳಿಸಬೇಕಾಗಿದೆ

ನಾಗಬನಗಳು ನಮ್ಮ ತುಳುನಾಡಿನಲ್ಲಿ ಬಹಳ. ನಾಗಪೂಜೆಯೂ ತುಳುನಾಡಿನ ಒಂದು ವೈಶಿಷ್ಟ್ಯ ಅನಾದಿಯಿಂದ ಇಂದಿನ ವರೆಗೂ ಈ ಸಂಪ್ರದಾಯವು ನಡೆಯುತ್ತಾ ಬಂದಿದೆ. ಪ್ರತಿಯೊಂದು ಆಸ್ತಿಯಲ್ಲಿ ಪ್ರತಿಯೊಂದು ಮನೆಮೊರದ ಸೊತ್ತಾಗಿ, ಒಂದೊಂದು ನಾಗಬನ ನಮ್ಮ ತುಳುನಾಡಿನಲ್ಲಿದೆಯೆಂದರೂ ಹೆಚ್ಚಾಗದು. ನಾಗ ಬನದಲ್ಲಿಟ್ಟು ಪೂಜಿಸುವ ವಿಗ್ರಹ ಬರೇ ನಾಗನದು, ಸರ್ಪದ್ದು. 'ನಾಗವಿಗ್ರಹದ ಪೂಜೆ ಮಾಡುವ ನಾಗಬನಕ್ಕೂ ಜಿನ ಮೂರ್ತಿಗೂ ಏನು ಸಂಬಂಧವುಂಟೋ ನನಗರಿಯದು. ನಾಗಬನದಲ್ಲಿ ಜಿನ ವಿಗ್ರಹವಿರುವುದು ನಾನಿದುವರೆಗೆ ಕೇಳಿಲ್ಲ. ಆದರೆ ಜಿನ ಮೂರ್ತಿಗಳಲ್ಲಿ ಸರ್ಪನ ಜಡೆ ಮೊದಲಾದ್ದವಿರುವುದರಿಂದ, ಸರ್ಪಕೂ ಜಿನ ಮೂರ್ತಿಗೂ ಸಂಬಂಧವುಂಟೆಂಬೇನೋ ಊಹಿಸಬಹುದು. ಅಥವಾ ಒಂದಾನೊಂದು ಕಾಲದಲ್ಲಿ ಈ ಸ್ಥಳದಲ್ಲಿ ಜಿನ ದೇವಾಲಯವಿದ್ದು, ಆ ಮೇಲೆ ಜೈನರ ಪ್ರಭಾವ ಸಂಪತ್ತುಗಳು ಈ ಕಡೆಯಲ್ಲಿ ಕ್ಷೀಣವಾಗುತ್ತಾ ಬರಲು, ಬ್ರಾಹ್ಮಣ ಸಂಪ್ರದಾಯದವರು, ಜೈನ ಮೂರ್ತಿಯ ಆರಾಧನೆಯನ್ನುಳಿದು, ಆ ಸ್ಥಳದ ಮಹಾತ್ಮ್ಯವನ್ನು ಮಾತ್ರ ನಂಬಿ, ಅಲ್ಲಿ ನಾಗ ಪ್ರತಿಷ್ಠೆ ಮಾಡಿದ್ದರೂ ಇರಬಹುದು. ಅಂತೂ ಇವು ಕೇವಲ ನನ್ನ ಕಲ್ಪನೆ ಮಾತ್ರ.

ಈ ಜಿನ ಮೂರ್ತಿಯು ಸುಮಾರು ಒಂದು ಅಡಿ ಎತ್ತರವಿದೆ, ಇದನ್ನು ಕಲ್ಲಿನಲ್ಲಿ ಕಡೆದಿರುವರು ಮೂರ್ತಿ ಬಹಳ ಸುಂದರವಾಗಿದೆ. ಇದೊಂದು ದಿಗಂಬರ ವಿಗ್ರಹ ತಲೆಯಲ್ಲಿ ಏಳು ಜಡೆ ಸರ್ಪ ಆವರಣವಿದೆ ಎಡ ಮತ್ತು ಬಲಗಡೆಗಳಲ್ಲಿ ಒಂದೊಂದು ಸ್ತ್ರೀ ಪುರುಷ ವಿಗ್ರಹಗಳಿವೆ. ಕೆಳಗೆ ನಾಲ್ಕು ಆಸನಸ್ಥ ಪುರುಷ ವಿಗ್ರಹಗಳಿವೆ ಈ ವಿಗ್ರಹದ ವಿವರವನ್ನು ನೋಡಲು ಇದು ಯಾವುದೇ ತೀರ್ಥಂಕರನ ವಿಗ್ರಹವೆಂದು ತೋರುತ್ತದೆ

ಈ ನಾಗಬನದ ನಾಗ ವಿಗ್ರಹವು ತೆಂಕು ಮುಖವಾಗಿದೆ. ಈ ನಾಗ ಪ್ರತಿಷ್ಠೆ ಮಾಡಿದ ಸ್ಥಳದಲ್ಲಿ ತುಂಬ ಹುತ್ತ ಬೆಳೆದಿದೆ. ಇತ್ತೀಚೆಗೆ ಹುತ್ತದ ಎಡೆಯಿಂದ ಒಂದು ಶಿಲಾ ವಿಗ್ರಹದ ಬದಿ ಕಂಡುಬರಲು, ಆ ಹುತ್ತವನ್ನು ಸ್ವಲ್ಪ ಕೆದಕಿ ನೋಡಿದಾಗ, ಈ ಮೂರ್ತಿ ಸ್ಪಷ್ಟವಾಗಿ ಕಂಡು ಬಂತೆಂದು ಹೇಳುತ್ತಾರೆ. ಮಣ್ಣಿನಡಿಯಲ್ಲಿದ್ದ ಈ ಶಿಲಾ ಮೂರ್ತಿಯು ಹುತ್ತದ ಮಣ್ಣು ಮೇಲೆ ಬಂದಂತೆ, ಅದರೊಡನೆ ಮೇಲ್ಬಂದು, ಶತ ಶತಮಾನಗಳಿಂದ ತನಗೊದಗಿದ ದುರದೃಷ್ಟವನ್ನು ಈಗ ನೀಗಿ ಹೀಗೆ ಬೆಳಕು ಕಂಡಿರಬಹುದು! ಇದು ಮಾತ್ರವಲ್ಲದೆ ಈಗ ಈ ನಾಗಕಲ್ಲಿನ ಮೂಡು ಭಾಗದಲ್ಲಿ ಇನ್ನೊಂದು ನಾಗ ವಿಗ್ರಹವೂ ಹುತ್ತದೆಡೆಯಿಂದ ತಲೆಯೆತ್ತಿ ನಿಂತಿದೆ. ಇದನ್ನು ವಿಚಾರಿಸಿದರೆ ಈ ನಾಗಬನದಲ್ಲಿ, ಈ ನೆಲದ ಗರ್ಭದಲ್ಲಿ ಇನ್ನೆಷ್ಟು ದಿವ್ಯ ವಿಗ್ರಹಗಳು ಅಡಗಿವೆಯೋ ಎಂದು ಆಶ್ಚರ್ಯ ಹುಟ್ಟುತ್ತದೆ.

ಒಟ್ಟಿನಿಂದ ಇದೊಂದು ಗಮನೀಯ ವಿಚಾರವಾಗಿದೆ, ಇತಿಹಾಸ ಸಂಶೋಧಕರಿಗೆ ಇಲ್ಲಿ ಒಂದು ಅಪೂರ್ವ ಸಂದರ್ಭ ಒದಗಿದೆ ಜೈನ ಧರ್ಮಾಭಿಮಾನಿಗಳಿಗೆ ಇಲ್ಲೊಂದು ಪುಣ್ಯ ಸಂಧಿ ದೊರೆತಿದೆ ಇತಿಹಾಸದಲ್ಲಿ ಅಭಿಮಾನವಿದ್ದರೂ ಅದರ ಸಂಶೋಧನೆಯಲ್ಲಿ ನನ್ನ ಜ್ಞಾನ ಸಾಲದು ಆದ್ದರಿಂದ ಕನ್ನಡ ನಾಡಿನ ಮಹನೀಯರ, ಇತಿಹಾಸ ಸಂಶೋಧಕರ ಹಾಗೂ ಜಿನ ಧರ್ಮಾಭಿಮಾನಿಗಳ ಗಮನವನ್ನು ಈ ಕಡೆ ಸೆಳೆಯಬೇಕೆಂಬ ಉದ್ದೇಶದಿಂದ ನಾನೀ ಪ್ರಸ್ತಾಪನೆಯನ್ನಿಲ್ಲಿ ಮಾಡಿದ್ದೇನೆ ಇನ್ನೂ ಮೈ ನಾನಾ ಸ್ಥಳವನ್ನು ಸಂದರ್ಶಿಸಬೇಕೆಂದಿದ್ದೇನೆ ಆ ನನ್ನ ಅಲ್ಪಮತಿಗೆ ಇದಕ್ಕಿಂತ ಹೆಚ್ಚಿನ ವಿವರವೇನಾದರೂ ತಿಳಿದರೆ ಅದನ್ನು ನಾನು ಆಗ ಅರಿಕೆ ಮಾಡಿಕೊಳ್ಳುತ್ತೇನೆ.

THE CANARA BANKING CORPORATION Ltd.

(Incorporated in British India with limited liability)

STATEMENT OF AFFAIRS AS ON 31ST DECEMBER 1942

Capital & Liabilities	Rs	As	Ps	Property & Assets	Rs	As	Ps
Paid up Capital	6 36 890	0	0	Office premises furniture etc	91 6509		0
Reserve & other funds	3 71 882	13	11	Advances	31 28 612	4	9
Deposits	41 83 273	4	1	Investment on Govt Securities etc at cost	15 34 536	14	3
Due to Bankers	5 08 545	12	1	Sundries	74 183	5	7
Bills per contra	3 59 357	12	1	Bills for Collection	3 59 357	12	1
Sundries including branch adjustments & undisbursed profits	2 83 736	5	9	Cash on Hand & with bankers	12 05 397	14	8
Profit for the year 1942	49 461	3	5				
Total Rs	63 93 747	3	4	Total Rs	63,93 747	3	4

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲ್
ಒಂದೇ ಉಪಾಯ
ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ 2-12-0, ರೂ 4-8-0, ರೂ 8 ಕ್ರಯಕ್ಕೆ ದೊರಕುವುದು

ತಯಾರಿಸುವವರು ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT and also on BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc. at very favourable rates

All kinds of inland banking business undertaken

ಹುಳುಕಡ್ಡಿ ಮದ್ದು

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ, ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮಂರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ಯಾಕ್ಟ್ರೀಸ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ದಿವ್ಯೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಬಭೇದಿಗ ಉತ್ತಮಾಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 30—4—1943 [ಸಂಚಿಕೆ 18]

ಮಹಾತ್ಮರೇ ಮೊದಲಾದ

ರಾಷ್ಟ್ರ ಧುರೀಣರ ಬಂಧನ ನ್ಯಾಯಬಾಹಿರವಿದೆ!

ಫೆಡರಲ್ ಕೋರ್ಟಿನ ಮಹತ್ವದ ತೀರ್ಮಾನ

"ಬಂಧಿಸುವ ಅಧಿಕಾರ ಸ್ಪಷ್ಟವಾಗಿಲ್ಲ"

ಡಿಫೆನ್ಸ್ ಓಫ್ ಇಂಡಿಯಾ ಕಾನೂನು—ಎಂದರೆ ಈಗ ಎಲ್ಲರಿಗೂ ಅದರ ಅರಿವಿದೆ; ಎಷ್ಟೋ ಮಂದಿ ಭಾರತೀಯರು, ಭಾರತದ ಮುಂದಾಳುಗಳು, ದೇಶ ಸೇವಕರು ಜನಪ್ರಿಯ ರಾಷ್ಟ್ರ ಧುರೀಣರು; ಈ ಕಾನೂನಿಗೆ ಬಲಿಯಾಗಿ ಸೆರೆಮನೆ ಸೇರಿದ್ದಾರೆ; ಯಾವಾಗ ಬಿಡುಗಡೆಯಾಗುವರೋ ಗೊತ್ತಿಲ್ಲದೆ, ಗುರಿಯಿಲ್ಲದೆ, ಎಲ್ಲಿರುವರೋ ಯಾವುದೂ ತಿಳಿಯದೆ ಕತ್ತಲೆ ಕೋಣೆಯಲ್ಲಿ ತಳ್ಳಲ್ಪಟ್ಟಿದ್ದಾರೆ. ಒಟ್ಟಿನಿಂದ ಅಖಿಲ ಭಾರತವನ್ನು ನಿರ್ಬಂಧದಲ್ಲಿಟ್ಟು ಬ್ರಿಟಿಷರು ಆಳುತ್ತಿರುವ ಆಡಳಿತದ ಸಿದ್ಧದ ಪ್ರಬಲ ಅಸ್ತ್ರವೆಂದರೆ ಡಿಫೆನ್ಸ್ ಓಫ್ ಇಂಡಿಯಾ ಕಾನೂನಾಗಿದೆ. ಮೊನ್ನೆ ಮೊನ್ನೆ ಮಹಾತ್ಮರು ನೆಹರು ಅಜಾದರೇ ಮೊದಲಾದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೊಂದಿಗೆ, ಪ್ರಾಂತಗಳ, ಜಿಲ್ಲೆಗಳ, ನಗರ ಗ್ರಾಮಗಳ ಸಾವಿರಾರು ಮಂದಿ ಜನಪ್ರಿಯ ಮುಂದಾಳುಗಳು ಯಾವುದೇ ವಿಚಾರಣೆಯಿಲ್ಲದೆ, ಎಲ್ಲಿರುವರೆಂಬೂ ಗೊತ್ತಿಲ್ಲದೆ ಸೆರೆಮನೆಗಳಲ್ಲಿ ತಳ್ಳಲ್ಪಟ್ಟಿರುವುದೂ ಈ ಕಾನೂನಿನ ಬಲಾತ್ಕಾರದಿಂದಲೇ. ಆದರೆ ಡಿಫೆನ್ಸ್ ಓಫ್ ಇಂಡಿಯಾ ಕಾನೂನುಗಳು ಎಷ್ಟರ ಮಟ್ಟಿಗೆ ನ್ಯಾಯವಿವೆ, ಎಷ್ಟರ ಮಟ್ಟಿಗೆ ಲೋಪ ದೋಷಯುಕ್ತವಾಗಿವೆ, ಆ ಕಾನೂನಿನ ನಿಬಂಧನೆಗಳನ್ನನ್ವಯಿಸುವಾಗ ಎಷ್ಟರ ನ್ಯಾಯವಾಗಿದೆ ಎಂಬೀ ಸಂಗತಿಗಳು ಆಗಾಗ ಅಲ್ಲಲ್ಲಿ ಹಲವು ಕೆಲವು ನ್ಯಾಯಾಧೀಶರ ತೀರ್ಮಾನಗಳಿಂದ ಹೊರ ಬಂದಿವೆ. ಅಂಥಾ ತೀರ್ಮಾನಗಳಲ್ಲಿ ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಸರ್ ಮೊರಿಸ್‌ಗ್ವಾಯರರ ಮೊನ್ನೆ ಮೊನ್ನೆಯ ತೀರ್ಮಾನವೊಂದು ಅತ್ಯಂತ ಮಹತ್ವದಿದೆ.

ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ೨೬ನೇ ನಿಯಮವು ನ್ಯಾಯ ಬಾಹಿರವೆಂದು ಈಗ ಸರ್ ಮೋರಿಸ್ ಗ್ವಾಯರರು ಸಾರಿದ್ದಾರೆ. ಇದರಿಂದ ದೇಶ ಸರ್ವತ್ರ ಆಂದೋಲನವುಂಟಾಗಿದೆ. ಫೆಡರಲ್ ಕೋರ್ಟು ಭಾರತದ ಪ್ರಾಮುಖ್ಯ ಅಧಿಕಾರೀ ಕೋರ್ಟು. ಸರ್ ಮೋರಿಸ್ ಗ್ವಾಯರರು ಅದರ ಮುಖ್ಯ ನ್ಯಾಯಾಧೀಶರು. ಅವರ ತೀರ್ಮಾನವೆಂದರೆ ಸರಕಾರವು ಅದಕ್ಕೆ ಬಗ್ಗಲೇಬೇಕಾಗಿದೆ. ಯಾವ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ೨೬ನೇ ನಿಯಮವು ನ್ಯಾಯ ಬಾಹಿರವಿದೆಯೆಂದು ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶ ಸರ್ ಗ್ವಾಯರರು ಹೇಳಿದರೋ, ಆ ನ್ಯಾಯ ಬಾಹಿರ ನಿಯಮದ ಅನ್ವಯ ಪ್ರಕಾರವೇ ಗಾಂಧಿಜಿ ಮೊದಲಾದ ಸಾವಿರಾರು ಮಂದಿ ರಾಷ್ಟ್ರ ಧುರೀಣರನ್ನು ಬಂಧಿಸಿರುವುದರಿಂದ, ಈ ತೀರ್ಮಾನದ ಪ್ರಕಾರ ಅವರನ್ನೆಲ್ಲಾ ಬಿಡುಗಡೆ ಮಾಡಬೇಕಾಗಿದೆ. ಸರಕಾರವಿಂದು ಈ ೨೬ನೆಯ ನಿಯಮವು ನ್ಯಾಯಬಾಹಿರವಾದರೆ ಇನ್ನೊಂದು ನಿಯಮವನ್ನು ಅನ್ವಯಿಸಿಯೋ ಅಥವಾ ಹೊಸ ನಿಯಮವನ್ನು ಸೃಷ್ಟಿಸಿಯೋ, ರಾಷ್ಟ್ರದ ಮುಖಂಡರನ್ನು, ಮಹಾತ್ಮಾಜಿ ಮೊದಲಾದವರನ್ನು ಸೆರೆಮನೆಯಿಂದ ಬಿಡುಗಡೆ ಮಾಡದಿರಲು ಯೋಚನೆ ಮಾಡುತ್ತಿದೆಯೆಂಬುದೂ ಹತ್ತು ಪಾಲಿಗೂ ಖಂಡಿತವೇ ಆಗಿದೆ.

ಇದರ ಪ್ರಸ್ತಾವನೆ ಹೀಗಿದೆ:

ಶ್ರೀ ಕೇಶವ ತಳಪದೆಯೆಂಬವರನ್ನು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ೨೬ನೆಯ ನಿಯಮದನ್ವಯ ಸೆರೆ ಹಿಡಿಯಲಾಯಿತು. ಆದರೆ ಅವರನ್ನು ಬಿಡುಗಡೆ ಮಾಡಬೇಕೆಂದು ಮೇಲಿನ ಕೋರ್ಟಿನಲ್ಲಿ ವಿನಂತಿಮಾಡಿಕೊಳ್ಳಲಾಯಿತು. ಮುಂಬಯಿ ಹೈಕೋರ್ಟಿನವರು ಈ ವಿನಂತಿಯನ್ನು ತಿರಸ್ಕರಿಸಿಬಿಟ್ಟರು. ಹೈಕೋರ್ಟಿನ ಈ ತೀರ್ಪಿನ ವಿರುದ್ಧ ಫೆಡರಲ್ ಕೋರ್ಟಿಗೆ ಅಪೀಲು ಹೋಯಿತು. ಫೆಡರಲ್ ಕೋರ್ಟು ಭಾರತದ ಮುಖ್ಯ ನ್ಯಾಯಾಸ್ಥಾನ. ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಧೀಶ ಸರ್ ಗ್ವಾಯರರು ೨೬ನೆಯ ನಿಯಮದ ನ್ವಯದ ಈ ಬಂಧನವು ನ್ಯಾಯ ಬಾಹಿರವೆಂದು ಸಾರಿಬಿಟ್ಟರು. ಹೀಗೆ ಶ್ರೀ ಕೇಶವ ತಳಪದೆಯವರ ವಿಚಾರಣೆಯ ಫಲವಾಗಿ ಈ ತೀರ್ಮಾನವುಂಟಾಯಿತು. ಅವರ ವಿಷಯವಾಗಿ ಮಾಡಿದ್ದ ಈ ತೀರ್ಮಾನವೀಗ ಇಡೀ ದೇಶಕ್ಕೇ ಅನ್ವಯಿಸುತ್ತದೆ. ಮಹಾತ್ಮರೇ ಮೊದಲಾದ ಸಾವಿರಾರು ಮಂದಿಯೂ ಈ ನಿಯಮಂತೆ ಬಂಧಿಸಲ್ಪಟ್ಟವರಾದ ಕಾರಣ, ಅವರ ಬಿಡುಗಡೆಯನ್ನೂ ಸರಕಾರ ಮಾಡಬೇಕಾಯಿತು. ಆದ್ದರಿಂದ ವೈಸರಾಯರು ಈ ಕುರಿತು ಪ್ರತ್ಯೇಕ ಆಲೋಚನೆ ಮಾಡಬೇಕಾಗಿ ಬಂದಿದೆ. ವೈಸರಾಯರೀಗ ಏನು ಮಾಡುವರೋ ನೋಡಬೇಕು. ಸರ್ ಮೊರಿಸ್ ಗ್ವಾಯರರು ಈ ೨೬ನೆಯ ನಿಯಮದ ಕುರಿತು ಹೀಗೆಂದು ತೀರ್ಮಾನ ಬರೆದಿರುವರು. (೧) "ಈ ಕಾಯಿದೆಯಲ್ಲಿ 'ಯೋಗ್ಯ ಕಾರಣಗಳಿಂದ ಅಧಿಕಾರಿಗಳ ಸಂಶಯಕ್ಕೆ ಕಾರಣನಾದವನು ಎಂದು ಬರೆದಿದೆ; ಯೋಗ್ಯ ಕಾರಣಗಳಿಂದ ಅಧಿಕಾರಿಗಳ ಸಂಶಯಕ್ಕೆ ಕಾರಣನಾದವನು ಎಂದು ಇದರ ಅರ್ಥವೋ? ಅಲ್ಲ? (೨) ಯೋಗ್ಯ ಕಾರಣಗಳಿಂದ ಸಂಶಯಕ್ಕೆ ಗುರಿಯಾದ ವ್ಯಕ್ತಿಗಳನ್ನು ಬಂಧಿಸಲು ಮಾತ್ರ ಅಧಿಕಾರವಿರುವವರು, - ಕೇವಲ ಕೆಲವು ವ್ಯಕ್ತಿಗಳು ಹಲವು ರೀತಿಯಿಂದ ವರ್ತಿಸದಂತೆ ಮಾಡುವುದಕ್ಕಾಗಿ ಸ್ಥಾನ ಬದ್ಧತೆಯಲ್ಲಿಡಲು ಅಧಿಕಾರವಿರುವುದೋ?—ಈ ಎರಡು ಪ್ರಶ್ನೆಗಳು ಇಲ್ಲಿ ಹುಟ್ಟುತ್ತವೆ. ಇದನ್ನು ನಾವು ಸೂಕ್ಷ್ಮವಾಗಿ ಪರೀಕ್ಷಿಸಬೇಕು! ಯುದ್ಧಕಾಲದಲ್ಲಿ ಪ್ರತಿಯೊಂದು ಸರಕಾರವೂ, ಶಾಂತಿ ಕಾಲದಲ್ಲಿ ನಾವು ನಿರೀಕ್ಷಿಸದಂತಹ ಹೊಸ ಅಧಿಕಾರಗಳನ್ನು ಪಡೆಯುವುದೇನೋ ಸಹಜ. ಆದರೆ ಯುದ್ಧಕಾಲದಲ್ಲಿ ಸದುದ್ದೇಶದಿಂದ ಮಾಡಿದ ಕಾಯಿದೆಗಳನ್ನು ಟೀಕಿಸಬಾರದೆಂದಿದ್ದರೂ, ಶಾಸನ ಮಂಡಳವು ಕೊಡದ ಅಧಿಕಾರಗಳನ್ನು ಸರಕಾರದವರು ನಡೆಸದಂತೆ ನೋಡುವುದೂ ಅವಶ್ಯವಾಗಿದೆ" ಹೀಗೆಂದು ಸರ್ ಗ್ವಾಯರರು ಪ್ರಸ್ತಾಪಿಸಿ ಮುಂದೆ ಹೀಗೆ ತೀರ್ಮಾನಿಸಿದ್ದಾರೆ.

ಅಧಿಕಾರ ಯಾರಿಗಿದೆ?

"ಸ್ಥಾನ ಬದ್ಧತೆ ಮಾಡುವ ಅಧಿಕಾರವನ್ನು ಇಂಥವರೇ ಹೊಂದಿರುವರೆಂದು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಲ್ಲಿ ಸ್ಪಷ್ಟವಾಗಿಲ್ಲ. ಈ ಮಹತ್ವದ ನಿರ್ಣಯವನ್ನು ಕಾಯಿದೆ ಮಾಡಿದ ಕಾರ್ಯಕಾರೀ ಮಂಡಳಕ್ಕೆ ಬಿಟ್ಟು ಬಿಡಲಾಗಿದೆ. ಈ ಅಧಿಕಾರವನ್ನು ಒಬ್ಬ ವ್ಯಕ್ತಿಗೆ ಅಥವಾ ಒಂದು ಸಂಸ್ಥೆಗೆ ಒಪ್ಪಿಸುವುದಕ್ಕೆ ಯಾವ ಆತಂಕವೂ ಇಲ್ಲವೆಂದು ನನಗೆ ಕಂಡು ಬರುವುದು. ಒಬ್ಬ ಮನುಷ್ಯನನ್ನು ಸ್ಥಾನಬದ್ಧತೆಯಲ್ಲಿಡಬೇಕೆಂದು ಗೃಹಮಂತ್ರಿಗನಿಸಿದರೆ ಅಂಥವರನ್ನು ಬಂಧಿಸುವುದಕ್ಕೆ ಅಧಿಕಾರ ಕೊಡುವ ಕಾಯಿದೆ ಮಾಡುವುದಕ್ಕೂ, ಕೇಂದ್ರ ಸರಕಾರವು ತಾನು ಆರಿಸುವ ಅಥವಾ ತಾನು ಅಧಿಕಾರ ಕೊಡುವ ಅಥವಾ ಸ್ಥಾನಬದ್ಧತೆಯಲ್ಲಿಡಲು ಅಧಿಕಾರ ಕೊಡುವುದಕ್ಕೂ ವ್ಯತ್ಯಾಸವಿದೆ. ಈ ಅಧಿಕಾರವನ್ನು ಕೇಂದ್ರ ಸರಕಾರವು ಇಟ್ಟುಕೊಂಡಿದೆಯಲ್ಲದೆ ಪ್ರಾಂತಿಕ ಸರಕಾರಗಳ ಗವರ್ನರರ ಸಲಹೆಗಾರರಿಗೆ ಒಪ್ಪಿಸಿದೆ. ಇಂಗ್ಲೆಂಡಿನಲ್ಲಿ ಈ ರೀತಿ ಬಂಧಿಸಲ್ಪಡುವವರ ಸಂಖ್ಯೆ ಕಡಿಮೆಯಿರುವುದರಿಂದ ಪ್ರತಿಯೊಬ್ಬರ ವಿಚಾರವನ್ನು ಗೃಹಮಂತ್ರಿ ಮಾಡಬಹುದು. ಆದರೆ ಭಾರತದಲ್ಲಿ ಈ ರೀತಿ ಬಂಧಿತರಾದವರ ಸಂಖ್ಯೆ ಬಹಳ ಇರುವುದರಿಂದ ಪ್ರತಿಯೊಬ್ಬರ ವಿಚಾರ ಗವರ್ನರ್ ಜನರಲರು ಅಥವಾ ಗವರ್ನರರು ಮಾಡುವರೆಂದು ನಂಬುವುದು ಹೇಗೆ. ಆದ್ದರಿಂದ ಈ ಅಧಿಕಾರವು ಎಷ್ಟೇ ಸಮಯ ಸಾಮಾನ್ಯ ಅಧಿಕಾರಗಳ ಕೈಯ್ಯಲ್ಲೇ ಇರುವುದು. ಈ ಅಧಿಕಾರವಿರುವವರು ಬಂಧಿಸಲ್ಪಟ್ಟ ವ್ಯಕ್ತಿ ಯೋಗ್ಯ ಕಾರಣಗಳಿಂದ ಸಂಶಯಾಸ್ಪದನಿರುವನೋ ಇಲ್ಲವೋ ಎಂಬುದನ್ನು ತಿಳಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ.

'ಇಂಥ ಒಂದು ರೀತಿಯಲ್ಲಿ ಒಬ್ಬ ವ್ಯಕ್ತಿ ವರ್ತಿಸಲಿರುವನೆಂದು ಯೋಗ್ಯ ಕಾರಣಗಳಿಂದ ಸಂಶಯ ಬಂದವರನ್ನು ಸ್ಥಾನಬದ್ಧತೆಯಲ್ಲಿಡಲು ಅಧಿಕಾರ ದೊರೆತರೆ, ಆ ಅಧಿಕಾರ ಬಲದಿಂದ ಒಬ್ಬ ವ್ಯಕ್ತಿಯನ್ನು ಒಂದು ಕೆಲಸ ಮಾಡದಂತೆ ನಿರ್ಬಂಧಿಸುವುದೂ ಸರಿಯೇ? ಈ ಎರಡು ಅಧಿಕಾರಗಳಲ್ಲಿ ವ್ಯತ್ಯಾಸವಿದೆಯೆಂದು ನಾವು ಒಪ್ಪಲೇಬೇಕು. ಒಂದು ಕೆಲಸ ಮಾಡಲಿರುವನೆಂದು ಸಂಶಯ ಬಂದರೆ ಆ ವ್ಯಕ್ತಿಯನ್ನು ಸ್ಥಾನ ಬದ್ಧತೆಯಲ್ಲಿಡಲು ಕಾನೂನು ಅಧಿಕಾರ ಕೊಟ್ಟಿದೆ. ಆದರೆ ಆ ಕಾನೂನಿನ ಬಲದಿಂದ ಸಂಶಯ ಬಾರದಿರುವವರನ್ನೂ ಬಂಧಿಸಲು ಅವಕಾಶವಿದೆ. ಒಬ್ಬನು ಒಂದು ಕೆಲಸ ಮಾಡುವುದನ್ನು ತಪ್ಪಿಸುವುದವಶ್ಯವೆಂದು ಸರಕಾರಕ್ಕೆ ತೋರಿದರೆ ಸಾಕು ಅತನನ್ನು ಸರಕಾರವು ಸ್ಥಾನಬದ್ಧತೆಯಲ್ಲಿಡಬಹುದೆಂದು ಈ ನಿಯಮದಲ್ಲಿದೆ. ಆದರೆ ಸರಕಾರದವರು ತಮ್ಮ ಮೇಲೆ ಜವಾಬ್ದಾರಿ ತೆಗೆದುಕೊಳ್ಳ ಬಯಸದೆ ಆ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಬಹುದು. ಆ ವ್ಯಕ್ತಿ ಅಂಥಾ ಕೆಲಸ ಮಾಡುವನೆಂಬುದಕ್ಕೆ ಆಧಾರವಿಲ್ಲದಿದ್ದರೂ ಅತನನ್ನು ಬಂಧಿಸಬಹುದು. ಈ ರೀತಿ ಮಾಡಲು ೨೬ನೇ ನಿಯಮದಲ್ಲಿ ಅಧಿಕಾರವಿದೆ. ಆದರೆ ಈ ರೀತಿ ಅಧಿಕಾರ ಕೊಡಲು ೧೦ನೇ ಪ್ರಕರಣದಲ್ಲಿ ನನಗೇನೂ ಆಧಾರ ತೋರುವುದಿಲ್ಲ. ಇಷ್ಟೊಂದು ವ್ಯಾಪಕವಾದ ನಿಯಮ ಮಾಡಲು ಶಾಸನ ಮಂಡಳವು ಕೇಂದ್ರ ಸರಕಾರಕ್ಕೆ ಅಧಿಕಾರ ಕೊಡಬಹುದಿತ್ತು. ಆದರೆ ಇದುವರೆಗೆ ಹಾಗೇನೂ ಕೊಟ್ಟಿಲ್ಲ. ಈಗ ಒಬ್ಬ ವ್ಯಕ್ತಿ ಹೀಗೆ ಮಾಡಲಿರುವನೆಂದು ಸಂಶಯ ಬಂದರೆ ಮಾತ್ರ ಅವನನ್ನು ಬಂಧಿಸುವ ಅಧಿಕಾರವಿದೆ. ಆದರೆ ಒಬ್ಬ ವ್ಯಕ್ತಿಯು ಇನ್ನುಮುಂದೆ ಇಂಥ ಕೆಲಸ ಮಾಡಬಹುದೆಂದು ಅಥವಾ ಇಂಥಾ ಕೆಲಸ ಅವನಿಂದ ಆಗಬಹುದೆಂದೂ ಸರಕಾರಕ್ಕೆ ತೋರಿದರೆ ಅವನನ್ನು ಬಂಧಿಸುವ ಅಧಿಕಾರ ಸರಕಾರಕ್ಕಿಲ್ಲ. ಆ ಕೆಲಸವನ್ನು ಆತನು ಮಾಡುವನೆಂಬುದಕ್ಕೆ ಯೋಗ್ಯ ಆಧಾರಗಳಿದ್ದರೆ ಮಾತ್ರ ಆತನನ್ನು ಬಂಧಿಸಬೇಕು."

ಕೊನೆಯ ಒಂದು ಎಚ್ಚರಿಕೆ!

ಸರ್ ಮಾರಿಸ್ ಗ್ವಾಯರರು ಈ ರೀತಿ ತೀರ್ಮಾನಕೊಡುತ್ತಾ, ಕೊನೆಗೆ ಹೀಗೆ ಎಚ್ಚರಿಸಿರುವರು, "ನಮ್ಮ ಈ ತೀರ್ಮಾನದಿಂದ ಸರಕಾರಕ್ಕೆ ತಾತ್ಕಾಲಿಕ ತೊಂದರೆಗಳಾಗುವವೆಂದು ನಮಗೆ ತಿಳಿದಿದೆ. ಸದ್ಯದ ಕಷ್ಟಕಾಲದಲ್ಲಿ ಇಂತಹ ತೊಂದರೆಯಾಗುವುದನ್ನು ತಿಳಿದು ನನಗೂ ದುಃಖವಾಗುತ್ತದೆ. ಆದರೆ, ಈ ರೀತಿಯ ವಿಶೇಷಾಧಿಕಾರದ ಅನಿಯಂತ್ರಿತ ಪ್ರಯೋಗದಿಂದ ಭಾರತದ ಅಸಂಖ್ಯಾತ ಪ್ರಜೆಗಳ ಮೇಲೆ ಅನ್ಯಾಯವಾಗಿದೆ. ಇನ್ನು ಮುಂದೆಯೂ ಆಗುವುದು. ಆದ್ದರಿಂದ ಇಂಥಾ ಅಧಿಕಾರ ಪಡೆದಿರುವವರು ಇನ್ನು ಮುಂದಾದರೂ ಎಚ್ಚರಿಕೆಯಿಂದಿರುವರೆಂದು ನಾವು ನಂಬುತ್ತೇವೆ. ಮಾತ್ರವಲ್ಲದೆ ಈ ಕಾನೂನನ್ನು ಅತ್ಯಂತ ಸ್ಪಷ್ಟವಾಗಿ ಜನರ ಮನಸ್ಸಿನಲ್ಲಿ ಸಂಶಯವುಳಿಯದಂತೆ ವಿವರಿಸಬೇಕಾಗಿದೆ. ಸ್ಥಾನಬದ್ಧತೆಯ ಆಜ್ಞೆ ಮಾಡುವವರಿಗೂ ಒಂದು ಸಂಗತಿ ಇಲ್ಲಿ ತಿಳಿಸಬೇಕಾಗಿದೆ. ಯಾವ ಕಾರಣದಿಂದ ಈ ಆಜ್ಞಾಪೂರೈಸಲಾಗಿದೆಯೆಂಬುದನ್ನು ಅವರು ಸ್ಪಷ್ಟವಾಗಿ ತಿಳಿಸಿಕೊಡಬೇಕು. ಹಾಗೆ ತಿಳಿಸುವುದು ಅವರ ಕರ್ತವ್ಯ." ಈ ರೀತಿಯಾಗಿ ಫೆಡರಲ್ ಕೋರ್ಟು ಮಹತ್ವದೊಂದು ತೀರ್ಮಾನ ಮಾಡಿದ್ದರಿಂದ ಕಾನೂನು ಪಂಡಿತರಲ್ಲಿ ಬಹಳ ಗಡಿಬಿಡಿಯುಂಟಾಗಿರುವುದು. ದೇಶದ ಹಲವು ಮುಂದಾಳುಗಳು ಸರ್ ಗ್ವಾಯರರನ್ನು ಅಭಿನಂದಿಸಿರುವರು. ವೈಸರಾಯರು ಪೇಚಾಟದಲ್ಲಿ ಸಿಲುಕಿರುವರು. ವೈಸರಾಯರು ಬಹುಶಃ ತನ್ನ ಬತ್ತಳಿಕೆಯಿಂದ ಇನ್ನೊಂದು ಅಸ್ತ್ರವನ್ನು, ಓರ್ಡಿನೆನ್ಸನ್ನು—ತೆಗೆಯಲಿರುವರೆಂದು ಬಲವಾದ ಊಹೆಯಿದೆ. ಫೆಡರಲ್ ಕೋರ್ಟು ಹೇಗೆ ತೀರ್ಮಾನವೀಯಲಿ, ಡಿಫೆನ್ಸ್ ಕಾನೂನಿನ ೨೬ನೇ ನಿಯಮವು ನ್ಯಾಯ ಬಾಹಿರವಿರಲಿ, ಈಗ ಮಹಾತ್ಮರೇ ಮೊದಲಾದ ರಾಷ್ಟ್ರ ಧುರೀಣರನ್ನು ಬಂಧಿಸಿದ ನಿಯಮ ಪಾಶವು ಸ್ವಲ್ಪ ಸಡಿಲಾಗಿರಲಿ, ಬ್ರಿಟಿಷ್ ಸರಕಾರದ ಉದ್ದೇಶವು ಮಹಾತ್ಮರೇ ಮೊದಲಾದವರನ್ನು ಸದ್ಯ ಸೆರೆಮನೆಯಲ್ಲಿಯೇ ಇರಿಸುವುದೆಂಬುದು ನಿಶ್ಚಯವಿರುವಾಗ, ಈ ತೀರ್ಮಾನದಿಂದ ರಾಷ್ಟ್ರಮುಖಂಡರ ಬಂಧವಿಮೋಚನೆಯಾದೀತೆಂದು ಹಾರೈಸುವುದು ನಿಷ್ಪ್ರಯೋಜಕವಾಗಿದೆ.

'ಸ್ವಾತಂತ್ರ್ಯ ಪ್ರತಿಜ್ಞೆಯು ರಾಜದ್ರೋಹವಲ್ಲ'

ವರ್ಧಾ ಸೆಶನ್ಸ್ ಜಡ್ಜರ ಮಹತ್ವದ ತೀರ್ಪು

'ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸಂಪೂರ್ಣವಾಗಿ ಓದಿದರೆ, ಈ ಪ್ರತಿಜ್ಞೆಯ ಉಚ್ಚಾರದಿಂದ ಸಾರ್ವಜನಿಕ ಶಾಂತತಾಭಂಗವಾಗಿ ಅತ್ಯಾಚಾರದ ಮೂಲಕ ಈಗಿದ್ದ ಬ್ರಿಟಿಷ್ ಭಾರತ ಸರಕಾರವು ಅಡಿಮೇಲಾಗುವದೆಂದು ನನಗನಿಸುವುದಿಲ್ಲ. ಪ್ರತಿವರ್ಷ ಜನವರಿ ೨೬ನೇ ತಾರೀಕಿನ ದಿನ ಈ ಪ್ರತಿಜ್ಞೆಯ ಉಚ್ಚಾರಮಾಡಲಾಗುತ್ತಿದೆ. ಆದರೂ ಇಷ್ಟು ಸಮಯಗಳಲ್ಲಿ ಒಬ್ಬರ ಮೇಲೆಯೂ ಖಟ್ಲೆ ಹಾಕಿಲ್ಲ. ಹೀಗೆ ಸರಕಾರವು ಇದಕ್ಕೆ ಪ್ರತಿಬಂಧ ಮಾಡದೆ ಇದ್ದುದರಿಂದ ಸರಕಾರಕ್ಕೆ ಇದರಿಂದ ಏನೂ ಧಕ್ಕೆಯಾಗಿಲ್ಲವೆಂದೇ ಹೇಳಬೇಕಾಗುತ್ತದೆ' ಹೀಗೆಂದು ವರ್ಧಾ ಸೆಶನ್ಸ್ ಜಡ್ಜರಾದ ಶ್ರೀ ಮುಧೋಳಕರರು ತಮ್ಮ ತೀರ್ಪಿನಲ್ಲಿ ಹೇಳಿ ಆರೋಪಿಗಳಾದ ಮಂಗಳೂರಿನ ಶ್ರೀ. ರಾಮಚಂದ್ರ ಭಟ್ಟರನ್ನೂ ಕರಾಚಿಯ ತೋತಾರಾಮ್ ವಾಲೇಚರನ್ನೂ ದೋಷಮುಕ್ತ ಮಾಡಿದ್ದಾರೆ. ಜಡ್ಜರು ತಮ್ಮ ತೀರ್ಪಿನಲ್ಲಿ ಈ ಪ್ರತಿಜ್ಞೆಯ ಸಾದ್ಯಂತ ವಿವೇಚನೆ ಮಾಡಿ ಕಾಯಿದೆಯ ಆಧಾರದಿಂದ ಈ ಪ್ರತಿಜ್ಞೆಯ ಉಚ್ಚಾರವು ರಾಜದ್ರೋಹವಾಗಲಾರದೆಂದು ಸ್ಪಷ್ಟಪಡಿಸಿದ್ದಾರೆ. ಅವರು ಮಾಡಿದ ವಿವೇಚನೆಯು ವಿಚಾರಪರವಿರುವುದರಿಂದ ಅದನ್ನು ಈ ಕೆಳಗೆ ಸಾರಾಂಶವಾಗಿ ಕೊಡಲಾಗಿದೆ.

ಮೊದಲನೆಯ ಭಾಗದಲ್ಲಿ ೧) 'ಯಾವದೇ ಸರಕಾರವು ತನ್ನ ಪ್ರಜೆಗಳ ಹಕ್ಕುಗಳನ್ನು ಕಸಿದುಕೊಂಡು ಅವರ ಮೇಲೆ ದಬ್ಬಾಳಿಕೆಯನ್ನು ನಡೆಸಿದರೆ ಇಂಥ ಸರಕಾರವನ್ನು ಬದಲಾಯಿಸುವ ಇಲ್ಲವೆ ಕಿತ್ತುಹಾಕುವ ಹಕ್ಕು ಪ್ರಜೆಗಳಿಗಿರುತ್ತದೆ. ಭಾರತದಲ್ಲಿ ಬ್ರಿಟಿಷ್ ಸರಕಾರವು ಭಾರತೀಯರ ಸ್ವಾತಂತ್ರ್ಯವನ್ನು ಅಪಹರಣ ಮಾಡಿದಲ್ಲದೆ ಜನತೆಯ ಸುಲಿಗೆಯನ್ನು ಮಾಡಿ ಜನರ ಆರ್ಥಿಕ, ರಾಜಕೀಯ, ನೈತಿಕ ಹಾಗೂ ಸಾಂಸ್ಕೃತಿಕ ಅಧಃಪತನಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಬ್ರಿಟಿಷ್ ಸರಕಾರದ ಸಂಬಂಧವನ್ನು ಕಡಿದೊಗೆದು ಪೂರ್ಣ ಸ್ವರಾಜ್ಯವನ್ನು ದೊರಕಿಸಬೇಕೆಂಬುದೇ ನಮ್ಮ ನಿರ್ಧಾರವು.'

೨) 'ಸಾಮ್ರಾಜ್ಯವಾದಿತ್ವವನ್ನು ನಷ್ಟ ಮಾಡುವದು ನಮ್ಮ ಉದ್ದೇಶವಾಗಿದ್ದರೂ ಅಧಿಕಾರಿ ಇಲ್ಲವೆ ಅಧಿಕಾರೇತರ ಇಂಗ್ಲಿಷರ ಕೂಡೆ ನಮಗೆ ಹಗೆತನವಿಲ್ಲ.'

೩) 'ಕಾಂಗ್ರೆಸಿನ ತತ್ವ ಹಾಗೂ ಧೋರಣೆಯನ್ನು ನಾವು ಶಿಸ್ತಿನಿಂದ ಪಾಲಿಸಲು ಬದ್ಧರಾಗಿದ್ದೇವೆ; ಮತ್ತು ಸ್ವಾತಂತ್ರ್ಯದ ಸಲುವಾಗಿ ಸಮರವು ಪ್ರಾರಂಭವಾದರೆ ಅದರಲ್ಲಿ ನಾವು ಭಾಗಿಗಳಾಗುವದಕ್ಕೆ ಸಿದ್ಧರಿದ್ದೇವೆ' ಹೀಗಿದೆ.

ಇದರಲ್ಲಿ ಮೊದಲನೇ ಭಾಗವು ರಾಜದ್ರೋಹಾತ್ಮಕವಿರುತ್ತದೆಂದು ಸರಕಾರೀ ವಕೀಲರು ವಾದಿಸುತ್ತಾರೆ. ಆದರೆ ಇದರಲ್ಲಿ ಸರಕಾರದ ಧೋರಣವು ದಬ್ಬಾಳಿಕೆಯದಿದ್ದು ಅದರಿಂದ ಜನರ ಆರ್ಥಿಕ ಹಾನಿಯಾಗಿದೆಂದು ಹೇಳಲಾಗಿದೆ. ಇಂಥ ಪ್ರಮಾಣಿಕ ಟೀಕೆಯು ರಾಜದ್ರೋಹವೆನಿಸಲಾರದು. ಇಂಥ ಟೀಕೆಯೇನೂ ಹೊಸದಲ್ಲ. ಈಗ ೫೦ ವರ್ಷಗಳ ಹಿಂದೆಯೇ ಶ್ರೀಗಳಾದ ಡಿಗ್ಬಿ ಮತ್ತು ದಾದಾಭಾಯಿ ನವರೋಜಿ ಇವರು ಎರಡು ಪುಸ್ತಕಗಳನ್ನು ಬರೆದಿದ್ದು ಆ ಪುಸ್ತಕಗಳಲ್ಲಿ ಸರಕಾರದ ಧೋರಣವನ್ನು ಉಗ್ರವಾಗಿ ಟೀಕಿಸಿರುವರು.

ಅಂದಿನಿಂದ ಇಂಥ ಟೀಕೆಗಳನ್ನು ಮಾಡುವದು ಒಂದು ಕ್ರಮವಾಗಿ ಹೋಗಿದೆ. ಆ ಪುಸ್ತಕಗಳು ಕಾಯಿದೆಗೆ ವಿರುದ್ಧವಾಗಿರುವವೆಂದು ಯಾರಿಂದಲೂ ಹೇಳಲಾಗಿಲ್ಲ. ಆ ಪುಸ್ತಕಗಳಲ್ಲಿಯ ಟೀಕೆಯು ನಿಷ್ಕಾರಣವಾದದ್ದಲ್ಲ. ಹಾಗೂ ಅಪ್ರಮಾಣಿಕವಾದದ್ದಲ್ಲವೆಂದೇ ಸರಕಾರವು ಏನೂ ಕ್ರಮ ತೆಗೆದುಕೊಳ್ಳದೆ ಬಿಟ್ಟಿರಬೇಕು. ಇಲ್ಲವೆ ಸರಕಾರವು ಈಗ ಬಲಿಷ್ಠವಾದ್ದರಿಂದ ಇಂಥ ಟೀಕೆಗಳನ್ನು ಉಪೇಕ್ಷಿಸಿರಲೂ ಬಹುದು. ಇಷ್ಟು ದಿವಸಗಳವರೆಗೆ ಈ ಟೀಕೆಗಳಿಂದ ಸರಕಾರವೇನು ಅಡಿಮೇಲಾಗಿಲ್ಲ. ಅಂದಮೇಲೆ ಈಗ ಮಾತ್ರ ಅಂಥಾ ಪರಿಣಾಮವಾಗುವುದೆಂದು ಹೇಳುವುದು ಸಾಹಸವಲ್ಲವೆ? ಇನ್ನು ಬ್ರಿಟಿಷರ ಸಂಬಂಧವನ್ನು ಕಡಿದುಕೊಳ್ಳುವ ಇಚ್ಛೆಯೂ ಆಕ್ಷೇಪಾರ್ಹವೆಂದು ಹೇಳಲಿಕ್ಕಾಗುವುದಿಲ್ಲ. ಭಾರತದ ರಾಜಕೀಯ ಗುರಿಯು ವಸಾಹತು ಸ್ವರಾಜ್ಯವೆಂದು ಬ್ರಿಟಿಷ್ ಸರಕಾರವೇ ಘೋಷಣೆಯನ್ನು ಮಾಡಿದೆ. ಹಾಗೂ 'ವೆಸ್ಟ್‌ಮಿನಿಸ್ಟರ್' ಕಾಯಿದೆಯಿಂದ ವಸಾಹತುಗಳಿಗೆ ಬ್ರಿಟಿಷರ ಸಂಬಂಧವನ್ನು ಬಿಟ್ಟುಬಿಡಲು ಅಧಿಕಾರವನ್ನೂ ಕೊಡಲಾಗಿದೆ. ಆದ್ದರಿಂದ ಭಾರತವು ಬ್ರಿಟಿಷರ ಸಂಬಂಧವನ್ನು ಕಡಿದುಕೊಳ್ಳಬೇಕೆಂದು ಹೇಳಿದರೆ ರಾಜದ್ರೋಹವಾಗಲಾರದು.

ಎರಡನೆಯ ಭಾಗದಲ್ಲಿ-ಸಾಮ್ರಾಜ್ಯವಾದಿತ್ವವನ್ನು ನಷ್ಟಮಾಡುವದನ್ನು ಹೇಳಲಾಗಿದೆ. ಭಾರತಕ್ಕೆ ವಸಾಹತು ಸ್ವರಾಜ್ಯವನ್ನು ಕೊಟ್ಟು ಪೂರ್ಣ ಸ್ವತಂತ್ರವಾಗುವದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಅಂದಮೇಲೆ ಈ ಭಾಗವೂ ರಾಜದ್ರೋಹಾತ್ಮಕವಾಗಿದೆಯೆಂದು ಹೇಳಲು ಬರುವುದಿಲ್ಲ.

ಮೂರನೆಯ ಭಾಗದಲ್ಲಿ-ಕಾಂಗ್ರೆಸಿನ ಆಜ್ಞೆಯನ್ನು ಪಾಲಿಸುವ ಪ್ರತಿಜ್ಞೆಯಿರುತ್ತದೆ; ಸ್ವಾತಂತ್ರ್ಯದ ಹೋರಾಟದ ವಿಷಯವಾಗಿಯೂ ಹೇಳಲಾಗಿದೆ. ಆದರೆ ಹೀಗೆ ಮಾಡುವಲ್ಲಿ ಹಿಂಸೆ, ಅತ್ಯಾಚಾರಗಳ ಅವಲಂಬನ ಮಾಡುವ ಉದ್ದೇಶವಿಲ್ಲ. ಆದ್ದರಿಂದ ಈ ಭಾಗದಲ್ಲಿಯೂ ರಾಜದ್ರೋಹಾತ್ಮಕವಿಲ್ಲ.

ಹೀಗೆ ಈ ಮೇಲಿನ ವಿವೇಚನೆಯಿಂದ ಸ್ವಾತಂತ್ರ್ಯದ ಪ್ರತಿಜ್ಞೆಯ ಉಚ್ಚಾರವು ಅಪರಾಧವೆಂದೂ ಹೇಳುವದು ಯೋಗ್ಯವಾಗಲಾರದು, ಹಾಗೂ ಕಾಯಿದೆಯಿಂದಲೂ ಅದು ರಾಜದ್ರೋಹಾತ್ಮಕವೆಂದೂ ಸಿದ್ಧವಾಗುವದಿಲ್ಲ.

ಹೊಸ 'ಆರ್ಡಿನನ್ಸು' ಹುಟ್ಟಿಬಂತು!

ಫೆಡರಲ್ ಕೋರ್ಟಿನ ತೀರ್ಮಾನಕ್ಕಾಗಿ!

ಹಿಂದುಸ್ಥಾನ ಸರಕಾರದವರು ತಾ. ೨೪ರಂದು ಒಂದು ಆರ್ಡಿನನ್ಸ್ ಹೊರಡಿಸಿ, ಫೆಡರಲ್ ಕೋರ್ಟಿನವರು ನ್ಯಾಯಬಾಹಿರವೆಂದು ಸಾರಿದ ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನ ೨೬ನೆಯ ಕಲಮಿನ ಪ್ರಕಾರ ತಾವು ಹಿಂದೆ ಮಾಡಿದ್ದನ್ನೆಲ್ಲ ಸರಿಯೆಂದು ಸಾರಿರುವರು.

ಸಂರಕ್ಷಣ ಕಾಯಿದೆಯ ೨೬ನೇ ಕಲಮಿನ ೧ನೇ ಉಪಕಲಮಿನ ಬದಲು ಮತ್ತೊಂದನ್ನು ಸೇರಿಸಿ, ದೇಶಕ್ಕೆ ಮತ್ತು ಯುದ್ಧ ಪ್ರಯತ್ನಕ್ಕೆ ವಿಘಾತಕವಾದಂಥಾ ಚಟುವಟಿಕೆಗಳನ್ನು ಯಾರಾದರೂ ಮಾಡಿರುವರೆಂದು, ಮಾಡುತ್ತಿರುವರೆಂದು ಇಲ್ಲವೆ ಮಾಡುವ ಸಂಭವವಿದೆಯೆಂದು ಅಧಿಕಾರಿಗಳಿಗೆ ಸಂಶಯ ಬಂದರೆ ಅವರನ್ನು ಬಂಧನದಲ್ಲಿಡಲು ಈ ಆರ್ಡಿನೆನ್ಸಿನನ್ವಯ ಅಧಿಕಾರ ಕೊಡಲಾಗಿದೆ.

ಪಾಕಿಸ್ತಾನ ನಿರಾಕರಣೆ

ಮೋಮಿನ್ ಪರಿಷತ್ತಿನಲ್ಲಿ

ಅಖಿಲ ಭಾರತ ಮೋಮಿನ್ ಪರಿಷತ್ತಿನ ೬ನೇ ಅಧಿವೇಶನವು ಹೊಸದಿಲ್ಲಿಯಲ್ಲಿ ಸೇರಿ ಪಾಕಿಸ್ತಾನವನ್ನು ನಿರಾಕರಿಸುವ ನಿರ್ಣಯ ಮಾಡಿದೆ. ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಿ ಅವರೊಡನೆ ಸಂಧಾನ ಮಾಡಬೇಕೆಂದೂ ನಿರ್ಣಯ ಮಾಡಲಾಗಿದೆ; ಲೀಗು ಮುಸ್ಲಿಮರ ಪ್ರತಿನಿಧಿಕ ಸಂಸ್ಥೆಯಲ್ಲವೆಂದು ಖಂಡಿಸಿದೆ; ಕೊನೆಗೆ ದಕ್ಷಿಣಾಫ್ರಿಕದ ಮಸೂದೆಯನ್ನು ನಿಷೇಧಿಸಿದೆ.

'ಪಾಕಿಸ್ತಾನವೇ ಪರಮೌಷಧ'

'ಮಹಾತ್ಮರು ನನಗೆ ಪತ್ರ ಬರೆಯಲಿ'

ಜಿನ್ನರ ಉದ್ಗಾರ

ಡಿಲ್ಲಿಯಲ್ಲಿ ಮೂವತ್ತನೇ ಮುಸ್ಲಿಂ ಲೀಗಿನ ವಾರ್ಷಿಕಾಧಿವೇಶನವು ಅವರ ಖಾಯಂ ಅಧ್ಯಕ್ಷರಾದ ಜಿನ್ನರ ಅಧ್ಯಕ್ಷತೆಯಿಂದ ಸೇರಿತು. ಅದರಲ್ಲಿ ಅವರು ಅಧ್ಯಕ್ಷ ಭಾಷಣ ಕೊಡುತ್ತಾ ಪಾಕಿಸ್ತಾನದಿಂದಲೇ ದೇಶದ ಸ್ವಾತಂತ್ರ್ಯವೆಂದು ಸಾರಿ, ಇಂದಿನ ದೇಶದ ಬಿಕ್ಕಟ್ಟನ್ನು ಬಗೆಹರಿಸಲು ನಿಜವಾಗಿಯೂ ಮನಸ್ಸಿದ್ದರೆ ಗಾಂಧಿಜಿ ನನಗೆ ಪತ್ರ ಬರೆಯಲೆಂದೂ, ಹಾಗೆ ಅವರು ಪತ್ರ ಬರೆದರೆ ಅದನ್ನು ತಡೆಯಲು ಯಾರು ಸಮರ್ಥರೆಂದೂ ಹೇಳಿದರು. ಜಿನ್ನರು ಮೂರು ಗಂಟೆಗಳ ಸುದೀರ್ಘ ಭಾಷಣವಿತ್ತರು. 'ವೈಸರಾಯರ ಬಳಿಗೆ ಹೋಗಿ ಏನು ಪ್ರಯೋಜನ? ಗಾಂಧಿಜಿ ನನಗೆ ಪತ್ರ ಬರೆಯಲಿ. ಸರಕಾರವು ಪ್ರಬಲವಿದ್ದರೂ ಗಾಂಧಿಜಿ ನನಗೆ ಬರೆದ ಪತ್ರವನ್ನು ತಡೆಯಲು ಸಮರ್ಥನಾಗಲಾರದು. ಭಾರತ ಬಿಕ್ಕಟ್ಟು ಇದರಿಂದ ಪರಿಹಾರವಾಗುವುದು.' ಎಂದು ಜಿನ್ನಾ ಕೂಗಿದರು. ಅನಂತರ ಜಿನ್ನರು, ಪಾಕಿಸ್ತಾನವೆಂಬ ಶಬ್ದವನ್ನು ಮೊದಲು ಕೇಳಿದವರು ಹಿಂದುಗಳೆಂದೂ, ಸಂಯುಕ್ತ ರಾಜ್ಯಘಟನೆಯಿಂದ ಹಿಂದೂ ರಾಜ್ಯವೇ ಸ್ಥಾಪಿತವಾಗಲಿರುವುದರಿಂದ ಮುಸಲ್ಮಾನರು ಅದಕ್ಕೆಂದೂ ಒಪ್ಪಲಾರರೆಂದೂ ತಿಳಿಸಿದರು. ಜಮೀನ್ದಾರರು ಮತ್ತು ಭಂಡವಾಳಗಾರರು ಬುದ್ಧಿವಂತರಾದರೆ ಹೊಸ ಕಾಲಕ್ಕೆ ತಕ್ಕಂತೆ ನಡೆಯಬೇಕೆಂದು ಎಚ್ಚರಕೊಟ್ಟರು. ಕೊನೆಗೆ, ಹಿಂದುಗಳೊಡನೆ ಬಿನ್ನವಿಸಿಕೊಳ್ಳುತ್ತಾ ಒಪ್ಪಂದ ಮಾಡಿಕೊಳ್ಳಿರಿ, ಪಾಕಿಸ್ಥಾನಕ್ಕೆ ಒಪ್ಪಿರಿ, ನಾವಿಬ್ಬರೂ ಒಂದಾಗಿ ಬ್ರಿಟಿಷರನ್ನು ಇಲ್ಲಿಂದ ಹೊಡೆದೋಡಿಸುವ ಎಂದರು. ಅನಂತರ ದಿನದಿನಕ್ಕೆ ಮುಸ್ಲಿಂ ಲೀಗು ಬಲವಾಗುತ್ತಿದೆಯೆಂದೂ ತಿಳಿಸಿದರು. 'ನಾನು ಗೋಖಲೆ ಮತ್ತು ದಾದಾಭಾಯಿಯವರ ಶಿಷ್ಯ; ಮುಸಲ್ಮಾನರಿಗೆ ಅವರೇ ಗುರುಪು ಕೊಟ್ಟರು; ಆದರೆ ಗಾಂಧಿಜಿ ಮಾತ್ರ ಹಿಂದೂ ರಾಜ್ಯ ಸ್ಥಾಪಿಸಲು ಪ್ರಯತ್ನಿಸುತ್ತಿರುವರು' ಎಂದು ಹೇಳುತ್ತಾ, ಬ್ರಿಟಿಷರು ನಮ್ಮ ನಮ್ಮೊಳಗೆ ಒಡಕು ಹುಟ್ಟಿಸಿ ತಮ್ಮ ಬೇಳೆ ಬೇಯಿಸುತ್ತಿರುವುದು ನಿಜವಾದರೂ, ಹಿಂದುಗಳು ಪಾಕಿಸ್ತಾನಕ್ಕೆ ಒಪ್ಪದಿದ್ದರೆ ಭಾರತ ಬಿಕ್ಕಟ್ಟು ಬಗೆಹರಿಯದೆಂದು ವಾದಿಸಿದರು. ಅದ್ದರಿಂದ ನಿಜವಾಗಿ ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಪಾಕಿಸ್ತಾನವು ಮೊದಲು ಒಪ್ಪಿಗೆಯಾಗಬೇಕೆಂದರು. ಕಟ್ಟಕಡೆಗೆ ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆ ಕೊಡುತ್ತಾ, ಮುಸಲ್ಮಾನರ ಅಸಂತೋಷದ ಕೂಡೆ ತುಂಬುತ್ತಾ ಬಂದಿದೆಯೆಂದರು.

'ನಾನು ಮಾಡಿದ್ದು ತಪ್ಪೆಂದು ನನ್ನ ಆತ್ಮಕ್ಕೆ ತೃಪ್ತಿ ಪಡಿಸುವಿರಾ?'

ಗಾಂಧಿಜಿ ಹೇಳಿದರು

'ನಾನು ಮಾಡಿದ್ದು ತಪ್ಪೆಂದು ನನ್ನ ಆತ್ಮಕ್ಕೆ ತೃಪ್ತಿ ಪಡಿಸುವಿರಾ? ಹಾಗಾದರೆ ನಾನು ನನ್ನ ತಪ್ಪು ತಿದ್ದಿಕೊಳ್ಳುವೆನು' ಎಂದು ಗಾಂಧಿಜಿ ಉಪವಾಸಕಾಲದಲ್ಲಿ ಅವರಲ್ಲಿ ಹೋಗಿದ್ದ ಶ್ರೀ ರಾಧಾಕಾಂತ ಮಾಲವೀಯರೊಡನೆ ಹೇಳಿದ್ದರು. ಅದ್ದರಿಂದ ಮಹಾತ್ಮರಿಗೆ ದೇಶದಲ್ಲಿ ನಡೆದ ಘಟನೆಗಳ ವಿಷಯ ವಿವರ ತಿಳಿಯಲು ಆಸ್ಪದ ಕೊಡಬೇಕು, ಹಾಗಾದರೆ ಅವರ ಮೇಲೆ ಹೊರಿಸಲ್ಪಟ್ಟ ಕಳಂಕ ಮಾಸಿ ರಾಜಕೀಯ ಬಿಕ್ಕಟ್ಟು ಬಗೆಹರಿಯುವುದು ಎಂದು ಅವರು ಹೇಳುತ್ತಾರೆ.

ಬಂಗಾಳದಲ್ಲಿ ಲೀಗ್ ಮಂತ್ರಿಮಂಡಳ

ಹಕ್ಕರು ರಾಜಿನಾಮೆ ಕೊಡಬೇಕಾಗಿ ಬಂದು, ಅವರ ಮಂತ್ರಿಮಂಡಳ ಕಳಚಿ ಬಿದ್ದ ಮೇಲೆ ಗವರ್ನರರ ಹೇಳಿಕೆಯಂತೆ ಸರ್ ನಾಜಿಮುದ್ದೀನರು ಬಂಗಾಳದಲ್ಲಿ ಲೀಗ್ ಮಂತ್ರಿಮಂಡಳವನ್ನು ಸ್ಥಾಪಿಸಿದರು. ಇವರ ಮಂತ್ರಿಗಳನ್ನು ಗವರ್ನರರೇ ಆರಿಸಿದರು. ಒಟ್ಟು ಈ ಹೊಸ ಮಂತ್ರಿಮಂಡಳದಲ್ಲಿ ಹದಿಮೂರು ಮಂದಿ ಇದ್ದಾರೆ. ಕಲ್ಕತ್ತದಲ್ಲಿ ಪ್ರಚಂಡ ಸಾರ್ವಜನಿಕ ಸಭೆಯೊಂದು ಜರಗಿ ಗವರ್ನರರು ಹಕ್ಕರನ್ನು ಹೊರಗೆ ಹಾಕಿದ ವಿಷಯ, ನಾಜಿಮುದ್ದೀನರು ಏಕಪಕ್ಷೀಯ ಮಂತ್ರಿಮಂಡಳ ಮಾಡಿದ ವಿಷಯ ಖಂಡಿಸಲಾಯಿತು.

ಶ್ರೀ. ಡಿ. ಪಿ. ಕರ್ಮಾರ್ಕರ್‌ರವರ ಬಂಧನ

ಬೊಂಬಾಯಿಯಲ್ಲಿ ಧಾರವಾಡದ ಪೋಲೀಸರಿಂದ

ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷರಾದ ಶ್ರೀ ಡಿ. ಪಿ. ಕರ್ಮಾರ್ಕರ್‌ರವರನ್ನು ಏಪ್ರಿಲ್ ೧೮ನೇ ತಾರೀಕು ಬೊಂಬಾಯಿಯಲ್ಲಿ ಧಾರವಾಡ ಪೋಲೀಸರು ದಸ್ತಗಿರಿ ಮಾಡಿದರೆಂದು ಗೊತ್ತಾಗಿದೆ. ಕಳೆದ ಆಗಸ್ಟಿನಿಂದ ಇವರಿಗಾಗಿ ಹುಡುಕಾಡಲಾಗುತ್ತಿದ್ದಿತು. ಇವರ ದಸ್ತಗಿರಿಗಾಗಿ ಒಂದು ಸಾವಿರ ರೂಪಾಯಿಗಳ ಬಹುಮಾನ ಕೊಡುವುದಾಗಿಯೂ ತಿಳಿಸಲಾಗಿತ್ತು.

NOTICE

The Ammembal Subba Rao Pai Memorial Fund

Applications for loan stipends from the above Fund should reach the undersigned on or before the 15th June 1943. While granting stipends first preference will be given to those who are already undergoing courses with aid from this Fund. If Funds are available after awarding the above said stipends, applications for technical courses will be considered. Applications for arts courses will be considered in cases of exceptional merit. Only Gowd Saraswath Brahmins need apply.

Blank application forms will be supplied at a cost of one anna each for original ones and half-anna each for renewals. If they are to be sent by post, an additional three-fourth anna stamp should be sent to cover postage. All correspondence will be attended to if a reply post-card or an embossed cover is enclosed along with the letter or application.

Office of the A. S. R. P. M. Fund, Canara High School Mangalore, 28th Aprial 1943.

J. Vasudeva Pai, B. A., L.T., *Hon. Secretary.*

ಸಮರಭೂಮಿಯ ಸಂಚಾರ

ಟ್ಯುನಿಸಿಯಾ ಕಾಳಗದ ಉಗ್ರತೆ ಹೆಚ್ಚುತ್ತಿದ್ದಂತೆ ಜರ್ಮನರ ಪ್ರತಿಭಟನೆಯೂ ಬಲವಾಗುತ್ತಿದೆ. ಬ್ರಿಟಿಷರ ಎಂಟನೇ ಸೈನ್ಯವು ಮೆಜಾಜ ಎಲ್ ಬಾಬದಿಂದ ಮುನ್ನುಗ್ಗುತ್ತಿದೆ. ಹೆಜ್ಜೆ ಹೆಜ್ಜೆಗೂ ಉಭಯಪಕ್ಷದ ಹಾನಿ ಬಲವಾಗುತ್ತಿದೆ. ಜರ್ಮನರು ತಮ್ಮ ವ್ಯೂಹವು ಮುರಿದು ಹೋಗದಂತೆ ಪ್ರಾಣದಾಸೆ ಬಿಟ್ಟು ಹೋರಾಡುತ್ತಿರುವರು.

ರಶ್ಯನರು ಪೋಲೆಂಡಿನ ಅಧಿಕಾರಿಗಳನ್ನು ಕೊಂದರೆಂದು ಜರ್ಮನಿ ಪ್ರಚಾರ ಮಾಡಿದ ಬಗ್ಗೆ ಪೋಲೆಂಡ್ ಸರಕಾರವೂ ರಶ್ಯದ ಮೇಲೆ ಸಂಶಯ ಬರುವ ರೀತಿ ವರ್ತಿಸಿದ್ದರಿಂದ ಈಗ ರಶ್ಯ ಪೋಲೆಂಡ್ ಸರಕಾರಗಳ ರಾಜಕೀಯ ಸಂಬಂಧ ಕಡಿದು ಹೋಗಿದೆ. ರಶ್ಯವು ಪೋಲೆಂಡ್ ವಿರುದ್ಧ ಧೋರಣ ಕೈಕೊಳ್ಳುವುದೆಂದು ಪ್ರಕಟವಾಗಿದೆ. ಪೋಲೆಂಡ್ ಸರಕಾರ ಈ ಕುರಿತು ಈವರೆಗೆ ಏನೂ ಹೇಳಿಲ್ಲ.

ಹ್ಯಾಂಕೋವ್ ವೇಕಿಂಗ್ ಗಡಿಯಲ್ಲಿ ಪರ್ವತದ ಮೇಲೆ ಕಟ್ಟಿದ ಮಹತ್ವದ ನಗರ ಲಿಂಬಾವನ್ನು ಚೀನೀಯರು ಖಾಲಿ ಮಾಡಿದರು. ನ್ಯೂಗಿನಿಯ-ಬಳ್ಳಿ-ವಿವೇಕ-ಬಂದರದ-ಹತ್ತಿರ ಜಪಾನೀ ಹಡಗಗಳ ಗುಂಪೊಂದು ಕಾಣ ಸಿಕ್ಕಿದೆ. ಗ್ವಾಡಲಕನಾಲದ ಬಳಿ ಅಮೆರಿಕ ಜಪಾನ್ ವೈಮಾನಿಕರೊಳಗೆ ಕಾಳಗವಾಯಿತು

ಮೂರನೆಯ ವಸಂತ ಧಾಳಿ

ರಶ್ಯದಲ್ಲಿ ಹಿಟ್ಲರನೀಗ ಮೂರನೆಯ ವಸಂತ ಧಾಳಿಗೆ ಸಿದ್ಧತೆ ನಡೆಸುತ್ತಿದ್ದಾನೆ. ರಶ್ಯದಲ್ಲಿ ಹಿಮ ಕರಗಲು ತೊಡಗಿದ್ದೇ, ಜರ್ಮನರ ಯುದ್ಧದ ಬಿಸಿಹೆಚ್ಚಿತು ಜರ್ಮನರು ಕಳೆದ ಹಿಮ ಕಾಲದಲ್ಲಿ ಸೋಲಿನ ಮೇಲೆ ಸೋಲು ಪಡೆದರೂ ಅವರ ಸಾಹಸವೇನೂ ಕುಂದಿಲ್ಲ ಅಲ್ಲಿನ ಯುದ್ಧವೂ ಸಂಪೂರ್ಣ ನಿಂತಿಲ್ಲ ಹೊಸ ಹೊಸ ಸೈನ್ಯಗಳನ್ನು ತಂದು ಯುದ್ಧ ಮಾಡುತ್ತಿರುವರಲ್ಲದೆ, ಮುಂದಿನ ಧಾಳಿಯ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿರುವರು. ಕಾಕಸಸಿನ ಕೊನೆಯ ಮೂಲೆಯನ್ನು ರಕ್ಷಿಸುವ ತೀವ್ರ ಹೋರಾಟಕ್ಕಾಗಿ ಹಿಟ್ಲರನ ಸೇನಾಪತಿಗಳು ಕುಬಾನಿನಲ್ಲಿ ತಮಾನಿನ ಹತ್ತಿರ ೮—೧೦ ಡಿವಿಜನ್, ಎಂದರೆ ಒಂದು ಲಕ್ಷದಷ್ಟು ಸೈನ್ಯ ಸಂಗ್ರಹಿಸಿರುವರೆಂದು ತಿಳಿಯುತ್ತದೆ ಈ ಸೈನ್ಯವು ಸಮಯ ಸಾಧಿಸಿ ತಮ್ಮ ಮುನ್ನಡೆಯನ್ನು ಕೈಕೊಳ್ಳುವುದರೊಡನೆ ರಶ್ಯನರ ಮುನ್ನಡೆಯನ್ನು ತಡೆಯಲೂ ಸಿದ್ಧವಾಗುವದು ಕಳೆದ ವರ್ಷ ಮೂರುವರೆ ತಿಂಗಳ ಸಾಹಸಮಯ ಹೋರಾಟದಲ್ಲಿ ಪಡೆದುಕೊಂಡಿದ್ದ ಪ್ರದೇಶಗಳನ್ನೆಲ್ಲಾ ಜರ್ಮನರೀಗ ಕಳೆದುಕೊಂಡಿರುವರು. ತಮ್ಮ ಸ್ವಾಧೀನ ಬಂದಿದ್ದ ಖಾರ್ಖಾವನ್ನು ಬಿಟ್ಟುಕೊಡಬೇಕಾಯಿತು. ಅಂತೂ ನಾಲ್ಕು ತಿಂಗಳ ಹಿನ್ನಡೆಯ ನಂತರ ಈಗ ಜರ್ಮನರು ಪುನಃ ಚೇತರಿಸಿಕೊಂಡು ಮಹಾ ಸಂಗ್ರಾಮಕ್ಕೆ ಸಿದ್ಧರಾಗಿದ್ದಾರೆ. ಉತ್ತರದಲ್ಲಿ ಲೆನಿನ್‌ಗ್ರಾಡನ್ನು ಜರ್ಮನರು ಸುತ್ತುಗಟ್ಟುತ್ತಿರುವರಲ್ಲದೆ ಆ ನಗರದ ಮೇಲೆ ಬಾಂಬು ಸುರಿಸುತ್ತಿರುವರು. ಕಳೆದ ವರ್ಷದಲ್ಲಿ ಆದ ಅಪಮಾನ, ಅಪಜಯಗಳ ಪ್ರತೀಕಾರವನ್ನು ತೀರಿಸಿಕೊಳ್ಳಲು ಹಿಟ್ಲರನು ರಶ್ಯದ ಮೇಲೆ ಸದ್ಯವೇ ತನ್ನ ಧಾಳಿಯನ್ನು—ಮೂರನೆಯ ವಸಂತ ಧಾಳಿಯನ್ನು—ಪ್ರಾರಂಭಿಸುವನು. ಕಳೆದ ವರ್ಷದ ವಸಂತ ಧಾಳಿಯೂ ಮೇ ತಿಂಗಳಲ್ಲಿಯೇ ಪ್ರಾರಂಭವಾಯಿತು. ಈ ವರ್ಷವೂ ಅದೇ ತಿಂಗಳಲ್ಲಿ ತೊಡಗಬಹುದು. ಕಳೆದ ಸಲದಂತೆ ಈ ಸಲವೂ ಹಿಟ್ಲರನು ದಕ್ಷಿಣ ರಶ್ಯದಲ್ಲಿ ಧಾಳಿಯನ್ನು ಪ್ರಾರಂಭಿಸಬಹುದು. ಈ ಧಾಳಿಗಾಗಿ ತಮ್ಮ ಸೈನ್ಯ ಕಳುಹಿಸಿ ಕೊಡುವಂತೆ ಹಿಟ್ಲರನು ಬಾಲ್ಕನ್ ರಾಷ್ಟ್ರಗಳಿಗೂ ತಿಳಿಸಿರುವನಂತೆ. ಅಂತೂ ಅತ್ತ ಟ್ಯುನಿಸಿಯದಲ್ಲಿ ಹೋರಾಟ ಸಾಗುತ್ತಿರುವಂತೆ ರಶ್ಯದಲ್ಲಿಯೂ ಪುನಃ ಭೀಕರ ಕದನ ನಡೆಯುವುದು ಖಂಡಿತ. ಈ ಸಲ ಹಿಟ್ಲರನು ತನ್ನ ಕೊನೆಯ ಸಾಹಸ ಮಾಡುವ ನಿರ್ಧಾರದಲ್ಲಿದ್ದರೂ ಇರಬಹುದು. ಅದಾಗಿ ಆತನು ಈ ಧಾಳಿಯಲ್ಲಿ ವಿಷ ವಾಯುವನ್ನೂ ಪ್ರಯೋಗಿಸಲಿರುವನೆಂದು ಪ್ರಚಾರ ಸಾರುತ್ತದೆ. ಇದು ಸತ್ಯವೋ ಮಿಥ್ಯವೋ ಮುಂದೆ ನೋಡಬೇಕಾಗಿದೆ.

ಟ್ಯುನಿಸಿಯಾ ಪರಿಸ್ಥಿತಿ

ರೊಮೆಲನ ಸೈನ್ಯವು ದಕ್ಷಿಣ ಟ್ಯುನಿಸಿಯವನ್ನೆಲ್ಲಾ ಬಿಟ್ಟುಕೊಟ್ಟು, ಟ್ಯುನಿಸ್ ಬಿಜರ್ಟಾಗಳ ನಡುವಿನ ಮೂಹತ್ತು ಮೈಲು ವಿಸ್ತಾರದ ರಣಭೂಮಿಯಲ್ಲಿ ಬಂದು ತಳವೂರಿದೆ. ವಾನ್ ಆರ್ನಿಮನ ಸೈನ್ಯವೂ ಅದರ ಸಹಾಯಕ್ಕೆ ಬಂದಿದೆ. ಈ ಉಭಯ ಸೈನ್ಯಗಳಲ್ಲಿ ೨೫೦,೦೦೦ಕ್ಕಿಂತ ಹೆಚ್ಚಿನ ಸೈನಿಕರಿರುವರೆಂದು ಹೇಳಲಾಗುತ್ತದೆ. ಇನ್ನೊಂದು ಕಡೆಯಲ್ಲಿ ಬ್ರಿಟಿಷ್ ಎಂಟನೇ ಸೈನ್ಯ, ಬ್ರಿಟಿಷ ಒಂದನೇ ಸೈನ್ಯ, ಅಮೆರಿಕ ಮತ್ತು ಫ್ರೆಂಚ್ ದಲಗಳು ಕೂಡಿ ಇದನ್ನು ಎದುರಿಸಿವೆ ಎರಡು ಸೇನೆಗಳ ಬಲಾಬಲಗಳೂ ಸರಿ ಸಮಾನವಿರುವವು ಜರ್ಮನರು ಬ್ರಿಟಿಷರು ನಿರೀಕ್ಷಿಸಿದಷ್ಟು ಸುಲಭದಿಂದ ಟ್ಯುನಿಸಿಯವನ್ನು ಬಿಟ್ಟು ಹೋಗುತ್ತಿಲ್ಲ ಟ್ಯುನಿಸಿಯದಲ್ಲಿ 'ಡಂಕರ್ಕಿ'ನ ಪುನರಾವೃತ್ತಿಯಾಗುವುದೆಂದು ಮಿತ್ರರು ಭಾವಿಸಿದ್ದು ಈಗ ತುಸು ವಿಪರೀತವಾಗುತ್ತದೆ. ಮೊನ್ನೆ ಮೊನ್ನೆ ಟ್ಯುನಿಸಿಯಾದಿಂದ ಸಿಸಿಲಿ ಕಡೆಗೆ ಹೊರಟಿದ್ದ ಕೆಲ ಜರ್ಮನ್ ವಿಮಾನಗಳನ್ನು ಅಮೆರಿಕನರು ಉರುಳಿಸಿಬಿಟ್ಟರೆಂದು ಮಿತ್ರರು ಬಹಳ ಕೊಚ್ಚಿಬಿಟ್ಟಂತೆ ತೋರುವುದು. ಆದರೆ ಜರ್ಮನರ ಕೆಲ ವಿಮಾನಗಳು ರುಳಿಸಲ್ಪಟ್ಟವೆಂಬ ಸುದ್ದಿಯೊಡನೆಯೇ, ಟ್ಯುನಿಸಿಯ ರಣರಂಗಕ್ಕೆ ಜರ್ಮನರ ಸೈನ್ಯಗಳು ಬೇರೆ ಕಡೆಗಳಿಂದ ಬರುತ್ತಲಿವೆಯೆಂಬ ವಾರ್ತೆಯೂ ತಲುಪಿದೆ. ಇದರಿಂದ ಮಿತ್ರರ ಉತ್ಸಾಹ ತುಸು ತಣ್ಣಗಾಗಿದೆ ಜರ್ಮನರು ಟ್ಯುನಿಸಿಯವನ್ನು ಸುಲಭದಿಂದ ಬಿಟ್ಟುಹೋಗುವುದಿಲ್ಲವೆಂಬುದು ಖಂಡಿತವಾಗಿದೆ. ಟ್ಯುನಿಸಿಯಾ ಯುದ್ಧವನ್ನು ಇನ್ನೂ ಕೆಲವು ವಾರಗಳ ವರೆಗೆ ಮುಂದುವರಿಸಬೇಕೆಂದೇ ಹಿಟ್ಲರನ ಉದ್ದೇಶವಿದ್ದಂತೆ ತೋರುವುದು ಏಕೆಂದರೆ ಅತ್ತ ರಶ್ಯದಲ್ಲಿ ಮೂರನೆಯ ವಸಂತಧಾಳಿ ಪ್ರಾರಂಭಿಸುವಾಗ, ಮಿತ್ರರನ್ನು ಈ ಕಡೆ ಉದ್ಯೋಗ ನಿರತರನ್ನಾಗಿ ಮಾಡಿಬಿಟ್ಟರೆ ರಶ್ಯ ಯುದ್ಧದಲ್ಲಿ ಮಿತ್ರರ ಕಿರುಕುಳವೂ ಬರಲಾರದು ಅಥವಾ ಮಿತ್ರರು ರಶ್ಯದ ನೆರವಿಗಾಗಿ ಇನ್ನೊಂದು ದ್ವಿತೀಯ ರಂಗ ತೆರೆಯುವ ಭೀತಿಯೂ ಇಲ್ಲ. ಮಿತ್ರರಿಗಾದರೂ ತಾವು ಟ್ಯುನಿಸಿಯದಲ್ಲಿ ಹೋರಾಟ ಕೊಡುತ್ತಿದ್ದು—ಇದೇ ನಮ್ಮ ದ್ವಿತೀಯ ರಂಗವಾಗಿದೆಯೆಂದು ರಶ್ಯನರನ್ನು ಸಮಜಾಯಿಸಲೂ ಆಗುತ್ತದೆ ಹಾಗಾಗಿ ಟ್ಯುನಿಸಿಯಾ ಯುದ್ಧ ಸುಲಭದಲ್ಲಿ ತೀರುವ ಲಕ್ಷಣ ತೋರುವುದಿಲ್ಲ. ಒಂದು ಪಕ್ಷ ಟ್ಯುನಿಸಿಯಾ ರಣಮುಖದಲ್ಲಿ ಜರ್ಮನರು ಸೋತರೂ, ಹಿಟ್ಲರನು ಬೇರೆ ಮಾರ್ಗಗಳಿಂದ ಆಫ್ರಿಕಕ್ಕೆ ಧಾಳಿಯಿಡುವುದು ಅಸಂಭವವಲ್ಲ ಸ್ಪೇನ್ ಮಾರ್ಗವಾಗಿ ಆಲ್ಜೀರಿಯದಲ್ಲಿಯೂ, ಕ್ರೀಟ್ ಮಾರ್ಗವಾಗಿ ಇಜಿಪ್ತಿನಲ್ಲಿಯೂ ಜರ್ಮನರು ಆಫ್ರಿಕವನ್ನು ನುಗ್ಗಬಹುದು ಹೀಗಿರುವಾಗ ಆಫ್ರಿಕಾ ಯುದ್ಧ ಬೇಗನೇ ಕೊನೆಗಾಣುವುದೆಂತು?

ಕೊಂದವರು ಯಾರು?

ಸತ್ತವರಂತೂ ಪೋಲೆಂಡಿನ ಪ್ರಜೆಗಳು, ಇವರನ್ನು ಕೊಂದವರು ಯಾರು ಎಂಬ ವಿಷಯದಲ್ಲೀಗ ಜರ್ಮನ್ ರಶ್ಯಗಳೊಳಗೆ ದೊಡ್ಡ ವಿವಾದವೆದ್ದಿದೆ! ಇದೊಂದು ಸ್ವಾರಸ್ಯದ ಸಂಗತಿ ಅನ್ಯೋನ್ಯರನ್ನು ಕೊಲೆಪಾತಕಿಗಳಾಗಿ ಮಾಡಬೇಕೆಂದು ಉಭಯತರೂ ಈ ವಾಗ್ಯುದ್ಧವನ್ನು ಬೆಳೆಸಿದ್ದಾರೆ ಪಾಪ! ಸತ್ತ ಪೋಲೆಂಡಿನವರ ಗತಿಯೇನು? ಅವರ ಹೆಂಡತಿ ಮಕ್ಕಳ ಅವಸ್ಥೆಯೇನು? ಈ ವಿಚಾರವನ್ನು ಯಾರು ಮಾಡಬೇಕು? ೧೯೩೯ರಲ್ಲಿ ರಶ್ಯ ಪೋಲೆಂಡಿನ ಅರ್ಧಭಾಗವನ್ನು ವಶಪಡಿಸಿಕೊಂಡಾಗ ಸೆರೆಹಿಡಿದ ೧೦ ಸಾವಿರ ಮಂದಿ ಅಲ್ಲಿನ ಅಧಿಕಾರಿಗಳನ್ನು ೧೯೪೦ ಮಾರ್ಚ್ ಮೇ ತಿಂಗಳ ನಡುವೆ ಸ್ಮಾಲೆನ್‌ಸ್ಕದ ಹತ್ತಿರ ಒಂದು ಅಡವಿಯಲ್ಲಿ ರಶ್ಯನ್ ಗುಪ್ತ ಪೋಲೀಸರು ಒಂದೇ ಸಲ ಗುಂಡಿಕ್ಕಿ ಕೊಂದು ಹಾಕಿದ್ದಾರೆಂದೂ, ಈ ಸತ್ತವರ ಗೋರಿಗಳು ಈಗ ಸಿಕ್ಕಿರುವವೆಂದೂ ಜರ್ಮನ್ ಪ್ರಚಾರಖಾತೆ ಬೊಬ್ಬಿಡುತ್ತದೆ. ಈ ಸಂಬಂಧದಲ್ಲಿ, ಸದ್ಯ ಇಂಗ್ಲೆಂಡಿನಲ್ಲಿರುವ ದೇಶಭ್ರಷ್ಟ ಪೋಲೆಂಡ್ ಸರಕಾರದವರೂ ಒಂದು ಪ್ರಕಟಣೆ ಹೊರಡಿಸಿರುವರು. ೧೯೩೯ರಲ್ಲಿ ರಶ್ಯನರ ವಶವಾದ ಸಾವಿರಾರು ಅಧಿಕಾರಿಗಳು ಕಾಣೆಯಾಗಿರುವುದು ಸತ್ಯವೆಂದೂ, ಈ ವಿಷಯವಾಗಿ, ರಾಯಭಾರಿ ಮೂಲಕ ರಶ್ಯನ್ ಸರಕಾರದೊಡನೆ ಮಾಡಿದ ವಿಚಾರಣೆಗಳ ಪರಿಣಾಮವು ಪ್ರಯೋಜನಕಾರಿಯಾಗಿಲ್ಲವೆಂದೂ, ರಶ್ಯ ಸರಕಾರದವರು ಅವರನ್ನು ಬಿಡುಗಡೆ ಮಾಡಿರುವುದಾಗಿ ಮಾತ್ರ ಹೇಳುತ್ತಾರೆಂದೂ ಆ ಪ್ರಕಟಣೆಯಲ್ಲಿ ಹೇಳಲಾಗಿದೆ. ಅಂತೂ ಜರ್ಮನ್ ಪ್ರಚಾರದಿಂದ ಪೋಲೆಂಡ್ ಸರಕಾರಕ್ಕೆ ಸಾಕಷ್ಟು ಸಂಶಯವುಂಟಾಗಿದೆಯೆಂಬುದು ಸ್ಪಷ್ಟವಾಗಿದೆ ಜರ್ಮನಿಯು ಹೇಳುವಂಥಾ ಈ ಹತ್ಯಾಕಾಂಡವಾದ ಸ್ಥಳವನ್ನು ಸಂದರ್ಶಿಸಲು, ಪೋಲೆಂಡ್ ಸರಕಾರದ ಹೇಳಿಕೆಯಂತೆ ರೆಡ್‌ಕ್ರಾಸ್ ಸಂಸ್ಥೆಯವರು ಅಲ್ಲಿಗೆ ಹೋಗುವರೆಂದೂ ತಿಳಿದಿದೆ ಪೋಲಿಶ್ ರಕ್ಷಣಾ ಮಂತ್ರಿಯೂ ಇದೇ ರೀತಿ ಸಂಶಯ ಬರುವ ಪ್ರಕಟಣೆ ಕೊಟ್ಟಿರುವನು. ಅವರಿಗೆ ರಶ್ಯ ಸರಕಾರದ ಮೇಲೆ ಈ ಕುರಿತು ಪ್ರಬಲ ಸಂಶಯವಿದೆಯೆಂಬುದು ಅವರ ಹೇಳಿಕೆಯಿಂದ ವಿದಿತವಾಗುತ್ತದೆ. ಆದರೆ ರಶ್ಯನ್ ಸರಕಾರವು ಈ ಜರ್ಮನ್ ಪ್ರಚಾರವನ್ನು ಪ್ರಬಲವಾಗಿ ಪ್ರತಿಭಟಿಸುತ್ತದೆ. ರಶ್ಯನ್ ಪ್ರಕಟಣೆ ಸಾರುವುದೇನೆಂದರೆ, ಪೋಲೆಂಡಿನ ಅಧಿಕಾರಿಗಳನ್ನೆಲ್ಲಾ ನಾವು ಬಿಡುಗಡೆ ಮಾಡಿದ್ದೆವು, ಆದರೆ ಅವರು ಜರ್ಮನರ ಕೈಗೆ ಸಿಕ್ಕಿದ ಕೂಡಲೇ, ಅವರಿಂದ ನಿರ್ದಯ ಹತರಾದರು, ಈ ಕೊಲೆ ಪಾತಕವನ್ನು ಈಗ ಜರ್ಮನರು ನಮ್ಮ ತಲೆಮೇಲೆ ಹೇರಿಸುವ ಸಾಹಸ ಮಾಡುತ್ತಿದ್ದಾರೆ, ಅವರು ಹೇಳುವ ಸಾಮೂಹಿಕ ಗೋರಿಯು ಒಂದು ಪ್ರಾಚೀನ ಐತಿಹಾಸಿಕ ಸ್ಮಶಾನವಾಗಿದೆ, ಎಂದು! ಅಂತೂ ಈ ಇಬ್ಬರ ಪ್ರಚಾರವನ್ನು ನೋಡಿದರೂ ನಿರಪರಾಧಿ ಪೋಲೆಂಡಿನ ಅಧಿಕಾರಿಗಳು ಕೊಲ್ಲಲ್ಪಟ್ಟಿದ್ದಾರೆಂಬುದು ಈಗ ವಿದಿತವಾಗುವುದು. ಕೊಂದವರು ನಾವೇ ಎಂದು ಸದ್ಯ ಯಾರೂ ಒಪ್ಪಿಕೊಳ್ಳುವುದಿಲ್ಲ ಮುಂದೆ ಎಂದಾದರೊಂದು ದಿನ ಅದರ ಸತ್ಯಾಂಶ ಪ್ರಕಟವಾಗಿಯೇ ಆದೀತು! ಸದ್ಯ ಅದನ್ನು ತಿಳಕೊಂಡಾದರೂ ಮಾಡುವುದೇನಿದೆ? ಸತ್ತವರಂತೂ ಪುನಃ ತಲೆಯೆತ್ತಲಾರರು!

ಟರ್ಕಿಯ ತಾಟಸ್ಥ್ಯ

ಸದ್ಯದ ಈ ಮಹಾ ಯುದ್ಧದಲ್ಲಿ ದಿನದಿನಕ್ಕೆ ತಟಸ್ಥ ರಾಷ್ಟ್ರಗಳೊಂದೊಂದೇ ಸಮರಾಸಕ್ತವಾಗುತ್ತಾ ಬರುತ್ತಿದ್ದರೂ ಟರ್ಕಿ ಮೊದಲಿಂದ ಇಂದಿನ ವರೆಗೆ ತನ್ನ ತಾಟಸ್ಥ್ಯವನ್ನು ಕಾಪಾಡಿಕೊಂಡಿದೆ. ಟರ್ಕಿಯ ಸ್ಥಾನ ಮಹಾತ್ಮ್ಯೆಯಿಂದಾಗಿ ಅದು ಯಾವ ಕಡೆಗೆ ವಾಲಿತೋ, ಅದರ ಎದುರು ಪಕ್ಷಕ್ಕೆ ಬಲವಾದ ಪೆಟ್ಟು ಬೀಳುವುದು. ಆದ್ದರಿಂದಲೇ ಅದನ್ನು ಯಾರೂ ಇದುವರೆಗೆ ಕೆಣಕಲೂ ಹೋಗಿಲ್ಲ. ಟರ್ಕಿಯಾದರೂ ಈ ಪರಿಸ್ಥಿತಿಯಲ್ಲಿ ಬಹಳ ಕುಶಲತೆಯಿಂದಲೇ ವರ್ತಿಸುತ್ತಿದೆ ಎರಡು ಪಕ್ಷದವರೊಡನೆಯೂ ಒಪ್ಪಂದದಿಂದಿರುತ್ತಾ, ತನ್ನ ಸಿದ್ಧತೆಯನ್ನು ಚನ್ನಾಗಿ ಅಳವಡಿಸಿಕೊಂಡಿರುವುದು. ಟರ್ಕಿಗಾದರೂ ಅತ್ತ ಬ್ರಿಟನು, ಇತ್ತ ಜರ್ಮನಿ ಇವೆರಡರೊಡನೆಯೂ ಸ್ನೇಹ ಸಂಬಂಧವೇ ಬೇಕಾಗಿದೆ, ಏಕೆಂದರೆ ಯಾರೊಡನೆ ದ್ವೇಷ ಸಾಧಿಸಿಕೊಂಡರೂ ತನ್ನ ಗತಿಕೆಟ್ಟು ಹೋಗುವುದೆಂದು ಟರ್ಕಿಗೆ ಚನ್ನಾಗಿ ತಿಳಿದಿದೆ ಇದೆಲ್ಲಾ ಕಾರಣಗಳಿಂದಲೇ ಟರ್ಕಿ ಇದು ವರೆಗೆ ತಾಟಸ್ಥ್ಯ ನೀತಿಯನ್ನು ಕಾಪಾಡಿಕೊಂಡು ಬಂದಿರುವುದು ಟರ್ಕಿಯು ಜರ್ಮನಿಯೊಡನೆ ಮಾಡಿಕೊಂಡ ವ್ಯಾಪಾರೀ ಕರಾರನ್ನು ಮತ್ತೆ ಒಂದು ವರ್ಷದ ವರೆಗೆ ಮುಂದುವರಿಸಿದೆಯೆಂದು ಜರ್ಮನ್ ಪ್ರಚಾರ ಖಾತೆ ಸಾರುತ್ತದೆ ಈ ಒಪ್ಪಂದದ ಕರಾರುಗಳು ಪ್ರಸಿದ್ಧವಾಗಿಲ್ಲವಾದರೂ ಜರ್ಮನಿಗೆ ಕಳುಹಿಸಲ್ಪಡುವ ಕಚ್ಚಾ ಮಾಲುಗಳಲ್ಲಿ 'ಕ್ರೋಮು' ಎಷ್ಟು ಕಳುಹಿಸುವುದೆಂಬುದು ಅತ್ಯಂತ ಮಹತ್ವದ್ದಿದೆ. ಇದರಿಂದಲೇ ಯುದ್ಧದ ಮೇಲೆ ಮಹತ್ವದ ಪರಿಣಾಮವಾಗುತ್ತದೆ. ಉಳಿದ ಯಾವ ಕರಾರುಗಳಿಂದಲೂ ಸದ್ಯ ಯುದ್ಧದ ಮೇಲೆ ಹೆಚ್ಚಿನ ಪರಿಣಾಮಗಳೇನೂ ಉಂಟಾಗುವುದಿಲ್ಲ. ಜರ್ಮನರ ಮನೋಭಾವನೆ, ಸ್ಥಿತಿಗತಿಗಳೆಲ್ಲಾ ಟರ್ಕಿಗೆ ಚನ್ನಾಗಿ ಗೊತ್ತಿರುವುದರಿಂದ ಎಂದಾದರೊಂದು ದಿನ ದೋಷವಿಂದ, ಬೇಕೆಂದೇ ಕಲಹ ಕಾರಣವನ್ನು ಹುಡುಕಿ ಜರ್ಮನಿ ತನ್ನ ಮೇಲೆ ಆಕ್ರಮಣ ಮಾಡಿದರೆ ಬಿಟ್ಟುಕೊಡಬಾರದೆಂದು ಟರ್ಕಿ ಇಂದು ಪ್ರಬಲ ಯುದ್ಧ ಸಿದ್ಧತೆಯನ್ನೂ ಮಾಡಿಕೊಂಡಿದೆ. ಟರ್ಕಿಯ ಯುದ್ಧ ಶಕ್ತಿ ಹೆಚ್ಚಿಸಲು ಮಿತ್ರರೂ ಬೇಕಾದ ಸಹಾಯ ಕಳುಹಿಸುತ್ತಿದ್ದಾರೆ. ಮಿತ್ರರಿಗಂತೂ ಟರ್ಕಿಯನ್ನು ಜರ್ಮನಿ ಮೇಲೆ ಯುದ್ಧ ಹೂಡುವಂತೆ ಮಾಡಿಬಿಡಬೇಕೆಂದು ತುಂಬಾ ಮನಸ್ಸಿದೆ. ಆದರೆ ಟರ್ಕಿಯ ಸದ್ಯದ ಸ್ಥಿತಿ ನೋಡಿದರೆ ತಾನಾಗಿ ಟರ್ಕಿ ಯಾರ ಮೇಲೂ ಬೀಳಲು ತಯಾರಿಲ್ಲವೆಂದು ಖಚಿತವಾಗುವುದು. ಆದರೆ ತನ್ನ ಮೇಲೆ ಬಿದ್ದರೆ ಮಾತ್ರ ಟರ್ಕಿ ಸುಮ್ಮಗಿರಲಾರದು!

ಜಪಾನ್ ಮಂತ್ರಿಮಂಡಳದಲ್ಲಿ

ಕಳೆದ ವಾರ ಕೆಲವು ಬದಲಾವಣೆಗಳಾದವು. ವಿದೇಶ ಮಂತ್ರಿ ಟಾನಿಯರ ಬದಲು, ಶಿಗುಮಿತ್ಸು ಈಗ ವಿದೇಶ ಮಂತ್ರಿಯಾಗಿದ್ದಾರೆ ಇನ್ನಿಬ್ಬರು ಉಗ್ರವಾದೀ ಮಂತ್ರಿಗಳ ಬದಲು ಸೌಮ್ಯ ವಾದಿಗಳನ್ನು ತೆಗೆದುಕೊಳ್ಳಲಾಗಿದೆ. ಯುದ್ಧ ಕಾಲದಲ್ಲಿ ಇಂಥಾ ಬದಲಾವಣೆಯಾಗುವುದರಲ್ಲಿ ಮಹತ್ವವಿದ್ದೇ ಇರುತ್ತದೆ ಇದಕ್ಕಿಂತ ಹಿಂದೆ ಅಂಥಾ ಬದಲಾವಣೆಗಳಿಂದ ಬಹಳ ಮಹತ್ವಗಳುಂಟಾಗಿವೆ ರಾಜ ಕುಮಾರ ಕಾನೋ ರಾಜಿನಾಮೆಕೊಟ್ಟು ಟೋಜೋ ಅಧಿಕಾರಕ್ಕೆ ಬಂದ ಮೇಲೆ ಒಮ್ಮೆಲೇ ಯುದ್ಧ ಸುರುವಾಯಿತು ಈಗಲೂ ಅಂತಹ ಪರಿಸ್ಥಿತಿಯೇ ಬಂದಿದೆ ಜಪಾನಿಗಂತೂ ಮಿತ್ರರ ಅಂಜಿಕೆ ಇದ್ದೇ ಇದೆ ಆದರೆ ಮಿತ್ರರ ಯೋಜನೆಯ ಪ್ರಕಾರವೇ, ಎಂದರೆ ಯೂರೋಪಿನ ಯುದ್ಧ ಮುಗಿಸಿ ಏಶ್ಯಾ ಯುದ್ಧ ಪ್ರಾರಂಭವಾಗುವುದರಿಂದ ಮಿತ್ರರು ಜಪಾನಿನ ಮೇಲೆ ಬೀಳಲು ಇನ್ನೆಷ್ಟೋ ಸಮಯ ಬೇಕಾಗುವುದು ಅದುವರೆಗೆ ಜಪಾನರು ಸುಮ್ಮಗಿರುವುದೂ ನ್ಯಾಯವಲ್ಲ ಮುಂದೆ ಯೂರೋಪನ್ನು ಗೆದ್ದು ಮಿತ್ರರು ಪ್ರಬಲರಾದರೆ ತನಗೆ ಅಪಾಯ ಖಂಡಿತ, ಆದ್ದರಿಂದ ಈ ಮಧ್ಯದ ಅವಧಿಯಲ್ಲಿ ತಾನು ಏಶಾದ ರಾಷ್ಟ್ರಗಳನ್ನು ಗೆದ್ದು ಭದ್ರಮಾಡಿಕೊಳ್ಳದಿದ್ದರೆ ತೊಂದರೆಯುಂಟಾಗುವುದೆಂದು ಜಪಾನೂ ತಿಳಿದಿದೆ ಅದೇ ದೃಷ್ಟಿಯಿಂದ ಆಸ್ಟ್ರೇಲಿಯದ ಬಳಿ ಅರಕಾನದಲ್ಲಿ ಮತ್ತು ರಶ್ಯದ ಗಡಿಯಲ್ಲಿ ಜಪಾನರು ಕಾಲು ಚಾಚುತ್ತಿದ್ದಾರೆ ಬಂಗಾಳ ಉಪ ಸಾಗರದಲ್ಲಿ ಜಪಾನ್ ಹಡಗುಗಳು ಸುರಕ್ಷಿತ ಸಂಚರಿಸಬೇಕಾದರೆ ಚಿತಗಾಂಗ್ ಅವರ ಕೈಯಲ್ಲಿರಬೇಕಾಗಿದೆ ಆದ್ದರಿಂದ ಈಗ ಅರಕಾನದಲ್ಲಿ ಮುಂದುವರಿಯುತ್ತಿರುವ ಜಪಾನರು ಚಿತಗಾಂಗ ವರೆಗೂ ಬರಬಹುದು. ಹೀಗೆ ಜಪಾನ್ ಮಂತ್ರಿಮಂಡಳದಲ್ಲಿ ಬದಲಾವಣೆಯಾದ್ದರಿಂದ ಏಶ್ಯಾದ ರಾಷ್ಟ್ರಗಳಿಗೆ ಗಂಡಾಂತರವೇ ಹೆಚ್ಚಿದಂತಾಗಿದೆ ಜಪಾನಂತೂ ತನ್ನ ಆಕ್ರಮಣ ನೀತಿಯನ್ನು ಮುಂದುವರಿಸುವುದು ಖಂಡಿತ. ಹಾಗಿರಲು ಭಾರತ ಆಸ್ಟ್ರೇಲಿಯಗಳಿಗೆ ಅಂಜಿಕೆ ಹೇಗಾದರೂ ಹೆಚ್ಚೇ ಆಯಿತು ಚೀನದ ಯುದ್ಧವನ್ನು ಜಪಾನು ಈ ಸಂದರ್ಭದಲ್ಲಿಯೇ ಕೊನೆಗಾಣಿಸುವ ನಿರ್ಧಾರವನ್ನಾದರೂ ಮಾಡಬಹುದು.

ಮಧ್ಯಪೂರ್ವದ ಸೇನಾಪತಿಗಳಾದ ವಿಲ್ಸನ್ನರು ಅಂಕಾರಾ ಬಿಡುವ ಮುಂಚೆ ಟರ್ಕಿ ಪ್ರಧಾನರನ್ನು ಕಂಡರೆಂದು ಅಧಿಕೃತವಾಗಿ ತಿಳಿಯುತ್ತದೆ. ಚರ್ಚಿಲರು ಅಡಾನಾದಲ್ಲಿ ನಡೆಸಿದ ಮಾತುಕತೆಗಳ ಬಗ್ಗೆ ಇನ್ನಷ್ಟು ಸಹಕಾರ ದೊರಕಿಸಲು ಮತ್ತು ಅವರತರ ಯುದ್ಧ ಪರಿಸ್ಥಿತಿಯಲ್ಲಿ ಆಗಿರುವ ವ್ಯತ್ಯಾಸವನ್ನನುಲಕ್ಷಿಸಿ ಭೂಮಧ್ಯ ಸಮುದ್ರದಲ್ಲಿ ಮಿತ್ರರಿಗೆ ಅನುಕೂಲತೆ ಒದಗಿಸಿಕೊಳ್ಳುವುದೇ ವಿಲ್ಸನರ ಭೇಟಿಯ ಉದ್ದೇಶವಾಗಿತ್ತೆಂದು ಟರ್ಕಿ ಪತ್ರಿಕೆಗಳು ಬರೆಯುತ್ತಿವೆ ವಿಲ್ಸನರ ಈ ಆಲೋಚನೆಯು ಕಾಸಾಬ್ಲಾಂಕಾ ಪರಿಷತ್ತಿನ ಪರಿಣಾಮಗಳಲ್ಲೊಂದು ಹೇಳಲಾಗಿದೆ

ಅಮೇರಿಕದ ಅಧ್ಯಕ್ಷ ರೂಜುವೆಲ್ಟರು ಮೆಕ್ಸಿಕೋಕ್ಕೆ ತಾ. ೨೦ನೇ ದಿನ ಗುಪ್ತವಾಗಿ ಪ್ರಯಾಣಮಾಡಿ ಅಲ್ಲಿಯ ಅಧ್ಯಕ್ಷರಾದ ಕ್ಯಾಮಾಚೋ ಅವರನ್ನು ಕಂಡರು. ಯುದ್ಧಾರಂಭದ ನಂತರ ಅವರು ಗುಪ್ತಪ್ರವಾಸ ಕೈಕೊಂಡದ್ದು ಇದು ಎರಡನೆಯ ಸಲ. ಯುದ್ಧದ ಪರಿಸ್ಥಿತಿಯನ್ನು ಅಮೇರಿಕ ಮತ್ತು ಮೆಕ್ಸಿಕೋಗಳ ಪರಸ್ಪರ ಸಮಸ್ಯೆಗಳನ್ನು ಚರ್ಚಿಸಲಾಯಿತೆಂದು ಇಬ್ಬರು ಅಧ್ಯಕ್ಷರೂ ಆಕಾಶವಾಣಿಯಲ್ಲಿ ಭಾಷಣಮಾಡುತ್ತ ಹೇಳಿದರು

ಸ್ವದೇಶಾಭಿಮಾನಿ

ತಾರೀಕು 30—4—1943

ಜಿನ್ನರ ಪ್ರಲಾಪ

ಡಿಲ್ಲಿಯಲ್ಲಿ ಸೇರಿದ ಮೂವತ್ತನೆಯ ಮುಸ್ಲಿಂ ಲೀಗ್ ಅಧಿವೇಶನದ ಅಧ್ಯಕ್ಷ ಪೀಠದಿಂದ, ಅದರ ಸ್ಥಿರ ಅಧ್ಯಕ್ಷರಾದ ಜಿನ್ನಾ ಸಾಹೇಬರು, 'ಪಾಕಿಸ್ತಾನವೇ ಪರಮೌಷಧ'ವೆಂದು ಪುನಃ ಕೂಗಿಹೇಳಿದರು. ತನ್ನ ನಿತ್ಯದ ಸರಣಿಯಂತೆ, ಗಾಂಧಿಜಿ ಮತ್ತು ಕಾಂಗ್ರೆಸನ್ನು ಯಥಾಶಕ್ತಿ ದೂಷಿಸಿದರು. ಗಾಂಧಿಜಿ, ಭಾರತದಲ್ಲಿ ಹಿಂದು ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವರೆಂದೂ ಅದಕ್ಕೆ ಮುಸಲ್ಮಾನರು ಒಪ್ಪಲಾರರೆಂದೂ, ಅವರಿಗೆ ಪಾಕಿಸ್ತಾನವೇ ಬೇಕಾಗಿದೆಯೆಂದೂ ಹೇಳುತ್ತಾ, ಕೊನೆಗೆ ಪಾಕಿಸ್ತಾನದಿಂದಲೇ ಭಾರತಕ್ಕೆ ವಿಮೋಚನೆಯೆಂದೂ ವಾದಿಸಿದರು.

ವೈಸರಾಯರಿಗೆ ಬರೆದ ಪತ್ರದಲ್ಲಿ ಗಾಂಧಿಜಿಯವರು ಸೂಚಿಸಿದಂತೆ, 'ಜಿನ್ನರೇ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಲಿ' ಎಂಬ ಮಾತನ್ನು ಉಲ್ಲೇಖಿಸಿ, ಇಂಥಾ ರಾಷ್ಟ್ರೀಯ ಸರಕಾರಕ್ಕೆ ಒಪ್ಪಿದರೆ, ಕೇವಲ ಹಿಂದೂ ರಾಜ್ಯವನ್ನು ಕಟ್ಟಿದಂತೆ ಎಂದು ಭಯಪ್ರದರ್ಶನ ಮಾಡಿದ್ದಾರೆ. ಜಿನ್ನರಿಗೇ ರಾಷ್ಟ್ರೀಯ ಸರಕಾರ ಮಾಡಲು ಬಿಟ್ಟರೆ, ಅಂಥಾ ಸರಕಾರವೂ ಹಿಂದೂ ರಾಜ್ಯವಾಗಿ ಏಕೆ ಪರಿಣಮಿಸಬೇಕೋ ನಮಗೆ ತಿಳಿಯದು. 'ನನ್ನ ಮೇಲೆ ನಿಮ್ಮ ಅಧಿಕಾರ ಬೇಡ' ಎಂದು ಜಿನ್ನರು ಗಾಂಧಿಜಿಯವರೊಡನೆ ಹೇಳುತ್ತಾರೆ! ಜಿನ್ನರನ್ನೇ ಭಾರತದ ಪ್ರಧಾನಮಂತ್ರಿಯಾಗಿ ಮಾಡಲು ಬಯಸುವ ಗಾಂಧಿಜಿ, ಜಿನ್ನರ ಮೇಲೆ ಹೇಗೆ ಅಧಿಕಾರ ಮಾಡುವರೋ ಅರ್ಥವಾಗುವುದಿಲ್ಲ. ಜಿನ್ನರ ಈ ಪ್ರಲಾಪಗಳಲ್ಲಿ, ಕುತರ್ಕ ಅಸಂಬದ್ಧತೆಗಳೇ ತುಂಬಿ ತೋರುತ್ತವೆ.

ಜಿನ್ನರು ತಮ್ಮ ಸಲದ ಮಾತಿನಲ್ಲಿ ಐಕ್ಯದ ವಿಷಯ ಬಹಳ ಆಗ್ರಹಗೊಂಡಂತೆ ನಟಿಸಿದ್ದಾರೆ. 'ನಮ್ಮ ನಮ್ಮೊಳಗೆ ಭಿನ್ನಭೇದಗಳಿರುವುದರಿಂದ, ಬ್ರಿಟಿಷರು ನಮ್ಮ ಮೂರ್ಖತನದ ಲಾಭ ಪಡೆಯುತ್ತಿರುವರೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅದ್ದರಿಂದಲೇ ನಾವಿಂದು ಒಂದಾಗಿ ಬ್ರಿಟಿಷರನ್ನು ಇಲ್ಲಿಂದ ಹೊರಗಟ್ಟುವ' ಎಂದೂ ಹೇಳುತ್ತಾರೆ! ಹಿಂದು ಮುಸ್ಲಿಮರು ಒಂದಾಗಲು, ಲೀಗ್ ಕಾಂಗ್ರೆಸ್‌ಗಳು ಐಕ್ಯವಾಗಲು ಅಡ್ಡಿ ಮಾಡಿದವರಾದರೂ ಯಾರು? ಮಹಾತ್ಮಾ ಗಾಂಧಿ, ನೆಹರು, ಪ್ರಸಾದ್, ಅಜಾದ್ ಮೊದಲಾದ ಹಲವು ಮಂದಿ ರಾಷ್ಟ್ರಪತಿಗಳು ಐಕ್ಯವಾಗಬೇಕೆಂದು ಸಾಧಿಸಲು ಪ್ರಯತ್ನಿಸಿದಾಗ ಅದಕ್ಕೆ ಅಡ್ಡಗಾಲು ಹಾಕಿದವರಾದರೂ ಜಿನ್ನರೇ ಅಲ್ಲವೆ? ಹೀಗಿರುತ್ತಾ ಜಿನ್ನರು ಈಗ, 'ಒಪ್ಪಂದದ ಬಗ್ಗೆ ಗಾಂಧಿಜಿ ನನಗೆ ಪತ್ರ ಬರೆಯಲಿ. ಅದನ್ನು ಯಾರು ತಡೆಯುತ್ತಾರೆಯೋ ನೋಡುತ್ತೇನೆ' ಎಂದು ತಿರುಗಿ ಕೂಗುತ್ತಿರುವುದರ ತಾತ್ಪರ್ಯವೇನೆಂದು ತಿಳಿಯದಾಗಿದೆ. ಗಾಂಧಿಜಿ ತನಗೆ ಶರಣಾಗಬೇಕೆಂದೋ, [illegible] ಭಾರತದ ಬಿಕ್ಕಟ್ಟು ಬಗೆಹರಿಯುವುದೆಂದೋ ಜಿನ್ನರು ಕನವರಿಸುವಂತೆ ತೋರುತ್ತದೆ. ನಿಜವಾಗಿಯೂ ಜಿನ್ನಾ ಸಾಹೇಬರು ತನ್ನಿಂದ ಭಾರತದ ಬಿಕಟ್ಟು ಬಗೆಹರಿಯುವುದೆಂದು ಆತ್ಮಸಾಕ್ಷಿಯಿಂದ ತಿಳಿಯುವದಾದರೆ, ಭಾರತದ ಬಿಕ್ಕಟ್ಟು ಬಿಡಿಸಲು ಹೃತ್ಪೂರ್ವಕವಾಗಿ ಅವರು ಬಯಸುವುದಾದರೆ, ಅವರೇ ಗಾಂಧಿಜಿಯವರಿಗೆ ಪತ್ರ ಯಾಕೆ ಬರೆಯಬಾರದು? ಗಾಂಧಿಜಿಯಂತೂ ಸೆರೆಮನೆಯಲ್ಲಿದ್ದಾರೆ. ಅನ್ಯರ ಬಂಧನಕ್ಕೊಳಗಾಗಿದ್ದಾರೆ. ಜಿನ್ನರು ಸ್ವತಂತ್ರರಿರುವಾಗ, ಗಾಂಧಿಜಿಗೆ ಪತ್ರ ಬರೆಯಲು ಜಿನ್ನರೇ ಪ್ರಾರಂಭಿಸುವುದು ಉಚಿತವೂ ಯೋಗ್ಯವೂ ಅಲ್ಲವೆ?

ಪ್ರಾಂತದ ವಿದ್ಯಾಭ್ಯಾಸ

ನಮ್ಮ ಪ್ರಾಂತದ ವಿದ್ಯಾಭ್ಯಾಸದ ಪ್ರಗತಿಯನ್ನು ಪರಾಮರ್ಶಿಸುತ್ತಾ, ಸರಕಾರವು ತನ್ನನ್ನೇ ತಾನು ಅಭಿನಂದಿಸಿಕೊಂಡ ಹಾಗೆ ತೋರುತ್ತದೆ. ೧೯೩೭ನೇ ವರ್ಷದಿಂದ ೧೯೪೨ರ ವರೆಗಿನ ಐದು ವರ್ಷಗಳ ಅವಧಿಯಲ್ಲಿ, ಪ್ರಾಂತದ ಎಲಿಮೆಂಟರಿ ಶಾಲೆಗಳಲ್ಲಿ ಶೇಕಡಾ ೮-೫ರಂತೆಯೂ, ಸೆಕೆಂಡರಿ ಶಾಲೆಗಳಲ್ಲಿ ಶೇಕಡಾ ೨೭ರಂತೆಯೂ, ಕಾಲೇಜುಗಳಲ್ಲಿ ಶೇಕಡಾ ೫೦ರಂತೆಯೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದೆಂದು ಸರಕಾರವು ಸೂಚಿಸಿ; ಇಲ್ಲಿ ತನ್ನ ಅಭಿಮಾನವನ್ನು ಕೊಚ್ಚಿಕೊಂಡಿದೆ. ಎಲಿಮೆಂಟರಿ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಅಲ್ಪ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ವಿಚಾರವು ಯಾರಿಗಾದರೂ ಇಲ್ಲಿ ಹೊಳೆದು ಬರದಿರದು. ಆದರೆ, ಇಪ್ಪತ್ತು ಮಂದಿಗಿಂತ ಕಡಿಮೆ ಹಾಜರಿರುವ ಶಾಲೆಗೆ ಗ್ರೇಂಟು ಕೊಡಲು ಸರಕಾರವು ತಿರಸ್ಕರಿಸಲು, ಇದರಿಂದ ಸಾವಿರಾರು ಸಣ್ಣ ಸಣ್ಣ ಶಾಲೆಗಳು ಹೋಗಿ ದೊಡ್ಡ ಶಾಲೆಗಳಲ್ಲಿ ಪ್ರಯತ್ನವು "ಕೇಂದ್ರೀಕೃತವಾಗಿ" ವ್ಯಯ ಮಾಡುವ ಅಲ್ಪ ಹಣದಿಂದ 'ಉತ್ತಮ ವಿದ್ಯಾಭ್ಯಾಸ ಮತ್ತು ಅಧಿಕ ಪ್ರಯೋಜನ'ಗಳನ್ನು ಪಡೆದಂತಾಯಿತೆಂದೂ ಸರಕಾರವು ಇದಕ್ಕೆ ವಿವರಣೆ ಕೊಡುತ್ತದೆ!

ಅಂತೂ ಸರಕಾರದ ಈ ಧೋರಣದಿಂದ ಪಟ್ಟಣಗಳಿಗೆ ಸೌಕರ್ಯ ಒದಗಿಸಿಕೊಟ್ಟಂತೆ ಮಾತ್ರ ಆಯಿತು. ಸಣ್ಣ ಸಣ್ಣ ಹಳ್ಳಿಗಳಲ್ಲಿರುವ ಬಡಜನರು ತಮ್ಮ ಮಕ್ಕಳನ್ನು ಪಟ್ಟಣಗಲ್ಲಿರುವ ದೊಡ್ಡ ಶಾಲೆಗೆ ಕಳುಹಿಸಲು ಅಸಮರ್ಥರಾಗಿರುವುದರಿಂದ ಬಾಲಕರ ವಿದ್ಯಾಭ್ಯಾಸವು ಒಟ್ಟಿನಿಂದ ನೆಲೆಗೆಟ್ಟಂತಾಯಿತು. ದಿನದಿನಕ್ಕೆ ಹುಟ್ಟುವ ಮಕ್ಕಳ ಸಂಖ್ಯೆ ಹೆಚ್ಚುತ್ತಾ ಇದ್ದರೂ, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕೆಂದು ಈಗಿನ ಎಲ್ಲಾ ಹೆತ್ತವರಿಗೂ ಮನಸಿದ್ದರೂ, ಸರಕಾರವು ಹಳ್ಳಿಹಳ್ಳಿಗಳಲ್ಲಿ ಸಣ್ಣ ಸಣ್ಣ ಶಾಲೆಗಳನ್ನು ಪ್ರೋತ್ಸಾಹಿಸದಿರುವುದು ಸದೋಷದೃಷ್ಟಿಯಾಗಿದೆ. ಸರಕಾರವು ಹಳ್ಳಿಹಳ್ಳಿಗಳಲ್ಲಿರುವ ಎಲಿಮೆಂಟರಿ ಶಾಲೆಗಳ ಕಡೆಗೆ ಇದಕ್ಕಿಂತ ಹೆಚ್ಚಿಗೆ ಗಮನಕೊಡುವುದು ಅವಶ್ಯವಾಗಿದೆ.

ಸ್ವದೇಶ ಸಮಾಚಾರ

"ಗಾಂಧಿಜಿಯನ್ನು ನೋಡಲು ಅಪ್ಪಣೆ ಕೊಡಲಿಲ್ಲ"

ಫಿಲಿಪ್ಸರ ಹೇಳಿಕೆ

ಪ್ರೆಸಿಡೆಂಟ್ ರೂಸ್‌ವೆಲ್ಟರ ರಾಯಭಾರಿ ವಿಲಿಯಂ ಫಿಲಿಪ್ಸರು ಹೊಸದಿಲ್ಲಿಯ ಪತ್ರಿಕೋದ್ಯಮಿಗಳೊಡನೆ ಮಾತನಾಡುತ್ತಾ, ಮಹಾತ್ಮಾ ಗಾಂಧಿ, ನೆಹರು, ಅಜಾದ್ ಇವರನ್ನು ಭೇಟಿಯಾಗಲು ತಮಗೆ ಮನಸ್ಸಿದ್ದು ಆ ಬಗ್ಗೆ ತಾನು ಪ್ರಯತ್ನ ಮಾಡಿದರೂ, ಅವರನ್ನು ಭೇಟಿಯಾಗಲು ನನಗೆ ಸರಕಾರವು ಅಪ್ಪಣೆ ಕೊಡಲಿಲ್ಲವೆಂದು ಹೇಳಿದರು. ಈ ಸಭೆಯಲ್ಲಿ ಫಿಲಿಪ್ಸರು ಭಾರತದ ಪತ್ರಿಕಾ ಪ್ರತಿನಿಧಿಗಳು ತಮನಿತ್ತ ಸಹಕಾರದ ಬಗ್ಗೆ ಧನ್ಯವಾದ ಹೇಳಿದರು. ತನ್ನ ಸರಕಾರಕ್ಕಲ್ಲದೆ ಬೇರೆಯವರಿಗೆ, ತನ್ನೀ ಪ್ರಯಾಣದ ವರದಿಯೊಪ್ಪಿಸಲು ತಾನು ಅಸಮರ್ಥನಿರುವೆನೆಂದರು. ಕೊನೆಗೆ ಅಮೇರಿಕಕ್ಕೆ ಹೋಗಿ ತಾನು ಇಲ್ಲಿಗೆ ಪುನಃ ಮರಳಿ ಬರುವೆನೆಂದೂ ಹೇಳಿದರು.

'ಬಂಗಾಳದ ಗವರ್ನರರು ಮನೆಗೆ ಹೋಗಬೇಕು'

'ಬಂಗಾಳದ ಗವರ್ನರರು ಜನರ ವಿಶ್ವಾಸ ಕಳಕೊಂಡಿರುವರು, ಶತ್ರುವು ಬಾಗಿಲ ಬಳಿ ಬಂದಿರುವಾಗ ಅಡಳಿತ ವಹಿಸಲು ಇಂಥವರು ಸಮರ್ಥರಲ್ಲ, ಅವರು ತಮ್ಮ ಅಧಿಕಾರವನ್ನು ಬಿಟ್ಟು ಸ್ವದೇಶಕ್ಕೆ ಹೋಗಬೇಕೆಂದು ಹೇಳುವುದು ಬಂಗಾಳದ ಪ್ರಜೆಗಳ ಹಕ್ಕು' ಎಂಬುವಾಗಿ ಡಾ। ಶ್ಯಾಮ ಪ್ರಸಾದ ಮುಖರ್ಜಿಯವರು ಒಂದು ಹೇಳಿಕೆಯಿತ್ತು ಸಾರಿರುವರು. ಬಂಗಾಳ ಗವರ್ನರರು ಹಕ್ ಮಂತ್ರಿಮಂಡಳವನ್ನು ರದ್ದುಗೊಳಿಸಿದ ಬಗ್ಗೆ ಕಲ್ಕತ್ತೆಯಲ್ಲಿ ಪ್ರಚಂಡ ಸಾರ್ವಜನಿಕ ಸಭೆ ಜರಗಿ ಗವರ್ನರರ ಕೃತಿಯನ್ನು ಖಂಡಿಸಲಾಯಿತು. ಈ ಸಭೆಯಲ್ಲಿ ಹಕ್ಕರೂ, ಸಂತೋಷಕುಮಾರ ಬಸುಗಳೂ ಡಾ। ಶ್ಯಾಮ ಪ್ರಸಾದ ಮುಖರ್ಜಿಯವರೂ ಭಾಷಣ ಮಾಡಿದರು.

ದಕ್ಷಿಣ ಆಫ್ರಿಕ ಸರಕಾರದ ನೀತಿಯ ಖಂಡನೆ

ಹಿಂದುಸ್ತಾನ ಸರಕಾರದಿಂದ

ದಕ್ಷಿಣ ಆಫ್ರಿಕ ಸರಕಾರವು ಭಾರತೀಯರ ವಿರುದ್ಧವಾಗಿ, ವರ್ಣಭೇದ ಮಸೂದೆಯನ್ನು ಈಗ ಪೂರ್ಣ ಸ್ವೀಕರಿಸಿದ್ದರಿಂದ, ಹಿಂದುಸ್ತಾನ ಸರಕಾರದವರು ಆ ಬಗ್ಗೆ ತಮ್ಮ ನಿಷೇಧವನ್ನು ವ್ಯಕ್ತಪಡಿಸಿ ಒಂದು ಪ್ರಕಟಣೆ ಕೊಟ್ಟಿರುವರು. ದಕ್ಷಿಣ ಆಫ್ರಿಕ ಸರಕಾರವು ಈ ರೀತಿಯ ವರ್ಣಭೇದದ ಮಸೂದೆಯನ್ನು ತಂದು ಭಾರತೀಯರಿಗೆ ಅನ್ಯಾಯ ಮಾಡುವುದೆಂದು ತಿಳಿದ ಕೂಡಲೇ ಭಾರತ ಸರಕಾರವು ಹಾಗೆ ಮಾಡಕೂಡದೆಂದು ಮೂರು ಮನವಿಗಳನ್ನು ಮಾಡಿದ್ದರು. ಆದರೆ ಆ ಮನವಿಯ ಕಡೆಗೆ ಆಫ್ರಿಕ ಸರಕಾರವು ಗಮನ ಕೊಡಲಿಲ್ಲ. ಅದ್ದರಿಂದ ಭಾರತ ಸರಕಾರವು ತನಗಾದ ವಿಷಾದವನ್ನು ಈಗ ವ್ಯಕ್ತ ಮಾಡಿದೆ. ಈ ಮಸೂದೆಯು ಅನವಶ್ಯಕ, ಅಪ್ರಸ್ತುತ ಮತ್ತು ಅತ್ಯಂತ ಪ್ರತಿಗಾಮಿ ಧೋರಣದ್ದಿರುವುದೆಂದು ಅಖಿಲ ಭರತ ಖಂಡವೇ ಒಮ್ಮತದಿಂದ ನಿಷೇಧಿಸಿದೆ. ಭಾರತ ಸರಕಾರದ ಅಭಿಪ್ರಾಯವಾದರೂ ಇಂತಿದೆ.

ಫೆಡರಲ್ ಕೋರ್ಟ್ ತೀರ್ಮಾನದಂತೆ

ಕಲ್ಕತ್ತದಲ್ಲಿ ೧೮ ಜನರ ಬಿಡುಗಡೆ

ಫೆಡರಲ್ ಕೋರ್ಟಿನ ತೀರ್ಮಾನದಂತೆ, ಕಲ್ಕತ್ತದಲ್ಲಿ ಡಿಫೆನ್ಸ್ ಕಾನೂನಿನ ೨೬ನೆಯ ನಿಯಮದಂತೆ ಬಂಧಿಸಲಾದ ೧೮ ಜನರ ಬಿಡುಗಡೆಯಾಗಿದೆ. ಇದೇ ಪ್ರಕಾರ ೨ ಜನರ ಬಿಡುಗಡೆಗೆ ಸಪ್ರು ಅಲಹಾಬಾದ್ ಕೋರ್ಟಿಗೆ ಅರ್ಜಿ ಮಾಡಿರುವರು. ಹೀಗೆಯೇ ಬೊಂಬಾಯಿ, ಲಾಹೋರ್, ಮದ್ರಾಸ್ ಮೊದಲಾದ ಕಡೆಗಳಲ್ಲಿಯೂ ಅರ್ಜಿ ಆಗಿದೆ.

ರಾಜಕೀಯ ಕೈದಿಗಳ ಬಿಡುಗಡೆ

ಬರೋಡಾ ಸರಕಾರವು ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆಮಾಡುವ ಆಜ್ಞೆ ಹೊರಡಿಸಿದೆ. ಅವರಿಗೆ ವಿಧಿಸಲಾಗಿದ್ದ ದಂಡವನ್ನು ಹಿಂತಿರುಗಿ ಕೊಡಲಾಗುವುದು. ಕ್ರಾಂತಿಕಾರಕ ಕೈದಿಗಳನ್ನು ಮಾತ್ರ ಬಿಡುವುದಿಲ್ಲವಂತೆ.

ರಾಜಾಜಿ ಬ್ರಿಟನಿನ ಅಪಜಯ ಪ್ರಾರ್ಥಿಸಿದರೆ?

ರಾಜಾಜಿಯವರು ಸಂಡೆ ಒಬ್ಸರ್ವರ್ ಪತ್ರಿಕೆಯ ಮೇಲೆ ಹೂಡಿದ ಮಾನಹಾನಿ ಖಟ್ಲೆ ವಿಚಾರಣೆ ಸಮಯದಲ್ಲಿ, ಆ ಪತ್ರಿಕೆ ಸಂಪಾದಕ ಬಾಲಸುಬ್ರಹ್ಮಣ್ಯಂ ಮುದಲಿಯಾರರು, ಅವಿನಾಶಲಿಂಗಂ ಚೆಟ್ಟಿಯಾರರ ದಿನಚರಿಯೊಂದನ್ನು ಹಾಜರುಪಡಿಸಿದರು. ಅದರಲ್ಲಿ, ರಾಜಾಜಿ ಒಂದು ಸಭೆಯಲ್ಲಿ, ಕೂಡಿದ ಸಭಿಕರೆಲ್ಲರೂ ಬ್ರಿಟನಿನ ಅಪಜಯಕ್ಕಾಗಿ ಪ್ರಾರ್ಥಿಸಬೇಕೆಂದು ಕೇಳಿಕೊಂಡಿರುವರಾಗಿ ಉಲ್ಲಿಖಿತವಾಗಿದೆ.

ಮದ್ರಾಸ್ ಸೆಕ್ರೆಟರಿಯೇಟ್

ಈ ವರ್ಷ ಬೇಸಿಗೆಯಲ್ಲಿ ಉದಕಮಂಡಲಕ್ಕೆ ಹೋಗುವುದಿಲ್ಲವೆಂದು ಪ್ರಸಿದ್ಧವಾಗಿದೆ. ಆದರೆ ಸೆಕ್ರೆಟರಿಗಳಿಗೆ ಮಾತ್ರ ಅಲ್ಲಿ ೬ ವಾರ ಇದ್ದು ಬರಲು ಅನುಕೂಲ ಕೊಡಲಾಗಿದೆ. ಮದ್ರಾಸ್ ಸರಕಾರದವರು ಕರಾವಳಿಹೊರತು ಉಳಿದ ಎಲ್ಲಾ ಸ್ಥಳಗಳ ದೀಪ ನಿರ್ಬಂಧ ತೆಗೆದುಹಾಕಿರುವರು.

ಎಸೆಂಬ್ಲಿ ಸ್ಪೀಕರರಿಗೆ ದಂಡ!

ಮಗಳ ವಿವಾಹ ಆದ್ದಕ್ಕೆ

ಮಧ್ಯ ಪ್ರಾಂತದ ಎಸೆಂಬ್ಲಿ ಸ್ಪೀಕರರಾದ ಘನಶ್ಯಾಮಸಿಂಗ ಗುಪ್ತ ಇವರು ತಮ್ಮ ೧೩ ವರ್ಷದ ಮಗಳನ್ನು ೧೭ ವರ್ಷದ ವರನಿಗೆ ಕೊಟ್ಟು ಮದುವೆ ಮಾಡಿದರೆಂದು ಅವರಿಗೆ ೫೦೦ ರೂಪಾಯಿ ದಂಡ ವಿಧಿಸಲಾಗಿದೆ. ಆದರೆ ಗುಪ್ತರು ತಾನು ಸೆರೆಮನೆಯಲ್ಲಿರುವಾಗ, ತನ್ನ ಅರಿವಿಲ್ಲದೆ ಈ ವಿವಾಹ ನಡೆದಿತ್ತೆಂದು ಹೇಳಿಕೆ ಕೊಟ್ಟಿರುವರು.

ಗಾಂಧಿಜಿಯನ್ನು ಬಿಡುಗಡೆ ಮಾಡಿ ಅರಸರು ಕ್ಷಮೆ ಕೇಳಲಿ!

ಬರ್ನಾಡ್ ಶಾ ಹೇಳಿಕೆ!

ಬ್ರಿಟನಿನ ಪ್ರಸಿದ್ಧ ನಾಟಕ ಕರ್ತ ಜಾರ್ಜ್ ಬರ್ನಾಡ್ ಶಾರೊಡನೆ ಭಾರತದ ಸಮಸ್ಯೆಯನ್ನು ಬಗೆಹರಿಸುವುದು ಹೇಗೆಂದು ಕೇಳಲು ಅವರು ಹೀಗೆಂದರು: 'ಬ್ರಿಟನಿನ ಅರಸರು ಗಾಂಧಿಜಿಯನ್ನು ಬಿಡುಗಡೆ ಮಾಡಿ, ತನ್ನ ಮಂತ್ರಿ ಮಂಡಳವು ಅವರನ್ನು ಬಂಧಿಸಿದ ತಪ್ಪಿಗಾಗಿ ಕ್ಷಮೆ ಕೇಳಬೇಕು. ಆದರೆ ಭಾರತದ ಬಿಕ್ಕಟ್ಟು ಬಗೆಹರಿಯುವುದು.'

ಗಾಂಧಿಜಿ ಆಗಸ್ಟ್ ೯ಕ್ಕೆ ಮರಣಾಂತ ಉಪವಾಸ ಮಾಡುವರು?

ಇದೇ ಬರುವ ಆಗಸ್ಟ್ ೯ರಂದು (ಅವರನ್ನು ಸೆರೆ ಹಿಡಿದ ದಿನ) ಮಹಾತ್ಮರು ಮರಣಾಂತ ಉಪವಾಸ ಕೈಕೊಳ್ಳಲಿರುವರೆಂಬ ಸುದ್ದಿಯೊಂದು ನಾಗಪುರದ 'ಲೋಕಮತ' ಎಂಬ ಹಿಂದೀ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಗಾಂಧಿಜಿ ವೈಸರಾಯರೊಡನೆ ಪತ್ರ ವ್ಯವಹಾರ ನಡೆಸುತ್ತಿರುವರೆಂದೂ, ಅವರು ಮರಣಾಂತ ಉಪವಾಸ ಕೈಕೊಳ್ಳಲಿರುವರೆಂದೂ ಪ್ರಬಲವಾದ ಊಹಾಪೋಹವೆದ್ದಿದೆ.

'ಸಂಪೂರ್ಣ ಸ್ವಾತಂತ್ರ್ಯವೇ ಅಹರಾರ ಧ್ಯೇಯ'

ಭಾರತದ ಸಂಪೂರ್ಣ ಸ್ವಾತಂತ್ರ್ಯವೇ ಅಹರಾರ ಧ್ಯೇಯವೆಂದು ಮೌಲಾನಾ ಗುಲಾಮು ಗೌಸರು ಸಂಯುಕ್ತ ಪ್ರಾಂತ ಅಹರಾರ ವಾರ್ಷಿಕಾಧಿವೇಶನದ ಅಧ್ಯಕ್ಷ ಪೀಠದಿಂದ ಹೇಳಿದರು. 'ಹಿಂದುಗಳು ತಮ್ಮ ರಾಜ್ಯವನ್ನು ಸ್ಥಾಪಿಸುವ ಹಠ ಹಿಡಿದರೆ ಮುಸ್ಲಿಮರು ಬಿಡಲಿಕ್ಕಿಲ್ಲ. ಲೀಗಿಗೂ ನಮಗೂ ಭೇದವಿಷ್ಟೆ, ಮೊದಲು ವಿಭಜನೆ ಮಾಡಿ ಅನಂತರ ಗಳಿಸಬೇಕೆಂದು ಲೀಗಿನವರು ಹೇಳುತ್ತಾರೆ, ನಮ್ಮದು ಅದರ ವಿರುದ್ಧವಿದೆ' ಎಂದೂ ಸ್ಪಷ್ಟಪಡಿಸಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ರೇಶನಿಂಗ್

ನಗರ ಸಭೆಯ ಅವಸರದ ಸಭೆಯೊಂದು ತಾ. ೧೫ರಂದು ಜರಗಿ ನಗರದೊಳಗೆ ಚಿಮಿಣಿ ಎಣ್ಣೆ ಮತ್ತು ಸಕ್ಕರೆಯನ್ನು ಹಂಚುವ ವಿಷಯದಲ್ಲಿ ರೇಶನಿಂಗ್ ಕ್ರಮವನ್ನು ಜಾರಿಗೆ ತರುವ ನಿರ್ಧಾರವಾಯಿತು. ವಿದ್ಯುದ್ದೀಪಗಳಿದ್ದರೆ, ಪ್ರತಿ ಮನೆಗೆ ತಿಂಗಳಿಗೆ ಒಂದು ಬಾಟಲಿಯಂತೆಯೂ ಇಲ್ಲದಿದ್ದರೆ ವಾರಕ್ಕೆ ಒಂದು ಬಾಟಲಿಯಂತೆಯೂ ಚಿಮಿಣಿ ಎಣ್ಣೆ, ತಿಂಗಳೊಂದರ ತಲಾ ೧¼ ರಾತಲಿನಂತೆ ಸಕ್ಕರೆ—ಹೀಗೆ ಪಂಚುವ ನಿರ್ಧಾರವಾಯಿತು. ಅದಕ್ಕೆ ಅವಶ್ಯವಿರುವ ಅಂಕೆ-ಸಂಖ್ಯೆಗಳನ್ನು ಸಂಗ್ರಹಿಸಲು ಕೌನ್ಸಿಲಿನ ಪ್ರತಿಯೊಬ್ಬ ಸದಸ್ಯರಿಗೆ ವಾರ್ಡುಗಳು ಪ್ರತ್ಯೇಕಿಸಲ್ಪಟ್ಟುವು

ಕಲೆಕ್ಟರರ ಅಧ್ಯಕ್ಷತೆಯಲ್ಲಿ

ಕಲೆಕ್ಟರರ ಆಫೀಸಿನಲ್ಲಿ ಅಧಿಕಾರಿಗಳ ಮತ್ತು ಇತರರ ಒಂದು ಸಭೆ ನೆರೆದಿತ್ತು. ಮಂಗಳೂರು ಮುನಿಸಿಪಾಲಿಟಿಯಲ್ಲಿ ಬೇಗನೇ ಜಾರಿಗೆ ಬರಲಿರುವ ಚಿಮಿಣಿ ಎಣ್ಣೆ ಮತ್ತು ಸಕ್ಕರೆಯ 'ರೇಶನಿಂಗ್'ನ ಕುರಿತಾಗಿ ಆಲೋಚಿಸುವುದು ಆ ಸಭೆಯ ಉದ್ದೇಶವಾಗಿತ್ತು. ಮಂಗಳೂರು ಕೋ-ಓಪರೇಟಿವ್ ಸ್ಟೋರ್ಸಿನ ಕಾರ್ಯದರ್ಶಿ ಶ್ರೀ. ಎಸ್. ನರಸಪ್ಪಯ್ಯನವರು 'ಆಹಾರ ಸಾಮಗ್ರಿಗಳ ಸರಬರಾಯಿ ಯೋಜನೆ'ಯ ಕುರಿತು ವಿವರಿಸಿದರು. ತಮ್ಮ ಸ್ಟೋರು ಸರಕಾರವು ಒಪ್ಪಿಕೊಂಡಿರುವ ಈ ಅಧಿಪತ್ಯದ ಸ್ಟೋರುಗಳಲ್ಲಿ ಒಂದೆಂದೂ, ಅದರ ಮೂಲಕ ಆಹಾರ ಸಾಮಗ್ರಿಗಳ ಸರಬರಾಯಿಯಾಗಬೇಕೆಂದೂ, ಈ ಸ್ಟೋರಿಗೆ ಸರಕಾರದ ಒಬ್ಬ ಸೀನಿಯರ್ ಕೊ-ಓಪರೇಟಿವ್ ಇನಸ್ಪೆಕ್ಟರರ ಸಹಾಯದ ಸೇವೆ ಒದಗಿದೆ ಎಂದೂ, ಅಕ್ಕಿಯನ್ನೂ ಮಾರಲು ಈ ಸ್ಟೋರು ಸಿದ್ಧವೆಂದೂ, ಈಗಿರುವ ಈ ಸ್ಟೋರಿನ ೫ ಶಾಖೆಗಳೊಂದಿಗೆ ಇನ್ನೂ ೭ ಹೆಚ್ಚಿಗೆ ಶಾಖೆಗಳನ್ನು ಈ ನಗರದಲ್ಲಿ ತೆರೆಯಲು ತಾವು ಸಿದ್ಧರೆಂದೂ, ಅಧಿಕಾರಿಗಳು ಸರಬರಾಯಿ ಕಾರ್ಯದಲ್ಲಿ ಸಹಾಯ ಕೊಡಬೇಕೆಂದೂ, ಮಳೆಗಾಲದ ನಾಲ್ಕು ತಿಂಗಳಿಗೂ ಸಾಕಾಗುವಂತೆ ಸುಮಾರು ೬೫ ಸಾವಿರ ಮುಡಿ ಅಕ್ಕಿಯನ್ನು ಒದಗಿಸಬೇಕೆಂದೂ, ಸರಕಾರವು ಅಕ್ಕಿಯನ್ನು ಸ್ವಾಧೀನ ಮಾಡಿದ ಮೇಲೆ ಅಕ್ಕಿ ಸಿಕ್ಕದೆ ತೊಂದರೆಯಾಗಿದೆ ಎಂದೂ ಮುಂತಾಗಿ ನಿವೇದಿಸಿದರು. ಜಿಲ್ಲಾ ಕಲೆಕ್ಟರರ ಸ್ಟೋರಿಗೆ ಸಾಧ್ಯವಿರುವ ಸಹಾಯ ಕೊಡುವೆವೆಂದರು.

ಮಹಾ ಜನರ ಮನವಿ

ಯೊಂದನ್ನು ತಯಾರಿಸಿ, ಅಕ್ಕಿಯ ಬೆಲೆಯನ್ನು ಇನ್ನೂ ತಗ್ಗಿಸಿ ನಿಯಂತ್ರಣವನ್ನು ಬಲಪಡಿಸಬೇಕೆಂದು ಕೇಳಿಕೊಂಡು, ನಗರ ಸಭಾ ಉಪಾಧ್ಯಕ್ಷರಾದ ಶ್ರೀ ಸಿ ಎಲ್ ಲೋಬೋ ಅವರು ಗವರ್ನರರಿಗೆ ಒಂದು ಮನವಿಯನ್ನು ಕಳುಹಿಸಿದ್ದರಷ್ಟೆ? ಈ ಮನವಿಯು ತಮ್ಮ ಕೈಸೇರಿದು ತಾವು ಅದನ್ನು ಪರಿಶೀಲಿಸುತ್ತಿರುವುದಾಗಿ ಗವರ್ನರರ ಆಪ್ತಕಾರ್ಯದರ್ಶಿ ಸರ್ ಹ್ಯೂಮ್ ರವರಿಂದ ಶ್ರೀ ಲೋಬೋ ಅವರಿಗೆ ಪತ್ರ ಬಂದಿರುವುದು

ಪಶ್ಚಿಮ ಕರಾವಳಿಯ ಫಲಪುಷ್ಪ ಪ್ರದರ್ಶನ

ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ತಾ. ೨೭ರಂದು ಬೆಳಿಗ್ಗೆ ಈ ಪ್ರದರ್ಶನ ಆರಂಭವಾಗಿ ಮರುದಿನವೂ ನಡೆಯಿತು. ಜಿ ಎ ಸಂಘದ ಗೌ॥ ಕಾರ್ಯದರ್ಶಿ ಶ್ರೀ. ಪಿ ಆರ್ ಆರ್. ಪೂಂಜರವರು, ಈ ಪ್ರಥಮ ಪ್ರದರ್ಶನದ ಉದ್ದೇಶವನ್ನು ವಿವರಿಸಿ ಇದರಲ್ಲಿ ಆಸಕ್ತಿ ವಹಿಸಿದ ನಮ್ಮ ಜಿಲ್ಲಾ ಕಲೆಕ್ಟರ್, ಅವರ ಪತ್ನಿ ಬೇಗಂ ಕರಮತುಲ್ಲಾ, ಹಣ್ಣಿನ 'ಸ್ಪೆಶಲಿಸ್ಟ್' ಶ್ರೀ. ಕೆ. ಸಿ. ನ್ಯಾಕ್ ಅವರನ್ನು ಅಭಿವಂದಿಸಿದರು. ಬಳಿಕ ಹಣ್ಣಿನ ಸ್ಪೆಶಲಿಸ್ಟರಾದ ಶ್ರೀ. ಕೆ ಸಿ. ನ್ಯಾಕ್ ಅವರು ಭಾಷಣ ಮಾಡುತ್ತ ಹಣ್ಣಿನ ಮಹತ್ವ, ಅದರ ಉಪಯೋಗ, ಆಹಾರದ ಕೊರತೆಯನ್ನು ಹೋಗಲಾಡಿಸಬಲ್ಲ, ಅದರ ಯೋಗ್ಯತೆ, ಅದರಲ್ಲಿರುವ ಪೌಷ್ಟಿಕ ಪದಾರ್ಥಗಳ ಹಾಗೂ ಔಷಧ ಗುಣಗಳನ್ನು ವಿವರಿಸಿ, ಹಲವು ಪಾಶ್ಚಾತ್ಯ ದೇಶಗಳಲ್ಲಿ ಹಣ್ಣುಗಳ ಬೆಳೆಯನ್ನು ಹೆಚ್ಚಿಸಿಕೊಂಡದರಿಂದ ಉಂಟಾದ ಪ್ರಯೋಜನಗಳನ್ನು ತಿಳಿಸಿದರು. ಈ ಕರಾವಳಿಯಲ್ಲಿ ಬೆಳೆಸಬಹುದಾದ ಹಣ್ಣುಗಳ ಕುರಿತಾಗಿ ಸೂಚನೆ ಕೊಟ್ಟರು. ಬಳಿಕ ಬೇಗಂ ಕರಮತುಲ್ಲಾ ಅವರು ಪ್ರದರ್ಶನದ ಉದ್ಘಾಟನಾ ಕಾರ್ಯವನ್ನು ನೆರವೇರಿಸುತ್ತಲೂ ನೆರೆದವರು ಕಾಲೇಜ್ ಹಾಲಿನಲ್ಲಿ ತುಂಬಿರುವ ಫಲಪುಷ್ಪಗಳ ಸ್ಟಾಲುಗಳನ್ನು ಸಂದರ್ಶಿಸಿದರು. ಡಾ॥ ಕೆ. ಆರ್. ಶಿಣೈ, ಶ್ರೀ. ಕೆ. ಸಿ. ನ್ಯಾಕ್, ಡಾ ಎಲ್ ಉಮೇಶರಾವ್ ಮೊದಲಾದ ಮಹನೀಯರ ಭಾಷಣಗಳಿದ್ದವು. ಬೇಗಂ ಕರಮತುಲ್ಲಾ ಅವರು ಸ್ಟಾಲಿನವರಿಗೆ ಬಹುಮಾನಗಳನ್ನು ಹಂಚಿದರು.

ಶ್ರೀ ರಾಮಕೃಷ್ಣ ಜನ್ಮದಿನೋತ್ಸವವು

ವಿವೇಕಾನಂದ ಸಭೆಯವರ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ೧೧೮ನೇ ಜನ್ಮ ದಿನೋತ್ಸವವು ಕೆನರಾ ಹೈಸ್ಕೂಲಲ್ಲಿ ತಾ. ೨೫ರಂದು ಜರಗಿತು. ಸ್ವಾಮಿ ತ್ಯಾಗೀಶಾನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ಕೀರ್ತನೆ ಮೊದಲಾದ ಬೆಳಗಿನ ಕಾರ್ಯಕ್ರಮವಾದ ಮೇಲೆ ಸಂಜೆ, ಪ್ರಾರ್ಥನೆ, ಸಂಗೀತಗಳಿದ್ದುವು. ಸ್ವಾಮಿ ಓಜಸಾನಂದಜಿ ಮತ್ತು ಸ್ವಾಮಿ ಪ್ರಣವೇಶಾನಂದಜಿಯವರು ಮಾತನಾಡಿದರು. ಸಾಯಂ ಪೆಂಟಲೆಂಡ್‌ಪೇಟೆ ಮೈದಾನಿನಲ್ಲಿ ಬಡವರಿಗೆ ಅನ್ನದಾನವಿತ್ತು.

ಉದಾರ ದಾನ

ಸಾಹುಕಾರ ಶ್ರೀ ಮಹೇಲ್ ಜಣ್ಣಪ್ಪ ನಾಯ್ಕರು ಶ್ರೀ ರಾಮಾಂಜನೇಯ ವ್ಯಾಯಾಮ ಶಾಲೆಗೆ ಬಾಡಿಗೆ ಇಲ್ಲದೆ ಕಟ್ಟೋಣ ಒದಗಿಸಿ ಕೊಟ್ಟಿರುವರೆಂದು ತಿಳಿಯುತ್ತೇವೆ.

ಹೆತ್ತವರ ದಿನಾಚರಣೆ

ಕದ್ರಿ ವಿದ್ಯಾಬೋಧಿನಿ ಹಯ್ಯರ್ ಎಲಿಮೆಂಟರಿ ಶಾಲೆಯ ಹೆತ್ತವರ ದಿನಾಚರಣೆಯು ಶ್ರೀ ನಾರಾಯಣ ಕಿಲ್ಲೆಯವರ ಅಧ್ಯಕ್ಷತೆಯಿಂದ ಜರಗಿತು. ಪ್ರಾರ್ಥನೆ ವರದಿ ವಾಚನಗಳಾದ ಮೇಲೆ ಶ್ರೀಗಳಾದ ಮುಚ್ಚಿಮಲೆ ಶಂಕರನಾರಾಯಣ ರಾವ್, ರಾಮರಾವ್, ಭೋಜರಾವ್ ಮೊದಲಾದವರ ಭಾಷಣಗಳಾದುವು. ವಿವಿಧ ವಿನೋದಾವಳಿಗಳಿದ್ದುವು

ವಾರ್ಷಿಕೋತ್ಸವ

ಜಪ್ಪು ಮಹಿಳಾ ಸಮಾಜದ ವಾರ್ಷಿಕೋತ್ಸವವು ಶ್ರೀಮತಿ ಗಿರಿಜಾ ಕಾಮತರ ಅಧ್ಯಕ್ಷತೆಯಿಂದ ಜರಗಿತು. ಶ್ರೀ ಬಿ. ಗಂಗಾಧರದಾಸರು ಸಮಾಜದ ಏಳಿಗೆ ವಿಷಯ ಮಾತನಾಡಿದರು. ಒಂದು ಪ್ರಹಸನವೂ ಅಭಿನಯಿಸಲ್ಪಟ್ಟಿತು.

ಮುನ್ಸಿಪಾಲಿಟಿ

ಸಭೆಯೊಂದು, ಅದರ ಆಫೀಸಿನಲ್ಲಿ ೩ಮೇ ತಾ ೩ರಂದು ಸೋಮವಾರ ಸಂಜೆ ೫-೩೦ಕ್ಕೆ ಜರಗುವುದು

ಮಿಲಿಟರಿ ವೆಲ್‌ಫೇರ್ ವರ್ಕರರಾಗಿ

ಶ್ರೀ ಸಿ. ಎಲ್ ಲೋಬೋ ಅವರು ನೇಮಿಸಲ್ಪಟ್ಟಿರುವರು. ಸೈನಿಕ, ನಾವಿಕ, ವೈಮಾನಿಕರ ಕುಟುಂಬಗಳ ಸುಖ ದುಃಖಗಳನ್ನು ವಿಚಾರಿಸುವುದು, ಮಾಜಿ ಯೋಧರಿಗೆ ನೆರವಾಗುವುದು, ದೂರುಗಳನ್ನೆಲ್ಲ ಕೇಳಿ ಪರಿಹರಿಸುವುದು, ಯುದ್ಧ ಕೈದಿಗಳಾಗಿರುವವರಿಗೆ ಇಂಗ್ಲಿಷಿನಲ್ಲಿ ಪತ್ರ ಬರೆಯಲು ಸಹಾಯ ಮಾಡುವುದು; ಆ ಕುಟುಂಬಗಳಿಗೆ ವೈದ್ಯಕೀಯ ಮತ್ತು ವಿದ್ಯಾ ಸಹಾಯ ಸಿಗುವಂತೆ ನೋಡುವುದು—ಈ ಎಲ್ಲ ಕೆಲಸಗಳನ್ನು ಮಂಗಳೂರು ತಾಲೂಕಿನ ಮಟ್ಟಿಗೆ ಶ್ರೀ ಲೋಬೋ ಅವರು ನೋಡಿಕೊಳ್ಳುವರು.

ಸತ್ಕಾರ ಕೂಟ

ತಾ. ೨೭ನೇ ಸಂಜೆ ದ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡಿನ ಡೈರೆಕ್ಟರರಾಗಿರುವ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಕೊಚ್ಚಿಕಾರ್ ಪದ್ಮನಾಭ ಪೈ, ಯು ಗೋಪಾಲ ನಾಯ್ಕ ಇವರು ನಮ್ಮ ಜಿಲ್ಲೆಯವರೂ ಕೆನರಾ ಬ್ಯಾಂಕಿನ ಡೈರೆಕ್ಟರರೂ ಆಗಿದ್ದು ಪ್ರಕೃತ ಬೊಂಬಾಯಿಯಲ್ಲಿರುವ ಶ್ರೀಮಾನ್ ಕುಡ್ಪಿ ಭುಜಂಗರಾವ್ ಮತ್ತು ಸುಜೀರ ಪುಂಡಲೀಕ ನಾಯ್ಕರನ್ನು ಸ್ಥಳೀಯ ಕಾರ್ಪೊರೇಶನ್ ಬ್ಯಾಂಕಿನ ರಥಬೀದಿ ಆಫೀಸಿನ ಪಟಾರದಲ್ಲಿ ಸತ್ಕರಿಸಿ 'ಕೂಟವನ್ನೇರ್ಪಡಿಸಿ ಗೌರವಿಸಿದರು. ಶ್ರೀ ಬಿ. ವೈಕುಂಠ ಬಾಳಿಗರು ಮತ್ತು ಶ್ರೀ ಕೆ. ಪದ್ಮನಾಭ ಪೈಯವರು ಶ್ರೀ ಭುಜಂಗರಾಯರ ಮತ್ತು ಶ್ರೀ ಪುಂಡಲೀಕ ನಾಯ್ಕರ ಗುಣ ನಡತೆಗಳನ್ನು ಶ್ಲಾಘಿಸಿ ಮಾತನಾಡಿದರು. ಅನೇಕ ವರ್ಷಗಳಿಂದ ಶ್ರೀ ಭುಜಂಗರಾಯರು ಬೊಂಬಾಯಿಯಲ್ಲಿದ್ದು ಈಗ ಅಲ್ಲಿಯ ಪ್ರಥಮಶ್ರೇಣಿಯ ವ್ಯಾಪಾರಿಗಳಾಗಿರುವರೆಂದೂ, ಇಂದು ಕೂಡಾ ಮುಂಬಾಯಿಯಲ್ಲಿಯ ದಕ್ಷಿಣ ಕನ್ನಡಿಗರು ಅನೇಕ ವಿಷಯಗಳಲ್ಲಿ ಶ್ರೀ ರಾಯರ ಸಹಕಾರ ಸಹಾನುಭೂತಿಯನ್ನು ಪಡೆಯುತ್ತಿರುವರೆಂದೂ ಅಲ್ಲಿಯ ಹಲವಾರು ವಾಣಿಜ್ಯ ಸಂಸ್ಥೆಗಳು ಶ್ರೀಯುತರ ನೇತೃತ್ವದಲ್ಲಿ ಪ್ರಗತಿಯನ್ನು ಹೊಂದುತ್ತಿರುವವೆಂದೂ ಮಾತನಾಡಿದರು. ಅನಂತರ ಶ್ರೀ ಪುಂಡಲೀಕ ನಾಯ್ಕರ ವಿಷಯ ಪ್ರಸ್ತಾಪಿಸುತ್ತ ಪ್ರಾಮುಖ್ಯ ದೇಶೀಯ ವಿಮಾ ಸಂಸ್ಥೆಯಾದ ಬೊಂಬೆ ಲ್ಯಾಫ್ ಎಶ್ಯೂರೆನ್ಸ ಕಂಪೆನಿಯಲ್ಲಿ ವಿಮಾದಾರರಿಂದಾರಿಸಲ್ಪಟ್ಟ ಡೈರೆಕ್ಟರರೆಂದರೆ ಶ್ರೀ ನಾಯ್ಕರ ಮೇಲಿನ ಜನರ ಪ್ರೀತಿ ಪುರಸ್ಕಾರಗಳ ಮತ್ತು ಅವರ ಪ್ರಾಮುಖ್ಯತೆಯ ವಿಷಯ ಬೇರೆ ಹೇಳಬೇಕಾಗಿಲ್ಲವೆಂದೂ ಅದಲ್ಲದೆ ಅವರೂ ಬೊಂಬಾಯಿಯ ಪ್ರಮುಖ್ಯ ವರ್ಗದ ವ್ಯಾಪಾರಿಗಳಾಗಿದ್ದುದು ನಮ್ಮ ಜಿಲ್ಲೆಯ ಯುವಕ ವರ್ಗಕ್ಕೊಂದು ಹುರುಪನ್ನು ಹುಟ್ಟಿಸುತ್ತದೆಂದೂ ನಾಡಿನ ವಾಣಿಜ್ಯ ಕ್ಷೇತ್ರದಲ್ಲಿ ಶ್ರೀಯುತರುಗಳಾದ ಭುಜಂಗರಾಯರು ಮತ್ತು ಪುಂಡಲೀಕ ನಾಯ್ಕರಂಥವರಿದ್ದುದರಿಂದಲೇ ನಮ್ಮ ಸಂಸ್ಥೆಗಳು ಅಭಿವೃದ್ಧಿಯನ್ನು ಹೊಂದುತ್ತಿರುವವೆಂದೂ ಹೇಳಿದರು.

ಶ್ರೀ ರಾಮೋತ್ಸವವು

ಯುಗಾದಿ ಮೊದಲ್ಗೊಂಡು ರಥಬೀದಿಯ ಶ್ರೀ ಶಿವಾನಂದ ಭಟ್ಟರಲ್ಲಿ ನಡೆಯಿತು.

ಹಿಂದೂ ಫೆಡರಲ್ ಬೋರ್ಡು ಮತ್ತು ವಿವೇಕಾನಂದ ಸಭೆಯವರೂ ಒಂದಾಗಿ ರಾಮೋತ್ಸವವನ್ನು ಆಚರಿಸಿದರು.

ಪುತ್ತೂರು

ಅಕ್ಕಿ ಎತ್ತ ಸಾಗುತ್ತಿದೆ?

ಅಕ್ಕಿ ಧಾರಣೆ ನಿಯಂತ್ರಣವಾದಂದಿನಿಂದ ರಾತ್ರಿ ಸಮಯದಲ್ಲಿ ಗಾಡಿಗಳಲ್ಲಿ ಅಕ್ಕಿ ಮುಡಿಗಳು ಪೇಟೆಯಿಂದ ಹಳ್ಳಿಗಳಿಗೆ ಸಾಗುತ್ತಿವೆಯೆಂದೂ, ಅಡಿಕೆ ಮಾರಿದ ಶ್ರೀಮಂತರು ಒಂದೇ ಸವನೆ ಅಕ್ಕಿ ದಾಸ್ತಾನು ಮಾಡುವುದರಿಂದ, ಬಡವರಿಗೆ ಕಂಟ್ರೋಲಿನ ಪ್ರಯೋಜನ ದೊರೆಯುವುದಿಲ್ಲವೆಂದೂ ಒಂದು ದೂರು ಬಂದಿದೆ

ಕಾರ್ಕಳ

ತಾಲೂಕು ರಾಷ್ಟ್ರ ಭಾಷಾ

ಪ್ರಚಾರ ಸಂಘದ ವಾರ್ಷಿಕ ಸಭೆಯು ಸಂಘದ ಅಧ್ಯಕ್ಷ ಶ್ರೀ ಡಿ. ವೆಂಕಟೇಶ ಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಲೆಕ್ಕ ಪತ್ರಗಳು ಸ್ವೀಕೃತವಾದುವು. ಪ್ರಚಾರ ಕಾರ್ಯವನ್ನು ಮತ್ತಷ್ಟು ಬೆಳೆಸಲಿಕ್ಕಾಗಿ ಚಾಲತಿ ವರ್ಷಕ್ಕೆ ೫೦೦ ರೂ.ಗಳ ಸಾರ್ವಜನಿಕ ವಂತಿಗೆಯಾಗಬೇಕೆಂದಾಯಿತು.

ಸಭೆಸಮಾಚಾರಗಳು

ಬೋಳ ಕೆರಂಜಾರು ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವ, ಕಾರ್ಕಳ ಬೋರ್ಡ್ ಹಾಸ್ಕೂಲಿನ ವರ್ಧಂತಿ ಉತ್ಸವ, ಆ ಶಾಲೆಯ ಹಿಂದಿನ ದಿನ ವಿದ್ಯಾರ್ಥಿಗಳ ವಾರ್ಷಿಕ ಸಭೆ ಮತ್ತು ಸಂಸ್ಕೃತ ಕಾಲೇಜಿನ ಹಸ್ತಲಿಖಿತ 'ಸರಸ್ವತಿ' ಪತ್ರಿಕೆಯ ಉದ್ಘಾಟನಾ ಸಮಾರಂಭಗಳು ಕ್ರಮವಾಗಿ ಶ್ರೀ. ಯು. ಕೃಷ್ಣರಾವ್, ಡಾಕ್ಟರ ಯಂ. ಕೇಶವ ಪೈ, ವಕೀಲ ಕೆ. ಲಕ್ಷ್ಮಣ ಕುಡ್ವ ಮತ್ತು ಪಂಡಿತ ಯನ್. ಶ್ರೀನಿವಾಸ ಶಾಸ್ತ್ರಿಯವರ ಅಧ್ಯಕ್ಷತೆಗಳಲ್ಲಿ ಜರಗಿದುವು.

ಹರಿಜನ ವಿದ್ಯಾರ್ಥಿಗಳಿಗೆ

ಕಾರ್ಕಳ ಹರಿಜನ ಸೇವಾ ಸಂಘದ ಸ್ಥಳೀಯ ಹರಿಜನ ಆಶ್ರಮದಲ್ಲಿ ಪುಕ್ಕಟೆ ನಿವಾಸ, ಅನ್ನ ಬಟ್ಟೆ ಮೊದಲಾದವುಗಳ ಧರ್ಮ ಸಹಾಯ ಪಡೆಯಲಿಚ್ಛಿಸುವ ಹರಿಜನ ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ, ವಿಹಿತ ಸಂಬಂಧ ಯೋಗ್ಯತೆ ಇತ್ಯಾದಿ ವಿವರಗಳೊಂದಿಗೆ ಅರ್ಜಿಯನ್ನು, ಬಡತನದ ಬಗ್ಗೆ ತಾಲೂಕು ತಹಸಿಲ್ದಾರರ ಪ್ರಮಾಣ ಪತ್ರದೊಂದಿಗೆ ಇದೇ ಮೇ ತಿಂಗಳ ಅಂತ್ಯದೊಳಗಾಗಿ ತಮಗೆ ಕಳುಹಿಸಿಕೊಡಬೇಕೆಂದು ಸಂಘದ ಅಧ್ಯಕ್ಷ ಶ್ರೀ. ವಕೀಲ ಮಹಾಬಲ ಹೆಗ್ಡೆಯವರು ತಿಳಿಸುತ್ತಾರೆ.

ಉಡುಪಿ

ಮಟ್ಟಿ ತೆನ್ನಯ್ಯ ಪೂಜಾರಿ ಕೊಲೆಗೆ

ಸಂಬಂಧಪಟ್ಟ ಪಾಂಗಾಳ ಶಿವರಾಮ ಶೆಟ್ಟಿ ಕಾರ್ಕಳ ತಾಲೂಕು ದುರ್ಗ ಮುದ್ದಣ್ಣ ಹೆಗ್ಡೆರ ಮನೆಯಲ್ಲಿ ಕಾರ್ಕಳ ಸಬ್ ಇನ್ಸ್‌ಪೆಕ್ಟರರಿಂದ ಸೆರೆ ಹಿಡಿಯಲ್ಪಟ್ಟಿದ್ದಾರೆ. ಅವರನ್ನು ಮಂಗಳೂರು ಸಬ್ ಜೈಲಿನಲ್ಲಿ ಇರಿಸಲಾಗಿದೆ.

ನಗರ ಸಭೆ

ಯು ತಾ. ೧೯ರಂದು ಜರಗಿ, ಶ್ರೀ ಎಸ್. ಸತ್ಯಮೂರ್ತಿ ಮತ್ತು ಬೇಗಮ್ ಆಜಾದರ ನಿಧನದ ಸಲುವಾಗಿ ದುಃಖ ಪ್ರದರ್ಶಿಸಲಾಯಿತು. ಸಭೆಯು ಐದು ನಿಮಿಷ ಮುಂದುವರಿಸಲ್ಪಟ್ಟಿತು. ಕೌನ್ಸಿಲು ಸಿಬಂಧಿಗೆ ಹೊಸ ಸ್ಕೇಲಿನಂತೆ ತುಟ್ಟಿಭತ್ತೆಯನ್ನೀಯುವರೆ ಕೌನ್ಸಿಲಿನ ಆಕ್ಷೇಪನೇನೂ ಇಲ್ಲ, ಆದರೆ ಆರ್ಥಾಂಶ ಹಣವನ್ನು ಸಹಾಯಧನವಾಗಿ ಸರಕಾರವೇ ಕೊಡುವಂತೆ ಮಾನ್ಯ ಸರಕಾರಕ್ಕೆ ತಿಳಿಸಬೇಕೆಂದಾಯಿತು

ಸರ್ವ ಧಾರ್ಮಿಕ ಐಕ್ಯತೆ

ಯ ವಿಷಯದಲ್ಲಿ ಹೈದರಾಬಾದ [ದಖ್ಖನ್] ದೀನರ ಸಮಾಜದ ಮೌಲ್ವಿ ಸೈಯ್ಯದ್ ಇಮಾಂರವರು ತಾ. ೧೯ ಮತ್ತು ೨೦ರಲ್ಲಿ ಅಜ್ಜರ ಕಾಡು ಗಾಂಧಿ ಮೈದಾನದಲ್ಲಿ ಭಾಷಣವಿತ್ತರು

ಸ್ಥಿರಾಸ್ತಿ ಮಾರಾಟ

ಪುತ್ತೂರಿನಿಂದ ಸುಮಾರು 22 ಮೈಲು ದೂರ ಮೂಡುಭಾಗದಲ್ಲಿದ್ದು ಮತ್ತು ಪಂಜ ಒಂಗ್ಲೆಯಿಂದ ಸುಮಾರು ¾ ಮೈಲು ದೂರದಲ್ಲಿ ಇರುವ ಐವತೊಕ್ಲು ಗ್ರಾಮದ ಬೊಳ್ಳಾಜೆ ಎಂಬ ಸ್ಥಿರಾಸ್ತಿಯನ್ನು ತಾರೀಕು 10-5-1948ನೇ ಸೋಮವಾರ ಪೂರ್ವಾಹ್ನ 11 ಗಂಟೆಗೆ ಪುತ್ತೂರು ಸಬ್ ಆಫೀಸಿನಲ್ಲಿ ಬಹಿರಂಗವಾದ ಏಲಮಿನಲ್ಲಿ ಮಾರಾಟ ಮಾಡಲಿಕ್ಕಿರುವ ಸಂಗ್ತಿ ಈ ಮೂಲಕ ಪ್ರಕಟಿಸಿಯದೆ ಕಾಯುಷ್ಕೃಳ್ಳವರು ಆ ಸಮಯಕ್ಕೆ ಸರಿಯಾಗಿ ಬಂದು ಏಲಮಿಗೆ ನಿಲ್ಲಬೇಕು. ಈ ಆಸ್ತಿಯು ವಠ್ಯುಕ್ತವಾಗಿದ್ದು ಕ್ಷೀಡು, ಕರೆ ಪಸೀರಾಶ್ರಯ ಸಹ ಸಾಮಾನ್ಯ ಸಾಕಷ್ಟು ಇವೆ. ಈ ಆಸ್ತಿಯು ಕೆಳಗೆ ಕಾಣಿಸಿದಂತೆ ಜುಮ್ಲಾ 29 ಎಕ್ರೆ 94 ಸೆಂಟ್ಸ್ ವಿಸ್ತೀರ್ಣವಾಗಿದ್ದು ರೂ. 139-9-0 ತೀರ್ವೆ ಉಂಟು. ಇದರಲ್ಲಿ 6 ಜನ ಚಾಲಗೇಣಿ ಒಕ್ಕಲುಗಳಿದ್ದು ಅವರಿಂದ ವಸೂಲಾಗತಕ್ಕ ಗೇಣಿ ಭತ್ತ ಮುಡಿ 254 ಇರುತ್ತದೆ. ಈ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖ್ಲೆ ವ ಗೇಣಿ ಚೀಟುಗಳು ನನ್ನ ವಶ ಇರುವದನ್ನು ನಾನು ಪುತ್ತೂರಿನಲ್ಲಿ ಇರುವಾಗ್ಯೆ ತೋರಿಸಲು ಸಿದ್ಧನಾಗಿದ್ದೇನೆ. ಈ ಆಸ್ತಿಯ ಕ್ರಯ ಕನಿಷ್ಟ ಪಕ್ಷಕ್ಕೆ ರೂ 7000-(ಏಳು ಸಾವಿರ ರೂಪಾಯಿ). ಸವರೀ ಆಸ್ತಿಯು ವಿಸ್ತೀರ್ಣ.-ಐವತೊಕ್ಲು ಗ್ರಾಮದ 2ನೇ ಪಟ್ಟೆಗೆ ಒಳ್ಪಟ್ಟಿದೆ ಬಾಬ್ತು.

	ವಿಸ್ತೀರ್ಣ ಎ. ಸೆ	ತೀರ್ವೆ ರೂ.
Iನೇ ತರಗತಿ ನಂಜ	12-77	91- 3-0
II „ „	9-54	42-15-0
III „ „	0-33	1- 6-0
ಭಾಗಾಯ್ತು	0-23	0- 8-0
ಪುಂಜ	6-57	3- 9-0
ಜುಮ್ಲಾ	29-94	139- 9-0

ಪುತ್ತೂರು 21-4-'48. } ಮೊಳಹಳ್ಳಿ ಶಿವರಾವ್ ಅಡ್ವೊಕೇಟರ್.

ಸಿನೆಮಾ ಸುದ್ದಿ

ನಮ್ಮ ಸ್ವಾಗತವಿದೆ

ಯುದ್ಧವಾದರೇನು? ಶಾಂತಿಯಾದರೇನು? ನಮ್ಮ ಸಾಹಸಗಳನ್ನು ಬಿಟ್ಟುಬಿಡುವುದೇ? ಚಲಚ್ಚಿತ್ರಕ್ಕೆ ಬೇಕಾದ ಸಾಧನ ಸಾಮಗ್ರಿ ಸಿಗುತ್ತಿಲ್ಲವೆಂಬುದೇನೋ ನಿಜವಾದರೂ ಹೊಸ ಹೊಸ ಚಿತ್ರ ಸಂಸ್ಥೆಗಳಂತೂ ಪ್ರಾರಂಭವಾಗುವುದು ನೋಡಿದರೆ ಸಂತೋಷದಾಯಕವೂ ಆಗಿದೆ. ಶೇಟ್ ಚುನಿಲಾಲ್ ದೇಸಾಯಿಯವರ ಆಶ್ರಯದಲ್ಲಿ ನಿರ್ದೇಶಕ ನಿತಿನ್ ಬೋಸರು ಬೊಂಬಯಿಯಲ್ಲಿ 'ನಿತಿನ್ ಪ್ರೊಡಕ್ಷನ್' ಎಂಬ ಸಿನೆಮಾ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ರಣಜಿತ್‌ನ ನಿರ್ದೇಶಕ ಜಯಂತ ದೇಸಾಯಿಯವರೂ, ಬೊಂಬಯಿಯಲ್ಲಿ 'ಜಯಂತ್ ಪ್ರೊಡಕ್ಷನ್' ಒಂದನ್ನು ಸುರುಮಾಡಿದ್ದಾರೆ. 'ಫಿಲ್ಮಿಸ್ತಾನ್'ವೆಂಬುದನ್ನು ಶಶಿಧರ್ ಮುಖರ್ಜಿಯವರು ರಾಯ್‌ಬಹದ್ದೂರ್ ಚುನ್ನಿಲಾಲರ ಕೃಪೆಯಿಂದ ತೊಡಗಿರುವರು. ಕೆಲ ಉತ್ಸಾಹೀ ಯುವಕರು ಬೊಂಬಯಿಯಲ್ಲಿ 'ದೀನ್ ಫಿಲ್ಮ್ಸ್' ಎಂಬ ಸಂಸ್ಥೆ ಸ್ಥಾಪಿಸಿದ್ದಾರೆ. ಬೊಂಬಯಿಯಲ್ಲಿಯೇ 'ವಾಡಿಯಾ ಮುವಿಟೋನ್' ಎಂಬುದೂ ಸುರುವಾಗಿದೆ. ಸಹಕಾರೀ ತತ್ವದ ಮೇಲೆ ಲಾಭವನ್ನು ಸರಿಪಾಲು ಮಾಡಿ ಹಂಚುವ ಸಂಸ್ಥೆಯೊಂದು 'ಪೀಪಲ್ಸ್ ಪಿಕ್ಚರ್ಸ್'; ಇದೂ ಬೊಂಬಯಿಯಲ್ಲಿಯೇ ಸ್ಥಾಪಿತವಾದ ಚಿತ್ರ ಸಂಸ್ಥೆ. ಕೊನೆಯದಾಗಿ, ಬೊಂಬಯಿಯಲ್ಲಿ 'ಮೇಗ್ನೆಟ್‌ಸ್ಕ್ರೀನ್ ಫಿನೇನ್ಸ್ ಲಿಮಿಟೆಡ್' ಎಂಬ ಹೆಸರಿನ ಸಿನೆಮಾ ಸಂಸ್ಥೆಯೂ ಸುರುವಾಗಿದೆ. ಪಂಕಜಮಲ್ಲಿಕ್ ಇದಕ್ಕೆ ಸೇರಿದ್ದಾರೆಂದೂ ಸುದ್ದಿ ಬಂದಿದೆ. ಕಲ್ಕತ್ತೆಯಲ್ಲಿ 'ನ್ಯೂ ಸೆಂಚುರೀ ಪ್ರೊಡಕ್ಷನ್' ಎಂಬುದು ಸ್ಥಾಪಿತವಾಗಿ ಬಂಗಾಳಿಯಲ್ಲಿ 'ಅಲೇರಿಯಾ' ಎಂಬ ಚಿತ್ರವನ್ನು ತಯಾರಿಸಿದೆ. ಲಾಹೋರಿನಲ್ಲಿ 'ಮಹೇಶ್ವರೀ ಪಿಕ್ಚರ್ಸ್' ಎಂಬುದು ಪ್ರಾರಂಭವಾಗಿರುವುದು. ಲಾಹೋರಿನ ಬಟ್ರಾ ಪ್ರೊಡಕ್ಷನ್ಸ್‌ನವರು 'ಪಾಹೀ' ಎಂಬ ಚಿತ್ರವನ್ನು ತಯಾರಿಸುತ್ತಾರೆ. ಮಾಧುರಿ ಇದರಲ್ಲಿ ಅಭಿನಯಿಸುವಳು. ಲಕ್ನೋದಲ್ಲಿ 'ನ್ಯೂ ಇಂಡಿಯಾ ಆರ್ಟ್ ಪಿಕ್ಚರ್ಸ್'ನವರು 'ಶಾಮಾ' ಚಿತ್ರ ತಯಾರಿಸುವರು. ಈ ಎಲ್ಲಾ ಹೊಸ ಸಂಸ್ಥೆಗಳಿಗೆ ನಮ್ಮ ಸ್ವಾಗತವಿದೆ.

ಬೊಂಬೇ ಟಾಕೀಸ್ ಒಡೆದ ಮೇಲೆ?

ದೇವಿಕಾರಾಣಿ ಪಂಗಡವು ಮಾಲಾಡದ ಕಲಾಭವನದಲ್ಲಿಯೇ ಉಳಿದಿದೆ. ಚುನ್ನಿಲಾಲರ ಪಂಗಡವು ಇನ್ನೆಲ್ಲಿಯೋ ಹೋಗಿ ತಳವೂರಿದೆ. ಹೀಗಾಗಿ ಬೊಂಬೇ ಟಾಕೀಸ್ ಒಡೆದ ಮೇಲಿನ ಸಂಗತಿಯೇನೆಂದು ಈಗ ಎಲ್ಲರ ಪ್ರಶ್ನೆ. ಹೀಗೆ ಒಡೆದು ಹೋದ ವಿಚಾರ ಹಲವರಿಗೆ ಅತ್ಯಂತ ವಿಷಾದವಿರುವುದು. ಆದರೆ ಏಕೆ ವಿಷಾದವಾಗಬೇಕು? ಸೋದರರು ಬೇರಾದರೆ ಹಾಳಾಗಬೇಕೆಂದೇ [illegible] ಉಂಟೇನು? [illegible] ಗಳನ್ನು ಸಂಪಾದಿಸಲಾರದೇನು? [illegible] ಯಿತು. ಪ್ರಭಾತ ಕಂಪೆನಿ ಹುಟ್ಟಿತು. ಅಗಣಿತ ಧನ, ಜನ, ಕೀರ್ತಿಗಳನ್ನು ಗಳಿಸಿತು. ಕೊಲ್ಹಾಪುರ ಸಿನೆಟೋನ್ ಹುಟ್ಟಿತು. ಅದು ಹೆಸರು ಹಣಗಳನ್ನೆಲ್ಲಾ ಸಂಪಾದಿಸಿತು. ಆ ಮೇಲೆ ಆ ಸಂಸ್ಥೆಗಳು ಎಷ್ಟೆಷ್ಟು ಹೆಸರಲ್ಲಿ ಒಡೆದು ಹೋಗಲಿಲ್ಲ? ಯಾರಾದರೂ ಸುಮ್ಮಗಿದ್ದರೆ? ಫಿಲ್ಮ್ ಕೈಗಾರಿಕೆ ಹಾಳಾಯಿತೆ? ಬದಲು ಹಲವು ಅಭಿವೃದ್ಧಿಗಳೇ ಆದವು. ಹಾಗಾಗಿ ಬೊಂಬೇ ಟಾಕೀಸ್ ಒಡೆದು ಹೋದ ಮೇಲೆ ಏನಾಗುತ್ತದೋ ಎಂದು ಏಕೆ ಕಣ್ಣೀರು ಮಿಡಿವಿರಿ?—ಇದು ಆಹಮ್ಮದ್ ಅಬ್ಬಾಸರು ವಾದಿಸುತ್ತಾರೆ.

ರಮೋಲಾ–ಮನೋರಮಾ

ರನ್ನು ಖಜಾಂಚಿಯಲ್ಲಿ ನಾವು ಜತೆಯಾಗಿ ನೋಡಿದ್ದೇವೆ. ಇನ್ನೊಮ್ಮೆ ಅವರು ಒಟ್ಟಾದುದನ್ನು ನೋಡುವ ಆಶೆ ಯಾರಿಗಿಲ್ಲ? ಹಾಗಾದರೆ ತಲ್ವಾರ್ ಪ್ರೊಡಕ್ಷನ್ಸ್‌ನ 'ಮುಂಚೋಲಿ' ಚಿತ್ರ ನೋಡಿ. ಅದರಲ್ಲಿ ಅವರಿಬ್ಬರೂ ಜತೆಯಾಗಿದ್ದಾರೆ. ಗ್ಯಾನಿ, ಜ್ಯೋತಿಪ್ರಕಾಶ್, ರಾಮ್‌ದುಲಾರಿ ಸುಂದರ್ ಮೊದಲಾದವರು ಇತರ ನಟರು.

ಅಮೆರಿಕದಲ್ಲಿ ಜ್ಞಾನೇಶ್ವರ್

ಚಿತ್ರವು ಪ್ರದರ್ಶಿತವಾಯಿತು. ಅಲ್ಲಿನ ಸಿನೆಮಾ ವಿಮರ್ಶಕರು ಇದನ್ನು ಮುಕ್ತಕಂಠದಿಂದ ಹೊಗಳಿದರು. ಶಾಂತಾರಾಮರ ದಿಗ್ದರ್ಶನವು ಮೆಚ್ಚುಗೆಗೆ ಪಾತ್ರವಾಯಿತು. ಇದು ಹೋಲಿವುಡ್ ಚಿತ್ರಗಳನ್ನೂ ಮೀರಿದೆಯೆಂದೂ ಈ ಚಿತ್ರದ ವಿಷಯ ಅಲ್ಲಿನ ಪತ್ರಿಕೆಯೊಂದು ಬರೆಯಿತು. ನ್ಯೂಯಾರ್ಕಿನ ಲಿಟ್ಲ್ ಕಾರ್ನೆಜಿ ಥಿಯೇಟರಿನಲ್ಲಿ ಈ ಚಿತ್ರವು ಪ್ರದರ್ಶಿತವಾಗಿದೆ. ಮಹಾರಾಷ್ಟ್ರದ ೧೩ನೇ ಶತಮಾನದ ಮಹಾ ಸಂತನ ಜೀವನವು ಅಮೆರಿಕನರಿಗೆ ಅಪ್ಯಾಯನವಾಯಿತು. ಆದರೆ ಈ ಸಾಹಸ ಮಾಡಿದವರಾರು? ಅಮೆರಿಕದಲ್ಲಿ ಈ ಚಿತ್ರ ತೋರಿಸಿದವರಾರು? ಅವರೇ ರಾಮುಬಗೋಯಿ. ಇವರು ಕೆಲಿಫೋರ್ನಿಯದಲ್ಲಿ ಹುಟ್ಟಿ ಬೆಳೆದ ಭಾರತೀಯರು. ಮೂರು ವರ್ಷಗಳ ಕೆಳಗೆ ಭಾರತಕ್ಕೆ ಬಂದರು. ಬಂದವರೇ ಕೆಲವು ಚಿತ್ರಗಳನ್ನು ಅಮೆರಿಕಕ್ಕೊಯ್ದರು! ಜ್ಞಾನೇಶ್ವರ್, ಆದ್ಮಿ, ಕಂಗನ್ ಈ ಮೂರನ್ನು. ಆ ಚಿತ್ರಗಳ ಪೈಕಿ ಪ್ರಥಮಚಿತ್ರ ಜ್ಞಾನೇಶ್ವರ್. ಇಂದು ಅಮೆರಿಕದ ಪ್ರಸಿದ್ಧ ಥಿಯೇಟರೊಂದರಲ್ಲಿಯೇ ಪ್ರದರ್ಶಿತವಾಯಿತು. ಭಾರತದ ನಿಜ ಜೀವನವನ್ನು ಇಲ್ಲಿನ ಸಂಸ್ಕೃತಿಯನ್ನು ಅಮೆರಿಕನರೆದುರು ತೋರಿಸುವುದೇ ರಾಮುಬಾಗೋಯಿಯವರ ಉದ್ದೇಶ. ಅವರ ಉದ್ದೇಶವಿಂದು ಫಲಿಸಿತು. 'ಗಂಗಾದೀನ್' ಮೊದಲಾದ ಕುಚಿತ್ರಗಳನ್ನು ಕಂಡು ಭಾರತ ಕುರಿತು ಅಪ ಅಭಿಪ್ರಾಯಪಟ್ಟ ಅಮೆರಿಕನರಿಂದ [illegible] ಭಾಸ್ಕರ್ [illegible] ಇದೇ ಭಾರತೀಯ ಪ್ರಥಮ ಚಿತ್ರ [illegible]. ಆದರೆ ಅದರ ಅವಸ್ಥೆ ಏನಾಯಿತೋ ತಿಳಿಯದು. ಇದು ವರೆಗೆ 'ಕೋರ್ಟ್ ಡಾನ್ಸರ್' ಅಮೆರಿಕದಲ್ಲಿ ನಲಿದ ಸುದ್ದಿಯೇ ಬಂದಿಲ್ಲ.

ಲೀಲಾ ಚಿಟ್ನಿಸ್

ಇವಳ ಮೊದಲ ಪತಿ ಡಾ. ಚಿಟ್ನಿಸ್. ಇವರು ವೈದ್ಯವೃತ್ತಿಯ ಡಾಕ್ಟರ್ ಅಲ್ಲ. ಡಾಕ್ಟರ್ ಆಫ್ ಫಿಲಾಸಫಿ ಡಿಗ್ರಿ ಪಡೆದವರು.

ಸಾಬೂ ಪುನಃ

ವಾಲ್ಟರ್ ವಾಂಗರ್ಸ್ ಇವರ ಅರೇಬಿಯನ್ ನೈಟ್ಸ್ ಕಥೆಯೊಂದರಲ್ಲಿ ನಟಿಸುತ್ತಾನೆ. ಆರು ವರ್ಷಗಳ ಹಿಂದೆ ಈ 'ಆನೆ ಹುಡುಗ' ಕರಾಪುರ ಕಾಡಿನಲ್ಲಿ ತಿಂಗಳ ಎರಡು ರೂಪಾಯಿ ಸಂಬಳಕ್ಕೆ ದುಡಿಯುತ್ತಿದ್ದ; ಆತನ ಇಂದಿನ ಆದಾಯ ಅಮೆರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ಸಮಾನ! ೧೦ ವರ್ಷದ ವರೆಗೆ ಸಾಬೂ ತನಗೆ ಭವ್ಯ ಭವಿಷ್ಯತ್ತಿದೆಯೆಂದೇ ತಿಳಿದವನಲ್ಲ. ಮೈಸೂರು ನಗರದಿಂದ ೪೫ ಮೈಲು ದೂರದ ಕರಾಪುರ ಕಾಡಿನಲ್ಲಿ ತಂದೆ ಶೇಕ್ ಇಬ್ರಾಹಿಮನೊಂದಿಗೆ ಈತ ಆನೆಗಳೊಡನೆ ಆಡುತ್ತಿದ್ದ. ಒಮ್ಮೆ ಕೋರ್ಡಾ ಇಲ್ಲಿಗೆ ಸಿನೆಮಾ ಚಿತ್ರ ತೆಗೆಯಲು ಬಂದವನು, ಈ ಹುಡುಗನಿಗೆ ಆನೆಯನ್ನು ಪಳಗಿಸುವಲ್ಲಿ, ಕಾಡು ಜೀವಿಗಳ ಒಡನಾಟದಲ್ಲಿರುವ ಅದ್ಭುತ ಶಕ್ತಿಯನ್ನು ನೋಡಿ ಕರಕೊಂಡು ಹೋದ. ಸಾಬು ಇಂಗ್ಲೆಂಡಿನಲ್ಲಿ ಶಾಲೆಗೆ ಹೋಗಿ ಇಂಗ್ಲಿಷ್ ಕಲಿತ. ಈಗ ಅಮೆರಿಕದಲ್ಲಿದ್ದಾನೆ. ಅಮೆರಿಕದವನೇ ಆಗಿಹೋಗಿದ್ದಾನೆ. ಅಲ್ಲಿಯೂ ಗ್ಲೋರಿಯಾ ಜೀನ್, ಪೆಗ್ಗಿರ್ಯೆನ್, ಬೊಬಿ ಶೀರರ್ ಮೊದಲಾದ ಸಹ ನಟವರ್ಗದವರೊಡನೆ ಶಾಲೆಗೆ ಹೋಗುತ್ತಾನೆ. ವಿಮಾನ ಬಿಡುವುದು, ಕಾರು ನಡೆಸುವುದು, ಟೆನಿಸ್ ಆಡುವುದು ಎಲ್ಲಾ ಆತನಿಗೆ ಗೊತ್ತು. ಇಷ್ಟಿದ್ದರೂ ಆತನು ಮುಂದುಗಾರನಲ್ಲ. ಆತನು ಗಳಿಸಿದ ಸಂಪತ್ತು ಭಾರತದ ಸಂಪತ್ತು! ಮರಿಯಾ ಮೊಂಟೆಜ್, ಜಾನ್ ಹಾಲ್ ಮೊದಲಾದವರೊಡನೆ ಸಾಬು ಇತ್ತೀಚೆಯ ಚಿತ್ರದಲ್ಲಿ ಅಭಿನಯಿಸುವನು. ಇದು ಸಾಹಸಮಯ ಪ್ರೇಮ ಚಿತ್ರ; ನೈಸರ್ಗಿಕ ವರ್ಣದ್ದು.

ಸೆಂಟ್ರಲ್‌ನಲ್ಲಿ "ಕೈದಿ"

ಸ್ಥಳೀಯ ಸೆಂಟ್ರಲ್ ಟೋಕೀಸಿನಲ್ಲಿ ಫಿಲ್ಮ್ ಕಾರ್ಪೊರೇಶನಿನವರ ಕೃತಿ ರತ್ನ 'ಕೈದಿ' ಪ್ರದರ್ಶಿತವಾಗುತ್ತಿದೆ. ಖಜಾಂಚಿ ಖ್ಯಾತಿಯ ರಮೋಲಾ, ಲೀಲಾ ದೇಸಾಯಿ ಸೋದರಿ ಮಾನಿಕಾ ದೇಸಾಯಿ ಇವರು ಇದರಲ್ಲಿ ನಟಿಸುತ್ತಾರೆ. ಮಾತ್ರವಲ್ಲದೆ ಮೆಹತಾಬ್, ನಂದ್ರೇಕರ್ ಮೊದಲಾದ ಪ್ರಸಿದ್ಧ ನಟನಟೀ ವರ್ಗದಿಂದಲೇ ಈ ಚಿತ್ರದ ಉತ್ಕೃಷ್ಟತೆಯನ್ನು ಊಹಿಸಬಹುದು. ಈ ಕಥೆಯು ರುದ್ರ ರೋಮಾಂಚನಕಾರಿಯಾಗಿ ಹೃದಯದ್ರಾವಕವಿದೆ. ಸಿನೆಮಾ ವಿಮರ್ಶಕರಿದಕ್ಕೆ ಸರಿಗಟ್ಟುವ ರುದ್ರ ಚಿತ್ರವಿಲ್ಲೆಂದು ಮುಕ್ತಕಂಠದಿಂದ ಹೊಗಳಿರುವರು.

ANDREWS
LIVER SALT
ಆಂಡ್ರೂಸ್ ಲಿವರ್ ಸಾಲ್ಟ್
ಆರೋಗ್ಯಪಾನೀಯ — ವಿರೇಚಕ

ಯುದ್ಧದ ನಿಮಿತ್ತದಿಂದಾಗಿ, ಎಂಡ್ರೂಸ್ ಲಿವರ್ ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ಸಿಗುವುದು.

ನಂಬಿ ನಂಬಿ
ತೆಗೆದು
ಕೊಳ್ಳಲು

ದಮ್ಮಿನ ಮೇಲೆ
ಒಂದೇ ಉಪಾಯ
ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2–12–0, ರೂ. 4–8–0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ESTD.] **Canara Bank, Limited** [1906.

(Incorporated in British India with limited liability).

BALANCE SHEET AS ON 31st DECEMBER 1942

LIABILITIES	Rs.	As.	Ps.	ASSETS	Rs.	As.	Ps.
SUBSCRIBED CAPITAL: Rs.20 lacs.				Fixed Capital			
Paid up Capital	14,96,072	8	0	Expenditure	1,00,182	13	2
Reserves	4,50,000	0	0	ADVANCE TO CUSTOMERS:			
Deposits	1,45,50,502	7	1	Secured by valu-			
Due to Bankers	13,50,000	0	0	able securities.	51,16,338	6	2
Bills for collection				Secured by bills			
as per contra	8,76,169	10	2	of Exchange etc.	24,36,563	11	11
Liability for Foreign				Investments	65,65,374	15	7
Bills negotiated	8,05,026	10	5	Bills for collection	8,76,160	10	2
Sundries	10,51,464	10	11	Liabilities of custo-			
Appropriation A/c.	2,062	3	8	mers for foreign			
Net Profits	1,53,310	2	10	bills negotiated	8,05,026	10	5
				Sundries	4,71,599	3	0
				Cash on hand and at			
				Call with Bankers	43,63,352	14	8
Total Rs.	2,07,34,608	5	1	Total Rs.	2,07,34,608	5	1

THE CANARA BANKING CORPORATION Ltd.

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises,			
Reserve & other funds	3,71,882	13	11	furniture, etc.	91,659	0	0
Deposits	41,83,273	4	1	Advances	31,28,612	4	9
Due to Bankers	5,08,545	12	1	Investment on			
Bills per contra	3,59,357	12	1	Govt. Securities			
Sundries including				etc. at cost	15,34,536	14	3
branch adjustments &				Sundries	74,183	5	7
undisbursed profits	2,83,736	5	9	Bills for Collection	3,59,357	12	1
Profit for the year 1942	49,461	3	5	Cash on Hand &			
				with bankers	12,05,397	14	8
Total Rs.	63,93,747	3	4	Total Rs.	63,93,747	3	4

ಪುಸ್ತಕಾವಲೋಕನ

ಪಚ್ಚೇಉಂಗುರ ಮತ್ತು ಆತ್ಮಾಹುತಿ

ಧಾರವಾಡದ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರ ೫೫ನೆಯ ಗ್ರಂಥ 'ಪಚ್ಚೇಉಂಗುರ ಮತ್ತು ಆತ್ಮಾಹುತಿ' ಎಂಬೀ ಎರಡು ನೀಳ್ಗತೆಗಳ ಪುಸ್ತಕ. ಶ್ರೀ. ಎಂ. ಜಿ. ವೆಂಕಟೇಶಯ್ಯರು ಇದನ್ನು ಬರೆದವರು. ಕ್ರಾನ್ ೧/೮ ಆಕಾರ ೧೫೪ ಪುಟಗಳುಳ್ಳ ಈ ಪುಸ್ತಕದ ಬೆಲೆ ಒಂದು ರೂಪಾಯಿ. ಕಲಾವಿದ ಶ್ರೀ ರಾಘವೇಂದ್ರರ ಆವರಣ ಚಿತ್ರವು ಈ ಪುಸ್ತಕದ ಆಕರ್ಷಣವನ್ನು ಹೆಚ್ಚಿಸಿದೆ.

'ಪಚ್ಚೇಉಂಗುರ' ಮೊದಲನೆಯ ಕಥೆ; ಒಂದು ರಾಜ ಕುಟುಂಬದ ಕಥೆ. ರಾಜ ಕುಟುಂಬದ ವಾತಾವರಣವು ಕಲ್ಪಿತವಿದ್ದಂತೆ ತೋರುತ್ತದೆ. ಕಥೆಯ ಪ್ರಾರಂಭವೇ ಒಂದು ಹೃದಯದ್ರಾವಕ ಘಟನೆಯಿಂದ ತೊಡಗಿದೆ. ಸ್ತ್ರೀ ರತ್ನದ ಮಾನಾಪಹಾರ, ಬಲಾತ್ಕಾರ! ಇದೇ ಕಥೆಯ ಆದ್ಯಂತ ತುಂಬಿದೆಯೆಂದರೂ ಸಲ್ಲುವುದು. ಮಹಾರಾಜ ಯಶವಂತಸಿಂಗನಿಗೆ ಇನ್ನೂ ಚಿಕ್ಕ ವಯಸ್ಸು, ಚಿಕ್ಕಂದಿನಲ್ಲೇ ಆತನ ತಂದೆ ತೀರಿ ಹೋಗಿರಲು, ಸೋದರ ಮಾವ ವೀರಸೇನನು ರಾಜ್ಯದ ಆಡಳಿತ ವಹಿಸುವನು. ಆತನು ಕುಮಾರ್ಗಿ, ಭೋಗಪ್ರಿಯ. ಮಂತ್ರಿ ಬಾಜಿರಾಯನ ಮಗಳು ಸೀತೆಯ ಮಾನಾಪಹಾರವು ವೀರಸೇನನಿಂದ ನಡೆವುದು; ಸೀತೆ ಆ ಅಪಮಾನಕ್ಕೆ ಹೇಸಿ ಪ್ರಾಣ ಬಿಟ್ಟುಬಿಡುವಳು! ಈ ವಿಷಯ ತರುಣ ಮಹಾರಾಜ ಯಶವಂತನಿಗೆ ತಿಳಿಯುವುದು. ಯಶವಂತನು ತನ್ನ ಆಪ್ತ ಸೇವಕರ ಸಹಾಯದಿಂದ ವೀರಸೇನನ ಹಾಗೂ ಅವನ ಧೂರ್ತ ಅನುಚರರ ಕಾರ್ಯಗಳನ್ನು ಬಹಿರಂಗಕ್ಕೆಳೆಯುವನು; ಅವರೆಲ್ಲಾ ದುರ್ಮರಣ ಹೊಂದುವರು. ಕೊನೆಗೆ ಮಂತ್ರಿ ಬಾಜಿರಾಯನಿಂದ ಪೋಷಿತೆಯಾಗಿ ಅನಾಥೆಯಾಗಿದ್ದ ಇಂದಿರೆಯನ್ನೇ, ರಾಜಾ ಯಶವಂತನು ಪರಿಣಯವಾಗುವನು. 'ಪಚ್ಚೇಉಂಗುರ'ವು ಬಹಳ ಪ್ರಭಾವವುಳ್ಳದ್ದು; ಅದು ವೀರಸೇನನ ಕೈಯಿಂದ ತಪ್ಪಿ ಸೀತೆಗೆ ದೊರಕುವುದು. ಅದನ್ನು ಆಕೆ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಯಶವಂತನಲ್ಲಿಗೆ ತನ್ನ ಕರುಣ ಕಥೆಯನ್ನು ತಿಳಿಸಲು ಕಳುಹಿಸುವ ಆಪ್ತಚರನೊಡನೆ ಕೊಟ್ಟುಕಳುಹಿಸುವಳು. ಪಚ್ಚೇಉಂಗುರದ ಪತ್ತೆಗಾಗಿ ವೀರಸೇನನು ತನ್ನ ಧೂರ್ತ ಅನುಚರರೊಡನೆ ಬಹಳ ಸಾಹಸ ಮಾಡುವನು. ಕೊನೆಗೆ ಪಚ್ಚೇಉಂಗುರವು ಮಹಾರಾಜನ ಕೈಯಲ್ಲಿಯೇ ಉಳಿಯುವುದು.

ಒಟ್ಟಿನಲ್ಲಿ ಈ ಕಥೆ ಒಂದು ಕರುಣ ಕಥೆ. ಸೀತೆಯ ಆತ್ಮಹತ್ಯೆ! ತನ್ನ ಮಾನಾಪಹಾರವಾಗಿ ತಾನು ಏಕೆ ಬದುಕಿರಲಿ ಎಂದು ಅವಳು ಆ ಬಗೆಯ ಸಾವನ್ನಪ್ಪಿದಳು. ಇಂದಿರೆಯ ತಾಯಿ ಬಿಹಾರಿಯ ಜೀವನವೂ ಅಂತೆಯೇ ಕರುಣಾಮಯ. ಅವಳು ಮಾಡಿದ ತಪ್ಪಿಗಾಗಿ ಅವಳೇ ತಕ್ಕ ಪ್ರಾಯಶ್ಚಿತ್ತ ಪಡೆದಳು. ಇಂದಿರೆ ಅನಾಥಳಾಗಿ ಅತ್ಯಂತ ದುಃಖಿನಿಯಾಗಿದ್ದರೂ ಕೊನೆಗೆ ಮಹಾರಾಜನ ಕೈಹಿಡಿದು ಸುಖ ಉಣ್ಣುವಳು. ಧೂರ್ತರೆಲ್ಲರೂ ದುರ್ಮರಣ ಹೊಂದುವರು. ಕಥೆಯನ್ನು ವಿವರಿಸುವಾಗ ಅಲ್ಲಲ್ಲಿ ಕತೆಗಾರರು ತಿಳಿನಗೆಯನ್ನು ತುಂಬಿದ್ದಾರೆ.

'ಆತ್ಮಾಹುತಿ' ಎರಡನೆಯ ನೀಳ್ಗತೆ. ಇದನ್ನು ಕಾದಂಬರಿ ಎಂದರೂ ಒಪ್ಪುತ್ತದೆ. ಕಾದಂಬರಿಯನ್ನು ಬೆಳೆಸುವಂತೆ, ಅಲ್ಲಲ್ಲಿ ಹಲವಾರು ಮನೋರಂಜಕ ಘಟನೆಗಳನ್ನು ವಿಸ್ತರಿಸಿ ಕಥೆಯನ್ನು ಬರೆದಿದ್ದಾರೆ. ಎರಡು ಮೂರು ತಲೆಮಾರುಗಳ ಜೀವನ ಕಥೆಯಿದರಲ್ಲಿ ಸೇರಿದೆ. ಅದರೊಡನೆ ಹಲವಾರು ತೆರದ ವ್ಯಕ್ತಿಗಳ ಅಂತರಂಗ ಬಹಿರಂಗ ಜೀವನಗಳ ಪರಿಚಯವನ್ನೂ ಕತೆಗಾರರು ಮಾಡಿದ್ದಾರೆ.

'ಪಚ್ಚೇಉಂಗುರ'ಕ್ಕಿಂತಲೂ 'ಆತ್ಮಾಹುತಿ'ಯೇ ಉತ್ತಮ ಕಥೆಯೆಂದು ನಮಗೆ ತೋರುತ್ತದೆ. ಇಲ್ಲಿಯೂ ಆದ್ಯಂತವಾಗಿ ತೋರುವ ಮಧುರ ಹಾಸ್ಯವು ಕತೆಯ ಶೋಭೆಯನ್ನು ಹೆಚ್ಚಿಸಿದೆ. ಇದರಲ್ಲಿ ಸಹಲ ವಿಧದ ಹಲವು ವ್ಯಕ್ತಿಗಳ ಜೀವನ ಚಿತ್ರವು ಒಂದು ಇಡೀ ಸಮಾಜವನ್ನೇ ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತದೆ.

ಈ ಕತೆಯಲ್ಲಿ ಮುಖ್ಯ ಪಾತ್ರಗಳು ರಾಮು ಮತ್ತು ಸುಬ್ಬು. ರಾಮು ಮತ್ತು ಸುಬ್ಬು ಬಾಲ್ಯದ ಗೆಳೆಯ ಗೆಳತಿಯರು. ಸುಬ್ಬುವಿನ ತಂದೆ ಗೋವಿಂದರಾಯರು ಆಕೆಯನ್ನು ಓರ್ವ ಮುದುಕನಿಗೆ ಮದುವೆ ಮಾಡಿಕೊಡುತ್ತಾರೆ. ಆತ ಬೇಗನೇ ತೀರಿ ಹೋಗುತ್ತಾನೆ. ರಾಮು ಸಮಾಜದ ದೂಷಣೆಗೆ ಅಂಜದೆ, ಬಾಲ್ಯದ ಗೆಳತಿ ಸುಬ್ಬುವನ್ನು ಮದುವೆ ಮಾಡಿಕೊಳ್ಳುವುದಾಗಿ ನಿಶ್ಚಯಿಸುತ್ತಾನೆ. ಇದರಿಂದ ಶಾಸ್ತ್ರಿಗಳಂಥಾ ಸಮಾಜ ಸೂಕರಗಳು ರಾಮುವಿಗೂ ಆತನ ತಂದೆ ತಾಯಿಂದಿರಿಗೂ ಅನೇಕ ಉಪದ್ರವ ಕೊಡುತ್ತಾರೆ. ತನ್ನಿಂದಾಗಿ ಈ ಎಲ್ಲಾ ಆಪತ್ತು ಒದಗಿತಲ್ಲಾ ಎಂದು ಸುಬ್ಬು ಈ ಮಧ್ಯೆ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ. ರಾಮು ಈ ವ್ಯಥೆಯನ್ನು ಮರೆಯಲೋಸುಗ ಗೆಳೆಯನೊಂದಿಗೆ ಕಲ್ಕತ್ತಕ್ಕೆ ಹೋಗಿ ಕಾಲೇಜು ಸೇರುತ್ತಾನೆ. ಸುಬ್ಬುವಿನ 'ಆತ್ಮಾಹುತಿ'ಯಿಂದ ಒಂದು ಜೀವನ ಕಥೆ ಇಲ್ಲಿ ಅಂತ್ಯವಾಗಿದೆಯೆನಿಸಿದರೂ, ರಾಮುವಿನ ಕಥೆ ಇನ್ನೂ ಮುಗಿದಂತೆ ತೋರುವುದಿಲ್ಲ. ಬಹುಶಃ ಕತೆಗಾರರು ಒಂದು ದೀರ್ಘ ಕಾದಂಬರಿ ಬರೆಯಲು ಹಂಚಿಕೆ ಹಾಕಿದ್ದು ಮಧ್ಯದಲ್ಲಿಯೇ ಹೀಗೆ ನಿಲ್ಲಿಸಿಬಿಟ್ಟರೋ ಎಂಬ ಸಂಶಯ ತೋರುತ್ತದೆ.

ಶ್ರೀ ವೆಂಕಟೇಶಯ್ಯರು ಸಮಾಜ ಜೀವನವನ್ನು ಚಿತ್ರಿಸುವಲ್ಲಿ ಬಹಳ ಕುಶಲರಿದ್ದಾರೆ. ವ್ಯಂಗ್ಯವಾಣಿಯಲ್ಲಿಯೂ ಚತುರರಿದ್ದಾರೆ. ಆತ್ಮಾಹುತಿಯ ಪ್ರತಿಯೊಂದು ಪಾತ್ರವೂ ಸಜೀವ ಪಾತ್ರವಿದೆ. ಮಾನವನ ದೌರ್ಬಲ್ಯ, ಸ್ತ್ರೀಯ-ಕಾರುಣ್ಯ, ಸಮಾಜದ ದೋಷ ದೃಷ್ಟಿ, ಸನಾತನಿಗಳ ಅನ್ಯಾಯ ಇವೆಲ್ಲವನ್ನೂ ಹೃದಯಂಗಮವಾಗಿ ಕತೆಗಾರರು ಬಯಲಿಗೆಳೆದಿರುವರು; ತಮಗಿರುವ ಸಂಸ್ಕೃತ ಭಾಷಾ ಪಾಂಡಿತ್ಯವನ್ನೂ ಉತ್ತಮವಾಗಿ ಉಪಯೋಗಿಸಿಕೊಂಡಿದ್ದಾರೆ. 'ಆತ್ಮಾಹುತಿ'ಯಂಥಾ ಉತ್ತಮ ಕಥೆ, ಕಾದಂಬರಿಗಳನ್ನು ನಾವು ಈ ಲೇಖಕರಿಂದ ಹಾರೈಸುತ್ತೇವೆ.

—ಕಯ್ಯಾರ.

ರೈಲು ಬಂಡಿಗಳ ಸಮಯ

ಏಪ್ರಿಲ್ ತಾ. ೧೫ರಿಂದ ವ್ಯತ್ಯಸ್ಥವಾದ ಪ್ರಕಾರ.

	ಹೊರಡುವುದು.	ಬರುವುದು.
ಮೈಲ್	೭-೪೦ ಪೂ.	೬-೨೫ ಅಪ.
ಶಟ್ಲ್	೬-೩೦ ಅಪ.	೧೧-೫ ಪೂ.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ವರ್ಜಿನಿಯಾ ಪ್ಲ್ಯುಕ್ಯೂರ್ಡ್ ಸಿಗರೇಟ್ ತಂಬಾಕು.
ಬೀಡಿ ತಯಾರಿಸುವರೆ ಹೊಸತೊಂದು ಪ್ರಯೋಗ

ನಿಪಾಣಿ ಬೀಡಿ ತಂಬಾಕನ್ನು ವರ್ಜನಿಯಾ ಸಿಗರೇಟ್ ತಂಬಾಕಿನೊಂದಿಗೆ ಸೇರಿಸಿರಿ, ಇದನ್ನು ಸೇರಿಸಿ ಹದಗೊಳಿಸಿದರೆ ಬೀಡಿ ತಯಾರಿಸಲು ಅತ್ಯುತ್ತಮವೆನಿಸುವುದು.

ಹದಗೊಳಿಸಿದ ವರ್ಜಿನಿಯಾ ತಂಬಾಕು ಪರಿಮಳ ಪೂರ್ಣವೂ, ಆನಂದದಾಯಕವೂ ಆಗಿರುವುದರಿಂದ, ಬೀಡಿಗಳು ವರ್ಜಿನಿಯಾ ಸಿಗರೇಟನಂತೆ ಸುಖವನ್ನೂಟುಮಾಡುತ್ತವೆ. ವರ್ಜಿನಿಯಾ ಬೀಡಿಗಳು ಹಗುರವಿರುವುದರಿಂದ ಪೌಂಡಿಗೆ ಹೆಚ್ಚು ಬೀಡಿಗಳಾಗುತ್ತವೆ.

ವರ್ಜಿನಿಯಾ ತಂಬಾಕಿಗೆ ಕಡಿಮೆ ಬೆಲೆಯಿರುವುದರಿಂದ ಹೆಚ್ಚು ಮಾರಾಟವಾಗಿ ಅಧಿಕ ಲಾಭ ಸಿಗುತ್ತದೆ.

ರಖಂ ಮತ್ತು ಚಿಲ್ಲರೆಯಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಹೈಜಿಯಾ ಟೊಬೆಕೊ ಕಂಪೆನಿ
ಮಣ್ಣಗುಡ್ಡೆ, ಮಂಗಳೂರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.
ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಶೀತ, ಕೆಮ್ಮು, ಹಲ್ಲುವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವನವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂಬಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:-

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:-1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 7—5—1943 [ಸಂಚಿಕೆ 19]

ಹೊಸ 'ಆರ್ಡಿನೆನ್ಸು' ನ್ಯಾಯ ಸಮ್ಮತವೋ?

ಮದ್ರಾಸ್ ಹೈಕೋರ್ಟಿನಲ್ಲಿ ವಾದ

'ದಕ್ಷಿಣ ಆಫ್ರಿಕದ ಮೇಲೆ ಪ್ರತೀಕಾರಮಾಡಿರಿ'

ಹೊಸ ಆರ್ಡಿನೆನ್ಸು ನ್ಯಾಯಸಮ್ಮತವೋ?

ಮದ್ರಾಸ್ ಹೈಕೋರ್ಟಿನಲ್ಲಿ ವಾದ

ಫೆಡರಲ್ ಕೋರ್ಟಿನಲ್ಲಿ ನ್ಯಾಯಬಾಹಿರವೆಂದು ಸಾರಲಾದ ೨೬ನೇ ನಿಯಮವನ್ನು ತಿರಿಗಿ ನ್ಯಾಯಸಮ್ಮತ ಮಾಡಬೇಕೆಂದು ಗವರ್ನರ್ ಜನರಲರು ಹೊರಡಿಸಿದ ಹೊಸ ಆರ್ಡಿನೆನ್ಸು ನ್ಯಾಯಸಮ್ಮತವಾಗಿಲ್ಲವೆಂದು ಮದ್ರಾಸ್ ಹೈಕೋರ್ಟಿನಲ್ಲಿ ರಜಾಕಾಲದ ನ್ಯಾಯಾಧೀಶರಾದ ಹಾರ್ವಿಲ್ ಮತ್ತು ಹ್ಯಾಪ್ಪೆಲರ ಮುಂದೆ ವಾದವುಂಟಾಗಿದೆ. ಮದ್ರಾಸಿನ ಪ್ರಸಿದ್ಧ ವಕೀಲರು ಈ ವಾದವನ್ನು ಶ್ರೀಮತಿ ಅಮ್ಮಸ್ವಾಮಿನಾಥನ್ ಮತ್ತು ೭ ಜನರ ಪರವಾಗಿ ಅರ್ಜಿ ಮಾಡಿ ವಾದಿಸಿರುವರು.

ಮದ್ರಾಸ್ ವಕೀಲ ಸಂಘದ ಅಧ್ಯಕ್ಷ ಶ್ರೀ. ಟಿ. ವಿ. ಮುತ್ತುಕೃಷ್ಣಯ್ಯರರು ವಾದಿಸುತ್ತಾ ಈ ಹೊಸ ಆರ್ಡಿನೆನ್ಸಿನಂತೆ ಶಾಸನಸಭೆಯಲ್ಲಿ ಪಾಸಾದ ಕಾಯಿದೆಯು ತಿದ್ದುಪಡಿ ಮಾಡಲಾಗಿದೆ. ಆದರೆ ಕಾನೂನು ಪ್ರಕಾರ, ಗವರ್ನರ್ ಜನರಲರಿಗೆ ಶಾಸನಸಭೆಯ ಕಾಯಿದೆಯನ್ನು ತಿದ್ದುಪಡಿಮಾಡಲು ಅಧಿಕಾರವಿಲ್ಲವೆಂದರು. ಗವರ್ನರ್ ಜನರಲರಿಗೆ ಯಾವಾಗ ಈ ಅಧಿಕಾರವಿಲ್ಲವೋ ಆದ್ದರಿಂದ ಈಗ ಹೊರಡಿಸಿದ ಆರ್ಡಿನೆನ್ಸು ಮಾಡುವ ಅಧಿಕಾರವೂ ಇಲ್ಲವೆಂದು ಇದು ನ್ಯಾಯಸಮ್ಮತವಲ್ಲವೆಂದರು. ಆ ಮೇಲೆ ಯಾವುದೇ ಆರ್ಡಿನೆನ್ಸಾದರೂ ನಿಷ್ಪ್ರಯೋಜಕವಾಗಬಾರದೆಂಬ ವಿಷಯ ವಾದಿಸಿ, ಈ ಆರ್ಡಿನೆನ್ಸಿನಲ್ಲಿರುವ ಅನೇಕ ನಿಷ್ಪ್ರಯೋಜಕ ಸಂಗತಿಗಳನ್ನೆತ್ತಿ ತೋರಿಸಿದರು. ಆರ್ಡಿನೆನ್ಸಿಗೆ ಕೇವಲ ಆರೇ ತಿಂಗಳ ಅವಧಿ. ಹಾಗೆ ಮಾಡುವುದು ಅದು ನಿಷ್ಪ್ರಯೋಜಕವಾಗಬಾರದೆಂಬುದಕ್ಕಾಗಿ ಗವರ್ನರ್ ಜನರಲರು ಹೀಗೆ ಹೊಸ ಆರ್ಡಿನೆನ್ಸು ಹೊರಡಿಸಿದ್ದರಿಂದ, ಶಾಸನ ಸಭೆಯ ಅಧಿಕಾರವನ್ನು ತಾವು ಉಪಯೋಗಿಸಿಕೊಂಡಂತಾಯಿತೆಂದರು. ಮಾತ್ರವಲ್ಲದೆ, ಈ ಹೊಸ ಆರ್ಡಿನೆನ್ಸು ಫೆಡರಲ್ ಕೋರ್ಟಿನ ತೀರ್ಮಾನವನ್ನು ತಡೆದುಬಿಟ್ಟಿದೆ. ಹೀಗೆ ಮಾಡಲು ಭಾರತದಲ್ಲಿ ಯಾವ ಅಧಿಕಾರಿಗೂ ಅಧಿಕಾರವಿಲ್ಲ. ಹೊಸ ಆರ್ಡಿನೆನ್ಸಿನಿಂದ ಜನರಿಗೆ ಫೆಡರಲ್ ಕೋರ್ಟಿನ ಪ್ರಯೋಜನ ಸಿಗದೆ ಮೋಸವಾಗಿದೆ. ಫೆಡರಲ್ ಕೋರ್ಟಿನ ತೀರ್ಮಾನದಂತೆ ಮಾಡಲ್ಪಟ್ಟ ಅರ್ಜಿಗಳಿಗೆ ಬಾಧಕಬಂದಿದೆಯೆಂದರು.

'ದಕ್ಷಿಣ ಆಫ್ರಿಕದ ಮೇಲೆ ಪ್ರತೀಕಾರ ಸಾಧ್ಯವಿದೆ'

ಸಣಬು ಮತ್ತು ಬಟ್ಟೆ ಕಳಿಸಬೇಡಿ

ನಾತಾಳ ಭಾರತ ಕಾಂಗ್ರೆಸಿನ ಪ್ರತಿನಿಧಿಯಾಗಿ ಭಾರತದಲ್ಲಿರುವ ಸ್ವಾಮೀ ಭವಾನಿ ದಯಾಳರು ಮತ್ತು ಮುಹಮ್ಮದ್ ಅಹಮ್ಮದ್ ಜಾಹಾದರು ಒಂದು ಪ್ರಕಟಣೆ ಹೊರಡಿಸಿ ದಕ್ಷಿಣ ಆಫ್ರಿಕ ಸರಕಾರವು ಅಲ್ಲಿ ನೆಲೆನಿಂತ ಭಾರತೀಯರ ಮೇಲೆ ವರ್ಣದ್ವೇಷದ ನಿರ್ಣಯ ಪಾಸುಮಾಡಿದ್ದರಿಂದ ಅದರ ಪ್ರತೀಕಾರವಾಗಿ ನಾವು ಸುಮ್ಮಗಿರಬಾರದು, ನಾವು ಅಲ್ಲಿಗೆ ಕಳುಹಿಸುವ ಬಟ್ಟೆ ಮತ್ತು ಸಣಬು (ಚರ್ಮ)ಗಳನ್ನು ಕಳುಹಿಸಬಾರದು ಎಂದು ವಿನಂತಿಸಿಕೊಂಡಿದ್ದಾರೆ. 'ಈ ವರ್ಣದ್ವೇಷದ ನಿರ್ಣಯದಿಂದ ಉಂಟಾದ ಪರಿಸ್ಥಿತಿಯನ್ನು ಪರಿಶೀಲಿಸಲು ಜೋಹಾನ್ಸ್ ಬರ್ಗನಲ್ಲಿ ಈ ತಿಂಗಳ ಅಂತ್ಯದಲ್ಲಿ ಒಂದು ಭಾರತೀಯರ ಕಾಂಗ್ರೆಸ್ ಸೇರಲಿದೆ. ಈ ಕಾಂಗ್ರೆಸಿನ ನಿರ್ಣಯವನ್ನು ನಿರೀಕ್ಷಿಸದೆ ಹಿಂದೀಯರ ಮತ್ತು ದಕ್ಷಿಣ ಆಫ್ರಿಕ ನಿವಾಸಿಗಳ ಒಂದು ದುಂಡುಮೇಜು ಪರಿಷತ್ತನ್ನು ಕರೆಯಬೇಕೆಂದು ನಾವು ವಿನಂತಿಸುತ್ತೇವೆ. ಇದರಿಂದ ಉಭಯರಿಗೂ ಮಹತ್ವದ ಪ್ರಯೋಜನವಾಗುವುದು. ಕೆಲವರು ಭಾರತೀಯರಿಗೆ ದಕ್ಷಿಣ ಆಫ್ರಿಕದ ವಿಷಯ ಪ್ರತೀಕಾರ ಕೈಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಆದರೆ ಇಲ್ಲಿಂದ ಹೋಗುವ ಚರ್ಮ ಮತ್ತು ಬಟ್ಟೆಗಳನ್ನು ನಾವು ಕಳುಹಿಸದಿರುವುದೇ ಯೋಗ್ಯ ಪ್ರತೀಕಾರವಾಗಿದೆ. ಈ ನಿರ್ಯಾತವನ್ನು ನಿಲ್ಲಿಸಿದರೆ ದೇಶಸೇವೆ ಮಾಡಿದಂತಾಗುತ್ತದೆ. ಜಂಜೀಬಾರ ಲವಂಗ ಪ್ರಕರಣವು ಹೇಗೆ ಬಗೆಹರಿಯಿತೆಂಬುದನ್ನು ಈ ಸಂದರ್ಭದಲ್ಲಿ ನೆನಪಿನಲ್ಲಿಟ್ಟುಕೊಳ್ಳುವುದು ಉಚಿತವಾಗಿದೆ. ಒಂದೇ ಕಾಮನ್‌ವೆಲ್ತಿನ ಉಭಯ ರಾಷ್ಟ್ರಗಳಲ್ಲಿ ಹೀಗೆ ವರ್ಣದ್ವೇಷ ಬೆಳೆಸಲು ದಕ್ಷಿಣ ಆಫ್ರಿಕವು ಹಿಂದೆ ಮುಂದೆ ನೋಡುವುದಿಲ್ಲವಾದರೆ, ನಾವದಕ್ಕೆ ತಕ್ಕ ಪ್ರತೀಕಾರೋಪಾಯ ಕೈಕೊಳ್ಳುವಾಗ ಯುದ್ಧ ಪ್ರಯತ್ನಕ್ಕೆ ಹಾನಿ ಬರುತ್ತದೆಯೆಂಬುದನ್ನೂ ವಿಚಾರಕ್ಕೆ ತಂದುಕೊಳ್ಳಬೇಕಾಗಿಲ್ಲ' ಎಂದು ಅವರು ಆ ವಿನಂತಿಯಲ್ಲಿ ಸ್ಪಷ್ಟಪಡಿಸಿರುವರು.

ಕೂಲಿಗಾರರ ೧೪ ಬೇಡಿಕೆಗಳು

೧) ರಾಜಕೀಯ ಕೈದಿಗಳನ್ನು ಬಿಡಬೇಕು. ೨) ಆಹಾರ ಪದಾರ್ಥ ಬಟ್ಟೆಗಳ ಧಾರಣೆ ಏರಿದ ದಾಮಾಶಾಯಿಯಲ್ಲಿ ತುಟ್ಟಿಭತ್ತೆ ಕೊಡಬೇಕು. ೩) ಆಹಾರ ಮತ್ತು ಬಟ್ಟೆಗಳ ಅತಿಶಯ ಏರಿದ ಬೆಲೆ ಇಳಿಸಬೇಕು. ೪) ಯುದ್ಧ ಬೋನಸ್ಸು ಕೊಡಬೇಕು. ೫) ನಿರುದ್ಯೋಗ, ರೋಗ, ಮತ್ತು ಯುದ್ಧ ಇನ್ಶೂರೆನ್ಸ್ ಮಾಡಿಸಬೇಕು. ೬) ಹೆರಿಗೆಯ ಸೌಕರ್ಯ ಕೊಡಬೇಕು. ೭) ಒಂದು ತಿಂಗಳ ಸಂಬಳ ಸಹಿತ ರಜೆ ಕೊಡಬೇಕು. ೮) ನೌಕರಿಯ ಭದ್ರತೆಯಿರಬೇಕು. ೯) ಎಲ್ಲಾ ತರದ ಕಡಿತ ನಿಲ್ಲಿಸಬೇಕು. ೧೦) ನಾಗರಿಕರ ಹಕ್ಕು, ಭಾಷಣ ಮತ್ತು ಸಂಘಟನಾ ಸ್ವಾತಂತ್ರ್ಯ ಕೊಡಬೇಕು. ೧೧) ಟ್ರೇಡ್ ಯೂನಿಯನ್‌ಗಳಿಗೆ ಮನ್ನಣೆ ಕೊಡಬೇಕು. ೧೨) ವಿಮಾನಧಾಳಿಯಲ್ಲಿ ರಕ್ಷಣೆ ವ್ಯವಸ್ಥೆ ಮಾಡಬೇಕು. ೧೩) ಯುದ್ಧದ ಪರಿಣಾಮದಿಂದ ಯಾರಾದರೂ ಸತ್ತರೆ ಯಾ ಗಾಯಗೊಂಡರೆ ಆ ಕೂಲಿಗಾರರಿಗೆ ಮತ್ತು ಅವರ ಕುಟುಂಬಕ್ಕೆ ಪರಿಹಾರ ಕೊಡಬೇಕು. ೧೪) ರಾಷ್ಟ್ರೀಯ ಸರಕಾರ ಸ್ಥಾಪಿಸಿ ಅದಕ್ಕೆ ಅಧಿಕಾರ ಕೊಡಬೇಕು ಹೀಗೆಂದು ನಾಗಪುರದಲ್ಲಿ ಸೇರಿದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ೨೦ನೇ ವಾರ್ಷಿಕಾಧಿವೇಶನದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ ಡಾ. ಚಾರುಚಂದ್ರ ಬೆನರ್ಜಿಯವರು ಹೇಳಿದರು.

ಕುಲಶೇಖರ ದೊಂಬಿ ಖಟ್ಲೆ

ಮರಣದಂಡನೆ ಮುಂದೆ ಬಿತ್ತು

ಮದ್ರಾಸ್ ಕುಲಶೇಖರ ಪಟ್ಟಣದ ಬಳಿ ಉಪ್ಪಿನ ಕಾರ್ಖಾನೆ ಮೇಲೆ ಗಲಭೆಗಾರರು ಧಾಳಿಮಾಡಿದ್ದರು. ಆ ಸಮಯ ಎಕ್ಸೈಸ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರ ಕೊಲೆಯೂ ಆಗಿತ್ತು. ಆ ಸಂಬಂಧ ರಾಜಗೋಪಾಲನ್ ದೇಶಿರಾಜನ್ ಯಾನ್ ರಾಮ ನಾದರ್ ಇಬ್ಬರಿಗೆ ತಿನ್ನವೆಲ್ಲಿ ಸ್ಪೆಶಲ್ ಜಡ್ಜರು ಮರಣದಂಡನೆ ವಿಧಿಸಿದ್ದರು. ಸ್ಪೆಶಲ್ ಕೋರ್ಟು ಆರ್ಡಿನೆನ್ಸು ನ್ಯಾಯ ಬಾಹಿರವಾದ್ದರಿಂದ ಸ್ಪೆಶಲ್ ಕೋರ್ಟಿನ ತೀರ್ಪು ನ್ಯಾಯಬಾಹಿರವಾದುದೆಂದೂ, ಅವರ ಶಿಕ್ಷೆ ವಜಾ ಆಗಬೇಕೆಂದೂ ಮದ್ರಾಸ್ ಹೈಕೋರ್ಟಿನಲ್ಲಿ ಜರೂರು ಅರ್ಜಿ ದಾಖಲು ಮಾಡಿದ್ದರು. ಚೀಫ್ ಜಸ್ಟಿಸರೂ, ಜಸ್ಟಿಸ್ ಲಕ್ಷ್ಮಣರಾಯರೂ ಅಪೀಲು ವಿಚಾರಣೆಯಲ್ಲಿ ಮರಣದಂಡನೆ ಆರ್ಡರನ್ನು ನಿಲ್ಲಿಸಬೇಕೆಂದು ತೀರ್ಪು ಕೊಟ್ಟಿದ್ದಾರೆ. ಹೈಕೋರ್ಟಿನವರು ಅಪೀಲು ಅರ್ಜಿ ದಾಖಲು ಮಾಡಿ, ಜುಲೈ ೧೪ರಲ್ಲಿ ಫುಲ್ ಬೆಂಚ್ ತೀರ್ಮಾನಕ್ಕಿಟ್ಟಿದ್ದಾರೆ. ತಿಯಾಲಿಯ ದಂಗೆ ಖಟ್ಲೆಯ ಅಪೀಲೂ ಮದ್ರಾಸ್ ಹೈಕೋರ್ಟಿನಲ್ಲಿ ದಾಖಲಾಗಿದ್ದು ಅದೂ ಜುಲೈ ೧೪ರಲ್ಲಿ ವಿಚಾರಣೆ ನಡೆಯುವುದು.

ಮದ್ರಾಸ್ ಪ್ರಾಂತದಲ್ಲಿ

೬೪೪ ಜನರ ಸ್ಥಾನಬದ್ಧತೆ

೩೦೧೧ ಜನರಿಗೆ ಶಿಕ್ಷೆ

ಕಳೆದ ಆಗಸ್ಟ್ ಮೊದಲ್ಗೊಂಡು ಎಪ್ರಿಲ್ ೧೫ರ ವರೆಗೆ ಮದ್ರಾಸ್ ಪ್ರಾಂತದಲ್ಲಿ ಒಟ್ಟು ೬೪೪ ಜನರು ಸ್ಥಾನಬದ್ಧರಾಗಿಯೂ, ೩೦೧೧ ಜನರು ಶಿಕ್ಷೆಗೊಳಗಾಗಿಯೂ ಇರುವರೆಂದು ಸರಕಾರವೇ ಅಂಕೆಸಂಖ್ಯೆ ಪ್ರಕಟಿಸಿದೆ. ಕಾಂಗ್ರೆಸ್ ಮುಖಂಡರನ್ನು ಸೆರೆಹಿಡಿದ ಬಗ್ಗೆ ಅತೃಪ್ತಿ ತೋರಿಸಿ ತಮ್ಮ ನಿಷೇಧ ವ್ಯಕ್ತಮಾಡಿದ ೧೧ ಜಿಲ್ಲಾ ಬೋರ್ಡುಗಳನ್ನು ಹಾಗೂ ೧೧ ಮುನ್ಸಿಪಾಲಿಟಿಗಳನ್ನು ೫ ಪಂಚಾಯತ ಬೋರ್ಡುಗಳನ್ನು ಸರಕಾರ ವಶಮಾಡಿದೆ.

ಮೈಸೂರಲ್ಲಿ ಬೀಡಿ ಕೆಲಸಗಾರರ ಮುಷ್ಕರ

೧೪ ಆಣೆ ಕೂಲಿ ಸಿಕ್ಕಿತು

ಮೈಸೂರಲ್ಲಿ ಆರು ಬೀಡಿ ಕಾರ್ಖಾನೆಗಳ ಸುಮಾರು ಒಂದು ಸಾವಿರ ಕೆಲಸಗಾರರು ತಮ್ಮ ಕೂಲಿಯನ್ನು ೧೨ ಆಣೆಯಿಂದ ಒಂದು ರೂಪಾಯಿಗೇರಿಸಬೇಕೆಂದು ಮುಷ್ಕರ ಹಿಡಿದರು. ಅಸಿಸ್ಟೆಂಟ್ ಲೇಬರ್ ಕಮಿಶನರು ಮುಷ್ಕರಗಾರರನ್ನು ಕಂಡು ಮಾತನಾಡಿ ಅವರು ಹೆಚ್ಚು ಕೂಲಿ ಕೇಳುತ್ತಿರುವುದು ಸರಿಯೆಂದು ಫೇಕ್ಟರಿ ಮಾಲಿಕರಿಗೆ ತಿಳಿಸಿ, ಯುದ್ಧ ಮುಗಿವವರೆಗೆ ಕೂಲಿ ೧೪ ಆಣೆಯಂತೆ ಕೊಡಲು ಒಡಂಬಡಿಕೆ ಮಾಡಿದರೆಂದು ಗೊತ್ತಾಗಿದೆ.

ಬ್ರಿಟನಿನಲ್ಲಿ ಬೆಳ್ಳಿ ಅಭಾವ

ಉಂಟಾಗಿ ಇತ್ತೀಚೆಗೆ ಅಮೆರಿಕದಿಂದ ಎರಡು ಲಕ್ಷ ಔನ್ಸ್ ಬೆಳ್ಳಿ ಬ್ರಿಟನಿಗೆ ರವಾನೆಯಾಗಿದೆ. ವಿಮಾನ ಹಡಗುಗಳ ತಯಾರಿಕೆಗೆ ಹಾಗೂ ಇಲೆಕ್ಟ್ರಿಕ್ ಸಾಧನಗಳಿಗೆ ಬೆಳ್ಳಿ ಈಗ ಹೆಚ್ಚು ಹೆಚ್ಚಾಗಿ ಬೇಕಾಗಿದೆ.

೧೭ ೦೦೦ ರೂ. ಅಪಹರಣ!

ಕರಾಚಿಯ ಪ್ರಮುಖ ಕೇಂದ್ರವಾದ ಮಾರಿಯೆಟ್ ರಸ್ತೆಯಲ್ಲಿ ಪಿಸ್ತೂಲ್ ತೋರಿಸಿ ಮೂವರು ಕಳ್ಳರು ೧೭,೦೦೦ ರೂ.ಗಳನ್ನು ಅಪಹರಿಸಿಕೊಂಡು ಹೋದ ಸುದ್ದಿ ಬಂದಿದೆ. ಕೇಶಿಯರ್ ಪ್ರತಿಭಟಿಸಲು ಗುಂಡು ಹಾರಿಸಿ ಆತನನ್ನು ಗಾಯಗೊಳಿಸಿದ್ದಾರೆ. ಜನರು ಅವರನ್ನು ಹಿಂಬಾಲಿಸಿದಾಗ ಮೂರು ಮಂದಿ ಸಿಕ್ಕಿಬಿದ್ದಿರುವರು. ಆದರೆ ಹಣ ಅಪಹರಿಸಿಕೊಂಡು ಹೋದುದು ಪತ್ತೆಯಿಲ್ಲ.

ಸತ್ಯಮೂರ್ತಿಯವರ ಮಗಳ ಮದುವೆಗೆ ಪತ್ರಿಕಾಕರ್ತರ ಉಡುಗರೆ

ಲಾಹೋರಿನ 'ಟ್ರಿಬ್ಯೂನ್' ಪತ್ರಿಕಾಕರ್ತರು ದಿವಂಗತ ಸತ್ಯಮೂರ್ತಿಯವರ ಏಕಮಾತ್ರ ಪುತ್ರಿಯ ಮದುವೆ ಸಮಯದಲ್ಲಿ ರೂ. ೨೫೦೦ರ ಒಂದು ನಿಧಿಯನ್ನು ಆಕೆಗೆ ಸಂಭಾವನೆಯಾಗಿ ಕಳುಹಿಸಿರುವರು. 'ಟ್ರಿಬ್ಯೂನ್' ಪತ್ರಿಕೆಗೆ ಸತ್ಯಮೂರ್ತಿಯವರು ಹಿಂದೆ ಹಲವು ಅಮೂಲ್ಯ ಲೇಖನಗಳನ್ನು ಬರೆದಿದ್ದರು. ಮದರಾಸಿನಲ್ಲಿ ಈ ವಿವಾಹವು ಕಳೆದ ವಾರ ನೆರವೇರಿತು.

'ಇದು ಇಂಗ್ಲಿಷ್ ಸ್ಥಾನ'

'ಇದು, ಇಂದು ಹಿಂದುಸ್ಥಾನವೂ ಅಲ್ಲ, ಪಾಕಿಸ್ಥಾನವೂ ಅಲ್ಲ; ಇದು ಇಂಗ್ಲಿಷ್ ಸ್ಥಾನ. ಹಾಗಾಗಿ ನಾವೆಂದು ಹಿಂದು ಮುಸ್ಲಿಮರೆನ್ನದೆ ಒಗ್ಗಟ್ಟಾಗಿ ಸ್ವಾತಂತ್ರ್ಯವನ್ನು ಗಳಿಸುವ. ಬ್ರಿಟಿಷರಾಳ್ವಿಕೆಯ ೧೫೦ ವರ್ಷಗಳಿಂದ ನಾವು ಅನುಭವಿಸಿದ ಕಷ್ಟ ಸಾಕು. ನಾವೀಗ ಒಂದಾಗಬೇಕು. ನಮ್ಮನ್ನು ಆಳುವವರಿಗೆ ಅಧಿಕಾರ ಬಿಟ್ಟುಕೊಡಲು ಮನಸ್ಸಿಲ್ಲ. ಕೊಟ್ಟ ಮಾತನ್ನು ಬ್ರಿಟಿಷರು ನಡೆಸುವವರಲ್ಲ' ಹೀಗೆಂದು ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಲೈಲಪುರದಲ್ಲಿ ಸೇರಿದ ಪಂಜಾಬ್ ಪ್ರಾಂತಿಕ ಹಿಂದುಮಹಾಸಭೆಯ ಅಧ್ಯಕ್ಷಸ್ಥಾನದಿಂದ ಸಾರಿದರು.

ದೊಡ್ಡ ಉದ್ಯೋಗಗಳು!

ಶಾಂತಿಸಾಗರ ಪರಿಷತ್ತಿನಿಂದ ಈಗ ಮರಳಿ ಬಂದಿರುವ ಶಿವರಾಯರು ಸರ್ ರಂಗನಾಥರವರ ಬದಲು ಭಾರತ ಮಂತ್ರಿಗಳ ಸಲಹೆಗಾರರಾಗಿಯೂ ಶಿವರಾಯರ ಬದಲು ಅಜೀಜುಲ್ ಹಕ್ಕರು ಭಾರತದ ಹೈ ಕಮಿಶನರಾಗಿಯೂ ನೇಮಿಸಲ್ಪಡುವರೆಂದು ವಾರ್ತೆಯಿದೆ.

ಸಾವರ್ಕಾರರು ನಿರಾಶರಾದರೆ?

'ಬಂಗಾಳ ಗವರ್ನರ್ ಮುಸ್ಲಿಂ ಲೀಗು ಮುಖಂಡರು'

—ಟ್ರೇಡ್ ಯೂನಿಯನ್ ಕಾಂಗ್ರೆಸ್—

ಹೇಬಸ್ ಕಾರ್ಪಸ್ ಅರ್ಜಿಗಳನ್ನು ತಿತ್ತು ಹಾಕಿದರು

ಮದ್ರಾಸ್ ಹೈಕೋರ್ಟಿನಲ್ಲಿ ಶ್ರೀಮತಿ ಅನ್ನ ಸ್ವಾಮಿ ನಾಥನ್ ಹಾಗೂ ಬೇರೆ ಏಳು ಜನ ಜನರ ಪರವಾಗಿ ಫೆಡರಲ್ ಕೋರ್ಟಿನ ತೀರ್ಮಾನದಂತೆ ಮಾಡಲಾದ ಹೇಬಸ್ ಕೋರ್ಪಸ್ ಅರ್ಜಿಯನ್ನು ಹೈಕೋರ್ಟ ನ್ಯಾಯಾಧೀಶ ಹಾರೀಲ್ ಮತ್ತು ಹ್ಯಾಪ್ವೆಲ್ಲರು ತಿತ್ತು ಹಾಕಿದರು. ಆದರೆ ಫೆಡರಲ್ ಕೋರ್ಟಿಗೆ ಅಪೀಲು ಹಾಡಲು ಸರ್ಟಿಫಿಕೇಟು ದೊರಕಿದೆ.

ಕೇಂದ್ರ ಎಸೆಂಬ್ಲಿ ಅಧಿವೇಶನ

ಬರುವ ಕೇಂದ್ರ ಎಸೆಂಬ್ಲಿ ಅಧಿವೇಶನವು ಜುಲಾಯಿ ತಿಂಗಳಲ್ಲೂ, ಕೌನ್ಸಿಲ್ ಓಫ್ ಸ್ಟೇಟ್ ಅಧಿವೇಶನವು ಅಗಷ್ಟ ತಿಂಗಳಲ್ಲೂ ಜರಗುವುದು.

ಕನ್ನಡ ಸಾಹಿತ್ಯ ಸಮ್ಮೇಳನ

ಇಪ್ಪತ್ತೇಳನೇ ಕನ್ನಡ ಸಾಹಿತ್ಯ ಸಮ್ಮೇಳನವು ಶಿವಮೊಗ್ಗದಲ್ಲಿ ನಡೆಯಬೇಕಾಗಿದ್ದು, ರಾಜಕೀಯ ಪರಿಸ್ಥಿತಿಯಿಂದಾಗಿ ಮುಂದೆ ಬಿದ್ದಿರುತ್ತಾ, ಅದನ್ನು ಬರುವ ದಸರೆ ಸಮಯದಲ್ಲಿ ಜರಗಿಸಬೇಕೆಂದು ಶಿವಮೊಗ್ಗದ ಸ್ವಾಗತ ಸಮಿತಿಯವರು ಈಗ ನಿರ್ಣಯಿಸಿರುವರು.

ರೂ. ೨೦೦೦ ಬಹುಮಾನ

ವಿಜಾಪುರದಲ್ಲಿ ಆನಂದ ಮಹಾಲಿನ ಹತ್ತಿರವಿರುವ ಹತ್ತೀಕಾನದಲ್ಲಿ ಕೂಡಿಸಿಟ್ಟ ಸರಕಾರೀ ಹುಲ್ಲು ಮತ್ತು ಕಣಕಿ ಬಣವಿಗೆ ಬೆಂಕಿ ಹಚ್ಚಿದವರನ್ನು ಪತ್ತೆ ಮಾಡಿ ಕೊಟ್ಟವರಿಗೆ ರೂ. ೨೦೦೦ ಬಹುಮಾನ ಕೊಡುವುದಾಗಿ ಅಲ್ಲಿನ ಸಿಟಿ ಪೋಲೀಸ್ ಸ|| ಇ|| ರವರು ಪ್ರಕಟಿಸಿದ್ದಾರೆ.

ಸಾವರ್ಕಾರರ ನಿರಾಶೆ!

ಈ ಸಲದ ವೈಸರಾಯರ ಕಾರ್ಯಕಾರೀ ಮಂಡಳಕ್ಕೆ ಸಾವರ್ಕಾರರು ತಮ್ಮ ಪಕ್ಷದ ಕೆಲವು ಮಹನೀಯರ ಹೆಸರುಗಳನ್ನು ಸೂಚಿಸಿ ದೀರ್ಘ ಪತ್ರವೊಂದನ್ನು ಬರೆದಿದ್ದರೆಂದೂ ಆ ತ್ರಕ್ಕೆ ವೈಸರಾಯರು ಏನೂ ಗಮನ ಕೊಡದಿರುವುದರಿಂದ ಸಾವರ್ಕಾರರೀಗ ನಿರಾಶರಾಗಿರುವರೆಂದೂ ತಿಳಿದಿದೆ. ಸಾವರ್ಕಾರರು ವೈಸರಾಯರ ಕಾರ್ಯಕಾರೀ ಮಂಡಳಕ್ಕೆ ಸೂಚಿಸದ ಜನರಲ್ಲಿ ಡಾ|| ಮುಂಜೆ, ಶ್ರೀ ಬಿ. ಟಿ. ಖಪಾರ್ಡೆ, ಶ್ರೀ ಜಮುನಾದಾಸ ಮೆಹತಾ, ಸರ್ ಗೋಕುಲ ಚಂದ ನಾರಂಗ ಮೊದಲಾದವರ ಹೆಸರುಗಳಿದ್ದುವೆಂದು ತಿಳಿಯಲಾಗಿದೆ. ವೈಸರಾಯರು ಸಾವರ್ಕಾರರ ಸೂಚನೆಗೆ ಮನ್ನಣೆ ಕೊಡದಿರುವುದರಿಂದ ಹಿಂದು ಮಹಾಸಭೆಗೆ ಅವರು ಎಷ್ಟು ಗೌರವ ಕೊಡುತ್ತಾರೆಂದು ತಿಳಿಯುತ್ತದೆ.

ಬಂಗಾಳದ ಗವರ್ನರರು ಮುಸ್ಲಿಂ ಲೀಗ್ ಮುಖಂಡರು!

"ಬಂಗಾಳದ ಗವರ್ನರರೊಡನೆ ನಾನು ಮಾತನಾಡಿದಾಗ ಅವರು ಪಕ್ಷಾತೀತರೆಂದು ನನಗೆ ತಿಳಿಯದೆ ಹೋಯಿತು. ಅವರ ಮಾತಿನ ಸರಣಿಯಿಂದ ನನಗೆ ಹಾಗೆ ಕಲ್ಪನೆಯಾಯಿತು. ರಾಜಿಕೊಟ್ಟ ಬಂಗಾಳ ಎಸೆಂಬ್ಲಿಯಲ್ಲಿ ನೀವು ಮುಸ್ಲಿಂ ಲೀಗಿನ ಮುಖಂಡತ್ವ ವಹಿಸಬೇಕೆಂದು ನಾನವರೊಡನೆ ಸ್ಪಷ್ಟವಾಗಿ ಹೇಳಿದೆ" ಹೀಗೆಂದು ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರು ಲಾಹೋರಿನಲ್ಲಿ ಒಂದು ಸಾರ್ವಜನಿಕ ಭಾಷಣ ಕೊಡುತ್ತಾ ಹೇಳಿದರು.

ಟ್ರೇಡ್ ಯೂನಿಯನ್ ಕಾಂಗ್ರೆಸಿನ ಸಭೆ

ಕಮುನಿಸ್ಟ್ ಮತ್ತು ರಾಷ್ಟ್ರೀಯ ಸೂಚನೆಗಳ ನಿರಾಕರಣೆ

ನಾಗಪುರದಲ್ಲಿ ಶ್ರೀ ಚಾರುಚಂದ್ರ ಬೆನರ್ಜಿಯವರ ಅಧ್ಯಕ್ಷತೆಯಿಂದ ಸೇರಿದ ಅಖಿಲಭಾರತ ಟ್ರೇಡ್ ಯೂನಿಯನಿನ ಸಭೆ ಮುಕ್ತಾಯವಾಯಿತು. ಅಲ್ಲಿ ಸದಸ್ಯ ಪರಿಸ್ಥಿತಿ ಕುರಿತು ಎರಡು ಗಂಟೆಗಳ ತನಕ ಚರ್ಚೆಯಾಗಿ ಠಂದರಾವುಗಳು ಬಿದ್ದು ಹೋದವು. ಒಂದು ರಾಷ್ಟ್ರೀಯ ಪಕ್ಷದವರದ್ದು. ಇನ್ನೊಂದು ಕಮ್ಯುನಿಸ್ಟರದ್ದು. ಎರಡು ಸೂಚನೆಗಳಲ್ಲಿಯೂ ಗಾಂಧಿಜಿ ಹಾಗೂ ಕಾಂಗ್ರೆಸಿಗಳ ಅನಿಯಮಿತ ಅವಧಿವರೆಗಿನ ಬಂಧನ ಹಾಗೂ ಅವರನ್ನು ಕಾಣಲು ಯಾರಿಗೂ ಸಮ್ಮತಿ ಕೊಡದಿರುವುದರ ಖಂಡನೆಯಿದ್ದು, ಕೂಡಲೇ ಅವರ ಬಿಟ್ಟುಕೊಡಬಾರದೆಂದಿರುವ ಸರಕಾರದ ಧೋರಣವನ್ನು ಟೀಕೆ ಮಾಡಿ ಕೂಡಲೇ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸಿ ದೇಶ ರಕ್ಷಣೆಯನ್ನು ಸಂಘಟಿಸಬೇಕೆಂದು ಎರಡು ಪಕ್ಷಗಳ ನಿರ್ಣಯಗಳಲ್ಲಿಯೂ ಇತ್ತು. ಆದರೆ ಸೂಚನೆಗಳಲ್ಲಿ ಎರಡು ಭೇಧವಿತ್ತು. ಮೊದಲನೆಯದು ಕಮುನಿಸ್ಟ್ ಪಕ್ಷದವರು ಹಿಂದು ಮುಸ್ಲಿಂ ಐಕ್ಯಕ್ಕಾಗಿ ಒಡಂಬಡಿಕೆ ಮುಖ್ಯವಾಗಿ ಜಿನ್ನರೊಡನೆ ಒಪ್ಪಂದವಾಗಬೇಕೆಂದರು. ಮಹತ್ವದ ಅಲ್ಪ ಸಂಖ್ಯಾಕ ಪಕ್ಷಗಳಿಗೆ ಸ್ವಯಂ ನಿರ್ಣಯಾಧಿಕಾರವಿರಬೇಕೆಂದೂ, ಹೊಸ ರಾಜ್ಯಘಟನೆಯಾಗುವವರೆಗೆ ರಾಷ್ಟ್ರೀಯ ಸರಕಾರದಲ್ಲಿ ಸಹಕರಿಸಲು ಎಲ್ಲಾ ಪಕ್ಷಗಳೂ ತಮ್ಮ ಮುಖಂಡರಿಗೆ ಒತ್ತಾಯ ಮಾಡಬೇಕೆಂದೂ ರಾಷ್ಟ್ರೀಯ ಪಕ್ಷದವರು ವಾದಿಸಿದರು. ಆದರೂ ಬ್ರಿಟಿಷ್ ಸರಕಾರವು ಅಧಿಕಾರ ಬಿಟ್ಟುಕೊಡಲು ಒಪ್ಪದಿದ್ದರೆ ರಾಷ್ಟ್ರೀಯ ಬಲವನ್ನು ಸಂಘಟಿಸಿ ಸರಕಾರವನ್ನು ಒತ್ತಾಯಪಡಿಸಬೇಕೆಂದು ರಾಷ್ಟ್ರೀಯ ಪಕ್ಷದವರ ವಾದವಿತ್ತು. ಮಿತ್ರರಾಷ್ಟ್ರಗಳ ಯುದ್ಧ ನಿರ್ವಹಣ ಹಾಗೂ ಯುದ್ಧಾನಂತರದ ಪುನರ್ಘಟನೆಯ ಯೋಜನೆಯನ್ನಾಲೋಚಿಸುವ ಭಾರತದ ಕೂಲಿಗಾರರ ಹಿತವನ್ನು ಅಕ್ಷಿಸಬೇಕೆಂದು ಮಿತ್ರ ರಾಷ್ಟ್ರಗಳ ಕೂಲಿಗಾರ ಸಂಘಗಳು ತಮ್ಮ ಸರಕಾರಗಳಿಗೆ ಆಗ್ರಹಪಡಿಸಬೇಕೆಂದು ಕಮುನಿಸ್ಟರ ಸೂಚನೆಯಿತ್ತು.

ಬ್ರಿಟನಿನ ಭಾರತೀಯ ವಿದ್ಯಾರ್ಥಿಗಳು

ತಮ್ಮ ಏಳನೇ ಸಮ್ಮೇಳನವನ್ನು ಎಡಿನ್‌ಬರೋನ್ನು ಜರಗಿಸಿ, ಭಾರತದ ರಾಜಕಿಯ ಬಂಧಿಗಳನ್ನು ಬಿಡುಗಡೆ ಮಾಡಬೇಕೆಂದು ನಿರ್ಣಯ ಮಾಡಿದರು. ಇದರಲ್ಲಿ ಬ್ರಿಟನ್, ಚೀನ, ಅಮೆರಿಕ, ನಿಗ್ರೋ ಭಾಷಣ ಕರ್ತರಿದ್ದರು.

"ಅನ್ನದ ಬದಲು ಕಲ್ಲು"

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿ ಶ್ರೀ. ಜೆ. ಸಿ. ಕುಮಾರಪ್ಪನವರನ್ನು ಬಂಧಿಸಿದ್ದು ಅವರು ಬರೆದ "ಅನ್ನದ ಬದಲು ಕಲ್ಲು" ಎಂಬ ಲೇಖನದ ಬಗ್ಗೆ ವಿಚಾರಣೆಯಾಗುತ್ತಿದೆ. ಶ್ರೀ ಕುಮಾರಪ್ಪನವರು ಆ ಲೇಖನದಲ್ಲಿ ಈಗಿನ ನೋಟಿನ (ಒಂದು ರೂಪಾಯಿ) ಬೆಲೆ ಒಂದುವರೆ ಆಣೆಯೆಂದು ವಿಶದಪಡಿಸಿ, ನೋಟಿನ ಬದಲು ನಿಮ್ಮಲ್ಲಿರುವ ಧವಸ ಧಾನ್ಯಗಳನ್ನು ಕೊಡಬೇಡಿ ಎಂದು ಸಾರಿದ್ದರು. ಬ್ರಿಟನ್ನಿನ ಭಾರತದ ಆರ್ಥಿಕ ನೀತಿಯನ್ನು ಖಂಡಿಸಿ, ಇಂದಿನ ಭಾರತದ ಆರ್ಥಿಕ ನೀತಿ 'ಆರ್ಥಿಕ ದಗ್ಧ ಭೂಮಿ ಧೋರಣೆ ಎಂದು ಹೇಳಿದ್ದರು.

ಅ. ಭಾ. ಹರಿಜನ ಪರಿಷತ್ತು

ಇದರ ೯ನೇ ಅಧಿವೇಶನವು ಅಮೃತಸರದಲ್ಲಿ ಶ್ರೀ. ಎಚ್. ಜೆ. ಖಂಡೇಕರರ ಅಧ್ಯಕ್ಷತೆಯಿಂದ ನೆರವೇರಿತು. ಧಾರ್ಮಿಕ ರಾಜಕೀಯ ಸಾಮಾಜಿಕ ಉನ್ನತಿಗಾಗಿ ಹರಿಜನರು ಇತರ ಹಿಂದೂ ಬಾಂಧವರೊಡನೆ ಸಹಕರಿಸಬೇಕೆಂದು ಅಧ್ಯಕ್ಷರು ಹೇಳಿದರು. ರಾಷ್ಟ್ರದ ಮುಂದಾಳುಗಳನ್ನು ಬಿಡುಗಡೆ ಮಾಡಬೇಕೆಂದು ನಿರ್ಣಯವಾಯಿತು.

ಕಂಬನಿ

ಹಲಸಂಗಿ ಗೆಳೆಯರೂ ಶ್ರೀ ಅರವಿಂದ ಗ್ರಂಥಮಾಲೆಯ ಸಂಚಾಲಕರಲ್ಲೊಬ್ಬರೂ ಆದ ಶ್ರೀ ಕಾಪಸೆ ರೇವಪ್ಪನವರು ತಮ್ಮ ೩೩ನೇ ವಯಸ್ಸಿನಲ್ಲಿ ತಾ. ೩-೪-೪೩ನೇ ದಿನ ದಿವಂಗತರಾದರೆಂದು ತಿಳಿದು ಅತ್ಯಂತ ವಿಷಾದಪಡುತ್ತೇವೆ. ಶ್ರೀಯುತರು ಚಿತ್ರಕಲೆಯಲ್ಲಿ ನೈಪುಣ್ಯ ಸಂಪಾದಿಸಿದ್ದರಲ್ಲದೆ ಜನಪದಸಾಹಿತ್ಯ ಸಂಗ್ರಹದಲ್ಲಿಯೂ ಪ್ರಚಾರದಲ್ಲಿಯೂ ತೊಡಗಿದ್ದರು. 'ಮಲ್ಲಿಗೆ ದಂಡೆ'ಯನ್ನು ಕಟ್ಟಿದವರು ಅವರೇ. ಅವರ 'ನಂದನವನ' ಮತ್ತು 'ಸನ್ಯಾಸಿ' ಎಂಬ ಗ್ರಂಥಗಳು ಪ್ರಕಟವಾಗಿವೆ. ಇನ್ನೂ ಕೆಲವು ಗ್ರಂಥಗಳು ಪ್ರಕಟವಾಗದೇ ಉಳಿದಿವೆ. ಜನ ಪದ ಸಾಹಿತ್ಯದಲ್ಲಿ ಮುಖ್ಯವಾಗಿ ಗರತಿಯ ಹಾಡುಗಳಿಂದಲೂ ಶರಣರ ವಚನ ಸಾಹಿತ್ಯದಿಂದಲೂ ಅವರು ಚಿರಪರಿಚಿತರಾಗಿರುವರು. ಅವರ "ಬಸವಣ್ಣ" ನಾಟಕವಿನ್ನೂ ಅಪ್ರಕಟವಾಗಿಯೇ ಉಳಿದಿದೆ.

ಉತ್ತರ ಕರ್ನಾಟಕದ ಸಾಹಿತಿಗಳಲ್ಲಿ ಒಬ್ಬರಾಗಿದ್ದ ಶ್ರೀ ಕಾಪಸೆಯವರು ಅಕಾಲ ಮರಣಕ್ಕೆ ತುತ್ತಾದುದರಿಂದ ಕನ್ನಡಕ್ಕೆ ಒಂದು ದೊಡ್ಡ ನಷ್ಟವಾಗಿದೆ. ದಿವಂಗತರ ಆತ್ಮಕ್ಕೆ ಪರಮಾತ್ಮನು ಶಾಂತಿಯೀಯಲಿ.

ಸಾವರಕರರ ಹೀರಕ ಮಹೋತ್ಸವ

ಹಿಂದೂ ಮಹಾಸಭೆಯ ಅಧ್ಯಕ್ಷರಾದ ವೀರ ಸಾವರಕರ ಇವರಿಗೆ ೬೦ ವರ್ಷ ಸಲ್ಲುವ ತಾ. ೨೮-೫-೪೩ನೇ ದಿನ ಅಂದರೆ ಅವರ ಹುಟ್ಟಿದ ಹಬ್ಬದ ದಿವಸ ಅವರನ್ನು ಅಖಿಲ ಭಾರತದ ಪರವಾಗಿ ಸಾರ್ವಜನಿಕವಾಗಿ ಗೌರವಿಸಿ ಅವರಿಗೆ ಆ ದಿವಸ ಶಕ್ಯವಿದ್ದಷ್ಟು ಹಣವನ್ನು ಕಾಣಿಕೆಯಾಗಿ ಅರ್ಪಿಸಬೇಕೆಂದು ನಿರ್ಧರಿಸಲಾಗಿದೆ.

ಹುಣಿಸೇ ಮರಗಳನ್ನು ಕಡಿಯಬಾರದು

ಫಲ ಬಿಡುವ ಹುಣಿಸೇ ಮರಗಳನ್ನು ಕಡಿಯಬಾರದಾಗಿ ಮದ್ರಾಸ್ ಸರಕಾರದ ಸೂಚನೆ ಹೊರಟಿದೆ. ಎಲ್ಲ ಮರಗಳ ಜತೆಯಲ್ಲಿ ಇಂಥ ಹುಣಿಸೇ ಮರಗಳನ್ನೂ ಕಡಿದುದರಿಂದಲೇ, ಹುಣಿಸೆ ಹಣ್ಣಿನ ಸಂಬರಾಯಿ ಕಡಿಮೆಯಾಗಲು ಕಾರಣವೆಂದು ಸರಕಾರ ತಿಳಿದಿದೆ.

ಉಡುಪಿ

ಮುಟ್ಟಿ ತೆನ್ನಯ್ಯ ಪೂಜಾರಿ ಕೊಲೆ

ಗೆ ಸಂಬಂಧಪಟ್ಟವರೆಂಬ ಆರೋಪಕ್ಕೊಳಗಾದ ಶ್ರೀ|| ಅಧಿಕಾರಿ ರಾಮಚಂದ್ರಯ್ಯ ಮೊದಲಾದ ಐದು ಮಂದಿಯನ್ನು ಮದ್ರಾಸ್ ಹೈಕೋರ್ಟ್ ಅಪೀಲಿನಲ್ಲಿ ಬಿಟ್ಟಿರುವರೆಂದೂ ಉಳಿದವರಿಗೆ ಜಿಲ್ಲಾ ಕೋರ್ಟಿನಲ್ಲಿ ಕೊಟ್ಟ ತೀರ್ಪು ಕಾಯಂ ಮಾಡಲಾಗಿದೆಯೆಂದೂ ತಿಳಿದುಬರುತ್ತದೆ.

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2—12—0, ರೂ. 4—8—0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

THE CANARA BANKING CORPORATION Ltd.

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs. As. Ps.	Property & Assets	Rs. As. Ps.
Paid up Capital -	6,36,890 0 0	Office premises, furniture, etc.	91,659 0 0
Reserve & other funds	3,71,882 13 11	Advances	31,28,612 4 9
Deposits	41,83,873 4 1	Investment on Govt. Securities etc. at cost	15,34,536 14 3
Due to Bankers	5,08,545 12 1	Sundries	74,183 5 7
Bills per contra	3,59,357 12 1	Bills for Collection	3,59,357 12 1
Sundries including branch adjustments & undisbursed profits	2,83,736 5 9	Cash on Hand & with bankers	12,05,397 14 8
Profit for the year 1942	49,461 3 5		
Total Rs.	63,93,747 3 4	Total Rs.	63,93,747 3 4

ವೃದ್ಧಿಯಿಂದ ಅಭಿವೃದ್ಧಿ

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೧, ೪೨ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LTD.,

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಸಮರಭೂಮಿಯ ಸಂಚಾರ

ಟ್ಯುನಿಸಿಯಾ ಒಂದು ಕಡೆಯನ್ನುಳಿದರೆ ಸದ್ಯ ಇನ್ನೆಲ್ಲಿಯೂ ಅಷ್ಟೊಂದು ತೀವ್ರ ಹೋರಾಟ ನಡೆಯುತ್ತಲಿಲ್ಲ. ಆದರೆ ರಶ್ಯ, ಅರಕಾನ, ಆಸ್ಟ್ರೇಲಿಯ ಈ ಎಲ್ಲಾ ಸ್ಥಳಗಳಲ್ಲಿಯೂ ಮಹಾ ಸಂಗ್ರಾಮಕ್ಕೆ ಸಿದ್ಧತೆಗಳಾಗುವ ಲಕ್ಷಣಗಳೇ ತೋರಿಬರುತ್ತವೆ. ಟ್ಯುನಿಸಿಯದಲ್ಲಿ ಮಿತ್ರರು ಜೋರಾಗಿ ಮುಂದುವರಿಯಲು ಸಾಹಸ ಮಾಡುವುದಿದ್ದರೂ ಜರ್ಮನರ ಪ್ರತಿಭಟನೆ ಬಲವಾಗಿದೆ. ಅರಕಾನದಲ್ಲಿ ಜಪಾನರು ಮುಂದೊತ್ತಿ ಮಾಂಗಡಾ, ಬಾಥಡಾಂಗಗಳನ್ನು ಕೈವಶ ಮಾಡುವ ಸಂಭವವಿದೆ. ಆಸ್ಟ್ರೇಲಿಯದ ಬಳಿ ಜಪಾನರ ಸಿದ್ಧತೆಗಳು ಬಲವಾಗಿದ್ದು, ಆಸ್ಟ್ರೇಲಿಯನರು ಭೀತರಾಗಿದ್ದಾರೆ.. ಹೀಗೆ ಎಲ್ಲಾ ರಣಭೂಮಿಗಳಲ್ಲಿಯೂ ಒಳ್ಳೆಯ ಹುರುಪಿನ ಚಟುವಟಿಕೆಗಳೇ ಕಾಣಬರುತ್ತವೆ. ಫಾಸಿಫಿಕ್‌ನಲ್ಲಿ ಜಪಾನರು ವಶಪಡಿಸಿಕೊಂಡ ಪ್ರದೇಶಗಳನ್ನು ಅವರ ಉಪಯೋಗಕ್ಕೇ ಬಿಟ್ಟುಕೊಟ್ಟರೆ ಬೇಗನೇ ಅವರು ಅಮೆರಿಕಕ್ಕೂ ಆಕ್ರಮಿಸಬಹುದು ಎಂದು ಹಿಂದೆ ಟೋಕಿಯೋದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಜೋಸೆಫ್ ಗ್ರ್ಯೂ ಎಚ್ಚರಿಕೆಯಿತ್ತಿದ್ದಾರೆ. ಚೀನದ ಹ್ಯಾಂಕೋವ್-ಪೆಕಿಂಗ ಗಡಿಯಲ್ಲಿ, ಹುನಾನ ಪ್ರಾಂತದಲ್ಲಿ, ಶಾಂಸಿ-ಹೊನಾನ ಗಡಿಯಲ್ಲಿ-ಹೀಗೆ ಅಲ್ಲಲ್ಲಿ ತಿಕ್ಕಾಟಗಳು ಆಗಾಗ ಆಗುತ್ತಲೇ ಇವೆ.

ಸ್ಟಾಲಿನ್ ಸಂದೇಶ

ರಶ್ಯದ ಇತಿಹಾಸದಲ್ಲಿ ಮೇ ದಿನಾಚರಣೆ ಅತ್ಯಂತ ಮಹತ್ವದ್ದು; ರಶ್ಯದ ಕ್ರಾಂತಿಯ ಭವ್ಯ ಸ್ಮರಣೆಯದ್ದು. ಈ ದಿನವನ್ನು ಕಮುನಿಸ್ಟರು ರಶ್ಯದಲ್ಲಿ ಅತ್ಯಂತ ಉತ್ಸಾಹದಿಂದ ಆಚರಿಸುತ್ತಾರೆ. ಅಖಿಲ ಜಗತ್ತಿನಲ್ಲಿಯೂ ಕಮುನಿಸ್ಟರೆಲ್ಲೆಲ್ಲಿರುವರೋ ಅವರೆಲ್ಲರೂ ಈ ದಿನವನ್ನು ಆಚರಿಸುವರು. ಈ ವರ್ಷ ಸ್ಟಾಲಿನ್, ರಶ್ಯದ ಏಕಾಂಗವೀರನು ಮೇ ದಿನದ ಶುಭ ಸಂದೇಶವನ್ನಾಗಿ ಕೊಟ್ಟ ಭಾಷಣವು ಬಹಳ ಉತ್ಸಾಹಪೂರಿತವಿದೆ; ಆವೇಶ ಪೂರ್ಣವಿದೆ. ಸ್ಟಾಲಿನ್ ಸೋವಿಯೆಟ್ ವೀರರ ಧೈರ್ಯ ಶೌರ್ಯೋತ್ಸಾಹಗಳನ್ನು ಪ್ರಶಂಸಿಸಿ ಹೀಗೆ ಸಾರಿದನು: 'ದೇಶದ ರಕ್ಷಣೆಯು ವಿಷಮ ಪರಿಸ್ಥಿತಿಗೆ ಬಂದೊದಗಿರುವೀ ಸಂದರ್ಭದಲ್ಲಿ ನಾವಿಂದು ಮೇ ದಿನವನ್ನು ಆಚರಿಸುತ್ತೇವೆ. ರಶ್ಯನ್ ವೀರರು ಮಾತೃಭೂಮಿಯನ್ನು ಗಂಡಾಂತರದಿಂದ ರಕ್ಷಿಸುವರೆಂದು ಭರವಸೆಯಿಟ್ಟಿರುವೆವು. ನಮ್ಮ ಆ ಭರವಸೆ ವ್ಯರ್ಥವಾಗಿಲ್ಲ: ಸ್ಟಾಲಿನ್‌ಗ್ರಾಡ್ ಕದನದಲ್ಲಿ ರಶ್ಯನ್ ವೀರರು ತೋರಿಸಿದ ಸಾಹಸವು ಅಪ್ರತಿಮವಾದುದು. ಸ್ಟಾಲಿನ್‌ಗ್ರಾಡ್ ಕದನದಿಂದ ಜರ್ಮನರ ಪತನ ಪ್ರಾರಂಭವಾಯಿತು. ಆ ಮೇಲೆ ಮಿತ್ರರ ಪೆಟ್ಟು ವೈರಿಗೆ ಬಿತ್ತು. ಶತ್ರುವು ಜರ್ಜರಿತನಾಗುತ್ತಿದ್ದಾನೆ. ಅಜೇಯರೆಂದು ಅರ್ಭಟಿಸುತ್ತಿದ್ದ ಜರ್ಮನರಿಂದು ಆರ್ತನಾದ ಹೊರಡಿಸುತ್ತಿದ್ದಾರೆ. ಆದರೆ ಜರ್ಮನಿ ಸೋತಿದೆಯೆಂದು ಭಾವಿಸುವುದು ಮೂರ್ಖತನ. ಮಿತ್ರರು ಇನ್ನೂ ಭೀಕರ ಹೋರಾಟ ಮಾಡಬೇಕಾಗಿದೆ. ಹಿಟ್ಲರಿಗೆ ಬಿದ್ದ ಪೆಟ್ಟು ಸಾಕಾಗಲಿಲ್ಲ. ಇನ್ನೂ ಆತನನ್ನು ಸದೆಬಡೆಯಬೇಕು. ಮಿತ್ರರೊಡನೆ ರಶ್ಯನ್ ಸೇನೆಯು ಶತ್ರುವನ್ನು ಮರ್ದಿಸಲು ಹಿಂಜರಿಯಲಾರದು. ರಶ್ಯದ ಸ್ತ್ರೀ ಪುರುಷರೆಲ್ಲರೂ ಅತುಲ ಬಲಿದಾನ ಮಾಡಿದ್ದಾರೆ. ಫೆಸಿಸ್ಟ್ ರಾಕ್ಷಸನನ್ನು ಮುರಿಯಲು ನಮಗೆ ಹೆಚ್ಚಿನ ಸಹಾಯಬೇಕು. ಸೋವಿಯೆಟ್ ವೀರರೇ ಸಿದ್ಧರಾಗಿರಿ' ಸ್ಟಾಲಿನ್ ಹೀಗೆಂದು ಹುರುಪಿತ್ತಿದ್ದಾನೆ. ತನ್ನ ಸೇನೆಯ ಪರಾಕ್ರಮವನ್ನು ಪಶಂಸಿಸುವುದರೊಡನೆ ವೈರಿಯ ಹೋರಾಟವನ್ನೂ ಕಡೆಗಣಿಸಿಲ್ಲ. ವೈರಿ ಎಷ್ಟು ಹೋರಾಡಿದರೂ ನಮ್ಮನ್ನು ಗೆಲ್ಲುವುದು ಸಾಧ್ಯವಿಲ್ಲವೆಂಬುದು ಸ್ಟಾಲಿನನ ಅಚಲ ವಿಶ್ವಾಸ. ಇದೇ ಸ್ವಾತಂತ್ರ್ಯ ವೀರರ ವಿಶ್ವಾಸ!

ಅರಕಾನ ಅರಣ್ಯದಲ್ಲಿ

ಅರಕಾನ ಅರಣ್ಯದಲ್ಲಿ ಜಪಾನರು ಹೋರಾಟ ನಡೆಸುತ್ತಿದ್ದಾರೆ. ಅವರ ಹೋರಾಟದ ಪರಿಣಾಮವಾಗಿ ಬ್ರಿಟಿಷ್ ಮತ್ತು ಹಿಂದೀ ಸೈನ್ಯಗಳು ಹೊಸ ಠಾಣಗಳನ್ನು ಹುಡುಕುತ್ತ ಹಿಂಜರಿಯಬೇಕಾಯಿತು. ಬ್ರಿಟಿಷರು ಹಿಂಜರಿದ ಕೂಡಲೇ ಅವರ ಹಿಂದೆಯೇ ಜಪಾನರು ಮುನುಗ್ಗುತ್ತಾ ಬಂದಿದ್ದಾರೆ. ಈಗಾಗಲೇ ಜಪಾನರು ಹಲವು ಠಾಣ್ಯಗಳನ್ನು ಕೈವಶಪಡಿಸಿಕೊಂಡಿರುವರು. ಸದ್ಯ ಅವರ ಸೈನ್ಯವು ಮಾಯೂ ನದೀ ತೀರದಲ್ಲಿದೆ. ಅಲ್ಲಿ ಅವರು ಪ್ರತಿದಿನ ಒಂದೊಂದೇ ಹೆಜ್ಜೆ ಮುಂದಿಡುತ್ತಿದ್ದು ಮಾಂಗಡಾ ಮತ್ತು ರಾಥೆಡಾಂಗಗಳನ್ನು ಆಕ್ರಮಿಸಲು ಪ್ರಯತ್ನಿಸುತ್ತಿದ್ದಾರೆ. ಹೀಗೆ ಅರಕಾನ ಅರಣ್ಯದಲ್ಲಿ ಕಾಳಗದ ಕಾವು ಏರುತ್ತಾ ಹೋಗುತ್ತಿದೆ. ಮಾಯೂ ದ್ವೀಪಕಲ್ಪದ ಗುಡಗಾಡುಗಳಲ್ಲಿ ಜೋರಿನ ಹೋರಾಟ ಕೊಲೆ ಸುಲಿಗೆಗಳೂ ನಡೆದವು, ಘೋರ ಅತ್ಯಾಚಾರಗಳಾಗುತ್ತಿವೆ. ಒಂದು ದಿನ್ನೆಯ ಮೇಲೆ ಎಂಟು ಜನ ಜಪಾನಿ ಸೈನಿಕರು ಊಟ ಮಾಡುತ್ತಾ ಕುಳಿತಿರುವುದನ್ನು ನೋಡಿ ಪಂಜಾಬೀ ಸೈನಿಕರು ಅವರ ಮೇಲೆ ಗುಂಡು ಹಾರಿಸಿದರು. ಕೂಡಲೇ ಜಪಾನರೂ ಇವರ ಮೇಲೆ ಗುಂಡೆಸೆದರು. ಪರಿಣಾಮವಾಗಿ ಪಂಜಾಬಿಗಳು ಹಿಂಜರಿಯಬೇಕಾಯಿತು. ಹೀಗೆ ಜಪಾನರು ದಿನ ದಿನಕ್ಕೆ ಈ ಕಡೆ ಒತ್ತುತ್ತಾ ಬರುತ್ತಾರೆ. ಫ್ಯಾಸಿಫಿಕ್‌ನಲ್ಲಿ ಜಪಾನರು ಮುಂದೇನು ಮಾಡುವರೆಂಬುದು ನಿಶ್ಚಿತ ತಿಳಿಯದಿದ್ದರೂ ರಶ್ಯ, ಭಾರತ, ಆಸ್ಟ್ರೇಲಿಯ ಈ ಮೂರು ಕಡೆಗಳಲ್ಲಿಯೂ ಅವರು ಧಾಳಿಯಿಡುವ ಸಂಭವವಿದೆ. ಆಸ್ಟ್ರೇಲಿಯದ ಹತ್ತಿರವಂತೂ ಅವರು ಬಹಳ ಸಿದ್ಧತೆ ಮಾಡುತ್ತಿದ್ದಾರೆ. ಇದರಿಂದ ಆಸ್ಟ್ರೇಲಿಯವು ಗಾಬರಿಗೊಂಡಿದೆ. ಭಾರತ ಗಡಿಯಲ್ಲಿ ಮೇಲೆ ಹೇಳಿದಂತೆ ಕಾಳಗವೇ ಪ್ರಾರಂಭವಾಗಿದೆ. ಇದನ್ನೆಲ್ಲಾ ನಿರೀಕ್ಷಿಸಿದರೆ, ಬಹುಶಃ ಜರ್ಮನರು ವಸಂತಧಾಳಿಯನ್ನು ಪ್ರಾರಂಭಿಸುವಾಗಲೇ ಜಪಾನರೂ ತಮ್ಮ ಆಕ್ರಮಣ ಕಾರ್ಯವನ್ನು ಆರಂಭಿಸಬಹುದೋ ಏನೊ?

ಫೇಣಿ ಮೇಲೆ ಬಾಂಬು ವರ್ಷ!

ಪೂರ್ವ ಬಂಗಾಳದ ನವಕಾಲೀ ಜಿಲ್ಲೆಯ ಮುಖ್ಯ ಪಟ್ಟಣ ಫೇಣಿ; ಇದೊಂದು ಹಳ್ಳಿಯೂ ಅಲ್ಲ, ಪೇಟೆಯೂ ಅಲ್ಲ. ಅಂತೂ ಇತ್ತೀಚೆಗೆ ಇಲ್ಲಿಗೆ ಜಪಾನರು ಬಾಂಬು ಸುರಿಸಲು ಸುರು ಮಾಡುವುದಕ್ಕಿಂತ ಮೊದಲು ಈ ಸ್ಥಳದ ಹೆಸರು ಬಹುಮಂದಿಗೆ ಗೊತ್ತೇ ಇರಲಿಲ್ಲ. ಆದರೆ ಜಪಾನರು ತಮ್ಮ ವ್ಯೂಹ ಕಟ್ಟಿ ಇನ್ನು ಭಾರತದತ್ತ ಮುಂದೊತ್ತಿ ಬರುವರೆಂದು ತಿಳಿದ ಕೂಡಲೇ ಫೇಣಿ ಒಂದು ಯುದ್ಧ ಕ್ಷೇತ್ರವಾಯಿತು. ಇದರ ಹೆಸರು ದೇಶದಾದ್ಯಂತ ಸಾಗರದಾಚೆಗೂ ಸಾವಿರಾರು ಮೈಲುಗಳ ದೂರ ಕೇಳಿ ಬಂತು. ಜಡ ನಿದ್ರೆಯಲ್ಲಿದ್ದ ಫೇಣಿ ಒಮ್ಮೆಲೇ ಜಪಾನರ ಬಾಂಬಿನ ಗುಡುಗು ಕೇಳಿ ಎಚ್ಚರಗೊಂಡಿತು. ಫೇಣಿ ಮೇಲೆ ಬಿದ್ದ ಬಾಂಬುಗಳ ಅವಸ್ಥೆಯೇನು? ಬುದ್ಧಿಗೆಟ್ಟ ಜಪಾನರು ಕಕ್ಕಾಬಿಕ್ಕಿ, ಫೇಣಿ ನಗರದ ರಸ್ತೆ ಬೀದಿಗಳ ಮೇಲೆ ಮನೆ ಕಟ್ಟಡಗಳ ಮೇಲೂ ಬಿಡದೆ ೪೫ ಸೆಕುಂಡ ವರೆಗೆ ಬಾಂಬು ಸುರಿಸಿದರು. ಹುಲ್ಲಿನ ಗುಡಿಸಲು ಉರ್ಧಿದು ಹೋದವು; ಜಿಂಕ್ ತಗಡುಗಳು ಉಂಡೆಗಟ್ಟಿದವು. ಶತ್ರುಗಳ ಐದು ವಿಮಾನಗಳೇನೋ ಉರುಳಿದವು; ಓಡಿ ಹೋದ ವಿಮಾನಗಳಂತೂ ತಿರುಗಿ ಬರುವ ಹಾಗಿಲ್ಲ. ಆದರೆ ಇದರಿಂದ ಫೇಣಿಯ ಜನರಿಗಾದ ಕಷ್ಟ ನಷ್ಟಗಳು, ಸಂಕಟ ಸಂತಾಪಗಳು ಕಡಿಮೆಯಾಗುವ ಹಾಗೂ ಇಲ್ಲ. ಅನೇಕರು ಗಾಯಗೊಂಡರು; ಕಟ್ಟಡಗಳಲ್ಲಿದ್ದವರು ನರಳಿ ಸಾಕಸ್ಕೀಡಾದರು; ಆದರೂ ಜನರು ಧೈರ್ಯದಿಂದ ಎಲ್ಲವನ್ನು ಸಹಿಸಿಕೊಂಡರು! ಧಾಳಿಯಿಂದ ಮುಖ್ಯ ಮುಖ್ಯ ಬೀದಿಗಳಲ್ಲೆಲ್ಲಾ ಉರಿ ಹಬ್ಬಿತು. ಉರಿಯನ್ನು ನಂದಿಸುವ ಕೆಲಸವೇನೋ ಭರದಿಂದ ಸಾಗುತಿತ್ತು. ಓರ್ವ ಆಸ್ಟ್ರೇಲಿಯನ್ ವೈಮಾನಿಕನ ಮುಂದಾಳುತನದಲ್ಲಿ ಈ ಪ್ರಯತ್ನ ಭರದಿಂದ ನಡೆಯಿತು. ಬೆಂಕಿಗೆ ಬೇಗೆಗೊಂಡವರನ್ನು ಉಪಚರಿಸುವ ಕೆಲಸವೂ ಆಯಿತು. ಆದರೆ ಫೇಣಿಗೆ ಕಲ್ಕತ್ತಾ ಮೆಡಿಕಲ್ ಆಸ್ಪತ್ರೆಯಿಂದ ಕಳುಹಿಸಲ್ಪಟ್ಟ ಡಾ| ರವೀಂದ್ರ ಚಟರ್ಜಿಯವರೂ ಗಾಯಗೊಂಡದ್ದರಿಂದ ಅವರ ಸೇವೆಯೇನೂ ಗಾಯಗೊಂಡವರಿಗೆ ದೊರಕದಂತಾಯಿತು. ಬಾಂಬಿನ ಸಿಡಿತವಾದಾಗ ಎಷ್ಟೋ ಎದೆಗುಂದಿದ್ದರು. ರಕ್ತದ ಅಭಾವವೇ ಇದರ ಕಾರಣವೆಂದು ತಿಳಿಯುತ್ತದೆ. ಪಾಪ ಬಡ ಭಾರತೀಯರ ಮೈಯಲ್ಲಿ ಈಗ ರಕ್ತವೆಲ್ಲಿದೆ? ಆದರೂ ರಕ್ತ ಕಡಿಮೆ ಇದ್ದವರ ಮೈಗೆ ರಕ್ತ ತುಂಬಿಸುವ ಬಗ್ಗೆ ಧಾಳಿಯಾದ ನಂತರ, ರಕ್ತದ ಗಟ್ಟಿಯನ್ನು (ಬ್ಲಡ್ ಬೇಂಕ್‌ಗಳಿಂದ) ವಿಮಾನ ಮೂಲಕ ಅಲ್ಲಿಗೆ ತರಲಾಯಿತು! ಕೇವಲ ೪೫ ಸೆಕುಂಡಿನ ಬಾಂಬಿನ ಮಳೆಗೆ ಜನರು ಹೀಗೆ ತತ್ತರಿಸಿ ಹೋದರೂ, ಯಾರೂ ಎದೆಗುಂದಲಿಲ್ಲ. ಮಿತ್ರರ ಅಂತ್ಯ ವಿಜಯದ ಬಗ್ಗೆ ವಿಶ್ವಾಸ ಯಾರೂ ಬಿಟ್ಟು ಬಿಡಲೇ ಇಲ್ಲ!

ಸದ್ಯದ ಸುದ್ದಿಗಳು

ಜರ್ಮನರು ಸದ್ಯ ಟ್ಯುನಿಸಿಯದಲ್ಲಿ ಪ್ರಬಲ ಪ್ರತಿಭಟನೆ ಕೊಡುತ್ತಿದ್ದಾರೆ. ಉತ್ತರ ಟ್ಯುನಿಸಿಯದಲ್ಲಿ ೧೦ ದಿನಗಳ ವರೆಗೆ ಘೋರ ಕಾಳಗವಾಯಿತು. ಈ ಯುದ್ಧದ ಅಂತ್ಯದಲ್ಲಿ ಅಮೆರಿಕನ್ ದಳಗಳು ಯಶಸ್ವಿಯಾಗಿ ಮುನ್ನುಗ್ಗಿದವು. ಜರ್ಮನರು ಹೀಗಾಗಿ ತಮ್ಮ ಮುಂಬಾಗದ ಠಾಣ್ಯಗಳನ್ನು ಖಾಲಿ ಮಾಡಬೇಕಾಗಿ ಬಂದಿದೆಯೆಂದು ತಿಳಿದುಬರುತ್ತದೆ. ಅಮೆರಿಕನ್ ದಳವು ಮೆಟೂರ್ ಪಟ್ಟಣವನ್ನು ಹಿಡಿದಿರುವುದರಿಂದ, ಉತ್ತರ ಟ್ಯುನಿಸಿಯದ ಗುಡ್ಡಗಾಡು ಪ್ರದೇಶದಲ್ಲಿರುವ ಜರ್ಮನರ ವ್ಯೂಹವನ್ನು ಭೇದಿಸಿದಂತಾಗಿದೆ. ಆದರಿಂದ ಬಿಜರ್ಟಾ ಟ್ಯುನಿಸಗಳ ಗಂಡಾಂತರವೂ ಹೆಚ್ಚಿದೆ.

ಮಾಟಗನ್ ಎಂಬ ಭವನದಲ್ಲಿ ಹಿಟ್ಲರ್-ಮುಸಲಿನಿ-ಗೋರಿಂಗ್ ಹಾಗೂ ಲಾವಲರು ಭೇಟಿಯಾಗಿ ಬಹುಕಾಲ ಚರ್ಚೆ ನಡೆಸಿದರು. ಈ ಗುಪ್ತ ಚರ್ಚೆ ನಡೆಸಿ ಸಶಸ್ತ್ರ ಗಾಡಿಯಲ್ಲಿ ಹೋಗುತ್ತಿರುವಾಗ ಲಾವಲರನ್ನು ಯಾರೋ ಕೊಲ್ಲಲು ಪ್ರಯತ್ನಮಾಡಿ ಬಾಂಬು ಸ್ಫೋಟವಾಯಿತೆಂದೂ ಆದರೆ ಲಾವಲರಿಗೆ ಇದರಿಂದ ಹೆಚ್ಚಿನ ಗಾಯವಾಗಿರದೆ ಅವರ ಸೆಕ್ರೆಟರಿ ಫ್ಯಾಯರ್ ಕೆಥಲಾರಿಗೆ ಬಲವಾದ ಪೆಟ್ಟಾಗಿದೆಯೆಂದೂ ಒಂದು ದಟ್ಟ ಸುದ್ದಿ ಹಬ್ಬಿದೆ. ಇತ್ತೀಚೆಗೆ ಈ ಸುದ್ದಿ ನಿರಾಧಾರವಾದುದೆಂದೂ ಸಾರಲಾಗಿದೆ.

ಗುಡಲಕನಾರದ ಈಶಾನ್ಯಕ್ಕಿರುವ ರಸೆಲ್ ದ್ವೀಪಗಳಲ್ಲಿ ಅಮೆರಿಕನ್ ಸೈನ್ಯಗಳು ಬಂದು ತಳವೂರಿವೆಯೆಂದು ನೌಕಾ ಪ್ರಕಟಣೆಯೊಂದು ಸಾರುತ್ತದೆ. ರಸೆಲ್ ದ್ವೀಪಗಳು ಗುಡಲಕನಾರದಿಂದ ಕೇವಲ ಮೂವತ್ತು ಮೈಲು ದೂರವಿರುವುದರಿಂದ ಅಮೆರಿಕನ್ ಸೈನ್ಯಗಳು ನ್ಯೂಜಾರ್ಜಿಯಾದ ಮುಂಡಾಕೇಂದ್ರದಿಂದ ೧೨೦ ಮೈಲು ಬಂದಂತಾಯಿತು. ಉತ್ತರ ಶಾಂತಿ ಸಾಗರದಲ್ಲಿ ಕಿಸ್ಕಾ ಬಂದರದ ಮೇಲೂ ಅಮೆರಿಕನ್ ವಿಮಾನಗಳು ದಾಳಿ ಮಾಡುತ್ತಿವೆ.

ಅರಕಾನದಿಂದ ಸದ್ಯ ಬಂದ ಸುದ್ದಿಯಂತೆ, ಅಲ್ಲಿ ಜಪಾನರ ಚಟುವಟಿಕೆ ಇನ್ನೂ ಹೆಚ್ಚುತ್ತಲೇ ಇದೆ. ಮಾಂಗಡಾ ಬಾಥಡಾಂ ಮತ್ತು ಬಾಲಿಬಜಾರಗಳ ಮೇಲೆ ಪುನಃ ಪುನಃ ಜಪಾನರು ಬಾಂಬೆಸೆಯುತ್ತಿದ್ದಾರೆ. ಮಾಯೂ ನದಿಯಿಂದ ಬಂಗಾಳ ಉಪಸಾಗರದ ವರೆಗೆ ಬ್ರಿಟಿಷರ ಗಸ್ತಿ ಚಟುವಟಿಕೆ ಬಲವಾಗಿದೆ. ಈ ಗಸ್ತಿ ದಲದವರಿಗೂ ಜಪಾನರಿಗೂ ಆಗಾಗ ಹೊಯ್ಕೈ ಆಗುತ್ತದೆ.

ಹಂಗೇರಿ ಸರಕಾರದವರು ತಮ್ಮ ಪಾರ್ಲಿಮೆಂಟಿನ ಕೆಳೆಮನೆಯನ್ನು ರದ್ದು ಮಾಡಬೇಕೆಂದು ನಿರ್ಧರಿಸಿದ್ದರಿಂದ ಈಗ ಅಲ್ಲಿ ರಾಜಕೀಯ ಬಿಕ್ಕಟ್ಟುಂಟಾಗಿದೆ. ಸರಕಾರೀ ಪಕ್ಷದವರು ವಿರೋಧ ಪಕ್ಷದವರನ್ನು ಮುರಿಯಲು ಅವರಿಗೆ ಚರ್ಚೆ ಮಾಡಲು ಆಸ್ಪದವಿರದಂತೆ ಮಾಡಲೆ ಈ ನಿರ್ಧಾರ ಮಾಡಿರುವರು.

ಕುಬಾನ್ ವ್ಯೂಹದಲ್ಲಿ ನೊವೊರೆಸಿಸ್ಕ್ ಬೆಟ್ಟದಿಂದ ಕುಬಾನ್ ತಪ್ಪಲ ವರೆಗೆ ರಶ್ಯನ್ ಸೇನೆಗಳು ಜೀವದ ಹಂಗು ತೊರೆದು ಹೋರಾಡುತ್ತವೆ.

ಸ್ವದೇಶಾಭಿಮಾನಿ

ತಾರೀಖು 7—5—1943

ಹೊಸ 'ಆರ್ಡಿನೆನ್ಸು'

ಇಂಡಿಯಾ ಡಿಫೆನ್ಸ್ ಆಕ್ಟಿನ ೨೬ನೇ ನಿಯಮವು ನ್ಯಾಯಬಾಹಿರವೆಂದು ಭಾರತದ ಉನ್ನತ ನ್ಯಾಯಸ್ಥಾನವಾದ ಫೆಡರಲ್ ಕೋರ್ಟಿನ ನ್ಯಾಯಾಧೀಶ ಸರ್ ಮೋರಿಸ್ ಗ್ವಾಯರರು ಸಾರಿದರಷ್ಟೇ? ಹೀಗಾಗಿ ಸರಕಾರದವರು, ಆ ನಿಯಮದನ್ವಯ ಬಂಧಿಸಿದ ಎಲ್ಲರನ್ನೂ ಬಿಡುಗಡೆ ಮಾಡಬೇಕಾದ ಸಂದರ್ಭ ಬಂದದ್ದನ್ನು ತಪ್ಪಿಸಲು, ಈಗ ಹೊಸ 'ಆರ್ಡಿನೆನ್ಸು'ಒಂದನ್ನು ಗವರ್ನರ್ ಜನರಲರು ಹೊರಡಿಸಿದ್ದಾರೆ.

ಈ ಆರ್ಡಿನೆನ್ಸು ಪ್ರಕಾರ, ಡಿಫೆನ್ಸ್ ಓಫ್ ಇಂಡಿಯಾ ಏಕ್ಟಿನ ೨೬ನೇ ನಿಯಮದನ್ವಯ ಬಂಧಿತರಾದವರನ್ನು ಬಿಡುಗಡೆ ಮಾಡುವುದು ಅವಶ್ಯವಿರದೆ ಅವರು ಇನ್ನೂ ಬಂಧಿತರಾಗಿಯೇ ಇರಬೇಕಾಗಿದೆ ಮಾತ್ರವಲ್ಲದೆ ಇನ್ನೂ ಇಂತೆಯೇ ಹಲವರನ್ನು ಬಂಧನಕ್ಕೆ ಸೇರಿಸಲು ಅಧಿಕಾರ ಕೊಡಲ್ಪಟ್ಟಿದೆ.

ಆದರೆ ಈ ಹೊಸ ಆರ್ಡಿನನ್ಸಾದರೂ ನ್ಯಾಯಸಮ್ಮತವಿದೆಯೇ ಎಂಬ ಬಗ್ಗೆ ಹಲವು ನ್ಯಾಯಸ್ಥಾನಗಳಲ್ಲೀಗ ವಾದವಿವಾದಗಳುಂಟಾಗಿವೆ. ಹೊಸ ಆರ್ಡಿನೆನ್ಸನ್ನು ಹೀಗೆ ಜಾರಿಗೆ ತರಲು ಗವರ್ನರ್ ಜನರಲರಿಗೆ ಅಧಿಕಾರವಿದೆಯೇ ಎಂಬ ಬಗ್ಗೆ ಪ್ರಶ್ನೆಗಳನ್ನು ನ್ಯಾಯ ಶಾಸ್ತ್ರಜ್ಞರು ಕೇಳುತ್ತಿದ್ದಾರೆ.

ಯಾವುದೇ ಆರ್ಡಿನೆನ್ಸಿಗಾದರೂ ಕೇವಲ ಆರು ತಿಂಗಳದೇ ಅಧಿಕಾರವಿರುತ್ತಾ ಆ ಆರ್ಡಿನೆನ್ಸು ಮತ್ತೂ ಮುಂದುವರಿಯಬೇಕಾದರೆ ಶಾಸನಸಭೆ ಅದನ್ನು ಮಂಜೂರು ಮಾಡಬೇಕು. ಹೀಗಿರಲು ಹಿಂದಿನ 'ಆರ್ಡಿನೆನ್ಸ'ನ್ನು ಈಗ ಹೊಸ 'ಆರ್ಡಿನೆನ್ಸಿನಿಂದ ಮುಂದುವರಿಸುವಲ್ಲಿ ಗವರ್ನರ್ ಜನರಲರು ಶಾಸನ ಸಭೆಯ ಅಧಿಕಾರವನ್ನು ತಾವೇ ತಮ್ಮ ಕೈಗೆ ತೆಗೆದುಕೊಂಡ ಹಾಗಾಗುವುದಿಲ್ಲವೆ? ಇಂಥಾ ಅಧಿಕಾರವು ಗವರ್ನರ ಜನರಲರಿಗೆಕೊಡಲ್ಪಟ್ಟಿದೆಯೇ ಎಂಬುದೊಂದು ಪ್ರಶ್ನೆ.

ಭಾರತದ ಮುಖ್ಯ ನ್ಯಾಯಸ್ಥಾನದ ಮುಖ್ಯ ನ್ಯಾಯಾಧೀಶರ ತೀರ್ಮಾನದಂತೆ, ನ್ಯಾಯ ಬಾಹಿರವಾದ ೨೬ನೇ ನಿಯಮದಂತೆ ಬಂಧಿತರಾದವರಿಗೆ ಒಮ್ಮೆ ಬಿಡುಗಡೆಯಾಗಲು ಆಸ್ಪದವಿರುತ್ತಾ, ಹೀಗೆ ಹೊಸ 'ಆರ್ಡಿನೆನ್ಸನ್ನು' ತಂದು, ಪ್ರಜೆಗಳಿಗೆ ಸಿಗಬೇಕಾದ ಒಂದು ನ್ಯಾಯಕ್ಕೆ ಈ ರೀತಿ ಆತಂಕ ತಂದದ್ದು ಕಾನೂನು ಸಮ್ಮತವೇ ಎಂಬುದು ಇನ್ನೊಂದು ಪ್ರಶ್ನೆ.

ಫೆಡರಲ್ ಕೋರ್ಟಿನ ತೀರ್ಮಾನವನ್ನು ನಿಷ್ಪ್ರಯೋಜಕಮಾಡುವಂತೆ ಹೀಗೆ 'ಆರ್ಡಿನೆನ್ಸು' ಹೊರಡಿಸಬಹುದಾದರೆ ಫೆಡರಲ್ ಕೋರ್ಟಿನ ತೀರ್ಮಾನಕ್ಕೆ ಎಷ್ಟರಮಟ್ಟಿಗೆ ಬಹುಮಾನ ಕೊಟ್ಟ ಹಾಗಾಯಿತು ಎಂಬುದು ಮತ್ತೊಂದು ವಾದ. ಹೀಗೆ ಹಲವು ಕಾರಣಗಳಿಂದ ಈಗ ಹೊರಡಿಸಿದ ಹೊಸ 'ಆರ್ಡಿನೆನ್ಸು' ದರೂ ನ್ಯಾಯಸಮ್ಮತವೇ ಎಂಬ ಕುರಿತು ದೇಶದ ಉದ್ದಗಲದಲ್ಲಿ ಬಹಳ ವಾದವಿವಾದಗಳುಂಟಾಗಿವೆ.

ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧಿಪತಿ ಸರ್ ಮೋರಿಸ್ ಗ್ವಾಯರು ತಮ್ಮ ತೀರ್ಮಾನದ ಪರಿಣಾಮವಾಗಿ ಏನನ್ನು ಇಚ್ಛಿಸಿದ್ದರೋ, ಅದು ಇಂದಿನ ಹೊಸ 'ಆರ್ಡಿನೆನ್ಸಿ'ನಿಂದ ಫಲಿಸಲಿಲ್ಲವೆಂಬುದು ಅನೇಕರ ಟೀಕೆಯಾಗಿದೆ. ಸರ್ ಗ್ವಾಯರರಿಂದು ನ್ಯಾಯಾಧಿಪತಿ ಉದ್ಯೋಗದಿಂದ ನಿವೃತ್ತರಾಗಿರುವರು; ಆದರೆ ಅವರ ಅನಂತರದ ನ್ಯಾಯಾಧಿಪತಿಗಳು ಈ ಹೊಸ 'ಆರ್ಡಿನೆನ್ಸಿ'ನ ಕುರಿತು ಯಾರ ತೀರ್ಪು ಕೊಡುವರೋ ನೋಡಬೇಕು.

ಬಂಗಾರದ ಬೆಲೆ

ಬಂಗಾರದ ಬೆಲೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದನ್ನು ನಾವೀಗ ನೋಡುತ್ತೇವೆ. ಇದರ ಕಾರಣವೇನೆಂಬುದರ ಕುರಿತು ಅರ್ಥ ಶಾಸ್ತ್ರಜ್ಞರಲ್ಲಿ ತೀವ್ರ ಚರ್ಚೆಗಳಾಗುತ್ತಿವೆ.

ಯುದ್ಧ ನಿಮಿತ್ತ, ಕೆಲವು ಜನರಲ್ಲಿ, ಎಂದರೆ ಯಾರ ಸಾಮಾನುಗಳಿಗೆ ಯುದ್ಧದ ಗಿರಾಕಿ ಹೆಚ್ಚಿದೆಯೋ, ಅಂಥವರಲ್ಲಿ, ಹಣ ಎಂದರೆ ಕಾಗದದ ರೂಪಾಯಿಗಳು ಹೆಚ್ಚಾಗಿದ್ದು ಇಂದಿನ ವಿಷಮ ಪರಿಸ್ಥಿತಿಯಲ್ಲಿ ತಮ್ಮ ದ್ರವ್ಯವನ್ನು ಬಂಗಾರ ರೂಪದಲ್ಲಾದರೂ ಮಾರ್ಪಡಿಸಿ ಭದ್ರತೆಯಲ್ಲಿಡುವುದು ಅವಶ್ಯವೆಂದು ಅವರು ಗ್ರಹಿಸುವುದು ಮುಖ್ಯವಾದ ಇದರ ಒಂದು ಕಾರಣವಾಗಿದೆ.

ಇತ್ತೀಚೆಗೆ ಯುದ್ಧಾನಂತರದ ಆರ್ಥಿಕ ವ್ಯವಸ್ಥೆಯ ಕುರಿತು ಪ್ರಕಟವಾದ ಆಂಗ್ಲ-ಅಮೆರಿಕ ಯೋಜನೆಗಳಲ್ಲಿ ಬಂಗಾರಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ವಿಚಾರಿಸಿ; ಜನರು, ಮುಂದಿನ ತಮ್ಮ ಭವಿಷ್ಯವು ಬಂಗಾರದ ಮೇಲೆ ಹೊಂದಿಕೊಂಡಿದೆಯೆಂದು ಅರ್ಥಮಾಡಿಕೊಂಡು ಈಗ ಅದನ್ನು ಪಡಕೊಳ್ಳುವುದೂ ಒಂದು ಕಾರಣವೆನಬೇಕು!

ನೋಟುಗಳ ಚಲಾವಣೆಯನ್ನು ಸರಕಾರವು ದಿನ ದಿನಕ್ಕೆ ಹೆಚ್ಚು ಮಾಡಿದ್ದರ ಪರಿಣಾಮವಾಗಿ ಜನರಿಗೆ ಇಂದಿನ ಕಾಗದ ರೂಪಾಯಿಯ ಬೆಲೆಯ ಕುರಿತು ಉಂಟಾದ ಸಂಶಯವೂ ಮೂರನೆಯ ಕಾರಣವೆನ್ನಬಹುದು.

ಒಟ್ಟಿನಿಂದ ಹೇಳುವುದಿದ್ದರೆ ಬಂಗಾರಕ್ಕೆ ಹೇಗೆ ಮೇಲೆ ಮೇಲೆ ಕ್ರಯ ಏರುತ್ತಾ ಹೋಗುವುದೋ, ಹಾಗೆ ರೂಪಾಯಿಯ ಬೆಲೆ ತಗ್ಗುತ್ತಾ ಬರುತ್ತಿದೆಯೆಂದು ನಾವು ತಿಳಕೊಳ್ಳಬಹುದು.

ಹೀಗೆ ರಾಷ್ಟ್ರದ ಹಾಗೂ ಅಂತರ್ರಾಷ್ಟ್ರದ ರಾಜಕೀಯ ಆರ್ಥಿಕ ಅವ್ಯವಸ್ಥೆಯೇ ಇಂದು ಬಂಗಾರಗಳಿಗೆ, ಈ ರೀತಿ ಬೆಲೆ ಹೆಚ್ಚಲು ಕಾರಣವಾಗಿದೆ.

ಯುದ್ಧದ ನಿಮಿತ್ತವಾಗಿ ಇಂದು ಬಂಗಾರಕ್ಕೆ ಬೆಲೆ ಹೆಚ್ಚಿದೆ; ಇದಕ್ಕೆ ಮಾತ್ರವಲ್ಲ ಇನ್ನೂ ಅನೇಕ ಪದಾರ್ಥಗಳಿಗೂ ಹೀಗೆಯೇ ಹೆಚ್ಚುತ್ತಿದೆ. ಯುದ್ಧದ ನಿಷ್ಕರ್ಷೆಯೊಡನೆ ಇವೆಲ್ಲವುಗಳ ಬೆಲೆಯೂ ಸಮತೂಕವಾಗಬಹುದು.

ಸ್ವದೇಶ ಸಮಾಚಾರ

ಸುಲ್ತಾನಪುರ ದೊಂಬಿ!

೩ ಜನರಿಗೆ ಮರಣದಂಡನೆ

ಆಗಸ್ಟ್ ತಿಂಗಳಲ್ಲಿ ಸುಲ್ತಾನಪುರದ ಸಬ್ ಇನ್‌ಸ್ಪೆಕ್ಟರರನ್ನು ಕೊಂಡ ಆರೋಪದ ಖಟ್ಲೆಯಲ್ಲಿ ಫೈಜಾಬಾದದ ಸ್ಪೆಶಲ್ ಜಡ್ಜರು ಇಬ್ಬರಿಗೆ ಮರಣದಂಡನೆಯನ್ನು ವಿಧಿಸಿ, ಉಳಿದ ೨೬ ಮಂದಿಗಳನ್ನು ಬಿಡುಗಡೆ ಮಾಡಿರುವರು.

ಕೆನೆಡಿಯನ್ ಕೊಲೆ ಖಟ್ಲೆ

ಬಿಹಾರ ಪ್ರಾಂತದಲ್ಲಿ ಕೆನೆಡಿಯನ್‌ನೊಬ್ಬನ ಕೊಲೆ ಮಾಡಿದ ಖಟ್ಲೆಯಲ್ಲಿ ಹೈಕೋರ್ಟಿನವರು ಒಬ್ಬನ ಮರಣದಂಡನೆ ಶಿಕ್ಷೆಯನ್ನು ರದ್ದುಪಡಿಸಿ ಏಳು ಮಂದಿಯ ಮರಣದಂಡನೆ ಶಿಕ್ಷೆಯನ್ನು ಸ್ಥಿರಗೊಳಿಸಿದರು. ಮತ್ತಿಬ್ಬರ ಜೀವಾವಧಿ ಶಿಕ್ಷೆಯು ಸ್ಥಿರವಾಯಿತು.

ಐ. ಸಿ. ಎಸ್. ಅಧಿಕಾರಿ ರಾಜಿನಾಮೆ

ಐ. ಸಿ. ಎಸ್. ಅಧಿಕಾರಿಯಾಗಿರುವ ನಾಗಪುರದ ಶ್ರೀ. ಆರ್. ಕೆ. ಪಾಟೀಲರು ತಮ್ಮ ಕೆಲಸಕ್ಕೆ ರಾಜಿನಾಮೆಯಿತ್ತಿದ್ದಾರೆ. ಇವರು ೧೨ ವರ್ಷ ಸರ್ವಿಸು ಮಾಡಿರುವರು.

ಕಟಕ್ಕಿನಲ್ಲಿ ವಿಮಾನಧಾಳಿ ಎಚ್ಚರಿಕೆ

ಗಲನೇ ಎಪ್ರಿಲ್ ಕಟಕಿನಲ್ಲಿ ಶತ್ರುವಿಮಾನದ ಭೀತಿ ತೋರಿ, ವಿಮಾನಧಾಳಿಯ ಎಚ್ಚರಿಕೆ ಕೊಡಲಾಗಿತ್ತು.

ಹಕ್ಕರು ಬಾಯಿ ಬಿಡುತ್ತಾರೆ

ಬಂಗಾಳದ ಹಿಂದಿನ ಪ್ರಧಾನಮಂತ್ರಿ ಫಜುಲುಲ್ ಹಕ್ಕರು ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ, ಗವರ್ನರರಿಗೂ ತಮಗೂ ಇತ್ತೀಚೆಗೆ ದಿನಂಪ್ರತಿ ಜಗಳಗಳಾಗುತ್ತಿದ್ದ ವಿಷಯ ಬಹಿರಂಗಪಡಿಸಿದ್ದಾರೆ. ಡಾಕಾ ಜೈಲಿನಲ್ಲಿ ಗುಂಡು ಹಾರಿಸಿದ ವಿಷಯ ವಿಚಾರಣೆ ನಡೆಸಬೇಕೆಂದು ತಾನು ಹೇಳಿದ್ದೇನೆಂದೂ, ಗವರ್ನರರು ಅದಕ್ಕೊಪ್ಪಲಿಲ್ಲೆಂದೂ, ಮಿಡ್ನಾಪುರದ ದುರಂತದಲ್ಲಿ ಕೆಲವು ಸರಕಾರೀ ನೌಕರರ ಕೃತ್ಯಗಳನ್ನು ಕುರಿತು ವಿಚಾರಿಸಬೇಕೆಂದು ತಾನು ಕೇಳಿದ್ದಕ್ಕೂ ಗವರ್ನರರೊಪ್ಪಲಿಲ್ಲವೆಂದೂ ಅವರು ಹೇಳಿದರು.

ಶಿಕ್ಷಿಸುವ ಅಧಿಕಾರವಿಲ್ಲ!

'ಕಾಂಗ್ರೆಸಿನ ತೊಣೆ' ಎಂಬ ಪುಸ್ತಕವನ್ನು ಪ್ರಕಟಿಸಿ, ಕೋರ್ಟು ಅಪಮಾನ ಮಾಡಿದರೆಂದು, ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿ ಜಗತ್ ನಾರಾಯಣ ಲಾಲರ ಪರವಾಗಿ, ಸರ್ ಟ್ಯಾಟನ್ ಹೇಮರ ಮೇಲೆ ಮಾಡಿದ್ದ ಅರ್ಜಿಯನ್ನು ಸ್ಪೆಶಲ್ ನ್ಯಾಯಾಧೀಶರು ತೆಗೆದುಹಾಕಿ, ಸರ್ ಟ್ಯಾಟನ್ ಹೇಮರನ್ನು ಶಿಕ್ಷಿಸುವ ಅಧಿಕಾರ ಈ ಕೋರ್ಟಿಗಿಲ್ಲವೆಂದರು!

ರಾ. ಶ್ರೀ. ಹುಕ್ಕೇರಿಕರರ ಬಂಧನ

ಬೊಂಬಯಿಯಲ್ಲಿ

ಕರ್ನಾಟಕ ಕಾಂಗ್ರೆಸ್ ಮುಂದಾಳುಗಳಲ್ಲೊಬ್ಬರೂ, ಕ. ಪ್ರಾಂ. ಕಾಂ. ಕಮಿಟಿಯ ಹಿಂದಿನ ಕಾರ್ಯದರ್ಶಿಗಳೂ ಆದ ಶ್ರೀ. ರಾ. ಶ್ರೀ. ಹುಕ್ಕೇರಿಕರರನ್ನು ಬೊಂಬಯಿಯಲ್ಲಿ ಬಂಧಿಸಿರುವರೆಂದು ತಿಳಿಯುತ್ತದೆ. ಇವರನ್ನು ಹಿಡಿದು ಕೊಟ್ಟವರಿಗೆ ಸರಕಾರವು ೫೦೦ ರೂ. ಇನಾಮು ಕೊಡುವುದಾಗಿ ಸಾರಿತ್ತು. ರೂ. ೧೦೦೦ ಇನಾಮು ಕೊಡುವುದಾಗಿ ಸಾರಿದ ಶ್ರೀ. ಕರಮಕರರನ್ನು ಕಳೆದ ವಾರ ಬಂಧಿಸಿದ್ದರು.

ವೈಸರಾಯ್ ಮಂತ್ರಿಮಂಡಳದ

ಹೊಸ ಸದಸ್ಯರು

ವೈಸರಾಯರ ಮಂತ್ರಿಮಂಡಳದಲ್ಲೀಗ ಈ ಹೊಸ ಸದಸ್ಯರು ಸೇರಿದ್ದಾರೆ. ಸರ್ ಎ. ರಾಮಸ್ವಾಮಿ ಮುದಲಿಯಾರರು ಸಪ್ಲೈ ಖಾತೆಗೆ, ಈಗ ಲಂಡನಿನಲ್ಲಿ ಹೈ ಕಮಿಶನರಾಗಿರುವ ಸರ್ ಅಜೀಜುಲ್ ಹಕ್ಕರು ವಾಣಿಜ್ಯಮಂತ್ರಿ, ಬ್ರಾಡಕಾಸ್ಟಿಂಗ್ ಮತ್ತು ಇನ್‌ಫೋರ್ಮೇಶನ್ ಖಾತೆಗೆ ಸರ್ ಸುಲ್ತಾನ್ ಅಹಮ್ಮದ್, ಸರ್ ಅಶೋಕ ಕುಮಾರ ರಾಯ್ ನ್ಯಾಯಮಂತ್ರಿ, ಆಣೆಯವರ ಸ್ಥಾನದಲ್ಲಿ ಮಧ್ಯಪ್ರಾಂತದ ನ...

ಕಿ ಶಿಸ್ತು ವಿರೋಧಕ ಕಾಂಗ್ರೆಸ್ ಪ್ರಧಾನಮಂತ್ರಿ ಡಾ. ಖಾರೆ ಇವರು ನೇಮಿಸಲ್ಪಟ್ಟಿರುವರು

'ಅಮೆರಿಗೆ ಭವಿಷ್ಯವಿಲ್ಲ'

'ಯುದ್ಧಾನಂತರದ ಅಮೆರಿಯವರ ಧೋರಣವನ್ನು ನೋಡಿದರೆ ನಗುಬರುತ್ತದೆ. ತಮ್ಮ ರಾಜ್ಯಕ್ಕೇ ಮುಂದಿನ ಜಗತ್ತಿನಲ್ಲಿ ಸ್ಥಾನ ದೊರೆಯಬೇಕೆಂದು ಅವರು ಆಶಿಸಿದ್ದಾರೆ. ಇಂಥ ಸ್ವಾರ್ಥಬುದ್ಧಿಯವರಿಗೆ ಮುಂದಿನ ಜಗತ್ತಿನಲ್ಲಿ ಸ್ಥಾನವಿಲ್ಲ. ಅಂತರ್ರಾಷ್ಟ್ರೀಯ ಹಿತಕ್ಕಾಗಿ ಕಷ್ಟ ಣಗಾಡುವವರು ಮಾತ್ರ ಮುಂದಿನ ಜಗತ್ತಿನ ಮುಂದಾಳುಗಳಾಗುವವರು. ಅಮೆರಿಯಂಥವರಿಂದ ಜಗತ್ತನ್ನು ರಕ್ಷಿಸುವುದು ಸಾಧ್ಯವಿಲ್ಲ' ಹೀಗೆಂದು ಡೈಲಿ ಹೆರಾಲ್ಡ್ ಟೀಕಿಸುತ್ತದೆ.

'ನಮ್ಮ ಗಡಿನಾಡಿನಲ್ಲಿ ನಿಮ್ಮ ಬೇಳೆ ಬೇಯದು'

ಜಿನ್ನರಿಗೆ ಖಾನ್ ಸಾಹೇಬರ ಉತ್ತರ

'ಗಡಿನಾಡಿನಲ್ಲಿ ಲೀಗಿನ ಪ್ರಭಾವ ಹೆಚ್ಚಿದೆಯೆಂದು ಜಿನ್ನಾ ಕೂಗುತ್ತಾರೆ. ನಾವು ಜಿನ್ನರನ್ನು ಗಡಿನಾಡಿಗೆ ಆಮಂತ್ರಿಸುತ್ತೇವೆ. ಬಂದು ನೋಡಲಿ, ಇಲ್ಲಿ ಲೀಗಿನ ಪ್ರಭಾವ ಹೆಚ್ಚಿದೆಯೇ ಎಂದು' ಹೀಗೆಂದು ಡಾ. ಖಾನ್‌ಸಾಹೇಬರು ಜಿನ್ನರಿಗೆ ಮಾರ್ನುಡಿದಿರುವರು. ಸರದಾರ್ ಔರಂಗಜೇಬರು ಜಿನ್ನರ ಬೆಂಬಲದಿಂದ ಗಡಿನಾಡಿನಲ್ಲಿ ಮಂತ್ರಿಮಂಡಳವೊಂದನ್ನು ಸ್ಥಾಪಿಸಲು ಪ್ರಯತ್ನಮಾಡುತ್ತಿರುವರು.

ಐದು ಮಂದಿ ಉಮೇದ್ವಾರರು

ಶ್ರೀ. ಎಸ್. ಸತ್ಯಮೂರ್ತಿಯವರು ದಿವಂಗತರಾಗಿ ಖಾಲಿಬಿದ್ದ ಕೇಂದ್ರ ಎಸೆಂಬ್ಲಿಯ ಸದಸ್ಯಸ್ಥಾನಕ್ಕೆ ಮದ್ರಾಸಿನಿಂದ ಐದುಮಂದಿ ಉಮೇದ್ವಾರರು ಮುಂದೆ ಬಂದಿದ್ದಾರೆ. ಶ್ರೀ. ಜಿ. ರಂಗಯ್ಯ ನಾಯ್ಡುರವರು ಕಾಂಗ್ರೆಸಿನ ಪರವಾಗಿಯೂ, ಶ್ರೀ. ಟಿ. ಸುಂದರರಾವ್ ನಾಯ್ಡುರವರು 'ಜಸ್ಟೀಸ್‌ಪಾರ್ಟಿ' ಪರವಾಗಿಯೂ ಉಮೇದುವಾರರಾಗಿರುವರು.

ಹತ್ತಿಯ ಕಂಟ್ರಾಕ್ಟುಗಳು

'ಹತ್ತಿಯ ಹೊಸ ಫಸಲಿನ ಮೇಲೆ ಆದರಿಸಿಕೊಂಡು ಮುಂದೆ ಕಂಟ್ರಾಕ್ಟ್ ನಡೆಸುವವರು ಹಾಗೆ ಮಾಡಕೂಡದೆಂದು ಸರಕಾರದ ಅಪ್ಪಣೆಯಾಗಿದೆ. ಈ ಅಪ್ಪಣೆಯ ಮೇರೆಗೆ ಹತ್ತಿಯನ್ನು ಕೊಳ್ಳುವ ಅಥವಾ ಮಾರುವ ಕಂಟ್ರಾಕ್ಟನ್ನು ಯಾರೂ ನಡೆಸಕೂಡದು.

ಹೂರ್ ಮುಖಂಡರ ಫಾಸಿ

ಪೀರ್ ಪಗಾರೋವಿನ ಬಲಗೈ ಬಂಟನಾಗಿದ್ದು ಹೂರ್ ಸೈನ್ಯದ ಸರ್ವ ಸೇನಾಪತಿ ಎಂದು ಹೇಳಿಕೊಳ್ಳುತ್ತ, ಹೂರ್ ಸರಕಾರದ ಹೆಸರಲ್ಲಿ ಜನಗಳಿಂದ ಬಲಾತ್ಕಾರವಾಗಿ ಹಣ ಸುಲಿಯುತ್ತಿದ್ದ ಮಾರ್ಯರ ಎಂಬಾತನನ್ನು ಈಚೆಗೆ ಹಿಡಿದು ಗಲ್ಲಿಗೇರಿಸಿದರೆಂದು ಸಿಂಧ್ ಪ್ರಾಂತದ ವಾರ್ತೆ.

ವೈಸರಾಯರ ಅಧಿಕಾರದ ಅವಧಿ

ಭಾರತದ ವೈಸರಾಯರ ಪದವಿಗೆ ಯೋಗ್ಯರಾದ ವ್ಯಕ್ತಿಗಳನ್ನು ಆರಿಸುವುದು ಸದ್ಯ ಪ್ರಯಾಸವಾಗಿರುವುದರಿಂದ ಲಾರ್ಡ್ ಲಿನ್‌ಲಿತ್‌ಗೋರವರ ಅಧಿಕಾರದ ಅವಧಿಯು ಹೆಚ್ಚಿಸಲ್ಪಡುವುದು ಸಂಭವನೀಯವಾಗಿದೆ.

ಬಂಗಾಳ

ಹೊಸ ಮಂತ್ರಿಮಂಡಲದಲ್ಲಿ

ಖ್ವಾಜಾ ಸರ್. ನಿಜಾಮುದ್ದೀನ್ (ಪ್ರಧಾನ ಮಂತ್ರಿ) ಶ್ರೀ. ಎಚ್. ಎಸ್. ಸುಹ್ರವರ್ದಿ, ಶ್ರೀ. ತಮಿಜುದ್ದೀನ್ ಅಹ್ಮದ್, ಶ್ರೀ. ಎಂ. ಎ. ಮುಜಿ ಮುದ್ದೀನ್ ಹೊಸ್ಸೆನ್, ಖ್ವಾಜಾ ಷಹಾಬುದ್ದೀನ್, ನವಾಬ್ ಮುಷ್ರಾಫ್ ಹೊಸ್ಸೇನ್ ಶ್ರೀ. ಟಿ. ಸಿ. ಗೋಸ್ವಾಮಿ; ಶ್ರೀ. ಬಿ. ಪ್ರಸನ್ನ ದೈನ್, ಶ್ರೀ. ತಾರಕನಾಥ ಮುಖರ್ಜಿ, ಶ್ರೀ. ಪುಳಿನ ಬಿಹಾರಿ ಮಲ್ಲಿಕ್, ಶ್ರೀ. ಜೋಗೇಂದ್ರನಾಥ ಮಂಡಲ್, ಶ್ರೀ. ಪ್ರೇಮಹರಿ ಬರ್ಮನ್ ಇವರು ಮಂತ್ರಿಗಳಾಗಿರುವರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರ ಸಭೆ

ತಾ. ೩ರಂದು ಸಂಜೆ ಚೇರ್‌ಮೇನ್ ಪುತ್ತೂರು ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಮಾರ್ಗಗಳಲ್ಲಿರುವ ದೀಪಗಳ ಸಲುವಾಗಿ ರೂ. ೩೦೦ನ್ನು ಖರ್ಚು ಮಾಡಲು ನಿರ್ಧಾರವಾಯಿತು. ಕೆಲ ಉಪಾಧ್ಯಾಯಿನಿಯರಿಗೆ ಮೊದಲು ಕೊಡುವುದಕ್ಕಿಂತ ಕಡಿಮೆ ಸಂಬಳ ಕೊಡಬಾರದೆಂದು ಕೆಲ ಕೌನ್ಸಿಲರು ವಾದಿಸಿದರು. ಭಗಿನೀ ಸಮಾಜಕ್ಕೆ ೬೦ಕ್ಕಿಂತ ಹೆಚ್ಚು ಧನಸಹಾಯ ಕೊಡುವ ವಿಷಯ ಬಹಳ ಚರ್ಚೆ ನಡೆಯಿತು. ಕೊನೆಗೆ ೬೦೦ ರೂ. ಕೊಡುವ ನಿರ್ಣಯವಾಯಿತು. ನಗರಸಭೆ ಎ. ಆರ್. ಪಿ.ಯವರಿಗೆ ಕೊಟ್ಟ ಲಾರಿಯನ್ನು ಮಾರ್ಗಕ್ಕೆ ನೀರು ಚಿಮುಕಿಸಲು ತಿರಿಗಿ ಕೊಡಲು ಅಸಾಧ್ಯವೆಂದು ಬಂದ ಉತ್ತರದ ಬಗ್ಗೆ, ಫಯರ್ ಸರ್ವಿಸ್ ಡೈರೆಕ್ಟರರನ್ನು ಕಾಣಲು ತಾನು ಕೌನ್ಸಿಲಿಗೆ ಸಹಾಯಮಾಡುವೆನೆಂದು ತಿಳಿಸಿದ ಫಯರ್ ಸರ್ವಿಸ್ ಇನ್ಸ್‌ಪೆಕ್ಟರರಿಗೆ ಕೌನ್ಸಿಲು ಸಹಾಯ ಕೊಡುವುದಾಗಿ ತೀರ್ಮಾನವಾಯಿತು.

ಅಕ್ಕಿ ಬಗ್ಗೆ ಅಂಗಡಿಗಳ ಜಪ್ತಿ ಅಧಿಕ ಕ್ರಯಕ್ಕೆ ಮಾರಾಟ ಮಾಡಿದ್ದಕ್ಕೆ!

ತಾ. ೩ರಂದು ಮಂಗಳೂರು ಡಿವಿಜನಲ್ ಆಫೀಸರ್ ಶ್ರೀ. ಬಿ. ಜೂಗಪ್ಪ ಇವರು ತಮ್ಮ ಸಿಬಂದಿ ಸಹಿತ ಮಂಗಳೂರಿನ ಹಲವು ಅಕ್ಕಿ ವ್ಯಾಪಾರಿಗಳ ಅಂಗಡಿಯನ್ನು ಜಪ್ತಿಮಾಡಿ ನಿಯಂತ್ರಿತ ಬೆಲೆಗಿಂತ ಅಧಿಕ ಕ್ರಯದಲ್ಲಿ ವಿಕ್ರಯವಾಗುತ್ತಿದ್ದ ಸಾವಿರಾರು ಅಕ್ಕಿ ಮುಡಿಗಳನ್ನು ಸ್ವಾಧೀನಪಡಿಸಿಕೊಂಡಿರುವರು. ಇತೀಚೆಗೆ ಅಂಗಡಿಗಾರರು ಸರಕಾರವು ಸ್ವಾಧೀನ (ರಿಕ್ವಿಸಿಶನ್) ಮಾಡಿದ ಅಕ್ಕಿ ಮುಗಿದಿದೆಯೆಂದು ಬೋರ್ಡು ಹಾಕಿ ವರ್ಗದಾರರ ಅಕ್ಕಿಯೆಂದು ರೂ. ೧೦-೮-೦ ಹಾಗೂ ಮಿಕ್ಕಿದ ಕ್ರಯದಲ್ಲಿ ಮಾರಾಟಮಾಡುತ್ತಿದ್ದರು. ಜಿಲ್ಲೆಯಲ್ಲಿ ಅಕ್ಕಿ ಕ್ರಯ ನಿಯಂತ್ರಣದ ಆಜ್ಞೆಯಲ್ಲಿ ಮೊದಲು ಕಲೆಕ್ಟರರು ಅಕ್ಕಿ ಭತ್ತಗಳನ್ನು 'ರಿಕ್ವಿಸಿಶನ್' ಮಾಡಿ, ಅವುಗಳಿಗೆ ಬೆಲೆ ನಿಯಂತ್ರಿಸಿರುತ್ತಾ, ತಾವು ತಮ್ಮಲ್ಲಿರುವ 'ರಿಕ್ವಿಸಿಶನ್' ಅಕ್ಕಿ ಮುಗಿಯಲು, ನಮ್ಮ ಗಿರಾಕಿಗಳಿಗೆ ಕೊಡುವದಕ್ಕಾಗಿ ವರ್ಗಧಾರರಿಂದ ಹೆಚ್ಚು ಕ್ರಯಕ್ಕೆ ತಂದು ಮಾರಾಟಮಾಡಬೇಕಾಯಿತೆಂದು ಅಂಗಡಿಯವರ ವಾದವಿತ್ತು. ಯಾವುದೇ ಅಕ್ಕಿಗಾದರೂ ನಿಯಂತ್ರಿತ ಕ್ರಯಕ್ಕಿಂತ ಅಧಿಕ ಕ್ರಯದಲ್ಲಿ ಮಾರಾಟಮಾಡಲು ನಿಮಗೆ ಕಲೆಕ್ಟರರ ಹುಕುಮಿದೆಯೇ ಎಂದು ಆಫೀಸರರು ಹೇಳಿದರು.

ಫುಡ್‌ಗ್ರೈನ್ಸ್ ಕಂಟ್ರೋಲ್ ಆರ್ಡರಿನ ಮೇರೆಗೆ ಲೈಸನ್ಸುದಾರರಿಗೆ ನೋಟೀಸು

ರೆವೆನ್ಯು ಡಿಪಾರ್ಟ್‌ಮೆಂಟಿನ ಮತ್ತು ಕಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನ ಎಲ್ಲಾ ಆಫೀಸರರು ಲೈಸೆನ್ಸ್ ಶರ್ತಗಳನ್ನು ತಪ್ಪದೆ ಅನುಸರಿಸುವ ಅವಶ್ಯಕತೆಯ ಕುರಿತು ಎಲ್ಲಾ ಲೈಸೆನ್ಸ್‌ದಾರರಿಗೆ ಆಗಿಂದಾಗ್ಗೆ ಒತ್ತಿಹೇಳುತ್ತಿದ್ದರೂ ಅನೇಕ ಮಂದಿ ಲೈಸೆನ್ಸ್‌ದಾರರು ಲೈಸೆನ್ಸಿನ ಶರ್ತಗಳನ್ನು ಅನುಸರಿಸುವಲ್ಲಿ ಅಲಕ್ಷ್ಯ ಭಾವದಿಂದಿರುವದು ತಿಳಿದುಬಂದಿರುತ್ತದೆ. ಇನ್ನು ಮುಂದೆಯೂ ಈ ರೀತಿ ಲೈಸೆನ್ಸಿನ ಶರ್ತಗಳನ್ನು ಅನುಸರಿಸದಿದ್ದಲ್ಲಿ ಅಂಥವರ ವಿಷಯದಲ್ಲಿ ಕಠಿಣ ಕಾರ್ಯಕ್ರಮವನ್ನು ಕೈಕೊಳ್ಳಲಾಗುವದೆಂದು ಈ ಮೂಲಕ ಕೊನೆಯ ಬಾರಿ ಎಚ್ಚರಿಸಲಾಗುತ್ತಿದೆ. ಲೈಸೆನ್ಸ್‌ದಾರರು ಅನುಸರಿಸಬೇಕಾದ ಮುಖ್ಯ ಅವಶ್ಯಕತೆಗಳಿವು. ೧. ಪ್ರತಿದಿನದ ಪ್ರಾರಂಭದ ಸ್ಟೋಕು, ಜಮೆಯಾದ ಮತ್ತು ಮಾರಿದ ಮಾಲಿನ ವಿವರವನ್ನು ವಿಶದವಾಗಿ ತೋರಿಸುವ ಲೈಸೆನ್ಸ್ ಕೊಡಲ್ಪಟ್ಟ ಪ್ರತಿ ಒಂದು ಆಹಾರಧಾನ್ಯಕ್ಕೆ ಒಂದರಂತೆ ಬೇರೆಬೇರೆಯಾದ 'ಸ್ಟಾಕ್ ರಿಜಿಸ್ಟ್ರಿ'ಯನ್ನು ಇಡತಕ್ಕದ್ದು. ಇದರಲ್ಲಿ ಆಯಾ ದಿನದ ವರೆಗಿನ ವಿವರಗಳು ಬಾಕಿಯಿಲ್ಲದೆ ಪೂರ್ತಿಯಾಗಿರತಕ್ಕದ್ದು. ೨. ಸ್ಟಾಕುಗಳ ಮತ್ತು ಕೊಟ್ಟ ಮಾಲುಗಳ ಸರಿಯಾದ ಮಾಸಿಕ ವಿವರವನ್ನು ಫಾರ್ಮು 'ೞ' ಯಲ್ಲಿ ಕಾಲಕ್ಕೆ ಸರಿಯಾಗಿ ಕಳುಹಿಸುವುದು. ೩. ಯಾವದೊಂದು ಆಹಾರ ಧಾನ್ಯವನ್ನು ಲೈಸೆನ್ಸ್‌ದಾರರಲ್ಲದಿರುವವರಿಗೆ ೨೦ ಮಣಕ್ಕಿಂತ ಅಧಿಕವಾಗಿ ಕೊಡದಿರುವುದು. ೪. ಎಲ್ಲಾ ಮಾರಾಟದ ವ್ಯವಹಾರಗಳ ಬಗ್ಗೆ ರಶೀದಿಗಳನ್ನು ಕೊಡುವುದಲ್ಲದೆ ಅದರ ದ್ವಿಪ್ರತಿಯನ್ನು ಇಟ್ಟುಕೊಳ್ಳುವುದು. ೫. ಕ್ರಯಗಳ ಪಟ್ಟಿಯ ಬೋರ್ಡನ್ನು ವ್ಯಾಪಾರ ಸ್ಥಳದಲ್ಲಿ ಎದುರಿಗಿರಿಸುವುದು ಅಲ್ಲದೆ ಕಮ್ಮಿಶನರ್ ಆಫ್ ಸಿವಿಲ್ ಸಪ್ಲ್ಯಾಸರವರು ವಿಧಿಸಿರುವ ರೀತಿಯ ಬೋರ್ಡನ್ನೂ ವ್ಯಾಪಾರ ಸ್ಥಳದಲ್ಲಿ ಎದುರಿಗಿರಿಸುವುದು. ಲೈಸೆನ್ಸಿನ ಶರ್ತಗಳನ್ನು ಉಲ್ಲಂಘಿಸುವ ತಪ್ಪಿತಸ್ತರ ಮೇಲೆ ವ್ಯವಹರಣೆ ನಡೆಸಲ್ಪಡುವದೆಂದೂ, ಉಲ್ಲಂಘನೆಯ ಪ್ರಥಮ ಬಾರಿಗೆ ಪರಿಹಾರವಾಗಿ ಅಧಿಕ ಪ್ರಮಾಣದ ಜುಲುಮಾನೆಯನ್ನು ವಿಧಿಸುವಂತೆ ಕೋರ್ಟಿನವರನ್ನು ಒತ್ತಾಯಪಡಿಸಲಾಗುವುದೆಂದೂ ಲೈಸೆನ್ಸ್‌ದಾರರಿಗೆ ತಿಳಿಸಲಾಗುತ್ತದೆ. ಹುಕುಮಿನ ಮತ್ತು ಲೈಸೆನ್ಸಿನ ಶರ್ತಗಳನು ಪುನಃ ಪುನಃ ಉಲ್ಲಂಘಿಸುತ್ತಿದ್ದಲ್ಲಿ ಲೈಸೆನ್ಸನ್ನು ರದ್ದುಮಾಡುವುದರೊಡನೆ ವ್ಯವಹರಣೆ ನಡೆಸಿ ಸಜೆಯನ್ನು ವಿಧಿಸಲು ಕೋರ್ಟನ್ನು ಒತ್ತಾಯಪಡಿಸುವಂತೆಯೂ ಕಾರ್ಯಕ್ರಮವನ್ನು ಕೈಕೊಳ್ಳಲಾದೀತು ಎಂದು ಕಮರ್ಶಿಯಲ್ ಟೇಕ್ಸ್ ಆಫೀಸರ್, ಮಂಗಳೂರು ಇವರು ತಿಳಿಸುತ್ತಾರೆ.

ಮೇ ದಿನಾಚರಣೆ

ಮಂಗಳೂರಲ್ಲಿ ಕಮ್ಯುನಿಸ್ಟರು ಮೇ ದಿನಾಚರಣೆ ಮಾಡಿದರು. ರಾಷ್ಟ್ರೀಯ ಐಕ್ಯ ಗಾಂಧಿಜಿ ಬಿಡುಗಡೆ, ಬಡವರಿಗೆ ಆಹಾರ ಮಜೂರರ ತುಟ್ಟಿ ಭತ್ತೆ, ರಾಷ್ಟ್ರೀಯ ಸರಕಾರದ ಘೋಷಣೆಗಳ ಕರಪತ್ರಗಳನ್ನು ಹಂಚಿರುವರು.

ಕೊ-ಒಪರೇಟಿವ್ ಹ್ಯಾಂಡ್ ಲೂಮ್ ಸೇಲ್ಸ್ ಎಂಪೋರಿಯಂ

ಪ್ರಾಂತಿಕ ಕೈಮಗ್ಗಗಳ ನೇಕಾರ ಸಹಕಾರ ಸಂಘ, ಮದ್ರಾಸು ಇದರಿಂದ ನಡೆಸಲಾಗುವ ಮೇಲ್ಕಂಡ ಎಂಪೋರಿಯಂನ್ನು ತಾ. ೩ರಂದು ಸಂಜೆ ಶ್ರೀ ಜೆ. ಸಿ. ರಾಯರವರು, ಹಂಪನಕಟ್ಟೆ ರೈಲ್ವೆ ಸ್ಟೇಶನ್ ರಸ್ತೆಯಲ್ಲಿ ತೆರೆದರು. ಇದು ಬಟ್ಟೆಗಳನ್ನು ಮಾರಾಟ ಮಾಡುವ ಒಂದು ಸಂಸ್ಥೆ.

ಬೆಂಕಿಯ ಹಾವಳಿ

ಈಚೆಗೆ ಹಂಪನಕಟ್ಟೆಯ ಸ್ವಸ್ತಿಕಾ ಭವನಕ್ಕೆ ಸಂಬಂಧಿಸಿದ ಒಂದು ಕಟ್ಟಡಕ್ಕೆ ಬೆಂಕಿ ತಗಲಿ, ಅದು ಸುಟ್ಟು ಹೋಗಿ ಬೆಂಕಿ ಹರಡಲಿದ್ದಾಗ, ಮದ್ರಾಸ್ ಫಯರ್ ಸರ್ವಿಸಿನ ಹೊಸದಾಗಿ ವ್ಯವಸ್ಥೆಗೊಂಡ ಮಂಗಳೂರು ಶಾಖೆಯ ಫಾಯರ್ ಆಫೀಸರ್ ಶ್ರೀ ಡಬ್ಲ್ಯು. ವಿಲಿಯಂ ಸೀಡರು ಬೆಂಕಿಯಾರಿಸುವ ಯಂತ್ರ, ಜನಗಳೊಡನೆ ಒಂದು ಬೆಂಕಿಯಾರಿಸಿದರು.

ಸೆಂಟ್ರಲ್ ಕೋಪರೇಟಿವ್ ಬಂಡಸಾಲೆ

ಈ ಬಂಡಸಾಲೆಯು, ತಾ. ೩ರಂದು ಸಂಜೆ ಬಂದರದಲ್ಲಿ ಕೋ॥ ಸಂಘಗಳ ಜತೆ ರಿಜಿಸ್ಟ್ರಾರ್ ಶ್ರೀ ಜೆ. ಸಿ. ರಾಯರಿಂದ ತೆರೆಯಲ್ಪಟ್ಟಿತು.

ರಜತ ಮಹೋತ್ಸವ

ಸ್ಥಳೀಯ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ ಕೊ-ಓಪರೇಟಿವ್ ಸೋಸೈಟಿ, ಲಿಮಿಟೆಡ್, ರಜತ ಮಹೋತ್ಸವವು ಕಳೆದ ತಾ. ೧-೨ರಲ್ಲಿ ನೆರವೇರಿತು. ತಾ. ೧ರಲ್ಲಿ ಜರುಗಿದ ಆ ಸಂಘದ ಸದಸ್ಯರ ದಿನಾಚರಣೆಯ ಸಭೆಗೆ ಶ್ರೀ. ಬಿ. ಎಸ್. ಅಂಚನ ಅವರು ಅಧ್ಯಕ್ಷರಾಗಿದ್ದರು. ಶ್ರೀ. ಕೆ. ರಾಮಚಂದ್ರರು "ಸಹಕಾರ"ದ ಕುರಿತು ಭಾಷಣ ಕೊಟ್ಟರು. ಅಧ್ಯಕ್ಷರ ಭಾಷಣವಾಗಿ ಸಂಘದ ಪ್ರೆಸಿಡೆಂಟ್ ಶ್ರೀ. ಎನ್. ಬಾರ್ನಬಸರು ಧನ್ಯವಾದಗಳನ್ನು ಅರ್ಪಿಸಿದರು.

ಕಳೆದ ತಾ. ೨ನೇ ಸಂಜೆ ಈ ಸಂಘದ ಸಿಲ್ವರ್ ಜುಬಿಲಿ ಮಹೋತ್ಸವದ ಸಮಾರಂಭವು, ಶ್ರೀ ಜೆ. ಸಿ. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಭಾಷಣವನ್ನು ಸಂಘದ ಉಪಾಧ್ಯಕ್ಷ ಶ್ರೀ. ಎಸ್. ಎ. ಫುರ್ಟಾಡೋರವರು ಮಾಡಿದರು. ಜುಬಿಲಿ ವರದಿಯನ್ನು ಸಂಘದ ಅಧ್ಯಕ್ಷ ಶ್ರೀ. ಎನ್. ಬಾರ್ನಬಸರು ವಾಚಿಸಿದರು. ಸಭಿಕರಲ್ಲಿ ಶ್ರೀ. ಎಸ್. ನರಸಪ್ಪಯ್ಯ, ಜನಾಬ್ ಅಬ್ದುರ್‌ರಹೀಂ ಅಹ್ಮದ್, ಶ್ರೀ. ಬಿ. ಎಸ್. ಅಂಚನ್ ಇವರು ಭಾಷಣ ಮಾಡಿದರು.

ಹಿಂದೂ ಸ್ತ್ರೀಯರಿಗೂ ಪಾಲು

ಸಿಗಬೇಕೆಂಬುದರ ಕುರಿತು ಕೇಂದ್ರ ಸಭೆಯಲ್ಲಿ ಮಂಡಿಸಲ್ಪಟ್ಟಿರುವ ಮಸೂದೆಯನ್ನು ಥಿಯಸಾಫಿಕಲ್ ಲಾಜಿನಲ್ಲಿ ಭಗಿನಿ ಸಮಾಜದ ಆಶ್ರಯದಲ್ಲಿ ಶ್ರೀ ಕೆ ಸದಾಶಿವರಾವ್ ಅವರು ವಿವರಿಸಿ ಹೇಳಿದರು.

ಶ್ರೀ ಜೆರೋಮ್ ಸಾಲ್ಡಾನಾ

ಮದ್ರಾಸಿನ ಮಾಜಿ ಎಂ. ಎಲ್. ಸಿ. ಮುಂಬಯಿಯ ನಿವೃತ್ತ ಎಡಿಶನಲ್ ಜಜ್, ಇವರ ೭೫ನೆಯ ಜನ್ಮ ದಿನವು ರತ್ನೋತ್ಸವವಾಗಿ ತಾ. ೨೬ರಂದು ಸಂಜೆ ಆಚರಿಸಲ್ಪಟ್ಟಿತು. ಬೆಳಿಗ್ಗೆ ಶ್ರೀ ಸಿ. ಎಲ್. ಲೋಬೋ ಅವರು ಶ್ರೀ ಸಾಲ್ಡಾನಾ ಅವರಿಗೆ ಒಂದು ಮಂಗಳ ಪತ್ರವನ್ನು ಅರ್ಪಿಸಿದರು. ಸಂಜೆ ಕೆಥಲಿಕ್ ಕ್ಲಬ್ಬಿನಲ್ಲಿ ಶ್ರೀ ಎಲ್. ಪಿ. ಫೆರ್ನಾಂಡಿಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಜರಗಿತು. ಶ್ರೀಯುತರು ಮಾಧವರಾವ್, ಜೆ. ಪಿ. ನಜರೆತ್, ಎಲ್. ರೇಗೋ, ಎಂ. ಎಸ್. ಶ್ರೇಷ್ಠ ಇವರು ಭಾಷಣಗಳನ್ನಿತ್ತು ಶ್ರೀ ಸಾಲ್ಡಾನಾ ಅವರ ರಾಷ್ಟ್ರಾಭಿಮಾನ, ಕರ್ತವ್ಯನಿಷ್ಠೆ, ಜನಸೇವೆಯಲ್ಲಿ ಅವರಿಗಿರುವ ಆಸಕ್ತಿಗಳನ್ನು ವಿವರಿಸಿ, ಅವರಿಗೆ ದೀರ್ಘಾಯುಸ್ಸನ್ನು ಕೋರಿದರು.

ಫೆಡರಲ್ ಹಿಂದೂ ಸ್ಕೂಲ್ ಬೋರ್ಡಿನ

ಆಶ್ರಯದಲ್ಲಿ ತಾ. ೨೬ರಂದು ಸಂಜೆ, ಕೆನರಾ ಹೈಸ್ಕೂಲಿನಲ್ಲಿ ಸ್ವಾಮಿ ತ್ಯಾಗೀಶಾನಂದರು ವಿವಿಧ ಮತಗಳ ಏಕ ಸಂದೇಶದ ಕುರಿತೂ ಸ್ವಾಮಿ ವಿಜಯಾನಂದರು ವಿದ್ಯಾಭ್ಯಾಸವು ಧಾರ್ಮಿಕ ತಳಹದಿಯ ಮೇಲಿರುವುದರ ಅವಶ್ಯತೆಯ ಕುರಿತೂ ಉಪನ್ಯಾಸಗಳನ್ನಿತ್ತರು.

ಬಿಡುಗಡೆ

ಆಗಸ್ಟ್ ತಿಂಗಳಲ್ಲಿ ಧಾರವಾಡದಲ್ಲಿ ಬಂಧಿಸಲ್ಪಟ್ಟಿದ್ದ ಪತ್ರಿಕೋದ್ಯೋಗಿ ಶ್ರೀ. ಹರಿದಾಸರು (ಮಂಗಳೂರಿನವರು) ೯ ತಿಂಗಳ ಜೈಲುವಾಸವನ್ನು ಮುಗಿಸಿ ಹಿಂದಿರುಗಿರುವರು.

ತೃತೀಯ ದ. ಕ. ಜಿಲ್ಲಾ. ಸಹಕಾರಿ ಪರಿಷತ್ತು

ಇದು ಮೇ ೧೪ ಮತ್ತು ೧೫ರಂದು ಪುತ್ತೂರಿನಲ್ಲಿ ದ್ರಾವಿಡ ಬ್ರಾಹ್ಮಣ ಸಹಕಾರೀ ವಿದ್ಯಾರ್ಥಿ ಭವನದಲ್ಲಿ ಜರಗುವುದು.

ಪ್ರದರ್ಶನದ ಬಹುಮಾನ

ಮಂಗಳೂರಲ್ಲಿ ಪ್ರಥಮ ಬಾರಿಯಾಗಿ ಜರುಗಿದ ಪಶ್ಚಿಮ ಕರಾವಳಿ ಫಲ ತರಕಾರೀ ಪ್ರದರ್ಶನವು, ಕಳೆದ ಸೋಮ, ಮಂಗಳವಾರಗಳಲ್ಲಿ, ಗವರ್ನಮೆಂಟ್ ಕಾಲೇಜಿನಲ್ಲಿ ಯಶಸ್ವಿಯಾಗಿ ನಡೆಯಿತು. ಸೋಮವಾರ ಜಿಲ್ಲಾ ಕಲೆಕ್ಟರರ ಪತ್ನಿಯವರು ಪ್ರದರ್ಶನಕ್ಕೆ ಬಂದಿದ್ದ ಸಾಮಗ್ರಿಗಳ ಮಾಲಕರಿಗೆ ಬಹುಮಾನಗಳನ್ನು ಹಂಚಿದ ಮೇಲೆ ಜಿಲ್ಲಾ ಕಲೆಕ್ಟರರು ಈ ಪ್ರದರ್ಶನಕ್ಕೆ ಪ್ರೋತ್ಸಾಹ ಕೊಟ್ಟು ಭಾಷಣ ಮಾಡಿದರು. ಶ್ರೀ ಪಿ. ಆರ್. ಆರ್. ಪೂಂಜರು ಸಂಬಂಧಪಟ್ಟವರಿಗೆಲ್ಲ ವಂದನಾರ್ಪಣೆ ಮಾಡಿದರು.

ಫಲವಸ್ತುಗಳಲ್ಲಿ 'ಸ್ಪೆಶಲಿಸ್ಟ್'ರಾದ ಶ್ರೀ. ಕೆ. ಸಿ. ನ್ಯಾಕರು ಈ ಜಿಲ್ಲೆಯವರು. ಇವರು ಬ್ರಿಸ್ಟೊಲಿನಿಂದ ವ್ಯಾಸಂಗ ಮಾಡಿ, ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿ ಅನುಭವ ಪಡೆದು, ಹಲವು ಪರಿಶೋಧನೆಗಳನ್ನೂ ನಡೆಸಿದವರು. ಇವರು ಮದ್ರಾಸ್ ಸರಕಾರದ "ಫ್ರುಟ್ ಸ್ಪೆಶಲಿಸ್ಟ್"ರು. ಇವರಿನ್ನೂ ಆಧಿಪತ್ಯದ ಹಲವೆಡೆಗಳಲ್ಲಿ ಇಂಥ ಪ್ರದರ್ಶನಗಳನ್ನು ಏರ್ಪಡಿಸಲಿರುವರು. ಈ ಪ್ರದರ್ಶನದ ಬಹುಮಾನ ಮತ್ತು ವೆಚ್ಚಗಳಿಗಾಗಿ ಸರಕಾರದಿಂದ ಸುಮಾರು ೫೦೦ ರೂಪಾಯಿಗಳು ಮಂಜೂರಾಗಿತ್ತೆಂದು ತಿಳಿದಿದೆ.

ಪ್ರದರ್ಶನದಲ್ಲಿ ಪ್ರಥಮ ಹಾಗೂ 'ಸ್ಪೆಶಲ್' ಬಹುಮಾನಗಳನ್ನು ಪಡೆದವರಲ್ಲಿ ಕಾಪಿನ ಶ್ರೀ. ಮುದ್ದಣ್ಣ ಶೆಟ್ಟರು ಅಗ್ರಗಣ್ಯರು. ಅವರಿಗೆ ೭ ಬಹುಮಾನಗಳು ಸಿಕ್ಕಿವೆ. ದ. ಕ. ಫಲವಸ್ತುಗಳನ್ನು ಬೆಳೆಸುವ ಕೋ-ಓಪರೇಟಿವ್ ಸಂಘಕ್ಕೆ ೪ ಬಹುಮಾನಗಳೂ ಬೇಗಂ ಕರಮತುಲ್ಲಾ ಮುಸ್ತಾ ಅವರ ಸ್ನೇಹಿತರ ಪಂಗಡಕ್ಕೆ ೫ ಬಹುಮಾನಗಳೂ, ಶ್ರೀ. ಕೆ. ಸೀತಾರಾಮ ಶೆಟ್ಟಿ, ಕಟೀಲ್ ಇವರಿಗೆ ೩ ಬಹುಮಾನಗಳೂ, ಕುಂಬಳೆಯ ಶ್ರೀ ಕೆ. ಎಂ. ನ್ಯಾಕರಿಗೆ ೩ ಬಹುಮಾನಗಳೂ, ಸ್ಥಳೀಯ ಮಹಿಳಾ ಸಭೆಯವರಿಗೂ, ಈ ತಾ॥ ಸ್ವಾಲಿಗೂ, ಸ್ವಾಮಿ ಈಶ್ವರಾನಂದ ಮಹಿಳಾ ಸೇವಾಶ್ರಮದವರಿಗೂ ಎರಡೆರಡು ಬಹುಮಾನಗಳೂ, ಮಂಗಳೂರು ಮುನ್ಸಿಪಾಲಿಟಿಗೂ ೨ ಬಹುಮಾನಗಳೂ, ಶ್ರೀಮತಿ ಶಾಂಭವಿ ಆರ್. ಪೂಂಜ, ಕಾಸರಗೋಡು ತುರ್ತಿ ಗಾರ್ಡನ್ಸ್ ಶ್ರೀ. ಇಂಚ್ಚಾಡಿ ಕೋಟ್ಯಣ್ಣ ಆಳ್ವ, ಉಡ್ಪಿ ತಾಲೂಕು ಸ್ವಾಲು, ಕ್ಯೂಕುಡೆ ಶ್ರೀ. ಪಿ. ಫಸ್. ಎಸ್. ರಾವ್, ಮಂಗಳೂರು ಸೈಂಟ್ ಆಗ್ನೀಸ್ ಕೋನ್ವೆಂಟ್, ನಜರೇತ್ ಹೋಂ, ಸೈ॥ ಆಂಟೋನಿ ತಲ್ಲೇರಿ ಮಿಸೆಸ್ ಕೇಶ್ಯನ್ ಅನಂತನ್, ಬಿಜೈ ಕುಮಾರಿ ಸುನಂದ, ಶ್ರೀಮತಿ ಯು. ಸಂಜೀವ ರಾವ್, ಉಡ್ಪಿ, ಶ್ರೀ. ಕೆರೋಡಿ ನರಸಿಂಗ ರಾವ್, ಉಡ್ಪಿ ಕೃಷ್ಣಭವನ, ಮಂಗಳೂರು, ಗವರ್ನಮೆಂಟ್ ಕಾಲೇಜ್ ಇವರಿಗೆಲ್ಲಿ ಒಂದೊಂದು ಬಹುಮಾನಗಳು ದೊರಕಿವೆ. ಇನ್ನು ಹಲವರಿಗೆ ಯೋಗ್ಯತಾ ಪತ್ರಗಳೂ ಕೊಡಲ್ಪಟ್ಟಿವೆ.

ಇಡ್ಯ ವಿದ್ಯಾದಾಯಿನಿ

ಹಾ. ಎ. ಶಾಲೆಯ ವಾರ್ಷಿಕೋತ್ಸವವು ಡಾ॥ ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ತಾ. ೨೫ರಂದು ಜರಗಿತು. ಶಾಲೆಯ ಸ್ಥಾಪಕರಾದ ದಿವಂಗತ ಶ್ರೀ ಇಡ್ಯ ಕೃಷ್ಣಯ್ಯನವರ ಭಾವಚಿತ್ರದ ಅನಾವರಣವನ್ನು ಶ್ರೀ. ಎಂ. ರಾಮಕೃಷ್ಣ ಪೂಂಜರು ನೆರವೇರಿಸಿದರು. ಮುಖ್ಯೋಪಾಧ್ಯಾಯ ಶ್ರೀ ಎಚ್. ದಾಮೋದರರಾಯರು ಧನ್ಯವಾದಗಳನ್ನರ್ಪಿಸಿದರು. ಬಳಿಕ ವಿವಿಧ ವಿನೋದಾವಳಿಗಳಿದ್ದುವು.

ಕುರ್ನಾಡಿ ಶಾಂತಿನಿಕೇತನ

ತಾ. ೨೪-೪-೪೯ನೇ ರಾತ್ರಿ ಸುಂದರ್ಶಿ, ಸೌಕೂರು, ಪೆರ್ಡೂರು, ಅಮೃತೇಶ್ವರಿ ಮೇಳಗಳ ದಶಾವತಾರ ಆಟವು ಮಂಗಳೂರು ಡಿವಿಜನಲ್ ಆಫೀಸರ್ ಶ್ರೀ. ಬಿ. ಜೂಗಪ್ಪನವರ ಅಧ್ಯಕ್ಷತೆಯಿಂದ ಜರಗಿತು. ಶ್ರೀಮತಿ ಸೀತಾರತ್ನ ಕಲ್ಯಾಣಿ, ತಹಶಿಲ್ದಾರ್ ಕೆ. ಕೇಶವ ಕುಡ್ವ, ಡಿ. ಬೋ. ವಿದ್ಯಾಧಿಕಾರಿ ಶ್ರೀ. ಎಚ್. ರಾಮರಾವ್ ಇವರುಗಳು ಭಾಷಣವಿತ್ತರು. ನಾಲ್ಕು ಮೇಳದವರಿಗೂ ಬಹುಮಾನವಿತರಣೆಯಿತ್ತು.

ಉಡುಪಿ

ಸಿಡುಬು

ಮುನಿಸಿಪಲ್ ವ್ಯವಹಾರ ಕ್ಷೇತ್ರದ ವಳಕಾಡು ವಾರ್ಡಿನಲ್ಲಿ ಸಿಡುಬು ತಲೆದೋರಿರುತ್ತದೆ. ಎರಡು ಮರಣಗಳಾದುವು.

ಸಕ್ಕರೆ

ಮನೆಯೊಂದಕ್ಕೆ ವಾರಕ್ಕೊಂದು ರಾತಲಿನಂತೆ ಸಕ್ಕರೆ ಮಾರಾಟದ ವ್ಯವಸ್ಥೆಯನ್ನು ಆಯಾ ವಾರ್ಡು ಮುಖೇನ ಅಧಿಕಾರಿಗಳು ಮಾಡಿರುವರು.

ವಿಟ್ಲ

ಇಲ್ಲಿಯ ಪಂಚಾಯಿತ ಬೋರ್ಡ್ ಶಾಲೆಯ ಮಕ್ಕಳ ವರ್ಧಂತ್ಯುತ್ಸವವು ವಿಟ್ಲದ ಅರಸು ಶ್ರೀ ರವಿವರ್ಮ ರಾಜರ ಅಧ್ಯಕ್ಷತೆಯಿಂದ ಜರಗಿತು.

ಕುಂದಾಪುರ

ಈಗ ಓನ್‌ಗೋಲಿನ ಜ್ಯೊಂಟ್ ಮೆಜಿಸ್ಟ್ರೇಟ್ ಮತ್ತು ಸಬ್ ಕಲೆಕ್ಟರರಾಗಿರುವ ಶ್ರೀ. ಡಿ. ಡಿ. ಸಾತೆಯವರು ಕುಂದಾಪುರ ಸಬ್. ಕಲೆಕ್ಟರ್ ಮತ್ತು ಜ್ಯೊಂಟ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತದೆ.

ಬಂಟವಾಳ

ಇಲ್ಲಿಯ ಶ್ರೀ ಯಶವಂತ ವ್ಯಾಯಾಮ ಶಾಲೆಯ ತೃತೀಯ ವಾರ್ಷಿಕೋತ್ಸವವು ಕಳೆದ ತಾ. ೧ರಲ್ಲು ಶ್ರೀಮಾನ್ ಮಿಜಾರ ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಸ್ಥೆಗೆ ಒಂದು ಕಟ್ಟಡದ ಅವಶ್ಯಕತೆಯನ್ನು ಕಂಡು ಅವರು ರೂ. ೧೫೫೧ಗಳನ್ನು ತೆತ್ತು ವ್ಯಾಯಾಮ ಶಾಲೆಯ ಕಟ್ಟಡ ನಿಧಿಯನ್ನು ಪ್ರಾರಂಭಿಸಿರುವರು. ಅವರಂತೆ ಇತರ ವ್ಯಾಯಾಮ ಪ್ರಿಯರೂ ಈ ಸಂಸ್ಥೆಗೆ ಸಹಾಯವನ್ನು ಮಾಡುವರಾಗಿ ನಿರೀಕ್ಷಿಸಲಾಗಿದೆ.

ಸಿನೇಮಾ ಸುದ್ದಿ

ಭಾರತೀ ದೇವಿ

ಭಾರತೀ ದೇವಿಯನ್ನು ... ಚಿತ್ರದಲ್ಲಿ ಜನ ಮೊದಲ ಸಲ ಪರಿಚಯ ಮಾಡಿಕೊಂಡೆವು. 'ಸೌಗಂಧ'ದಲ್ಲಿ ಆಕೆಯ ಗಾನವೇನು, ನಟನೆಯೇನು ಇವುಗಳಿಗೆ ಮರುಳಾದೆವು. ಈಗಾಕೆ 'ಕಾಶಿನಾಥ'ದಲ್ಲಿ ಅಭಿನಯಿಸಿದ್ದಾಳೆ. ಅದನ್ನು ಬೇಗನೆ ನೋಡುವ ಆಸೆ ನಮ್ಮದು. ಭಾರತೀ ದೇವಿ ಕಾನನಳಿಗಿಂದು ಸೋರಿದ್ದಾಳೆ. ನ್ಯೂ ಥಿಯೇಟರ್ಸ್‌ನ ಕೀರ್ತಿ ಹೆಚ್ಚಿಸಿದ್ದಾಳೆ. ಸಿನೇಮಾ ಪ್ರಿಯರನ್ನು ಮರುಳುಗೊಳಿಸಿದ್ದಾಳೆ. ಆಕೆಗೆ ಭವ್ಯ ಭವಿಷ್ಯ ಕಾದಿದೆ.

'ಬೊಂಬೇ ಟಾಕೀಸಿನಲ್ಲಿ 'ಜ್ವಾಲ್ಲಾ'

ಮಲಾಡದಲ್ಲಿ ನೆಲೆನಿಂತ ಬೊಂಬೇ ಟಾಕೀಸಿನವರು, ತಮ್ಮ ಹೊಸ ಕೃತಿಗೆ 'ಜ್ವಾಲ್ಲಾ' ಎಂದು ಹೆಸರಿಟ್ಟಿರುವದಾಗಿ ತಿಳಿದುಬರುತ್ತದೆ. ಸಿನೇಮಾ ಜೀವಿಗಳ ಜೀವನಕಥೆಯಿದರ ಕಥಾವಸ್ತುವಿದೆ. ದೇವಿಕಾರಾಣಿ ಸ್ವತಃ ಇವರಲ್ಲಿ ನಾಯಕಿಯಾಗಿ ನಟಿಸುವಳೆಂದು ಸುದ್ದಿ.

ಕನ್ನಡ 'ಕೃಷ್ಣ ಸುದಾಮ'

'ಪ್ರಹ್ಲಾದ' ಚಿತ್ರವನ್ನಿತ್ತ ಕಲ್ಯಾಣಿಯವರು ಕನ್ನಡದಲ್ಲಿ 'ಕೃಷ್ಣಸುದಾಮ' ಎಂಬೀ ಚಿತ್ರವನ್ನು ತಯಾರಿಸುತ್ತಿದ್ದಾರೆ. ಇದರ ರಚನೆ ಈಗ ಪೂರ್ತಿಯಾಗುತ್ತಲಿದೆ. ಶ್ರೀ ಬೆಳ್ಳಾವೆ ನರಹರಿ ಶಾಸ್ತ್ರಿಗಳು ಈ ಚಿತ್ರದ ಸಂವಾದ ಲೇಖಕರು ಮಾತ್ರವಲ್ಲದೆ, ಇದೇ ಮೊದಲನೆಯ ಸಲವಾಗಿ ಅವರು ಈ ಚಿತ್ರದಲ್ಲಿ ಅಭಿನಯವನ್ನೂ ಮಾಡಿರುವರು. ಶ್ರೀಮತಿಯರಾದ ಎಸ್. ಡಿ. ಸುಬ್ಬುಲಕ್ಷ್ಮಿ, ಚಂದ್ರಮ್ಮ, ತುಳಸಿ, ನಾಗರತ್ನ, ಮತ್ತು ಶ್ರೀ. ಎಮ್. ಎಸ್. ಶೇಷಾಚಾರ್ ಮೊದಲಾದವರು ಇದರಲ್ಲಿ ನಟಿಸುತ್ತಾರೆ. ಶ್ರೀ. ಸುಬ್ರಹ್ಮಣ್ಯಂರವರೇ ಇದರ ನಿರ್ದೇಶಕರು.

ಅಮ್ಮೆಂಬಳ ಭಾಸ್ಕರರಾಯರ ಕಥೆ ಏಶ್ಯಾಟಿಕ್ ಕಂಪೆನಿಗೆ

ಮಜಾರ್‌ಖಾನರ ಏಶ್ಯಾಟಿಕ್ ಪಿಕ್ಚರ್ಸ್ ಕಂಪೆನಿಗೆ ನಮ್ಮ ಜಿಲ್ಲೆಯವರಾದ ಶ್ರೀ. ಅಮ್ಮೆಂಬಳ ಭಾಸ್ಕರರಾಯರು ಕಥೆಯೊಂದನ್ನು ಬರೆಯುತ್ತಿರುವರೆಂದು ಸುದ್ದಿ. ಪ್ರಭಾತದ ಪ್ರಸಿದ್ಧ 'ಅದ್ಮಿ' ಚಿತ್ರದ ಕಥೆ ಬರೆದವರು ಇವರೇ.

'ಜವಾಬ್'

ನ್ಯೂ ಥಿಯೇಟರ್ಸಿನ ಈ ಚಿತ್ರವು ಬೊಂಬಯಿಯಲ್ಲೀಗ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ. ಅಲ್ಲಿ ಇದರ ರಜತೋತ್ಸವ ವಾರ ಆಚರಿಸಲ್ಪಟ್ಟಿತು. ಕಾನನ್, ಜಮುನಾ, ಬರುವರಂಥಾ ಸಿನೇಮಾ ಲೋಕ ಪ್ರಖ್ಯಾತರು ಇದರಲ್ಲಿ ನಟಿಸುವರು. 'ಜವಾಬ್'ನ ಬಂಗಾಲೀ ಭಾಷಾ ಪ್ರತಿಯನ್ನು ತರಿಸಿ ಮಂಗಳೂರಿನ ಕಲಾ ಪ್ರಿಯರನ್ನು ಬಾಲಾಜಿ ಟಾಕೀಸಿನವರು ಮೆಚ್ಚಿಸಿದ್ದಾರೆ. ಅದರ ಹಿಂದೀ ಭಾಷಾ ಪ್ರತಿಯನ್ನೀಗ ಸೆಂಟ್ರಲ್‌ನವರು ಬೇಗನೇ ತರಿಸುವವರಿದ್ದಾರೆ. ಬಂಗಾಳೀ ಪ್ರತಿಗಿಂತ ಇದರಲ್ಲಿ ಅಧಿಕ ಹಾಡುಗಳಿವೆಯೆಂದೂ ತಿಳಿದಿದೆ. ಬೊಂಬಯಿಯಲ್ಲೀಗ ಪ್ರದರ್ಶಿತವಾಗಿ, ಜನರ ಮೆಚ್ಚುಗೆಗೆ ಪಾತ್ರವಾಗಿರುವುದು ಈ ಹಿಂದೀ ಪ್ರತಿ. ನೋಡಬೇಕು, ಬೊಂಬಯಿ ಜನರನ್ನು ಮರುಳುಗೊಳಿಸಿದ 'ಜವಾಬ'ನ್ನು ನಮ್ಮೂರಿನ ಥಿಯೇಟರಿನಲ್ಲಿ.

ನೆನಪಿರಲಿ!

ಮೊದಲನೆಯ ಭಾರತೀಯ ಚುಂಬನ ಚಿತ್ರ 'ಪಹಿಲೇಮಂಗಲ್ ಗೌರ್' ಶಾಹಿಮೋಡಕ್ ಮತ್ತು ಸ್ನೇಹಪ್ರಭಾ ಇದರಲ್ಲಿ ಹೀಗೆ ಬಹಿರಂಗವಾಗಿ ತುಟಿತಾಗಿಸುವ ಸಾಹಸಕ್ಕೆ ಮೊದಲುಮಾಡಿದ್ದಾರೆ. ಕಥೆ, ಅಭಿನಯ, ಫೊಟೋಗ್ರಫಿ ಹೇಗೆ ಇರಲಿ, (ಅದು ಒಳ್ಳೆಯದಿಲ್ಲವೆಂದು ನಮ್ಮ ಅಭಿಪ್ರಾಯವಲ್ಲ.) ಸಾಲದೇ, ಈ ಚುಂಬನ ಸಾಹಸವೊಂದೇ, ಈ ಚಿತ್ರ ಜನಪ್ರಿಯವಾಗುವುದೆಂಬುದಕ್ಕೆ! ಸನಾತನಿಗಳು, ಧರ್ಮಾಭಿಮಾನಿಗಳು, ಅನಾಚಾರಿಗಳು ಈ ಚಿತ್ರವನ್ನು ಖಂಡಿತವಾಗಿ ನೋಡುವರು, ನೆನಪಿರಲಿ!

ಬೆಳಗಾವಿ

ಅಕ್ಕತಂಗೀರ ಹಾಳದಲ್ಲಿ ಪೋಲೀಸರಿಗೆ ಬೇಕಾಗಿದ್ದ ಶ್ರೀ. ಬಸಯ್ಯ ಮಠಪತಿ ಮತ್ತು ನಿಂಗಪ್ಪ ಕರಲಿಂಗಣ್ಣ ಇವರ ಮನೆಯಲ್ಲಿ ಅನುಕ್ರಮವಾಗಿ ಅವರ ತಾಯಿ ಮತ್ತು ಹೆಂಡತಿಯರನ್ನು ಸೆರೆಹಿಡಿದೊಯ್ದು ಲಾಕಪ್ಪಿನಲ್ಲಿರಿಸಿರುವರು. ಇವರಿಬ್ಬರ ಮನೆಗೂ ಬೀಗಹಾಕಿದ್ದಾರೆ. ಕಿಳದಿಯ ಶ್ರೀ. ಬಸಪ್ಪಾ ಕಳ್ಳಿಗದ್ದಿ ಮತ್ತು ವೀರಭದ್ರಪ್ಪ ಅಂಗಡಿ ಇವರ ಮನೆಯ ಮಕ್ಕಳನ್ನು ೮-೧೦ ಮಂದಿಯನ್ನು ಲಾಕಪ್ಪಿನಲ್ಲಿರಿಸಿ ಇವರಿಬ್ಬರ ಮನೆಗೂ ಬೀಗಹಾಕಿರುವರು. ಬೆಣಚಿನಮರಡಿಯ ಬೆಕೂಡಿನ ಮರಡಿ ಇವರ ಮನೆಗೂ ಬೀಗಹಾಕಿದ್ದಾರೆ. ಜುಗುಳದ ಶ್ರೀ. ಲೊಂಡೆ ವಕೀಲ ಮೋತೀಚಂದ ಶಹಾ ಮತ್ತು ಪರಗೌಡ ಪಾಟೀಲ ಇವರನ್ನು ಬಂಧಿಸಲಾಗಿದೆ. ಬೇಡಕಿಹಾಳದ ಸಿರಿಗೌಡ ಪಾಟೀಲರು ಕಾಣೆಯಾಗಿರುವರೆಂದು ಅವರ ೮೫ ವರ್ಷದ ತಂದೆಯನ್ನು ಬಂಧಿಸಿದ್ದಾರೆ. ಅಲ್ಲದೆ ಶ್ರೀ. ಗುಂಡಪ್ಪ ಜೇಡಗೆ ಅಣ್ಣಪ್ಪ ಪೋತದಾರ, ಧರ್ಮಾಣಿ, ಕಾರಿ ಮತ್ತು ಅಪ್ಪಾ ಬೇಡಗೆ ಇವರ ಬಂಧನವಾಗಿದೆ ಮಾಂಗೂರಿನ ಅಪ್ಪಾಲಾಲ ನಾಯಕವಾಡ್ರೆ, ಧನಲಾಲ ಪಂಡಿತ, ಕಾಸಾರಕಳವಾಡೆ ಇವರನ್ನೂ ಸೆರೆಹಿಡಿದಿರುವರು ಬೆಳಗಾವಿ ರಳಕವಾಡಿಯ-ಶ್ರೀಮಂತ ಸರಫರಾಫ ಬೋಥರಾವ ನಾಯಕರನ್ನು ಮುತ್ತಿಗೆಹಾಕಿ ಪೋಲೀಸರು ಬಂಧಿಸಿದರು. ಸಾಯಂಕಾಲ ಬಿಟ್ಟರು. ಅವರ ಮೋಟರು ಡ್ರೈವರನನ್ನು ಇನ್ನು ಬಿಟ್ಟಿಲ್ಲ. ಶ್ರೀ. ಮೋಹನರಾವ್ ಗಂಗಾಧರರಾವ್ ದೇಶಪಾಂಡೆ ವಕೀಲರನ್ನು ಹಿಂಡಲಗಿಯಿಂದ ನಾಸಿಕ ಸೆರೆಮನೆಗೆ ಒಯ್ಯಲಾಗಿದೆ. ಹುದಲಿಯ ಕಾರ್ಯಕರ್ತರಾದ ಶ್ರೀಗಳು ಬಸಪ್ಪಾ ಬದಾರಾ ಅಕ್ಕಪ್ಪಾ ಬೇಡರ, ಕೇದಾರಿ ಬಂಗಾಡಿ, ರಾಮಸೋನಟಕ್ಕೆ, ಲಕ್ಷ್ಮಣ ತುಕಾರಾಮ ಇವರನ್ನು ಬಂಧಿಸಲಾಗಿದೆ ಇಲ್ಲಿನ ಸೌ. ಸೌಂದರಿ ಬಾಯಿ ಭೃತಾರವರ ಕಟೀಗ ಮರದ ಮತ್ತು ಸೌ. ಬಯಾಬಾಯಿ ಭೃತಾರ ರಾಮಚಂದ್ರ ಇವರನ್ನು ಡಿ. ಇ. ಕಾನೂನಿನಂತೆ ಬಂಧಿಸಿದ್ದಾರೆ.

ಅಥಣಿ ತಾಲೂಕಿನ ಬಡಕಲ್ಲಿನಲ್ಲಿ ಸಾರ್ವಭೌಮರ ವಿರುದ್ಧ ದಂಗೆ ಕೂಡಿದ ಆರೋಪದ ಮೇಲೆ ೧೪ ಜನರ ಬಂಧನವಾಗಿದೆ. ೬ ಜನರಿಗೆ ಬೇರೆ ಬೇರೆ ಶಿಕ್ಷೆ ವಿಧಿಸಿ ಮಿಕ್ಕವರನ್ನು ಬಿಡುಗಡೆ ಮಾಡಿರುವರು. ಬೆಳಗಾವಿ ಪೋಲೀಸ್ ಸುಪರಿಂಟೆಂಡೆಂಟರು ನೂರಾರು ಕೆಲ ಪೋಲೀಸರೊಂದಿಗೆ ಸಂಪಗಾವಿಗೆ ಹೋಗಿ ೨೬ ಜನರನ್ನು ಬಂಧಿಸಿರುವರು. ಬೆಳಗಾವಿ ಜೈಲಿನಲ್ಲಿ ಸ್ಥಾನಬದ್ಧತೆಯಲ್ಲಿರುವ ಶ್ರೀ. ಸ್ವಾಮೀಶಾಚಾರ್ಯ ಗುಪ್ತದ ಇವರನ್ನು ಕ್ಷಾಮ ಪರಿಹಾರ ಕಾರ್ಯಕ್ಕಾಗಿ ಬಿಡುಗಡೆ ಮಾಡಿದ್ದಾರೆ. ಅಕ್ಕತಂಗೀರ ಹಳದಲ್ಲಿ ಶ್ರೀ ಬಸವಣ್ಣಪ್ಪ ನಿವಾಸಿ, ನಿಂಗಪ್ಪವಾಸ್ತಿ, ಬಾಳಪ್ಪ ಹುಚ್ಚಪ್ಪ ಗೋಳ ಇವರನ್ನೂ; ವಾಚ್ಛಾಪುರದಲ್ಲಿ ಹಿರೇಮಠದ ಸ್ವಾಮಿ ಶ್ರೀ. ಉಜ್ಜಯ್ಯ ಸ್ವಾಮಿಗಳನ್ನು ಬಂಧಿಸಿರುವರು. ಜಲಗಿ ಬಸ್ತವಾಡ ಬಾಂಬು ಪ್ರಕರಣದಲ್ಲಿ ಈವರೆಗೆ ೨೦೦ ಜನರನ್ನು ಬಂಧಿಸಿದ್ದಾರೆ. ಇನ್ನೂ ಸೆರೆಮನೆ ಸತ್ರ ನಡೆಯುತ್ತಿವೆ. ಹಲಗಿಯ ದೊಡ್ಡಣ್ಣವರ ಬಂಧುಗಳು ಬಂಧಿಸಲ್ಪಟ್ಟಿರುವರು ಶಹಾಪುರದ ವ್ಯಾಪಾರಿ ಶ್ರೀ ಕೃಷ್ಣರಾವ್ ಗಾಗಡೆಯವನ್ನು ಡಿ ಇ. ಕಾನೂನಿನಂತೆ ಬಂಧಿಸಲಾಗಿದೆ. ಬೆಳಗಾವಿ ಜಿಲ್ಲೆಯ ವಿಧ್ವಂಸಕರ ಖಟ್ಲೆಗಳ ವಿಚಾರಣೆಗಾಗಿ ಸರಕಾರವು

ಸ್ಥಳೀಯ ಸಿನೇಮಗಳು

ಬಾಲಾಜಿ ಟಾಕೀಸಿನಲ್ಲಿ 'ಹರಿಶ್ಚಂದ್ರ' ಚಿತ್ರವು ಮೂರನೇ ವಾರ ಯಶಸ್ವಿಯಾಗಿ ಪ್ರದರ್ಶಿತವಾಗುತ್ತದೆ. ಹರಿಶ್ಚಂದ್ರ ನಮ್ಮ ಜಿಲ್ಲೆಯ ಜನರನ್ನು ಮರುಳುಗೊಳಿಸಿ ಬಿಟ್ಟಿದೆ!

ಸೆಂಟ್ರಲ್ ಟಾಕೀಸಿನಲ್ಲಿ ತಾಜ್‌ಮಹಲ್ ಪಿಕ್ಚರ್ಸ್ ಕೃತಿ 'ಉಜಾಲಾ' ಪ್ರದರ್ಶಿತವಾಗುತ್ತಿದೆ. ರೂಪರಾಣಿ ನಾಸೀಮ್, ನಟರಾಜ ಪೃಥ್ವಿರಾಜನೊಡನೆ ಇದೇ ಪ್ರಥಮ ಸಲ ಈ ಚಿತ್ರದಲ್ಲಿ ನಟಿಸುತ್ತಾಳೆ.

ಶ್ರೀ. ಕಡಕೋಳಯವರನ್ನು ... ಜಪ್ತಿಮಾಡಿ ನೇಮಿಸಿದ್ದಾರೆ. ಮುಗುಟಖಾನ ಹುಬ್ಬಳ್ಳಿ ಮತ್ತು ಸೌಂದಲಗಿ ಈ ಎರಡು ಹಳ್ಳಿಗಳ ಮೇಲೆ ಕ್ರಮಶಃ ಆರು ಮತ್ತು ಮೂರು ಸಾವಿರ ರೂಪಾಯಿ ಸಾಮುದಾಯಿಕ ದಂಡ ಹೊರಿಸಲಾಗಿದೆ. ಖಾನಾಪುರ ತಾಲೂಕಿನಲ್ಲಿ ಪೋಲೀಸರು ದಾಳಿ ಮಾಡಿ ಅಪರಾಧಿಗಳನ್ನು ಸಂಶೋಧಿಸುತ್ತಿರುವರು. ಕೌಜಲಗಿಯಲ್ಲಿ ಶಾನೇಮುಚಂದ ತಾರಾಚಂದ ಶೇಟರನ್ನು ಬಂಧಿಸಿರುವರು. ಮುನವಳ್ಳಿಯ ಗುರು ಲಿಂಗಪ್ಪ ಗೇವಶೆಟ್ಟಿ ಚನ್ನಪ್ಪವಾಳ ಮತ್ತು ಪಾಂಡುರಂಗ ಮಿರಜಕರ ಇವರನ್ನು ಡಿ. ಇ. ಕಾನೂನಿನಂತೆ ಬಂಧಿಸಿರುವರು. ತಿಗಡೊಳ್ಳಿಯಲ್ಲಿ ೧೧, ಕಾದರೊಳ್ಳಿಯಲ್ಲಿ ೨ ಹಾಗೂ ದೇವಶೀಗಿ ಹಳ್ಳಿಯಲ್ಲಿ ೨ ಹೀಗೆ ಒಟ್ಟು ೧೫ ಜನರನ್ನು ಬಂಧಿಸಿರುವರು. ದೇಶನೂರಿಯ ೮ ಜನರು ತಿಗಡೊಳ್ಳಿಯ ೩ ಜನರು ತಾವಾಗಿಯೇ ಹಾಜರಾಗಿರುವರು. ಹೊಸರಿತ್ತಿ ಆಶ್ರಮದ ಶ್ರೀ. ಪ್ರಭು ನವಣೂರ ಇವರನ್ನು ಬಂಧಿಸಿರುವರು. ವಾಚ್ಛಾಪುರದಲ್ಲಿ ಕೃಷ್ಣಾಜಿ ಸಖಾರಾಮ ದೇಶಪಾಂಡೆ, ಗಣೂ ದೇಶಪಾಂಡೆ ಹಾಗೂ ಟಿ. ಎ. ದೇಶಪಾಂಡೆ ಇವರು ಬಂಧಿತರಾಗಿರುವರು.

ಧಾರವಾಡ

ಕರ್ನಾಟಕದ ಪ್ರಸಿದ್ಧ ಮುಖಂಡರಾದ ಶ್ರೀ ದತ್ತಾತ್ರೇಯ ಕರಮರಕರರನ್ನು ಮತ್ತು ಶ್ರೀ. ಹುಕ್ಕೇರಿಕರರನ್ನು ಮುಂಬಯಿಯಲ್ಲಿ ಬಂಧಿಸಿರುವರು ಇವರನ್ನು ಹಿಡಿದುಕೊಟ್ಟವರಿಗೆ ೧೦೦೦ ಮತ್ತ ೫೦೦ ರೂಪಾಯಿ ಇನಾಮು ಸರಕಾರದಿಂದ ಸಾರಲಾಗಿತ್ತು. ಧಾರವಾಡದ ಹಂಭಾವು ಸಾರಿಯವರು ಬಂಧಿತರಾಗಿರುವರು ಗದಗದ ಈಶ್ವರಪ್ಪ ಬಡಿಗೇರರೂ ಸೆರೆಸಿಕ್ಕಿರುವರು. ಮಾಳವಾಡದ ಮಹಾದೇವಪ್ಪ ನೀಲಗಾರದ ಇವರು ತಾವೇ ಹಾಜರಾದರು. ಕರ್ಜಗಿಯ ಭರಪ್ಪಾ ವಡ್ಡಿಸಕೊಪ್ಪ ಇವರ ಬಂಧನವಾಗಿದೆ. ಧಾರವಾಡದ ಜಿಲ್ಲಾ ಪೋಲೀಸರು ಧಾರವಾಡದ ೧೫ ಜನರಿಗೆ ಮೇ ೧೫ರೊಳಗೆ ಹಾಜರಾಗಲು ನೋಟೀಸು ಕೊಟ್ಟಿದ್ದಾರೆ. ಧಾರವಾಡ ಜಿ. ಎಸ್. ಖಾತೆಯವರನ್ನು ಬಳ್ಳಾರಿಯಲ್ಲಿ ಬಂಧಿಸಿದರು ಹಾದಿ ಸಿಂದ್ಲಿಕಪ್ಪರನ್ನು ಸೆರೆಹಿಡಿಯಲಾಗಿದೆ. ಹುಬ್ಬಳ್ಳಿಯಲ್ಲಿ ಶ್ರೀ. ದತ್ತ ದೀಕ್ಷಿತ ಬಂಗಾಪುರ, ಶಿವಾನಂದ ನೂನು ಶಿವರಾಯಪ್ಪ ಮಾನಪ್ಪ ಮಾನಯನವರ ಮತ್ತು ಗೋವಿಂದ ರೆಡ್ಡಿ ಭೀಮ ರೆಡ್ಡಿ ಇವರನ್ನು ಸೆರೆಹಿಡಿಯಲಾಗಿದೆ. ಇಬ್ರಾಹಿಮಪುರದ ಗಂಗನಗೌಡರು ಮುದಿಗೌಡರು, ಇವರನ್ನು ಬಂಧಿಸಿ ನವಲಗುಂದದಲ್ಲಿಟ್ಟಿದ್ದರು. ಹುಬ್ಬಳ್ಳಿ ವರ್ತಕ ಶಾಪಿನ ಅನೇಕ ಕೆಲಸಗಾರರು ತಾ ೨೮ರಂದು ೨ ತಾಸು ಮುಷ್ಕರ ಹೂಡಿದರು. ಆ ಮೇಲೆ ಮೆನೇಜರರು ಬಂದು ಭರವಸೆ ಕೊಟ್ಟಂತೆ ಕೆಲಸ ಸುರುವಾಯಿತು. ಇದು ಅವರ ಎರಡನೆಯ ಮುಷ್ಕರ. ಗದಗದ ಶ್ರೀಗಳು ಶಿವರುದ್ರಪ್ಪ ಪರಕಾಳ, ಎಲ್ಲಪ್ಪಣ ಮತ್ತು ಮಲ್ಲೇಶ್ವರ ಸವದತ್ತಿ ಇವರನ್ನು ಬಂಧಿಸಲಾಗಿದೆ.

ಉತ್ತರ ಕನ್ನಡ

ಸಿದ್ಧಾಪುರದಲ್ಲಿ ಕೆಲದಿನಗಳ ಹಿಂದೆ ತಾಲೂಕು ಕಚೇರಿ ಹತ್ತಿರ ಸ್ಫೋಟವಾಯಿತು. ಸಿದ್ಧಾಪುರದಲ್ಲಿ ಕಳೆದ ೧೨ನೇ ತಾರೀಕಿನಂದು ಹುಡುಗರು ಪ್ರಭಾತಫೇರಿ ಮಾಡಿದರು. ಅವರನ್ನು ಚದರಿಸಲು ಪೋಲೀಸರು ಯತ್ನಿಸಿದರು ಧ್ವಜಗಳನ್ನು ಕಿತ್ತುಕೊಂಡರು ಕೊನೆಗೆ ಶಾಲೆಯ ಬಳಿ ಧ್ವಜವಂದನೆಯಾಯಿತು. ಹೊನ್ನಾವರ ಗುರ್ಪುರಹಳ್ಳಿಯ ಭಾಗವತರು ಸರ್ಕಸ್ ನೋಡಲು ಬಂದಿದ್ದು ಅವರನ್ನು ಸಂಶಯದ ಮೇಲೆ ಬಂಧಿಸಿಬಿಟ್ಟರು. ಸಿರ್ಸಿ ಮೇಲೆ ಹೇರಿರುವ ಐದುಸಾವಿರ ಪುಂಡುಗಂದಾಯದ ಬಗ್ಗೆ ನೋಟೀಸು ಜಾರಿಯಾಗಿದೆ ಅಂಕೋಲೆಯಲ್ಲಿ ಕಳೆದ ೬ನೇ ತಾರೀಕಿನಿಂದ ೧೩ರ ವರೆಗೆ ವಿದ್ಯಾರ್ಥಿಗಳ ಹರತಾಳ ಧ್ವಜವಂದನೆ ಭಜನೆ ಮೊದಲಾದವು ನಡೆದವು. ಖರೆದೂ ಹನುಮಂತ ಶೆಟ್ಟಿ ಉರುವಳೆ ಮತ್ತು ರಾಮಕೃಷ್ಣ ಶೆಟ್ಟಿ ಉರುವಳ ಇವರನ್ನು ಸೆರೆಹಿಡಿಯಲಾಗಿದೆ. ಕುಮತಾ ದಾಳೂ ಕುಮೋಠಬದಲ್ಲಿ ಅಕ್ಕಿ ಲೂಟಿ ಮಾಡಿದ ಬಗ್ಗೆ ೧೫ ಜನರ ಬಂಧನವಾಗಿದೆ.

ಅಂಕೋಲೆಯ ಶ್ರೀ. ಮುಕುಂದ ಪ್ರಭುಗಳ ಬಂಧನವಾಗಿದೆ. ಇವರ ಮಗ ಶ್ರೀ. ದಯಾನಂದ ಪ್ರಭು ಸಿಕ್ಕಿಲ್ಲ.

ಕನ್ನಡ ಸಂಸ್ಥಾನಗಳು

ಬಾಪೂ ಸಾಹೇಬ ಪಟವರ್ಧನ ಕಾಗವಾಡ ಹಾಗೂ ಶಾಮರಾವ ಜಿರಗುರೆ ಇವರನ್ನು ಬಂಧಿಸಿರುವರು. ಹಾತಕ ಕೊಂಗಲೆಪೇಟೆಯ ಸಾಂಗವದ ಪರೇಲರವಾಸಿ ಮತ್ತು ಚಾವಡಿಗೇಗೆ ಬೆಂಕಿ ಹಚ್ಚಲಾಗಿದೆ. ನೂಲದಲ್ಲಿ ವಿಧ್ವಂಸಕ ಚಟುವಟಿಕೆ ಬಗ್ಗೆ ಸುಮಾರು ೧೨ ಜನರ ಬಂಧನವಾಗಿದೆ. ಈಸೂರು ಖಟ್ಲೆ ಪುನರ್ವಿಮರ್ಶೆಗಾಗಿ ನ್ಯಾಯಮೂರ್ತಿ ನಾಗೇಶ್ವರರಾಯರನ್ನು ನೇಮಿಸಿದ್ದಾರೆ. ಮೈಸೂರು ಸಂಸ್ಥಾನದ ಮುಂದಾಳುಗಳಾದ ಶ್ರೀಗಳು ಡಿ. ವಿ. ಗುಂಡಪ್ಪ, ಎಂ. ಪಿ. ಸೋಮಶೇಖರರಾವ್ ನಿಟ್ಟೂರ್ ಶ್ರೀನಿವಾಸರಾವ್, ಪಿ. ಆರ್. ರಾಮಯ್ಯ, ಟಿ. ಟಿ. ಶರ್ಮಾ ಮೊದಲಾದವರು ಒಂದು ಪ್ರಕಟಣೆ ಹೊರಡಿಸಿ, ಫೆಡರಲ್ ಕೋರ್ಟಿನ ತೀರ್ಮಾನದಂತೆ ಮೈಸೂರು ಸರಕಾರದವರು ರಾಜಕೀಯ ಕೈದಿಗಳ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿರುವರು. ಜೂನ್‌ನಿಂದ ಸೇರುವ ಪ್ರಜಾಪ್ರತಿನಿಧಿ ಸಭೆ ಕಾಂಗ್ರೆಸ್ ಸದಸ್ಯರು ಹೋಗಬಾರದೆಂದು ನಿರ್ಣಯವಾಗಿದೆ.

ಕೊಲ್ಹಾಪುರ ಸಂಸ್ಥಾನದ ನೆರ್ಲೆಚಾವಡಿ ಹಾಗೂ ಅಲ್ಲಿಯ ಕಾಗದ ಪತ್ರಗಳಿಗೆ ಯಾರೋ ಬೆಂಕಿ ಹಚ್ಚಿದ್ದಾರೆ.

ವಿಜಾಪುರ

ವಿಜಾಪುರದ ಕರ್ನಾಟಕ ವೈಭವ ಮುದ್ರಣಾಲಯವನ್ನು ಸ್ವಾತಂತ್ರ ದಿನದ ನಿಮಿತ್ತ ಪ್ರಕಟವಾದೊಂದು ಹಸ್ತಪತ್ರಿಕೆಯ ನಿಮಿತ್ತ ಜಪ್ತಿಮಾಡಿದರು. ಹಂಸಭಾವಿ ಶ್ರೀ. ಶಿವಪ್ಪ ನೇಶ್ವಿಯವರ ಮೇಲೆ ವಾರಂಟಿದ್ದು, ಅವರು ಹಾಜರಾಗದ್ದರಿಂದ ಅವರ ತಂದೆಯವರ ಆಸ್ತಿ ಸರಕಾರದವರು ಜಪ್ತಿಮಾಡಿದ್ದಾರೆ. ಹೊಸಪೇಟೆಯ ತಾಲೂಕಿನ ನಾರಾಯಣ ದೇವರಕೆರಿಗೆ ಸೇರಿದ ಟಪ್ಪಾಲುಪೆಟ್ಟಿಗೆಯೊಂದು ಕಾಣೆಯಾಗಿದೆ. ಇಲ್ಲಿನ ಪೋಲೀಸರು ಶ್ರೀ ವರ್ಧಮಾನ ಇವರನ್ನು ಬಂಧಿಸಿರುವರು.



ಯುದ್ಧದ ದೆಸೆಯಿಂದಾಗಿ, ಎಂಡ್ರ್ಯೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್‍ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಪುನಃ ದೊರಕುವುದು.

ಪುಸ್ತಕಾವಲೋಕನ

ಆಧುನಿಕ ರಶ್ಯಾ

'ಸರ್ವರಿಗೂ ಸಮಪಾಲು' ಎಂಬುದು ಇಂದು ವಿಶ್ವ ಜನತೆಯ ಘೋಷಣೆ. ಇದರ ಘೋಷಕರ ಪಿತೃಭೂಮಿ ಆಧುನಿಕ ರಶ್ಯಾ, ಯು. ಎಸ್. ಎಸ್. ಆರ್. ಯಾವುದೇ ರಾಷ್ಟ್ರದಲ್ಲಾದರೂ ಒಂದು ಹೊಸ ಆಡಳಿತ ಸ್ಥಾಪಿತವಾಗಬೇಕಾದರೆ ಹೋರಾಟ, ಕ್ರಾಂತಿಗಳು ಆಗಿಯೇ ಆಗಬೇಕು. ಆದರೆ ರಶ್ಯದಲ್ಲಿ ಇಂಥಾ ಹೊಸ ರಾಜ್ಯ ಪದ್ಧತಿಯು, ಜಾರ್ ಅರಸನ ಚಕ್ರಾಧಿಪತ್ಯವು ಉರುಳಿ ಕಮ್ಯೂನಿಸ್ಟರ ಏಕಾಧಿಪತ್ಯವು ಸ್ಥಾಪಿತವಾದಾಗ ಆದ ಕ್ರಾಂತಿಯ ಇತಿಹಾಸವು ರುದ್ರ ರಮಣೀಯವಾದುದು, ಅಖಿಲ ಪ್ರಪಂಚವನ್ನೇ ಬೆರಗುಗೊಳಿಸಿದ್ದು; ಚಕ್ರಾಧಿಪತಿಗಳನ್ನು, ಸಾಮ್ರಾಜ್ಯಶಾಹಿಗಳನ್ನು, ಭಂಡವಾಳಗಾರರನ್ನು ನಡುಗಿಸಿ ಬಿಟ್ಟದ್ದು! ಇಂಥಾ ಭವ್ಯವಾದ ಇತಿಹಾಸದ ವಿವರವನ್ನು ಸಾದ್ಯಂತ ಕನ್ನಡದಲ್ಲಿ ಇದೇ ಪ್ರಥಮವಾಗಿ ಒರೆದವರು, ಪತ್ರಿಕಾ ಪ್ರಪಂಚದಲ್ಲಿ ಹಾಗೂ ರಾಜಕೀಯದಲ್ಲಿ ನುರಿತವರೂ, ಆ ಬೆಂಗಳೂರಿನ 'ತಾಯಿನಾಡು' ಮತ್ತು 'ಡೈಲಿ ನ್ಯೂಸ್' ಪತ್ರಿಕೆಗಳ ಸಂಪಾದಕರೂ ಆದ ಶ್ರೀ ಪಿ. ಆರ್. ರಾಮಯ್ಯರು, ಇದು ಮೊದಲು 'ಫ್ರಾನ್ಸಿನ ಮಹಾ ಕ್ರಾಂತಿ'ಯೆಂಬ ರಾಜಕೀಯ ಗ್ರಂಥವನ್ನು ಬರೆದು ಕನ್ನಡಿಗರ ಮನ್ನಣೆಗೆ ಪಾತ್ರರಾದವರು.

ಆಧುನಿಕ ರಶ್ಯಾ ೧೯೧೭ನೇ ನವಂಬರ ೭ನೆಯ ತಾರೀಕಿನಿಂದ ಆರಂಭವಾಯಿತು. ಆ ದಿನ ಬಾಲ್ಶವಿಸ್ಟರು ಲೆನಿನ್ ಮತ್ತು ಟ್ರಾಟ್‌ಸ್ಕಿ ಇವರ ಮುಂದಾಳುತನದಲ್ಲಿ ರಶ್ಯದ ಆಡಳಿತವನ್ನು ಪ್ರಜೆಗಳ, ಕೂಲಿಗಾರರ ಸಲುವಾಗಿ ಸ್ವಾಧೀನಪಡಿಸಿಕೊಂಡರು. ಅಂದಿನಿಂದ ಇದುವರೆಗೆ ಬಾಲ್ಶವಿಸ್ಟರು ಕಮ್ಯುನಿಸ್ಟ್ ಪಾರ್ಟಿಯನ್ನು ಸ್ಥಾಪಿಸಿ ಬೆಳೆಸಿಕೊಂಡು ರಶ್ಯದ ಆಡಳಿತವನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಂಡಿರುವರು. ಮುನ್ನೂರು ವರ್ಷಗಳಿಂದ ನಡೆದುಕೊಂಡು ಬಂದಿದ್ದ ಜಾರ್ ಪ್ರಭುತ್ವವು ೧೯೧೭ನೇ ಮಾರ್ಚ ೧೫ರಂದು ಕೊನೆಗೊಂಡಿತು. ಆ ಮಧ್ಯೆ ಕೆಲವು ತಾತ್ಕಾಲಿಕ ಸರಕಾರಗಳು ತಲೆಯೆತ್ತಿದ್ದರೂ ಬಲವಿಲ್ಲದೆ ಕೊನೆಗೊಂಡವು. ಅದೇ ನವಂಬರ ೭ರಲ್ಲಿ ಸ್ಥಾಪಿತವಾದ ಬಾಲ್ಶವಿಸ್ಟರ ಅಧಿಕಾರವು ಭದ್ರ ತಳಹದಿಯಲ್ಲಿ ಇದುವರೆಗೂ ನೆಲೆ ನಿಂತಿದೆ. ಕೂಲಿಗಾರರು, ಪ್ರಜೆಗಳು ಆ ಸರಕಾರದ ಆಶ್ರಯದಲ್ಲಿ ಇಂದು ಸಜೀವರಾಗಿದ್ದಾರೆ, ಪ್ರಬಲರಾಗಿದ್ದಾರೆ. ಇಂಥಾ ನವನಿರ್ಮಾಣಕಾರಣವಾದ ರಶ್ಯದ ಮಹಾಕ್ರಾಂತಿಯ ವಿಸ್ತಾರ ಇತಿಹಾಸದ ಸಿಂಹಾವಲೋಕನವು ಈ ಪುಸ್ತಕದಲ್ಲಿದೆ. ಆಂಗ್ಲ ಭಾಷೆಯಲ್ಲಿ ಈ ಕುರಿತು ಅನೇಕ ಪುಸ್ತಕಗಳು ಪ್ರಕಟವಾಗಿವೆ. ಇವುಗಳ ಆಧಾರದ ಮೇಲೆ ಲೇಖಕರು ಈ ಬೃಹದ್ಗ್ರಂಥವನ್ನು ರಚಿಸಿದ್ದಾರೆ.

ರಶ್ಯದ ಪೂರ್ವೇತಿಹಾಸದಿಂದ ತೊಡಗಿ, ಕೊನೆಯ ಜಾರ್ ಅರಸ II ನಿಕಲಸನು ಪಟ್ಟಕ್ಕೆ ಬಂದಾಗ ಇದ್ದ ರಶ್ಯದ ಪರಿಸ್ಥಿತಿ, ಜಾರ್ ಪ್ರಭುತ್ವದಿಂದ ಅತೃಪ್ತ ರಶ್ಯದಲ್ಲಿ ಮೂಡಿದ ಕ್ರಾಂತಿಯ ಬೀಜಗಳು, ಜನರ ಬೇಡಿಕೆಗಳ ನಿರಾಕರಣೆ, ರಶ್ಯಾ ಜಪಾನ್ ಯುದ್ಧದ ಪರಿಣಾಮವಾಗಿ ಅಶಾಂತಿ ಹೆಚ್ಚಿ ಕ್ರಾಂತಿ ಆರಂಭವಾದುದು, ಡೂಮಾ ಸಭೆಯ ಸ್ಥಾಪನೆ ಮಾಡಿ ಜಾರನು ಜನತೆಯನ್ನು ತೃಪ್ತಿಗೊಳಿಸಲು ಹವಣಿಸಿದ್ದು, ಅರಮನೆತನದಲ್ಲಿ ರಾಸ್‌ಪುಟಿನ್ನನ ಪ್ರವೇಶ ಮತ್ತು ರಾಣಿ ಜಾರಿನಾಳ ಪರವಶಭಾವ ಮತ್ತು ಇವೆರಡರ ಪರಿಣಾಮವಾಗಿ ಹೆಚ್ಚಿದ ಅತೃಪ್ತಿ, ಮುಂದೆ ಕ್ರಾಂತಿಕಾರರ ಪ್ರಾಬಲ್ಯ, ಆದರಿಂದಾಗಿ ಜಾರನ ಸಿಂಹಾಸನ ತ್ಯಾಗ, ರಾಸ್‌ಪುಟಿನನ ಹಾಗೂ ಪರಿವಾರ ಸಮೇತ ರಾಜ ದಂಪತಿಗಳ ಕೊಲೆ, ಆ ಮೇಲೆ ಸ್ಥಾಪಿತವಾದ ತಾತ್ಕಾಲಿಕ ಸರಕಾರಗಳ ಆಡಳಿತ, ಮುಂದೆ ಕಾರ್ಲ್ ಮಾರ್ಕ್ಸನ ತತ್ವಗಳ ಪ್ರಸಾರ, ಸೋಶಿಯಲಿಸಂ ಕಮ್ಯುನಿಸಂಗಳ ವಿಚಾರ, ಲೆನಿನನ ಮುಂದಾಳುತನದಲ್ಲಿ ಬಾಲ್ಶೆವಿಕ ಪಾರ್ಟಿಯ ಸಾಹಸ, ಅನಂತರ ಸೋವಿಯೇಟ್ ಸರಕಾರದ ಸ್ಥಾಪನೆ, ಲೆನಿನನ ನವ ನಿರ್ಮಾಣ ಸಾಮರ್ಥ್ಯ, ಟ್ರಾಟ್‌ಸ್ಕಿಯನ್ನು ಮುರಿದು ಮೇಲೆ ಬಂದ ಸ್ಟಾಲಿನನ ಏಳಿಗೆ, ಕೊನೆಗೆ ಯು. ಎಸ್. ಎಸ್. ಆರ್. (ಯೂನಿಯನ್ ಓಫ್ ಸೋವಿಯೆಟ್ ಸೋಶಿಯಲಿಸ್ಟ್ ರಿಪಬ್ಲಿಕ್) ಸರಕಾರದ ವಿವರ ಇವಿಷ್ಟು ವಿಷಯಗಳನ್ನು ಈ ಗ್ರಂಥದಲ್ಲಿ ಲೇಖಕರು ವಿವರಿಸಿದ್ದಾರೆ. ೧೯೪೧ರ ಜೂನಿನಲ್ಲಿ ರಶ್ಯ ಮತ್ತು ಜರ್ಮನಿಗಳೊಳಗೆ ಯುದ್ಧ ಪ್ರಾರಂಭವಾಗಿ ೧೯೪೧ ನವಂಬರ ೭ರಲ್ಲಿ ಸೋವಿಯೇಟ್ ಕ್ರಾಂತಿಯ ೨೪ನೇ ವಾರ್ಷಿಕೋತ್ಸವದೆಂದು ಸ್ಟಾಲಿನ್ ಕೊಟ್ಟ ಸಂದೇಶದೊಡನೆ ಪುಸ್ತಕ ಕೊನೆಗೊಂಡಿದೆ. ಗ್ರಂಥದ ಅದ್ಯಂತಗಳಲ್ಲಿ ೧೯೪೧ರ ಯುದ್ಧಕ್ಕೆ ಮೊದಲಿನ ರಶ್ಯದ ಭೂಪಟವನ್ನೂ ಕೊಟ್ಟಿದ್ದಾರೆ.

ಈ ಕ್ರಾಂತಿಯ ಇತಿಹಾಸ ರಕ್ತರಂಜಿತ ಇತಿಹಾಸ. ಒಂದು ನವನಿರ್ಮಾಣವಾಗಬೇಕಾದರೆ ಈ ತರದ ರಕ್ತಾಕ್ರಾಂತ ಆಗಬೇಕೇ ಎಂದು ಮನಮರುಗುತ್ತದೆ. ಅದರಲ್ಲಿ ಕೆಲವು ನಿರ್ದಯೀ ವಧೆ, ಕೇವಲ ಸಂಶಯದ ಮೇಲೆ ಕೊಲೆ, ಕೇವಲ ತಮ್ಮ ಪಕ್ಷದ ಪ್ರತಿಷ್ಠೆ ಸ್ಥಾಪಿಸುವ ಸ್ವಾರ್ಥಕ್ಕಾಗಿ ಎದುರು ಪಕ್ಷದ ಹಾಗೂ ಅವರ ಮುಂದಾಳುಗಳ ದಯಾಶೂನ್ಯ ಹನನ, ಪುತ್ರ ಮಿತ್ರ ಪರಿವಾರ ಸಮೇತರಾದ ರಾಜ ದಂಪತಿಗಳ ಸೆರೆಮನೆಯ ಸಂಕಷ್ಟ, ಕೊನೆಗೆ ಅವರ ನಿರ್ದಯ ಹತ್ಯೆ, ಬಾಲ್ಶವಿಸ್ಟ್ ಅಧಿಕಾರ ಸ್ಥಾಪಿಸುವಲ್ಲಿ ಲೆನಿನನ ಬಲಭುಜವಾಗಿ ನಿಂತು ಹೋರಾಡಿದ ಕ್ರಾಂತಿ ವೀರ ಟ್ರಾಟ್‌ಸ್ಕಿಯ ದೇಶ ತ್ಯಾಗ ಮತ್ತು ಕೊಲೆ, ಇಂತು ಹಲವಾರು ಮರಣ ಕೃತ್ಯಗಳು! ಇವುಗಳನ್ನು ನೋಡಿದರೆ ಈ ಕ್ರಾಂತಿಯ ಬಗ್ಗೆ ಹೇಸಿಕೆ ತೋರುತ್ತದೆ, ಕ್ರಾಂತಿಕಾರರ ಹೇಡಿತನ ಸಂಕುಚಿತ ಬುದ್ಧಿ ಕಾಣುತ್ತದೆ. ಬಹುಶಃ ಈ ವಿವರ ವೃತ್ತಾಂತಗಳೆಲ್ಲಾ ರಶ್ಯದ ಬಗ್ಗೆ ಅತೃಪ್ತಿಯಿದ್ದ ಹಾಗೂ ಉಳ್ಳ ಬ್ರಿಟಿಷ್ ಸಾಮ್ರಾಜ್ಯಶಾಹೀ ಪ್ರಚಾರ ಪಂಡಿತರ ಉಪಪ್ರಚಾರದ ಪ್ರಭಾವವಿದ್ದರೂ ಇರಬಹುದು. ವಿಸ್ತಾರವಾದ ಗ್ರಂಥವನ್ನು ಸ್ವಲ್ಪ ಸಾವಕಾಶ ಬರೆದಿದ್ದರೆ, ಇಲ್ಲವೇ ಭಾಷಾ ಶೈಲಿಗಳನ್ನು ತಿದ್ದಿಕೊಂಡಿದ್ದರೆ ಗ್ರಂಥವಿದು ಇನ್ನಷ್ಟು ಆಕರ್ಷಕವಾಗುತ್ತಿತ್ತು. ಪುಸ್ತಕದ ಬೆಲೆ ಅಷ್ಟೊಂದು ಹೆಚ್ಚಾಗಿದೆ ಎಲ್ಲರೂ ಕೊಂಡುಕೊಳ್ಳುವಂತಿದೆ.

ಯುದ್ಧದ ನಿಮಿತ್ತ ಇಂದು ನಮ್ಮ ಜನತೆಯಲ್ಲಿ ರಾಜಕೀಯ ಮನೋಭಾವನೆ ಬೆಳೆದಿದೆ. ರಾಷ್ಟ್ರೀಯ ವಿಚಾರದಂತೆ ಅಂತರ್ರಾಷ್ಟ್ರೀಯ ವಿಚಾರಗಳೂ ಇಂದು ನಮ್ಮ ಸಮಸ್ಯೆಗಳಾಗಿವೆ. ಈ ಕಾಲದಲ್ಲಿ ಇಂಥಾ ಗ್ರಂಥಗಳ ಅವಶ್ಯಕತೆ ಬಹಳವಿದೆ. ಕನ್ನಡಿಗರು ಈ ಗ್ರಂಥದ ಉತ್ತಮ ಪ್ರಯೋಜನ ಮಾಡಿಕೊಳ್ಳಬೇಕು. ಶ್ರೀ ರಾಮಯ್ಯರು ಹಾಗೂ ನಮ್ಮ ನಾಡಿನ ಇತರ ರಾಜಕೀಯ ಅನುಭವಿಗಳು ಇಂಥಾ ಹಲವು ಗ್ರಂಥಗಳನ್ನು ಬರೆದು ಕನ್ನಡದ ಸರಸ್ವತೀ ಭಂಡಾರವನ್ನು ತುಂಬಬೇಕು, ಕನ್ನಡಿಗರ ಹೃದಯ ಬುದ್ಧಿಗಳನ್ನು ವಿಕಾಸಗೊಳಿಸಬೇಕು. 'ಆಧುನಿಕ ರಶ್ಯಾ' ಕನ್ನಡದಲ್ಲಿ ಇದುವರೆಗೆ ನಿರ್ಮಾಣವಾದ ಅಂತರಾಷ್ಟ್ರೀಯ ರಾಜಕೀಯ ಗ್ರಂಥಗಳಲ್ಲಿ ಪ್ರಥಮ ಪಂಕ್ತಿಯದಾಗಿದೆ.

—ಕಯ್ಯಾರ.

ಗ್ರಂಥಕರ್ತ ಪಿ. ಆರ್. ರಾಮಯ್ಯ, ಪ್ರಕಾಶಕರು: ತಾಯಿನಾಡು ಪ್ರಕಟನಾಲಯ, ಬೆಂಗಳೂರು ನಗರ. ಕ್ರೌನ್ ೧/೪ ಆಕಾರದ ೩೫೬ ಪುಟಗಳು ಬೆಲೆ ರೂ. ೧-೮-೦.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—

ಕುಟಿಕೂರ ಟಾಲ್ಕಮ್ ಪೌಡರ್.

CUTICURA TALCUM POWDER

ವರ್ಜಿನಿಯಾ ಫ್ಲ್ಯುಕ್ಯೂರ್ಡ್ ಸಿಗರೇಟ್ ತಂಬಾಕು.

ಬೀಡಿ ತಯಾರಿಸುವರೆ ಹೊಸತೊಂದು ಪ್ರಯೋಗ

ನಿವಾಣಿ ಬೀಡಿ ತಂಬಾಕನ್ನು ವರ್ಜಿನಿಯಾ ಸಿಗರೇಟ್ ತಂಬಾಕಿನೊಂದಿಗೆ ಸೇರಿಸಿರಿ, ಇದನ್ನು ಸೇರಿಸಿ ಹದಗೊಳಿಸಿದರೆ ಬೀಡಿ ತಯಾರಿಸಲು ಅತ್ಯುತ್ತಮವೆನಿಸುವುದು.

ಹದಗೊಳಿಸಿದ ವರ್ಜಿನಿಯಾ ತಂಬಾಕು ಪರಿಮಳ ಪೂರ್ಣವೂ, ಆನಂದದಾಯಕವೂ ಆಗಿರುವುದರಿಂದ, ಬೀಡಿಗಳು ವರ್ಜಿನಿಯಾ ಸಿಗರೇಟಿನಂತೆ ಸುಖವನ್ನುಂಟುಮಾಡುತ್ತವೆ. ವರ್ಜಿನಿಯಾ ಬೀಡಿಗಳು ಹಗುರವಿರುವುದರಿಂದ ಪೌಂಡಿಗೆ ಹೆಚ್ಚು ಬೀಡಿಗಳಾಗುತ್ತವೆ.

ವರ್ಜಿನಿಯಾ ತಂಬಾಕಿಗೆ ಕಡಿಮೆ ಬೆಲೆಯಿರುವುದರಿಂದ ಹೆಚ್ಚು ಮಾರಾಟವಾಗಿ ಅಧಿಕ ಲಾಭ ಸಿಗುತ್ತದೆ.

ರಖಂ ಮತ್ತು ಚಿಲ್ಲರೆಯಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಹೈಜಿಯಾ ಟೊಬೆಕೊ ಕಂಪೆನಿ
ಮಣ್ಣಗುಡ್ಡ, ಮಂಗಳೂರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ.

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates

All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕೆ, ಉಪದ್ರವ, ಕರಿ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದ್ರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ,

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ;

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಮಿಥ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ಟರೀಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 14—5—1943 [ಸಂಚಿಕೆ 20]

'ನೆಹರು ವೆಲ್ಸರಿಗಿಂತ ಉತ್ತಮ ಇತಿಹಾಸಕಾರರು'

ಪಂಡಿತ ಜವಾಹರಲಾಲರು, ಹಿಂದೆ ಸೆರೆಮನೆಯಲ್ಲಿದ್ದಾಗ, ಮಗಳಿಗೆ ಪತ್ರ ಬರೆವ ರೂಪದಲ್ಲಿ ಜಗತ್ತಿನ ಇತಿಹಾಸದ ಕುರಿತು ಒಂದು ಸಾವಿರ ಪುಟಗಳ ಒಂದು ಉದ್ಗ್ರಂಥವನ್ನೇ ಬರೆದಿರುವರು. ನೆಹರು ಗ್ರಂಥಗಳನ್ನು ಅಮೆರಿಕನರೂ ಬಹಳ ಆಸಕ್ತಿಯಿಂದ ಓದುತ್ತಾರೆ. ನೆಹರು ಗ್ರಂಥಗಳು ಅಮೆರಿಕದಲ್ಲಿ ಪ್ರಕಟವಾಗಿ ಬಹಳ ಮಾರಲ್ಪಡುವುದೇ ಇದಕ್ಕೆ ನಿದರ್ಶನ. ಇತ್ತೀಚೆಗೆ 'ಕರೆಂಟ್ ಹಿಸ್ಟರಿ' ಎಂಬ ಪತ್ರಿಕೆಯಲ್ಲಿ ಎಡ್ವರ್ಡ್ ಮೋರ್‌ಗಿಲ್ಸ್ ಎಂಬವರು ನೆಹರುಗಳ ಜಗತ್ತಿನ ಇತಿಹಾಸ ಪುಸ್ತಕದ ಕುರಿತು ಬರೆಯುತ್ತಾ, ಈ ಪುಸ್ತಕವು ಇಂಗ್ಲೆಂಡಿನ ಪ್ರಸಿದ್ಧ ಲೇಖಕ ಎಚ್. ಜಿ. ವೆಲ್ಸರು ಬರೆದ 'ಜಗತ್ತಿನ ಇತಿಹಾಸ' ಪುಸ್ತಕಕ್ಕಿಂತಲೂ ಉತ್ತಮವಾದುದೆಂದು ಪ್ರಶಂಸಿಸಿದ್ದಾರೆ. ಆ ವಿಮರ್ಶಕರ ಅಭಿಪ್ರಾಯವಿಂತಿದೆ:—

"ಒಂದು ಸಾವಿರ ಪುಟ ತುಂಬ ನೆಹರುಗಳ ಭಾವನೆಯು ಚಿತ್ರಿತವಾಗಿದೆ. ಅವರ ವಿಷಯಾನುಭವ ಪೂರ್ಣವಾದದ್ದು. ಭಾರತದಲ್ಲಿ ಬ್ರಿಟಿಷರು ನಡೆಸುವ ಸಾಮ್ರಾಜ್ಯಶಾಹಿತ್ವವನ್ನು ಖಂಡಿಸುವಾಗಲೂ ನೆಹರು ಮಾತುಗಳಲ್ಲಿ ಒಂದಿಷ್ಟು ದ್ವೇಷ ಭಾವನೆಯಿಲ್ಲ. ಅವರು ಧೀರೋದಾತ್ತ ಸ್ವಭಾವದವರು; ಉದಾರ ಮನಸ್ಸಿನವರು. ನೆಹರುಗಳ ಈ ಇತಿಹಾಸ ವೆಲ್ಸರ ಪುಸ್ತಕಕ್ಕಿಂತಲೂ ಉತ್ತಮವಾಗಿದೆ. ನೆಹರು ಆಗಾಗ ಮಗಳನ್ನು ಎಚ್ಚರಿಸುತ್ತಾರೆ, ವೈಯಕ್ತಿಕವಾಗಿ ಆಂಗ್ಲೇಯರನ್ನು ದ್ವೇಷಿಸಬಾರದೆಂದು ಅವರು ಸಾರುತ್ತಾರೆ. ಇಂಗ್ಲೆಂಡಿನಲ್ಲಿರುವ ಪದ್ಧತಿಯ ದೋಷವೆಂದು ನೆಹರು ತಿಳಿಸುತ್ತಾರೆ. ಭಾರತೀಯರಿಗೂ ಒಮ್ಮೆ ಸಾಮ್ರಾಜ್ಯವಿದ್ದಾಗ ಅವರೂ ಹೀಗೆಯೇ ಮಾಡುತ್ತಿದ್ದರೆಂದು ತಿಳಿಸುತ್ತಾರೆ. ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ ಮಹನೀಯರ ಮಹಾ ಗುಣಗಳನ್ನು—ಭಾರತದ ಇಂದಿನ ದಾಸ್ಯಕ್ಕೆ ಅವರೇ ಕಾರಣರಾಗಿದ್ದರೂ—ನೆಹರು ಉದಾರರಾಗಿ ಪ್ರಶಂಸಿಸುತ್ತಾರೆ. ಕೊನೆಯ ಪರಿಚ್ಛೇದದಲ್ಲಿ ಬ್ರಿಟನು ಭಾರತಗಳೊಳಗಿನ ಹೋರಾಟದ ದುರಂತ ಚಿತ್ರ ತೋರಿಸುತ್ತಾರೆ. ಚೇಂಬರ್ಲೇನರ ಶಾಂತಿ ಧೋರಣೆಯು ಹೇಗೆ ಆಕ್ರಮಣಗಾರರಿಗೆ ಆಹ್ವಾನವಾಯಿತೆಂಬುದನ್ನು ವಿವರಿಸುವಾಗಲೂ ಅವರು ಔಚಿತ್ಯದ ಮೇರೆ ಮೀರಿಲ್ಲ. ಈ ಯುದ್ಧದ ಘಟನೆಗಳಿಂದ ಬ್ರಿಟನು ಪಾಠ ಕಲಿತು ಭಾರತದೊಡನೆ ಯೋಗ್ಯ ಒಪ್ಪಂದಕ್ಕೆ ಬರಲೆಂದು ನೆಹರು ಹಾರೈಸುತ್ತಾರೆ. ಆದರೆ ಅದು ಆಗುವ ವರೆಗೂ, ನೆಹರುಗಳ ವ್ಯಕ್ತಿತ್ವ, ಬುದ್ಧಿವಂತಿಕೆಗಳೆಲ್ಲಾ ಸೆರೆಮನೆಯ ಕತ್ತಲು ಕೋಣೆಯೊಳಗೇ ಬೆಳಗುತ್ತಿರಬೇಕಾಗಿದೆ!"

ವೈಸರಾಯರಿಗೆ ಬಹಿರಂಗಪತ್ರ

ಇಂದಿನ ಭಾರತದ ಸರ್ವಾಧಿಕಾರಿ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗೋರ ಮಾತೃಭೂಮಿ ಲಂಡನಿನಲ್ಲಿ 'ಜಾನ್‌ಬುಲ್' ಎಂಬ ಒಂದು ಪ್ರಸಿದ್ಧ ಪತ್ರಿಕೆಯಿದೆ. ಆ ಪತ್ರಿಕೆಯೇ ಅವರಿಗೆ ಹೀಗೆ ಒಂದು ಬಹಿರಂಗ ಪತ್ರ ಬರೆದಿದೆ. ಹೊರಗಿನವರಲ್ಲ; ಒಳಗಿನವರೇ! ಭಾರತೀಯರಲ್ಲ; ಬ್ರಿಟಿಷರೇ! ಭಾರತದಲ್ಲಿ ಸದ್ಯ ಉಂಟಾಗಿರುವ 'ಅನ್ನ ಬ್ರಹ್ಮ'ದ ಸಮಸ್ಯೆಯ ಕುರಿತು, ಆ ಪತ್ರದಲ್ಲಿ ಉಗ್ರ ಉಲ್ಲೇಖವಿದೆ. ಅದು ಇಂತಿದೆ:—

ವೈಸರಾಯರಿಗೊಂದು ಬಹಿರಂಗ ಪತ್ರ

ಜಸ್ಟಿಸ್ ಪಾರ್ಟಿಯವರು ಮುಸ್ಲಿಂ ಧರ್ಮಕ್ಕೆ ಸೇರುವರೆ?

"ಪ್ರಿಯ ಲಿನ್‌ಲಿತ್‌ಗೋ, ನೀವು ವೈಸರಾಯ್ ಆಗಿರುವ ಭಾರತದಲ್ಲಿ ಇಂದು ಕ್ಷಾಮವುಂಟಾಗಿದೆ; ಜನರು ಆಹಾರ ಸಿಗದೆ ಕಂಗೆಡುತ್ತಿದ್ದಾರೆ, ವ್ಯಾಪಾರಿಗಳ ಹಗಲು ಸುಲಿಗೆ ನಡೆಯುತ್ತಲೇ ಇದೆ. ಇದನ್ನೆಲ್ಲಾ ಕಂಡು ಬ್ರಿಟನಿಗೆ ನಾಚಿಕೆಯಾಗಿದೆ. ಭಾರತದ ನಲ್ವತ್ತು ಕೋಟಿ ಜನರು, ಇಂದು, ಹಿಂದೆಂದೂ ಆಗದ ಸುಲಿಗೆಗೆ ಬಲಿಯಾಗಿದ್ದಾರೆ. ಅವರ ಆಹಾರವಸ್ತುಗಳ ಬೆಲೆ ಶೇಕಡಾ ೧೮೦ರಷ್ಟು ಏರಿದೆ; ಇನ್ನೂ ಹೆಚ್ಚುತ್ತಲೇ ಇದೆ. ಹಿಂದೆ ಒಂದು ಪೆನ್ನಿ ಕ್ರಯವಿದ್ದ ಅಕ್ಕಿ ಈಗ ಒಂದು ಶಿಲಿಂಗ್ ಕೊಟ್ಟರೂ ಸಿಗಲೊಲ್ಲದು. ಆ ಜನರ ಹತ್ತಿರ ಹಣವೂ ಇಲ್ಲ. ಪಂಜಾಬಿನಲ್ಲೇ ಗೋದಿ ಸಿಗುವುದಿಲ್ಲ; ಡೆಲ್ಲಿಯಲ್ಲಿಯೇ ಅಕ್ಕಿ ದೊರಕುವುದಿಲ್ಲ. ಇದಕ್ಕೆಲ್ಲಾ, ಭಾರತ ಸರಕಾರ ಹೇಳುವುದೇನು? ಪ್ರಾಂತಗಳಲ್ಲಿ ಸ್ವಂತ ಆಡಳಿತವಿದೆಯೆಂದೆ? ಇದೆಲ್ಲಾ ಟೊಳ್ಳು. ನಿಜವಾಗಿ ಹೇಳುವುದಾದರೆ ಕೇಂದ್ರ ಸರಕಾರ ಪ್ರಾಂತ ಸರಕಾರಗಳ ಅಧಿಕಾರವನ್ನೆಲ್ಲಾ ನುಂಗಿ ನೀರ್ಕುಡಿದಿದೆ. ನೀವು ಅದರ ಸರ್ವಾಧಿಕಾರಿಗಳು. ನಿಮ್ಮ ಕೇಂದ್ರ ಸರಕಾರಕ್ಕಾದರೂ ಅಧಿಕಾರ ಎಷ್ಟು! ಆಡಿದ್ದೇ ಆಜ್ಞೆ; ಮಾಡಿದ್ದೇ ಶಾಸನ! ಹೀಗಿರುವಾಗ ಈ ಆಹಾರ ಸಮಸ್ಯೆ ಬಗ್ಗೆ, 'ಬಡವರ ಬಗ್ಗರ ತುತ್ತಿನ ಚೀಲ'ದ ಚುರು ಚುರು ನಿಲ್ಲಿಸುವ ಬಗ್ಗೆ, ನೀವೇನು ಮಾಡಿದ್ದೀರಿ? ಬೇಡದ ಶಾಸನ, ಈ ಮತ್ತಿನ್ನಿತರ ಕೆಲಸ ನಿಲ್ಲಿಸಿ, ಜನರ ಸಹಕಾರ ಪಡೆದು, ಯೋಗ್ಯ ವ್ಯವಸ್ಥೆಯನ್ನಾದರೂ ಮಾಡಬಾರದೆ? ಈ ಬರಗಾಲವನ್ನು, ಈ ಹಗಲು ಸುಲಿಗೆಯನ್ನು ನಿಲ್ಲಿಸಬಾರದೆ?

'ಜಾನ್‌ಬುಲ್' ಎದೆಗಾರಿಕೆ ನೋಡಿದಿರಾ? ಹಗಲು ಸುಲಿಗೆಯಂತೆ, ಅದನ್ನು ನಿಲ್ಲಿಸಬೇಕಂತೆ! ಲಂಡನಿನಲ್ಲಿ ಕುಳಿತು ಭಾರತ ಸರಕಾರವನ್ನು ಎಷ್ಟು ಬೇಕಾದರೂ ಟೀಕಿಸಬಹುದು! ಭಾರತದಲ್ಲಿಯೂ ಜರ್ಮನ್ ಜಪಾನ್ ಸರಕಾರಗಳನ್ನು ಕಟ್ಟುಗ್ರ ಟೀಕೆ ಮಾಡುವವರಿದ್ದಾರೆ!

ಇದೊಂದು ಗಾಂಧೀ ಕತೆ!

ಸಮಯ ಪಾಲನೆಯಲ್ಲಿ ಗಾಂಧಿಜಿ ಅಗ್ರಗಣ್ಯರು. ಒಂದು ಹಳ್ಳಿಯಲ್ಲಿ ಸಭೆಯೊಂದು ಗೊತ್ತಾಗಿತ್ತು. ಗಾಂಧಿಜಿ ಸಭೆಗೆ ಬರಲು ಒಪ್ಪಿದ್ದರು. ಸಮಯ ತಡವಾಗಿತ್ತು. ಬನ್ನಾಲಿಯವರು ಒಂದು ಸೈಕಲು ಹಿಡಿದು ನಿಂತಿದ್ದರು; ಗಾಂಧಿಜಿ ಬಂದವರೇ, ಬನ್ನಾಲಿಯರ ಕೈಯಿಂದ ಸೈಕಲು ಎಳಕೊಂಡು, ಅದನ್ನೇರಿಬಿಟ್ಟರು; ಸೈಕಲು ಓರೆ ಓರೆ ಓಡುತಿತ್ತು; ಗಾಂಧಿಜಿ ಎಲ್ಲಿ ಮಾರ್ಗದಲ್ಲಿ ಬಿದ್ದುಬಿಡುತ್ತಾರೋ, ಎಂದು ಬನ್ನಾಲಿಯವರಿಗೆ ಕಳವಳ; ಹೇಗೋ ಜೇಗೋ ಸೈಕಲು ಏರಿ ನಿಶ್ಚಯಿಸಿದ ಹೊತ್ತಿಗೆ ಸಭಾಸ್ಥಳಕ್ಕೆ ಗಾಂಧಿಜಿ ಮುಟ್ಟಿಬಿಟ್ಟರು. ಇಂಥದೇ ಇನ್ನೊಂದು ಸಂದರ್ಭ. ಗಾಂಧಿಜಿ ಆಗಲೂ ಹೇಗೆ ಸಮಯಪಾಲನೆ ಮಾಡಿದರೆಂಬುದು ಆದರ್ಶಕರವಿದೆ.

ಗಾಂಧಿಜಿ ಬೊಂಬಾಯಿಯಲ್ಲಿದ್ದರು; ಅವರಿಗೆ ಡಿಲ್ಲಿಗೆ ಹೋಗಬೇಕಿತ್ತು; ಮಹಾನುಭಾವರೊಬ್ಬರು 'ಕಾರು ಕಳುಹಿಸಿ ಕೊಡುತ್ತೇನೆ ಸ್ಟೇಶನಿಗೆ ಹೋಗಲು' ಎಂದರು; ಗಾಂಧಿಜಿ 'ಆಯಿತು, ಸರಿಯಾಗಿ ಹೊತ್ತಿಗೇ ಕಳುಹಿಸಿಬಿಡಿ' ಎಂದರು. ಮಧ್ಯಾಹ್ನದ ಸಮಯ ಎಲ್ಲಾ ಕೆಲಸ ಮುಗಿಸಿ ಗಾಂಧಿಜಿ ಎರಡು ನಿಮಿಷ ಮೊದಲೇ ಸಜ್ಜಿತರಾಗಿ ಕಾದು ನಿಂತಿದ್ದರು. ಇನ್ನೂ ಕಾರು ಬಂದಿರಲಿಲ್ಲ. ಗಾಂಧಿಜಿ ಗಡಿಯಾರ ನೋಡುತ್ತಾರೆ; ತಪ್ಪಿದರೆ ರೈಲು ಹೊರಟು ಹೋಗುತ್ತದೆ. ಕೈಯಲ್ಲಿ ಕೋಲು ಹಿಡಕೊಂಡು ಹೊರಟೇಬಿಟ್ಟರು ಗಾಂಧಿಜಿ ಆ ಉರಿ ಬಿಸಿಲಿಗೆ! ಮಹಾದೇವ ದೇಸಾಯಿಗೆ ಗಡಿಬಿಡಿ! ಬೇರೆ ಕಾರು ತರಿಸೋಣವೆಂದರೂ ಗಾಂಧಿಜಿ ನಿಲ್ಲಲಿಲ್ಲ. ಒಂದೆರಡು ನಿಮಿಷಗಳಲ್ಲೇ ಆ ಕಾರು ಬಂತು; ಗಾಂಧಿಜಿ ಹೊರಟು ಹೋಗಿದ್ದರು; ಡ್ರೈವರನಿಗೆ ಗಡಿಬಿಡಿ; ಗಾಂಧಿಜಿಯನ್ನು ಹಿಂಬಾಲಿಸಿ ಹೋದ; ಮಧ್ಯಮಾರ್ಗದಲ್ಲಿ ಅವರೂ ಸಿಕ್ಕಿದರು; "ಕ್ಷಮಿಸಿರಿ, ಗಾಂಧಿಜಿ, ದಯವಿಟ್ಟು ಇನ್ನಾದರೂ ಕಾರಿನಲ್ಲಿ ಕುಳಿತುಕೊಳ್ಳಿ" ಎಂದು ಬೇಡಿದ ಡ್ರೈವರ್! ಗಾಂಧಿಜಿ ಒಲ್ಲೆನೆಂದರು. 'ನಿನ್ನ ತಪ್ಪಿಗಿದು ಪ್ರಾಯಶ್ಚಿತ್ತ. ನಾನು ಕಾರಿನಲ್ಲಿ ಕುಳಿತುಕೊಳ್ಳುವುದಿಲ್ಲ. ಹೀಗೆ ಮಾಡಿದರೆ ನೀನು ಸಮಯ ತಪ್ಪಿಸುವ ಅಭ್ಯಾಸವನ್ನು ಇನ್ನಾದರೂ ಬಿಟ್ಟುಬಿಡುವಿ" ಎನ್ನುತ್ತಾ ಕಾಲ್ನಡಿಗೆಯಿಂದಲೇ ಹೊರಟುಹೋದರು! ಟ್ರೈನು ಹತ್ತುವಾಗ, ಗಾಂಧಿಜಿ, ಕಾರಿನ ಯಜಮಾನನನ್ನು ಬಳಿ ಕರೆದು 'ದಯಮಾಡಿ ಆ ಡ್ರೈವರನನ್ನು ಶಿಕ್ಷಿಸಬೇಡಿ; ಆತನನ್ನು ನಾನೇ ಶಿಕ್ಷಿಸಿಬಿಟ್ಟಿದ್ದೇನೆ" ಎಂದು ಹೇಳಿದರು!

ಜಸ್ಟಿಸ್ ಪಾರ್ಟಿ ಮುಸ್ಲಿಂ ಧರ್ಮಕ್ಕೆ

ಕಳೆದ ೧೯೩೭ರ ಚುನಾವಣೆಯಲ್ಲಿ, ಮದ್ರಾಸ್ ಪ್ರಾಂತದಲ್ಲಿ 'ಜಸ್ಟಿಸ್ ಪಾರ್ಟಿ' ಕಾಂಗ್ರೆಸಿನೆದುರು ನಿಂತು ಪರಾಜಿತವಾದದ್ದೇ ಆ ಮೇಲೆ ಅದು ತಲೆಯೆತ್ತಲೇ ಇಲ್ಲ. ಈ ಅಪಜಯದ, ಅಪಮಾನದ ಫಲವಾಗಿ ಇತ್ತೀಚೆಗೆ 'ಜಸ್ಟಿಸ್ ಪಾರ್ಟಿ' ಧುರೀಣರಲ್ಲಿ ಸೋಲಿನ ಮನೋಭಾವನೆ (defeatism) ಬೆಳೆದುಬಂದಂತೆ ತೋರುತ್ತದೆ. ಇದಕ್ಕೆ ನಿದರ್ಶನವಾಗಿ, ಈ 'ಪಾರ್ಟಿ' ಧುರೀಣ, ಇ. ವಿ. ರಾಮಸ್ವಾಮಿ ನಾಯಕರ ಮಾತನ್ನೇ ಕೇಳಿ: ಇತ್ತೀಚೆಗೆ ತಿರುಚಿನಾಪಳ್ಳಿಯಲ್ಲಿ; ಈ ಪಾರ್ಟಿಯ ಒಂದು ಸಮ್ಮೇಳನ ಜರಗಿತು. ರಾಮಸ್ವಾಮಿ ನಾಯಕರನ್ನೇ ದ್ರಾವಿಡನಾಡು ನಕ್ಷೆಯ ಅನಾವರಣೋತ್ಸವಕ್ಕೆ ಆಮಂತ್ರಿಸಿದ್ದರು; ನಾಯಕರು, ಆ ನಕಾಶೆಯ ಅನಾವರಣ ಮಾಡುತ್ತಾ ಹೀಗಂದರು:—

'ದ್ರಾವಿಡರಿಗೆ ನ್ಯಾಯ ದೊರೆಯಬೇಕಾದರೆ ದ್ರಾವಿಡನಾಡನ್ನು ಭರತ ಖಂಡದಿಂದ ವಿಂಗಡಿಸಬೇಕು; ಅದುವರೆಗೆ ದ್ರಾವಿಡರಿಗೆ ಶಾಂತಿಯಿಲ್ಲ; ರಾಜಕೀಯ, ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯವಿಲ್ಲ. (ಜಿನ್ನಾ ಕೂಗುವ 'ಪಾಕಿಸ್ಥಾನ'ವನ್ನೂ ನಾಯಕರ ಈ 'ದ್ರಾವಿಡ ಸ್ಥಾನ'ವನ್ನೂ ಹೋಲಿಸಿ ನೋಡಿ! ಹೇಗೆ, ಎರಡೂ ಒಂದೇ ತಂದೆಯ ಮಕ್ಕಳಲ್ಲವೇ?) ದ್ರಾವಿಡ ನಾಡನ್ನು ಕೊಡದೆ ಹೋದರೆ, ಈ ನಾಡೆಲ್ಲಾ 'ಪಾಕಿಸ್ಥಾನ'ವಾಗುವ ಸಂಭವವಿದೆ; ದ್ರಾವಿಡರ ಭವಿಷ್ಯವನ್ನು ನಾನು ನೋಡುತ್ತಿದ್ದೇನೆ. ದ್ರಾವಿಡರಿಗೆ ಈ ನ್ಯಾಯವಾದ ಹಕ್ಕನ್ನು ಕೊಟ್ಟರೆ ಆಯಿತು; ಇಲ್ಲವಾದರೆ ಅವರು ತಮ್ಮ ಧರ್ಮವನ್ನು ಬಿಟ್ಟು ಮುಸಲ್ಮಾನರಾಗುವರು!"

ಆಹಾ ಎಂಥಾ ಉದ್ಗಾರವಿದು! ಎಂಥಾ ತರ್ಕವಿದು! ಸೋಲಿನ ಮನೋಭಾವನೆಯ ಪರಮಾವಧಿಯಲ್ಲಿ ಮನುಷ್ಯನು ಮತಿಗೆಡುತ್ತಾನೆ; ತನ್ನ ಮಾನವತ್ವವನ್ನೂ ಕಳೆದುಕೊಳ್ಳುತ್ತಾನೆ; ಹಿಂದೆ ಕಾಂಗ್ರೆಸಿನಲ್ಲಿದ್ದ ನಾಯಕರು ಮತ್ತೆ ಜಸ್ಟಿಸ್ ಪಾರ್ಟಿ ಸೇರಿದರು; ಜಸ್ಟಿಸ್ ಪಾರ್ಟಿಯಿಂದ 'ಮುಸ್ಲಿಂ ಮತ' ಅನಂತರ ಬೇರೊಂದು! ಯಾರ ಹಣೆಬರಹ ಹೇಗಿದೆಯೋ ಯಾರು ಬಲ್ಲರು? ಲಲಾಟ ಲಿಖಿತವನ್ನು ಯಾರು ತಾನೇ ಅಳಿಸಲಾಪರು? ರಾಮಸ್ವಾಮಿ ನಾಯಕರು, ತಮ್ಮ ಪಾರ್ಟಿ ಸಹಿತ ಮುಸ್ಲಿಂ ಲೀಗಿಗೆ ಸೇರುವುದಿದ್ದರೆ, ಯಾರಿಂದ ತಾನೇ ಅದನ್ನು ತಪ್ಪಿಸಲಿಕ್ಕಾದೀತು? ಅಥವಾ ಅದನ್ನು ತಪ್ಪಿಸಿಯಾದರೂ ಯಾರಿಗೇನು ಲಾಭವುಂಟು?

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ಒಂದು ಕತೆ!

'ಸ್ಫೂರ್ತಿ'ಗಾಗಿ ಪೇಚಾಟ!

(ದುರ್ಗಾದಾಸ)

ಮಹಾಶಯರೇ,

ನಾವು 'ಗೋಳಾಟ' ಎಂಬ ಹೊಸ ಪತ್ರಿಕೆಯನ್ನು ಹೊರಡಿಸುವುದಾಗಿ ನಿಶ್ಚಯಿಸಿದ್ದೇವೆ. ಕಾಗದದ ಅಭಾವದೀ ಕಾಲದಲ್ಲಿಯೇ ನಾವೀ ಸಾಹಸಕ್ಕೆ ಕೈಕೊಂಡಿರುವುದು; ನಮ್ಮ 'ಗೋಳಾಟ'ವು ಈ ಕಾಲದಲ್ಲಿಯೇ ದಿಕ್ಕುದಿಕ್ಕುಗಳಲ್ಲಿ ಕೇಳಿಸಿದರೆ, ಮುಂದೆ ಭವ್ಯ ಭವಿಷ್ಯತ್ತು ಉಂಟೆಂಬ ಉನ್ನತ ಆಶೆಯಿಂದ. ನಿಮ್ಮಂಥಾ ಹೆಸರಾಂತ ಸಾಹಿತಿಗಳು ಲೇಖನಗಳಿಂದ ನಮ್ಮಲ್ಲಿ ನವಚೈತನ್ಯ ತುಂಬಿಸಬೇಕು. ಸದ್ಯ ನಮ್ಮ ಪತ್ರಿಕೆಯ ಪ್ರಥಮ ಸಂಚಿಕೆಗೇ ನಿಮ್ಮಿಂದ ಒಂದು ಸ್ಫೂರ್ತಿಮಯವಾದ ಲೇಖನವನ್ನು ನಾವು ನಿರೀಕ್ಷಿಸುತ್ತೇವೆ. ನಮ್ಮ ವಿನಂತಿಯನ್ನು ಮನ್ನಿಸುವಿರಾಗಿ ನಂಬಿದ್ದೇವೆ. ಮುಂದಿನ ವಾರದಲ್ಲಿ ನಮ್ಮ ಪ್ರಥಮ ಸಂಚಿಕೆ ಪ್ರಕಟಿಸುವ ನಿರ್ಧಾರವಾಗಿದೆ.

ಇತಿ-ಸಂಪಾದಕ, 'ಗೋಳಾಟ'

ದಿನದ ಕೆಲಸ ತೀರಿಸಿ ಸಂಜೆ ಆಫೀಸಿನಿಂದ ಹೊರಡುವಷ್ಟರಲ್ಲಿ ಟಪಾಲು ಪೇದೆ ಈ ಪತ್ರವನ್ನು ಕೊಟ್ಟು ಹೋದ. 'ಗೋಳಾಟ' ಒಳ್ಳೆಯ ಹೆಸರು. ಈ ಕಾಲದಲ್ಲಿಯೂ ಒಂದು ಹೊಸ ಪತ್ರಿಕೆ, ಎಂಥಾ ಸಾಹಸವಿದು! ಮುಂದಿನ ವಾರವೇ ಪ್ರಕಟಣೆ—ಅದ್ಭುತ! ಆದರೆ 'ಸ್ಫೂರ್ತಿಮಯ' ಲೇಖನಕ್ಕೆ ನಾನೇನು ಮಾಡಲಿ? ದಿನವಿಡೀ ಯುದ್ಧದ ವಾರ್ತೆ ಓದಿ ಓದಿ, ಬರೆಜು ಬರೆದು, ತಲೆಯ ನರಗಳೆಲ್ಲಾ ಸಡಿಲು ಸಡಿಲಾದರೆ, ಅಬ್ಬಾ ಸೆಕೆಯೋ, ದಿನವಿಡೀ ಈ ಸೆಕೆಯಿಂದ ಮೈಯ್ಯಲ್ಲಿದ್ದ ನೀರೆಲ್ಲ ಬೆವರಿ ಬೆವರಿ ಹರಿದು ಹರಿದು ಹೋದರೆ, ಹಾಲು ಹಾಕದ ಹುಜಿಸೇ ಹುಡಿಯ ಕಾಪಿ ಆಗಾಗ ಕುಡಿಯುತ್ತಾ ಇದ್ದರೆ, ಸ್ಫೂರ್ತಿ ಹೇಗೆ ತಾನೇ ಹುಟ್ಟಬೇಕು? ಪಾಪ! ಹೊಸ ಸಂಪಾದಕರಿಗೆ ಏನು ಗೊತ್ತು, ಹಳೆಯ ಪತ್ರಿಕೋದ್ಯಮಿಗಳ ಸಂಕಷ್ಟ!—ಹೊಸ ಪತ್ರಿಕೆ ಹೊರಡಿಸುವ ಹುಮ್ಮಸು! ಇದ್ದ ಪತ್ರಿಕೆಗಳನ್ನೇ ಜೀವಂತವಿರಿಸುವುದು ಸಮಸ್ಯೆಯಾಗಿದ್ದಾಗ! ಹಾಳಾದ ಯಾವುದೋ ಪ್ರೆಸ್ಸಿನವರು ಇವರಿಗೆ ಧರ್ಮಕ್ಕೆ ಪ್ರಿಂಟುಮಾಡಿಕೊಡಲು ಒಪ್ಪಿದ್ದಾರೇನೊ! ಅಲ್ಲ, ಕಾಗದ ಇವರಿಗೆ ಎಲ್ಲಿಂದ ಸಿಗಬೇಕು? ಸತ್ತೇ ಹೋಗಲಿ! ಹಾಗೇನೋ ಆಗುವುದಂತೂ ಖಂಡಿತ, ಆದರೆ ನನ್ನಿಂದಾಗಿ ಹಾಗಾಗುವುದು ಬೇಡ. ಒಂದು ಲೇಖನ ತಾನೆ? ಏನಾದರೂ ಗೀಚಿ ಬಿಡುವುದು. ಆದರೆ ಈ 'ಸ್ಫೂರ್ತಿಗೆ' ನಾನೇನು ಮಾಡಲಿ?

ಆಫೀಸಿನಿಂದ ಹೊರಬಿದ್ದವನೇ, ಹತ್ತಿರದ ಸೀಯಾಳದ ಅಂಗಡಿಗೆ ಹೋದೆ. ಅಲ್ಲಿ ನನ್ನ ಸಹಪಾಠಿ—ಭಟ್ಟರು, ಅವರೀಗ ವಕೀಲರಾಗಿದ್ದಾರೆ— ನಿಂತಿದ್ದರು. ಅವರಿಗೂ ಸೆಕೆ ನನ್ನಂತೆ ಬಹಳ ಆಗಿರಬೇಕು. ಸೀಯಾಳ ಕುಡಿಯುವರೆ ಬಂದಿರಬಹುದು. 'ನಮಸ್ಕಾರ ವಕೀಲರೆ' ಎಂದೆ. ನನ್ನನ್ನು ಧುರುಧುರು ನೋಡಿ ಕೈ ಮೇಲೆ ಕೆಳಗೆ ಮಾಡಿದರೇ ಹೊರತು, ಬಾಯಿಂದ ಮಾತೇ ಹೊರಡಲಿಲ್ಲ. ಬಹುಶಃ ಬಾಯಾರಿಕೆಯಿಂದ ಅವರ ಗಂಟಲಿನ 'ಪಸೆ' ಆರಿದ್ದರೂ ಇರಬಹುದು! ಪಾಪ! ಅವರ ತಂದೆಯೇನೋ ಅಡಿಕೆಗೆ ೩೦೦ ರೂಪಾಯಿ ಕ್ರಯ ಇದ್ದಾಗ ಮಗನಿಗೆ 'ಇಂಗ್ಲಿಷು' ಕಲಿಸಿದರು. ಮುಂದೆ ಮಗ ವಕೀಲನಾಗಬೇಕೆಂದು (ಬೇರೆ ವಕೀಲರಿಗೆ ಹಣ ಕೊಟ್ಟು ಕೊಟ್ಟು ಅವರಿಗೂ ಸಾಕಾಗಿ ಹೋಗಿತ್ತು.) ವಕಾಲಾತೂ ಕಲಿಸಿದರು. ಇಷ್ಟರಲ್ಲಿ ಅವರ ಆಸ್ತಿಯೂ ಮಾರಾಟವಾಗಿ ಹೋಯಿತು. ಭಟ್ಟರೇನೋ ವಕಾಲತು ಕಲಿತಿದ್ದಾರೆ ನಿಜ; ಆದರೆ ಮಂಗಳೂರಲ್ಲಿ ಅವರಂಥಾ ಹೊಸ ವಕೀಲರನ್ನು ಯಾರು ಕೇಳಬೇಕು? ಆ ಚಿಂತೆಯಿದ್ದರೂ ಇರಬಹುದು ಅವರಿಗೆ.

ಅಂಗಡಿಯ ನಾಗಪ್ಪನೊಡನೆ ಒಂದು ಸೀಯಾಳ ಕೆತ್ತಿ ಕೊಡು ಎಂದೆ. ಆಸಾಮಿಗೆ ಅದು ಕೇಳಿದಂತೆಯೇ ತೋರಲಿಲ್ಲ. ಕೈಯ್ಯಲ್ಲಿ ನೋಟುಗಳನ್ನು ಎಣಿಸುತ್ತಾ ಇದ್ದಾನೆ ನಾಗಪ್ಪ!, ಒಂದು, ಎರಡು ಮೂರು ನಾಲ್ಕು . . . . . ಹತ್ತು ಹದಿನೈದು! ನೋಟುಗಳಷ್ಟೂ ವಕೀಲರ ಕಿಸೆಯೊಳಗೆ! ಬಹುಶಃ ವಕೀಲರಿಗೆ ನಾಗಪ್ಪನ 'ಕೇಸು' ಸಿಕ್ಕಿರಬಹುದು. ಹೌದು, ದೊಡ್ಡ ದೊಡ್ಡ 'ಕೇಸು' ಇಂಥಾ ವಕೀಲರಿಗೆ ಎಲ್ಲಿಂದ? ಚಿಂತೆಯಿಲ್ಲ, ಹೇಗಾದರೂ ಜೀವನ ನಡೆಸುತ್ತಾರಲ್ಲ. ಅದೇ ದೊಡ್ಡದು. ವಕೀಲರು ನೋಟುಗಳನ್ನು ಕಿಸೆಗೆ ಹಾಕಿ ಹೊರಟೇ ಹೋದರು. ಹೊರಟು ಹೋದರೂ ನಾಗಪ್ಪ ಇನ್ನೂ ಅವರ ಕಡೆಯೇ ನೋಡುತ್ತಾನೆ. ನಾನು, ಗಿರಾಕಿ ಬಂದಿದ್ದೇನೆಂಬುದೂ ಅವನಿಗೆ ನೆನಪೇ ಇಲ್ಲ. 'ಎಲ್ಲಾ ಬೋ—ಮಗಾ ಭಟ್ಟು ಈ ಹೊತ್ತು ಹೊಡೆದು ಬಿಟ್ಟೆಯಲ್ಲಾ ಒಾದು ಪೆಟ್ಟು!' ವಕೀಲರಿಗೆ ಇದು ಕೇಳಿದರೂ ಕೇಳದಂತೆ ಮಾಡಿ ಅವರು ಹೋದರು. ನಾಗಪ್ಪ ನನ್ನ ಕಡೆಗೆ ಕಣ್ಣು ಹೊರಳಿಸಿ ನೋಡುತ್ತಾ, ಕಡೆಗೆ ಒಂದು ದೀರ್ಘ ಶ್ವಾಸ ಬಿಟ್ಟ. ಅಯ್ಯೋ ಇದೇನು ಬಂತು! 'ಹೌದ್ಲೋ ನಾಗಪ್ಪ, ಅವರು ವಕೀಲರಲ್ವೇನೋ, ಏನು ಹಾಗೆ ಬಾಯಿಗೆ ಬಂದ ಹಾಗೆ ಒದರುತ್ತಿ?' 'ವಕೀಲನೋ, ಜಡ್ಜನೋ ಈ ಹೊತ್ತು ಹೊಡೆದು ಬಿಟ್ಟನಲ್ಲಾ ಈ ಬೋ— ಮಗ ಭಟ್ಟು! ಅಲ್ಲ, ಈ ಹಳ್ಳಿಯ ಮಾಣಿಗೆ ಆ ನಂಬ್ರ ಹೇಗೆ ಗೊತ್ತಾಯಿತು ಸ್ವಾಮಿ!' 'ವಕೀಲರೋ ಅವರು, 'ನಂಬ್ರು' ಅವರಿಗೆ ಗೊತ್ತಾಗದೆ ಇರುತ್ತದೊ? ಕೋರ್ಟಿನಲ್ಲಿ ಗೊತ್ತಾಗುವುದಿಲ್ಲವೆ? ಅವರು ಅದನ್ನು ಡೈರಿಯಲ್ಲಿ ಬರಕೊಳ್ಳುತ್ತಾರೊ!' 'ಇದು ಕೋರ್ಟಿನ 'ನಂಬ್ರು' ಅಲ್ಲ ಸ್ವಾಮಿ! ಬಿಡ್ಡಿನ ನಂಬ್ರು! ನಿಮಗೆ ಗೊತ್ತೇ ಇಲ್ಲವೆ?—ಇಲ್ಲಿ ಕೇಳಿ, ಒಂದು ಕೊಟ್ಟರೆ ಎಂಟು! ಒಂದು ಮುಕ್ಕಾಲಿಗೆ ಎಂಟು ಮುಕ್ಕಾಲು, ಒಂದು ರೂಪಾಯಿಗೆ ಎಂಟು ರೂಪಾಯಿ, ಅದರಲ್ಲಿ ಕುಳೋಸಿಂಗ್, ಓಪಣಿಂಗ್, ಡಬ್ಲಿಂಗ್, ಟಬ್ಲಿಂಗ್...' 'ಸತ್ತು ಹೋಗಲಿ ನಿನ್ನ 'ಟಬ್ಲಿಂಗ್' ಈಗ ಒಂದು ಸೀಯಾಳ ಕೆತ್ತಿ ಕೊಡಯ್ಯಾ', ಓಹೋ ನೀವು ಸಿಯಾಳಕ್ಕೆ ಬಂದವರೋ ಆಗಲೇ ಹೇಳಲಿಲ್ಲವಲ್ಲಾ. . . .'

ಹಾಳು ಹೋಟೆಲಲ್ಲಿ ಹನ್ನೆರಡು ಗಂಟೆ ವರೆಗೂ ಬೊಬ್ಬೆಯೇ ಬೊಬ್ಬೆ! 'ಗೋಳಾಟ'ದ ಸಂಪಾದಕರಿಗೆ ಲೇಖನ ಬರೆಯಬೇಕೆಂದರೆ ಈ ಬೊಬ್ಬೆಯಲ್ಲಿ ಸಾಧ್ಯವೆ? ಮುಂಜಾನೆ ಸ್ವಲ್ಪ ಬೇಗ ಎದ್ದು ಬರೆದುಬಿಡುವುದು. ಆಗ 'ಸ್ಫೂರ್ತಿ' ಬಂದರೂ ಬರಬಹುದು. ಹೇಗಿದ್ದರೂ ನಾಳೆ ಖಂಡಿತ ಬರೆದು ಕಳುಹಿಸಲೇ ಬೇಕು.

ನಾಲ್ಕುವರೆ ಗಂಟೆಗೆ 'ಎಲಾರಂ' ಎಚ್ಚರಿಸಿತು. ಎದ್ದವನೇ ದೀಪ ಹಚ್ಚಿ, ಹೊರಗೆ ಹೋಗಿ ಮುಖ ತೊಳೆದು ಒಂದು ಮೇಜಿನ ಮುಂದೆ ಕುಳಿತೆ. ಕಾಗದ ಲೇಖನಿಯೆಲ್ಲಾ ಸರಿಮಾಡಿಕೊಂಡೆ. ಇನ್ನು ಬರೆದೇ ಬಿಡುವುದು. ಅಲ್ಲ ಲೇಖನ ಬರೆಯಬೇಕೆಂದರೆ ಬರೆಯುವುದೇನೆಂದು ಸ್ವಲ್ಪ ವಿಚಾರವಾದರೂ ಮಾಡಬೇಡವೆ? ಯಾವ ವಿಚಾರವೂ ಹೊಳೆಯುವುದಿಲ್ಲವಲ್ಲ. ಆದರಲ್ಲೂ ಲೇಖನದಲ್ಲಿ ಸ್ಫೂರ್ತಿ ಇರಬೇಕು. ಕವಿತೆ ಬರೆಯಲೇ? ಸತ್ಯಾಗ್ರಹದ ಕುರಿತು ಬರೆದರೆ ಸ್ಫೂರ್ತಿಮಯ ಆದರೂ ಆಗಬಹುದು. ಆದರೆ ಡಿಫೆನ್ಸ್ ಕಾನೂನು, ಅದು ಬೇಡ; ಜರ್ಮನಿ ಜಪಾನುಗಳ ಫೇಸಿಸಮ್ಮನ್ನು ಖಂಡಿಸಿ, ಪ್ರಚಂಡವಾಗಿ ಖಂಡಿಸಿ ಕವಿತೆ ಬರೆದುಬಿಡುತ್ತೇನೆ, ಯಾರಿಗೂ ತೊಂದರೆಯಿಲ್ಲ. ಸರಿ ಇದು ಒಳ್ಳೆಯ ಯೋಚನೆ! 'ಆದರೆ ಯಾವ ಛಂದಸ್ಸಿನಲ್ಲಿ ಬರೆಯಲಿ? 'ಗೋಳಾಟ'ದ ಸಂಪಾದಕರು ಹಳೆಯ ಸಂಪ್ರದಾಯದವರೋ, ಹೊಸ ಸಂಪ್ರದಾಯದವರೋ, ಒಂದು 'ರಗಳೆ'ಯಲ್ಲಿ ಬರೆದುಬಿಡುವುದು. ಹೊಸಬರಿಗೂ ಹಳಬರಿಗೂ ಎಲ್ಲರಿಗೂ ಒಪ್ಪುತ್ತದೆ. ಅಲ್ಲ, ಕವಿತೆಯೇ 'ರಗಳೆ'ಯಾಗಿ ಬಿಟ್ಟರೆ? ಕವಿತೆ ಬೇಡ, ಕತೆ ಬರೆಯುವುದು. 'ಪ್ಲೋಟ್' ಯಾವುದು? ಒಬ್ಬ ಯುವಕ ಕಾಲೇಜ್ ವಿದ್ಯಾರ್ಥಿ, ಆತ ಬೇರೆ ಜಾತಿಯವನಾಗಿರಬೇಕು, ಮುಸಲ್ಮಾನ ಆದರೂ ಆಗಬಹುದು. ಒಬ್ಬ ತರುಣಿ ಆಕೆಯೂ ಕಾಲೇಜ್ ಹುಡುಗಿ, ಅವಳು ಬ್ರಾಹ್ಮಣರ ಹುಡುಗಿ ಯಾಕೆ ಆಗಬಾರದು? ಕಾಮಕ್ಕೆ ಕಣ್ಣುಂಟೆ? 'ಇಬ್ಬರೂ ಪ್ರೇಮಿಸುತ್ತಾರೆ. ಆದರೆ ಸಮಾಜ ಒಪ್ಪಲೊಲ್ಲದು. ಪ್ರೇಮಿಗಳು ಕೇಳಲಾರರು; ವಿಘ್ನಗಳು ಒದಗುವವು. ಕೊನೆಗೆ ಒಂದು ದಿನ ಬೆಳಗ್ಗೆ ಊರ ಕೆರೆಯಲ್ಲಿ ಎರಡು ಶವಗಳು ತೇಲುತ್ತಿದ್ದವು. ಸತ್ತ ಮೇಲೂ ಆ ಪ್ರೇಮಿಗಳು ಅನ್ಯೋನ್ಯ ಆಲಿಂಗಿಸಿಕೊಂಡೇ ಇದ್ದರು. ಇಬ್ಬರನ್ನೂ ಅಂಥಾ ಪ್ರೇಮಪಾಶ ಬಿಗಿದಿತ್ತು... ಒಳ್ಳೆಯ ಪ್ಲೋಟು ಕಾಲೇಜ್ ತರುಣ ತರುಣಿಯರು ಖಂಡಿತ ನನ್ನ ಈ ಕತೆಯನ್ನು ಮೆಚ್ಚುತ್ತಾರೆ. ಇನ್ನು ಬರೆದೇ ಬಿಡುವುದು. ಪ್ರಣಯಿಗಳಿಗೆ ಯಾವ ಹೆಸರಿಡಲಿ ಜಿನ್ನಾ, ಆಜಾದ್, ಹಕ್... ಸರೋಜಿನಿದೇವಿ ಕಮಲಾದೇವಿ, ಸಬಿತಾದೇವಿ...

ರೂಮಿನ ಹೊರಗೆ ಹೋಟೆಲ್ ಹುಡುಗ ರಾಮು ಮಲಗಿದ್ದವನೇ ಥಟ್ಟನೆ ಎದ್ದು ಕುಳಿತ. ಕೆದರಿದ ಕ್ರಾಪನ್ನು ಎರಡು ಕೈಗಳಿಂದಲೂ ಬಲವಾಗಿ ಮುಷ್ಟಿಯಲ್ಲಿ ಹಿಡಿದುಕೊಂಡ, ಹಿಡಿದು ಗಟ್ಟಿಯಾಗಿ ಎಳೆದು ಬಿಟ್ಟ. ಎಳೆದ ಮುಷ್ಟಿಯನ್ನು ಇನ್ನೂ ಬಿಡಲೇ ಇಲ್ಲ. ನನ್ನ ಎದೆಗೆ ನೇರಾಗಿ ಎರಡೂ ಮುಷ್ಟಿಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ರೂಮಿನೊಳಗೆ ಬಂದೇ ಬಿಟ್ಟ. ಎಲಾ, ಇವನಿಗೇನು ಹುಚ್ಚು ಹಿಡಿದಿದೆಯೊ? ಗಾಬರಿಯಿಂದ ಅವನನ್ನೇ ನೋಡುತ್ತಾ ನಿಂತೆ. ಬಂದವನೇ ರಾಮು ದೀಪದ ಎದುರು ತನ್ನೆರಡು ಭದ್ರಮುಷ್ಟಿಗಳನ್ನೂ ಬಿಚ್ಚಿ ಅವರಲ್ಲಿದ್ದ ಒಂದೊಂದೇ ಕೂದಲುಗಳನ್ನು ಎಣಿಸುತ್ತಾ, ಒಂದು ಎರಡು ಮೂರು ನಾಲ್ಕು ಐದು ಆರು... ಎಂಟು! 'ನಂಬ್ರ ಎಂಟು' ಎಂದು ಒಮ್ಮೆ ಕೋತಿಯಂತೆ ನೆಲದಿಂದ ಮೇಲೆ ಹಾರಿಬಿಟ್ಟ! 'ಎಲಾ ಏನು ಮಾಡುತ್ತೀಯೊ?' 'ಅಲ್ಲ ಶಾರ್, ಈ ಹೊತ್ತು ನಂಬ್ರ ಎಂಟು' ನಾಗಪ್ಪ ಸಂಜೆ ಹೇಳಿದ್ದ. ನಂಬ್ರ ಎಂದರೆ ಕೋರ್ಟಿನ ನಂಬ್ರವಲ್ಲ; ಬಿಡ್ಡಿನ ನಂಬ್ರ! 'ಘಟಿಂಗ ಹೊರಗೆ ಹೋಗುತ್ತೀಯೋ ಇಲ್ಲವೋ?' ರಾಮು ಹಲ್ಲು ಕಿರಿಯುತ್ತಾ ಹೊರಗೆ ಹೋದ. ಈ ಮಾರಿಗಳ ಕಾಟದಲ್ಲಿ ಹೇಗೆ ಕತೆ ಬರೆಯಲಿ, ಬಂದ ಸ್ಫೂರ್ತಿಯೂ ಹೇಗೆ ಉಳಿಯಬೇಕು?

ನಾನು ನಿಜವಾಗಿ ಹೇಳುತ್ತೇನೆ; ಹೆಂಗುಸರ ತಲೆಯಲ್ಲಿ ಮಿದುಳೇ ಇಲ್ಲ!. ಅಲ್ಲದಿದ್ದರೆ ಪವನಿಗೆ ೮೫ ರೂಪಾಯಿ ಆದ ಈ ಕಾಲದಲ್ಲಿಯೂ ಯಾರಾದರೂ ಆಭರಣದ ಹಠ ಹಿಡಿವಾರೆ? ಆಭರಣ ಮಾಡಿಸಿ ಕೊಡದಿದ್ದರಂತೂ ಸಾಧ್ಯವೇ ಇಲ್ಲ. ಹೆಂಗುಸರ ಹತ್ತಿರ ಸತ್ಯವೇ ಹೇಳಬೇಕೆಂದೇನು? ಹೇಗಾದರೂ ಮಾರಾಣಿಗೆ ನಾಲ್ಕು ಬಳೆಗಳಾದರೆ ಸರಿ, ಬೆಳ್ಳಿಯ ಬಳೆ ಮಾಡಿಸಿ ಬಂಗಾರದ ಗಿಲೀಟು ಕೊಡಿಸುತ್ತೇನೆ; ಅನಂತಾಚಾರಿ ಮಾಡಿಕೊಡಲು ಒಪ್ಪಿದ್ದಾನೆ. ನಾಳೆ ಆದಿತ್ಯವಾರ ಬರುವಾಗಲೇ ಬಳೆ ತರಬೇಕೆಂದು ಅವಳೂ ಅಪ್ಪಣೆ ಮಾಡಿದ್ದಾಳೆ ಬೇರೆ. ಈ ಆಚಾರಿ ಜಾತಿಯನ್ನು ನಂಬಲಿಕ್ಕೂ ಸಾಧ್ಯವಿಲ್ಲ. ಇದುವರೆಗೆ ಕೆಲಸ ಶುರು ಮಾಡಿದ್ದಾನೋ ಇಲ್ಲವೋ ಭೂಪತಿ! ಈಗಾದರೂ ಹೋಗಿ ಅವನಿಗೆ ಹೇಳಿಬರುತ್ತೇನೆ. ಆ ಮಾರಾಯ್ತಿ ನಾಳೆ ಮನೆಗೆ ಹೋಗುಹೋಗಾದರೂ ಕೊಟ್ಟದ್ದರೆ—

'ಚಲ್ ಚಲ್ರೇ' ಪದ ಹೇಳುತ್ತಾ ಅನಂತಾಚಾರಿ ಏನನ್ನೋ ತಟ್ಟುತ್ತಾ ಇದ್ದಾನೆ. 'ಬನ್ನಿ ಸ್ವಾಮಿ ನಿಮ್ಮ ಬಳೆಯನ್ನೇ ತಟ್ಟುತ್ತೇನೆ. ನಾಳೆಗೆ ರೆಡಿ' ಆಚಾರಿ ತಟ್ಟುವುದನ್ನು ನಿಲ್ಲಿಸದೇ ಹೀಗೆ ಹೇಳಿದ. ಆಚೆ ಮನೆಯ ಎಮ್ಮೆಗೆ ಕೋಣನ ನೆನಪಾಯಿತೋ ಏನೋ 'ಆಹುರ್ರೋ' ಎಂದಿತು. ಆಚಾರಿ ತಟ್ಟುವುದೂ ನಿಂತಿತು! ಎಮ್ಮೆ ಕೂಗುತ್ತಲೇ ಇತ್ತು; ಆಚಾರಿ ಎಮ್ಮೆ ಕೂಗುವುದನ್ನು ಎಣಿಸುತ್ತಲೇ ಇದ್ದ. ಕೂಗು ನಿಲ್ಲಲು ಒಂದು ಕಾಗದದ ಚೂರಿನಲ್ಲಿ ೭ ಎಂದು ಬರೆದಿಟ್ಟುಕೊಂಡ!. ನನಗಿದೊಂದೂ ಅರ್ಥವಾಗಲಿಲ್ಲ. ಆಚಾರಿ ಪುನಃ ತಟ್ಟಲು ತೊಡಗುತ್ತಾನೆ. ನಾಲ್ಕು ಸೆಕುಂಡ ಆಗಿರಲಿಲ್ಲ, ಎಮ್ಮೆ ಪುನಃ ಕೂಗತೊಡಗಿತು. ಆಚಾರಿ ಪುನಃ ಎಣಿಸಿದ, ಈ ಸಲ ಒನ್ನು ಹೊಡದ ೫ ಎಂದು ಬರೆದಿಟ್ಟ. ನನ್ನ ಕುತೂಹಲ ಮತ್ತೂ ಹೆಚ್ಚಿತು. ಆಚಾರಿಯನ್ನೇ ಇದೇನೆಂದು ಕೇಳಿದೆ. 'ಅಲ್ಲ ಸ್ವಾಮಿ, ಈ ಎಮ್ಮೆ ಕೂಗಿದ ನಂಬ್ರಕ್ಕೆ ಕಟ್ಟಿದರೆ ಸರಿಯಾಗಿ ಬರುತ್ತದೆ. ಬೆಳಗ್ಗೆ ಮೊದಲನೆಯ ಸಲ ಕೂಗಿದ ನಂಬ್ರ ಓಪಣಿಂಗ್, ಸಂಜೆ ಹೋಗುವಾಗ ಕೂಗಿದ ನಂಬ್ರ 'ಕುಳೋಸಿಂಗ್'. 'ಅಲ್ಲ ಆಚಾರಿ, ಸಂಜೆ ವರೆಗೆ ಎಮ್ಮೆ ಕೂಗುವುದೂ ನೀನು ಎಣಿಸುವುದೂ ನಡೆದರೆ ಬಳೆ ನಾಳೆಗೆ ಆದೀತೇನಯ್ಯಾ?' 'ಅದಕ್ಕೇನು ಸ್ವಾಮಿ ರಾತ್ರಿಯಾದರೂ ನಿಮ್ಮ ಕೆಲಸ ಮುಗಿಸದೆ ಇರುತ್ತೇನೆಯೆ? 'ಆಯಿತು. ಹೇಗಾದರೂ ನಾಳೆಗೆ ತಯಾರು ಮಾಡು ಮಾರಾಯ್ಯಾ, ನಾಳೆ ಬೆಳಗ್ಗೆ ಕೊಡುತ್ತೀಯಲ್ಲಾ?' 'ಮತ್ತೆ ಉಂಟೇ? ಆದರೆ ಈಗ ಒಂದು ರೂಪಾಯಿ ಇದ್ದರೆ—'

ಈ ದಿನವೂ ಸೆಕೆ ತಡೆಯಲಾಗುವುದಿಲ್ಲ. ಸೀಯಾಳ ಕುಡಿಯಬೇಕು. ಕಿಸೆಗೆ ಕೈಹಾಕಿ ನೋಡಿದರೆ ಒಂದುವರೆ ಆಣೆ ಇದೆ. ಎಳನೀರಿಗೆ ಈಗ ಎರಡಾಣೆ ಹೇಳುತ್ತಾನೆ ನಾಗಪ್ಪ! ಅಲ್ಲ, ಸಾಮಾನಿಗೆ ಎಲ್ಲಾ ಬೆಲೆ ದಿನದಿಂದ ದಿನಕ್ಕೆ ಮಲೇರಿಯಾ ಜ್ವರದಂತೆ ಹೆಚ್ಚಾಗುತ್ತಲೇ ಇದೆಯಲ್ಲಾ, ಮನುಷ್ಯನಿಗೆ ಮಾತ್ರ ಬೆಲೆ ಏರುವುದಿಲ್ಲವೊ? ಒಣ ಅಡಿಕೆಗೂ ಖಂಡಿಗೆ ಏಳ್ನೂರು ರೂಪಾಯಿ ಆಗಿದೆ. ನೆಲಗಡಲೆ ವ್ಯಾಪಾರಿಯೂ ಮಾಳಿಗೆ ಮನೆ ಕಟ್ಟಿಸುತ್ತಾನೆ. ನನಗೂ ಒಂದು ಖಂಡಿ ಅಡಿಕೆ ಇರಬಾರದಿತ್ತೆ? ಅಲ್ಲ, ನೆಲಗಡಲೆ ವ್ಯಾಪಾರವನ್ನಾದರೂ ಮಾಡಲು ದೇವರು ಬುದ್ಧಿ ಕೊಡಬಾರದಿತ್ತೋ, ಎಲ್ಲದಕ್ಕೂ ಅದೃಷ್ಟ ಬೇಕು; ವಿದ್ಯೆ ವಿದ್ಯೆ ಎಂದರೆ ಯಾರು ಬೆಲೆ ಕೊಡುತ್ತಾರೆ. ಸರಸ್ವತಿಗೂ ಲಕ್ಷ್ಮಿಗೂ ಯಾವಾಗಲೂ ಕಾಳಗವೆ. ಹೌದು ಅವರೂ ಅತ್ತೆ ಸೊಸೆಯರು! ಮೇಲಿನ ಲೋಕದ ದೇವಿಯರಲ್ಲಿಯೂ ಈ ಅತ್ತೆ ಸೊಸೆ ಮತ್ಸರ ಇದ್ದರೆ, ನಮ್ಮ ಈ ಲೋಕದ ದೇವಿಯರನ್ನು ನಾವು ದೂರಿಯಾದರೂ ಏನು ಪ್ರಯೋಜನ? ಅಂತೂ ಬಾಯಾರಿಕೆ ಏನೋ ಬಹಳ ಆಗಿದೆ. ಒಂದು ಸೋಡಾ ಆದರೂ ಕುಡಿದು ಬಿಡುವುದು. 'ಒಂದು ಸೋಡಾ ಕೊಡಯ್ಯಾ' ಸೋಡಾ ಅಂಗಡಿ ಆನಂದರಾಯನೊಡನೆ ಕೇಳಿದೆ. ಸೋಡಾ ಅಂಗಡಿಯ ಆನಂದರಾಯನು ಒಂದು ಸೋಡಾ ಬಾಟ್ಲಿಯನ್ನು ಅಡ್ಡ ನೀಟ ಹಿಡಿದು ನೋಡುತ್ತಾ ಇದ್ದಾನೆ. ತಿರುಗಿ ಕೇಳಿದೆ. 'ಒಂದು ಸೋಡಾ' ಅದೂ ಆತನಿಗೆ ಕೇಳಿಸಲೇ ಇಲ್ಲ. ಸೋಡಾ ಬಾಟ್ಲಿಯನ್ನು ಆನಂದ ರಾಯನು ಎತ್ತಿ ಹಿಡಿದಿದ್ದಾನೆ! ಎಲ್ಲಿ ಇನ್ನು ನನ್ನ ತಲೆಗೆ ಬಡೆದುಬಿಡುತ್ತಾನೋ ಎಂದು ಹೆದರಿ ಸ್ವಲ್ಪ ದೂರ ಸರಿದೆ. ಸೋಡಾ ಕುಪ್ಪಿಯನ್ನು ಎತ್ತಿ ಹಿಡಿದವನೇ ಎದ್ದು ನಿಂತು ಹೆಮ್ಮೆಯಿಂದ ನನ್ನನ್ನು ನೋಡುತ್ತಾ 'ಮೂರು' ಎಂದು ಅರಚಿದ. 'ಮೂರು ಬೇಡ ಮಾರಾಯಾ ಒಂದು ಸೋಡಾ ಕೊಡು' ಎಂದೆ. 'ನೋಡಿ ಸ್ವಾಮಿ ಈ ಬಾಟ್ಲಿ ನೋಡಿ, ಇದನ್ನು ಅಡ್ಡ ಹಿಡಿದರೂ ನೀಟ ಹಿಡಿದರೂ ಮೂರು ನಂಬ್ರ ಕಾಣುತ್ತದೆ, ಈ ದಿನದ 'ನಂಬ್ರು' ಮೂರು.' 'ಹಾಳಾಗಿ ಹೋಗಲಿ ನಿನ್ನ ನಂಬ್ರ, ಬಾಯಾರಿಕೆ ಆಗಿದೆ, ಒಂದು ಸೋಡಾ ಕೊಡಯ್ಯಾ'. 'ಓಹೊ—ನಿಮಗೆ ಸೋಡಾ ಬೇಕಿತ್ತೊ? ನೀವು ಆಗಲೇ ಕೇಳಬಾರದಿತ್ತೆ?'

ಈ ತಲೆಕೆಟ್ಟ ಜನರ ಮಧ್ಯದಲ್ಲಿ ಹೆಚ್ಚು ಕಾಲ ಹೀಗೆ ಇದ್ದರೆ, ಖಂಡಿತವಾಗಿ ಹುಚ್ಚರ ಆಸ್ಪತ್ರೆಗೇ ಹೋಗಬೇಕು. ಇಂಥಾ ವಾತಾವರಣದಲ್ಲಿ 'ಗೋಳಾಟ'ದ ಸಂಪಾದಕರಿಗೆ 'ಸ್ಫೂರ್ತಿ'ಯ ಲೇಖನವನ್ನಾದರೂ ಹೇಗೆ ಬರೆಯಲಿ? ಸ್ಫೂರ್ತಿಯನ್ನು ಅಂಗಡಿಯಲ್ಲಿ ಕೊಂಡುಕೊಳ್ಳಬಹುದೊ? ಅಥವಾ ಇನ್ನು ಅದಕ್ಕಾಗಿ ಅಂಗಡಿಗೆ ಹೋದರೂ ಅಲ್ಲಿಯೂ ಇದೇ 'ನಂಬ್ರು'ದ ಸಂಭ್ರಮವೇ ಆದರೆ? ಅಂತೂ ನನ್ನಿಂದ ಈ ಸಲ ಲೇಖನ ಬರೆಯುವುದು ಖಂಡಿತ ಆಗುವುದಿಲ್ಲ.

ಸ್ವಾಮೀ ಸಂಪಾದಕರೇ,

ನಿಮ್ಮ ಪತ್ರ ತಲಪಿತು. ಸದ್ಯದ ಪರಿಸ್ಥಿತಿಯಿಂದಾಗಿ ನಿಮಗೆ ನನ್ನಿಂದ ಲೇಖನ ಬರೆದು ಕಳುಹಿಸಲಾಗಲಿಲ್ಲವೆಂಬುದಕ್ಕಾಗಿ ಕ್ಷಮಿಸಬೇಕು; ಮುಂದೆ ಒಳ್ಳೆಯ ಕಾಲ ಒದಗಿದಾಗ ಖಂಡಿತ ಬರೆದು ಕಳುಹಿಸುತ್ತೇನೆ. ಆದರೆ ದಯಮಾಡಿ ಮುಂದೆ ನೀವು ಲೇಖನ ಅಪೇಕ್ಷಿಸುವುದಾದರೆ ಎರಡು ವಾರದ ಸಮಯವಾದರೂ ಕೊಡಬೇಕು; ಅದರೊಡನೆ ಲೇಖನ ಬರೆಯಲು ಸ್ವಲ್ಪ ಕಾಗದ ಒಂದು ಬಾಟ್ಲಿ ಶಾಯಿ, ಒಂದು ಲೇಖನಿ, ಪತ್ರವ್ಯವಹಾರಕ್ಕಾಗಿ ಅಂಚೆ ಚೀಟು ಇಷ್ಟನ್ನೂ ಕಳುಹಿಸಲು ದಯಮಾಡಿ ಮರೆಯಬೇಡಿ. ಇತಿ X

ಗೋಳಾಟದ ಸಂಪಾದಕರಿಂದ ಪುನಃ ಪತ್ರ ಬಂತು.

ಮಹಾಶಯರೇ,

ಸದ್ಯ ನಮಗೆ ನಾವು ಹಾರೈಸಿದಂತೆ ನಿಮ್ಮಂಥಾ ಹೆಸರಾಂತ ಸಾಹಿತಿಗಳಿಂದ ಲೇಖನ ಬರಲಿಲ್ಲ ಮಾತ್ರವಲ್ಲ, ಮುಖ್ಯವಾಗಿ ಪ್ರಿಂಟು ಮಾಡುವರೆ ಕಾಗದವೇ ಸಿಗಲಿಲ್ಲ. ಹಾಗಾಗಿ ಒಳ್ಳೆಯ ಕಾಲ ಬಂದಾಗ, ನಿಮ್ಮ ಉದಾರ ಸೂಚನೆಯಂತೆ ನಿಮ್ಮ ಅಮೂಲ್ಯ ಸ್ಫೂರ್ತಿಯ ಲೇಖನವನ್ನು ಕೇಳುತ್ತೇವೆ. ಇತಿ ಸಂಪಾದಕ, 'ಗೋಳಾಟ'

ಸಮರಭೂಮಿಯ ಸಂಚಾರ

ರಶ್ಯದಲ್ಲಿ ಇಷ್ಟರಲ್ಲೆ ಭಾರೀ ಯುದ್ಧವಾಗಲಿದೆಯೆಂದು ಮೋಸ್ಕೋದ ರಾಯ್‌ಟರ್ ಸುದ್ದಿಗಾರನು ತಿಳಿಸುತ್ತಾನೆ. ಆರ್ಕ್‌ಟಿಕ್ ಸಾಗರದಿಂದ ಕಪ್ಪು ಸಮುದ್ರದ ವರೆಗೆ ೨೦೦೦ ಮೈಲು ವಿಸ್ತಾರದ ರಣಭೂಮಿಯಲ್ಲಿ ಜರ್ಮನರು ಅನೇಕ ಕಡೆ ಪ್ರಬಲ ಹೊಸ ಸೈನ್ಯ ಸಂಗ್ರಹ ಮಾಡಿದ್ದಾರೆ. ಡೊನೆಜ್ ರಂಗದ ರಸ್ತೆಗಳು ಗಟ್ಟಿಯಾಗಿದ್ದು ಟೇಂಕ್ ಓಡಾಟಕ್ಕೆ ಸಿದ್ಧವಾಗಿವೆ. ಕೂಬಾನ ಪ್ರದೇಶದಲ್ಲಿ ಈಶಾನ್ಯ ದಿಕ್ಕಿನಿಂದ ನೊವೊರೊಸಿಸ್ಕ್‌ನತ್ತ ಮುನ್ನುಗ್ಗುತ್ತಿದ್ದ ರಶ್ಯನರು ವೈರಿ ವ್ಯೂಹವನ್ನು ಮತ್ತೊಂದು ಕಡೆ ಭೇದಿಸಿದ್ದಾರೆ. ಕ್ರಿಮಸ್ಕಾಯಾ ಗುಡ್ಡಗಾಡುಗಳಲ್ಲಿ ಮುಂದುವರಿಯುತ್ತಿದ್ದ ರಶ್ಯನರ ವ್ಯೂಹವನ್ನು ತಡೆಯಲು ಜರ್ಮನರು ಪಾಂಜರ್ ದಳಗಳನ್ನು ಉಪಯೋಗಿಸುತ್ತಾರೆ.

ರೊಮೆಲ್ ಮತ್ತು ಆರ್ನಿಮ್ ಇಬ್ಬರೂ ಟುನಿಸಿಯಾ ಬಿಟ್ಟುಹೋಗಿರುವರೆಂದೂ, ಅಲ್ಲಿನ ಸೇನಾಪತಿತ್ವ ಇಟಲಿಯನ್ ಸೇನಾಪತಿಯೋರ್ವನ ಕೈಗೆ ಕೊಡಲಾಯಿತೆಂದೂ ವದಂತಿಯಿದೆ. ಮಿತ್ರ ಸೈನ್ಯಗಳನ್ನೆದುರಿಸುತ್ತಿರುವ ಜರ್ಮನರನ್ನು ಉತ್ತರ ದಕ್ಷಿಣಗಳಲ್ಲಿ ಬ್ರಿಟಿಷ್ ಸೈನ್ಯಗಳೂ, ಮಧ್ಯದಲ್ಲಿ ಫ್ರೆಂಚ್ ದಳಗಳೂ ಮುತ್ತತೊಡಗಿವೆ. ಟ್ಯುನಿಸ್ ಉತ್ತರದಲ್ಲಿ ಬಹುಮಟ್ಟಿಗೆ ಜರ್ಮನರ ಪ್ರತಿರೋಧ ನಿಂತಿದೆ. ಎಲ್ ಅಲಾಮೆನಿನಿಂದ ಟ್ಯುನಿಸ್ ವರೆಗೆ ಯಶಸ್ವಿಯಾಗಿ ಮುಂದುವರಿಸಿದ ಬ್ರಿಟಿಷ್ ಸಪ್ತಮ ಸೈನ್ಯವು ನಗರದ ವಾಯುವ್ಯಕ್ಕೆ ನುಗ್ಗುತ್ತಿದೆ. ಬಿಜರ್ಟಾ ಬಂದರವನ್ನು ಸಂಪೂರ್ಣ ವಶಪಡಿಸಿಕೊಂಡು ಅಮೆರಿಕನ್ ಪ್ರಥಮ ದಳವೂ, ಆಗ್ನೇಯ ದಿಕ್ಕಿನಿಂದ ಬ್ರಿಟಿಷ್ ಸಪ್ತಮ ದಲವೂ ಮುಂದುವರಿದಿದೆ. ಈ ಎರಡೂ ಸೈನ್ಯಗಳು ಸಂಧಿಸಿದ ಕೂಡಲೇ ಜರ್ಮನರನ್ನು ಇಬ್ಭಾಗವಾಗಿ ವಿಂಗಡಿಸಿದಂತಾಗುತ್ತದೆ. ಟ್ಯುನಿಸ್ ಬಿಜರ್ಟಾಗಳಲ್ಲಿ ಜರ್ಮನರನ್ನು ಸೋಲಿಸಿ ೫೦ ಸಾವಿರ ಜನರನ್ನು ಸೆರೆ ಹಿಡಿಯಲಾಯಿತೆಂದು ಹೇಳಲಾಗುತ್ತದೆ.

ಬಿಜೆರ್ಟಾ ಪತನದಿಂದ

ಬಿಜೆರ್ಟಾದ ಹೆಸರು ಇತಿಹಾಸದಲ್ಲಿ ಹಲಕಾಲದ ವರೆಗೆ ಉಳಿಯುವಂತಾಗಿದೆ. ಸಿಸಿಲಿಯಿಂದ ನೂರು ಮೈಲು ದೂರವಿರುವ ಈ ಟುನಿಸಿಯದ ನೌಕಾ ಕೇಂದ್ರವು ಒಂದು ದೊಡ್ಡ ಬಂದರವಾಗಿದೆ. ಇದರ ವೈಮಾನಿಕ ಕೇಂದ್ರಗಳು ಇಟಲಿಗೆ ಹತ್ತಿರವಿದ್ದು, ಇಟಲಿಯನರಿಗೆ ಯಾವಾಗಲೂ ಗಂಡಾಂತರ. ತರುವಂತಾದ್ದೇ ಆಗಿರುವುದು. ಬಿಜೆರ್ಟಾ ಇಡೀ ಜಗತ್ತಿನಲ್ಲೇ ಅತ್ಯಂತ ಪ್ರಖ್ಯಾತವಾದೊಂದು ನೌಕಾ ಕೇಂದ್ರ. ಮೆಡಿಟರೇನಿಯನಿನ ಇಡೀ ಆಫ್ರಿಕಾ ತೀರದಲ್ಲಿರುವ ಎಲ್ಲಾ ಬಂದರಗಳಿಗಿಂತಲೂ ಇದು ಅತ್ಯಂತ ಭದ್ರವಾದದ್ದು. ಸಂಯುಕ್ತ ರಾಷ್ಟ್ರಗಳ ಕೈಗೆ ಬಂದ ಈ ಬಂದರವು ನೆಲಜಲ, ವಾಯು ಯುದ್ಧಗಳ ಕೇಂದ್ರ ಸ್ಥಳವಾಗಿ ಅತ್ಯಂತ ಸಹಕಾರಿಯಾಗುವುದು. ಟುನಿಸಿಯವು 1881 ರಿಂದ ಫ್ರೆಂಚ್ ಆಡಳಿತಕ್ಕೊಳಪಟ್ಟಿತ್ತು. ಫ್ರೆಂಚರು ಬಿಜರ್ಟಾವನ್ನು ಜಿಬ್ರಾಲ್ಟರಿನಷ್ಟೇ ಬಲಯುತವಾಗಿ ಮಾಡಿದರು. ಇದು ರೋಮನ್ ಮಹಾಹತ್ತಾದಂದಿನಿಂದ ಈ ನಗರವು ಅನೇಕ ಹೋರಾಟಗಳ ರಣಕ್ಷೇತ್ರವಾಗಿದೆ. ಇದು ಅನೇಕ ಅರಸರ ಕೈಬದಲಿದೆ. ಫ್ರೆಂಚ್ ಇಟಲಿಗಳ ಘರ್ಷಣೆಯ ಕಾಲದಲ್ಲಿ ಬಿಜರ್ಟಾವನ್ನು ಆದಷ್ಟು ಫ್ರೆಂಚರು ಬಲಪಡಿಸಿಕೊಂಡರು. ಆದರೆ ಇಟಲಿ ಬಿಜರ್ಟಾವನ್ನು ಸ್ವಾಧೀನಪಡಿಸಿಕೊಂಡಿತು. ಇಂದು ಇಟಲಿಯ ಕೈಯಿಂದ ಮಿತ್ರರು ಅದನ್ನು ತೆಗೆದುಕೊಂಡದ್ದು ಇಟಲಿಗೆ ಮಹಾ ಗಂಡಾಂತರವಾದಂತೆಯೇ ಆಗಿದೆ. ಬಿಜರ್ಟವನ್ನು ಸ್ವಾಧೀನಪಡಿಸಿಕೊಂಡ ಮಿತ್ರರು, ಅಲ್ಲಿಂದ ಸಿಸಿಲಿ, ಸಾರ್ಡಿನಿಯಾ ಹಾಗೂ ಇಟಲಿಯ ಮುಖ್ಯ ಸ್ಥಳಗಳಿಗೆ ಬಲವಾದ ಪೆಟ್ಟು ಕೊಡಬಲ್ಲರು. ಬಿಜರ್ಟಾ ಮೆಡಿಟರೇನಿಯನಿನ ಮುಖ್ಯ ಜಲಮಾರ್ಗದಲ್ಲಿರುವುದರಿಂದ; ಇದು ಮಿತ್ರರ ಕೈಗೆ ಬಂದರೆ, ಇಟಲಿ ನೌಕಾದಳವು ಮುರಿದಂತೆಯೇ ಆಯಿತು. ಅಂತೂ ಬಿಜರ್ಟಾ ಪತನದಿಂದ ಮಿತ್ರರ ಬಲ ಹೆಚ್ಚಿದೆ. ಶತ್ರುಗಳ, ಆದರಲ್ಲೂ ವಿಶೇಷವಾಗಿ ಇಟಲಿಯ ತಲೆಗೆ ವಜ್ರಾಘಾತವಾದಂತಾಗಿದೆ!

ಜಪಾನಿನ ಚಟುವಟಿಕೆಗಳು

ಮಂಚೂರಿಯದಲ್ಲಿ ಜಪಾನರು ೧೦ ಲಕ್ಷ ಸೈನಿಕರನ್ನು ಸಂಗ್ರಹಿಸಿಟ್ಟಿರುವುದರಿಂದ, ಇಷ್ಟರಲ್ಲಿಯೇ ರಶ್ಯದ ಮೇಲೆ ಜಪಾನರು ಧಾಳಿಯಿಡಬಹುದೆಂದು ಊಹಿಸಲಾಗಿದೆ. ಶಾಂತಿ ಸಾಗರದಲ್ಲಿ, ಜಪಾನರು ಬೇಗನೇ ಒಂದು ಧಾಳಿ ಮಾಡುವರೆಂದೂ, ಹ್ಯಾಂಕಿಂಗ್ ಕೈಗೊಂಬೆ ಸರಕಾರದ ಸೈನ್ಯಾಧಿಕಾರಿಗಳು ವಿಶೇಷ ಚಟುವಟಿಕೆ ನಡೆಸುತ್ತಿರುವರೆಂದೂ ಚೀನದ ಸೈನ್ಯಾಧಿಕಾರಿ ಹೇಳುತ್ತಾನೆ. ಈಶಾನ್ಯ ಬಂಗಾಳದಲ್ಲಿ, ಒಂದು ವಿಮಾನ ಕ್ಷೇತ್ರದ ಮೇಲೆ ಜಪಾನಿ ವಿಮಾನಗಳು ಧಾಳಿಯಿಟ್ಟವು. ಅರಕಾನ ರಂಗದಲ್ಲಿ ಬುಥಿಡಾಂಗ ಹಳ್ಳಿಯನ್ನು ತಾವು ಸ್ವಾಧೀನಪಡಿಸಿರುವುದಾಗಿ ಜಪಾನರು ಹೇಳುತ್ತಾರೆ. ಅರಕಾನ ಪ್ರದೇಶದಲ್ಲಿ ಕೆಲದಿನದಿಂದ ಜಪಾನರ ಗಸ್ತು ಚಟುವಟಿಕೆ ವಿನಾ ಬೇರೇನೂ ಇರಲಿಲ್ಲ. ಮಾಂಗಡಾದ ಸಲುವಾಗಿ ಕಾಳಗ ನಡೆದಿದೆ. ಬಾಥೆಡಾಂಗ ಜಪಾನರ ವಶವಾದ್ದರಿಂದ ಮತ್ತು ಮಾಂಗಡಾ ರಸ್ತೆಯು ಸ್ವಲ್ಪ ಭಾಗ ಜಪಾನರ ವಶವಾದ್ದರಿಂದ, ಮಾಂಗಡಾವನ್ನು ರಕ್ಷಿಸುವ ಶಕ್ಯವಿಲ್ಲದಾಗಿದೆ. ಬಾಥೆಡಾಂಗದಂಥಾ ಉತ್ತಮ ಕೇಂದ್ರವು ಜಪಾನರಿಗೆ ಸಿಕ್ಕಿದ್ದರಿಂದ ಅವರು ಪಶ್ಚಿಮ ದಿಕ್ಕಿಗೆ ಮತ್ತು ಕರಾವಳಿ ಕಡೆಗೆ ಏಕಕಾಲದಲ್ಲಿ ಧಾಳಿಯಿಡಲು ಅನುಕೂಲವಾಗಿದೆ. ಡೋಚಾಕ್‌ಕದಿಂದ ಮಾಂಗಡಾದ ವರೆಗೆ ಇತ್ತೀಚೆಗೆ ಕಟ್ಟಿದ ರಸ್ತೆಯಿಂದಲೂ ಅವರು ನುಗ್ಗಬಹುದು. ಸದ್ಯ ಮಾಂಗಡಾವೇ ಜಪಾನರ ಗುರಿಯಾಗಿದೆ. ಇಲ್ಲಿನ ಬ್ರಿಟಿಷ್ ಸೈನ್ಯದ ಪರಿಸ್ಥಿತಿ ಚಿಂತಾಜನಕವಿದೆ. "ಬಾಥೆಡಾಂಗ ಖಾಲಿ ಮಾಡಿದೆವು; ನಮ್ಮ ಸೈನ್ಯಗಳು ಶಿಸ್ತಿನಿಂದ ಹಿಂದೆ ಸರಿದವು" ಎಂದು ಈಗ ವರದಿ ಬಂದಿದೆ.

ಸ್ಟಾಲಿನ್ ರೂಸ್‌ವೆಲ್ಟ್ ಭೇಟಿ?

ಪೋಲಂಡಿನವರಿಗೂ ರಶ್ಯನರಿಗೂ ಈಗ ವೈಮನಸ್ಸುಂಟಾದ್ದರಿಂದ, ಮಿತ್ರರಿಗೂ ಬಹಳ ತೊಂದರೆಯಾಗಿದೆ. ರಶ್ಯನರ ವಶ ೬೦,೭೦ ಸಾವಿರ ಪೋಲೆಂಡ್ ಸೈನಿಕರಿದ್ದರು. ಅದನ್ನು ರಶ್ಯದ ಸೇನಾಪತಿಗಳು ಚದರಿಸಿದರು. ಅವರ ವಶವಿರುವ ಶಸ್ತ್ರಾಸ್ತ್ರಗಳನ್ನೂ ಕಿತ್ತುಕೊಂಡರು. ಯುದ್ಧಪೂರ್ವದಲ್ಲಿ ಪೋಲೆಂಡಿನ ವಶವಿದ್ದ ಪ್ರದೇಶವನ್ನು, ಈಗ ತಮ್ಮ ವಶ ಬಿಡಬೇಕೆಂದು ಪೋಲೆಂಡಿನವರ ಆಗ್ರಹ. ಯುದ್ಧಪೂರ್ವದಲ್ಲಿ ಬೇರೆಬೇರೆ ಕಾರಣಗಳಿಂದ ಪೋಲೆಂಡು ವಿಸ್ತಾರವಾಗಿತ್ತೆಂದೂ, ಪೋಲೆಂಡಿನ ಮೂಲ ರಾಜ್ಯ ಅಷ್ಟು ವಿಸ್ತಾರವಿರಲಿಲ್ಲವೆಂದೂ ರಶ್ಯನರು ಹೇಳಿ, ಪೋಲೆಂಡಿನವರನ್ನು ಪ್ರತಿಭಟಿಸುತ್ತಾರೆ. ಬ್ರಿಟಿಷರು ಪೋಲೆಂಡಿಗೆ, ಯುದ್ಧ ಪೂರ್ವಕಾಲದ ಪ್ರದೇಶಗಳನ್ನು ತೆಗೆಸಿಕೊಡಲು ವಚನ ಬದ್ಧರಾಗಿರುವರು. ಹಾಗಾಗಿ ಮಿತ್ರರಿಗೆ ಈಗ ಸಂಕಟವಾಗಿದೆ. ಬ್ರಿಟನು ಕೊಟ್ಟ ಮಾತನ್ನು ಮುರಿಯುವುದಕ್ಕೂ ಆಗುವುದಿಲ್ಲ; ರಶ್ಯವನ್ನು ಕೆಣಕುವುದೂ ಸರಿಯಲ್ಲ. ಆದ್ದರಿಂದಲೇ ಇರಬೇಕು ಈಗ ರೂಸ್‌ವೆಲ್ಟರು ಈ ಮಧ್ಯಸ್ಥಿಕೆಗೆ ಬಂದಂತೆ ತೋರುತ್ತದೆ. ಸ್ಟಾಲಿನರು ರೂಸ್‌ವೆಲ್ಟರೂ ಭೇಟಿಯಾಗುವರೆಂಬ ವದಂತಿಯೊಂದು ದಟ್ಟ ಹಬ್ಬಿದೆ. ಆದರೆ ರೂಸ್‌ವೆಲ್ಟರನ್ನು ಸ್ಟಾಲಿನರು ಕಾಣಹೋಗುವರೋ, ಸ್ಟಾಲಿನರನ್ನು ರೂಸ್‌ವೆಲ್ಟರು ಕಾಣಹೋಗುವರೋ, ಅಥವಾ ಉಭಯತರೂ ಮೂರನೆಯ ಸ್ಥಳದಲ್ಲಿ ಭೇಟಿಯಾಗುವರೋ ಒಂದೂ ನಿಶ್ಚಿತ ತಿಳಿದಿಲ್ಲ. ಹಿಂದುಸ್ಥಾನದಂತಹ ಜಗತ್ತಿನ ಐದನೇ ಒಂದಂಶ ಜನರಿರುವ ರಾಜ್ಯದ ವಿಚಾರವನ್ನು ಯುದ್ಧಾನಂತರ ನಿರ್ಣಯಿಸುವುದಾಗಿ ಹೇಳುವ ಮಿತ್ರರಿಗೆ, ಪೋಲೆಂಡಿನ ವಿಚಾರ ಈಗಲೇ ಯಾಕೆ ನಿರ್ಣಯವಾಗಬೇಕೋ ನಮಗೆ ತಿಳಿಯಲೊಲ್ಲದು. ಹೇಗಿದ್ದರೂ 'ಬಿಳಿಯರು ಬಿಳಿಯರೇ; ಕರಿಯರು ಕರಿಯರೇ!' ಅಲ್ಲವೆ?

ಸದ್ಯದ ಸುದ್ದಿಗಳು

ಉತ್ತರ ಆಫ್ರಿಕದಲ್ಲಿ ಹೋರಾಟ ಮುಗಿಯುತ್ತ ಬಂದಿದೆ. ಟ್ಯುನಿಸ್-ಬಿಜರ್ಟಾಗಳೆರಡನ್ನೂ ಮಿತ್ರರು ವಶಪಡಿಸಿಕೊಂಡಿರುವರು. ಬಿಜರ್ಟಾ ಆಕ್ರಮಣದಿಂದ ಯುರೋಪಿನ ಮೇಲೆ ಧಾಳಿಯಿಡಲು ಮಿತ್ರರಿಗೆ ಅನುಕೂಲವಾಯಿತು. ಯುರೋಪಿನಲ್ಲಿ ಬೇಗನೇ ಮಿತ್ರರು ಧಾಳಿ ಮಾಡುವ ಯೋಚನೆಯಲ್ಲಿದ್ದಾರೆ. ಟುನಿಸಿಯದ ತುದಿಯಲ್ಲಿ ಇನ್ನೂ ಯುದ್ಧ ನಡೆಯುತ್ತಿದೆ. ಹಲವು ವೈರಿ ಸೈನಿಕರು ಬ್ರಿಟಿಷ್ ಅಮೆರಿಕನ್ ಸೈನಿಕರನ್ನು ಎದುರಿಸುತ್ತಿರುವರು. ಟುನಿಸಿಯದಲ್ಲಿ ವೈರಿ ಸೈನ್ಯಗಳು ಬಾನ್ ದ್ವೀಪಕಲ್ಪವನ್ನು ಮುಟ್ಟಿದವೆಂದು ತಿಳಿದಿದೆ. ಬಾನ್ ದ್ವೀಪಕಲ್ಪದ ಬಳಿ ಇನ್ನೂ ದೊಡ್ಡ ನೌಕಾ ಯುದ್ಧ ನಡೆಯುತ್ತಿದೆ. ಬಾನ್ ದ್ವೀಪಕಲ್ಪದಲ್ಲಿರುವ ಶತ್ರು ಸೈನ್ಯವನ್ನು ಇಬ್ಭಾಗಿಸಲು ಬ್ರಿಟಿಷ್ ಟೇಂಕುಗಳು ಹೋರಾಡುತ್ತಿವೆ. ಈ ಪ್ರಯತ್ನ ಯಶಸ್ವಿಯಾದರೆ ಶತ್ರುಗಳಿಗೆ ದಕ್ಷಿಣಕ್ಕಿದ್ದ ತಮ್ಮ ಸೈನ್ಯ ಸಂಬಂಧವೂ ತಪ್ಪಿ ಹೋಗುತ್ತದೆ.

ಅಖಿಲ ಭಾರತದಲ್ಲಿ ಜಯಭೇರಿ ಮೊಳಗಿಸಿದೆ!

ಎಂ. ಪಿ. ಪ್ರೊಡಕ್ಷನಿನ
ಅದ್ವಿತೀಯ ಚಿತ್ರ

ಜವಾಬ್

ತಾರೀಕು
14-5-'43
ರಿಂದ ಆರಂಭ!

ಬಂಗಾಳದ
ಕಲಕಂಠೆಯರಿಬ್ಬರು ಹಾಡುತ್ತಾರೆ!

ಕಾನನ್-ಬರುವಾ-ಜಮುನಾ
ದೇವಬಾಲಾ-ಅಹಿನ್ ಚೌಧರಿ-ಜಹಾರ್
ಮೊದಲಾದ ಪ್ರಸಿದ್ಧ ನಟವರ್ಗ

'ಜವಾಬ್' ಬೊಂಬಯಿಯಲ್ಲೀಗ 32ನೇ ವಾರ!

'ಪ್ರೇಮಕ್ಕೆ ಪ್ರತಿಪ್ರೇಮ ತೋರಿಸುವುದು
ಮಾನವ ಧರ್ಮ!

ಆದರೆ ಪ್ರೇಮಕ್ಕಾಗಿ ಸ್ವಾರ್ಥತ್ಯಾಗ ಮಾಡುವುದಲ್ಲವೇ
ಪ್ರೇಮದ ನಿಜವಾದ ಕಾಣಿಕೆ?'

ಸೆಂಟ್ರಲ್ ಟೋಕೀಸ್,
ಮಂಗಳೂರು.

JAWAB

THE CAST:
KANAN-BARUA
JAMUNA &c.

ಸ್ವದೇಶಾಭಿಮಾನಿ

ತಾರೀಕು 14—5—1943

ಮಹಾಸಭೆಯಲ್ಲಿ ಒಡಕು?

ಹೊಸ ಡಿಲ್ಲಿಯಲ್ಲಿ ಇತ್ತೀಚೆಗೆ ಸೇರಿದ ಅಖಿಲ ಭಾರತ ಹಿಂದೂ ಮಹಾಸಭೆಯಲ್ಲಿ ಒಡಕು ಉಂಟಾದ ವಿಷಯವಿಂದು ಎಲ್ಲೆಡೆಗಳಲ್ಲಿಯೂ ಪ್ರಸಿದ್ಧವಾಗಿದೆ. ಸಭೆ ಸೇರಿಸಿದ್ದು, ಸರಿಯಲ್ಲವೆಂಬ ಕೆಲ ಮುಖ್ಯ ಸದಸ್ಯರು ಎತ್ತಿದ ಆಕ್ಷೇಪವನ್ನು, ಅಧ್ಯಕ್ಷರು ವಜಾಮಾಡಿದ ಬಗ್ಗೆ ಈ ಒಡಕು ಹೊರಬಂದಿದೆ. ಅಧ್ಯಕ್ಷರ 'ರೂಲಿಂಗ್'ನ ನಿಷೇಧಾರ್ಥವಾಗಿ ಭಾಯಿ ಪರಮಾನಂದ, ರಾಜಾ ಮಹೇಶ್ವರ ದಯಾಳ ಶೇಠ, ಸ್ವಾಮಿ ಸತ್ಯಾನಂದ ಹಾಗೂ ಇಂದ್ರ ಪ್ರಕಾಶ ಮೊದಲಾದ ಹಿಂದೂ ಮಹಾಸಭೆಯ ಪ್ರಸಿದ್ಧ ಕಾರ್ಯಕರ್ತರು ೧೬-೨೫ ಸದಸ್ಯರೊಂದಿಗೆ, ಅಧ್ಯಕ್ಷರೊಡನೆ ಭಿನ್ನಾಭಿಪ್ರಾಯ ಹುಟ್ಟಿ ಸಭೆಯಿಂದ ಹೊರಬಂದಿರುವುದು ಅತ್ಯಂತ ಗಮನೀಯಾಂಶವಿದೆ.

ಯಾವುದೇ ಸಂಸ್ಥೆಯಾದರೂ, ಸಂಘಟನಾಶಕ್ತಿಯನ್ನು ಬೆಳಸಿಕೊಳ್ಳಬೇಕಾದರೆ ಪ್ರಾಗತಿಕ ಧೋರಣಕ್ಕನುಗುಣವಾಗಿ ಮುಂದುವರಿಯಬೇಕು. ಅದಿಲ್ಲದಿದ್ದರೆ ಅಂಥಾ ಸಂಘದಲ್ಲಿ ಒಡಕು ಹುಟ್ಟುವುದು ಖಂಡಿತ. ಇತ್ತೀಚೆಯ ಹಿಂದೂ ಮಹಾಸಭೆಯ ಹಲ ಕೆಲವು ಧೋರಣಗಳು ಹಿಂದುಗಳಲ್ಲಿ ತೀರಾ ಅತೃಪ್ತಿ ಹುಟ್ಟಿಸಿವೆ. ಅದರ ಪರಿಣಾಮವು ಈ ಮುಖಂಡರ ಸಭಾತ್ಯಾಗದ ಮೂಲಕ ಈಗ ವ್ಯಕ್ತವಾಗಿದೆ. ಆಗ್ರಾ ಪ್ರಾಂತದ ಹಿಂದೂ ಮಹಾಸಭೆಯ ಕಾರ್ಯಕಾರೀ ಮಂಡಳದವರು ಸಭೆ ಸೇರಿ ನಿರ್ಣಯಮಾಡಿದ್ದೂ ಈ ವಿಷಯವನ್ನೇ ವ್ಯಕ್ತಗೊಳಿಸುತ್ತದೆ.

'ಮಹಾತ್ಮ ಗಾಂಧಿಯವರ ಚರಿತಾರ್ಹ ಉಪವಾಸ, ಆ ಸಂದರ್ಭದಲ್ಲಿಯೂ ಸರ್ ಜೆ. ಪಿ. ಶ್ರೀ ವತ್ಸರು ರಾಜಿನಾಮೆ ಕೊಡಬಾರದೆಂದು ಹಿಂದೂ ಮಹಾಸಭೆ ತಳೆದ ಧೋರಣ ಇವುಗಳಿಂದೆಲ್ಲಾ ಹಲವು ಹಿಂದುಗಳ ಮನಸ್ಸು ನೊಂದಿದೆ. ಈ ವಿಷಯವನ್ನು ನಾವು ಹಿಂದು ಮಹಾ ಸಭಾಧ್ಯಕ್ಷರ ಗಮನಕ್ಕೆ ತರಲೆಳಸುತ್ತೇನೆ. ಆದ್ದರಿಂದ ಮಹಾ ಸಭೆಯವರು ತಮ್ಮ ಧೋರಣ ಮತ್ತು ಕಾರ್ಯಕ್ರಮವನ್ನು ಕೂಡಲೇ ಬದಲಾಯಿಸಿ, ಹಿಂದುಸ್ಥಾನದ ಸ್ವಾತಂತ್ರ್ಯ ಸಾಧನೆಗೆ ವಿಧಾಯಕ ಕಾರ್ಯ ಕೈಕೊಳ್ಳಬೇಕು' ಎಂದು ಆ ನಿರ್ಣಯದಲ್ಲಿ ಸ್ಪಷ್ಟಪಡಿಸಲಾಗಿದೆ.

ಹಿಂದು ಮಹಾಸಭೆಯ ಇಂದಿನ ಒಡಕಿನ ಕೆಲವು ಕಾರಣಗಳನ್ನು ನಾವೀ ನಿರ್ಣಯದಲ್ಲಿ ನೋಡಬಹುದಲ್ಲವೆ?

ಬಟ್ಟೆಯ ಬೆಲೆ

'ಸದ್ಯದ ಮಹಾ ಯುದ್ಧದಿಂದುಂಟಾದ ಅನರ್ಥಗಳಲ್ಲಿ ಮುಖ್ಯವಾದುದು ಒಂದು. ಜನರ ನಿತ್ಯೋಪಯೋಗೀ ಪದಾರ್ಥಗಳಿಗೆ ಮಿತಿಮೀರಿ ಬೆಲೆ ಹೆಚ್ಚಿರುವುದು. ಆಹಾರ ಸಾಮಗ್ರಿಗಳ ಬಳಿಕ್ಕೆ ಮನುಷ್ಯನಿಗೆ ಅತ್ಯಂತೋಪಯೋಗೀ ವಸ್ತುವೆಂದರೆ ಬಟ್ಟೆ. ದರಿದ್ರ ಧನಿಕರೆನ್ನದೆ ಎಲ್ಲರಿಗೂ ಇದು ಬೇಕೇಬೇಕು. ಈಗ ಮಧ್ಯಮ ವರ್ಗದವರ ಮತ್ತು ಸಾಮಾನ್ಯ ವರ್ಗದವರ ಬಟ್ಟೆಯ ಧಾರಣೆ ನಾಲ್ಕು ಐದು ಪಾಲಿಗಿಂತಲೂ ಹೆಚ್ಚಿದೆಯೆಂಬುದು ಮುಂಬಯಿ ಗಿರಣಿ ಸಂಘದವರ ಪ್ರಕಟಣೆಯಿಂದಲೇ ತಿಳಿದುಬರುತ್ತದೆ. ಸಾಮಾನ್ಯ ಜನರು ಉಪಯೋಗಿಸುತ್ತಿದ್ದ ಧೋತರವು ರೂ. ೨ಕ್ಕೆ ಮೊದಲು ಸಿಗುತಿದ್ದರೆ ಈಗ ರೂ. ೧೧ ಕೊಡಬೇಕಾಗಿದೆ.

'ಹೀಗೆ ಬೆಲೆ ಹೆಚ್ಚಲು ಗಿರಣಿಯಲ್ಲಿಯೇ ಕ್ರಯ ಹೆಚ್ಚಿದರೊಡನೆ ವ್ಯಾಪಾರಿಗಳ ಲಾಭ ಬಡಕತನವು ಮೇರೆ ಮೀರಿದ್ದೂ ಕಾರಣವಾಗಿದೆ. ಆದ್ದರಿಂದ ಈ ವಿಷಯದಲ್ಲಿ ಸರಕಾರದವರು ಕೂಡಲೇ ಕೈಹಾಕಿ ಬಟ್ಟೆಯ ಬೆಲೆಯನ್ನು ನಿಯಂತ್ರಿಸಬೇಕು. ಈ ನಿಯಂತ್ರಣದೊಂದಿಗೆ ನೂಲಿನ ಮಾರಾಟವನ್ನೂ ನಿಯಂತ್ರಿಸತಕ್ಕದ್ದು. ನೂಲಿನ ಧಾರಣೆಯನ್ನು ನಿಯಂತ್ರಿಸಿ ಕೈಮಗ್ಗಗಳಿಗೆ ಪ್ರೋತ್ಸಾಹವಿತ್ತರೆ ಎಷ್ಟೋ ಬಡಜನರಿಗೆ ಸಾಕಾಗುವಷ್ಟು ಬಟ್ಟೆ ತಯಾರಾಗುವುದು. ಬಡಜನರ ಕಷ್ಟ ನಿವಾರಣೆಗೆ ಸರಕಾರವು ಕೂಡಲೇ ಕಾರ್ಯಕ್ರಮ ಕೈಕೊಳ್ಳಬೇಕು'.

ಹೀಗೆಂದು ಭಾರತದ ಪ್ರಸಿದ್ಧರಾದ ಪಂಡಿತ ಮದನಮೋಹನ ಮಾಲವೀಯ ಶ್ರೀ. ಸಿ. ವಿಜಯರಾಘವಾಚಾರ್, ಶ್ರೀ. ಎಂ. ಎಸ್. ಅಣೆ, ಸರ್ ವಿಶ್ವೇಶ್ವರಯ್ಯ, ಸರ್ ಚಿಮಣಲಾಲ ಶೀಟಲವಾಡ, ಶ್ರೀ. ಜಯಕರ್, ಶ್ರೀ. ಎನ್. ಸಿ. ಕೇಳ್ಕರ್ ಮೊದಲಾದವರು ಒಂದು ಪ್ರಕಟಣೆ ಹೊರಡಿಸಿದ್ದಾರೆ. ಸರಕಾರವು ಈ ವಿನಂತಿಯನ್ನು ಗಮನಿಸುವುದೆಂದು ನಾವು ಹಾರೈಸುತ್ತೇವೆ.

ಬಿಸಿ ಸುದ್ದಿಗಳು

ಚರ್ಚಿಲರು ಅಮೆರಿಕಕ್ಕೆ ಹೋಗಿ ರೂಸ್ವೆಲ್ಟರೊಡನೆ ಮಾತುಕತೆ ನಡೆಸಿದರು. ಅಮೆರಿಕದ ಸೇನಾಧಿಕಾರಿಗಳೂ ಈ ಮಾತುಕತೆಯಲ್ಲಿ ಭಾಗವಹಿಸಿರುವರು. ಕಳೆದ ಜನವರಿಯ ಕ್ಯಾಸಬ್ಲಾಂಕಾ ಪರಿಷತ್ತಿನ ಮುಂದಿನ ಯೋಜನೆ ಇದೆಯೆಂದು ಹೇಳಲಾಗಿದೆ. ಈ ಚರ್ಚೆಯಲ್ಲಿ ಬಹಳ ಮಹತ್ವದ ನಿರ್ಣಯಗಳಾಗುವುವೆಂದು ಹಾರೈಸಲಾಗಿದೆ. ವೇವಲರೂ ಅಮೆರಿಕಕ್ಕೆ ಹೋಗಿದ್ದಾರೆ.

ಝುಗಾನ ಪರ್ವತಗಳಲ್ಲಿ ಜರ್ಮನ್ ಸೈನ್ಯಗಳು ಶರಣು ಬಂದವೆಂದು ಹೇಳಲಾಗಿದೆ. ಟ್ಯುನಿಸಿಯಾ ಯುದ್ಧದ ಕೊನೆಯಂಕ ಆಗುತ್ತಿದೆ. ಬಾನ್ ದ್ವೀಪಕಲ್ಪದಲ್ಲಿಯೂ ಜರ್ಮನರ ಪ್ರತಿಭಟನೆ ಜೋರಾಗಿದೆ. ಬ್ರಿಟಿಷ್ ಸೈನ್ಯ ಮುಂದುವರಿಯುತ್ತಿದೆ.

ಶಿಯಾಳಿ ವಿನಾಶಕ ಖಟ್ಲೆಯಲ್ಲಿ 'ಆನಂದ ವಿಕಟನ್' ಪತ್ರಿಕೆಯ ಸಂಪಾದಕರಿಗೆ ಏಳು ವರ್ಷ ಶಿಕ್ಷೆ ಆಗಿದೆ. ಗಡಿನಾಡಿನಲ್ಲಿ ಮುಸ್ಲಿಂ ಲೀಗಿನವರು ಮಂತ್ರಿಮಂಡಳ ಸ್ಥಾಪಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಮೇ ೨೩ಕ್ಕೆ ಮುಂಬಯಿಯಲ್ಲಿ ಅ. ಭಾ. ಕಮ್ಯುನಿಸ್ಟ ಸಮ್ಮೇಳನ ಜರಗಲಿದೆ.

ಪೋಲೆಂಡನ್ನು ತನ್ನ ಭೀಕರ ಅತ್ಯಾಚಾರಗಳಿಂದ ಕಂಪಾಯಮಾನಗೊಳಿಸಿದ ಗೆಸ್ಟಪೋ ನಾಯಕ ವಿಲ್ಹೆಲ್ಮ್ ಕ್ರೂಗರ್ ಎಂಬವನನ್ನು ಅಲ್ಲಿಯ ದೇಶಾಭಿಮಾನಿಗಳು ಗುಂಡಿಟ್ಟು ಕೊಂದಿದ್ದಾರೆ.

ಹಾಲೆಂಡಿನಲ್ಲಿ 'ಮಾರ್ಶಲ್ ಲಾ'ವನ್ನು ಜರ್ಮನರು ಜ್ಯಾರಿಗೆ ತಂದಿದ್ದಾರೆ.

ಸ್ವದೇಶ ಸಮಾಚಾರ

೨೪ ಜನರಿಗೆ ಹಾಜರಾಗಲು ನೋಟೀಸು

ಶ್ರೀ. ಕೆ. ಕೆ. ಶೆಟ್ಟಿ ಮೊದಲಾದವರು

ಶ್ರೀ. ಕೆ. ಕೆ. ಶೆಟ್ಟಿ ಮೊದಲಾದ ೨೪ ಜನರು ಡಿಫೆನ್ಸ್ ಕಾನೂನಿನಂತೆ ವಾರಂಟಗಳಿದ್ದು ಅವರೆಲ್ಲರು ಮೇ ೨೫ರೊಳಗೆ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರ ಮುಂದೆ ಹಾಜರಾಗತಕ್ಕದ್ದೆಂದು ಧಾರವಾಡ ಜಿಲ್ಲಾ ಮೆಜಿಸ್ಟ್ರೇಟರು ನೋಟಿಸು ಕೊಟ್ಟಿರುವರು.

ನೆಹರು ಕುರಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು

ಈ ಸಲದ ಪಾರ್ಲಿಮೆಂಟ್ ಸಭೆಯಲ್ಲಿ ನೆಹರುಗಳ ಕುರಿತು ಪ್ರಶ್ನೆ ಕೇಳಲ್ಪಟ್ಟವು. ಅದಕ್ಕೆ ಉತ್ತರವೀಯುತ್ತಾ ಅಮೆರಿ ಹೀಗೆಂದರು, "ಜವಾಹರಲಾಲ ನೆಹರುಗಳು ಭಾರತದಲ್ಲೇ ಇದ್ದಾರೆ. ವರ್ಕಿಂಗ್ ಕಮಿಟಿ ಮೆಂಬರರೊಡನೆಯೆ ಇರುವರು. ತಮ್ಮ ಕುಟುಂಬದ ಜನರೊಡನೆ, ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಮಾತ್ರ ಅವರಿಗೆ ಪತ್ರ ವ್ಯವಹಾರ ಮಾಡಲು ಅನುಕೂಲ ಕೊಡಲಾಗಿದೆ." 'ಪಾರ್ಲಿಮೆಂಟ ಸದಸ್ಯರಾದರೂ ನೆಹರುಗಳೊಡನೆ ಪತ್ರವ್ಯವಹಾರ ಮಾಡಬಹುದೆ?' ಎಂಬ ಪ್ರಶ್ನೆಗೆ ಅಮೆರಿ 'ಪಾರ್ಲಿಮೆಂಟ್ ಸದಸ್ಯರು ನೆಹರು ಕುಟುಂಬದವರಾಗಿದ್ದರೆ ಮಾಡಬಹುದು'. ಎಂದರು. ಪಾರ್ಲಿಮೆಂಟಿನಲ್ಲಿ ಹೀಗೆ ಪ್ರಶ್ನೋತ್ತರಗಳಾಗುತ್ತಿದ್ದರೂ ನೆಹರು ಪುತ್ರಿ ಇಂದಿರಾ ಗಾಂಧಿಗೆ ಪತ್ರವ್ಯವಹಾರಕ್ಕೆ ಸರಕಾರ ತೊಂದರೆಯುಂಟುಮಾಡುತ್ತಿದೆಯೆಂಬುದು ಸರ್ವ ವಿದಿತವಿದೆ.

ಸ್ಥಳೀಯ ಸಂಸ್ಥೆಗಳಿಗೆ ಸರಕಾರದ ಅಪ್ಪಣೆ

ಈಗಿನ ಚಳವಳಿದಿಂದ ಮುನ್ಸಿಪಾಲಿಟಿ, ಜಿಲ್ಲಾ ಬೋರ್ಡುಗಳಿಗೆ ಎಷ್ಟು ನಷ್ಟವುಂಟಾಗಿದೆಯೆಂಬೂ ಈ ಸಂಬಂಧ ಅವುಗಳಿಗೆ ಸಲಬೇಕಾದ ಪರಿಹಾರ ದ್ರವ್ಯದ ಮೊತ್ತವೆಷ್ಟೆಂದೂ ಸರಕಾರಕೆ ತಿಳಿಸಬೇಕಾಗಿ ಮದ್ರಾಸು ಸರಕಾರವು ಪ್ರಾಂತದ ಸ್ಥಳೀಯ ಸಂಸ್ಥೆಗಳನ್ನು ಕೇಳಿದೆ.

ಅ. ಭಾ. ಟ್ರೇಡ್ ಯೂನಿಯನ್

ಇದರ ಅಧ್ಯಕ್ಷರಾಗಿ ಶ್ರೀ ಎಸ್. ಎ. ಡಾಂಗೆಯವರೂ, ಕಾರ್ಯದರ್ಶಿಗಳಾಗಿ ಶ್ರೀ ಎನ್. ಎಂ. ಜೋಶಿಯವರೂ, ಕೋಶಾಧ್ಯಕ್ಷರಾಗಿ ಶ್ರೀ. ಬಿ. ಎ. ಖೇಡಗೀಕರರೂ ಆರಿಸಲ್ಪಟ್ಟಿದ್ದಾರೆ.

ಹೆಣ್ಣು ಟೈಪಿಸ್ಟರು

ಮದ್ರಾಸ್ ಸೆಕ್ರೆಟರಿಯೇಟಿನಲ್ಲಿ ಇದೇ ಮೊದಲನೆಯ ಸಲವಾಗಿ, ಓರ್ವ ಕ್ರಿಶ್ಚನ್ ಮತ್ತು ಓರ್ವ ಬ್ರಾಹ್ಮಣ ಹುಡುಗಿಯರನ್ನು ಟೈಪಿಸ್ಟರಾಗಿ ನೇಮಿಸಲಾಗಿದೆ.

ಬಿಡುಗಡೆ ವಿಚಾರವಿಲ್ಲ?

ವೈಸರಾಯರ ಹೊಸ ಕೌನ್ಸಿಲಿನ ಸದಸ್ಯರು ರಾಜಕೀಯ ಕೈದಿಗಳ ಬಿಡುಗಡೆ ವಿಚಾರ ಮಾಡುವರೆಂದು ದಟ್ಟ ಸುದ್ದಿ ಹರಡಿತ್ತು. ಆದರೆ ಇತ್ತೀಚೆಯ ವಾರ್ತೆಯಂತೆ ಅವರು ಆ ಕುರಿತು ಅಷ್ಟು ಆತುರವುಳ್ಳವರಾಗಿಲ್ಲವೆಂದು ತಿಳಿದು ಬರುತ್ತದೆ.

ಕೇಶವ ತಲ್ಪಡೆ ಖಟ್ಲೆ

ಫೆಡರಲ್ ಕೋರ್ಟಿನ ಮಹತ್ವದ ತೀರ್ಮಾನದ ಕಾರಣರಾದ ಶ್ರೀ. ಕೇಶವ ತಲ್ಪಡೆಯವರ ಖಟ್ಲೆಯಲ್ಲಿ ಹೊಸ ಆರ್ಡಿನೆನ್ಸು ಪ್ರಕಾರ ಅವರ ಬಿಡುಗಡೆ ಸಾಧ್ಯವಿಲ್ಲದಾಗಲು ಆ ಖಟ್ಲೆಯನ್ನು ಪುನಃ ಫೆಡರಲ್ ಕೋರ್ಟಿಗೆ ಕಳುಹಿಸಲಾಗಿದೆ. ವೆಸ್ಟನರೆಂಬ ಮು. ಹೈ. ಕೋರ್ಟು ನ್ಯಾಯಾಧೀಶರು ಶ್ರೀ. ತಲ್ಪಡೆಯವರನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನಿಸಿದ್ದರು. ಉಳಿದಿಬ್ಬರು ಮೇಲಿನ ಅಭಿಪ್ರಾಯವಿತ್ತರು.

೧೪ ಸಾವಿರ ಭಾರತೀಯ ಯುದ್ಧ ಕೈದಿಗಳು

ಜರ್ಮನಿ ಇಟಲಿ ವಶದಲ್ಲಿರುವರೆಂದೂ, ಅವರಿಗೆ ಲಂಡನಿನ ಭಾರತೀಯ ಹಿತಚಿಂತಕರು ರೆಡ್‌ಕ್ರಾಸ್ ಮೂಲಕ ಆಹಾರ ಬಟ್ಟೆ ಮೊದಲಾದುವುಗಳನ್ನು ಕಳಿಸಿರುವರೆಂದೂ ತಿಳಿದಿದೆ.

'ಮೆಡಂಚಿಯಾಂಗರನ್ನು ಭಾರತಕ್ಕೆ ಕಳುಹಿಸಿ'

ಬ್ರಿಟನಿನಲ್ಲಿರುವ ಭಾರತ ಕಾಂಗ್ರೆಸಿನವರು, ಭಾರತದ ಬಿಕ್ಕಟ್ಟು ಪರಿಹರಿಸುವ ಸಲುವಾಗಿ, ಮಿತ್ರ ರಾಷ್ಟ್ರಗಳ ಪ್ರತಿನಿಧಿಯಾಗಿ ಮೇಡಂ ಚಿಯಾಂಗರನ್ನು ಭಾರತಕ್ಕೆ ಕಳುಹಿಸಿ ಕೊಡಿ ಎಂದು ಒಂದು ಸೂಚನೆ ಮಾಡಿರುವರು. ಈ ಸೂಚನೆಗೆ ಅನೇಕ ಬ್ರಿಟಿಷ ಪ್ರಮುಖರೂ ಬೆಂಬಲವಿತ್ತಿರುವರು.

ದೇಶಭಕ್ತರ ಮರಣ

ಕಾನಪುರದ ಪ್ರಸಿದ್ಧ ದೇಶಭಕ್ತ ಮಣಿಲಾಲ ಪಾಂಡೆಯವರು ಅಸ್ವಸ್ಥದ ಮೂಲಕ ಸೆರೆಮನೆಯಿಂದ ಬಿಡುಗಡೆ ಮಾಡಲ್ಪಟ್ಟು ಕ್ಷಯರೋಗದಿಂದ ನಿಧನಹೊಂದಿರುವರು. ಇವರ ಪತ್ನಿ, ಒಬ್ಬ ಮಗ, ಓರ್ವ ಮಗಳು ಇರುವರು.

ಮಹಾಸಭೆಯಲ್ಲಿ ಬಿಕ್ಕಟ್ಟು?

ಹೊಸ ದಿಲ್ಲಿಯಲ್ಲಿ ಸೇರಿದ ಅ. ಭಾ. ಹಿಂದು ಮಹಾಸಭೆಯ ಅಧ್ಯಕ್ಷರು ರೂಲಿಂಗ್ ಕೊಟ್ಟದ್ದಕ್ಕೆ ನಿಷೇಧಿಸಿ, ಭಾಯಿ ಪರಮಾನಂದ, ರಾಜಾ ಮಹೇಶ್ವರ ದಯಾಳ, ಸ್ವಾಮಿ ಸತ್ಯಾನಂದ ಇಂದ್ರ ಪ್ರಕಾಶ ಮೊದಲಾದ ೧೬-೨೫ ಮಂದಿ ಸದಸ್ಯರು ಸಭಾ ತ್ಯಾಗ ಮಾಡಿದರು.

'ಆಫ್ರಿಕದೊಡನೆ ರಾಜಕೀಯ ಸಂಬಂಧ ಕಡಿಯಿರಿ'

ಡಾ। ಖರೆಯವರಿಗೆ ಸ್ವಾಮಿ ದಯಾಳರ ಬಿನ್ನಹ

ಸಾಗರದಾಚೆಯ ಸೀಮೆಗಳ ಭಾರತೀಯರ ಮೇಲ್ವಿಚಾರಣೆ ಖಾತೆಗೆ ಸದಸ್ಯರಾಗಿ ನೇಮಕರಾದ ಡಾ। ಎನ್. ಬಿ. ಖಾರೆಯವರೊಡನೆ ನಾತಾಳ ಭಾರತೀಯ ಕಾಂಗ್ರೆಸಿನ ಪ್ರತಿನಿಧಿ ಸ್ವಾಮಿ ಭವಾನಿ ದಯಾಳರು ಒಂದು ಬಿನ್ನಹ ಮಾಡಿಕೊಂಡಿದ್ದಾರೆ. ಅದರಲ್ಲಿ ಅವರು ದಕ್ಷಿಣ ಆಫ್ರಿಕದ ಭಾರತೀಯರ ವಿಷಯ, ಖಾರೆಯವರು ವಿಶೇಷಾಸಕ್ತಿ ವಹಿಸುವರೆಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿ, ಆಫ್ರಿಕದೊಡನೆ ರಾಜಕೀಯ ಸಂಬಂಧವನ್ನು ಕಡಿದುಕೊಳ್ಳಬೇಕೆಂದೂ, ಅಲ್ಲಿನ ಹೈ ಕಮಿಶನರನ್ನು ಹಿಂದೆ ಕರೆಸಿಕೊಳ್ಳಬೇಕೆಂದೂ, ಜನ್ಮಭೂಮಿಯ ಗೌರವವನ್ನುಳಿಸುವ ಸಲುವಾಗಿ ದಕ್ಷಿಣಾಫ್ರಿಕದ ಯೂನಿಯನ್ ಸರಕಾರದ ಮೇಲೆ ಸೇಡು ತೀರಿಸಬೇಕೆಂದೂ ಬಿನ್ನವಿಸಿರುವರು.

ಶ್ರೀಮತಿ ಆಸಫ್ ಅಲಿಯವರ ಮೇಲೆ ಖಟ್ಲೆ

ಕಳೆದ ಸಪ್ಟಂಬರ ತಾ. 7ಕ್ಕೆ ಶ್ರೀಮತಿ ಅರುಣ ಆಸಫ್ ಅಲಿಯವರು ದಿಲ್ಲಿಯ ಪೋಲೀಸ್ ಸುಪರಿಂಟೆಂಡೆಂಟರ ಮುಂದೆ ಹಾಜರಾಗಬೇಕೆಂದು ಕೊಟ್ಟ ಹುಕುಮನ್ನು ಉಲ್ಲಂಘಿಸಿದ ಆರೋಪದ ಮೇಲೆ ಖಟ್ಲೆಯಾಗಿದ್ದು ವಿಚಾರಣೆ ಆರಂಭವಾಗಿದೆ. ಸಾಕ್ಷಿದಾರರು ಸಾಕ್ಷಿ ಹೇಳಿ ಆಸಫ್ ಅಲಿಯವರ ಮನೆಯ ಗೋಡೆಯ ಮೇಲೆ ನೊಟೀಸು ಹಚ್ಚಿರುವುದಾಗಿ ಹೇಳಿದರು. ಶ್ರೀಮತಿ ಅಸಫಾಲಿಯವರು ಹಾಜರಾಗದ ಕಾರಣ ಅವರು ತಪ್ಪಿಸಿಕೊಂಡು ಓಡಿ ಹೋಗಿದ್ದಾರೆಂದು ಸರಕಾರ ಜಾಹೀರು ಮಾಡಿದೆ.

ಹೊಸ ವೈಸರಾಯರು?

ಈಗಿನ ವೈಸರಾಯ್ ಲಿನ್‌ಲಿತ್‌ಗೋರವರ ಅಧಿಕಾರಾವಧಿಗೆ ಜೀವದಾನ ಮಾಡುತ್ತಾ ಮಾಡುತ್ತಾ ಬಂದು ಬಹಳ ಕಾಲ ಮುಂದುವರಿಯಿತಷ್ಟೆ? ಆದರೆ ಇನ್ನಾದರೂ ಹೊಸ ವೈಸರಾಯರ ನೇಮಕವಾಗಬೇಕಾಗಿದೆಯೆಂದು ಬ್ರಿಟಿಷ್ ಪಾರ್ಲಿಮೆಂಟಿನವರು ಆಲೋಚಿಸಲಾರಂಭಿಸಿದ್ದಾರಂತೆ. ಈ 'ವರಾನ್ವೇಷಣ' ಕಾರ್ಯವು ಬಹಳ ಬಿರುಸಿನಿಂದ ನಡೆಯುತ್ತಿದೆ ಲಂಡನಿನಲ್ಲಿ!

ಸ್ಟ್ಯಾಂಡರ್ಡ್ ಬಟ್ಟೆ

ಯನ್ನು ಮದ್ರಾಸ್ ಪ್ರಾಂತಕ್ಕಾಗಿ ಸರಬರಾಯಿ ಮಾಡಬೇಕೆಂದು, ಮದ್ರಾಸ್ ಸರಕಾರವು ಈ ಯೋಜನೆಯಲ್ಲಿ ಭಾಗವಹಿಸಿರುವುದಾಗಿ ಸುದ್ದಿ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲೆಯ ಜಮೀನ್ದಾರರಲ್ಲಿ—ವಿನಂತಿ

ನಮ್ಮ ಜಿಲ್ಲೆಯ ಜಮೀನ್ದಾರರಿಗೆ, ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ (ಎಂ ಎಲ್.ಎ) ಪಿ. ಆರ್. ರಂಗನಾಥ ಪೂಂಜ, ಕೆ ಟಿ. ಆಳ್ವ, ಕೆ. ಎಸ್. ಹೆಗ್ಡೆ, ಡಿ ಮಂಜಯ್ಯ ಹೆಗ್ಡೆ (ಎಂ. ಎಲ್. ಸಿ), ಕೆ ರಘುಚಂದ್ರ ಬಳ್ಳಾಲ, ಡಿ ಪುಟ್ಟಸ್ವಾಮಿ ಇವರು ಒಂದು ವಿನಂತಿಮಾಡಿಕೊಂಡು ಪ್ರಕಟಣೆ ಕೊಟ್ಟಿರುವರು. ಆ ಪ್ರಕಟಣೆಯಲ್ಲಿ ಅವರು ಹೇಳುವುದೇನೆಂದರೆ, 'ನಮ್ಮ ಜಿಲ್ಲೆಯಲ್ಲಿ ಅಕ್ಕಿಗಾಗಿ ಜನರು ಸಂಕಷ್ಟಪಡುತ್ತಿರುವುದರಿಂದ, ಸರಕಾರವು, ನಾವು ವಿರೋಧಿಸಿದರೂ, ಅಕ್ಕಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಯಿತು. ಸರಕಾರವು ಅಕ್ಕಿಯನ್ನು ಸ್ವಾಧೀನಪಡಿಸುವುದಕ್ಕಿಂತಲೂ, ಜಮೀನ್ದಾರರೇ ಮುಂಬಂದು ಜಿಲ್ಲೆಯ ಆಹಾರಸಮಸ್ಯೆಯನ್ನು ಬಗೆಹರಿಸಬೇಕು. ಬಡವರಿಗಾಗಿ ತ್ಯಾಗಮಾಡಬೇಕು ಅಕ್ಕಿ ಮಾರ್ಕೆಟಿಗೆ ಬರುವಂತೆ ಕಳುಹಿಸಬೇಕು ಹೀಗೆ ಅಕ್ಕಿ ಧಾರಣೆಯನ್ನು ನಾವೇ ಒಂದು ಯೋಗ್ಯ ದರದಲ್ಲಿ ಕೊಟ್ಟರೆ ಸರಕಾರದ ಮಧ್ಯಸ್ಥಿಕೆಯೇ ಬೇಡ, ಅಕ್ಕಿ ಸರಿಯಾಗಿ ಮಾರ್ಕೆಟಿಗೆ ಬರುವುದಾದರೆ, ಅದನ್ನು ಸ್ವಾಧೀನಪಡಿಸುವ ಪ್ರಯಾಸಕರ ಕೆಲಸವನ್ನು ಸರಕಾರದವರೂ ಕೈಗೊಳ್ಳಲಾರರು, ಹಾಗೆ ನಾವು ಕಮ್ಮಿ ಕ್ರಯದಲ್ಲಿ ಅಕ್ಕಿ ಕೊಟ್ಟರೂ ವ್ಯಾಪಾರಿಗಳು ಲಾಭದಾಸೆಯಿಂದ ಮಾರುವಾಗ ಹೆಚ್ಚು ಕ್ರಯವಿಡುವರೆಂದು ಸಂದೇಹವಿದ್ದರೆ ನಿಮ್ಮ ಅಕ್ಕಿಯನ್ನು ಸಹಕಾರೀ ಸಂಘಗಳಿಗೆ ಕೊಟ್ಟುಬಿಡುವುದು ಉತ್ತಮವಾಗಿದೆ ಅದು ಬಡವರಿಗೇ ದೊರಕುವುದು ಆದ್ದರಿಂದ ಜಮೀನ್ದಾರರು ಬಡವರ ಕಡೆಗೆ ಉದಾರದೃಷ್ಟಿಯುಳ್ಳವರಾಗಿ ತಾವಾಗಿ ಮುಂಬಂದು ತ್ಯಾಗಮಾಡಿದರೆ ಈ ಉಪಕಾರ ಮರೆಯುವಂಥಾದ್ದಲ್ಲ' ಜಿಲ್ಲೆಯ ಜಮೀನ್ದಾರರು ಈ ಮಹನೀಯರ ವಿನಂತಿಯನ್ನು ಅವಶ್ಯ ಕೇಳುವರೆಂದು ನಾವು ನಂಬುತ್ತೇವೆ.

ರಜೆ

ಮಂಗಳೂರಿನ ಡಿಪ್ಯುಟಿ ಕಲೆಕ್ಟರ್ ಶ್ರೀ ಬಿ ಜೂಗಪ್ಪ ಇವರು ಮೂರು ತಿಂಗಳ ರಜೆಯಲ್ಲಿರುವರು

ಮಳೆ

ಮಂಗಳೂರಲ್ಲಿ ಕೆಲದಿನಗಳಿಂದ ವಿಪರೀತ ಸೆಕೆಯಿದ್ದು ತಾ ೧೩ರಂದು ರಾತ್ರಿ ವಿಶೇಷ ಸಿಡಿಲು ಗುಡುಗುಗಳಿಂದ ಚೆನ್ನಾಗಿ ಮಳೆಬಂದಿದೆ

ಜಿಲ್ಲಾ ಪತ್ರಿಕೋದ್ಯಮಿ ಸಂಘ

ಇದರ ಕಾರ್ಯಕಾರೀ ಸಮಿತಿಯು, ತಾ ೧೩ರಂದು ಸೇರಿ ಶ್ರೀ ಬೆನಗಲ್ ರಾಮರಾಯರ ನಿಧನದ ಬಗ್ಗೆ ಸಹಸಂತಾಪ ಸೂಚಿಸುವ ಠರಾವೊಂದನ್ನೂ, ಪತ್ರಿಕೋದ್ಯಮಿ ಸಂಘದ ಕಾರ್ಯದರ್ಶಿ ಶ್ರೀ ಕು ಶಿವರಾಯರನ್ನು ಬೊಂಬಾಯಿಯಲ್ಲಿ ಬೇಗನೇ ಜರಗಲಿರುವ ಅಖಿಲ ಭಾರತ ಪ್ರಾಗತಿಕ ಬರೆಹಗಾರರ ಸಮ್ಮೇಳನಕ್ಕೆ ಕಳುಹಿಸುವುದಾಗಿಯೂ ನಿರ್ಣಯ ಮಾಡಿತು.

ದ. ಕ. ಜಿಲ್ಲಾ ಬೋರ್ಡು

ಸಭೆಯೊಂದು ತಾ ೨೧ರಂದು ಪ್ರಾತಃ ೧೧ ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗಲಿದೆ

ವರ್ಗ

ಮಂಗಳೂರು ಸಬ್ ಡಿವಿಜನ್ ಪೋಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟ್ ಶ್ರೀ ಜಿ. ಆರ್. ದೇವರಾಜಯ್ಯಂಗಾರರಿಗೆ ನೆಲ್ಲೂರು ಪೋಲೀಸ್ ಸುಪರಿಂಟೆಂಡೆಂಟರಾಗಿ ನೇಮಕವಾಗಿದೆ

ಮಿ. ಎಸ್. ಮಹಮ್ಮದ್ ಉಸ್ಮಾನ್ ಸಾಹೇಬ್ ಇವರು ದಕ್ಷಿಣ ಕನ್ನಡದ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಾಗಿ ನೇಮಕವಾಗಿದ್ದಾರೆ.

ಶಿವ ಬ್ರಾಹ್ಮಣ ಪರಿಷತ್ತು

ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಆಶ್ರಯದಲ್ಲಿ ಮೇ ತಾ ೧೯ರಂದು ಕೊಡಿಯಾಲಬೈಲಿನ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ಡಾ. ಎಂ. ವಿ. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಲಿದೆ.

ಕಾಸರಗೋಡು

ತಾಲೂಕು ಕಿಸಾನ್ ಸಂಘ

ದ ಕಾರ್ಯಕಾರಿ ಸಮಿತಿಯ ಸಭೆಯೊಂದು ತಾ. ೨೮ರಂದು ಜರಗಿತು. ಬೇಗಂ ಅಜಾದ್ ಮತ್ತು ಸತ್ಯಮೂರ್ತಿ, ಇವರ ಅಕಾಲ ಮರಣದಲ್ಲಿ ಸಂತಾಪ ಸೂಚಿಸುವುದು, ಎ. ಐ. ಸಿ. ಸಿ. ನಿರ್ಣಯವನ್ನು ಪುನರಾಲೋಚಿಸಬೇಕೆಂದು ಜೈಲಿನಿಂದ ಹೊರಬಂದ ಕಾಂಗ್ರೆಸಿಗರನ್ನು ಕೇಳಿಕೊಳ್ಳುವುದು ಈ ಎರಡು ನಿರ್ಣಯಗಳನ್ನು ಸಮಿತಿಯು ಸ್ವೀಕರಿಸಿತು

ಹೊಸದುರ್ಗ

ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಒಂದು ಸಭೆಯು ಜರಗಿ ಕಲ್ಲಿಕೋಟೆಯಲ್ಲಿ ಮುಷ್ಕರ ಹೂಡಿರುವ ಬೀಡಿ ಕೆಲಸಗಾರರೊಡನೆ ಸಹಾನುಭೂತಿ ತೋರಿಸುವ ಮತ್ತು ಅವರಿಗೆ ನೆರವಾಗುವುದಕ್ಕಾಗಿ ಸಹಾಯ ನಿಧಿಗೆ ಚಂದಾ ಕೊಡುವ ನಿರ್ಣಯಗಳಾದುವು ೧೦ ಆಣೆ ಕೂಲಿಯ ಬದಲು ೧೦೦೦ ಬೀಡಿಗೆ ಹನ್ನೆರಡಾಣೆಯನ್ನೂ ೨೫ ಶೇ. ತುಟ್ಟಿಭತ್ತೆಯನ್ನು ಕೊಡಬೇಕೆಂದು ಸಮಿತಿಯು ಪ್ರಭಾತ ಕಂಪೆನಿಯವರನ್ನು ಕೇಳಿಕೊಂಡಿತು

ಉಡುಪಿ

ರಾಜಿನಾಮೆ

ಸ್ಥಳೀಯ ಮ್ಯುನಿಸಿಪಲ್ ಕೌನ್ಸಿಲಿನ ಸದಸ್ಯರಾದ ಶ್ರೀ ಶಂಭು ಸೆಟ್ಟರು ಮತ್ತು ಶ್ರೀ ಸುಂದರ ಕಾಮತರು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಟ್ಟಿರುವರು

ಅಕ್ಕಿ ದಾಸ್ತಾನು

ಮುಂಬರುವ ಶ್ರೀ ಪ್ರತ್ತಿಗೆ ಸ್ವಾಮಿಗಳ ಪರ್ಯಾಯ ಮಹೋತ್ಸವದ ಪೂರ್ವ ಸಿದ್ಧತೆಗಾಗಿ ಸ್ವಾಮಿಗಳು ೪೦೦ ಮುಡಿ ಅಕ್ಕಿಯನ್ನು ತಮ್ಮ ಮಠದಲ್ಲಿ ಶೇಖರಿಸಿಟ್ಟಿರುವರು. ಉಡುಪಿ ತಹಶಿಲ್ದಾರ್ ಶ್ರೀ ಕೆ ಕೆ ಕುದ್ವರು ಮಠಕ್ಕೆ ಚಿತ್ತೈಸಿ ದಾಸ್ತಾನು ಇಟ್ಟ ಅಕ್ಕಿಯನ್ನು ಯಾವ ಕೆಲಸಕ್ಕೂ ವಿನಿಯೋಗಿಸಕೂಡದೆಂದು ಕಾನೂನಿನ ಪ್ರಕಾರ ಆಜ್ಞೆ ಇತ್ತಿರುವರು

ನಗರ ಸಭೆ

ಯ ಸಾಮಾನ್ಯ ಸಭೆಯೊಂದು ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ತಾ ೩ರಲ್ಲು ಜರಗಿ ಶ್ರೀ ಕೆ ವಿ ಸುಂದರಮ್ ಅಯ್ಯರರನ್ನು ಕೌನ್ಸಿಲಿನ ಪಬ್ಲಿಕ್ ಎನಲಿಸ್ಟರಾಗಿ ಆರಿಸಲಾಯಿತು

ಶ್ರೀ ಬೆನಗಲ್ ರಾಮರಾಯರ ನಿಧನ!

ಮದ್ರಾಸ್ ಸರಕಾರದ ಹಿಂದಿನ ಕನ್ನಡ ಭಾಷಾಂತರಕಾರರೂ ಪ್ರಸಿದ್ಧ ಕನ್ನಡದ ಅಭಿಮಾನಿಗಳೂ ಆದ ಶ್ರೀ ಬೆನಗಲ್ ರಾಯರು ತಮ್ಮ ೭೭ನೇ ವಯಸ್ಸಿನಲ್ಲಿ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ತಮ್ಮ ಸ್ವಂತ ಮನೆಯಲ್ಲಿ ಹೃದಯವಿಕಾರದಿಂದ ತೀರಿಹೋದರೆಂದು ತಿಳಿಸಲು ನಮಗೆ ಅತ್ಯಂತ ವ್ಯಸನವಾಗುತ್ತದೆ ಶ್ರೀ ಬೆನಗಲ್ ರಾಯರು ನಮ್ಮ ದಕ್ಷಿಣ ಕನ್ನಡದವರಿದ್ದು, ಉತ್ತಮ ಗ್ರಂಥಕರ್ತರೂ, ಲಲಿತಕಲೆಗಳ ಪ್ರೋತ್ಸಾಹಕರೂ ಆಗಿದ್ದರು ಇವರು ದಿವಂಗತ ಪಂಜೆ ಮಂಗೇಶರಾಯರ ಭಾವ ಮೈದುನರು ಕನ್ನಡನಾಡು ಒಂದಾಗಬೇಕು ಎಂಬುದಕ್ಕಾಗಿ ಅಹರ್ನಿಶಿ ದುಡಿಯುತ್ತಿದ್ದ ಹಿರಿಯರಲ್ಲಿ ಇವರೊಬ್ಬರು ಶ್ರೀ ಬೆನಗಳ್ ರಾಮರಾಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು ನಾಟಕಕಾರರಾಗಿ, ನಟರಾಗಿ ರಂಗಭೂಮಿಗಾಗಿ ದುಡಿದವರು ಹೀಗೆ ಕನ್ನಡದ ಸರ್ವತೋಮುಖದ ಏಳಿಗೆಗೆ ಇವರು ಬಹಳ ಶ್ರಮಿಸಿದವರು. ಅವರ ನಿಧನದಿಂದ ಕನ್ನಡ ತಾಯಿ ತನ್ನ ಸತ್ಪುತ್ರನೊಬ್ಬನನ್ನು ಕಳಕೊಂಡಳು! ಕನ್ನಡನಾಡು ಒಂದು ಉಜ್ವಲ ಜೀವರತ್ನವನ್ನು ಕಳೆದುಕೊಂಡಿತು. ಬೆನಗಲ್ ರಾಮರಾಯರ ನಿಧನದಿಂದ ಅವರ ಬಂಧುವರ್ಗದವರಿಗುಂಟಾದ ಸಂತಾಪದಲ್ಲಿ 'ನಾವು ಸಹಾನುಭೂತಿ ತೋರಿಸುವುದಲ್ಲದೆ ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ದಿವಂಗತ ಬೆನಗಲ್ ರಾಮರಾಯರ ನಿಧನದ ಸಂತಾಪ ಸೂಚನೆಯಾಗಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರ ಒಂದು ದಿನ ಮುಚ್ಚಲಾಯಿತು.

ಕರ್ನಾಟಕ

ಬೆಳಗಾವಿ

ನವದತ್ತಿ ತಾಲೂಕಿನ ಮನೊಳ್ಳಿ ಮೇಲೆ ೫ ಸಾವಿರ ರೂ ದಂಡ ಹಾಕಲಾಗಿದೆ ಸುಂದರಾಬಾಯಿ ವೆಂಕಟೇಶ ಮರದ ಮತ್ತು ರಾಮರಾವ ಕುಲಕರ್ಣಿಯವರನ್ನು ಬಂಧಿಸಿದ್ದಾರೆ. ರೀಗೂರ ಕುಲಕರ್ಣಿ ಶ್ರೀ ಅನಂತರಾಯರನ್ನೂ, ಅವರ ಓರ್ವ ಸನದಿಯನ್ನೂ ಸೆರೆಹಿಡಿದಿರುವರು ಅಕ್ಕತಂಗೇರ ಹಾಳದ ಭಾಳಪ್ಪ ಕರಿಲಂಗಣ್ಣ; ನಿಂಗಪ್ಪ ಹಳಮನಿ, ಬಾಗಪ್ಪ ಬಡಿಗೇರ, ಯಲ್ಲಪ್ಪಾ ಬಾಯಿಕಾ, ಬಸವಣ್ಣಿ ಮಾವಿನಕಟ್ಟಿ ಇವರನ್ನು ಬಂದಿಸಿದ್ದಾರೆ ಕಿತ್ತೂರಿನ ಹಳ್ಳಿಗಳಲ್ಲಿ ಪ್ರತಿದಿನ ನೂರಾರು ಪೋಲೀಸರು ಜಿಡ್ತಿ ನಡೆಸುತ್ತಾರೆ ಅಮರೊಳ್ಳಿಯಲ್ಲಿ ತಾ. ೩೦-೧ ಈ ಎರಡು ದಿನ ೧೪ ಜನರ ಬಂಧನವಾಗಿದೆ ಹೊನ್ನಾಪುರ ಶಾಲಾ ಮಾಸ್ತರ್ ಕಂದೇರಪ್ಪ ಕಲಗೌಡು, ಬಂಧಿತರಾಗಿದ್ದಾರೆ ಕೆಳದಿಯ ಬಸಪ್ಪ ಕಳ್ಳಗದ್ದಿ ವೀರಭದ್ರಪ್ಪಾ ಅಗಡಿ ಇವರ ಮನೆಮಕ್ಕಳನ್ನು ೮-೧೦ ಮಂದಿಯನ್ನು ಲಾಕಪ್ಪಿನಲ್ಲಿಟ್ಟು ಅವರ ಮನೆಗೆ ಬೀಗ ಹಾಕಿರುವರು ಯಮುನಪ್ಪಾ ಚಿಣಚಿನ ಮರ್ಜಿಯವರ ಮನೆಗೂ ಬೀಗ ಹಾಕಿದ್ದಾರೆ ಅಥಣಿ ತಾಲೂಕು ಜೂಗಳದಲ್ಲಿ ಲೆಂಡೆ ಮೊದಲಾದವರ ಮನೆ ಜಪ್ತಿ ಮಾಡಿ ಅಲ್ಲಿನ ಪ್ರಮುಖ ಪಟೇಲ ಲೆಂಡೆ ಮೋತೀ ಚಂದ ಶಹಾಪರ ಗೌಡ ಪಾಟೀಲರನ್ನು ಸೆರೆಹಿಡಿದಿರುವರು ಹುದಲಿಯಲ್ಲಿಯೂ ೧೦ ಜನರ ಬಂಧನವಾಗಿದೆ ಶೇಡಬಾಳದಲ್ಲಿ ನಾಂದ್ರೆ ಮತ್ತು ಪಾಟೀಲರ ಬಂಧನವಾಗಿದೆ ನಲಗರ ಸ್ಟೇಶನ್ ಸುಟ್ಟ ಸಂಶಯದಿಂದ ಮೊಂಗಳಸೂಳಿಯಲ್ಲಿ ೭-೮ ಜನರನ್ನು ಹಿಡಿದಿದ್ದಾರೆ ಇನ್ನೂ ಮೂವರು ಪರಾರಿಯಾಗಿರುವರೆಂದು ಅವರನು ಹಿಡಿದು ತರುವರೆ ಅವರ ಮನೆ ಹೆಂಗುಸರನ್ನು ಬಂಧನದಲ್ಲಿಟ್ಟಿರುವರು ಕೊನಗೂಳಿಯಲ್ಲಿ ನಾಲ್ವರ ಬಂಧನವಾಗಿದೆ ಕಳದ ೭-೮ ತಿಂಗಳಿಂದ ಕಾಣೆಯಾಗಿರುವ ಬೇಡಕಿ ಹಾಳದ ಕಾಂಗ್ರೆಸ್ ಮುಖಂಡರ ಹಿರಿಯರನ್ನು ಬಂಧಿಸಿಕೊಂಡೊಯ್ದಿರುವರು. ಅಕ್ಕೋಳದಲ್ಲಿ ಕವುತೆಯವರನ್ನು ಬಂಧಿಸಿದರು ಇವರು ಸಿಗುವವರೆಗೆ ಅವರ ತಂದೆ ಮತ್ತು ಅಣ್ಣನನ್ನು ಬಂದಿಸಿದ್ದರು. ಮಾಗೊರಲ್ಲಿ ಮೂವರನ್ನು ಸೆರೆಹಿಡಿದಿದ್ದಾರೆ.

ಕೋಟೇಶ್ವರ

ಕನ್ನಡ ಸಾಹಿತ್ಯೋತ್ಸವ

ವು ಇಲ್ಲಿನ 'ಮಿತ್ರಮಂಡಳಿ' ಆಶ್ರಯದಲ್ಲಿ ಶ್ರೀ ಎಂ ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಕೋಟೇಶ್ವರ ಶಾಲೆಯಲ್ಲಿ ತಾ ೧೬ರಂದು ಸಂಜೆ ಜರಗಲಿರುವುದು.

ಸುಬ್ರಹ್ಮಣ್ಯ

ಮರವಲ್ಲಿ ವರ್ಷಂಪ್ರತಿ ನಡಿಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಇದೇ ತಾ. ೧೮ರಿಂದ ಪ್ರಾರಂಭವಾಗಿ ೩ ದಿವಸ ಪ್ರಾತಃಕಾಲ ಶ್ರೀ ನರಸಿಂಹ ದೇವರಿಗೆ ಮಹಾಭಿಷೇಕ, ರಾತ್ರೆ ವಿಮಾನೋತ್ಸವ ವಸಂತಪೂಜೆ, ತಾ ೧೯ರಂದು ಪೂರ್ಣಾಹ್ನ ಮಹಾರಥೋತ್ಸವ ವಸಂತಪೂಜೆ, ತಾ. ೨೦ರಂದು ಅವಭೃತೋತ್ಸವ, ವಸಂತಪೂಜೆ, ಹೀಗೆ ಮೂರು ದಿವಸ ಪೂಜಾ, ಉತ್ಸವ, ವಸಂತ ಪೂಜೆ ಬ್ರಾಹ್ಮಣ ಸಂತರ್ಪಣಾದಿ ಸತ್ಕಾರ್ಯಗಳು ನಡೆಯುವವು.

ಕೊಲ್ಹಾಪುರ

ದೇವಾಲ್ ಕ್ಲಬ್ ರಜತೋತ್ಸವ

ಇದೇ ತಾ. ೧೫ರಿಂದ ೧೮ರ ವರೆಗೆ ಜರಗುವುದು ನಾಟ್ಯ ಸಂಗೀತ ಕಲೆಗಳ ಪ್ರೋತ್ಸಾಹದಲ್ಲಿ ಈ ಕ್ಲಬ್ ಬಹುಕಾಲದಿಂದ ಪರಿಶ್ರಮ ವಹಿಸುತ್ತಿದೆ. ಈ ಜುಬಿಲಿ ಸಂಬಂಧ ಬರೋಡದ ಖಾನ್ ಸಾಹೇಬ್ ಫೈಜ್ ಖಾನ್, ಶ್ರೀಮತಿ ಹೀರಾಬಾಯಿ ಬರೋಡೆಕರ್, ಬೊಂಬಾಯಿಯ ಇಂದಿರಾ ವಾಡ್ಕರ್, ಬೊಂಬಾಯಿಯ ಕುಮಾರ ಗಂಧರ್ವ, ಬೆಳಗಾವಿನ ಶಿವ್ರಂಬುವಜೆ, ಪೂನೆದ ಗಜಾನನ ಬುವಾ, ಧಾರವಾಡದ ಮಲ್ಲಿಕಾರ್ಜುನ ಮನ್ಸೂರ್ ಮೊದಲಾದ ಸಂಗೀತ ಪ್ರವೀಣರು ಬರಲಿರುವರು, ಪಿಟೀಲು ವಾದ್ಯ ಪ್ರವೀಣ ಲಕ್ನೋದ ಜೋಗ್, ಬೊಂಬಾಯಿಯ ಪರ್ಸೇಕರ್ ಇವರೂ ಆಮಂತ್ರಣ ಅಂಗೀಕರಿಸಿದ್ದಾರೆ. ಉತ್ತರ ಭಾರತದ ಪ್ರಸಿದ್ಧ ನಾಟ್ಯಗಾರರನ್ನೂ ಆಮಂತ್ರಿಸಲಾಗಿದೆ. ಸಂಗೀತ ನಾಟ್ಯ ಸ್ಪರ್ಧೆಗಳೂ ಇವೆ.

ಧಾರವಾಡ

ನರಗುಂದದ ಐವರನ್ನು ಬಂಧಿಸಲಾಗಿದೆ. ಪಡಿಯಚ್ಚುಗಾರ ಶ್ರೀ ಶ್ರೀನಿವಾಸ ಪೋತೆದಾರರನ್ನು ಸೆರೆಮನೆಗೊಯ್ದಿರುವರು. ಆ ಊರಿನ ಜಮೀನ್ದಾರ ಮಲ್ಲಪ್ಪನಾಯಕ ತಟ್ಟಿಯವರನ್ನು ಗಜೇಂದ್ರಗಡದ ನಾಗಪ್ಪ ಮರದ ಇವರನ್ನೂ ಡಿ. ಇ ಕಾನೂನಿನಂತೆ ಬಂಧಿಸಿದ್ದಾರೆ ಶ್ರೀಮತಿ ಸಿದ್ಧಮತಿ ಮೈಲಾರ ಇವರು ಆಮರಣ ಉಪವಾಸ ಸುರುಮಾಡಿರುವರು. ಈ ಉಪವಾಸ ಬಿಡಲು ಶ್ರೀ. ಅಮತುಸ್ಸಲಾಮ ಬೇನರು ತಂತಿ ಮೂಲಕ ಬಿನ್ನವಿಸಿಕೊಂಡಿದ್ದಾರೆ ಹಾನಗಲ್ಲಿನಲ್ಲಿ ೧೭ ಜನರ ಸೆರೆಹಿಡಿದಿದ್ದಾರೆ. ಹಾವೇರಿಯಲ್ಲಿ ಪೋಸ್ಟಾಫಿಸಿನ ವಿಂಡೋ ಪಟ್ಟಿಗೆಯ ಕಪಾಟಿಗೆ ಯಾರೋ ಬೆಂಕಿ ಹಚ್ಚಿರುವರು

ಕನ್ನಡ ಸಂಸ್ಥಾನಗಳು

ಡಿ. ಇ ಕಾನೂನ್ ಪ್ರಕಾರ ಮಾಡಲಾದ ಖಟ್ಲೆಯ ವಿಚಾರಣೆ ವರದಿಯನ್ನು ಪತ್ರಿಕೆಗಳಲ್ಲಿ ಪ್ರಸಿದ್ಧಿಸಕೂಡದೆಂದು ಮೈಸೂರು ಸರಕಾರದವರು ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧವನ್ನು ಹಿಂದೆಗೆದುಕೊಂಡಿದ್ದಾರೆ ಕೊಲ್ಹಾಪುರದ ಶಾಹಪುರಿ ಶಸ್ತ್ರಾಸ್ತ್ರ ಕಾನೂನು ಖಟ್ಲೆಯಲ್ಲಿ ಸ್ಪೆಶಲ್ ಕೋರ್ಟು ನ್ಯಾಯಾಧೀಶರು ನಿರ್ಣಯಕೊಟ್ಟು ಶಂಕರಗಳ ತೆಗೆಯುವರಿಗೆ ೬ ತಿಂಗಳ ಶಿಕ್ಷೆ ವಿಧಿಸಿ, ಗಣಪತಿ ಮಿರಜಿಯನ್ನು ಬಿಡುಗಡೆ ಮಾಡಿದ್ದಾರೆ ಜಮಖಂಡಿಯಲ್ಲಿ ಧಾನ್ಯ ಸಂಬಂಧ ಆದ ಗೊಂದಲದಲ್ಲಿ ೩ ಮಹಿಳೆಯರು ಸಹಿತ ೩೧ ಜನರಿಗೆ ೧ರಿಂದ ೬ ತಿಂಗಳ ವರೆಗೆ ಶಿಕ್ಷೆ ವಿಧಿಸಲಾಗಿದೆ. ಅಲ್ಲದೆ ಪ್ರತಿಯೊಬ್ಬರಿಗೂ ಐದು ರೂಪಾಯಿ ಜುಲ್ಮಾನೆ ಬೆಂಗಳೂರು ಜಿಲ್ಲಾ ದಿಕಾರಿಗಳ ಗಡೀಪಾರು ಆಜ್ಞೆ ಉಲ್ಲಂಘಿಸಿದ ಒಗ್ಗೆ ಕೊಲ್ಹಾಪುರದ ವಿದ್ಯಾಧರ ಗಣೇಶವಡಗಾಂವಕರರನ್ನು ಬೆಂಗಳೂರು ಪೋಲೀಸರು ಬಂಧಿಸಿರುವರು

ಶ್ರೀ ಮೈಲಾಲರು ಮೃತಪಟ್ಟದ್ದು ಹೇಗೆ?

ಹೊಸ ರಿತ್ತಿಯಲ್ಲಿ ಪೋಲೀಸರು ಗುಂಡು ಹಾರಿಸಿ, ಶ್ರೀ ಮಹಾದೇವಪ್ಪ ಮೈಲಾಲರೆಂಬ, ಗಾಂಧಿಜಿಯವರ ದಂಡಿ ಯಾತ್ರೆಯ ಸತ್ಯಾಗ್ರಹಿಗಳಲ್ಲೊಬ್ಬರನ್ನು ಕೊಂದು ಹಾಕಿ ಬಿಟ್ಟರಷ್ಟೆ? ಈ ವಿಷಯವಾಗಿ ಸರಕಾರ ಈಗ ಒಂದು ಪ್ರಕಟಣೆ ಹೊರಡಿಸಿದೆ ಅದರಲ್ಲಿ, ಹಾವೇರಿ ಭಾಗದಲ್ಲಿ ಶ್ರೀ ಮೈಲಾರರ ತಂಡದವರು ಹಾವಳಿ ಹೆಚ್ಚಿಗಿದ್ದು, ಅವರನ್ನು ಪಂಚಿಕೆಯಿಂದ ಹಿಡಿಯಬೇಕೆಂದು ಪೋಲೀಸರು ಪ್ರಯತ್ನಿಸುತ್ತಿದ್ದರೆಂದೂ, ಹೊಸರಿತ್ತಿಯಲ್ಲಿ ಒಂದು ಹಳ್ಳಿಯ ಹಪ್ತೆ ಹಣವಸೂಲು ಮಾಡುವ ಕೇಂದ್ರ ಮಾಡಿ, ಅಲ್ಲಿ ಪೋಲೀಸು ಕಾವಲಿಟ್ಟಿತ್ತೆಂದೂ, ಶ್ರೀ ಮೈಲಾರ ತಂಡದವರು ಇಲ್ಲಿಗೆ ಮುತ್ತಿಗೆ ಹಾಕುವರೆಂದು ನಿರೀಕ್ಷಿಸಲಾಗಿತ್ತೆಂದೂ, ಅದರಂತೆ ಅವರು, ಒಂದು ದಿನ ಮುಂಜಾನೆ ೮ ॥ ಗಂಟೆಗೆ ಒಮ್ಮೆಗೇ ಬಂದು ಕಾವಲಿದ್ದ ಪೋಲೀಸನ ಮೇಲೆ ಬೀಳಲು, ಅವನನ್ನು ಪೋಲೀಸನು 'ಬೊಯನೇಟ್'ನಿಂದ ಇರಿಯಲು, ಉಳಿದವರು ಪೋಲೀಸನನ್ನು ನೆಲಕ್ಕೆ ಕೆಡವಿದರೆಂದೂ, ಅದೇ ಸಮಯ, ಉಳಿದ ಪೋಲೀಸರನ್ನು ಸುಮಾರು ೨೦ ಜನರು ಮುತ್ತಿದರೆಂದೂ, ಆಗ ನಾಮದೇವ ಪಾಟೀಲನೆಂಬ ಪೋಲೀಸನು ಗುಂಡುಹಾರಿಸಲು ಶ್ರೀ ಮೈಲಾರರೇ ಅದಕ್ಕೆ ತುತ್ತಾದರೆಂದೂ, ಪಾಟೀಲನು, ಒಂದು ಬಾಂಬ ಸ್ಫೋಟವಾಗಿ ಅದಕ್ಕೆ ತುತ್ತಾಗಿ ಮೈಮರೆತನೆಂದೂ, ಇಷ್ಟು ಹೊತ್ತಿಗೆ, ಹಣದ ಪೆಟ್ಟಿಗೆಯನ್ನು ಹಾರಿಸಿಕೊಂಡು ಹೋಗಲು ಶ್ರೀ. ಮೈಲಾಲರರ ಕಡೆಯವನು ಪ್ರಯತ್ನಿಸಲು, ಪಾಟೀಲನು ಆಗ ಎಚ್ಚರಗೊಂಡು ಅವನನ್ನು ಇರಿದು ಗಾಯಗೊಳಿಸಿದನೆಂದೂ, ಇಷ್ಟರಲ್ಲಿ ಹರಿ ಪ್ರಭಾತನೆಂಬ ಇನ್ನೊಬ್ಬ ಪೋಲೀಸನು ಪುಂಡರಲ್ಲಿ ಇನ್ನೊಬ್ಬನನ್ನು ಗುಂಡುಹಾರಿಸಿ ಕೊಂದನೆಂದೂ, ಪಾಟೀಲನ ಇರಿತಕ್ಕೆ ಗುರಿಯಾದವನು ಓಡಿಹೋಗುತ್ತಿರಲು ಅವನಿಗೂ ಗುಂಡು ಹಾಕಿ ಕೆಡವಿದನೆಂದೂ ಆ ಮೇಲೆ ಉಳಿದವರೆಲ್ಲರೂ ಓಡಿಹೋದರೆಂದೂ, ಅಷ್ಟರಲ್ಲಿ ಚಕ್ಕಡಿಯವನೊಬ್ಬನು ಕಣ್ಣಿಗೆ ಬೀಳಲು ಅವನನ್ನು ಬಂಧಿಸಿದಾಗ, ಅವನಲ್ಲಿ ಕೋವಿ ಮೊದಲಾದುವಿದ್ದುವೆಂದೂ ಆ ಪ್ರಕಟಣೆಯಲ್ಲಿ ಹೇಳಲಾಗಿದೆ.

ಸಿನೆಮಾ ಸುದ್ದಿ

ಶಾಂತಾರಾಮರ 'ಮಾಲಿ'

ಇದು ರಾಜಕಮಲ್ ಕಲಾಮಂದಿರದ ದ್ವಿತೀಯ ಕೃತಿ. ಅದರ ನಿರ್ದೇಶಕರು ಕೇಶವರಾವ್ ದಾತೆ. ಇದೊಂದು ಸಂತನ ಜೀವನ ಕಥೆ. ಇದರ ಮರಾಠಿ ಪ್ರತಿಗೆ 'ಭಕ್ತೀಚಾ ಮಾಲಾ' ಎಂಬ ನಾಮಕರಣ. ಮಾಸ್ಟರ್ ಕೃಷ್ಣರಾಯರೇ ಇದರಲ್ಲಿ ನಟಿಸುತ್ತಾರೆ.

'ಪರಶುರಾಮ್'

ಎಂಬ ಚಿತ್ರವನ್ನು ನವೀನ್ ಪಿಕ್ಚರ್ಸಿನವರು ತಯಾರಿಸುವರು. ಪೃಥ್ವಿರಾಜ್, ನಂದ್ರೇಕರ್, ಲೀಲಾ, ಊರ್ಮಿಳಾ, ಪ್ರೇಮಾ, ಚಿತ್ರಮಾಲಾ ಮೊದಲಾದವರು ಇದರಲ್ಲಿ ನಟಿಸುವರು.

ಫಗ್ನಿಸ್–ಮೋಟೆ

ಇವರಿಬ್ಬರೀಗ ಜತೆಯಾಗಿದ್ದಾರೆ 'ಮಹಾತ್ಮಾ ವಿದುರ'ದಲ್ಲಿ. ಮಹಾಭಾರತದ ಪ್ರಸಿದ್ಧ ಮಹಾತ್ಮ ಜೀವನ ತಿಳಿಯದು [illegible] ಯಾಕೆ.

ನಟ ನಟಿಯರಾಗುತ್ತೀರೆ?

ನಿಮಗಿದೊಂದು ಸಂದರ್ಭ. ಶಾಂತಾರಾಮ ಸ್ಥಾಪಿಸಿದ ಹೊಸ ಸಂಸ್ಥೆಗೆ ಹೊಸ ಜನರನ್ನೇ ತೆಗೆದುಕೊಳ್ಳುತ್ತಾರೆ. ಅನೇಕ ಮಂದಿ ಅಲ್ಲೀಗ ಸೇರಿದ್ದಾರೆ. ಬಂದವರನ್ನೆಲ್ಲಾ ಶಾಂತಾರಾಮರ ತಮ್ಮ ಕಾಶಿನಾಥರು ಪರೀಕ್ಷಿಸುತ್ತಾರೆ. ನಿರಾಶರಾದವರಿಗೂ ತಿರುಗಿ ಹೋಗಲು ಟಿಕೇಟು ಖರ್ಚು ಕೊಡುತ್ತಾರೆ. ಅವರ ವಿಳಾಸ ಇಷ್ಟು, 'ರಾಜಕಮಲ್ ಕಲಾಮಂದಿರ್, ಸ್ಟುಡಿಯೋ ಪರೇಲ್, ಬೊಂಬಾಯಿ' ನಟ ನಟಿಯರಾಗಲು ಆತುರವುಳ್ಳವರು ಒಮ್ಮೆ ಯಾಕೆ ಇಲ್ಲಿ ಪ್ರಯತ್ನಿಸಬಾರದು?

ಕಾನನಳೋ ಕುರ್ಶೀದಳೊ?

ಇವರಲ್ಲಿ ಯಾರು, ಚನ್ನಾಗಿ ಹಾಡುತ್ತಾರೆ! ಇದೊಂದು ಧೀರ ಪ್ರಶ್ನೆ! ಕಾನನಳ ಸಂಗೀತ ಶಾಸ್ತ್ರೀಯ ಸಂಗೀತ, ಕುರ್ಶೀದಳ ಸಂಗೀತ ಭಾವನಾ ಪ್ರಧಾನ. ಇಬ್ಬರೂ ಚನ್ನಾಗಿಯೇ ಹಾಡುತ್ತಾರೆ!

ಈ ಪಕ್ಷಪಾತವೇಕೆ?

ಇಂಡಿಯಾ ಸರಕಾರವು ಈಗ ಸಿನೆಮಾಗಳ ಅಡಿಯಿಷ್ಟೇ ಇರಬೇಕೆಂದು ನಿಯಂತ್ರಿಸಿದೆ. ಆ ನಿಯಂತ್ರಿತ ಅಡಿಗಳು ೧೧ ಸಾವಿರ. ಅದಕ್ಕಿಂತ ಮಿಕ್ಕಿದ ಚಿತ್ರ ಯಾರೂ ತಯಾರಿಸಕೂಡದು. ಆದರೆ 'ಬೊಂಬೇ ಟಾಕೀಸ್ ಚಿತ್ರ 'ಕಿಸ್ಮತ್' ಈ ನಿರ್ಬಂಧವನ್ನು ಮೀರಿ 750 ಅಡಿ ಹೆಚ್ಚಿಗಿದೆ. ಶಾಂತರಾಮರ 'ಶಕುಂತಲಾ' ಚಿತ್ರಕ್ಕೂ ನಿಯಂತ್ರಿತ ಅಡಿಗಳಿಗಿಂತ ಹೆಚ್ಚಿಗೆ ಉಪಯೋಗಿಸಲು ಸರಕಾರ ಸಮ್ಮತಿ ಕೊಟ್ಟಿರುವುದಾಗಿ ತಿಳಿಯುತ್ತದೆ. ರಾಯಬಹದ್ದೂರ್ ಚುನೀಲಾಲರ ಬಗ್ಗೆ, ಶಾಂತಾರಾಮರ ಬಗ್ಗೆ ಮಾತ್ರ ಸರಕಾರವು ಈ ಪಕ್ಷಪಾತ ಏಕೆ ತೋರಿಸಬೇಕು?

'ಭಕ್ತ ಬೋಡನಾ'

ಎಂದರೆ ಇದು ಗುಜರಾತೀ ಚಿತ್ರ. ತೆಲುಗು ಚಿತ್ರ 'ಭಕ್ತ ಪೋತನಾ' ಬೇರೆ. ಗುಜರಾಥಿನ ಮಹಾ ಸಂತನೊರ್ವನ ಜೀವನವನ್ನು ವಾಡಿಯಾ ಪವರು ಈಗ ಚಿತ್ರಿಸುತ್ತಾರೆ. 'ಭಕ್ತ ಪೋತನಾ' ತೆಲುಗು ಮಹಾತ್ಮನೊರ್ವನ ಜೀವನ, ನಾಗಯ್ಯ ನಟಿಸಿದ್ದು. ಈ ತೆಲುಗುಚಿತ್ರ ಬಾಲಾಜಿಗೆ ಬರಲಿಯವುದೆಂದು ಸುದ್ದಿ. ಹಿಂದೀ ಚಿತ್ರ ಯಾರು ತಯಾರಿಸುವರೋ ತಿಳಿಯುವುದಿಲ್ಲ.

ಸುಶೀಲಾ ರಾಣಿ ಯೋಗ್ಯತೆ?

'ಫಿಲ್ಮ್ ಇಂಡಿಯಾ'ದ ಬಾಬುರಾವ್ ಪಟೇಲನ ಕಾರ್ಯದರ್ಶಿ ಸುಶೀಲಾ ರಾಣಿ ಯೋಗ್ಯತೆಯೇನು? ಆಕೆ ವಿಜ್ಞಾನದಲ್ಲಿ ಓನರ್ಸ್ ಪದವಿ ಪಡೆದವಳು, ಎಲ್. ಟಿ. ಆಗಿದ್ದಾಳೆ. ಯುನಿವರ್ಸಿಟಿ ಬಂಗಾರದ ಪದಕ ದೊರಕಿದೆ ಆಕೆಗೆ.

ಸೆಂಟ್ರಲ್‌ನಲ್ಲಿ 'ಜವಾಬ್'

ಮನೋಜಕುಮಾರನು ಓರ್ವ ತರುಣ ಜಮೀನ್ದಾರ; ಒಂದು ಅವಗಡದಲ್ಲಿ ಆತನ ಮೆದುಳು ಕೆಟ್ಟುಹೋಗುವುದು; ಸ್ಮರಣೆ ಸರಿಯಿರುವುದಿಲ್ಲ. ಮನೋಜನು ಚಿಕಿತ್ಸೆಗಾಗಿ ಅಲ್ಲಾಹಾಬಾದಿಗೆ ತೆರಳುತ್ತಾನೆ. ಅಲ್ಲಿ ಆತನ ಭಾವೀಪತ್ನಿಯಾಗಿ ನಿಶ್ಚಯವಾಗಿದ್ದ ಹುಡುಗಿ ರೇವಾಳ ಮನೆಯಲ್ಲಿ ಉಳಕೊಳ್ಳುವುದಾಗಿ ನಿಶ್ಚಯವಾಗಿತ್ತು. ಕುಮಾರನಿಗೆ ಸ್ಮರಣೆ ಸರಿಯಿಲ್ಲವಷ್ಟೆ? ಆತನು ಮಧ್ಯಮಾರ್ಗದಲ್ಲಿ ಒಂದು ಸ್ಟೇಶನಿನಲ್ಲಿಳಿಯುವನು. ಸ್ಟೇಶನ್ ಮಾಸ್ತರ ಮೊಮ್ಮಗಳು ಮೀನಾ ಇವನ ಶುಶ್ರೂಷೆ ಮಾಡುವಳು. ಊಟಮಾಡಬೇಕಾದರೆ ಮೀನಾ ಬಳಿಯಿರಬೇಕು; ನಿದ್ರೆಮಾಡಬೇಕಾದರೆ ಮೀನಾ ಹಾಡಬೇಕು; ದಿನಹೋದಂತೆ ಇವರಿಬ್ಬರೂ ಅನ್ಯೋನ್ಯ ಅನುರಾಗದಿಂದ ಆಕರ್ಷಿಸಲ್ಪಡುವರು. ಅಲ್ಲಿಂದ ಕುಮಾರನು ಅಲ್ಲಾಹಾಬಾದಿಗೆ ಬರುವನು. ರೇವಾ ನವನಾಗರಿಕತೆಯ ಹುಡುಗಿ. ತನ್ನ ರೂಪ್ಯ, ತನ್ನ ವಿದ್ಯೆ, ತನ್ನ ಸಂಸ್ಕಾರಗಳ ವಿಷಯ ಆಕೆಗೆ ಬಹಳ ಗರ್ವ! ತನ್ನ ಭಾವೀ ಪತಿಯನ್ನು ತನ್ನ ದಾಸನನ್ನಾಗಿ ಮಾಡಲು ರೇವಾ ನೋಡುತ್ತಾಳೆ! ಆದರೆ ಕುಮಾರನು ಆಕೆಯ ರೀತಿನೀತಿಯನ್ನು ಸ್ಪಷ್ಟ ಖಂಡಿಸುತ್ತಾನೆ–ರೇವಾಳ ಗರ್ವ ಇಳಿಯುವುದು! ಇಬ್ಬರು ಸುಂದರಿಯರು–ರೇವಾ ಮತ್ತು ಮೀನಾ–ಓರ್ವ ಯುವಕನನ್ನು ಪ್ರೀತಿಸುತ್ತಾರೆ–ಓರ್ವ ಯುವತಿಯು, ಇನ್ನಿಬ್ಬರನ್ನು ಸುಖೀದಂಪತಿಗಳನ್ನಾಗಿ ಮಾಡಲು ತನ್ನ ಪ್ರೇಮದ ಬಲಿದಾನ ಮಾಡುತ್ತಾಳೆ! ಇಂಥಾ ರಮ್ಯ ರೋಮಾಂಚಕ ಕಥೆ, ಈಗ ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶಿತವಾಗುವ ಜವಾಬ್ ಚಿತ್ರದ್ದು. ಬಂಗಾಳದ ಕೋಕಿಲ ಕಂಠಿಯರಾದ ಕಾನನ್ ಮತ್ತು ಜಮುನಾ ಇವರು ಹಲವು ಮಧುರ ಹಾಡುಗಳನ್ನು ಹಾಡುತ್ತಾರೆ! ಅಖಿಲ ಭಾರತದಲ್ಲಿ ಇದು ಪ್ರಸಿದ್ಧವಾದ ಜನಪ್ರಿಯವಾದ ಚಿತ್ರ.


An R.I.N. ship in north Atlantic waters

ಏನು? ಉತ್ತರಧ್ರುವದಲ್ಲಿ ಹಿಂದುಸ್ಥಾನದ ಸಂರಕ್ಷಣೆಯೆ?

ಹೌದು, ರಾಯಲ್ ಇಂಡಿಯನ್ ನೇವಿಯ ಯುದ್ಧನೌಕೆಗಳು ಕೆಲವು ಸಲ ನಮ್ಮ ದೇಶದಿಂದ ಇಷ್ಟು ದೂರದಲ್ಲಿ ಸಂಚರಿಸುತ್ತಿವೆ. ಆಧುನಿಕ ಯುದ್ಧತಂತ್ರದ ವ್ಯಾಪ್ತಿಯು ಇಷ್ಟು ವಿಶಾಲವಾಗಿದೆ. ಪ್ರತಿದಿನವೂ ಕಷ್ಟಗಳನ್ನೂ ಎದುರಿಸುತ್ತ ಈ ನೌಕೆಗಳು ನಮ್ಮ ಸಾರಿಗೆ ಹಡಗುಗಳನ್ನು ರಕ್ಷಿಸುತ್ತಿವೆ; ಮತ್ತು ಯುದ್ಧದ ಅತ್ಯಾವಶ್ಯಕ ಸಾಧನಗಳು ನಮಗೆ ಸುರಕ್ಷಿತವಾಗಿ ತಲುಪುವಂತೆ ಮಾಡುತ್ತವೆ. ಅವುಗಳ ತೊಂದರೆ ಹೆಚ್ಚಾಗದಂತೆ ನಾವು ನೋಡಬೇಡವೇ? ನಮ್ಮ ಮನೆಯ ಗೋಡೆಗಳಿಗೆ ಹಚ್ಚುವ ಬಣ್ಣಗಳು ನಮ್ಮ ಹಡಗುಪಡೆಗೆ ಬೇಕಾಗಿರುತ್ತವೆಂಬು ತಿಳಿದೂ ಅವನ್ನು ಕೊಳ್ಳುವುದೆಂದರೆ, ಆ ತೊಂದರೆ ಹೆಚ್ಚಿಸಿದಂತೆಯೆ! ಬಣ್ಣ, ಪೆಟ್ರೋಲು, ರಬ್ಬರು, ಉಕ್ಕು, ಹಗ್ಗ — ಇನ್ನೂ ನೂರಾರು ಸಾಮಾನುಗಳು ನಮ್ಮ ಸಂರಕ್ಷಣೆಗೆ ಅತ್ಯಾವಶ್ಯಕವಾಗಿ ಬೇಕಾಗಿವೆ. ಅದರಂತೆಯೆ ಅವುಗಳಿಗಾಗಿ ನಾವು ವೆಚ್ಚಮಾಡುವ ಹಣ. ನಾವು ಪ್ರತಿಯೊಂದು ಸಾಮಾನಿನ ಮೇಲೆ ಮಾಡುವ ವೆಚ್ಚವನ್ನು ಕಡಿಮೆಮಾಡಿ, ಜಯವು ಸಮೀಪಿಸುವಂತೆ ಮಾಡೋಣ;

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್ ...ಇಲ್ಲವೆ ಡಿಫೆನ್ಸ್ ಲೋನ್ಸ್

ಸರ್ಟಿಫಿಕೇಟುಗಳು ನಿಮ್ಮ ಅಂಚೆ ಕಚೇರಿಯಲ್ಲಿ ಸಿಗುವವು.

೧೦ ರೂ. ಗೆ ಹತ್ತು ವರ್ಷಗಳಲ್ಲಿ ರೂ. ೩-೯-೦ ಲಾಭ ಬರುವುದು.

ಇವುಗಳ ಹೊರತು ಮತ್ತೇನನ್ನೂ ಕೊಳ್ಳುವ ಮೊದಲು ಕೊಂಚ ಯೋಚಿಸಿರಿ.

CPU.25.Kn.


ನಂಬಿ ನಂಬಿ ತೆಗೆದು ಕೊಳ್ಳಲು ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2–12–0, ರೂ. 4–8–0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಲಾಪುರ.

ರೈಲು ಬಂಡಿಗಳ ಸಮಯ

ಎಪ್ರಿಲ್ ತಾ. ೧೫ರಿಂದ ವ್ಯವಸ್ಥಿತವಾದ ಪ್ರಕಾರ.

	ಹೊರಡುವುದು	ಬರುವುದು
ಮೈಲ್	೭-೪೦ ಪೂ.	೭-೩೫ ಅಪ.
ಶಟ್ಲ್	೬-೩೦ ಅಪ.	೧೧-೩೫ ಪೂ.

ನೋಟಗಳು....

ಗಾಂಧಿ ಮತ್ತು ಜಿನ್ನಾ ರಾಜಕಾರಣದಿಂದ ನಿವೃತ್ತರಾಗಬೇಕೆಂದು ಅಂಬ್ಡೇಕರ್ ಹೇಳುತ್ತಾರೆ!

ಅಂಬ್ಡೇಕರರು ವೈಸರಾಯ್ ಮಂತ್ರಿಮಂಡಳದಿಂದ ಹೊರ್ರಬರಬೇಕೆಂದು ಗಾಂಧಿ ಮತ್ತು ಜಿನ್ನಾ ಹೇಳಿದರೂ ಹೇಳಬಹುದು!

ಅಂಬ್ಡೇಕರ್ ಹೇಳುತ್ತಾರೆಂದು ಗಾಂಧಿ ಮತ್ತು ಜಿನ್ನರು ರಾಜಕಾರಣದಿಂದ ನಿವೃತ್ತರಾಗುವರೆಂದು ನಾವು ನಂಬುವುದಿಲ್ಲ.

ಗಾಂಧಿ ಮತ್ತು ಜಿನ್ನಾ ಹೇಳಿದರೂ ಅಂಬ್ಡೇಕರ್ ವೈಸರಾಯ್ ಮಂತ್ರಿಮಂಡಳ ಬಿಟ್ಟು, ಪ್ರಾಣಹೋದರೂ ಹೊರಬರುವ ಸೂಚನೆಯೂ ಇಲ್ಲ.

ಹಾಗಾಗಿ ಒಬ್ಬರಿಗೊಬ್ಬರು ಉಪದೇಶಮಾಡುವುದು ಸದ್ಯಕ್ಕೆ ಏನೂ ಪ್ರಯೋಜನವಿಲ್ಲೆಂದು ತೋರುತ್ತದೆ.

* * *

'ದ್ರಾವಿಡ ಸ್ಥಾನ' ಕೊಡದಿದ್ದರೆ ನಾವೆಲ್ಲರೂ ಮುಸ್ಲಿಂ ಜಾತಿಗೆ ಸೇರುತ್ತೇವೆಂದು ಜಸ್ಟಿಸ್ ಪಾರ್ಟಿ ಧುರೀಣರಾದ ರಾಮಸ್ವಾಮಿ ನಾಯಕರು ಕೂಗುತ್ತಾರೆ!

ಮಗನು ಮಾಡುವ 'ಫಟಿಂಗ'ತನವನ್ನು ತಂದೆ ಒಪ್ಪಲಿಲ್ಲವೆಂದು, ಹಿಂದೊಮ್ಮೆ ಗಾಂಧಿಯವರ ಹಿರಿಯ ಮಗ 'ಅಬ್ದುಲ್ಲಾ ಗಾಂಧಿ' ಆಗಿದ್ದ.

'ಇದೇನೂ ಆತನ ದೋಷವಲ್ಲ, ಆತನನ್ನು ಹುಟ್ಟಿಸಿದಾಗ, ನನ್ನ ಬುದ್ಧಿ ಅಷ್ಟು ಒಳ್ಳೆಯದಿರಲಿಲ್ಲ' ಎಂದು, ಮಗನ ಮತಾಂತರದ ಕುರಿತು ಗಾಂಧಿಜಿಯೇ ತನ್ನ ತಪ್ಪನ್ನು ಒಪ್ಪಿಕೊಂಡರು!

'ಜಸ್ಟಿಸ್ ಪಾರ್ಟಿ'ಯವರೆಲ್ಲಾ ಮುಸ್ಲಿಂ ಜಾತಿಗೆ ಸೇರಿದರೆ, ಅವರನ್ನು ಹುಟ್ಟಿಸಿದವರೂ ಗಾಂಧಿಜಿಯಂತೆ ತಮ್ಮ ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ!

ಒಳ್ಳೆಯ ತಂದೆಯ ಹೊಟ್ಟೆಯಲ್ಲಿ ಕೆಟ್ಟ ಮಕ್ಕಳು ಹುಟ್ಟಬಾರದೆಂಬುದೇನೋ ನಿಜ; ಆದರೆ ಹುಟ್ಟಲಿಕ್ಕಿಲ್ಲವೆಂದು ಹೇಳುವುದಾದರೂ ಹೇಗೆ?.

ಪುಸ್ತಕಾವಲೋಕನ

ಸ್ಟಾಲಿನ್

ಬೆಂಗಳೂರು, ಸುಲ್ತಾನ ಪೇಟೆಯ, ಗುರುಸ್ವಾಮಿ ಬಿಲ್ಡಿಂಗ್ಸ್‌ನಲ್ಲಿ 'ಪ್ರಗತಿ ಸಾಹಿತ್ಯ' ಎಂಬ ಹೊಸ ಪುಸ್ತಕ ಮಾಲೆ ಹೊರಟಿದೆ. ಅದರ ಪ್ರಥಮ ಪುಸ್ತಕ ಸ್ಟಾಲಿನ್ ಎಂಬುದು. ಶ್ರೀ ಕೈಲೂರ್‌ಕರ್ ಇದರ ಲೇಖಕರು. ಕ್ರೌನ್ ೮/೮ ಆಕಾರದ ೧೩ ಪುಟಗಳುಳ್ಳ ಈ ಪುಸ್ತಕದ ಬೆಲೆ ಎರಡಾಣೆ.

ರಶ್ಯದ ವೀರ ನಾಯಕ ಸ್ಟಾಲಿನ್‌ನ ಕುರಿತು ಕೇಳದವರು ಇಂದು ಯಾರೂ ಇರಲಾರರು; ಇಂದು ಜಗದೇಕ ವೀರ ಸ್ಟಾಲಿನ್ ಫ್ಯಾಸಿಸ್ಟ್ ಮರ್ದನಕ್ಕೆದುರು ತನ್ನ ರಕ್ತ ಸೈನ್ಯವನ್ನು ಒಡ್ಡಿ ಮಾಡುವ ಹೋರಾಟ ಜಗತ್ತನ್ನೇ ಬೆರಗುಗೊಳಿಸಿದೆ. ಅಂಥಾ ಮಹಾ ವೀರನ ಜೀವನದ ಪರಿಚಯವನ್ನು ಈ ಪುಸ್ತಕದಲ್ಲಿ ಶ್ರೀ ಕೈಲೂರ್‌ಕರರು ಮಾಡಲು ಪ್ರಯತ್ನಿಸಿದ್ದಾರೆ; ಸೂಕ್ಷ್ಮವಾಗಿ ತಿಳಿಸಿದ್ದಾರೆ. ಲೆನಿನ್ ಹಾಕಿ ಕೊಟ್ಟ ಮಾರ್ಗದಲ್ಲಿ ರಶ್ಯದ ನವನಿರ್ಮಾಣಗೈಯ್ಯುವಲ್ಲಿ ಸ್ಟಾಲಿನ್ ಸಾಧಿಸಿದ ಸಾಹಸಮಯ ಕಾರ್ಯಗಳ ಪರಿಚಯವನ್ನು ಸಂಕೋಚವಾಗಿ ತಿಳಿಸಿದ್ದಾರೆ; ಅದರೊಂದಿಗೆ ಸ್ಟಾಲಿನನ ವ್ಯಕ್ತಿತ್ವದ ವಿಷಯ ತಮಗಿರುವ ಅಭಿಮಾನವನ್ನು ಅಲ್ಲಲ್ಲಿ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಅಂತರ್ರಾಷ್ಟ್ರೀಯ ಮಹಾ ಪುರುಷರ ಜೀವನ ಚಿತ್ರಗಳನ್ನು ಓದುವುದು ಯಾರಿಗಾದರೂ ಸ್ಫೂರ್ತಿದಾಯಕವಾದುದು. 'ಪ್ರಗತಿ ಸಾಹಿತ್ಯ'ದವರು ಇದೇ ತರದಲ್ಲಿ ಇನ್ನೂ ಕೆಲವು ಸಾಮಾಜಿಕ, ರಾಜಕೀಯ ವಿಚಾರಗಳ ಜೊತೆಗೆ ಪ್ರಕಟಪಡಿಸುವುದಾಗಿ ತಿಳಿಸಿದ್ದಾರೆ. ಇವರ ಪ್ರಯತ್ನ ಸ್ತುತ್ಯ. ಕನ್ನಡಿಗರು ಈ ಪುಸ್ತಕ ಮಾಲೆಯನ್ನು ಸ್ವಾಗತಿಸುವರೆಂದು ನಾವು ಹಾರೈಸುತ್ತೇವೆ.

—ಕಯ್ಯಾರ.

ನೋಟೀಸು

ದಕ್ಷಿಣಕನ್ನಡ ಸಬೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ

ಸ್ಮಾಲ ನಂಬ್ರ 156/1942.

ಕೇವುಗುರ ಮುಕುಂದ ರಾಮಚಂದ್ರ ಕಾಮತ್ } ವಾದಿ.

ಎದ್ರು

1. ಪಿ. ನಾರಾಯಣ ನರಸಿಂಹ ಪೈ, ಪೊಳ್ತಿಲ ನರಸಿಂಹ ಪೈಯವರ ಮಗ.
2. ಕೆ. ಶ್ರೀನಿವಾಸ ನಾಯ್ಕ, ಕೂಳೂರು. ಸರ್ವೋತ್ತಮ ನಾಯ್ಕರ ಮಗ. ಮಂಗಳೂರು ಶಹರಿನಲ್ಲಿರುವವರು. } ಪ್ರತಿವಾದಿ

ಸದರಿ ಪ್ರತಿವಾದಿರೀಗೆ ಈ ಮೂಲಕ ತಿಳಿಯಪಡಿಸುವುದು:—

ಸದರಿ ವಾದಿಯು ವ್ಯಾಪಾರದ ಲೇವಾದೇವಿ ಬಾಬ್ತು ರೂಪಾಯಿ 461—3—0ನ್ನು ಮುಂದಿನ ಬಡ್ಡಿ ನ ಕೋರ್ಟು ಖರ್ಚು ಸಮೇತ ನಿಮ್ಮಿಂದ ಬರಮಾಡಿಕೊಳ್ಳುವರೆ ದಾಕಲು ಮಾಡಿದ ಮೇಲ್ಕಂಡ ದಾವೆಯು ತಾ. 17-6-1943ಕ್ಕೆ ಇಟ್ಟಿರುತ್ತದೆ. ಆದುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಸದರಿ ತಾ. 17-6-1943ಕ್ಕೆ ಪೂರ್ವಾಹ್ನ 11 ಗಂಟೆಗೆ ಸದರಿ ಕೋರ್ಟು ಮುಂದೆ ಖುದ್ದಾಗಲೀ ಯಾ ಕ್ರಮಪ್ರಕಾರ ಅಧಿಕಾರ ಹೊಂದಿದ ಪ್ಲೀಡರ ಮೂಲಕವಾಗಲೀ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ, ಸದ್ರಿ ವ್ಯಾಜ್ಯವು ನಿಮ್ಮ ಗೈರು ಹಾಜರಿನಲ್ಲೇ ಏಕಪಕ್ಷವಾಗಿ ತೀರ್ಮಾನಿಸಲಾಗುವದು.

(ಕೋರ್ಟು ಹುಕುಂ ಪ್ರಕಾರ)

ಮಂಗಳೂರು ತಾರೀಕು 10-5-'43 } B. Srinivasa Pai and H. Vasudeva Kamath

ವಾದಿ ಕಡೆ ವಕೀಲರು.

ವೃದ್ಧಿಯಿಂದ ಅಭಿವೃದ್ಧಿ

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LTD.,

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ವರ್ಜಿನಿಯಾ ಪ್ಲ್ಯುಕ್ಯೂರ್ಡ್ ಸಿಗರೇಟ್ ತಂಬಾಕು.

ಬೀಡಿ ತಯಾರಿಸುವರೆ ಹೊಸತೊಂದು ಪ್ರಯೋಗ

ಸಿವಾಣೆ ಬೀಡಿ ತಂಬಾಕನ್ನು ವರ್ಜಿನಿಯಾ ಸಿಗರೇಟ್ ತಂಬಾಕಿನೊಂದಿಗೆ ಸೇರಿಸಿರಿ, ಇದನ್ನು ಸೇರಿಸಿ ಹದಗೊಳಿಸಿದರೆ ಬೀಡಿ ತಯಾರಿಸಲು ಅತ್ಯುತ್ತಮವೆನಿಸುವುದು.

ಹದಗೊಳಿಸಿದ ವರ್ಜಿನಿಯಾ ತಂಬಾಕು ಪರಿಮಳ ಪೂರ್ಣವೂ, ಆನಂದದಾಯಕವೂ ಆಗಿರುವುದರಿಂದ, ಬೀಡಿಗಳು ವರ್ಜಿನಿಯಾ ಸಿಗರೇಟಿನಂತೆ ಸುಖವನ್ನುಂಟುಮಾಡುತ್ತವೆ. ವರ್ಜಿನಿಯಾ ಬೀಡಿಗಳು ಹಗುರವಿರುವುದರಿಂದ ಪೌಂಡಿಗೆ ಹೆಚ್ಚು ಬೀಡಿಗಳಾಗುತ್ತವೆ.

ವರ್ಜಿನಿಯಾ ತಂಬಾಕಿಗೆ ಕಡಿಮೆ ಕ್ರಯವಿರುವುದರಿಂದ ಹೆಚ್ಚು ಮಾರಾಟವಾಗಿ ಅಧಿಕ ಲಾಭ ಸಿಗುತ್ತದೆ.

ರಖಂ ಮತ್ತು ಚಿಲ್ಲರೆಯಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಹೈಜೀಯಾ ಟೊಬೆಕೊ ಕಂಪೆನಿ

ಮಣ್ಣಗುಡ್ಡೆ, ಮಂಗಳೂರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ — ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 21—5—1943 [ಸಂಚಿಕೆ 21]

ಅಲ್ಲಾಭಕ್ಷರನ್ನು ಗುಂಡಿಕ್ಕಿ ಕೊಂದುಬಿಟ್ಟರು!

ಹಗಲು ಹೊತ್ತಿನಲ್ಲಿ ಪೋಲೀಸ್ ಸ್ಟೇಶನಿನೆದುರು!

ಅಪರಾಧಿಯ ಪತ್ತೆಯಿನ್ನೂ ಆಗಿಲ್ಲ!

ಸಿಂಧ ಪ್ರಾಂತದ ಹಿಂದಿನ ಮುಖ್ಯ ಮಂತ್ರಿಗಳೂ ಅಖಿಲಭಾರತ ಆಝಾದ್ ಮುಸ್ಲಿಂ ಪರಿಷತ್ತಿನ ಅಧ್ಯಕ್ಷರೂ ಆದ ಅಲ್ಲಾಭಕ್ಷರು ಶಿಕಾರಿಪುರದಲ್ಲಿ ತಾ. ೧೪ರಂದು ಮುಂಜಾನೆ ೯ ಗಂಟೆ ಹೊತ್ತಿಗೆ, ಯಾರೋ ದುರಾತ್ಮರ ಕೈಯಿಂದ ಗುಂಡಿನೇಟಿಗೆ ಬಲಿಬಿದ್ದು ಮೃತರಾದರೆಂಬ ವಾರ್ತೆ ಕೇಳಿ ಇಂದು ಅಖಿಲಭಾರತವೇ ಪರಿತಪಿಸುತ್ತಿದೆ. ಹೀಗೆ ನಡು ಹಗಲಲ್ಲಿ, ಇಂಥಾ ಮಹಾ ವ್ಯಕ್ತಿಗಳ ಕೊಲೆ ಆಗುತ್ತಿರುವಾಗ, ಹತ್ತಿರದಲ್ಲಿಯೇ ಪೋಲೀಸ್ ಪಂಗಡವೊಂದಿದ್ದೂ, ಅವರಿಂದ ಈ ಕೊಲೆಯನ್ನು ತಡೆಯುವುದಾಗಲಿ, ಅಪರಾಧಿಗಳನ್ನು ಹಿಡಿಯುವುದಾಗಲಿ ಯಾವುದೂ ಆಗಲಿಲ್ಲವೆಂಬ ವಿಷಯವು ಬಹಳ ಖೇದಾಸ್ಪದವಿದೆ. ಅಲ್ಲಾಭಕ್ಷರಂಥ ಜೀವರತ್ನವೊಂದು ನಮ್ಮನ್ನಗಲಿ ಹೋದ ಬಗ್ಗೆ, ಮುಸ್ಲಿಮರೆನ್ನದೆ ಹಿಂದುಗಳೆನ್ನದೆ ಭಾರತದ ಸಕಲ ಜಾತಿಮತಧರ್ಮದವರೆಲ್ಲರೂ ಅತೀವ ದುಃಖಮಗ್ನರಾಗಿರುವರು. ಸರಕಾರದವರು, ಈ ನಡು ಹಗಲಲ್ಲಿ, ಪೋಲೀಸ್ ಪಂಗಡದೆದಿರೇ ಆದ ಕೊಲೆಯ ಪತ್ತೆಹಚ್ಚಲು ಸಿ. ಐ. ಡಿ ಅಧಿಕಾರಿಗಳನ್ನೇನೋ ಕಳುಹಿಸಿರುವರಾದರೂ, ಇದು ವರೆಗೆ ಅಪರಾಧಿಗಳನ್ನು ಗುರುತಿಸಲಾಗಲಿಲ್ಲವಂತೆ!

ಈ ಕೊಲೆಯ ಘಟನೆಯು ಕುರಿತು ಈ ರೀತಿಯಾಗಿ ಸುದ್ದಿ ಕೊಡಲ್ಪಟ್ಟಿದೆ: ತಾ. ೧೪ರಂದು ಬೆಳಗ್ಗೆ ಯಾರೋ ಇಬ್ಬರು, ಅಲ್ಲಾಭಕ್ಷರ ಮನೆಗೆ ಬಂದು ಶಿಕಾರಿಪುರಕ್ಕೆ ತುಸು ದೂರವಿರುವ ಒಂದು ತೋಟವನ್ನು ನೋಡಲು ವಿನಂತಿಸಿಕೊಂಡರು. ಆ ಪ್ರಕಾರ ಅಲ್ಲಾಭಕ್ಷರು ಜೊತೆಗಾರರೊಡನೆ ಟಾಂಗಾ ಹತ್ತಿ ತೋಟವನ್ನು ನೋಡ ಹೋಗಿ, ಹಿಂತಿರುಗಿ ಬರುತ್ತಿದ್ದರು. ಅಲ್ಲಾಭಕ್ಷರು ಮುಂದೆ ಟಾಂಗಾದವನ ಪಕ್ಕದಲ್ಲಿ ಕುಳಿತಿದ್ದರು. ಉಳಿದಿಬ್ಬರು ಹಿಂದೆ ಇದ್ದರು. ಟಾಂಗವು ಪೋಲೀಸ್ ಲೈನಿನ ಹತ್ತಿರ ಬಂದ ಕೂಡಲೇ ಇಬ್ಬರು ರಿವಾಲ್ವರುಗಳಿಂದ ಸಜ್ಜಿತರಾಗಿ ಬಂದು ಟಾಂಗಾದ ಎದುರು ಬಂದು ನಿಂತರು; ಅವರಲ್ಲಿ ಓರ್ವನು ಗುಂಡು ಹಾರಿಸಿದನು. ಇನ್ನೊಬ್ಬನು ಗುಂಡು ಹಾರಿಸುವುದರಲ್ಲಿರುವಾಗ, ಟಾಂಗಾದಲ್ಲಿದ್ದವರು ಇಳಿದು ಅತನನ್ನು ತಡೆದರು. ಇದೇ ಸಮಯ, ಕೆಲ ಪೋಲೀಸರು ಕೆಲವು ಕೈದಿಗಳನ್ನು ಕರಕೊಂಡು ಈ ಟಾಂಗಾಕ್ಕೆ ಸ್ವಲ್ಪ ದೂರ ಹೋಗುತ್ತಿದ್ದರು. ಗುಂಡಿನ ಶಬ್ದ ಕೇಳಿ ಪೋಲೀಸರು ಗುಂಡು ಹಾರಿಸಿದರು. ಆದರೆ ಅತ್ಯಾಚಾರಿಗಳು ಕೂಡಲೇ ಸಮೀಪದೊಂದು ಗೋಡೆ ಹಾರಿ ಓಡಿಬಿಟ್ಟರು! ಅಲ್ಲಾಭಕ್ಷರ ಎದೆಗೆ ಗುಂಡು ಹೊಕ್ಕಿದ್ದುದರಿಂದ ಅವರು 'ಅಲ್ಲಾಹೋ ಅಕ್‌ಬರ್' ಎಂದು ಹೇಳುತ್ತಾ ಅಲ್ಲಿಯೇ ನಿಧನ ಹೊಂದಿದರು! ಎದೆಯಲ್ಲಿ ಒಂದು, ಮತ್ತೊಂದು ಬಲಭುಜದಲ್ಲಿ ಹೀಗೆ ಎರಡು ಗುಂಡುಗಳು ಅವರಿಗೆ ತಾಗಿತ್ತೆಂದು ಆಸ್ಪತ್ರೆಯಲ್ಲಿ ಹೇಳಲಾಯಿತು. ಮೃತರಿಗೆ ಕೇವಲ ೪೩ ವರ್ಷ ವಯಸ್ಸಾಗಿತ್ತು.

ಅಲ್ಲಾಭಕ್ಷರ ಶವವನ್ನು ಮಹಾ ಮೆರವಣಿಗೆಯಿಂದ ಕೊಂಡು ಹೋದರು. ಹಿಂದು ಮುಸ್ಲಿಮರೆನ್ನದೆ ಅಸಂಖ್ಯಾತ ಜನರು ಈ ಮಹಾತ್ಮರ ಶವದ ಮೆರವಣಿಗೆಯಲ್ಲಿ ಸಹಭಾಗಿಗಳಾಗಿದ್ದರು. ಕೆಲದಿವಸಗಳ ಹಿಂದೆ ಎಸೆಂಬ್ಲಿ ಸದಸ್ಯರಾದ ಎಚ್. ಎಸ್. ಘಮಸಾನಿ, ಮತ್ತು ಸೇತ್ ಶೀತಲದಾಸರೂ ಇದೇ ರೀತಿ ಕೊಲ್ಲಲ್ಪಟ್ಟಿದ್ದರು. ಅಲ್ಲಾಭಕ್ಷರು, ಸರಕಾರದ ಧೋರಣವನ್ನು ಟೀಕಿಸಿ, ಇಂಥಾ ಸರಕಾರವು ಕೊಟ್ಟಿರುವ ಬಿರುದುಗಳನ್ನು ತಾನಿಟ್ಟುಕೊಳ್ಳಲಾರೆನೆಂದು, ಸರಕಾರವಿತ್ತ ಖಾನ್‌ಬಹದ್ದೂರ್, ಓ. ಬಿ. ಇ. ಬಿರುದುಗಳನ್ನು ವೈಸರಾಯರಿಗೆ ಹಿಂತಿರುಗಿ ಕಳುಹಿಸಿದ್ದರು. ಆ ಸಂದರ್ಭದಲ್ಲಿ ಅಲ್ಲಾಭಕ್ಷರು ವೈಸರಾಯರಿಗೆ ಬರೆದ ಪತ್ರವು ಚರಿತ್ರಾರ್ಹವಾದುದು. ವೈಸರಾಯರು, ಅಲ್ಲಾಭಕ್ಷರು ಆ ಪತ್ರದಲ್ಲಿ ಪ್ರಕಟಿಸಿದ ಅಭಿಪ್ರಾಯವು 'ಕಾಂಗ್ರೆಸ್ ಪರ'ವಾಗಿದೆಯೆಂಬ ನೆವನದಿಂದ ಅವರನ್ನು ಪ್ರಧಾನ ಮಂತ್ರಿಮಂಡಳದಿಂದ 'ಡಿಸ್‌ಮಿಸ್' ಮಾಡಿದ್ದರು. ಆ ಮೇಲೆ, ಅಲ್ಲಿ ಮುಸ್ಲಿಂ-ಲೀಗ್-ಮಂತ್ರಿಮಂಡಳವನ್ನು ಸ್ಥಾಪಿಸಲಾಯಿತು! ಅಲ್ಲಾಭಕ್ಷರ ಮರಣದಿಂದ, ಸಿಂಧದಲ್ಲಿ 'ಕಾಂಗ್ರೆಸ್‌ಪರ' ಧೋರಣವುಳ್ಳ ಸ್ವತಂತ್ರ ವಿಚಾರದ ಮಹಾಮುಂದಾಳುವು ಹೋದ ಹಾಗಾಯಿತು! ಮುಸ್ಲಿಂ ಲೀಗ್ ಮಂತ್ರಿಮಂಡಳವನ್ನು ತಲೆಕೆಳಗು ಮಾಡಬಲ್ಲ ಜನಪ್ರಿಯ ಮುಖಂಡನು ಕಣ್ಮರೆಯಾದ ಹಾಗಾಯಿತು! ಅಖಿಲಭಾರತವು ಸ್ವತಂತ್ರ ವಿಚಾರದ ಮಹಾಧೀಮಂತ ರಾಜನೀತಿಜ್ಞನೊಬ್ಬನನ್ನು ಕಳದುಕೊಂಡು ಕಂಬನಿ ಸುರಿಸುವಂತಾಯಿತು!

ಅಲ್ಲಾಭಕ್ಷರ ಅಮಾನುಷ ಕೊಲೆಯಿಂದ ತಮಗುಂಟಾದ ಅಪಾರ ದುಃಖವನ್ನು ರಾಜಗೋಪಾಲಾಚಾರಿ, ಡಾ। ಖಾನ್ ಸಾಹೇಬ್, ಸರ್ ಗುಲಾಮು ಹಿದಯತುಲ್ಲಾ, ಡಾ। ಮುಖರ್ಜಿ, ಡಾ! ಅನ್ಸಾರಿ, ಕಿರಣ ಶಂಕರರಾಯ್, ಎಚ್. ಎಸ್. ಸುಹ್ರವಾರ್ದಿ ವೀರ ಸಾವರ್ಕರ್, ಡಾ. ಸುಬ್ಬರಾಯನ್ ಮೊದಲಾದ ಎಲ್ಲಾ ಕಡೆಯ ಮುಖಂಡರೂ ವ್ಯಕ್ತಮಾಡಿದ್ದಾರೆ. ಅಲ್ಲಾಭಕ್ಷರ ನಿಧನದ ನಿಮಿತ್ತ ಸಿಂಧದ ಎಲ್ಲಾ ಕಡೆಗಳಲ್ಲಿಯೂ ದುಃಖಪ್ರದರ್ಶನಗಳಾಗಿವೆ.

ಪೈಗಂಬರವಾಸಿ ಅಲ್ಲಾಭಕ್ಷರು ಸುಮ್ರಾದ ಸುಪ್ರಸಿದ್ಧ ಬಲೂಚಿಮನೆತನಕ್ಕೆ ಸೇರಿದವರು, ಕರಾಚಿಯಲ್ಲಿ ಅವರು ಜನಿಸಿದ್ದು. ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ಅವರು, ತಮ್ಮ ತಂದೆಯೊಡನೆ ವ್ಯಾಪಾರ ನಡೆಸಲಾರಂಭಿಸಿದರು. ತಮ್ಮ ೨೦ನೆಯ ವಯಸ್ಸಿನಲ್ಲಿಯೇ ಸಕ್ಕೂರ್ ಲೋಕಲ್ ಬೋರ್ಡಿನ ಸದಸ್ಯರಾದರು; ಆ ಮೇಲೆ ಅದರ ಅಧ್ಯಕ್ಷರಾಗಿಯೂ ಚುನಾಯಿತರಾದರು. ಅನಂತರ ಬೊಂಬಯಿ ಶಾಸನ ಸಭೆಯ ಸದಸ್ಯರಾಗಿದ್ದು ೯ ವರ್ಷಗಳ ಮೇಲೆ ಬೊಂಬಯಿಯಿಂದ ಬೇರ್ಪಡಿಸಲ್ಪಟ್ಟ ಸಿಂಧ್ ಶಾಸನ ಸಭೆಯಲ್ಲಿ ಸಿಂಧ್ ಯುನೈಟೆಡ್ ಪಾರ್ಟಿಯ ಸದಸ್ಯರಾದರು. ಅಲ್ಲಿ ಅವರು ಗುಲಾಮ್ ಹಸೇನ್ ಹಿದಾಯತುಲ್ಲಾ ಮಂತ್ರಿಮಂಡಳವನ್ನು ಸೋಲಿಸಿ ಕಾಂಗ್ರೆಸ್ ಪಕ್ಷದ ಸಹಾಯದಿಂದ ಮುಸ್ಲಿಂ ಲೀಗಿನ ವಿರೋಧವಾಗಿ ಸಿಂಧಿಗೆ ಒಂದು ಹೊಸ ಮಂತ್ರಿಮಂಡಳವನ್ನು ಸ್ಥಾಪಿಸಿದರು. ೧೯೪೦ರಲ್ಲಿ ಅವರು ಡಿಲ್ಲಿಯಲ್ಲಿ ಜರಗಿತ ಅಖಿಲಭಾರತ ಆಝಾದ್ ಮುಸ್ಲಿಂ ಪರಿಷತ್ತಿಗೆ ಅಧ್ಯಕ್ಷರಾದರು. ಪುನಃ ಇವರು ೧೯೪೧ರಲ್ಲಿ ತನ್ನ ಮಂತ್ರಿಮಂಡಳ ಸ್ಥಾಪಿಸಿದರು. ೧೯೪೨ರಲ್ಲಿ ಇವರು ಬ್ರಿಟಿಷರ ಭಾರತದ ರಾಜಕೀಯ ಧೋರಣವನ್ನು ಒಪ್ಪದೆ, ತನಗೆ ಬ್ರಿಟಿಷರಿಂದ ದೊರಕಿದ ಬಿರುದುಗಳನ್ನು ಹಿಂತಿರುಗಿ ಕಳುಹಿಸಿದರ ಪರಿಣಾಮವಾಗಿ, ಮಂತ್ರಿಮಂಡಳದಿಂದ 'ಡಿಸ್‌ಮಿಸ್' ಮಾಡಲ್ಪಟ್ಟರು.

ಈ ಘಟನೆಯು ಅವರ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿತು. ಭವಿಷ್ಯ ಭಾರತದಲ್ಲಿ ಅವರಿಗೆ ಚಿರಸ್ಥಾನವೊಂದು ಸ್ಥಾಪಿತವಾಗಿತ್ತು. ಅವರ ದೇಶಾಭಿಮಾನ, ಪ್ರಜಾಸೇವಾ ಕಾಂಕ್ಷೆ, ಸ್ವತಂತ್ರ ವಿಚಾರ, ನಿರ್ಭಯ ಪ್ರವೃತ್ತಿಗಳು ಜನತೆಯ ಮೆಚ್ಚುಗೆ ಪಡೆದಿದ್ದವು. ಆದರೆ ವಿಧಿಯ ಲಿಖಿತ ಬೇರಾಯಿತು. ಅಲ್ಲಾಭಕ್ಷರು ದುರಾತ್ಮರ ಗುಂಡಿನೇಟಿಗೆ ಬಲಿಯಾದರು. ಇದರಿಂದ ಭರತಮಾತೆಯು ತನ್ನ ಸುಪುತ್ರನೋರ್ವನನ್ನು ಕಳಕೊಂಡಳು. ಆದರೆ ಅವರ ಈ ಮರಣವು ಅವರ ಜೀವಿತೋದ್ದೇಶವನ್ನು ಮತ್ತಷ್ಟೂ ಸಫಲಗೊಳಿಸದಿರಲಾರದು!

ಪುತ್ತೂರಲ್ಲಿ ತೃತೀಯ ಸಹಕಾರೀ ಪರಿಷತ್ತು

ಇದೇ ತಾ. ೧೪ ಮತ್ತು ೧೫ರಂದು ಪುತ್ತೂರಲ್ಲಿ ದ. ಕ. ಜಿಲ್ಲೆಯ ಮೂರನೆಯ ಸಹಕಾರೀ ಪರಿಷತ್ತು ನಿವೃತ್ತ ಸಹಕಾರೀ ರಿಜಿಸ್ಟ್ರಾರರಾದ ಶ್ರೀ ಎಂ. ಗಿರಿಯಪ್ಪ ಇವರ ಅಧ್ಯಕ್ಷತೆಯಿಂದ ಪುತ್ತೂರಿನ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ಜರಗಿತು. ಜಿಲ್ಲೆಗಳ ಬೇರೆ ಬೇರೆ ತಾಲೂಕುಗಳಿಂದ ಹಲವು ಮಂದಿ ಪ್ರತಿನಿಧಿಗಳು ಬಂದಿದ್ದರು. ತಾ. ೧೪ರಂದು ಪ್ರಾತಃಕಾಲ ೧೦ ಗಂಟೆಗೆ ಪರಿಷತ್ತು ಆರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಮೊಳಹಳ್ಳಿ ಶಿವರಾಯರ ಅಸ್ವಸ್ಥತೆಯ ಮೂಲಕ ಅವರ ಸ್ವಾಗತ ಭಾಷಣವನ್ನು ಶ್ರೀ ಸಿ. ಎಸ್. ಶಾಸ್ತ್ರಿಗಳು ಓದಿದರು. ಶ್ರೀ ಶಿವರಾಯರು ತಮ್ಮ ಸಂಕ್ಷಿಪ್ತವಾದ ಭಾಷಣದಲ್ಲಿ, ಪರಿಷತ್ಪ್ರತಿನಿಧಿಗಳಿಗೂ, ಅಭ್ಯಾಗತರಿಗೂ ಸ್ವಾಗತ ಬಯಸುತ್ತಾ ೧೯೦೯ರಲ್ಲಿ ಪುತ್ತೂರಲ್ಲಿಯೇ ಈ ಜಿಲ್ಲೆಯಲ್ಲಿ ಪ್ರಥಮತಃ ಸಹಕಾರೀ ಸಂಘ ಸ್ಥಾಪಿತವಾದ ವಿಷಯವನ್ನು ಹೇಳಿ, ಆ ಮೇಲೆ ಸಹಕಾರೀ ಸಂಸ್ಥೆಯು ಜಿಲ್ಲೆಯಲ್ಲಿ ಬೆಳವಣಿಗೆ ಹೊಂದಿದ ಇತಿಹಾಸವನ್ನು ವಿವರಿಸಿ, ಆ ಸಮಯದಲ್ಲಿ ಉಂಟಾದ ನಷ್ಟ ಕಷ್ಟಗಳ ವಿಷಯ ತಿಳಿಸಿ, ಇಂದಿನ ಅಭಿವೃದ್ಧಿಯನ್ನು ಸೂಚಿಸಿ ಮುಂದೆ ಇತೋಪ್ಯತಿಶಯ ಊರ್ಜಿತವಾಗಬೇಕಾದ ಹಲವು ಸೂಚನೆಗಳನ್ನೂ ಇತ್ತರು. ಪ್ರಕೃತದ ಅನೇಕ ಸಮಸ್ಯೆಗಳನ್ನು ಮುಂದಿಟ್ಟರು. ಮುಖ್ಯವಾಗಿ ಆಹಾರ ಸಮಸ್ಯೆ ವಿಷಯ ಸಹಕಾರಿಗಳು ಮಾಡಬೇಕಾದ ಕರ್ತವ್ಯದ ಕುರಿತು ಎಚ್ಚರಿಸಿದರು. ಅಪರಾಹ್ನ ಕೃಷಿಕರ ಭಂಡಸಾಲೆ ಸಂಘದ ಮಹಾಸಭೆ, ಪುತ್ತೂರು ಡಿವಿಜನ್ ಮಹಾಳಿ ನಿವಾರಣಾ ಸಂಘದ ಮಹಾಸಭೆ, ಪುತ್ತೂರು ಯೂನಿಯನಿನ ಮಹಾ ಸಭೆಗಳು ಜರಗಿ, ರಾತ್ರಿ ವಿಷಯ ನಿಯಾಮಕ ಸಮಿತಿ ಸಭೆ ಸೇರಿತು. ಮರುದಿನ ತಾ. ೧೫ರಂದು ಪೂರ್ವಾಹ್ನ ಸುವರ್ಣಸರರ ಪರಿಷತ್ತು, ಆ ಮೇಲೆ ಪರಿಷತ್ತಿನ ಅಧಿವೇಶನ, ಅಧ್ಯಕ್ಷ ಭಾಷಣಗಳಾಗಿ ಸಂಜೆಗೆ ಪರಿಷತ್ತು ಕೊನೆಗೊಂಡಿತು. ಕೆಳಗಿನ ನಿರ್ಣಯಗಳು ಪರಿಷತ್ತಿನಲ್ಲಿ ಮಂಜೂರಾದವು:

ಶ್ರೀಗಳಾದ ಉಳ್ಳಾಲ ಮಂಗೇಶರಾವ್ ಮತ್ತು ಕರೆಂಜೆ ರಾಮರಾಯ ನಿಧನದ ಬಗ್ಗೆ ಸಂತಾಪ ಸೂಚಿಸುವ, ಪ್ರತ್ಯೇಕ ಗ್ರೈನ್ ಬೇಂಕುಗಳಿಲ್ಲದ ಸ್ಥಳಗಳಲ್ಲಿ, ರೂರಲ್ ಕ್ರೆಡಿಟ್ ಸೊಸೈಟಿಗಳು ದವಸಧಾನ್ಯಗಳ ವ್ಯಾಪಾರ ಮಾಡುವ, ರೂರಲ್ ಕ್ರೆಡಿಟ್ ಸೊಸೈಟಿಗಳು ಸಾಲ ಕೊಡುವ ವಿಷಯವಲ್ಲದೆ ಇತರ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಸಹಕರಿಸುವ, ಜಿಲ್ಲೆಯಲ್ಲಿ ಸಣ್ಣ ದೊಡ್ಡ ಕೈಗಾರಿಕೆಗಳನ್ನು ಸಹಕಾರೀ ಪದ್ಧತಿಯಲ್ಲಿ ಪ್ರಾರಂಭಮಾಡುವ, ಸಹಕಾರಿಗಳು ಗ್ರಾಮಗಳಲ್ಲಿ ಉಪವೃತ್ತಿಗಳನ್ನು ಹೆಚ್ಚಿಸುವ, ನೇಕಾರರ ಸೊಸೈಟಿಗಳನ್ನು ಸ್ಥಾಪಿಸಿ ಕಡಿಮೆ ದರದ ಬಟ್ಟೆಗಳನ್ನು ತಯಾರಿಸಬೇಕೆನ್ನುವ, ಜಿಲ್ಲೆಯಲ್ಲಿ ಮಹಿಳೆಯರ ಸಹಕಾರೀ ಸಂಘಗಳನ್ನು ಅಭಿವೃದ್ಧಿಗೊಳಿಸುವ, ಕೃಷಿಕರು ಹೆಚ್ಚಿರುವ ಕೋಪರೇಟಿವ್ ಸೊಸೈಟಿಗಳಲ್ಲಿ ಅಮಿತ ಜವಾಬ್ದಾರಿಯ ನಿಯಮವನ್ನು ತೆಗೆದುಹಾಕಬೇಕೆನ್ನುವ, ಅಧಿಕಾಹಾರ ಬೆಳೆಸುವ ಯೋಜನೆಯಲ್ಲಿ ಸರಕಾರ ಕೊಡುವ ಸ್ಥಳವನ್ನು ೮ ವರ್ಷ ಅವಧಿ ವರೆಗೆ ಕೊಡುವುದು ಮಾತ್ರವಲ್ಲದೆ ಮೊದಲು ಕೃಷಿ ಮಾಡಿದವನಿಗೆ ಪ್ರಥಮ ಹಕ್ಕು ಕೊಡಬೇಕೆನ್ನುವ, ಮೀನು ಹಿಡಿಯುವ ಕೈಗಾರಿಕೆಯವರಿಗೆ ಸಹಾಯವಾಗುವ, ಯುದ್ಧದ ಪರಿಸ್ಥಿತಿಯಿಂದಾಗಿ ಒಟ್ಟಾದ ದ್ರವ್ಯವು ಸಹಕಾರೀ ಸಂಘಗಳ ಮೂಲಕ ಯೋಗ್ಯ ಭದ್ರತೆಗೊಳಗಾಗಬೇಕೆನ್ನುವ ಮೊದಲಾದ ನಿರ್ಣಯಗಳು ಮಂಜೂರಾದವು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜನತೆ ಸಹಕರಿಸದಿದ್ದರೆ ಸರಕಾರವು ದೇಶದ ಸಮಸ್ಯೆ ಪರಿಹರಿಸಲಾರದೆಂದು ಮೊದಲಾಗಿ ತಿಳಿಸಿ, ಸಹಕಾರ ರೀತಿಯಲ್ಲಿ ಅನೇಕ ಸಣ್ಣ ದೊಡ್ಡ ಕೈಗಾರಿಕೆಗಳನ್ನು ಪ್ರಾರಂಭಿಸಬೇಕೆಂದು ಹೇಳಿ, ಆ ಮೇಲೆ ಸಹಕಾರೀ ಸಂಸ್ಥೆಗಳ ಅಭಿವೃದ್ಧಿ ಕುರಿತು ಅನೇಕ ಸಲಹೆಗಳನ್ನಿತ್ತರು. ಶ್ರೀ. ಬಿ. ರಾಮಚಂದ್ರರಾಯರು ಕೃತಜ್ಞತೆ ಅರ್ಪಿಸಿದರು. ಪರಿಷತ್ತಿನ ಸ್ವಾಗತ ಸಮಿತಿಯವರ ಸತ್ಕಾರವು ವಿಶೇಷ ಪ್ರಶಂಸಾರ್ಹವಿತ್ತು.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಪ್ಲಾಕ್ರೋಪ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 21—5—1943 [ಸಂಚಿಕೆ 21]

ಅಲ್ಲಾಭಕ್ಷರನ್ನು ಗುಂಡಿಕ್ಕಿ ಕೊಂದುಬಿಟ್ಟರು!

ಹಗಲು ಹೊತ್ತಿನಲ್ಲಿ ಪೋಲೀಸ್ ಸ್ಟೇಶನಿನೆದುರು!

ಅಪರಾಧಿಯ ಪತ್ತೆಯಿನ್ನೂ ಆಗಿಲ್ಲ!

ಸಿಂಧ ಪ್ರಾಂತದ ಹಿಂದಿನ ಮುಖ್ಯ ಮಂತ್ರಿಗಳೂ ಅಖಿಲಭಾರತ ಅಝಾದ್ ಮುಸ್ಲಿಂ ಪರಿಷತ್ತಿನ ಅಧ್ಯಕ್ಷರೂ ಆದ ಅಲ್ಲಾಭಕ್ಷರು ಶಿಕಾರಿಪುರದಲ್ಲಿ ತಾ. ೧೪ರಂದು ಮುಂಜಾನೆ ೯ ಗಂಟೆ ಹೊತ್ತಿಗೆ, ಯಾರೋ ದುರಾತ್ಮರ ಕೈಯಿಂದ ಗುಂಡಿನೇಟಿಗೆ ಬಲಿಬಿದ್ದು ಮೃತರಾದರೆಂಬ ವಾರ್ತೆ ಕೇಳಿ ಇಂದು ಅಖಿಲಭಾರತವೇ ಪರಿತಪಿಸುತ್ತಿದೆ. ಹೀಗೆ ನಡು ಹಗಲಲ್ಲಿ, ಇಂಥಾ ಮಹಾ ವ್ಯಕ್ತಿಗಳ ಕೊಲೆ ಆಗುತ್ತಿರುವಾಗ, ಹತ್ತಿರದಲ್ಲಿಯೇ ಪೋಲೀಸ್ ಠಾಣೆಯೊಂದಿದ್ದೂ, ಅವರಿಂದ ಈ ಕೊಲೆಯನ್ನು ತಡೆಯುವುದಾಗಲಿ, ಅಪರಾಧಿಗಳನ್ನು ಹಿಡಿಯುವುದಾಗಲಿ ಯಾವುದೂ ಆಗಲಿಲ್ಲವೆಂಬ ವಿಷಯವು ಬಹಳ ಖೇದಾಸ್ಪದವಿದೆ. ಅಲ್ಲಾಭಕ್ಷರಂಥ ಜೀವರತ್ನವೊಂದು, ನಮ್ಮನ್ನಗಲಿ ಹೋದ ಬಗ್ಗೆ, ಮುಸ್ಲಿಮರೆನ್ನದೆ ಹಿಂದುಗಳೆನ್ನದೆ ಭಾರತದ ಸಕಲ ಜಾತಿಮತಧರ್ಮದವರೆಲ್ಲರೂ ಅತೀವ ದುಃಖಮಗ್ನರಾಗಿರುವರು. ಸರಕಾರದವರು, ಈ ನಡು ಹಗಲಲ್ಲಿ, ಪೋಲೀಸ್ ಠಾಣೆಯೆದುರೇ ಆದ ಕೊಲೆಯ ಪತ್ತೆಹಚ್ಚಲು ಸಿ. ಐ. ಡಿ ಅಧಿಕಾರಿಗಳನ್ನೇನೋ ಕಳುಹಿಸಿರುವರಾದರೂ, ಇದು ವರೆಗೆ ಅಪರಾಧಿಗಳನ್ನು ಗುರುತಿಸಲಾಗಲಿಲ್ಲವಂತೆ!

ಈ ಕೊಲೆಯ ಘಟನೆಯ ಕುರಿತು ಈ ರೀತಿಯಾಗಿ ಸುದ್ದಿ ಕೊಡಲ್ಪಟ್ಟಿದೆ: ತಾ. ೧೪ರಂದು ಬೆಳಗ್ಗೆ ಯಾರೋ ಇಬ್ಬರು, ಅಲ್ಲಾಭಕ್ಷರ ಮನೆಗೆ ಬಂದು ಶಿಕಾರಿಪುರಕ್ಕೆ ತುಸು ದೂರವಿರುವ ಒಂದು ತೋಟವನ್ನು ನೋಡಲು ವಿನಂತಿಸಿಕೊಂಡರು. ಆ ಪ್ರಕಾರ ಅಲ್ಲಾಭಕ್ಷರು ಜೊತೆಗಾರರೊಡನೆ ಟಾಂಗಾ ಹತ್ತಿ ತೋಟವನ್ನು ನೋಡ ಹೋಗಿ, ಹಿಂತಿರುಗಿ ಬರುತ್ತಿದ್ದರು. ಅಲ್ಲಾಭಕ್ಷರು ಮುಂದೆ ಟಾಂಗಾದವನ ಪಕ್ಕದಲ್ಲಿ ಕುಳಿತಿದ್ದರು. ಉಳಿದಿಬ್ಬರು ಹಿಂದೆ ಇದ್ದರು. ಟಾಂಗವು ಪೋಲೀಸ್ ಲೈನಿನ ಹತ್ತಿರ ಬಂದ ಕೂಡಲೇ ಇಬ್ಬರು ರಿವಾಲ್ವರುಗಳಿಂದ ಸಜ್ಜಿತರಾಗಿ ಬಂದು ಟಾಂಗಾದ ಎದುರು ಬಂದು ನಿಂತರು; ಅವರಲ್ಲಿ ಓರ್ವನು ಗುಂಡು ಹಾರಿಸಿದನು. ಇನ್ನೊಬ್ಬನು ಗುಂಡು ಹಾರಿಸುವುದರಲ್ಲಿರುವಾಗ, ಟಾಂಗಾದಲ್ಲಿದ್ದವರು ಇಳಿದು ಆತನನ್ನು ತಡೆದರು. ಇದೇ ಸಮಯ, ಕೆಲ ಪೋಲೀಸರು ಕೆಲವು ಕೈದಿಗಳನ್ನು ಕರಕೊಂಡು ಈ ಟಾಂಗಾಕ್ಕೆ ಸ್ವಲ್ಪ ದೂರ ಹೋಗುತ್ತಿದ್ದರು. ಗುಂಡಿನ ಶಬ್ದ ಕೇಳಿ ಪೋಲೀಸರು ಗುಂಡು ಹಾರಿಸಿದರು. ಆದರೆ ಅತ್ಯಾಚಾರಿಗಳು ಕೂಡಲೇ ಸಮೀಪದೊಂದು ಗೋಡೆ ಹಾರಿ ಓಡಿಬಿಟ್ಟರು! ಅಲ್ಲಾಭಕ್ಷರ ಎದೆಗೆ ಗುಂಡು ಹೊಕ್ಕಿದ್ದುದರಿಂದ ಅವರು 'ಅಲ್ಲಾಹೋ ಅಕ್‌ಬರ್' ಎಂದು ಹೇಳುತ್ತಾ ಅಲ್ಲಿಯೇ ನಿಧನ ಹೊಂದಿದರು! ಎದೆಯಲ್ಲಿ ಒಂದು, ಮತ್ತೊಂದು ಬಲಭುಜದಲ್ಲಿ ಹೀಗೆ ಎರಡು ಗುಂಡುಗಳು ಅವರಿಗೆ ತಾಗಿತ್ತೆಂದು ಆಸ್ಪತ್ರೆಯಲ್ಲಿ ಹೇಳಲಾಯಿತು. ಮೃತರಿಗೆ ಕೇವಲ ೪೫ ವರ್ಷ ವಯಸ್ಸಾಗಿತ್ತು.

ಅಲ್ಲಾಭಕ್ಷರ ಶವವನ್ನು ಮಹಾ ಮೆರವಣಿಗೆಯಿಂದ ಕೊಂಡು ಹೋದರು. ಹಿಂದು ಮುಸ್ಲಿಮರೆನ್ನದೆ ಅಸಂಖ್ಯಾತ ಜನರು ಈ ಮಹಾತ್ಮರ ಶವದ ಮೆರವಣಿಗೆಯಲ್ಲಿ ಸಹಭಾಗಿಗಳಾಗಿದ್ದರು. ಕೆಲದಿನಗಳ ಹಿಂದೆ ಎಸೆಂಬ್ಲಿ ಸದಸ್ಯರಾದ ಎಚ್. ಎಸ್. ಛವನಾನಿ, ಮತ್ತು ಸೇಠ್ ಶೀತಲದಾಸರೂ ಇದೇ ರೀತಿ ಕೊಲ್ಲಲ್ಪಟ್ಟಿದ್ದರು. ಅಲ್ಲಾಭಕ್ಷರು, ಸರಕಾರದ ಧೋರಣವನ್ನು ಟೀಕಿಸಿ, ಇಂಥಾ ಸರಕಾರವು ಕೊಟ್ಟಿರುವ ಬಿರುದುಗಳನ್ನು ತಾನಿಟ್ಟುಕೊಳ್ಳಲಾರೆನೆಂದು, ಸರಕಾರವಿತ್ತ ಖಾನ್‌ಬಹದ್ದೂರ್, ಒ. ಬಿ. ಇ. ಬಿರುದುಗಳನ್ನು ವೈಸರಾಯರಿಗೆ ಹಿಂತಿರುಗಿ ಕಳುಹಿಸಿದ್ದರು. ಆ ಸಂದರ್ಭದಲ್ಲಿ ಅಲ್ಲಾಭಕ್ಷರು ವೈಸರಾಯರಿಗೆ ಬರೆದ ಪತ್ರವು ಚರಿತ್ರಾರ್ಹವಾದುದು. ವೈಸರಾಯರು, ಅಲ್ಲಾಭಕ್ಷರು ಆ ಪತ್ರದಲ್ಲಿ ಪ್ರಕಟಿಸಿದ ಅಭಿಪ್ರಾಯವು 'ಕಾಂಗ್ರೆಸ್ ಪರ'ವಾಗಿದೆಯೆಂಬ ನೆವನದಿಂದ ಅವರನ್ನು ಪ್ರಧಾನ ಮಂತ್ರಿಮಂಡಳದಿಂದ 'ಡಿಸ್‌ಮಿಸ್' ಮಾಡಿದ್ದರು. ಆ ಮೇಲೆ, ಅಲ್ಲಿ ಮುಸ್ಲಿಂ ಲೀಗ್ ಮಂತ್ರಿಮಂಡಳವನ್ನು ಸ್ಥಾಪಿಸಲಾಯಿತು! ಅಲ್ಲಾಭಕ್ಷರ ಮರಣದಿಂದ, ಸಿಂಧದಲ್ಲಿ 'ಕಾಂಗ್ರೆಸ್‌ಪರ' ಧೋರಣವುಳ್ಳ, ಸ್ವತಂತ್ರ ವಿಚಾರದ ಮುಂದಾಳುವು ಹೋದ ಹಾಗಾಯಿತು! ಮುಸ್ಲಿಂ ಲೀಗ್ ಮಂತ್ರಿಮಂಡಳವನ್ನು ತಲೆಕೆಳಗು ಮಾಡಬಲ್ಲ ಜನಪ್ರಿಯ ಮುಖಂಡನು ಕಣ್ಮರೆಯಾದ ಹಾಗಾಯಿತು! ಅಖಿಲಭಾರತವು ಸ್ವತಂತ್ರ ವಿಚಾರದ ಮಹಾಧೀಮಂತ ರಾಜನೀತಿಜ್ಞನೊಬ್ಬನನ್ನು ಕಳ್ದುಕೊಂಡು ಕಂಬನಿ ಸುರಿಸುವಂತಾಯಿತು!

ಅಲ್ಲಾಭಕ್ಷರ ಅಮಾನುಷ ಕೊಲೆಯಿಂದ ತಮಗುಂಟಾದ ಅಪಾರ ದುಃಖವನ್ನು ರಾಜಗೋಪಾಲಾಚಾರಿ, ಡಾ। ಖಾನ್ ಸಾಹೇಬ್, ಸರ್ ಗುಲ್ಲಾಮು ಹಿದಯತುಲ್ಲಾ, ಡಾ। ಮುಖರ್ಜಿ, ಡಾ! ಅನ್ಸಾರಿ, ಕಿರಣ ಶಂಕರರಾಯ್, ಎಚ್. ಎಸ್. ಸೂಹ್ರವಾರ್ದಿ, ವೀರ ಸಾವರ್ಕರ್, ಡಾ. ಸುಬ್ಬರಾಯನ್ ಮೊದಲಾದ ಎಲ್ಲಾ ಕಡೆಯ ಮುಖಂಡರೂ ವ್ಯಕ್ತಮಾಡಿದ್ದಾರೆ. ಅಲ್ಲಾಭಕ್ಷರ ನಿಧನದ ನಿಮಿತ್ತ ಸಿಂಧದ ಎಲ್ಲಾ ಕಡೆಗಳಲ್ಲಿಯೂ ದುಃಖಪ್ರದರ್ಶನಗಳಾಗಿವೆ.

ಪೈಗಂಬರವಾಸಿ ಅಲ್ಲಾಭಕ್ಷರು ಸುಮ್ರಾದ ಸುಪ್ರಸಿದ್ಧ ಬಲೂಚಿಮನೆತನಕ್ಕೆ ಸೇರಿದವರು, ಕರಾಚಿಯಲ್ಲಿ ಅವರು ಜನಿಸಿದ್ದು. ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ಅವರು, ತಮ್ಮ ತಂದೆಯೊಡನೆ ವ್ಯಾಪಾರ ನಡೆಸಲಾರಂಭಿಸಿದರು. ತಮ್ಮ ೨೦ನೆಯ ವಯಸ್ಸಿನಲ್ಲಿಯೇ ಸಕ್ಕೂರ್ ಲೋಕಲ್ ಬೋರ್ಡಿನ ಸದಸ್ಯರಾದರು; ಆ ಮೇಲೆ ಅದರ ಅಧ್ಯಕ್ಷರಾಗಿಯೂ ಚುನಾಯಿತರಾದರು. ಅನಂತರ ಬೊಂಬಯಿ ಶಾಸನ ಸಭೆಯ ಸದಸ್ಯರಾಗಿದ್ದು ೯ ವರ್ಷಗಳಮೇಲೆ ಬೊಂಬಯಿಯಿಂದ ಬೇರ್ಪಡಿಸಲ್ಪಟ್ಟ ಸಿಂಧ್ ಶಾಸನ ಸಭೆಯಲ್ಲಿ ಸಿಂಧ್ ಯುನೈಟೆಡ್ ಪಾರ್ಟಿಯ ಸದಸ್ಯರಾದರು. ಅಲ್ಲಿ ಅವರು ಗುಲಾಮ್ ಹುಸೇನ್ ಹಿದಾಯತುಲ್ಲಾ ಮಂತ್ರಿಮಂಡಳವನ್ನು ಸೋಲಿಸಿ ಕಾಂಗ್ರೆಸ್ ಪಕ್ಷದ ಸಹಾಯದಿಂದ ಮುಸ್ಲಿಂ ಲೀಗಿನ ವಿರೋಧವಾಗಿ ಸಿಂಧಿಗೆ ಒಂದು ಹೊಸ ಮಂತ್ರಿಮಂಡಳವನ್ನು ಸ್ಥಾಪಿಸಿದರು. ೧೯೪೦ರಲ್ಲಿ ಅವರು ಡಿಲ್ಲಿಯಲ್ಲಿ ಜರಗಿತ ಅಖಿಲಭಾರತ ಅಜಾದ್ ಮುಸ್ಲಿಂ ಪರಿಷತ್ತಿಗೆ ಅಧ್ಯಕ್ಷರಾದರು. ಪುನಃ ಇವರು ೧೯೪೧ರಲ್ಲಿ ತನ್ನ ಮಂತ್ರಿಮಂಡಳ ಸ್ಥಾಪಿಸಿದರು. ೧೯೪೨ರಲ್ಲಿ ಇವರು ಬ್ರಿಟಿಷರ ಭಾರತದ ರಾಜಕೀಯ ಧೋರಣವನ್ನು ಒಪ್ಪದೆ, ತನಗೆ ಬ್ರಿಟಿಷರಿಂದ ದೊರಕಿದ ಬಿರುದುಗಳನ್ನು ಹಿಂತಿರುಗಿ ಕಳುಹಿಸಿದರ ಪರಿಣಾಮವಾಗಿ, ಮಂತ್ರಿಮಂಡಳದಿಂದ 'ಡಿಸ್‌ಮಿಸ್' ಮಾಡಲ್ಪಟ್ಟರು.

ಈ ಘಟನೆಯು ಅವರ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿತು. ಭವಿಷ್ಯ ಭಾರತದಲ್ಲಿ ಅವರಿಗೆ ಚಿರಸ್ಥಾನವೊಂದು ಸ್ಥಾಪಿತವಾಗಿತ್ತು. ಅವರ ದೇಶಾಭಿಮಾನ, ಪ್ರಜಾಸೇವಾ ಕಾಂಕ್ಷೆ, ಸ್ವತಂತ್ರ ವಿಚಾರ, ನಿರ್ಭಯ ಪ್ರವೃತ್ತಿಗಳು ಜನತೆಯ ಮೆಚ್ಚುಗೆ ಪಡೆದಿದ್ದವು. ಆದರೆ ವಿಧಿಯ ಲಿಖಿತ ಬೇರಾಯಿತು. ಅಲ್ಲಾಭಕ್ಷರು ದುರಾತ್ಮರ ಗುಂಡಿನೇಟಿಗೆ ಬಲಿಯಾದರು. ಇದರಿಂದ ಭಾರತಮಾತೆಯು ತನ್ನ ಸುಪುತ್ರನೋರ್ವನನ್ನು ಕಳಕೊಂಡಳು. ಆದರೆ ಅವರ ಈ ಮರಣವು, ಅವರ ಜೀವಿತೋದ್ದೇಶವನ್ನು ಮತ್ತಷ್ಟೂ ಸಫಲಗೊಳಿಸದಿರಲಾರದು!

ಪುತ್ತೂರಲ್ಲಿ ತೃತೀಯ ಸಹಕಾರೀ ಪರಿಷತ್ತು

ಇದೇ ತಾ. ೧೪ ಮತ್ತು ೧೫ರಂದು ಪುತ್ತೂರಲ್ಲಿ ದ. ಕ. ಜಿಲ್ಲೆಯ ಮೂರನೆಯ ಸಹಕಾರೀ ಪರಿಷತ್ತು ನಿವೃತ್ತ ಸಹಕಾರೀ ರಿಜಿಸ್ಟ್ರಾರರಾದ ಶ್ರೀ ಎಂ. ಗಿರಿಯಪ್ಪ ಇವರ ಅಧ್ಯಕ್ಷತೆಯಿಂದ ಪುತ್ತೂರಿನ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ಜರಗಿತು. ಜಿಲ್ಲೆಗಳ ಬೇರೆ ಬೇರೆ ತಾಲ್ಲೂಕುಗಳಿಂದ ಹಲವು ಮಂದಿ ಪ್ರತಿನಿಧಿಗಳು ಬಂದಿದ್ದರು. ತಾ. ೧೪ರಂದು ಪ್ರಾತಃಕಾಲ ೧೦ ಗಂಟೆಗೆ ಪರಿಷತ್ತು ಆರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಮೊಳಹಳ್ಳಿ ಶಿವರಾಯರ ಅಸ್ವಸ್ಥತೆಯ ಮೂಲಕ ಅವರ ಸ್ವಾಗತ ಭಾಷಣವನ್ನು ಶ್ರೀ ಪಿ. ಎಸ್. ಶಾಸ್ತ್ರಿಗಳು ಓದಿದರು. ಶ್ರೀ ಶಿವರಾಯರು ತಮ್ಮ ವಿಸ್ತಾರವಾದ ಭಾಷಣದಲ್ಲಿ, ಪರಿಷತ್ತಿನ ಪ್ರತಿನಿಧಿಗಳಿಗೂ, ಅಭ್ಯಾಗತರಿಗೂ ಸ್ವಾಗತ ಬಯಸುತ್ತಾ, ೧೯೦೯ರಲ್ಲಿ ಪುತ್ತೂರಲ್ಲಿಯೇ ಈ ಜಿಲ್ಲೆಯಲ್ಲಿ ಪ್ರಥಮತಃ ಸಹಕಾರೀ ಸಂಘ ಸ್ಥಾಪಿತವಾದ ವಿಷಯವನ್ನು ಹೇಳಿ, ಆ ಮೇಲೆ ಸಹಕಾರೀ ಸಂಸ್ಥೆಯು ಜಿಲ್ಲೆಯಲ್ಲಿ ಬೆಳವಣಿಗೆ ಹೊಂದಿದ ಇತಿಹಾಸವನ್ನು ವಿವರಿಸಿ, ಆ ಸಮಯದಲ್ಲಿ ಉಂಟಾದ ನಷ್ಟ ಕಷ್ಟಗಳ ವಿಷಯ ತಿಳಿಸಿ, ಇಂದಿನ ಅಭಿವೃದ್ಧಿಯನ್ನು ಸೂಚಿಸಿ ಮುಂದೆ ಇತೋಪ್ಯತಿಶಯ ಊರ್ಜಿತವಾಗಬೇಕಾದ ಹಲವು ಸೂಚನೆಗಳನ್ನೂ ಇತ್ತರು. ಪ್ರಕೃತದ ಅನೇಕ ಸಮಸ್ಯೆಗಳನ್ನು ಮುಂದಿಟ್ಟರು. ಮುಖ್ಯವಾಗಿ ಆಹಾರ ಸಮಸ್ಯೆ ವಿಷಯ ಸಹಕಾರಿಗಳು ಮಾಡಬೇಕಾದ ಕರ್ತವ್ಯದ ಕುರಿತು ಎಚ್ಚರಿಸಿದರು. ಅಪರಾಹ್ನ ಕೃಷಿಕರ ಭಂಡಸಾಲೆ ಸಂಘದ ಮಹಾಸಭೆ, ಪುತ್ತೂರು ಡಿವಿಜನ್ ಮಹಾಳಿ ನಿವಾರಣಾ ಸಂಘದ ಮಹಾಸಭೆ, ಪುತ್ತೂರು ಯೂನಿಯನಿನ ಮಹಾ ಸಭೆಗಳು ಜರಗಿ, ರಾತ್ರಿ ವಿಷಯ ನಿಯಾಮಕ ಸಮಿತಿ ಸಭೆ ಸೇರಿತು. ಮರುದಿನ ತಾ. ೧೫ರಂದು ಪೂರ್ವಾಹ್ನ ಸುಪ್ರೈಸರರ ಪರಿಷತ್ತು, ಆ ಮೇಲೆ ಪರಿಷತ್ತಿನ ಅಧಿವೇಶನ, ಅಧ್ಯಕ್ಷ ಭಾಷಣಗಳಾಗಿ ಸಂಜೆಗೆ ಪರಿಷತ್ತು ಕೊನೆಗೊಂಡಿತು. ಕೆಳಗಿನ ನಿರ್ಣಯಗಳು ಪರಿಷತ್ತಿನಲ್ಲಿ ಮಂಜೂರಾದವು:

ಶ್ರೀಯುತರಾದ ಉಳ್ಳಾಲ ಮಂಗೇಶರಾವ್ ಮತ್ತು ಕರಂಜೆ ರಾಮರಾಯ ನಿಧನದ ಬಗ್ಗೆ ಸಂತಾಪ ಸೂಚಿಸುವ, ಪ್ರತ್ಯೇಕ ಗೈನ್ ಬೇಂಕುಗಳಿಲ್ಲದ ಸ್ಥಳಗಳಲ್ಲಿ, ರೂರಲ್ ಕ್ರೆಡಿಟ್ ಸೊಸೈಟಿಗಳು ದವಸಧಾನ್ಯಗಳ ವ್ಯಾಪಾರ ಮಾಡುವ, ರೂರಲ್ ಕ್ರೆಡಿಟ್ ಸೊಸೈಟಿಗಳು ಸಾಲ ಕೊಡುವ ವಿಷಯವಲ್ಲದೆ ಇತರ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಸಹಕರಿಸುವ, ಜಿಲ್ಲೆಯಲ್ಲಿ ಸಣ್ಣ ದೊಡ್ಡ ಕೈಗಾರಿಕೆಗಳನ್ನು ಸಹಕಾರೀ ಪದ್ಧತಿಯಲ್ಲಿ ಪ್ರಾರಂಭಮಾಡುವ, ಸಹಕಾರಿಗಳು ಗ್ರಾಮಗಳಲ್ಲಿ ಉತ್ಪತ್ತಿಗಳನ್ನು ಹೆಚ್ಚಿಸುವ, ನೇಕಾರರ ಸೊಸೈಟಿಗಳನ್ನು ಸ್ಥಾಪಿಸಿ ಕಡಿಮೆ ದರದ ಬಟ್ಟೆಗಳನ್ನು ತಯಾರಿಸಬೇಕೆನ್ನುವ, ಜಿಲ್ಲೆಯಲ್ಲಿ ಮಹಿಳೆಯರ ಸಹಕಾರೀ ಸಂಘಗಳನ್ನು ಅಭಿವೃದ್ಧಿಗೊಳಿಸುವ, ಕೃಷಿಕರು ಹೆಚ್ಚಿರುವ ಕೋಪರೇಟಿವ್ ಸೊಸೈಟಿಗಳಲ್ಲಿ ಅಮಿತ ಜವಾಬ್ದಾರಿಯ ನಿಯಮವನ್ನು ತೆಗೆದುಹಾಕಬೇಕೆನ್ನುವ, ಅಧಿಕಾಹಾರ ಬೆಳೆಸುವ ಯೋಜನೆಯಲ್ಲಿ ಸರಕಾರ ಕೊಡುವ ಸ್ಥಳವನ್ನು ೮ ವರ್ಷ ಅವಧಿ ವರೆಗೆ ಕೊಡುವುದು ಮಾತ್ರವಲ್ಲದೆ ಮೊದಲು ಕೃಷಿ ಮಾಡಿದವನಿಗೆ ಪ್ರಥಮ ಹಕ್ಕು ಕೊಡಬೇಕೆನ್ನುವ, ಮೀನು ಹಿಡಿಯುವ ಕೈಗಾರಿಕೆಯವರಿಗೆ ಸಹಾಯವಾಗುವ, ಯುದ್ಧದ ಪರಿಸ್ಥಿತಿಯಿಂದಾಗಿ ಖಾದ್ಯ ದ್ರವ್ಯವು ಸಹಕಾರೀ ಸಂಘಗಳ ಮೂಲಕ ಯೋಗ್ಯ ಭದ್ರತೆಗೊಳಗಾಗಬೇಕೆನ್ನುವ ಮೊದಲಾದ ನಿರ್ಣಯಗಳು ಮಂಜೂರಾದವು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜನತೆ ಸಹಕರಿಸದಿದ್ದರೆ ಸರಕಾರವು ದೇಶದ ಸಮಸ್ಯೆ ಪರಿಹರಿಸಲಾರದೆಂದು ಮೊದಲಾಗಿ ತಿಳಿಸಿ, ಸಹಕಾರ ರೀತಿಯಲ್ಲಿ ಅನೇಕ ಸಣ್ಣ ದೊಡ್ಡ ಕೈಗಾರಿಕೆಗಳನ್ನು ಪ್ರಾರಂಭಿಸಬೇಕೆಂದು ಹೇಳಿ, ಆ ಮೇಲೆ ಸಹಕಾರೀ ಸಂಸ್ಥೆಗಳ ಅಭಿವೃದ್ಧಿ ಕುರಿತು ಅನೇಕ ಸಲಹೆಗಳನ್ನಿತ್ತರು. ಶ್ರೀ ಬಿ. ರಾಮಚಂದ್ರರಾಯರು ಕೃತಜ್ಞತೆ ಅರ್ಪಿಸಿದರು. ಪರಿಷತ್ತಿನ ಸ್ವಾಗತ ಸಮಿತಿಯವರ ಸತ್ಕಾರವು ವಿಶೇಷ ಪ್ರಶಂಸಾರ್ಹವಿತ್ತು.

ಇಂದಿನ ಭಾರತ

—ಲುಯಿ ಫಿಶರ್

ಅಮೆರಿಕದ ಪ್ರಸಿದ್ಧ ಪತ್ರಿಕೋದ್ಯಮಿಗಳೂ, ಗ್ರಂಥಕರ್ತರೂ ಆದ ಲುಯಿ ಫಿಶರು ಇತ್ತೀಚೆಗೆ ಭಾರತ ಯಾತ್ರೆ ಮಾಡಿದರು; ಭಾರತದಿಂದ ಮರಳಿದವರೇ ಅಮೆರಿಕನರಿಗೆ ಇಲ್ಲಿನ ಹೃದ್ಗತ ತಿಳಿಸುತ್ತಿದ್ದಾರೆ; ಬ್ರಿಟನು, ಭಾರತದಲ್ಲಿ ನಡೆಸುತ್ತಿರುವ 'ಸಾಮ್ರಾಜ್ಯಶಾಹೀ ಸುಲಿಗೆಯನ್ನು ಖಂಡಿಸುತ್ತಾರೆ. ಗಾಂಧಿಜಿಯವರ ನಿರ್ಮಲ ನಡತೆಯನ್ನು ವಿವರಿಸುತ್ತಾರೆ; ಕಾಂಗ್ರೆಸಿನ ನೀತಿ ನ್ಯಾಯುವಾದುದೆಂದು ಸಾರುತ್ತಾರೆ. ಇತ್ತೀಚೆಗೆ ಅವರು ಸಾನ್ ಫ್ರಾನ್ಸಿಸ್ಕೋದ ನಗರಭವನದಲ್ಲಿ ಭಾರತದ ವಿಷಯ, ಗಾಂಧಿಜಿ ಉಪವಾಸ, 'ಕ್ವಿಟ್ ಇಂಡಿಯಾ' ವಿಚಾರಗಳ ಕುರಿತು ಒಂದು ಮಹತ್ವದ ಭಾಷಣ ವಿತ್ತರು. ಅದರ ಸಾರಾಂಶ ಇಂತಿದೆ:—

ಕೇವಲ ಆರ್ಥಿಕ ಸಮಸ್ಯೆ

'ಭಾರತದ ನಿಜವಾದ ಸಮಸ್ಯೆ ಆರ್ಥಿಕ ಸಮಸ್ಯೆ. ಭಾರತವು ಸ್ವತಂತ್ರವಾಗದೆ ಆ ಸಮಸ್ಯೆ ಪೂರ್ಣವಾಗುವ ಹಾಗಿಲ್ಲ. ಅಲ್ಲಿನ ಜನ ಸಂಖ್ಯೆ ವರ್ಷ ವರ್ಷ ಐದು ಮಿಲಿಯ ಹೆಚ್ಚುತ್ತಲಿದೆ. ನಾನು ರಶ್ಯದಲ್ಲಿದ್ದಾಗ ಪಂಚವಾರ್ಷಿಕ ಯೋಜನೆ ಅಲ್ಲಿ ಸುರುವಾಗಿತ್ತು. ಪಗರ ನಗರಗಳು ಉದಯಿಸುತ್ತಿದ್ದವು. ಆದರೂ ಅಲ್ಲಿನ ಜನರಿಗೆ ಸಾಕಷ್ಟು ಉದ್ಯೋಗವಿರಲಿಲ್ಲ. ಭಾರತದಂತೆ ಅಲ್ಲಿ ಜನಸಂಖ್ಯೆ ಹೆಚ್ಚುವುದಿಲ್ಲ. ಹಾಗಿರುವಾಗ, ಭಾರತದಲ್ಲಿ ಉದ್ಯೋಗ-ಕೈಗಾರಿಕೆಗಳಾವವೂ ಹೆಚ್ಚದೆ ಈ ಜನರಿಗೆ ನೆಲೆಯೆಲ್ಲಿ? ಹತ್ತು ವರ್ಷಕ್ಕಿಂತ ಮೊದಲು ಎಷ್ಟು ಆಹಾರ ಇಲ್ಲಿತ್ತೋ ಈಗಲೂ ಹೆಚ್ಚಿದ ಐವತ್ತು ಮಿಲಿಯ ಜನರೂ ಅಷ್ಟೇ ಆಹಾರ ತಿನಬೇಕು. ಹತ್ತು ವರ್ಷ ಮೊದಲು ಅವರು ಉಡುತ್ತಿದ್ದ ಬಟ್ಟೆಗಳನ್ನೇ ಈಗಲೂ ಅವರು ಹಂಚಿಕೊಳ್ಳಬೇಕು. ಇದೆಂಥಾ ದುಸ್ಥಿತಿ! ಭಾರತದಲ್ಲಿ ನೆಲೆ ನಿಂತವರೆಲ್ಲರಿಗೂ ಈ ದೃಶ್ಯವೇ ಕಣ್ಣಿಗೆ ಬೀಳುತ್ತದೆ. ವೈಸರಾಯ್ ಲಿನ್‌ಲಿತ್ಗೋರೇ ನನ್ನೊಡನೆ ಹೇಳಿದರು: 'ಇಂದು ಭಾರತವು ಬ್ರಿಟಿಷ್ ದ್ವೇಷಿಯಾಗಿರುವಷ್ಟು ಹಿಂದೆಂದೂ ಆಗಿಲ್ಲ' ಎಂದು! ಹಾಗಾದರೆ ಇದಕ್ಕೇನು ಮಾಡುವುದು? ಅವರನ್ನು ಸ್ವತಂತ್ರ ಮಾಡುವುದು. ಪ್ರತಿಯೊಂದು ಜನಾಂಗದ ಜೀವನದಲ್ಲಿಯೂ ಒಂದು ಮಾರ್ಪಾಟು ಆಗುತ್ತದೆ. ಆಗ ಅವರಿಗೆ ಸ್ವತಂತ್ರವಾಗುವ ಆಶೆ ಹುಟ್ಟುವುದು. ಭಾರತೀಯರಿಂದು ಸ್ವತಂತ್ರರಾಗಲು ಬಯಸಿದ್ದಾರೆ. ಹಾಗಾದರೆ ಅವರ ಸಮಸ್ಯೆ ಪರಿಹಾರವಾಗುತ್ತದೆ. ನಾವು ಅಮೆರಿಕನರು ಬೇರೆಯವರಿಂದ ಆಳಿಸಿಕೊಳ್ಳುವುದನ್ನು, ನಮ್ಮ ಮುಖಂಡರನ್ನು ಬೇರೊಂದು ವಿದೇಶೀ ಸರಕಾರವು ಸೆರೆಮನೆಗೆ ಸೇರಿಸುವುದನ್ನೂ ತುಸು ಹೊತ್ತು ಊಹನೆ ಮಾಡುವ. ಸ್ವಾವಾತರದ ಅನ್ಯಾಯ ಸಹಿಸುವೆವೆ? ಭಾರತೀಯರಾದರೂ ಏಕೆ ಸಹಿಸಬೇಕು? ನಾವು ಭಾವಿಸಿದ್ದು ಐದು ನೂರು ಮಿಲಿಯ ಬಿಳಿ ಜನರಿಗೆ—ಯೂರೋಪಿನ ಜನರಿಗೆ—ಸುವ್ಯವಸ್ಥೆ, ಆಗಬೇಕೆಂದು! ಆದರೆ ಮೊನ್ನೆ ತಿರುಗಾಡಿ ಬಂದು, ವೆಂಡಲ್ ವಿಲ್ಕಿಯೇ ಹೇಳಿದರು; ಈ ಗೋಳದಲ್ಲಿ ಎರಡು ಬಿಲಿಯ ಜನರಿದ್ದಾರೆಂದು! ಅವರೆಲ್ಲರೂ ನಮ್ಮಂತೆ, ಬಿಳಿಯರಂತೆ ಸುವ್ಯವಸ್ಥೆ, ಸ್ವತಂತ್ರ ಸರಕಾರ ಬೇಕೆಂದು ಬಯಸುತ್ತಾರೆ. ನಾವೀ ವಿಷಯ ತಿಳಕೊಂಡರೆ ಈ ಮಹಾಯುದ್ಧದ ಪರಿಣಾಮವಾಗಿ ಒಂದು ಐತಿಹಾಸಿಕ ಘಟನೆ ನಡೆದೀತು.

ಗಾಂಧಿಜಿ ಪ್ರಭಾವ

ಭಾರತದ ಸ್ವಾತಂತ್ರ್ಯದ ಚಿಹ್ನೆ ಮಹಾತ್ಮಾ ಗಾಂಧಿ. ಅವರು ಭಾರತದ ಅಭಿಪ್ರಾಯವನ್ನು ಪ್ರತಿನಿಧೀಕರಿಸುತ್ತಾರೆ. ಸಮಗ್ರ ಭಾರತವೇ ಸ್ವತಂತ್ರವಾಗಬೇಕೆಂದು ಬಯಸುತ್ತದೆ. ಗಾಂಧಿಜಿ ಅದನ್ನೇ ಹೇಳುತ್ತಾರೆ. ಲಿಂಕೋಲ್ನ್ ಮಹಾತ್ಮನಾಗಿದ್ದ, ಏಕೆಂದರೆ ಯೂನಿಯನ್‌ಗಾಗಿ ಆತನು ಹೋರಾಡಿದ. ಲೆನಿನ್ ಮಹಾತ್ಮನಾಗಿದ್ದ, ರಶ್ಯದ ನವ ವ್ಯವಸ್ಥೆ ಮಾಡಲು ಆತ ಹೋರಾಡಿದ. ಚರ್ಚಿಲ್ ಮಹಾತ್ಮ, ಏಕೆಂದರೆ ಇಡೀ ಇಂಗ್ಲೆಂಡಿನ ಮಹತ್ವವನ್ನುಳಿಸಲು ಆತನ ಹೋರಾಟವಿದೆ. ಗಾಂಧಿಜಿ ಮಹಾತ್ಮರು, ಏಕೆಂದರೆ ಅವರ ಪ್ರತಿಯೊಂದು ಕೆಲಸವೂ ಭಾರತವನ್ನು ಸ್ವತಂತ್ರಗೊಳಿಸುವ ಸಲುವಾಗಿದೆ. ಗಾಂಧಿಜಿಯ 'ಪರ್ಣಕುಟಿ'ಯಲ್ಲಿ ಅವರ ಬಳಿ ಕುಳಿತು, ನಾನವರ ಮಾತುಗಳನ್ನು ಕೇಳಿದ್ದೇನೆ, ಅಖಿಲಭಾರತದ ಧ್ವನಿಯನ್ನೇ ಅವರ ಮಾತಿನಲ್ಲಿ ನಾನು ಕೇಳಿದ್ದೇನೆ. ಗಾಂಧಿಜಿ ಏಕೆ ಉಪವಾಸ ಮಾಡಿದರೆಂದು ಹಲವು ಅಮೆರಿಕನರಿಗೆ ಅರ್ಥವಾಗುವುದಿಲ್ಲ ವೈಸರಾಯರೇ ನನ್ನೊಡನೆ ಹೇಳಿದ್ದಾರೆ, ಭಾರತದಲ್ಲಿರುವ ಬ್ರಿಟಿಷ ಸೈನ್ಯವು ಭಾರತವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವ ಸೈನ್ಯ ಎಂದು. ಅಮೆರಿಕವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ವಿದೇಶೀ ಸೈನ್ಯವೊಂದು ಇಲ್ಲಿದ್ದರೆ, ನಾವದನ್ನು ಸಹಿಸಿಯೇವೆ? ಹಾಗಾದರೆ ಗಾಂಧಿ ಅಂಥಾ ಸೈನ್ಯವನ್ನೇಕೆ ಸಹಿಸಬೇಕು? ನಾವಾ ಸಂದರ್ಭದಲ್ಲಿ ಕತ್ತಿ ಗುಂಡುಗಳನ್ನು ಹಿಡಿದು ಹೋರಾಡಿ, ಆ ಸೈನ್ಯವನ್ನು ಹೊರಹಾಕುವೆವು. ಗಾಂಧಿಜಿಯಲ್ಲಿರುವ ಅಸ್ತ್ರವೆಂದರೆ ನೈತಿಕ ಅಸ್ತ್ರ ಸತ್ಯಾಗ್ರಹ, ಉಪವಾಸ! ಅವರ ಉಪವಾಸ ಸಮಸ್ತ ಭಾರತವನ್ನೇ ನಡುಗಿಸಿಬಿಟ್ಟಿದೆ. ವೈಸರಾಯರ ಮಂತ್ರಿಮಂಡಳದಲ್ಲಿ ಹತ್ತು ಮಂದಿ ಭಾರತೀಯರಿದ್ದಾರೆ. ಅವರಲ್ಲಿ ಮೂವರು, ಗಾಂಧಿಜಿ ಉಪವಾಸದ ನಿಮಿತ್ತ ರಾಜಿನಾಮೆ ಕೊಟ್ಟಿದ್ದಾರೆ. ಅವರಲ್ಲಿ ಒಬ್ಬರ ವಿಷಯ ಹೇಳುತ್ತೇನೆ. ಸರ್ ಹೋಮಿ ಮೋಡಿ, ಬ್ರಿಟಿಷ್ ರಾಜರಿಂದ ನೈಟ್ ಪದವಿ ಪಡೆದವರು—ಮಿಲಿಯಾಧಿಪತಿ ಓರ್ವ ಪಾರ್ಸಿ ವ್ಯಾಪಾರಿಗಳು, ಇವರು ಗಾಂಧಿಜಿ ತತ್ವದವರಲ್ಲ—ಅವರೂ ರಾಜಿನಾಮೆಯಿತ್ತಿದ್ದಾರೆ. ನಿಜವಾಗಿ ಊಹಿಸಿ ಹಾಗಾದರೆ ಭಾರತದ ಮೂಕಮಿಲಿಯದ ಮೇಲೆ ಗಾಂಧಿಜಿ ಪ್ರಭಾವ ಎಷ್ಟಿದೆಯೆಂದು!

ಭಾರತ ಮರ್ದನ!

ಆದರೆ ನಾನು ಭಾರತಕ್ಕೆ ಹೋದಾಗ ಈ ಸಂದರ್ಭ ಒದಗಿರಲಿಲ್ಲ. ಗಾಂಧಿಜಿ ಆಗ ಕೇಳುತ್ತಿದ್ದುದರಲ್ಲಿ, ಏನೇನೂ ಅಸಾಧ್ಯ ಕೇಳಿಕೆಯಿರಲಿಲ್ಲ. ಗಾಂಧಿಜಿ ವೈಸರಾಯರ ಭೇಟಿಗಾಗಿ ಎರಡು ಸಲ ಪ್ರಾರ್ಥಿಸಿಕೊಂಡರು; ಆ ಎರಡು ಪ್ರಾರ್ಥನೆಗಳೂ ತಿರಸ್ಕೃತವಾದವು. ಗಾಂಧಿಜಿ ರಾಜಿಗಾಗಿ ಕೇಳಿದರು. ವೈಸರಾಯರಿಗೆ ಅದು ಬೇಕಾಗಿರಲಿಲ್ಲ. ಚರ್ಚಿಲರೇ ಹಿಂದೊಮ್ಮೆ ಹೇಳಿದ್ದರು: 'ಗಾಂಧಿ ತತ್ವವನ್ನು ನಾವು ಆದಷ್ಟು ಬೇಗ ಮರ್ದಿಸಿ ಬಿಡಬೇಕಾಗಿದೆ'ಯೆಂದು! ನಿಜವಾಗಿ ಬ್ರಿಟಿಷರೀಗ ಭಾರತವನ್ನು ಪಂಥಕ್ಕೆ ಕರೆದಿದ್ದಾರೆ. ಭಾರತದ ಸ್ವಾತಂತ್ರ್ಯ ಆಂದೋಲನವನ್ನು ಹೀಗೆ ಮರ್ದಿಸುವುದು ಸರಿಯಲ್ಲವೆಂದು ಚಿಯಾಂಗ್ ಕೈಶೇಕರೇ, ಚರ್ಚಿಲರಿಗೂ ರೂಸ್‌ವೆಲ್ಟರಿಗೂ ಎಚ್ಚರಿಕೆಯಿತ್ತಿದ್ದಾರೆ; ಭಾರತವನ್ನಿಂತು ಮರ್ದಿಸುವುದರಿಂದ ಅದನ್ನು ಅಕ್ಷರಾಷ್ಟ್ರಗಳ ಪಕ್ಷಕ್ಕೆ ಸೇರಿಸಿದಂತಾಗುತ್ತದೆಂದು!

ಕೆಲವರು ನನ್ನನ್ನು ಬ್ರಿಟಿಷ್ ದ್ವೇಷಿ ಎನ್ನುತ್ತಾರೆ. ನನ್ನ 'ಡಾನ್ ಒಫ್ ವಿಕ್ಟರಿ' ಪುಸ್ತಕ ನೋಡಿ: ನಾನೆಷ್ಟು ಬ್ರಿಟಿಷ್ ಸಹಾಯಿ ಇದ್ದೇನೆಂದು ಆಗ ತಿಳಿಯುವಿರಿ; ನಾನು ಕೆಲ ಬ್ರಿಟಿಷ್ ಸಂಸ್ಕೃತಿಗಳನ್ನು ನಮ್ಮ ಸಂಸ್ಕೃತಿಗಳಿಗಿಂತಲೂ ಮಿಗಿಲಾಗಿ ಮೆಚ್ಚುತ್ತೇನೆ ನಾನು ಬ್ರಿಟಿಷ ದ್ವೇಷಿಯಲ್ಲ. ನಾನು ಟೋರಿ ದ್ವೇಷಿ, ನಾನು ಸಾಮ್ರಾಜ್ಯಶಾಹೀ ದ್ವೇಷಿ, ಸ್ಪೈನ್ ರಿಪಬ್ಲಿಕನ್ನು ರಕ್ಷಿಸಲಾರದವರು, ಜೆಕೊಸ್ಲವೇಕಿಯನ್ನು ಕೊಂದವರು, ಹಿಟ್ಲರ್ ಮುಸಲನಿಗಳೊಡನೆ ಸಂಧಾನಕ್ಕೆ ಹೋದವರು, ಈಗಲೂ ಅಂಥವರು ಕೆಲವರು ಬ್ರಿಟಿಷ್ ಮಂತ್ರಿ ಮಂಡಳದಲ್ಲಿದ್ದಾರೆ! ಅಂಥವರು ಭಾರತಕ್ಕೆ ಸ್ವತಂತ್ರ ಕೊಟ್ಟಾರೆಂದು ನಾನು ಹಾರೈಸುವುದಿಲ್ಲ.

'ತೊಲಗಿ ಹೋಗಿರಿ' ಎಂದರೆ?

ಕಳೆದ ವಸಂತದಲ್ಲಿ ನಾನು ಗಾಂಧಿಜಿಯೊಡನೆ ಒಂದು ವಾರ ಕಳೆದಿದ್ದೇನೆ. ಬೆಳಗ್ಗೆ ಮತ್ತು ಸಂಜೆ ಅವರೊಡನೆ ಗಾಳಿ ಸಂಚಾರ ಹೋಗಿದ್ದೇನೆ. ಅವರೊಂದಿಗೆ ಕುಳಿತು ಊಟ ಮಾಡಿದ್ದೇನೆ. ವಿಷ್ಟೋ ಸಮಯ ಅವರೊಡನೆ ಚರ್ಚಿಸಿದ್ದೇನೆ. ನಿಜವಾಗಿಯೂ ಅವರು, ಮೃದುಹೃದಯದ ಸರಳ ಸ್ವಭಾವದ ಸಾತ್ವಿಕ ವ್ಯಕ್ತಿ. ಮಕ್ಕಳನ್ನು ಕಂಡರೆ ಅವರಿಗೆ ಆದರ; ವಿನೋದಪ್ರಿಯ. ತಮ್ಮ ಮನಸ್ಸಿನಲ್ಲಿದ್ದುದನ್ನು ಅವರು ಸ್ಪಷ್ಟವಾಗಿ ಹೇಳಿ ಬಿಡುತ್ತಾರೆ. ಹಾಗೆ ಹೇಳುವ ಸ್ವಭಾವ ಅವರಲ್ಲಿರುವುದರಿಂದ ಅವರ ಮಾತಿನ ಅರ್ಥದ ಆಳ ತಿಳಿಯಲಾರದ ಜನರು—ಏನೇನೋ ಅರ್ಥ ಕಲ್ಪಿಸಿಕೊಳ್ಳುತ್ತಾರೆ; ಅವರನ್ನು ಜಪಾನ್ ಪ್ರಿಯರೆಂದು ತಿಳಕೊಳ್ಳುತ್ತಾರೆ. ಆದರೆ ನಿಜವಾಗಿ ಅವರು ಜಪಾನ್ ಪಕ್ಷಪಾತಿಯೋ ಅಲ್ಲವೋ ಎಂಬುದನ್ನು ಚಿಯಾಂಗ್ ಕೈಶೇಕರೇ ಹೇಳಬಲ್ಲರು; ಚಿಯಾಂಗರು ಅನೇಕ ಸಲ ಹೇಳಿದ್ದಾರೆ: ಗಾಂಧಿಜಿ ಜಪಾನ್ ದ್ವೇಷಿ, ಚೀನಪ್ರಿಯರೆಂದು! ಇತ್ತೀಚೆಯ ಭಾರತದ ರಾಜಕೀಯದಲ್ಲಿಯೂ ಗಾಂಧಿಜಿ ಅದೇ ರೀತಿ ವರ್ತಿಸಿದರು. ಹೊಂಕೊಂಗ್, ಮಲಯ, ಸಿಂಗಾಪುರ ಮೊದಲಾದೆಡೆ ಬ್ರಿಟಿಷರು ಸೋತು ಹಿಂದೋಡುತ್ತಿದ್ದರು; ಬ್ರಿಟಿಷರು ಭಾರತವನ್ನು ರಕ್ಷಿಸಬಲ್ಲರೆಂಬ ಬಗ್ಗೆ ಭಾರತೀಯರಿಗೆ ವಿಶ್ವಾಸ ಉಳಿಯಲಿಲ್ಲ. ಈ ಸಂದರ್ಭದಲ್ಲಿ ರೂಸ್‌ವೆಲ್ಟರ ಒತ್ತಾಯದಿಂದ ಬ್ರಿಟಿಷ್ ಮಂತ್ರಿಮಂಡಳವು ಕ್ರಿಪ್ಸರನ್ನು ಕಳುಹಿಸಿತು. ಕ್ರಿಪ್ಸರು ಆಗ ಬ್ರಿಟನಿನಲ್ಲಿ ಜನಪ್ರಿಯರು. ಕ್ರಿಪ್ಸರನ್ನು ಚರ್ಚಿಲರು ಭಾರತದ ಸಂಧಾನ ದೂತರಾಗಿ ಕಳುಹಿಸಿದ್ದು ಅವರ ಕೀರ್ತಿಯನ್ನು ಹಾಳು ಮಾಡಲಿಕ್ಕೆ. ಸ್ಟಾಲಿನ್ ತನ್ನ ವಿರೋಧಿಯನ್ನು ಗುಂಡಿಟ್ಟು ಕೊಲ್ಲುತ್ತಾನೆ, ಚರ್ಚಿಲ್ ಈ ತರ ಕರಗಿಸಿಬಿಡುತ್ತಾನೆ! ಕ್ರಿಪ್ಸರು ಸಂಧಾನ ಯಶಸ್ವಿಯಾಗಲು ಪ್ರಯತ್ನ ಮಾಡಿದರು; ಆದರೆ ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳಿಗೆ ಅದು ಬೇಕಾಗಿರಲಿಲ್ಲ; ಅವರು ಕ್ರಿಪ್ಸರಿಗೆ ಬೆನ್ನಿನಿಂದ ತಿವಿದುಬಿಟ್ಟರು; ಕ್ರಿಪ್ಸ್‌ಸಂಧಾನ ಯಶಸ್ವಿಯಾಗದ ಕಾರಣ ಏನೇ ಇರಲಿ, ಆ ಸಂಧಾನದಿಂದ ಮುನ್ನಿನ ಭಾರತ ಬ್ರಿಟನ್ ಸಂಬಂಧ ಮತ್ತಷ್ಟೂ ಕೆಟ್ಟಿತು; ಇದನ್ನೆಲ್ಲಾ ಕಂಡು ಗಾಂಧಿಜಿ ಹೇಳಿದರು. "ನನಗೆ ಇದನ್ನೆಲ್ಲಾ ನೋಡಿ ಬೇಸರವಾಗಿದೆ. ಬ್ರಿಟಿಷರು ಇಲ್ಲಿಂದ ಹೊರಟು ಹೋಗಲೇಬೇಕು' ಎಂದು. ಆದರೆ ಗಾಂಧಿಜಿ ತನ್ನ ತಪ್ಪನ್ನು ಒಪ್ಪಿಕೊಳ್ಳುವ ಮಹಾತ್ಮರಿದ್ದಾರೆ. 'ನಾನೀಗ ಬ್ರಿಟಿಷರು ಇಲ್ಲಿಂದ ಹೊರಟುಹೋಗಬೇಕೆಂದೇ ಹಠ ಹಿಡಿಯಲಾರೆ; ಹಾಗೆ ಮಾಡಿದರೆ ಭಾರತವನ್ನು ಅಕ್ಷಪಕ್ಷಕ್ಕೆ ಒಪ್ಪಿಸಿದಂತೆಯೆ' ಎಂದೂ ಅವರು ನುಡಿದರು. 'ಬ್ರಿಟಿಷ್ ಮತ್ತು ಅಮೆರಿಕನ್ ಸೈನಿಕರು ಇಲ್ಲಿ ಇರಬಹುದು; ಭಾರತದಲ್ಲಿ ಅವರ ಸೈನ್ಯ ಭದ್ರತೆ ಮಾಡಬಹುದು; ಅಕ್ಷ ರಾಷ್ಟ್ರಗಳೆದುರು ಅವರು ಇಲ್ಲಿ ನಿಂತು ಕಾದಾಡಬಹುದು'' ಎಂದು ಗಾಂಧಿಜಿ ಸ್ಪಷ್ಟಪಡಿಸಿದರು. ಗಾಂಧಿಜಿಯಾಗಲಿ, ಯಾವನೇ ಭಾರತ ಮುಖಂಡನಾಗಲಿ, ಬ್ರಿಟಿಷರು ಭಾರತದಿಂದ ಈ ಯುದ್ಧಕಾಲದಲ್ಲಿಯೇ ಹೊರಟುಹೋಗಬೇಕೆಂದನ್ನುವುದಿಲ್ಲ; ಈ ಯುದ್ಧಕಾಲದಲ್ಲಿಯೇ ಸಂಪೂರ್ಣ ಸ್ವಾತಂತ್ರ್ಯವನ್ನೂ ಕೇಳುವುದಿಲ್ಲ. ಭಾರತಕ್ಕೆ ಈಗ ರಾಷ್ಟ್ರೀಯ ಸರಕಾರ ಕೊಡಬೇಕು; ಹಾಗೆ ಕೊಟ್ಟರೆ ಮಾತ್ರ ಮುಂದೆ ಸಂಪೂರ್ಣ ಸ್ವಾತಂತ್ರ್ಯ ಸಿಗಬಹುದೆಂದು ಅವರು ನಂಬುವರು. ರಶ್ಯನರೂ ಚೀನೀಯರೂ ಇಷ್ಟು ಉಗ್ರ ವೀರ ಹೋರಾಟ ಯಾಕೆ ಮಾಡುತ್ತಿರುವರೆಂದು ಆಲೋಚಿಸಿರಿ! ಭಾರತೀಯರಾದರೂ ಅಂಥಾ ಹೋರಾಟ ಮಾಡಬೇಕಾದರೆ, ಅವರಿಗೆ ತಮ್ಮ ದೇಶದ ಸ್ವಾತಂತ್ರ್ಯವನ್ನುಳಿಸುವ ಘನವಾದ ಉದ್ದೇಶ ಅವರ ಕಣ್ಮುಂದೆ ಬೇಡವೇನು? ಬ್ರಿಟಿಷರಿಗಾಗಿ ಭಾರತೀಯರು ಸಾಯಬೇಕೇನು? ನಾವು ನಷ್ಟ ಪಡಬೇಕಾದರೆ, ನಮಗೆ ಅದರಿಂದ ಮುಂದೆ ಲಾಭ ಉಂಟೆಂಬ ಆಶೆಯಿರಲೇ ಬೇಕು. ಭಾರತೀಯರು ಪಡುವ ನಷ್ಟಕ್ಕೆ ಮುಂದೆ ಏನು ಲಾಭವುಂಟೆಂದು ಯಾರೂ ಅವರಿಗೆ ಹೇಳುವುದಿಲ್ಲವಲ್ಲಾ!

ಸಾಮ್ರಾಜ್ಯವಾದ ಬಿಡಬೇಕು

ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಚರ್ಚಿಲರು ಹೇಳಿದರು. ಅನಂತರ ಬ್ರಿಟಿಷ್ ಸಾಮ್ರಾಜ್ಯದ ದಿವಾಳಿ ಮಾಡಲು ನಾನು ಅಧ್ಯಕ್ಷನಾಗಲಾರೆನೆಂದರು. ಎಂದರೆ ಇದರಿಂದೆಲ್ಲಾ ಭಾರತವು ನಿರಂತರ ದಾಸ್ಯದಲ್ಲಿಯೇ ಕೊಳೆಯುತ್ತಿರಬೇಕೆಂದಾಯಿತು. ಯುದ್ಧ ತೊಡಗಿದ್ದು ಜಗತ್ತಿನ ಸ್ವಾತಂತ್ರ್ಯದ ಸಲುವಾಗಿ. ಈ ಯುದ್ಧಾನಂತರ ಶಾಂತಿ ಸ್ಥಿರಸ್ಥಾಪಿತವಾಗುವುದು. ಆದರೆ ಶಾಂತಿ ಉಳಿಯುವುದುಂಟೆ? ಒಬ್ಬರ ರಾಷ್ಟ್ರವನ್ನು ಒಬ್ಬರು ಕಸಿದುಕೊಳ್ಳುವುದೇ ನಡೆದರೆ ಶಾಂತಿ ಹೇಗೆ ಉಳಿಯಬೇಕು? ಯಾತಕ್ಕಾಗಿ ಈ ಯುದ್ಧವೆಂಬುದೇ ಮಹತ್ವದ ಪ್ರಶ್ನೆ! ಹಿಟ್ಲರ್ ಮುಸಲಿನಿ, ಫ್ರಾನ್ಸ್, ಜಪಾನುಗಳೇ ಯುದ್ಧಕ್ಕೆ ಜವಾಬ್ದಾರಿಯಲ್ಲ. ನಮ್ಮಲ್ಲಿರುವ ಹಿಟ್ಲರೀ ಭಾವನೆಗಳೂ ಅದಕ್ಕೆ ಬೇಕಾದಷ್ಟು ಜವಾಬ್ದಾರಿಯಾಗಿವೆ. ಕೈಸರನನ್ನು ಸೋಲಿಸಿದೆವು. ಹಿಟ್ಲರ್ ತಲೆಯೆತ್ತಿದ. ಇವನನ್ನೂ ಸೋಲಿಸಿದ ಮೇಲೆ ಇನ್ನೊಬ್ಬ ಪ್ರಳಯ ಪುರುಷ ತಲೆಯೆತ್ತುತ್ತಾನೆ. ಆದ್ದರಿಂದ ನಾವಿಂದು ಹಿಟ್ಲರ್‌ನನ್ನು ಸೋಲಿಸುವುದಲ್ಲ; ಹಿಟ್ಲರ್ ಮನೋಭಾವನೆಯನ್ನೇ ಮುರಿಯಬೇಕು.

ಭಾರತೀಯರಿಗೆ ಸ್ವಾತಂತ್ರ್ಯ ದೊರೆತರೂ ಆಡಳಿತೆ ನಡೆಸಲು ಅಸಾಧ್ಯವೆರದು ಪ್ರಚಾರ ನಡೆದಿದೆ. ವೈಸರಾಯರೇ ನನ್ನೊಡನೀಮಾತು ಹೇಳಿದರು. ಆಗ ನಾನು ಅವರಿಗೆ ನೀವು 1776ರಲ್ಲಿ ಅಮೆರಿಕದ ಗಣಪಸಾಹಸಿಗಳ ವಿಷಯವೂ ಹೀಗೆಯೇ ಹೇಳಿದ್ದೀರಿ ಎಂದೆ. ನಾವು ನಾಗರಿಕರಾದರೂ, ಆಳುವುದು ಹೇಗೆಂಬುದನ್ನು ಅನಾಗರಿಕರೆಂದು ನಾವು ಹೇಳುವ ಭಾರತೀಯರಿಂದಲೂ ಚೀನೀಯರಿಂದಲೂ ಕಲಿಯುವ ಸಂದರ್ಭ ಬಂದಿದೆ. ಈಗ ಏಶ್ಯಾದ ಜನರಿಗೆ ಸ್ವಾತಂತ್ರ್ಯ ಬೇಕಾಗಿದೆ. ಅದನ್ನು ನಿರ್ಬಂಧಿಸಿದರೆ ಅದರಿಂದ ಗಂಡಾಂತರವುಂಟಾಗಲಿದೆ. ಮನಸ್ಸಿದ್ದರೆ ಹಿಂದೂ ಮುಸ್ಲಿಂ ಸಮಸ್ಯೆ ರಾತ್ರೆ ಬೆಳಗಾಗುವುದರೊಳಗೆ ಪರಿಹಾರವಾಗುವುದು. ಜನರನ್ನು ವಿಭಜಿಸಿ ಆಳುವುದು ಸಾಮ್ರಾಜ್ಯಶಾಹೀ ಸರಕಾರಗಳ ಪದ್ಧತಿಯಾಗಿದೆ. ಅಲ್ಪ ಸಂಖ್ಯಾಕರ ಬೊಬ್ಬೆ, ಪರಸ್ಪರ ಕಲಹ ಬೆಳೆಸಿ ತಮ್ಮ ಬೇಳೆ ಬೇಯಿಸಲಾಗುತ್ತದೆ. ಝಾರನ ಕಾಲದಲ್ಲಿ ಇದೇ ತರ ಆರ್ಮೇನಿಯವರ ಹಾಗೂ ಟಾರ್ಟರರ ಮಧ್ಯೆ ಜಗಳ ಹೆಚ್ಚಿಸಿದ್ದರು. ಬೊಲ್ಶೆವಿಕರ ಕಾಲದಲ್ಲಿ ಆ ಸಮಸ್ಯೆ ಬಗೆಹರಿಯಿತು. ಭಾರತವು ಸ್ವಾತಂತ್ರ್ಯಾರ್ಹವಲ್ಲವೆನ್ನುವುದು ಅಪರಾಧ; ಕೊಡುವ ಮನಸ್ಸಿಲ್ಲದವರ ಕುಂಟು ನೆವನ. ಇಂಗ್ಲೆಂಡು ಮನಸ್ಸು ಮಾಡಿದರೆ ಎಲ್ಲಾ ಆಗುತ್ತದೆ. ಹಳೆ ಇಂಗ್ಲೆಂಡು ಮತ್ತು ಹಳೆ ಅಮೆರಿಕ ಮಾಯವಾಗಲೇ ಬೇಕು. ವಸಾಹತು, ಸಾಮ್ರಾಜ್ಯವಿಸ್ತರಣಾಭಿಲಾಷೆಗಳೆಲ್ಲಾ ಅಳಿದು ಹೋಗಲೇ ಬೇಕು. ಆಗ ಜಗತ್ತಿಗೇ ಸುಖವಾಗುವುದು. ಅಮೆರಿಕನರು ಸರಿಯಾಗಿ ಆಲೋಚಿಸಿ ಎಲ್ಲರಿಗೂ ಸ್ವಾತಂತ್ರ್ಯ ಕೊಡಬೇಕು. ಯುದ್ಧದಲ್ಲಿ ವಿಜಯಿಗಳಾಗಬೇಕೆಂಬ ಆಶೆಯಿದ್ದರೆ ಹೀಗೆ ಮಾಡಬೇಕು; ಶಾಂತಿ ಸ್ಥಾಪಿಸಬೇಕು; ಶಾಂತಿಯ ಪಾಠವನ್ನು ಗಾಂಧಿಜಿಯೇ ಜಗತ್ತಿಗೆ ಕಲಿಸಿದ್ದಾರೆ.

ಬಾವುಗಳನ್ನು ಕೂಡಲೇ ಗುಣಪಡಿಸಿರಿ.

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಆದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು

CUTICURA OINTMENT

ಸಮರಭೂಮಿಯ ಸಂಚಾರ

ಕಳೆದ ಮೂರು ವರ್ಷಗಳಿಂದ ನಡೆಯುತ್ತಿದ್ದ ಆಫ್ರಿಕದ ಯುದ್ಧವು ಮಿತ್ರರ ವಿಜಯದಲ್ಲೀಗ ಕೊನೆಗೊಂಡಿತು. ಟುನಿಸ್ ಬಿಜರ್ಟಾಗಳೆರಡೂ ಒಂದೇ ದಿನ ಮಿತ್ರರ ಕೈಗೆ ಬಂದದ್ದರಿಂದ ಈ ಯುದ್ಧದಲ್ಲಿ ಎಣಿಸಿದಕ್ಕಿಂತ ಮೊದಲೇ ಜಯವೊದಗಿತು. ಅಮೆರಿಕ, ಬ್ರಿಟನು ಹಾಗೂ ಭಾರತದ ವೀರರು ಆಫ್ರಿಕದಲ್ಲಿ ಅಸಮ ಸಾಹಸದಿಂದ ಹೋರಾಡಿ ಎಣಿಸಿದಕ್ಕಿಂತಲೂ ಮುಂಚಿತವಾಗಿ ಜಯಶ್ರೀಯನ್ನು ಒಲಿಸಿಕೊಂಡರು. ಶತ್ರುಗಳ ಲಕ್ಷಾಂತರ ಮಂದಿ ಸೈನಿಕರು ಸೆರೆಸಿಕ್ಕುವುದರೊಡನೆ ಸೇನಾಪತಿ ಆರ್ನಿಮನಂಥ ಮಹಾಯೋಧನೂ ಕೈಸೆರೆಬಿದ್ದಿರುವುದು ಸಾಹಸದ ಸಂಗತಿಯಾಗಿದೆ. ಇದಕ್ಕಿಂತ ಮೊದಲು ಫ್ರೆಂಚ್ ಸೇನಾಪತಿ ಆಡ್ಮಿರಲ್ ಎಸ್ಟೋವನನ್ನು ಜರ್ಮನರು ಕೈಸೆರೆ ಹಿಡಿದಿದ್ದರು. ಮಿತ್ರರೀಗ ಆ ಸೇಡನ್ನು ತೀರಿಸಿಕೊಂಡಂತಾಯಿತು. ಭಾರತೀಯ ಯೋಧರೇ ಆರ್ನಿಮನನ್ನು ಸೆರೆಹಿಡಿದರೆಂಬುದು ಪ್ರಶಂಸಾರ್ಹ ವಿಷಯ. ವೈಸರಾಯರು ಮೊನ್ನೆ ಮೊನ್ನೆ ಮಾಡಿದ ಆಕಾಶ ಭಾಷಣದಲ್ಲಿ, ಭಾರತೀಯ ಸೈನಿಕರು ಈ ವಿಜಯದ ಬಗ್ಗೆ ಮಾಡಿದ ಅಸಮ ಸಾಹಸವನ್ನು ಮುಕ್ತಕಂಠದಿಂದ ಹೊಗಳಿದ್ದಾರೆ.

ಮುಂದಿನ ಗಮನವೆತ್ತ?

1939ರಿಂದ ಆಫ್ರಿಕಾ ಯುದ್ಧದ ಗತಿಯನ್ನಾವಲೋಕಿಸಿದರೆ, ಹಿಟ್ಲರನು, ಈ ಯುದ್ಧರಂಗಕ್ಕೆ ಅಷ್ಟೊಂದು ಪ್ರಾಧಾನ್ಯತೆ ಕೊಟ್ಟಂತೆ ಕಂಡುಬರುವುದಿಲ್ಲ. ರಶ್ಯದ ಹೋರಾಟವೇ ಆತನ ಮುಖ್ಯ ಗುರಿಯಾಗಿತ್ತು. ಸುಮ್ಮಸುಮ್ಮಗೆ ಮಿತ್ರರನ್ನು ಕೆಣಕುತ್ತಿದ್ದಲ್ಲಿ ರಶ್ಯದ ಕಡೆಗೆ ಅವರ ಹೆಚ್ಚಿನ ಸಹಾಯ ಹೋಗದಂತೆ ಮಾತ್ರ ಈ ಮೂರು ವರ್ಷವೂ, ಆಫ್ರಿಕದಲ್ಲಿ ಒಮ್ಮೆ ಮುಂದರಿಯುತ್ತಾ, ಹಿಂಜರಿಯುತ್ತ ಇದ್ದದ್ದು ನಾವು ಹಿಂದೆಯೇ ವಿವರಿಸಿದ್ದೇವೆ. ರಶ್ಯಾ ಯುದ್ಧವು ಹಿಟ್ಲರನಿಗೆ ಅತ್ಯಂತ ಪ್ರಾಧಾನ್ಯವಾಗಿದ್ದರೂ ಆಫ್ರಿಕ ರಣರಂಗವನ್ನು ಇಷ್ಟು ಉಪೇಕ್ಷಿಸಿದ್ದು ಸರಿಯಲ್ಲವೆಂದೇ ಹೇಳಬೇಕು. ಏಕೆಂದರೆ ಆಫ್ರಿಕ ಯುದ್ಧದಲ್ಲಿ ವಿಜಯೋನ್ಮತ್ತರಾದ ಮಿತ್ರರು ಯುರೋಪಿಗೆ ಧಾಳಿಯಿಡಲು ಇದರಿಂದ ಮುಕ್ತದ್ವಾರವಾಗಿದೆ. ಟುನಿಸಿಯಾ ವಿಜಯದಿಂದ ಯೂರೋಪಿನಲ್ಲಿ ದ್ವಿತೀಯ ರಂಗ ಮಾತ್ರವಲ್ಲ ಬೇಕಾದಷ್ಟು ರಂಗಗಳನ್ನು ಅವರು ತೆರೆಯಬಹುದು. ಇಂದಿನ ಅನುಕೂಲ ಸಂದರ್ಭವನ್ನು ಮಿತ್ರರು ಉಪಯೋಗಿಸಿಕೊಳ್ಳದೆ ಇರಲಾರರು. ಚರ್ಚಿಲರು ಅಮೆರಿಕಕ್ಕೆ ಹೋಗಿ ರೂಸ್‌ವೆಲ್ಟರೊಡನೆ ಮಾತುಕತೆ ಮಾಡಿರುವುದಾದರೂ ಇದೇ ಉದ್ದೇಶದಿಂದ ಎಂದು ತಿಳಕೊಳ್ಳಬಹುದಾಗಿದೆ. ಮಿತ್ರರು ಯೂರೋಪ್ ಧಾಳಿ ಪ್ರಾರಂಭಿಸುವುದಾದರೆ ಮೊತ್ತಮೊದಲು ಇಟಲಿಗೇ ಹೆಚ್ಚಿನ ಗಂಡಾಂತರವಿದೆ. ಭೂಮಧ್ಯ ಸಾಗರದಲ್ಲಿ ನೌಕಾ ಯುದ್ಧವೂ ನಡೆಯಬಹುದು, ಹೇಗಿದ್ದರೂ ಈ ಅನುಕೂಲ ಸಂದರ್ಭದಲ್ಲಿಯೇ ಯೂರೋಪಿನಿಂದ ಶತ್ರುವನ್ನು ಹೊಡೆದೋಡಿಸದ್ದಿರೆ, ರಶ್ಯದಲ್ಲಿ ಆತನ ಪ್ರಾಬಲ್ಯವನ್ನು ಮುರಿಯದಿದ್ದರೆ ಈ ವಿಜಯವನ್ನು ಪಡೆದೂ ಪ್ರಯೋಜನವಿಲ್ಲ.

ವಾಶಿಂಗ್‌ಟನ್ ಮಾತುಕತೆ

ಚರ್ಚಿಲ್ ಮತ್ತು ರೂಸ್‌ವೆಲ್ಟರು ಕಳೆದ ವಾರ ವಾಶಿಂಗ್‌ಟನಿನಲ್ಲಿ ಸೇರಿ ಮಹತ್ವದ ಮಾತುಕತೆ ನಡೆಸಿದರು. ಈ ಮಹಾಶಯರ ಜತೆಯಲ್ಲಿ ಉಭಯ ರಾಷ್ಟ್ರಗಳ ಮಹಾ ಸೇನಾನಿಗಳು, ರಾಜಕಾರಣಿಗಳು ಸಮರತಜ್ಞರು ಎಲ್ಲಾ ಇದ್ದರು; ಮಹತ್ವದ ಅವರ ಮಾತುಕತೆಯಲ್ಲಿ ಚೀನದ ವಿದೇಶಾಂಗ ಮಂತ್ರಿ ಸೂಂಗ್ ಮತ್ತು ಪೋಲೆಂಡಿನ ಪ್ರತಿನಿಧಿಗಳೂ ಹಾಜರಿದ್ದರು. ಇದನ್ನೆಲ್ಲಾ ನೋಡಿದರೆ ಈ ರೂಸ್‌ವೆಲ್ಟ್, ಚರ್ಚಿಲ್ ಮಾತುಕತೆಯಲ್ಲಿ ಯೂರೋಪಿನ ಯುದ್ಧ ವಿಚಾರ ಮಾತ್ರವಲ್ಲ ಏಶ್ಯಾ ಸಮರದ ವಿಚಾರವೂ ಮಾಡಿರಬಹುದೆಂದು ತರ್ಕಿಸಲು ಆಸ್ಪದವಿದೆ. ಯೂರೋಪಿನ ಮೇಲೆ ಮುಂದೆ ಮಾಡತಕ್ಕ ಯುದ್ಧ, ಜಪಾನನ್ನು ಪ್ರತಿಭಟಿಸುವ ಇಲ್ಲವೇ ಅಲ್ಲಿಗೆ ಧಾಳಿಯಿಡುವ ಯೋಚನೆಗಳು ಮುಖ್ಯವಾದ ಇಲ್ಲಿನ ಮಾತುಕತೆಗಳಾಗಿರಬಹುದು. ಇವೆರಡೂ ಇಂದಿನ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದು. ಒಂದೆಡೆ ಆಫ್ರಿಕಾದಲ್ಲಿ ಶತ್ರುವನ್ನು ಸೋಲಿಸಿದ ಹುಮ್ಮಸು, ಅದರಿಂದ ಯೂರೋಪಿಗೆ ಧಾಳಿಯಿಡಲು ಆದ ಅನುಕೂಲ, ರಶ್ಯದ ಭಾರವಿಳಿಸಲು ದ್ವಿತೀಯ ರಂಗ ತೆರೆಯಬೇಕಾದ ಅವಶ್ಯಕತೆ, ಚೀನದ ಹೊರೆ ತಪ್ಪಿಸಲು ಜಪಾನನ್ನು ಮರ್ದಿಸುವ ವಿಚಾರ ಇವುಗಳೆಲ್ಲಾ ಸದ್ಯದ ಸಮಸ್ಯೆಗಳೇ ಸರಿ. ಅಂತೂ ಈ ಮಾತುಕತೆಯಲ್ಲಿ ಮುಂದೆ ನಡೆಯಬಹುದಾದ ಯುದ್ಧದ ಕುರಿತು ವಿಚಾರವಿನಿಮಯವಾಗಿರಲೇಬೇಕು. ಈ ಸಲದ ಅವರ ಭೇಟಿ ಕಸಬ್ಲಾಂಕಾ ಸಮ್ಮೇಳನದ ಎರಡನೆಯ ಅಂಕವೆಂದು ಹೇಳಲಾಗುತ್ತದೆ. ಕಸಬ್ಲಾಂಕಾದಲ್ಲಿ ಸೇರಿ ಆಫ್ರಿಕಾ ಯುದ್ಧದ ವಿಚಾರ ಆಲೋಚಿಸಲಾಯಿತು. ಆಫ್ರಿಕದಲ್ಲೀಗ ಜಯದೊರೆತಿರಲು, ಮುಂದಿನ ಯೂರೋಪಿನ ಧಾಳಿಯ ಕುರಿತು ಆಲೋಚಿಸಲು ಈ ಭೇಟಿಯಾಗಿರಬೇಕು.

'ಸ್ವಾತಂತ್ರ್ಯ' ಕೃತಿಯಲ್ಲಿ?

ವಾಶಿಂಗ್‌ಟನಿನಲ್ಲಿ ಹೀಗೆ ಮಾತುಕತೆಗಳು ನಡೆದಿವೆಯೇನೋ ಸರಿ. ಆದರೆ ಭಾರತೀಯರು ಕುತೂಹಲ ಪಡತಕ್ಕ ವಿಚಾರಗಳೇನಿವೆಯೆಂಬುದು ಪ್ರಶ್ನೆ. ಭಾರತದ ಸಮಸ್ಯೆಯ ವಿಚಾರ ಮಾತುಕತೆಗಳು ನಡೆದವೋ ಇಲ್ಲವೊ ತಿಳಿದಿಲ್ಲ. ಜಗತ್ತಿನ ಸ್ವಾತಂತ್ರ್ಯದ ಸಲುವಾಗಿ ಮಿತ್ರರೀ ಯುದ್ಧಮಾಡುತ್ತಿದ್ದಾರೆಂದು ಬಾಯಿಯಿಂದೇನೋ ಹೇಳುತ್ತಲೇ ಇದ್ದಾರೆ. ಆದರೆ ಭಾರತಕ್ಕೆ, ಪರದಾಸ್ಯದಿಂದ ಇನ್ನೂ ನರಳುತ್ತಿರುವ ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬೇಡವೆಂದು ಚರ್ಚಿಲ್ ರೂಸ್‌ವೆಲ್ಟರಾದಿಯಾಗಿ ಅಮೆರಿಕ ಬ್ರಿಟನುಗಳ ಮಂದಿ ಆಲೋಚಿಸಿದಂತೆ ತೋರುತ್ತದೆ. ಏಕೆಂದರೆ ಅಲ್ಲಿ ಸ್ವಾತಂತ್ರ್ಯಕ್ಕಾಗಿ ಯುದ್ಧವಾಗುತ್ತಿರುವಾಗ, ಇಲ್ಲಿ ಸ್ವಾತಂತ್ರ್ಯದ ಮಾತೆತ್ತುವುದೂ ಅಪರಾಧವಾಗಿದೆ! ಭಾರತದ ಮಹಾ ಮಹಾ ದೇಶಾಭಿಮಾನಿಗಳು,ಸಹಸ್ರಾರು ಮಂದಿ, ಗಾಂಧಿಜಿ ನೆಹರು ಅಜಾದರೇ ಮೊದಲಾಗಿ 'ಸೆರೆಮನೆಯೊಳಗೆ ಕೊಳೆಯುತ್ತಿದ್ದಾರೆ. ಬಾಯಿಯಿಂದ ಮಿತ್ರರು ಸ್ವಾತಂತ್ರ್ಯದ ಧ್ಯೇಯವನ್ನು ಈ ಹೋರಾಟಕ್ಕೆ ಅನ್ವಯಿಸುವುದಿದ್ದರೂ ಕೃತಿಯಿಂದ ಆ ಧ್ಯೇಯವನ್ನು ಬಿಡುತ್ತಾ ಬರುವ ಹಾಗೆ ತೋರುತ್ತದೆ. ಪರ್ಲ್‌ಬಕ್, ಲುಯಿ ಫಿಶರ್ ಮೊದಲಾದ ಅಮೆರಿಕದ ಮಹಾ ಮೇಧಾವಿಗಳೇ ಹೀಗೆಂದು ಸಾರಿದ್ದಾರೆ. ಅಟ್ಲಾಂಟಿಕ್ ಘೋಷಣೆಯ ಆಶ್ವಾಸನವೂ ಇತ್ತೀಚೆಗೆ ಬೆಲೆಯಿಲ್ಲದಾಗಿದೆ. ಚರ್ಚಿಲ್ ಅಮೆರಿಯವರು ಭಾರತದ ಸಮಸ್ಯೆಯತ್ತ ಏನೇನೂ ಗಮನಕೊಡುವುದೇ ಇಲ್ಲ. ಅಂಥಾ ಸಾಮ್ರಾಜ್ಯಶಾಹೀ ಮುಖಂಡರು ಗಮನ ಕೊಟ್ಟಾರೆಂದು ಯಾರೂ ಹಾರೈಸುವುದೂ ಇಲ್ಲ. ಆದರೆ ರೂಸ್‌ವೆಲ್ಟರ ವಿಚಾರವೇನು? ಅಮೆರಿಕ, ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳ ತೌರುಮನೆ ಎಂಬ ಕೀರ್ತಿಗೆ ಗತಿಯೇನು? ಭಾರತೀಯರು ಅಮೆರಿಕದತ್ತ ಕತ್ತೆತ್ತಿ ಕುತೂಹಲದಿಂದ ನಿರೀಕ್ಷಿಸುತ್ತಿದ್ದುದಕ್ಕೆ ಪ್ರತಿಫಲವೇನು? 'ದಿನ ಹೋಗುತ್ತಾ ರಾಯರ ಕುದುರೆ ಕತ್ತೆಯಾಗುತ್ತಾ ಬಂತು' ಎಂಬ ನಾಣ್ಣುಡಿಯಂತೆ ಅಮೆರಿಕವೂ ಸಾಮ್ರಾಜ್ಯಶಾಹೀ ನೀತಿಗೆ ತಲೆಬಗ್ಗಿಸುತ್ತಿದೆಯೆ? ರೂಸ್‌ವೆಲ್ಟರೂ ಸಾಮ್ರಾಜ್ಯಶಾಹೀ ಮುಖಂಡರಾಗುತ್ತಾ ಬಂದರೆ? ಮಿತ್ರರ ಸಹವಾಸದಿಂದ ಚರ್ಚಿಲ್ ಅಮೆರಿಯವರ ಸಂಪರ್ಕದಿಂದ ಇಂಥಾ ಬದಲಾವಣೆ ಬರಲಾರದೆಂದಾದರೂ ಹೇಗೆ ಹೇಳಬಹುದು? ನಿಜವಾಗಿಯೂ ಮಿತ್ರರ ಮನೋಗತಿ ಹೀಗೇ ಆದರೆ, ಹಿಟ್ಲರನನ್ನು ಸೋಲಿಸಿಯೂ ಜಗತ್ತಿಗೆ ಪ್ರಯೋಜನವಿಲ್ಲ!'

ಟರ್ಕಿಯನ್ನೆಳೆಯುವರೆ?

'ರಾಜಕೀಯ ರಂಗದಲ್ಲಿ ಬೇಗನೇ ಅತ್ಯಂತ ಮಹತ್ವದ ಘಟನೆಗಳಾಗುವವೆಂದು ತೋರುತ್ತದೆ. ಇಷ್ಟರಲ್ಲಿಯೇ ಇಟಲಿಯ ಪತನ ಹಾಗೂ ಟರ್ಕಿಯು ಮಿತ್ರರಾಷ್ಟ್ರಗಳ ಮೇಲೆ ಯುದ್ಧ ಸಾರುವುದು ಸಂಭವಿದೆ' ಹೀಗೆಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಒಂದು ಅಗ್ರಲೇಖದಲ್ಲಿ ಉಲ್ಲೇಖಿಸಿದೆ. 'ಜರ್ಮನರಿಗೆ ಮಧ್ಯಪೂರ್ವದಲ್ಲಿ ಕಾಲಿಡಲು ಆಸ್ಪದ ಕೊಡದೆ, ಈಗಾಗಲೇ ಟರ್ಕಿಯು ಮಿತ್ರರಿಗೆ ಬಹಳ ಸಹಾಯಮಾಡಿದೆ. ಟರ್ಕಿಯು ಮಿತ್ರರಾಷ್ಟ್ರಗಳನ್ನು ಸೇರಿದ ಬಳಿಕ ಬಾಲ್ಕನ್ ರಾಷ್ಟ್ರಗಳ ಮೇಲೆ ಕೂಡಲೇ ಧಾಳಿ ಮಾಡಲು ಅನುಕೂಲವಾಗುವುದು' ಎಂದು ಆ ಪತ್ರಿಕೆ ಹೇಳುತ್ತದೆ. 'ಟರ್ಕಿ ತನ್ನ ಸೈನ್ಯ ಸಾಮಗ್ರಿಗಳನ್ನು ಬೆಳಸಿಕೊಂಡದ್ದು, ಅದರ ಮಿಲಿಟರಿ ಮುಖಂಡರು ಜನರಲ್ ಇಸೆನಹಾವರರೊಡನೆ ಮಾತುಕತೆ ಮಾಡಿದ್ದು, ಇರಾಕ್, ಇರಾಣ್, ಸೈಪ್ರಸ್, ಸಿರಿಯ ಮೊದಲಾದೆಡೆಗಳಲ್ಲಿ ಟರ್ಕಿ ಜನರಿಗೆ ಬ್ರಿಟಿಷ್ ದಳಗಳು ಬೆಂಬಲವಾಗಿರುವುದು–ಇವನ್ನೆಲ್ಲಾ ಕಂಡರೆ ಶತ್ರುಗಳು ಬಹಳ ಚಿಂತೆಗೊಳಗಾಗಿರಲು ಸಾಕು' ಎಂದು ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆ ಬರೆಯುತ್ತದೆ. ಅಂತೂ ಈಗ ಟರ್ಕಿಯನ್ನು ಯುದ್ಧಕ್ಕೆಳೆಯುವ ಪ್ರಯತ್ನ ನಡೆಯುತ್ತಿದೆಯೆಂದು ಇದರಿಂದ ಸ್ಪಷ್ಟವಾಗುವುದು. ಟರ್ಕಿ ಮಾತ್ರ, ಈ ಬಲೆಯಲ್ಲಿ ಬೀಳುವುದೋ ಇಲ್ಲವೋ ನೋಡಬೇಕಾಗಿದೆ.

ಅಟ್ಟು ನಡುಗುಡ್ಡೆಯಲ್ಲಿ

ಅಮೆರಿಕನ್ ಸೈನಿಕರು ಅಟ್ಟು ನಡುಗುಡ್ಡೆಯ ಮೇಲೆ ತಳವೂರಿ, ಪರ್ವತದ ಸಾಲಿನ ತೀರ ಜಪಾನಿಗಳ ಮೇಲೆ ಧಾಳಿಗೆ ಪ್ರಾರಂಭಿಸಿರುವರು. ನಡುಗುಡ್ಡೆಯ ಉತ್ತರ ದಕ್ಷಿಣ ತುದಿಗಳಲ್ಲಿ ಅಮೆರಿಕನರು ಇಳಿದಿರುವರು. ಉತ್ತರ ಶಾಂತಿಸಾಗರದಲ್ಲಿ ಪರಿಸ್ಥಿತಿ ಈಗ ಅನುಕೂಲವಾದಾಗಿದ್ದರಿಂದ, ಅಲ್ಯೂಶಿಯನ್ ನಡುಗುಡ್ಡೆಗಳಲ್ಲೊಂದಾದ ಅಟ್ಟು ನಡುಗುಡ್ಡೆಯ ಮೇಲೆ ಅಮೆರಿಕನ್ ಸೈನಿಕರು ಚಟುವಟಿಕೆ ಪ್ರಾರಂಭಿಸಿದರು. ಮೊದಲನೆಯ ದಳವು ಬ್ಲಯಿಂಡ್ ಎಂಬ ಒತ್ತಿನಲ್ಲಿ ಮತ್ತು ಹೋಲ್ಜ್ ಉಪಸಾಗರದಲ್ಲಿ (ಇವೆರಡೂ ಅಟ್ಟು ನಡುಗುಡ್ಡೆಯ ಉತ್ತರಕ್ಕಿವೆ) ಇಳಿದವು. ಈ ದಳಗಳು ಅಲ್ಲಿ ಇಳಿಯುತ್ತಿದ್ದಾಗ ಅಮೆರಿಕದ ನೌಕಾ ಮತ್ತು ವಿಮಾನ ದಳಗಳು ಆ ಭಾಗದಲ್ಲಿರುವ ಶತ್ರು ಠಾಣ್ಯಗಳ ಮೇಲೆ ಧಾಳಿಯಿಟ್ಟವು. ಅಮೆರಿಕನರೀಗ ಜಪಾನಿ ಸೈನ್ಯವನ್ನು ಆಕ್ರಮಿಸಿ, ಜಪಾನರನ್ನು ಅಲ್ಲಿಂದ ಹಿಂದೂಡಿರುವರು.

ಸ್ವದೇಶಾಭಿಮಾನಿ

ತಾರೀಕು 21—5—1943

ಬಾಷ್ಪಾಂಜಲಿ!

ಶ್ರೀಯುತರಾದ ಬೆನಗಲ್ ರಾಮರಾವ್ ಮತ್ತು ಡಾಕ್ಟರ್ ಕೆ. ವಿಟ್ಠಲ ಶೆಟ್ಟಿ ಈ ಉಭಯರು ಮಹನೀಯರನ್ನು ಕಳೆದುಕೊಂಡು ದಕ್ಷಿಣ ಕನ್ನಡವಿಂದು ಬಡವಾಗಿದೆ. ಒಬ್ಬರು ಸಾಹಿತ್ಯ ಕ್ಷೇತ್ರದಲ್ಲಿ, ಇನ್ನೊಬ್ಬರು ರಾಜಕೀಯ ರಂಗದಲ್ಲಿ ಹೀಗೆ ಇಬ್ಬರೂ ಅಸಮಾನ ಕೀರ್ತಿ ಪಡೆದವರು; ಜನತಾ ಸೇವೆಯೇ ಜನಾರ್ದನನ ಸೇವೆಯೆಂದು ಅಹರ್ನಿಶಿ ದುಡಿದವರು; ಅವರಿಬ್ಬರ ಸಾರ್ವಜನಿಕ ಸೇವೆಯೂ ಬಹಳ ಹಿರಿದು; ಅಂತೆಯೇ ಅವರೀರ್ವರ ಕೀರ್ತಿಯೂ ಶಾಶ್ವತವಾದುದು.

ಶ್ರೀ ಬೆನಗಲ್ ರಾಮರಾಯರು ಕನ್ನಡದ ನವನಿರ್ಮಾಣದ ಸಂಧಿಕಾಲದಲ್ಲಿ ಮುಂದೆ ಬಂದು ದುಡಿದ ಸಾಹಸಿಗರು; ಡಾ| ವಿಟ್ಠಲ್ ಶೆಟ್ರು ನಮ್ಮ ದೇಶದಲ್ಲಿ ರಾಜಕೀಯ ಮನೋಭಾವನೆ ಜನತೆಯಲ್ಲಿ ಜಾಗೃತಿಯಾಗುತ್ತಿರುವ ಸಂಧಿ ಕಾಲದಲ್ಲಿ ಮುಂದಾಳಾಗಿ ನಿಂತು ಹೋರಾಡಿದ ವೀರರು. ಶ್ರೀ ಬೆನಗಲ್ ರಾಮರಾಯರು ತಾಯ್ನುಡಿಯ ಕೀರ್ತಿ ಸೌರಭವನ್ನು ಬಹಳವಾಗಿ ಪಸರಿಸಿದ್ದಾರೆ; ಡಾ| ವಿಠಲ ಶೆಟ್ರು ತಾಯ್ನಾಡಿನ ಕೀರ್ತಿ ಧ್ವಜವನ್ನು ಹಿಡಿದೆತ್ತಿ ಹೋರಾಡಿದ್ದಾರೆ. ಇಂತು ಇವರೀರ್ವರು ಮಹನೀಯರ ನೆನಹು ನಮ್ಮ ಜಿಲ್ಲೆಯವರಿಗೆ ನಿರಂತರವಾದ ಒಂದು ಸವಿ ನೆನಹು.

ಶ್ರೀ. ರಾಮರಾಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಹಲವು ಕನ್ನಡ ಸಂಘ ಸಂಸ್ಥೆಗಳ ಮುಂದಾಳಾಗಿ ಮಾಡಿದ ಕೆಲಸಗಳು, ಅವರು ಬರೆದ ಹಾಗೂ ಪ್ರಕಟಿಸಿದ ಹಲವು ಗ್ರಂಥಗಳು ಅವರ ಹೆಸರನ್ನು ಶಾಶ್ವತವಾಗಿ ಚಿರಸ್ಮರಣೀಯವಾಗಿ ಮಾಡುವವು. ಡಾ. ವಿಠಲ ಶೆಟ್ರು ಮುನ್ಸಿಪಲ್ ಸದಸ್ಯರಾಗಿ, ಆ ಮೇಲೆ ಅದರ ಚೇರ್‌ಮೆನರಾಗಿ, ಆ ಮೇಲೆ ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರಾಗಿ ಮತ್ತು ಅದರ ಪ್ರೆಸಿಡೆಂಟರಾಗಿ ಮಾಡಿದ ಹಲವು ಸಾರ್ವಜನಿಕ ಉಪಯುಕ್ತ ಕಾರ್ಯಕಲಾಪಗಳು ಅವರ ಹೆಸರನ್ನು ನಮ್ಮ ಜಿಲ್ಲೆಯ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಉಲ್ಲಿಖಿತವಾಗುವಂತೆ ಮಾಡಿವೆ.

ಶ್ರೀ. ಬೆನಗಲ್ ರಾಮರಾಯರು ಸಾಹಿತ್ಯದಲ್ಲಿ ಸಿದ್ಧ ಹಸ್ತರಾದ ಮುಂದಾಳು. ಡಾ| ವಿಠಲ ಶೆಟ್ಟರು ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಸವ್ಯಸಾಚಿಗಳೆನಿಸಿದ ಧುರೀಣರು. ಇಬ್ಬರೂ ಅವರವರ ಕ್ಷೇತ್ರದಲ್ಲಿ ಬಹಳವಾಗಿ, ನಿರಂತರವಾಗಿ, ಅವಿಶ್ರಾಂತರಾಗಿ ಕಾರ್ಯಕಲಾಪಗಳನ್ನು ಮಾಡಿ ಜನತೆಯ ಅತ್ಯಂತ ಗೌರವಕ್ಕೆ ಪಾತ್ರರಾದವರು; ಜನಪ್ರಿಯರು.

ಇಂಥಾ ಇಬ್ಬರು ಮಹನೀಯರನ್ನು ಕಳಕೊಂಡು ದಕ್ಷಿಣ ಕನ್ನಡವಿಂದು ನಿಜವಾಗಿಯೂ ತೀರಾ ಬಡವಾಗಿದೆ. ಅವರ ವಿಯೋಗವು ಶುಂಬಿಸಲಾರದ ನಷ್ಟವಾಗಿದೆ. ಈ ಉಭಯರು ಮಹನೀಯರ ಬಂಧು ಬಳಗದವರೊಡನೆ, ಪುತ್ರ ಮಿತ್ರ ಕಳತ್ರರೊಡನೆ, ಅವರ ಅನೇಕ ಮಂದಿ ಸಹ ಕಾರ್ಯಕರ್ತರೊಡನೆ, ಜಿಲ್ಲೆಯ ಹಾಗೂ ನಾಡಿನ ಸಾವಿರಾರು ಮಂದಿ ಸಹಾನುಭೂತಿಪರರೊಡನೆ ನಮ್ಮದೀ ಶ್ರದ್ಧಾಂಜಲಿ—ಬಾಷ್ಪಾಂಜಲಿ!

'ಟುನಿಸಿಯಾ ದಿನ'

ಕಳೆದ ಮೂರು ವರ್ಷಗಳ ಹೋರಾಟದ ನಂತರ ಆಫ್ರಿಕಾದಲ್ಲಿ ದೊರಕಿದ ವಿಜಯದ ಆನಂದೋತ್ಸವವನ್ನು ಮಿತ್ರರು ಎಲ್ಲೆಲ್ಲೂ ಆಚರಿಸುತ್ತಿದ್ದಾರೆ. ಭಾರತದ ವೈಸರಾಯರು ತಾ. ೨೧ನ್ನು 'ಟುನಿಸಿಯಾ ದಿನ'ವೆಂದು ಸಾರ್ವಜನಿಕ ರಜಾ ದಿನವಾಗಿ ಆಚರಿಸಬೇಕೆಂದು ಸಾರಿದ್ದಾರೆ. ಅಂತೆ ಎಲ್ಲಾ ಕಡೆಗಳಲ್ಲಿಯೂ ಈ ಉತ್ಸವಾಚರಣೆಯ ಸಂಭ್ರಮವು ಬಹಳವಾಗಿ ಕಂಡುಬರುತ್ತದೆ.

ಆಫ್ರಿಕದಲ್ಲಿ ದೊರೆಕಿದ ವಿಜಯದ ಬಗ್ಗೆ ವೈಸರಾಯರೇ ಭಾರತೀಯ ಸೈನಿಕರನ್ನು ಪ್ರಶಂಸಿಸಿದ್ದಾರೆ. ಜನರಲ್ ಆರ್ನಿಮನಂಥಾ ಜರ್ಮನ್ ಸೇನೆಯ ಅಪ್ರತಿಮ ಸೇನಾಪತಿಯನ್ನು ಕೈಸೆರೆಹಿಡಿದಿರುವರುವ ಭಾರತೀಯ ಸೈನಿಕರೆಂದರೆ ಅವರ ಸಾಹಸಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇರೆ ಬೇಕಾಗಿಲ್ಲ. ಆಫ್ರಿಕದ ಮರುಭೂಮಿಯಲ್ಲಿ ನಿಂತು, ಅಗಣಿತ ನಷ್ಟಸಂಕಷ್ಟಗಳನ್ನು ಎಲ್ಲಾ ಅನುಭವಿಸಿ, ಎದೆಯ ರಕ್ತವನ್ನು ಧಾರೆಧಾರೆಯಾಗಿ ಚೆಲ್ಲಿ ಜೀವನವನ್ನು ತೃಣಸಮಾನವೆಂದು ಭಾವಿಸಿ ಹೋರಾಡಿದ ಭಾರತೀಯ ಸೈನಿಕರನ್ನು ಈ 'ಟುನಿಸಿಯಾ ದಿನ'ದ ಉತ್ಸವ ಕಾಲದಲ್ಲಿ ನಾವು ನೆನೆಯಲು ಮರೆಯಲಾರೆವು. ಅವರ ಈ ಬಲಿದಾನವು ಭಾರತಕ್ಕೆ ಕೀರ್ತಿಯನ್ನೂ ಸ್ವಾತಂತ್ರ್ಯವನ್ನೂ ತರಲೆಂದು ನಮ್ಮ ಹಾರೈಕೆಯಾಗಿದೆ.

ಸದ್ಯದ ಸುದ್ದಿಗಳು

ಚರ್ಚಿಲ್ ರೂಸ್‌ವೆಲ್ಟರ ಮಾತುಕತೆ ಇನ್ನೂ ಮುಗಿದಿಲ್ಲ. ಚರ್ಚಿಲರು ಅಮೆರಿಕ ಕಾಂಗ್ರೆಸಿನಲ್ಲಿ ಒಂದು ಭಾಷಣ ಮಾಡುವರು.

ಫಿಲಿಪ್ಸರು ತಮ್ಮ ಭಾರತದ ವರದಿಯನ್ನು ರೂಸ್‌ವೆಲ್ಟರಿಗೊಪ್ಪಿಸಿದ್ದಾರೆ. ಎರಡನೆಯ ಸಲ ಅವರ ಭೇಟಿಯಾಯಿತು. ಫಿಲಿಪ್ಸರು ಮರಳಿ ಭಾರತಕ್ಕೆ ಬರಲಿರುವರೆಂದು ರೂಸ್‌ವೆಲ್ಟ್ ಹೇಳಿದರು.

ಭಾರತದ ಹೊಸ ವೈಸರಾಯರ ಬಗ್ಗೆ ಚರ್ಚಿಲ್ ಮಂತ್ರಿಮಂಡಳದವರ 'ವರಾನ್ವೇಷಣಾ ಕಾರ್ಯ' ಇನ್ನೂ ಮುಗಿದಿಲ್ಲ.

ಉತ್ತರ ಭಾರತ ದಕ್ಷಿಣಭಾರತಗಳ ಹಲವು ನಗರ ಗ್ರಾಮಗಳಲ್ಲಿ ಇನ್ನೂ ಕಾಂಗ್ರೆಸಿನವರ ಬಂಧನ, ಶಿಕ್ಷೆ ಮೊದಲಾದವು ನಡೆಯುತ್ತಲೇ ಇದೆ.

ಜೂನ್ ೧೫ರಿಂದ ದಕ್ಷಿಣ ಕನ್ನಡ ಜಿಲ್ಲಾ ಸೆಶ್ಯನ್ ಜಡ್ಜರಾದ ಮಿ| ಅಲ್ಲಪ್ಪಿ ಸಾಹೇಬರು ನಿವೃತ್ತರಾಗುವ ಸಲುವಾಗಿ ರಜೆ ತೆಗೆದುಕೊಳ್ಳುವುದರಿಂದ ಶ್ರೀ. ಸಿ. ಸತ್ಯನಾರಾಯಣ ಚೌಧರಿಯವರು ದ. ಕ. ಜಿಲ್ಲೆಯ ಜಿಲ್ಲಾ ಸೆಶ್ಯನ್ಸ್ ಜಡ್ಜರಾಗಿ ನೇಮಕವಾಗುವರು.

ಕಲ್ಕತ್ತೆದ ಡಾ| ಸರ್ ನೀಲರತ್ನ ಸರ್ಕಾರರು ೮೨ನೇ ವಯಸ್ಸಿನಲ್ಲಿ ತೀರಿಹೋದರು. ಇವರು ಪ್ರಸಿದ್ಧ ಡಾಕ್ಟರರು. ಕಲ್ಕತ್ತಾ ವಿಶ್ವ ವಿದ್ಯಾಲಯದ ವೈಸ್ ಛಾನ್ಸಲರಾಗಿದ್ದರು. ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದವರು.

ಸ್ವದೇಶ ಸಮಾಚಾರ

ಅಮೇರಿ ಏಜೆಂಟರ ಪ್ರಚಾರ

ಬ್ರಿಟಿಷ್ ಪ್ರಜೆಗಳು ಭಾರತ ಹಾಗೂ ಇತರ ವಸಾಹತುಗಳ ವಿಷಯ ಆಗಾಗ ಭಾಷಣ ಕೇಳುತ್ತಾರೆ. ೧೯೪೨ರಲ್ಲಿ ಇಂಥಾ ೧೫೦೦೦ ಭಾಷಣಗಳಾಗಿವೆ. ೨೦ ಲಕ್ಷ ಜನರು ಭಾಷಣ ಕೇಳಿದ್ದಾರೆ. ಜನರಿಗೆ ಬೇಕಾದ ಭಾಷೆಗಳಲ್ಲಿ ಈ ಭಾಷಣಗಳಾಗುತ್ತಿವೆ. ಭಾರತ ಮೊದಲಾದ ವಸಾಹತುಗಳಲ್ಲಿ ತಾವು ಎಷ್ಟು ಯೋಗ್ಯ ಆಡಳಿತ ಮಾಡುತ್ತೇವೆಂಬುದೇ ಈ ಭಾಷಣಗಳ ಪಲ್ಲವಿ!

ಜಿನ್ನರನ್ನು ಡಿಟೆನ್ಯನ್ ಮಾಡಲಾಗುವುದೆ?

ಹಿಂದು ಮುಸ್ಲಿಮರೊಟ್ಟಿಗೆ ಬ್ರಿಟಿಷ್ ಸರಕಾರದ ವಿರುದ್ಧ ಕಾರ್ಯ ಕೈಕೊಳ್ಳಬೇಕೆಂದು ಜಿನ್ನರು ಮೊನ್ನೆ ತಮ್ಮ ಭಾಷಣದಲ್ಲಿ ಹೇಳಿದ ಬಗ್ಗೆ ಅವರನ್ನು ಸ್ಥಾನಬದ್ಧರಾಗಿಡಲಾಗುವುದೇ ಎಂದು ಕಾಮನ್ಸಿನಲ್ಲಿ ಪ್ರಶ್ನಿಸಲಾಯಿತು. ಅದಕ್ಕೆ ಅಮೇರಿ ಉತ್ತರ ಕೊಡುತ್ತಾ 'ಅಂಥಾ ಪ್ರಶ್ನೆ ಈಗ ಹುಟ್ಟುವುದಿಲ್ಲ' ಎಂದರು. ಆಕ್ರಮವಾದ ಬಂಧನವನ್ನು ಸಕ್ರಮ ಮಾಡಲು ಭಾರತದ ವೈಸರಾಯರಿಗೆ ಅಧಿಕಾರವಿದೆಯೇ ಎಂದೂ ಪ್ರಶ್ನಿಸಲಾಯಿತು. ಕಾಂಗ್ರೆಸ್ ಮುಖಂಡರನ್ನು ಅಕ್ರಮವಾಗಿ ಬಂಧಿಸಲಾಗಿದೆಯೆಂಬ ತೀರ್ಪನ್ನು ಗಮನಿಸಿ ಅವರಿಗೇನಾದರೂ ಪರಿಹಾರ ಕೊಡಲಾಗುವುದೋ ಎಂದು ಇನ್ನೊಂದು ಪ್ರಶ್ನೆ. ಅಮೇರಿ ಉತ್ತರ ಕೊಡುತ್ತಾ ಕೇವಲ ಶಾಬ್ದಿಕ ಅಕ್ರಮವಲ್ಲದೆ ನಿಜವಾದ ಅಕ್ರಮವಲ್ಲವೆಂದರು.

ನೋಟುಗಳ ಅತಿ ಪ್ರಸರಣ ತಡೆಯಲು ಸರಕಾರ ಆರ್ಡಿನೆನ್ಸ್

ಒಂದನ್ನೀಗ ಜಾರಿಗೆ ತರುತ್ತದೆ. ವಿಶೇಷ ಲಾಭಗಳು ಜನರ ಕೈಯಲ್ಲಿ ಉಳಿಯದಂತೆ ಹಾಗೂ ಲಿಮಿಟೆಡ್ ಕಂಪನಿಗಳುಗಳು ಬಹಳವಾಗಿ ಏಳದಂತೆ ಓರ್ಡಿನೆನ್ಸು ತರಲಾಗುತ್ತದೆ. ವಿಶೇಷ ಲಾಭದ ಮೇಲೆ ಅತಿಯಾಗಿ ತೆರಿಗೆ ಹೊರಿಸಿ ನೋಟುಗಳನ್ನು ಸರಕಾರವು ಪುನಃ ಸ್ವಾಧೀನ ಮಾಡುವುದು. ಇದರಿಂದ ನೋಟುಗಳ ಚಲನವೂ ಕಡಿಮೆಯಾಗುವುದು. ಲಾಭದಲ್ಲಿ ನೂರಕ್ಕೆ 93⅓ರ ಹಣವನ್ನು ಸರಕಾರವು ತೆಕ್ಕೊಳುವುದು. ಉಳಿದ ಹಣವೂ ಚಲಾವಣೆಗೆ ಬೀಳದಂತೆ ತಡೆಯಲಾಗುವುದು. ಸರಕಾರಕ್ಕೆ ಹಾನಿಯಾಗುವಂತೆ ಕೆಲವು ಕಂಪನಿಗಳು ಹೆಚ್ಚು ಬೋನಸ್ಸು ಕೊಡುತ್ತಿರುವುದರಿಂದ ಬೋನಸ್ಸು ಹಂಚುವ ಹಾಗೂ ಕಮಿಶನ್ ಕೊಡುವ ಅಧಿಕಾರವನ್ನು ಸರಕಾರವು ತನ್ನ ವಶ ತೆಗೆದುಕೊಳ್ಳುವುದು. ಕೆಲ್ಬ್ಯಾವಾಲುಗಳ ಸಂಗ್ರಹದ ಅಧಿಕಾರವು ಸರಕಾರದ ಕೈಗೆ ಹೋಗುವುದು. ಏಕೆಂದರೆ ಆವಶ್ಯಕತೆಗಿಂತ ಹೆಚ್ಚಿಗೆ ಸಂಗ್ರಹಿಸಿಟ್ಟರೆ ಮುಂದೆ ಧಾರಣೆ ಏರಿಸಲಾಗುವುದನ್ನು ತಡೆಗಟ್ಟಲು. ಕೇಂದ್ರ ಸರಕಾರದ ಆಜ್ಞೆಯಿಲ್ಲದೆ ಇನ್ನು ಮುಂದೆ ಭಂಡವಲು ಹೊರಡಿಸಬಾರದೆಂದೂ ವಿಧಿಸುವರು. ಲಿಮಿಟೆಡ್ ಕಂಪೆನಿಗಳು ಹೆಚ್ಚಾಗಿ ಹುಟ್ಟದಂತೆ ಮಾಡುವುದೇ ಇದರ ಉದ್ದೇಶ.

ವೈಮಾನಿಕನ ಕೊಲೆ ಖಟ್ಲೆ ರದ್ದಾಯಿತು.

ಮೊಂಗೀರ ಪ್ರಾಂತದ ಒಂದು ಹಳ್ಳಿಯಲ್ಲಿ ಆರ್. ಎ. ಎಫ್. ವಿಮಾನ ಮುರಿದುಬಿದ್ದು ಮೂವರು ವೈಮಾನಿಕರನ್ನು ಕೊಲೆಮಾಡಿದರೆಂಬ ಆರೋಪದ ಅಪರಾಧಿಗಳನ್ನು ಸ್ಪೆಶಲ್ ಜಡ್ಜ್ ಎಸ್. ನಾಕ್ಕೆ ಇವಾಮದು ರುಜುವಾತಿಲ್ಲವೆಂದು ಬಿಟ್ಟುಬಿಟ್ಟರು. ಸರಕಾರದ ಪರವಾಗಿ ಸಾಕ್ಷಿ ಹೇಳಿದವರೂ, ಮೇಲಿನ ಕೋರ್ಟಿನಲ್ಲಿ, ತಾವು ಒತ್ತಾಯಕ್ಕಾಗಿ ಕೆಳಗಿನ ಕೋರ್ಟಿನಲ್ಲಿ ಸುಳ್ಳು ಹೇಳಬೇಕಾಯಿತೆಂದೂ ನಿಜವಾಗಿ ಅಂಥ ಘಟನೆಯನ್ನು ತಾವು ಕಂಡಿಲ್ಲವೆಂದೂ ನುಡಿದರು. ಮೊಂಘೀರದಲ್ಲಿ ಬೇರೆಯೂ ವೈಮಾನಿಕರ ಕೊಲೆ ಖಟ್ಲೆಯೊಂದು ಇಲ್ಲಿ ಬಂದಿತ್ತು. ಅದೂ ಹೀಗೆ ಬಿಡಲ್ಪಟ್ಟಿತು.

ಪೂನೆಯಲ್ಲಿ ವಿದ್ಯಾರಣ್ಯ ಸಂಘ

ಎಂಟು ಕನ್ನಡಿಗರ ಕೂಟವೊಂದು ಏರ್ಪಟ್ಟಿದೆ. ಕನ್ನಡ ಸಾಕ್ಷರತಾ ಪ್ರಚಾರ, ವಿನಾಯಕ ಹಬ್ಬ, ವಸಂತ ಹಬ್ಬ, ಸ್ನೇಹಸಮ್ಮೇಳನ ಹಾಗೂ ವಾಚನಾಲಯ ಇವುಗಳ ಮುಖಾಂತರ ಕನ್ನಡದ ಸೇವೆ ಮಾಡುವುದು ಇವರ ಗುರಿಯಿದೆ. ಸಂಘ ಸ್ಥಾಪಿತವಾದ ದಿನ ಬಸವೇಶ್ವರ ಜಯಂತಿ ಆಚರಿಸಲ್ಪಟ್ಟಿತು.

ಅಮೆರಿಕದಲ್ಲಿ ಭಾರತದ ವಿಚಾರ

ವಾಗಿ ಈಗ ತುಸು ಆಂದೋಲನವಾಗುತ್ತಿದೆ. ಭಾರತದಿಂದ ಮರಳಿದ ಫಿಲಿಪ್ಸರು ತಮ್ಮ ವರದಿಯನ್ನು ರೂಸ್‌ವೆಲ್ಟರಿಗೊಪ್ಪಿಸಿದರು. ಅವರು ಅಮೆರಿಕ ಬ್ರಿಟನ್ ಶಿಷ್ಟಮಂಡಳವನ್ನು ಸಂದರ್ಶಿಸಿ ಭಾರತದ ಪರಿಸ್ಥಿತಿ ವಿಷಯ ತಮ್ಮ ಅಭಿಪ್ರಾಯ ತಿಳಿಸುವರು. ಕೆಲವು ವರ್ಜಸ್ಸೀ ಅಮೆರಿಕನರು ಭಾರತೀಯರು ಪರ್ಲ್‌ಬಕ್ಕರ ಮುಂದಾಳುತನದಲ್ಲಿ ಚರ್ಚಿಲರನ್ನು ಭೇಟಿಯಾಗಿ ಗಾಂಧೀಜಿಯವರ ಬಿಡುಗಡೆಗಾಗಿ ಒತ್ತಾಯಮಾಡುತ್ತಾರೆಂದು ವದಂತಿ. ಫಿಲಿಪ್ಸರು ಭಾರತಕ್ಕೆ ಮರಳಿ ಬರುವರಂತೆ!

ನಕ್ಷತ್ರಮಂಡಳದ ಸೃಷ್ಟಿ

೩೦—೫೦ ಲಕ್ಷ ವರ್ಷ ಹಿಂದೆ

ಎಂಬುದಾಗಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ೫ ವರ್ಷಗಳಿಂದ ಸಂಶೋಧನೆ ಮಾಡುತ್ತಿದ್ದ ೩೦ ವರ್ಷದ ತರುಣ ಭಾರತೀಯ ಡಾ| ಚಂದ್ರಶೇಖರರು ಅಭಿಪ್ರಾಯಪಡುತ್ತಾರೆ. ಈ ಭೂಮಿಯ ಸೃಷ್ಟಿಯಾಗಿ ಕಡಿಮೆಯೆಂದರೆ ೨೦ ಲಕ್ಷ ವರ್ಷವಾಗಿರಬೇಕೆಂದು ಅವರ ಗಣನೆಯಿದೆ. ಇದೇ ೫ನೇ ಏಪ್ರಿಲ್ ಇವರು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಕಿಕ್ಕಿರಿದ ವಿದ್ವಾಂಸರ ಸಭೆಯಲ್ಲಿ ಈ ಕುರಿತು ಭಾಷಣವಿತ್ತರು. 'ಪ್ಲೆಯಿಯೋಟಿಸ್' ಇವರ ಸಂಶೋಧನೆಯ ವಿಷಯ. ಐನ್‌ಸ್ಟೀನನ ಎಕ್ಸ್‌ಪಾಂಡಿಂಗ್ ಥಿಯರಿಗೂ ಇವರ ನಿರ್ಣಯವು ಸರಿ ಹೋಗುತ್ತದೆ.

ಗಡಿನಾಡಿನಲ್ಲಿಯೂ ಲೀಗ್ ಮಂತ್ರಿಮಂಡಳ

ವೊಂದನ್ನು ಸ್ಥಾಪಿಸಬೇಕೆಂದು, ಅಲ್ಲಿನ ಗವರ್ನರರು ಲೀಗ್ ಮುಂದಾಳು, ಸರ್ದಾರ್ ಮಹಮ್ಮದ್ ಔರಂಗಜೇಬ್ ಖಾನರ ಸಹಾಯ ಕೋರಿದ್ದಾರೆ. ಬೇಗನೇ ಈ ಮಂತ್ರಿಮಂಡಳದ ಹೆಸರು ಪ್ರಕಟವಾಗುವುದಾಗಿ ತಿಳಿಯುತ್ತದೆ.

ವಿಜಯಲಕ್ಷ್ಮಿ ಮತ್ತು ಇಂದಿರಾ

ನೆಹರು ಸೋದರಿ ವಿಜಯಲಕ್ಷ್ಮಿ ಪಂಡಿತ್, ನೆಹರು ಪುತ್ರಿ ಇಂದಿರಾ ಗಾಂಧಿ ಇವರನ್ನು ನೈನಿ ಜೈಲಿನಿಂದ ಬಿಡುಗಡೆಮಾಡಿ ಅಲಹಾಬಾದು ಖಾಲೀ ಆಸ್ತಿಯ 'ಋತುಸಂಹಾರ' ಮಂದಿರದಲ್ಲಿ ವಾಸಿಸುವಂತೆ ಸರಕಾರ ಆಜ್ಞಾಪಿಸಿದೆ. ಅಲ್ಲಿ ಯಾರಿಗೂ ಭೇಟಿ ಸಿಗಲಾರದು. ಖಾಲೀ ಆಸ್ತಿಯಲ್ಲಿ ಶ್ರೀಮತಿ ಪಂಡಿತರಿಗೆ ಆಸ್ತಿಯಿದೆ.

ಮದ್ರಾಸಿಗೆ ಅಗ್ಗ ದರದ ಬಟ್ಟೆ

ಜೂನ್ ಆರಂಭಕ್ಕೆ ೧೯೪ ಲಕ್ಷ ಗಜ ಬರುವುದಾಗಿ ಸರಕಾರ ತಿಳಿಸುತ್ತದೆ. ಇಷ್ಟು ಮಾತ್ರವಲ್ಲದೆ ಬೇರೆ ಬೇರೆ ಜಿಲ್ಲೆಗಳ ನೇಕಾರ ಸಂಘಗಳೂ ಅಗ್ಗ ತರದ ಬಟ್ಟೆ ತಯಾರು ಮಾಡಿ ಒದಗಿಸುವವೆಂದೂ ತಿಳಿಯುತ್ತದೆ.

ಅ. ಭಾ. ಕಮ್ಯುನಿಸ್ಟ್ ಪಕ್ಷ ಸಮ್ಮೇಳನ

ವು ಬೊಂಬಯಿಯಲ್ಲಿ ತಾ. ೨೩ರಿಂದ ತೊಡಗಿ ಬಂಧು ವಾರ ಜರಗಲಿದೆ. ಈ ಸಮ್ಮೇಳನ ಸೇರದೆ ಎಂಟು ವರ್ಷಗಳಾದುವು. ಪರೇಲಿನಲ್ಲಿ ಈ ಸಮ್ಮೇಳನ ಸೇರುವುದು. ಗಿರಣಿ ಕೂಲಿಗಾರರು ಈ ಭಾಗದಲ್ಲಿ ಅಧಿಕ ಇದ್ದಾರೆ. ಭಾರತದಲ್ಲಿ ಈಗ ೧೫ ಸಾವಿರ ಕಮ್ಯುನಿಸ್ಟ್ ಸದಸ್ಯರಿದ್ದಾರೆ. ೨೫೦ ಟ್ರೇಡ್ ಯೂನಿಯನ್‌ಗಳ ಬೆಂಬಲ ಕಮ್ಯುನಿಸ್ಟ್ ಪಾರ್ಟಿಗಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರು ಮುನ್ಸಿಪಲ್ ಸಭೆ

ತಾ. ೧೭ರಂದು ಸಂಜೆ ಅದರ ಆಫೀಸಿನಲ್ಲಿ ಚೇರ್‌ಮನ್ ಪುತ್ತೂರು ಹುಸೇನ್ ಸಾಹೇಬರ ಅಧ್ಯಕ್ಷತೆಯಿಂದ ನೆರವೇರಿತು. ಕೂಳೂರು ಮಾರ್ಗ ದುರಸ್ತಿಗೆ ೧೫೧೭ ರೂ. ಸೆಂಕ್ಷನ್ ಆಯಿತು. ಹಂಪನ್‌ಕಟ್ಟೆಯಲ್ಲಿರುವ ವಿಠಲ್ ಶಾಂತಾರಾಮ ಸ್ಮಾರಕ ದೀಪಸ್ತಂಭವನ್ನು ಕೊರೊನೇಶನ್ ಗಾರ್ಡನಿನ ಬಳಿ ತರಲು ಕೌನ್ಸಿಲು ಸಮ್ಮತಿಸಲಿಲ್ಲ. ನಗರದ ಗಡಿಯ ಕದ್ರಿ ಮಾರ್ಗವನ್ನು ಅಗಲಗೊಳಿಸಲು ೧೮೦೦ ರೂ. ಯನ್ನು ಕೌನ್ಸಿಲು ತೆರಬೇಕೆಂದು ಸೂಚಿಸಿದ ಸರಕಾರದ ಅಜ್ಞೆಗೆ ಕೌನ್ಸಿಲು ಒಪ್ಪಿತು. ವಿದ್ಯುದ್ದೀಪಗಳ ಸಂಖ್ಯೆ ಕಮ್ಮಿ ಮಾಡುವ ಸೂಚನೆಗೆ ಕೌನ್ಸಿಲು ಒಪ್ಪಿತು. ಮಳೆಗಾಲದಲ್ಲಿ ಬೆಳದಿಂಗಳುಂಟೆಂದು ಬೀಗನೇ ದೀಪ ಆರಿಸಬಾರದೆಂದು ಕೌನ್ಸಿಲರೊಬ್ಬರೂ ಸೂಚಿಸಿದ್ದಕ್ಕೆ ಸಮ್ಮತಿ ಸಿಕ್ಕಿತು.

ಡಾ॥ ವಿಠಲ ಶೆಟ್ರು ದಿವಂಗತರಾದರು

ದ. ಕ. ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರೂ ಹಿಂದಿನ ಮಂಗಳೂರು ಮುನ್ಸಿಪಲ್ ಚೇರ್ಮನ್ನರೂ ಆದ ಡಾ॥ ಕೆ. ವಿಠಲ ಶೆಟ್ರು ತಾ. ೧೪ರಂದು ಪ್ರಾತಃಕಾಲ ೩ ಗಂಟೆಗೆ ಮಂಗಳೂರಿನ ತಮ್ಮ ಮನೆಯಲ್ಲಿ ದಿವಂಗತರಾದರೆಂದು ತಿಳಿಸಲು ನಾವು ತುಂಬಾ ವಿಷಾದಿಸುತ್ತೇವೆ. ಡಾ॥ ಶೆಟ್ರಿಗೆ ಕೇವಲ ೫೪ ವರ್ಷ ಪ್ರಾಯ. ನಮ್ಮ ಪ್ರಾಂತದ ಜಿಲ್ಲಾ ಬೋರ್ಡು ಪ್ರೆಸಿಡೆಂಟರಲ್ಲಿ ಇವರು ಹಿರಿಯರು. ಶ್ರೀಯುತರು ಕೆಲ ಸಮಯದಿಂದ ಅನಾರೋಗ್ಯದಿಂದಿದ್ದರೂ, ಸಾರ್ವಜನಿಕ ಸೇವೆಯನ್ನು ಬಿಡದೆ ಮಾಡುತ್ತಲೇ ಇದ್ದರು. ದಕ್ಷಿಣಕನ್ನಡ ಜಿಲ್ಲೆಯವರು ಡಾ॥ ಶೆಟ್ಟರ ಅಪಾರ ಸಾರ್ವಜನಿಕ ಸೇವೆಗಳನ್ನು ಎಂದೆಂದೂ ಮರೆಯುವಂತಿಲ್ಲ. ಅಕಾಲದಲ್ಲಿ ಡಾ॥ ಶೆಟ್ರು ಹೀಗೆ ನಿಧನ ಹೊಂದಿದ್ದು ನಮ್ಮ ಜಿಲ್ಲೆಗೆ ತುಂಬಲಾರದ ಮಹಾ ನಷ್ಟ. ಮೃತರ ಪತ್ನೀ ಪುತ್ರರ ಹಾಗೂ ಬಂಧು ಬಳಗದವರ ಈ ಅಪಾರ ದುಃಖದಲ್ಲಿ ನಾವೂ ನಮ್ಮ ಸಹಸಂತಾಪವನ್ನು ಸೂಚಿಸುತ್ತೇವೆ. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ!

ನೇಕಾರರ ಮುಷ್ಕರ

ಮಂಗಳೂರಿನ ಮಿ॥ ಜೆ. ಪಿ. ಸಿಕ್ವೇರರ ನೇಯಿಗೆ ಮತ್ತು ಬಣ್ಣಗಾರಿಕೆಯ ಕಾರ್ಖಾನೆಯ ಕೆಲಸಗಾರರು ತಾ. ೧೭ರಿಂದ ಮುಷ್ಕರ ಹೂಡಿರುವರು. ಈ ಕಾರ್ಖಾನೆಯವರು ಯುದ್ಧ ಸುರುವಾದಂದಿನಿಂದ, ಇದುವರೆಗೆ ತುಟ್ಟಿಭತ್ತೆ ಕೊಡದಿರುವ ನಿಮಿತ್ತ, ತಮಗೆ ತುಟ್ಟಿಭತ್ತೆ ಕೊಡಬೇಕೆಂಬುದಾಗಿ ಕೆಲಸಗಾರರ ಕೇಳಿಕೆಯೆಂದೂ, ಮಜೂರರು ಹೀಗೆ ಸಂಘಟಿತರಾಗುತ್ತಿರುವಾಗ, ಅವರ ಸಂಘಟನೆ ಮುರಿಯಲು, ಕಾರ್ಖಾನೆ ಮಾಲಕರು ಕೆಲವರನ್ನು ಕೆಲಸದಿಂದ ತೆಗೆದುಹಾಕಿದರೆಂದೂ, ಹಾಗಾಗಿ ಮುಷ್ಕರ ತೊಡಗಿದೆಯೆಂದೂ ಕೂಲಿಗಾರರ ಪ್ರಕಟಣೆಯಿದೆ. ನೇಕಾರರ ಮುಷ್ಕರದಲ್ಲಿ ಸಹಾನುಭೂತಿ ತೋರಿಸುವಂತೆ ಮಂಗಳೂರಿನ ಬೇರೆ ಬೇರೆ ಕೆಲಸಗಾರರ ಸಂಘಗಳೂ ನಿರ್ಧರಿಸಿವೆ.

ಗವರ್ನಮೆಂಟ್ ಟ್ರೇಡ್ ಸ್ಕೂಲ್

ಹಾಸ್ಟೆಲ್ ದಿನಾಚರಣೆ ತಾ. ೧೦ರಲ್ಲಿ ನಡೆಯಿತು. ಆ ದಿನ ನಡೆದ ಫುಟ್‌ಬಾಲ್ ಮತ್ತು ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಸಿ. ಪಿ. ಸಿ. ಯ ವಾರ್ ಟ್ರೋಫಿಯನ್ನು ಪಡೆದಿರುವರು.

ನಿರ್ಬಂಧಕಾಜ್ಞೆ

ಮೇ 18, 1943ರಿಂದ ಪುನಃ ಎರಡು ತಿಂಗಳ ವರೆಗೆ ಜಿಲ್ಲೆಯಲ್ಲಿ ಸಭೆ ಸೇರಿಸುವರೆ, ಮೆರವಣಿಗೆ ತೆಗೆಯುವರೆ, ಹಾಗೂ ಸಭೆ ಮೆರವಣಿಗೆಗಳಲ್ಲಿ ಭಾಗವಹಿಸುವರೆ ಕೂಡದೆಂದು ಡಿಫೆನ್ಸ್ ಕಾನೂನಿನಂತೆ, ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರು ನಿರ್ಬಂಧಕಾಜ್ಞೆ ವಿಧಿಸಿರುವರು. ಶುದ್ಧ ಧಾರ್ಮಿಕ ಮತ್ತು ಇತರ ಸಾಮಾಜಿಕ ಕೂಟ ಮೆರವಣಿಗೆಗಳಿಗೆ ಈ ನಿರ್ಬಂಧಕಾಜ್ಞೆ ಅನ್ವಯಿಸುವುದಿಲ್ಲವೆಂದೂ ತಿಳಿಸಲಾಗಿದೆ.

ವೀರ ಸಾವರ್ಕರರು ಮಂಗಳೂರಿಗೆ?

ಬರುವ ಅಕ್ಟೋಬರ ತಿಂಗಳಲ್ಲಿ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿರುವ ವೀರ ಸಾವರ್ಕರರು ಶಿವಮೊಗ್ಗೆಯಲ್ಲಿ ಜರಗಲಿರುವ ಅಖಿಲ ಭಾರತೀಯ ಸಂಸ್ಥಾನಗಳ ಹಿಂದೂ ಮಹಾಸಭೆಯ ಪ್ರಥಮ ಪರಿಷತ್ತಿನಲ್ಲಿ ಭಾಗವಹಿಸಲು ಬರಲಿರುವರೆಂದೂ ಈ ಸಂದರ್ಭದಲ್ಲಿ ಅವರನ್ನು ನಮ್ಮ ಜಿಲ್ಲೆಗೆ ಆಹ್ವಾನಿಸುವ ಬಗ್ಗೆ ನಮ್ಮ ಜಿಲ್ಲೆಯ ಹಿಂದೂ ಮಹಾಸಭಾ ಕಾರ್ಯಾಧಿಕಾರಿಗಳು ಪರ್ಯಾಲೋಚಿಸುತ್ತಿರುವರೆಂದೂ ಸುದ್ದಿ.

ಸಿಡಿಲಿನಿಂದ ಮರಣ!

ಇದೇ ತಾ. ೧೩ನೇ ಗುರುವಾರ ರಾತ್ರಿ, ವೇಣೂರಿನಲ್ಲಿ ಸಿಡಿಲು ಬಡಿದು ಒಬ್ಬನು ಮೃತಪಟ್ಟಿರುವನು; ಇಬ್ಬರಿಗೆ ಜಖಂ ಆಗಿದೆ. ಒಂದೆರಡು ಕಡೆಗಳಲ್ಲಿ ಕಚ್ಚಾ ಮನೆಗಳು ಕುಸಿದು ಬಿದ್ದಿವೆ. ಮರಗಳನೇಕ ಮುರಿದು ಬಿದ್ದಿವೆ.

ಹೊಸ ಸಂಸ್ಥೆಗಳು

ಶ್ರೀ. ಬಿ. ಆರ್. ಕರ್ಕೇರ ಇವರು ಸದ್ಯದಲ್ಲಿ ಒಂದು ಬ್ಯಾಂಕನ್ನು ರಿಜಿಸ್ಟರ್ ಮಾಡಲಿರುವರೆಂದು ತಿಳಿದುಬರುತ್ತದೆ.

ಮಂಗಳೂರಲ್ಲಿ 'ಕೆನರಾ ಕಮರ್ಶಿಯಲ್ ಕಾರ್ಪೊರೇಶನ್' ಎಂಬ ಹೊಸ ಸಂಸ್ಥೆ ಸ್ಥಾಪನೆಯಾಗಿದ್ದು ಅದರ ಕಾರ್ಯಾಲಯವು, ಕಲ್ಲಕೋಟೆಯಲ್ಲಿ ತೆರೆಯಲಾಗಿದೆ.

ಹನುಮಾನ್ ಹೈಕಿಂಗ್ ಪಾರ್ಟಿ

ಇವರು ತಮ್ಮ ಒಂದು ತಿಂಗಳ ಕಾಲ್ನಡಿಗೆ ಪ್ರವಾಸವನ್ನು ಮುಗಿಸಿ ತಾ. ೧೭ಕ್ಕೆ ಮಂಗಳೂರಿಗೆ ಮರಳಿ ಬಂದಿದ್ದಾರೆ. ಸಾಧಾರಣ ೩೦೦ ಮೈಲು ಜಿಲ್ಲೆಯ ಒಳಗೆ ಸಂಚಾರ ಮಾಡಿ ಸುಖವಾಗಿ ಹಿಂದಿರುಗಿದ್ದಾರೆ.

ಸಂತಾಪ ಸೂಚನೆ

ಶ್ರೀ. ಪಿ. ರಾಮರಾಯರು ಮಲ್ಯರಿಗೆ ತಾ. ೧೨ರಂದು ಪತ್ನಿವಿಯೋಗವಾಯಿತೆಂದು ತಿಳಿಸಲು ವಿಷಾದಿಸುತ್ತೇವೆ.

ಐ. ಸಿ. ಎಸ್.

ಪರೀಕ್ಷೆಗೆ ಕುಳಿತಿದ್ದ ನಮ್ಮ ಜಿಲ್ಲೆಯ ಶ್ರೀ. ಎಂ. ಕೆ. ಶಂಭುಭಟ್ಟರು ಉತ್ತೀರ್ಣರಾಗಿರುವರು.

ಉಡುಪಿ

ಮಣಿಪುರ

ಬಿಲ್ಲವ ಯೂನಿಯನ್ನಿನ ಗುರುನಾರಾಯಣ ಮಂದಿರದ ಶಂಕು ಸ್ಥಾಪನೆಯನ್ನು ಶ್ರೀ. ಎಸ್. ಎನ್. ಸುವರ್ಣರು ನೆರವೇರಿಸಿದರು.

ಹೊಸ ಹೈಸ್ಕೂಲ್‌ಗಳು

ಉಡುಪಿ ತಾಲೂಕು ಇನ್ನಂಜೆಯಲ್ಲಿ ಹೈಸ್ಕೂಲಿಗೆ ಇತ್ತೀಚೆಗೆ ಸರಕಾರದ ಮಂಜೂರಾತಿ ದೊರಕಿದೆಯೆಂದೂ ಅದಕ್ಕೆ ಸಂಬಂಧಪಟ್ಟ ಹೊಸ ವರ್ಗಗಳನ್ನು ಇದೇ ಬರುವ ಜೂನ್ ತಿಂಗಳಲ್ಲಿ ತೆರೆಯಲಾಗುವುದೆಂದೂ ತಿಳಿದುಬರುತ್ತದೆ. ಇದೇ ರೀತಿ ಕಾಸರಗೋಡಲ್ಲಿ ಮುಸ್ಲಿಂ ಮಹಿಳಾ ಹೈಸ್ಕೂಲೊಂದು, ಮಿಶನ್ ಬಾಲಿಕಾ ಹೈಸ್ಕೂಲೊಂದೂ ಬರುವ ಜೂನಿನಿಂದ ತೆರೆಯಲಾಗುವುದೆಂದು ಸುದ್ದಿಯಿದೆ.

ಕಾರ್ಕಳ

ಪುರಸ್ಕೃತರು

ಕಾರ್ಕಳ ಕೇಂದ್ರದಿಂದ ಫೆಬ್ರವರಿಯಲ್ಲಿ ಹಿಂದೀ ಪರೀಕ್ಷೆಗಳಲ್ಲಿ ಶ್ರೀ. ಕೆ. ಮಾಧವ ಜೋಯಿಸರು ದಕ್ಷಿಣ ಭಾರತದಲ್ಲಿ ಮತ್ತು ರಾಷ್ಟ್ರಭಾಷೆಯ ಶ್ರೀ. ಕೆ. ವೇಲಾಯುಧನರವರು ಕರ್ನಾಟಕದಲ್ಲಿ ಸರ್ವದ್ವಿತೀಯರಾಗಿ ತೇರ್ಗಡೆ ಹೊಂದಿ ಇಬ್ಬರೂ ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆಂದೂ, ವೇಲಾಯುಧನರು ದಿವಂಗತ ಶ್ರೀ. ಕೆ. ರಾಘವಾಚಾರ್ ಸ್ಮಾರಕ ಪುರಸ್ಕಾರವನ್ನು ಪಡೆಯುವರೆಂದೂ ಗೊತ್ತಾಗಿದೆ.

ಇಲ್ಲಿ ತಹಶೀಲ್ದಾರ್ ಶ್ರೀ. ಸೋಲೋಮನ್ ಜೋಶ್ವರು ಜಿಲ್ಲಾ ಸ್ಪೆಶ್ಯಲ್ ಆಫೀಸರರಾಗಿ ವರ್ಗ ಹೊಂದಿ, ಇವರ ಸ್ಥಾನದಲ್ಲಿ ಇಲ್ಲಿ ಸ್ಪೇಶಲ್ ಸಬ್ ಮೆಜಿಸ್ಟ್ರೇಟರಾಗಿರುವ ಶ್ರೀ. ಎಚ್. ಸುಂದರರಾಯರು ತಹಶೀಲ್ದಾರರಾಗಿ ನೇಮಕವಾಗಿದ್ದಾರೆ.

ಕಾಸರಗೋಡು

ದ. ಕ. ಜಿಲ್ಲಾ ರಾಮರಾಜ ಕ್ಷತ್ರಿಯರ ೬ನೇ ಪರಿಷತ್ತು ಅತ್ತಾವರ ಪೈಲು ಪೋ. ಎ. ಶಾಲೆಯಲ್ಲಿ ಸರಸ್ವತಿ ಸಂಘದ ಶ್ರೀ. ಲಕ್ಷ್ಮಣಾನಂದ ಸ್ವಾಮಿಜಿಯವರ ಅಧ್ಯಕ್ಷತೆಯಿಂದ ನೆರವೇರಿತು.

ಪುತ್ತೂರು

ವರ್ಗ

ಇಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ. ಅಚ್ಯುತಯ್ಯನವರಿಗೆ ವರ್ಗವಾಗಿದ್ದು ಸಬ್ ಇನ್ಸ್‌ಪೆಕ್ಟರ್ ಶ್ರೀ. ರಾಜೀವ ಇವರು ಇಲ್ಲಿಗೆ ಬಂದಿರುತ್ತಾರೆ.

ಕೊಲೆ

ವಿಟ್ಲ ಕಡ್ಲೂರು ಗ್ರಾಮದಲ್ಲಿ ತಾ. ೯ರಂದು ಶ್ರೀ. ದಿವಾಣ ಸುಬ್ರಾಯ ಭಟ್ಟರೆಂಬವರನ್ನು ಅಕ್ಕ ಲಿಂಗನೊಬ್ಬನು ಚೂರಿ ಹಾಕಿ ಕೊಂದಿರುವನೆಂದು ವಾರ್ತೆ.

ಕರ್ನಾಟಕ

ಬೆಳಗಾವಿ

ಸಿಂಗ್ಯಾನ ಪಟ್ಟಣ ೬—೭ ನೂರು ಮಿಲಿಟರಿ ಪೋಲೀಸರು ಮುತ್ತಿಗೆ ಹಾಕಿ ಊರಲ್ಲಿದ್ದ ಎಲ್ಲ ಮನೆಗಳನ್ನೂ ಗುತ್ತಲಿನ ಗುಡ್ಡಗಳನ್ನೂ ಹುಡುಕಿದರು. ಫರಾರಿಯಾದವರು ಯಾರೂ ಸಿಗಲಿಲ್ಲ. ಇಲ್ಲಿನ ಪೋಲೀಸ್ ಪಾಟೀಲರಾದ ಮುದಿಯಪ್ಪ ಈರಪ್ಪಾ ಬೆಲ್ಲದ ಇವರ ಮನೆಯನ್ನೂ ಈ ಸಂಬಂಧ ಹುಡುಕಿದರು. ನಾಗ್ವಾಡಪುರದಲ್ಲಿ ನಾಲ್ವರು ಜನರನ್ನು ಕೈದುಮಾಡಿದ್ದಾರೆ. ಇಲ್ಲಿನ ಭರಮಪ್ಪ ಹೀರೇಮಠರಿಗೆ ಅಡಿಗೆ ಮಾಡಿ ಕಳುಹಿಸುತ್ತಿದ್ದಾರೆಂದು ಅವರ ತಾಯಿ ಮತ್ತು ದಂಪತಿ ಇಬ್ಬರನ್ನೂ ಬಂಧಿಸಿರುವರು. ಈ ಮೊದಲು ಇಲ್ಲಿ ಬಂಧಿತರಾದ ಬಸವಣಿ ಹೊಳೆಯಾಚೆ ಮತ್ತು ಬಾಳಪ್ಪ ದ್ಯಾಗಿನಕಟ್ಟಿ ಇವರನ್ನು 'ಡಿಟೆನ್ಯೂ' ಮಾಡಲಾಗಿದೆ. ಯೋಸ್ಯಾಪುರಕ್ಕೆ ಪೋಲೀಸ್ ಅಧಿಕಾರಿಗಳು ಮುತ್ತಿಗೆ ಹಾಕಿ ಕೆಲವು ಮನೆಗಳನ್ನು ಜಪ್ತಿಮಾಡಿದರು. ಬೇನಾಡಿಯಲ್ಲಿ ಕಳೆದ ವಾರ ಗಣಪತಿ ಬ್ಯಾಳ್ಕರ ಮೊದಲಾದ ಹಲವರನ್ನು ಬಂಧಿಸಿರುವರು. ಸವದತ್ತಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ, ಕೆಲ ರಾಜಕೀಯ ಕೈದಿಗಳನ್ನು ಬಿಡಿಸಿಕೊಂಡು ಹೋದ ಆರೋಪದಲ್ಲಿ ೩೪ ಜನರ ಮೇಲೆ ಖಟ್ಲೆಯಾಗಿದ್ದು ೩೦ ಜನರಿಗೆ ಶಿಕ್ಷೆಯಾಗಿದ ಉಳಿದವರ ಬಿಡುಗಡೆಯಾಗಿದೆ. ಅಕ್ಕತಂಗೀರ ಹಾಳದ ಮೋಟಿಕ ಶಾನಿಗ ರೂಪಾಯಿ ದಂಡ ಗಂಡಾಯ ಹಾಕಲಾಗಿದೆ. ನಿಪ್ಪಾಣಿಯಲ್ಲಿ ಭಿಕುಲಾಲ ರಾಮಚಂದ್ರ ಕಾಂತಮಾಳ್ಕೆ, ಆತ್ಮಾರಾಮ ಸಿಂಪಿ ಸೋನಾರ ಮತ್ತು ವಿನಾಯಕರಾವ್ ಪಾಟಣಕರ ಇವರನ್ನು ಬಂಧಿಸಿರುವರು. ಯಾದವಾಡದ ಗೋಪಾಳರಾವ ಪಡವಿಯವರನ್ನು ಬಂಧಿಸಲಾಗಿದೆ. ಹುದಲಿಯಲ್ಲಿ ೪೦, ೫೦ ಪೋಲೀಸರು ಬ್ರಾಹ್ಮಣರ ಓಣಿಗೆ ಮುತ್ತಿಗೆ ಹಾಕಿ ಹುಡುಕಾಡಿದರು. ಶ್ರೀ. ವಡವಿಯವರು ಸಿಗಲಿಲ್ಲ. ಇಲ್ಲಿನ ಬಸಪ್ಪ ಬಾಳಪ್ಪ ಇವರ ಬಂಧನವಾಗಿದೆ. ಕಿತ್ತೂರಲ್ಲಿ ಸೋಮವಾರ ಮತ್ತು ಗುರುವಾರ ಎರಡೂ ಪೇಟೆಗಳಲ್ಲಿ ರಾತ್ರಿ ೧೦ ಗಂಟೆಯಿಂದ ಬೆಳಗ್ಗೆ ೬ ಗಂಟೆ ವರೆಗೆ ಯಾರೂ ಅಡ್ಡಾಡಕೂಡದು. ಇಲ್ಲಿನ ಗುರುನಾಥ ಜೋಶಿಯವರನ್ನು ಡಿಟೆನ್ಯೂ ಮಾಡಲಾಗಿದೆ.

ಧಾರವಾಡ

ಶ್ರೀ. ನಲವಡಿಯವರು ಜಿಲ್ಲಾ ಬೋರ್ಡಿನ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಿರುವರು. ಬೆಳವಣಿಕೆ ಹನುಮಂತರಾವ್ ಮುಜುಮದಾರರು ಬಂಧಿತರಾಗಿದ್ದಾರೆ. ರಾಣೆಬೆನ್ನೂರಿನ ಶ್ರೀ. ರಾಮನಾಥ ಬೆಳವಡಿಯವರು ಫರಾರಿಯಾಗಿದ್ದು, ಅವರ ಆಸ್ತಿಯಲ್ಲಿ ೫ ತಿಂಗಳ ಹಿಂದೆ ಜಪ್ತಿಯಾಗಿದೆ; ಈಗ ಆತನು ಸಿಗದಕ್ಕಾಗಿ ೬೦ ವರ್ಷದ ಆತನ ತಂದೆಯನ್ನು ಬಂಧಿಸಿರುವರು. ಗಜೇಂದ್ರಗಡದಲ್ಲಿ ನಾಲ್ವರ ನೆರೆಹಿಡಿದಿರುವರು. ಕೆಲ ಘಟಗಿ ತಾಲೂಕಿನ ಗಳಗಿ ಮತ್ತು ಮುಲಕೊಪ್ಪ ಹಳ್ಳಿಗಳ ಮೇಲೆ ೧ ಸಾವಿರ ಮತ್ತು ೬ ನೂರು ಸಾಮೂಹಿಕ ದಂಡ ಗಂಡಾಯ ಹಾಕಲಾಗಿದೆ. ನವಲಗುಂದ ಲಿಂಗೋ ಕಾಮನಹಳ್ಳಿ, ಮತ್ತು ಶಿಪ್ಪಾಜಿ ನೋಟ್ ಸಜ್ಜನರನ್ನು ಬಂಧಿಸಿರುವರು. ಬೊಮ್ಮನಹಳ್ಳಿಯಲ್ಲಿ ನಾರಾಯಣ ಕಂದಗಲ್ ಗಿ ಬೊಜಲಾದ ಸಿಲ ಜನರ ಬಂಧನವಾಗಿದೆ. ಬಂಕದ ಕಟ್ಟಿಯ ಬೂದಪ್ಪ ಮತ್ತು ದೇವರೆಡ್ಡಿ ಇವರನ್ನು ಬಂಧಿಸಿದ್ದು ಬೂದಪ್ಪರನ್ನು ಆ ಮೇಲೆ ಬಿಟ್ಟುಬಿಟ್ಟಿರು.

ಅಜ್ಞಾತವಾಸದಲ್ಲಿರುವ ಕರ್ನಾಟಕ ಧುರೀಣ ಶ್ರೀ. ಶಿವರುದ್ರಪ್ಪ ನೇಸ್ರಿ ಇವರ ತಾಯಿಯವರನ್ನೂ (೭೦ ವರ್ಷ ಪ್ರಾಯದವರು) ಇವರ ಅಣ್ಣಂದಿರಾದ ಶ್ರೀ. ಬಿ. ಆರ್. ನೇಸ್ರಿ (ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿ) ಮತ್ತು ಇವರ ಮಗನನ್ನೂ ಬಂಧಿಸಲಾಗಿದೆ. ಫರಾರಿಯಾಗಿದ್ದ ಸುತ್ತೋಡಿಯ ಶಿವನಗೌಡರ ಮನೆಯನ್ನೂ ಜಪ್ತಿ ಮಾಡಿ ಅಲ್ಲಿಂದ ೬ ಜನರನ್ನೂ (ಹೆಂಗುಸರೂ ಇದ್ದಾರೆ) ಬಂಧಿಸಲಾಗಿದೆ.

ವಿಜಾಪುರ

ತೇರದಾಳ ಮುಟ್ಟಿಯಲ್ಲಿ ಹಲವು ದಿನಗಳಿಂದ ನಿಂತು ಹೋಗಿದ್ದ ರಾಟಿನ ಕೇಂದ್ರ ತರುಗ ಪತ್ತಿದ್ದು ಅ. ಭಾ. ಚರಕಾ ಸಂಘದ ಪರವಾಗಿ ಉತ್ಪಾದನ ಕೆಲಸ ಆಗುತ್ತಿದೆ. ಜಮಖಂಡಿ ರೈಲ್ವೆ ಸ್ಟೇಶನ್ ಸುಟ್ಟ ಆರೋಪದಲ್ಲಿ ಖಟ್ಲೆಗೆ ಗುರಿಯಾದ ಬೇವನೂರ ಮೊದಲಾದ ೮ ಮಂದಿ ಆರೋಪಿಗಳು ನಿರ್ದೋಷಿಗಳಾದರು.

ಉತ್ತರ ಕನ್ನಡ

ಸಿದ್ದಾಪುರದಲ್ಲಿ ತಂತಿ ಕಡಿದ ಆರೋಪಕ್ಕೆ ಗುರಿಯಾಗಿ ೫, ೬ ವರ್ಷ ಶಿಕ್ಷೆಗೆ ಗುರಿಯಾದ ವರದಾ ಯಾನೆ ದೇವಯಾನಿ ಬಾಯಿ ವೆಂಕಟೇಶ ಶಾರದಾಬಾಯಿ ಗಂಗಾಧರ ಶ್ಯಾನಭಾಗ, ನಂದಕುಮಾರ ಶರ್ಮಾ, ದಯ್ಯಾಕರ ರಾಮಚಂದ್ರ ಶೇಟ್, ಶ್ರೀನಿವಾಸ ಕೃಷ್ಣಪ್ಪ ಬೀಳಗಿ, ಕೃಷ್ಣ ರಾಮಚಂದ್ರ ಹೆಗ್ಗಡೆ, ನಾರಾಯಣ ಗಣಪಯ್ಯ ಕಾಮತ್ ಇವರು ಹೈಕೋರ್ಟಿಗೆ ಅಪೀಲು ಮಾಡಿ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಕುಮಟಾ ತಾಲೂಕಿಗೆ ಸೇರಿದ ಸಾಲೆಕಾರ ಮತ್ತು ಹೆಗಡೆ ಗ್ರಾಮಗಳ ಮೇಲೆ ಒಂದೊಂದು ಸಾವಿರ ದಂಡ ಗಂಡಾಯ ಹಾಕಲಾಗಿದೆ. ಅಂಕೋಲೆಯಲ್ಲಿ ತಾ. ೩೦, ೩೧ರಲ್ಲಿ ಉತ್ತರಕನ್ನಡ ಜಿಲ್ಲೆಯ ದ್ವಿತೀಯ ಸಾಹಿತ್ಯ ಸಮ್ಮೇಳನ, ಕವಿಗೋಷ್ಠಿ, ಬಾಲಕರ ಮೇಳಗಳು ಶ್ರೀ. ರಾಜರತ್ನಂ, ಕಡಂಗೋಡ್ಲು ಕಾರಂತ ಇವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ತಿಳಿದುಬರುತ್ತದೆ.

ಪ್ರಾಂತಿಕ ವಿದ್ಯಾ ಪರಿಷತ್ತು

ಮದ್ರಾಸು ಪ್ರಾಂತದ ೩೩ನೆ ಪ್ರಾಂತಿಕ ವಿದ್ಯಾ ಪರಿಷತ್ತು ತಾ. ೧೧ರಂದು ವೆಲ್ಲೂರಿನಲ್ಲಿ ಹಿಂದೂ ಥಿಯಲಾಜಿಕಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ. ಕೆ. ರಂಗಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾಭ್ಯಾಸದಲ್ಲಿ ಸುಧಾರಣೆಯ ಕುರಿತು ಮಾತನಾಡುತ್ತಾ ಅಧ್ಯಕ್ಷರು ವರ್ಧಾ ವಿದ್ಯಾಭ್ಯಾಸ ಕ್ರಮವು ತುಂಬ ಉಪಯುಕ್ತವಾದುದೆಂದೂ ನಾಲ್ಕನೆಯ ಫಾರ್ಮಿನ ಮೊದಲ್ಗೊಂಡು ವಿದ್ಯಾಭ್ಯಾಸ ಕ್ರಮವನ್ನು ಎರಡಾಗಿ ಮಾಡುವ ಯೋಜನೆಯನ್ನು ಸ್ವದ್ಯಕ್ಷ ಸರಕಾರದವರು ಜಾರಿಗೆ ತರಬಾರದೆಂದೂ ಹೇಳಿದರು. ಅಧ್ಯಾಪಕರ ಸ್ಥಾನವು ಒಂದು ಪವಿತ್ರ ಗುರುವಿನಸ್ಥಾನವಿದ್ದಂತೆ, ಅದರ ಪಾವಿತ್ರ್ಯವನ್ನು ಕಾಪಾಡಿ ಜನರ ಮನ್ನಣೆ ಗೌರವಗಳಿಗೆ ನಾವು ಅರ್ಹರಾಗಬೇಕು, ಎಂದು ಅವರು ಸಹೋದ್ಯೋಗಿಗಳೊಡನೆ ವಿನಂತಿಮಾಡಿದರು. ಅಧ್ಯಾಪಕರು ರಾಜಕೀಯ ತಟಸ್ಥತ್ವವನ್ನು ಪ್ರತಿಪಾದಿಸಬೇಕು; ಅದರ ವಿಭಿನ್ನ ಪಕ್ಷಗಳ ತಿಕ್ಕಾಟದಲ್ಲಿ ಸಿಕ್ಕಿಕೊಳ್ಳಬಾರದೆಂದು ಅಧ್ಯಕ್ಷರು ಹೇಳಿ, ಅಧ್ಯಾಪಕವರ್ಗವು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕೈಯಿಕ್ಕಬಾರದೆಂದು ಮದ್ರಾಸ್ ಸರಕಾರವು ನಾಲ್ಕು ವರ್ಷಗಳ ಹಿಂದೆ ಹೊರಡಿಸಿದ್ದ ಆಜ್ಞೆಯನ್ನು ಟೀಕಿಸಿದರು.

ಶ್ರೀ. ಬೆನಗಲ್ ರಾಮರಾಯರು

(ಜೀವನ ಪರಿಚಯ)

ಶ್ರೀ. ಬೆನಗಲ್ ರಾಮರಾಯರು ಇದೇ ವೈಶಾಖ ಶುದ್ಧ ೪ ಶನಿವಾರ (೮ ೫ ೪೩) ರಾತ್ರಿ ಎರಡು ಗಂಟೆ ಸಮಯಕ್ಕೆ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಸ್ವಗೃಹದಲ್ಲಿ ವಿಧಿವಶರಾದರೆಂಬ ಸುದ್ದಿ ಕೇಳಿ, ಅವರ ಬಂಧುಬಳಗದವರೊಡನೆ ಅಖಿಲ ಕರ್ನಾಟಕವೇ ಅಪಾರ ಶೋಕಕ್ಕೀಡಾಗಿದೆ. ಕನ್ನಡನಾಡು, ನುಡಿಗಳ ಸಲುವಾಗಿ ಕಳೆದ ಕೆಲವು ದಶಕಗಳಿಂದ ನಿರಂತರ ದುಡಿಯುತ್ತಿದ್ದ ಪ್ರಭಾವಶಾಲೀ ಮಹನೀಯರಿವರ ನಿಧನದಿಂದ ಕನ್ನಡ ಲೋಕವು ಮಹಾ ಮುಂದಾಳುವೋರ್ವನನ್ನು ಕಳೆದುಕೊಂಡು ಕಂಗೆಟ್ಟಂತಾಗಿದೆ!

ಶ್ರೀ. ಬೆನಗಲ್ ರಾಮರಾಯರು ದಕ್ಷಿಣ ಕನ್ನಡ ಜಿಲ್ಲೆಯವರು, ಇಲ್ಲಿನ ಕುಲೀನ ಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿದವರು ಇವರ ಕುಟುಂಬದವರು ಮೊದಲಿಂದಲೇ ಸರಕಾರೀ ಹುದ್ದೆಗಳಲ್ಲಿದ್ದುದು ಮಾತ್ರವಲ್ಲದೆ, ಈಗಲೂ ಹಲವರು ಉಚ್ಚ ಅಧಿಕಾರಗಳಲ್ಲಿ ವಿರಾಜಮಾನರಾಗಿದ್ದಾರೆ. ಶ್ರೀ. ಬೆನಗಲ್ ರಾಮರಾಯರ ತಂದೆ ಶ್ರೀ ಮಂಜುನಾಥಯ್ಯರು ಸೌ। ರಮಾಬಾಯಿ ಎಂದು ಇವರ ತಾಯ ಹೆಸರು. ಶ್ರೀ ಮಂಜುನಾಥಯ್ಯರು ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಮುನ್ಸೀಫ್‌ಕೋರ್ಟಿನಲ್ಲಿ ಖಾಸಗಿ ವಕೀಲರಾಗಿದ್ದರು. ಶ್ರೀ ರಾಮ ನವಮಿಯ ದಿನ ಇವರು ಜನಿಸಿದ್ದರಿಂದ ಮಾತಾಪಿತೃಗಳು ಇವರಿಗೆ ರಾಮನೆಂದು ಹೆಸರಿಟ್ಟರು.

ಶ್ರೀ ರಾಮರಾಯರ ಬಾಲ್ಯ ವಿದ್ಯಾಭ್ಯಾಸವು ಪುತ್ತೂರಲ್ಲಿಯೇ ಆಯಿತು. ಆ ಮೇಲೆ ಮಂಗಳೂರಿನ ಗಣಪತಿ ಹೈಸ್ಕೂಲಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ತೊಡಗಿದರು ಅಲ್ಲಿ ಎಫ್. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂದಿನ ವಿದ್ಯಾಭ್ಯಾಸಕ್ಕೆ ಮದ್ರಾಸಿಗೆ ತೆರಳಿ ಅಲ್ಲಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ಮೇಲೆ ಕೆಲ ಸಮಯ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಭಾಷಾಧ್ಯಾಪಕರಾಗಿದ್ದು, ತೆಲುಗು ಭಾಷೆಯನ್ನು ಐಚ್ಛಿಕವಾಗಿ ತೆಗೆದುಕೊಂಡು ಎಂ. ಎ. ಪರೀಕ್ಷೆ ಕೊಟ್ಟು ಉತ್ತೀರ್ಣರಾದರು. ಕೆಲಕಾಲ ಅಧ್ಯಾಪಕರಾಗಿದ್ದು ಅನಂತರ ಎಲ್. ಎಲ್. ಬಿ. ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿದರು.

ಶ್ರೀ. ಬೆನಗಲ್ ರಾಮರಾಯರು ಕೆಲಕಾಲ ಮೈಸೂರು ನಾರ್ಮಲ್ ಸ್ಕೂಲಲ್ಲಿ ಅಧ್ಯಾಪಕರಾಗಿದ್ದು, ಆ ಮೇಲೆ ಬೊಂಬಯಿ ಸರಕಾರದಲ್ಲಿ ಕನ್ನಡ ಭಾಷಾ ಪರಿವರ್ತಕರಾಗಿ (Kannda Translator) ನೇಮಕ ಹೊಂದಿದರು. ಬಳಿಕ ಅಲ್ಲಿಂದ ಮದ್ರಾಸು ಸರಕಾರದ ಕನ್ನಡ ಭಾಷಾಪರಿವರ್ತಕರಿಗೆ ಸಹಾಯಕರಾಗಿ ವರ್ಗಾಯಿಸಲ್ಪಟ್ಟು, ಮುಂದೆ ಇವರೇ ಪ್ರಧಾನ ಕನ್ನಡ ಭಾಷಾಪರಿವರ್ತಕರಾಗಿ ನೇಮಿತರಾದರು. ಆಗ ಅವರಿಗೆ ೩೦೦–೫೦೦ ರೂಪಾಯಿಗಳ ವೇತನ ದೊರೆಯಿತು. ಮುಂದೆ ೧೯೩೯ರಲ್ಲಿ ಉದ್ಯೋಗ ನಿವೃತ್ತರಾಗಿ ಕೆಲವರ್ಷ ಮದ್ರಾಸಿನ ಗೌರವ ನ್ಯಾಯಾಧೀಶರಾಗಿದ್ದರು. ಈ ಸಂದರ್ಭಗಳಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದ ಪಠ್ಯ ಪುಸ್ತಕ ಸಮಿತಿಯ ಸದಸ್ಯರೂ, ಅದರ ಅಧ್ಯಕ್ಷರೂ ಪರೀಕ್ಷಕರೂ ಆಗಿ ಕೆಲಸ ಮಾಡಿರುವರು. ಮದ್ರಾಸು ವಿಶ್ವವಿದ್ಯಾಲಯದ ಎಕೆಡಮಿಕ್ ಕೌನ್ಸಿಲ್ ಮತ್ತು ಸೆನೆಟ್ಟುಗಳಲ್ಲಿಯೂ ಇವರು ಕನ್ನಡ ಭಾಷಾಪ್ರತಿನಿಧಿಯಾಗಿದ್ದರು ಈ ಮಧ್ಯೆ ಹಲವುಸಲ ಮೈಸೂರು ವಿಶ್ವವಿದ್ಯಾಲಯದಲ್ಲಿಯೂ ಪಠ್ಯ ಪುಸ್ತಕ ಸಮಿತಿ ಸದಸ್ಯರಾಗಿಯೂ ಪರೀಕ್ಷಕರಾಗಿಯೂ ಇದ್ದರು.

ಶ್ರೀ ಬೆನಗಲ್ ರಾಮರಾಯರು ಆಧುನಿಕ ಕನ್ನಡ ಸಾಹಿತ್ಯದ ನವ ನಿರ್ಮಾಣದ ಪ್ರಾರಂಭ ಕಾಲದಲ್ಲಿ ದುಡಿದ ಮಹನೀಯರಲ್ಲೊಬ್ಬರು. ಶ್ರೀ. ಪಂಜೆ ಮಂಗೇಶರಾಯರು ಮತ್ತು ಶ್ರೀ. ಉಳ್ಳಾಲ ಮಂಗೇಶರಾಯರು ಇವರ ಜಾತಿಯವರು ಹಾಗೂ ಬಾಲ್ಯಸ್ನೇಹಿತರು. ಇವರಲ್ಲಿ ಶ್ರೀ. ಪಂಜೆ ಮಂಗೇಶರಾಯರು ಇವರ ಭಾವನೈದುನರು. ದಿವಂಗತ ನಂದಳಿಕೆ ಲಕ್ಷ್ಮೀನಾರ್ಣಪ್ಪನವರೂ ಇವರ ಆಪ್ತಸ್ನೇಹಿತರು. ನಂದಳಿಕೆಯವರ ಮತ್ತು ಬೆನಗಲರ ಸ್ನೇಹಸಂಬಂಧವು ಎಷ್ಟು ಅಮೋಘವಿತ್ತೆಂಬುದು, ಶ್ರೀ. ರಾಯರು 'ಮುದ್ದಣ' ಪುಸ್ತಕದಲ್ಲಿ ಬರೆದ ಅಮೂಲ್ಯ ಲೇಖನದಿಂದ ಅಖಿಲ ಕರ್ನಾಟಕಕ್ಕೇ ಪರಿಚಯವಾಗಿದೆ. ಬೆನಗಲ್ ರಾಮರಾಯರಿಗೆ ಕನ್ನಡ, ಇಂಗ್ಲಿಷ್, ತೆಲುಗು, ಮರಾಠಿ, ಸಂಸ್ಕೃತ ಮೊದಲಾದ ಹಲವು ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯವಿತ್ತು. ಮಂಗಳೂರಲ್ಲಿ ಕನ್ನಡದ ನವನಿರ್ಮಾಣದ ಪ್ರಾರಂಭ ಕಾಲದಲ್ಲಿ ದುಡಿಯುತ್ತಿದ್ದ ಶ್ರೇಷ್ಠ ವರ್ಗದ ಸಾಹಿತ್ಯ ಪತ್ರಿಕೆ 'ಸುವಾಸಿನಿ'ಗೆ ಇವರು ಕೆಲಕಾಲ ಸಂಪಾದಕರಾಗಿದ್ದರು. ಈ ಸಂದರ್ಭದಲ್ಲಿ ಶ್ರೀಗಳಾದ ಎಚ್. ನಾರಾಯಣರಾವ್, ಪಂಜೆ ಮಂಗೇಶರಾವ್, ನಂದಳಿಕೆ ಲಕ್ಷ್ಮೀನಾರ್ಣಪ್ಪ, ಉಳ್ಳಾಲ ಮಂಗೇಶರಾವ್ ಮೊದಲಾದವರು ಇವರ ಜತೆ ಕಾರ್ಯಕರ್ತರಾಗಿ ಕನ್ನಡ ನಾಡನುಡಿಗಳ ಸೇವೆ ಮಾಡಿದವರು. ಸತ್ಯರಾಜನ ಪೂರ್ವದೇಶ ಯಾತ್ರೆ, ರಮಾಮಾಧವ, ಕೃಷ್ಣಕುಮಾರಿ, ಸುಭದ್ರಾ ವಿಜಯ, ಕುಂದಮಾಲೆ, ಘೋಷಯಾತ್ರೆ ಮೊದಲಾದ ಅನೇಕ ಗ್ರಂಥಗಳನ್ನು ಇವರು ಬರೆದಿದ್ದಾರೆ. ಕೆಳದಿ ಬಸವರಾಜ ನಿರ್ಮಿತ ಶಿವತತ್ವ ರತ್ನಾಕರವೆಂಬ ಸಂಸ್ಕೃತ ವಿಶ್ವಕೋಶವನ್ನು ದೇವನಾಗರೀ ಲಿಪಿಯಲ್ಲಿ ಸ್ವಂತ ಖರ್ಚಿನಿಂದ ಮುದ್ರಿಸಿ ಪ್ರಕಟಿಸಿದ್ದಾರೆ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾಲಯದ ಸಲುವಾಗಿ 'ಪುರಾಣನಾಮ ಚೂಡಾಮಣಿ' ಎಂಬ ಪೌರಾಣಿಕ ಕೋಶವನ್ನು ಸಂಗ್ರಹಿಸಿದ್ದಾರೆ ಇದು ಮಾತ್ರವಲ್ಲದೆ ಆಗಾಗ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ವಾಗ್ಭೂಷಣ ಮೊದಲಾದ ಪತ್ರಿಕೆಗಳಲ್ಲಿ ಲೇಖನ, ಪ್ರಬಂಧ, ಕವಿತೆಗಳನ್ನೂ ಬರೆದು ಪ್ರಕಟಿಸಿರುವರು. ಸಂಗೀತ, ಸಾಹಿತ್ಯ, ನಾಟ್ಯಶಾಸ್ತ್ರಗಳಲ್ಲಿ ಇವರಿಗೆ ಬಹಳವಾದ ಆಸಕ್ತಿಯಿತ್ತು. ಸ್ವತಃ ನಾಟಕರರಿದ್ದಂತೆ ನಟರೂ ಆಗಿದ್ದರು; ಸ್ವತಃ ಕವಿಗಳಾಗಿದ್ದು ಗಮಕಿಗಳೂ ಆಗಿದ್ದರು. ಜ್ಯೋತಿಶ್ಶಾಸ್ತ್ರದಲ್ಲಿಯೂ ಇವರಿಗೆ ಅನುಭವವಿತ್ತು. ಮದ್ರಾಸಿನ ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿಯ ಕನ್ನಡ ಪ್ರತಿನಿಧಿ ಮುಖಂಡರಾಗಿ ಅನೇಕ ಗ್ರಂಥಕರ್ತರಿಗೆ ಪ್ರೋತ್ಸಾಹವಿತ್ತಿದ್ದಾರೆ. ಕನ್ನಡ ಏಕೀಕರಣದ ಸಲುವಾಗಿ ಬಹಳ ದುಡಿದಿದ್ದಾರೆ. ಇವರ ಪ್ರಯತ್ನದ ಫಲವಾಗಿಯೇ ಕನ್ನಡನಾಡಿನ ನಕ್ಷೆಯೊಂದು ನಿರ್ಮಿತವಾಯಿತು.

ಶ್ರೀ ಬೆನಗಲ್ ರಾಮರಾಯರ ಈ ತೆರದ ಬಹುಮುಖವಾದ ನಾಡ ನುಡಿಗಳ ಸೇವೆಯ ಗೌರವವಾಗಿ ೧೯೩೫ನೇ ಇಸವಿಯಲ್ಲಿ ಬೆಳಗಾವಿಯಲ್ಲಿ ಸೇರಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನವು ಇವರಿಗೆ ಒಪ್ಪಿಸಲಾಯಿತು ಪರಿಷತ್ತಿನ ಮೈಸೂರು ಪ್ರಾಂತ ಸಮಿತಿಯ ಅಧ್ಯಕ್ಷರಾಗಿ ಕೆಲ ಸಮಯ ಸೇವೆಮಾಡಿದ್ದಾರೆ. ಆಮೇಲೆ ಮಲ್ಲೇಶ್ವರ ಕರ್ಣಾಟಕ ಸಂಘದ ಅಧ್ಯಕ್ಷರಾಗಿ ದುಡಿದಿದ್ದಾರೆ. ಕನ್ನಡನಾಡು ಒಂದಾಗಬೇಕು, ಕನ್ನಡ ನುಡಿ ಬೆಳಗಬೇಕು, ಕನ್ನಡಿಗರು ಬಾಳಬೇಕು ಎಂದು ಶ್ರೀ ರಾಯರು ಅನಶ್ಯಾಗಿ ಅಹರ್ನಿಶಿ ಕೆಲಸ ಮಾಡಿದ್ದಾರೆ ಇಂಥಾ ಕನ್ನಡದ ಹಿರಿಯ ಸೇವಕರೊಬ್ಬರ ನಿಧನದಿಂದ ನಿಜವಾಗಿಯೂ ಕನ್ನಡಿಗರು ಕಂಗೆಟ್ಟಿರುವರು. ಕನ್ನಡ ನಾಡಿನ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಶ್ರೀ. ರಾಮರಾಯರ ಹೆಸರು ಶಾಶ್ವತವಾಗಿರುವುದು; ಅವರ ಸೇವೆ ಚಿರಸ್ಮರಣೀಯವಾಗಿರುವುದು.

ನೋಟಗಳು....

ಹಿಟ್ಲರ್ ಮುಸಲನಿಗಳು ಭೇಟಿಯಾದರು. ಏನೇನೋ ಮಾತನಾಡಿದರು. ಏನು ಮಾತನಾಡಿದರೆಂದು ಯಾರೂ ಗುಟ್ಟು ಬಿಡುವುದಿಲ್ಲ.

ಕೂಡಲೇ ಚರ್ಚಿಲ್ ರೂಸ್‌ವೆಲ್ಟರೂ ಭೇಟಿಯಾದರು. ಅವರೂ ಏನೇನೋ ಮಾತನಾಡುತ್ತಾರೆ, ಯಾವ ವಿಚಾರವೆಂದು ಅವರೂ ತಿಳಿಸುವುದೇ ಇಲ್ಲ.

ಮುಸ್ಲಿಂ ಲೀಗಿನವರು ಸಭೆ ಸೇರುತ್ತಾರೆ. ಬಹಳ ನಿರ್ಣಯ ಮಾಡುತ್ತಾರೆ. 'ಪಾಕಿಸ್ತಾನ' ಬೇಕೆನ್ನುತ್ತಾರೆ; ಕೊಡದಿದ್ದರೆ ಕಾದಾಡುತ್ತೇವೆಂದೂ ಹೆದರಿಸುತ್ತಾರೆ.

ಕೂಡಲೇ ಹಿಂದು ಮಹಾಸಭೆಯವರೂ ಸಭೆ ಕರೆಯುತ್ತಾರೆ. ಅವರೂ ತುಂಬಾ ರಂಪ ಮಾಡುತ್ತಾರೆ 'ಹಿಂದುಸ್ತಾನ'ವು ವಿಭಾಗವಾಗಬಾರದೆನ್ನುತ್ತಾರೆ. ವಿಭಜನೆಯಾದರೆ ಹೋರಾಡುವೆವೆಂದೂ ಆರ್ಭಟಿಸುತ್ತಾರೆ

ಹಿಟ್ಲರ್ ಮುಸಲನಿಗಳು ಭೇಟಿಯಾಗಬಹುದಾದರೆ ಚರ್ಚಿಲ್ ರೂಸ್‌ವೆಲ್ಟರೂ ಭೇಟಿಯಾಗಬಾರದೇಕೆ?

ಹಿಟ್ಲರ್ ಮುಸಲನಿಗಳೇ ಗುಟ್ಟು ಮಾಡುವುದೆಂದೇನು? ಹಾಗಾದರೆ ಚರ್ಚಿಲ್ ರೂಸ್‌ವೆಲ್ಟರದೂ ಗುಟ್ಟೇ!

ಮುಸ್ಲಿಂ ಲೀಗಿಗೆ ಮಾತ್ರ ರಂಪವು 'ಪಾಸು' ಮಾಡುವ ಹಕ್ಕೆ? ಹಿಂದು ಮಹಾ ಸಭೆಗೆ ಇಲ್ಲವೆಂದವರಾರು?

ಮುಸ್ಲಿಂ ಲೀಗಿನವರಿಗೆ ಪಾಕಿಸ್ಥಾನ ಬೇಕಾದರೆ, ಹಿಂದು ಮಹಾಸಭೆಯವರಿಗೆ 'ಹಿಂದುಸ್ಥಾನ'ವೂ ಬೇಕು!

ಈ ಪಂಥದಲ್ಲಿ ಯಾರು ಸೋಲುತ್ತಾರೋ ಯಾರು ಗೆಲ್ಲುತ್ತಾರೋ ಆ ವಿಷಯ ಬೇರೆ! ಆದರೆ 'ತಾವು ಹಿಡಿದ ಕೋಳಿಗೆ ಮೂರೇ ಕಾಲು!'

ಯೂರೋಪಿನ ರಾಜಕಾರಣವೆಲ್ಲಾ ಗುಟ್ಟಿನಲ್ಲಿ! ಭಾರತದ ರಾಜಕಾರಣವೆಲ್ಲಾ ಬಹಿರಂಗದಲ್ಲಿ!

ಬಹುಶಃ ಇದು ಬಿಳಿ ಕರಿಬಣ್ಣದ ವ್ಯತ್ಯಾಸ ಇದ್ದರೂ ಇರಬಹುದು!

ಯೂರೋಪಿನ ರಾಜ ಕಾರಣಿಗಳು ಗುಟ್ಟಾಗಿ ಮಾತನಾಡಿದರೇ ವಿನಾ, ಏನು ಮಾತನಾಡಿದರೆಂದು ಯಾರಿಗೂ ಗೊತ್ತಿಲ್ಲ ಇಬ್ಬರೂ ನಾವೇನೂ ನಿಮ್ಮನ್ನು ದೂರಿ ಮಾತನಾಡಲಿಲ್ಲವೆಂದು ಪರಸ್ಪರ ಹೇಳಿದರೂ ಹೇಳಬಹುದು, ಹಾಗಾಗಿ ಮುಂದೆ ರಾಜಿಯಾದರೂ ಆಗಬಹುದು!

ಬಹಿರಂಗವಾಗಿ ಬೈದವರು ಹಾಗೇನೂ ಹೇಳುವರೆ ಉಪಾಯವಿಲ್ಲ, ಮುಂಡೆ ಮುಂಡೆ ಬಡೆದುಕೊಂಡೇ ಅವರದು ತೀರ್ಮಾನ!

ಇದಕ್ಕಲ್ಲವೇ ಹೇಳುವುದು 'ಡಿಪ್ಲೊಮಸಿ' ಪಾಶ್ಚಾತ್ಯರಿಂದ ಕಲಿಯಬೇಕೆಂದು!

ಸಿನೆಮಾ ಸುದ್ದಿ

"ಜಗಳದ ನಂತರ"

ಸ್ನೇಹ ಪ್ರಭಾ ಪ್ರಧಾನಳ 'ಜಗಳದ ನಂತರ' ಎಂದರೆ ಇದೇನೆಂದು ನಮ್ಮನ್ನು ಸುಮ್ಮಗೆ ಪ್ರಶ್ನಿಸಬೇಡಿ! ಆಕೆಯೇ 'ಜಗಳದ ನಂತರ'ದ ಕಥೆ ಬರೆದಿದ್ದಾಳೆ ಕಿಶೋರ ಸಾಹುವಿನೊಡನೆ 'ಜಗಳದ ನಂತರ'ದ ಆಕೆಯ ಆತ್ಮಕಥೆಯನ್ನೇ ಬರೆದಿದ್ದಾಳೋ ಏನೋ! ಅಂತೂ ಈ ಹೆಸರಿನ ಅವಳ ಕಥೆಯು 'ನವಯುಗ' ಚಿತ್ರಪಟದವರಿಂದ ಸಿನೆಮಾ ತಯಾರಾಗುತ್ತಿದೆ. ಸ್ನೇಹ ಪ್ರಭಾ ಇದರಲ್ಲಿ ಶಾಹು ಮೋಡಕನೊಡನೆ ನಟಿಸುತ್ತಾಳೆ. ಭಾರತೀಯ ಸಿನೆಮಾ ತಾರೆಗಳಲ್ಲಿ ಬಹಿರಂಗವಾಗಿ ಮೊದಲು ಚುಂಬಿಸಿಕೊಂಡವರು ಈ ಪುಣ್ಯಾತ್ಮರು!

ರಶ್ಯನ್ ಚಿತ್ರ

ಎಂದರೆ ಕಮ್ಯುನಿಸ್ಟರ ಎದೆ ಉಬ್ಬಿ ಹೋಗುತ್ತದೆ. ಅದೇನೋ ಯುದ್ಧ ಪ್ರಚಾರವೆಂದರೂ ಅವರು ಒಪ್ಪುವುದಿಲ್ಲ. ಅವರನ್ನು ಒಪ್ಪಿಸಲೂ ಸಾಧ್ಯವಿಲ್ಲ; ಪಿತೃಭೂಮಿಯಿಂದ ಬಂದ ಚಿತ್ರಗಳೆಂದರೆ, ಕಮ್ಯುನಿಸ್ಟರಿಗೆ ಅಷ್ಟು ಪ್ರೀತಿ! ಮೊನ್ನೆ ಮೊನ್ನೆ ಸ್ಥಳೀಯ ಸ್ನ್ಯಾಚಿತ್ರದಲ್ಲಿ 'ಮೋಸ್ಕೊದ ಒಳಿ ಕಾದಾಟ' ನಡೆದ ರಶ್ಯನ್ ಚಿತ್ರವೊಂದನ್ನು ನಾವು ನೋಡಿದ್ದೇವೆ. ನಮ್ಮ ಕಮ್ಯುನಿಸ್ಟರು ಆನಂದ ತುಂದಿಲರಾಗಿ ಬಿಟ್ಟಿದ್ದಾರೆ. ಅಂಥದೇ ಇನ್ನೊಂದು ಚಿತ್ರ 'ಸ್ಟಾಲಿನ್ ಗ್ರಾಡ್ ವಿಜಯ' ಈಗ ತಯಾರಾಗಿದೆ. ಲಂಡನಿನಲ್ಲಿ ಪ್ರದರ್ಶಿತವಾಗುತ್ತಿದೆ. ರಶ್ಯನ್ ವೀರರು ಮಾಡಿದ ಹೋರಾಟ ಇಲ್ಲಿ ಪ್ರದರ್ಶಿತವಾಗಿದೆ. ಇದು ಯಾವಾಗ ನಮ್ಮೂರಿಗೆ ಬಂದಿತೋ? ನಮ್ಮೂರಿನ ಕಮ್ಯುನಿಸ್ಟರ ಆಶೆ ತೀರಿಸೀತೋ?

ಜೋಹಾನ್ಸ್‌ಬರ್ಗಿನಲ್ಲಿ 'ಸೂರ್‌ದಾಸ್'

ಪ್ರಭಾತದ 'ಜ್ಞಾನೇಶ್ವರವು' ನ್ಯೂಯಾರ್ಕಿನಲ್ಲಿ ಪ್ರದರ್ಶಿತವಾಗಿ ಪ್ರಶಂಸಿಸಲ್ಪಟ್ಟಂತೆ, ರಣಜಿತ್‌ನವರ 'ಭಕ್ತ ಸೂರ್‌ದಾಸ್' ಚಿತ್ರವು ಜೋಹಾನ್ಸ್‌ಬರ್ಗಿನಲ್ಲಿ ಪ್ರದರ್ಶಿತವಾಗಿ ಪ್ರಶಂಸಿತವಾಗಿದೆ. ಅಲ್ಲಿನ ವ್ಯಾಪಾರಿಗಳಾದ ಶ್ರೀ. ಎಂ. ಎಲ್. ಪಟೇಲರು ತಮ್ಮ ಮೆಜೆಸ್ಟಿಕ್ ಸಿನೆಮಾದಲ್ಲಿ ಈ ಚಿತ್ರವನ್ನು ಪ್ರದರ್ಶಿಸಿದರು ಭಾರತೀಯ ಚಿತ್ರಗಳು ಹೀಗೆ ವಿದೇಶಗಳಲ್ಲಿ ಪ್ರದರ್ಶಿತವಾಗಿ ಜನಪ್ರಿಯವಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಶಾಂತಿ-ವಿಶ್ರಾಂತಿ!

'ಬಸಂತ್' 'ಕಿಸ್ಮತ್' ಖ್ಯಾತಿ ಮುಮ್ತಾಜ್ ಶಾಂತಿ ಸಿನೆಮಾ ನಟನೆಯಿಂದ ವಿಶ್ರಾಂತಿ ಪಡೆಯುವಳೆಂದು ಬೊಂಬಯಿ ಪತ್ರಿಕೆಯೊಂದು ಬರೆಯುತ್ತದೆ. ಈ ಸುದ್ದಿ ಕೇಳಿ ಎಷ್ಟು ಜನರಿಗೆ ಅಶಾಂತಿ!

ಮಂಗಳೂರು

ಶ್ರೀ ಶಂಕರ ಜಯಂತಿ

ಯು ಮಂಗಳೂರಿನ ಪೋಲೀಸ್ ಡಿ. ಸುಪರಿಂಟೆಂಡೆಂಟಾದ ಶ್ರೀ। ಜೆ ಆರ್. ದೇವರಾಜ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಶ್ರೀ. ಎಂ. ಎಸ್. ಅಚ್ಯುತ ಶರ್ಮ ಅವರು 'ಶ್ರೀ ಶಂಕರಾಚಾರ್ಯ'ರ ಜೀವಿತದ ಕುರಿತು ಮಾತನಾಡಿದರು.

ಧನ್ಯವಾದ

ಕಾಸರಗೋಡಿನ ಶ್ರೀ. ಕೆ. ಎ. ರಾಮಕೃಷ್ಣ ಶೆಟ್ಟರು ತಮ್ಮ ವಿವಾಹದ ಸಂದರ್ಭದಲ್ಲಿ ತಂತಿ ಪತ್ರಗಳ ಮೂಲಕ ಶುಭಾಶಂಸೆ ಮಾಡಿದ ಎಲರಿಗೂ ಧನ್ಯವಾದ ಅರ್ಪಿಸುತ್ತಾರೆ.



ಪುಸ್ತಕಾವಲೋಕನ.

ತೆನಾಲಿ ರಾಮಕೃಷ್ಣ

ಧಾರವಾಡ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರು, ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಬರೆದ 'ತೆನಾಲಿ ರಾಮಕೃಷ್ಣ' ನಾಟಕವನ್ನು ತಮ್ಮ ಗ್ರಂಥಮಾಲೆಯ ೫೬ನೆಯ ಕುಸುಮವಾಗಿ ಪ್ರಕಟಿಸಿದ್ದಾರೆ. ಕ್ರಾನ್ ೧/೮ ಆಕಾರದ ೧೫೪+೬ ಪುಟಗಳುಳ್ಳ ಈ ಪುಸ್ತಕದ ಬೆಲೆ ಒಂದು ರೂಪಾಯಿ.

ತೆನಾಲಿ ರಾಮಕೃಷ್ಣನು ಓರ್ವ ವಿಕಟಕವಿಯಲ್ಲ, ಕೇವಲ ಚೋದ್ಯಗಾರನಲ್ಲ, ಆತನ ವಿಷಯ ಪ್ರಕಟವಾಗಿರುವ ಅನೇಕ ಅಶ್ಲೀಲ ಕಥೆಗಳು ಪ್ರಾಮಾಣಿಕವಲ್ಲ ಎಂಬುದನ್ನು ಸಮರ್ಥಿಸುತ್ತಾ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ವಿಮರ್ಶಕ ದೃಷ್ಟಿಯಿಂದ ರಾಮಕೃಷ್ಣನ ಭವ್ಯ ಜೀವನವನ್ನು ಈ ನಾಟಕ ರೂಪದಲ್ಲಿ ಚಿತ್ರಿಸಿರುವರು. 'ಮಂಡೋದರಿ' 'ನಚಿಕೇತ' ಮೊದಲಾದ ಉತ್ತಮ ವ್ಯಕ್ತಿ ಜೀವನ ನಾಟಕಗಳಿಂದ ಕನ್ನಡಿಗರಿಗೆ ಪೂಜ್ಯ ಪರಿಚಿತರಾದ ಶ್ರೀ ಸಿ. ಕೆ. ಯವರು 'ತೆನಾಲಿ ರಾಮಕೃಷ್ಣ'ವನ್ನೀಗ ಬರೆದಿರುವರೆಂದ ಮೇಲೆ ನಾಟಕದ ಮಹತ್ವಕ್ಕೆ ಬೇರೆ ಪ್ರಸ್ತಾವನೆ ಬೇಕಾಗಿಲ್ಲ.

ಈ ನಾಟಕದಲ್ಲಿ ತೆನಾಲಿ ರಾಮಕೃಷ್ಣನ ಜೀವನದ ಕುರಿತು, ಆತನ ಪ್ರತಿಭೆ, ಪಾಂಡಿತ್ಯ, ಕವಿತಾ ಸಾಮರ್ಥ್ಯ, ಉತ್ತಮ ಹಾಸ್ಯ ಪ್ರವೃತ್ತಿ, ಸ್ವಭಾವೋಕ್ತಿಗಳ ಕುರಿತು ಹಲವು ನಿದರ್ಶನಗಳನ್ನು ಕೊಡಲಾಗಿದೆ. ವಿಜಯನಗರ ಸಾಮ್ರಾಜ್ಯದ ವಿಷಯ ಬರೆದ ಹಲವು ಇಂಗ್ಲಿಷ್ ತೆಲುಗು ಗ್ರಂಥಗಳನ್ನೂ ಆಧಾರವಾಗಿಟ್ಟುಕೊಂಡು ನಾಟಕಕಾರರು ಕಥಾವಸ್ತುವನ್ನು ನಿರ್ಮಿಸಿರುವರು ಕೆಲವೆಡೆ ಕುತೂಹಲಜನಕ ಸನ್ನಿವೇಶನಗಳನ್ನು ತಾವೇ ಕಲ್ಪಿಸಿಕೊಂಡಿದ್ದಾರೆ.

ರಾಮಲಿಂಗ ಎಂಬುದು ತೆನಾಲಿ ರಾಮಕೃಷ್ಣನ ಪೂರ್ವನಾಮ ರಾಮಲಿಂಗನು ಮಹಾ ವಿದ್ವಾಂಸ, ಆದರೆ ರಾಜಾಶ್ರಯವಿಲ್ಲ, ಅವನಿಗೆ ಆ ಹಂಬಲವೂ ಇಲ್ಲ ರಾಮಲಿಂಗನು ತೆನಾಲಿಯಿಂದ ವಿಜಯನಗರದ ಕಾಳಿಕಾದೇವಿಯ ಗುಡಿಗೆ ಆರಾಧನೆಗಾಗಿ ಬರುತ್ತಾನೆ, ಅಲ್ಲಿ ಆತನು ಮಂತ್ರಿ ಅಪ್ಪಾಜಿಯವರ ದೃಷ್ಟಿಗೆ ಬೀಳುತ್ತಾನೆ ರಾಮಲಿಂಗನಿಗೆ ಕಾಮಿನೀ ಕಾಂಚನಗಳಲ್ಲಿ ಮೋಹವಿಲ್ಲವೆಂಬ ಬಗ್ಗೆ ಪರೀಕ್ಷೆಯೂ ಅಲ್ಲಿ ಆಗುತ್ತದೆ ಆದಾದ ವೇಳೆ ಮಂತ್ರಿ ಅಪ್ಪಾಜಿಯವರು ರಾಮಲಿಂಗನನ್ನು ಒಡಂಬಡಿಸಿ ವಿಜಯನಗರದ ಅರಸರಲ್ಲಿ ಧರ್ಮಸಚಿವನಾಗಿ ಸೇರಿಸುತ್ತಾರೆ ಇದು ಮೊದಲನೆಯ ಅಂಕದ ಕಥೆ ವೇಶ್ಯೆಯೊಡನೆ, ಅರ್ಚಕನೊಡನೆ ಅಪ್ಪಾಜಿಯವರೊಡನೆ ರಾಮಲಿಂಗನು ಮಾಡುವ ಮಾತುಕತೆಗಳಿಂದ ನಾಟಕಕಾರರು ರಾಮಲಿಂಗನ ನಿರ್ಮಲ ಜೀವನವನ್ನು ಭವ್ಯವಾಗಿ ಚಿತ್ರಿಸುತ್ತಾರೆ

ಭೋಗವಿಲಾಸ ಪ್ರಿಯನಾಗಿ ವಿಜಯನಗರದ ಕೃಷ್ಣರಾಯನು ಚಿನ್ನಾ ದೇವಿಯೊಡನೆ ಸಲ್ಲಾಪ ಮಗ್ನನಾಗಿದ್ದಾನೆ ಧರ್ಮ ಸಚಿವನಾದ ರಾಮಲಿಂಗನು ತೆನ್ನಾಲಿಯ ಬಡ ಕುಟೀರಕ್ಕೆ ಬಂದು ಹೆಂಡತಿಯನ್ನು ವಿಜಯನಗರಕ್ಕೆ ಕರಕೊಂಡು ಹೋಗುವನು. ರಾಮಲಿಂಗನ ಪತ್ನಿ ಕಮಲೆ 'ಎಂಥಾ ರಸಿಕಳು!' ಧೂರ್ತನೂ, ಕೋಪಿಷ್ಠನೂ ಆದ ವಿಜಯನಗರದ ವೃದ್ಧ ಸಾರ್ವಭೌಮನು ಕಾರ್ಕಳದ ಭೈರರಸನಿಗೆ ನ್ಯಾಯಾನ್ಯಾಯ ನೋಡದೆ ಮರಣಾಂತದ ಶಿಕ್ಷೆ ಆಜ್ಞಾಪಿಸುವನು ಕೃಷ್ಣರಾಯನೂ ಸಚಿವನಾದ ರಾಮಲಿಂಗನೂ ಈ ಶಿಕ್ಷೆ ಅನ್ಯಾಯದ್ದೆಂದು ಪ್ರತಿಭಟಿಸಲು ಅವರಿಗೂ ಚಿತ್ರಹಿಂಸೆ ಆಜ್ಞೆಯಾಗುವುದು ಆದರೆ ಧೀಮಂತ ಮಂತ್ರಿ ಅಪ್ಪಾಜಿ ಆ ಶಿಕ್ಷೆಗಳನು ಉಪಾಯದಿಂದ ತಪ್ಪಿಸುತ್ತಾನೆ. ಸಾರ್ವಭೌಮನು ತನ್ನ ಪಾಪಕೃತ್ಯದ ಫಲವಾಗಿ ಆರತ್ಯದಲ್ಲಿ ದುರ್ಮರಣವನ್ನೇ ಹೊಂದುವನು. ಇಲ್ಲಿಗೆ ದ್ವಿತೀಯಾಂಕ ಕೊನೆಗೊಳ್ಳುವುದು.

ರಾಮಲಿಂಗನು ಸದಾ ಧಾನಧರ್ಮ ಪರಾಯಣನಾಗಿರುವುದರಿಂದ ಆತನಿಗೆ ಸಂಪಾದಿಸಿದ್ದಕ್ಕಿಂತ ಅಧಿಕ ವ್ಯಯ, ಹೀಗಿರಲು ಒಮ್ಮೆ ಧರ್ಮಕಾರ್ಯಕ್ಕೆ ಹಣ ಸಾಕಾಗದಿರಲು, ಸ್ವಾರ್ಥನಾದ ತನಗೆ ವೈಷ್ಣವರಿಂದ ಹಣಪಡೆವ ಶರತ್ತು ಪ್ರಕಾರ ತನ್ನ ಹೆಸರು ರಾಮಲಿಂಗ ಎಂದಿರುವುದನ್ನು 'ರಾಮಕೃಷ್ಣ' ಎಂದು ಬದಲಾಯಿಸಲು ಒಪ್ಪಿಕೊಳ್ಳುತ್ತಾನೆ ನಿಜವಾಗಿ ನೋಡಿದರೆ ಹೆಸರಿನಲ್ಲೇನಿದೆ? ಮುಂದೆ ಒಮ್ಮೆ ಆಸ್ಥಾನದಲ್ಲಿ ಎದೆ ಬಿಚ್ಚಿ ಮಾತನಾಡಿದ ಬಗ್ಗೆ ರಾಮಕೃಷ್ಣನಿಗೆ ವಿಜಯನಗರಬಿಟ್ಟುಹೋಗಲು ಅಪ್ಪಣೆಯಾಗುವುದು. ಆದರೆ ಮುಂದೆ ದೊರೆಯನ್ನು ಶತ್ರುಗಳು ತಂತ್ರ ಹೂಡಿ ಕೊಲ್ಲುವ ಹಂಚಿಕೆ ಮಾಡಲು ಅದನ್ನು ರಾಮಕೃಷ್ಣನೇ ತಪ್ಪಿಸುವನು ಆ ಸಂದರ್ಭದಲ್ಲಿ ದೊರೆ ಕೃಷ್ಣರಾಯನಿಗೆ ರಾಮಕೃಷ್ಣನ ಸ್ವಾಮಿಭಕ್ತಿ, ಜೀವನದ ಅಮೂಲ್ಯತೆ ಹೊಳೆಯುವುದು. ದೊರೆ ರಾಮಕೃಷ್ಣನನ್ನು ಕೊಂಡಾಡಿ ಸತ್ಕರಿಸುತ್ತಾನೆ. ಇದು ಕೊನೆಯ ಅಂಕದ ಕಥೆ

ಶ್ರೀ. ಸಿ ಕೆ ವೆಂಕಟರಾಮಯ್ಯರು ಕನ್ನಡದ ಓರ್ವ ಪ್ರಥಮ ಪಂಕ್ತಿಯ ಸಾಹಿತ್ಯ ಛಕ್ಕರು, ವಿಮರ್ಶಕ ದೃಷ್ಟಿಯ ವಿದ್ವಾಂಸರು. ಒಳ್ಳೆಯ ಸಂಸ್ಕೃತ ಪಂಡಿತರು. ಮೇಲಾಗಿ ಉತ್ತಮ ರಸಿಕರು. 'ತೆನಾಲಿ ರಾಮಕೃಷ್ಣ'ದಲ್ಲಿಯೂ ಸಿ ಕೆ ಯವರ ಪ್ರತಿಭೆ ಚೆನ್ನಾಗಿ ಮೂಡಿದೆ, ಆದರೂ ಇದು ಅವರ 'ನಚಿಕೇತ', 'ಮಂಡೋದರಿ' ದೃಶ್ಯಗಳ ಮಟ್ಟಕ್ಕೇರಲಿಲ್ಲವೆಂದುನಮಗೆ ತೋರುತ್ತದೆ. ಬಹುಶಃ ತೆನಾಲಿ ರಾಮಕೃಷ್ಣನ ವ್ಯಕ್ತಿತ್ವ 'ನಚಿಕೇತ', 'ಮಂಡೋದರಿ' ಇವರ ವ್ಯಕ್ತಿತ್ವದಷ್ಟು ಪ್ರಭಾವಶಾಲಿಯಾಗಿಲ್ಲದಿರುವುದೂ ಇದಕ್ಕೆ ಕಾರಣವಿದ್ದರೂ ಇರಬಹುದು. ಸಿ. ಕೆ ಯವರ ಶುದ್ಧ ಸರಳ ಹಾಗೂ ಹೃದಯಹಾರೀ ಭಾಷಾಶಾಲಿ ಇಲ್ಲಿಯೂ ಕಾವ್ಯವಾಹಿನಿಯಾಗಿ ಹರಿದಿದೆ.

—ಕಯ್ಯಾರ.

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ 2-12-0, ರೂ 4-8-0, ರೂ. 8 ಕ್ರಯಕ್ಕೆ ದೊರಕುವುದು

ತಯಾರಿಸುವವರು ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಲಾಪುರ.

ರೈಲು ಬಂಡಿಗಳ ಸಮಯ

ಎಪ್ರಿಲ್ ತಾ. ೧೫ರಿಂದ ವ್ಯತ್ಯಸ್ಥವಾದ ಪ್ರಕಾರ.

	ಹೊರಡುವುದು.	ಬರುವುದು.
ಮೈಲ್	೭-೪೦ ಪೂ.	೬-೩೫ ಅಪ.
ಶಟ್ಲ್	೬-೩೦ ಅಪ.	೧೦-೫ ಪೂ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

Wanted Graduates

APPLY FOR TERMS

CANARA BANK LTD.,

Ested: 1906

THE CANARA BANKING CORPORATION Ltd

(Incorporated in British India with limited liability)

STATEMENT OF AFFAIRS AS ON 31ST DECEMBER 1942

Capital & Liabilities	Rs	As	Ps	Property & Assets	Rs	As	Ps
Paid up Capital	6 36 890	0	0	Office premises			
Reserve & other funds	3 71 882	13	11	furniture etc	91 659	0	0
Deposits	41 83 873	4	1	Advances	31,28 612	4	9
Due to Bankers	5 08 545	12	1	Investment on			
Bills per contra	3 59 357	12	1	Govt Securities			
Sundries including				etc at cost	15 34 536	14	3
branch adjustments &				Sundries	74 193	5	7
undisbursed profits	2 83 736	5	9	Bills for Collection	3 59 357	12	1
Profit for the year 1942	49 461	3	5	Cash on Hand &			
				with bankers	12 05 397	14	8
Total Rs	63 93 747	3	4	Total Rs	63 93 747	3	4

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆ ಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿವಸಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD: 1931

HEAD OFFICE
Mangalore.

BRANCHES
Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಣ್ಣುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳು ಕಡ್ಡಿ, ಪಿತ್ಥ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soen after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. 1906

[ಸಂಪುಟ 37] ತಾರೀಕು 28—5—1943 [ಸಂಚಿಕೆ 22]

ಅಮೆರಿಕದ ಕರ್ತವ್ಯ

ಶ್ರೀಮತಿ ಜಾನ್‌ಗಂತರ್ ವಿವರಿಸುತ್ತಾರೆ

'ಪಾಕಿಸ್ಥಾನ' ಯೋಜನೆ ಕಲ್ಪನಾ ರಾಜ್ಯ

ಶ್ರೀಮತಿ ಫ್ರಾಂನ್ಸಿಸ್‌ಗಂತರ್, ಅಮೆರಿಕದ ಪ್ರಸಿದ್ಧ ಗ್ರಂಥಕರ್ತರೂ ಪತ್ರಿಕೋದ್ಯಮಿಗಳೂ ಆದ ಜಾನ್ ಗಂತರರ ಪತ್ನಿ, ಭಾರತದ ವಿಷಯ ಒಂದು ವಿಚಾರ ಪೂರ್ಣ ಲೇಖನ ಬರೆದಿರುವರು. ಆ ಲೇಖನದಲ್ಲಿ 'ಪಾಕಿಸ್ಥಾನ'ದ ಟೊಳ್ಳುತನ, ಇಂಗ್ಲಿಷರ ಸ್ವಾರ್ಥದ ಆಡಳಿತ, ಭಾರತೀಯರ ಸ್ವಾತಂತ್ರ್ಯ ಹಕ್ಕು ಈ ವಿಚಾರಗಳನ್ನೆಲ್ಲಾ ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ಅದರ ಸಾರಾಂಶವಿಂತಿದೆ:

"೧೯೩೮ರಲ್ಲಿ ನನ್ನ ಪತಿ ಜಾನ್‌ಗಂತರ್ ಮತ್ತು ನಾನು, ಜಿನ್ನರೊಡನೆ ಮೂರು ತಾಸುಗಳ ಕಾಲ ಕಳೆದಿದ್ದೆವು. ಮುಸ್ಲಿಂ ಲೀಗಿಗೆ ಕಾಂಗ್ರೆಸಿನ ಕುರಿತು ಇರುವ ದೂರುಗಳೇನೆಂದು ಕೇಳಿದೆವು. ಆಗ ಅವರಿಗೆ ಒಂದೇ ಒಂದು ದೂರನ್ನೂ ಹೇಳುವುದಾಗಲಿಲ್ಲ. ೧೯೪೨ರಲ್ಲಿ ಸರ್ ಕ್ರಿಪ್ಸರೂ ಜಿನ್ನರೊಡನೆ ಅದೇ ಪ್ರಶ್ನೆ ಕೇಳಿದರು. ಜಿನ್ನರು ಆಗೇನೋ ಪೂರ್ವ ಸಿದ್ಧತೆ ಮಾಡಿಕೊಂಡಿದ್ದರು; ಒಂದು ದೂರು ಕೊಟ್ಟರು. ಕ್ರಿಪ್ಸರು ಆ ಕುರಿತು ವಿಚಾರಣೆ ಮಾಡಿ, 'ಜಿನ್ನರ ದೂರಿನಲ್ಲಿ ಏನೇನೂ ಸ್ವಾರಸ್ಯವಿಲ್ಲ' ಎಂದು ಆ ವೇಳೆ ತಿಳಿಸಿದ್ದಾರೆ.

'ಜಿನ್ನರೇನೋ 'ಗಟ್ಟಿಗರು; ಪ್ರತಿಭಾಶಾಲೀ ವಕೀಲರು; ಒಂದೊಮ್ಮೆ ಕಾಂಗ್ರೆಸಿನ ಪಕ್ಷ ವಹಿಸಿ ಅಸಮಾನ ಹೋರಾಡಿದವರು. ಮುಂದೆ, ಅವರ ವೈಯುಕ್ತಿಕ ಉನ್ನತಾ ಕಾಂಕ್ಷೆಗೆ, ಸ್ವಾರ್ಥತ್ಯಾಗ ಮಾಡುವ ಕಾಂಗ್ರೆಸಿಗಿಂತಲೂ, ಉದಾರದಾನ ಮಾಡುವ ಬ್ರಿಟಿಷರೇ ಒಳ್ಳೆಯದೆಂದು ತೋರಿತು. ಪಾಕಿಸ್ತಾನದ ವಿಷಯ ಒಂದನ್ನು ಬಿಟ್ಟರೆ ಅವರೂ ಒಳ್ಳೆಯ ರಾಷ್ಟ್ರೀಯವಾದಿ, ದೇಶಪ್ರೇಮಿ. ಬ್ರಿಟಿಷರು ಜಿನ್ನರನ್ನು ಹಿಡಿದು ಆಟವಾಡುವುದಾದರೆ, ಜಿನ್ನರು ಬ್ರಿಟಿಷರನ್ನು ಹಿಡಿದೂ ಆಟವಾಡುತ್ತಿದ್ದಾರೆ!

'ಪಾಕಿಸ್ಥಾನ'ದ ಪ್ರಶ್ನೆ

'ಪಾಕಿಸ್ಥಾನ್' ಈ ಹೆಸರು, ಮುಸ್ಲಿಮರ ಭಾರತ ವಿಭಜನೆಯ ಕಲ್ಪನಾರಾಜ್ಯದ ಒಂದು ಕಲ್ಪನಾ ಹೆಸರು. ಇದು ಬ್ರಿಟಿಷರೂ ಜಿನ್ನರೂ ಘೋಷಿಸಿಕೊಂಡು ಮಾಡುತ್ತಿರುವ ಒಂದು ಮಾಟ ದಾಟ. 'ಪಾಕಿಸ್ಥಾನ' ಯೋಜನೆ ಯಶಸ್ವಿಯಾದರೆ ಭಾರತವೂ ಬಾಲ್ಕನ್ ರಾಷ್ಟ್ರಗಳ ಸ್ಥಿತಿಯನ್ನು ಹೊಂದಿ ಕೊನೆಯಿಲ್ಲದ ಕಲಹದಲ್ಲಿ ಪ್ರವೃತ್ತವಾಗುವುದು. ಇಂಗ್ಲಿಷರ ಈ ಹಿಂದೂ ಮುಸ್ಲಿ ಸಮಸ್ಯೆಗೆ ಕಾಂಗ್ರೆಸಿನ ಧೋರಣೆಯೇನು? ಹಿಂದು ಮುಸ್ಲಿಮರ ಮಧ್ಯೆ ಈಗ ಇರುವುದೆಂದು ಕಾಣುವ ಈ ವ್ಯತ್ಯಾಸಕ್ಕೆ ನಿಜವಾದ ಕಾರಣ ಆರ್ಥಿಕ ಬಡತನವಲ್ಲದೆ! ಧರ್ಮದ ವಿಚಾರವಲ್ಲವೆಂದು ಕಾಂಗ್ರೆಸು ತಿಳಿದಿದೆ. ಕಾಂಗ್ರೆಸಿಗೆ ಮುಸ್ಲಿಮರು 'ಅಲ್ಪ ಸಂಖ್ಯಾಕ'ರಲ್ಲ; ಅವರು 'ಸೋದರ ಭಾರತೀಯರು'. ಪ್ರತಿಯೊಂದು ಜಾತಿಮತದವರಿಗೂ ಕಾಂಗ್ರೆಸು, ತಮ್ಮ ವಿಷಯ ಉಂಟಾಗುವ ಯಾವುದೇ ವ್ಯಾಜ್ಯವನ್ನಾದರೂ ಅಂತರಾಷ್ಟ್ರೀಯ ಪಂಚಾಯಿತ ಮಂಡಳಕ್ಕೊಪ್ಪಿಸಲು, ಇಲ್ಲವೇ ಉಭಯ ಪಕ್ಷದವರೊಪ್ಪುವ ಯಾವುದೇ ಪಂಚಾಯಿತರು ತೀರ್ಮಾನಿಸಲೂ ಸಮ್ಮತಿಸುತ್ತದೆ. ಆದರೆ ಕಾಂಗ್ರೆಸು, ನೆಹರುಗಳ ಮಾತಿನಲ್ಲಿ "ಭಾರತದ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳಿಗೆ ವಿರೋಧವಾಗಿ, ಭಾರತವನ್ನು ವಿಭಜಿಸುವ, ಹಾಗೂ ಯಾವುದೇ ಅಲ್ಪ ಸಂಖ್ಯಾಕ ಪಕ್ಷವು ಬಹು ಸಂಖ್ಯಾಕ ಪಕ್ಷದ ಮೇಲೆ ಅಧಿಕಾರ ಮಾಡುವ ವಿಷಯಕ್ಕೆ ವಿರುದ್ಧವಿದೆ; ಏಕೆಂದರೆ ಬಹು ಸಂಖ್ಯಾಕ ಪಕ್ಷಕ್ಕೂ ಅದರ ಹಕ್ಕು ಇರಬೇಕು' ಎಂದು ಹೇಳುತ್ತದೆ. ಇಂಗ್ಲೆಂಡು, ಬಹು ಸಂಖ್ಯಾಕರ ಹಕ್ಕಿನ ವಿಷಯದಲ್ಲಿ, ಅಡ್ಡಗಾಲಿಡುತ್ತಿದೆ.

ಸಹಾಯವೋ ವಿರೋಧವೋ?

'ಈ ವಿಷಯ ನಾವು ಅಮೆರಿಕನರು ಮಾಡುವ ಕರ್ತವ್ಯವೇನು? ಒಂದುಕಡೆ, ಬ್ರಿಟಿಷ್ ಸಾಮ್ರಾಜ್ಯ, (ತನ್ನ ೧೯ನೇ ಶತಮಾನದ ಸಾಮ್ರಾಜ್ಯಶಾಹೀ ಧೋರಣೆಯನ್ನು ಇನ್ನೂ ಅನುಸರಿಸಿದೆ) ನೆದರ್ಲೆಂಡ್ ಸಾಮ್ರಾಜ್ಯ, ಮತ್ತು ಇನ್ನೂ ಅಂತರ್ರಾಷ್ಟ್ರೀಯ ಸ್ಥಾನ ಸಿಗದ ಯುರೋಪಿನ ಸಣ್ಣ ರಾಷ್ಟ್ರಗಳು, ಇನ್ನೊಂದು ಕಡೆ, ಸಂಖ್ಯೆಯಿಂದಲೂ ಭೌಗೋಳಿಕ ಸ್ಥಿತಿಯಿಂದಲೂ ಪ್ರಬಲವಾಗಿರುವ ಚೀನ, ರಶ್ಯ, ಇವುಗಳು; ಕಳೆದ ೧೫೦ ವರ್ಷಗಳ ಆಂಗ್ಲ ರಶ್ಯ ಮತ್ತು ಆಂಗ್ಲ ಚೀನ ಸಂಬಂಧಗಳನ್ನು ನೋಡಿದರೆ, ಭಾರತದಿಂದ ಬ್ರಿಟಿಷ್ ಅಧಿಕಾರವನ್ನು ಕಿತ್ತೊಗೆಯುವುದು ಚೀನ ರಶ್ಯಗಳ ರಾಷ್ಟ್ರೀಯ ಧೋರಣೆಗೂ ಅತ್ಯಂತ ಹಿತಕಾರಿಯೆಂದು ಯಾವನಾದರೂ ತಿಳಿಯದಿರಲಾರನು. ಸಂಯುಕ್ತ ರಾಷ್ಟ್ರಗಳು ಭಾರತದ ವಿಷಯ ಏನು ಮಾಡಿವೆ? ಅಮೆರಿಕನರು ನಾವು ಸಂಯುಕ್ತ ರಾಷ್ಟ್ರಗಳ ಮುಂದಾಳುಗಳೆಂದು ಹೇಳುತ್ತೇವಲ್ಲಾ, ನಾವೇನು ಮಾಡಿದ್ದೇವೆ ಭಾರತದ ವಿಚಾರ? ನಾವು ಭಾರತದ ಸ್ವಾತಂತ್ರ್ಯ ಕ್ರಾಂತಿಗೆ ಸಹಾಯಿಗಳೇ ವಿರೋಧಿಗಳೇ?

'ಸ್ವಾತಂತ್ರ್ಯದ ಸಲುವಾಗಿ ಕ್ರಾಂತಿ ನಡೆದರೆ ಏನೇನೂ ಪಾಪವಿಲ್ಲ. ಫ್ರೆಂಚ್ ಕ್ರಾಂತಿಯು ರಾಜಕೀಯ ಪ್ರಜಾ ಪ್ರಭುತ್ವವನ್ನು, ರಶ್ಯನ್ ಕ್ರಾಂತಿಯು ಆರ್ಥಿಕ ಪ್ರಜಾಪ್ರಭುತ್ವವನ್ನೂ ಸ್ಥಾಪಿಸಿತು. ಹಾಗೆಯೇ ಭಾರತದ ಕ್ರಾಂತಿಯು ಒಂದು ಮಾನಸಿಕ ಪ್ರಜಾಪ್ರಭುತ್ವವದನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಇದರಲ್ಲಿ ಉತ್ತಮ ಸಹಾನುಭೂತಿ ತೋರಿಸಿದರೆ ಅದರಿಂದ ಆರ್ಥಿಕ ರಾಜಕೀಯ ಉನ್ನತಿಯೇ ಆದೀತು. ಭಾರತದ ಕ್ರಾಂತಿಯೆಂದರೆ, ಇಡೀ ಜಗತ್ತಿನ ಕ್ರಾಂತಿಯ ಇತಿಹಾಸದಲ್ಲಿಯೇ ಮೊದಲನೆಯ ಸಲವೆನಿಸಿ ಬಹಿರಂಗವಾಗಿ ನಡೆದ ಕ್ರಾಂತಿ; ಈ ಕ್ರಾಂತಿಯ ಧೋರಣೆಗಳೆಲ್ಲವೂ ಸದಯ ಮಾನವ ಹೃದಯದಿಂದ ಪ್ರೇರಿತವಾದವುಗಳು. ಈ ಕ್ರಾಂತಿಯಲ್ಲಿ ಹಗೆತನವಿಲ್ಲ—ದಂಗೆಯಿಲ್ಲ, ಗುಪ್ತಚಾರರ ಕ್ರಮವಿಲ್ಲ, ಹತ್ಯಾಕಾಂಡವಿಲ್ಲ, ಈ ಕ್ರಾಂತಿಯ ಸಾಧನಗಳೆಂದರೆ ಆತ್ಮ ಬಲಿದಾನ; ವಿರೋಧಿಯಲ್ಲಿ ಪ್ರೇಮ!

ಬ್ರಿಟಿಷರಲ್ಲಿ ವಿಶ್ವಾಸವಿಲ್ಲ

'ಆದರೆ ಅವರು ಸ್ವಾತಂತ್ರ್ಯಕ್ಕೆ ಯುದ್ಧಾನಂತರದ ವರೆಗೆ ಯಾಕೆ ಕಾಯಬಾರದು?" ಎನ್ನುವಿರಾ? ಯಾಕೆಂದರೆ, ಅವರಿಗೆ ಬ್ರಿಟಿಷರ ಆಡಳಿತದಲ್ಲಿ ವಿಶ್ವಾಸವಿಲ್ಲ. ಯುದ್ಧಾನಂತರ ಶಾಂತಿ ಸ್ಥಾಪಿಸಲು ಬ್ರಿಟಿಷರಿಗೆ ಸಾಮರ್ಥ್ಯವುಂಟೆಂಬ ಬಗ್ಗೆ, ಮಾತ್ರವಲ್ಲ ಇಂದಿನ ಯುದ್ಧವನ್ನು ಯಶಸ್ವಿಯಾಗಿ ನಿರ್ವಹಿಸಲು ಬ್ರಿಟಿಷರಿಗೆ ಸಾಮರ್ಥ್ಯವುಂಟೆಂಬ ಬಗ್ಗೂ ಅವರಿಗೆ ವಿಶ್ವಾಸವಿಲ್ಲ. ೧೫೦ ವರ್ಷಗಳಿಂದ, ಭಾರತದಲ್ಲಿ ನಿರಂಕುಶಾಧಿಕಾರ ಮಾಡಿದ ಮೇಲೆ ಬ್ರಿಟಿಷರ ಆಡಳಿತದ ಕುರಿತು ಭಾರತದಜನಮತದಲ್ಲಿ ಅವಿಶ್ವಾಸವುಂಟಾಗಿದೆ. ೧೫೦ ವರ್ಷಗಳ ಬ್ರಿಟಿಷರ ಅಧಿಕಾರವು ಭಾರತಕ್ಕೆ ಶೇಕಡಾ ೯೦ರ ನಿರಕ್ಷರತೆಯನ್ನು ಕೊಟ್ಟಿತು! (ಜಪಾನಿನಲ್ಲಿ ಕೇವಲ ೨೦% ಮಂದಿ, ಫಿಲಿಪೈನಿನಲ್ಲಿ ೪೦% ಮಂದಿ) ಭಾರತೀಯರಿಗೆ ಕೇವಲ ೨೫ ವರ್ಷಗಳ ಆಯುಷ್ಯ ಕೊಟ್ಟಿತು! (ಇಂಗ್ಲೆಂಡಿನಲ್ಲಿ ೬೦ ವರ್ಷವೂ ಅಮೆರಿಕದಲ್ಲಿ ೬೩ ವರ್ಷವೂ ಆಯುಸ್ಸು) ವಾರ್ಷಿಕ ಆದಾಯ ಮೂರು ಶಿಲಿಂಗ್ ಕೊಟ್ಟಿತು! (ಜಪಾನಿನಲ್ಲಿ ಇದರ ಮೂರು ಪಾಲು ಹೆಚ್ಚು; ಇಂಗ್ಲೆಂಡಿನಲ್ಲಿ ೧೦ ಪಾಲು ಹೆಚ್ಚು; ಅಮೆರಿಕದಲ್ಲಿ ೨೩ ಪಾಲು ಹೆಚ್ಚು) ವಿದ್ಯೆಗಾಗಿ ಉತ್ಪತ್ತಿಯ ಶೇಕಡಾ ಮೂರು ಶಿಲಿಂಗಿನಷ್ಟು ವೆಚ್ಚ ಮಾಡುವುದಾಯಿತು! (ಇಂಗ್ಲೆಂಡಿನಲ್ಲಿ ೩೦೦ ಶಿಲಿಂಗ್‌ನಷ್ಟು, ಅಮೆರಿಕದಲ್ಲಿ ೪೦೦ ಶಿಲಿಂಗಿನಷ್ಟು ಹೆಚ್ಚು) ಇದೆಲ್ಲಾ, ಇಡೀ ಜಗತ್ತಿನಲ್ಲಿಯೇ ಅತ್ಯಂತ ಫಲ ಸಂಪತ್ ಸಮೃದ್ಧವಾಗಿರುವ ದೇಶದಲ್ಲಿ—ಭಾರತದಲ್ಲಿ! ಬ್ರಿಟಿಷರ ಆಡಳಿತದಲ್ಲಿ! ಇದನ್ನೆಲ್ಲಾ ನೋಡಿ ಅವರೀಗ ಆಲೋಚನೆ ಮಾಡುತ್ತಾರೆ—ಜಪಾನರು ಬಂದರೂ ಇದಕ್ಕಿಂತ ಕೆಟ್ಟದೇನೂ ನಮಗೆ ಆಗಲಿಕ್ಕಿಲ್ಲವೆಂದು. ಬ್ರಿಟಿಷರನ್ನು ಬಿಟ್ಟು, ನಾವಾಗಿಯೇ ನಮ್ಮ ಆಡಳಿತ ಮಾಡಿದರೆ ಇದಕ್ಕಿಂತ ಉತ್ತಮ ಸ್ಥಿತಿಗೆ ಬಂದೇವೆಂದು ಅವರು ತಿಳಿದಿದ್ದಾರೆ. ಇಷ್ಟಾದರೂ ಅವರು ಆಂಗ್ಲೇಯರನ್ನು ದ್ವೇಷಿಸುವುದಿಲ್ಲ. ಅವರು, ಬ್ರಿಟಿಷರಿಗಾಗಿ ಮರುಗುತ್ತಾರೆ; ಅವರು ಭಾರತದಲ್ಲಿ ಮಾಡಿದ ಕೆಲಸ ಸಾಕು; ಬ್ರಿಟನಿಗೆ ಹೋಗಿ, ತಮ್ಮದನ್ನಾದರೂ ಆಡಷ್ಟು ತಾವು ಜಾಗ್ರತೆ ಮಾಡಿಕೊಳ್ಳಲಿ ಎಂದು ಹೇಳುತ್ತಾರೆ. ಭಾರತದ ಅಧಿಕಾರ ಮಾಡಲು, ತಾವು ಭಾರತೀಯರೇ ಸಮರ್ಥರೆಂದು ಅವರಿಗೀಗ ಚೆನ್ನಾಗಿ ತಿಳಿದಿದೆ;

ಅಮೆರಿಕದ ಕರ್ತವ್ಯ

ನಾವೇ ಸ್ವಾತಂತ್ರ್ಯ ಕ್ರಾಂತಿಯನ್ನು ಭೀಕರ ಮರ್ದನದಿಂದ ಅಡಗಿಸಲು ಸಹಾಯ ಮಾಡುವುದೆ? ನಾವು ಮನಸು ಮಾಡಿದರೆ ಹಾಗೆಮಾಡಬಹುದು. ಭಾರತವನ್ನು ಭಯಭೀತಗೊಳಿಸಿ ಆಳಲು ಕೈಕೊಡಬಹುದು. ಭಾರತವನ್ನು ಚೂರು ಚೂರಾಗಿ ಮಾಡಬಹುದು. ಭಾರತೀಯರಲ್ಲಿ ಅಂತಃ ಕಲಹ ಹೆಚ್ಚಿಸಿ ನಾಶಗೊಳಿಸಬಹುದು. ಪೋರ್ಜರಿ ಪತ್ರಗಳಿಂದ ಅನ್ಯಾಯ ಮಾಡಬಹುದು. ೧೯೪೨ರ ಸಪ್ಟೆಂಬರದ ನಂತರ ಭಾರತದ ಕುರಿತು ವಾಶಿಂಗ್‌ಟನ್ ಯೋಚನೆಯೇನು? ಸ್ಟೇಟ್ ಡಿಪಾರ್ಟ್‌ಮೆಂಟಿನಲ್ಲಿ ವಿರುದ್ಧ ಮತ್ತು ಪರವಾಗಿ ಸಮತೂಕ ಅಭಿಪ್ರಾಯವಿದ್ದಂತೆ ತೋರುತ್ತದೆ. ಆದರೆ ವೈಟ್ ಹೌಸಿನವರು ಹಳೆ ಅಭಿಪ್ರಾಯಕ್ಕೇ ಮಾಲಿಕೊಂಡಿರುವರು. ಭಾರತದ ವಿಚಾರ ನಾವು ಕೈಹಾಕಬೇಕಾಗಿಲ್ಲ; ಚರ್ಚಿಲರೇ ಅದನ್ನು ಸರಿಗೊಳಿಸುವರೆಂದು! ಚರ್ಚಿಲರು ಸರಿಗೊಳಿಸುವದೆಂದರೆ, ಇರುವೆಯ ಮೇಲೆ ಆನೆ ಸವಾರಿ ಮಾಡಿದಂತೆ! ಚರ್ಚಿಲರ ಈ ತರದ ಸರಿ ಮಾಡುವ ಭರವಸೆ ಸಾಲದು; ರಶ್ಯ, ಕಂಬನಿ, ಕೆಲಸ, ಬೆವರುಗಳು ಮಾತ್ರ ಸಾಲವು; ಸಾಮ್ರಾಜ್ಯಶಾಹಿತ್ವ ಸಾಲದು; ಜಪಾನರನ್ನು ಗೆಲ್ಲಲು ಯಂತ್ರ ಸಾಧನ ಸಾಲದು; ನಾವು ಹೊಸ ಪರಿಸ್ಥಿತಿಯೊಂದನ್ನು ಕಲ್ಪಿಸಬೇಕು. ಆ ಪರಿಸ್ಥಿತಿಯಲ್ಲಿ ಜಪಾನರ ಯಂತ್ರ ಲೋಕವೇ ಮುರಿದು ಹೋಗಬೇಕು. ಅಂಥಾ ಪರಿಸ್ಥಿತಿಯುಂಟಾಗಬೇಕಾದರೆ ಭಾರತವು ಸ್ವತಂತ್ರವಾಗಬೇಕು; ಚೀನವು ಸ್ವತಂತ್ರವಾಗುವಂತೆ.

ಇದು ವರೆಗೂ ಇದಾಗದಿರುವುದು ಒಂದು ದುರದೃಷ್ಟ. ಆದರೆ ಭಾರತದ ವಿಚಾರ, ಬ್ರಿಟನಿನಲ್ಲಿ ಹಾಗೂ ಅಮೆರಿಕದಲ್ಲಿ ಜನಮತವನ್ನು ಕೆರಳಿಸಿದರೆ ಇದೇನೂ ಅಸಂಭವವಲ್ಲ. ಭಾರತವನ್ನು ಸ್ವತಂತ್ರಗೊಳಿಸುವುದರ ಮೂಲಕ ಯುದ್ಧವನ್ನು ವಿಜಯಿಯಾಗಿಸುವುದೂ ಅಸಾಧ್ಯವಲ್ಲ. ನಾವು ಭಾರತವನ್ನು ಬಿಡುಗಡೆ ಮಾಡಿದರೆ ನಾವೇನೂ ನಷ್ಟ ಹೊಂದುವುದಿಲ್ಲ. ಮೇಲಾಗಿ ಮೂರನೇ ಮಹಾ ಯುದ್ಧವಿನ್ನೊಂದು ಆಗದಂತೆ ಮಾಡಿದ ಹಾಗೂ ಆಗುವುದು!

ಅರ್ಧಲಕ್ಷ ಜನ ಸೆರೆಮನೆಯಲ್ಲಿ

ಆಮ್ಮೆರಿ ಹೇಳಿಕೆ

"ಕಾಂಗ್ರೆಸ್ ಚಳವಳದ ನಿಮಿತ್ತ ಮಾರ್ಚ ೧೫ರ ವರೆಗೆ ೩೬೮೬೫ ಜನರನ್ನು ಸೆರೆಹಿಡಿಯಲಾಗಿದೆ. ೧೧೬೨೩ ಜನ ಸ್ಥಾನಬದ್ಧತೆಯಲ್ಲಿರುವರು. ಮಾರ್ಚ ೧ನೇ ತಾರೀಕು ವರೆಗೆ ೨೩೦೬೧ ಜನ ಬಂಧನದಲ್ಲಿದ್ದಾರೆ. ೮೦೦೦ ಜನ ಅನಿಶ್ಚಿತ ಅವಧಿ ವರೆಗೆ ಸ್ಥಾನಬದ್ಧತೆಯಲ್ಲಿರುವರು. ಈ ಅಂಕೆಯಲ್ಲಿ ಗಡಿನಾಡಿನ ಬಂಧನ ಸೇರಿಲ್ಲ. ಮಹಿಳೆಯರೆಷ್ಟು ಜನ ಬಂಧಿತರಾಗಿರುವರೆಂದು ತಿಳಿದಿಲ್ಲ. ಛಡೀ ಶಿಕ್ಷೆ ಹೆಚ್ಚಿಗೆ ಕೊಡಲ್ಪಟ್ಟಿಲ್ಲ ೧೮ ವರ್ಷಕ್ಕಿಂತ ಕೆಳಗಿನ ಎಷ್ಟು ಜನರಿಗೆ ಛಡೀ ಶಿಕ್ಷೆ ಕೊಡಲ್ಪಟ್ಟಿದೆಯೆಂದು ಗೊತ್ತಾಗಿಲ್ಲ." ಹೀಗೆಂದು ಅಮೆರಿ ಪಾರ್ಲಿಮೆಂಟಿನಲ್ಲಿ ಹೇಳಿದರು.

'ಹಿಂದೂಪತ್ರಿಕೆ.'

ನಮ್ಮನ್ನಗಲಿದ
ಡಾಕ್ಟರ್ ವಿಟ್ಠಲ ಶೆಟ್ಟರು
(ಜೀವನ ಪರಿಚಯ)

—ಕಯ್ಯಾರ ಕಿಞ್ಞಣ್ಣ ರೈ

ಆರಡಿ ಎತ್ತರದ ಉನ್ನತ ಶರೀರ, ಇಂಥಾ ಎತ್ತರಕ್ಕೊಪ್ಪುವ ನಪ್ಪುಪ್ಪ ದೇಹ, ಸಣ್ಣ ಕ್ರಾಪಿನ ದೊಡ್ಡ ತಲೆ, ಆಗಲವಾದ ಮುಖಕ್ಕೆ ಅಲಂಕಾರವಾದ ಮೀಸೆ, ಖಾದೀ ದೋತಿ, ಬಿಳಿ ಶರ್ಟು, ಇಡೀ ದೇಹವನ್ನೇ ಮುಚ್ಚುವ ಬಣ್ಣದ ಶಾಲು, ಸಮುದ್ರದ ಘೋಷಕ್ಕೆ ಸದೃಶವಾದ ಗಂಭೀರ ಧ್ವನಿ—ಇಂಥಾ ಭವ್ಯ ವ್ಯಕ್ತಿತ್ವವುಳ್ಳ ಮಹನೀಯರನ್ನು—ಡಾ| ಕೆ. ವಿಟ್ಠಲ ಶೆಟ್ರನ್ನು ೧೯೩೭ರ ಇತಿಹಾಸ ಪ್ರಸಿದ್ಧ ಚುನಾವಣೆಯ ಕಾಲದಲ್ಲಿ ಮಂಗಳೂರಲ್ಲಿ ಮಾತ್ರವಲ್ಲ, ಜಿಲ್ಲೆಯ ಮೂಲೆ ಮೂಲೆಗಳಲ್ಲಿ, ಎಲ್ಲಿ ನೋಡಿದರಲ್ಲಿ ಜಿಲ್ಲೆಯ ಜನತೆ ಕಾಣಬಹುದಿತ್ತು. ಕಾಂಗ್ರೆಸು ಪಕ್ಷ ದೆದುರು ಜಸ್ಟಿಸ್ ಪಾರ್ಟಿಯು ತನ್ನ ಕೊನೆಯ ಕಾಲದ ಹೋರಾಟ ಕೊಡಲು ನಿಶ್ಚಯಿಸಿತ್ತು. ಡಾ| ಕೆ. ವಿಟ್ಠಲ ಶೆಟ್ಟರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಚೇರ್‌ಮೇನರೇ ಆಗಿದ್ದಾರೆಂದಮೇಲೆ ಈ ಚುನಾವಣೆಯಲ್ಲಿ ಕಾಂಗ್ರೆಸಿಗೆ ಯಶಸ್ಸು ತರುವಲ್ಲಿ ಅವರ ಜವಾಬ್ದಾರಿ ಹಿರಿದಾಗಿತ್ತು. ಮದ್ರಾಸ್ ನ್ಯಾಯವಿಧಾಯಕ ಸಭೆಗೆ ನಮ್ಮ ಜಿಲ್ಲೆಯ ನಾಲ್ವರು ಕಾಂಗ್ರೆಸ್ ಪಕ್ಷದ ಸದಸ್ಯರೂ—ಶ್ರೀಗಳಾದ ಕಾರಂತ, ಎ. ಬಿ. ಶೆಟ್ಟಿ, ಬಾಳಿಗ, ಈಶ್ವರ ಇವರು—ಪ್ರಬಲ ಬಹುಮತದಿಂದ ಆರಿಸಿ ಬಂದರು. ಇಂಥಾ ಅಭೂತಪೂರ್ವ ಕಾಂಗ್ರೆಸಿನ ವಿಜಯದಲ್ಲಿ ಡಾ| ವಿಟ್ಠಲ ಶೆಟ್ರ ಸಾಹಸವೂ ಬಹಳವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಎದುರು ಪಕ್ಷದ, ಜಸ್ಟಿಸ್ ಪಾರ್ಟಿ ಮುಂದಾಳು, ಇವರ ಅಣ್ಣಂದಿರೇ ಆದ ದಿವಾನ್ ಬಹದ್ದೂರ್ ಮಹಾಬಲ ಹೆಗ್ಗಡೆಯವರು; ಮಂಗಳೂರು ಸರ್ಕಲ್‌ಗೆ ಉಮೇದ್ವಾರರು ಇವರ ಸಮೀಪದ ಬಂಧು ಶ್ರೀಮಾನ್ ಲಕ್ಷ್ಮಪ್ಪ ರೈಗಳು. ಹೀಗಿದ್ದರೂ ರಾಜಕೀಯ ರಂಗದಲ್ಲಿ, ನ್ಯಾಯಕ್ಕಾಗಿ ಹೋರಾಡುವಲ್ಲಿ, ಜಾತಿ ಬಾಂಧವ್ಯಗಳನ್ನೆಲ್ಲಾ ಬದಿಗೊತ್ತಿ ಯೋಧನಂತೆ ಹೋರಾಡಿ ಕಾಂಗ್ರೆಸಿನ ಕೀರ್ತಿಧ್ವಜವು ನಮ್ಮ ಜಿಲ್ಲೆಯಲ್ಲಿ ಮುಗಿಲು ಮುಟ್ಟುವಂತೆ ಮಾಡಿದ ಮುಂದಾಳುಗಳಲ್ಲಿ ಡಾ| ವಿಟ್ಠಲ ಶೆಟ್ಟರೂ ಓರ್ವ ಹಿರಿಯರು.

ಇದೇ ಸಂದರ್ಭದಲ್ಲಿ ಡಾ| ವಿಟ್ಠಲ ಶೆಟ್ಟರೊಡನೆ ನನ್ನ ಮೊದಲ ಪರಿಚಯವಾದುದು. ನಾನಾಗ ವಿದ್ಯಾರ್ಥಿ. ಕಾಂಗ್ರೆಸ್ಸಿನ ವಿಜಯಕ್ಕಾಗಿ ನಾವು ವಿದ್ಯಾರ್ಥಿ ಸಂಘದವರೂ ಸ್ವಯಂಸೇವಕರಾಗಿ ದುಡಿಯುತ್ತಿದ್ದೆವು. ಅಲ್ಲಲ್ಲಿ ಸಭೆಗಳನ್ನು ಸೇರಿಸುತ್ತಿದ್ದೆವು; ಭಾಷಣ ಮಾಡುತ್ತಿದ್ದೆವು; ಘೋಷಣೆಗೈಯುತ್ತಿದ್ದೆವು. ಕಿರಿಯರ ಉತ್ಸಾಹ ಎಷ್ಟಿದ್ದರೂ ಹಿರಿಯರ ಪ್ರಭಾವವೇ ಯಾವಾಗಲೂ ಹಿರಿದು. ಡಾ| ಶೆಟ್ಟರು ಸಭೆಗಳಿಗೆ ಬಂದರೆಂದರೆ, ಸಭೆಯ ಅಧ್ಯಕ್ಷರಾಗಿದ್ದರೆಂದರೆ ಆ ದಿನದ ಒಂದು ಗೆಲವೇ ಬೇರೆ ತ್ತು. ಇಂಗ್ಲಿಷ್ ಕನ್ನಡಗಳಲ್ಲಿ ನುರಿತ ವಾಗ್ಮಿಯಾಗಿದ್ದರೂ ಡಾ| ಶೆಟ್ರು ಸ್ವಚ್ಛ ಸುಂದರ ತುಳು ಭಾಷೆಯಲ್ಲಿಯೇ ಭಾಷಣ ಕೊಡುವುದು ಸಂಪ್ರದಾಯ. ಒಮ್ಮೆ ಉತ್ತರ ಭಾರತದಿಂದ ಹಿಂದೀ ಪ್ರಚಾರಕರೊಬ್ಬರು ಮಂಗಳೂರಿಗೆ ಬಂದಿದ್ದರು. ಅವರು ಕಾಳೇಲ್ಕರ್ ಎಂದು ನನ್ನ ನೆನಪು. ಮೈದಾನಿನಲ್ಲಿ ಸಭೆ. ಡಾ| ಶೆಟ್ಟರೇ ಅಧ್ಯಕ್ಷರು. ಉಪನ್ಯಾಸಕರು ಹಿಂದೀ ಭಾಷೆಯ ಕುರಿತು ಸ್ಫೂರ್ತಿಮಯ ಭಾಷಣವಿತ್ತರು. ನನ್ನ ಹತ್ತಿರ ಇದ್ದ ಗೆಳೆಯರೊಬ್ಬರು ಇನ್ನು ಆರು ತಿಂಗಳೊಳಗೆ ಹಿಂದೀ ಕಲಿತೇ ಬಿಡುತ್ತೇನೆಂದು ಅಲ್ಲಿಯೇ ಪ್ರತಿಜ್ಞೆ ಮಾಡಿದರು. ಕೊನೆಗೆ ಅಧ್ಯಕ್ಷರ ಭಾಷಣ ಪ್ರಾರಂಭವಾಯಿತು; ಹಿಂದಿಯಲ್ಲಿ! ಎಲ್ಲರಿಗೂ ಬೆರಗು! ತುಳು ಮಾತನಾಡುವ ಅಧ್ಯಕ್ಷರು ಹಿಂದಿಯಲ್ಲಿ ಮಾತನಾಡುತ್ತಾರೆ! ಡಾ| ವಿಟ್ಠಲ ಶೆಟ್ರು ಕೇವಲ ಮಾತಿನ ಮಲ್ಲರೇ ಇರಲಿಲ್ಲ; ಕೃತಿಯಲ್ಲಿ ತಂದು ತೋರಿಸುವ ಆದರ್ಶ ಮುಂದಾಳುಗಳಾಗಿದ್ದರು.

ಡಾ| ಶೆಟ್ಟರೊಡನೆ ಮುಂದೆ ನನ್ನ ಹೆಚ್ಚಿನ ಪರಿಚಯವಾದದ್ದು ಕೆರೆಹಾರಿನಲ್ಲಿ ಹಯ್ಯರ್ ಎಲಿಮೆಂಟರಿ ಶಾಲೆಯೊಂದನ್ನು ಸ್ಥಾಪಿಸಲು ನಾವು ಪ್ರಯತ್ನಿಸಿದಾಗ. ಇದ್ದ ಎಲಿಮೆಂಟರಿ ಶಾಲೆಯನ್ನು ಹಯ್ಯರ್ ಎಲಿಮೆಂಟರಿ ಮಾಡುವ ಹಂಚಿಕೆ ನಾವು ಹೂಡಿದೆವು. ಪುಣ್ಯಕ್ಕೆ, ಆಗ ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರು ಡಾ| ವಿಟ್ಠಲ ಶೆಟ್ಟರೇ ಇದ್ದರು. ಡಾ| ಶೆಟ್ರ ಮುಂದೆ ನಮ್ಮ ಸೂಚನೆ ಮಂಡಿಸಿದೆವು. ನಾವೆಷ್ಟು ಉತ್ಸಾಹದಿಂದ, ಆತುರದಿಂದ ಹಯ್ಯರ್ ಎಲಿಮೆಂಟರಿ ಆಗಬೇಕೆಂದು ಸೂಚಿಸಿದೆವೋ, ಕಾರ್ಯ ಕೈಕೊಂಡೆವೋ, ಅಷ್ಟೇ ಉತ್ಸಾಹದಿಂದ—ಸರಕಾರವು ಆಕ್ಷೇಪಿಸುತ್ತಿದ್ದರೂ—ಪ್ರೆಸಿಡೆಂಟ್ ಶೆಟ್ಟರು ಅದಕ್ಕೆ ಪ್ರೋತ್ಸಾಹವಿತ್ತರು. ಬೇಕಾದ ಕಾರ್ಯಕ್ರಮ ಕೈಕೊಂಡರು. ಸ್ವತಃ ಬಂದು ಊರಿನವರು ಕಟ್ಟಿಸುವ ಶಾಲಾ ಕಟ್ಟಡದ ಶಂಖು ಸ್ಥಾಪನೆಯನ್ನೂ ಮಾಡಿದರು. ಊರವರನ್ನು ಹುರಿದುಂಬಿಸಿದರು. ನಮ್ಮ ನಿರೀಕ್ಷೆಯಷ್ಟು ತ್ವರೆಯಲ್ಲಿಯೇ ಶಾಲೆ ಹಯ್ಯರ್ ಎಲಿಮೆಂಟರಿಯಾಗಿ ಮಾರ್ಪಟ್ಟಿತು. ಊರವರು ನಾಲ್ಕು ಸಾವಿರಕ್ಕೂ ಮಿಕ್ಕಿದ ಧನ ಸಂಗ್ರಹವಿತ್ತು ಕಟ್ಟಡವನ್ನೂ ಕಟ್ಟಿಸಿದರು. ಈಗ ಈ ಶಾಲೆ ಡಿಸ್ಟ್ರಿಕ್ಟ್ ಬೋರ್ಡು ಹಯ್ಯರ್ ಎಲಿಮೆಂಟರಿಗಳಲ್ಲಿ ಒಂದು ಉತ್ತಮ ಶಾಲೆಯಾಗಿದೆ.

ಸಾರ್ವಜನಿಕ ಕಾರ್ಯದಲ್ಲಿ, ವಿದ್ಯಾ ಪ್ರಚಾರದಲ್ಲಿ, ಜಿಲ್ಲಾ ಬೋರ್ಡಿನ ಕಾರ್ಯಕಲಾಪಗಳಲ್ಲಿ ಡಾ| ಶೆಟ್ಟರ ಉತ್ಸಾಹ, ಸಾಹಸ, ಕಾರ್ಯಪಟುತ್ವಗಳು ಅಸಮಾನವಿದ್ದವು.

ಡಾ| ಶೆಟ್ಟರು ಜನಪ್ರಿಯರಿದ್ದರು. ಜಿಲ್ಲೆಯ ಎಲ್ಲಾ ಜಾತಿಮತದವರೊಡನೆ, ಅದರ ಮುಂದಾಳುಗಳೊಡನೆ ಸ್ನೇಹದಿಂದಿದ್ದರು. ಅಖಿಲಭಾರತದ ವಿಷಬೀಜದ ಅಂಕುರವೆಂದು ನಮ್ಮ ಮಂಗಳೂರಲ್ಲಿಯೂ, ಒಂದು ವರ್ಷ ಹಿಂದೆ ಹಿಂದೂ ಮುಸ್ಲಿಂ ಅಂತಃಕಲಹ ಆರಂಭವಾಗುವ ಸೂಚನೆಯಿತ್ತು. ಡಾ| ಶೆಟ್ಟರು ಆಗ ಮುಂಬಂದು, ಉಭಯ ಪಕ್ಷದ ಮುಂದಾಳುಗಳನ್ನು ಕರೆದು 'ಸೌಹಾರ್ದ ಮಂಡಳಿ'ಯನ್ನು ಏರ್ಪಡಿಸಿ ಪರಿಸ್ಥಿತಿಯನ್ನು ಸಮಾಧಾನಕ್ಕೆ ತಂದರು. ಯಾರೇ ಆಗಲಿ, ಕೊಟ್ಟ ದೂರನ್ನು ತೆರೆದ ಕಿವಿಯಿಂದ ಕೇಳುತ್ತಿದ್ದರು. ನ್ಯಾಯವನ್ನು ಮಾಡಲು ಸದಾ ಸಿದ್ಧರಿದ್ದರು. ಯಾವುದೇ ಹೊತ್ತಿಗೆ ಭೇಟಿಗೆ ಹೋಗಲಿ ತಡವಿಲ್ಲದೆ ಕರೆದು ಮಾತನಾಡುತ್ತಿದ್ದರು. ಅಧಿಕಾರದಲ್ಲಿರುವವರಲ್ಲಿ ಈ ಸ್ವಭಾವವಿರುವುದು ಬಹಳ ಅಪರೂಪ; ಯಾವುದೇ ಸಲವಾದರೂ ಸಂದರ್ಶಕರು ಅವರಲ್ಲಿಂದ ಅತೃಪ್ತರಾಗಿ ಮರಳುವಂತಿರಲಿಲ್ಲ. ಅದು ಅವರಲ್ಲಿದ್ದ ಒಂದು ವೈಶಿಷ್ಟ್ಯವೆನಬೇಕು. ಕೊನೆಯ ಸಲ ನಾನವರನ್ನು ಕಂಡಾಗ ಅವರ ಆರೋಗ್ಯ ಬಹಳ ಕೆಟ್ಟಿತ್ತು. ನಾನು ಅವರ ಆರೋಗ್ಯದ ವಿಷಯ ಕೇಳಲು, 'ನಾನೀಗ ಎಷ್ಟೋ ಹುಷಾರಾಗಿದ್ದೇನೆ' ಎಂದರು. 'ಆದರೂ ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ' ಎಂದು ಹೇಳಿದೆ. 'ಎಷ್ಟೋ ಮುಖ್ಯ ಕೆಲಸಗಳು ಇನ್ನೂ ಬಾಕಿಯುಂಟು; ಅದಕ್ಕಾಗಿ ನಾನು ಹೋಗದೆ ಆಗುವುದಿಲ್ಲ; ಮತ್ತೆ ಈ ಕೆಲಸಗಳನ್ನು ಮಾಡುತ್ತಿರುವಾಗ ನನಗೆ ಆಯಾಸವೇ ತೋರುವುದಿಲ್ಲ' ಎಂದರು. ಶರೀರ ಕುಗ್ಗಿದ್ದರೂ ಅವರ ಆತ್ಮಶಕ್ತಿ ಅಷ್ಟು ದೃಢವಿತ್ತು. ಸ್ಥಳೀಯ ಸಂಸ್ಥೆಗಳ ಆಡಳಿತವೆಂಬುದು ಅವರಿಗೆ ಹಾಗೆ ರಕ್ತಗತವಾಗಿ ಹೋಗಿತ್ತು!

ಡಾ| ವಿಟ್ಠಲ ಶೆಟ್ಟರು ೧೮೭೧ನೇ ಇಸವಿ ಅಕ್ಟೋಬರ್ ತಿಂಗಳ ೧೧ನೇ ತಾರೀಕಿನ ದಿನ ಮಂಗಳೂರಲ್ಲಿ ಹುಟ್ಟಿದರು. ಇವರ ತಂದೆಯವರು ಕೊಡಿಯಾಲಗುತ್ತು ನಾಣ ಶೆಟ್ರು; ತಾಯಿ ಚೆನ್ನಮ್ಮ ಶೆಟ್ಟಿ—ಕೊಡಿಯಾಲಗುತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧವಾದ ಬಂಟ ಮನೆತನ. ಇವರಿಗೆ ಅನಾದಿಯಿಂದಲೆ ಸರಕಾರದಿಂದ ಗೌರವವಿದೆ. ಡಾ| ಶೆಟ್ರ ಕುಟುಂಬದ ಮನೆತನ ಹರೀಕಳ ಗ್ರಾಮದ ದಬ್ಬೆಲು. ದಿವಾನ್ ಬಹದ್ದೂರ್ ಮಹಾಬಲ ಹೆಗ್ಗಡೆಯವರು ಇವರ ದೊಡ್ಡಮ್ಮನ ಮಗ. ಅಳಿಯ ಸಂತಾನದ ಕುಟುಂಬದ ಇವರೆಲ್ಲರೂ ಒಂದೇ ಮನೆತನಕ್ಕೆ ಸೇರಿದವರು. ಡಾ| ಶೆಟ್ಟರಿಗೆ ಎಕ್ಕಾರು ಗುತ್ತಿನಿಂದ ಪ್ರಥಮ ವಿವಾಹವಾಯಿತು. ಮೊದಲನೆಯ ಪತ್ನಿ ಅಕಾಲ ನಿಧನ ಹೊಂದಲು, ಹೇರೂರು ಗುತ್ತಿನಿಂದ ದ್ವಿತೀಯ ವಿವಾಹವಾಗಿ, ಎರಡನೆಯ ಪತ್ನಿಯಲ್ಲಿ ಅವರಿಗೆ ಮೂವರು ಹುಡುಗಿಯರೂ ಒಬ್ಬ ಹುಡುಗನೂ ಹೀಗೆ ನಾಲ್ವರು ಮಕ್ಕಳಿದ್ದಾರೆ.

ಶ್ರೀ. ಶೆಟ್ರ ಪ್ರಾಥಮಿಕ ವಿದ್ಯಾಭ್ಯಾಸವು ಪ್ರಥಮ ತರಗತಿಯಿಂದಲೇ ಮಂಗಳೂರು ಸ್ಯೆಂಟ್ ಎಲಾಶಿಯಸ್ ಕಾಲೇಜಿನಲ್ಲಿ ನಡೆಯಿತು. ಇಂಟರ್‌ಮಿಡಿಯೇಟ ವರೆಗೆ ಇಲ್ಲಿ ಕಲಿತು, ಮುಂದೆ ಮೆಡಿಕಲ್ ಡಿಗ್ರಿಗಾಗಿ ಹೈದರಾಬಾದಿಗೆ ಹೋದರು. ಆ ಮೇಲೆ ಅಲ್ಲಿಂದ ಕಲ್ಕತ್ತಕ್ಕೆ ತೆರಳಿ, ಅಲ್ಲಿ ಕೆಲಕಾಲ ಅಲ್ಬರ್ಟ್ ವಿಕ್ಟೋರಿಯಾ ಹಾಸ್ಪಿಟಲಲ್ಲಿ ಹೌಸ್ ಸರ್ಜನರಾಗಿದ್ದರು. ತಾಯ್ತಂದೆಯವರಿಗೆ ಒಬ್ಬನೇ ಮಗನಾಗಿದ್ದರಿಂದ, ಆ ಮೇಲೆ ಮಂಗಳೂರಿಗೇ ಬಂದು ೧೦ ವರ್ಷಗಳ ಕಾಲ 'ಪ್ರೇಕ್ಟಿಸ್' ನಡೆಸಿದರು. ಈ ಸಂದರ್ಭದಲ್ಲಿ ಇವರು ವಜ್ರದ ವ್ಯಾಪಾರವನ್ನೂ ಮಾಡುತ್ತಿದ್ದರು. ವಜ್ರ ಪರೀಕ್ಷೆಯಲ್ಲಿ ಶ್ರೀ. ಶೆಟ್ಟರು ಅತ್ಯಂತ ನಿಪುಣರಿದ್ದರು.

೧೯೨೫ನೇ ಇಸವಿಯಿಂದಲೇ ಇವರು ಮಂಗಳೂರು ಮುನ್ಸಿಪಲ್ ಕೌನ್ಸಿಲರಾಗಿದ್ದರು. ಆ ಮೇಲೆ ಅದರ ವೈಸ್ ಚೇರ್‌ಮೇನರಾಗಿ ಮುಂದೆ, ೧೯೩೧ ನವಂಬರ ೧೨ರಿಂದ ೧೯೩೪ರ ಎಪ್ರಿಲ್ ಅಂತ್ಯದ ವರೆಗೆ ಮಂಗಳೂರು ನಗರ ಸಭೆಗೆ ಎರಡು ಸಲ ಚೇರ್‌ಮೇನರಾಗಿ ಆರಿಸಿ ಬಂದರು. ಇವರ ಆಡಳಿತದಲ್ಲಿಯೇ ಮಂಗಳೂರಿಗೆ ವಿದ್ಯುಚ್ಛಕ್ತಿ ಬಂತು; ಮಾರ್ಗಗಳಿಗೆ ತಾರು ಹಾಕಲ್ಪಟ್ಟಿತು; ಪ್ರಾಮುಖ್ಯ ರಸ್ತೆಗಳೆಲ್ಲವೂ ವಿಸ್ತರಿಸಲ್ಪಟ್ಟವು. ಮುನ್ಸಿಪಲ್ ಸಾರ್ವಜನಿಕ ವಾಚನಾಲಯವು ಸ್ಥಾಪಿತವಾಯಿತು. ಮುನ್ಸಿಪಲ್ ನೌಕರರೆಲ್ಲರ ಸಂಬಳವು ಹೆಚ್ಚಿಸಲ್ಪಟ್ಟಿತು; ಹೀಗೆ, ಇವರ ಅಧಿಕಾರ ಕಾಲದಲ್ಲಿ ಅನೇಕಾನೇಕ ನಗರೋಪಯುಕ್ತ ಕಾರ್ಯಗಳಾಗಿವೆ. ಉಪ್ಪಿನ ಸತ್ಯಾಗ್ರಹ ಕಾಲದಲ್ಲಿ ಮುನ್ಸಿಪಾಲಿಟಿಯಲ್ಲಿ ಸರಕಾರದ ಕಾಂಗ್ರೆಸ್ ಮರ್ದನ ನೀತಿಯನ್ನು ಖಂಡಿಸಿ ಠರಾವು ಮಾಡಿದ್ದರು. ೧೯೩೪ರಲ್ಲಿ ಮಂಗಳೂರು ಮುನ್ಸಿಪಲ್ ಚೇರ್‌ಮೇನ್ ಪದವಿಯನ್ನು ಶ್ರೀ ಬಾಳಿಗರಿಗೆ ಬಿಟ್ಟುಕೊಟ್ಟು, ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರಾದರು. ಡಾ| ಶೆಟ್ರು ಮಂಗಳೂರು ಮುನ್ಸಿಪಲ್ ಚೇರ್‌ಮೇನರಾದಂದಿನಿಂದ ತನ್ನ ಸ್ವಂತ ಡಾಕ್ಟರೀ ಕೆಲಸಕ್ಕೆ ತಿಲಾಂಜಲಿಯಿತ್ತು, ಸಾಯುವ ಕೊನೆಯ ಗಳಿಗೆ ವರೆಗೂ, ದಿನದ ಇಪ್ಪತ್ತನಾಲ್ಕು ತಾಸುಗಳನ್ನೂ ಎಂಬಂತೆ, ಸಾರ್ವಜನಿಕ ಸೇವೆಯಲ್ಲಿಯೇ ಸವೆದರು. ಮಂಗಳೂರು ಮುನ್ಸಿಪಲ್ ಚೇರ್‌ಮೇನರಾದವರಲ್ಲಿ ಇವರಷ್ಟು ಜನಪ್ರಿಯರೂ, ನಗರಸಭಾ ಕಾರ್ಯಮಗ್ನರೂ ಸಾರ್ವಜನಿಕ ಸೇವಾತತ್ಪರರೂ ಇದುವರೆಗೆ ಬೇರಾರೂ ಆಗಿಲ್ಲ.

ಸ್ವಂತ ಉದ್ಯೋಗವನ್ನು ಬಿಟ್ಟು ನಗರ ಸಭೆಯ ಆಡಳಿತದಲ್ಲಿ ಮಗ್ನರಾಗಿ ಪಡೆದ, ಡಾ| ಶೆಟ್ರ ಸ್ಥಳೀಯ ಸಂಸ್ಥೆಗಳ ಆಡಳಿತದ ಪರಿಪಕ್ವಾನುಭವವು ಅವರ ಜಿಲ್ಲಾ ಬೋರ್ಡು ಆಡಳಿತದಲ್ಲಿ ಇನ್ನಷ್ಟು ಪ್ರಭೆಬೀರಿದೆ. ೧೯೩೪ನೇ ಜೂನ್ ೨೭ರಿಂದು ಅವರು ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷ ಸ್ಥಾನವನ್ನೇರಿದರು. ೧೯೨೭ರಿಂದಲೇ ಅವರು ಜಿಲ್ಲಾ ಬೋರ್ಡು ಸದಸ್ಯರಾಗಿದ್ದರು. ಇಡೀ ಮದ್ರಾಸು ಪ್ರಾಂತದ ಡಿ| ಬೋ| ಪ್ರೆಸಿಡೆಂಟರಲ್ಲಿ, ಅವರು ಎಳೆಯವರೂ, ಮತ್ತು ಅತ್ಯಂತ ಪ್ರಸಿದ್ಧರಲ್ಲೊಬ್ಬರೂ ಆಗಿದ್ದರು. ಅವರ ಅಧಿಕಾರಕಾಲದಲ್ಲಿ ಸಾರ್ವಜನಿಕರಿಂದ ರೂಪಾಯಿ ೮೦,೦೦೦/ಗಳಷ್ಟು ಬೋರ್ಡಿಗೆ ಆಸ್ಪತ್ರೆ ಶಾಲಾ ಕಟ್ಟಡಗಳಾಗಿ ಕಾಣಿಕೆ ಬಂದಿವೆ! ಸ್ವತಃ ಡಾಕ್ಟರಿದ್ದು, ಸಾರ್ವಜನಿಕ ಆರೋಗ್ಯದ ಬಗ್ಗೆ ಅವರಿಗೆ ಖಚಿತ ಆಸಕ್ತಿಯಿತ್ತು. ಪ್ರತಿಯೊಂದು ಜಿಲ್ಲಾ ಬೋರ್ಡು ಆಸ್ಪತ್ರೆ, ಡಿಸ್ಪೆನ್ಸರಿಗಳಿಗೆಂಬಂತೆ ಮೆಟರ್ನಿಟಿ ವಾರ್ಡುಗಳು ಸೇರಿಸಲ್ಪಟ್ಟುವು. ಮಾರ್ಗ ಮಾಡಿಸುವ ಮತ್ತು ಸಂಕ ಕಟ್ಟಿಸುವ ವಿಚಾರದಲ್ಲಿ ಅವರದು ಪಕ್ವವಾದ ಅನುಭವ. ಜಿಲ್ಲಾ ಬೋರ್ಡು ಪ್ರೆಸಿಡೆಂಟರಾಗಿದ್ದವರಲ್ಲಿ ಇವರಷ್ಟು ಜಿಲ್ಲಾ ಸಂಚಾರ ಮಾಡಿದವರೂ, ಗ್ರಾಮ ಗ್ರಾಮಗಳಲ್ಲಿ ಜನರ ಪರಿಚಯ ಮಾಡಿಕೊಂಡವರೂ, ಜನಪ್ರಿಯರೂ ಬೇರಿಲ್ಲ. ಡಾ| ಶೆಟ್ಟರು ಎರಡು ಸಲ ಜಿಲ್ಲಾ ಬೋರ್ಡಿನಿಂದ ಮದ್ರಾಸು ವಿಶ್ವವಿದ್ಯಾಲಯದ ಸೆನೆಟಿನ ಸದಸ್ಯರಾಗಿ ಆರಿಸಲ್ಪಟ್ಟಿರುವರು.

ವಾಣಿಜ್ಯ, ಸಂಚಾರ, ಸೌಕರ್ಯಗಳ ದೃಷ್ಟಿಯಿಂದ ಅವರ ಅಧಿಕಾರ ಕಾಲದಲ್ಲಿ ಆದ ಸಂಕಗಳು ಅತ್ಯಂತ ಪ್ರಾಮುಖ್ಯವಿವೆ. ಉದಾಹರಣೆಗೆ ಶಿವಪುರ ಮತ್ತು ಕಟೀಲು ಸಂಕಗಳು ೧೯೩೭—೪೦ರಲ್ಲು ಕಟ್ಟಿಸಲ್ಪಟ್ಟವು. ಯುದ್ಧ ಕಾಲವಾಗಿ ಸಂಕಕ್ಕೆ ಬೇಕಾದ ಕಬ್ಬಿಣ ಮೊದಲಾದವು ದೊರಕದೆ ಇರುವ ಪ್ರಸಂಗವೊದಗದಿದ್ದರೆ, ಇಷ್ಟರಲ್ಲಿಯೇ ಪುತ್ತಿಗೆ ಸಂಕವೂ ತೆಕ್ಕಿಲ್ ಸಂಕವೂ ಆಗಿಬಿಡುತಿತ್ತು.

ವಿದ್ಯಾ ಪ್ರಚಾರದಲ್ಲಿಯೂ ಅವರ ಶ್ರದ್ಧೆ ಬಹಳವಿತ್ತು. ೧೯೩೮ರ ವರೆಗೆ ಉಪಾಧ್ಯಾಯರು ಅವರ ಸಂಬಳದಲ್ಲಿ ರೂಪಾಯಿಗೆ ೦—೧—೬ ಆಣೆಯಿಂದ ೦—೧—೦ ವರೆಗಿನ ಕಡಿತಕ್ಕೊಳಗಾಗಿದ್ದರು. ೧೯೩೮ರಲ್ಲಿ ಅವರ ಸಂಕಷ್ಟ ಪರಿಹಾರವಾಯಿತು. ಉಪಾಧ್ಯಾಯರನ್ನು ಆದಷ್ಟು ಮಟ್ಟಿಗೆ ಅವರವರ ಊರಲ್ಲಿಯೇ ನೇಮಿಸುತ್ತಿದ್ದರು. ಅವರ ಅಧಿಕಾರ ಕಾಲದಲ್ಲಿ—ಸರಕಾರವು ಮೇಲಿನ ತರಗತಿಗಳನ್ನು ತೆರೆಯಲು ಆಕ್ಷೇಪವೆತ್ತುತ್ತಿದ್ದರೂ—ಪೆರಡಾಲ, ಯಡನ್ನೀರ್, ಕಾಸರಗೋಡು, ಮೂಡಬಿದ್ರಿಗಳಲ್ಲಿ ನಾಲ್ಕು ಹೊಸ ಹಯ್ಯರ್ ಎಲಿಮೆಂಟರಿ ಶಾಲೆಗಳಾದವು. ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಸರಕಾರವು ಕಡಿತವನ್ನು ಮಾಡಲು ಬಹಳ ಒತ್ತಾಯ ಮಾಡುತ್ತಿದ್ದರೂ, ಅವರು ಆ ಒತ್ತಾಯವನ್ನು ವಿಚಕ್ಷಣತೆಯಿಂದ ತಪ್ಪಿಸಿಕೊಂಡು ಆಡಳಿತ ನಡೆಸುತ್ತಿದ್ದರು. ಕಾರ್ಕಳ ಮತ್ತು ಉಡುಪಿ ಹೈಸ್ಕೂಲುಗಳಿಗೆ ಅವರ ಅಧಿಕಾರ ಕಾಲದಲ್ಲಿ 'ಹಾಲ್'ಗಳು ಸೇರಿಸಲ್ಪಟ್ಟವು. ಉಡುಪಿ ಹೈಸ್ಕೂಲನ್ನು ಮುನ್ಸಿಪಾಲಿಟಿಗೂ, ಕಾಸರಗೋಡು ಹೈಸ್ಕೂಲನ್ನು ಬಾಸಲ್ ಮಿಶನಿಗೂ ಬಿಟ್ಟುಕೊಡುವ ವಿಷಯ ಅವರು ವಿರೋಧವಾಗಿದ್ದರು. ಡಾ| ಶೆಟ್ರ ಆಡಳಿತ ಕಾಲದಲ್ಲಿಯೇ ಜಿಲ್ಲಾ ಬೋರ್ಡಿಗೆ ಸುಂದರವಾದೊಂದು ಸಭಾಭವನವೂ ಕಟ್ಟಿಸಲ್ಪಟ್ಟಿತು.

ಆಡಳಿತದಲ್ಲಿ ಮಾತ್ರವಲ್ಲ ವೈಯುಕ್ತಿಕವಾಗಿಯೂ ಅವರು ಅನೇಕ ಸಾರ್ವಜನಿಕ ಕಾರ್ಯಗಳನ್ನು ಮಾಡಿದ್ದಾರೆ. ಅನೇಕ ಮುಷ್ಕರಗಳನ್ನು ಉಭಯ ಪಕ್ಷಗಳಿಗೂ ಸಮಾಧಾನಕರವಾಗಿ ಇತ್ಯರ್ಥಿಸಿದ್ದಾರೆ. ಕಯ್ಯೂರಲ್ಲಿ ನಡೆದ ಪೋಲೀಸರ ಅತ್ಯಾಚಾರದ ಆರೋಪದ ಕುರಿತು ಅಧಿಕಾರೇತರ ವಿಚಾರ ಮಂಡಳಿಯನ್ನೇರ್ಪಡಿಸಿ ಅಲ್ಲಿಗೆ ಹೋಗಿ ವಿಚಾರಣೆ ನಡೆಸಿದ್ದಾರೆ. ಹಿಂದೂ ಮುಸ್ಲಿಂ ದಂಗೆಯಾಗುವುದನ್ನು ನಿವಾರಿಸಿ ಐಕ್ಯಪ್ರಯತ್ನವನ್ನು ಸಾಧಿಸಿದ್ದಾರೆ. ಕಾಂಗ್ರೆಸಿನ ಕೀರ್ತಿಯನ್ನು ಜಿಲ್ಲೆಯ ಮೂಲೆಮೂಲೆಗಳಲ್ಲಿ ಹರಡಲು ತನ್ನಿಂದಾದ ಸೇವೆ ಸಲ್ಲಿಸಿದ್ದಾರೆ. ೧೯೩೪ರಲ್ಲು ಸರಕಾರದಿಂದ ದೊರೆತ 'ರಾವ್ ಬಹದ್ದೂರ್' ಬಿರುದನ್ನು ತ್ಯಜಿಸಿ, ಭಾರತದ ರಾಷ್ಟ್ರೀಯ ಗೌರವವನ್ನು ಮೆರೆಸಿದ್ದಾರೆ. ೧೯೪೧ರ ವೈಯುಕ್ತಿಕ ಸತ್ಯಾಗ್ರಹದಲ್ಲಿ ಸೆರೆಮನೆಯ ಸಂಕಷ್ಟ ಅನುಭವಿಸಿದ್ದಾರೆ; ದಂಡ ತೆತ್ತಿದ್ದಾರೆ. ಆದರೆ ಆ ಸಲದ ಸೆರೆಮನೆಯಿಂದ ಹೊರ ಬಂದವರೇ ಪುನಃ ಆರೋಗ್ಯ ಹೊಂದಲಿಲ್ಲ. ಅದೇ ಅವರಿಗೆ ಮೃತ್ಯುಪ್ರಾಯವೂ ಆಯಿತು! ನಮ್ಮ ಜಿಲ್ಲೆಯು ಓರ್ವ ಪ್ರಭಾವಶಾಲೀ ಮುಂದಾಳುವನ್ನು, ಪರಿಪಕ್ವ ಅನುಭವದ ಸಮರ್ಥ ಆಡಳಿತಗಾರರನ್ನು ಕಳಕೊಂಡಿತು! ರಾಷ್ಟ್ರೀಯ ಭಾರತದಲ್ಲಿ, ಇಂಥಾ ಅನುಭವಶಾಲಿಗೆ, ಡಾ| ವಿಟ್ಠಲ ಶೆಟ್ಟರಿಗೆ, ಮದ್ರಾಸು ಮಂತ್ರಿಮಂಡಳದಲ್ಲಿ ಖಂಡಿತವಾಗಿಯೂ ಸ್ಥಾನವೊಂದು ಕಾದಿಡಲ್ಪಟ್ಟಿದೆಯೆಂದು ಅನೇಕರು ಬಗೆದಿದ್ದರು. ಆದರೆ ಅವರ ಈ ಅಕಾಲ ನಿಧನದಿಂದ ಹಲವರ ಆ ಹಾರೈಕೆ ವ್ಯರ್ಥವಾಯಿತು! ಹೀಗೆ ನಮ್ಮ ಜಿಲ್ಲೆ ಮಾತ್ರವಲ್ಲ ಇಡೀ ಪ್ರಾಂತವೇ ಡಾ| ಶೆಟ್ಟರ ನಿಧನದಿಂದ ಮಹಾ ನಷ್ಟಕ್ಕೆ ಗುರಿಯಾಗಿದೆಯೆನಬೇಕು. ಅವರ ಅಕಾಲ ನಿಧನವು ಒಂದು ತುಂಬಲಾರದ ನಷ್ಟವಾಗಿದೆ.

ಸಮರಭೂಮಿಯ ಸಂಚಾರ

ಟುನಿಸಿಯಾ ಕದನ ಕೊನೆಗೊಂಡದ್ದು ಮಿತ್ರರಿಗೆ ಆನಂದವೇ ಆನಂದ. ಉತ್ತರ ಆಫ್ರಿಕದ ಕಡಲ ತೀರಕ್ಕೆ ಈಗ ಮಿತ್ರರೇ ಒಡೆಯರು. ಮೂರು ವರ್ಷಗಳ ಮಹಾ ಸಂಗ್ರಾಮದಲ್ಲಿ ದೊರಕಿದ ಈ ವಿಜಯವೆಂದರೆ, ಮಿತ್ರ ರಾಷ್ಟ್ರಗಳಲ್ಲೆಲ್ಲಾ ಇದರ ಆನಂದೋತ್ಸವ ಹೇಳ ತೀರದು. ಶತ್ರು ನಾಶವಾದ ಲೆಕ್ಕ ಹಾಕಿದಷ್ಟು ಮಿತ್ರರಿಗೆ ಆನಂದವು ಮೇರೆ ಮೀರುತ್ತಲಿದೆ. 'ಶತ್ರುಗಳ ಎರಡು ಸಾವಿರ ವಿಮಾನ ನಾಶವಾಯಿತು; ಎರಡು ಲಕ್ಷ ಸೈನಿಕರು ಸೆರೆಸಿಕ್ಕಿದರು; ಹದಿನೇಳು ಜನ ಸೇನಾ ನಾಯಕರೇ ಬಂದಿಗಳಾದರು. ಆರ್ನಿಮನಂಥಾ ಮಹಾ ಸೇನಾನಿಯೇ ನಮ್ಮ ಬಂಧನದಲ್ಲಿದ್ದಾನೆ. ನಾವು ಆಲೋಚಿಸಿದ್ದಕ್ಕಿಂತಲೂ ಹೆಚ್ಚಿನ ವಿಜಯವೇ ಇಲ್ಲಿ ದೊರಕಿದೆ. ಜರ್ಮನ್ ಸೇನೆಗೆ ಬಲವಂತವಾದ ಪೆಟ್ಟು ಬಿದ್ದಿದೆ. ಇನ್ನು ಜರ್ಮನಿಯೊಡನೆ ಸಂಧಾನವೇ ಇಲ್ಲ; ಪ್ರತೀಕಾರ ತೀರಿಸಿಯೇ ತೀರಿಸುವೆವು' ಎಂದು ಮಿತ್ರ ವೀರರು ಅರ್ಭಟಿಸುತ್ತಿದ್ದಾರೆ.

ಟುನಿಸಿಯಾ ಕಾಳಗದಿಂದ ಹಿಟ್ಲರನಿಗೆ ಅಪಾರ ನಷ್ಟವಾಯಿತೆಂಬುದು ಸಾವಿರ ಸತ್ಯ. ಆದರೆ ಇಷ್ಟು ದೀರ್ಘಕಾಲ ಈ ಹೋರಾಟವನ್ನೆಳೆದುದರಿಂದ ಆತನಿಗೆ ಲಾಭವೂ ಆಗಿದೆಯೆಂಬ ಬಗ್ಗೆ ಯಾರೂ ಕುರುಡರಾಗಬಾರದು. ರಶ್ಯದೊಡನೆ ಹೋರಾಡಿ ಹೋರಾಡಿ ಬಳಲಿದ್ದ ಜರ್ಮನರಿಗೆ, ಯೂರೋಪಿನಲ್ಲಿ ಸಿದ್ಧತೆ ಮಾಡಿಕೊಳ್ಳಲು ಕಾಲಾವಕಾಶ ಬೇಕಾಗಿತ್ತು ಅದಕ್ಕಾಗಿ ಇಷ್ಟು ದೀರ್ಘಕಾಲ ಮಿತ್ರರನ್ನು ಟುನಿಸಿಯಾದಲ್ಲಿ ತಡೆಹಾಕಿ, ಹಿಟ್ಲರ್ ಈ ಬಲಿದಾನ ಮಾಡಿದ್ದಾನೆ. ಮತ್ತೊಂದು ವಿಷಯವೆಂದರೆ, ಟುನಿಸಿಯದಲ್ಲಿ ಅಪರಿಮಿತ ಸೇನೆ ಕೈಸೆರೆ ಸಿಕ್ಕಿದ್ದು ಯುದ್ಧದಲ್ಲಿ ಹಿಂದೋಡುವುದು ಮಿತ್ರರದೊಂದು ಸಮರವಿಧಾನವಾದರೂ ಹಿಟ್ಲರನಿಗೆ ಬಹುಶಃ ಅದರಲ್ಲಿ ವಿಶ್ವಾಸವಿಲ್ಲವೆಂದು ತೋರುತ್ತದೆ ಸೋತ ಸೈನ್ಯವನ್ನು ಆತನು ಹಿಂದಕ್ಕೆ ಸರ್ವಥಾ ಕರೆಸಿಕೊಳ್ಳಲಾರನೇನೋ. ಏಕೆಂದರೆ ಸೋತ ಸೈನಿಕರನ್ನು ನೋಡಿ ಇತರರಿಗಾದರೂ ಅದೇ ಬುದ್ಧಿ ಬಂದರೆ! ಅಥವಾ ಒಂದು ಕಡೆಯಲ್ಲಿ ಸೋತು ಹಿಂದೋಡಿದವರು, ಇನ್ನೊಂದು ಕಡೆಯಲ್ಲಾದರೂ ಅದೇ ಬುದ್ಧಿಯನ್ನು ಮಾಡಿದರೆ? ಹಾಗಾಗಿ ಸೋತ ಸೈನ್ಯವನ್ನು ಯಾವಾಗ ಹಿಟ್ಲರ್ ತನ್ನ ಸೈನ್ಯದಲ್ಲಿ ಸೇರಿಸಿಕೊಳ್ಳಲಾರನೋ, ಆಗ ಅವರು ಶತ್ರುಗಳ ಕೈ ಸೇರುವುದೇ ಒಂದೇ ಒಂದು ಹಾದಿ. ಅದಕ್ಕೆ ಅಲ್ಲಿಂದ ಬಂದ ಸುದ್ದಿಗಳೂ ಆಧಾರವಿವೆ. ಜರ್ಮನ್ ಸೈನಿಕರು ಗುಂಪು ಗುಂಪಾಗಿ, ಸಾವಿರ ಸಾವಿರವಾಗಿ, ಮಿತ್ರರ ದಲಕ್ಕೆ ಸೆರೆಯಾಗಲು ಮುನ್ನುಗ್ಗಿ ಹೋಗುತ್ತಿದ್ದರಂತೆ! ಹಿಂದಿರುಗಿ ಹೋಗಿ ಹಿಟ್ಲರನ ಗುಂಡಿನೇಟಿಗೆ ಬಲಿಯಾಗುವುದಕ್ಕಿಂತ ಇದೇ ಅವರಿಗೆ ಒಳಿತೆಂದು ತೋರಿರಬೇಕು!

ಅಂತೂ ಸದ್ಯ ಯೂರೋಪಿನ ಮೇಲೆ ಧಾಳಿಯಾಗುವ ಮಾತುಗಳೇ ಎಲ್ಲಾ ಕಡೆಗಳಲ್ಲಿಯೂ ಕೇಳಿಬರುತ್ತದೆ. ಹಿಟ್ಲರನಾದರೂ ಯೂರೋಪಿನ ರಂಗಗಳನ್ನು ಬಲಪಡಿಸಿಕೊಂಡೇ ಇದ್ದಾನೆ. ಮಿತ್ರರು ಮೊದಲಾಗಿ ಇಟಲಿಗೆ ಧಾಳಿಯಿಡುವ ಭೀತಿ ಹುಟ್ಟಿಸುತ್ತಿದ್ದಾರೆ. ಈ ಭೀತಿ ಹುಟ್ಟಿಸುವ ವಾರ್ತೆ ಹರಡುವುದನ್ನು ಹಿಟ್ಲರನಿಂದಲೇ ಮಿತ್ರರು ಕಲಿತಂತೆ ತೋರುತ್ತದೆ. ಹಿಟ್ಲರನಾದರೂ ಯುದ್ಧಾರಂಭದಲ್ಲಿ ಇದೇ ಉಪಾಯವನ್ನು ಕೈಕೊಂಡನು. ಒಂದರ ಮೇಲೊಂದು ರಾಷ್ಟ್ರವನ್ನು, ದಿನಕ್ಕೊಂದರಂತೆ ಭೀತಿ ಹುಟ್ಟಿಸಿಯೇ ಗೆದ್ದುಬಿಟ್ಟನು. ಮಿತ್ರರೂ ಸದ್ಯ ಅದೇ ಉಪಾಯಕ್ಕೆ ತೊಡಗಿದ್ದಾರೆ. ಇಟಲಿಯನ್ನು ಮರ್ದಿಸಿ ಬಿಡುವುದಾಗಿ ಹೇಳುತ್ತಾರೆ. ಹೇಗೆ ಹೇಳುವುದು, ಟುನಿಸಿಯದಲ್ಲಿ ಹಿಟ್ಲರನ ಮಹಾ ಸೇನೆಗೆ ದೊರೆತ ಪ್ರಬಲ ಅಪಜಯದಿಂದ ಕಂಗಾಲಾದ ಇಟಲಿಯನರು, ಈ ಭಯ ಜನಕ ವಾರ್ತೆ ಕೇಳಿ ಕಂಗೆಡಲಾರರೆಂದು!

ಇಟಲಿಯ ಜನರಲ್ಲಿ ಭೀತಿ ಹೆಚ್ಚುತ್ತಿದೆಯೆಂದೂಹಿಸಲು ಸಾಕಷ್ಟು ಆಧಾರಗಳಿವೆ. ವಿಕ್ಟರ್ ಇಮಾನ್ಯುವೇಲ್ ಸಿಂಹಾಸಿನ ತ್ಯಾಗಮಾಡುವನೆಂದು ಸುದ್ದಿಯಿದೆ. ಜನರಲ್ ಬಡೋಗ್ಲಿಯನ್ನು ಹಿಂದಕ್ಕೆ ಕರೆಸಿಕೊಂಡದ್ದನ್ನೆಲ್ಲಾ ನೋಡಿದರೆ, ಇಟಲಿಯನರಿಗೆ ಹಿಟ್ಲರನ ಮೇಲೆ ವಿಶ್ವಾಸ ಕಡಿಮೆಯಾದಂತೆ ಕಂಡು ಬರುವುದು. ಮಿತ್ರರಿಗಾದರೂ ಯೂರೋಪಿನ ಧಾಳಿಗೆ ಇದೇ ಸುಸಮಯ, ಒಂದರ ಮೇಲೊಂದು ಏಟು ಈಗ ಬೀಳಬೇಕು. ಇಟಲಿಗೆ ಜರ್ಮನಿಯ ವಿಶ್ವಾಸ ಕಡಿಮೆಯಾಗುತ್ತಿರುವ ಈ ಕಾಲದಲ್ಲಿಯೇ ಅಲ್ಲಿಗೆ ಧಾಳಿಯಿಡಬೇಕು, ಈಗಾಗಲೇ ಮಿತ್ರರು ಸಿಸಿಲಿ ಮೇಲೆ ಬಾಂಬು ಸುರಿಸಲು ತೊಡಗಿದ್ದಾರೆ. ಮೆಡಿಟರೇನಿಯನ್ ದ್ವೀಪಗಳನ್ನು ಆಕ್ರಮಿಸಿಕೊಂಡು, ಯೂರೋಪನ್ನು ನುಗ್ಗುವ ಸೂಚನೆ ಕಾಣುತ್ತದೆ. ಅಥವಾ ಉತ್ತರ ಯೂರೋಪಿನ ಮೇಲೆ ಆಶ್ಚರ್ಯಕರ ಧಾಳಿ ಮಾಡಿದರೂ ಮಾಡಬಹುದು ಹೀಗೆ ಮಿತ್ರರು ಈಗ ಯೂರೋಪಿನ ಧಾಳಿಯನ್ನೂ ಬಲವಾಗಿ ತೊಡಗಿದರೆ, ಹಿಟ್ಲರನ ಅವಸ್ಥೆ ಪೇಚಾಟಕ್ಕೆ ಬೀಳುವುದು. ಒಂದು ಕಡೆ ರಶ್ಯದ ಹೋರಾಟ ನಡೆಸಬೇಕು, ಇನ್ನೊಂದು ಕಡೆ ಯೂರೋಪಿನಲ್ಲಿ ಮಿತ್ರರನ್ನು ಪ್ರತಿಭಟಿಸಬೇಕು ಮತ್ತು ಅಷ್ಟರಲ್ಲಿಯೇ, ಆಕ್ರಮಿತ ರಾಷ್ಟ್ರಗಳ ಜನರು ದಂಗೆಯೆದ್ದರೆ ಅವರನ್ನೂ ಅಡಗಿಸಿಕೊಳ್ಳಬೇಕು!

ಪಶ್ಚಿಮ ರಂಗದ ವಾರ್ತೆ ಆಶಾದಾಯಕವಿದ್ದರೂ, ಪೂರ್ವರಂಗದಲ್ಲಿ ಅಷ್ಟೊಂದು ವಿಜಯೋನ್ಮಾದವಿಲ್ಲ. ಅರಕಾನ ಸೋಲು ಟುನಿಸಿಯಾ ವಿಜಯದ ಮಹತ್ವವನ್ನು ಕುಗ್ಗಿಸಲಾರದಾದರೂ ಜಪಾನರು ಈ ಕಡೆಯಲ್ಲಿ ಪ್ರಾಬಲ್ಯಗೊಂಡಿದ್ದಾರೆಂದಿಷ್ಟು ಇದರಿಂದ ವ್ಯಕ್ತವಾಗುವುದು. ಹಿಂದಿನಿಂದಲೇ ಪೂರ್ವ ರಂಗದಲ್ಲಿ ಮಿತ್ರರ ಸಮರ ವ್ಯೂಹ ಚನ್ನಾಗಿಲ್ಲವೆಂಬ ದೂರು ಕೇಳಿ ಬರುತ್ತಿತ್ತು. ಅದು ಇಂದೂ ಸುಧಾರಿಸಿದಂತೆ ತೋರುವುದಿಲ್ಲ. ಮಿತ್ರರ ಮುಖ್ಯ ಮುಖ್ಯ ಸ್ಥಾನಗಳೆಲ್ಲಾ ಒಂದೊಂದಾಗಿ ಶತ್ರುಗಳ ಕೈ ಸೇರುತ್ತವೆ. ಬಾಥೆಡಾಂಗ್ ಕೈ ಬಿಟ್ಟಿತು. ಮಾಂಗ್ಡಾ ಜಪಾನರ ವಶವಾಯಿತು. ಇದರಿಂದ ಜಪಾನ್ ಸೇನೆ ಚಿತಗಾಂಗಿಗೆ ಕೇವಲ ಐವತ್ತು ಮೈಲು ದೂರವಿರುವ ಕಾಕ್ಸ್ ಬಜಾರಿಗೆ ಸರಿದಿವೆ. ಇಲ್ಲಿಯೂ ಬಾಂಬು ಬೀಳುತ್ತಲಿದೆ. ಜಪಾನರು ಇಲ್ಲಿಯೂ ಯುದ್ಧ ಹೂಡಬಹುದೋ ಎಂದು ಹೆದರುವರೋ ನೋಡಬೇಕು. ಅಂತೂ ಆಯಕಟ್ಟಿನ ಸ್ಥಳಗಳು ಜಪಾನರ ಕೈಯಲ್ಲಿವೆ. ಬರ್ಮಾದಲ್ಲಿ ಜಪಾನರು ಪ್ರಬಲರಾಗಿದ್ದಾರೆ. ಆದಷ್ಟು ಬೇಗ ಬರ್ಮವನ್ನು ಪುನಃ ಸ್ವಾಧೀನಮಾಡಿಕೊಂಡು ಬರ್ಮಾ ಮಾರ್ಗ ತೆರೆದು ಚೀನಕ್ಕೆ ಸಹಾಯ ಕಳುಹಿಸಿದರೆ ಆಗವರ ಸ್ಥಿತಿ ನೆಟ್ಟಗಾಗುವುದು. ಅಂಥಾ ಸಾಹಸವೇನೂ ನಡೆಯುತ್ತಿರುವುದು ಕಂಡುಬರುವುದಿಲ್ಲ. ನಮ್ಮ ಸೇನಾಪತಿ ವೇವಲರೇನೋ ವಾಶಿಂಗ್‌ಟನಿಗೆ ತೆರಳಿ ಚರ್ಚಿಲ್ ರೂಸ್‌ವೆಲ್ಟ್ ಮಾತುಕತೆಯಲ್ಲಿ ಭಾಗಿಗಳಾಗಿದ್ದಾರೆ ಆ ಮಾತುಕತೆಯಲ್ಲಿ ಪೂರ್ವ ರಣರಂಗದ ವಿಚಾರವೂ ನಿಷ್ಕರ್ಷೆಯಾಗ ಬಹುದೆಂದು ಹಾರೈಸಬಹುದು

ಚರ್ಚಿಲ್ ಮತ್ತು ರೂಸ್‌ವೆಲ್ಟರು ವಾಶಿಂಗ್‌ಟನಿನಲ್ಲಿ ಸೇರಿ ಸಮರ ಸಾಧನೆಯ ಕುರಿತು ಬಹಳ ಗಾಢ ವಿಚಾರ ಮಾಡುತ್ತಿದ್ದಾರೆ ಅದರ ವಿವರವಿನ್ನೂ ಬಂದಿಲ್ಲ. ಮಾತುಕತೆಯೂ ಸಂಪೂರ್ಣ ಮುಗಿದಿಲ್ಲ. ಕಳೆದ ಸಲ ಕಸಂಬ್ಲಾಂಕಾದಲ್ಲಿ ಸೇರಿದಾಗ ಕೆಲವು ನಿರ್ಣಯಗಳಾಗಿದ್ದುವಂತೆ ಅದರಲ್ಲಿ ಆಫ್ರಿಕಾ ಯುದ್ಧದ ಯಶಸ್ವಿತೆ ಪ್ರಾಮುಖ್ಯವಾಗಿತ್ತೆಂದು ಹೇಳಲಾಗುತ್ತದೆ. ಅಂತೂ ಈಗ ವಿದಿವಶದಿಂದ ಆಫ್ರಿಕಾದಲ್ಲಿ ವಿಜಯವೇ ದೊರಕಿತು. ಹಾಗಾಗಿ ಮುಂದಿನ ವಿಚಾರ ಇದರಲ್ಲಿ ಆಗಬಹುದು. ಬಹುಶಃ ಯೂರೋಪಿನ ಧಾಳಿ ವಿಚಾರವೇ ಇಲ್ಲಿ ಹೆಚ್ಚಿನ ಮಟ್ಟಿಗೆ ಬರಬಹುದು. ಹಿಟ್ಲರನೂ ಈಗ ಕಂಗಾಲಾಗಿದ್ದಾನೆ. ಇಟಲಿಯೂ ಭೀತವಾಗಿದೆ. "ಈ ಸಮಯದಲ್ಲಿ ಯೂರೋಪು ಧಾಳಿಯೊಂದೇ' ಮಿತ್ರರ ಪ್ರಬಲ ಸಾಧನವಾಗಿದೆ. ಇತ್ತ ಜಪಾನೂ ವಿಜೃಂಭಿಸುತ್ತಿದೆ ಅದನ್ನು ತಡೆಗಟ್ಟದಿದ್ದರೂ ಉಪಾಯವಿಲ್ಲ. ಭಾರತವನ್ನು ಎಲ್ಲಿಯಾದರೂ ಜಪಾನು ನುಂಗಿ ಬಿಟ್ಟರೆ, ಬ್ರಿಟಿಷರ ರತ್ನ ಭಂಡಾರವೇ ಹೋದಂತೆ! ಅಮೆರಿಕದ ಸೈನಿಕರಾದರೂ ಇಲ್ಲಿಯೇ ಇದ್ದಾರೆ ಭಾರತವನ್ನು ಕಾಯುತ್ತಾ. ಹಾಗಾಗಿ ಅಮೆರಿಕಕ್ಕೂ ಇದು ಒಂದು ಸಮಸ್ಯೆಯೇ ಆಗಿದೆ. ಬರ್ಮವನ್ನು ಪುನಃ ಪಡೆಯದಿದ್ದರೆ ಚೀನಕ್ಕೆ ಸಹಾಯ ಮಾಡಲು ಮಾರ್ಗವಿಲ್ಲದಾಗುತ್ತದೆ. ಅದಕ್ಕಾದರೂ ಭಾರತವೇ ಯೋಗ್ಯ ರಂಗ, ವೇವಲ್ಲರೂ ವಾಶಿಂಗ್‌ಟನ್ 'ಪರಿಷತ್ತಿಗೆ ಹೋಗಿದ್ದಾರೆ. ಏನು ಆಲೋಚನೆ ಮಾಡುತ್ತಾರೋ ನೋಡಬೇಕು, ಈ ಸಂದರ್ಭದಲ್ಲಿ ಮೊನ್ನೆ ಮೊನ್ನೆ ಫಾಸಿಫಿಕ್ ಯುದ್ಧಮಂಡಳದ ಸಭೆಯೂ ಅಮೆರಿಕದಲ್ಲಿ ಜರಗಿತು. ಚರ್ಚಿಲರೂ ಇದಕ್ಕೆ ಹೋಗಿದ್ದರು. ಇದರ ನಿರ್ಣಯಗಳೂ ಬಹಳ ಮಹತ್ವದವಿರಬೇಕು.

ವಾಶಿಂಗ್‌ಟನ್‌ಗೆ ಹೋಗಿರುವ ಚರ್ಚಿಲರು ಅಮೆರಿಕ ಕಾಂಗ್ರೆಸಿನಲ್ಲಿ ಒಂದು ಭಾಷಣ ಮಾಡಿದರು. ಸ್ವತಃ ರೂಸ್‌ವೆಲ್ಟರೇ, ಜಗತ್ತಿನ ಪ್ರತಿಭಾಶಾಲಿಗಳಲ್ಲಿ ಒಬ್ಬರಾದ ಇವರ ಭಾಷಣವು ಇತಿಹಾಸ ಪ್ರಸಿದ್ಧವೆಂದು ಕೊಂಡಾಡಿದರು. ಚರ್ಚಿಲರು ಟುನಿಸಿಯಾ ವಿಜಯದ ಕುರಿತು ಪ್ರಸ್ತಾಪಿಸಿದರು. ನಾನಾ ರಣರಂಗಗಳಲ್ಲಿ ಮಿತ್ರ ಸೈನಿಕರು ನೆಲಜಲ ಆಕಾಶಗಳ ಯುದ್ಧದಲ್ಲಿ ಹೇಗೆ ಸಾಹಸ ಪ್ರದರ್ಶಿಸಿ ಶತ್ರುವನ್ನು ಬಗ್ಗುಬಡೆಯುತ್ತಿರುವರೆಂದು ವಿವರಿಸಿದರು. ಜಪಾನಿನ ದ್ರೋಹ ಬುದ್ಧಿಯನ್ನು ಖಂಡಿಸಿದರು. ಜಪಾನನ್ನು ಸದೆಬಡಿವಲ್ಲಿ ಅಮೆರಿಕಕ್ಕೆ ಇರುವಷ್ಟೇ ಪ್ರತೀಕಾರ ಬುದ್ಧಿಯು ಬ್ರಿಟನಿಗೂ ಇದೆಯೆನ್ನುತ್ತಾ, ಭಾರತದ ಪೂರ್ವ ಗಡಿಗಳಲ್ಲಿರುವ ಬ್ರಿಟನಿನ ಸೇನೆಗಳು ಇದರಲ್ಲಿ ಯೋಗ್ಯ ಪಾತ್ರವಹಿಸಿ ಚೀನಕ್ಕೆ ಸಹಾಯ ಮಾಡುವವೆಂದೂ, ಇದಕ್ಕಾಗಿಯೇ ವೇವಲರೂ ಇಲ್ಲಿಗೆ ಬಂದು ನಮ್ಮೊ ಚರ್ಚೆಯಲ್ಲಿ ಭಾಗವಹಿಸಿರುವರೆಂದೂ, ಬರ್ಮಾ ರಸ್ತೆಯನ್ನು ಮರಳಿ ಪಡೆಯುವ ಆಲೋಚನೆ ಇದೆಯಾದರೂ ಅದೊಂದು ಪ್ರಬಲ ಸಮಸ್ಯೆಯಾಗಿದೆಯೆಂದೂ ನುಡಿದರು ಆ ಮೇಲೆ ವಿಮಾನ, ಹಡಗು, ಯುಬೋಟು ಮೊದಲಾದ ಯುದ್ಧ ಸಾಮಗ್ರಿಗಳು ಇಂದು ಶತ್ರುವಿಗಿಂತ ಮಿತ್ರರಲ್ಲಿ ಅಧಿಕವಿದೆಯೆಂದು ಸಾರುತ್ತಾ, ಆದ್ದರಿಂದ ಶತ್ರು ರಾಷ್ಟ್ರಗಳ ಮೇಲೆ, ಜರ್ಮನಿ, ಇಟಲಿ ಜಪಾನುಗಳ ಮೇಲೆ ಆಕ್ರಮಿಸುವುದು ನಮ್ಮ ಮುಂದಿನ ಉದ್ದೇಶವಿದೆಯೆಂದು ಸ್ಪಷ್ಟಪಡಿಸುತ್ತಾ, ಬೇಗನೇ ಚಿಯಾಂಗ್ ಕೈಶೇಕರನ್ನು ಸ್ಟಾಲಿನರನ್ನೂ ಕಂಡು ಈ ಕುರಿತು ಮಾತನಾಡುವ ಸಂದರ್ಭವುಂಟೆಂದು ತಿಳಿಸುತ್ತಾ, ಆಫ್ರಿಕಾ ವಿಜಯದಿಂದ ದೊರಕಿದ ಲಾಭವನ್ನು ವಿವರಿಸುತ್ತಾ, ಚರ್ಚಿಲರು ಕೊನೆಗೆ, ಇನ್ನೂ ಹೆಚ್ಚಿನ ಕೆಲಸ ನಾವು ಮಾಡಲಿಕ್ಕಿದೆಯೆಂದು ಎಚ್ಚರಿಸಿ, ಯೂರೋಪು, ಪೆಸಿಫಿಕ್, ಭಾರತ ರಣರಂಗಗಳಲ್ಲಿ ಮಾಡಬೇಕಾದ ಸಿದ್ಧತೆಗಳನ್ನು ತಿಳಿಸಿ, ರಶ್ಯದ ವಿಷಯ ಸಹಾನುಭೂತಿ ಪ್ರದರ್ಶಿಸಿ, ರಶ್ಯನರ ಭಾರವನ್ನಿಳಿಸಬೇಕಾದುದು ನಮ್ಮ ಕರ್ತವ್ಯವೆಂದು ಸಾರಿ, ಶತ್ರುವು ಸುಸಜ್ಜಿತನಾಗಿರುವನೆಂಬುದನ್ನು ಒಪ್ಪಿಕೊಂಡು, ಯುದ್ಧವನ್ನು ದೀರ್ಘಕಾಲ ನಡೆಯದಂತೆ ಮಾಡುವುದೇ ಮಿತ್ರರ ಮುಖ್ಯ ಉದ್ದೇಶವೆಂದೂ ಹೇಳಿದರು. ಈ ಸ್ಫೂರ್ತಿದಾಯಕವಾದ ಮಾತುಗಳನ್ನು ಕೇಳಿ ಅಮೆರಿಕ ಕಾಂಗ್ರೆಸಿನವರು ಬಹಳ ಕೈಚಪ್ಪಾಳೆಯನ್ನೂ ಹೊಡೆದರು.

ತಾ. ೨೨ರಂದು ೨೦ ಜಪಾನೀ ವಿಮಾನಗಳು ಚಿತಗಾಂಗ್ ವಿಮಾನಗೃಹದ ಮೇಲೆ ಧಾಳಿಯಿಟ್ಟವು. ಅದರ ವಿವರವಿನ್ನೂ ತಿಳಿದುಬಂದಿಲ್ಲ. ಮಿತ್ರ ವೈಮಾನಿಕರು ಅವುಗಳನ್ನೆದುರಿಸಿದ್ದಾರೆ. ಜಪಾನಿ ಧಾಳಿಯಿಂದ ಬಹಳ ಹಾನಿಯೇನೂ ಆಗಿಲ್ಲವೆಂದೂ ಕೆಲವರು ಸತ್ತಿರುವರೆಂದೂ, ಕೆಲವರಿಗೆ ಗಾಯವಾಗಿರುವುದೆಂದೂ ಸದ್ಯ ಹೇಳಲಾಗಿದೆ.

ಸ್ವದೇಶಾಭಿಮಾನಿ

ತಾರೀಕು 28—5—1943

ಹೊಸ "ಆರ್ಡಿನೆನ್ಸು"

ಭಾರತ ಸರಕಾರದವರು ಈಗ ಒಂದು ಹೊಸ 'ಆರ್ಡಿನೆನ್ಸ'ನ್ನು ಹೊರಡಿಸಿ ವರ್ಷಕ್ಕೆ ಮೂಹತ್ತು ಸಾವಿರಕ್ಕೆ ಮಿಕ್ಕಿ ಲಾಭವಿರುವವರಿಂದ ಅಧಿಕ ಲಾಭದ ಹಣವನ್ನು ಬೇಗನೆ ಪಡೆಯುವ ಉಪಾಯವೊಂದನ್ನು ಮಾಡಿದ್ದಾರೆ. ಇದರಿಂದ ನೋಟುಗಳ ಅತಿ ಪ್ರಸರಣವು ಕಡಿಮೆಯಾಗಿ, ಈಗ ಏರಿರುವ ಸಾಮಗ್ರಿಗಳ ಬೆಲೆಯು ಸ್ವಲ್ಪ ಮಟ್ಟಿಗೆ ತಗ್ಗಬಹುದೆಂದು ಸರಕಾರದ ಅಭಿಪ್ರಾಯವಿದೆ.

ಈ ಹೊಸ 'ಆರ್ಡಿನೆನ್ಸಿ'ನಂತೆ ಈಗ ಸೇಕಡಾ ೮೦ರ ತೆರಿಗೆ ತೆತ್ತಂತೆ ಆಗುತ್ತದೆ. ಉಳಿದ ಸೇಕಡಾ ೨೦ರಲ್ಲಿಯೂ ೧೩,೧/೩ ನಷ್ಟರ ಹಣವನ್ನು ಸರಕಾರಕ್ಕೆ ಠೇವಣಾತಿಯಿಡಲು ಕೊಡತಕ್ಕದ್ದು. ಸರಕಾರವು ಆ ಠೇವಣಾತಿ ಹಣಕ್ಕೆ ೬,೨/೩ ಹಣ ಕೂಡಿಸಿ, ಅಂತೂ ಸೇಕಡಾ ೨೦ರ ರಕಮನ್ನು ಶೇಕಡಾ ೨ರಂತೆ ಬಡ್ಡಿ ಕೂಡಿಸಿ ಯುದ್ಧ ಮುಗಿದ ಮೇಲೆ ತೆರಿಗೆ ಪಡೆದವರಿಗೆ ತಿರುಗಿ ಕೊಡುವುದು. ಎರಡು ವರ್ಷಗಳಿಗೆ ಮುಂಚಿತವಾಗಿ ಯುದ್ಧ ಮುಗಿದರೆ ಎರಡು ವರ್ಷಗಳ ನಂತರ ಕೊಡುವುದು.

ಇದು ಮಾತ್ರವಲ್ಲದೆ ಅಧಿಕ ಲಾಭವಿದ್ದವರ ಇನ್‌ಕಮ್‌ಟೇಕ್ಸನ್ನು ವಸೂಲು ಮಾಡುವ ಪದ್ಧತಿಯಲ್ಲಿಯೂ ತಿದ್ದುಪಡಿಯಾಗಿದೆ ವ್ಯಾಪಾರಸ್ಥರ ವಾರ್ಷಿಕ ಲೆಕ್ಕ ಮುಗಿದ ಕೂಡಲೇ, ಇನ್‌ಕಮ್‌ಟೇಕ್ಸ್ ಅಧಿಕಾರಿಗಳು ಅವರನ್ನು ಕರೆಸಿ, ವಿವಾದ ವಿಷಯಗಳನ್ನು ದೀರ್ಘ ವಿಚಾರಕ್ಕಾಗಿ ಬೇರೆಯಿಟ್ಟು, ಇನ್‌ಕಮ್‌ಟೇಕ್ಸ್ ವಸೂಲು ಮಾಡುವರು. ವಿಚಾರಾಂತ್ಯದಲ್ಲಿ ತೆರಿಗೆ ಹೆಚ್ಚಾಯಿತೆಂದು ರುಜುವಾದರೆ ಹೆಚ್ಚಿನ ತೆರಿಗೆಗೆ ಐದು ಸಲೆ ಬಡ್ಡಿ ಹಿಡಿದು ಸರಕಾರವು ಹೆಚ್ಚಿನ ತೆರಿಗೆಯನ್ನು ತಿರುಗಿ ಕೊಡುವುದು ಸರಕಾರದ ತೆರಿಗೆಗೆ ಮೋಸಮಾಡುವ ಸಲುವಾಗಿ ವ್ಯಾಪಾರಸ್ಥರೂ ಕಂಪನಿಗಳೂ, ದಲಾಲಿ ರೂಪದಿಂದಾಗಲಿ, ಕೆಲಸದವರಿಗೆ ಇನಾಮು ರೂಪದಿಂದಾಗಲಿ ಹೆಚ್ಚು ಖರ್ಚಿನ ಬಾಬು ತೋರಿಸದಂತೆ, ಇದರ ಮಿತಿಯನ್ನು ಸರಕಾರವೇ ನಿಯಂತ್ರಿಸುವುದು.

ಹೀಗೆ ಜನರ ಕೈಯಲ್ಲಿ ಯುದ್ಧದ ದೆಸೆಯಿಂದ ಓಡಾಡುತ್ತಿರುವ ಅಧಿಕ ನೋಟುಗಳನ್ನು ತಡೆ ಹಿಡಿಯಲು ಈ ಉಪಾಯವನ್ನು ಹೂಡಲಾಗಿದೆ. ಹೀಗೆ ಮಾಡುವುದರಿಂದ ಇನ್ನು ಮುಂದೆ ಉದ್ಯೋಗದಲ್ಲಿ ಸಾಹಸ ಮಾಡಲು ಯಾರೂ ಮನಸ್ಸು ಮಾಡಲಾರರೆಂದೂ, ಇದರಿಂದ ಭಾರತದ ಔದ್ಯೋಗಿಕ ಪ್ರಗತಿಗೆ ತಡೆಯುಂಟೆಂದೂ ಈಗಾಗಲೇ ಕೆಲವು ದೂರುಗಳು ಕೇಳಿ ಬರುತ್ತವೆ.

ಪುನಃ ಮುಖಂಡರು

ಸರಕಾರದೊಡನೆ ಮನವಿ ಮಾಡಿಕೊಂಡಿದ್ದಾರೆ; ಸಪ್ರು, ಜಯಕರ್, ಸರ್ ಜಗದೀಶ ಪ್ರಸಾದ್ ಮೊದಲಾದವರು ಒಂದು ಸಂಯುಕ್ತ ಪ್ರಕಟಣೆ ಹೊರಡಿಸಿ, ಕಾಂಗ್ರೆಸು ಮುಖಂಡರನ್ನು ಬಿಡುಗಡೆ ಮಾಡಬೇಕೆಂದೂ, ಅದರಿಂದ ಭಾರತದ ಬಿಕ್ಕಟ್ಟು ಬಗೆಹರಿಯುವುದೆಂದೂ ಸರಕಾರಕ್ಕೆ ಬಿನ್ನವಿಸಿರುವರು.

ಮಹಾತ್ಮರನ್ನು ಕಾಣಲು ಯಾರಿಗೂ ಸಂದರ್ಭ ಕೊಡದಿರುವುದು, ಸ್ವತಃ ರೂಸ್‌ವೆಲ್ಟರ ರಾಯಭಾರಿ ಫಿಲಿಪ್ಸರಿಗೇ ಆ ಸಂದರ್ಭವೊದಗಿಸಿ ಕೊಡದಿರುವುದು, ಅಮೆರಿ ಪಾರ್ಲಿಮೆಂಟಿನಲ್ಲಿ ಭಾರತದ ನಿಚಾರ ಮಾತನಾಡುತ್ತಿರುವುದು ಇದನ್ನೆಲ್ಲಾ ನೋಡಿದರೆ ಸರಕಾರವು ಭಾರತದ ಸಮಸ್ಯೆ ಬಗೆಹರಿಸಲು ಇಚ್ಛಿಸಿದಂತೆ ಕಂಡುಬರುವುದಿಲ್ಲವೆಂದು ತಿಳಿಸಿ, ನ್ಯಾಯ ಧರ್ಮಗಳ ಹೆಸರಲ್ಲಿ ಗಾಂಧಿಜಿ ಮೊದಲಾದ ಕಾಂಗ್ರೆಸು ಮುಖಂಡರನ್ನು ಬಿಡುಗಡೆ ಮಾಡುವ ಅವಶ್ಯಕತೆಯನ್ನು ಅವರು ಸಾರಿದ್ದಾರೆ.

ಗಾಂಧಿಜಿ ಜಪಾನಿನ ಮಿತ್ರರಲ್ಲವೆಂದು ಘಂಟಾಘೋಷ ತಿಳಿಸುತ್ತಾ, ಇಂಥಾ ಆರೋಪವನ್ನು ಗಾಂಧಿಜಿ ಮತ್ತು ಕಾಂಗ್ರೆಸಿನ ಮೇಲೆ ಹೊರಿಸಿ, ಆರೋಪದ ವಿಚಾರಣೆಗೂ ಆಸ್ಪದ ಕೊಡದೆ ಕೊಳೆಯಬಿಡುತ್ತಿರುವುದು ನ್ಯಾಯವಲ್ಲವೆಂದೂ, ಈ ಬಗ್ಗೆ ನಿಷ್ಪಕ್ಷಪಾತೀ ವಿಚಾರಣಾ ಮಂಡಳವೊಂದೇರ್ಪಡಬೇಕೆಂದೂ ಅವರು ಕೇಳಿಕೊಂಡಿರುವರು.

ಇತ್ತೀಚಿಗೆ ಶ್ರೀಮತಿ ಕೈಶೀಕರು ಸಹರುಗಳನ್ನು ಬಿಡುಗಡೆ ಮಾಡಬೇಕೆಂದು ಸಾರಿದ್ದನ್ನು ನೆನಪಿಗೆ ತಂದು ಕೊಡುತ್ತಾ ರಾಷ್ಟ್ರದ ಮುಂದಾಳುಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಮುಖಂಡರು ಪುನಃ ವಿನಂತಿಸಿದ್ದಾರೆ. ಮುಖಂಡರ ಇದುವರೆಗಿನ ಮನವಿಗಳೆಲ್ಲಾ ಅರಣ್ಯರೋದನವೇ ಆಗಿದೆ. ಈ ಸಲದ ವಿನಂತಿಗಾದರೂ ಅದೇ ಪಾಡೇ?

ಸದ್ಯದ ಸುದ್ದಿಗಳು

ರಶ್ಯದ ಕಮುನಿಸ್ಟ್ ಪಾರ್ಟಿಯವರು, ಈಂದಿನೀ ಯುದ್ಧ ಪ್ರಸಂಗದಲ್ಲಿ, ಮಿತ್ರಪಕ್ಷಗಳ ಸೌಹಾರ್ದತೆಯನ್ನು ಹೆಚ್ಚಿಸುವ ಸಲುವಾಗಿ, ತಮ್ಮ ಪಾರ್ಟಿಯ ಅಂತರ್ರಾಷ್ಟ್ರೀಯ ಸಂಸ್ಥೆಯನ್ನೀಗ ರದ್ದು ಮಾಡಿದ್ದಾರೆ

ರಾಜಪಟ್ಟತ್ಯಾಗ ಮಾಡಿದ, ಈಗಿನ ಸಾರ್ವಭೌಮರ ಅಣ್ಣಂದಿರಾದ ಡ್ಯೂಕ್ ಓಫ್ ವಿಂಡ್ಸರರಿಗೆ ಈಗ ಪ್ರಾಮುಖ್ಯ ಸ್ಥಾನಗಳನ್ನು ಕೊಡತಕ್ಕದೆಂದು ಬ್ರಿಟನಿಗೆ ಅಮೆರಿಕದ ಸಂದೇಶಗಳು ಬರುತ್ತಿವೆ ಭಾರತದ ವೈಸರಾಯ್ ಪದವಿ ಅವರಿಗೆ ಕೊಡಬೇಕೆಂದೂ ಒಂದು ಸೂಚನೆ.

ರೂಸ್‌ವೆಲ್ಟ್ ಚರ್ಚಿಲರ ಮಾತುಕತೆ ಬಹಳ ದೀರ್ಘ ಕಾಲ ನಡೆಯುತ್ತಿದೆ. ಕಳೆದ ಕೆಲವು ದಿನಗಳಿಂದಿತ್ತ ಇಡೀ ದಿನ ಅವರು ಮಾತುಕತೆ ಮಾಡುತ್ತಿದ್ದಾರೆ, ರಶ್ಯದ ಸಹಾಯ, ಮಿತ್ರರ ವೈಮಾನಿಕ ಚಟುವಟಿಕೆ, ಜಪಾನಿನ ಪ್ರತೀಕಾರ ಮೊದಲಾದ ವಿಚಾರಗಳಲ್ಲಿ ಆಲೋಚನೆಗಳಾಗಿವೆ.

ನಾಗಪುರದ ಐ. ಸಿ. ಎಸ್ ಅಧಿಕಾರಿ ಶ್ರೀ ಆರ್. ಕೆ. ಪಾಟೀಲರ ರಾಜಿನಾಮೆಯನ್ನು ಅಮೆರಿ ಅಂಗೀಕರಿಸಿದ್ದಾರೆ ಅವರ ರಾಜಿನಾಮೆ ಕಾರಣ ರಾಜಕೀಯ ಮತ್ತು ವೈಯುಕ್ತಿಕ ಶ್ರೀ. ಪಾಟೀಲರು ಮುಂದೆ ಗ್ರಾಮಾಭ್ಯುದಯ ಕಾರ್ಯದಲ್ಲಿ ನಿರತರಾಗುವರೆಂದು ತಿಳಿದಿದೆ. ಶ್ರೀ. ಎಚ್. ವಿ. ಕಾಮತರ ಬಳಿಕ (ನಮ್ಮ ಜಿಲ್ಲೆಯವರು) ಆ ಪ್ರಾಂತದಲ್ಲಿ ರಾಜಿನಾಮೆಯಿತ್ತ ಐ. ಸಿ ಎಸ್‌ರಲ್ಲಿ ಇವರು ಎರಡನೆಯವರು.

ಸ್ವದೇಶ ಸಮಾಚಾರ

ವಿಜಯಲಕ್ಷ್ಮಿ, ಚಂದ್ರಿಕೆ ಮತ್ತು ಇಂದಿರಾ

ಗಾಂಧಿಯವರನ್ನು ಜೈಲಿನಿಂದ ಬಿಡುಗಡೆ ಮಾಡಿ, ಅಲಹಾಬಾದಲ್ಲಿರುವ ಅವರ ಮನೆಯಲ್ಲಿ ಉಳಕೊಳ್ಳುವಂತೆಯೂ ಆದರೆ ಅಲ್ಲಿ ಭೇಟಿಗೆ ಯಾರಿಗೂ ಅವಕಾಶವಿರದೆ ಇರಬೇಕೆಂದೂ ಸರಕಾರ ಆಜ್ಞೆ ಮಾಡಿದ್ದಕ್ಕೆ, ನಿರ್ಬಂಧಕ್ಕೊಳಗಾಗಿ ನಾವು ಅಲ್ಲಿರಲು ಇಚ್ಛಿಸುವುದಿಲ್ಲವೆಂದು ಅವರು ಉತ್ತರ ಕೊಟ್ಟಿರುವುದಾಗಿ ತಿಳಿದಿದೆ. ವಿಜಯಲಕ್ಷ್ಮಿಯವರ ಕುಮಾರಿಯವರು ಚಂದ್ರಲೇಖಾ ಮತ್ತು ತಾರಾ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ತೆರಳಿರುವರು.

ಸಬರ್ಮತಿ ಹರಿಜನ ಆಶ್ರಮ

ವನ್ನು ಪೋಲೀಸರು ಮುತ್ತಿ, ಜಪ್ತಿ ನಡೆಸಿದರು. ಆಶ್ರಮದ ಮೇನೇಜರ್ ಶ್ರೀ. ನರಹರಿ ಪರೀಕರನ್ನು ಬಂಧಿಸಿರುವರು.

ಮದ್ರಾಸಿನಲ್ಲಿ ಮಂತ್ರಿಮಂಡಳ

ರಚಿಸಲು ಹಿಂದು ಮಹಾಸಭೆಯ ಡಾ। ನಾಯುಡು ಪ್ರಯತ್ನಿಸುತ್ತಿರುವರೆಂದು ಸುದ್ದಿಯಿದೆ ಡಾ। ನಾಯುಡು ಈ ಸಂಬಂಧ ರಾಮಸ್ವಾಮಿ ನಾಯಕ, ಅಬ್ದುಲ್ ಹಮೀರ್‌ಖಾನ್, ಮುತ್ತಯ್ಯ ಚೆಟ್ಟಿಯಾರ್ ಇವರನ್ನು ಕಂಡು ವಿಚಾರವಿನಿಮಯ ಮಾಡುವರೆಂದೂ ಸುದ್ದಿ.

'ಬ್ರಿಟಿಷರಿಗೆ ಗಾಂಧಿಜಿ ಬುದ್ಧಿವಾದ'

ಎಂಬೀ ೮೦ ಪುಟಗಳ ಪುಸ್ತಕವು ಲಂಡನಿನಲ್ಲಿ ಪ್ರಕಟವಾಗಿದೆ. ಅದರಲ್ಲಿ ಗಾಂಧಿಜಿಯವರ ಲೇಖನಗಳ ಸಂಗ್ರಹವಿದೆ. ಶ್ರೀ. ವಿ. ಕೆ. ಕೃಷ್ಣಮೇನನರು ಇದನ್ನು ಸಂಗ್ರಹಿಸಲು ಪ್ರಯತ್ನಿಸಿದವರೆಂದು ತಿಳಿದಿದೆ.

ಅ. ಭಾ. ಕಮುನಿಸ್ಟ್ ಪಕ್ಷ

ದ ಸಮ್ಮೇಳನವು ಮುಂಬಾಯಿಯಲ್ಲಿ ಸೇರಿ ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಸರಕಾರದೊಡನೆ ಕೇಳುವ ನಿರ್ಣಯ ಮಾಡಿದೆ.

ಅಚ್ಯುತ ಪಟವರ್ಧನರು

ಈಗ ಅಜ್ಞಾತವಾಸದಲ್ಲಿದ್ದು, ಅವರು ಜೂನ್ ೬ನೇ ತಾರೀಕಿನೊಳಗೆ ಹಾಜರಾಗಬೇಕೆಂದು ಸರಕಾರ ನೋಟೀಸು ಕೊಟ್ಟಿದೆ. ಇವರು ಮಾಜಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರು. ಇದೇ ರೀತಿ ಭಾಸ್ಕರ ಗೋವಿಂದ ಧ್ರುವೆಯವರಿಗೂ ನೋಟೀಸಿದೆ.

ಛಡೀ ಏಟು

ಆಗಸ್ಟ್ ತಿಂಗಳಲ್ಲಿ ನಡೆದ ಒಂದು ದುರಂತದ ಆರೋಪದಿಂದ ಕಾಶಿಯಲ್ಲಿ ಮೂವರಿಗೆ ತಲಾ ೧೫ ಛಡೀ ಏಟಿನ ಶಿಕ್ಷೆ ಆಗಿದೆ. ಇತರರಿಗೆ ಬೇರೆ ಬೇರೆ ಶಿಕ್ಷೆಗಳಾಗಿವೆ.

ಅಲ್ಲಾಭಕ್ಷರ ಕೊಲೆ ಪಾತಕಿಗಳನ್ನು ಹಿಡಿದು ಕೊಟ್ಟರೆ

೧೦ ಸಾವಿರ ರೂಪಾಯಿ ಕೊಡುವುದಾಗಿ ಸಿಂಧದ ಪೋಲೀಸ್ ಇನ್‌ಸ್ಪೆಕ್ಟರ್ ಜನರಲರು ಪ್ರಕಟಿಸಿದ್ದಾರೆ.

ಕೇಂದ್ರ ಎಸೆಂಬ್ಲಿ

ಅವಧಿಯನ್ನು ಸಪ್ಟಂಬರ ೧೩ರಿಂದ ಮತ್ತೆ ಒಂದು ವರ್ಷ ಬೆಳೆಸಲಾಗುವುದೆಂಬ ಸುದ್ದಿಯಿದೆ

ಬಿಳಿ ಸಿಪಾಯಿಯ ಉನ್ಮತ್ತ ವರ್ತನ

ಮರಾಠಿಯ ಪ್ರಸಿದ್ಧ ಲೇಖಕರೂ, ರಶ್ಯದಲ್ಲಿ ೩೦ ತಿಂಗಳು ಎಂಬ ಪುಸ್ತಕದ ಬರೆಹಗಾರರೂ ಆದ, ಶ್ರೀ. ದಿ. ಜಿ. ತೆಂಡೂಲಕರರ ಮೇಲೆ ಓರ್ವ ಬಿಳಿಯ ಸಿಪಾಯಿಯು ಮುಂಬಯಿ ಚರ್ಚ ಗೇಟಿನ ಬಳಿ ಆಕ್ರಮಣ ಮಾಡಿ ಗಾಯಗೊಳಿಸಿದನೆಂದೂ ಅವರಿಗೆ ಅದರಿಂದ ಹಲ್ಲು ಮುರಿದದ್ದಲ್ಲದೆ ಬಹಳ ಗಾಯವೂ ಆಗಿದೆಯೆಂದೂ ಸಂಯುಕ್ತ ಕರ್ನಾಟಕದ ಸುದ್ದಿ, ತೆಂಡೂಲಕರರು ಆ ಸಿಪಾಯಿಗೆ ಏನೂ ಮಾಡದೆ ಅನ್ಯಾಯವಾಗಿ ಹೀಗೆ ಮಾಡಿದನೆಂದೂ ಪ್ರಕಟಿಸಿಯಿದೆ.

ಹಿಂದೀ ಸೈನಿಕರಿಗೆ ಗೌರವ

ಆಫ್ರಿಕದಲ್ಲಿ ವಿಜಯವನ್ನು ಪಡೆದ ನಾಲ್ಕನೇ ಹಿಂದೀ ದಳದವರು ಗೌರವಿಸಲು ಬ್ರಿಟನಿಗೆ ಕರೆತರಬೇಕೆಂದು ಕಾಮನ್ಸ್ ಸಭಾ ಮಂದಿರದಲ್ಲೊಂದು ಅರಿಕೆಯನಾದಾಗ, ಅಮೆರಿ ಈ ವಿಷಯ ಆಲೋಚಿಸಿ ಹೇಳುತ್ತೇವೆಂದರು.

ಟೋರಿಗಳ ದಾರಿ

'ಟೋರಿ'ಗಳು ಇಂಗ್ಲೆಂಡಿನ ಸನಾತನೀ ಸಂಪ್ರದಾಯದ ರಾಜಕಾರಣಿಗಳು. ಅವರೇ ಅಲ್ಲಿ ಪ್ರಬಲರು. ಗಾಂಧಿಜಿ ಉಪವಾಸದ ಕುರಿತು 'ಡೈಲಿ ಟೆಲಿಗ್ರಾಫ್' ಎಂಬ ಟೋರಿ ಪತ್ರಿಕೆ ಹೀಗೆ ಬರೆಯುತ್ತದೆ. 'ಉಪವಾಸವು ಬಿಡುಗಡೆಯಾಗಲು ಗಾಂಧಿ ಮಾಡಿದ ಉಪಾಯ' ಎಂದು! 'ಹಿಟ್ಲರ್-ಮುಸಲನಿ, ಟೋಜೋಗಳಿಗೆ ಬಾಗದ ಇಂಗ್ಲೆಂಡು ಗಾಂಧಿಗೆ ಶರಣಾಗಿತೇ?' ಎಂದು 'ಡೈಲಿ ಮೈಲ್' ಬರೆಯುತ್ತದೆ. ಟೋರಿಗಳಿಂದ ಇದಕ್ಕಿಂತ ಒಳ್ಳೆಯ ಮಾತನ್ನು ಯಾರೂ ಹಾರೈಸುವುದೇ ಇಲ್ಲವಲ್ಲಾ!

'ಭಾರತದಲ್ಲಿ ರಾಷ್ಟ್ರೀಯತೆಯಿಲ್ಲ!' ಅಮೆರಿ ಕೂಗುತ್ತಾರೆ

ಲಂಡನಿನಲ್ಲಿ ಸೇರಿದ ಒಂದು ಕೂಟದಲ್ಲಿ ಅಮೆರಿ ಮಾತನಾಡುತ್ತಾ ಹೀಗಂದರು, 'ಭಾರತದಲ್ಲಿ ಮುಖ್ಯ ವಸ್ತು ಚಾ-ಅಲ್ಲಿ ಅಖಂಡ ರಾಷ್ಟ್ರೀಯತೆ ಎಂಬುದು ಇಲ್ಲ. ಭಿನ್ನಭಿನ್ನ ಜನಾಂಗಗಳಿವೆ. ನಾವು ಬೇಕೆಂದು ಭಾರತವನ್ನು ಆಳಲಿಲ್ಲ. ಅಲ್ಲಿನ ಪರಿಸ್ಥಿತಿ ನಮ್ಮನ್ನು ಹಾಗೆ ಮಾಡಲು ಒತ್ತಾಯಪಡಿಸಿತು. ಭಾರತೀಯರೇ ನಮಗೆ ಹಾಗೆ ಮಾಡಲು ಆಸ್ಪದವಿತ್ತರು. ಕಾಂಗ್ರೆಸಿನ ಧೋರಣವು ಕ್ರಾಂತಿ' ಯುದ್ಧಾನಂತರ ಭಾರತಕ್ಕೆ ನಾವು ಸ್ವಾತಂತ್ರ್ಯ ಕೊಡಬೇಕೆಂದಿದ್ದೆವು-ಆದರೆ ಗಾಂಧಿ, ಮಿತ್ರರ ಪತನವನ್ನು ಹಾರೈಸುತ್ತಾರೆ. ಆಹಾ! ಅಮೆರಿಯವರ ಬಾಯಿಯಿಂದ ಬಿದ್ದ ಆಣಿ ಮುತ್ತುಗಳ! ಈ ಸಭೆಯಲ್ಲಿ ಅನೇಕ ಮಹಿಳೆಯರು ಇದ್ದರು!

ಬಾಡೋಲಿಯ ಕಾಂಗ್ರೆಸಿನವರು

ಶ್ರೀಯುತ ದರ್ಬಾರದ್ರಿ ಜೆಕಿಸದಾಸಶಹಾ, ಜಯ ಕೃಷ್ಣ ಅಮ್ರಿತಲಾಲ ಶುಕ್ಲ ಅಮುಂಬಾದ ನರ್ಮದಲಾಲ ಮುಲ್ಜಿ ಭಾಯಿ ಹಾಗೂ ವ್ರಜಚಂದ್ರ ಚೋಟಾಲಾಲರು ಅಜ್ಞಾತವಾಸದಲ್ಲಿರುವುದರಿಂದ ಹಾಜರಾಗಬೇಕೆಂದು ಸರಕಾರದ ನೋಟೀಸಿದೆ.

ಭಾರತಕ್ಕೆ ಬರಲು ಬ್ರಿಟಿಷ ಕಮುನಿಸ್ಟ್

ಮುಖಂಡ ವಿಲಿಯಂ ಗಲಾಚಾ ಆತುರತೋರಿಸಿದ್ದಾರೆ. ಭಾರತದಲ್ಲಿ ಸೇರುವ ಕಮುನಿಸ್ಟ್ ಪರಿಷತ್ತಿಗೆ ಹೋಗುವಂತೆ, ಭಾರತದ ಬಿಕ್ಕಟ್ಟು ಪರಿಹರಿಸಲು ಪ್ರಯತ್ನಿಸುವ ಸಲುವಾಗಿ, ಮುಖಂಡರನ್ನು ಕಾಣುವಂತೆ, ಅಮೆರಿ ಭಾರತಕ್ಕೆ ಹೋಗಲು ತನಗೆ ಪಾಸುಪೋರ್ಟ ಕೊಡಿಸಬೇಕೆಂದು ಅವರು ತಿಳಿಸಿದ್ದಾರೆ.

ಗಡಿನಾಡಿನಲ್ಲಿ ಮಂತ್ರಿಮಂಡಳ

ರಚಿತವಾಗಿ ಬಿಟ್ಟಿತು! ಸರ್ದಾರ್ ಮಹಮ್ಮದ್ ಅವರಂಗಜೇಬ್‌ಖಾನ್, ಸರ್ದಾರ್ ಅಬ್ದುರ್ ರಾಚೆನಿಸ್ತಾರ್, ಖಾನ್‌ಸಾಮಿನ್ ಜಾನ್‌ಖಾನ್, ಸರ್ದಾರ್ ಅಜಿತ್‌ಸಿಂಗ್, ರಾಜಾ ಬಹದ್ದೂರ್ ರಹಮಾನ್ ಇವರು ಮಂತ್ರಿಮಂಡಳದಲ್ಲಿದ್ದಾರೆ.

ಫೆಡರಲ್ ಕೋರ್ಟಿಗೆ

ಮುಖ್ಯ ನ್ಯಾಯಾಧೀಶರಾಗಿ ಪೇಟ್ರಿಕ್ ಸ್ಪೆನ್ಸರು ನೇಮಕವಾಗಿದ್ದು, ಅವರು ಆಗಸ್ಟ್ ತಿಂಗಳಲ್ಲಿ ಅಧಿಕಾರ ವಹಿಸುವರು.

ಸಾವರ್ಕಾರರ ಉಪಾಯ

ಮುಸ್ಲಿಂ ಲೀಗ್ ಮಂತ್ರಿಮಂಡಳವೆಲ್ಲಿಯಾದರೂ ಆಗುತ್ತದೆಂದು ಗೊತ್ತಾದ ಕೂಡಲೇ ಸಿಖ್ಖರೂ ಹಿಂದುಗಳೂ ಸೇರಿ ಅದನ್ನು ಸರ್ವಪಕ್ಷಗಳ ಮಂತ್ರಿಮಂಡಳ ಮಾಡಬೇಕೆಂದು ಸಾವರ್ಕಾರರು ಹೊಸ ಉಪಾಯವೊಂದನ್ನು ಸೂಚಿಸಿದ್ದಾರೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರಲ್ಲಿ 'ಟುನಿಸಿಯಾ ದಿನ'

ದ ಆಚರಣೆಯು 'ನೇಶನಲ್ ವಾರ್ ಫ್ರಂಟ್'ನವರ ಆಶ್ರಯದಲ್ಲಿ ಕಳೆದ ಶುಕ್ರವಾರ ನೆರವೇರಿತು. ಆ ದಿನ ಅದರ ವಾರ್ಷಿಕೋತ್ಸವವೂ ಆಚರಿಸಲ್ಪಟ್ಟಿತು. ಡಾ। ಕೇಶವ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಗಣಪತಿ ಹೈಸ್ಕೂಲಲ್ಲಿ ಈ ಉತ್ಸವಗಳು ಜರಗಿದವು. ಜಿಲ್ಲಾ ಆರ್ಗನೈಸರ್ ಶ್ರೀ ಎಚ್. ಹುಸೇನ್ ಸಾಹೇಬ್ ಎಂ. ಎಲ್. ಎ. ಇವರು ಈ ಉತ್ಸವದ ಕುರಿತು ಪ್ರಾಸ್ತಾವಿಕ ಭಾಷಣವಿತ್ತರು. ಆ ಮೇಲೆ ಇದರ ಲೀಡರುಗಳಾದ ಶ್ರೀಮತಿ ಪಾರ್ವತಿ ಬಾಯಿ, ಶ್ರೀಗಳಾದ ಎಂ. ಕೆ. ಧರ್ಮರಾಜ, ಗೋಪಾಲ ಸಾಲ್ಯಾನ್ನರೂ ಅವರೊಂದಿಗೆ ಶ್ರೀಗಳು ಎಚ್. ಥೀಮರಾವ್ ಮತ್ತು ಜೆರೋಂ ಸಾಲ್ಡಾಣ್ಹರೂ ಭಾಷಣಮಾಡಿದರು. ಆ ದಿನ 'ವಿಕ್ಟರಿ ಹೌಸ್' ಒಂದು ತೆರೆಯಲ್ಪಟ್ಟಿತು. ಈ ಸಂಬಂಧ ತಾಲೂಕು ಕಚೇರಿಯಲ್ಲಿ ಬಡವರಿಗೆ ಸುಮಾರು ೩೫ ಮುಡಿ ಅಕ್ಕಿ ಹಂಚಲಾಗಿದೆ.

ನೇಮಕ

ಡಿಪ್ಯುಟಿ ಕಲೆಕ್ಟರ್ ಶ್ರೀಯುತ ಕುಮಾರಯ್ಯರು ಮದ್ರಾಸ್ ನಗರದ ಐದನೇ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಾಗಿ ನೇಮಕ ಹೊಂದಿದ್ದು ಎಗ್ಮೋರ್ ಕೋರ್ಟಿನಲ್ಲಿ ಕಾರ್ಯ ನಿರ್ವಹಿಸಲಿರುವರು.

ಡಿಸ್ಟ್ರಿಕ್ಟ್ ಬೋರ್ಡ್ ಸಭೆ

ಪ್ರೆಸಿಡೆಂಟರ ನಿಧನದ ಬಗ್ಗೆ ಸಂತಾಪ ಸೂಚನೆ

ದ. ಕ. ಜಿಲ್ಲಾ ಬೋರ್ಡಿನ ಸಭೆಯು ತಾ ೨೧ರಂದು ಅವರ ಆಫೀಸಿನಲ್ಲಿ ಜರಗಿತು. ಪ್ರೆಸಿಡೆಂಟ್ ಡಾ। ಕೆ. ವಿಟ್ಠಲ ಶೆಟ್ಟರ ಅನಿರೀಕ್ಷಿತ ನಿಧನದಿಂದಾಗಿ, ಜಿಲ್ಲಾ ಬೋರ್ಡಿಗೆ ಉಂಟಾದ ಸಂತಾಪವನ್ನೂ ಸೂಚಿಸಿ ಒಂದು ಠರಾವಾಯಿತು ವೈಸ್ ಪ್ರೆಸಿಡೆಂಟ್ ಶ್ರೀ ಎ. ಲಕ್ಷ್ಮೀನಾರಾಯಣ ರಾಯರು ಗತಿಸಿದ ಜನಪ್ರಿಯ ಪ್ರೆಸಿಡೆಂಟ್ ಡಾ। ಕೆ ವಿಟ್ಠಲ ಶೆಟ್ರ ವಿಷಯವಾಗಿ ಮಾತನಾಡಿದರು. ಸರಕಾರದೊಡನೆ ಪ್ರೆಸಿಡೆಂಟರ ನಿಧನದ ವಿಷಯವಾಗಿ ಬೋರ್ಡು ಆಫೀಸಿಗೆ ಒಂದು ದಿನದ ರಜೆ ಕೊಡುವ ಬಗ್ಗೆ ಸಮ್ಮತಿ ಕೇಳಲಾಯಿತು. ಸಂತಾಪ ಸೂಚನೆಯ ಠರಾವು ಪ್ರೆಸಿಡೆಂಟರ ಕುಟುಂಬಕ್ಕೆ ಕಳುಹಿಸಬೇಕಾಗಿಯೂ ನಿರ್ಣಯವಾಯಿತು. ಶ್ರೀಗಳಾದ ಚವ್ಹಾಣರು, ಮುಸಬ್ಬರು ಡಾ। ಶೆಟ್ರ ಗುಣ ಪ್ರಶಂಸೆ ಮಾಡಿ ಮಾತನಾಡಿದರು.

ಡಿಸ್ಟ್ರಿಕ್ಟ್ ಬೋರ್ಡಿನ ಕಾರ್ಯಕಲಾಪಗಳ ವಿವರವನ್ನು ಪ್ರಕಟಿಸಲಾಗುವುದಿಲ್ಲವೆಂಬ ನಿರ್ಣಯವಾಯಿತು. ಕಡಿತದ ಸೂಚನೆಯ ತಡೆ ಹಿಡಿಯಲಾಯಿತು ಅಲ್ಪಾಡಿ ಆಸ್ಪತ್ರೆಯನ್ನು ಬೆಲ್ತಿಗೆ ಸಾಗಿಸುವುದಾಗಿ ನಿರ್ಣಯವಾಯಿತು ಶ್ರೀ. ಎಂ. ದೇವದಾಸ ಶೆಣೈಯವರನ್ನು ಶ್ರೀ ಹುಸೇನ್ ಸಾಹೇಬರ ಸ್ಥಾನದಲ್ಲಿ ವರ್ಕ್ಸ್ ಎಂಡ್ ಕಮ್ಯುನಿಕೇಶನ್ ಕಮಿಟಿಗೆ ಸದಸ್ಯರಾಗಿ ಆರಿಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ವೈಸ್ ಪ್ರೆಸಿಡೆಂಟರು ವಹಿಸಿದ್ದರು

ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆ

ದ. ಕ. ಜಿಲ್ಲಾ ಬೋರ್ಡ ಅಧ್ಯಕ್ಷ ಡಾ। ವಿಟ್ಠಲ ಶೆಟ್ರು ನಿಧನದಿಂದ ಖಾಲಿಬಿದ್ದ ಸ್ಥಾನಕ್ಕೆ ಅಧ್ಯಕ್ಷರನ್ನು ಚುನಾವಣೆ ಮಾಡುವ ಸಲುವಾಗಿ ಜೂನ್ ೧೧ನೇ ದಿನ ಬೆಳಗ್ಗೆ ೧೧ ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಒಂದು ವಿಶೇಷಸಭೆ ಸೇರಲಿದೆ.

'ಹಿಂದೂ ಸ್ತ್ರೀಯರಿಗೂ ಪಾಲು ಸಿಗಬೇಕು'

ಎಂಬುದಾಗಿ, ಈಗ ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಲಾದ ಮಸೂದೆಗೆ ಬೆಂಬಲಕೊಡುವ ನಿಮಿತ್ತ ಮಂಗಳೂರಿನ ಮಹಿಳೆಯರು ಭಗಿನೀ ಸಮಾಜದ ಆಶ್ರಯದಲ್ಲಿ ಒಂದು ಸಭೆ ಸೇರಿಸಿದರು. ಶ್ರೀಮತಿ ಪಾರ್ವತಿ ಬಾಯಿಯವರು ಅಧ್ಯಕ್ಷೆಯರಾಗಿದ್ದರು. ಶ್ರೀ. ಕಾರ್ಕಳ ಸದಾಶಿವರಾಯರು ಈ ಮಸೂದೆಯನ್ನು ವಿವರಿಸಿದರು. 'ಈ ಮಸೂದೆಯನ್ನು ಮಂಗಳೂರಿನ ಮಹಿಳೆಯರು ಸಮರ್ಥಿಸುತ್ತಾರೆ, ವಿವಾಹ ಮಸೂದೆಗೂ ಬೆಂಬಲವೀಯುತ್ತಾರೆ. ಈ ಮಸೂದೆಯ ಕುರಿತು ಅಭಿಪ್ರಾಯ ಸಂಗ್ರಹಿಸಲು ಮಿಸ್ ವಿಲಾಸಿನಿ ಶೆಣೈ (ಮದ್ರಾಸಿನ ವಕೀಲರು) ಇವರನ್ನು ಆಹ್ವಾನಿಸಬೇಕೆಂದು ಸರಕಾರಕ್ಕೆ ಈ ಸಭೆ ಸೂಚಿಸುತ್ತದೆ' ಎಂದು ಶ್ರೀಮತಿ ಲಕ್ಷ್ಮೀಬಾಯಿಯವರು ಒಂದು ನಿರ್ಣಯ ಮಂಡಿಸಿದರು. ಶ್ರೀಮತಿ ಲೀಲಾಬಾಯಿ ಏಕಾಂಬರರಾಯರು ಅದನ್ನು ಸಮರ್ಥಿಸಿದರು. ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು. ಅನಂತರ ಮಿಸ್ ವಿಲಾಸಿನಿ ಶೆಣೈಯವರು ಭಾಷಣವಿತ್ತರು. ಅಖಿಲ ಭಾರತದ ಮಹಿಳಾ ಪರಿಷತ್ತನ್ನು ಮಂಗಳೂರಿಗೆ ಕರೆಯುವ ನಿರ್ಣಯವನ್ನೂ ಸಭೆ ಸ್ವೀಕರಿಸಿತು. ಶ್ರೀಮತಿ ಲೀಲಾಬಾಯಿಯವರು ಕೃತಜ್ಞತೆ ಹೇಳಿದರು.

ಪುನರ್ವಿವಾಹ

ದಕ್ಷಿಣ ಕನ್ನಡ ಜಿಲ್ಲಾ ಕುಂದಾಪುರ ತಾಲೂಕು ಹನ್ನಾರ ಮಾಗಣೆ, ನಾಗೋಡಿ ಗ್ರಾಮದ, ಕೋಸನಾಡಿಯ, ಶ್ರೀಯುತ ವೆಂಕಟರಮಣಯ್ಯ ಯಾನೆ ಅಪ್ಪಯ್ಯ ಇವರು ಶಿವಮೊಗ್ಗ ಜಿಲ್ಲಾ, ಸಾಗರ ತಾಲೂಕು, ಕರೂರ ಹೋಬಳಿ, ಅರಬಳ್ಳಿ ಗ್ರಾಮದ ಹಳ್ಕೆರೆ, ಸೂತ ಭಟ್ಟರ ಮಗಳಾದ ಸರಸ್ವತಿ ಬಾಯಿಯೆಂಬ ಪುನರ್ವಿವಾಹ ಕನ್ನೆಯನ್ನು ವಿಧಿಯುಕ್ತವಾಗಿ ವಿಜೃಂಭಣೆಯಿಂದ ಶಿರ್ಶಿಯ ಶ್ರೀ। ಅಕದಾಸೆ ಗಣಪತಿ ಭಟ್ಟರ ಮಾಳಿಗೆಯ ಮೇಲೆ ಪಾಣಿಗ್ರಹಣ ಮಾಡಿಕೊಂಡರು. (ಬಾತ್ಮಿ)

ಬುದ್ಧ ಜಯಂತಿ

ಯು ತಾ. ೧೯ರಂದು ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಸಂಜೀವರಾಯರ ಅಧ್ಯಕ್ಷತೆಯಿಂದ ಜರಗಿತು ಕುಮಾರಿ ಮಂಗಲರ ಸ್ವಾಗತಗೀತೆ, ಶ್ರೀ ಏಕಾಂಬರರಾಯರ ಪದ್ಯವಾಚನ, ಶ್ರೀ. ಎಂ. ಎಸ್. ಮಾಧವರಾವ್ ಮತ್ತು ಡಾ। ಕೇಶವ ಪೈ ಮೊದಲಾದವರ ಭಾಷಣಗಳಾದುವು. ಶ್ರೀ ಉಡುಪಾ ಮತ್ತು ಕೂಟದವರ ಸಂಗೀತವಿತ್ತು

ಮಚ್ವೆಗಳು ಒಡೆದು ಹೋಗಿವೆ

ಬೊಂಬಯಿಯಿಂದ ಬರುತ್ತಿರುವ ಹಲವು ಮಚ್ವೆಗಳು ತುಫಾನಿನಿಂದ ಸಮುದ್ರದಲ್ಲಿ ಒಡೆದು ಹೋಗಿವೆಯೆಂದೂ, ಅವುಗಳಲ್ಲಿ ಕೆಲವು ಮಂಗಳೂರಿನ ಮಚ್ವೆಗಳಿವೆಯೆಂದೂ ಸುದ್ದಿಯಿದೆ ಅದರ ವಿವರವಿನ್ನೂ ತಿಳಿದುಬಂದಿಲ್ಲ

ಅಕ್ಕಿ ವಿಚಾರ

ಕಂಟ್ರೋಲ್ ದರಕ್ಕೆ ಈಗ ಮಂಗಳೂರಲ್ಲಿ ಅಕ್ಕಿ ಸಿಗುವುದು ಕಷ್ಟವಾಗಿದೆ. 'ರಿಕ್ವಿಸಿಶನ್' ಅಕ್ಕಿ ಇಲ್ಲವೆಂದು ('ರಿಕ್ವಿಸಿಶನ್' ಅಕ್ಕಿಗೆ ಮಾತ್ರ ಕಂಟ್ರೋಲ್ ಆದ್ದರಿಂದ) ವ್ಯಾಪಾರಸ್ಥರು ಹೇಳುತ್ತಿದ್ದಾರೆ 'ರಿಕ್ವಿಸಿಶನ್' ಅಕ್ಕಿಯನ್ನು ಸರಕಾರದವರೀಗ ಕೋಪರೇಟಿವ್ ಸ್ಟೋರ್ಸ್‌ಗಳಿಗೆ ಮಾತ್ರ ಕೊಡುತ್ತಿರುವರೆಂದೂ, ಅಲ್ಲಿ, ಅದಿದ್ದರೆ, ಸೇರು ಲೆಕ್ಕದಲ್ಲಿ ಸಿಗುತ್ತದೆಂದೂ ತಿಳಿಯುತ್ತದೆ. ವ್ಯಾಪಾರಿಗಳು 'ವರ್ಗದಾರರ ಅಕ್ಕಿ'ಯೆಂದು ಸೇರಿಗೆ ನಾಲ್ಕಾಣೆಯಂತೆಯೂ, ಮುಡಿಗೆ ರೂ. ೧೦ ೮-೦ ಯಂತೆಯೂ ಮಾರಾಟ ಮಾಡುತ್ತಾರೆ. ಊಟ ಮಾಡುವ ರೀತಿಯ ಒಳ್ಳೆಯ ಅಕ್ಕಿ ಸಿಗಬೇಕಾದರೆ ರೂ ೧೯-೦-೦ ಅದಕ್ಕಿಂತಲೂ ಹೆಚ್ಚು ಕ್ರಯವೂ ಕೊಡಬೇಕಾಗಿ ಬರುತ್ತದೆ.

ಜಟ್ಟಿ ಕಾಳಗ

ಕದ್ರಿ ವಿದ್ಯಾಬೋಧಿನಿ ಹಾ. ಎ ಶಾಲಾ ವಠಾರದಲ್ಲಿ ಕೊಲ್ಹಾಪುರದ ಶಂಕರಲಾಲ್ ಮತ್ತು ಕದ್ರಿ ತಮ್ಮ ಇವರೊಳಗೆ ಜಟ್ಟಿ ಕಾಳಗವಾಗಿ, ಇಬ್ಬರೂ ಸರಿಸಮಾನರೆಂದು ನಿರ್ಣಯವಾಯಿತು. ಶ್ರೀ. ಪದ್ಮನಾಭ ಪಿಳ್ಳೆಯವರು ತಮ್ಮ ಇವರಿಗೆ ಪದಕವಿತ್ತರು.

ಯಕ್ಷಗಾನ ಮತ್ತು ನಾಟಕ

ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಒಂದು ನಾಟಕ ಮತ್ತು ಯಕ್ಷಗಾನ ಕೂಟವೂ ಜರಗಿತು.

ವಿಟ್ಲ

ಬಿಡುಗಡೆ

ಶ್ರೀ. ವಿಟ್ಠಲದಾಸ ಶೆಟ್ರು, ಮದ್ರಾಸ್ ಮೆಡಿಕಲ್ ಸ್ಕೂಲ್‌ನಲ್ಲಿ ಕಲಿಯುತ್ತಿದ್ದು ಮಹಾತ್ಮರ ಉಪವಾಸ ಸಮಯ ಪಿಕೆಟಿಂಗ್ ಮಾಡಿ ಸೆರೆಮನೆ ಸೇರಿದವರು ಬಿಡುಗಡೆಯಾಗಿ ವಿಟ್ಲಕ್ಕೆ ಬಂದಿರುವರು.

ಕಾರ್ಕಳ

ಅವಗಡ

ತಾ. ೧೯ರಂದು ಸಂಜೆ ಜಡಿಮಳೆ ಸುರಿದು, ಒಂದು ಕಟ್ಟೋಣದ ಪಾರ್ಶ್ವದ ಮಾಡು ಮುರಿದು ಬಿತ್ತು, ಅದರೊಳಗೆ ಕೆಲಸ ಮಾಡುತ್ತಿದ್ದ ಮೇಸ್ತ್ರಿಯೋರ್ವನು ಮೃತನಾಗಿದ್ದಾನೆ. ಇನ್ನು ಮೂವರಿಗೆ ವಿಶೇಷ ಗಾಯಗಳಾಗಿವೆ

ಕೋಟೇಶ್ವರ

ಸಾಹಿತ್ಯೋತ್ಸವ

ಇಲ್ಲಿನ ಮಿತ್ರಮಂಡಳಿ ಆಶ್ರಯದಲ್ಲಿ ಸಾಹಿತ್ಯೋತ್ಸವವು ಶ್ರೀ. ಪಿ. ಕೆ. ಆಚಾರ್ಯರ ಅಧ್ಯಕ್ಷತೆಯಿಂದ ಜರಗಿತು. ಶ್ರೀ. ಐತಾಳ ಮತ್ತು ಕೂಟದವರು ನಾದ ಗೀತೆ ಹಾಡಿದರು. ಶ್ರೀ. ಕಸ್ತೂರಿ ಕಾವ್ಯ ವಾಚನ ಮಾಡಿದರು. ಶ್ರೀಗಳಾದ ಎಮ್ಮಾಳ, ಪುರಾಣಿಕ, ಉಡುಪ, ಹತ್ವಾರ್, ಗೋವಿಂದಯ್ಯ, ಉರಾಳ ಮೊದಲಾದವರು ಭಾಷಣಗಳನ್ನಿತ್ತರು

ಟುನಿಸಿಯಾ ದಿನಾಚರಣೆ

ಯು ಕಾರ್ಕಳ ಪುತ್ತೂರು ಮೊದಲಾದ ತಾಲೂಕು ಕೇಂದ್ರಗಳಲ್ಲಿಯೂ ಜರಗಿದೆ.

ಕರ್ನಾಟಕ

ಬೆಳಗಾವಿ

ಬೆಳಗಾವಿ ಸೆಂಟ್ರಲ್ ಇಂಗ್ಲಿಷ್ ಸ್ಕೂಲಿನ ಕಟ್ಟಡಕ್ಕೆ ಬೆಂಕಿ ಬಿದ್ದು ೬-೭ ಸಾವಿರ ರೂಪಾಯಿ ನಷ್ಟವಾಗಿದೆ. ಶ್ರೀ ಬಾಪುರಾವ ಕುಲಕರ್ಣಿಯವ ಮನೆ ಜಪ್ತಿ, ಅದೇ ದಿನ ಬಿಂದುರಾವ ಕುಲಕರ್ಣಿಯವರನ್ನು ಬಂಧಿಸಿರುವರು. ಸತ್ತಿಯಲ್ಲಿ ಅನಂತರಾವ ಕುಲಕರ್ಣಿಯವರ ಮನೆ ಜಪ್ತಿಮಾಡಿ ಕೆಲವು ಸಾಮಾನುಗಳನ್ನು ಒಯ್ದಿರುವರು. ಮೆಜಿಸ್ಟ್ರೇಟರು ನೋಟೀಸು ಹೊರಡಿಸಿದರೂ ಅನಂತರಾಯರು ಹಾಜರಾಗಲಿಲ್ಲ. ಮಂಗಸೂಳಿಯಲ್ಲಿ ೫೦ ಜನರ ಬಂಧನವಾಗಿದೆ. ಗಣೇಶವಾಡಿಯಲ್ಲಿ ೧೮ ಮತ್ತು ಶೇಡಬಾಳಿನಲ್ಲಿ ೪-೫ ಜನರನ್ನು ಬಂಧಿಸಲಾಗಿದೆ. ಅಕ್ಕಿ, ಜೋಳ, ಗೋದಿ ಇವುಗಳ ಹಿಟ್ಟು ಇವುಗಳನ್ನು ಅಪ್ಪಣೆಯಿಲ್ಲದೆ ಯಾರೂ ೮ ಚೀಲಕ್ಕಿಂತ ಹೆಚ್ಚು ಇಟ್ಟುಕೊಳ್ಳಕೂಡದೆಂದು ಅಪ್ಪಣೆಯಾಗಿದೆ. ಅಥಣಿ ತಾಲೂಕಿನ ಕೆಲವು ಪ್ರದೇಶಗಳನ್ನು ಬರಗಾಲ ಪ್ರದೇಶವೆಂದು ಸಾರಿದ್ದರೂ ಸರಕಾರದವರು ಇದುವರೆಗೆ ಏನೂ ಪರಿಹಾರ ಕಾರ್ಯಕ್ರಮ ಕೈಕೊಂಡಿರುವುದಿಲ್ಲ. ನಿಪ್ಪಾಣಿಯ ಬ್ಯಾಂಕರ್ ಶೇಟ್ ಲಖಮಿಚಂದ ತುಳಜಾರಾಮರ ಅಂಗಡಿ ಮನೆಗಳನ್ನು ಜಪ್ತಿಮಾಡಿ ೫ ಸಾವಿರ ರೂಪಾಯಿ ಕೊಂಡುಹೋಗಿರುವರು.

ಧಾರವಾಡ

ಅಣ್ಣಿಗೇರಿ ತಹಸೀಲದಲ್ಲಿರುವ ಸುತ್ಕೋಟಿಯ ಶಿವನಗೌಡರ ಮನೆಯನ್ನು ಜಪ್ತಿಮಾಡಿ ೪ ಜನರನ್ನು ಬಂಧಿಸಲಾಯಿತು ಇವರಲ್ಲಿ ಹೆಂಗುಸರೂ ಇದ್ದರು. ನರಗುಂದದಲ್ಲಿ ೮ ಕಾ. ಪ್ರಕಾರ ಶ್ರೀಗಳಾದ ಬಸಪ್ಪ ಹಸಬಿ, ಬಸವಂತಪ್ಪಾ ಹುಬ್ಬಳ್ಳಿ, ಕೋಟಸಂಗನಗೌಡ, ವೀರಭದ್ರಪ್ಪಾ ಹೊಸಕೇರಿ ಶಿವನಗೌಡ ಪಾಟೀಲ ಇವರನ್ನು ಬಂಧಿಸಿದ್ದು ಆ ಮೇಲೆ ಬಿಡುಗಡೆ ಮಾಡಿದರು

ಉತ್ತರ ಕನ್ನಡ

ಮೈಸೂರು ಪೋಲೀಸರು ಸಿದ್ಧಾಪುರದ ಕೊಲ್ಲಾ ೪ ಗಣೇಶಯ್ಯರನ್ನು ಹಿಡಿದು ಸಿದ್ಧಾಪುರಕ್ಕೆ ಕಳುಹಿಸಿರುವರು. ಇವರು ಸಪ್ಟೆಂಬರದಿಂದ ಕಾಣೆಯಾಗಿದ್ದರು. ಸಿದ್ಧಾಪುರ ಪೋಲೀಸರು ತೋರ್ಗಲ್ ಕಾಯಿ ರಾಮಚಂದ್ರಯ್ಯರನ್ನು ಬಂಧಿಸಿರುವರು ಸಿದ್ಧಾಪುರ ಪಂಚಾಯತ ಬೋರ್ಡು ಸೆಕ್ರೆಟರಿ ರಾಜೀನಾಮೆಯಿತ್ತಿರುವರು ಅಂಕೋಲಾ ತಾಲೂಕಿನಲ್ಲಿ ಪರಾರಿಯಾಗಿದ್ದವರನ್ನು ಹಿಡಿಯುವ ಕಾರ್ಯಕ್ರಮ ಭರದಿಂದ ನಡೆದಿದೆ ೩ನೇ ತಾರೀಕಿಗೆ ೨೬೦ ಜನ ಪೋಲೀಸರು ಹಿಚ್ಕಡ, ನಗರ ಕೇರಿ, ಕಾಮಗೆ ಜೂಗ ಮುಂತಾದ ಗ್ರಾಮಗಳನ್ನು ಬೆಳಗಿಂದ ಸಂಜೆ ವರೆಗೆ ಸುತ್ತಿದರು. ಯಾರೂ ಸಿಗಲಿಲ್ಲ. ೬ನೇ ತಾರೀಕಿಗೆ ೪೦, ೫೦ ಪೋಲೀಸರು ಆಗರಗೋಣಕ್ಕೆ ಮುತ್ತಿಗೆ ಹಾಕಿದರು ೯ನೇ ತಾರೀಕು ಸಗಡಗೇರಿಗೆ ಮುತ್ತಿಗೆ ಹಾಕಿದರು. ಎಲ್ಲಿಯೂ ಯಾರೂ ಸಿಗಲಿಲ್ಲ. ಅವರ ಆಸ್ತಿ ವಶಮಾಡಿಕೊಳ್ಳಲಾಗುವುದಂತೆ ಮೊರಬದ ಪಟೇಲ ಶ್ರೀ ನಾರಾಯಣ ಮತ್ತು ಸಂತುವಟಿಗಾರರನ್ನು ಸ್ಥಾನಬದ್ಧ ಮಾಡಲಾಗಿದೆ. ಶ್ರೀ ನಾಗಪ್ಪ ನಾರಾಯಣ ಪಂಡಿತ, ವಿಘ್ನೇಶ್ವರ ವೆಂಕಟರಮಣ ಪಂಡಿತ, ಇವರಿಗೆ ೬ ೬ ತಿಂಗಳ ಶಿಕ್ಷೆಯಾಗಿದೆ. ನಾರಾಯಣ ಶೇಟ ಇವರಿಗೆ ೧ ತಿಂಗಳ ಶಿಕ್ಷೆಯಾಗಿದೆ.

ವಿಜಾಪುರ

ಬರಗಾಲ ಪರಿಹಾರ ಕೆಲಸಗಳು ಸುರುವಾಗಿದ್ದು ಅಧಿಕಾರಿ ಅಧಿಕಾರೇತರ ಜನರು ಅದರಲ್ಲಿ ಬಹಳ ಮೆಹನತ್ತು ವಹಿಸಿ ದುಡಿಯುತ್ತಿದ್ದಾರೆ. ಇಲ್ಲಿ ಕಾಳಿನ ಸಂಗ್ರಹ ಕಡಿಮೆಯಿರುವುದರಿಂದ ಹೆಚ್ಚು ಕಾಳು ಕಳುಹಿಸಬೇಕೆಂದು ಮುಂಬಯಿ ಸರಕಾರಕ್ಕೆ ವಿನಂತಿಸಲಾಗಿದೆ. ತಾರನಾಳದಲ್ಲಿ ಕೆರೆ ಕಟ್ಟಿಸುವ ಕಲಸದಲ್ಲಿ ೨೨೦೦೦ ಜನ ಕೂಲಿ ಮಾಡುತ್ತಿದ್ದಾರೆ ಮದಬಾವಿಯಲ್ಲಿ ಒಡ್ಡಿನ ಕಾಮಗಾರಿಯಲ್ಲಿ ೨೮೦೦ ಜನ ಕೆಲಸ ಮಾಡುತ್ತಿದ್ದು ಸಧ್ಯ ಅದು ನಿಂತಿದೆ ಮೊಂಟಗಿ ರಸ್ತೆ ಕಾಮಗಾರಿಯಲ್ಲಿ ೬ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ ಅವರಿಗೆ ಸೀರೆ, ಅಂಗಿ, ಟೊಪ್ಪಿಗೆ ಮೊದಲಾದವರನ್ನು ಇಲ್ಲಿನ ವ್ಯಾಪಾರಿ ಕುಲಕರ್ಣಿಯವರು ಸ್ವಂತ ಹಣದಿಂದ ೧೦೦೦-೧೨೦೦ ರೂ ವೆಚ್ಚ ಮಾಡಿ ಕೊಟ್ಟರು. ಕೆರೂರಿಂದ ಬಿಟಿ ಕುರ್ಕಿ ವರೆಗಿನ ಮಾರ್ಗ ಸುರುವಾಗಿ ೨, ೩॥ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ.

ಕನ್ನಡ ಸಂಸ್ಥಾನಗಳು

ಮೈಸೂರು ಸಂಸ್ಥಾನದ ಬೇರೆ ಬೇರೆ ಸೆರೆಮನೆಗಳಲ್ಲಿರುವ ೨೯೩ ಸ್ಥಾನಬದ್ಧರ ಬಿಡುಗಡೆ ಮಾಡಲು ಅಪ್ಪಣೆಯಾಗಿದೆಯಂತೆ, ಇದರಲ್ಲಿ ೧೫೯ ಜನರನ್ನು ಶರತವಿಲ್ಲದೆ ಬಿಡುಗಡೆ ಮಾಡಲಾಗುವುದೆಂದೂ ತಿಳಿದಿದೆ. ಎಪ್ರಿಲ್ ಅಂತ್ಯದ ವರೆಗೆ ೫೦೦ ಜನರು ಸ್ಥಾನಬದ್ಧರಾಗಿದ್ದರು ಇವರ ವಿಚಾರ ಮೊದಲಿನಂತೆಯೇ ನಿರ್ಣಯವಿರುವುದಂತೆ! ಮಲಬಾರ ಸಿವಿಲ್ ಸರ್ವಿಸಿನಲ್ಲಿರುವ ಕೆಸಿಡ್ ಶಿಬ್ಲಾಕ್ ವೆಲ್ಸ್ ಮತ್ತು ಮಿಸೆಸ್ ಡೊರೊತಿ ಡೆನಿಜನ್ ಇವರು ವೈರಿಗಳಿಗೆ ಸುದ್ದಿ ಕಳುಹಿಸುತ್ತಿರುವರೆಂದು ಇವರಿಗೆ ಶಿಕ್ಷೆ ವಿಧಿಸಲಾಗಿದೆ. ಈ ತರದ ಖಟ್ಲೆ ಬಹುಶಃ ಇದೇ ಮೊದಲನೆಯದು ಅರ್ಜುನವಾಡ ಮತ್ತು ಶಿರವಾಡಿ ಕಳ್ಳಿನಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ

ಶ್ರೀ ಸಿ ವಿ. ರಾಮಕೃಷ್ಣ ಜೆಟ್ಟಿಯವರ ನಿಧನ

'ಮಂಗನ ಮದುವೆ' ಮೊದಲಾದ ಪುಸ್ತಕಗಳನ್ನು ಬರೆದವರೂ, ಕಂಠೀರವದ 'ದಾಸಯ್ಯನ ಜೋಳಿಗೆ'ಯ ಪ್ರಧಾನ ಲೇಖಕರೂ, ಉತ್ತಮ ಹಾಸ್ಯ ಬರೆಹಗಾರರೂ ಆದ ಶ್ರೀ ಸಿ ವಿ ರಾಮಕೃಷ್ಣ ಜೆಟ್ಟಿಯವರು ಇತ್ತೀಚೆಗೆ ಚಾಮರಾಜನಗರದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಒರ್ವ ಶ್ರೇಷ್ಠ ಪತ್ರಿಕಾ ಲೇಖಕರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿಯಿರಲಿ!

ಶ್ರೀ ಕರಮರಕರ್‌ರಿಗೆ ಡಾಕ್ಟರೇಟ್

"ದ್ರಾವಿಡ ಧರ್ಮದ ವಿಕಾಸ"ವೆಂಬ ವಿಷಯವಾಗಿ ೩ ವರ್ಷ ಸಂಶೋಧನೆ ನಡೆಸಿ ಆಂಗ್ಲ ಭಾಷೆಯಲ್ಲಿ ಒಂದು ಪ್ರಬಂಧವನ್ನು ಬರೆದುದಕ್ಕಾಗಿ ಧಾರವಾಡದ ಶ್ರೀಯುತ ಅನಂತರಾವ್ ಕರಮರಕರರಿಗೆ ಮುಂಬಾಯಿ ವಿಶ್ವವಿದ್ಯಾಲಯದವರು ಡಾಕ್ಟರೇಟ್ ಪ್ರಶಸ್ತಿಯನ್ನು ಕೊಟ್ಟಿದ್ದಾರೆ

ಕೊಡಗು

ಭಾರತ ಸಂರಕ್ಷಣಾ ಕಾಯಿದೆಗೆ ವಿರುದ್ಧ ಭಾಷಣ ಮಾಡಿದರೆಂದು ಶ್ರೀಗಳಾದ ಬಿ. ಪದ್ಮನಾಭಯ್ಯ, ಯಂ ಎಸ್. ರಾಮಚಂದ್ರ, ಪುಲಿಯಂಡ ಸುಬ್ಬಯ್ಯ ಮತ್ತು ಮಚ್ಚಿಯಂಡ ಐಯ್ಯಪ್ಪ ಇವರುಗಳನ್ನು ತಾ. ೧೯ ಮತ್ತು ೨೦ರಲ್ಲಿ ದಸ್ತಗಿರಿ ಮಾಡಿರುತ್ತಾರೆ. ಇವರ ವಿಚಾರಣೆಯನ್ನು ಜೂನ್ ಒಂದನೆ ವಾರಕ್ಕೆ ಇಡಲಾಗಿದೆ.

ಮಹಾತ್ಮರ 'ದತ್ತಪುತ್ರ' ಅಲ್ಲಾಭಕ್ಷ್

ತಾಯ್ನಾಡಿಗಾಗಿ ದುಡಿದು ಮಡಿದರು!

ಸಿಂಧದ ಮಾಜಿ ಪ್ರಧಾನ ಮಂತ್ರಿ ಅಲ್ಲಾಭಕ್ಷರು ತಾ. ೧೪ರಂದು ಶುಕ್ರವಾರ, ದುರಾತ್ಮರ ಕೈಯಿಂದ ಅಮಾನುಷ ಕೊಲೆಗೀಡಾದರೆಂಬುದು ಅತ್ಯಂತ ವಿಷಾದಕರ ವಾರ್ತೆ. ಈ ಸುದ್ದಿ ಕೇಳಿ, ಇದು ನಿಜವೆಂದು ನಂಬುವುದೂ ಕಷ್ಟವಾಯಿತು. ಸಿಂಧದ ಪ್ರಭಾವಶಾಲೀ ಪುರುಷ ಸಿಂಹರವರು, ಅತ್ಯಂತ ಸತ್ಯಾತ್ಮರಾದ ಮುಸ್ಲಿಮರು, ಭಾರತಮಾತೆಯ ಪ್ರೀತಿಯ ಕುಮಾರರು. ನಮ್ಮ ತಾಯ್ನಾಡಿನ ಇತಿಹಾಸದಲ್ಲಿಯೇ ಇಷ್ಟು ಘೋರ, ದುಃಖಕರ, ವೈಯುಕ್ತಿಕ ದುರಂತ ನಡೆದಷ್ಟು ವಿರಳ. ಈ ಸಂದರ್ಭ, ಅಬ್ರಹಾಂ ಲಿಂಕನನ ನೆನಪಾಗುತ್ತದೆ. ಆ ಮಹಾ ಪುರುಷನೂ, ತನ್ನ ತಾಯ್ನಾಡಿನ ಐಕ್ಯ ಸಾಧನೆಯನ್ನೇ ತನ್ನ ಜೀವನೋದ್ದೇಶವಾಗಿ ಮಾಡಿಕೊಂಡು ಮಡಿದ! ಆದ್ದರಿಂದಲೇ, ಈಗ ಆ ಯುಗ ಪುರುಷನ ಕೀರ್ತಿ ಹಬ್ಬಿದೆ. ಭಾರತದ ಸ್ವಾತಂತ್ರ್ಯದ ಪುಣ್ಯೇತಿಹಾಸವು ಮುಂದೆ ಉಲ್ಲಿಖಿತವಾಗುವ ಸಂದರ್ಭದಲ್ಲಿ, ಇಂದಿನೀ ಕೋಲಾಹಲ, ಅಶಾಂತಿ, ಘರ್ಷಣೆಗಳು ನಿಂತು ಶಾಂತಿ ನೆಲಸಿದಾಗ, ಪರಿಸ್ಥಿತಿಯ ಸತ್ಯಾಸತ್ಯ ನ್ಯಾಯಾನ್ಯಾಯಗಳ ವಿಮರ್ಶೆಯಾದಾಗ, ಅಲ್ಲಾಭಕ್ಷರಿಗೂ ಒಂದು ಉತ್ತಮ ಸ್ಥಾನ ಸಿಗಲೇಬೇಕು. ಅವರೂ ಆಗ ಪ್ರಥಮ ಶ್ರೇಣಿಯ ಮಹಾಪುರುಷರಲ್ಲೊಬ್ಬರಾಗಿ ಗಣಿಸಲ್ಪಡುವರು.

ರಜಪೂತ ರಕ್ತ ಅವರದು

ಅಲ್ಲಾಭಕ್ಷರು ಉತ್ತರ ಸಿಂಧದ ಬಲೂಚಿ ಮನೆತನಕ್ಕೆ ಸೇರಿದವರು. ಇವರ ವಂಶದವರು ರಜಪೂತರು. 'ಸುಮ್ರಾ ಎಂಬ ರಜಪೂತ ರಾಜವಂಶಕ್ಕೆ ಸೇರಿದವರು.' ಅಲ್ಲಾಭಕ್ಷರು ಮುಸಲ್ಮಾನ ಧರ್ಮದಲ್ಲಿ ಅತ್ಯಂತ ಅಭಿಮಾನಿಯಾಗಿದ್ದರೂ, ತಮ್ಮ ಧಮನಿಗಳಲ್ಲಿ ಹಿಂದೂ ರಕ್ತ ಸಂಚಾರವಾಗುತ್ತಿದೆಯೆಂದು ಆಗಾಗ ಹೇಳುತ್ತಿದ್ದರು. ಅಲ್ಲಾಭಕ್ಷರ ಬುದ್ಧಿ ಬಹಳ ತೀಕ್ಷ್ಣ. ಬಾಲ್ಯದಿಂದಲೇ ಜನತೆಯೊಡನೆ ಬೆರೆತು, ಅವರ ಸುಖದುಃಖಗಳನ್ನು ಕಣ್ಣಾರೆ ಕಂಡು ಅಮೂಲ್ಯ ಅನುಭವ ಪಡೆದಿದ್ದರು. ಆದ್ದರಿಂದಲೇ ಅವರು ಮುಂದೆ ಯೋಗ್ಯ ಮುಂದಾಳುಗಳಾದರು. ಜಮೀನ್ದಾರರಾಗಿ, ಕಂಟ್ರಾಕ್ಟದಾರರಾಗಿ ಅವರು ತಮ್ಮ ಸುಖ ಜೀವನ ಸಾಗಿಸುತ್ತಿದ್ದರು.

ಮಾಂಟ್‌ಫೋರ್ಡ್ ಸುಧಾರಣೆ ಬಂದ ಕಾಲ. ಅಲ್ಲಾಭಕ್ಷರು ಆಗ ಮುಂಬಯಿ ಶಾಸನ ಸಭೆಯ ಸದಸ್ಯರಾಗಿದ್ದರು. ಸಿಂಧದ ಮುಸ್ಲಿಂ ಪಕ್ಷದ ನಾಯಕರಾಗಿದ್ದರು. ಕೀರ್ತಿ ಕಾಮನೆಯ ಆತುರವಿಲ್ಲದಿದ್ದರೂ ಸಾರ್ವಜನಿಕ ಸೇವಾ ಕಾಂಕ್ಷೆ ಅವರಲ್ಲಿ ಬಹಳವಿತ್ತು. ಆದ್ದರಿಂದಲೇ ರಾಜಕಾರಣದಲ್ಲಿ ಅವರ ಪ್ರಭಾವ ಬೆಳೆಯುತ್ತಾ ಹೋಯಿತು. ಅವರ ದೇಶಾಭಿಮಾನ, ಸಾರ್ವಜನಿಕ ಸೇವೆ ಯಾರಿಗೂ ತಿಳಿಯದ ವಿಷಯವಲ್ಲ. ತಮ್ಮ ಹೊಲ ನೆಲದಲ್ಲಿ ಅವರಿಗೆ ಆಸಕ್ತಿ ಬಹಳ. ಆದ್ದರಿಂದಲೇ ರೈತರನ್ನು ಬಹಳ ಪ್ರೀತಿಸುತ್ತಿದ್ದರು. ಬಡವರ ಮೇಲಿನ ಪ್ರೀತಿಯ ದ್ಯೋತಕವಾಗಿ, ಯೌವನಕ್ಕೆ ಕಾಲಿಟ್ಟಂದಿನಿಂದಲೇ ಖಾದೀ ಬಟ್ಟೆಯನ್ನು ಉಡತೊಡಗಿದರು. ಹದಿನೆಂಟು ವರ್ಷಗಳ ಹಿಂದೆ ಅವರ ಹುಟ್ಟೂರು ಶಿಕಾರಿಪುರವು ನೆರೆಹಾವಳಿಗೆ ತುತ್ತಾದಾಗ, ಜನರ ಸಂಕಷ್ಟ ಪರಿಹರಿಸುವಲ್ಲಿ ಅವರು ಅಹರ್ನಿಶಿ ದುಡಿದರು.

ರಾಜಕೀಯ ರಂಗದಲ್ಲಿ

ಮುಂದೆ ಸಿಂಧ ಪ್ರಾಂತವು ಪ್ರತ್ಯೇಕವಾಯಿತು. ಆಗ ಅವರೂ ಶಾಸನ ಸಭೆಗೆ ಕಾಲಿಟ್ಟರು. ಈಗ ಅವರ ಬೆಳಕು ಚೆನ್ನಾಗಿ ಬೀರಿತು. ಹಿಂದುಗಳೂ ಮುಸಲ್ಮಾನರೂ ಅಲ್ಲಾಭಕ್ಷರನ್ನೇ ತಮ್ಮ ಮುಂದಾಳುವೆಂದು ಒಪ್ಪಿಕೊಂಡರು. ಕಳೆದ ಏಳು ವರ್ಷಗಳಿಂದ ಸಿಂಧದ ರಾಜಕೀಯ ಇತಿಹಾಸವು ನಾನಾ ಘಟನೆಗಳಿಂದ ಕೂಡಿದೆ. ಎಷ್ಟೋ ಮಂತ್ರಿ ಮಂಡಳಗಳು ನಾಯಿಕೊಡೆಗಳಂತೆ ತಲೆಯೆತ್ತಿವೆ; ಉರುಳಿವೆ. ಹಲವು ಪಕ್ಷಗಳು ರಚಿತವಾಗಿ ಹರಿದುಹೋಗಿವೆ. ಜಾತೀಯ ಹೊಡೆದಾಟ, ಘೋರತರ ದಂಗೆಗಳೂ ಆಗಿ ಹೋಗಿವೆ. ಹಿಂದುಗಳ ಸಮಸ್ಯೆ, ಮುಸಲ್ಮಾನರ ಸಮಸ್ಯೆ, ಪಾಕಿಸ್ತಾನ, ಅಖಂಡ ಹಿಂದುಸ್ತಾನ, ಕಾಂಗ್ರೆಸ್, ಮುಸ್ಲಿಂಲೀಗ್, ಹಿಂದು ಮಹಾಸಭೆ ಇಂತು ಸಾಮಾಜಿಕ ರಾಜಕೀಯ ಎಲ್ಲಾ ಸಮಸ್ಯೆಗಳೂ ಸಿಂಧದಲ್ಲಿವೆ. ಇವುಗಳೆಲ್ಲವುಗಳಿಗಿಂತ ಮೇಲಾಗಿ ಅಲ್ಲಾಭಕ್ಷರ ವ್ಯಕ್ತಿತ್ವ ನಿಷ್ಕಳಂಕವಾಗಿ ಎದ್ದು ತೋರುತಿತ್ತು. ಅವರು ಹೆಸರಾದ ಅರ್ಥಿಕ ಮಂತ್ರಿ. ಎಲ್ಲದರಲ್ಲಿಯೂ ಅವರದೇ ಮೇಲುಗೈ. ಸಿಂಧೂ ನದೀ ನೀರನ್ನು ಕರಾಚಿ ವರೆಗೆ ಹರಿಸಿದವರು ಅವರೇ. ಅನೇಕ ಪಾಳು ಬಿದ್ದ ಭೂಮಿಗಳನ್ನು ಸಾಗುವಳಿ ಮಾಡಿಸಲು ಅನೇಕ ಅಣೆಕಟ್ಟುಗಳನ್ನು ಕಟ್ಟಿಸಿದರು.

ಅಲ್ಲಾಭಕ್ಷರದು ಸಂಕೋಚ ಮನಸ್ಸಲ್ಲ; ವಿಶಾಲ ಭಾವನೆ, ಅಖಿಲಭಾರತಭಾವನೆ ಅವರದು. ಭಾರತವು ಅಖಂಡ ರಾಷ್ಟ್ರವೆಂದು ಅವರ ವಿಶ್ವಾಸ. ಒಂದಲ್ಲ ಒಂದು ದಿನ ವಿಶ್ವವು ಸ್ವತಂತ್ರ ರಾಷ್ಟ್ರವಾಗುವುದೆಂದು ಹಂಬಲಿಸುತ್ತಿದ್ದರು. ಅಜಾದ್ ಮುಸ್ಲಿಂ ಪರಿಷತ್ತಿನ ಪ್ರಥಮ ಅಧ್ಯಕ್ಷ ಪದವಿ ಅವರಿಗೆ ದೊರಕಿತು. ದೇಶದ ಸ್ವಾತಂತ್ರ್ಯ ಸಾಧನೆಗಾಗಿ ಮುಸ್ಲಿಮರು ಒಂದಾಗಬೇಕೆಂದು ಅವರು ಯತ್ನಿಸಿದರು. ಗವರ್ನರರ ನಿರಂಕುಶಾಧಿಕಾರವನ್ನು ಖಂಡಿಸಿದರು. ವೈಸರಾಯರಿಗೆ ಹಾಗೆಂದು ಪತ್ರ ಬರೆದರು. ತಮಗೆ ಇಂಥಾ ಸರಕಾರವಿತ್ತ ಬಿರುದನ್ನು ಸ್ವೀಕರಿಸುವುದು ಅರಾಷ್ಟ್ರೀಯವೆಂದು ಹಿಂದಕ್ಕಟ್ಟಿದರು. ಪ್ರಾಮಾಣಿಕವಾದ ಅಭಿಪ್ರಾಯ ಪ್ರಕಟಣೆಗಾಗಿ ಅವರು ಪದಚ್ಯುತರಾಗಬೇಕಾಯಿತು.

ಪದಚ್ಯುತರಾದ ಮೇಲೆ ಕಳೆದ ಆರು ತಿಂಗಳಿಂದ ಸ್ವಗೃಹದಲ್ಲಿ ಶಾಂತಚಿತ್ತರಾಗಿದ್ದರು. ತಮಗೆ ವೈರಿಗಳಿರುವರೆಂದು ಅವರಿಗೆ ಗೊತ್ತಿತ್ತು. ಮಿತ್ರರು ಹಾಗೆ ಎಚ್ಚರಿಸಿದ್ದರು. ಆದರೆ ಅವರ ಧೈರ್ಯ ಅಸಾಮಾನ್ಯವಾದುದು. ನಿರ್ಭಯವಾಗಿ ಮನಬಂದತ್ತ ಸಂಚರಿಸುತ್ತಿದ್ದರು. ಅವರ ಮೃತ್ಯು ಇಷ್ಟು ಸಮೀಪವಿತ್ತೆಂದು ಯಾರೂ ಕನವರಿಸಿರಲಾರರು. ಮೂರು ಗಂಡು, ನಾಲ್ಕು ಹೆಣ್ಣು ಮಕ್ಕಳೊಂದಿಗೆ ಪತ್ನಿಯನ್ನು ಸಂಕಟಕ್ಕೀಡು ಮಾಡಿ ದುರ್ವಿಧಿಯು ಅಲ್ಲಾಭಕ್ಷರನ್ನು ಸೆಳೆಕೊಂಡಿತು!

ಮಹಾತ್ಮರ 'ದತ್ತ ಪುತ್ರ'

ಅಲ್ಲಾಭಕ್ಷರು ಮಿತಭಾಷಿ. ಸರಳ ಜೀವನ ಅವರದು. ಶುದ್ಧ ಖಾದೀ ಉಡಿಗೆ. ಮೈಮೇಲೆ ಒಂದು ಜವಾರ್ ಕೋಟು; ತಲೆಗೆ ಶಿರಸ್ತ್ರಾಣವಿಲ್ಲ. ಪಾದರಕ್ಷೆಯನ್ನೂ ಹಾಕಿಕೊಳ್ಳುತ್ತಿರಲಿಲ್ಲ. ಅವರಷ್ಟು ನಿಷ್ಠಾವಂತ ಮುಸ್ಲಿಮರು ದೊರಕುವುದು ಅಪರೂಪ. ಮಕ್ಕಳ ಮೇಲೆ ಅವರಿಗೆ ಬಹಳ ಮಮತೆ. ಮೋಟಾರ್ ಕಾರಿನಲ್ಲಿ ಹೋಗುವಾಗ ಡ್ರೈವರ್ ಬಳಿ ಅವರ ಸ್ಥಾನ. 'ಡ್ರೈವರ್ ಮಿತ್ರ' ಎಂದು ಅವರಿಗೆ ಹೇಳುವುದಿತ್ತು. ರಾಜಕೀಯ ರಂಗದಲ್ಲಿ ಉತ್ತಮ ಮಿತ್ರರು ಸಿಗುವುದು ದುರ್ಲಭ. ಆದರೆ ಅಲ್ಲಾಭಕ್ಷರನ್ನು ಕೊನೆವರೆಗೂ ಮರೆಯಲಾರದವರು ಹಲವರಿದ್ದಾರೆ. ಅವರಲ್ಲಿ ಹಿಂದುಗಳೂ ಇದ್ದಾರೆ! ಭಾರತದ ಸಂತ ಮಹಾತ್ಮರಾದ ಗಾಂಧಿಜಿ ಒಮ್ಮೆ ಅಲ್ಲಾಭಕ್ಷರನ್ನು ತನ್ನ 'ದತ್ತಪುತ್ರ' ಎಂದು ಕರೆದಿದ್ದರು! ಅಂಥಾ ಗುಣಶಾಲಿ ಅಲ್ಲಾಭಕ್ಷರು!

—ಎನ್. ವಿ. ತಾಡನಿ.

'ನನ್ನ ಮಗು'

'ಮೀನಾಕ್ಷಿಯದು, ಹೊರ ಬಂದಿದೆ ಈಗ, ಸಾಲ್ವಿಯವರ ಸಹಾಯದಿಂದ. ದಾಮು ಅಣ್ಣಾ ಮಾಲ್ವಂಕರ್, ಜೋಗ್, ಸುಮತಿ ಗುಪ್ತೆ ವಿನಾಯಕ್ ಮೊದಲಾದ ಪಂಗಡವೂ ಜತೆಯಲ್ಲಿದೆ. ಪ್ರಫುಲ್ಲ ಚಿತ್ರದ ತಯಾರಿಯಿದು. ವಿನಾಯಕರೇ ಇದರ ನಿರ್ದೇಶಕರು. ಖಾಂಡೇಕರರು ಇದರ ಕಥಾ ಸಂಭಾಷಣಾ ಲೇಖಕರು.

ಸಿನೆಮಾ ಸುದ್ದಿ

ರಮೋಲಾ ಬಂಗಾಳಿ

ಸಿನೆಮಾದಲ್ಲಿ ಇದೇ ಪ್ರಥಮ ಸಲವಾಗೀಗ ನಟಿಸುತ್ತಾಳೆ. 'ಅಲೇಯಾ' ಎಂಬುದು ಆ ಚಿತ್ರದ ಹೆಸರು. ಛಾಬಿ ಬಿಶ್ವಾಸ್, ಪ್ರಮೋದ ಗಂಗೋಲಿ ಮೊದಲಾದವರು ಇವಳ ಜತೆಯ ನಟವರ್ಗ.

'ದುಲ್ಹಾನ್'

ಎಂಬುದು ರಮಣೀಕದವರ ಕೃತಿ. ಶಾಹು ಮೋಡಕ್ ಯಶೋಧರಾ ಕಟ್ಟುವಿನೊಡನೆ ಇದರಲ್ಲಿ ನಟಿಸುವನು. ರಾಮಶುಕಲ್, ಮಾಯಾ ಬೆನರ್ಜಿ, ಕನ್ಯಾಲಾಲ್, ಶಂಕರಪ್ರಸಾದ್ ಇತ್ಯಾದಿ ಇದರ ನಟವರ್ಗ.

ಸಬಿತಾ ಕವಿತೆ

ಬರೆಯುತ್ತಿದ್ದಾಳೆ. ಅವಳ ಕವಿತಾ ಸಂಗ್ರಹವೊಂದು ಪ್ರಕಟವಾಗಿದೆ. ಅವಳ ಪುಸ್ತಕದ ಆದಾಯವನ್ನೆಲ್ಲಾ ಅಕೆರೆಡ್ ಕ್ರೋಸ್ ಸೊಸೈಟಿಗೆ ದಾನ ಮಾಡುವುದಾಗಿ ಪ್ರಕಟಿಸಿರುವಳು. ಒಳ್ಳೆಯ ಪುಣ್ಯದಾನ.

ಪಂಚೋಲಿ 'ಪೂಂಜಿ'

ಚಿತ್ರದಲ್ಲಿ ಬೇಬಿ ಅಖ್ತಾರ್, ರಾಗಿಣಿ, ಮನೋರಮಾ ಈ ತ್ರಿತಾರೆಯರು ಶೋಭಿಸುವರು. ವಿಷ್ಣು ಪಂಚೋಲಿ ಮತ್ತು ರವೀಂದ್ರ ದಾವೆ ಇದರ ನಿರ್ದೇಶಕರು.

'ಜವಾಬ್' ನಂತರ

ಬರುವಾರವರು 'ರಾಣಿ' ಎಂಬ ಚಿತ್ರವನ್ನು ತಯಾರಿಸುತ್ತಾರೆ. ಬರುವಾ, ಜಮುನಾ, ಕಲಾವತಿ ಇವರು ನಟ ವರ್ಗ. ಕಮಲ್‌ದಾಸ್ ಗುಪ್ತರ ಸಂಗೀತ ನಿರ್ದೇಶಕತ್ವ. ನಿರ್ದೇಶಕರು ಸ್ವತಃ ಬರುವರೇ ಎಂದು ಬೇರೆ ಹೇಳಬೇಕಾಗಿಲ್ಲ. ಬರುವಾ, ಕಲಾ ಸಾಮ್ರಾಜ್ಯದಲ್ಲಿ ಆದರ್ಶವಾದಿ; ರವೀಂದ್ರರ ಶಿಷ್ಯ ತಾನೆ!

ಪೃಥ್ವೀರಾಜ್ ಸ್ವರ್ಣಲತಾ

ಕೊಡನೆ 'ಇಶಾರಾ'ದಲ್ಲಿ ನಟಿಸುತ್ತಾನೆ. ಸುರೇಶ್, ಸೂರಿಯಾ, ಜಗದೀಶ್, ಮತ್ತನೇಕರು ಪ್ರಸಿದ್ಧ ನಟನಟಿಯರೂ ಇದರಲ್ಲಿ ಭಾಗಿಗಳಾಗಿರುವರು. ಆರ್. ಡಿ. ಪ್ರೊಡಕ್ಷನ್ ತಯಾರಿಕೆ ಇದು. ಜೆ. ಕೆ. ನಂದಾ ಇದರ ನಿರ್ದೇಶಕರು.

'ಕಲೆ ಮಾರಲಾರೆ'

ರಾಜಕುಮಾರ ಬರುವಾ ರವೀಂದ್ರನಾಥರ ಶಿಷ್ಯ. 'ದೇವದಾಸ್' 'ಅಧಿಕಾರ' ಮೊದಲಾದ ಚಿತ್ರಗಳಿಂದ ಸಿನೆಮಾ ಲೋಕದಲ್ಲಿಯೇ ಕ್ರಾಂತಿ ಸಾಧಿಸಿದವರು. ಕಲೆಗಾಗಿ ಕಲೆಯನ್ನಾರಾಧಿಸಿ ಹಣವನ್ನು ನೀರಿನಂತೆ ವ್ಯಯ ಮಾಡಿದವರು. 'ಜವಾಬ್'-ಅವರ ಇತ್ತೀಚೆಯ ಕೃತಿ. 'ಜವಾಬ್'ನಿಂದ ಬಹಳ ಹಣವೇನೋ ಸಿಕ್ಕಿತು ಅವರಿಗೆ. ಆದರೆ ಇತ್ತೀಚೆಗೆ ಈ ವೃತ್ತಿ ಅವರಿಗೆ ಅಸಹ್ಯವೆನಿಸಿದೆ. ಹಣಕ್ಕಾಗಿ ಕಲೆಯನ್ನು ಮಾರಾಟ ಮಾಡುವುದು ಅವರಿಗೆ ಸಹಿಸುವುದಿಲ್ಲ. 'ಅಮೃತ ಬಜಾರ್' ಪತ್ರಿಕೆಯಲ್ಲಿ ಹಾಗೆಂದು ಅವರು ಒಂದು ಹೇಳಿಕೆಯಿತ್ತಿದ್ದಾರೆ:

'ಸಿನೆಮಾಲೋಕದಿಂದ ನಿವೃತ್ತನಾಗಬೇಕೆಂದು ತೀವ್ರವಾಗಿ ನಾನು ಆಲೋಚಿಸುತ್ತಿರುವೆನು. ಸಿನೆಮಾ ವ್ಯವಸಾಯ ನನ್ನ ಗೌರವಕ್ಕೆ ಕುಂದು ತರುವಷ್ಟು ಅಧಃಪಾತಕ್ಕಿಳಿದಿದೆ. ಹೊಟ್ಟೆಗಾಗಿ ಮೈಮಾರುವ ಸುಂದರಿಯನ್ನು ಕಂಡರೆ ನನಗೆಷ್ಟು ಅಸಹ್ಯವೆನಿಸುತ್ತದೋ, ಹಣಕ್ಕಾಗಿ ಕಲೆಯನ್ನು ಮಾರುವುದನ್ನು ಕಂಡರೂ ನನಗೆ ಹಾಗೆಯೇ ಅನಿಸುತ್ತದೆ. ಹಣಗಳಿಸಬೇಕಾದರೆ ಬೇಕಾದಷ್ಟು ಮಾರ್ಗವಿದೆ. ಕಲೆಯನ್ನು ನಾ ಮಾರಲೊಲ್ಲೆ. ಗುರು ರವೀಂದ್ರರೇ ನನ್ನನ್ನು ಈ ಉದ್ಯೋಗಕ್ಕೆ ಹಚ್ಚಿದರು. 'ಕಲೆಯನ್ನು ಮಾರಾಟ ಮಾಡಬೇಡ!' ಎಂದು ಅವರು ನನಗೆ ಹೇಳಿದ್ದರು. ಅವರಾ ಋಷಿ ಸಂದೇಶವಿನ್ನೂ ನನ್ನ ಕಿವಿಗಳಲ್ಲಿ ಧ್ವನಿಸುತ್ತಿದೆ. ಆತ್ಮವಂಚನೆಗಿಂತಲೂ ಈ ವೃತ್ತಿಯನ್ನು ಬಿಟ್ಟುಬಿಡುವುದೇ ಲೇಸೆಂದು ನನಗನಿಸುತ್ತದೆ. ಮುಂದೆ ಭಾರತ ಸ್ವತಂತ್ರವಾದಾಗ, ರಾಷ್ಟ್ರೀಯ ಸರಕಾರ ಸ್ಥಾಪಿತವಾದಾಗ, ಈ ಕಲೆಗೂ ಯೋಗ್ಯ ಸ್ಥಾನ ದೊರಕೀತು. ಆಗ ಮತ್ತೆ ಕಲಾಸೇವೆ ಕೈಕೊಳ್ಳುತ್ತೇನೆ; ಅಲ್ಲಿವರೆಗೆ ಕಲಾದೇವಿಯಿಂದ ದೂರವಿರುತ್ತೇನೆ.'

ನೋಟಗಳು....

೧೯೩೭ರ ಚುನಾವಣೆಗೆ ಕಾಂಗ್ರೆಸು ಪ್ರತಿಸ್ಪರ್ಧಿಸಿತು. ಕಾಂಗ್ರೆಸನ್ನು ಎದುರಿಸಿದ ಮುಸ್ಲಿಂ ಲೀಗು ಮೊದಲಾದ 'ಪಕ್ಷ'ಗಳು ಹರಿದು ಹೋದವು; ಕಾಂಗ್ರೆಸು ಪ್ರಾಂತ ಪ್ರಾಂತಗಳಲ್ಲಿ ಮಂತ್ರಿಮಂಡಳಗಳನ್ನೂ ಸ್ಥಾಪಿಸಿತು.

ಕಾಂಗ್ರೆಸ್ ಮುಂದಾಳುಗಳೀಗ ಸೆರೆಮನೆಗೆ ತಳ್ಳಲ್ಪಟ್ಟಿದ್ದಾರೆ. ಪ್ರಾಂತ ಪ್ರಾಂತಗಳ ಮಂತ್ರಿ ಮಂಡಳಗಳೀಗ ಬರಿದೂ ಆಗಿವೆ. ಚುನಾವಣೆಯಲ್ಲಿ ಗೆಲ್ಲದಿದ್ದರೂ, ಬಹುಮತವಿಲ್ಲದಿದ್ದರೂ, ಪ್ರಾಂತ ಪ್ರಾಂತಗಳಲ್ಲಿ ಯಾರೂ ಈಗ ಮಂತ್ರಿಮಂಡಳ ಮಾಡಬಹುದು. ಮಂತ್ರಿಮಂಡಳ ಮಾಡುವವರಿಗೆ ಆಯಾಯ ಪ್ರಾಂತದ ಗವರ್ನರರೂ ಬೇಕಾದ ಸಹಾಯ ಮಾಡಿಯೇ ಮಾಡುತ್ತಾರೆ. ಕಾಂಗ್ರೆಸಿನವರಂತೂ, ಖಂಡಿತವಾಗಿ ಸೆರೆಮನೆಯೊಳಗಿದ್ದಾರೆ!

ಪ್ರಾಂತ ಪ್ರಾಂತಗಳಲ್ಲೀಗ ಮುಸ್ಲಿಂ ಲೀಗು ಮಂತ್ರಿಮಂಡಳಗಳಾಗುತ್ತಿವೆ. ಮುಸ್ಲಿಂಲೀಗು ವಿರೋಧಿಸಿದರೂ ಕಾಂಗ್ರೆಸಿನವರು ಮಂತ್ರಿಮಂಡಳ ರಚಿಸಲಿಲ್ಲವೆ? ಅದೇ ರೀತಿ, ಕಾಂಗ್ರೆಸಿನವರು ವಿರೋಧಿಸಿದರೂ ಮುಸ್ಲಿಂ ಲೀಗಿನವರು ಮಂತ್ರಿಮಂಡಳ ಮಾಡಿಯೇ ಮಾಡುತ್ತಾರೆ. 'ಚಾಟನಂಪ್ರತಿಚಾಟನಂ:'

ಆದರೆ ವ್ಯತ್ಯಾಸವಿಷ್ಟೆ. ಮುಸ್ಲಿಂ ಲೀಗಿನವರು ಶಾಸನ ಸಭೆಯಲ್ಲಿರುವಾಗಲೇ ಕಾಂಗ್ರೆಸಿನವರು ಆಡಳಿತ ನಡೆಸಿದರು. ಕಾಂಗ್ರೆಸಿನವರು ಸೆರೆಮನೆಯಲ್ಲಿರುವಾಗಲೇ ಮುಸ್ಲಿಂ ಲೀಗಿನವರು ಆಡಳಿತ ಮಾಡುತ್ತಾರೆ!

ಈ ವ್ಯತ್ಯಾಸವೆಂದರೆ, ಇದು ಕೇವಲ ರಾಜಕೀಯ ನೀತಿ. 'ಹಗೆಯನ್ನು ದಂಗೆಯಿಂದಾದರೂ ಗೆಲ್ಲಬೇಕು' ಎಂಬುದೂ ಒಂದು ರಾಜನೀತಿ. ಸತ್ಯ ಅಹಿಂಸೆಗಳೆಲ್ಲಾ ಗಾಂಧೀ ಶಿಷ್ಯರ ತಲೆಹರಟೆ! ಜನತೆಯ ಬೆಂಬಲ, ಮತದಾರರ ಪ್ರಾತಿನಿಧ್ಯ, ಪ್ರಜಾಪ್ರಭುತ್ವಗಳೆಲ್ಲಾ 'ಸೆರೆಮನೆ'ಯಲ್ಲಿ ಕೊಳೆಯುವ ಕಾಂಗ್ರೆಸಿನವರ ಕೂಗು!

ಪ್ರಜಾಪ್ರಭುತ್ವವು ಭಾರತಕ್ಕೆ ಒಪ್ಪುವುದಿಲ್ಲವೆಂದು ಬ್ರಿಟಿಷರೇ ಹೇಳಲಿಲ್ಲವೆ? ಭಾರತೀಯರೊಂದು ಜನಾಂಗದವರಲ್ಲವೆಂದೂ ಜಿನ್ನರೂ ಸಾರಿದ್ದಾರೆ. ಮುಸ್ಲಿಂ ಲೀಗಿನವರು ಮಂತ್ರಿಮಂಡಳ ಮಾಡುವಾಗ, ಅವರಿಗೆ ಹಿಂದೂ ಮತದಾರರ ಪ್ರಾತಿನಿಧ್ಯವಾದರೂ ಏಕೆ? ಮುಸ್ಲಿಂ ಲೀಗಿನ ಧ್ಯೇಯ 'ಪಾಕಿಸ್ಥಾನ!' ಪ್ರಾಂತಗಳ ಗವರ್ನರರ ಬೆಂಬಲವೊಂದಿದ್ದರೆ ಮಂತ್ರಿಮಂಡಳ ಆಗಿಯೇ ಆಗುತ್ತದೆ! ಕಾಂಗ್ರೆಸಿನವರಂತೂ ಖಂಡಿತ ಸೆರೆಮನೆಯಲ್ಲಿದ್ದಾರೆ!

ಕಾಂಗ್ರೆಸಿಗೊಮ್ಮೆ ಅಧಿಕಾರ; ಮುಸ್ಲಿಂ ಲೀಗಿಗೊಮ್ಮೆ ಅಧಿಕಾರ. 'ಒಮ್ಮೆ ಅತ್ತೆಯ ಕಾಲ ಮತ್ತೆ ಸೊಸೆಯ ಕಾಲ' ಈಗ ಕಾಂಗ್ರೆಸು ಸೆರೆಮನೆಯಲ್ಲಿ; ಮತ್ತೆ ಮುಸ್ಲಿಂ ಲೀಗೂ . . . . . ?

'ಬಿಕ್ಕಟ್ಟು ಬಿಡಿಸಲು ಸರಕಾರಕ್ಕೆ ಮನಸ್ಸಿಲ್ಲ'

ರಾಜಿಯಿತ್ತ ಐ. ಸಿ. ಎಸ್. ಅಧಿಕಾರಿ ಹೇಳಿಕೆ.

ಸರಕಾರದ ಸಹಾಯದಿಂದ ಲೀಗ್ ಮಂತ್ರಿಮಂಡಳಗಳು

'ಸರಕಾರಕ್ಕೆ ಬಿಕ್ಕಟ್ಟು ಬಿಡಿಸುವ ಇಚ್ಛೆ ಇಲ್ಲ'

ರಾಜಿನಾಮೆಯಿತ್ತ ಐ. ಸಿ. ಎಸ್. ಅಧಿಕಾರಿ ಹೇಳುತ್ತಾರೆ

ಇತ್ತೀಚೆಗೆ ಐ. ಸಿ. ಎಸ್. ಅಧಿಕಾರಕ್ಕೆ ರಾಜಿನಾಮೆ ಕೊಟ್ಟ ನಾಗಪುರದ ಶ್ರೀ. ಆರ್. ಕೆ ಪಾಟೀಲರು 'ಹಿತಾವಾದ' ಪತ್ರಿಕೆಯಲ್ಲಿ ಸದ್ಯದ ರಾಜಕೀಯದ ಬಗ್ಗೆ ಈ ರೀತಿ ಬರೆದಿರುವರು—

ಇಡೀ ದೇಶದಲ್ಲಿ ನಿರಾಶೆಯ ವಾತಾವರಣ ತುಂಬಿದೆ. ಈ ಬಿಕ್ಕಟ್ಟನ್ನು ಬಿಡಿಸಲು ಪ್ರಯತ್ನಿಸುವದು ಪ್ರತಿಯೊಬ್ಬ ವಿಚಾರವಂತ ಹಾಗೂ ಸಾರ್ವಜನಿಕ ಸೇವಾ ಬುದ್ಧಿಯ ಭಾರತೀಯನ ಕರ್ತವ್ಯ. ಯುದ್ಧ ಮುಗಿದ ಮೇಲೆ ಸಹ ಹಿಂದುಸ್ಥಾನವು ಸ್ವತಂತ್ರವಾಗುವದಿಲ್ಲವೆಂದು ಯಾವ ದೇಶಾಭಿಮಾನಿಯೂ ತಿಳಿದುಕೊಂಡಿರುವದಿಲ್ಲ. ಗಾಂಧಿಜಿಯವರು ಕೆಲವು ಶರತಗಳನ್ನು ಪೂರೈಸಬೇಕೆಂದು ಅವರ ಮತ್ತು ವೈಸರಾಯರ ನಡುವೆ ನಡೆದ ಪತ್ರವ್ಯವಹಾರದಿಂದ ತಿಳಿದುಬಂದಿತು. ಆದರೆ ಅವು ವೈಯಕ್ತಿಯ ಅಧಿಕಾರದಿಂದ ಯಾರೂ ಪೂರೈಸಲಾರದಂಥ ಶರತಗಳಾಗಿವೆ ಮಹಾತ್ಮಾಜಿಯವರು ಅದಕ್ಕೆ ಯೋಗ್ಯ ಉತ್ತರ ಕೊಟ್ಟಿರುವರು 'ತಮ್ಮ ಅಭಿಪ್ರಾಯವು ಬದಲಾಗಿದೆಯೆಂದು—ವೈಸರಾಯರು ಮನಗಾಣಿಸಬೇಕು ಇಲ್ಲ, ಕಾಂಗ್ರೆಸಿನ ಅಭಿಪ್ರಾಯ ಬದಲಾಗಬೇಕೆಂಬ ಇಚ್ಛೆ ಇದ್ದರೆ ತಮಗೆ ವರ್ಕಿಂಗ್ ಕಮಿಟಿ ಸದಸ್ಯರ ಭೇಟಿ ಮಾಡಿಸಬೇಕು' ಎಂದು ಹೇಳಿದರು. ಇದಕ್ಕಿಂತಲೂ ಸಮಂಜಸವಾದ ಬೇಡಿಕೆಯು ಜಗತ್ತಿನಲ್ಲಿ ಇನ್ನಾವುದಾದರೂ ಇರುವದೇ ಎಂದು ನನಗೆ ಸಂಶಯ ಬರುತ್ತದೆ.

ಈ ಬಿಕ್ಕಟ್ಟನ್ನು ಬಿಡಿಸುವ ಇಚ್ಛೆ ಸರಕಾರಕ್ಕಿರುವದಿಲ್ಲ ತದ್ವಿರುದ್ಧವಾಗಿಯೇ ಎಲ್ಲ ತರದ ಪ್ರಯತ್ನಗಳನ್ನು ಮಾಡುತ್ತಿರುವದು ಸರಕಾರವು ತನ್ನ ಕಿರಿಬೆರಳನ್ನು ಸಹ ಅಲುಗಾಡಿಸುವದಿಲ್ಲವೆಂದು ಹಿಂದಿನ ಅನುಭವದಿಂದ ಕಂಡುಬಂದ ಮಾತು ಇಡೀ ರಾಷ್ಟ್ರವೂ ಈ ವಿಷಯವನ್ನು ದೀರ್ಘವಾಗಿ ಆಲೋಚಿಸತಕ್ಕದ್ದು ನಮ್ಮ ಬೇಡಿಕೆಯು ಅತ್ಯಂತ ನ್ಯಾಯವಾಗಿರುವದು. ಇಲ್ಲವೆಂದು ಯಾರೂ ಅನ್ನಲಾರರು ಗಾಂಧಿಜಿಯವರು ಕೇಳಿದ ಈ ಸಣ್ಣ ಬೇಡಿಕೆಯು ಮಾನ್ಯವಾಗದಿರದು ಇಡೀ ದೇಶದಲ್ಲಿ ಸಾರ್ವಜನಿಕ ಸಭೆಗಳು ಸೇರಿ ಈ ಬೇಡಿಕೆಯನ್ನು ಮುಂದಿಡಬೇಕು ಸ್ವಾತಂತ್ರ್ಯವನ್ನು ರಕ್ಷಿಸಲು ಜಗತ್ತಿನಲ್ಲಿ ಅದೆಷ್ಟು ಸ್ವಾರ್ಥತ್ಯಾಗ ನಡೆದಿದೆಯೆಂಬುದು ಎಲ್ಲರಿಗೂ ಗೊತ್ತಿದೆ ಸ್ವಾತಂತ್ರ್ಯ ಸೈನಿಕರು ರಕ್ತದ ನದಿಗಳನ್ನು ಈಸಿ ದಾಟುತ್ತಿರುವರು ಈ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಪ್ರಿಯರು ಸ್ವಾತಂತ್ರ್ಯ ರಕ್ಷಕರಿಗೆ ಸಹಾಯ ಮಾಡದಿದ್ದರೆ, ಅವರು ಮನುಷ್ಯರೇ ಅಲ್ಲ'

ಸರಕಾರದ ಸಹಾಯದಿಂದ ಲೀಗ್ ಮಂತ್ರಿಮಂಡಳಗಳು

ಈಗ ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ನಾಯಿ ಕೊಡೆಗಳಂತೆ ಏಳುತ್ತವೆ ಕಾಂಗ್ರೆಸಿನವರು ಸೆರೆಮನೆಯಲ್ಲಿರುವ ಸಮಯ ಸಾಧಿಸಿ ಕೆಲವರು ಪ್ರತಿಗಾಮಿಗಳು ಸರಕಾರದ ಮಾಟಕ್ಕೆ ಕೈಯೊಡ್ಡುತ್ತಿದ್ದಾರೆ. ಕಾಂಗ್ರೆಸಿನ ವರ್ಚಸ್ಸು ಭಾರತದಲ್ಲಿಲ್ಲವೆಂದು ಘೋಷಿಸಲು ಅಧಿಕಾರಿಗಳೂ ಈ ಪ್ರಯತ್ನ ಮಾಡುತ್ತಿರುವರು ಶಾಸನ ಸಭಾ ಸದಸ್ಯರ ಬೆಂಬಲವಿಲ್ಲದೆ ಮಂತ್ರಿಮಂಡಳ ರಚಿಸುವುದು ಎಷ್ಟರ ಮಟ್ಟಿಗೆ ನ್ಯಾಯವೋ ಹೇಳಬರುವದಿಲ್ಲ ಆದರೆ ಇಂದಿನ ಪರಿಸ್ಥಿತಿಯಲ್ಲಿ ಸರಕಾರದವರು ನ್ಯಾಯಾನ್ಯಾಯಗಳಿಗೆ ಹೆಚ್ಚಿನ ಗಮನ ಕೊಡುವಂತೆಯೂ ತೋರುವದಿಲ್ಲ. ಓರಿಸ್ಸಾ, ಆಸಾಮುಗಳಲ್ಲಿ ಇದೇ ಬಗೆಯ ಮಂತ್ರಿಮಂಡಳವಾಗಿದೆ. ಮದ್ರಾಸ್, ಮಧ್ಯ ಪ್ರಾಂತಗಳಲ್ಲಿಯೂ ಈ ತರದ ಪ್ರಯತ್ನವಾಗುವ ಸುದ್ದಿಯಿದೆ ಗಡಿನಾಡಿನಲ್ಲಿ ಮುಸ್ಲಿಂ ಲೀಗಿನವರು ಮುಂದೆ ಬಂದಿದ್ದಾರೆ. ಗಡಿನಾಡಿನಲ್ಲಿ ಕಾಂಗ್ರೆಸ್ 'ಪ್ರಾಬಲ್ಯವೆಂಬುದು ಸರ್ವ ವಿದಿತವೇ ಕಾಂಗ್ರೆಸ್ ಸದಸ್ಯರನ್ನೆಲ್ಲಾ ಸೆರೆಮನೆ ಸೇರಿಸಿ, ಹೊರಗಿದ್ದವರನ್ನೂ ಒಳ ಹಾಕುತ್ತಾ ಹೋದರೆ ಯಾರೂ ಮಂತ್ರಿಮಂಡಳ ಮಾಡಬಹುದು ಆದರೆ ಈ ಎಲ್ಲಾ ಹೊಸ ಮಂತ್ರಿಮಂಡಳಗಳಿಗೆ ಜನತೆಯ ಬೆಂಬಲವುಂಟೆಂದು ಮಾತ್ರ ಯಾರೂ ಹೇಳಲಾರರು ಬಂಗಾಳದಲ್ಲಿಯಾದರೂ ಲೀಗ್ ಮಂತ್ರಿಮಂಡಳವು ಹೇಗೆ ರಚಿತವಾಯಿತೆಂಬುದು ಲೋಕ ಜಾಹಿರವಾಗಿದೆ ಫಜುಲುಲ್ ಹಕ್ಕರನ್ನು ರಾಜಿನಾಮೆ ಕೊಡ ಹೇಳಿ ಸರ್ ನಾಜಿಮುದ್ದೀನರಿಗೆ ಗವರ್ನರರು ಪಟ್ಟಕಟ್ಟಿದರು ಅಂತೂ ಅಖಿಲಭಾರತದಲ್ಲಿ ಮುಸ್ಲಿಂಲೀಗ್ ಮಂತ್ರಿಮಂಡಳ ಮಾಡುವರೆ ಸರಕಾರದವರು ಬೆಂಬಲ ಕೊಡುವಂತೆ ತೋರುತ್ತದೆ.

THE CANARA BANKING CORPORATION Ltd

(Incorporated in British India with limited liability)

STATEMENT OF AFFAIRS AS ON 31ST DECEMBER 1942.

Capital & Liabilities	Rs	As	Ps	Property & Assets	Rs	As	Ps
Paid up Capital	6 36 890	0	0	Office premises			
Reserve & other funds	3 71 882	13	11	furniture etc	91 659	0	0
Deposits	41 83 873	4	1	Advances	31 28 612	4	9
Due to Bankers	5 08 545	12	1	Investment on			
Bills per contra	3 59 357	12	1	Govt Securities			
Sundries including				etc at cost	15 34 536	14	3
branch adjustments &				Sundries	74 183	5	7
undisbursed profits	2 83 736	5	9	Bills for Collection	3 59,357	12	1
Profit for the year 1942	49 461	3	5	Cash on Hand &			
				with bankers	12 05,397	14	8
Total Rs	63 93 747	3	4	Total Rs	63,93 747	3	4

Wanted Graduates

APPLY FOR TERMS

CANARA BANK LTD.,

Ested: 1906

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷದಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ 2–12–0, ರೂ 4–8–0, ರೂ 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ANDREWS LIVER SALT

ಏಂಡ್ರೂಸ್ ಲಿವರ್‌ಸಾಲ್ಟ್

ಆರೋಗ್ಯಪಾನೀಯ — ವಿರೇಚಕ

The Bank of Mangalore Limited, Mangalore.

ESTD: 1931

HEAD OFFICE	*BRANCHES*
Mangalore.	Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷನಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appieciated by eminent Doctors. Proved to be the best remedy where even allopathic medicines failed A specific foi threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು –
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮಾರಾರ ಗಲ್ಲಿ ಹುಬ್ಬಳ್ಳಿ.
2. 36 ಪ್ಲಾಕ್ರೋಪ್ಟ್‌ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.